KANNADIGA

DAILY

YEAR. 10. Nos. 104-180

FROM 24-8-1933

TO 24-11-1933

ಕನ್ನಡಿಗ

ನಿತ್ಯ ಸಂಚಿಕೆ.

ವರ್ಷ. 10. ಸಂಚಿಕೆ. 104-180.

24-8-1933 ರಿಂದ

24-11-1933 ಗೆ.

यद्यत् परवशं दुःखं । यद्यदात्मवशं सुखम् ॥ मनु

ಇನಸ್ಯೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯೂರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯೂರನ್ಸ
[illegible]
ಯುನಾಯಿಟೆಡ್ ಕ. ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು.
ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವುದು.

ವರ್ಷ ೧೦] ಧಾರವಾಡ— ಗುರುವಾರ ಭಾದ್ರಪದ ಶುದ್ಧ ೪ ಶಕೆ ೧೮೫೫ ತಾ॥ ೨೪ ೮-೩೩ [ಸಂಚಿಕೆ ೧೦೪

ಮಹಾತ್ಮಾ ಗಾಂಧಿಯವರನ್ನು ಬಿಟ್ಟರು.

[illegible] ತಾ॥ ೨೩

ತಾ॥ ೨೩— ಮಹಾತ್ಮಾ ಗಾಂಧಿಯವರು ಇವತ್ತಿನ ದಿವಸ ೩-೪೫-ಗಂಟೆಗೆ ಸೆರೆಮನೆಯಿಂದ ಅನಿರ್ಬಂಧವಾಗಿ ಬಿಡುಗಡೆ ಮಾಡಲ್ಪಟ್ಟಿರುವರೆಂದು ಕಾಕಾ ಕಾಲೇಲಕರರು ತಿಳಿಸುತ್ತಾರೆ.

ಗೋಕಾಕದಲ್ಲಿ ಮೋಟಾರಿನ ಅಪಘಾತ

ಒಬ್ಬಳು ಸತ್ತಳು. ಮೂವರಿಗೆ ಘಾಯ

ಬೆಳಗಾವ ತಾ॥ ೨೩— ಗೋಕಾಕದಲ್ಲಿ ಮೋಟರ ಅಪಘಾತವಾಗಿ ಒಬ್ಬ ಹುಡುಗಿಯು ಸತ್ತಿರುವಳಲ್ಲದೆ ಮೂವರು ಗಾಯ ಹೊಂದಿರುವರೆಂದು ತಿಳಿದುಬಂದಿದೆ.

ಪಂಡಿತ ಜವಾಹಿರರ ಬಿಡುಗಡೆ

ಡೆಹರಾಡೂನ ತಾ, ೨೧— ಪಂಡಿತ ಜವಾಹಿರಲಾಲ ನೆಹರೂರವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ತಾ॥ ೧೭ಕ್ಕೆ ಬಿಡುಗಡೆ ಹೊಂದತಕ್ಕವರಿದ್ದಾರೆ. ಅವರು ನಂತರ ಅಲಹಾಬಾದದಲ್ಲಿ ಮೂರು ದಿವಸ ನಿಂತು ಆಮೇಲೆ ಕುಮಾರಿ ಇಂದು ಇವಳ ಭೆಟ್ಟಿಗೆ ಪುಣೆಗೆ ಹೋಗತಕ್ಕವರಿದ್ದಾರೆ.

ಕೆಂಪಂಗಿಯವರ ಕೈದು

ನಥಿಯಾಗಲ್ಲಿ ತಾ॥೨೨ —ಪೇಶಾವರ ಜಿಲ್ಹೆಯಲ್ಲಿಯ ಚಾರಸದಾ ಭಾಗದ ಅಸಿಸ್ಟಂಟ ಕಮೀಶನರರ ಕಚೇರಿಯ ಮುಂದೆ ಪಿಕೆಟಿಂಗ ಮಾಡಿದ ಸಂಬಂಧವಾಗಿ ನಾಲ್ವರು ಕೆಂಪಂಗಿಯವರು ಕೈದು ಮಾಡಲ್ಪಟ್ಟಿದ್ದಾರೆ.

ಒಂದೇಸಮನೆ ೭೯ ತಾಸು ಈಸಿದ ಜರ್ಮನ ತರುಣಿ

ಬರ್ಲಿನ್ ತಾ॥ ೨೧— ಓರ್ವ ಜರ್ಮನ್ ತರುಣಿಯು ಒಂದೇಸವನೆ ೭೯ ತಾಸು ಈಸಿ, ಈಸುವದರಲ್ಲಿ ಜಗತ್ತಿನಲ್ಲಿ ಅಗ್ರಸ್ಥಾನವನ್ನು ಪಡೆದಿದ್ದಾಳೆ ಆವಳ ಸ್ಥಿತಿಯು ಈಗ ಚಿಂತಾಜನಕವಾಗಿದ್ದು ಆವಳನ್ನು ರುಗ್ಣಾಲಯದಲ್ಲಿ [illegible]ಕಲಾಗಿದೆ. ಕಳೆದವರ್ಷದಲ್ಲಿಯಾದರೂ ಇ[illegible]ಳು ೭೪ ತಾಸು ಈಸಿ ಜಗತ್ತಿನಲ್ಲಿ ಮೊದಲನೆ [illegible]ನವನ್ನು ಪಡೆದಿದ್ದಳು.

ಅಲ್ಲಲ್ಲಿಯ ಶಿಕ್ಷೆ.

ಅಹಮ್ಮದಾಬಾದ— ಬಹಿಷ್ಕಾರದ ಹಸ್ತಪತ್ರಿಕೆಗಳನ್ನು ಹಂಚಿದ್ದಕ್ಕಾಗಿ ೯ ಜನ ಕಾಂಗ್ರೆಸ್ ಕೆಲಸಗಾರರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆ.

ವರ್ಧಾ— ಸ್ಕೂಲಬೋರ್ಡ ಚೇರಮನ್ನರಾದ ಕೇಶರಾವ ಬಾಬು ಅವರು ೬ ಜನ ಅನುಯಾಯಿಗಳೊಂದಿಗೆ; ಅಡವಿ ಕಾಯಿದೆ ಭಂಗಕ್ಕಾಗಿ ಕೇಲಬಾರ ಎಂಬಲ್ಲಿಗೆ ಹೊರಟಿರಲು, ಪೋಲೀಸರು ಅವರನ್ನು ಹಾದಿಯಲ್ಲಿ ಸೆರೆಹಿಡಿದು ಜೇಲಿಗೆ ಗುರಿಮಾಡಿದ್ದರು. ಮ್ಯಾಜಿಸ್ಟ್ರೇಟರು ಅವರಲ್ಲಿ ಒಬ್ಬರನ್ನು ಅಲ್ಪವಯಯೆಂದು ಬಿಟ್ಟುಬಿಟ್ಟು ಉಳಿದವರಿಗೆ ಪ್ರತ್ಯೇಕವಾಗಿ ೩ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

ಕಾನಪೂರ—ರಾಮಗೋಪಾಳ ರಾಮಪ್ರಸಾದ ಅವರ ಅಂಗಡಿಯ ಮುಂದೆ ಪಿಕೇಟಿಂಗ ಮಾಡಿದ ಸಂಬಂಧವಾಗಿ ಓರ್ವ ಕಾಂಗ್ರೆಸ್ ಕೆಲಸಗಾರನು ಕೈದು ಮಾಡಲ್ಪಟ್ಟಿದ್ದಾನೆ. ಅದೇ ಅಪರಾಧಕ್ಕಾಗಿ ಮತ್ತೊರ್ವ ಕೆಲಸಗಾರನಿಗೆ ೬ತಿಂಗಳ ಕೈದು ಹಾಗು ೧೦೦ ರುಪಾಯಿ ದಂಡ ಹೀಗೆ ಶಿಕ್ಷೆ ವಿಧಿಸಲ್ಪಟ್ಟಿತು.

ಕರಾಚಿ — ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಕೂಡದೆಂಬ ನೋಟೀಸನ್ನು ಅಲ್ಲಗಳೆದು ಸಭೆಯಲ್ಲಿ ಭಾಷಣಮಾಡಿದ್ದಕ್ಕಾಗಿ ಕೈದ ಮಾಡಲ್ಪಟ್ಟ, ಸ್ವಾಮಿ. ಕೃಷ್ಣಾನಂದ ಎಂಬ ಓರ್ವ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭಾಸದರ ಖಟ್ಲೆಯ ವಿಚಾರಣೆಯು, ಸಿಟಿ ಮ್ಯಾಜಿಸ್ಟ್ರೇಟರಲ್ಲಿ ನಡೆದು, ಅವರಿಗೆ ೧ ವರ್ಷದ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು.

ಬಾಗಲಕೋಟೆಯ ಸುದ್ದಿ.

ಬಾಗಲಕೋಟೆ ತಾ ೨೨ — ಇಲ್ಲಿಯ ಮ್ಯುನಸಿಪಾಲಿಟಿ ಸ್ಟ್ಯಾಂಡಿಂಗ ಕಮಿಟಿಯ ಚೇರಮನ್ನರಾದ ಶ್ರೀ. ಸಾಸನೂರ ವಕೀಲರ ಮೇಲೆ ಅದೇ ಕಮಿಟಿಯ ಓರ್ವ ಸಭಾಸದರಾದ ಶ್ರೀ ಕೋತನಾಳ ಇವರು ಚೇರಮನ್ನರು ತಮ್ಮನ್ನು ಸಭಾಸತ್ವದಿಂದ ತೆಗೆದುಹಾಕಿದ್ದಕ್ಕಾಗಿ ಮುನಸೂಫ ಕೋರ್ಟಿನಲ್ಲಿ ದಾವೆ ಮಾಡಿದರಷ್ಟೇ. ಆದರೆ ಈ ದಾವೆಯು ಕಿತ್ತಿಹಾಕಲ್ಪಟ್ಟಿರುವದೆಂದು ತಿಳಿದುಬರುತ್ತದೆ.

ಹುಬ್ಬಳ್ಳಿಯ ಪತ್ರ.

ಹುಬ್ಬಳ್ಳಿ ತಾ ೨೨—

ಹುಬ್ಬಳ್ಳಿ ತಾಲೂಕ ಲೋಕಲ್‌ಬೋರ್ಡ

ಹುಬ್ಬಳ್ಳಿ ಬೋರ್ಡಿನ ಅಧ್ಯಕ್ಷರಾದ ರಾ॥ ಸಾ॥ ಚನ್ನಪ್ಪಗೌಡಾ ಪಾಟೀಲ ಇವರನ್ನು ಆಯ್ಕೆ ಆರಿಸಿದ್ದು ಕಾಯದೆಗನುಸರಿಸಿಲ್ಲವೆಂದು, ಅದು ರದ್ದಾಗಬೇಕೆಂದೂ ದಾವೆ ನಡೆದಿದ್ದು ಅದರಲ್ಲಿ ಈ ದಾವೆಯು ಮುಗಿಯುವವರೆಗೆ ಅವರನ್ನ ಅಧ್ಯಕ್ಷಾಧಿಕಾರಕ್ಕೆ ಮನಾಯಿ ಮಾಡುವಂತೆ ತಾತ್ಪೂರ್ತಿಕ ಇಂಜೆಕ್ಶನ್ ಪಡಕೊಳ್ಳಲಿಕ್ಕೆ ಅರ್ಜಿ ಮಾಡಲಾಗಿತ್ತು. ರಾ॥ ಸಾ॥ ರ ಪರವಾಗಿ ಶ್ರೀ. ಜೋಗ ವಕೀಲರು, ಅವರ ವಿರುದ್ಧ ಶ್ರೀ, ಪಾವಟೆ ವಕೀಲರು ವಕೀಲಿ ಹಿಡಿದಿದ್ದರು. ಕೆಲಹೊತ್ತು ಚರ್ಚೆಯಾಗಿ ಅರ್ಜಿಯು ಕಿತ್ತಿ ಒಗೆಯಲ್ಪಟ್ಟಿತು.

ವಿಜಯನಗರದ ಸ್ಮಾರಕೋತ್ಸವ-೧೯೩೬

—ಸ್ಮಾರಕದ ಕಾರ್ಯವನ್ನು ಮುಂಕ್ಷಂದವ ಬಗ್ಗೆ ಶ್ರೀಮಾನ್ ಬೆಳವಿ ಮುಂತಾದವರ ಸಲಹೆಯನ್ನು ಪಡೆಯಲಿಕ್ಕೆ ಹುಬ್ಬಳ್ಳಿಯ ಶ್ರೀ [illegible]ಡಲದವರು ಕಾರ್ಯದರ್ಶಿಗಳಾದ ಶ್ರೀ ಪೆನ್ನಳ್ಳಿಶಿಯವರನ್ನು ತಾ॥ ೨೦ ೮-೩೩ನೇ ದಿವಸ ಬೆಳಗಾಂವಿಗೆ ಕಳಿಸಿದ್ದರು. ಅವರು ಶ್ರೀ ಬೆಳವಿದಾತಾರ ಮತ್ತು ಸಂಯುಕ್ತ ಕರ್ನಾಟಕ-ಆರ್ಯೋದಯದ ಕಚೇರಿಗಳಿಗೆ ಹೋಗಿ ವಿಚಾರ ವಿನಿಮಯ ಮಾಡಿ ಬಂದಿರುವರು. ಬೆಳಗಾಂವಿಯವರು ಈ ಸ್ಮಾರಕದ ಬಗ್ಗೆ ತಮಗಿದ್ದ ಉತ್ಸಾಹ - ಅಭಿಮಾನಗಳನ್ನು ವ್ಯಕ್ತಪಡಿಸಿದ್ದು ತಮ್ಮ ಪಾಲಿಗೆ ಬಂದಷ್ಟು ಹಣ ಕೂಡಿಸಲಿಕ್ಕೂ ಕೆಲಸ ಮಾಡಲಿಕ್ಕೂ ಒಪ್ಪಿರುವರು.

ಕೊನೆಯಬುತ್ತಿ.



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಛ್ರೀ

ಶಾಸ್ತ್ರಶುದ್ಧ [illegible] ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು [illegible] ಗಿಯೂ, [illegible] ಗಟ್ಟಿಯಾಗಿಯೂ ಬಾಯಿಯು ಸುವಾಸವಾಗಿಯೂ, ಆಗುವದು ಹೆಮ್ಮೆ [illegible] ಒಸಡುಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದ್ಧ [illegible] ಈ ಹೆಮ್ಮು [illegible] ತ್ವವು ಕಚ್ಛ್ರೀ ” ದಂತ ಮಂಜನದಲ್ಲಿ ಅಡಕ [illegible] [illegible] ಕ್ರಿಮಿಗಳು [illegible] ಕೆಡುವದು [illegible] ಕಚ್ಛ್ರೀ ದಂತವನ್ನು [illegible] ವವಲ್ಲದೆ [illegible] ಗಳು [illegible] ‘ ಕಚ್ಛ್ರೀ ದಂತಮಂಜನ [illegible] ಗಿಸಿಯೇ ಇದರ ಗುಣಗಳನ್ನು [illegible] ಬೇಕಲ್ಲದೆ [illegible] ನ್ನೂ ದಂತ ಅವು [illegible] ಯ ಲಾಭವು ಕನ್ನಡಿಗರೇ ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು “ ಮನೆಗೆದ್ದು ಮಾರುಗೆದ್ದೆ ’ ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನುಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

ಬಹಳ ಹಳೆಯದಾದ ಹೆಚ್ಚು ವಿಶ್ವಾಸ [illegible]
ಹೆಚ್ಚಿನ ಸುಧಾರಣೆಯ [illegible]

ಶ್ರೀ ಗೌರೀಶಂಕರ [illegible]

ತಾರೀಖು ೧೬-೪ ೧೯೩೩ ರಿಂದ ತಾ॥ ೧೬-೧೨ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ [illegible] ಯಾತ್ರಿಕರಿಂದ
ವರ್ತಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸರ್ಟಿಫಿಕೇಟುಗಳನ್ನೂ ಪಡೆದಿರುತ್ತಿರುವ

ಶ್ರೀ [illegible] ಶ್ವರ ಸಮುದ್ರ [illegible] ಕ್ಷೇತ್ರಗಳ ಮಹಾಯಾತ್ರಾ ಪ್ರಯಾಣ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೀಯ ಸೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್‌ಟ್ರೇನು [illegible] ತಾರೀಖು (ಶಕೆ ೧೮೫೫ ಆಶ್ವಯುಜ ಶು॥ ೧೩) [illegible] ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ॥೨		೧೯ ಲಖನೌ	೨೪	೩೭ [illegible]	[illegible]
೨ ನಾಶಿಕ	೩-೪	೨೦ ಅಯೋಧ್ಯಾ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬	೨೧ ಅಲ್ಲಾಬಾದ	,,	೩೯ [illegible] [ಹಡಗದಿಂದ] ೧೮	
೪ ಸೋಮನಾಥಪಟ್ಟಣ (ಹಡಗದಿಂದ)	೮-೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ಪೋರಬಂದರ	,,	೨೩ ಕಾಶಿ	೨೮-೨೯ ೩೦ ೩೧ ನವ್ಹೆಂಬರ ತಾ॥೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲಿಟಾಣಾ (ಜೈನತೀರ್ಥ)	೧೦ ೧೧	೨೪ ಸಾರನಾಥ	,,	೪೨ [illegible] [ಲಂಕಾ]	೨೩
		೨೫ ಗಯಾ	೨		
೭ ಅಬೂಪರ್ವತ (ಜೈನತೀರ್ಥ)	೧೨ ೧೩	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೩ ಧನುಷ್ಕೋಡಿ [ಹಡಗದಿಂದ],	
೮ ಅಹಮದಾಬಾದ	೧೪	೨೭ ಗಿರಿ	,,	೪೪ ಮದುರೆ	೨೬
೯ ಸಾಬರಮತಿ	,,	೨೮ ಸಮ್ಮೇದಶಿಖರಜಿ (ಜೈನತೀರ್ಥ)	೪	೪೫ ತ್ರಿಚಿನಾಪಳ್ಳಿ	೨೫
೧೦ ಬರೋಡ	೧೫			೪೬ ಶ್ರೀರಂಗ	,,
೧೧ ಉಜ್ಜಯಿನಿ	೧೬	೨೯ ಕಲಕತ್ತಾ	೬ ೭-೮	೪೭ ಬೆಂಗಳೂರ	೨೭
೧೨ ಆಗ್ರಾ	೧೭	೩೦ ಜಗನ್ನಾಥ ಪುರಿ	೮	೪೮ ಮೈಸೂರ	೨೮-೨೯
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸ	೧೨ ೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ [illegible] ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು॥ ೧೩ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡಕ್ಲಾಸ ೩೧೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ ಟಿಕೇಟ ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧ ಚಾರ್ಜು ತೆಗೆದುಕೊಳ್ಳಲ್ಪಡುವದು ಸ್ಮಾರ್ತ ವೈಷ್ಣವಾದಿ ಎಲ್ಲಾ ಮತದವರಿಗೂ ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು ಹೆಚ್ಚಿನ ಮಾಹಿತಿಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೊಗ್ರಾಫರರೂ ಅಗಸರೂ ಇರುವರು ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು ಆದಕಾರಣ ಟಿಕೇಟಗಳಿಗಾಗಿ ತ್ವರೆಮಾಡತಕ್ಕದ್ದು

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ ಏಜನ್ಸಿ ರಿಂಟಿಗಳು— ಸದರ ಕಂಪನಿಯ ಏಜನ್ [illegible] ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರ ಹಾಗು ವರ್ತಕರ ಬಹಳ ಪರಿಚಯದವರು [illegible] ಕೆಲಸ ಮಾಡಿ ಕೊಡಲ್ಪಟ್ಟಿ [illegible] ಬೀಸಗೆಯಲ್ಲಿ ಜರೂರ ಕೆಲಸ ಮಾಡಿಕೊಡುವದಕ್ಕೆ ಬರುವದು [illegible] ಕೆಲಸ ಮಾಡಿಸತಕ್ಕವರು ಶೀಘ್ರ ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು [illegible] ತಕ್ಕದ್ದು ಅರ್ಜಿಯ ಫಾರ್ಮುಗಳೂ ಏಜನ್ ರಿಂಟಿಯ ಹೆಚ್ಚಿನ ಮಾಹಿತಿ ಪತ್ರಿಕೆಗಳೂ ಬೇಕಾದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು ಏಜಂಟರಾಗಲಿಚ್ಛಿಸುವವರು ಕೂಡಲೆ ತಿಳಿಸತಕ್ಕದ್ದು ಯೋಗ್ಯ ಕಮೀಶನ್ ಕೊಡಲ್ಪಡುವದು

ಕೆ. ಎ ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬುಕ್‌ಸೇಲರ.

ಮುದ್ದಾಂ ಗಣೇಶ ಚವತಿ ನಿಮಿತ್ತವಾಗಿ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಗುರುವಾರ ತಾ॥ ೨೪-೮-೩೩ ನೇ ದಿವಸ ರಾತ್ರಿ



ಎಂಬ ನಾಟಕವನ್ನು ಅಭಿನಯಿಸುವರು.

ಕನ್ನಡಿಗ.

ಧಾರವಾಡ— ಗುರುವಾರ ತಾರೀಖು ೨೪—೮—೧೯೩೩

॥ ಓಂ ॥

ಶ್ರೀಗಣೇಶಾಯನಮಃ

ಶ್ರೀ ಪರಮಾತ್ಮನ ಅತ್ಯಧಿಕವಾದ ಇಚ್ಛೆಯ ಮೇರೆಗೆ ಈಗ ಈ 'ಕನ್ನಡಿಗ' ದಿನಪತ್ರಿಕೆಯ ಸಂಪಾದಕತ್ವವನ್ನು ವಹಿಸುವ ಯೋಗವು ಆಕಸ್ಮಿಕವಾಗಿ ನಮಗೆ ಉಂಟಾಗಿದೆ. ಧಾರವಾಡದಲ್ಲಿ ಒಂದು ದಿನಪತ್ರಿಕೆಯನ್ನು ತೆಗೆಯಬೇಕೆಂಬ ಪ್ರಯತ್ನಗಳು ಹಿಂದಕ್ಕೆ ಮೂರು ಸಲ ಆಗಿದ್ದವು. ಹನ್ನೆರಡು ಹದಿನೈದು ವರುಷಗಳ ಹಿಂದೆ ಒಂದು ಲಕ್ಷ ರೂಪಾಯಿ ಭಂಡವಲ ... 'ಸಂಯುಕ್ತ ಕರ್ನಾಟಕ' ವನ್ನು ತೆಗೆಯಬೇಕೆಂಬ ಪ್ರಯತ್ನದಲ್ಲಿ ಕೈಗೆ ... ಯಿಗೆ ಬಾರದೆ ಹೋಯಿತು. ಮೂರು ವರುಷಗಳ ಮುಂಚೆ, ಇದೇ ಕನ್ನಡಿಗನನ್ನು ಇಲ್ಲಿಗೆ ತರಬೇಕೆಂಬ ಪ್ರಯತ್ನವೂ ವಿಫಲವಾಯಿತು. ಪುನಃ ಸ್ವಲ್ಪ ದಿವಸಗಳಲ್ಲಿಯೇ ದೇಶಭಕ್ತ ದಿವಾಕರ ರಂಗರಾಯರು ಈ ವಿಷಯದಲ್ಲಿ ಮಾಡಿದ ಪ್ರಯತ್ನವೂ ಫಲಕಾರಿಯಾಗಲಿಲ್ಲ. ಅವೆಲ್ಲ ಕಾಲಕ್ಕೂ ನಾವೇ ಸಂಪಾದಕರಾಗ್ಗಿ ನಿಯೋಜಿತರಾಗಿದ್ದೆವು. ಆಗ ಅದು ನಮಗೂ ಬೇಕೇ ಆಗಿತ್ತು. ಆದರೆ ಆಗ ಆ ಯೋಗವು ಒದಗಿ ಬರಲಿಲ್ಲ. ಯೋಗಾಯೋಗವು ಎಂಥ ವಿಲಕ್ಷಣವಾದುದೋ ನೋಡಿರಿ! ದೇವರ ಇಚ್ಛೆಯಿಲ್ಲದೆ ಕೇವಲ ಮನುಷ್ಯ ಪ್ರಯತ್ನವು ವ್ಯರ್ಥವಾದುದೆಂಬುದನ್ನು ನಿದರ್ಶನಕ್ಕೆ ತಂದುಕೊಡುವ ಉದ್ದೇಶದಿಂದಲೋ ಏನೋ, ದೇವರು ಆವೆಲ್ಲ ಪ್ರಯತ್ನಗಳನ್ನು ವಿಫಲಗೊಳಿಸಿದನು. ಇಂದು ಕನಸು ಮನಸಿನಲ್ಲಿರದೆ ಆಕಸ್ಮಿಕವಾಗಿ ಈ ಯೋಗವನ್ನು ಒದಗಿಸಿಕೊಟ್ಟಿರುವನು. ಆದಕಾರಣ ಇದು ಕೇವಲ ಪರಮಾತ್ಮನ ಇಚ್ಛೆಯೆಂದು ಬಗೆದು ಅದಕ್ಕೆ ತಲೆಯನ್ನು ಬಗ್ಗಿಸಿ, ಸಂಪಾದಕತ್ವವನ್ನು ವಹಿಸಿ ಶ್ರೀ ಗಣೇಶಾಯನಮಃ ಎಂದು ಅಂದು ಇಂದು ಲೆಕ್ಕಣಿಕೆಯನ್ನು ಎತ್ತಿರುವೆವು. ಯಾವ ಪರಮಾತ್ಮನು ನಮಗೆ ಸಂಪಾದಕತ್ವವನ್ನು ವಹಿಸಲು ಪ್ರೇರಿಸಿರುವನೋ ಅದೇ ಪರಮಾತ್ಮನು ಅದನ್ನು ನಿರ್ವಹಿಸುವ ಶಕ್ತಿಯನ್ನು ಕೊಟ್ಟು ಕಾಪಾಡಲೆಂದು ಅನನ್ಯಭಾವದಿಂದ ಬೇಡಿಕೊಳ್ಳುತ್ತೇವೆ.

ಕನ್ನಡಿಗನು ಹೊರಟು ಹತ್ತು ವರ್ಷಗಳಾದವು. ದಿನಪತ್ರಿಕೆಗೆ ಧಾರವಾಡವು ಅನುಕೂಲ ಸ್ಥಳವಾದುದರಿಂದ ಇಲ್ಲಿಗೆ ಬರಬೇಕೆಂದು ಆತನು ಎರಡು ಸಲ ಪ್ರಯತ್ನಮಾಡಿದನು. ಸಾಧ್ಯವಾಗಲಿಲ್ಲ. ಧಾರವಾಡವು ಕನ್ನಡಿಗನಿಗೆ ಅಪರಿಚಿತವಾದ ಸ್ಥಳವು. ಆದರೆ ಮತ್ತೊಂದು ದೃಷ್ಟಿಯಿಂದ ಕನ್ನಡಿಗನು ಕರ್ನಾಟಕದವನು. ಪ್ರತಿಯೊಂದು ಮಹತ್ವದ ಪ್ರಶ್ನೆಯನ್ನು ಇಡೀ ಕರ್ನಾಟಕದ ದೃಷ್ಟಿಯಿಂದ ವಿಚಾರಮಾಡುವುದೊಂದು ಆತನ ಚಟ. ಆದುದರಿಂದಲೇ ಆತನು ಬಾಗಲಕೋಟೆಯಲ್ಲಿ ಪತ್ರವನ್ನು ನಿಲ್ಲಿಸಿ, ಯಂತ್ರಸಾಮಗ್ರಿಯನ್ನೆಲ್ಲ ಕಟ್ಟಿಕೊಂಡು ಬಂದು, ಧಾರವಾಡದವರ ಉಡಿಯಲ್ಲಿ ಬಿದ್ದು ಈ ಪತ್ರವನ್ನು ಹೊಸದಾಗಿ ಹೊರಡಿಸಿರುವನು. ಶ್ರೀ ಕೃಷ್ಣನು ಹುಟ್ಟಿದ್ದು ಒಂದು ಕಡೆಗೆ; ಬೆಳೆದದ್ದು ಬೇರೊಂದು ಕಡೆಗೆಯಲ್ಲವೆ? ಆತನು ತನ್ನ ಹಾರೈಕೆಗೆ ಅನುಸರಿಸಿ ಇಲ್ಲಿ ಹಾರಿ ಏನೋ ಬಂದನು. ಆದರೆ ಇಂಥ ಭಾರವನ್ನು ಹೊತ್ತುಕೊಂಡು ಹೋಗುವದಕ್ಕೆ ಧಾರವಾಡದವರ ಸಹಾಯದ ಅಪೇಕ್ಷೆಯಿದೆಯಲ್ಲವೆ?

ಇನ್ನು ಉಳಿಯಿತು, ಕನ್ನಡಿಗನ ಸಾಹಸದ ವಿಷಯ. ಕನ್ನಡಿಗನು ತಂತಿಗಳ ಮೂಲಕವಾಗಿ ಸುದ್ದಿಗಳನ್ನು ತರಿಸಿ ಪ್ರಕಟಿಸುವನು. ಮತ್ತೆ ಹೀಗೆ ವರ್ಷಕ್ಕೆ ಸಾವಿರಾರು ರೂಪಾಯಿಗಳನ್ನು ಕೇವಲ ತಂತಿಗಳನ್ನು ತರಿಸುವದಕ್ಕಾಗಿಯೇ ವೆಚ್ಚ ಮಾಡಿದರೂ **ಪತ್ರಿಕೆಯ ಬೆಲೆಯನ್ನು ಒಂದೇ ಬಿಲ್ಲೆಯಾಗಿ** ಇಟ್ಟಿರುವನು. ಈಗಿನ ದಿನಗಳಲ್ಲಿ ವಾರಪತ್ರಿಕೆಗಳಿಂತಲೂ ದಿನಪತ್ರಿಕೆಗಳಿಗೆ ಮಹತ್ವ ಹೆಚ್ಚು. ಮತ್ತು ತಂತಿಗಳ ಮೂಲಕವಾಗಿ ಸುದ್ದಿಗಳನ್ನು ತರಿಸದಿದ್ದರೆ ಅದು ನಿಜವಾಗಿ ದಿನಪತ್ರಿಕೆಯಲ್ಲವೆಂದೇ ಹೇಳಬಹುದು. ಏಕೆಂದರೆ ತಂತಿ, ಉಗಿಬಂಡಿ, ಉಗಿಹಡಗುಗಳ ಮೂಲಕ, ದೂರ ದೂರ ಕಾಣಿಸುವ ದೇಶಗಳು ಸಮೀಪಸಮೀಪಕ್ಕೆ ಬಂದಿವೆ. ಇಡೀ ಪೃಥ್ವಿಯೊಳಗಿನ ಜನರೆಲ್ಲರ ಒಂದೇ ದೋಣಿಯಲ್ಲಿ ಕುಳಿತವರಂತೆ ಅವರ ಸ್ಥಿತಿಯಾಗಿದೆ. ಒಂದು ಭಾಗದಲ್ಲಾದ ಅದ್ಭುತ ಸಂಗತಿಯ ಪರಿಣಾಮವು ಅರಕ್ಷಣದಲ್ಲಿ ಮತ್ತೊಂದು ಭಾಗದ ಮೇಲೆ ಆಗುತ್ತದೆ. ದಿನದಿನಕ್ಕೆ—ಅದೇಕೆ—ಕ್ಷಣಕ್ಷಣಕ್ಕೆ ಸುದ್ದಿಗಳು ಬರದಿದ್ದರೆ ಅವು ಹಳಸಿ ಹೋಗುತ್ತವೆ. ಚಲತ್‌ಚಿತ್ರಪಟಗಳ ಮೇಲಿನ ಚಿತ್ರಗಳನ್ನು ನೋಡುವವನು ಒಂದಿಷ್ಟು ಅತ್ತ ಮೋರೆಯನ್ನು ತಿರುಗಿಸಿದರೆ ಸಾಕು, ಎಷ್ಟೋ ನೋಟಗಳನ್ನು ಕಳೆದುಕೊಳ್ಳುವದಿಲ್ಲವೆ? ಆತನು ಕಣ್ಣೊಳಗೆ ಎಣ್ಣೆಯನ್ನು ಹಾಕಿಕೊಂಡು ನೋಡಲಿಕ್ಕೆ ಬಿರಬಿರನೆ ಕಣ್ಣುಗಳನ್ನು ಬಿಟ್ಟುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಹಾಗೆ ಜನರ ಸ್ಥಿತಿಯಾಗಿದೆ! ಜನರು ಕಣ್ಣು ಕಿವಿಗಳೆರಡನ್ನೂ ಚೆನ್ನಾಗಿ ತೆರೆದು ಕಾದುಕೊಳ್ಳದೆ ನಿರ್ವಾಹವಿಲ್ಲ. ಚಲತ್ ಚಿತ್ರಪಟವನ್ನು ನೋಡುವವನ್ನು ಬಿಟ್ಟರೆ ಸಾಗೀತು. ಆದರೆ ತನ್ನ ಲಾಭಹಾನಿಗಳಿಗೂ ಜೀವಿತಕ್ಕೂ ಪ್ರತ್ಯಕ್ಷ ಸಂಬಂಧವುಳ್ಳ ಸುದ್ದಿಗಳನ್ನು ಆಗಿಂದಾಗ ತಿಳಿದುಕೊಳ್ಳದಿದ್ದರೆ ಸಾಗೀತೆ? ಇಲ್ಲ. ಅಲ್ಲದೆ, ನಮ್ಮ ರಾಷ್ಟ್ರದಲ್ಲಿ ದಿನದಿನಕ್ಕೆ ಹೊಸ ಹೊಸ ಪ್ರಶ್ನೆಗಳು ಹುಟ್ಟುತ್ತವೆ. ಅವನ್ನು ಆಗಿಂದಾಗ ಬಿಡಿಸಬೇಕಾಗುತ್ತದೆ. ... ಗಳ ಅನ್ನವು ಯಾರಿಗೆ ಬೇಕಾಗಿದೆ? ಇದೆಲ್ಲ ನಿಜ. ಆದರೆ ಒಂದೇ ಬಿಲ್ಲೆಯಲ್ಲಿ ಇದನ್ನೆಲ್ಲ ಪೂರೈಸುವುದು ಅತ್ಯಂತ ಸಾಹಸದ ಮಾತು. ಇಂಥ ಸಾಹಸವನ್ನು ಕೈಕೊಂಡವರಲ್ಲಿ ಕನ್ನಡಿಗನೇ ಮೊಟ್ಟಮೊದಲಿನವನು. ಈಗ ಎರಡು ವರ್ಷಗಳ ಹಿಂದೆ ಆತನು ಇದಕ್ಕೆ ಕೈ ಹಾಕಿದ್ದನು. ಆದರೆ ಅಷ್ಟರಲ್ಲಿ ಅದರ ಸಂಪಾದಕರಿಗೆ ಸೆರೆಮನೆಗೆ ಹೋಗಬೇಕಾದುದರಿಂದ ಅದು ಆಗ ಪೂರ್ಣವಾಗಿ ಕೈಗೂಡಲಿಲ್ಲ. ಅದನ್ನೇ ಈಗ ಪುನಃ ಕೈಕೊಂಡಿರುವನು. ಇದೇನೂ ಹೊರತಲ್ಲ. ಹೀಗೆ ಅತ್ಯಂತ ಕಡಿಮೆ ಬೆಲೆ ಇಡುವುದಕ್ಕೆ ಮತ್ತೇನೂ ಕಾರಣವಿಲ್ಲ. ತೀರ ಬಡವರೂ ಈಗ ಓದುವ ಹವ್ಯಾಸ; ಅಲ್ಲದೆ ವಾಚನಾಭಿರುಚಿಯನ್ನು ಬೆಳಿಸುವ ದೃಷ್ಟಿಯಿಂದಲೂ ಕಡಿಮೆ ಬೆಲೆ ಇಡುವುದು ಅನುಕೂಲ, ಅರ್ಥಾತ್, ಆರ್ಥಿಕ ದೃಷ್ಟಿಯಿಂದ ಇದು ಕನ್ನಡಿಗನಿಗೆ ಪೂರೈಸಬೇಕಾದರೆ, ಪ್ರತಿಯೊಬ್ಬ ಕನ್ನಡಿಗನು ಇದು ತನ್ನ ಪತ್ರಿಕೆಯೆಂದೇ ಭಾವಿಸಿ ಇದನ್ನು ಕೊಳ್ಳಬೇಕು. ನಾಲ್ಕೈದು ಸಾವಿರ ಪ್ರತಿಗಳು ಖರ್ಚಾದರೆ ಮಾತ್ರವೇ ಇದು ಸಾಧ್ಯವಿದೆ. ಅಗ್ಗ ಬೆಲೆಯಿದ್ದರೆ ಹಳ್ಳಿಗಳ ವರೆಗೆ ಹೋಗಿ ಸುದ್ದಿಗಳು ಮುಟ್ಟುವದಿಲ್ಲ. ಇಡೀ ಕರ್ನಾಟಕದ ಮೂಲೆಮೂಲೆಗಳಲ್ಲಿ ... ಜಾಗೃತಿಯನ್ನು ಮಾಡುವುದೇ 'ಕನ್ನಡಿಗ'ನ ಹಂಬಲ. ಆದರೆ ಇದಕ್ಕೆ ಕನ್ನಡಿಗರೆಲ್ಲರ ಬೆಂಬಲ ಬೇಕಲ್ಲವೇ! ಕನ್ನಡಿಗರು ಈ ರೀತಿಯಾಗಿ ಕೈಕೊಟ್ಟು, ಕನ್ನಡಿಗನ ... ಯನ್ನು ಕೈಗೂಡಿಸ ವರೆಂದು ನಾವು ಹಾರೈಸುತ್ತೇವೆ.

ಶ್ರೀ

ಸ್ವಾಗತವು

ಕನ್ನಡದ ... ನ ವನಪೂಲ ... ಗೆಯ್ದ ಸೀ ... !
ನಿನ್ನವನು, ಕನ್ನಡಿಗ ಗೆಳೆಯ, ಬಾರ!
ನನ್ನ ಹೃದಯವು ನಿನ್ನ ಮನೆ ಇದೋ ಸ್ವಾಗತವು!
ಕನ್ನಡಿಗ, ... ವೃಷ್ಟಿ! ಮನೆಗೆ ಬಾರಾ!

— ನಾ ರಾ

ಕರ್ನಾಟಕ ದೇವಿ

ಚೇತರಿಸಿಕೊಂಡೇಳಿ ಜೀವನದ ಚೆಲುವೆ
ನೂತನದ ನಾಡಿನಲಿ ನೂತನೆಯು ಆಗಿ॥
ಒಳ್ಳೆವಳು ಇದ್ದು ನೀ ಮರವು ಹಾಸಿಗೆಯಲ್ಲಿ
ಸುಳ್ಳಸಿದ್ದೆಯು ಗೃವುನೆಸಿತೆಸಿತು ಒಲವೆ ॥ ೧ ॥

ಪ್ರೈವಾನದ ನೆಂಳಲ್ಲಿ ಮಂದುಡಿ ಪವಡಿಸಿ ದಾಕೆ।
ವ್ಯೋಮಭೂಮಿಯ ತುಂಬಿ ನಿಲುವಾಕೆಯಂಗೆ ॥ ೨ ॥
ಸರ್ವ ಹೃದಯದ ಒಲ್ಮೆಯುಡಿಗೆಯೆಂದನು ಹೊಸೆದು
ಸರ್ವಕಾಲದಿ ಧರಿಸಿ ಸಜದಲಿ ರವಿ ಸೆ ॥ ೩ ॥
ಭೇದಬಂಧನವೆಂಬ ಮುಳ್ಳು ಪಂಜರದಲ್ಲಿ
ಸೀದು ಹೋಗುವದೇಕೆ ಸರ್ವಗತ ಬಲವೇ ॥ ೪ ॥

— ರ. ಶ್ರೀ. ಮು

ತುರಂಗಕ್ಕೆ ಹೋಗಿ ಬಂದರೆ ಏನಾಗುವದು?

ಸಿಮ ಲಾ ತಾ॥ ೨೧ - ತುರಂಗದಿಂದ ಬಿಡುಗಡೆ ಹೊಂದಿದ ಮೇಲೆ ಮನುಷ್ಯರ ತೂಕವು ಕಡಿಮೆಯಾಗುವದೆಂದು ಸರ್ವಸಾಧಾರಣವಾಗಿ ಜನರ ನಂಬಿಗೆಯಾಗಿದೆ. ಆದರೆ ಇದೀಗ ಪ್ರಸಿದ್ಧವಾಡಲ್ಪಟ್ಟ ತುರಂಗಖಾತೆಯ ಸರಕಾರಿ ವರದಿಯಿಂದ ತಿಳಿದುಬರುವದೇನಂದರೆ- ೧೦೦ ಕ್ಕೆ ೫೫ ಜನರ ತೂಕವು ಹೆಚ್ಚು ಆಗಿದ್ದು ೩೧ ಜನರ ತೂಕವು ಮೊದಲಿನಷ್ಟೆ ಇರುತ್ತದೆ. ಕೇವಲ ೧೪ ಜನರ ತೂಕವು ಮಾತ್ರ ಕಡಿಮೆಯಾಗಿದ್ದು ಅವರಲ್ಲಿ ಯಾವರೂ ೫ ಪೌಂಡಿನಗಿಂತ ತೂಕ ಕಡಿಮೆಯಾದವರು ವಿರಳರಿರುತ್ತಾರೆ

ಹೈದರಾಬಾದದಲ್ಲಿ

ಪ್ರಜಾಪಕ್ಷಕ್ಕೆ ಅಡ್ಡಿ

ಅಕೋಲಾ ತಾ ೨೧ — ಇಲ್ಲಿ ಹೊರಡುತ್ತಿರುವ ರಾಷ್ಟ್ರೀಯ ಪಕ್ಷದ ವಾರಪತ್ರಿಕೆಯಾದ ಪ್ರಜಾಪಕ್ಷಕ್ಕೆ ಹೈದರಾಬಾದದ ಅಧಿಪತಿಗಳು ತಮ್ಮ ಸಂಸ್ಥಾನದಲ್ಲಿ ಅಡ್ಡಿಯನ್ನುಂಟು ಮಾಡಿದ್ದಾರೆ.

ಇಹವೃತ್ತ.

... ವಾರ ದಿವಸ ... ಯ ೫॥ ಘಂಟೆಗೆ ಶಾಂಕರೇಶ್ವರ ... ಲೋಕಮಾನ್ಯ ವಕ್ತೃತ್ವ ಸ್ಪರ್ಧೆಯು ಏರ್ಪಡಿಸಲ್ಪಟ್ಟಿತ್ತು. ಈ ಸ್ಪರ್ಧೆಯಲ್ಲಿ ಐವರು ವಿದ್ಯಾರ್ಥಿಗಳು ಭಾಗ ತೆಗೆದುಕೊಂಡಿದ್ದರು. ಹಿಂದೂಸ್ಥಾನದ ಇತಿಹಾಸದಲ್ಲಿ ವಿಜಯನಗರ ... ಮಾಡಿದ ಕಾರ್ಯ ಮತ್ತು ... ತ್ವ ಶಿಕ್ಷಣದಲ್ಲಿಯ ... ಇವೆರಡು ಸ್ಪರ್ಧೆಯ ವಿಷಯಗಳಾಗಿದ್ದವು. ಶ್ರೀ ... ರಾಮರಾಯರು ... ಶ್ರೀ ಮುದವೀಡು ... ವಾರರು ಹಾಗು ಶ್ರೀ ಪೆರೂರ ರಾಮರಾಯರು ಪರೀಕ್ಷಕರಾಗಿ ಆರಿಸಲ್ಪಟ್ಟಿದ್ದರು. ಸ್ಪರ್ಧೆಯು ಸುಮಾರು ೧॥ ಗಂಟೆಯವರೆಗೆ ನಡೆದು ಮೊದಲು ಬಂದ ಮೂವರಿಗೆ ಪಾರಿತೋಷಕವನ್ನು ಕೊಡಲಾಯಿತು.

ಪಂಡಿತ ತಾರಾನಾಥರ 'ಪ್ರೇಮ' ಪತ್ರಿಕೆಯು ಅಕ್ಟೋಬರ ತಿಂಗಳಿನಿಂದ ಇಲ್ಲಿಂದ ಪ್ರಕಟಿಸಲ್ಪಡುವದೆಂದೂ ಇಲ್ಲಿಯ ಕನ್ನಡ ... ಸಂಘದವರು ಈ ಪತ್ರಿಕೆಯ ಪ್ರಕಟನಾ ಕಾರ್ಯದ ಜವಾಬದಾರಿಯನ್ನು ವಹಿಸಿಕೊಂಡಿರುವರೆಂದೂ ತಿಳಿದುಬರುತ್ತದೆ.

ಪ್ಯಾರಿಸ ಪಟ್ಟಣದಲ್ಲಿರುವ ಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ ಹಾಸನದ ರಾಜೇರಾಯರು ಶ್ರೀ ಅ. ನ. ಕೃಷ್ಣರಾಯರಿಂದ ಕೂಡಿಕೊಂಡು ಸೋಮವಾರ ದಿವಸ ಇಲ್ಲಿಗೆ ಬಂದಿದ್ದರು. ಜಯಕರ್ನಾಟಕದ ಸಂಪಾದಕರಾದ ಶ್ರೀ ರಾಮಚಂದ್ರರಾವ ಬೆಳಗಾವಿ ಇವರ ಮನೆಯಲ್ಲಿ ಅಂದು ಸಾಯಂಕಾಲ ಕನ್ನಡಿಗರ ಸಭೆ ಕೂಡಿತ್ತು. ಶ್ರೀ ರಾಜೇರಾಯರು ಫ್ರಾನ್ಸ ದೇಶದಲ್ಲಿಯ ತಮ್ಮ ಅನುಭವವನ್ನು ಕುರಿತು ಹೇಳಿದರು.

ಮಂಗಳವಾರ ದಿವಸ ಕರ್ನಾಟಕ ಕಾಲೇಜದಲ್ಲಿ ಫ್ರಾನ್ಸ ದೇಶದ ಸಾಹಿತ್ಯದ ವಿಷಯವಾಗಿ ಅವರ ಉಪನ್ಯಾಸವಾಯಿತು.

ವಿದ್ಯಾರ್ಥಿಗಳು

ಖಾದಿಯನ್ನೇ ಧರಿಸಬೇಕು

ಭಾವನಗರ ಸಂಸ್ಥಾನದಲ್ಲಿಯ ಬಾಲಮಂದಿರ ಹಾಗು ಅಧ್ಯಾಪನ ... ದರದ ವ್ಯವಸ್ಥಾಪಕರು ತಮ್ಮ ಶಾಲೆಗಳಲ್ಲಿ ಕಲಿಯಲು ಬರುವ ವಿದ್ಯಾರ್ಥಿಗಳೆಲ್ಲರೂ ಕೈನೂಲು ಹಾಗು ಕೈಮಗ್ಗದ ಅರಿವೆಗಳನ್ನೇ ಧರಿಸಬೇಕೆಂದು ನಿಯಮ ಮಾಡಿದ್ದಾರೆ. ಇನ್ನು ಮುಂದಿನದು ವ್ಯವಸ್ಥಾಪಕರಿಂದರೂ ಪ್ರತಿಯೊಬ್ಬ ವಿದ್ಯಾರ್ಥಿಯು ನೂಲು ತೆಗೆದು ಇಂತಿಷ್ಟು ನೂಲು ಕೊಡತಕ್ಕದ್ದೆಂದು ಗೊತ್ತು ಮಾಡಿದ್ದಾರೆ

ರತ್ನಾಗಿರಿ ತುರಂಗದಲ್ಲಿ ಅಪ್ಪಾಸಾಹೇಬರ ಉಪವಾಸ

ಸರ್ದಾರ ಶಾರ್ದೂಲಸಿಂಗರಿಗೆ ೬ ತಿಂಗಳ ಕಠಿಣ ಶಿಕ್ಷೆ.

ರತ್ನಾಗಿರಿ ತುರಂಗದಲ್ಲಿ ಅಪ್ಪಾಸಾಹೇಬರ ಉಪವಾಸ

ರತ್ನಾಗಿರಿ ತಾ|| ೨೧— ಅಪ್ಪಾಸಾಹೇಬ ಪಟವರ್ಧನ ಇವರು ಮಹಾತ್ಮರಿಗೆ ಸಹಾನುಭೂತಿಪರರಾಗಿ ಇಲ್ಲಿಯ ತುರಂಗದಲ್ಲಿ ಉಪವಾಸವನ್ನು ಪ್ರಾರಂಭಿಸಿರುವರಾಗಿ ತಿಳಿಯಬರುತ್ತದೆ ಮಹಾತ್ಮರು ಉಪವಾಸವನ್ನು ನಿಲ್ಲಿಸಿದ ದಿವಸವೇ ಇವರಾದರೂ ಉಪವಾಸವನ್ನು ಬಿಡತಕ್ಕವರಿದ್ದಾರೆ

ಸರ್ದಾರ ಶಾರ್ದೂಲಸಿಂಗರಿಗೆ

೬ ತಿಂಗಳ ಕಠಿಣ ಶಿಕ್ಷೆ.

ಲಾಹೋರ— ಶ್ರೀ ಅಣೆಯವರ ತರುವಾಯ ಅಖಿಲ ಭಾರತ ಕಾಂಗ್ರೆಸ್ ಸಭೆಯ ಹಂಗಾಮಿ ಅಧ್ಯಕ್ಷರಾದ ಸರದಾರ ಶಾರ್ದೂಲಸಿಂಗರಿಗೆ ೬ ತಿಂಗಳ ಕಠಿಣ ಕೈದು ಹಾಗು ೫೦೦ ರುಪಾಯಿ ದಂಡ ಹೀಗೆ ಶಿಕ್ಷೆ ವಿಧಿಸಲ್ಪಟ್ಟಿದೆ ದಂಡ ಕೊಡದಿದ್ದರೆ ಮತ್ತೆ ಒಂದು ತಿಂಗಳ ಶಿಕ್ಷೆ ಹೇಳಲಾಗಿದೆ ಪರದೇಶಿ ಅರಿವೆಯ ಅಂಗಡಿಯಮುಂದೆ ಪಿಕಟಿಂಗ ಮಾಡುವಾಗ ಇವರು ಇತರ ಮೂವರು ಸ್ವಯಂಸೇವಕರೊಂದಿಗೆ ಸೆರೆಹಿಡಿಯಲ್ಪಟ್ಟರು ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೩ ತಿಂಗಳ ಕಠಿಣ ಶಿಕ್ಷೆ ಹೇಳಲಾಗಿದೆ

ಬೆಳಗಾವಿಯ ಸುದ್ದಿ.

ತಾ|| ೨೦ ನೆ ದಿವಸ ಸಾಯಂಕಾಲಕ್ಕೆ ಅಭ್ಯಾಸ ಮಂಡಲದ ಪರವಾಗಿ ಅರುಣೋದಯ ಕಚೇರಿಯಲ್ಲಿ ಸಾಹಿತ್ಯಾಭಿಮಾನಿಗಳ ಸಭೆ ಸೇರಿತ್ತು. ಹುಬ್ಬಳ್ಳಿಯ ನ್ಯೂ ಇಂಗ್ಲೀಷ ಶಾಲೆಯ ಶಿಕ್ಷಕರೂ, ವಿಜಯನಗರೋತ್ಸವ ಮಂಡಳದ ಓರ್ವ ಕಾರ್ಯಕರ್ತರೂ ಆದ ಶ್ರೀ ಜಿ. ಎಸ್ ಮೊಕಾಶಿಯವರು ಕರ್ನಾಟಕ ಏಕೀಕರಣದ ಬಗ್ಗೆಯೂ ಮತ್ತು ವಿಜಯನಗರ ಸಾಮ್ರಾಜ್ಯದ ಷಟ್ ಶತ್ ಸಾಂವತ್ಸರಿಕ ಉತ್ಸವದ ಬಗ್ಗೆಯೂ ರಸವತ್ತಾದ ಭಾಷಣ ಮಾಡಿದರು

ತಾ|| ೨೨ ನೆ ದಿವಸ ಮುಂಜಾನೆಯಲ್ಲಿ ಠಳಕವಾಡಿಯಲ್ಲಿರುವ ಮಧ್ವಾಚಾರ್ಯ ಮುನವಳ್ಳಿಯವರ ಬಂಗಲೆಯ ಹತ್ತಿಲಲ್ಲಿ ಸಿಡಿಲು ಬಿದ್ದು ಈಚಲಿನ ಗಿಡವು ಸುಟ್ಟು ಹೋಗಿದೆ ಬೇರೆ ಅಪಘಾತವೇನೂ ಆಗಿರುವದಿಲ್ಲ

ಶ್ರೀ ಮಹಾದೇವಭಾಯಿ ದೇಸಾಯಿಯವರ ತಕ್ಕ ಇಲ್ಲಿಯ ಸೆರೆವನೆಗೆ ತಂದಿರುವರಾಗಿ ಸುದ್ದಿಯಿದೆ

ಬೆಳಗಾವಿ ತಾ|| ೨೨ — ಕಳೆದ ಎರಡು ದಿವಸಗಳಿಂದ ಅಡ್ಡಮಳೆಯಂತೆ ಮಳೆಯು ಸೆಳಕುಸೆಳಕು ಬೀಳುತ್ತಿರುವವು ರೋಗಾದಿಗಳು ಏನೂ ಇಲ್ಲ.

ರವಿವಾರ ದಿವಸ ಶ್ರೀ. ಹಣಮಂತರಾವ ಕೌಜಲಗಿಯವರ ಅಧ್ಯಕ್ಷತೆಯ ಕೆಳಗೆ ಮಹಾತ್ಮರ ಪ್ರಾಣಾಂತಿಕ ಉಪವಾಸದ ಬಗ್ಗೆ ಸಾರ್ವಜನಿಕ ಸಭೆ ಕೂಡಿತ್ತು ಶ್ರೀ ಕೇಶವರಾವ ಗೋಖಲೆ, ಜಯದೇವ ಕುಲಕರ್ಣಿ ಪಾಚ್ಛಾಪುರ ದೇಶಪಾಂಡೆ ಮತ್ತು ಶ್ರೀ ದಾಕೂರ ಇವರ ಭಾಷಣಗಳಾದವು ಸುಮಾರು ೫೦೦ ಜನರು ಸಭೆಗೆ ಕೂಡಿದ್ದರು

ಕಳೆದ ಬುಧವಾರ ಕರ್ನಾಟಕ ಪ್ರಾಂತಿಕ ಹರಿಜನ ಸೇವಕ ಸಮಿತಿಯ ಸಭೆ ಕೂಡಿ ಪ್ರಾಂತಿಕ ಹರಿಜನ ಸೇವಕ ಸಮಿತಿಯ ನಿಧಿಯ ಲೆಕ್ಕ ಪಾಸಾಯಿತು

ಸರದಾರ ವಲ್ಲಭಭಾಯಿಯವರ ಮಗಳಾದ ಕುಮಾರಿ ಮಣಿಬೇನ ಪಟೇಲರು ತಾ||೨೭-೮-೩೩ ನೇ ದಿವಸ ಹಿಂಡಲಗಿ ಸೆರೆಮನೆಯಿಂದ ಬಿಡುಗಡೆ ಹೊಂದಿದರು

ಶ್ರೀ ಪಂಡಿತ ರಾಯಪ್ಪ ಚಿಕ್ಕೋಡಿಯವರು ಮೈಯಲ್ಲಿ ನೆಟ್ಟಗಿಲ್ಲದ್ದರಿಂದ ಅವರು ಮುಂಬಯಿ ಬ್ರಾಹ್ಮಣೇತರ ಯುವಕ ಪರಿಷತ್ತಿಗೆ ಹೋಗುವಂತಿಲ್ಲ ಈ ಕಾರಣ ಪರಿಷತ್ತನ್ನು ಒಂದು ವಾರದ ವರೆಗೆ ಮುಂದೆ ಹಾಕಿದ್ದಾರೆ. ಚಿಕ್ಕೋಡಿಯವರೇ ಅಧ್ಯಕ್ಷರಾಗುವರು

ಕಾರವಾರ ಜಿಲ್ಹೆಯಲ್ಲಿ ಭೂಮಿಗಳ ಜಪ್ತಿ ಕೈದು ಹಾಗು ಶಿಕ್ಷೆ.

ಕಾರವಾರ ಜಿಲ್ಹೆಯಲ್ಲಿ ನಡೆದಿದ್ದ ಕರನಿರಾಕರಣ ಚಳವಳಿಯನ್ನು ತಾ|| ೧ನೇ ಅಗಸ್ಟದಿಂದ ಹಿಂತೆಗೆದುಕೊಳ್ಳಲಾಗಿದೆ ಅಂದಿನಿಂದ ಅಲ್ಲಿಯ ಕಾಂಗ್ರೆಸ ಕೆಲಸಗಾರರು ವೈಯಕ್ತಿಕ ಕಾಯದೆಭಂಗವನ್ನು ಪ್ರಾರಂಭಿಸಿದ್ದಾರೆ

ಸಿರ್ಸಿಯ ಪ್ರಸಿದ್ಧ ಕಾಂಗ್ರೆಸ ಕೆಲಸಗಾರರಾದ ಶ್ರೀ ವಾಮನ ಅನಂತ ಹೊದಕೆಯವರನ್ನು ತಾ|| ೭ನೆಯ ದಿವಸ ಸಿದ್ದಾಪುರದಲ್ಲಿ ಸೆರೆಹಿಡಿಯಲಾಯಿತು. ಚಳವಳಿಯಲ್ಲಿ ಭಾಗತೆಗೆದುಕೊಳ್ಳದೆ ಇದ್ದ ಜನರು ಹಸಿವೆಯಿಂದ ಕಂಗೆಡುತ್ತಿರುವ ಕರನಿರಾಕರಣವಾದಿಗಳಿಗೆ ಸಹಾಯ ಮಾಡತಕ್ಕದ್ದೆಂದು ಅವರು ಕೇಳಿಕೊಂಡಿದ್ದೇ ಅವರ ಅಪರಾಧವಾಗಿದೆ

ಉಡುಪಿಯ ನಾರಾಯಣಭಟ್ಟರು ತಾ|| ೫ನೆಯ ದಿವಸ ಸಿದ್ದಾಪುರದಲ್ಲಿ ಮಹಾತ್ಮಾ ಗಾಂಧಿಯವರ ಸಂದೇಶದ ಪ್ರತಿಗಳನ್ನು ಹಂಚಿದರು ಪೋಲೀಸರು ಇದಕ್ಕಾಗಿ ಅವರನ್ನು ಸೆರೆ ಹಿಡಿದು ಖಟ್ಲೆಗೆ ಗುರಿಮಾಡಿದರು ಮ್ಯಾಜಿಸ್ಟ್ರೇಟರು ಅವರಿಗೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

ಕಾನುವಳ್ಳಿಯ ಶ್ರೀ ಶಿವರಾಮ ಮಂಜಯ್ಯ ಹೆಗಡೆಯವರು ಸಿದ್ದಾಪುರ ತಾಲೂಕದ ಕರನಿರಾಕರಣ ಚಳವಳಿಯ ಮುಖಂಡರೊಬ್ಬರು ೧೯೩೨ರಲ್ಲಿ ಸೆರೆಮನೆಯಿಂದ ಹೊರಬೀಳುವಾಗ ಅವರಿಗೆ ಪೆರೋಲ ಹಚ್ಚಲಾಗಿತ್ತು ಅಂದಿನಿಂದ ಅವರು ಪೋಲೀಸರಿಗೆ ಸಿಕ್ಕಿರಲಿಲ್ಲ ಮೊನ್ನೆ ಅಗಸ್ಟ ೯ನೇ ತಾರೀಖಿಗೆ ಅವರು ತಾವಾಗಿಯೇ ಪೋಲೀಸರಿಗೆ ಸ್ವಾಧೀನರಾದರು ಅವರ ಮನೆತನದ ಹೊಲಗಳೆಲ್ಲ ಜಪ್ತಾಗಿ ಸರಕಾರದ ಸ್ವಾಧೀನವಾಗಿವೆ

ಸಿದ್ದಾಪುರದ ಶ್ರೀ ಗಣಪತಿ ಹೆಗಡೆ ಹೂವಿನಮನೆಯವರೂ ಮತ್ತು ಶ್ರೀ ಪುಟ್ಟು ಎಂಬವರಿಗೂ ಕ್ರಮವಾಗಿ ಮೂರು ಮತ್ತು ೬ ತಿಂಗಳ ಶಿಕ್ಷೆಯಾಗಿದೆ

ಬೀಳಗಿಯ (ಸಿದ್ದಾಪುರ ತಾಲೂಕ) ಶ್ರೀ. ವಾಮನ ದಾಸಪ್ಪ ಮಡಗಾವಕರರಿಗೆ ೬ ತಿಂಗಳ ಶಿಕ್ಷೆಯಾಯಿತು. ಅವರು ಹಿಂದಕ್ಕೆ ೬ ತಿಂಗಳ ಶಿಕ್ಷೆ ಭೋಗಿಸಿ ಬರುವಾಗ ಅವರಿಗೆ ಪೆರೋಲ ಹಚ್ಚಿದ್ದರು ಅದನ್ನು ಮುರಿದದ್ದಕ್ಕೆ ಈ ಶಿಕ್ಷೆಯಾಗಿದೆ ಅವರ ಹೊಲಗಳು ಜಪ್ತ ಮಾಡಲ್ಪಟ್ಟು ೪೦೦ ರೂಪಾಯಿಗೆ ಲಿಲಾವು ಆದವು

'ಗಣಪತಿ'ಯ ಅವತಾರ!

ಜಬಲಪುರದಲ್ಲಿ ಚಮ್ಮಾರಳೊಬ್ಬಳಿಗೆ ಒಂದು ವಿಚಿತ್ರ ಮಗುವು ಜನಿಸಿದೆ ಅದಕ್ಕಿರುವದು ಒಂದು ತಲೆ, ಒಂದು ಸೊಂಡಿಲು. ಕೈಯೂ ಇಲ್ಲ, ಕಾಲೂ ಇಲ್ಲ ಊರಿನ ಜನರೆಲ್ಲ ಇವಳ ಮನೆಯಲ್ಲೇ! ಪಾಪ! ಆ ಊರಿನ ಸಾರ್ವಜನಿಕರು ತಮ್ಮ ಊರಿನಲ್ಲಿ ಗಣಪತಿ ಅವತರಿಸಿದನೆಂದು ತಂಡತಂಡವಾಗಿ ದರುಶನ ತೆಗೆದುಕೊಳ್ಳುತ್ತಿದ್ದಾರೆ. ಇದರ ದೆಸೆಯಿಂದ ಆ ಹೆತ್ತ ಮಹಾತಾಯಿಗೆ ಹಣದ ಸೂರೆ! ದರ್ಶನಕ್ಕೆ ಬಂದವರೆಲ್ಲರೂ ಗಣಪತಿಗೆ ಮುಡಪನ್ನೊಪ್ಪಿಸುತ್ತಾರೆ

ಮಗುವನ್ನು ಬಲಿಕೊಟ್ಟ ಮಹಾತಾಯಿ

ಭರತಖಂಡದ ಅಸಂಖ್ಯಾತ ಜನರು ಪರಮಾತ್ಮನು ಒಬ್ಬನೇ ಆದರೂ ಅವನನ್ನು ಬೇರೆ ಬೇರೆ ವಿಧದಲ್ಲಿ ಪೂಜಿಸುತ್ತಾರೆ. ಅವನನ್ನು ತೃಪ್ತಿಗೊಳಿಸಲು ಪ್ರಾಣಿಗಳನ್ನೊ ಬಲಿಕೊಡುವದುಂಟು ಕೋಳಿ, ಕುರಿ, ಆಡು ಇಂಥವುಗಳನ್ನು ಬಲಿಕೊಡುವದು ಜನರಿಗೆ ಸಾಮಾನ್ಯವಾಗಿ ಹೋಗಿದೆ ಆದರೆ ಮಕ್ಕಳನ್ನು ಬಲಿಕೊಡುವದನ್ನು ಕೇಳಿದರೆ ಆಶ್ಚರ್ಯವಾಗುವದಲ್ಲವೆ? ಸರಸ್ವತಿ ದೇವಿಯನ್ನು ತೃಪ್ತಗೊಳಿಸಲು ಒಂದು ಸಣ್ಣ ಹುಡಿಗೆಯನ್ನು ಬಲಿಕೊಟ್ಟ ಒಬ್ಬ ಮಹಾತಾಯಿಯ ಕತೆಯನ್ನು ಕೊಂಚ ಕೇಳಿ! ಸಂಯುಕ್ತ ಪ್ರಾಂತಕ್ಕೆ ಸೇರಿದ ಅಗ್ರಾದಲ್ಲಿ ಒಬ್ಬ ಸಂಗೀತಗಾರಳಿದ್ದಳು ಬಹಳ ಒಳ್ಳೆ ಹಾಡುಗಾರತಿ ಏನೋ ಕಾರಣಾಂತರಗಳಿಂದ ಅವಳ ಕಂಠದ ಮಾಧುರ್ಯವು ಕಡಿಮೆಯಾಯಿತು ಸರಸ್ವತಿಯು ವಿದ್ಯಾಧಿಕಾರಿಣಿಯಷ್ಟೆ ಅವಳನ್ನು ತೃಪ್ತಗೊಳಿಸಿದರೆ ಧ್ವನಿಯು ಮೊದಲಿನಂತೆ ಸರಿಹೋಗುವದೆಂದು ನಂಬಿ ಆ ಮಹಾತಾಯಿಯು ಒಂದು ಮಗುವಿನ ಪ್ರಾಣವನ್ನು ಸರಸ್ವತಿಗರ್ಪಿಸಿದಳು! ಈ ರಾಕ್ಷಸೀ ಕೃತ್ಯವನ್ನು ನಡಿಸಿದ ಆ ಪಾಪಿಗೆ ಅವರ ಜನ್ಮಾಂತ್ಯ ಶಿಕ್ಷೆಯು ವಿಧಿಸಲ್ಪಟ್ಟಿತು

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗರ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು.

ಸ್ತ್ರೀಯರ ವಿಕಾರದಮೇಲೆ ರಾಮಬಾಣ ಔಷಧವು

ಶರಗು, ಬಿಳೀಶರಗು, ಕೆಂಪು ಶರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತನದ ಆದಮೇಲೆ ತಗದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಡ ಆಗುತ್ತದೆ

ಡಾ. ಕುಲಕರ್ಣೀಜ

ಲೆಬೋರೆಟರಿ ಮುಂಬಯಿ ನಂಬರ ೧೨

ಬಾಟ್ಲಿ ಕಿಮ್ಮತ್ತು ೧—೧೨—೦

ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು

ಗೀತೆಯ ಗುಟ್ಟು— ಶ್ರೀಮದ್ಭಗವದ್ಗೀತೆಯ ಮೂಲ ಶ್ಲೋಕ, ಸರಲ ಕನ್ನಡ ಅರ್ಥ ... ಇದರಲ್ಲಿ ೧೦೦ ಪುಟಗಳ ವಿವೇಚನೆ, ಕ್ರೌನ ೮ ೩೦೦ ಪುಟಗಳು-ಬೆಲೆಯು ಎರಡು ರೂಪಾಯಿ

ಉಪನಿಷತ್-ಪ್ರಕಾಶ— ಭಾಗ ೧ ಮತ್ತು ೨ ಈಶ, ಕೇನ, ಕಠ, ಪ್ರಶ್ನ, ಮಾಂಡೂಕ್ಯ ೧ನೇದರಲ್ಲಿ, ಮುಂಡಕ, ಐತರೇಯ, ತೈತ್ತಿರೀಯ ೨ನೇಭಾಗದಲ್ಲಿ ೧ನೇ ಭಾಗ ೧೭೬ ಮತ್ತು ೨ನೇ ಭಾಗ ೧೮೦ ಪುಟಗಳು. ಕ್ರೌನ ೮ ಬೆಲೆ ...

ಉಪನಿಷತ್-ರಹಸ್ಯ— ಪ್ರೊ. ರಾನಡೆಯವರ "A Constructive Survey of Upanishadic Philosophy" ಎಂಬ ಗ್ರಂಥದ ಕನ್ನಡ ಅನುವಾದ, ... ಉಪನಿಷತ್ತುಗಳು (... ಮುನ್ನುಡಿ ...) ... ಪುಟ ... ಬೆಲೆ ...

ಶ್ರೀರಾಮಕೃಷ್ಣ ಲೀಲಾಮೃತವು— ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ಅಧ್ಯಾತ್ಮ ಸಾಧನ ... ಪುಟ ... ಬೆಲೆ ...

ಎಲ್ಲ ಪುಸ್ತಕಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ಬೆಲೆ ... ಬೇರೆ

... ಕಾರ್ಯಾಲಯ, ಧಾರವಾಡ

यद्यत् परवशं दुःखं । यद्यदात्मवशं सुखम् ॥ मनु.

ಇನ್‌ಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್‌ಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಕರ್ನಾಟಕ

ಇನ್‌ಸ್ಯುಅರನ್ಸ
...ದ ಹಣವನ್ನು ಸ್ವದೇಶ
... ಉಳಿಸಬೇಕಾದರೆ.
... ಯುನಾಯಿಟೆಡ
... ಕಂ.ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು.
ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಶುಕ್ರವಾರ ಭಾದ್ರಪದ ಶುದ್ಧ ೫ ಶಕೆ ೧೮೫೫ ತಾ|| ೨೫-೮-೩೪ [ಸಂಚಿಕೆ ೧೦೫

ಮ. ಗಾಂಧಿ—ಸರೋಜನಿದೇವಿ ಭೆಟ್ಟಿ

ಮಹಾತ್ಮಾ ಗಾಂಧಿಯವರ ಪ್ರಕೃತಿ

ಸೌ. ಸರೋಜಿನಿದೇವಿಯವರು ಮಹಾತ್ಮರನ್ನು ಭೆಟ್ಟಿಯಾದರು.

ಪುಣೆ ತಾ|| ೨೩— ಸೌ. ಸರೋಜಿನಿ ದೇವಿಯವರು ಹೈದರಾಬಾದದಿಂದ ಇವತ್ತಿನ ದಿವಸ ಇಲ್ಲಿಗೆ ಬಂದು ಕೂಡಲೆ ಮಹಾತ್ಮರ ದರ್ಶನ ತೆಗೆದುಕೊಂಡರು ಮಹಾತ್ಮರ ಪ್ರಕೃತಿ ಸಂಬಂಧವಾಗಿ ವಿಚಾರಿಸಲಾಗಿ ಮಹಾತ್ಮರು ಬಹಳ ಅಶಕ್ತರಾಗಿ ಕಾಣುತ್ತಿರುವರೆಂದು ಅವರಿಗೆ ಬಹುಕಾಲದವರೆಗೆ ಸಂಪೂರ್ಣ ವಿಶ್ರಾಂತಿಯು ಆವಶ್ಯವಿತೆಯೆಂದೂ ಅವರು ಹೇಳಿದರು.

(ಅ ಪ್ರ)

ಮಹಾತ್ಮರ ಪ್ರಕೃತಿ ಮಾನ

ಪುಣೆ ತಾ|| ೨೩— ಮುಂಬಯಿಯ ಡಾ|| ಗಿಲ್ಡರ, ಡಾ|| ಪಟೇಲ ಮತ್ತು ಪುಣೆಯ ಡಾ|| ಘಾರಪುರೆ ಇವರು ಇವತ್ತಿನ ದಿವಸ ಮಹಾತ್ಮರ ಪ್ರಕೃತಿಯನ್ನು ಪರೀಕ್ಷಿಸಿ ನೋಡಿದರು ಅವರು ಮಹಾತ್ಮರ ಪ್ರಕೃತಿಯ ವಿಷಯವಾಗಿ ಒಂದು ಪತ್ರಿಕೆ ತೆಗೆದಿದ್ದು ಮಹಾತ್ಮರು ಉಪವಾಸದ ಮೂಲಕ ಬಹಳ ಅಶಕ್ತರಾಗಿರುವರಾಗಿ ಅವರು ಅದರಲ್ಲಿ ಕಾಣಿಸಿದ್ದಾರೆ ಅವರ ವಾಂತಿ ವಿಕಾರವು ಸಂಪೂರ್ಣವಾಗಿ ನಿಂತು ಹೋಗಿದೆಯೆಂದೂ, ಅವರು ಇನ್ನೂವರೆಗೆ ಅನ್ನದ ರಸವನ್ನು ತೆಗೆದುಕೊಳ್ಳುವಷ್ಟು ಶಕ್ತಿವಂತರಿರುವರೆಂದೂ, ಆದರೂ ಅವರಿಗೆ ಸಂಪೂರ್ಣ ವಿಶ್ರಾಂತಿಯು ಅವಶ್ಯವಿದ್ದು ಪತ್ರವ್ಯವಹಾರ, ಭೆಟ್ಟಿ ಮೊದಲಾದವುಗಳನ್ನು ನಿಲ್ಲಿಸಬೇಕೆಂದು ಸಲಹೆ ಕೊಡಲಾಗಿದೆಯೆಂದೂ ಉಲ್ಲೇಖಿಸಿದ್ದಾರೆ

(ಅ. ಪ್ರ)

ಸೊಲ್ಲಾಪುರದಲ್ಲಿ ಸುಮಂತ ಇವರಿಗೆ ಶಿಕ್ಷೆ

ಸೊಲ್ಲಾಪುರ ತಾ|| ೨೩— ಕಮಲಾಕರ ಸುಮಂತ ಇವರು ಮೊನ್ನೆ ದಿವಸ ಮಾಣಿಕ ಚೌಕದಲ್ಲಿ ಒಂದು ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದರು ಈ ಕಾರಣ ಪೋಲೀಸರು ಅವರನ್ನು ಕೈದು ಮಾಡಿ, ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆಗೆ ನಿಲ್ಲಿಸಿದರು ಮ್ಯಾಜಿಸ್ಟ್ರೇಟರು ಅವರಿಗೆ ೧೫ ತಿಂಗಳ ಕಠಿಣ ಕೈದು ಶ್ರೀ. ೫೦ ದಂಡದ ಶಿಕ್ಷೆ ವಿಧಿಸಿದರು ದಂಡ ಕೊಡದಿ ಮತ್ತೆ ೩ ತಿಂಗಳ ಶಿಕ್ಷೆ-ಹೇಳಿದರು

ಮಹಾತ್ಮರು ಉಪವಾಸ ಮುರಿದರು

ಪುಣೆ ತಾ|| ೨೩— ಮಹಾತ್ಮಾ ಗಾಂಧಿಯವರು ಇವತ್ತಿನ ದಿವಸ ಸಂಜೆಯಲ್ಲಿ ಅನಿರ್ಬಂಧವಾಗಿ ಬಿಡುಗಡೆ ಮಾಡಲ್ಪಟ್ಟರು ಬಿಡುಗಡೆಯ ಸುದ್ದಿಯು ತಿಳಿಯುತ್ತಲೆ ಅವರು ಆಸ್ಪತ್ರಿಯಲ್ಲಿಯೇ ಉಪವಾಸವನ್ನು ಮುರಿದರು ಉಪವಾಸವನ್ನು ಮುರಿಯುವದಕ್ಕಿಂತ ಮೊದಲು ಅವರು ಪ್ರಾರ್ಥನೆಯನ್ನು ಜರುಗಿಸಿದರು. ಈ ಪ್ರಾರ್ಥನೆಯಲ್ಲಿ ಸಿ. ಎಫ್. ಆಂಡ್ರೂಜರವರು ಭಾಗವಹಿಸಿದ್ದರು. ನಂತರ ಅವರನ್ನು ಲೇಡಿ ಠಾಕರಸೀ ಇವರ ಮನೆಗೆ ಕರೆದೊಯ್ಯಲಾಯಿತು. ತಮ್ಮ ಪ್ರಕೃತಿಯು ಪೂರ್ಣವಾಗಿ ಸುಧಾರಿಸುವವರೆಗೆ ಅವರು ಅಲ್ಲಿಯೇ ಇರತಕ್ಕವರಿರುತ್ತಾರೆ

(ಅ. ಪ್ರ)

ಶ್ರೀ ಸೆಕ್ಸೆನಾ ಮೊದಲಾದವರ ಖಟ್ಲೆ

ಲಖನೌ ತಾ|| ೨೩— ೬ ನೇ ಅಗಸ್ಟ ದಿವಸ ಶ್ರೀ. ಮೋಹನಲಾಲ ಸೆಕ್ಸೆನಾ ಮೊದಲಾದ ೨೨ ಜನರನ್ನು ಕೈದು ಮಾಡಿದ್ದರಷ್ಟೆ ಅವರ ವಿಚಾರಣೆಯು ಈ ಹೊತ್ತಿನ ದಿವಸ ಜಿಲ್ಲಾ ಸೆರೆಮನೆಯಲ್ಲಿ ನಡೆಯಿತು. ಯಾವತ್ತು ಆರೋಪಿಗಳು ತಮ್ಮ ಅಪರಾಧವನ್ನು ಒಪ್ಪಿಕೊಂಡರು ನಿರ್ಣಯವು ತಾ|| ೨೫ ರ ದಿವಸ ಆಗುವದು

ಇಹವೃತ್ತ

ಶ್ರೀ ಗಜಾನನ ಉತ್ಸವದ ನಿಮಿತ್ತವಾಗಿ ನಿನ್ನೆ ನ ದಿವಸ ಕರ್ನಾಟಕ ಹಾಯಸ್ಕೂಲದಲ್ಲಿ ಶ್ರೀ ಧ ಮುಲಿಯವರು 'ಗ್ರಂಥಗಳು' ಎಂಬ ಬಗ್ಗೆಯೂ, ಕರ್ನಾಟಕ ಮಹರಾಷ್ಟ್ರ ಮಂಡಲದಲ್ಲಿ ಶ್ರೀ ಬೆಳಗಲಿ ರಾಮಚಂದ್ರರಾಯರು "ಆಧುನಿಕ ಕನ್ನಡ ಸಾಹಿತ್ಯ"ದ ವಿಷಯವಾಗಿಯೂ ಭಾಷಣ ಮಾಡಿದರು.

ಮುರುಘಾ ರಾಜೇಂದ್ರ ಫ್ರೀ ಬೋರ್ಡಿಂಗದಲ್ಲಿ ನಿನ್ನೆ ನ ದಿವಸ ಸಂಜೆಯಲ್ಲಿ ಬೆಂಗಳೂರಿನ ಶ್ರೀ ಆ ನ ಕೃಷ್ಣರಾಯರು "ನನ್ನ ಧರ್ಮ ಗುರು," ಎಂಬ ವಿಷಯವಾಗಿ ಭಾಷಣ ಮಾಡಿದರು.

೭೦ ಜನ ಚೀನಿ ಅಧಿಕಾರಿಗಳು ಅಪಘಾತದಿಂದ ಮರಣ ಹೊಂದಿದರು.

ನಾನಚಿಂಗ ತಾ|| ೨೩— ಚೀನಿ ಸೇನಾಪತಿಗಳಾದ ಚಾಂಗಕೈಶೇಕ ಇವರ ಕೈಕೆಳಗೆ ಶಿಕ್ಷಣವನ್ನು ಪಡೆದ ಲಷ್ಕರಿ ಅಧಿಕಾರಿಗಳು ಕಾಮ್ಯುನಿಸ್ಟರ ಮೇಲೆ ದಾಳಿ ಮಾಡುವದಕ್ಕಾಗಿ ಎಕ್ಸಪ್ರೆಸ್ ಗಾಡಿಯಿಂದ ನಾನಚಿಂಗ ಕಡೆಗೆ ಹೊರಟಿದ್ದರು ಹಾದಿಯಲ್ಲಿ ಗಾಡಿಯು ಹಳಿಯಿಂದ ಸರಿದು ಹೋಗಿದ್ದರಿಂದ ಭಯಂಕರ ಅಪಘಾತ ಸಂಭವಿಸಿ ೭೦ ಜನ ಅಧಿಕಾರಿಗಳು ಮರಣ ಹೊಂದಿದರು. ಮತ್ತು ೨೦೦ ಜನರಿಗೆ ಗಾಯವಾಯಿತು.

ಅಮೇರಿಕೆಯಲ್ಲಿ ಬಾಲಮಹಾತ್ಮರು

ನ್ಯೂಯಾರ್ಕ ತಾ|| ೨೩— ಲಂಡನದ ಡೇಲಿ ಹೆರಾಲ್ಡ ಪತ್ರಿಕೆಯಲ್ಲಿ ಅಮೇರಿಕೆಯ ಚಿಕ್ಕ ಬಾಲಕನದೊಂದು ಭಾವಚಿತ್ರವು ಪ್ರಸಿದ್ಧವಾಗಿದೆ ಈ ಬಾಲಕನು ಯಾವಾಗಲೂ ಮಹಾತ್ಮರ ವೇಷದಲ್ಲಿ ತಿರುಗುತ್ತಿರುವನು ಈ ಹುಡುಗನು ಚಾಳೀಸ ಮೊದಲಾದವುಗಳಿಂದ ಪ್ರತ್ಯಕ್ಷ ಮಹಾತ್ಮರಂತೆಯೇ ಕಾಣಿಸುತ್ತಿರುವನು ಚಿತ್ರಕಾರನು ಚಿತ್ರದಲ್ಲಿ ಹುಡುಗನ ಹತ್ತರ ಒಂದು ಆಡನ್ನು ನೂ ನಿಲ್ಲಿಸಿರುತ್ತಾನೆ.

ಅಮೇರಿಕನ್ನರಿಗೆ ಗಾಂಧಿ ಆಶ್ರಮದ ಕಲ್ಲು ಬೇಕಾಯಿತು.

ಅಹಮ್ಮದಾಬಾದ ತಾ|| ೨೩— ಅಮೇರಿಕೆಯ ರೋಲಿನ್ಸ ಕಾಲೇಜದ ಪ್ರಿನ್ಸಿಪಾಲರು ಸಾಬರಮತಿ ಆಶ್ರಮದಲ್ಲಿ ಮಹಾತ್ಮರು ಇರುತ್ತಿರುವ ಸ್ಥಳದ ಕಲ್ಲನ್ನು ಕಳಿಸಿಕೊಡಲು ವಿನಂತಿ ಮಾಡಿಕೊಂಡಿದ್ದಾರೆ ಈ ಕಾಲೇಜದಲ್ಲಿ ಅನೇಕ ಪ್ರಸಿದ್ಧ ವ್ಯಕ್ತಿಗಳ ನಿದರ್ಶನದ ಕಲ್ಲುಗಳನ್ನು ಇಟ್ಟಿದ್ದಾರೆ. ಮಹಾತ್ಮರಂತಹ ಜಗದ್ವಂದ್ಯ ವಿಭೂತಿಗಳ ಸ್ಮರಣೆಯೂ ಇಲ್ಲಿಯೇ ಬೇಕೆ ಬಹು ಅವಶ್ಯವಾಗಿಯೇ ತಾವು ಈ ಕಲ್ಲನ್ನು ಕಳಿಸಬೇಕೆಂದು ಅವರು ಪತ್ರದಲ್ಲಿ ಬರೆದಿದ್ದಾರೆ.

ಟಿಳಕಸ್ಮಾರಕ ನಿಧಿಗೆ ೨೦೦೦ ರೂಪಾಯಿ

ಬಡೋದೆಯ ಸುಪ್ರಸಿದ್ಧ ಶಿಲ್ಪಶಾಸ್ತ್ರಜ್ಞರಾದ ಶ್ರೀ ಕೋಲ್ಹಟಕರ ಇವರು ಮುಂಬಯಿಯ ಟಿಳಕ ಸ್ಮಾರಕ ನಿಧಿಗೆ ೨೦೦೦ ರೂಪಾಯಿ ದಾನ ಮಾಡಿದ್ದಾರೆ

ಮೈಸೂರ ಸಂಸ್ಥಾನ ಹಾಗು ಫ್ರಾನ್ಸ ದೇಶದ ನಡುವೆ ವ್ಯಾಪಾರ

ಫ್ರಾನ್ಸ ದೇಶದಲ್ಲಿ ೬|| ಕೋಟಿ ಹಿಂದಿ ಸರಕು

ಬೆಂಗಳೂರ ತಾ|| ೨೨- ಹಿಂದುಸ್ಥಾನದಲ್ಲಿಯ ಫ್ರೆಂಚ ಟ್ರೇಡ ಕಮಿಶನರರಾದ ಲೆಫ್ಟನೆಂಟ ಮಾರ್ಸೆಲ್ ಬೋನಾರ್ಡ ಇವರು ಕಳೆದ ವಾರದಲ್ಲಿ ಮೈಸೂರ ಸಂಸ್ಥಾನಕ್ಕೆ ಬಂದಿದ್ದರು. ಆ ಕಾಲದಲ್ಲಿ ಅವರು ಮೈಸೂರ ಸಂಸ್ಥಾನ ಹಾಗು ಫ್ರಾನ್ಸ ದೇಶದ ನಡುವಿನ ವ್ಯಾಪಾರವನ್ನು ಸುಧಾರಿಸುವ ಬಗೆಗಳನ್ನು ಕುರಿತು ಪ್ರಯತ್ನ ಮಾಡಿದರು ಆಗ ಅವರು ಹೇಳಿದ್ದೇನಂದರೆ— ಫ್ರಾನ್ಸ ದೇಶವು ಹಿಂದಿ ಸರಕಿಗೆ ದೊಡ್ಡದೆಂದು ಗಿರಾಕಿ ೧೯೩೨—೩೩ರಲ್ಲಿ ಫ್ರಾನ್ಸ ದೇಶವು ಹಿಂದುಸ್ಥಾನದಿಂದ ೭ ಕೋಟಿ ೩೫ ಲಕ್ಷ ರೂಪಾಯಿಗಳ ಸರಕನ್ನು ಕೊಂಡುಕೊಂಡಿತು ಮತ್ತು ೨ ಕೋಟಿ ೪೩ ಲಕ್ಷ ರೂಪಾಯಿಯ ಸರಕನ್ನು ಹಿಂದುಸ್ಥಾನಕ್ಕೆ ಮಾರಿತು ಈ ಎಲ್ಲ ವ್ಯವಹಾರವನ್ನು ನೋಡಲಾಗಿ ವ್ಯಾಪಾರವು ಇನ್ನು ಬೆಳೆಯುವ ಸಂಭವವಿದೆ ಆದರೆ ಆರ್ಥಿಕ ಪರಿಸ್ಥಿತಿಯು ಮಾತ್ರ ಹೆಚ್ಚಿಗೆ ಸುಧಾರಿಸಬೇಕು.

ಕೊನೆಯುಚ್ಚ

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕರ್ಪ್ಯೂರ

ಶ. ಸ್ವ ಶುದ್ಧ [illegible] ಕ್ರಿ [illegible] ಶ:

ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ ಬಾಯಿಯು ಸುವಾಸವಾಗಿಯೂ, ಆಗುವವು. ಹಲ್ಲುಗಳು [illegible] ವಸಡಿನ ರಕ್ತಸ್ರಾವದಲ್ಲಿ ಹಲವು ಸರ್ವೋತ್ಕೃಷ್ಟವಾದ ವನಸ್ಪತಿಯಿಂದ ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮುಗಳಿನ ತತ್ವವು "ಕರ್ಪ್ಯೂರ" ದಂತ ಮಂಜನದಲ್ಲಿ ಅಡಕವಾಗಿದೆ. ಆಹಾರದ ಅವಶೇಷಗಳು ಹಲ್ಲುಗಳ ಸಂದಿಗಳಲ್ಲಿ ಉಳಿದು ಕ್ರಿಮಿಗಳುಂಟಾಗಿ ಹಲ್ಲು ವಸಡು [illegible] ಕೆಡುವವು. ಆದರೆ ಈ ಕ್ರಿಮಿಗಳು ಕರ್ಪ್ಯೂರ ದಂತಮಂಜನದ ಉಪಯೋಗದಿಂದ ನಾಶವಾಗುವವಲ್ಲದೆ ಒಸಡುಗಳು [illegible] ಬಾಯಿಯ [illegible] ವಾಸನೆಯು [illegible] ನಾಶವಾಗುತ್ತದೆ. 'ಕರ್ಪ್ಯೂರ' ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಮೊದಲು ಕೊಡು "ಮನೆಗೆದ್ದು, ಮಾರುಗೆದ್ದೆ" ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹಳೆಯದಾದ ಹೆಚ್ಚುವಿಶ್ವಾಸಕ್ಕೆ ಪಾತ್ರವಾದದ್ದು

ಹೆಚ್ಚಿನ ಸುಧಾರಣೆಯ ಎಳೆಸಲ್ಪಡುತ್ತಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ॥ ೧೬-೫-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಶಹಾಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀಕಾಶೀ ರಾಮೇಶ್ವರ ಸಮುದ್ರದಾಟ ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರತ್ಯಕ್ಷ ಪುಣ್ಯದ ಸೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್‌ಟ್ರೇನು ಸನ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು॥ ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧	ಹುಬ್ಬಳ್ಳಿ ಅಕ್ಟೋಬರ ತಾ॥೨	೧೯	ಲಖನೌ	೨೪	೩೭	ಕುಂಭಕೋಣಂ	೧೫
೨	ಪುಣೆ ೩-೪	೨೦	ಅಯೋಧ್ಯ	೨೫	೩೮	ರಾಮೇಶ್ವರ	೧೬-೧೭
೩	ಮುಂಬಯಿ ೫-೬-೭	೨೧	ಅಲಹಾಬಾದ	,,	೩೯	ಕನ್ಯಾಕುಮಾರಿ [ಹಡಗದಿಂದ]	೧೮
೪	ಸೋಮನಾಥಪಟ್ಟಣ (ಹಡಗದಿಂದ) ೮-೯	೨೨	ಪ್ರಯಾಗ	೨೬-೨೭	೪೦	ಕೊಲಂಬೋ [ಹಡಗದಿಂದ]	೧೯-೨೦-೨೧
೫	ವೇರಾವಳ ,,	೨೩	ಶ್ರೀಕಾಶಿ	೨೮-೨೯-೩೦-೩೧ ನವೆಂಬರ ತಾ॥೧	೪೧	ಕ್ಯಾಂಡಿ [ಲಂಕಾ]	೨೨
೬	ಪಾಲೀತಾಣಾ (ಜೈನತೀರ್ಥ) ೧೦-೧೧	೨೪	ಸಾರನಾಥ	,,	೪೨	ತಲಾಯಿಮನ್ನಾರ [ಲಂಕಾ]	೨೩
೭	ಅಬುಪಹಾಡ (ಜೈನತೀರ್ಥ) ೧೨-೧೩	೨೫	ಗಯಾ	೩	೪೩	ಧನುಷ್ಕೋಡಿ [ಹಡಗದಿಂದ]	,,
೮	ಅಹಮ್ಮದಾಬಾದ ೧೪	೨೬	ರಾಜಗಿರಿ ಕುಂಡ (ಜೈನತೀರ್ಥ)	೪	೪೪	ಮಧುರೆ	೨೪
೯	[illegible] ,,	೨೭	ಗಿರೀ	,,	೪೫	ತ್ರಿಚಿನಾಪಳ್ಳಿ	೨೫
೧೦	[illegible] ೧೫	೨೮	ಸಮ್ಮೇತಶಿಖರಜಿ (ಜೈನತೀರ್ಥ)	೬	೪೬	ಶ್ರೀರಂಗ	,,
೧೧	[illegible] ೧೬	೨೯	ಕಲಕತ್ತಾ	೭-೮-೯	೪೭	ಬೆಂಗಳೂರ	೨೬
೧೨	[illegible] ೧೭	೩೦	ಜಗನ್ನಾಥಪುರಿ	೮	೪೮	ಮೈಸೂರ	೨೭-೨೮
೧೩	ಮಥುರಾ ೧೮-೧೯	೩೧	ವಿಶಾಖಪಟ್ಟಣ	೯			
೧೪	ಗೋಕುಲ ,,	೩೨	ರಾಜಮಹೇಂದ್ರಿ	೧೦			
೧೫	ವೃಂದಾವನ ,,	೩೩	ಬೆಜವಾಡ	೧೧			
೧೬	[illegible] ,,	೩೪	ಮದ್ರಾಸ	೧೨-೧೩			
೧೭	ದಿಲ್ಲಿ ೨೦-೨೧	೩೫	ಶಿವಕಂಚಿ	೧೪			
೧೮	ಹರಿದ್ವಾರ ೨೨-೨೩	೩೬	ವಿಷ್ಣುಕಂಚಿ	,,			

ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು॥ ೧೩ ಬುಧವಾರ) ಮುಂದಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು.

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚುಸೇರಿ ಸೆಕೆಂಡಕ್ಲಾಸ ೩೧೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೀಟ ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ, ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಬಗ್ಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು ಆದಕಾರಣ ಟಿಕೀಟ ಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯ ಏಜನ್ಸ ರಿಂಟಿಗಳು— ಸದರ ಕಂಪನಿಯ ಏಜನ್ಸಿ ರ [illegible] ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ಸೈಕರ ಹಾಗು ಪಕನಡಾರ್ [illegible] ಬಹಳ ಪಟಣಗಳು [illegible] ಕೊಡಲ್ಪಟ್ಟಿ ೧೯೩೪ [illegible] ಬೇಸಗೆಯಲ್ಲಾದರೂ ಶಿರ್ದಿಮಾಡಿಕೊಡುವದಲ್ಲಿ ಬರುವದು ಕಾರಣ [illegible] ವ. [illegible] ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸತಕ್ಕದ್ದು ಅರ್ಜಿಯ ಫಾರ್ಮುಗಳೂ ಏಜನ್ಸ ರಂಟಿಯ ಹೆಚ್ಚಿನ ಮಾಹಿತಿ ಪತ್ರಿಕೆಗಳೂ ಬೇಕಾದವರಿಗೆ ಮುಕ್ತದಿಯಾಗಿ ಕಳಿಸಲ್ಪಡುವವು ಏಜಂಟರಾಗಲಿಚ್ಛಿಸುವವರು ಕೂಡಲೆ ತಿಳಿಸತಕ್ಕದ್ದು ಯೋಗ್ಯ ಕಮೀಶನ ಕೊಡಲ್ಪಡುವದು

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ. [illegible]. ಚನಪ್ಪಾ ಬುಕ್‌ಸೇಲರ.

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಶನಿವಾರ ತಾ॥ ೨೫-೮-೩೩ ನೇ ದಿವಸ ರಾತ್ರಿ

ಮಾಯಾಬಾಜಾರ.

ಎಂಬ ನಾಟಕವನ್ನು ಅಭಿನಯಿಸುವರು.

ಸಂಘದೊಡೆಯ,

ಗರೂಡ ಸದಾಶಿವರಾಯರು

ಕನ್ನಡಿಗ.

ಧಾರವಾಡ — ಗುರುವಾರ ತಾರೀಖು ...

ನಮ್ಮ ಧ್ಯೇಯವು.

ಎಷ್ಟೋ ಸಾರೆ ನಾವು ನಮ್ಮ ಧ್ಯೇಯವಾವುದೆಂಬುದನ್ನು ವಾಚಕರ ಮುಂದೆ ಸಂಕ್ಷೇಪವಾಗಿ— ಆದರೂ ಸ್ಪಷ್ಟವಾಗಿ ಇಡುವ ... ನಮ್ಮ ... ದೇ ...ಯುವಾವುದೆಂಬುದನ್ನು ... ಶಬ್ದಗಳಲ್ಲಿ ಹೇಳುತ್ತೇವೆ **ಸ್ವಧರ್ಮ ಸಾಧನವು** ... ಮುಖ್ಯ ಧ್ಯೇಯವು. ಸ್ವಧರ್ಮವೆಂದರೆ ... ಸಾಧನಗಳ ... 'ಸ್ವ' ಎಂದರೆ ಒಬ್ಬ ವ್ಯಕ್ತಿಯ ಮೊದಲ್ಗೊಂಡು ಅನೇಕ ... ಮಾನವ ... ಗೊಂಡ ಸಮಷ್ಟಿ ಜೀವಗಳು ... ಯಾವತ್ತೂ ಸೃಷ್ಟಿ ... ಅಂತರ್ಗತವು 'ಸ್ವ' ಎಂಬ ಶಬ್ದದಲ್ಲಿ ಆಗುತ್ತವೆ. ಇವೆಲ್ಲರಿಗೂ ತಮ್ಮ ತಮ್ಮ ... ಸ್ವಭಾವ ಧರ್ಮಗಳಿಗನುಸಾರವಾಗಿ ಮಾಡತಕ್ಕ ಕಾರ್ಯ ... ವ್ಯಕ್ತಿಯು ... ಸಮಷ್ಟಿ ಜೀವಗಳು ತಮ್ಮ ತಮ್ಮ ಕರ್ತವ್ಯವನ್ನು ... ಉದ್ಭವವಾಗುತ್ತದೆ. ಇಲ್ಲಿ ಇದ್ದರೆ ಇಲ್ಲವೆಂಬುದು ಎಂದೂ ಧರ್ಮದ ಸನಾತನ ತತ್ವವು, ಇದು ಅದರ ವೈಶಿಷ್ಟ್ಯವು. ಇದೇ ನಮ್ಮ ಧ್ಯೇಯವು.

ಈ ಸ್ವಧರ್ಮವು ನಾನಾ ಕ್ಷೇತ್ರಗಳಲ್ಲಿ ಹಗೆ ... ಬೇರೆ ಬೇರೆ **ರೂಪಗಳನ್ನು ತಾಳುತ್ತ**ದೆಂಬುದನ್ನು ಸ್ವಲ್ಪ ವಿವೇಚಿಸುವ. ರಾಜಕಾರಣವು ಇದರದೊಂದು ಮುಖ್ಯ ಅಂಗವು. ಈ ರಾಜಕಾರಣದಲ್ಲಿ ಅದು ಸ್ವರಾಜ್ಯದ ರೂಪವನ್ನು ತಾಳಿರುತ್ತದೆ. ಸ್ವರಾಜ್ಯವೆಂದರೆ ಹಿಂದುಸ್ಥಾನವು ಕಳೆದುಕೊಂಡ ತನ್ನದೊಂದು ಸ್ವಧರ್ಮವನ್ನು ಸಂಪಾದಿಸುವುದು. ಮತ್ತೇನೂ ಇಲ್ಲ. ಪ್ರತಿಯೊಂದು ವ್ಯಕ್ತಿಗೆ ಇಲ್ಲವೆ ವ್ಯಕ್ತಿಸಮೂಹಕ್ಕೆ ತನ್ನ ಧರ್ಮವನ್ನು ಆಚರಿಸುವುದಕ್ಕೆ ಪೂರ್ಣವಾಗಿ ಸ್ವಾತಂತ್ರ್ಯವು ಇರಬೇಕೆಂಬುದೇ ಸ್ವರಾಜ್ಯದ ಮುಖ್ಯ ಲಕ್ಷಣವು. ಸ್ವರಾಜ್ಯ ಇಲ್ಲದಿದ್ದರೆ ಹಿಂದೀ ರಾಷ್ಟ್ರದ ಸ್ವಧರ್ಮದ ಪೂರ್ಣ ವಿಕಾಸವಾಗಲಾರದು. ಅಂತೇ ನಮಗೆ ಸ್ವರಾಜ್ಯವು ಬೇಕು. ಸಾರಾಂಶ ಸ್ವರಾಜ್ಯವೇ ನಮ್ಮ ರಾಜಕಾರಣದ ಮುಖ್ಯ ಧ್ಯೇಯ. ಸ್ವರಾಜ್ಯ-ಸಂಪೂರ್ಣ ಸ್ವರಾಜ್ಯ- ನಮ್ಮನ್ನು ನಾವು ಆಳಿಕೊಳ್ಳುವುದಕ್ಕೆ — ವಿಕಾಸಮಾಡಿಕೊಳ್ಳುವುದಕ್ಕೆ ಯಾರೀಯಿಂದ ತಿಲಪ್ರಾಯವೂ ಅಡ್ಡಿ ಬರದಂಥ ಸ್ವರಾಜ್ಯ. ಆ ಬಳಿಕ ಅದಕ್ಕೆ ನೀವು ಸ್ವಾತಂತ್ರ್ಯವೆಂದು ಹೆಸರಿಡಿರಿ, ಸ್ವಾತಂತ್ರ್ಯದ ಅಚ್ಚು ಕಟ್ಟು ಎಂದು ಹೆಸರಿಡಿರಿ ಅಥವಾ ಸ್ವತ್ವಾವುದೊಂದು ಹೆಸರಿಡಿರಿ. ಯಾವ ಹೆಸರಿಟ್ಟರೂ ಅರ್ಥವೊಂದೇ. ಹಿಂದುಸ್ಥಾನದವರಿಗೆ ತಮ್ಮ ವಿಕಾಸವನ್ನು ತಾವು ತಮ್ಮ ಮನಸ್ಸಿಗೆ ಬಂದಂತೆ ಮಾಡಿಕೊಳ್ಳಲಿಕ್ಕೆ (ತನಗೆ ಬೇಡೋರಿದರೆ ತನ್ನನ್ನು ತಾನು ಹಾನಿಮಾಡಿಕೊಳ್ಳುವುದಕ್ಕೂ ಅದಕ್ಕೆ ಸ್ವಾತಂತ್ರ್ಯವಿರಬೇಕು) ಈಗ ಅದಕ್ಕೆ ಅವಕಾಶವಿಲ್ಲ. ಆ ತರಹದ ಅವಕಾಶವನ್ನು ಕಲ್ಪಿಸಿಕೊಳ್ಳುವುದೇ ರಾಜ್ಯ ಚಳವಳಿಯ ಮುಖ್ಯ ಧ್ಯೇಯ.

ಈ ಸ್ವರಾಜ್ಯ ಚಳವಳಿಯು ಉತ್ಕ್ರಾಂತಿ ಹೊಂದುತ್ತ ಹೊಂದುತ್ತ ಈಗ ರಾಷ್ಟ್ರೀಯ ಸಭೆಯಲ್ಲಿ ಮೂರ್ತಿಸಿದೆ. ಅಲ್ಲಿ ಆ ಕಲ್ಪನೆಯ ವಿಕಾಸವು ದಿನದಿನಕ್ಕೆ ಆಗುತ್ತದೆ. ರಾಷ್ಟ್ರೀಯ ಸಭೆಯಲ್ಲಿ ಕುಂದುಕೊರತೆಗಳೇನೂ ಇಲ್ಲವೆಂದೂ ಅದು ಯಾವಾಗಲೂ ಸರಿಯಾದ ದಾರಿಯನ್ನೇ ಹಿಡಿಯುತ್ತದೆಂದೂ ನಮ್ಮ ಅಂಬೋಣವಿಲ್ಲ. ಅಂದರೆ ಒಟ್ಟಿನ ಮೇಲೆ, ಅದಷ್ಟು ವ್ಯವಸ್ಥಿತವಾಗಿ ನಡೆದ ಸಂಸ್ಥೆಯು ಮತ್ತೊಂದಿಲ್ಲ, ಅದರಷ್ಟು ವರ್ಚಸ್ಸನ್ನು ಪಡೆದ ಸಾರ್ವಜನಿಕ ಸಂಘವು ರಾಜಕಾರಣದಲ್ಲಿ ಮತ್ತೊಂದಿಲ್ಲ. ಅವಕಾರಣ ಆ ಸಂಸ್ಥೆಯಲ್ಲಿ ಸ್ವಲ್ಪ ಸ್ಥಿತ್ಯಂತರಗಳಾದರೂ ಆಗಬೇಕೆಂದು ನಾವು ಬಯಸಿದರೂ— ಒಟ್ಟಿನಮೇಲೆ ಅದರ ಸಹಯವಾಗಿ ಒಂದು ಬಗೆಯ ಆದರಭಾವನವನ್ನು ತಾಳುವುದು ನಮ್ಮ ಕರ್ತವ್ಯವೆಂದು ನಾವು ತಿಳಿಯುತ್ತೇವೆ.

ರಾಜಕಾರಣದಲ್ಲಿಯಂತೆ ಸಾಮಾಜಿಕ ವಿದ್ಯಾವಿಷಯಕ ಮುಂತಾದ ವಿಷಯಗಳಲ್ಲಿಯೂ 'ಸ್ವಧರ್ಮ ಸಾಧನವೇ ನಮ್ಮ ಮುಖ್ಯ ಧ್ಯೇಯವು' ಎನ್ನುವುದನ್ನು ತಾವು ಉದ್ಧಾರಮಾಡಿಕೊಳ್ಳಬೇಕಲ್ಲದೆ, ಅನ್ಯರು ಅದನ್ನು ಮಾಡಲಾರರೆಂಬ ಒಳಗೆಲ್ಲಿಗೆ ಹಚ್ಚಿ ನಾವು ಪ್ರತಿಯೊಂದು ಸಾಧನದ ಗುಣಾವಗುಣಗಳನ್ನು ಪರೀಕ್ಷಿಸುವವರು. ಸಾರಾಂಶ, ಸ್ವಾವಲಂಬನವೇ ನಮ್ಮ ಮುಖ್ಯ ಸಾಧನ. ರಾಜಕಾರಣದಲ್ಲಿಯೇ ಆಗಲಿ, ಸಾಮಾಜಿಕ ವಿಷಯದಲ್ಲಿಯೇ ಆಗಲಿ ಈ ಸ್ವಾವಲಂಬನದ ಮಾರ್ಗವನ್ನು ಅವಲಂಬಿಸಬೇಕಲ್ಲದೆ, ಯಾರ್ಯಾಂಚಿತ್ತಾದರೂ ಪರರಮೇಲೆ ಹೊಣೆಮಾಡುವ ಮಾರ್ಗವನ್ನು ಪ್ರತ್ಯಕ್ಷವಾಗಿಯೇ ಆಗಲಿ ಅವಲಂಬಿಸಬಾರದೆಂದು ನಮ್ಮ ಅಭಿಪ್ರಾಯ.

ಮೇಲ್ಕಾಣಿಸಿದ ವಿವರಣೆಯಿಂದ ನಮ್ಮ ಮುಖ್ಯ ವ್ಯವಹಾರಿಕ ಧ್ಯೇಯವು ರಾಷ್ಟ್ರೀಯತ್ವವೆಂಬುದು ವಾಚಕರ ಲಕ್ಷ್ಯದಲ್ಲಿ ಬಾರದೇ ಇರದು. ರಾಷ್ಟ್ರೀಯತ್ವವೆಂದರೆ ರಾಜಕಾರಣ, ಸಾಮಾಜಿಕ, ಧಾರ್ಮಿಕ ಅಥವಾ ಅನ್ಯ ಯಾವುದೇ ವಿಷಯದಲ್ಲಿ ತನ್ನ ಸ್ವಧರ್ಮವನ್ನು ತಾನು ತಿಳಿದುಕೊಂಡು ಅದಕ್ಕೆ ತಕ್ಕ ಸಾಧನಗಳನ್ನು ಕೈಕೊಳ್ಳುವುದು. ವಿಶಾಲವಾದ ರಾಷ್ಟ್ರೀಯತ್ವದ ಅರ್ಥವು ಇಷ್ಟೇ ಇರುತ್ತದೆ.

ಈ ಧ್ಯೇಯವನ್ನೇ ನಮ್ಮ ಪ್ರಾಂತದ ಮಟ್ಟಿಗೆ ಹೇಳುವದಾದಲ್ಲಿ 'ಕರ್ನಾಟಕತ್ವ'ವು ಎಂದು ಹೇಳಬಹುದು. ಅದೊಂದು ಶಬ್ದದಲ್ಲಿ ಕರ್ನಾಟಕದ ರಾಜಕೀಯ, ಧಾರ್ಮಿಕ, ಸಾಮಾಜಿಕ ಆಕಾಂಕ್ಷೆಗಳೆಲ್ಲವೂ ಅಡಕವಾಗುತ್ತವೆ. ಇಡೀ ಹಿಂದುಸ್ಥಾನಕ್ಕೆ ಸಂಬಂಧಿಸಿದ ಸಾಧನಗಳನ್ನು ಕೂಡ ನಾವು ನಮ್ಮ ಪ್ರಾಂತಕ್ಕೆ ಅನುಕೂಲವಾಗುವಂತೆ ಪರಿಪೋಷಿಸಿ ಅವ ಳವಂತೆ ಅನ್ವಯಿಸಿಕೊಳ್ಳಬೇಕೆಂದು ನಮ್ಮ ಮತ. ಇಲ್ಲದಿದ್ದರೆ ಅಂಧಾನುಕರಣವಾಗಿ ನಮ್ಮ ವಿಕಾಸಕ್ಕೆ ಚ್ಯುತಿಯುಂಟಾಗುವುದು. ಕೆಲವರಿಗೆ ರಾಷ್ಟ್ರೀಯತ್ವವೊಂದೇ ಎನ್ನ ಕಾಣುತ್ತದೆ, ಇತ್ತ ಕೆಲವರಿಗೆ ಕರ್ನಾಟಕತ್ವದ ಮೇಲಷ್ಟೇ ದೃಷ್ಟಿ. ನಮಗಾದರೋ ಅವೆರಡೂ ಸಮಪ್ರಮಾಣದ ಮಹತ್ವವುಳ್ಳವುಗಳಾಗಿ ತೋರುತ್ತವೆ. ಅವೆರಡರಲ್ಲಿ ಎಳ್ಳಷ್ಟಾದರೂ ವಿರೋಧವಿರುವದಿಲ್ಲ. ಇಷ್ಟೇ ಅಲ್ಲ, ವ್ಯಕ್ತಿಯ ಮೊದಲ್ಗೊಂಡು ದೊಡ್ಡ ದೊಡ್ಡ ರಾಷ್ಟ್ರಗಳವರೆಗೆ ಪ್ರತಿಯೊಬ್ಬ ವ್ಯಕ್ತಿಯು ಇಲ್ಲವೆ ಸಮೂಹವು ತನ್ನ ಮೂಲ ಸ್ವಭಾವಕ್ಕನುಸರಿಸಿ ಮಾಡುವ ಪ್ರತಿಯೊಂದು ಕಾರ್ಯವು ಒಂದಕ್ಕೊಂದು ವಿರುದ್ಧವಾಗಿರದೆ ಒಂದಕ್ಕೊಂದು ಪೂರಕವಾಗಿಯೇ ಇರುತ್ತವೆ. ಸಾರಾಂಶ, ಕನ್ನಡಿಗನು ತನ್ನ ರಥವನ್ನು ಧ್ಯೇಯತ್ವ ಮತ್ತು ಕರ್ನಾಟಕತ್ವ ಎಂಬ ಎರಡು ಚಕ್ರಗಳ ಮೇಲೆ ಸಾಗಿಸತಕ್ಕವನು. ಸ್ವಧರ್ಮದ ಅಂತಃಪ್ರೇರಣೆಯೇ ಆ ರಥವನ್ನು ಸಾಗಿಸುವ ಮುಖ್ಯ ಚಾಲಕ ಶಕ್ತಿ.

ಅಖಿಲ ಭಾರತ ಸ್ವದೇಶಿ ಪ್ರದರ್ಶನ ಬಳ್ಳಾರಿ

ಸ್ವದೇಶಿ ವಸ್ತುಗಳನ್ನು ಉಪಯೋಗಿಸುವುದು, ತನ್ನ ದೇಶದ ಉದ್ಯೋಗಗಳ ಕಳೆಗಳನ್ನು ಪುನಃ ಕಾಣುವ ... ತನ್ನ ದೇಶದ ಆರ್ಥಿಕ ... ಅಭಿವೃದ್ಧಿಗೊಳಿಸ ... ದು ... ಅಗತ್ಯದ ದೇಶದಲ್ಲಿ ಬ್ರಿಟಿಷ್ ವಸ್ತುಗಳನ್ನು ಕೊಳ್ಳ ... ಚಳವಳಿಯು ... ಉದ್ದೇಶದಲ್ಲಿ ಬ್ರಿಟಿಷ ಪ್ರಧಾನ ... ಯುವ ... ಬಾಗಿಗಳಾಗಿ ... ಸಂಯುಕ್ತ ಸಾಮ್ರಾಜ್ಯಗಳಲ್ಲಿಯೂ ಸ್ವದೇಶಿ ಚಳವಳಿಯು ಭರದಿಂದ ನಡೆದಿದೆ.

ಭಾರತ ದಲ್ಲಿ ಉದ್ಯೋಗಗಳ ಸಂಬಂಧವಾಗಿ ... ಆರ್ಥಿಕ ಅಭಿವೃದ್ಧಿಗೆ ಬೇಕಾದ ಅನುಕೂಲತೆಗಳಿವೆ. ದೊಡ್ಡ ಜೀವನದಿಗಳು, ... ಯು, ... ವಿಪುಲವಾದ ಅರಣ್ಯಗಳು, ಅನೇಕ ಬಗೆಯ ... ಗಳ ಖನಿಗಳು ... ಹವಾಮಾನಗಳು ಈ ಪ್ರಕಾರ ... ದಲ್ಲಿ ಲಭ್ಯವಾಗಿವೆ. ... ರಾಷ್ಟ್ರದ ಪ್ರಜೆಗಳ ... ಅವಶ್ಯಕವಾದ ಪದಾರ್ಥಗಳು ಬೇರೆ ದೇಶಗಳಿಂದ ಬರುತ್ತಲಿವೆ. ಬಟ್ಟೆಗಳು, ಸಕ್ಕರೆ, ಔಷಧ ಪದಾರ್ಥಗಳು, ಯಂತ್ರ ಸಾಮಗ್ರಿ ... ಗಳು ಬೇರೆ ದೇಶಗಳಿಂದ ... ಈ ದೇಶದಲ್ಲಿ ಉಳಿಸುವ ... ಪದಾರ್ಥಗಳನ್ನು ... ಅನುಕೂಲತೆಗಳನ್ನು, ... ಮಾಡಿದ ಶಕ್ತಿದಲ್ಲಿ, ಭಾರತದೇಶದ ಆರ್ಥಿಕ ಸ್ಥಿತಿಯು ಅಭಿವೃದ್ಧಿಗೆ ಬಂದು ಉದ್ಯೋಗಗಳ ... ಪ್ರಜೆಗಳಿಗೆ ... ಸುಖಶಾಂತಿಗಳು ...

ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಂಡು, ರಾಜಕೀಯ ದೃಷ್ಟಿಯಿಂದ ಪರಾಧೀನರಾಗಿ ... ಈ ದೇಶದಲ್ಲಿ ಸ್ವದೇಶಿ ಚಳವಳಿಯನ್ನು ಬೆಳಸುವುದು, ಸ್ವದೇಶಿ ವಸ್ತುಗಳನ್ನು ಉಪಯೋಗಿಸುವದು, ... ದೇಶದ ... ಹಿತವನ್ನು ... ಪ್ರಜೆಗಳ ... ಸ್ವದೇಶಿ ಪ್ರದರ್ಶನಗಳನ್ನು ... ರ ವರ್ಗ ... ಅದು ... ಸಾಧ್ಯ ಆಗಲಾರದು.

ಸ್ವದೇಶಿ ಚಳವಳಿಗೆ ಪ್ರಚಾರ ಮಾಡುವ ಕಾರ್ಯಗಳಲ್ಲಿ ಸ್ವದೇಶಿ ಪ್ರದರ್ಶನವು ಪ್ರಬಲ ಸಹಕಾರಿಯಾಗುವದು. ಸ್ವದೇಶಿ ವಸ್ತುಗಳನ್ನು ತಯಾರು ಮಾಡುವವರು, ಕೊಳ್ಳುವವರು, ಬಳಸುವವರು, ಎಲ್ಲರೂ ಒಂದು ಕಡೆ ಸೇರಿ ... ದೇಶದ ... ಸ್ಥಿತಿಯನ್ನರಿತು ಅದರ ಅಭಿವೃದ್ಧಿಗೆ ಬೆಂಬಲ ... ಕೊಡಲಿಕ್ಕೆ ಸುಸಮಯವು ಸಿಗುವುದು. ಆದುದರಿಂದ ಬರುವ ಡಿಸೆಂಬರ ತಿಂಗಳಲ್ಲಿ ಅಖಿಲ ಭಾರತ ಸ್ವದೇಶಿ ಪ್ರದರ್ಶನವನ್ನು ಬಳ್ಳಾರಿ ಪಟ್ಟಣದಲ್ಲಿ ಜರುಗುವಂತೆ ಏರ್ಪಾಟು ಮಾಡಿದೆ. ಇದರಿಂದ ಈ ಜಿಲ್ಲೆಯ ಜನರಿಗೆ ಬಹಳ ಲಾಭವುಂಟು. ಹೊಸ ಪಂಥಗಳನ್ನು ನಿರ್ಮಿಸಲಿಕ್ಕೆ, ವ್ಯಾಪಾರವನ್ನು ಅಭಿವೃದ್ಧಿಗೊಳಿಸಲಿಕ್ಕೆ, ಸ್ವದೇಶಿ ಉತ್ಪನ್ನವನ್ನು ಬೇರೆ ರಾಷ್ಟ್ರಗಳವರೆ ಮಾರಲಿಕ್ಕೆ ಬಹಳ ಅನುಕೂಲ ದೊರೆಯುವದು.

ಆದುದರಿಂದ ಅಖಿಲ ಭಾರತ ಸ್ವದೇಶಿ ಪ್ರದರ್ಶನವು ಯಶಸ್ವಿಯಾಗಿ ಜರುಗುವುದಕ್ಕೆ ಎಲ್ಲರೂ ತಮ್ಮ ಸಹಾಯ್ಯವಿತ್ತು, ಸ್ವದೇಶಿ ಸರಕುಗಳನ್ನು ಪ್ರದರ್ಶನಕ್ಕೆ ಕಳುಹಿಸುವರೆ ದಲ್ಲಿ ಬೆಂಬಲವನ್ನು ಕೊಡಬೇಕೆಂದು ಕೋರಿಕೆ.

ಗುರುಪಾದ ಶಿವಪ್ಪ
ಹಕ್ಕಿ ... ರ ...
ಟೇಕೂರು ... ಶ್ಯಾಂ
ಕಾರ್ಯದರ್ಶಿಗಳು.

ವರಿಷ್ಠ ಕಾಯದೇಮಂಡಲದ ಅಧಿವೇಶನ

ಸಿಮ್ಲಾ ತಾ। ೨೨— ವರಿಷ್ಠ ಕಾಯದೆ ಮಂಡಲದ ಇವತ್ತಿನ ಅಧಿವೇಶನದಲ್ಲಿ ಓರ್ವ ಸಭಾಸದರು ... ಗ್ಯಾಲೇಶನದ ರಾಜಕೀಯ ಕೈದಿಗಳ ವಿಷಯವಾಗಿ ಪ್ರಶ್ನೆ ಕೇಳಿದರು. ಆಗ ಗೃಹಮಂತ್ರಿಗಳು ಅವರಿಗೆ, ರೇಗ್ಯೂಲೇಶನ್ ಅನ್ವಯ ... ಸೆರೆ ಹಿಡಿಯಲ್ಪಟ್ಟವರೆಂದೂ, ಆರ್ಡಿನನ್ಸ ಅನ್ವಯ ಸೆರೆ ಹಿಡಿಯಲ್ಪಟ್ಟವರ ಸಂಖ್ಯೆ ... ಇರುತ್ತದೆಂದೂ ತಿಳಿಸಿದರು. ಇದಲ್ಲದೆ ರೆಗ್ಯುಲೇಶನದ ... ಜನರಲ್ಲಿ ... ಜನರ ... ಸರಕಾರದಿಂದ ಭತ್ತೆ ಸಿಗುತ್ತದಯಾಗಿ ಹೇಳಿದರು. ಉಳಿದ ... ಜನರಲ್ಲಿ ... ಜನರ ... ಸರಕಾರದಿಂದ ಏನೂ ಸಿಗುತ್ತಿರುವದಿಲ್ಲವಾಗಿಯೂ, ಒಬ್ಬರ ವಿಷಯವಾಗಿ ಮಾತ್ರ ಇನ್ನೂ ವಿಚಾರ ನಡೆದಿರುವದಾಗಿಯೂ ತಿಳಿಸಿದರು.

ಹಾವು ಗೀತಾಶ್ರವಣ ಮಾಡಿತು

ಗ್ವಾಲೇರ ತಾ॥ ... — ಶಿವಪುರಿ ಎಂಬಲ್ಲಿ ಒಂದು ದೇವಾಲಯದಲ್ಲಿ ಪೌರ್ಣಿಮೆ ದಿವಸ ... ಒಂದು ಹಾವು ... ಹಾವು ದಪ್ಪವಾದದ್ದೊಂದು ... ಬಂತೆ. ಆಗ ಪೂಜಾರಿಯು ಹಾವನ್ನು ನೋಡಿ ಅದರ ಮುಂದೆ ಗೀತಾಪಠಣ ಪ್ರಾರಂಭ ಮಾಡಿದನಂತೆ. ಆಗ ಹಾವು ಸುಮ್ಮನೆ ಸುತ್ತಿಕೊಂಡು ಕುಳಿತು ಗೀತಾಶ್ರವಣ ಮಾಡಿ, ಅದು ಮುಗಿದ ಮೇಲೆ ಹೊರಟು ಹೋಯಿತಂತೆ.

ಬೆಳಗಾವಿಯ ಪತ್ರ.

ತಾ॥ ೩೧-೮-೩೩

ಬಾಗೇವಾಡಿಯ ಹತ್ತರ ಕಮಕರ ಹಟ್ಟಿಯಲ್ಲಿ ಸಿಡಿಲ ಬಿದ್ದು, ಬಿದ್ದ ಸ್ಥಳದಲ್ಲಿ ನೀರು ಹರಿಯಹತ್ತಿದೆಯೆಂದು ಸುದ್ದಿ ಬಂದಿದೆ. ಜನರು ಆ ನೀರು ಕುಡಿಯಹತ್ತಿದ್ದಾರಂತೆ. ಆ ಸ್ಥಳದಲ್ಲಿ ಭಾವಿಯು ಇಲ್ಲ, ನೀರು ಇಲ್ಲ, ಹೀಗೆ ನೀರು ಹರಿಯುವದರಿಂದ ಜನರಿಗೆ ಚಮತ್ಕಾರ ಅನಿಸುತ್ತಿದೆ.

ಇಲ್ಲಿಯ ಜನರಲ್ ಲಾಯಬ್ರರಿಯವರು ಹೊಸ ಕಟ್ಟಡವನ್ನು ಕಟ್ಟಿಸುವರಿದ್ದು, ಅದಕ್ಕಾಗಿ ೧೫-೨೦ ಸಾವಿರ ರೂಪಾಯಿ ಖರ್ಚು ಮಾಡತಕ್ಕವರಿರುವರು. ಜನರಲ್ ಲಾಯಬ್ರರಿಗೆ ತಕ್ಕಂತೆ ಸ್ಥಾನ ತೆಗೆದುಕೊಡುವವರಿಗೆ ೫೦ ರುಪಾಯಿಯ ಬಹುಮಾನವನ್ನು ಕೊಡುವವರಿರುವರು.

ಯಮನನ್ನು ಗೆದ್ದವರು

ತುರ್ಕಸ್ಥಾನದ ಸೋಚೀರ ಎಂಬ ಊರಲ್ಲಿ ಈಗ ೨೦ ವರ್ಷಗಳಿಂದ ಒಂದಾದರೂ ಮರಣವಿಲ್ಲವಂತೆ! ಯಮನ ಸೋಲೇ ಎಂದೆನ್ನಬೇಕು.

ಜಾಯಿಂಟ ಕಮೀಟಿ ಪ್ರತಿನಿಧಿಗಳ ಅಭಿಪ್ರಾಯ

ಅಜಮೀರದಲ್ಲಿ ೧೬ ಜನರನ್ನು ಹಿಡಿದರು.

ಜಾಯಿಂಟ ಕಮೀಟಿ ಪ್ರತಿನಿಧಿಗಳ ಸ್ವದೇಶಾಗಮನ

ಮುಂಬಯಿ ತಾ ೨೪ — ಜಾಯಿಂಟ ಕಮೀಟಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಸರ್ ಸಿ; ಪಿ ರಾಮಸ್ವಾಮಿ ಮೊದಲಾದ ಪ್ರತಿನಿಧಿಗಳೂ, ತ್ರಾವಣಕೋರ ಮಹಾರಾಜ ಮಹಾರಾಣಿ ಮೊದಲಾದ ಸನ್ಮಾನ್ಯರೂ ಇವತ್ತಿನ ದಿವಸ ಇಟಾಲಿಯನ್ ಉಗಿಹಡಗದಿಂದ ಇಲ್ಲಿಗೆ ತಿರುಗಿ ಬಂದರು ಇವರಲ್ಲಿ ಪುರುಷೋತ್ತಮದಾಸ ಠಾಕುರದಾಸ, ಸರ್ ಮಿರ್ಜಾ ಇಸ್ಮಾಯಿಲ, ಕೃಷ್ಣಮಾಚಾರಿ ಲಿಕತ ಹಯಾತಖಾನ, ಶಫತ ಅಹಮ್ಮದಖಾನ ಗಜನವಿ ಮೊದಲಾದವರು ಪ್ರಮುಖರಾಗಿದ್ದರು

ಅಸೋಸಿಯೇಟೆಡ್ ಪ್ರತಿನಿಧಿಯು ಪ್ರತಿನಿಧಿಗಳ ಭೆಟ್ಟಿ ತೆಗೆದುಕೊಂಡು, ಮಹಾತ್ಮರು ಅನಿರ್ಬಂಧವಾಗಿ ಬಿಡುಗಡೆ ಮಾಡಲ್ಪಟ್ಟಿರುವರಾಗಿಯೂ, ಅವರು ಉಪವಾಸವನ್ನು ನಿಲ್ಲಿಸಿರುವರಾಗಿಯೂ ತಿಳಿಸಿದರು ಪ್ರತಿನಿಧಿಗಳೆಲ್ಲರೂ ಈ ಸುದ್ದಿ ಕೇಳಿ ಸಂತೋಷ ವ್ಯಕ್ತಪಡಿಸಿದರು.

[ಅ ಪ್ರೆ]

ಜಾಯಿಂಟ ಕಮೀಟಿಯ ಕಾರ್ಯದ ಬಗ್ಗೆ ಪ್ರತಿನಿಧಿಗಳ ಅಭಿಪ್ರಾಯ.

ಜಾಯಿಂಟ ಕಮೀಟಿಯಲ್ಲಾದ ಕಾರ್ಯದ ಬಗ್ಗೆ ಅವರ ಅಭಿಪ್ರಾಯವನ್ನು ವಿಚಾರಿಸಲಾಗಿ, ಕೆಲವರು ಆ ಬಗ್ಗೆ ಸಂತೋಷವನ್ನು ವ್ಯಕ್ತ ಮಾಡಿದರು ಇನ್ನು ಕೆಲವರು ಕಮೀಟಿಯ ಕಾರ್ಯವು ಪೂರ್ಣವಾಗುವ ವರೆಗೆ ನಿಶ್ಚಿತವಾದ ಅಭಿಪ್ರಾಯವನ್ನು ವ್ಯಕ್ತ ಮಾಡುವಂತಿಲ್ಲವೆಂದು ಹೇಳಿದರು ಆದರೆ ಸರ್ ಮಿರ್ಜಾ ಇಸ್ಮಾಯಿಲರು ಮತ್ತು ಪುರುಷೋತ್ತಮದಾಸ ಠಾಕುರದಾಸರು ಆ ಬಗ್ಗೆ ಪಿಟ್ಟೆಂದು ಮಾತಾಡಲು ಸಹ ನಿರಾಕರಿಸಿದರು ಸರ್ ಸಿ. ಪಿ. ರಾಮಸ್ವಾಮಿಯವರು ಈಗಲೆ ಅಭಿಪ್ರಾಯ ವ್ಯಕ್ತಮಾಡುವದು ಅವಸರದ್ದಾಗುವದೆಂದು ಹೇಳಿದರು. ಗಜನವಿ ಸಾಹೇಬರು ಜಾಯಿಂಟ ಕಮೀಟಿಯ ಕಾರ್ಯದ ಬಗ್ಗೆ ತಮಗೆ ಸಂಪೂರ್ಣ ವಿಶ್ವಾಸವಿದೆಯೆಂದೂ, ವಿಶೇಷತಃ ಮುಸಲ್ಮಾನರಿಗೆ ಅದು ಆಶಾದಾಯಕವಿದೆಯೆಂದೂ ಅಭಿಪ್ರಾಯ ವ್ಯಕ್ತ ಮಾಡಿದರು ದಿ ಬ, ಕೃಷ್ಣಮಾಚಾರಿಯರ್ ಇವರು ಹೊಸ ಸುಧಾರಣೆಯ ಮಸೂದೆಯು ಪಾಸಾದ ಕೂಡಲೆ, ಅನೇಕ ಸಂಸ್ಥಾನಿಕರು ಸಂಯುಕ್ತ ಘಟನೆಯಲ್ಲಿ ಸೇರಬಹುದೆಂದೂ, ಹೀಗಾದಲ್ಲಿ ಸಂಯುಕ್ತ ಘಟನೆಯು ಶೀಘ್ರದಲ್ಲಿಯೇ ಬಳಕೆಯಲ್ಲಿ ಬರಬಹುದೆಂದು ಆಶೆಯನ್ನು ಪ್ರದರ್ಶಿಸಿದರು ಸರ್ ಲಿಖತ್ ಹಯಾತಖಾನರು, ಸರ್ ಹೋರರು ತಮ್ಮ ಬುದ್ಧಿ ಚಾತುರ್ಯದಿಂದಲೂ ಮತ್ತು ಧೈರ್ಯವಾದ ವಿಶ್ವಾಸದಿಂದಲೂ ಹಿಂದುಸ್ಥಾನದ ತೊಡಕನ್ನು ಬಿಚ್ಚಿ ಹಿಂದುಸ್ಥಾನವನ್ನು ತೃಪ್ತಿಗೊಳಿಸುವರಾಗಿ ತಮಗೆ ವಿಶ್ವಾಸವಿದೆಯೆಂದು ನುಡಿದರು ಶಫತ್ ಅಹಮ್ಮದಖಾನರು ಕಮಿಟಿಯಲ್ಲಾದ ಕಾರ್ಯದ ಬಗ್ಗೆ ಸಮಾಧಾನವನ್ನು ವ್ಯಕ್ತಮಾಡಿದರು ಸರ ಸಿ ಪಿ ರಾಮಸ್ವಾಮಿ ಅಯ್ಯರರವರು, ಸರ ಹೋರರು ಸಂಯುಕ್ತಘಟನೆ, ಮಧ್ಯವರ್ತಿ ರಕ್ಷಣಗಾರಿಕೆ ಮೊದಲಾದವುಗಳ ಸಂಬಂಧವಾಗಿ ಬಿಳೇ ಕಾಗದದಲ್ಲಿ ಕಾಣಿಸಲ್ಪಟ್ಟ ಭದ್ರತೆಗಳೊಂದಿಗೆ ಬಿಳೇ ಕಾಗದದೊಳಗಿನ ಮುಖ್ಯಾಂಶಗಳನ್ನು ಪಾರ್ಲಮೆಂಟದಲ್ಲಿ ಪಾಸು ಮಾಡಿಸಿಕೊಳ್ಳದೆ ಬಿಡುವದಿಲ್ಲವೆಂದು ತಮಗೆ ತೋರುತ್ತಿದೆಯಾಗಿ ಹೇಳಿದರು ಹಿಂದುಸ್ಥಾನದ ಭಾವಿತತ್ವವು ಬ್ರಿಟಿಶ ಹಾಗು ಹಿಂದಿ ಜನರ ಸಹಕಾರದ ಮೇಲೆಯೆ ಅವಲಂಬಿಸಿದೆಯೆಂಬುದು ಈಸಲದ ವಾದವಿವಾದಗಳಿಂದ ತಮಗೆ ಸ್ಪಷ್ಟವಾಗಿ ಕಂಡುಬಂದಿತೆಂದು ನುಡಿದರು

(ಅ ಪ್ರೆ.)

ಅಜಮೀರದಲ್ಲಿ ೧೬ ಜನರನ್ನು ಹಿಡಿದರು.

ಅಜಮೀರ ತಾ। ೨೨— ಐವರು ಪುರುಷರು ಹಾಗು ೧೧ ಸ್ತ್ರೀಯರು ಈ ಹೊತ್ತಿನ ದಿವಸ ಅಗ್ರಾ ದ್ವಾರದಿಂದ ಒಂದು ಮೆರವಣಿಗೆ ತೆಗೆದಿದ್ದರು ಪೋಲೀಸರು ಹೊರಪೇಟೆಯಲ್ಲಿ ಅವರಿಗೆ ಅಡ್ಡಿ ಮಾಡಿ, ಯಾವತ್ತುರನ್ನೂ ಸೆರೆಹಿಡಿದರು ಅವರು ಬಹಿಷ್ಕಾರದ ವಾಕ್ಯಗಳನ್ನು ಕೂಗುತ್ತ ನಡೆದಿದ್ದರು ಅವರ ಹತ್ತರ ಪೋಲೀಸರಿಗೆ ಕಾಯದೆಗೆ ವಿರುದ್ಧವಾದ ಪತ್ರಿಕೆಗಳು ಸಿಕ್ಕವು ೬ ಜನ ಸ್ತ್ರೀಯರು ತಮ್ಮ ಹುಡುಗರನ್ನು ಸಂಗಡ ಕರೆದುಕೊಂಡು ಬಂದಿದ್ದರು

ಮಹಾತ್ಮರಿಗೆ ಶಾರೀರಿಕ ಶಿಕ್ಷೆ ಕೊಡಬೇಕಂತೆ

ಕರಾಚಿಯಲ್ಲಿ 'ಡೇಲಿ ಗ್ಯಾಜಿಟ್' ಎಂಬುದೊಂದು ಆಂಗ್ಲೋ ಇಂಡಿಯನ್ ಪತ್ರಿಕೆಯುಂಟು ಈ ಪತ್ರಿಕೆಯ ಸಂಪಾದಕರು ಒಂದು ಸಂಚಿಕೆಯಲ್ಲಿ ಮಹಾತ್ಮರ ಉಪವಾಸದ ಸಂಬಂಧವಾಗಿ ಅತ್ಯಂತ ದ್ವೇಷಪೂರ್ಣವಾದ ಟೀಕೆ ಮಾಡಿರುವರು ಮಹಾತ್ಮರ ತಲೆಯು ತಿರುಗಿದಂತೆ ಕಾಣುತ್ತದೆ ಅವರು ಹಟಮಾರಿ ಹುಡುಗನಂತೆ ವರ್ತಿಸುತ್ತಿದ್ದಾರೆ ಕಾರಣ ಅವರಿಗೆ ಶಾರೀರಿಕ ಶಿಕ್ಷೆಯನ್ನು ವಿಧಿಸಲೇ ಬೇಕು' ಎಂದು ಅವರು ಉಲ್ಲೇಖಿಸಿದ್ದಾರೆ.

ಸ್ಥಾನಬದ್ಧ ಕೈದಿಗಳಿಗೆ ಭತ್ತೆ ಎಷ್ಟು ?

ಸಿಮುಲಾ ತಾ। ೨೨— ಹಿಂದುಸ್ಥಾನ ಸರಕಾರದ ಗೃಹಮಂತ್ರಿಗಳಾದ ಸರ ಹ್ಯಾರಿ ಹೇಗ ಅವರು ಬಂಗಾಲದ ಸ್ಥಾನಬದ್ಧ ಕೈದಿಗಳ ಸಂಬಂಧವಾಗಿ ಕೆಳಗಿನಂತೆ ಸ್ಪಷ್ಟೀಕರಿಸಿದರು

೧೬ ಜನರಿಗೆ ಏನೂ ಭತ್ತೆ ಇಲ್ಲ ೯ ಜನರಿಗೆ ಪ್ರತಿವರ್ಷ ೬೦೦ ರೂ ನಾಲ್ಕರಿಗೆ ೬೦೦ ರಿಂದ ೧೮೦೦ ರೂ ಗಳ ವರೆಗೆ ಐವರಿಗೆ ೧೮೦೦ ದಿಂದ ೨೦೮೦ ಗಳ ವರೆಗೆ ಮೂವರಿಗೆ ಪ್ರತಿವರ್ಷ ೨೪೦೦ ರೂ ಒಬ್ಬರ ವಿಷಯವಾಗಿ ಇನ್ನೂ ವಿಚಾರ ನಡೆದಿದೆ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು.

ಡಾ ಕುಲಕರ್ಣೀಜ
ಲೆಬೋರೆಟರಿ ಮುಂಬಯಿ ನಂಬ ೧೨
ಬಾಟ್ಲಿ ಕಿಮ್ಮತ್ತು ೧—೧೬—೦
ಎಲ್ಲ ಕೆಮಿಸ್ಟ್ರಲ್ಲಿಯೂ ದೊರೆಯುವದು

ಸ್ತ್ರೀಯರ ವಿಕಾರದ ಮೇಲೆ .
ರಾಮಬಾಣ ಔಷಧವು

ಶರಗು, ಬಿಳೇಶರಗು, ಕೆಂಪು ಶರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ ಬಾಣಂತಿತನ ಆದ ಮೇಲೆ ತಗದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ಬಿ ಟಿ. ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.
೧೮—೭

ಗೀತೆಗೆ ಗುಟ್ಟು— ಗೀತ ಸ್ವರೂಪದ ಮೂಲ ...ಸಂಕಲನ ... ಬೆಲೆ ೧೦೦ ...
... ೩೦೦ ಪುಟಗಳು ಬೆಲೆ ೧ ರೂ ...

ಉಪನಿಷತ್-ಪ್ರವೇಶ— ಭಾಗ ೧ ಮತ್ತು ೨ ಈಶ,ಕೇನ,ಕಠ,ಪ್ರಶ್ನ, ಮಾಂಡೂಕ್ಯ ಮೊದಲಾದವು, ಮುಂಡಕ,ಐತರೇಯ, ತೈತ್ತಿರೀಯ ... ಭಾಗದಲ್ಲಿ ... ಎರಡಕ್ಕೂ ...

ಉಪನಿಷತ್-ರಹಸ್ಯ— ಪ್ರೋ ರಾನಡೆಯವರ "A Constructive Survey of Upanishadic Philosophy" ಎಂಬ ಗ್ರಂಥದ ಕನ್ನಡ ಅನುವಾದ, ದಶೋಪನಿಷತ್ತು ಮೊದಲಾದ ಉಪನಿಷತ್ತುಗಳು ...
... ಬೆಲೆ ...

ಶ್ರೀರಾಮಕೃಷ್ಣಲೀಲಾ ... ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ಆಧ್ಯಾತ್ಮಿಕ ...

ಎಲ್ಲ ಪುಸ್ತಕಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ಬೆಲೆ ...

ಏಜಂಟರು ಬೇಕಾಗಿದ್ದಾರೆ
ಧಾರಾಳವಾದ ಕಮೀಶನ್ನ ಕೊಡಲಾಗುವದು. ಇಚ್ಛೆಯುಳ್ಳವರು ಪತ್ರವ್ಯವಹಾರ ಮಾಡಬೇಕು
—ವ್ಯವಸ್ಥಾಪಕ
'ಕನ್ನಡಿಗ'

ದಿ. ಅಂಕಲಗಿ ಬ್ಯಾಂಕ (ಲಿ.) ಧಾರವಾಡ.
ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿ
ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಬರುವರು! ಧಾರವಾಡಕ್ಕೆ ಬರುವರು!
ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾದ
ಕಲಾನಿಪುಣ ಪ್ರೊ. ಎಚ್. ಜಿ. ಘೋಡಕೆ ಇವರ
ಹಾಸ್ಯಕಾರಕ-ಪ್ರೋಜ ಮತ್ತು ಸಂಗೀತ ಹೊಸತರದ
ನಕಲಿನ ದಣದಣಿತ
ಪ್ರೋಗ್ರಾಮ
ಆಗುವವು.

यचत् परवशं दुःखं । यचदात्मवशं सुखम्॥मनु.

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.
ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಶನಿವಾರ ಭಾದ್ರಪದ ಶುದ್ಧ ೬ ಶಕೆ ೧೮೫೫ ತಾ॥ ೨೬-೮-೩೩ [ಸಂಚಿಕೆ ೧೦೬

ಇನ್‌ಸ್ಯೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್‌ಸ್ಯೂರನ್ಸ
ಕಂಪನಿಯೇ
ಉತ್ತಮವಾದುದು

ಇನಸ್ಯೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಮಹಾತ್ಮರೊಡನೆ ಸುದ್ದಿಗಾರರ ಸಂಭಾಷಣ

ಆಕಸ್ಮಿಕ ಮುಕ್ತತೆಯ ಬಗ್ಗೆ ವಿಷಾದ. ಸರಕಾರಿ ಆರೋಪಗಳ ನಿರಾಕರಣೆ

ಪ್ರಸಂಗಬಂದರೆ ವ್ಹಾಯಿಸರಾಯರ ಭೆಟ್ಟಿ

ಪುಣೆ ತಾ|| ೨೫—

ಪರ್ಣಕುಟಿಯಲ್ಲಿ ಮ ಗಾಂಧಿಯವರು ಪತ್ರಿಕಾ ಪ್ರತಿನಿಧಿಗಳಿಗೆ ಭೆಟ್ಟಿಯನ್ನಿತ್ತರು ಆಗ ಅವರು ಒದನುಡಿದುದರ ಸಾರಾಂಶವೇನಂದರೆ —

ಸೆರೆಮನೆಯನ್ನು ಸೇರುವುದಕ್ಕಿಂತಲೂ ಮರಳಿ ಮತ್ತೆ ಮತ್ತೆ ಉಪವಾಸವ್ರತವನ್ನು ಕೈಕೊಳ್ಳುವುದಕ್ಕಿಂತಲೂ ನಾನು ಮನಮುಟ್ಟಿ ಹಂಬಲಿಸುತ್ತಿರುವುದು ಶಾಂತಿಗಾಗಿ ನಾನು ಎಣಿಸಿದ್ದಕ್ಕಿಂತಲೂ ಮೊದಲೆ ಆಕಸ್ಮಿಕವಾಗಿ ನನ್ನ ಬಿಡುಗಡೆಯಾಗಿದೆ. ನನಗೆ ಈಗ ಥಕ್ಕನೆ ದೊರೆತ ಈ ಸ್ವಾತಂತ್ರ್ಯದ ಉಪಯೋಗವನ್ನು ಶಾಂತಿ ಸಂಧಾನ ಕಾರ್ಯದಲ್ಲಿಯೇ ಮುಖ್ಯವಾಗಿ ಉಪಯೋಗಿಸಬೇಕೆಂದಿದ್ದೇನೆ. ಆದರೂ ನನ್ನ ಅಶಕ್ತತೆಯು ಕಡಿಮೆಯಾದ ಕೂಡಲೆ ನಾನು ಯಾವ ಬಗೆಯಿಂದ ಕೆಲಸಕ್ಕೆ ಆರಂಭ ಮಾಡುವೆನೆಂಬುದು ನನಗೆ ಗೊತ್ತಿಲ್ಲ ಈ ಮೊದಲು ಹೇಳುದುದನ್ನೆ ನಾನು ಈಗ ಸಹ ಹೇಳುತ್ತೇನೆ ಮೊದಲಿನಕಿಂತಲೂ ಹೆಚ್ಚು ಒತ್ತಿ ಒತ್ತಿ ಹೇಳಲು ಸಿದ್ಧನಿದ್ದೇನೆ

'ಬೆಳಕು ಕೊಟ್ಟು ದಾರಿ ತೋರು' ಎಂದು ಪರಮಾತ್ಮನಲ್ಲಿ ಬಿಟ್ಟೂಬಿಡದೆ ಬೇಡಿಕೊಳ್ಳುತ್ತಿದ್ದೇನೆ (ಅ ಪ್ರೆ)

ಈಗ ನನ್ನನ್ನು ಬಿಡುಗಡೆ ಮಾಡಿದ್ದು ನನಗೇನೂ ಸಮಾಧಾನದ ಸಂಗತಿಯಾಗಿಲ್ಲ ಯಾಕಂದರೆ ನಾನು ಜೇಲಿಗೆ ಹೋಗುವ ಮುಂದೆ ನಾನು ಅನೇಕಗೆಳೆಯರನ್ನು ಜೇಲಿಗೆ ಕರೆದೊಯ್ದು ಅವರನ್ನು ಜೇಲಿನಲ್ಲಿ ಬಿಟ್ಟು ಉಪವಾಸದ ಕಾರಣದಿಂದ ಬಿಡುಗಡೆ ಹೊಂದಿದ್ದುದು ನನಗೆ ನಾಚಿಕೆಯ ಸಂಗತಿಯಾಗಿದೆ

ತಮ್ಮ ಉಪವಾಸದ ಸಂಬಂಧವಾಗಿ ಸರಕಾರದವರು ತೆಗೆದ ಪ್ರಕಟನೆಯ ಬಗ್ಗೆ ಮಹಾತ್ಮರು ಹೇಳಿದ್ದೇನಂದರೆ-ಸರಕಾರದವರು ನ್ಯಾಯವಾದ ರೀತಿಯಲ್ಲಿ ವರ್ತಿಸಿರುವದಿಲ್ಲವೆಂದೇ ನನ್ನ ಅಭಿಪ್ರಾಯ. ಸಪ್ಟೆಂಬರದಲ್ಲಿಯ ಉಪವಾಸಕಾಲದಲ್ಲಿ ಸರಕಾರದವರು ನನಗೆ ಅಸ್ಪೃಶ್ಯತಾ ನಿವಾರಣ ಕಾರ್ಯದಲ್ಲಿ ಯಾರು ಬೇಕಾದವರ ಭೆಟ್ಟಿ ತೆಗೆದುಕೊಳ್ಳುವದಕ್ಕೂ ಮತ್ತು ಬೇಕಾದವರೊಡನೆ ಪತ್ರ ವ್ಯವಹಾರ ಮಾಡಲಿಕ್ಕೂ ಇವೇ ಮೊದಲಾದ ಯಾವತ್ತು ಸವಲತ್ತುಗಳನ್ನು ಕೊಟ್ಟಿದ್ದರು. ನಾನು ಆ ಕಾಲಕ್ಕೆ ರಾಜಕೈದಿಯಿದ್ದೆನೆಂದು ಅವರು ಈ ಸವಲತ್ತುಗಳನ್ನು ಕೊಟ್ಟಿದ್ದಿಲ್ಲ ಸವಲತ್ತುಗಳನ್ನು ಕೊಡುವದು ಅವಶ್ಯವಿದೆಯೆಂಬುದು ಅವರಿಗೆ ಮನವರಿಕೆಯಾಗಿದ್ದರಿಂದಲೇ ಅವರು ಹಿಂಗೆ ಸವಲತ್ತು ಕೊಟ್ಟಿದ್ದರು

ಮಹಾತ್ಮರು ಆಮೇಲೆ ಹಿಂದುಸ್ಥಾನ ಸರಕಾರದ ಪತ್ರದ ಬಗ್ಗೆ ಉಲ್ಲೇಖಮಾಡಿ ಅವರು ಆಗ ತಮಗೆ ಯಾವತ್ತು ಸವಲತ್ತುಗಳನ್ನು ಕೊಟ್ಟಿದ್ದರೆಂದು ತಿಳಿಸಿದರು ಈ ಪತ್ರದಲ್ಲಿ ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತಾ ನಿವಾರಣ ಕಾರ್ಯವನ್ನು ಸಾಗಿಸುವದಾದರೆ, ಆ ಕಾರ್ಯದ ಮಟ್ಟಿಗೆ ಅವರಿಗೆ ಪತ್ರವ್ಯವಹಾರ ಭೆಟ್ಟಿ ಇವೇ ಮೊದಲಾದವುಗಳ ಬಗ್ಗೆ ಸಂಪೂರ್ಣ ಸ್ವಾತಂತ್ರ್ಯ ಕೊಡುವದು ಅವಶ್ಯವಿದೆಯೆಂದು ಉಲ್ಲೇಖಿಸಲ್ಪಟ್ಟಿತ್ತು ಸರಕಾರದವರು ತಮ್ಮ ಪತ್ರದಲ್ಲಿ ಮಹಾತ್ಮರ ಕಾರ್ಯವು ಪರಿಣಾಮಕಾರಿಯಾಗಬೇಕಾದರೆ ಅವರ ಪ್ರಕಟನೆಗಳಿಗೆ ಯಾವ ತರದಿಂದಲೂ ಅಡ್ಡಿ ಮಾಡತಕ್ಕದಲ್ಲವೆಂದು ಉಲ್ಲೇಖಿಸಿದ್ದರು (ಅ ಪ್ರೆ)

ಸರಕಾರದ ಕಟ್ಟಪ್ಪಣೆಗಳ ಸಂಬಂಧವಾಗಿ ಉಲ್ಲೇಖ ಮಾಡಿ ಮಹಾತ್ಮರು ಹೇಳಿದ್ದೇನಂದರೆ— ಹರಿಜನ ಕೆಲಸದ ಸಂಬಂಧದಲ್ಲಿಯ ನನ್ನ ವಿನಂತಿಗೆ ಸರಕಾರದವರು ತಲೆಗೊಡಲೇ ಬೇಕಾಗುತ್ತದೆ. ನಾನು ರಾಜಕೈದಿಯೇ ಆಗಿರಲಿ ಇಲ್ಲವೆ ಇತರ ಸಾಮಾನ್ಯ ಕೈದಿಯೇ ಆಗಿರಲಿ ಹರಿಜನ ಕಾರ್ಯದಲ್ಲಿ ನನಗೆ ಯಾವ ವಿಧದಿಂದಲೂ ಅಡ್ಡಿಯಾಗತಕ್ಕದ್ದಲ್ಲ. ನನ್ನ ಅಭಿಪ್ರಾಯ ಕೇಳಿದರೆ, ವರ್ಗೀಕರಣಕ್ಕೂ ಇದಕ್ಕೂ ಏನೂ ಸಂಬಂಧವಿರುವದಿಲ್ಲ ಮುಖ್ಯವಾದ ಪ್ರಶ್ನೆಯೆಂದರೆ— ಹರಿಜನ ಸೇವೆಯೇ ನನ್ನ ಪ್ರಾಣ ಹರಿಜನ ಸೇವೆಯ ಹೊರತು ನಾನು ಬದುಕುವದು ಶಕ್ಯವಿಲ್ಲ ನಾನು ಜೀವದಿಂದ ಇರುವವರೆಗೆ ಈ ಪ್ರಶ್ನೆಯು ನನಗೆ ಜೀವ್ಹಾಳದ ವಿಷಯವಾಗಿದೆ ಸರಕಾರದವರು ಮತ್ತು ಜನತೆಯು ಇದಕ್ಕೆ ತಲೆಗೊಡಲೇ ಬೇಕಾಗುವದು

ಹರಿಜನ ಕಾರ್ಯಕ್ಕಾಗಿ ತಮಗೆ ಸಿಕ್ಕ ಸ್ವಾತಂತ್ರ್ಯವನ್ನು ದುರುಪಯೋಗ ಮಾಡಿಕೊಂಡರೆಂದಾಗಿ ಸರಕಾರದವರು ತಮ್ಮ ಮೇಲೆ ಆರೋಪ ಹೊರಿಸಿದ್ದರ ವಿಷಯವಾಗಿ ಮಹಾತ್ಮರು ನಿಷೇಧ ವ್ಯಕ್ತಮಾಡಿ ಹೇಳಿದ್ದೇನಂದರೆ— ಹಿಂದು ಮುಂದು ನೋಡದೆ ಹೀಗೆ ಆರೋಪ ಹೊರಿಸುವದು ಸಮಂಜಸವಾಗಿರುವದಿಲ್ಲ ಸರಕಾರಿ ಅಧಿಕಾರಿಗಳಿಗಂತೂ ಇದು ಎಷ್ಟೂ ಶೋಭಿಸುವದಿಲ್ಲ ಅವರು ನನ್ನ ಮೇಲೆ ಮೊದಲು ಇಲ್ಲದ ಸಲ್ಲದ ಆರೋಪ ಹೊರಿಸಿ ತಮ್ಮ ನಡೆವಳಿಯೇ ನ್ಯಾಯವಾದದ್ದೆಂದು ಸಮರ್ಥನ ಮಾಡಲು ಈಗ ಮುಂದೆ ಬಂದಿದ್ದಾರೆ. ಅವರ ಈ ರೀತಿಯು ನನ್ನ ಸರಳ ಮನಸ್ಸಿಗಂತೂ ತಮ್ಮ ಬಂಧನದಲ್ಲಿದ್ದವರಿಗೆ ತಾವು ಮುದ್ದಾಂ ಕೊಟ್ಟ ವಚನವನ್ನು ಅವರು ತಾವಾಗಿಯೇ ತಿಳಿದೂ ತಿಳಿದೂ ಮುರಿದಂತೆ ಅನಿಸುತ್ತದೆ.

ವ್ಹಾಯಿಸರಾಯರ ಭೆಟ್ಟಿಯ ಬಗ್ಗೆ ಪುನಃ ಯತ್ನ ಮಾಡುತ್ತೀರೇನು ಎಂದು ಪ್ರಶ್ನೆ ಕೇಳಲಾಗಿ ಅವರು, ಈ ಬಗ್ಗೆ ಈಗಲೆ ನಿಶ್ಚಿತವಾಗಿ ಏನೂ ಹೇಳಲು ಬರುವಂತಿಲ್ಲವೆಂದೂ, ಎಲ್ಲವು ಪ್ರಸಂಗವನ್ನೇ ಅವಲಂಬಿಸಿರುತ್ತದೆಂದೂ ಉತ್ತರವಿತ್ತರು (ಅ ಪ್ರೆ)

ಮಹಾತ್ಮರೊಡನೆ ಒಪ್ಪಂದ ಮಾಡಿ ಕೊಳ್ಳದ ಹೊರತು ಗತ್ಯಂತರವಿಲ್ಲ.

ಲಂಡನ ತಾ। ೨೪— ಮಹಾತ್ಮಾ ಗಾಂಧಿಯವರನ್ನು ಸರಕಾರದವರು ಬಿಡುಗಡೆ ಮಾಡಿದ ಸಂಬಂಧವಾಗಿ "ಡೇಲಿ ಹೆರಾಲ್ಡ" ಪತ್ರಿಕೆಯಲ್ಲಿ ಒಂದು ಅಗ್ರಲೇಖವು ಬಂದಿರುತ್ತದೆ. ಈ ಲೇಖದಲ್ಲಿ ಸರಕಾರದ ಧೋರಣದ ವಿಷಯವಾಗಿ ಟೀಕೆ ಮಾಡಲ್ಪಟ್ಟಿರುತ್ತದೆ. ಸರಕಾರದವರು ಮಹಾತ್ಮರೊಡನೆ ಮಾರ್ಜಾಲ ನೀತಿಯನ್ನು ನಡಿಸುವರೆಂದು ಅದು ಅಭಿಪ್ರಾಯ ವ್ಯಕ್ತ ಮಾಡಿದೆ ಅದು ಅಷ್ಟು ಮಾತ್ರವಲ್ಲ ಅದೇನೆಂದರೆ, ಸರಕಾರದವರಿಗೆ ಮಹಾತ್ಮರೊಡನೆ ಆಗಲಿ ಇಲ್ಲವೆ ಅವರ ಪಕ್ಷದ ಮುಖಂಡರೊಡನೆ ಆಗಲಿ ವಿಚಾರ ವಿನಿಮಯ ಮಾಡದ ಹೊರತು ಗತ್ಯಂತರವಿಲ್ಲ ಆದ್ದರಿಂದ ಸರಕಾರದವರು ಈ ಸಮಯವನ್ನು ವ್ಯರ್ಥ ಹೋಗಗೊಡದೆ ಅವರೊಡನೆ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನ ಮಾಡಬೇಕು ಯಾಕಂದರೆ. ಅವರೊಡನೆ ಒಪ್ಪಂದ ಮಾಡಿಕೊಳ್ಳದ ಹೊರತು ಚಿರವಾದ ಶಾಂತತೆಯು ಸ್ಥಾಪಿತವಾಗುವ ಸಂಭವ ಕಂಡುಬರುವದಿಲ್ಲ

ದಿಂಡಿಗಲ್ಲಿನಲ್ಲಿ ಉಪ್ಪಿನ ಕಾಯದೆ ಭಂಗ.

ಮದುರಾ ತಾ ೨೩— ದಿಂಡಿಗಲ್ಲ ಬಳಿಯ ಹಳ್ಳಿಯಲ್ಲಿ ಇಬ್ಬರು ಕಾಂಗ್ರೆಸ್ ಸ್ವಯಂಸೇವಕರು ಕಾಯದೆಗೆ ವಿರುದ್ಧವಾಗಿ ಉಪ್ಪು ತಯಾರ ಮಾಡುತ್ತಿದ್ದರು ಗೋಲೀಸರು ಎರಡು ದಿನಗಳ ಹಿಂದೆ ಅವರನ್ನು ಸೆರೆಹಿಡಿದು ಇಲ್ಲಿಗೆ ಕರೆದುಕೊಂಡು ಬಂದಿದ್ದಾರೆ

ಮಹಾತ್ಮರ ಶಿಕ್ಷೆಯು ರದ್ದಾಯಿತು.

ಮುಂಬಯಿ ತಾ ೨೩— ಮುಂಬಯಿ ಕಾಯದೆ ಮಂಡಳದ ಈ ಹೊತ್ತಿನ ಅಧಿವೇಶನದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಗೃಹಮಂತ್ರಿಗಳು, ಮಹಾತ್ಮರನ್ನು ಅನಿರ್ಬಂಧವಾಗಿ ಬಿಡುಗಡೆ ಮಾಡಿರುತ್ತದೆಂದೂ, ಅವರ ಶಿಕ್ಷೆಯನ್ನು ರದ್ದು ಮಾಡಿರುತ್ತದೆಂದೂ ಹೇಳಿದರು.

ಕೊನೆಯುಬ್ಬು

ಹಾಂಗೋ



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚೂರ

ಶುಸ್ಕಶದ್ಧ ... ಕ್ರಿಮಿನಾಶ

ದಂತಮಂಜನ.

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ ಬಾಯಿಯು ಸುವಾಸವಾಗಿಯೂ, ಆಗುವವು. "ಹೆಸುಮ್ಮಗುಳು" ಎಂಬ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮುಗಳ ತತ್ವವು "ಕಚ್ಚೂರ" ದಂತ ಮಂಜನದಲ್ಲಿ ಅಡಕವಾಗಿದೆ ... ... "ಕಚ್ಚೂರ" ದಂತಮಂಜನವನ್ನು ಉಪಯೋಗಿಸಿರಿ. ... ಗಳನ್ನು ಕಂಡ ಕೊಳ್ಳಬೇಕಲ್ಲದೆ ಕೇವಲ ಹಣ ನೀಡುವಂದ ಅವು ತೀರಿ ಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಕೊಳ್ಳಲು ಕೋರಿದೆ. "ಮನೆಗೆದ್ದು ಮಾರುಗೆದ್ದೆ" ಎಂಬ ನಾಣ್ಣುಡಿಯಂತೆ ನಡೆಯಿರಿ. ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಜನರು ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದು

ಹೆಚ್ಚಿನ ಸುಧಾರಣೆಯುಳ್ಳದ್ದೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ, ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ॥ ೧೮-೬-೩೩ ರ ವರೆಗೆ ಇಷ್ಟೇ ಭರತಖಂಡ (ಹಿಂದುಸ್ಥಾನ) ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ, ಯಾತ್ರಿಕರಿಂದ ಶಹಾಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

ಶ್ರೀಕಾಶೀ ರಾಮೇಶ್ವರ ಸಮುದ್ರದಾಟಿ ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೀಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು॥ ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ॥	೨	೧೯ ಲಖನೌ	೨೫	೩೭ ಕುಂಭಕೋಣಂ	೧೫
೨ ನಾಸಿಕ	೩-೪	೨೦ ಅಯೋಧ್ಯೆ	೨೬	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಹಾಬಾದ	,,	೩೯ ಕನ್ಯಾಕುಮಾರಿ [ಹಡಗದಿಂದ]	೧೮
೪ ಸೋಮನಾಥ (ಹಡಗದಿಂದ)	೮-೯	೨೨ ಪ್ರಯಾಗ	೨೭-೨೮	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ವೇರಾವಳ		೨೩ ಶ್ರೀಕಾಶಿ	೨೯-೩೦-೩೧ ನವೆಂಬರ ತಾ॥೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲಿಟಾಣಾ (ಜೈನತೀರ್ಥ)	೧೦-೧೧	೨೪ ಸಾರನಾಥ	,,	೪೨ ತಲಾಯಿಮನಾರ [ಲಂಕಾ]	೨೩
೭ ಅಬುಪಹಾಡ (ಜೈನತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಡಿ [ಹಡಗದಿಂದ],	
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೪ ಮದುರೆ	೨೪
೯ ಸಾಬರಮತಿ	೧೫	೨೭ ಗಿರ್ದಿ	,,	೪೫ ತ್ರಿಚನಾಪಳ್ಳಿ	೨೫
೧೦ ಬರೋಡೆ	೧೬	೨೮ ಸಮೇತಶಿಖರಜಿ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಉಜ್ಜಯಿನಿ	೧೭	೨೯ ಕಲಕತ್ತಾ	೫-೬-೭	೪೭ ಬೆಂಗಳೂರ	೨೬
೧೨ ಆಗ್ರಾ	೧೮	೩೦ ಜಗನ್ನಾಥಪುರಿ	೮	೪೮ ಮೈಸೂರ	೨೭-೨೮
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರಿದ್ವಾರ	೨೨-೨೪	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು॥ ೧೪ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು.

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡಕ್ಲಾಸ ೩೧೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟು ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಬಗ್ಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು. ಆದಕಾರಣ ಟಿಕೇಟುಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯ ಏಜಂಟರಿಗೆ— ಸದರ ಕಂಪನಿಯ ಏಜಂಟರ ... ೪ ವರ್ಷಗಳಿಂದ ... ... ಶ್ರೀ ಗೌರೀಶಂಕರ ಕಂಪನಿಗೆ ... ಕಳಿಸತಕ್ಕದ್ದು. ... ಏಜಂಟರಾಗಬಯಸುವವರು ಕೂಡಲೆ ತಿಳಿಸತಕ್ಕದ್ದು. ಯೋಗ್ಯ ಕಮೀಶನ್ ಕೊಡಲ್ಪಡುವದು.

ಕೆ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಕೆ. ಎಚ್. ಚನಪ್ಪಾ ಬುಕ್‌ಸೇಲರ.

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಶನಿವಾರ ತಾ॥ ೨೬-೮-೩೩ ನೇ ದಿವಸ ರಾತ್ರಿ

ಮಾಯಾಬಾಜಾರ.

ಎಂಬ ನಾಟಕವನ್ನು ಅಭಿನಯಿಸುವರು.

ಸಂಘದೊಡೆಯ,

ಗರೂಡ ಸದಾಶಿವರಾಯರು

ಕನ್ನಡಿಗ.

ಧಾರವಾಡ— ಶನಿವಾರ ತಾರೀಖು ೨೮—೮— ೧೯೨೯

ಇಂದೇನು ?

ಇಂದೇನು ? ಕತ್ತಲು ಕಾರ್ಮೋಡ ಕವಿದ ಕತ್ತಲು ರಾತ್ರಿ ಒಬ್ಬರ ಮೋರೆಯು ಮೇಲೆ ಯೂ ದ್ರವವಿಲ್ಲ ಚಿವಟಿದರೆ ತುಂಬ ರಕ್ತವಿಲ್ಲ ಮಹಾತ್ಮಾ ಗಾಂಧಿಯವರು ಸರಕಾರದ ವರೊಡನೆ ನಡೆಸಿದ ಸಂಧಾನವನ್ನು ಸರಕಾರದವರು ತುಚ್ಛತೆಯಿಂದ ತಿರಸ್ಕರಿಸಿದೊಡನೆ ಜನ ಒಂದು ಬಗೆಯ ಉತ್ಸಾಹವೂ ಉದಾಸೀನತೆಯೂ ಉಂಟಾಗಿದೆ ಆದರೆ ಈ ಸ್ಥಿತಿಯು ಒಳ್ಳೆ ಈ ಹೃದಯದ ದೌರ್ಬಲ್ಯತೆಯು ತರವಲ್ಲ ಸ್ವಲ್ಪ ಜಯ ಸಿಕ್ಕೊಡನೆ ಕುಣಿದಾಡು ವುದೂ ಸ್ವಲ್ಪ ಸೋಲು ಸಂಭವಿಸಿದೊಡನೆ ಕೈಕಾಲು ಕಳೆದುಕೊಳ್ಳುವುದೂ ಹೇಡಿ ನಡೆ ಭಾರತೀಯರೇ ! ಈ ಎದೆಯ ಅಳುಕುತನವನ್ನು ಅಳಿಸಿ ಒಗೆಯಿರಿ ಎದ್ದೇಳಿರಿ ಮತ್ತು ಕರ್ತವ್ಯ ದಕ್ಷರಾಗಿರಿ

ಇಷ್ಟರಿಂದ ನಿರುತ್ಸಾಹಿಗಳಾಗಲು ಆದದ್ದಾದರೂ ಏನು ? ಕಾಯದೇಭಂಗದ ಚಳುವಳಿಯು ಸರಕಾರದವರ ಮಿತಿಮೀರಿದ ಒತ್ತಾಯದಿಂದ ಸದ್ಯಕ್ಕೆ ಹಣ್ಣಾಗಿರುತ್ತದೆಂಬುದಷ್ಟೇ ಇಲ್ಲವೆ? ದ ಪೃವಲ್ಲಿ ತೊಳಲಾಡುವ ರಾಷ್ಟ್ರಗಳಿಗೆ ಇಂಥ ಅನುಭವಗಳೇನೂ ಹೊಸವಲ್ಲ ಪ್ರತಿಯೊಂದು ದಾಸ ರಾಷ್ಟ್ರದ ಇತಿಹಾಸವನ್ನು ಓದಿದರೆ, ಸ್ವಾತಂತ್ರ್ಯ ಸೂರ್ಯನ ಉದಯವಾಗುವ ಮುಂಚೆ ಅವಕ್ಕೆ ಈ ತರಹದ ಕತ್ತಲೊಳಗಿಂದ ಮೋಡ ಮುಸುಕಿದ ಬಂದ್ಧ ಹಾಯ್ದು ಹೋಗಲೇಬೇಕಾಗುತ್ತದೆಂಬುದು ಗೊತ್ತಾಗುವುದು ಕತ್ತಲೊಳ ಮಗೆ ಜಯ ಸಿಕ್ಕಿದಹೆಂದು ಆನಂದದಿಂದ ಚಪ್ಪಾಳೆ ಹೊಡೆಯುತ್ತಿರಬಹುದು ಆದರೆ ತೋರಗಾಣಿಕೆಯ ಜಯವನ್ನು ದೊರಕಿಸಲಿಕ್ಕೆ ಅವರಿಗೆ ಎಂಥ ಭಯಂಕರವಾದ ಬೆಲೆ ಯನ್ನು ಕೊಡಬೇಕಾಗಿದೆಂಬುದನ್ನು ಬಲ್ಲಿರಾ ? ತಾವು ಸುಧಾರಿಸಿದ ರಾಷ್ಟ್ರವೆಂಬ ಅವರ ಹೆಸರಿಗೆ ಅವರ ಹೆಸರಿಗೆ ಕಲಂಕ ಉಂಟಾಗಿದೆ ಮಸಿ ಹತ್ತಿರುತ್ತದೆ ಇದು ಸುಧಾರಿಸಿದ ಸರಕಾರ ವೆಂದೂ ಇವರಿಂದ ನ್ಯಾಯ ಬಯಸುವುದು ಮೂರ್ಖತನದ್ದೆಂದೂ ಜಗತ್ತಿನಲ್ಲಿ ಇಂದು ಡಂಗುರ ಹೊಡೆಯುತ್ತದೆ. ಆ ಡಂಗುರದ ಸಪ್ಪಳಕ್ಕೆ ಬೆದರಿಯೋ ಏನೋ ಅವರು ನಡನಡುವೆ ಎಲ್ಲೋ ಒಂದೆರಡು ಚಿಕ್ಕಪುಟ್ಟ ಕಾರ್ಯಗಳನ್ನು ಮಾಡಿ ತಾವು ಇನ್ನೂ ಪೂರ್ಣ ಕೆಟ್ಟ ಸ್ಥಿತಿಗೆ ಬಂದಿಲ್ಲವೆಂದು ತೋರಿಸಲಿಕ್ಕೆ ಪ್ರಯತ್ನಿಸುತ್ತಾರೆ ಗಾಂಧಿಜೀಯವರನ್ನು ಬಿಟ್ಟುಕೊಟ್ಟ ಈ ತರಹದ ಒಂದು ಚಿಕ್ಕ ಕಾರ್ಯ ಗಾಂಧಿಜೀಯವರಂಥ ಮಹಾಪುರುಷರನ್ನು ಸಾಮಾನ್ಯ ಕೈದಿಯಂತೆ ನಡಿಸಿಕೊಳ್ಳುವುದೇನೂ ಸುಧಾರಿಸಿದ ರಾಷ್ಟ್ರದ ಲಕ್ಷಣವೇ? ಅವರ ತತ್ವ ತಮಗೆ ಸರಿಬಾರದಿದ್ದರೆ ಆ ತತ್ವಗಳ ಆಚರಣೆಗೆ ಪ್ರತಿಬಂಧಕವಾಗುವಷ್ಟು ಬಂಧವು ಸಾಲದೆ? ಅದಕ್ಕಿಂತ ಹೆಚ್ಚಿಗೆ ನಿರ್ಬಂಧವನ್ನು ಹಾಕುವದು ಸುಧಾರಿಸಿದ ರಾಷ್ಟ್ರ ಲಕ್ಷಣವೆ? ಅಲ್ಲದೆ ಅವರು ಪ್ರತಿಪಾದಿಸುವ ತತ್ವದಲ್ಲಿದರೂ ಅಂಥದೇನಿದೆ? ಸವಿನಯ ದ ಕಾಯದೆಯನ್ನು ಮುರಿದು ಅದರಿಂದಾಗುವ ಫಲಗಳನ್ನು ಆನಂದದಿಂದ ಅನುಭವಿಸಲು ಸಿದ್ಧರಾಗಿರುವವರು ಸುಧಾರಿಸಿದ ಯಾವ ರಾಷ್ಟ್ರದಲ್ಲಿಯಾದರೂ ಇತ್ತೀಚೆಗೆ ಮಾನ್ಯವಾಗುತ್ತ ನಡೆದ ಹೊಸ ಪದ್ಧತಿ ಕಾಡು ಸರಕಾರಗಳನ್ನು ಹಾದಿಗೆ ತರುವದಕ್ಕೆ ಕಾಡು ಉಪಾಯಗಳು ಸುಧಾರಿಸಿದ ಸರಕಾರಗಳನ್ನು ಹಾದಿಗೆ ತರುವದಕ್ಕೆ ಇಂಥ ಸುಧಾರಿಸಿದ ಉಪಾಯಗಳು ಉಪಾಯಗಳನ್ನು ಯೋಚಿಸಲಿಕ್ಕೆ ಜನತೆಗೆ ಅಲ್ಲಿಗಳಿಯುವದೆಂದರೆ ತಾವು ಸುಧಾರಿಸಿದ ವಲ್ಲವೆಂದು ಜಾಹೀರ ಮಾಡಿದಂತಲ್ಲವೆ? ಇವಲ್ಲದೆ ಮಹಾತ್ಮಾ ಗಾಂಧಿಯವರು ಕಾಯ ದೆಭಂಗವನ್ನು ತಾತ್ಪೂರ್ತಿಕವಾಗಿ ನಿಲ್ಲಿಸಿ, ಮಾನಾಪಮಾನಗಳನ್ನು ಬದಿಗಿಟ್ಟು, ಸರಕಾರದವರ ಸಂಧಿಯನ್ನು ಮಾಡಲಿಕ್ಕೆ ಸಿದ್ಧರಾದ ಮೇಲೆ ಹೀಗೆ ಮಾಡುವುದಂತೂ ಅನ್ಯಾಯವು ಇದೆಲ್ಲ ಅರಣ್ಯ ರೋದನವನ್ನು ಮಾಡಿ ಫಲವೇನು ? ಸರಕಾರದವರಿಗೆ ಸುಧಾರಿಸಿದ ವೆಂದೆನ್ನಿರಿ ಬಿಡಿರಿ ಅವರು ಈವರೆಂತೂ ಕಾಯದೆಭಂಗ ಚಳವಳಿಯನ್ನು ಬೇಕಾಯಿದೇ ಚಳವಳಿಯೆಂದೂ ಸದ್ಯಕ್ಕಂತೂ ಜಾಹೀರು ಮಾಡಿ ಬಿಟ್ಟಿರುವರು, ದುರ್ದೈವದ ಸಂಗತಿ ಯೆಂದರೆ, ಅಂಶತಃ ಅವರೂ ಏಕಾಗಲೊಲ್ಲದು ನಮ್ಮ ಪ್ರತಿನಿಧಿಗಳ ಸಭೆಯಾದ ಅಸೆಂಬ್ಲಿಯು ಅದಕ್ಕೆ ಸಮ್ಮತಿಯನ್ನು ಕೊಟ್ಟುಬಿಟ್ಟಿದೆ. ! ದೇಶದಲ್ಲಿ ಈಗ ಇಂಥ ವಿಷಮ ಪರಿಸ್ಥಿತಿಯು ಉಂಟಾಗಿದೆ ನಾನೀ ಎಂಬ ಮುಖಂಡರು ಮುಂದುಗಾಣದವರಾಗಿ ಕೆಲವರು ಗಾಡಿಯನ್ನು ಹಿಂದಕ್ಕೆ ನೂಕಿಸಬೇಕೆನ್ನುತ್ತಾರೆ, ಮತ್ತೆ ಕೆಲವರು ಅದನ್ನು ಹಾದಿಗೆ ಒಯ್ಯಬೇಕೆಂಬ ವಿಚಾರದಲ್ಲಿದ್ದಾರೆ ಆದರೆ ಇವರೆಲ್ಲರೂ ಅದೂರದರ್ಶಿಗಳೆಂದು ನಮ್ಮ ಅಭಿಪ್ರಾಯ ಶಾಂತರೀತಿಯಿಂದಲೂ ಗಂಭೀರವಾಗಿಯೂ ವಿಚಾರಮಾಡಿ ಮುಂದಿನ ಕಾರ್ಯವನ್ನು ನಿಶ್ಚಯಿಸಬೇಕಲ್ಲವೆ, ಆತುರದಿಂದ ಏನೂ ಕೈಕೊಳ್ಳಬಾರದು ಮುಂದೇನು ? ಬಗ್ಗೆ ನಮ್ಮ ಅಭಿಪ್ರಾಯವನ್ನು ಮತ್ತೊಮ್ಮೆ ಕೊಡುವೆವು

ಕಲಕತ್ತಾ ಕಾಂಗ್ರೆಸ್ ಬಗ್ಗೆ ಅಸೆಂಬ್ಲಿಯಲ್ಲಿ ಪ್ರಶ್ನೆಗಳ ಸುರಿಮಳೆ.

ಅಸೆಂಬ್ಲಿಯಲ್ಲಿ ಮೊನ್ನಿನ ದಿವಸ ಶ್ರೀ ಗಯಾಪ್ರಸಾದ ಸಿಂಗ ಇವರು ಕಲಕತ್ತಾ ಕಾಂಗ್ರೆಸ್ ಹಾಗು ಮಾಲವೀಯರ ಆರೋಪಗಳ ಬಗ್ಗೆ ಪ್ರಶ್ನೆ ವಿಚಾರಿಸಿದರು ಈ ಪ್ರಶ್ನೆಯ ನಂತರದಲ್ಲಿ ಬೇರೆ ಬೇರೆ ಸಭಾಸದರು ಅದೇ ವಿಷಯವಾಗಿ ಅನೇಕ ಪ್ರಶ್ನೆಗಳನ್ನು ಕೇಳಿದರು ಸರ್ ಹ್ಯಾರಿ ಹೇಗರು ಕಾಂಗ್ರೆಸ್ ಅಧಿವೇಶನಕ್ಕೆ ಸರಕಾರದವರು ತಡೆ ಹಾಕಿದ್ದರ ಅಲ್ಲಿ ಯಾವ ನಿರ್ಣಯಗಳೂ ಸ್ವೀಕೃತವಾಗಲಿಲ್ಲವೆಂದು ಉತ್ತರ ಕೊಟ್ಟರು ಇಸ್ಮಾಯಿಲ್‌ಖಾನ ಇವರಿಗೆ ಉತ್ತರ ಕೊಡುವಾಗ ಕಾಂಗ್ರೆಸ ಅಧಿವೇಶನಕ್ಕೆ ಸ್ವಲ್ಪೇ ಜನರು ಬಂದಿದ್ದರೆಂದ ಅವರು ನುಡಿದರು

ಶ್ರೀ ಗಯಾಪ್ರಸಾದರು ನಡುವೆ ಬಾಯಿ ಹಾಕಿ ನಿರ್ಣಯಗಳು ಸ್ವೀಕೃತವಾಗುವ ಮುಂದೆ ಪ್ರತಿನಿಧಿಗಳ ಮೇಲೆ ಹಲ್ಲೆ ನಡೆದಿತ್ತು ಎಂದು ನುಡಿದರು

ಸರ್ ಹ್ಯಾರಿಹೇಗರು ತಮಗೇನೂ ಹಾಗೆ ತಿಳಿದು ಬಂದಿಲ್ಲವೆಂದು ಉತ್ತರ ಕೊಟ್ಟರು

ಗೃಹಮಂತ್ರಿಗಳು ಆ ಮೇಲೆ ಆ ದಿವಸ ಒಟ್ಟು ೧೬೦೦ ಜನರನ್ನು ಸೆರೆಹಿಡಿದಿತ್ತೆಂದೂ ಅವರಲ್ಲಿ ೨೦೦ ಜನರನ್ನು ಜಿಟ್ಲಿಗೆ ಗುರಿಮಾಡಿತ್ತೆಂದೂ ತಿಳಿಸಿದರು

ಶ್ರೀ ಗಯಾಪ್ರಸಾದರು ಪಂಡಿತ ಮಾಲವೀಯರ ಆರೋಪಗಳ ಕಡೆಗೆ ಗೃಹಮಂತ್ರಿಗಳ ಲಕ್ಷ್ಯವನ್ನು ಎಳೆದರು ಗೃಹಮಂತ್ರಿಗಳು ಅವರಿಗೆ ಮೇ ೨೫ ನೇ ತಾರೀಖಿನ ಹಿಂದುಸ್ಥಾನ ಸರಕಾರದ ಪ್ರಕಟನೆಯ ಕಡೆಗೆ ಬೊಟ್ಟು ಮಾಡಿ ತೋರಿಸಿದರು ಮತ್ತು ಬಂಗಾಲ ಸರಕಾರದವರಿಗೆ ವಿಚಾರಣಾಂತ್ಯದಲ್ಲಿ ಆರೋಪಗಳಲ್ಲಿ ಏನೂ ನಿಜಾಂಶವಿಲ್ಲವೆಂದು ಕಂಡು ಬಂದಿದೆಯೆಂದು ಹೇಳಿದರು

ಸರ್ ಹ್ಯಾರಿ ಹೇಗರು ಪುನಃ ಹೇಳಿದ್ದೇನಂದರೆ— ಅಪಮಾನಕ್ಕೆ ಗುರಿಯಾದವರು ಬೇಕಾದರೆ ನ್ಯಾಯ ಕೋರ್ಟುಗಳಿಗೆ ಹೋಗಬಹುದಿತ್ತು. ಆದರೆ ಹಾಗೆ ಮಾಡಿರುವದಿಲ್ಲ

ಶ್ರೀ ಪುರಿಯವರು ಅಪಾದಿತ ಅಪರಾಧಿಗಳನ್ನು ಜಿಟ್ಲಿಗೆ ಗುರಿಮಾಡಲು ಹಿಂದುಸ್ಥಾನ ಸರಕಾರದವರು ಅಪ್ಪಣೆ ಕೊಡುವರೋ ಎಂದು ಕೇಳಿದರು

ಗೃಹಮಂತ್ರಿಗಳು ಪ್ರಶ್ನೆಯು ಸ್ಥಳಿಕ ಸರಕಾರಕ್ಕೆ ಸಂಬಂಧಿಸಿದ್ದಿರುವದೆಂದು ಉತ್ತರ ಕೊಟ್ಟರು

ಶ್ರೀ ಗಯಾಪ್ರಸಾದರು "ಪಂಡಿತ ಮಾಲವೀಯರ ಆರೋಪಗಳು ಸುಳ್ಳು ಇದ್ದಲ್ಲಿ ಅವರ ಮೇಲೆ ಜಿಟ್ಲಿ ಹಾಕಬಹುದಿತ್ತು" ಎಂದು ವಿಚಾರಿಸಿದರು

ಸರ್ ಹ್ಯಾರಿ ಹೇಗರು ತಮಗೇನೂ ಅದು ಅವಶ್ಯಕ ತೋರಲಿಲ್ಲವೆಂದು ಉತ್ತರ ಕೊಟ್ಟರು.

ರೋಣದಲ್ಲಿ ಪೆರೋಲ

ರೋಣದಲ್ಲಿ ಪೆರೋಲದ ಮೇಲಿದ್ದ ಶ್ರೀ ಮುಪ್ಪಣ್ಣನವರು ಅಧಿಕಾರಿಗಳಿಂದ ಪಡೆದು ಕೊಂಡು ೧೫ ದಿವಸದ ಪೆರೋಲ ಬಿಡುಗಡೆಗಾಗಿ ಇಲ್ಲಿಗೆ ಬಂದಿದ್ದಾರೆ

ಬೆಳಗಾಗುವದರೊಳಗೆ ಸರುಡನಾದ

ರೋಮಾನಿಯಾದ ಜಾಸಿ ಎಂಬಲ್ಲಿ ಓರ್ವ ಹುಡುಗ ಅವನಿಗೆ ಒಂದು ದಿವಸ ರಾತ್ರಿ ತಾನು ಕುರುಡನಾದಂತೆ ಕನಸು ಬಿತ್ತು ಬೆಳಗಾಗುತ್ತಲೆ ಕಣ್ಣು ತೆರೆದನು ಆದರೆ ಕನಸು ನಿಜವೇ ಆಗಿ ಅವನು ಕುರುಡನಾಗಿದ್ದರಿಂದ ಅವನಿಗೆ ಏನೂ ಕಾಣಿಸಲಿಲ್ಲ

ದಿಲ್ಲಿ ಒಳಸಂಚಿನ ಜಟ್ಲಿಯ ನಿರ್ಣಯ

ದಿಲ್ಲಿ ತಾ ೨೬— ಸೆಶನ್ಸ ಜಜ್ಜ ಮಿ ಬೇಟ ಇವರು ಈ ಹೊತ್ತಿನ ದಿವಸ ದಿಲ್ಲಿ ಒಳಸಂಚಿನ ಜಟ್ಲಿಯ ನಿರ್ಣಯ ಹೇಳಿದರು ಮೂವರು ಆರೋಪಿಗಳಿಗೆ ಪ್ರತ್ಯೇಕವಾಗಿ ೫ ವರ್ಷ ಕಠಿಣ ಶಿಕ್ಷೆಯಾಯಿತು ಈ ಆರೋಪಿಗಳೆಂದರೆ ಶ್ರೀ. ವಾತ್ಸಾಯನ, ವಿಮಲಪ್ರಸಾದ ಹಾಗು ಡಾ ಬಾಬುರಾಮ ಗುಪ್ತ ಇವರು

ಡಾ. ಹರ್ಡಿಕರರ ಬಿಡುಗಡೆ

ಸಾಬರಮತಿ ತುರುಂಗದಲ್ಲಿ ತಮ್ಮ ಶಿಕ್ಷೆಯ ಅವಧಿಯನ್ನು ಅನುಭವಿಸುತ್ತಿರುವ ಹಿಂದು ಸ್ಥಾನೀ ಸೇವಾದಳದ ಡಾ. ಹರ್ಡಿಕರ ಇವರು ತಾ ೧೫ನೇ ಸಪ್ಟೆಂಬರ ದಿವಸ ತುರುಂಗದಿಂದ ಬಿಡುಗಡೆ ಹೊಂದುವವರಿದ್ದಾರೆಂದು ತಿಳಿದು ಬರುತ್ತದೆ

ಶ್ರೀಮತಿ ಮೋತೀಲಾಲರ ಚಿಂತಾಜನಕ ಪ್ರಕೃತಿ

ಅಲಹಾಬಾದ ತಾ ೨೬— ಪಂಡಿತ ಜವಾಹಿರಲಾಲ ನೆಹರೂ ಇವರ ಮಾತೋಶ್ರೀಯವರಾದ ಶ್ರೀಮತಿ ಸ್ವರೂಪರಾಣಿಯವರ ಪ್ರಕೃತಿಯು ಚಿಂತಾಜನಕವಿರುವದರಿಂದ, ಪಂಡಿತ ಜವಾಹಿರ ರ ಬಿಡುಗಡೆಯು ತಾ ೧೧ ಕ್ಕಿಂತ ಪೂರ್ವದಲ್ಲೆ ಆಗಬಹುದೆಂದು ಅನುಮಾನ ಮಾಡಲಾಗಿದೆ

ಪಂಡಿತ ಜವಾಹಿರರನ್ನು ನೈನೆ ತುರುಂಗಕ್ಕೊಯ್ದರು .

ಅಲಹಾಬಾದ ತಾ ೨೬ — ಪಂಡಿತ ಜವಾಹಿರಲಾಲರನ್ನು ಈ ಹೊತ್ತಿನ ದಿವಸ ಡೆಹರಾಡೂನ ತುರುಂಗದಿಂದ ನೈನಿ ತುರುಂಗಕ್ಕೆ ಕರೆದೊಯ್ದು ರುವರು ಅವರು ತಮ್ಮ ಉಳಿದ ಶಿಕ್ಷೆಯನ್ನು ಅಲ್ಲಿಯೇ ಭೋಗಿಸುವವರಿದ್ದಾರೆ.

ಮಹಾತ್ಮರ ಸೇವೆಗಾಗಿ ಮೀರಾಬೇನರು

ಪುಣೆ ತಾ ೨೬—ಮಹಾತ್ಮರು ಈಗ ಪುನಃ ಪರ್ಣಕುಟಿಗೆ ಬಂದಿದ್ದಾರೆ ಅವರು ತಮ್ಮ ಉಪವಾಸ ಕಾಲದಲ್ಲಿ ನಿದ್ರಿಸಿದ ಸ್ಥಳದಲ್ಲಿಯೇ ಈಗ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾರೆ ಅವರ ಸೇವೆಗಾಗಿ ಮೀರಾಬೇನರು ಬಂದಿದ್ದಾರೆ

ಡಾ. ಬೆಸಂಟರ ಪ್ರಕೃತಿಯು ಚಿಂತಾಜನಕವಾಯಿತು

ಮದ್ರಾಸ ತಾ ೨೬ ಡಾ. ಬೆಸಂಟ ಇವರ ಪ್ರಕೃತಿಯು ಇತ್ತೀಚೆಗೆ ನಿಶ್ಶಕ್ತತೆಯಿಂದ ಚಿಂತಾಜನಕವಾಗಿದೆ ಆದರೆ ಹೆದರತಕ್ಕ ಕಾರಣವಿಲ್ಲೆಂದು ಡಾಕ್ಟರರ ಅಭಿಪ್ರಾಯವಿದೆ

ಬರೋಡಾ ಸಂಸ್ಥಾನದ ಕಟ್ಟಪ್ಪಣೆ

ಅಮರೇಲಿ ತಾ ೨೬— ಬಡೋದಾ ಸರಕಾರ ಸ್ಪಿರಿಟದ ಸಂಬಂಧವಾಗಿ ಒಂದು ಕಟ್ಟಪ್ಪಣೆ ಹೊರಡಿಸಿದ್ದಾರೆ ೧೦೦ಕ್ಕೆ ೩೦ಕ್ಕಿಂತ ಹೆಚ್ಚಿಗೆ ಸ್ಪಿರಿಟನ್ನೊಳಗೊಂಡ ಯಾವದೇ ವಸ್ತುವು ತಮ್ಮ ಸಂಸ್ಥಾನದಲ್ಲಿ ಬರತಕ್ಕದ್ದಲ್ಲವೆಂದು ಅಪ್ಪಣೆ ಮಾಡಿದ್ದಾರೆ. ಆ ಪದಾರ್ಥವೇ ಇರಲಿ ಇನ್ನು ಮೇಲೆ ಹೆಚ್ಚಿಗೆ ಕೊಬಾಣವೇ ಇರಲಿ ಈ ಅಪ್ಪಣೆಯು ಅನ್ವಯಿಸುವದು

ರಾಜಾಬಹದ್ದೂರ ಸರ್ ಬನ್ಸಿಲಾಲರ ಔದಾರ್ಯ.

ಹೈದರಾಬಾದ ತಾ ೨೬- ರಾಜಾಬಹದ್ದೂರ ಸರ್ ಬನ್ಸೀಲಾಲ ಮೋತೀಲಾಲ ಇವರು ಕೂಲಿಕಾರರಿಗೆ ಉತ್ತಮವಾದ ಮನೆಗಳನ್ನು ಕಟ್ಟಿಸಕೊಡುವದಕ್ಕಾಗಿ ೩ ಲಕ್ಷ ರುಪಾಯಿಗಳನ್ನು ದಾನ ಮಾಡಿದ್ದರು ಈ ಬಗ್ಗೆ ನಡೆದ ಕಾರ್ಯವನ್ನು ನೋಡಿ ಸಮಾಧಾನಗೊಂಡು ಅವರು ಮತ್ತೆ ೩ ಲಕ್ಷ ರುಪಾಯಿ ದಾನ ಮಾಡಿದ್ದಾರೆ.

ಇಹವೃತ್ತ

ಕಾಲೇಜ ಹಾಸ್ಟೆಲದಲ್ಲಿ ನಿನ್ನಿನ ದಿವಸ ಶ್ರೀ ಆ ನ ಕೃಷ್ಣರಾಯರು 'ನ್ಯಾಶನಲ್ ವ್ಯಾಲ್ಯೂ ಆಫ್ ಆರ್ಟ' ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು.

ಸಾಯಂಕಾಲದಲ್ಲಿ ಲಿಂಗಾಯತ ವಿದ್ಯಾವರ್ಧಕ ಸಂಸ್ಥೆಯ ವಾಙ್ಮಯ ಶಾಖೆಯ ಪರವಾಗಿ ಶ್ರೀ ಅ ನ ಕೃಷ್ಣರಾಯರು 'ಆಧುನಿಕ ಕನ್ನಡ ಸಾಹಿತ್ಯ'ದ ಸಂಬಂಧವಾಗಿ ಭಾಷಣ ಮಾಡಿದರು.

ಗಾಂಧಿ ವ್ಹಾಯಿಸರಾಯರ ಭೆಟ್ಟಿ.

ಸಿಮಲಾ ತಾ। ೨೧— ಶ್ರೀ ಲಾಲಚಂದ ನವಲರಾಯ ಇವರು ಈಸಲದ ಅಸೆಂಬ್ಲಿ ಅಧಿವೇಶನದಲ್ಲಿ ಗಾಂಧೀ ವ್ಹಾಯಿಸರಾಯರ ಭೆಟ್ಟಿಯ ಬಗ್ಗೆ ಒಂದು ಸೂಚನೆ [ತರಲು ತಯಾರಾ]ಗಿದ್ದಾರೆ. ಈ ಸೂಚನೆಯ ಮೇಲೆ ತಾ। ೭ ದಿವಸ ಚರ್ಚೆ ನಡೆಯಬಹುದೆಂದು ತಿಳಿಯುತ್ತದೆ. ಈ ಸೂಚನೆಯಲ್ಲಿ ಅವರು ವ್ಹಾಯಿಸರಾಯರು ಮಹಾತ್ಮರಿಗೆ ಭೆಟ್ಟಿ ಕೊಟ್ಟು ಸದ್ಯದ ವಿಷಮಾವಸ್ಥೆಯನ್ನು ಹೋಗಲಾಡಿಸಬೇಕೆಂದು ಉಲ್ಲೇಖಿಸಿದ್ದಾರೆ.

ಹರಿಜನ ಮುಖಂಡರು ರಾಜೀನಾಮೆ ಕೊಟ್ಟರು

ಅಹಮ್ಮದಾಬಾದ ತಾ॥ ೨೩— ಅಹಮ್ಮದಾಬಾದ ಮ್ಯುನಸಿಪಾಲಿಟಿ ಸ್ಕೂಲಬೋರ್ಡದ ಸಭಾಸದರಾದ ಶ್ರೀ ಕಿಶಾಭಾಯಿಯವರು ಸರಕಾರದ ಧೋರಣದ [ನಿಷೇಧಾರ್ಥವಾಗಿ] ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಸರಕಾರದವರು ಮಹಾತ್ಮರಿಗೆ ಹರಿಜನ ಕಾರ್ಯಕ್ಕಾಗಿ ಮೊದಲಿನಂತೆ ಸವಲತ್ತು ಕೊಡದೆ ಇದ್ದದ್ದೇ ಈ ನಿಷೇಧದ ಕಾರಣವಾಗಿದೆ.

ಸರಕಾರಿ ಕಟ್ಟಡದ ಮೇಲೆ ರಾಷ್ಟ್ರಧ್ವಜ.

ಶೇಖುಪುರ ತಾ॥ ೨೩— ಓರ್ವ ಮುಸಲ್ಮಾನ ಸ್ವಯಂಸೇವಕನು ಈ ಹೊತ್ತಿನ ದಿವಸ ಡೆಪ್ಯೂಟಿ ಕಮಿಶನರರ ಕೋರ್ಟಿನ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಿದನು. ಪೋಲೀಸರು ಕೂಡಲೆ ಅವನನ್ನು ಸೆರೆ ಹಿಡಿದೊಯ್ದರು.

ಮಹಾತ್ಮರ ಪ್ರಕೃತಿ

ಪುಣೆ ತಾ॥ ೨೪— ಪರ್ಣಕುಟಿಯ ವ್ಯವಸ್ಥಾಪಕ ಮಂಡಳನವರು ಈ ಹೊತ್ತಿನ ದಿವಸ ಮಹಾತ್ಮರ ಪ್ರಕೃತಿಯ ಬಗ್ಗೆ ಕೆಳಗಿನಂತೆ ಪತ್ರಕ ತೆಗೆದಿದ್ದಾರೆ.

ಮಹಾತ್ಮಾ ಗಾಂಧಿಯವರ ಪ್ರಕೃತಿಯು ಬಹಳ ಅಶಕ್ತವಿರುವದರಿಂದ ಅವರಿಗೆ ಮಾನಸಿಕ ಶ್ರಮ ಕೊಟ್ಟಲ್ಲಿ ಅವರ ಪ್ರಕೃತಿಯು ಮತ್ತಿಷ್ಟು ಕೆಡುವ ಸಂಭವವಿದೆಯೆಂದು ಡಾಕ್ಟರರ ಅಭಿಪ್ರಾಯವಿದೆ. ಕಾರಣ ಸಧ್ಯಕ್ಕೆ ಅವರ ಭೆಟ್ಟಿಗಾಗಿ ಯಾರೂ ಬರಕೂಡದೆಂದು ವಿನಂತಿ ಇದೆ.

ಮಹಾತ್ಮಾ ಗಾಂಧಿಯವರು ಈ ಹೊತ್ತು ಮುಂಜಾನೆ ಪ್ರಾರ್ಥನೆ ಮಾಡಿ ಸೂರ್ಯ ಸ್ನಾನ ತೆಗೆದುಕೊಂಡರು. ಈ ಹೊತ್ತು ಮುಂಜಾನೆ ಡಾ॥ ಮೆಹತಾ ಇವರು ಉಪಚಾರ ಮಾಡಿ ಹೋದರು. ಡಾಕ್ಟರರು ಅವರಿಗೆ ಕನಿಷ್ಠ ಪಕ್ಷ ಎರಡರಿಂದ ಮೂರು ವಾರಗಳ ವರೆಗಾದರೂ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಂಡಿರುವರೆಂದು ತಿಳಿಯುತ್ತದೆ. ಅವರ ರಕ್ತದಾಭಿಸರಣವು ೧೬೨ ಇದ್ದು ಪ್ರಕೃತಿಯು ಸರ್ವಸಾಧಾರಣ ನೆಟ್ಟಗಿದೆ. ಡಾಕ್ಟರರು ಅವರಿಗೆ ತೆಳ್ಳನ್ನ ಪದಾರ್ಥಗಳನ್ನು ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದ್ದಾರೆ. ಅವರು ಈ ಹೊತ್ತಿನ ದಿವಸ ಮೋಸಂಬಿಯ ರಸ ತೆಗೆದುಕೊಂಡರು. ಆದರೆ ನಾಳೆನಿಂದ ಅವರು ಕಂಕಾಹಾರ ಪ್ರಾರಂಭಿಸುವರೆಂದು ತೋರುತ್ತದೆ. ಇದರಂತೆ ಅವರು ಮೂರು ನಾಲ್ಕು ದಿನಗಳಲ್ಲಿ ಹಾಲು ತೆಗೆದುಕೊಳ್ಳಲು ಪ್ರಾರಂಭ ಮಾಡಬಹುದು. ಮಹಾತ್ಮರಿಗೆ ಈ ಹೊತ್ತು ಮಧ್ಯಾನ್ಹದಲ್ಲಿಯಾದರೂ ನಿದ್ದೆ ಹತ್ತಿತ್ತು.

ಇವತ್ತಿನ ದಿವಸ ಮುಂಜಾನೆ ಡಾಕ್ಟರರು ಬಂದ ಕಾಲಕ್ಕೆ ಸೌ. ಸರೋಜಿನಿಯವರು ಪರ್ಣಕುಟಿಗೆ ಬಂದು ಹೋದರು. ಮಹಾತ್ಮರ ತೂಕವು ಈಗ ೯೩॥ ಪೌಂಡು ಇದೆ.

ಹೈದರಾಬಾದದಲ್ಲಿ ೧೪೪ನೇ ಕಲಮು

ಹೈದರಾಬಾದ (ಸಿಂಧ) ತಾ। ೨೧— ಹೈದರಾಬಾದ ಪಟ್ಟಣದ ಪಟ್ಟಿಗೆ ೧೪೪ನೇ ಕಲಮು ಜಾರಿಯಲ್ಲಿ ಬಂದಿದ್ದು ಸಭೆ ಮೆರವಣಿಗೆ ಮೊದಲಾದವುಗಳಿಗೆ ತಡೆ ಮಾಡಲಾಗಿದೆ.

ಇಲ್ಲಿಯ ಹಿಂದೂ ಕುಮಾರಿ ಲಾಲಾ ಕೃಪಾಲಾನಿ ಎಂಬವಳು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿ ಮುಸಲ್ಮಾನನ್ನು ಲಗ್ನವಾಗಿದ್ದರಿಂದ ಇಲ್ಲಿಯ ಹಿಂದೂ ಜನರಲ್ಲಿ ಕ್ಷೋಭೆಯುಂಟಾಗಿದೆ. ಈ ಕ್ಷೋಭೆಯು ದಂಗೆಯಲ್ಲಿ ರೂಪಾಂತರವಾದೀತೆಂಬ ಭಯದಿಂದ ಅಧಿಕಾರಿಗಳು ಹೀಗೆ ಮುಂಜಾಗ್ರತೆಯಿಂದ ವರ್ತಿಸುತ್ತಿದ್ದಾರೆ.

ಚೀನಿ ವ್ಯಾಪಾರಿಗಳನ್ನು ಓಡಿಸಿಕೊಂಡು ಹೋದರು

ಹಾರ್ಬಿನ್ ತಾ। ೨೩— ನಿನ್ನೆ ಮೂವತ್ತು ಜನ ದರೋಡೆಗಾರರು ಎರ್ಹೋ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿ ೫೩ ಜನ ವ್ಯಾಪಾರಿಗಳನ್ನು ಓಡಿಸಿಕೊಂಡು ಹೋಗಿದ್ದಾರೆ. ಅವರು ಈಗ ಆ ವ್ಯಾಪಾರಸ್ಥರನ್ನು ಒಂದು ಗುಡ್ಡಗಾಡು ಪ್ರದೇಶದಲ್ಲಿ ಇಟ್ಟಿದ್ದಾರೆ. ಅವರ ಬಿಡುಗಡೆ ಬೇಕಾದರೆ ಹಣ ಕೊಟ್ಟು ಬಿಡಿಸಿಕೊಂಡು ಹೋಗಿರೆಂದು ಹೇಳುತ್ತಿದ್ದಾರೆ.

ಜೇಲಿನಲ್ಲಿ ಕೆಲಸ ಮಾಡದ್ದಕ್ಕೆ ೬ ತಿಂಗಳ ಕಠಿಣ ಶಿಕ್ಷೆ.

ಹೊಸದಿಲ್ಲಿ ತಾ। ೨೩ - ಲುಧಿಯಾನಾ ಒಳಸಂಚಿನ ಸಂಬಂಧವಾಗಿ ೭ ವರ್ಷ ಕಠಿಣ ಶಿಕ್ಷೆಗೆ ಗುರಿಯಾದ ಅತಾ ಮಹಮ್ಮದ ಎಂಬುವವನು ಜೇಲಿನಲ್ಲಿ ಕೆಲಸ ಮಾಡಲು ನಿರಾಕರಿಸಿದ್ದರಿಂದ, ಅವನಿಗೆ ಮತ್ತೆ ೬ ತಿಂಗಳ ಶಿಕ್ಷೆ ಆಯಿತು.

ಮದ್ರಾಸದಲ್ಲಿ ಪರದೇಶಿ ಅರಿವೆಯ ಪಿಕೆಟಿಂಗ

ಮದ್ರಾಸ ತಾ। ೨೩— ಶ್ರೀ ಎನ್. ಎಸ್. ವರದಾಚಾರಿಯವರು ತಮ್ಮ ಸಂಗಡ ೧೭ ಜನ ಸ್ವಯಂಸೇವಕರನ್ನು ಕರೆದುಕೊಂಡು, ರತ್ನಾ ಹಾಗು ಚಾಯನಾ ಬಜಾರದಲ್ಲಿ, ಪರದೇಶಿ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದರು. ಪೋಲೀಸರು ಸ್ವಯಂಸೇವಕರ ಕೈಯೊಳಗಿನ ಬಹಿಷ್ಕಾರದ ಪತ್ರಿಕೆಗಳನ್ನು ಕಸಿದುಕೊಂಡರು. ಯಾರನ್ನೂ ಸೆರೆಹಿಡಿಯಲಿಲ್ಲ.

ಮಗುವನ್ನು ಮಾರಿಕೊಂಡ ಮಹಾ ತಾಯಿಯು

ಮೇತ್ರನಜೀರ ಎಂಬಲ್ಲಿ ಓರ್ವ ರೆಶ್ರಿಯನ್ ಹೆಂಗಸು ತನ್ನದೊಂದು ಗಂಡು ಮಗುವನ್ನು ಓರ್ವ ಗೃಹಸ್ಥನಿಗೆ ೭ ಆಣೆಗೆ ಮಾರಿಕೊಂಡಿರುವಳೆಂದು ಸುದ್ದಿ ಬಂದಿದೆ. ಇವಳು ಬಾಣಂತಿತನಕ್ಕಾಗಿ ಆಸ್ಪತ್ರೆ ಸೇರಿದ್ದಳು. ಬಾಣಂತಿತನವನ್ನು ಮುಗಿಸಿಕೊಂಡು ಆಸ್ಪತ್ರೆಯಿಂದ ಹೊರಬಿದ್ದ ಕೂಡಲೆ ಆ ಗಂಡು ಕೂಸನ್ನು ಅಲ್ಲಿಯ ವಾರ್ಡರನಿಗೆ ಮಾರಿಬಿಟ್ಟಳು. ಹಣದ ಅಡಚಣಿಯೇ ಇದಕ್ಕೆ ಕಾರಣವಂತೆ.

ಓರ್ವ ಹೆಂಗಸು ತತ್ತಿ ಹಡೆದಳು.

ಜಬಲಪುರ ತಾ॥ ೨೩— ರೇವಾ ಸಂಸ್ಥಾನದಲ್ಲಿಯ ಒಂದು ಊರಲ್ಲಿ ಓರ್ವ ಹೆಂಗಸು ೩೦ ತತ್ತಿಗಳನ್ನು ಹಡೆದಿದ್ದಾಳೆ. ಈ ಸುದ್ದಿಯು ತಿಳಿದಕೂಡಲೆ ಪೋಲೀಸರು ಅಲ್ಲಿಗೆ ಬಂದರು. ಆಗಿರೆ ಅವರಿಗೆ ಅಲ್ಲಿ ಎರಡನೇ ತತ್ತಿಗಳು ಸಿಕ್ಕವು. ಯಾಕಂದರೆ ಈ ಅವಧಿಯಲ್ಲಿ ಆ ಹೆಂಗಸು ಉಳಿದ ಯಾವತ್ತೂ ತತ್ತಿಗಳನ್ನು ಸುಟ್ಟುಬಿಟ್ಟಿದ್ದಳು.

ದಿ. ಅಂಕಲಗಿ ಬ್ಯಾಂಕ (ಲಿ.) ಧಾರವಾಡ.
ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ
ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರರು

ಬರುವರು! ಧಾರವಾಡಕ್ಕೆ ಬರುವರು!
ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾದ
ಕಲಾನಿಪುಣ ಪ್ರೊ. ಎಚ್. ಜಿ. ಘೋಡಕೆ ಇವರ
ಹಾಸ್ಯಕಾರಕ-ಪ್ರೋಜ ಮತ್ತು ಸಂಗೀತ ಹೊಸತರದ
ನಕಲಿನ ಪ್ರಚಂಡ
ಪ್ರೋಗ್ರಾಮು
ಆಗುವವು.

ಡಾ. ಕುಲಕರ್ಣೀಜ
ಲೆಬೊರೋಟರಿ ಮುಂಬಯಿ ನಂಬರ ೧೨
ಬಾಟ್ಲಿ ಕಿಮ್ಮತ್ತು ೧—೧೨—೦
ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು
ಕರಗು, ಬಿಳೀಕರಗು, ಕೆಂಪು ಕರಗು ತಿಂಗಳಿಗೊಮ್ಮೆ ನರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದೆ.

ಬಿ. ಟಿ. [ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.
೧೮-೭

ತ್ರೈತೆಯ ಗುಟ್ಟು— ಶ್ರೀಮದ್ಭಗವದ್ಗೀತೆಯ ಮೂಲ ಶ್ಲೋಕ, ಶಂಕರಭಾಷ್ಯದ ಅರ್ಥ... ಇದರಲ್ಲಿವೆ ೧೦೦ ಪುಟಗಳು... ಕ್ರಿ.೫ ೦ ... ಪುಟಗಳು-ಬೆಲೆ ೧ರೂ. ...

ಉಪನಿಷತ್-ಪ್ರಕಾಶ— ಭಾಗ ೧ ಮತ್ತು ... ಈಶ, ಕೇನ, ಕಠ, ಪ್ರಶ್ನ, ಮಾಂಡೂಕ್ಯ ... ಮುಂಡಕ, ಐತರೇಯ, ತೈತ್ತಿರೀಯ ... ೧ನೇ ಭಾಗ ... ಮತ್ತು ೨ನೇ ಭಾಗ ... ಬೆಲೆ ...

ಉಪನಿಷತ್-ರಹಸ್ಯ— ಪ್ರೊ. ರಾನಡೆಯ "A Constructive Survey of Upanishadic Philosophy" ಎಂಬ ಗ್ರಂಥದ ಕನ್ನಡ ಅನುವಾದ ... ಉಪನಿಷತ್ತು ಮೊದಲಾದವು ... (ಶ್ರೀ. ಬೇಂದ್ರೆ ಮತ್ತು ...) ... ಪು. ಬೆಲೆ ೩ರೂ, ...

ಶ್ರೀರಾಮಕೃಷ್ಣಚರಿತಾಮೃತವು— ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ಅಧ್ಯಾತ್ಮ ... ಪು. ಬೆಲೆ ... ರೂ ...

ಎಲ್ಲ ಪುಸ್ತಕಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ಬೆಲೆ ...

ಏಜಂಟರು ಬೇಕಾಗಿದ್ದಾರೆ.
ಧಾರವಾಡ ಕಮೀಶನ ಕೊಡಲಾಗುವದು. ಇಚ್ಛೆಯುಳ್ಳವರು ಪತ್ರವ್ಯವಹಾರ ಮಾಡಬೇಕು.
—ವ್ಯವಸ್ಥಾಪಕ
"ಕನ್ನಡಿಗ"

ನೋಟೀಸಿನ ದರಗಳು
ಮೊದಲನೆ ಸಾರೆ ಸಿಂಗಳಕಾಲಮಿನ
ಮುಂದೆ ಪ್ರತಿಯೊಂದು ಸಾಳಿನ
ಎರಡನೆ ಸಾರೆ
ಮುಂದೆ ಪ್ರತಿಯೊಂದು ಸಾರೆ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗನ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬ. ೨೭೮೮

यद्यत् परवशं दुखं । यद्यदात्मवशं सुखम्॥मनु.

ನಿತ್ಯ ಪತ್ರಿಕೆ. ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ರವಿವಾರ ಭಾದ್ರಪದ ಶುದ್ಧ ೭ ಶಕೆ ೧೮೫೫ ತಾ|| ೨೭-೮-೩೩ [ಸಂಚಿಕೆ ೧೦೭

ಇನಸ್ಯೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯೂರನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ.ಕಂ.ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಮಹಾತ್ಮಾ ಗಾಂಧಿಯವರ ಸಂದೇಶ.

ಮುಂದಿನ ಜೀವನವು ಅನಿಶ್ಚಿತ; ಹರಿಜನ ಕಾರ್ಯವು ಅನ್ನಕ್ಕಿಂತಲೂ ಪ್ರಿಯವಾಗಿದೆ.

ಪುಣೆ ತಾ| ೨೫— ಮಹಾತ್ಮರು ತಾವು ಬಿಡುಗಡೆ ಹೊಂದಿ ಬಂದ ಬಳಿಕ 'ಹರಿಜನ ಪತ್ರಿಕೆಯ ವಾಚಕರಿಗಾಗಿ ಕೆಳಗಿನಂತೆ ಸಂದೇಶ ಕೊಟ್ಟಿದ್ದಾರೆ

ಪರಮೇಶ್ವರನ ಲೀಲೆಯು ಅವರ್ಣನೀಯವಾಗಿದೆ ಅನಪೇಕ್ಷಿತ ಪ್ರಸಂಗಗಳಿಗೆ ಎದೆಗೊಡುವದು ನನ್ನ ಸಾರ್ವಜನಿಕ ಆಯುಷ್ಯದಲ್ಲಿ ಎಷ್ಟೋಸಾರೆ ಬಂದಿತ್ತು. ಆದರೆ ಈಗಿನಂತಹ ಅನಪೇಕ್ಷಿತ ಪ್ರಸಂಗವು ಮಾತ್ರ ಎಂದೂ ಬಂದಿದ್ದಿಲ್ಲ. ನನ್ನ ಮುಂದಿನ ಕಾರ್ಯವೇನು ? ನಾನು ತುರಂಗದ ಹೊರಗಿನ ದಿವಸಗಳನ್ನು ಹೇಗೆ ಕಳೆಯುವೆನೆಂಬದು ನನಗೇ ಗೊತ್ತಿರುವುದಿಲ್ಲ. ಆದರೆ ತುರಂಗದ ಹೊರಗೆ ಇರಲಿ ಇಲ್ಲವೆ ಒಳಗೆ ಇರಲಿ, ಹರಿಜನ ಕಾರ್ಯವು ಮಾತ್ರ ನನಗೆ ಯಾವಾಗಲೂ ಪರಮಪ್ರಿಯವಾದ ವಿಷಯವಾಗಿದೆಯೆಂಬುದು ಖಂಡಿತವಾದದ್ದು. ಹರಿಜನ ಕಾರ್ಯವು ನನಗೆ ಅನ್ನಕ್ಕಿಂತಲೂ ಹೆಚ್ಚು ಪ್ರಿಯವಾದ ವಿಷಯವಾಗಿದೆ ನಾನು ಅನ್ನವಿಲ್ಲದೆ ಎಷ್ಟೋ ದಿನ ಜೀವಿಸಬಹುದು ಆದರೆ ಹರಿಜನ ಕಾರ್ಯವಿಲ್ಲದಿದ್ದರೆ ಒಂದು ಕ್ಷಣವಾದರೂ ಜೀವಿಸುವದು ಶಕ್ಯವಿಲ್ಲ ಪರಮೇಶ್ವರನು ಹಿಂದೂ ಧರ್ಮದಲ್ಲಿಯ ಈ ಕಲಂಕವನ್ನು ಸಂಪೂರ್ಣವಾಗಿ ತೊಳೆದು ಬಿಡಲೆಂದೂ, ಹಿಂದೂ ಧರ್ಮವು ಸತ್ಯರೂಪಿ ನಾರಾಯಣನ ಪ್ರಕಾಶವನ್ನು ಉಪಭೋಗಿಸುವಂತೆ ಮಾಡಲೆಂದೂ ಪ್ರಾರ್ಥಿಸುತ್ತೇನೆ ನಾನು ನನ್ನ ಜೀವವನ್ನು ಈ ಕಾರ್ಯಕ್ಕೆ ಧಾರೆಯೆರದಿದ್ದೇನೆ ಮತ್ತು ಈ ಸತ್ಯಾಚರಣೆಗಾಗಿ ಬೇಕಾದಂಥ ತಪಸ್ಸು ಮಾಡಲು ನಾನು ಸದೈವ ಸಿದ್ಧನಿದ್ದೇನೆ.

ಮಹಾತ್ಮರ ಪ್ರಕೃತಿ

ಪುಣೆ ತಾ| ೨೫- ಮಹಾತ್ಮಾ ಗಾಂಧಿಯವರ ಪ್ರಕೃತಿಯು ಸುಧಾರಿಸಹತ್ತಿದ್ದು ಅವರು ಹಾಲು ತೆಗೆದುಕೊಳ್ಳುವವನ್ನು ಸುರುವು ಮಾಡಿದ್ದಾರೆ. ಅವರು ಈ ಹೊತ್ತಿನ ದಿವಸ ಕೆಲವು ಸಣ್ಣ ಪತ್ರಗಳನ್ನು ಬಾಯಿಂದ ಹೇಳಿದರು

ಸೌ. ಸರೋಜಿನಿದೇವಿ

ಸೌ|| ಸರೋಜಿನಿದೇವಿಯವರು ಈಹೊತ್ತಿನ ದಿವಸ ಮದ್ರಾಸ ಎಕ್ಸಪ್ರೆಸ್‌ದಿಂದ ಹೈದರಾಬಾದದಿಂದ ಬಂದರು. ಕೂಡಲೆ ಅವರು ಪರ್ಣಕುಟಿಗೆ ಹೋಗಿ ಮಹಾತ್ಮರ ಭೆಟ್ಟಿ ತೆಗೆದುಕೊಂಡರು. ಡಾಕ್ಟರರು ಮಹಾತ್ಮರ ಪ್ರಕೃತಿಯನ್ನು ಪರೀಕ್ಷಿಸುವವರೆಗೆ ಅವರು ಅಲ್ಲಿಯೇ ಇದ್ದರು

ಮಹಾತ್ಮಾ ಗಾಂಧಿಯವರಿಗೆ ಮೋಸಂಬಿಯ ರಸವು ಪಚನವಾಗಹತ್ತಿದ್ದರಿಂದ, ಅವರು ಬೇಗನೆ ಗುಣಹೊಂದಬಹುದೆಂದು ಹೇಳಬಹುದು ಈ ಹೊತ್ತಿನ ದಿವಸ ಅವರು ಹಾಸಿಗೆಯ ಮೇಲಿಂದಲೆ ಕೆಲವು ಪತ್ರಗಳನ್ನು ಬರೆಯಲು ಹೇಳಿದರು ಸಾಯಂಕಾಲದಲ್ಲಿ ಡಾ| ದಿನಶಾ ಮೆಹತಾ ಇವರು ಅಂಗಮರ್ದನ ಮಾಡಿದರು ಸದ್ಯಕ್ಕೆ ಸೌ. ಕಸ್ತೂರಿಬಾಯಿ, ಮೀರಾಬೆನ ಹಾಗು ಶ್ರೀ ಪ್ಯಾರೇಲಾಲ ನಾರಾಯಣ? ಘುರಾದಾಸ ಇವರು ಮಹಾತ್ಮರ ಶುಶ್ರೂಷ ಮಾಡುತ್ತಿರುವರು

ಶ್ರೀಮತಿ ಸ್ವರೂಪರಾಣಿಯವರ ಪ್ರಕೃತಿ.

ಲಖನೌ ತಾ| ೨೫— ಶ್ರೀಮತಿ ಸ್ವರೂಪರಾಣಿ ನೆಹರೂರವರು ಕೆಲವು ದಿವಸಗಳಿಂದ ಎದೆನೋವಿನಿಂದ ಒಳಲುತ್ತಿದ್ದರಷ್ಟೆ, ಅವರು ಸೌ. ಕಮಲಾ ನೆಹರೂ ಇವರಿಂದ ಕೂಡಿಕೊಂಡು ಈ ಹೊತ್ತಿನ ದಿವಸ ಇಲ್ಲಿಗೆ ಬಂದರು ವೈದ್ಯಕೀಯ ಕಾಲೇಜದಲ್ಲಿ ಕ್ಷ ಕಿರಣದಿಂದ ಅವರ ಪ್ರಕೃತಿಯನ್ನು ಪರೀಕ್ಷೆ ಮಾಡಿತು. ಅವರ ಪ್ರಕೃತಿಯು ಅಷ್ಟೇನೂ ಸಮಾಧಾನಕರವಿಲ್ಲವೆಂದು ಕಂಡು ಬಂತು. ಶ್ರೀಮತಿಯವರು ಕೆಲವು ದಿವಸ ಲಖನೌದಲ್ಲಿಯೇ ಇರತಕ್ಕವರಿದ್ದಾರೆ

'ಬಿಳೇ ಕಾಗದದ' ಬಗ್ಗೆ ಆಚಾರ್ಯರ ಅಭಿಪ್ರಾಯ

ಜಾಯಿಂಟ ಕಮಿಟಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಶ್ರೀ|| ಎಂ. ಕೆ ಆಚಾರ್ಯ ಇವರು ಮೊನ್ನಿನ ದಿವಸ ವಿಲಾಯತಿಯಿಂದ ತಿರುಗಿಬಂದರು ಪತ್ರಿಕಾ ಪ್ರತಿನಿಧಿಯು, ಜಾಯಿಂಟ ಕಮಿಟಿಯ ಕಾರ್ಯದ ಬಗ್ಗೆ ಅವರ ಅಭಿಪ್ರಾಯ ಕೇಳಲಾಗಿ ಅವರು ಬಿಳೇ ಕಾಗದವು ನಿರುಪಯೋಗ ವಸ್ತುವಿನಕಿಂತಲೂ ಅತಿ ಕೆಡಕುಳ್ಳದ್ದಾಗಿರುವದೆಂದು ಹೇಳಿದರು

ಅವರು ಮತ್ತೂ ಹೇಳಿದ್ದೇನಂದರೆ — ಪಾರ್ಲಮೆಂಟಿದವರು ಬಿಳೇ ಕಾಗದಲ್ಲಿ ಏನೂ ತಿದ್ದುಪಡೆ ಮಾಡದೆ ಅದನ್ನು ಇದ್ದಕ್ಕಿದ್ದಂತೆ ಮಾನ್ಯ ಮಾಡಿದರೆ, ಸರಕಾರದ ಆಳರಸರ ಬದಲು ರಾಜ್ಯ ಸೂತ್ರವನ್ನು ಬೇರೊಂದು ವರ್ಗದವರ ಕೈಯಲ್ಲಿ ಕೊಟ್ಟಂತಾಗುವದು. ಇಷ್ಟೇ ಅಲ್ಲದೆ ಬಾಯಿಯಿಲ್ಲದ ಅನೇಕ ಜನರ ಮೇಲೆ ಬಾಯಿಯುಳ್ಳ ಕೆಲವೊಂದು ಜನರಿಗೆ ದೊಣಸು ಆಳ್ವಿಕೆಯಲ್ಲು ಆಸ್ಪದ ಕೊಟ್ಟಂತಾಗುವದು.

ಬ್ರಿಟಿಶ ಪತ್ರಿಕೆಯ ಎಚ್ಚರಿಕೆ

ಹಿಂದುಸ್ಥಾನದಲ್ಲಿ ವೈಷಮ್ಯವುಂಟಾದೀತು

ಲಂಡನ್ ತಾ|| ೨೩— "ಮ್ಯಾಂಚೆಸ್ಟರ ಗಾರ್ಡಿಯನ್" ಪತ್ರಿಕೆಯು ಈ ಹೊತ್ತಿನ ಸಂಚಿಕೆಯಲ್ಲಿ ಮಹಾತ್ಮರ ಬೇಡಿಕೆಗಳ ಬಗ್ಗೆ ಒಂದು ಸಂಪಾದಕೀಯ ಲೇಖವು ಬಂದಿದೆ. ಪತ್ರಿಕೆಯು ಈ ಲೇಖದಲ್ಲಿ ಮಿ. ಪೋಲಕ ಇವರಿಂದ ತಮಗೆ ಬಂದ ಒಂದು ಪತ್ರವನ್ನು ಉದ್ಧರಿಸಿರುತ್ತದೆ. ಈ ಲೇಖದಲ್ಲಿ ಮಿ. ಪೋಲಕರು, ಮಹಾತ್ಮಾ ಗಾಂಧಿ ಹಾಗು ಸರಕಾರದವರಲ್ಲಿ ತತ್ವದಬಗ್ಗೆ ಏನೂ ಮತಭೇದವಿಲ್ಲವೆಂದೂ, ಅಸ್ಪೃಶ್ಯತಾ ನಿವಾರಣ ಕಾರ್ಯವನ್ನು ಸಾಗಿಸಲಿಕ್ಕೆ ಮಹಾತ್ಮರಿಗೆ ಎಲ್ಲ ಬಗೆಯ ಸವಲತ್ತುಗಳನ್ನು ಕೊಡಬೇಕೆಂದೂ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ. ಸಂಪಾದಕರಾದರೂ ಅವರ ಅಭಿಪ್ರಾಯವನ್ನು ಸಮರ್ಥನ ಮಾಡಿ, ಮಹಾತ್ಮರು ಬೇಡುವದನ್ನೆಲ್ಲ ಕೊಡಬೇಕೆಂದು ಬರೆದಿದ್ದಾರೆ ಪತ್ರಿಕೆಯು ಮತ್ತೂ ಅನ್ನುವದೇನಂದರೆ— ಈ ವಿಷಯದ ಸಂಬಂಧವಾಗಿ ಸರಕಾರದೊಡನೆ ಹೋರಾಡಿ, ಈ ಹೋರಾಟದಲ್ಲಿ ಪ್ರಾಣತ್ಯಾಗವನ್ನು ಮಾಡಲು ಮಹಾತ್ಮರಿಗೆ ಆಸ್ಪದ ಕೊಡುವದು ಬ್ರಿಟಿನ್ ಹಾಗೂ ಹಿಂದುಸ್ಥಾನದ ದೃಷ್ಟಿಯಿಂದ ವಿಘಾತಕವಾಗದೆ ಹೋಗದು. ಇದಲ್ಲದೆ ಇದರಿಂದ ಹಿಂದುಸ್ಥಾನದಲ್ಲಿ ವಿಪರೀತವಾದ ವೈಷಮ್ಯವು ಬೆಳೆದು, ಅದು ಚಿರಕಾಲ ಅವರ ಮನಸಿನಲ್ಲಿ ಉಳಿಯುವದು

ಮುಂಬಯಿಯಲ್ಲಿ ಕಾಯದೆ ಭಂಗ

ಎಸ್. ಜಿ ತಾವಡೆ ಎಂಬ ಓರ್ವ ಕಾಂಗ್ರೆಸ್ ಕೆಲಸಗಾರನಿಗೆ ಪೋಲೀಸ ಅಧಿಕಾರಿಗಳು ೨೪ ತಾಸಿನಲ್ಲಿ ಮುಂಬಯಿ ಬಿಟ್ಟು ಬಿಟ್ಟು ಹೋಗಬೇಕೆಂದು ಅಪ್ಪಣೆ ವಿಧಿಸಿದ್ದರು ಆದರೆ ಅವರು ಅಧಿಕಾರಿಗಳ ಅಪ್ಪಣೆಯಂತೆ ಮುಂಬಯಿ ಬಿಟ್ಟು ಹೋಗಲಿಲ್ಲ. ಅಧಿಕಾರಿಗಳು ತಾ|| ೨೨ ನೇ ದಿವಸ ಅವರನ್ನು ಕೈದು ಮಾಡಿ ಕಟ್ಲೆಗೆ ಗುರಿ ಮಾಡಿದರು. ಮ್ಯಾಜಿಸ್ಟ್ರೇಟರು ಅವರಿಗೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು.

ಪ್ರೋ. ಚೌಕರೆ ಎಂಬ ಮತ್ತೋರ್ವ ಕಾಂಗ್ರೆಸ್ ಕೆಲಸಗಾರರನ್ನಾದರೂ ಇದೇ ಅಪರಾಧಕ್ಕಾಗಿ ತಾ|| ೨೨ ನೆ ದಿವಸ ಸೆರೆ ಹಿಡಿದಿರುತ್ತದೆ.

ಮಂದಿರ ಪ್ರವೇಶ ಮಸೂದೆಯು ೧ ವರ್ಷ ಮುಂದೆ ಬಿತ್ತು.

ಸಿಮ್ಲಾ ತಾ|| ೨೪ — ಈ ಹೊತ್ತಿನ ಅಸೆಂಬ್ಲಿಯಲ್ಲಿ ಮಂದಿರ ಪ್ರವೇಶ ಮಸೂದೆಯ ಮೇಲೆ ಸ್ವಲ್ಪ ಹೊತ್ತು ಚರ್ಚೆನಡೆದು, ಅದು ೧೯೩೪ರ ಕೊನೆಯ ವರೆಗೆ ಮುಂದರಿಸಲ್ಪಟ್ಟಿತು ಶ್ರೀ ಆರ್. ಎಸ್. ಶರ್ಮಾ ಇವರು ಮಸೂದೆಯನ್ನು ೧೯೩೪ರ ಕೊನೆಯ ವರೆಗೆ ಮುಂದರಿಸಿ ಅದರ ಮೇಲೆ ಜನರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಉಪಸೂಚನೆ ತಂದಿದ್ದರು. ಈ ಉಪಸೂಚನೆಗೆ ಸರಕಾರದ ಬೆಂಬಲ ದೊರೆತು ಬಹುಮತದಿಂದ ಸ್ವೀಕೃತವಾಯಿತು.

ಅಜಮೀರದಲ್ಲಿ ೧೭ ಜನರಿಗೆ ಶಿಕ್ಷೆ.

ಅಜಮೀರ ತಾ ೨೪ — ತಾ ೨೧ನೆ ದಿವಸ ಪಿಕೆಟಿಂಗದ ಸಂಬಂಧವಾಗಿ ೧೭ ಜನ ಗಂಡಸರನ್ನೂ ಐವರು ಹೆಂಗಸರನ್ನೂ ಸೆರೆಹಿಡಿದಿತ್ತಷ್ಟೆ. ಅವರ ಖಟ್ಲೆಯ ವಿಚಾರಣೆಯು ಈ ದಿವಸ ಮುಗಿದು, ಅವರಿಗೆ ಪ್ರತ್ಯೇಕವಾಗಿ ೩ ತಿಂಗಳ ಶಿಕ್ಷೆಯಾಯಿತು. ಗಂಡಸರಿಗೆ ಕಠಿಣ ಶಿಕ್ಷೆಯನ್ನು ವಿಧಿಸಿದ್ದು ಹೆಂಗಸರಿಗೆ ಸಾದಾ ಶಿಕ್ಷೆ ವಿಧಿಸಲ್ಪಟ್ಟಿತು

ಸೂಚನೆ.

ಈ ಹೊತ್ತಿನ ದಿವಸ ಶ್ರೀ ದತ್ತಾತ್ರೇಯ ನಾಟಕ ಮಂಡಲಿಯವರು "ಶ್ರೀರಾಮ ಪಾದುಕಾ ಪಟ್ಟಾಭಿಷೇಕ" ನಾಟಕವನ್ನು ಅಭಿನಯಿಸಿದೆ "ಸತ್ಯ ಸಂಕಲ್ಪ" ನಾಟಕವನ್ನು ಅಭಿನಯಿಸುವರು.

ಕೊನೆಯುಚ್ಚು

ಗಾಂಧಿ ವ್ಹಾಯಿಸರಾಯರ ಭೆಟ್ಟಿ.

ಸಿಮಲಾ ತಾ. ೨೧— ಶ್ರೀ ಲಾಲಚಂದ ನ ವಲರಾಯ ಇವರು ಈ ಸಲದ ಅಸೆಂಬ್ಲಿ ಅಧಿವೇಶನದಲ್ಲಿ ಗಾಂಧೀ ವ್ಹಾಯಿಸರಾಯರ ಭೆಟ್ಟಿಯ ಬಗ್ಗೆ ಒಂದು ಸೂಚನೆ ಕೊಡುತ್ತಾರೆ ಈ ಸೂಚನೆಯ ಮೇಲೆ ತಾ। ೭ ದಿವಸ ಚರ್ಚೆ ನಡೆಯಬಹುದೆಂದು ತಿಳಿಯುತ್ತದೆ ಈ ಸೂಚನೆಯಲ್ಲಿ ಅವರು ವ್ಹಾಯಿಸರಾಯರು ಮಹಾತ್ಮರಿಗೆ ಭೆಟ್ಟಿ ಕೊಟ್ಟು ಸದ್ಯದ ವಿಷಮಾವಸ್ಥೆಯನ್ನು ಹೋಗಲಾಡಿಸಬೇಕೆಂದು ಉಲ್ಲೇಖಿಸಿದ್ದಾರೆ.

ಹರಿಜನ ಮುಖಂಡರು ರಾಜೀನಾಮೆ ಕೊಟ್ಟರು

ಅಹಮ್ಮದಾಬಾದ ತಾ॥ ೨೧— ಅಹಮ್ಮದಾಬಾದ ಮ್ಯುನಿಸಿಪಾಲಿಟಿ ಸ್ಕೂಲಬೋರ್ಡದ ಸಭಾಸದರಾದ ಶ್ರೀ ಕಿಶಾಭಾಯಿಯವರು ಸರಕಾರದ ಧೋರಣದ ನಿಷೇಧಾರ್ಥವಾಗಿ ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಸರಕಾರದವರು ಮಹಾತ್ಮರಿಗೆ ಹರಿಜನ ಕಾರ್ಯಕ್ಕಾಗಿ ಮೊದಲಿನಂತೆ ಸವಲತ್ತು ಕೊಡದೆ ಇದ್ದದ್ದೇ ಈ ನಿಷೇಧದ ಕಾರಣವಾಗಿದೆ.

ಸರಕಾರಿ ಕಟ್ಟಡದ ಮೇಲೆ ರಾಷ್ಟ್ರಧ್ವಜ.

ಶೇಖುಪುರ ತಾ॥ ೨೩— ಓರ್ವ ಮುಸಲ್ಮಾನ ಸ್ವಯಂಸೇವಕನು ಈ ಹೊತ್ತಿನ ದಿವಸ ಡೆಪ್ಯುಟಿ ಕಮಿಶನರರ ಕೋರ್ಟಿನ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಿದನು. ಪೋಲೀಸರು ಕೂಡಲೆ ಅವನನ್ನು ಸೆರೆ ಹಿಡಿದೊಯ್ದರು

ಮಹಾತ್ಮರ ಪ್ರಕೃತಿ

ಪುಣೆ ತಾ॥ ೨೪— ಪರ್ಣಕುಟಿಯ ವ್ಯವಸ್ಥಾಪಕ ಮಂಡಳದವರು ಈ ಹೊತ್ತಿನ ದಿವಸ ಮಹಾತ್ಮರ ಪ್ರಕೃತಿಯ ಬಗ್ಗೆ ಕೆಳಗಿನಂತೆ ಪತ್ರಿಕೆ ತೆಗೆದಿದ್ದಾರೆ.

ಮಹಾತ್ಮಾ ಗಾಂಧಿಯವರ ಪ್ರಕೃತಿಯು ಬಹಳ ಅಶಕ್ತವಿರುವದರಿಂದ ಅವರಿಗೆ ಮಾನಸಿಕ ಶ್ರಮ ಕೊಟ್ಟಲ್ಲಿ ಅವರ ಪ್ರಕೃತಿಯು ಮತ್ತಿಷ್ಟು ಕೆಡುವ ಸಂಭವವಿದೆಯೆಂದು ಡಾಕ್ಟರರ ಅಭಿಪ್ರಾಯವಿದೆ' ಕಾರಣ ಸಧ್ಯಕ್ಕೆ ಅವರ ಭೆಟ್ಟಿಗಾಗಿ ಯಾರೂ ಬರಕೂಡದೆಂದು ವಿನಂತಿ ಇದೆ.

ಮಹಾತ್ಮಾ ಗಾಂಧಿಯವರು ಈ ಹೊತ್ತು ಮುಂಜಾನೆ ಪ್ರಾರ್ಥನೆ ಮಾಡಿ ಸೂರ್ಯಸ್ನಾನ ತೆಗೆದುಕೊಂಡರು ಈ ಹೊತ್ತು ಮುಂಜಾನೆ ಡಾ॥ ಮೆಹತಾ ಇವರು ಉಪಚಾರ ಮಾಡಿ ಹೋದರು ಡಾಕ್ಟರರು ಅವರಿಗೆ ಏನಿಲ್ಲೆಂದರೂ ಮೂರು ವಾರಗಳ ವರೆಗಾದರೂ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಂಡಿರುವರೆಂದು ತಿಳಿಯುತ್ತದೆ. ಅವರ ರುಧಿರಾಭಿಸರಣವು ೧೬೦ ಇದ್ದು ಪ್ರಕೃತಿಯು ಸರ್ವಸಾಧಾರಣ ನೆಟ್ಟಗಿದೆ ಡಾಕ್ಟರರು ಅವರಿಗೆ ತೆಳ್ಳನ್ನ ಪದಾರ್ಥಗಳನ್ನು ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿದ್ದಾರೆ. ಅವರು ಈ ಹೊತ್ತಿನ ದಿವಸ ಮೋಸಂಬಿಯ ರಸ ತೆಗೆದುಕೊಂಡರು. ಅವರೆ ನಾಳಿನಿಂದ ಅವರು ಶಂಕಾಹಾರ ಪ್ರಾರಂಭಿಸುವರೆಂದು ತೋರುತ್ತದೆ ಇದರಂತೆ ಅವರು ಮೂರು ನಾಲ್ಕು ದಿನಗಳಲ್ಲಿ ಹಾಲು ತೆಗೆದುಕೊಳ್ಳಲು ಪ್ರಾರಂಭ ಮಾಡಬಹುದು ಮಹಾತ್ಮರಿಗೆ ಈ ಹೊತ್ತು ಮಧ್ಯಾಹ್ನದಲ್ಲಿಯಾದರೂ ನಿದ್ದೆ ಹತ್ತಿತ್ತು.

ಇವತ್ತಿನ ದಿವಸ ಮುಂಜಾನೆ ಡಾಕ್ಟರರು ಬಂದ ಕಾಲಕ್ಕೆ ಸೌ. ಸರೋಜಿನಿಯವರು ಪರ್ಣಕುಟಿಗೆ ಬಂದು ಹೋದರು, ಮಹಾತ್ಮರ ತೂಕವು ಈಗ ೯೩॥ ಪೌಂಡು ಇದೆ.

ಹೈದರಾಬಾದದಲ್ಲಿ ೧೪೪ನೇ ಕಲಮು

ಹೈದರಾಬಾದ (ಸಿಂಧ) ತಾ। ೨೩— ಹೈದರಾಬಾದ ಪಟ್ಟಣದ ಮ್ಯಾಜಿಸ್ಟ್ರೇಟರು ೧೪೪ನೇ ಕಲಮು ಜಾರಿಯಲ್ಲಿ ತಂದಿದ್ದು ಸಭೆ ಮೆರವಣಿಗೆ ಮೊದಲಾದವುಗಳಿಗೆ ತಡೆ ಮಾಡಲಾಗಿದೆ

ಇಲ್ಲಿಯ ಹಿಂದೂ ಕುಮಾರಿ ಲಾಲಾ ಕೃಪಾಲಾನಿ ಎಂಬವಳು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿ ಮುಸಲ್ಮಾನನನ್ನು ಲಗ್ನವಾಗಿದ್ದರಿಂದ ಇಲ್ಲಿಯ ಹಿಂದೂ ಜನರಲ್ಲಿ ಕ್ಷೋಭೆಯುಂಟಾಗಿದೆ ಈ ಕ್ಷೋಭೆಯು ದಂಗೆಯಲ್ಲಿ ರೂಪಾಂತರವಾದೀತೆಂಬ ಭಯದಿಂದ ಅಧಿಕಾರಿಗಳು ಹೀಗೆ ಮುಂಜಾಗ್ರತಿಯಿಂದ ವರ್ತಿಸುತ್ತಿದ್ದಾರೆ.

ಚೀನಿ ವ್ಯಾಪಾರಿಗಳನ್ನು ಓಡಿಸಿಕೊಂಡು ಹೋದರು

ಹಾರ್ಬಿನ್ ತಾ ೨೩— ಸುಮಾರು ಮುನ್ನೂರು ಜನ ದರೋಡೆಗಾರರು ಎರೆಸ್ಟೇ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿ ೫೩ ಜನ ವ್ಯಾಪಾರಿಗಳನ್ನು ಓಡಿಸಿಕೊಂಡು ಹೋಗಿದ್ದಾರೆ ಅವರು ಈಗ ಆ ವ್ಯಾಪಾರಸ್ಥರನ್ನು ಒಂದು ಗುಡ್ಡಗಾಡು ಪ್ರದೇಶದಲ್ಲಿ ಇಟ್ಟಿದ್ದಾರೆ ಅವರ ಬಿಡುಗಡೆ ಬೇಕಾದರೆ ಹಣ ಕೊಟ್ಟು ಬಿಡಿಸಿಕೊಂಡು ಹೋಗಿರೆಂದು ಹೇಳಹತ್ತಿದ್ದಾರೆ.

ಜೇಲಿನಲ್ಲಿ ಕೆಲಸ ಮಾಡದ್ದಕ್ಕೆ ೬ ತಿಂಗಳ ಕಠಿಣ ಶಿಕ್ಷೆ.

ಹೊಸಪೆಲ್ಲಿ ತಾ। ೨೩. ಬುಧಿಯಾನಾ ಒಳಸಂಚಿನ ಸಂಬಂಧವಾಗಿ ೭ ವರ್ಷ ಕಠಿಣ ಶಿಕ್ಷೆಗೆ ಗುರಿಯಾದ ಆಶಾ ಮಹಮ್ಮದ ಎಂಬುವವನು ಜೇಲಿನಲ್ಲಿ ಕೆಲಸ ಮಾಡಲು ನಿರಾಕರಿಸಿದ್ದರಿಂದ, ಅವನಿಗೆ ಮತ್ತೆ ೬ ತಿಂಗಳ ಶಿಕ್ಷೆ ಆಯಿತು.

ಮದ್ರಾಸದಲ್ಲಿ ಪರದೇಶಿ ಅರಿವೆಯ ಪಿಕೆಟಿಂಗ

ಮದ್ರಾಸ ತಾ। ೨೩— ಶ್ರೀ ಎನ್ ಎಸ್. ವರದಾಚಾರಿಯವರು ತಮ್ಮ ಸಂಗಡ ೧೬ ಜನ ಸ್ವಯಂಸೇವಕರನ್ನು ಕರೆದುಕೊಂಡು, ರತ್ನಾ ಹಾಗು ಚಾಯನಾ ಬಜಾರದಲ್ಲಿ, ಪರದೇಶಿ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದರು. ಪೋಲೀಸರು ಸ್ವಯಂಸೇವಕರ ಕೈಯೊಳಗಿನ ಬಹಿಷ್ಕಾರದ ಪತ್ರಿಕೆಗಳನ್ನು ಕಸಿದುಕೊಂಡರು, ಯಾರನ್ನು ಸೆರೆಹಿಡಿಯಲಿಲ್ಲ.

ಮಗುವನ್ನು ಮಾರಿಕೊಂಡ ಮಹಾ ತಾಯಿಯು

ಮಚ್ಛನಹೇರಿ ಎಂಬಲ್ಲಿ ಓರ್ವ ಕಿಶ್ಚಿಯನ್ ಹೆಂಗಸು ತನ್ನದೊಂದು ಗಂಡು ಮಗುವನ್ನು ಓರ್ವ ಗ್ರಹಸ್ಥನಿಗೆ ೬ ಆಣೆಗೆ ಮಾರಿಕೊಂಡಿರುವಳೆಂದು ಸುದ್ದಿ ಬಂದಿದೆ ಇವಳು ಬಾಣಂತಿತನಕ್ಕಾಗಿ ಆಸ್ಪತ್ರಿ ಸೇರಿದ್ದಳು ಬಾಣಂತಿತನವನ್ನು ಮುಗಿಸಿಕೊಂಡು ಆಸ್ಪತ್ರಿಯಿಂದ ಹೊರಬಿದ್ದ ಕೂಡಲೆ ಆ ಗಂಡು ಕೂಸನ್ನು ಅಲ್ಲಿಯ ವಾರ್ಡರನಿಗೆ ಮಾರಿ ಬಿಟ್ಟಳು ಹಣದ ಅಡಚಣಿಯೇ ಇದಕ್ಕೆ ಕಾರಣವಂತೆ

ಓರ್ವ ಹೆಂಗಸು ತತ್ತಿ ಹಡೆದಳು.

ಜಬಲಪುರ ತಾ॥ ೨೩— ರೇವಾ ಸಂಸ್ಥಾನದಲ್ಲಿಯ ಒಂದು ಊರಲ್ಲಿ ಓರ್ವ ಹೆಂಗಸು ೩೦ ತತ್ತಿಗಳನ್ನು ಹಡೆದಿದ್ದಾಳೆ. ಈ ಸುದ್ದಿಯು ತಿಳಿದಕೂಡಲೆ ಪೋಲೀಸರು ಅಲ್ಲಿಗೆ ಬಂದರು ಆಗೆರೆ ಅವರಿಗೆ ಅಲ್ಲಿ ಎರಡನೇ ತತ್ತಿಗಳು ಸಿಕ್ಕವು. ಯಾಕಂದರೆ ಈ ಅವಧಿಯಲ್ಲಿ ಆ ಹೆಂಗಸು ಉಳಿದ ಯಾವತ್ತೂ ತತ್ತಿಗಳನ್ನು ಸುಟ್ಟು ಬಿಟ್ಟಿದ್ದಳು

ದಿ. ಅಂಕಲಗಿ ಬ್ಯಾಂಕ (ಲಿ.) ಧಾರವಾಡ.
ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ.
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ
ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ್

ಬರುವರು! ಧಾರವಾಡಕ್ಕೆ ಬರುವರು!
ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರ
ಕಲಾನಿಪುಣ ಪ್ರೊ. ಎಚ್. ಜಿ. ಘೋಡಕೆ ಇವರ
ಹಾಸ್ಯಕಾರಕ-ಪ್ರೋಜ ಮತ್ತು ಸಂಗೀತ ಹೊಸತರದ
ನಕಲಿನ ಪ್ರಚಂಡ
ಪ್ರೊಗ್ರ್ಯಾಮ
ಆಗುವವು.

ಡಾ. ಕುಲಕರ್ಣೀಜ
ಲೆಬೊರೋಟರಿ ಮುಂಬಯಿ ನಂಬರ ೧೨
ಬಾಟ್ಲಿ ಕಿಮ್ಮತ್ತು ೧—೨—೦
ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು.



ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು
ಶರಗು, ಬಿಳೀಶರಗು, ಕೆಂಪು ಶರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣ ವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದೆ.

ಬಿ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.
೧೮-೭

ಸ್ತ್ರೀಯರ ಗುಟ್ಟು— [illegible] ಇದಲ್ಲದೆ ೧೦೦ ಪುಟಗಳು [illegible]
ಉಪನಿಷತ್-ಪ್ರಕಾಶ— ಭಾಗ ೧ ಮತ್ತು- ಈಶ, ಕೇನ, ಕಠ, ಪ್ರಶ್ನ, ಮಾಂಡೂಕ್ಯ [illegible] ಮುಂಡಕ, ಐತರೇಯ, ತೈತ್ತರೀಯ [illegible] ಎರಡಕ್ಕೂ [illegible]
ಉಪನಿಷತ್-ರಹಸ್ಯ— ಪ್ರೋ. ರಾನಡೆಯವರ "A Constructive Survey of Upanishadic Philosophy" ಎಂಬ ಗ್ರಂಥದ ಕನ್ನಡ ಅನುವಾದ [illegible]
ಶ್ರೀ ರಾಮಕೃಷ್ಣ ವಚನಾಮೃತವು— ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, [illegible]
ಎಲ್ಲ ಪುಸ್ತಕಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ಬೆಲೆ [illegible]

ಏಜಂಟರು ಬೇಕಾಗಿದ್ದಾರೆ
ಧಾರಾಳವಾದ ಕಮಿಶನ ಕೊಡಲಾಗುವದು ಇಚ್ಛೆಯುಳ್ಳವರು ಪತ್ರವ್ಯವಹಾರ ಮಾಡಬೇಕು.
—ವ್ಯವಸ್ಥಾಪಕ
"ಕನ್ನಡಿಗ"

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗನ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು.

ನೋಟೀಸಿನ ದರ
ಮೊದಲನೆ ಸಾರೆ ಸಿಂಗಲಕಾಲಮಿನ
ಮುಂದೆ ಪ್ರತಿಯೊಂದು ಸಾಲಿನ
ಎರಡನೆ ಸಾರೆ
ಮುಂದೆ ಪ್ರತಿಯೊಂದು ಸಾರೆ

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ ಮನು.

ನಿತ್ಯ ಪತ್ರಿಕೆ. ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ರವಿವಾರ ಭಾದ್ರಪದ ಶುದ್ಧ ೭ ಶಕೆ ೧೮೫೫ ತಾ॥ ೨೭-೮-೩೩ [ಸಂಚಿಕೆ ೧೦೭

ಇನಸ್ಯೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯೂರನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಮಹಾತ್ಮಾ ಗಾಂಧಿಯವರ ಸಂದೇಶ.

ಮುಂದಿನ ಜೀವನವು ಅನಿಶ್ಚಿತ; ಹರಿಜನ ಕಾರ್ಯವು ಅನ್ನಕ್ಕಿಂತಲೂ ಪ್ರಿಯವಾಗಿದೆ.

ಪುಣೆ ತಾ॥ ೨೫— ಮಹಾತ್ಮರು ತಾವು ಬಿಡುಗಡೆ ಹೊಂದಿ ಬಂದ ಬಳಿಕ 'ಹರಿಜನ ಪತ್ರಿಕೆಯ ವಾಚಕರಿಗಾಗಿ ಕೆಳಗಿನಂತೆ ಸಂದೇಶ ಕೊಟ್ಟಿದ್ದಾರೆ

ಪರಮೇಶ್ವರನ ಲೀಲೆಯು ಅವರ್ಣನೀಯವಾಗಿದೆ ಅನಪೇಕ್ಷಿತ ಪ್ರಸಂಗಗಳಿಗೆ ಎದಿಗೊಡುವದು ನನ್ನ ಸಾರ್ವಜನಿಕ ಆಯುಷ್ಯದಲ್ಲಿ ಎಷ್ಟೋಸಾರೆ ಬಂದಿತ್ತು. ಆದರೆ ಈಗಿನಂತಹ ಅನಪೇಕ್ಷಿತ ಪ್ರಸಂಗವು ಮಾತ್ರ ಎಂದೂ ಬಂದಿದ್ದಿಲ್ಲ ನನ್ನ ಮುಂದಿನ ಕಾರ್ಯವೇನು ? ನಾನು ತುರಂಗದ ಹೊರಗಿನ ದಿವಸಗಳನ್ನು ಹೇಗೆ ಕಳೆಯುವೆನೆಂಬುದು ನನಗೇ ಗೊತ್ತಿರುವುದಿಲ್ಲ. ಆದರೆ ತುರಂಗದ ಹೊರಗೆ ಇರಲಿ ಇಲ್ಲವೆ ಒಳಗೆ ಇರಲಿ, ಹರಿಜನ ಕಾರ್ಯವು ಮಾತ್ರ ನನಗೆ ಯಾವಾಗಲೂ ಪರಮಪ್ರಿಯವಾದ ವಿಷಯವಾಗಿದೆ ಯೆಂಬುದು ಖಂಡಿತವಾದದ್ದು ಹರಿಜನ ಕಾರ್ಯವು ನನಗೆ ಅನ್ನಕ್ಕಿಂತಲೂ ಹೆಚ್ಚು ಪ್ರಿಯವಾದ ವಿಷಯವಾಗಿದೆ ನಾನು ಅನ್ನವಿಲ್ಲದೆ ಎಷ್ಟೋ ದಿನ ಜೀವಿಸಬಹುದು ಆದರೆ ಹರಿಜನ ಕಾರ್ಯವಿಲ್ಲದಿದ್ದರೆ ಒಂದು ಕ್ಷಣವಾದರೂ ಜೀವಿಸುವದು ಶಕ್ಯವಿಲ್ಲ ಪರಮೇಶ್ವರನು ಹಿಂದೂ ಧರ್ಮದಲ್ಲಿಯ ಈ ಕಲಂಕವನ್ನು ಸಂಪೂರ್ಣವಾಗಿ ತೊಳೆದು ಬಿಡಲೆಂದೂ, ಹಿಂದೂ ಧರ್ಮವು ಸತ್ಯರೂಪಿ ನಾರಾಯಣನ ಪ್ರಕಾಶವನ್ನು ಉಪಭೋಗಿಸುವಂತೆ ಮಾಡಲೆಂದೂ ಪ್ರಾರ್ಥಿಸುತ್ತೇನೆ ನಾನು ನನ್ನ ಜೀವವನ್ನು ಈ ಕಾರ್ಯಕ್ಕೆ ಧಾರೆಯೆರೆದಿದ್ದೇನೆ ಮತ್ತು ಈ ಸತ್ಯಾಚರಣೆಗಾಗಿ ಬೇಕಾದಂಥ ತಪಸ್ಸು ಮಾಡಲು ನಾನು ಸದೈವ ಸಿದ್ಧನಿದ್ದೇನೆ.

ಮಹಾತ್ಮರ ಪ್ರಕೃತಿ

ಪುಣೆ ತಾ॥ ೨೫- ಮಹಾತ್ಮಾ ಗಾಂಧಿಯವರ ಪ್ರಕೃತಿಯು ಸುಧಾರಿಸಹತ್ತಿದ್ದು ಅವರು ಹಾಲು ತೆಗೆದುಕೊಳ್ಳುವದನ್ನು ಸುರುವು ಮಾಡಿದ್ದಾರೆ ಅವರು ಈ ಹೊತ್ತಿನ ದಿವಸ ಕೆಲವು ಸಣ್ಣ ಪತ್ರಗಳನ್ನು ಬಾಯಿಂದ ಹೇಳಿದರು

ಸೌ. ಸರೋಜಿನಿದೇವಿ

ಸೌ॥ ಸರೋಜಿನಿದೇವಿಯವರು ಈಹೊತ್ತಿನ ದಿವಸ ಮದ್ರಾಸ ಎಕ್ಸಪ್ರೆಸ್‌ದಿಂದ ಹೈದರಾಬಾದದಿಂದ ಬಂದರು. ಕೂಡಲೆ ಅವರು ಪರ್ಣಕುಟಿಗೆ ಹೋಗಿ ಮಹಾತ್ಮರ ಭೆಟ್ಟಿ ತೆಗೆದುಕೊಂಡರು. ಡಾಕ್ಟರರು ಮಹಾತ್ಮರ ಪ್ರಕೃತಿಯನ್ನು ಪರೀಕ್ಷಿಸುವವರೆಗೆ ಅವರು ಅಲ್ಲಿಯೇ ಇದ್ದರು

ಮಹಾತ್ಮಾ ಗಾಂಧಿಯವರಿಗೆ ಮೋಸಂಬಿಯ ರಸವು ಪಚನವಾಗಹತ್ತಿದ್ದರಿಂದ, ಅವರು ಬೇಗನೆ ಗುಣಹೊಂದಬಹುದೆಂದು ಹೇಳಬಹುದು ಈ ಹೊತ್ತಿನ ದಿವಸ ಅವರು ಹಾಸಿಗೆಯ ಮೇಲಿಂದಲೆ ಕೆಲವು ಪತ್ರಗಳನ್ನು ಬರೆಯಲು ಹೇಳಿದರು ಸಾಯಂಕಾಲದಲ್ಲಿ ಡಾ। ದಿನಶಾ ಮೆಹತಾ ಇವರು ಅಂಗಮರ್ದನ ಮಾಡಿದರು ಸಧ್ಯಕ್ಕೆ ಸೌ. ಕಸ್ತೂರಿಬಾಯಿ, ಮೀರಾಬೆನ ಹಾಗು ಶ್ರೀ ಮಥುರಾದಾಸ ಇವರು ಮಹಾತ್ಮರ ಶುಶ್ರೂಷೆ ಮಾಡುತ್ತಿರುವರು

ಶ್ರೀಮತಿ ಸ್ವರೂಪರಾಣಿಯವರ ಪ್ರಕೃತಿ.

ಲಖನೌ ತಾ॥ ೨೫— ಶ್ರೀಮತಿ ಸ್ವರೂಪರಾಣಿ ನೆಹರೂರವರು ಕೆಲವು ದಿವಸಗಳಿಂದ ಎದೆನೋವಿನಿಂದ ಒಳಲುತ್ತಿದ್ದರಷ್ಟೆ ಅವರು ಸೌ. ಕಮಲಾ ನೆಹರೂ ಇವರಿಂದ ಕೂಡಿಕೊಂಡು ಈ ಹೊತ್ತಿನ ದಿವಸ ಇಲ್ಲಿಗೆ ಬಂದರು ವೈದ್ಯಕೀಯ ಕಾಲೇಜದಲ್ಲಿ ಕ್ಷ ಕಿರಣದಿಂದ ಅವರ ಪ್ರಕೃತಿಯನ್ನು ಪರೀಕ್ಷೆ ಮಾಡಿತು ಅವರ ಪ್ರಕೃತಿಯು ಇನ್ನೂ ಸಮಾಧಾನಕರವಿಲ್ಲವೆಂದು ಕಂಡುಬಂತು. ಶ್ರೀಮತಿಯವರು ಕೆಲವು ದಿವಸ ಲಖನೌದಲ್ಲಿಯೇ ಇರತಕ್ಕವರಿದ್ದಾರೆ

'ಬಿಳೇ ಕಾಗದದ ಬಗ್ಗೆ ಆಚಾರ್ಯರ ಅಭಿಪ್ರಾಯ

ಜಾಯಿಂಟ ಕಮೀಟಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಶ್ರೀ॥ ಎಂ. ಕೆ. ಆಚಾರ್ಯ ಇವರು ಮೊನ್ನಿನ ದಿವಸ ವಿಲಾಯತಿಯಿಂದ ತಿರುಗಿಬಂದರು ಪತ್ರಿಕಾ ಪ್ರತಿನಿಧಿಯು ಜಾಯಿಂಟ ಕಮೀಟಿಯ ಕಾರ್ಯದ ಬಗ್ಗೆ ಅವರ ಅಭಿಪ್ರಾಯ ಕೇಳಲಾಗಿ ಅವರು ಬಿಳೇ ಕಾಗದವು ನಿರುಪಯೋಗ ವಸ್ತುವಿನಕಿಂತಲೂ ಅತಿ ಕೆಡಕುಳ್ಳದ್ದಾಗಿರುವದೆಂದು ಹೇಳಿದರು

ಅವರು ಮತ್ತೂ ಹೇಳಿದ್ದೇನಂದರೆ — ಪಾರ್ಲಮೆಂಟದವರು ಬಿಳೇ ಕಾಗದಲ್ಲಿ ಏನೂ ತಿದ್ದುಪಡೆ ಮಾಡದೆ ಅದನ್ನು ಇದ್ದಕ್ಕಿದ್ದಂತೆ ಮಾನ್ಯ ಮಾಡಿದರೆ, ಕಾರಭಾರದ ಅಳರಸರ ಬದಲು ರಾಜ್ಯ ಸೂತ್ರವನ್ನು ಬೇರೊಂದು ವರ್ಗದವರ ಕೈಯಲ್ಲಿ ಕೊಟ್ಟಂತಾಗುವದ. ಇಷ್ಟೇ ಅಲ್ಲದೆ ಬಾಯಿಯಿಲ್ಲದ ಅನೇಕ ಜನರ ಮೇಲೆ ಬಾಯಿಯುಳ್ಳ ಕೆಲವೊಂದು ಜನರಿಗೆ ದೊಣಸು ತಿಕ್ಕುವಲ್ಲಿ ಆಸ್ಪದ ಕೊಟ್ಟಂತಾಗುವದು

ಬ್ರಿಟಿಶ ಪತ್ರಿಕೆಯ ಎಚ್ಚರಿಕೆ

ಹಿಂದುಸ್ಥಾನದಲ್ಲಿ ವೈಷಮ್ಯವುಂಟಾದೀತು

ಲಂಡನ್ ತಾ॥ ೨೬— "ಮ್ಯಾಂಚೆಸ್ಟರ ಗಾರ್ಡಿಯನ್" ಪತ್ರಿಕೆಯು ಈ ಹೊತ್ತಿನ ಸಂಚಿಕೆಯಲ್ಲಿ ಮಹಾತ್ಮರ ಬೇಡಿಕೆಗಳ ಬಗ್ಗೆ ಒಂದು ಸಂಪಾದಕೀಯ ಲೇಖವು ಬಂದಿದೆ ಪತ್ರಿಕೆಯು ಈ ಲೇಖದಲ್ಲಿ ಮಿ. ಪೋಲಕ ಇವರಿಂದ ತಮಗೆ ಬಂದ ಒಂದು ಪತ್ರವನ್ನು ಉಧೃರಿಸಿರುತ್ತದೆ ಈ ಲೇಖದಲ್ಲಿ ಮಿ ಪೋಲಕರು, ಮಹಾತ್ಮಾ ಗಾಂಧಿ ಹಾಗು ಸರಕಾರದವರಲ್ಲಿ ತತ್ವದಬಗ್ಗೆ ಏನೂ ಮತಭೇದವಿಲ್ಲವೆಂದೂ, ಅಸ್ಪೃಶ್ಯತಾ ನಿವಾರಣ ಕಾರ್ಯವನ್ನು ಸಾಗಿಸಲಿಕ್ಕೆ ಮಹಾತ್ಮರಿಗೆ ಎಲ್ಲ ಬಗೆಯ ಸವಲತ್ತುಗಳನ್ನು ಕೊಡಬೇಕೆಂದೂ ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ ಸಂಪಾದಕರಾದರೂ ಅವರ ಅಭಿಪ್ರಾಯವನ್ನು ಸಮರ್ಥನ ಮಾಡಿ, ಮಹಾತ್ಮರು ಬೇಡುವದನ್ನೆಲ್ಲ ಕೊಡಬೇಕೆಂದು ಬರೆದಿದ್ದಾರೆ ಪತ್ರಿಕೆಯು ಮತ್ತೂ ಅನ್ನುವದೇನಂದರೆ— ಈ ವಿಷಯದ ಸಂಬಂಧವಾಗಿ ಸರಕಾರದೊಡನೆ ಹೋರಾಡಿ, ಈ ಹೋರಾಟದಲ್ಲಿ ಪ್ರಾಣತ್ಯಾಗವನ್ನು ಮಾಡಲು ಮಹಾತ್ಮರಿಗೆ ಆಸ್ಪದ ಕೊಡುವದು ಬ್ರಿಟನ್ ಹಾಗೂ ಹಿಂದುಸ್ಥಾನದ ದೃಷ್ಟಿಯಿಂದ ವಿಘಾತಕವಾಗದೆ ಹೋಗದು ಇದಲ್ಲದೆ ಇದರಿಂದ ಹಿಂದುಸ್ಥಾನದಲ್ಲಿ ವಿಪರೀತವಾದ ವೈಷಮ್ಯವು ಬೆಳೆದು, ಅದು ಚಿರಕಾಲ ಅವರ ಮನಸಿನಲ್ಲಿ ಉಳಿಯುವದು

ಮುಂಬಯಿಯಲ್ಲಿ ಕಾಯದೆ ಭಂಗ

. ಎಸ್ ಜಿ. ತಾವಡೆ ಎಂಬ ಓರ್ವ ಕಾಂಗ್ರೆಸ್ ಕೆಲಸಗಾರನಿಗೆ ಪೋಲೀಸ ಅಧಿಕಾರಿಗಳು ೨೫ ತಾಸಿನಲ್ಲಿ ಮುಂಬಯಿ ಹದ್ದು ಬಿಟ್ಟು ಹೋಗಬೇಕೆಂದು ಅಪ್ಪಣೆ ವಿಧಿಸಿದ್ದರು ಆದರೆ ಅವರು ಅಧಿಕಾರಿಗಳ ಅಪ್ಪಣೆಯಂತೆ ಮುಂಬಯಿ ಬಿಟ್ಟು ಹೋಗಲಿಲ್ಲ ಅಧಿಕಾರಿಗಳು ತಾ॥ ೨೨ ನೇ ದಿವಸ ಅವರನ್ನು ಕೈದು ಮಾಡಿ ಖಟ್ಲೆಗೆ ಗುರಿಮಾಡಿದರು. ಮ್ಯಾಜಿಸ್ಟ್ರೇಟರು ಅವರಿಗೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು

'ಪೀ ಬಾಕರೆ ಎಂಬ ಮತ್ತೋರ್ವ ಕಾಂಗ್ರೆಸ್ ಕೆಲಸಗಾರರನ್ನಾದರೂ ಇದೇ ಅಪರಾಧಕ್ಕಾಗಿ ತಾ॥ ೨೨ನೆ ದಿವಸ ಸೆರೆ ಹಿಡಿದಿರುತ್ತಾರೆ.

ಮಂದಿರ ಪ್ರವೇಶ ಮಸೂದೆಯು ೧ ವರ್ಷ ಮುಂದೆ ಬಿತ್ತು.

ಸಿಮ್ಲಾ ತಾ॥ ೨೫— ಈ ಹೊತ್ತಿನ ಅಸೆಂಬ್ಲಿಯಲ್ಲಿ ಮಂದಿರ ಪ್ರವೇಶ ಮಸೂದೆಯ ಮೇಲೆ ಸ್ವಲ್ಪ ಹೊತ್ತು ಚರ್ಚೆ ನಡೆದು, ಅದು ೧೯೩೪ರ ಕೊನೆಯ ವರೆಗೆ ಮುಂದರಿಸಲ್ಪಟ್ಟಿತು ಶ್ರೀ ಆರ್ ಎಸ್ ಶರ್ಮಾ ಇವರು ಮಸೂದೆಯನ್ನು ೧೯೩೪ರ ಕೊನೆಯ ವರೆಗೆ ಮುಂದರಿಸಿ ಅದರ ಮೇಲೆ ಜನರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಉಪಸೂಚನೆ ತಂದಿದ್ದರು ಈ ಉಪಸೂಚನೆಗೆ ಸರಕಾರದ ಬೆಂಬಲ ದೊರೆತು ಬಹುಮತದಿಂದ ಸ್ವೀಕೃತವಾಯಿತು

ಅಜಮೀರದಲ್ಲಿ ೧೬ ಜನರಿಗೆ ಶಿಕ್ಷೆ.

ಅಜಮೀರ ತಾ ೨೫ — ತಾ ೨೨ನೆ ದಿವಸ ಪಿಕೆಟಿಂಗದ ಸಂಬಂಧವಾಗಿ ೧೦ ಜನ ಗಂಡಸರನ್ನೂ ೬ವರು ಹೆಂಗಸರನ್ನೂ ಸೆರೆಹಿಡಿದಿತ್ತಷ್ಟೆ. ಅವರ ಖಟ್ಲೆಯ ವಿಚಾರಣೆಯು ಈ ದಿವಸ ಮುಗಿದು, ಅವರಿಗೆ ಪ್ರತ್ಯೇಕವಾಗಿ ೩ ತಿಂಗಳ ಶಿಕ್ಷೆಯಾಯಿತು ಗಂಡಸರಿಗೆ ಕಠಿಣ ಶಿಕ್ಷೆಯನ್ನು ವಿಧಿಸಿದ್ದು ಹೆಂಗಸರಿಗೆ ಸಾದಾ ಶಿಕ್ಷೆ ವಿಧಿಸಲ್ಪಟ್ಟಿತು

ಸೂಚನೆ.

ಈ ಹೊತ್ತಿನ ದಿವಸ ಶ್ರೀ ದತ್ತಾತ್ರೇಯ ನಾಟಕ ಮಂಡಲಿಯವರು "ಶ್ರೀರಾಮ ಪಾದುಕಾ ಪಟ್ಟಾಭಿಷೇಕ" ನಾಟಕವನ್ನು ಅಭಿನಯಿಸದೆ "ಸತ್ಯ ಸಂಕಲ್ಪ" ನಾಟಕವನ್ನು ಅಭಿನಯಿಸುವರು

ಕೊನೆಯಬಚ್ಚು

ಹೊಂಗೋಲ್

ಕ್ರಿಮಿನಾಶಕ

ಮುಲಾಮು.

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ

ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ ಬಾಯಿಯು ಸುವಾಸವಾಗಿಯೂ, ಆಗುವವು. "ಹಲ್ಲುಗಳು" ವಸಡೆಗಳ ರಕ್ಷಣೆಗೆ ಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದ್ದ ಈ ರಸ್ತು ಗಳಿಂದ ತಯಾರಾದ "ಕರ್ಚ್ಯೂ" ದಂತಮಂಜನ ದಲ್ಲಿ ಉಪಕಾರವಾಗಿದ ... [illegible] ... ಜನರ ಉಪಯೋಗ ... [illegible] ... ಒಸಡೆಗಳು ... [illegible] ... "ಕರ್ಚ್ಯೂ" ದಂತಮಂಜನವನ್ನು ಉಪಯೋಗಿಸಿರಿ ... [illegible] ... ಮಾಲನ್ನು ... "ವ ನೆಗೆ ಮಾರುಗೆದ" ಎಂಬ ನಾಣ್ಣುಡಿಯಂತೆ ನಡೆ ರಿ! ಸ್ವದೇಶೀ ವಸ್ತುಗಳನ್ನು ಪ್ರಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

ಬಹಳ ಹಳೆಯದೂ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದು

ಪಶ್ಚಿಮ ಸುಧಾರಣೆಯ ಎಲ್ಲರಿಗೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ. ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ|| ೧೬-೫-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ) ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ **ಪ್ರಶಂಸಾಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ**

ಶ್ರೀಕಾಶೀ ರಾಮೇಶ್ವರ ಸಮುದ್ರದಾಟ ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೀಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಅಶ್ವಯುಜ ಶು|| ೧೨) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿದಂತೆ ಕ್ರಮವಾಗಿ

೧ ಪಂಢರಪುರ	ಅಕ್ಟೋಬರ ತಾ|| ೨	೧೯ ಲಖನೌ	೨೪	೩೭ ಕುಂಭಕೋಣಂ	೧೫
೨ ನಾಶಿಕ	೩-೪	೨೦ ಅಯೋಧ್ಯ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ ಕನ್ಯಾಕುಮಾರಿಗೆ [ಹಡಗದಿಂದ]	೧೮
೪ ಸೋಮನಾಥಕ್ಕೆ (ಹಡಗದಿಂದ)	೮-೯	೨೨ ಪ್ರಯಾಗ	೨೬-೨೭	೪೦ ಕೊಲಂಬೊಕ್ಕೆ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಕಾಶಿ	೨೮-೨೯-೩೦-೩೧ ನವ್ಹೆಂಬರ ತಾ|| ೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲಿಟಾನಾ (ಜೈನತೀರ್ಥ)	೧೦-೧೧	೨೪ ಸಾರನಾಥ	,,	೪೨ ಕಲಾಯುಮಹಾರಾ [ಲಂಕಾ]	೨೩
೭ ಅಬುಪಹಾಡ (ಜೈನತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಡಿ [ಹಡಗದಿಂದ]	,,
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೪ ಮಧುರೆ	೨೪
೯ ಸಾಬರಮತಿ	,,	೨೭ ಗಿರಿ	,,	೪೫ ತ್ರಿಚನಾಪಳ್ಳಿ	೨೫
೧೦ ಬರೋಡ	೧೫	೨೮ ಸಮ್ಮೇತಶಿಖರ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಉಜ್ಜಯನಿ	೧೬	೨೯ ಕಲಕತ್ತಾ	೫-೬-೭	೪೭ ಬೆಂಗಳೂರ	೨೬
೧೨ ಆಗ್ರಾ	೧೭	೩೦ ಜಗನ್ನಾಥ ಪುರಿ	೮	೪೮ ಮೈಸೂರ	೨೭-೨೮
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು|| ೧೩ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೬ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕಂಡ ಕ್ಲಾಸಿಗೆ ... ರೂಪಾಯಿ ... [illegible] ... ಟಿಕೇಟ ಪಡೆಯಬೇಕು. ಸೆಕಂಡಕ್ಲಾಸಿನವರು ... ಥರ್ಡಕ್ಲಾಸಿನವರು ... ಕಳಿಸತಕ್ಕದು. ಹನ್ನೆರಡು ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ ... ಪ್ರತ್ಯೇಕವಾಗಿ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕು ... ಟ್ರೇನಿನಲ್ಲಿ ಶ್ರೀ ... ದಸ್ವಾಮಿಗಳಿರುವದರಿಂದ ವೀರಶೈವರ ... ಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥ ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಆಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟಿರು ಕಾರಣ ಟಿಕೇಟ ಗಳನ್ನು ಬೇಗ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯ ಏಜನ್ಸ ರೆಂಟಿಗಳು— ಸದರ ಕಂಪನಿಯ ... [illegible] ... ಬೇಕಾದವರು ... ಶ್ರೀ ಗೌರೀಶಂಕರ ಕಂಪನಿಗೆ ... ಕೊಡಲ್ಪಡುವದು

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ ಎಸ್. ಚನಪ್ಪಾ ಬಾಗಲಕೋಟೆ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ರವಿವಾರ ತಾ|| ೨೭-೮-೩೩ ನೇ ದಿವಸ ರಾತ್ರಿ

ಶ್ರೀರಾಮ

ಪಾದುಕಾ ಪಟ್ಟಾಭಿಷೇಕ

ಎಂಬ ನಾಟಕವನ್ನು ಅಭಿನಯಿಸುವರು.

ಈ ನಾಟಕದಲ್ಲಿ ಶ್ರೀ ಗರೂಡರು ದಶರಥನ ಪಾತ್ರವನ್ನು ವಹಿಸುವರು

ಸಂಘದೊಡೆಯರು

ಗರೂಡ ಸದಾಶಿವರಾಯರು

ಕನ್ನಡಿಗ.

ಧಾರವಾಡ— ರವಿವಾರ ತಾರೀಖು ೨೭—೮—೧೯೩೩

ಅಶುಭ ನುಡಿಯುವ ನಮ್ಮ ಜೋಯಿಸರು.

ಗ್ರೀಸ ದೇಶದಲ್ಲಿ ಅಶುಭ ನುಡಿಯುವ ಒಂದು ಗುಡಿಯಿತ್ತು. ಅಲ್ಲಿಗೆ ಹೋಗಿ ಯಾರಾದರೂ ಏನಾದರೂ ಪ್ರಶ್ನೆ ಮಾಡಿದರೆಂದರೆ ಅದಕ್ಕೆ ಅದು ಉತ್ತರ ಕೊಡುತ್ತಿತ್ತು. ಚಮತ್ಕಾರವೇನೆಂದರೆ ಅದು ಕೊಟ್ಟ ಉತ್ತರಗಳು ಎಂದೆಂದಿಗೂ ಸುಳ್ಳಾಗುತ್ತಿದ್ದಿಲ್ಲವೆಂದು ಆ ದೇಶದಲ್ಲೆಲ್ಲ ಅದರ ಖ್ಯಾತಿ ಇದ್ದಿತು. ಅದು ಸಳ್ಳಾಗುವ ಬಗೆಯೆಂತು? ಯಾವಾಗಲೂ ಎಡಗಡೆಯ ಮೇಲೆ ಕೈಯಿಟ್ಟೇ ಉತ್ತರ ಕೊಡುತ್ತಿತ್ತು! ನಮ್ಮಲ್ಲಿಯ ಜೋಯಿಸರನೇಕರು ಇದೇ ಸಂಪ್ರದಾಯದವರು. ಹೀಗೆ ಪ್ರಶ್ನೆಗಳಿಗೆ ಸಂದಿಗ್ಧ ಉತ್ತರಗಳನ್ನು ಕೊಟ್ಟು ಅನೇಕ ಜೋಯಿಸರು ತಮ್ಮ ಹೊಟ್ಟೆ ಹೊರೆದುಕೊಳ್ಳುತ್ತಿರುವರು. 'ಬ್ರಾಹ್ಮಣ ಸಂತರ್ಪಣ' ದ ಗೊಂಡಲಿಗರೂ ಇದೇ ವರ್ಗದವರು. ಆದರೆ ರಾಜಕಾರಣದಲ್ಲಿ ಈಗ ಹೊಸದೊಂದು ಜೋಯಿಸವರ್ಗವು ಹುಟ್ಟಿದೆ. ಇವರ ಉದ್ಯೋಗವೆಂದರೆ ರಾಜಕಾರಣದಲ್ಲಿಯಾಗಲಿ, ಮತ್ತಾವ ಸಾರ್ವಜನಿಕ ಪ್ರಶ್ನೆಯ ವಿಷಯದಲ್ಲಾಗಲಿ, ಒಮ್ಮೆಲೇ ಅಶುಭವಾದ 'ನ' ಕಾರಾತ್ಮಕ ಉತ್ತರವನ್ನು ಕೊಟ್ಟು ಬಿಡುವುದು. ಇಂಥದೊಂದು ಚಳವಳಿಯು ಯಶಸ್ವಿಯಾಗುವುದೇನು? ಇಲ್ಲ. ಈ ಮಾರ್ಗದಿಂದ ಕೊನೆಗೆ ರಾಷ್ಟ್ರಕ್ಕೆ ಜಯ ಸಿಕ್ಕುವುದೇನು? ಇಲ್ಲ. ಈ ದಿವಸಗಳಲ್ಲಿ ಖಾದಿಯ ಉಪಯೋಗವನ್ನು ಕೈಕೊಳ್ಳೋಣವೇನು? ಬೇಡ. ರಾಷ್ಟ್ರೀಯ ಶಿಕ್ಷಣವನ್ನು ಹೂಡೋಣವೇನು? ಅರ್ಥವಿಲ್ಲ. ಕಾಯದೇಭಂಗವು ಹಿತಕರವೇನು? ಇಲ್ಲ. ವಕೀಲಿ ಉದ್ಯೋಗವನ್ನು ಬಹಿಷ್ಕರಿಸಿ ಸಾರ್ವಜನಿಕ ಸೇವೆಗೆ ದೇಶವು ನಿಲ್ಲಲೇನು? ಛೇ, ಅದರಿಂದ ವೃತ್ತಿಭೇದವಾಗುತ್ತದೆ. ಶಾಸನಮಂಡಲಗಳನ್ನು ಬಹಿಷ್ಕರಿಸೋಣವೋ? ಬೇಡವೋ? ಬೇಡ. ಅದರಿಂದ ಘಾತವಾಗುತ್ತದೆ— ಹೀಗೆ ಪ್ರತಿಯೊಂದು ಪ್ರಶ್ನೆಗೂ ಅಶುಭವಾದ ಉತ್ತರವನ್ನು ಕೊಟ್ಟುಬಿಡುವ 'ರಾಜಕಾರಣ ಧುರಂಧರ' ರ ವರ್ಗವೊಂದು ನಮ್ಮಲ್ಲಿ ನಿರ್ಮಾಣವಾಗಿದೆ. ಅಥಾರ್ತ್ ಎಲ್ಲಿಯವರೆಗೆ ಹಿಂದುಸ್ಥಾನವು ಶಂಕೇಯರ ಅಳುಕಿನಲ್ಲಿ ಇರುವುದೋ ಅಲ್ಲಿಯವರೆಗೆ ಇಂಥ ಚಳವಳಿಗೆಲ್ಲ ಪೂರ್ಣ ಯಶವು ದೊರಕುವುದು ಶಕ್ಯವೇ ಇಲ್ಲ. ಆದಕಾರಣ ಹೀಗೆ ಚಳವಳಿಗೆ ಸಂಪೂರ್ಣ ಯಶಸ್ಸು ದೊರೆಯದ ಕೂಡಲೆ ಈ ವ್ಯವಹಾರಜ್ಞರೆನಿಸಿಕೊಳ್ಳುವ 'ರಾಜಕಾರಣಪಟು'ಗಳು ಬೊಟ್ಟು ಮಾಡಿ ತೋರಿಸಿ 'ನಾವು ಮುಂಚೆಯೇ ಭವಿಷ್ಯ ಹೇಳಲಿಲ್ಲವೇ, ಇದು ನಿಂತು ಹೋಗುವುದೆಂದು' ಎಂದು ಗಂಭೀರವಾಗಿ ನುಡಿಯುತ್ತಾರೆ! ಮಹಾತ್ಮಾ ಗಾಂಧಿಯವರ ಕಾಯದೆಭಂಗ ಚಳವಳಿಯ ಸಂಬಂಧದಿಂದಂತೂ, ಈಗ ಅದಕ್ಕೆ ಸ್ವಲ್ಪ ಇಳಿಗಾಲವು ಪ್ರಾಪ್ತವಾದೊಡನೆ ಇವರು ಮನಬಂದಂತೆ ಬಾಯಿ ಬಿಡುತ್ತಿರುವರು. ಮತ್ತು ಇದೆಲ್ಲ ಕೋಲಾಹಲವನ್ನು ಇವರು ಲೋಕಮಾನ್ಯರ ಹೆಸರಿನಿಂದ ನಡಿಸಿರುವರು! ಇವರಿಗೆ ಗಾಂಧಿಯವರ ಮೇಲೆ ಮೊದಲಿನಿಂದಲೂ ಮತ್ಸರ. ಅವರ ವರ್ಚಸ್ವವನ್ನು ಹೇಗಾದರೂ ಮಾಡಿ ಕಡಿಮೆ ಮಾಡಲಿಕ್ಕೆ ಇವರು ಇಷ್ಟು ದಿವಸ ಹೆಣಗಾಡಿದರು. ಅದು ಸಾಧ್ಯವಾಗಲಿಲ್ಲ. ಈಗ ಇವರು ತಮ್ಮ ಹಳೇ ಪಂಚಾಂಗವನ್ನು ಬಿಚ್ಚಿ, ಈ ಚಳವಳಿಯು ಪ್ರಾರಂಭವಾದ ಕಾಲಕ್ಕೆ ತಾವು ಎಷ್ಟೆಷ್ಟು ಅಶುಭ ವಚನಗಳನ್ನು ನುಡಿದದ್ದನ್ನು ಜನರ ಮುಂದೆ ಹೇಳಿ ತಾವು ವಿಲಕ್ಷಣ ಜೋಯಿಸರೆಂದು ತಮ್ಮ ಬೆನ್ನು ತಾವೇ ಚಪ್ಪರಿಸಿಕೊಳ್ಳುತ್ತಿರುವರು! ನಮ್ಮ ಹಳೆಯ ಜೋಯಿಸರೂ ಗೊಂದಲಿಗರೂ ಮಾತ್ರ ಹೀಗೆ ಎಂದೂ ಅಶುಭ ನುಡಿಯುವದಿಲ್ಲ. ಅವರು ಯಾವಾಗಲೂ ಜನರಿಗೆ ಶುಭಕರವಾದ ಉತ್ತರಗಳಿಂದ ಧೈರ್ಯಗೊಟ್ಟು ದುಡ್ಡು ಎತ್ತುತ್ತಾರೆ. ಈ ತರಿಸ್ಟ ಜೋಯಿಸರಾದರೂ ಯಾವಾಗಲೂ ಅಶುಭ ನುಡಿದು ರಾಷ್ಟ್ರದ ಎದೆಗೆಡಿಸಲಿಕ್ಕೆ ಹವಣಿಸುತ್ತಾರೆ. ರಾಷ್ಟ್ರವು ಇಂಥ ಜೋಯಿಸರಿಂದ ಯಾವಾಗಲೂ ದೂರವಿರಬೇಕು.

ಕೇಸರಿಕಾರರು ಇಂಥ ಜೋಯಿಸರೊಳಗೆ ಅಗ್ರಗಣ್ಯರು. ಲೋಕಮಾನ್ಯರ ಪಟ್ಟಶಿಷ್ಯರೆಂದು ತಿಳಿದು ಇವರು ಲೋಕಮಾನ್ಯರ ಹೃದಯವನ್ನು ಬಲ್ಲವರು ತಾವೊಬ್ಬರೇ ಎಂಬ ಹೆಮ್ಮೆಯಿಂದ ಮಹಾತ್ಮರನ್ನು ಹಳಿಯುತ್ತಿರುವರು. ಲೋಕಮಾನ್ಯರ ಹೃದಯವು ನಮಗೆ ಸ್ವಲ್ಪ ಗೊತ್ತಿದೆ. ಲೋಕಮಾನ್ಯರು ಇವರಂತೆ ಮಹಾತ್ಮಾ ಗಾಂಧಿಯವರನ್ನು ಅವರ ಚಳವಳಿಯನ್ನು ನಿಷ್ಕಾರಣವಾಗಿ ಎಂದೂ ಹಳಿಯುತ್ತಿದ್ದಿಲ್ಲವೆಂದೂ ನಾವು ಸಾರಿ ಹೇಳಬಲ್ಲೆವು. ಲೋಕಮಾನ್ಯರಿಗೂ ಮಹಾತ್ಮರಿಗೂ ಮತಭೇದಗಳಿದ್ದುವೆಂದು ನಮ್ಮ ಅಂಬೋಣವಿಲ್ಲ. ಮತಭೇದಗಳಿದ್ದ ಮಾತ್ರಕ್ಕೆ ಮನಬಂದಂತೆ ಬೈಯಬೇಕೆ? ಮಹಾಪುರುಷರಿಗೆ ತಕ್ಕದಾದ ರೀತಿನೀತಿಗಳನ್ನಾದರೂ ಅನುಸರಿಸಬೇಡವೆ? ಪ್ರತಿಯೊಂದು ವಿಷಯದಲ್ಲಿ ಮಹಾತ್ಮಾಗಾಂಧಿಯವರ ವಚನಗಳು ವೇದವಾಕ್ಯಗಳೆಂದು ತಿಳಿದು ಅನುಸರಿಸುವವರು ನಾವೂ ಅಲ್ಲ. ಆದರೇನು? ಅವರ ಚಳವಳಿಯ ಮತ್ತು ಅವರ ವಚನಗಳ ಗುಣಾವಗುಣಗಳ ವಿಮರ್ಶೆಯನ್ನು ಎಷ್ಟೇ ಕಠೋರವಾಗಿ ಮಾಡುವ ಮಾತು ಬೇರೆ, ಅವರಿಂದ ದೇಶಕ್ಕೆ ಯಾವಾಗಲೂ ಅತ್ಯಂತ ಹಾನಿಯೇ ಆಗಿದೆಯೆಂದೂ, ಅವರು ದೇಶವನ್ನು ೫೦ ವರ್ಷ ಹಿಂದಕ್ಕೆ ನೂಕಿದರೆಂದೂ ಅನ್ನುವ ಮಾತು ಬೇರೆ!

ಮಹಾತ್ಮಾ ಗಾಂಧಿಯವರು ಹೂಡಿದ ಚಳವಳಿಯ ವಿಷಯವಾಗಿ ಎಷ್ಟೇ ಮತಭೇದವಿದ್ದರೂ ದೇಶದಲ್ಲಿ ಈ ೧೦—೧೨ ವರುಷಗಳಲ್ಲಿ ಎಷ್ಟು ಜಾಗ್ರತಿಯಾಗಿರುವುದೋ, ಅಷ್ಟು ಹಿಂದೆ ಎಂದೂ ಆಗಿದ್ದಿಲ್ಲವೆಂಬ ಮಾತನ್ನು ಅವರ ದ್ವೇಷಿಗಳು ಕೂಡ ಅಲ್ಲಗಳೆಯಲಾರರು. ಒಂದು ವ್ಯಕ್ತಿಗೆ, ಒಬ್ಬ ಮಹಾ ವಿಭೂತಿಗೆ ಎಷ್ಟು ಸಾಧ್ಯವಾಗಬೇಕೋ ಅಷ್ಟೆಲ್ಲ ಜಾಗ್ರತೆಯು ಈ ಮಹಾಪುರುಷನಿಂದ ಆಗಿದೆಯೆಂಬದು ನಿರ್ವಿವಾದವಾದ ಮಾತು. ಇನ್ನು ಆ ಜಾಗ್ರತೆಯು ಸ್ವರಾಜ್ಯವನ್ನು ದೊರಕಿಸಲಿಕ್ಕೆ ಸಮರ್ಥವಾಗದಿದ್ದರೆ ಅದು ಅತನ ದೋಷವಲ್ಲ. ಅದಕ್ಕೆ ಬೇರೆ ಕಾರಣಗಳುಂಟು. ಸ್ವರಾಜ್ಯವು ಸಿಕ್ಕಿದರೆ ಅದು ಆತನೊಬ್ಬನ ಮಹಾಪುಣ್ಯದ ಫಲವೆಂದೂ ಈಗ ಸ್ವರಾಜ್ಯವು ಸಿಗದಿದ್ದರೆ ಅದು ನಮ್ಮೆಲ್ಲರ ಪಾಪದ ಪ್ರಾಯಶ್ಚಿತ್ತವೆಂದೂ ನಮ್ಮ ಸ್ಪಷ್ಟವಾದ ಅಭಿಪ್ರಾಯ.

ಅಸೆಂಬ್ಲಿಯಲ್ಲಿಯ ಪ್ರಶ್ನೋತ್ತರಗಳು.

ಕಾಂಗ್ರೆಸದೊಡನೆ ಒಪ್ಪಂದ ಮಾಡಿಕೊಳ್ಳಿರಿ.

ಅಂದಮಾನ ಕೈದಿಗಳ ಮರಣಕ್ಕೆ ಸರಕಾರದವರೇ ಜವಾಬದಾರರಲ್ಲವೆ?

ಸಿಮ್ಲಾ ತಾ. ೨೫ ಈ ಹೊತ್ತಿನ ಅಸೆಂಬ್ಲಿ ಅಧಿವೇಶನದಲ್ಲಿ ಸರಕಾರದ ಪಬ್ಲಿಕಿ ಕಾಗದ ಅಂದಮಾನ ಕೈದಿಗಳ ಸಂಬಂಧವಾಗಿ ಪ್ರಶ್ನೋತ್ತರಗಳು ನಡೆದದ್ದರಿಂದ ಪ್ರಶ್ನೋತ್ತರ ಸಮಯವು ಬಹಳ ಮನೋರಂಜನವಾಗಿ ಪರಿಣಮಿಸಿತು.

ಶ್ರೀ ಲಾಲಚಂದ ನವಲರಾಯ, ಇವರು ದಬ್ಬಾಳಿಕೆಯನ್ನು ಸಾಗಿಸುವದೇ ಸರಕಾರದ ನೀತಿ ಇರುವದೇನೆಂದು ಪ್ರಶ್ನೆ ಮಾಡಿದರು. ಗೃಹಮಂತ್ರಿಗಳು ಅವರಿಗೆ ಸ್ಥಳಿಕ ಸರಕಾರದವರು ಜಂಪ ಸ್ಥಾನದ ಸರಕಾರದ ವೃತ್ತಿಯೊಂದಿಗೆ ಕಾಯದೆಭಂಗದ ಕೈದಿಗಳನ್ನು ಅವರ ಶಿಕ್ಷೆಯ ಅವಧಿಗಿಂತ ಮೊದಲೆ ಬಿಡುಗಡೆ ಮಾಡುತ್ತಿರುವರೆಂದು ಉತ್ತರ ಕೊಟ್ಟರು.

ಮಿ. ಇಸ್ಮಾಯಿಲಖಾನರು ಸರಕಾರದವರು ಕಾಂಗ್ರೆಸದೊಡನೆ ಒಪ್ಪಂದ ಮಾಡಿಕೊಳ್ಳಲು ಸಿದ್ಧರಿರುವರೇನು ಎಂದು ಪ್ರಶ್ನೆ ಮಾಡಿದರು.

ಸರ್ ಹೇಗ-ಸಿದ್ಧರಿಲ್ಲವೆಂಬುದು ಸ್ಪಷ್ಟವೇ ಇದೆ. ಚಳವಳಿಯು ಯಾವತ್ತೂ ಮುಖ್ಯಾಂಗಗಳು ಈಗ ನಿಲ್ಲಿಸಲ್ಪಟ್ಟವೆಯೆಂದು ಹೇಳಲು ಏನೂ ಅಭ್ಯಂತರವಿಲ್ಲ.

ಬಿ ಆರ್ ಪುರಿ— ಅಂದ ಬಳಿಕ ಯಾವತ್ತೂ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬಾರದೇಕೆ?

ಸರ್ ಹೇಗ— ಈ ಸಂಬಂಧವಾಗಿ ಸ್ಥಳಿಕ ಸರಕಾರದವರು ಯಾವ ಧೋರಣವನ್ನು ಅನುಸರಿಸುವರೆಂಬುದನ್ನು ಈ ಮೊದಲೆ ಹೇಳಿದ್ದೇನೆ.

ಲಾಲಚಂದ — ಮಹಾತ್ಮರನ್ನು ಸೆರೆ ಹಿಡಿದು ಅವರಿಗೆ ಶಿಕ್ಷೆ ವಿಧಿಸಿದ್ದೇಕೆ? ಅವರು ಅಂಥದು ಯಾವ ಕೃತ್ಯವನ್ನು ಮಾಡಿದ್ದರು? ಸರ್ – ಗಾಂಧೀಜಿಯವರು ಚಳವಳಿಯನ್ನು ಪುನರುಜ್ಜೀವನಗೊಳಿಸಲು ಪ್ರಯತ್ನ ಮಾಡಿ ಆ ಬಗ್ಗೆ ಒಂದು ಪ್ರಕಟನೆಯನ್ನು ಹೊರಡಿಸಿದ್ದರು.

ಗಯಾಪ್ರಸಾದಸಿಂಗ ಇವರ ಪ್ರಶ್ನೆಗೆ ಉತ್ತರ ಕೊಡುವಾಗ ಗೃಹಮಂತ್ರಿಗಳು ಒಡನುಡಿದದ್ದೇನೆಂದರೆ— ಸರಕಾರದವರು ಅಲ್ಲಿಯ ಚೀಫ ಕಮೀಶನರರೊಡನೆ ಪತ್ರವ್ಯವಹಾರ ನಡಿಸಿ, ಕೆಲವೊಂದು ಸುಧಾರಣೆಗಳನ್ನು ಒಳಿಕೆಯಲ್ಲಿ ತಂದಿರುವರು. 'ಬ' ವರ್ಗದ ಕೈದಿಗಳಿಗೆ ವೃತ್ತಪತ್ರ ಮತ್ತು ಭೆಟ್ಟಿಯ ಬಗ್ಗೆ ಹೆಚ್ಚಿನ ಸವಲತ್ತುಗಳನ್ನು ಕೊಟ್ಟಿದೆ. 'ಕ' ವರ್ಗದ ಕೈದಿಗಳಲ್ಲಿ ಯಾರಾದರೂ ಅಕ್ಷರಬಲ್ಲವರಿದ್ದರೆ, ಅವರಿಗೆ ದೀಪ, ವೃತ್ತಪತ್ರಿಕೆ ಮೊದಲಾದವುಗಳು ಕೊಡಲ್ಪಡುವವು ಮತ್ತು ಅವರಿಗೆ ಭೆಟ್ಟಿಯ ಸವಲತ್ತಾದರೂ ಸಿಗುವದು.

ಗಯಾಪ್ರಸಾದಸಿಂಗ - ಇಷ್ಟು ಮೊದಲೆ ಮಾಡಿದ್ದರೆ ಸರಕಾರದವರು ಮೂವರ ಪ್ರಾಣವನ್ನು ಉಳಿಸಬಹುದಾಗಿತ್ತು.

ಸರ್ ಹೇಗ— ಕೈದಿಗಳು ಅನ್ನತ್ಯಾಗಕ್ಕೆ ಪ್ರಾರಂಭಿಸಿದ್ದರಿಂದ, ಈ ಸವಲತ್ತುಗಳನ್ನು ಬೇಡಿದ್ದರಿಂದ ಅಗ್ಗ ವಿಚಾರವಾಡಲಾಗಲಿಲ್ಲ. ಅವರು ಅನ್ನತ್ಯಾಗವನ್ನು ತಮ್ಮಷ್ಟಕ್ಕೆ ತಾವೇ ಹಿಂತೆಗೆದುಕೊಂಡ ಕೂಡಲೆ ಅವರ ಬೇಡಿಕೆಗಳ ಬಗ್ಗೆ ವಿಚಾರ ಮಾಡಿ, ಹೀಗೆ ದಲಾವಣೆಯನ್ನು ಮಾಡಿದೆ.

ಶ್ರೀ. ನಿಯೋಗಿ— ಕೈದಿಗಳು ಅನ್ನತ್ಯಾಗದಕಿಂತ ಮೊದಲೆ ತಮ್ಮ ಅಡಚಣೆಗಳನ್ನು ಸ್ಥಳಿಕ ಅಧಿಕಾರಿಗಳಿಗೆ ತಿಳಿಸಿದ್ದರು. ಆದರೆ ಅವರ ಅಡಚಣೆಗಳು ಮೇಲಿನ ಅಧಿಕಾರಿಗಳ ಕಿವಿಗೆ ಮುಟ್ಟಲೇ ಇಲ್ಲ.

ಸರ ಹೇಗ— ಈ ಸಂಬಂಧವಾಗಿ ನನಗೆ ಏನೂ ಗೊತ್ತಿಲ್ಲ.

ಶ್ರೀ ನಿಯೋಗಿ— ಗೃಹಮಂತ್ರಿಗಳು ಇನ್ನು ಮೇಲಾದರೂ ವಿಚಾರಣೆ ನಡಿಸಿ ವಿಚಾರಿಸುವರೋ? ಸರ ಹೇಗ— ಪ್ರಶ್ನೆಗಳನ್ನು ಬರಹದಲ್ಲಿ ಕೊಟ್ಟರೆ ವಿಚಾರಣೆ ಮಾಡುವೆನು.

ನವಲರಾಯ— ಕೈದಿಗಳ ಮರಣಕ್ಕೆ ಜವಾಬದಾರರಾರು?

ಸರ ಹೇಗ— ಅನ್ನತ್ಯಾಗವನ್ನು ಕೈಕೊಂಡವರೇ ಜವಾಬದಾರರು?

ನವಲರಾಯ— ನಿಯಮಗಳಲ್ಲಿ ತಿದ್ದುಪಡಿ ಮಾಡುವದು ಅವಶ್ಯವಿತ್ತೆಂದು ಸರಕಾರದವರು ಒಪ್ಪಿಕೊಂಡಿಯೇ ಇರುವರು. ಅಂದಬಳಿಕ ಸರಕಾರದವರೇ ಜವಾಬದಾರರಾಗುವದಿಲ್ಲವೇ?

ಸರ ಹೇಗ— ಕೆಲವೊಂದು ಸವಲತ್ತುಗಳು ಮಾತ್ರ ವಿಚಾರಣೀಯವಾದವುಗಳಿದ್ದವು. ಉಳಿದವುಗಳು ತಿರಸ್ಕರಿಸಲ್ಪಟ್ಟವು.

ಮಿತ್ರ— ಕೈದಿಗಳು ತಮ್ಮ ಅಡಚಣೆಗಳನ್ನು ಹಿಂದುಸ್ಥಾನ ಸರಕಾರದವರ ದೃಷ್ಟಿಗೆ ತರಬಹುದೇ ಹೇಗೆ?

ಸರ ಹೇಗ—ಚೀಫ ಕಮಿಶನರರ ಮುಖಾಂತರ ಬರಬಹುದು.

ಮಿತ್ರ— ಚೀಫ ಕಮಿಶನರರು ಅವರ ಅರ್ಜಿಯನ್ನು ಮೇಲೆ ಕಳಿಸದೆ ತಮ್ಮಲ್ಲಿಯೇ ಇಟ್ಟುಕೊಂಡಿರುವರಲ್ಲ!

ಸರ ಹೇಗ- – ಕೈದಿಗಳು ತಮ್ಮ ದೂರುಗಳನ್ನು ನೇರವಾಗಿ ಹಿಂದುಸ್ಥಾನ ಸರಕಾರದವರಿಗೆ ತಿಳಿಸಬಹುದು.

ಚಿತಗಾಂಗ:— ಚಿತಗಾಂಗ ಶಸ್ತ್ರಾಗರದ ಆರೋಪಿಗಳಲ್ಲಿ ೧೦ ಜನರು ಈಗ ಎಷ್ಟೋ ದಿನಗಳಿಂದ ಅದೃಶ್ಯರಾಗಿದ್ದಾರೆ. ಅವರಲ್ಲಿ ಒಬ್ಬನು ಮೊನ್ನಿನ ದಿವಸ ಶಿವಪುರ ಎಂಬಲ್ಲಿ ಸಿಕ್ಕಿರುವನು. ಇವನನ್ನು ಪತ್ತೆ ಹಚ್ಚಿಕೊಟ್ಟವರಿಗೆ ಸರಕಾರದವರು ೨೦೦ ರುಪಾಯಿ ಪ್ರತಿಫಲವನ್ನು ಪ್ರಕಟ ಮಾಡಿದ್ದರು.

ಪುನಮಚಂದರ ಉಪವಾಸದ ಕಾರಣ

ಸೇಟ ಪುನಮಚಂದ ರಾಂಕಾ ಇವರು ತುರಂಗದಲ್ಲಿ ತಾವು ಉಪವಾಸ ಕೈಕೊಂಡಿದ್ದರ ಸಂಬಂಧವಾಗಿ ಪತ್ರಿಕೆಗೆ ಒಂದು ಪ್ರಕಟನೆ ಕೊಟ್ಟಿದ್ದಾರೆ. ಅದರಲ್ಲಿ ಅವರು ಅನ್ನುವದೇನಂದರೆ— ವರ್ಗೀಕರಣದ ನಿಷೇಧಾರ್ಥವಾಗಿ ನಾನು ಉಪವಾಸ ಕೈಕೊಂಡಿರಲಿಲ್ಲ. ಇಲ್ಲವೆ ಅ ಮತ್ತು ಬ ವರ್ಗದವರೂ ಸಹ 'ಕ' ವರ್ಗದ ಅನ್ನವನ್ನೇ ಸ್ವೀಕರಿಸಬೇಕೆಂದು ನನ್ನ ಉದ್ದೇಶವಿರಲಿಲ್ಲ. ನನ್ನ ಉಪವಾಸವು ಸರಕಾರದ ವಿರುದ್ಧವಿತ್ತು. ರಾಜಕೀಯ ಕೈದಿಗಳನ್ನು ನಡಿಸಿಕೊಳ್ಳುತ್ತಿರುವದರ ಪದ್ಧತಿಯ ನಿಷೇಧಾರ್ಥವಾಗಿ ಇತ್ತು. ಯಾಕಂದರೆ ಸರಕಾರದವರು ರಾಜಕೀಯ ಕೈದಿಗಳನ್ನು ಹಾಗು ಸಾಮಾನ್ಯ ಕೈದಿಗಳನ್ನು ಬೇರೆ ಬೇರೆ ರೀತಿಯಿಂದ ನಡಿಸಿಕೊಳ್ಳಲು ನಿರಾಕರಿಸಿದರು. ರಾಜಕೀಯ ಕೈದಿಗಳನ್ನು ಬೇರೆ ಬೇರೆ ವರ್ಗಗಳಲ್ಲಿ ಸೇರಿಸುವದನ್ನು ನಿಲ್ಲಿಸಿದಲ್ಲಿ ಉಪವಾಸವನ್ನು ಬಿಟ್ಟುಕೊಡುವೆನು ಎಂದು ಸರಕಾರದವರಿಗೆ ನಾನು ತಿಳಿಸಿದ್ದೆ.

ಕೋರ್ಟಿನಲ್ಲಿ ಗೊಂದಲ ಹಾಕಿದ್ದಕ್ಕೆ ಕಾಂಗ್ರೆಸ ಜನರಿಗೆ ಶಿಕ್ಷೆ

ಕಲಕತ್ತಾ ತಾ|| ೨೩— ಕಾಂಗ್ರೆಸ ಧ್ವಜಗಳನ್ನು ಹಿಡಿದುಕೊಂಡು, ಕಾಂಗ್ರೆಸ ಜಯಜಯಕಾರ ಮಾಡುತ್ತ ಹೌರಾ ಕೋರ್ಟಿನಲ್ಲಿ ಒಳಹೊಕ್ಕು ಗೊಂದಲ ಹಾಕಿದ್ದಕ್ಕಾಗಿ ಪೋಲೀಸರು ಇಬ್ಬರನ್ನು ಖಟ್ಲೆಗೆ ಗುರಿ ಮಾಡಿದ್ದರು. ಮ್ಯಾಜಿಸ್ಟ್ರೇಟರು ಅವರಿಗೆ ಪ್ರತ್ಯೇಕವಾಗಿ ೩ ತಿಂಗಳ ಕಠಿಣ ಕೈದು ಮತ್ತು ೨೫ ರೂಪಾಯಿ ದಂಡ ಇಲ್ಲವೆ ೬ ವಾರಗಳ ಕೈದು ಹೀಗೆ ಶಿಕ್ಷೆ ವಿಧಿಸಿದರು.

ಅಮೇರಿಕೆಯಲ್ಲಿ ಬಿರುಗಾಳಿಯ ಅನರ್ಥ

೧೦ ಜನರು ಸತ್ತರು

ನ್ಯೂಯಾರ್ಕ ತಾ|| ೨೪— ಅಮೇರಿಕೆಯ ಕೆಲವು ಭಾಗಗಳಲ್ಲಿ ಭಯಂಕರ ಬಿರುಗಾಳಿ ಬೀಸಿದ್ದರಿಂದ ೧೦ ಜನರು ಪ್ರಾಣಕ್ಕೆ ಎರವಾಗಿದ್ದಾರೆ. ಈ ಸಂಬಂಧವಾಗಿ ಇನ್ನೂ ಹೆಚ್ಚಿನ ಸುದ್ದಿಗಳು ತಿಳಿದುಬಂದಿಲ್ಲ. ಮರಣಹೊಂದಿದವರ ಸಂಖ್ಯೆಯು ಇನ್ನೂ ಹೆಚ್ಚಿಗಿರಬಹುದೆಂದು ತರ್ಕಮಾಡಿದೆ. ಹಡಗು, ಬೆಳೆ ಮೊದಲಾದವುಗಳು ಅನರ್ಥಕ್ಕೊಳಗಾಗಿದ್ದು, ಲಕ್ಷಗಟ್ಲೆ ಹಾನಿ ಸಂಭವಿಸಿದೆ

ವರ್ಗಾವರ್ಗಿ

ಬೈಲಹೊಂಗಲದ ಸೆಕಂಡ ಕ್ಲಾಸ ಸಬ್ ಜಡ್ಜರಾದ ಮಿ|| ಎಸ್ ಬಿ. ಸಾಲೇಕರರನ್ನು ಆ ಸ್ಥಳದಿಂದ ಮುಕ್ತವಾಗುತ್ತಲೆ, ಗೋಕಾಕದ ಸಬ್ ಜಡ್ಜರನ್ನಾಗಿ ನಿಯಮಿಸಿರುತ್ತದೆ. ಗೋಕಾಕದ ಸಬ್ ಜಡ್ಜರಾದ ಮಿ|| ಜಿ. ಎ. ಬಳಸೆ ಇವರನ್ನು ಭುಸಾವಳಕ್ಕೆ ವರ್ಗ ಮಾಡಲಾಗಿದೆ

ಮಿ|| ಎಸ್. ಆರ್ ಪುರಂಧರೆಯವರು ತಾ|| ೧೦ನೆ ನವ್ಹೆಂಬರದ ವರೆಗೆ ಇಲ್ಲವೆ ಬೇರೆ ಅಸಿಸ್ಟಂಟ ಸುಪರಿಂಟೆಂಡೆಂಟ ಬರುವವರೆಗೆ ಧಾರವಾಡ ಜಿಲ್ಲೆಯ ಡೆಪ್ಯೂಟಿ ಸುಪರಿಂಟೆಂಡೆಂಟರಾಗಿ ಉಳಿಯತಕ್ಕದ್ದು

ಚಿಕ್ಕೋಡಿಯ ಹೆಡ್ ಕಾರಕೂನರಾದ ಮಿ|| ಏ. ಪಿ. ಖತೀಬ ಇವರಿಗೆ ಎರಡನೆ ವರ್ಗದ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಕೊಟ್ಟಿರುತ್ತದೆ

ಕಾರವಾರ ಜಿಲ್ಹೆಯ ಶಿರಸಿ ಭಾಗದ ಅಸಿಸ್ಟಂಟ ಕಲೆಕ್ಟರ ಮಿ|| ಎಂ. ಜೆ. ದೇಸಾಯಿ ಇವರನ್ನು ಆ ಭಾಗದ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರನ್ನಾಗಿ ನಿಯಮಿಸಿರುತ್ತದೆ.

ಇಹವೃತ್ತ

ಇಲ್ಲಿಯ ವಕೀಲರಾದ ಮಿ|| ಜೊಸೆಫ್ ರಿಚಾರ್ಡ ನಜರೆತ್ ಇವರು ಒಂದು ವರ್ಷದ ಮಟ್ಟಿಗೆ ಬೈಲಹೊಂಗಲದ ಸಬ್‌ಜಡ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕವಿಭೂಷಣ ಬೆಟಗೇರಿ ಕೃಷ್ಣಶರ್ಮಾ ಇವರು ಹೈದರಾಬಾದ ಗಜಾನನೋತ್ಸವ ಮಂಡಲದವರ ಆಮಂತ್ರಣವನ್ನು ಸ್ವೀಕರಿಸಿ ವ್ಯಾಖ್ಯಾನ ಕೊಡಲು ಅಲ್ಲಿಗೆ ಹೋಗಿದ್ದಾರೆ.

ಕಾಯಿದೆಭಂಗಕ್ಕಾಗಿ ಕೈದು ಹಾಗು ಶಿಕ್ಷೆ.

ಅಲಹಾಬಾದ ತಾ|| ೨೪ — ರಾಯ ಬರೇಲಿ ಜಿಲ್ಲೆಯ ಒಚ್ಛಾಮನ್ ಎಂಬಲ್ಲಿ ಮೂವರು ಕಾಂಗ್ರೆಸ ಸ್ವಯಂಸೇವಕರು ಕಾಯಿದೆ ಭಂಗದ ಬಗ್ಗೆ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಪೋಲೀಸರು ಕೂಡಲೆ ಅವರನ್ನು ಕೈದು ಮಾಡಿದರು

ಮಿರ್ಜಾಪುರ ಎಂಬಲ್ಲಿ ಇಬ್ಬರು ಸ್ವಯಂಸೇವಕರು ಆಕ್ಷೇಪಾರ್ಹ ಹಸ್ತಪತ್ರಿಕೆಗಳನ್ನು ಹಂಚಿದ್ದರಿಂದ ಅವರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದರು.

ಕೈದಿಗಳು ಓಡಿ ಹೋದರು.

ಹೈದರಾಬಾದ (ಸಿಂಧ) ತಾ|| ೨೪— ಶಿವಾನದಲ್ಲಿಯ ತುರಂಗದೊಳಗಿಂದ ಇಬ್ಬರು ಕೈದಿಗಳು ಓಡಿ ಹೋಗಿರುವರೆಂದು ಸುದ್ದಿ ಬಂದಿದೆ. ವಾರ್ಡರನು ಬೇರೊಬ್ಬನಿಗೆ ಚಾರ್ಜ ಒಪ್ಪಿಸಿ ಹೋಗುತ್ತಿರುವಾಗ ಇಬ್ಬರು ಇಲ್ಲದೆ ಇದ್ದದ್ದು ಕಂಡು ಬಂತು. ಈ ಸುದ್ದಿಯನ್ನು ಕೂಡಲೆ ಪೋಲೀಸರಿಗೆ ತಿಳಿಸಿತು ಅವರು ಅತ್ತಿತ್ತ ಶೋಧ ಮಾಡಿದರು ಅವರು ತುರಂಗದ ಮಾಳಿಗೆಯ ಮೇಲಿಂದ ಪಾರಾಗಿ ಹೋಗಿರುವರೆಂಬುದು ತಿಳಿದು ಬಂತು.

ಮುಂಬಯಿ :— ಮದ್ರಾಸ 'ಎಕ್ಸಪ್ರೆಸ್' ಹೊಗೆಬಂಡಿಯು ಸೇವಾಪೇಟ ಮತ್ತು ತಿರುವಳ್ಳೂರ ಸ್ಟೇಶನಗಳ ನಡುವೆ ಹೋಗುತ್ತಿರುವಾಗ ಓರ್ವ ಕಾಂಗ್ರೆಸ್ ಸ್ವಯಂಸೇವಕನು ಸರಪಳಿಯನ್ನು ಜಗ್ಗಿ ಅದನ್ನು ನಿಲ್ಲಿಸಿದನು, ಮತ್ತು ಪ್ರಯಾಣಿಕರಿಗೆ ಬ್ರಿಟಿಶ ಸರಕಿನ ಬಹಿಷ್ಕಾರದ ಹಸ್ತಪತ್ರಿಕೆಗಳನ್ನು ಹಂಚಿದನು.

ಓರ್ವ ರೇಲ್ವೆ ಸಿಪಾಯಿಯು ಅವನನ್ನು ಸೆರೆಹಿಡಿದು ಮದ್ರಾಸಕ್ಕೆ ಕರೆದೊಯ್ದನು

ಕಾನಪುರ:— ಶಂಕರಸಿಂಗ ಎಂಬ ತರುಣನ ಮನೆಯಲ್ಲಿ ಪೋಲೀಸರಿಗೆ ೫ ಬಾಂಬುಗಳು ಸಿಕ್ಕಿದ್ದರಿಂದ, ಅವರು ಅವನನ್ನು ಸೆರೆಹಿಡಿದು ಖಟ್ಲೆಗೆ ಗುರಿಮಾಡಿದ್ದಾರೆ. ಇದಲ್ಲದೆ ಅವನ ತಾಯಿಯನ್ನಾದರೂ ಕಳವಿನ ಪದಾರ್ಥಗಳನ್ನು ಮನೆಯಲ್ಲಿಟ್ಟುಕೊಂಡ ಬಗ್ಗೆ ಕೈದು ಮಾಡಿದ್ದಾರೆ.

ಮದ್ರಾಸ:— ಸ್ಥಳಿಕ ಸರಕಾರದವರು ಕಾಯದೆಭಂಗದ ಕೈದಿಗಳನ್ನು ಬಿಡುಗಡೆ ಮಾಡುವ ಕ್ರಮವನ್ನು ಪುನಃ ಸುರುವು ಮಾಡಿದ್ದಾರೆ ಈ ಕ್ರಮವನ್ನು ಅವರು ಕೆಲವು ದಿನಗಳಿಂದ ತಡೆಹಿಡಿದಿದ್ದರು. ಜುಲೈ ತಿಂಗಳ ಕೊನೆಯಲ್ಲಿ ಮದ್ರಾಸ ಇಲಾಖೆಯ ಜೇಲುಗಳಲ್ಲಿ ಒಟ್ಟು ೩೮೪ ಜನ ಕಾಯದೆ ಭಂಗದ ಕೈದಿಗಳಿದ್ದರು.

ಧ್ರಗಂಧ್ರಾ :— ಧ್ರಗಂಧ್ರಾ ಪ್ರಜಾಮಂಡಳದ ಅಧ್ಯಕ್ಷರು ವ್ಹಾಯಿಸ್‌ರಾಯರಿಗೆ ತಾರು ಮಾಡಿ, ಸಂಸ್ಥಾನದಲ್ಲಿಯ ಅನಿಶ್ಚಿತ ಕಾರಭಾರದ ಕಡೆಗೆ ಅವರ ಲಕ್ಷ್ಯವನ್ನು ಎಳೆದಿದ್ದಾರೆ. ಅವರು ತಮ್ಮ ಈ ತಾರಿನಲ್ಲಿ ಸ್ವತಂತ್ರವಾದದ್ದೊಂದು ವಿಚಾರಣಾ ಮಂಡಳವನ್ನು ನಿಯಮಿಸಬೇಕೆಂದು ಕೇಳಿಕೊಂಡಿದ್ದಾರೆ.

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ|| ೨೫ ೮ ೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಬರುವರು! ಧಾರವಾಡಕ್ಕೆ ಬರುವರು!!

ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾ
ಕಲಾನಿಪುಣ ಪ್ರೊ. ಎಚ್. ಜಿ. ಘೋಡಕೆ ಇವರ
ಹಾಸ್ಯಕಾರಕ-ಪ್ರೋಜ ಮತ್ತು ಸಂಗೀತ ಹೊಸತರದ
ನಕಲಿನ ಪ್ರಚಂಡ

ಪ್ರೋಗ್ರಾಮ

ಆಗುವವು.

ಡಾ. ಕುಲಕರ್ಣೀಜ
ಲೆಬೊರೋಟರಿ ಮುಂಬಯಿ ನಂಬ ೧೨
ಬಾಟ್ಲಿ ಕಿಮ್ಮತ್ತು ೧—೨—೦
ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು !!!

ಕರಗು, ಬಿಳೀಕರಗು, ಕೆಂಪು ಕರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ. ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತಗದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ಬಿ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.

೧೮-೬

ಗೀತೆಯ ಗುಟ್ಟು— ...

ಉಪನಿಷತ್-ಪ್ರಕಾಶ— ಭಾಗ ೧ ಮತ್ತು ೨. ...

ಉಪನಿಷತ್-ರಹಸ್ಯ— ಪ್ರೋ. ರಾನಡೆಯವರ "A Constructive Survey of Upanishadic Philosophy" ಎಂಬ ಗ್ರಂಥದ ಕನ್ನಡ ಅನುವಾದ, ...

ಶ್ರೀರಾಮಕೃಷ್ಣಚರಿತಾಮೃತವು— ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ...

ಎಲ್ಲ ಪುಸ್ತಕಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ...

ಅಧ್ಯಾತ್ಮ ಕಾರ್ಯಾಲಯ
ಧಾರವಾಡ

ವಿಜಂಬಿರು
...ಗಿದ್ದಾರೆ.
ಧಾರವಾಡ ...
ಕೊಡಲಾಗುವದು. ...
...ವರು ಪತ್ರವ್ಯವಹಾರ ಮಾಡಬೇಕು.
—ವ್ಯವಸ್ಥಾಪಕ
"ಕನ್ನಡಿಗ"

ನೋಟೀಸಿನ ದರಗಳು
ಮೊದಲನೆ ಸಾರೆ ...
ಮುಂದೆ ...
ಎರಡನೆ ಸಾರೆ
ಮುಂದೆ ...

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲಿಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು.

ಕಿಂ. ಬಿ. ೨೭೮೮ यथत् परवशं दुखं । यथदात्मवशं सुखम्॥मनु ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು. ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

೧೦] ಧಾರವಾಡ— ಮಂಗಳವಾರ ಭಾದ್ರಪದ ಶುದ್ಧ ೯ ಶಕೆ ೧೮೪೬ ತಾ॥ ೨೯-೮-೨೩ [ಸಂಚಿಕೆ ೧೦೮

ಇನ್ಸ್ಯುಅರನ್ಸ
ವಿಮ ಇಳಿಸಲು
ಯುನಾಯಿಟೆಡ್
ಕ ಇನ್ಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು

ಇನ್ಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಮಹಾತ್ಮರು ಪುನಃ ಸರಕಾರಕ್ಕೆ ಪತ್ರ ಬರೆಯುವರು.

ಲ್ಲಿ ತಾ॥ ೨೨— ಮಹಾತ್ಮಾ ಗಾಂಧಿಯ ನ ದಿವಸ ರಾತ್ರಿ ಸುಖವಾಗಿ ಕಳೆದರು ಪ್ರಕೃತಿಯು ಕ್ರಮವಾಗಿ ಸುಧಾರಿಸಹತ್ತಿದೆ ದಿನಾಲು ಸ್ವಲ್ಪು ಹೊತ್ತು ಅತ್ತಿಂದಿತ್ತ ತ್ತಿರುವರು ನಿಸರ್ಗೋಪಚಾರ ತಜ್ಞ ಶಾ ಮೆಹತಾ ಇವರು ದಿನಾಲು ಅವರ ನ್ನು ಪರೀಕ್ಷಿಸುತ್ತಿರುವರು ಇನ್ನು ವೈದ್ಯಕೀಯ ಮಂಡಳದವರು ಮಹಾ ಪ್ರಕೃತಿಯನ್ನು ಪರೀಕ್ಷಿಸಲು ಬರುವ ಲ್ಲವೆಂದು ತೋರಿಬರುತ್ತದೆ ಯಾಕಂ ನೂ ಅವಶ್ಯಕವಾಗಿ ಕಾಣುವದಿಲ್ಲ ದೀನಬಂಧು ಆ್ಯಂಡ್ರೂಜ ಹಾಗು ಕರಾಚಿ ಪಾಲಟಿಯ ಮೇಯರರಾದ ಶ್ರೀ ಜಮ ಹತಾ ಇವರು ಈ ಹೊತ್ತು ಮಹಾತ್ಮ ಕಂಡು ಅವರೊಡನೆ ಮಾತುಕತೆಯಾಡಿ

ಮಹಾತ್ಮಾ ಗಾಂಧಿಯವರು ಇನ್ನೂ ಒಂದು ನಂತರ ಸರಕಾರದವರೊಡನೆ ಪತ್ರವ್ಯವ ಹರಿಸುವರು. ಈ ಒಂದು ವಾರದೊಳ ನ್ನು ಪ್ರಕೃತಿಯು ಸಂಪೂರ್ಣವಾಗಿ ಸುವದೆಂದು ಅವರಿಗೆ ಬಲವಾದ ಆಶೆ

ದೀನಬಂಧು ಆ್ಯಂಡ್ರೂಜ ಇವರ ನೆರಿಹಾವ ದ ಸಂಕಟ ಗ್ರಸ್ತರಾದವರ ಸ್ಥಿತಿಗತಿಗ ಳಿದುಕೊಂಡು ಬರಲು ಬೇಗನೆ ಕಟ ಹೋಗತಕ್ಕವರಿದ್ದಾರೆ. (ಅ ಪ್ರೆ)

ಮಹಾತ್ಮಾ ಗಾಂಧಿಯವರ ಪ್ರಕೃತಿ

ಲ್ಲಿ ತಾ॥ ೨೨— ಮಹಾತ್ಮಾ ಗಾಂಧಿಯ ಪ್ರಕೃತಿಯು ಕ್ರಮವಾಗಿ ಸುಧಾರಿಸಹತ್ತಿದೆ ಈಗ ಹಾಲು ಹಣ್ಣು ಹಾಗು ಪಲ್ಲೆ ತೆಗೆ ಳ್ಳುತ್ತಿರುವರು ಇನ್ನೂ ಅವರು ತಮ್ಮ ನಿತ್ಯ ದವನ್ನು ಸುರುವು ಮಾಡಿರುವದಿಲ್ಲ ದೀನ ಬಂಧು ಆ್ಯಂಡ್ರೂಜ ಹಾಗು ಸರ್ ಶಕರ ಪಟ್ಟಾಣಿಯವರು ಈ ಹೊತ್ತಿನ ಮಹಾತ್ಮರ ಭೆಟ್ಟಿ ತೆಗೆದುಕೊಂಡು ಅವ ಮಾತುಕತೆಯಾಡಿದರು ಮಹಾತ್ಮರು ತಮ್ಮ ನಿಯಮದಂತೆ ಈ ದಿವಸ ಮೌನವ್ರತಕ್ಕೆ ಪ್ರಾರಂಭ ದ್ದಾರೆ

ಶಾಯೊಕ್ ಕೆರೆಯ ಒಡ್ಡು ಒಡೆಯಿತು.

ನಗರ ತಾ॥ ೨೮—ತಾ॥೨೭ ನೆ ದಿವ ಹಾನೆ ಶಾಯೊಕ್ ಕೆರೆಯ ಒಡ್ಡು ಒಡೆ ದು ಸುದ್ದಿ ಬಂದಿದೆ. ಕರ್ದು ಎಂಬಲ್ಲಿ ವಾರದ ದಿವಸ ಮಧ್ಯರಾತ್ರಿಯಲ್ಲಿ ೨೪ ನೀರು ಏರಿತ್ತು. ಈ ವರ್ಷ ಕರ್ದು ಎಂ ಹೆಚ್ಚೆಂದರೆ ೨೯ ಫೂಟು ೬ ಇಂಚಿನ ನೀರು ಏರಿತ್ತು. ಆದರೆ ೧೯೩೩ನೇ ಜುಲೈ ವಾರದ ದಿವಸ ಇದು ೩೨ ಫೂಟು ೪ ವರೆಗೆ ಬಂದಿತ್ತು. (ಅ. ಪ್ರೆ.)

ಶ್ರೀ ಸೆಕ್ಸೆನಾ ಮೊದಲಾದ ೨೨ ಜನರಿಗೆ ಶಿಕ್ಷೆ

ಲಖನೌ ತಾ॥೨೭— ಶ್ರೀ ಮೋಹನಲಾಲ ಸೆಕ್ಸೆನಾ ಹಾಗು ಅವರ ಅನುಯಾಯಿಗಳಾದ ಬೇರೆ ೨೧ ಜನರಿಗೆ ೧೭ (೧) ನೆ ಕಲಮಿನನ್ವ ಯ ೬ ತಿಂಗಳ ಕಠಿಣ ಶಿಕ್ಷೆಯಾಯಿತು ಈ ಯಾವತ್ತರನ್ನು ತಾ॥ ೧೫ ನೆ ದಿವಸ ಪಿಕೆಟಿಂಗದ ಸಂಬಂಧವಾಗಿ ಸೆರೆ ಹಿಡಿದಿತ್ತು

ಆತ್ಮಶುದ್ಧಿಗಾಗಿ ಆಮರಣ ಉಪವಾಸ

ಜೋಧಪುರ ತಾ॥ ೨೫— ಇಲ್ಲಿ ಶ್ರೀ. ರೋ ಜೋನಾಜಿ ಹಾಗು ಶ್ರೀ ಚಂಪಾಶ್ರೀಜಿ ಎಂಬ ಇಬ್ಬರು ಜೈನ ಸನ್ಯಾಸಿಗಳು ತಮ್ಮ ಆತ್ಮಶುದ್ಧಿ ಗಾಗಿ ಆಮರಣ ಉಪವಾಸ ಮಾಡುವವರಿದ್ದಾರೆ

ಮುಂಬಯಿಯಲ್ಲಿ ಇಂಪೀರಿಯಲ್ ಬ್ಯಾಂಕದ ಪಿಕೆಟಿಂಗ

ಮುಂಬಯಿ ತಾ॥ ೨೬— ಇಂಪೀರಿಯಲ್ ಬ್ಯಾಂಕದ ಮುಂದೆ ಪಿಕೆಟಿಂಗ ಮಾಡಿದ ಸಂಬಂ ಧವಾಗಿ ಶ್ರೀ. ಬಾಬ್ರೇಕರರಿಗೆ ೧೦ ತಿಂಗಳ ಕಠಿ ಣ ಕೈದು ಹಾಗು ೫೦ ರೂ. ದಂಡ ಇಲ್ಲವೆ ೬ ವಾರ ಕೈದು ಹೀಗೆ ಶಿಕ್ಷೆಯಾಗಿದೆ

ಸರ್ವಧರ್ಮ ಪರಿಷತ್ತು

ಶ್ರೀ॥ ಸಯಾಜಿರಾವ ಗಾಯಕವಾಡರು ಅಧ್ಯಕ್ಷರು

ನ್ಯೂಯಾರ್ಕ ತಾ॥ ೨೬— ಚಿಕಾಗೋದಲ್ಲಿ ಕೂಡುವ ಸರ್ವಧರ್ಮ ಪರಿಷತ್ತಿಗೆ ಶ್ರೀ ಸಯಾ ಜಿರಾವ ಗಾಯಕವಾಡ ಇವರನ್ನು ಅಧ್ಯಕ್ಷ ರನ್ನಾಗಿ ಆರಿಸಿರುತ್ತಾರೆ ಈ ಕಾರಣ ಅವರು ಲಂಡನದಿಂದ ಚಿಕಾಗೋ ಕಡೆಗೆ ಹೊರಟಿರು ತ್ತಾರೆ.

ಸೊಲ್ಲಾಪುರದಲ್ಲಿ ಪಿಕೆಟಿಂಗಕ್ಕೆ ನಿರ್ಬಂಧ

ಪುಣೆ ತಾ॥ ೨೬— ಮುಂಬಯಿ ಸರಕಾರದವರು ವಿಶಿಷ್ಟ ಗ್ಯಾಜೆಟು ಹೊರಡಿಸಿ ತಾ॥ ೨೫ ನೆ ತಾರೀಖಿನಿಂದ ಕ್ರಿಮಿನಲ್ ಲಾ ಅಮೆಂಡ ಮೆಂಟ ಕಾಯದೆಯ ೭ ನೆ ಕಲಮನ್ನು ಸೊಲ್ಲಾಪುರದಲ್ಲಿ ಬಳಕೆಯಲ್ಲಿ ತಂದಿದ್ದಾರೆ ಕೆಲಸಕ್ಕೆ ಹೋಗುವವರಿಗೆ ಅಡ್ಡಿ ಮಾಡುವದಾಗಲಿ ಇಲ್ಲವೆ ಕೆಲಸ ಸಹಿತ ಕಡೆಯಲ್ಲಿ ಪಿಕೆಟಿಂಗ ಮಾಡುವ ದಾಗಲಿ ಈ ಕಲಮಿನನ್ವಯ ಅಪರಾಧವಾಗುತ್ತದ್ದು ಈ ಅಪರಾಧ ಮಾಡುವವರಿಗೆ ೬ ತಿಂಗಳ ಕೈದು ಹಾಗು ೫೦೦ ರೂಪಾಯಿ ದಂಡ ಹೀಗೆ ಶಿಕ್ಷೆಯಾಗುವದು

ಹೊಗೆಬಂಡಿಯನ್ನು ಡಬ್ಬು ಕೆಡಹುವ ಪ್ರಯತ್ನ

ಮದ್ರಾಸ ತಾ॥ ೨೬— ನಿನ್ನಿನ ದಿವಸ ರಾತ್ರಿ ಮ ದ್ರಾಸ ಮತ್ತು ಸದರ್ನ ಮರಾಠಾ ರೇಲ್ವೆ ಮಾರ್ಗದ ಬಾಳೆ ಹಾ ಸ್ಟೇಶನದ ಹತ್ತಿರ ಪ್ರವಾಸಿಕರ ಗಾಡಿಯನ್ನು ಡಬ್ಬು ಕೆಡಹುವ ಪ್ರಯತ್ನ ನಡೆಯಿತು. ಆ ಮ ಮೇಲೆ ಕಟ್ಟಿಗೆಯ ತುಂಡುಗಳನ್ನು ಇಟ್ಟಿದ್ದರು. ಎಂ ಜಿನು ಅಲ್ಲಿ ಹೋದ ಕೂಡಲೇ ಮುಂದಕ್ಕೆ ಸರಿಯಲೇ ಇಲ್ಲ. ಎಂಜಿನಿನ ಕೆಲವು ಭಾಗಗಳು ಮುರಿದವು.

ಅಸೆಂಬ್ಲಿಯಲ್ಲಿ ಸಂಸ್ಥಾನ ಸಂರಕ್ಷಣೆಯ ಮಸೂದೆ

ಸಿಮುಲಾ ತಾ॥ ೨೮ — ಗೃಹಮಂತ್ರಿಗಳಾದ ಸರ್ ಹ್ಯಾರಿ ಹೇಗ ಇವರು ಈ ಹೊತ್ತಿನ ದಿವಸ ಹಿಂದಿ ಸಂಸ್ಥಾನ ಸಂರಕ್ಷಣೆ ಮಸೂದೆಯನ್ನು ಅಸೆಂಬ್ಲಿಯಲ್ಲಿ ಮಂಡಿಸಿದರು ಈ ಮಸೂದೆಗೆ ಜೋಡಿಸಿದ ವಿಷಯ ಸೂಚಕ ಪತ್ರಿಕೆಯಲ್ಲಿ ಅ ವರು ಅನ್ನುವದೇನಂದರೆ— ಸಾಮಾನ್ಯ ಕಾಯ ದೆಗಳಿಂದ ಸಾಕಷ್ಟು ಸಂರಕ್ಷಣೆ ಆಗುವದಿಲ್ಲವೆಂ ದು ಅನುಭವದಿಂದ ಕಂಡುಬಂದಿದೆ ಬ್ರಿಟಿಶ ಹಿಂದುಸ್ಥಾನದಲ್ಲಿ ಸಂಸ್ಥಾನದ ಆಡಳಿತೆಯ ವಿ ರುದ್ಧವಾಗಿಯೂ ಸಂಸ್ಥಾನಿಕರ ಬಗ್ಗೆ ಅಪ್ರೀತಿ ಹುಟ್ಟಿಸುವ ಬಗ್ಗೆಯೂ ಚಳವಳಿಯು ಸಾಗಿಸಲ್ಪ ಡುತ್ತಿದೆ. ಈ ಚಳವಳಿಯಿಂದ ಸಂಸ್ಥಾನಿಕರ ನ್ನು ಸಂರಕ್ಷಿಸುವದು ಅವಶ್ಯವಿದೆ

ಈ ಮಸೂದೆಯಿಂದ ೧೯೩೦ ನೆ ಇಸ್ವಿಯ ಇ ಪಿ ಕೋಡಿನ ೧೨೧ ನೆ (ಅ) ಕಲಮಿನಲ್ಲಿ ತಿದ್ದುಪಡೆ ಮಾಡಲಗಿದೆ ಈ ಮಸೂದೆಯಿಂ ದ ಸಂಸ್ಥಾನಗಳಲ್ಲಿಯೂ ಮುದ್ರಣದ ವಿಶಿಷ್ಟ ಕಾಯದೆಯು ಬಳಕೆಯಲ್ಲಿ ತರಲ್ಪಡುವದು ಇದ ಲ್ಲದೆ ಯಾವದಾದರೂ ಕೃತ್ಯವನ್ನು ಮಾಡಕೂ ಡದೆಂದೂ, ಸಭೆ ಮೊದಲಾದವುಗಳನ್ನು ಜರುಗಿ ಸಕೂಡದೆಂದೂ ಆಜ್ಞೆ ವಿಧಿಸಲು ಬರುವದು ಈ ಆಜ್ಞೆಗೆ ವಿರುದ್ಧವಾಗಿ ವರ್ತಿಸಿದವರಿಗೆ ಶಿಕ್ಷೆ ವಿಧಿಸಲ್ಪಡುವದು

ಸರ್ ಭೋರ ಇವರು ಅಸೆಂಬ್ಲಿಯಲ್ಲಿ ಈ ಹೊತ್ತಿನ ದಿವಸ ೧೯೧೦ ನೆ ಇಸ್ವಿಯ ನೂಲಿನ ಔದ್ಯೋಗಿಕ ಸಂರಕ್ಷಣೆಯ ಮಸೂದೆಯಲ್ಲಿ ತಿ ದ್ದುಪಡೆ ಮಾಡುವದನ್ನು ಸೂಚಿಸಿದರು

(ಅ ಪ್ರೆ)

ಬಿಡುಗಡೆ ಆದ ಕೂಡಲೆ ಪುನಃ ಪಿಕೆಟಿಂಗ

ಮದ್ರಾಸ ತಾ॥ ೨೬ — ಶ್ರೀ ಎಸ್ ಎಸ್ ವರದಾಚಾರಿ ಮೊದಲಾದ ೧೨ ಜನರನ್ನು ಪಿಕೆ ಟಿಂಗದ ಸಂಬಂಧವಾಗಿ ನಿನ್ನಿನ ದಿವಸ ಸೆರೆಹಿ ಡಿದೊಯ್ದು ಸ್ವಲ್ಪು ಕಾಲದಲ್ಲಿ ಅವರನ್ನು ಬಿಡುಗ ಡೆ ಮಾಡಿದರು ಅವರು ಪುನಃ ಆಗಿಂದಾಗ್ಗೆ ಪಿಕೆಟಿಂಗಕ್ಕೆ ನಿಂತುಕೊಂಡರು

ಜಿಲ್ಹಾ ಬೋರ್ಡುಗಳ ಮೇಲೆ ಸಂಯುಕ್ತ ಪ್ರಾಂತ ಸರಕಾರದ ಟೊಣ್ಣೆ

ಅಹಮದಾಬಾದ ತಾ॥ ೨೬— ಸಂಯುಕ್ತ ಪ್ರಾಂತ ಸರಕಾರದವರು ಜಿಲ್ಹಾ ಬೋರ್ಡಗಳ ಸಂಬಂಧವಾಗಿ ಒಂದು ವಿಶಿಷ್ಟ ಪತ್ರಿಕೆಯನ್ನು ಪ್ರಸಿದ್ಧ ಮಾಡಿದ್ದಾರೆ ಅದರಲ್ಲಿ ಅವರು ಅ ನ್ನುವದೇನಂದರೆ— ಈಗ ಜಿಲ್ಹಾ ಬೋರ್ಡುಗ ಳಲ್ಲಿ ಎಲ್ಲಿ ನೋಡಿದಲ್ಲಿ ಒಡಕು, ಜಗಳ ಇವೇ ಕಂಡು ಬರುತ್ತವೆ. ಈ ಮೂಲಕ ಅವುಗಳ ಮೇಲಿನ ಜನರ ವಿಶ್ವಾಸವು ಹಾರಿ ಹೋಗಹತ್ತಿ ದೆ ... ಎಲ್ಲಿಯಾದ ರೂ ಮಾತು ಹೊರಟರೆ ಸಾಕು. ಬೋರ್ಡುಗ ಳ ವಿಷಯವಾಗಿ ನಿಂದೆ ಹಾಗು ನಿಷೇಧವೇ ಕೇ ಳಬರುತ್ತದೆ.

ಶ್ರೀನಿವಾಸ ಅಯ್ಯಂಗಾರರ ಮೇಲೆ ನೋಟೀಸು

ಬೆಂಗಳೂರ ತಾ॥ ೨೫— ಮೈಸೂರ ಹಾಯ ಕೋರ್ಟದವರು ಇಲ್ಲಿಯ ವಕೀಲರಾದ ಶ್ರೀ ಬೇಲೂರ ಶ್ರೀನಿವಾಸ ಅಯ್ಯಂಗಾರರ ಮೇಲೆ ನೋಟೀಸು ಹೊರಡಿಸಿ, ವೃತ್ತಿಗೆ ವಿರುದ್ಧವಾಗಿ ವರ್ತಿಸಿದ್ದಕ್ಕಾಗಿ ನಿಮ್ಮ ಮೇಲೆ ಯೋಗ್ಯ ಉ ಪಾಯಗಳನ್ನೇಕೆ ಕೈಕೊಳ್ಳಬಾರದೆಂಬ ಒಗ್ಗೆ ಕಾರಣ ತೋರಿಸಬೇಕೆಂದು ಕೇಳಿದ್ದಾರೆ ವಿಚಾ ರಣೆಯು ತಾ॥ ೧ ನೇ ಸಪ್ಟೆಂಬರ ದಿವಸ ನಡೆ ಯತಕ್ಕದ್ದಿದೆ.

ಡಾ. ಸೇನರನ್ನು ಸೆರೆಹಿಡಿದರು.

ಕಲಕತ್ತಾ— ಪೋಲೀಸ ಅಧಿಕಾರಿಗಳು ತಾ॥ ೨೧ ನೆ ದಿವಸ ಡಾ ಶೀಲಧ್ರಾವ ಸೇನ ಇವರ ಮನೆಯನ್ನು ಝಡತಿ ಮಾಡಿ, ಕಾಯ ದೇ ಭಂಗ ಚಳವಳಿಯ ಸಂಶಯದಿಂದ ಅವರ ನ್ನು ಸೆರೆಹಿಡಿದ ಕೊಂಡು ಹೋದರು.

ಸಾಲೇಮಪುರ ಮಹಾರಾಜರ ಮನೋದಯ

ಲಾಹೋರ ತಾ॥ ೨೬ — ಮುಸಲ್ಮಾನ ಮುಖಂಡರಲ್ಲಿ ಏಕವಾಕ್ಯತೆಯನ್ನುಂಟು ಮಾಡು ವದಕ್ಕೆ ಸಾಲೇಮಪುರ ಮಹಾರಾಜರು ದೀರ್ಘ ವಾದ ಪ್ರಯತ್ನ ನಡಿಸಿದ್ದಾರೆ. ಈ ಉದ್ದಿಶ್ಯ ವಾಗಿ ತಮ್ಮ ರಾಜವಾಡೆಯಲ್ಲಿ ಅವರು ಸ್ವಲ್ಪು ದಿನ ಗಳಲ್ಲಿಯೇ ಮುಸಲ್ಮಾನ ಮುಖಂಡರದೊಂದು ಸಭೆ ಕೂಡಿಸುವವರಿದ್ದಾರೆ.

ಅಸೆಂಬ್ಲಿಯಲ್ಲಿ ಮತ್ತೊಂದು ಹೊಸ ಪಕ್ಷ.

ಸಿಮುಲಾ ತಾ॥ ೨೬— ಅಸೆಂಬ್ಲಿಯ ರಾಷ್ಟ್ರೀ ಯ ಪಕ್ಷದಲ್ಲಿ ಡೆಮಾಕ್ರ್ಯಾಟಿಕ್ ಎಂಬುದೊಂ ದು ಹೊಸ ಪಕ್ಷವು ನಿರ್ಮಾಣವಾಗಿದೆ ಶ್ರೀ. ನಿಯೋಗಿಯವರು ಈ ಪಕ್ಷದ ಮುಖಂಡತ್ವವ ನ್ನು ವಹಿಸಿಕೊಂಡಿದ್ದಾರೆ ಈ ಪಕ್ಷದಲ್ಲಿ ಒ ಟ್ಟು ೨೦ ಜನ ಸಭಾಸದರಿದ್ದು, ಟಿ. ಸಿ. ಘಂಡ ನ್ ಇವರು ಕಾರ್ಯದರ್ಶಿಗಳಿರುತ್ತಾರೆ

ಕೊನೆಯುಚ್ಚು

ಹೊಂಗೋಲ



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚೂರ್ಯ

ಶಾಸ್ತ್ರಶುದ್ಧ ಪವಿತ್ರ ಕ್ರಿಮಿನಾಶಕ

ದಂತಮಂಜನ

ಇದು ಉಪಯೋಗಿಸುವದರಿಂದ ಹಲ್ಲು ಬೇನೆಗಳಿಯೂ, ಬಾಯಿಯ ... 'ಹೆಮ್ಮುಗುಳು' ... ಸಲು ಸರ್ವೋತ್ಕೃಷ್ಟವಾದ ವನಸ್ಪತಿ ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ ಈ ... ಗಳಿನ ಕ್ವಾವು "ಕಚೂರ್ಯ" ... ದಲ್ಲಿ ಅಡಕವಾಗಿದೆ ... ಟು ಆದರೆ ಈ ಕ್ರಿಮಿಗಳು ಕಚೂರ್ಯ ದಂತಮಂಜನದ ಉಪಯೋಗದಿಂದ ನಾಶವಾಗ ... ಬೇರೆಗಳು ... 'ಕಚೂರ್ಯ' ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡು ... ಬೇಕಲ್ಲದೆ ಕೇವಲ ವರ್ಣನೆಯಿಂದ ಅಲ್ಲ ... ಯಲ್ಲಾರವು ಕನ್ನಡಿಗರೇ, ಕನ್ನಡ ... ಮಾಲನ್ನು ಮೊದಲು ಕೊಂಡು "ಮನೆ ಮಾರುಗೆಡಿ" ಎಂಬ ನಾಣ್ಣುಡಿಯಂತೆ ... ಕೆ ಸ್ವದೇಶೀ ವಸ್ತುಗಳನ್ನು ಪಯೋಗಿಸಿ ... ಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹಳೆಯದಾದ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದು

ಹೆಚ್ಚಿನ ಸುಧಾರಣೆಯುಳ್ಳದ್ದೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ, ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ॥ ೧೮-೫-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ, ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀಕಾಶೀರಾಮೇಶ್ವರ ಸಮುದ್ರದಾಟ ಲಂಕಾಕ್ಷೇತ್ರಗಳ ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೆಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್‌ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು॥ ೧೨) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ॥	೨	೧೯ ಲಖನೌ	೨೪	೩೭ ಕುಂಭಕೋಣಂ	೧೫
೨ ನಾಶಿಕ	೩-೪	೨೦ ಅಯೋಧ್ಯೆ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ ಕನ್ಯಾಕುಮಾರಿಗೆ [ಹಡಗದಿಂದ]	೧೮
೪ ಸೋಮನಾಥಕ್ಕೆ (ಹಡಗದಿಂದ)	೮-೯	೨೨ ಪ್ರಯಾಗ	೨೬-೨೭	೪೦ ಕೊಲಂಬೋಕ್ಕೆ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಶ್ರೀಕಾಶಿ ೨೮-೨೯-೩೦-೩೧ ನವ್ಹೆಂಬರ ತಾ॥	೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲೀತಾಣಾ (ಜೈನತೀರ್ಥ)	೧೦-೧೧	೨೪ ಸಾರನಾಥ	,,	೪೨ ತಲಾಯಿಮನಾರ [ಲಂಕಾ]	೨೩
೭ ಅಬೂಪಹಾಡ (ಜೈನತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಡಿ [ಹಡಗದಿಂದ]	,,
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೪ ಮದುರೆ	೨೪
೯ ಸಾಬರಮತಿ	,,	೨೭ ಗಿರಿಡಿ	,,	೪೫ ತ್ರಿಚನಾಪಳ್ಳಿ	೨೫
೧೦ ಬರೋಡೆ	೧೫	೨೮ ಸಮೇತಶಿಖರಜಿ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಉಜ್ಜಯಿನಿ	೧೬	೨೯ ಕಲಕತ್ತಾ	೫-೬-೭	೪೭ ಬೆಂಗಳೂರ	೨೬
೧೨ ಆಗ್ರಾ	೧೭	೩೦ ಜಗನ್ನಾಥ ಪುರಿ	೮	೪೮ ಮೈಸೂರ	೨೭-೨೮
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರಿದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು॥ ೧೨ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡ ಕ್ಲಾಸ ೩೧೦ ರೂಪಾಯಿ ಥರ್ಡಕ್ಲಾಸ ೧೮೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕು ಸೆಕೆಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು. ೫ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀ ... ದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು ಹೆಚ್ಚಿನ ಮಾಹಿತಿಗೆ ... ಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಿ ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ... ನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟಿರು ... ಕಾರಣ ಟಿಕೀಟ ಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ ಏಜನ್ಸ ರೆಂಟೆಗಳು— ಸದರ ಕಂಪನಿಯ ... ರೆಂಟೆಗಳಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರು ಹಾಗು ವಕೀಲದಾರರ ಬಹಳ ... ಗಳು ಕೀರ್ತಿ ... ಕೊಡಲ್ಪಟ್ಟಿವೆ ೧೯೩೩ ನೇ ಇಸ್ವಿಯ ಬೇಸಗಿಯಲ್ಲಾದರೂ ಕೀರ್ತಿಮಾಡಿಕೊಳ್ಳ ಬರುವದು ಕಾರಣ ... ಶೀಘ್ರ ಶ್ರೀ ಗೌರೀಶಂಕರ ಕಂಪನಿಗೆ ... ಕಳಿಸತಕ್ಕದ್ದು ... ಏಜನ್ಸ ರೆಂಟೆಯ ಹೆಚ್ಚಿನ ಮಾಹಿತಿ ಪತ್ರಿಕೆಗಳು ... ಪುಕ್ಕಟೆಯಾಗಿ ಕಳಿಸಲ್ಪಡುವವು ಏಜಂಟರಾಗಬಿಚ್ಛಿಸುವವರು ಕೂಡಲೆ ಕೇಳತಕ್ಕದ್ದು ಯೋಗ್ಯ ... ಕೊಡಲ್ಪಡುವದು

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ.

ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬುಕ್‌ಸೇಲರ.

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಮಂಗಳವಾರ ತಾ॥ ೨೯-೮-೩೩ ನೇ ದಿವಸ ರಾತ್ರಿ

ಸಂಪೂರ್ಣ ರಾಮಾಯಣ.

ಎಂಬ ನಾಟಕವನ್ನು ಅಭಿನಯಿಸುವರು.

ಈ ನಾಟಕವು ಪುನಃ ಇಲ್ಲಿ ದೊರೆಯಲಿಕ್ಕಿಲ್ಲ.

ಸಂಘದೊಡೆಯರು,

ಗದೀಗೆಪ್ಪ ಹಂಪಿಹೊಳಿಯವರು

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು [illegible]

ಕರ್ನಾಟಕದ ಸಂಘಟನ

ಕನ್ನಡಿಗನ ಕಾರ್ಯಕ್ಷೇತ್ರವು ಮುಖ್ಯವಾಗಿ ಕರ್ನಾಟಕವು. ಏಕೆಂದರೆ ಕನ್ನಡಿಗನು ಕನ್ನಡತನವನ್ನು ಮುಖಾಂತರವೇ ಕೆಲಸ ಮಾಡಬೇಕಾದುದರಿಂದ, ಅರ್ಥಾತ್ ಆತನ ಕೂಗು ಕನ್ನಡ ಭಾಷೆಯು ಎಲ್ಲಿಯವರೆಗೆ ಹಬ್ಬಿರುವುದೋ ಅಲ್ಲಿಯವರೆಗೆ ಮಾತ್ರವೇ ಕೇಳಿಬರುವುದು. ಆದರೆ ಹೀಗೆ ಆವನ ಕಾರ್ಯಕ್ಷೇತ್ರವು ಮರ್ಯಾದಿತವಾಗಿದ್ದರೂ ಆತನ ಕಾರ್ಯ [illegible] ಸಂಕುಚಿತ ದೃಷ್ಟಿಯದಾಗಿಲ್ಲ. ಆತನು ರಾಜಕಾರಣವೊಂದನ್ನೇ ತನ್ನ ಧ್ಯೇಯವನ್ನಾಗಿ [illegible]ಕೊಂಡಿಲ್ಲ. ಕರ್ನಾಟಕದ ಹಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಆತನು [illegible] ಸಂ ಚರಿಸತಕ್ಕವನು. [illegible] ಪ್ರತಿಯೊಂದು ವಿಷಯದಲ್ಲಿ ಕರ್ನಾಟಕವು ಸಂಘಟಿತವಾಗಿ ತನ್ನ ವೇಳೆಯನ್ನು ರಾಷ್ಟ್ರದ ಏಳ್ಗೆಗೆ ಅವಿರೋಧವಾಗುವ ರೀತಿಯಲ್ಲಿ ಸಾಧಿಸಿಕೊಳ್ಳಬೇಕೆಂದೂ ಕನ್ನಡಿಗನ ಜೀವಿತದ ಸಾಫಲ್ಯವು ಅದರಲ್ಲಿಯೇ ಇರುತ್ತದೆಂದೂ ನಮ್ಮ ಭಾವನೆ.

ವೃತ್ತಪತ್ರಿಕೆಗಳೆಂದರೆ ಮುಖ್ಯ ರಾಜಕಾರಣಕ್ಕೇ ಹೆಚ್ಚಿನ ಪ್ರಾಧಾನ್ಯವನ್ನು ಕೊಡಬೇಕೆಂದು ಹಲವರ ಅಭಿಪ್ರಾಯ. ಅವರಿಗೆ ಪತ್ರಿಕೆಗಳಲ್ಲಿ [illegible] ವಿಷಯಗಳು ಬರುವುದೆಂದರೆ ತಲೆ ಬೇಸರ. ಈಗಿನ ದಿವಸಗಳಲ್ಲಿ, ಜನರ ಮಿಕ್ಕ ಯಾವ ವಿಷಯವನ್ನು ಆಲೋಚಿಸದೆ, ವಿಶೇಷತಃ ಯಾವಾಗಲೂ ರಾಜಕಾರಣವೊಂದನ್ನೇ ಚರ್ಚಿಸುತ್ತಿರಬೇಕೆಂದು ಅವರು ಅನ್ನುತ್ತಾರೆ. ಆದರೆ ಈ ಅಭಿಪ್ರಾಯವನ್ನು ನಾವು ಸಮ್ಮತಿಸುವದಿಲ್ಲ. ಕೇವಲ ರಾಜಕಾರಣವೊಂದನ್ನೇ ತಮ್ಮ ಮುಖ್ಯ ಧ್ಯೇಯವನ್ನಾಗಿ ಇಟ್ಟುಕೊಳ್ಳುವ ಪತ್ರಿಕೆಗಳು ಹಾಗೆ ಮಾಡಲಿ. ನಮ್ಮ ಧ್ಯೇಯವೇನೂ ಹಾಗೆ ಸಂಕುಚಿತವಾಗಿರುವುದಿಲ್ಲ. ರಾಷ್ಟ್ರದ ಏಳ್ಗೆಯು ಮುಖ್ಯತಃ ಕರ್ನಾಟಕದ ಏಳ್ಗೆಯು ನಮ್ಮ ಮುಖ್ಯಧ್ಯೇಯವಾಗಿರುವುದರಿಂದ ಅದು ಯಾವ ಯಾವ ಮಾರ್ಗಗಳಿಂದ ಆದೀತೋ ಅವೆಲ್ಲ ವಿಷಯಗಳನ್ನು ಚರ್ಚಿಸುವುದು ನಮ್ಮ ಕರ್ತವ್ಯ. ಆವೆಲ್ಲ ವಿಷಯಗಳಲ್ಲಿ ಕರ್ನಾಟಕವು ತನ್ನ ವೈಶಿಷ್ಟ್ಯಕ್ಕನುಗುಣವಾಗಿ ಯಾವ ದಾರಿಯನ್ನು ಹಿಡಿಯಬೇಕೆಂಬುದನ್ನು ಹೇಳುವುದು ನಮ್ಮ ಉದ್ದೇಶ.

ಮತ್ತೆ ಕೆಲವರಿಗೆ, ದಿನಪತ್ರಿಕೆಗಳೆಂದರೆ ಬಾಯಿ ಚುರುಕು ಮಾಡುವ ಬಿಸಿ ಬಿಸಿ ಸುದ್ದಿಗಳನ್ನು ಕೊಡುವುದೊಂದೇ ಅವುಗಳ ಕೆಲಸವೆಂದು ತಿಳುವಳಿಕೆ. ಮಿಕ್ಕ ವಿಷಯಗಳೆಲ್ಲವೂ ಗೌಣವೆಂದೂ ಜನರ ಭಾವನೆಗಳನ್ನು ಉದ್ದೀಪ್ತ ಮಾಡುವ ಸುದ್ದಿಗಳನ್ನಷ್ಟು ಕೊಟ್ಟರೆ ಕೆಲಸವಾಯಿತೆಂದೂ ಅವರು ಬಗೆಯುತ್ತಾರೆ. ಇದು ತಪ್ಪು. ಶುದ್ಧಿಯುದ್ಧವಾಗಿ ಸುದ್ದಿಗಳನ್ನು ಕೊಡುವುದೇ ಗೌಣ ವಿಷಯವೆಂದೂ ನಾವು ನಿಶ್ಚಯಿಸಿಕೊಂಡ ಕಾರ್ಯಕ್ಷೇತ್ರದಲ್ಲಿ ಜನಮತವನ್ನು ಜಾಗೃತಗೊಳಿಸಿ ಅದಕ್ಕೆ ವಿಶಿಷ್ಟ ಬಗೆಯ ದಾರಿ ಹಚ್ಚಲಿಕ್ಕೆ ಯತ್ನಿಸುವುದೇ ದಿನಪತ್ರಿಕೆಗಳ ಮುಖ್ಯ ಕರ್ತವ್ಯವೆಂದೂ ನಾವು ತಿಳಿಯುತ್ತೇವೆ. ಜನರ ಮನೋಭಾವನೆಗಳನ್ನು ಹಿಂಬಾಲಿಸುವುದು ಮುಖ್ಯ ಕೆಲಸವಲ್ಲ. ಅವಕ್ಕೆ ವಿಶಿಷ್ಟ ಸ್ವರೂಪವನ್ನು ಕೊಡಲೆತ್ನಿಸುವುದು ಮುಖ್ಯ ಕೆಲಸ.

ಇವಲ್ಲದೆ, ಈಗಿನ ಸ್ಥಿತಿಯಲ್ಲಿ ಕರ್ನಾಟಕವು ಮಾಡತಕ್ಕ ಮುಖ್ಯ ಕಾರ್ಯವು ತನ್ನ ಸಂಘಟನವು. ಅದು ಹಿಂದುಳಿದ ಪ್ರಾಂತವಾಗಿರುವುದರಿಂದ ಅದು ಬೇಗನೆ ತನ್ನ ಶಕ್ತಿಯನ್ನು ಬೆಳಸಿಕೊಳ್ಳದಿದ್ದರೆ, ಅದು ರಾಷ್ಟ್ರದ ಶರೀರದಲ್ಲಿ ಒಂದು ಊನವಾದ ಅಂಗವಾಗಿ ಉಳಿಯುವ ಸಂಭವವಿದೆ. ಇಡೀ ಹಿಂದುಸ್ಥಾನದ ರಾಜಕಾರಣದಲ್ಲಿ ಅದು ಈಗ ಮಾಡತಕ್ಕ ಕಾರ್ಯವು ವಿಶೇಷವಾಗಿಲ್ಲ. ಇಡಿ ಹಿಂದುಸ್ಥಾನದ ರಾಜಕಾರಣಕ್ಕೆ ವಿಶಿಷ್ಟವಾದೊಂದು ಸ್ವರೂಪವನ್ನು ಕೊಡುವ ಶಕ್ತಿಯು ಇನ್ನೂ ಅದಕ್ಕೆ ಬಂದಿರುವುದಿಲ್ಲ. ಹಲಕೆಲವು ಮಹಾಪುರುಷರ ವಿಷಯವೇನು ನಾವು ಇಲ್ಲಿ ಹೇಳುವುದಿಲ್ಲ. ಅಂಥ ಲೋಕೋತ್ತರ ಪುರುಷರು ಕರ್ನಾಟಕದಲ್ಲಿಯೂ ದೇವರ ಕೃಪೆಯಿಂದ ಹುಟ್ಟಬಹುದು. ಅಂಥವರಿಗೆ ದೇಶಕಾಲಗಳ ಮರ್ಯಾದೆ ಇರುವುದಿಲ್ಲ. ನಾವು ಮಾತಾಡುವುದು ಸಾಮಾನ್ಯ ಜನತೆಯ ದೃಷ್ಟಿಯಿಂದ. ಈ ಕಾರಣಕ್ಕೋಸ್ಕರ, ಇಡೀ ಹಿಂದುಸ್ಥಾನದ ರಾಜಕಾರಣದಲ್ಲಿ ನಮ್ಮ ಮುಖಂಡರು ಮಾಡಬೇಕಾದ ಈಗ ಮಾಡುತ್ತಿರುವ ಕಾರ್ಯವು ಇಷ್ಟೇ. ಏನೆಂದರೆ ಹಿಂದಿನ ಸ್ಥಾನವನ್ನು ಆದಷ್ಟು ಮಟ್ಟಿಗೆ ಹಿಂಬಾಲಿಸುವುದು ಮತ್ತು ಇಲ್ಲಿಯ ಪರಿಸ್ಥಿತಿಯನ್ನೂ ಲೋಕಮತವನ್ನೂ ಹಿಂದುಸ್ಥಾನದ ಮುಖಂಡರ ಅವಲೋಕನಕ್ಕೆ ತಂದು ಅವರಿಗೆ ಹಿಂದುಸ್ಥಾನದ ಮುಂದಿನ ಮಾರ್ಗವನ್ನು ನಿಶ್ಚಯಿಸುವದಕ್ಕೆ ಸಹಾಯಮಾಡುವುದು. ಆದರೆ ಕರ್ನಾಟಕದ ವಿಷಯದಲ್ಲಿ ಮಾತ್ರ, ಕರ್ನಾಟಕಸ್ಥರು ಮಾಡತಕ್ಕ ಕಾರ್ಯಗಳು ಅನೇಕವಾಗಿವೆ. ಕರ್ನಾಟಕ ರಾಷ್ಟ್ರವನ್ನು ನಿರ್ಮಾಣಮಾಡುವ ಹೊಣೆಯು ಮುಖಂಡರ ಮೇಲೆ ಇರುತ್ತದೆ. ಆದುದರಿಂದಲೇ ನಾವು ಸಂಗ ಒದಗಿದಾಗೆಲ್ಲ ರಾಜಕಾರಣವನ್ನಂತೂ ಚರ್ಚಿಸಿಯೇ ಚರ್ಚಿಸುತ್ತೇವೆ. ಅಲ್ಲದೆ ಕರ್ನಾಟಕವನ್ನು ಸಂಘಟಿತವಾಗಿ ಮಾಡುವ ನಮ್ಮ ಮುಖಂಡರ ಕಾರ್ಯಕ್ಕೆ ಸತತವಾಗಿ ನೆರವಾಗುವ ಉದ್ದೇಶದಿಂದ 'ಕನ್ನಡಿಗ'ದಲ್ಲಿ ಅವೆಲ್ಲ ವಿಷಯಗಳನ್ನು ಎಡಬಿಡದೆ ಚರ್ಚಿಸುತ್ತೇವೆ.

ಕಿರಿನುಡಿಗಳು.

ಶಿಕ್ಷಣದ ಸ್ಥಿತಿ

ಮುಂಬಯಿ ಇಲಾಖೆಯಲ್ಲಿ ಶಿಕ್ಷಣದ ಸ್ಥಿತಿಯು ಯಾವ ಬಗೆಯದಿರುತ್ತದೆಂಬುದನ್ನು ನೋಡಿದರೆ ಶಿಕ್ಷಣ ವಿಷಯದಲ್ಲಿ ಸರಕಾರದವರು ಎಷ್ಟು ಉದಾಸೀನರಿರುತ್ತಾರೆಂಬುದು ಗೊತ್ತಾಗದಿರದು. ವಸ್ತುತಃ ನೋಡಿದರೆ, ಸರಕಾರದವರು ಜನರಿಗೆ ಶಿಕ್ಷಣವನ್ನು ಕೊಡ [illegible] ಮಾಡತಕ್ಕದ್ದು. ಆದರೆ [illegible] ಮುಂಬಯಿ ಸರಕಾರದವರು ಈ ವಿಷಯದಲ್ಲಿ [illegible] ಕೇವಲ [illegible]. [illegible] ಶಿಕ್ಷಣದ ಹೊಣೆಗಾರಿಕೆಯು ತಮ್ಮ ಮೇಲೆ ಇಲ್ಲವಂತೆ! ಆದಕಾರಣ, ಮುಂಬಯಿ ವಿಶ್ವವಿದ್ಯಾಲಯಕ್ಕೆ ಮುಂಬಯಿ ಸರಕಾರದವರು ಪ್ರತಿವರ್ಷ [illegible] ಸಾವಿರ ರೂಪಾಯಿಗಳ ಗ್ರ್ಯಾಂಟನ್ನು ಮಾತ್ರವೇ ಕೊಡುತ್ತಿರುವರು. ಮುಂಬಯಿ ಇಲಾಖೆಯಲ್ಲಿ ಸರಕಾರಿ ಆರ್ಟ್ಸ ಕಾಲೇಜುಗಳಿದ್ದು ಅವುಗಳಲ್ಲಿ ಪುಣೆಯ ಡೆಕ್ಕನ ಕಾಲೇಜನ್ನು ೧೯೩೪ ನೆಯ ಇಸ್ವಿಯ ಕೊನೆಗೆ ನಿಲ್ಲಿಸಿಯೇ ಬಿಟ್ಟಿರುತ್ತಾರೆ. ಮಿಕ್ಕ ಒಂದೆರಡು ಕಾಲೇಜುಗಳಿಗೂ ದಾಳಿಯು ಬರಬಹುದಾಗಿತ್ತು. ಆದರೆ ಸದ್ಯಕ್ಕಂತೂ ಅದು ದೂರ ಇದೆಂಬುದೇ ನಮ್ಮ ಪುಣ್ಯ. ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕೋದ [illegible] ವರ್ಷಗಳಲ್ಲಿ ಸುಮಾರು ೧೦೦ ಕ್ಕೆ [illegible]ರಂತೆ ಬೆಳೆದಿರುತ್ತದೆ. ಕಾಲೇಜುಗಳಲ್ಲಿ ಈ ವರ್ಷಗಳಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಇಮ್ಮಡಿಯಾಗಿರುತ್ತದೆ. ೧೯೩೧-೩೨ ರಲ್ಲಿ [illegible] ಹೆಂಗಸರು ಕಾಲೇಜುಗಳಲ್ಲಿ ಕಲಿಯುತ್ತಿದ್ದರು. ಸರಕಾರದವರ ಆರ್ಟ್ಸ ಕಾಲೇಜುಗಳಲ್ಲದೆ ೧೯ ಖಾಸಗಿ ಕಾಲೇಜುಗಳಿರುತ್ತವೆ. ವಿಶ್ವವಿದ್ಯಾಲಯದವರೂ ಸರಕಾರದವರೂ ಇಬ್ಬರೂ ಕೂಡಿ ತಮ್ಮದೊಂದು ಬೋರ್ಡು ಮಾಡಿಕೊಂಡು ಮ್ಯಾಟ್ರಿಕ್ಯುಲೇಶನ ಪರೀಕ್ಷೆಯ ನಿಯಮನವನ್ನು ಮಾಡುವ ಯೋಜನೆಯು ನಡೆದದೆ. ಲಕ್ಷ ಲಕ್ಷ ಸಂಬಳಗಳನ್ನು ತಿನ್ನುವವರು ಯಾವ ಖಾತೆಯಲ್ಲಾದರೂ ಮೇಲಿನ ಅಧಿಕಾರಿಗಳು ಅವರಲ್ಲಿ ಬಹುಶಃ ಯುರೋಪಿಯನ್ನರೇ ಹೆಚ್ಚು. ಇನ್ನೇನೊ ಮುಂಬಯಿ ಎಜ್ಯುಕೇಶನ ಸರ್ವಿಸದ ೧ ನೇ ವರ್ಗದ ನವಕರರನ್ನೇ ಎಲ್ಲ ಕ್ಲಾಸು ಹೇಳುವರೆಗಿಯ ಅಧಿಕಾರಗಳಾಗಿ ನೇಮಿಸಿಕೊಳ್ಳುವ ಪದ್ಧತಿಯನ್ನು ಇಡುವರಂತೆ! ಇಂದು ಈ ಪದ್ಧತಿಯನ್ನು ಪ್ರಾರಂಭಮಾಡಿದರೆ ಅದು ಮುಗಿಯಲಿಕ್ಕೆ ಎಷ್ಟು ವರ್ಷಗಳು ಬೇಕೋ ಏನೋ? ಈ ಇಲಾಖೆಯಲ್ಲಿ [illegible] ಮಾಧ್ಯಮ ಶಿಕ್ಷಣದ ಶಾಲೆಗಳಿವೆ. ಅವುಗಳಲ್ಲಿ [illegible] ವಿದ್ಯಾರ್ಥಿಗಳು ಕಲಿಯುತ್ತಿರುವರು. ಹೆಣ್ಣುಮಕ್ಕಳ ಶಾಲೆಗಳು ೧೯[illegible] ಇದ್ದು ಅವುಗಳಲ್ಲಿ ಒಟ್ಟು [illegible] ಹೆಂಗಸರು ವಿದ್ಯೆ ಕಲಿಯುತ್ತಿರುವರು. ಒಟ್ಟಿನ ಮೇಲೆ ಈ ಇಲಾಖೆಯಲ್ಲಿ ವಿದ್ಯೆ ಕಲಿತಿರುವವರ ಸಂಖ್ಯೆ ೧೦೦ ಕ್ಕೆ ೧೦ ಮಾತ್ರವೇ ಇರುತ್ತದೆ. ಅಂದರೆ ಮಿಕ್ಕ ಸುಮಾರು ೯೦ ಜನರು ನಿರಕ್ಷರ ಕುಕ್ಷಿಗಳು! ಇದರಲ್ಲಿ ಹಿಂದು ಜನರ ಪ್ರಮಾಣವು ೧೦೦ ಕ್ಕೆ [illegible]ರಂತೆ ಇರುತ್ತದೆ. ಉದ್ಯೋಗ ಧಂದೆಗಳನ್ನು ಕಲಿಸುವತಕ್ಕ ಸಾಕಷ್ಟು ಶಾಲೆ ಕಾಲೇಜುಗಳಿರುವುದಿಲ್ಲ. ಇದು ಈ ಇಲಾಖೆಯ ಶಿಕ್ಷಣದ ಶೋಚನೀಯ ಸ್ಥಿತಿಯು.

ಮೈಸೂರಿನ ವೃದ್ಧ ಪಿತಾಮಹರು

ಮೈಸೂರಿನ ವೃದ್ಧ ಪಿತಾಮಹರಾದ ಶ್ರೀ ಎಂ. ವೆಂಕಟಕೃಷ್ಣಯ್ಯ ಇವರ ೯೦ ನೆ ವರ್ಷದ ವರ್ಧಂತಿ ಉತ್ಸವವು ತಾ॥ ೨೨ನೆ ದಿವಸ ಮೈಸೂರಲ್ಲಿ ಬಹಳೇ ವಿಜೃಂಭಣೆಯಿಂದ ಜರುಗಿತು. ಮೈಸೂರ ನಾಗರಿಕರು ಅಂದು ಸಂಜೆಯಲ್ಲಿ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಸಭೆಯಲ್ಲಿ ಸೇರಿ, ಅವರಿಗೆ ಮಾನಪತ್ರವನ್ನರ್ಪಿಸಿ, ಶಿಕ್ಷಣ ಪತ್ರಿಕಾ ವ್ಯವಸಾಯ, ಇವೆ ಮೊದಲಾದ ವಿಷಯಗಳಲ್ಲಿ ಅವರು ಮಾಡಿದ ಮಹತ್ತರವಾದ ಸೇವೆಯನ್ನು ಕುರಿತು ಧನ್ಯವಾದಗಳನ್ನರ್ಪಿಸಿದರು. ಶ್ರೀ ಎಂ. ವೆಂಕಟಕೃಷ್ಣಯ್ಯನವರಿಗೆ ಪರಮಾತ್ಮನು ಪೂರ್ಣಾಯುರಾರೋಗ್ಯವನ್ನು ದಯಪಾಲಿಸಲೆಂದೂ, ಅವರಿಂದ ಇನ್ನೂ ಹೆಚ್ಚಿನ ದೇಶಸೇವೆ ಘಟಿಸಲೆಂದೂ, ನಾವು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತೇವೆ.

ಮೈಸೂರ ಸಂಸ್ಥಾನದ ಸುದ್ದಿಗಳು.

ಮೈಸೂರ ವಿಶ್ವವಿದ್ಯಾಲಯದವರು ಕೆಳಗಿನ ವಿಷಯಗಳ ಮೇಲೆ ಉತ್ತಮವಾದ ನಿಬಂಧವನ್ನು ಬರೆದು ಕಳಿಸಿದವರಿಗೆ ೨೦೦ ರೂಪಾಯಿಯ ಬಂಗಾರದ ಪದಕವನ್ನು ಬಹುಮಾನವಾಗಿ ಕೊಡತಕ್ಕವರಿದ್ದಾರೆ.

೧ ಹೊಯಸಳರ ಕಾಲದಲ್ಲಿಯ ಜೈನಧರ್ಮ ೨ ಚಿಕ್ಕರಾಜ ಒಡೆಯರ ಇವರ ಕಾಲದಲ್ಲಿಯ ಸಾಮಾಜಿಕ ಸ್ಥಿತಿ ಮತ್ತು ಹೊಯಸಳರ ಕಾಲದಲ್ಲಿಯ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಇವೇ ಸ್ಪರ್ಧೆಯ ವಿಷಯಗಳಾಗಿವೆ.

ಈ ಸ್ಪರ್ಧೆಯಲ್ಲಿ ಹಿಂದುಸ್ಥಾನದಲ್ಲಿಯ ಯಾವದೇ ವಿಶ್ವವಿದ್ಯಾಲಯದ ಪದವೀಧರರು ಭಾಗ ತೆಗೆದುಕೊಳ್ಳಬಹುದು. ಆದರೆ ಈ ಪದವೀಧರರು ೧೯೨೯ ರಕ್ಕಿಂತ ಮೊದಲು ಪದವಿಯನ್ನು ಪಡೆದವರಿರಬೇಕು. ಸ್ಪರ್ಧೆಯಲ್ಲಿ ಭಾಗ ತೆಗೆದುಕೊಳ್ಳುವವರು ತಮ್ಮ ತಮ್ಮ ನಿಬಂಧಗಳನ್ನು ೧೯[illegible]ನೆ ಜೂನ ೩೦ನೇ ತಾರೀಖಿನೊಳಗಾಗಿ ವಿಶ್ವವಿದ್ಯಾಲಯದ ರಜಿಸ್ಟ್ರಾರರ ಕಡೆಗೆ ಕಳಿಸಬೇಕು.

ಬೆಂಗಳೂರ ಪಟ್ಟಣದಲ್ಲಿಯ ಶ್ರೀ ಮಲ್ಲಿಕಾರ್ಜುನ ದೇವಾಲಯವನ್ನು ಹಾಗು ಅದರ ಬಳಿಯಲ್ಲಿಯ ಶಿಲಾಲೆಖವನ್ನು ಮೈಸೂರ ಸರಕಾರದವರು, ಪ್ರಾಚೀನ ಸ್ಮಾರಕ ಸಂರಕ್ಷಣೆಯ ಕಟ್ಟಳೆಯ ಮೇರೆಗೆ ತಮ್ಮ ಸಂರಕ್ಷಣೆಗೆ ಒಳಪಡಿಸಿಕೊಂಡಿದ್ದಾರೆ.

ತರೀಕೆರೆ ರೇಲ್ವೆ ಅಪಘಾತದ ಬಗ್ಗೆ ವಿಚಾರಣೆ ನಡೆದಿದ್ದು, ಶನಿವಾರ ದಿವಸ ಅಸಿಸ್ಟಂಟ ಸ್ಟೇಶನ ಮಾಸ್ತರ ಹಾಗು ಶಿವಪುರದ ಸ್ಟೇಶನ ಮಾಸ್ತರ ಮರುಸಕ್ತಿಗಳಾದವು.

ಮಹಾತ್ಮರಿಗೆ
ಜೈನ ಮುನಿಗಳ ಬೆಂಬಲ

ಜೋಧಪುರ ತಾ॥ ೨೫— ಮದನಲಾಲಜಿ ಎಂಬ ಓರ್ವ ಜೈನ ಮುನಿಗಳು ಇಲ್ಲಿ ಒಂದು ಪ್ರಚಂಡ ಸಭೆಯಲ್ಲಿ ಭಾಷಣ ಮಾಡಿ, ಅಸ್ಪೃಶ್ಯತಾ ನಿವಾರಣ ಕಾರ್ಯದಲ್ಲಿ ಮಹಾತ್ಮರಿಗೆ ಯಾವತ್ತೂ ವಿಧದಲ್ಲಿ ಸಹಾಯ ಮಾಡಲು ಜನರಿಗೆ ಉಪದೇಶ ಮಾಡಿದರು.

ಡಾ. ಭೈಲೂರ

ಇವರ ಔಷಧಗಳು

ಬಾಲಗ್ರಹ ಚೂರ್ಣ } ಬಾ ೬ ೧—೪—೦

{ ಕೆಮ್ಮಿ ಬಾಯಿ ಗುಳಿಗೆಗಳು ಬಾ. ೬ ೦—೮—೦

ಕಾಪಸಾಯಿರೆಸ್— ನೆಗಡಿ, ಗೂಬ್ಬರ, ವೈಲಿ, ಹವೆಯಿಂದು ಹಾಗುವ ಫುಪ್ಪುಸದ ವಿಕಾರಗಳು, ಉರಿ, ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟೆ ಹಾರುವಿಕೆ (ಡಬಾ), ಕೊರಡಗೆಮ್ಮು, ಇವುಗಳ ಮೇಲೆ ಹೊರ್ತಾಗಿ ಸಣ್ಣ ಹುಡ ಗರ ಅಥವಾ ದೊಡ್ಡವರ [illegible] ಮೇಲೆ ಸನ್ನು ಕಾಫ್ ಸಾಯ ರೆಸ್ ಔಷಧ ಉಪಯೋಗವು ಜನ್ಯ ಆಗುವದರಿಂದ ಎಲ್ಲರಿಗೂ ತಿಳಿಸಲೇಕೆನ್ನುವ ಈ ಕಾಫ್ ಸಾಯರೆಸ್‌ವನ್ನು ಸಣ್ಣ ಮಕ್ಕಳಿಗಾಗಲೀ ದೊಡ್ಡವರಿಗಾಗಲೀ ಯಾವದೇ [illegible] ಕೊಡಲು ಆತಂಕವಿಲ್ಲ. ಇದು ಸಂಗ್ರ ಹ ಯೋಗ್ಯವಾದ ವದ ೬ ಸಣ್ಣ ಬಾ ೦-೭-೦ ದೊಡ್ಡ ಬಾ ೧-೧೨-೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳಬಹುದು.

[illegible] ಔಷಧಗಳನ್ನು [illegible]

[illegible] ಮತ್ತು ವ್ಯಾಪಾರಿಗಳಿಗೆ ಪೂರ್ಣ [illegible] ಕೊಡಲ್ಪಡುವದು

ಪತ್ತೆ:— ಡಾ|| ಹರೀ ಮಹಾದೇವ ಭೈಲೂರ ದ ಬೆಳಗಾವ

ಬಾಗಲಕೋಟ ಎಜಂಟ— ಬಿ. ಟಿ ಕೆರೂರ ಆ್ಯಂಡ ಸನ್ಸ, ಮೆಡಿಕಲ್ ಸ್ಟೋರ್ಸ



ಮಹನೀಯರ ಇತ್ತ ಲಕ್ಷ್ಯಕೊಡಿರಿ.

ಕಿರ್ಲೋಸ್ಕರ

ಕಬ್ಬಿಣ

ಫರ್ನೀಚರ

ಎಂದರೆ

ಸ್ಪ್ರಿಂಗ ಕಾಟ, ಖುರ್ಚಿ, ಸ್ಟೂಲ, ತೊಟ್ಟಿಲ ಇತ್ಯಾದಿ

ಅತ್ಯುತ್ತಮ ಮಾಲು

ಅತಿ ಸಣ್ಣ ಜಾಗೆಯಲ್ಲಿ ಸಹ ಇವುಗಳ ಉಪಯೋಗವು ಬಹಳೇ ಆಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಿರ್ಲೋಸ್ಕರ ಬಂಧುಗಳು ಲಿ. } ಕಿರ್ಲೋಸ್ಕರ ವಾಡಿ. ಜಿ. (ಸಾತಾರಾ)

ದಿ. ಅಂಕಲಗಿ ಬ್ಯಾಂಕ ಲಿ.. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ|| ೨೫ ೮ ೩೩ } ಕೃಷ್ಣರಾವ ಅಂಕಲಗಿ ಮ್ಯಾನೇಜಿಂಗ ಡಾಯರೆಕ್ಟರ.

ಬರುವರು! ಧಾರವಾಡಕ್ಕೆ ಬರುವರು!!

ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾದ

ಕಲಾನಿಪುಣ ಪ್ರೊ. ಎಚ್. ಜಿ. ಘೋಡಕೆ ಇವರ

ಹಾಸ್ಯಕಾರಕ-ಪ್ರೋಜ ಮತ್ತು ಸಂಗೀತ ಹೊಸತರದ

ನಕಲಿನ ಪ್ರಚಂಡ

ಪ್ರೋಗ್ರಾಮ

ಆಗುವವು...

ಟಿಕೇಟಿನ ದರಗಳು.

ಮೊದಲನೇ ದರ್ಜೆ [illegible]

	೧—೮—೦
[illegible]	೦—೮—೦
[illegible]	೦—೪—೦
[illegible]	೦—೨—೦

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲಿಕ ದೇಸಾಯಿ [illegible] ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು,

ಹುಬ್ಬಳ್ಳಿಯ ಪತ್ರ

ಹುಬ್ಬಳ್ಳಿ ತಾ|| ೨೫— ಈಹೊತ್ತು ಸಂಜೆಗೆ ಇಲ್ಲಿಯ ಗಣೇಶ ಮಂಡಲದ ಪರವಾಗಿ ಕರ್ನಾಟಕದ ಇತಿಹಾಸ ಸಂಶೋಧಕರಾದ ಶ್ರೀ ಮಾದ್ ರಾಜಪುರೋಹಿತ ಇವರ ವ್ಯಾಖ್ಯಾನವಾಯಿತು. ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಅಧ್ಯಕ್ಷರಿದ್ದರು.

ಶ್ರೀ ರಾಜಪುರೋಹಿತರು "ಪ್ರಾಚೀನ ಸಂಸ್ಕೃತಿ ಹಾಗು ಇತಿಹಾಸ" ಈ ವಿಷಯದ ಮೇಲೆ ೧|| ತಾಸಿನ ವರೆಗೆ ಅಸ್ಖಲಿತ ಭಾಷಣ ಮಾಡಿ, ಶ್ರೋತೃವೃಂದವನ್ನು ತಲ್ಲೀನಗೊಳಿಸಿದರು. ವ್ಯಾಖ್ಯಾತರು ತಮ್ಮ ಭಾಷಣದಲ್ಲಿ, ಕನ್ನಡಿಗರ ಕಲಾಕೌಶಲ್ಯ, ಶಿಲ್ಪಕಲೆ, ಮೊದಲಾದವುಗಳನ್ನು ಸರಳವಾದ ಭಾಷೆಯಲ್ಲಿ ತಿಳಿಸಿ ಹೇಳಿದರು. ಸಂಗೀತದಲ್ಲಿ ಸಹ ನಮ್ಮವರು ಮುಂದುವರಿದಿದ್ದರೆಂದೂ ಯಾವತ್ತು ಗಾಯಕರು ಪ್ರಥಮದಲ್ಲಿ ಗಜಾನನನ್ನು ಸ್ತುತಿಸಿ ಹಾಡುವಾಗ ಬಾದಾಮಿಯ ಗಣಪತಿಯನ್ನು "ವಾತಾಪಿ ಗಣಪತಿಂ" ಎಂದು ಸ್ತುತಿಸುತ್ತಿದ್ದರೆಂದೂ ಹೇಳಿದರು

ಆ ಮೇಲೆ ಚಂದ್ರಶೇಖರ ಶಾಸ್ತ್ರಿಗಳು ವ್ಯಾಖ್ಯಾತರ ವ್ಯಾಖ್ಯಾನದೊಳಗಿನ ರಸವನ್ನು ವರ್ಣಿಸಿದರು. ಮತ್ತು ಶ್ರೀ ನಾಗರೆಂಬ ಬಂಗಾಲಿ ಗೃಹಸ್ಥರು ಎಲ್ಲ ಜಗತ್ತಿನಲ್ಲಿ ಅಡ್ಡಾಡಿ ನೋಡಿ ಕರ್ನಾಟಕದ ಚಿತ್ರಕಲೆ ಹಾಗು ಶಿಲ್ಪಕಲೆಯೇ ಜಗತ್ತಿಗೆ ಮಿಗಿಲಾದದ್ದೆಂದು ಹೇಳಿರುವದನ್ನು ತಿಳಿಸಿದರು.

ರಾತ್ರಿ ಅದೇ ಸ್ಥಳದಲ್ಲಿ ಶ್ರೀ. ವೇ. ಮೂವರಕೇಡಿ ವೇದವ್ಯಾಸಾಚಾರ್ಯರ ಕೀರ್ತನೆಯಾಯಿತು

ಆ ಮೇಲೆ ಶ್ರೀ ಬೆಂಗೇರಿ ಮತ್ತು ಶ್ರೀ ಮೊಕಾಶಿಯವರು ಶ್ರೀ ರಾಜಪುರೋಹಿತರೊಡನೆ ಗಂಗಾವತಿಯಲ್ಲಿಯ ವಿಜಯನಗರದ ಸ್ಮಾರಕದ ಬಗ್ಗೆ ಚರ್ಚಿಸಿದರು.

ಬೆಳಗಾವಿಯ ಪತ್ರ

ಗವ್ಹರ್ನರರ ಮಾನ ಪತ್ರದ ಬಗ್ಗೆ ಚರ್ಚೆ

ಬೆಳಗಾವಿ ತಾ। ೨೭— ಮೊನ್ನೆ ಕೂಡಿದ ಇಲ್ಲಿಯ ಮುನಸಿಪಾಲಟಿಯ ಸರ್ವಸಾಧಾರಣ ಸಭೆಯಲ್ಲಿ ಹಲಕೆಲವು ವಿಷಯಗಳ ಚರ್ಚೆಯಾದ ಮೇಲೆ ಮಿ ಲಾಡರು, ನಾಮದಾರ ಗವ್ಹರ್ನರರಿಗೆ ಮಾನಪತ್ರಕೊಡುವ ಠರಾವು ತಂದರು. ಶ್ರೀ. ಎನ್. ರಾಮರಾಯರು ಇಂಗ್ಲೀಷದಲ್ಲಿ ಭಾಷಣಮಾಡಿ, ಮಾನಪತ್ರ ಕೊಡುವದರ ಉದ್ದೇಶ ಮೊದಲಾದವುಗಳನ್ನು ತಿಳಿಸಿ ಹೇಳಿದರು ತರುವಾಯ ಸ್ವಲ್ಪ ಕಾಲ ಸಭೆಯು ಸ್ತಬ್ಧವಾಯಿತು. ನಂತರ ಶ್ರೀ ಮಂಡಗಿ ವಕೀಲರು ಜನಾಭಿಪ್ರಾಯ ತಿಳಿದುಕೊಳ್ಳುವದಕ್ಕಾಗಿ ಈ ವಿಷಯವನ್ನು ಎರಡು ವಾರ ಮುಂದೆ ಹಾಕಬೇಕೆಂದು ಉಪಸೂಚನೆ ತಂದರು. ಇಷ್ಟಾದ ಮೇಲೆ ಶ್ರೀ ಸಾಧನರು ಮ್ಯುನಸಿಪಾಲಟಿಗೂ ಸರಕಾರಕ್ಕೂ ನಿಕಟ ಸಂಬಂಧವಿದ್ದು ಮಾನ ಪತ್ರದ ನೆವದಿಂದ ಮುನಸಿಪಾಲಿಟಿಯ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸುಲಭ ಸಾಧ್ಯವಾಗುವದೆಂದು ಹೇಳಿದರು. ಆ ಮೇಲೆ ಎನ್. ರಾಮರಾಯರು ಬೆಳಗಾವಿಯ ಸ್ಥಿತಿಯು ಪುಣೆ ಮುನಸಿಪಾಲಿಟಿಯಂತಾಗಬಾರದೆಂದು, ವಿಷಯವನ್ನು ಜನಾಭಿಪ್ರಾಯಕ್ಕಾಗಿ ಮುಂದೆ ಹಾಕುವದು ಅವಶ್ಯವಿದೆಯೆಂದೂ ನುಡಿದರು. ಪೋತದಾರ ವಕೀಲರು ೨ ವಾರಗಳ ಬದಲು ೧ ವಾರ ಮುಂದೆ ಹಾಕಬೇಕೆಂದು ಸೂಚನೆಯನ್ನಿತ್ತರು. ಶ್ರೀ ಲಾಡರು ಜನಮತವನ್ನು ತೆಗೆದುಕೊಳ್ಳುವದು ಸಮಂಜಸ ಕಾಣಿಸುವದಿಲ್ಲವೆಂದು ಉತ್ತರ ಕೊಟ್ಟರು. ಮತ ತೆಗೆದುಕೊಳ್ಳಲಾಗಿ ಶ್ರೀ [illegible] ಇವರ ಉಪಸೂಚನೆಯು ಬಹುಮತದಿಂದ ಸ್ವೀಕೃತವಾಯಿತು

ಮೊನ್ನೆ ಸಂಜೆಯ ೬ ಗಂಟೆಗೆ ಇಲ್ಲಿಯ ಪೇಟೆಯ ಗಣಪತಿಯ ಎದುರಿಗೆ ವೇ. ಪ. ಗಂಗಾ

ಮದ್ರಾಸ ಪ್ರಾಂತದಲ್ಲಿ

೧೩ ರಾಜಕೀಯ ಕೈದಿಗಳ ಬಿಡುಗಡೆ

ಮದ್ರಾಸ ತಾ। ೨೫— ಮದ್ರಾಸ ಸರಕಾರದವರು ಈ ಹೊತ್ತಿನ ದಿವಸ ಕಾಯಿದೇಭಂಗದ ೧೩ ಕೈದಿಗಳನ್ನು ಅವರ ಅವಧಿಗಿಂತ ಮೊದಲೆ ಬಿಡುಗಡೆ ಮಾಡಿದ್ದಾರೆ. ಮುಂದಿನವಾರದಲ್ಲಿ ಇನ್ನೂ ೧೧೦ ಜನರನ್ನು ಬಿಡುವರು

ಈಗ ಎಷ್ಟೋ ದಿನಗಳಿಂದ ಪರದೇಶಿ ಅರಿವೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡುತ್ತಿದ್ದ ಶ್ರೀ ಎಸ್. ಎಸ್ ವರದಾಚಾರಿ ಮೊದಲಾದ ೮ ಜನರನ್ನು ಈ ಹೊತ್ತಿನ ದಿವಸ ಸೆರೆಹಿಡಿದಿದ್ದಾರೆ. ಇವರು ಅಲ್ಲಿ ಬಹಿಷ್ಕಾರ ಪತ್ರಿಕೆಗಳನ್ನು ಹಂಚುತ್ತಿದ್ದರು.

ಬನಾರಸದಲ್ಲಿ ಬಹಿಷ್ಕಾರದ ಚಳವಳಿ

ಬನಾರಸ ತಾ। ೨೫. ೮ ಜನ ಹೆಂಗಸರು, ಈ ಹೊತ್ತು ಬ್ರಿಟಿಶ ಸರಕಿನ ಬಹಿಷ್ಕಾರದ ವಾಕ್ಯಗಳನ್ನು ಉಚ್ಚರಿಸುತ್ತ ಬೀದಿಗಳಲ್ಲಿ ಹೊರಟಿದ್ದರು ಪೋಲೀಸರು ಹಾದಿಯಲ್ಲಿ ಅವರನ್ನು ಸೆರೆಹಿಡಿದು ಪೋಲೀಸ ಠಾಣೆಗೆ ಕರೆದೊಯ್ದರು. ಓರ್ವ ಹೆಂಗಸು ತನ್ನ ಸಂಗಡ ಮೊಲೆಗೂಸನ್ನು ಕರೆದುಕೊಂಡು ಬಂದಿದ್ದಳು. ಆ ಕೂಸಿನೊಂದಿಗೆ ಅವಳಿಗೆ ಕೈದು ಮಾಡಿತು ಈ ಯಾವತ್ತು ಹೆಂಗಸರು ಮ್ಯಾಜಿಸ್ಟ್ರೇಟರಿಗೆ ಮೊದಲೆ ಎಚ್ಚರಿಕೆ ಕೊಟ್ಟಿದ್ದರು.

ಅಂತ್ಯಜರ ಮೇಲೆ ಸಾಮಾಜಿಕ ಬಹಿಷ್ಕಾರ.

ಅಹಮ್ಮದಾಬಾದ ತಾ|| ೨೬. ಗುಜರಾಥದಲ್ಲಿಯ ವೀಣಾ ಎಂಬ ಊರಲ್ಲಿ ಮೊನ್ನಿನ ದಿವಸ ಒಂದು ಎಮ್ಮೆ ಸತ್ತಿತ್ತು. ಹಿಂದೂ ಜನರು ಅಂತ್ಯಜರಿಗೆ ಅದರ ವ್ಯವಸ್ಥೆ ಮಾಡಿ ಬರಲು ತಿಳಿಸಿದರು. ಅಂತ್ಯಜರು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ಈಗ ಹಿಂದೂ ಜನರು ಅವರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿ, ಇದಕ್ಕೆ ವಿರುದ್ಧವಾಗಿ ವರ್ತಿಸಿದವರು ೧೧೧ ರೂಪಾಯಿ ದಂಡ ತೆತ್ತಬೇಕಾಗುವದೆಂದು ಎಚ್ಚರಿಕೆ ಕೊಟ್ಟಿದ್ದಾರೆ. ಈ ಮೂಲಕ ಊರಲ್ಲಿ ಕ್ಷೋಭೆಯುದ್ಭವಿದೆ.

ಸಂಗಮೇಶ್ವರದಲ್ಲಿ ಇಬ್ಬರಿಗೆ ಕೈದು

ರತ್ನಾಗಿರಿ ತಾ|| ೨೫— [illegible] ಸಂಗಮೇಶ್ವರದಲ್ಲಿ ಇಬ್ಬರನ್ನು ಕೈದುಮಾಡಿ ಅಲ್ಲಿಗೆ ಕರೆತಂದಿದ್ದಾರೆ.

[illegible]

ಶ್ರೀ ಕೇಳಕರರಿಗೆ ಭೋಜರಾಜ ನಿಧಿಯ ಬಹುಮಾನ.

[illegible] ತಾ|| ೨೫ — [illegible] ಎಂಬ ಗ್ರಂಥವನ್ನು ಬರೆದ ಬಗ್ಗೆ ಶ್ರೀ. ಎನ್. ಸಿ. ಕೇಳಕರ ಇವರಿಗೆ ಈ ವರ್ಷದ "ಭೋಜರಾಜನಿಧಿ" [illegible] ಶ್ರೀ ಎನ್ ಎಸ್ [illegible]

[illegible]

ಧರರಾಯರು "ಧರ್ಮ ಸಂಸ್ಥಾಪನೆ ಹಾಗೂ ಮಹಾತ್ಮಾ ಗಾಂಧಿ" ಎಂಬ ವಿಷಯದ ಮೇಲೆ ಒಳ್ಳೇ ಸ್ಫೂರ್ತಿದಾಯಕವಾದ ಭಾಷಣ ಮಾಡಿದರು.

ನಂ. ಬಿ. ೨೭೮೮

सर्वं परवशं दुःखं । सर्वमात्मवशं सुखम् ॥ मनु.

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಶೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಶೂರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನಸ್ಶೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ.ಕಂ.ಲಿ
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಬುಧವಾರ ಭಾದ್ರಪದ ಶುದ್ಧ ೧೦ ಶಕೆ ೧೮೫೫ ತಾ॥ ೩೦-೮-೩೩ [ಸಂಚಿಕೆ ೧೦೯

ಶ್ರೀಮತಿ ಸ್ವರೂಪರಾಣಿಯವರ ಚಿಂತಾಜನಕ ಪ್ರಕೃತಿ

(ಅಸೋಸಿಯೇಟೆಡ್ ಕಂತಿಯ ವಾರ್ತೆ ತಾ॥ ೨೯)

ಶ್ರೀಮತಿ ಸ್ವರೂಪರಾಣಿಯವರ ಪ್ರಕೃತಿ

ಲಖನೌ ತಾ॥ ೨೮- ಶ್ರೀಮತಿ ಸ್ವರೂಪರಾಣಿ ನೆಹರೂರವರ ಪ್ರಕೃತಿಯನ್ನು ಡಾಕ್ಟರರು ಈ ದಿನ ಪುನಃ ಪರೀಕ್ಷಿಸಿದರು ಅವರ ಪ್ರಕೃತಿ ಯು ಕಠಿಣವಾಗಿರುವದಾಗಿ ಅವರು ಅಭಿಪ್ರಾಯ ಪಟ್ಟಿರು. ಆದರೂ ಗಂಡಾಂತರದ್ದಿಲ್ಲವೆಂದು ತಿಳಿಯಲಿ ಅಡ್ಡಿಯಿಲ್ಲ ಸೌ॥ ಕಮಲಾ ನೆಹರೂರವರು ಎಪೆನ್ಡೋಪಿನಿಂದ ಬಳಲುತ್ತಿದ್ದುದರಿಂ ದ ಅತ್ತೆಯವರ ಶುಶ್ರೂಷೆಗೆ ನಿಲ್ಲುವದು ಅವರಿಗೆ ಅಸಾಧ್ಯವಾಗಿದೆ (ಅ ಪ್ರೆ·)

ಅಸೆಂಬ್ಲಿಯಲ್ಲಿ ರಿಝರ್ವ ಬ್ಯಾಂಕಿನ ಮಸೂದೆ

ಸಿಮಲಾ ತಾ॥ ೨೮ ರಿಝರ್ವ ಬ್ಯಾಂಕಿನ ಮಸೂದೆಯು ತಾ॥ ೩೦ನೆ ದಿವಸ ಅಸೆಂಬ್ಲಿಯಲ್ಲಿ ಮುಂದೆ ಬರುವದೆಂದು ಅಸೋಸಿಯೇಟೆಡ್ ಪ್ರೆಸ್ಸದವರಿಗೆ ತಿಳಿದು ಬಂದಿದೆ ಸರ ಜಾರ್ಜ ಶುಸ್ಟರ ಇವರು ಮಸೂದೆಯನ್ನು ಮಂಡಿಸುವವರಿದ್ದಾರೆ (ಅ ಪ್ರೆ)

ವ್ಹಾಯಿಸರಾಯರಿಗೆ ಸಂತೋಷಕೂಟ

ಸಿಮಲಾ ತಾ॥ ೨೮- ಅಸೆಂಬ್ಲಿಯ ಅಧ್ಯಕ್ಷರಾದ ಸರ್ ಷಣ್ಮುಖಂ ಚೆಟ್ಟಿಯವರು ಈ ಹೊ ಸ ದಿವಸ ವ್ಹಾಯಿಸರಾಯ ಲಾರ್ಡ ವಿಲಿಂಗಡನ್ ಹಾಗು ಲೇಡಿ ವಿಲಿಂಗಡನ್ ಇವರ ಪ್ರೀತ್ಯರ್ಥವಾಗಿ ಸೆಸಿಲ್ ಹಾಟೆಲದಲ್ಲಿ ಭೋಜನ ಸಮಾರಂಭವನ್ನು ಏರ್ಪಡಿಸಿದ್ದರು ಸರ ಷಣ್ಮುಖಂ ಚೆಟ್ಟಿಯವರು ಮೊದಲು ಯಥಾಯೋಗ್ಯವಾಗಿ ಅತಿಥಿಗಳ ಆದರ ಸತ್ಕಾರ ಮಾಡಿದರು ಮತ್ತು ಹೊಸ ಸುಧಾರಣೆಗಳು ಬಳಕೆಯಲ್ಲಿ ಬಂದ ಮೇಲೆ ಅವುಗಳ ಕಾರಭಾರವು ಸುಸೂತ್ರವಾಗಿ ನಡೆಯುವದೆಂಬುದನ್ನಾದರೂ ನೋಡಲು ಲಾರ್ಡ ವಿಲಿಂಗಡನ್ನರು ಅಲ್ಲಿಯವರೆಗೆ ವ್ಹಾಯಿಸರಾ ಯರಾಗಿ ಉಳಿಯುವರಾಗಿ ಆಶಿಯಿದೆಯೆಂದು ಅಭಿಪ್ರಾಯ ವ್ಯಕ್ತಮಾಡಿದರು

ಲಾರ್ಡ ವಿಲಿಂಗಡನ್ನರು ಅವರಿಗೆ ಉತ್ತರ ರೂಪವಾಗಿ ಹೇಳಿದ್ದೇನಂದರೆ— ನಾನು ವ್ಹಾಯಿಸರಾಯನಾಗಿ ಬಂದಂದಿನಿಂದ ನಾನು ಅನುಸರಿಸಿದ ಧೋರಣವು ನಿಮಗೆ ಸಮ್ಮತವಾ ಗಿರಲಿ ಇಲ್ಲವೆ ಇರಲಿ, ನಾನಂತೂ ಹೊಸ ಸುಧಾರಣೆಗಳಿಗನು ಗುಣವಾಗಿಯೇ ತನ್ನ ಧೋರಣವನ್ನಿಡಲು ಪ್ರಯತ್ನ ಪಟ್ಟಿದ್ದೇನೆ. ಈ ಧೋರಣವನ್ನು ಅನುಸರಿಸುವಾಗ ಕಾಯಿದೆಗೆ ವಿರುದ್ಧವಾಗಿ ವರ್ತಿಸುವವರನ್ನು ಎದುರಿಸುವ ಪ್ರಸಂಗಗಳೂ ಬಂದವು. ಈ ಹೊಸ ಸುಧಾರಣೆಗಳಿಂದ ಹಿಂದುಸ್ಥಾನವು ಇತರ ರಾಷ್ಟ್ರಗಳಂತೆ ಸರಿಸಮಾನತ್ವದಂಥ ರೀತಿಯಲ್ಲಿ ತಕ್ಕ ಹುದ್ದಾಗಿ ಆಶೆಯಿದೆ. ಹೊಸ ಸುಧಾರಣೆ ಗಳು ಬಳಕೆಯಲ್ಲಿ ಬಂದ ಮೇಲೆಯೂ ವ್ಹಾಯಿ ಸರಾಯನಾಗಿ ಇಲ್ಲಿರಲು ಅಭಿಮತಿ ಹೊಂದಿದ್ದೆ

ಮತ್ತು ನನ್ನ ಪ್ರಕೃತಿಯು ನೆಟ್ಟಗಿದ್ದಲ್ಲಿ ನಾನ್ ಹಾಗೆ ಮಾಡಲು ಸಿದ್ಧನೇ ಇರುವೆನು (ಅ ಪ್ರೆ)

ಶ್ರೀ. ಗೋಸಾವಿಯರಿಗೆ ೧ ವರ್ಷ ಕಠಿಣ ಶಿಕ್ಷೆ.

ಪುಣೆ ತಾ॥ ೨೮— ಅಲೀಬಾಗದ ಶ್ರೀ ಮಹಾದೇವ ಗೋಸಾವಿಯವರನ್ನು ಅಲ್ಲಿ ಸೆರೆಹಿಡಿದು ಇಲ್ಲಿಗೆ ಕರೆತಂದಿದ್ದರು ಅವರ ಖಟ್ಲೆಯ ವಿಚಾರಣೆ ನಡೆದು ಆರ್ಡಿನನ್ಸ ಮುರಿದಿದ್ದಕ್ಕೆ ಅವರಿಗೆ ೧ ವರ್ಷ ಕಠಿಣ ಶಿಕ್ಷೆಯಾಯಿತು ಅವರಿಗೆ 'ಬ' ವರ್ಗ ಕೊಟ್ಟಿರುತ್ತದೆ

ಫೌಜದಾರರಿಗೆ ಬಡತರ್ಫ

ಲಖನೌ ತಾ॥ ೨೮— ಬಾವಿಯಲ್ಲಿ ಬಿದ್ದ ಓರ್ವ ಹೆಂಗಸಿನ ವಿಚಾರಣೆಯ ಸಂಬಂಧದಲ್ಲಿ ಅಸಭ್ಯ ರೀತಿಯಿಂದ ನಡೆದುಕೊಂಡದ್ದಕ್ಕೆ ಉನ್ನಾವ ಜಿಲ್ಹೆಯಲ್ಲಿಯ ಓರ್ವ ಫೌಜದಾರರನ್ನು ತಾತ್ಪೂರ್ತಿಕವಾಗಿ ನೌಕರಿಯಿಂದ ಬಡತರ್ಫ ಮಾಡಿರುತ್ತದೆ.

ನಿಜಾಮಸಂಸ್ಥಾನದಲ್ಲಿ ಪರಕೀಯರಿಗೆ ನೌಕರಿ ಇಲ್ಲ

ಹೈದರಾಬಾದ ತಾ॥ ೨೭- ನಿಜಾಮ ಸರಕಾರದವರು ಒಂದು ಫರ್ಮಾನು ಹೊರಡಿಸಿ, ಸಂಸ್ಥಾನದ ಹೊರಗಿನವರನ್ನು ಸಂಸ್ಥಾನದ ಯಾವದೇ ನೌಕರಿಯಲ್ಲಿ ನೇಮಿಸಿಕೊಳ್ಳಕೂಡದೆಂದು ಅಪ್ಪಣೆ ವಿಧಿಸಿದ್ದಾರೆ

ಪಂಜಾಬ ಪ್ರಾಂತದಲ್ಲಿ ನಾಲ್ವರಿಗೆ ಗಲ್ಲು.

ಲ್ಯಾಲಪುರ ತಾ॥ ೨೭— ಗೀವಾಲಾ ದರೋಡೆ ಖಟ್ಲೆಯ ವಿಚಾರಣೆಯು ಈ ಹೊತ್ತಿನ ದಿವಸ ಮುಗಿದು, ಮಹಮ್ಮದ ಖಾನ, ಗೋಪಾಲ ಸಿಂಗ, ಕೃಪಾಲಸಿಂಗ ಮತ್ತು ಭಾಗಸಿಂಗ ಈ ನಾಲ್ವರು ಆರೋಪಿಗಳಿಗೆ ಗಲ್ಲಿನ ಶಿಕ್ಷೆಯಾಯಿತು ಮುನಶಿ ಎಂಬ ಓರ್ವ ಆರೋಪಿಯು ನಿರ್ದೋಷಿಯಾಗಿ ಬಿಡುಗಡೆ ಹೊಂದಿದನು

ಈ ದರೋಡೆಗಾರರು ರಾತ್ರಿ ಸಮಯದಲ್ಲಿ ಓರ್ವ ಜಮೀನದಾರನ ಮನೆಯನ್ನು ದರೋಡೆ ಮಾಡಿ ಇಬ್ಬರನ್ನು ಕೊಂದಿದ್ದರು ಮತ್ತು ಅನೇಕರಿಗೆ ಗಾಯಮಾಡಿದ್ದರು

೪ ತಿಂಗಳವರೆಗೆ ಉಪವಾಸ ಮಾಡಿದ ಹುಡುಗಿ

ಡಾಕ್ಟರರಿಗೂ ದಿಗಿಲು ಬಿತ್ತು

ಮಾದ್ರಿದ್ ಕ್ರೆನ್ನೆ ಎಂಬಲ್ಲಿ ೧೪ ವರ್ಷದ ಓರ್ವ ಹುಡುಗಿಯು ೪ ತಿಂಗಳಾಯಿತು ಅನ್ನ ನೀರುಗಳಿಲ್ಲದೆ ದಿನ ಕಳೆದಿರುವಳೆಂದು ತಿಳಿಯುತ್ತದೆ.

ಅವಳು ಈಗ ಹಾಸಿಗೆಯಲ್ಲಿಯೇ ಬಿದ್ದುಕೊಂಡಿರುವಳು. ಅವಳು ಸುಖಿಯಾಗಿದ್ದು ಅವಳ ಮನಸ್ಥಿತಿಯಾದರೂ ನೆಟ್ಟಗಿದೆ ಅವಳ ಮುಖ ಬಣ್ಣವಾದರೂ ಸ್ವಲ್ಪ ಬದಲಾಗಿಲ್ಲ

ಈ ವಿಚಿತ್ರವನ್ನು ಕಂಡು ಡಾಕ್ಟರರು ಅವಳನ್ನು ನೋಡಿಕೊಂಡು ಹೋಗುತ್ತಿರುವರು ಆದರೆ ಒಬ್ಬರಾದರೂ ಇದಕ್ಕೆ ಸಮಾಧಾನಕರವಾದ ಕಾರಣ ಹೇಳಲು ಶಕ್ತರಿಲ್ಲ

ಮುಂಬೈ ಕಾಯದೆಮಂಡಲದಲ್ಲಿ

ಡೆಕ್ಕನ ಕಾಲೇಜದ ಬಗ್ಗೆ ಪ್ರಶ್ನೆ

ಪುಣೆ ತಾ॥ ೨೮- ಮುಂಬಯಿ ಕಾಯದೆ ಮಂಡಲದ ಈ ಹೊತ್ತಿನ ಅಧಿವೇಶನದಲ್ಲಿ ಡೆಕ್ಕನ ಕಾಲೇಜದ ಬಗ್ಗೆ ಅನೇಕ ಪ್ರಶ್ನೋತ್ತರಂಗಳು ನಡೆದವು ಮಿ॥ ಪೆಟಿಟ್ ಇವರ ಪ್ರಶ್ನೆಗೆ ಉತ್ತರ ಕೊಡುವಾಗ, ದಿ ಬ- ಕಂಬಳಿಯವರು ಹೇಳಿದ್ದೇನಂದರೆ ಡೆಕ್ಕನ್ ಕಾಲೇಜನ್ನು ಸರಕಾರಿ ಸಂಸ್ಥೆಯೆಂದು ಮುಚ್ಚಿಬಿಡುವದನ್ನು ಸರಕಾರದವರು ಎಂದೋ ನಿರ್ಧಾರ ಮಾಡಿಯೇ ಬಿಟ್ಟಿದ್ದಾರೆ ಈ ವಿಷಯದ ಬಗ್ಗೆ ಸರಕಾರದವರು ಪುನಃ ವಿಚಾರ ಮಾಡುವದು ಶಕ್ಯವಿಲ್ಲ ಕಾಲೇಜದ ಬೈಲು ಸ್ಥಳವನ್ನು ಮತ್ತು ಕಟ್ಟಡವನ್ನು ಮಾರುವ ಸಂಬಂಧವಾಗಿ ಇನ್ನೂ ಏನೂ ನಿಶ್ಚಿತವಾಗಿಲ್ಲ ಈ ಕಾಲೇಜದ ಕಟ್ಟಡವನ್ನು ಸರಕಾರದವರು ೧೮೬೮ರಲ್ಲಿ ಕಟ್ಟಿಸಿದರು ಸರ್ ಜಮಶೇಟಜಿ ಜಿಜೀಭಾಯಿಯವರು ಈ ಕಟ್ಟಡವನ್ನು ಕಟ್ಟಿಸುವ ಮುಂಚೆ ೧½ ಲಕ್ಷ ರುಪಾಯಿಗಳನ್ನು ಕೊಟ್ಟು ಸರಕಾರದವರಾದರೂ ಕಾಲೇಜಕ್ಕೆ ೧ ಲಕ್ಷ ರೂಪಾಯಿ ಕೊಡತಕ್ಕದ್ದೆಂದು ಕರಾರು ಹಾಕಿದರು ಇದಲ್ಲದೆ, ಕಾಲೇಜಕ್ಕಾಗಿ ಯೋಗ್ಯವಾದದ್ದೊಂದು ಸ್ಥಳವನ್ನು ಕೊಟ್ಟು, ಕಟ್ಟಡವನ್ನು ಕಟ್ಟಿಸಿ, ಸ್ಥಳ ಮತ್ತು ಕಟ್ಟಡ ಇವೆರಡನ್ನೂ ಶಿಕ್ಷಣ ಕಾರ್ಯಕ್ಕಾಗಿ ಟ್ರಸ್ಟಿ ಜನರ ಸ್ವಾಧೀನದಲ್ಲಿ ಕೊಡಬೇಕೆಂದು ಅವರು ಕರಾರು ಹಾಕಿದ್ದರು

ಸರಕಾರದವರು ಕಾಲೇಜದ ಸ್ಥಳ ಹಾಗು ಕಟ್ಟಡಕ್ಕಾಗಿ ಮೊದಲು ೧೪೩೯೭೭ ರೂಪಾಯಿ ಖರ್ಚು ಮಾಡಿದ್ದಾರೆ ಆ ಮೇಲೆ ಈ ವರೆಗೆ ಸರಕಾರದವರಿಗೆ ಕಾಲೇಜದ ದೆಸೆಯಿಂದ ೩೦೪೫ ರುಪಾಯಿ ಖರ್ಚು ಬಂದಿದೆ ಈ ಕಾಲೇಜನ್ನು ಸರ್ ಜಮಶೇಟಜಿ ಜಿಜೀಭಾಯಿ ಇವರ ಹೆಸರಿನಿಂದ ತೆರೆದಿರುವದಿಲ್ಲ ಇದಕ್ಕಾಗಿ ಅವರು ಧರ್ಮಾದಾಯವನ್ನು ಕೊಟ್ಟಿರುವದಿಲ್ಲ ಈ ಕಟ್ಟಡವನ್ನು ಎಂಡನೆಯವರಿಗೆ ಒಪ್ಪಿಸುವದಾದರೆ ಇಲ್ಲವೆ ಎರಡನೆ ಕೆಲಸಕ್ಕೆ ಉಪಯೋಗಿಸುವದಾದರೆ, ಆ ಬಗ್ಗೆ ಕೋರ್ಟಿಗೆ ಅವಶ್ಯವಾದ ಅರ್ಜಿ ಮಾಡಿರುವೆವು ಈ ಕಾಲೇಜು ಸ್ವಾವಲಂಬಿಯಾಗಲಾರದೆಂದು ಸರಕಾರದ ಅಭಿಪ್ರಾಯವಿದೆ ಕಾರಣ ಪುನರ್ಘಟನಾ ಮಂಡಲದವರ ಶಿಫಾರಸಗಳನ್ನು ಕೃತಿಯಲ್ಲಿ ತರುವದು ಶಕ್ಯವಿಲ್ಲ

ಶ್ರೀ॥ ಕಾಳೆಯವರು ಕಾಲೇಜದಲ್ಲಿಯ ಗ್ರಂಥಸಂಗ್ರಹ ಹಾಗು ಉಪಕರಣಗಳನ್ನು ಏನು ಮಾಡುವಿರಿ ಎಂದು ಕೇಳಿದರು ದಿ॥ ಬ॥ ಕಂಬಳಿಯವರು " ಕಾಲೇಜನ್ನು ಯಾವದಾದರೂ ಸಂಸ್ಥೆಗೆ ಕೊಡುವದಾದಲ್ಲಿ ಅಗ್ಗಿಯ ವಿಚಾರ ಮಾಡುವೆವು " ಎಂದು ಉತ್ತರ ಕೊಟ್ಟರು.

ಕರ್ನಾಟಕ

ಮಂಗಳೂರ— ಪ್ರೆಸಿಡೆನ್ಸಿ ಲಾಯಿಫ್ ಅಸ್ಯುರನ್ಸ ಕಂಪನಿಯ ಏಜಂಟರಾದ ಜೆ. ಜೆ. ಫರ್ನಾಂಡೀಸ ಮೊದಲಾದ ೯ ಜನರಿಗೆ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟರು ನಿನ್ನಿನ ದಿವಸ ಇ. ಪಿ ಕೋಡಿನ ೧೨೦ [ಬ] ಕಲಮಿನನ್ವಯ ಬೇರೆ ಬೇರೆ ಶಿಕ್ಷೆ ವಿಧಿಸಿದರು ಈ ಖಟ್ಲೆಯ ವೃತ್ತಾಂತವೇನಂದರೆ— ಜಾನ್ ಪಾಯಸ್ ಎಂಬವನೊಬ್ಬನು ತಾ॥ ೭ನೆ ಎಪ್ರಿಲ್ ೧೯೩೦ನೇ ದಿವಸ ಮರಣಹೊಂದಿದನು. ಸ್ಥಳಿಕ ಏಜಂಟರು ತಾ॥ ೯ನೆ ಎಪ್ರಿಲ ದಿವಸ ಈ ಮರಣ ಹೊಂದಿದವನ ಹೆಸರಿನಿಂದ ವಿಮಾ ಪತ್ರ ಮಾಡಿ ಕಳಿಸಿದರು. ಈ ವಿಮಾ ಪತ್ರದೊಂದಿಗೆ ಅವರು ಡಾಕ್ಟರರ ಸಟಿ ಫಿಕೇಟನ್ನಾದರೂ ಇಟ್ಟಿದ್ದರು. ಮುಂದೆ ತಾ॥ ೧೫ನೇ ಜೂನ ದಿವಸ ಏಜಂಟರು ವಿಮಾ ಕಂಪನಿಗೆ ಜಾನ್ ಪಾಯಸನ ಮರಣ ಪತ್ರಿಕೆಯನ್ನು ಕಳಿಸಿ ಅವನಿಗೆ ಸಲ್ಲತಕ್ಕ ಹಣವನ್ನು ಬೇಡಿದರು ವಿಮಾ ಇಳಿಸಿದವನು ಒಂದು ತಿಂಗಳಲ್ಲಿಯೇ ಹೇಗೆ ಸತ್ತನೆಂಬ ಬಗ್ಗೆ ಕಂಪನಿಯವರಿಗೆ ಸಂಶಯ ಬಂತು ಅವರು ಆ ಸಂಬಂಧವಾಗಿ ವಿಚಾರಣೆ ಮಾಡಿ ಮೇಲಿನ ೯ ಜನರನ್ನೂ ಖಟ್ಲೆಗೆ ಗುರಿಮಾಡಿದರು ಮ್ಯಾಜಿಸ್ಟ್ರೇಟರು ಇಬ್ಬರನ್ನು ನಿರ್ದೋಷಿಗಳನ್ನಾಗಿ ಬಿಟ್ಟು ಉಳಿದವರಿಗೆಲ್ಲ ಶಿಕ್ಷೆ ವಿಧಿಸಿದರು

ಬೆಂಗಳೂರ— ಮೈಸೂರ ಸರಕಾರದವರು ಇಲ್ಲಿಯ ಮೆಂಟಲ್ ಆಸ್ಪತ್ರೆಯಲ್ಲಿಯ ಕ್ಲಿನಿಕಲ್ ಅಸಿಸ್ಟಂಟರಾದ ಡಾ॥ ಎಂ ಗೋವಿಂದಸ್ವಾಮಿಯವರಿಗೆ ದಾಮೋದರದಾಸ ಶಿಷ್ಯವೃತ್ತಿಯನ್ನು ಕೊಟ್ಟು ಹೆಚ್ಚಿನ ಅಭ್ಯಾಸಕ್ಕಾಗಿ ಅವರನ್ನು ಅಮೇರಿಕೆಗೆ ಕಳಿಸುವವರಿದ್ದಾರೆ.

ಮೈಸೂರಲ್ಲಿ ಜರಗುವ ಈ ಸಲದ ದಸರಾ ಮಹೋತ್ಸವಕ್ಕೆ ಬರಬಹುದಾದ ಹಿಂದಿ ಅತಿಥಿ ಅಭ್ಯಾಗತರಿಗೆ ಯೋಗ್ಯವಾದ ಮಾನ ಮರ್ಯಾದೆ ಮಾಡಿ, ಅವರಿಗೆ ಯಾವತ್ತು ಸಲಕರಣೆಗಳನ್ನು ಒದಗಿಸಿಕೊಡುವದಕ್ಕಾಗಿ ಸರಕಾರದವರು ಶ್ರೀ. ಎಸ್ ಶ್ರೀನಿವಾಸಾಚಾರ ಇವರನ್ನು ಆ ಸ್ಥಳಕ್ಕೆ ನಿಯಮಿಸಿದ್ದಾರೆ.

ಮಡಿಕೇರಿ - ಮಡಿಕೇರಿ ಮುನಸಿಪಾಲಿಟಿಯ ಅಧ್ಯಕ್ಷ ಶ್ರೀ ಎಲ್ ಸಿ ಸುಬ್ಬಯ್ಯ ಎಂ. ಎ ಬಿ ಎಲ್ ಇವರು ಶ್ರೀ ಪಿ ಬಿ ಅಯಮಾ ಅವರಿಂದ ಬರಿದಾದ ಸ್ಥಳಕ್ಕೆ ಸಭಾಸದರಾಗಿ ಆರಿಸಿ ಬಂದಿದ್ದಾರೆ.

ಕೊಡಗು ಕಾಯದೆಮಂಡಲದ ಅಧಿವೇಶನವು ತಾ॥ ೨೩ನೇ ಅಕ್ಟೋಬರ ದಿವಸ ಪ್ರಾರಂಭವಾಗುವದು.

ಹೊನ್ನಿನ ಹೊಳೆ

ತಾ॥ ೨೬ನೆ ಅಗಸ್ಟಕ್ಕೆ ಮುಗಿಯುವ ಒಂದು ವಾರದಲ್ಲಿ ಮುಂಬಯಿಯಿಂದ ಒಟ್ಟು ೧ ಕೋಟಿ ೧೭ ಲಕ್ಷ ೩೬ ಸಾವಿರ ೧೯೪ ರೂಪಾಯಿಯ ಭಂಗಾರವು ಪರದೇಶಕ್ಕೆ ಹೋಗಿರುತ್ತದೆ.

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚುರ್

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವದು. ಹೆಸರ್ಮಗುಳು ' ವಸಡಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೊಸ [illegible] ಕಚ್ಚುರ " ದಂತ ಮಂಜನ [illegible] ಆಹಾರದ ಅವಶೇಷಗಳ [illegible] ಮತ್ತು ರೋಗಗಳು ಕೆಡುವವು [illegible] ಕ್ರಿಮಿಗಳ್ಲು ಕಚ್ಚುರ ದಂತವ [illegible] ವಲ್ಲದೆ [illegible] ಕಚ್ಚುರ ದಂತಮಂಜನವನ್ನು ಉಪಯೋಗಿಸಿ [illegible] ಗುಣಗಳನ್ನು [illegible] ಕನ್ನಡಿಗರೇ, ಕನ್ನಡ ನಾಡಿನ [illegible] ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

ಬಹಳ ಹಳೆಯದಾದ ಹೆಸರುವಾಸಿಯಾದ [illegible]
ಹೆಚ್ಚಿನ ವ್ಯವಸ್ಥೆ [illegible]

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ.

[illegible] ವರೆಗೆ [illegible]
[illegible] ಯಾತ್ರೆಯನ್ನು ಮುಖ್ಯವಾಗಿ [illegible]
[illegible]

ಶ್ರೀ ಕಾಶೀ ರಾಮೇಶ್ವರ [illegible]

[illegible]

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೀಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು [illegible] (ಶಕೆ [illegible] ಅಶ್ವಯುಜ [illegible]) [illegible] ಹುಬ್ಬಳ್ಳಿ [illegible] ಹೊರಟು, ಈ ಕೆಳಗೆ ನಮೂದಿಸಿದಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ [illegible]	೧೯ [illegible]	[illegible]
೨ ನಾಶಿಕ [illegible]	೨೦ ಅಯೋಧ್ಯೆ [illegible]	[illegible]
೩ ಮುಂಬಯಿ [illegible]	೨೧ ಅಲಹಾಬಾದ	[illegible]
೪ ಸೋನ ಸಾಧಳ್ಳಿ (ಹಡಗಿನಿಂದ)	೨೨ ಪ್ರಯಾಗ [illegible]	೪೦ [illegible] [ಹಡಗಿನ [illegible]]
[illegible]	೨೩ ಕಾಶಿ [illegible]	[illegible]
೫ ವೇರಾವಳ ,,	ನವೆಂಬರ [illegible]	೪೧ [illegible]
೬ [illegible] (ಜೈನ ತೀರ್ಥ) ೧೦ ೧೧	೨೪ ಸಾರನಾಥ	೪೨ [illegible]
	೨೫ ಗಯಾ	
೭ ಅಬು [illegible] (ಜೈನತೀರ್ಥ) ೧೨ ೧೩	೨೬ ರಾಜಗಿರಿ [illegible] (ಜೈನ ತೀರ್ಥ)	೪೩ [illegible] [ಹಡಗಿನಿಂದ]
೮ ಅಹಮ್ಮದಾಬಾದ ೧೪	೨೭ ಗಿರಿ	೪೪ ಮದುರೆ [illegible]
೯ ಸಾಬರಮತಿ ,,	೨೮ [illegible] (ಜೈನ ತೀರ್ಥ)	೪೫ [illegible]
೧೦ ಬರೋಡೆ ೧೫		೪೬ [illegible]
೧೧ ಉಜ್ಜಯನಿ ೧೬	೨೯ ಕಲಕತ್ತಾ [illegible]	[illegible]
೧೨ ಆಗ್ರಾ ೧೭	೩೦ ಜಗನ್ನಾಥಪುರಿ	೪೮ [illegible]
೧೩ ಮಥುರಾ ೧೮-೧೯	೩೧ ವಿಶಾಖಪಟ್ಟಣ [illegible]	[illegible]
೧೪ ಗೋಕುಲ ,,	೩೨ ರಾಜಮಹೇಂದ್ರಿ [illegible]	[illegible] ಕೊಡದು [illegible]
೧೫ ವೃಂದಾವನ ,,	೩೩ ಬೆಜವಾಡ [illegible]	[illegible]
೧೬ ಗೋವರ್ಧನ ,,	೩೪ ಮದ್ರಾಸ [illegible]	[illegible]
೧೭ ದಿಲ್ಲಿ ೨೦-೨೧	೩೫ ಶಿವಕಂಚಿ ೧೪	[illegible] ಹುಬ್ಬಳ್ಳಿಗೆ [illegible]
೧೮ ಹರದ್ವಾರ ೨೨-೨೩	೩೬ ವಿಷ್ಣುಕಂಚಿ ,,	ವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ [illegible] ರೇಲ್ವೆ, ಹಡಗು, ಇಳಿದುಕೊಳ್ಳುವ [illegible] ಸೆಕಂಡಕ್ಲಾಸ ೧೦ [illegible] ಥರ್ಡಕ್ಲಾಸ [illegible] ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ [illegible] ಥರ್ಡಕ್ಲಾಸಿನವರು [illegible] ಅಡ್ವಾನ್ಸ ಕಳಿಸತಕ್ಕದ್ದು. [illegible] ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜ ತೆಗೆದುಕೊಳ್ಳಲ್ಪಡು[illegible] ಎಲ್ಲಾ [illegible] ಪ್ರತ್ಯೇಕವಾಗಿ ಊಟದ [illegible] ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟ[illegible] ವೀರಶೈವರ [illegible] ಅನುಕೂಲವುಂಟು. ಹೆಚ್ಚಿನ ಮಾಹಿತಿಗೆ ಪತ್ರಿಕೆಯನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, [illegible] ಡಾಕ್ಟರೂ ಫೋಟೋಗ್ರಾಫರರೂ [illegible] ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ [illegible] ಸ್ಥಳ ಸಿಗದ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು. ಆದ[illegible] ಟಿಕೇಟಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ [illegible] ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ ಏಜನ್ಸ ಕಂಟಿಗಳು— [illegible] ಧಾರವಾಡ ಜಿಲ್ಲೆಯ [illegible] ಬಹಳ [illegible] ಕೊಡಲ್ಪಡುವದು [illegible] ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು [illegible] ಕೊಡಲ್ಪಡುವದು.

ಜಿ ಎ ಶಿರೂರ

ಮ್ಯಾನೇಜರ್, ಶ್ರೀ. ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ.— ಜಿ ಎಚ್. ಚನಪ್ಪಾ ಬುಕ್‌ಸೇಲರ.

ಬರುವರು! ಧಾರವಾಡಕ್ಕೆ ಬರುವರು!!

ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾದ
ಕಲಾನಿಪುಣ ಪ್ರೊ. ಎಚ್.-ಜಿ. ಘೋಡಕೆ ಇವರ
ಹಾಸ್ಯಕಾರಕ-ಪ್ರೋಜ ಮತ್ತು ಸಂಗೀತ ಹೊಸತರದ
ನಕಲಿನ ಪ್ರಬಂಧ.

ಪ್ರೋಗ್ರಾಮ

ಇರುವದು

ಕನ್ನಡಿಗ.

ಧಾರವಾಡ— ಬುಧವಾರ ತಾರೀಖು ೩೦—೮— ೧೯೩೩

ಪುನರಪಿ ಬಂಧನ ಪುನರಪಿ ಮೋಚನ.

ಪುನರಪಿ ಜನನ ಪುನರಪಿ ಮರಣವೆಂಬ ಜನನ ಮರಣ ಚಕ್ರವು ಮಾನವ ಪ್ರಾಣಿಯು ಯಾವಾಗಲೂ ಹತ್ತಿರ ವಂತೆ. ಮಹಾತ್ಮಾ ಗಾಂಧಿಯವರಿಗೆ ಮಾತ್ರ ಬಂಧನ ಮುಕ್ತಿ ಚನದ ಸರಕಾರದ ಸುದರ್ಶನ ಚಕ್ರವು ಯಾವಾಗಲೂ ಬೆನ್ನ ಹತ್ತುವಂತೆ ತೋರುತ್ತದೆ. ಸರಕಾರದವರು ಗಾಂಧೀಜಿಯವರ ಆಟವನ್ನು ತಿಳಿಸ್ವಾತ್ರ್ಯ ವನ್ನು ನಡೆಯಗೊಡಲಿಕ್ಕಿಲ್ಲವೆಂದು ತೊಟ್ಟಿರುವರು! ಗಾಂಧೀಜಿಯವರು ಸತ್ಯಾಗ್ರಹಿಗಳೆಂಬುದು ಈ ಸರಕಾರದವರಿಗೆ ಗೊತ್ತಿಲ್ಲವೆ? ತಮ್ಮ ಪ್ರಾಣ ಹೋದರೂ ತಮ್ಮ ಪಣವನ್ನು ಬಿಡತಕ್ಕವರಲ್ಲವೆಂಬುದನ್ನೇನು ಅವರು ಅರಿ ಯರು. ಇಂಥ ಉಪವಾಸದ ಹುಡುಗಾಟಗಳ ಫಾರ್ಸಿನಿಂದೇನು ಪ್ರಯೋಜನ ಸರಕಾರದವರಿಗೆ? ಆತ್ಮಶಕ್ತಿ ಮಹಾಶಕ್ತಿಯಾಗಿರುವುದೆಂಬ ದೇಶ ಗಾಂಧೀಜಿಯವರಿಗೆ ಗೊತ್ತಿಲ್ಲವೆಂತಿಲ್ಲ. ನೈತಿಕ ಶಕ್ತಿಬಲದ ಮೇಲೆ ಅವಲಂಬಿಸಿ ಗಾಂಧೀಜಿಯವರು ಸರಕಾರದೊಡನೆ ಯುದ್ಧ ಮಾಡಹತ್ತಿದ್ದಾರೆ. ಹೊಡೆದು ನಿಂತಿಲ್ಲ. ಅವರು ತಮ್ಮ ನೈತಿಕ ಬಲದ ಮೇಲೆ, ತಮ್ಮ ಆಧ್ಯಾತ್ಮಿಕ ಬಲದ ಮೇಲೆ ಅವಲಂಬಿಸಿ ಯುದ್ಧ ಮಾಡಲು ನಿಂತಿರುವರು. ಯಾವ ರಣದಲ್ಲಿ ಮಲ್ಲ ಯುದ್ಧ ಮಾಡಲು ನಿಂತಿರುವರೋ ಆ ರಣಕ್ಕೆ ತಕ್ಕ ಆಯುಧಗಳಿಂದ ಕಾದಾಡುವುದು ನ್ಯಾಯ. ಅದು ಧರ್ಮಯುದ್ಧವು. ಹಿಂದಕ್ಕೆ ಮಹಾಭಾರತ ರಾಮಾಯಣಾದಿ ಯುದ್ಧಗಳ ಕಾಲದಲ್ಲಿ ಈ ಬಗೆಯು ನೀತಿಯು ಅವಲಂಬಿಸಲ್ಪಟ್ಟಿದ್ದನ್ನು ನಾವು ಓದಿದ್ದೇವೆ. ಪ್ರತಿಯೋಧನು ರಥವನ್ನು ಕಳೆದುಕೊಂಡರೆ ಅಥವಾ ಆತನ ಕೈಯೊಳಗಿಂದ ಆಯುಧವು ಕಳಚಿ ಬಿದ್ದರೆ, ಮತ್ತೊಂದು ರಥವನ್ನೇರುವವರೆಗೆ ಆಯುಧವನ್ನು ತೆಕ್ಕೊಳ್ಳುವವರೆಗೆ ಯುದ್ಧವು ನಿಲ್ಲಿಸುತ್ತಿತ್ತು. ಆ ಉದಾತ್ತ ಯುದ್ಧ ನೀತಿಯೆತ್ತ! ಒಬ್ಬ ಶರೀರಿಕ ಬಲಹೀನನಾದ ವ್ಯಕ್ತಿಯು ಆತನು ನೈತಿಕ ರಣದಲ್ಲಿ ನಿಂತು ಯುದ್ಧ ಮಾಡುತ್ತಿರಲು, ತಮ್ಮ ಶಾರೀರಿಕ ಧರ್ಪವನ್ನು ತೋರಿಸುವ ಕುಟಿಲ ಯುದ್ಧ ನೀತಿಯೆತ್ತ! ಗಾಂಧೀಜಿಯವರಿಗೂ ಸರಕಾರದವರಿಗೂ ಈ ಮಲ್ಲಯುದ್ಧವನ್ನು ನೋಡಲಿಕ್ಕೆ ಆಕಾಶದೊಳಗೆ ದೇವತೆಗಳು ಬಂದು ನಿಂತಿರಲಿಕ್ಕೆ ಸಾಕು. ಸರಕಾರದವರು ತಮ್ಮ ಶಾರೀರಿಕ ಸಾಮರ್ಥ್ಯದಿಂದ ಆ ಬಡಪ್ರಾಣಿಯನ್ನು ಮತ್ತೆ ಸೆರೆಹಿಡಿದು ತಂದು ಸೆರೆಮನೆಯಲ್ಲಿರಿಸುವುದನ್ನೂ ಆತನು ಅದರಿಂದ ಯತ್ಕಿಂಚಿತ್ತಾದರೂ ಅಳುಕದೆ, ಕೇವಲ ತನ್ನ ಆಧ್ಯಾತ್ಮಿಕ ಶಕ್ತಿಯ ಜೋರಿನ ಮೇಲೆ, ಪುನಃ ಪಾರಾಗಿ ಬರುತ್ತಿರುವುದನ್ನೂ ನೋಡಿ ದೇವತೆಗಳಿಗೆ ಗಾಂಧೀಜಿಯವರ ವಿಷಯವಾಗಿ ಎಂಥ ಆದರ ಭಾವವು ಹುಟ್ಟಿರಬಹುದು? ಆದರೆ ಈ ದ್ವಂದ್ವ ಯುದ್ಧವನ್ನು ನೋಡಿ ಹಿಂದೀ ಜನರ ಹೊಟ್ಟೆಯಲ್ಲಿ ಭಯಂಕರ ಕಸವಿಸಿಯಾಗುತ್ತಿದೆ. ಅವರಲ್ಲಿಯೂ ಆ ಮಹಾತ್ಮನು ತಾನೊಬ್ಬನೇ ಅನ್ಯರ ಸಹಾಯದ ಅಪೇಕ್ಷೆ ಇಲ್ಲದೆ, ಕೇವಲ ನಮ್ಮ ಸಲುವಾಗಿ ಇಂಥ ಭಯಂಕರ ಪ್ರಾಣಸಂಕಟ ತುತ್ತಾಗುತ್ತಿರುವುದನ್ನು ನೋಡಿಯಂತೂ ಯಾವ ಹಿಂದೀ ಮನುಷ್ಯನ ಹೊಟ್ಟೆ ತಳಮಳವಾಗಲಿಕ್ಕಿಲ್ಲ! ಅಲ್ಲದೆ ಆ ಯುದ್ಧದಲ್ಲಿ ನಾವು ಆ ಮಹಾತ್ಮನಿಗೆ ಯಾವರೀತಿಯಿಂದಲೂ ನೆರವಾಗದಿರುವುದನ್ನು ನೆನಿಸಿಕೊಂಡರಂತೂ ಯಾವ ಹಿಂದೀ ಮನುಷ್ಯನು ತನ್ನ ಜೀವನದ ಬಗ್ಗೆ ನಾಚಿ ತಲೆ ಬಾಗಿಸದಿರಲಿಕ್ಕಿಲ್ಲ. ನಿಜವಾಗಿ ನೋಡಿದರೆ ಇದು ಸತ್ಯಾಗ್ರಹಿಗಳೆಂದು ಹೇಳಿಕೊಳ್ಳುವವರ ಪರೀಕ್ಷೆಯ ಕಾಲವಾಗಿತ್ತು. ಆದರೆ ಇಲ್ಲ. ಅಷ್ಟು ತ್ರಾಣವು ಈ ದೇಶದಲ್ಲಿಲ್ಲ. ಮಹಾತ್ಮರ ಮಾರ್ಗವು ಮಹಾತ್ಮರೊಬ್ಬರಿಗೇ ಸಾಧ್ಯವು! ಆದರೆ, ಮಹಾತ್ಮರನ್ನು ಅರಿತವರೂ ದೂರದರ್ಶಿಗಳೆಂದೂ ಖ್ಯಾತಿಗೊಂಡ ಈಗಿನ ಸರಕಾರದವರು ಇನ್ನು ಈ ದುಃಖದಾಯಕ ನೋಟಕ್ಕೆ ಕೊನೆಮಾಡುವರೇನು ?

ಕಿರಿನುಡಿಗಳು.

ಹಿಮಾನದಲ್ಲಿ ಇಡಲ್ಪಟ್ಟ ರಾಜಕೀಯ ಕೈದಿಗಳು ತಮಗೆ ಅಧಿಕಾರಿಗಳು ಕೆಲವು ಸವಲತ್ತುಗಳನ್ನು ಕೊಡಬೇಕೆಂದು ಕೇಳಿಕೊಂಡರು. ಅಧಿಕಾರಿಗಳಿಗೆ ಪರಿಪರಿಯಿಂದ ಕೇಳಿದರು. ಅಧಿಕಾರಿಗಳು ಕೊಡಲಿಲ್ಲ. ಕೊನೆಗೆ ನಿರುಪಾಯರಾಗಿ ಅವರಲ್ಲಿ ಕೆಲವರು ಉಪವಾಸವ್ರತವನ್ನು ಕೈಕೊಂಡರು. ಆದರೂ ಅಧಿಕಾರಿಗಳು ಆಲಿಸಲಿಲ್ಲ. ಅದರ ಪರಿಣಾಮವೇನಾಯಿತೆಂದರೆ ಮಹಾವೀರರು ಸತ್ತೇ ಹೋದರು! ಆ ಕ್ರೂರ ವಿಚಿತ್ರರಾದರು. ಆಗ ನೋಡಿ ಸರಕಾರದವರ ಕಣ್ಣು ತೆರೆಯಿತು. ಈಗ ಸರಕಾರದವರು ಅವರಿಗೆ ವೃತ್ತಪತ್ರಗಳನ್ನು ಓದಲಿಕ್ಕೆ ಕೊಡುವುದು ಇವೇ ಮುಂತಾದ ಕೆಲವು ಸವಲತ್ತುಗಳನ್ನು ಕೊಟ್ಟಿರುವರು. ಈ ರಾಜಕೀಯ ಕೈದಿಗಳು ಬೇಡಿದ ಬೇಡಿಕೆಗಳೇನೂ ಅಸಮಂಜಸವಾದವುಗಳಿದ್ದಿಲ್ಲವೆಂಬುದನ್ನು ಸರಕಾರವೂ ಒಪ್ಪಲೇಬೇಕು. ಹಾಗಿದ್ದ ಬಳಿಕ ರಾಜಕೀಯ ಕೈದಿಗಳನ್ನು ಪ್ರಾಣಾಂತದವರೆಗೆ ಕಾಡುವದೇಕೆ? ಅವರು ಉಪವಾಸ ಬಿದ್ದ ಸುದ್ದಿ ಮುಂತಾದುದೇನೂ ತಮಗೆ ಅಷ್ಟೊಂದು ಗೊತ್ತೇ ಇರಲಿಲ್ಲವೆಂದು ಹಿಂದುಸ್ಥಾನ ಸರಕಾರದವರು ಈಗ ತಮ್ಮ ಕಿವಿಯ ಮೇಲೆ ಕೈ ಇಟ್ಟುಕೊಳ್ಳುತ್ತಿರುವರು! ಆದರೆ ಅದಾದರೂ ಅವರ ತಪ್ಪೇ ಅಲ್ಲವೆ? ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ, ಸರಕಾರದವರು ಹಾರುನುಡಿಗಳಿಂದ ತಮ್ಮ ಮೇಲಿನ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವುದು. ಅಂಡಮಾನದ ರಾಜಕೈದಿಗಳು ಉಪವಾಸ ಬೀಳುವ ಹೆದರಿಕೆಯನ್ನು ಹಾಕಿ ಸವಲತ್ತುಗಳನ್ನು ಬೇಡಿದರಂತೆ! ಆದಕಾರಣ ಅವರ ಬೇಡಿಕೆಗಳಿಗೆ ಸರಕಾರದವರು ಒಡಂಬಡಲಿಲ್ಲವಂತೆ! ಆ ರಾಜಕೀಯ ಕೈದಿಗಳು ಉಪವಾಸ ಬೀಳುವ ಮುಂಚೆ, ಅನೇಕ ಸಲ ವಿನಯಪೂರ್ವಕವಾಗಿ ಎಷ್ಟು ಕೇಳಿಕೊಂಡರೂ ದಾದು. ಪತ್ರದ್ದರಿಂದ ಕೊನೆಗೆ ಉಪವಾಸವನ್ನವಲಂಬಿಸಬೇಕಾಯಿತೆಂಬುದು ಈಗ ಸ್ಪಷ್ಟವಾಗಿದೆ. ಹಾಗೆ ವಿನಯಪೂರ್ವಕವಾಗಿ ಕೇಳಿಕೊಂಡಾಗ ಅವರ ಬೇಡಿಕೆಗಳನ್ನು ಪೂರೈಸಿದ್ದರೆ, ಉಪವಾಸ ಬೀಳಲಿಕ್ಕೆ ಅವರಿಗೇನೂ ಹುಚ್ಚು ಹಿಡಿದಿತ್ತೆ? ಇಲ್ಲ ಯಾವತ್ತು ಸೌಮ್ಯ ಉಪಾಯಗಳು ಕುಂಠಿತವಾದ ಬಳಿಕವೇ ಅವರು ಉಪವಾಸದ ಕಠೋರ ವ್ರತವನ್ನು ಕೈಕೊಂಡರು. ಅಂದ ಬಳಿಕ, ಅವರು ಹೆದರಿಕೆ ಹಾಕಿ ಬೇಡಿಕೆಗಳನ್ನು ಮುಂದಿಟ್ಟರೆಂದು ಹೇಳುವುದರಲ್ಲಿ ಏನು ಅರ್ಥವಿದೆ?

ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದ ಡೇ ಅಣೆಯವರು ಸರ್ವಾಧಿಕಾರಿ ಎನ್ನುವ ನೇಮಿಸುವ ಪದ್ಧತಿಯನ್ನು ನಿಲ್ಲಿಸಬಾರದೆಂಬ ಅಭಿಪ್ರಾಯದವರ. ಅವರ ತರುವಾಯ ಅವರ ಸ್ಥಳಕ್ಕೆ ಬಂದ ಶ್ರೀ ಮಾಧವಸಿಂಗರು ಅದಕ್ಕೆ ವಿರುದ್ಧವಾಗಿ ಸರ್ವಾಧಿಕಾರಿಗಳನ್ನು ನಿಯಮಿಸಬಾರದೆಂಬ ಅಭಿಪ್ರಾಯದವರು. ಆದಕಾರಣ ಅವರು ತಮ್ಮ ಸ್ಥಳದಲ್ಲಿ ಯಾರನ್ನೂ ಸರ್ವಾಧಿಕಾರಿಗಳನ್ನಾಗಿ ನೇಮಿಸದೆ ಸೆರೆಮನೆಗೆ ಹೋದರು. ಅಂತೂ ಈಗ ರಾಷ್ಟ್ರೀಯ ಸಭೆಯ ಸಂಸ್ಥೆಗಳೆಲ್ಲವೂ ನಾಮಶೇಷವಾಗಿರುವವಲ್ಲದೆ, ದೇಶಕ್ಕೆ ಮಾರ್ಗದರ್ಶಿಯಾದ ಸರ್ವಾಧಿಕಾರಿಯೂ ಇಲ್ಲ. ರಾಷ್ಟ್ರೀಯ ಸಭೆಯ ಕಾರ್ಯದರ್ಶಿಯ ಸ್ಥಳವೂ ಬರಿದಾಗಿದೆ! ಇಂಥ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸಭೆಯ ವರ್ಚಸ್ಸನ್ನು ಮತ್ತೆ ಹೇಗೆ ಪ್ರಸ್ಥಾಪಿಸಬಹುದೆಂಬ ವಿಷಯವು ಬಹಳ ಯೋಚಿಸತಕ್ಕುವಾದ ವಿಷಯವು. ಸರಕಾರದವರಿಗೂ ರಾಷ್ಟ್ರೀಯ ಸಭೆಗೂ ನಡೆದಿರುವ ಯುದ್ಧದಲ್ಲಿಯ ಒಂದು ಅಂಕು ಮುಗಿಯಲಿಕ್ಕೆ ಬಂದಿದೆ. ಕಾಯದೆಭಂಗ ಚಳವಳಿಯನ್ನು ನಿಲ್ಲಿಸಿಯೇ ತೀರಬೇಕೆಂದು ಸರಕಾರದವರು ಪಟ್ಟುತೊಟ್ಟಿರು ಸಾಮುದಾಯಿಕ ಕಾಯದೆಭಂಗವು ನಿಲ್ಲಿಸಲ್ಪಟ್ಟಿದೆ ವೈಯಕ್ತಿಕ ಕಾಯದೆಭಂಗವೇನೋ ಇನ್ನೂ ನಿಲ್ಲಿಸಲ್ಪಟ್ಟಿಲ್ಲವೆಂಬುದು ನಿಜ. ಆದರೆ ಇನ್ನು ರಾಷ್ಟ್ರೀಯ ಸಭೆಯು ಮುಂದೆ ಯಾವ ಮಾರ್ಗವನ್ನು ಹಿಡಿಯಬೇಕೆಂಬುದನ್ನು ನಿಶ್ಚಯಿಸುವ ಕಾಲವು ಒದಗಿದೆಯೆಂದು ನಮಗೆ ತೋರುತ್ತದೆ. ಆದರೆ ಇದನ್ನು ನಿಶ್ಚಯಿಸುವದೆಂತು? ಆಲ್ ಇಂಡಿಯಾ ಕಾಂಗ್ರೆಸ ಕಮೀಟಿಯು ಕೂಡಬೇಕು ಮತ್ತು ತೀವ್ರವೇ ರಾಷ್ಟ್ರೀಯ ಸಭೆಯನ್ನು ಕರೆಯುವ ಏರ್ಪಾಡು ಆಗಬೇಕು. ರಾಷ್ಟ್ರೀಯ ಸಭೆಯು ಕೂಡದೆ, ಈ ಪ್ರಶ್ನೆಯು ನಿರ್ಣಯವಾಗುವಂತೆ ತೋರುವದಿಲ್ಲ. ಕಾಯದೆಭಂಗ ಚಳವಳಿಯನ್ನು ಎಂದೂ ಹೂಡಲೇ ಬಾರದೆಂದು ನಾವೂ ಹೇಳುವದಿಲ್ಲವೆಂಬುದಾಗಿ ಸರಕಾರದ ಪಕ್ಷಿಯಿಂದ ಹೇಗರವರು ಈಗ ಸ್ಪಷ್ಟವಾಗಿ ಹೇಳುವುದರಿಂದ ತಾತ್ವಿಕ ಪ್ರಶ್ನೆಯು ಎಷ್ಟೋ ಮಟ್ಟಿಗೆ ಬಿಟ್ಟಿರುತ್ತದೆ. ಇನ್ನುಳಿಯಿತು ವ್ಯವಹಾರಿಕ ಪ್ರಶ್ನೆಯು. ಅಂದರೆ ಈಗ ಕಾಯದೆಭಂಗವನ್ನು ಎಲ್ಲಿಯ ವರೆಗೆ ಮತ್ತು ಏಕೆ ನಿಲ್ಲಿಸಬೇಕೆಂಬುದು. ವೈಯಕ್ತಿಕ ಕಾಯದೆಭಂಗವಷ್ಟೇ ಈಗ ಉಳಿದಿದೆ. ಆ ಪ್ರಶ್ನೆಯನ್ನು ಸಮಾಧಾನಕಾರಕವಾಗಿ ಬಿಡಿಸುವುದು ಅಷ್ಟೊಂದು ಕಠಿಣವಲ್ಲವೆಂದು ನಮಗೆ ತೋರುತ್ತದೆ. ಏಕೆಂದರೆ, ಕಾಯದೆಭಂಗದ ಚಳವಳಿಯ ಅಂಜಿಕೆಯು ಈಗ ತಮಗೆ ಇರುವುದಿಲ್ಲವೆಂದು ಸರಕಾರದವರೇ ಒಪ್ಪುತ್ತಾರೆ. ಅಂದಬಳಿಕ ವೈಯಕ್ತಿಕ ಕಾಯದೆಭಂಗಕ್ಕೆ ಪರವಾನಗಿಯನ್ನು ಕೊಟ್ಟ ಮಾತ್ರಕ್ಕೆ ಹಾನಿಯೇನೂ ಆಗುವುದಿಲ್ಲ. ಆದ ಕಾರಣ ವೈಯಕ್ತಿಕ ಕಾಯದೆ ಭಂಗವಷ್ಟೇ ಇನ್ನು ಸಾಲದು. ರಾಷ್ಟ್ರೀಯ ಸಭೆಯು ಹೊಸ ಕಾರ್ಯಕ್ರಮಗಳನ್ನು ಅಂಗೀಕರಿಸುವುದು ಅವಶ್ಯವಿದೆ.

ಆದಕಾರಣ ಈಗಿನ ಪರಿಸ್ಥಿತಿಯಲ್ಲಿ ಪುನಃ ರಾಷ್ಟ್ರೀಯ ಸಭೆಯನ್ನು ಕೂಡಿಸುವುದೇ ನಿಜವಾದ ಮಾರ್ಗವೆಂದು ನಮಗೆ ತೋರುತ್ತದೆ. ಈಗ ಸರಕಾರದವರು ಅದನ್ನು ಕೂಡಿಸುವುದಕ್ಕೆ ಅಡ್ಡ ಬರಲಾರರೆಂದು ತಿಳಿಯಲು ಅಡ್ಡಿ ಇಲ್ಲ.

ಸರ್ ಮಿರ್ಜಾ ಇಸ್ಮಾಯಿಲರೊಡನೆ ಸಂಭಾಷಣ.

ಬೆಂಗಳೂರ ತಾ॥ ೨೬— ಜಾಯಿಂಟ ಕಮಿಟಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಮೈಸೂರ ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಇವರು ನಿನ್ನಿನ ದಿವಸ ಇಂಗ್ಲಂಡದಿಂದ ಇಲ್ಲಿಗೆ ತಿರುಗಿ ಬಂದರು. ಪತ್ರಿಕಾ ಪ್ರತಿನಿಧಿಯು ಅವರ ಭೆಟ್ಟಿ ತೆಗೆದುಕೊಂಡು ಜಾಯಿಂಟ ಕಮಿಟಿಯ ಅನುಭವದ ವಿಷಯವಾಗಿ ಅವರ ಅಭಿಪ್ರಾಯ ವಿಚಾರಿಸಿದನು. ಆಗ ಅವರು ಹೇಳಿದ್ದೇನಂದರೆ— ಬ್ರಿಟಿಶ ಸರಕಾರದವರು ಬಿಳೀ ಕಾಗದವನ್ನು ಅಂಗೀಕರಿಸಲು ಒಳ್ಳೆ ಆತುರರಾಗಿರುವರು. ಹೊಸ ಆಡಳಿತೆಯು ಗಾಂಭೀರ್ಯದಲ್ಲಿ ಬಳಕೆಯಲ್ಲಿ ಬರಬಹುದೆಂದು ಆಶೆಯಿದೆ. ಮೈಸೂರ ಸಂಸ್ಥಾನದವರು ಕೊಡುತ್ತಿರುವ ಪೊಗದಿಯು ಅನ್ಯಾಯದ್ದಾಗಿರುವದೆಂದು ಭಾರತ ಮಂತ್ರಿಗಳು ಮತ್ತು ಇತರರು ಅಭಿಪ್ರಾಯ ವ್ಯಕ್ತ ಮಾಡಿರುವರು. ಆದರೆ ಈ ಪೊಗದಿಯು ಇಲ್ಲದಂತಾಗಬೇಕಾದರೆ ಇನ್ನೂ ಎಷ್ಟೋ ಅಡಚಣೆಗಳುಂಟು. ಸಂಯುಕ್ತ ಘಟನೆಯು ಬೇಗನೆ ಬಳಕೆಯಲ್ಲಿ ಬಂದು, ಪೊಗದಿಯು ಸಂಪೂರ್ಣವಾಗಿ ನಿಂತುಹೋಗುವದಾಗಿ ಆಶೆಯಿದೆ. ಸರ್ ಸ್ಯಾಮ್ಯುಯೆಲ್ ಹೋರರ ವಿಷಯವಾಗಿ ನನ್ನ ಅಭಿಪ್ರಾಯವೆಂದರೆ, ಅವರು ಹಿಂದುಸ್ಥಾನದ ಪರಮ ಮಿತ್ರರಾಗಿರುವರು.

ನ್ಯಾಯಿಸರಾಯರಿಗೆ ಸವಡು ಇಲ್ಲ.

ಸಿಮುಲಾ ತಾ॥ ೨೬— ಸರಹದ್ದ ಪ್ರಾಂತದ ಕೆಲವು ಹಳ್ಳಿಗಳ ಮೇಲೆ ಅಧಿಕಾರಿಗಳು ವಿಮಾನುಗಳಿಂದ ಬಾಂಬಿನ ಸುರಿಮಳೆ ನಡಿಸಿರುವರಷ್ಟೆ. ಈ ಸಂಬಂಧವಾಗಿ ತಮ್ಮ ನಿಷೇಧ ವ್ಯಕ್ತ ಮಾಡುವದಕ್ಕಾಗಿ ಅಸೆಂಬ್ಲಿಯ ಕೆಲವು ಸಭಾಸದರು ವ್ಹಾಯಿಸ್‌ರಾಯರಲ್ಲಿ ಶಿಷ್ಟಮಂಡಳ ಒಯ್ಯತಕ್ಕವರಿದ್ದರು. ಪೊಲಿಟಿಕಲ್ ಖಾತೆದಾರರಾದುದಿಯವರು ಈ ಶಿಷ್ಟ ಮಂಡಳದ ನೇತೃತ್ವ ವಹಿಸತಕ್ಕವರಿದ್ದರು. ಆದರೆ ವ್ಹಾಯಿಸ್‌ರಾಯರ ಗುಪ್ತ ಕಾರ್ಯದರ್ಶಿಗಳು ಸಿದ್ದೀಕ ಹುಸೇನ ಎಂಬ ಓರ್ವ ಸಭಾಸದರಿಗೆ ಪತ್ರ ಬರೆದು, ಶಿಷ್ಟಮಂಡಳಕ್ಕೆ ಭೆಟ್ಟಿ ಕೊಡಲು ವ್ಹಾಯಿಸ್‌ರಾಯರಿಗೆ ಸವಡು ಇಲ್ಲವೆಂದು ತಿಳಿಸಿದ್ದಾರೆ.

ಅಂತ್ಯಜರ ಉನ್ನತಿಯ ಪ್ರಯತ್ನ

ಅಲಹಾಬಾದ ತಾ॥ ೨೬— ಸಂಯುಕ್ತ ಪ್ರಾಂತ ಸರಕಾರದವರು ಒಂದು ಪ್ರಕಟನೆ ತೆಗೆದಿದ್ದಾರೆ. ಈ ಪ್ರಕಟನೆಯಲ್ಲಿ ಅವರು ಅಸ್ಪೃಶ್ಯರ ಉನ್ನತಿಯ ಬಗ್ಗೆ ಏನು ಮಾಡತಕ್ಕದ್ದೆಂಬುದರ ವಿಷಯವಾಗಿ ಸರಕಾರದವರು ವಿಚಾರ ನಡಿಸಿರುವರೆಂದು ತಿಳಿಸಿರುವರು. ಇದಲ್ಲದೆ, ಈ ಸಂಬಂಧವಾಗಿ ಅವರು ಒಂದು ಪರಿಷತ್ತನ್ನಾದರೂ ಕೂಡಿಸತಕ್ಕವರಿದ್ದಾರೆಂದೂ, ಈ ಪರಿಷತ್ತು ಸಪ್ಟೆಂಬರದ ೩ನೆ ವಾರದಲ್ಲಿ ಶಿಕ್ಷಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೂಡುವದೆಂದು ಉಲ್ಲೇಖಿಸಿದ್ದಾರೆ.

ಮುಂಬಯಿ ಕೌನ್ಸಿಲದಲ್ಲಿ ಪುಣೆಯಲ್ಲಿಯ ಪ್ಲೇಗು.

(ಅಸೋಸಿಯೇಟೆಡ್ ತಂತಿಯ ವಾರ್ತೆ ತಾ|| ೨೯)

ಮುಂಬಯಿ ಕೌನ್ಸಿಲದಲ್ಲಿ ಪುಣೆಯಲ್ಲಿಯ ಪ್ಲೇಗು.

"ಕೌನ್ಸಿಲನ್ನು ಮುಂದಿರಿಸಿರಿ"

ಪುಣೆ ತಾ|| ೨೬— ಇಲ್ಲಿ ನಡೆದಿರುವ ಮುಂಬಯಿ ಕಾಯದೇ ಮಂಡಳದ ಅಧಿವೇಶನದಲ್ಲಿ ಪುಣೆಯಲ್ಲಿಯ ಪ್ಲೇಗಿನ ಸಂಬಂಧವಾಗಿ ಈ ಹೊತ್ತಿನ ದಿವಸ ಪ್ರಶ್ನೋತ್ತರಗಳು ನಡೆದವು ಸ್ಥಾನಿಕ ಸಂಸ್ಥೆಗಳ ಮಂತ್ರಿಗಳಾದ ಸರ್ ರುಸ್ತುಂ ವಕೀಲರು ಕೆಳಗಿನಂತೆ ಹೇಳಿದರು

"ಪುಣೆ ಪಟ್ಟಣದಲ್ಲಿ ಈ ವರ್ಷ ೧೮ ನೆ ಜಾನೇವರಿ ದಿವಸ ಪ್ಲೇಗು ಪ್ರಾರಂಭವಾಯಿತು. ಕ್ಯಾಂಟೋನಮೆಂಟದಲ್ಲಿ ತಾ|| ೩ ನೆ ಮಾರ್ಚ ದಿವಸ ಶುರುವಾಯಿತ ಈ ವರೆಗೆ ಒಟ್ಟು ೧ ಲಕ್ಷ ೫೫ ಸಾವಿರ ಜನರು ಪ್ಲೈಗಿ ಚುಚ್ಚಿಸಿಕೊಂಡಿದ್ದಾರೆ ೪ ಲಗಾ ಇಲಿಗಳನ್ನು ನಾಶ ಮಾಡಿದ್ದಾರೆ. ಮ್ಯುನಿಸಿಪಾಲಿಟಿಯವರು ಬೇನೆಯು ಹಬ್ಬದಂತೆ ಜಾಗರೂಕತೆಯಿಂದ ವರ್ತಿಸುತ್ತಿದ್ದಾರೆ

ಕೆಲವು ಸಭಾಸದರು, ಪಟ್ಟಣದಲ್ಲಿ ಪ್ಲೇಗು ಜೋರು ಇರುವುದರಿಂದ ಅಧಿವೇಶನವನ್ನು ಮುಂದರಿಸಬೇಕೆಂದು ಆಗ್ರಹದ ವಿನಂತಿ ಮಾಡಿಕೊಂಡ ... ಸರಕಾರಿ ಪಕ್ಷದ ಸಭಾಸದರಿಂದ "ಅಶಕ್ಯ" ವೆಂದು ಉತ್ತರ ಬಂತು

(ಅ ಪ್ರ)

ಮಹಾತ್ಮರ ಬಗ್ಗೆ ಅಸೆಂಬ್ಲಿಯಲ್ಲಿ ಪ್ರಶ್ನೋತ್ತರಗಳು

ನಿನ್ನೆ ಮಹಾತ್ಮಾ ಗಾಂಧಿಯವರು ಕಾರಾಗೃಹದಲ್ಲಿ ಹರಿಜನ ಕಾರ್ಯ ಕ್ಕಾಗಿ ಕೇಳಿಕೊಂಡು ಸವಲತ್ತುಗಳನ್ನು ಬೇಡಿದ್ದ ಸ್ಸ್ ಈ ಸಂಬಂಧವಾಗಿ ತಾ|| ೨೩ ನೆ ದಿವಸ ಅಸೆಂಬ್ಲಿಯಲ್ಲಿ ಕೆಲವು ಪ್ರಶ್ನೋತ್ತರಗಳು ನಡೆದವು ಅವು ಮಹತ್ವದ್ದಾಗಿರುವದರಿಂದ ಅವುಗಳಲ್ಲಿ ಕೆಲವನ್ನು ಕೆಳಗೆ ಕೊಟ್ಟಿರುತ್ತದೆ

ಮಿ ಮಸ್ವಡ ಅಹಮ್ಮದ— ೧ ಮಹಾತ್ಮರು ಅನ್ನ ಉಪವಾಸವನ್ನು ಪ್ರಾರಂಭಿಸಿದ್ದರು ನಿಜವಿರುವದೋ ಹೇಗೆ? ೨ ನಿಜವಿದ್ದರೆ, ಅಸ್ಪೃಶ್ಯತಾ ನಿವಾರಣೆಯ ಕಾರ್ಯದ ಬಗ್ಗೆ ಸರಕಾರದವರು ಅವರಿಗೆ ಯಾವ ಯಾವ ಸವಲತ್ತುಗಳನ್ನು ಕೊಡಲು ನಿರಾಕರಿಸಿದರು? ೩ ಭೆಟ್ಟಿ ಹಾಗು ಪತ್ರವ್ಯವಹಾರಗಳ ಮೇಲೆ ಯಾವ ಬಗೆಯ ನಿರ್ಬಂಧಹಾಕಿರುವಿರಿ? ೪ ಅವರ ಬೇಡಿಕೆಗಳು ಯಾವವು? ೫ ಸರಕಾರದವರು ಅವ ಬೇಡಿಕೆಗಳನ್ನು ಮಾನ್ಯಮಾಡಿದ್ದೀರಿ?

ಸರ್ ಹೇಗ— ತಾ|| ೧೮ ನೆ ಆಗಸ್ಟ ದಿವಸ ಹಿಂದಿನ ಸ್ಥಾನ ಸರಕಾರದವರು ಒಂದು ಪ್ರಕಟನೆ ಹೊರಡಿಸಿದರು ಸಭಾಸದರು ಅದನ್ನು ನೋಡಬೇಕು

ಮಿ ಲಾಲಚಂದ— ಆ ಪ್ರಕಟನೆಯಲ್ಲಿ ಏನಿದೆಯೆಂಬುದನ್ನು ಹೇಳಬೇಕು ಯಾಕಂದರೆ ಅದು ನನಗೆ ನೆನಪು ಇರಲಿಲ್ಲ

ಸರ್— ಅದರದೊಂದು ಪ್ರತಿಯನ್ನು ಮೇಜಿನ ಮೇಲೆ ಇಡುವೆನು

ಲಾಲಚಂದ— ಕೆಲವು ಉಪಪ್ರಶ್ನೆಗಳನ್ನು ಕೇಳುವೆನು, ಆ ಪ್ರಕಟಣೆಯ ಮುಖ್ಯ ಅಂಶಗಳು ಅದರ ಸಾರಾಂಶವನ್ನು ಹೇಳಲಿಕ್ಕೆ ಒಪ್ಪುವಿರಾ?

ಸರ್ ಹೇಗ — ಅದು ಒಳ್ಳೆ ಉದ್ದವಾದ ಪ್ರಕಟನೆಯಿದ್ದು, ಅದರ ಸಾರಾಂಶವನ್ನು ಈಗ ಹೇಳುವದು ನನಗೆ ಶಕ್ಯವಿಲ್ಲ.

ಲಾಲಚಂದ— ಈ ಸಂಬಂಧ ಬೇಡಿಕೆಯು ನಿಲ್ಲಿಸಲ್ಪಡಬೇಕೆಂದು ಸರಕಾರದವರು ಅಸ್ಪೃಶ್ಯತೆಯ ಕೆಲಸ ಅಷ್ಟರಲ್ಲಿ ಸಂಬಂಧದ ಮಹಾತ್ಮರು ಬೇಡಿದ್ದನ್ನು ನಿಲ್ಲಿಸಿದ್ದಾರೆ? ಅದು ಸಂಪೂರ್ಣವಾಗಿ ನಿಂತುಹೋಗಿ, ಪುನಃ ಮರುಕಳಿಸಬಾರದೆಂಬ ಅಭಿಪ್ರಾಯವೋ ಹೇಗೆ?

ಸರ್ ಹೇಗ — "ಕಾರಾಗೃಹದ ಭಾಗವನ್ನು ನಿಲ್ಲಿಸಬೇಕೆಂಬುವದನ್ನು" ನಾವು ಯಾವ ಒಟ್ಟನು ಅದನ್ನು ... ವರ್ಷಗಳ ವರೆಗೆ ಪುನಃ ಕರುವ ಮಹಾತ್ಮರ ... ಅರ್ಥದಲ್ಲಿ ಉಪಯೋಗಿಸಿರುವದಿಲ್ಲ ... ಅಥವಾ ದಿವಸ, ಸಧ್ಯಕ್ಕೆ ಮಾತ್ರ ಬಿಟ್ಟು ಕೊಡತಕ್ಕದ್ದು ಎಂದು ಇರುತ್ತದೆ

ಮಿ ಮಸ್ವಡ ಅಹಮ್ಮದ — ಮಹಾತ್ಮರಿಗೆ ಈಗ ಮೊದಲಿನಂತೆ ಸವಲತ್ತುಗಳನ್ನು ಕೊಡಲಿ ಇದ್ದದ್ದು ನಿಜವೋ ಹೇಗೆ?

ಸರ್ ಹೇಗ — ಅಹುದು

ಮಿ ಅಹಮ್ಮದ— ಈಗ ಕೊಡಲಿ ಇದ್ದ ಸವಲತ್ತುಗಳು ಯಾವವು?

ಸರ್ ಹೇಗ ಈ ಮುಂಚೆ ಅವರಿಗೆ ಪತ್ರವ್ಯವಹಾರ, ಭೆಟ್ಟಿ ಸುದ್ದಿಗಾರರೊಡನೆ ಸಂಭಾಷಣ ಇವೇ ಮೊದಲಾದ ವಿಷಯಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿತ್ತು ಆದರೆ ಈಗ ಸರಕಾರದವರು ಅವರಿಗೆ ಸುದ್ದಿಗಾರರೊಡನೆ ಸಂಭಾಷಣ ನಡೆಸುವ ಸವಲತ್ತು ಕೊಡಲು ನಿರಾಕರಿಸಿರುವರು ಅದರಂತೆ ದಿನಕ್ಕೆ ಯಾರಾದರೂ ಇಬ್ಬರದೇ ಭೆಟ್ಟಿ ತೆಗೆದುಕೊಳ್ಳಬೇಕೆಂದೂ, ದಿನಾಲು ಐದೇ ಪತ್ರಗಳನ್ನು ಬರೆಯತಕ್ಕದ್ದೆಂದೂ ಅವರಿಗೆ ನಿರ್ಬಂಧ ಹಾಕಿರುತ್ತದೆ

ಮಿ ಅಹಮ್ಮದ —ಮಹಾತ್ಮರು ತಮಗೆ ಮುಂಚೆ ನೊಡಿದ ಸವಲತ್ತುಗಳನ್ನು ದುರುಪಯೋಗ ಮಾಡಿಕೊಂಡಿರುವರೋ ಹೇಗೆ?

ಸರ್ ಹೇಗ ಮಾರ ಪ್ರಯೋಗದ ಪ್ರಶ್ನೆಯು ಉದ್ಭವಿಸುವದಿಲ್ಲ ಕೈದಿಗೆ ಇಷ್ಟು ಸವಲತ್ತು ಕೊಡುವದು ಯೋಗ್ಯವಿದೆಯೋ ಇಲ್ಲವೋ ಎಂಬುದು ಮುಖ್ಯ ಪ್ರಶ್ನೆಯಿದೆ

ಬಾಹಿರಿ ಚೌಧರಿ — ಸಾಮುದಾಯಿಕ ಹಾಗು ವ್ಯಕ್ತಿಶಃ ಕಾಯದೆಭಂಗಗಳೆಗೆ ಸರಕಾರದವರು ಏನು ಅರ್ಥ ಮಾಡುವರು?

ಸರ್ ಹೇಗ - ಈ ಶಬ್ದಗಳನ್ನು ಸರಕಾರದವರು ಹುಡುಕಿ ತೆಗೆದಿರುವದಿಲ್ಲ ಈ ಶಬ್ದಗಳು ಮಿ ಅಣೆಯವರ ಪ್ರಕಟಣೆಯಲ್ಲಿ ಬಂದಿರುತ್ತವೆ ಅದ್ದರಿಂದ ಅವುಗಳ ಅರ್ಥವನ್ನು ಮಿ ಅಣೆಯವರಾಗಲಿ, ಮಿ ಗಾಂಧಿಯವರಾಗಲಿ ಸರಿಯಾಗಿ ಮಾಡಬಲ್ಲರು

ಮಿ ಪಾಠಕ— ರಾಜಕೈದಿಯೆಂದರೆ ಏನೆಂಬುವದನ್ನು ತಿಳಿಸುವಿರಾ? ಅವನು ಕೈದಿ ಅಹುದೋ ಅಲ್ಲವೋ?

ಸರ್ ಹೇಗ — ಅಹುದು ಆದರೆ ರಾಜಕೈದಿಗೂ ಮತ್ತು ಸಾಮಾನ್ಯ ಕೈದಿಗೂ ಬೇದವೆಂದರೆ, ರಾಜಕೈದಿಗೆ ಹೆಚ್ಚು ಸವಲತ್ತುಗಳು ಇರುತ್ತವೆ

ಬಿ ಆರ್ ಪುರಿ— ಮಹಾತ್ಮರಿಗೆ ಯಾವ ಕಾರಣದಿಂದ "ಅ" ವರ್ಗ ಕೊಟ್ಟಿರುವಿರಿ? ಅವರ ಜೀವನದೇನೂ ಯುರೋಪಿಯನ್ನರಂತೆ ಇರುವುದಿಲ್ಲ ಅಲ್ಲದೆ ಅವರಿಗೆ ಕಿಂಚಿತ್ತಾದರೂ ಆಸ್ತಿಯಿಲ್ಲ ಅಂದಬಳಿಕ ಅವರಿಗೆ ಅ ವರ್ಗ ಕೊಟ್ಟರೋ ಹೇಗೆ?

ಸರ್ ಹೇಗ — ಮಿ ಗಾಂಧಿಯವರಿಗೆ "ಅ" ವರ್ಗವು ಪರಂಪರಾಗತವಾಗಿ ನಡೆದು ಬಂದಿದೆ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ತಾ|| ೨೫ ೮ ೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ಡಾ ಕುಲಕರ್ಣೀಜ
ಲೆಬೊರೋಟರಿ ಮುಂಬಯಿ ನಂಬ ೧೨
ಒಟ್ಲೆ ಕಿಮ್ಮತ್ತು ೧—೨—೦
ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಕರಗು, ಬಿಳೇಸರಗು, ಕೆಂಪುಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣ ವಾಗುತ್ತದೆ ಬಾಣಂತಿತನ ಅದ ಮೇಲೆ ತಗದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದ

ಬಿ ಟಿ. ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ

ಗೀತೆಯ ಗುಟ್ಟು— ಶ್ರೀಮದ್ಭಗವದ್ಗೀತೆಯ ಮೂಲ ಶ್ಲೋಕ, ಸರಲ ಕನ್ನಡ ಅರ್ಥ ... ಇದಲ್ಲದೆ ೧೦೦ ಪುಟಗಳ ಪೀಠಿಕೆ, ಕ್ರೌನ ೮ ೬೦೦ ಪುಟಗಳು-ಬೆಲೆ ...

ಉಪನಿಷತ್-ಪ್ರಕಾಶ— ಭಾಗ ೧ ಮತ್ತು ೨. ಈಶ,ಕೇನ,ಕಠ, ಪ್ರಶ್ನ, ಮಾಂಡೂಕ್ಯ ಗಳೇಕಡಲ್ಲ, ಮುಂಡಕ,ಐತರೇಯ, ತೈತ್ತಿರೀಯ ... ೧ನೇ ಭಾಗ ... ಮತ್ತು ೨ನೇ ಭಾಗ ... ಪುಟಗಳು. ಕ್ರೌನ ... ಬೆಲೆ ...

ಉಪನಿಷತ್-ರಹಸ್ಯ— ಶ್ರೀ ರಾನಡೆಯವರ "A Constructive Survey of Upanishadic Philosophy" ಎಂಬ ಗ್ರಂಥದ ಕನ್ನಡ ಅನುವಾದ, ... ಉಪನಿಷತ್ತುಗಳು (ಶ್ರೀ ...) ... ಪು. ಬೆಲೆ ...

ಶ್ರೀರಾಮಕೃಷ್ಣಚರಿತಾಮೃತವು— ಶ್ರೀ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆ, ಅಧ್ಯಾತ್ಮ ... ಕ್ರೌನ ... ಪು ಬೆಲೆ ...

ಎಲ್ಲ ಪುಸ್ತಕಗಳನ್ನು ಒಟ್ಟಿಗೆ ತೆಗೆದುಕೊಂಡಲ್ಲಿ ಬೆಲೆ ... ಅಂಚೆ ವೆಚ್ಚ ಬೇರೆ

ಅಧ್ಯಾತ್ಮ ಕಾರ್ಯಾಲಯ

ಏಜಂಟರು ಬೇಕಾಗಿದ್ದಾರೆ

ಧಾರಾಳವಾದ ಕಮೀಶನ್ನ ಕೊಡಲಾಗುವದು, ಇಚ್ಛೆಯುಳ್ಳವರು ಪತ್ರವ್ಯವಹಾರ ಮಾಡಬೇಕು

—ವ್ಯವಸ್ಥಾಪಕ
"ಕನ್ನಡಿಗ"

ಹಿಂದುಸ್ಥಾನ.

ಹೈದರಾಬಾದ (ದಕ್ಷಿಣ) — ನಿಜಾಮ ಸಾಹೇಬರು ಕೆಲವು ಫರ್ಮಾನುಗಳನ್ನು ಹೊರಡಿಸಿ, ಕೆಳಗಿನಂತೆ ಆಜ್ಞೆ ಮಾಡಿದ್ದಾರೆ.

೧ ಶಹಾಬಾದ ಕಲ್ಲಿನ ಕಾರಖಾನೆಗೂ ಹಾಗು ಮಹಮ್ಮದ ನಿಜಾಮುದ್ದೀನರ ಎಣ್ಣೆಯ ಕಾರಖಾನೆಗೂ ಹೊರಗಿನಿಂದ ಬರುವ ಯಾವದೇ ಸಾಮಾನುಗಳಿಗೆ ಜಕಾತಿಯನ್ನು ತೆಗೆದುಕೊಳ್ಳತಕ್ಕದ್ದಲ್ಲ

೨ ಕೆಲವು ದಿನಗಳ ಹಿಂದೆ ನಾನು ಆರಿಸಿದ ರಾಷ್ಟ್ರಗೀತೆಯನ್ನೇ ಹೈದರಾಬಾದದ ರಾಷ್ಟ್ರಗೀತೆಯೆಂದು ತಿಳಿದು ಕೊಳ್ಳಬೇಕು.

ಜಾಯಿಂಟ ಕಮೀಟಿಗೆ ಸಂಸ್ಥಾನದ ವತಿಯಿಂದ ಪ್ರತಿನಿಧಿಗಳಾಗಿ ಹೋಗಿದ್ದ ಸರ್ ಅಕ್ಬರ ಹೈದರಿಯವರು ತಾ|| ೫ ನೆ ದಿವಸ ಹೈದರಾಬಾದಕ್ಕೆ ತಿರುಗಿ ಬರತಕ್ಕವರಿದ್ದಾರೆ

ಮದ್ರಾಸ — ಕೆಲವು ಕಾಲ ಮದ್ರಾಸ ಸರಕಾರದ ಓರಿಯಂಟಲ್ ಟ್ರಾನ್ಸಲೇಟರರೂ ಸುಪ್ರಸಿದ್ಧ ಕನ್ನಡ ಸಾಹಿತಿಗಳೂ ಆದ ಶ್ರೀ ಬೆನಗಲ್ ರಾಮ ರಾಯರು ಮದ್ರಾಸದಲ್ಲಿ ಆನರರಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮಂತ್ರಿ ಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯದಲ್ಲಿ ಪ್ರಕಟಿಸಿದರು.

ರ. ನಂ. ಬಿ. ೨೭೮೮ यत् परवशं दुःखं । यद्यदात्मवशं सुखम् ॥ मनु ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರುಃ— ಆಲೂರ ವೆಂಕಟರಾಯರು. ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಗುರುವಾರ ಭಾದ್ರಪದ ಶುದ್ಧ ೧೧ ಶಕೆ ೧೮೫೫ ತಾ॥ ೩೧-೮-೩೩ [ಸಂಚಿಕೆ ೧೮೦

ಇನಸ್ಶೂರನ್ಸ
ಜೀವವಿಮೆ ಇಳಿಸಲು ದಿ ಯುನಾಯಿಟೆಡ್ ಕರ್ನಾಟಕ ಇನಸ್ಶೂರನ್ಸ ಕಂಪನಿಯೇ ಉತ್ತಮವಾದುದು.

ಇನಸ್ಶೂರನ್ಸ
ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ. ದಿ ಯುನಾಯಿಟೆಡ್ ಕರ್ನಾಟಕ ಇ. ಕಂ. ಲಿ. ಧಾರವಾಡ ಇದರಲ್ಲಿಯೇ ವಿಮೆ ಇಳಿಸಿರಿ.

ಪಂಡಿತ ಜವಾಹಿರಲಾಲರನ್ನು ಬಿಟ್ಟರು.

ಮಹಾತ್ಮರ ಪ್ರಕೃತಿಯಲ್ಲಿ ಸಮಾಧಾನಕರ ಸುಧಾರಣೆ.

(ಅಸೋಸಿಯೇಟೆಡ್ ತಂತಿಯ ವಾರ್ತೆ. ತಾ॥ ೩೦)

ನೈನಿತಾಲ ತಾ॥ ೩೦— ಸಂಯುಕ್ತಪ್ರಾಂತ ಸರಕಾರದವರು ಈ ಹೊತ್ತಿನ ದಿವಸ ನೈನಿಜೇಲ ಅಧಿಕಾರಿಗಳಿಗೆ ಒಂದು ಪತ್ರವನ್ನು ಕಳಿಸಿ, ಪಂಡಿತ ಜವಾಹಿರಲಾಲ ನೆಹರೂರವರನ್ನು ಈ ದಿವಸ ಜೇಲಿನಿಂದ ಬಿಡುಗಡೆ ಮಾಡಬೇಕೆಂದು ತಿಳಿಸಿದ್ದಾರೆ.

ಸರಕಾರದವರು ಈ ಸಂಬಂಧವಾಗಿ ಒಂದು ಪತ್ರಿಕೆ ತೆಗೆದಿದ್ದು, ಅದರಲ್ಲಿ ಅವರು ಅನ್ನುವದೇನಂದರೆ— ಶ್ರೀಮತಿ ಸ್ವರೂಪರಾಣಿ ನೆಹರೂರವರ ಪ್ರಕೃತಿಯು ಬಹಳ ಅಸ್ವಸ್ಥವಾಗಿರುವದರಿಂದ ಉಪಚಾರಕ್ಕಾಗಿ ಅವರನ್ನು ಈಗ ಆಸ್ಪತ್ರಿಯಲ್ಲಿ ಹಾಕಿರುತ್ತದೆ. ನಾತೋಶ್ರೀಯವರ ಕಡೆಯ ಘಳಿಗೆಯಲ್ಲಿ ಅವರ ಹತ್ತರವೇ ಇರಲು ಪಂಡಿತ ಜವಾಹಿರಲಾಲರಿಗೆ ಅನುಕೂಲ ಮಾಡಿಕೊಡಲು, ಜವಾಹಿರಲಾಲರನ್ನು ಅವರ ಶಿಕ್ಷೆಯ ಅವಧಿಗಿಂತ ಮೊದಲೆ ಬಿಡುಗಡೆ ಮಾಡಬೇಕೆಂದು ನಿರ್ಧಾರವಾಯಿತು. ಅದರಂತೆ ಜೇಲ ಅಧಿಕಾರಿಗಳಿಗೆ ಅಪ್ಪಣೆ ಕೊಡಲಾಗಿದೆ. (ಅ ಪ್ರೆ)

ಮಹಾತ್ಮರ ಪ್ರಕೃತಿಯಲ್ಲಿ ಸುಧಾರಣೆ.

ಪುಣೆ ತಾ॥ ೨೯— ಡಾ ಗಿಲ್ಡರ ಇವರು ಈ ಹೊತ್ತಿನ ದಿವಸ ಸಂಜೆಯಲ್ಲಿ ಪರ್ಣಕುಟಿಗೆ ಹೋಗಿ ಮಹಾತ್ಮರ ಪ್ರಕೃತಿಯನ್ನು ಪರೀಕ್ಷಿಸಿದರು. ಅವರ ಪ್ರಕೃತಿಯ ವಿಷಯಕ್ಕೆ ಅಧಿಕೃತ ಪ್ರಕಟನೆಯೇನೂ ಹೊರಟಿರುವದಿಲ್ಲ. ಆದರೆ ಅವರ ಪ್ರಕೃತಿಯಲ್ಲಿ ಒಳ್ಳೆ ಸಮಾಧಾನಕರವಾದ ಸುಧಾರಣೆಯುಂಟಾಗಿದೆಯೆಂದು ಡಾಕ್ಟರರ ಅಭಿಪ್ರಾಯವಾಗಿದೆ. ಮಹಾತ್ಮರ ತೂಕವು ಈಗ ೯೦ ಪೌಂಡು ಇದೆ. ಅವರು ಪ್ರತಿ ದಿನಸ ತೋಟದಲ್ಲಿ ಸ್ವಲ್ಪ ಹೊತ್ತು ಅತ್ತಿತ್ತ ಅಡ್ಡಾಡಿ ಬರುತ್ತಾರೆ. ಇನ್ನು ಒಂದೆರಡು ದಿನಗಳಲ್ಲಿ ಅವರ ಪ್ರಕೃತಿಯು ಮೊದಲಿನಂತೆ ಸರ್ವಸಾಧಾರಣ ಸ್ಥಿತಿಗೆ ಬರುವದೆಂದು ಆಶಿಯಿದೆ.

(ಅ ಪ್ರೆ)

ಒಳ್ಳೆ ಕೋಣೆಯಲ್ಲಿ ೮೦೦೦ ಕೈದಿಗಳು

ಸಿಮಲಾ ತಾ॥ ೨೯— ಕಾಯದೆಭಂಗಕ್ಕಾಗಿ ಗುನ್ಹೆಯಾಗಿ ಜೇಲುಗಳಲ್ಲಿ ಇನ್ನೂ ಶಿಕ್ಷೆ ಅನುಭವಿಸುತ್ತಿರುವವರ ಸಂಖ್ಯೆಯು ಒಳ್ಳೆ ಕೋಣೆಯಲ್ಲಿ ಒಟ್ಟು ೮೬೮೩ ಇತ್ತು. ತಿಂಗಳ ಕೊನೆಯಲ್ಲಿಯ ಸಂಖ್ಯೆಗೆ ಈ ಸಂಖ್ಯೆ ತುಲನೆ ಮಾಡಲಾಗಿ, ಆಗಿನಕಿಂತ ೨೩೭೩ ಜನರು ಕಡಿಮೆಯಾಗಿರುವರೆಂದು ತೋರುವದು.

(ಅ. ಪ್ರೆ.)

ರಾಜಕೈದಿಗಳ ಅನ್ನತ್ಯಾಗ ಒತ್ತಾಯದಿಂದ ಅನ್ನವನ್ನು ಹೇಗೆ ಹಾಕುವರು!

ಸಿಮಲಾ ತಾ॥ ೨೮ — ಈ ಹೊತ್ತಿನ ಅಸೆಂಬ್ಲಿ ಅಧಿವೇಶನದಲ್ಲಿ ಪ್ರಶ್ನೋತ್ತರ ಸಮಯದಲ್ಲಿ ಶ್ರೀ ಸತ್ಯೇಂದ್ರನಾಥ ಮಿತ್ರ ಇವರು ರಾಜಕೀಯ ಕೈದಿಗಳ ವಿಷಯವಾಗಿ ಎಷ್ಟೋ ಪ್ರಶ್ನೆ ಕೇಳಿದರು ಈ ಪ್ರಶ್ನೆಗಳಲ್ಲಿ ಮುಖ್ಯವಾದ ಪ್ರಶ್ನೆಯೆಂದರೆ ಅಂದಮಾನದಲ್ಲಿಯ ಮಹಾವೀರಸಿಂಗ ಎಂಬ ಕೈದಿಗೆ ಒತ್ತಾಯದಿಂದ ಅನ್ನ ಹಾಕಿದ್ದರ ವಿಷಯವಾಗಿ ಇತ್ತು.

ಸರಕಾರದ ಪರವಾಗಿ ಸರ್ ಹೇಗ ಇವರು ಉತ್ತರ ಕೊಟ್ಟದ್ದೇನಂದರೆ— ಮಹಾವೀರಸಿಂಗನ ತೂಕವು ಸೆರೆಗೆ ಬರುವ ಮುಂದೆ ೧೩೮ ಪೌಂಡು ಇತ್ತು. ಅನ್ನತ್ಯಾಗವನ್ನು ಪ್ರಾರಂಭಿಸುವ ಮೊದಲು ಅವನ ತೂಕವು ೧೧೮ ಪೌಂಡಿನಷ್ಟೇ ಇತ್ತು. ಆದರೆ ಅನ್ನತ್ಯಾಗವನ್ನು ಕೈಕೊಂಡ ಮೇಲೆ ಅವನ ತೂಕವು ಭರಭರನೆ ಇಳಿಯಹತ್ತಿತು. ಈ ಸ್ಥಿತಿಯಲ್ಲಿ ಡಾಕ್ಟರರ ಸಲಹೆಯಂತೆ ಅವನಿಗೆ ಒತ್ತಾಯದಿಂದ ಅನ್ನ ಹಾಕುವದೇ ಅವಶ್ಯಕವೂ ಮತ್ತು ಶ್ರೇಯಸ್ಕರವೂ ಎನಿಸಿತು. ತರುವಾಯ ಅಧಿಕಾರಿಗಳು ಅವನ ಎದೆಯ ಮೇಲೆ ಬೂಟು-ಗಾಲಿನಿಂದ ಕೂತುಕೊಂಡ ಕಾರಣ, ಅವನು ತನ್ನಷ್ಟಕ್ಕೆ ತಾನೇ ಬಾಯಿ ತೆಗೆದನು, ಮತ್ತು ಆ ಮೇಲೆ ಅವನಿಗೆ ಅನ್ನ ಹಾಕಿತು, ಎಂಬ ಸುದ್ದಿಯಲ್ಲಿ ಏನೂ ತಥ್ಯಾಂಶವಿಲ್ಲ. ಒತ್ತಾಯದಿಂದ ಅನ್ನ ಹಾಕಿದ ಮೇಲೆ ಅವನ ಬಾಯೊಳಗಿಂದ ರಕ್ತ ಬೀಳಹತ್ತಿತು.

ಸತಿ ಹೋಗುವ ಪ್ರಯತ್ನ

ಡಾಯಮಂಡ ಹಾರ್ಬರ ತಾ॥ ೨೮ — ಶ್ರೀಕಂಠ ಪುರಕಾಯ ಧನಂಜಯ ೨೪ ವರ್ಷದ ತರುಣನು ಯಾವದೋ ಒಂದು ರೋಗದಿಂದ ಮೊನ್ನಿನ ದಿವಸ ಮರಣ ಹೊಂದಿದನು. ಅವನಿಗೆ ಗಂಡ ಮಕ್ಕಳು ಯಾರೂ ಇದ್ದಿದ್ದಿಲ್ಲ. ಆದ್ದರಿಂದ, ಅವನ ಹೆಂಡತಿಯು ಹೆಣದ ಹಿಂದೆ ಸ್ಮಶಾನದವರೆಗೆ ಹೋಗಿ ಉತ್ತರಕ್ರಿಯೆ ಜರುಗಿಸಿದಳು. ಹೆಣಕ್ಕೆ ಬೆಂಕಿಯನ್ನು ಹಚ್ಚಿದ ಕೂಡಲೆ ಯಾವತ್ತು ಜನರು ಅಲ್ಲಿಂದ ದೂರಸರಿದು ಒತ್ತಟ್ಟಿಗೆ ಕುಳಿತುಕೊಂಡರು. ಚಿತೆಯ ಬಳಿಯಲ್ಲಿ ನಿಂತಿದ್ದ ಮೃತನ ಹೆಂಡತಿಯು ಈ ಸಂಧಿಯನ್ನು ಸಾಧಿಸಿ ಚಿತೆಯೊಳಗೆ ಹಾರಿಕೊಂಡು, ಹೆಣಕ್ಕೆ ಗಟ್ಟಿಯಾಗಿ ಅಂಟಿಕೊಂಡಳು. ಹತ್ತರ ಕುಳಿತವರು ತಟ್ಟನೆ ಓಡಿಬಂದು ಅವಳನ್ನು ಹೊರಗೆ ತೆಗೆಯಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ನಂತರ ಜನರು ಚಿತೆಯನ್ನು ಆರಿಸಿ, ಅವಳನ್ನು ಹೊರಗೆ ತೆಗೆದರು. ಅವಳ ಮೇಲೆ ಪ್ರಜ್ಞೆ ಇರಲಿಲ್ಲ.

ಕಾಲೇಜಗಳಲ್ಲಿ ಪಕೀಲಿಯ ಜನರು?

ಪುಣೆ ತಾ॥ ೨೮— ಈ ಹೊತ್ತಿನ ಮುಂಬಯಿ ಕಾಯದೆ ಮಂಡಳದ ಅಧಿವೇಶನದಲ್ಲಿ ರಾ. ಬ ಕಾಳೆಯವರ ಪ್ರಶ್ನೆಗೆ ಉತ್ತರ ಕೊಡುವಾಗ ದಿ ಬ ಕಂಬಳಿಯವರು, ಪುಣೆಯಲ್ಲಿಯ ಮಹಾರಾಷ್ಟ್ರದ ಮಂಡಳದ ವ್ಯಾಯಾಮ ಶಾಲೆ ಸರಕಾರದವರು ಮನ್ನಣೆ ಕೊಡಲು ಸಿದ್ಧರಿಲ್ಲವೆಂದು ತಿಳಿಸಿದರು.

ರಾ ಸಾ ಕುಲಕರ್ಣಿಯವರು ಶಿಕ್ಷಣ ಮಂತ್ರಿಗಳಿಗೆ ಕೆಳಗಿನ ಪ್ರಶ್ನೆಗಳನ್ನು ಕೇಳಿದರು.

೧) ಕೆಲವು ಸರಕಾರಿ ಕಾಲೇಜುಗಳಲ್ಲಿ ಪ್ರಿನ್ಸಿಪಾಲ ಹಾಗು ಪ್ರೊಫೆಸರರು ಒಬ್ಬರಿಗೊಬ್ಬರು ಆಪ್ತರಿರುವದು ನಿಜವೋ ಹೇಗೆ? ೨) ಮತ್ತು ಈ ಆಪ್ತತ್ವದ ಕಾರಣದಿಂದ ಕಾಲೇಜದಲ್ಲಿಯ ಕೆಲಸವು ಯಾವತ್ತು ಪ್ರೊಫೆಸರರಲ್ಲಿ ಸರಿಯಾಗಿ ಹಂಚಿ ಹೋಗದೆ ಇದ್ದದ್ದು ನಿಜವಿರುವದೋ ಹೇಗೆ?

ದಿ ಬ ಕಂಬಳಿ— ಗುಜರಾಥ ಕಾಲೇಜದಲ್ಲಿ ಮಾತ್ರ ಪ್ರಿನ್ಸಿಪಾಲ ಎಂ ಎಸ್. ಕಮಿಸೆರಿಯೇಟ ಮತ್ತು ಜೆ ಎನ್ ಕಮಿಸೆರಿಯೇಟ ಇವರು ಅಣ್ಣ ತಮ್ಮಂದಿರಿದ್ದರು.

ಮುಂಬಯಿಯಲ್ಲಿ ಮುಸಲ್ಮಾನರ ಪ್ರಚಂಡ ಸಭೆ.

ಸರಡಪ್ಪ ೯೨೦ಬಿನ ನಿಷೇಧ

ಮುಂಬಯಿ ತಾ॥ ೨೨ — ನೆನ್ನಿನ ಸೋಮವಾರ ದಿವಸ ಇಲ್ಲಿಯ ಫೋರ್ಟ ಕರಬಸ್ತಾನದಲ್ಲಿ ಎಂ. ಸಿ ಚಗಲಾ ಇವರ ಅಧ್ಯಕ್ಷತೆಯ ಕೆಳಗೆ ಮುಸಲ್ಮಾನರ ಪ್ರಚಂಡ ಸಾರ್ವಜನಿಕ ಸಭೆಯಾಯಿತು. ಸರಹದ್ದು ಪ್ರಾಂತದಲ್ಲಿಯ ವಾಯುವ್ಯ ಸರಹದ್ದಿನ ಬಗ್ಗೆ ನಿಷೇಧದ ಠರಾವು ಪಾಸಾಯಿತು. ಹಿಂದಿನ ಮೇಲೆ ಹೇಗೆ ಬಾಂಬಿನ ಮಳೆಗರೆಯುವದು ಆರಂಭಿಸಿದವರಿಗೆ ಒಪ್ಪತಕ್ಕದ್ದಲ್ಲವೆಂದೂ, ನ್ಯಾಯ ನೀತಿ ದಯಾ ಮೊದಲಾದ ತತ್ವಗಳಿಗೆ ವಿರುದ್ಧವಾಗಿರುತ್ತದೆಂದೂ ನಿರ್ಣಯವಾಯಿತು ಮತ್ತು ಇನ್ನು ಮುಂದಾದರೂ ಈ ಕ್ರೂರತರವಾದ ಪದ್ಧತಿಯನ್ನು ಬಿಟ್ಟುಕೊಡಬೇಕೆಂದು ಸರಕಾರದವರಿಗೆ ಆಗ್ರಹದ ವಿನಂತಿ ಮಾಡಿಕೊಂಡಿತು.

ಸಾಬರಮತಿ ಆಶ್ರಮದ ಕಡೆಗೆ ಸ್ವಯಂಸೇವಕ ದಲ

ಲಾಹೋರ ತಾ॥ ೨೯— ಸ್ವಯಂಸೇವಕರದೊಂದ ದಲವು ಈ ಹೊತ್ತಿನ ದಿವಸ ಇಲ್ಲಿಂದ ಸಾಬರಮತಿ ಆಶ್ರಮದ ಕಡೆಗೆ ಹೊರಟಿತ್ತು. ಅವರು ಇಲ್ಲಿಂದ ಹೊರಟ ಕೂಡಲೆ ಪೋಲಿಸರು ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯನ್ವಯ ಅವರನ್ನು ಸೆರೆ ಹಿಡಿದರು.

ಮಂಚೂರಿಯಾದಲ್ಲಿ ಪುನಃ ಯುದ್ಧ

ಕ್ಯಾಂಟನ್ ತಾ॥ ೨೮— ಸೇನಾಪತಿ ಮಕೀ ಹತಿನ್ ಇವರು ಸ್ವಯಂಸೇವಕರ ನೇತೃತ್ವವನ್ನು ಈ ಹೊತ್ತಿನಿಂದ ತಮ್ಮ ಕಡೆಗೆ ತೆಗೆದುಕೊಂಡಿದ್ದಾರೆ. ಈ ಸ್ವಯಂಸೇವಕ ದಲದಲ್ಲಿ ೧ ಲಕ್ಷಕ್ಕಿಂತ ಹೆಚ್ಚು ಜನರಿದ್ದು ಅವರೆಲ್ಲರೂ ಮಂಚೂರಿಯಾದಲ್ಲಿ ಜಪಾನದ ಅಧಿಕಾರವನ್ನು ಮನ್ನಿಸಲು ಸಿದ್ಧರಿಲ್ಲ. ಚೀನ ದೇಶದಲ್ಲಿ ಪುನಃ ಯುದ್ಧವು ಸುರುವಾಗುವ ಲಕ್ಷಣವಿದೆ.

ಎಚ್. ಡಿ ರಾಜಾ ಇವರು ಆರೋಪವನ್ನು ಅಲ್ಲಗಳೆದರು

ಮದ್ರಾಸ ತಾ॥ ೨೮— ಅಧಿಕಾರಿಗಳು ಎಚ್. ಡಿ ರಾಜಾ ಇವರ ಮೇಲೆ ನೋಟೀಸು ಪ್ರಯೋಗಿಸಿ ಸದ್ವರ್ತನದ ಬಗ್ಗೆ ಹೊಣೆ ಏಕೆ ಬೇಡಬಾರದೆಂಬ ಬಗ್ಗೆ ಕಾರಣ ತೋರಿಸಲು ಕೇಳಿಕೊಂಡಿದ್ದರು. ಶ್ರೀ ರಾಜಾ ಇವರು ಈಗ ಎಗ್ಮೋರ ಪೋಲೀಸ ಕೋರ್ಟದಲ್ಲಿ ಒಂದು ಲೇಖಿ ಜಬಾನಿ ಕೊಟ್ಟು ಆರೋಪಗಳನ್ನು ಅಲ್ಲಗಳೆದಿದ್ದಾರೆ.

ಶ್ರೀ ರಾಜಾ ಇವರು ತಮ್ಮ ಲೇಖಿ ಜಬಾನಿಯಲ್ಲಿ ತಮ್ಮ ಪರವಾಗಿ ಶ್ರೀ ರಾಜಗೋಪಾಲಾಚಾರ್ಯ, ರಾಮದಾಸ, ಭಾಷ್ಯಮ್, ಮಿ ಸ್ಟ್ರ್ಯಾಟಫೋರ್ಡ ಮಿ ಬ್ರ್ಯಾಡ್ಲೆ ಇವರನ್ನು ಸಾಕ್ಷಿ ನುಡಿಯಲು ಕರೆಯುವೆನೆಂದು ತಿಳಿಸಿದ್ದಾರೆ.

ವಿಚಾರಣೆಯು ೬ ನೆ ತಾರೀಖಿನ ವರೆಗೆ ಮುಂದುವರಿದಿದೆ

ಇಹನ್ಯತ್ರ

ಮಾಳವದ್ದಿ ಪ್ರಿಕ್ಟೋರಿಯಾ ಹಾಯಸ್ಕೂಲ ಶಾಲೆಯಲ್ಲಿ ೫ ದಿವಸಗಳ ವರೆಗೆ ಗಣಪತಿ ಉತ್ಸವವು ನಡೆದು, ತಾ॥ ೨೮ ನೆ ದಿವಸ ವಿಸರ್ಜನ ಕಾರ್ಯವು ಯಥಾಸಾಂಗವಾಗಿ ಜರುಗಿತು. ಶಿಕ್ಷಕರೆಲ್ಲರೂ ಬಾಲಕರನ್ನು ಪಂಕ್ತಿಗಳಲ್ಲಿ ಅಚ್ಚುಕಟ್ಟಾಗಿ ಕರೆದುಕೊಂಡು ಕೂಟಕೂಟಗಳಲ್ಲಿ ಲಾರಿ, ಲೇಜಿಮುಗಳ ಕವಾಯತು ಬ್ಯಾಂಡಿನೊಂದಿಗೆ ಮನೋರಂಜನವಾಗುವಂತೆ ಮಾಡಿಸುತ್ತ, ಮೆರವಣಿಗೆಯೊಂದಿಗೆ ವಿಸರ್ಜನ ಕಾರ್ಯವನ್ನು ನೆರವೇರಿಸಿದರು.

ಕೊನೆಯಚ್ಚು



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚೂರ್ಯ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ

ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವದು. "ಹೇಮ್ಮುಗಳು" ಒಸಡುಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೇಮ್ಮುಗಳಿನ ತತ್ವವು "ಕಚ್ಚೂರ್ಯ" ದಂತ ಮಂಜನದಲ್ಲಿ ಅಡಕವಾಗಿದೆ. ಆಹಾರದ ಅವಶೇಷಗಳು ಹಲ್ಲುಗಳ ಸಂದುಗಳಲ್ಲಿ ಉಳಿದು ಕ್ರಿಮಿಗಳುಂಟಾಗಿ ಹಲ್ಲು ಮತ್ತು ಒಸಡುಗಳು ಕೆಡುವವು. ಆದರೆ ಈ ಕ್ರಿಮಿಗಳು ಕಚ್ಚೂರ್ಯ ದಂತಮಂಜನದ ಉಪಯೋಗದಿಂದ ನಾಶವಾಗುವವಲ್ಲದೆ ಒಸಡುಗಳು ಬಲವತ್ತಾಗಿ ಬಾಯೊಳಗಿನ ದುರ್ವಾಸನೆಯು ಹೋಗಿ ಸುವಾಸವುಂಟಾಗುವದು. "ಕಚ್ಚೂರ್ಯ" ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆದ್ದು ಮಾರುಗೆದ್ದು" ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

[illegible]

ಹೆಚ್ಚಿನ ಸುಧಾರಣೆ [illegible]

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೮ ಫೆಬ್ರುವರಿ ೧೯೩೧ರಿಂದ ತಾ|| ೧೭ ಏಪ್ರಿಲ ವರೆಗೆ ಇಡೀ ಭರತಖಂಡದ (ಹಿಂದುಸ್ಥಾನದ) ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀಕಾಶೀರಾಮೇಶ್ವರ ಸಮುದ್ರದಾಟು ಲಂಕಾಕ್ಷೇತ್ರಗಳ ಮಹಾಯಾತ್ರಾ ಪ್ರಯಾಣ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೆಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ ೧೯೩೧ನೇ ಇಸವಿಯ ಅಕ್ಟೋಬರ ೧ನೇ ತಾರೀಖು (ಶಕೆ ೧೮೫೩ ಅಶ್ವಯುಜ ಶು|| ೧೦) ಗುರುವಾರ ಹುಬ್ಬಳ್ಳಿ ಪಟ್ಟಣದ ಸ್ಟೇಷನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಪ್ರವಾಸ ಮಾಡಿ

೧ ಪಂಢರಪುರ	ಅಕ್ಟೋಬರ ತಾ ೨	೧೯ ಲಖನೌ	೨೪	೩೭ ಕುಂಭಕೋಣಂ	೫
೨ ನಾಸಿಕ	೪-೫	೨೦ ಅಯೋಧ್ಯಾ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೬-೭-೮	೨೧ ಅಲಹಾಬಾದ	,,	೩೯ ಕನ್ಯಾಕುಮಾರಿ [ಹಡಗದಿಂದ]	೧೮
೪ ಸೋಮನಾಥಪಟ್ಟಣ (ಹಡಗದಿಂದ)	೮-೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಕಾಶಿ	೨೮-೨೯-೩೦-೩೧ ನವ್ಹೆಂಬರ ತಾ|| ೧	೪೧ ಕ್ಯಾಂಡಿ [ಸಿಲೋನ]	೨೨
೬ ದ್ವಾರಕಾ (ಜೈನತೀರ್ಥ)	೧೦-೧೧	೨೪ ಸಾರನಾಥ	೧	೪೨ ಅನುರಾಧಪುರ [ಸಿಲೋನ]	೨೩
೭ ಅಬೂಪಹಾಡ (ಜೈನತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಡಿ [ಹಡಗದಿಂದ]	,,
೮ ಅಹಮದಾಬಾದ	೧೪	೨೬ ಪಾವಾಪುರಿ ಕುಂಡ (ಜೈನತೀರ್ಥ)	೩	೪೪ ಮದುರೆ	೨೫
೯ ಸಾಬರಮತಿ	,,	೨೭ ಗಿರಿ	,,	೪೫ ತ್ರಿಚಿನಾಪಳ್ಳಿ	೨೬
೧೦ ಬರೋಡೆ	೧೫	೨೮ ಸಮ್ಮೇತಶಿಖರ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಉಜ್ಜಯನಿ	೧೬	೨೯ ಕಲಕತ್ತಾ	೫-೬-೭	೪೭ ಬೆಂಗಳೂರ	೨೮
೧೨ ಆಗ್ರಾ	೧೭	೩೦ ಜಗನ್ನಾಥಪುರಿ	೮	೪೮ ಮೈಸೂರ	೨೯-೩೦
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ ೩೦ನೇ ತಾರೀಖು (ಶಕೆ ೧೮೫೩ ಮಾರ್ಗಶಿರ ಶು|| ೧೪ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು.

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕಂಡಕ್ಲಾಸ ೩೧೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ ಸೆಕಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಗಾಗಿ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಆಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು. ಆದಕಾರಣ ಟಿಕೇಟಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯ ಏಜಂಟರುಗಳು— ಸದರ ಕಂಪನಿಯ ಏಜಂಟರ ಟಿಕೇಟಿನಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ [illegible] ಹಾಗು [illegible] ಬಹಳ [illegible] ಕೊಡಲ್ಪಟ್ಟಿದ್ದು [illegible] ಟಿಕೇಟು ಮಾಡಿಕೊಳ್ಳತಕ್ಕವರು ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸತಕ್ಕದ್ದು. ಅರ್ಜಿಯ ಫಾರ್ಮುಗಳು ಏಜಂಟರಿಂದಲೂ [illegible] ಬೇಕಾದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು. [illegible] ಯೋಗ್ಯ ಕಮೀಶನ್ ಕೊಡಲ್ಪಡುವದು.

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ. ಎಚ್. ಚನಪ್ಪಾ ಬುಕ್‌ಸೇಲರ.

ಬರುವರು! ಏರನಾಡಕೆಧ ಬರುವರು!!

ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾದ

ಕಲಾನಿಪುಣ ಪ್ರೊ. ಎಚ್. ಜಿ. ಫೋಡಕೆ ಇವರ

ಹಾಸ್ಯಕಾರಕ-ಪ್ರೊಜ ಮತ್ತು ಸಂಗೀತ ಹೊಸತರದ

ನಕಲಿನ ಪ್ರಚಂಡ

ಪ್ರೋಗ್ರಾಮ

ಅನುಪಮ

ಕನ್ನಡಿಗ.

ಧಾರವಾಡ— ಗುರುವಾರ ತಾರೀಖು ೩೧—೮—೧೯೩೩

ಏಕತಂತ್ರ ರಾಜ್ಯಪದ್ಧತಿಯ ಪುನರವತಾರ!

ಜಗತ್ತಿನ ವಿಚಾರ ಪ್ರವಾಹವೆಲ್ಲವೂ ಮಹಾಯುದ್ಧದ ನಂತರ ವಿರುದ್ಧ ದಿಕ್ಕಿಗೆ ಸಾಗುತ್ತಿರುವಂತೆ ತೋರುತ್ತದೆ. ಪ್ರಜಾಸತ್ತಾತ್ಮಕ ರಾಜ್ಯ, ಪ್ರಜೆಗಳ ಹಕ್ಕು, ಪ್ರಜೆಗಳೇ ರಾಜರು, ಪ್ರಜೆಗಳ ಪ್ರತಿನಿಧಿಗಳು ಎಂಬಿವೇ ಮಂತ್ರಗಳು, ಯುದ್ಧದ ಸಮೀಪದ ದಿನಗಳಲ್ಲಿ ಮಹಾಯುದ್ಧದ ಕಾಲದಲ್ಲಿ ಎಲ್ಲ ಕಡೆಗೂ ಸರ್ವಾಧಿಕಾರಿಗಳನ್ನೇ ನೇಮಿಸಬೇಕಾಯಿತು. ಏಕೆಂದರೆ, ಯುದ್ಧದ ದಿವಸಗಳಲ್ಲಿ ಪ್ರಜಾಪ್ರತಿನಿಧಿ ಸಭೆಗಳಂಥ ದೊಡ್ಡ ಸಭೆಗಳಿಂದ ತೀವ್ರ ಕಾರ್ಯವಾಗ ಲೇನು ಶಕ್ಯವಿದ್ದಿಲ್ಲ. ಆದರೆ ಹೀಗೆ ಸರ್ವಾಧಿಕಾರಿಯ ಕೈಯಲ್ಲಿ ಅಧಿಕಾರವೆಲ್ಲವನ್ನು ಕೇಂದ್ರೀಕರಿಸುವ ಚಟವು ಮುಂದೆ ಪ್ರಬಲವಾಯಿತು. ಈಗ ಎಲ್ಲಿ ನೋಡಿದಲ್ಲಿ ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಗೆ ಅಳಿಗಾಲವುಂಟಾಗ ಬಹುದೆಂಬ ಅಂಜಿಕೆಯು ಯುರೋಪದ ಅನೇಕ ದೇಶಗಳಲ್ಲಿ ಕಂಡು ಬರುತ್ತದೆ. ಸಾರಾಂಶದಲ್ಲಿ ಜೋತಾಡುವ ಮುಳ್ಳು ಒಂದು ತುದಿಯಿಂದ ಮತ್ತೊಂದು ತುದಿಗೆ ಜೋಲಿಹೊಡೆದಿದೆ. ರಶಿಯಾ ದೇಶವೊಂದರಲ್ಲಿ ಮಾತ್ರವೇ ಪ್ರಜೆಗಳ ವರ್ಚಸ್ಸು ಬೆಳೆಯುತ್ತದೆ. ಅಲ್ಲಿ ಕೂಡ, ಹೆಸರಿಗೆ ಮಾತ್ರವೇ ಪ್ರಜೆಗಳಿಗೆ ಸ್ವಾತಂತ್ರ್ಯವುಂಟೆಂದು ಹೇಳಬಹುದು. ರಶಿಯಾ ಸರಕಾರವು ಕೂಡ ತನ್ನ ರಾಷ್ಟ್ರೀಯ ಧ್ಯೇಯವನ್ನು ಅಲ್ಲಗಳೆಯುವವರೆಲ್ಲರನ್ನು ಅತ್ಯಂತ ಕ್ರೂರತನದಿಂದ ದಬ್ಬುತ್ತಲಿದೆ. ಮಿಕ್ಕ, ಅನೇಕ ದೇಶಗಳಲ್ಲಂತೂ ಪ್ರಜಾಸ್ವಾತಂತ್ರ್ಯದ ಮಾತೇ ಇಲ್ಲ. ಜಗತ್ತಿನ ಈ ವಿಚಾರ ಪ್ರವಾಹಕ್ಕೆ ವಿರುದ್ಧವಾಗಿ ಹೀಗೆ ಮೊದಲಿನದಲ್ಲಿ ಇಟಲಿಯ ಮುಸಲೋನಿಯು ಮೊದಲಿನವನು. ಪ್ರಜೆಗಳೆಂದರೆ ಅಜ್ಞಾನಿಗಳೆಂದೂ, ಅವರಿಗೇನೂ ತಿಳಿಯುವುದಿಲ್ಲವೆಂದೂ, ದೇಶದಲ್ಲಿಯ ಜಾಣರು ಹೇಳಿದ್ದೇ ವೇದವಾಗಬೇಕೆಂದೂ ಹೇಳಿ ತನ್ನ ಇಚ್ಛೆಗೆ ಅನುರೂಪವಾಗಿ ರಾಜ್ಯಕಾರಭಾರವನ್ನು ನಡೆಸುವನು. ಆತನ 'ಫಾಸಿಸ್ಟ' ಪಕ್ಷದ ಪ್ರಾಬಲ್ಯವು ಈಗ ಇಟಲಿಯಲ್ಲಿ ಮಾತ್ರವೇ ಅಲ್ಲ. ಅವರ ವಿಚಾರಗಳು ದಿನದಿನಕ್ಕೆ ಇಡೀ ಯುರೋಪ ಖಂಡವನ್ನೇ ನುಂಗುತ್ತಿವೆ. ಜರ್ಮನಿಯಲ್ಲಿ ಈಗ ೫—೬ ವರ್ಷಗಳಲ್ಲಾದಷ್ಟು ವಿಚಾರ ಕ್ರಾಂತಿಯು ಹಿಂದಕ್ಕೆ ಎಂದೂ ಆಗಿಲ್ಲ. ಜರ್ಮನಿಯು ಮಹಾಯುದ್ಧದಲ್ಲಿ ಪೂರ್ಣವಾಗಿ ಸೋತದ್ದರಿಂದ ಅದು ಹಣ್ಣುಗಾಯಿ ನೀರುಗಾಯಿ ಆಗಿಹೋಗಿದೆ. ಪರರಾಜ್ಯಗಳಿಗೆ ಕೊಡತಕ್ಕ ಸಾಲದ ಹೊರೆಯನ್ನು ಹೊತ್ತು ಬಾರದ ಗಿದೆ! ಅಲ್ಲದೆ ಆ ಯುದ್ಧದ ಸೋಲಿನಿಂದಾದ ಅಪಮಾನದ ಸೇಡನ್ನು ಯಾವಾಗ ತೀರಿಸಿಕೊಂಡೇನೋ ಎಂದೂ ಕರಕರನೆ ಹಲ್ಲು ಕಿರಿಯುತಿದೆ. ಇತ್ತೀಚೆಗೆ ಜಗತ್ತಿನಲ್ಲಿ ಆರ್ಥಿಕ ಮಂದಿಕೆಯುಂಟಾದ್ದರಿಂದಂತೂ ಅದರ ಸಂಕಟಕ್ಕೆ ಪಾರವಿಲ್ಲದೆ. ಇಂಥ ಪರಿಸ್ಥಿತಿಯಲ್ಲಿ ಸಾಲ ತಪ್ಪಿಸುವ ಯುಕ್ತಿಯನ್ನು ದೇಶಕ್ಕೆ ಉಪದೇಶಿಸುವವನು ಅವರಿಗೆ ಬೇಕಾಗಿದ್ದನು. ಹಿಟ್ಲರನೆಂಬವನು ಈಗ ದಿಢೀರನೆ ದಂಗುವವಾಗಿ ಹಾಗೆ ಉಪದೇಶಿಸಿ ಮೊದಗಿದ್ದಾನೆ. ಕೂಡಲೆ, ಆತನ ಪಕ್ಷವು ಜರ್ಮನ್ ರಾಷ್ಟ್ರವು ಒಂದುಗೂಡಿ ನಿಂತಿದೆ. ನಾಝಿ ಪಕ್ಷವು ಈಗ ಜರ್ಮನಿಯಲ್ಲಿ ಭಯಂಕರವಾದ ಕ್ರಾಂತಿಯನ್ನು ಮಾಡಿದೆ. ಆ ರಾಷ್ಟ್ರವನ್ನು ಸುಸಂಘಟಿತವಾಗಿ ಮಾಡುವ ತನ್ನ ಕಾರ್ಯಕ್ಕೆ ಅಡ್ಡ ಬಂದವರೆಲ್ಲ ಹಿಟ್ಲರನ ದಯೆ ಮಾಯೆಯಿಲ್ಲದೆ ಕತ್ತರಿಸಿ ಚೆಲ್ಲುತ್ತಿರುವನು. ಈಗ ಅಲ್ಲಿ ಪ್ರಜಾಸತ್ತಾಕ ರಾಜ್ಯಪದ್ಧತಿಯ ಮಾತೇ ಇಲ್ಲ. ತುರ್ಕಸ್ಥಾನದಲ್ಲಿ ಕೆಮಾಲಪಾಶನ ಪ್ರಾಬಲ್ಯ ಹೇಳಿದ್ದೇ ಈಗ ಪೂರ್ವಳಿಕೆ. ಆತನು ಯುರೋಪದ ಸಂಸ್ಕೃತಿಯ ಭಕ್ತನು. ತಾನು ಮುಸಲ್ಮಾನನಾದರೂ ಮುಸಲ್ಮಾನ ಧರ್ಮದ್ವೇಷಿಯು. ಖಿಲಾಫತನ್ನು ಆತನು ಮೂಲೆಗುಂಪು ಮಾಡಿಬಿಟ್ಟಿರುವನು. ಮುಸಲ್ಮಾನರ ಪಿತೃಭಾಷೆಯಾದ ಅರಬೀ ಭಾಷೆಗೆ ಅಲ್ಲಿ ಬಹಿಷ್ಕಾರ. ಮುಸಲ್ಮಾನ ಟೊಪ್ಪಿಗೆ ಹಾಕಿಕೊಂಡವರಿಗೆ ದಂಡನೆ. ಹೀಗೆ ಅಲ್ಲಿಯೂ ಏಕತಂತ್ರ ಕಾರಭಾರ. ಹೀಗೆ ಎಲ್ಲಿನೋಡಿದಲ್ಲಿ ಕ್ಷತ್ರಿಯ ವರ್ಗವು ಪ್ರಬಲವಾಗುತ್ತ ನಡೆದಿದೆ. ಈ ಗಾಳಿಯು ಈಗ ಆಯರ್ಲಂಡಕ್ಕೂ ಮುಟ್ಟಿದೆ. ಅಲ್ಲಿಯೂ 'ನೀಲಿ' ಬಣ್ಣದ ಅಂಗಿಗಳನ್ನು ಹಾಕಿಕೊಂಡು ನ್ಯಾಶನಲ್ ಗಾರ್ಡ್‌ವೆಂಬ ಪಕ್ಷವು ಜನರಲ್ ಓಡೋಫಿಯ ಕೈಕೆಳಗೆ ಎದ್ದಿದೆ. ಈ ಪಕ್ಷವು ಮುಸಲೋನಿಯ ಫಾಸಿಸ್ಟ ಪಕ್ಷದ ರೀತಿನೀತಿಗಳನ್ನು ಅನುಸರಿಸುವದು. ಇದರಿಂದ ಆಯರ್ಲಂಡವೂ ಕೂಡ ಜಮಾ ನಿಯಂತೆ ಒಳಜಗಳಗಳಿಗೆ ತುತ್ತಾಗಿ, ಡಿ ವ್ಯಾಲೆರಾ ಇವನು ಬಹಳ ಪರಿಶ್ರಮದಿಂದ ಇದೀಗ ಗಳಿಸಿರುವ ಸ್ವಾತಂತ್ರ್ಯಕ್ಕೆ ಪುನಃ ಎಲ್ಲಿ ಎರವಾಗುವದೋ ಎಂದು ಅಂಜಿಕೆಯುಂಟಾಗಿದೆ. ಇಂತೂ ಯುರೋಪಖಂಡದಲ್ಲಿ ಎಲ್ಲೆಲ್ಲಿಯೂ ಶಾಂತಿಯಿಲ್ಲ. ಹೊರಗೇನೋ ಶಾಂತಿ ಕೆಲವುಟ್ಟಿಗೆ ಕಾಣುತ್ತಿದೆ. ಆದರೆ, ಪ್ರತಿಯೊಂದು ಸುರಂಗದೊಳಗೆ ಮದ್ದು ತುಂಬುವಂತೆ, ಅಸಂತೋಷದ ಮದ್ದನ್ನು ತಾಂಬಿಕೊಂಡಿದೆ. ಅದಕ್ಕೆ ಎಲ್ಲಿಂದ ಕಿಡಿಯು ಬಿದ್ದು ಆ ಸುರಂಗದ ಭಯಂಕರ ಸ್ಫೋಟವಾಗುವುದೋ ಯಾರಿಗೆ ಗೊತ್ತು?

ಟ್ರಿಸ್ಟಿಯಾ ತಾ॥ ೨೬— ಜೂನ ೬ನೆ ತಾರೀಖಿನ ದಿವಸ ಬಾರಿಸಾಲ ಸ್ಟೇಶನದಲ್ಲಿ ಬೃಂದಾನಾಥ ಗುಪ್ತ ಎಂಬವನನ್ನು ಸೆರೆಹಿಡಿದು ಅವನ ಬಳಿಯಲ್ಲಿ ಪೋಲೀಸರಿಗೆ ಬಾರಿನ ಪಿಸ್ತೂಲು ಸಿಕ್ಕಿತು. ಈ ಬಗ್ಗೆ ಅವನ ಮೇಲೆ ಖಟ್ಲೆ ನಡೆದು, ಶಸ್ತ್ರಾಸ್ತ್ರ ಕಾಯದೆಯ ಅನ್ವಯ ಅವನಿಗೆ ೫ ವರ್ಷ ಕಠಿಣ ಶಿಕ್ಷೆ ಕೊಟ್ಟಿತು.

ಕಲಕತ್ತೆಯಲ್ಲಿ ೧೧ ಜನರಿಗೆ ಕೈದು

ಕಲಕತ್ತಾ ೬॥ ೨೬— ಪೋಲೀಸ ಅಧಿಕಾರಿಗಳು ಈ ಹೊತ್ತಿನ ದಿವಸ 'ಪಾರ್ಕ ಸರ್ಕಸ' ದಲ್ಲಿ ಒಂದು ಮನೆಯನ್ನು ಝಡತಿ ಮಾಡಿ ಕಾಯಭದೆಂಗ ಚಳವಳಿಯ ಸಂಬಂಧದಿಂದ ಡಾ॥ ನೀಲಮಾಧವಸೇನ ಮೊದಲಾದ ೧೧ ಜನರನ್ನು ಸೆರೆ ಹಿಡಿದುಕೊಂಡು ಹೋದರು.

ವನಮಾಲಿ ಚಟರ್ಜಿ ಎಂಬ ಓರ್ವ ಕ್ರಾಂತಿಕಾರಕ ಆರೋಪಿಗೆ ಮನೆಯಲ್ಲಿ ಆಶ್ರಯ ಕೊಟ್ಟಿದ್ದಕ್ಕೆ ಶ್ರೀಮತಿ ಸರೋಜಬಾಲಾ ವಿಶ್ವಾಸ ಎಂಬವಳಿಗೆ ಸೆಶನ್ಸ ಮ್ಯಾಜಿಸ್ಟ್ರೇಟರು ೬ ವರ್ಷ ಕಠಿಣ ಶಿಕ್ಷೆ ವಿಧಿಸಿದರು.

ಮಿ. ಆ್ಯಂಡ್ರೂಜರ ಕಾರ್ಯಕ್ರಮ

ಪುಣೆ ತಾ॥ ೨೮— ದೀನಬಂಧು ಆ್ಯಂಡ್ರೂಜರು ತಮ್ಮ ಮುಂದಿನ ಕಾರ್ಯಕ್ರಮದ ವಿಷಯವಾಗಿ ಹೇಳಿದ್ದೇನಂದರೆ—

ಪುಣೆಯಿಂದ ನಾನು ಶಾಂತಿನಿಕೇತನಕ್ಕೆ ಹೋಗತಕ್ಕವನಿದ್ದೇನೆ. ಕವೀಂದ್ರ ರವೀಂದ್ರರು ನನ್ನ ಆಗಮನವನ್ನು ನಿರೀಕ್ಷಿಸುತ್ತಿರುವರು. ಆ ಮೇಲೆ ಓಡಿಸಾ ಪ್ರಾಂತದಲ್ಲಿ ನೆರೆಹಾವಳಿಯಿಂದ ಬಳಲುತ್ತಿರುವವರಿಗೆ ಸಹಾಯ ಮಾಡಲು ಅತ್ತ ಹೋಗುವೆನು.

ಕಲಕತ್ತೆಯಲ್ಲಿ ಸ್ವದೇಶಿ ವಸ್ತು ಪ್ರದರ್ಶನ

ಕಲಕತ್ತಾ ಸ್ವದೇಶಿ ವಸ್ತು ಪ್ರದರ್ಶನದ ಕಾರ್ಯದರ್ಶಿಗಳಾದ ಡಾ॥ ಎನ್. ಎನ್. ದತ್ತ ಇವರು ತಿಳಿಸುವದೇನಂದರೆ—

ತಾ॥ ೨ನೆ ಸಪ್ಟೆಂಬರ ದಿವಸ ವೆಲಿಂಗ್ಟನ್ ಚೌಕದಲ್ಲಿ ವಿಸ್ತೃತವಾದ ಪ್ರಮಾಣದಲ್ಲಿ ಸ್ವದೇಶಿ ಪ್ರದರ್ಶನವನ್ನು ತೆರೆಯುವದು ಗೊತ್ತಾಗಿದೆ. ಈ ಪ್ರದರ್ಶನವು ಒಂದು ತಿಂಗಳವರೆಗೆ ನಡೆಯತಕ್ಕದ್ದಿದೆ. ಈ ಸಂಬಂಧವಾಗಿ ಒಂದು ಪ್ರಾತಿನಿಧಿಕ ಮಂಡಳವು ನಿಯಮಿಸಲ್ಪಟ್ಟಿದ್ದು ಕಾರ್ಪೋರೇಶನದ ಮೇಯರರಾದ ಶ್ರೀ ಸಂತೋಷಕುಮಾರ ಬಸು ಇವರು ಮಂಡಲದ ಅಧ್ಯಕ್ಷರಾಗಿದ್ದಾರೆ. ಇದಲ್ಲದೆ ಈ ಮಂಡಲದಲ್ಲಿ ಸರ್ ಪಿ. ಸಿ. ರೇ, ಡಾ॥ ಬಿ. ಸಿ. ರಾಯ್, ಮಿ॥ ಜೆ. ಎನ್. ಬಸು, ಮಿ॥ ಎನ್. ಆರ್. ಸರಕಾರ ಇವರೇ ಮೊದಲಾದ ಪ್ರಮುಖ ಗೃಹಸ್ಥರಿರುವರು.

ಮಂಡಲದವರು ಈ ಪ್ರದರ್ಶನದಲ್ಲಿ "ವೃತ್ತಪತ್ರಿಕೆಗಳ ಪ್ರದರ್ಶನ" ವನ್ನಾದರೂ ಮಾಡತಕ್ಕವರಿದ್ದಾರೆ. ಕಾರಣ ಪತ್ರಿಕಾಕರ್ತರು ತಮ್ಮ ತಮ್ಮ ಪತ್ರದ ಇತ್ತೀಚಿನ ಸಂಚಿಕೆಗಳನ್ನು ಪ್ರದರ್ಶನಕ್ಕೆ ಕಳಿಸಿಕೊಟ್ಟು ಸಹಾಯ ಮಾಡಬೇಕಾಗಿ ವಿನಂತಿ. ಈ ಪತ್ರಿಕಾ ಪ್ರದರ್ಶನದಿಂದ ಪತ್ರಕರ್ತರಿಗೆ ಒಳ್ಳೆ ಲಾಭವಾಗಬಹುದಾಗಿ ನಮಗೆ ಆಶೆಯಿದೆ.

ಹುಬ್ಬಳ್ಳಿ ಸಿಟಿ ಹಾಯಸ್ಕೂಲಿಗೆ ಧರ್ಮಾರ್ಥ ನಾಟಕ.

ಇಲ್ಲಿಯ ಕರ್ನಾಟಕ ಎಜ್ಯುಕೇಶನ್ ಸೊಸಾಯಿಟಿಯ ಶಾಖೆಯಾದ ಹುಬ್ಬಳ್ಳಿಯ ಸಿಟಿ ಹಾಯಸ್ಕೂಲಿಗೆ, ಶ್ರೀ ದತ್ತಾತ್ರೇಯ ನಾಟಕ ಮಂಡಲಿಯವರು, ತಾ ೩—೯—೩೩ ನೆ ರವಿವಾರ ದಿವಸ 'ಸತ್ಯಸಂಕಲ್ಪ' ವೆಂಬ ನಾಟಕವನ್ನು ಹಗಲು ೫ ರಿಂದ ರಾತ್ರಿ ೧೦ ಗಂಟೆಯವರೆಗೆ ಅಭಿನಯಿಸಿ, ಬರುವ ಉತ್ಪನ್ನವನ್ನು ಮೇಲಿನ ಸಂಸ್ಥೆಗೆ ಧರ್ಮಾರ್ಥವಾಗಿ ಕೊಡಲೊಪ್ಪಿದ್ದಾರೆ. ಕಾರಣ ಯಾವತ್ತರೂ ಈ ಶಿಕ್ಷಣ ಸಂಸ್ಥೆಗೆ ಸಹಾಯ ಮಾಡಬೇಕೆಂದು ವಿನಂತಿ.

ತಮ್ಮ

ಧಾರವಾಡ ತಾ॥ ೨೮-೮-೩೩ } ಬಿ. ಎನ್. ಬೈಚವಾಳ ಸೆಕ್ರೆಟರಿ

ದೈವೀ ಚಮತ್ಕಾರ.

ಕೋಟಗಿರಿ ಸಮೀಪದಲ್ಲಿ ಅರವೇಳು ಎಂಬದೊಂದು ಹಳ್ಳಿಯುಂಟು. ಅಲ್ಲಿ ಒಂದು ಕಿತ್ತಳೆ ಗಿಡಕ್ಕೆ ನಿಂಬೆ ಹಣ್ಣಿನಷ್ಟೊಂದು ಹಸುರು ಹಣ್ಣು ಆಗಿರುತ್ತದೆ. ಈ ಗಿಡವು ೬ ತಿಂಗಳದ್ದಿದ್ದು, ೩ ಫೂಟು ಎತ್ತರವಿರುತ್ತದೆ. ಈ ಚಮತ್ಕಾರವನ್ನು ನೋಡಲು ಬೇರೆ ಬೇರೆ ಕಡೆಗಳಿಂದ ಜನರು ತಂಡತಂಡವಾಗಿ ಬರುತ್ತಿರುವರು.

ಬಡ ಫ್ರೆಂಚ ಹುಡುಗಿ.

ಹೆಣ್ಣು ಮಕ್ಕಳಿಗೆ ತಂದೆ ತಾಯಿಗಳೇ ವರಗಳನ್ನು ಆರಿಸುವ ಪದ್ಧತಿಯು ಹಿಂದುಸ್ಥಾನದಲ್ಲಿ ಒಂದರಲ್ಲೇ ಇದೆ ಎಂತಿಲ್ಲ. ಈ ಪದ್ಧತಿಯು ಫ್ರಾನ್ಸ ದೇಶದಲ್ಲಿಯಾದರೂ ಬಹುಕಾಲದಿಂದ ನಡೆದು ಬಂದಿದ್ದಾಗಿದೆ. ಹುಟ್ಟಿದವರಿಗೆ ಲ್ಲ ಮರಣವು ಹೇಗೆ ಕ್ರಮ ಪ್ರಾಪ್ತವೋ ಹಾಗೆಯೇ ತಮಗೆ ವಿವಾಹವು ಕ್ರಮಪ್ರಾಪ್ತವೆಂದು ಪ್ರತಿಯೊಬ್ಬ ಫ್ರೆಂಚ ಹುಡಿಗಿಗೂ ಗೊತ್ತುಂಟು. ಮತ್ತು ತಂದೆ ತಾಯಿಗಳಾದರೂ ಬಾಲ್ಯದಿಂದಲೇ ಅವಳನ್ನು ಸಂಸಾರವನ್ನು ಹೇಗೆ ಸಾಗಿಸಿಕೊಂಡು ಹೋಗಬೇಕೆಂಬುವದರಲ್ಲಿ ತರಬೇತು ಮಾಡುವರು.

ಹುಡಿಗಿಯು ಹುಟ್ಟಿದರಾಯಿತು, ಅಂದಿನಿಂದಲೇ ಅವಳ ತಂದೆ ತಾಯಿಗಳು ಅವಳ ವರದಕ್ಷಿಣೆಗಾಗಿ ಹಣವನ್ನು ಕೂಡಿಡಹತ್ತುವರು. ಯಾರಾದರೂ ತಮ್ಮ ಯೋಗ್ಯತೆಗೆ ತಕ್ಕಷ್ಟು ಹಣವನ್ನು ಕೂಡಿಡಲು ತಪ್ಪಿದಲ್ಲಿ, ಅವರು ಸಾರ್ವಜನಿಕ ನಿಂದೆಗೆ ಪಾತ್ರರಾಗಬೇಕಾಗುವದು. ಯಾವಳಾದರೂ ಹುಡಿಗಿಯು ಅನಾಥಳಿದ್ದರೆ ಅವಳ ಆಪ್ತೇಷ್ಟರು ಅವಳ ವರದಕ್ಷಿಣೆಯ ಬಗ್ಗೆ ತಮ್ಮಿಂದಾದಷ್ಟು ಸಹಾಯ ಮಾಡುವರು.

ತಂದೆ ತಾಯಿಗಳ ಮರಣದ ನಂತರ ಅವರ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗಾದರೂ ಪಾಲು ಸಿಗುವದು. ಇದರಿಂದ ಅವಳು ಕೇವಲ ಗಂಡನ ಮೇಲೆಯೇ ಅವಲಂಬಿಸದೆ ತನ್ನ ಚರಿತಾರ್ಥ ಸಾಗಿಸಿಕೊಳ್ಳಬಲ್ಲಳು.

ಮೋಡಗಳ ಮೇಲೆ ಜಾಹೀರಾತು ಹಾಕುವದು.

ಈ ವರ್ಷದ ಟೋರಂಟೋ ಜಾತ್ರೆಯ ಸಮಯದಲ್ಲಿ ನೆರೆಯಲಿಕ್ಕಿದ್ದ ಪ್ರದರ್ಶನ ಕಾಲಕ್ಕೆ ಬ್ರಿಟಿಶ ಔದ್ಯೋಗಿಕ ಮಹಾಮಂಡಳದವರು ಮೋಡಗಳ ಮೇಲೆ ಜಾಹೀರಾತುಗಳನ್ನು ತೂಗಬಿಟ್ಟು, ಅತ್ತ ಕಡೆಗೆ ಸಾರ್ವಜನಿಕರ ಲಕ್ಷವನ್ನು ಎಳೆಯುವ ಹೊಸ ಕ್ರಮವನ್ನು ಪ್ರಾರಂಭಮಾಡುವವರಿದ್ದಾರೆ. ಈ ಉದ್ದೇಶಕ್ಕಾಗಿ ಅವರು ಆಕಾಶದ ಮೇಲೆ ಬರೆಯುವ ಒಂದು ತರವನ್ನು ಹುಡುಕಿ ತೆಗೆದಿದ್ದಾರೆ. ಉಗ್ರವಾದ ಲೆನ್ಸುಗಳನ್ನು ಉಪಯೋಗಿಸಿದಲ್ಲಿ ೩೦೦೦ ಫೂಟು ಎತ್ತರದ ಮೇಲೆ ಸೂರ್ಯಕಿರಣಗಳ ಗುಂಟ ಏನು ಬೇಕಾದದನ್ನಾದರೂ ಚಿತ್ರಿಸಬಹುದೆಂಬದನ್ನು ಅವರು ಅನುಭವದಿಂದ ಕಂಡುಹಿಡಿದಿದ್ದಾರೆ.

ಸ್ವಲ್ಪ ದಿನಗಳ ಹಿಂದೆ ಲಂಡನದಲ್ಲಿ ಈ ಪ್ರಯೋಗವನ್ನು ಮಾಡಿತೋರಿಸಿತು. ಅದು ಒಳ್ಳೇ ಪರಿಣಾಮಕಾರಿಯಾಯಿತು. ಈಗ ಲಂಡನದಲ್ಲಿ ಪ್ರತಿದಿವಸ ಸಂಜೆಯಲ್ಲಿ ಲೇಸೆಸ್ಟರ ಚೌಕದ ಮೇಲಿನ ಮೋಡಗಳ ಮೇಲೆ ದೊಡ್ಡದೊಂದು ಗಡಿಯಾರದ ಮುಂಭಾಗವನ್ನು ತೂಗಬಿಡುತ್ತಿರುತ್ತದೆ. ಅನಂತರ ಉಳಿದ ಚಿತ್ರವಿಚಿತ್ರವಾದ ಜಾಹೀರಾತುಗಳನ್ನು ತೂಗಹಾಕುತ್ತಿದೆ.

ಈ ತರದ ಪ್ರಕಟನೆಗೆ ಸರಕಾರದ ಅನುಮತಿ ತೆಗೆದುಕೊಳ್ಳಲು ಒಂದು ವಿಶಿಷ್ಟವಾದ ಕಾಯದೆಯನ್ನು ಮಾಡಲಾಯಿತು. ಈ "ಆಕಾಶಲೇಖನ" ವು ಜಗತ್ತಿನಲ್ಲೆಲ್ಲ ಬೇಗನೆ ಬಳಕೆಯಲ್ಲಿ ಬರುವದೆಂದು ನಂಬಲಾಗಿದೆ.

ಅಸೆಂಬ್ಲೆಯಲ್ಲಿ ವ್ಹಾಯಿಸರಾಯರ ಭಾಷಣ

ಕಾಯದೆಭಂಗಕ್ಕೆ ಜನತೆಯ ಬೆಂಬಲವಿಲ್ಲ. ಸದ್ಯದ ಪರಿಸ್ಥಿತಿಯು ಎಷ್ಟೋ ಸಮಾಧಾನಕರವಿದೆ "

(ಅಸೋಸಿಯೇಟೆಡ್ ತಂತಿಯ ವಾರ್ತೆ ತಾ। ೩೦

ಸಿಮ್ಲಾ ತಾ। ೩೦— ವ್ಹಾಯಿಸರಾಯರಾದ ಲಾರ್ಡ ವ್ಹಿಲಿಂಗಡನ್ನರು ಈ ಹೊತ್ತಿನ ದಿವಸ ಮುಂಜಾನೆ, ಕೌನ್ಸಿಲ್ ಆಫ್ ಸ್ಟೇಟ ಹಾಗು ಲೇಜಿಸ್ಲೇಟಿವ್ಹ ಅಸೆಂಬ್ಲಿಯ ಸಭಾಸದರನ್ನು ಉದ್ದೇಶಿಸಿ ಅಸೆಂಬ್ಲಿ ಗೃಹದಲ್ಲಿ ಒಂದು ಭಾಷಣ ಮಾಡಿದರು ಅವರು ತಮ್ಮ ಭಾಷಣದಲ್ಲಿ ದೇಶದಲ್ಲಿ ಸದ್ಯಕ್ಕೆ ನಡೆದ ಯಾವತ್ತು ಸಂಗತಿಗಳನ್ನು ಸಮಾಲೋಚನ ಪೂರ್ವಕವಾಗಿ ವಿವರಿಸಿದರು. ಅಲ್ಲದೆ, ಹೊಸ ಸುಧಾರಣೆಗಳು ಬರುವದಕ್ಕಿಂತ ಪೂರ್ವದಲ್ಲಿ ರಿಝರ್ವ ಬ್ಯಾಂಕ ಸೂಚನೆಯು ತೀರ್ಮಾನವಾಗಿ ಅದು ಯಶಸ್ವಿಯಾಗುವದಾಗಿ ತಮಗೆ ಆಶೆಯಿದೆಯೆಂದು ಅಭಿಪ್ರಾಯ ವ್ಯಕ್ತ ಮಾಡಿದರು ವ್ಹಾಯಿಸರಾಯರ ಭಾಷಣದ ಸಮಯದಲ್ಲಿ ಯಾವತ್ತು ಸಭಾಸದರು ಸಭೆಗೆ ಬಂದಿದ್ದರು. ಅಲ್ಲದೆ ಪ್ರೇಕ್ಷಕರ ಸ್ಥಳಗಳಾದರೂ ಕಿಕ್ಕಿರಿದು ತುಂಬಿದ್ದವು

ವ್ಹಾಯಿಸರಾಯರು ತಮ್ಮ ಭಾಷಣದಲ್ಲಿ ನುಡಿದದ್ದೇನೆಂದರೆ – ಹಿಂದುಸ್ಥಾನದಲ್ಲಿಯ ಸರ್ವ ಸಾಧಾರಣ ಸ್ಥಿತಿಯು ಕಳೆದ ಎಷ್ಟೋ ದಿನಗಳಿಗಿಂತಲೂ ಈಗ ಅನೇಕ ವಿಧಗಳಲ್ಲಿ ಹೆಚ್ಚು ಸಮಾಧಾನಕರವಾಗಿದೆ. ರಾಜಕೀಯ ಪರಿಸ್ಥಿತಿಯನ್ನು ಕುರಿತು ಅವರು ಅಂದದ್ದೇನೆಂದರೆ– ಕಾಯದೇಭಂಗ ಚಳವಳಿಯು ಇನ್ನೂ ನಡೆದಿರುವದೇನೋ ನಿಜವಿದೆ. ಇದಕ್ಕೆ ಆ ಚಳವಳಿಯ ಪುರಸ್ಕರ್ತರ ಹಟವೇ ಕಾರಣವಾಗಿದೆ. ಆದರೆ ಈ ಚಳವಳಿಗೆ ಜನತೆಯ ಬೆಂಬಲವಿಲ್ಲ. ಇನ್ನು ಮುಂದೆ ದೇಶದಲ್ಲಿ ಸುಖ ಸಮಾಧಾನ ನೆಲಗೊಳ್ಳುವ ಮಾರ್ಗಗಳು ನಮ್ಮ ಮುಂದೆ ಕಾಣಿಸುತ್ತಿವೆ

ವ್ಹಾಯಿಸರಾಯರು ಮತ್ತೂ ಹೇಳಿದ್ದೇನೆಂದರೆ— ಹೊಸ ಸುಧಾರಣೆಗಳ ಆಡಳಿತದಲ್ಲಿ, ಜಗಳವೆಂದರೆ ಕಾಯದೆಯನ್ನು ಮುರಿಯುವವರು ಹಾಗು ಕಾಯದೆಯನ್ನು ಎತ್ತಿ ಹಿಡಿಯುವವರು ಇರುವದಿಲ್ಲ. ಆದರೆ ವ್ಯವಹಾರಿಕ ಪ್ರಶ್ನೆಗಳನ್ನು ಬಿಡಿಸಲು ಯಾವ ಧೋರಣವನ್ನು ಅನುಸರಿಸತಕ್ಕದ್ದೆಂಬುದು ವಿಷಯವಾಗಿಯೆ ವಾದವಿರುತ್ತದೆ.

ಲಂಡನದಲ್ಲಿ ನಡೆದ ಜಾಯಿಂಟ ಕಮಿಟಿಯ ಮಾತನ್ನೆತ್ತಿ ಅವರು ಹೇಳಿದ್ದೇನೆಂದರೆ— ಈ ಕೊನೆಯ ಪ್ರಸಂಗದಲ್ಲಾದರೂ ಹಿಂದಿ ಮುಖಂಡರಿಗೆ ತಮ್ಮ ತಮ್ಮ ಬೇಡಿಕೆಗಳನ್ನು ಮುಂದೆ ಇಡಲು ಅನುವು ದೊರೆತದ್ದು ನೋಡಿ ಸಂತೋಷಭರಿತನಾಗಿದೇನೆ. ಹೊಸ ಸುಧಾರಣೆಗಳು ಬೇಗನೆ ಬಳಿಕೆಯಲ್ಲಿ ಬರಬೇಕೆಂದು ನನ್ನೆಲ್ಲರ ಇಚ್ಛೆ ಇದ್ದರೆ, ನಾವು ದೇಶದಲ್ಲೆಲ್ಲ ಪ್ರಗತಿಪರವಾದ ವಾತಾವರಣವನ್ನುಂಟು ಮಾಡಬೇಕು. ಸಭಾಸದರು ತಮ್ಮ ವರ್ಚಸ್ಸನ್ನು ವೆಚ್ಚಮಾಡಿ, ಬಿಳೇ ಕಾಗದದಿಂದ ದೊರೆಯಬಹುದಾದ ಹೊಸ ಸುಧಾರಣೆಗಳ ವಿಷಯವಾಗಿ ದೇಶದಲ್ಲೆಲ್ಲ ಚಳವಳಿ ಹೂಡಿ, ಮತದಾರರಿಗೆ ಆ ಹೊಸ ಸುಧಾರಣೆಗಳ ಜ್ಞಾನಮಾಡಿ ಕೊಡಬೇಕು (ಅ ಪ್ರೆ)

ಅಲೀಪುರದಲ್ಲಿ ೮ ಜನರಿಗೆ ಶಿಕ್ಷೆ.

ಅಲೀಪುರ ತಾ|| ೨೮— ಕಾಯದೆಗೆ ವಿರುದ್ಧವಾದ ಅಭಯ ಆಶ್ರಮದ ಸಭಾಸದರಾಗಿದ್ದ ಕ್ಶಾಗಿ, ದೇವೇಂದ್ರನಾಥ ಸೇನ ಮೊದಲಾದ ೫ ಜನರಿಗೆ ಪ್ರತ್ಯೇಕವಾಗಿ ೩ ತಿಂಗಳ ಶಿಕ್ಷೆಯಾಯಿತು. ಇದಲ್ಲದೆ ಆಶ್ರಮದ ಬೇರೆ ಮೂವರು ಕೆಲಸಗಾರರಿಗೆ ಪ್ರತ್ಯೇಕವಾಗಿ ೬ ತಿಂಗಳ ಶಿಕ್ಷೆ ದೊರೆಯಿತು

ಸದ್ಯದ ರಾಜಕೀಯ ಪರಿಸ್ಥಿತಿಗೆ ಜಮನಾದಾಸರ ರಾಮಬಾಣ

ಶ್ರೀ ಜಮನಾದಾಸ ಮೆಹತಾ ಇವರು ಆದಿತ್ಯವಾರ ದಿವಸ ಹಿಂದೂ ಯುವಕ ಸಂಘದಲ್ಲಿ " ಸದ್ಯದ ರಾಜಕೀಯ ಪರಿಸ್ಥಿತಿ ಹಾಗು ಅದನ್ನು ಸುಧಾರಿಸುವ ಮಾರ್ಗಗಳು " ಎಂಬ ವಿಷಯವಾಗಿ ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ಹೇಳಿದ್ದೇನಂದರೆ— ಈಗ ಎಲ್ಲಿ ನೋಡಿದಲ್ಲಿ ನಿರಾಶಾಜನಕ ವಾತಾವರಣವೇ ಕಂಡುಬರುತ್ತದೆ ಒಬ್ಬರ ಮುಖದ ಮೇಲೆಯೂ ಉತ್ಸಾಹದ ಕಳೆ ಕಂಡುಬರುವದಿಲ್ಲ. ಕಾರ್ಯಕರ್ತರು [illegible] ದಲ್ಲಿಯೇ ಉಳಿಯಬೇಕೆಂದು ನವ್ಯ ಹಣಬಂಡಿದರಲ್ಲಿ [illegible] ವರು. ಆದರೆ [illegible] ಯ ಸುಧ್ಯ [illegible] ವನು [illegible] ಈ ರಿಜ [illegible] ತಿಯ [illegible] ಹೇಗಾದರೂ ಬಾರಾಗುವ ಪ್ರಯತ್ನ ಮಾಡಬೇಕು. ನಾವು ಮಾಡಬೇಕಾದ ಮೊದಲನೆ ಕೆಲಸವೆಂದರೆ ರೋಗವನ್ನು ಕಂಡುಹಿಡಿದು ಅದಕ್ಕೆ ಚಿಕಿತ್ಸೆಯನ್ನು ಕೊಡಬೇಕು. ಮೊದಲನೆಯದೆಂದರೆ ಸರಕಾರದವರು ಸದ್ಯಕ್ಕಂತೂ ಕಾಂಗ್ರೆಸ್ ಚಳವಳಿಯನ್ನು ಹತ್ತಿಕ್ಕಿದ್ದಾರೆ ಅದಲ್ಲದೆ ಅವರು ಒಂದು ವಿರಿದ್ರ್ಯಾನ [illegible] ವನ್ನು ಹೂಡಿ, ಕಾಂಗ್ರೆಸ್ ಪಕ್ಷದ ಕೆಲವರನ್ನು ತಮ್ಮ ಕಡೆಗೆ ಎಳೆದುಕೊಂಡಿದ್ದಾರೆ ಇನ್ನು ಎರಡನೆ ವಿಷಯವೆಂದರೆ ನಾವು ಆರ್ಥಿಕ ಪರಿಸ್ಥಿತಿಯ ವಿಷಯವಾಗಿ ಯಾರಾದರೂ ವಿಚಾರ ಮಾಡಬೇಕು [illegible] ದಲ್ಲಿಯ ಆರ್ಥಿಕ ಪರಿಸ್ಥಿತಿಯಾದರೂ ಕೆಟ್ಟು ಹೋಗಿ [illegible] ಇದನ್ನು [illegible] ರದ [illegible] ಗಳ [illegible]. ಮೂರನೆಯದೆಂದರೆ, ದೇಶದಲ್ಲಿಯ ಪಕ್ಷೋಪಪಕ್ಷಗಳಲ್ಲಿಯ ಒಳ ಭೇದಗಳಾದರೂ ರಾಜಕೀಯ ಅವನತಿಗೆ ಕಾರಣವಾಗಿದೆ. ಕಾಂಗ್ರೆಸದಲ್ಲಿಯೇ ವರದು ನಾಲ್ಕು ಪಕ್ಷಗಳುಂಟು

ಶ್ರೀ ಜಮನಾದಾಸರು ಮುಂದೆ ಹೇಳಿದ್ದೇನಂದರೆ— ಒಂದು ಕಡೆಗೆ ಕಾಯದೆ ಮಂಡಳಗಳನ್ನು ಬಹಿಷ್ಕರಿಸಲು ಉಪದೇಶ ಮಾಡಿ, ಮತ್ತೊಂದು ಕಡೆ " ಹರಿಜನ ಮಸೂದೆಗೆ ಕಾಯದೆ ಮಂಡಳದವರ ಬೆಂಬಲ ತೆಗೆದುಕೊಳ್ಳಲು ಶ್ರೀ ರಾಜಗೋಪಾಲಾಚಾರ್ಯರಿಗೆ ಹೇಳಿಕೊಳ್ಳುವದು ಎಳ್ಳಷ್ಟು ಸಮಂಜಸವಾದುದಿಲ್ಲ ನನ್ನನ್ನು ಕೇಳಿದರೆ, ನಾವು ಮಾಡತಕ್ಕದ್ದೆಂದರೆ ಕಾಯದೆ ಮಂಡಳಗಳನ್ನೂ, ಲೋಕಲ್ ಬೋರ್ಡುಗಳನ್ನೂ, ಪಂಚಾಯಿತಿಗಳನ್ನೂ, ಮ್ಯುನಿಸಿಪಾಲಿಟಿ ಮೊದಲಾದ ಸಂಸ್ಥೆಗಳನ್ನೂ ಸ್ವಾಧೀನಪಡಿಸಿಕೊಳ್ಳತಕ್ಕದ್ದೆಂದೇ ಹೇಳುತ್ತೇನೆ

ಶ್ರೀ ಜಮನಾದಾಸರು ಕೊನೆಯಲ್ಲಿ ಯವತಕ್ಕೂ [illegible] ರಿಗೆ [illegible] ಹಾಗು [illegible] ಹೋಗಲು ವಿನಂತಿ ಮಾಡಿಕೊಂಡು, ಹೇಳಿದ್ದೇನಂದರೆ– ನಾವೆಲ್ಲ ಒಕ್ಕಟ್ಟಿನಿಂದ [illegible] ಹುಟ್ಟಿದ್ದಾದರೆ, ಯವನೇ [illegible] ಗಲಿ ಅವರ ಸ್ವಾತಂತ್ರ್ಯ ಮಾರ್ಗದಲ್ಲಿ ಅಡ್ಡಬರಲು ಶಕ್ತನಾಗಲಾರನು

ಶಾಂತೇಶ ವಾಚನಾಲಯಕ್ಕೆ ಧರ್ಮಾರ್ಥ ನಾಟಕ.

ಇಲ್ಲಿಯ, ದಿ ಧಾರವಾಡ ಅಮೇಚ್ಯೂರ ಡ್ರಾಮ್ಯಾಟಿಕ್ ಅಸೋಸಿಯೆಶನದವರು, ತಾವು ಬರುವ ವಾರದಲ್ಲಿ ಆಡಲಿರುವ ಪ್ರೊ. ಜಹಾಗೀರದಾರರ " ಸಂಸಾರಿಕ ಕಂಟ " ಎಂಬ ನಾಟಕದ ಎಲ್ಲ ಉತ್ಪನ್ನವನ್ನು ಶ್ರೀ ಶಾಂತೇಶ ವಾಚನಾಲಯಕ್ಕೆ ಕೊಡುವವರಿದ್ದಾರೆಂದು ತಿಳಿಯುತ್ತದೆ

ಸುಪ್ರಸಿದ್ಧ ಡಾ ಜಿ. ಬಿ. ಯವರ ಸುಪ್ರಸಿದ್ಧ

ಸುಗಂಧ ನಶ್ಯದ ಪುಡಿ



ಲೋಕ ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ [illegible] ಸಾವಿರಾರು [illegible] ಇದನ್ನು ಉಪಯೋಗಿಸಿ ಸಾವಿರಾರು [illegible] ಪತ್ರಗಳನ್ನು ಕೊಟ್ಟಿರುತ್ತಾರೆ. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ [illegible] ವ್ಯಾಧಿಗಳು ಯಾವವೆಂದರೆ— ಪಿಣಿಸಿ, ಒಂಟಿತಲೆನೋವು, ತಲೆಯ [illegible] ರೋಗಗಳು ಕಣ್ಣುಗಳಲ್ಲಿ [illegible] ವ್ಯಾಧಿಗಳು [illegible] [illegible] ವ್ಯಾಧಿಗಳು [illegible] [illegible] ಸುಗಂಧ ನಶ್ಯದ ಪುಡಿ [illegible] ಇದನ್ನು ಅನೇಕ ಪ್ರಭುಗಳ [illegible] [illegible]

[illegible] ಗುರುಬಸವ ಅಂಡ್ ಕಂಪನಿ, ಲಿಮಿಟೆಡ್

[illegible]

[illegible]

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ಎಲ್ಲಕ್ಕಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ॥ ೩೧ ೮ ೩೪ | ಕೃಷ್ಣರಾವ ಅಂಕಲಗಿ ಮ್ಯಾನೇಜಿಂಗ ಡಾಯರೆಕ್ಟರ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಗುರುವಾರ ತಾ|| ೩೦-೮-೩೪ ನೇ ದಿವಸ ರಾತ್ರಿ

ಶ್ರೀಕೃಷ್ಣ ಸುದಾಮ

ಎಂಬ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

ಸಂಘದೊಡೆಯರು,

ಗರೂಡ ಸದಾಶಿವರಾಯರು

ಸತ್ಯಾಗ್ರಹಿಗಳ ೪ನೇ ತಂಡಕ್ಕೆ ವರ್ಧಾದಲ್ಲಿ ಕೈದು

ವರ್ಧಾ ತಾ|| ೨೭- ವರ್ಧಾ ತಾಲೂಕ ಸತ್ಯಾಗ್ರಹಿಗಳ ೪ನೆ ತಂಡದವರು ಕಾಯದೆಭಂಗದ ಉದ್ದೇಶದಿಂದ ಭಿವಾಪುರ ಎಂಬ ಹಳ್ಳಿಯಿಂದ ಇತ್ತ ಕಡೆಗೆ ಬರುತ್ತಿದ್ದರು ಆದರೆ ಪೋಲಿಸರು ಅವರು ವರ್ಧಾಕ್ಕೆ ಬರುವದರೊಳಗಾಗಿಯೇ ಅವರನ್ನು ಕೈದು ಮಾಡಿದರು. ಈ ತಂಡದಲ್ಲಿ ೭ ಜನರು ಇದ್ದರು

ನೋಟೀಸಿನ ದರಗಳು.

ಮೊದಲನೆ ಸಾರೆ ಸಿಂಗಲಕಾಲಮಿನ ೧ ಸಾಲಿಗೆ	೦-೩-೦
ಮುಂದೆ ಪ್ರತಿಯೊಂದು ಸಾರೆ	೦-೨-೦
ಎರಡನೆ ಸಾರೆ	[illegible]
ಮುಂದೆ ಪ್ರತಿಯೊಂದು ಸಾರೆ	[illegible]

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮಂತ್ರಿ ಲೋಕ. ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम्॥मनु

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಶೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಶೂರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಶೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ.ಕಂ.ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಶುಕ್ರವಾರ ಭಾದ್ರಪದ ಶುದ್ಧ ೧೨ ಶಕೆ ೧೮೫೫ ತಾ|| ೧-೯-೩೩ [ಸಂಚಿಕೆ ೧೭೧

ಪಂ ಜವಾಹಿರಲಾಲರ ಬಿಡುಗಡೆ. ಮಾತಾ-ಪುತ್ರರ ಭೆಟ್ಟಿ

(ಅಸೋಸಿಯೇಟೆಡ್ ತಂತಿಯ ವಾರ್ತೆ ತಾ|| ೩೧)

ಪಂಡಿತ ಜವಾಹಿರಲಾಲರ ಬಿಡುಗಡೆ

ಅಲಹಾಬಾದ ತಾ|| ೩೦— ಪಂಡಿತ ಜವಾಹಿರಲಾಲ ನೆಹರೂ ಇವರು ಈ ಹೊತ್ತಿನ ದಿವಸ ಸಂಜೆಯ ೫ ಗಂಟೆಗೆ ನೈನಿ ಜೇಲಿನಿಂದ ಬಿಡುಗಡೆ ಹೊಂದಿದರು ಸುಪರಿಂಟೆಂಡೆಂಟರು ಅವರನ್ನು ತಮ್ಮ ಮೋಟರದಲ್ಲಿ ಕುಳ್ಳರಿಸಿಕೊಂಡು ಆನಂದ ಭುವನಕ್ಕೆ ತಂದು ಮುಟ್ಟಿಸಿದರು ಅವರು ಈ ದಿವಸ ರಾತ್ರಿ ತಾಯಿಯವರನ್ನು ಕಾಣಲು ಲಖನೌಕ್ಕೆ ತೆರಳತಕ್ಕವರಿದ್ದಾರೆ (ಅ ಪ್ರೆ)

ಅಲಹಾಬಾದದಲ್ಲಿ ಪಂಡಿತ ಜವಾಹಿರರ ಭಾಷಣ.

ಅಲಹಾಬಾದ ತಾ|| ೩೦— ಪಂಡಿತ ಜವಾಹಿರಲಾಲರು ಈ ಹೊತ್ತಿನ ದಿವಸ ಖದ್ದರ ಭಾಂಡಾರದಲ್ಲಿ ಸಾರ್ವಜನಿಕ ಸಭೆಯಲ್ಲಿ ಸ್ವಲ್ಪ ಹೊತ್ತು ಭಾಷಣ ಮಾಡಿ, ಅಗಲಿಸಲ್ಪಟ್ಟವರನ್ನು ಪುನಃ ಕಾಣಲಿಕ್ಕೆ ತಮಗೆ ಆನಂದವಾಗುತ್ತದೆಂದು ಹೇಳಿದರು ಪಂಡಿತರು ಉಲ್ಹಾಸ ವೃತ್ತಿಯವರಾಗಿಯೂ ಮತ್ತು ಸುಸ್ಥಿತಿಯುಳ್ಳವರಾಗಿಯೂ ಕಂಡು ಬಂದರು (ಅ ಪ್ರೆ)

ಮಾತಾ—ಪುತ್ರರ ಭೆಟ್ಟಿ.

ಲಖನೌ ತಾ|| ೩೧— ನಿನ್ನಿನ ದಿವಸ ಸಂಜೆಯ ೫ ಗಂಟೆಗೆ ಜೇಲಿನಿಂದ ಬಿಡುಗಡೆ ಹೊಂದಿದ ಪಂಡಿತ ಜವಾಹಿರಲಾಲರು ಈ ಹೊತ್ತಿನ ದಿವಸ ಮುಂಜಾನೆ ಅಲಹಾಬಾದದಿಂದ ಇಲ್ಲಿಗೆ ಬಂದರು ಮತ್ತು ಕೂಡಲೆ ತಾಯಿಯವರನ್ನು ಕಾಣಲು ನೇರವಾಗಿ ವೈದ್ಯಕೀಯ ಕಾಲೇಜದ ಆಸ್ಪತ್ರಿಗೆ ಹೊರಟು ಹೋದರು ಶ್ರೀಮತಿ ಸ್ವರೂಪರಾಣಿಯವರ ಜ್ವರವು ನಿನ್ನಿನ ದಿವಸ ಸಂಜೆಯಲ್ಲಿ ಸ್ವಲ್ಪ ಹೆಚ್ಚಾಗಿತ್ತು ಅವರು ಮಗನ ಬಿಡುಗಡೆಯ ವಾರ್ತೆಯನ್ನು ಕೇಳಿ ಉದ್ರೇಕಗೊಂಡಿದ್ದೇ ಇದಕ್ಕೆ ಕಾರಣವಿರಬಹುದು (ಅ ಪ್ರೆ)

ಲಖನೌ ತಾ|| ೩೧- ಪಂಡಿತ ಜವಾಹಿರಲಾಲರು ಈ ಹೊತ್ತಿನ ದಿವಸ ತಮ್ಮ ಮಾತೃಶ್ರೀಯವರನ್ನು ಕಂಡರು. ಶ್ರೀಮತಿಯವರ ಪ್ರಕೃತಿಯಲ್ಲಿ ಏನೂ ಬದಲು ಆಗಿರುವದಿಲ್ಲ (ಅ ಪ್ರೆ)

ಸೌ|| ಕಮಲಾದೇವಿ ನೆಹರೂರವರಿಗೆ ಪುನಃ ಎದೆನೋವು

ಲಖನೌ ತಾ|| ೩೧- ಸೌ|| ಕಮಲಾದೇವಿ ನೆಹರೂರವರಿಗೆ ಈ ಹೊತ್ತಿನ ದಿವಸ ಪುನಃ ಎದೆನೋವು ಎದ್ದಿತ್ತು. ಅವರು ಇನ್ನೂ ಹಾಸಿಗೆಯಲ್ಲಿಯೇ ಒರಗಿಕೊಂಡಿದ್ದಾರೆ ಕುಮಾರಿ ಇಂದು ನೆಹರೂ ಇವಳಿಗೆ ಹೊರಟು ಬರಲು ಬರೆದಿದೆ. (ಅ ಪ್ರೆ)

ಪಂಡಿತ ಜವಾಹಿರಲಾಲರ ಕಾರ್ಯಕ್ರಮ

ಲಖನೌ ತಾ|| ೩೧ — ಪಂಡಿತ ಜವಾಹಿರಲಾಲ ನೆಹರೂ ಇವರು ಮೂರು ದಿನಗಳ ವರೆಗೆ ಇಲ್ಲಿ ನಿಲ್ಲತಕ್ಕವರಿದ್ದಾರೆ ಆ ಮೇಲೆ ಅವರು ಅಲಹಾಬಾದಕ್ಕೆ ಹೋಗತಕ್ಕವರಿದ್ದಾರೆ ಅಲ್ಲಿ ಸ್ವಲ್ಪ ಹೊತ್ತು ನಿಂತು ಪುನಃ ಅವರು ಇಲ್ಲಿಗೆ ತಿರುಗಿ ಬರುವರು ನಂತರ ಅವರು ತಮ್ಮ ಮಾತೃಶ್ರೀಯವರ ಬಳಿಯಲ್ಲಿ ಉಳಿಯತಕ್ಕವರಿದ್ದಾರೆ (ಅ ಪ್ರೆ)

ಮಹಾತ್ಮರ ಪ್ರಕೃತಿಯಲ್ಲಿ ಅಷ್ಟೇನೂ ಸುಧಾರಣೆಯಾಗಿಲ್ಲ.

ಪುಣೆ ತಾ|| ೩೦— ಮಹಾತ್ಮಾ ಗಾಂಧಿಯವರ ಪ್ರಕೃತಿಯಲ್ಲಿ ಸುಧಾರಣೆಯಾಗಿ ಅವರು ಬೇಗನೆ ಮೊದಲಿನಂತೆ ಆರೋಗ್ಯವಂತರಾಗುವರೆಂಬುದಾಗಿ ಆಶೆ ಮಾಡಿದ್ದುದು ಅತಿಶಯೋಕ್ತಿಯಾಗಿರುವದೆಂದು ತೋರಿಬರುತ್ತದೆ ಯಾಕಂದರೆ ಅವರ ಪ್ರಕೃತಿಯು ಮೊದಲು ಸ್ವಲ್ಪ ದಿವಸ ಬೇಗಬೇಗನೆ ಸುಧಾರಿಸುತ್ತ ಹೋದದ್ದೇನೋ ನಿಜ ಆದರೆ ಅವರ ಶುಶ್ರೂಷೆಯಲ್ಲಿ ತೊಡಗಿದವರು ಯಾವದಾದರೂ ಕೆಲಸ ಮಾಡುವಾಗ ಮಹಾತ್ಮರಿಗೆ ಬಹಳ ದಣುವು ಆಗುತ್ತದೆಯೆಂದು ಹೇಳುತ್ತಾರೆ (ಅ ಪ್ರೆ)

ಮಹಾತ್ಮರು ಗುಣಹೊಂದಬೇಕಾದರೆ ಇನ್ನೂ ಒಂದುವಾರ ಬೇಕು.

ಪುಣೆ ತಾ|| ೩೦— ಮಹಾತ್ಮಾ ಗಾಂಧಿಯವರು ಸಂಪೂರ್ಣವಾಗಿ ಗುಣ ಹೊಂದಿ ಮೊದಲಿನ ಸ್ಥಿತಿಗೆ ಬರಬೇಕಾದರೆ ಇನ್ನೂ ಒಂದು ವಾರ ಬೇಕಾಗಬಹುದೆಂದು ತಿಳಿಯುತ್ತದೆ ಆದ್ದರಿಂದ ಅವರು ತಾವು ಸಂಪೂರ್ಣವಾಗಿ ಗುಣ ಹೊಂದುವ ವರೆಗೆ ಅಂದರೆ ಇನ್ನೂ ಒಂದು ವಾರದ ವರೆಗೆ ಮುಂದಿನ ಹೆಜ್ಜೆಯನ್ನು ಕೈಕೊಳ್ಳುವದಿಲ್ಲ (ಅ ಪ್ರೆ)

ರಾಜಕೀಯ ಪರಿಸ್ಥಿತಿ ಬಗ್ಗೆ ವಿಚಾರ ವಿನಿಮಯ.

ಪುಣೆ ತಾ| ೩೦— ಮಹಾತ್ಮಾ ಗಾಂಧಿಯವರು ಈಗ ರಾಜಕೀಯ ಚಳವಳಿಗೆ ಸಂಬಂಧಿಸಿದ ಮಹತ್ವದ ವಿಷಯಗಳ ಬಗ್ಗೆ ವಿಚಾರ ವಿನಿಮಯ ನಡಿಸಿರುವರೆಂದು ಗೊತ್ತಾಗುತ್ತದೆ (ಅ ಪ್ರೆ)

ಬಸವೇಶ್ವರ ಖಾದಿ ಅಂಗಡಿ ಹುಬ್ಬಳ್ಳಿ ಸಂಚಾಲಕರ ಮೇಲಿನ ಆರೋಪ ಸುಳ್ಳಿದೆ

ಈ ಖಾದಿ ಅಂಗಡಿಯ ಬಗ್ಗೆ ಕೆಲವು ಸುಳ್ಳು ಸುದ್ದಿಗಳನ್ನು ಕೆಲವರು ಪ್ರಸಾರ ಮಾಡುವದಕ್ಕೆ ಆರಂಭಿಸಿರುವರಂತೆ ಅವುಗಳನ್ನು ನಂಬಬಾರದು. ಸಂಶಯವಿದ್ದವರು ಸಂಚಾಲಕರಿಗೆ ಭೆಟ್ಟಿಯಾಗಿ ಕೇಳಿ ನಿಜಸ್ಥಿತಿಯನ್ನು ತಿಳಿಕೊಳ್ಳಬಹುದು ಎಂದು ಶ್ರೀ ಪಾವಟೆ ಮತ್ತು ಶ್ರೀ ಕೆಂಚಣ್ಣವರು ತಿಳಿಸುತ್ತಾರೆ.

ಆಯರ್ಲಂಡದಲ್ಲಿ ಕಾಯದೆಭಂಗ ಪೋಲೀಸರ ಕಣ್ಣುತಪ್ಪಿಸಿ ಸಭೆಮಾಡಿದರು.

ಡಬ್ಲಿನ್ ತಾ| ೩೦— ಅಧಿಕಾರಿಗಳು ಸಭೆ ಮೆರವಣಿಗೆ ಮೊದಲಾದವುಗಳಿಗೆ ಪ್ರತಿಬಂಧವನ್ನು ಮಾಡಿದಾಗ್ಯೂ, ನೀಲಿ ಅಂಗಿಯ ಜನರು ಮೊನ್ನಿನ ದಿವಸ ಗುಪ್ತವಾಗಿ ಸಭೆಯನ್ನು ನೆರವೇರಿಸಿದರು ೫೦೦ ಜನ ಪೋಲೀಸರು ಈ ಗುಪ್ತ ಸಭೆಯ ಸ್ಥಳವನ್ನು ಹುಡುಕುವದರಲ್ಲಿ ತೊಡಗಿದರು. ಪೋಲೀಸರು ಒಂದು ಸಂಶಯಾಸ್ಪದವಾದ ಸ್ಥಳದಲ್ಲಿ ತೋಫು, ಗುಂಡು, ಬಂದೂಕು ಮೊದಲಾದವುಗಳಿಂದ ಸುಸಜ್ಜಿತರಾಗಿ ಕುಳಿತುಕೊಂಡಿರಲು, ಜನರಲ್ ಓಡಫಿಯವರು ತೀವ್ರ ವೇಗದ ಒಂದು ಮೋಟರದಲ್ಲಿ ಆ ಗುಡ್ಡಗಾಡು ಪ್ರದೇಶದಲ್ಲಿ ಎತ್ತಲೋ ನಡೆದಿದ್ದರು ಗುಪ್ತಚಾರರು ಎಂಟು ಮೋಟಾರುಗಳಾದರೂ ಅವರ ಮೋಟರದ ಹಿಂದೆಯೇ ಇದ್ದವು ಆದರೆ ಜನರಲ್ ಓಡಫಿಯವರ ಮೋಟರ ಇಕ್ಕಟ್ಟಿನ ಸ್ಥಳದಲ್ಲಿ ಬಂದ ಕೂಡಲೇ, ಅವರೊಂದಿಗೆಯೇ ಹೊರಟಿದ್ದ ನೀಲಿ ಅಂಗಿಯವರು ತಮ್ಮ ಮೋಟರದ ವೇಗವನ್ನು ಕಡಿಮೆ ಮಾಡಿದರು ಈ ಕಾರಣ ಅವರ ಹಿಂದೆ ಬರುತ್ತಿದ್ದ ಗುಪ್ತಚಾರರಿಗೆ ಓಡಫಿಯವರ ಮೋಟರನ್ನು ಬೆನ್ನುಹತ್ತುವದು ಅಶಕ್ಯವಾಯಿತು ಜನರಲ್ ಓಡಫಿಯವರು ಮೋಟರಿನ ವೇಗವನ್ನು ಹೆಚ್ಚುಮಾಡಿ ಹೊರಟುಹೋದರು

ಆಯರಿಶ ಪ್ರಜಾಸತ್ತಾತ್ಮಕ ಸೈನ್ಯದವರ ಹಂಚಿಕೆ

ಡಬ್ಲಿನ ತಾ|| ೩೦— ಆಯರಿಶ ಪ್ರಜಾಸತ್ತಾತ್ಮಕ ಸೈನ್ಯದ ಹೆಡ್‌ಕ್ವಾರ್ಟರ ಸ್ಟಾಫದ ಜನರಲ್ ಸೀನರಥೆಲ್ ಇವರು ಮೊನ್ನಿನ ದಿವಸ ಮಿಡಲಟೆನ್ ಎಂಬಲ್ಲಿ ಒಂದು ಭಾಷಣ ಮಾಡಿದರು ಆಗ ಅವರು ಹೇಳಿದ್ದೇನಂದರೆ— ಡಿವ್ಹೆಲರಾ ಪಕ್ಷದವರು ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯನ್ನು ಪ್ರಾರಂಭಿಸುವರೆಂಬ ಅಪೇಕ್ಷೆಯಿಂದ ಆಯರಿಶ್ ಪ್ರಜಾಸತ್ತಾತ್ಮಕ ಸೈನದವರು ಫಿಯನಾಫೆಲಕ್ಕೆ ಅಂಟಿಕೊಂಡು ಕಳಿತಿದ್ದಾರೆ ಆಯರಿಶ ಪ್ರಜಾಸತ್ತಾತ್ಮಕ ಸೈನಿಕರು ತಮ್ಮ ಶಸ್ತ್ರಾಸ್ತ್ರಗಳನ್ನು ಪ್ರಜಾಸತ್ತಾತ್ಮಕ ಸರಕಾರದ ಹೊರತು ಉಳಿದವರ ಕೈಯಲ್ಲಿ ಕೊಡಲು ಸಿದ್ಧರಿಲ್ಲ

ಅಂತ್ಯಜರ ಶಿಕ್ಷಣಕ್ಕೆ ೧೦ ಲಕ್ಷ ರುಪಾಯಿ ಬೇಡಿಕೆ.

ಈ ಸಲದ ಬಿಹಾರ - ಓರಿಸಾ ಕಾಯದೆ ಮಂಡಳದಲ್ಲಿ ರಾಯಬಹದ್ದೂರ ಲಕ್ಷ್ಮೀಪ್ರಸಾದ ಸಿಂಹ ಇವರು, ಬಿಹಾರ ಓಡಿಸಾ ಪ್ರಾಂತದಲ್ಲಿಯ ಅಸ್ಪೃಶ್ಯರ ಶಿಕ್ಷಣಕ್ಕಾಗಿ, ಬರುವ ೫ ವರ್ಷಗಳಲ್ಲಿ ಕೂಡಿ ೧೦ ಲಕ್ಷ ರುಪಾಯಿಗಳನ್ನು ತೆಗೆದಿಡಬೇಕೆಂದು ಸೂಚನೆ ತರುವವರಿದ್ದಾರೆ ಇದಲ್ಲದೆ ಅವರು ಕಾಯದೆ ಮಂಡಳದ ಉಪಾಧ್ಯಕ್ಷರ ಸ್ಥಳವನ್ನು "ಆನರರಿ" ಸ್ಥಳವನ್ನಾಗಿ ಮಾಡತಕ್ಕದ್ದೆಂದೂ ಮತ್ತು ಸಕಾರಿ ರಾಣಿಯನ್ನು ಪ್ರತಿವರ್ಷ ರಾಂಚಿಗೆ ಒಯ್ಯುವದನ್ನು ನಿಲ್ಲಿಸತಕ್ಕದ್ದೆಂದೂ ಗೊತ್ತುವಳಿ ತರತಕ್ಕವರಿದ್ದಾರೆ ಕಡೆಯ ಎರಡು ಗೊತ್ತುವಳಿಗಳಿಗೆ ಆರ್ಥಿಕ ಮುಂದಟ್ಟಣೆಯೇ ಕಾರಣವಾಗಿದೆ.

ಒಪ್ಪಂದದ ಬಗ್ಗೆ ಓರ್ವ ಬ್ರಿಟಿಶ ಗೃಹಸ್ಥನ ಪ್ರಯತ್ನ

ಮುಂಬಯಿ ತಾ|| ೩೦— ಇಂಗ್ಲಂಡದಿಂದ ಇತ್ತೀಚೆಗೆ ಹಿಂದುಸ್ಥಾನಕ್ಕೆ ಹೊರಟು ಬಂದ ಮಹಾತ್ಮಾ ಗಾಂಧಿಯವರ ಬ್ರಿಟಿಶ ಸ್ನೇಹಿತನೊಬ್ಬನು ಒಂದೆರಡು ದಿನಗಳ ಹಿಂದೆ ಮಹಾತ್ಮರನ್ನು ಕಂಡು, ಕಾಂಗ್ರೆಸ್ ಹಾಗು ಸರಕಾರದ ನಡುವೆ ಒಪ್ಪಂದವು ಸಾಧ್ಯವಿದೆಯೇನೆಂಬ ವಿಷಯವಾಗಿ ವಿಚಾರ ವಿನಿಮಯ ಮಾಡಿದನೆಂದು ತಿಳಿಯುತ್ತದೆ ಈ ಗೃಹಸ್ಥನು ಈ ಸಂಬಂಧವಾಗಿ ವ್ಹಾಯಿಸರಾಯರನ್ನು ಕಾಣಲು ಬೇಗನೆ ಸಿಮ್ಲಾಕ್ಕೆ ಹೊರಡತಕ್ಕವನಿರುತ್ತಾನೆ

ಚರ್ಚಿಲ ಸಾಹೇಬರ ಪಕ್ಷವು ಪ್ರಬಲವಾಗುವದು!

ಪುಣೆ ತಾ| ೩೦— ಭಾರತ ಸೇವಕ ಸಮಾಜದಲ್ಲಿ ಕೂಡಿದ ಗುಪ್ತಸಭೆಯಲ್ಲಿ ಭಾಷಣ ಮಾಡುವಾಗ ದೀನಬಂಧು ಆ್ಯಂಡ್ರೂಜರು ಹೇಳಿದ್ದೇನಂದರೆ— ಬಳೇಕಾಗದದ ವರದಿಯು ಪ್ರಸಿದ್ಧವಾದ ಬಳಿಕ, ಕಾಂಜರ್ವೇಟಿವ್ಹ ಪಕ್ಷದಲ್ಲಿ ಚರ್ಚಿಲ್ ರೊದರಮಿಯರ ಪಕ್ಷವು ಪ್ರಬಲವಾಗುವ ಸಂಭವ ತೋರಿಬರುತ್ತದೆ ಹೀಗೆ ಆದಲ್ಲಿ ಕಾಂಜರ್ವೇಟಿವ್ಹ ಪಕ್ಷವು ಒಡೆದು ಹೋಗುವದು ಮತ್ತು ಹಿಂದುಸ್ಥಾನದ ಪ್ರಶ್ನೆಯು ಮೇಲೆ ಮುಂದಿನ ವರ್ಷ ಪುನಃ ಆರಿಸುವಿಕೆ ಆಗಬೇಕಾಗುವದು

ಸೌ|| ಸರೋಜಿನಿ ದೇವಿಯವರಾದರೂ ಈ ಸಭೆಯಲ್ಲಿ ಭಾಷಣ ಮಾಡಿದರು. ಸಭೆಯಲ್ಲಿ ಪತ್ರಿಕಾ ಸುದ್ದಿಗಾರರಿಗೆ ಪ್ರವೇಶವಿರಲಿಲ್ಲ

ಕೊನೆಯಬುತ್ತಿ

ಹೊಂಗೋಲ್



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಛೂರ್

ಶುಷ್ಕಶುವ ಮತ್ತು ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವದು. "ಹೆಮ್ಮುಗುಳು" ವಸಡಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮುಗಳಿನ ಕತ್ವವು "ಕಚ್ಛೂರ್" ದಂತ ಮಂಜನದಲ್ಲಿ ಅಡಕವಾಗಿದೆ. ಆಹಾರದ ಅವಶೇಷಗಳು ಹಲ್ಲುಗಳ ಸಂದಿಗಳಲ್ಲಿ ಉಳಿದು ಕ್ರಿಮಿಗಳುಂಟಾಗಿ ಹಲ್ಲು ಮತ್ತು ವಸಡೆಗಳು ಕೆಡುವವು. ಆದರೆ ಈ ಕ್ರಿಮಿಗಳು ಕಚ್ಛೂರ್ ದಂತಮಂಜನದ ಉಪಯೋಗದಿಂದ ನಾಶವಾಗ ವವಲ್ಲದೆ ಒಸಡೆಗಳು ಬಲಕಟ್ಟಾಗಿ ಬಾಯೊಳಗಿನದುರ್ವಾಸನೆಯು ಹಡಗಿ ಸುವಾಸವುಂಟಾಗುವದು. "ಕಚ್ಛೂರ್" ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಹಾಸಿಗೆಯಿದ್ದಷ್ಟು ಕಾಲುಚಾಚು" ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹಳೆಯದೂ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದೂ
ಹೆಚ್ಚಿನ ಸಂಧಾರಣೆ ಪಡೆದದ್ದೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ. ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ|| ೧೭-೫-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)
ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ, ಯಾತ್ರಿಕರಿಂದ
ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

ಶ್ರೀ ರಾಮೇಶ್ವರ ಸಮುದ್ರದಾಟ ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೆಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಅಶ್ವಯುಜ ಶು|| ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ||	೨	೧೯ ಲಖನೌ	೨೪	೩೭ ಕುಂಭಕೋಣಂ	೫
೨ ನಾಶಿಕ	೪-೫	೨೦ ಅಯೋಧ್ಯೆ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ ಕನ್ಯಾಕುಮಾರಿ [ಹಡಗದಿಂದ]	೧೮
೪ ಸೋಮನಾಥಪಟ್ಟಣ (ಹಡಗದಿಂದ)	೮-೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಕಾಶೀ	೨೮-೨೯-೩೦-೩೧ ನವೆಂಬರ ತಾ|| ೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲಿಟಾಣಾ (ಜೈನತೀರ್ಥ)	೧೦-೧೧	೨೪ ಸಾರನಾಥ	,,	೪೨ ಅನುರಾಧಪುರ [ಲಂಕಾ]	೨೩
೭ ಅಬುಪಹಾಡ (ಜೈನತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಡಿ [ಹಡಗದಿಂದ]	,,
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೪ ಮಧುರೆ	೨೪
೯ ಸಾಬರಮತಿ	,,	೨೭ ಗಿರಿ	,,	೪೫ ತ್ರಿಚನಾಪಳ್ಳಿ	೨೫
೧೦ ಬಡೋದೆ	೧೫	೨೮ ಸಮ್ಮೇದಶಿಖರ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಉಜ್ಜಯಿನ	೧೬	೨೯ ಕಲಕತ್ತಾ	೫-೬-೭	೪೭ ಬೆಂಗಳೂರ	೨೬
೧೨ ಆಗ್ರಾ	೧೭	೩೦ ಜಗನ್ನಾಥ ಪುರಿ	೮	೪೮ ಮೈಸೂರ	೨೭-೨೮
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು|| ೧೩ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣ ವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು.

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚುಸೇರಿ ಸೆಕಂಡಕ್ಲಾಸ ೩೧೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ ಸೆಕಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಆಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು. ಆದಕಾರಣ ಟಿಕೇಟ ಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯು ಏಜನ್ ರಂಟೆಗಳು— ಸದರ ಕಂಪನಿಯ ಏಜನ್ ರಂಟೆಗಳೆಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರು ಹಾಗು ವರ್ತಕರ ಬಹಳ ಪರಿಚಯದಲ್ಲಿ ತೀರ್ಮಾನ ಕೊಡಲ್ಪಟ್ಟಂತೆ ೧೯೩೪ ನೇ ಇಸ್ವಿಯ ಬೇಸಗೆಯಲ್ಲಾದರೂ ತಯಾರಮಾಡಿಕೊಡುವದರಲ್ಲಿ ಬರುವದು. ಇಂಥ ಉಪಯೋಗ ಬೇಕಾದವರು ಶೀಘ್ರ ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸತಕ್ಕದ್ದು. ಅರ್ಜಿಯ ಫಾರ್ಮುಗಳೂ ಏಜನ್ ರಂಟೆಯ ಹೆಚ್ಚಿನ ಮಾಹಿತಿ ಪತ್ರಿಕೆಗಳೂ ಬೇಕಾದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು. ಏಜಂಟರಾಗಬಯಸುವವರು ಕೂಡಲೆ ತಿಳಿಸತಕ್ಕದ್ದು. ಯೋಗ್ಯ ಕಮೀಶನ್ ಕೊಡಲ್ಪಡುವದು.

ಜಿ. ಎ. ಶಿರೂರ
ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ
ಬಾಗಲಕೋಟೆ ಏಜಂಟ:— ಜಿ. ಎಚ್. ಚನಪ್ಪಾ ಬುಕ್‌ಸೇಲರ.

ಬರುವರು! ಧಾರವಾಡಕ್ಕೆ ಬರುವರು!!

ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾದ

ಕಲಾನಿಪುಣ ಪ್ರೊ. ಎಚ್. ಜಿ. ಘೋಡಕೆ ಇವರ

ಹಾಸ್ಯಕಾರಕ-ಪ್ರೌಢ ಮತ್ತು ಸಂಗೀತ ಹೊಸತರದ

ಸಕಲಿನ ಪ್ರಚಂಡ

ಪ್ರೋಗ್ರಾಮ

ಅಗುವದು.

ಕನ್ನಡಿಗ.

ಧಾರವಾಡ— ಶುಕ್ರವಾರ ತಾರೀಖು ೧—೯—೧೯೩೩

ನಾಡಹಬ್ಬವನ್ನು ಹಬ್ಬಿಸಬೇಡವೆ?

ಕೆಲವು ವರ್ಷಗಳಿಂದ ಈಗ ನವರಾತ್ರಿಯ ನಾಡಹಬ್ಬವು ಚೆನ್ನಾಗಿ ಬೇರೂರಿದೆಯೆಂದೆನ್ನಲು ಅಡ್ಡಿಯಿಲ್ಲದರಿಂದ, ಇನ್ನು ಇದನ್ನು ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿಯೂ ಹೇಗೆ ಹಬ್ಬಿಸಬೇಕೆಂಬುದನ್ನು ವಿಚಾರಮಾಡುವುದು ಅವಶ್ಯವಿದೆ. ಹಾಗು ಈ ಹಬ್ಬದಲ್ಲಿ ಕರ್ನಾಟಕದಲ್ಲಿ ಜಾಗೃತಿಯನ್ನುಂಟುಮಾಡುವುದಕ್ಕೆ ಕನ್ನಡಿಗರು ಯಾವ ಯಾವ ಮುಖ್ಯ ಕಾರ್ಯಗಳನ್ನು ಕೈಕೊಳ್ಳಬೇಕೆಂಬುದನ್ನು ಯೋಚಿಸಬೇಕು. ನಾಡಹಬ್ಬವು ನಾಡಿಗೆಲ್ಲ ಹಬ್ಬವಾಗಬೇಕು. ಹಾಗೆ ಆಗಬೇಕಾದರೆ ಇದೇ ಕರ್ನಾಟಕಕ್ಕೋಸ್ಕರ ಒಂದು ನಾಡಹಬ್ಬದ ಮಂಡಳವು ಸ್ಥಾಪಿತವಾಗಬೇಕು. ಈ ಮಂಡಳದವರು ನಾಡಹಬ್ಬಗಳೆಲ್ಲಲ್ಲಿ ಆಗುವವೋ ಎಲ್ಲೆಲ್ಲಿ ಅವು ಜರಗುವಂತೆಯೂ, ಎಲ್ಲಿ ಅವು ಜರಗುತ್ತವೆಯೋ ಅಲ್ಲಿ ಅವು ಹೆಚ್ಚಾಗಿ ಜರಗುವಂತೆಯೂ ಪ್ರಯತ್ನಿಸಬೇಕು. ಮೇಲಾಗಿ ನಾಡಹಬ್ಬದ ಸಿದ್ಧತೆ ಗಣೇಶ ಚತುರ್ಥಿಯಿಂದಲೇ ಪ್ರಾರಂಭಿಸಿದರೆ, ಯಾವತ್ತು ನಾಡಹಬ್ಬಗಳಿಗೆ ವಿಶಿಷ್ಟ ಸ್ವರೂಪ ಕೊಡಲು ಅವಕಾಶವು ದೊರೆಯುತ್ತದೆ. ತಮ್ಮ ತಮ್ಮ ಊರುಗಳಲ್ಲಿ ಇದನ್ನು ಆಚರಿಸಲಿಕ್ಕೇನೋ ಪ್ರತಿಯೊಬ್ಬರಿಗೆ ಸ್ವಾತಂತ್ರ್ಯವಿದೆ. ಆದರೆ, ಎಲ್ಲಿ ಎಲ್ಲಿ ಯಾವ ಕಾರ್ಯಕ್ರಮಗಳು ಜರಗುತ್ತವೆಂಬುದು ಮುಂಚಿತವಾಗಿ ಗೊತ್ತಾಗಿದ್ದರೆ ಮಿಕ್ಕವರಿಗೆ ಅವುಗಳನ್ನು ತಿಳಿದುಕೊಳ್ಳುವುದಕ್ಕೆ ಉತ್ಸಾಹವುಂಟಾಗುತ್ತದೆ. ನಾಡಹಬ್ಬದಲ್ಲಿ ಉಪನ್ಯಾಸ ಮುಂತಾದವುಗಳ ಮೂಲಕ ಜಾಗ್ರತಿಮಾಡುವುದಕ್ಕೋಸ್ಕರ ಟೊಂಕಕಟ್ಟಿಕೊಂಡು ನಿಂತ ಉಪನ್ಯಾಸಕರು ಅಂತವೇ ಬೇಕಾಗುತ್ತದೆ. ಉಪನ್ಯಾಸಗಳನ್ನು ಕೊಡುವುದಕ್ಕಾದವರು ತಮ್ಮ ಮಿಕ್ಕ ಕೆಲಸಗಳನ್ನು ಆಗ ಬದಿಗಿಟ್ಟು ಕರೆದಲ್ಲಿ ಹೋಗಲಿಕ್ಕೆ ಸಿದ್ಧರಿರಬೇಕು. ಮತ್ತು ಕರೆದಾಗ ಹೋಗಿ, ಮನಸ್ಸಿಗೆ ಬಂದದ್ದೊಂದು ವಿಷಯವನ್ನು ತೆಗೆದುಕೊಂಡು ನಿಂತ ಕಾಲ ಮೇಲೆ ಏನಾದರೂ ನಾಲ್ಕು ಮಾತಾಡಿ ಜನರನ್ನು ರಂಜಿಸಿ ಬರುವುದಕ್ಕಿಂತ, ಪ್ರತಿಯೊಬ್ಬ ವಕ್ತೃವು ಕರ್ನಾಟಕಕ್ಕೆ ಪ್ರತ್ಯಕ್ಷವಾಗಿ ಇರುವ ವಿಷಯಗಳನ್ನಾಗಲಿ ಅಥವಾ ಮತ್ಯಾವ ಉಪಯುಕ್ತ ವಿಷಯವನ್ನಾಗಲಿ ಆರಿಸಿ ಚೆನ್ನಾಗಿ ಅಭ್ಯಾಸಮಾಡಿ ಉಪನ್ಯಾಸಗಳನ್ನು ಕೊಟ್ಟರೆ ಅನಾಯಾಸದಿಂದ ಜನರಿಗೆ ಶಿಕ್ಷಣ ಕೊಟ್ಟಂತಾಗುವುದು. ಸಾರಾಂಶ, ನಾಡಹಬ್ಬವು ರಾಷ್ಟ್ರೀಯ ಶಿಕ್ಷಣದ ಶಾಲೆಯಾಗಬೇಕು. ನಾಡಹಬ್ಬವು ಸ್ವದೇಶೀ ಬಹಿಷ್ಕಾರಗಳ ಸ್ಥಾನವನ್ನೂ ಆಕ್ರಮಿಸಬಹುದು. ಖಾದಿ ಪ್ರಸಾರ, ಸ್ವದೇಶಿ ವಸ್ತುಗಳ ಪ್ರದರ್ಶನ, ಕೈಗಾರಿಕೆಗಳಿಗೆ ಉತ್ತೇಜನ ಮುಂತಾದ ಕಾರ್ಯಗಳು ಕೈಕೊಳ್ಳಲ್ಪಡಬೇಕು. ಹಳ್ಳಿಗಳಲ್ಲಿ ಅಲ್ಲಲ್ಲಿ ಕೆಲವು ಉತ್ಕೃಷ್ಟ ಕಲಾವಿದರು ಮುಂತಾದವರು ಇರುವರು. ಅವರಿಗೆ ಪಟ್ಟಣಗರಿಂದ ಈಗ ಏನೂ ಉತ್ತೇಜನವಿಲ್ಲದ ಕಾರಣ ಜಾಣತನವೆಲ್ಲವೂ ಅಡಗಿ ಹೋಗಿದೆ. ಅದಕ್ಕೆ ನಾವು ಉತ್ತೇಜನ ಕೊಡುವದರಿಂದ ಕರ್ನಾಟಕದಲ್ಲಿ ಈಗ ಮಲಗಿರುವ ಉದ್ಯೋಗಗಳಾವುವೆಂಬುದು, ಅವನ್ನು ಎಬ್ಬಿಸಬೇಕೆಂಬುದು ಗೊತ್ತಾಗುವುದು. ಈ ಹಬ್ಬದಿಂದ ಕರ್ನಾಟಕದ ವಿಶಿಷ್ಟ ಸಂಸ್ಕೃತಿಯನ್ನು ಪೋಷಿಸಬೇಕು. ಯಾರಿಗೆ ವಾಙ್ಮಯದ ಮೇಲೆ ಪ್ರೀತಿ, ಯಾರಿಗೆ ಇತಿಹಾಸದ ಅಭಿರುಚಿ, ಯಾರಿಗೆ ಕೀರ್ತನ ಪುರಾಣಾದಿಗಳ ಮೇಲೆ ಪ್ರೇಮ, ಯಾರಿಗೆ ನಾಟಕದ ಹಂಬಲವು, ಅವರಿಗೆಲ್ಲರಿಗೂ ಉತ್ತೇಜನ ದೊರೆಯಬೇಕು. ಆದರೆ ಹೀಗೆ ಮಾಡುವಾಗ ಒಂದು ಮಾತು ಮಾತ್ರ ಧ್ಯಾನದಲ್ಲಿಡಬೇಕು. ಅದೇನೆಂದರೆ ಕೀರ್ತನಗಳೇ ಆಗಲಿ, ಲಾವಣಿಗಳೇ, ನಾಟಕಗಳೇ ಆಗಲಿ, ಅದಷ್ಟು ಮಟ್ಟಿಗೆ ರಾಷ್ಟ್ರದ ಧಾರ್ಮಿಕ, ರಾಷ್ಟ್ರೀಯ ಮುಂತಾದ ಭಾವನೆಗಳನ್ನು ಉದ್ದೀಪನಗೊಳಿಸುವಂಥವಿರಬೇಕು. ಮಧ್ಯವರ್ತಿ ಮಂಡಳವೊಂದು ಸ್ಥಾಪಿತವಾದರೆ ಇನ್ನೂ ಅನೇಕ ಕಾರ್ಯಗಳನ್ನು ಮಾಡಬಹುದು. ಈ ಸಲವಂತೂ ವಿಜಯದಶಮಿಯ ಮೊದಲು ನಾಡಹಬ್ಬದ ಸಂಬಂಧದಿಂದ ಸಾರ್ವಜನಿಕ ಉತ್ಸವವನ್ನು ವ್ಯವಸ್ಥಿತವಾಗಿ ಪ್ರಾರಂಭಿಸುವ ದೊಡ್ಡ ಹೊಣೆಯು ಕರ್ನಾಟಕದ ಮೇಲೆ ಇರುವುದೆಂಬುದನ್ನು ಮರೆಯಬಾರದು. ನಾಡಹಬ್ಬದ ಒಳಗಾಗಿ ಕರ್ನಾಟಕದ ಮುಖ್ಯ ಪಟ್ಟಣಗಳಲ್ಲಾದರೂ ತಾತ್ಪೂರ್ತಿಕ ಮಂಡಳಗಳಾಗಿದ್ದರೆ, ನಾಡಹಬ್ಬದ ಸಮಯದಲ್ಲಿ ಯಾವುದೊಂದು ಸ್ಥಳದಲ್ಲಿ ಒಂದು ಅಖಿಲ ಕರ್ನಾಟಕ ಸಭೆಯನ್ನು ಕರೆದು ಆಗ ಯುಕ್ತವಾದ ಒಂದು ಉತ್ಸವ ಮಂಡಳವನ್ನು ಸ್ಥಾಪಿಸಿ ಕಾರ್ಯವನ್ನು ಪ್ರತ್ಯಕ್ಷ ಪ್ರಾರಂಭಿಸುವುದಕ್ಕೆ ಒಳಿತಾಗುತ್ತದೆ. ನಮ್ಮ ಬೆಳಗಾಂವಿಯ ಬಂಧುಗಳು ಈ ವಿಷಯದಲ್ಲಿ ಅತ್ಯಂತ ಉತ್ಸಾಹಯುಕ್ತವಾಗಿ ಕಾರ್ಯವನ್ನು ಪ್ರಾರಂಭಮಾಡಿ, ವಿಶೇಷವರಿಗೆ ಮಾರ್ಗವನ್ನು ಹಾಕಿಕೊಟ್ಟಿರುವರು. ಅವರು ತಮ್ಮ ಜಿಲ್ಹೆಯಲ್ಲಿ ಕೂಡಿಸಬೇಕಾದ ಸಾವಿರ ರೂಪಾಯಿಗಳನ್ನು ಕೂಡಿಸುವ ಹೊಣೆಯನ್ನು ಹೊತ್ತುಕೊಂಡು ಅದಕ್ಕೋಸ್ಕರವಾದ ಕರ್ನಾಟಕದ ಮುಖಂಡರದೊಂದು ಮಂಡಳವನ್ನು ಸ್ಥಾಪಿಸಿರುವರು. ಹುಬ್ಬಳ್ಳಿಯವರು ಈ ವಿಷಯದಲ್ಲಿ ಅತ್ಯಂತ ಉತ್ಸಾಹವನ್ನು ತೋರಿಸಿದೆ. ಅಲ್ಲಿಯ ಕಮಿಟಿಯವರು ಕರ್ನಾಟಕನ್ನೇ ಜಾಗ್ರತಗೊಳಿಸುವ ಸ್ತುತ್ಯವಾದ ಕಾರ್ಯವನ್ನು ಕೈಕೊಂಡಿರುವರು. ಧಾರವಾಡದಲ್ಲಿ ಮಾತ್ರ ಇನ್ನೂ ವಿಶೇಷ ಚಟುವಟಿಕೆ ಇಲ್ಲ. ಇಷ್ಟರಲ್ಲಿ ಚಟುವಟಿಕೆ ಲಕ್ಷಣ ಕಾಣುವದಿಲ್ಲ. ಗದಗ, ಬಾಗಲಕೋಟೆ, ವಿಜಾಪುರ, ಕಾರವಾರ, ಮಂಗಳೂರು ಮುಂತಾದ ಸ್ಥಳಗಳು ತೀವ್ರವೇ ಜಾಗ್ರತವಾಗುವವೆಂದು ಆಶಿಸುತ್ತೇವೆ. ಸದ್ಯಕ್ಕೆ ಮಾಡಬೇಕಾದದ್ದು ಅನೇಕ ತಾತ್ಪೂರ್ತಿಕ ಉತ್ಸವ ಮಂಡಳಗಳನ್ನು ಸ್ಥಾಪಿಸುವುದು. ಅಂದರೆ ಮುಂದೆ ಒಟ್ಟಾರೆ ಕಾರ್ಯಕ್ರಮವನ್ನು ನಿಶ್ಚಯಿಸಲಿಕ್ಕೆ ಅನುಕೂಲವಾಗುವುದು.

ಬೆಳಗಾವಿಯ ಪತ್ರ

ಗವ್ಹರ್ನರ ಮಾನಪತ್ರಕ್ಕೆ ನಾಗರಿಕರ ವಿರೋಧ

ಬೆಳಗಾವಿ ತಾ| ೩೧— ಮ್ಯುನಸಿಪಾಲಟಿಯಿಂದ ನಾಮದಾರ ಗವ್ಹರ್ನರಿಗೆ ಮಾನಪತ್ರ ಕೊಡುವ ಒಗ್ಗೆ ಪ್ರಯತ್ನ ನಡೆದಿದೆ.

ಈ ಒಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವದಕ್ಕೆ ಇಲ್ಲಿನ ಕಾಂಗ್ರೆಸ್ಸಿನ ಮತದಾರರು ತಾ| ೨೮ನೆ ದಿನಸ ಜವಾಹಿರ ಚೌಕದಲ್ಲಿ ಸಭೆಯಲ್ಲಿ ಸೇರಿದ್ದರು. ಶ್ರೀ ರಾಮರಾವ ನರಗುಂದ ವಕೀಲರು ಅಧ್ಯಕ್ಷರಾಗಿದ್ದರು. ಶ್ರೀ ಬಾಬಾಸಾಹೇಬ ಸೋಮಣ, ಠಾಕೂರ, ಮತ್ತು ಡಾ॥ ಕೋನಾಡಕರ ಇವರ ಭಾಷಣಗಳಾದವು. ಕೊನೆಯಲ್ಲಿ ಗವ್ಹರ್ನರಿಗೆ ಮಾನಪತ್ರವನ್ನು ಕೊಡಬಾರದೆಂಬ ಗೊತ್ತುವಳಿಯು ಸಭೆಯಲ್ಲಿ ಬಂತು. ಅದು ಬಹುಮತದಿಂದ ಸ್ವೀಕೃತವಾಯಿತು.

ತಾ| ೩೦ನೇ ದಿವಸ ನಾಗರಿಕರು ಮಾರ್ಕೆಟದಲ್ಲಿ ಶ್ರೀ ಜೆ.ವಿ.ರಾಯರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಸೇರಿ, ಗವ್ಹರ್ನರರಿಗೆ ಮಾನಪತ್ರವನ್ನು ಕೊಡಕೂಡದೆಂದು ಮ್ಯುನಸಿಪಾಲಿಟಿಗೆ ತಿಳಿಸತಕ್ಕವರಿದ್ದಾರೆ.

ಜಿಲ್ಹಾ ಲೋಕಲ್‌ಬೋರ್ಡಿನವರು ಮಾನಪತ್ರ ಕೊಡುವದನ್ನು ಗೊತ್ತುಮಾಡಿ, ಅದಕ್ಕೆ ೨೫೦ ರೂಪಾಯಿ ತೆಗೆದಿಟ್ಟಿರುತ್ತಾರೆ.

ಮೆ|| ಕಲೆಕ್ಟರರು ತಾ|| ೨೯ನೆ ದಿವಸ ಜಿಲ್ಹಾ ಲೋಕಲ್‌ಬೋರ್ಡಿಗೆ ಭೆಟ್ಟಿ ಕೊಟ್ಟರು. ತಮ್ಮ ಕಚೇರಿಯ ಹಿಂದೆ ಇದ್ದ ಲ್ಯಾಂಡರೆಕಾರ್ಡ್ಸ ಕಚೇರಿಯ ಕಟ್ಟಡವನ್ನು ಜಿಲ್ಹಾ ಬೋರ್ಡಿನವರು ಸ್ಥಳ ಸಂಕೋಚದ ಒಗ್ಗೆ ಬೇಡಿದ್ದರಂತೆ! ಕಲೆಕ್ಟರರು ಆ ಸ್ಥಳವನ್ನು ನೋಡಿ ಹೋದರು.

ಬೆಂಗಳೂರಿನ ಸುದ್ದಿ

ಬೆಂಗಳೂರ— ಕೊಚೀನ ಮಹಾರಾಜರು ತಾ|| ೮ನೆ ಸಪ್ಟೆಂಬರ ದಿವಸ ಇಲ್ಲಿಗೆ ಬಂದು ಮೂರು ದಿನಗಳ ವರೆಗೆ ಇಲ್ಲಿ ನಿಂತುಕೊಂಡು ನಂತರ ತಮ್ಮ ರಾಜಧಾನಿಗೆ ಮರಳಿ ಹೋಗುವರು.

ದಿವಾಣರಾದ ಸರ ಮಿರ್ಜಾ ಇಸ್ಮಾಯಿಲರು ತಾ|| ೩೧ನೆ ದಿವಸ ದಿವಾಣಗಿರಿಯನ್ನು ಪುನಃ ವಹಿಸಿಕೊಂಡರು. ಅವರ ಸ್ಥಳದಲ್ಲಿ ತಾತ್ಪೂರ್ತಿಕ ದಿವಾಣರಾಗಿದ್ದ ದಿ. ಬ. ಎಂ. ಎನ್. ಕೃಷ್ಣರಾಯರು ಅಂದಿನಿಂದ ಸೇವಾನಿವೃತ್ತರಾದರು.

ಮೈಸೂರ ವಿಶ್ವವಿದ್ಯಾಲಯದ ಪದವಿದಾನ ಸಮಾರಂಭವು ತಾ|| ೧೪ನೆ ಆಕ್ಟೋಬರ ದಿವಸ ಜರುಗುವದಾಗಿ ರಜಿಸ್ಟ್ರಾರರು ಪ್ರಸಿದ್ಧಮಾಡಿದ್ದಾರೆ.

ಹಂಗರಿಯ ಇಬ್ಬರು ಪ್ರಸಿದ್ಧ ಕಲಾವಿದರಾದ ಮಿಸೆಸ್ ಸಾಸ್ ಬ್ರನರ ಹಾಗು ಮಿ||ಎಲಿಜಾಬೇಥ ಬ್ರನರ ಇವರು ಈಗ ಇಲ್ಲಿಗೆ ಬಂದಿದ್ದು ಅವರು ಶೀಘ್ರದಲ್ಲಿಯೆ ಈ ಊರಲ್ಲಿ ತಮ್ಮ ಚಿತ್ರಗಳ ಪ್ರದರ್ಶನಮಾಡತಕ್ಕವರಿದ್ದಾರೆ. ಈ ಕಲಾವಿದರು ಈಗ ೩ ವರ್ಷಗಳಿಂದ ಹಿಂದುಸ್ಥಾನದಲ್ಲಿ ಪ್ರವಾಸ ಮಾಡಹತ್ತಿದ್ದು ಶಾಂತಿನಿಕೇತನ, ಕಲಕತ್ತಾ, ಸಿಮ್ಲಾ ಇವೇ ಮೊದಲಾದ ಕಡೆಗಳಲ್ಲಿ ತಮ್ಮ ಚಿತ್ರಗಳನ್ನು ಪ್ರದರ್ಶಿಸಿ ಬಂದಿದ್ದಾರೆ. ಮಿಸ್ ಎಲಿಜಾಬೇಥರು ಒಂದು ಸಂಭಾಷಣದ ಕಾಲಕ್ಕೆ, ತಾವು ಹಳೆಬೀಡು, ಬೇಲೂರು, ಮೊದಲಾದವುಗಳಲ್ಲಿಯ ಕಲಾಕೌಶಲ್ಯವನ್ನು ಕಂಡು ಬೆರಗಾದೆವೆಂದು ತಿಳಿಸಿದರು. ಇವರು ಹಿಂದುಸ್ಥಾನದಲ್ಲಿ ಪ್ರವಾಸಕ್ಕೆ ಬಂದ ಉದ್ದೇಶವೆಂದರೆ— ಇಲ್ಲಿಯ ಜನರ ಜೀವಿತದ ಸಂಪ್ರದಾಯ ಚಿತ್ರಗಳನ್ನು ಚಿತ್ರಿಸಿಕೊಂಡು ಯುರೋಪ ಹಾಗು ಅಮೇರಿಕೆಯ ಜನರ ಮುಂದೆ ಅವುಗಳನ್ನು ಮಂಡಿಸಿ, ಇತ್ತ ಅವರ ಲಕ್ಷವನ್ನು ಎಳೆಯುವದೇ ಇರುತ್ತದೆ.

ಅಸೆಂಬ್ಲಿಯಲ್ಲಿಯ ಮನೋರಂಜಕ ಪ್ರಶ್ನೋತ್ತರಗಳು

ಸಿಮಲಾ ತಾ| ೨೯— ಈ ಹೊತ್ತಿನ ದಿವಸ ಅಸೆಂಬ್ಲಿಯಲ್ಲಿ ಶ್ರೀ ಸಂತಸಿಂಗ ಇವರ ಕ್ರಿಮಿನಲ್ ಪ್ರೊಸೀಜರ ಕೋಡಿನ ತಿದ್ದುಪಡಿ ಹಾಗು ಗಯಾಪ್ರಸಾದಸಿಂಗರ ಖಾದಿ ಸಂರಕ್ಷಣೆಯ ಮಸೂದೆ ಇವುಗಳ ಮೇಲೆ ಚರ್ಚೆ ನಡೆಯಿತು. ಮೊದಲು ಕೆಳಗಿನಂತೆ ಮನೋರಂಜಕ ಪ್ರಶ್ನೋತ್ತರಗಳು ನಡೆದವು.

ಶ್ರೀ ಮಿಶ್ರ ಇವರ ಪ್ರಶ್ನೆಗೆ ಉತ್ತರ ಕೊಡುವಾಗ ಸರ ಹೇಗ ಇವರು ಅಂದಮಾನದಲ್ಲಿಯ ಕೈದಿಗಳ ಉಪವಾಸ ಹತನ್ನು ಎಂದೂ ಮುಚ್ಚಿದ್ದಿಲ್ಲವೆಂದೂ, ಜನಗಣತಿಯ ವರದಿಯೊಳಗಿಂದ ನೀವು ತೆಗೆದುಕೊಂಡ ಅವತರಣಿಕೆಯು ತಪ್ಪಿರುವದೆಂದೂ ಹೇಳಿದರು.

ಶ್ರೀ ಗಯಾಪ್ರಸಾದಸಿಂಗ ಇವರ ಪ್ರಶ್ನೆಗೆ ಉತ್ತರ ಕೊಡುವಾಗ ಶ್ರೀ ಪಿ ಆರ್ ರಾವ ಇವರು ಹೇಳಿದ್ದೇನಂದರೆ— ಪಂಜಾಬ ಮೇಲ ಗಾಡಿಯು ಈಗ ಪಾಟಣಾದ ಮೇಲ್ಗಡೆಯಿಂದ ಹೋಗದೆ ಗಯಾ ಸ್ಟೇಶನದ ಮೇಲಿಂದ ಹೋಗುತ್ತದೆ. ಕ್ರಾಂತಿಕಾರಕರು ಹೊಗೆಬಂಡಿಯನ್ನು ತಬ್ಬಿ ಕೆಡಹುವರೆಂಬ ಭೀತಿಯಿಂದ ಹೀಗೆ ಮಾಡಲ್ಪಟ್ಟಿರುವದೆಂಬದನ್ನು ತಿಳಿದುಕೊಳ್ಳುವದು ಶುದ್ಧ ತಪ್ಪಾಗಿದೆ.

ಮಿ ಮಸೂದ ಅಹಮ್ಮದ— ಬಿಹಾರ ವ್ಯಾಪಾರಿ ಸಂಘದವರು ಈ ಸಂಬಂಧವಾಗಿ ನಿಷೇಧ ಪ್ರದರ್ಶಕ ಠರಾವು ಮಾಡಿರುವರು.

ಮಿ ರಾವ— ನನಗೆ ಗೊತ್ತಿರುವದಿಲ್ಲ.

ಮಿ ಮಸೂದ ಅಹಮ್ಮದ— ರೇಲ್ವೆ ಸಲಹೆಗಾರ ಮಂಡಲದವರಿಗಾದರೂ ಇದು ಸಮ್ಮತವಿರುವದಿಲ್ಲ.

ಮಿ ರಾವ— ಇದಾದರೂ ನನಗೆ ಗೊತ್ತಿರುವದಿಲ್ಲ.

ಮಿ ಮಿಶ್ರ- ಶ್ರೀ ರಾಸ ಬಿಹಾರಿ ಬೋಸ ಇವರ ಯಾವತ್ತೂ ಪುಸ್ತಕಗಳಿಗೆ ಹಿಂದುಸ್ಥಾನದಲ್ಲಿ ನಿರ್ಬಂಧವಿದೆಯೋ ಹೇಗೆ?

ನಾ ಹೇಗ- ನಿರ್ಬಂಧವಿದೆ. ಮಿ ಬೋಸ ಇವರ ಮೇಲೆ ಒಳಸಂಚು ಹಾಗು ಕೊಲೆಯ ಆರೋಪವಿರುವದರಿಂದ ಅವರ ಪುಸ್ತಕಗಳಿಗೆ ನಿರ್ಬಂಧ ಹಾಕಲಾಗುತ್ತದೆ.

ಮಿ ಮಿಶ್ರ- ಅವರ ಪುಸ್ತಕಗಳು ಎಲ್ಲಿ ಮುದ್ರಿತವಾಗಿರುವವು!

ನಾ ಹೇಗ- "ನ್ಯೂಏಶಿಯಾ" ಎಂಬ ಪುಸ್ತಕವು ಜಪಾನದಲ್ಲಿ ಮುದ್ರಿತವಾಗಿರುವದು. ಉಳಿದವುಗಳು ಎಲ್ಲಿ ಮುದ್ರಿತವಾಗಿರುವವೆಂಬದನ್ನು ಹೇಳಲು ಬರುವಂತಿಲ್ಲ.

ಮಿ ಮಿಶ್ರ ಹಾಗಾದರೆ ಪುಸ್ತಕಗಳನ್ನು ಓದದೆಯೆ ನಿರ್ಬಂಧ ಹಾಕಿರುವರೋ ಹೇಗೆ?

ನಾ ಹೇಗ- ಸರಕಾರದವರು ಈ ಪುಸ್ತಕಗಳನ್ನೆಲ್ಲ ನೋಡಿರುವರು.

ಮಿ ಬಿ ದಾಸ- ಶ್ರೀ ಬೋಸ ಇವರಿಗೆ ಜಪಾನದಲ್ಲಿ ಚಳವಳ ಮಾಡಲು ನಿರ್ಬಂಧವಿರುವದಿಲ್ಲವೆ!

ನಾ ಹೇಗ- ಜಪಾನದಲ್ಲಿಯ ಅವರ ಚಳವಳಿಯು ಹಿಂದುಸ್ಥಾನ ಸರಕಾರದ ವಿರುದ್ಧವಿರುತ್ತದೆ. ಜಪಾನ ಸರಕಾರದ ವಿರುದ್ಧವಿರುವದಿಲ್ಲ.

ಹಾಯಕೋರ್ಟ ಕ್ರಿಮಿನಲ್ ಸೆಶನ್ಸದಲ್ಲಿ ವಕೀಲರಿಗೆ ನಿರ್ಬಂಧ.

ಮುಂಬಯಿ ತಾ|| ೨೮— ಹಾಯಕೋರ್ಟದಲ್ಲಿ ಕ್ರಿಮಿನಲ್ ಸೆಶನ್ಸದಲ್ಲಿ ಕೆಲಸ ನಡೆಸಲು ವಕೀಲರಿಗೆ ಈಗ ಆಸ್ಪದ ವಿರುವದಿಲ್ಲ. ಈ ನಿರ್ಬಂಧವನ್ನು ಕಿತ್ತೊಗೆಯಬೇಕೆಂದು ವೆಸ್ಟರ್ನ ಇಂಡಿಯಾ ಆ್ಯಡ್‌ವೋಕೇಟ ಅಸೋಸಿಯೇಶನದವರು ಹಾಯಕೋರ್ಟಿಗೆ ಅರ್ಜಿ ಮಾಡಿದ್ದರು. ಈ ಹೊತ್ತಿನ ದಿವಸ ಹಾಯಕೋರ್ಟ ಫುಲ್ ಬೆಂಚದವರು ಅರ್ಜಿಯನ್ನು ವಿಚಾರಕ್ಕೆ ತೆಗೆದುಕೊಂಡು ವೆಚ್ಚಸಹಿತವಾಗಿ ಅರ್ಜಿಯನ್ನು ಕಿತ್ತಿ ಹಾಕಿದರು.

ಅಸೆಂಬ್ಲಿಯಲ್ಲಿ ಮಹತ್ವದ ಪ್ರಶ್ನೋತ್ತರಗಳು

" ಸರಕಾರದವರು ಮಹಾತ್ಮರಿಗೆ ಭೆಟ್ಟಿ ಕೊಡಲು ಸಿದ್ಧರಿಲ್ಲ "

(ಅಸೋಸಿಯೇಟೆಡ್ ಪ್ರೆಸ್ ವಾರ್ತೆ ತಾ। ೩೧)

ಸಿಮುಲಾ ತಾ ೩೧— ಅಸೆಂಬ್ಲಿಯಲ್ಲಿ ಈ ಹೊತ್ತಿನ ದಿವಸ ಖಾಸಗಿ ಮಸೂದೆಗಳು ಚರ್ಚೆಗೆ ತೆಗೆದುಕೊಳ್ಳಲ್ಪಟ್ಟವು. ಮಿ. ಸಯ್ಯದ [illegible] ಸಹಿತ ಸ್ಟ್ರೇಟ ವಲ್ಲಿಯ ಬಾಂಬಿನ ಸುರಿಮಳೆಯ ಸಂಬಂಧವಾಗಿ ಅಧಿವೇಶನವನ್ನು ಮುಂದೆಸಬೇಕೆಂಬ ಸೂಚನೆ ತಂದರು. ಈ ವೇಳೆಯಲ್ಲಿ ಸಭಾಸದರಲ್ಲಿ ಒಳ್ಳೆ ಉತ್ಸಾಹವು ಕಂಡುಬಂತು. ಅಬ ಲ್ಲಾ ಪರೂನರು ಹಿಂದುಸ್ಥಾನದಲ್ಲಿ ಸಂದೇಶಿಕ ವೇಗಿ ಪ್ರತಿಬಂಧವನ್ನುಂಟು ಮಾಡಬೇಕೆಂದು ಸೂಚಿಸಿದ ತಕ್ಷಣ ಅವರಿನ್ನಾರೆ ಜಪಾನಿ ಜನರು ಹಿಂದಿ ಅರಳಿಯನ್ನು ಬಹಿಷ್ಕರಿಸಿದ್ದೇ ಇದಕ್ಕೆ ಕಾರಣವಾಗಿದೆ. ಈ ಸೂಚನೆಯ ಸಂಬಂಧವಾಗಿ ಸಭಾಸದರಲ್ಲಿ ಪರಸ್ಪರ ವಾದವೊದಗುವದು ನಡೆದಿತ್ತು.

ಪ್ರಶ್ನೋತ್ತರ ಸಮಯದಲ್ಲಿ ಮಿ. ಬಿ. ದಾಸರು ಮಹಾತ್ಮಾ ಗಾಂಧಿಯವರ ಇತ್ತೀಚಿನ ಪ್ರಕಟನೆಯ ಕಡೆಗೆ ಸರಕಾರದ ಲಕ್ಷವನ್ನೆಳೆದರು. ಸರ್ ಹೇಗರು ಸರಕಾರದವರು ತಮ್ಮ ಅಭಿಪ್ರಾಯಗಳನ್ನು ಒದಲು ಮಾಡಲು ಕಾರಣಿಸುವದಿಲ್ಲ ಎಂದು ಉತ್ತರ ಕೊಟ್ಟರು.

ಮಿ॥ ಮಸ್ವದ ಅಹಮ್ಮದ— ಸರಕಾರದವರು ಮಹಾತ್ಮರಿಗೆ ಭೆಟ್ಟಿ ಕೊಡಲು ಸಿದ್ಧರಿರುವರೊ ಹೇಗೆ?

ಸರ್ ಹೇಗ— ಸರಕಾರದವರು ಸಿದ್ಧರಿಲ್ಲ. ಈ ಪರಿಸ್ಥಿತಿಯಲ್ಲಂತೂ ಶಕ್ಯವಿಲ್ಲ

(ಅ ಪ್ರೆ)

ಕೌನ್ಸಿಲ್ ಆಫ್ ಸ್ಟೇಟದಲ್ಲಿ ಮಹಾತ್ಮರ ಬಗ್ಗೆ ಪ್ರಶ್ನೆ

ಸಿಮುಲಾ ತಾ। ೩೧— ಕೌನ್ಸಿಲ ಆಫ್ ಸ್ಟೇಟದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೋಮ ಸೆಕ್ರೆಟರಿಗಳಾದ ಮಿ॥ ಹಾಕೆಟ್ ಇವರು ಹೇಳಿದ್ದೇನಂದರೆ— ಮಹಾತ್ಮಾ ಗಾಂಧಿಯವರಿಗೆ ತುರುಂಗದಲ್ಲಿ ಯಾವ ಸವಲತ್ತುಗಳನ್ನು ಕೊಡತಕ್ಕದ್ದು ಮತ್ತು ಯಾವ ಸವಲತ್ತುಗಳನ್ನು ಕೊಡತಕ್ಕದಲ್ಲವೆಂಬುದನ್ನು ಮುಂಬಯಿ ಸರಕಾರದವರು ಮೊದಲು ನಿರ್ಣಯಿಸಿದರು. ಅವರ ಈ ನಿರ್ಣಯಕ್ಕೆ ಹಿಂದುಸ್ಥಾನ ಸರಕಾರ ಹಾಗೂ ಭಾರತ ಮಂತ್ರಿಗಳದಾದರೂ ಒಪ್ಪಿಗೆ ಇತ್ತು. ಮುಂಬಯಿ ಸರಕಾರದವರು ಮಹಾತ್ಮಾ ಗಾಂಧಿಯವರಿಗೆ, ನೀವು ಕಾಯದೆ ಭಂಗ ಚಳವಳಿಯನ್ನು ಬಿಟ್ಟುಗೊಟ್ಟಲ್ಲಿ ಮತ್ತು ಅದಕ್ಕೆ ಉತ್ತೇಜನ ಕೊಡದಿದ್ದದಲ್ಲಿ ನಿಮ್ಮನ್ನು ಬಿಡುಗಡೆ ಮಾಡಲಾಗುವದೆಂದು ತಿಳಿಸಿದ್ದರು. ಇದಕ್ಕಾದರೂ ಅವರು ಮೇಲಿನ ಅಧಿಕಾರಿಗಳ ಸಮ್ಮತಿ ಪಡೆದಿದ್ದರು. ಉಪವಾಸದ ಮೂಲಕ ಆವರ ಪ್ರಕೃತಿಯು ಗಂಡಾಂತರ ಸ್ಥಿತಿಗೆ ಮುಟ್ಟಿದ ಕೂಡಲೆ ಅವರನ್ನು ಬಿಡುಗಡೆ ಮಾಡಿತು. ಇದಕ್ಕಾದರೂ ಮೇಲಿನ ಅಧಿಕಾರಿಗಳ ಸಮ್ಮತಿಯನ್ನು ಪಡೆದ ಕೊಂಡಿತ್ತು. ಮುಂಬಯಿ ಸರಕಾರದವರು ಮೇಲಿನ ಅಧಿಕಾರಿಗಳ ಸಮ್ಮತಿಯನ್ನು ತೆಗೆದುಕೊಳ್ಳದೆ ತಾವಾಗಿಯೇ ಮಹಾತ್ಮರನ್ನು ಬಿಟ್ಟರೆಂಬ ಸುದ್ದಿಯಲ್ಲಿ ಏನೂ ತಥ್ಯಾಂಶವಿರುವದಿಲ್ಲ. (ಅ ಪ್ರೆ.)

ಜಾಯಿಂಟ ಕಮೀಟಿಯ ಪ್ರತಿನಿಧಿಗಳ ಅಭಿಪ್ರಾಯ.

ಮುಂಬಯಿ ತಾ। ೩೧— ಜಾಯಿಂಟ ಕಮೀಟಿಗೆ ಪ್ರತಿನಿಧಿಗಳಾಗಿ ಹೋಗಿದ್ದ ಬೇಗಮ್ ಶಹಾ ನವಾಜ ಇವರು ಈ ಹೊತ್ತಿನ ದಿವಸ ಲಂಡನದಿಂದ ಇಲ್ಲಿಗೆ ತಿರುಗಿ ಬಂದರು. ಜಾಯಿಂಟ ಕಮೀಟಿಯ ಶಿಫಾರಸಿನ ವಿಷಯವಾಗಿ ಹಿಂದೂ ಪ್ರತಿನಿಧಿಯು ಅವರ ಅಭಿಪ್ರಾಯ ವಿಚಾರಿಸಲಾಗಿ ಅವರು ಹೇಳಿದ್ದೇನಂದರೆ— ಪ್ರಾಂತಿಕ ಸ್ವಾಯತ್ತತೆಯು ೧೯೩೭ರಲ್ಲಿ ಬರುವದೆಂದೂ ಅರಿಯದೆ ರಿಜರ್ವ ಬ್ಯಾಂಕಿನ ಮಸೂದೆ ಅಸೆಂಬ್ಲಿಯಲ್ಲಿ ಮಂಡಿಸ್ಪಡುವದನ್ನು ನೋಡಿದಲ್ಲಿ ಸಂಯುಕ್ತ ಘಟನೆಯು ಇನ್ನು ಬಹು ದಿನಗಳವರೆಗೆ ದೂರ ಹೋಗಲಾರದೆಂದು ತಿಳಿಯಲು ಅಡ್ಡಿಯಿಲ್ಲ.

ಸರ್ ಹೇಗರು ಅತಿ ಕೆಳಗೆ ಪೂರ್ವಕವಾಗಿ ಸಾಕ್ಷಿ ನುಡಿದದ್ದಕ್ಕೆ ಅವರಿಗೆ ಧನ್ಯವಾದಗಳನ್ನರ್ಪಿಸಬೇಕಾಗಿದೆ ಎಂದು ಹೇಳಿದ್ದೇನಂದರೆ— ಭಾರತ ಮಂತ್ರಿಗಳ ಸಾಕ್ಷಿಯು ವಾತಾವರಣದಲ್ಲಿ ಎಷ್ಟೋ ಸ್ಥೈರ್ಯವನ್ನುಂಟು ಮಾಡಿದೆ. ಕಮೀಟಿಯ ಮುಂದೆ ಸಾಕ್ಷಿ ನುಡಿಯಲು ಬಂದ ಕೆಲವು ದೇಶಬಾಂಧವರು, ಸ್ತ್ರೀಯರಿಗೆ ಕೆಟ್ಟಿನ ಮತಾಧಿಕಾರವನ್ನು ಕೊಡತಕ್ಕದ್ದು ಮತ್ತು ಕಾಯದೆ ಮಂಡಳಗಳಲ್ಲಿ ಅವರಿಗೆ ಪ್ರಾತಿನಿಧ್ಯ ನಿರಕತಕ್ಕದ್ದು ಎಂಬ ಬೇಡಿಕೆಯು ಕೇವಲ ಸುಶಿಕ್ಷಿತ ಸ್ತ್ರೀಯರಿಂದ ಬಂದದ್ದಿರುತ್ತದೆ ಎಂದು ಹೇಳಿದರು. ಆದ್ದರಿಂದ ಹಿಂದೂ ಸ್ತ್ರೀಯರು ಈಗ ಎಚ್ಚತ್ತು ತಾವು ಎಚ್ಚತ್ತಿರುವೆವೆಂದೂ ತಮ್ಮ ಹಕ್ಕುಬಾಧ್ಯತೆಗಳನ್ನು ಹೇಗೆ ಸಾಧಿಸಿಕೊಳ್ಳಬೇಕೆಂಬುದು ತಮಗೆ ಗೊತ್ತಿರುವದೆಂದೂ ತಿಳಿಸಿಕೊಡಬೇಕು. ಮತ್ತು ಯಾವತ್ತು ಸ್ತ್ರೀಯರು ಜಾತಿ ಪಂಗಡಗಳ ಭೇದವನ್ನು ಗಣಿಸದೆ ಒಕ್ಕಟ್ಟಾಗಿ, ಸ್ತ್ರೀಯರ ಬೇಡಿಕೆಯನ್ನು ಪೂರೈಸದ ಯಾವದೇ ಘಟನೆಯು ತಮಗೆ ಮಾನ್ಯವಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಕೊನೆಯಲ್ಲಿ ಬೇಗಮರು ಹೇಳಿದ್ದೇನಂದರೆ— ಈ ಸುಸಂಧಿಯು ಇನ್ನೊಮ್ಮೆ ದೊರೆಯಲಿಕ್ಕಿಲ್ಲ ಆದ್ದರಿಂದ ಈಗಲೇ ಎಚ್ಚತ್ತು, ಹಿಂದಿ ಸ್ತ್ರೀಯರು ಮತಾಧಿಕಾರದ ಬೇಡಿಕೆಯಲ್ಲಿ ಸಂಘಟಿತರಾಗಿರುವರೆಂಬುದನ್ನು ತೋರಿಸಿಕೊಡಿರಿ ಪಾರ್ಲಮೆಂಟದವರು ಈ ಪ್ರಶ್ನೆಯ ಬಗ್ಗೆ ನಿರ್ಣಯಕ್ಕೆ ಬರುವದರೊಳಗಾಗಿಯೇ ಬೇಕಾದದ್ದೆಲ್ಲ ಕೂಗಾಟವೆಬ್ಬಿಸಿ, ನಿಮ್ಮ ಸಲುವಾಗಿ ಪ್ರಯತ್ನ ಮಾಡುವವರಿಗೆ ಬೆಂಬಲ ಕೊಡಿರಿ ಹೀಗೆ ಮಾಡಿದರೇನೇ ನಿಮಗೆ ಯಶವು ಸಿಗುವದು. (ಅ. ಪ್ರೆ)

ಇದೇ ದಿವಸ ಮುಂಗೋಲಿಯ ಹಡಗದಿಂದ ತಿರುಗಿ ಬಂದ ಅಹಮದಾಬಾದದ ಖಾನಸಾಹೇಬ ಹರಿಪ್ರಸಾದ ಇವರು ಹೇಳಿದ್ದೇನಂದರೆ— ಹಿಂದೀ ಜನರು ಈಗ ತಮ್ಮ ಭೇದಭಾವಗಳನ್ನು ಬದಿಗಿಟ್ಟು ಒಕ್ಕಟ್ಟಿನಿಂದ ವರ್ತಿಸಬೇಕು ಅಂದರೆ ದೇಶದಲ್ಲಿ ಸಹಕಾರಕ್ಕೆ ಯೋಗ್ಯವಾದ ವಾತಾವರಣವು ನಿರ್ಮಿತವಾಗುವದು ಮತ್ತು ಸ.ಧಾರಣೆಗಳು ಬೇಗನೆ ಕೊಡಲ್ಪಡುವವು. ಆದ್ದರಿಂದ ಯಾವತ್ತು ಜನರು ಇಂಗ್ಲೆಂಡಿನೊಡನೆ ಸಹಕಾರ ಮಾಡಬೇಕು. ಸಾಮ್ರಾಜ್ಯದ ಬೆಳವಣಿಗೆಗೆ ಇದರಕಿಂತ ಸುರಕ್ಷಿತವಾದದ್ದೂ, ನಿಶ್ಚಿತವಾದದ್ದೂ ಬೇರೊಂದು ಮಾರ್ಗವಿಲ್ಲ (ಅ. ಪ್ರೆ)

ಡಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ॥ ೨೫ ೮ ೩೩ — ಕೃಷ್ಣರಾವ ಅಂಕಲಗಿ, ಮ್ಯಾನೇಜಿಂಗ ಡಾಯರೆಕ್ಟರ

ಕಡೇ ಆಟ! ಕಡೇ ಆಟ!!

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಶನಿವಾರ ತಾ॥ ೨-೯-೩೩ ನೇ ದಿವಸ ರಾತ್ರಿ

ಎಚ್ಚತ್ತ ನಾಯಿಕ

ಎಂಬ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

ಸಂಘದೊಡೆಯರು,
ಗರೂಡ ಸದಾಶಿವರಾಯರು

ಭುವನೇಶ್ವರಿ ಭಾಂಡಾರ.

ಬೈಲಹೊಂಗಲದಲ್ಲಿ ಎಲ್ಲ ಬಗೆಯ ಬಟ್ಟೆ, ಔಷಧ, ಸುಗಂಧಿ ಸಾಮಾನು, ಸ್ಟೇಶನರಿ ಹಾಗೂ ರೈತರಿಗೆ ಬೇಕಾಗುವ ಒಕ್ಕತನದ ಎಲ್ಲ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ವತನದಾರ ಕಾಟಾ.

ಬೈಲಹೊಂಗಲದಲ್ಲಿ ದಲಾಲಿಯಿಂದ ಹತ್ತಿ, ಶೇಂಗಾ ಮುಂತಾದ ಯಾವದೇ ಜೀನಸುಗಳನ್ನು ಮಾರಬೇಕಾದರೆ ನಮ್ಮಲ್ಲಿ ಬನ್ನಿ ದರ, ಗೋಡಾವುನ, ನೀರು, ಇಳಿಯುವ ಸ್ಥಳ ಮೊದಲಾದ ಎಲ್ಲ ಸೌಕರ್ಯಗಳೂ ಇವೆ

ಗೋಪಾಳರಾವ ಕುಲಕರ್ಣಿ ಬೈಲಹೊಂಗಲ.

ಡಾ ಕುಲಕರ್ಣೀಜ

ಲೆಬೊರೇಟರಿ ಮುಂಬಯಿ ನಂಬರ ೧

ಬಾಟ್ಲಿ ಕಿಮ್ಮತ್ತು ೧—೨—೦

ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಶರಗು, ಬಿಳೇಶರಗು, ಕೆಂಪು ಶರಗು, ತಿಂಗಳಿಗೊಮ್ಮೆ ಸರಿಯಾಗಿ ಮಟ್ಟಾಗದಿರುವಿಕೆ. ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣ ವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದೆ.

ಬಿ. ಟಿ. ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.

೧೮-೨

ಕನ್ನಡಿಗನ ಚಂದಾ ವಿವರ

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦ ೧೩-೦
೩ ತಿಂಗಳಿಗೆ	೧-೪-೦	೨-೨-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ಈ ಪತ್ರಿಕೆಯನ್ನು ರಂಗನಾಥ ಬ[illegible] ವಂತ ಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम्॥मनु.

ನಿತ್ಯ ಪತ್ರ ಬೆಲೆ ೩ ಪೈ

ಇನ್ಸ್ಯುರೆನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್ಸ್ಯುರೆನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನ್ಸ್ಯುರೆನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

[೧೦] ಧಾರವಾಡ— ಶನಿವಾರ ಭಾದ್ರಪದ ಶುದ್ಧ ೧೩ ಶಕೆ ೧೮೫೩ ತಾ॥ ೨-೯-೩೧ [ಸಂಚಿಕೆ ೧೧೨

ಮದ್ರಾಸ ಇಲಾಖೆಯಲ್ಲಿ ಹಿಂದೂ-ಮುಸಲ್ಮಾನರ ದಂಗೆ

ಪೋಲೀಸರು ಗೋಳೀಬಾರು ಮಾಡಿದರು, ಒಬ್ಬನು ಸತ್ತನು ಹಾಗು ಇಬ್ಬರಿಗೆ ಗಾಯ.

(ಅಸೋಸಿಯೇಟೆಡ್ ಶಂತಿಯ. ವಾರ್ತೆ ತಾ। ೧)

ಮದ್ರಾಸ ತಾ। ೩೧— ಉತ್ತರ ಅರ್ಕಾಟ ದ ಅಂಬೂರ ಎಂಬಲ್ಲಿ ಅಲ್ಲಿಯ ಪೋಲಿಸರು ದಂಗೆಗಾರರ ಮೇಲೆ ಗೋಳೀಬಾರು ಮಾಡಿದ್ದಿಯ ಬಂದಿದೆ ಈ ಗೋಳೀಬಾರದಲ್ಲಿ ಒಬ್ಬನು ಸತ್ತಿರುವನು ಮತ್ತು ಇಬ್ಬರಿಗೆ ಗಾಯವಾಗಿದೆ. ಆದಿ ದ್ರಾವಿಡರು ಹಾಗು ಮುಸಲ್ಮಾನರ ಜಗಳವೆದ್ದು, ಪರಿಸ್ಥಿತಿಯು ಸಿಕೋಪಕ್ಕೆ ಏರಿದ್ದರಿಂದ ಪೋಲೀಸರು ಗೋಳೀಬಾರು ಮಾಡಬೇಕಾಯಿತೆಂದು ಸುದ್ದಿಗಾರನು ತಿಳಿಸುತ್ತಾನೆ. (ಅ ಪ್ರ)

ಲಖನೌದಲ್ಲಿ ಬಹಿಷ್ಕಾರ ಚಳವಳಿ. ೧೩ ಜನರಿಗೆ ಕೈದು.

ಲಖನೌ ತಾ॥ ೩೧— ೧೩ ಜನ ಕಾರ್ಯಕರ್ತರು ಈ ಹೊತ್ತಿನ ದಿವಸ ಊರಲ್ಲಿ ಮೆರವಣಿಗೆಯಿಂದ ಹೊರಟಿದ್ದರು ಹೋಗಹೋಗುತ್ತ ಪರದೇಶಿ ಅರಿವೆ ಹಾಗು ಬ್ರಿಟಿಶ ಸರಕುಗಳ ಬಹಿಷ್ಕಾರಿಸಿರೆಂದು ಜನರಿಗೆ ಉಪದೇಶಿಸುತ್ತ ನಡೆದಿದ್ದರು ಪೋಲೀಸರು ಮೆರವಣಿಗೆಗೆ ಅಡ್ಡಿ ಮಾಡಿ ಯಾವತ್ತರನ್ನು ಸೆರೆಹಿಡಿದರು. (ಅ ಪ್ರ)

ಕಲಕತ್ತೆಯಲ್ಲಿ ಸ್ಫೋಟಕ ಪದಾರ್ಥದ ಟ್ರಂಕು ಸಿಕ್ಕಿತು.

ಕಲಕತ್ತಾ ತಾ॥ ೩೧— ಪೋಲೀಸರು ಈ ಸ್ಟ್ರೀಟ ಸಂದಿಯಲ್ಲಿ ಪೋಲೀಸ ಚೌಕಿಯ ಹತ್ತಿರುವ ಒಂದು ಮನೆಯನ್ನು ಝಡತಿ ಮಾಡಿದರು. ಝಡತಿಯಲ್ಲಿ ಅವರಿಗೆ ಸ್ಫೋಟಕ ಪದಾರ್ಥದಿಂದ ತುಂಬಿದ ಒಂದು ದೊಡ್ಡ ಟ್ರಂಕು ಸಿಕ್ಕಿತು. ಪೋಲಿಸರು ಇವಕ್ಕೋಸುಗ ಓರ್ವ ಬಂಗಾಲಿ ತರುಣನನ್ನು ಕೈದು ಮಾಡಿದರು ಇಂಥ ದೊಡ್ಡ ಟ್ರಂಕು ಇತ್ತೀಚೆಗೆ ಸಿಕ್ಕಿದ್ದಿಲ್ಲ ಟ್ರಂಕಿನ ಹೊರತು, ಒಂದು ಭಯಂಕರವಾದ ಆಯುಧವೂ ಸಿಕ್ಕಿದೆ. (ಅ ಪ್ರ)

ಬನಾರಸದಲ್ಲಿ ಪಿಕೆಟಿಂಗದ ಮೆರವಣಿಗೆ

ಬನಾರಸ ತಾ॥ ೩೦— ಶ್ರೀ ಶಿವನಾಥಸಿಂಗ ಇವರು ೨೦ ಜನ ಸ್ವಯಂಸೇವಕರೊಡನೆ ಪರದೇಶಿ ಅರಿವೆಯ ಅಂಗಡಿಗಳ ಪಿಕೆಟಿಂಗಿಗಾಗಿ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯಿಂದ ಹಾಯ್ದು ಹೋದರು ಪೋಲೀಸರು ಅವರನ್ನು ಇನ್ನೂ ಸೆರೆ ಹಿಡಿದಿರುವದಿಲ್ಲ.

ಈ ಜನರು ತಮ್ಮ ಕಾರ್ಯಕ್ರಮವನ್ನು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಮುಂಗಡವಾಗಿಯೆ ತಿಳಿಸಿದ್ದರಂತೆ!

ಡಬ್ಲಿನದಲ್ಲಿ ಝಡತಿ

ಓಡಿಹೋಗಿಯುವರ ಕಾಗದಪತ್ರಗಳನ್ನು ಜಪ್ತ ಮಾಡಿದರು

ಡಬ್ಲಿನ ತಾ। ೩೦— ೭ ಜನ ಗುಪ್ತಚಾರರು ಈ ಹೊತ್ತಿನ ದಿವಸ ಪುನಃ ನೀಲಿ ಅಂಗಿಯವರ ಮುಖ್ಯ ಠಾಣೆಯನ್ನು ಝಡತಿ ಮಾಡಿದರು.

ಝಡತಿಯಲ್ಲಿ ಅವರು ಜನರಲ್ ಓಡಫಿಯವರ ಡೆಸ್ಕನ್ನು ಮುರಿದರು ಮತ್ತು ಅದರಲ್ಲಿಯ ಕಾಗದಪತ್ರಗಳನ್ನು ಜಪ್ತ ಮಾಡಿದರು ಇದಲ್ಲದೆ ಹೋಗುವ ಮುಂದೆ ಸಂಘದ ಅಧಿಕಾರಿಗಳ ಹೆಸರುಗಳನ್ನು ಬರೆದುಕೊಂಡು ಹೋದರು

ನಾಝಿ ತರುಣರ ಸಾಹಸ

ತುರುಂಗದಿಂದ ಮುಖಂಡರನ್ನು ಓಡಿಸಿದರು

ಮ್ಯುನಿಚ್ ತಾ। ೩೦— ಕೆಲವು ನಾಝಿ ತರುಣರು ಇನ್ಸಬರ್ಗ ತುರುಂಗವನ್ನು ಮುರಿದು ತಮ್ಮ ಮುಖಂಡರಾದ ಹರ ಹಾಫೇರ ಇವರನ್ನು ತುರುಂಗದಿಂದ ಓಡಿಸಿಕೊಂಡು ಹೋಗಿರುತ್ತಾರೆ ಈ ಕಾರಣ ಊರಲ್ಲೆಲ್ಲ ಗದಿಬಿಡಿ ಎದ್ದಿದೆ ಈ ತರುಣರು ಆಸ್ಟ್ರಿಯನ್ ಸೈನ್ಯಾಧಿಕಾರಿಗಳಂತೆ ವೇಷ ಹಾಕಿಕೊಂಡು ತುರುಂಗದಲ್ಲಿ ಒಳಹೊಕ್ಕರು ಮತ್ತು ತಗಲು ಆಜ್ಞಾ ಪತ್ರವನ್ನು ಕೊಟ್ಟು ಮುಖಂಡನನ್ನು ಬಿಡಿಸಿಕೊಂಡು ಹೋದರು ಪೋಲೀಸರು ಈ ವಿಷಯವಾಗಿ ಸಂಶಯದಿಂದ ೩೦ ಜನ ತರುಣರನ್ನು ಸೆರೆಹಿಡಿದಿರುತ್ತಾರೆ

ದೊಡ್ಡ ದೊಡ್ಡ ಬ್ಯಾಂಕುಗಳು ದಿವಾಳಿ ತೆಗೆದವು.

ಲಂಡನ್ ತಾ। ೩೦— ಬ್ರಿಜ್ಜಪೋರ್ಟದಲ್ಲಿಯ ಮೂರು ವ್ಯಾಪಾರಿ ಬ್ಯಾಂಕುಗಳು ದಿವಾಳಿ ತೆಗೆದಿರುತ್ತವೆ ಈ ಬ್ಯಾಂಕುಗಳ ಒಟ್ಟು ಭಂಡವಲು ೬೬,೭೫,೦೦೦ ಡಾಲರ್ಸ ಇತ್ತು

ಪ್ಯಾರಿಸ ಹೊಗೆ ಬಂಡಿಯು ಉರುಳಿಬಿತ್ತು.

ಪ್ಯಾರಿಸ ತಾ॥ ೩೦— ಪ್ಯಾರಿಸ್ ರಾಯನ್ ಹೊಗೆ ಬಂಡಿಯು ಈ ಹೊತ್ತಿನ ದಿವಸ ಸಾಮೂರು ಎಂಬಲ್ಲಿ ಹಳಿಬಿಟ್ಟು ಜಾರಿಬಿತ್ತು. ಗಾರ್ಡನು ಮರಣ ಹೊಂದಿದನು ಹಾಗು ೭೫ ಜನರು ಗಾಯ ಹೊಂದಿದರು.

೨೦ ಲಕ್ಷ ನಿರುದ್ಯೋಗಿಗಳಿಗೆ ಉದ್ಯೋಗ ಸಿಕ್ಕಿತು.

ಅಮೇರಿಕೆಯಲ್ಲಿಯ ಕೂಲಿಗೇಡಿ ಜನರಲ್ಲಿ ೨೦ ಲಕ್ಷ ಜನರಿಗೆ ಉದ್ಯೋಗ ದೊರೆತಿರುವದೆಂದು ವಾಶಿಂಗಟನ್ನದಿಂದ ಸುದ್ದಿ ಬಂದಿದೆ.

ಬದರೀನಾಥ ದೇವಾಲಯವನ್ನು ಟೆಹರಿ ದರಬಾರಕ್ಕೆ ಕೊಡಕೂಡದು

ಕಾಶಿ ತಾ। ೩೦ ಅಖಿಲಭಾರತ ವರ್ಣಾಶ್ರಮ ಸ್ವರಾಜ್ಯಸಂಘದವರು ಬದರೀನಾಥ ದೇವಾಲಯವನ್ನು ಟೆಹರಿ ಸಂಸ್ಥಾನಕ್ಕೆ ಒಪ್ಪಿಸಬೇಕೋ ಒಪ್ಪಿಸಬಾರದೋ ಎಂಬ ಬಗ್ಗೆ ವಿಚಾರ ಮಾಡಿ. ತಮ್ಮ ವರದಿಯನ್ನು ಹಿಂದುಸ್ಥಾನ ಹಾಗು ಸಂಯುಕ್ತಪ್ರಾಂತ ಸರಕಾರದವರಿಗೆ ಕಳಿಸಿಕೊಟ್ಟಿರುವರು. ಸಂಘದವರು ತಮ್ಮ ಈ ವರದಿಯಲ್ಲಿ ದೇವಾಲಯವನ್ನು ಟೆಹರಿ ಸಂಸ್ಥಾನದ ವಶಕ್ಕೆ ಕೊಡತಕ್ಕದ್ದಲ್ಲವೆಂದು ಉಲ್ಲೇಖಿಸಿದ್ದಾರೆ ಮತ್ತು ಅಖಿಲಭಾರತ ಪ್ರಾತಿನಿಧಿಕ ಸಂಘವನ್ನು ಸ್ಥಾಪಿಸಿ ಆಡಳಿತೆಯನ್ನು ಅದರ ಕೈಯಲ್ಲಿ ಕೊಡಬೇಕೆಂದು ಅಭಿಪ್ರಾಯ ವ್ಯಕ್ತಮಾಡಿದ್ದಾರೆ

ಪದ್ಮಾನದಿಗೆ ಮಹಾಪೂರ

ಸಾವಿರ ಜನರು ನಿರಾಶ್ರಿತರಾದರು

ರಾಜಶಾಹಿ ತಾ॥ ೩೧— ಪದ್ಮಾ ನದಿಗೆ ಮಹಾಪೂರ ಬಂದಿದ್ದರಿಂದ ಎಷ್ಟೋ ಊರುಗಳು ನೀರಲ್ಲಿ ಮುಳುಗಿವೆ ನೂರಾರು ಮನೆಗಳು ಹರಿದುಹೋಗಿರುವವೆಂದು ಸುದ್ದಿಯಿದೆ ರಾಜಶಾಹಿಯಲ್ಲಿ ಸಾವಿರ ಜನರು ನಿರಾಶ್ರಿತರಾಗಿದ್ದಾರೆ ಜನರು ಬೀದಿಗಳ ಮೇಲೆ ಬಿದುರುಗಳ ಅಟ್ಟವನ್ನು ಕಟ್ಟಿಕೊಂಡು ಇರತೊಡಗಿದ್ದಾರೆ ನದಿಯ, ನೀರು ಇನ್ನೂ ಏರುತ್ತಲಿದೆ

ಹೊಗೆ ಬಂಡಿಯನ್ನು ಡಬ್ಬು ಕೆಡಹುವ ಪ್ರಯತ್ನ ನಾಲ್ವರನ್ನು ಸೆರೆಹಿಡಿದರು.

ಮದ್ರಾಸ ತಾ॥ ೩೧— ಎಮ್ ಎಸ್ ಎಂ ರೇಲ್ವೆಮಾರ್ಗದಲ್ಲಿ ಸ್ವಲ್ಪ ದಿನಗಳ ಹಿಂದೆ ಪಕಾಲಾ ಎಂಬಲ್ಲಿ ಹೊಗೆಬಂಡಿಯನ್ನು ಡಬ್ಬು ಕೆಡಹುವ ಪ್ರಯತ್ನ ನಡೆದಿತ್ತಷ್ಟೆ ಪೋಲೀಸರು ಈ ವಿಷಯವಾಗಿ ನಾಲ್ವರನ್ನು ಸೆರೆಹಿಡಿದಿದ್ದಾರೆ ರೇಲ್ವೆ ಸುಪರಿಂಟೆಂಡೆಂಟರು ಸ್ವತಃ ವಿಚಾರಣೆ ನಡೆಸಲು ಅತ್ತ ಹೋಗಿದ್ದಾರೆ.

ಕ್ರಾಂತಿಕಾರಕ ಕಾಯದೆ ಅನ್ವಯ ಮೂವರು ಚೀನಿ ಜನರಿಗೆ ಶಿಕ್ಷೆ.

ಕಲಕತ್ತಾ ತಾ। ೩೦— ಬಳಿಯಲ್ಲಿ ಪಿಸ್ತೂಲು ಮತ್ತು ಕಾಡತೂಸುಗಳನ್ನು ಇಟ್ಟುಕೊಂಡದ್ದಕ್ಕೆ ಮೂವರು ಚೀನದವರನ್ನು ಸೆರೆ ಹಿಡಿದಿತ್ತು ಅವರ ವಿಚಾರಣೆ ನಡೆದು ಅವರಿಗೆ ಪ್ರತ್ಯೇಕವಾಗಿ ೭ ವರ್ಷ ಕಠಿಣ ಶಿಕ್ಷೆಯಾಯಿತು.

ಮೈಸೂರ ಸಂಸ್ಥಾನದ ಸುದ್ದಿ

ಶಿವಮೊಗ್ಗಾ ದಂಗೆಯ ಖಟ್ಲೆಯ ವಿಚಾರಣೆ

ತಾ॥ ೭ ನೆ ಮೇ ದಿವಸ ಶಿವಮೊಗ್ಗೆಯಲ್ಲಿ ಹಿಂದು ಮುಸಲ್ಮಾನರ ನಡುವೆ ದಂಗೆಯಾಗಿತ್ತಷ್ಟೆ. ಈ ಬಗ್ಗೆ ಅಧಿಕಾರಿಗಳು ೨೨ ಹಿಂದೂ ಜನರನ್ನು ಸೆರೆಹಿಡಿದು ಅವರನ್ನು ಖಟ್ಲೆಗೆ ಗುರಿ ಮಾಡಿದ್ದರು ಆರೋಪಿಗಳಲ್ಲಿ ಇಬ್ಬರು ಮುನಸಿಪಾಲಟಿಯ ಸಭಾಸದರಿದ್ದರು. ಸ್ಪೇಶಲ್ ಫಸ್ಟಕ್ಲಾಸ ಮ್ಯಾಜಿಸ್ಟ್ರೇಟ ಮಿ ಎಸ್. ಕೃಷ್ಣಮೂರ್ತಿಯವರು ಕಳೆದ ವಾರದಲ್ಲಿ ತೀರ್ಪು ಕೊಟ್ಟರು. ೫ ಜನರನ್ನು ನಿರ್ದೋಷಿಯೆಂದು ಬಿಡುಗಡೆಮಾಡಿ ಉಳಿದವರನ್ನು ಸೆಶನ್ಸ ಕಮಿಟ್ ಮಾಡಿದರು.

ಶ್ರೀ ವ್ಹಿ ವೆಂಕಟಪ್ಪ, ಎಂ ಎಲ್ ಸಿ ಇವರು ಬೆಂಗಳೂರ ಜಿಲ್ಹಾ ಬೋರ್ಡಿಗೆ ಅಧ್ಯಕ್ಷರಾಗಿ ಆರಿಸಿಬಂದ ಕಾರಣ, ಆನೇಕಲ್ಲು ಜಮೀನದಾರ ಸಂಘದವರು. ತಾ॥ ೨೭ ನೆ ದಿವಸ ಸಭೆ ಜರುಗಿಸಿ, ಅವರಿಗೆ ಮಾನಪತ್ರವನ್ನು ಸಮರ್ಪಿಸಿದರು ಬೆಂಗಳೂರ ಜಿಲ್ಹೆಯ ಡೆಪ್ಯೂಟಿ ಕಮಿಶನರಾದ ಶ್ರೀ. ಕೆ ವ್ಹಿ ಅನಂತರಾಮ ಇವರು ಈ ಸಮಾರಂಭಕ್ಕೆ ಅಧ್ಯಕ್ಷರಾಗಿದ್ದರು.

ಮದ್ರಾಸದಲ್ಲಿ ಪಿಕೆಟಿಂಗ.

ಮದ್ರಾಸ ತಾ॥ ೩೦— ಜಾರ್ಜಟಾವುನ್‌ದಲ್ಲಿಯ ಪರದೇಶಿ ಅರಿವೆಯ ಅಂಗಡಿಗಳ ಮುಂದೆ ಪಿಕೆಟಿಂಗ ನಡೆದಿರುತ್ತದೆ ೧೭ ಜನರು ಪಿಕೆಟಿಂಗ ಮಾಡುತ್ತಿರುವರು ಅವರಲ್ಲಿ ಒಬ್ಬರು ವಕೀಲರಿರುವರು. ಪೋಲೀಸರು ಈ ವರೆಗೆ ಯಾರನ್ನೂ ಸೆರೆಹಿಡಿದಿರುವದಿಲ್ಲ.

ಕಾಲು ನಡಿಗೆಯಿಂದ ಲಂಡನಕ್ಕೆ ಹೋದ ಮನುಷ್ಯ.

ಲಖನೌ ತಾ॥ ೩೧— ಕಳೆದ ಫೆಬ್ರುವರಿಯಲ್ಲಿ ಮಿ ಎಂ. ಎಚ್. ಚಾಮರ್ಸ ಎಂಬ ಓರ್ವ ಗೃಹಸ್ಥನು ಹಿಂದುಸ್ಥಾನದಿಂದ ಕಾಲು ನಡಿಗೆಯಿಂದ ಲಂಡನಕ್ಕೆ ಹೋಗಿದ್ದನು ಅವನು ಈ ದಿವಸ ತನ್ನ ಪ್ರವಾಸವನ್ನು ಮುಗಿಸಿಕೊಂಡು ಇಲ್ಲಿಗೆ ತಿರುಗಿ ಬಂದನು. ಅವನ ಗೆಳೆಯರು ಮತ್ತು ಇತರ ಜನರು ಸ್ಟೇಶನದಲ್ಲಿ ಅವನಿಗೆ ಯಥಾಯೋಗ್ಯವಾಗಿ ಆದರ ಸತ್ಕಾರ ಮಾಡಿದರು.

ಅವನು ಈ ಪ್ರವಾಸವನ್ನು ಒಟ್ಟು ೧೩೦ ದಿನಗಳಲ್ಲಿ ಮುಗಿಸಿದನು ಪ್ರತಿ ದಿವಸ ಅವನು ೩೦ ಮೈಲಿನಂತೆ ನಡೆಯುತ್ತಿದ್ದನು. ಅವನ ಅನುಭವದ ವಿಷಯವಾಗಿ ಶೀಘ್ರದಲ್ಲಿಯೇ ಒಂದು ಗ್ರಂಥವು ಪ್ರಸಿದ್ಧವಾಗತಕ್ಕದ್ದಿರುತ್ತದೆ.

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಛೂರ್ಯ

ಶುಸ್ತ್ರಶದ ಪುತ, ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವದು. ಹಲ್ಲುಗಳು, ವಸಡೆಗಳ ರಕ್ತಸ್ರಾವ... ಕಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮ... ಗಳ ತತ್ವವು 'ಕಚ್ಛೂರ್ಯ' ದಂತ ಮಂಜನ... ... ಅವಶೇಷಗಳು ... ಕ್ರಿಮಿಗಳು ... ವಸಡೆಗಳು ಕೆಡುವವು. ಆದರೆ ಈ ಕ್ರಿಮಿಗಳು ಕಚ್ಛೂರ್ಯ ದಂತಮಂಜನದ ಉಪಯೋಗದಿಂದ ನಾಶವಾಗುವವಲ್ಲದೆ, ಒಸಡೆಗಳು ... ಸುವಾಸವುಂಟಾಗುವದು. 'ಕಚ್ಛೂರ್ಯ' ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆದ್ದು ಮಾರುಗೆದ್ದು" ಎಂಬ ನಾಣ್ಣುಡಿಯಂತೆ ನಡೆಯಿರಿ. ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹಳೆಯದಾದ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದ,
ಹೆಚ್ಚಿನ ಸುಧಾರಣೆ ಎಲ್ಲಕ್ಕೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ. ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ|| ೧೬-೬-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)
ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ
ವರ್ತಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀರಾಮೇಶ್ವರ ಸಮುದ್ರ ದಾಟ ಲಂಕಾಕ್ಷೇತ್ರಗಳ
ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೀಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು|| ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ|| ೨	೧೯ ಲಖನೌ ೨೪	೩೭ ಚಿದಂಬರಂ ೫
೨ ನಾಶಿಕ ೩-೪	೨೦ ಅಯೋಧ್ಯೆ ೨೫	೩೮ ರಾಮೇಶ್ವರ ೧೬-೧೭
೩ ಮುಂಬಯಿ ೫-೬-೭	೨೧ ಅಲ್ಲಾಬಾದ ,,	೩೯ ಧನುಷ್ಕೋಡಿ [ಹಡಗದಿಂದ] ೧೮
೪ ಸೋನಗಡ ನಾಥಳ್ಯ (ಹಡಗದಿಂದ) ೮-೯	೨೨ ಪ್ರಯಾಗ ೨೬-೨೭	೪೦ ಕೊಲಂಬೋ [ಹಡಗದಿಂದ] ೧೯-೨೦-೨
೫ ವೇರಾವಳ ,,	೨೩ ಕಾಶಿ ೨೮-೨೯-೩೦-೩೧ ನವೆಂಬರ ತಾ|| ೧	೪೧ ಕ್ಯಾಂಡಿ [ಲಂಕಾ] ೨೨
೬ ಪಾಲೀಟಾಣಾ (ಜೈನತೀರ್ಥ) ೧೦-೧೧	೨೪ ಸಾರನಾಥ ,	೪೨ ಅನುರಾಧಪುರ [ಲಂಕಾ] ೨೩
೭ ಅಬುಪರ್ವತ (ಜೈನತೀರ್ಥ) ೧೨-೧೩	೨೫ ಗಯಾ ೨	೪೩ ಧನುಷ್ಕೋಡಿ [ಹಡಗದಿಂದ] ,,
೮ ಅಹಮ್ಮದಾಬಾದ ೧೪	೨೬ ರಾಜಗಿರಿ ಕುಂಡಲ (ಜೈನತೀರ್ಥ) ೩	೪೪ ಮದುರೆ ೨೫
೯ ಸಾಬರಮತಿ ,,	೨೭ ಗಿರಿ ,,	೪೫ ತ್ರಿಚಿನಾಪಳ್ಳಿ ೨೫
೧೦ ಬರೋಡ ೧೫	೨೮ ಸಮ್ಮೇದಶಿಖರ (ಜೈನತೀರ್ಥ) ೪	೪೬ ಶ್ರೀರಂಗ ,,
೧೧ ಉಜ್ಜಯಿನಿ ೧೬	೨೯ ಕಲಕತ್ತಾ ೫-೬-೭	೪೭ ಬೆಂಗಳೂರ ೨೬
೧೨ ಆಗ್ರಾ ೧೭	೩೦ ಜಗನ್ನಾಥ ಪುರಿ ೮	೪೮ ಮೈಸೂರ ೨೭-೨೮
೧೩ ಮಥುರಾ ೧೮-೧೯	೩೧ ವಿಶಾಖಪಟ್ಟಣ ೯	ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವೆಂಬರ ೨೯ನೇ ತಾರೀಖು (ಶಕೆ ೧೮೫೫
೧೪ ಗೋಕುಲ ,,	೩೨ ರಾಜಮಹೇಂದ್ರಿ ೧೦	ಮಾರ್ಗಶಿರ ಶು|| ೧೩ ಬುಧವಾರ)
೧೫ ವೃಂದಾವನ ,,	೩೩ ಬೆಜವಾಡ ೧೧	ಮುಂಜಾನೆ ಹುಬ್ಬಳ್ಳಿ ಪಟ್ಟಣ
೧೬ ಗೋವರ್ಧನ ,	೩೪ ಮದ್ರಾಸ ೧೨-೧೩	ವನ್ನು ಬಂದು ಸೇರುವದು.
೧೭ ದಿಲ್ಲಿ ೨೦-೨೧	೩೫ ಶಿವಕಂಚಿ ೧೪	
೧೮ ಹರಿದ್ವಾರ ೨೨-೨೩	೩೬ ವಿಷ್ಣುಕಂಚಿ ,,	

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು.

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕಂಡಕ್ಲಾಸಿಗೆ ೩೧೦ ರೂಪಾಯಿ, ಥರ್ಡಕ್ಲಾಸಿಗೆ ೧೪೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ ಸೆಕಂಡಕ್ಲಾಸಿನವರು ೫೦ ರೂ, ಥರ್ಡಕ್ಲಾಸಿನವರು ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧ ಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀ ಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಬಗ್ಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶರಾದರು. ಆದಕಾರಣ ಟಿಕೇಟಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯ ಏಜನ್ಸ ರೆಂಟೆಗಳು— ನಮ್ಮ ಕಂಪನಿಯ ಏಜನ್ಸ ರೆಂಟೆಗಳಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರ ಹಾಗು ವ್ಯಾಪಾರಸ್ಥರ ಬಹಳ ಪ್ರಯೋಜನಗಳು ... ... ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸತಕ್ಕದ್ದು. ಅರ್ಜಿಯ ಫಾರ್ಮುಗಳು ಏಜನ್ಸ ರೆಂಟೆಯ ಹೆಚ್ಚಿನ ಮಾಹಿತಿ ಪತ್ರಿಕೆಗಳು ಬೇಕಾದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು. ಏಜ-ಟರಾಗಬಯಸುವವರು ಕೂಡಲೆ ತಿಳಿಸತಕ್ಕದ್ದು. ಯೋಗ್ಯ ಕಮೀಶನ್ ಕೊಡಲ್ಪಡುವದು.

ಜಿ. ಎ ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬಾಳ್‌ಕೇರಿ.

ಬರುವರು! ಧಾರವಾಡಕ್ಕೆ ಬರುವರು!!

ಗಂಧರ್ವನಾಟಕ ಮತ್ತು ಯಶವಂತ ನಾಟಕ ಮಂಡಳಿಗಳಲ್ಲಿ ಹೆಸರಾದ

ಕಲಾನಿಪುಣ ಪ್ರೊ. ಎಚ್. ಜಿ. ಘೋಡಕೆ ಇವರ

ಹಾಸ್ಯಕಾರಕ-ಪ್ರೋಜ ಮತ್ತು ಸಂಗೀತ ಹೊಸತರದ

ನಕಲಿನ ಪ್ರಚಂಡ

ಪ್ರೋಗ್ರಾಮ

ಆಗುವವು.

ಕನ್ನಡಿಗ.

ಧಾರವಾಡ— ಶನಿವಾರ ತಾರೀಖು ೨—೮—೧೯೩೩

ವ್ಯಾಪಾರದ ದೊಡ್ಡ ತೊಡಕು!

—:o:o:—

ರಾಜನೀತಿಯು ವಾರಾಂಗನೆಯಂತೆ ಬಹುರೂಪಗಳುಳ್ಳದ್ದೆಂದು ಎನ್ನುತ್ತಾರೆ. ವ್ಯಾಪಾರ ನೀತಿಯೂ ಬಹುಶಃ ಹಾಗೆಯೇ ಇರುತ್ತದೆ. ಇಂದು ಸ್ವಾರ್ಥಕ್ಕೋಸ್ಕರ ಶತ್ರುಗಿ ಕತ್ತಿಗೆ ಕತ್ತಿ ಮಸೆದವರೇ ನಾಳಿನ ದಿವಸ ಅದೇ ಸ್ವಾರ್ಥಕ್ಕೋಸ್ಕರ ಪರಮ ಮಿತ್ರರಾಗಿ ಒಬ್ಬರಲ್ಲಿ ಒಬ್ಬರು ಕೈಯಾಕಿ ತಿರುಗಾಡಬೇಕಾಗುತ್ತದೆ. ಅಂಥದೊಂದು ಪ್ರಸಂಗವು ವಿಲಾಯತಿಯು ಮತ್ತು ಈ ದೇಶದ ವ್ಯಾಪಾರಸ್ಥರಿಗೆ ಈಗ ಬಂದಿದೆ. ಜಪಾನದವರು ಇಷ್ಟರ ಯುರೋಪಖಂಡದ ವ್ಯಾಪಾರಕ್ಕೇ ದೊಡ್ಡದೊಂದು ಗಂಡಾಂತರವಾಗಿದ್ದಾರೆ. ಜಪಾನದವರ ಇತ್ತೀಚೆಗೆ ಯುರೋಪದಲ್ಲಿ ತಮ್ಮ ಮಾಲನ್ನು ಮಿತಿಮೀರಿ ಅಗ್ಗವಾಗಿ ಮಾರುತ್ತಿರುವರು. ನೋಡಿದರೆ ಜಪಾನವು ಪೂರ್ವದಿಕ್ಕಿಗೆ ಇದ್ದರೆ ಯುರೋಪಖಂಡವು ಪಶ್ಚಿಮ ದಿಕ್ಕಿಗೆ ಇದೆ. ಹೀಗೆ ಕೈಗಳಲ್ಲಿ ಇಷ್ಟುದೂರ ಅಂತರವಿದ್ದರೂ ಕೂಡ ವ್ಯಾಪಾರದಲ್ಲಿ ಅತಿಶಯವಾಗಿ ಮುಂದೆ ಓಡಿದ ಯುರೋಪಖಂಡದ ವ್ಯಾಪಾರಸ್ಥರೊಡನೆ ಜಪಾನವು ಸ್ಪರ್ಧೆ ನಡಿಸಿರುತ್ತದೆ. ಈಗ ಅದು ನಮ್ಮ ದೇಶದಲ್ಲಿಯೂ ತನ್ನ ಅನೇಕ ಜಿನಸುಗಳನ್ನು ತಂದು ಅತಿ ಅತಿ ಅಗ್ಗವಾಗಿ ಮಾರುತ್ತಿದೆ. ಜಪಾನ ದೇಶವು ಕೈಗಾರಿಕೆಯಲ್ಲಿಯೂ ಕಲಾಕೌಶಲ್ಯದಲ್ಲಿಯೂ ಇಷ್ಟು ಸಧಾರಿಸಿದ ದೇಶವಷ್ಟೆ. ಆದರೆ ಈ ಜಪಾನಿಯರು ತಮ್ಮ ದೇಶದಿಂದ ಅಲ್ಲಿಗೆ ಮಾಲುಗಳನ್ನು ಹೊತ್ತು ತಂದು ಜಗಿ, ಅವರ ದೇಶದಲ್ಲಿ ಅವರಗಿಂತ ಅಗ್ಗ ಮಾರುತ್ತಾರೆ! ವಿಲಾಯತಿಯ ಗಿರಣಿಕಾರರಿಗೆ ಈಗ ತೊಟ್ಟಿಯಲ್ಲಿ ಬೆಂಕಿ ಬಿದ್ದಿದೆ. ಹಿಂದುಸ್ಥಾನದ ಗಿರಣಿಗಳ ಮೇಲೆ ಲ್ಯಾಂಕಶಾಯರ ಗಿರಣಿಯವರ ಉಪಜೀವನ! ಈಗ ಹಿಂದುಸ್ಥಾನದ ಗಿರಣಿಗಳು ತಮ್ಮ ಕೈಬಿಟ್ಟು ಜಪಾನದವರ ಕೈಗೆ ಹೋಗುತ್ತಿರುವದರಿಂದ ಅವರಿಗೆ ದೊಡ್ಡ ಚಿಂತೆಯಾಗಿದೆ. ಇತ್ತ ಹಿಂದುಸ್ಥಾನದ ಗಿರಣಿಕಾರರಿಗೂ ಅದೇ ತರಹದ ಚಿಂತೆ. ಜಪಾನಿಯರು ತಮ್ಮ ಅರಿವೆಗಳನ್ನು ಈ ದೇಶದ ಗಿರಣಿಕಾರರಿಗಿಂತಲೂ ಅಗ್ಗವಾಗಿ ಮಾರುತ್ತಿರುವರು! ಜಪಾನದಲ್ಲಿ ಹತ್ತಿ ಹುಟ್ಟುವುದಿಲ್ಲ. ಅವರು ಈ ದೇಶದಿಂದಲೂ ಮಿಕ್ಕ ದೂರದೂರ ದೇಶಗಳಿಂದಲೂ ಹತ್ತಿಯನ್ನು ಒಯ್ದು ಅರಿವೆಗಳನ್ನು ತಂದು ಮಾರುವರು. ಪುನಃ ಈ ದೇಶಗಳಿಗೆ ತಂದು ಇಷ್ಟು ಅಗ್ಗವಾಗಿ ಹೇಗೆ ಕೊಡಬಹುದು? ಹೀಗಾಗುವುದಕ್ಕೆ ಕೆಲವು ಕಾರಣಗಳಿವೆ. ಜಪಾನದಲ್ಲಿ ಕೂಲಿಯು ಬಹಳ ಅಗ್ಗ, ಉಪಜೀವನವೂ ಅಗ್ಗ. ಮೇಲಾಗಿ ಅಲ್ಲಿಯ ಸರಕಾರವು ಸ್ವಂತ ತಿಜೋರಿಯಿಂದ ಹಣವನ್ನು ಕೊಟ್ಟು ಅಲ್ಲಿಯ ಉದ್ಯೋಗ ಧಂದೆಗಳನ್ನು ಪೋಷಿಸುತ್ತಿರುವರು. ಅದರಿಂದ, ಜಪಾನದವರ ಮೇಲೆ ಪರದೇಶಗಳು ಎಷ್ಟು ಸುಂಕವನ್ನು ಹೇರಿದರೂ ಅದನ್ನು ಕೊಟ್ಟು ತಮ್ಮ ಮಾಲನ್ನು ಮಾರಬಲ್ಲರು. ಇರಲಿ, ಮೇಲ್ಕಾಣಿಸಿದ ಕಾರಣಗಳಿಗೋಸ್ಕರ ಲ್ಯಾಂಕಶಾಯರ ಗಿರಣಿಕಾರರು ಹಿಂದುಸ್ಥಾನದ ಗಿರಣಿಕಾರರೊಡನೆ ಸಖ್ಯತ್ವವನ್ನು ಬೆಳಸಿ ಇನ್ನು ಮೇಲೆ ಇಬ್ಬರೂ ಕೂಡಿ ಜಪಾನದವರನ್ನು ಹೊರಗೆ ಹಿಮ್ಮೆಟ್ಟಿಸಬೇಕೆಂಬುದನ್ನು ಯೋಚನೆ ಮಾಡುವವರು! ಇದಕ್ಕಾಗಿ ಮೊನ್ನೆ ವಿಲಾಯತಿಯಿಂದ ಒಂದು ವೃತ್ತಾಂತ ಮಂಡಳವು ಈ ದೇಶಕ್ಕೆ ಒಂದಿಕ್ಕೆ ಹೊಂಟಿದೆ. ಈ ದೇಶದ ವ್ಯಾಪಾರಸ್ಥರಲ್ಲಿ ಇನ್ನು ಮತ್ಸ್ಯಕ್ಯವಾದಂತೆ ತೋರುವದಿಲ್ಲ. ಜಪಾನದವರಿಂದ ನಮಗೇನೂ ಹಾನಿಯಾಗುವುದಿಲ್ಲ. ಜಪಾನದವರು ನಮ್ಮಿಂದ ಉರುಟು ಹತ್ತಿ ಮಾತ್ರ ಒಯ್ಯುತ್ತಾರೆ. ಜನಗು ನೂಲುಗಳಿಗೆ ಬೇಕಾಗುವ ಹತ್ತಿ ಈ ದೇಶದಲ್ಲಿ ಹುಟ್ಟುವುದಿಲ್ಲ. ಅದಕಾರಣ ಅವರು ಇಲ್ಲಿಯ ಹತ್ತಿಗೆ ಬಹಳ ಬೆಲೆ ಕೊಟ್ಟರೆ ನಮ್ಮ ರೈತರಿಗೆ ಹಿತವೇ ಆಗುತ್ತದಲ್ಲದೆ ನಮಗೇನೂ ಅಷ್ಟೊಂದು ಹಾನಿಯಾಗುವುದಿಲ್ಲ ಎಂದಾಗಿ ಅನ್ನುತ್ತಾರೆ. ಈಗ ಹಿಂದುಸ್ಥಾನವು ಜಪಾನದವರ ಮೇಲೆ ಭಯಂಕರ ಕರವನ್ನು ಹೇರಿದೆ. ಇದರ ಸೇಡು ತೀರಿಸಿಕೊಳ್ಳಲಿಕ್ಕೆಂದು ಜಪಾನವು ಈಗ ಈ ದೇಶದ ಹತ್ತಿಯನ್ನು ಕೊಂಡುಕೊಳ್ಳುವುದಿಲ್ಲವೆಂದು ಬಹಿಷ್ಕಾರ ಹಾಕಿದೆ. ಅದಕ್ಕೆ ಜಪಾನದವರೊಡನೆ ಸ್ನೇಹ ಮಾಡಿಕೊಂಡರೇನೇ ಇಲ್ಲಿಯ ರೈತರ ಉದ್ಧಾರವಾಗುತ್ತದೆಂದು ಇವರ ಅಂಬೋಣ. ಇದಕ್ಕೆ ವಿರುದ್ಧವಾಗಿ ಜಪಾನದವರನ್ನು ಒಗ್ಗಿ ಬಡದು ಲ್ಯಾಂಕಶಾಯರದವರೊಡನೆ ಸಹಕಾರ ಮಾಡಬೇಕೆಂದು ಮತ್ತೊಂದು ಪಕ್ಷದವರ ಅಂಬೋಣ. ಏನೇ ಇರಲಿ ಕೆಲವು ದಿನ ಈ ಮುಂಚೆ ಬ್ರಿಟಿಶ ಅರಿವೆಗೆ ಬಹಿಷ್ಕಾರ ಹಾಕಬೇಕೆಂಬ ಕೂಗು ಎದ್ದಿತ್ತು. ಅದೇ ಈಗ ಇಲ್ಲಿಯ ಗಿರಣಿಕಾರರು ಬ್ರಿಟಿಶರೊಡನೆ ಸಹಕಾರ ಮಾಡಿ ಜಪಾನಕ್ಕೆ ಬಹಿಷ್ಕರಿಸಬೇಕೆಂದು ಅನ್ನುತ್ತಿರುವರು! ಜಪಾನದ ವ್ಯಾಪಾರಸ್ಥರೊಡನೆಯೂ ಮಾತುಕತೆಗಳು ನಡೆಯುವವು. ಬ್ರಿಟಿಶ ವ್ಯಾಪಾರಸ್ಥರೊಡನೆಯೂ ಮಾತುಕತೆಗಳು ನಡೆಯುವವು. ಅವುಗಳ ಈಗ ನಿಶ್ಚಯವಾಗುತ್ತದೆಂದು ಎದುರು ನೋಡುವ ಪ್ರೇಕ್ಷಿಸುವ.

ಕಿರುನುಡಿಗಳು.

ವಾಚನಾಲಯಗಳೆಂದರೆ ಚಿಕ್ಕ ವಿಶ್ವವಿದ್ಯಾಲಯಗಳೆಂದು ದೊಡ್ಡವರು ಹೇಳುತ್ತಿರುವುದುಂಟಲ್ಲ. ಈಗಿನ ದಿನಗಳಲ್ಲಿ ಅವು ರಾಷ್ಟ್ರೀಯ ಶಿಕ್ಷಣ ಸ್ಥಾನವನ್ನು ಆಕ್ರಮಿಸುತ್ತಿವೆಂದು ಹೇಳಬಹುದು. ಶಾಲೆ ಕಾಲೇಜುಗಳಲ್ಲಿ ಕಲಿಯುವ ವಿದ್ಯೆಗಿಂತಲೂ ಈ ವಾಚನಾಲಯಗಳಲ್ಲಿ ದೊರಕುವ ವಿದ್ಯೆಯಿಂದಲೇ ನಮ್ಮ ತರುಣರಲ್ಲಿ ರಾಷ್ಟ್ರೀಯತ್ವವು ಬೆಳೆಯುತ್ತದೆ. ತಮ್ಮ ಪ್ರಾಂತದಲ್ಲೆಲ್ಲ ವಾಚನಾಲಯಗಳ ಜಾಳಿಗೆಯನ್ನು ಹಬ್ಬಿಸಿ, ಜನತೆಗೆ ಶಿಕ್ಷಣ ಕೊಡಲು ಪ್ರಾರಂಭಿಸಿದವರಲ್ಲಿ ನಮ್ಮ ಆಂಧ್ರ ಬಂಧುಗಳು ಅಗ್ರಗಣ್ಯರು. ಈಗ ಇಡೀ ಹಿಂದುಸ್ಥಾನದ ವತಿಯಿಂದಲೇ! ಇಂಥ ಸಮ್ಮೇಲನಗಳು ಕೂಡುತ್ತವೆ. ಈ ವರ್ಷ ಅಖಿಲ ಹಿಂದುಸ್ಥಾನದ ವಾಚನಾಲಯಗಳ ಸಮ್ಮೇಲನವು ಕಲಕತ್ತೆಯಲ್ಲಿ ಬರುವ ಸಪ್ಟೆಂಬರ ತಿಂಗಳ ೫ನೇ ತಾರೀಖಿನಿಂದ ೧೧ ತಾರೀಖುಗಳಲ್ಲಿ ಕೂಡುವದು. ಈ ಸಲದ ಸಮ್ಮೇಲನದ ವಿಶೇಷವೇನೆಂದರೆ, ಕಲಕತ್ತೆಯವರು ಸಮ್ಮೇಲನದ ಸಲುವಾಗಿ ಬಂದ ಪ್ರತಿನಿಧಿಗಳನ್ನು ಕೆಲವು ವಾಚನಾಲಯಗಳಿಗೆ ಕರೆದುಕೊಂಡು ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನೂ ಕುಂದು ಕೊರತೆಗಳನ್ನೂ ಪ್ರತ್ಯಕ್ಷವಾಗಿ ತೋರಿಸತಕ್ಕವರಿರುವರು. ಇದು ಒಳ್ಳೇ ಯುಕ್ತಿ. ಬೇರೆ ಬೇರೆ ಪ್ರಾಂತಗಳಲ್ಲಿಯ ಮುಖಂಡರು ತಮ್ಮ ಪ್ರಾಂತದ ಅನುಭವವನ್ನು ಬರೆದು ಸಮ್ಮೇಲನಕ್ಕೆ ಕಳಿಸಿದರೂ ಎಷ್ಟೋ ಕಾರ್ಯವನ್ನೂ ಮಾಡಿದಂತಾಗುವುದು. ಆದರೆ ಹೀಗೆ ಮಾಡುವುದಕ್ಕೆ ಪ್ರತಿಯೊಂದು ಪ್ರಾಂತಕ್ಕೆ ಒಂದು ಮಧ್ಯವರ್ತಿ ಸಭೆಯು ಇರಬೇಕಾಗುತ್ತದೆ. ಕರ್ನಾಟಕದಲ್ಲಿಯ ಯಾವುದೊಂದು ವಾಚನಾಲಯ ಸಂಸ್ಥೆಯು ಯಾವತ್ತು ವಾಚನಾಲಯಗಳ ವಿವರಗಳನ್ನು ತರಿಸಿ, ಕರ್ನಾಟಕದಲ್ಲಿ ಅವು ಬೆಳೆಯುವದಕ್ಕೂ ಸುಧಾರಿಸುವದಕ್ಕೂ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬ ಬಗ್ಗೆ ವಿಚಾರ ಮಾಡುವುದೆಂದು ಸೂಚಿಸುತ್ತೇವೆ. ಕಲಕತ್ತೆಯಲ್ಲಿ ಕೂಡುವ ಸಮ್ಮೇಲನದಲ್ಲಿ ಇಡೀ ಹಿಂದುಸ್ಥಾನದ ಸಲುವಾಗಿ ಒಂದು ಮಧ್ಯವರ್ತಿ ಮಂಡಲವನ್ನು ಸ್ಥಾಪಿಸುವ ವಿಚಾರವೂ ಆಗತಕ್ಕದ್ದಿದೆ. ಆ ಘಟನೆಯಲ್ಲಿ ಕರ್ನಾಟಕವೂ ಸೇರಿ ತನ್ನ ಪ್ರಾಂತದ ಹಿತವನ್ನು ಕಾಯ್ದುಕೊಳ್ಳಬೇಕೆಂದು ಸೂಚನೆ.

ಕರ್ನಾಟಕ ಸಂಘ, ಕಲ್ಯಾಣ.

ಮುಂಬಯಿಯಲ್ಲಿಯ ಕನ್ನಡ ಸಾಹಿತಿಗಳಾದ ಶ್ರೀ ಎಂ ಆರ್ ಗೋಕರ್ಣ, ಆರ್. ಕೆ. ಜಹಾಗೀರದಾರ ಮತ್ತು ಏ ಎನ್ ರಾವ ಇವರ ಸಂಘಟಿತ ಪ್ರಯತ್ನದಿಂದ, ಕಲ್ಯಾಣದಲ್ಲಿ ಮೊನ್ನಿನ ೨೩ ನೆ ತಾರೀಖಿನ ದಿವಸ "ಕರ್ನಾಟಕ ಸಂಘ"ವು ಸ್ಥಾಪಿತವಾಗಿದೆ. ಈ ಸಂಘದ ಅನಾವರಣ ಸಮಾರಂಭವು ವುಯಿಲಸನ್ ಕಾಲೇಜದ ಪ್ರೊಫೆಸರರಾದ ಶ್ರೀ ಪ್ರತಾಪಗಿರಿ ರಾಮಮೂರ್ತಿ ಎಂ ಎ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ವಸಯಿಬಯಿಯಲ್ಲಿಯ ಕನ್ನಡ ಸಹೋದರ-ಸಹೋದರಿಯರೆಲ್ಲರೂ ಈ ಸಂಘಕ್ಕೆ ತ್ರಿಕರಣ ಪೂರ್ವಕವಾಗಿ ಸಹಾಯ ಮಾಡುವರೆಂದು ನಾವು ಆಶಿಸುತ್ತೇವೆ. ಸಂಘವು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ, ಕರ್ನಾಟಕದ ಕೀರ್ತಿಯನ್ನು ಬೆಳೆಸುತ್ತ ಬಹುಕಾಲ ಬದುಕಲಿ.

ಚೀನ—ಜಪಾನ ನಡುವೆ ಯುದ್ಧವು ಸುರುವಾಯಿತು

ಮುಕಡೆನ್ ತಾ|| ೨೯— ಝಪಾಶಿ ಎಂಬಲ್ಲಿ ಜಪಾನಿ ಸೈನಿಕರು ಹಾಗು ಚೀನಿ ಬಂಡುಗಾರರ ನಡುವೆ ಯುದ್ಧವು ಸುರುವಾಗಿದೆ. ಬಂಡುಗಾರರಲ್ಲಿ ೧೫೦ ಜನರು ಮಡಿದಿರುವರು. ಜಪಾನಿ ಸೈನಿಕರಲ್ಲಿ ಎಷ್ಟು ಜನರು ಮರಣ ಹೊಂದಿರುವರೆಂಬುದು ತಿಳಿದಿರುವದಿಲ್ಲ.

ಜಪಾನಿ ಯುದ್ಧದ ಹಡಗಗಳು ಚೀನಕ್ಕೆ ಹೊರಟವು.

ಟೋಕಿಯೋ ತಾ|| ೨೯— ಚೀನದಲ್ಲಿ ಫೂಚೌ ಎಂಬುದೊಂದು ಪಟ್ಟಣವುಂಟು. ಅಲ್ಲಿ ಎಷ್ಟೋ ಜನ ಜಪಾನಿ ಜನರು ವಾಸ ಮಾಡಿದ್ದಾರೆ. ಆದರೆ ಅವರಿಗೆ ಅಲ್ಲಿಯ ಸಮಾಜ ಸತ್ತಾವಾದಿಗಳು ಅತಿ ತೊಂದರೆ ಕೊಡುತ್ತಿದ್ದಾರೆ. ಈ ತೊಂದರೆಯಿಂದ ಅವರನ್ನು ರಕ್ಷಿಸಿಕೊಳ್ಳಲು ಜಪಾನಿ ಅಧಿಕಾರಿಗಳು ಮೇಕೋದಿಂದ ಆತ್ತ ಮೂರು ಯುದ್ಧದ ಹಡಗಗಳನ್ನು ಕಳಿಸಿದ್ದಾರೆ.

ಒಪ್ಪಿಗೆ ಹಾಗು ವಿಮರ್ಶೆ

"ವ್ಯವಹಾರೋಪಯೋಗಿ ಕಾನಡೀ ಭಾಷಾಮಾಲಾ" ಭಾಗ ೧ ಲೇಖಕ ಗೋಡಬೋಲೆ ಗೋ. ಕೃ ಟಿಳಕರೋಡ, ಪುಣೆ, ಬೆಲೆ ೩|| ಆಣೆ

ಯಾವುದೇ ಭಾಷೆಯನ್ನು ಮತ್ತೊಂದು ಭಾಷೆಯ ಜನರು ಕಲಿಯಬೇಕೆಂದು ಅಪೇಕ್ಷಿಸುವುದೆಂದರೆ ಆ ಭಾಷೆಗೆ ಮಾನ್ಯತೆ ಗೌರವವನ್ನು ಒಪ್ಪಿಕೊಂಡ ಹಾಗೆಯೆ ಎಂದು ಬೇರೆ ಹೇಳಬೇಕಿಲ್ಲ. ಬೇರೆ ಭಾಷೆಯ ಜನರು ಕನ್ನಡವನ್ನು ಕಲಿಯಲು ಉತ್ಸುಕತೆಯನ್ನು ತೋರುವರೋ ಅಂದು ಕನ್ನಡಿಗರ ಭಾಗ್ಯದ ದಿನವು ಸಮೀಪಿಸಿತೆಂಬಲ್ಲಿ ಸಂದೇಹವಿಲ್ಲ.

ಕನ್ನಡಿಗರಲ್ಲಿ ನವಚೈತನ್ಯವು ಇದೀಗ ತಲೆದೋರುತ್ತಿರುವುದರ ಬಾಹ್ಯಪರಿಣಾಮವೆ ಪರಭಾಷೆಯವರು ಕನ್ನಡ ಭಾಷೆ, ಸಾಹಿತ್ಯ, ಜನಾಂಗಗಳನ್ನು ಕುರಿತು ಅರಿತುಕೊಳ್ಳಬೇಕೆಂದು ಮರಾಠಿ ಹಿಂದೀ ಮೊದಲಾದ ಭಾಷೆಯವರಲ್ಲಿ ಕಂಡು ಬರುವ ಕುತೂಹಲದಲ್ಲಿ ಕಂಡು ಬರುತ್ತಿದೆ. ಶ್ರೀ ಗೋಡಬೋಲೆಯವರು ಕನ್ನಡ ಭಾಷೆಯನ್ನು ಕಲಿತುಕೊಳ್ಳಬೇಕೆಂಬುವವರ ಸಲುವಾಗಿ ಪುಸ್ತಕ ಬರೆದಿರುವುದು ಉಪಯುಕ್ತವಾಗಿದೆ. ಪುಸ್ತಕದ ಕೊನೆಗೆ ಕನ್ನಡ ವರ್ಣಮಾಲೆಯನ್ನು ಕೊಟ್ಟಿದ್ದರೆ ಜನ್ಮಾಗಿತ್ತು. ಕನ್ನಡವನ್ನು ಕಲಿಯಬೇಕೆಂಬ ಇಚ್ಛೆಯ ಮರಾಠಿಗರ ಸಲುವಾಗಿ ಈ ಪುಸ್ತಕ ಮಾಲೆಯನ್ನು ಆರಂಭಿಸಿದ್ದು ಅಭಿನಂದನೀಯವಾಗಿದೆ.

—ಶಂ. ಬಾ. ಜೋಶಿ

ಹೆಂಡತಿಯ ರಕ್ತವನ್ನು ಕುಡಿದ ಗಂಡ.

ಕೋಲಂಬೋ ತಾ|| ೨೮— ಕೇಗಲಾ ಪೋಲೀಸ ಕೋರ್ಟಿನಲ್ಲಿ ಭಯಂಕರವಾದುದೊಂದು ಖಟ್ಲೆಯ ವಿಚಾರಣೆ ನಡೆದಿದೆ. ಈ ಖಟ್ಲೆಯಲ್ಲಿ ಓರ್ವ ಗೃಹಸ್ಥನು ಅಪಾದಿತನಾಗಿರುವನು. ಮೊನ್ನಿನ ದಿವಸ ಅವನ ಹೆಂಡತಿಯು ಸಾಕ್ಷಿಯಾಯಿತು. ಅವಳು ಸಾಕ್ಷಿಯಲ್ಲಿ ಹೇಳಿದುದೇನೆಂದರೆ— ನನ್ನ ಗಂಡನು ಮನೇರಿ ಯಾಕ್ಕೆ ಹೋದವನು ತಿರುಗಿ ಬಂದ ಕೂಡಲೆ ಕುಡಿಯಲಿಕ್ಕೆ ನನ್ನ ದೇಹದೊಳಗಿನ ರಕ್ತವನ್ನು ಬೇಡಿದನು. ಅವನು ಹೀಗೆ ರಕ್ತವನ್ನು ಬೇಡಲಿಕ್ಕೆ ನಾನು ಯಾವ ತಪ್ಪು ಮಾಡಿದ್ದೆನೊ ನನಗೆ ತಿಳಿಯಲಿಲ್ಲ. ರಕ್ತವನ್ನು ಕೊಡದೆ ಇದ್ದರೆ ನಾನು ಮತ್ತು ನನ್ನ ಮಕ್ಕಳು ಪ್ರಾಣಕ್ಕೆ ಎರವಾಗಬೇಕಾಗುವದೆಂದು ಅವನು ಬೆದರಿಕೆ ಹಾಕಿದನು. ನಾನು ನನ್ನ ತೋಳು ಮತ್ತು ಕಾಲುಗಳೊಳಗಿಂದ ಮೂರು ಸಾರೆ ಅರ್ಧ ಕಪ್ಪು ರಕ್ತವನ್ನು ತೆಗೆದು ಕುಡಿಯಲು ಕೊಟ್ಟೆ. ಅವನ ಅದೆಲ್ಲವನ್ನು ಕುಡಿದು ಪುನಃ ರಕ್ತವನ್ನು ಬೇಡಿದನು. ಇಷ್ಟರಲ್ಲಿ ಪೋಲೀಸರು ಒಳಬರು ಅವನನ್ನು ಸೆರೆಹಿಡಿದೊಯ್ದರು.

ಕರೀ ಜೊಣ್ಣದವರ ಸಂಘ

ಲಿಸಬನ್ ತಾ|| ೩೦— ಈಗ ಜಗತ್ತಿನಲ್ಲಿ ಅಲ್ಲಲ್ಲಿ ನೀಲಿ ಅಂಗಿ, ಕೆಂಪು ಅಂಗಿ, ಖಾಕಿ ಅಂಗಿ ಇವೇ ಮೊದಲಾದ ಸಂಘಗಳ ಹೆಸರುಗಳು ಕೇಳಬರುವವಷ್ಟೇ. ಈ ಸಂಘಗಳಂತೆಯೆ ಮೊನ್ನೆ ಇಲ್ಲಿ ಒಂದು ಕರೀ ಜೊಣ್ಣದವರ ಸಂಘವು ಸ್ಥಾಪಿತವಾಗಿದೆ. ಈ ಸಂಘದ ಸಭಾಸದರು ಮೆರವಣಿಗೆಯ ಕಾಲದಲ್ಲಿ ಕರೀ ಜೊಣ್ಣವನ್ನು ಹಾಕಿಕೊಂಡಿರುತ್ತಾರೆ. ಈ ಸಂಘದ ನಿಜವಾದ ಉದ್ದೇಶದ ವಿಷಯವಾಗಿ ಪೋಲೀಸರಿಗೆ ಸಂಶಯ ಬಂದಿದೆ. ಅವರು ಅದನ್ನು ಪತ್ತೆ ಹಚ್ಚಲು ಪ್ರಯತ್ನ ನಡೆಸಿದ್ದಾರೆ.

ಅಸೆಂಬ್ಲೆಯಲ್ಲಿ ಸರಹದ್ದ ಬಾಂಬಿನ ಸುರಿಮಳೆ

(ಅಸೋಸಿಯೇಟೆಡ್ ತಂತಿಯ ವಾರ್ತೆ ತಾ|| ೧)

ಸಿಮಲಾ ತಾ|೧ ಈಸೊತ್ತಿನ ಅಸೆಂಬ್ಲಿಯ ಅಧಿವೇಶನದ ಸರಕಾರಿ ಸೂಚನೆಗಳ ವಿಷಯವಾಗಿ ಚರ್ಚೆ ನಡೆಯುವಾಗ ಮಿ| ಮಸ್ಸದ ಅಹಮ್ಮದರು ಸರಹದ್ದ ಪ್ರಾಂತದ ಬಾಂಬಿನ ಸುರಿಮಳೆಯ ವಿಷಯವಾಗಿ ಪ್ರಶ್ನೆ ಕೇಳಿದರು ಸೈನ್ಯಖಾತೆಯ ಸೆಕ್ರೆಟರಿಯವರಾದ ಮಿ ಟೋಟೆನ್‌ಹ್ಯಾಮ ಇವರು ಕೆಳಗಿನಂತೆ ಉತ್ತರ ಕೊಟ್ಟರು

ಸರಹದ್ದ ಪ್ರಾಂತದಲ್ಲಿ ಚಳವಳಿಯನ್ನುಂಟು ಮಾಡಲೋಸುಗ ಕೆಲವು ಚಳವಳಿಗಾರರು ಬಾಜೂರಕ್ಕೆ ಒಂದಿರುವರೆಂದು ಹಿಂದ ಸ್ಥಾನ ಸರಕಾರದವರಿಗೆ ಸುದ್ದಿ ಬಂತು ಈ ಚಳವಳಿಗರು ಸರಹದ್ದ ಪ್ರಾಂತದಲ್ಲಿ ಶಾಂತತಾಭಂಗವನ್ನುಂಟು ಮಾಡಿದಲ್ಲಿ ಸೆರೆಕಾರಿಯ ಪ್ರದೇಶದವರು ತೊಂದರೆಗೊಳಗಾಗಬಹುದೆಂದು ತೋರಿತು ಈ ಚಳವಳಿಯ ಮುಖ್ಯಸ್ಥರಿಗೆ ಕೋಟಕಾಯಿ ಹಳ್ಳಿಯವರು ಆಶ್ರಯ ಕೊಟ್ಟು ಅವರನ್ನು ಬಚ್ಚಿಟ್ಟುಕೊಂಡಿದ್ದರು ಹಳ್ಳಿಯ ಜನರು ಅವರನ್ನು ಅಧಿಕಾರಿಗಳಿಗೆ ಒಪ್ಪಿಸಲು ನಿರಾಕರಿಸಿದರು ಮತ್ತು ಖಾನನು ವಿರೋಧಕ ಧೋರಣವನ್ನು ಸ್ವೀಕರಿಸಿದನು. ಈ ಕಾರಣ ಅವರಿಗೆ ಮುಂಗಡ ಸೂಚನೆ ಕೊಟ್ಟು ಆಕಾಶದ ಮೇಲಿಂದ ಬಾಂಬಿನ ಸುರಿಮಳೆಗರೆಯಿತು. ಒಟ್ಟಿಗೆ ೯೦ ಬಾಂಬುಗಳನ್ನು ಹಾರಿಸಿರುತ್ತದೆ. ಒಟ್ಟು ೨೦ ಮನೆಗಳು ನಾಶವಾಗಿವೆಯೆಂದು ತಿಳಿದಿದೆ ಬಾಂಬಿನ ಸುರಿಮಳೆಗರೆಯುವಾಗ ಹಳ್ಳಿಯು ಹಾಳು ಸುರಿಯುತ್ತಿತ್ತು ಯಾಕಂದರೆ ಜನರು ತಮ್ಮ ತಮ್ಮ ಸ್ತ್ರೀಯರು ಹಾಗು ಹುಡುಗರನ್ನು ಸುರಕ್ಷಿತವಾದ ಸ್ಥಳಕ್ಕೆ ಕಳಿಸಿರುತ್ತಿದ್ದರು ಈ ಕಾರಣ ಯಾರಿಗೂ ಗಾಯವಾಗಿಲ್ಲವೆಂದು ಹೇಳಬಹುದು ಈ ಬಾಂಬಿನ ಸುರಿಮಳೆಗೋಸಗ ಒಟ್ಟು ೧೫೦೦೦ ಕ್ಕಿಂತ ಕಡಿಮೆ ವೆಚ್ಚ ಬಂದಿರುತ್ತದೆ (ಅ. ಪ್ರೆ)

ರಾಷ್ಟ್ರ ಸಂಘಕ್ಕಾಗಿ ೧೦ ಲಕ್ಷ ಪೌಂಡಿನ ಭವ್ಯ ಕಟ್ಟಡ.

ಜಿನೀವಾ — ರಾಷ್ಟ್ರ ಸಂಘದವರ ಉಪಯೋಗಕ್ಕಾಗಿ ಹೊಸದೊಂದು ಭವ್ಯವಾದ ಕಟ್ಟಡವು ಕಟ್ಟಲ್ಪಡಹತ್ತಿದ್ದು, ಅದರ ಮುಂಭಾಗವು ಈಗಾಗಲೆ ತಯಾರಾಗಿರುತ್ತದೆ ಕಟ್ಟಡದ ಉದ್ದಳತೆಯು ೧ ಮೈಲು ಇದ್ದು, ಕಟ್ಟಡವು ಸುಮಾರು ೫೦೦೦ ಜನರನ್ನು ಹಿಡಿಯುವದು ಈ ಕಟ್ಟಡವು ಪೂರ್ಣವಾಗಬೇಕಾದರೆ ಸುಮಾರು ೧೦ ಲಕ್ಷ ಪೌಂಡ ಖರ್ಚ ಹತ್ತುವದೆಂದು ಎಸೆಕೆ ಮಾಡಿರುತ್ತದೆ

ಕಟ್ಟಡದಲ್ಲಿ ಕೆಲಸ ಮಾಡುವವರಿಗೆ ಯಾವ ವಿಧದಿಂದಲೂ ತೊಂದರೆಯಾಗಬಾರದೆಂದು ಅಧಿಕಾರಿಗಳು ಕಟ್ಟಡದ ಬಳಿಯಲ್ಲಿಯ ರೇಲ್ವೆ ಮಾರ್ಗವನ್ನು ಬೇರೆ ಕಡೆಗೆ ಒಯ್ದಿರುತ್ತಾರೆ

ಪ್ರತಿ ದಿವಸ ೮೦೦ ಕ್ಕಿಂತ ಹೆಚ್ಚು ಜನರು ಕಟ್ಟಡದ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಿರುತ್ತಾರೆ ಈ ಕೂಲಿಕಾರರಲ್ಲಿ ಸ್ವೀಡನ್, ಇಟಲಿ, ಫ್ರಾನ್ಸ ಇವೇ ಮೊದಲಾದ ದೇಶಗಳ ಜನರು ಇರುವರು ಕಟ್ಟಡಕ್ಕೆ ಒಟ್ಟು ೩ ಲಕ್ಷ ಚೀಲ ಸಿಮೆಂಟು, ೭ ಲಕ್ಷ ಇಟ್ಟಂಗಿ ಮತ್ತು ೪೦೦೦ ಟನ್ ಉಕ್ಕಿನ ತೊಲೆ ಹೀಗೆ ಉಪಕರಣಗಳು ಬೇಕಾಗಬಹುದು.

ಅಮೇರಿಕೆಯಲ್ಲಿ ಅಪಘಾತ ಹೊಗೆಬಂಡಿಯು ನದಿಯಲ್ಲಿ ಬಿತ್ತು

ನ್ಯೂಯಾರ್ಕ ತಾ| ೨೯— ಅಮೇರಿಕೆಯ ದಕ್ಷಿಣ ಭಾಗದಲ್ಲಿ ನಿನ್ನಿನ ದಿವಸ ಒಂದು ಮೇಲ್‌ಬಂದು ಅತೀತ ಅಪಘಾತಗಳು ಸಂಭವಿಸಿವೆ ಈ ಯಾನದಲ್ಲಿ ಅಪಘಾತದಲ್ಲಿ ೧೧ ಜನರು ಸತ್ತಿರುವರು ಮತ್ತು ೩೦ ಜನರು ಗಾಯಗೊಂಡಿರುವರು

ನ್ಯೂ ಮೆಕ್ಸಿಕೋದಲ್ಲಿ ಒಂದು ಪ್ರಯಾಣಿಕರ ಹೊಗೆಬಂಡಿಯು ೨೦ ಸಾರಿ ಪಲ್ಟಿ ನದಿಯಲ್ಲಿ ಬಿತ್ತು ಒಂದು ಕಡೆ ೩ ಜನರು ಮತ್ತು ೨೦ ಜನರಿಗೆ ಗಾಯವಾಯಿತು

ಇದರಂತೆ ಕೊಲೊರ್‍ಯಾಡೊದಲ್ಲಿ ಒಂದು ವಿಮಾನು ಕೆಳಗೆ ಬಿದ್ದು ೫ ಜನರು ಸತ್ತರು

ನ್ಯೂಮೆಕ್ಸಿಕೋ ದ ಪ್ರಾಂತದಲ್ಲಿ ಆಕಾಶದಲ್ಲಿ ಹಾರುತ್ತಿರುವಾಗ ಥಂಡರ್‌ಸ್ಟಾರ್ಮ್ ಸಂಭವಿಸಿ ವಿಮಾನದಲ್ಲಿ ೩ ಜನರು ಸತ್ತರು

ಪೋಸ್ಟ ಕಾರ್ಡಿನ ಮೇಲೆ ೧ ಲಕ್ಷ ೩೧ ಸಾವಿರ ಅಕ್ಷರ.

ಜರ್ಮನ್ ಲೇಖಕನ ಕೌಶಲ್ಯ.

ಬರ್ಲಿನ್— ಇಲ್ಲಿಯ ಓರ್ವ ಗೃಹಸ್ಥನು ಒಂದು ಪೋಸ್ಟ ಕಾರ್ಡಿನ ಮೇಲೆ ೧ ಲಕ್ಷ ೩೧ ಸಾವಿರ ೬೮೩ ಅಕ್ಷರಗಳನ್ನು ಬರೆದಿರುತ್ತಾನೆ. ಕಾರ್ಡಿನಲ್ಲಿ ಒಟ್ಟು ೨ ಸಾವಿರ ಶಬ್ದಗಳಿವೆ ಈ ವರೆಗೆ ಜಗತ್ತಿನಲ್ಲಿ ಇಷ್ಟು ಚಿಕ್ಕ ಅಕ್ಷರಗಳನ್ನು ಯಾರೂ ಬರೆದಿರುವದಿಲ್ಲ ಅವನು ಬರೆದ ವಿಷಯವೆಂದರೆ ಹಿಟ್ಲರರ 'ನನ್ನ ಯುದ್ಧ' ಎಂಬ ಗ್ರಂಥದೊಳಗಿನದು ಇರುತ್ತದೆ ಇವನು ಕಾರ್ಡಿನ ಮೇಲೆ ಬರೆದ ವಿಷಯವು ಆ ಗ್ರಂಥದಲ್ಲಿ ೮೭ ಪುಟ ಆಗಿರುತ್ತದೆ. ಕಾರ್ಡಿನಲ್ಲಿ ಒಟ್ಟು ೨೩೬ ಸಾಲುಗಳಿವೆ ದುರ್ಬಿನಿನ ಹೊರತು ಅವುಗಳನ್ನು ಓದಲು ಬರುವದಿಲ್ಲ ಈ ವಿಷಯವನ್ನು ಬರೆಯಲು ೩೫|| ತಾಸು ಹಿಡಿಯಿತು ಇದಕ್ಕೂ ಮೊದಲು ಒಬ್ಬನು ಈ ಪ್ರಯತ್ನವನ್ನು ಮಾಡಿದ್ದನು ಆದರೆ ಅವನಿಗೆ ೨೦ ಸಾವಿರಕ್ಕಿಂತ ಹೆಚ್ಚು ಶಬ್ದಗಳನ್ನು ಬರೆಯುವದಾಗಲಿಲ್ಲ.

ವರ್ಗಾವರ್ಗಿ.

ಮಿ| ವಿ ಎಸ್ ಆರ್ ಮ್ಯಾಕ್ಲಿನ್, ಆಯ್. ಸಿ. ಎಸ್, ಇವರು ರಜೆಯಿಂದ ತಿರುಗಿ ಬಂದ ಮೇಲೆ, ಮಿ| ಎಸ್. ಎಸ್. ಮ್ಯಾಕ್ಟರ ಇವರ ಸ್ಥಳದಲ್ಲಿ ಬೆಳಗಾವ ಜಿಲ್ಲೆಯ ಮುಖ್ಯ ಕಲೆಕ್ಟರೆಂದು ಕೆಲಸ ಮಾಡತಕ್ಕದ್ದು

ಧಾರವಾಡದ ಡಿಸ್ಟ್ರಿಕ್ಟ ಹಾಗು ಸೆಶನ್ಸ ಜಡ್ಜರಾದ ಮಿ| ಆರ್. ಡಬ್ಲೂ ಎಚ್ ಡೈವ್ಸ್, ಆಯ್ ಸಿ. ಎಸ್ ಇವರ ಸ್ಥಳದಲ್ಲಿ ಮಿ| ಕೆ ಎಂ. ಕುಮಟೇಕರ ರನ್ನು ನಿಯಮಿಸಿರುತ್ತದೆ. ಮಿ| ಡೈವ್ಸ್ ರವರನ್ನು ಅಹಮ್ಮದನಗರಕ್ಕೆ ವರ್ಗ ಮಾಡಿ ಎತ್ತದೆ

ಮಿ| ಟಿ. ಜಿ. ಸಿಸ್ಸನ್, ಆಯ್. ಸಿ ಎಸ್. ಇವರನ್ನು ರಜೆಯಿಂದ ತಿರುಗಿ ಬಂದ ಮೇಲೆ ಮಿ| ಆರ್ ಎಸ್ ಹಿರೇಮಠ ಇವರ ಸ್ಥಳದಲ್ಲಿ ಬೆಳಗಾವದ ಅಸಿಸ್ಟಂಟ ಕಲೆಕ್ಟರರನ್ನಾಗಿ ನಿಯಮಿಸಿರುತ್ತದೆ.

ಮಿ ಸಿ ಎಸ್ ಬೆಳ್ಳೀಯವರು ತಮ್ಮ ಸ್ಥಳದ ಲಿಸ್ಟ ಕೆಲಸಕ್ಕೆ ಹೋಗತಕ್ಕವರು ಎಂದರಿಂದ, ಮಿ ಆರ್ ಎಸ್ ಹಿರೇಮಠ ಇವರು ದಕ್ಷಿಣ ಭಾಗದ ಅಸಿಸ್ಟಂಟ ಕಲೆಕ್ಟರೆಂದು ಕೆಲಸ ಮಾಡತಕ್ಕದ್ದು

ಮಿ ಅಬ್ದುಲ ರಹಿಮಾನ ಹಸನಸಾಹೇಬ ಇವರು ತಮ್ಮ ಮೊದಲಿನ ಸ್ಥಳಕ್ಕೆ ಹೋಗತಕ್ಕವರಿರುವದರಿಂದ ಮಿ ಡಿ. ಬಿ ದೇಶಪಾಂಡೆಯವರು, ರಜೆಯಿಂದ ತಿರುಗಿ ಬಂದ ಬಳಿಕ, ಧಾರವಾಡ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರರೆಂದು ಕೆಲಸ ಮಾಡತಕ್ಕದ್ದು

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗನ ಕಾರ್ಯಾಲಯ, ಧಾರವಾಡದಲ್ಲಿ ಪ್ರಸಿದ್ಧಿಸಿದರು.

೧೧೪ ವರ್ಷದ ಹೆಂಗಸು

ಕೋಲಂಬೋ ತಾ| ೨೯— ಒಲ್ಗೇರಿಯಾದಲ್ಲಿ ೧೧೪ ವರ್ಷದ ಓರ್ವ ಮುದುಕಿಯು ಇರುತ್ತಾಳೆ. ಅವಳ ಸ್ಮರಣಶಕ್ತಿಯು ಇನ್ನೂ ಚೆನ್ನಾಗಿದೆ. ೧೦೦ ವರ್ಷದ ಹಿಂದಿನ ಸಂಗತಿಗಳನ್ನು ಅವಳು ಹೇಳಬಲ್ಲಳು ಅವಳು ಶಾಕಾಹಾರಿ ಇರುತ್ತಾಳೆ. ಆದರೆ ನೀರಿನ ಬದಲು ಮಾತ್ರ ಮದ್ಯವನ್ನು ಕುಡಿಯುತ್ತಾಳೆ

೫೧೮ ಫೂಟು ಉದ್ದ ಥರ್ಮಾಮೀಟರ.

ಶಿಕಾಗೋ ಪ್ರದರ್ಶನದಲ್ಲಿ ೫೧೮ ಫೂಟ ಉದ್ದವಾದುದೊಂದು ಥರ್ಮಾಮೀಟರ ಇರುತ್ತದೆ ಹವೆಯಲ್ಲಿಯ ಉಷ್ಣತೆಯನ್ನು ತಿಳಿದುಕೊಳ್ಳುವದಕ್ಕೋಸುಗ ಇದನ್ನು ಇಟ್ಟಿರುತ್ತದೆ ೫೧೮ ಫೂಟು ಉದ್ದವೆಂದರೆ ೨೦ ಅಂತಸ್ತುಗಳ ಮನೆಯಷ್ಟು ಎತ್ತರವಾಗುವದು ಒಂದು ಮೈಲು ದೂರದವರೆಗೂ ಅದರೊಳಗಿನ ಅಂಕೆಗಳು ಕಾಣಬರುವವು

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯವಸ್ಥಾಪಕ

ಏಜಂಟರು ಬೇಕಾಗಿದ್ದಾರೆ

ಧಾರವಾಡ ಕನ್ನಡಿಗನ್ನು ಕೊಡಲಾಗುವದು, ಇಚ್ಛೆಯುಳ್ಳವರು ಪತ್ರವ್ಯವಹಾರ ಮಾಡಬೇಕು.

—ವ್ಯವಸ್ಥಾಪಕ "ಕನ್ನಡಿಗ"

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ನಿಮಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ|| ೨೫ ೮ ೩೩ | ಕೃಷ್ಣರಾವ ಅಂಕಲಗಿ ಮ್ಯಾನೇಜಿಂಗ ಡಾಯರೆಕ್ಟರ

ಕಡೇ ಆಟ! ಕಡೇ ಆಟ!!

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಶನಿವಾರ ತಾ|| ೨-೯-೩೩ ನೇ ದಿವಸ ರಾತ್ರಿ

ಏಚ್ಚಮ ನಾಯಿಕ

ಎಂಬ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

ಸಂಘದೊಡೆಯರು,

ಗರೂಡ ಸದಾಶಿವರಾಯರು

ಭುವನೇಶ್ವರಿ ಭಾಂಡಾರ.

ಬೈಲಹೊಂಗಲದಲ್ಲಿ ಎಲ್ಲ ಬಗೆಯ ಬಟ್ಟೆ, ಔಷಧ, ಸುಗಂಧಿ ಸಾಮಾನು, ಸ್ಟೇಶನರಿ ಹಾಗೂ ರೈತರಿಗೆ ಬೇಕಾಗುವ ಒಕ್ಕಲತನದ ಎಲ್ಲ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ವತನದಾರ ಕಾಟಾ.

ಬೈಲಹೊಂಗಲದಲ್ಲಿ ದಲಾಲಿಯ ಎಂದರೆ ಹತ್ತಿ, ಶೇಂಗಾ ಮುಂತಾದ ಯಾವದೇ ಜಿನಸುಗಳನು ಮಾರಬೇಕಾದರೆ ನಮ್ಮಲ್ಲಿ ಬನ್ನಿ. ದರ, ಗೋಡಾವುನ, ನೀರು, ಇಳಿಯುವ ಸ್ಥಳ ಮೊದಲಾದ ಎಲ್ಲ ಸೌಕರ್ಯಗಳೂ ಇವೆ

ಗೋಪಾಳರಾವ ಕುಲಕರ್ಣಿ ಬೈಲಹೊಂಗಲ

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ. ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ಬರುತ್ತವೆ. ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ನಮಕನಾ ಟಿಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ| ೨-೯-೩

ತಳಗುಡ್, ಹೈದರಾಬಾದ (ಡೆಕ್ಕನ್) ಬಿ. ಜಿ. ಚಿಮ್ಮಲಗಿ

ಇನಸ್ಸ್ಯುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಸ್ಯುರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನಸ್ಸ್ಯುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ,
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು. ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ರವಿವಾರ ಭಾದ್ರಪದ ಶುದ್ಧ ೧೪ ಶಕೆ ೧೮೫೫ ತಾ॥ ೩-೯-೩೩ [ಸಂಚಿಕೆ ೧೦೭

ಮಹಾತ್ಮಾ ಗಾಂಧಿಯವರ ಭಾವೀ ಧೋರಣ

ಮುಖಂಡರೊಡನೆ ವಿಚಾರ ವಿನಿಮಯ; ಮುಂಬಯಿಯಲ್ಲಿ ಪರಿಷತ್ತು

(ಅಸೋಸಿಯೇಟೆಡ್ ತಂತಿಯ ವಾರ್ತೆ ತಾ॥೨)

ಪುಣೆ ತಾ॥ ೨— ಸ್ವಲ್ಪ ದಿವಸಗಳ ಹಿಂದೆ ಇಂಗ್ಲಂಡದಿಂದ ತಿರುಗಿ ಬಂದ ಸರ್ ಕಾವಸ ಜಹಾಂಗೀರ ಇವರು ನಿನ್ನಿನ ದಿವಸ ಪರ್ಣಕುಟಿಗೆ ಬಂದಿದ್ದರು. ಅವರು ಅರ್ಧ ತಾಸಿನವರೆಗೆ ಮಹಾತ್ಮರೊಡನೆ ಮಾತು ಕತೆ ಆಡಿದರು. ಸರ್ ಕಾವಸಜಿಯವರು ಮ. ಗಾಂಧಿಯವರ ಆಮಂತ್ರಣದ ಮೇರೆಗೆಯೆ ಬಂದಿದ್ದರೆಂದು ತಿಳಿಯುತ್ತದೆ.

ಮ. ಗಾಂಧಿಯವರು ತಾವು ಮುಂದಿನ ಕೃತಿಯನ್ನು ಕೈಕೊಳ್ಳುವದಕ್ಕಿಂತ ಪೂರ್ವದಲ್ಲಿ ಶಕ್ಯವಿದ್ದಷ್ಟು ಮುಖಂಡರ ಭೆಟ್ಟಿ ತೆಗೆದುಕೊಂಡು ಅವರ ಸಲಹೆ ಕೇಳಲು ಉತ್ಸುಕರಾಗಿದ್ದಾರೆ. ಈ ಕಾರಣ ಕಾಂಗ್ರೆಸ ಪಕ್ಷಕ್ಕೆ ಸೇರಿದ್ದ ಅನೇಕ ಮುಖಂಡರು ಮುಂದಿನ ವಾರದಲ್ಲಿ ಇಲ್ಲಿಗೆ ಆಗಮಿಸಬಹುದೆಂದು ತೋರುತ್ತದೆ.

ಮಹಾತ್ಮಾ ಗಾಂಧಿಯವರು ಈ ಉದ್ದಿಶ್ಯವಾಗಿ ಇದಾಗಲೆ ಮವಾಳ ಪಕ್ಷದ ಪ್ರಮುಖ ಮುಂದಾಳುಗಳು ಹಾಗು ಜಾಯಿಂಟ ಕಮಿಟಿಯ ಪ್ರತಿನಿಧಿಗಳು ಮೊದಲಾದವರೊಡನೆ ಪತ್ರವ್ಯವಹಾರ ನಡಿಸುವವರೆಂದು ಗೊತ್ತಾಗುತ್ತದೆ. ಈ ಮುಂದಾಳುಗಳಲ್ಲಿ ನಾ. ಶ್ರೀನಿವಾಸ ಶಾಸ್ತ್ರಿ, ಸರ ತೇಜಬಹಾದ್ದೂರ ಸಪ್ರು, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ ಇವರು ಪ್ರಮುಖರಾಗಿರುವರು. ಪಂಡಿತ ಜವಾಹಿರಲಾಲ ನೆಹರು ಇವರು ರಾಜಕೀಯ ವಿಷಯಗಳ ಕಡೆಗೆ ತಮ್ಮ ಲಕ್ಷವನ್ನು ಹೊರಳಿಸಲು ಶಕ್ತರಾಗುವದೆ, ಮಹಾತ್ಮರೊಡನೆ ವಿಚಾರ ವಿನಿಮಯ ಮಾಡುವರೆಂಬುದು ಖಂಡಿತವಾದದ್ದು.

ಈ ವಿಚಾರ ವಿನಿಮಯವು ಬಹುಶಃ ಮುಂಬಯಿಯಲ್ಲಿ ನಡೆಯಬಹುದು. ಮತ್ತು ಮ. ಗಾಂಧಿಯವರು ಪ್ರವಾಸ ಮಾಡಲು ಶಕ್ಯವಾದ ಕೂಡಲೆ ಮುಂಬಯಿಯ ಉಪನಗರವಾದ ಶಾಂತಾಕ್ರುಜಕ್ಕೆ ಹೋಗುವರೆಂದು ಗೊತ್ತಾಗುತ್ತದೆ.

(ಅ. ಪ್ರೆ)

ವಿಜಗಪಟ್ಟಣ ಬಂದರವು ಕ್ಟೋಬರದಿಂದ ಸುರುವಾಗುವದು

ಸಿಮಲಾ ತಾ॥ ೧— ವಿಜಗಪಟ್ಟಣದ ಬಂದರವು ಹೊಸ ಬಂದರವು ತಾ॥ ೫ ನೆ ಅಕ್ಟೋಬರದಿಂದ ಪ್ರಾರಂಭವಾಗುವದೆಂದು ಸರಕಾರದವರು ಪ್ರಸಿದ್ಧ ಮಾಡಿದ್ದಾರೆ. ಈ ಬಂದರವು ಸೂರ್ಯೋದಯದಕಿಂತ ಅರ್ಧ ತಾಸು ಮೊದಲು ಪ್ರಾರಂಭವಾಗಿ, ಸೂರ್ಯಾಸ್ತದ ನಂತರ ಅರ್ಧ ತಾಸಿನ ಮೇಲೆ ಮುಚ್ಚಲ್ಪಡುವದು.

(ಅ. ಪ್ರೆ)

ಅಸೋಸಿಯೇಟೆಡ್ ಪ್ರತಿನಿಧಿಯೊಡನೆ ಮಹಾತ್ಮರ ಸಂಭಾಷಣ

ಪುಣೆ ತಾ. ೨— ಅಸೋಸಿಯೇಟೆಡ್ ಪ್ರತಿನಿಧಿಯೊಡನೆ ಸಂಭಾಷಣ ಮಾಡುವಾಗ ಮಹಾತ್ಮಾ ಗಾಂಧಿಯವರು, 'ನ್ಯೂಜಲೆಟರ" ಎಂಬ ರಾಷ್ಟ್ರೀಯ ಕೂಲಿಕಾರ ಪಕ್ಷದ ಸಾಕ್ಷಿಕ ಪತ್ರದಲ್ಲಿ ತಮ್ಮ ವಿಷಯವಾಗಿ ಬಂದ ಟೀಕೆಗೆ ಉತ್ತರ ಕೊಟ್ಟರು. ಈ ಪತ್ರಿಕಾಕರ್ತರು ತಮ್ಮ ಪತ್ರದಲ್ಲಿ ಮಹಾತ್ಮರು ಸರಕಾರದವರ ಸಂಧಾನ ಪೂರ್ವಕವಾದ ಧೋರಣವನ್ನು ಕಂಡು ಹಿಡಿದು ಅದಕ್ಕೆ ತಕ್ಕಂತೆ ವರ್ತಿಸುವರೆಂಬ ಆಶೆಯಿದೆ" ಎಂದು ಉಲ್ಲೇಖಿಸಿದ್ದರು. ಮಹಾತ್ಮರು ಹೇಳಿದುದೇನಂದರೆ— ನಾನು ಒಂದಕ್ಕೆ ಎಷ್ಟೋಸಾರೆ ಸಲಹೆ ಕೊಟ್ಟದ್ದುಂಟು. ಆದರೆ ಅವುಗಳ ಏನಾದರೂ ತಪ್ಪಾಗಿರುವದೆಂದು ನನಗೆ ಎನಿಸುವದಿಲ್ಲ. ಈಗ ನಾನು ಅನಪೇಕ್ಷಿತವಾಗಿ ಬಿಡುಗಡೆ ಹೊಂದಿ ಬಂದದ್ದರಿಂದ ನನ್ನ ಕಾರ್ಯವು ಕಠಿಣವಾಗಿದೆ. ಸದ್ಯದ ಪರಿಸ್ಥಿತಿಗೆ ಅನುಗುಣವಾದ ಧೋರಣವನ್ನು ನಾನು ಕಂಡು ಹಿಡಿಯಬೇಕಾಗಿದೆ. ಆದ್ದರಿಂದ ನಾನು ಈಗ ಹೇಳುವದೇನಂದರೆ, ಸದ್ಯದ ಪರಿಸ್ಥಿತಿಯ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಿದ ಹೊರತು ನಾನು ಮುಂದಿನ ಹೆಜ್ಜೆಯನ್ನು ಕೈಕೊಳ್ಳುವದಿಲ್ಲ. ನಾನು ಈಗ ನನ್ನ ಮುಂದೆ ಯಾವ ಯೋಜನೆಯನ್ನು ತಯಾರ ಮಾಡಿಟ್ಟುಕೊಂಡಿರುವದಿಲ್ಲ. ಈ ಪರಿಸ್ಥಿತಿಯಲ್ಲಿ ಯಾವ ಧೋರಣವನ್ನು ಸ್ವೀಕರಿಸತಕ್ಕದೆಂಬ ವಿಷಯವಾಗಿ ನನ್ನ ಯಾವತ್ತೂ ಮಿತ್ರರೊಡನೆ ನಾನು ವಿಚಾರ ಮಾಡುವೆನು. ಅವರ ಸಲಹೆಗಳನ್ನು ಕೇಳಿಕೊಳ್ಳುವೆನು. ನಂತರ ಅವುಗಳನ್ನು ಪರಿಶೀಲಿಸಿ ಧೋರಣವನ್ನು ನಿಶ್ಚಯಿಸುವೆನು. ನಾನು ಶಾಂತಿಯಾಗಿ ಹಂಬಲಿಸಿ ಇತ್ತಿರುವೆನೆಂದು ಪುನ ಒತ್ತಿ ಒತ್ತಿ ಹೇಳುತ್ತೇನೆ. ಆದ್ದರಿಂದ ನಾನು ಶಾಂತಿಯ ಸಲುವಾಗಿ ನನಗೆ ಶಕ್ಯವಿದ್ದಷ್ಟು ಬಗೆಗಳಿಂದ ಪ್ರಯತ್ನ ಮಾಡುವಲ್ಲಿ ಎಳ್ಳಷ್ಟೂ ಕಸರು ಮಾಡುವದಿಲ್ಲ.

(ಅ ಪ್ರೆ)

ಅಹಮ್ಮದಾಬಾದದಲ್ಲಿ ೮ ಜನರನ್ನು ಹಿಡಿದರು

ಅಹಮ್ಮದಬಾದ ತಾ॥ ೧— ಈ ಹೊತ್ತಿನ ದಿವಸ ಪೋಲೀಸರು ಇಲ್ಲಿ ೮ ಜನ ಸ್ವಯಂಸೇವಕರನ್ನು ಕೈದು ಮಾಡಿದರು. ಮೂವರನ್ನು ಪಿಕೆಟಿಂಗದ ಆರೋಪದಿಂದಲೂ, ಉಳಿದ ಐವರನ್ನು ರಾಸ ಎಂಬಲ್ಲಿಗೆ ಪ್ರಯಾಣ ಮಾಡುತ್ತಿದ್ದ ಆರೋಪದಿಂದಲೂ ಸೆರೆ ಹಿಡಿದರು.

(ಅ ಪ್ರೆ)

ಮಹಾತ್ಮಾ ಗಾಂಧಿಯವರಿಗೆ ಡಾಕ್ಟರರ ಸಲಹೆ.

ಶ್ರಮದ ಕೆಲಸವನ್ನು ಮಾಡತಕ್ಕದ್ದಲ್ಲ

ಪುಣೆ ತಾ। ೧ — ಡಾ ಗಿಲ್ಡರ ಇವರು ಈ ಹೊತ್ತಿನ ದಿವಸ ಮಹಾತ್ಮಾ ಗಾಂಧಿಯವರ ಪ್ರಕೃತಿಯನ್ನು ಪರೀಕ್ಷಿಸಿದರು. ಅವರ ಪ್ರಕೃತಿಯು ಮಂದಗತಿಯಿಂದ ಸುಧಾರಿಸತೊಡಗಿದೆಯೆಂದು ಅವರಿಗೆ ತೋರಿತು. ಈ ಕಾರಣ ಅವರು ಮಹಾತ್ಮರಿಗೆ « ಕೆಲವು ದಿವಸ ಶ್ರಮದ ಕೆಲಸವನ್ನು ಮಾಡತಕ್ಕದ್ದಲ್ಲ " ವೆಂದು ಸಲಹೆ ಕೊಟ್ಟರು.

(ಅ ಪ್ರೆ)

ಮಹಾತ್ಮಾ ಗಾಂಧಿಯವರ ಸದ್ಯದ ಆಹಾರ

ಪುಣೆ ತಾ ೧— ಮಹಾತ್ಮಾ ಗಾಂಧಿಯವರು ಈಗ ಬೇಯಿಸಿದ ಪಲ್ಲೆಯ ನೀರು, ಹಣ್ಣು, ಹಣ್ಣಿನ ರಸ, ಆಡಿನ ಹಾಲು ಇವುಗಳನ್ನು ತೆಗೆದುಕೊಳ್ಳುತ್ತಿರುವರು. ಅವರು ಪ್ರತಿ ದಿವಸ ಮಹತ್ವದ ಪತ್ರವ್ಯವಹಾರವನ್ನು ನೋಡುತ್ತಿರುವರು. ಇದಲ್ಲದೆ ತೋಟದಲ್ಲಿ ಸ್ವಲ್ಪ ಹೊತ್ತು ಅಡ್ಡಾಡಿ ಬರುತ್ತಿರುವರು.

ದೀನಬಂಧು ಸಿ ಎಫ್. ಆ್ಯಂಡ್ರೂಜ ಇವರು ಪ್ರತಿದಿವಸ ಮಹಾತ್ಮರ ಭೆಟ್ಟಿಗೆ ಬಂದು ಹೋಗುತ್ತಿರುವರು.

(ಅ ಪ್ರೆ)

ಮಹಾತ್ಮಾ ಗಾಂಧಿಯವರಿಗೆ ಓಡಿಸಾ ಪ್ರಾಂತದವರ ಕರೆ

ಪುಣೆ ತಾ ೧— ಮಹಾತ್ಮಾ ಗಾಂಧಿಯವರಿಗೆ ಓಡಿಸಾ ಪ್ರಾಂತದಿಂದ ಅಲ್ಲಿಯ ನೆರೆಹಾವಳಿಯ ವಿಷಯವಾಗಿ ಅನೇಕ ತಾರುಗಳು ಮತ್ತು ಪತ್ರಗಳು ಬರತೊಡಗಿವೆ. ಈ ಯಾವತ್ತು ತಾರು ಮತ್ತು ಪತ್ರಗಳಲ್ಲಿ ಓಡಿಸಾಕ್ಕೆ ಬರಬೇಕೆಂದು ಮಹಾತ್ಮರಿಗೆ ವಿನಂತಿ ಮಾಡಿಕೊಂಡಿರುತ್ತದೆ.

(ಅ ಪ್ರೆ)

ಕಲಕತ್ತೆಯಲ್ಲಿ

೯ ಬಾಂಬು, ೧೦೦೦ ಕಾಡತೂಸು ಸಿಕ್ಕವು

ಕಲಕತ್ತಾ ತಾ॥ ೨— ಪೋಲೀಸ ಅಧಿಕಾರಿಗಳು ಈ ಹೊತ್ತಿನ ದಿವಸ ಜೋರಬಗಾನ ಎಂಬಲ್ಲಿ ಒಂದು ಮನೆಯನ್ನು ಝಡತಿಮಾಡಿದರು. ಅಲ್ಲಿ ಅವರಿಗೆ ೯ ಬಾಂಬು, ೧೦೦೦ ಕಾಡತೂಸು, ಮತ್ತು ನಾಲ್ಕು ಪಿಸ್ತೂಲುಗಳು ಸಿಕ್ಕವು. ಪೋಲೀಸರಿಗೆ ಅಲ್ಲಿ ಬಾಂಬು ಹಾಗು ನೋಟುಗಳನ್ನು ತಯಾರ ಮಾಡುವ ಯಂತ್ರ ಸಾಮುಗ್ರಿಗಳೂ ದೊರೆತವು. ಈ ವಿಷಯವಾಗಿ ಪೋಲೀಸರು ೭ ಜನ ಬಂಗಾಲಿ ತರುಣರನ್ನು ಸೆರೆ ಹಿಡಿದಿರುತ್ತಾರೆ.

(ಅ ಪ್ರೆ)

ಮುಂಬಯಿ ಸರಕಾರಕ್ಕೆ ಅಹಮ್ಮದಬಾದ ಮುನಸಿಪಾಲಟಿಯವರ ವಿನಂತಿ

ಅಹಮ್ಮದಾಬಾದ ತಾ॥ ೨ — ಅಹಮ್ಮದಬಾದ ಮ್ಯುನಸಿಪಾಲಟಿಯವರು ತಮ್ಮ ಮುನಸಿಪಾಲಟಿಯ ಅಧ್ಯಕ್ಷರಾದ ಶ್ರೀ ಮಾವಳಣಕರ ಇವರ ಮೇಲೆ ರತ್ನಾಗಿರಿ ಹದ್ದು ಬಿಟ್ಟು ಹೋಗತಕ್ಕದ್ದಲ್ಲವೆಂದು ಹಾಕಿದ ನಿರ್ಬಂಧವನ್ನು ತೆಗೆದೊಗೆಯಬೇಕಾಗಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವ ಒಂದು ಠರಾವು ಮಾಡಿಕೊಂಡಿದ್ದಾರೆ. ಇದಲ್ಲದೆ ಅವರು ತಮ್ಮ ಈ ಠರಾವಿನಲ್ಲಿ ಮುನಸಿಪಾಲಟಿಯವರಿಗೆ ೫ ತಿಂಗಳವರೆಗೆ ಅಧ್ಯಕ್ಷರಿಲ್ಲದೆ ಕೆಲಸ ಸಾಗಿಸಬೇಕಾಯಿತು ಎಂದು ಕಾಣಿಸಿದ್ದಾರೆ.

(ಅ ಪ್ರೆ)

ಅಲವಾರದಲ್ಲಿ ಭಯಂಕರ ಅಪಘಾತ

೧೬ ಜನರು ಸತ್ತರು ಹಾಗು ಅನೇಕರಿಗೆ ಗಾಯ

ಸಿಮಲಾ ತಾ। ೧— ನಿನ್ನೆ ಆ ದಿವಸ ಅಲವಾರ ಪಟ್ಟಣದಲ್ಲಿ ಒಂದು ಶೋಚನೀಯವಾದ ಪ್ರಸಂಗವು ಸಂಭವಿಸಿತೆಂದು ಅಲ್ಲಿಂದ ಸುದ್ದಿ ಬಂದಿದೆ. ಒಂದು ಪೂಜಾಸಮಾರಂಭದ ಕಾಲಕ್ಕೆ ಅಂಗಳದಲ್ಲಿ ಜನರು ನೆರೆದಿರಲು ಮನೆಯು ಧೊಪ್ಪನೆ ಕಡಕೊಂಡು ಬಿತ್ತು. ಅದರಿಂದ ೧೬ ಜನರು ಸತ್ತಿದ್ದಲ್ಲದೆ ಅನೇಕರು ಗಾಯ ಹೊಂದಿದರು.

(ಅ. ಪ್ರೆ.)

ಮುಂಬಯಿಯಲ್ಲಿಯ ಸರ ಘಗಟ್ಟೆ ದಲಾಲರು ಕೆಲಸ ಮಾಡಲು ನಿರಾಕರಿಸಿದರು.

ಮುಂಬಯಿ ತಾ॥ ೨ — ಇಲ್ಲಿಯ ಸರಾಫ ಗಟ್ಟೆ ವ್ಯವಸ್ಥಾಪಕ ಮಂಡಳದವರು ದಲಾಲರಿಗೆ ಗುರುತಿನ ಚಿನ್ಹಗಳನ್ನು ಧರಿಕೊಂಡು ಬರಬೇಕೆಂದು ಆಗ್ರಹ ಕೊಟ್ಟದ್ದರಿಂದ, ಅವರು ಈ ಹೊತ್ತು ವ್ಯವಹಾರವನ್ನು ಸಾಗಿಸಲು ನಿರಾಕರಿಸಿದರು,

(ಅ. ಪ್ರೆ)

ಅಬ್ದುಲ್ ರಹಿಮಾನರನ್ನು ಗಲ್ಲಿಗೇರಿಸಿದರು

ಕ್ವೆಟಾ ತಾ॥ ೨— ಕರ್ನಲ್ ಅಬಾಟ್ ಇವರನ್ನು ಕೊಲೆ ಮಾಡಿದ ವಿಷಯವಾಗಿ ಗಲ್ಲಶಿಕ್ಷೆಗೆ ಗುರಿಯಾದ ಅಬ್ದುಲ್ ರಹಿಮಾನ ಇವರನ್ನು ತಾ॥ ೩೧ ನೆ ದಿವಸ ಮುಂಜಾನೆ ಮಾಚ ಸೆಂಟ್ರಲ್ ಜೇಲಿನಲ್ಲಿ ಗಲ್ಲಿಗೇರಿಸಿದರು.

(ಅ. ಪ್ರೆ)

ಹಾಂಗೋಲ



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕರ್ಚ್ಯೂರ

ಶಾಸ್ತ್ರೀಯ ಪದ್ಧತಿ ರೀತಿಯಿಂದ ತಯಾರಿಸಿದ

ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸನೆಯಾಗಿಯೂ ಆಗುವದು. 'ಹಲ್ಲುಗಳು' ಮೊದಲಾದವುಗಳ ರಕ್ಷಣೆಗಾಗಿ ... ಪೂರ್ವೋಕ್ತ ಶಾಸ್ತ್ರೀಯ ವನಸ್ಪತಿಗಳಿಂದ ... ಈ ತನಕ ... "ಕರ್ಚ್ಯೂರ" ದಂತಮಂಜನ ... ಆಹಾರದ ... ಹಲ್ಲುಗಳ ... ಕರ್ಚ್ಯೂರ ದಂತಮಂಜನವನ್ನು ಉಪಯೋಗಿಸಿದರೆ ... ಬೇಕಾದರೆ ... ನಮ್ಮ ... ಕನ್ನಡಿಗರೇ ಕನ್ನಡ ನಾಡಿನ ಮಾಲನ್ನು ಮೊದಲು ಕೊಡು "ಮನೆಗೆದ್ದು ಮಾರುಗೆದ್ದು" ಎಂಬ ನಾಣ್ಣುಡಿಯಂತೆ ನಡೆಯಿರಿ. ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

... ಹೆಚ್ಚು ... ಪತ್ರಿಕೆ ...

ಹೆಚ್ಚಿನ ... ಜನರ ... ಹಗಿದ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೯೩೨ ... ರಿಂದ ತಾ|| ೧೬-೩೨ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ) ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀಕಾಶೀ ರಾಮೇಶ್ವರ ಸಮುದ್ರದಾಟಿ ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೀಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು|| ೧೨) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಷನದಿಂದ ಹೊರಟು, ಈ ಕೆಳಗೆ ನಮೂದಿಸಿದಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ||	೨	೧೯ ಲಖನೌ	೨೪	೩೭ ಕುಂಭಕೋಣಂ	೧೫
೨ ನಾಶಿಕ	೩-೪	೨೦ ಅಯೋಧ್ಯಾ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ ಕನ್ಯಾಕುಮಾರಿ [ಹಡಗದಿಂದ]	೧೮
೪ ಸೋಮನಾಥ (ಹಡಗದಿಂದ)	೮-೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಶ್ರೀಕಾಶಿ	೨೮-೨೯-೩೦-೩೧ ನವ್ಹೆಂಬರ ತಾ|| ೧	೪೧ ಕ್ಯಾಂಡಿ [೨೨]	೨೩
೬ ಪಾಲಿಟಾಣಾ (ಜೈನತೀರ್ಥ)	೧೦ ೧೧	೨೪ ಸಾರನಾಥ	,	೪೨ ... [೨೪]	೨೫
೭ ಅಬುಪಹಾಡ (ಜೈನತೀರ್ಥ)	೧೨ ೧೩	೨೫ ಗಯಾ	೨	೪೩ ಧನುಷ್ಕೋಡಿ [ಹಡಗದಿಂದ]	
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೪ ಮದುರೆ	೨೬
೯ ಸಾಬರಮತಿ	,,	೨೭ ಗಿರಿ...		೪೫ ತ್ರಿಚನಾಪಳ್ಳಿ	೨೭
೧೦ ಬಡೋದೆ	೧೫	೨೮ ... (ಜೈನ ತೀರ್ಥ)	೪	೪೬ ಶ್ರೀರಂಗ	
೧೧ ಉಜ್ಜಯಿನಿ	೧೬	೨೯ ಕಲಕತ್ತಾ	೫-೬-೭	೪೭ ಬೆಂಗಳೂರ	೨೮
೧೨ ಆಗ್ರಾ	೧೭	೩೦ ಜಗನ್ನಾಥಪುರಿ	೮	೪೮ ಮೈಸೂರ	೨೯-೩೦
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,		

ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ ೩೦ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು|| ೧೩ ಬುಧವಾರ) ಮುಂಜಾನೆ ಹುಬ್ಬಳ್ಳೀ ಪಟ್ಟಣವನ್ನು ಮುಟ್ಟುವದು

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡಕ್ಲಾಸ ೩೦೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ ಥರ್ಡಕ್ಲಾಸಿನವರು ೩೦ ರೂ ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು ಹೋದಸಾರೆ ನಮ್ಮ ಟ್ರೇನಿನಲ್ಲಿ ತಡವಾಗಿ ಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು ಆದ ಕಾರಣ ಟಿಕೇಟ ಗಳಿಗಾಗಿ ತ್ವರೆಮಾಡತಕ್ಕದ್ದು

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರಿ.ಶಂಕರ ಕಂಪನಿಯ ಎಜಂಟ್ ರೆಂಟಿಗಳು— ಸದರ ಕಂಪನಿಯ ಎಜಂಟರು ... ಧಾರವಾಡ ಜಿಲ್ಲೆಯ ... ಹಾಗು ವತನದಾರರ ... ಕೆಲಸ ಮಾಡಿ ... ಬೇಸಗೆಯಲ್ಲಾದರೂ ... ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸತಕ್ಕದ್ದು ... ಯೋಗ್ಯ ಕಮೀಶನ ಕೊಡಲ್ಪಡುವದು

ಜಿ. ಎ ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಎಜಂಟ:— ಜಿ ಎಚ್. ಚನಪ್ಪಾ ಬುಕ್‌ಸೇಲರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ಬರುತ್ತವೆ. ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ನಮ್ಮ ಕನಾ೯ಟಕ ಬಂಧುಗಳಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ|| ...

ಪಳ್ಳಿ ಡ್ ಹೈದರಾಬಾದ (ಡೆಕ್ಕನ್) **ಬಿ ಜಿ ಚಿಮ್ಮಲಗಿ**

ಭುವನೇಶ್ವರಿ ಭಾಂಡಾರ.

ಬೈಲಹೊಂಗಲದಲ್ಲಿ ಎಲ್ಲ ಬಗೆಯ ಬಟ್ಟೆ, ಔಷಧ, ಸುಗಂಧಿ ಸಾಮಾನು, ಸ್ಟೇಶನರಿ ಹಾಗೂ ರೈತರಿಗೆ ಬೇಕಾಗುವ ಒಕ್ಕಲತನದ ಎಲ್ಲ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ವತನದಾರ ಕಾಟಾ.

ಬೈಲಹೊಂಗಲದಲ್ಲಿ ದಲಾಲಿಯಿಂದ ಹತ್ತಿ, ಶೇಂಗಾ ಮುಂತಾದ ಯಾವದೇ ಜಿನಸುಗಳನ್ನು ಮಾರಬೇಕಾದರೆ ನಮ್ಮಲ್ಲಿ ಬನ್ನಿ ದರ, ಗೋಡಾವುನ. ನೀರು ಇಳಿಯುವ ಸ್ಥಳ ಮೊದಲಾದ ಎಲ್ಲ ಸೌಕರ್ಯಗಳೂ ಇವೆ

ಗೋಪಾಳರಾವ ಕುಲಕರ್ಣಿ ಬೈಲಹೊಂಗಲ.

ಕನ್ನಡಿಗ.

ಧಾರವಾಡ— ರವಿವಾರ ತಾರೀಖು ೫—೯—೩೭

ವಿಜಯನಗರ ಸ್ಮಾರಕೋತ್ಸವ ದಿನ.

ಸ್ತ ಸನೆಯು ಇತ್ತೀಚೆಗೆ ಕರ್ನಾಟಕವು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ತ್ಸವ ಅತ್ಯಂತ ವಿಜೃಂಭಣೆಯಿಂದ ಜರುಗಿಸಬೇಕೆಂದೂ ಅದಕ್ಕೋಸ್ಕರ ಒಂದು ಲಕ್ಷ ರೂಪಾಯಿ ನಿಧಿಯನ್ನು ಕೂಡಿಸಲಿಕ್ಕೆ ಈಗಿನಿಂದಲೇ ಪ್ರಾರಂಭಿಸಬೇಕೆಂದೂ ... ಈಗ ಎಲ್ಲರಿಗೂ ತಿಳಿದ ಮಾತಾಗಿದೆ. ಆ ಸಾಮ್ರಾಜ್ಯ ಸ್ಥಾಪನೆಯ ದಿನವು ಯಾವುದು? ಈ ಉತ್ಸವದ ಸಿದ್ಧತೆಯನ್ನು ... ಗೆ ಮಾಡಬೇಕೆಂಬದನ್ನು ಇಂದು ನೋಡುವೆವು.

ಈ ಗ್ರಂಥದ ಪಟ್ಟಿಗೆ. ಶಕೆ ೧೨೫೮ ನೆಯ ವೈಶಾಖ ಶುದ್ಧ ಸಪ್ತಮಿ ಬುಧವಾರ ಆ ಸಾಮ್ರಾಜ್ಯ ಸ್ಥಾಪನೆಯ ದಿನವೆಂದು ಹೇಳಬಹುದು. ಆ ದಿವಸಲ್ಲಿ ಸಂಭವಿಸಿದ ಮುಖ್ಯ ಸಂಗತಿಗಳು ಎರಡು (೧) ವಿದ್ಯಾನಗರವೆಂಬ ಪಟ್ಟಣದ ಸ್ಥಾಪನೆ (೨) ಆ ಸಾಮ್ರಾಜ್ಯ ಸಿಂಹಾಸನದಲ್ಲಿ ಮೊದಲನೆಯ ಅರಸನಾದ ಹರಿಹರನ ಪಟ್ಟಾಭಿಷೇಕ. ಇವೆರಡು ಸಂಗತಿ ಅದೇ ದಿನವೇ ಘಟಿಸಿದವೆಂಬುದಕ್ಕೆ ಹಲವು ಆಧಾರಗಳುಂಟು. ಚಂದ್ರಗಿರಿ ರಾಜ್ಯದಲ್ಲಿ ಹರಿಹರಪುರವೆಂಬ ಪಟ್ಟಣವು ಆಗ ಹರಿಹರನ ಹೆಸರಿನಿಂದ ಸ್ಥಾಪಿತವಾಯಿತು. ಗುತ್ತಿಯ ಹತ್ತಿರ ಬುಕ್ಕರಾಯ ಪಟ್ಟಣವೆಂಬುದೂ ಹರಿಹರನ ತಮ್ಮನಾದ ಬುಕ್ಕರಾಯನ ಹೆಸರಿನಿಂದ ಸ್ಥಾಪಿತವಾಯಿತು. ಆ ಕಾಲದ ದಾನಪತ್ರದಲ್ಲಿಯ ಈ ವಿಜಯನಗರ ಸಾಮ್ರಾಜ್ಯ ದಿನದ ... ವಿದೆ. ಮತ್ತೊಂದು ಶಿಲಾಲಿಪಿಯಲ್ಲಿ ವಿದ್ಯಾರಣ್ಯಪುರದ ಹೆಸರ ಬಂದಿದ್ದು ಅದರಿಂದಲೂ ಇದೇ ಸಾಮ್ರಾಜ್ಯ ಸ್ಥಾಪನೆಯ ದಿನವೆಂದು ಗೊತ್ತಾಗುತ್ತದೆ. ಇದಲ್ಲದೆ ವಿದ್ಯಾರಣ್ಯರ ಕಾಲಜ್ಞಾನವೆಂಬದೊಂದು ಪುಸ್ತಕದ ಮೇಲಿಂದಲೂ ಇದೇ ಮಾತು ಸಿದ್ಧವಾಗುತ್ತದೆ. ಬುಕ್ಯಾನನ್ ಹ್ಯಾಮಿಲ್ಟನ್‌ನೆಂಬೊಬ್ಬ ಪ್ರವಾಸಿಯು ಕೆಲವು ವರ್ಷಗಳ ಹಿಂದೆ ಮದ್ರಾಸ, ಮೈಸೂರ ಕಾನಡಾಜಿಲ್ಹ ಮತ್ತು ಮಲಬಾರಗಳಲ್ಲಿ ಪ್ರವಾಸಕ್ಕೆ ಬಂದಿದ್ದನು. ಅವನು ತನ್ನ ಪ್ರವಾಸದ ವರ್ಣನೆಯನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟಿರುವನು. ಅದರಲ್ಲಿ ಅವನು ತನಗೆ ದೊರೆತ ವಿದ್ಯಾರಣ್ಯ ಶಿಕ್ಷಾ (Vidyaranya Sikka) ಎಂಬ ಪುಸ್ತಕದೊಳಗಿನ ಕೆಲವು ಸಂಗತಿಗಳನ್ನು ಕೊಟ್ಟಿರುವನು. ಅದರಲ್ಲಿಯೂ ವಿದ್ಯಾನಗರದ ಸ್ಥಾಪನೆ ಹರಿಹರನ ಪಟ್ಟಾಭಿಷೇಕ ಇವು ಮೇಲ್ಕಾಣಿಸಿದ ದಿನವೇ ಜರುಗಿದವೆಂದು ಸ್ಪಷ್ಟವಾಗಿ ... ಆದ ಕಾರಣ ವಿಜಯನಗರ ಸ್ಮಾರಕೋತ್ಸವ ದಿನವು ಆ ದಿವಸವೇ ಜರುಗಬೇಕಾಗಿರುವದು ತಿಳಿಯಲು ಅಡ್ಡಿಯಿಲ್ಲ.

... ತ್ಸವದ ದಿನಕ್ಕೆ ಇನ್ನು ೨—೩ ವರುಷಗಳು ಮಾತ್ರವೇ ಉಳಿದಿವೆ. ಇಷ್ಟರಲ್ಲಿ ... ಗಿಸಬೇಕಾದ ಕಾರ್ಯಗಳು ಅನೇಕವಾಗಿವೆ. ಅವುಗಳಲ್ಲಿ ಅತ್ಯಂತ ಮುಖ್ಯವಾದವು ಎರಡು (೧) ಸಾದ್ಯಂತವಾದ ವಿಜಯನಗರದ ಇತಿಹಾಸವನ್ನು ಕನ್ನಡದಲ್ಲಿಯೂ ಇಂಗ್ಲಿಷಿನಲ್ಲಿಯೂ ಬರೆಯಿಸಿ ಪ್ರಕಟಿಸುವುದು. ಈ ಮಹಾ ಕಾರ್ಯವು ಆಗಿಂದಾಗ ಆಗತಕ್ಕದ್ದಲ್ಲ. ಆದ್ದರಿಂದ ಈಗಿನಿಂದಲೇ ಈ ಕಾರ್ಯವನ್ನು ಒಂದು ತಜ್ಞರಾದ ಮಂಡಲದವರಿಗೆ ಒಪ್ಪಿಸುವುದು ಒಳ್ಳೆಯದಿದೆ. (೨) ಹಾಗೆಯೇ ಒಂದು ಲಕ್ಷ ರೂಪಾಯಿಗಳನ್ನು ಕೂಡಿಸುವುದೂ ಒಮ್ಮೆಲೆ ಆಗುವ ಕಾರ್ಯವಲ್ಲ. ಆದುದರಿಂದ ಕನ್ನಡಿಗರು ಎಚ್ಚತ್ತು ಚಟುವಟಿಕೆಗೆ ಪ್ರಾರಂಭಿಸಬೇಕು.

ಈ ಉತ್ಸವದ ಕಾರ್ಯವನ್ನು ವ್ಯವಸ್ಥಿತವಾಗಿ ಜರುಗಿಸುವುದಕ್ಕೆ ಅಖಿಲಕರ್ನಾಟಕದ ಒಂದು ಮಂಡಳವು ಸ್ಥಾಪಿತವಾಗಬೇಕು. ಅದನ್ನು ಸ್ಥಾಪಿಸುವದಕ್ಕೋಸ್ಕರ ಅಖಿಲ ಕರ್ನಾಟಕದ ಒಂದು ವಿಶೇಷ ಸಭೆಯನ್ನು ಬರುವ ನಾಡಹಬ್ಬದ ಸುಮಾರಕ್ಕೆ ಯಾವುದೊಂದು ಸ್ಥಳದಲ್ಲಿ ಕರೆಯುವುದು ಒಳ್ಳೆಯದು. ಬೆಳಗಾಂವಿ, ಹುಬ್ಬಳ್ಳಿ ಅಥವಾ ಮತ್ತಾವುದೊಂದು ಉತ್ಸಾಹಿಗಳಾದ ಪಟ್ಟಣವು ಈಗಿನಿಂದಲೇ ಸಿದ್ಧತೆಗೆ ಹತ್ತಬೇಕೆಂದು ನಮ್ಮ ವಿನಯದ ಸೂಚನೆ. ಮತ್ತೊಂದು ಸೂಚನೆಯೆಂದರೆ, ಆ ಬಗೆಯಾಗಿ ಕೂಡುವ ಅಖಿಲ ಕರ್ನಾಟಕದ ಸಭೆಗೆ ಕರ್ನಾಟಕದ ಯಾವತ್ತು ಭಾಗಗಳಿಂದಲೂ ಸಾಕಷ್ಟು ಪ್ರತಿನಿಧಿಗಳು ಬರಬೇಕಾದರೆ ... ದ ಮುಖ್ಯ ಮುಖ್ಯ ಸ್ಥಳಗಳಲ್ಲಿ ತಾತ್ಪೂರ್ತಿಕ ಸ್ಮಾರಕ ಮಂಡಳಗಳು ಸ್ಥಾಪಿತವಾಗಬೇಕು. ಕರ್ನಾಟಕದಲ್ಲೆಲ್ಲ ತಿರುಗಾಡಿ ಈ ಪ್ರಕಾರದ ಮಂಡಳಗಳನ್ನು ಸ್ಥಾಪಿಸುವದಕ್ಕೆ ಕೆಲವರು ಹೊರಬೇಕಾಗಿತ್ತು. ಆದರೆ ಹಾಗೆ ಕಾರ್ಯವನ್ನು ಕೈಕೊಳ್ಳುವವರ ಅಭಾವದಲ್ಲಿ, ನಾವು ಕನ್ನಡಿಗರಿಗೆಲ್ಲರಿಗೂ ವಿಜ್ಞಾಪಿಸಿಕೊಳ್ಳುವುದೇನೆಂದರೆ— ಕನ್ನಡಿಗರೆ, ಅಭಿಮಾನಿಗಳಾದ ಕನ್ನಡಿಗರೇ, ಉತ್ಸಾಹಯುಕ್ತರಾದ ಕನ್ನಡಿಗರೇ, ನೀವು ಈ ವಿಷಯದ ದಾರಿಯನ್ನು ನೋಡದೆ ಆದಷ್ಟು ತೀವ್ರ ನಿಮ್ಮ ನಿಮ್ಮ ಸ್ಥಳಗಳಲ್ಲಿ ತಾತ್ಪೂರ್ತಿಕ ಮಂಡಳಗಳನ್ನು ಸ್ಥಾಪಿಸಿ ತಿಳಿಸಿರಿ. ಹೀಗೆ ಮಾಡುವುದರಿಂದ ತೀವ್ರವೇ ಅಖಿಲ ಕರ್ನಾಟಕ ಸಭೆಯನ್ನು ಕರೆಯಲು ಅನುಕೂಲವಾಗುತ್ತದೆ.

ಕಿರಿನುಡಿಗಳು.

... ದಲ್ಲಿ ಎಲ್ಲಿ ನೋಡಿದರೂ ಒಂದು ತರದ ದೈನ್ಯವು ಪಸರಿಸುತ್ತದೆ. ವ್ಯಾಪಾರಿಗಳಿಗೆ ಸೌಖ್ಯವಿಲ್ಲ, ಗಿರಣಿಕಾರರಿಗೆ ಸೌಖ್ಯವಿಲ್ಲ ... ರಲ್ಲಿಯೂ ಬಡರೈತರ ಗೋಳು ಎಲ್ಲಕ್ಕೂ ಹೆಚ್ಚು. ಈ ದೇಶದಲ್ಲಿ ೧೦೦ಕ್ಕೆ ೭೦ ಜನರ ಉಪಜೀವನವು ಒಕ್ಕಲತನದಿಂದ ಸಾಗುತ್ತಿದೆ. ಆದರೆ ಒಕ್ಕಲತನಸಿಂದ ... ರೈತರ ... ಕೈಯಿಂದ ಕಂದಾಯವನ್ನು ತೆತ್ತು ಸ್ವಸ್ಥ ಕೂಡುವ ವಿಚಿತ್ರ ಸ್ಥಿತಿ ಇಳಿದಿದೆ. ಈ ಸ್ಥಿತಿಯು ಇಂದಿಗೆ ಸುಧಾರಿಸೀತು, ನಾಳೆಗೆ ಸುಧಾರಿಸೀತು ಎಂದು ಗಿಡಕ್ಕೆ ಹಚ್ಚಿ ಕುಳಿತಿರೋಣ ಒಡೆದಿದೆ. ನಮ್ಮ ಬೇಸರ ತ್ತದೆ. ... ದಿನದಿನಕ್ಕೆ ಮತ್ತಿಷ್ಟು ಅದು ಕೆರಳುತ್ತಲೇ ನಡೆದಿದೆ. ಇಂದ ಕಾಲದಲ್ಲಿ, ಸರಕಾರದವರು ರೈತರ ಕೈಹಿಡಿಯುತ್ತಾರೆಂದು ಅದು ಈ ಮಾರ್ಗದಿಂದ ಅವರ ಪ್ರಯತ್ನಗಳು ತೀರ ಅಲ್ಪವಾಗಿವೆ. ರೈತರನ್ನು ಕಾಡುವುದಕ್ಕೆ ಒರಗಿ ... ಇವೆ. ಆದರೂ ಸರಕಾರದವರು ತಮ್ಮ ಕಂದಾಯವು ಹೇಗೆ ವಸೂಲಾದೀತೆಂಬ ಯೋಚನೆಯಲ್ಲಿ ಇದ್ದಾರಲ್ಲದೆ ಅನ್ಯ ಯೋಚನೆಯನ್ನೇ ಮಾಡುವದಿಲ್ಲ. ಮಧ್ಯಭಾಗ ಮತ್ತು ದಕ್ಷಿಣ ಭಾಗದಲ್ಲಿ ಅವರು ಕೊಡತಕ್ಕ ಸುಮಾರು ೩ ೨೧ ಕೋಟಿ ರೂಪಾಯಿಗಳ ಭೂಕಂದಾಯವನ್ನು ವಸೂಲ ಮಾಡಿದರು. ಅವರು ಕೊಟ್ಟದ್ದು ... ಸುಮಾರ ೧ ಲಕ್ಷ ಮಾತ್ರವೆ! ಇದು ರೈತರ ಮೇಲಿನ ಅವರ ಮಮತೆ! ದಿನದಿನಕ್ಕೆ ರೈತರ ಪರಿಸ್ಥಿತಿಯು ಕೆಡುತ್ತಿದೆ. ಈ ಸರಕಾರದವರ ಮಮತೆಯು ಮಾತ್ರ ದಿನದಿನಕ್ಕೆ ಹೆಚ್ಚುತ್ತ ನಡೆದಿದೆ. ಇದರ ಕಾರಣವೇನಿರಬಹುದು! ಒತ್ತಾಯದಿಂದ ವಸೂಲ ಮಾಡುವ ಉಪಾಯಗಳನ್ನು ಅವಲಂಬಿಸಿದರಬೇಕೆಂದು ತರ್ಕಿಸಬೇಕಾಗುವದಿಲ್ಲವೆ? ಆದರೆ ಸರಕಾರದವರಾದರೋ, ತಾವು ಯಾವ ಒತ್ತಾಯದ ಉಪಾಯವನ್ನು ಯೋಜಿಸುತ್ತಿಲ್ಲವೆಂದು ಹೇಳುತ್ತಾರೆ. ಪ್ರತ್ಯಕ್ಷವಾಗಿ ದುಃಖ ಅನುಭವಿಸುತ್ತಿರುವ ರೈತರಿಗೆ ಅಧಿಕಾರಿಗಳು ಕಾಗದ ಮೇಲೆ ಬರೆದ ವರದಿಗಳಿಂದ ಹೇಗೆ ಸಮಾಧಾನವಾಗಬೇಕು! ಕಂದಾಯವನ್ನೆಲ್ಲ ಹೊಸ ಮೂಲ ಪದ್ಧತಿಯಲ್ಲಿಯೇ ವಸೂಲಾಗಬೇಕಾಗಿದೆ. ಸಂಯುಕ್ತಪ್ರಾಂತದಲ್ಲಿ ಈ ದೃಷ್ಟಿಯಿಂದ ಸರಕಾರವು ವಿಚಾರ ಮಾಡುತ್ತಿದೆ. ರೈತರಿಗೆ ಯಾವ ವರ್ಷ ಬೆಳೆ ಬರದಿದ್ದಿಲ್ಲವೋ ಆ ವರ್ಷ ಅವರಿಂದ ಆ ಪ್ರಮಾಣದಿಂದ ಕಡಿಮೆ ತೆರಿಗೆಯನ್ನು ತೆಗೆದುಕೊಳ್ಳುವುದೊಂದು ಯುಕ್ತಿಯನ್ನು ಹುಡುಕದ ಹೊರತು ರೈತರ ಗೋಳು ತಪ್ಪುವುದಿಲ್ಲ.

ಶ್ರೀ ದತ್ತಾತ್ರಯ ಕಂಪನಿಯವರ ಸತ್ಯಸಂಕಲ್ಪ

ನಾಟ್ಯಕಲೆಗಾಗಿಯೇ ತಮ್ಮ ಜೀವಿತವನ್ನು ಮೀಸಲಾಗಿಟ್ಟುಕೊಂಡ ಶ್ರೀಮಾನ್ ಗರುಡ ಸದಾಶಿವರಾಯರು ರಚಿಸಿದ ಸಾಮಾಜಿಕ ನಾಟಕವಿದು. ಇಂದಿನ ಕರ್ನಾಟಕ ಸಮಾಜದ ಚಿತ್ರವನ್ನಿದರಲ್ಲಿ ಕಾಣಬಹುದು. ಕನ್ನಡಿಗರಿಂದ ನುಡಿಯುತ್ತಿರುವ ವಿಚಾರಗಳನ್ನು ಮಾಡುತ್ತಿರುವ ಕೃತಿಗಳನ್ನು ಇದರಲ್ಲಿ ನೋಡಿ ದೋಷಗಳನ್ನು ಅನೇಕ ರೀತಿಯಿಂದ ತಿದ್ದಿಕೊಳ್ಳಬಹುದು. ಸಾಮಾಜಿಕ ನಾಟಕಗಳು ಹೆಚ್ಚು ಹೆಚ್ಚಾಗಿ ಹೊಸ ಹೊಸ ವಿವಿಧತೆಯನ್ನೊಳಗೊಂಡು ರಂಗಭೂಮಿಯ ಮೇಲೆ ಬರಲೆಂದೇ ನಾವು ಹಾರೈಸುತ್ತೇವೆ.

ಹೊಸ ಹುಡುಗರು ಸಹ ಅಭಿನಯದಲ್ಲಿ ಪ್ರವೀಣ್ಯತೆಯನ್ನು ಹೊಂದುವಂತೆ, ಅವರಿಗೆ ಶಿಕ್ಷಣ ಕೊಡುವ ಕಲೆಯು ಶ್ರೀಯುತ ಗರುಡರಲ್ಲಿ ಚೆನ್ನಾಗಿ ಬೇರೂರಿದೆ. ಹೆಸರಾಗಿದ್ದ ಅಭಿನಯಕಾರರು ಗರುಡರ ಕಂಪನಿಯನ್ನು ಬಿಟ್ಟರೂ ಸಹ, ಹೊಸಬರನ್ನು ಕೂಡಲೆ ತೆಗೆದುಕೊಂಡು ಅವರನ್ನು ಕೂಡ 'ಗರುಡ'ರ ಅಭಿನಯಕ್ಕೇನೇ ಹೋಲುವಂತೆ ಶಿಕ್ಷಣ ಕೊಟ್ಟು, ಶ್ರೀ ದತ್ತಾತ್ರಯ ಕಂಪನಿಯ ಗೌರವವನ್ನು ಶ್ರೀಯುತ ಸದಾಶಿವರಾಯರು ವೃದ್ಧಿಗೊಳಿಸಿದ್ದಾರೆ.

ಕಂಪನಿಯು ಇನ್ನೂ ಹೆಚ್ಚಾಗಿ ಪ್ರಗತಿ ಹೊಂದುವಂತೆ ಆಶೀರ್ವದಿಸಬೇಕೆಂದು ಕರ್ನಾಟಕ ಮಾತೆಯನ್ನು ಬೇಡಿಕೊಳ್ಳುತ್ತೇವೆ.

ಹುಬ್ಬಳ್ಳಿ ಸಿಟಿಹಾಯಸ್ಕೂಲಕ್ಕೆ ಧರ್ಮಾರ್ಥ ನಾಟಕ

ಹುಬ್ಬಳ್ಳಿ ಸಿಟಿಹಾಯಸ್ಕೂಲಿನ ಸಲುವಾಗಿ ಶ್ರೀದತ್ತಾತ್ರಯ ನಾಟಕ ಮಂಡಳಿಯವರು ಈ ರವಿವಾರ ತಾ॥ ೫—೯—೩೭ನೇ ದಿವಸ 'ಸತ್ಯ ಸಂಕಲ್ಪ' ಎಂಬ ನಾಟಕವನ್ನು ಧರ್ಮಾರ್ಥ ಕೊಡತಕ್ಕವರಿದ್ದರಷ್ಟೇ? ಆದರೆ ಕೆಲವು ಅನಾನುಕೂಲತೆಯ ಮೂಲಕ ಈ ನಾಟಕವನ್ನು ಮುಂದಿನ ರವಿವಾರ ತಾ॥ ೧೨—೯—೩೭ರ ವರೆಗೆ ಮುಂದೆ ಹಾಕುವದರಲ್ಲಿ ಬಂದಿದೆಯೆಂದೂ ಕಾರಣ ಅಭಿಮಾನಿಗಳು ಅಂದು ನಾಟಕಕ್ಕೆ ಆಗಮಿಸಿ ಶಿಕ್ಷಣಕಾರ್ಯಕ್ಕೆ ನೆರವಾಗಬೇಕೆಂದೂ ಕಾರ್ಯದರ್ಶಿಗಳಾದ ಶ್ರೀ ಬಿ. ಎನ್. ಬೈಚವಾಳ ಇವರು ತಿಳಿಸುತ್ತಾರೆ.

ಹಿಂದಿ ಅರಳಿಯ ಮೇಲೆ ಜಪಾನದ ಬಹಿಷ್ಕಾರ.

ಮುಂಬಯಿ ತಾ॥ ೧ — ಸರ್ ಜೋಸೆಫ ಭೋರ ಇವರು ತಾ॥ ೩೧ ನೆ ದಿವಸ ಅಸೆಂಬ್ಲಿಯಲ್ಲಿ "ಹಿಂದಿ ಅರಳಿ ಹಾಗು ಜಪಾನದ ಬಹಿಷ್ಕಾರ" ದ ವಿಷಯವಾಗಿ ಸ್ಪಷ್ಟೀಕರಣ ಮಾಡಿದರು. ಅವರು ಆಗ, ಜಪಾನದವರು ಹಿಂದಿ ಅರಳಿಯ ಮೇಲೆ ಬಹಿಷ್ಕಾರ ಹಾಕಿದ್ದುದು ಪರಿಣಾಮಕಾರಿಯಾಗಿರುವದಿಲ್ಲ. ಯಾಕಂದರೆ ಅರಳಿಯ ನಿರ್ಗತವು ಮೊದಲಿನಕಿಂತ ಹೆಚ್ಚಾಗಿದ್ದುದು ಕಾಣುತ್ತದೆ ಎಂದು ಹೇಳಿದ್ದರು. ಈ ವಿಷಯವಾಗಿ ಅಸೋಸಿಯೇಟೆಡ್ ಪ್ರತಿನಿಧಿಯು ಈಸ್ಟ ಇಂಡಿಯಾ ಕಾಟನ್ ಅಸೋಸಿಯೇಶನವರ ಅಭಿಪ್ರಾಯವನ್ನು ವಿಚಾರಿಸಲು ಅವರು ಕೆಳಗಿನಂತೆ ಹೇಳಿದರು.

"ನಿಜವಾದ ಸಂಗತಿಯೆಂದರೆ, ಓಸಾಕದ ಜಪಾನಿ ನೂಲಿನ ಸಂಘದವರು ಹಿಂದಿ ಅರಳಿಯ ಮೇಲೆ ಬಹಿಷ್ಕಾರ ಹಾಕಿದ ಮೇಲೆ ಹಿಂದಿ ಅರಳಿಯು ಹಡಗುಗಳಲ್ಲಿ ತುಂಬಿ ಹೆಚ್ಚಾಗಿ ಅತ್ತ ಕಡೆಗ ಹೋದದ್ದೇನೋ ನಿಜವಿದೆ. ಆದರೆ ಇದಕ್ಕೆ ಜಪಾನದವರು ಬಹಿಷ್ಕಾರದಕ್ಕಿಂತ ಪೂರ್ವದಲ್ಲಿ ಅರಳಿಯನ್ನು ಕಳಿಸಿಕೊಡಲು ಹೇಳಿಕೊಂಡಿದ್ದುದೇ ಕಾರಣವಾಗಿದೆ. ಬಹಿಷ್ಕಾರವು ಪರಿಣಾಮಕಾರಿಯಾಗಿ ನಡೆದಿದೆಯೆಂಬುದಕ್ಕೆ ಪ್ರತ್ಯಕ್ಷವಾದ ಉದಾಹರಣೆಯು ಬೇಕಿದ್ದರೆ, ಕೆಳಗಿನ ಸಂಗತಿಯ ಕಡೆಗೆ ಲಕ್ಷಕೊಡಬೇಕು. ಅದೆಂದರೆ, ಜಪಾನಕ್ಕೆ ಅರಳಿಯನ್ನು ತುಂಬಿಕೊಂಡು ಹೋಗುವ ಹಡಗುಗಳಿಗೆ "ಫ್ರೇಟ" ಕೊಡುವ ಅಧಿಕಾರವು ಜಪಾನ ನೂಲಿನ ಸಂಘದವರ ಕೈಯಲ್ಲಿ ಇದೆ. ಅವರು ಈಗ ಬಹಿಷ್ಕಾರ ಪ್ರಾರಂಭವಾಗುವದಕ್ಕಿಂತ ಮೊದಲು ಕೊಟ್ಟ ಬೇಡಿಕೆಗಳ ಪ್ರಕಾರ ಅರಳಿಯನ್ನು ತುಂಬಿಕೊಂಡು ಬಂದ ಹಡಗುಗಳಿಗಷ್ಟೇ "ಫ್ರೇಟ" ಕೊಡುತ್ತಾರೆ. ಉಳಿದವುಗಳಿಗೆ ಕೊಡುವದಿಲ್ಲ.

(ಅ ಪ್ರ)

ಪಂಡಿತ ಜವಾಹಿರರ ಸಂಭಾಷಣ.

ಬಿಳೇ ಕಾಗದದಿಂದ ಲಾಭವಿಲ್ಲ

ಸ್ವರಾಜ್ಯ ಚಳವಳಿಯ ಮುಖ್ಯ ಉದ್ದೇಶವೇನು?

ಲಖನೌ ತಾ॥ ೧— ಅಸೋಸಿಯೇಟೆಡ್ ಪ್ರತಿನಿಧಿಯ ಮುಂದೆ ಪಂಡಿತ ಜವಾಹಿರಲಾಲ ನೆಹರೂ ಇವರು ಹೇಳಿದ್ದೇನೆಂದರೆ— ಹಿಂದುಸ್ಥಾನದ ಮುಖ್ಯ ತೊಡಕೆಂದರೆ ಅರ್ಥಿಕ ವಿಷಯಕ್ಕೆ ಸಂಬಂಧಿಸಿದ್ದಿರುತ್ತದೆ. ರಾಜಕಾರಣಕ್ಕೆ ಸಂಬಂಧಿಸಿದ್ದಿರುವದಿಲ್ಲ. ಮತ್ತು ಹಿಂದುಸ್ಥಾನದ ಸಂಕಷ್ಟಗಳೆಂದರೆ ರೈತರಿಗೆ ಸಂಬಂಧಿಸಿದ್ದಿರುತ್ತವೆ.

ಬಿಳೇ ಕಾಗದದ ವಿಷಯವಾಗಿ ಅವರು ಹೇಳಿದುದೇನೆಂದರೆ - ಬಿಳೇಕಾಗದದಲ್ಲಿಯ ಸೂಚನೆಗಳು ಕಾರ್ಯರೂಪದಲ್ಲಿ ಬರುವಂತಹ ಸೂಚನೆಗಳಿಲ್ಲ. ಅವುಗಳಿಂದ ಏನೂ ಲಾಭ ದೊರೆಯಲಾರದು.

ಪಂಡಿತರು ಮತ್ತೂ ಹೇಳಿದುದೇನೆಂದರೆ, ಸ್ವರಾಜ್ಯ ಚಳವಳಿಯನ್ನು ಸಾಗಿಸುವಲ್ಲಿ ನಮ್ಮ ಮುಖ್ಯ ಉದ್ದೇಶವೆಂದರೆ, ಅಡಳತೆಯ ವೆಚ್ಚವನ್ನು ಕಡಿಮೆ ಮಾಡುವದೂ ಮತ್ತು ರೈತರ ತಲೆಭಾರವನ್ನು ತಗ್ಗಿಸುವದೂ ಇರುತ್ತದೆ.

(ಅ. ಪ್ರ)

ಮುಂಬಯಿ ಇಲಾಖೆಯ ಜೇಲುಗಳ ವರದಿ.

ಮುಂಬಯಿ ಇಲಾಖೆಯ ... ಜೇಲುಗಳ ಆಡಳಿತೆಯ ... ವರದಿಯು ಇದೀಗ ಪ್ರಸಿದ್ಧವಾಗಿದೆ. ಈ ... ಇನ್ಸ್‌ಪೆಕ್ಟರ್ ಜನರಲ್ ರವರು ... ಈ ವರ್ಷವು ತುರುಂಗ ಖಾತೆಯು ... ಬ್ಬಾಗಿ ಪರಿಣಮಿಸಿತು. ... ವರ್ಷವೂ ತುರುಂಗ ಖಾತೆಯ ... ಇಷ್ಟು ಭಾರವು ಬಿದ್ದಿದ್ದಿಲ್ಲ. ತುರುಂಗ ಖಾತೆಯವರು ಈ ವರ್ಷ ತಂಡತಂಡವಾಗಿ ... ಬರುತ್ತಿರುವ ಕೇವಲ ಕಾಯದೆ ಭಂಗದ ... ಗಳೊಡನೆ ನಡೆದುಕೊಳ್ಳಬೇಕಾಗಿ ... ಮುಂಬಯಿಯ ಪುಂಡುಗಾರರೊಡನೆಯೂ ನಡೆದುಕೊಳ್ಳಬೇಕಾಯಿತು. ಖಾತೆಯೊಳಗಿನ ಯಾವತ್ತು ಅಧಿಕಾರಿಗಳು ದಕ್ಷತೆಯಿಂದಲೂ ಸುವ್ಯವಸ್ಥೆಯಿಂದಲೂ ಮತ್ತು ... ಪೂರ್ವಕವಾಗಿಯೂ ಕೆಲಸ ಮಾಡಿದ್ದರಿಂದ ಇದು ಸಾಧ್ಯವಾಯಿತು.

ಈ ವರದಿಯಲ್ಲಿ ಕಾಣಿಸಲ್ಪಟ್ಟ ಮುಖ್ಯ ವಿಷಯಗಳೆಂದರೆ— ಈ ವರ್ಷ ಒಬ್ಬನಾದರೂ ಅಂದವಾನಕ್ಕೆ ಕಳಿಸಲ್ಪಟ್ಟಿರುವದಿಲ್ಲ. ಕಾಯದೆ ಭಂಗದ ಅಪರಾಧಿಗಳೆಂಬುವರ ಒಟ್ಟು ೧೧ ... ಜನರು ತುರುಂಗವಾಸವನ್ನು ... ನಾಸಿಕ ಜೇಲಿನ ಪ್ರಕರಣದ ಸಂಬಂಧವಾಗಿ ವರದಿಯಲ್ಲಿ ಕೆಳಗಿನಂತೆ ಉಲ್ಲೇಖ ಬಂದಿದೆ.

ಈ ಅನಾಹುತವು ಸಂಭವಿಸಿದ ಬಗ್ಗೆ ವಿಷಾದವಾಗುತ್ತದೆ. ೧೯೩೨ ನೆ ಅಕ್ಟೋಬರದಲ್ಲಿ ಇಬ್ಬರು ಜೇಲರರು, ಕೈಕೆಳಗಿನ ಇಬ್ಬರು ನೌಕರರು ಮತ್ತು ಓವರ್ ಸಿಯರರು ವರ್ಗ ಕೈದಿಯ ಮೇಲೆ ಹಲ್ಲೆಮಾಡಿದ್ದರು. ಅವರ ಮೇಲೆ ಖಟ್ಲೆ ನಡೆದು ಜೇಲರರು ಮತ್ತು ಓವರ್ ಸಿಯರರಿಗೆ ಶಿಕ್ಷೆಯಾಯಿತು. ಉಳಿದವರ ವಿಷಯವಾಗಿ ಖಾತೆಯವರೇ ವಿಚಾರ ನಡಿಸಿ ಅವರನ್ನು ನೌಕರಿಯಿಂದ ತೆಗೆದುಹಾಕಿದರು. ಜೇಲಿನ ಸುಪರಿಂಟೆಂಡೆಂಟರ ಮೇರೆಯೂ ಯೋಗ್ಯವಾದ ಉಪಾಯವನ್ನು ಕೈಕೊಂಡಿತು.

ವರದಿಯ ಕೊನೆಯಲ್ಲಿ ಉಲ್ಲೇಖಿಸಲ್ಪಟ್ಟದ್ದುದೇನಂದರೆ— ಶಿಕ್ಷೆಯನ್ನು ವಿಧಿಸುವ ಮುಂದೆ ಅವು ಎರಡನೆಯವರಿಗೆ ಬುದ್ಧಿ ಕಲಿಸುವಂತಹ ಶಿಕ್ಷೆ ವಿಧಿಸಬೇಕು ಎಂದು ಇನ್ಸ್‌ಪೆಕ್ಟರ ಜನರಲರು ಅಭಿಪ್ರಾಯವ್ಯಕ್ತಮಾಡಿರುವರು. (ಅ ಪ್ರ)

ರಾ. ಬ ಕಾಳೆಯವರು ಮಹಾತ್ಮರಿಗೆ ಭೆಟ್ಟಿಯಾದರು

ಪುಣೆ ತಾ|| — ಮುಂಬಯಿ ಕಾಯದೆ ಮಂಡಳದಲ್ಲಿಯ ವಿರೋಧಕ ಪಕ್ಷದ ಮುಖಂಡ ರಾವ ಬಹಾದ್ದೂರ ಕಾಳೆಯವರು ಈ ಹೊತ್ತಿನ ದಿವಸ ಮಹಾತ್ಮರಿಗೆ ಭೆಟ್ಟಿಯಾಗಿ ಅವರೊಡನೆ ಮಾತುಕತೆ ಆಡಿದರು. (ಅ. ಪ್ರ)

ಜಮಖಂಡಿ ಮಹಾರಾಜರ ಔದಾರ್ಯ.

ಕೊಲ್ಹಾಪುರ ತಾ|| ೩೦— ಜಮಖಂಡಿಯ ಮಹಾರಾಜರಾದ ಶ್ರೀಮಂತ ಅಪ್ಪಾಸಾಹೇಬ ಪಟವರ್ಧನ ಇವರು ಕರವೀರ ದಂಬಾರದ ಬೋರ್ಡಿಂಗಕ್ಕೆ ೧೫೦೦ ರೂಪಾಯಿಗಳನ್ನು ಕೊಟ್ಟು ಕಳಿಸಿದ್ದಾರೆ. ಈ ೧೫೦೦ ರಲ್ಲಿ ೧೦೦೦ ರುಪಾಯಿಗೆ ಬರುವ ಬಡ್ಡಿಯಲ್ಲಿ ರಾಜಾರಾಮ ಕಾಲೇಜದಲ್ಲಿರುವ ಜಮಖಂಡಿ ಸಂಸ್ಥಾನದ ಓರ್ವ ಯೋಗ್ಯ ವಿದ್ಯಾರ್ಥಿಗೆ ಒಂದು "ಫ್ರೀಶಿಪ್ಪ" ನ್ನೂ, ಬೇರೆ ಇಬ್ಬರಿಗೆ ಅರ್ಧ "ಫ್ರೀಶಿಪ್ಪ" ನ್ನೂ ಕೊಡಬೇಕೆಂದು ತಿಳಿಸಿದ್ದಾರೆ. ಉಳಿದ ೫೦೦ ರುಪಾಯಿಗಳನ್ನು ರಾಜಾರಾಮ ಕಾಲೇಜದಲ್ಲಿಯ್ನು ಯಾವದೇ ಸ್ಥಳದ ಯಾವದೇ ಜಾತಿಯ ಬಡ ವಿದ್ಯಾರ್ಥಿಗಳಿಗೆ ಅವರಿಂದ ಕಾಗದ ಬರಿಸಿಕೊಂಡು ಸಾಲ ಕೊಡಬೇಕೆಂದು ತಿಳಿಸಿದ್ದಾರೆ.

ಪತ್ರವ್ಯವಹಾರ

ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕಿನ ದಿವಾಳಿಯು

ಠೇವುದಾರರು ಏನು ಮಾಡಬೇಕು.

ಧಾರವಾಡದ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕಿನವರು ... ಒಂದು ಯೋಜನೆಯನ್ನು ... ಗೊತ್ತು ಮಾಡಿದ್ದರು ... ಬ್ಯಾಂಕಿನ ... ದರ ... ದ ... ದು ... ಇಂಡಸ್ಟ್ರಿಯಲ್ ಬ್ಯಾಂಕಿಗೆ ... ರುಪಾಯಿ ಸಾಲವಾಗಿ ಕೊಟ್ಟ ಧಾರವಾಡ ಬ್ಯಾಂಕಿನವ ... "ಯೋಜನೆ" ಯನ್ನು ... ಗೊತ್ತು ಮಾಡಿದರು. ಈ ... ಯವಾಗುವದೇನೆಂದರೆ, ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕಿನವರು ಯೋಜನೆಯನ್ನು ... ನ್ನು ... ದಿವಾಳಿ ತೆಗೆಯುವೆವೆಂದು ನಿನ್ನೆ 'ವಿಜಯ'ದಲ್ಲಿ ನೋಟೀಸು ಕೊಟ್ಟಿರುವರು. ... ಹಾಗೆ ... ಏನೂ ಉಳಿಯದಂತಾಗುವದು.

೧ ಈ ... ದಿವಾಳಿ ತೆಗೆಯುವದರಿಂದ ... ೧೫೦೦ ... ಬ್ಯಾಂಕಿನವರು ... ಮತ್ತು ... ಅವರ ... ಕೇವಲ ... ಗೆ ... ಬ್ಯಾಂಕಿನವರು ... ಬ್ಯಾಂಕಿನ ... ಬೇಕು ... ಆಧ ... ದೆ

೨ ದಿವಾಳಿ ತೆಗೆದ ಮೇಲೆ ... ವ್ಯಕ್ತಿಯವರನ್ನು ... ಬ್ಯಾಂಕಿನ ... ಭಾಂಡವಲು (... ಬಿಟ್ಟು) ... ಠೇವುದಾರರ ... ಹಂಚುವ ... ಅಲ್ಲದೆ ಈ ... ಬೇಕು.

೩ ಠೇವುದಾರರು ... ಕಡೆಗೆ ... ಅಥವಾ ... ಬೇಕು ... ವಾಡಬೇಕು ಎಂದು ... ಮತ್ತು ... ಹೇಳುವುದು ... ಮಾಡುವದು ... ಅವರ ... ಯೋಜನೆಯನ್ನು ... ಮಾಡಿಕೊಳ್ಳುವದು ... ಬ್ಯಾಂಕಿನವರು ವಿಚಾರ ಮಾಡಬೇಕು.

೪ ಬ್ಯಾಂಕು ಚನ್ನಾಗಿ ನಡೆಯುವದೆಂದು ತಿಳಿದು ತಮ್ಮ ಹಣವನ್ನು ... ಕೊಡತಕ್ಕವರು ... ಬ್ಯಾಂಕಿನ ... ದಿವಾಳಿಗೆ ... ವಾಯಿತೆಂಬುದನ್ನು ... ಬ್ಯಾಂಕಿನ ಈಗಿನ ರೀತಿಯನ್ನು ... ಬ್ಯಾಂಕಿನ ... ನ್ನು ಹೊರಗೆಡುಹಲು ಸಹಾಯವಾಗಬೇಕಾಗಿ ಬಿನ್ನಹ.

ಒಬ್ಬ

"ಠೇವುದಾರ"

ಹರಿಜನ ಜಗಳದಲ್ಲಿ ಒಬ್ಬನು ಸತ್ತನು

ಅಹಮ್ಮದಾಬಾದ ತಾ|| ೩— ... ಭಗಳದಲ್ಲಿ ... ಜನರಲ್ಲಿ ... ದಿವಸ ಜಗಳವೆದ್ದು, ಅವರಲ್ಲಿ ಒಬ್ಬನು ಸತ್ತಿರುತ್ತಾನೆ. ... ಮೂವರು ಹರಿಜನರನ್ನು ಸೆರೆಹಿಡಿದಿರುತ್ತಾರೆ. (ಅ ಪ್ರ)

ಮುಂಬಯಿಯಲ್ಲಿ ಕನ್ನಡ ದೈನಿಕ ಪತ್ರ

ಮುಂಬಯಿ ತಾ ೪— ಶ್ರೀ ಕೆ ಕೃಷ್ಣರಾವ ... ಈ ... ದಿವಸ ... ಟಿಂಗ್ ... "ನವಕರ್ನಾಟಕ" ಎಂಬ ಕನ್ನಡ ದೈನಿಕ ಪತ್ರಿಕೆಯು ಪ್ರಕಾಶಕರೂ ಮುದ್ರಕರೂ ಆಗಿರುವರೆಂದು "ಡಿಕ್ಲರೇಶನ್" ಮಾಡಿದರು. ಮೊದಲನೆ ಸಂಚಿಕೆಯು ತಾ|| ೧೧ ನೆ ದಿವಸ ಹೊರಡತಕ್ಕದ್ದಿದೆ.

ಮೈಸೂರ ಸಂಸ್ಥಾನದ ಸುದ್ದಿಗಳು

ಬೆಂಗಳೂರ ತಾ|| ೪ ಮೈಸೂರ ಸಂಸ್ಥಾನದ ಮುಸಲ್ಮಾನ ... ಮಂಡಳದವರ ಸಭೆಯು ... ದಲ್ಲಿ ... ಕಾರ್ಯಕ್ರಮಗಳನ್ನು ... ಈ ... ಮುಸಲ್ಮಾನ ಸ್ತ್ರೀಯರ ... ಅಂತ ... ನವರು ... ರನ್ನು ... ಅಭ್ಯಾಸಕ್ಕೆ ... ಆಗಿದ್ದಾರೆ.

ತಾ|| ೬ ... ರಾಜಸೇವಾಸಕ್ತ ರಾವಬಹಾದ್ದೂರ ... ಕೃಷ್ಣಸ್ವಾಮಿ ಅಯ್ಯಂಗಾರ ... ಸುಬ್ರಹ್ಮಣ್ಯ ... ಬಿ ಎ ಮೈಸೂರ ವಿಶ್ವವಿದ್ಯಾಲಯದ ... ರಜಿಸ್ಟ್ರಾರರು ಮತ್ತು ಬೆಂಗಳೂರ ... ಹೈಸ್ಕೂಲಿನ ...

ಮೈಸೂರ ತಾ|| ೩೦ ... ದಿವಸ ಬೆಂಗಳೂರ ... ಗೆ ... ಮಹಾರಾಜರಿಗೆ ಭೆಟ್ಟಿ ... ದರು ... ಅವರು ... ಅಧಿಕಾರಿಗಳು, ಇಂಜಿನಿಯರರು ... ಬಂದರು.

ಏಜಂಟರು ಬೇಕಾಗಿದ್ದಾರೆ

ಧಾರವಾಡದ ... ಕೊಡಲಾಗುವದು. ... ಪತ್ರವ್ಯವಹಾರ ಮಾಡಬೇಕು

—ವ್ಯವಸ್ಥಾಪಕ "ಕನ್ನಡಿಗ"

ಡಾ. ಕುಲಕರ್ಣೀಜ ಲೆಬೋರೇಟರಿ ಮುಂಬಯಿ ನಂಬರ ... ಬಾಟ್ಲಿ ಕಿಮ್ಮತ್ತು ೧—೨—೦ ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

... ಬಿಳೇಸರಗು, ಕೆಂಪು ... ತಿಂಗಳಿಗೊಮ್ಮೆ ಸರಿಯಾಗಿ ... ಹೊಟ್ಟೆಯನೋವು, ... ನಡನೋವು, ಅಶಕ್ತತಾ ವಗೈರೆ ವಿಕಾರ ... ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣ ವಾಗುತ್ತದೆ. ... ಮೇಲೆ ... ಕೊಳ್ಳಲು ಪ್ರಕೃತಿ ... ಸದೃಢ ಆಗುತ್ತದೆ.

ಬಿ ಟಿ. ಕೆರೂರ ಆ್ಯಂಡ ಸನ್ಸ್ ಮೆಡಿಕಲ್ ಸ್ಟೋರ್ಸ ಬಾಗಲಕೋಟೆ.

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆ

ಧಾರವಾಡ ತಾ|| ... | ಕೃಷ್ಣರಾವ ಅಂಕಲಿಗಿ ಮ್ಯಾನೇಜಿಂಗ ಡಾಯರೆಕ್ಟರ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ರವಿವಾರ ತಾ|| ೩-೯-೩೩ ನೇ ದಿವಸ ರಾತ್ರಿ

ಸತ್ಯಸಂಕಲ್ಪ.

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

ಸಂಘದೊಡೆಯರು.

ಗರೂಡ ಸದಾಶಿವರಾಯರು

ಈ ಪತ್ರಿಕೆಯನ್ನು ... ಗನಾಥ ಬಳವಂತ ... ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗನ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम्॥ मनु.

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

[೧೦] ಧಾರವಾಡ— ಮಂಗಳವಾರ ಭಾದ್ರಪದ ಬಹುಳ ೧ ಶಕೆ ೧೮೫೫ ತಾ|| ೫-೯-೩೩ [ಸಂಚಿಕೆ ೧೮೪

ಇನಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು

ಇನಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ.ಕಂ.ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಮಿದನಾಪುರದಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕೊಲೆ.

(ಅಸೋಸಿಯೇಟೆಡ್ ತಂತಿಯ ವಾರ್ತೆ ತಾ|| ೪)

...ನಾಪುರ ತಾ|| ೨— ಡಿಸ್ಟ್ರಿಕ್ಟ ಮ್ಯಾಜಿ...ದ ಮಿ. ಬಿ ಎ ಜೆ ಬರ್ಜ ಇವರು ...ನ ದಿವಸ ಪೋಲೀಸ ಕ್ಲಬ್ಬಿನ ಪುಟ್ ...ಮ್ಯಾಚ ನೋಡಲು ಹೋಗಿದ್ದಾಗ ೫ ...ಸುಮಾರಕ್ಕೆ ಅಲ್ಲಿ ಅವರ ಕೊಲೆಯಾ...

...ಪ್ರಾಣಾಂತಿಕ ಹಲ್ಲೆ ಮಾಡಿದವರು ...ರು ಇದ್ದರು ಯಾವತ್ತರೂ ಬಂಗಾಲಿ ...ದ್ದರು, ಈ ಮೂವರಲ್ಲಿ ಒಬ್ಬನು ಅಲ್ಲಿಂ...ಸತ್ತನು ಮತ್ತೊಬ್ಬನು ಭಯಂಕರ ...ಹೊಂದಿದನು ಮೂರನೆಯವನು ಸೆರೆ ...ಸಿಕ್ಕಿಬಿಟ್ಟನು.

...ಬರ್ಜ ಇವರು ಟಾವ್ರನ್ ಕ್ಲಬ್ಬಿನ ಪರ ...ಮುಸಲ್ಮಾನರ ವಿರುದ್ಧ ಪುಟಬಾಲ್ ...ಆಡಲು ೫ ಗಂಟೆಯ ಸುಮಾರಕ್ಕೆ ...ಸ ಲಾಯಿನಕ್ಕೆ ಹೋದರು. ಅವರು ...ದಿಂದ ಇಳಿದು ಕೆಲವು ಹೆಜ್ಜೆ ಮುಂದೆ ...ತ್ತಲೆ, ಅವರಿಗೆ ಗುಂಡುಗಳು ಬಂದು ... ಅವರು ತಕ್ಷಣವೇ ಸತ್ತರು.

...ಹೊಂದಿದ ಮನುಷ್ಯನನ್ನು ಪೋಲೀ...ಲಿನಲ್ಲಿ ಆಸ್ಪತ್ರಿಯಲ್ಲಿ ಇಟ್ಟಿರುತ್ತದೆ. ಅವನ ಮರಣೋನ್ಮುಖ ಜವಾಬನ್ನು ...ಹೊಂದಿರುತ್ತದೆ ಮ್ಯಾಚು ನೋಡಲು ...ಬರ್ಜ ಮತ್ತು ಇತರ ಅಧಿಕಾರಿಗಳಾದ ...ದಿದ್ದರು

...ಬರ್ಜ ಇವರ ಅಂಗರಕ್ಷಕರು ಆರೋಪಿ...ಲೆ ಗುಂಡು ಹಾರಿಸಿದರು ಒಬ್ಬನು ...ಮತ್ತು ಮತ್ತೊಬ್ಬನು ಗಾಯಹೊಂದಿ... ಗಾಯಹೊಂದಿದವನನ್ನು ಪೋಲೀಸರು ...ಯುತ್ತಲೆ ಅವನು ' ನನ್ನನ್ನಾದರೂ ಕೊಲ್ಲಿರಿ ಎಂದು ಚೀರಿದನು

...ಮಿದನಾಪುರ ತಾ|| ೩ – ಮಿ. ಬರ್ಜ ...ನ್ನು ಕೊಲೆ ಮಾಡಿದ್ದು ದ, ಭಯಂಕರ ...ಅತ್ಯಾಚಾರದಲ್ಲಿ ಒಂದಾಗಿದೆ ಕ್ರಾಂತಿ...ಹಾಡೇಸುಗಳಿನಲ್ಲಿ ಈ ವರೆಗೆ ಇಂತ ...ಚಾರಕ್ಕೆ ಕೈ ಹಾಕಿರಲಿಲ್ಲ

...ಬರ್ಜ ಇವರು ಟ ಫ್ರೆನ್ ಫುಟ್ ...ಕ್ಲಬ್ಬದ ಅಧ್ಯಕ್ಷರಿದ್ದರು ಅವರು ...ಬರುವಾಗ ತಮ್ಮ ಸಂಗಡ ಅಸಿಸ್ಟಂ...ಸ ಸುಪರಿಂಟೆಂಡೆಂಟ ಮಿ ಜೋನ್ಸ ...ಸಿವ್ಹಿಲ್ ಸರ್ಜನ್ ಮಿ ಲಿಂಟನ್ ಇವ...ರನ್ನು ಕರೆದುಕೊಂಡು ಬಂದಿದ್ದರು.

...ಆಟವು ಇನ್ನು ಮೇಲೆ ಸುರುವಾಗತಕ್ಕ ... ಆಷ್ಟರಲ್ಲಿ ಮೂವರು ಬಂಗಾಲಿ ತರು...ರು ಬರ್ಜರ ಸಮೀಪದಲ್ಲಿ ಬಂದು ಅವರ ... ಗುಂಡು ಹಾರಿಸಿದರು. ತಕ್ಷಣವೇ ...ರು ಮರಣ ಹೊಂದಿದರು ಅವರಿಗೆ ೬ ...ಗುಂಡಿನ ಗಾಯಗಳಾಗಿದ್ದವು,

ಮಿ. ಬರ್ಜ ಇವರ ಅಂಗರಕ್ಷಕರು ಕೂಡಲೆ ಹಲ್ಲೆಗಾರರ ಮೇಲೆ ಏರಿ ಹೋಗಿ ಗುಂಡು ಹಾರಿಸಿದರು ಒಬ್ಬನು ಸತ್ತನು ಒಬ್ಬನು ಗಾಯ ಹೊಂದಿದನು. ಮತ್ತು ಮತ್ತೊಬ್ಬನು ಸೆರೆಸಿಕ್ಕನು

ಪೋಲೀಸರು ಹಾಗು ಸೈನಿಕರು ಮುಖ್ಯ ಮುಖ್ಯ ಬೀದಿಗಳಲ್ಲಿ ಕಾವಲಿಗೆ ನಿಂತುಕೊಂಡಿದ್ದಾರೆ

ಮಿದನಾಪುರ ತಾ ೩ — ಕ್ರಾಂತಿಕಾರರ ಗುಂಡಿನ ಅತ್ಯಾಚಾರಕ್ಕೆ ಆಹುತಿಯಾದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಮಿ ಬಿ ಎ ಜೆ ಬರ್ಜ ಇವರನ್ನು ಈ ಹೊತ್ತಿನ ದಿವಸ ಸೈನಿಕ ಪದ್ಧತಿಗನುಸಾರ ವಾಗಿ ಹುಗಿಯಿತು (ಅ ಪ್ರ)

ಈ ಅತ್ಯಾಚಾರದ ಬಗ್ಗೆ ಈ ವರೆಗೆ ೬೦ ಜನರನ್ನು ಸೆರೆಹಿಡಿದಿರುತ್ತದೆ

ಅತ್ಯಾಚಾರಿಯು ಮರಣ ಹೊಂದಿದನು.

ಮಿದನಾಪುರ ತಾ ೩— ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಮಿ ಬರ್ಜ ಇವರನ್ನು ಕೊಲೆ ಮಾಡಿದವನೆಂದು ತಿಳಿಯಲ್ಪಟ್ಟ ಆರೋಪಿಯು ಆಸ್ಪತ್ರಿಯಲ್ಲಿ ಮರಣ ಹೊಂದಿದನು (ಅ ಪ್ರ)

ಕೋರ್ಟು ಕಚೇರಿಗಳಿಗೆ ಬಿಡುವು

ಕಲಕತ್ತಾ ತಾ ೩ — ಬಂಗಾಲದಲ್ಲಿಯ ಯಾವತ್ತೂ ಕೋರ್ಟು ಕಚೇರಿಗಳು ನಾಳಿನ ದಿವಸ ಎರಡು ಗಂಟೆಯ ವರೆಗೆ ಮುಚ್ಚಲ್ಪಡುವವು (ಅ ಪ್ರ)

ದೇಶೀದಾಸರು ಮುಲ್ತಾನಕ್ಕೆ

ಹೊಸ ದಿಲ್ಲಿ ತಾ| ೪— ದೇವೀದಾಸ ಗಾಂಧಿಯವರನ್ನು ನಿನ್ನಿನ ದಿವಸ ಮುಲ್ತಾನ ಜೇಲಿಗೆ ಕರೆದೊಯ್ದರು. ಅವರ ಕೈಯಲ್ಲೇನೂ ಬೇಡಿಗಳನ್ನು ತೊಡಿಸಿರಲಿಲ್ಲ. ಆದರೆ ಅವರ ಕಾವಲಿಗಾಗಿ ಓರ್ವ ಹೆಡ್ ಕಾನಸ್ಟೇಬಲ್ ಮತ್ತು ಇಬ್ಬರು ಸಿಪಾಯರು ಇದ್ದರು (ಅ ಪ್ರ)

ಅಸೆಂಬ್ಲಿಯಲ್ಲಿ ಮಿದನಾಪುರ ಅತ್ಯಾಚಾರ

ಸಿಮಲಾ ತಾ|| ೪— ಅಸೆಂಬ್ಲಿಯ ಸಭಾಸದರಲ್ಲಿ ಈ ಹೊತ್ತಿನ ದಿವಸ ಮಿದನಾಪುರ ಅತ್ಯಾಚಾರದ ಸಂಬಂಧವಾಗಿ ಸಾತುಕತೆಗಳು ನಡೆದಿದವು ಈ ಬಗ್ಗೆ ಎಫ್ ಈ ಜೇಮ್ಸ ಇವರು ಪ್ರಶ್ನೆ ಕೇಳುವವರಿರುವರೆಂದೂ ಆಗ ಯಾವತ್ತು ಸಾದ್ಯಂತ ಸಂಗತಿಗಳು ಹೊರಬೀಳುವವೆಂದು ತಿಳಿಯುತ್ತದೆ (ಅ ಪ್ರ)

ಅಸೆಂಬ್ಲಿಯಲ್ಲಿಯ ಪ್ರಶ್ನೋತ್ತರಗಳು

ಸಿಮಲಾ ತಾ|| ೪— ಅಸೆಂಬ್ಲಿಯಲ್ಲಿ ಪ್ರಶ್ನೋತ್ತರದ ಕಾಲಕ್ಕೆ ಸರ್ ಜೊಸೆಫ್ ಭೋರ ಇವರು ಸರದಾರ ಸಂತಸಿಂಗರ ಪ್ರಶ್ನೆಗೆ ಕೆಳಗಿನ ಉತ್ತರ ಕೊಟ್ಟರು

ಹಿಂದುಸ್ಥಾನದಲ್ಲಿ ಎಣ್ಣೆಯ ಧಾರಣೆಯನ್ನು ಹೆಚ್ಚಿಸಲೋಸುಗ ಎಣ್ಣೆಯ ಕಂಪನಿಗಳು ಬಂದಾಗಿದ್ದವು ಎಂಬುದು ಸರಕಾರದ ವಿಚಾರಣೆಯಲ್ಲೇನೂ ಕಂಡುಬಂದಿಲ್ಲ

ಸರ್ ಜೊಸೆಫ್ ಭೋರ ಇವರು ಮಿ|| ಮಹ್ಮದ ಅಹಮ್ಮದ ಇವರಿಗೆ ಉತ್ತರ ಕೊಟ್ಟದ್ದೇನೆಂದರೆ ಹಿಂದುಸ್ಥಾನಕ್ಕೆ ಬರುದ ಜಪಾನಿ ಶಿಷ್ಟಮಂಡಳವು ಜಪಾನ ಸರಕಾರದ ಪ್ರತಿನಿಧಿಯಾಗಿರುತ್ತದೆ ಆದ್ದರಿಂದ ಅವರು ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳೊಡನೆ ವಿಚಾರ ವಿನಿಮಯ ಮಾಡುವರು ಹಿಂದುಸ್ಥಾನ ಸರಕಾರದವರು ಈ ವಿಚಾರ ವಿನಿಮಯದ ಕಾಲದಲ್ಲಿ ಔದ್ಯೋಗಿಕ ವಿಷಯ, ವ್ಯಾಪಾರ ವಿಷಯ ಇವೇ ಮೊದಲಾದ ಯಾವತ್ತು ಹಿತಸಂಬಂಧಗಳನ್ನು ತಮ್ಮ ಮುಂದೆ ಇಟ್ಟುಕೊಳ್ಳುವವರಲ್ಲಿ ಸಂದೇಹವಿಲ್ಲ ಸರ್ ಫ್ರಾಂಕ ನಾಯ್ಸ ಇವರು ಕೂಲಿಕಾರರ ಹಿತಸಂಬಂಧವನ್ನು ನೋಡಿಕೊಳ್ಳುವರು (ಅ ಪ್ರ)

ರಾಜಕೀಯ ಕೈದಿಗಳನ್ನು ಅಂದಮಾನಕ್ಕೆ ಕಳಿಸಿದರು.

ಕಲಕತ್ತಾ ತಾ ೬— ಈ ಇಲಾಖೆಯ ಬೇರೆ ಬೇರೆ ಜೆಲ್ಲಿಗಳ ಕೆಲವು ರಾಜಕೀಯ ಕೈದಿಗಳ ಒಂದು ಗುಂಪನ್ನು ಈ ದಿವಸ ಅಂದಮಾನಕ್ಕೆ ಕೊಟ್ಟು ಕಳುಹಿದರು (ಅ ಪ್ರ)

ಅಸೆಂಬ್ಲಿಯಲ್ಲಿ ದೇವೀದಾಸರ ಬಗ್ಗೆ ಪ್ರಶ್ನೆ

ಸಿಮಲಾ ತಾ ೪ — ಅಸೆಂಬ್ಲಿಯಲ್ಲಿ ಈ ದಿವಸ ಶ್ರೀ ದೇವಿದಾಸ ಗಾಂಧಿಯವರ ಬಗ್ಗೆ ಸಭಾಸದರು ಪ್ರಶ್ನೆಗಳನ್ನು ಕೇಳಿದರು ಅವುಗಳಿಗೆ ಉತ್ತರ ಕೊಡುವಾಗ ಸರ್ ಹ್ಯಾರೀ ಹೇಗ ಇವರು ಹೇಳಿದುದೇನೆಂದರೆ— ಶ್ರೀ ದೇವಿದಾಸರು ದಿಲ್ಲಿಯ ಹೊರತು ಬೇರೆ ಯಾವದೇ ಸ್ಥಳದಲ್ಲಿ ನೆಲಸಿದ್ದರೆ ಸರಕಾರದವರೇನೂ ಅವರಿಗೆ ಡಿಸ್ಟರ್ಬ ಮಾಡುತ್ತಿರಲಿಲ್ಲ ಈಗಾದರೂ ಅವರು ದಿಲ್ಲಿಯನ್ನು ಬಿಟ್ಟು ಹೋಗುತ್ತಿದ್ದಲ್ಲಿ ಸರಕಾರದವರು ಅವರನ್ನು ಬಿಡುಗಡೆ ಮಾಡಲು ಸಿದ್ಧರಿರುವರು ಶ್ರೀ ದೇವೀದಾಸರು ಹಿಂದಕ್ಕೆ ದಿಲ್ಲಿಯಲ್ಲಿ ಕಾಯದೆಭಂಗ ಚಳವಳಿಯೊಡನೆ ಸಂಬಂಧವಿಟ್ಟದ್ದೇ ಇದಕ್ಕೆ ಕಾರಣವಾಗಿದೆ (ಅ ಪ್ರ)

ಧಾರವಾಡದ ಚಟುವಟಿಕೆಗಳು.

[ಈ ಕಾಲಮದಲ್ಲಿ ಸ್ಥಳೀಕ ಸಂಘಗಳ ಚಟುವಟಿಕೆಗಳನ್ನು ಮತ್ತು ಸಾರ್ವಜನಿಕ ಹಿತ ಸಂಬಂಧದ ಈ ಊರಿನ ಸುದ್ದಿಗಳನ್ನು ಕೊಡಬೇಕೆಂದು ಯೋಚಿಸಿದ್ದೇವೆ. ಕಾರಣ ಸ್ಥಳಿಕ ಸಂಘದವರು ಮತ್ತು ಸಾರ್ವಜನಿಕ ವಿಷಯಗಳಿಗೆ ಸಂಬಂಧಿಸಿದವರು ತಮ್ಮ ತಮ್ಮ ಸಂಘಗಳ ಚಟುವಟಿಕೆ ಮೊದಲಾದವುಗಳ ವೃತ್ತಾಂತವನ್ನು ದಯವಿಟ್ಟು ಕಳುಹಬೇಕಾಗಿ ಸೂಚನೆಯಿದೆ.]

—ಸಂಪಾದಕ

ಅಂಕೋಲೆಯ ಶ್ರೀ ದಿನಕರ ದೇಸಾಯಿ ಎಂ ಎ ಇವರು ಇಲ್ಲಿಗೆ ಬಂದಿರುವರು

ಬೆಂಗಳೂರಿನ ಶ್ರೀ ಅ ನ ಕೃಷ್ಣರಾಯರು ಈಹೊತ್ತಿನ ಬೆಳಗಿನ ಗಾಡಿಯಿಂದ ಗದಗಿಗೆ ಹೋದರು

ಕರ್ನಾಟಕ ಕಾಲೇಜದ ಕರ್ನಾಟಕ ಸಂಘದಲ್ಲಿ ಶ್ರೀ ಮಳಿಯೆ ಗೋವರ್ಧನರಾಯರು " ಸಾಹಿತ್ಯ ಮತ್ತು ಕನ್ನಡ ' ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು

ಲಲಿತ ಕಲಾದರ್ಶ ನಾಟಕ ಮಂಡಳಿಯ ಒಡೆಯರಾದ ಶ್ರೀ ಪೆಂಭಾರಕರರು ಕಳೆದ ವಾರದಲ್ಲಿ ಕನ್ನಡ ಅಮೇಚ್ಯೂರ ನಾಟ್ಯಸಂಘಕ್ಕೆ ಭೆಟ್ಟಿ ಕೊಟ್ಟು ಸಂತೋಷವನ್ನು ವ್ಯಕ್ತಪಡಿಸಿದರು

ಬೆಳ್ಳಿಯ ಕರಾರಿನ ಪ್ರಶ್ನೆ

ಸಿಮಲಾ ತಾ ೪— ಕೌನ್ಸಿಲ ಆಫ್ ಸ್ಟೇಟದಲ್ಲಿ ಬೆಳ್ಳಿಯ ಕರಾರಿನ ಪ್ರಶ್ನೆಗೆ ಉತ್ತರವೀಯುವಾಗ ಫಾಯನಾನ್ಸ ಸೆಕ್ರೆಟರಿ ಮಿ ಟೇಲರ ಇವರು ಹೇಳಿದುದೇನೆಂದರೆ— ಮಾರಾಟಕ್ಕಾಗಿ ತೆಗೆದಿಟ್ಟ ಬೆಳ್ಳಿಯಲ್ಲಿ ಅಂತರಿಕ ಮಾರಾಟವೂ ಕೂಡಿತ್ತು ಆದರೆ ಖಾಸಗಿ ಮಾರಾಟವು ಮಾತ್ರ ಕೂಡಿರಲಿಲ್ಲ ಹಿಂದುಸ್ಥಾನ ಸರಕಾರದವರು ದೇಶದಲ್ಲಿ ಗೊತ್ತು ಮಾಡಿದ್ದರಕ್ಕಿಂತ ಹೆಚ್ಚಿನ ಬೆಳ್ಳಿಯನ್ನು ಮಾರಲು ಶಕ್ತರಾಗಲಿಲ್ಲ (ಅ ಪ್ರ)

ಸಿಮಲಾ ತಾ ೩— ಕೌನ್ಸಿಲ ಆಫ್ ಸ್ಟೇಟದ ಸಭಾಸದರಾದ ಜಿ ಎ ನಟೇಶನ್ ಇವರು ಉಕ್ಕಿನ ಉದ್ಯೋಗದ ಸ್ಥಿತಿಗತಿಯ ಬಗ್ಗೆ ವಿಚಾರ ಮಾಡಲು ನಿಯಮಿಸಲ್ಪಟ್ಟಿರುವ ಜಕಾತಿ ಮಂಡಳಕ್ಕೆ ಸಭಾಸದರಾಗಿ ಆರಿಸಲ್ಪಟ್ಟಿದ್ದಾರೆ (ಅ ಪ್ರ)

ಕೊನೆಯ ಬಚ್ಚು

ಹೊಂಗೋಲ

ಕರ್ನಾಟಕ ಕೆಮಿಕಲ್ ವರ್ಕ್ಸ, ಬಳ್ಳಾರಿ.

ಕಚ್ರ್ಯ

ಶುಸ್ತ್ರಶದ ಪಂತ ಕ್ರಿಮಿಶ ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಿಯೂ, ಒಸಡೆಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವದು. 'ಹೆಮ್ಮುಗುಲು" ವಸಡೆಗಳ ರಕ್ತಸ್ರಾವ ಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮುಗಲಿನ ತತ್ವವು "ಕಚ್ರ್ಯ" ದಂತ ಮಂಜನದಲ್ಲಿ [illegible] ... "ಕಚ್ರ್ಯ" ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆದ್ದು ಮಾರುಗೆದೆ" ಎಂಬ ನಾಣ್ಣುಡಿಯಂತೆ ನಡೆದು ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹಳೆಯದಾದ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದ
ಹೆಚ್ಚಿನ ಅಭಿಮಾನಕ್ಕೆ ಪಾತ್ರವಾಗಿರುವ

ಶ್ರೀ ಗೌರೀಶಂಕರ ಕಂಪನಿ. ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ॥ ೧೬-೭-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀಕಾಶೀ ರಾಮೇಶ್ವರ ಸಮುದ್ರದಾಟ ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೀಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಅಶ್ವಯುಜ ಶು॥ ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ॥೨	೧೯ ಲಖನೌ ೨೪	೩೭ ಕುಂಭಕೋಣಂ ೧೫
೨ ನಾಶಿಕ ೩-೪	೨೦ ಅಯೋಧ್ಯೆ ೨೫	೩೮ ರಾಮೇಶ್ವರ ೧೬-೧೭
೩ ಮುಂಬಯಿ ೫-೬-೭	೨೧ ಅಲ್ಲಾಬಾದ ,,	೩೯ ಧನುಷ್ಕೋಟಿ [ಹಡಗದಿಂದ] ೧೮
೪ ಸೋಮನಾಥ (ಹಡಗದಿಂದ) ೮ ೯	೨೨ ಪ್ರಯಾಗ ೨೬-೨೭	೪೦ ಕೊಲಂಬೊ [ಹಡಗದಿಂದ] ೧೯-೨೦-೨೧
೫ ವೇರಾವಳ ,,	೨೩ ಕಾಶಿ ೨೮-೨೯-೩೦-೩೧ ನವೆಂಬರ ತಾ॥೧	೪೧ ಕ್ಯಾಂಡಿ [ಲಂಕಾ] ೨೨
೬ ದ್ವಾರಕಾ (ಹೈಸೇರ್ಥ) ೧೦-೧೧	೨೪ ಸಾರನಾಥ ,,	೪೨ ಕಲಾಯಿಮುನಾ [ಲಂಕಾ] ೨೩
೭ ಅಯೋಧ್ಯಾ (ಹೈಸೇರ್ಥ) ೧೨-೧೩	೨೫ ಗಯಾ ೨	೪೩ ಧನುಷ್ಕೋಟಿ [ಹಡಗದಿಂದ] ,,
೮ ಅಹಮ್ಮದಾಬಾದ ೧೪	೨೬ ರಾಜಗಿರಿ ತೀರ್ಥ (ಹೈಸೇರ್ಥ) ೩	೪೪ ಮದುರೆ ೨೬
೯ ಅಬುರೋಡು ,,	೨೭ ಗಿರಿ ,,	೪೫ ತಿರುಚಿನಾಪಳ್ಳಿ ೨೫
೧೦ ಅಜ್ಮೀರ ೧೫	೨೮ ಸಮ್ಮೇತ ಶಿಖರ (ಹೈಸೇರ್ಥ) ೪	೪೬ ಶ್ರೀರಂಗ ,,
೧೧ ಜಯಪುರ ೧೬	೨೯ ಕಲಕತ್ತಾ ೫-೬-೭	೪೭ ಚಿಂಗಲಪೇಟ ೨೬
೧೨ ಆಗ್ರಾ ೧೭	೩೦ ಜಗನ್ನಾಥ ಪುರಿ ೮	೪೮ ಮೈಸೂರ ೨೭-೨೮
೧೩ ಮಥುರಾ ೧೮-೧೯	೩೧ ಪಿಠಾಪುರ ೯	
೧೪ ಗೋಕುಲ ,,	೩೨ ರಾಜಮಹೇಂದ್ರಿ ೧೦	
೧೫ ವೃಂದಾವನ ,,	೩೩ ಬೆಜವಾಡ ೧೧	
೧೬ ಗೋವರ್ಧನ ,,	೩೪ ಮದ್ರಾಸ ೧೨-೧೩	
೧೭ ದಿಲ್ಲಿ ೨೦-೨೧	೩೫ ಶಿವಕಂಚಿ ೧೪	
೧೮ ಹರಿದ್ವಾರ ೨೨-೨೩	೩೬ ವಿಷ್ಣುಕಂಚಿ ,,	

ಈ ಎಲ್ಲ ಮಹಾಯಾತ್ರೆಗಳನ್ನು ಮುಗಿಸಿಕೊಂಡು ನವೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು॥ ೧೩ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡಕ್ಲಾಸ ೩೦೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ, ಥರ್ಡಕ್ಲಾಸಿನವರು ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸಕ್ಕೆ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಶಿವದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ವಿವರಕ್ಕೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿ ಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು. ಆ ಕಾರಣ ಟಿಕೇಟುಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ ಏಜಂಟರುಗಳು— [illegible]

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬುಳ್ಳಸೇಟರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ. ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು. ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ. ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ಬರುತ್ತವೆ. ನೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಡಿಮ್ಮೆ ಕ್ರಯಕ್ಕೆ ದೊರೆಯುವದಲ್ಲದೆ, ನಮ್ಮ ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು.

ವಳಗುಡ್ ಹೈದರಾಬಾದ (ಡೆಕ್ಕನ್) — ಬಿ ಜಿ. ಚಿಮ್ಮಲಗಿ

ಭುವನೇಶ್ವರಿ ಭಾಂಡಾರ.

ಬೈಲಹೊಂಗಲದಲ್ಲಿ ಎಲ್ಲ ಬಗೆಯ ಬಟ್ಟೆ, ಔಷಧ, ಸುಗಂಧಿ ಸಾಮಾನು, ಸ್ಟೇಶನರಿ ಹಾಗೂ ರೈತರಿಗೆ ಬೇಕಾಗುವ ಒಕ್ಕಲತನದ ಎಲ್ಲ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ವತನದಾರ ಕಾಟಾ.

ಬೈಲಹೊಂಗಲದಲ್ಲಿ ದಲಾಲಿಯ ಅಡಿ ಹತ್ತಿ, ಶೇಂಗಾ ಮುಂತಾದ ಯಾವದೇ ಜಿನಸುಗಳನ್ನು ಮಾರಬೇಕಾದರೆ ನಮ್ಮಲ್ಲಿ ಬನ್ನಿ. ದರ, ಗೋದಾಮು, ನೀರು ಇಳಿಯುವ ಸ್ಥಳ ಮೊದಲಾದ ಎಲ್ಲ ಸೌಕರ್ಯಗಳೂ ಇವೆ

ಗೋಪಾಳರಾವ ಕುಲಕರ್ಣಿ ಬೈಲಹೊಂಗಲ.

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು ೨೯—೯—೧೯೩೩

ನ್ಯಾಯಿಸರಾಯರ ಹುರುಳಿಲ್ಲದ ಹರಟೆ.

ಹಿಂದಿನ ನಾಟಕಗಳಲ್ಲಿ ... ನ ಮಂತ್ರಿಯನ್ನು ರಾಜ್ಯಸಭಾದಲ್ಲಿ ಹೀಗೆ ನಡೆದಿದೆ ಎಂದು ಹೇಳುವುದನ್ನು, ಆದರೆ ಮಂತ್ರಿಯು ಆತನಿಂದ ಅದು ಅತ್ಯಸ್ಪಷ್ಟವಾಗಿ ನಡೆವುದೆಂದೇ ಯಾವಾಗಲೂ ಉತ್ತರಕೊಡುವುದನ್ನು ಅನೇಕರು ನೋಡಿರಬಹುದು. ಸಾಮ್ಯವಾಗಿ ಅದೇ ಹಾಗೆಯೇ ನೋಟವು ನಮ್ಮ ... ಯ ದೇಶದಲ್ಲಿ ಈಗಿನ ಕಾಲ ಸ್ಪಷ್ಟವಾಗಿ ನೋಡಲು ಸಿಗುತ್ತದೆ. ... ಯಾದವರೂ ಕೂಡಿದಾಗ ಪ್ರತಿಸಲ ... ಸರಾಯರು ಬಹುಶಃ ಇದೇ ತರಹದ ಭಾಷಣವನ್ನು ಮಾಡುತ್ತಾರೆ. ಅಂದಿನವರೆಗಿನ ಆಡಳಿತದಲ್ಲಿ ಪ್ರಜೆಗಳ ಹಿತದ ಬಗ್ಗೆ ತಾವು ಹೇಗೆ ಪ್ರಯತ್ನಿಸಿದರೆಂಬುದನ್ನು ಅವರು ... ತ್ತಾರೆ. ಇಂಥ ಭಾಷಣದಲ್ಲಿ ... ಪೌರುಷವೇ ಹೆಚ್ಚಾಗಿರುತ್ತದೆ.

ಮೊನ್ನೆ ಇದೇ ತರಹದ ಒಂದು ಭಾಷಣವನ್ನು ನಮ್ಮ ನ್ಯಾಯಿಸರಾಯ ಸಾಹೇಬರು ಕಾಮಂಡಲದಲ್ಲಿ ಮಾಡಿದ್ದಾರೆ. ಅದಕ್ಕೆ ಹುರುಳಿಲ್ಲದ ಹರಟೆಯೆನ್ನಬಹುದು. ಈ ಸಲ ... ಅವರು ಅತಿಶಯವಾಗಿ ಉದ್ದವಾದ ಭಾಷಣವನ್ನು ಮಾಡಲಿಲ್ಲ. ಸರಹದ್ದಿನ ಸರಕಾರದವರು ಕಟಕಾಯಿ ಎಂಬ ಗ್ರಾಮದ ಮೇಲೆ ವಿಮಾನದಿಂದ ಬಾಂಬುಗಳನ್ನು ... ದುದರ ಸಮರ್ಥನೆ, ಜಪಾನದೊಡನೆ ಈ ದೇಶವು ಮಾಡಿಕೊಂಡ ವ್ಯಾಪಾರಸಂಧಿ ಈ ಅಕ್ಟೋಬರದಿಂದ ಮುರಿದು ಬಿಡಬೇಕೆಂದು ನಿರ್ಣಯಿಸಿದುದರ ಕಾರಣ, ಆರ್ಥಿಕ ... ಸುಧಾರಿಸುತ್ತ ನಡೆದುದರ ವಿವೇಚನ, ರಿಝರ್ವ ಬ್ಯಾಂಕಿನ ಸ್ಥಾಪನೆಯ ಯೋಜನೆ ... ದೆಭಂಗ ಚಳವಳಿಯನ್ನು ಮುರಿಬಡಿದುದರ ಪೌರುಷ, ಎಷ್ಟು ಮತ್ತು ಸಿಂಧ ಪ್ರಾಂತ ... ಣದ ಪೂರ್ವಸಿದ್ಧತೆ ಇವೇ ಮುಂತಾದ ವಿಷಯಗಳು ಅದರಲ್ಲಿ ಇವೆ.

ಸರಹದ್ದಿನಲ್ಲಿ ಬಾಂಬು ಹಾರಿಸಿದ್ದಕ್ಕಾಗಿ ಇಡೀ ಜಗತ್ತೇ ಈ ಸರಕಾರಕ್ಕೆ ದೋಷಕೊಡುತ್ತಿದೆ. ಈ ಸರಕಾರವು ತನ್ನ ಸಲುವಾಗಿ ಈ ಬಾಂಬು ಹಾರಿಸಲಿಲ್ಲ. ಅಫಗಾನಿಸ್ಥಾನದ ಸರಕಾರದ ವಿರುದ್ಧ ಎದ್ದ ಕೆಲವು ಬಂಡುಗಾರರು ಒಂದು ಹಳ್ಳಿಯಲ್ಲಿ ಅಡಗಿಕೊಂಡರು. ಉಳಿದ ... ಅವರು ಏನು ಮಾಡಿದರೂ ಸಿಕ್ಕುವಂತೆ ಇಲ್ಲವಂತೆ? ಅದಕ್ಕೋಸ್ಕರ ವಿಮಾನ ಒಂದು ಹಳ್ಳಿಯ ಮೇಲೆ ಬಾಂಬು ಹಾರಿಸಿದರಂತೆ! ಆದರೆ ತಾವು ಅದನ್ನು ಎಷ್ಟು ಯುಕ್ತಿಯಿಂದ ಹಾರಿಸಿದರೆಂದರೆ, ಅದರಿಂದ ಯಾರೂ ಸಾಯಲಿಲ್ಲವಂತೆ! ಮನೆಮಾರುಗಳು ಮಾತ್ರ ಧ್ವಸ್ತವಾಗಿ ಹೋದವಂತೆ! ಅಲ್ಲದೆ ಹೀಗೆ ಬಂಡುಗಾರರ ಮೇಲಷ್ಟೇ ಅಲ್ಲ ಇಡೀ ಗ್ರಾಮದ ಮೇಲೆಯೇ ಬಾಂಬು ಹಾರಿಸುವುದು ಯುದ್ಧನೀತಿಗೆ ವಿರುದ್ಧವಿಲ್ಲವಂತೆ! ಇದು ನ್ಯಾಯಿಸರಾಯರ ಸಮರ್ಥನದ ಸಾರಾಂಶ. ಇದರಿಂದ ಈ ಸರಕಾರದ ವಿಷಯವಾಗಿ ಮತ್ತಿಷ್ಟು ಕೆಟ್ಟ ಅಭಿಪ್ರಾಯವಾಗುವ ಸಂಭವವಿಲ್ಲವೆ? ಜಪಾನದ ವ್ಯಾಪಾರಸ್ಥರೂ ವಿಲಾಯತಿಯ ವ್ಯಾಪಾರಿಗಳೂ ಇಲ್ಲಿಯ ವ್ಯಾಪಾರಸ್ಥರೊಡನೆ ಮಾತುಕಥೆಗಳನ್ನಾಡಲು ಇಲ್ಲಿಗೆ ಬರಲಿಕ್ಕೆ ಹೊರಟಿರುವರು. ಆಗ ಏನು ನಿಷ್ಕರ್ಷೆಯಾಗುವದೋ ನೋಡುವ. ಆರ್ಥಿಕ ಸ್ಥಿತಿಯು ಸುಧಾರಿಸುತ್ತದೆಯೋ ಇಲ್ಲವೋ ಎಂಬುದು ... ಅಂಕಿಗಳಿಂದ ನಿರ್ಣಯಿಸಲಿಕ್ಕೆ ಬರಲಾರದು. ಪ್ರಜೆಗಳು ಸುಖಿಗಳಾಗಿರುವರೋ ಇಲ್ಲವೋ ಎಂಬುದರ ಮೇಲಿಂದ ಅದನ್ನು ನಿರ್ಣಯಿಸಬೇಕಾಗುತ್ತದೆ. ಇಲ್ಲದಿದ್ದರೆ ಪ್ರಜೆಗಳಿಂದ ಒತ್ತಾಯದಿಂದ ವಸೂಲಮಾಡಿ ಸರಕಾರವು ಶ್ರೀಮಂತವಾದರೆ ಅದು ನಿಜವಾದ ಶ್ರೀಮಂತಿಕೆಯ ಲಕ್ಷಣವಲ್ಲ. ಪ್ರಜೆಗಳು ಈಗ ಹೆಚ್ಚಿಗೆ ಸುಖಿಗಳಾಗಿರುವರೆಂದು ಸರಕಾರವು ಎದೆತಟ್ಟಿ ಹೇಳಲಾಪದೋ? ... ಬ್ಯಾಂಕಿನಿಂದ ನಮಗೆ ಲಾಭವಾಗುವದೋ ಇಲ್ಲವೋ ಎಂಬುದು ಇನ್ನೂ ಸಂಶಯಾಸ್ಪದವಾದ ವಿಷಯ. ... ಅದರ ಘಟನೆಯ ಮೇಲೆ ಅವಲಂಬಿಸಿದೆ. ಕಾಯಿದೆಭಂಗ ಚಳವಳಿಯನ್ನು ಸರಕಾರವು ಹೀಗೆ ನಿಗ್ರಹಿಸಿತೆಂಬುದು ಜಗಜ್ಜಾಹೀರವೇ ಇದೆ. ಸಾರಾಂಶ, ... ಸರಾಯರ ಭಾಷಣದಲ್ಲಿ ... ಮೇಲೆ ಅತಿಶಯವಾಗಿ ಬಿದ್ದ ಕರದ ಭಾರವನ್ನು ಕಡಿಮೆ ಮಾಡುವವರಿದ್ದ ... ವಿಷಯವೂ, ಪ್ರಜಾಹಿತದ ಬಗ್ಗೆ ಯಾವ ವಿಷಯವೂ ಒಂದೂ ಇಲ್ಲ. ಆದ ... ದರಿಂದಲೇ ನಾವು ಅದಕ್ಕೆ ಹುರುಳಿಲ್ಲದ ಹರಟೆಯೆಂದೆನ್ನುವುದು.

ಕಿರಿನುಡಿಗಳು.

ಈಗ ಎಲ್ಲೆಲ್ಲಿಯೂ ಕನ್ನಡಿಗರಲ್ಲಿ ಪುನಃ ಚೈತನ್ಯವು ತಲೆದೋರುತ್ತಿರುವುದು ಸುಚಿಹ್ನ. ವಿಶೇಷತಃ ಕರ್ನಾಟಕದ ಹೊರಗಿರುವವರು ವಿಶೇಷ ಚಟುವಟಿಕೆಯನ್ನು ತೋರುವರು. ಲಖನೌದಲ್ಲಿ ಕನ್ನಡಿಗರು ಬಹು ವರ್ಷಗಳಿಂದ ತಮ್ಮದೊಂದು ಸಂಘವನ್ನು ನಡೆಯಿಸುವುದು ತಿಳಿದ ವಿಷಯವೇ. ಆಗ ಮುಂಬಯಿ ಪಟ್ಟಣದಲ್ಲಿ ಕನ್ನಡಿಗರ ಸಂಖ್ಯೆ ಸುಮಾರು ೩೫ ಸಾವಿರ ಇರುವದಂತೆ. ಆದರೆ ಇಷ್ಟು ಜನರಿದ್ದರೂ ಅವರೆಲ್ಲರನ್ನೂ ಒತ್ತಟ್ಟಿಗೆ ಕಲೆ ಹಾಕುವ ಸಂಘವಿದ್ದಿಲ್ಲ. ಮುಂದೆ ಹೋದ ಮೈಸೂರಿನವರೇನೋ ಮಾತುಂಗದಲ್ಲಿ ತಮ್ಮ ಒಕ್ಕಲನ್ನು ಬೆಳೆಸಿಕೊಂಡರು. ವ್ಯವಸ್ಥಿತವಾಗಿ ಇದರ ... ಇತ್ತ ಮಂಗಳೂರಿನವರೂ ಅವರಂತೆಯೇ ಜಾಗ್ರತಿಯನ್ನು ತೋರಿಸಿದರು. ಹೋದ ಚಳವಳಿಯಲ್ಲಿ ಮುಂಬಯಿಯಲ್ಲಿಯ ಕನ್ನಡಿಗರು ತಮ್ಮ ಸ್ವಾರ್ಥತ್ಯಾಗದಿಂದ ಹೆಸರುವಾಸಿಗಳಾದರು. ಆದರೂ ಮೈಸೂರು ಮಂಗಳೂರು ಮುಂತಾದ ಭೇದಭಾವವಿಲ್ಲದೆ ಕೇವಲ ಕನ್ನಡಿಗರೆಂಬುದೊಂದೇ ಅಭಿಮಾನದಿಂದ ಹೊರಟ ಸಂಸ್ಥೆಗಳಿರಲಿಲ್ಲ. ಹಿಂದಕ್ಕೆ ಕರ್ನಾಟಕ ಸಂಘವೇನೋ ಅನೇಕ ವರ್ಷಗಳವರೆಗೆ ಹೀಗೆ ಕನ್ನಡಿಗರ ಸಂಘಟನವನ್ನು ಮಾಡುವುದಕ್ಕೆ ಪ್ರಯತ್ನಿಸಿತು. ಆದರೆ ಆಗ ಇನ್ನೂ ಕಾಲವು ಅನುಕೂಲವಿದ್ದಿಲ್ಲ. ಈಗ ಆ ಸ್ಥಿತಿಯು ಬದಲಾಗಿದೆ. ಆದುದರಿಂದಲೇ ಈಗಿನ ಮುಂಬಯಿ ಕರ್ನಾಟಕ ಸಂಘವು ಈ ಏಕೀಕರಣವನ್ನು ಹೊಸ ಹುರುಪಿನಿಂದ ಮಾಡತೊಡಗಿದೆ. ಕನ್ನಡಿಗರ ಸಲುವಾಗಿ ಹೈಸ್ಕೂಲು ತೆರೆಯಿತು ... ಗರುಡ ಸದಾಶಿವರಾಯರು ತಮ್ಮ ಕಂಪನಿಯನ್ನು ಮುಂಬಯಿಗೆ ಒಯ್ದು ಕನ್ನಡಿಗರಲ್ಲಿ ಜಾಗೃತಿಯನ್ನುಂಟುಮಾಡಿರುವರು. ... ಮುಂಬಯಿಯ ... ಕಲ್ಯಾಣದಲ್ಲಿ ಹೊಸದಾಗಿ ಕರ್ನಾಟಕ ಸಂಘವು ಹುಟ್ಟಿತು. ಅಲ್ಲದೆ "ನವಕರ್ನಾಟಕ" ವೆಂಬ ದಿನಪತ್ರಿಕೆಯೂ ಇದೇ ತಿಂಗಳಲ್ಲಿ ಪ್ರಾರಂಭವಾಗಹುದು. ಮದ್ರಾಸಿನಲ್ಲಿ ಮುಂಬಯಿಗಿಂತಲೂ ಕನ್ನಡಿಗರು ಹೆಚ್ಚಿರಹುದು. ಅಲ್ಲಿಯೂ ತೀವ್ರವೇ ಜಾಗ್ರತಿಯುಂಟಾಗುವುದೆಂದು ನಂಬಿದ್ದೇನೆ. ಕರ್ನಾಟಕದ ಹೊರಗೂ ಕರ್ನಾಟಕದ ಒಳಗೂ ಹೊರಟಿರುವ ವಿವಿಧ ಸಂಘಗಳನ್ನು ಒತ್ತಟ್ಟಿಗೆ ಸೂಂಡು ಮಾಡುವುದು ಅವಶ್ಯವಿದೆ. ಆದಕಾರಣ, ಅವರೆಲ್ಲರೂ ನಮಗೆ ಮಾಹಿತಿಯನ್ನು ಕಳಿಸಿದರೆ ನಾವು ಅವುಗಳನ್ನು ನೋಂದು ಮಾಡಿಡುವ ವ್ಯವಸ್ಥೆ ಮಾಡುವೆವು.

ಬೇಗಮ್ ಶಹಾನವಾಜರ ಆಶಾವಾದ

ಮುಂಬಯಿ ತಾ॥ ೨— ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯು ಈ ಹೊತ್ತು ಸಂಜೆಯಲ್ಲಿ ತಾಜಮಹಾಲ ಹೊಟೆಲಿಗೆ ಹೋಗಿ ಬೇಗಮ್ ಶಹಾ ನವಾಜ ಇವರ ಭೆಟ್ಟಿ ತೆಗೆದುಕೊಂಡನು. ಆಗ ಅವರು ಹೇಳುವದೇನಂದರೆ— ಮಹಾತ್ಮಾ ಗಾಂಧಿಯವರು ಶೀಘ್ರದಲ್ಲಿ ಉದಾರ ಮತವಾದಿ ಮುಖಂಡರನ್ನು ಮತ್ತು ಜಾಯಿಂಟ ಕಮಿಟಿಯ ಪ್ರತಿನಿಧಿಗಳನ್ನು ಕಾಣುವವರಿದ್ದಾರೆಂಬುದು ಆನಂದದ ಸಂಗತಿಯಾಗಿದೆ. ಇಂತಹ ಸಂತೋಷದಾಯಕ ವಾರ್ತೆಯನ್ನು ನಾನು ಬಹುದಿವಸಗಳಿಂದ ಕೇಳಿರಲೇ ಇಲ್ಲ. ಸರ ತೇಜಬಹಾದ್ದೂರ ಸಪ್ರೂ, ನಾ॥ ಶ್ರೀನಿವಾಸ ಶಾಸ್ತ್ರಿ, ಸರ. ಸಿ. ಪಿ. ರಾಮಸ್ವಾಮಿ ಅಯ್ಯರ ಮೊದಲಾದ ದೇಶಭಕ್ತರು ಯೋಗ್ಯವಾದ ಸಲಹೆ ಕೊಟ್ಟು ಮಹಾತ್ಮರವ ನವೊಲಿಸುವರೆಂದು ನಮಗೆ ಆಶೆಯುಂಟು. (ಅ. ಪ್ರೆ.)

ಬೇಗಮ್‌ಶಹಾ ನವಾಜರು ನ್ಯಾಯಿಸರಾಯರನ್ನು ಕಾಣುವರು

ಮುಂಬಯಿ ತಾ॥ ೨— ಬೇಗಮ್‌ಶಹಾ ನವಾಜರು ಇಲ್ಲಿಂದ ನೇರವಾಗಿ ಸಿಮ್ಲಾಕ್ಕೆ ಹೋಗಿ ನ್ಯಾಯಿಸರಾಯರನ್ನು ಕಾಣುವವರಿದ್ದಾರೆ. ಅವರು ನ್ಯಾಯಿಸರಾಯರೊಡನೆ ಸದ್ಯದ ರಾಜಕೀಯ ಪ್ರಶ್ನೆಗಳ ವಿಷಯವಾಗಿ ವಿಚಾರ ವಿನಿಮಯ ಮಾಡುವರು. ಅವರು ನ್ಯಾಯಿಸರಾಯರ ಕೂಡ ದೇಶದಲ್ಲಿಯ ಸರ್ವಸಾಧಾರಣ ಪರಿಸ್ಥಿತಿಯ ವಿಷಯವಾಗಿ ಚರ್ಚೆಮಾಡಿ, ಕಾಂಗ್ರೆಸದೊಡನೆ ಸಹಕಾರ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುವರು; ಯಾಕೆಂದರೆ ನವಯುಗವು ಪ್ರಾರಂಭವಾಗಬೇಕಾದರೆ ದೇಶದಲ್ಲಿ ಶಾಂತತೆಯು ಮತ್ತು ಎಲ್ಲ ಪಕ್ಷದವರ ಸಹಕಾರವು ಅವಶ್ಯವಿದೆಯೆಂದು ಅವರಿಗೆ ತೋರಬಹುದಾಗಿದೆ. ಅವರು ನ್ಯಾಯಿಸರಾಯರೊಡನೆ, ಪ್ರಾಂತಿಕ ಸರಕಾರದವರು ಜಾಯಿಂಟ ಕಮಿಟಿಯವರ ಮುಂದೆ ವಿಚಾರಕ್ಕಾಗಿ ಮಂಡಿಸಿದ್ದ ಆಡಳಿತೆಯ ಕೆಲವೊಂದು ಕಠಿಣ ಪ್ರಶ್ನೆಗಳ ವಿಷಯವಾಗಿಯು ವಿಚಾರ ವಿನಿಮಯ ಮಾಡುವರು. ಬೇಗಮ್‌ಶಹಾ ನವಾಜರು ಜಾಯಿಂಟ ಕಮಿಟಿಯ ಮುಂದಿನ ಅಧಿವೇಶನಕ್ಕೆ ಹೋಗುವರೋ ಇಲ್ಲವೋ ಎಂಬುದು ಹೇಳಲು ಬರುವಂತಿಲ್ಲ. ಅವರು ಈ ವಿಷಯವಾಗಿ ಇನ್ನೂ ಏನೂ ನಿರ್ಧಾರ ಮಾಡಿರುವದಿಲ್ಲ. (ಅ. ಪ್ರೆ.)

ಮಿದನಾಪುರ ಅತ್ಯಾಚಾರದ ಬಗ್ಗೆ ಮಹಾತ್ಮರ ಅಭಿಪ್ರಾಯ

ಪುಣೆ ತಾ॥ ೩— ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯು ಮಹಾತ್ಮರನ್ನು ಕಂಡು ಮಿದನಾಪುರದಲ್ಲಿ ನಡೆದಿನ ಅತ್ಯಾಚಾರದ ವಿಷಯವಾಗಿ ಅವರ ಅಭಿಪ್ರಾಯವನ್ನು ವಿಚಾರಿಸಿದನು. ಆಗ ಮಹಾತ್ಮರು ಹೇಳಿದುದೇನಂದರೆ—

ರಾಜಕೀಯ ಹಕ್ಕುಗಳನ್ನಾಗಲಿ, ರಾಜಕೀಯ ಸ್ವಾತಂತ್ರ್ಯವನ್ನಾಗಲಿ ದೊರಕಿಸಲು ಹಿಂಸೆಯು ಉಪಯೋಗದ್ದಲ್ಲವೆಂದು ನನ್ನ ಮನಸ್ಸಿಗೆ ಎಂದೋ ಖಾತ್ರಿಯಾಗಿದೆ. ಅಹಿಂಸಾಮಾರ್ಗದಲ್ಲಿಯೇ ನನ್ನ ಸಂಪೂರ್ಣ ವಿಶ್ವಾಸವಿದೆಯೆಂದು ಪುನಃ ಸಾರಿ ಹೇಳುವದೇನು ಅವಶ್ಯಕತೇರವದಿಲ್ಲ. ಆದ್ದರಿಂದ ನಾನು ಇಲ್ಲಿ ಮಿದನಪುರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕೊಲೆಯ ವಿಷಯವಾಗಿ ತಿರಸ್ಕಾರವನ್ನು ವ್ಯಕ್ತಪಡಿಸದೆ ಇರಲಾರೆ. ಮತ್ತು ಹೀಗೆ ತಿರಸ್ಕಾರ ವ್ಯಕ್ತಪಡಿಸುವ ಮುಂದೆ ನನಗೆ ವಿಷಾದವೂ ಆಗುತ್ತದೆ, ಯಾಕೆಂದರೆ ಆಳರಸರು ಈ ಕೊಲೆಗಳ ಕಾರಣವನ್ನು ಹುಡುಕಿ ಹಿಡಿದು ಅವುಗಳನ್ನು ಪರಿಹರಿಸಲು ಯತ್ನಿಸದೆ, ಅವುಗಳನ್ನು ಹತ್ತಿಕ್ಕಲು ದಬ್ಬಾಳಿಕೆಯ ಉಪಾಯಗಳನ್ನು ಅವಲಂಬಿಸುತ್ತಿರುವರು. ಹೀಗೆ ದಬ್ಬಾಳಿಕೆಯಿಂದ ಆಳುವದೆಂದರೆ, ಆರ್ಡಿನನ್ಸ ರಾಜ್ಯವೇ ಎಂಬುದರಲ್ಲಿ ಸಂದೇಹವಿಲ್ಲ. (ಅ. ಪ್ರೆ.)

ಅಲ್ಲಲ್ಲಿಯ ಸುದ್ದಿಗಳು.

ಮದ್ರಾಸ ತಾ॥ ೧— ತ್ರಿನೆಲ್ಲೂರ ಸ್ಟೇಶನ ಸಮೀಪದಲ್ಲಿ ಮುಂಬಯಿ ಎಕ್ಸ್‌ಪ್ರೆಸ್ ಆಗಿ ಬಂಡಿಯ ಸರಪಳಿಯನ್ನು ಜಗ್ಗಿ ಗಾಡಿಯನ್ನು ನಿಲ್ಲಿಸಿ ಕಾಂಗ್ರೆಸ್ ಪತ್ರಿಕೆಗಳನ್ನು ಹಂಚಿದ್ದಕ್ಕೋಸುಗ ತಾ॥ ೨೦ ನೇ ದಿವಸ ಟಿ. ಸಿ. ರತ್ನವೇಲು ಎಂಬ ಓರ್ವ ಕಾಂಗ್ರೆಸ್ ಕೆಲಸಗಾರನನ್ನು ಸೆರೆ ಹಿಡಿದಿದ್ದರು. ಸಬ್. ಡಿವಿಜನಲ್ ಮ್ಯಾಜಿಸ್ಟ್ರೇಟರ ಮುಂದೆ ಅವರ ಖಟ್ಲೆಯ ವಿಚಾರಣೆಯಾಗಿ ಅವರಿಗೆ ೬ ತಿಂಗಳ ಕಠಿಣ ಶಿಕ್ಷೆಯಾಯಿತು.

ನಿನ್ನಿನ ದಿವಸ ತ್ರಿಚಿ ಜೇಲಿನಿಂದ ೩೩ ರಾಜಕೀಯ ಕೈದಿಗಳು ಬಿಡುಗಡೆ ಹೊಂದಿರುವರೆಂದು ಸುದ್ದಿ ಬಂದಿದೆ. ಈ ೩೩ ಜನರಲ್ಲಿ ಮೂವರು ತಮ್ಮ ಶಿಕ್ಷೆಯ ಅವಧಿಕಿಂತ ೬ ತಿಂಗಳ ಮೊದಲು ಮತ್ತು ಒಬ್ಬನು ಒಂದು ವರ್ಷ ಮೊದಲು ಬಿಡುಗಡೆ ಹೊಂದಿರುವರು.

ನಡಿಯಾದ ತಾ॥ ೧ — ವೀಣಾದಲ್ಲಿಯ ಹಿಂದೂ ಜನರು ಅಲ್ಲಿಯ ಅಸ್ಪೃಶ್ಯರ ಮೇಲೆ ಬಹಿಷ್ಕಾರವನ್ನು ಹಿಂತೆಗೆದುಕೊಂಡಿರುವರು.

ಕೊಡಗು ಪ್ರಾಂತದಲ್ಲಿಯ ನಾರಾಯಣರಾಯ ಎಂಬ ಓರ್ವ ಕಾಂಗ್ರೆಸ್ ಸ್ವಯಂಸೇವಕನು ಅಲ್ಲಿಯ ಪೋಲೀಸ ಇನಸ್ಪೆಕ್ಟರರಿಗೆ ವೀರರಾಜಪೇಟೆಯಲ್ಲಿ ತಾನು ಸಭೆ ಜರುಗಿಸುವೆನೆಂದು ಮುಂಗಡ ತಿಳಿಸಿದ್ದನು. ಪೋಲೀಸರು ಸಭೆಯ ವರದಲ್ಲಿ ಆತನನ್ನು ಸೆರೆ ಹಿಡಿದರು.

ಜಪಾನಿ ನೂಲಿನ ಶಿಷ್ಟಮಂಡಳದವರು ತಾರೀಖು ೧೬ ನೇ ದಿವಸ ಮುಂಬಯಿಗೆ ಬಂದಿಳಿಯತಕ್ಕವರಿದ್ದಾರೆ. ಲ್ಯಾಂಕೆಶಾಯರ ಶಿಷ್ಟಮಂಡಳದವರು ತಾ॥ ೧೩ ನೇ ದಿವಸ ಬರತಕ್ಕವರಿದ್ದಾರೆ.

ದಕ್ಷಿಣ ಅಮೇರಿಕೆಯ ದಾಸ್ಯವಿಮೋಚಕ ಸಾಯಮನ್ ಬೋಲಿವ್ಹರರು.

ಅಮೇರಿಕಾ ಖಂಡದ ದಕ್ಷಿಣ ಭಾಗದಲ್ಲೆಲ್ಲ ಕಳೆದ ಸೋಮವಾರ ದಿವಸ, ದಾಸ್ಯವಿಮೋಚಕ ಸಾಯಮನ್ ಬೊಲಿವ್ಹರ ಇವರ ೧೫೦ ನೆ ಪುಣ್ಯತಿಥಿಯು ಆಚರಿಸಲ್ಪಟ್ಟಿತು. ಈ ಸಾಯಮನ್ ಬೋಲಿವ್ಹರ ಇವರು ತಮ್ಮ ಜೀವಿತ ಕಾಲದ ೪೭ ವರ್ಷದ ಅವಧಿಯಲ್ಲಿ ಸ್ಪ್ಯಾನಿಶ ಸರಕಾರದೊಡನೆ ಧೈರ್ಯದಿಂದ ಹೋರಾಡಿ ದಕ್ಷಿಣ ಅಮೇರಿಕೆಯನ್ನು ಅವರ ದಾಸ್ಯದಿಂದ ಮುಕ್ತ ಮಾಡಿದರು.

ತಮ್ಮ ತಾರುಣ್ಯದಲ್ಲಿ ಸಾಯಮನ ಬೊಲಿವ್ಹರ ಇವರು ಒಂದು ದಿವಸ, ಜರ್ಮನಿಯ ಪ್ರಸಿದ್ಧ ಶಾಸ್ತ್ರಜ್ಞರಾದ ಅಲೆಕ್ಝಾಂಡರ ವ್ಹಾನ್ ಹಂಬೊಲ್ಟ ಇವರಿಗೆ ಭೆಟ್ಟಿಯಾದರು ಮತ್ತು "ದಕ್ಷಿಣ ಅಮೇರಿಕೆಯು ಸ್ಪೇನದ ದಾಸ್ಯದಿಂದ ಬಿಡುಗಡೆ ಹೊಂದುವ ಪಕ್ವಕಾಲವು ಇನ್ನೂ ಬಂದಿರುವದಿಲ್ಲವೋ" ಎಂದು ಅವರಿಗೆ ಪ್ರಶ್ನೆ ಮಾಡಿದರು. ಹಂಬೋಲ್ಟ ಇವರು "ಬಂದಿದೆ" ಎಂದು ಉತ್ತರ ಕೊಟ್ಟರು. ಹಾಗಾದರೆ "ದಕ್ಷಿಣ ಅಮೇರಿಕೆಯನ್ನು ಸ್ಪೇನದ ದಾಸ್ಯದಿಂದ ಹೊರಗೆ ತೆಗೆಯುವ ಮಹಾತ್ಮರಾರೂ ಸ್ಪೇನದಲ್ಲಿ ಇಲ್ಲವೇ" ಎಂದು ಬೊಲಿವ್ಹರರು ತಿರುಗಿ ಪ್ರಶ್ನೆ ಮಾಡಿದರು. ಹಂಬೋಲ್ಟರು "ಯಾರೂ ಇಲ್ಲ"-ವೆಂದು ಉತ್ತರ ಕೊಟ್ಟರು.

ವ್ಹಾನ್ ಹಂಬೋಲ್ಟರೊಡನೆ ತಾವು ನಡಿಸಿದ ಈ ಸಂಭಾಷಣೆಯು ಬೋಲಿವ್ಹರ ಇವರ ಮನಸಿನಲ್ಲಿ ಯಾವಾಗಲೂ ಕುಟಿಯುತ್ತಿತ್ತು. ಅವರು ತಮ್ಮ ೨೨ನೆ ವರ್ಷದಲ್ಲಿ ರೋಮ ಪಟ್ಟಣದ ಒಂದು ಗುಡ್ಡದ ಮೇಲೆ ನಿಂತುಕೊಂಡು "ದಕ್ಷಿಣ ಅಮೇರಿಕೆಯನ್ನು ಸ್ಪೇನದ ದಾಸ್ಯದಿಂದ ವಿಮೋಚನ ಮಾಡದ ಹೊರತು ಸುಮ್ಮನೆ ಕೂಡತಕ್ಕವನಲ್ಲವೆಂದು ಮತ್ತು ಅದಾಗದ ಹೊರತು ತಮ್ಮ ಆತ್ಮಕ್ಕೆ ಶಾಂತಿಯಿಲ್ಲವೆಂದೂ ಈಶ ಸಾಕ್ಷಿಯಾಗಿ ಪ್ರತಿಜ್ಞೆ ಮಾಡಿದರು. ಮತ್ತು ಅಂದಿನಿಂದ ಸ್ವಾತಂತ್ರ್ಯ ಚಳವಳಿಯನ್ನು ಭರದಿಂದ ಸಾಗಿಸಿ, ದಕ್ಷಿಣ ಅಮೇರಿಕೆಯನ್ನು ಸ್ಪೇನದ ದಾಸ್ಯದಿಂದ ಬಿಡುಗಡೆಮಾಡಿ, ತಮ್ಮ ೪೭ ವಯಸ್ಸಿನಲ್ಲಿ ಯಾವತ್ತರನ್ನು ದುಃಖಸಾಗರದಲ್ಲಿ ಮುಳುಗಿಸಿ ಜಗತ್ತಿನೊಳಗಿಂದ ಕಣ್ಮರೆಯಾದರು.

ಬೊಲಿವ್ಹರ ಇವರು ತಮ್ಮ ೨೨ ನೆ ವಯಸ್ಸಿನಲ್ಲಿ ಮೇಲಿನಂತೆ ಪ್ರತಿಜ್ಞೆ ಮಾಡಿದಾಗ ಹಿಪ್ಪೋ ಜನರು "ಈ ತರುಣನಿಂದೇನಾಗುವದು ಸುಳ್ಳೇ ಸಾಹಸದ ಕೆಲಸಕ್ಕೆ ಕೈಹಾಕ್ಯಾನೆ" ಎಂದು ಅಪಹಾಸ್ಯ ಮಾಡಿದರು. ಆದರೆ ಈಗ ನೋಡಿರಿ! ದಕ್ಷಿಣ ಅಮೇರಿಕೆಯಲ್ಲಿ ಎಲ್ಲೆಲ್ಲಿಯೂ ಅವನ ಸ್ಮಾರಕಗಳು ಅವನು ಮಾಡಿದ ಮಹತ್ಕಾರ್ಯವನ್ನು ಜಗತ್ತಿಗೆಲ್ಲ ಸಾರುತ್ತಲಿವೆ.

ಅಕ್ಷರಗಳಿಲ್ಲದ ವೃತ್ತಪತ್ರ.

ಬೆಲ್‌ಗ್ರಾಡ — ಇಲ್ಲಿ ಹೊಸದೊಂದು ಸಾಪ್ತಾಹಿಕ ವರ್ತಮಾನ ಪತ್ರವು ಹೊರಟಿದೆ. ಆದರೆ ಈ ವರ್ತಮಾನ ಪತ್ರದಲ್ಲಿ ಒಂದಾದರೂ ಅಕ್ಷರ ಇರುವದಿಲ್ಲ. ಅದರಲ್ಲಿ ಕೆಲವು ವ್ಯಂಗ್ಯ ಚಿತ್ರಗಳು ಮಾತ್ರ ಇರುತ್ತವೆ. ಉಳಿದ ಪುಟಗಳೆಲ್ಲ ಬರಿದಾಗಿರುತ್ತವೆ.

ಅಧಿಕಾರಿಗಳು ಕಳೆದ ವಾರದಲ್ಲಿ ಒಂದು ಕಟ್ಟಳೆಯನ್ನು ಹೊರಡಿಸಿದ್ದಾರೆ. ಈ ಕಟ್ಟಳೆಯು [illegible] ವರ್ತಮಾನ ಪತ್ರಕಾರರು ತಮ್ಮ ತಮ್ಮ ವರ್ತಮಾನ ಪತ್ರದ ಪ್ರೂಫುಗಳನ್ನು ವರ್ತಮಾನ ಪತ್ರವು ಅಚ್ಚಿಗೆ ಹೋಗುವದಕ್ಕಿಂತ ಮೊದಲು ತಮ್ಮ ಅಧಿಕಾರಿಗಳಿಗೆ ಒಪ್ಪಿಸಬೇಕು. ಎಂದು ಉಲ್ಲೇಖಿಸಿದ್ದಾರೆ.

ನಿರೋದ್ಯೋಗಿತನವನ್ನು ಕಳೆಯುವ ಉಪಾಯ

ಬೂಟು ತಯಾರ ಮಾಡುವ ಶಿಕ್ಷಣ

ಕಲ್ಕತ್ತಾ ತಾ|| ೨— ಮಧ್ಯಮ ವರ್ಗದಲ್ಲಿಯ ನಿರುದ್ಯೋಗಿತನವನ್ನು ಹೋಗಲಾಡಿಸುವ ಉದ್ದೇಶದಿಂದ ಬಂಗಾಲ ಸರಕಾರದ ಔದ್ಯೋಗಿಕ ಖಾತೆಯವರು ಒಂದು ಯೋಜನೆಯನು ತಯ್ಯಾರ ಮಾಡಿದ್ದಾರೆ. ಈ ಯೋಜನೆಗನುಸಾರವಾಗಿ ಅವರು ಕಾರ್ಪೋರೇಶನ್ ಬೀದಿಯಲ್ಲಿ "ಬೂಟು, ಮೊಚ್ಚೆ, ಚಪ್ಪಲಿ" ಮೊದಲಾದವುಗಳನ್ನು ತಯಾರ ಮಾಡುವ ಶಿಕ್ಷಣ ಕೊಡುವ ಒಂದು ಶಾಲೆಯನ್ನು ತೆಗೆದಿದ್ದಾರೆ. ಈ ಶಾಲೆಯ ಶಿಕ್ಷಣ ಅವಧಿಯು ೬ ತಿಂಗಳದ್ದಿರುತ್ತದೆ.

ನಿರುದ್ಯೋಗಿತನವು ಹೇಗೆ ಹೋಗುವದು?

ಕಲಕತ್ತಾ ತಾ|| ೨— ಕಳೆದವಾರದಲ್ಲಿ ನಿರೋದ್ಯೋಗಿ ತರುಣರ ಪರಿಷತ್ತು ಸೇರಿತ್ತು. ಪರಿಷತ್ತಿನ ಅಧ್ಯಕ್ಷರಾದ ಮಿ|| ಖೈತಾನ ಇವರು ತಮ್ಮ ಭಾಷಣದಲ್ಲಿ ಹೇಳಿದ ದೇನಂದರೆ—

ಕಲಕತ್ತೆಯ ಹಿಂದೀ ವ್ಯಾಪಾರಿ ಸಂಘದವರು ಬಂಗಾಲದಲ್ಲಿ ೮೦ ಲಕ್ಷ ನಿರುದ್ಯೋಗಿಗಳಿರುವರೆಂದು ಪ್ರಸಿದ್ಧ ಮಾಡಿದ್ದಾರೆ. ಈ ೮೦ ಲಕ್ಷ ಜನರಲ್ಲಿ ಸುಶಿಕ್ಷಿತ ನಿರುದ್ಯೋಗಿಗಳು ಏನಿಲ್ಲೆಂದರೂ ೧ ಲಕ್ಷ ಇರುವರೆಂದು ಗೊತ್ತಾಗುತ್ತದೆ. ಈ ನಿರುದ್ಯೋಗಿತನವನ್ನು ಹೋಗಲಾಡಿಸಲು ಕಾಣುವ ಶಕ್ಯ ಉಪಾಯವೆಂದರೆ ಧಾನ್ಯ ಹಾಗು ಇತರ ಕಚ್ಚಾ ಸರಕುಗಳ ಬೆಲೆಯನ್ನು ಈಗಿನ ೨ ಪಟ್ಟು ಹೆಚ್ಚಿಸಬೇಕು. ಈ ಯೋಜನೆಯನ್ನು ಬಳಕೆಯಲ್ಲಿ ತಂದ ಹೊರತು ನಿರುದ್ಯೋಗಿತನವು ಇಲ್ಲದಂತಾಗಲಾರದು. ಇದು ಸಾಧ್ಯವಾಗಬೇಕಾದರೆ ಹುಂಡಿಯ ದರವು ೧೮ ಪೆನ್ಸಿನಿಂದ ೯ ಪೆನ್ಸಿಗೆ ಬರಬೇಕು. ಆಗಲೆ ವ್ಯಾಪಾರವು ಬೆಳೆದು ಎಷ್ಟೋ ಜನರಿಗೆ ಕೆಲಸ ಸಿಗುವದು. ಇದರ ಜೊತೆಗೆ ಕೈಗಾರಿಕೆಯ ಉದ್ಯೋಗಗಳನ್ನಾದರೂ ಪ್ರಾರಂಭ ಮಾಡಬೇಕು.

ಕಲ್ಟೂರರ ಮನೆಯಲ್ಲಿ ದರೋಡೆ

ಪುಣೆ ತಾ ೨— ಕೆಲವು ದರೋಡೆಗಾರರು ಈ ಹೊತ್ತಿನ ದಿವಸ ಬೆಳಗು ಮುಂಜಾನೆ ಇಲ್ಲಿಯ ವೆಸ್ಲಿ ಬೀದಿಯಲ್ಲಿ ಕುಲಾಬಾ ಕಲೆಕ್ಟರರಾದ ಸಯ್ಯದ ಅಮೀನ ಉದ್ದೀನ ಇವರ ಮನೆಯನ್ನು ದರೋಡೆ ಮಾಡಿ, ೨೦೦೦ ರುಪಾಯಿ ಬೆಲೆಯ ವಸ್ತುಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ.

ಚೀನ ಜಪಾನ ಯುದ್ಧದಲ್ಲಿ ೬೦೦ ಜನರು ಸತ್ತರು.

ಚಿಂಚೌ ತಾ ೨— ಚೀನಿ ಜನರು ಶಿಮೋನಚಾಯ ಎಂಬ ಪಟ್ಟಣದ ಮೇಲೆ ಹಲ್ಲೆ ಮಾಡಿದರು. ಈ ಕಾರಣ ಚೀನಿ ಸ್ವಯಂಸೇವಕರು ಮತ್ತು ಜಪಾನಿ ಸೈನ್ಯದವರಲ್ಲಿ ಯುದ್ಧವು ಸುರುವಾಯಿತು. ಯುದ್ಧದಲ್ಲಿ ೬೦೦ ಚೀನಿ ಜನರು ಮರಣ ಹೊಂದಿದರು.

೬೦ ವರ್ಷದ ಹಿಂದೆ ನಟ್ಟ ಸೂಜಿ

ಲಾ ಬೂಟಾ ಕೋಕರಡೊ, ಅಮೇರಿಕಾ — ೬೦ ವರ್ಷದ ಹಿಂದೆ ಮಿಸೆಸ್ ಮೇರಿ ಕ್ಲೇಅರ ಎಂಬವಳ ಕಾಲಲ್ಲಿ ಒಂದು ಸೂಜಿಯು ನಟ್ಟಿತ್ತು. ಅದು ಈ ದಿವಸ ಹೊರಗೆ ಬಂತು.

ನಿರುದ್ಯೋಗಿತನವು ಹಿಂದುಸ್ಥಾನ ಸರಕಾರದ್ದಲ್ಲ

ಸಿಮಲಾ ತಾ ೨—ಅಸೆಂಬ್ಲಿಯಲ್ಲಿ ಪ್ರಶ್ನೋತ್ತರದ ಕಾಲಕ್ಕೆ ಸರ್ ಫ್ರಾಂಕ ನಾಯಿಸ ಇವರು, ನಿರುದ್ಯೋಗಿತನದ ಪ್ರಶ್ನೆಯು ಪ್ರಾಂತಿಕ ಸರಕಾರಕ್ಕೆ ಸಂಬಂಧಿಸಿದ್ದು, ಹಿಂದುಸ್ಥಾನ ಸರಕಾರದ್ದಲ್ಲವೆಂದು ಉತ್ತರ ಕೊಟ್ಟರು.

ಏಜಂಟರು ಬೇಕಾಗಿದ್ದಾರೆ

ಧಾರವಾಡ ಕಮೀಶನ ಕೊಡಲಾಗುವದು. ಅಪೇಕ್ಷೆಯುಳ್ಳವರು ಪತ್ರವ್ಯವಹಾರ ಮಾಡಬೇಕು

—ವ್ಯವಸ್ಥಾಪಕ "ಕನ್ನಡಿಗ"

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ|| ೨೫-೮-೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಡಾ ಜಿ ಬಿ ಯಮ

ಸುಗಂಧ ನಶ್ಯದ ಪುಡಿ

ಲೋಕ ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ [illegible] ಉಪಯೋಗಿಸಿ [illegible] ಪತ್ರಗಳನ್ನು ಕೊಟ್ಟಿರುವರು. ಪ್ರತ್ಯಕ್ಷವಾಗಿ ಈ ನಶ್ಯದ ಪುಡಿಯಿಂದ ಗುಣವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆಶೂಲೆ, ತಲೆಯ [illegible] ರೋಗಗಳು ಕಣ್ಣುಗಳಲ್ಲಿ [illegible] ಗಳು ಸರ್ವ ವ್ಯಾಧಿಗಳು [illegible] ದೋಷದಿಂದ ಆದ ವ್ಯಾಧಿಗಳು ಪರಿಹಾರವಾಗುವದಲ್ಲದೆ, [illegible] ವ್ಯಾಧಿಗಳ ನಷ್ಟ [illegible] ಜ್ಞಾನ ಶಕ್ತಿಯನ್ನು ಹೆಚ್ಚು ಮಾಡುತ್ತದೆ. [illegible] ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು [illegible] ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ [illegible] ಉಪಯೋಗಿಸುತ್ತಾರೆ. ಮಾದರಿ ಸೀಸೆ [illegible] ಬಿಡಿ ಸೀಸೆ [illegible] ೪ ಆಣೆ, ಪೋ. ಖ. ೪ ಆಣೆ ಡಜನ್ ಒಂದಕ್ಕೆ ೨—೮—೦ ವ್ಹಿ. ಪಿ. ಚಾರ್ಜ ೮ ಆಣೆ

ಏಜಂಟರು— ಗುರುಬಸವ ಅಂಡ್ ಕಂಪನಿ, ಲಿಮಿಟೆಡ್

ಪೋ. ಬಾ. ೫೧೦ [illegible] ಮದರಾಸು.

[illegible]

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಮಂಗಳವಾರ ತಾ|| ೫-೯-೩೩ ನೇ ದಿವಸ ರಾತ್ರಿ

ಸಂಪೂರ್ಣ ರಾಮಾಯಣ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

- ಸಂಘದೊಡೆಯರು

ಗರೂಡ ಸದಾಶಿವರಾಯರು

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ಬಿ. ೨೭೮೮

यपत् परवश दुःख । यद्यदात्मवशं सुखम्॥

ಇನಸ್ಯೂರನ್ಸ
ನಿಮ್ಮ ಇಳಿಸಲು
ಯುನಾಯಿಟೆಡ
ಇನಸ್ಯೂರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೇವೆ ವ ಆತ್ಮೋದ್ಧಾರಕಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ಪುಸ್ತಕ ೧೦] ಧಾರವಾಡ— ಬುಧವಾರ ಭಾದ್ರಪದ ಬಹುಳ ೨ ಶಕೆ ೧೮೫೨ ತಾ॥ ೬-೯-೩೦ [ಸಂಚಿಕೆ ೧೭೩

ಫ್ರೀಪ್ರೆಸ್ಸದ ೧೦೦೦೦ ರು. ಜಪ್ತಾದವು.

— ೩ ನೆ ಪುಟ ನೋಡಿರಿ

ಪಂಡಿತ ಜವಾಹಿರರು ಮಹಾತ್ಮರನ್ನು ಕಾಣುವರು.

ಲಖನೌ ತಾ॥ ೪— ಪಂಡಿತ ಜವಾಹಿರಲಾಲರು ನಾಳಿನ ದಿವಸ ಲಖನೌಕ್ಕೆ ಹೋಗುವರು. ಅಲ್ಲಿ ಸ್ವಲ್ಪ ದಿವಸ ನಿಂತು ಅವರು ಮಹಾತ್ಮರನ್ನು ಕಾಣಲು ಹೋಗುವರೆಂದು ಗೊತ್ತಾಗುತ್ತದೆ. ಅವರು ಲಖನೌದಲ್ಲಿ ಪಂಡಿತ ಮಾಲವೀಯರೊಡನೆಯೂ ವಿಚಾರ ವಿನಿಮಯ ಮಾಡಬಹುದೆಂದು ತೋರುತ್ತವೆ (ಅ ಪ್ರೆ)

ಜವಾಹಿರರ ಭಾವೀ ಧೋರಣ ಮಹಾತ್ಮರ ನಿರ್ಣಯದಂತೆ ನಡೆದುಕೊಳ್ಳುವರು

ಲಖನೌ ತಾ॥ ೪— ಪಂಡಿತ ಜವಾಹಿರಲಾಲರು ಕಾಂಗ್ರೆಸ ಕೆಲಸಗಾರರೊಡನೆ ವಿಚಾರ ವಿನಿಮಯ ಮಾಡಿದರು. ಅವರು ಈ ವಿಚಾರ ವಿನಿಮಯ ಕಾಲದಲ್ಲಿ ಭಾವೀ ರಾಜಕೀಯ ಧೋರಣೆಯ ವಿಷಯದಲ್ಲಿ ಮಹಾತ್ಮಾ ಗಾಂಧಿಯವರ ನಿರ್ಣಯದಂತೆಯೇ ನಡೆದುಕೊಳ್ಳುವೆನೆಂದು ಹೇಳಿದರೆಂದು ಸುದ್ದಿ ಬಂದಿದೆ (ಅ ಪ್ರೆ)

ಉಕ್ಕಿನ ಉದ್ಯೋಗದ ವಿಚಾರಣೆ

ಸಿಮಲಾ ತಾ॥ ೪— ಉಕ್ಕಿನ ಉದ್ಯೋಗದ ಬಗ್ಗೆ ವಿಚಾರಣೆ ಮಾಡಲು ನಿಯಮಿಸಿದ ಮಂಡಳಕ್ಕೆ ಮಿ॥ ಮದಾಯಿ ಇವರು ಅಧ್ಯಕ್ಷರಾಗಿಯೂ ಮಿ॥ ವಾಯಿಲ್ಸ ಮತ್ತು ...ಟೇಶನ್ ಇವರು ಸಭಾಸದರಾಗಿಯೂ ನಿಯಮಿಸಲ್ಪಡುವರೆಂದು ಅಸೆಂಬ್ಲಿ ಸಭಾಸದರು ನುಡಿದ ಮಾತು ಕತೆಗಳಿಂದ ಗೊತ್ತಾಗುತ್ತದೆ (ಅ ಪ್ರೆ)

ವಿಮಾನದ ಅಪಘಾತ

ಸಿಮಲಾ ತಾ॥ ೪— ಇಂಡಿಯನ್ ಏರ ಫೋರ್ಸ ...ದ ಮೊದಲನೆ ಸ್ಕ್ವಾಡ್ರನಿಗೆ ಸಂಬಂಧಿಸಿದ ... ಹಿಂದೀ ಅಧಿಕಾರಿಗಳು ಈ ... ವಿಮಾನದೊಳಗೆ ಕುಳಿತು ... ಅವರು ಏರಿ ಹೋಗುವಷ್ಟರಲ್ಲಿ ಅದೇ ಸ್ಕ್ವಾಡ್ರನ್ನಿನ ಮೂರು ಯಂತ್ರಗಳಿಗೆ ತಾಕಿದ್ದರಿಂದ ಅಪಘಾತವಾಯಿತು. ಈ ಅಧಿಕಾರಿಗಳು ... ಅಧಿಕಾರಿಗಳಲ್ಲಿ ಇಬ್ಬರಾಗಿದ್ದರು ... ಇಬ್ಬರು ಸತ್ತಿದ್ದರಿಂದ ಉಳಿದವರು ಆಯೋಗ ... ಕಂಡು ಬಂದರು ಮತ್ತು ವಿಮಾನ ಸರ್ವೀರ್ಸ ಡಿಪಾರ್ಟಮೆಂಟಿಗೆ ತಂದಿತು ... ಇಬ್ಬರು ಸತ್ತಕಾರಣ ಹಿಂದಿ ನೈಮಾನಿಕ ... ಉತ್ತೀರ್ಣ ಹೊಂದಿದ ಹಿಂದಿ ವೈಮಾನಿಕರ ಸಂಖ್ಯೆಯು ಮೂರಕ್ಕೆ ಇಳಿದಂತಾಯಿತು ... ಹೊಂದಿದವರೊಬ್ಬರೂ ಸೀಖರಿದ್ದರು. (ಅ ಪ್ರೆ)

ರೇಲ್ವೆದವರ ನೋಟೆರು

ರೇಲ್ವೆದವರು ಸರಕಾರದ ಸಮ್ಮತಿಯಿಂದ ತಮ್ಮ ನೋಟುಗಳನ್ನಿಡಬಹುದೆಂಬ ಕಾಯದೆಯು ದಿಲ್ಲಿಯ ಕಾಯದೆ ಮಂಡಲದಲ್ಲಿ ಮಂಜೂರಾಯಿತು

'ಪ್ರಬೋಧ'ಕ್ಕೆ ೬೦೦೦ ರೂ ಹೊಣೆ

ಮುಂಬಯಿ ಸರಕಾರದವರು ಈ ಹೊತ್ತಿನ ದಿವಸ ಮುದ್ರಣ ಕಾಯದೆಯ ಅನ್ವಯ, ಇಲ್ಲಿಯ 'ಪ್ರಬೋಧ'ವೆಂಬ ಗುಜರಾಥಿ ವಾಂಪತ್ರಿಕೆಯ ಮುದ್ರಕ ಹಾಗು ಪ್ರಕಾಶಕರ ಮೇಲೆ ಸಿ ಆಯ್. ಡಿ ದ್ವಾರಾ ನೋಟೀಸು ಪ್ರಯೋಗಿಸಿದರು ಈ ನೋಟೀಸದಲ್ಲಿ ಪತ್ರಿಕೆಯಲ್ಲಿ ಆಕ್ಷೇಪಾರ್ಹವಾದ ವಿಷಯವು ಬಂದಿದೆಯಾದ ಕಾರಣ ೬೦೦೦ ರೂ ಹೊಣೆ ಇಡಬೇಕೆಂದು ಕೇಳಿರುತ್ತದೆ (ಅ ಪ್ರೆ)

ಮುಂಬಯಿಯಲ್ಲಿ ಸ್ತ್ರೀಯರಿಗೆ ಶಿಕ್ಷೆ

ಮುಂಬಯಿ ತಾ॥ ೫— ಪರದೇಶಿ ಅರಿವೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ್ದಕ್ಕೋಸುಗ ನಿನ್ನಿನ ದಿವಸ ಇಬ್ಬರು ಸ್ತ್ರೀಯರನ್ನು ಸೆರೆ ಹಿಡಿದಿತ್ತು. ಅವರ ಖಟ್ಲೆಯ ವಿಚಾರಣೆಯು ಈ ಹೊತ್ತಿನ ದಿವಸ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ನಡೆದು, ಅವರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಕೈದು, ೫೦ ರೂಪಾಯಿ ದಂಡ ಇಲ್ಲವೆ ೬ ವಾರ ಕೈದು ಹೀಗೆ ಶಿಕ್ಷೆಯಾಯಿತು (ಅ ಪ್ರೆ)

ಅಸೆಂಬ್ಲಿಯಲ್ಲಿ ಸರಹದ್ದ ಬಾಂಬಿನ ಚರ್ಚೆ.

ಸಿಮಲಾ ತಾ॥— ನವೌಲವಿ ಶಾಫಿ ದಾವುದಿ ಇವರು ಅಸೆಂಬ್ಲಿಯಲ್ಲಿ ಸರಹದ್ದ ಪ್ರಾಂತದಲ್ಲಿಯ ಬಾಂಬಿನ ಸುರಿಮಳೆಯ ವಿಷಯವಾಗಿ ನಿಲುವಳಿಯ ಸೂಚನೆ ತಂದಿದ್ದರು ಈ ಸೂಚನೆಯ ಮೇಲೆ ಈ ಹೊತ್ತು ದೀರ್ಘ ಚರ್ಚೆ ನಡೆಯಿತು. ಲೋಕಪಕ್ಷದ ಅನೇಕ ಜನ ಸಭಾಸದರು ಸರಕಾರದ ಧೋರಣವನ್ನು ತೀವ್ರ ತರವಾಗಿ ನಿಷೇಧಿಸಿ, ಅನೇಕ ತರದ ಪ್ರಶ್ನೆಗಳನ್ನು ಮಾಡಿದರು. ಒಬ್ಬರು ಇಂತಹ ನಿರ್ದಯವಾದ ಕೃತ್ಯವನ್ನು ಯಾವ ಕಾಯಿದೆಗನುಸಾರವಾಗಿ ಮಾಡಿತು ಎಂದು ಕೇಳಿದರು. ಮತ್ತೊಬ್ಬರು ಯುರೋಪಿಯನ್ನರು ಅಪರಾಧಿಗಳಿದ್ದರೆ ಅವರ ಮೇಲೆಯೂ ಹೀಗೆಯೇ ಬಾಂಬಿನ ಸುರಿಮಳೆಗರೆಯುತ್ತಿದ್ದರೇನು ಎಂದು ಪ್ರಶ್ನೆ ಮಾಡಿದರು

ಸೈನ್ಯ ಖಾತೆಯ ಸೆಕ್ರೆಟರಿಯವರಾದ ಮಿ ಟೋಟನ ಹ್ಯಾಮ ಇವರು ಉತ್ತರಕೊಡುವಾಗ ಹೇಳಿದುದೇನಂದರೆ— ಹಿಂದಕ್ಕೆ ವಿಮಾನದಿಂದ ಹೀಗೆಯೇ ಬಾಂಬಿನ ಸುರಿಮಳೆಗರೆದಿತ್ತು. ಆಗ ಯಾರೂ ಆಕ್ಷೇಪವೆತ್ತಲಿಲ್ಲ. ಅದರ ಈಗ ಮಾತ್ರ ಆಕ್ಷೇಪವೆತ್ತುತ್ತಿರುವರು. ಇದನ್ನು ನೋಡಿ ನನಗೆ ಬಹು ಆಶ್ಚರ್ಯವಾಗುತ್ತಿದೆ. ಸಿಕ್ಕ ಸಿಕ್ಕಂತೆ ಬಾಂಬು ಹಾರಿಸಲಿಲ್ಲವೆಂದು ನಾನು ಸಭಾಸದರಿಗೆ ಆಶ್ವಾಸನ ಕೊಡುತ್ತೇನೆ

ಕೊನೆಯಲ್ಲಿ ಮಿ ಟೊಟೇನ್ ಹ್ಯಾಮರು ಹೇಳಿದುದೇನಂದರೆ— ಸರಹದ್ದ ಪ್ರಾಂತದ ಸಂರಕ್ಷಣೆಯ ಕಾರ್ಯದಲ್ಲಿ ಸಶಸ್ತ್ರ ಸೈನಿಕರು ಜೌಕಿ ಬಿಟ್ಟನಂತಿದ್ದಾರೆ. ನಮ್ಮ ಮೇಲಿನ ಜವಾಬದಾರಿಯನ್ನು ಸಾಗಿಸಿಕೊಂಡು ಹೋಗಬೇಕಾದರೆ ಕೆಲವೊಂದು ವಿಶಿಷ್ಟ ಪ್ರಸಂಗಗಳಲ್ಲಿ ಹೀಗೆ ಮಾಡುವದು ನ್ಯಾಯವೂ ಮತ್ತು ಪರಿಣಾಮಕಾರಿಯೂ ಇದೆಯೆಂದು ನನಗೆ ಎನಿಸುತ್ತಿದೆ. ನಾವು ಇದಕ್ಕೆ ನಾಚಿಕೊಳ್ಳುವ ಕಾರಣವಿಲ್ಲ (ಅ ಪ್ರೆ)

ನಾ. ಗವ್ಹರ್ನರರಿಗೆ ಬೆಳಗಾವ ಮ್ಯುನಿಸಿಪಾಲಟಿಯ ಮಾನಪತ್ರ.

ಬೆಳಗಾಂವ ತಾ॥ ೪— ನಿನ್ನಿನ ದಿವಸ ಕೂಡಿದ ಮುನಸಿಪಾಲಟಿಯ ವಿಶಿಷ್ಟ ಸಭೆಯಲ್ಲಿ ನಾ ಗವ್ಹರ್ನರರಿಗೆ ಮಾನಪತ್ರ ಕೊಡತಕ್ಕದ್ದೆಂಬ ಗೊತ್ತುವಳಿಯು ಬಹುಮತದಿಂದ ಸ್ವೀಕೃತವಾಯಿತು

ಮಾನಪತ್ರಕ್ಕೋಸುಗ ೧೫೦ ರೂಪಾಯಿ ವೆಚ್ಚ ಮಾಡತಕ್ಕದ್ದೆಂದು ನಿರ್ಣೀತವಾಗಿ ಮಾನಪತ್ರವನ್ನು ತಯಾರ ಮಾಡಲು ಕೆಳಗಿನ ಸದ್ಗೃಹಸ್ಥರ ಮಂಡಳವು ನಿಯಮಿಸಲ್ಪಟ್ಟಿತು. ಅವರೆಂದರೆ- ಅಧ್ಯಕ್ಷರು ಉಪಾಧ್ಯಕ್ಷರು, ಮಿ ... ದಿ ಬ ಲಕ್ಕೆ, ಶ್ರೀ ಪೋತದಾರ ಮತ್ತು ಶ್ರೀ ಚಿಕ್ಕೋಡಿ

ಬಸರಾ ತುರಂಗದಲ್ಲಿ ಗೋಳೀಬಾರು.

ಬಸರಾ ತಾ॥ ೩— ಬಸರಾ ತುರಂಗದಲ್ಲಿಯ ಕೆಲವು ಕೈದಿಗಳು ಕಾವಲುಗಾರರ ಮೇಲೆ ಕಲ್ಲುಗಳ ಸುರಿಮಳೆಗರೆದು ಅವರ ಶಸ್ತ್ರಾಸ್ತ್ರಗಳನ್ನು ಕಸಿದುಕೊಳ್ಳಲು ಪ್ರಯತ್ನಿಸಿದರು ಆಗ ಅಧಿಕಾರಿಗಳು ಅವರ ಮೇಲೆ ಗೋಳೀಬಾರು ಮಾಡಿದರು ಗೋಳೀಬಾರದಲ್ಲಿ ೬ ಜನರು ಸತ್ತಿದ್ದು, ೨೦ ಜನರ ಗಾಯಹೊಂದಿರುವರು

ಬ್ರಾಹ್ಮಣೇತರ ಯುವಕ ಪರಿಷತ್ತು

ಬ್ರಾಹ್ಮಣೇತರ ಯುವಕ ಪರಿಷತ್ತಿನ ಮೊದಲನೆ ಅಧಿವೇಶನವು ತಾ॥ ೧೭ ನೇ ದಿವಸ ಮುಂಬಯಿಯಲ್ಲಿ ಕೂಡತಕ್ಕದ್ದಿದೆ. ಬೆಳಗಾವಿಯ ಶ್ರೀ ಪಂಡಿತಪ್ಪ ಚಿಕ್ಕೋಡಿಯವರು ಅಧ್ಯಕ್ಷರಾಗತಕ್ಕವರಿರುವರೆ

ಕರಾಚಿ ತಾ. — ಅಖಿಲ ಭಾರತ ಸ್ವದೇಶಿ ಪ್ರದರ್ಶನದ ಉದ್ಘಾಟನ ಸಮಾರಂಭವು ತಾ॥ ೬ ನೇ ದಿವಸ ಡಾ॥ ಮಹಮ್ಮದ ಆಲಮ್ ಇವರ ಹಸ್ತದಿಂದ ಜರುಗತಕ್ಕದ್ದಿದೆ.

ಧಾರವಾಡದ ಚಟುವಟಿಕೆಗಳು.

ಮದರಾಸ, ಕಲಕತ್ತಾ, ಆಂಧ್ರ, ಮುಂತಾದ ಪ್ರಾಂತಗಳಲ್ಲಿ ತಮ್ಮ ಅದ್ಭುತ ದೇಹಶಕ್ತಿ ಯೋಗಶಕ್ತಿಗಳನ್ನು ಪ್ರದರ್ಶಿಸಿ—ಸುಪ್ರಸಿದ್ಧರಾಗಿರುವ ಪ್ರೊಫೆಸರ್ ಸುದರ್ಶನದಾಸ, ಎಂ ಎಸ್ ಸಿ ಯವರು ಇಲ್ಲಿಗೆ ಬಂದಿರುತ್ತಾರೆ. ಇವರ ಅದ್ಭುತ ಪ್ರಯೋಗಗಳಲ್ಲಿ— ನೆಲದೊಳಗೆ ಸಜೀವವಾಗಿ ಹುಗಿಯಲ್ಪಡುವದೂ, ಉರಿವ ಬೆಂಕಿಯ ಕೆಳಗೆ ಮಲಗುವದು, ಹೃದಯದ ಆವರ್ತ ನಾಡಿಗಳನ್ನು ನಿಲ್ಲಿಸುವದು ಆ್ಯಸಿಡ್‌ಗಳನ್ನು ಕುಡಿಯುವದು, ಉರಿವ ಕೆಂಡ ನುಂಗುವದು, ಮುಂತಾದ ಅನೇಕ ಸಾಹಸದ ಪ್ರಯೋಗಗಳಿರುತ್ತವೆ. ಇಲ್ಲಿಯೂ ಅವರ ಪ್ರಯೋಗಗಳಾಗಬಹುದು

ದಿ ಧಾರವಾಡ ಎಕ್ಸಟೆನ್‌ಶನ್ ಏರಿಯಾದ ಕರ ಕೊಡುವವರ ಸಂಸ್ಥೆಯ ಮೊದಲನೆ ಸಾಧಾರಣ ಸಭೆಯು ತಾ॥ ೧೦ ನೆಯ ದಿವಸ ಕೂಡತಕ್ಕದ್ದಿರುವದೆಂದು ತಿಳಿಯುತ್ತದೆ

ವಾಳವಾಡ್ಡ ಇಂಗ್ಲೀಷ ಶಾಲೆಯ ಶಿಕ್ಷಕರು ಶಾಲೆಯ ಎಲ್ಲ ಹುಡುಗರನ್ನು ತಾ॥ ೩ ನೆ ದಿವಸ ಕರ್ನಾಟಕ ಕಾಲೇಜವನ್ನು ತೋರಿಸಲಿಕ್ಕೆ ಕರೆದುಕೊಂಡು ಹೋಗಿದ್ದರು. ಕರ್ನಾಟಕ ಕಾಲೇಜದ ಪ್ರಾಣಿವನಸ್ಪತಿ ಶಾಸ್ತ್ರದ ಅಧ್ಯಾಪಕರಾದ ಪ್ರೊ ಕೇಂಡೆ ಇವರು ವಿದ್ಯಾರ್ಥಿಗಳಿಗೆ ತಿಳಿಯುವಂತೆ " ಮನುಷ್ಯನ ಶರೀರ " ಎಂಬ ವಿಷಯದ ಮೇಲೆ ಒಂದು ಪಾಠವನ್ನು ಹೇಳಿದರು

ಮೊನ್ನೆ ಮಧ್ಯಾಹ್ನದಲ್ಲಿ ಒರ್ವ ಕೂಲಿಯವನು ಆರ್ಥಿಕ ವಿಪನ್ನತೆಗಾಗಿ ಏಳು ಗಡಗಡೆಯ ಭಾವಿಯನ್ನು ಜಿಗಿದನು. ಹತ್ತರ ಇದ್ದವರಿಗೆ ತಿಳಿಯಿತು. ಕೂಡಲೆ ಹಗ್ಗ ಬಿಟ್ಟರು. ಅವನು ಮೊದಲು ಹಗ್ಗ ಹಿಡಿಯಲಿಲ್ಲ. ಹೆದರಿಕೆ ಹಾಕಿದ ಕೂಡಲೆ ಹಗ್ಗವನ್ನು ಹಿಡಿದು ಮೇಲೆ ಬಂದನು

ಇದೇ ತಿಂಗಳ ಕೊನೆಯ ವಾರದಲ್ಲಿ ಇಲ್ಲಿಯ ಕರ್ನಾಟಕ ಹಾಯಸ್ಕೂಲದಲ್ಲಿ ಸೋಶಿಯಲ್ ಗ್ಯಾದರಿಂಗ ಇರುವದರಿಂದ ಅದರ ಪೂರ್ವ ಸಿದ್ಧತೆಯು ಪ್ರಾರಂಭವಾಗಿದೆ

ಸರದಾರ ವಲ್ಲಭಭಾಯಿಯವರ ಬಿಡುಗಡೆ

ಸರದಾರ ವಲ್ಲಭಭಾಯಿ ಹಾಗು ಬಾಬು ರಾಜೇಂದ್ರ ಪ್ರಸಾದರನ್ನು ಪ್ರಕೃತಿಯ ಅಸ್ವಸ್ಥತೆಯ ಮೂಲಕ ಸರಕಾರದವರು ಬೇಗನೆ ಬಿಡುಗಡೆ ಮಾಡುವವರಿದ್ದಾರೆಂದೂ, ಮಹಾತ್ಮರು ಇವರೊಡನೆ ವಿಚಾರ ವಿನಿಮಯ ಮಾಡುವವರಿದ್ದಾರೆಂದೂ ಹಿಂದುಸ್ಥಾನ ಟೈಮ್ಸ ಪತ್ರಿಕೆಯು ಹೇಳುತ್ತದೆ

ಕೊನೆಯಚ್ಚು.

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ರ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವವು. 'ಹೆಮ್ಮುಗುಳು'' ಒಸಡೆಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮುಗುಳಿನ ತತ್ವವು "ಕಚ್ರ್ಯೂ" ದಂತ ಮಂಜನದಲ್ಲಿ ಅಡಕವಾಗಿದೆ. ಆಹಾರದ ಅವಶೇಷಗಳು ಹಲ್ಲುಗಳ ಸಂದಿಗಳಲ್ಲಿ ಉಳಿದು ಕ್ರಿಮಿಗಳುಂಟಾಗಿ ಹಲ್ಲು ಮತ್ತು ಒಸಡೆಗಳು ಕೆಡುವವುಂಟು. ಆದರೆ ಈ ಕ್ರಿಮಿಗಳು ಕಚ್ರ್ಯೂ ದಂತಮಂಜನದ ಉಪಯೋಗದಿಂದ ನಾಶವಾಗುವವಲ್ಲದೆ ಒಸಡೆಗಳು ಬಲಕಟ್ಟಾಗಿ ಬಾಯೊಳಗಿನ ದುರ್ವಾಸನೆಯು ಹೋಗಿ ಸುವಾಸವುಂಟಾಗುವದು. 'ಕಚ್ರ್ಯೂ' ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ತಿಳಿದುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಮೊದಲು ಕೊಳ್ಳಿರಿ. "ಮನೆಗೆದ್ದು ಮಾರುಗೆದ್ದು" ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

ಬಹಳ ಹಳೆಯದಾದ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದು
ಹೆಚ್ಚಿನ ಸುಧಾರಣೆಯುಳ್ಳದ್ದೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೬-೪ ೧೯೩೩ ರಿಂದ ತಾ॥ ೧೬-೬-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)
ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ, ಯಾತ್ರಿಕರಿಂದ
ಮಾನಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

ಶ್ರೀಕಾಶೀರಾಮೇಶ್ವರ ಸಮುದ್ರದಾಟ ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೆಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೆಶಲ್‌ಟ್ರೇನು ಸ್ನ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು॥ ೧೨) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಷನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಹುಬ್ಬಳ್ಳಿ ಅಕ್ಟೋಬರ ತಾ॥೨		೧೯ ಲಖನೌ	೨೫	೩೭ ಕುಂಭಕೋಣಂ	೧೫
೨ ಪುಣೆ	೩-೪	೨೦ ಅಯೋಧ್ಯೆ	೨೬	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ ಕನ್ಯಾಕುಮಾರಿ [ಹಡಗದಿಂದ]	೧೮
೪ ಸೋಮನಾಥಪಟ್ಟಣ (ಹಡಗದಿಂದ)	೮ ೯	೨೨ ಪ್ರಯಾಗ	೨೭-೨೮	೪೦ ಕೊಲಂಬೊ [ಹಡಗದಿಂದ	೧೯-೨೦-೨೧
೫ ವೇರಾವಳ	,,	೨೩ ಕಾಶಿ	೨೯-೩೦-೩೧-ನವೆಂಬರ ತಾ॥೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲೀತಾಣಾ (ಜೈನತೀರ್ಥ)	೧೦ ೧೧	೨೪ ಸಾರನಾಥ	,,	೪೨ ಅನುರಾಧಪುರ [ಲಂಕಾ]	೨೩
೭ ಅಬುಪರ್ವತ (ಜೈನತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಟಿ [ಹಡಗದಿಂದ]	,,
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೪ ಮದುರೆ	೨೪
೯ ಜಯಪುರ	,,	೨೭ ಗಿರಿ	,,	೪೫ ತ್ರಿಚನಾಪಳ್ಳಿ	೨೫
೧೦ ಅಜಮೀರ	೧೫	೨೮ ಪಾವಾಪುರಿ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಅಮೃತಸರ	೧೬	೨೯ ಕಲಕತ್ತಾ	೫-೬	೪೭ ಬೆಂಗಳೂರ	೨೬
೧೨ ಆಗ್ರಾ	೧೭	೩೦ ಜಗನ್ನಾಥ ಪುರಿ	೮	೪೮ ಮೈಸೂರ	೨೭-೨೮
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೪	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾಸ್ಥಳಗಳನ್ನು ಸುತ್ತಿಕೊಂಡು ನವೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು॥ ೧೩ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡಕ್ಲಾಸ ೩೦೦ ರೂಪಾಯಿ. ಥರ್ಡಕ್ಲಾಸ ೧೫೦ ರೂಪಾಯಿಗಳು ಮಾತ್ರ. ಟಿಕೇಟು ಪಡೆಯಬೇಕಾದಲ್ಲಿ ಸೆಕಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನವರು ಟಿಕೀಟುಗಳಿಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ಪಯಣಮಾಡಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶರಾದರು. ಅದಕಾರಣ ಟಿಕೀಟುಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯ ಏಜಂಟ್ ರೆಂಟಿಗಳು— ಸದರ ಕಂಪನಿಯು ಏಜಂಟರುಗಳಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರಿಗಾಗಿ ವತನದಾರರ ಆತ್ಮ ... ಗಳು ... ಮಾಡಿ ಕೊಡಲ್ಪಟ್ಟಿಂತೆ ೧೯೩೩ ರ ... ಬೇಸಿಗೆಯಲ್ಲಿ ... ಮಾಡಿಕೊಡುವದಕ್ಕೆ ಬರುವದು ... ಬೇಕಾದವರು ಶೀಘ್ರ ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸತಕ್ಕದ್ದು. ಅರ್ಜಿಯ ಫಾರ್ಮುಗಳು ಏಜಂಟ ರೆಂಟಿಯ ಹೆಚ್ಚಿನ ಮಾಹಿತಿ ಪತ್ರಿಕೆಗಳು ಬೇಕಾದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು. ಏಜಂಟರಾಗಬಯಸುವವರು ಕೂಡಲೆ ತಿಳಿಸತಕ್ಕದ್ದು. ಯೋಗ್ಯ ಕಮಿಶನ್ ಕೊಡಲ್ಪಡುವದು.

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ. ಎಸ್. ಚನಪ್ಪಾ ಬಾಗೇವಾಡಿ.

ಉತ್ತಮ ತಬಲೆಗಳು,

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ. ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು. ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ. ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ... ತ್ತವೆ. ನೇರವಾಗಿ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ। ೨-೯-೩೩

ವಳಿಗಂಡ್ ಹೈದರಾಬಾದ (ಡೆಕ್ಕನ್) ಬಿ. ಕೆ. ಶಿಮ್ಮಲಗಿ

ಭುವನೇಶ್ವರಿ ಭಾಂಡಾರ.

ಬೈಲಹೊಂಗಲದಲ್ಲಿ ಎಲ್ಲ ಬಗೆಯ ಬಟ್ಟೆ, ಔಷಧ, ಸುಗಂಧಿ ಸಾಮಾನು, ಸ್ಟೇಶನರಿ ಹಾಗೂ ರೈತರಿಗೆ ಬೇಕಾಗುವ ಒಕ್ಕಲತನದ ಎಲ್ಲ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ವತನದಾರ ಖಾಟಾ:

ಬೈಲಹೊಂಗಲದಲ್ಲಿ ದಲಾಲಿಯಿಂದ ಹತ್ತಿ, ಶೇಂಗಾ ಮುಂತಾದ ಯಾವದೇ ಜೀನಸುಗಳನ್ನು ಮಾರಬೇಕಾದರೆ ನಮ್ಮಲ್ಲಿ ಬನ್ನಿ. ದರ, ಗೋದಾಮು, ನೀರು ಇಳಿಯುವ ಸ್ಥಳ ಮೊದಲಾದ ಎಲ್ಲ ಸೌಕರ್ಯಗಳೂ ಇವೆ

ಗೋಪಾಳರಾವ ಜಾಲಿಹಾಳ ಬೈಲಹೊಂಗಲ.

ಕನ್ನಡಿಗ.

ಧಾರವಾಡ— ಬುಧವಾರ ತಾರೀಖು ೬—೯—೧೯೩೩

ಮಹಾತ್ಮರು ಬ್ರಿಟಿಶರ ಮಿತ್ರರು.

ಮಹಾತ್ಮಾ ಗಾಂಧಿಯವರು ತಾವು ಬ್ರಿಟಿಶ ಸಾಮ್ರಾಜ್ಯದ ದೊಡ್ಡ ಮಿತ್ರರೆಂದು ಹೇಳಿಕೊಳ್ಳುತ್ತಿರುವರಷ್ಟೆ. ಇದು ಸುಳ್ಳೆಂದು ಕೆಲವರೂ, ಕೇವಲ ಉಪಚಾರದ ಮಾತೆಂದು ಕೆಲವರೂ ಭಾವಿಸುತ್ತಿರುವರು! ಆದರೆ ಇದು ಸರಿಯಲ್ಲ. ನಿಜವಾಗಿಯೇ ಅವರು ಮಿತ್ರರು, ಶತ್ರುಗಳಲ್ಲ. ಹೇಳಿಕೇಳಿ ಅವರು ಅಸಹಕಾರಿಗಳು; ಸತ್ಯಾಗ್ರಹಿಗಳು. ಅಲ್ಲ ಅವರು ಈ ಅನ್ಯರ ರಾಜ್ಯಪದ್ಧತಿಗೆ ಸೈತಾನ ಪದ್ಧತಿಯೆಂದು ಕೂಡ ಹೆಸರಿಡದೆ ಬಿಡಲಿಲ್ಲ. ಇಂಥವರು ಸರಕಾರದ ಮಿತ್ರರು ಹೇಗೆ ಎಂಬುದು ಅನೇಕರಿಗೆ ಬಗೆಹರಿಯದ ಸಹಜವಿದೆ. ಆದರೆ ಅವರ ಜೀವನ ರಹಸ್ಯವನ್ನೂ ತತ್ವಗಳನ್ನೂ ಸೂಕ್ಷ್ಮವಾಗಿ ಶೋಧಿಸಿದವರಿಗೆ ಹಾಗೆನ್ನುವವರಲ್ಲಿ, ಅವರಲ್ಲಿ ತಿಲಮಾತ್ರವೂ ದೋಷಭಾವವಿಲ್ಲವೆಂದು ತಿಳಿವದು. ಅವರಿಗೆ ಬ್ರಿಟಿಶ ಜನರ ಮೇಲೆ ಪ್ರೇಮ ಉಂಟು; ಆದರ ಉಂಟು. ಬ್ರಿಟಿಶರಲ್ಲಿರುವ ಅನೇಕ ಸದ್ಗುಣಗಳನ್ನು ಅವರು ಬಲ್ಲರು. ಬ್ರಿಟಿಶ ಸಾಮ್ರಾಜ್ಯದಿಂದ ಹಿಂದುಸ್ಥಾನವನ್ನು ಕಡಿದುಕೊಂಡು ಹಿಂದುಸ್ಥಾನವು ಪೂರ್ಣವಾಗಿ ಬೇರೆಯಾಗಬೇಕೆಂಬ ತತ್ವವನ್ನು ಕೆಲವರು ಮುಂದೆ ಚಾಚಿದಾಗ್ಯೂ ಅವರು ಆ ಭಾವನೆಯನ್ನು ಅಷ್ಟು ಮೆತ್ತಗೆ ಮಾಡುವ ಹವಣಿಸಿದರೆಂಬುದು ಯಾರಿಗೆ ಗೊತ್ತಿಲ್ಲ? ವಸ್ತುತಃ ನಿಜವಾಗಿ ವಿಚಾರ ಮಾಡಿದರೆ ಅವರ ಅಸಹಕಾರ ಚಳವಳಿಯು ಅಸ್ತಿಭಾರವೇ ಬ್ರಿಟಿಶರ ಮೇಲಿನ ಅವರ ವಿಶ್ವಾಸದ ಮೇಲೆ ಹಾಕಲ್ಪಟ್ಟಿರುತ್ತದೆ. ಏಕಂದರೆ ಅಸಹಕಾರದ ಚಳವಳಿಯ ಮೂಲ ಉದ್ದೇಶವೇ ಕಣ್ಣು ಮುಚ್ಚಿಕೊಂಡಿರುವ ಬ್ರಿಟಿಶ ನ್ಯಾಯದೇವತೆಯ ಕಣ್ಣುಗಳನ್ನು ತೆರೆಸುವದು. ಬ್ರಿಟಿಶರು ಚಾಣಾಕ್ಷರು. ಆದ ಕಾರಣ ಮತ್ತಾವ ಕಾರಣದ ಸಲುವಾಗಿ ಇರದಿದ್ದರೂ ಸ್ವಾರ್ಥದ ಸಲುವಾಗಿಯಾದರೂ ಹಿಂದುಸ್ಥಾನವನ್ನು ಕಳೆದುಕೊಳ್ಳುವಂಥ ಪ್ರಸಂಗವನ್ನು ಮಾಡಲಿಕ್ಕಿಲ್ಲೆಂದು ಅವರ ಬಲವಾದ ನಂಬಿಗೆ. ಈಗಿನ ರಾಜ್ಯಪದ್ಧತಿಯು ದೋಷವಾಗಿರುವದರಿಂದ, ಅದನ್ನೇ ಸಮೂಲವಾಗಿ ಬದಲು ಮಾಡಿ ಬಿಟ್ಟರೆ ಹಿಂದುಸ್ಥಾನಕ್ಕೆ ಹಿತವಾಗುವದೆಂದೂ ಇಂಗ್ಲಂಡಕ್ಕೂ ಹಿತವಾಗುವದೆಂದೂ ಅವರ ತಿಳವಳಿಕೆ. ಅಧಿಕಾರಿಗಳಾದ ಹಲಕೆಲವು ಬ್ರಿಟಿಶರು ಇದನ್ನರಿಯದ ಅವರಿಗೆ ವಿರೋಧಿಸುತ್ತಿರುವರು. ಅವರ ಬೇಡಿಕೆಗಳನ್ನು ನಿರ್ಮಲ ಹೃದಯದಿಂದ ಆಗಿಷ್ಟು ಈಗಿಷ್ಟು ಮಾನ್ಯ ಮಾಡುತ್ತ ಬಂದಿದ್ದರೆ ಈ ಅಸಹಕಾರ ಚಳವಳಿಯ ಪ್ರಸಂಗವೇ ಬರುತ್ತಿದ್ದಿಲ್ಲ. ಕೊನೆಯ ಉಪಾಯವೆಂದು ಅವರು ಕಾಯ್ದೆಭಂಗ ಚಳವಳಿಯನ್ನು ಕೈಕೊಂಡರು. ಅದರ ಉದ್ದೇಶವು ಕೂಡ, ಕಲ್ಲು ಮಾಡಿಕೊಂಡಿರುವ ಬ್ರಿಟಿಶರ ಹೃದಯದಲ್ಲಿ, ಸ್ವಂತ ದುಃಖಭೋಗದಿಂದ ಸ್ವಲ್ಪ ಕನಿಕರ ಹುಟ್ಟಿಸುವದೇ ಆಗಿರುತ್ತದೆ. ಇತ್ತ ಹಿಂದೀ ಜನರಿಗೂ ಅವರು ಅದಷ್ಟು ಮಟ್ಟಿಗೆ ಬ್ರಿಟಿಶರಿಂದ ಬೇರೆ ಆಗಬೇಕೆಂದೇ ಹೇಳುತ್ತ ಬಂದಿರುವರು. ಬ್ರಿಟಿಶರು ತೀರ ಹಟ ಹಿಡಿದರೆ ಉಪಾಯವಿಲ್ಲ; ಇಲ್ಲದಿದ್ದರೆ ಹಿಂದುಸ್ಥಾನವು ಬ್ರಿಟಿಶರ ಸಂಬಂಧವನ್ನು ಹಾರಿಸುವದು ಏನೂ ಕಾರಣವಿಲ್ಲವೆಂಬೇ ಅವರ ಮತ. ಇದನ್ನರಿಯದೆ ಲಾರ್ಡ ವಿಲಿಂಗ್ಡನ್ನರಂಥ ವೃದ್ಧರೂ ಬಹಳ ಅನುಭವಿಗಳೂ ಆದ ವ್ಹಾಯಿಸರಾಯರು, ಹಟಕ್ಕೆ ಬಿದ್ದು ಅವರಿಗೆ ಭೆಟ್ಟಿಯೇ ಕೊಡಲಿಕ್ಕಿಲ್ಲವೆಂದು ಮತ್ತೆ ಪುನಃ ಈಗ ಜಾಹೀರ ಮಾಡಿದ್ದು ಅನ್ಯಾಯವಲ್ಲವೆ? ಹೀಗೆ ಮಾಡುವದರಿಂದ ಇಂಗ್ಲಂಡಕ್ಕೂ ಹಿಂದುಸ್ಥಾನಕ್ಕೂ ತಳಕು ಹಾಕಬೇಕೆಂದಿರುವ ಒಂದು ಕೊಂಡಿಯನ್ನು ನಷ್ಟಪಡಿಸಿದಂತಾಗ ವದೆಂಬುದನ್ನು ಅವರು ಎಂದೆಂದಿಗೂ ಮರೆಯಬಾರದೆಂದು ನಾವು ಅವರಿಗೆ ಎಚ್ಚರಿಕೆ ಕೊಡುತ್ತೇವೆ.

ಕಿರಿನುಡಿಗಳು.

ಬ್ರಿಟಿಶ ಸರಕಾರದವರು ಬಹಳ ಪರೋಪಕಾರಿಗಳು. ಅವರಿಗೆ ತಮಗಿಂತಲೂ ಅನ್ಯರ ಹಿತವೇ ಹೆಚ್ಚು. ಅಫಗಾಣಿಸ್ಥಾನಗಡಿಯ ಮೇಲೆ ಶಾಂತತೆಯನ್ನು ಸ್ಥಾಪನೆ ಮಾಡುವದಕ್ಕಾಗಿ ತಮ್ಮಲ್ಲಿಯ ಹಣ ಖರ್ಚು ಮಾಡಿ ಅಲ್ಲಿಯವರ ಮೇಲೆ ಬಾಂಬು ಒಗೆಯುತ್ತಾರೆ. ಗಡಿಯ ಗಿರಣಿಕಾರರ ಮೇಲೆ ಉಪಕಾರ ಮಾಡಲಿಕ್ಕಾಗಿ ತಮ್ಮ ಸರಕಾರದ ಕಂದಾಯವನ್ನು ಕಡಿಮೆ ಮಾಡಲು ಸಿದ್ಧರಿರುವರು. ಇದುದರಿಂದಲೇ ಈಗ ಅವರು ಸಂಸ್ಥಾನಿಕರನ್ನು ಸಂರಕ್ಷಿಸುವದಕ್ಕೋಸ್ಕರ ಬ್ರಿಟಿಶ ಹಿಂದುಸ್ಥಾನದ ಮುದ್ರಣ ಸ್ವಾತಂತ್ರ್ಯದ ಮೇಲೆ ಕಟ್ಟುನಿಟ್ಟು ಬಡಿಯಲು ಸಿದ್ಧರಾಗಿರುವರು. ಈ ದೇಶದಲ್ಲಿ ವೃತ್ತಪತ್ರಕರ್ತರು ಬರೆಯುತ್ತಲು ಈಗಾಗಲೆ ಎಷ್ಟು ಪಾಶಗಳನ್ನು ಹಾಕಲ್ಪಟ್ಟಿರುತ್ತವೆಂಬುದು ಎಲ್ಲರಿಗೂ ಗೊತ್ತಿದೆ. ಆ ಪಾಶಗಳು ಸಾಲದೆ, ಸಂಸ್ಥಾನಿಕರ ವಿರುದ್ಧ ರಾಜದ್ರೋಹಾತ್ಮಕವಾದ ಲೇಖಗಳನ್ನು ಬರೆಯುವವರಿಗೆ ತಾವು ಶಿಕ್ಷಿಸುವರಂತೆ! ಈ ದೇಶಿಯ ಸಂಸ್ಥಾನಿಕರೆಂದರೆ— ಹಿಂದಕ್ಕಿನ ಮೊಗಲಪಾತಶಾಗಳು. ಅವರು ಎಂಥ ಘೋರವಾದ ಅನ್ಯಾಯವನ್ನು ಮಾಡಿದರೂ ಅವರಿಗೆ ಹೇಳ ಕೇಳುವವರೇ ಇಲ್ಲ. ಅವರ ವಿರುದ್ಧವಾಗಿ ಆ ಸಂಸ್ಥಾನಗಳಲ್ಲಂತೂ ಬಾಯಿ ತೆರೆಯಲಿಕ್ಕೆ ಮಾರ್ಗವೇ ಇಲ್ಲ. ಬ್ರಿಟಿಶ ಸರಕಾರದವರ ಕಡೆಗೆ ದೂರು ಒಯ್ದರೆ ಅವರು ತಮ್ಮ ಕಿವಿಯ ಮೇಲೆ ಕೈಯಿಟ್ಟುಕೊಳ್ಳುತ್ತಾರೆ. ಆದ ಕಾರಣ, ಈಗ ಬ್ರಿಟಿಶ ಇಲಾಖೆಗಳಲ್ಲಿಯ ಪತ್ರಿಕೆಗಳಲ್ಲಿ ಸಂಸ್ಥಾನಿಕರ ಅನ್ಯಾಯಗಳನ್ನು ಬೈಲಿಗೆ ಎಳೆಯುವುದೊಂದೇ ಮಾರ್ಗವು ತೆರೆದಿತ್ತು. ಆದರೆ ಹೀಗೆ ಇಲ್ಲಿಯ ಪತ್ರಿಕೆಗಳಕ್ಕೂ ಕೂಡ ಲೆಕ್ಕಣಿಕೆ ಎತ್ತದಂತೆ ಈ ಸಲ ಕಾಯದೆ ಮಂಡಳದಲ್ಲಿ ಒಂದು ಕಾಯದೆಯನ್ನು ಮಾಡುವವರಿದ್ದಾರೆ. ಹೀಗೆ ಮಾಡಿದ ಬಳಿಕ ಸಂಸ್ಥಾನದ ಪ್ರಜೆಗಳಿಗೆ ನ್ಯಾಯ ದೊರಕುವ ಬಗೆ ಹೇಗೆ?

ಫ್ರೀಪ್ರೆಸ್ ಪತ್ರಿಕೆಯು ೧೦೦೦೦ ರೂಪಾಯಿ ಜಪ್ತಾದವು.

ಮುಂಬಯಿ ತಾ|| ೪ ಫ್ರೀಪ್ರೆಸ್ ಪತ್ರಿಕೆಯವರು ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಲ್ಲಿ ೨೦೦೦೦ ರೂಪಾಯಿಗಳನ್ನು ಅಡವು ಇಟ್ಟಿದ್ದರಷ್ಟೆ. ಮುಂಬಯಿ ಸರಕಾರದವರು ಅವುಗಳಲ್ಲಿ ೧೦೦೦೦ ರೂಪಾಯಿಗಳನ್ನು ಈಗ ಜಪ್ತ ಮಾಡಿರುತ್ತಾರೆ. ಪತ್ರಿಕೆಯಲ್ಲಿ ಮುದ್ರಣಕಾರ ಯಡೆಯ ಅನ್ವಯ ಆಕ್ಷೇಪಾರ್ಹವಾದ ಲೇಖಗಳು ಪ್ರಕಟವಾದದ್ದೇ ಇದಕ್ಕೆ ಕಾರಣವಾಗಿದೆ. ಈ ಆಕ್ಷೇಪಾರ್ಹವಾದ ಲೇಖಗಳು ಯಾವವೆಂದರೆ – "ಏಶಿಯಾ ಖಂಡದ ಸ್ವಾತಂತ್ರ್ಯವೇ ಜಗತ್ತಿನಲ್ಲಿಯ ಸಂಕಟವನ್ನು ಹೋಗಲಾಡಿಸಲು ತಕ್ಕ ಉಪಾಯವಾಗಿದೆ" ಎಂಬುದೊಂದು ಮತ್ತು "ವಾಚ ಟಾವರ" ಎಂಬ ಮತ್ತೊಂದು ಈ ಲೇಖಗಳು ಅನುಕ್ರಮವಾಗಿ ತಾ ೯ನೆ ಜುಲೈ ಮತ್ತು ೫ನೆ ಅಗಸ್ಟ ಸಂಚಿಕೆಗಳಲ್ಲಿ ಪ್ರಕಟವಾಗಿರುತ್ತವೆ

(ಅ ಪ್ರೆ)

೪ ಗಿರಣಿಗಳು ಮುಚ್ಚಿಹೋದವು.

ಮುಂಬಯಿ ತಾ|| ೪— ಈ ದಿ. ಸಹೂನ ಗುಂಪಿಗೆ ಸೇರಿದ ಮತ್ತೆ ನಾಲ್ಕು ಗಿರಣಿಗಳು ಮುಚ್ಚಿಹೋಗಿವೆ. ವ್ಯಾಪಾರದ ಮಂದಿ ಮತ್ತು ಜಪಾನದವರ ಸ್ಪರ್ಧೆ ಇವುಗಳೇ ಇದಕ್ಕೆ ಕಾರಣವಾಗಿವೆ. ಈ ಗಿರಣಿಗಳು ಮುಚ್ಚಿಹೋಗಿದ್ದರಿಂದ ೭೦೦೦ ಕೂಲಿಕಾರರು ಕೂಲಿಗೇಡಿಗಳಾಗಿದ್ದಾರೆ. ತಾ|| ೧ನೆ ಎಪ್ರಿಲ ೧೯೩೩ ರಿಂದ ಈವರೆಗೆ ಪಟ್ಟಣದಲ್ಲಿ ಒಟ್ಟು ೧೦ ಗಿರಣಿಗಳು ಮುಚ್ಚಿಹೋಗಿವೆ. ಈ ಕಾರಣ ೧೫೦೦೦ ಕೂಲಿಕಾರರು ಕೂಲಿಗೇಡಿಗಳಾಗಿದ್ದಾರೆ.

(ಅ ಪ್ರೆ.)

ಇಂಪೀರಿಯಲ್ ಬ್ಯಾಂಕಿನಲ್ಲಿ ಕಳವು.

ಮಂಗಳೂರ ತಾ|| ೨— ನಿನ್ನಿನ ದಿವಸ ಇಲ್ಲಿಯ ಇಂಪೀರಿಯಲ್ ಬ್ಯಾಂಕಿನಲ್ಲಿ ಡಿಸ್ಟ್ರಿಕ್ಟ ಕೋರ್ಟಿನ ಶಿರಸ್ತೇದಾರ ಇವರು ೧೦೦೦೦ ರೂಪಾಯಿಯ ಸಂಬಳದ "ಬಿಲ್ಲ"ನ್ನು ರೂಪಾಯಿಗಳಲ್ಲಿ ರೂಪಾಂತರ ಮಾಡಿಕೊಂಡು ಹೋಗಲು ಬಂದಿದ್ದರು. ಬ್ಯಾಂಕಿನವರು ಅವರಿಗೆ ಕೆಲವು ನೋಟುಗಳನ್ನೂ ಮತ್ತು ರುಪಾಯಿಗಳನ್ನೂ ಕೊಟ್ಟರು. ಅವರು ರುಪಾಯಿಗಳನ್ನು ಕಿಸೆಯಲ್ಲಿ ಹಾಕಿಕೊಂಡು, ಮತ್ತೆ ಕೆಲವು ರುಪಾಯಿ ದೊರಕಿಸಲು "ಕಾವುಂಟರ"ನಲ್ಲಿಗೆ ಹೋದರು. ಹೋಗುವಾಗ ಚೀಲವನ್ನು ಮೊದಲಿನ ಸ್ಥಳದಲ್ಲಿ ಬಿಟ್ಟು ಹೋಗಿದ್ದರು. ಈ ಸಂಧಿಯನ್ನು ಸಾಧಿಸಿ ಯಾವನೋ ಒಬ್ಬನು ಆ ಚೀಲವನ್ನು ಅಪಹರಿಸಿಕೊಂಡು ಹೋದನು. ಶಿರಸ್ತೇದಾರ ಇವರು, ಅಲ್ಲಿ ಹೋಗಿ ನೋಡುತ್ತಾರೆ, ಚೀಲವಿದ್ದಿಲ್ಲ. ಪೋಲೀಸರಿಗೆ ಕೂಡಲೆ ವರದಿ ಕೊಟ್ಟರು. ಅಪರಾಧಿಗಳ ಶೋಧವು ನಡೆದಿದೆ.

ಮೈಸೂರ ಸಂಸ್ಥಾನದ ಸುದ್ದಿಗಳು

ಮೈಸೂರ ತಾ|| ೧— ಮೈಸೂರ ತಾಲೂಕ ಕಚೇರಿಯ ಬೊಕ್ಕಸದಲ್ಲಿಯ ಹಣವನ್ನು ಅಪರಾತಫರು ಮಾಡಿದ ಬಗ್ಗೆ, ತಾಲೂಕ ಶಿರಸ್ತೆದಾರ ಎ. ಕೆ. ವೆಂಕಟರಾಘವ ಅಯ್ಯಂಗಾರ ಮತ್ತು ಹೋಮಯ್ಯ ಸರಾಫ ಇವರ ಮೇಲೆ ೬ ವರ್ಷಗಳಿಂದ ಖಟ್ಲೆ ನಡೆದಿತ್ತು. ಸಿಟಿ ಮ್ಯಾಜಿಸ್ಟ್ರೇಟರು ನಿನ್ನಿನ ದಿವಸ ತೀರ್ಪು ಹೇಳಿ ಇಬ್ಬರಿಗೂ ೧ ವರ್ಷದ ಕಠಿಣ ಶಿಕ್ಷೆ ವಿಧಿಸಿದರು.

ಮೈಸೂರ ವಿಶ್ವವಿದ್ಯಾಲಯದ ಸಂಘದ ಪರವಾಗಿ ಸಂಘದ ಕಚೇರಿಯಲ್ಲಿ ಮೊನ್ನಿನ ದಿವಸ ಶ್ರೀ. ಆರ್ ಗೋಪಾಲಸ್ವಾಮಿ ಅಯ್ಯರ ಇವರು "ಅಸ್ಪೃಶ್ಯರೂ ಅವರ ಹಿತಸಾಧನೆಯೂ" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು.

ಮೈಸೂರ ಪ್ರಾಂತಿಕ ಸಹಕಾರ ಪರಿಷತ್ತು ತಾ|| ೨೫—೨೭ ಮತ್ತು ೨೭. ಈ ಮೂರು ದಿನಗಳ ವರೆಗೆ ಇಲ್ಲಿಯ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಜರುಗತಕ್ಕದ್ದಿದೆ

ಸೊಂಡೂರಿನಲ್ಲಿ ಕನ್ನಡ ಸಾಹಿತ್ಯ ಪ್ರಚಾರ

ಸೊಂಡೂರಿನ ಅರಮನೆಯಲ್ಲಿ ಪ್ರತಿವರ್ಷವೂ ಗಣೇಶೋತ್ಸವ ನಡೆಯುತ್ತಿದೆ. ಆದರೆ ಕನ್ನಡ ಸಾಹಿತ್ಯದ ಸಂಬಂಧ— ಕನ್ನಡದ ಸಂಬಂಧ ಅದಕ್ಕೆ ಇರಲಿಲ್ಲ. ಈ ವರ್ಷ ಗದಗಿನ ಕರ್ನಾಟಕ ಚೇಂಬರ ಆಫ್ ಕಾಮರ್ಸದ ಕಾರ್ಯದರ್ಶಿ ಬಳ್ಳಾರಿ ವೀರಭದ್ರಪ್ಪನವರೂ, ಗದಗಿನ ಶ್ರೀ ಅಪ್ಪಯ್ಯಾಚಾರ್ಯರೂ ಉತ್ಸವದಲ್ಲಿ ಭಾಗಿಗಳಾಗಲು ಆಮಂತ್ರಿತರಾಗಿದ್ದರು. ಈ ಪ್ರಸಂಗದಲ್ಲಿ ಅತಿಥಿಗಳು "ಆಧುನಿಕ ಕನ್ನಡ ಸಾಹಿತ್ಯದ ಪರಿಚಯ"ದ ಬಗ್ಗೆ ಭಾಷಣ ಮಾಡಿ ಶ್ರೀಯುತರಾದ ಶ್ರೀನಿವಾಸ, ಬೇಂದ್ರೆ, ಮಧುರಚೆನ್ನ ಮುಂತಾದವರ ಕವಿತೆಗಳನ್ನು ಹಾಡಿ ತೋರಿಸಿದರು. ಮರುದಿನ ಶ್ರೀ ಮಹಾರಾಜರು ಅವರ ತಾಯಿಯವರಿಗಾಗಿ ಪ್ರತ್ಯೇಕವಾಗಿ ಕವಿತಾ ವಾಚನವೂ ಸಾಹಿತ್ಯ ಪರಿಚಯವೂ ಆಯಿತು. ಮಹಾರಾಜರು ಕನ್ನಡದ ಸಂಬಂಧವಾಗಿ ಬಹಳ ಕಳಕಳಿಯನ್ನು ತೋರಿಸಿದರು. ಅನೇಕ ಪ್ರಶ್ನೆಗಳನ್ನು ಮಾಡಿದರು. "... ಯೋಣ ಬಾ" ಪದ್ಯವು ಮಹಾರಾಜರಿಗೆ ಬಹಳ ರುಚಿಸಿತು.

ಡಾ. ಕುಲಕರ್ಣೀಯ

ಲೆಬೊರೇಟರಿ ಮುಂಬಯಿ ನಂಬ ೧೨

ಬಾಟ್ಲಿ ಕಿಮ್ಮತ್ತು ೧—೨—೦

ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು



ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಪರಗು, ಬಿಳೇಪರಗು, ಕೆಂಪು ಪರಗು, ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ಬಿ. ಟಿ. ಕೆರೂರ ಆ್ಯಂಡ ಸನ್ಸ

ಮೆಡಿಕಲ್ ಸ್ಟೋರ್ಸ

ಬಾಗಲಕೋಟೆ.

೧೪-೬

ಹಳೆಯ ಕನ್ನಡ ಸಾಹಿತ್ಯದಲ್ಲಿಯ ಪ್ರತಿಭಾಂಶ.

[ಸಾಂಗಲಿಯ ವೆಲಿಂಗ್ಡನ್ ಕಾಲೇಜದ ಕರ್ನಾಟಕ ಸಂಘದ ಉದ್ಘಾಟನ ಸಮಾರಂಭದಲ್ಲಿ ಪ್ರೊ. ಮುಗಳಿ ಎಂ. ಎ. ಮಾಡಿದ ಭಾಷಣದ ಸಾರಾಂಶ]

ಮೊದಲು ಸಾಹಿತ್ಯದ ಕೆಲವು ಸಾಮಾನ್ಯ ಲಕ್ಷಣಗಳನ್ನು ತಿಳಿದುಕೊಳ್ಳುವದು ಅವಶ್ಯ. ಜಗತ್ತಿನ ಯಾವುದೇ ಭಾಷೆಯ ಕಡೆವಾಳ ವಸವನುತಿಯಲ್ಲಿ ಕೆಲವು ಗುಣಗಳಿರಬೇಕು. ಅವು ವಿಶ್ವಮಾನ್ಯತೆ, ಕಲ್ಪಾಂತಸ್ಥಾಯಿತೆ ಹಾಗೂ ಮುಖ್ಯವಾಗಿ ಆನಂದದಾಯಕತೆ. ಅಂತೂ ಎಲ್ಲರಿಗೆ ಎಲ್ಲ ಕಾಲದಲ್ಲಿ ನಲಿವುಣಿಸುವಂಥದೇ ಚಿರಂತನ ಸಾಹಿತ್ಯ. ಅವು ಇರಬೇಕಾದರೆ ಅಂತಹ ಸಾಹಿತ್ಯಕಾರರಲ್ಲಿ ಮೂಲತಃ ಇರಬೇಕಾದ ಗುಣವು ಪ್ರತಿಭೆ. ಪ್ರತಿಭೆಯೆಂದರೆ ಹೊಸಹೊಸದಾದ ನಿರ್ಮಾಣಶಕ್ತಿಯೆಂದು ಲಾಕ್ಷಣಿಕರ ಮತ. ಹೊಸಹೊಸದು ಎಂದರೆ ಹಳೆಯದರ ಕೇವಲ ತ್ಯಾಗಪೂರ್ವವಾದ ವಿಚಿತ್ರ ವಿಶ್ವಾಮಿತ್ರ ಸೃಷ್ಟಿಯಲ್ಲ. ಚೆಲುವನ್ನು ಕಂಡು ಹೊಸ ಹೊರಹೊಮ್ಮುವ ಹಿಗ್ಗು ಹುಟ್ಟಿಸುವ ಚೆಲುವಿನ ರಹು. ಅದು ತೀರ ಹೊಸದು ಅಲ್ಲವೆ ತೀರ ಹಳೆಯದು ಇರಬಹುದು. ಮುಖ್ಯವಾಗಿ ಹಿಗ್ಗು [illegible] ಅದರಲ್ಲಿ ಹುರುಳು ಇರಬೇಕು [illegible] ಆ ಪ್ರಮಾಣದಲ್ಲಿ ಹೆಚ್ಚು [illegible]ವೇ ಪ್ರತಿಭೆಯ ಹವರೂರು. ಆದರ ವ್ಯಕ್ತಿಯು ಚೈತನ್ಯ ಚಮತ್ಕಾರ ರಸವುಳ್ಳವು ಮೂರು ಗುಣವು [illegible]ದಾಗಿರುವುದು. ಅಂತೂ ಕಾವ್ಯವಲ್ಲವೆ ಸಾಹಿತ್ಯದಲ್ಲಿ ಪ್ರತಿಭಾದರ್ಶಕವಾಗಿ ಇರಬೇಕಾದದು ಮೊದಲು ಚೈತನ್ಯ ಎಂದರೆ (sincerity) ಎನಿಸಿಕೆ, [illegible] ಅಂತರಂಗ ಪ್ರಧಾನವಾಗಿ ಇರುವುದು; ಚಮತ್ಕಾರ ಎಂದರೆ novelty; [illegible] Beauty ಅಥವಾ ಪೂರ್ಣ ಸೌಂದರ್ಯ ಅಥವಾ ಪೂರ್ಣಾನಂದ. ಮುಖ್ಯವಾದುದು ಚೈತನ್ಯ, ಚಮತ್ಕಾರವಲ್ಲ. ಆದರೂ ಗುಣಪೂರ್ಣವಾದ ಸಾಹಿತ್ಯದಲ್ಲಿ ಈ ಮೂರು ಗುಣಗಳ ತ್ರಿವೇಣೀ ಸಂಗಮವಾಗಬೇಕು. ಈ ಸಂಗಮದ ಹುಟ್ಟುನಾಡು ಪ್ರತಿಭೆ. ಈ ಪ್ರತಿಭೆಯು ಹಳೆಯ ಕನ್ನಡ ಸಾಹಿತ್ಯದಲ್ಲಿದೆ. ಕೇಳುವುದೆ [illegible] ಹುಟ್ಟಬಹುದು. ಆದರೆ ಕೇಳುವವರಿದ್ದಾರೆ. ಗ್ರಿಯರ್ಸನ್‌ರ ಪ್ರಕಾರ ಕನ್ನಡ ಸಾಹಿತ್ಯವು ಪ್ರಾಯಃ ಅನುಕರಣಮಯ ಎಂದರೆ ಛಾಯಾಕರ್ಷಣ, ಪ್ರತಿಭಾವಿಹೀನ ಎಂದು, ಆ. ಪಿ. ರಾಯ ಇವರ ಪ್ರಕಾರ ಜಗತ್ತಿನ ಜ್ಞಾನಸಂಪತ್ತಿಗೆ ಕನ್ನಡವು ಕೊಡುವ ಉದ್ದೇಶ್ಯ [illegible] ಎಂದರೆ ಸ್ವಂತದಲ್ಲಿ ಸ್ಮೃತಿಸಾಹಿತ್ಯ ಎಂದು. ಮೊದಲು ಕನ್ನಡ ಕವಿಗಳ ಸ್ವಾತಂತ್ರ್ಯವನ್ನು ನೋಡಲಾಗಿ ಅವುಗಳಲ್ಲಿ ಮೇಲ್ಪಂತ ಚಿರಂತನ ಸಾಹಿತ್ಯದ ಗುರುತುಗಳ ಅರಿವೂ ಪ್ರತಿಭೆಯು ಅಸ್ಪಷ್ಟವಾಗಿ ಬೆಳೆಯಲು, ತಿಳಿವೂ, ರಸವೇ ರಚನೆಯ ಜೀವಾಳವೆಂಬ ತಿಳಿನೋಟವೂ ಇವೆ. ಆದರೆ ವಿಷಯದ ಆಯ್ಕೆಯಲ್ಲಿ ಸ್ವಮತ ಪರಂಪರೆಯ ಬೇಲಿ ಕಿತ್ತಿಲದ ಕವಿಗಳಿಲ್ಲ. ಸಾಕ್ಷ್ಯವು ಕಿತ್ತಿಟ್ಟರೆ ಕನ್ನಡದಲ್ಲಿ ಸ್ವಕಲ್ಪಿತ ವಿಷಯಗಳಿಲ್ಲ. ಆದರೆ ಜಗತ್ತಿನ ಯಾವುದೇ ಹಳೆಯ ಸಾಹಿತ್ಯವು ಈ ನಿರ್ಬಂಧವನ್ನು ಒಪ್ಪಿದ್ದರಿಂದ ಪ್ರತಿಭೆಯ ಪರೀಕ್ಷೆಯನ್ನು ಇಲ್ಲಿ ಅಷ್ಟು ಮಾಡಲಾಗದು. ಇಷ್ಟು, ನಿಜ, ಕನ್ನಡ ಕೃತಿಗಳು ಸ್ವಲ್ಪ ಕೇವಲ ಭಾಷಾಂತರಗಳಾಗಿದರೂ, ಎಲ್ಲ ಸಂಸ್ಕೃತದ ಛಾಯೆ ಗಳಲ್ಲ. ಸ್ವತಂತ್ರವಾದ ಅನುವಾದಗಳೆ ಹುಟ್ಟಿ, ಹೆಚ್ಚಾಗಿ ನಮ್ಮ ಕವಿಗಳ ದೋಷವು ಶೈಲಿಯಲ್ಲಿ ತೋರುವ ಪಾಂಡಿತ್ಯಾಡಂಬರದ ಅಧಿಕ್ಯಕ್ಕೆ. ಅದನ್ನೇಗೆ ನೋಡದೆ, ತೋರುವ ಪ್ರತಿಭಾಂಶವೆಷ್ಟು ಎಂಬುದನ್ನು ಕಂಡು ಹಿಡಿಯಬೇಕಾಗಿದೆ. ಇದಕ್ಕಾಗಿ ಆದಿ ಪಂಪನ ಇಡಿಯ ಭ್ಯಾಸ ಬೇಕು. ಆತನ ಕನ್ನಡ ಪ್ರತಿಭೆಯು ಹಿರಿಹುದ್ದರಿ ಮಾಡಲಿಕ್ಕಾಗಿ ಆತನ ಮಾನಿನ ಜ್ಞಾನಿ ಓದಬೇಕು. ಕನ್ನಡದಲ್ಲಿ ವೀರರನ್ನಿಯಬೇಕು. ಹೆಜ್ಜೆಹೆಜ್ಜೆಗೆ ಇವರೀರ್ವರಲ್ಲಿ ಪ್ರತಿಭೆಯ ನಿದರ್ಶನಗಳಿವೆ. ತರುವಾಯ ಒಸವ ಹಾಸ್ಯರಸಕ್ಕೆ ಸಾರಬೇಕು. ವಚನ ಸಾಹಿತ್ಯ ನವೋನವವಾದ ಅನುಭಾವಗಳನ್ನೂ ಕನ್ನಡ ಛಂದಸ್ಸಿನ ರಾಗಣಿಗಳನ್ನೂ ಕಾಣಬೇಕು. ಇಲ್ಲಿ ಸ್ವಾನ್ಯ ಸಂಪತ್ತಿಗಳನ್ನೂ [illegible] ಹರಿದೇವಿನಲ್ಲಿನ ವಸನಗಳನ್ನೂ ಮರೆಯುವಂತಿಲ್ಲ. ಬ್ರಾಹ್ಮಣಕವಿಗಳಲ್ಲಿ ಶ್ರೀ ಕೃಷ್ಣ ಕಥಾವ್ಯಸರು ಕನ್ನಡ ಬಾಸಿನ ಚಂದ್ರಕಾಂತರು ಲಕ್ಷ್ಮೀಶನಲ್ಲಿ ಕನ್ನಡದ ಗಣ್ಯತನದ ಗ್ಗಾರವನ್ನೂ ಕುಮಾರವ್ಯಾಸನಲ್ಲಿ ಕನ್ನಡದ ಗಂಡುಗಾಡಿಯನ್ನೂ ನೋಡಬೇಕು. ಈ ದೂರದ ಪ್ರತಿಭಾಫಲಗಳು ಅನೇಕ. ಕೊನೆಗೆ ಸರ್ವಜ್ಞನ ತ್ರಿಪದಿ, ದಾಸರ ಶರಣರ ಹಾಡುಗಳು ಇವುಗಳ ಉತ್ಕೃಷ್ಟತೆಯನ್ನು ಶೋಧಿಸಿ, ರತ್ನಾಕರವರ್ಣಿಯ ಭರತೇಶವೈಭವದ ಕಡಲಲ್ಲಿ ಮುಳುಗಿ ಏಳಬೇಕು. ಅಲ್ಲಿ ಸ್ವತಂತ್ರ ಕನ್ನಡ ಪ್ರತಿಭೆಯು ಕಳಸವಿಡೆ ರಾರಾಜ್ಯವಿದೆ.

ಹುಬ್ಬಳ್ಳಿಯಲ್ಲಿ ಸ್ವದೇಶಿ ಅಂಗಡಿ.

ಅಖಿಲ ಭಾರತ ಚರಖಾ ಸಂಘದ ಅಂಗಡಿಗಳಲ್ಲಿ ದೊರೆಯುವ ಸರಕುಗಳು ಕೇವಲ ಕೈನೂಲಿನವೂ ಕೈಮಗ್ಗದವೂ ಮಾತ್ರ ಇರುತ್ತವೆಯೋ, ಅದರಂತೆ ಕೇವಲ ಸ್ವದೇಶಿ ಗಿರಣಿಗಳ ಬಟ್ಟೆಗಳನ್ನು ಮಾರುವ ಅಂಗಡಿಗಳು ಹುಬ್ಬಳ್ಳಿಯಲ್ಲಿ ಈ ವರೆಗೆ ಇದ್ದಿಲ್ಲ. ಈಗಿದ್ದ ಅಂಗಡಿಗಳು ಸ್ವದೇಶಿ ಪರದೇಶಿ ಅರಿವೆಗಳೆರಡನ್ನೂ ಸಂಗ್ರಹಿಸುತ್ತಿರುವದರಿಂದ ಅವುಗಳಲ್ಲಿ ಪರದೇಶಿ ಯಾವುದು ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಗಿರಾಕಿಗಳಿಗೆ ತೊಂದರೆಯಾಗುತ್ತಿತ್ತು. ಈಗ ಇಂಥದೊಂದು ಶುದ್ಧ ಸ್ವದೇಶಿ ಅಂಗಡಿಯು ಕೊಪ್ಪೀಕರ ಬೀದಿಯಲ್ಲಿಯ ಪತ್ತುಮಸಾಹೇಬರ ಕಟ್ಟಡದಲ್ಲಿ ೧-೯-೩೩ ನೆ ದಿವಸ ಸ್ಥಾಪಿತವಾಗಿದೆ. ಪರದೇಶಿಯ ಒಂದು ತುಂಡು ಸಹ ಈ ಅಂಗಡಿಯಲ್ಲಿಲ್ಲವೆಂದು ಏಜಂಟರು ಜಾಹೀರ ಮಾಡಿದ್ದಾರೆ.

ಹುಬ್ಬಳ್ಳಿಯ ಸುದ್ದಿ

ಲಲಿತಕಲಾದರ್ಶ ನಾಟಕ ಮಂಡಳಿಯವರು ತಾ|| ೭ನೆ ದಿವಸ "ಮಾನಾಪಮಾನ" ವೆಂಬ ನಾಟಕವನ್ನು ಪ್ರಯೋಗಿಸಿ ಅದರ ಉತ್ಪನ್ನವನ್ನು ಇಲ್ಲಿಯ ದಿ ಇಂಡಿಯನ್ ವುಮೆನ್ಸ ಏಡ್ ಸೊಸಾಯಿಟಿಗೆ ಕೊಡತಕ್ಕವರಿದ್ದಾರೆ.

ಬಾಗಲಕೋಟೆಯ ಸುದ್ದಿ

ಬಾಗಲಕೋಟೆ ತಾ|| ೩ — ಈಗ ೨-೩ ದಿನಗಳಿಂದ ಮಳೆ ಚನ್ನಾಗಿ ಆಗುತ್ತಿದೆ. ಮುಂಗಾರಿಯ ಬೆಳೆಯು ಹುರಿಕಟ್ಟಾಗಿದೆ.

ಮದ್ದು ತಯಾರಿಸುವ ಒಂದು ಮನೆಯಲ್ಲಿ ಮದ್ದಿನ ಅಪಘಾತದಿಂದ ಹೆಣ್ಣುಮಗಳೊಬ್ಬಳು ಅಗ್ನಿನಾರಾಯಣನಿಗೆ ಆಹುತಿಯಾದಳು.

ಈಗೀಗ ದಿನ ಕುಸ್ತಿಗಳು ನಡೆದಿವೆ. ರೊಕ್ಕ ಕೊಟ್ಟವರಿಗೆ ಮಾತ್ರ ನೋಡಲು ಅನುವು ದೊರೆಯುವಂತಿದೆ. ಕೊಲ್ಹಾಪುರ ಕೆರೂರ ಮೊದಲಾದ ಸ್ಥಳಗಳಿಂದ ಬೆಳೆದ ಗಡಿಗರು ಬಂದಿರುವವು.

ಇಲ್ಲಿಯ ಜಾಯಿಂಟ ಸಬ್ ಜಡ್ಜರಾದ ಶ್ರೀ ಹೊನ್ನಾಪುರ ಇವರಿಗೆ ಫಸ್ಟಕ್ಲಾಸ ಮ್ಯಾಜಿಸ್ಟ್ರೇರಿಯಲ್ ಅಧಿಕಾರವು ದೊರೆತಿದೆ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ಭರತ ನಾಟ್ಯ ಸೇವಾ ನಾಟಕ ಮಂಡಳಿಯವರು ನಾಳಿನ ದಿವಸ ಶ್ರೀ ಹುಯಿಲಗೋಳ ಅಚ್ಯುತರಾಯರು ಬರೆದ "ಅಚಲ ಪದ" ಅಥವಾ ಧ್ರುವ ಚರಿತ್ರೆ ಎಂಬ ನಾಟಕವನ್ನು ಆಡಿ ತೋರಿಸಿದರು. ಇದರ ಬಗ್ಗೆ ಜನರಲ್ಲಿ ವಿಮರ್ಶೆ ನಡೆದಿದೆ.

ಮುಂಬಯಿ ಸರಕಾರ ಮತ್ತು ಪುನರ್ಘಟನಾ ಮಂಡಳ

ಪುಣೆ ತಾ|| ೩— ಮುಂಬಯಿ ಸರಕಾರದವರು ಪುನರ್ಘಟನಾ ಮಂಡಳದ ಶಿಫಾರಸುಗಳಲ್ಲಿ ಕಾರ್ಯವಾಗಿ ಒಳಕೆಯಲ್ಲಿ ತಂದ ಶಿಫಾರಸುಗಳ ಬಗ್ಗೆ ಒಂದು ಪತ್ರಿಕೆಯನ್ನು ಹೊರಡಿಸಿದ್ದಾರೆ. ನಡೆದ ವರ್ಷದಲ್ಲಿ ಎಷ್ಟು ಉಳಿತಾಯ ಮಾಡಿತು, ಎಂಬುದನ್ನು ಅವರು ಕೆಳಗಿನಂತೆ ತೋರಿಸಿದ್ದಾರೆ.

೧೯೩೩-೩೪ ಕೆಲವು ಖರ್ಚುಗಳ ಮೇಲೆ

ಭತ್ತೆ	೪೪೩೬೦೦	೫೭೮೦೦೦
ಪಗಾರ	೧೫೩೦೦	೩೪೬೦೦
ಸರ್ವಸಾಧಾರಣ	೧೨೩೦೦೦	೭೩೨೬೦೦
ಒಕ್ಕಲತನ	೧೦೫೦೦	೧೨೯೦೦
ಶಿಕ್ಷಣ	೪೪೫೦೦	೧೨೫೩೦೦
ಅರಣ್ಯ	೭೨೮೦	೧೦೧೦೦
ಆಬಕಾರಿ	೧೦೦೦೦	೧೨೦೦೦
ನ್ಯಾಯಖಾತೆ	೨೨೪೦೦	೨೦೯೦೦
ಭೂಕಂದಾಯ	೩೪೭೭೩	೬೯೯೬೨
ವೈದ್ಯಕೀಯ ಖಾತೆ	———	೩೦೦೦೦
ಪೋಲೀಸ	೪೧೦೦	೪೨೦೦
ಸಾರ್ವಜನಿಕ ಆರೋಗ್ಯ	೨೫೨೦೦	೨೫೨೦೦
ಪಬ್ಲಿಕ್ ವರ್ಕ್ಸ	೧೦೪೨೦	೧೭೬೩೦೦
ರಜಿಸ್ಟ್ರೇಶನ್	೫೦೬೦೦೦	೫೦೦೦೦
ಪೆನಶನದಲ್ಲಿ ಉಳಿತಾಯ	———	೭೦೦೦೦೦

ಮಿದನಾಪುರ ಅತ್ಯಾಚಾರ ಬ್ರಿಟಿಶ ಪತ್ರಗಳ ಅಭಿಪ್ರಾಯ.

ಲಂಡನ್ ತಾ|| ೪— ಮಿದನಾಪುರದಲ್ಲಿಯ ಅತ್ಯಾಚಾರದಿಂದ ವಿಲಾಯತಿಯಲ್ಲಿ ಕ್ಷೋಭೆಯುದ್ದಿದೆ. ಈ ಬಗ್ಗೆ ಇಲ್ಲಿಯ ಪತ್ರಿಕೆಗಳು ಕೆಳಗಿನಂತೆ ಅಭಿಪ್ರಾಯವನ್ನು ವ್ಯಕ್ತಮಾಡಿವೆ.

ಲಂಡನ್ ಟಾಯಿಮ್ಸ್— ಈ ಕೊಲೆಯು ಸಶಸ್ತ್ರ ಕಾವಲುಗಾರರ ಎದುರಿನಲ್ಲಿಯೇ ಆಯಿತೆಂಬುದು ನಿಜ. ಆದರೆ ಇದರ ಮೇಲಿಂದ ಪ್ರಾಂತಿಕ ಸರಕಾರದವರು ಅವಶ್ಯವಾದ ಸಂರಕ್ಷಣೆಯನ್ನು ಇಟ್ಟಿದ್ದಿಲ್ಲವೆಂದು ಎನ್ನಲು ಒದವದಿಲ್ಲ. ಬಂಗಾಲದಲ್ಲಿ ಈಗ ಇಟ್ಟಿರುವ ಇಲೀಸ ಸೈನ್ಯವನ್ನು ಇನ್ನೂ ಕೆಲವು ದಿವಸ ಇಡು[illegible] ಅವಶ್ಯವಿದೆ. ಕಾಂಗ್ರೆಸ್‌ದವರ ವೆಚ್ಚ ಉಳಿ[illegible]ಯದ ಹೇಳಿಕೆಯ ಕಡೆಗೆ ಲಕ್ಷ ಕೊಟ್ಟು ಬಂಗಾಲ ಸರಕಾರದವರು ಪೋಲೀಸ ಮತ್ತು ಸೈನ್ಯದ ಖರ್ಚನ್ನು ಕಡಿಮೆ ಮಾಡುವದು ಇಷ್ಟವಾಗಿರುವದಿಲ್ಲ.

ಡೇಲಿ ಟೆಲಿಗ್ರಾಫ್— ಈ ಅತ್ಯಾಚಾರವು ಆದರೂ ಸಹ ಬಂಗಾಲದಲ್ಲಿಯ ಅಶಾಂತತೆಯ ಭಾಗದಲ್ಲಿಯ ಪರಿಸ್ಥಿತಿಯು ಸುಧಾರಿಸತೊಡಗಿದೆಯೆಂದು ತಿಳಿಯಲು ಸಂದೇಹವಿಲ್ಲ.

ಡೇಲಿ ಮೇಲ— ಈ ಭಯಂಕರ ಅತ್ಯಾಚಾರವನ್ನು ನೋಡಲಾಗಿ, ಬಿಳೀ ಕಾಗದದ ವಿರೋಧಕರ ಸಂಖ್ಯೆಯು ಬೆಳೆಯತೊಡಗಿದೆಯೆಂದು ಎನ್ನಬಹುದು.

ಮಾರ್ನಿಂಗ ಪೋಸ್ಟ— ಬ್ರಿಟನದಲ್ಲಿಯ ಮವಾಳ ಧೋರಣದ ಮುಖಂಡರಾದರೂ ಈ ಅತ್ಯಾಚಾರದ ವಿಷಯವಾಗಿ ಸ್ಪಷ್ಟೀಕರಣ ಮಾಡಲು ಸಮರ್ಥರಿಲ್ಲ.

ಬೇಕು! ಬೇಕು! ಬೇಕು!

ಏಜಂಟರು ಬೇಕಾಗಿದ್ದಾರೆ

ಧಾರವಾಡದ [illegible]

ಕೊಡಲಾಗುವದು. [illegible]ಯುಳ್ಳವರು ಪತ್ರವ್ಯವಹಾರ ಮಾಡಬೇಕು.

—ವ್ಯವಸ್ಥಾಪಕ "ಕನ್ನಡಿಗ"

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಗುರುವಾರ ತಾ|| ೭-೯-೩೩ ನೇ ದಿವಸ ರಾತ್ರಿ

ಶ್ರೀ ರಾಮ

ಪಾದುಕಾ ಪಟ್ಟಾಭಿಷೇಕ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳೆಕೊಳ್ಳಬಾರದು.

ಸಂಘದೊಡೆಯರು,
ಗದಗ ಸಬಾಶಿವರಾಯರು

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಪತ್ತಿಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಒರೆಯಿರಿ

ಧಾರವಾಡ
ತಾ|| ೨೫-೮-೩೩

ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ

ನಂ. ಬಿ. ೨೭೮೮ | यथत् परवशं दुखं । यथदात्मवश सुखम्॥मनु | ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ಸಂಪಾದಕರು:—ಆಲೂರ ವೆಂಕಟರಾಯರು.

ಮುದ್ರಕರು

ವರ್ಷ ೧೦] ಧಾರವಾಡ— ಗುರುವಾರ ಭಾದ್ರಪದ ಬಹುಳ ೩ ಶಕೆ ೧೮೫೯ ತಾ|| ೨-೯-೩೭ [ಸಂಚಿಕೆ ೧೯೬

ಇನಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಪಂ. ಜವಾಹಿರರು ಪುಣೆಗೆ ಬರುವರು

ಪಂಡಿತ ಜವಾಹಿರರಿಗೆ ಮಹಾತ್ಮರ ಪತ್ರ

ಪುಣೆ ತಾ|| ೫— ಮಹಾತ್ಮಾಗಾಂಧಿಯವರು ಪಂಡಿತ ಜವಾಹಿರಲಾಲನೆಹರೂ ಇವರಿಗೆ ಒಂದು ಪತ್ರವನ್ನು ಬರೆದು, ಪುಣೆಗೆ ಬರಬೇಕೆಂದು ಕೇಳಿಕೊಂಡಿರುವರೆಂದು ಅಸೋಸಿಯೇಟಿಡ್ ಪ್ರೆಸ್ಸದವರಿಗೆ ತಿಳಿದು ಬಂದಿದೆ

(ಅ. ಪ್ರೆ)

ಕಾರವಾರ ಜಿಲ್ಲೆಯಲ್ಲಿಯ ಹೆಚ್ಚಿನ ಪೋಲೀಸರ ಖರ್ಚು

ಪುಣೆ ತಾ|| ೫— ಈಹೊತ್ತಿನ ಕಾಯದೆ ಮಂಡಳದ ಅಧಿವೇಶನದಲ್ಲಿ ಲೋಕಪಕ್ಷದ ... ರ್ವ ಸಭಾಸದರು ಕಾರವಾರ ಜಿಲ್ಹೆಯಲ್ಲಿಯ ಹೆಚ್ಚಿನ ಪೋಲೀಸರ ಖರ್ಚಿನ ಹಣದ ವಿಷಯವಾಗಿ ಒಂದು ಸೂಚನೆಯನ್ನು ತಂದಿದ್ದರು ಈ ಸೂಚನೆಯಲ್ಲಿ ಅವರು " ಈ ಹೆಚ್ಚಿನ ಪೋಲೀಸ ಖರ್ಚನ್ನು ಸರಕಾರದವರು ಅಷ್ಟಣಿ ಕೊಡುವಂತೆ ಕೇವಲ ಅಲ್ಲಿಯ ಜನರ ಮೇಲೆಯೇ ಹೇರದೆ, ಸಾಮಾನ್ಯವಾಗಿ ಪ್ರತಿಯೊಬ್ಬ ಕರ ಕೊಡುವವನ ಮೇಲೆಯೂ ಹೇರಬೇಕು " ಎಂದು ಸೂಚಿಸಿದ್ದರು ಸೂಚನೆಯ ಮೇಲೆ ಚರ್ಚೆ ನಡೆದು, ಅದು ನಾಪಾಸಾಯಿತು ಗೃಹಮಂತ್ರಿಗಳು ತಮ್ಮ ಭಾಷಣದಲ್ಲಿ, ಅಲ್ಲಿಯ ಜನರ ಅನನ್ವಿತ ಕೃತ್ಯಗಳನ್ನು ವಿಚಾರಕ್ಕೆ ತೆಗೆದುಕೊಂಡಲ್ಲಿ, ಹೆಚ್ಚಿನ 'ಪೋಲೀ'ಸರನ್ನಿಟ್ಟದ್ದೇ ನ್ಯಾಯವಾದದ್ದೆಂದು ತೋರುವದೆಂದು ಹೇಳಿದರು

ಕಾಯದೆ ಮಂಡಳದ ಕಾರ್ಯವು ಶನಿವಾರದೊಳಗಾಗಿ ಸಮಾಪ್ತವಾಗಬಹುದಾಗಿ ತೋರುತ್ತದೆ. (ಅ ಪ್ರೆ)

ಸೌ. ಗಂಗಾಬೇನರಿಗೆ ಶಿಕ್ಷೆ

ಮುಂಬಯಿ ತಾ||೫— ಇಲ್ಲಿಯ ಪ್ರಸಿದ್ಧ ಕಾಂಗ್ರೆಸ ಕೆಲಸಗಾರರಾದ ಸೌ ಗಂಗಾಬೇನ ಪಟೇಲ ಇವರು ಈ ಹೊತ್ತಿನ ದಿವಸ ಚರ್ನಿರೋಡಿಯಲ್ಲಿ ಪರದೇಶಿ ಅರಿವೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡುತ್ತಿದ್ದರು ಪೋಲೀಸರು ಅವರನ್ನು ಸೆರೆ ಹಿಡಿದು, ... ನೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ಖಟ್ಲೆಗೆ ಗುರಿ ಮಾಡಿದರು ಮ್ಯಾಜಿಸ್ಟ್ರೇಟರು ಅವರಿಗೆ ಪೋಲೀಸ ಕಮೀಶನರರ ಅಪ್ಪಣೆ ಮುರಿದದ್ದಕ್ಕೂ ಮತ್ತು ಪಿಕೆಟಿಂಗ ಮಾಡಿದ್ದಕ್ಕೂ ಕೂಡಿ, ೯ ತಿಂಗಳ ಸಾದಾ ಕೈದು ಹಾಗು ೧೦೦ ರೂ. ದಂಡ ಹೀಗೆ ಶಿಕ್ಷೆ ವಿಧಿಸಿದರು ಸೌ|| ಗಂಗಾಬೇನರು ಇದೀಗ ತಮ್ಮ ಶಿಕ್ಷೆಯನ್ನು ಅನುಭವಿಸಿ ಬಿಡುಗಡೆ ಹೊಂದಿ ಬಂದಿದ್ದರು ಬಿಡುಗಡೆ ಆದ ಕೂಡಲೆ ಅವರ ಮೇಲೆ ಪ್ರತಿಬಂಧಕ ನೋಟೀಸು ಪ್ರಕಟಿಸಲ್ಪಟ್ಟಿತ್ತು (ಅ. ಪ್ರೆ.)

ಕೌನ್ಸಿಲ ಆಫ್ ಸ್ಟೇಟ

ಸಿಮಲಾ ತಾ|| ೫— ಕೌನ್ಸಿಲ್ ಆಫ್ ಸ್ಟೇಟದ ಅಧಿವೇಶನವು ಈ ಹೊತ್ತಿನ ದಿವಸ ಸ್ವಲ್ಪೇ ಕಾಲ ನಡೆಯಿತು ಮೂರು ಸರಕಾರೀ ಮಸೂದೆಗಳು ತೀರ್ಮಾನಾದವು ಪ್ರಶ್ನೋತ್ತರ ಸಮಯದಲ್ಲಿ ವ್ಯಾಪಾರಿ ಕಾರ್ಯದರ್ಶಿ ಮಿ ಸ್ಟಿವಾರ್ಟ ಇವರು ಜಗದೀಶ ಪ್ರಸಾದರಿಗೆ ಉತ್ತರ ಕೊಟ್ಟದ್ದೇನೆಂದರೆ— ಸರಕಾರದವರು ಹಿಂದಿ—ಜಪಾನದ ನಡುವೆ ನಡೆಯುವ ವಿಚಾರ ವಿನಿಮಯದ ಕಾಲಕ್ಕೆ ಹಿಂದಿ ಉದ್ಯೋಗಗಳಿಗೆ ಸಂಬಂಧಿಸಿದವರ ಅಭಿಪ್ರಾಯವನ್ನಾದರೂ ವಿಚಾರಿಸಬೇಕೆಂದಿರುವರು ಈ ಕಾರಣ ಅವರು ಕೆಲವು ಔದ್ಯೋಗಿಕ ಮತ್ತು ವ್ಯಾಪಾರಿ ಸಂಘಗಳಿಗೆ ಪ್ರತಿನಿಧಿಗಳನ್ನು ಆರಿಸಿ ಕಳುಹಲು ಬರೆದಿರುವರು ಅವರು ಪ್ರತಿನಿಧಿಗಳನ್ನು ಆರಿಸಿ ಕಳುಹಿದಲ್ಲಿ ಹಿಂದಿ ಶಿಷ್ಟ ಮಂಡಳದವರು ವಿಚಾರ ವಿನಿಮಯದ ಸಮಯದಲ್ಲಿ ಉದ್ಭಾಟವಾಗುವ ಪ್ರಶ್ನೆಗಳ ವಿಷಯಕ್ಕೆ ಅವರ ಸಲಹೆಗಳನ್ನು ಕೇಳಿಕೊಳ್ಳುವರು

(ಅ ಪ್ರೆ)

ಸಿಮಲಾ ತಾ|| ೬ — ಕೌನ್ಸಿಲ್ ಆಫ್ ಸ್ಟೇಟದ ಈ ಹೊತ್ತಿನ ಅಧಿವೇಶನದಲ್ಲಿ ಶ್ರೀ ಮಥುರಾ ಪ್ರಸಾದ ಮೆಹ್ರೊತ್ರಾ ಇವರು ಖಾಸಗಿ ಮಸೂದೆಗಳಲ್ಲಿ ಒಂದು ಮಸೂದೆಯನ್ನು ಮಂಡಿಸಿದರು ಅದರ ಸಾರಾಂಶವೆಂದರೆ- ಅಮೇರಿಕೆಯ ಯುದ್ಧದ ಸಾಲವನ್ನು ತೀರಿಸುವದಕ್ಕಾಗಿ ಕೊಟ್ಟ ಹಿಂದುಸ್ಥಾನದ ಬೆಳ್ಳಿಯ ಮಾರಾಟದ ಬಗ್ಗೆ ಆದ ಪತ್ರವ್ಯವಹಾರವನ್ನು ಸಭೆಯಲ್ಲಿ ಇಡಬೇಕು ' ಎಂಬುದು ಇತ್ತು

ಪ್ರಶ್ನೋತ್ತರದ ಸಮಯದಲ್ಲಿ ಕಮಾಂಡರ ಇನ್ ಚೀಫ್ ಇವರು ಹುಸೇನ ಇಮಾಮ ಇವರಿಗೆ ಉತ್ತರ ಕೊಟ್ಟದುದೇನೆಂದರೆ—ಸಂರಕ್ಷಣೆಯ ಪ್ರಶ್ನೆಯ ಬಗ್ಗೆ ವಿಚಾರ ಮಾಡಲು ನಿಯಮಿಸಲ್ಪಟ್ಟ ತಜ್ಞರ ವರದಿಯನ್ನು ಪ್ರಸಿದ್ಧ ಮಾಡುವದು ಸೈನ್ಯಖಾತೆಯ ದೃಷ್ಟಿಯಿಂದ ಶಕ್ಯವಿಲ್ಲ ಆದರೆ ಒಂದೆರಡು ತಿಂಗಳಲ್ಲಿ ಈ ಪ್ರಶ್ನೆಯ ಬಗ್ಗೆ ಮತ್ತು ಕ್ಯಾಪಿಟೇಶನ್ ಚಾರ್ಜೆಸ್ ಟ್ರಿಬ್ಯೂನಲದವರು ವಿಚಾರ ಮಾಡಿದ ಈ ಪ್ರಶ್ನೆಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಸರಕಾರದವರು ತಮ್ಮ ನಿರ್ಣಯವನ್ನು ಪ್ರಸಿದ್ಧಮಾಡುವರು (ಅ ಪ್ರೆ)

ಲೆಜಿಸ್ಲೇಟಿವ್ಹ ಅಸೆಂಬ್ಲಿ

ಸಿಮಲಾ ತಾ|| ೫— ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಈ ಹೊತ್ತಿನ ದಿವಸ ಖಾಸಗಿ ಮಸೂದೆಗಳ ಚರ್ಚೆ ಆಗತಕ್ಕದ್ದಿತ್ತು (ಅ ಪ್ರೆ)

ಸಿಮಲಾ ತಾ|| ೬—ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಈ ಹೊತ್ತಿನ ವಿಷಯ ಸೂಚಿಕೆಯಲ್ಲಿ ನೂಲಿನ ಸಂರಕ್ಷಣೆಯ ಮಸೂದೆ ಹಾಗು ಹಿಂದಿ ಸಂಸ್ಥಾನಗಳ ಸಂರಕ್ಷಣೆಯ ಮಸೂದೆ ಇವು ಇರುವವು (ಅ ಪ್ರೆ)

ಸಿಮಲಾ ತಾ ೬— ಈ ಹೊತ್ತಿನ ಅಸೆಂಬ್ಲಿಯಲ್ಲಿ ಹಿಂದಿ ನೂಲಿನ ಸಂರಕ್ಷಣೆಯ ಮಸೂದೆಯು ಅವಿರೋಧವಾಗಿ ಸ್ವೀಕೃತವಾಯಿತು

ಸಂಸ್ಥಾನ ಸಂರಕ್ಷಣೆಯ ಮಸೂದೆಯನ್ನು ಸಿಲೆಕ್ಟ ಕಮೀಟಿಗೆ ಒಪ್ಪಿಸಬೇಕೆಂದು ಹೇಳುವಾಗ ಸರ್ ಹೇಗರು ಹೇಳಿದ್ದೇನೆಂದರೆ – ಮಸೂದೆಯನ್ನು ಅವಸರದಿಂದ ಪಾಸು ಮಾಡಿಕೊಳ್ಳುವದೆ ನೂ ಸರಕಾರದ ಇಚ್ಛೆಯಿಲ್ಲ ಅದು ಈ ಅಧಿವೇಶನದಲ್ಲಿಯೇ ಪಾಸಾಗಬೇಕೆಂದು ಸರಕಾರದವರ ಆಗ್ರಹವಿಲ್ಲ ಈಗ ನಿಯಮಿಸಲ್ಪಡುವ ಸಿಲೆಕ್ಟ ಕಮೀಟಿಯು ನವ್ಹೆಂಬರದಲ್ಲಿ ದಿಲ್ಲಿಯಲ್ಲಿ ಕೂಡುವ ಸ್ಪೇಶಲ್ ಅಧಿವೇಶನದ ಕಾಲಕ್ಕೆ ಕೂಡುವದು ಅವರು ಒಪ್ಪಿಸುವ ವರದಿಯನ್ನೂ ಮತ್ತು ಈ ಮಸೂದೆಯ ಮುಂದಿನ ಕ್ರಮಗಳನ್ನೂ ಆ ಸಮಯದ ಅಧಿವೇಶನ ಕಾಲದಲ್ಲಿ ವಿಚಾರ ಮಾಡಲು ಬರುವದು

ಅಗಸ್ಟ ತಿಂಗಳದಿಂದ ಕೈದಾದವರು

ಸಿಮಲಾ ತಾ ೬— ಹೋಮ ಸೆಕ್ರೆಟರಿ ಹ್ಯಾಲೆಟ್ ಇವರು ಈ ಹೊತ್ತಿನ ಕೌನ್ಸಿಲ್ ಆಫ್ ಸ್ಟೇಟದ ಅಧಿವೇಶನದಲ್ಲಿ ಅಗಸ್ಟ ೧ನೇ ತಾರೀಖಿನಿಂದ ಇತ್ತೀಚೆಗೆ ಕೈದು ಮಾಡಲ್ಪಟ್ಟವರ ಸಂಖ್ಯೆಯನ್ನು ಸಭೆಯಲ್ಲಿ ಇಟ್ಟರು ಕೈದಾದವರೆಲ್ಲರೇನೂ ಶಿಕ್ಷೆಗೆ ಗುರಿಯಾಗಿರುವದಿಲ್ಲ.

ಆ ಆ ಪ್ರಾಂತಗಳಲ್ಲಿ ಕೈದು ಮಾಡಲ್ಪಟ್ಟವರ ಸಂಖ್ಯೆಯು ಕೆಳಗಿನಂತೆ ಇದೆ.

ಮದ್ರಾಸ ೩೩, ಮುಂಬಯಿ ೫೭, ಸಂಯುಕ್ತಪ್ರಾಂತ ೩೧, ಪಂಜಾಬ ೭೦, ಬಿಹಾರ ಓರಿಸಾ ೧೧, ಮಧ್ಯಪ್ರಾಂತ ೬, ಆಸಾಮ ೧, ಸರಹದ್ದಪ್ರಾಂತ ೩, ದಿಲ್ಲಿ ೬

ಬಂಗಾಲದ ಅಂಕಿಯು ಹಸ್ತಗತವಾಗಿರುವದಿಲ್ಲ (ಅ ಪ್ರೆ)

ವಿಮಾನಿನ ಅಪಘಾತ

ಸಿಮಲಾ ತಾ| ೬— ಪಾಲಿದಾನ ... ಹತ್ತಿರ ಸಂಭವಿಸಿದ ವಿಮಾನದ ಅಪಘಾತದ ವಿಷಯವಾಗಿಯೂ ಮತ್ತು ಇಬ್ಬರು ಹಿಂದು ವೈಮಾನಿಕರ ಮರಣದ ಬಗ್ಗೆಯೂ ಸರಕಾರದವರ ಅಧಿಕೃತ ಸ್ಪಷ್ಟೀಕರಣವೇನೆಂದರೆ— ಕೆಳಗೆ ಇಳಿಯಲು ಸಿಗ್ನಲ ಕೊಡುವಾಗ ಕೈಯಿಂದ ಮುಂಚಿತವಾಗಿಯೇ ಮತ್ತು ನೆಲದಿಂದ ೪೦೦ ಫೂಟು ಉದ್ದಾಣ ಮಾಡಿದ ಮೇಲೆ ಯಂತ್ರವು ಒಮ್ಮಿಂದೊಮ್ಮೆ ಚಲ್ಲಾ ... ಅವಘಾತವು ಸಂಭವಿಸಿತು ಯಂತ್ರದಲ್ಲಿ ಏನಾದರೂ ದೋಷವಿತ್ತೆಂದು ... ಅಪಘಾತದ ಕಾರಣದ ಬಗ್ಗೆ ವಿಚಾರಣೆಯು ನಡೆಯುವದು (ಅ ಪ್ರೆ)

ಧಾರವಾಡದ ಚಟುವಟಿಕೆಗಳು.

ಮೊನ್ನೆ ಸಾಯಂಕಾಲಕ್ಕೆ ಕೆಲಗೇರಿಯ "ವಾಟರ ವರ್ಕ್ಸ"ದ ಎಂಜಿನ ಒಮ್ಮೆಲೆ ಕೆಟ್ಟದ್ದರಿಂದ ನಿನ್ನಿನ ದಿವಸ ನಳದಲ್ಲಿ ನೀರು ಬರಲಿಲ್ಲ ಎಂಜಿನದ ದುರಸ್ತಿಯಾಗುವ ವರೆಗೆ ನೀರು ಬರಲಾರದು. ಆದರೆ ಈ ಸಂಬಂಧದಲ್ಲಿ ಮ್ಯುನಿಸಿಪಾಲಟಿಯವರ ಪೂರ್ವ ಸೂಚನೆಗಳನ್ನು ಕೊಟ್ಟಿರಲಿಲ್ಲ ಮತ್ತು ಕಚೇರಿಯ ನೋಟೀಸು ಬೋರ್ಡಿಗೂ ಹಚ್ಚಿರಲಿಲ್ಲ

ಪ್ರತಿವರ್ಷದಂತೆ ನಾಳೆ ಹೆಣ್ಣುಮಕ್ಕಳ ಕಾಲೇಜದಲ್ಲಿ ವಾರ್ಷಿಕ ಸಮಾರಂಭವು ನಡೆಯುವದು. ಸಂಭಾಷಣಾದಿ ಕಾರ್ಯಕ್ರಮಗಳು ಜರಗುವವು ದೊಡ್ಡ ದೊಡ್ಡ ಜನರಿಗೆ ಟಿಕಿಟಿನ ಪ್ರವೇಶ ಧನವನ್ನಿಟ್ಟಿರುವರು ಬಂದ ಹಣವನ್ನು "ಗರ್ಲಗಾಯಿಡ"ಗೆ ಕೊಡುವರಂತೆ

ಅಧಿಕಾರಿಗಳ ಕ್ರೀಡಾಂಗಣವು ಪೂರ್ಣವಾಗಿ ತಯಾರಿಸಲ್ಪಟ್ಟದೆ

ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಎದುರಿಗೆ ಸ್ವರಾಜ್ಯ ಬ್ಯಾಂಕ ಮತ್ತು ಇನಶ್ಯೂರನ್ಸ ಕಂಪನಿ 'ಯೆಂ ಹೊಸ ಸಂಸ್ಥೆಯು ಸ್ಥಾಪಿತವಾಗಿದೆ

ಇಲ್ಲಿಯ ಕರ್ನಾಟಕ ಕಾಲೇಜದ ಗ್ಯಾದರಿಂಗ ತಾ|| ೨೫—೯—೩೩ನೆ ದಿವಸ ಎಂದು ನಿರ್ಣಯವಾಯಿತು ಇದೇ ಸುಮಾರಕ್ಕೆ ಹಾಯಸ್ಕೂಲ ಗ್ಯಾದರಿಂಗ ಆಗುವದು. ಅಂತೂ ಈ ತಿಂಗಳ ಕೊನೆಯ ವಾರವೆಂದರೆ ಗ್ಯಾದರಿಂಗಗಳ ಸುಗ್ಗಿಯು.

ಗೆ ಯಿಂದಾಗಿ ಆಹುತಿ

ಅಂ ... ರ ತಾ|| ೪ — ತಾ|| ೩೦-ನೆ ದಿವಸ ಆದ ದಂಗೆಯ ಕಾಲಕ್ಕೆ ಗೋಳೀಬಾರದಲ್ಲಿ ಗಾಯಹೊಂದಿದ ಮುಸಲ್ಮಾನ ಯುವಕನು ನಿನ್ನಿನ ದಿವಸ ಆಸ್ಪತ್ರೆಯಲ್ಲಿ ಮರಣ ಹೊಂದಿದನು

ಮದ್ರಾಸ ಕಾಂಗ್ರೆಸ ಭವನವನ್ನು ತಿರುಗಿ ಕೊಡುವರು

ಮದ್ರಾಸ ತಾ|| ೬— ಮದ್ರಾಸ ಸರಕಾರದವರು ಇಲ್ಲಿಯ ಕಾಂಗ್ರೆಸ ಭವನವನ್ನು ಕಾಂಗ್ರೆಸ ಅಧಿಕಾರಿಗಳಿಗೆ ತಿರುಗಿ ಕೊಡುವದನ್ನು ನಿಶ್ಚಯಿಸಿ ಅದರಂತೆ ಮಾಡಲು ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಿಗೆ ತಿಳಿಸಿರುವರೆಂದು ತಿಳಿಯುತ್ತದೆ

ಕೊನೆಯುಚ್ಚು.



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚೂರ್

ಶಾಸ್ತ್ರೋಕ್ತವಾದ ಮಾತ್ರ ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವವು. 'ಹೆಮ್ಮುಗುಳು' ವಸಡೆಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿ ಇದೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಒಂದು ಗುಣದ ಕತ್ತವು "ಕಚ್ಚೂರ" ದಂತಮಂಜನದಲ್ಲಿ ಅಡಕವಾಗಿದೆ ... ಕಚ್ಚೂರ ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆದ್ದು ಮಾರುಗೆಲ್ಲು" ಎಂಬ ನಾಣ್ಣುಡಿಯಂತೆ ನಡೆಯಿರಿ. ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

ಒಳ್ಳೆ ಹಳೆಯದಾದ ಪ್ರಖ್ಯಾತಿಸಿದ್ಧಿ ಹೊಂದಿದ
ಹೆಚ್ಚಿನ ಪ್ರಯಾಣಕ್ಕೆ ಅನುಕೂಲವಾಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ|| ೧೬-೫-೩೩ ರ ವರೆಗೆ ಉತ್ತರ ಖಂಡ (ಹಿಂದುಸ್ಥಾನ) ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀ ರಾಮೇಶ್ವರ ಸಮುದ್ರ ದಾಟಿ ಲಂಕಾ ಕ್ಷೇತ್ರಗಳ ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೆಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಅಶ್ವಯುಜ ಶು|| ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಷನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ||೭		೧೯ ಲಖನೌ	೨೪	೩೭ ಕುಂಭಕೋಣಂ	೧೫
೨ ನಾಶಿಕ	೩-೪	೨೦ ಅಯೋಧ್ಯೆ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲಹಾಬಾದ	,,	೩೯ ಕನ್ಯಾಕುಮಾರಿ [ಹಡಗದಿಂದ]	೧೮
೪ ಸೋಮನಾಥ (ಹಡಗದಿಂದ)	೮ ೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಕಾಶೀ	೨೮-೨೯-೩೦ ೩೧ ನವ್ಹೆಂಬರ ತಾ||೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲಿಟಾಣಾ (ಜೈನತೀರ್ಥ)	೧೦ ೧೧	೨೪ ಸಾರನಾಥ	,,	೪೨ ಅನುರಾಧಪುರ [ಲಂಕಾ]	೨೩
೭ ಅಬುಪಹಾಡ (ಜೈನತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಟಿ [ಹಡಗದಿಂದ]	,,
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ಜೈನತೀರ್ಥ)	೩	೪೪ ಮದುರೆ	೨೪
೯ ಜಯಪುರ	,,	೨೭ ಗಿರಿ	,,	೪೫ ತಿರುಪತಿ	೨೫
೧೦ ಬರೋಡೆ	೧೫	೨೮ ಸಮ್ಮೇದಶಿಖರ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಉಜ್ಜಯಿನಿ	೧೬	೨೯ ಕಲಕತ್ತಾ	೫ ೬-೭	೪೭ ಬೆಂಗಳೂರ	೨೬
೧೨ ಆಗ್ರಾ	೧೭	೩೦ ಜಗನ್ನಾಥಪುರಿ	೮	೪೮ ಮೈಸೂರ	೨೭-೨೮
೧೩ ಮಥುರಾ	೧೮ ೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,	೩೪ ಮದ್ರಾಸ	೧೨ ೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,		

ಈ ಎಲ್ಲ ಮಹಾಯಾತ್ರಾಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು|| ೧೩ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಮುಟ್ಟುವದು

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಸೆಕೆಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟಿರು. ಆದಕಾರಣ ಟಿಕೀಟ ಗಳಿಗಾಗಿ ತ್ವರೆಮಾಡತಕ್ಕದ್ದು

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ ಏಜನ್ಸ ರೆಂಟಿಗಳು— ಸದರ ಕಂಪನಿಯ ಏಜನ್ಸರೆಂಟಿಗಳಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರ ಹಾಗು ವತನದಾರರ ಉತಾರ ತಕ್ತೆಗಳು ... ಶ್ರೀ ಗೌರೀಶಂಕರ ಕಂಪನಿಗೆ ... ಯೋಗ್ಯ ಕಮೀಶನ್ ಕೊಡಲ್ಪಡುವದು

ಜಿ. ಎ ಶಿರೂರ
ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ
ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬಾಳ್‌ಸೇಲರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ. ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ... ತ್ತವೆ ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ ... ಕನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ| ೨-೯-೩೩

ಮಳಿಗುಡ್ ಹೈದರಾಬಾದ (ಡೆಕ್ಕನ್) **ಬಿ ಜಿ ಚಿಮ್ಮಲಗಿ**

ಭುವನೇಶ್ವರಿ ಭಾಂಡಾರ.

ಬೈಲಹೊಂಗಲದಲ್ಲಿ ಎಲ್ಲ ಬಗೆಯ ಬಟ್ಟೆ, ಔಷಧ, ಸುಗಂಧಿ ಸಾಮಾನು, ಸ್ಟೇಶನರಿ ಹಾಗೂ ರೈತರಿಗೆ ಬೇಕಾಗುವ ಒಕ್ಕಲತನದ ಎಲ್ಲ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ವತನದಾರ ಕಾಟಾ.

ಬೈಲಹೊಂಗಲದಲ್ಲಿ ದಲಾಲಿಯ ಅಂಗಡಿ ಹತ್ತಿ, ಶೇಂಗಾ ಮುಂತಾದ ಯಾವದೇ ಜಿನಸುಗಳನ್ನು ಮಾರಬೇಕಾದರೆ ನಮ್ಮಲ್ಲಿ ಬನ್ನಿ ದರ, ಗೋದಾವುನ, ನೀರು, ಇಳಿಯುವ ಸ್ಥಳ

ಕನ್ನಡಿಗ.

ಧಾರವಾಡ— ಗುರುವಾರ ತಾರೀಖು ೭—೯—೧೯೨೯

ಸಂಸ್ಥಾನಗಳೂ ಸ್ವರಾಜ್ಯವೂ.

ದೇಶವು ಒಂದೇ ರಾಷ್ಟ್ರವಿದ್ದರೂ ಇದರಲ್ಲಿ ಈಗ ಎರಡು ಪರಸ್ಪರ ವಿರುದ್ಧವಾದ ... ಡ. ಬರುತ್ತವೆ. ಒಂದು ಬ್ರಿಟಿಶ ಹಿಂದುಸ್ಥಾನದಲ್ಲಿ ಪ್ರಚಲಿತವಾಗಿರುವ ... ವಿಧಾನಸಭೆ ... ಸಂಸ್ಥಾನಗಳಲ್ಲಿರುವ ದ್ವಿಪದ್ಧತಿ. ಬ್ರಿಟಿಶ ಹಿಂದುಸ್ಥಾನದ ... ತಿಯು ನಿಜವಾಗಿ ಉಳ್ಳದಿದ್ದರೂ ತೋರಿಗೊಡಿಕೆಯಲ್ಲಾದರೂ ಅತ್ಯಂತ ಆನಿ ... ತವಿದ್ದಂತೆ ತೋರುವದಿಲ್ಲ. ಕಾಯದೆ ಮಂಡಳಗಳಲ್ಲಿ ಪ್ರಜಾಪ್ರತಿನಿಧಿಗಳು ... ನ್ನು ಕಾಯದೆ ... ವರು ... ಕೊಡುವದು, ನಿಯಮ ಮಾಡುವ ... ಗಳು ನಡೆಯುವದು-ಇವೇ ಮುಂತಾದವುಗಳು ಇಲ್ಲಿಯ ಆಡಳಿತಕ್ಕೆ ಅಲ್ಪ ... ಪ್ರಜಾಸತ್ತಾತ್ಮಕ ರಾಜ್ಯಪದ್ಧತಿಯ ಬಾಹ್ಯ ಸ್ವರೂಪವನ್ನು ಉಂಟು ಮಾಡ್ಯ ... ಸಂಸ್ಥಾನಗಳಲ್ಲಿ ಮಾತ್ರ ಇದರ ವಿಪರೀತ ಸ್ಥಿತಿಯು ಕಂಡು ಬರುತ್ತದೆ. ಸಂ ... ಂದರೆ ಬ್ರಿಟಿಶ ಸಾಮ್ರಾಜ್ಯದ ಪಂಚಮ ಜಾರ್ಜ ಬಾದಶಹರಿಗಿಂತಲೂ ಒಂದು ... ಟ್ಟಿಗೆ ಅನಿರ್ಬಂಧಿತವಾದ ಅಧಿಕಾರವುಳ್ಳವನು. ಪಂಚಮ ಜಾರ್ಜ ಬಾದಶ ... ಯಾವ ಅಧಿಕಾರಗಳಿಲ್ಲವೋ ಅವೆಲ್ಲ ಅಧಿಕಾರಗಳು ಈ ಸಂಸ್ಥಾನಿಕರಿಗೆ ಇರುತ್ತ ... ಜವಾಬದಾರಿ ಆತನ ಕೈಯಲ್ಲಿ ಸಂಸ್ಥಾನಿಕನ ಸರ್ವತಂತ್ರ ಸ್ವತಂತ್ರನು ಮಾತ್ರವಂ ... ಹೇನೆಂದರೆ, ಬಹಳ ದೊಡ್ಡ ದೊಡ್ಡ ಸಂಸ್ಥಾನಿಕರಿಗೆ ಎಷ್ಟು ಅಧಿಕಾರಗಳೋ ... ಬಾಲ್ಕು ಗೇಣು ಜಾಗೆಯ ಮೇಲೆ ಒಡೆತನವುಳ್ಳ ಸಂಸ್ಥಾನಿಕನಿಗೂ ಇರುತ್ತವೆ! ... ಸ್ಥಿತಿ. ಹೀಗೆ ನಿರಂಕುಶವಾದ ಅಧಿಕಾರಗಳನ್ನು ಚಲೋ ರೀತಿಯಿಂದ ಉಪ ... ಸುಸಂಸ್ಕೃತರಾದ ಸಂಸ್ಥಾನಿಕರು ಎಲ್ಲಿಯೋ ನೂರಕ್ಕೆ ಒಬ್ಬರು. ಮಿಕ್ಕವರೆಲ್ಲ ... ಜನಗಳೇ. ಇಂಥವರ ವಿರುದ್ಧವಾಗಿ ಅಲ್ಲಿಯ ಪ್ರಜೆಗಳು 'ಬ್ರ' ಎಂದು ... ರಿಕ್ಕಾ ಕಳವು. ಅಲ್ಲಿಯ ಪ್ರಜೆಗಳು ಇಷ್ಟು ದಿವಸ ಬ್ರಿಟಿಶ ವೃತ್ತಪತ್ರಗಳ ... ವನ್ನು ದುಃಖಗಳನ್ನು ತೋಡಿಕೊಳ್ಳುತ್ತಿದ್ದರು. ಆದರೆ, ಈ ಸಲ ಒಂದು ... ಯು ಪಾಸಾಗತಕ್ಕದ್ದಿದ್ದು, ಆದರಿಂದ ಬ್ರಿಟಿಶ ಇಲಾಖೆಗಳಲ್ಲಿಯೂ ಸಂಸ್ಥಾನಿಕ ... ಯಿತ್ತದಂತೆ ಆಗುತ್ತದೆ. ಅಂದ ಬಳಿಕ ಅಲ್ಲಿಯ ಪ್ರಜೆಗಳು ತಮ್ಮ ಗೋಳ ... ವದು ಯಾರ ಎದುರಿಗೆ? ಬ್ರಿಟಿಶ ಪ್ರಜೆಗಳು ಈಗ ಸ್ವರಾಜ್ಯವನ್ನು ಸಂ ... ಬದ್ಧರಂತಹರಾಗಿರುವರಷ್ಟೆ. ಹೀಗೆ ಬ್ರಿಟಿಶ ಹಿಂದುಸ್ಥಾನಕ್ಕೆ ಸ್ವರಾಜ್ಯವು ... ಗ್ಗಲಿನಲ್ಲಿಯೇ ಇರುವ ಸಂಸ್ಥಾನಗಳ ಪ್ರಜೆಗಳ ಗೋಳಾಟವು ತಪ್ಪುವದಿಲ್ಲ. ಅದ ... ಕಲಿಬ್ಬಿಸುವ ಹೊಸ ಸುಧಾರಣೆಯಲ್ಲಿ ಸಂಸ್ಥಾನಿಕರ ಪ್ರವೇಶವು ಇಲ್ಲಿಯ ... ಲ್ಲಿ ಆಗುವದು. ಅಂದ ಬಳಿಕ ರಾಷ್ಟ್ರೀಯ ಸಭೆಯಾದರೂ ಸಂಸ್ಥಾನದ ಪ್ರಜೆ ... ಳಗೆ ಸೇರಿಸಿಕೊಂಡೇ ಅವರ ಸುಖದುಃಖಗಳ ವಿಚಾರವನ್ನು ಮಾಡಲು ಇನ್ನು ... ಈಗ ರಾಷ್ಟ್ರೀಯ ಸಭೆಯು ಹಾಗೆ ಮಾಡುತ್ತಿರುವದಿಲ್ಲ. ಸಂಸ್ಥಾನದ ಪ್ರಜೆಗ ... ನರೂ ಇದರ ವಿಚಾರವನ್ನು ಮಾಡುವರೇನು? ಆದರೆ, ಅದಕ್ಕೆ ಮುಂಚೆ, ... ಯು ಪುನರುಜ್ಜೀವನವಾಗಬೇಕಲ್ಲವೆ?

... ನುಡಿಗಳು.

... ರಿಗೂ ಮೋಟಾರಗಾಡಿಗಳಿಗೂ ಸ್ಪರ್ಧೆ ನಡೆದಿದೆಂಬುದು ಎಲ್ಲ ... ಇದೆ. ಮೋಟಾರುಗಳಿಂದ ಉ ... ಎಷ್ಟೋ ಜನ ನಿಯಾಗರುವುದು ... ಹಾನಿಯನ್ನು ತಪ್ಪಿಸುವ ಸಲು ... ತಾನೇ ತನ್ನ ಮೋಟಾರು ... ದ್ದಾರೆಂದು ಸುದ್ದಿ ಇತ್ತು. ಮೊ ... ಕಾಯ ದೆ ಮಂಡಳದಲ್ಲಿ ... ಅಯಾ ... ವ್ಯಾ ... ರಕಾರಗಳ ... ಪಡೆದ ಕೆಲವು ಕರಾ ... ಇಂಥ ಮೋಟಾ ... ಸರ್ವಿಸುಗ ... ದುದೆಂಬ ಕಾಯದೆಯು ಅಲ್ಲಿ ... ಮುಂದೆಯೂ ಅದು ಮಂ ... ಜಾರು ಮಾಡಲ್ಪಟ್ಟು ಆ ಕಾಯದೆಗೆ ಸರಕಾರದ ಒಪ್ಪಿಗೆ ದೊರೆತು ಅದು ಪ್ರಚಾರದಲ್ಲಿ ಬರುವದೆಂದೂ ಆ ಮೇಲೆ ರೇಲ್ವೆಗಳು ತಮ್ಮ ಮೋಟಾರು ಗಾಡಿಗಳನ್ನು ಇಟ್ಟು ಈಗಿನ ಮೋಟಾರುಗಳ ಬೆಳವಣಿಗೆಯನ್ನು ನಿಲ್ಲಿಸಲು ಪ್ರಯತ್ನಿಸುವವೆಂದೂ ತಿಳಿಯಲು ಆಸ್ಪದ ಇದೆ. ಆದ ಕಾರಣ, ಮೋಟಾರಿನವರು ತೀವ್ರ ಎಚ್ಚರಾಗಬೇಕು. ಅವರು ತಮ್ಮದೊಂದು ದೊಡ್ಡ ಸಂಘವನ್ನು ಮಾಡಿಕೊಂಡು ತಮ್ಮ ಹಿತವನ್ನು ಕಾಯ್ದುಕೊಳ್ಳುವದು ಅವಶ್ಯವಿದೆ. ಅಲ್ಲದೆ ಈಗಿನಗಿಂತ ಹೆಚ್ಚು ವ್ಯವಸ್ಥಿತವಾಗಿ ಕಾರ್ಯಮಾಡಹತ್ತಿ ರೇಲ್ವೆ ಕಂಪನಿಗಳು ಆಯಾ ಸ್ಥಳಗಳಲ್ಲಿ ಮೋಟಾರುಗಳನ್ನಿಡುವ ಅವಶ್ಯವಿಲ್ಲೆಂಬ ಸಂಗತಿಯನ್ನು ಸರಕಾರಕ್ಕೆ ಸಿದ್ಧಮಾಡಿ ತೋರಿಸಬೇಕು.

... ನದಿಯ ಮಹಾಪೂರ

... ದ (ಸಿಂಧ) ತಾ|| ೫— ಈ ಹೊ ... ಮುಂಜಾನೆ ಕೋರ್ಟ ಎಂಬಲ್ಲಿ ಸಿಂ ... ನೀರು ೨೪ ಲ ಫೂಟಿನ ವರೆಗೆ ... ಯೊಳಗಾಗಿ ನೀರಿಳಿ ಇಳಿದು ಹೋ ... ಂದಾಜಿದೆ. ಸಕ್ಕರದಲ್ಲಿ ನೀರು ... ದೆ. (ಅ ಪ್ರ)

ಮಿ. ಆ್ಯಂಡ್ರೂಜರ ಪ್ರಯಾಣ

ಪುಣೆ ತಾ|| ೫— ದೀನಬಂಧು ಸಿ ಎಫ್ ಆ್ಯಂಡ್ರೂಜ ಇವರು ನಾಳಿನ ದಿವಸ ಸಂಜೆಗೆ ಕಲಕತ್ತೆಗೆ ಹೋಗತಕ್ಕವರಿದ್ದಾರೆ. ಅವರು ಪನಾಮದಲ್ಲಿ ಶಾಂತಿ ನಿಕೇತನಕ್ಕೆ ಭೆಟ್ಟಿಕೊಟ್ಟು ಮುಂದೆ ಹೋಗುವರು

(ಅ ಪ್ರ)

ಮುಂಬಯಿ ಇಲಾಖೆಯ ಪೋಲೀಸ ಖಾತೆಯ ವರದಿ

ಮುಂಬಯಿ ತಾ. ೫—ಮುಂಬಯಿ ಇಲಾಖೆಯ ಇನಸ್ಪೆಕ್ಟರ ಜನರಲ್ ಆಫ್ ಪೋಲೀಸ ಇವರು ೧೯೩೦ನೆ ಇಸ್ವಿಯ ಮುಂಬಯಿ ಇಲಾಖೆಯ (ಸಿಂಧವನ್ನು ಹೊರ್ತು ಪಡಿಸಿ) ಪೋಲೀಸ ಖಾತೆಯ ವರದಿಯನ್ನು ಇದೀಗ ಪ್ರಸಿದ್ಧ ಮಾಡಿದ್ದಾರೆ. ಅವರು ತಮ್ಮ ಈ ವರದಿಯಲ್ಲಿ ೧೯೩೦ರಲ್ಲಿ ಕಾಯದೇ ಭಂಗವು ಪುನಃ ಸುರುವಾದುದರಿಂದ ಪೋಲೀಸರು ಎಷ್ಟು ದಕ್ಷತೆಯಿಂದ ಕೆಲಸ ಮಾಡಬೇಕಾಯಿತೆಂಬುದನ್ನೂ ಮತ್ತು ಅವರು ಆರ್ಡಿನನ್ಸು ಹಾಗು ಇತರ ಕಾಯದೆಗಳ ಅನ್ವಯ ಕಾಯದೆಗೆ ವಿರುದ್ಧವಾದ ಚಟುವಟಿಕೆಗಳನ್ನು ಎಷ್ಟು ಪರಿಣಾಮಕಾರಿ ರೀತಿಯಿಂದ ಹತ್ತಿಕ್ಕಿದರೆಂಬುದನ್ನೂ ಒತ್ತಿ ಒತ್ತಿ ಹೇಳಿದ್ದಾರೆ. ಈ ವರದಿಯಲ್ಲಿ ಅವರು ಉಲ್ಲೇಖಿಸಿರುವದೇನಂದರೆ— ಈ ವರ್ಷದ ಪ್ರಾರಂಭದಲ್ಲಿ ಇಲಾಖೆಯಲ್ಲೆಲ್ಲ ಕಾಯದೇಭಂಗ ಚಳವಳಿಯು ಪ್ರಾರಂಭವಾದದ್ದೇ ಪ್ರಮುಖವಾದ ಸಂಗತಿಯಾಗಿದೆ. ಆದರೆ ಆರ್ಡಿನನ್ಸುಗಳ ಮೂಲಕ ಚಳವಳಿಯು ಚಳವಳಿಯವರು ಕಲ್ಪನೆ ಮಾಡಿಕೊಂಡಂತೆ ಹುರಿಗೊಳ್ಳಲಿಲ್ಲ. ಅದು ತೀವ್ರವಾಗಿಯೇ ಕಮರಿಹೋಯಿತು. ಆರ್ಡಿನನ್ಸು, ಕ್ರಿಮಿನಲ್‌ಲಾ ಅಮೆಂಡಮೆಂಟ ಮತ್ತು ಮುದ್ರಣ ಕಾಯದೆ ಇವುಗಳ ಅನ್ವಯ ಸಾಕಷ್ಟು ಅಧಿಕಾರವು ದೊರೆತಿದ್ದರಿಂದ ಕಾಂಗ್ರೆಸ ಚಳವಳಿಯವರ ವಿರುದ್ಧವಾಗಿ ಸಂಘಟಿತ ಮತ್ತು ಉಗ್ರವಾದ ಉಪಾಯಗಳನ್ನು ಕೈಕೊಳ್ಳುವದು ಸಾಧ್ಯವಾಯಿತು. ಚಳವಳಿಯು ಪ್ರಾರಂಭವಾದ ಸ್ವಲ್ಪೇ ಸಮಯದಲ್ಲಿ ಕೆಲವು ಪ್ರಮುಖರಾದ ಮುಖಂಡರು ಜೇಲಿನಲ್ಲಿ ಬಂಧಿಸಲ್ಪಟ್ಟರು. ಇನ್ನೂ ಕೆಲವರ ಮೇಲೆ ಪ್ರತಿಬಂಧಕ ನೋಟೀಸು ಪ್ರಯೋಗಿಸಿ ಅವರು ಚಳವಳಿಯಲ್ಲಿ ಭಾಗ ತೆಗೆದುಕೊಳ್ಳದಂತೆ ವ್ಯವಸ್ಥೆ ಮಾಡಿತು. ಕಾಂಗ್ರೆಸ್ ಸಂಸ್ಥೆಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಸಂಘಗಳನ್ನು ಕಾಯದೆಗೆ ವಿರುದ್ಧ ಮಾಡಿತು. ಆ ಸಂಘಗಳ ಕಟ್ಟಡಗಳನ್ನು, ಕಚೇರಿಗಳನ್ನು ಸರಕಾರದ ವಶಕ್ಕೆ ತೆಗೆದುಕೊಂಡಿತು. ಕಾಂಗ್ರೆಸದ ಯಾವದೇ ಬಹಿರಂಗ ಚಳವಳಿಗೆ ಆಸ್ಪದವನ್ನು ಕೊಡಲಿಲ್ಲ. ಅಧಿಕಾರಿಗಳು ಅಹಮ್ಮದಾಬಾದದ ಗುಜರಾಥ ಪ್ರಾಂತಿಕ ಸಮಿತಿ ಮತ್ತು ಕಾಯದೆಗೆ ವಿರುದ್ಧವಾದ ಇತರ ಸಂಸ್ಥೆಗಳ ದ್ರವ್ಯನಿಧಿಯ ವಿಷಯವಾಗಿ ಒಳ್ಳೆ ಆಸ್ಥೆಯಿಂದ ವಿಚಾರಣೆ ನಡಿಸಿ, ಅವುಗಳನ್ನು ಪತ್ತೆ ಹಚ್ಚಿ, ಒಟ್ಟಿಗೆ ೮೪೦೦೦ ರೂಪಾಯಿಗಳನ್ನು ಜಪ್ತುಮಾಡಿದರು. ಇದರಲ್ಲಿ ಅವುಗಳ ಮೇಲಿನ ಬಡ್ಡಿಯು ಕೂಡಿಲ್ಲ. ಕೆಲವು ದಿವಸ ಪ್ರತಿನಿತ್ಯವೂ ತಪ್ಪದೆ ಹೊರಡುತ್ತಲಿದ್ದ ಕಾಂಗ್ರೆಸ ಬುಲೆಟಿನಗಳು ಮತ್ತು ಅನಧಿಕೃತ ಪತ್ರಿಕೆಗಳು ಯಾವಾಗಾದರೊಮ್ಮೆ ಹೊರಡತೊಡಗಿದವು. ಕೆಲವರು ಕಾಯರಾ ಹಾಗು ಅಹಮ್ಮದಾಬಾದದಲ್ಲಿ ಚಳವಳಿಯ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಹುಟ್ಟಿಸಲು ಪ್ರಯತ್ನಿಸಿದರು. ಅವರ ಯತ್ನವು ಸಫಲವಾಗಲಿಲ್ಲ. ಮಹಾತ್ಮಾ ಗಾಂಧಿಯವರ ಮೆಚ್ಚಿಗೆಯ ಸಮರ ಭೂಮಿಯಾದ ಬಾರ್ಡೋಲಿಯ ಜನರು ಕ್ರಮೇಣ ತಮ್ಮ ತಪ್ಪನ್ನು ತಿಳಿದುಕೊಂಡು ಚಳವಳಿಯಿಂದ ತಮ್ಮ ದೃಷ್ಟಿಯನ್ನು ಹೊರಳಿಸಿದರು. ಇದರ ಪರಿಣಾಮವೆಂದರೆ ಜುಲೈ ತಿಂಗಳಲ್ಲಿ ಅಲ್ಲಿ ರಾಜನಿಷ್ಠ ಸಭೆಯನ್ನು ಕೂಡಿಸುವದು ಸಾಧ್ಯವಾಯಿತು. ಈ ಸಭೆಗೆ ಅನೇಕ ಜನರು ಬಂದಿದ್ದರು.

ಈ ವರ್ಷದಲ್ಲಿ ಯಾವಾಗಲೂ ಬಹಳ ತೊಂದರೆ ಕೊಡಹತ್ತಿದ ಭಾಗವೆಂದರೆ ಕಾರವಾರ ಜಿಲ್ಹೆಯೇ ಆಗಿದೆ. ಈ ಭಾಗದಲ್ಲಿ ಕೆಲವು ಚಳವಳಿಗಾರರು ಸಂಘಟಿತ ರೀತಿಯಲ್ಲಿ ಚಳವಳಿಯನ್ನು ಸಾಗಿಸಿದರು. ಇವರು ಮೈಸೂರ ಸಂಸ್ಥಾನದಲ್ಲಿ ಅಡಗಿಕೊಂಡಿರುತ್ತಿದ್ದರು. ಈ ಚಳವಳಿಯು ಕಾರವಾರದಲ್ಲಿ ಒಳ್ಳೇ ಉಗ್ರವಾಗಿ ಸಾಗಿತು. ಅಲ್ಲಿಯ ಕೆಲವು ರೈತರು ಸಿಂದಿ ಬನಗಳನ್ನು ನಾಶ ಮಾಡುವದು ರಾಜನಿಷ್ಠರ ಮನೆಗಳನ್ನು ಸುಡುವದು ಮೊದಲಾದ ಅತ್ಯಾಚಾರಗಳನ್ನು ಮಾಡಿದರು. ಇವಲ್ಲದೆ ಕರನಿರಾಕರಣ ಚಳವಳಿಯಾದರೂ ಒಂದೇ ಸಮನೆ ನಡೆದಿತ್ತು.

ಗವ್ಹರ್ನರರು ಇಲಾಖೆಯಲ್ಲಿ ಪ್ರವಾಸಕೆ ಹೋದ ಕಾಲಕ್ಕೆ ಜನರು ಅವರನ್ನು ಹೃತ್ಪೂರ್ವಕವಾದ ಆದರ ಸತ್ಕಾರಗಳಿಂದಲೂ ಉತ್ಸಾಹದಿಂದಲೂ ಬರಮಾಡಿಕೊಂಡರು. ಇದನ್ನು ನೋಡಲಾಗಿ ಜನರ ಮನೋವೃತ್ತಿಯಲ್ಲಿ ಬದಲಾಗಿದುದು ಸ್ಪಷ್ಟವಾಗಿ ಕಂಡು ಬರುವದು.

ಈ ಕಾಯದೆಭಂಗ ಚಳವಳಿಯಲ್ಲಿ ಪೋಲೀಸರ ನೈತಿಕ ಹಾಗು ಸರ್ವಸಾಧಾರಣ ವರ್ತನವು ಮಾದರಿಯದಾಗಿತ್ತು. (ಅ ಪ್ರ)

ಮಹಾತ್ಮಾ ಗಾಂಧಿಯವರ ಸದ್ಯದ ತೂಕ.

ಪುಣೆ ತಾ|| ೫— ಮಹಾತ್ಮಾ ಗಾಂಧಿಯವರ ಸದ್ಯದ ತೂಕವು ೯೯ ಪೌಂಡು ಇರುತ್ತದೆ. ಆಂದರೆ ಅವರ ತೂಕವು ಈಗ ಉಪವಾಸದ ಪ್ರಾರಂಭದಕ್ಕಿಂತ ಇನ್ನೂ ೫ ಪೌಂಡು ಕಡಿಮೆ ಇದೆ. (ಅ ಪ್ರ)

ಪಂಡಿತ ಜವಾಹಿರರು ಪುಣೆಗೆ ಬರುವರು.

ಪುಣೆ ತಾ|| ೫— ಪಂಡಿತ ಜವಾಹಿರಲಾಲ ನೆಹರೂ ಇವರು ಮಹಾತ್ಮಾ ಗಾಂಧಿಯವರಿಗೆ ತಾರಿನಿಂದ ಉತ್ತರಕೊಟ್ಟು, ತಾವು ತಾ|| ೮ ಇಲ್ಲವೆ ೯ ನೆ ಸಪ್ಟೆಂಬರ ದಿವಸ ಪುಣೆಗೆ ಬರುವೆನೆಂದು ತಿಳಿಸಿದ್ದಾರೆ. (ಅ. ಪ್ರ)

ಡಾ. ಕುಲಕರ್ಣೀಜ

ಲಿಬೋರೇಟರಿ ಮುಂಬಯಿ ನಂಬರ ೧೨

ಬಾಟ್ಲಿ ಕಿಮ್ಮತ್ತು ೧—೨—೦

ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುತ್ತದೆ



ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಕರಗು, ಬಿಳೇಕರಗು, ಕೆಂಪುಕರಗು, ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದೆ.

ಬಿ. ಟಿ. ಕೆರೂರ ಆ್ಯಂಡ ಸನ್ಸ

ಮೆಡಿಕಲ್ ಸ್ಟೋರ್ಸ

ಬಾಗಲಕೋಟೆ.

೧೪೭

ಧಾರವಾಡದಲ್ಲಿ ನೀರಿನ ಗೋಳಾಟ

ಆಧುನಿಕ ಸುಧಾರಣೆಗಳು ಹೆಚ್ಚಿದಂತೆ ಅವುಗಳನ್ನು ನಡಿಸುವ ಜನರ ಹೊಣೆಗಾರಿಕೆಯೂ ಹೆಚ್ಚುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನೀರಿನ ಬಾವಿಗಳ ಬದಲು ನೀರಿನ ನಳಗಳು ಬರುವವು. ನಳಗಳು ಆಕಸ್ಮಿಕವಾಗಿ ನಿಂತು ಹೋದರೆ ಅಲ್ಲಿಯ ಜನರ ಗೋಳಾಟವನ್ನೇನು ಹೇಳಬೇಕು? ಧಾರವಾಡದಲ್ಲಿ ನಿನ್ನಿನಿಂದ ಆ ತರಹದ ಸ್ಥಿತಿಯುಂಟಾಗಿದೆ. ಆಕಸ್ಮಿಕವಾಗಿ ನಳಗಳು ನಿಂತು ಹೋಗಿವೆ. ಏಕೆ ನಿಂತಿವೆ! ಎಷ್ಟು ಹೊತ್ತಿನವರೆಗೆ, ಅಥವಾ ಅಂದಾಜ ಎಷ್ಟು ದಿವಸಗಳವರೆಗೆ ನಿಂತಿವೆ ಇವೆ ಮುಂತಾದವುಗಳ ಬಗ್ಗೆ ಮುನಿಸಿಪಾಲಿಟಿಯವರು ಜನರಿಗೆ ಇನ್ನೂ ವರೆಗೂ ಕೂಡ ಏನೂ ತಿಳಿಸಿದ್ದದರಿಂದ ಜನರಲ್ಲಿ ಕೋಲಾಹಲವೆದ್ದಿದೆ. ಮುಂಜಾನೆ ಹೆಣ್ಣು ಮಕ್ಕಳು ಗಂಟೆ ಗಂಟೆಗಳವರೆಗೆ ಎಲ್ಲ ಕೆಲಸಗಳನ್ನು ಬಿಟ್ಟು ನೀರಿನ ಹಾದಿ ಕಾಯುತ್ತ ಕೊನೆಗೆ ನಿರಾಶೆ ಹೊಂದಿ ಕಣ್ಣುಗಳಿಗೆ ನೀರನ್ನು ತಂದುಕೊಂಡು ಮರಳಿ ಹೋಗುವ ನೋಟವು ಯಾರ ಮನಸ್ಸನ್ನು ಕರಗಿಸದೆ ಇದ್ದೀತು? ನಳ ನಿಲ್ಲಲಿಕ್ಕೆ ಪ್ರಬಲವಾದ ಕಾರಣಗಳಿರಬಹುದು. ಆದರೆ, ಆ ಸಂಗತಿಯನ್ನು ಜನರಿಗೆ ತಿಳಿಸದಿರಲಿಕ್ಕೇನೂ ಕಾರಣವು ಇರಲಾರದು. ಇಂದು ಮತ್ತು ನಾಳೆ ಮುನಸಿಪಾಲಟಿಗೆ ರಜೆಯಂತೆ. ಆದರೆ ನೀರಿಗೆ ಮಾತ್ರ ಜನರು ಎಂದಿಗೂ ರಜೆ ಕೊಡಲಾರರಷ್ಟೆ?

ಬಾಗಲಕೋಟೆಯಲ್ಲಿ ನಾಡಹಬ್ಬದ ಸಿದ್ಧತೆ.

ಬಾಗಲಕೋಟೆ ತಾ|| ೩— ನಾಡಹಬ್ಬದ ಬಗ್ಗೆ ವಿಚಾರ ಮಾಡುವದಕ್ಕಾಗಿ ತಾ|| ೨೮ ನೆ ದಿವಸ ಹಾರ್ಡಿಂಜ ವಾಚನಾಲಯದಲ್ಲಿ ನಾಗರಿಕರ ಸಭೆ ಸೇರಿತ್ತು. ಶ್ರೀ ಧಾರವಾಡ ಯಲಗುರ್ದರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಶ್ರೀ ಜೋರಾಪುರ ಗುರುರಾಯರು ನಾಡಹಬ್ಬವನ್ನು ಈ ಸಲ ಯಶಸ್ವಿಯಾಗಿ ಜರುಗಿಸಬೇಕೆಂದು ಸಭೆಯಲ್ಲಿ ಸೂಚನೆ ತಂದರು. ಅದು ಸ್ವೀಕೃತವಾಯಿತು. ಆ ಮೇಲೆ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆದು ಕನ್ನಡ ಗ್ರಂಥಗಳ ಪ್ರದರ್ಶನ ವೀರಪುರುಷರ ಭಾವಚಿತ್ರಗಳ ಪ್ರದರ್ಶನ, ಲಲಿತಕಲೆಗಳ ಪ್ರದರ್ಶನ ಇವುಗಳನ್ನು ಏರ್ಪಡಿಸಬೇಕೆಂದು ಗೊತ್ತಾಯಿತು. ವ್ಯಾಖ್ಯಾನಗಳಿಗೆ ಎರಡನೆಯ ಊರುಗಳಿಂದ ಶ್ರೀ ಸಾಸನೂರ, ಜಹಾಗೀರದಾರ, ಟಿ ರಾಘವಾಚಾರ್ಯ ಮುಂತಾದವರನ್ನು ಆಮಂತ್ರಿಸಬೇಕೆಂದು ನಿರ್ಣಯವಾಯಿತು. ಆ ಮೇಲೆ ಈ ಕಾರ್ಯಗಳಿಗಾಗಿ ಬೇರೆ ಬೇರೆ ಮಂಡಳಗಳನ್ನೂ ಕಾರ್ಯದರ್ಶಿಗಳನ್ನೂ ನಿಯಮಿಸಿತು.

ಹುಬ್ಬಳ್ಳಿಯ ಪತ್ರ.

ಲಲಿತ ಕಲಾದರ್ಶ ಕಂಪನಿಯವರು ಇಲ್ಲಿಯ ಕೋ ಆಪರೇಟಿವ್ಹ ದವಾಖಾನೆಗೆ ಧರ್ಮಾರ್ಥ ನಾಟಕ ಕೊಟ್ಟಿದ್ದರ ಉತ್ಪನ್ನವು ೧|| ಸಾವಿರ ಮೀರಬಹುದಂತೆ.

ವಿಜಯನಗರ ಸ್ಮಾರಕನಿಧಿಗೆ ಸಹಾಯ ಕೇಳಲಿಕ್ಕೆ ಶ್ರೀ ಪೆಂಡಾರಕರರ ಕಡೆಗೆ ಮಂಡಲದವರು ಹೋಗಿದ್ದರು. ಅದು ಫಲಕಾರಿಯಾಯಿತೆಂಬುದು ಇನ್ನೂ ಹೊರಬಿದ್ದಿಲ್ಲ.

ತಾ|| ೪ ನೇ ದಿವಸ ಸಂಜೆಗೆ ೨ ತಾಸುಗಳವರೆಗೆ ಒಂದೇ ಸವನೆ ಮಳೆ ಹೊಡೆಯಿತು. ಮತ್ತು ಆ ಮೇಲೆ ಇಡೀ ರಾತ್ರಿ ಸಣ್ಣಾಗಿ ಮಳೆ ಹತ್ತಿದ್ದು, ಈ ದಿವಸ ೧೧ ಘಂಟೆಯವರೆಗೂ ನಡೆದೇ ಇತ್ತು.

೨೦ ನ ಅಕ್ಟೋಬರದಲ್ಲಿ ಇಲ್ಲಿ ಕೂಡಲಿರುವ "ಶಿಕ್ಷಣ ಸಪ್ತಾಹದ" ಸಿದ್ಧತೆಯು ಭರದಿಂದ ಸಾಗಿದೆ.

ದಕ್ಷಿಣ ಭಾಗದ ವಿದ್ಯಾಖಾತೆಯ ಅಧಿಕಾರಿಗಳು ಹೋದ ವಾರದಲ್ಲಿ ಇಲ್ಲಿಯ ಇಂಗ್ಲೀಷ ಶಾಲೆಗಳಿಗೆ ಭೆಟ್ಟಿ ಕೊಟ್ಟು ಹೋದರು.

ನಾಡಹಬ್ಬ ಆದಿತ್ಯವಾರ ತಾ|| ೩ ನೆ ದಿವಸ ಇಲ್ಲಿ ಸಭೆಗೂಡಿ ನಾಡಹಬ್ಬವನ್ನು ಸಾಂಗಗೊಳಿಸಲಿಕ್ಕೆ ಕೆಳಗಿನ ಜನರದೊಂದು ಮಂಡಳವು ಸ್ಥಾಪಿತವಾಯಿತು.

ಅಧ್ಯಕ್ಷರು— ಶ್ರೀ ಗುರುರಾವ ನಾಳವೇಕರ, ಕಾರ್ಯದರ್ಶಿ— ಶ್ರೀ ದೇವಪೂರ, ಸದಸ್ಯರು— ಶ್ರೀ ಜೋಂಕಳಿ, ಗಾಯಕರ ಶ್ರೀ ಚಂದ್ರಶೇಖರ ಶಾಸ್ತ್ರಿಗಳು, ಲಿಂಗನಗೌಡರು, ಪುರಾಣಿಕರು.

ಕೆಳಗಿನ ಕಾರ್ಯಕ್ರಮ ಮಾಡುವದೂ ಗೊತ್ತಾಯಿತು. (೧) ಕವಿಸಮ್ಮೇಲನ (೨) ಸಂಗೀತ ಸಮ್ಮೇಲನ (೩) ಕುಂದ್ಯಾಟ ಹಾಗೂ ಶಾರೀರಕ ಶಕ್ತಿ ಪ್ರದರ್ಶನ (೪) ಐತಿಹಾಸಿಕ ವಸ್ತು ಸಂಗ್ರಹ ಹಾಗು ಚಿತ್ರ ಪ್ರದರ್ಶನ (೫) ನಾಟಕ ಪ್ರಯೋಗ. ಈ ಕಾರ್ಯಕ್ರಮಗಳಿಗೆ ಬೇರೆ ಬೇರೆ ಕಾರ್ಯದರ್ಶಿಗಳನ್ನು ನಿಯಮಿಸಿರುವರು.

ಹುಬ್ಬಳ್ಳಿಯ ವಿಜಯನಗರ ಸ್ಮಾರಕ ಸಂಘದ ಕಾರ್ಯದರ್ಶಿಗಳು ಸ್ಮಾರಕದ ಕಾರ್ಯವನ್ನು ಮುಂದುವರಿಸುವ ಬಗ್ಗೆ ತಾ|| ೩ನೆ ದಿವಸ ಧಾರವಾಡಕ್ಕೆ ಹೋಗಿ ಅಲ್ಲಿಯ ಮುಖಂಡರಿಗೆ ಭೆಟ್ಟಿಯಾದರು. ಸ್ಮಾರಕದ ಕಾರ್ಯದ ಬಗ್ಗೆ ಚರ್ಚೆಯಾಗಿ, ಒಬ್ಬಿಬ್ಬರು ಹ್ಯಾರಿ— ಹೊಸಪೇಟೆಗಳ ಕಡೆಗೆ ಹೋಗಿ, ಅಲ್ಲಿ ಸ್ಮಾರಕ ಸಂಘಗಳನ್ನು ತೀವ್ರವೇ ಸ್ಥಾಪಿಸಬೇಕೆಂದೂ ಮತ್ತು ವಿಜಯನಗರದ ಇತಿಹಾಸ ಬರೆಯಿಸುವ ಪ್ರಚಂಡ ಕಾರ್ಯಕ್ಕೆ ತಡಮಾಡದೇ ಪ್ರಾರಂಭ ಮಾಡಬೇಕೆಂದೂ ಮಾತುಕತೆಗಳಾಗಿರುವದಾಗಿ ತಿಳಿಯುತ್ತದೆ.

ಕರ್ನಾಟಕ

ಮಂಗಳೂರ— ಈ ಜಿಲ್ಲೆಯ "ಹೂ ಮತ್ತು ಕಾಯಿಪಲ್ಲೆಗಳ ಪ್ರದರ್ಶನವು ಅಕ್ಟೋಬರ ಮೊದಲನೆ ವಾರದಲ್ಲಿ ಜರಗತಕ್ಕದ್ದಿದೆ.

ಬಳ್ಳಾರಿ— ಇಲ್ಲಿಯ ಸೆಂಟ್ರಲ್ ಜೇಲಿನಿಂದ ಕಳೆದವಾರದಲ್ಲಿ ೧೫ ಜನ ರಾಜಕೀಯ ಕೈದಿಗಳು ತಮ್ಮ ಶಿಕ್ಷೆಯ ಅವಧಿಗಿಂತ ಮೊದಲೇ ಬಿಡುಗಡೆ ಹೊಂದಿದರು.

ಬೆಂಗಳೂರ— ಕಾರಾಗೃಹಖಾತೆಯ ಇನಸ್ಪೇಕ್ಟರ ಜನರಲ್‌ರ ಶಿಫಾರಸಿನನುಸಾರವಾಗಿ ಮೈಸೂರ ಸರಕಾರದವರು ತಮ್ಮಲ್ಲಿಯ ಕೈದಿಗಳ ಉಡಿಗೆ ತೊಡಿಗೆಯ ವಿಷಯವಾಗಿ ಕೆಳಗಿನಂತೆ ಗೊತ್ತು ಪಡಿಸಿದ್ದಾರೆ.

ಗಂಡಸರಿಗೇ— ಖಾದಿಯ ಎರಡು ಜಾಕೀಟು ಮತ್ತು ಎರಡು ಜೋಡು ಚೊಣ್ಣ, ಒಂದು ಟೊಪ್ಪಿಗೆ, ಎರಡು ಲಂಗೋಟಿ ೩೬ ಇಂಚಿನ ಒಂದು ಜಮಖಾನೆ ಟಾವೆಲು

ಹೆಂಗಸರಿಗೆ— ೬ ಯಾರ್ಡ ಉದ್ದ ಮತ್ತು ೪೨ ಇಂಚು ಅಗಲಿನ ೨ ಬಟ್ಟೆ ಮತ್ತು ಎರಡು ಕುಪ್ಪಸ,

ಕನ್ನಡ "ಟಾಯಿಪ್‌ರಾಯಿಟರ" ವನ್ನು ತಯಾರ ಮಾಡಿದ ಶ್ರೀ ನರಸಿಂಹ ಮೂರ್ತಿಯವರು, ಕಳೆದವಾರದಲ್ಲಿ ಇಲ್ಲಿ ಕೂಡಿದ ಮೈಸೂರ ಶಾರ್ಟ ಹ್ಯಾಂಡ ರಾಯಟರ್ಸ ಅಸೋಸಿಯೇಶನದ ವಾರ್ಷಿಕ ಸಮಾರಂಭದಲ್ಲಿ ಸರ್ ಸಿ ವ್ಹಿ ರಮನ ಇವರ ಮುಂದೆ ತಮ್ಮ ಟಾಯಿಪ್‌ರಾಯಿಟರದ ಪ್ರಯೋಗವನ್ನು ಮಾಡಿ ತೋರಿಸಿದರು.

ಮೈಸೂರ ತಾ|| ೩— ಮೈಸೂರ ವಿಶ್ವವಿದ್ಯಾಲಯದ ಪರವಾಗಿ ಸ್ಥಾಪಿತವಾದ ಶ್ರೀ ಕೃಷ್ಣರಾಜೇಂದ್ರ ರಜತೋತ್ಸವದ ವ್ಯಾಖ್ಯಾನ ಮಾಲೆಯ ಪಕಿಯಿಂದ ನಿನ್ನಿನ ದಿವಸ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಇಂಡಿಯನ್ ಸಾಯನ್ಸ ಇನಸ್ಟಿಟ್ಯೂಟದ ನಿವೃತ್ತ ಡಾಯರೆಕ್ಟರರಾದ ಡಾ. ಸರ್ ಮಾರ್ಟಿನ್ ಫೋರ್ಸ್ಟರ ಇವರ ಉಪನ್ಯಾಸವಾಯಿತು. "ವಿಜ್ಞಾನ ಶಾಸ್ತ್ರವೂ ಹಾಗು ಪ್ರಗತಿಯು" ಇದೇ ವ್ಯಾಖ್ಯಾನದ ವಿಷಯವಾಗಿತ್ತು.

ಕಾಂಗ್ರೆಸ್ಸು ಜೀವಂತವಿದೆ.

ಕಾನಪೂರ ತಾ|| ೪— ಪಂಡಿತ ಜವಾಹರಲಾಲರು "ಪ್ರಕಾಶ" ಪತ್ರಿಕೆಯ ಪ್ರತಿನಿಧಿಯ ಮುಂದೆ ಪ್ರಚಲಿತ ವಿಷಯದ ಸಂಬಂಧವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದರು. ಆಗ ಅವರು ಹೇಳಿದುದೇನಂದರೆ— ತಾತ್ವಿಕ ದೃಷ್ಟಿಯಿಂದ ವಿಚಾರ ಮಾಡಲಾಗಿ, ಸಾಮುದಾಯಿಕ ಇಲ್ಲವೆ ವ್ಯಕ್ತಿಶಃ ಕಾಯದೆಭಂಗದಲ್ಲಿ ಏನೂ ಭೇದವಿರುವದಿಲ್ಲ. ಬೇರೆ ಬೇರೆ ಪ್ರಸಂಗಗಳಿಗೆ ಬೇರೆ ಬೇರೆ ಉಪಾಯಗಳನ್ನು ಯೋಜಿಸಬೇಕಾಗುತ್ತದೆ.

ಸದ್ಯದ ಕಾಂಗ್ರೆಸ ಕಾರ್ಯಕ್ರಮವು ಮಾನ್ಯವಿದೆಯೋ ಇಲ್ಲವೆ ಬೇರೆ ಯೋಜನೆಯನ್ನು ಕೈಗೆ ಯತಕ್ಕದ್ದಿರುವದೋ ಎಂದು ಪ್ರಶ್ನೆ ಮಾಡಲಾಗಿ ಅವರು ದರ್ಪದಿಂದ ಹೇಳಿದ್ದೇನಂದರೆ— ಏನೇ ಆದರೂ, ನಾನು ಕಾಂಗ್ರೆಸದ ಜನರಲ್ ಸೆಕ್ರೆಟರಿ ಇರುತ್ತೇನೆ.

ಸರ್ವಾಧಿಕಾರಿ ಪರಂಪರೆಯನ್ನು ರದ್ದುಮಾಡಿದ್ದುದು ಮತ್ತು ಕಾಂಗ್ರೆಸ ಸಂಸ್ಥೆಗಳನ್ನು ತಾತ್ಪೂರ್ತಿಕ ಮುಚ್ಚಿದ್ದುದರ ಸಂಬಂಧವಾಗಿ ಅವರು ಅಭಿಪ್ರಾಯ ಕೊಟ್ಟದ್ದೇನಂದರೆ— ಶ್ರೀ ಅಣೆಯವರು ಹೇಳಿದಂತೆ ಕಾಂಗ್ರೆಸ ಸಂಸ್ಥೆಯು ಇನ್ನೂ ಜೀವಂತವಿದ್ದು ಅದರ ನಿಶ್ಚಿತ ಸಂಘಟಿತ ಕಾರ್ಯವನ್ನು ಮಾಡುವಂಥ ಕಚೇರಿಗಳು ಮಾತ್ರ ಮುಚ್ಚಲ್ಪಟ್ಟಿವೆ

ಮ. ಗಾಂಧಿಯವರು ಶಾಂತಿಸಂಧಾನದ ಕೆಲಸವನ್ನು ಕಂಡು ಹಿಡಿಯಲು ವ್ಹಾಯಿಸರಾಯರ ಭೆಟ್ಟಿ ತೆಗೆದುಕೊಳ್ಳುವ ವಿಷಯದಲ್ಲಿ ಅವರ ಧೋರಣದ ಬಗ್ಗೆ ತಪ್ಪು ಕಲ್ಪನೆಯದ್ದರ ಸಂಬಂಧವಾಗಿ ಅವರ ಅಭಿಪ್ರಾಯ ಕೇಳಲು ಅವರು ಹೇಳಿದ್ದೇನಂದರೆ— ಮಹಾತ್ಮಾಜಿಯವರ ಸ್ವಭಾವವು ಪೂರ್ಣ ತಿಳಿದಿಲ್ಲ. ಶಾಂತತೆಯನ್ನು ಪ್ರಸ್ಥಾಪಿಸಲಿಕ್ಕೆ ಮೇಲಿಂದ ಮೇಲೆ ಯತ್ನ ಮಾಡುವದು ತಮ್ಮ ಕರ್ತವ್ಯವೇ ಆಗಿದೆಯೆಂದು ಮಹಾತ್ಮರು ತಿಳಿದುಕೊಂಡಿರುವರು. ... ಮತಭೇದವಿದ್ದರೂ ಅವರಲ್ಲಿ ... ದದ್ದೇನೂ ಇಲ್ಲ. ಆದರೆ ನಾನು ಮಾತ್ರ ರೀತಿಯಲ್ಲಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸಲಾರೆನು

ಕನ್ನಡಿಗನ ಚಂದಾ ವಿವರ

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦-೧೩-...
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-...-೦

ವ್ಯವಸ್ಥಾಪಕ

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ... ಗಳು, ಗ್ಯಾಲಿರ್‍ಯಾಕ, ಬಾಯಿಂಡರ ಮಶಿನ್ಸ, ಲೆಡ್ ಕಟರ, ಹಾಗೂ ಟ್ರೆಡಲ್ (ಚಾಂಡ್ಲ) ಆಕಾರ ಫೂಲ್‌ಸ್ಕೆಪ್ ಫೋಲಿಯೊ.

ಕನ್ನಡಿಗ ಮುದ್ರಾಲಯ
ಧಾರವಾಡ

ಬೇಕಾಗಿದೆ.

ಉತ್ತಮ ಸ್ಥಿತಿಯಲ್ಲಿದ್ದ ಒಂದು ಉಪಯೋಗಿಸಿದ ಸಾಯಕಲ್ಲು ಬೇಕಾಗಿದೆ. ಕೊಡುವವರು ಸಮಕ್ಷಮ ಕಾಣಬೇಕು.

... C/o ಕನ್ನಡಿಗ ಧಾರವಾಡ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಗುರುವಾರ ತಾ|| ೭-೯-೪೧ ನೇ ದಿವಸ ರಾತ್ರಿ

ಶ್ರೀರಾಮ

ಪಾದುಕಾ ಪಟ್ಟಾಭಿಷೇಕ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

ಸಂಘದೊಡೆಯರು,
ಗರೂಡ ಸದಾಶಿವರಾಯರು

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ.

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ|| ೨೫ ೮-೪೧

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ಈ ಪತ್ರಿಕೆಯನ್ನು ಲಿಂಗನಾಥ ಒಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ನಂ. ಬಿ. ೨೭೮ यदन् परवशं दुःखं । यद्यदात्मवशं सुखम्॥ मनु ನಿತ್ಯ ಪತ್ರ ೩ ಪೈ

ಕನ್ನಡಿಗ

ಇನ್ಸ್ಯೂರೆನ್ಸ್
ಜೀವವಿಮೆ ಇಳಿಸಬಯಸುವವರು
ದಿ ಯುನಾಯಿಟೆಡ್
ಕರ್ನಾಟಕ ಇನ್ಸ್ಯೂರೆನ್ಸ್
ಕಂಪನಿಯೇ
ಉತ್ತಮವಾದುದು

ಇನ್ಸ್ಯೂರೆನ್ಸ್
[illegible]
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಶುಕ್ರವಾರ ಭಾದ್ರಪದ ಬಹುಳ ೮ ಶಕೆ ೧೮೫೩ ತಾ॥ ೪-೯-೩೧ [ಸಂಚಿಕೆ ೧೧೭

ಅಸೆಂಬ್ಲಿಯಲ್ಲಿ ರಾ. ಬ. ಪಾಟೀಲರ ಸೂಚನೆ

ಸಿಮಲಾ ತಾ। ೭ ಈ ಹೊತ್ತಿನ ಅಸೆಂಬ್ಲಿಯ ಅಧಿವೇಶನದಲ್ಲಿ ರಾವಬಹಾದ್ದೂರ ಪಾಟೀಲ ಇವರು, ಮುಂಬಯಿ ಫ್ರೀಪ್ರೆಸ್ ಪತ್ರದ ೧೦೦೦೦ ರೂಪಾಯಿಗಳನ್ನು ಜಪ್ತ ಮಾಡಿದ್ದರ ಸಂಬಂಧವಾಗಿ ನಿಲುವಳಿಯ (Adjournment) ಸೂಚನೆಯನ್ನು ತಂದಿದ್ದರು. ಆದರೆ ಅಧ್ಯಕ್ಷರು "ಈ ವಿಷಯದ ಬಗ್ಗೆ ಅಪೀಲು ಇದ್ದುದರಿಂದ, ವಿಷಯವು ಪೂರ್ಣವಾಗಿ ನಿರ್ಣೀತವಾಗಿರುವದಿಲ್ಲ. ಕಾರಣ ಅದರ ಮೇಲೆ ಚರ್ಚೆ ಮಾಡಲು ಬರುವದಿಲ್ಲ" ಎಂದು ಹೇಳಿ ಸೂಚನೆಯನ್ನು ನಿಯಮಬಾಹ್ಯ ಮಾಡಿದರು. ಇದಲ್ಲದೆ ಅವರು 'ಈ ವಿಷಯವು ಮುಂಬಯಿ ಸರಕಾರಕ್ಕೆ ಸಂಬಂಧಪಟ್ಟಿರುವದರಿಂದ ಅದನ್ನು ಇಲ್ಲಿ ವಿಚಾರ ಮಾಡುವದೇನೂ ನ್ಯಾಯವಾಗಿ ತೋರುವದಿಲ್ಲ" ಎಂದು ಹೇಳಿದರು.

(ಅ ಪ್ರೆ)

ಕಲಕತ್ತೆಯಲ್ಲಿ ಝಡತಿ.

ಕಲಕತ್ತಾ ತಾ। ಪೋಲೀಸ ಅಧಿಕಾರಿಗಳು ಇತ್ತೀಚೆಗೆ ದೊರೆತ ಶಸ್ತ್ರಾಸ್ತ್ರಗಳ ಸಂಬಂಧವಾಗಿ ಈ ಹೊತ್ತು ಮುಂಜಾನೆ ಕೆಲವು ಸ್ಥಳಗಳನ್ನು ಝಡತಿಮಾಡಿ, ಇಬ್ಬರು ಬಂಗಾಲಿ ತರುಣರನ್ನು ಸೆರೆಹಿಡಿದರು. ಈ ಸಮಯದಲ್ಲಿ ಹೆಣ್ಣು ಮಕ್ಕಳ ಕಾಲೇಜದ ವಸತಿಗೃಹವು ಝಡತಿ ಮಾಡಲ್ಪಟ್ಟಿತು.

(ಅ ಪ್ರೆ)

ಪಂಡಿತ ಜವಾಹಿರರು ಲಖನೌಕ್ಕೆ ಬಂದರು.

ಲಖನೌ ತಾ। ೬— ಪಂಡಿತ ಜವಾಹಿರಲಾಲ ನೆಹರೂ ಇವರು ನಿನ್ನಿನ ದಿವಸ ಸಂಜೆಗೆ ಇಲ್ಲಿಗೆ ಬಂದರು. ಅವರು ಮಹಾತ್ಮರನ್ನು ಕಾಣಲು ತಾ॥ ೮ನೇ ದಿವಸ ಪುಣೆಗೆ ಹೋಗಲಿದ್ದಾರೆ.

(ಅ. ಪ್ರೆ)

ಮುಂಬಯಿಯಲ್ಲಿ ಸಭೆ ಮೊದಲಾದವುಗಳಿಗೆ ಪ್ರತಿಬಂಧವು.

ಮುಂಬಯಿ ತಾ॥ ೭ ಮುಂಬಯಿ ಸರಕಾರದವರು ಈ ಹೊತ್ತಿನ ಒಂದು ಕಟ್ಟಳೆ ತೆಗೆದು ತಾ॥ ೧೧ನೆ ಸಪ್ಟಂಬರದಿಂದ ಎರಡು ತಿಂಗಳ ವರೆಗೆ ಮುಂಬಯಿಯಲ್ಲಿ ಶಾಂತತಾಭಂಗಕ್ಕೆ ಉತ್ತೇಜನ ಕೊಡುವಂಥ ಸಭೆ, ಪ್ರವರಣಿಗೆ ಮೊದಲಾದವುಗಳನ್ನು ಯಾರೂ ಒರುಗಿಸಕೂಡದೆಂದು ಅಪ್ಪಣೆಕೊಟ್ಟಿದೆ. ಊರಲ್ಲಿ ದಾಂಗಿ ಜಗಳ ಮೊದಲಾದವುಗಳಿಂದ ಸಾರ್ವಜನಿಕ ಶಾಂತತೆಗೂ, ಮಾನವ ಪ್ರಾಣಿಯ ಜೀವಿತಕ್ಕೂ ಧಕ್ಕೆ ತಟ್ಟುವ ಸಂಭವವಿದೆಯೆಂದು ಕಂಡು ಬಂದದ್ದೇ ಕಾರಣವಾಗಿದೆ. ಈ ಅಪ್ಪಣೆಯು ಮುಂಬಯಿ ದ್ವೀಪಕ್ಕೂ ಅನ್ವಯಿಸುತ್ತದೆ.

(ಅ. ಪ್ರೆ)

ಸ್ವರೂಪರಾಣಿಯವರ ಪ್ರಕೃತಿ

ಲಖನೌ ತಾ। ೬— ಶ್ರೀಮತಿ ಸ್ವರೂಪರಾಣಿ ನೆಹರೂ (ಪಂ॥ ಜವಾಹಿರಲಾಲ ನೆಹರೂ) ಇವರ ಪ್ರಕೃತಿಯು ಇನ್ನೂ ಹಾಗೆಯೇ ಇದೆ ಆದರೆ ಅವರು ಈಗ ಮೊದಲಿನಕಿಂತ ಅಶಕ್ತರಾಗಿದ್ದಾರೆ

(ಅ ಪ್ರೆ)

ಬಂಗಾಲ ಗವರ್ನರರ ದುಃಖ ಪ್ರದರ್ಶನ

ಕಲಕತ್ತಾ ತಾ। ೬— ಬಂಗಾಲ ಸರಕಾರವು ಈ ಹೊತ್ತಿನ ದಿವಸ ವಿಶಿಷ್ಟ ಗ್ಯಾಜೆಟ್ ಹೊರಡಿಸಿ ಮಿದನಾಪುರದ ಮೆಜಿಸ್ಟ್ರೇಟ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ॥ ಈ॥ ಜೆ॥ ಬರ್ಜ ಇವರು ಕೊಲೆಗಡಕರ ಕೈಗೆ ಸಿಕ್ಕು ಪ್ರಾಣಕ್ಕೆರವಾದರೆಂಬುವನ್ನು ಸಮರ್ಥನ ಮಾಡಲು, ಗವರ್ನರ ಇನ್ ಕೌನ್ಸಿಲರವರಿಗೆ ವಿಷಾದವಾಗುತ್ತಿದೆ ಎಂದು ದುಃಖ ಪ್ರದರ್ಶನ ಮಾಡಿದ್ದಾರೆ

(ಅ ಪ್ರೆ)

ಕಲಕತ್ತಾ ಕಾರ್ಪೋರೇಶನದಲ್ಲಿ ಮಿದನಾಪುರ ಅತ್ಯಾಚಾರ

ಕಲಕತ್ತಾ ತಾ। ೬—ಕಲಕತ್ತಾ ಕಾರ್ಪೋರೇಶನದ ಈ ಹೊತ್ತಿನ ಸಭೆಯಲ್ಲಿ ಮಿದನಾಪುರದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ॥ ಬಿ। ಈ। ಜೆ॥ ಬರ್ಜ ಇವರ ಕೊಲೆಯ ಸಂಬಂಧವಾಗಿ ಒಂದು ಠರಾವು ಬಂದಿತ್ತು. ಈ ಠರಾವಿನಲ್ಲಿ "ಮೊನ್ನಿನ ಶನಿವಾರ ದಿವಸ ಕ್ರಾಂತಿಕಾರಕರು ಮಿದನಾಪುರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕೊಲೆ ಮಾಡಿದ್ದನ್ನು ಕಂಡು ಈ ಸಭೆಗೆ ಭೀತಿಯು ಉತ್ಪನ್ನವಾಗಿದ್ದಲ್ಲದೆ, ಆ ಬಗ್ಗೆ ಈ ಸಭೆಯು ತಿರಸ್ಕಾರವನ್ನು ವ್ಯಕ್ತ ಪಡಿಸುತ್ತದೆ" ಎಂಬುದಾಗಿ ಉಲ್ಲೇಖಿಸಲ್ಪಟ್ಟಿತ್ತು. ಇದಲ್ಲದೆ ಮಿ। ಬಿ। ಈ। ಜೆ। ಬರ್ಜ ಇವರು ಬಂಗಾಲದ ಓರ್ವ ಪ್ರಮುಖ ಗೃಹಸ್ಥರಲ್ಲಿ ಗಣಿಸಲ್ಪಡುತ್ತಿದ್ದರೆಂದೂ ಅವರು ಯಾವತ್ತೂ ಜಾತಿ ಪಂಥಗಳ ಜನರಿಗೆ ಪ್ರಿಯರಾಗಿದ್ದರೆಂದೂ ನಮೂದಿಸಲ್ಪಟ್ಟಿತ್ತು.

ಮೇಯರರಾದರೂ ಈ ಠರಾವಿಗೆ ಸಹಾನುಭೂತಿಯನ್ನು ತೋರಿಸಿ, ದಿವಂಗತರ ಬಗ್ಗೆ ಆದರವನ್ನು ತೋರಿಸುವದಕ್ಕಾಗಿ ತಾವು ಕಟ್ಟಡದ ಮೇಲಿ ದ್ವಜವನ್ನು ಇಳಿಸುವದಾಗಿ ಹೇಳಿದರು

(ಅ ಪ್ರೆ)

ಕೌನ್ಸಿಲ್ ಆಫ್ ಸ್ಟೇಟ

ಸಿಮಲಾ ತಾ॥ ೭ ಕೌನ್ಸಿಲ್ ಆಫ್ ಸ್ಟೇಟದಲ್ಲಿ ಈ ಹೊತ್ತಿನ ದಿವಸ ನಾಲ್ಕು ಮಸೂದೆಗಳು ಸ್ವೀಕೃತವಾದವು. ಇವುಗಳಲ್ಲಿ ಅಸೆಂಬ್ಲಿಯಲ್ಲಿ ಸ್ವೀಕೃತವಾದ ನೂಲಿನ ಸಂರಕ್ಷಣೆಯ ಮಸೂದೆಯು ಒಂದಾಗಿತ್ತು

(ಅ ಪ್ರೆ)

ಮಹಾತ್ಮರ ಸಾಪ್ತಾಹಿಕ ಮೌನವ್ರತ

ಪುಣೆ ತಾ। ೭ – ಮಹಾತ್ಮಾ ಗಾಂಧಿಯವರಿಗೆ ಇತ್ತೀಚೆಗೆ ಬಹಳ ಮಾನಸಿಕ ಶ್ರಮವಾಗುತ್ತಿದ್ದುದರಿಂದ ಅದನ್ನು ತಪ್ಪಿಸಿಕೊಳ್ಳುವದಕ್ಕೋಸುಗ ಅವರು ನಿನ್ನಿನಿಂದ ಪ್ರತಿ ದಿವಸ ಮುಂಜಾನೆ ೨ ಘಂಟೆಯಿಂದ ೭ ತಾಸು ಮೌನವ್ರತವನ್ನು ಪಾಲಿಸತೊಡಗಿದ್ದಾರೆ. ಅವರು ನಸುಕಿನಲ್ಲಿ ಎಂದಿನಂತೆ ಪ್ರಾರ್ಥನೆಯನ್ನು ಮುಗಿಸಿಕೊಂಡು ಪರ್ಣಕುಟಿಯ ಉಪವನದಲ್ಲಿ ಸ್ವಲ್ಪ ಹೊತ್ತು ತಿರುಗಾಡಿಬಂದು, ನಂತರ ಮೌನವ್ರತವನ್ನು ಆಚರಿಸುವರು. ಅವರು ನೂಲು ತೆಗೆಯಲು ಪ್ರಾರಂಭಿಸಿದ್ದಾರೆ ಮತ್ತು ಯಾವತ್ತೂ ಸಂಭಾಷಣಗಳು ಮಧ್ಯಾಹ್ನದ ನಂತರ ನಡೆಯುವವು

(ಅ ಪ್ರೆ)

ಬಾಬು ರಾಜೇಂದ್ರ ಪ್ರಸಾದರನ್ನು ಆಸ್ಪತ್ರೆಗೆ ತಂದರು

ಪಾಟಣಾ ತಾ॥ ೭— ಹಜಾರಿಬಾಗ ತುರಂಗದಲ್ಲಿ ೧। ತಿಂಗಳಿಂದ ಅಸ್ವಸ್ಥರಾಗಿದ್ದ ಪ್ರಸಿದ್ಧ ಕಾಂಗ್ರೆಸ ಮುಖಂಡರಾದ ಬಾಬು ರಾಜೇಂದ್ರ ಪ್ರಸಾದರನ್ನು ಈ ಹೊತ್ತಿನ ದಿವಸ ವೈದ್ಯಕೀಯ ಉಪಚಾರಕ್ಕೋಸುಗ ಇಲ್ಲಿಯ ವೈದ್ಯಕೀಯ ಕಾಲೇಜದ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಅವರು ಬಹಳ ಅಶಕ್ತರಾಗಿದ್ದು, ಕಳೆಗುಂದಿದವರಂತೆ ಕಾಣುತ್ತಾರೆ

(ಅ ಪ್ರೆ)

ಮಿದನಾಪುರದಲ್ಲಿ ಝಡತಿ ಹಾಗು ಕೈದು

ಮಿದನಾಪುರ ತಾ। ೭ ಮಿ. ಬರ್ಜ ಇವರ ಕೊಲೆಯ ಸಂಬಂಧವಾಗಿ ಅಧಿಕಾರಿಗಳು ನಿನ್ನಿನ ದಿವಸ ಇಲ್ಲಿ ಎಷ್ಟೋ ಮನೆಗಳನ್ನು ಝಡತಿ ಮಾಡಿದರು. ಆ ಮನೆಗಳಲ್ಲಿ ವಕೀಲರು, ಡಾಕ್ಟರರು ಮತ್ತು ಸುಶಿಕ್ಷಿತರ ಮನೆಗಳಾದರೂ ಇದ್ದವು. ಝಡತಿಯನಂತರ ಅವರು ಹಲವು ಜನರನ್ನು ಕೈದು ಮಾಡಿದರು

ಓರ್ವ ವಕೀಲರು ದ್ವಿಚಕ್ರ ಗಾಡಿಯಲ್ಲಿ ಹೋಗುತ್ತಿರುವಾಗ ತಮ್ಮ ಬಂಗಲೆಯನ್ನು ಝಡತಿ ಮಾಡಿರುವದಾಗಿ ಅಡಿಶನಲ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಲ್ಲಿ ತಕರಾರು ಮಾಡಿದರು.

ಈ ಹೊತ್ತಿನ ಮುಂಜಾನೆಯಿಂದ ಸಶಸ್ತ್ರ ಪೋಲೀಸರು ಹಾಗು ಸೈನಿಕರು ಮುಖ್ಯ ಮುಖ್ಯ ಬೀದಿ ಮತ್ತು ಮನೆಗಳ ಮುಂದೆ ಕಾವಲು ನಿಂತುಕೊಂಡಿದ್ದಾರೆ.

(ಅ ಪ್ರೆ).

ಸರಹದ್ದದಲ್ಲಿ ಸೈನಿಕರ ಚಲನವಲನ

ಸಿಮಲಾ ತಾ। ೭— ಸರಹದ್ದದಿಂದ ಇತ್ತೀಚೆಗೆ ಬಂದ ಸುದ್ದಿಯ ಮೇರೆಗೆ – ಬ್ರಿಗೇಡ ದಳದವರು ತಾ॥ ೫ನೆ ದಿವಸ ಘಲನಾಯಿ ಪಶ್ಚಿಮದಲ್ಲಿಯ ಕರಪ್ಪಾಲಾ ಕಣಿವೆಯಲ್ಲಿ ಆಫರಿದಿಗಳನ್ನು ಶೋಧಿಸಿದರು. ಈ ಸಮಯದಲ್ಲಿ ವಿಶೇಷವೇನೂ ಸಂಭವಿಸಲಿಲ್ಲ. ಹತೀಮಕಾರ ಒಳಿಯಲ್ಲಿ ಈ ದಲದ ವಿಮಾನದ ಮೇಲೆ ಗೋಲಿಬಾರು ಮಾಡಲಾಯಿತು ಮತ್ತು ನಾಹಕ್ಕಿ ಕಣಿವೆಯ ಉತ್ತರದಿಕ್ಕಿನಲ್ಲಿ ೪ ಮೈಲಿನ ವರೆಗೆ ಅದನ್ನು ಒಯ್ಯಲಾಯಿತು. ನೌಶೇರಾ ಬ್ರಿಗೇಡದಲದವರು ಘಲನಾಯಿ ಎಂಬಲ್ಲಿ ಪೇಶಾವರ ಬ್ರಿಗೇಡದಲಕ್ಕೆ ಬಂದು ಕೂಡಿಕೊಂಡಿರುವರು ಮತ್ತು ಜ್ಯಾಂಡ ಶಿಬಿರವು ಮುಚ್ಚಲ್ಪಟ್ಟಿರುವದು

(ಅ ಪ್ರೆ)

... ಅನುವೃತ್ತ.

ಕೆಲಗೇರಿ ಪಾಚ್ಛದ ಪರ್ಸ್ತಿವ ಎಂಜಿನದ ದುರುಸ್ತಿಯು ನಡೆದಿದೆ ಎಂದು. ಮುಗಿಯುವದೋ ಏನೋ ತಿಳಿದಿಲ್ಲ

ಈಗ ಎರಡು ಮೂರು ದಿನದಿಂದ ಬಂದೇ ಸವನೆ ಮಳೆ ಹತ್ತಿದೆ.

ಬಾಗಿಲುಕೋಟೆಯ ಶ್ರೀ ಲೋಚನಪ್ಪ ಗೂಗವಾಡ ಇವರು ಇಲ್ಲಿಯ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕೆ ೫೦ ರೂಪಾಯಿಗಳನ್ನು ಕೊಟ್ಟು ಆಜೀವ ಸಭಾಸದರಾಗಿದ್ದಾರೆ

ಕರ್ನಾಟಕ

ಬೆಂಗಳೂರ ತಾ। ೭ – ಇಂಟರಮೀಜಿಯೇಟ ಕಾಲೇಜ ಯೂನಿಯನ್ನದ ಸಲುವಾಗಿ ನಿನ್ನಿನ ದಿವಸ ಶ್ರೀ ಎಂ ಸುಬ್ಬರಾವ್, ಆಯ್ ಸಿ ಎಸ್ ಇವರು "ಶಿಕ್ಷಣದ ಧ್ಯೇಯ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ವ್ಯಾಖ್ಯಾತರು ತಮ್ಮ ಭಾಷಣದಲ್ಲಿ ಸದ್ಯದ ಶಿಕ್ಷಣ ಪದ್ಧತಿಯು ಸದೋಷವಾದದ್ದೆಂದು ಹೇಳಿ, ಯಾವತ್ತರು ಮಹಾತ್ಮಾ ಗಾಂಧಿಯವರನ್ನು ಅನುಸರಿಸಬೇಕೆಂದು ವಿನಂತಿ ಮಾಡಿಕೊಂಡರು

ದಿವಾನ ಬಹದ್ದೂರ ಎಂ ಎಸ್ ಕೃಷ್ಣರಾವ ಇವರು ಸೇವಾನಿವೃತ್ತರಾದುದರಿಂದ, ರಾಜಮಂತ್ರ ಪ್ರವೀಣ ದಿ ಬ ಕೆ ಮ್ಯಾಥನ್ ಇವರು ಭದ್ರಾವತಿ ಕಬ್ಬಿಣ ಕಂಪನಿಯ ವ್ಯವಸ್ಥಾಪಕ ಮಂಡಳದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ

ಮಿದನಾಪುರ ಅತ್ಯಾಚಾರ 'ಮ್ಯಾಂಚೆಸ್ಟರ ಗಾರ್ಡಿಯನ್'ದ ಮತ

ಲಂಡನ್ ತಾ॥ ೫— ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯು ಮಿದನಾಪುರ ಅತ್ಯಾಚಾರದ ವಿಷಯದಲ್ಲಿ ಹೀಗೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಅವರು ತೋರಿಸಿದ ಹೆಚ್ಚಿನ ಧೈರ್ಯದ ಬಗ್ಗೆ ಅವರನ್ನು ಕೊಂಡಾಡಿರುತ್ತದೆ. ಪತ್ರಿಕೆಯು ಅಭಿಪ್ರಾಯಪಟ್ಟಿದೆ. ಏನಂದರೆ— ಇಂಥ ಅತ್ಯಾಚಾರಗಳ ಮೇಲಿಂದ ಹಿಂದುಸ್ಥಾನವು ಸ್ವಯಂ ನಿರ್ಣಯದ ಹಕ್ಕಿಗೆ ಯೋಗ್ಯವಿಲ್ಲವೆಂದು ನಿರ್ಣಯಿಸಿ, ದಬ್ಬಾಳಿಕೆಯನ್ನು ಜೋರಿನಿಂದ ಸಾಗಿಸುವದು ಅವಶ್ಯವಿದೆಯೆಂದು ಅರ್ಥ ಮಾಡಿದಲ್ಲಿ, ಅದು ಅತ್ಯಂತ ತಪ್ಪಾದದ್ದಾಗುವದಲ್ಲದೆ, ಅನ್ಯಾಯವೂ ಆಗುವದು

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕರ್ಪೂರ

ಶಾಸ್ತ್ರೀಯ [illegible] ಕ್ರಿಮಿನಾಶಕ

[illegible]

[illegible] ಹಲ್ಲುಗಳು [illegible] ಆಗುವದು. [illegible] ರಕ್ತಸ್ರಾವ [illegible] ವನಸ್ಪತಿ [illegible] ಕರ್ಪೂರ [illegible] ಉಪಯೋ[illegible] ಕನ್ನಡಿಗರೇ ಕನ್ನಡ ನಾಡಿನ ಮಾಲನ್ನು ಮೊದಲು ಕೊಡು "[illegible]" ಎಂಬ ಸಾಣ್ಣುಡಿಯಂತೆ ನಡೆಯಿ. ಸ್ವದೇಶೀ [illegible]ಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

[illegible] ಹೆಚ್ಚು [illegible] ಪಾತ್ರ[illegible]

ಪೆಚ್ಚಿ[illegible] ಎಲ್ಲ[illegible] ಆಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ|| ೧೬-೧೧-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀ ರಾಮೇಶ್ವರ ಸಮುದ್ರದ ಟು ಲಂಕಾ ಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಲಕ್ಷ್ಮಣೆಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಅಶ್ವಯುಜ ಶು|| ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಬಿಟ್ಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

[illegible] ಅಕ್ಟೋಬರ ತಾ||೨		೧೯ ಲಖನೌ	೨೪	೩೭ ಶಂಭುಕೊಂಡಂ	೮
[illegible]	೩-೪	೨೦ ಅಯೋಧ್ಯ	೨೫	೩೮ ರಾಮೇಶ್ವರ	೧೬-೧೭
ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ ಕನ್ಯಾಕುಮಾರಿ [ಹಡಗದಿಂದ]	೧೮
ಸೋಮನಾಥ (ಹಡಗದಿಂದ)	೮ ೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨
		೨೩ ಕಾಶಿ	೨೮-೨೯-೩೦-೩೧ ನವೆಂಬರ ತಾ||೧	೪೧ ಕ್ಯಾಂಡಿ [ಸಿಲೋನ]	೨೨
[illegible]	,,	೨೪ ಸಾರನಾಥ	,,	೪೨ [illegible] [ಸಿಲೋನ]	೨೩
[illegible] (ಜೈನತೀರ್ಥ)	೧೦ ೧೧	೨೫ ಗಯಾ	೨		
[illegible] (ಜೈನತೀರ್ಥ)	೧೨-೧೩	೨೬ ರಾಜಗಿರಿ [illegible] (ಜೈನತೀರ್ಥ)	೩	೪೩ ಧನುಷ್ಕೋಟಿ [ಹಡಗದಿಂದ]	
[illegible]	೧೪	೨೭ ಗಿರಿ[illegible]	,,	೪೪ ಮಧುರೆ	೨೭
[illegible]	,,	೨೮ [illegible] (ಜೈನತೀರ್ಥ)	೪	೪೫ [illegible]	೨೫
[illegible]	೧೫			೪೬ [illegible]	,,
[illegible]	೧೬	೨೯ ಕಲಕತ್ತಾ	೫ ೬-೭	೪೭ [illegible]	೨೬
[illegible]	೧೭	೩೦ ಜಗನ್ನಾಥಪುರಿ	೮	೪೮ ಮೈಸೂರ	೨೭-೨೮
ಮಥುರಾ	೧೮-೧೯	೩೧ ಸಾಕ್ಷಿಗೋಪಾಲ	೯		
ಗೋಕುಲ	,,	೩೨ ರಾಜಮಹೇಂದ್ರಿ	೧೦		
ವೃಂದಾವನ	,,	೩೩ ಬೆಜವಾಡ	೧೧		
ಗೋವರ್ಧನ	,,	೩೪ ಮದ್ರಾಸ	೧೨ ೧೩		
ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಈ ಎಲ್ಲ ಮಹಾಯಾತ್ರಾಸ್ಥಳಗಳನ್ನು ಸುತ್ತಿಕೊಂಡು ನವೆಂಬರ ೩೦ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು|| ೧೩ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡಕ್ಲಾಸ [illegible] ರೂಪಾಯಿ. ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ ಥರ್ಡಕ್ಲಾಸಿನವರು ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕೆ ಅನುಕೂಲವುಂಟು. ಹೆಚ್ಚಿನವರ ಹೆಚ್ಚಿಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು ಆದಕಾರಣ ಟಿಕೇಟುಗಳಿಗಾಗಿ ತ್ವರೆಮಾಡತಕ್ಕದ್ದು

ಮೇಲೆ ಗೊತ್ತುಪಡಿಸಿದ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ ಏಜಂಟರುಗಳು — [illegible] ಏಜಂಟರುಗಳಿಂದ [illegible] ಧಾರವಾಡ ಜಿಲ್ಲೆಯ [illegible] ಹಾಗು ಪತನದಾರರ ಬಹಳ [illegible] ತರಿಸಿ [illegible] ಬೇಸರಿಯಲ್ಲಾ [illegible] ಶ್ರೀ ಗೌರೀಶಂಕರ ಕಂಪನಿಗೆ [illegible] ಕೇಳತಕ್ಕದ್ದು ಅಜೀಟ ಫಾರ್ಮುಗಳನ್ನು ಏಜಂಟರ [illegible] ಮಾಹಿತಿ ಪತ್ರಿಕೆಗಳು [illegible] ಪುಕ್ಕಟೆಯಾಗಿ [illegible] ಯೋಗ್ಯ ಕಮೀಶನ ಕೊಡಲ್ಪಡುವದು

ಜಿ. ಎ. ಹಿರೂರ

ಮ್ಯಾನೇಜರ ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬಾಳಿಕೇರಿ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ಖರೀದಿ ತುಟ್ಟಿ ಆಗುತ್ತವೆ. ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ನಮ್ಮ ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ|| ೨-೯-೩೩

ವಳಿಗಡ್ ಹೈದರಾಬಾದ (ಡೆಕ್ಕನ್) **ಬಿ ಜಿ ಚಿಮ್ಮಲಗಿ**

ಭುವನೇಶ್ವರಿ ಭಾಂಡಾರ.

ಬೈಲಹೊಂಗಲದಲ್ಲಿ ಎಲ್ಲ ಬಗೆಯ ಬಟ್ಟೆ, ಔಷಧ, ಸುಗಂಧಿ ಸಾಮಾನು, ಸ್ಟೇಶನರಿ ಹಾಗೂ ರೈತರಿಗೆ ಬೇಕಾಗುವ ಒಕ್ಕಲತನದ ಎಲ್ಲ ಸಾಮಾನುಗಳೂ ನಮ್ಮಲ್ಲಿ ದೊರೆಯುತ್ತವೆ.

ವತನದಾರ ಕಾಟಾ.

ಬೈಲಹೊಂಗಲದಲ್ಲಿ ದಲಾಲಿಯಿಂದ ಹತ್ತಿ, ಶೇಂಗಾ ಮುಂತಾದ ಯಾವದೇ ಜಿನಸುಗಳನ್ನು ಮಾರಬೇಕಾದರೆ ನಮ್ಮಲ್ಲಿ ಬನ್ನಿ. ದರ, ಗೋಡಾವುನ ನೀರು ಇಳಿಯುವ ಸ್ಥಳ ಮೊದಲಾದ ಎಲ್ಲ ಸೌಕರ್ಯಗಳೂ ಇವೆ

ಗೋಪಾಳರಾವ ಕುಲಕರ್ಣಿ ಬೈಲಹೊಂಗಲ.

ಕನ್ನಡಿಗ.

ಧಾರವಾಡ— ಶುಕ್ರವಾರ ತಾರೀಖು

ಕನ್ನಡಿಗರೇ, ನಾಡತಾಯಿಯನ್ನು ಪೂಜಿಸಿರಿ.

ಟಕ ಎಂದಸಪ್ಪ ವಿ ಇತ್ಸಾ ಇಸಿತ ಆ ಕನ್ನಡಿಗ ಎನು ವಹಿತ ಲ ರ ಕೇಳುತ್ತಾರೆ ಅವರಿ ನವು ಕನ್ನಡವ ರ ಕೆ ತ್ವತ್ಕದ ಇನ್ನ್ಯ ನಿರ ರೇ ನೀವು ನ ನ ತ ಯಿ. ನ್ನ ವ ನವ ಟ್ಟ ಪೂದಲ ಪ ಜಿಸಿ ವ ನಿ ಧನ ಳ ಲಿಸ್ಸ ಸಾಧನವು ಅದೊ ಜಿಲ್ಲದಿದ್ದರೆ ಇನಿ ಶಂ ಸ ದ ಪ್ರಯೋಜನವಿಲ್ಲ ಅದೊಂದಿದ್ದರ ವಿ ನ ಸಾಧನ ಳು ಸುಲಭ ಗ ಕೈಸೇ ರ ವ ನಾಡು ನಮ್ಮ ತಾಯ್ ದೇವತೆ ಕನ ನ ಟಕ ಎಂಬ ಸಾತೆಯೆಂಬುದೇನೂ ಕೇವಲ ಪ್ರಯೋಗವಲ್ಲ ಅಂಲಕಾರಿಕ ಭ ಷೆಯಲ್ಲ ಕನ ಟಕ ವಾತೆ ರೂಪ ಕಿರಿ ವ ಂತಾಪ ಇಂದ್ರಿಯಗಳಿವ ಕೈಕಾಲು ವ ಂತಾದ ಅವಯವಗಳಿವೆ ಕಲವರಿಗೆ ತಿಳಿದ ರುವ ವದಿಯ ತಿಪೆ ಸೂಕ್ಷ್ಮವಾಗಿ ವಿಚಾರ ಮಾಡಿದ ವದ ನಿಜವೆಂದು ನಮಗೆ ಕಾಣುವದು ಕರ್ನಾಟಕ ವ ತೆಯ ರೂಪ ಗುಪವಂತೆ ಪ್ರಾಕೃತ ರೂಪ ಮಾತ್ರವಲ್ಲ, ಅದು ಅಪ್ರಾಕೃತವಾದ ರೂಪವು ಯಗಳು ನಮ್ಮ ನಿವ್ಮ ಇಂದ್ರಿಯಗಳಂತೆ ಪ್ರಾಕೃತ ಇ ದ್ರಿಯಗಳಲ್ಲ ಇಂದ್ರಿಯಗಳು, ನಮ್ಮ ನಿಮ್ಮ ಅವಯವಗಳಂತೆ ಅವಳಿಗ ಪ್ರಾಕೃತ ಅವ ಅಪ್ರಾಕೃತ ಅವಯವಗಳಿವೆ ಆದುದರಿಂದ ಅವು ನಮ್ಮ ಲೌಕಿಕ ದೃಷ್ಟಿಗೆ ಅವನ್ನು ಕಾಣುವುದಕ್ಕೆ ಜ್ಞಾನಚಕ್ಷುವು ಬೇಕು, ದಿವ್ಯಚಕ್ಷುವು ಬೇಕು ಯದಲ್ಲಿ ಜ್ಞಾನೋದಯವಾಗಿದೆಯೋ ಅತನು ಮಾತ್ರವೇ ಅವಳ ರೂಪ ಕಾಣಬಲ್ಲನು, ಚರ್ಮ ಚಕ್ಷುವಿಗೆ ಅದು ಶಕ್ಯವಿಲ್ಲ, ಇಂಥ ಅವಳ ಅಪ್ರಾ ಪೂಜಿಸುವುದೇ, ಕನ್ನಡಿಗರ ಅದ್ಯ ಕರ್ತವ್ಯ ಶ್ರವಣ ಮನನ ನಿಧಿಧ್ಯಾಸ ಇಂದ ಅವಳನ್ನು ಭಜಿಸುವದೇ ಅವಳ ಪೂಜೆ ಆದರೆ ಆ ಅಪ್ರಾಕೃತ ವಿಗ್ರಹ ಈ ಬಗೆಯಾಗಿ ಪೂಜಿಸುವದು ಸಾಧ್ಯವಿಲ್ಲವಾದ್ದರಿಂದ, ಅವಳ ಪ್ರತಿಮೆಯನ್ನು ಶವನ್ನ ರ ಪ್ಪತ್ತು ಮುಂಚೆ ಮಾಡಬೇಕು ಸತತವಾಗಿ ಅವಳ ಧ್ಯಾನ ಗ್ಯತೆಯು ನಮ್ಮಲ್ಲಿ ಒನ್ನಿಲಿ ಬರುವದಿಲ್ಲವಾದುದರಿಂದ ನಾವು ಕೊನೆಗೆ ನವ ವದಲ್ಲಿಯಾದರೂ ಅವಳನ್ನು ಪೂಜಿಸಿ ಪ್ರಸಾದವನ್ನು ಪಡೆಯಬೇಕು

ಪೂಜಿಸುವ ವಿಧಿಯೇನು? ಮನೆಯಲ್ಲಿ ನಾವು ಧೂಪ ದೀಪ ನೈವೇದ್ಯಾದಿಗ ಪೂಜಿಸುವಂತೆಯೇ ಆ ಪೂಜಾವಿಧಿಯಿರುವುದೋ ಅಥವಾ ಅದಕ್ಕೆ ಮಾತ್ರ ವಿಧಿಯಿರುವುದೊ? ಅಹುದು, ಮನೆಯಲ್ಲಿ ನಾವು ದೇವನ್ನು ಪೂಜಿಸುವ ಯ ವುದ. ಆದರೆ, ಮನೆಯಲ್ಲಿಯ ಪೂಜೆಯಲ್ಲಿ ನಾವು ಇತ್ತೀಚೆಗೆ ಪೂಜೆ ರ್ಮವನ್ನು ಮರೆತುಬಿಟ್ಟು ಬಾಹ್ಯವಿಧಿಯಿಂದಲೇ ತೃಪ್ತರಾಗುವಂತೆ ಮಾತ್ರ ಆಗದು ಆ ಬಾಹ್ಯವಿಧಿಯು ಅಂತರ್ವಿಧಿಯ ಸಿದ್ಧತೆಯ ಸಾಧನವು ಬಾ ನೂ ಅವಲ ಬಿಸದೆ ಕೇವಲ ಅಂತರ್ವಿಧಿಯನ್ನೇ ಅವಲಂಬಿಸುವುದೂ ಸರಿ ಅಂತರ ಶುಚಿತ್ವವು ಬೇಕು ಧೂಪವು ಬಾಹ್ಯಶುಚಿಯ ಸಾಧನ ಸ್ನಾನವು ಧನ ಮಡಿಯು ಬಾಹ್ಯಶುಚಿಯ ಸಾಧನ ಈ ತರಹದ ಶಾರೀರಿಕ ಶುದ್ಧ ಶುಚಿಗೆ ಆವಶ್ಯವಾದ ಸಾಧನ ಮಾನಸಿಕ ಧೂಪದಿಂದ ಕರ್ನಾಟಕ ಮಾತೆ ಹಾಗೆಯೇ ದೀಪ ಬೆಳಗುವದು ಅವಳ ಪ್ರತಿಮೆಯು ನಮ್ಮ ಕಣ್ಣಿಗೆ ಸ್ಪಷ್ಟ ಹೃದಯದಲ್ಲಿ ಓ ಮೂಡಬೇಕೆಂದು ಜ್ಞಾನದೀಪದಿಂದ ಅವಳನ್ನು ಬೆಳ ಹೃದಯದಲ್ಲಿ ಅವಳ ಮೂರ್ತಿಯನ್ನು ಸ್ಥಿರವಾಗಿ ನಿಲ್ಲಿಸ ವುದು ಸಾಧನ ವು ಉಣ್ಣುತಿನ್ನುವುದೆಲ್ಲವೂ ಅವಳ ಪ್ರಸಾದವೆಂಬ ಭಾವನೆಯನ್ನುಂಟು ನಿಜವಾದ ನೈವೇದ್ಯವಾದ ಆತ್ಮಸಮರ್ಪಣೆಗೆ ಅದು ಅನುಕೂಲವು ಆದು ಎಳಿರಿ, ಈ ಪವಿತ್ರವಾದ ನಾಡಹಬ್ಬದಲ್ಲಿ ನಾಡತಾಯಿಯನ್ನು ಜನನ್ಯ

ಖಂಡದ ಸ್ತ್ರೀಯರ ಸಭೆಗೆ ಅಧ್ಯಕ್ಷರಾಗುವ ಮಾನವು ದೊರೆತಿತ್ತು. ತುರ್ಕಸ್ಥಾನ ಜಪಾನದಿಂದಲೂ ಪ್ರಸಿದ್ಧ ಸ್ತ್ರೀಯರು ಬಂದಿದ್ದರು.

ಏರ್ಪಡಿಸಿದ ಸಭೆಯಲ್ಲಿ ಸಮಾಜದಲ್ಲಿ ಹೆಂಗಸರ ಸ್ಥಾನವು ಅವುದಿರಬೇಕೆಂಬುದೇ ಮುಖ್ಯ ವಿಷಯವಾಗಿತ್ತು. ಈಗ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಕೂಲಿಕಾರರಿಗೆ ಇಲ್ಲದೆ ತಿರುಗಾಡುವ ಜನರೇ ಅತಿಶಯವಾಗಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ, ಪ್ರತಿಯೊಂದು ಉದ್ಯೋಗದಲ್ಲಿ ಹೆಂಗಸರು ಸೇರಿರುವುದು. ಗಂಡರಿಗಿಂತ ಹೆಂಗಸರಿಗೆ ಕೂಲಿ ಕಡಿಮೆ. ಅವರು ಕೆಲಸ ಮಾಡುವದು ಜಾಸ್ತಿ. ಆದುದರಿಂದಲೇ ಅನೇಕ ಗಂಡಸರು ಕೂಲಿ ಇಲ್ಲದೆ ಉಳಿಯಬೇಕಾಗುತ್ತದಂತೆ. ಆದುದರಿಂದ ಸ್ತ್ರೀಯರು ಹಿಂದಿನಂತೆ ಮನೆವಾರ್ತೆಯ ಕೆಲಸಗಳನ್ನಷ್ಟೇ ಮಾಡಹತ್ತಬೇಕೆಂದೂ ಹಾಗೆ ಮಾಡಿದರೆ ಕೂಲಿಗಾರರ ಪ್ರಸಂಗವು ತಪ್ಪಿ ಜಗತ್ತು ಹೆಚ್ಚು ಸುಸ್ಥಿತಿಯಲ್ಲಿರುವದೆಂದೂ ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಈ ಮಹಾಸಭೆಯಲ್ಲಿ ಜೋರಿನಿಂದ ಪ್ರತಿಪಾದಿಸಿದರು. ಆದರೆ ಆ ಮಹಾಸಭೆಯು ಅದಕ್ಕೆ ಒಪ್ಪಲಿಲ್ಲ. ಸ್ತ್ರೀಯರ ಸರ್ವ ವಿಷಯದಲ್ಲಿಯೂ ಪುರುಷರ ಸರಿಸಮಾನರೆಂದರಾಗಿರಬೇಕೆಂದು ತತ್ವವೇ ಅಲ್ಲಿ ಪ್ರಬಲವಾಯಿತು. ಆದರೆ ಹೆಣ್ಣು ಮಕ್ಕಳಲ್ಲಿ ಕೆಲವರಿಗಾದರೂ ಹೆಂಗಸರ ಕಾರ್ಯಕ್ಷೇತ್ರವು ಮನೆಯು ಎಂಬ ತತ್ವವು ಮಾನ್ಯವಾಗುತ್ತಿದೆಂಬುದು ಸುಚಿಹ್ನವು. ಹೆಚ್ಚುಕಟ್ಟು ಅನುಭವವು ಬಂದಂತೆ ಹಿಂದಿನ ತತ್ವವು ಹೆಚ್ಚು ಮಾನ್ಯವಾಗುತ್ತ ಹೋಗಬಹುದೆಂದು ಆಶೆ ಯುಂಟು

ಕರ್ನಾಟಕ ಗ್ರಂಥ ಪ್ರದರ್ಶನ

ಕರ್ನಾಟಕಸ್ಥರಲ್ಲಿ ಬಿನ್ನಹ

ಮಹನೀಯರೇ,

ಈಗ ಕನ್ನಡ ಗ್ರಂಥಗಳಿಗಿರುವ ದುರವಸ್ಥೆಯು ತಮಗೆಲ್ಲ ಗೊತ್ತೇ ಇರುವದು. ಕನ್ನಡದಲ್ಲಿ ಹಳೆಯ ಗ್ರಂಥಗಳೆಷ್ಟವೆ, ಹೊಸ ಗ್ರಂಥಗಳೆಷ್ಟು ಪ್ರಸಿದ್ಧವಾಗಿರುವವು ಇವು ಓದುಗರಿಗೆ ಗೊತ್ತೇ ಇರುವದಿಲ್ಲ. ಈ ವಿಷಾದಕರ ಪರಿಸ್ಥಿತಿಯನ್ನು ಹೋಗಲಾಡಿಸುವದಕ್ಕಾಗಿ ಬಾಗಲಕೋಟೆಯ ನಾಡಹಬ್ಬ ಸಭೆಯವರು ಈ ಸಲ ನಾಡಹಬ್ಬದಲ್ಲಿ, ಕನ್ನಡ ಗ್ರಂಥಗಳ (ಪ್ರಸಿದ್ಧ ಹಾಗು ಅಪ್ರಸಿದ್ಧ) ಕರ್ನಾಟಕಕ್ಕೆ ಸಂಬಂಧಪಟ್ಟ ನಕಾಶೆ, ಚಿತ್ರಪಟ, ಕಟ್ಟಡಗಳ, ವೀರಪುರುಷರ, ವೃತ್ತಪತ್ರಗಳ ಹಾಗೂ ಪುಸ್ತಕಗಳ ಪ್ರದರ್ಶನವೊಂದನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿದ್ದಾರೆ. ಕಾರ್ಯವು ಕಠಿಣವಿದೆ. ಆದರೆ ತಮ್ಮೆಲ್ಲರ ಸಹಾಯದಿಂದ ಅದನ್ನು ಕೊನೆಗಾಣಿಸುವೆವೆಂದು ವಿಶ್ವಾಸವಿದೆ. ತಾವು ತಮ್ಮಲ್ಲಿದ್ದ ಸಾಹಿತ್ಯಗಳನ್ನು ನಮ್ಮ ಕಡೆಗೆ ಕಳುಹಿಸಬೇಕಾಗಿ ಬಿನ್ನಹ. ಉತ್ಸವ ಮುಗಿದ ಕೂಡಲೆ ತಮ್ಮ ವಸ್ತುಗಳನ್ನು ತಮಗೆ ಮುಟ್ಟಿಸುತ್ತೇವೆ. ಈ ಕಾರ್ಯದಲ್ಲಿ ವ್ಯಾಪಾರಿಗಳು, ಸಂಘಗಳು, ಸಭೆಯವರು, ವೃತ್ತಪತ್ರಕಾರರು ಹಾಗೂ ಎಲ್ಲ ಮಹನೀಯರು ನಮಗೆ ಸಹಾಯ ಮಾಡಿ ಪ್ರದರ್ಶನವನ್ನು ಯಶಸ್ವಿಯಾಗಿ ಕೊನೆಗಾಣಿಸಬೇಕಾಗಿ ಬೇಡುವ,

ತಮ್ಮ ವಿಧೇಯರು

ಬಾಗಲಕೋಟ { ಯಲಗುರ್ದರಾವ ಧಾರವಾಡ (ಅಧ್ಯಕ್ಷ)
ಮುರಿಗಯ್ಯಸ್ವಾಮಿ ಒಂಗಿನ (ಉಪಾಧ್ಯಕ್ಷ)

ನಾ ಹ ಉ ಕಮೀಟಿ

ಬಾಗಲಕೋಟ

ಡಿಗಳು.

...ಲ್ಲಿ ಹೆಣ್ಣು ಮಕ್ಕಳ ಸ್ಥಾ... ತ್ಯಂತ ಮಹತ್ವದ ಪ್ರಶ್ನೆ ...ಯರು ಎ ತ್ತ ಪು... ಈ ಜಗತ್ತಿನ ಮಾನವನ್ನ... ದು ನಿರ್ವಿವಾದವಾದ ...ಸಿದ ರಾಷ್ಟ್ರವೆಂದೆನ್ನಿಸಿ... ಪಾಶ್ಚಿಮಾತ್ಯ ವಿಚಾರ... ಯೆಂದು ಎನ್ನಲು ಅಡ್ಡಿ ... ಶ್ಚಿಮಾತ್ಯರ ವಿಚಾರಗ... ನಿವೆ ಎಂಬುದನ್ನು ತಿಳಿ... ವಶ್ಯ ಅಮೇರಿಕೆಯಲ್ಲಿ ...ವಲ್ಲಿ ಇಡೀ ಜಗತ್ತಿನ ಹೆಂಗಳೆಯರದೊಂದು ದೊಡ್ಡ ಸಭೆಯು ಒಂದು ವಾರದವರೆಗೆ ನಡೆದು ಮೊನ್ನೆ ಮೊನ್ನೆ ಮುಗಿಯಿತು. ಇಂಥ ಸಭೆಯು ಕೂಡಿದ್ದು ಇದೇ ಮೊದಲನೆಯ ಸಲ. ೨೬ ರಾಷ್ಟ್ರಗಳ ಸ್ತ್ರೀ ಪ್ರತಿನಿಧಿಗಳು ಈ ಸಭೆಗೆ ಬಂದಿದ್ದರು. ಇಂಗ್ಲಂಡದ ಮಂತ್ರಿಮಂಡಳದಲ್ಲಿ ಇಂದಿನ ವರೆಗೆ ಒಬ್ಬಳೇ ಹೆಣ್ಣುಮಗಳು ಮಂತ್ರಿಸ್ಥಾನವನ್ನು ಅಲಂಕರಿಸಿದ್ದಳು. ಅವಳ ಹೆಸರು ಮಾರ್ಗರೆಟ್ ಬೋನಫೀಲ್ಡ. ರ್‍ಯಾಚೆಲ್ ಕ್ರಾವ್ರಡಿ ಎಂಬವಳು ಹಿಂದಕ್ಕೆ ಲೀಗ ಆಫ್ ನೇಶನ್ಸದಲ್ಲಿ ಅಧಿಕಾರ ಸ್ಥಾನವನ್ನು ಅಲಂಕರಿಸಿದ್ದಳು. ಇವರಿಬ್ಬರು ಈ ಮಹಾಸಭೆಗೆ ಹೋಗಿದ್ದರು. ಹಿಂದುಸ್ಥಾನದ ಪರವಾಗಿ ಮುತ್ತುಲಕ್ಷ್ಮಿ ರೆಡ್ಡಿಯವರು ಅಲ್ಲಿಗೆ ಹೋಗಿದ್ದರು. ಇವರಿಗೆ ಏಶಿಯಾ

ಚಳವಳಿಯು ಜೀವಂತವಿದೆ.

ಸಿಮ್ಲಾ ತಾ॥ ೬— ಶ್ರೀ ಪುರಷೋತ್ತಮ ಇವರು ಈ ಹೊತ್ತಿನ ಕೌನ್ಸಿಲ್ ಆಫ್ ಸ್ಟೇಟದಲ್ಲಿ ರಾಜಕೀಯ ಕೈದಿಗಳ ಬಿಡುಗಡೆಯ ವಿಷಯವಾಗಿ ಒಂದು ಗೊತ್ತುವಳಿಯನ್ನು ತಂದಿದ್ದರು. ಈ ಗೊತ್ತುವಳಿಯ ... ಸೂಚನೆಯು ಕಾರ್ಯವ ... ರಾದರೆ ಶಾಂತವಾದ ... ಹುಟ್ಟುವದು ಅವಶ್ಯವಿರುವದರಿಂದ ಈ ಕಾಲಕ್ಕೆ ಹಿಂಸ ಮತ್ತು ಅಹಿಂಸೆಗಳಿಗಾಗಿ ಶಿಕ್ಷೆ ಹೊಂದಿದವರನ್ನು ಬಿಟ್ಟುಗೊಟ್ಟು ಉಳಿದ ಯಾವತ್ತು ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದೂ ಉಲ್ಲೇಖಿಸಿದ್ದರು. ಈ ಗೊತ್ತುವಳಿಯು ಮೇಲೆ ಸ್ವಲ್ಪ ಹೊತ್ತು ಚರ್ಚೆಯಾಗಿ ಅದು ಮತಕ್ಕೆ ಬೀಳದೆ ತಿರಸ್ಕರಿಸಲ್ಪಟ್ಟಿತು. ಹೋಮ್ ಸಕ್ರೆಟರಿಗಳಾದ ಮಿ. ಹ್ಯಾಲೆಟ್ ಇವರು ಸರಕಾರದ ಪರವಾಗಿ ಉತ್ತರವನ್ನು ಕೊಟ್ಟು, ಕೈದಿಗಳನ್ನು ಬಿಡುಗಡೆ ಮಾಡಿದ ಪಕ್ಷಕ್ಕೆ ಅವರು ಪುನಃ ಕಾಯದೆಭಂಗವನ್ನು ಪ್ರಾರಂಭ ಮಾಡುವದಿಲ್ಲವೆಂದು ತಮಗೆ ಆಶ್ವಾಸನ ಬೇಕೆಂದು ಹೇಳಿ, ಸರಕಾರದ ಧೋರಣವನ್ನು ಸಮರ್ಥಿಸಿದರು. ಮತ್ತು ಕಾಯದೆಭಂಗ ಚಳವಳಿಯು ಕಾಂಗ್ರೆಸದವರ ಸ್ವೀಕೃತ ಧೋರಣವಾಗಿದೆಯೆಂದೂ, ಚಳವಳಿಯು ಪೂರ್ಣವಾಗಿ ಸತ್ತಿರದೆ ಇನ್ನೂ ಜೀವಂತವಿದೆಯೆಂದೂ ಹೇಳಿದರು (ಅ ಪ್ರೆ)

ಡಾ ಕುಲಕರ್ಣೀಜ
ಲೆಬೊರೋಟರಿ ಮುಂಬಯಿ ನಂಬರ ೧೨
ಬಾಟ್ಲಿ ಕಿಮ್ಮತ್ತು ೧— ೨—೨
ಕೆಮಿಸ್ಟರಲ್ಲಿಯೂ ದೊರೆಯು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಗರಗು, ಬಿಳೀಸರಗು ಕೆಂಪು ಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿ ಇತೆ ಬೆನ್ನು ಹಿಡಿಯೋದು, ನಡಸೋವು ಅಶಕ್ತತಾ ಮೊದಲಾದ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಇದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದೆ

ಬಿ ಟಿ. ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.
೧೮೭

ಓಟಾವಾ ಕರಾರಿನ ಪರಿಣಾಮ.

ಹಿಂದೂಸ್ಥಾನ ಮತ್ತು ಬ್ರಿಟನ್ ಈ ದೇಶಗಳಲ್ಲಿಯ ಈ ವರ್ಷದ ಮೊದಲಿನ ೫ ತಿಂಗಳುಗಳ ವ್ಯಾಪಾರ ವಿಷಯಕ ಅಂಕಿಗಳು ಇದೀಗ ಪ್ರಸಿದ್ಧವಾಗಿವೆ. ಈ ಅಂಕಿಗಳನ್ನು ನೋಡಲಾಗಿ ಓಟಾವಾ ಕರಾರು ಬ್ರಿಟನಿಗೆ ಎಷ್ಟು ಪಥ್ಯಕರವಾಗಿದೆಯೆಂಬುದು ತಿಳಿದು ಬರುತ್ತದೆ. ಈ ಐದು ತಿಂಗಳ ಅವಧಿಯಲ್ಲಿ ಪರದೇಶದಿಂದ ಹಿಂದೂಸ್ಥಾನಕ್ಕೆ ಬಂದ ಸರಕುಗಳಲ್ಲಿ ಬ್ರಿಟಿಶ ಸರಕು ೧೦೦ಕ್ಕೆ [illegible] ರಂತೆ ಇತ್ತು. ಆದರೆ ಈ ವರ್ಷ ೧೦೦ಕ್ಕೆ [illegible] ರ ವರೆಗೆ ಏರಿದೆ. ಬ್ರಿಟಿಶ ಮೋಟಾರುಗಳ ಆಯಾತವು [illegible] ರಿಂದ [illegible] ರ ವರೆಗೆ ಬಂದಿದೆ. ಅಂದರೆ ಮೂರು ಪಟ್ಟು ಹೆಚ್ಚಾಗಿದೆ. ಸಿನೇಮಾ ಫಿಲ್ಮುಗಳಲ್ಲಿಯೂ ಇದೇ ಅನುಭವ ಬರುತ್ತದೆ. ಸ್ವದೇಶಿ ಚಳವಳಿ ಮತ್ತು ಜಪಾನಿನವರ ಸ್ಪರ್ಧೆಯ ಮೂಲಕ ಲ್ಯಾಂಕೆಶಾಯರದ ಬಟ್ಟೆಯ ವ್ಯಾಪಾರಕ್ಕೆ [illegible] ಹಿಂದೂಸ್ಥಾನದ ಪೇಟೆಯು ಬ್ರಿಟನ ಕೈಬಿಡುತ್ತಿತ್ತು. ಆದರೆ ಈ ಓಟಾವಾ ಕರಾರಿನಿಂದ ಅದರಲ್ಲಿಯೂ [illegible] ರಷ್ಟು ಹೆಚ್ಚಾಗಿದೆ. ಆದರೆ ಬ್ರಿಟನಕ್ಕೆ ಹೋಗುವ ಹಿಂದಿ ಸರಕುಗಳ ನಿರ್ಯಾತವು ಅದೇ ಪ್ರಮಾಣದಲ್ಲಿ ಹೆಚ್ಚಾಗಿರುವದಿಲ್ಲ. [illegible] ಅಕ್ಕಿ, ಚಹಾ ಮೊದಲಾದ ಪದಾರ್ಥಗಳನ್ನು ಬಿಟ್ಟರೆ, ಕಾಫಿ, ಕಬ್ಬಿಣ, ಉಕ್ಕು, ಚರ್ಮ ಮುಂತಾದವುಗಳ ನಿರ್ಯಾತವು ಅತಿ ಕಡಿಮೆಯಾಗಿದೆ. [illegible] ದಿಂದ ಬ್ರಿಟನ್ನದ ಕೂಡ ಹಿಂದೂಸ್ಥಾನದ ಆಯಾತ ನಿರ್ಯಾತವು ಸಮಪ್ರಮಾಣದಲ್ಲಿ ಆಗುತ್ತಿರುವದಿಲ್ಲವೆಂದೂ, ಇಂಗ್ಲಂಡದ [illegible] ಯೋಗ ಮೇಲಾಗಿರುವದೆಂದೂ ಸಿದ್ಧವಾಗುವದಿಲ್ಲವೆ?

ಯಾಕೂಬ ಹಸನರ ಪ್ರಯಾಣ.

ಮದ್ರಾಸ ತಾ॥ ೫— ಕಾಯದೆಮಂಡಳದ ಸಭಾಪತಿಗಳಾದ ಮೌಲಾನಾ ಯಾಕೂಬ ಹಸನರು ಈ ಹೊತ್ತಿನ ದಿವಸ ಬೆಂಗಳೂರ ಎಕ್ಸಪ್ರೆಸದಿಂದ ಅಂಬೂರಕ್ಕೆ ಪ್ರಯಾಣ ಮಾಡಿದರು. ಅಲ್ಲಿ ಮೊನ್ನೆ ಮೊನ್ನೆ ಮುಸಲ್ಮಾನರು ಹಾಗು ಅಸ್ಪೃಶ್ಯರಲ್ಲಿ ಆದ ದಂಗೆಯ ಸಂಬಂಧವಾಗಿ ಅವರು ವಿಚಾರಮಾಡಿ ಶಕ್ಯವಾದರೆ ಅವರಲ್ಲಿ ಐಕ್ಯವನ್ನುಂಟುಮಾಡಿ ಬರುವರು.

ಮೈಸೂರ ಸಂಸ್ಥಾನದಲ್ಲಿ ನೆರೆಹಾವಳಿ

ಚಿಕ್ಕಬಳ್ಳಾಪುರ ತಾ॥ ೫— ಕೋಲಾರ ಜಿಲ್ಹೆಯ ಶಾಮಸಮುದ್ರಮ್ ಎಂಬಲ್ಲಿ ಮೈಸೂರ ಸರಕಾರದವರು ಅಲ್ಲಿಯ ರೈತರ ಸಹಾಯಾರ್ಥವಾಗಿ ಕೆರೆಗೆ ಒಡ್ಡನ್ನು ಕಟ್ಟುತ್ತಿರುವರು. ಆದರೆ ಕೆರೆಯು ಈಗ ತುಂಬಿ ನೀರು ಹೆಚ್ಚಾಗಿರುವದೆಂದೂ, ಆ ಘಟನೆಯು ಒಡ್ಡು ಹರಿದುಹೋಗಿರುವದೆಂದೂ ತಿಳಿಯುತ್ತದೆ. ಈ ಮೂಲಕ ಅಲ್ಲಿಯ ಜನರು ಚಿಂತಾಕುಲರಾಗಿದ್ದಾರೆ. ಕೋಲಾರದ ಎಗ್ಜಿಕ್ಯೂಟಿವ ಇಂಜನಿಯರರು ಅತ್ತ ಹೋಗಿದ್ದಾರೆ.

ಲಾಹೋರದಲ್ಲಿ ಶಿಕ್ಷೆ.

ಲಾಹೋರ ತಾ॥ ೫— ಪರದೇಶಿ ಅರಿವೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ್ದಕ್ಕೋಸುಗ ಇಬ್ಬರು ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೪ ತಿಂಗಳ ಕಠಿಣ ಶಿಕ್ಷೆಯು ದೊರೆತಿದೆ.

ಸರ್ವಾಧಿಕಾರಿಯನ್ನು ಹಿಡಿದರು.

ಲ್ಯಾಲಪುರ ತಾ॥ ೪— ಜಿಲ್ಹಾ ಕಾಂಗ್ರೆಸ್ ಕಮಿಟಿಯ ಸರ್ವಾಧಿಕಾರಿಗಳಾದ ಸರದಾರ ಹುಕುಮ ಸಿಂಗ ಎಂಬುವರು ಎಲ್ಲಿಗೋ ಪ್ರಯಾಣ ಮಾಡುವ ಉದ್ದೇಶವಾಗಿ ಸ್ಟೇಶನಕ್ಕೆ ಬರುತ್ತಿರಲು ಪೋಲೀಸರು ಕ್ರಿಮಿನಲ್ ಕೋಡಿನ [illegible] ನೇ ಕಲಮಿನನ್ವಯ ಅವರನ್ನು ಕೈದು ಮಾಡಿದರು.

ಮಹಾತ್ಮರೊಡನೆ ಚರ್ಚೆ

ಪುಣೆ ತಾ॥ ೬— ಶ್ರೀ ಟಿ. ಪ್ರಕಾಶಮ್ ಇವರು ಈ ದಿನ ಮಹಾತ್ಮರ ದರ್ಶನ ತಕ್ಕೊಂಡು [illegible] ಗಂಟೆಯ ವರೆಗೆ ಪ್ರಸ್ತುತ ಪರಿಸ್ಥಿತಿಯ ಸಂಬಂಧವಾಗಿ ಅವರೊಡನೆ ಮಾತುಕತೆ ಮಾಡಿದರು.

ಮಹಾತ್ಮರ ಭವಿಷ್ಯದ ಧೋರಣವ ಸಂಬಂಧವಾಗಿ ಅವರಿಗೆ ಪ್ರಶ್ನೆ ಮಾಡಲಾಗಿ ಮಹಾತ್ಮರು ನಿಶ್ಚಿತವಾದ ಧೋರಣವನ್ನು ಗೊತ್ತು ಮಾಡಿಕೊಳ್ಳುವ ತನಕ ಪ್ರಕಟನೆಯನ್ನು ಮಾಡದಿರುವವರೆಗೆ ಏನನ್ನೂ ಹೇಳುವದಿಲ್ಲವೆಂದು ಉತ್ತರ ಕೊಟ್ಟರು.

ರಾಜಕೀಯ ಕೈದಿಗಳನ್ನು ಅಂದಮಾನಕ್ಕೆ ಕಳಿಸಬೇಡಿರಿ

ಕಲಕತ್ತಾ ತಾ॥ ೫— ಅಂದಮಾನದ ಕೈದಿಗಳ ಸಂಬಂಧದಲ್ಲಿ [illegible] ಕರೆದವರು ಈ ಹೊತ್ತಿನ ದಿವಸ ಒಂದು ಪತ್ರಿಕೆಯನ್ನು ತೆಗೆದು, ಅಂದಮಾನದ ಸ್ಥಿತಿಯು ರಾಜಕೀಯ ಕೈದಿಗಳನ್ನು ತಿರುಗಿ ಹಿಂದೂಸ್ಥಾನಕ್ಕೆ ಕರೆತಬೇಕೆಂದೂ; ಜನ ಭಿನ್ನಾಯವನ್ನು ಧಿಕ್ಕರಿಸಿ ಇನ್ನು ಮುಂದ ಕೈದಿಗಳನ್ನು ಅಲ್ಲಿಗೆ ಕಳಿಸಕೂಡದೆಂದೂ ಸರಕಾರಕ್ಕೆ ವಿನಂತಿ ಮಾಡಿಕೊಂಡಿದ್ದಾರೆ. ಈ ಪತ್ರಿಕೆಯ ಮೇಲೆ ಡಾ॥ ರವೀಂದ್ರನಾಥ ಟಾಗೋರ, ಆಚಾರ್ಯ ರಾಯ ಸಾ। ಸರೋಜಿನಿದೇವಿ ನಾಯಡು, ಮಿಸೆಸ್ ಸೇನಗುಪ್ತ, ಶ್ರೀಮತಿ ವಾಸಂತಿ ದಾಸ, ಪಂಡಿತ ಜವಾಹಿರಲಾಲ ನೆಹರೂ, ಮೌಲಾನಾ ಆಜಾದ್, ಶ್ರೀ ರಮಾನಂದ ಚಟರ್ಜಿ, ಶ್ರೀ ಸಿ. ವಾಯ್. ಚಿಂತಾಮಣಿ ಮೊದಲಾದ ಪ್ರಮುಖ ಗೃಹಸ್ಥರ ಸಹಿಗಳಿವೆ.

ಬ್ರಿಟಿಶ ವ್ಯಾಪಾರಕ್ಕೆ ಕುತ್ತು ಜಪಾನದ ಪ್ರಚಂಡ ಯೋಜನೆ

ಲಂಡನ್ ತಾ॥ ೫— ಇಂಗ್ಲಂಡದ ಅರಬಿ ಉಣ್ಣೆ ಮತ್ತು ರೇಶಿಮೆಯ ವ್ಯಾಪಾರವನ್ನು ಮುಗ್ಗಿಸಿ ಅವನ್ನು ತಮ್ಮ ಕೈಯಲ್ಲಿ ತೆಗೆದು ಕೊಳ್ಳುವದಕ್ಕೋಸುಗ ಜಪಾನದವರು ಒಂದು ಪ್ರಚಂಡವಾದ ಯೋಜನೆಯನ್ನು ತಯಾರ ಮಾಡಿರುವರೆಂದು ಡೇಲಿ ಹೆರಾಲ್ಡ ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ.

ಮುನಸಿಪಾಲಟಿ ವಿರುದ್ಧ ತೀರ್ಪು

ಝಾಂಸಿ ಮುನಸಿಪಾಲಟಿಯ ಸೆಕ್ರೆಟರಿಯಾಗಿದ್ದ ಶ್ರೀ ಬಿ. ಎಲ್. ವರ್ಮಾ ಇವರು, ಮುನಸಿಪಾಲಟಿಯವರು ತಮ್ಮನ್ನು ನೌಕರಿಯಿಂದ ತೆಗೆದ ಬಗ್ಗೆ ಮುನಸಿಪಾಲಟಿಯ ಮೇಲೆ ದಾವೆ ಮಾಡಿದ್ದರು! ಸಬ್‌ಜಡ್ಜರ ಸೆಕ್ರೆಟರಿಯವರಂತೆ ನ್ಯಾಯವನ್ನು ನಿರ್ಣಯಿಸಿ ಮುನಸಿಪಾಲಿಟಿಯವರು ಅವರಿಗೆ [illegible] ರೂಪಾಯಿ ಹಾನಿಯನ್ನು ತುಂಬಿ ಕೊಡಬೇಕೆಂದು ತೀರ್ಪು ಕೊಟ್ಟರು. ಈ ಖಟ್ಲೆಯ ವೃತ್ತಾಂತವೇನಂದರೆ— ಶ್ರೀ ವರ್ಮಾ ಇವರು ರಜೆಯ ಮೇಲಿದ್ದಾಗ ಪೋಲೀಸರು ಅವರನ್ನು ಕಾಯದೆಭಂಗದ ಸಂಬಂಧದಿಂದ ಸೆರೆ ಹಿಡಿದರು. ಕಮಿಶನರರು ಮುನಸಿಪಾಲಟಿಗೆ ಪತ್ರ ಬರೆದು ಚಳವಳಿಯವರನ್ನು ನೌಕರಿಯಲ್ಲಿ ಇಟ್ಟುಕೊಳ್ಳಕೂಡದಾಗಿ ಆಕ್ಷೇಪವೆತ್ತಿದರು. ಮುನಸಿಪಾಲಟಿಯವರು ಅವರನ್ನು ಅವರು ಇನ್ನೂ ರಜೆಯಮೇಲಿದ್ದಾಗಲೇ ನೌಕರಿಯಿಂದ ತೆಗೆದರು. ಶ್ರೀ ವರ್ಮಾ ಇವರು ರಜೆಯ ಮೇಲಿದ್ದಾಗ ತಮ್ಮನ್ನು ನೌಕರಿಯಿಂದ ತೆಗೆದದ್ದು ಅನ್ಯಾಯವಾಗಿರುವದಾಗಿ ಕೋರ್ಟಿನಲ್ಲಿ ದಾವೆ ಮಾಡಿದರು.

ಪಂ. ಜವಾಹಿರರ ಪ್ರಕಟನೆ.

ಅಲಹಾಬಾದ ತಾ॥ ೪— ಪಂಡಿತ ಜವಾಹಿರಲಾಲ ನೆಹರೂ ಇವರು ಸ್ಥಾನಿಕ ಕಾಂಗ್ರೆಸ್ ಮುಂದಾಳುಗಳೊಡನೆ ಎಂದು ದಿವಸ ಚರ್ಚೆ ಮಾಡಿ ಒಂದು ಪತ್ರಿಕೆಯನ್ನು ಹೊರಡಿಸಿದ್ದಾರೆ. ಈ ಪತ್ರಿಕೆಯಲ್ಲಿ ಅವರು ಅನ್ನುವದೇನಂದರೆ— ಕಾಂಗ್ರೆಸದ ಭಾವೀ ಧೋರಣದ ವಿಷಯದಲ್ಲಿ ಮಹಾತ್ಮರ ಭೆಟ್ಟಿ ತೆಗೆದುಕೊಳ್ಳುವವರೆಗೆ ನಾನು ಏನೂ ಹೇಳಲಾರೆ. ಕಾಂಗ್ರೆಸದ ಘಟನೆಯನ್ನು ದಲಿಸುವದು ಯಾರ ಕೈಯಲ್ಲಿಯೂ ಇಲ್ಲ. ಮಹಾತ್ಮಾ ಗಾಂಧಿ ಹಾಗು ಶ್ರೀ ಅಣೆಯವರು ಸಲಹೆಗಳನ್ನು ಕಾಂಗ್ರೆಸ್ ಸಂಸ್ಥೆಗಳು ಮಾನ್ಯಮಾಡಿರುತ್ತವೆ. ಅಂದರೆ ಅವುಗಳ ಅಸ್ತಿತ್ವವೇ ಮುಗಿಯಿತೆಂಬುದಾಗಿ ಅರ್ಥವಾಗುವದಿಲ್ಲ. ಕರಾಚಿ ಕಾಂಗ್ರೆಸದಲ್ಲಿ ನಾನು ಜನರಲ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿದ್ದೇನೆ. ಮತ್ತು ಅಂಥ ಪ್ರಸಂಗವು ಬಂದಲ್ಲಿ ನಾನು ಆ ಕಾರ್ಯವನ್ನು ಪುನಃ ಕೈಕೊಳ್ಳುತ್ತೇನೆ.

ವಿದ್ಯಾರ್ಥಿಗಳನ್ನು ಹೊಡೆಯಬಹುದೇ?

ಕಲಕತ್ತಾ ತಾ॥ ೪— ಬಂಗಾಲ ಕಾಯದೆಮಂಡಳದ ಈ ಹೊತ್ತಿನ ಅಧಿವೇಶನದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಶಿಕ್ಷಣ ಮಂತ್ರಿಗಳಾದ ಖ್ವಾಜಾ ನಾಜಿಮುದ್ದೀನ ಇವರು ಹೇಳಿದುದೇನಂದರೆ— ವಿದ್ಯಾರ್ಥಿಗಳನ್ನು ಬೆತ್ತದಿಂದ ಹೊಡೆಯುವ ಅಧಿಕಾರವು ಶಾಲೆಯ ಮುಖ್ಯಾಧ್ಯಾಪಕರಿಗೆ ಒಪ್ಪಿಸಿರುತ್ತದೆ. ಆದರೆ ದೇಹಕ್ಕೆ ಏನೂ ಗಾಯವಾಗದಂತೆ ಹೊಡೆಯಬೇಕು.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ಮದ್ರಾಸ ಕಾರ್ಪೋರೇಶನದಲ್ಲಿ ಮಿದನಾಪುರ ಅತ್ಯಾ[ಚಾರ]

ಮದ್ರಾಸ ತಾ॥ ೪— ಮದ್ರಾಸ ಕಾರ್ಪೋರೇಶನದ ಈ ಹೊತ್ತಿನ ಸಭೆಯಲ್ಲಿ ಜ. ನಾರಾಯಣಸ್ವಾಮಿ ಚೆಟ್ಟಿಯವರು ಮಿದನಾಪುರ ಕಲೆಕ್ಟರರಾದ ಮಿ। ಬರ್ಜ ಇವರ ಕೊಲೆಯ ಬಗ್ಗೆ ದುಃಖಪ್ರದರ್ಶನ ವ್ಯಕ್ತ ಮಾಡುವ ಠರಾವನ್ನು ಸಭೆಯಲ್ಲಿ ಮಂಡಿಸಲು ಅಪ್ಪಣೆ ಕೊಡುವದು ಗಬೇಕೆಂದು ಕೇಳಿಕೊಂಡರು. ಅವರಿಗೆ ಅಪ್ಪಣೆ ಕೊಟ್ಟಿತು.

ಬೆಳಗಾವಿ ತಾ॥ ೭— [illegible] ಮೇಲೆ ದಾಳಿ ಮಾಡಿದ ಸಂಬಂಧವಾಗಿ [illegible] ಯಲ್ಪಟ್ಟ ಶ್ರೀ ಬಾಪು ಶ್ರೀ ಗೋಖಲೆ [illegible] ಶ್ರೀ ಖಂಡೆ ಇವರಿಗೆ ಮೊನ್ನಿನ ದಿವಸ [illegible] ವಾಗಿ ೩ ತಿಂಗಳ ಕಠಿಣ ಕೈದು ಹಾಗು [illegible] ರೂಪಾಯಿ ದಂಡ ಹೀಗೆ ಶಿಕ್ಷೆಯಾಯಿತು.

ಕನ್ನಡಿಗನ ಚಂದಾ ವಿವ[ರ]

	ಸ್ಥಳಿಕರಿಗೆ	ಪರಸ್ಥಳ[ದವರಿಗೆ]
ತಿಂಗಳಿಗೆ	೧-೬-೬	೦-೧[illegible]
೩ ತಿಂಗಳಿಗೆ	೧-೪-೦	೨-[illegible]
೬ ತಿಂಗಳಿಗೆ	೨-೮-೦	೫-[illegible]
ವರ್ಷಕ್ಕೆ	೫-೦-೦	೯-[illegible]

ವ್ಯವಸ್ಥಾ[ಪಕರು]

ಛಾಪಖಾನೆಯ ಸಾಮಾನು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನ[ಡ ಅಕ್ಷರ]ಗಳು, ಗ್ಯಾಲಿಯ್ಸ್, ಬಾಯಿಂಡರ [illegible] ಮಶಿನ್ಸ್, ಲೆಡ್ ಕಟರ, ಹಾಗು ಟ್ರೆಡಲ್ (ಇಂಗ್ಲಂಡ) ಅಕಾಂ ಫ[illegible] ಫೋಲಿಯೊ.

ಕನ್ನಡಿಗ ಮುದ್ರಾ[ಲಯ]
ಧಾರವಾ[ಡ]

ಬೇಕಾಗಿದೆ.

ಉತ್ತಮ ಸ್ಥಿತಿಯಲ್ಲಿದ್ದ ಉಪ[ಯೋ]ಯೋಗಿಸಿದ ಸಾಯಕಲ್ಲು ಬೇಕಾ[ಗಿದೆ] ವಿದ್ದವರು ಕಮಕ್ಕೆ ಮ ಕಾಣಬೇಕು

ಕೈ C/o ಕನ್ನಡಿಗ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವ[ರು]

ಶನಿವಾರ ತಾ॥ ೯-೯-೩೩ ನೇ ದಿವಸ ರಾತ್ರಿ

ಪಾಂಡವರ

ಅಜ್ಞಾತವಾಸ.

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾ[ರದು]

ಸಂಘದೊಡೆಯರು
ಗರೂಡ ಸದಾಶಿವರಾ[ವ]

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇ[ರಿ]

ಕುಟುಂಬ ಸಂರಕ್ಷಕ ನಿಧಿ.

ವಿನೂತನವಾದ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ [ಮಾಹಿತಿ]ಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೫-೮-೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ರ. ಬಿ. ೨೭೮೮

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ ಮನು.

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:- ...ೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಶನಿವಾರ ಭಾದ್ರಪದ ಬಹುಳ ೫ ಶಕೆ ೧೮೫೫ ತಾ॥ ೯-೯-೩೩ [ಸಂಚಿಕೆ ೧೮೮

ಇನ್‌ಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್‌ಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು...

ಇನ್‌ಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಪಂ. ಜವಾಹಿರರು ಪುಣೆಗೆ ಹೊರಟರು.

ಲಖನೌ ತಾ॥ ೮— ಪಂಡಿತ ಜವಾಹಿರಲಾಲರು ತಮ್ಮ ಕಾರ್ಯದರ್ಶಿ ಹಾಗು ಪ್ರೈವ್ಹೇಟ ಲಾಣಿಯವರೊಂದಿಗೆ ಮುಂಬಯಿ ಮೇಲಿನಿಂದ ಈ ಹೊತ್ತಿನ ದಿವಸ ಪುಣೆಗೆ ಹೊರಟರು (ಅ ಪ್ರೈ)

ಪಂಡಿತ ಜವಾಹಿರರ ಆಗಮನ

ಪುಣೆ ತಾ॥ ೭— ಪಂಡಿತ ಜವಾಹಿರಲಾಲ ನೆಹರೂ ಇವರು ಮದ್ರಾಸ ಎಕ್ಸಪ್ರೆಸದಿಂದ ಶನಿವಾರ ದಿವಸ ಸಂಜೆಗೆ ಇಲ್ಲಿಗೆ ಬ ತಕ್ಕವರಿರುವದರಿಂದ ಕರ್ನಾಟಕದಲ್ಲಿಯ ಜನರು ಅವರ ಆಗಮನವನ್ನು ಕುತೂಹಲದಿಂದ ನಿರೀಕ್ಷಿಸಹತ್ತಿದ್ದಾರೆ. (ಅ ಪ್ರೈ)

ಮಹಾತ್ಮರಿಗೆ ಥಕ್ಕರರ ಸೂಚನೆ

ಪುಣೆ ತಾ॥ ೭—ಮಹಾತ್ಮಾ ಗಾಂಧಿಯವರು ಪ್ರತಿನಿತ್ಯದಲ್ಲಿಯೂ ಅಸ್ಪೃಶ್ಯ ಸೇವಕ ಸಮಾಜದ ಜನರಲ್ ಸೆಕ್ರೆಟರಿಯವರಾದ ಶ್ರೀ ಎ ವ್ಹಿ ಥಕ್ಕರ ಇವರೊಡನೆ ವಿಚಾರ ವಿನಿಮಯ ಮಾಡುತ್ತಿರುವರು ಶ್ರೀ ಥಕ್ಕರ ಇವರು ಮಹಾತ್ಮಾ ಗಾಂಧಿಯವರಿಗೆ ಅಸ್ಪೃಶ್ಯತಾ ನಿವಾರಣ ಚಳವಳಿಗೆ ಅವಶ್ಯಕವಾದ ಚಲನವನ್ನು ಕೊಡುವದಕ್ಕೋಸುಗ ಒಂದು ವರ್ಷದ ಮಟ್ಟಿಗೆ ಉಳಿದ ಯಾವತ್ತು ಕಾರ್ಯವನ್ನು ಬಿಟ್ಟು, ಹರಿಜನ ಚಳವಳಿಯಲ್ಲಿಯೇ ತೊಡಗಬೇಕೆಂದು ಸೂಚನೆ ಮಾಡಿರುವರೆಂದು ತಿಳಿದುಬರುತ್ತದೆ ಆದರೆ ಹರಿಜನ ಕೆಲಸದ ನಿಮಿತ್ತದಿಂದ ಮಹಾತ್ಮಾ ಗಾಂಧಿಯವರು ತಮ್ಮ ಯಾವತ್ತು ರಾಜಕೀಯ ಚಲನವಲನಗಳನ್ನು ಬದಿಗಿರಿಸಲು ಒಪ್ಪಿಕೊಳ್ಳುವರೆಂದು ಹೇಳಲು ಬರುವಂತಿಲ್ಲ ಆದರೆ ಎಲ್ಲವೂ ಗಾಂಧಿ ಜವಾಹಿರರ ಸಂಭಾಷಣದ ವೇಳೆಯ ಮೇಲೆ ಅವಲಂಬಿಸಿದೆ (ಅ ಪ್ರೈ)

ಮಧ್ಯಪ್ರಾಂತದ ಹೊಸ ಗವ್ಹರನರರು.

ಮುಂಬಯಿ ತಾ॥ ೮— ಮಧ್ಯಪ್ರಾಂತದ ನಿಯೋಜಿತ ಗವ್ಹರ್ನರರಾದ ಸರ್ ಹ್ಯೂಗ್ ಕ್ಲೆರೆಂಡನ್ ಗೋವನ್ ಇವರು ಈ ಹೊತ್ತಿನ ದಿವಸ ಮುಂಜಾನೆ ಎಸ್ ಎಸ್ ಮಲೋಜಾ ಹಡಗದಿಂದ ಇಲ್ಲಿಗೆ ಬಂದರು ಬಹಾದುರ ಮುನಿಸಿಪಾಲಿಟಿಯ ಉಪಾಧ್ಯಕ್ಷರು, ಸಭಾಸದರು ಮತ್ತು ಇತರ ಗೃಹಸ್ಥರು ಬಂದರದಲ್ಲಿ ಅವರಿಗೆ ಯಥಾಯೋಗ್ಯ ಸ್ವಾಗತ ಮಾಡಿ, ಅವರಿಗೆ ಪೂ ಮಾಲೆಗಳನ್ನರ್ಪಿಸಿದರು ಅವರು ಮುಂಬಯಿಯಲ್ಲಿ ಒಂದು ದಿವಸ ನಿಂತು ನಾಳಿನ ದಿವಸ ನಸುಕಿನಲ್ಲಿ ಪುಣೆಗೆ ಹೋಗುವರು. ಅಲ್ಲಿ ಅವರು ಸಮಾರು ಒಂದು ವಾರದ ವರೆಗೆ ನಿಂತುಕೊಂಡು ಆ ಮೇಲೆ ನಾಗಪುರಕ್ಕೆ ತೆರಳುವರು (ಅ ಪ್ರೈ)

ಮಹಾತ್ಮರ ಪ್ರಕಟನೆ.

ತಾ॥ ೨೪ಕ್ಕೆ ಹರಿಜನ ದಿನ

ಪುಣೆ ತಾ॥ ೭— ಮಹಾತ್ಮಾ ಗಾಂಧಿಯವರು "ಹರಿಜನ ದಿನ" ದ ಸಂಬಂಧವಾಗಿ ಕೆಳಗಿನಂತೆ ಪ್ರಕಟನೆ ಹೊರಡಿಸಿದ್ದಾರೆ

"ಅಸ್ಪೃಶ್ಯ ಸೇವಕ ಸಮಾಜದವರು ಈ ತಿಂಗಳ ೨೪ ನೆ ತಾರೀಖಿಗೆ ಹರಿಜನ ದಿನವನ್ನು ಪಾಲಿಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ ಕಳೆದ ವರ್ಷ ಇದೇ ದಿವಸ "ಪುಣೆಯ ಒಪ್ಪಂದ" ವೆಂದು ತಪ್ಪಾಗಿ ಕರೆಯಲ್ಪಡುವ "ಯರೋಡಾ ಒಪ್ಪಂದ" ವು ನಿರ್ಣಿತವಾಯಿತು ಯಾವತ್ತೂ ಈ ದಿವಸವನ್ನು ಸಮಯೋಚಿತವಾಗಿ ಆಚರಿಸುವರೆಂದು ನಂಬಿದ್ದೇನೆ ಅಂದು ಮನೆ ಮನೆಗೆ ಹೋಗಿ ಹರಿಜನ ಕಾರ್ಯಕ್ಕೋಸುಗ ಹಣವನ್ನು ಕೂಡಿಸಬೇಕು ಇದರಂತೆ ಅಂದು ಹರಿಜನರಾದರೂ, ತಮ್ಮ ಉದ್ಧಾರ ಮತ್ತು ಹಿಂದೂ ಧರ್ಮದ ಪಾವಿತ್ರ್ಯಕ್ಕೋಸುಗ ಮುಂದುವರಿಯಲ್ಪಟ್ಟ ಈ ಚಳವಳಿಯಲ್ಲಿ ತಮ್ಮಿಂದ ಕಾರ್ಯವೇನಾಯಿತೆಂಬುದನ್ನು ಸಮಾಲೋಚಿಸುವರೆಂದು ನನಗೆ ಆಶೆಯಿದೆ ಆದರೆ ಈ ವಿಷಯದ ಹೆಚ್ಚಿನ ಜವಾಬ್ದಾರಿಯು ಶುದ್ಧ ಹಿಂದೂ ಜನರ ಮೇಲೆಯೇ ಇದೆ ಎಂಬುದರಲ್ಲಿ ಸಂದೇಹವಿಲ್ಲ ಸುಧಾರಣಾವಾದಿಗಳು, ಸನಾತನ ಜನರನ್ನು ತಮ್ಮ ಕಡೆಗೆ ಎಳೆದುಕೊಳ್ಳುವದು ತಮ್ಮ ಕರ್ತವ್ಯವಿದೆಯೆಂದು ತಿಳಿದುಕೊಳ್ಳಬೇಕು ಆದರೆ ಈ ಕಾರ್ಯವನ್ನು ಅವರು ಸ್ವಾರ್ಥತ್ಯಾಗ ಸರಳತನ, ಕಾರುಣ್ಯ ಹಾಗೂ ಶುದ್ಧ ಮನಸ್ಸು ಇವುಗಳಿಂದ ನೆರವೇರಿಸಬೇಕು" (ಅ ಪ್ರೈ)

ಗಿರಣಿ ಸಂಘ ಹಾಗು

ಲೇಬರ ಯೂನಿಯನ್‌ವರಲ್ಲಿ ಮತಭೇದ

ಅಹಮ್ಮದಾಬಾದ ತಾ॥ ೮— ಗಿರಣಿ ಸಂಘದವರು ತಮ್ಮ ಹಾಗು ಲೇಬರ ಯೂನಿಯನ್ನವರಲ್ಲಿಯ ಮತಭೇದವನ್ನು ವಿಚಾರ ಮಾಡಿ ಅದನ್ನು ಬಗೆಹರಿಸಲಿಕ್ಕೆ ಮಹಾತ್ಮಾ ಗಾಂಧಿಯವರ ಬದಲು ಬೇರೊಬ್ಬರನ್ನು ಪಂಚರನ್ನಾಗಿ ನಿಯಮಿಸಬೇಕೆಂದು ವಿನಂತಿ ಮಾಡಿಕೊಂಡಿದ್ದರು ಮಹಾತ್ಮರ ಪ್ರಕೃತಿಯು ಸುಧಾರಿಸದೆ ಇದ್ದದ್ದು ಮತ್ತು ಅವರು ಇತರ ರಾಷ್ಟ್ರೀಯ ಕಾರ್ಯದಲ್ಲಿ ತೊಡಗಿಕೊಂಡದ್ದು ಇವೇ, ಅವರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಲು ಕಾರಣಗಳಾಗಿವೆ ಆದರೆ ಲೇಬರ ಯೂನಿಯನ್ನವರು ಅವರಿಗೆ 'ನಕಾರಾತ್ಮಕ ಉತ್ತರ ಕೊಟ್ಟು, ಮಹಾತ್ಮರು ಮುಂಬಯಿಗೆ ಬಂದಾಗ್ಗೆ ಅವರ ಕಡೆಗೆ ಹೋಗಿ ನ್ಯಾಯವನ್ನು ಬಗೆಹರಿಸಲು ಕೇಳಿಕೊಳ್ಳೋಣ ಎಂದು ತಿಳಿಸಿದ್ದಾರೆ (ಅ ಪ್ರೈ)

ಕ್ಯಾಪ್ಟನ್ನರ ಕೊಲೆ

ಸಿಮಲಾ ತಾ॥ ೮— ಪಂಜಾಬದಲ್ಲಿಯ ರಜಮಾಕ ದಲಕ್ಕೆ ಸೇರಿದ ಕ್ಯಾಪ್ಟನ್ ಟಿ ಆರ್ ಈಸ್ಟ್ಮನ್ನ ಇವರು ರಜಮಾಕ ಒಳಿಯಲ್ಲಿ ತುಂಡರಿಸಲ್ಪಟ್ಟು ಕೊಲ್ಲಲ್ಪಟ್ಟಿರುವರೆಂದು ಅಧಿಕೃತ ಸುದ್ದಿ ಬಂದಿದೆ (ಅ ಪ್ರೈ)

ಬಾರಾಬಂಕಿಯಲ್ಲಿ

ಪೋಸ್ಟಿನ ಹಣದ ಲೂಟಿ

ಲಖನೌ ತಾ॥ ೮— ಬಾರಾಬಂಕಿಯ ಪೋಸ್ಟಿನ ಅಧಿಕಾರಿಗಳು ಪೋಸ್ಟಿನೊಳಗಿನ ನಿತ್ಯದ ಹಣವನ್ನು ಸರಕಾರಿ ಬೊಕ್ಕಸಕ್ಕೆ ಒಯ್ಯುತ್ತಿರುವಾಗ ಕೆಲವು ಸಶಸ್ತ್ರ ದರೋಡೆಗಾರರು ಪೋಸ್ಟ ಮಾಸ್ತರರು ಹಾಗು ಇಬ್ಬರು ಸೇವಕರ ಮೇಲೆ ಹಲ್ಲೆ ಮಾಡಿದರೆಂದು ಸುದ್ದಿ ಬಂದಿದೆ ಪೋಸ್ಟ ಮಾಸ್ತರರು ಹಾಗು ಇತರರಿಗೆ ಭಯಂಕರ ಘಾಯ ಸಂಭವಿಸಿದೆ ಅವರೆಲ್ಲರೂ ಈಗ ಆಸ್ಪತ್ರೆಯಲ್ಲಿ ಇದ್ದಾರೆ ದರೋಡೆಗಾರರು ಚೀಲಗಳನ್ನು ತೆಗೆದುಕೊಂಡು ಓಡಿಹೋದರು ಈ ವರೆಗೆ ಯಾರೂ ಹಿಡಿಯಲ್ಪಟ್ಟಿರುವದಿಲ್ಲ. ಅಪರಾಧಿಗಳ ಕೈಯಿಂದ ಬಂದೂಕಿನಿಂದ ನಡೆದಿದೆ ೩೦೦೦ ರೂಪಾಯಿಗಳು ಲೂಟಿ ಮಾಡಲ್ಪಟ್ಟಿವೆಯೆಂದು ತಿಳಿದಿದೆ (ಅ ಪ್ರೈ)

ಅಸೆಂಬ್ಲಿಯಲ್ಲಿ

ರಿಝರ್ವ ಬ್ಯಾಂಕಿನ ಮಸೂದೆ

ಸಿಮಲಾ ತಾ॥ ೮— ಅಸೆಂಬ್ಲಿಯಲ್ಲಿ ಈ ಹೊತ್ತಿನ ದಿವಸ 'ರಿಝರ್ವ ಬ್ಯಾಂಕಿನ ಮಸೂದೆಯು ಚರ್ಚೆಗೆ ಬರತಕ್ಕದ್ದಿದೆ ಈ ಮಸೂದೆಯ ಉದ್ದೇಶ ಪತ್ರಿಕೆಯಲ್ಲಿ ಕಾಣಿಸಲ್ಪಟ್ಟಿರುವದೇನ ಪರಿ—

ಈ ಮಸೂದೆಯು ಉದ್ದೇಶವೆಂದರೆ ಹಿಂದ ಸ್ಥಾನದಲ್ಲಿ ರಿಝರ್ವ ಬ್ಯಾಂಕನ್ನು ಸ್ಥಾಪಿಸುವದಿರುತ್ತದೆ ಮೊದಲನೆಯ ಜಂಟಿ ಪರಿಷತ್ತಿನ ಸಂಯುಕ್ತಘಟನಾ ಉಪಮಂಡಳದವರು ಹಿಂದಿ ಹಣ ಹಾಗು ಚಲನದ ಕಾರ್ಯಭಾರದಲ್ಲಿ ವಿಶ್ವಾಸವನ್ನು ಹುಟ್ಟಿಸಲು ಗಟ್ಟಿಯಾದ ತಳಹದಿಯ ಮೇಲೆ ಆದಷ್ಟು ಬೇಗನೆ ಹಿಂದುಸ್ಥಾನದ ರಿಝರ್ವ ಬ್ಯಾಂಕನ್ನು ಸ್ಥಾಪಿಸಬೇಕೆಂದು ಶಿಫಾರಸು ಮಾಡಿದ್ದರು ಮೂರನೆ ಜಂಟಿ ಪರಿಷತ್ತಿನ ಸಾಯಮನ್ಸನಿಯಲ್ ಸೇಫಗಾರ್ಡ್ಸ ಕಮೀಟಿಯವರಾದರೂ ಈ ಮೇಲಿನ ತಳಹದಿಯ ಮೇಲೆ ರಿಝರ್ವ ಬ್ಯಾಂಕಿನ ಮಸೂದೆಯನ್ನು ಹಿಂದಿ ಕಾಯದೆವ ಮಂಡಳದಲ್ಲಿ ಆದಷ್ಟು ಬೇಗ ಮುಂದೆ ತರುವಂತೆ ಏರ್ಪಾಡು ಮಾಡಬೇಕೆಂದು ಶಿಫಾರಸು ಮಾಡಿದ್ದರು ಇದರಂತೆ ಈ ಮಂಡಳದವರು ತಮ್ಮ ವರದಿಯಲ್ಲಿ ಸ್ಟೇಟ ಸೆಕ್ರೆಟರಿಯವರು ರಿಝರ್ವ ಬ್ಯಾಂಕಿನ ಸ್ಥಾಪನೆಯ ವಿಷಯವಾಗಿ ಹಿಂದ ಪ್ರತಿನಿಧಿಗಳ ಅಭಿಪ್ರಾಯವನ್ನಾದರೂ ತಿಳಿದುಕೊಳ್ಳತಕ್ಕದ್ದೆಂದು ಉಲ್ಲೇಖಿಸಿದ್ದರು ಇದರಂತೆ ಒಂದು ಪ್ರತಿನಿಧಿ ಮಂಡಳವಾದರೂ ನಿಯಮಿಸಲ್ಪಟ್ಟಿತ್ತು. ಆ ಮಂಡಳದ ವರದಿಯನ್ನಾದರೂ ಆ ಪಂಚಾಳ ದ್ರವ ಶಿಫಾರಸಗಳ ಸಾರವಾಗಿಯೇ ತಯ್ಯಾರ ಮಾಡಿದೆ ಜಾಯಿಂಟ ಸಿಲೆಕ್ಟ ಕಮೀಟಿಯವರು ವಿಚಾರ ಮಾಡದೆ ಇದ್ದ ಕೆಲವು ವಜ್ಜೆಗಳ ವಿಷಯವಾಗಿಯೂ ಮತ್ತು ಮಸೂದೆಯೊಳಗಿನ ಸಂಗತಿಗಳ ವಿಷಯವಾಗಿಯೂ ಟಿಪ್ಪಣಿಗಳನ್ನು ಕೊಟ್ಟಿರುತ್ತದೆ (ಅ ಪ್ರೈ)

ಅಸೆಂಬ್ಲಿಯ ಅಧ್ಯಕ್ಷರು ರಿಝರ್ವ ಬ್ಯಾಂಕ ಮಸೂದೆಯ ಸಂಬಂಧವಾಗಿ ಸಭಾಸದರಿಗೆ ಹೇಳಲು ವ್ಯಕ್ತಪಡಿಸಿದ್ದೇನಂದರೆ— ರಿಝರ್ವ ಬ್ಯಾಂಕ ಮಸೂದೆಯ ಸಂಬಂಧವಾಗಿ ತಮ್ಮ ಅಂಬೋಣವನ್ನು ಸಭೆಯ ಮುಂದೆ ಇಡಲು ಫಾಯನಾನ್ಸ ಮೆಂಬರ ಸರ್ ಜಾರ್ಜ ಶ್ಯೂಸ್ಟರ ಇವರಿಗೆ ರೂಢಿಗಿಂತ ಹೆಚ್ಚಿನ ಅವಧಿಯನ್ನು ಕೊಡಲಾಗುತ್ತದೆ ಯಾಕೆಂದರೆ ಮಸೂದೆಯು ಅಷ್ಟು ಮಹತ್ವದ್ದಿದೆ

ಆ ಮೇಲೆ ಸರ್ ಜಾರ್ಜ ಶ್ಯೂಸ್ಟರರು ಈ ಮಹತ್ವದ ಮಸೂದೆಯನ್ನು ಮಂಡಿಸುವಲ್ಲಿ ಫಾಯನಾನ್ಸ ಮೆಂಬರ ನಾತೆಯಿಂದ ತಮ್ಮ ಜವಾಬದಾರಿಯು ಎಷ್ಟಿರುವದೆಂಬುದರ ಅರಿವು ತಮಗಿದೆಯೆಂದೂ ಹೇಳಿ ಮಸೂದೆಯನ್ನು ಸಭೆಯಲ್ಲಿ ಮಂಡಿಸಿದರು. (ಅ ಪ್ರೈ)

ಧಾರವಾಡದ ಚಟುವಟಿಕೆಗಳು.

ಇಲ್ಲಿಯ ಕನ್ನಡ ಆಯೋಜಿತ ನಾಟ್ಯ ಸಂಘದವರು ತಾ॥ ೧೧ನೆ ದಿವಸ ರಾತ್ರಿ ಪ್ರೊ ಆರ್ ವ್ಹಿ ಜಹಗೀರದಾರ ಇವರಿಂದ ರಚಿತವಾದ "ಸಂಸಾರಿಗ ಕಂಸ" ಎಂಬ ಸಾಮಾಜಿಕ ನಾಟಕವನ್ನು ರಂಗಭೂಮಿಯ ಮೇಲೆ ತಂದು, ಅದರಿಂದ ಬಂದ ಉತ್ಪನ್ನವನ್ನೆಲ್ಲ ಶ್ರೀ ಶಾಂತೇಶ ವಾಚನಾಲಯಕ್ಕೆ ಕೊಡತಕ್ಕವರಿದ್ದಾರೆ ಕನ್ನಡ ನಾಡು ಮತ್ತು ನುಡಿಗಾಗಿ ಮನಮುಟ್ಟಿ ಹಣಗಾಡುವ ಈ ವಾಚನಾಲಯಕ್ಕೆ ಎಲ್ಲರೂ ಕೊಡಗೈಯಿಂದ ಸಹಾಯ ಮಾಡುವರೆಂದು ನಂಬಿದ್ದೇವೆ

ರಾಜಾ ಲಖಮಗೌಡ ಸಂದೇಸಾಯಿ ಹಾಯಸ್ಕೂಲಿನ ಗ್ಯಾದರಿಂಗ ಸಮಾರಂಭವು ಈ ತಿಂಗಳ ಕೊನೆಗೆ ಜರಗುವದು ಗ್ಯಾದರಿಂಗದಲ್ಲಿ "ಆ ಷಾಢಭೂತಿ" ಎಂಬ ಕನ್ನಡ ನಾಟಕವನ್ನು ಅಭಿನಯಿಸತಕ್ಕವರಿದ್ದಾರೆ

ಇಹವೃತ್ತ.

ಈಗ ಕಳೆದ ಮೂರು ದಿನಗಳಿಂದ ನಳಗಳಲ್ಲಿ ನೀರು ಬಾರದೆ ಇದ್ದ ವಿಷಯವಾಗಿ ಕನ್ನಡಿಗನ ಪ್ರತಿನಿಧಿಯು ಚೀಫ ಆಫೀಸರರಿಗೆ ಭೆಟ್ಟಿಯಾಗಿ ವಿಚಾರಿಸಲಾಗಿ ಅವರು, ಬಹುಶಃ ಇಂದಿನ ಸಂಜೆಯೊಳಗಾಗಿ ನಳಗಳಲ್ಲಿ ನೀರು ಬಿಡಲಾಗುವದೆಂದು ತಿಳಿಸಿದರು

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ರ್ಯೆ

ಶಾಸ್ತ್ರಶುದ್ಧ ಪತ್ರ ಕ್ರಿಮಿನಾಶಕ ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿಯೂ ಬಾಯಿಯು ಸುವಾಸವಾಗಿಯೂ ಆಗುವವು. 'ಹೆಮ್ಮುಗುಳು'' ವಸಡೆಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಿದೆ. ... ಗುಳಿನ ರಸವು ಕಚ್ರ್ಯ ದಂತ ಮಂಜನದಲ್ಲಿ ಕೂಡಿಸಲಾಗಿದ ಆಹಾರದ ಅವಶೇಷಗಳು ಹಲ್ಲುಗಳ ಸಂದಿಗಳಲ್ಲಿ ಉಳಿದು ಕ್ರಿಮಿಗಳು ಹುಟ್ಟಿ ಹಲ್ಲು ಮತ್ತು ವಸಡೆಗಳು ಕೆಡುವವು. ಆದರೆ ಈ ಕ್ರಿಮಿಗಳು ಕಚ್ರ್ಯ ದಂತಮಂಜನದ ಉಪಯೋಗದಿಂದ ನಾಶವಾಗಿ ವಸಡೆಗಳು ಬಲಕಟ್ಟಾಗಿ ... ಸುವಾಸವು ಬರುವದು 'ಕಚ್ರ್ಯ ದಂತಮಂಜನ'ವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆದ್ದು ಮಾರುಗೆದ್ದೆ" ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಒಂದೇ ಹಳೆಯದಾದ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದು
ಹೆಚ್ಚಿನ ಸಂಖ್ಯೆಯ ಮನ್ನಣೆ ಪಡೆದ ...

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೯೨೪ ರಿಂದ ತಾ|| ೧೯೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀ ರಾಮೇಶ್ವರ ಸಮುದ್ರದಾಟು ಲಂಕಾಕ್ಷೇತ್ರಗಳ ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೀಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಅಶ್ವಯುಜ ಶು|| ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಅಕ್ಟೋಬರ ತಾ||	೨	೧೯ ಲಖನೌ	೨೪	೩೭ ಚಿದಂಬರಂ	೫
೨ ನಾಶಿಕ	೩-೪	೨೦ ಅಯೋಧ್ಯೆ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲಹಾಬಾದ	,,	೩೯ ಧನುಷ್ಕೋಡಿ [ಹಡಗದಿಂದ]	೧೮
೪ ಸೋಮನಾಥಪಟ್ಟಣ (ಹಡಗದಿಂದ)	೮ ೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಕಾಶಿ	೨೮-೨೯-೩೦-೩೧ ನವ್ಹೆಂಬರ ತಾ|| ೧	೪೧ ಕ್ಯಾಂಡಿ [ಲಂಕಾ]	೨೨
೬ ಪಾಲಿಟಾಣಾ (ಜೈನತೀರ್ಥ)	೧೦ ೧೧	೨೪ ಸಾರನಾಥ	,,	೪೨ ಅನುರಾಧಪುರ [ಲಂಕಾ]	೨೪
೭ ಅಬು ಪರ್ವತ (ಜೈನತೀರ್ಥ)	೧೨ ೧೩	೨೫ ಗಯಾ	೨	೪೩ ಧನುಷ್ಕೋಡಿ [ಹಡಗದಿಂದ]	೨೫
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಪಾವಾಪುರ (ಜೈನತೀರ್ಥ)	೩	೪೪ ಮಧುರೆ	೨೬
೯ ಸಾಬರಮತಿ	,,	೨೭ ಗಿರಿಡ	೪	೪೫ ತಿರುಚನಾಪಳ್ಳಿ	೨೭
೧೦ ಬರೋಡೆ	೧೫	೨೮ ಸಮೇತಶಿಖರ (ಜೈನತೀರ್ಥ)	೪	೪೬ ಶ್ರೀರಂಗ	,,
೧೧ ಉಜ್ಜಯನಿ	೧೬	೨೯ ಕಲಕತ್ತಾ	೫-೬	೪೭ ಬೆಂಗಳೂರ	೨೮
೧೨ ಆಗ್ರಾ	೧೭	೩೦ ಜಗನ್ನಾಥಪುರಿ	೮	೪೮ ಮೈಸೂರ	೨೯-೩೦
೧೩ ಮಥುರಾ	೧೮ ೧೯	೩೧ ವಿಶಾಖಪಟ್ಟಣ	೯	ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ	
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦	೩೦ನೇ ತಾರೀಖು (ಶಕೆ ೧೮೫೫	
೧೫ ವೃಂದಾವನ	,,	೩೩ ಬೆಜವಾಡ	೧೧	ಮಾರ್ಗಶಿರ ಶು|| ೧೩ ಬುಧವಾರ)	
೧೬ ಗೋವರ್ಧನ	,,	೩೪ ಮದ್ರಾಸ	೧೨ ೧೩	ಮುಂಜಾನೆ ಹುಬ್ಬಳ್ಳೀ ಪಟ್ಟಣವನ್ನು ಬಂದು ಸೇರುವದು	
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸಹಿತ ಸೆಕಂಡಕ್ಲಾಸ ೩೦೦ ರೂಪಾಯಿ ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೀಟ ಪಡೆಯಬೇಕಾದಲ್ಲಿ ಸೆಕಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಬಗ್ಗೆ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶರಾದರು. ಆದಕಾರಣ ಟಿಕೀಟಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ ಏಜಂಟರಿಗೆ— ಸದರ ಕಂಪನಿಯ ಏಜಂಟರು ... ಧಾರವಾಡ ಜಿಲ್ಲೆಯ ... ಮತ್ತು ವಸೂಲಾದ ... ಕಮೀಶನ್ ಕೊಡಲ್ಪಡುವದು

ಜಿ ಎ ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬಾಳಸೇಠ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಿಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು ಬೇಕೆಯುವರಿಗೆ ಆರ್ಡರಕೊಟ್ಟು ನೋಡಬೇಕು. ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ದುಬ್ಬರವಾಗುವದು. ನೇರವಾಗಿ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ನಮ್ಮ ಕನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು.

ವಳಿಗುಡ್ ಹೈದರಾಬಾದ (ಡೆಕ್ಕನ್) — ಬಿ ಜಿ ಚಿಮ್ಮಲಗಿ

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ಕೆಲಸಗಳ, ಗ್ಯಾಲಿರ್‍ಯಾಕ, ಲೆಡ್ ಕಟರ ಹಾಗೂ ಹೊಸ ಟ್ರೆಡಲ್ (ಚಾಂಡ್ಲರ) ಅಕಾರ ಫೂಲ್ಸ ಕೇಪ ಫೋಲಿಯೊ

ಕನ್ನಡಿಗ ಮುದ್ರಾಲಯ ಧಾರವಾಡ

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವ
ತಿಂಗಳಿಗೆ	೦-೬-೬	೦-೧೨-೦
೩ ತಿಂಗಳಿಗೆ	೧-೪-೦	೨-೨-೦
೬ ತಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯವಸ್ಥಾಪಕ

ಕನ್ನಡಿಗ.

ಧಾರವಾಡ— ಶನಿವಾರ ತಾರೀಖು ೯—೯—೧೯೩೩

ಖರ್ಚಿನಲ್ಲಿ ಉಳಿವು
ಒಡವರ ಹೊಟ್ಟೆಗೆ ಮುಳುವು.

ಮುಂಬಯಿ ಸರಕಾರದವರು ..ನೆಯ ತಾರೀಖಿನ ದಿವಸ ಕಾಯದೆ ಮಂಡಳದ ಮುಂದೆ ಮು ಪತ್ರಿಕೆಯನ್ನಿಟ್ಟು ತಾವು ಈ ವರ್ಷದ ಖರ್ಚಿನಲ್ಲಿ ಎಷ್ಟೆಷ್ಟು ಉಳಿತಾಯವನ್ನು ಮಾಡಿ ರುವದನ್ನು ತೋರಿಸಿರುವರು. ಈ ವರ್ಷ ೧೪ ಕೋಟಿ ರುಪಾಯಿಗಳ ಉತ್ಪನ್ನವಾಗು ವದೂ ೧೫ ಕೋಟಿ ೧೧ ಲಕ್ಷ ರುಪಾಯಿಗಳ ಖರ್ಚಾಗುವದೆಂದೂ ಅಂದಾಜು ಕಟ್ಟಲ್ಪಟ್ಟಿ ಅಂದರೆ ೩೫ ಲಕ್ಷ ರುಪಾಯಿಗಳು ಖರ್ಚಿಗೆ ಕಡಿಮೆ ಬೀಳುವವೆಂದು ಅಂದಾಜ ಇತ್ತು. ಸಂಬಳ ಮುಂತಾದವುಗಳಲ್ಲಿ ಕಡಿತ ಮಾಡಿದ್ದರಿಂದ ಸುಮಾರು ೨೪ ಲಕ್ಷ ರುಪಾಯಿಗ ಖರ್ಚು ಕಡಿಮೆಯಾಗುತ್ತದೆ. ಆದುದರಿಂದ ಈ ವರ್ಷ ಸರಕಾರಕ್ಕೆ ಸುಮಾರು ೧೧ ಲಕ್ಷ ಯಿಗಳು ಮಾತ್ರವೇ ಖರ್ಚಿಗೆ ಕಡಿಮೆ ಬೀಳುತ್ತಿವೆಯಂತೆ! ದೇಶದ ಸಾಂಪತ್ತಿಕ ಸ್ಥಿತಿಯು ಕೆಳ ಇಳಿದಿರುವದರಿಂದ ಸರಕಾರದವರಿಗೆ ತಮ್ಮ ಖರ್ಚು ಕಡಿಮೆ ಮಾಡದೆ ನಿವಾಹವೇ ಇದು ಪರಕೀಯ ಸರಕಾರವಾದುದರಿಂದ ಜನರ ಹಿತದ ಕಡೆಗೆ ಲಕ್ಷ ಕೊಡದೆ, ಸಿಕ್ಕ ತೆ ಖರ್ಚು ಏರಿಸಿತ್ತು. ಹೇಳಕೇಳುವವರಿಲ್ಲದ್ದರಿಂದ ಹಿಂದೀ ಪ್ರಜೆಗಳು ಆ ಭಾರವನ್ನು ನೆ ಸಹಿಸುತ್ತ ಬಂದರು. ಆದರೆ ಹೀಗೆ ಏರಿಸುವದಕ್ಕಾದರೂ ಮಿತಿ ಇರುವದಲ್ಲವೆ? ಮುರಿಯುವಷ್ಟು ಭಾರವನ್ನು ಹಾಕಿದರೆ ಶಕ್ತಿಯು ಕೂಡ ತಾಳಲಾರದು. ಇತ್ತೀಚೆಗೆ ಜಗತ್ತಿನ ಸಾಂಪತ್ತಿಕ ಸ್ಥಿತಿಯು ಹೀನವಾಗಿರುವದರಿಂದ, ಹಿಂದೀ ಜನರ ಮೇಲೆ ಇನ್ನು ರವನ್ನು ಹಾಕಿದರೆ ಅವರು ನೆಲಕ್ಕೆ ಕುಕ್ಕರಿಸುವರೆಂದು ತಿಳಿದು ಸರಕಾರದವರು ಆಗ ತೆರೆದು ತಮ್ಮ ಖರ್ಚನ್ನು ಕಡಿಮೆ ಮಾಡಬೇಕೆಂದು ಯೋಚಿಸಿದರು. ಎಲ್ಲೆಲ್ಲಿ ಖರ್ಚು ಮಾಡಬಹುದೆಂಬ ಬಗ್ಗೆ ವಿಚಾರಿಸಿ ಹೇಳಲು ಥಾಮಸ ಕಮಿಟಿಯು ನಿಯಮಿಸಲ್ಪಟ್ಟ ಅವರು ವಿಚಾರ ಮಾಡಿ ಸುಮಾರು ೨ ಕೋಟಿ ರುಪಾಯಿಗಳನ್ನು ಉಳಿಸುವ ಮಾರ್ಗ ತೋರಿಸಿದರು. ಆದರೇನು? ಸರಕಾರದವರು ಅವನ್ನು ಆಲಿಸಲೇ ಇಲ್ಲ. ಈಗ ಆ ಯವರು ಹೇಳಿದ ಉಳಿತಾಯದಲ್ಲಿ ೨೩ ಲಕ್ಷ ರುಪಾಯಿಗಳ ಉಳಿತಾಯವನ್ನು ಮಾತ್ರ ಸಿರುವರು. ಮಿಕ್ಕ ಯಾವತ್ತೂ ಖರ್ಚನ್ನು ಇದ್ದಕಿದ್ದಂತೆಯೇ ಇಟ್ಟು ಬಿಟ್ಟಿರುವರು. ಧಡೋಚ ಮತ್ತು ಪಂಚಮಹಾಲ ಜಿಲ್ಲೆಗಳನ್ನು ಒಂದುಗೂಡಿಸಿಯೂ ಮತ್ತು ಕೆಲ ಳ ಖರ್ಚನ್ನು ಕಡಿಮೆ ಮಾಡಿಯೂ ಒಂದು ಲಕ್ಷ ಉಳಿಸಿಕೊಂಡಿರುವರು.

೨೪ ಲಕ್ಷ ರೂಪಾಯಿಗಳ ಖರ್ಚನ್ನಾದರೂ ಹೇಗೆ ಉಳಿಸಿಕೊಂಡಿರುವರೆಂಬುದನ್ನು ಲಕ್ಷ ಲಕ್ಷ ಸಂಬಳಗಳನ್ನು ಗಳಿಸುವವರ ಸಂಬಳಗಳಲ್ಲೇನೂ ವಿಶೇಷ ಕಡಿಮೆ ಎಲ್ಲಿ ಬಡಶಿಪಾಯರನ್ನು ಕಡಿಮೆಮಾಡಿ, ಎಲ್ಲಿ ಬಡಕಾರಕೂನರನ್ನು ಕಡಿಮೆಮಾ ಮಾಡಿ ಕಡಿಮೆ ಮಾಡಿದ್ದೇ ವಿಶೇಷ. ಇಲ್ಲವೆನ್ನಲಿಕ್ಕೆ ಪಬ್ಲಿಕ್ ವರ್ಕ್ಸ ಖಾತೆಯ ಕಣ್ಣಿಗೆ ಕಾಣುವಂತೆ ಖರ್ಚನ್ನು ಕಡಿಮೆ ಮಾಡಿರುವರು. ಭತ್ತೆ ಮುಂತಾದವುಗ ಲಕ್ಷ ಕಡಿಮೆಯಾಗಿದೆ. ಸಂಬಳದಿಂದ ೧೫-೧೬ ಸಾವಿರ ರೂಪಾಯಿ ಮಾತ್ರವೇ ವಾಗಿದೆ. ನಿಜವಾಗಿ ನೋಡಿದರೆ ಶಿಕ್ಷಣದಂಥ ಮಹತ್ವದ ವಿಷಯದಲ್ಲಿ ಖರ್ಚು ಮಾಡಲಿಕ್ಕೆ ಕಾರಣವಿಲ್ಲ. ಆದರೆ ಅದರಲ್ಲಿ ೪೬—೪೫ ಸಾವಿರ ರೂಪಾಯಿ ಕಡಿಮೆ ಪೋಲೀಸ ಮತ್ತು ಜೇಲುಗಳ ಖರ್ಚನ್ನು ಮಾತ್ರ ಬಹುಶಃ ಏನೂ ಕಡಿಮೆಮಾಡಿ ಎಂದೇ ಹೇಳಬಹುದು. ಪೋಲೀಸ ಖಾತೆದಲ್ಲಿ ಸುಮಾರು ೪ ಸಾವಿರ ರೂ ಮಾತ್ರವೇ ಕಡಿಮೆ. ಪೋಲೀಸ ಖಾತೆಯೆಂದರೆ ಸರಕಾರದ ‹ ಆಳಿಯ ಖಾತೆ, ಅಸಂತೋಷವುಂಟಾದರೆ ಮುಂದೇನು ಗತಿ? ಕಾಳು ಕಡೆಯ ಮಾನದಿಂದ ನೋ ರರ ಸಂಬಳವನ್ನು ಇನ್ನೂ ಬಹಳ ಕಡಿಮೆಮಾಡುವದು ಅವಶ್ಯವಿತ್ತು. ಆದರಲ್ಲಿ ಕ್ಕೆ ತಲೆಭಾರವಾದ ದೊಡ್ಡ ಜನರ ಸಂಬಳಗಳನ್ನು ಕಡಿಮೆಮಾಡಬಹುದಿತ್ತು. ಲೇ ನಾವು ಅನ್ನುವದ ಖರ್ಚಿನಲ್ಲಿಯ ಈ ಉಳವು ಬಡಜನರ ಹೊಟ್ಟೆಗೆ ಮಾತ್ರ ಬಂದು

——

ಕೌನ್ಸಿಲಿನ ಸುದ್ದಿಗಳು.

ಕ್ಲಿ ಕೂಡಿದ ವರಿಷ್ಠ ಕಾಯದೆ ರೈತರ ದುಃಸ್ಥಿತಿಯ ಪ್ರಶ್ನೆಯ ಬಗ್ಗೆ ಸ್ವಲ್ಪ ಚರ್ಚೆ ನಡೆಯಿತು. ನಿರ್ಣಯವಾಗಲಿಲ್ಲ. ವಿಧವೆಗ ಶಾಂತಿಸ್ತೇ ಕೊಡಬೇಕೆಂಬುದಕ್ಕೆ ವಿಲ್ಲ. ಅದಕ್ಕೆ ಯಾವುದೊಂ ಸ್ವರೂಪವನ್ನು ಕೊಡುವುದಕ್ಕೆ ನೆಯನ್ನು ಮಾಡಬೇಕೆಂದು ಗೊ ಬದಿಯ ಮಸೂದೆಯು ಸಿಲೆಕ್ಟ ಕಡೆಗೆ ಒಪ್ಪಿಸಲ್ಪಟ್ಟಿದೆ. ಅಲ್ಲಿ ವಿಚಾರವಾಗಿ ಬಂದ ಬಳಿಕ ಆ ವಿಷಯದಲ್ಲಿ ಕಾಯದೆಯಾಗುವುದು. ಅಲ್ಲಿ ಹೊರಟ ಮತ್ತೊಂದು ಮಹತ್ವದ ವಿಷಯವೆಂದರೆ ಖಾದಿಯ ವಿಷಯವು. ಖಾದಿ ಬಟ್ಟೆಗೆ ಸರಕಾರದವರು ಸಂರಕ್ಷಣೆಯ ಸೌಕರ್ಯವನ್ನು ಕಲ್ಪಿಸಿ ಕೊಡಬೇಕೆಂದು ಒಬ್ಬರು ಒಂದು ಕಾಯದೆಯ ಮಸೂದೆಯನ್ನು ತಂದಿರುವರು. ಖಾದಿಯ ಬಟ್ಟೆಗೆ ಸುಂಕವು ಕಡಿಮೆ ಮಾಡಲ್ಪಟ್ಟರೆ ಅದರ ಪ್ರಚಾರಕ್ಕೂ ಉತ್ಪತ್ತಿಗೂ ಅನುಕೂಲವಾಗುವುದು. ಆನಂದದ ಸಂಗತಿಯೆಂದರೆ ಈ ವಿಷಯದಲ್ಲಿ ಹಿಂದುಸ್ಥಾನ ಸರಕಾರವು ಸಂಪೂರ್ಣವಾಗಿ ಸಹಾನುಭೂತಿಯುಳ್ಳದ್ದಿರುವುದೆಂದು ಹೇಳಿದೆ. ಪ್ರಾಂತಿಕ ಸರಕಾರಗಳಲ್ಲಿ ಮದ್ರಾಸ ಸರಕಾರವು ಇದಕ್ಕೆ ಅನುಕೂಲವಿದೆ. ವ್ಯಾಪಾರದ ದೊಡ್ಡ ದೊಡ್ಡ ಸಂಸ್ಥೆಗಳೂ ಇದಕ್ಕೆ ಅನುಕೂಲವಾಗಿವೆ. ಹೀಗಿದ್ದರೂ ಮುಂಬಯಿಯ ಗೃಹಸ್ಥರೊಬ್ಬರು ಇದಕ್ಕೆ ವಿರೋಧವನ್ನು ಮಾಡುವುದನ್ನು ಬಿಡಲಿಲ್ಲ. ಖಾದಿಯೆಂದರೇನು ಎಂಬುದೇ ನಿಶ್ಚಯವಿಲ್ಲವೆಂದು ಅವರ ಅಂಬೋಣ! ಖಾದಿಯೆಂದರೆ ಗಿರಣಿಯ ಒರಟು ಬಟ್ಟೆಯೆಂದು ಅವರ ಸಂದೇಹ! ಮಹಾತ್ಮಾ ಗಾಂಧಿಯವರು ಈ ಶಬ್ದದ ಮುಖ್ಯ ಉತ್ಪಾದಕರೆಂಬುದು ಯಾರಿಗೆ ಗೊತ್ತಿಲ್ಲ? ಕೈನೂಲು ಕೈನೇಯಿಗೆಯ ಬಟ್ಟೆಗಳಿಗೆ ಮಾತ್ರವೇ ಆ ಹೆಸರು ಒತ್ತದೆಂಬುದು ಆಬಾಲವೃದ್ಧರಿಗೂ ಗೊತ್ತಾಗಿದೆ. ಆ ಶಬ್ದವು ಈಗ ಕೇವಲ ಗುಜರಾಥೀ ಭಾಷೆಯ ಶಬ್ದವಾಗಿ ಉಳಿದಿರದೆ ಇಡೀ ಹಿಂದುಸ್ಥಾನದ ಶಬ್ದವಾಗಿದೆ. ಇಂಥ ಆ ವಿರೋಧಕರಿಗೆ ಆ ಸಭೆಯಲ್ಲಿಯೇ ಸಮರ್ಪಕವಾದ ಉತ್ತರವು ದೊರೆತ ಬಳಿಕ ಆ ಕಾಯದೆಯ ಮಸೂದೆಯು ಕೂಡ ಹೆಚ್ಚಿನ ವಿಚಾರಕ್ಕೋಸ್ಕರ ಸಿಲೆಕ್ಟ ಕಮಿಟಿಯ ಕಡೆಗೆ ಕಳುಹಿಸಲ್ಪಡಬೇಕೆಂಬ ನಿರ್ಣಯವು ಮಂಜೂರಾಯಿತು.

ತುಂಗಭದ್ರಾ ನದಿಯ ಅಣೆಕಟ್ಟು

ಹೈದರಾಬಾದ ತಾ|| ೪ ವ ಮದ್ರಾಸ ಸರಕಾರ ಹಾಗೂ ನಿಜಾಮ ಸರಕಾರದವರಲ್ಲಿ ತುಂಗಭದ್ರಾ ಅಣೆಕಟ್ಟಿನ ವಿಷಯವಾಗಿ ವಿಚಾರ ವಿನಿಮಯ ನಡೆದಿತ್ತಷ್ಟೆ. ಈ ವಿಚಾರ ವಿನಿಮಯವು ಈಗ ಮುಗಿದಿದ್ದು, ಅಣೆಕಟ್ಟನ್ನೂ ಕಟ್ಟುವ ಬಗ್ಗೆ ಒಂದು ಯೋಜನೆಯಾದರೂ ಸಿದ್ಧವಾಗಿದೆ. ಕೆಲಸವು ಬೇಗನೆ ಸುರುವಾಗುವದು. ಈ ಯೋಜನೆಗೆ ಒಟ್ಟು ೧೯ ಕೋಟಿ ರೂಪಾಯಿ ಖರ್ಚು ಹತ್ತುತ್ತಿದ್ದು, ನಿಜಾಮ ಸರಕಾರದವರು ಅದರಲ್ಲಿ ೭ ಕೋಟಿ ರುಪಾಯಿ ಕೊಡುವರು. ಈ ಅಣೆಕಟ್ಟಿನಿಂದ ಒಟ್ಟು ೧೯ ಲಕ್ಷ ಎಕರೆ ಭೂಮಿಯು ತೋಯ್ಯುತ್ತಿದ್ದು, ಇದು ಜಗತ್ತಿನಲ್ಲಿಯ ಪ್ರಚಂಡ ಅಣೆಕಟ್ಟುಗಳಲ್ಲಿ ಒಂದಾಗಿ ಗಣಿಸಲ್ಪಡುವದು

ಹಿಂದೂ ಸ್ತ್ರೀಯರ ಪೋಟಗಿ.

ಸಿಮಲಾ ತಾ|| ೫— ಈ ಹೊತ್ತಿನ ದಿವಸ ಅಸೆಂಬ್ಲಿಯಲ್ಲಿ ಖಾಸಗಿ ಮಸೂದೆಗಳ ಮೇಲೆ ಚರ್ಚೆ ನಡೆಯಿತು.

ಪ್ರಶ್ನೋತ್ತರಗಳ ಕಾರ್ಯವು ಮುಗಿದ ಬಳಿಕ, ದಿ. ಬ. ಹರಿವಿಲಾಸ ಸಾರಡಾ ಇವರು ಹಿಂದೂ ವಿಧವೆಯರ ಪೋಟಗಿ ಹಣವನ್ನು ಕಾಯದೆಯಿಂದ ನಿಶ್ಚಿತಪಡಿಸಬೇಕು ಎಂಬ ಆಶಯದ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದರು. ಈ ಮಸೂದೆಯನ್ನು ಮಂಡಿಸುವಾಗ ಅವರು ಹೇಳಿದುದೇನಂದರೆ— ಹಿಂದೂ ವಿಧವೆಯರ ಪೋಟಗಿಯನ್ನು ಕಾಯದೆಯಿಂದ ನಿಶ್ಚಿತಪಡಿಸದೆ ಇದ್ದುದರಿಂದ ಅವರು ಬಹಳ ಕಷ್ಟಕ್ಕೊಳಗಾಗಬೇಕಾಗುತ್ತದೆ. ಪತಿಯು ಮೃತ್ಯುಪತ್ರದಲ್ಲಿ ವ್ಯವಸ್ಥೆ ಮಾಡಿದ ಅನುಸಾರವಾಗಿಯೇ ಪತ್ನಿಗೆ ಪೋಟಗಿ ಸಿಗುತ್ತದೆ. ಸದ್ಯದ ಹಿಂದೂ ಕಾಯದೆಯಲ್ಲಿ ತಿದ್ದುಪಡೆ ಆಗದೆ ಹಿಂದೂ ವಿಧವೆಯರಿಗೆ ಹೊಟ್ಟೆಯ ಪೂರ್ತಿ ಹಣವು ದೊರೆಯಬೇಕೆಂಬುದೇ ಈ ಮಸೂದೆಯ ಉದ್ದೇಶವಾಗಿದೆ.

ಲಾ ಮೆಂಬರ ಸರ್ ಬಿ. ಬಿ. ಘೋಸ ಇವರು ಮಸೂದೆಯನ್ನು ಜನಾಭಿಪ್ರಾಯದ ಸಲುವಾಗಿ ಡಿಸೆಂಬರದ ವರೆಗೆ ಪ್ರಸಿದ್ಧ ಮಾಡಬೇಕೆಂದು ಉಪಸೂಚನೆಯನ್ನು ತಂದರು. ರಾಮಕೃಷ್ಣ ಝಾ ಇವರು ಮಸೂದೆಗೆ ಬೆಂಬಲ ಕೊಟ್ಟರು. ಶ್ರೀ ಅಮರನಾಥದತ್ತ, ಶ್ರೀ ಎಸ್. ಸಿ. ಸೇನ, ಶ್ರೀ ವ್ರಜಕಿಶೋರ ಇವರು ಉಪಸೂಚನೆಗೆ ಬೆಂಬಲ ಕೊಟ್ಟರು. ನಂತರ ಸಾರಡಾ ಇವರು ಆಕ್ಷೇಪಗಳಿಗೆ ಪ್ರತ್ಯುತ್ತರ ಕೊಟ್ಟರು. ಕೊನೆಯಲ್ಲಿ ಮತ ತೆಗೆದುಕೊಳ್ಳಲಾಗಿ ಉಪಸೂಚನೆಯು ಸ್ವೀಕೃತವಾಯಿತು.

ಅಸ್ಪೃಶ್ಯತಾ ನಿವಾರಕ ಮಸೂದೆ.

ರಾ. ಬ. ಎಂ. ಸಿ. ರಾಜಾ ಇವರು ಈಗ ಕಾಯಿದೆ ಹಾಗು ರೂಢಿಯಲ್ಲಿ ಪಾಲಿಸಲ್ಪಡುತ್ತಿರುವ ಅಸ್ಪೃಶ್ಯತೆಯನ್ನು ಇನ್ನು ಮುಂದೆ ಕಾಯದೆಯಲ್ಲಿ ಪಾಲಿಸಬಾರದಾಗಿ ಸೂಚನೆಯನ್ನು ಸಭೆಯ ಮುಂದೆ ಮಂಡಿಸಿದರು. ಪಂಡಿತ ಸೇನ ಇವರು ಧರ್ಮಶಾಸ್ತ್ರದಲ್ಲಿಯ ಉದಾಹರಣೆಗಳನ್ನು ಕೊಟ್ಟು ಸೂಚನೆಯನ್ನು ವಿರೋಧಿಸಿದರು. ಶ್ರೀ ಆರ್. ಎಂ. ಶರ್ಮಾ ಇವರು ಸೂಚನೆಯನ್ನು ಜನಾಭಿಪ್ರಾಯದ ಬಗ್ಗೆ ೧೯೩೪ನೆ ಜೂನದ ವರೆಗೆ ಮುಂದೆ ಹಾಕಬೇಕೆಂದು ಉಪಸೂಚನೆ ತಂದರು. ಚರ್ಚೆಯು ನಡೆದಿರುವಾಗಲೇ ಅಧಿವೇಶನವು ಮುಂದೆ ಬಿತ್ತು.

ಖಾದಿ ಸಂರಕ್ಷಣ ಬಿಲ್ಲು

ಮಿ. ಗಯಾಪ್ರಸಾದಸಿಂಗ ಇವರು ತಮ್ಮ 'ಖಾದಿ ಸಂರಕ್ಷಣ ಬಿಲ್ಲನ್ನು' ಸಿಲೆಕ್ಟ ಕಮಿಟಿಗೆ ಕಳಿಸಬೇಕೆಂದು ಸೂಚಿಸಿ ಮಂಡಿಸಿದರು. ಅದಕ್ಕೆ ಮುಂಬಯಿಯ ಗಿರಣಿಯ ಒಡೆಯರ ಸಂಘದ ಪ್ರತಿನಿಧಿಗಳಾದ ಮೋದಿಯವರು ವಿರೋಧಿಸಿದರು. ಧಾರವಾಡದ ರಾ. ಬ. ಪಾಟೀಲರು ಜಾಧವ, ಬಿ. ದಾಸ, ರಂಗಯ್ಯಂಗಾರ ಮುಂತಾದವರು ಠರಾವನ್ನು ಸಮರ್ಥಿಸಿ ಭಾಷಣ ಮಾಡಿದರು. ಸರಕಾರದ ಪರವಾಗಿ ಸರ್ ಭೋರ ಇವರು ಠರಾವಿಗೆ ತಾವು ವಿರುದ್ಧವಿಲ್ಲೆಂದೂ, ಆದರೂ ತಾವು ತಟಸ್ಥರಿರುವರೆಂದೂ ಹೇಳಿದರು. ಸೂಚಕರಾದ ಸಿಂಗರು ಉತ್ತರ ಕೊಟ್ಟ ಮೇಲೆ ಅವರ ಸೂಚನೆಯು ಪಾಸಾಯಿತು.

ಡಾ. ಕುಲಕರ್ಣಿಯ
ಲೆಬೊರೇಟರಿ ಮುಂಬಯಿ ನಂಬರ ೧೨
ಬಾಟ್ಲಿ ಕಿಮ್ಮತ್ತು ೧—೨—೦
ಕೆಮಿಸ್ಟರಲ್ಲಿಯೂ ದೊರೆಯು

ಸ್ತ್ರೀಯರ ವಿಕಾರದ ಮೇಲೆ
ರಾಮಬಾಣ ಔಷಧವು
ಬಿಳಿಗು, ಬಿಳೇಬಗು, ಕೆಂಪು ಹೋಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ಬಿ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.
೧೮-೬

ವಿಜಾಪುರದ ಪತ್ರ.

ವಿಜಾಪುರ ತಾ ೬ ... ಜೇಲಿನಲ್ಲಿ ಶಿಕ್ಷೆಯನ್ನನುಭವಿಸುತ್ತಿರುವ ... ಆಚಾರ್ಯರು ಬೆಳಗಾವಿ ಜೇಲಿನಿಂದ ... ಗೆ ಬಂದು ಹೋದರು ... ದಿವಸ ಬಿಡುಗಡೆ ಹೊಂದತಕ್ಕವರಿದ್ದಾರೆ

ಮುಂಬಯಿ ... ಶ್ರೀ ... ವತ್ತು ಇಲ್ಲಿಯ ಶ್ರೀ ಮರುಳಾರಾಧ್ಯ ಶಾಸ್ತ್ರಿಗಳೂ ಬಿಡುಗಡೆ ಹೊಂದಿದ್ದಾರೆ

''ಕರ್ನಾಟಕ ವೈಭವ' ವು ಶ್ರೀ ... ಹನುಮಂತರಾಯರ ಸಂಪಾದಕತ್ವದಲ್ಲಿ ... ಸಪ್ಟೆಂಬರದಿಂದ ಪುನಃ ಹೊಸ ... ಹೊರಟಿದೆ

ಜಿಲ್ಹೆಯ ಅನೇಕ ಭಾಗಗಳಲ್ಲಿ ಪ್ಲೇಗು ಪ್ರಾರಂಭವಾಗಿದೆ

ಜಿಲ್ಹಾ ಸ್ಕೂಲಬೋರ್ಡಿಗೆ ... ಅವರು ... ಗಿನವರನ್ನು ನಿಯಮಿಸಿದ್ದಾರೆ

... ಶ್ರೀ ... ದೇ ... ಅಲ್ಲಿ ... ಶ್ರೀ ... ಎಸ್ ... ಷ್ಟ ವಕೀಲ

... ಶಿಕ್ಷೆಗೆ ಗುರಿಯಾದ ವೆಂಕಟರಾಮಯ್ಯನವರ ... ಬಿನ ದಿವಸ ಇಲ್ಲಿ ನಡೆಯ ... ನೋಟೀಸು ... ಪ್ಪಟ್ಟಿದೆ

ಜಿಲ್ಹಾ ಸ್ಕೂಲಬೋರ್ಡಿನ ಅಧ್ಯಕ್ಷರ ಆರಿಸುವಿಕೆಯು ತಾ|೫ ನೆ ದಿವಸ ನಡೆದು, ಶ್ರೀ ಶಂಕರಗೌಡ ಪಾಟೀಲ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು

ಇದರಂತೆ ... ಸ್ಕೂಲಬೋರ್ಡಿನ ಚೇರಮನರ ಸ್ಥಳಕ್ಕೆ ಪುನಃ ... ಹೇಬ ಹಳಕಟ್ಟಿಯವರೇ ಆರಿಸಲ್ಪಟ್ಟಿದ್ದಾರೆ

ಬಾಗಲಕೋಟೆಯ ಸುದ್ದಿ

ಬಾಗಲಕೋಟ ತಾ|| ೬ ಬಸವೇಶ್ವರ ... ಸ್ಕೂಲಿನ ... ತಾ| ೧೫ ನೇ ದಿವಸ ದಕ್ಷಿಣ ಭಾಗದ ವಿದ್ಯಾಖಾತೆಯ ಅಧಿಕಾರಿಗಳಾದ ಶ್ರೀ ... ಇವರ ಅಧ್ಯಕ್ಷತೆಯ ... ಗವದು

ಹುಬ್ಬಳ್ಳಿಯ ಪತ್ರ

ಹುಬ್ಬಳ್ಳಿಯ ತಾ|| ೬ — ತಾ|| ೪ ನೇ ದಿವಸ ಸಂಜೆಗೆ ... ಮಂಡಳಿಯ ಸಭಾಗೃಹದಲ್ಲಿ ತರುಣರ ಸಭೆ ಸೇರಿತ್ತು. ಆ ವೇಳೆಗೆ ಶ್ರೀ ಜಿ ಎಸ್ ... ಅವರು ವಿಜಯನಗರ ಸ್ಮಾರಕೋತ್ಸವದ ಬಗ್ಗೆ ಭಾಷಣ ಮಾಡಿದರು ಮತ್ತು ವಿಜಯನಗರೋತ್ಸವ ಸ್ಮಾರಕ ಸ್ವಯಂಸೇವಕ ಸಂಘವು ಸ್ಥಾಪಿಸಲ್ಪಟ್ಟಿತು

ಈ ಸಂಘಕ್ಕೆ ಶ್ರೀ ... ಅವರ ಅಧ್ಯಕ್ಷರಾಗಿಯೂ, ಕೃಷ್ಣಮೂರ್ತಿ ಹೆಬ್ಬಳ್ಳಿಯವರು ನಾಯಕರಾಗಿಯೂ ಆರಿಸಲ್ಪಟ್ಟಿದ್ದಾರೆ

ಸಂಘದಲ್ಲಿ ಈಗಾಗಲೆ ೨೦ ಜನರು ಸೇರ್ಪಡೆಯಾಗಿದ್ದು, ಇನ್ನು ಮೇಲೆ ಸೇರಬಿಚ್ಛಿಸುವವರು ನಾಯಕರನ್ನು ಕಾಣಬೇಕು

ಯುಕ್ತ ಪ್ರಾಂತ ಮುಖಂಡರೊಡನೆ ಪಂ. ಜವಾಹಿರರ ಚರ್ಚೆ

ಲಖನೌ ತಾ| ೬ — ಪಂಡಿತ ಜವಾಹಿರಲಾಲ ನೆಹರೂರವರು ಈ ಹೊತ್ತಿನ ದಿವಸ ಸಂಯುಕ್ತಪ್ರಾಂತದ ಕಾಂಗ್ರೆಸ್ ಮುಖಂಡರೊಡನೆ ಸದ್ಯದ ಪರಿಸ್ಥಿತಿಯ ಸಂಬಂಧವಾಗಿ ಮಾತುಕತೆಯಾಡಿದರು ಈ ಮಾತುಕತೆಯಲ್ಲಿ ಸಂಯುಕ್ತಪ್ರಾಂತದ ಪರಿಸ್ಥಿತಿಯ ವಿಷಯವಾಗಿ ವಿಶೇಷ ಚರ್ಚೆಯಾಯಿತು.

ಡಾ ಸಯ್ಯದ ಮಹಮ್ಮದ ಇವರು ಈ ಹೊತ್ತಿನ ದಿವಸ ಚಪ್ರಾದಿಂದ ಇಲ್ಲಿಗೆ ಬಂದು

... ಪಂಡಿತ ಜವಾಹಿರರ ... ಅವರು ... ಜವಾಹಿರಲಾಲರನ್ನು ಕಾಣಲು ... ಆಸ್ಪತ್ರೆಗೆ ಹೋದರು

ಶ್ರೀ ... ಪ್ರಕೃತಿಯ ... ಆ ... ಈ ... ದಿವಸ ... ಆಸ್ಪತ್ರೆಯು ... ಪಂಡಿತ ಜವಾಹಿರರ ಎದುರಿಗೆ ... ಈ ಮೂಲಕ ಶ್ರೀಮತಿಯವರಲ್ಲಿ ... ಚ್ಚಾಗಿರುತ್ತದೆ

ಸ್ತುತ್ಯ ದಾನ.

ಶ್ರೀ ಮುಜ್ಜಗದ್ಗುರು ... ಸಿಂಹಾಸನಾಧೀಶ್ವರ ಶ್ರೀ ... ಲಿಂಗ ಶಿವಾಚಾರ್ಯ ... ಸ್ವಾಮಿಯವರು ... ಬಸ್ಸಾಪುರ ... ಪು ... ಶ್ರೀ ... ೫೦೦೦ ರುಪಾಯಿಗಳನ್ನು ಶಾಶ್ವತನಿಧಿಯೆಂದು ಕೊಟ್ಟಿರುವರೆಂದು ... ದೇಶಮುಖರವರು ತಿಳಿಸಿದ್ದಾರೆ

ಬಿಹಾರದಲ್ಲಿ ೧೦ ಜನರಿಗೆ ಶಿಕ್ಷೆ

ಪಾಟಣಾ ತಾ| ೬ — ಇಬ್ಬರು ಸ್ವಯಂಸೇವಕರು ಕೈಯಲ್ಲಿ ರಾಷ್ಟ್ರಧ್ವಜ ಹಿಡಿದುಕೊಂಡ ಸರಕಾರಿ ಭವನದ ಮೇಲೆ ದಾಳಿ ಮಾಡುವ ಉದ್ದೇಶದಿಂದ ಆತ್ತ ಹೊರಟಿದ್ದರು ಪೋಲೀಸರು ಹಾದಿಯಲ್ಲಿಯೇ ಅವರನ್ನು ಕೈದು ಮಾಡಿದರು

... ಹಾಗು ಮಂಚಿಹಾಲ ಎಂಬಲ್ಲಿ ಕ್ರಮವಾಗಿ ನಾಲ್ಕು ಮತ್ತು ೧೦ ಜನರು ಸೆರೆ ಹಿಡಿಯಲ್ಪಟ್ಟಿರುತ್ತಾರೆ ತಾ|| ... ನೆ ದಿವಸ ಕೈದಿಗೊಳಗಾದ ೧೦ ... ಸ್ವಯಂಸೇವಕರಿಗೆ ... ರಿಂದ ೧೦ ತಿಂಗಳ ವರೆಗೆ ಬೇರೆ ಬೇರೆ ಅವಧಿಯ ಕಠಿಣ ಶಿಕ್ಷೆಯಾಗಿದೆ

ಬಿರುಗಾಳಿಯಿಂದ ೧೦೦ ಜನರು ಸತ್ತರು

ಸನಂಟೋನಿಯೋ ತಾ| ೬ — ಟೆಕ್ಸಾಸ ಮತ್ತು ನೆ ಕ್ಸಿಕೋ ಎಂಬಲ್ಲಿ ಭಯಂಕರ ಬಿರುಗಾಳಿ ಬೀಸಿದ್ದರಿಂದ ೧೦೦ ಜನರು ಸತ್ತಿರುವರೆಂದೂ, ವಾರ್ತಾವಾಹಕ ಸಾಧನಗಳೆಲ್ಲ ನಷ್ಟವಾಗಿರುವವೆಂದೂ ಸುದ್ದಿ ಬಂದಿದೆ

ಜರ್ಮನ್ ಸರಕುಗಳ ಬಹಿಷ್ಕಾರ

... ತಾ| ೬ — ಸ್ವೀಡನ್ ಕೆಲಸಗಾರರ ಯೂನಿಯನ್ ... ದವರು ಜರ್ಮನ ಸರಕುಗಳ ಮೇಲೆ ಬಹಿಷ್ಕಾರ ಸಾರಿದ್ದಾರೆ ಈ ಮೂಲಕ ಜರ್ಮನ ಸರಕುಗಳ ಆಯಾತವು ಈಗಾಗಲೆ ೧೦೦ಕ್ಕೆ ೨೦ ರಂತೆ ಕಡಿಮೆಯಾಗಿದೆ

ಪುಸ್ತಕಾಲಯದ ಝಡತಿ.

ಬನಾರಸ ತಾ|| ೬ — ಪೋಲೀಸ ಹಾಗು ಸಿ ಆಯ್ ಡಿ ಇನಸ್ಪೆಕ್ಟರರು ನಿನ್ನೆಯ ದಿವಸ ಇಲ್ಲಿ ಒಂದು ಪುಸ್ತಕಾಲಯವನ್ನು ಝಡತಿಮಾಡಿ, ೧೫೦೦ ರುಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ಜಪ್ತಮಾಡಿಕೊಂಡು ಹೋದರು,

---

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ಪಿಕೆಟಿಂಗ ನೋಟೀಸಿನ ಪರಿಣಾಮ.

ಗೌಹಾತಿ ತಾ ೬ — ಆಸಾಮ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿದ್ದ ಹೇಮಚಂದ್ರ ಬರೂಹ ಇವರು, ಅಧಿಕಾರಿಗಳಿಗೆ ಒಂದು ನೋಟೀಸು ಕಳಿಸಿ, ತಾವು ಗಾಂಜಾ ಅಂಗಡಿಯ ಮುಂದೆ ಪಿಕೆಟಿಂಗ ಸುರುವು ಮಾಡುವವೆಂದು ತಿಳಿಸಿದ್ದರು ಪೋಲೀಸರು ನಿನ್ನಿನ ದಿವಸ ಅವರನ್ನು ಕೈದು ಮಾಡಿದರು

ಅಬಲಾ ಸಂರಕ್ಷಣ ಮಂಡಳ

ಕಲಕತ್ತಾ, ತಾ| ೬ — ಬಂಗಾಲ ಇಲಾಖೆಯಲ್ಲಿ ಸ್ತ್ರೀಯರನ್ನು ಓಡಿಸಿಕೊಂಡು ಹೋಗುವದು, ಅವರಿಗೆ ತೊಂದರೆ ಕೊಡುವದು, ಬಲಾತ್ಕಾರ ಮಾಡುವದು ಇವೇ ಮೊದಲಾದ ಅಪರಾಧಗಳು ಕೆಲವು ದಿನಗಳಿಂದ ಅತ್ಯಾಚಾರವಾಗಿ ನಡೆದಿರುವವಷ್ಟೆ. ಈ ನೀಚ ಕೃತ್ಯಗಳಿಗೆ ತಡೆ ಹಾಕುವದಕ್ಕಾಗಿ ಅಲ್ಲಿಯ ಹಿಂದೂ ಮಹಾಸಭೆಯವರು ಅಬಲಾ ಸಂರಕ್ಷಣ ಮಂಡಳವೆಂಬುದೊಂದು ಸಂಘವನ್ನು ಸ್ಥಾಪಿಸಿಕೊಂಡಿದಾರೆ ಈ ಮಂಡಳಕ್ಕೆ ದ್ರವ್ಯ ಸಹಾಯವು ಅವಶ್ಯವಾಗಿ ಬೇಕಾಗಿದ್ದು ಅಲ್ಲಿಯ ಪ್ರಮುಖ ಜನರು ಈ ಬಗ್ಗೆ ಒಂದು ಪತ್ರಿಕೆಯನ್ನು ಹೊರಡಿಸಿ ದ್ರವ್ಯಸಹಾಯ ಮಾಡಬೇಕೆಂದು ಸಾರ್ವಜನಿಕರಲ್ಲಿ ವಿನಂತಿ ಮಾಡಿಕೊಂಡಿದ್ದಾರೆ ಈ ಪತ್ರಿಕೆಯ ಮೇಲೆ ಆಚಾರ್ಯ ... ರಾಯ್, ... ಕುಮಾರ ಬೋಸ, ರಮಾನಂದ ಚಟರ್ಜಿ, ಪ್ರಮಥನಾಥ ತರ್ಕಭೂಷಣ ... ಕಿರಣ ಶಂಕರರಾಯ್, ... ಗೃಹಸ್ಥರ ಸಹಿಗಳಿವೆ

ಪುಣೆ ತಾ|| ೬ — ಮಹಾತ್ಮರ ಅಶಕ್ತತೆಯು ಕ್ರಮಶಃ ಕಡಿಮೆಯಾಗಹತ್ತಿದೆ

ಶ್ರೀ ವ್ಹಿ ಆರ್ ಶಿಂದೆಯವರು ಈ ಹೊತ್ತಿನ ದಿವಸ ಮಹಾತ್ಮರನ್ನು ಕಂಡು ... ರಿಜನಸೇವೆಗಾಗಿ ಒದ್ದಾಡುತ್ತಿರುವ ಯಾವತ್ತು ಸಂಸ್ಥೆಗಳನ್ನು ನಿಮ್ಮ ನೇತೃತ್ವಕ್ಕೆ ಒಳಪಡಿಸಿಕೊಂಡರೆ ಹಿತವಾಗುವದೆಂದು ಅವರಿಗೆ ಸೂಚಿಸಿದರು

ಶ್ರೀ ಶಿಂದೆಯವರು ಮಹಾತ್ಮರಿಗೆ ಅವರ ಭಾವೀ ಧೋರಣದ ಬಗ್ಗೆ ವಿಚಾರಿಸಲು ಪುಣೆಯಿಂದ ಪ್ರಯಾಣ ಮಾಡುವ ಪೂರ್ವದಲ್ಲಿ ಅದು ಜಾಹೀರ ಮಾಡಲ್ಪಡುವದು ಎಂದು ಮಹಾತ್ಮರ ಅವರಿಗೆ ಉತ್ತರ ಕೊಟ್ಟರು



ಕಿರ್ಲೋಸ್ಕರ

ಕಲ್ಯಾಣ ಶೆಂಗಾ ಯಂತ್ರ

—— ৷(o)৷ ——

ಒಂದು ತಾಸಿನಲ್ಲಿ ... ರಿಂದ ... ವರೆಗೆ ಶೆಂಗಾಗಳನ್ನು ಒಡೆಯುವದು ಇದು ... ಶೆಂಗಾ ಒಡೆಯುವದು ಹೆಚ್ಚಿನ ಮಾಹಿತಿ ಬಗ್ಗೆ ಈ ಹೊತ್ತೇ ಬರೆಯಿರಿ

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್

ಕಿರ್ಲೋಸ್ಕರವಾಡಿ ಜಿ.(ಸಾತಾರಾ)

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಶನಿವಾರ ತಾ|| ೯-೯-೩೩ ನೇ ದಿವಸ ರಾತ್ರಿ

ಪಾಂಡವರ

ಅಜ್ಞಾತವಾಸ.

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು

ಸಂಘದ ... ದಾರ

ಗದಗ ಸದಾಶಿವರಾಯರು

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ|| ೨೫-೮ ೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ರ. ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम्॥ मनु.

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಶೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಶೂರನ್ಸ
ಕಂಪನಿಯೇ
ಉತ್ತಮವಾದುದು

ಕರ್ನಾಟಕ

ಇನಸ್ಶೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧ ಧಾರವಾಡ—ರವಿವಾರ ಭಾದ್ರಪದ ಬಹುಳ ೬ ಶಕೆ ೧೮೫೫ ತಾ|| ೧೦-೯-೩೩ [ಸಂಚಿಕೆ ೧೯೯

ಕಾಬೂಲದಲ್ಲಿ ಗುಂಡಿನ ಅತ್ಯಾಚಾರ, ಮೂವರ ಕೊಲೆ.

ಮಾಡರ್ನ ರಿವ್ಯೂಕಾರರಿಗೆ ಮಹಾತ್ಮರ ಉತ್ತರ

ಪುಣೆ ತಾ|| ೮—ಮಾಡರ್ನ ರಿವ್ಯೂ ಎಂಬ ಮಾಸ ಪತ್ರಿಕೆಯ ಸಂಪಾದಕರು ತಮ್ಮ ಪತ್ರಿಕೆಯಲ್ಲಿ ಮಹಾತ್ಮಾಗಾಂಧಿಯವರ ಸಪ್ಟೆಂಬರ ಉಪವಾಸ ಮತ್ತು ಅದರ ಹಿಂದಿನ ಉಪವಾಸ ಇವೆರಡೂ ಬಲುಮೆಯದಾಗಿವೆಯೆಂದು ಟೀಕೆ ಮಾಡಿರುವರು ಮಹಾತ್ಮರು ಇಂದಿನ ಹರಿಜನ ಪತ್ರಿಕೆಯಲ್ಲಿ ಈ ಟೀಕೆಗೆ ಪ್ರತ್ಯುತ್ತರರೂಪವಾಗಿ ಬರೆಯುವದೇನಂದರೆ:—

ನನ್ನ ಸಪ್ಟೆಂಬರದ ಉಪವಾಸವು ದುರ್ದೈವದಿಂದ ಕೆಲವರ ಮೇಲೆ ಬಲುಮೆಯದಾಯಿತೆಂದು ನಾನು ಒಪ್ಪಿಕೊಳ್ಳುವೆನು ಇವರಿಂದಲೇ ಅವರು ಕೆಲಸಕ್ಕೆ ತೊಡಗಿದರು ನಾನು ಉಪವಾಸ ಮಾಡಿದ್ದಿಲ್ಲವಾದರೆ ಅವರು ಕೆಲಸಕ್ಕೆ ಹಚ್ಚುತ್ತಿರಲೇ ಇಲ್ಲ ಇದರಂತೆ ನನ್ನ ಉಪವಾಸದಿಂದ ಸರಕಾರದವರ ಮೇಲೆ ನನ್ನನ್ನು ಬಿಡುಗಡೆ ಮಾಡುವ ಪ್ರಸಂಗವು ಬಂದಿತೆಂಬುದನ್ನಾದರೂ ನಾನು ಒಪ್ಪಿಕೊಳ್ಳುವೆನು ಸರಕಾರದ ಮೇಲೆ ಒತ್ತಾಯ ತರುವದೇನೂ ನನ್ನ ಉಪವಾಸದ ಉದ್ದೇಶವಿರಲಿಲ್ಲ ನನ್ನ ಉಪವಾಸವು ಕೇವಲ ನೈತಿಕ ವಿಷಯಕ್ಕೆ ಸಂಬಂಧಿಸಿತ್ತು ಸರಕಾರದವರು ನನ್ನ ಬಂಬೋಣವನ್ನು ವಿಚಾರಮಾಡಿ, ನಾನು ಬೇಡಿದ ಸವಲತ್ತುಗಳು ನ್ಯಾಯವಾಗಿರದಿದ್ದರೆ ನನ್ನನ್ನು ಶಾಂತವಾಗಿ ಸಾಯಬಿಡಬೇಕಾಗಿತ್ತು. ನಾನು ಜೇಲಿನಲ್ಲಿ ಸತ್ತದ್ದೇ ಆಗಿದ್ದರೆ, ಅವರು ನನ್ನ ಪ್ರೇತವನ್ನು ಪ್ರಸಿದ್ಧ ಮಾಡಿದ್ದರೆ ಅವರ ಮೇಲೆ ನಿರ್ದಯತನದ ಆರೋಪವೆಲ್ಲ ಅಳಿದು ಹೋಗುತ್ತಿತ್ತು. (ಅ ಪ್ರೆ)

ಖಾದ್ರಿ ಸಾಹೇಬರ ಆಕಸ್ಮಿಕ ಮರಣ.

ಪುಣೆ ತಾ|| ೮— ಮುಂಬಯಿ ಕಾಯದೆ ಮಂಡಳಕ್ಕೆ ಅ[illegible]ಬಾದದ ಉತ್ತರ ಭಾಗದ ಸಭಾಸದರಾಗಿ ಆರಿಸಿಬಂದ ಮಿ ಜೆ ಖಾದ್ರಿಯವರು ಈ ಹೊತ್ತಿನ ದಿವಸ ಮಧ್ಯಾಹ್ನದ ೩ ಗಂಟೆಯ ಸುಮಾರಕ್ಕೆ ಕೌನ್ಸಿಲ್ ಗೃಹದಲ್ಲಿ ಕುಳಿತಾಗ, ಒಮ್ಮಿಂದೊಮ್ಮೆ ಹೃದಯ ವಿಕಾರದಿಂದ ಮರಣ ಹೊಂದಿದರು ಈ ಆಕಸ್ಮಿಕ ನಿಧನದ ಬಗ್ಗೆ ದುಃಖವ್ಯಕ್ತಪಡಿಸುವದಕ್ಕೋಸುಗ ಅಧಿವೇಶನ ಮರುದಿವಸಕ್ಕೆ ಮುಂದರಿಸಲ್ಪಟ್ಟಿತ್ತು. (ಅ ಪ್ರೆ.)

[ಇವರು ಕೆಲಕಾಲ ದಕ್ಷಿಣಭಾಗದ ವಿಭಾಗದ ವರಿಷ್ಠ ಅಧಿಕಾರಿಗಳಾಗಿದ್ದರು.]

ಬೆಲಡಂಗಾ ದಂಗೆಯ ಖಟ್ಲೆಯ ವಿಚಾರಣೆ

ಬೆರಹಾಮಪುರ ತಾ| ೭— ಬೆಲಡಂಗಾ ದಂಗೆಯ ಸಂಬಂಧದ ಖಟ್ಲೆಗಳನ್ನು ವಿಚಾರ ಮಾಡಲು ನಿಯಮಿಸಲ್ಪಟ್ಟ ಸ್ಪೇಶಲ್ ಮ್ಯಾಜಿಸ್ಟ್ರೇಟರಾದ ಮಿ. ಜೆ ಎಚ್. ಬೀಲ ಇವರು ಈ ಹೊತ್ತಿನಿಂದ ವಿಚಾರಣೆಯನ್ನು ಪ್ರಾರಂಭ ಮಾಡುವವರಿದ್ದಾರೆ

ಈ ಖಟ್ಲೆಯಲ್ಲಿ ೧೩೧ ಜನ ಮುಸಲ್ಮಾನರು ಅಪರಾಧಿಗಳಾಗಿದ್ದು, ಅವರು ತಮ್ಮ ಪರವಾಗಿ ಹಿಂದಕ್ಕೆ ಮಂತ್ರಿಗಳಾಗಿದ್ದ ಏ ಕೆ ಫಜಲುಲ್ ಹಕ್ಕ ಎಂ ಎಲ್ ಸಿ ಇವರನ್ನು ವಕೀಲಿ ಕೊಟ್ಟಿದ್ದಾರೆ (ಅ ಪ್ರೆ)

ಕಲಕತ್ತಾ ಮುನಸಿಪಾಲಟಿ ಮಸೂದೆಯಲ್ಲಿ ತಿದ್ದುಪಡೆ.

ಕಲಕತ್ತಾ ತಾ|| ೮— ಬಂಗಾಲ ಕಾಯದೆ ಮಂಡಲದ ಅಧಿವೇಶನದಲ್ಲಿ ಸ್ಥಾನಿಕ ಸಂಸ್ಥೆಗಳ ಮಂತ್ರಿಗಳಾದ ಸರ್. ಬಿ ಪಿ ಸಿಂಗ ರಾಯ್ ಇವರು ಕಲಕತ್ತಾ ಮುನಸಿಪಾಲಟಿಯ ಮಸೂದೆಯಲ್ಲಿ ತಿದ್ದುಪಡೆ ಮಾಡಬೇಕೆಂಬ ಒಂದು ಸೂಚನೆ ತಂದಿದ್ದರು ಈ ಸೂಚನೆಯು ೬೫ ವಿರುದ್ಧ ೧೬ ಮತಗಳಿಂದ ಸ್ವೀಕೃತವಾಯಿತು, ಮಸೂದೆಗೆ ವಿರುದ್ಧವಾಗಿ ಅನೇಕ ಉಪಸೂಚನೆಗಳು ಬಂದಿದ್ದವು ಈ ಮಸೂದೆಯ ಉದ್ದೇಶವೆಂದರೆ ಸರಕಾರದವರ ಅಪ್ಪಣೆ ಪಡೆದುಕೊಳ್ಳದೆ ಕಾರ್ಪೋರೇಶನದಲ್ಲಿ ರಾಜಕೀಯ ಇಲ್ಲವೆ ಇತರ ಸರಕಾರ ವಿರುದ್ಧ ಚಳವಳಿಯಲ್ಲಿ ಭಾಗತೆಗೆದುಕೊಂಡವರನ್ನು ಕೆಲಸಕ್ಕೆ ನಿಯಮಿಸಿಕೊಳ್ಳುವದಕ್ಕೆ ತಡೆ ಹಾಕುವದು ಇರುತ್ತದೆ. (ಅ ಪ್ರೆ.)

ಸಂಸ್ಥಾನ ಸಂರಕ್ಷಣೆಯ ಮಸೂದೆ

ಸಿಮಲಾ ತಾ|| ೯—ಮಿ. ಬಿ ದಾಸ ಇವರು ಅಸೆಂಬ್ಲಿಯಲ್ಲಿ ಸಂಸ್ಥಾನ ಸಂರಕ್ಷಣೆಯ ಮಸೂದೆಯನ್ನು ಜನಾಭಿಪ್ರಾಯಕ್ಕೆ ಕಳಿಸಬೇಕೆಂದು ಸೂಚನೆ ತಂದಿದ್ದರು ಸರಕಾರದವರು ಇದಕ್ಕೆ ಒಪ್ಪಿಗೊಂಡಿದ್ದರಿಂದ, ಅದರ ಮೇಲೆ ಮತ ತೆಗೆದುಕೊಳ್ಳಲು, ಅದು ೬೬ ವಿರುದ್ಧ ೭ ಮತಗಳಿಂದ ಸ್ವೀಕೃತವಾಯಿತು ಸರ್ ಹ್ಯಾರಿ ಹೇಗರು ಉತ್ತರ ಕೊಟ್ಟಿದ್ದೇನಂದರೆ ಮಸೂದೆಯೊಳಗಿನ ಯಾವತ್ತೂ ವಿಷಯಗಳ ಸಂಪೂರ್ಣವಾಗಿ ನಿರೀಕ್ಷಣೆ ಮಾಡುವದಕ್ಕೆ ಅಡ್ಡಿ ಮಾಡುವದು ಸರಕಾರದ ಇಚ್ಛೆಯಿಲ್ಲ. ಆದರೆ ಅಸೆಂಬ್ಲಿಯವರು ಈ ಮಸೂದೆಯ ವಿಷಯವಾಗಿ ತಮ್ಮ ಕೊನೆಯ ನಿರ್ಣಯವನ್ನು ಆಯವ್ಯಯದ ಅಧಿವೇಶನದೊಳಗಾಗಿಯೇ ಗೊತ್ತುಮಾಡಿಕೊಳ್ಳತಕ್ಕದ್ದೆಂಬುದೇ ಸರಕಾರದ ಉದ್ದೇಶವಿದೆ (ಅ ಪ್ರೆ)

ಲೆಜಿಸ್ಲೇಟಿವ್ಹ ಅಸೆಂಬ್ಲಿ

ಸಿಮಲಾ ತಾ|| ೯— ಈ ಹೊತ್ತಿನ ಅಸೆಂಬ್ಲಿ ಅಧಿವೇಶನದಲ್ಲಿ ಕೆಳಗಿನ ಗ್ರ್ಯಾಂಟುಗಳು ಮಾನ್ಯ ಮಾಡಲ್ಪಟ್ಟವು

೧ ಸಾಮ್ರಾಜ್ಯಾಂತರ್ಗತ ಆರ್ಥಿಕ ಸಂಘಗಳಿಗೆ ಸಹಾಯಾರ್ಥವಾಗಿ ಹಿಂದುಸ್ಥಾನದ ಸಹಾಯ ಹಣವೆಂದು ೩೮೪೦೦ ರು.

೨ ಸಿ ಆಯ್ ಡಿ ಯಲ್ಲಿಯ ತಾತ್ಪೂರ್ತಿಕ ಪೋಲೀಸದಳವನ್ನು ತಾ|| ೧-೯-೩೩ ರಿಂದ ಕಾಯಂ ಇಡುವದಕ್ಕೆ ೧೬೭೦೬ ರ.

೩ ಹಿಂದುಸ್ಥಾನ ಸರಕಾರದ ಸೆಕ್ರೆಟರಿಯೇಟದ ಉಚ್ಚ ಅಧಿಕಾರಿಗಳನ್ನು ಹಾಗೆ ಬರುವ ಚಳಿಗಾಲದಲ್ಲಿ ಕೌನ್ಸಿಲ್ ಗೃಹವನ್ನು ಸಂರಕ್ಷಿಸಲೋಸುಗ ಹೆಚ್ಚಿನ ಪೋಲೀಸರನ್ನು ನಿಯಮಿಸಿಕೊಳ್ಳಲು ೧೫೬೪೮ ರು

೪ ಜಾಯಿಂಟ ಸಿಲೆಕ್ಟ ಕಮೀಟಿಯ ಸಂಬಂಧವಾಗಿ ಬಂದ ಖರ್ಚಿನ ಬಗ್ಗೆ ೧೫೩೦೦೦ ರು.

೫ ಜಾಯಿಂಟ ಸಿಲೆಕ್ಟ ಕಮೀಟಿಯು ಬರ್ಮಾ ಶಿಷ್ಟ ಮಂಡಳದವರಿಗಾಗಿ ೫೫೨೦೦ ರು. (ಅ ಪ್ರೆ)

ಸೂರ್ಯಸೇನ ಮೊದಲಾದವರ ಅಪೀಲಿನ ವಿಚಾರಣೆ

ಮಿದನಾಪುರ ತಾ| ೮— ಚಿತಗಾಂಗ ಶಸ್ತ್ರಾಗಾರಕ್ಕೆ ಸಂಬಂಧಿಸಿದ ಬೇರೊಂದು ಖಟ್ಲೆಯಲ್ಲಿ ಅನುಕ್ರಮವಾಗಿ ಗಲ್ಲು ಹಾಗು ಕರಿ ನೀರಿನ ಶಿಕ್ಷೆಗೆ ಪಾತ್ರರಾದ ಸೂರ್ಯಸೇನ, ತಾರಕೇಶ್ವರ ದಸ್ತೀದಾರ ಮತ್ತು ಕುಮಾರಿ ಕಲ್ಪನಾ ದತ್ತ ಇವರ ಖಟ್ಲೆಯ ವಿಚಾರಣೆಯು ತಾ|೧ ನ ನವ್ಹೆಂಬರ ದಿವಸ ಶುರುವಾಗುವದೆಂದು ತಿಳಿದಿದೆ (ಅ ಪ್ರೆ)

ಹೊನ್ನಿನ ಹೊಳೆ

ಮುಂಬಯಿ ತಾ| ೯— ಈ ಹೊತ್ತಿನ ದಿವಸ ಇಲ್ಲಿಂದ ಹೊರಟ [illegible] ಹಡಗದಿಂದ [illegible] ಲಕ್ಷ ೧೬ ಸಾವಿರ ೭೭೪ ರೂಪಾಯಿ [illegible] ಭಂಗಾರವು ಪರದೇಶಕ್ಕೆ ಹೋಯಿತು [illegible] ಬ್ರಿಟನ್ [illegible] ಬಿಟ್ಟಂದಿನಿಂದ [illegible] ಸಾವಿರ [illegible] ರೂಪಾಯಿಯ ಭಂಗಾರವು ಪರದೇಶಗಳಿಗೆ ಹೋಗಿದೆ (ಅ ಪ್ರೆ)

ರಾಮಸ್ವಾಮಿಯವರು ವ್ಹಾಯಿಸರಾಯರ ಭೆಟ್ಟಿಗೆ

ಮುಂಬಯಿ ತಾ|| ೯ ಸರ|| ಸಿ| ಪಿ| ರಾಮಸ್ವಾಮಿ ಅಯ್ಯರ ಇವರು ಈ ಹೊತ್ತಿನ ದಿವಸ ಮುಂಜಾನೆ ಇಲ್ಲಿಗೆ ಬಂದರು ಅವರು ರಾತ್ರಿ ಗಾಡಿಯಿಂದ ವ್ಹಾಯಿಸರಾಯರ ಭೆಟ್ಟಿ ತೆಗೆದುಕೊಳ್ಳಲು ಸಿಮಲಾಕ್ಕೆ ಹೋಗತಕ್ಕವರಿದ್ದಾರೆ ಅವರು ಅಲ್ಲಿ ೪-೫ ದಿನಗಳ ವರೆಗೆ ನಿಲ್ಲತಕ್ಕವರಿದ್ದಾರೆ ಮತ್ತು ವ್ಹಾಯಿಸರಾಯರೊಡನೆ ಜಾಯಿಂಟ ಸಿಲೆಕ್ಟ ಕಮಿಟಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಚರ್ಚೆ ಮಾಡತಕ್ಕವರಿದ್ದಾರೆ (ಅ ಪ್ರೆ)

ಇಹವೃತ್ತ

ನಿನ್ನೆಯ ದಿವಸ ಇಲ್ಲಿಗೆ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ಕೂಡ್ಲಿ ಶೃಂಗೇರಿ ಶ್ರೀಮಜ್ಜಗದ್ಗುರು ಶ್ರೀ ಅಭಿನವ ಶಂಕರ ಭಾರತೀ ಸ್ವಾಮಿಗಳು ಇಲ್ಲಿಗೆ ಆಗಮಿಸಿದ್ದು ಅವರ ಶಿಷ್ಯವರ್ಗದಿಂದ ಪಾದಪೂಜಾ ವಗೈರೆ ಉತ್ಸವಾದಿಗಳು ನಡೆದಿರುತ್ತವೆ.

ಸಿಗಿ ಸಿಗಿ ಕೆಂಡವನ್ನು ನುಂಗುವದು. ಕಾಜನ್ನು ತಿನ್ನುವದು, ನಾಡಿಗಳನ್ನು ನಿಲ್ಲಿಸುವದು, ನೆಲದೊಳಗೆ ಜೀವಂತ ಹುಗಿಸಿಕೊಳ್ಳುವದು ಇವೇ ಮೊದಲಾದ ಅದ್ಭುತ ಪ್ರಯೋಗಗಳನ್ನು ಮಾಡುವಲ್ಲಿ ಪ್ರಖ್ಯಾತಿಯನ್ನು ಪಡೆದ ಪ್ರೋ. ಸುದರ್ಶನದಾಸ ಎಂ. ಎಸ್. ಸಿ ಯವರು ತಾ|| ೧೩ ನೆ ದಿವಸ ರಾತ್ರಿ ೯|| ಗಂಟೆಗೆ ಟೆಂಗಿನಕಾಯಿ ಗಿರಣಿಯಲ್ಲಿಯ ಶ್ರೀ ಗಣೇಶ ನಾಟಕ ಶಾಲೆಯಲ್ಲಿ ಮೇಲಿನ ಅತಿ ಆಶ್ಚರ್ಯಕರವಾದ ಪ್ರಯೋಗಗಳನ್ನು ಮಾಡಿ ತೋರಿಸಿ ಬಂದ ಉತ್ಪನ್ನವನ್ನು ಜಯ ಕರ್ನಾಟಕಕ್ಕೆ ಕೊಡತಕ್ಕವರಿದ್ದಾರೆ ಕರ್ನಾಟಕಾಭಿಮಾನಿಗಳು ಸಹಾಯ ಮಾಡುವರಾಗಿ ಕೋರುತ್ತೇವೆ

ಏಸಿಯಾದಲ್ಲಿಯ ರಾಷ್ಟ್ರಗಳ ಸಂಘ ಜಪಾನಿ ತರುಣರ ಉಪಕ್ರಮ

ಟೋಕಿಯೋ ತಾ| ೭— ಮಾಂಚೂಕೋದ ನವೀನ ರಾಜಧಾನಿಯಾದ ಛಾಂಗಚನ್ ಎಂಬಲ್ಲಿ ಮಾಂಚೂಕೋ ಮತ್ತು ಜಪಾನ ಈ ಎರಡೂ ರಾಷ್ಟ್ರಗಳಲ್ಲಿಯ ಸುಮಾರು ೬೦೦೦ ಜನ ತರುಣರದೊಂದು ಪರಿಷತ್ತು ಸೇರಿತ್ತು ಪರಿಷತ್ತಿನಲ್ಲಿ ಕೆಳಗಿನ ಆಶಯದ ನಿರ್ಣಯವು ಸರ್ವಾನುಮತದಿಂದ ಸ್ವೀಕೃತವಾಯಿತು

ಯಾವತ್ತು ಜಗತ್ತಿನಲ್ಲಿ ಶಾಂತತೆಯು ಪ್ರಸ್ಥಾಪಿತವಾಗಿ ಮಾನವ ಜಾತಿಯ ಪ್ರಗತಿಯಾಗಬೇಕಾದರೆ, “ ವಿಸ್ತೃತ ಏಸಿಯಾ ” ದ ಕಲ್ಪನೆಯನ್ನು ಬಳಕೆಯಲ್ಲಿ ತರುವದು ಯುಕ್ತವಿದೆ ಕಾರಣ ಏಸಿಯಾ ಖಂಡದಲ್ಲಿಯ ಯಾವತ್ತು ತರುಣರು ಸಂಘಟಿತರಾಗಿ ಈ ಕಾರ್ಯವನ್ನು ಯಶಸ್ವಿ ಮಾಡಬೇಕು

ಬ್ರಿಟಿಶ ಶಿಷ್ಟಮಂಡಳದ ಆಗಮನ

ನೂಲಿನ ಉದ್ಯೋಗದ ಸಂಬಂಧವಾಗಿ ಜಪಾನ ಲ್ಯಾಂಕೆಶಾಯರ ಮತ್ತು ಹಿಂದುಸ್ಥಾನ ಪ್ರತಿನಿಧಿಗಳಲ್ಲಿ ವಿಚಾರ ವಿನಿಮಯ ನಡೆಯತಕ್ಕದ್ದಿರುವದಷ್ಟೆ ಈ ಚರ್ಚೆಯಲ್ಲಿ ಭಾಗವಹಿಸುವ ಬ್ರಿಟಿಶ ಶಿಷ್ಟ ಮಂಡಳವು ತಾ ೧೫ನೆ ದಿವಸ ಇಲ್ಲಿಗೆ ಬರತಕ್ಕದ್ದಿದೆ ಹಿಂದುಸ್ಥಾನ ಮತ್ತು ಬ್ರಿಟಿಶ ಪ್ರತಿನಿಧಿಗಳಲ್ಲಿ ತಾ ೧೨ನೆ ದಿವಸ ಚರ್ಚೆಗಾರಂಭವಾಗುವದು ಜಪಾನದ ಔದ್ಯೋಗಿಕ ಶಿಷ್ಟಮಂಡಳದವರು ಕಲಕತ್ತಾ ಮಾರ್ಗವಾಗಿ ಇಲ್ಲಿಗೆ ಬಂದು ಇವರನ್ನು ಕೂಡಿಕೊಳ್ಳುವರು

ಹಾಂಗಾಲ್



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚುರ್ಯ [illegible]

[illegible] ದ [illegible]

ಇದರ ಉಪಯೋಗದಿಂದ [illegible] ಗಳು [illegible] ಕಚ್ಚುರ್ಯ [illegible]

ದ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವ[illegible] ಜ್ಯದ ಹಾದಿಯನ್ನು ಹಿಡಿಯಿರಿ

ಒಮ್ಮೆ ಮಾಲು ತರಿಸಿ, ಉಪಯೋ[illegible] ಅನುಭವ ಪಡೆಯಿರಿ

[illegible] ಹಳೆ [illegible]

ಪೆಚ್ಚಿ [illegible]

ಶ್ರೀ ಗೌರೀಶಂಕರ [illegible]

ಕಾರ್ತಿಕ [illegible] ರಿಂದ ತಾ॥ ೧೬-೧೧ ರ ವರೆಗೆ [illegible] (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸರ್ಟಿಫಿಕೇಟುಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀ ರಾಮೇಶ್ವರ [illegible]

[illegible]

ಚಾರ್ಜು ಬಹಳ ಸುಲಭ! [illegible]

ಪ್ರೇಕ್ಷಣೀಯ ನೋಟ! [illegible]

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು [illegible] ಕಾರ್ತಿಕ [illegible] ಅಶ್ವಯುಜ [illegible] ಹೊರಟು, ಈ ಕೆಳಗೆ ನಮೂದಿಸಿರುವಂತೆ [illegible]

೧ ಪಂಢರಪುರ [illegible]	೧೯ ಲಖನೌ ೨೨	೩೭ ಶಂಭಕೋಣಂ ೫
೨ ನಾಶಿಕ ೩-೪	೨೦ ಅಯೋಧ್ಯೆ ೨೫	೩೮ [illegible] ೧೬ ೧೭
೩ ಮುಂಬಯಿ [illegible]	೨೧ ಅಲ್ಲಾಬಾದ ,,	೩೯ ಕನ್ಯಾ ಕುಮಾರಿ [illegible] ೧೮
೪ ಸೋಮನಾಥ (ಹರಗಿರಿಂದ)	೨೨ ಪ್ರಯಾಗ ೯-೨೨	೪೦ ಕೋಟಿ [illegible]
೫ ದ್ವಾರಕಾ ,,	೨೩ ಕಾಶೀ [illegible]	೪೧ ಕ್ಯಾಂಡಿ [illegible] ೨೨
೬ ಬೇಟ ದ್ವಾರಕಾ (ಕ್ಷೇತ್ರ) ೧೦ ೧೧	೨೪ ಸಾರನಾಥ ,	೪೨ ಅಲ್ಲಾಯಿಮುನಾ [illegible] ೨೩
೭ [illegible] (ಕ್ಷೇತ್ರ) ೧೨ ೧೩	೨೫ ಗಯಾ ೨	೪೩ [illegible]
೮ ಅಹಮ್ಮದಾಬಾದ ೧೪	೨೬ [illegible] (ಕ್ಷೇತ್ರ) ೩	೪೪ [illegible] ೨೬
೯ ಸಾಬರಮತಿ ,	೨೭ [illegible]	೪೫ [illegible] ೨೭
೧೦ ಚಿತೋಡ ೧೫	೨೮ [illegible] ೪	೪೬ [illegible]
೧೧ ಉಜ್ಜಯನಿ ೧೬	೨೯ ಕಲಕತ್ತಾ ೫-೬-೭	೪೭ [illegible] ೨೮
೧೨ ಆಗ್ರಾ ೧೭	೩೦ ಜಗನ್ನಾಥ ಪುರಿ ೮	೪೮ ಮೈಸೂರ ೨೯-೩೦
೧೩ ಮಥುರಾ ೧೮ ೧೯	೩೧ [illegible] ೯	[illegible]
೧೪ ಗೋಕುಲ ,	೩೨ ರಾಮೇಶ್ವರಂ [illegible] ೧೦	[illegible]
೧೫ ವೃಂದಾವನ ,,	೩೩ ಚಿದಂಬರಮ ೧೧	[illegible]
೧೬ ಗೋವರ್ಧನ ,	೩೪ [illegible] ೧೨-೧೩	[illegible]
೧೭ ದಿಲ್ಲಿ ೨೦-೨೧	೩೫ ಶಿವಕಂಚಿ ೧೪	[illegible]
೧೮ ಹರದ್ವಾರ ೨೨-೨೪	೩೬ ವಿಷ್ಣುಕಂಚಿ ,	[illegible]

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕಂಡಕ್ಲಾಸ [illegible] ರೂಪಾಯಿ ಥರ್ಡಕ್ಲಾಸ [illegible] ರೂಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ

ಸೆಕೆಂಡಕ್ಲಾಸಿನವರು [illegible] ರೂ ಥರ್ಡಕ್ಲಾಸಿನವರು [illegible] ರೂ ಅಡ್ವಾನ್ಸ ಕಳಿಸತಕ್ಕದ್ದು. [illegible] ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪ[illegible] [illegible] ವೈಷ್ಣವಾದಿ ಎಲ್ಲಾ ಮತದವರಿಗೂ, ವಿ ರಶೈವರಿಗೂ ಪ್ರತ್ಯೇಕವಾಗಿ ಊಟ[illegible] ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು ಟ್ರೇನಿನಲ್ಲಿ ಶ್ರೀ[illegible] [illegible] ಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನವರು [illegible] [illegible] ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರ[illegible] [illegible] ಫೋಟೋಗ್ರಾಫರರೂ ಆಗಸರೂ ಇರುವರು ಹೋದಸಾರೆ ನಮ್ಮ ಟ್ರೇನಿನಲ್ಲಿ [illegible] ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು [illegible] ಟಿಕೇಟ [illegible] ತ್ವರೆಮಾಡತಕ್ಕದ್ದು

ಮೊದಲೆ ಗೊತ್ತುಪಡಿಸಿ ಒರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರಿ ಶಂಕರ ಕಂಪನಿಯ ಎಜನ್ ಕಿಂಟೆಗಳು— [illegible] ಧಾರವಾಡ ಜಿಲ್ಲೆಯ ರೈತರ ಹಾಗು ವ್ಯಾಪಾರರ [illegible] ಶ್ರೀ ಗೌರೀಶಂಕರ ಕಂಪನಿಗೆ [illegible] ಕೊಡಲ್ಪಡುವವು

ಜಿ ಎ ತಿರೂರ

ಮ್ಯಾನೇಜರು, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ ಎಚ್. ಚನಪ್ಪಾ ಬಾಳ್ಕೇಲರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ [illegible] ಗಳನ್ನು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪ[illegible] ಬೇಕೆಯುವರಿಗೆ ಆರ್ಡರಕೊಟ್ಟು ನೋಡಬೇಕು. ಹೈದರಾಬಾದಿನಿಂದಲೇ ತಬ[illegible] ಗಳು ಪರಸ್ಥಳಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು [illegible] ನೇರವಾಗಿ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುತ್ತದೆ. ನಮ್ಮ[illegible] ಖಾತ್ರಿಪೂರ್ವಕ ಮಾಲು ದೊರೆಯುವದು.

ವಳಿಗುಡ್ ಹೈದರಾಬಾದ (ಡೆಕ್ಕನ್) **ಬಿ ಜಿ ಚಿಮ್ಮಲಗಿ**

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ಕೆಲಸ ಗಳು ಗ್ಯಾಲೀಕೇಸ್, ಲೆಡ್ ಕಟರ ಹಾಗೂ ಹೊಸ ಟ್ರೆಡಲ್ (ಚಾಂಡ್ಲರ) ಅಕ್ಷರ ಪೂರ್ಣ ಕೇಸ ಫಾಲಿಯೊ

ಕನ್ನಡಿಗ ಮುದ್ರಾಲಯ ಧಾರವಾಡ

ಕನ್ನಡಿಗನ ಚಂದಾ ವಿವರ.

	ಸ್ಥಳೀಕರಿಗೆ	ಪರಸ್ಥಳದ
ತಿಂಗಳಿಗೆ	೦-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೫-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯವಸ್ಥಾಪಕ

ಕನ್ನಡಿಗ.

ಧಾರವಾಡ— ರವಿವಾರ ತಾರೀಖು ೧೦—೯—೧೯೩೩

ಸೆರೆಮನೆಗಳ ಸ್ಥಿತಿಗತಿ

೧೯೩೨ನೆಯ ಇಸ್ವಿಯ ಸೆರೆಮನೆಗಳ ಸಂಬಂಧದ ವರದಿಯನ್ನು ಸರಕಾರದವರು ಪ್ರಸಿದ್ಧಿಸಿದ್ದಾರೆ. ಹೋದ ವರುಷವಿಡೀ ಕಾಂಗ್ರೆಸಿನವರು ಸರಕಾರದವರ ಕಾಯದೆಭಂಗದ ಚಳವಳಿಯು ನಡೆದುದರಿಂದ ಸರೆಮನೆಗಳನ್ನು ಹೆಚ್ಚಿಸುವ ಪ್ರಸಂಗ ಒದಗಿತ್ತು. ... ಸ್ಥಳಗಳನ್ನು ಪೂರೈಸಬೇಕಾದರೆ ಸರಕಾರಕ್ಕೆ ಸಾಕುಸಾಕಾಗಿ ಹೋಯಿತೆಂದು ಆ ಖಾತೆಯ ಅಧಿಕಾರಿಗಳು ಹೇಳುತ್ತಾರೆ. ಹೋದ ವರ್ಷ ಕಾಯದೆಭಂಗದ ಚಳವಳಿಯ ಹೊತ್ತಿಗೆ ಮುಂಬಯಿ ಪಟ್ಟಣದಲ್ಲಿ ರಂಗೆರಾಡಿ ... ಪ್ರಾಂತದಿಂದಲೂ ಸರೆಮನೆಗಳು ಬಹಳ ತುಂಬಿತು. ಕಾಯದೆಭಂಗ ಚಳವಳಿಯ ಸಲುವಾಗಿ ... ಜನರು ಸೆರೆಮನೆಯನ್ನು ಸೇರಿದರಂತೆ. ಆದರೆ ಹೊಸ ಕಾಯದೆಯ ಅನ್ವಯ ಸಂಶಯದ ಮೇಲೆ ಮನೆಯಲ್ಲಿ ಕುಳಿತವರನ್ನು ... ಹಲವುಗಳಲ್ಲಿರುವ ಕಾಯಕವನ್ನು ನಡೆಸದಿದ್ದರೆ ಸರಕಾರಕ್ಕೆ ಇನ್ನೂ ಎಷ್ಟು ತೊಂದರೆಯಾಗುತ್ತಿತ್ತೋ ಏನೋ ಇರಲಿ. ಈ ಜನರನ್ನು ಇಡುವದಕ್ಕಾಗಿ ೩೦ನೆಯ ಜನವರಿ ೧೯೩೨ ರಿಂದ ಯರೋಡಾ ಸೆರೆಮನೆಯನ್ನು ಹಿಗ್ಗಿಸಬೇಕಾಯಿತು. ... ೧೯೩೨ ರಿಂದ ವಿಸಾಪುರದಲ್ಲಿ ತಾತ್ಪೂರ್ತಿಕ ಸೆರೆಮನೆಯನ್ನು ಕಟ್ಟಬೇಕಾಯಿತು. ಅಲ್ಲದೆ ... ಗಳೆಂಬರ ಸಲುವಾಗಿ ಡೇರೆಗಳನ್ನು ನಿಲ್ಲಿಸಬೇಕಾಯಿತು. ಒಳ್ಳೆ ತಿಂಗಳಿನಲ್ಲಿ ನಾಸಿಕದ ಸರೆಮನೆಯನ್ನು ಬೆಳೆಸಬೇಕಾಯಿತು. ಆದರೆ ಮುಂದೆ ಅದರ ಅವಶ್ಯಕತೆ ಬೀಳದ್ದರಿಂದ ಅದನ್ನು ವ್ರವೇ ತೆಗೆದು ಹಾಕಿದರು. ಒಟ್ಟಿನ ಮೇಲೆ ಈ ಸರೆಮನೆಗಳಲ್ಲಿ ದಿನಾಲು ೧೯ ಸಾವಿರ ಕೈದಿಗಳಿತ್ತಿದ್ದರೆಂದು ಹೇಳಬಹುದು. ಒಟ್ಟು ಕೈದಿಗಳಲ್ಲಿ ೧೮೬ ಚಿಕ್ಕ ಹುಡುಗರೂ ೧೨ ಚಿಕ್ಕ ಹುಡುಗಿಯರೂ ಇದ್ದರು. ... ಕೈದಿಗಳಿಗೆ ಬೇಡಿಗಳನ್ನು ಹಾಕಿದ್ದರು. ಅವರಲ್ಲಿ ೧೮ ಜನರು ಮಾತ್ರ ಸೆರೆಮನೆಗಳೊಳಗಿಂದ ಓಡಿ ಹೋದರಂತೆ. ... ಜನರಿಗೆ ತಪ್ಪುಗಳ ಸಲುವಾಗಿ ಜೇಲ ಸುಪರಿಂಟೆಂಡೆಂಟರು ತಮ್ಮ ಅಧಿಕಾರದಲ್ಲಿ ಶಿಕ್ಷೆ ಕೊಟ್ಟರಂತೆ. ಈ ಸಂಖ್ಯೆಯು ೧೯೩೧ ರಲ್ಲಿ ... ಇತ್ತು. ಈ ವರ್ಷ ಅದು ಇಷ್ಟೊಂದು ಹೆಚ್ಚಾಗಲಿಕ್ಕೆ ಕಾಯದೆಭಂಗದ ಕೈದಿಗಳು ಸರೆಮನೆಯಲ್ಲಿಯ ಶಿಸ್ತಿಗೆ ನಿಷ್ಕಾರಣವಾಗಿ ಅಡ್ಡ ಬಂದುದೇ ಕಾರಣವೆಂದು ಅಧಿಕಾರಿಗಳು ಹೇಳುತ್ತಾರೆ. ಆದರೆ ಕಾಯದೆಭಂಗದ ಚಳವಳಿಯಲ್ಲಿ ಶಿಕ್ಷೆ ಹೊಂದಿದವರೆಲ್ಲರೂ ಸವಿನಯ ಕಾಯದೆಭಂಗವನ್ನು ಮಾಡಿದವರು. ತಪ್ಪುಗಳನ್ನು ಅವರು ಮಾಡಿದ್ದೇ ನಿಜವಾಗಿದ್ದರೆ ಈ ... ಸಾವಿರ ಜನರಿಗೆ ಸರೆಮನೆಯಲ್ಲಿ ಅಷ್ಟೊಂದು ಪೀಡೆಯಾಗಿರಲೇಬೇಕೆಂದು ಜನರು ಊಹಿಸಲು ಅಡ್ಡಿ ಏನಿ... ಬಿಡುಗಡೆ ಹೊಂದಿದವರಲ್ಲಿ ನೂರಕ್ಕೆ ೫೦ ಜನರ ತೂಕವು ಹೆಚ್ಚಾಯಿತಂತೆ. ನೂರಕ್ಕೆ ... ಜನರ ತೂಕವು ಕಡಿಮೆಯಾಯಿತಂತೆ. ಕಾಯದೆಭಂಗ ಚಳವಳಿಯಲ್ಲಿ ಶಿಕ್ಷೆ ಹೊಂದಿದವರು ತಮಗೆ ಕೊಟ್ಟಷ್ಟು ಕೆಲಸವನ್ನು ಮಾಡುತ್ತಿದ್ದಿಲ್ಲವಾದ ಕಾರಣ, ಕೈದಿಗಳು ಮಾಡಿದ ಕೆಲಸದಿಂದ ಬರುವ ಉತ್ಪನ್ನವು ಬಹಳ ಕಡಿಮೆಯಾಯಿತಂತೆ. ಆದರೆ ಕಾಯದೆಭಂಗ ಚಳವಳದಲ್ಲಿ ಶಿಕ್ಷೆ ಹೊಂದಿದವರೆಲ್ಲರೂ ಸುಶಿಕ್ಷಿತರು, ಕಠಿಣ ಕೆಲಸ ಮಾಡುವ ರೂಢಿಯಿಲ್ಲದವರು. ಅವರಿಗೆ ಅವರ ಯೋಗ್ಯತೆಗೆ ತಕ್ಕಂತೆ ಕೆಲಸ ಕೊಡದೆ, ಹೆಚ್ಚಿಗೆ ಕೊಟ್ಟರೆ ಕೆಲಸವು ಕಡಿಮೆಯಾಗದೆ ಹೇಗೆ ಇದ್ದೀತು? ಕಾಯದೆಭಂಗ ಚಳವಳಿಯಲ್ಲಿ ಶಿಕ್ಷೆ ಹೊಂದಿದ ಇಬ್ಬರನ್ನು ನಾಸಿಕ ಜೇಲದ ... ಹುಳಿಯುವಂತೆ ಥಳಿಸಿದ ಸಂಗತಿಯು ಹೋದ ವರ್ಷದ ಸರೆಮನೆಯ ಆಡಳಿತಕ್ಕೆ ಎಂದಿಗೂ ಅಳಿಸಿ ಹೋಗದಂಥ ಕಪ್ಪು ಕಲೆಯನ್ನು ಹಚ್ಚಿದೆ. ಸುದೈವದಿಂದ ಸರಕಾರದವರು ಅವರಿಗೆ ಶಿಕ್ಷೆಯನ್ನು ವಿಧಿಸಿ ಕೆಲಮಟ್ಟಿಗೆ ಆಡಳಿತದ ಮಾನವನ್ನುಳಿಸಿರುವರು.

ಕಿರಿನುಡಿಗಳು.

ಕಾಯದೆಭಂಗ ಚಳವಳಿಯನ್ನು ನಿಲ್ಲಿಸುವ ಉದ್ದೇಶದಿಂದ ಸರಕಾರದವರು ಪೋಲೀಸರಿಗೆ ಯುಲ್ಲಿ ವಿಶೇಷ ಅಧಿಕಾರಗಳನ್ನು ಕೊಟ್ಟರು. ಆದರೆ ಈಗ ಕಾಯದೆಭಂಗವು ನಿಂತಂತಿರುವುದರಿಂದ, ಇನ್ನು ಪೋಲೀಸರು ಜನರಿಗೆ ನಿಷ್ಕಾರಣವಾಗಿ ಪೀಡಿಸುವದನ್ನು ಬಿಟ್ಟಿರಬೇಕಾಗಿತ್ತು. ಆದರೆ ದೇವರು ಬಿಟ್ಟರೂ ಪೂಜಾರಿಯು ಬಿಡಲಿಲ್ಲವೆಂಬಂತೆ ಮೇಲಿನ ಅಧಿಕಾರಿಗಳು ಸೌಮ್ಯರಾಗಿದ್ದರೂ ಕೆಳಗಿನವರು ಹೋ ತಿಳಿಯದೆಯೋ ಇನ್ನೂ ವರೆಗೆ ತಮ್ಮ ... ಕವನ್ನು ಪೂರಾ ಬಿಟ್ಟಿರುವುದಿಲ್ಲ. ಇದರಿಂದ, ಕಾಯದೆಭಂಗದ ಹೊರತಾಗಿ ವಿಧಾಯಕ ಕ್ಷೇತ್ರಗಳಲ್ಲಿ ಕಾರ್ಯ ಮಾಡುವವರಿಗೂ ನಿಷ್ಕಾರಣವಾಗಿ ತೊಂದರೆಯಾಗುತ್ತದೆ. ಅಲ್ಲದೆ ಕರ್ನಾಟಕದಂಥ ಹಿಂದುಳಿದ ಪ್ರಾಂತದಲ್ಲಂತೂ ... ಇನ್ನೂ ಅಷ್ಟೊಂದು ತಿಳವಳಿಕೆಯವರಿಲ್ಲದುದರಿಂದ ಈ ಕಾರ್ಯಕರ್ತರಿಗೆ ಅತಿಶಯವಾಗಿ ಅಡಚಣೆಗಳು ಒದಗುತ್ತವೆ. ವೃತ್ತಪತ್ರಿಕೆಗಳನ್ನು ನೋಟಾರಿನಲ್ಲಿ ಯಾರ ಸಂಗಡಲಾದರೂ ಕಳುಹಿಸಲಿಕ್ಕೆ ವಸ್ತುತಃ ಯಾವ ಕಾಯದೆಯ ಪ್ರತಿಬಂಧವೂ ಇಲ್ಲ. ಆದರೂ ಕಳುಹಿಸುವವರನ್ನು ತಡೆಯಬೇಕೆಂದು ಪೋಲಿಸರ ಪ್ರವೃತ್ತಿ. ಆದರಿಂದ ಪತ್ರಿಕೆಗಳನ್ನು ಒಯ್ಯುವವರಿಗೂ ವಿನಾಕಾರಣ ಭೀತಿ. ಮೇಲಿನ ಅಧಿಕಾರಿಗಳ ನಿರ್ದರ್ಶನಕ್ಕೆ ಇದನ್ನು ತಂದಿರುವರು. ದೇಶಭಕ್ತ ಸುಕ್ಕೇರಿಕರ ಇವರು ಸೆರೆಮನೆಯಿಂದ ಬಂದೊಡನೆ ತಮ್ಮ ಪ್ರೀತಿಯ ಕಾರ್ಯವಾದ ಸ್ವದೇಶಿಯನ್ನು ಕೈಕೊಂಡು ಕೆಲಸ ಮಾಡಹತ್ತಿದರು. ... ಯಲ್ಲಿ ಅವರು ಒಂದು ಅಖಿಲ ... ದ ಸ್ವದೇಶಿ ಪ್ರದರ್ಶನದ ಸಿದ್ಧತೆಯನ್ನು ನಡಿಸಿರುವರು. ಅಲ್ಲದೆ ಧಾರವಾಡದಲ್ಲಿ ಅಸ್ಪೃಶ್ಯತಾ ನಿವಾರಣೆಯ ಸಲುವಾಗಿಯೂ ಪ್ರಯತ್ನಿಸಬೇಕೆಂದು ಅವರ ಇಚ್ಛೆ. ಇಂಥ ಕಾರ್ಯಗಳಲ್ಲಿ ತಮಗೂ ಮತ್ತು ಕೆಲಸಮಾಡುವ ಅನ್ಯರಿಗೂ ತೊಂದರೆಯಾಗಬಾರದೆಂಬ ಉದ್ದೇಶದಿಂದ ಅವರು ನಿನ್ನೆ ದಿವಸ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರನ್ನೂ ಪೋಲೀಸ ಸುಪರಿಂಟೆಂಡೆಂಟರನ್ನೂ ಪ್ರತ್ಯಕ್ಷವಾಗಿ ಕಂಡು ಮಾತಾಡಿದರೆಂದೂ, ಆ ಅಧಿಕಾರಿಗಳು ಅವರ ಹೇಳಿಕೆಯನ್ನು ಸಹಾನುಭೂತಿ ಪೂರ್ವಕವಾಗಿ ಕೇಳಿಕೊಂಡು ಅವರಿಗೆ ತೊಂದರೆಯನ್ನು ದೂರಮಾಡುವೆವೆಂದು ಆಶ್ವಾಸನವನ್ನು ಕೊಟ್ಟರೆಂದೂ ಕೇಳುತ್ತೇವೆ. ಸಂತೋಷ.

ಕಾಬೂಲದಲ್ಲಿ ಗುಂಡಿನ ಅತ್ಯಾಚಾರ

ಪೇಶಾವರ ತಾ|| ೮— ಕಾಬೂಲದಲ್ಲಿ ಓರ್ವ ಅಫಗಾನನು ಮೊನ್ನಿನ ಬುಧವಾರ ದಿವಸ ಲೆಗೇಶನಿಯನ್ ಗ್ಯಾರೀಜ ಸುಪರಿಂಟೆಂಡೆಂಟರಾದ ಮಿ| ಸ್ಟ್ರೇಂಜರರನು, ಕಾಬೂಲದಲ್ಲಿಯ ಬ್ರಿಟಿಶ ರಾಯಭಾರಿ ಮಂಡಳದಲ್ಲಿಯ ಓರ್ವ ಹಿಂದೀ ಮುನಶಿಯನ್ನೂ, ಓರ್ವ ಅಫಗಾನ ಪಹರೆಯವನನ್ನೂ ರಾಯಭಾರಿ ಮಂಡಳದ ಆವರದಲ್ಲಿ ಗುಂಡು ಹೊಡೆದು ಕೊಂದಿದ್ದಾನೆ. ಅವನು ಆಗಿಂದಾಗ್ಗೆ ಸೆರೆ ಹಿಡಿಯಲ್ಪಟ್ಟನು. ಅವನು ಹೀಗೆ ಕೊಲೆ ಮಾಡಿದ್ದುದರ ಉದ್ದೇಶವು ತಿಳಿದಿಲ್ಲ. ಅವರ ದೇಹಗಳು ಹಿಂದುಸ್ಥಾನಕ್ಕೆ ತರಲ್ಪಡುವವು. (ಅ ಪ್ರೆ)

ಮುಂಬಯಿಯಲ್ಲಿ ಸ್ವದೇಶಿ ಸಪ್ತಾಹ

ಮುಂಬಯಿ ತಾ|| ೮— ಸ್ವದೇಶಿ ಸಪ್ತಾಹದ ಸಂಬಂಧದಲ್ಲಿ ಸ್ವದೇಶಿ ಸಂಘದ ಪರವಾಗಿ ಈ ಹೊತ್ತಿನ ದಿವಸ ಸಾರ್ವಜನಿಕ ಸಭೆ ಸೇರಿತ್ತು. ಪ್ರೊಫೆಸರ ವಾಡಿಯಾ ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ವ್ಯಾಖ್ಯಾತರು ತಮ್ಮ ಭಾಷಣಗಳಲ್ಲಿ ಪ್ರತಿಯೊಬ್ಬ ಹಿಂದೀ ಮನುಷ್ಯನು ರಾಷ್ಟ್ರೀಯ ದೃಷ್ಟಿಯಿಂದ ಏಕತ್ವವನ್ನು ಪಾಲಿಸುವದು ಅವಶ್ಯವಿದೆಯೆಂದು ಒತ್ತಿ ಒತ್ತಿ ಹೇಳಿದರು. ಇದಲ್ಲದೆ ಸ್ವದೇಶಿ ಪ್ರಚಾರ ಮಾಡಲು ಪ್ರತಿಯೊಬ್ಬರು ಶಕ್ತಿಮೀರಿ ಪ್ರಯತ್ನ ಮಾಡಿ, ಸ್ವದೇಶಿ ಕಾರ್ಯವನ್ನು ಭರದಿಂದ ಮುಂದರಿಸಬೇಕೆಂದು ಅವರು ವಿನಂತಿ ಮಾಡಿಕೊಂಡರು. ಸಭೆಯಲ್ಲಿ ಶ್ರೀ ಜಮುನಾದಾಸ ದ್ವಾರಕಾದಾಸ, ಜಮ್ನಾದಾಸ ಮೆಹತಾ, ಸೌ|| ಮುನಶಿ ಎಂ. ಸಿ. ಛಗಲಾ ಇವರಾದಿಯಾಗಿ ಭಾಷಣ ಮಾಡಿದರು. (ಅ ಪ್ರೆ)

ಮಿದನಾಪುರ ಅತ್ಯಾಚಾರ

೩೦ ಜನರಿಗೆ ಬಂಧನ

ಮಿದನಾಪುರ ತಾ|| ೮— ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕೊಲೆಯ ಸಂಬಂಧದಲ್ಲಿ ೩೦ ಜನರು ಸೆರೆ ಹಿಡಿಯಲ್ಪಟ್ಟು ಸೆಂಟ್ರಲ್ ಜೇಲಿನಲ್ಲಿ ಬಂಧನದಲ್ಲಿಡಲ್ಪಟ್ಟಿದ್ದಾರೆ. ಅವರಲ್ಲಿ ೫ ಜನರನ್ನು ಈ ಹೊತ್ತಿನ ದಿವಸ ಸ್ಪೇಶಲ್ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿತು. ಮ್ಯಾಜಿಸ್ಟ್ರೇಟರು ಅವರಲ್ಲಿ ನಾಲ್ವರ ಜಾಮೀನಿನ ಅರ್ಜಿಗಳನ್ನು ನಿರಾಕರಿಸಿದರು. (ಅ ಪ್ರೆ)

ಆಂಧ್ರ ವಿಶ್ವವಿದ್ಯಾಲಯ.

ಬೆಜವಾಡಾ — ಆಂಧ್ರವಿಶ್ವವಿದ್ಯಾಲಯದ ಸಿಂಡಿಕೇಟದವರು ಕಳೆದ ತಮ್ಮ ಸಭೆಯಲ್ಲಿ ಓರಿಸಾ ಪ್ರಾಂತವು ಸ್ವತಂತ್ರವಾದಲ್ಲಿ ಆ ಪ್ರಾಂತದೊಳಗಿನ ಯಾವತ್ತು ಕಾಲೇಜಗಳನ್ನು ತಮ್ಮ ವಿಶ್ವವಿದ್ಯಾಲಯಕ್ಕೆ ಜೋಡಿಸಿಕೊಳ್ಳಬೇಕೋ ಜೋಡಿಸಿಕೊಳ್ಳಬಾರದೋ ಎಂಬ ಬಗ್ಗೆ ವಿಚಾರಮಾಡಿ, ಅವುಗಳನ್ನು ಜೋಡಿಸಿಕೊಳ್ಳಬೇಕೆಂದು ನಿರ್ಣಯ ಮಾಡಿಕೊಂಡರು.

ಕರ್ನಾಟಕ

ಮೈಸೂರ ತಾ|| ೫— ಶ್ರೀ ಬಿ. ಟಿ. ಕೇಶವ ಅಯ್ಯಂಗಾರ ಇವರ ಅಧ್ಯಕ್ಷತೆಯ ಕೆಳಗೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ನಿನ್ನಿನ ದಿವಸ ಸಾರ್ವಜನಿಕ ಸಭೆ ಸೇರಿ, ಮೈಸೂರ ಚಂದ್ರಕಲಾ ನಾಟಕ ಮಂಡಳಿಯ ಒಡೆಯರೂ ಮತ್ತು ಸುಪ್ರಸಿದ್ಧ ನಟರೂ ಆದ ಪೀರ್ ಮಹಮ್ಮದ ಸಾಹೇಬ ಇವರಿಗೆ ಮಾನಪತ್ರವು ಅರ್ಪಿಸಲ್ಪಟ್ಟಿತು.

ಬೆಂಗಳೂರ ತಾ|| ೫— ಡಾ|| ಸರ್. ಸಿ. ವ್ಹಿ. ರಾಮನ್ ಇವರು ನಿನ್ನಿನ ದಿವಸ ಸೆಂಟ್ರಲ್ ಕಾಲೇಜದ ಗಣಿತ ಮಂಟಪದಲ್ಲಿ 'ಪ್ರಾಣಿಗಳ ಬಣ್ಣ'ಗಳ ವಿಷಯವಾಗಿ ಭಾಷಣ ಮಾಡಿದರು.

ಮೈಸೂರ ವೃತ್ತಪತ್ರಿಕಾ ಸಂಘದವರು ಈ ಹೊತ್ತಿನ ದಿವಸ ಮುಂಜಾನೆ ಮೈಸೂರ ವರ್ತಕ ಸಂಘದ ಭವನದಲ್ಲಿ ಸಭೆಯಲ್ಲಿ ಕೂಡಿ, ಶ್ರೀ ಸೇನಗುಪ್ತರ ನಿಧನದ ಬಗ್ಗೆ ದುಃಖ ಪ್ರದರ್ಶಕ ಗೊತ್ತುವಳಿ ಮಾಡಿಕೊಂಡರು.

ಇಲ್ಲಿಯ ಸಾರ್ವಜನಿಕ ವಾಚನಾಲಯದ ೧೪ನೆ ವಾರ್ಷಿಕೋತ್ಸವವು ನಿನ್ನಿನ ದಿವಸ ರಾಜಕಾರ್ಯ ಪ್ರಸಕ್ತ ರಾವಬಹದ್ದೂರ ಎಂ. ಶಾಮರಾವ ಇವರ ಅಧ್ಯಕ್ಷತೆಯ ಕೆಳಗೆ ಸಾಂಗವಾಯಿತು.

ಮೈಸೂರ ವಿಶ್ವವಿದ್ಯಾಲಯದಲ್ಲಿ ಸಂಗೀತ ಶಿಕ್ಷಣದ ಬಗ್ಗೆ ದಿವಂಗತ ಬಕ್ಷಿ ಸುಬ್ಬಣ್ಣನವರು ಇವರ ಹೆಸರಿನಿಂದ ಒಂದು ಶಿಷ್ಯವೃತ್ತಿಯು ಏರ್ಪಡಿಸಲ್ಪಡತಕ್ಕದ್ದಿದೆ. ಈ ಶಿಷ್ಯವೃತ್ತಿಗೆ ಧನಸಂಚಯ ಮಾಡುವದಕ್ಕೋಸುಗ ಆವ ಇಬ್ಬರು ಶಿಷ್ಯರು ಮದ್ರಾಸದಲ್ಲಿ ಅಲ್ಲಲ್ಲಿ ಗಾಯನ ಮಾಡುತ್ತ ಹಣವನ್ನು ಕೂಡಿಸಹತ್ತಿದ್ದಾರೆ. ಬಕ್ಷಿಯವರು ಮೈಸೂರ ದರಬಾರದ ಪ್ರಸಿದ್ಧ ವೈಣಿಕರಿದ್ದರು.

ಡಾ|| ಕುಲಕರ್ಣೀಜ

ಲೆಬೊರೋಟರಿ ಮುಂಬಯಿ ನಂಬರ ೧೨

ಬಾಟ್ಲಿ ಕಿಮ್ಮತ್ತು ೧—೨—೦

ಕೆಮಿಸ್ಟರಲ್ಲಿಯೂ ದೊರೆಯು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಧರಗು, ಬಿಳೇಧರಗು, ಕೆಂಪು ಧರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನದ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದ

ಏಜಂಟ: ಬಿ. ಟಿ. ಕೆರೂರ ಆಂಡ ಸನ್ಸ್
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.

೧೫—೬

ಜಮೀನದಾರರು ಮತ್ತು ಭಾವೀ ಸಂಕ್ಷೋಭನೆಯು.

ಮುಂಬಯಿ ತಾ — ಈ ಸೋಮವಾರ ಲೆಜಿಸ್ಲೇಟಿವ್ಹ ಕೌನ್ಸಿಲ್ದಲ್ಲಿ ಶ್ರೀ ವ್ಹಿ ಕಿಲೋಸ್ಕರ ಇವರ ಠರಾವಿನ ಮೇಲೆ ಬಹು ಜೋರಿನ ಚರ್ಚೆ ನಡೆಯಿತು. ಶ್ರೀ ಲಕ್ಷ್ಮಣರಾವ ಜಾಧವ ಇವರು ಠರಾವಿಗೆ ವಿರೋಧವಮಾಡಿ ಜಮೀನದಾರರಿಕಿಂತ ಒಕ್ಕಲಿಗರ ಹಿತದ ಕಡೆಗೆ ಸರಕಾರದ ಲಕ್ಷ ಹೆಚ್ಚು ಲಕ್ಷಕ್ಕೆ ಹರಿಯಬೇಕೆಂದು ಹೇಳಿದರು. ಶ್ರೀ ಎನ್ ಎಂ ಜೋಶಿಯವರು, ಮುಂಬಯಿ ಪ್ರಾಂತ್ಯದಲ್ಲಿ ಇತರ ಜನ ಇದರೂ ಮುಖ್ಯವಾಗಿ ಪಠಾಣ ಯಮರಿದಾರರು ಯಾರೇ ಆಸ್ತಿಯನ್ನು ಜಪ್ತಮಾಡಿರೆಂದು ನಾವು ಎನ್ನುವದಿಲ್ಲ, ಆದರೆ ಪ್ರಸಂಗ ಒಂದಲ್ಲಿ ಒಡವರ ಪ್ರಾಣರಕ್ಷಣೆಗೋಸುಗ ಶ್ರೀಮಂತರ ಆಸ್ತಿಯನ್ನು ಜಪ್ತಮಾಡುವ ಅಧಿಕಾರವು ಸಂಘಟನೆಯಲ್ಲಿ ಬೇಕು ಎಂದು ನಾವು ಎನ್ನುತ್ತೇವೆ, ಮುಂತಾಗಿ ಹೇಳಿದರು.

ಈ ದಾರಣಾವ ದಿಗಳಿರುವವೋ ಇಲ್ಲವೆ ಕ್ರಾಂತಿಕಾರರ ವೇವೋ ಎಂಬದು ಜೋಶಿಯವರಿಗಾದರೂ ಗೊತ್ತಿದೆಯೋ ಇಲ್ಲವೋ ಎಂದು ಮಿ ಎಫ್ ಈ ಜೇವ್ಸರು ಅಭಿಪ್ರಾಯ ವ್ಯಕ್ತಪಡಿಸಿದರು. ಮಿ ವಾಜಪೇಯಿ ಇವರು ಸರಕಾರದ ಪರವಾಗಿ ಭಾಷಣವಾಡಿ, ಸಂರಕ್ಷಣೆಯ ಕರಾರುಗಳನ್ನು ಕೆಲವು ಕಾಗದದ ಮೇಲೆ ನವ ಓದಿಸಿದರೆ ಜಮೀನದಾರರ ಸಂರಕ್ಷಣೆಯಾದಂತಾಗುವದಿಲ್ಲವೆಂದು ಹೇಳಿ, ಯಾವತ್ತು ಚರ್ಚೆಯನ್ನು ಸಿಲೆಕ್ಟ ಕಮಿಟಿಗೆ ತಿಳಿಸುವೆವು ಎಂದು ಆಶ್ವಾಸನವನ್ನಿತ್ತರು.

ನ್ಯಾಯಾಧೀಶರ ರಾಜೀನಾಮೆ.

ಲಾಹೋರ ತಾ ೭— ಪತಿಯಾಲಾ ಸಂಸ್ಥಾನದ ಹಾಯಕೋರ್ಟಿನ ನ್ಯಾಯಾಧೀಶರೂ ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಓರ್ವ ಸಭಾಸದರೂ ಆದ ಸರದಾರ ಹರಬನ್ಸಸಿಂಗ ಇವರು ರಾಜಕೀಯ ಕಾರಣದ ಸಲುವಾಗಿ ತಮ್ಮ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟಿರುವರೆಂದು ತಿಳಿಯುತ್ತದೆ.

ಸರ್ ಪುರುಷೋತ್ತಮ ದಾಸರು

ಮುಂಬಯಿ ತಾ|| ೭— ಸರ್ ಪುರುಷೋತ್ತಮ ದಾಸ ಠಾಕೂರದಾಸ ಇವರು ಇಂಗ್ಲಂಡದಿಂದ ತಿರುಗಿ ಬಂದ ಕೂಡಲೆ ಡಾಕ್ಟರರು ಅವರಿಗೆ ೯೫ ದಿವಸ ವಿಶ್ರಾಂತಿ ತೆಗದುಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದರು. ಈಗ ಅವರ ಪ್ರಕೃತಿಯು ಸುಧಾರಿಸತೊಡಗಿದೆ. ಅವರು ರಿಝರ್ವ ಬ್ಯಾಂಕ ಕಮಿಟಿಯ ವರದಿಯ ಸಂಬಂಧದಲ್ಲಿಯ ತಮ್ಮ ಭಿನ್ನಾಭಿಪ್ರಾಯವನ್ನು ಬೇಗನೆ ಪ್ರಸಿದ್ಧ ಮಾಡುವವರಿದ್ದಾರೆ.

ಮುಂಬಯಿ ಕ್ರಾನಿಕಲ್ಲಕ್ಕೆ ನಿಜಾಮ ರಾಜ್ಯದಲ್ಲಿ ಅಡ್ಡಿ

ಸಿಕಂದರಾಬಾದ ತಾ|| ೭— ನಿಜಾಮ ಸಾಹೇಬರು ಇತ್ತೀಚೆಗೆ ಒಂದು ಅಪ್ಪಣೆ ಹೊರಡಿಸಿ, ಹೈದರಾಬಾದ ಸಂಸ್ಥಾನದಲ್ಲಿ ಮುಂಬಯಿ ಕ್ರಾನಿಕಲ್ ಪತ್ರಿಕೆಯನ್ನು ಯಾರೂ ಮಾರಾಟ ಮಾಡಕೂಡದೆಂದೂ, ಕೊಳ್ಳಕೂಡದೆಂದೂ ಅಪ್ಪಣೆ ವಿಧಿಸಿದ್ದಾರೆ. ಕ್ರಾನಿಕಲ್ ಪತ್ರಿಕೆಯಲ್ಲಿ ಹೈದರಾಬಾದ ಸಂಸ್ಥಾನದ ಅಧಿಕಾರಿಗಳ ಮೇಲೆ ಟೀಕೆ ಬಂದದ್ದೇ ಇದಕ್ಕೆ ಕಾರಣವಿರಬಹುದು.

ಗುಂಟೂರಲ್ಲಿ ಪಿಕೆಟಿಂಗ

ಗುಂಟೂರ ತಾ|| ೭— ಪ ಪೇಠಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಮಂಗಳವಾರ ದಿವಸ ನಾಲ್ವರನ್ನು ಸೆರೆ ಹಿಡಿದಿದ್ದರು, ಅವರ ಖಟ್ಲೆಯ ವಿಚಾರಣೆಯಾಗಿ ತಲಾ ೬ ತಿಂಗಳ ಶಿಕ್ಷೆಯಾಯಿತು.

ರಾಷ್ಟ್ರಧ್ವಜದ ಮೇಲೆ ವಕ್ರದೃಷ್ಟಿ.

ಕಲಕತ್ತಾ, ತಾ। ೭ — ವೆಲಿಂಗಟನ್ ಚೌಕದಲ್ಲಿ ಸೇರಿರುವ ಸ್ವದೇಶಿ ಪ್ರದರ್ಶನದ ಮಂಟಪದ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಿದ ಕಾರಣದಿಂದ ಒಂಗಲ ... ದ ಉದ್ಯೋಗಿಕ ಮತ್ತು ಒಕ್ಕಲ ... ಪ್ರದರ್ಶನದಿಂದ ತಮ್ಮ ... ಹಚ್ಚಿದ ... ಬಿಟ್ಟರು.

ದುಃಖಪ್ರದರ್ಶನಕ್ಕೆ ಅಡ್ಡಿ.

ದಿಲ್ಲಿ ತಾ ೭— ಇಲ್ಲಿಯ ಮುನಸಿಪಾಲಟಿಯು ಈ ಹೊತ್ತಿನ ಅಧಿವೇಶನದಲ್ಲಿ ವಿ ಜಿ ಪಟೇಲ ಇವರ ಮೇಲಿನ ಅತ್ಯಾಚಾರದ ನಿಷೇಧಾರ್ಥವಾಗಿ ಒಂದ ದುಃಖಪ್ರದರ್ಶಕ ಠರಾವು ಸಭೆಯ ಮುಂದೆ ಬರತಕ್ಕದ್ದಿತ್ತು. ಆದರೆ ಉಪಾಧ್ಯಕ್ಷರು ಅದು ಮುನಸಿಪಾಲಟಿ ಅಧಿಕಾರ ಕ್ಷೇತ್ರದೊಳಗಿನದಾಗಿ ವದಿಲ್ಲವೆಂದ ಅದನ್ನು ನಿಯಮಬಾಹ್ಯ ಮಾಡಿದರು.

ಶ್ರೀ ಜಯರಾಮದಾಸರು.

ಹೈದರಾಬಾದ ತಾ। ೭ — ಜಯರಾಮದಾಸ ದೌಲತರಾಮರನ್ನು ಇಟ್ಟ ಭಾಗವು ಆರೋಗ್ಯದ ದೃಷ್ಟಿಯಿಂದ ಒಳಿತಾಗಿರುವದಿಲ್ಲವೆಂದು ತಿಳಿಯುತ್ತದೆ. ಜಯರಾಮದಾಸರು ತಮ್ಮೊಂದಿಗೆ ಇನ್ನೊಬ್ಬ ರಾಜಕೀಯ ಕೈದಿಯನ್ನು ತಮ್ಮ ಹತ್ತಿರ ಇಡಬೇಕೆಂದು ಅಧಿಕಾರಿಗಳಿಗೆ ವಿನಂತಿ ಮಾಡಿಕೊಂಡಿದ್ದರು. ಆದರೆ ಅವರ ವಿನಂತಿಯು ಈ ವರೆಗೂ ಮಾನ್ಯಮಾಡಲ್ಪಟ್ಟಿಲ್ಲ.

ಬಳ್ಳಾರಿಯ ಪತ್ರ.

(ಸ್ವಂತ ಸುದ್ದಿಗಾರರಿಂದ)

ಬಳ್ಳಾರಿ ತಾ|| ೬— ಈ ಜಿಲ್ಹೆಯಲ್ಲಿ ಈ ವರ್ಷ ಆದಷ್ಟು ಮಳೆಯು ಹಿಂದೆ ೧೫— ೦ ವರ್ಷಗಳಿಂದ ಆಗಿಲ್ಲವೆಂದು ರೈತರು ಹೇಳುತ್ತಿರುವರು. ಈ ಅತಿಮಳೆಯ ಮೂಲಕ ಗುಗ್ಗರಹಟ್ಟಿ ಎಂಬಲ್ಲಿ ೬೩ ಮನೆಗಳು ಬಿದ್ದುಹೋಗಿವೆ. ... ೪೦—೫೦ ಮನೆಗಳು ಬಿದ್ದಿವೆ. ರೈತರು ದಿನಾಲು ... ಶ್ರೀ ... ಅವರು ... ಸಹಾಯ ... ಪ್ರಯತ್ನಿಸುತ್ತಿರುವರು ... ಬಳ್ಳಾರಿಯಲ್ಲಿಯೂ ... ಆಗಿದೆ.

ಪ್ಲೇಗಿನ ಹಾವಳಿ— ಕೊಟ್ಟೂರ, ಹರಪನಹಳ್ಳಿ ಮತ್ತು ಇತರ ತಾಲೂಕುಗಳಲ್ಲಿ ಪ್ಲೇಗು ಪ್ರಾರಂಭವಾಗಿ ... ಅಲ್ಲಿ ... ಸಾರ್ವಜನಿಕ ... ಪ್ಲೇಗಿನ ... ಇರುವದು ... ತಿಂಗಳಲ್ಲಿ ೧೧೦ ... ಸತ್ತವರು.

ರಾಜಕೀಯ ಸೆರೆಯಾಳುಗಳ ಬಿಡುಗಡೆ— ಕಳೆದ ೧೦ ದಿವಸಗಳಲ್ಲಿ ಸುಮಾರು ೨೨ ಜನ ರಾಜಕೀಯ ಸೆರೆಯಾಳುಗಳು ಶಿಕ್ಷೆಯ ಅವಧಿಗೆ ಮೊದಲೇ ಬಿಡುಗಡೆ ಹೊಂದಿದರು. ಅವರೆಲ್ಲರು ಓರಿಸಾ ಮತ್ತು ಆಂಧ್ರ ಪ್ರಾಂತಕ್ಕೆ ಸೇರಿದವರಿದ್ದರು. ಈಗ ಸೆಂಟ್ರಲ್ ಜೇಲಿನಲ್ಲಿ ಇನ್ನೂ ೨೪ ಜನ ರಾಜಕೀಯ ಕೈದಿಗಳಿರುವರು ... ಬಿಡುವರೆಂದು ಸುದ್ದಿಯಿದೆ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲಿಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗದ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ಬ್ರಾಹ್ಮಣೇತರ ಯುವಕ ಪರಿಷತ್ತು.

ರವಿವಾರ ತಾ|| ೧೦ನೆ ಸಪ್ಟೆಂಬರ ದಿವಸ ಶ್ರೀ ಪಂಡಿತಪ್ಪ ಚಿಕ್ಕೋಡಿಯವರ ಅಧ್ಯಕ್ಷತೆಯಲ್ಲಿ ಕೂಡತಕ್ಕದಿರುವ ಬ್ರಾಹ್ಮಣೇತರ ಯುವಕ ಪರಿಷತ್ತಿನಲ್ಲಿ ಕೆಳಗಿನ ವಿಷಯಗಳ ಬಗ್ಗೆ ಚರ್ಚೆಯಾಗತಕ್ಕದ್ದಿದೆ.

(೧) ಈ ಪಕ್ಷದ ಹೆಸರು 'ಡೆಮಾಕ್ರ್ಯಾಟಿಕ್' ಪಕ್ಷ ಎಂದು ಇರತಕ್ಕದ್ದು. (೨) ನ್ಯಾಯವಾದ ಮಾರ್ಗದಿಂದ ಶಕವಿದಷ್ಟು ಬೇಗನೆ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ದೊರಕಿಸುವದು. (೩) ಈ ಪಕ್ಷದ ಕಚೇರಿಯು ಮುಂಬಯಿಯಲ್ಲಿ ಇರತಕ್ಕದ್ದು. (೪) ಪಕ್ಷದ ಧೋರಣವು ಕೌನ್ಸಿಲ ಪಕ್ಷದ್ದು ಇರತಕ್ಕದ್ದು. (೫) ಬಿಳೀ ಕಾಗದ (೬) ಕೂಲಿಕಾರರು ಮತ್ತು ಒಕ್ಕಲಿಗರ ಸಂಘಟನೆ (೭) ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆ ಇವೇ ಮೊದಲಾದವು.

ಬಾಬು ರಾಜೇಂದ್ರ ಪ್ರಸಾದರ ಪ್ರಕೃತಿ

ಪಾಟಣಾ ತಾ|| ೭— ಬಾಬು ರಾಜೇಂದ್ರ ಪ್ರಸಾದರನ್ನು ಈ ಹೊತ್ತಿನ ದಿವಸ ಇಲ್ಲಿಗೆ ತಂದಿದ್ದಾರೆ. ಜನರಲ್ ಆಸ್ಪತ್ರಿಯಲ್ಲಿ ಅವರ ಬಗ್ಗೆ ವಿಶೇಷ ವ್ಯವಸ್ಥೆಯನ್ನು ಮಾಡಿರುತ್ತಾರೆ. ಶ್ರೀ ರಾಜೇಂದ್ರ ಬಾಬುಗಳೊಂದಿಗೆ ಪೋಲೀಸರೂ ಇದ್ದರು. ಅವರಿಗೆ ಏನು ಕೂಡಲಿಕ್ಕೆ ಶಕ್ತಿಯಿಲ್ಲವಾದ್ದರಿಂದ ... ವರೆಗೆ ಬೇನೆಯ ಖುರ್ಚಿಯಲ್ಲಿ ಕರೆದೊಯ್ದರು.

ಬಾಬು ರಾಜೇಂದ್ರ ಪ್ರಸಾದರು ಬೇಗನೆ ಗುಣಹೊಂದಲೆಂದು ಪ್ರಾರ್ಥನೆ ಮಾಡಲಿಕ್ಕೆ ಮ್ಯೋಸ್ಕರ ತಾ॥ ೭ನೆ ದಿವಸ ಕಲಕತ್ತೆಯಲ್ಲಿ ಮೋಯಿದ ಬಾಬು ಇವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿತ್ತು.

ಶುಭಕಾರ್ಯಕ್ಕೆ ಡಾ ಜಿ ಬಿ ಯವರ ಶುಭ ಕಾರ್ಯ !

ಸುಗಂಧ ನಶ್ಯದ ಪುಡಿ

ಲೋಕ ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯಿಂದ ಹಿಡಿಸಲ್ಪಟ್ಟ ... ವಂದಿಗಳ ... ಪ್ರಸಿದ್ಧವಾದ ಈ ನಶ್ಯದ ಪುಡಿ ... ವ್ಯಾಧಿಗಳು ... ವೇದರೆ— ಪಿಣಿಸಿ, ಒಂಟಿತಲೆಶೂಲೆ, ತಲೆಯ ... ರೋಗಗಳು ಕಣ್ಣುಗಳಲ್ಲಿ ... ಗಳು ಸರ್ವ ವ್ಯಾಧಿಗಳು ಜ ದೇಹದ ... ಮುಂತಾದ ವ್ಯಾಧಿಗಳು ಪರಿಹಾರವಾಗಿ ... ವ್ಯಾಧಿಗಳ ... ಹಚ್ಚು ಮಾಡುತ್ತದೆ. ... ಈ ನಶ್ಯದ ... ಈ ಸುಗಂಧ ನಶ್ಯದ ಪುಡಿ ... ಎಲ್ಲವೂ ... ಅನೇಕ ಪ್ರಭುಗಳ ... ಉಪಯೋಗಿಸುತ್ತಾರೆ ... ಬಿ ... ಡಿ. ಪಿ ...

ಏಜೆ— **ಗುರುಬಸವ ಅಂಡ್ ಕಂಪನಿ, ಲಿಮಿಟೆಡ್**

ಪೋ. ಬಾ. ... ಮದರಾಸ..

ಕಂಪನಿಯ ... ಹೆಸರನ್ನು ... ಬರೆಯಿರಿ

ಹುಬ್ಬಳ್ಳಿ ಸಿಟಿ ಹಾಯಸ್ಕೂಲಿನ ಸಹಾಯಾರ್ಥವಾಗಿ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ರವಿವಾರ ತಾ|| ೧೦-೯-೩೩ ನೇ ದಿವಸ ರಾತ್ರಿ

ಸತ್ಯಸಂಕಲ್ಪ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಸಂಘದೊಡೆಯರು,

ಗರೂಡ ...

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಸ್ತೃತಗಳಿಗಾಗಿ ಈ ಯೋಜನೆಯು ಆಕರ್ಷಕವಾಗಿದೆ. ಬೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ.

ಧಾರವಾಡ
ತಾ. ೨೩-೮-೩೩

ಕೃಷ್ಣರಾವ ಆ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ರ. ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम्॥ मनु

ನಿತ್ಯ ಪತ್ರ. ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಮಂಗಳವಾರ ಭಾದ್ರಪದ ಬಹುಳ ೮ ಶಕೆ ೧೮೫೫ ತಾ|| ೧೨-೯-೩೩ [ಸಂಚಿಕೆ ೧೨೦

ಇನ್‌ಸ್ಯೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್‌ಸ್ಯೂರನ್ಸ
ಕಂಪನಿಯೇ
ಉತ್ತಮವಾದುದು

ಇನ್‌ಸ್ಯೂರನ್ಸ
ಸ್ವದೇಶದ ಹಣವನ್ನು ಪ್ರದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಗಾಂಧಿ—ಜವಾಹಿರರ ಸಂಭಾಷಣ.

ಪುಣೆ ತಾ|| ೯— ಪಂಡಿತ ಜವಾಹಿರರು ವರ್ಣಕುಟಿಗೆ ಹೋದಾಗ, ಮಹಾತ್ಮಾ ಗಾಂಧಿಯವರು ಸಂಧ್ಯಾಕಾಲದ ಅಲ್ಪಾಹಾರವನ್ನು ತೆಗೆದುಕೊಳ್ಳುವಲ್ಲಿ ತೊಡಗಿದ್ದರು ಆದರೆ ಪಂಡಿತ ಜವಾಹಿರರು ಬಂದಿದ್ದನ್ನು ಕಂಡು ಮಹಾತ್ಮರು ಪ್ಲೇಟನ್ನು ಕೆಳಗಿಟ್ಟು ಎದ್ದು ನಿಂತು, ಅವರ ಬೆನ್ನು ಚಪ್ಪರಿಸಿ, ಶ್ರೀಮತಿ ಸ್ವರೂಪರಾಣಿ ಮತ್ತು ಸೌ ಕಮಲಾ ನೆಹರೂ ಇವರ ಕ್ಷೇಮ ಸಮಾಚಾರವನ್ನು ವಿಚಾರಿಸಿದರು ಆ ಮೇಲೆ ಇಬ್ಬರೂ ತೋಟದ ಕಡೆಗೆ ಮಾತಾಡುತ್ತ ಹೊರಟರು ಸೌ ರೋಜನಿ ನೇನಿಯವರಾದರೂ ಪ್ರಾರ್ಥನೆ ಮುಗಿಯುವವರೆಗೆ ಅಲ್ಲಿಯೇ ಇದ್ದರು ಶ್ರೀಮತಿ ಸ್ವರೂಪರಾಣಿಯವರ ಪ್ರಕೃತಿಯು ಸುಧಾರಿಸತೊಡಗಿರುವದೆಂದು ಈ ಹೊತ್ತು ರಾತ್ರಿ ಅಲ್ಲಿಂದ ಪಂಡಿತ ಜವಾಹಿರರಿಗೆ ತಾರು ಬಂದಿದೆ

ಪುಣೆ ತಾ|| ೧೧— ಮಹಾತ್ಮಾ ಗಾಂಧಿಯವರು ತಮ್ಮ ಮೌನವ್ರತವನ್ನು ಬಿಟ್ಟಕೂಡಲೆ ಈ ಹೊತ್ತು ಮಧ್ಯಾಹ್ನದಲ್ಲಿ ಪಂಡಿತ ಜವಾಹಿರರು ಅವರೊಡನೆ ಪುನಃ ವಿಚಾರವಿನಿಮಯ ಪ್ರಾರಂಭಮಾಡುವರು ಅವರು ನಿನ್ನಿನ ದಿವಸ ಮಹಾತ್ಮರೊಡನೆ ೩ ತಾಸು ಚರ್ಚೆ ಮಾಡಿದರೆಂದು ಗೊತ್ತಾಗುತ್ತದೆ ಈ ಚರ್ಚೆಯಿಂದ ಸದ್ಯದ ಪರಿಸ್ಥಿತಿಯ ವಿಷಯವಾಗಿ ಅವರಿಗೆ ಸ್ಪಷ್ಟವಾದ ಕಲ್ಪನೆ ಮಾಡಿಕೊಳ್ಳುವದು ಶಕ್ಯವಾಯಿತು ಈ ದಿವಸ ಭಾವೀ ಧೋರಣದ ಸಂಬಂಧವಾಗಿ ಚರ್ಚೆ ನಡೆಯುವದು ಮತ್ತು ಸಂಭಾಷಣವು ನಾಳಿನ ದಿನವಾದರೂ ಸಾಗಬಹುದು ಇವರ ಚರ್ಚೆಯು ಮುಗಿಯುವವರೆಗೆ ರಾಜಕೀಯ ಚಳವಳಿಯಲ್ಲಿ ಏನೂ ಸ್ಥಿತ್ಯಂತರವುಂಟಾಗುವ ಸಂಭವವಿಲ್ಲ ಮಹಾತ್ಮಾ ಗಾಂಧಿಯವರು ಶಾಂತಿ ಸಂಧಾನದ ಮಾರ್ಗವನ್ನು ಕಂಡು ಹಿಡಿಯುವದೇ ತಮ್ಮ ಮನೋಯುಕ್ತಿಯಾಗಿದೆಯೆಂದು ಸ್ಪಷ್ಟಪಡಿಸಿದ್ದಾರೆ ಆದರೆ ಅವರು ತಮ್ಮ ಇಷ್ಟಾರ್ಥವನ್ನು ಹೇಗೆ ಸಾಧಿಸಿಕೊಳ್ಳುವರೆಂಬುದು ಗೊತ್ತಾಗಿಲ್ಲ

ಮಹಾತ್ಮಾ ಗಾಂಧಿಯವರು ಜವಾಬದಾರ ಜನರಿಂದ ನೀವು ಇನ್ನು ಮುಂದೆ ಯಾವದಾದರೂ ಪ್ರತಿರೋಧಕ ಕಾರ್ಯವನ್ನು ಮಾಡಿರೆಂಬುದನ್ನು ಸ್ವೀಕರಿಸಲ್ಲವೆಂದೂ ಮತ್ತು ಮುಂದೆ ಕೆಲವು ದಿವಸ ದೇಶದಲ್ಲಿ ಶಾಂತತೆಯನ್ನುಂಟು ಮಾಡಲಿಕ್ಕೂ ಹಾಗೂ ಹರಿಜನರ ಉದ್ಧಾರಮಾಡಲಿಕ್ಕೂ ಪ್ರಯತ್ನಿಸತಕ್ಕದ್ದೆಂದು ಸಲಹೆಗಳು ಬಂದಿವೆಯೆಂದು ಗೊತ್ತಾಗುತ್ತದೆ (ಅ ಪ್ರೆ)

ಮಹಾತ್ಮರ ಬಗ್ಗೆ ತುಚ್ಛಕರವಾದ ಸೂಚನೆ

ಸಿಮಲಾ ತಾ|| ೧೧— ಕರಾಚಿಯ ಡೇಲಿ ಗೆಜೆಟ್ ಪತ್ರಿಕೆಯು ಮಹಾತ್ಮಾ ಗಾಂಧಿಯವರು ಮಾಡಿದ ಬಗ್ಗೆ ಈ ಹೊತ್ತಿನ ಅಸೆಂಬ್ಲಿಯಲ್ಲಿ ಲಾಲಚಂದ ನವಲರಾಯ ಇವರು ಪ್ರಶ್ನೆ ಎತ್ತಿದರು ಅವರ ಪ್ರಶ್ನೆಯ ನಂತರ ಎಷ್ಟೋ ಉಪಪ್ರಶ್ನೆಗಳು ಮುಂದೆ ಬಂದಿದ್ದರಿಂದ ಅದರಲ್ಲಿಯೇ ೨೦ ಮಿನಿಟು ಕಳೆದು ಹೋಯಿತು ಗೃಹಮಂತ್ರಿಗಳ ಪರವಾಗಿ ಮಿ ಸ್ಕೋನ ಇವರು ಉತ್ತರ ಕೊಟ್ಟದ್ದೇನಂದರೆ - ಈ ತರದ ಲೇಖದಿಂದುಂಟಾದ ಪರಿಣಾಮವನ್ನು ವಿಚಾರಪೂರ್ವಕ ಅಧಿಕಾರವು ಸ್ಥಳೀಕ ಸರಕಾರದವರಿಗೇನೇ ಇದೆ ಕಾಯದೆಗೆ ವಿರುದ್ಧವಾದ ಲೇಖಗಳ ಬಗ್ಗೆ ಉಪಾಯಗಳನ್ನು ಯೋಚಿಸುವದು ಅವರನ್ನೇ ಕೂಡಿದೆ ಉಪಪ್ರಶ್ನೆಗಳಿಗೆ ಉತ್ತರ ಕೊಡುವಾಗ ಅವರು ಹಿಂದುಸ್ಥಾನ ಸರಕಾರದವರು ಈ ವಿಷಯದಲ್ಲಿ ಕೈ ಹಾಕಲು ಸಿದ್ಧರಿಲ್ಲವೆಂದು ಹೇಳಿದರು (ಅ ಪ್ರೆ)

ಕೌನ್ಸಿಲ ಆಫ್ ಸ್ಟೇಟದಲ್ಲಿ ಅಂದಮಾನ ಕೈದಿಗಳು.

ಸಿಮಲಾ ತಾ|| ೧— ಕೌನ್ಸಿಲ್ ಆಫ್ ಸ್ಟೇಟದಲ್ಲಿ ಈ ಹೊತ್ತಿನ ದಿವಸ ಸ್ಥಿ ಸ್ಥಿ ಕಾಲೀಕರ ಇವರು ಅಂದಮಾನದಲ್ಲಿ ಇತ್ತೀಚೆಗೆ ಅನ್ನತ್ಯಾಗ ಕೈಕೊಂಡವರ ಕಷ್ಟಗಳು ಮತ್ತು ಅಲ್ಲಿ ಮರಣ ಹೊಂದಿದವರ ಮರಣದ ಬಗ್ಗೆ ವಿಚಾರ ಮಾಡಲಿಕ್ಕೆ, ಹಿಂದಿ ಕಾಯದೆ ಮಂಡಳದ ಸರಕಾರಿ ಹಾಗು ಸರಕಾರೇತರ ಸಭಾಸದರದೊಂದು ಮಂಡಳವನ್ನು ನಿಯಮಿಸಬೇಕೆಂಬ ಠರಾವು ತಂದರು (ಅ ಪ್ರೆ)

ಕಲಾತ ಅರಸರು ಮರಣ ಹೊಂದಿದರು

ಕ್ವೆಟಾ ತಾ|| ೧೦— ಕಲಾತದ ಅರಸರಾದ ಸರ್ ಮೀರ ಮಹಮ್ಮದ ಅಝುಮಖಾನ ಇವರು ನಿನ್ನಿನ ದಿವಸ ಸಂಜೆಯಲ್ಲಿ ಕಲಾತದಲ್ಲಿ ಮರಣಹೊಂದಿದರೆಂದು ಸುದ್ದಿ ಬಂದಿದೆ (ಅ ಪ್ರೆ)

ಪರದೇಶದಲ್ಲಿ ಕರನಿರಾಕರಣ

ಲಂಡನ್ ತಾ|| ೯— ಕರನಿರಾಕರಣ ಚಳವಳಿಯನ್ನು ಸಾಗಿಸಿದ ಸಂಬಂಧವಾಗಿ ಡನಮೋರ ಭಾಗದಲ್ಲಿ ೯ ಜನ ರೈತರು ಸೆರೆಹಿಡಿಯಲ್ಪಟ್ಟಿದ್ದಾರೆ ಆ ರವಿಚಾರಣೆಯು ಡಬ್ಲಿನದಲ್ಲಿ ಲಷ್ಕರಿ ಪಂಚರ ಮುಂದೆ ನಡೆಯತಕ್ಕದ್ದಿದ್ದು ಅವರು ಬೇಗನೆ ಅಲ್ಲಿಗೆ ಕಳಿಸಲ್ಪಡುವರು

ಇರಾಕ ದೊರೆಗಳ ಮರಣ

ಇರಾಕ ದೊರೆಗಳಾದ ಫೇಜಿಲ್ ಇವರು ಬರ್ನ ಎಂಬಲ್ಲಿ ತಾ|| ೮ ನೆ ದಿವಸ ಹೃದಯರೋಗದಿಂದ ಮರಣ ಹೊಂದಿದರು

ಫೇಜಿಲ್ ಇವರ ಚಿರಂಜೀವರಾದ ೧ ನೆ ಎಮೀರ ಗಾಜಿಯವರು ತಾ|| ೮ ನೆ ದಿವಸ ಅರಸೊತ್ತಿಗೆಯನ್ನು ಹೊಂದಿದರು ಇವರು ೨೧ ವರ್ಷದವರಿದ್ದು, ಇಂಗ್ಲಂಡದಲ್ಲಿಯ ಪ್ರಸಿದ್ಧ ಶಿಕ್ಷಣ ಸಂಸ್ಥೆಯಾದ ಹ್ಯಾರೊ ಎಂಬಲ್ಲಿ ಇವರ ಶಿಕ್ಷಣವಾಗಿದೆ.

ಮದ್ರಾಸದಲ್ಲಿ ಪಿಕೆಟಿಂಗ

ಮದ್ರಾಸ ತಾ|| ೯— ಶ್ರೀ ಬಿ ಸ್ಥಿ ಸುಬ್ಬರಾವ ಮೊದಲಾದವರು ಪರದೇಶಿ ಬಟ್ಟೆಯ ಅಂಗಡಿಗಳ ಮುಂದೆ ಪಿಕೇಟಿಂಗ ಮಾಡುವದನ್ನು ಇನ್ನೂ ಹಾಗೆಯೇ ಸಾಗಿಸಿದ್ದಾರೆ ನಿನ್ನಿನ ದಿವಸ ಶಿವಜ್ಞಾನಂ ಪಾರ್ಕದಲ್ಲಿ ಸಾರ್ವಜನಿಕ ಸಭೆ ಸೇರಿ, ಶ್ರೀನಿವಾಸ ರಾವ ಮೊದಲಾದವರ ಭಾಷಣಗಳಾದವು ಅವರು ತಮ್ಮ ವ್ಯಾಖ್ಯಾನದಲ್ಲಿ ಸ್ವದೇಶಿಯ ಬಗ್ಗೆಯೂ ಮತ್ತು ಪರದೇಶಿ ಸರಕುಗಳ ಬಹಿಷ್ಕಾರದ ವಿಷಯವಾಗಿಯೂ ಹೇಳಿದರು.

ಬ್ರಿಟಿಶ ವಿದ್ಯಾರ್ಥಿಗಳ

ಹಿಂದುಸ್ಥಾನದ ಸಂಚಾರ

— x —

ಬ್ರಿಟಿಶ ವಿದ್ಯಾರ್ಥಿಗಳ ಚಚಾರ್ತ್ಮಕ ಮಂಡಳದವರು ತಾ|| ೪ ನೆ ಆಕ್ಟೋಬರ ದಿವಸ ಮುಂಬಯಿಗೆ ಬಂದು ಮುಟ್ಟುವರು ಈ ಮಂಡಳದಲ್ಲಿ ಕಾಲಿಕಾಲ ಸರಕಾರದಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಆರ್ಥರ ಗ್ರೀನವುಡ ಇವರ ಮಗನಾದ ಏ ಡಬ್ಲ್ಯು ಜೆ ಗ್ರೀನವುಡ್ ಮುಂತಾದವರು ಇರುವರು

ಈ ಮಂಡಲದವರು ಅಲಹಾಬಾದ, ಮುಂಬಯಿ, ಕಲಕತ್ತಾ, ಡಾಕಾ, ಲಖನೌ ಮದ್ರಾಸ, ಮೈಸೂರ, ಮತ್ತು ಪಂಜಾಬ ಪ್ರಾಂತಗಳಿಗೆ ಭೆಟ್ಟಿಕೊಡುವರು ಹಿಂದುಸ್ಥಾನದಲ್ಲಿಯ ಜನರ ರೀತಿ ನೀತಿಗಳ ಜ್ಞಾನಮಾಡಿಕೊಂಡು, ಇಲ್ಲಿಯ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಕೂಡ ಸ್ನೇಹ ಬೆಳಿಸಿ, ಅಮೇರಿಕಾ ಮತ್ತು ಉಳಿದ ಸಾಮ್ರಾಜ್ಯಗ ಭಾಗಗಳ ವಿದ್ಯಾರ್ಥಿಗಳ ಸಂಗಡ ಒಳಿಕ ಮಾಡಿಕೊಂಡಂತೆ, ಇಲ್ಲಿಯ ವಿದ್ಯಾರ್ಥಿಗಳೊಡನೆಯೂ ದೃಢ ಒಳಿಕೆ ಮಾಡಿಕೊಳ್ಳುವದೇ ಉದ್ದೇಶವಿದೆಯೆಂದು ಸೆಕ್ರೆಟರಿಯವರ ಮಿ ಪ್ಯಾಟರ್ಸನ್ನರು ಹೇಳಿರುವರು ಮೈಸೂರ ವಿಶ್ವವಿದ್ಯಾಲಯದ ಪ್ರೊ ವಾಡಿಯಾ ಇವರ ಸಲಹೆಯ ಮೇರೆಗೆ ಈ ಪ್ರವಾಸವು ಕೈಕೊಳ್ಳಲ್ಪಟ್ಟಿದೆ

ನಾಗಪುರ ಮುನಸಿಪಾಲಿಟಿಯಲ್ಲಿ ಅಸ್ಪೃಶ್ಯಾಚಾರದ ನಿಷೇಧ

ನಾಗಪುರ ತಾ|| ೯ ನಿದಸಾಪುರ ಅಸ್ಪೃಶ್ಯಾಚಾರದ ನಿಷೇಧಾರ್ಥವಾಗಿ ಈ ಹೊತ್ತಿನ ಮುನಸಿಪಾಲಿಟಿ ಸಭೆಯು ಮುಂದರಿಸಲ್ಪಟ್ಟಿತು ಈ ನಿಷೇಧಪರ ಠರಾವಿಗೆ ಶ್ರೀ ಮ ನಿಸ್ವಾಮಿ ನಾಯುಡು ಇವರು ಚಿತಗಾಂಗದಲ್ಲಿಯ ಪಬ್ಲಿಕರ ಧೋರಣದ ಬಗ್ಗೆ ನಿಷೇಧ ವ್ಯಕ್ತಮಾಡಬೇಕೆಂದು ತಿದ್ದುಪಡಿ ಸೂಚಿಸಿದ್ದರು ಆದರೆ ಅಧ್ಯಕ್ಷರು ಅದನ್ನು ನಿಯಮಬಾಹ್ಯ ಮಾಡಿದರು

ಜನವೃತ್ತ.

ಇಲ್ಲಿಯ ಮ್ಯುನಸಿಪಾಲಿಟಿಯು ಶಾಲಾ ಕಡ್ ಮಾಸ್ತರರಿಗೆ ಮಿ ಸ್ಟ್ಯಾರ್ಟನ ಗಳಿಂದ "ಬಸವಿಗಳನ್ನು ಬಿಡುವುದರಿಂದ ಆಗುವ ದುಷ್ಪರಿಣಾಮಗಳು" ಎಂಬ ಪತ್ರಿಕೆಯು ಬಂದಿದ್ದು, ಮಾಸ್ತರ ಜನರು ಈ ಬಗ್ಗೆ ಉಪದೇಶ ಮಾಡಬೇಕೆಂದು ಪತ್ರಿಕೆಯು ಕೊನೆಯಲ್ಲಿ ಉಲ್ಲೇಖಿಸಿರುವರು

ಇಲ್ಲಿಯ ಕ್ರಿಶ್ಚಿಯನ್ ತರುಣ ಸಂಘದಿಂದ 'Voice of Youth" ಎಂಬ ತ್ರೈಮಾಸಿಕವು ೧ನೇ ಆಕ್ಟೋಬರದಿಂದ ಹೊರಡುವದು ಸಂಪಾದಕರು ರೆವ್ಹಂಡ ಬಂಕಾಪುರ ಇವರು

ಕಲೆಕ್ಟರ ದೊರೆಗಳು ನಿನ್ನಿನ ದಿವಸ ಸ್ಥಳಿಕ ಹಾಯಸ್ಕೂಲುಗಳಿಗೆ ಭೆಟ್ಟಿ ಕೊಟ್ಟು ವಿದ್ಯಾರ್ಥಿಗಳಿಗೆ ಅಸ್ಪೃಶ್ಯತಾ ನಿವಾರಣೆಯ ವಿಷಯವಾಗಿ ಪ್ರಶ್ನೆಗಳನ್ನು ಕೇಳಿದರು ಕೆಲವರು ಸಮ್ಮತಿ ಕೊಟ್ಟರು ಕೆಲವರು ಸುಮ್ಮನೆ ಇದ್ದರು

ಇಂಡಿಯಾ ಹೌಸ ಲಾಯಬ್ರರಿ

ಇಂಡಿಯಾ ಹೌಸ ಲಾಯಬ್ರರಿಯಲ್ಲಿಯ ಪುಸ್ತಕಗಳ ಪಟ್ಟಿಯೊಂದು ಇದೀಗ ಪ್ರಸಿದ್ಧವಾಗಿದೆ ಈ ಲಾಯಬ್ರರಿಯ ಮುಖ್ಯ ಉದ್ದೇಶವೆಂದರೆ ಹಿಂದುಸ್ಥಾನದ ವಿಷಯವಾಗಿ ಪರಿಚಯ ಮಾಡಿಕೊಡುವದೇ ಇರುತ್ತದೆ ಲಾಯಬ್ರರಿಯಲ್ಲಿ ಒಟ್ಟು ೧೫೦೦೦ ಗ್ರಂಥಗಳು ಇದ್ದು ಈ ಪಟ್ಟಿಯಲ್ಲಿ ಅವುಗಳು ವಿಷಯಾನುಸಾರವಾಗಿ ವಿಭಾಗಿಸಲ್ಪಟ್ಟಿವೆ ಈ ಲಾಯಬ್ರರಿಯಲ್ಲಿ ಯಾವತ್ತರಿಗೂ ನಿರ್ಬಂಧವಿಲ್ಲದೆ ಪ್ರವೇಶವಿದೆ.

ಸರಹದ್ದ ವೃತ್ತಪತ್ರಕ್ಕೆ ಹೊಣೆ ಬೇಡಿದರು

ನಾಥಿಯಾಗಲಿ ತಾ|| ೯— ಪೈಶಾವಿ. ಸರಹದ್ದ ಎಂಬ ಸಾಪ್ತಾಹಿಕ ಪತ್ರಕ್ಕೆ ಸರಕಾರದವರು ೫೦೦ ರೂಪಾಯಿ ಹೊಣೆ ಬೇಡಿದ್ದಾರೆ ಇದರಂತೆ ಪೇಶಾವರದಲ್ಲಿ ಖಾವಶಹಾ ಗುಲ್ ಎಂಬ ಹೆಸರಿನ ಕಂಪನಿಯವನನ್ನು ಕೈದು ಮಾಡಿದ್ದಾರೆ

ವಕೀಲರಿಗೆ ಶಿಕ್ಷೆ

ಗೌಹತಿ ತಾ|| ೯— ವ್ಯಕ್ತಿಶಃ ಕಾಯದೆ ಭಂಗವನ್ನು ಪ್ರಾರಂಭ ಮಾಡಿರೆಂಬ ಆಶಯದ ಹಸ್ತಪತ್ರಿಕೆಗಳನ್ನು ಹಂಚಿದ ಬಗ್ಗೆ ಕೈದು ಮಾಡಲ್ಪಟ್ಟ ಆಸಾಮ ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಹೇಮಚಂದ್ರ ಬರೂಹ ಇವರಿಗೆ ಈ ಹೊತ್ತಿನ ದಿವಸ ೧ ವರ್ಷ ಕಠಿಣ ಶಿಕ್ಷೆಯಾಯಿತು

ಕೊನೆಯುಬ್ಬು.

ಹೊಂಗೋಲ



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚುರ್ಯ

ಶುಸ್ತ್ರಶದ ಮತ, ಕ್ರಿಮಿನಾಶಕ ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವವು. 'ಹೆಮ್ಮುಗುಳು'' ವಸಡೆಗಳ ರಕ್ತಸ್ರಾವ ಕ್ಕೆ ಪಲು ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮುಗುಳಿನ ಸತ್ವವು 'ಕಚ್ಚುರ್ಯ' ದಂತ ಮಂಜನದಲ್ಲಿ ಅಡಕವಾಗಿದೆ ... ಕ್ರಿಮಿಗಳು ... 'ಕಚ್ಚುರ್ಯ' ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆದ್ದು ಮಾರುಗೆದ್ದು" ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

ಒಕಳೆ ಹಳೆಯುವ ಹೆಚ್ಚುವಿಶ್ವಾಸಕ್ಕೆ ಪಾತ್ರವಾದದ್ದು
ಹೆಚ್ಚಿನ ಸುಧಾರಣೆಯುಳ್ಳದ್ದೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೬-೪-೧೯೩೩ ರಿಂದ ತಾ॥ ೧೬-೬-೩೩ ರ ವರೆಗೆ ಇಡೀ ಭರತಖಂಡ (ಹಿಂದೂಸ್ಥಾನ) ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀಕಾಶೀರಾಮೇಶ್ವರ ಸಪ್ತಪುರಿ ದ್ವಾದಶ ಲಿಂಗ ಕ್ಷೇತ್ರಗಳ ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೀಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಅಶ್ವಯುಜ ಶು॥ ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಾಪುರ ಅಕ್ಟೋಬರ ತಾ॥೨		೧೯ ಲಖನೌ	೨೪	೩೭ ಕುಂಭಕೋಣಾ	೫
೨ ನಾಸಿಕ	೩-೪	೨೦ ಅಯೋಧ್ಯೆ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲಹಾಬಾದ	"	೩೯ ಧನುಷ್ಕೋಡಿ [ಹಡಗದಿಂದ]	೧೮
೪ ಸೋಮನಾಥಪಟ್ಟಣ (ಹಡಗದಿಂದ)	೮ ೯	೨೨ ಪ್ರಯಾಗ	೨೬-೨೭	೪೦ ಕೊಲಂಬೋ [ಹಡಗದಿಂದ]	೧೯-೨೦-೨೧
೫ ವೇರಾವಳ	"	೨೩ ಕಾಶಿ ೨೮-೨೯-೩೦ ೩೧ ನವೆಂಬರ ತಾ॥೧		೪೧ ಕ್ಯಾಂಡಿ [ಲಂಕಾ]	೨೨
೬ ದ್ವಾರಕಾ (ಕೃಷ್ಣತೀರ್ಥ)	೧೦-೧೧	೨೪ ಸಾರನಾಥ	"	೪೨ ಅನುರಾಧಪುರ [ಲಂಕಾ]	೨೩
೭ ಅಬುಪರ್ವತ (ಕೃಷ್ಣತೀರ್ಥ)	೧೨-೧೩	೨೫ ಗಯಾ	೨		
೮ ಅಹಮ್ಮದಾಬಾದ	೧೪	೨೬ ಬುದ್ಧಗಯಾ (ಕೃಷ್ಣತೀರ್ಥ)	೩	೪೩ ಧನುಷ್ಕೋಡಿ [ಹಡಗದಿಂದ]	೨೪
೯ ಸಾಬರಮತಿ	"	೨೭ ಗಿರಿ	"	೪೪ ಮಧುರೆ	೨೫
೧೦ ಬರೋಡ	೧೫	೨೮ ಪರಮೇಶ್ವರನಾಥ (ಕೃಷ್ಣತೀರ್ಥ)	೪	೪೫ ತ್ರಿಚನಾಪಲ್ಲಿ	೨೬
೧೧ ಅಜ್ಮೀರ	೧೬	೨೯ ಕಲಕತ್ತಾ	೫-೬-೭	೪೬ ಶ್ರೀರಂಗ	"
೧೨ ಆಗ್ರಾ	೧೭	೩೦ ಜಗನ್ನಾಥ ಪುರಿ	೮	೪೭ ಬೆಂಗಳೂರ	೨೭
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯	೪೮ ಮೈಸೂರ	೨೮-೨೯
೧೪ ಗೋಕುಲ	"	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	"	೩೩ ಬೆಜವಾಡ	೧೧		
೧೬ ಗೋವರ್ಧನ	"	೩೪ ನಂದ್ಯಾಲ	೧೨ ೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	"		

ಈ ಎಲ್ಲ ಮಹಾಯಾತ್ರೆಗಳನ್ನು ಮುಗಿಸಿಕೊಂಡು ನವೆಂಬರ ೩೦ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು॥ ೧೪ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣವನ್ನು ಬಂದು ಸೇರುವದು

ಟ್ರೇನಿನಲ್ಲಿ ಒಬ್ಬರಿಗೆ ೩ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ಇಳಿದುಕೊಳ್ಳುವ ಖರ್ಚು ಸೇರಿ ಸೆಕಂಡಕ್ಲಾಸ ಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟು ಪಡೆಯಬೇಕಾದಲ್ಲಿ ಸೆಕಂಡಕ್ಲಾಸಿನವರು ೫೦ ರೂ ಥರ್ಡಕ್ಲಾಸಿನವರು ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ಮಾಹಿತಿಗಾಗಿ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು. ಆ ಕಾರಣ ಟಿಕೀಟುಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿದ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರಿ ಶಂಕರ ಕಂಪನಿಯ ಏಜಂಟ್ ರಿಗಳು— ... ೪ ವರ್ಷಗಳಿಂದ ... ಕಮಿಶನ್ ... ಶ್ರೀ ಗೌರೀಶಂಕರ ಕಂಪನಿಗೆ ... ಯೋಗ್ಯ ಕಮೀಶನ ಕೊಡಲ್ಪಡುವದು

ಹಿ. ಎ ಶಿರೂರ
ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ
ಬಾಗಲಕೋಟೆ ಏಜಂಟ:— ಹಿ ಎಚ್. ಚಪಶ್ಯಾ ಬಾಳ್ ಸೇಲರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ. ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು. ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ. ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ಖರ್ಚು ಕ್ರಮವೆ. ನೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವವಲ್ಲದೆ, ನಮ್ಮ ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ। ೨-೯-೩೩

ವಳಿಗುಡ್ ಹೈದರಾಬಾದ (ಡೆಕ್ಕನ್) ಬಿ ಜಿ ಚಿಮ್ಮಲಗಿ

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ಕೆಲಸಗಳು, ಗ್ಯಾಲಿರ್‍ಯಾಕ, ಲೆಡ್ ಕಟರ, ಹಾಗೂ ಹೊಸ ಟ್ರೆಡಲ್ (ಹಾಂಡ್ಲರ) ಆಕಾರ ಪುಲ್ಸ್ ಕೇಪ ಫೊಲಿಯೊ

ಕನ್ನಡಿಗ ಮುದ್ರಾಲಯ ಧಾರವಾಡ

ಕನ್ನಡಿಗನ ಚಂದಾ ವಿವರ.

	ಸ್ಥಳಕರಿಗೆ	ಪರಸ್ಥಳದವ
ತಿಂಗಳಿಗೆ	೧-೬-೬	೦ ೧೩-೦
೩ ತಿಂಗಳಿಗೆ	೧-೪-೦	೨-೭ ೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫ ೦-೦	೯-೨-೦

ವ್ಯವಸ್ಥಾಪಕ

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು ೧೨—೯—೧೯೩೩

ಭತ್ತ ಮೊಸರು ಕಲಸಿದಂತೆ!

ಗಾಂಧೀಜಿಯವರು ಈಗ ನಂದ ಮತ್ತು ಪ್ರಾಗತಿಕ ಪಕ್ಷದ ಮುಂದಾಳುಗಳೊಡನೆ ದ ಮುಂದಿನ ಕಾರ್ಯಕ್ರಮದ ವಿಷಯವಾಗಿ ಮಾತಾಡತಕ್ಕವರಿರುವರಂತೆ! ವಿಹಿತ ಆದರೆ ೦ದ ಏನಾದರೂ ಉಪಯುಕ್ತವಾದ ಪರಿಣಾಮ ಯಾಗುವದೆಂದು ನಮಗಂತೂ ತೋರುವು ಏಕೆಂದರೆ ಇಬ್ಬರ ಮನೋರಚನೆಯೇ ಬೇರೆಯಾಗಿದೆ ಇಬ್ಬರ ರಾಜಕಾರಣದ ಪದ್ಧತಿ ಭಿನ್ನವಾಗಿದೆ ಎತ್ತು ಏರಿಗೆ ಎಳೆದರೆ ಕೋಣ ಕೆರೆಗೆ ಎಳೆಯುತಂತೆ ಮಂದ ಮುಂದಾ ರು ಸರಕಾರದವರೊಡನೆ ಸಹಕಾರ ಮಾಡಿ ಸರಕಾರದ ಜಾಲ ಒಡೆಯಲು ಹೇಳುವವರು ತ್ಮರು ಅಸಹಕಾರದ ಪುರಸ್ಕರ್ತರು ಆಂದ ಬಳಿಕ, ಇವರಿಬ್ಬರಲ್ಲಿ ಒಪ್ಪಂದವಾಗುವ ಬಗೆ ? ಗಾಂಧೀಜಿಯವರೇನೋ ಈಗ ಪುನಃ ಸೆರೆಮನೆಗೆ ಹೋಗುವದಕ್ಕಿಂತ ಸಂಧಾನ ಮಾಡು ಕ್ಕೆ ಹೆಚ್ಚಿಗೆ ಉತ್ಸುಕರಿರುವರಂತೆ ಆದರೆ ಅವರ ಸಂಧಾನದ ರೀತಿ ಬೇರೆ, ಮಂದಪಕ್ಷದ ಸಂಧಾನದ ರೀತಿ ಬೇರೆ ಆದ ಕಾರಣ ಅವರಿಬ್ಬರೂ ಒಂದುಗೂಡುವದು ಕಠಿಣ ಹಾಗೆ ಒ ಗೂಡಿಸುವುದು ಭತ್ತ ಮೊಸರು ಕಲಸಿದಂತೆ ಅವು ಎಂದಿಗೂ ಒಂದುಗೂಡಲಾರವು

ಗಾಂಧೀಜಿಯವರು ಕಾಂಗ್ರೆಸಿನ ಮುಂದಾಳುಗಳನ್ನು ಕಾಣುವುದರಲ್ಲಿ ಏನೋ ತಥ್ಯವಿದೆ ಮುದಾಯಿಕ ಕಾಯದೆಭಂಗವಂತೂ ಸದ್ಯಕ್ಕೆ ನಿಲ್ಲಿಸಲ್ಪಟ್ಟೇ ಇರುವುದು. ಇನ್ನುಳಿಯಿತು ವ್ಯಕ್ತಿ ಕಾಯದೆಭಂಗವು ಹಿಂದುಸ್ಥಾನಕ್ಕೆ 'ಕಾಯದೆಭಂಗವನ್ನವಲಂಬಿಸುವುದಕ್ಕೆ ಸಂಪೂರ್ಣ ಅಧಿಕಾ ಎಂಬ ತತ್ವದ ಸಂರಕ್ಷಣೆಗಾಗಿ ವ್ಯಕ್ತಿಗತ ಕಾಯದೆಭಂಗವನ್ನು ನಿಲ್ಲಿಸದೆ, ಅದಕ್ಕೆ ಪರವಾನಿ ನ್ನು ಕೊಟ್ಟದ್ದು ಸರಿಯೇ ಆಗಿತ್ತು. ಆದರೆ, ಈಗ ಆ ತತ್ವವನ್ನು ಸರಕಾರದವರೂ ಪರ್ಯಾ ಂದ ಒಪ್ಪಿರುವರು. ಕಾಯದೆಭಂಗವನ್ನು ಕೊನೆಯ ವರೆಗೆ ನಿಲ್ಲಿಸಿಯೇ ಬಿಡಬೇಕೆಂದೂ ಎಂದೆಂದಿಗೂ ಅವಲಂಬಿಸಲೇ ಕೂಡದೆಂದೂ ಅವರ ಅಂಬೋಣವೂ ಇಲ್ಲವಂತೆ! ಸದ್ಯಕ್ಕೆ ನಿಲ್ಲಿಸಿದರೆ ಸಾಕಂತೆ! ಆಯಿತು ಈ ರೀತಿಯಾಗಿ ತತ್ವದ ಪ್ರಶ್ನೆಯೂ ಸದ್ಯಕ್ಕೆ ಬಿಟ್ಟಿತು ಇನ್ನುಳಿಯಿತು, ಸಾಧ್ಯಾಸಾಧ್ಯದ ದೃಷ್ಟಿಯಿಂದಲೂ, ವಿಹಿತಾವಿಹಿತದ ದೃಷ್ಟಿಯಿಂ ವಿಚಾರ ಮಾಡಿ ರಾಷ್ಟ್ರೀಯ ಸಭೆಯ ಮುಂದಿನ ಕಾರ್ಯಕ್ರಮವನ್ನು ಹುಡುಕಿ ತೆಗೆಯು ಈ ಕಾರ್ಯಕ್ರಮವನ್ನು ನಿರ್ಣಯಿಸುವುದಕ್ಕೆ ಕಾಂಗ್ರೆಸ್ಸಿನ ಅಭಿಮಾನಿಗಳ ನೆರವು ಅವ ಕಾಂಗ್ರೆಸ್ಸಿನ ಅಭಿಮಾನಿಗಳಲ್ಲಿಯೂ ಅನೇಕ ಭೇದಗಳಿವೆ ಮಹಾರಾಷ್ಟ್ರ ಪಕ್ಷದವರು ಯಿಂದ ಕಾಂಗ್ರೆಸಿನ ಅಭಿಮಾನಿಗಳೆಂದು ಅಂದುಕೊಂಡರೂ ಅವರು ಮಂದ ಪಕ್ಷದವರ ಬೆರೆತು ಹೋಗಿರುವರೆನ್ನಲು ಅಡ್ಡಿ ಇಲ್ಲ ಅವರಿಗೆ ಶಾಸಕ ಮಂಡಳಗಳಲ್ಲಿ ಹೊಕ್ಕು ಮಾಡುವುದೊಂದೇ ಮುಖ್ಯವಾದ ಮಾರ್ಗವು ಕಾಣುತ್ತದೆ ಆ ಮಾರ್ಗದಲ್ಲಿ ಜನತೆಯ ಪೂರ್ಣವಾಗಿ ಹಾರಿಹೋಗಿದೆ ಜನತೆಗೆ ಪುನಃ ಆ ಮಾರ್ಗವನ್ನು ಅವಲಂಬಿಸಲು ಹೇಳಿ ಎಂದಿಗೂ ಕೇಳದು, ಹೊಸದಾಗಿ ದೊರಕುವ ರಾಜ್ಯಪದ್ಧತಿಯ ರಚನೆಯೇ ಹೀಗಿರು — ಹೇಗೆಂದರೆ ಅದರಲ್ಲಿ ನಿಜವಾದ ದೇಶಹಿತವನ್ನು ಮಾಡಲಿಚ್ಛಿಸುವವನಿಗೆ ಪ್ರವೇಶ ದೊರ ಕೂಡ ಕಠಿಣವಾಗುತ್ತದೆ ಆದ ಕಾರಣ, ಈ ಪಕ್ಷವೂ ಮಹಾತ್ಮರ ಅನುಯಾಯಿಗ ಬೆರೆಯಲಾರದು

ಅದನ್ನು ಬಿಟ್ಟುಕೊಟ್ಟರೆ ಮಹಾತ್ಮಾ ಗಾಂಧಿಯವರ ಮೇಲೆ ವಿಶ್ವಾಸವಿದ್ದವರಲ್ಲಿ ಎರಡು ಕಂಡು ಬರುತ್ತವೆ. ಒಂದಕ್ಕೆ ಅವರಲ್ಲಿ ಪೂಜ್ಯಭಾವವಿದೆ. ಆದರೆ ಅವರನ್ನು ಸರ್ವ ಯೂ ಅವಲಂಬಿಸಲು ಸಿದ್ಧವಿರುವುದಿಲ್ಲ! ಮತ್ತೊಂದಕ್ಕೆ ಹಾಗೆ ಪೂಜ್ಯಭಾವವಿದ್ದುದ ರಲ್ಲಿ ಸಂಪೂರ್ಣವಾದ ಗುರುಭಕ್ತಿಯೂ ಇದೆ ಅದು ಇಂದು ಮಹಾತ್ಮರು ಸಮುದ್ರದಲ್ಲಿ ಹೇಳಿದರೆ ಹಿಂದು ಮುಂದೆ ನೋಡದೆ ಹಾರಿಕೊಳ್ಳಲು ಸಿದ್ಧವಿರುತ್ತದೆ ಮಹಾತ್ಮರು ಖಾದಿಯೆಂದರೆ ಖಾದಿ, ಇಂದು ಅಸ್ಪೃಶ್ಯತಾ ನಿವಾರಣೆಯೆಂದರೆ ಅಸ್ಪೃಶ್ಯತಾ ನಿವಾರಣೆ ತ್ತೇನಾದರೂ ಹೇಳಿದರೆ ನಾಳೆ ಅದು, ಹೀಗೆ ಅವರು ಹೇಳಿದ್ದನ್ನು ಕಣ್ಣುಮುಚ್ಚಿಕೊಂಡು ಸಲು ಸಿದ್ಧವಿದೆ ಅರ್ಥಾತ, ರಾಷ್ಟ್ರದಲ್ಲಿ ಯಾವ ಪಕ್ಷದ ಕಡೆಗೆ ಬಹುಮತವಿರುತ್ತ ಅದು ರಾಷ್ಟ್ರದ ಧೋರಣವಾಗುತ್ತದೆ ಮಹಾತ್ಮರನ್ನು ಅಂಧವಾಗಿ ಹಿಂಬಾಲಿಸುವ ಬಹುಮತವು ಈಗ ಇದ್ದಂತೆ ನಮಗೆ ತೋರುವದಿಲ್ಲ ಇದರ ಅರಿವು ಅವರಿಗೂ ಇರಲಿಕ್ಕೆ ಆದ ಕಾರಣ, ಮಹಾತ್ಮರು ತಮ್ಮ ಸ್ವಂತ ಇಚ್ಛೆಯನ್ನು ಬದಿಗಿರಿಸಿ ಯಾವುದೊಂದು ನ್ನು ಹುಡುಕಿದರೇನೇ ಫಲದಾಯಕವಾಗುತ್ತದೆ ಇಲ್ಲದಿದ್ದರೆ ಎಲ್ಲವೂ ಭತ್ತ ಮೊಸರು ಯೇ ಆಗುವ ಸಂಭವವುಂಟು

ಲಾಲ ದೇಸಾಯಿಯವರ ಮೇಲೆ ದಾವೆ.

ಂಬಯಿ ಸರಕಾರದ ಹಿಂದಿನ ಶಿಕ್ಷಣ ಮಂ . ಬ ಹರಿಲಾಲ ದೇಸಾಯಿಯವರ ತಂದೆ ಶ್ರೀ ದೇಸಾಯಿಭಾಯಿ ಕಾಲಿದಾಸ ಅವರು ಹೇಡಾ ಎಂಬಲ್ಲಿ ಸೋಮನಾಥ ಅನ್ನಛತ್ರ ಸಿದರು ಈ ಸಂಸ್ಥೆಗೆ ಗಾಯಕವಾಡ ೧೦೦೦೦ ರುಪಾಯಿ ಸಹಾಯ ಮಾಡಿದ ದೆ ಇತರ ಜನರಿಂದಾದರೂ ಸಹಾಯವು ಸಂಸ್ಥೆಯು ಬಡ ವಿದ್ಯಾರ್ಥಿಗಳಿಗೂ ಬೈರಾ ಗಿಗಳಿಗೂ ಅನ್ನ ದಾನ ಮಾಡುತ್ತಿರುವರು. ಈಗ ರಿ ಬ ಹರಿಲಾಲ ದೇಸಾಯಿಯವರು ಸಂಸ್ಥೆಯ ಟ್ರಸ್ಟಿ ಇರುವರು ಆದರೆ ಅವರು ಸಂಸ್ಥೆಯ ವ್ಯವಸ್ಥೆಯನ್ನು ಚೆನ್ನಾಗಿ ಸಾಗಿಸುತ್ತಿರುವದಿಲ್ಲವೆಂದು ಶ್ರೀ ಅಂಬಾಲಾಲ ಜಯಶಂಕರ ಹಾಗು ಇನ್ನೊಬ್ಬ ಸದ್ಗೃಹಸ್ಥರು ನಡಿಯಾದ ಕೋರ್ಟಿನಲ್ಲಿ ಅವರ ಮೇಲೆ ದಾವೆ ಮಾಡಿರುವರು ಆರಾಧ ಟ್ರಸ್ಟಿಗಳು ಅರ್ಜಿ ಸಹಿತ, ದಾವೆಯನ್ನು ತೆಗೆದು ಹಾಕಬೇಕೆಂದು ಬೇಡಿಕೊಂಡಿದ್ದರು ಆದರೆ ಕೋರ್ಟಿನವರು ಅವರ ಅರ್ಜಿಯನ್ನು ಅಮಾನ್ಯ ಮಾಡಿದರು ವಿಚಾರಣೆಯು ತಾ. ೧೮ನೆ ದಿವಸ ನಡೆಯಲಿಕ್ಕಿದೆ.

ಪೋಲೀಸ ಕಾವಲಿನಲ್ಲಿ ಬ್ರಾಹ್ಮಣೇತರ ತರುಣ ಪರಿಷತ್ತು.

ಮುಂಬಯಿ ತಾ|| ೧೨— ಮುಂಬಯಿ ಇಲಾಖೆಯ ಬ್ರಾಹ್ಮಣೇತರ ತರುಣ ಪರಿಷತ್ತು ಈ ಹೊತ್ತಿನ ದಿವಸ ಶ್ರೀ ಬಿ ಆರ್ ಜಕ್ಕೋಡಿಯವರ ಅಧ್ಯಕ್ಷತೆಯಲ್ಲಿ ನಾಂಗವಾಯಿತು. ಆರ್ಥಿಕ ಸುಧಾರಣೆಗಳ ಬಗ್ಗೆ ವಿಚಾರ ಮಾಡಲು ಅಖಿಲ ಭಾರತ ಬ್ರಾಹ್ಮಣೇತರ ಪರಿಷತ್ತಿನವನ್ನು ಕರೆಯಲು ಒಂದು ಮಂಡಳವನ್ನು ನಿಯಮಿಸಬೇಕೆಂಬ ಠರಾವು ಪರಿಷತ್ತಿನಲ್ಲಿ ಸ್ವೀಕೃತವಾಯಿತು. ಏನೇ ಆದರೂ ಗೊಂದಲ ಹಾಕಿಯಾರೆಂಬ ಭೀತಿಯಿಂದ ಪರಿಷತ್ತಿನಲ್ಲಿ ಪೋಲೀಸರು ಬಂದು ಕುಳಿತುಕೊಂಡಿದ್ದರು ಆದರೆ ಪರಿಷತ್ತಿನ ಕಾರ್ಯಕಲಾಪವೆಲ್ಲ ಶಾಂತರೀತಿಯಿಂದ ಕೊನೆಗೊಂಡಿತು

(ಅಸ್ರ)

ಕೋಹಿನೂರ ರತ್ನದ ಕಥೆ.

ಮಿಸ್ ಮೇರಿ ಅಬಟ ಎಂಬ ವಿದುಷಿಯು ಜಗತ್ತಿನಲ್ಲಿಯ ಪ್ರಸಿದ್ಧ ರತ್ನಗಳು ಎಂಬ ವಿಷಯದ ಮೇಲೆ ಒಂದು ನಿಬಂಧವನ್ನು ಬರೆದಿರುವಳು ಅವಳು ತನ್ನ ಈ ನಿಬಂಧದಲ್ಲಿ "ಕೋಹಿನೂರ ರತ್ನ"ದ ವಿಷಯವಾಗಿ ಹೇಳುವದೇನೆಂದರೆ ಈ ರತ್ನವು ಒಳ್ಳೆ ಚಮತ್ಕಾರಿಕ ಗುಣವುಳ್ಳದ್ದಾಗಿದೆ ಬ್ರಿಟಿಶ ಬಾದಶಹರು ತಮ್ಮ ಕಿರೀಟದಲ್ಲಿ ಅದನ್ನು ಧಾರಣ ಮಾಡಿದ್ದರೆ ಹಿಂದುಸ್ಥಾನವು ಬ್ರಿಟಿಶ ಸಾಮ್ರಾಜ್ಯದ ಕೈ ಬಿಟ್ಟೇ ಹೋಗುತ್ತಿತ್ತೆಂಬ ಹಂಚಿಕೆಯಿದೆ.

ಈ ಕೋಹಿನೂರ ರತ್ನವು ೧೮೫೦ರಲ್ಲಿ ವ್ಹಿಕ್ಟೋರಿಯಾ ಮಹಾರಾಣಿಯವರ ಕೈಗೆ ಬಂತು ಅವರು ಅದನ್ನು ತಮ್ಮ ಕಂಕಣದಲ್ಲಿ ಧರಿಸಿಕೊಳ್ಳದೆ ಬೇರೆ ಕಡೆಯಲ್ಲಿ ಇಟ್ಟುಕೊಂಡರು. ನಂತರ ಅವರು ಅದನ್ನು ತಮ್ಮ ಜೀವಂತ ಕಾಲ ಎಡ್ವರ್ಡನಿಗೆ ಕೊಡದೆ, ತಮ್ಮ ಸೊಸೆಯಾದ ಅಲೆಗ್ಝಾಂಡ್ರಾ ಮಹಾರಾಣಿಯವರ ಕೈಯಲ್ಲಿ ಕೊಟ್ಟರು ಅದು ಈಗ ಮೇರಿ ಮಹಾರಾಣಿಯವರ ಸ್ವಾಧೀನದಲ್ಲಿ ಇದೆ

ಈ ರತ್ನವು ಮೊದಲು ಹಿಂದುಸ್ಥಾನದ ಗವ್ಹರ್ನರರಾಗಿದ್ದ ಸರ್ ಜಾನ್ ಲಾರೆನ್ಸ ಅವರ ಕೈಗೆ ಸಿಕ್ಕಿತು. ಅವರಿಗೆ ಅದರ ಬೆಲೆಯು ತಿಳಿಯದೆ ಹೋದದ್ದರಿಂದ ಅವರು ಅದನ್ನು ತಮ್ಮ ಅಂಗಿಯ ಕಿಸೆಯಲ್ಲಿ ಇಟ್ಟುಕೊಂಡರು, ಒಂದು ದಿವಸ ಅವರು ತಮ್ಮ ಅಂಗಿಯನ್ನು ಮುಚ್ಚನಿಗ್ಗಹದಲ್ಲಿ ಮರೆತು ಬಂದಿದ್ದರು ರತ್ನವನ್ನು ಇಂಗ್ಲಂಡಕ್ಕೆ ಕಳಿಸಿಕೊಡಬೇಕೆಂಬ ಮಾತು ಹೊರಟ ಕೂಡಲೆ ಅವರಿಗೆ ಚಿಲ್ಲದ ನೆನಪು ಆಗಿ, ಅವರು ಅದನ್ನು ಕೂಡಲೆ ವಿಲಾಯತಿಗೆ ಕೊಟ್ಟು ಕಳಿಸಿದರು.

ಪಂ. ಜವಾಹಿರರು ಪುಣೆಗೆ ಬಂದರು.

ಪುಣೆ ತಾ|| ೯— ಪಂಡಿತ ಜವಾಹಿರಲಾಲ ನೆಹರೂ ಇವರು ಆ ದಿವಸ ಪುಣೆಗೆ ಇಲ್ಲಿಗೆ ಬಂದರು ಮಹಾತ್ಮಾಗಾಂಧಿಯವರ ಭೆಟ್ಟಿ ತೆಗೆದುಕೊಂಡರು ಪಂಡಿತರು ಹಾಗು ಮಹಾತ್ಮಾಗಾಂಧಿಯವರಿಗೆ ಈಗ ಎರಡು ವರ್ಷಗಳ ಮೇಲಾಯಿತು, ಭೆಟ್ಟಿಯಾಗಿದ್ದಿಲ್ಲ. ಪಂಡಿತ ಜವಾಹಿರರು ಸಂಜೆಯ ೫ ೩೦ಕ್ಕೆ ಮದ್ರಾಸ ಎಕ್ಸಪ್ರೆಸದಿಂದ ಇಲ್ಲಿಗೆ ಬಂದರು ಸ್ಟೇಶನದಲ್ಲಿ ಡಾ. ದೇಶಪಾಂಡೆ, ಶ್ರೀ ಸೋಂಡೆ ಹಾಗು ಮುಂತಾದ ನಾಯಕರು ಅವರ ಸ್ವಾಗತಕ್ಕೋಸುಗ ಸ್ಟೇಶನಕ್ಕೆ ಹೋಗಿದ್ದರು. ಪಂಡಿತರು ಗಾಡಿಯಿಂದ ಇಳಿಯುತ್ತಲೇ ಅವರಿಗೆ ಹೂವಿನಹಾರಗಳನ್ನು ಹಾಕಲಾಯಿತು ನಂತರ ಅವರು ಮೋಟರದಲ್ಲಿ ಪರ್ಣಕುಟಿಗೆ ಸಾಗಿದರು. ಸ್ಟೇಶನದಲ್ಲಿ ನೆರೆದ ಜನರು ಜಯಜಯಕಾರ ಮಾಡಿ ಅವರನ್ನು ಬೀಳ್ಕೊಟ್ಟರು

ಪಂಡಿತ ಜವಾಹಿರರು ಪುಣೆಯಲ್ಲಿ ಇರುವಷ್ಟು ದಿವಸ ಪರ್ಣಕುಟಿಯಲ್ಲಿ ಮಹಾತ್ಮಾಗಾಂಧಿಯವರ ಜೊತೆಯಲ್ಲಿಯೇ ಇಳಿದುಕೊಳ್ಳುವರು. (ಅಸ್ರ

ಸುದ್ದಿಗಾರರಿಗೆ ಸಲಹೆ

(೧) ನಮ್ಮ ಪತ್ರದ ಆಕಾರವು ಇನ್ನೂ ಚಿಕ್ಕದಿರುವದರಿಂದ ಸುದ್ದಿಗಳನ್ನು ಅತ್ಯಂತ ಸಂಕ್ಷೇಪವಾಗಿ ಬರೆಯಬೇಕು

(೨) ಸಾರ್ವಜನಿಕ ಹಿತದ ಮತ್ತು ಮಹತ್ವದ ಸುದ್ದಿಗಳನ್ನಷ್ಟೇ ಕಳಿಸಬೇಕು,

(೩) ವಿಶ್ವಸನೀಯವಾದ ಸುದ್ದಿಗಳನ್ನು ಮಾತ್ರವೇ ಕಳಿಸಬೇಕು

(೪) ನಿಷ್ಕಾರಣವಾಗಿ ಅನ್ಯರ ಮನವನ್ನು ನೋಯಿಸುವ ಸುದ್ದಿಗಳನ್ನು ಕೊಡಬಾರದು

(೫) ಮುನಸಿಪಾಲಟಿ, ಲೋಕಲಬೋರ್ಡ, ಕೋಆಪರೇಟಿವ್ಹ ಸೊಸಾಯಿಟಿ ಮುಂತಾದ ಸಾರ್ವಜನಿಕ ಸಂಸ್ಥೆಗಳ ಸಂಬಂಧವಾಗಿ ಸುದ್ದಿಗಳನ್ನು ಅವಶ್ಯ ಕೊಡಬಹುದು, ಆದರೆ ಅವು ಪಕ್ಷಾಭಿಮಾನರಹಿತವಾಗಿರಬೇಕು.

(೬) ಪತ್ರದ ಮಜಕೂರವನ್ನು ಸಂಕ್ಷಿಪ್ತವಾಗಿ ಮಾಡುವ ವಿಶಯಾರ್ಸವಾಗದಂತೆ ಬದಲು ಮಾಡುವ ಅಧಿಕಾರವನ್ನು ನಾವು ಇಟ್ಟುಕೊಂಡಿರುವೆವು

ಸಂಪಾದಕ

ಮದ್ರಾಸ ಕಾಂಗ್ರೆಸ ಭವನವು ತಿರುಗಿ ಸಿಕ್ಕಿತು.

ಮದ್ರಾಸ ತಾ|| ೯— ತಮಿಳುನಾಡ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರಾದ ಶ್ರೀ ಎಸ್. ಸತ್ಯಮೂರ್ತಿಯವರು ಈ ಹೊತ್ತಿನ ದಿವಸ ಕಾಂಗ್ರೆಸ್ ಭವನವನ್ನು ಸರಕಾರದವರಿಂದ ತಮ್ಮ ವಶಕ್ಕೆ ತೆಗೆದುಕೊಂಡರು.

ಸರಕಾರದವರು ಅದೇ ಭವನವನ್ನು ಅನ್ವಯಾ ತಾ|| ೧೪ ನೆ ಜೇನೆವಾರಿ ೧೯೩೨ ನೆ ದಿವಸ ತಮ್ಮ ವಶಕ್ಕೆ ತೆಗೆದುಕೊಂಡಿದ್ದರು

ಹುಬ್ಬಳ್ಳಿಯ ಪತ್ರ.

ಹುಬ್ಬಳ್ಳಿ ತಾ। ೧೦

ಡಾ ಕಬ್ಬೂರರ ಪ್ರಯಾಣ – ಡಾ. ಎಶ್ ಬಿ ಕಬ್ಬೂರ ಇವರು ಈ ಹೊತ್ತಿನ ಮುಂಜಾನೆಯ ಗಾಡಿಯಿಂದ ಹವೆಯಿಳಿಸುವದಕ್ಕೆಂದು ವಿಜಾಪುರಕ್ಕೆ ಪ್ರಯಾಣ ಮಾಡಿದರು ಪ್ಲಾಟಫಾರ್ಮದ ಮೇಲೆ ಓರ್ವ ಪೋಲೀಸನು ಅವರಿಗೆ ಹೆಸರನ್ನು ಕೇಳಿದನು. ಕೂಡಲೆ ಇಬ್ಬರಲ್ಲಿಯೂ ಸ್ವಲ್ಪ ವಾದವಿವಾದವಾಯಿತು. ಡಾಕ್ಟರರು ತಿರುಗಿ ಅವನಿಗೂ ಅವನ ಹೆಸರನ್ನು ಕೇಳಿದರು ಹೀಗೆ ಕೆಲ ಹೊತ್ತು ವಾದವಿವಾದವಾದ ಮೇಲೆ ಪರಸ್ಪರರು ತಮ್ಮ ತಮ್ಮ ಹೆಸರು ಕೇಳಿದರು ಡಾಕ್ಟರರು ಈ ವಿಷಯವಾಗಿ ಕಲೆಕ್ಟರರಿಗೆ ಬೇರೆ ನೆ ಪತ್ರ ಬರೆಯುವವರಿದ್ದಾರೆ

ಡಾಕ್ಟರರು ವಿಜಾಪುರದಲ್ಲಿ ವಿಜಯನಗರ ಸ್ಮಾರಕೋತ್ಸವ ಮಂಡಳವನ್ನು ಏರ್ಪಡಿಸಲು ಪ್ರಯತ್ನ ಮಾಡುವರು

ಪುಣೆಯ ಶ್ರೀ ಎಸ್. ಡಿ. ಗೋಖಲೆಯವರು ನ್ಯೂ ಇಂಗ್ಲೀಷ ಸ್ಕೂಲದಲ್ಲಿ "ಸಾಮ್ರಾಜ್ಯ ಸ್ಥಾಪನೆಯೂ ಮತ್ತು ಅವುಗಳ ಅಳಿಗಾಲವೂ" ಎಂಬ ವಿಷಯವಾಗಿ ಸುಶ್ರಾವ್ಯವಾದ ಉಪನ್ಯಾಸ ಕೊಟ್ಟರು. ಅವರು ತಮ್ಮ ಭಾಷಣದಲ್ಲಿ ಒಬ್ಬರ ಕೈಯಲ್ಲಿಯೇ ರಾಜ್ಯ ಸೂತ್ರವು ಇರುವದಕ್ಕಿಂತ ಪ್ರಜಾ ಸತ್ತಾತ್ಮಕ ರಾಜ್ಯ ಪದ್ಧತಿಯೇ ಮೇಲಾದುದೆಂದು ಹೇಳಿದರು

ನಾಡಹಬ್ಬ ಮಂಡಳದವರು ತಮ್ಮ ಕಾರ್ಯವನ್ನು ಭರದಿಂದ ಸಾಗಿಸಿದ್ದಾರೆ

ಲಲಿತಕಲಾದರ್ಶ ನಾಟಕ ಮಂಡಳಿಯವರು ಸುಮಾರು ೧ ತಿಂಗಳಿಂದ ಇಲ್ಲಿ ತಮ್ಮ ನಾಟಕಗಳನ್ನು ಪ್ರಯೋಗಿಸುತ್ತಿರುವರಷ್ಟೇ; ಆದರೆ ನಾಟಕ ನೋಡಲು ಬಂದವರಲ್ಲಿ ಬಹುತೇಕ ಜನರು ಧಾರವಾಡದವರೇ ಇರುತ್ತಾರೆ ಅವರ ಉತ್ಸಾಹವನ್ನು ಎಷ್ಟು ಕೊಂಡಾಡಿದರೂ ತೀರದು!

ದಿ ಧಾರವಾಡ ತಾಲೂಕ ಟೀಚರ್ಸ ಕೋ. ಕ್ರೆಡಿಟ್ ಸೊಸಾಯಿಟಿ

ಮೇಲಿನ ಸೊಸಾಯಿಟಿಯ ... ಸಾಧಾರಣ ಸಭೆಯು ... ನೇ ದಿವಸ ಮಧ್ಯಾಹ್ನದ ೪ ಗಂಟೆಗೆ ಪ್ರಿನ್ಸಿಪಾಲ ಕೆ ಎಸ್ ಜೋಶಿ, ವ್ಹಿಕ್ಟೋರಿಯಾ ಹಾಯಸ್ಕೂಲ ಇವರ ಅಧ್ಯಕ್ಷತೆಯ ಕೆಳಗ ವ್ಹಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಕೂಡಿತ್ತು ಸೊಸಾಯಿಟಿಯಲ್ಲಿ ಬಹು ದಿವಸಗಳಿಂದ ನಡದ ತಂಟೆಯನು ಶ್ರೀ ದೇಶಪಾಂಡೆ ... ಅಡಿಟರ ಇವರು ಒಗೆಹರಿಸಿ ... ಸಭೆಯಲ್ಲಿ ಸೊಸಾಯಿಟಿಯನ್ನು ವಿಭಾಗಿಸಿ ಲೆಕ್ಕ ಪತ್ರಗಳನ್ನು ಪ್ರಸಿದ್ಧ ಮಾಡಿದರು ಜನರಲ ಕಮಿಟಿಯವರು ಹಿಂದಿನ ಮ್ಯಾನೇಜಿಂಗ ಕಮಿಟಿಯನ್ನು ರದ್ದು ಪಡಿಸಿ ತಾತ್ಪೂರ್ತಿಕ ಕಮಿಟಿಯನ್ನು ನೇಮಿಸಿದ ... ಇವರ ಹೊಸಾಗಿ ಎಷ್ಟೋ ಮಹತ್ವದ ಠರಾವುಗಳನ್ನು ಪಾಸು ಮಾಡಿದರು.

೧೯-೯ ೪೩ ಓವರ ಸಾಂಬರ

ದಿವಾಣರ ರಾಜೀನಾಮೆ

ಭೋರ ತಾ॥ ೯— ಭೋರ ಸಂಸ್ಥಾನದ ದಿವಾಣರಾದ ರಾ ... ಇವರು ೧ನೆ ಸಪ್ಟೆಂಬರದಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ ಅವರು ಭೋರ ಸಂಸ್ಥಾನದ ಕಾಯದೆ ಮಂಡಳದಲ್ಲಿ ಅಧ್ಯಕ್ಷ ಕಾರ್ಯವನ್ನು ನಿರ್ವಹಿಸಿ, ಸಭೆಯು ಮುಗಿದ ಕೂಡಲೆ ... ಗಳ ರಜೆ ತೆಗೆದುಕೊಂಡು ಹೋಗಿದ್ದಾರೆ ಸರಕಾರದವರು ಕಾದಿಟ್ಟ ಅಡವಿಯಲ್ಲಿ ಗಿಡಗಳನ್ನು ಕಡಿದು ಅಡವಿ ಸತ್ಯಾಗ್ರಹ ಮಾಡಿದ ೭೦೦ ಜನ ಅಪರಾಧಿಗಳನ್ನು ಕ್ಷಮಿಸಬೇಕು ಎಂದು ಕಾಯದೆ ಮಂಡಳದಲ್ಲಿ ಠರಾವು ಪಾಸಾಗಿತ್ತು ಮತ್ತು ಇದಕ್ಕೆ ಕೆಲವು ಸರಕಾರ ನಿಯುಕ್ತ ಸಭಾಸದರಾದರೂ ಬೆಂಬಲ ಕೊಟ್ಟಿದ್ದರು ಈ ಸಂಗತಿಯು ದಿವಾಣರಿಗೆ ಸರಿ ತೋರದ್ದರಿಂದಲೇ ಅವರು ರಾಜೀನಾಮೆ ಕೊಟ್ಟಿರಬಹುದೆಂದು ಅನುಮಾನ ಮಾಡಬಹುದಾಗಿದೆ

ಫ್ರೀ ಪ್ರೆಸ್ ಪತ್ರದ ಡಿಕ್ಲರೇಶನ್

ಮುಂಬಯಿ ತಾ॥ ೯— ಫ್ರೀಪ್ರೆಸ್ ಪತ್ರಿಕೆಯ ಮುದ್ರಕ ಮತ್ತು ಪ್ರಕಾಶಕರಾದ ಶ್ರೀ ... ಯವರು, ಹೊಣೆಯ ಹಣವು ಜಪ್ತವಾದದ್ದರಿಂದ ಪುನಃ ಡಿಕ್ಲರೇಶನ ಮಾಡಲಿಕ್ಕೆ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಹೋಗಿದ್ದರು. ಮುದ್ರಕರ ನಾತೆಯಿಂದ ೫೦೦೦ ರುಪಾಯಿ ಹೊಣೆಯನ್ನು ತುಂಬಿ, ಮೊದಲಿನ ... ೧೦೦೦ ರುಪಾಯಿ ಇಡಬೇಕೆಂದು ಮ್ಯಾಜಿಸ್ಟ್ರೇಟರು ಅಪ್ಪಣೆ ವಿಧಿಸಿದರು ಆದರೆ ಪ್ರಕಾಶಕರ ನಾತೆಯಿಂದ ಡಿಕ್ಲರೇಶನ್ ಮಾಡಲು ... ಈ ಪ್ರಶ್ನೆಯ ಬಗ್ಗೆ ಸರಕಾರದವರನ್ನು ಕೇಳಿ ಅವರ ಅನುಮತಿಯನ್ನು ತೆಗೆದುಕೊಂಡು ಬರಬೇಕು ಎಂದು ಮ್ಯಾಜಿಸ್ಟ್ರೇಟರು ಅವರಿಗೆ ಹೇಳಿದರು

ನಾರಾಯಣದಾಸ ಗಾಂಧಿಯವರ ಬಿಡುಗಡೆ.

ಅಹಮ್ಮದಾಬಾದ ತಾ॥ ೯— ಸಾಬರಮತಿ ಆಶ್ರಮದ ಚಾಲಕರಾದ ಶ್ರೀ ನಾರಾಯಣದಾಸ ಗಾಂಧಿಯವರು ಈ ಹೊತ್ತಿನ ದಿವಸ ಬಿಡುಗಡೆ ಹೊಂದಿದರು. ಕೂಡಲೆ ಅಧಿಕಾರಿಗಳು ಅವರ ಮೇಲೆ ೧ ತಾಸಿನಲ್ಲಿ ಸುರಂಗದ ಹದ್ದನ್ನು ಬಿಡಬೇಕು ಹಾಗು ಆಶ್ರಮದ ಹತ್ತರ ಇರಬೇಕು ಎಂಬ ನೋಟೀಸನ್ನು ಪ್ರಯೋಗಿಸಿದರು, ಅವರು ಈಗ ಆಶ್ರಮದ ... ಯಲ್ಲಿ ಒಂದು ಬಂಗಲೆಯಲ್ಲಿ ಇರುತ್ತಿರುವರು.

ಪರದೇಶ

ಆಗಸ್ಟ ತಿಂಗಳ ಕೊನೆಯಲ್ಲಿ ಜರ್ಮನಿಯಲ್ಲಿ ... ಸಂಖ್ಯೆಯು ... ೩೦೦೦೦ ಇತ್ತು ಈ ಸಂಖ್ಯೆಯು ಆಗಸ್ಟ ತಿಂಗಳ ಮಧ್ಯದಲ್ಲಿ ... ಇತ್ತು

ಸಿಲೋನ ಸರಕಾರದವರು ತಮ್ಮಲ್ಲಿಯ ... ಸಹಾಯಸಾಧನವಾಗಿ ದಕ್ಷಿಣ ಹಿಂದುಸ್ಥಾನ ... ಬರುವ ತತ್ತಿಗಳ ... ಬಗ್ಗೆ ... ಕೈಕೊಳ್ಳತಕ್ಕವರಿದ್ದಾರೆ

... ಮಂತ್ರಿಮಂಡಳದ ... ಎಬ್ಬಿಸಿದ್ದರಿಂದ ಮಂತ್ರಿ ಮಂಡಳದವರು ರಾಜೀನಾಮೆ ಕೊಟ್ಟಿದ್ದಾರೆ

ಹಿಂದುಸ್ಥಾನ

ಮುಂಬಯಿ ತಾ ... ಹಿಂದುಸ್ಥಾನ ಸರಕಾರದ ಶಿಕ್ಷಣತಂತ್ರಳದವರಿಗೆ ಸಲಹೆ ಕೊಡಲು ತಮ್ಮ ... ಮಂಡಳದ ಪರಿಯಿಂದ ಯಾವರ ಪ್ರತಿನಿಧಿಗಳನ್ನು ಯಾರನ್ನು ಆರಿಸಿ ಕಳಿಸಬೇಕೆಂದು ... ಮಂಡಳದವ ... ಹಿಂದಿ ವ್ಯಾಪಾರಿ ... ಪರಿಗೆ ಕೇಳಿದ್ದರು ಅವರು ಇಂದಿನ ದಿವಸ ವಿಶಿಷ್ಟ ಸಭೆಯಲ್ಲಿ ... ಶ್ರೀ ಮನ ... ಭೇದಾರ, ಎಸ್ ಡಿ ಸಕ್ಲಾತವಾಲಾ ಮತ್ತು ಶ್ರೀ ಜಿ ಡಿ ಬಿರ್ಲಾ ಇವರ ಹೆಸರನ್ನು ಸರ್ವಾನುಮತದಿಂದ ಸೂಚಿಸಿದರು

ಈಸ್ಟ ಇಂಡಿಯಾ ಕಟನ್ ಅಸೋಸಿಯೇಶನದವರು ಈ ... ಪರಿಷತ್ತಿಗೆ ತಮ್ಮ ಪರಿಯಿಂದ ಸರ್ ಪುರುಷೋತ್ತಮದಾಸ ಠಾಕೂರದಾಸರನ್ನು ಪ್ರತಿನಿಧಿಗಳನ್ನಾಗಿ ಆರಿಸಿದ್ದಾರೆ

ಕರ್ನಾಟಕ

ಆಮೇರಿಕಾ ಮತ್ತು ಯುರೋಪ ಖಂಡಕ್ಕೆ ಪ್ರವಾಸಕ್ಕೆ ಹೋಗಿದ್ದ ಮೈಸೂರು ಯುವರಾಜರು ತಾ॥ ೭ನೆ ದಿವಸ ರಾಜಧಾನಿಗೆ ತಿರುಗಿ ಬಂದರು ಈ ಪ್ರವಾಸದಲ್ಲಿ ಅವರ ಜೊತೆಗೆ ... ಕೋ ಆಪರೇಟಿವ್ಹ ಸೊಸಾಯಿಟಿಗಳ ರಜಿಸ್ಟ್ರಾರರಾದ ಶ್ರೀ ಕೆ ಎಚ ರಾಮಯ್ಯ ಬಿ ಎ ಬಾರ್ ಅ್ಯಟಲಾ ಇವರಾದರೂ ಅಂದೇ ತಿರುಗಿ ಬಂದರು

'ತಾಯಿನಾಡು' ಪತ್ರಿಕೆಯ ೭ನೆ ವಾರ್ಷಿಕೋತ್ಸವವು ತಾ॥ ೧ನೆಯ ದಿವಸ ಶಿವಾನಂದ ನಾಟಕ ಗೃಹದಲ್ಲಿ ಸಾಂಗವಾಯಿತು. ಈ ಕಾಲಕ್ಕೆ ಸರ ಕೆ ಪಿ ಪುಟ್ಟಣಶೆಟ್ಟಿ, ಸರ್ ಎಂ ವಿಶ್ವೇಶ್ವರಯ್ಯನವರ ಭಾವಚಿತ್ರದ ಅನಾವರಣ ಮಾಡಿದರು ಇದಲ್ಲದೆ ಸಂಗೀತ ಕಚೇರಿಯಾದರೂ ನಡೆಯಿತು

ಆಲ ಇಂಡಿಯಾ ಓಪನ್ ಟೇನಿಸ್ ಟೂರ್ನಾಮೆಂಟ ಈ ತಿಂಗಳ ೩೦ನೇ ತಾರೀಖಿನಿಂದ ಬೆಂಗಳೂರ ಕ್ಯಾಂಟೋನಮೆಂಟ ಬೌರಿಂಗ ಇನ್ಸ್ಟಿಟ್ಯೂಟಿನ ಆಶ್ರಯದಲ್ಲಿ ಪ್ರಾರಂಭವಾಗುವದು ಈ ಬಗ್ಗೆ ಈಗಾಗಲೇ ವ್ಯವಸ್ಥೆ ನಡೆದಿದೆ

ಜಪಾನಿ ಧರ್ಮಗುರುಗಳು ಮಹಾತ್ಮರ ಭೆಟ್ಟಿಗೆ

ಪುಣೆ ತಾ॥ ೧೦— ಜಪಾನದ ಧರ್ಮಗುರುಗಳಾದ ... ಇವರು ಮಹಾತ್ಮರ ಭೆಟ್ಟಿಗಾಗಿ ಇಲ್ಲಿಗೆ ಬಂದಿದ್ದು ಭಾರತೀಯ ಹರಿಜನ ಸೇವಾಶ್ರಮ ಸಂಸ್ಥೆಯಲ್ಲಿ ಶ್ರೀ ರಾಜಭೋಜ ಇವರಲ್ಲಿ ಇಳಿದುಕೊಂಡಿದ್ದಾರೆ. ನಾಳೆ ೧೧ನೆ ತಾರೀಖಿನ ದಿವಸ ಪರ್ಣಕುಟಿಗೆ ಮಹಾತ್ಮರ ಭೆಟ್ಟಿಗೆ ಹೋಗತಕ್ಕವರಿದ್ದಾರೆ

ಡಾ. ಜಯಕರರ ಮಧ್ಯಸ್ಥಿಕೆ

ಲಂಡನ್ ತಾ॥ ೯ – ಅಲವಾರ ಮಹಾರಾಜರ ವಿಷಯವನ್ನು ಭಾರತ ಮಂತ್ರಿಗಳ ಮುಂದೆ ಇಡುವ ಕಾರ್ಯವನ್ನು ಡಾ. ಜಯಕರರು ತಮ್ಮ ಮೇಲೆ ತೆಗೆದುಕೊಂಡಿರುವರೆಂದು ತಿಳಿಯುತ್ತದೆ

ಡಿ ವ್ಹೆಲೆರಾ ಇವರ ವಿರುದ್ಧ ಜಾಹೀರನಾಮೆ

ಡಬ್ಲಿನ್ ತಾ॥ ೯—ಜನರಲ್ ಓಡಫಿಯುವರ ಅಧ್ಯಕ್ಷತೆಯ ಕೆಳಗೆ ಸ್ಥಾಪಿತವಾದ ಸಂಯುಕ್ತ ಐರ್ಲಂಡ ಪಕ್ಷದ ಜಾಹೀರನಾಮೆಯು ಹೊರಟಿದೆ, ಅದರಲ್ಲಿ ಕೆಳಗಿನ ವಿಷಯಗಳು ನಮೂದಿತವಾಗಿವೆ

(೧ ಈ ಪಕ್ಷಕ್ಕೆ ಸ್ವಯಂನಿರ್ಣಯ ತತ್ವವು ಮಾನ್ಯವಿದೆ (೨) ಸದ್ಯದ ರಾಜ್ಯಘಟನೆಯನ್ನು ಸ್ಥಿರಪಡಿಸಬೇಕು (೩) ಸದ್ಯದ ಸರಕಾರದ ಧೋರಣವು ದ್ವಿವಿಧವಿದ್ದು, ಅದು ಜಾಹೀರ ಮಾಡಿದ ಧೋರಣಕ್ಕೆ ವಿಸಂಗತವಿದೆ ... ಅಧಿಕಾರರೂಢ ಪಕ್ಷದ ... ಧೋರಣ ... (೪) ಬೇಕುಬೇಕಾದ ಆಶ್ವಾಸನಗಳನ್ನು ಕೊಟ್ಟು ಅವುಗಳನ್ನು ಪಾಲಿಸದೆ ಇದ್ದುದರಿಂದ ಸರಕಾರವು ಅಪ್ರಿಯವಾಗಿ ಹೋಗಿದೆ ಆದ್ದರಿಂದ ರಾಷ್ಟ್ರಕಾರ್ಯವನ್ನು ಸಾಗಿಸಲಿಕ್ಕೆ ಈ ಪಕ್ಷವು ಅವಶ್ಯವಾಗಿದೆ (೫) ರಾಷ್ಟ್ರದ ವಿಶಿಷ್ಟ ಸಂಸ್ಕೃತಿ ಮತ್ತು ಪ್ರಸ್ಥಾಪಿತ ಅಧಿಕಾರ ಸಮ್ಮತ ಇವುಗಳನ್ನು ಸ್ಥಿರಪಡಿಸಿ, ಅವಶ್ಯವಾದ ಸುಧಾರಣೆಗಳನ್ನು ಮಾಡುವದೇ ಈ ಹೊಸ ಪಕ್ಷದ ಉದ್ದೇಶವಿರುತ್ತದ

ಟಾಟಾ ಉಕ್ಕಿನ ಸಂರಕ್ಷಣೆ

ಸಿಮಲಾ ತಾ॥ ೯—ಟ್ಯಾರಿಫ್ ಬೋರ್ಡ ನ ಹೊಸ ಅಧ್ಯಕ್ಷರಾದ ಶ್ರೀ ಜಿ ಮ ನಟೇಶನ್ ಇವರು ಕೌನ್ಸಿಲ್ ಆಫ್ ಸ್ಟೇಟದಲ್ಲಿಯ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿರು ಮುಂದಿನ ವಾರ ... ಕಲಕತ್ತೆಗೆ ಹೋಗುವವರಿದ್ದಾರೆ ಈ ... ಅವರು ... ಭೆಟ್ಟಿ ತೆಗೆದುಕೊಂಡು ಟಾಟಾ ... ಉಕ್ಕಿನ ಕಂಪನಿಗೆ ಸಂರಕ್ಷಣೆಯನ್ನು ಕೊಡಬೇಕೋ ಇಲ್ಲವೋ ಎಂಬ ಬಗ್ಗೆ ಟ್ಯಾರಿಫ ಬೋರ್ಡದವರು ತಾ॥ ೧೬ ನೇ ಸಪ್ಟಂಬರದಿಂದ ವಿಚಾರ ನಡಿಸುವವರಿದ್ದಾರೆ

ವಿಜಯನಗರೋತ್ಸವಕ್ಕೆ ಸಹಾಯ

ಹುಬ್ಬಳ್ಳಿ ತಾ॥ ೧೧—

ಶ್ರೀ ... ನಾಡಿಗೇರವರು ವಿಜಯನಗರದ ಉತ್ಸವಕ್ಕೆ ೨೫೦ ರುಪಾಯಿಗಳನ್ನು ಕೆಳಗಿನಿಂದ ಕೊಡುವದಾಗಿ ವಚನಕೊಟ್ಟಿರುವರು

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲಿಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ, ಕನ್ನಡಿಗನ ಕಾರ್ಯಾಲಯ ಧಾರವಾಡಲ್ಲಿ ಪ್ರಸಿದ್ಧಿಸಿದರು

ಡಾ. ಕುಲಕರ್ಣೀಜ
ಲೆಬೊರೋಟರಿ ಮುಂಬಯಿ ನಂಬರ ೧
ಬಾಟ್ಲಿ ಕಿಮ್ಮತ್ತು ೧—೨—
ಕೆಮಿಸ್ಟರಲ್ಲಿಯೂ ದೊರೆಯು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಕರಗು, ಬಿಳೇಸೆರಗು, ಕೆಂಪುಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋದು ನಡನೋವು, ಅಶಕ್ತತಾ ವಗ್ಯರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ ಬಾಣಂತಿತನದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದ

ಬಿ ಟಿ ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಮಂಗಳವಾರ ತಾ॥ ೧೨-೯-೩೩ ನೇ ದಿವಸ ರಾತ್ರಿ

ಸಂಪೂರ್ಣ ರಾಮಾಯಣ.

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು

ಸಂಘದೊಡೆಯರು,
ಗರೂಡ ಸದಾಶಿವರಾಯರು

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ ೨೫ ೮ ೩೩

ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ.

ರ. ಸಂ. ಬಿ. ೨೭೮೮   यद्यत् परवशं दुःखं । यद्यदात्मवशं सुखम् ॥ मनु.   ನಿತ್ಯ ಪತ್ರ. ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦]   ಧಾರವಾಡ— ಬುಧವಾರ ಭಾದ್ರಪದ ಬಹುಳ ೯ ಶಕೆ ೧೮೫೫ ತಾ॥ ೧೩-೯-೩೩   [ಸಂಚಿಕೆ ೧೨೧

ಇನಸ್ಯುಅರನ್ಸ
ಜೀವವಿಮೆ ಇಳಿಸಲು,
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಪರ್ಣಕುಟಿಯಲ್ಲಿಯ ಮಹತ್ವದ ಸಂಭಾಷಣ

ಪುಣೆ ತಾ॥ ೧೧— ಈ ಹೊತ್ತಿನ ದಿವಸ ಮಧ್ಯಾಹ್ನದಲ್ಲಿ ಪರ್ಣಕುಟಿಯಲ್ಲಿ ಪಂಡಿತ ಜವಾಹಿರಲಾಲ ನೆಹರೂ, ಮಹಾತ್ಮಾಗಾಂಧಿ, ಮತ್ತು ಸೌ. ಸರೋಜಿನಿದೇವಿ ನಾಯುಡು ಇವರಲ್ಲಿ ಮಹತ್ವದ ವಿಷಯಗಳ ಸಂಬಂಧವಾಗಿ ಚರ್ಚೆ ನಡೆಯಿತು. ಪ್ರೊಫೆಸರ ಕೃಪಲಾನಿಯವರಾದರೂ ಕೆಲಹೊತ್ತು ಈ ಚರ್ಚೆಯ ಕಾಲಕ್ಕೆ ಪ್ರತ್ಯಕ್ಷ ಇದ್ದರು. ಚರ್ಚೆಯಲ್ಲಿ ಏನು ನಡೆಯಿತೆಂಬುದನ್ನು ಹೇಳಲಿಕ್ಕೆ ಬರುವಂತಿರದಿದ್ದರೂ ಹೆಚ್ಚಿನ ಪ್ರಗತಿಯೇನೂ ಆಗಿಲ್ಲವೆಂದು ಗೊತ್ತಾಗುತ್ತದೆ. ಚರ್ಚೆಯು ಕಲ್ಪನೆ ಮಾಡಿದ್ದರಕಿಂತ ಹೆಚ್ಚು ಕಾಲದ ವರೆಗೆ ಸಾಗುವದೆಂದೂ, ಪಂಡಿತ ಜವಾಹಿರಲಾಲರು ಬುಧವಾರ ದಿವಸ ಸಂಜೆಗೆ ಇಲ್ಲವೆ ಗುರುವಾರ ದಿವಸ ಪುಣೆಯಿಂದ ಹೊರಡಬಹುದೆಂದು ತೋರುತ್ತದೆ

ಪುಣೆ ತಾ॥ ೧೨— ಪಂಡಿತ ಜವಾಹಿರಲಾಲ ನೆಹರು, ಮಹಾತ್ಮಾಗಾಂಧಿ, ಸೌ ಸರೋಜಿನಿ ದೇವಿ ನಾಯುಡು ಮತ್ತು ಪ್ರೊ ಕೃಪಲಾನಿ ಇವರಲ್ಲಿ ಈ ಹೊತ್ತಿನ ದಿವಸವ ದರೂ ಸಂಭಾಷಣವು ಮುಂದೆ ಸಾಗಿತು ಸಂಭಾಷಣವು ೧—೧೦ ಗಂಟೆಯ ವರೆಗೆ ನಡೆಯಿತು ಆ ಮೇಲೆ ಎಲ್ಲರೂ ಚದುರಿದರು ಅವರಲ್ಲಿ ಪುನಃ ಮಧ್ಯಾಹ್ನದಲ್ಲಿ ಚರ್ಚೆ ನಡೆಯತಕ್ಕದ್ದಿದೆ ಸಂಭಾಷಣದಲ್ಲಿ ಏನು ನಡೆಯಿತೆಂಬುದು ಗುಪ್ತವಾಗಿ ಇಡಲ್ಪಟ್ಟಿದೆ ಮತ್ತು ಸಂಭಾಷಣವು ಯಾವಾಗ ಮುಗಿಯಬಹುದೆಂಬುದು ಗೊತ್ತಾಗುವದಿಲ್ಲ (ಅ ಪ್ರೆ)

ಕುಮಾರಿ ದತ್ತ ಇವಳ ವಿಚಾರಣೆ

ಕಲಕತ್ತಾ, ತಾ॥ ೧೨— ಡಾಯೋಸಿಸಿಜನ್ ಕಾಲೇಜದ ೪ನೇ ವರ್ಷದ ವಿದ್ಯಾರ್ಥಿನಿಯಾದ ಕುಮಾರಿ ಜ್ಯೋತಿಕಾಮೂದತ್ತ ಇವಳ ಮೇಲೆ ಶಸ್ತ್ರ ಕಾಯದೆಯ ಅನ್ವಯ ಖಟ್ಲೆ ಹಾಕಲ್ಪಟ್ಟು ಅವಳ ವಿಚಾರಣೆಯು ಇಂದು ಅಲೀಪುರ ಸ್ಪೇಶಲ್ ಮ್ಯಾಜಿಸ್ಟ್ರೇಟರ ಮುಂದೆ ಪ್ರಾರಂಭವಾಯಿತು. ಈ ಖಟ್ಲೆಗೆ ಕಾರಣವೇನಂದರೆ ಅವಳು ತನ್ನ ಹತ್ತರ ಲಾಯಸೆನ್ಸ ಇಲ್ಲದೆ ಆರು ಬಾರಿನ ಪಿಸ್ತೂಲು, ೫೦ ಕಾಡುತೂಸು ಇವುಗಳನ್ನು ಇಟ್ಟುಕೊಂಡಿದ್ದಳು

ವಿಚಾರಣೆಯಲ್ಲಿ ಫಿರ್ಯಾದಿ ಪಕ್ಷದವರು ಹೇಳಿದ್ದೇನಂದರೆ — ಬೋರ್ಡಿಂಗದ ಓರ್ವ ವಿದ್ಯಾರ್ಥಿಯು ೧೨ ರೂಪಾಯಿಗಳು ಕಳವಾಗಿ ಹೋಗಿದ್ದವು ಈ ಸಂಬಂಧವಾಗಿ ಬೋರ್ಡಿಂಗದ ಕೋಣೆಗಳನ್ನು ಝಡತಿ ಮಾಡಿತು ಅವುಗಳಲ್ಲಿ ಕುಮಾರಿ ದತ್ತ ಇವಳ ಕೋಣೆಯಾ ಇತ್ತು ಝಡತಿಯಲ್ಲಿ ಅವಳ ಹಾಸಿಗೆಯ ಕೆಳಗಿನಲ್ಲಿ ಒಂದು ಚಾಪೆಯ ಕೆಳಗೆ ಮೇಲಿನ ಶಸ್ತ್ರಗಳು ಮತ್ತು ಮದ್ದು ಗುಂಡುಗಳು ಸಿಕ್ಕವು (ಅ ಪ್ರೆ,)

ಮಹಾತ್ಮರು ವರ್ಧಾಕ್ಕೆ ಹೋಗುವರು.

ಪುಣೆ ತಾ॥ ೧೧— ಈಗಿನ ಏರ್ಪಾಟನ್ನು ನೋಡಲಾಗಿ ಮಹಾತ್ಮಾ ಗಾಂಧಿಯವರು ಶುಕ್ರವಾರ ದಿವಸ ಪುಣೆಯಿಂದ ಮುಂಬಯಿ ಕಡೆಗೆ ಹೋಗಬೇಕೆನ್ನುತ್ತಾರೆ ಅವರು ಅಲ್ಲಿ ಒಂದು ವಾರದ ವರೆಗೆ ನಿಂತು, ನಂತರ ವರ್ಧಾಕ್ಕೆ ಹೋಗತಕ್ಕವರಿದ್ದಾರೆ. (ಅ ಪ್ರೆ)

ಭಾರತ ಸೇವಕ ಸಮಾಜಕ್ಕೆ ಮಹಾತ್ಮರ ಭೆಟ್ಟಿ

ಪುಣೆ ತಾ॥ ೧೧ – ಮಹಾತ್ಮರು ಈ ಹೊತ್ತಿನ ದಿವಸ ಸಂಜೆಯಲ್ಲಿ ಸೌ ಕಸ್ತೂರಿಬಾಯಿ, ಹಾಗು ಪಂಡಿತ ಜವಾಹಿರಲಾಲ ರೊಂದಿಗೆ ಭಾರತ ಸೇವಕ ಸಮಾಜಕ್ಕೆ ಭೆಟ್ಟಿ ಕೊಟ್ಟರು. ಸಮಾಜದ ಅಧ್ಯಕ್ಷರಾದ ಶ್ರೀ ಜಿ. ಕೆ ದೇವಧರ ಹಾಗು ಇತರ ಸಭಾಸದರು ಯೋಗ್ಯ ಆದರ ಸತ್ಕಾರಗಳಿಂದ ಅವರನ್ನು ಸ್ವಾಗತ ಮಾಡಿಕೊಂಡರು ಮಹಾತ್ಮರು ಸಮಾಜದ ಸಭಾಸದರೊಡನೆ ಮಾತುಕತೆಯಾಡಿ, ನಂತರ ಗ್ರಂಥಾಲಯದಲ್ಲಿ ಸಾಯಂಪ್ರಾರ್ಥನೆ ಜರುಗಿಸಿದರು ಪ್ರಾರ್ಥನೆಯ ಸಮಯದಲ್ಲಿ ಜನರು ಕಿಚ್ಚಾಗಿ ನೆರೆದಿದ್ದರು (ಅ ಪ್ರೆ)

ಆಂಡ್ರೂಜರ ಕಾರ್ಯಕ್ರಮ

ಪುಣೆ ತಾ॥ ೧೨ — ದೀನಬಂಧು ಸಿ ಎಫ್ ಆಂಡ್ರ್ಯೂಜ ಇವರು ಅಸೋಸಿಯೆಟೆಡ್ ಪ್ರತಿನಿಧಿಯ ಮುಂದೆ ತಮ್ಮ ಭಾವೀ ಕಾರ್ಯಕ್ರಮದ ವಿಷಯವಾಗಿ ಹೇಳಿದುದೇನಂದರೆ ಇಂಗ್ಲಂಡಕ್ಕೆ ತಿರುಗಿ ಹೋದ ಕೂಡಲೆ ದಕ್ಷಿಣ ಆಫ್ರಿಕಾ ಮತ್ತು ಪೂರ್ವ ಆಫ್ರಿಕಾಕ್ಕೆ ಹೋಗುವವನಿದ್ದೇನೆ ಹಿಂದುಸ್ಥಾನಕ್ಕೆ ಜಲದಿ ಬರಬೇಕಾದದ್ದರಿಂದ ಮೇಲಿನ ಪ್ರವಾಸವನ್ನು ಮುಂದರಿಸಬೇಕಾಯಿತು ಆದರೆ ಇಂಗ್ಲಂಡಕ್ಕೆ ತಿರುಗಿ ಹೋದ ಕೂಡಲೆ ಅಲ್ಲಿಗೆ ಹೋಗಿ ಕೈಕೊಂಡ ಕಾರ್ಯವನ್ನು ಪೂರ್ತಿಗೊಳಿಸುವೆನು ಅಲ್ಲಿ ಹಿಂದುಸ್ಥಾನಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ಅತಿ ಸೂಕ್ಷ್ಮವಾದ ಪರಿಸ್ಥಿತಿಗೆ ಬಂದು ಮುಟ್ಟಿದ್ದರಿಂದಲೆ ಅಲ್ಲಿಗೆ ಹೋಗಬೇಕಾಗಿದೆ (ಅ ಪ್ರೆ)

ಹೆಚ್ಚಿನ ಬೆಳ್ಳಿಯೂ ಸರಕಾರವೂ.

ಸಿಮ್ಲಾ ತಾ॥ ೧ – ಅಸೆಂಬ್ಲಿ ಹಾಗೂ ಕೌನ್ಸಿಲ್ಲ ಸ್ಟೇಟ ಸಂಯುಕ್ತ ಸಭೆಗೆ ರಿಝರ್ವ ಬ್ಯಾಂಕದ ಒಗ್ಗೆ ವಿಚಾರ ಮಾಡುವ ಅಧಿಕಾರ ಕೊಡುವ ಠರಾವನ್ನು ಸರ ಜಾರ್ಜ ಶ್ಯೂಷ್ಟರ ತಂದರು ಹೆಚ್ಚಿನ ಬೆಳ್ಳಿಯನ್ನು ಮಾರುವ ಹೊಣೆಯು ಸರಕಾರದ ಮೇಲಿದೆ ಎಂಬುದನ್ನು ಅವರು ಒಪ್ಪಿದರು (ಅ ಪ್ರೆ)

ಪುಂಡನು ಕೂಸನ್ನು ಅಪಹರಿಸಿದನು

—❧—

ಲಾಹೋರ ತಾ॥ ೧೧— ಇಲ್ಲಿಯ ... ಕೋಟೆಯ ಬಳಿಯಲ್ಲಿ ನಿನ್ನಿನ ದಿವಸ ಸಂಜೆಯಲ್ಲಿ ಓರ್ವ ಪುಂಡನು ಒಂದು ವರ್ಷದ ಮಗುವನ್ನು ಅಪಹರಿಸಿಕೊಂಡು ಹೋಗಿದ್ದರಿಂದ ಊರಲ್ಲೆಲ್ಲ ಕ್ಷೋಭೆಯಿದ್ದಿದೆ ಈ ಬಾರಿನ್ನ ಕೋಟದಲ್ಲಿ ಯಾವಾಗಲೂ ಜನರು ವಿಹಾರಕ್ಕಾಗಿ ಬರುವದುಂಟು, ಓರ್ವ ಪರ್ಸ್ನೊ ಆಫ್ ಕಾರ್ಪೋರೇಟೆಡ್ ಅಕೌಂಟಂಟರಾದ ಶರ್ಮರವರ ಮಗನಾದ ... ಎಂಬುವನನ್ನು ಸಣ್ಣದೊಂದು ವಾಹನದಲ್ಲಿ ಕೂಡಿಸಿಕೊಂಡು ತಿರುಗಿ ಮನೆಗೆ ಹೋಗುತ್ತಿದ್ದಳು. ಅವಳು ಮನೆಯನ್ನು ಮುಟ್ಟುವಷ್ಟರಲ್ಲಿಯೇ ಅದರ ಹುಡುಗರು ೭ ೩೦ ಗಂಟೆಗೆ ಹಾರಿ ಹಾರಿಕೊಂಡು ಓರ್ವ ಬೋಳು ತಲೆಯ ಮನುಷ್ಯನು ಬಂದು ಮೋಟರಿನಲ್ಲಿ ಅವರ ಹಿಂದೆ ಬಂದು ಕೂಸನ್ನು ಅಪಹರಿಸಿಕೊಂಡು ಹೋದನು. ನರ್ಸ ಅವನಿಗೆ ಪ್ರತಿರೋಧ ಮಾಡಿದಳು ಅವನು ಮೋಟಾರನ್ನು ತಿರುಗಿ ಹೊಡೆದುಕೊಂಡು ಹೋಗುವಾಗ ಮೋಟಾರದ ಬಾಗಿಲದ ಮೇಲೆ ರಕ್ತದ ಕಲೆಗಳು ಕಂಡುಬಂದವೆಂದು ತಿಳಿಯುತ್ತದೆ. ಮಗುವನ್ನು ಪತ್ತೆ ಹಚ್ಚಿಕೊಟ್ಟವರಿಗೆ ೫೦೦ ರೂಪಾಯಿ ಕೊಡಲ್ಪಡುವದೆಂದು ಜಾಹೀರಾಗಿರುತ್ತದೆ (ಅ ಪ್ರೆ.)

ಶ್ರೀ ಬಿರ್ಲಾ ಇವರ ಪ್ರಯಾಣ

ಪುಣೆ ತಾ॥ ೧೨— ಶ್ರೀ ಜಿ ಡಿ ಬಿರ್ಲಾ ಇವರು ಈ ಹೊತ್ತು ಮಧ್ಯಾಹ್ನದಲ್ಲಿ ಮುಂಬಯಿ ಮಾರ್ಗವಾಗಿ ಲೋನಾವಳಕ್ಕೆ ಹೊರಡತಕ್ಕವರಿದ್ದಾರೆ (ಅ ಪ್ರೆ)

ಪರದೇಶ

ರೇಜಿನಾ (ಕಾನಡಾ.) ಎಂಬಲ್ಲಿ ಜಗತ್ತಿನ ಕಾಳುಕಡಿಗಳ ಪ್ರದರ್ಶನವು ನೆರೆದಿತ್ತು ಈ ಪ್ರದರ್ಶನಕ್ಕೆ ಹಿಂದುಸ್ಥಾನ ಸರಕಾರದವರಾದರೂ ಹಿಂದುಸ್ಥಾನದಲ್ಲಿಯ ಕಾಳುಕಡಿಗಳನ್ನು ಕಳಿಸಿದ್ದರು ಈ ಹಿಂದೀ ವಿಭಾಗವನ್ನು ನೋಡಲಿಕ್ಕೆ ಲಕ್ಷಕ್ಕಿಂತ ಹೆಚ್ಚು ಜನರು ಬಂದಿದ್ದರು ಈ ಪ್ರದರ್ಶನದಿಂದ ಜಗತ್ತಿನ ವ್ಯಾಪಾರದಲ್ಲಿ ಹಿಂದುಸ್ಥಾನವು ಎಂತಹ ಮಹತ್ವದ ಭಾಗವನ್ನು ಆಕ್ರಮಿಸಿರುವದೆಂಬುದು ಪ್ರೇಕ್ಷಕರಿಗೆ ಮನವರಿಕೆಯಾಯಿತೆಂದು ಹಿಂದಿ ವಿಭಾಗದ ಪ್ರಕಟನಾ ಖಾತೆಯ ಅಧಿಕಾರಿಗಳು ಲಂಡನದಲ್ಲಿಯ ಹಿಂದುಸ್ಥಾನದ ಹಾಯ ಕಮೀಶನರಿಗೆ ವರದಿ ಮಾಡಿದ್ದಾರೆ ಹಿಂದುಸ್ಥಾನವು ಇದರಲ್ಲಿ ಭಾಗ ತೆಗೆದುಕೊಂಡಿದ್ದರಿಂದ ಹಿಂದುಸ್ಥಾನದ ಮತ್ತು ಅಲ್ಲಿಯ ಪರಿಸ್ಥಿತಿಯ ಬಗ್ಗೆ ಅಲ್ಲಿಯ ಜನರಿಗೆ ಹೆಚ್ಚಿನ ಜ್ಞಾನ ...

ಇಹವೃತ್ತ.

ದೇ. ಭ ಹುಕ್ಕೇರಿ ರಾಮರಾಯರು ಗೋಕಾಕದಲ್ಲಿಯ ಸಿಂಹಾಸನವನ್ನು ನೋಡಲಿಕ್ಕೆ ಶನಿವಾರ ದಿವಸ ಅಲ್ಲಿಗೆ ಹೋಗಿದ್ದರಷ್ಟೇ, ಅವರು ಈಗ ಅಲ್ಲಿಂದ ತಿರುಗಿ ಬಂದಿರುವರು. ಈ ಸಿಂಹಾಸನವು ಅಹಮ್ಮದಾಬಾದ ಪ್ರದರ್ಶನಕ್ಕೆ ಹೋಗತಕ್ಕದ್ದಿದ್ದು, ಸಿಂಹಾಸನದ ಸಂಬಂಧವಾಗಿ ವಿಸ್ತೃತವಾದ ವೃತ್ತಾಂತವನ್ನು ನಾಳಿನ ಸಂಚಿಕೆಯಲ್ಲಿ ಕೊಡುವೆವು

ಕರ್ನಾಟಕದ ಡಿವ್ಹಿಜನಲ್ ಕೋ ಆಪರೇಟಿವ್ಹ ಇನ್ಸ್ಟಿಟ್ಯೂಟದ ವಾರ್ಷಿಕ ಸಭೆಯು ರವಿವಾರ ದಿವಸ ಕೂಡಿ, ಶ್ರೀ ನಲವಡಿ ವಕೀಲರು ಅಧ್ಯಕ್ಷರಾಗಿಯೂ ಶ್ರೀ ಮುಳಮುತ ವಕೀಲರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಇದರಂತೆ ಬೇರೆ ಬೇರೆ ಕಮೀಟಿಗಳ ಆಯ್ಕೆಯಾದವೂ ಆಯಿತು.

ಇಲ್ಲಿ ಮೊನ್ನಿನಿಂದ ಚಿಟ ಚಿಟ ಮಳೆಯು ಸುರುವರಿದಿದ್ದು ಹವೆಯು ತಂಪಾಗಿದೆ

ಮುಸಲ್ಮಾನರು ಹಾಗೂ ಕಾಂಗ್ರೆಸ್ಸು ಮಿರಾ-ಗಾಂಧಿ ಭೆಟ್ಟಿ

——×——

ಪುಣೆ ತಾ॥ ೯— ಮುಂಬಯಿ ಕಾಯದೆ ಮಂಡಳದಲ್ಲಿಯ ಮುಂಬಯಿ ಪಟ್ಟಣದ ಪ್ರತಿನಿಧಿಗಳಾದ ನಾ ಸರ್ ಸುಲೇಮಾನ ಕಾಸೀಮ ಮಿರಾ ಇವರ ಚಿರಂಜೀವರಾದ ಮಿ ಮಹಮ್ಮದ ಸುಲೆಮಾನ ಇವರು ಈ ಹೊತ್ತು ಮಧ್ಯಾಹ್ನದಲ್ಲಿ ಪರ್ಣಕುಟಿಯಲ್ಲಿ ಮಹಾತ್ಮರ ಭೆಟ್ಟಿತೆಗೆದುಕೊಂಡರು ಸಂಭಾಷಣದಲ್ಲಿ ಕಾಂಗ್ರೆಸದ ವಿರುದ್ಧವಾಗಿ ಮುಸಲ್ಮಾನ ಸಮಾಜದವರು ಎತ್ತುವ ತಕರಾರುಗಳ ಬಗ್ಗೆ ಬಹು ಹೊತ್ತು ಚರ್ಚೆಯಾಯಿತೆಂದು ತಿಳಿಯುತ್ತದೆ ಸಂಭಾಷಣವು ಸುಮಾರು ೧ ತಾಸಿನವರೆಗೆ ನಡೆದಿತ್ತು ಮಿ ಮಿರಾ ಇವರು ಈ ವಿಷಯವಾಗಿ ಇನ್ನೂ ಒಮ್ಮೆ ಮಹಾತ್ಮರೊಡನೆ ಚರ್ಚೆ ಮಾಡುವರೆಂದು ತಿಳಿಯುತ್ತದೆ

ಕೊನೆಯುಚ್ಚು.

ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಛ್ಯೂ

ಶಾಸ್ತ್ರಶುದ್ಧ ... ದಂತ ಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸನೆಯಾಗಿಯೂ ... "ಹಲ್ಲುಗಳು" ವಸಡುಗಳ ರಕ್ತಸ್ರಾವ ... ಸರ್ವೋತ್ಕೃಷ್ಟವಾದ ವನಸ್ಪತಿಯೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಗುಣಗಳ ... "ಕಚ್ಛ್ಯೂ" ದಂತ ಮಂಜನದಲ್ಲಿ ... ಆದ್ದರಿಂದ ... ಕನ್ನಡಿಗರೇ ಕನ್ನಡ ... ಮಾಲನ್ನು ಕೊಳ್ಳದೆ ... ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ... ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹತ್ತಿರವಾದ ಹೆಚ್ಚು ವಿಶ್ವಾಸಕ್ಕೆ ಪಾತ್ರವಾದ

ಹೆಚ್ಚಿನ ... ಧಾರಣೆಯುಳ್ಳದ್ದೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾ॥ ... ರಿಂದ ತಾ॥ ... ರ ವರೆಗೆ ಇಡೀ ಭರತಖಂಡ (ಹಿಂದೂಸ್ಥಾನ) ದ ಯಾತ್ರೆಯನ್ನು ಯಶಸ್ವಿಯಾಗಿ ನಡಿಸಿ ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

ಶ್ರೀ ಕಾಶೀ ರಾಮೇಶ್ವರ ... ಜ್ಯೋತಿರ್ಲಿಂಗ ಕ್ಷೇತ್ರಗಳ ಮಹಾಯಾತ್ರಾ ಸ್ಪೆಶಲ್

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೆಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ... ತಾರೀಖು (ಶಕೆ ೧೮೫೫ ಆಶ್ವಯುಜ ಶು॥ ...) ರವಿವಾರ ಹುಬ್ಬಳ್ಳಿ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಪಂಢರಪುರ ಆಕ್ಟೋಬರ ತಾ ೨	೧೯ ಬನಾರಸ ೨೭	೩೭ ... ೨೫
೨ ನಾಶಿಕ ೩-೪	೨೦ ಅಯೋಧ್ಯೆ ೨೮	೩೮ ... ೧೬ ೧೭
೩ ಮುಂಬಯಿ ೫-೬-೭	೨೧ ... ,,	೩೯ ಕನ್ಯಾಕುಮಾರಿ [ಹಡಗದಿಂದ] ೧೮
೪ ಸೋಮನಾಥ (ಹಡಗದಿಂದ)	೨೨ ಪ್ರಯಾಗ ೨೭ ೨೮	೪೦ ... [ಹಡಗದಿಂದ] ೧೯-೨೦-೨೧
... ೮ ೯	೨೩ ತ್ರಿವೇಣಿ ೨೯ ೩೦ ೩೧ ನವ್ಹೆಂಬರ ತಾ॥ ೧	೪೧ ... [...] — ೨೨
... ,,	೨೪ ... ,,	೪೨ ... [...] ೨೩
... (ಜೈನತೀರ್ಥ) ೧೦ ೧೧	೨೫ ಗಯಾ ೨	೪೩ ಧನುಷ್ಕೋಟಿ [ಹಡಗದಿಂದ] ೨
... (ಜೈನತೀರ್ಥ) ೧೨ ೧೩	೨೬ ರಾಜಗಿರಿ ... (ಜೈನತೀರ್ಥ) ೩	೪೪ ಮದುರೆ ೨೬
... ೧೪	೨೭ ಗಿರಿ ...	೪೫ ... ೨೫
... ,,	೨೮ ... (ಜೈನತೀರ್ಥ) ೪	೪೬ ... ,,
೧೦ ... ೧೫	೨೯ ಕಲಕತ್ತಾ ೫ ೬-೭	೪೭ ಬೆಂಗಳೂರ ೨೭
೧೧ ... ೧೬	೩೦ ಜಗನ್ನಾಥ ಪುರಿ ೮	೪೮ ಮೈಸೂರ ...
೧೨ ... ೧೭	೩೧ ... ೯	ಈ ಎಲ್ಲ ಮಹಾಯಾತ್ರೆಗಳನ್ನು ...
೧೩ ಮಥುರಾ ೧೮ ೧೯	೩೨ ರಾಜಮಹೇಂದ್ರಿ ೧೦	... ತಾರೀಖು (ಶಕೆ ೧೮೫೫
೧೪ ಗೋಕುಲ ,,	೩೩ ಬೆಜವಾಡ ೧೧	ಮಾರ್ಗಶಿರ ಶು॥ ೧೩ ಬುಧವಾರ)
೧೫ ವೃಂದಾವನ ,,	೩೪ ಮದ್ರಾಸ ೧೨ ೧೩	... ಹುಬ್ಬಳ್ಳಿ ...
೧೬ ಗೋವರ್ಧನ ,,	೩೫ ಶಿವಕಂಚಿ ೧೪	... ಬಂದು ... ಮುವದು.
೧೭ ದಿಲ್ಲಿ ೨೦-೨೧	೩೬ ವಿಷ್ಣುಕಂಚಿ ,,	
೧೮ ಹರಿದ್ವಾರ ೨೨-೨೩		

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು ಇವುಗಳ ಖರ್ಚು ಸೇರಿ ಸೆಕೆಂಡ ಕ್ಲಾಸಿನವರು ... ರೂ ಥರ್ಡ ಕ್ಲಾಸಿನವರು ... ರೂ ಅಡ್ವಾನ್ಸ ಕಳಿಸತಕ್ಕದ್ದು. ... ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ... ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ... ಜಂಗಮಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನ ವರ್ತಮಾನಕ್ಕಾಗಿ ... ಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಿಗಳು, ... ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ... ಸಿನಲ್ಲಿ ತಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶರಾದರು ... ಕಾರಣ ಟಿಕೇಟುಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರಿ ಶಂಕರ ಕಂಪನಿಯ ಏಜಂಟ್ ರಂಟೆಗಳು— ... ಗಳಿಂದ ... ಧಾರವಾಡ ಜಿಲ್ಲೆಯ ... ಹಾಗು ... ಗಳು ... ಬರುವವರು ... ಶ್ರೀ ಗೌರೀಶಂಕರ ಕಂಪನಿಗೆ ... ತಕ್ಕದ್ದು. ... ಪುಸ್ತಕ ... ಯೋಗ್ಯ ... ಕೊಡಲ್ಪಡುವದು.

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಕೆ ಎಸ್. ... ಬಾಗಲಕೋಟ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ... ಕಾರಿಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ. ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸುವೆವು. ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ. ಹೈದರಾಬಾದಿನ ... ಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ವ್ಯಾಪಾರಿಗಳು ಅದರ ಮೇಲೆ ತಮ್ಮ ... ಒಂದೇ ಸಲ ಆರ್ಡರ ಕಳಿಸಿದರೆ ನಮ್ಮ ಕ್ರಿಯೆ ಕಂಡುಬರುವದಲ್ಲದೆ ... ಕನಾಟಕದವರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು.

ವಳಿಗುಡ್ ಹೈದರಾಬಾದ (ದೆಕ್ಕನ್) ...

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ಕೆಲಸಗಳು, ಗ್ಯಾಲಿಗ್ಯಾಗ ಲೆಡ್ ಕಟರ, ಹಾಗೂ ಹೊಸ ಟ್ರೆಡಲ್ (ಚಾಂದ್ನಿ) ಆಕಾರ ಫೂಲ್ಸ ಕೇಪ ಫೋಲಿಯೊ

ಕನ್ನಡಿಗನ ಚಂದಾ ವಿವರ

	ಸ್ಥಳೀಕರಿಗೆ	ಪರಸ್ಥಳ
ತಿಂಗಳಿಗೆ	೧-೬-೬	೦ ೧...
೩ ತಿಂಗಳಿಗೆ	೧-೪-೦	೨-೦-...
೬ ತಿಂಗಳಿಗೆ	೨-೮-೦	೫-೦...
ವರ್ಷಕ್ಕೆ	೫-೦-೦	೯-...

ಕನ್ನಡಿಗ.

ಧಾರವಾಡ— ಬುಧವಾರ ತಾರೀಖು ೧೩—೯—೧೯೩೩.

ಕಾರವಾರ ಜಿಲ್ಹೆಯ ಮೇಲೆ ಸರಕಾರದ ಉಗಿಗಣ್ಣು.

ಈಗ ಸುಮಾರು ೧—೧॥ ವರುಷದಿಂದ ಎಲ್ಲರ ಕಣ್ಣುಗಳೂ ಕಾರವಾರ ಜಿಲ್ಹೆಯ ಕಡೆಗೆ ... ಅಂಕೋಲಾ, ತಾಲೂಕಿನಲ್ಲಿಯೂ ಕುಮಟಾ ತಾಲೂಕಿನ ಕೆಲವು ಭಾಗದಲ್ಲಿಯೂ ... ಭೂಕಂದಾಯವನ್ನು ಕೊಡಬಾರದೆಂದು ಕಟ್ಟು ಮಾಡಿ, ಕಾಯದೆಭಂಗ ಚಳವಳಿಯನ್ನು ...ದೇ ಇದಕ್ಕೆ ಕಾರಣ. ಅರ್ಥಾತ, ಸರಕಾರದವರದು ಅತ್ಯುಗ್ರ ಕಟಾಕ್ಷ, ಸತ್ಯಾಗ್ರಹಿಗಳ ಪ್ರೇಮದ ಕಟಾಕ್ಷ; ತಟಸ್ಥರದು ಕೌತುಕದ ಕಟಾಕ್ಷ, ಪುಕ್ಕರದು ಭೀತಿಯ ಕಟಾಕ್ಷ, ...ವ ದು ಖದ ಕಟಾಕ್ಷ ಹೀಗೂ ಒಂದಿಲ್ಲೊಂದು ಬಗೆಯಿಂದ, ಕಾರವಾರದ ಜಿಲ್ಹೆಯು ಹಿಂದುಸ್ಥಾನದ ಚಿತ್ತವನ್ನು ... ಸೆಳೆದಿತ್ತದೆ. ಭೂಕಂದಾಯದ ಬಗ್ಗೆ ಸರಕಾರದವರು ... ಪತ್ರಿಕೆಯಲ್ಲಿ ಇಲ್ಲಿ ಒತ್ತಾಯದಿಂದ ಭೂಕಂದಾಯವನ್ನು ವಸೂಲಮಾಡಿದ ಸಂಖ್ಯೆಯು ...ಗಳಿದ್ದು, ಇವುಗಳಲ್ಲಿ ಜಪ್ತಿ ಮಾರಾಟ ಮಾಡಿಯೇ ಅವನ್ನು ವಸೂಲ ಮಾಡಬೇಕಾಯಿತು. ನಿಶಾನೆಗಳನ್ನು ಹಿಡಿದುಕೊಂಡು ಮೆರವಣಿಗೆಗಳನ್ನು ತೆಗೆದು ಮತ್ತು ಲಷ್ಕರಿಯ ಆಯು... ಮೆರವಣಿಗೆಗಳಿಂದ ಜನರ ಮನಸ್ಸಿನಲ್ಲಿ ಅಂಜಿಕೆಯನ್ನು ಹುಟ್ಟಿಸಿಯೂ ಕಂದಾಯವು ...ಲ ಮಾಡಲ್ಪಟ್ಟಿತೆಂದೂ ಹೇಳುತ್ತಾರೆ. ಗಾಂಧೀಜಿಯವರ ಗಡುಮೆಟ್ಟಿದ ಬಾಡೋಲಿ... ಕೂಡ ಈ ಚಳವಳಿಯು ಪ್ರಾರಂಭವಾದ ಸ್ವಲ್ಪ ದಿನಗಳಲ್ಲಿ ದುಬನಿಷ್ಠೆ ಸಭೆ ಕೂಡಿಸು... ಪೋಲೀಸರಿಗೆ ಶಕ್ಯವಾಯಿತಂತೆ, ಆದರೆ ಪೋಲಿಸರಿಗೆ ಕೊನೆಯವರೆಗೆ ತೊಂದರೆಯನ್ನು ...ಟ್ಟ ಜಿಲ್ಹೆಯಂದರೆ ಕಾರವಾರ ಜಿಲ್ಹೆಯೊಂದೇ ಎಂದು ಇನ್ಸಪೆಕ್ಟರ ಜನರಲ್ ಆಫ್ ಪೋಲಿ... ೧೯೩೨ ನೆಯ ಇಸ್ವಿಯ ತಮ್ಮ ವರದಿಯಲ್ಲಿ ಒಡಂಬಡುತ್ತಾರೆ. ಮಿಕ್ಕ ಕಡೆಗೆ ಕಾಯದೆ...ಗ ಚಳವಳವು ಕಡಿಮೆಯಾಗಹತ್ತಿದಾಗ ಈ ಜಿಲ್ಹೆಯಲ್ಲಿ ಭಗ್ಗನೆ ಉರಿಯೆದ್ದು, ಭಯಂಕರ... ಬೇಗೆ ಕಟ್ಟಿತು. ಕಾರವಾರ ಜಿಲ್ಹೆಯಲ್ಲಿ ಅಡವಿ ಬಹಳ; ಅದು ವಾಹನಗಳು ಹೋಗುವ... ಅನನುಕೂಲವಾದ ಸ್ಥಳ. ಇವೇ ಮುಂತಾದ ಕಾರಣಗಳಿಂದ, ಅಲ್ಲಿಯ ಕಾಯದೆಭಂಗ ...ವಳಿಯನ್ನು ನಿಲ್ಲಿಸುವುದಕ್ಕೆ ತಮಗೆ ಶ್ರಮವಾಯಿತೆಂದು ಪೋಲೀಸ ವರದಿಯು ಹೇಳುತ್ತದೆ ...ಸೂರಿನಲ್ಲಿ ನಿಂತು, ಈ ಕಾಯದೇಭಂಗ ಚಳವಳವನ್ನು ಚಳವಳಿಗಾರರು ಪ್ರೋತ್ಸಾಹಿಸಿದ... ಅಂಕೋಲಾ ಮುಂತಾದ ಕಡೆಗೆ ನಾಡವರ ಎಂಬವರು ರೈತರು ಅವರು ಕ್ಷಾತ್ರತೇಜಸ್ಸುಳ್ಳ... ( ) ಅವರು ಅನೇಕ ಅತ್ಯಾಚಾರಗಳನ್ನು ಮಾಡಿ ಪೋಲಿಸರಿಗೆ ಬಹಳ ಪೀ...ದರೆಂದು ಈ ವರದಿಯು ಹೇಳುತ್ತದೆ. ಇವೆಲ್ಲ ಕಾರಣಗಳ ಸಲುವಾಗಿ ಸರಕಾರದವರು ಕಾರ... ಜಿಲ್ಹೆಯ ಮೇಲೆ ಅತ್ಯಂತ ಕೋಪವುಳ್ಳವರಾಗಿದ್ದಾರೆ. ಮಿಕ್ಕ ಕಡೆಗೆ ಹೇಗೋ ಹಾಗೆಯೇ ...ಜಿಲ್ಹೆಯ ಚಳವಳವನ್ನೂ ಅವರು ಬಗ್ಗು ಬಡೆದಿರುವರೆಂಬುದನ್ನೇನೂ ಹೇಳಲಿಕ್ಕೆ ಬೇಡ. ...ರೆ, ಅಷ್ಟರಿಂದ ಅವರ ಕೋಪವು ಶಾಂತವಾಗಿರುವುದಿಲ್ಲ. ಸರಕಾರದವರು ಹೋದ ಫೆಬ್ರು... ತಿಂಗಳಿನಲ್ಲಿ ೬೨ ಹಳ್ಳಿಗಳ ಮೇಲೆ ಜಾದಾ ಪೋಲಿಸರನ್ನು ಇಟ್ಟಿದ್ದಾರೆ ಮತ್ತು ಅವರ ...ನ್ನೆಲ್ಲ ಆ ಜನರು ತರಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಮುಂಬಯಿ ಇಲಾಖೆಯಲ್ಲಿ ಮಿಕ್ಕ ...ಗೆ ಭೂಕಂದಾಯವನ್ನು ಮುಂದೆ ಹಾಕಿಯೂ ಕೆಲವು ಕಡೆಗೆ ಸೂಟು ಬಿಟ್ಟೂ ರೈತರಿಗೆ ಸಹಾ... ಮಾಡಿದ್ದಾರೆ. ಆದರೆ ಈ ಜಿಲ್ಹೆಗೆ ಮಾತ್ರ ಆ ಬಗೆಯ ಸೌಕರ್ಯಗಳನ್ನು ಈ ವರ್ಷ ...ಟ್ಟಿರುವುದಿಲ್ಲ. ಕಾರವಾರ ಜಿಲ್ಹೆಯ ಕಾಯದೆಭಂಗದ ಮೂಲಕ, ಕಾರವಾರ ಜಿಲ್ಹೆಗಷ್ಟೇ ಶಿಕ್ಷೆ...ಯಾಗಿಯುತ್ತದೆಂತಲ್ಲ; ಅದರ ಸಲುವಾಗಿ ಧಾರವಾಡದವರಿಗೂ ಕಷ್ಟಗಳನ್ನು ಅನುಭವಿಸಬೇಕಾ...ತು. ಧಾರವಾಡದ ಅನೇಕ ಜನರ ಮೇಲೆ ಸರಕಾರವು ನಿಷ್ಕಾರಣವಾಗಿ ಸಂಶಯವನ್ನು ...ದುಕೊಂಡು ಹೇಗೆ ಅವರನ್ನು ನಾನಾವಿಧ ಶಿಕ್ಷೆಗಳಿಗೆ ಗುರಿಮಾಡಿದರೆಂಬುದು ಈಗ ಸರ್ವ...ತವಾಗಿದೆ. ಜಾದಾ ಪೋಲೀಸರಿಗಾಗಿ ಕೊಡತಕ್ಕ ಖರ್ಚನ್ನು ಜನರ ಮೇಲೆ ಹೇರದೇ ಸರಕಾ...ರವರು ಸೋಸಬೇಕೆಂದು ಶ್ರೀ ಗಂಗೋಳಿಯವರು ೫ ನೇ ತಾರೀಖಿನ ದಿನ ಕಾಯದೆಮಂಡ...ಳದಲ್ಲಿ ತಂದ ಠರಾವೂ ಸ್ವೀಕೃತವಾಗಲಿಲ್ಲ. ಸಾರಾಂಶ, ಇಡೀ ಹಿಂದುಸ್ಥಾನದಲ್ಲಿ, ಈ ಚಳವ...ಳದಲ್ಲಿ ಕಾರವಾರ ಜಿಲ್ಹೆಯಷ್ಟು ಕಷ್ಟವನ್ನು ಅನುಭೋಗಿಸಿದ ಜಿಲ್ಹೆಯು ಮತ್ತೊಂದಿಲ್ಲ. ಈ ...ಯಷ್ಟು ಸರಕಾರದ ಅತ್ಯಂತ ರೋಷಕ್ಕೆ ಪಾತ್ರವಾದ ಜಿಲ್ಹೆಯ ಪರಿಯಿಂದ ನಾವು ನಾಳಿನ ...ದ ನಾಲ್ಕು ಮಾತುಗಳನ್ನು ಹೇಳುವವರಿದ್ದೇವೆ.

ಮುಂಬಯಿ ಇಲಾಖೆಯ ಬ್ರಾಹ್ಮಣೇತರ ತರುಣ ಪರಿಷತ್ತು.

ಮುಂಬಯಿ ತಾ। ೧೦—ಮೊದಲೇ ಗೊತ್ತಾ...ದ ಬ್ರಾಹ್ಮಣೇತರ ತರುಣ ಪರಿಷತ್ತು ಈ ...ತ್ತಿನ ದಿವಸ ಮುಂಜಾನೆ ೮ ಗಂಟೆಗೆ ದಾ...ದರ ಭವನದಲ್ಲಿ ಪ್ರಾರಂಭವಾಯಿತು. ಪರಿ...ತ್ತಿಗೆ ಅಷ್ಟೇನೂ ಜನರು ಬಂದಿರಲಿಲ್ಲ. ಏರಿ...ರು ಪರಿಷತ್ತಿನಲ್ಲಿ ಗೊಂದಲ ಹಾಕಿಯಾರೆಂಬ ...ತಿಯಿಂದ ವ್ಯವಸ್ಥಾಪಕರು ಪೋಲೀಸರನ್ನು ... ಪೋಲೀಸರು ಸುಸಜ್ಜಿತರಾಗಿ ನಿಂತಿದ್ದರು. ಇಂ...ಟ್ಟನಲ್ಲಿ ಪರಿಷತ್ತಿನ ವಿಷಯವಾಗಿ ಜನರಲ್ಲಿ ಅಷ್ಟೇನೂ ಉತ್ಸಾಹವು ತೋರಿ ಬರುತ್ತಿರಲಿಲ್ಲ.

ಸ್ವಾಗತಾಧ್ಯಕ್ಷರಾದ ಶ್ರೀ. ಸಾವಂತರು ಪರಿಷತ್ತಿನ ಕಾರ್ಯವನ್ನು ಪ್ರಾರಂಭ ಮಾಡಿ ಹೇಳಿದುದೇನಂದರೆ— ಈ ಪರಿಷತ್ತನ್ನು ಕೂಡಿಸಗೊಡಬಾರದಾಗಿ ಅನೇಕ ಜನರು ಟೊಂಕ ಕಟ್ಟಿದ್ದರು. ಆದರೆ ಅವರ ಆಟವು ಸಫಲವಾಗಲಿಲ್ಲ. ಈಗಿನ ಬ್ರಾಹ್ಮಣೇತರ ಪಕ್ಷವೆಂದರೆ, ಅದ... ಳಿದಿರುವದಿಲ್ಲ. ಅವರ ವಿರುದ್ಧ ತರುಣರು ಬಂಡು ಎಬ್ಬಿಸಿ, ದೇಶದಲ್ಲೆಲ್ಲ ತರುಣ ಸಂಘಗಳನ್ನು ಸ್ಥಾಪಿಸದ ಹೊರತು ಬ್ರಾಹ್ಮಣೇತರ ಸಮಾಜದ ಉನ್ನತಿಯಾಗುವದು ಶಕ್ಯವಿಲ್ಲ.

ಸ್ವಾಗತಾಧ್ಯಕ್ಷರ ಭಾಷಣವಾದ ಬಳಿಕ ಅಧ್ಯಕ್ಷರಾದ ಶ್ರೀ ಚಿಕ್ಕೋಡಿಯವರು ತಮ್ಮ ಭಾಷಣವನ್ನು ಪ್ರಾರಂಭಿಸಿ ಹೇಳಿದುದೇನಂದರೆ:— ಸಿಂಧ ಹೊರ್ತು ಪಡಿಸಿ ಮುಂಬಯಿ ಇಲಾಖೆಗೆ ಬೇಗನೆ ಒಂದು ರಾಜ್ಯಘಟನೆಯು ಸಿಗತಕ್ಕದ್ದಿದೆ. ಈ ಕಾರಣ ಬ್ರಾಹ್ಮಣೇತರರು ಸಂಘಟಿತರಾಗಿ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕಾಗಿದೆ. ಒಟ್ಟು ಲೋಕಸಂಖ್ಯೆಯಲ್ಲಿ ಬ್ರಾಹ್ಮಣೇತರರ ಸಂಖ್ಯೆಯು ೧೦೦ಕ್ಕೆ ೫೦ರಂತೆ ಇದ್ದರೂ, ಅವರ ಸಮಾಜದ ಸ್ಥಿತಿಯು ಅತಿ ಹೀನತರದ್ದಾಗಿದೆ. ಬ್ರಾಹ್ಮಣೇತರರು ಶಿಕ್ಷಣದಲ್ಲಿ ಹಿಂದುಳಿದಿದ್ದಾರೆ. ಅವರ ಉನ್ನತಿಯಾಗಬೇಕಾದರೆ ಭಾವೀ ರಾಜ್ಯಘಟನೆಯೊಳಗಿನ ಕೌನ್ಸಿಲುಗಳನ್ನು ಕೈಯಲ್ಲಿ ತೆಗೆದುಕೊಳ್ಳುವದು ಅವಶ್ಯವಿದೆ.

ಅಧ್ಯಕ್ಷರ ಭಾಷಣವಾದ ಬಳಿಕ ವಿಷಯ ನಿಯಾಮಕ ಮಂಡಳದ ಸಭೆಯಾಗಿ ಕೆಳಗಿನ ಗೊತ್ತುವಳಿಗಳು ತೀರ್ಮಾನಿಸಲ್ಪಟ್ಟವು.

(೧) ಬಿಳೀ ಕಾಗದದ ಸಂಬಂಧವಾಗಿ ಬ್ರಾಹ್ಮಣೇತರ ತರುಣರ ಅಭಿಪ್ರಾಯವನ್ನು ಜಾಹೀರ ಮಾಡುವದಕ್ಕೆ, ನವ್ಹೆಂಬರ ಪೂರ್ವದಲ್ಲಿ ಅಖಿಲಭಾರತೀಯ ಬ್ರಾಹ್ಮಣೇತರ ಯುವಕ ಸಭೆಯನ್ನು ಬೇಗನೆ ಕೂಡಿಸಬೇಕು. ಈ ಬಗ್ಗೆ ಶ್ರೀ ಚಿಕ್ಕೋಡಿ ಮೋಕಾಶಿ ಮೊದಲಾದ ೧೦ ಜನರ ಮಂಡಳವು ನಿಯಮಿಸಲ್ಪಟ್ಟಿತು. (೨) ಕೌನ್ಸಿಲ್ ಪ್ರವೇಶವನ್ನು ಕೈಯ್ಯಲ್ಲಿ ತೆಗೆದುಕೊಳ್ಳುವದು (೩) ಒತ್ತಾಯದ ಶಿಕ್ಷಣ ಪ್ರಸಾರ (೪) ಸ್ವದೇಶಿಯ ಪುರಸ್ಕಾರ (೫) ರಾ. ಬ. ಬೋಲೆಯವರ ದೇವದಾಸಿ ಮಸೂದೆಗೆ ಬೆಂಬಲ (೬) ತರುಣ ಬ್ರಾಹ್ಮಣೇತರ ಯುವಕ ಸಂಘಗಳನ್ನು ಸ್ಥಾಪಿಸುವದು (೭) ಅಸ್ಪೃಶ್ಯತೆಯನ್ನು ಹೋಗಲಾಡಿಸುವದಕ್ಕೆ ರೋಟಿ ಬೇಟಿ ವ್ಯವಹಾರ ಸುರುವು ಮಾಡುವದು (೮) ರಾ. ಬ. ಬೋಲೆಯವರ ಜೂಜು ಪ್ರತಿಬಂಧಕ ಮಸೂದೆಗೆ ಮನ್ನಣೆ.

ಇಷ್ಟಾದ ಬಳಿಕ ಈ ಹೊಸ ಪಕ್ಷ ಕಾರ್ಯದರ್ಶಿಗಳ ಸ್ಥಳಕ್ಕೆ ಶ್ರೀ. ಮೋಕಾಶಿ, ಜಾಧವ ಮತ್ತು ಸಾವಂತ ಇವರನ್ನು ಆರಿಸಿದ ಬಳಿಕ ಸಭೆಯ ಕಾರ್ಯವು ಸಮಾಪ್ತವಾಯಿತು.

ದೇವರಾಜ ನಿಧಿಯ ಬಹುಮಾನ

೧೯೩೩ನೆ ಇಸ್ವಿಯ ದೇವರಾಜ ಬಹದೂರ ನಿಧಿಯ ಬಹುಮಾನವು ಕೆಳಗಿನ ಸಾಹಿತಿಗಳಿಗೆ ಸಿಕ್ಕಿರುತ್ತದೆ.

೧ ಶ್ರೀ ಎಲ್. ಗುಂಡಪ್ಪ ಎಂ. ಎ., "ಭಾಸನ ಏಕಾಂಕ ನಾಟಕಗಳು" ಎಂಬ ಗ್ರಂಥದ ಬಗ್ಗೆ ೩೦೦ ರು.

೨ ಶ್ರೀ. ಜಿ ಪಿ ರಾಜರತ್ನಂ, "ಚೀನ ದೇಶದ ಬೌದ್ಧ ಯಾತ್ರಿಕರು" ಎಂಬ ಗ್ರಂಥದ ಬಗ್ಗೆ ೨೦೦ ರು

೩ ಶ್ರೀ ಗೋರೂರ ರಾಮಸ್ವಾಮಿ ಅಯ್ಯಂಗಾರ, "ನಮ್ಮ ಊರಿನ ರಸಿಕರು" ಎಂಬ ಗ್ರಂಥದ ಬಗ್ಗೆ ೨೦೦ ರು. ಮೊದಲನೆ ಬಹುಮಾನಕ್ಕೆ ಯೋಗ್ಯವಾದ ಒಂದಾದರೂ ಗ್ರಂಥವು ಬಂದಿರಲಿಲ್ಲ.

ಕರ್ನಾಟಕಸ್ಥರಲ್ಲಿ ಬಿನ್ನಹ

ಕರ್ನಾಟಕದ ವ್ಯಾಪಾರ, ಒಕ್ಕಲತನ, ಉದ್ಯೋಗದಂಥ ಮುಂತಾದವುಗಳು ವೃದ್ಧಿ ಹೊಂದಿ, ಕರ್ನಾಟಕವು ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಇವೇ ಮೊದಲಾದ ವಿಷಯಗಳಲ್ಲಿ ಉನ್ನತಿಯನು ಹೊಂದಬೇಕಾದರೆ, ಕರ್ನಾಟಕದ ಏಕೀಕರಣವಾಗದ ಹೊರತು ಗತ್ಯಂತರವಿಲ್ಲವಾದ್ದರಿಂದ, ನಾಡ ಹಬ್ಬದ ಕೊನೆಯ ದಿವಸ ಕನ್ನಡಿಗರೆಲ್ಲರೂ ಕರ್ನಾಟಕ ಪ್ರಾಂತವನ್ನು ಸ್ವತಂತ್ರ ಪ್ರಾಂತವನ್ನಾಗಿ ಮಾಡಬೇಕೆಂದು ನಿರ್ಣಯ ಮಾಡಿಕೊಂಡು, ಅವುಗಳನ್ನು ಮದ್ರಾಸ, ಮುಂಬಯಿ, ಕೊಡಗು ಮತ್ತು ಮಧ್ಯವರ್ತಿ ಸರಕಾರಕ್ಕೆ ಕಳಿಸಿಕೊಡಬೇಕೆಂದು, ಕರ್ನಾಟಕ ಚೇಂಬರ ಆಫ್ ಕಾಮರ್ಸದ ಕಾರ್ಯದರ್ಶಿಗಳಾದ ಶ್ರೀ ಮುರಿಗಯ್ಯ ಜಂಗಿನ ಇವರು ತಿಳಿಸಿರುತ್ತಾರೆ.

ಎಸ್. ಎಂ. ಸಿ. ಓಪನ್ ಕ್ರಿಕೆಟ್ ಟೂರ್ನಮೆಂಟ್ಸ ೧೯೩೩

ಸಪ್ಟೆಂಬರ ೨೫ರಿಂದ ಆಕ್ಟೋಬರ ೩ರ ವರೆಗೆ ನಾಕ್ ಆವುಟ ಪದ್ಧತಿಯ ಮೇಲೆ ಈ ಪಂದ್ಯಾಟವು ನಡೆಯುತ್ತಿದ್ದು, ಕೊಲ್ಹಾಪುರ ಸಾತಾರಾ ಜಿಲ್ಹೆ, ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಲ್ಲಿಯ ಎಲ್ಲ ಕ್ಲಬ್ಬು, ಜಿಮಖಾನಾ, ಶಾಲೆ ಕಾಲೇಜಗಳು ಇದರಲ್ಲಿ ಭಾಗ ತೆಗೆದು ಕೊಳ್ಳಬಹುದು ಪ್ರವೇಶ ಫೀ ೫ ರೂಪಾಯಿ ಇದ್ದು ಪ್ರವೇಶ ಪತ್ರಿಕೆಯನ್ನು ೧೬ನೆ ಸಪ್ಟೆಂಬರದೊಳಗಾಗಿ ಕಳಿಸಬೇಕು.

ಗೆದ್ದ ಟೀಮಿಗೆ ಕೋಳಿಯಣ್ಣವರ ಮತ್ತು ಪಸ್ತಾಕರ ಇವರು ಕಾಣಿಕೆ ಸಲ್ಲಿಸಿದ "ವಿಲಿಂಗ್ಡನ್ ಕಾಲೇಜ ಕ್ರಿಕೆಟ್ ಚ್ಯಾಲೇಂಜ ಕಪ್ಪು" ಕೊಡಲ್ಪಡುವದು.

ಇದರ ಕಮೀಟಿಯಲ್ಲಿ ರಾವಸಾಹೇಬ ಪಿ. ದೇಸಾಯಿ ಪ್ರಿನ್ಸಿಪಾಲ ಲಿಮಯೆ ಮೊದಲಾದ ೭ ಜನರಿದ್ದಾರೆ.

ವಿಲಿಂಗ್ಡನ್ ಕಾಲೇಜ   ಡಿ. ಜಿ. ಧವಳೆ
ತಾ॥ ೪-೯-೧೯೩೩   ಸೆಕ್ರೆಟರಿ, ಕ್ರಿಕೆಟ್ ಪಂದ್ಯಾಟಗಳು

ಡಾ. ಕುಲಕರ್ಣಿ

ಲೆಬೊರೋಟರಿ ಮುಂಬಯಿ ನಂಬ್ರ ೧೩

ಚಾಲ್ತಿ ಕಿಮ್ಮತ್ತು ೧—೨—೦

ಕೆಮಿಸ್ಟರಲ್ಲಿಯೂ ದೊರೆಯು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಬಿಳಿ ಸೆರಗು, ಬಿಳೀಸೆರಗು, ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ಸುಧಾರಿಸಿ ಮತ್ತು ಸಧೃಡ ಆಗುತ್ತದೆ

ಏ. ಬಿ. ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟೆ.

೧೫-೬



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚುರ್ಯ

ದಂತ ಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿಯೂ ಬಾಯಿಯು ಸುವಾಸವಾಗಿಯೂ ... ವಸಡೆಗಳ ರಕ್ತಸ್ರಾವ ... ಸರ್ವೋತ್ಕೃಷ್ಟವಾದ ವನಸ್ಪತಿ ... ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ ... 'ಕಚ್ಚುರ್ಯ' ... ಕೇವಲ ಹಣ ... ಕನ್ನಡಿಗರೇ, ಕನ್ನಡ ... ಮಾಲನ್ನು ಮೊದಲು ಕೊಳ್ಳಿರಿ ... ಎಂಬ ... ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ... ಹಾದಿಯನ್ನು ಹಿಡಿಯಿರಿ

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ

... ಹೆಚ್ಚು ವಿಶ್ವಾಸಕ್ಕೆ ಪಾತ್ರವಾದ ...

... ಆಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

೩೨೦ ... ರಿಂದ ... ವರೆಗೆ ಇಡೀ ಭರತಖಂಡ (ಹಿಂದುಸ್ಥಾನ) ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರಗಳನ್ನೂ, ... ಸದಭಿಪ್ರಾಯಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀ ರಾಮೇಶ್ವರ ... ಕ್ಷೇತ್ರಗಳ ... ಯಾತ್ರಾ ...

ಖರ್ಚು ಬಹಳ ಸುಲಭ! ಉತ್ತಮ ವ್ಯವಸ್ಥೆ!

ಪ್ರೇಕ್ಷಣೀಯ ನೋಟ! ಸ್ವರ್ಗದ ಸೋಪಾನ

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ... ತಾರೀಖು (ಶಕೆ ೧೮೫೫ ಆಶ್ವಯುಜ ಶು|| ...) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ... ಕ್ರಮವಾಗಿ

೧ ಪಂಢರಪುರ ...	೧೯ ...	೩೭ ...
೨ ...	೨೦ ...	೩೮ ...
೩ ಮುಂಬಯಿ	೨೧ ಅಲಹಾಬಾದ	೩೯ ...
೪ ... (ಹರಗಡಿಂದ)	೨೨ ಪ್ರಯಾಗ	೪೦ ...
...	೨೩ ...	...
...	...	೪೪ ಧನುಷ್ಕೋಟಿ
...	...	೪೫ ಮಧುರೆ
...	...	೪೮ ಬೆಂಗಳೂರ
...	...	೪೯ ಮೈಸೂರ
೧೭ ...	೩೪ ...	...
೧೮ ...	೩೫ ...	...

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವು ಕೊಡಲ್ಪಡುವದು

ಈ ಎಲ್ಲ ಮಹಾಯಾತ್ರೆಗಳ ರೇಲ್ವೆ, ಹಡಗು, ... ಖರ್ಚು ... ಟಿಕೀಟು ಪಡೆಯಬೇಕಾದಲ್ಲಿ

... ರೂ ... ಅಡ್ವಾನ್ಸ ಕಳಿಸತಕ್ಕದ್ದು. ... ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜ ತೆಗೆದುಕೊಳ್ಳ... ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ... ವ್ಯವಸ್ಥೆ ... ಟ್ರೇನಿನಲ್ಲಿ ... ವೀರಶೈವರ ಆಚಾರಕ್ಕನುಕೂಲವುಂಟು. ... ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಿ... ಡಾಕ್ಟರರೂ ಫೋಟೋಗ್ರಾಫರರೂ ... ಇರುವರು. ... ಟಿಕೀಟು ... ತ್ವರೆಮಾಡತಕ್ಕದ್ದು

ಮೇಲೆ ಗೊತ್ತುಪಡಿಸಿದ ... ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರಿ ಶಂಕರ ಕಂಪನಿಯ ಏಜಂಟರು— ...

...

ಬಿ. ಎ ...

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ— ... ಎಸ್. ...

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ... ಕಾರಿಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು ... ಜೇರಿಯವರಿಗೆ ಆರ್ಡರ ಕೊಟ್ಟು ಮೋಸಹೋಗಬೇಡಿರಿ ಹೈದರಾಬಾದಿ... ಗಳು ಪಂಚಪ್ಪಿಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ... ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಡಿಮೆ ಕ್ರಯಕ್ಕೆ ದೊರೆಯುವದಲ್ಲದೆ ... ಖಾತ್ರಿಪೂರ್ವಕ ಮಾಲು ದೊರೆಯುವದು.

ಮಳಿಗುಡ್. ಹೈದರಾಬಾದ (ಡೆಕ್ಕನ್) ...

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ಕೆಲಸಗಳು, ಗ್ಯಾಲಿರ್‍ಯಾಕ ಲೆಡ್ ಕಟರ, ಹಾಗೂ ಹೊಸ ಟ್ರೆಡಲ್ (ಬಾಂಡ್ಲ) ... ಪ್ರೆಸ ...

ಕನ್ನಡಿಗ ಮುದ್ರಣಾಲಯ ಧಾರವಾಡ

ಕನ್ನಡಿಗದ ಚಂದಾ ವಿವರ

	ದೇಶದೊಳಗೆ	ಪರದೇಶ...
... ತಿಂಗಳಿಗೆ	೧-೭-೬	...
೩ ತಿಂಗಳಿಗೆ	೧-೪-೦	...
೬ ತಿಂಗಳಿಗೆ	೨-೮-೦	...
ವರ್ಷಕ್ಕೆ	೫-೦-೦	...

ಕನ್ನಡಿಗ.

ಧಾರವಾಡ— ಬುಧವಾರ ತಾರೀಖು ೧೩—೯—೧೯೩೩

ಕಾರವಾರ ಜಿಲ್ಲೆಯ ಮೇಲೆ ಸರಕಾರದ ಉಗಿಗಣ್ಣು.

ಉಪಯೋಗಿಸಿದ ಅನೇಕ ಕನ್ನಡ ಟೈಪ ಗಳು, ಗ್ಯಾಲಿರ್‍ಯಾಕ, ಲೆಡ್ ಕಟರ ಹಾಗೂ ಹೊಸ ಟ್ರೆಡಲ್ (ಚಿಂದ್ಲ) ಅಕಾಟ್ ಫೂಲ್ಸ ಕೇಪ ಫೋಲಿಯೊ

ಕನ್ನಡಿಗ ಮುದ್ರಣಾಲಯ ಧಾರವಾಡ

ಕನ್ನಡಿಗನ ಚಂದಾ ವಿವರ.

	ಸ್ಥಳೀಯರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦-೧೨-೦
೩ ತಿಂಗಳಿಗೆ	೧-೪-೦	೨-೨ ೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯವಸ್ಥಾಪಕ

ಕನ್ನಡಿಗ

ಧಾರವಾಡ— ಶುಕ್ರವಾರ ತಾರೀಖು ೧೩—೯—೧೯೨೯

ಕನಸು ಮನಸಿನಲ್ಲಿ ಕರ್ನಾಟಕ

[illegible] ನಾವು ಕರ್ನಾಟಕದ ದೇವಿಯನ್ನು [illegible] ಮಾನಸಿಕ [illegible] [illegible] ಕರ್ನಾಟಕತ್ವವನ್ನು [illegible] ಕರ್ನಾಟಕದ ಸೇವೆಯ [illegible] ಮಾನಸಿಕ ಪೂಜೆ [illegible] ಕರ್ನಾಟಕತ್ವ ಸಂಕುಚಿತವಾದ ಕಲ್ಪನೆ [illegible] ನಮಗೆ [illegible] ದೊರೆಯುತ್ತದೆ [illegible] ಕರ್ನಾಟಕವನ್ನು [illegible] ಅವಳ ಪೂಜೆ [illegible] ಯಾವುವು ಎಂಬುದನ್ನು ತಿಳಿಯುವುದು ಮಾತ್ರ [illegible] 'ಸುಲಭನಾ [illegible] ನಮ್ಮ ಕರ್ನಾಟಕ' ಎಂದೂ ಹೇಳಬಹುದು. ಆದರೆ ಅದು ಯಾರಿಗೆ ' [illegible] ಭಕ್ತರಾಗುವುದು ಮಾತ್ರ [illegible] ಬರೀ ಬಾಯಿಯಿಂದ 'ಕರ್ನಾಟಕ' 'ಕರ್ನಾ[illegible]'ನದೂ ಆಗಲಿಕ್ಕಿಲ್ಲ. ಈಗ ಹಾಗೆನ್ನಿಸಿಕೊಳ್ಳುವುದಕ್ಕೂ ಕೆಲವರಿಗೆ ನಾಚಿಕೆ. ಅಂದ[illegible]ರಿಂದ, ಕರ್ನಾಟಕದ ಹಿತವಾಗುವ ಬಗೆಯೆಂತು? ಅದಕ್ಕೆ ಮುಂಚೆ ಕರ್ನಾಟಕವು [ಕ]ನಸು ಮನಸ್ಸಿನಲ್ಲಿ ಕಾಣಬೇಕು. ಯಾವುದೊಂದು ವಿಷಯದ ವಿಚಾರವನ್ನು ಮಾಡು[ವಾಗ] ಅದು ಕರ್ನಾಟಕದ ಹಿತಕ್ಕೆ ವಿರುದ್ಧವಾಗಿದೆಯೋ, ಅದರಿಂದ ಇಡೀ ಕರ್ನಾಟಕದ [ಅ]ಧಿಸುತ್ತದೆಯೋ' ಎಂಬ ಪ್ರಶ್ನೆಯನ್ನು ಮನಸ್ಸಿನಲ್ಲಿ ಹಾಕಿಕೊಂಡು, ಅದಕ್ಕೆ ಸರಿಯಾದ [ಉತ್ತರವ]ನ್ನು ಹುಡುಕಬೇಕು. ಉದಾಹರಣಾರ್ಥವಾಗಿ, ಎಲ್ಲರಿಗೂ ಅತ್ಯಂತ ಮಾನ್ಯವಾಗಿರುವ [ಸ್ವದೇಶಿಯ] ವಿಚಾರವನ್ನೇ ಮೊದಲು ತೆಗೆದುಕೊಳ್ಳಿರಿ. ನಮ್ಮಲ್ಲಿ "ಕರ್ನಾಟಕತ್ವದ ಕಲ್ಪನೆ ಸಂಕುಚಿತವಾದ ಕಲ್ಪನೆ"ಯೆಂದು ಮೂಗು ಮುರಿಯುವ ಶರಣರು ಇನ್ನೂ ಕೆಲವರಿ[ದ್ದಾರೆ]. ಅವರಿಗೆ ಭರತಭೂಮಿಯೆಂದೊಡನೆ ಮೈಯ್ಯುಬ್ಬುತ್ತದೆ. ಅವರೇನು ಅಪ್ರಮಾಣಿಕ[ರಲ್ಲ]. [ಆ]ದರೆ ಅವರಿಗೆ 'ಸ್ವದೇಶಿ' ವಿಷಯವು ಕೇವಲ ಕರ್ನಾಟಕದ್ದಾಗಿ ತೋರುವುದಿಲ್ಲ [ಅದು ಇ]ಡೀ ಭರತಖಂಡದ ವಿಷಯ. ಇದರಲ್ಲಿ ಏಕೆ ಕರ್ನಾಟಕತ್ವವನ್ನು ತರುವಿರಿ" [ಎಂಬ ಶ]ಂಕೆಯುಂಟಾಗುತ್ತದೆ. ಸ್ವದೇಶಿಯ ವಿಷಯವು ಒಂದು ದೃಷ್ಟಿಯಿಂದ ಇಡೀ ಭರತ[ಖಂಡದ] ವಿಷಯವೆಂಬುದನ್ನು ನಾವೂ ಒಪ್ಪುತ್ತೇವೆ. ಆದರೆ, ಅಷ್ಟುಮಾತ್ರದಿಂದ, ಅದರ [ವಿಚ]ಾರವನ್ನು ಮಾಡುವಾಗ ನಾವು ನಮ್ಮ ಕರ್ನಾಟಕ ದೃಷ್ಟಿಯನ್ನು ಬಿಟ್ಟು ಕೊಡಬೇಕೆಂ[ಬುದನ್ನು] ಮಾತ್ರ ನಾವು ಸರ್ವಥಾ ಒಪ್ಪುವದಿಲ್ಲ. ಮಹಾತ್ಮಾಗಾಂಧಿ, ದೇ. ಜವಾಹಿರಲಾಲ [ಮೊದಲಾದ] ಮುಂತಾದ ಹಲಕೆಲವು ದೇಶಭಕ್ತರು ಯಾವುದೊಂದು ಪ್ರಾಂತಕ್ಕೋಸ್ಕರವಾಗಿ ಕೆಲಸ [ಮಾಡುತ್ತಿ]ರದೆ ಇಡೀ ಭರತಖಂಡಕ್ಕೋಸ್ಕರ ಪ್ರಯತ್ನ ಮಾಡುತ್ತಿರುವರು. ಅಂಥವರು ಗುಜ[ರಾತ ಅ]ಥವಾ ಸಂಯುಕ್ತಪ್ರಾಂತ ಅಥವಾ ಕರ್ನಾಟಕಪ್ರಾಂತ ಎಂಬೀ ಪ್ರಾಂತಭೇದಗಳನ್ನು [ಎಣಿಸ]ದೆ ಇಡೀ ಭರತಖಂಡದ ಚಿತ್ರವನ್ನಷ್ಟೇ ಕಣ್ಣುಮುಂದಿಟ್ಟುಕೊಂಡು ಕಾರ್ಯ[ಮಾಡು]ವುದು ವಿಹಿತವೇ ಸರಿ. ಅಂಥವರಿಗೆ ನಿಮ್ಮ ನಿಮ್ಮ ಪ್ರಾಂತದ ಹಿತವನ್ನಷ್ಟೇ [ನೋಡಿರಿ ಎ]ಂದು ನಾವು ಉಪದೇಶಿಸುವುದಿಲ್ಲ. ಒಬ್ಬನ ಮೇಲೆ ಇಡೀ ಭರತಖಂಡದ ಉದ್ಧಾರದ [ಹೊಣೆಯ]ಿದೆಯೆಂದು ಅವನಿಗೆ ಎನಿಸುವುದು ಸ್ವಾಭಾವಿಕ. ಯಾರು ತಮ್ಮ ಕಾರ್ಯಕ್ಷೇತ್ರವನ್ನು [ಭರ]ತಖಂಡವನ್ನಾಗಿ ಇಟ್ಟುಕೊಂಡಿರುವರೋ, ಮತ್ತು ಯಾರಿಗೆ ಕನಸುಮನಸ್ಸಿನಲ್ಲಿ ಇಡೀ [ಭರತಖ]ಂಡವಷ್ಟೇ ಕಾಣುವುದೋ ಅವರ ಸಲುವಾಗಿ ನಾವು ಈ ಪ್ರಾಂತಿಕ ಅಭಿಮಾನದ ಪ್ರಶ್ನೆ[ಯನ್ನು] ಎತ್ತುವುದಿಲ್ಲ. ಸಾರಾಂಶ, ಯಾರ ಇಷ್ಟ ದೇವತೆಯು ಭಾರತ ಮಾತೆಯೋ ಅವರಿಗೆ [ನಾವು ಹೇ]ಳುವುದಿಲ್ಲ. ಆದರೆ, ಕರ್ನಾಟಕದಲ್ಲಿದ್ದು, ಕರ್ನಾಟಕವಷ್ಟೇ ತಮ್ಮ ಕಾರ್ಯಕ್ಷೇತ್ರ[ವೆಂದಿ]ಟ್ಟುಕೊಂಡು, ಕರ್ನಾಟಕದ ಮುಖಾಂತರವೇ ಭರತಭೂಮಿಯ ಸೇವೆಯನ್ನು ಮಾಡು[ತ್ತಿರುವ]ವರು, ಕರ್ನಾಟಕದಲ್ಲಿ ಸ್ವದೇಶಿಯ ಪ್ರಸಾರವು ಹೇಗೆ ಆದೀತೆಂಬುದನ್ನು ಯೋಚಿಸಬೇ[ಕು]. ಈಗ ನಮ್ಮಲ್ಲಿ, ಹೀಗೆ ಕರ್ನಾಟಕವನ್ನು ತುಚ್ಛದೃಷ್ಟಿಯಿಂದ ನೋಡುವ, ಅಥವಾ ಅಲಕ್ಷದಿಂದ [ಕಾಣು]ವುದೊಂದು ವರ್ಗವಿರುವುದು. ಇರಲಿ, ಇಂಥವರಿಗೆ ನಾವು ನಿಜವಾದ ರಾಷ್ಟ್ರೀಯ ಜನ[ರೆನ್ನು]ವುದಿಲ್ಲ. ನಾವು ಈಗ ಮಾತಾಡುವುದು ಕರ್ನಾಟಕದ ಸಾಮಾನ್ಯ ಜನತೆಯ ಸಂಬಂಧ[ದಲ್ಲಿ]. ಅವರಿಗೆ ನಾವು ಪುನಃ ಪುನಃ ಹೇಳುವುದೇನೆಂದರೆ, ಕನ್ನಡಿಗರೇ, ನೀವು ಕನ್ನಡಿಗರೆನ್ನಿಸಿ[ಕೊಳ್ಳ]ಲು ನಾಚಬೇಡಿರಿ. ಕರ್ನಾಟಕವು ನಮ್ಮ ಮಾತೃದೇವತೆಯು. ಅವಳ ಉದ್ಧಾರವಾಗದೆ ನಿಮ್ಮ ಜನ್ಮವು ಸಾರ್ಥಕವಾಗಲಾರದು. ಅವಳ ಉದ್ಧಾರ ಭರತಭೂಮಿಯ ಉದ್ಧಾರಕ್ಕೆ [ಸರ್ವ]ತೋಮುಖವಾಗಿಯೂ ಪೋಷಕವೇ ಆಗುವುದು. ಹೀಗೆ ಕರ್ನಾಟಕದ ಭಕ್ತರಾಗಬೇಕಾದರೆ ಹಗ[ಲಿರುಳು] ನಾವು 'ಕರ್ನಾಟಕ' 'ಕರ್ನಾಟಕ'ವೆಂದು ಜಪಮಾಡಬೇಕು. ಹಗಲಿರುಳು 'ಕರ್ನಾ[ಟಕ]' 'ಕರ್ನಾಟಕ'ವೆಂದು ಕನವರಿಸಬೇಕು. ಆಗ ಮಾತ್ರ ಅವಳ ಮಾನಸಿಕ ಪೂಜೆಯು [ಆ]ಗುವುದಲ್ಲದೆ, ನಾವೂ ಕರ್ನಾಟಕರು, ನಮಗೂ ಕರ್ನಾಟಕದ ಅಭಿಮಾನವಿದೆ ಎಂದು [ಹೇಳಿ]ಕೊಂಬ ಕೊಚ್ಚಿಕೊಳ್ಳುವುದರಿಂದ ಅದು ಸಾಧ್ಯವಾಗಲಾರದು.

[ಶ್ರೀ] ಬಿರ್ಲಾ ಇವರ ಪ್ರಯಾಣ

[ಪುಣೆ] ತಾ|| ೧೩— ಶ್ರೀ ಜಿ. ಡಿ. ಬಿರ್ಲಾ [ಇವರು] ಈ ಹೊತ್ತಿನ ದಿವಸ ಸಂಜೆಯಲ್ಲಿ ಮುಂ[ಬಯಿ]ಗೆ ಪ್ರಯಾಣ ಮಾಡಿದರು

(ಅ ಪ್ರ)

ಅಂದಮಾನವನ್ನು ರದ್ದು ಮಾಡಿರಿ.

ಮದ್ರಾಸ ತಾ| ೧೧— ಸ್ಥಳಿಕ ವಕೀಲ ಸಂಘದವರು ಈ ಹೊತ್ತಿನ ದಿವಸ ಸಭೆಯಲ್ಲಿ ಕೂಡಿ, ರಾಜಕೀಯ ಕೈದಿಗಳನ್ನು ಅಂದಮಾನಕ್ಕೆ ಕಳಿಸಕೂಡದೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವ ನಿರ್ಣಯ ಮಾಡಿಕೊಂಡರು.

ರಿಝರ್ವ ಬ್ಯಾಂಕ ಮಸೂದೆಯು

ಸಿಲೆಕ್ಟ ಕಮಿಟಿಗೆ

ಸಿಮಲಾ- ತಾ|| ೧೧— ರಿಝರ್ವ ಬ್ಯಾಂಕ ಮಸೂದೆಯು ನೇಟಿವ ಅಸೆಂಬ್ಲಿಯಲ್ಲಿ ಮೂರು ದಿನ [illegible] ನಡೆದು, ಅದು ಏಕಮತದಿಂದ ಕೌನ್ಸಿಲ್ ಅಫ್ ಸ್ಟೇಟ ಮತ್ತು ಅಸೆಂಬ್ಲಿಯ ಸಭಾಸದರ ಜಾಯಿಂಟ ಸಿಲೆಕ್ಟ ಕಮಿಟಿಗೆ ಒಪ್ಪಿಸಲ್ಪಟ್ಟಿತು. ಈ ಸಿಲೆಕ್ಟ ಕಮಿಟಿಯಲ್ಲಿ ಎರಡೂ ಗೃಹಗಳಿಂದ ಪ್ರತ್ಯೇಕವಾಗಿ ೧೬ ಜನ ಸಭಾಸರಿರುವರು. ಈ ಸಿಲೆಕ್ಟ ಕಮಿಟಿಯು [illegible] ತನ್ನ ವರದಿಯನ್ನು [illegible] ದಲ್ಲಿ [illegible] ಸ್ಪೆಶಲ್ ಅಫಿಸರನಕ್ಕೆ ಒಪ್ಪಿಸತಕ್ಕದ್ದು. [illegible] ಶೂಸ್ಟರರು [illegible] ಬ್ಯಾಂಕಿಗೆ ಅನುಕೂಲವಾಗಿಯೂ ಮತ್ತು [illegible] ವಿನಿಮಯ ದರವನ್ನು ಕಡಿಮೆ ಮಾಡುವ ಶಕ್ತಿಯನ್ನು ಪುನಃ ಎತ್ತಬಾರದೆಂದು ಎಚ್ಚರಿಕೆ ಕೊಟ್ಟು, ಸರಕಾರ ಅಭಿಪ್ರಾಯವನ್ನು ಸಮರ್ಥಿಸುವಾಗಲೂ ಸಭಿಕರ ಉತ್ಸಾಹ ಧ್ವನಿಗಳು ಕೇಳಬಂದವು (ಅ ಪ್ರ)

ಮಹಾತ್ಮರ ಪತ್ರಿಕೆಯು

ಸಿದ್ಧವಾಯಿತು.

ಪುಣೆ ತಾ|| ೧೩— ವರ್ಕಿಂಗ ಕಮಿಟಿ [illegible] ಮುಖಂಡರಲ್ಲಿ ನಡೆದ ಮಾತುಕತೆಗೆ ಪುನಃ ವಧ್ಯಾಹ್ನದಲ್ಲಿ ಪ್ರಾರಂಭವಾಯಿತು. ಮತ್ತು ಈ ಹೊತ್ತಿನ ದಿವಸ ಯಾವದೇ ಪ್ರಕಟನೆಯನ್ನು ಹೊರಗೆಡಹುವದಿಲ್ಲವೆಂದು ಪತ್ರಿಕಾ ಸುದ್ದಿಗಾರರಿಗೆ ತಿಳಿಸಲ್ಪಟ್ಟಿತು. ಮಹಾತ್ಮಾಗಾಂಧಿಯವರು ತಮ್ಮ ಪ್ರಕಟನೆಯನ್ನು ತಯಾರಮಾಡಿರುವರೆಂದೂ, ಅದರ ಮೇಲೆ ಈ ಹೊತ್ತಿನ ದಿವಸ ಚರ್ಚೆ ನಡೆಯತಕ್ಕದ್ದಿದೆಯೆಂದೂ ಗೊತ್ತಾಗುತ್ತದೆ. ಮಹಾತ್ಮಾಗಾಂಧಿಯವರು ಈ ದಿವಸ ಮುಂಜಾನೆ ಸಿದ್ಧಮಾಡಿದ ಪತ್ರಿಕೆಯೇ ಕೊನೆಯದಾಗಿರುವದಿಲ್ಲವಾದ್ದರಿಂದ, ಇನ್ನೂ ಚರ್ಚೆಗೆ ಅವಕಾಶವುಂಟು. ಆದ್ದರಿಂದಲೇ ಅದನ್ನು ಈ ಹೊತ್ತು ಹೊರಗೆಡಹತಕ್ಕದ್ದಲ್ಲವೆಂದು ನಿಶ್ಚಿತವಾಗಿದೆ (ಅ ಪ್ರ)

ಶೇಖುಪುರಾದಲ್ಲಿ ಕಾಯದೆಯ

ಜಾಳಿಗೆ.

ಲಾಹೋರ ತಾ|| ೧೩— ಸರಕಾರದವರು ವಿಶಿಷ್ಟ ಗ್ಯಾಜೆಟ್ ಹೊರಡಿಸಿ ೧೯೩೦ನೇ ಇಸ್ವಿಯ ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ೭ನೇ ಕಲಮು ಇಂದಿನಿಂದ ಶೇಖುಪುರಾದಲ್ಲಿ ಬಳಕೆಯಲ್ಲಿ ಬರುವದೆಂದು ಪ್ರಸಿದ್ಧಮಾಡಿದ್ದಾರೆ (ಅ ಪ್ರ)

ಬೆಳಗಾವಿಯಲ್ಲಿ

ಗವ್ಹರ್ನರರ ಕಾರ್ಯಕ್ರಮ.

ಬೆಳಗಾವ ತಾ|| ೧೦— ಮುಂಬಯಿಯ ಗವ್ಹರ್ನರರಾದ ಸರ್ ಫ್ರೆಡರಿಕ್ ಸಾಯಿಕ್ಸ ಇವರು ತಾ| ೨೯ ನೆ ದಿವಸ ಇಲ್ಲಿಗೆ ಬಂದು, ಒಂದೆರಡು ದಿನ ಇಲ್ಲಿ ನಿಂತುಕೊಳ್ಳುವರು. ಇಲ್ಲಿ ಅವರ ಕಾರ್ಯಕ್ರಮವೆಂದರೆ— ದಕ್ಷಿಣ ಭಾಗದಲ್ಲಿಯ ಯಾವತ್ತು ತಾಲೂಕುಗಳಲ್ಲಿಯ ಗೌಡರ ದರಬಾರ ಕೂಡಿಸುವರು. ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯ ಕಾಲೇಜದ ಅನಾವರಣ ಸಮಾರ ಭವನ್ನು ಔಪಚಾರಿಕ [illegible] ಯಲ್ಲಿ ಜರುಗಿಸುವರು. ಕಾಲೇಜ ಹಾಸ್ಟೆಲದ ಕಳಪದಿಯ ಕಲ್ಲನ್ನು ಕೂಡಿಸಿ, ಶಿರಸಂಗಿ ದೇಸಾಯರ ಭಾವಚಿತ್ರದ ಅನಾವರಣ ಸಮಾರಂಭ ನೆರವೇರಿಸುವರು.

ನಾ. ಗವ್ಹರ್ನರರವರಿಗೆ [illegible] ದ ಅಧಿಕ್ಕೆ ಡಿಸ್ಟ್ರಿಕ್ಟ ಲೋಕಲ್ ಬೋರ್ಡ ಮುನಿಸಿಪಾಲಟಿ, ಲಿಂಗಾಯತ ಸಮಾಜ, ಮುಸಲ್ಮಾನ ಸಮಾಜ ಮತ್ತು ಅಸ್ಪೃಶ್ಯ ವರ್ಗ ಇವರ ವತಿ[ಯಿಂದ ಮಾನಪತ್ರಗಳು ಅರ್ಪಿಸಲ್ಪಡುವವು.]

ಯಿಂದ ಮಾನಪತ್ರಗಳು ಅರ್ಪಿಸಲ್ಪಡುವವು. ಇದಲ್ಲದೆ ಅವರು ಜಿಲ್ಹೆಯ ಬೇರೆ ಬೇರೆ ತಾಲೂಕಗಳ ವತನದಾರರು ಮತ್ತು ಕುಲಕರ್ಣಿಯರ ಮಾನಪತ್ರಗಳನ್ನೂ ಸ್ವೀಕರಿಸುವರು

ಖಾದಿ ಕೊಳ್ಳುವವರಿಗೆ ಸುಸಂಧಿ

ನಾಡಹಬ್ಬ ಮತ್ತು ಮಹಾತ್ಮರ ಹುಟ್ಟಿದ ಹಬ್ಬದ ನಿಮಿತ್ತವಾಗಿ ಅಖಿಲ ಭಾರತ ಚರಖಾ ಸಂಘದವರು, ತಮ್ಮ ಖಾದಿ ಅಂಗಡಿಗಳಲ್ಲಿ ತಾ|| ೨೦ ರಿಂದ ೩ ನೇ ಅಕ್ಟೋಬರದವರೆಗೆ ಖಾದಿಯನ್ನು ಕೊಂಡುಕೊಳ್ಳುವವರಿಗೆ ಒಂದು ರೂಪಾಯಿಗೆ ಒಂದು ಆಣೆ ಕಮಿಶನ್ ಕೊಡುತ್ತಾರೆಂದು ಪ್ರಸಿದ್ಧ ಮಾಡಿದ್ದಾರೆ

ಗೌರೀಶಂಕರ ಹಾಗು ಬಸವೇಶ್ವರ

ಸ್ಪೇಶಲ್ ಯಾತ್ರಾ ಟ್ರೇನುಗಳ ಸಮಾಚಾರ.

ಇದೇ ಸಪ್ಟಂಬರ ತಿಂಗಳ ೧೦ ನೇ ತಾರೀಖಿನ ದಿವಸ ಹಿಂದುಸ್ಥಾನದ ಪ್ರವಾಸಕ್ಕಾಗಿ ಹೊರಡುವ ಬಸವೇಶ್ವರ ಯಾತ್ರಾ ಟ್ರೇನಿನ ಮ್ಯಾನೇಜರರಾದ ಮಿ ಎಕ್ಲಾಸಪೂರ ಹುಬ್ಬಳ್ಳಿ ಇವರು ಪ್ರವಾಸಿಕರು ಕೂಡದ್ದರಿಂದ ಮತ್ತು ವಿಪ್ಲವ ಕಾರಣದಿಂದಲೋ ರೇಲ್ವೆ ಕಂಪನಿಗೆ ಹಣ ತುಂಬದೆ ಗಾಡಿಯನ್ನು ಹೊರಡಿಸಲಿಲ್ಲ. ವ್ಯರ್ಥವಾಗಿ ೭೦ ೮೦೦೦ ರೂಪಾಯಿ ಜಾಹೀರಾತಿಗಾಗಿ ಖರ್ಚು ಮಾಡಿಕೊಂಡು ಕೈಮುಚ್ಚಿಕೊಂಡು ಕೂತರು ಪಾಪ!

ಎಂ ಎಸ್ ಎಂ ರೇಲ್ವೆ ಕಂಪನಿಯವರು ಸಪ್ಟಂಬರ-ಅಕ್ಟೋಬರ ತಿಂಗಳಲ್ಲಿ ಯಾವ ಸ್ಪೆಶಲ್ ಯಾತ್ರಾ ಟ್ರೇನುಗಳು ಹೊರಡುವದಿಲ್ಲ. ಯಾರೂ ನಮ್ಮ ಕಡೆಗೆ ಹಣ ವಗೈರೆ ತುಂಬಿ ಕಾಂಟ್ರ್ಯಾಕ್ಟ ಮಾಡಿಕೊಂಡಿಲ್ಲವೆಂದು ಕಳೆದ ತಿಂಗಳಲ್ಲಿ ಪ್ರಕಟಿಸಿದ್ದರು. ಇದರಿಂದಂತೂ ಇವೆರಡೂ ಕಂಪನಿಗಳ ಮೇಲಿನ ಪ್ರವಾಸಿಕರ ವಿಶ್ವಾಸವು ಹಾರಿಹೋಗಿ ಪ್ರವಾಸಿಕರು ಹಣ ತುಂಬಿ ತಿಕೀಟು ಕೊಳ್ಳಲಿಲ್ಲ. ಹೀಗಾಗಿ ಎರಡೂ ಕಂಪನಿಗಳು ನಿರಾಶೆಯಾದವು. ಆದರೂ ಗೌರೀಶಂಕರ ಕಂಪನಿಯ ಚಾಲಕರಾದ ಮಿ ತಿರೂರ ಇವರು ತಮ್ಮ ಕಂಪನಿಯ ಅಭಿಮಾನಕ್ಕಾಗಿ ಧೈರ್ಯಗೊಂಡು ರೇಲ್ವೆ ಕಂಪನಿಯವರ ಸಂಗಡ ದೀರ್ಘ ಪ್ರಯತ್ನ ಮಾಡಿ ತಮ್ಮ ಟ್ರೇನಿಗೆ ಬಂದ ಅನೇಕ ವಿಪತ್ತುಗಳನ್ನು ದೂರಮಾಡಿಕೊಂಡು ಅಕ್ಟೋಬರ ತಿಂಗಳಲ್ಲಿಯೇ ತಮ್ಮ ಟ್ರೇನು ಹೊರಡುವಂತೆ ರೇಲ್ವೆ ಕಂಪನಿಯವರಿಂದ ಸಮ್ಮತಿ ಪಡೆದಿದ್ದಾರೆಂದು ತಿಳಿದಿದೆ. ಈ ಟ್ರೇನು ಮೊದಲು ಅಕ್ಟೋಬರ ತಿಂಗಳ ೧೫ನೇ ತಾರೀಖಿಗೆ ಹೊರಡುವದೆಂದು ಪ್ರಕಟಿಸಿತ್ತು. ಆದರೆ ರೇಲ್ವೆ ಕಂಪನಿಯವರು ಹೊಸ ಕಾರ್ಯಕ್ರಮಗಳನ್ನು ಕೇಳಿದ್ದರಿಂದ ಅಕ್ಟೋಬರ ತಿಂಗಳ ೨೨ ನೇ ತಾರೀಖಿನ ದಿವಸ ಹಗಲು ೧ ಗಂಟೆಗೆ ತಮ್ಮ ಗಾಡಿಯು ಹೊರಡುವದೆಂದು ಪ್ರೊಗ್ರ್ಯಾಮು ಹಾಕಿ ಕಂಪನಿಗೆ ಕಳಿಸಿದ್ದಾರೆ. ಮಿ ತಿರೂರವರು ತಮ್ಮ ಕಂಪನಿಯ ಅಭಿಮಾನದಿಂದ ಕನ್ನಡಿಗರಿಗೆ ವಿಶೇಷವಾಗಿ ಲಿಂಗಾಯತರಿಗೆ ಹಿಂದುಸ್ಥಾನದ ತೀರ್ಥಯಾತ್ರೆಗಳನ್ನು ಸುಲಭವಾಗಿ ಮಾಡಿಕೊಳ್ಳುವಂತೆ ಸೌಕರ್ಯಗಳನ್ನು ಒದಗಿಸಿಕೊಡುವದಕ್ಕಾಗಿ ಪ್ರಯತ್ನಿಸುತ್ತಿರುವರು. ನಿಶ್ಚಯವು ಗೌರೀಶಂಕರ ಕಂಪನಿಯು ಬರುವ ತಿಂಗಳ ೨೨ ನೇ ತಾರೀಖಿಗೆ ಹೊರಡಲು ನಿಶ್ಚಯಮಾಡಿದೆಂದು ವಿಶ್ವಾಸನೀಯವಾಗಿ ತಿಳಿದು ಬರುತ್ತದೆ. ಈ ಪ್ರವಾಸದಲ್ಲಿ ಲಂಕೆಯ ಪ್ರವಾಸವೂ ಇದ್ದದರಿಂದ ಸಿಂಹಳದ್ವೀಪವನ್ನು ನೋಡಲು ಯಾತ್ರಿಕರಿಗೆ ಅನಾಯಾಸವಾಗಿ ಸಿಗುವದು

ಸರದಾರ ವಲ್ಲಭಭಾಯಿಯವರ ಪ್ರಕೃತಿ.

ಮುಂಬಯಿ ತಾ॥ ... — ಇಲ್ಲಿಯ ಪ್ರಸಿದ್ಧ ಸಾಲಿಸಿಟರ ದ ಶ್ರೀ ಮಂಗಳದಾಸ ಪಕ್ವಾಸಾ ... ... ಸೆ ... ನಾಶಿಕ ತುರಂಗದಿಂದ ಬಿಡುಗಡೆ ಹೊಂದಿ ಬಂದರು. ಅವರು ಒಂದು ಪತ್ರಿಕೆಯವರ ಮುಂದೆ ತೋರಿಸಿದ್ದು, ಅದರಲ್ಲಿ ಅವರು ಅನ್ನುವದೇನಂದರೆ— ಸರದಾರ ವಲ್ಲಭಭಾಯಿಯವರನ್ನು ಯೆರೋಡಾ ಜೇಲಿನಿಂದ ತಾ॥ ... ನೆ ಆಗಸ್ಟ ದಿವಸ ಈ ಜೇಲಿಗೆ ತಂದ ಕೂಡಲೆ ನನ್ನನ್ನು ಅವರ ಜೊತೆಗೆ ಇಟ್ಟರು. ನಮ್ಮ ಕೋಣೆಯು ಒಂದು ಪಕ್ಕದಲ್ಲಿ ಇತ್ತು. ಸರದಾರ ಡಾಕ್ಟರರು ಮತ್ತು ಅವರ ಕೈಕೆಳಗಿನ ಮೂವರು "ಕ" ವರ್ಗದ ಕೈದಿಗಳ ಕೋಣೆಗಳು ನಮ್ಮ ಕೋಣೆಯ ಕಡೆಗೆ ಯಾವಾಗಲೂ ಹಾಕುತ್ತಿದ್ದರು. ಕೆಲವು ದಿವಸದ ಮೇಲೆ ಓರ್ವ ... ಕೈದಿಯನ್ನು ನಮ್ಮ ಬರಾಕಿಗೆ ತಂದು ಇಟ್ಟರು. ಅವರೇ ದಿನದ ... ಮಾಡುತ್ತಿದ್ದರು ... ಆಗಸ್ಟ ತಿಂಗಳ ಕೊನೆಯಲ್ಲಿ ನನ್ನನ್ನು ಕ್ವಾರಂಟೈನ ... ಮತ್ತು ನಾವು ಇದ್ದ ಕೋಣೆಯಲ್ಲಿ ಬೇರೆ ಇದ್ದವರು ಕೈದಿಗಳನ್ನು ಇಟ್ಟರು ... ನೆ ತಾರೀಖಿನ ನನ್ನ ಬಿಡುಗಡೆಯಾಯಿತು. ... ಏನಾಯಿತೆಂಬುದು ನನಗೆ ಗೊತ್ತಿರುವದಿಲ್ಲ. ವಲ್ಲಭಭಾಯಿಯವರ ಮೂಗಿನ ನೋವು ಈಗ ಕಡಿಮೆಯಾಗಿದೆ. ಆದರೆ ಈಗ ಅವರಿಗೆ ಪಲ್ಲಿನ ತ್ರಾಸವಾಗಹತ್ತಿದೆ. ಇದರ ಹೊರತು ಅವರ ಪ್ರಕೃತಿಯು ನೆಟ್ಟಗಿದ್ದು, ಅವರು ಆನಂದವೃತ್ತಿಯಲ್ಲಿರುವರು.

ಗೆಯಾ ಒಳಸಂಚಿನ ಖಟ್ಲೆ

(೩ ಆರೋಪಿಗಳಿಗೆ ಭಯಂಕರ ಶಿಕ್ಷೆ.)

ಗಯಾ ತಾ॥ ೧೨— ಸ್ಪೇಶಲ ಸೆಶನ್ಸ ಜಡ್ಜ ಮಿ॥ ಬಶಿರುದ್ದೀನ ಇವರು ಈ ಹೊತ್ತಿನ ದಿವಸ ಗಯಾ ಒಳಸಂಚಿನ ಖಟ್ಲೆಯ ತೀರ್ಪು ಹೇಳಿ, ಆರೋಪಿಗಳಿಗೆ ಕೆಳಗಿನಂತೆ ಶಿಕ್ಷೆ ವಿಧಿಸಿದರು.

ಶ್ಯಾಮಚರಣ ಭರ್ತಾರ, ಡಾ॥ ಕೇಶವ ಮತ್ತು ವಿಶ್ವನಾಥ ಇವರಿಗೆ ಪ್ರತ್ಯೇಕವಾಗಿ ೭ ವರ್ಷ ಕಠಿಣ ಶಿಕ್ಷೆ ಮತ್ತು ೨೦೦ ರೂ ದಂಡ. ಸಹದೇವಸಿಂಗ, ಶತ್ರುಘ್ನ ಮತ್ತು ಜಯದೇವ ಇವರಿಗೆ ೫ ವರ್ಷ ಕಠಿಣ ಶಿಕ್ಷೆ. ೨೦೦ ರೂ ದಂಡ, ಲಾಲಪ್ರಸಾದ ೩ ವರ್ಷ ಕಠಿಣ ಶಿಕ್ಷೆ. ೩೦೦ ರೂ ದಂಡ, ಕೇದಾರನಾಥ ಮತ್ತು ಮಾಲವೀಯ ೩ ವರ್ಷ ಕಠಿಣ ಶಿಕ್ಷೆ. ವಿಜಯಕುಮಾರದಾಸ ಗುಪ್ತ, ರಾಧಾಮೋಹನ ಮಹಂತ ಮತ್ತು ಭಗವಾನದಾಸ ಇವರಿಗೆ ೨ ವರ್ಷ ಕಠಿಣ ಶಿಕ್ಷೆ, ದೇವನಾರಾಯಣ ಯಾದವ ೧ ವರ್ಷ ಕಠಿಣ ಶಿಕ್ಷೆ. ರಾಮಧ್ಯಾನ ಇವರು ನಿರ್ದೋಷಿಯಾಗಿ ಬಿಡುಗಡೆ ಹೊಂದಿದರು.

ನಾ. ಹೇಗ ಸಾಹೇಬರಿಗೆ ಪಂ. ಜವಾಹಿರಲಾಲರ ಉತ್ತರ

ಪಡಿ ತಾ॥ ೧೧ ಕೌನ್ಸಿಲ ಆಫ್ ಸ್ಟೇಟದಲ್ಲಿ ಶ್ರೀ ... ಇವರು ... ಕೈದಿಗಳ ... ನಾಗಿ ತಂದ ಠರಾವಿನ ... ಕ ... ಸಾ. ಹೇಗ ... ಕೈದಿಗಳ ಸಂಬಂಧದ ... ಬಂದ ... ಮಾಡುವರು ... ಮಾಡಿದ್ದರು ... ಮ ... ಪಂಡಿತ ಜ ... ಪತ್ರಿಕೆಯವರ ... ಒಂದು ಪತ್ರವನ್ನು ತೋರಿಸಿದ್ದು, ಅದರಲ್ಲಿ ಅವ

ರು ಅನ್ನುವದೇನಂದರೆ, ಈ ... ನನಗೆ ಅನಿಶ್ಚಿತ ... ಮಾಡಿ ... ಸಂಬಂಧದವರಲ್ಲಿ ... ವಿಶೇಷ ಉತ್ಸುಕನಾಗಿಲ್ಲ ... ರ, ಆದಾಗ್ಯೂ ... ಪತ್ರಿಕೆಯ ಮೇಲೆ ... ಸಂಗತಿಯ ... ಮನುಷ್ಯರಂತೆ ... ಶಿಕ್ಷೆಯ ... ಅವರ ಮೇಲೆ ... ಅಭಿಪ್ರಾಯಪಟ್ಟವನಾಗಿದ್ದೇನೆ.

ಗಂಡ ಹೆಂಡಿರು ಹಾಸಿಗೆಯಲ್ಲಿ ಒಮ್ಮೆಲೆ ಸತ್ತರು.

ಬನಾರಸ ತಾ॥ ೧೨— ಘುಲವಾಡಿಯಾ ಮುಹಲ ವೆಂಬಲ್ಲಿ ಗಂಡಹೆಂಡಿರಿಬ್ಬರು ಒಂದೇ ಹಾಸಿಗೆಯಲ್ಲಿ ಒಮ್ಮೆಲೆ ಸತ್ತು ಹೋಗಿರುವರು. ಜನರು ಸಂಶಯ ತೆಗೆದುಕೊಂಡು ಬಾಗಿಲವನ್ನು ಮುರಿದು ಒಳಗೆ ನೋಡಲಾಗಿ ಕೋಣೆಯ ದೃಶ್ಯವು ಕಂಡು ಬಂತು. ಕಾರಣವು ಗೊತ್ತಾಗಿರುವದಿಲ್ಲ.

ಅಡವಿ ಸತ್ಯಾಗ್ರಹದ ಬಗ್ಗೆ ೫ ಜನರಿಗೆ ಶಿಕ್ಷೆ.

ವರ್ಧಾ ತಾ॥ ೧೩— ಕಲವಾರ ಎಂಬಲ್ಲಿ ತಾ॥ ... ನೆ ದಿವಸ ಅಡವಿ ಸತ್ಯಾಗ್ರಹ ಮಾಡಿದ ಸಂಬಂಧವಾಗಿ ಕೈಗೆ ಮಾಡಲ್ಪಟ್ಟ ೫ ಜನ ಸ್ವಯಂಸೇವಕರಿಗೆ ಈ ಹೊತ್ತಿನ ದಿವಸ ಇಪ್ಪತ್ತು ತಿಂಗಳ ಕಠಿಣ ಶಿಕ್ಷೆಯಾಯಿತು.

ಕಲೆಕ್ಟರರಿಗೆ ಕರಿ ನಿಶಾನೆ

ಅಲಹಾಬಾದ ತಾ॥ ೧೨ ಅಲ್ಲಿಂದ ... ಮೈಲ ... ರುವ ಹಂಡಿಯಾ ಎಂಬಲ್ಲಿ ನಿನ್ನೆ ದಿವಸ ಕಲೆಕ್ಟರರ ಅಧ್ಯಕ್ಷತೆಯ ಕೆಳಗೆ ದೀವಾಣಿ ... ಸಭೆ ಕೂಡಿತ್ತು. ಸಭೆಗೆ ಅನೇಕ ಜನ ... ಸತ್ಯಾಗ್ರಹಿಗಳು ಬಂದಿದ್ದರು.

ಸಭೆಯ ಪರಿವಾಗ ಇಬ್ಬರು ಕಾಂಗ್ರೆಸ ಸ್ವಯಂಸೇವಕರು ... ಹಿಡಿದುಕೊಂಡು ಸಭಾಸ್ಥಾನಕ್ಕೆ ಬಂದು "ಕಲೆಕ್ಟರರೇ ತಿರುಗಿ ಹೋಗಿರಿ" ಎಂಬ ... ಪೋಲೀಸರು ಅವರನ್ನು ಕೈದ ಮಾಡಿ ಒಯ್ದರು.

ಹೇರ ಹಿಟ್ಲರರಿಗೆ ಸುಭಾಸರ ಬೆಂಬಲ

ವ್ಹಿಯೆನ್ನಾ ತಾ॥ ೧೨— ಸುಭಾಷಚಂದ್ರ ಬೋಸ ಇವರು ಜರ್ಮನಿಯಲ್ಲಿಯ ನಮ್ಮ ಪ್ರವಾಸವನ್ನು ಮುಗಿಸಿಕೊಂಡು ಈ ದಿವಸ ಇಲ್ಲಿಗೆ ಬಂದರು. ಪ್ರತಿನಿಧಿಗಳ ... ಅವರ ಭೆಟ್ಟಿಯನ್ನು ತೆಗೆದುಕೊಳ್ಳಲು ... ಅವರು ಹೇರ ಹಿಟ್ಲರ ... ಮನಸ್ಸಿನವರು ... ಅಭಿಪ್ರಾಯ ವ್ಯಕ್ತ ಮಾಡಿದರು.

ಸರ್ ಶಾನವಾಜೇಯವರ ಮಧ್ಯಸ್ತಿಕೆ

ಕಾಂಗ್ರೆಸ— ಸರಕಾರ ಸಮಝೋತೆ ಒಪ್ಪಂದ

ಸಿಮಲಾ ತಾ॥ ೧೨— ಸರ್ ಶಾನವಾಜ ಜಹಾಂಗೀರ ಇವರು ಇಲ್ಲಿಯ ತಮ್ಮ ಮುಕ್ಕಾಮದಲ್ಲಿ ವ್ಹಾಯಿಸರಾಯ ಪ್ರಮುಖರಿಂಗಡನ ಮತ್ತು ಸಾ. ಹೇಗ ಇವರನ್ನು ಎಷ್ಟೋ ಸಾರೆ ಭೆಟ್ಟಿಯಾಗಿ ಅವರೊಡನೆ ಮಾತುಕತೆಯಾಡಿರುವರು. ಅವರು ಇಂದ ... ನೆ ತಾರೀಖಿಗೆ ಪುಣೆಯ ಕಡೆಗೆ ಹೋಗಿ ಅಲ್ಲಿ ಮಹಾತ್ಮರ ಭೆಟ್ಟಿಗಾಗಿ ಪುಣೆಗೆ ಹೋಗುವರು. ಕಾಂಗ್ರೆಸ್ ಹಾಗು ಸರಕಾರದವರ ನಡುವೆ ಸಮ್ಮತಿಯು ಮಾಡಿ ಒಪ್ಪಂದವನ್ನು ಕುದಿಸಬೇಕೆಂದು ಅವರು ಹಿಡಿದುಕೊಂಡಿರುವರೆಂದು ತಿಳಿಯುತ್ತದೆ.

ಕರ್ನಾಟಕ

ಸೆಪ್ಟಂಬರ ತಾ॥ ೧೨— ಈ ಹೊತ್ತು ೧ ... ಗಂಟೆಗೆ ಇಲ್ಲಿ ಕೂಡಿದ್ದ ಸಭೆಯಲ್ಲಿ ಶ್ರೀ ಬಾಳಕೃಷ್ಣದೇವ/ಪಾಂಡೆಯವರು ಸ್ವಯಂ ಸ್ಫೂರ್ತಿಯಿಂದ ಕಾಯದೆಭಂಗದ ಇಚ್ಛೆಯನ್ನು ಪ್ರಕಟಿಸಿ, ಮಾರುದಿನದಿಂದ ಸೆರೆ ಸಿಂದಿ ಅಂಗಡಿಯ ಮುಂದೆ ಪಿಕೆಟಿಂಗ ಮಾಡುವೆನೆಂದು ಜಾಹೀರ ಮಾಡಿದರು. ಇದರಂತೆ ಅವರು ಇಬ್ಬರನ್ನು ಕೂಡಿಕೊಂಡು ಪಿಕೆಟಿಂಗಕ್ಕೆ ಹೋದರು. ಅಧಿಕಾರಿಗಳು ಅವರನ್ನು ಎಂದಿಸಿಕೊಂಡು ಹೋಗಿ ಎಕ್ಕಡಿಕೆ ಕೊಟ್ಟು ಬಿಟ್ಟುಬಿಟ್ಟರು.

ಬೆಳಗಾವಿ ತಾ॥ ೧೪— ಕೊಚಿನ ಮಹಾರಾಜರು ನಾಳಿನ ದಿವಸ ಮುಂಜಾನೆ ಇಲ್ಲಿಗೆ ಬಂದು ಸಂಜೆಯ ಗಾಡಿಯಿಂದ ಪುಣೆಯ ಕಡೆಗೆ ಪ್ರಯಾಣ ಮಾಡುವರು.

ಗೋಕಾವಿ ತಾ॥ ೧೨— ಸುಪ್ರಸಿದ್ಧ ನ ಕಲೀಕಾರರಾದ ಶ್ರೀ ಘೋಡಕೆಯವರು ಇಲ್ಲಿಗೆ ಬಂದಿದ್ದಾರೆ. ಇಲ್ಲಿಯ ಕಾರ್ಯಗಳನ್ನು ಮುಗಿಸಿಕೊಂಡು ಅವರು ಧಾರವಾಡಕ್ಕೆ ಹೋಗತಕ್ಕವರಿದ್ದಾರೆ.

ಗದಗ— ಇಲ್ಲಿಯ ಡಾಕ್ಟರ ... ಗೋಳ ಇವರ ಮೇಲೆ ಕಲೆಕ್ಟರ ಸಾಹೇಬರು ಫಿರ್ಯಾದು ... ಏಕೆ ... ಮಾಡಬಾರದೆಂಬ ಬಗ್ಗೆ ಕಾರಣ ಕೇಳಿಸಲು ತೀಳಿದ್ದರಷ್ಟೆ, ಅದರ ತಾ॥ ೧೧ ನೆ ದಿವಸ ಕಲೆಕ್ಟರರನ್ನು ಕಂಡು ಪ್ರಶ್ನೆಗಳಿಗೆ ಸರಿಯಾದ ಉತ್ತರ ಕೊಟ್ಟು ವಿಚಾರಣೆ ಮಾಡಲು ಕಲೆಕ್ಟರರಿಗೆ ಅಧಿಕಾರವಿಲ್ಲವೆಂದು ತಿಳಿಸಿರುವರು.

ಶಿಗ್ಗಾವಿ— ತಾ॥ ೧೧ನೆ ದಿವಸ ಇಲ್ಲಿ ತಾಲೂಕ ಎಲ್ಲ ಶಿಕ್ಷಕರ ಸಭೆ ಕೂಡಿ ತಾಲೂಕ ಶಿಕ್ಷಕರ ಸಂಘವು ಸ್ಥಾಪಿಸಲ್ಪಟ್ಟಿತು. ಶ್ರೀ ವೆಂಕಟಾಚಾರ್ಯ ಗುಡಿ ಇವರು ಅಧ್ಯಕ್ಷರಿದ್ದರು. ಅನೇಕ ಮಹತ್ವದ ನಿರ್ಣಯಗಳು ಸ್ವೀಕೃತವಾಗಿ ರಾಷ್ಟ್ರಗೀತೆಯೊಡನೆ ಸಭೆಯು ಸಮಾಪ್ತವಾಯಿತು. ಸಂಘಕ್ಕೆ ಪ್ರೋತ್ಸಾಹವರ್ಧವಾಗಿ ಡಾಕ್ಟರರು ಪೋಸ್ಟಮಾಸ್ತರರು ಮತ್ತು ಪಿ ಎಲ್ ಬಿ ಓವ್ಹರಸೀಯರರು ಇವರು ಧನ ಸಹಾಯವನ್ನಿತ್ತರು.

ಡಾ. ಕೆ. ಎಂ. ಕಲಕೇರಿ

ಲೆಬೊರೋಟರಿ ಮುಂಬಯಿ ನಂಬರ ...

ಬಾಟ್ಲಿ ಕಿಮ್ಮತ್ತು ೧—೨—೦

ಕೆಮಿಸ್ಟರಲ್ಲಿಯೂ ದೊರೆಯು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಕರಗು, ಬಿಳೇಕರಗು, ಕೆಂಪು ಕರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋದು, ಕಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ಹಿತಕಾರಿ ಮತ್ತು ಸದೃಢ ಆಗುತ್ತದೆ.

ಬಿ. ಟಿ. ಕೆರೂರ ತ್ರ್ಯಂಬಕ ಶೆಟ್ಟಿ ಮೆಡಿಕಲ್ ಸ್ಟೋರ್ಸ

ಬಾಗಲಕೋಟೆ



ಕಿರ್ಲೋಸ್ಕರ

ಕಲ್ಯಾಣ ಶೆಂಗಾ ಯಂತ್ರ

ಒಂದು ತಾಸಿನಲ್ಲಿ ೭೫ ಶೇರು ಸಿಪ್ಪೆ ಸುಲಿದ ಶೆಂಗಾ ಬೀಜ ... ಗಳನ್ನು ಒಡೆಯುವದು ...

ಬೀಜ ಶೆಂಗಾ ಒಡೆಯುವದು ಹೆಚ್ಚಿನ ಮಾಹಿತಿ ಬಗ್ಗೆ ಈ ಹೊತ್ತೇ ಬರೆಯಿರಿ.

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್

ಕಿರ್ಲೋಸ್ಕರವಾಡಿ ಜಿ. (ಸಾತಾರಾ)

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ.

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ.

ಧಾರವಾಡ, ತಾ. ೭-೯-೩೩ } ಕೃಷ್ಣರಾವ ಅಂಕಲಗಿ, ಮ್ಯಾನೇಜಿಂಗ ಡಾಯರೆಕ್ಟರ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕರ್ನಾಟಕ ಮುದ್ರಣಾಲಯದಲ್ಲಿ ಮುದ್ರಿಸಿ ಕರ್ನಾಟಕ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೫

यद्यत् परवशं दुःखं । यद्यदात्मवशं सुखम् ॥ मनु

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಸೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಸೂರನ್ಸ
ಕಂಪನಿಯೇ
ಉತ್ತಮವಾದುದು

ಇನಸ್ಸೂರನ್ಸ
ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತು ಪ್ರತಿನಿತ್ಯವೂ ಪ್ರಕಟವಾಗುವದು

ವರ್ಷ ೧೦]   ಧಾರವಾಡ— ಶನಿವಾರ ಭಾದ್ರಪದ ಬಹುಳ ೧೨ ಶಕೆ ೧೮೫೫ ತಾ|| ೧೬-೯-೩೩   [ಸಂಚಿಕೆ ೧೨೪

ಗಾಂಧಿ-ಜವಾಹಿರರ ಪ್ರಕಟಣೆ.

ಮಹಾತ್ಮರ ಪ್ರಕಟಣೆ.

ಪುಣೆ ತಾ|| ೧೪—

ನನ್ನ ಸಾರ್ವಜನಿಕ ಸೇವೆಯ ಕ್ರಮದಲ್ಲಿ ನಾನು ಮುಂದಿನ ಕ್ಷಣದಲ್ಲಿ ಕೈಕೊಳ್ಳತಕ್ಕ ಕಾರ್ಯವು ನನ್ನ ಕಣ್ಣಮುಂದೆ ಕಟ್ಟಿದಂತೆ ಇರುವುದು ನನ್ನ ನಿತ್ಯದ ಅನುಭವ. ಆದರೆ ಕಳೆದ ಆಗಸ್ಟ ತಿಂಗಳ ೨೩ ನೆಯ ದಿನ ಅನಿರೀಕ್ಷಿತವಾಗಿ ಆದ ನನ್ನ ಬಿಡುಗಡೆಯ ಬಳಿಕ ಮತ್ತು ಮತ್ತೂ ಕತ್ತಲೆಯು ಕವಿದಂತಾಗಿದೆ. ನನ್ನ ಸದ್ಯದ ಕರ್ತವ್ಯದ ಹಾದಿಯು ನನಗೆ ನಿಚ್ಚಳವಾಗಿ ಹೊಳೆಯಲೊಲ್ಲದು. ನನ್ನ ಆರೋಗ್ಯದ ಸದ್ಯಸ್ಥಿತಿಯನ್ನು ನೋಡಿದರೆ ಕಳೆದು ಹೋದ ಶಕ್ತಿ ಕಸುವನ್ನೂ ಕ್ಷೇಮವನ್ನೂ ಪುನಃ ಪಡೆಯಲು ಅದೆಷ್ಟು ವಾರಗಳು ಬೇಕಾಗುವವೋ ಹೇಳಲರಿಯೆ. ಆರೋಗ್ಯದ ದೃಷ್ಟಿಯಿಂದ ನಾನು ಮತ್ತೆ ಕೆಲಸಕ್ಕೆ ಯೋಗ್ಯನಾದೊಡನೆ ಸೆರೆಮನೆಯನ್ನು ಸ್ವಾಗತಿಸಬೇಕೋ ಅಥವಾ ತಪ್ಪಿಹೋದ ಈ ವರ್ಷದ ಕಾರಾಗೃಹವಾಸದ ಶಿಕ್ಷಾಕಾಲವನ್ನೆಲ್ಲ ಬೇರೆ ಕಾರ್ಯದಲ್ಲಿ ಕಳೆಯಬೇಕೋ ಎಂಬೆರಡು ಪ್ರಶ್ನೆಗಳು ನನ್ನನ್ನು ಎದುರಿಸಿದವು.

ಮನಃಪೂರ್ವಕ ಪರಮಾತ್ಮನ ಪ್ರಾರ್ಥನೆ ಮಾಡಿ, ಮತ್ತು ಚೆನ್ನಾಗಿ ವಿಚಾರ ಮಾಡಿ ನೋಡಿ ನಾನು ಸೆರೆಮನೆಯಲ್ಲಿ ಕಳೆಯಬೇಕಾಗಿದ್ದ ಈ ವರ್ಷದ ಉಳಿದ ಸಮಯವನ್ನೆಲ್ಲ, ಅಂದರೆ ಬರುವ ಆಗಸ್ಟ ತಿಂಗಳ ೩ ನೆಯ ತಾರೀಖಿನ ವರೆಗೆ, ನಾನಾಗಿ ಸವಿನಯ ಶಾಸನಭಂಗದಲ್ಲಿ ಉಪಯೋಗದ ಕಾರ್ಯವನ್ನು ಕೈಕೊಂಡು ಸೆರೆಮನೆಯನ್ನು ಸೇರಬಾರದೆಂದು ನಿರ್ಧಾರ ಮಾಡಿದ್ದೇನೆ.

ಆದರೆ ಈ ನಿರ್ಣಯದಿಂದ [illegible] ಪುಣೆಯಲ್ಲಾದ ಮಂತ್ರಾಲೋಚನೆಯ ಸಭೆಯಲ್ಲಿ ಕೊಟ್ಟ ಹೇಳಿಕೆಗೆ ಯಾವ ವಿಧದ ಬಾಧೆಯೂ ತಟ್ಟಿರದು. ನನ್ನ ಭಾಗದ ಕಾರ್ಯವನ್ನು ನಾನು [illegible] ನಿಲ್ಲಿಸುವುದು ದುರ್ಭಾಗ್ಯದ ಸಂಗತಿಯಾದರೂ ಅತ್ಯಂತ ಅಗತ್ಯವಾದ್ದರಿಂದ ತಪ್ಪಿಸಕ್ಕೆ ಬಾರದ ವಿಷಯವಾಗಿದೆ.

ನನ್ನ ಬಿಡುಗಡೆಯು ನನ್ನನ್ನು ಅತ್ಯಂತ ಇಕ್ಕಟ್ಟಿನ ಇರುಕಿನಲ್ಲಿ ಧರ್ಮಸಂಕಟದಲ್ಲಿ ತಂದಿಟ್ಟಿದೆ. ಆದರೆ ನನ್ನ ಬಿಡುಗಡೆಯಿಂದುಂಟಾದ ಈ ಪರಿಸ್ಥಿತಿಯಲ್ಲಿ ನನ್ನಂತಹ ವಿನಮ್ರ ಸತ್ಯಸಾಧಕನೂ ಸತ್ಯಾಗ್ರಹಿಯೂ ಮರಳಿ ಸೆರೆಮನೆಯ ವಾಸವನ್ನೇ ಆಮಂತ್ರಿಸುವುದೆಂದರೆ ಅದೇಕೋ ನನಗೆ ಸರಿದೋರದು. ಬಿಡುಗಡೆಯ ಬುಡದಲ್ಲಿನ ಉದ್ದೇಶವು ಯಾವುದೇ ಇರಲಿ ಅದರೊಡನೆ ನಾನು ಕಾದಾಡುವುದಿಲ್ಲ. ನಾನು ಚೆನ್ನಾಗಿ ಯೋಚಿಸಿ ಅದರ ಸಂಪೂರ್ಣ ಸದುಪಯೋಗವನ್ನೇ ಮಾಡಬೇಕಾಗಿದೆ. ಈ ಬರುವ ಆಗಸ್ಟ ತಿಂಗಳೊಳಗೆ ನಾನು ನನ್ನ ಕಾರ್ಯವನ್ನು ಪ್ರಕಟಿಸಿ ಕಾರ್ಯಕ್ರಮವನ್ನು ಬದಲಿಸಿದ್ದರೆ ತಾವೇ ಏನೊಂದು ಸರಕಾರದವರು ನನ್ನನ್ನು ಮತ್ತೆ [illegible] ವಂತಾಗುವುದೆಂದು ನನಗೆ ತೋರುತ್ತದೆ. ಸತ್ಯಾಗ್ರಹಿ [illegible] ಇಂತಹ [illegible] ರಲಾರನು.

೨

ಸೆರೆಮನೆಯನ್ನು ಸೇರುವ ಕಾರ್ಯಕ್ರಮವನ್ನು ತಾತ್ಕಾಲಿಕ ತಳ್ಳುವ ಈ ನನ್ನ ನಿರ್ಧಾರವು ನನಗೆ ವಿಷದ ಬಟ್ಟಲಿನಂತಾಗಿದೆ. ಕಳೆದ ಆಗಸ್ಟ ೧೬ ನೆಯ ದಿನ ನನ್ನ ನಿರಾಹಾರದ ಉಪವಾಸ ಆರಂಭವಾದಾಗ ನನ್ನ ಆಳಿಕೆಯ ಅನಿಶ್ಚಿತಕಾಲ ಆಯುಗಳನ್ನು ವಿನಾಶಕಾರಕ ವಿಪತ್ತುಗಳನ್ನೂ ಕಣ್ಣಾರೆ ಕಂಡು ಕೈಬಾಗಿ ನೋಡುತ್ತ ಕೂಡುವುದರಿಂದ ನನಗೆ ತಾಳಲಾರದ ತೀವ್ರ ವೇದನೆಯುಂಟಾಗುತ್ತದೆಂದು ನಾನು ಹೇಳಿದ್ದು ಎಲ್ಲರಿಗೂ ಸುಪರಿಚಿತವಾದ ಸರಳವಾದ ಸತ್ಯಸಂಗತಿ. ಆ ದೃಶ್ಯವು ಒಂದಿನಿಷ್ಟೇ ಇಂದೂ ಭೀಕರ ಆದರೆ ಅಷ್ಟೇ ಸತ್ಯವಾಗಿದೆ. ಈ ಸಲ ಕರ್ತವ್ಯದೆದುರು ನಾನು ಅದನ್ನು ಸಹಿಸಲು ಕಲಿಯಬೇಕಾಗಿದೆ. ಆ ಕ್ರೂರವೇದನೆಯನ್ನು ತಾಳಬೇಕಾಗಿದೆ. ಆದರೆ ಸರಕಾರದವರು ಮಾನಸಿಕ [illegible] ಗಾಗಿ ಇಲಿಗೆ ಆಟ ಬೆಕ್ಕಿಗೆ ಪ್ರಾಣಸಂಕಟ ' ವೆಂಬ ನೀತಿಯನ್ನು ಕೈಕೊಂಡರೆ ನಾನು ಅದನ್ನು ಸಮ್ಮತಿಸಲಾರೆ. ಆದುದರಿಂದ ಪುನಃ ನನ್ನನ್ನು ಒಂದು ವೇಳೆ ಸೆರೆಹಿಡಿದು ಬಂಧಿಸಿದ್ದಾಗ ನಾನು ಹರಿಜನ ಕಾರ್ಯವನ್ನು ಕೈಕೊಳ್ಳಲು ಬಾರದಂತೆ ನನಗೆ ನಿರ್ಬಂಧವಿಟ್ಟ ಪಕ್ಷಕ್ಕೆ ನನಗೆ ಆತ್ಮಪ್ರೇರಣೆಯು ಆಗುವುದಾದರೆ ನಾನು ಅನಶನ ಉಪವಾಸವನ್ನು ಕೈಕೊಳ್ಳುವೆ. ಆಗ ಜೀವಕ್ಕೆ ಅತ್ಯಂತ ಅಪಾಯದ ಕಾಲವು ಸಮೀಪಿಸಿದಾಗ ಈ ಸಲದಂತೆ ಬಿಡುಗಡೆ ಮಾಡಿದರೆ ನಾನು ಕೇಳಿಸು. ಆಗ ಮಾತ್ರ ಯಾವ ' ನೆವದಿಂದಲೂ ಉಪವಾಸವನ್ನು ಮುರಿಯಲಾರೆ.

೩

ನನ್ನ ತಾತ್ಕಾಲಿಕ ಯೋಜನೆಗಳನ್ನೂ ನಿಚ್ಚಳವಾಗಿ ಇಲ್ಲಿ ಹೇಳಲಿರಲಾರೆ. ನಾನು ಅಭಿಯೋಗಾತ್ಮಕ ಶಾಸನಭಂಗ ಚಳವಳದಿಂದ ದೂರ ಇರಬಲ್ಲೆ, ಆದರೆ ನಾನು ಸ್ವತಂತ್ರ ನಿರುಪದ್ರವಿ ಕಾರ್ಯಕೆಲಸಗಾರರು ಬಂದು ನನ್ನ ಉಪದೇಶವನ್ನು ಕೇಳಿದರೆ ನಾನು ಇಲ್ಲವೆನ್ನಲಾರೆ. ರಾಷ್ಟ್ರೀಯ ಚಳವಳವು ತಪ್ಪುದಾರಿಯನ್ನು ತುಳಿಯುತ್ತಿದ್ದರೆ ಅದನ್ನು ತಡೆದು ತಿದ್ದುವುದೂ ನನ್ನ ಕರ್ತವ್ಯವಾಗುವುದು. ಹಿಂಸಾಮಾರ್ಗದಿಂದ ಸತ್ಯವನ್ನು ಸಾಕ್ಷಾತ್ಕರಿಸುವುದು ಸತರಾಂ ಸಾಧ್ಯವಿಲ್ಲೆಂಬ ನಂಬಿಗೆಯು, ನನ್ನ [illegible] ಕ್ಷಣಕ್ಕೂ ದೃಢವಾಗಿ ಬೆಳೆಯುತ್ತದೆ.

ನನ್ನ ಮಟ್ಟಿಗೆ ರಾಷ್ಟ್ರದ ಸ್ವಾತಂತ್ರ್ಯ ಸಂಪಾದನಕ್ಕೂ ಸತ್ಯಶೋಧನಕ್ಕೂ ಭೇದವಿಲ್ಲ. ದಬ್ಬಾಳಿಕೆಯ ಸ್ವರೂಪತ್ವದವರು ಕೆಲ ಕೆಲವು ಆದರ ದಬ್ಬಾಳಿಕೆಗೆ ಗುರಿಯಾದ ಪ್ರಜೆಗಳು [illegible] ಹಿಂಸಾಮಾರ್ಗವು [illegible] ವಾದುದೇ ಅದಕ್ಕೆ ಪರಿಣಾಮಕಾರಕ ಯೋಗ್ಯ ಉತ್ತರವನ್ನು ಕೊಡಲು ಸವಿನಯ ಶಾಸನ ಭಂಗಕ್ಕಿರುವ ಸಾಮರ್ಥ್ಯವು ಹಿಂಸೆಗೆ [illegible] ಆದುದರಿಂದ ಇಲ್ಲಿ ಉಲ್ಲೇಖಿಸಿರುವುದಕ್ಕಿಂತ ಹೆಚ್ಚಿನ ಹಾಳೆಗಳನ್ನು ನಾನು ಪ್ರಯತ್ನಪಟ್ಟರೆ ನನ್ನ ತಪ್ಪಿದ ನಿಷ್ಠೆಗೆ ದೊಡ್ಡ ದ್ರೋಹ ಮಾಡಿದ ಮಹಾಪರಾಧಕ್ಕೆ ನಾನು ಗುರಿಯಾಗುವೆ. ಸರಕಾರದವರು ನನ್ನನ್ನು ಸ್ವತಂತ್ರವಾಗಿರಗೊಟ್ಟರೆ ನಾನು ಈ ಕಾಲವನ್ನು ಹರಿಜನ ಸೇವೆಯಲ್ಲಿಯೂ ನನ್ನ ಆರೋಗ್ಯಕ್ಕೆ ಬಾಧಕವಾದ ಇನ್ನಿತರ ವಿಧಾಯಕ ಕಾರ್ಯದಲ್ಲಿಯೂ ಉಪಯೋಗಿಸುವೆನು.

ಸವಿನಯ ಶಾಸನಭಂಗದಂತೆ ಶಾಂತಿಯೂ ಒಂದು ನನ್ನ ಜೀವನದ ಅಂಗವೆಂಬುದನ್ನು ನಾನು ಇಲ್ಲಿ ಪುನಃ ಹೇಳುವ ಆಗತ್ಯವಿಲ್ಲ. ಶಾಂತಿಯು ಸಿಕ್ಕದೆಂಬ ಮಾತು ಮನವಟ್ಟಿದೊಡನೆಯೇ ಸತ್ಯಾಗ್ರಹಿಯು ಸವಿನಯ ಶಾಸನಭಂಗವನ್ನು ಕೈಕೊಳ್ಳುವನು. ಆದುದರಿಂದ ನನ್ನ ವಶಕ್ಕೆ ನಾನು ಸ್ವತಂತ್ರನಾಗಿರುವವರೆಗೆ ನನಗೆ ಸಮ್ಮತವಾದ ಒಪ್ಪಂದಕ್ಕಾಗಿ ಸಾಧ್ಯವಿದ್ದ ಸಕಲ ಪ್ರಯತ್ನಗಳನ್ನು ಮಾಡುವೆನು.

[ಅ ಪ್ರೆ]

ಪಂಡಿತ ಜವಾಹಿರರ ಪ್ರಕಟಣೆ

ಪುಣೆ ತಾ|| ೧೪ — ಪಂಡಿತ ಜವಾಹಿರಲಾಲ ನೆಹರೂ ಇವರು ಕೆಳಗಿನ ಪ್ರಕಟಣೆಯನ್ನು ಪತ್ರಿಕೆಗಳಿಗೆ ಪ್ರಸಿದ್ಧವಾಗಲು ಕೊಟ್ಟಿದ್ದಾರೆ. ಅದರ ಆಶಯವೆಂತೆಂದರೆ —

ನಾನು ಕಾರಾಗೃಹದಿಂದ ಬಿಡುಗಡೆ ಹೊಂದಿ ಬಂದ ಬಳಿಕ, ಭಯಂಕರ ಅಸ್ವಸ್ಥತೆಯಿಂದ ನರಳುತ್ತಿರುವ ನನ್ನ ಮಾತೃಶ್ರೀಯವರ ಕಡೆಗೆ ಹೋಗುವದೇ ನನ್ನ ಮೊದಲನೆ ಕರ್ತವ್ಯವಾಗಿತ್ತು. ಅದರಂತೆ ನಾನು ಕೂಡಲೆ ಮಾತೃಶ್ರೀಯವರು ಇರುವ ಆಸ್ಪತ್ರೆಗೆ ಹೋಗಿ ಅವರ ಭೆಟ್ಟಿ ತೆಗೆದುಕೊಂಡೆ. ಅವರ ಪ್ರಕೃತಿಯು ಗಣನೀಯ ಚಿಂತಾಜನಕವಾಗಿದ್ದು ಮತ್ತು ನನ್ನ ಮನಸ್ಸು ತ್ರಸ್ತವಾಗಿದ್ದರೂ ಸಹ, ದೇಶದಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿ ಹಾಗು ಸ್ವಾತಂತ್ರ್ಯ ಯುದ್ಧದ ಪ್ರಗತಿ ಇವುಗಳ ಬಗ್ಗೆ ವಿಚಾರ ಮಾಡದೆ ಕೂಡುವದು ನನ್ನಿಂದಾಗಲಿಲ್ಲ.

ನಾನು ಯಾವದೇ ಚಳವಳಿಯಿಂದ ಈಗ ೨೦ ತಿಂಗಳಿಂದ ಅಲಿಪ್ತನಿರುವೆ. ಇದಲ್ಲದೆ ಗಾಂಧಿಜಿಯವರನ್ನು ಕಾಣದೆ ಎರಡು ವರ್ಷಗಳ ಮೇಲೆ ಆಗಿ ಹೋಯಿತು. ಈ ಮಧ್ಯದಲ್ಲಿ ಎಷ್ಟೋ ಸಂಗತಿಗಳು ಸಂಭವಿಸಿದ್ದುಂಟು. ಸಂಯುಕ್ತ ಪ್ರಾಂತದ ಕೆಲವು ಮಿತ್ರರೊಂದಿಗೆ ವಿಚಾರ ಮಾಡಿ ಸದ್ಯದ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಪ್ರಯತ್ನ ಮಾಡಿದೆ. ಆದರೆ ಎರಡು ದಿನಗಳಿಂದ ಅಗಲಿದ ಗಾಂಧೀಜಿಯವರನ್ನು ಕಾಣದೆ ಇರುವದೆಂತು? ಇತ್ತ ಮಾತೃಶ್ರೀಯವರನ್ನು ಅಗಲಿ ಹೋಗುವದೂ ಕಠಿಣ ತೋರಿತು. ಆದರೆ ಸ್ವಲ್ಪ ದಿನ ಅಗಲಿ ಹೋಗಲಿಕ್ಕೇನೂ ಅಡ್ಡಿಯಿಲ್ಲೆಂದು ತೋರಿದ್ದರಿಂದ ಕೂಡಲೆ ನಾನು ಪುಣೆಗೆ ಹೊರಟು ಬಂದೆ. ಗಾಂಧೀಜಿಯವರೊಡನೆ ಪೇಟ ಮಂದಿರದ ವಿಚಾರವಿನಿಮಯ ಮಾಡಿ ನನ್ನ ವಿಚಾರಗಳನ್ನು ಅವರ ಮುಂದೆ ಮಂಡಿಸಿ, ಅವರ ಸಲಹೆಗಳನ್ನು ಕೇಳಿಕೊಂಡೆ. ಈ ವಿಚಾರವಿನಿಮಯದಲ್ಲಿ ಎರಡು ಪ್ರಶ್ನೆಗಳು ನಮ್ಮನ್ನು ಎದುರಿಸಿದವು. ಸ್ವಾತಂತ್ರ್ಯ ಯುದ್ಧದ ವ್ಯಾಪಕವಾದ ರಾಷ್ಟ್ರೀಯ ಪ್ರಶ್ನೆಯೊಂದು. ಮತ್ತು ಗಾಂಧೀಜಿಯವರನ್ನು ಸರಕಾರದವರು ಅನಿವಾರ್ಯವಾಗಿಯೇ ಜೇಲಿನಿಂದ ಬಿಟ್ಟದ್ದರಿಂದ ಉದ್ಭೂತವಾದ ವೈಯಕ್ತಿಕ ಪ್ರಶ್ನೆಯೊಂದು. ಕೊನೆಯ ಪ್ರಶ್ನೆಯನ್ನು ಹೇಗೆ ಬಿಡಿಸಬೇಕೆಂಬುದು ಗಾಂಧೀಜಿಯವರನ್ನೇ ಕೂಡಿತ್ತು. ಈ ವಿಷಯದಲ್ಲಿ ಅವರ ನಿರ್ಣಯದಿಂದ ರಾಷ್ಟ್ರದ ಮೇಲೆ ವಿರುದ್ಧ ಪರಿಣಾಮವಾಗದಿದ್ದರೂ ಅದು ಪ್ರಾಮುಖ್ಯವಾಗಿ ಅವರಿಗೊಬ್ಬರಿಗೇನೆ ಸಂಬಂಧಿಸಿದ್ದಿತು. ನಾನು ಪುಣೆಗೆ ಬಂದ ಉದ್ದೇಶವೆಂದರೆ, ಮಹಾತ್ಮರನ್ನು ಕಂಡು ನನ್ನ ಮನಸ್ಸಿನಲ್ಲಿ ಕೆಲವು ವಿಷಯಗಳ ಸಂಬಂಧವಾಗಿ ಉದ್ಭೂತವಾದ ಶಂಕಾಕುಶಂಕೆಗಳನ್ನು ಹೋಗಲಾಡಿಸಿಕೊಂಡು ಹೋಗುವದೇ ಆಗಿತ್ತು. ಆದರೆ ಈ ನಮ್ಮ ವಿಚಾರವಿನಿಮಯವನ್ನು ಸಾರ್ವಜನಿಕರು ಕುತೂಹಲ ದೃಷ್ಟಿಯಿಂದ ನಿರೀಕ್ಷಿಸುತ್ತಿರುವದು ತೋರಿಬಂದಿದೆ. ನಮ್ಮ ಈ ಸಂಭಾಷಣದ ವಿಷಯವಾಗಿ ಸಾರ್ವಜನಿಕ ಪ್ರಕಟಣೆಯು ಹೊರಬೀಳುವದಾಗಿ ಅವರು ಆಶೆ ಮಾಡಿಕೊಂಡಿರುವಂತೆ ಕಾಣುತ್ತದೆ. ಈ ವಿಚಾರ ವಿನಿಮಯದಲ್ಲಿ ನಡೆದ ಕೆಲವು ಮಹತ್ವದ ವಿಷಯಗಳನ್ನು ಸಾರ್ವಜನಿಕರ ಮುಂದೆ ಇಡುವ ಸುಲಭವಾದ ಉಪಾಯವೆಂದರೆ, ಗಾಂಧೀಜಿ ಹಾಗು ನಾನು ಪರಸ್ಪರ ಪತ್ರವ್ಯವಹಾರ ಸಾಗಿಸಿ ಅವುಗಳನ್ನು ಪ್ರಕಟಿಸುವದೇ ಆಗಿರುತ್ತದೆ ಮತ್ತು ಯೋಗ್ಯ ಸಮಯ ನೋಡಿಕೊಂಡು ಹೀಗೆ ಮಾಡುವದು ಗೊತ್ತಾಗಿದೆ. (ಅ ಪ್ರೆ)

ಮಹಾತ್ಮ ಗಾಂಧಿಯವರಿಂದ ಸ್ಫೂರ್ತಿಯನ್ನು ಹೊಂದಿ ಅವರ ನೇತೃತ್ವದ ಕೆಳಗೆ ಆಳಿದ ಚಿರಸ್ಮರಣೀಯವಾದ ೧೩ ವರ್ಷಗಳಿಂದ, ಇತರ ಅಸಂಖ್ಯಾತ ದೇಶಬಂಧುಗಳು ಮತ್ತು ಭಗಿನಿಯರೊಡನೆ ಹಿಂದುಸ್ಥಾನದ ಸ್ವಾತಂತ್ರ್ಯದ ಯುದ್ಧದಲ್ಲಿ ಭಾಗವಹಿಸಿಕೊಳ್ಳಲು ನನಗೆ ಅನುವು ದೊರೆತಿದ್ದುದು ನಾನು ಭಾಗ್ಯವೆಂದೇ ತಿಳಿದುಕೊಳ್ಳುತ್ತೇನೆ. ನಾನು ಈ ವಿಷಯವನ್ನು ಎಂದಿನಿಂದಲೂ ರಾಜಕೀಯ ಇಲ್ಲವೆ ಆರ್ಥಿಕ ದೃಷ್ಟಿಯಿಂದ ವಿಚಾರ ಮಾಡುತ್ತ ಬಂದಿದ್ದೇನೆ. ಸತ್ಯಾಗ್ರಹದ ನೈತಿಕ ಮತ್ತು ವ್ಯಾವಹಾರಿಕ ಸ್ವರೂಪವು ನನಗೆ ಎಂದಿನಿಂದ ಪ್ರಿಯವಾಗಿದ್ದರೂ ನಾನು ಧಾರ್ಮಿಕ ಇ

(ನಾಲ್ಕನೇ ಪುಟ ನೋಡಿರಿ)

ಹೊಂಗೋಲ



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ಕಚ್ಚೂರ

ಶಾಸ್ತ್ರಶುದ್ಧ ಉತ್ತಮ ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸವಾಗಿಯೂ, ಆಗುವದು. "ಹೆಮ್ಮುಗುಲು" ವಸಡೆಗಳ ರಕ್ತಸ್ರಾವ ನಿಲ್ಲಿಸಲು ಸರ್ವೋತ್ಕೃಷ್ಟವಾದ ವಸ್ತುವೆಂದು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಹೆಮ್ಮುಗುಳಿನ ಸತ್ವವು 'ಕಚ್ಚೂರ' ದಂತ ಮಂಜನದಲ್ಲಿ ಅಡಕವಾಗಿದೆ. ಆಹಾರದ ಅನೇಕ ಕಣಗಳು ಹಲ್ಲುಗಳ ಸಂದಿಗಳಲ್ಲಿ ಉಳಿದು ಕೊಳೆತು ಕ್ರಿಮಿಗಳಾಗಿ ಹಲ್ಲು ಮತ್ತು ವಸಡೆಗಳು ಕೆಡುವವು. ಆದರೆ ಈ ಕ್ರಿಮಿಗಳು ಕಚ್ಚೂರ ದಂತಮಂಜನದ ಉಪಯೋಗದಿಂದ ನಾಶವಾಗಿ, ಹಲ್ಲುಗಳು ಒಸಡೆಗಳು ಬಲಿಷ್ಟವಾಗಿ ಬಾಯಿಯೊಳಗಿರುವ ದುರ್ವಾಸನೆಯು ಅಳಿದು ಸುವಾಸವುಂಟಾಗುವದು. 'ಕಚ್ಚೂರ' ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ತಿಳಿಯಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆದ್ದು ಮಾರುಗೆದ್ದು" ಎಂಬ ನಾಣ್ಣುಡಿಯಂತೆ ನಡೆಯಿರಿ. ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹಳೆಯದಾದ ದೇಶಪ್ರಸಿದ್ಧ ಸತ್ಯ ಪ್ರತಿಷ್ಠಿತವಾದ
ಹೆಚ್ಚಿನ ಲಾಭ ನೋಡದೆ ಲೋಕಸೇವೆಗೆ ಆಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

೧೯೨೯ನೇ ಇಸವಿಯಿಂದ ತಾ|| ೧೬-೯-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ, ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

ಶ್ರೀ ಕಾಶೀ ರಾಮೇಶ್ವರ ಸಹ ಸಿಂಹಲದ್ವೀಪ ಲಂಕಾಕ್ಷೇತ್ರಗಳ ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಪ್ರೇಕ್ಷಣೀಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು ಸನ್ ೧೯೩೩ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು|| ೧೨) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ ಶಂಕರಪುರ ಅಕ್ಟೋಬರ ತಾ|| ೨		೧೯ ಲಖನೌ	೨೪	೩೭ ಕುಂಭಕೋಣಂ	೧೫
೨ ನಾಶಿಕ	೩-೪	೨೦ ಅಯೋಧ್ಯಾ	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಹಾಬಾದ	,,	೩೯ ಕನ್ಯಾಕುಮಾರಿಗೆ [ಹಡಗದಿಂದ]	೧೮
೪ ಸೋಮನಾಥಕ್ಕೆ (ಹಡಗದಿಂದ)	೮-೯	೨೨ ಪ್ರಯಾಗ	೨೬-೨೭	೪೦ ಕೊಲಂಬೊಕ್ಕೆ [ಹಡಗದಿಂದ]	೧೯-೨೦-೨೧
೫ ವೇರಾವಳ	,,	೨೩ ಕಾಶಿ	೨೮-೨೯-೩೦-೩೧ ನವ್ಹೆಂಬರ ತಾ|| ೧	೪೧ ಕ್ಯಾಂಡಿ [ಲಂಕಾ]	೨೨
೬ ದ್ವಾರಕಾ (ತೀರ್ಥ)	೧೦-೧೧	೨೪ ಸಾರನಾಥ	,,	೪೨ ಕೆಲಾಯನ [ಲಂಕಾ]	೨೩
೭ ಅಬುಪಹಾಡ (ತೀರ್ಥ)	೧೨-೧೩	೨೫ ಗಯಾ	೨	೪೩ ಧನುಷ್ಕೋಟಿ [ಹಡಗದಿಂದ]	,,
೮ ಅಹಮ್ಮದಾಬಾದ	೧೪	೨೬ ರಾಜಗಿರಿ ಕುಂಡ (ತೀರ್ಥ)	೩	೪೪ ಮಧುರೆ	೨೪
೯ ಸಾಬರಮತಿ	,,	೨೭ ಗಿರಿಡಿ	,,	೪೫ ತ್ರಿಚಿನಾಪಳ್ಳಿ	೨೫
೧೦ ಅಜಮೀರ	೧೫	೨೮ ಸಮ್ಮೇದಶಿಖರಜಿ (ತೀರ್ಥ)	೪	೪೬ ಶ್ರೀರಂಗ	,,
೧೧ ಅಲ್ಲಯಾ	೧೬	೨೯ ಕಲಕತ್ತಾ	೫-೬-೭	೪೭ ಬೆಂಗಳೂರ	೨೬
೧೨ ಆಗ್ರಾ	೧೭	೩೦ ಜಗನ್ನಾಥ ಪುರಿ	೮	೪೮ ಮೈಸೂರ	೨೭-೨೮
೧೩ ಮಥುರಾ	೧೮-೧೯	೩೧ ವಿಶಾಖಪಟ್ಟಣ	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸ	೧೨-೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ ಹರದ್ವಾರ	೨೨-೨೩	೩೬ ವಿಷ್ಣುಕಂಚಿ	,,		

ಈ ಎಲ್ಲ ಸ್ಥಳಗಳನ್ನು ಸುತ್ತಿಕೊಂಡು ನವ್ಹೆಂಬರ ೨೯ನೇ ತಾರೀಖು (ಶಕೆ ೧೮೫೫ ಮಾರ್ಗಶಿರ ಶು|| ೧೨ ಬುಧವಾರ) ಮುಂಜಾನೆ ಹುಬ್ಬಳ್ಳಿ ಪಟ್ಟಣಕ್ಕೆ ಬಂದು ಮುಟ್ಟುವದು.

ಟ್ರೇನಿನಲ್ಲಿ ಒಬ್ಬರಿಗೆ ಒಂದು ಜನರ ಸ್ಥಳವು ಕೊಡಲ್ಪಡುವದು.

ಈ ಎಲ್ಲ ಮಹಾಯಾತ್ರೆಗೆ ರೇಲ್ವೆ ಚಾರ್ಜು ಇಳಿದುಕೊಳ್ಳುವ ಬರ್ಥ ಸೇರಿ ಸೆಕೆಂಡಕ್ಲಾಸ ೨೦೦ ರೂಪಾಯಿ, ಥರ್ಡಕ್ಲಾಸ ೧೪೦ ರೂಪಾಯಿಗಳು ಮಾತ್ರ. ಟಿಕೇಟ ಪಡೆಯುವರಿಗಾಗಿ ಸೆಕೆಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕೆ ಅನುಕೂಲವುಂಟು. ಹೆಚ್ಚಿನ ವಿವರಕ್ಕಾಗಿ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ, ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡಮಾಡಿ ಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶರಾದರು. ಆದಕಾರಣ ಟಿಕೇಟಗಳಿಗಾಗಿ ತ್ವರೆಮಾಡತಕ್ಕದ್ದು.

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರಿ ಶಂಕರ ಕಂಪನಿಯ ಏಜಂಟರು— ಸದರ ಕಂಪನಿಯ ... ಗಳಿಂದ ... ವರ್ಷಗಳಿಂದ ಧಾರವಾಡ ಜಿಲ್ಲೆಯ ... ಮತ್ತು ... ಬಹಳ ... ಗಳು ... ಕೊಡಲ್ಪಟ್ಟಿಲ್ಲ ... ಶ್ರೀ ಗೌರೀಶಂಕರ ಕಂಪನಿಗೆ ... ಏಜಂಟ ... ಯೋಗ್ಯ ... ಕೊಡಲ್ಪಡುವದು.

ಜಿ. ಎ. ಶಿರೂರ

ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— ಜಿ. ಎಲ್. ಪಪ್ಪಾ ಬುಕ್‌ಸೇಲರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ. ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು. ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ. ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ಹಿರಿಗೆ ಬರುತ್ತವೆ. ನೇರವಾಗಿ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ|| ೨-೯-೩೩

ಪಳಿಗೆ ಡ್ ಹೈದರಾಬಾದ (ಡೆಕ್ಕನ್) **ಬಿ. ಜಿ. ಚಿಮ್ಮಲಗಿ**

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ಟೈಪ ಗಳು, ಗ್ಯಾಲಿ, ಸ್ಟಿಕ್ಕು, ಕೇಸು ಹಾಗೂ ಹೊಸ ಟ್ರೆಡಲ್ (ಚಾಂಡ್ಲ) ಆಕಾರ ಫುಲ್ಸ ಕೇಪ ಫೋಲಿಯೋ

ಕನ್ನಡಿಗ ಮುದ್ರಣಾಲಯ ಧಾರವಾಡ

ಕನ್ನಡಿಗನ ಚಂದಾ ವಿವರ.

	ಸ್ಥಳಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯವಸ್ಥಾಪಕ

ಕನ್ನಡಿಗ.

ಧಾರವಾಡ— ರವಿವಾರ ತಾರೀಖು [illegible]

ಮಕ್ಕಳ ಬಾಯಿತುತ್ತನ್ನು ಮಂದಿಯ ಬಾಯಿಯಲ್ಲಿ ಹಾಕಬೇಡಿರಿ.

[illegible] ಸ್ವದೇಶಿ ಚಳವಳದ ಸಾಹಸಕಾರ್ಯವನ್ನು [illegible] ಹೊರಟು [illegible] ವರ್ಷಗಳು ಹೊಂದ್ರಿಟ್ಟೆವು [illegible] ಸ್ಥಿರವಾಗಿ [illegible] ಗಂಡಾಂತರ [illegible] ಕಾರಣಗಳು ([illegible]) [illegible] ತಂದೊಡ್ಡಿರುವುದು [illegible] ದೂರವಾಗಿದೆ ಅವರೂ ಇದ[illegible] "ಸುಶಿಕ್ಷಿತ" ರೆನ್ನಿಸಿಕೊಳ್ಳುವವರ [illegible] ಗಳನ್ನು ಬೀಕಿಂದುಕೊಳ್ಳುವ [illegible] ಮಾಡುವ ಜನರು ಇನ್ನೂ ಇದ್ದಾರೆ ಸ ರದವರ ಅನ್ನವನ್ನುಂಡವರ [illegible] ಇಂಥ ಜನರು ಸರಕಾರಿ ನೌಕರರಲ್ಲಿ ವಿಶೇ ಗಿದ್ದಾರೆ. ಅವರಿಗೆ ತಾವು ದೇಶದ್ರೋಹವನ್ನು ಮಾಡುತ್ತಿರುವೆವೆಂಬ ಕಲ್ಪನೆ ಕೂಡ ತಿಳಿದಿಲ್ಲ ಈ ತರದ ನೋಹವನ್ನು ನಾವು [illegible] ಹೋಗಲಾಡಿಸಬಹುದು. ಆದರೆ [illegible]ನೆಯ ರಾಜಕೀಯ ಕಾರಣವನ್ನು ಹೋಗಲಾಡಿಸುವುದು ಅಷ್ಟು ಸುಲಭವಲ್ಲ. ಅದಕ್ಕ [illegible]ನೇ ಬೇಕು ನಾವು ಸ್ವದೇಶಿ ಚಳವಳವನ್ನು ಮಾಡುವುದೆಂದರೆ ಮುಖ್ಯವಾಗಿ ಪರದೇಶ [illegible]ಟ್ಟೆಯ ಮೇಲೆ ವಿಶೇಷವಾಗಿ ಇಂಗ್ಲಂಡದ ಹೊಟ್ಟೆಯ ಮೇಲೆ ಕಾಲುಕೊಡುವುದು ತಮ್ಮ [illegible]ಳ ಬಾಯಿಗೆ ಹೀಗೆ ಗಡ್ಡಿ ಬೀಳುವುದಕ್ಕೆ ಪರಕೀಯ ಸರಕಾರವು ಹೇಗೆ ಒಪ್ಪೀತು? ಅದ[illegible]ವು ನಮ್ಮ ಜನರನ್ನು ಕೇಳುವುದು ನೀವು ನಿಮ್ಮ ಮಕ್ಕಳಬಾಯಿ ತುತ್ತು ತೆಗೆದ, ಮಂದಿ[illegible]ಯಿಯಲ್ಲಿ ಹಾಕಿವಿರೊ? ಎಂದು. ಛೀ ಅಂಥ ಪಾಪವನ್ನೆಂದಿಗೂ ಮಾಡಬೇಡಿರಿ ಇತ್ತೀ [illegible] ಜಪಾನ ಮುಂತಾದ ದ್ವೀಪಗಳೂ ನಿಮ್ಮ ಮಕ್ಕಳ ತುತ್ತಿಗೆಯನ್ನು ಹಿಚುಕುವುದಕ್ಕೆ [illegible]ಗಿವೆ. ಎಚ್ಚರ. ನೀವೇ ನಿಮ್ಮನ್ನು ಸಂರಕ್ಷಿಸಿಕೊಳ್ಳಬೇಕಲ್ಲದೆ ಅನ್ಯರು ಯಾರೂ ಸಂರಕ್ಷಣೆಗೆ ಬರಲಾರರೆಂಬುದನ್ನು ಮರೆಯಬೇಡಿರಿ ೧—೨ ವರ್ಷಗಳಲ್ಲಿ ೧೫೦ ಕೋ[illegible] [illegible]ಗಾರವು ಹೊರಟು ಹೋಯಿತು ಇಂಥ ಅಗ್ಗದ ಕಾಲದಲ್ಲಿ ಕೂಡ ಜನರಿಗೆ ಹೊಟ್ಟೆ ಬ[illegible]ತಿಯಿಲ್ಲವಾಗಿದೆ ಸರಾಸರಿ ಮೇಲೆ ನೋಡಿದರೆ ಒಬ್ಬ ಹಿಂದೀ ಮನುಷ್ಯನ ಉತ್ಪನ್ನವು [illegible]ಗೆ ಆರು ರೂಪಾಯಿಗಳ ಮೇಲೆ ಇಲ್ಲ ಈ ಆರು ರೂಪಾಯಿಗಳಲ್ಲಿ ಸಂಸಾರವೆಲ್ಲವೂ [illegible] ಅದು ಹೇಗೆ ಶಕ್ಯವಿದೆ? ಅಂದಬಳಿಕ, ನೀವು ಪರದೇಶದ ವಸ್ತುಗಳನ್ನು ಕೊಳ್ಳ[illegible]ದ ಎಷ್ಟು ಜನರು ಉಪವಾಸ ಬೀಳುತ್ತಿರುವರೆಂಬುದನ್ನು ತುಸು ಯೋಚಿಸಿ; ಅರಿವೆ, ಸ [illegible]ರೇಶಿಮೆ, ಕಾಗದ, ಉಣ್ಣೆ ಅರಿವೆ, ಸಾಬಾಣ, ಬಣ್ಣದ ಸಾಮಾನು, ಗ್ಲಾಸು ಮುಂತಾದ ಅನೇ[illegible] [illegible]ಸುಗಳನ್ನು ನಾವು ಪರದೇಶದಿಂದ ಕೊಳ್ಳದೆ ನಮ್ಮ ದೇಶದಲ್ಲಿಯೇ ಹುಟ್ಟಿದವುಗಳನ್ನು [illegible]ಹುದು ಬಂಗಾರವು ತುಟ್ಟಿಯಾದದ್ದು ದೇಶಕ್ಕೆ ಕ್ಷೇಮಕರವೆಂದು ಕೆಲವರ ಭಾವನೆ ಬಂಗಾರವನ್ನು ಮಾರಿ, ಅಗ್ಗವಾದ ಪರದೇಶದ ಸಾಮಾನುಗಳನ್ನು ಕೊಂಡು ಒಟ್ಟಿಡುವ [illegible]ಕ್ಕೆ ಬೀಳುತ್ತಾರೆ ಇದರಿಂದ ಪರದೇಶಕ್ಕೆ ದಿನದಿನಕ್ಕೆ ಹೆಚ್ಚಿಗೆ ದುಡ್ಡು ಹೋಗಹತ್ತಿದೆ [illegible]ರ ಆಟದ ಒಡವೆಗಳಿಗಂತೂ ಸರ್ವಥಾ ಮೋಹ ಹೋಗಬೇಡಿರಿ ನಿಮ್ಮ ಮಕ್ಕಳ ಪರದೇಶದ ಆ ಮೋಹಕ ಗೊಂಬೆಗಳನ್ನಿಡುವುದೆಂದರೆ, ನಮ್ಮ ಬಡ ಉದ್ಯೋಗಸ್ಥರ ಅಸುವನ್ನು ಹೀರುವುದು ಅರಿವೆಯ ಸಂಬಂಧವಾಗಿ ನಾವು ಎಲ್ಲಕ್ಕೂ ಎಚ್ಚರವಾಗಿ[illegible] ೧೯೩೨ ರಲ್ಲಿ ಮೊದಲಿನ ಆರು ತಿಂಗಳಲ್ಲಿ ೫೦ ಕೋಟಿ ೩ ಲಕ್ಷ ವಾರುಗಳ ಚಿಲ್ಲರ ಅರಿ[illegible]ದಿತು. ಅದೇ ೧೯೩೩ ನೆಯ ಇಸ್ವಿಯ ಮೊದಲಿನ ಆರು ತಿಂಗಳುಗಳಲ್ಲಿ ೫೦ ಕೋಟಿ [illegible] ವಾರಗಳ ಚಿಲ್ಲರ ಅರಿವೆ ಬಂದಿದೆ. ಇದರಿಂದ ಆರು ತಿಂಗಳಲ್ಲಿ 2½ ಕೋಟಿ ವಾರು [illegible]ಚ್ಚಿಗೆ ಬಂದಂತಾಯಿತು ಈ ಆರು ತಿಂಗಳಲ್ಲಿ ಕೃತ್ರಿಮ ರೇಶಿಮೆ ಅರಿವೆಯು ೪೦ ಲಕ್ಷ [illegible]ಚ್ಚಿಗೆ ಬಂದಿದೆ ನಮ್ಮ ಜನರಿಗೆ ಬುದ್ಧಿ ಇದ್ದರೆ ಇಷ್ಟೆಲ್ಲ ಹಣವನ್ನು ಸಹಜವಾಗಿ ಅವರು [illegible]ರಲಿಲ್ಲವೆ?

[illegible] ಪ್ರಕಟಿಸಿದ್ದಾರೆ [illegible] ತಿಳಿಸಿದ್ದಾರೆ [illegible]

"[illegible] ಟೆಕ್ಸ್ಟೈಯಿಲ್ ಮಂಡಳದ [illegible] ಕಳೆದ [illegible] ಬರದೆ [illegible] ಸಮಯದಲ್ಲಿ [illegible] ಪ್ರಾಮಾಣಿಕತನದ [illegible] ಜಯ ಪಡೆಯ[illegible] ದ್ವೇಷಮಯವಾದ [illegible] ನಮ್ಮ [illegible] ನಾವು [illegible] ಕಾಲ [illegible] ಮಾತು [illegible] ಉಲ್ಲಂಘನೆ [illegible] ವಿಚಾರವಿನಿಮಯ [illegible] ಮೈತ್ರಿಯ ಸಂಬಂಧವನ್ನು [illegible] ಹಿಂದೀ ಗಿರಣಿಯ ಒಡೆಯರೊಡನೆಯ ನಮ್ಮ ಈ ವಿಚಾರವಿನಿಮಯಕ್ಕೆ ಒಳ್ಳೆ ಮಹತ್ವವನ್ನು ಕೊಟ್ಟಿರುವೆವು. ಹಿಂದುಸ್ಥಾನದಲ್ಲಿಯ ಅರಿವೆ ಉದ್ಯೋಗದವರು ಮತ್ತು ಇಂಗ್ಲಂಡದಲ್ಲಿಯ ಅವರ ವಿರೋಧಕರು ಇವರ ನಡುವೆ ಹಿಂದೆ ಎಂದೂ ಸರಕಾರಿ ರೀತಿಯ ಸಂಬಂಧವಿರಲಿಲ್ಲ ಅದ್ದರಿಂದ ಈಗ ದೊರೆತ ಸಂಧಿಯು ಒಳ್ಳೇ ಮಹತ್ವದ್ದಿದೆ ನಾವು ಪ್ರವಾಸಕ್ಕೆ ಅನುಕೂಲವಾದ ಈ ಸಮಯದಲ್ಲಿ ಕಷ್ಟಗಳನ್ನು ಸಹಿಸಿ ಹಿಂದಿ ಪ್ರತಿನಿಧಿಗಳೊಡನೆ ವಿಚಾರವಿನಿಮಯ ಮಾಡಲು ಇಲ್ಲಿಗೆ ಬಂದಿದ್ದೇವೆ. ಕಳೆದ ಕೆಲವು ವರ್ಷಗಳಿಂದ ಪರಸ್ಪರರಲ್ಲಿ ಪೃಥಕ್ಕಾಗಿ[illegible] ಕೊಂಡ ಶಂಕೆ ಕುಶಂಕೆಗಳು ಪರಸ್ಪರರು ಯೋಗ್ಯಮಾರ್ಗವನ್ನು ಅನುಸರಿಸಿದಲ್ಲಿ ಅಳಿದು ಹೋಗದೆ ಇರಲಿಕ್ಕಿಲ್ಲ ಈ ಶಂಕೆ ಕುಶಂಕೆಗಳನ್ನು ಹೋಗಲಾಡಿಸಿ ಹಿಂದಿ ಪ್ರತಿನಿಧಿಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವ ದೃಷ್ಟಿಯಿಂದಲೇ ನಾವು ಇಲ್ಲಿಗೆ ಬಂದಿದ್ದೇವೆಂಬುದು ಹೊಳೆಯದೆ ಇರದು ನಾವು ಪರಸ್ಪರರು ಹೀಗೆ ಭೆಟ್ಟಿಯಾಗಿ ವಿಚಾರವಿನಿಮಯ ಮಾಡುವದು ಫಲದಾಯಕವಿಲ್ಲವೆಂಬುದು ನಮಗಂತೂ ಎನಿಸುವದಿಲ್ಲ. ಯಾಕಂದರೆ ಇಂಥ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರು ತಮ್ಮ ತಮ್ಮ ಹಿತದ ವಿಷಯಗಳನ್ನು ನೋಡಲೇ ಬೇಕಾಗುವದರಿಂದ, ಅವು ಎರಡನೆಯವರಿಗೆ ತಿಳಿಯಲು ಶಕ್ಯವಾಗುತ್ತದೆ. ಒಂದು ಪಕ್ಷದವರಿಗೆ ತಮ್ಮ ದೃಷ್ಟಿಯೇ ಉತ್ತಮವಾಗಿ ತೋರಬಹುದು. ಆದರೆ ಈಗಿನಂಥ ಬಿಕ್ಕಟ್ಟಿನ ಸಮಯದಲ್ಲಿ ನಾವು ಸಹಕಾರದ ಮಾರ್ಗವನ್ನು ಹುಡುಕಿ ತೆಗೆದು ಅದರ ಕಾರ್ಯಕ್ಷೇತ್ರವನ್ನು ಗೊತ್ತುಮಾಡಿಕೊಂಡಲ್ಲಿ ನಾವು ಊರ್ಜಿತಾವಸ್ಥೆಯನ್ನು ಹೊಂದುವೆವೆಂಬುದರಲ್ಲಿ ಸಂದೇಹವಿಲ್ಲ

ಲ್ಯಾಂಕೆಶಾಯರದ ಅರಳಿ ವ್ಯಾಪಾರಗಳು ಕೃತ್ರಿಮ ರೇಶಿಮೆಯ ವ್ಯಾಪಾರಸ್ಥರ ಬೆಂಬಲವನ್ನು ದೊರಕಿಸಿಕೊಂಡು ಬಂದಿರುವರು. ಆ್ಯಂಗ್ಲೊ—ಇಂಡಿಯನ್ ಐತಿಹ್ಯದ ದೃಷ್ಟಿಯಿಂದ ಮಹತ್ವದ್ದಾಗಿದೆ. ಹೀಗೆ ಶಿಷ್ಟಮಂಡಲ ತೆಗೆದುಕೊಂಡು ಹೋಗತಕ್ಕದ್ದೆಂಬುದನ್ನು ನಿರ್ಣಯಿಸಿಕೊಳ್ಳಲು ಲ್ಯಾಂಕೆಶಾಯರದವರಿಗೇನೂ ಸುಲಭ ಹೋಗಲಿಲ್ಲ ಹಿಂದುಸ್ಥಾನದವರು ಇದನ್ನು ಲಕ್ಷದಲ್ಲಿ ತಂದುಕೊಂಡು ಶಿಷ್ಟಮಂಡಲವು ಇಲ್ಲಿಗೆ ಬಂದಿದ್ದರ ಮಹತ್ವವನ್ನು ಅರಿತುಕೊಳ್ಳುವರೆಂದು ನನಗೆ ಖಾತ್ರಿಯಿದೆ ಬ್ರಿಟಿಷದವರು ವಿಶೇಷತಃ ಲ್ಯಾಂಕೆಶಾಯರದವರು ಹಿಂದಿಯರೊಡನೆ ಪರಸ್ಪರ ವ್ಯಾಪಾರಿ ವ್ಯವಹಾರವನ್ನು ಬೆಳೆಸಲು ಬೇರೆ ಬೇರೆ ವಿಧಗಳಿಂದ ಪ್ರಯತ್ನ ಮಾಡ[illegible]ತ್ತಿರುವರು. ಹಿಂದಿ ಜನರಿಗೆ ಇಂಗ್ಲಂಡದ ಪೇಠೆಯಲ್ಲಿ ಹೆಚ್ಚಿನ ಗಿರಾಕಿಗಳು ಸಿಗುವಂತೆ ಮಾಡುವೆವೆಂದು ಒಟಾವಾದಲ್ಲಿ ಆಶ್ವಾಸನ ಕೊಡಲಾಗಿದೆ ಅದರಂತೆ ನಾವು ಹಿಂದುಸ್ಥಾನದ ಹಿತವನ್ನೇ ನಮ್ಮ ಕಣ್ಮುಂದೆ ಇಟ್ಟುಕೊಂಡು ಆ ದಿಶೆಯಲ್ಲಿ ಪ್ರಯತ್ನ ಮಾಡ[illegible] [illegible] ಈ ಪರಿಸ್ಥಿತಿಯಿಂದ ಉಭಯತರಲ್ಲೂ [illegible] ಭಾವೀ ಇತಿಹಾಸಕಾರರು ಆಂಗ್ಲೋ ಇಂಡಿಯನ ಟೆಕ್ಸ್ಟೈಯಿಲ್ ವ್ಯಾಪಾರಿ [illegible] ಮಹತ್ವದ ವಿಷಯವು [illegible] ನಮ್ಮ ಇತಿಹಾಸದಲ್ಲಿ [illegible] ಇಷ್ಟೇ ಅಲ್ಲದೆ ಇದರಿಂದ ಆಂಗ್ಲೋ-ಇಂಡಿಯನ್ನರಲ್ಲಿಯ ಸ್ನೇಹ ಸಂಬಂಧವು ವೃದ್ಧಿಂಗತವಾಗುವದು ಈ ಸ್ನೇಹ ಸಂಬಂಧದ ವೃದ್ಧಿಯನ್ನು ಕಣ್ಮುಂದೆ ಇಟ್ಟುಕೊಂಡೇ ನಾವು [illegible] ಸ್ಥಾನದಲ್ಲಿ ಕಾಲಿಟ್ಟಿದ್ದೇವೆ ಮತ್ತು ಇದೇ ದೃಷ್ಟಿಯಿಂದ ಪರಸ್ಪರರಲ್ಲಿ ಸಾಧ್ಯವಿದ್ದಷ್ಟು ಹೆಚ್ಚಿಗೆ ಸಹಕಾರವೂ ತಿಳಿವಳಿಕೆಯೂ ವೃದ್ಧಿಂಗತವಾಗುವದೆಂದು ಆಶಿಸುತ್ತೇವೆ

ನಮ್ಮ ಸಲುವಾಗಿ ಯಾವತ್ತೂ ವ್ಯವಸ್ಥೆಯನ್ನು ಮಾಡಿದ ಬಗ್ಗೆ ನಾವು ಉಪಕೃತರಾಗಿದ್ದೇವೆ ಹಿಂದುಸ್ಥಾನದಲ್ಲಿಯ ನಮ್ಮ ಮಿತ್ರರು ಹಾಗು ಇಂಗ್ಲಂಡದಲ್ಲಿಯ ನಮ್ಮನ್ನು ಇಲ್ಲಿಗೆ ಕಳುಹಿಸಿದವರು ಇವರ ಮುಂದೆ ಅತ್ಯಂತ ಗೋಜಿನ ಸ್ಥಿತಿಯ ಯಾವತ್ತೂ ಕಠಿಣ ಸಮಸ್ಯೆಗಳನ್ನು ಬಿಡಿಸಲು ನಾವು ಎಲ್ಲ ವಿಧದಿಂದಲೂ ಪ್ರಯತ್ನ ಮಾಡುವೆವು ಜಪಾನದ ಉದ್ಯೋಗಸ್ಥರ ಸಂಗಡ ಸಹ ನಮ್ಮ ಕೂಡ ವಿಚಾರವಿನಿಮಯ ಮಾಡಲು ಬರತಕ್ಕವರಿದ್ದಾರೆ. ನಮ್ಮ ಮುಂದಿನ ಗಹನವಾದ ಪ್ರಶ್ನೆಯು ಅವರ ಮಹತ್ವದ ವಿಚಾರವಿನಿಮಯದಿಂದ ಸುಲಭವಾಗಿ ಬಿಡಿಸಲ್ಪಡುವದೆಂದು ನಮಗೆ ಆಶೆಯಿದೆ (ಅ ಪ್ರ)

ಅಜಮೀರದಲ್ಲಿ ೭ ಜನರಿಗೆ ಜಾಮೀನು.

ಅಜಮೀರ ತಾ|| ೧೪— ಹಿಂದೂ ಸಭೆಯ ಪ್ರತಿನಿಧಿಗಳನ್ನು ಆರಿಸುವ ಕಾಲಕ್ಕೆ ಎರಡು ಪಂಗಡಗಳಲ್ಲಿ ಹೊಡೆದಾಟವಾದ ಸಂಬಂಧವಾಗಿ ಪೋಲೀಸರು ೭ ಜನರ ಮೇಲೆ ದಂಗೆಯ ಆರೋಪ ಹೊರಿಸಿ ಇ ಪಿ ಕೋಡಿನ [illegible] ಕಲಮಿನನ್ವಯ ಖಟ್ಲೆ ಹಾಕಿದ್ದಾರೆ ಅವರಿಂದ ಪ್ರತ್ಯೇಕವಾಗಿ ೨೦೦ ರೂಪಾಯಿ ಜಾಮೀನು ತೆಗೆದುಕೊಂಡಿದೆ (ಅ ಪ್ರ)

ಜಪಾನ ವ್ಯಾಪಾರಿ ಶಿಷ್ಟಮಂಡಲದ ಆಗಮನ

ಕಲಕತ್ತಾ ತಾ|| ೧೪— ಜಪಾನಿ ವ್ಯಾಪಾರಿ ಶಿಷ್ಟಮಂಡಲದ ಸಭಾಸದರು, ರಾಯಭಾರಿ ಮಂಡಲದ ಮಂತ್ರಿಗಳಾದ ಸೆಟ್‌ಸುಗೊ ಹೊರಿಗಳನ್ನು ಕೂಡಿಕೊಂಡು ಈ ಹೊತ್ತಿನ ದಿವಸ ಎಸ್ ಎಸ್. ಎರ್ಮ್ಮಾ ಹಡಗದಿಂದ ರಂಗೂನದಿಂದ ಇಲ್ಲಿಗೆ ಬಂದರು. ಬಂಗಾಲ ಸರಕಾರದ ಪರವಾಗಿ ಅವುಟ್‌ರ್ಯಾಮ ಘಾಟದಲ್ಲಿ ಅವರಿಗೆ ಯೋಗ್ಯ ಆದರ ಸತ್ಕಾರ ಮಾಡಲ್ಪಟ್ಟಿತು (ಅ ಪ್ರ)

ಕೌನ್ಸಿಲ್ ಆಫ್ ಸ್ಟೇಟ.

ಸಿಮ್ಲಾ ತಾ|| ೧೪— ಅಸೆಂಬ್ಲಿಯಲ್ಲಿ ಪಾಸಾದ ಕಾಟನ್ ಟೆಕ್ಸ್ಟೈಯಿಲ್ ಉದ್ಯೋಗ ಸಂರಕ್ಷಣೆಯ ಮಸೂದೆಯು ಈ ಹೊತ್ತಿನ ದಿವಸ ಕೌನ್ಸಿಲ್ ಆಫ್ ಸ್ಟೇಟದಲ್ಲಿ ಸ್ವೀಕೃತವಾಯಿತು. (ಅ ಪ್ರ)

ಟೆಕ್ಸ್ಟೈಯಿಲ್ ಮಂಡಳದ ಅಧ್ಯಕ್ಷರ ಪ್ರಕಟನೆ

[illegible]ಂಬಯಿ ತಾ|| ೧೪—ಬ್ರಿಟಿಶ ಟೆಕ್ಸ್ಟೈ[illegible] [illegible]ಷ್ಟಮಂಡಲದವರು ಮುಂಬಯಿ ಬಂದ[illegible]ದು ಇಳಿಯುತ್ತಲೆ, ಹಿಂದುಸ್ಥಾನದ [illegible]ಟಿಶ ವ್ಯಾಪಾರಿ ಕಮಿಶನರರಾದ ಸರ [illegible]ಸ ಏನ್ಸ್‌ಲಿವ್ಹರ್ ಮುಂಬಯಿಯ ಗಿ[illegible]ಯುರ ಸಂಘದ ಅಧ್ಯಕ್ಷರಾದ ಎಚ್. [illegible]ದಿಯುವರೂ, ಸರ ಕಾವಸಜಿ ಜಹಾಂ[illegible]ಗೀರ್ ಫಿರೋಜ ಪೆಟಿಟ್ ಮೊದಲಾದ ಗಿ[illegible] ಉದ್ಯೋಗಸ್ಥರೂ ಅವರಿಗೆ ಯಥಾ[illegible]ದ ಸ್ವಾಗತ ಮಾಡಿದರು ಗಣ್ಯರ ಪರವಾಗಿ ಅವರ ಏ ಡಿ ಸಿ ಯವರು ಶಿಷ್ಟಮಂಡಲದವರಿಗೆ ಸ್ವಾಗತ ಮಾಡಿ, ವಾರದ ಕೊನೆಯ ವರೆಗೆ ಪುಣೆಯ ಸರಕಾರಿ ಭವನದಲ್ಲಿ ಬಂದು ಇರಬೇಕಾಗಿ ಅವರಿಗೆ ಆಮಂತ್ರಣ ಕೊಟ್ಟರು

ಶಿಷ್ಟಮಂಡಲದವರು ನಿನ್ನಿನ ದಿವಸ ಸಂಜೆಗೆ ಪುಣೆಗೆ ಪ್ರಯಾಣ ಮಾಡಿ ಸೋಮವಾರ ದಿವಸ ಮುಂಬಯಿಗೆ ತಿರುಗಿ ಬರತಕ್ಕವರಿದ್ದಾರೆ (ಅ ಪ್ರ)

ಮುಂಬಯಿ ತಾ|| ೧೪— ಎಸ್ ಎಸ್ ಮಾಲೋಜಾ ಹಡಗದಿಂದ ಈ ಹೊತ್ತಿನ ದಿವಸ ಇಲ್ಲಿಗೆ ಬಂದ ಬ್ರಿಟಿಶ ಟೆಕ್ಸ್ಟೈಯಿಲ್ ಮಂಡ[illegible]

In The High-Court of Judicature at Bombay.

Ordinary Original Civil Jurisdiction

In the matter of the Indian Companies' Act VII of 1913

And

In the matter of the Karnatak Industrial Bank Limited, a Joint Stock Company... incorporated under the Indian Companies' Act VII of 1913 and having its registered office at No 1761 Gandhi Chowk, Dharwar

NOTICE IS HEREBY GIVEN that a petition for the winding up of the above-named Company by the High Court of Judicature at Bombay was on the 11th day of September 1933 presented to the Judge in Chambers hearing Company matters by the Dharwar Bank Limited, Dharwar a creditor of the said Company and that the said petition is directed to be heard before the Judge in Chambers hearing Company matters on Monday the 2nd day of October 1933 and any creditor or contributory of the said Company desirous to oppose the making of an order for the winding up of the said Company under the above Act should appear at the time of hearing by himself or his counsel for that purpose and a copy of the petition will be furnished to any creditor or contributory of the said company requiring the same by the undersigned on payment of the regulated charge for the same

Hibara & Co
Central Bank Building, Esplanade
Road, Fort, Bombay
Attorneys for the Petitioner

ನೋಟೀಸು.

ನಾಮದಾರ ಮುಂಬಯಿ ಹಾಯಕೋರ್ಟಿನಲ್ಲಿ.

ಸನ್ ೧೯೧೩ನೇ ಇಸ್ವಿಯ ಇಂಡಿಯನ್ ಕಂಪನೀಜ ಆ್ಯಕ್ಟಿನ ವಿಷಯವಾಗಿ

ಮತ್ತು

ಸನ್ ೧೯೧೩ನೇ ಇಸ್ವಿಯ ಇಂಡಿಯನ್ ಕಂಪನೀಜ ಆ್ಯಕ್ಟಿನಂತೆ ರಜಿಸ್ಟರಾದ ಹಾಗೂ ಧಾರವಾಡ ಗಾಂಧಿ ಚೌಕ ಮನೆ ನಂಬರ ೧೭೬೧ ರಲ್ಲಿ ತನ್ನ ರಜಿಸ್ಟರ್ಡ ಕಚೇರಿಯನ್ನಿಟ್ಟುಕೊಂಡ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕಿನ ವಿಷಯವಾಗಿ

ಎಲ್ಲರಿಗೂ ಈ ನೋಟೀಸಿನಿಂದ ತಿಳಿಸುವದೇನಂದರೆ —

ಮೇಲ್ಕಂಡ ಕಂಪನಿಯ ಧನಕೋ ಕಂಪನಿಯಾದ ಧಾರವಾಡ ಬ್ಯಾಂಕ ಲಿಮಿಟೆಡ್ ಇವರು ಆ ಕಂಪನಿಯನ್ನು ಸಕ್ತಿ ಬಿಡಬೇಕೆಂದು (Winding up) ನಾಮದಾರ ಮುಂಬಯಿ ಹೈಕೋರ್ಟಿಗೆ ತಾ॥ ೧೧-೯-೧೯೩೩ ನೇ ಇಸ್ವಿಯ ದಿನ ಅರ್ಜಿ ಮಾಡಿದ್ದಾರೆ. ಈ ಅರ್ಜಿಯ ವಿಚಾರವು ಇದೇ ೧೯೩೩ನೇ ಅಕ್ಟೋಬರ ೨ನೇ ತಾರೀಖಿಗೆ ಆಗಬೇಕೆಂದು, ಕಂಪನಿ ವಿಷಯಗಳನ್ನು ವಿಚಾರ ಮಾಡುವ ಜಜ್ಜ ಇನ್ ಚೇಂಬರ್ಸ ಇವರು ಗೊತ್ತು ಮಾಡಿದ್ದಾರೆ. ಅದ್ದರಿಂದ ಮೇಲ್ಕಂಡ ಅರ್ಜಿಯನ್ನು ವಿರೋಧಿಸಬೇಕೆನ್ನುವ ಧನಕೋ ಜನರು ಅಥವಾ ಶೇರಹೋಲ್ಡರರು ಆ ಅರ್ಜಿಯ ವಿಚಾರದ ಕಾಲಕ್ಕೆ ಹೈಕೋರ್ಟಿನಲ್ಲಿ ಸ್ವತಃ ಅಥವಾ ವಕೀಲರ ಮಾರ್ಫತ ಹಾಜರಾಗಬೇಕು. ಅರ್ಜಿಯ ನಕಲನ್ನು ಬೇಕಾದವರು ಅದರ ಚಾರ್ಜ ಕೊಟ್ಟು ಕೆಳಗೆ ಸಹಿ ಮಾಡಿದವರ ಕಡಿಂದ ಪಡೆಯಬಹುದು

ಹಿಬಾರಾ ಆ್ಯಂಡ ಕೋ
ಸೆಂಟ್ರಲ್ ಬ್ಯಾಂಕ ಬಿಲ್ಡಿಂಗ, ಎಸ್ಪ್ಲನೇಡ ರೋಡ, ಮುಂಬೈ
ಅರ್ಜದಾರರ ಆಟರ್ನಿಗಳು

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೫-೮-೩೩

ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ.

ಪುಣೆ ... ಜವಾಹಿರಲಾಲ ... ನೆಹರೂ ... ಮುಂಬಯಿಗೆ ... ಕರ್ನಾಟಕ ... [illegible]

... ಸ್ಪಷ್ಟಗೊಳಿಸಬೇಕೆಂದು ನನಗೆ ಎನಿಸುತ್ತದೆ. ಯಾಕಂದರೆ ನಮ್ಮ ಉದ್ದೇಶದ ವಿಷಯಕ್ಕೆ ಹಿಂದುಸ್ಥಾನದಲ್ಲಿಯಾಗಲಿ ವಿಶೇಷತಃ ಪರದೇಶಗಳಲ್ಲಾಗಲಿ ತಪ್ಪು ತಿಳುವಳಿಕೆ ಆಗತಕ್ಕದ್ದಲ್ಲ ... ಆರ್ಥಿಕ ಸಂಕಟದಲ್ಲಿ ... ಈ ಸಮಯದಲ್ಲಿ.

ರಾಷ್ಟ್ರೀಯ ಚಳವಳಿಗಾಗಿ ಸ್ಪಷ್ಟವಾದ ಆರ್ಥಿಕ ಧೋರಣವನು ಇಟ್ಟುಕೊಳ್ಳುವದೆ ಅವಶ್ಯವಾದ ಸಂಗತಿಯಾಗಿದೆ. ನನ್ನ ಕೆಲವು ಸನ್ಮಾನನೀಯ ಮಿತ್ರರು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕರೆಯಲು ನನಗೆ ವಿನಂತಿ ಮಾಡಿಕೊಂಡಿದ್ದಾರೆ. ಈ ಸಂಬಂಧವಾಗಿ ಪರಿಮಿತ ಸಭಾಸದರಿಂದ ಸೂಚನೆಗಳು ಬಂದಲ್ಲಿ ನಾನು ಸ್ವಸಂತೋಷದಿಂದ ಆ ಸಭೆಯನ್ನು ಕರೆಯುವೆನು. ಆದರೆ ಈ ಸಮಯದಲ್ಲಿ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕೂಡಿಸುವದು ಬಹು ಬಿಕ್ಕಟ್ಟಿನ ಕೆಲಸವಾಗಿರುವದರಿಂದ ಆ ಬಗ್ಗೆ ವಿಚಾರ ಮಾಡಬೇಕಾಗುವದು (ಅ ಪ್ರೆ)

ಪಂ. ಜವಾಹಿರರು ಮುಂಬಯಿಗೆ

... ಪಂ. ಜವಾಹಿರಲಾಲ ನೆಹರೂ ... ಮುಂಬಯಿ ... ಇಲ್ಲಿಗೆ ಬಂದರು. ಅವರ ಮಿತ್ರರೂ ಮತ್ತು ಹಿತಚಿಂತಕರು ಅವರಿಗೆ ... ಸ್ವಾಗತ ಮಾಡಿದರು ... [illegible] (ಅ ಪ್ರೆ)

ಗಾಂಧಿ-ಜವಾಹಿರರ ಪತ್ರವ್ಯವಹಾರ

... [illegible]

... ಉತ್ತರ ಕೊಟ್ಟರು

... ಗಾಂಧಿ ಮತ್ತು ... ದೇ ಮನೆಯಲ್ಲಿದ್ದರೂ ಅವರ ನಡುವೆ ಪತ್ರವ್ಯವಹಾರದ ಕರಡಿ ಪ್ರಕಟವಾಗುವದು.

ಪಂಡಿತ ಜವಾಹಿರರ ಪತ್ರ

ಪುಣೆ ತಾ ... — ಗಾಂಧಿ ಜವಾ... ಸಂಭಾಷಣವು ಪತ್ರರೂಪದಿಂದ ಪ್ರಸಿದ್ಧ ... ಹತ್ತಿದೆ. ತಮ್ಮ ಪತ್ರದಲ್ಲಿ ನೆಹರೂ ... ಕರಾಚಿ ಕಾಂಗ್ರೆಸದಲ್ಲಿ ... ವಿಷಯಕ ಗೊತ್ತುವ... ರಾಷ್ಟ್ರೀಯ ... ಮುರಿದಿಲ್ಲವೆಂದೂ, ... ಅವರ ಅಭಿಪ್ರಾಯ ... ಧೋರಣ... ಸರಿಯಾದುದಲ್ಲವೆಂಬುದನ್ನು ... ವಿಶೇಷ ಪ್ರಸಂಗಗಳಲ್ಲಿ ಈ ಧೋರಣ... ಮಾಡಬೇಕಾಗುತ್ತದೆಂದ ನೆಹರೂ ... [illegible]

ಮಹಾತ್ಮಾ ಗಾಂಧಿಯವರು ಮುಂಬಯಿಗೆ ಹೋಗುವರು

ಪುಣೆ ತಾ॥ ೧೬— ಮಹಾತ್ಮಾ ಗಾಂಧಿಯವರು ಈ ಹೊತ್ತು ಮಧ್ಯಾಹ್ನ ... ಗಂಟೆಗೆ ಪುಣೆಯನ್ನು ಬಿಟ್ಟು ... ಮುಂಬಯಿಗೆ ಹೋಗುವರು. ಅವರು ಮುಂದಿನ ಬುಧವಾರದ ವರೆಗೆ ಅಲ್ಲಿ ಇದ್ದು ... ತಾ॥ ೨೧ನೆ ದಿವಸ ಅಹಮ್ಮದಾಬಾದ ... ತಳಕದಿ ... ಅಹಮ್ಮದಾಬಾದಕ್ಕೆ ತೆರಳುವರು. ಅವರ ಮುಂದಿನ ಕಾರ್ಯಕ್ರಮವು ಇನ್ನೂ ನಿಶ್ಚಿತವಾಗಿಲ್ಲ. ... ಅವರು ... (ಅ ಪ್ರೆ)

ಪಂಡಿತ ಮದನ ಮೋಹನ ಮಾಲವೀಯರು ಗಾಂಧಿ—ನೆಹರೂರವರಿಗೆ ... ವಿಷ್ಯ ... ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ... ದೆಯೂ ಮುಂದಿನ ಧೋರಣವನ್ನು ... ಬೇಕೆಂದು ತಿಳಿಸಿದ್ದಾರೆಂದು ತಿಳಿಯುತ್ತದೆ (ಅ ಪ್ರೆ)

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಶನಿವಾರ ತಾ॥ ೧೬-೯-೩೩ ನೇ ದಿವಸ ರಾತ್ರಿ

ಯುಚ್ಚಪ್ಪನಾಯಿಕ

ಎಂಬ ... ನಾಟಕವನ್ನು ಆಡಿಸುವರು.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಛಾಪಖಾನೆಯಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ರ. ನಂ. ಬಿ. ೨೭೮೮

यथत् परवशं दुःखं । यथदात्मवशं सुखम्॥ मनु

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ರವಿವಾರ ಭಾದ್ರಪದ ಬಹುಳ ೭ ಶಕೆ ೧೮೫೬ ತಾ|| ೧೬-೯-೩೪ [ಸಂಚಿಕೆ ೧೨೧

ಇನಸ್ಶೂರನ್ಸ

ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್‌ಸ್ಶೂರನ್ಸ
ಕಂಪನಿಯೇ
ಉತ್ತಮವಾದುದು

ಇನಸ್ಶೂರನ್ಸ

ವಿದೇಶದ ಹಣವನ್ನು ಸ್ವದೇಶ
[illegible] ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಮಹಾತ್ಮರ ಪ್ರಕೃತಿ ರಂಗಸ್ವಾಮಿಯವರ ಆಗಮನ

ಮಹಾತ್ಮಾ ಗಾಂಧಿಯವರ ಪ್ರಕೃತಿ

ಮುಂಬಯಿ ತಾ|| ೧೬— ಡಾ. ಗಿಲ್ಡರ ಅವರು ಈಹೊತ್ತಿನ ದಿವಸ ಮಹಾತ್ಮರ ಪ್ರಕೃತಿಯನ್ನು ಪರೀಕ್ಷಿಸಿ ಅವರ ಪ್ರಕೃತಿಯ ಬಗ್ಗೆ ಕೆಳಗಿನಂತೆ ಪತ್ರಿಕೆ ಹೊರಡಿಸಿದ್ದಾರೆ

ಮಹಾತ್ಮರ ಸರ್ವಸಾಧಾರಣ ಪ್ರಕೃತಿಯು ಚೆನ್ನಾಗಿದೆ. ಅವರ ರುದಿರಾಭಿಸರಣವು ದಿನ ದಿನಕ್ಕೆ ಹೆಚ್ಚಾಗತೊಡಗಿದೆ. ಮಹಾತ್ಮರು ತಮಗೆ ಸಾಧ್ಯವಿದ್ದಷ್ಟು ವಿಶ್ರಾಂತಿಯನ್ನು ಪಡೆಯಬೇಕೆಂದು ಪುನಃ ಹೇಳಿದ್ದೇವೆ.

ಡಾಕ್ಟರರ ಸಲಹೆಯ ಮೇರೆಗೆ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳು ಒಂದು ವಿನಂತಿಪತ್ರವನ್ನು ಹೊರಡಿಸಿ, ಮಹಾತ್ಮರಿಗೆ ಶ್ರಮ ಕೊಡತಕ್ಕಗಲ್ಲವೆಂದೂ, ಸಂಪೂರ್ಣ ಆವರ್ಶ್ಯ ಬಿಟ್ಟುಬಿಡತಕ್ಕದ್ದೆಂದೂ ಸಾರ್ವಜನಿಕರಲ್ಲಿ ಆಗ್ರಹದ ವಿನಂತಿ ಮಾಡಿಕೊಂಡಿದ್ದಾರೆ

(ಅ ಪ್ರೆ)

ಮಹಾತ್ಮರು ಮುಂಬಯಿಗೆ ಬಂದರು.

ಮುಂಬಯಿ ತಾ|| ೧೫— ಮಹಾತ್ಮಾ ಗಾಂಧಿಯವರು ಈಹೊತ್ತಿನ ದಿವಸ ಸಂಜೆಯ ಗಾಡಿಯಿಂದ ಪುಣೆಯಿಂದ ಇಲ್ಲಿಗೆ ಬಂದರು. ಗಾಡಿಯು ಬರುವದಕ್ಕಿಂತ ಪೂರ್ವದಲ್ಲಿ ವ್ಹಿಕ್ಟೋರಿಯಾ ಟರ್ಮಿನಸ್ ಅವರ ಸ್ವಾಗತಕ್ಕೋಸ್ಕರ ಪ್ರಚಂಡ ಜನಸಮುದಾಯವು ನೆರೆದಿತ್ತು. ಗಾಡಿಯು ಪ್ಲಾಟಫಾರ್ಮದ ಮೇಲೆ ಬಂದ ಕೂಡಲೆ ಜನರು "ಗಾಂಧೀಕಿ ಜಯ" ಎಂಬ ಜಯಜಯಕಾರಗಳಿಂದ ಅವರನ್ನು ಸ್ವಾಗತಿಸಿದರು. ಆ ಮೇಲೆ ಅವರನ್ನು ಅವರಿಗಾಗಿ ಇಟ್ಟ ಮೋಟರದ ಕಡೆಗೆ ಸಾಲು ರಚಿಸಿ ಕರೆದೊಯ್ದರು. ನಂತರ ಅವರು ಮೋಟರದಲ್ಲಿ ಕುಳಿತುಕೊಂಡು ಜನಸಂದಣಿಯನ್ನು ತಪ್ಪಿಸುವ ಉದ್ದೇಶದಿಂದ ಮತ್ತು ಬೇರೆಯಿಂದ [illegible] ಹೋದರು.

ಮಹಾತ್ಮರನ್ನು ಸ್ಟೇಶನದಿಂದ ತಮ್ಮಲ್ಲಿಗೆ ಕರೆದುಕೊಂಡು ಹೋಗಲು ಶ್ರೀ ರವಿಶಂಕರ ಶಿವರಾಮರೂ ಸ್ಟೇಶನಕ್ಕೆ ಬಂದಿದ್ದರು. ಮಹಾತ್ಮರು ಅವರೊಡನೆ ನೇರವಾಗಿ ಮಣಿಭುವನಕ್ಕೆ ಹೊರಟು ಹೋದರು. ಮಹಾತ್ಮರು ಈಗ ಅಲ್ಲಿಯೇ ಇರುವರು.

ಪುಣೆಯಿಂದ ಇಲ್ಲಿಗೆ ಹೊರಟು ಬರುವಾಗ ದಾರಿಯಲ್ಲಿಯ ಯಾವತ್ತೂ ಸ್ಟೇಶನುಗಳಲ್ಲಿ ಮಹಾತ್ಮರಿಗೆ ಅಲ್ಲಲ್ಲಿಯ ಜನರು ಯೋಗ್ಯವಾದ ಸತ್ಕಾರ ಮಾಡಿದರು. ಮಹಾತ್ಮರನ್ನು ಕಾಣಲು ಬಂದ ಪ್ರತಿಯೊಬ್ಬರಿಂದ ಹರಿಜನ ಕಾರ್ಯಕ್ಕೋಸುಗ ಧನವನ್ನು ಮತ್ತು ಆಭರಣಗಳನ್ನು ಕೂಡಿಸಿದರು.

ಮಹಾತ್ಮರು ಇಲ್ಲಿ ಐದು ದಿನಗಳ ವರೆಗೆ ನಿಂತುಕೊಂಡು ನಂತರ ಅಹಮದಾಬಾದಕ್ಕೆ ಪ್ರಯಾಣ ಮಾಡುವವರಿದ್ದಾರೆ (ಅ ಪ್ರೆ)

ಬಿಳೇ ಕಾಗದದ ಮೇಲೆ ಕಾಂಜರ್ವೇಟಿವ್ಹರ ಗಲಭೆ

ಲಂಡನ ತಾ|೧೫ 'ಡೇಲಿಮೇಲ' ಪತ್ರಿಕೆಯ ಪ್ರತಿನಿಧಿಗೆ ಭೆಟ್ಟಿ ಕೊಟ್ಟಾಗ ವಿನ್‌ಸ್ಟನ್ ಚರ್ಚಿಲರು ಹೇಳಿದ್ದೇನಂದರೆ— ಬರುವ ಅಕ್ಟೋಬರದಲ್ಲಿ ಬರ್ಮಿಂಗಹ್ಯಾಮದಲ್ಲಿ ಕಾಂಜರ್ವೇಟಿವ್ಹ ಜನರ ಪರಿಷತ್ತು ಸೇರತಕ್ಕದ್ದಿದೆ. ಆ ಸಭೆಗೆ ನಾನಾದರೂ ಹೋಗುವವನಿದ್ದೇನೆ. ಸಭೆಯಲ್ಲಿ ಬಿಳೇ ಕಾಗದದ ಮೇಲೆ ಹಲ್ಲೆ ಮಾಡಲೋಸುಗ ಪುರಾಗ್ರಹಿ ಕಾಂಜರ್ವೇಟಿವ್ಹ ಜನರು ಒಳ್ಳೆ ಸಿದ್ಧತೆ ನಡಿಸಿದ್ದಾರೆ. ಜಾಯಿಂಟ ಪಾರ್ಲಮೆಂಟ ಕಮೀಟಿಯ ನಿರ್ಣಯವು ಹೊರಬೀಳುವವರೆಗೆ ಆ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವದನ್ನು ಮುಂದಕ್ಕೆ ಹಾಕುವದಕ್ಕೆ ಕಾಂಜರ್ವೇಟಿವ್ಹ ಸಭಾಸದರು ಸಿದ್ಧರಿರುವದಿಲ್ಲ.

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಳ ಮತ್ತು ಕಂಡಿ)

ಹುಬ್ಬಳ್ಳಿ ತಾ|| ೧೬

ಜವಾರಿ ಹತ್ತಿ	೧೦೫
ಅಕ್ಲಂಡ ಹತ್ತಿ	೧೦೫
ವಿಲಾಯತಿ ಹತ್ತಿ	೯೫-೯೮
ನ್ಯೂಕಾಸ್ಪಿ ಹತ್ತಿ	೧೧೩-೧೪
ಜೀನ ಕಾಳಿ	೮೦
ಡಬ್ಬಲ್ ರೂಲ ಅರಳೆ	೭೫
ಸಾಜಿನ ಅರಳೆ	೭೦-೭೨
ಜೋಳ	೧೨-೧೩
ಗೋದಿ	೭೨-೭೪||
ಹೆಸರು	೯||-೧೨
ಉದ್ದು	೬|
ಕಡ್ಲಿ	೬
ಕುಸಬಿ	೧೧-೧೧|
ಔಡಲ	೯||-೧೦
ಅಗಸಿ	೬||-೭

ಬೆಳ್ಳಿ ಭಂಗಾರ

ಭಂಗಾರ	೩೨
ಬೆಳ್ಳಿ	[illegible]

ಪತ್ರವ್ಯವಹಾರ

ಧಾರವಾಡದಲ್ಲಿ ನೀರಿನ ವ್ಯವಸ್ಥೆಯೇನು ?

ಸಂಪಾದಕರು 'ಕನ್ನಡಿಗ' ಧಾರವಾಡ ಇವರಿಗೆ—

ಸ ವಿ ವಿ. ಧಾರವಾಡ ಮ್ಯುನಸಿಪಾಲಟಿಯವರಿಂದ ನಳದ ಗೋಳಾಟವು ಹೇಗಾಯಿತೆಂಬುದನ್ನು ಮೊನ್ನೆ ನೀವು ಜನರಿಗೆ ತೋರಿಸಿದ್ದಾಯಿತು. "ಕನ್ನಡಿಗ" ದ ಧಾರವಾಡಕ್ಕೆ ಬಂದ ಮೇಲೆ ಆದ ನೀರಿನ ಗೋಳಾಟವೆಂದರೆ ಇದು ನಾಲ್ಕನೇ ಸಲ. ಆದರೆ 'ಕನ್ನಡಿಗ' ನೀವು ಈ ಊರಿಗೆ ಬರುವ ಮೊದಲು ಧಾರವಾಡದ ಜನ ಕೊಡ ಮಾಡಿದ ನೀರಿನ ತೊಂದರೆಯನ್ನು ಹೇಳಲಾಗಲ್ಲ! ಇದೇ ಒಂದು ವರ್ಷದ ಅವಧಿಯಲ್ಲಿ ೪–೬ ಸಲ ನೀರು ಬಂದಾಗಿದೆ. ಕಳೆದ ವರ್ಷ ಸುಮಾರ ಇದೇ ಮಳೆಗಾಲದ ಸಮಯದಲ್ಲಿ ಹತ್ತು ದಿನ ನಳಗಳು ಒಡಲಿಲ್ಲ. ಮೊನ್ನೆ ಮೇ ತಿಂಗಳ ಸುಮಾರಕ್ಕೆ ಹದಿನೈದು ದಿನ ತೊಂದರೆಯಾಯಿತು. ಈ ಪ್ರಕಾರವಾಗಿ ಇಂಜನ ಹಾಳಾಗಲಿ, ಉಳಿದ ಯಂತ್ರಗಳಾಗಲಿ, ಮೇಲಿಂದ ಮೇಲೆ ಕೆಡಹತ್ತಿದರೆ ಜನರ ಗೋಳಿನ ಪಾಡೇನು ? ಈ ಬಗ್ಗೆ ನಗರ ಪಿತಾಮಹರೇನಾದರೂ ವಿಚಾರ ಮಾಡುವರೋ ? ಯಂತ್ರಗಳು ಹಳೇವಾಗಿದ್ದರೆ, ಹೊಸವನ್ನಾದರೂ ತರಲಿ. ದೇಶವನ್ನು ತರಲು ಹಣವಿಲ್ಲವಾದರೆ ಇಲೆಕ್ಟ್ರಿಕ್ ಕಂಪನಿಗಾದರೂ ವ್ಯವಸ್ಥೆಗಾಗಿ ಕೊಡಲಿ. ಇಲೆಕ್ಟ್ರಿಕ್ ಕಂಪನಿಗೆ ಕೊಟ್ಟರೆ ಮ್ಯುನಸಿಪಾಲಟಿಗೆ ಪ್ರತಿವರ್ಷ ೧೦–೧೨ ಸಾವಿರ ರೂಪಾಯಿಗಳ ಉಳಿತಾಯವಾಗುವದೆಂದು ಊರಲ್ಲೆಲ್ಲ ಕೇಳಿಕೆಯಲ್ಲಿದೆ. ಇದು ನಿಜವೇ ಹೇಗೆಂಬುದನ್ನು ಚೀಫ ಆಫೀಸರರು ಜನರಿಗೆ ತಿಳಿಸುವರೇ ?

—ಓರ್ವ ನಾಗರಿಕ

ಹಿಂದಿ ಪ್ರಶ್ನೆಯ ಮೇಲೆ ಭಾಷಣ ಮಾಡಲು ಅಡ್ಡಿ.

ಲಂಡನ್ ತಾ| ೧೫— ಬ್ರಿಟಿಶ ಬ್ರಾಡಕಾಸ್ಟಿಂಗ ಕಂಪನಿಯವರು ಪ್ರಕಟ ಮಾಡಿರುವದೇನಂದರೆ— ಜಾಯಿಂಟ ಪಾರ್ಲಮೆಂಟರಿ ಕಮೀಟಿಯ ಕಾರ್ಯವು ನಡೆದಿರುವವರೆಗೆ ಹಿಂದಿ ಪ್ರಶ್ನೆಯು ನ್ಯಾಯಾಲಯದ ಕ್ಷೇತ್ರದಲ್ಲಿಯ ಪ್ರಶ್ನೆಯಾಗಿ ಗಣಿಸಲ್ಪಡುವದು. ಆದ್ದರಿಂದ ಹಿಂದಿ ಪ್ರಶ್ನೆಯ ಮೇಲೆ ರೇಡಿಯೋದಲ್ಲಿ ಸಾರ್ವಜನಿಕ ರೀತಿಯಲ್ಲಿ ಭಾಷಣ ಮಾಡಲು ಯಾರಿಗೂ ಅಪ್ಪಣೆ ಕೊಡಲ್ಪಡುವದಿಲ್ಲ. ರಾಜಕೀಯ ಪ್ರಶ್ನೆಯ ಹೊರತು ಇತರ ಪ್ರಶ್ನೆಗಳ ಬಗ್ಗೆ ಭಾಷಣ ಮಾಡಲು ಅಡ್ಡಿ ಇಲ್ಲ.

ಧಾರವಾಡದ ಚಟುವಟಿಕೆಗಳು.

ಶ್ರೀ ಗರುಡ ಸದಾಶಿವರಾಯರ ನೇತೃತ್ವದ ಕೆಳಗೆ ಸಿದ್ಧವಾಗುತ್ತಿರುವ "ಆಂಜನೇಯ ಕ್ಲಬ್ ಮೇಜರ್ಸ್" ಸಂಘದವರು, ಇದೇ ತಿಂಗಳ ೨೭ ನೆ ತಾರೀಖು ಬುಧವಾರ ದಿವಸ ಮಹಾನವಮಿಯ ಸುಮೂಹುರ್ತದಲ್ಲಿ ಶ್ರೀ ವಾ. ದ್ವಿವೇಂದ್ರಲಾಲರಿಂದ ರಚಿತವಾದ ಮತ್ತು ಶ್ರೀ ರಂಗರಾವ ಹಿರೇಕೆರೂರ ಇವರಿಂದ ಭಾಷಾಂತರಿಸಲ್ಪಟ್ಟ "ಚಂದ್ರಗುಪ್ತ" ವೆಂಬ ಹೃದಯದ್ರಾವಕವಾದ ಐತಿಹಾಸಿಕ ನಾಟಕವನ್ನು ಅಭಿನಯಿಸತಕ್ಕವರಿದ್ದಾರೆ.

ನಾಡಹಬ್ಬದಲ್ಲಿ ಬುಧವಾರ ೨೭ ನೆ ತಾರೀಖು ದಿವಸ ಕವಿ ಸಮ್ಮೇಲನವು ಜರಗುವದು. ಸಮ್ಮೇಲನದಲ್ಲಿ ಭಾಗವಹಿಸುವ ಕವಿಗಳು ಶಾಂತೇಶ ವಾಚನಾಲಯದ ಕಾರ್ಯದರ್ಶಿಗಳಾದ ಶ್ರೀ ಕುಲಕರ್ಣಿ ರಾಘವೇಂದ್ರರಾಯರನ್ನು ಕಾಣಬೇಕು.

ಈ ಊರಲ್ಲಿ ಧಾರವಾಡ ತಾಲೂಕ ಕುಲಕರ್ಣಿ ಸಂಘವನ್ನು ಸ್ಥಾಪಿಸುವ ಬಗ್ಗೆ ಪ್ರಯತ್ನ ನಡೆದಿದೆ.

ಕರ್ನಾಟಕ ಕಾಲೇಜದಲ್ಲಿ ನಿನ್ನಿನ ದಿವಸ ಚರ್ಚಾತ್ಮಕ ಸಂಘದ ಪರವಾಗಿ ಅಂಧಶ್ರದ್ಧೆ ಎಂಬ ವಿಷಯದಾಗಿ ಚರ್ಚೆ ನಡೆಯಿತು. ಪ್ರೊ. ಟಾಕಳಕರ, ಪ್ರೊ. ಇನಾಮದಾರ, ಪ್ರೊ. ಜಹಾಗೀರದಾರ ಇವರು ಭಾಷಣ ಮಾಡಿದರು. ಅಂಧಶ್ರದ್ಧೆಯಿಂದ ಕಾರ್ಯಕ್ಕೆ ಹಾನಿ ಉಂಟಾಗುತ್ತದೆಂದು ಕೊನೆಗೆ ನಿರ್ಣಯವಾಯಿತು. ಕಾರ್ಯ ಬಹು ಹೊತ್ತು ನಡೆಯಿತು. ಪ್ರೇಕ್ಷಕರು ಕಿಕ್ಕಿರಿದು ನೆರೆದಿದ್ದರು.

ಬಳ್ಳಾರಿಯ ಪತ್ರ

ಬಳ್ಳಾರಿ ತಾ|| ೧೫—

ಪುರಸಭೆಗೆ ಸರಕಾರದ ಕಮೀಶನರು

ಬಳ್ಳಾರಿ ಪುರಸಭೆಯ ಆರ್ಥಿಕ ಪರಿಸ್ಥಿತಿಯು ಬಹಳ ಕೆಟ್ಟಿರುವದೆಂದೂ ಮತ್ತು ಬಾಕಿ ಬಹಳ ಉಳಿದಿರುವದೆಂದೂ ಸರಕಾರದವರು ಇದನ್ನು ಸುಧಾರಿಸಲು ಡೆಪ್ಯೂಟಿ ಕಲೆಕ್ಟರ ಗ್ರೀಡಿನ್ ಒಬ್ಬರನ್ನು ಅಕ್ಟೋಬರ ೧ನೆ ತಾರೀಖಿನಿಂದ ನೇಮಿಸಿದ್ದಾರೆ. ಸರಕಾರದ ಈ ವರ್ತನವನ್ನು ಖಂಡಿಸಲು ನಾಳಿನ ದಿವಸ ಪ್ರಜೆಗಳ ಒಂದು ಸಭೆಯಿದೆ.

ಮಹಾತ್ಮಾ ಗಾಂಧಿಯವರ ಜನ್ಮದಿನೋತ್ಸವವನ್ನು ವಿಜೃಂಭಣೆಯಿಂದ ಮಾಡಲು ಜಿಲ್ಹಾ ಹರಿಜನ ಸೇವಾ ಸಂಘ ಮತ್ತು ಸ್ವದೇಶಿ ಸಂಘದ ಶ್ರೀ ಸುಬ್ರಹ್ಮಣ್ಯಂ ಇವರು ಸನ್ನಾಹಗಳನ್ನು ಈಗಾಗಲೇ ನಡಿಸಿದ್ದಾರೆ.



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

ರಚರ್ಯ

ಶಾಸ್ತ್ರೀಯ ರೀತಿ ಕ್ರಿಮಿನಾಶಕ
ದಂತಮಂಜನ

ಇದರ ಉಪಯೋಗದಿಂದ ಹಲ್ಲುಗಳು ಬೆಳ್ಳಗಾಗಿಯೂ, ಒಸಡುಗಳು ಗಟ್ಟಿಯಾಗಿಯೂ, ಬಾಯಿಯು ಸುವಾಸನೆಯಾಗಿಯೂ, ಆಗುವವು. "ಹೇಮ್ಯಗುಳು" ವಸಡಿಗಳ ರಕ್ತಸ್ರಾವ ಫಲು ಸರ್ವೋತ್ಕೃಷ್ಟವಾದ ವನಸ್ಪತಿಯು ಆಯುರ್ವೇದದಲ್ಲಿ ಹೇಳಲ್ಪಟ್ಟಿದೆ. ಈ ಔಷಧಿಗ ಳಿಂದ ತಯಾರಾದ "ರಚರ್ಯ" ದಂತ ಮಂಜನವು ... ಆಹಾರದ ಅವಶೇಷಗಳು ಹಲ್ಲುಗಳ ಸಂದಿಗಳಲ್ಲಿ ಉಳಿದು ಕ್ರಿಮಿಗಳು ... ಮತ್ತು ವಸಡಿಗಳು ಕೆಡುವವು. ಆದರೆ ಈ ಕ್ರಿಮಿಗಳು ರಚರ್ಯ ದಂತಮಂಜನ ಉಪಯೋಗದಿಂದ ನಾಶವಾಗುವವು. ಒಸಡಿಗಳು ಬಲಕಟ್ಟಾಗಿ ಬಾಯಿಯೊಳಗಿನ ಸುವಾಸನೆಯು ... ಸುವಾಸನೆಯುಂಟಾಗುವದು. "ರಚರ್ಯ" ದಂತಮಂಜನವನ್ನು ಉಪಯೋಗಿಸಿಯೇ ಇದರ ಗುಣಗಳನ್ನು ಕಂಡುಕೊಳ್ಳಬೇಕಲ್ಲದೆ ಕೇವಲ ವರ್ಣನೆಯಿಂದ ಅವು ತಿಳಿಯಲಾರವು. ಕನ್ನಡಿಗರೇ, ಕನ್ನಡ ನಾಡಿನ ಮಾಲನ್ನು ಮೊದಲು ಕೊಂಡು "ಮನೆಗೆಡು ಮಾರುಗೆಡು" ಎಂಬ ನಾಣ್ಣುಡಿಯಂತೆ ನಡೆಯಿರಿ! ಸ್ವದೇಶೀ ವಸ್ತುಗಳನ್ನು ಉಪಯೋಗಿಸಿ ಸ್ವರಾಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋಗಿಸಿ ಅನುಭವ ಪಡೆಯಿರಿ.

ಬಹಳ ಹಳೆಯದಾದ ಹೆಚ್ಚು ಖ್ಯಾತಿ ಹೊಂದಿದ್ದ
ಹೆಚ್ಚಿನ ಸಾಧಾರಣೆಯುಳ್ಳದ್ದಾಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ಇದೀಗ ೧೯೩೩ ನೇ ಇಸವಿ ತಾ|| ೧೬-೧೧ ರ ವರೆಗೆ ಇಡೀ ಭರತಖಂಡ (ಹಿಂದುಸ್ತಾನ) ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ, ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, ಸುವರ್ಣ ಪದಕಗಳನ್ನೂ, ಸದಭಿಪ್ರಾಯಗಳನ್ನೂ ಪಡೆದಿರುತ್ತದೆ.

ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ಉತ್ತರ ಹಿಂದುಸ್ಥಾನದ ಕ್ಷೇತ್ರಗಳ ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! ಉತ್ತಮ ವ್ಯವಸ್ಥೆ!
ಪ್ರೇಕ್ಷಣೆಯ ನೋಟ! ಸ್ವರ್ಗದ ಸೋಪಾನ!

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ೧೯೩೩ ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧೮೫೫ ಆಶ್ವಯುಜ ಶು|| ೧೩) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿದಂತೆ ಕ್ರಮವಾಗಿ

೧ ಪಂಢರಪುರ	ಅಕ್ಟೋಬರ ತಾ|| ೨	೧೯ ಅಯೋಧ್ಯೆ	೨೪	೩೭ ಕುಂಭಕೋಣಂ	...
೨ ನಾಶಿಕ	೪-೬	೨೦ ...	೨೫	೩೮ ರಾಮೇಶ್ವರ	೧೬-೧೭
೩ ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ ಕನ್ಯಾಕುಮಾರಿ (ಮಧುರೆಯಿಂದ)	
೪ ಸೋಮನಾಥ (ವೆರಾವಳದಿಂದ)		೨೨ ಪ್ರಯಾಗ	೨೬-೨೭		೧೮
೫ ವೆರಾವಳ	೮-೯	೨೩ ಕಾಶಿ		೪೦ ಶ್ರೀಕಾಳಹಸ್ತಿ (ರೇಣಿಗುಂಟದಿಂದ)	
೬ ದ್ವಾರಕಾ (ಜಾಮನಗರ)					೧೯-೨೧
೭ ಅಬುಪರ್ವತ (ಜೈನತೀರ್ಥ)	೧೦-೧೧	೨೪ ವೈದ್ಯನಾಥ		೪೧ ತಿರುಪತಿ	೨೨
೮ ಅಜ್ಮೀರ	೧೨-೧೩	೨೫ ಗಯಾ		೪೨ ...	
೯ ಪುಷ್ಕರ		೨೬ ... (ಜೈನತೀರ್ಥ)		೪೩ ... (ಕಡಪದಿಂದ)	೨೩
೧೦ ಮಥುರಾ	೧೪	೨೭ ಗಿರಿ		೪೪ ಮಹಾನಂದಿ	
೧೧ ಬೃಂದಾವನ		೨೮ ಸಮ್ಮೇತಶಿಖರ (ಜೈನತೀರ್ಥ)		೪೫ ಶ್ರೀಶೈಲ	೨೪
೧೨ ಗೋವರ್ಧನ	೧೫-೧೬	೨೯ ಕಲಕತ್ತಾ	೨೮-೨೯	೪೬ ಶ್ರೀಶೈಲ	
೧೩ ದಿಲ್ಲಿ		೩೦ ಜಗನ್ನಾಥ ಪುರಿ	೩೧	೪೭ ...	,,
೧೪ ಹರಿದ್ವಾರ		೩೧ ...	೧-೨	೪೮ ...	೨೬
೧೫ ಹೃಷೀಕೇಶ		೩೨ ರಾಜಮಹೇಂದ್ರಿ	೫	ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು ನವೆಂಬರ	
೧೬ ಗೋಕುಲ		೩೩ ಬೆಜವಾಡ	೧೦	೨೯ನೇ ತಾರೀಖು (ಶಕೆ ೧೮೫೫	
೧೭ ...		೩೪ ಮದ್ರಾಸ	೧೧	ಮಾರ್ಗಶಿರ ... ಬುಧವಾರ)	
೧೮ ಹರಿದ್ವಾರ	೧೮-೨೦	೩೫ ಶಿವಕಂಚಿ	೧೩-೧೪	ಮುಂಜಾನೆ ಹುಬ್ಬಳ್ಳಿ ಪಟ್ಟಣ	
	೨೧-೨೩	೩೬ ವಿಷ್ಣು ಕಂಚಿ	೧೪	ಕ್ಕೆ ಬಂದು ಸೇರುವದು	

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವನ್ನು ಕೊಡಲ್ಪಡುವದು.
ಈ ಎಲ್ಲ ಮಹಾಯಾತ್ರೆಗೆ ರೈಲ್ವೆ ಚಾರ್ಜು, ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡ ಕ್ಲಾಸ ೩೦೦ ರೂ. ಥರ್ಡ ಕ್ಲಾಸಿನವರು ... ಪಾಯಿಗಳು ಮಾತ್ರ. ಟಿಕೇಟ ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ. ಥರ್ಡಕ್ಲಾಸಿನವರು ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ೩ ವರ್ಷದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳಲ್ಪಡುವದು. ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು. ಟ್ರೇನಿನಲ್ಲಿ ಶ್ರೀಪಟ್ಟದಸ್ವಾಮಿಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು. ಹೆಚ್ಚಿನವರ ಹಿತಿಬಿಗ್ಯ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು. ಹೋದಸಾರೆ ನಮ್ಮ ಟ್ರೇನಿನಲ್ಲಿ ತಡವಾಗಿ ಬಂದವರಿಗೆ ಸ್ಥಳ ಸಿಗದೆ ಕೂಡ್ದರಿಂದ ಬಹಳ ಜನರು ನಿರಾಶರಾದರು. ಆದಕಾರಣ ಟಿಕೇಟ ಗಳಿಗಾಗಿ ತ್ವರೆಮಾಡತಕ್ಕದ್ದು.

* ಮೇಲೆ ಗೊತ್ತುಪಡಿಸಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು.

ಶ್ರೀ ಗೌರೀಶಂಕರ ಕಂಪನಿಯ ಎಂಜಿನ್ ರೆಂಟಿಗಳು— ಸದರ ಕಂಪನಿಯ ಎಂಜಿನ ರೆಂಟಿಗಳು ಅನೇಕ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರ ಹಾಗು ವರ್ತಕರ ಬಹಳ ಹತ್ತಿಗಳನ್ನು ... ಬರುವದು ... ಶ್ರೀ ಗೌರೀಶಂಕರ ಕಂಪನಿಗೆ ... ಕಳಿಸತಕ್ಕದ್ದು. ... ಯೋಗ್ಯ ... ಕೊಡಲ್ಪಡುವದು.

ಜಿ. ಎ. ಶಿರೂರ
ಮ್ಯಾನೇಜರ, ಶ್ರೀ. ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ
ಬಾಗಲಕೋಟೆ ಏಜಂಟ:— ಜಿ. ಎಚ್. ಚನಪ್ಪ ಬಾಳಸಿಂದ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ. ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು. ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ. ಹೈದರಾಬಾದಿನಿಂದಲೇ ತಬಲೆಗಳು ಪರಸ್ಥಳಕ್ಕೆ ಹೋಗಿ, ಅಲ್ಲಿಯ ಬಿಚಾರವೆಚ್ಚಗಳು ಅದರ ಮೇಲೆ ಬಿದ್ದು ನಿಮಗೆ ಬರುವವು. ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ನಮ್ಮ ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. ತಾ|| ...

ವಳಿಗ.ಡ್ ಹೈದರಾಬಾದ (ಡೆಕ್ಕನ್)
ಬಿ ಜಿ ಚಿಮ್ಮಲಗಿ

ಛಾಪಖಾನೆಯ ಸಾಮಾನುಗಳು ಮಾರತಕ್ಕದ್ದಿವೆ.

ಉಪಯೋಗಿಸಿದ ಅನೇಕ ಕನ್ನಡ ಟೈಪಗಳು, ಗ್ಯಾಲೀಕ್ಯಾಬಿನೆಟ್, ಲೆಡ್ ಕಟರ, ಹಾಗೂ ಹೊಸ ಟ್ರೆಡಲ್ (ಬಾಂಡ್) ಆರಾ. ಫುಲ್ಸ ಕೇಪ ಪ್ಲೋಲಿಯೊ.

ಕನ್ನಡಿಗ ಛಾಪಖಾನೆ ಧಾರವಾಡ

ಕನ್ನಡಿಗನ ಚಂದಾ ವಿವರ.

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೧-೬-೬	೦ ೧೩ ೦
೩ ತಿಂಗಳಿಗೆ	೧-೪-೦	೨-೨ ೦
೬ ತಿಂಗಳಿಗೆ	೨-೮-೦	೪-೦-೦
ವರ್ಷಕ್ಕೆ	೫-೦-೦	೯-೦-೦

ವ್ಯವಸ್ಥಾಪಕ

[illegible masthead]

ಧಾರವಾಡ— ರವಿವಾರ ತಾರೀಖು [illegible]

ಗಾಂಧೀಜಿಯವರ ವಿಲಕ್ಷಣ ಆತ್ಮಸಂಯಮನ.

[illegible] ಅವರು [illegible] ಅಸ್ಪೃಶ್ಯತಾ [illegible] ಪ್ರಕಟಿಸಿ [illegible] ಮುಂದೇನು ಮಾಡಬೇಕೆಂಬ ಬಗ್ಗೆ [illegible] ಅವರ ಲಕ್ಷ್ಯವು [illegible] ವಿಚಾರ [illegible] ನಡೆದಿದ್ದವು [illegible] ಪುನರ್ ಬಂಧನ ಪ್ರಸಂಗ [illegible] ಸರಕಾರ [illegible] ಅದಕ್ಕೆ ಕೊನೆ ಮಾಡಿದರು. ಅವರು ಮತ್ತೆ ಕಾಯ [illegible] ಸರಕಾರವು [illegible] ಗಾಂಧೀಜಿಯವರಿಗೂ ಹಾಗೆ ಎನಿಸಿದಂತೆ ತೋರು[illegible] ಆಗಲಿಂದಲೇ ಅವರು ಈ ಆತ್ಮಸಂಯಮನವನ್ನು ಮಾಡಿಕೊಂಡು, ಸರಕಾರದ [illegible] ಗಾಂಧೀಜಿಯವರು ಪುನಃ ಸೆರೆಮನೆಗೆ ಹೋದದ್ದನ್ನು ನೋಡಿ [illegible] ಮಾಡಿಬಿಟ್ಟರು. ಅವರಿಗೆ ಸರಕಾರದವರು ಒಂದು ವರ್ಷದ ಶಿಕ್ಷೆಯನ್ನು ವಿಧಿಸಿ[illegible] ಸೆರೆಮನೆಯಲ್ಲಿದ್ದಾಗ ಅವರು ಉಪವಾಸ ಮಾಡಿದರು. ಆಗ ಅವರ ಜೀವಕ್ಕೆ ಅಪಾ[ಯ]ವಾಗಬಹುದೆಂಬ ಹೆದರಿಕೆಯಿಂದಲೇ ಏನೋ ಅವರನ್ನು ಬಂಧಮುಕ್ತ ಮಾಡಿದರು. ಆದರ [illegible] ತಾನೇಕೆ ತೆಗೆದುಕೊಳ್ಳಬೇಕೆಂದು ಗಾಂಧೀಜಿಯವರ ಅಂಬೋಣ. ಆದ ಕಾರಣ [illegible] ತಮ್ಮ ಶಿಕ್ಷೆಯು ಮುಗಿಯುವ ಅವಧಿಯ ವರೆಗೆ ತಾವು ಸೆರೆಮನೆಯಲ್ಲಿಯೇ [illegible]ವೆಂದು ಭಾವಿಸುವರು. ಆದ ದರಿಂದಲೇ ಅವರು ಪುನಃ ಕಾಯದೆಭಂಗವನ್ನು ಮಾಡುವ[illegible] ನಿಲ್ಲಿಸಿದ್ದು ಇದರಿಂದ ಸರಕಾರದವರಿಗೂ ತಮಗೂ ನಡೆದಿರುವ ಈ ಇಲಿ ಬೆಕ್ಕುಗಳ ಯು[ದ್ಧ] ತಾನಾಗಿಯೇ ಹೋಗುವುದೆಂಬ ಕಾರಣದಿಂದ ಅವರು ಈ ಯುಕ್ತಿಯನ್ನು ತೆಗೆದಿರುವ[illegible] ಒಮ್ಮೆ ಉಪ್ಪನ್ನು ಕಷ್ಟತರವಾದ ಚಿಂತೆಯೊಳಗಿಂದ ಸ್ವಲ್ಪ ಪಾರಾಗಿ, ಮುಕ್ತಿಯ ಉಸು[ರು] [illegible] ಮಹಾತ್ಮರು ತಮ್ಮ ತತ್ವವನ್ನು ತಿಲಪ್ರಾಯವೂ ಬಿಡದೆ ತಮ್ಮ [illegible] ಕೆಡಹಲು ಉದ್ಯುಕ್ತರಾದವರನ್ನು ಕುಸ್ತಿಯಲ್ಲಿ ಕೆಡಹಿ ಅವರ ಎದೆಯ ಮೇಲೆ ಕುಳಿ[ತ]ರೆ. ಹೀಗೆ ಅವರು ಸರಕಾರದವರ ಪೇಚಿನೊಳಗಿಂದ ಪುನಃ ಪುನಃ ಪಾರಾಗುತ್ತಿರುವದನ್ನು [illegible] ಯಾವ ಭಾರತೀಯನಿಗೆ ಅವರ ವಿಲಕ್ಷಣವಾದ ಆತ್ಮಸಂಯಮನದ ಬಗ್ಗೆ ಆಶ್ಚರ್ಯವೂ [illegible]ದವೂ ಆಗಲಿಕ್ಕಿಲ್ಲ? ಬಾಣವನ್ನು ಬಿಡುವದಕ್ಕಿಂತಲೂ ಬಾಣವನ್ನು ಉಪಸಂಹಾರ[ಮಾಡು]ವದಕ್ಕೆ ಹೆಚ್ಚಿನ ಶಕ್ತಿ ಬೇಕು.

[ಗಾ]ಂಧಿ-ಜವಾಹಿರರ ಪತ್ರವ್ಯವಹಾರ

[ಪು]ಣೆ ತಾ॥ [illegible] ಪಂಡಿತ ಜವಾಹಿರ[ಲಾಲರು] [illegible] ಪ್ರಕಟನೆಯಲ್ಲಿ ಉಲ್ಲೇಖ ಮಾಡಿದ [illegible] ಮತ್ತು ಗಾಂಧಿಯವರ ನಡುವಿನ ಪತ್ರ[illegible]ಗಳು ಪ್ರಸಿದ್ಧವಾಗತೊಡಗಿವೆ.

[ಪ]ಂಡಿತ ಜವಾಹಿರರ ಪತ್ರವು [illegible] ಶಬ್ದಗಳುಳ್ಳದ್ದಿದೆ. ಅವರು ತಮ್ಮ [illegible] ಕರಾಚಿ ಕಾಂಗ್ರೆಸದಲ್ಲಿ ಸ್ವೀಕೃತ[illegible] ಮತ್ತು ಆರ್ಥಿಕ [illegible] ಮಹಾ[illegible]ವನ್ನು ಎಳೆದು, [illegible] ನಿವರ್ಶನಕ್ಕೆ ತಂದು ಕೊಟ್ಟಿದ್ದಾರೆ.

[illegible] ರಾಷ್ಟ್ರೀಯ ಸಮಸ್ಯೆಯ ಸಂಬಂ[ಧ]ವಿತ್ತು, ಶ್ರೀ ಅಣೆಯವರ ಪ್ರಕಟನೆ [ಕಾ]ಂಗ್ರೆಸ್ ಸಂಸ್ಥೆಯು ವಿಸರ್ಜನ[illegible], ಈ ವಿಷಯದಲ್ಲಿ ಶ್ರೀ ಅಣೆ[illegible] ಗಾಂಧಿಯವರಾಗಲಿ ಕೈಕೊಂಡ [illegible] ತಮಗೆ ಸಮ್ಮತವಿದೆಯೆಂದೂ ಅಭಿ[ವ್ಯ]ಕ್ತಮಾಡಿದ್ದಾರೆ.

[ವೈ]ಯುಕ್ತಿಕ ಕಾಯದೆಭಂಗ ಮತ್ತು ಸಾ[ಮೂಹಿ]ಕ ಕಾಯದೆಭಂಗ ಇವುಗಳ ನಡುವೆ ವಿಶೇಷ ಭೇದವಿಲ್ಲೆಂದು ಪಂಡಿತರ ಅಂಬೋಣ. ಕಾಂಗ್ರೆಸ ಚಳವಳಿಯನ್ನು ಗುಪ್ತವಾಗಿ ಸಾಗಿಸತಕ್ಕದ್ದಲ್ಲವೆಂದು ಮಹಾತ್ಮರ ಹೇಳಿಕೆಯು ಸಮ್ಮತವಿದ್ದರೂ, ಕೆಲವೊಂದು ಪ್ರಸಂಗಗಳಲ್ಲಿ ಈ ಧೋರಣವನ್ನು ಸಡಿಲು ಮಾಡಬೇಕಾಗುತ್ತದೆ ಎಂದು ಪಂಡಿತರ ಅಭಿಪ್ರಾಯ.

ಕೊನೆಯಲ್ಲಿ ಅವರು, ಯಾವತ್ತು ಕಾಂಗ್ರೆಸ ಕಾರ್ಯಕರ್ತರು ತಮ್ಮ ಉದ್ದಿಷ್ಟ ಕಾರ್ಯವನ್ನು [illegible] ಅಧಿಕಾರಿಗಳಿಗೆ [illegible] ಹಾಸ್ಯಾಸ್ಪದವಾಗುತ್ತದೆಂದು ಉಲ್ಲೇಖ ಮಾಡಿದ್ದಾರೆ. ಇದು ಮಹಾತ್ಮರ ವಿಷಯದಲ್ಲಿ ಮಾತ್ರ ಸರಿಹೋಗಬಹುದೆಂದೂ, ಆದರೆ ಇತರ ಸಂಬಂಧದಲ್ಲಿ ಅಶಕ್ಯ [illegible]ವೆಂದೂ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

(ಅ ಪ್ರೆ)

ಜಪಾನಿ ವ್ಯಾಪಾರಿ ಮಂಡಲದ ಬರುವಿಕೆಯ ಉದ್ದೇಶ

ಕಲಕತ್ತಾ ತಾ॥ [illegible]— ಜಪಾನಿ ವ್ಯಾಪಾರಿ ಮಂಡಲದ ಅಧ್ಯಕ್ಷರಾದ [illegible] ಇವರು ಅಸೋಸಿಯೆಟೆಡ್ ಪ್ರತಿನಿಧಿಯ ಮುಂದೆ ತಮ್ಮ ಆಗಮನದ ಉದ್ದೇಶವಾಗಿ ಹೇಳಿದ್ದೇನಂದರೆ— ಹಿಂದೀ ಜಪಾನಿ ವ್ಯಾಪಾರದ ಒಪ್ಪಂದವು [illegible] ಮುಗಿಯಲಿಕ್ಕಿದ್ದು ಈ ಸಂಬಂಧವಾಗಿ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳೊಡನೆ ಮಾತುಕತೆಯಾಡಲು [illegible] ಬೇಕೆಂದಿದೆ. [illegible] ಜಪಾನದಲ್ಲಿ [illegible] ವ್ಯಾಪಾರಿ ಸಂಬಂಧವನ್ನು ಸ್ಥಿರಪಡಿಸಿ ಅದು ವೃದ್ಧಿಂಗತವಾಗುವಂತೆ ಯೋಚನೆ ಮಾಡುವದೇ ನಮ್ಮ ಉದ್ದೇಶವಾಗಿದೆ. ಹಿಂದೀ ಪೇಟೆಯನ್ನು ಸಂಪೂರ್ಣವಾಗಿ ನಮ್ಮ ಕೈಯಲ್ಲಿ ತೆಗೆದುಕೊಳ್ಳುವದು ನಮ್ಮ ಉದ್ದೇಶವಿಲ್ಲ. ಇಲ್ಲವೆ ಹಿಂದುಸ್ಥಾನದಲ್ಲಿಯ ಉದ್ಯೋಗಧಂದೆಗಳೊಡನೆ [illegible] ನಮ್ಮ ಇಚ್ಛೆಯಿಲ್ಲ. [illegible] ಹಿಂದಿನ ಪೇಟೆಯಲ್ಲಿ ಮಾರಲಿಕ್ಕೆ [illegible] ದೊರೆಯಬೇಕೆಂಬುದೇ ನಮ್ಮ ಇಚ್ಛೆಯಾಗಿದೆ. ನಾವೇನು ಈ ವಿಷಯದಲ್ಲಿ ಇತರ ದೇಶಗಳಿಗಿಂತ ಹೆಚ್ಚಿನ ಸವಲತ್ತು ಬೇಡುವದಿಲ್ಲ. ಅವರನ್ನು ಹೇಗೆ ನಡಿಸಿಕೊಳ್ಳುವರೋ ಹಾಗೆಯೇ ನಮ್ಮನ್ನು ನಡಿಸಿಕೊಳ್ಳಬೇಕೆಂದು [illegible] ನಮ್ಮ ಹಾಗು ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳ ನಡುವೆ ನಡೆಯುವ ಮಾತುಕತೆಯಿಂದ ಹಿಂದೀ ಜಪಾನಿ ವ್ಯಾಪಾರ ಸಂಬಂಧವು ಪ್ರಗತಿಯನ್ನು ಹೊಂದಿ ಬ್ರಿಟನ್ ಹಾಗು ಜಪಾನದ ಪರಂಪರಾಗತವಾದ ಸ್ನೇಹ ಸಂಬಂಧವು ವೃದ್ಧಿಂಗತವಾಗುವದೆಂದು ನಂಬಿದ್ದೇನೆ.

(ಅ ಪ್ರೆ)

ಪಂಡಿತ ಜವಾಹಿರರಿಗೆ ಮಹಾತ್ಮರ ಉತ್ತರ.

ಮುಂಬಯಿ ತಾ॥ [illegible]— ಮಹಾತ್ಮಾ ಗಾಂಧಿಯವರು ಪಂಡಿತ ಜವಾಹಿರರಿಗೆ ಬರೆದ ಪತ್ರ ಮುದ್ರಣಕ್ಕೆ ಸಿದ್ಧವಾದದ್ದಿದೆ. ಮಹಾತ್ಮರು ತಮ್ಮ ಈ ಪತ್ರದಲ್ಲಿ ಪಂಡಿತ ಜವಾಹಿರರ ಪ್ರತಿಯೊಂದು ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಧನಿಕರಲ್ಲಿ ಬದಲಾವಣೆಯಾಗದ ಹೊರತು ಸಾಮಾನ್ಯ ಜನರ ಸ್ಥಿತಿಗತಿಯು ಸುಧಾರಿಸುವದಿಲ್ಲವೆಂಬ ಪಂಡಿತರ ತತ್ವವು ತಮಗೆ ಮಾನ್ಯವಿದೆಯೆಂದು ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಅಖಿಲ ಹಿಂದುಸ್ಥಾನವು ಏಕಾಂಗ [illegible] ಸಂಸ್ಥಾನಿಕರು ತಮ್ಮ ಕೆಲವೊಂದು ಅಧಿಕಾರಗಳಿಗೆ ನೀರು ಬಿಟ್ಟು, ತಮ್ಮ ಪ್ರಜೆಗಳ ನಿಜವಾದ ಪ್ರತಿನಿಧಿಗಳ [illegible] ಪಂಡಿತರ ತತ್ವವು ತಮಗೆ ಸಂಪೂರ್ಣ ಮಾನ್ಯವಿರದಿದ್ದರೂ, ಅದು ತಮಗೆ ಸಮ್ಮತವಿದೆಯೆಂದು ಹೇಳಿದ್ದಾರೆ. ಶ್ರೀ ಅಣೆಯವರ ಧೋರಣದ [illegible]ಯವಾಗಿ ಪಂಡಿತರು ಮಾಡಿದ ಸ್ಪಷ್ಟೀಕರ[ಣವು] ತಮಗೆ ಸಮ್ಮತವಿದೆಯೆಂದು ಅಭಿಪ್ರಾಯ ವ್ಯಕ್ತಮಾಡಿ, [illegible] ಕೊಟ್ಟದ್ದಿಲ್ಲವಾದರೆ ಒಳಗಿನ [illegible] ಚಳವಳಿಯಲ್ಲ ನಾವ್ [illegible] ಹೋಗುತ್ತಿತ್ತೆಂದು ನುಡಿದಿದ್ದಾರೆ. ವೈಯುಕ್ತಿಕ ಹಾಗು ಸಾಮೂದಾಯಿಕ ಕಾಯದೆಭಂಗದಲ್ಲಿ ಭೇದವೇನೆಂದ ಕೇಳಿದರೆ, ಸಾಮೂದಾಯಿಕ ಕಾಯದೆಭಂಗದಲ್ಲಿ [illegible] ವೈಯಕ್ತಿಕ [illegible] ವ್ಯಕ್ತಿಗೆ [illegible] ಕಾಯದೆಭಂಗದಲ್ಲಿ ಪ್ರತಿಯೊಬ್ಬ ಸತ್ಯಾಗ್ರಹಿಯು ತಾನೇ ಮುಖಂಡನಾಗಿರುವನು ಎಂದು ಹೇಳಿದ್ದಾರೆ. ಸಾಮೂದಾಯಿಕ ಕಾಯದೆಭಂಗದ ಹೊಣೆಯನ್ನು ಹೊತ್ತುಕೊಳ್ಳುವಷ್ಟು ಶಕ್ತಿಯು ಸದ್ಯಕ್ಕೆ ಕಾಂಗ್ರೆಸ ಸಂಸ್ಥೆಯಲ್ಲಿ ಇಲ್ಲವೆಂಬುದು ತಮಗೆ ತಿಳಿದು ಬಂದಿದ್ದರಿಂದ, ಕಾಂಗ್ರೆಸ ಸಂಸ್ಥೆಯು ಸುಳ್ಳು [illegible] ಸಾಮುದಾಯಿಕ ಕಾಯದೆಭಂಗವನ್ನು ಸ್ಥಗಿತಗೊಳಿಸಿ ಗುಂಡಾಂತರಕ್ಕೊಳಗಾಗುವದ [illegible] ಉಲ್ಲೇಖಿಸಿದ್ದಾರೆ. ಕೊನೆಯಲ್ಲಿ ಅವರು, ಸತ್ಯಾಗ್ರಹಿಗಳಲ್ಲಿ ಬೆರೆಯಲು ತಮ್ಮಲ್ಲಿ ಅಷ್ಟು ಸಾಮರ್ಥ್ಯವಿಲ್ಲವೆಂದು ಕಾಂಗ್ರೆಸ ಕಾರ್ಯಕರ್ತರಿಗೆ ತಿ[illegible] ಸಿದಲ್ಲಿ ಅವರು ಅದರಿಂದ ದೂರ ಉಳಿಯುವದರಲ್ಲಿ ಏನೂ ತಪ್ಪಿಲ್ಲವೆಂದೂ, ಅವರು ಜಾತೀಯ ಐಕ್ಯ, ಅಸ್ಪೃಶ್ಯತಾ ನಿವಾರಣೆ [illegible] ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಕೆಲಸ ಮಾಡಿದರೆ, ಅವರೂ ದೇಶಸೇವೆಯನ್ನು ಮಾಡಿದಂತಾಗುವದೆಂದು ಹೇಳಿದ್ದಾರೆ. ನಾನು ನನ್ನ ಕಾರ್ಯವನ್ನು ತಡೆಹಿಡಿದದ್ದು, [illegible] ತಪ್ಪು ತಿಳುವಳಿಕೆ ಹುಟ್ಟಲು ಕಾರಣವಾಗುತ್ತಿದ್ದರೂ ಅದರಿಂದ [illegible] ತಮಗ ಭರವಸೆಯಿದೆ ಎಂದು ನುಡಿದಿದ್ದಾರೆ.

(ಅ ಪ್ರೆ)

ಮುಂಬಯಿ ಕೆಲಸಗಾರರೊಡನೆ ಪಂ. ಜವಾಹಿರರ ಸಂಭಾಷಣ.

ಮುಂಬಯಿ ತಾ॥ [illegible]— ಪಂಡಿತ ಜವಾಹಿರಲಾಲರು ನಿನ್ನಿನ ದಿವಸ ಇಲ್ಲಿಗೆ ಒಂದು [illegible] ಕಾಂಗ್ರೆಸ ಕೆಲಸಗಾರರನ್ನು ಭೆಟ್ಟಿ ಕೊಟ್ಟುದರಲ್ಲಿಯೂ ಮತ್ತು ಅವರೊಡನೆ ಸದ್ಯದ ಪರಿಸ್ಥಿತಿ ಸಂಬಂಧವಾಗಿ ವಿಚಾರ ವಿನಿಮಯ ಮಾಡುವದರಲ್ಲಿಯೂ ಕಾಲ ಕಳೆದರು. ಈ ವಿಚಾರವಿನಿಮಯದಲ್ಲಿ ಮಹಾತ್ಮಾ ಗಾಂಧಿ ಹಾಗು ಅವರ ನಡುವಿನ ಪತ್ರವ್ಯವಹಾರದ ಸಂಬಂಧವಾಗಿಯೇ ವಿಶೇಷ ಚರ್ಚೆಯಾಯಿತು. [illegible]ಲವರು ಅವರಿಗೆ "ನೀವು ನಿಮ್ಮ ಪ್ರಕಟಣೆಯಲ್ಲಿ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕೂಡಿಸುವಲ್ಲಿ ಕೆಲವು ಅಡಚಣಿಗಳು ಉದ್ಭೂತವಾಗಬಹುದು ಎಂದು ಉಲ್ಲೇಖಿಸಿದ್ದು ಆ ಅಡಚಣಿಗಳು ಯಾವವು" ಎಂದು ಪ್ರಶ್ನೆ ಮಾಡಿದರು. ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಅನೇಕ ಜನ ಸಭಾಸದರು ಇನ್ನೂ ಜೇಲಿನಲ್ಲಿರುವದು ಮುಖ್ಯವಾದ ಅಡಚಣಿಯಾಗಿದೆಯೆಂದೂ, ಅದನ್ನು ಕರೆದಲ್ಲಿ ಸರಕಾರದವರು ಅದನ್ನು ಕೂಡಿಸಗೊಡುವರೋ ಇಲ್ಲವೋ ಎಂದು ಹೇಳಬರುವಂತಿಲ್ಲವೆಂದೂ ಅವರು ಹೇಳಿದರು. ಇದಲ್ಲದೆ ಪಂಡಿತ ಮಾಳವೀಯಾ ಇವರಿಂದ ಒಬ್ಬರಿಂದಲೇ ಸಭೆಯನ್ನು ಕರೆಯಬೇಕೆಂದು ಸೂಚನೆ ಬಂದಿರುವದಾಗಿಯೂ, ಕಮಿಟಿ ಸಭಾಸದರಿಂದ ಹಾಗೆ ಸೂಚನೆ ಒದಗಲ್ಲಿ ನಿಯಮಗಳನುಸಾರವಾಗಿ ತಾವು ಸಭೆಯನ್ನು ಕರೆಯಲಿ ಬೇಕಾಗುತ್ತದೆಂದೂ ಸ್ಪಷ್ಟಪಡಿಸಿದರು.

ಪಂಡಿತರು ಇಲ್ಲಿ ಒಂದೆರಡು ದಿವಸ ನಿಂತುಕೊಂಡು ನಂತರ ಮಹಾತ್ಮಾಜಿಯವರ ಭೆಟ್ಟಿಗೆ ಲಖನೌಕ್ಕೆ ಹೋಗತಕ್ಕವರಿದ್ದಾರೆ.

(ಅ ಪ್ರೆ)

ರಂಗಸ್ವಾಮಿಯವರು ಮಹಾತ್ಮರ ಭೆಟ್ಟಿಗೆ ಬಂದರು

ಮುಂಬಯಿ ತಾ॥ [illegible]— ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀ ಎ. ರಂಗಸ್ವಾಮಿ ಅಯ್ಯಂಗಾರ ಇವರು ಮಹಾತ್ಮರನ್ನು ಕಾಣಲು ಈ ಹೊತ್ತಿನ ದಿವಸ ಮುಂಜಾನೆ ಇಲ್ಲಿಗೆ ಬಂದಿದ್ದಾರೆ.

(ಅ ಪ್ರೆ)

ಸ್ವರೂಪರಾಣಿಯವರ ಪ್ರಕೃತಿಯು ತಾರು

ಮುಂಬಯಿ ತಾ॥ [illegible]— ಪಂಡಿತ ಜವಾಹಿರಲಾಲರಿಗೆ ಲಖನೌದಿಂದ ಶ್ರೀಮತಿ ಸ್ವರೂಪರಾಣಿಯವರ ಪ್ರಕೃತಿಯು ಅಷ್ಟೊಂದು ಸಮಾಧಾನಕರವಿಲ್ಲವೆಂದು ತಾರು ಬಂದಿದೆ. ಈ ಕಾರಣ ಪಂಡಿತ ಜವಾಹಿರರು ನಾಳಿನ ದಿವಸ ಸಂಜೆಗೆ ಲಖನೌಕ್ಕೆ ಪ್ರಯಾಣ ಮಾಡತಕ್ಕವರಿದ್ದಾರೆ.

(ಅ ಪ್ರೆ)

ಬಾಗಲಕೋಟೆಯ ಪತ್ರ.

(ಸ್ವಂತ ಬಾತ್ಮಿಗಾರರಿಂದ)

ಶ್ರೀ ... ಆಗೋಳ ಅಚ್ಯುತರಾಯರ ಯತ್ನದಿಂದ ಜನ್ಮವೆತ್ತಿದ ... ಭರತ ನಾಟ್ಯ ಸಮಾಜದವರು ತಮ್ಮ '...' ವೆಂಬ ನಾಟಕದ ಪ್ರಯೋಗವನ್ನು ಮಾಡಿ ತೋರಿಸಿದ್ದು, ಅದು ಲೋಕಪ್ರಿಯ ಆಗುತ್ತಿದೆ. ... ಈ ನಾಟಕದ ... ಸಹನೆಯನ್ನು ... ಮನಸ್ಸು ... ಕಾಣುತ್ತದೆ. ಈಗಾಗಲೆ ಎರಡು ಪ್ರಯೋಗಗಳ ಉತ್ಕರ್ಷವನ್ನು ... ಶ್ರೀ ಅಚ್ಯುತರಾಯರ ... ವ್ಯದುಸ್ವಭಾವದ ಮೂಲಕ ... ಪ್ರಸ್ತುತ ಅಲ್ಲಿ ಬೆಳೆಯುವಲ್ಲಿ ಅಸ್ಪದವಾಗಿದೆ.

ಇದಲ್ಲದೆ ಶಿವಾನಂದ ನಾಟಕ ಗೃಹದಲ್ಲಿ ಗದುಗಿನ ಶ್ರೀ ದತ್ತಾತ್ರೇಯ ನಾಟಕ ಮಂಡಳಿಯವರ ಆಟಗಳು ನಡೆದಿವೆ.

ನಾಡಹಬ್ಬ ಉತ್ಸವದ ನಿಮಿತ್ತ ತಮ್ಮದೊಂದು ಪ್ರಯೋಗವಾಗಬೇಕೆಂದು ಇಲ್ಲಿಯ ... ದಿನ ... ಸಾತ್ವಿಕ ... ಶ್ರೀ ... ಕೃಷ್ಣರಾಯರು ಬರೆದ ... ಎಂಬ ನಾಟಕವನ್ನು ಕಲಿಸುತ್ತಿರುವರು. ಸಂಘದ ... ಮುಖ್ಯ ಮುಖ್ಯ ಪಾತ್ರವಹಿಸುವವರಿಂದ ಆದು ... ವಾಗುವದೆಂದು ನಾಟ್ಯಪ್ರಿಯರ ... .

ಈ ಊರ ... ವಿದ್ಯಾರ್ಥಿಗಳಿಂದ ... ಬೇಕೆಂದು ಮುನಸಿಪಾಲಿಟಿಯ ... ಕಮಿಟಿಯಲ್ಲಿ ... ಆದರೆ ಆ ... ಇದ್ದ ... ಹಾಗಿದ್ದು, ಅದನ್ನು ... ಆಯುವ ... ಮುನಸಿಪಾಲಿಟಿಯ ನಿರ್ಣಯದಿಂದ ... ದೊರೆಯ ... .

... ಜೀವನ ... ಪ್ರಯೋಜನ ... ಅಸ್ಪೃಶ್ಯರಿಗಾಗಿ ಸರಿಸಮಾನ ... ಆಗ ಕೃಷಿ ... ಫಲಗಳನ್ನು ... ಇಲ್ಲಿಯ ... ಕೋ ... ಆಪರೇಟಿವ ... ಕಳಿಸಿದ್ದು, ಅವು ಇಲ್ಲಿಂದ ಆಯಾ ... ಗಳಿಗೆ ... .

ಇಲ್ಲಿಯ ... ಮಂದಿರದಲ್ಲಿ ಒಂದು ... ಸಾಯಿದ್ದಿದ ... ಸಾರಸ್ವತ ... ಕೆಲವು ಕಡೆ, ... ಸೇರಿದ್ದ ... ಹೊಸ್ತಿಲ ... ಬರೆದಿಟ್ಟು, ... ಇವರನ್ನು ನಿರ್ಣಯ ... ಹೋಗಲು ಬಂಕದಿಂದ ನಿನ್ನ ಮಂದಿರದ ... ಸಭೆಯನ್ನು ಕರೆದಿದ್ದರು. ಆದರೆ ... ಯದ ... ಸಭೆಗೆ ... ಬಂದಿರುವದನ್ನು ನೋಡಿ, ... ಕಾರಣದಿಂದ ಸಭೆಯ ಕಾರ್ಯವನ್ನು ... ನವರಾತ್ರಿಯಲ್ಲಿ ಒಂದು ... ಕೊಡಬೇಕೆಂದು ... ಹೋದರು.

ಟಿಳಕ ಸ್ಮಾರಕ ಭವನಕ್ಕೆ ೧೦೦೦೦ ರೂಪಾಯಿ ದಾನ

ಕಾನಪೂರ ತಾ|| ೧೪- ಇಲ್ಲಿಯ ಪ್ರಸಿದ್ಧ ವಕೀಲರಾದ ಸೇಟ ರಾಮನಾಥ ಇವರು ಟಿಳಕ ಸ್ಮಾರಕ ಭವನಕ್ಕೆ ೧೦೦೦೦ ರೂಪಾಯಿ ದಾನ ಮಾಡಿದ್ದಾರೆ.

ಸೆರಸೋಪೆಂತರೂ ಸಹಿ ಮಾಡಿದರು

ಕಲಕತ್ತಾ ತಾ|| ೧೪- ಅಂದಮಾನ ರಾಜಕೀಯ ಕೈದಿಗಳ ಸಂಬಂಧವಾಗಿ ರವೀಂದ್ರನಾಥ ಟಾಗೋರ, ಪಂಡಿತ ಜವಾಹಿರಲಾಲ ನೆಹರು ಮೊದಲಾದವರ ಸಹಿಯಿಂದ ಹೊರಟ ಪತ್ರಿಕೆಯಲ್ಲಿಯ ವಿಷಯವು ತಮಗಾದರೂ ಸಮ್ಮತವಿದ್ದು ಆ ಪತ್ರಿಕೆಯ ಮೇಲೆ ತಾವಾದರೂ ಸಹಿ ಮಾಡುವದಾಗಿ ಜಾಹೀರ ಮಾಡಬೇಕೆಂದು ಪಂಡಿತ ಮದನಮೋಹನ ಮಾಲವೀಯ ... ಶ್ರೀ ನರಸೋಪಂತ ಕೇಳಕರ ಇವರು ... ದಲದವರಿಗೆ ತಿಳಿಸಿದ್ದಾರೆ.

ನಾಡಹಬ್ಬದ ಕಾರ್ಯಕ್ರಮ

ಧಾರವಾಡ ೧೯೩೩.

ತಾರೀಖು	ದಿವಸ	ವ್ಯಾಖ್ಯಾತರು	ವಿಷಯ
೨೦-೯-೩೩	ಬುಧವಾರ	ನಾಟಕ ಶಿರೋಮಣಿ ಗರುಡ ಸದಾಶಿವರಾಯರು	
೨೧-೯-೩೩	ಗುರುವಾರ	... ಬೆಟಗೇರಿ ಕೃಷ್ಣರಾಯರು	ಜನ ಪದ ಸಾಹಿತ್ಯ
೨೨-೯-೩೩	ಶುಕ್ರವಾರ	... ಕೃಷ್ಣರಾಯರು	
೨೩-೯-೩೩	ಶನಿವಾರ	ಗೋಖಲೆ ...	
೨೪-೯-೩೩	ಆದಿತ್ಯವಾರ	ಪ್ರೊ ... —	ಹೊಸ ಕನ್ನಡ ಕಾವ್ಯ ಸೃಷ್ಟಿ
೨೫-೯-೩೩	ಸೋಮವಾರ	... ಸಕ್ಕ್ರಿ	
೨೬-೯-೩೩	ಮಂಗಳವಾರ	... ವ್ಯಾಯಾಮಶಾಲೆಯವರ ಆಟಗಳ ಪ್ರದರ್ಶನ	
೨೭-೯-೩೩	ಬುಧವಾರ	ಕವಿ ಸಮ್ಮೇಲನ	
೨೮-೯-೩೩	ಗುರುವಾರ	ಉಪಸಂಹಾರ	

ತಾ|| ೧೬-೯-೩೩ ಕಾರ್ಯದರ್ಶಿಗಳು

ಉಪವಾಸ ಬೀಳುವದು

ಮಂಗಳೂರ ತಾ|| ೧೯— ಕಾಸರಗೋಡ ತಾಲೂಕ ಬೋರ್ಡದ ಅಧಿಕಾರಿಗಳು ತಮ್ಮ ಕೈಕೆಳಗಿನ ಕೆಲವು ಶಿಕ್ಷಕರಿಗೆ ... ತಿಂಗಳ ಪಗಾರ ಇನ್ನೂ ಪಗಾರವನ್ನು ಕೊಟ್ಟಿರುವದಿಲ್ಲ ಶಿಕ್ಷಕರಿಗೆ ಸಾಲವನ್ನು ಕೊಟ್ಟ ಧನಿಕರು ಶಿಕ್ಷಕರ ಮೇಲೆ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ ಅಧಿಕಾರಿಗಳಿಂದ ಬೇಗನೆ ಸಂಬಳ ಪಡೆದುಕೊಳ್ಳುವ ಉದ್ದೇಶದಿಂದ ಆ ಶಿಕ್ಷಕರು ತಾಲೂಕಬೋರ್ಡ ಕಚೇರಿಯಲ್ಲಿ ಅನ್ನ ನೀರುಗಳಿಲ್ಲದೆ ಉಪವಾಸ ಕೂಡಲು ನಿಶ್ಚಯಿಸಿರುವರು.

ಇಂದೂರಲ್ಲಿ ಶಾಸನಭಂಗ

ಬ್ರಾಹ್ಮಣನಿಗೆ ೧೦೧ ರು. ದಂಡ

ಜಬಲಪುರ ತಾ|| ೧— ಸಂಸ್ಥಾನದ ಕಾಯದೆಗೆ ವಿರುದ್ಧವಾದ ರೀತಿಯಲ್ಲಿ ನುಶ್ಶಾಸಮಾರಂಭವನ್ನು ಜರುಗಿಸಿದ ಬಗ್ಗೆ ಇಂದೂರಲ್ಲಿ ಭದಿಲಾಲ ರಘುನಾಥನೆಂಬ ಬ್ರಾಹ್ಮಣನಿಗೆ ಅಲ್ಲಿಯ ಮ್ಯಾಜಿಸ್ಟ್ರೇಟರು ೧೦೧ ರೂಪಾಯಿ ದಂಡ ಇಲ್ಲವೆ ೧ ದಿವಸ ಕೈದು. ಹೀಗೆ ಶಿಕ್ಷೆ ವಿಧಿಸಿರುವರು.

ಲಖನೌದಲ್ಲಿ ೧೫ ಜನರಿಗೆ ಶಿಕ್ಷೆ.

ಲಖನೌ ತಾ|| ೧೪— ಬ್ರಿಟಿಶ ಸರಕಾರಗಳಿಗೆ ಬಹಿಷ್ಕಾರ ಹಾಕಿರೆಂದು ಉಪದೇಶ ಮಾಡಿದ ಬಗ್ಗೆ ಈ ಹೊತ್ತಿನ ದಿವಸ ೧೫ ಜನ ಸ್ವಯಂಸೇವಕರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆ ದೊರೆಯಿತು.

ಮುಂಬಯಿಯಲ್ಲಿ

ಡಾ. ಹರ್ಡೀಕರರು.

ಮುಂಬಯಿ ತಾ|| ಹಿಂದುಸ್ಥಾನೀ ಸೇವಾದಲದ ಜನರಲ್ ಸೆಕ್ರೆಟರಿಯವರಾದ ಡಾ. ಹರ್ಡೀಕರರು ಅಮೇರಿಕೆಯಿಂದ ನಿನ್ನಿನ ದಿವಸ ಇಲ್ಲಿಗೆ ಬಂದರು. ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀ ಸೋಫಿಯಾ ಸೊಮಜಿ ಮೊದಲಾದವರು ಅವರ ಸ್ವಾಗತಕ್ಕೆ ಸ್ಟೇಶನಕ್ಕೆ ಹೋಗಿದ್ದರು.

ಡಾಕ್ಟರರು ಈ ಹೊತ್ತು ದಿವಸ ತಮ್ಮ ಸಹಕಾರಿಗಳೊಂದಿಗೆ ಚರ್ಚೆ ಮಾಡಿದರು. ಅವರು ಪಂಡಿತ ಜವಾಹಿರರೊಡನೆ ಲಖನೌಕ್ಕೆ ಹೋಗುವ ಸಂಭವವಿದೆ.

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ರವಿವಾರ ತಾ|| ೧೭-೯-೩೩ ನೇ ದಿವಸ ರಾತ್ರಿ

ಮಾಯಾಬಾಜಾರ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

ಸಂಘದೊಡೆಯರು,

ಗರೂಡ ಸದಾಶಿವರಾಯರು

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ|| ೨೫-೮-೩೩ — ಕೃಷ್ಣರಾವ ಅಂಕಲಗಿ, ಮ್ಯಾನೆಜಿಂಗ ಡಾಯರೆಕ್ಟರ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ಭಾರತಮಂತ್ರಿಗಳ ಸೆಕ್ರೆಟರಿ ಹಿಂದುಸ್ಥಾನಕ್ಕೆ ಬಂದರು

ಭಾರತಮಂತ್ರಿ ಸರ ಸ್ಯಾಮ್ಯುಯೆಲ ಹೋರ ಇವರ ಪಾರ್ಲಮೆಂಟರಿ ಸೆಕ್ರೆಟರಿ ಮಿ|| ಬಾರ್ಟ ಪ್ಯಾಟ್ರಿಕ್ ಇವರು ತಾ|| ... ದಿವಸ ಮಾಲೋಜಾ ಹಡಗದಿಂದ ಮುಂಬಯಿಗೆ ಬಂದಿರುತ್ತಾರೆ. ಅವರು ನಾಲ್ಕು ತಿಂಗಳು ಹಿಂದುಸ್ಥಾನದಲ್ಲಿ ಇದ್ದುಕೊಂಡು ... ಯ ಪರಿಸ್ಥಿತಿಯನ್ನು ನಿರೀಕ್ಷಿಸುವರು.

ಡಾ. ಕುಲಕರ್ಣಿಯ ಲೆಬೋರೇಟರಿ ಮುಂಬಯಿ ನಂಬರ ...

ಬಾಟ್ಲಿ ಕಿಮ್ಮತ್ತು ೧—೨—...

ಕೆಮಿಸ್ಟರಲ್ಲಿಯೂ ದೊರೆಯು...

ಔಷಧ

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಬರಗು, ಬಿಳೇಶರಗು, ಕೆಂಪುಶರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ದಿ ಟಿ. ಕೆರೂರ ಆ್ಯಂಡ ಸನ್ಸ ಮೆಡಿಕಲ್ ಸ್ಟೋರ್ಸ ಬಾಗಲಕೋಟೆ.

ಬಾಸುತಕರ ಬ್ರದರ್ಸ

ಇವರ ಯಶವಂತ ಟೇಲರಿಂಗ ... ದಲ್ಲಿ ಯಾವತ್ತೂ ನಮೂನೆಯ ಫ್ಯಾಶನಿನ ಅರಿವೆಗಳನ್ನು ಟಾಯಿಮ್ ಶೀರ ... ಕೊಡುತ್ತದೆ. ಗ್ರಾಹಕರು ತ್ವರಿತವಾಗಬೇ...

೧೪-೯ — ಬಾಸುತಕರ ಬ್ರದರ್ಸ ಗುಳೇದಗುಡ್ಡ.

ಏಜಂಟರು ಬೇಕಾಗಿದ್ದಾರೆ

ಧಾರವಾಡ ಜಿಲ್ಲೆ... ಕೆಲಸಮಾಡುವವರು, ಅರ್ಜಿಯು... ಬರೆದು ಪತ್ರವ್ಯವಹಾರ ಮಾಡಬೇಕು

—ವ್ಯವಸ್ಥಾಪಕ "ಕನ್ನಡಿಗ"

ರ. ನಂ. ಬಿ. ೨೭೨೫

यदत् परवशं दुःखं । यदात्मवशं सुखम् ॥ मनु

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

[ವರ್ಷ ೧೦] ಧಾರವಾಡ — ಮಂಗಳವಾರ ಭಾದ್ರಪದ ಬಹುಳ ೦ ಶಕೆ ೧೮೫೫ ತಾ॥ ೧೯-೯-೩೩ [ಸಂಚಿಕೆ ೧೩೭

ಇನ್ಸ್ಯೂರನ್ಸ

ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್ಸ್ಯೂರನ್ಸ
ಕಂಪನಿಯೇ
ಉತ್ತಮವಾದುದು

ಇನ್ಸ್ಯೂರನ್ಸ

ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಪಂಡಿತ ಜವಾಹಿರರ ಸ್ಪಷ್ಟೀಕರಣ

ಲ್ಯಾಂಕೆಶಾಯರ ಮಂಡಲದವರು ಹಾಗು ಮುಂಬಯಿ ಗಿರಣಿ ಒಡೆಯರು.

ಮುಂಬಯಿ ತಾ॥ ೧೮— ಮುಂಬಯಿ ಗಿರಣಿ ಒಡೆಯರ ಸಂಘದ ಸಭಾಗೃಹದಲ್ಲಿ ಈಹೊತ್ತಿನ ದಿವಸ ಲ್ಯಾಂಕೆಶಾಯರ ಶಿಷ್ಟಮಂಡಲದವರೊಂದಿಗೆ ತಮ್ಮ ಕಚೇರಿಯಲ್ಲಿ ವಿಚಾರವಿನಿಮಯ ಮಾಡಿದರು. ಅಧ್ಯಕ್ಷರಾದ ಶ್ರೀ ಎಚ್. ಪಿ. ಮೋದಿಯವರು ಶಿಷ್ಟಮಂಡಳದವರಿಗೆ ಸ್ವಾಗತ ಬಯಸಿ, ಶಿಷ್ಟಮಂಡಳದವರು ಸಾಧ್ಯವಾದ ರೀತಿಯೊಂದು ಒಟ್ಟಿನಲ್ಲಿ ತಮ್ಮೊಡನೆ ಸ್ನೇಹ ಬೆಳಸಬೇಕೆಂದೂ, ಬ್ರಿಟಿಶ ಬಟ್ಟೆಯ ಉದ್ಯೋಗದಲ್ಲಿ ಹಿಂದೀ ಅರಳೆಯನ್ನು ಹೆಚ್ಚಾಗಿ ಉಪಯೋಗಿಸಬೇಕೆಂದೂ ವಿನಂತಿ ಮಾಡಿಕೊಂಡರು. ಕೊನೆಯಲ್ಲಿ ಅವರು, ಉಭಯತರ ಪರಸ್ಪರ ವಿಚಾರವಿನಿಮಯದಿಂದ ಉಭಯತರಿಗೂ ಹಿತವುಂಟಾಗಿ ಪರಸ್ಪರರಲ್ಲಿ ಹೆಚ್ಚಾದ ಸಹಕಾರ ಭಾವವು ಬೆಳೆಯುವದೆಂದು ಆಶೆಯನ್ನು ವ್ಯಕ್ತಮಾಡಿದರು.

ಶಿಷ್ಟಮಂಡಲದ ಅಧ್ಯಕ್ಷರಾದ ವೈಯಿಲಿಯಮ್ ಕ್ಲೇರ ಲೀಜ ಇವರು ತಮಗೆ ಸ್ವಾಗತ ಕೋರಿದ ಬಗ್ಗೆ ಸಂಘದವರ ಆಭಾರ ಮನ್ನಿಸಿ, ಪರಿಷತ್ತಿನ ಕಾರ್ಯವು ಯಶಸ್ವಿಯಾಗಿ, ಅದರಿಂದ ಎರಡೂ ರಾಷ್ಟ್ರಗಳಲ್ಲಿಯ ಉದ್ಯೋಗ ಸಂಘಗಳಿಗೆ ಹೆಚ್ಚಾದ ಉತ್ತೇಜನ ದೊರೆಯುವದಾಗಿ ತಮಗೆ ಆಶೆಯಿದೆಯೆಂದು ಹೇಳಿದರು. ಬಟ್ಟೆಯ ಉದ್ಯೋಗದಲ್ಲಿ ಹಿಂದೀ ಅರಳೆಯನ್ನು ಹೆಚ್ಚಾಗಿ ಉಪಯೋಗಿಸಬೇಕೆಂದು ಹೇಳಿಕೊಂಡ ವಿಷಯದಲ್ಲಿ ಅವರು, ಈ ಬಗ್ಗೆ ಹೆಚ್ಚು ಪ್ರಯತ್ನ ಮಾಡಬೇಕಾಗುತ್ತದೆಂದೂ, ಹಿಂದುಸ್ಥಾನಕ್ಕೆ ಸಹಾಯ ಮಾಡಬೇಕಾದರೆ ಇತರ ಎಷ್ಟೋ ಹಾದಿಗಳು ಇವೆಯೆಂದೂ ಹೇಳಿದರು. ಕೊನೆಯಲ್ಲಿ ಅವರು ತಾವು ಇಲ್ಲಿಗೆ ಬಂದಿದ್ದರ ಉದ್ದೇಶವು ಹಿಂದೀ ಜನರೊಡನೆ ಸಹಕಾರ ಬೆಳಸುವದೇ ಆಗಿದೆಯೆಂದು ನುಡಿದರು.

ಜಪಾನಿ ಶಿಷ್ಟಮಂಡಲದವರು ಈಹೊತ್ತಿನ ದಿವಸ ಮುಂಬಯಿ ಗಿರಣಿ ಒಡೆಯರ ಭೆಟ್ಟಿಗೆ ಹೋಗಿದ್ದು ರಾತ್ರಿ ೧೨ರವರೆಗೆ [illegible] ಹೋಗ [illegible] (ಅ ಪ್ರ)

ಮಹಾತ್ಮರ ಪ್ರಕೃತಿ

ಮುಂಬಯಿ ತಾ॥ ೧೮— ಡಾ॥ ಪಟೇಲ ಮತ್ತು ಡಾ॥ ಗಿಲ್ಡರ ಇವರು ಈಹೊತ್ತು ಪುನಃ ಮಹಾತ್ಮಾ ಗಾಂಧಿಯವರ ಪ್ರಕೃತಿಯನ್ನು ಪರೀಕ್ಷಿಸಿದರು. ಅವರ ರುಧಿರಾಭಿಸರಣವು ಸ್ವಲ್ಪ ಕಮ್ಮಿಯಾಗಿದೆ. ಇದರ ಹೊರತು ಉಳಿದ ವಿಷಯಗಳಲ್ಲಿ ಅವರ ಪ್ರಕೃತಿಯು ಇದ್ದಕ್ಕಿದ್ದಂತೆ. ಮಹಾತ್ಮರು ಶ್ರಮದ ಕೆಲಸದಲ್ಲಿ ಭಾಗ ತೆಗೆದುಕೊಳ್ಳಕೂಡದೆಂದು ಅವರು ಪುನಃ ಒತ್ತಿ ಹೇಳಿದ್ದಾರೆ. (ಅ ಪ್ರ)

ಗಿರಣಿ ಒಡೆಯರೊಡನೆ ವಿಚಾರವಿನಿಮಯ

ಮುಂಬಯಿ ತಾ॥ ೧೮— ಮಹಾತ್ಮರು ಪ್ರಾರ್ಥನೆಯ ನಂತರ ಗಿರಣಿ ಒಡೆಯರ ಶಿಷ್ಟಮಂಡಲದವರಿಗೆ ಭೆಟ್ಟಿಕೊಟ್ಟು, ಗಿರಣಿ ಒಡೆಯರೊಡನೆ ಸಹಕಾರ ಮಾಡಿ ಖಾದಿಯ ಉದ್ಯೋಗವನ್ನು ಹೇಗೆ ಬೆಳಸಬಹುದು ಎಂಬ ಬಗ್ಗೆ ವಿಚಾರ ಮಾಡತಕ್ಕವರಿದ್ದಾರೆ. (ಅ ಪ್ರ)

ರಂಗಸ್ವಾಮಿಯವರು ಮತ್ತು ಮಹಾತ್ಮರು

ಮುಂಬಯಿ ತಾ॥ ೧೬— ಮದ್ರಾಸದ ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀ ಏ. ರಂಗಸ್ವಾಮಿ ಅಯ್ಯಂಗಾರ ಇವರು ಈಹೊತ್ತಿನ ದಿವಸ ಮಹಾತ್ಮರೊಡನೆ ಅವರ ಜೇಲಿನಿಂದ ಬಿಡುಗಡೆಯಾಗಿ ಬಂದಂದಿನಿಂದ ಉದ್ಭವಿಸಿದ ರಾಜಕೀಯ ಪರಿಸ್ಥಿತಿಯ ಸಂಬಂಧವಾಗಿ ಚರ್ಚೆ ಮಾಡಿದರು. ನಾಳಿನ ದಿನವಾದರೂ ಚರ್ಚೆ ನಡೆಯುವದು.

ಸರ್ ಕಾವಸಜಿಯವರ ಮಧ್ಯಸ್ಥಿಕೆ

ಮುಂಬಯಿ ತಾ॥ ೧೬— ಸರ್ ಕಾವಸಜಿ ಜಹಾಂಗೀರ (ಜ್ಯೂನಿಯರ) ಇವರು ಈಹೊತ್ತಿನ ಮಹಾತ್ಮರೊಡನೆ ಸುಮಾರು ಒಂದು ತಾಸಿನವರೆಗೆ ವಿಚಾರ ವಿನಿಮಯ ಮಾಡಿದರು. ಈ ಚರ್ಚೆಯಲ್ಲಿ ಏನು ನಡೆಯಿತೆಂಬುದು ಗುಪ್ತವಾಗಿ ಇಡಲ್ಪಟ್ಟಿದೆ. ಸರ್ ಕಾವಸಜಿಯವರಾದರೂ ತಮ್ಮ ಈ ವಿಚಾರ ವಿನಿಮಯವು ಯಾವದೇ ತರದ ರಾಜಕೀಯ ಮಹತ್ವದ್ದಿಲ್ಲದ್ದಾಗಿಲ್ಲವೆಂದು ನುಡಿದರು. ಅದರೂ ಅವರು ಈಹೊತ್ತು ರಾತ್ರಿ ಸಿಮುಲಾ ಕಡೆಗೆ ಪ್ರಯಾಣ ಮಾಡುವದನ್ನು ನೋಡಿದಲ್ಲಿ, ಅವರ ಭೆಟ್ಟಿಯಲ್ಲಿ ಏನಾದರೂ ಮಹತ್ವವಿರಲೇಬೇಕು ಎಂದು ತೋರಿ ಬರುತ್ತದೆ. (ಅ ಪ್ರ)

ಮಹಾತ್ಮರು ಏನು ಮಾಡುವರು.

ಮುಂಬಯಿ ತಾ॥ ೧೬— ಮಹಾತ್ಮಾಗಾಂಧಿಯವರು ತಮ್ಮ ಪ್ರಕೃತಿಯು ಸಂಪೂರ್ಣವಾಗಿ ಸುಧಾರಿಸುವವರೆಗೆ, ಶಾಂತಿಸ್ಥಾಪನೆಯ ಸಂಬಂಧದಲ್ಲಿ ಯಾವದೇ ಹೆಜ್ಜೆಯನ್ನು ಮುಂದಿಡುವ ಸಂಭವವಿಲ್ಲವೆಂದು ತೋರಿಬರುತ್ತದೆ. (ಅ ಪ್ರ)

ಹರಿಜನ ಕೆಲಸಗಾರರೊಡನೆ ಮಹಾತ್ಮರ ಸಂಭಾಷಣ

ಮುಂಬಯಿ ತಾ॥ ೧೮— ಮಹಾತ್ಮರು ೧೯॥ ಕಾಟಿಗೆ ಪ್ರಾರ್ಥನೆಯನ್ನು ಮುಗಿಸಿದ ನಂತರ ಗುಜರಾತ ಹರಿಜನ ಶಿಷ್ಟಮಂಡಳಕ್ಕೆ ಭೆಟ್ಟಿ ಕೊಟ್ಟರು. ಶಿಷ್ಟಮಂಡಳದವರು ತಮ್ಮ ತೊಂದರೆ ಹಾಗು ಅಡಚಣಿಗಳನ್ನು ಅವರ ಮುಂದೆ ಮಂಡಿಸಿದರು. ಅ ಪ್ರ

ಪತ್ರವ್ಯವಹಾರ

ಹುಬ್ಬಳ್ಳಿ ಧಾರವಾಡ ಮ್ಯುನಿಸಿಪಾಲಿಟಿ

ಸಂಪಾದಕರು, " ಕನ್ನಡಿಗ " ಧಾರವಾಡ ಇವರಿಗೆ—

ನ ಏ ಏ [illegible] ಮ್ಯುನಿಸಿಪಾಲಿಟಿಯ ಬಗ್ಗೆ ಬರೆದ ಪತ್ರ ಓದಿದ್ದಾಯಿತು. ಮ್ಯುನಿಸಿಪಾಲಿಟಿಯ ಕಾರ್ಯಕಲಾಪಗಳಿಗೂ, ಕರ ಕೊಡುವವರಿಗೂ ಸಂಬಂಧವೇ ಇಲ್ಲದಂತಾಗಿದೆ. ' ಕನ್ನಡಿಗ ' ದವರಾದರೂ ಈಪರಿ ನಮ್ಮನ್ನು ಸಿಂತು ನಮ್ಮ ನಗರ ಪಿತಾಮಹರು ಏನೇನು ನಡಿಸಿರುವರೆಂಬುದನ್ನು ತಿಳಿಸಿದರೆ ಊರವರ ಮೇಲೆ ಅದೊಂದು ಉಪಕಾರ ಮಾಡಿದಂತಾಗುವದು. ಒಂದು ನಳದ ಗ್ಯಾರಂಟಿಯೇ? ದೀಪದ ಸ್ಥಿತಿಗಳೇನು? ಮನೆಯ ಪಟ್ಟಿಗಳೇನು? ಭಂಗೀ ಪಟ್ಟಿಯೇನು? ಆ ಪಟ್ಟಿ, ಈ ಪಟ್ಟಿಯೆಂದು ತಲೆ ಭಾರವಾಗುವಂತೆ ಕರಗಳು ನಮ್ಮ ಮೇಲೆ ಹೇರಲ್ಪಟ್ಟಿವೆ. ಮೇಲಾಗಿ ಈ ಊರಲ್ಲಿ ಪ್ರತಿಯೊಂದು ಮಾಲಿನ ಮೇಲೆ ಅತಿಕೆಯ ಜಕಾತಿ ಹಾಕಿದ್ದರಿಂದ ವ್ಯವಹಾರ ಉದ್ಯೋಗಗಳಿಗೆ ದೊಡ್ಡ ಪೆಟ್ಟು ಬಿದ್ದಿದೆ. ಒಳ್ಳೇದು, ಇಷ್ಟೆಲ್ಲ ಕರ, ಜಕಾತಿಗಳಿಂದ ಗೊತ್ತು ಉತ್ಪನ್ನ ಬರುವದಷ್ಟೇ? ಅದರಿಂದ ಕರ ಕೊಡುವವರಾದ ನಮಗೆ ಲಾಭವಾದರೂ ಏನಿದೆ? ನಮಗಂತೂ ಏನೂ ಕಾಣುವದಿಲ್ಲ. ನಗರ ಪಿತಾಮಹರಲ್ಲಿ ಯಾರಾದರೂ ನಮಗೆ ಈ ಬಗ್ಗೆ ಸ್ಪಷ್ಟೀಕರಿಸಿ ತಿಳಿಸಬಲ್ಲರೋ?

ತಾ॥ ೧೭-೯-೩೩ ಜೆ. ವ್ಹಿ. ಮೆಳ್ಳಿಗಟ್ಟಿ ಬಿ ಎ
ಧಾರವಾಡ ಒವರ್‌ಸೀಯರ

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಲ ಮಾಹಿತಿ ಕೊರತೆ)

ಹುಬ್ಬಳ್ಳಿ ತಾ॥ ೧೮

ಜವಾರಿ ಹತ್ತಿ	೧೦೫-೧೦೭
ಅಕ್ಲಂಡ ಹತ್ತಿ	೧೦೫
ವಿಲಾಯತಿ ಹತ್ತಿ	೯೭-೯೮
ಫ್ಯೂಕ್ಸ್ರ ಹತ್ತಿ	೧೧೨-೧೫
ಜೀನ ಅರಳೆ	೮೦
ಡಬ್ಬಲ್ ರೂಲ ಅರಳೆ	೭೫-೭೬
ಸಾಜನ ಅರಳೆ	೭೦-೭೨
ಜೋಳ	೧೧ ೧೩
ಗೋದಿ	೬॥-೭
ಹೆಸರು ಜವಾರಿ	೯-೧೦
ಉದ್ದು	೬।
ಕಡ್ಲಿ	೬-೬।
ಕುಸಬಿ	೧೦-೧೧।
ಔಡಲ	೧೦
ಅಗಸಿ	೬।॥

ಬೆಳ್ಳಿ, ಬಂಗಾರ

ಬಂಗಾರ	೩೨
ಬೆಳ್ಳಿ	[illegible]

ಅನ್ಸಾರಿ—ಗಾಂಧಿ ಭೆಟ್ಟಿ

ಮುಂಬಯಿ ತಾ॥ ೧೬— ಮಹಾತ್ಮರು ಅಂದಿನ ಮಧ್ಯಾಹ್ನದಲ್ಲಿ ಡಾ॥ ಅನ್ಸಾರಿಯವರಿಗೆ ಭೆಟ್ಟಿ ಕೊಟ್ಟರು, ನಂತರ ಹಿಂದೂ ಪತ್ರಿಕೆಯ ಸಂಪಾದಕರಾದ ಶ್ರೀ ಏ. ರಂಗಸ್ವಾಮಿ ಅಯ್ಯಂಗಾರ ಅವರೊಡನೆ ಪುನಃ ಚರ್ಚೆ ನಡೆಸುವರು. ಅ ಪ್ರ

ಕರ್ನಾಟಕದ

ಅನಂತಪುರ ತಾ॥ ೧೫— ಧಾರವಾಡದ ವಾಮನರಾವ ಕಂಪನಿಯವರು ಈಗ ೩೦ ದಿವಸಗಳಿಂದ ಇಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಆಡುತ್ತಿದ್ದು ನಿನ್ನಿನ ದಿವಸ ಅವರು ಒಂದು ನಾಟಕದ ಉತ್ಪನ್ನವನ್ನು ಕೋದಂಡ ರಾಮಸ್ವಾಮಿ ದೇವಾಲಯಕ್ಕೆ ಧರ್ಮಾರ್ಥ ಕೊಟ್ಟರು.

ಬೆಂಗಳೂರ ತಾ॥ ೧೬— ಇಲ್ಲಿಯ ಕಾಸ್ಮೊಸ ಸಂಘದವರು ನಿನ್ನಿನ ದಿವಸ ವಿಶಿಷ್ಟ ಸಭೆಯಲ್ಲಿ ಸೇರಿ ಸಂಸ್ಥಾನದ ಅಧಿಕಾರಿಗಳು ಶ್ರೀ ಎಸ್. ವೆಂಕಟಪತಯ್ಯನವರನ್ನು ಸೆರೆ ಹಿಡಿದು ಬ್ರಿಟಿಶ ಅಧಿಕಾರಿಗಳಿಗೆ ಅವರನ್ನು ಒಪ್ಪಿಸಿದ್ದು ಕಾನೂನಿಗೆ ವಿರುದ್ಧವಾಗಿರುವದೆಂದೂ ಮತ್ತು ನಾಗರಿಕರ ಮೂಲಭೂತ ಹಕ್ಕಿಗೆ ಭಂಗ ತರುವಂತಹದಾಗಿರುವದೆಂದೂ ಗೊತ್ತುವಳಿ ಮಾಡಿಕೊಂಡರು. ಇವರನ್ನು ಕಾರವಾರದ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಅವರನ್ನು "ಅ" ವರ್ಗದಲ್ಲಿ ಇರಿಸುವ ಬದಲು "ಕ" ವರ್ಗದಲ್ಲಿ ಇರಿಸಿದ್ದು ವಿಷಾದಕರವಾಗಿದೆಯೆಂದು ಅಭಿಪ್ರಾಯ ವ್ಯಕ್ತಮಾಡಿ ಇತ್ತ ಗಮನ ಕೊಡಬೇಕೆಂದು ಮುಂಬಯಿ ಸರಕಾರದವರಿಗೆ ವಿನಂತಿ ಮಾಡಿಕೊಂಡರು.

ಮಂಗಳೂರ ತಾ॥ ೧೮— ಗೆರಸೊಪ್ಪೆಯ ಧಬಧಬೆಯಿಂದ ಇಡೀ ಮೈಸೂರ ಪ್ರಾಂತಕ್ಕೆ ವಿದ್ಯುತ್ ಶಕ್ತಿಯನ್ನು ಪೂರೈಸುವ ಬಗ್ಗೆ ಮೈಸೂರ ಹಾಗು ಬ್ರಿಟಿಶ ಅಧಿಕಾರಿಗಳು ಸಧ್ಯದಲ್ಲಿ ಒಂದು ಯೋಜನೆಯನ್ನು ಸಿದ್ಧ ಮಾಡುವದಲ್ಲಿ ತೊಡಗಿದ್ದಾರೆ. ಉಭಯ ಸರಕಾರದ ಪ್ರತಿನಿಧಿಗಳು ತಿಂಗಳಿಗೊಮ್ಮೆ ಧಬಧಬೆಯ ಬಳಿಯಲ್ಲಿ ಕೂಡಿ ಮೇಲಿನ ಯೋಜನೆಯ ಬಗ್ಗೆ ವಿಚಾರ ವಿನಿಮಯ ಮಾಡುತ್ತಿರುವರು.

ನೋಟೀಸು

ಯಾವತ್ತು ಜನರಿಗೆ ತಿಳಿಸುವದೇನಂದರೆ ನರಗುಂದದಲ್ಲಿ ತಾ॥ ೨೦-೯-೩೩ ಇಸ್ವಿಯಿಂದಾ ತಾ॥ ೨೮-೯-೧೯೩೩ ಇಸ್ವಿವರೆಗೆ ಯಾರೂ ಜಾತ್ರಿಯನ್ನು ಕೂಡಿಸಬಾರದು. ಅಂತಾ ಹುಕುಮಾತ ಮುಂಬಯಿ ಸರಕಾರದವರು ಜ್ಯಾದಾ ಜಾಹೀರನಾಮೆಯನ್ನು ತೆಗೆದಿರುತ್ತಾರೆ ಮತ್ತು ಈ ಜಾತ್ರಿಯ ದೆಸೆಯಿಂದಾ ತಾ॥ ೧೯-೯-೧೯೩೩ ಇಸ್ವಿಯಿಂದಾ ನರಗುಂದಕ್ಕೆ ಜಾತ್ರಿಯ ಸಲುವಾಗಿ ಯಾರೂ ಹೋಗಬಾರದಂತಾ ಮನಾಯಿ ಮಾಡಿರುತ್ತಾರೆ.

L. N. Brown
18-9-1933 District Magistrate
Dharwar

[illegible]

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು [illegible]

ಬಳ್ಳಾರಿಯ ಅಖಿಲ ಹಿಂದುಸ್ಥಾನದ ಸ್ವದೇಶಿ ಪ್ರದರ್ಶನ.

ಧಾರವಾಡದ ' ಅಖಿಲ ಕರ್ನಾಟಕ ಸ್ವದೇಶಿ ಸಭೆ ' ಯು ಮುಂತಲವಾಗಿ ಬರುವ [illegible] ಬರುವ ತಿಂಗಳಿನಲ್ಲಿ ಬಳ್ಳಾರಿಯಲ್ಲಿ ಒಂದು ಅಖಿಲ ಹಿಂದುಸ್ಥಾನದ ಸ್ವದೇಶಿ ಪ್ರದರ್ಶನವನ್ನು [illegible] ಡುವುದನ್ನು ನಿರ್ಣಯಿಸಿರುತ್ತದೆಂದು ತಿಳಿಸಲಿಕ್ಕೆ ನಮಗೆ ಆನಂದವಾಗುತ್ತದೆ. ಪ್ರದರ್ಶನ [illegible] ಎಂದರೆ ಸ್ವದೇಶಿ ವಸ್ತುಗಳ ಶಿಕ್ಷಣವನ್ನು ಕೊಡುವ ಪಾಠಶಾಲೆಗಳು. ಒಸವಲ್ಲಿ ಸ್ವದೇಶಿ ವಸ್ತು [illegible] ಗಳ ವಿಷಯವಾಗಿ ಇನ್ನೂ ಬಹಳ ಅಜ್ಞಾನವಿರುತ್ತದೆ. ಸ್ವದೇಶಿ ಚಳವಳಿಯು ಮೊದಲು [illegible] ವರ್ಷಗಳಾಗಿದ್ದರೂ, ಜನರಿಗೆ ಸ್ವದೇಶಿ ವಸ್ತುಗಳ ಬಗ್ಗೆ ಇನ್ನೂ ಅಷ್ಟೊಂದು [illegible] ಇಲ್ಲ. ಸ್ವದೇಶಿ ವಸ್ತುಗಳೆಂದರೆ ಉಡಲು ವಸ್ತ್ರಗಳೆಂದು [illegible] ಈ ಆರೋಪವನ್ನು ಸ್ವೀಕರಿಸಿಯೂ ಸ್ವದೇಶಿ ವಸ್ತುಗಳ ಉತ್ಪತ್ತಿಗೆ ಉತ್ತೇಜನವನ್ನು ಕೊಡುವ [illegible] ಬೇಕಾಗಿದ್ದರು. ಆಮೇಲೆ ಅವರು ಉತ್ತೇಜನ ಕೊಟ್ಟಿದ್ದರಿಂದಲೇ ಇಂದಿಗೆ ನಾವು ಸ್ವದೇಶಿ ವಸ್ತುಗಳಲ್ಲಿ ಅಂದಚೆಂದವಾದ ಒಡವೆಗಳನ್ನು ಕಾಣುತ್ತಿರುವೆವು. ಭಾರತ ಮಾತೆಯು [illegible] ದಲ್ಲಿ ಹೇರಳವಾದ ಅಪೂರ್ವ ವಸ್ತುಗಳುಂಟಾಗುತ್ತವೆ. ಅವುಗಳನ್ನು ಉಪಯೋಗಿಸುವ [illegible] ತಿಳಿಯದೆ ನಮ್ಮವರಿಗಿದ್ದಿಲ್ಲ. ಅದು ಉಂಟಾಗಲಿಕ್ಕೆ ಇಂಥ ಪ್ರದರ್ಶನಗಳ ಸಹಾಯವು [illegible] ವಾಗಿದೆ.

ಪ್ರದರ್ಶನಗಳೆಂದರೆ ಪಾಠಶಾಲೆಗಳೆಂದು ನಾವು ಹೇಳಿದೆವಷ್ಟೆ. ಕೇವಲ ನೋಟಗಳೆಂದು ಹೇಳಲಿಲ್ಲ. ಹೀಗೆ ಹೇಳುವುದಕ್ಕೆ ಕಾರಣವುಂಟು. ಏಕೆಂದರೆ ಈಗ ಪ್ರದರ್ಶನಗಳೆಂದರೆ ಕೇವಲ ನೋಟಗಳೆಂದು ಅನೇಕರು ತಿಳಿಯುತ್ತಾರೆ. ಪ್ರದರ್ಶನ ಮಾಡುವದೆಂದರೆ ದೇಶದಲ್ಲಿ ಎಲ್ಲ ಕಡೆಯಿಂದಲೂ ಉತ್ತಮೋತ್ತಮವಾದ ವಸ್ತುಗಳನ್ನು ಸಂಗ್ರಹಿಸಿ ತಂದು ಒತ್ತಟ್ಟಿಗೆ ಇಟ್ಟು, ನೋಡುವವರ ಕಣ್ಣಿಗೆ ಹಬ್ಬವನ್ನುಂಟು ಮಾಡಿದರೆ ತೀರಿತೆಂದು ತಿಳಿಯುವುದು ಸರ್ವಥಾ ಸರಿಯಲ್ಲ. ಪ್ರದರ್ಶನವನ್ನು ಮಾಡುವುದೂ ಒಂದು ವಿದ್ಯೆ, ಪ್ರದರ್ಶನವನ್ನು ನೋಡುವುದೂ ಒಂದು ವಿದ್ಯೆ. ಪ್ರದರ್ಶನಗಳನ್ನು ಹೂಡುವ ಉದ್ದೇಶವು ಜನರಿಗೆ ಒಂದು ತರಹದ ಶಿಕ್ಷಣವನ್ನು ಕೊಡುವುದು ಇರುತ್ತದೆ. ಈ ಪ್ರದರ್ಶನವು ಈ ಸಲ ಕರ್ನಾಟಕದ ಒಂದು ಭಾಗವಾದ ಬಳ್ಳಾರಿಯಲ್ಲಿ [illegible] ಕೂಡ್ಡಿರುವುದರಿಂದ, ಅದರ ಪ್ರವರ್ತಕರು ಈ ಪ್ರದರ್ಶನದಿಂದ ಕರ್ನಾಟಕದ ಜನರಿಗೆ ಯಾವ ಯಾವ ಉದ್ಯೋಗಗಳಲ್ಲಿ ಅಭಿರುಚಿಯನ್ನು ಹುಟ್ಟಿಸುವದೂ ಶಿಕ್ಷಣವನ್ನು ಕೊಡುವದೂ ಶಕ್ಯವಿರುತ್ತದೆಂಬುವನ್ನು ಚೆನ್ನಾಗಿ ಯೋಚಿಸಬೇಕು. ಹಿಂದುಸ್ಥಾನದ ಮಿಕ್ಕ ಭಾಗಗಳಲ್ಲಿ ಯಾವ ಯಾವ ಉದ್ಯೋಗಗಳು ಹೇಗೆ ಹೇಗೆ ಅಭಿವೃದ್ಧಿ ಹೊಂದುತ್ತಿರುತ್ತವೆಂಬ ಬಗ್ಗೆ ಪ್ರಯೋಗಗಳ ಸಹಿತವಾದ ಪ್ರಬಂಧಗಳನ್ನು [illegible] ಬೇಕು. ಕಬ್ಬಿನ [illegible] ಬೆಲ್ಲ ಸಕ್ಕರೆಗಳನ್ನು ಮಾಡುವುದು, ಸಾಬಾಣ, ಗ್ಲಾಸು, [illegible] ಟಾಕಿನ ತುದಿಗಳು ಇವೇ ಮುಂತಾದ ಉದ್ಯೋಗಗಳ ಮಾಹಿತಿಯನ್ನು ಪ್ರಯೋಗ ಸಹಿತವಾಗಿ ಮಾಡಿಕೊಟ್ಟರೆ, ಇಲ್ಲಿಯ ಉದ್ಯೋಗಗಳನ್ನು ತೆಗೆಯುವವರಿಗೆ ಉತ್ತೇಜನ ದೊರೆಯಬಹುದು. ಬಳ್ಳಾರಿಯ ಪ್ರದರ್ಶನದ ಕಾರ್ಯದರ್ಶಿಗಳಾದ ದೇ. ಬ. ಹುಳ್ಳೇರಿ [illegible] ಹಿಂದುಸ್ಥಾನದಲ್ಲಿ ಹುಟ್ಟುವ ಯಾವತ್ತು ವಸ್ತುಗಳ ಸವಿಸ್ತರ ಮಾಹಿತಿಯನ್ನು ಸಂಕಲನ ಮಾಡಿ ಮುದ್ರಿಸುತ್ತಿರುವರು. ಕರ್ನಾಟಕದ ಹೊರಗಿನ ಜನರು ತಮ್ಮ ತಮ್ಮ ವಸ್ತುಗಳ ಬಗ್ಗೆ ವಿವರಗಳನ್ನು ಕೊಡುವಂತೆ ಕರ್ನಾಟಕದೊಳಗಿನ ಜನರು ಕೊಡುತ್ತಿರುವುದಿಲ್ಲ. ಇವಕ್ಕೆ ಅವರ [illegible] ಕಾರಣವು. ಆದರೆ ಇನ್ನಾದರೂ ನಮ್ಮ ಕರ್ನಾಟಕ ಬಂಧುಗಳು ಎತ್ತರವಾಗಿ ಬಳ್ಳಾರಿಯಲ್ಲಿ ಆಗಲಿರುವ ಈ ಪ್ರದರ್ಶನಕ್ಕೆ ತಮ್ಮ ವಸ್ತುಗಳನ್ನು ಕಳುಹಿಸಿಯೂ, ಶ್ರೀ ಹುಳ್ಳೇರಿ ಇವರು ಮುದ್ರಿಸುತ್ತಲಿರುವ ಸ್ವದೇಶಿ ವಸ್ತುಗಳ ಪಟ್ಟಿಯ ಪುಸ್ತಕದಲ್ಲಿ ತಮ್ಮ ಪ್ರಕಟನೆ ಮುಂತಾದವುಗಳನ್ನು ಕೊಟ್ಟು, ತಮ್ಮ ವಸ್ತುಗಳನ್ನು ಪ್ರಚಾರ ಮಾಡಬೇಕೆಂದೂ ಸೂಚಿಸುತ್ತೇವೆ.

ಕಿರಿನುಡಿಗಳು.

ಮಹಾತ್ಮಾ ಗಾಂಧಿಯವರು ಉಪವಾಸ ಮಾಡಿದರೆ ಒಳ್ಳೇ ಆಂಗ್ಲೋ ಇಂಡಿಯನ್ ಪತ್ರ [illegible] ಭಗ ಭಗನೆ [illegible] ಪತ್ರದ ಈ ಆಂಗ್ಲೋ ಇಂಡಿಯನ್ ಸಂಪಾದಕರು [illegible] ತಮ್ಮ ಪತ್ರಿಕೆಯಲ್ಲಿ ಮಹಾತ್ಮರ ವಿರುದ್ಧವಾಗಿ ಮನಬಂದಂತೆ [illegible] ವಾಗಿ ಬಾಯಿ ಬಿಟ್ಟಿರುವರು. [illegible] ಉಪವಾಸ ಮಾಡುವ ಈ ಗಾಂಧಿಯನ್ನು ಚೆನ್ನಾಗಿ ಶಿಕ್ಷೆಯಿಂದ ಥಳಿಸಬೇಕಾಗಿತ್ತೆಂತ ಆದರೆ ಅವರು ಮುದುಕರಾಗಿರುವುದರಿಂದ ಹೀಗೆ ಮಾಡಲು ಬರುವಂತಿಲ್ಲವೆಂದು ಈ ಸಂಪಾದಕರಿಗೆ ಅತ್ಯಂತ ವಿಷಾದವಾಗಿದೆಯಂತೆ. ನೋಡಿದಿರಾ, ಈ ಆಂಗ್ಲೋ ಇಂಡಿಯನ್ನರ ನಾಲಿಗೆಯು ಎಷ್ಟು ಉದ್ದವಾಗಿದೆ! ಆದರೆ ಮಾಡುವದೇನು? ಇಂಥವರ ಹಾವಳಿಯು ಸರಕಾರದವರು ತಮ್ಮ [illegible] ಇರುವರೆಂಬ ಭಾವನೆಯು ಮೇಲೆ [illegible] ಅದು ನಿಜವಾಗಿಯೇ ಇದೆ. ಏಕೆಂದರೆ [illegible] ದ ಮಂಡಲದಲ್ಲಿ ಮೊನ್ನೆ ಈ ವಿಷಯವಾಗಿ ಚರ್ಚೆಯ [illegible] ಆಂಗ್ಲೋ - ಇಂಡಿಯನ್ನರ ಈ ವರ್ತನೆಯನ್ನು ಸರಕಾರದವರು ತೀವ್ರವಾಗಿ [illegible] ಬೇಕೆಂದು ಲೋಕಪಕ್ಷದ ಜನರು ಆಕ್ಷೇಪದಿಂದ [illegible] ಹೇಳಿದರು. ಆದರೆ ಸರಕಾರವು ಕಿವಿಯ ಮೇಲೆ ಕೈಯಿಟ್ಟುಕೊಂಡು, ಹಾಗೆ ಮಾಡುವುದಕ್ಕೆ ತಮ್ಮ ವಿಷಯವಿಲ್ಲವೆಂದು ಹೇಳಿಬಿಟ್ಟರು. ಆ ಲೇಖವು ಸರಿಯಾದುದೆಂದೂ ತಾವು ಅಭಿಪ್ರಾಯ ಕೊಡುವುದಿಲ್ಲ, ಸರಿಯಿಲ್ಲವೆಂದೂ ಹೇಳುವುದಿಲ್ಲ. [illegible] ಆ ಲೇಖದ ವಿಚಾರವನ್ನು ಮುಂಬಯಿ ಸರಕಾರದವರು [illegible] ಬೇಕೆಂದು [illegible] ಲೋಕಪಕ್ಷದ ಜನರು ಒಂದೇ ಸಮನೆ ಸಿನ್ನ [illegible] ಸರಕಾರದವರು ಇದರ ವಿಚಾರವನ್ನು ಮಾಡಲೇ ಬೇಕೆಂದು [illegible] ಸರಕಾರದವರು ಅ [illegible] ಲಿಸಲಿಲ್ಲ. ಕೊನೆಗೆ, ಆ ಲೇಖವು ಸರಿಯಾ [illegible] ವಲ್ಲವೆಂದು ಒಪ್ಪಿಕೊಳ್ಳಬೇಕಾದರೆ ಕೃತಜ್ಞತಾ [illegible] ಹೋಯಿತು. ಇಂಥ ಪ್ರಸಂಗಗಳಲ್ಲಿ ಮಾತ್ರ ಸರಕಾರದವರಿಗೆ [illegible] ಸ್ವಾತಂತ್ರ್ಯದ ನೆನಪು ಆಗುತ್ತದೆ. ಪ್ರಾಂತಿಕ ಸ್ವಾಯತ್ತತೆಯ ನೆನಪು ಆಗುತ್ತದೆ. ಕಾವು [illegible] ಕಾವುದೆಂದರೆ [illegible] ಸ್ವಾತಂತ್ರ್ಯ [illegible] ಪ್ರಾಂತಿಕ ಸ್ವಾಯತ್ತತೆಗೂ ಬಾದೆಯಂತೆ! [illegible] ದೇ ಜನರನ್ನು ಪ್ರೆಸ್ ಆಕ್ಟಿನಿಂದ [illegible] ವಾ [illegible] ಗಳು ಅವರಿಗೆ ನೆನಪಾಗುವುದಿಲ್ಲ. ಇದಕ್ಕೆ [illegible] ಬೇಕು ಸ್ಪಷ್ಟಿಕರಣವೆಂದು?

ಮುಖಂಡರೊಡನೆ ಮಹಾತ್ಮರ ವಿಚಾರ ವಿನಿಮಯ

ಮುಂಬಯಿ ತಾ|| [illegible]— ಮಹಾತ್ಮಾ ಗಾಂಧಿಯವರು ಮುಂಬಯಿಯಲ್ಲಿಯ ತಮ್ಮ ಮೊದಲನೆ ದಿನವನ್ನು ಬೇರೆ ಬೇರೆ ಅಭಿಪ್ರಾಯವುಳ್ಳ ರಾಜಕೀಯ ಮುಖಂಡರೊಡನೆ ಚರ್ಚೆ ಮಾಡುವದರಲ್ಲಿಯೇ ಕಳೆದರು. ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಡಾಕ್ಟರರು ಸಲಹೆ ಕೊಟ್ಟರೂ ಅವರು ಅದನ್ನು ಲಕ್ಷಿಸದೆ ಮೊದಲೇ ಗೊತ್ತುಮಾಡಲ್ಪಟ್ಟ ಕಾರ್ಯಕ್ರಮಗಳಿಗನುಸಾರವಾಗಿ ಕಾಲವನ್ನು ಕಳೆದರು. ಈ ದಿವಸ ಅವರ ಭೆಟ್ಟಿಗೆ ಬಂದವರಲ್ಲಿ ಮೊದಲನೆಯವರೆಂದರೆ ಪಂಡಿತ ಜವಾಹಿರಲಾಲರು. ಅವರು ಮಹಾತ್ಮರೊಡನೆ ಭಾವೀ ಕಾರ್ಯದ ಸಂಭಂಧವಾಗಿ ಚರ್ಚೆ ಮಾಡಿದರೆಂದು ತಿಳಿಯುತ್ತದೆ. ಪಂಡಿತ ಜವಾಹಿರರ ನಂತರ ಸೌ. ಸರೋಜಿನಿಯವರು ಮಹಾತ್ಮರನ್ನು ಕಾಣಲು ಬಂದಿದ್ದರು. ಅವರು ಅವರೊಡನೆ ಸ್ವಲ್ಪ ಹೊತ್ತು ಮಾತುಕತೆಯಾಡಿ ಹೋದರು. ನಂತರ ಅಖಿಲ ಭಾರತ ಅಸ್ಪೃಶ್ಯ ಸೇವಕ ಸಮಾಜದ ಅಧ್ಯಕ್ಷರಾದ ಶ್ರೀ ಜಿ. ಡಿ. ಬಿರ್ಲಾ ಇವರು ಬಂದರು. ಹರಿಜನ ಕಾರ್ಯದ ಸಂಬಂಧವಾಗಿ ಹಿಂದುಸ್ಥಾನದಲ್ಲೆಲ್ಲ ಪ್ರವಾಸಕ್ಕೆ ಹೊರಡುವದರ ವಿಷಯವಾಗಿ ಚರ್ಚೆ ಮಾಡಿದರು. ಮಹಾತ್ಮರ ಪ್ರಕೃತಿಯು ಇನ್ನೂ ಅಷ್ಟೇನೂ ಸುಧಾರಿಸಿಲ್ಲವಾದ್ದರಿಂದ ಅವರು ಇನ್ನೂ ಒಂದು ತಿಂಗಳವರೆಗೆ ಈ ಪ್ರವಾಸವನ್ನು ಕೈಕೊಳ್ಳುವಂತಿಲ್ಲವೆಂದು ತಿಳಿಯುತ್ತದೆ. ಅವರು ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳುವದಕ್ಕೋಸುಗ ಕೂಡಲೆ ವರ್ಧಾಕ್ಕೆ ಪ್ರಯಾಣ ಮಾಡತಕ್ಕವರಿದ್ದಾರೆ. ಶ್ರೀ ಬಿರ್ಲಾ ಇವರು ನಾಳಿನ ದಿವಸ ದಿಲ್ಲಿಗೆ ಹೋಗತಕ್ಕವರಿದ್ದಾರೆ. (ಆ ಶ್ರೀ)

ಕಾಂಗ್ರೆಸ್ ಹಾಗು ಸರಕಾರದ ನಡುವೆ ಒಪ್ಪಂದ.

ನ್ಯಾಯಸಲಹೆಯೆಡೆಗೆ ಮುಖಂಡರ ಕಾರು

ಮುಂಬಯಿ ತಾ|| [illegible]— ಬೇರೆ ಬೇರೆ ರಾಜಕೀಯ ಅಭಿಪ್ರಾಯದ [illegible] ಜನ ಮುಖಂಡರು ನ್ಯಾಯಸಹಾಯ ಹಾಗು ಭಾರತ ಮಂತ್ರಿಗಳ [illegible] ಮಹಾತ್ಮರಿಗೆ [illegible] ಒಪ್ಪಂದ ಮಾಡಿಕೊಳ್ಳಲು ದೊರೆತ ಈ ಸುಸಂಧಿಯನ್ನು ವ್ಯರ್ಥ ಹೋಗಗೊಡಬೇಡಿರಿ ಎಂದು ಆಗ್ರಹದ ವಿನಂತಿ ಮಾಡಿಕೊಂಡಿದ್ದಾರೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ. (ಆ ಶ್ರೀ)

ಮೈಸೂರ ಸಂಸ್ಥಾನದ ಸುದ್ದಿಗಳು.

ಮೈಸೂರ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘದ ಪ್ರಥಮ ವಾರ್ಷಿಕೋತ್ಸವವು ತಾ|| [illegible]ನೆ ದಿವಸ ಸಾಯಂಕಾಲ [illegible]|| ಗಂಟೆಗೆ ನಡೆಯಿತು. ಡಾ|| [illegible] ವ್ಹಿ. ರಾಮನ್‌ರವರು ಅಧ್ಯಕ್ಷರಾಗಿದ್ದರು.

ಮೈಸೂರ ವಿಶ್ವವಿದ್ಯಾಲಯದ ಪದವಿಪ್ರದಾನ ಮಹೋತ್ಸವವು ಅಕ್ಟೋಬರ [illegible]ನೆ ತಾರೀಖಿನ ದಿವಸ ಮೈಸೂರಿನ ಜಗನ್ಮೋಹನ ರಾಜಭವನದಲ್ಲಿ ನಡೆಯುವದು. ಈ ಸಂದರ್ಭದಲ್ಲಿ ಮೈಸೂರ ಸಂಸ್ಥಾನದ ಶ್ರೀ ಮಹಾರಾಜರು ಅಧ್ಯಕ್ಷರಾಗುವರು. ಅಣ್ಣಾಮಲೈ ವಿಶ್ವವಿದ್ಯಾಲಯದ ಉಪಾಧ್ಯಕ್ಷರಾದ ಶ್ರೀ ರಂಗನಾಥನ್‌ರವರು ಹೊಸ ಪದವೀಧರರಿಗೆ ಬುದ್ಧಿವಾದದ ಭಾಷಣವನ್ನು ಕೊಡುವರು.

ಮೈಸೂರ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಮಹಾದೇವಯ್ಯನವರಿಗೂ ಮತ್ತು ಉಪನ್ಯಾಯಾಧೀಶರಾದ ಶ್ರೀ. [illegible] ನಾರಾಯಣರಾಯರಿಗೂ ಆ ಕೆಲಸಗಳಲ್ಲಿ ಕಾಯಂ ಮಾಡಲಾಗಿದೆಯೆಂದು ಸರಕಾರದ ಪ್ರಕಟನೆಯು ಹೊರಟಿದೆ.

ಮೈಸೂರ ಪ್ರಾಂತಿಕ ಸಹಕಾರ ಸಮ್ಮೇಳನವು ಇದೇ [illegible]ನೇ ತಾರೀಖು ಮಂಗಳವಾರ ದಿವಸ ಬೆಂಗಳೂರಿನಲ್ಲಿ ನಡೆಯುವುದು. ಇದರ ಪ್ರಾರಂಭೋತ್ಸವವನ್ನು ಮೈಸೂರಿನ ಶ್ರೀ ಮಹಾರಾಜರು ನಡೆಸುವರು. ದಿ. ಬ. ಎಂ. ರಾಮಚಂದ್ರರಾಯರು ಅಗ್ರಾಸನ ವಹಿಸುವರು.

ಇಂಗ್ಲಂಡದಿಂದ ಒಂದು [illegible] ಸಂಘವು ಭಾರತದೇಶಕ್ಕೆ ಬರುವವರಿದ್ದಾರೆ. ಹಾಗೆಯೇ ಅವರು ಅಕ್ಟೋಬರ [illegible]ನೇ ತಾರೀಖು ಮೈಸೂರಿಗೆ ಬರುವರು. ಅವರು ಇಲ್ಲಿ [illegible]ನೆ ತಾರೀಖಿನ ವರೆಗೆ ಇದ್ದು ಆ ದಿವಸ ಸಾಯಂಕಾಲ ಮೈಸೂರು ಮಹಾರಾಜರವರ ಕಾಲೇಜಿನವರೊಡನೆ ಒಂದು ಚರ್ಚೆಯನ್ನು ನಡಿಸಿ ಬೆಂಗಳೂರಿಗೆ ಬರುವರು. ಬೆಂಗಳೂರಿನಲ್ಲಿಯೂ ಯುನಿವ್ಹರ್ಸಿಟಿ ಯೂನಿಯನ್ನದರೊಡನೆ ಚರ್ಚೆ ನಡಿಸುವರು.

[illegible]ನೆ ದಿವಸ ಸಾಯಂಕಾಲ ಮೈಸೂರ ಯುನಿವ್ಹರ್ಸಿಟಿ ಯೂನಿಯನ್ನಿನಲ್ಲಿ ಮದ್ರಾಸ ವಿಶ್ವವಿದ್ಯಾಲಯದ ಎಕನಾಮಿಕ್ಸ ಅಧ್ಯಾಪಕರಾದ ಪೆ. ಥಾಮಸರವರು " ಹಿಂದುಸ್ಥಾನದ ಸಮಸ್ಯೆ " ಎಂಬ ವಿಷಯವಾಗಿ ಭಾಷಣ ಮಾಡಿದರು.

ಅವರು ತಮ್ಮ ಭಾಷಣದಲ್ಲಿ ಹಿಂದುಸ್ಥಾನದಲ್ಲಿ ಆರ್ಥಿಕ ಜೀವನವು ಬಹಳ ಹೀನ ಸ್ಥಿತಿ [illegible]ಯೆಂದೂ, ಧನಿಕರಿಗೂ ಬಡವರಿಗೂ ಇರುವ ವ್ಯತ್ಯಾಸವು ಹೆಚ್ಚುತ್ತಿರುವದೆಂದು ಅದು ಪ್ರಪಂಚದಲ್ಲಿ ಸಾಮಾನ್ಯವಾಗಿ ಕಡಿಮೆಯಾಗುತ್ತಿದರೂ ಹಿಂದುಸ್ಥಾನದಲ್ಲಿ ವಿಪರೀತ ಸ್ಥಿತಿ ಹೊಂದಿದೆಯೆಂದೂ ಈ ಆರ್ಥಿಕ ದು[illegible] ಮುಖ್ಯವಾಗಿ ವ್ಯವಸಾಯವನ್ನೇ ಅವಲಂಬಿಸಿರುವುದು, ಕೈಗಾರಿಕೆ, ವ್ಯಾಪಾರದ ಕಡೆಗೆ ಗಮನವಿಲ್ಲದಿರುವದೇ ಕಾರಣವಾಗಿದೆಯೆಂದು [illegible]ದರು.

ಬೆಂಗಳೂರಿನಿಂದ ಕೆಲವು ಕ್ರೀಡ[illegible] [illegible] ಹೈದರಾಬಾದಿಗೆ ಈ ತಿಂಗಳ [illegible] ವಾರದಲ್ಲಿ ಹೊರಡುವರು. ಅವರು ಅಲ್ಲಿ [illegible] ಕ್ರಿಕೆಟ್ಟ ಮತ್ತು ಫುಟಬಾಲ [illegible] ಆಡುವರು.

ಪ್ರತಿನಿಧಿಯೊಡನೆ ನೆಹರೂರವರ ಸಂಭಾಷಣ

ಮುಂಬಯಿ ತಾ|| ೧೭— ಪಂಡಿತ ಜವಾಹರಲಾಲರು ಅಲಹಾಬಾದಕ್ಕೆ ಪ್ರಯಾಣ ಮಾಡುವದಕ್ಕಿಂತ ಮುಂಚೆ ಸ್ಟೇಶನ್ನಿನಲ್ಲಿ ಪ್ರತಿನಿಧಿಯು ಅವರ ಭೆಟ್ಟಿ ಪಡೆದನು. ಆಗ ಪಂಡಿತರು ತಮ್ಮ ಮತ್ತು ಗಾಂಧಿಯವರ ನಡುವೆ ಸಾಗಿದ ಪತ್ರವ್ಯವಹಾರದ ವಿಷಯ, ಕಲ್ಕತ್ತಾ ಗಲಭೆಗಳ ವಿಷಯ, ... ವಿವರಣ ಮಾಡಿದರು.

ಅಖಿಲ ಇಂಡಿಯಾ ಕಾಂಗ್ರೆಸ ಕಮೀಟಿಯ ಸಭೆ ಕರೆಯಲು ಹಿಂದಾ ವ ಂದೆ ನೋಡು ಎಂದು ಪ್ರತಿನಿಧಿಯು ಅವರಿಗೆ ಪ್ರಶ್ನೆ ಮಾಡಿದನು. ಆಗ ಪಂಡಿತರು ಉತ್ತರ ಕೊಟ್ಟಿದ್ದು ಈ ಪ್ರಕಾರ:—

ಸಭೆಯನ್ನು ಕೂಡಿಸಲು ಪರಿಮಿತ ಸಬ್ಜೆಕ್ಟ್ಸ್ ಕಮಿಟಿ ಒಂದಲ್ಲಿ ಸಭೆಯನ್ನು ಕೂಡಿಸುವದು ನನ್ನ ಕರ್ತವ್ಯವಾಗಿದೆಯೆಂದು ... ಪ್ರಕಟನೆಯಲ್ಲಿ ಮೊ ಲೇ ತಿಳಿಸಿದರೆ ನನ್ನ ವ್ಯಕ್ತಿಶಃ ಅಭಿಪ್ರಾಯ ಕೇಳಿಕೊಂಡರೆ, ಹೀಗೆ ಸಭೆ ಕೂಡಿಸುವುದು ಉಪಯೋಗವಾಗುವದಿಲ್ಲವೆಂದು ತೋರುತ್ತದೆ. ಯಾಕೆಂದರೆ, ಕಾಂಗೆಸ ... ನಿಶ್ಚಿತವಾದ ಕಾರ್ಯಕ್ರಮವ ಪ ... ಮುಂದೆ ಇಟ್ಟುಬಿಟ್ಟಿದ್ದಾರೆ. ಈ ... ವನ್ನು ಹಿಂತೆಗೆದುಕೊಳ್ಳುವದಾಗಲಿ ಬದಲು ಮಾಡು ದಾಗಲಿ ಇದ್ದರೆ ... ವೇಳೆಯಲ್ಲಿ ಸಭೆಯನ್ನು ಕೂಡಿಸ ... ದೆ ಸಭೆಯನ್ನು ಕರೆಯ ಬೇಕೆಂ ... ಪ್ರಿಯವುಳ್ಳವರು ಕಾರ್ಯಕ್ರಮವ ... ಮಾಡಬೇಕೆಂಬ ಇಚ್ಛೆಯುಳ್ಳವರಾಗಿ ನಾನು ತಿಳಿಯುತ್ತೇನೆ. ಆದ ... ಗೊತ್ತಿದ್ದ ಮಟ್ಟಿಗೆ ಮಾತ್ರ ದೇಶದ ... ಜನರ ಕಾರ್ಯಕ್ರಮವನ್ನು ಬದಲು ... ಅಭಿಪ್ರಾಯವುಳ್ಳವರು ಇರುವ ... ಜನ ಕಾಂಗ್ರೆಸ್ ಕೆಲಸಗಾರರು ... ಕ್ರಮವನ್ನು ಸ್ವಸಂತೋಷದಿಂದ ... ವರಿದ್ದಾರೆ.

ಕಾಂಗ್ರೆಸದ ಈಗಿನ ಕಾರ್ಯಕ್ರಮವು ... ವದಾಗಿಯೂ ಮತ್ತು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯನ್ನು ಕರೆಯದಿದ್ದ ... ಪತ್ರಿಕೆಗಳಲ್ಲಿ ಟೀಕೆ ಬಂದಿರುವದನ್ನು ... ದ್ದೇನೆ. ಪತ್ರಕರ್ತರು ಕಾಂಗ್ರೆಸ ... ಮದಲ್ಲಿಯ ಕೆಲವೊಂದು ವಿಷಯಗ ... ದಿಂದಲೂ ಭಿನ್ನ ಅಭಿಪ್ರಾಯವು ... ರುವರು. ಈ ಪತ್ರಕರ್ತರು ತಮ್ಮ ... ಸಾಮ್ರಾಜ್ಯವಲ್ಲಿಯೇ ಹೊ ಗಾಡುತ್ತ ... ಅವರಿಗೆ ಸಾಮಾನ್ಯ ಜನರ ವಿಶೇಷ ... ಗಿ ಆ ಜನರ ಮನೋಪ್ರವೃತ್ತಿಯ ವಿ ... ಸಾಕಷ್ಟು ಜ್ಞಾನವಿಲ್ಲ ಇದು ನನ್ನ ... ಮವಲ್ಲ. ಕಾಂಗ್ರೆಸ್ ಕೆಲಸಗಾರರು ಸಾಮಾನ್ಯ ಜನರಿಗೆ ... ತ್ತದೆ. ನಾನು ಜೇಲಿನಿಂದ ಬಿಡುಗಡೆಯಾದವನು ಆದಿನಿಂದ ನಾ ... ಕಾಂಗ್ರೆಸ್ ಕೆಲಸಗಾರ ... ಕಾರ್ಯಕ್ರಮದ ಸಂಬಂಧವಾಗಿ ಮಾತು ... ದ್ದೇನೆ ... ಕಾರ್ಯಕ್ರಮದಲ್ಲಿ ಯಾ ... ರದ ವ್ಯತ್ಯಾಸ ಮಾಡುವದು ಅವರಿಗೆ ... ರ ವದಿಲ್ಲ. ವಸ್ತುಸ್ಥಿತಿಯು ಹೀಗಿರ ... ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿ ... ಕರೆದು, ಬಹುಜನ ಕೆಲಸಗಾರರಿಗೆ ಸ ... ದ ಕಾರ್ಯಕ್ರಮವನ್ನು ಬದಲಿಸುವ ... ಲ್ಲಿ ವಿಚಾರ ಮಾಡುವದರಿಂದ ಯಾವ ... ದೊರೆಯುವದೋ ನನಗೆ ತೋರದಾ ... (ಅ ಪ್ರ)

ಇಷ್ಟಾದ ಮೇಲೆ ಪ್ರತಿನಿಧಿಯು ಪಂಡಿತರಿಗೆ, ನಿಮ ಗೂ ಮಹಾತ್ಮಾ ಗಾಂಧಿಯವರಿಗೂ ಉದ್ದೇಶದ ಸಂಬಂಧದಲ್ಲಿ ವಿಶೇಷವಾದ ಭಿನ್ನಾಭಿಪ್ರಾಯವು ಇರುವದಿಲ್ಲವೇ ಎಂದು ಪ್ರಶ್ನೆ ಮಾಡಿದನು. ಆಗ ಪಂಡಿತರು ಉತ್ತರ ಕೊಟ್ಟದ್ದು ಈ ಪ್ರಕಾರ —

ಧನಿಕರ ವರ್ಗವನ್ನು ಅಳಿದು ಸಮಾಜದಲ್ಲಿ ಸಮತಾಭಾವವನ್ನು ಉಂಟುಮಾಡುವ ನನ್ನ ಉದ್ದೇಶಕ್ಕೆ ಮಹಾತ್ಮರು ಸರ್ವಸಾಮಾನ್ಯವಾಗಿ ತಮ್ಮ ಒಪ್ಪಿಗೆ ಕೊಟ್ಟಿರುವದು, ಅವರ ಮತ್ತು ನನ್ನ ನಡುವೆ ನಡೆದ ಪತ್ರವ್ಯವಹಾರದ ಮೇಲಿಂದ ಸ್ಪಷ್ಟವಾಗಿ ಕಂಡುಬರುವದು. ನಾವು ಉಭಯತರು ಈ ವಿಷಯವನ್ನು ಒಂದೇ ದೃಷ್ಟಿಯಿಂದ ನಿರೀಕ್ಷಿಸುತ್ತಿರುವದಿಲ್ಲ ಎಂಬುದು ನಿಜ. ಆದರೆ ಗುರಿಯು ಮಾತ್ರ ಇಬ್ಬರದೂ ಒಂದೇ ಇದೆ. ಗಾಂಧಿಯವರು ಸಾಧನೆಗಳಿಗೆ ವಿಶೇಷ ಮಹತ್ವ ಕೊಡುವರು. ಸರಿಯಾದ ಮಾರ್ಗಕ್ರಮಣ ಮಾಡಿದಲ್ಲಿ ಫಲವು ದೊರೆತೇ ದೊರೆಯುವದೆಂದು ಅವರ ವಿಶ್ವಾಸ. ನಮ್ಮ ಉದ್ದೇಶವನ್ನು ನಾವು ಯಾವಾಗಲೂ ನಮ್ಮ ಕಣ್ಣು ಮುಂದೆ ಇಟ್ಟುಕೊಳ್ಳುವದು ಅವಶ್ಯವಿದೆಯೆಂದು ನನಗೆ ಎನಿಸುತ್ತದೆ. ಮಾರ್ಗಗಳ ವಿಷಯವಾಗಿ ನನ್ನ ಅಭಿಪ್ರಾಯ ಕೇಳಿದರೆ, ನಾನು ಹಿಂದಕ್ಕಿಂದಲೂ ಗಾಂಧಿಯವರನ್ನು ಅನುಸರಿಸುತ್ತ ಬಂದಿದ್ದೇನೆ ಮತ್ತು ಮುಂದಾದರೂ ಅವರನ್ನೇ ಹಿಂಬಾಲಿಸುತ್ತೇನೆ. ಕಾರ್ಯಕ್ರಮದಲ್ಲಿಯ ಅರ್ಥಿಕ ವಿಷಯದ ಕಡೆಗೆ ನಾನು ಹೆಚ್ಚು ವಜನನ್ನು ಹಾಕಬೇಕೆನ್ನುತ್ತೇನೆ. ಯಾಕೆಂದರೆ ಇದರಿಂದ ಜನರಿಗೆ ನಮ್ಮ ಉದ್ದೇಶದ ಬಗ್ಗೆ ಸ್ಪಷ್ಟವಾದ ಕಲ್ಪನೆಯಾಗುವದು. ನಮ್ಮ ಹೋರಾಟವು ಪ್ರಾಮುಖ್ಯವಾಗಿ ರಾಷ್ಟ್ರೀಯ ಹೋರಾಟವಾಗಿದೆ. ಯಾಕೆಂದರೆ ಪರಕೀಯ ಪ್ರಭುತ್ವದಲ್ಲಿ ನರಳುತ್ತಿರುವ ಪ್ರತಿಯೊಂದು ರಾಷ್ಟ್ರವೂ ಮೊದಲು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಅರ್ಥಿಕ ಕಾರ್ಯಕ್ರಮಗಳಿಂದ ತೊಡಕುಗಳೆಲ್ಲ ಬಿಟ್ಟು ಹೋಗಿ, ಪ್ರತಿಯೊಬ್ಬನಿಗೆ ತಾನು ಎಲ್ಲಿರುವೆನು, ತಮ್ಮ ಜನರ ಸ್ಥಿತಿಗತಿಯೇನು ಇವೇ ಮೊದಲಾದವುಗಳ ಬಗ್ಗೆ ಸ್ಪಷ್ಟವಾದ ಕಲ್ಪನೆಯಾಗುವದು.

ಇಷ್ಟಾದ ನಂತರ ಪ್ರತಿನಿಧಿಯು ಅವರಿಗೆ "ನೀವು ಚಳವಳಿಯನ್ನು ಸಾಗಿಸಬೇಕೆನ್ನುತ್ತೀರಿ, ಮಹಾತ್ಮರು ಸಂಧಾನದ ಮಾರ್ಗವನ್ನು ಹುಡುಕುತ್ತಿರುತ್ತಾರೆ. ಎರಡೂ ಅಸಂಬದ್ಧ ತೋರುವದಿಲ್ಲವೇ? ಎಂದು ಪ್ರಶ್ನೆ ಮಾಡಿದನು. ಆಗ ಪಂಡಿತರು ಕೆಳಗಿನಂತೆ ಉತ್ತರ ಕೊಟ್ಟರು.

ಇಷ್ಟಾರ್ಥವು ಕೈಗೂಡುವರೆಗೆ ಯುದ್ಧವು ಹೀಗೆಯೆ ಸಾಗತಕ್ಕದ್ದು, ಎಂದು ಮಹಾತ್ಮರು ಮೇಲಿಂದ ಮೇಲೆ ಸ್ಪಷ್ಟ ಮಾಡಿದ್ದಾರೆ. ಇದಲ್ಲದೆ ಅವರು ಶಾಂತಿ ಸಂಧಾನದ ಮಾರ್ಗಗಳನ್ನು ಶೋಧಿಸಲು ತಾವು ಯಾವಾಗಲೂ ಸಿದ್ಧರಿರುವದಾಗಿಯೂ ಸಾರಿದ್ದಾರೆ. ಮಹಾತ್ಮರ ಎರಡೂ ಹೇಳಿಕೆಯಲ್ಲಿ ಕೆಲವರಿಗೆ ವಿರೋಧ ಭಾವವು ಕಂಡು ಬರುತ್ತದೆ. ಆದರೆ ಮಹಾತ್ಮರು ಎಂದಿನಿಂದಲೂ ಇದೇ ಧೋರಣವನ್ನೇ ಸ್ವೀಕರಿಸುತ್ತ ಬಂದಿದ್ದಾರೆ. ಚಳವಳಿಯು ಅತಿ ಉಗ್ರ ಸ್ವರೂಪದಲ್ಲಿದ್ದಾಗ ಸಹ, ಅವರು ತಾವು ಒಪ್ಪಂದಕ್ಕೆ ಸಿದ್ಧರಿರುವೆವೆಂದಾಗಿ ಸಾರಿದ್ದರು. ಯಾಕೆಂದರೆ ಅವರಿಗೆ ಶಾಂತಿಯು ಅಷ್ಟು ಪ್ರಿಯವಾಗಿದೆ ಮತ್ತು ಅವರು ಶುದ್ಧವಾದ ಸತ್ಯಾಗ್ರಹಿಗಳಿರುತ್ತಾರೆ. ಇದರ ಅರ್ಥವೆಂದರೆ, ಇಷ್ಟಾರ್ಥವು ಸಂಪೂರ್ಣವಾಗಿ ಕೈವಶವಾದ ಮೇಲೆಯೆ ಸಂಪೂರ್ಣ ಶಾಂತಿಯು ದೊರೆಯುವದು. ... ಮಧ್ಯದಲ್ಲಿ ದಿಲ್ಲಿ ಒಪ್ಪಂದದಂತೆ ಹಲವು ತಾತ್ಕಾಲಿಕ ಒಪ್ಪಂದಗಳು ಘಟಿಸಬಹುದು (ಅ ಪ್ರ)

ಪತ್ರಿಕೆಗಳಲ್ಲಿ ಕಾಂಗ್ರೆಸ ಹಾಗು ಸರಕಾರದ ನಡುವೆ ಒಪ್ಪಂದವಾಗುವ ಸಂಭವವಿದೆಯೆಂಬ ಸುದ್ದಿಗಳು ಪ್ರಕಟವಾಗುತ್ತಿವೆ. ಆದರೆ ಒಪ್ಪಂದದ ಬಗ್ಗೆ ಮಾತುಕತೆ ನಡೆದಿದ್ದೆಂದು ನನಗೆ ಗೊತ್ತಿರುವದಿಲ್ಲ ಮತ್ತು ಇನ್ನು ಮುಂದೆಯಾದರೂ ಈ ಸಂಬಂಧದಲ್ಲಿ ಮಾತುಕತೆ ನಡೆಯುವ ಸಂಭವವಿಲ್ಲ. ನನಗೆ ಗೊತ್ತಿದ್ದ ಮಟ್ಟಿಗೆ ಮಹಾತ್ಮರಿಗಾದರೂ ಇದಾವುದೂ ಗೊತ್ತಿರುವದಿಲ್ಲ. ಏನೇ ಇರಲಿ, ಯಾರಾದರೂ ಈ ಬಗ್ಗೆ ಪ್ರಯತ್ನ ಮಾಡಲಿಚ್ಛಿಸಿದಲ್ಲಿ ಮಹಾತ್ಮರು ಅವರೊಡನೆ ವಿಚಾರ ವಿನಿಮಯ ಮಾಡಲು ಸಿದ್ಧರೇ ಇರುವರು. ಯಾಕೆಂದರೆ ಇದೇ ಅವರ ನೈತಿಕ ತಳಹದಿಯಾಗಿದೆ. ನಮ್ಮ ಉದ್ದೇಶವನ್ನಂತೂ ನಾವು ಸ್ಪಷ್ಟಮಾಡಿದ್ದೇವೆ. ಈ ಮಾತುಕತೆಯಿಂದ ಅದರಲ್ಲೇನೂ ವ್ಯತ್ಯಾಸವಾಗುವ ಸಂಭವವಿಲ್ಲವೆಂದು ನಾನು ಪುನಃ ಹೇಳುತ್ತೇನೆ. ನನ್ನನ್ನು ಕೇಳಿದರೆ, ಎರಡು ಶಕ್ತಿಗಳಲ್ಲಿ ಕಾದಾಟ ನಡೆದಿರುವದೆಂದು ನಾನು ಹೇಳಬಲ್ಲೆ. ಅವೆಂದರೆ ಪ್ರಭುತ್ವ ಮತ್ತು ರಾಷ್ಟ್ರೀಯತ್ವ. ಇವೆರಡೂ ಒಂದಕ್ಕೊಂದು ತೀರ ವಿರುದ್ಧವಾಗಿವೆ. ಇವೆರಡರಲಿ ಎಂದೂ ಒಪ್ಪಂದವಾಗುವ ಸಂಭವವಿಲ್ಲ. ಪರಭಕ್ತ ಪ್ರಭುತ್ವ ಸಂಪೂರ್ಣವಾಗಿ ಇಲ್ಲದಂತಾದಾಗಲೇ ಒಪ್ಪಂದವು ಘಟಿಸುವದು. ಒಂದ ವೇಳೆ ಒಪ್ಪಂದವು ಆಗಹರಿಸು. ಅದರಲ್ಲಿ ಕಿಂಚಿತ್ತಾದರೂ ಪ್ರಭುತ್ವದ ಅಂಶವು ಕಂಡುಬಂದಲ್ಲಿ, ಅದು ಕೊನೆತನಕ ಬಾಳಲಾರದು. ಈ ತತ್ವವು ಕಾಂಗ್ರೆಸದ ರಾಜಕೀಯ ಧ್ಯೇಯವಾದ ರಾಷ್ಟ್ರೀಯ ಸ್ವಾತಂತ್ರ್ಯದಲ್ಲಿ ಅಡಕವಾಗಿಯೇ ಇದೆ. ಈ ರಾಜಕೀಯ ಧ್ಯೇಯವನ್ನು ಬಿಟ್ಟು ವಿಚಾರ ಮಾಡಿದರೂ ಸಹ, ಮಾರ್ಗದಲ್ಲಿ ಅರ್ಥಿಕ ಪ್ರಶ್ನೆಗಳು ಧುತ್ತೆಂದು ಮುಂಚೆ ಒಂದು ನಿಲ್ಲುತ್ತವೆ. ನಾವು ಈ ಪ್ರಶ್ನೆಯನ್ನು ಸಾಮಾನ್ಯ ಜನರಿಗೆ ಅನುಕೂಲವಾಗುವ ರೀತಿಯಲ್ಲಿಯೇ ಬಿಡಿಸಬೇಕು. ಹಿಂದುಸ್ಥಾನದಲ್ಲಿ ಇತ್ತೀಚೆಗೆ ಈವರೆಗೆ ಎಷ್ಟೋ ಚಳವಳಿಗಳು ಸಾಗುತ್ತ ಬಂದಿವೆ. ಇವೆಲ್ಲಕ್ಕೂ ಮಧ್ಯಮ ಹಾಗು ಸಾಮಾನ್ಯ ಜನರ ಅರ್ಥಿಕ ದುಸ್ಥಿತಿಯೇ ಪ್ರಾಮುಖ್ಯವಾದ ಮೂಲಕಾರಣವಾಗಿದೆ. ಈ ಅರ್ಥಿಕ ದುಸ್ಥಿತಿಯನ್ನು ಹೋಗಲಾಡಿಸದೆ, ಯಾವದೇ ಒಪ್ಪಂದವಾಗಲಿ ಯಾವದೇ ರಾಜ್ಯಕಾರಭಾರವಾಗಲಿ, ಕಡೆತನಕ ಬಾಳುವದಿಲ್ಲ ಮತ್ತು ಅದರಿಂದ ಹಿಂದುಸ್ಥಾನದ ತೊಡಕು ಬಿಡುವದಿಲ್ಲ (ಅ ಪ್ರ)

ಡಾ. ಕುಲಕರ್ಣೀಯ
ಲೆಬೊರೋಟರಿ ಮುಂಬಯಿ ನಂಬರ ೧೨
ಬಾಟ್ಲಿ ಕಿಮ್ಮತ್ತು ೧—೪—೦
ಕೆಮಿಸ್ಟರಲ್ಲಿಯೂ ದೊರೆಯು

ಸ್ತ್ರೀಯರ ವಿಕಾರದ ಮೇಲೆ
ರಾಮಬಾಣ ಔಷಧವು

ರೋಗು, ಬಿಳೇ ರೋಗು ಕೆಂಪು ರೋಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿ ವಿಳೆ ಬೆನ್ನು ಹಿಡಿಯೋಣ ನಡಸೂವು ರಕ್ತತಾ ವಸ್ಸಿರೆ ವಿಕಾರಗಳು, ಗ ಣವಾಗು ತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನಷ್ಟವಾಗಿ ಗರ್ಭಧಾರಣ ವಾಗ ತ ದೆ ಬಾಟಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ

ಬಿ ಟಿ ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ
ಬಾಗಲಕೋಟ

ಬಾಸುತಕರ ಬ್ರದರ್ಸ

ಇವರ ಯಶವಂತ ಟೇಲರಿಂಗ ಫರ್ಮ ದಲ್ಲಿ ಯಾವತ್ತೂ ನಮೂನೆಯ ಫ್ಯಾಶನೇಬಲ್ ಅರಿವೆಗಳನ್ನು ಟಾಯಿಸ್ಟೀರ ಹೊಲಿದು ಕೊಡುತ್ತಾರೆ. ಗ್ರಾಹಕರು ತ್ವರೆಮಾಡಬೇಕು.

ಬಾಸುತಕರ ಬ್ರದರ್ಸ
ಗುಳೇದಗುಡ್ಡ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಮಂಗಳವಾರ ತಾ|| ೧೯-೯-೪೩ನೇ ದಿವಸ ರಾತ್ರಿ

ಸಂಪೂರ್ಣ ರಾಮಾಯಣ.

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ಈ ಪ್ರಯೋಗವು ತಿರುಗಿ ಇಲ್ಲಿ ಆಗಲಾರದು.

ಕಾರಣ ಪ್ರೇಕ್ಷಕರು ಈ ಸುಸಂಧಿಯನ್ನು ಕಳಕೊಳ್ಳಬಾರದು.

ಸಂಘದೊಡೆಯರು
ಗರೂಡ ಸದಾಶಿವರಾಯರು

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ | ಕೃಷ್ಣರಾವ ಅಂಕಲಿಗಿ
ತಾ. ೨೫ ಜ ೩೩ | ಮ್ಯಾನೇಜಿಂಗ ಡಾಯರೆಕ್ಟರ.

ಹಾಂಗೋಲ್



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

[illegible] ಬಯಿಯು [illegible]ವಾಗಿ [illegible]
[illegible] ಗುಳು " ಎಸಡೆಗ [illegible]
ಕಲು ಸರ್ವೋತ್ಕೃಷ್ಟವಾದ ವನ[illegible]
ಆಯುರ್ವೇದದಲ್ಲಿ ಹೇಳಲ್ಪಟ್ಟ[illegible]
ಗಳಿನ [illegible] "ಕಟ್ಟು" [illegible]
ದಲ್ಲಿ [illegible]ಗಿದೆ [illegible]
ಹಲ್ಲುಗಳ [illegible]
[illegible] ಮತ್ತು [illegible]
ಟು ಆಗರೆ ಈ [illegible]ಗಳು ಕಟ್ಟು[illegible]
ಜನರ ಗುಪ್ತ [illegible] ನಾಶ[illegible]
[illegible]ಗಳು [illegible] ಬಯಿ[illegible]
[illegible] ಸುವಾಸ[illegible]
[illegible]
[illegible] ಇದರ ಗುಣಗಳನ್ನು [illegible]
ಬೇಕಲ್ಲದೆ [illegible] ನೆಯಿಂದ
ಯಲಾರವು ಕನ್ನಡಿಗರೇ, ಕನ್ನ[illegible]
ಮಾಲನ್ನು ಮೊದಲು ಕೊಂಡು "[illegible]
ಮಾಡಿಗಿದೆ' ಎಂಬ ನಾಣ್ಣುಡಿಯ[illegible]
! ಸ್ವದೇಶೀ ವಸ್ತುಗಳನ್ನು ಉಪಯೋ[illegible]
ಜ್ಯದ ಹಾದಿಯನ್ನ ಹಿಡಿಯಿರಿ
ಒಮ್ಮೆ ಮಾಲು ತರಿಸಿ, ಅ[illegible]
ಅನುಭವ ಪಡೆಯಿರಿ

ಬಹಳ ಹಳೆಯದ [illegible] ಸ್ವತ್ವವಾದ [illegible]
ಹೆಚ್ಚಿನ [illegible] ಎಳ್ಳಷ್ಟೂ ಆಗಿರುವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

[illegible] ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ [illegible] ಯಾತ್ರಿಕರಿಂದ ಮಾನಪತ್ರಿಕೆಗಳನ್ನೂ, [illegible]ಗಳನ್ನೂ, [illegible]ಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀ ರಾಮೇಶ್ವರ [illegible] ಕ್ಷೇತ್ರಗಳ

[illegible] ಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

[illegible]ಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು ಸನ್ ೧೯[illegible]ನೇ ಇಸವಿಯ ಅಕ್ಟೋಬರ ೧ ನೇ ತಾರೀಖು (ಶಕೆ ೧[illegible] ಆಶ್ವಯುಜ ಶು|| [illegible]) ರವಿವಾರ ಹುಬ್ಬಳ್ಳಿ ಪಟ್ಟಣದ ಸ್ಟೇಶನದಿಂದ ಹೊರಟು, ಈ ಕೆಳಗೆ ನಮೂದಿಸಿರುವಂತೆ ಕ್ರಮವಾಗಿ

೧ [illegible] ಅಕ್ಟೋಬರ ತಾ|| ೨	೧೯ [illegible] ೨೬	೩೭ [illegible] ೨೫
೨ ನಾಶಿಕ ೩-೪	೨೦ ಅಯೋಧ್ಯೆ ೨೫	೩೮ [illegible] ೧೬-೧೭
೩ ಮುಂಬಯಿ ೫-೬	೨೧ ಅಲಹಾಬಾದ ,,	೩೯ [illegible] (ಹಡಗದಿಂದ) ೧೮
೪ ಸೊಮನಾಥ (ಹಡಗಿನಿಂ) ೮ ೯	೨೨ [illegible] ೨೬-೨೭	೪೦ [illegible] [ಹಡಗದಿಂದ ೧೯-೨೦-೨]
೫ ವೇರಾವಳ ,,	೨೩ [illegible] ೨೮ ೨೯-೩೦ ೩೧ ನವೆಂಬರ ತಾ|| ೧	೪೧ [illegible] [illegible] ೨೨
೬ [illegible] (ಸ್ನಾನ ತೀರ್ಥ) ೧೦-೧೧	೨೪ [illegible] ೨	೪೨ [illegible] [illegible] ೨೩
೭ [illegible] (ಸ್ನಾನ ತೀರ್ಥ) ೧೨-೧೩	೨೫ ಗಯಾ ,,	೪೩ [illegible] [ಹಡಗದಿಂದ] ,,
೮ ಅಹಮ್ಮದಾಬಾದ ೧೪	೨೬ ರಾಜಗಿರಿ ಕುಂಡ (ಸ್ನಾನ ತೀರ್ಥ) ೪	೪೪ ಮದುರೆ ೨೫
೯ ಸಾಬರಮತಿ ,,	೨೭ ಗಿರಿ	೪೫ [illegible] ೫
೧೦ [illegible] ೧೫	೨೮ ಸಮುದ್ರ [illegible] (ಸ್ನಾನತೀರ್ಥ) ೬	೪೬ [illegible] ,,
೧೧ [illegible] ೧೬	೨೯ ಕಲಕತ್ತಾ ೭-೮-೯	೪೭ [illegible] ೨೬
೧೨ ಆಗ್ರಾ ೧೭	೩೦ ಜಗನ್ನಾಥ ಪುರಿ ೮	೪೮ [illegible] ೨೭-೨೮
೧೩ ಮಥುರಾ ೧೮-೧೯	೩೧ [illegible] ೯	ಈ ಎಲ್ಲ [illegible]
೧೪ ಗೋಕುಲ ,,	[illegible] ೧೦	[illegible]ಗಳನ್ನು [illegible]
೧೫ ಬೃಂದಾವನ ,,	೩೨ [illegible] ೧೧	[illegible] ([illegible]
೧೬ ಗೋವರ್ಧನ ,,	೩೩ [illegible] ೧೨-೧೩	[illegible] ೩ ೧೪ [illegible]
೧೭ ದಿಲ್ಲಿ ೨೦-೨೧	೩೪ [illegible] ೧೪	[illegible] ಹುಬ್ಬಳ್ಳಿಗೆ [illegible]
೧೮ ಹರದ್ವಾರ ೨೨-೨೩	೩೫ [illegible] ,,	ವಸ್ತು ಬಂದು [illegible] ರುವದು

ಟ್ರೇನಿನಲ್ಲಿ ಒಬ್ಬರಿಗೆ ೨ ಜನರ ಸ್ಥಳವನ್ನು ಕೊಡ್ಲಾಗುವದು

ಈ ಎಲ್ಲ ಮಹಾಯಾತ್ರೆಗೆ ರೇಲ್ವೆ, ಹಡಗು ಇಳಿದುಕೊಳ್ಳುವ ಖರ್ಚು ಸೇರಿ ಸೆಕೆಂಡಕ್ಲಾಸ ೨೩೦ ರೂಪಾಯಿ ಥರ್ಡಕ್ಲಾಸ [illegible] ಯಿಗಳು ಮಾತ್ರ ಟಿಕೇಟ ಪಡೆಯಬೇಕಾದಲ್ಲಿ ಸೆಕೆಂಡಕ್ಲಾಸಿನವರು ೫೦ ರೂ ಥರ್ಡಕ್ಲಾಸಿನವರು [illegible] ರೂ ಅಡ್ವಾನ್ಸ ಕಳಿಸತಕ್ಕ[illegible] [illegible]ದ ಮೇಲೆ ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದು[illegible] ಪದು ಸ್ಮಾರ್ತ, ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾ[illegible] ವ್ಯವಸ್ಥೆ ಇದ್ದು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು ಟ್ರೇನಿನಲ್ಲಿ [illegible]ದಸ್ತುನುಗಳಿರುವದರಿಂದ ವೀರಶೈವರ ಆಚಾರಕ್ಕನುಕೂಲವುಂಟು ಹೆಚ್ಚಿನವಾ[illegible] [illegible]ಗಳನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿ[illegible] ಜವಾನರೂ, ಡಾಕ್ಟರರೂ ಫೋಟೋಗ್ರಾಫರರೂ ಅಗಸರೂ ಇರುವರು [illegible] ನಿನಲ್ಲಿ ತಡವಾಗಿ ಬಂದವರಿಗೆ ಸ್ಥಳ ಸಿಗದೆ [illegible] ದ್ದರಿಂದ ಬಹಳ ಜನರು ನಿರಾಶರಾ[illegible] ಕಾರಣ ಟಿಕೆಟುಗಳನ್ನು ಕ್ರಮವಾಗಿ ತ್ವರೆಮಾಡತಕ್ಕದ್ದು

ಮೇಲೆ ಗೊತ್ತುಪಡಿಸಿದ ರೀತಿಯ ತಾರೀಖಿಗೆ ತಪ್ಪದೆ ಟ್ರೇನು ಹೊರ[illegible]

ಶ್ರೀ ಗೌರೀಶಂಕರ ಕಂಪನಿಯ ಏಜಂಟರು — [illegible] [illegible] [illegible] [illegible] ಕಂಪನಿಗೆ [illegible] ಅವರ ಫಾರ್ಮುಗಳನ್ನು ಏಜಂಟರಿಂದ [illegible] [illegible] ಕೊಡಲ್ಪಡುವದು

[illegible]

ಮ್ಯಾನೇಜರ ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ — [illegible] ಬಾಳೆಕೇಲರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು ನಾವು [illegible] ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ [illegible]ಂದ ಗ್ಯಾರಂಟಿ ಮಾಲು [illegible] ವರು ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ ಹೈದರಾಬಾದಿನಿಂದ[illegible] ಗಳು ಪರಸ್ಥಳಕ್ಕೆ ಹೋಗಿ ಅಲ್ಲಿಯ ಖರ್ಚುವೆಚ್ಚಗಳು ಅದರ ಮೇಲೆ ಬಿದ್ದು ನಿಮ್ಮ [illegible] ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ [illegible] ಕರ್ನಾಟಕದವರಿಗೆ [illegible] ಮಾಲು ದೊರೆಯುವದು. [illegible]

ಮಳಿಗ ಡ್ ಹೈದರಾಬಾದ (ಡೆಕ್ಕನ್) **[illegible]**

ಛಾಪಖಾನೆಯ ಸಾಮಾನುಗಳು

ಮಾರತಕ್ಕದ್ದಿವೆ.

ಉಪಯೋಗಿಸಿದ [illegible] ಕನ್ನಡ ಕೆಲಸ [illegible], ಗ್ಯಾಲಿರ್ಯಾಕ, ಲೆಡ್ ಕಟರ, ಹಾಗೂ [illegible] ([illegible]) [illegible] ಫುಲ್ಸ [illegible]

ಕನ್ನಡಿಗ [illegible] ಧಾರವಾಡ

ಕನ್ನಡಿಗನ ಚಂದಾ[illegible]

	[illegible]	[illegible]
ತಿಂಗಳಿಗೆ	೦-೬-೬	೦ [illegible]
೩ ತಿಂಗಳಿಗೆ	೧-೪-೦	೨-೮
೬ ತಿಂಗಳಿಗೆ	೨-೮ ೦	೫-೨-
ವರ್ಷಕ್ಕೆ	೫ ೦-೨	೯-೦-

ವ್ಯವಸ್ಥಾ[illegible]

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

यद्यत् परवशं दुःखं । यद्यदात्मवशं सुखम्॥ मनु

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಇನಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯುಅರನ್ಸ
ಪ್ರದೇಶದ ಹಣವನ್ನು ಪ್ರದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ - ಬುಧವಾರ ಏಪ್ರಿಲ್ [illegible] ಶಕೆ ೧೮೫೦ [illegible] [ಸಂಚಿಕೆ ೧೨೭

ಗಾಂಧಿ-ರಂಗಸ್ವಾಮಿ ಸಂಭಾಷಣ

ಬ್ಯಾಂಕೆಶಾಯರ ಮಂಡಲದವರು ಹಾಗು ಮುಂಬಯಿ ಗಿರಣಿ ಒಡೆಯರು.

ಮುಂಬಯಿ ತಾ ೧೮—ಬ್ರಿಟಿಶ ನೂಲು ಹಾಗು ಅರಿವೆಯ ಶಿಷ್ಟಮಂಡಳದವರ ಮತ್ತು ಹಿಂದೀ ಗಿರಣಿಗಳ ಒಡೆಯರ ನಡುವಿನ ಪರಿಷ ತ್ತಿಗೆ ಕಳೆದ ೩ ನ ದಿವಸ ಪ್ರಾರಂಭವಾಯಿತು. ಶ್ರೀ ಎಚ್ ಪಿ ಮೋದಿಯವರು ಪ್ರಾಸ್ತಾವಿಕ ಭಾಷಣ ಮಾಡಿ ಪರಿಷತ್ತಿನ ಕಾರ್ಯವನ್ನು ಪ್ರಾರಂಭಿಸಿದರು ಮಧುರಾ, ಬಡೋದಾ, ಅಹ ಮ್ಮದಾಬಾದ, ಕಾನಪೂರ, ಬಂಗಾಲ ಮತ್ತು ಮುಂಬಯಿ ಮೊದಲಾದ ಕಡೆಗಳಿಂದ ಪ್ರತಿನಿಧಿ ಗಳು ಬಂದಿದ್ದರು ಪರಿಷತ್ತಿನಲ್ಲಿ ಪತ್ರಿಕಾ ಪ್ರತಿ ನಿಧಿಗಳಿಗೆ ಪ್ರವೇಶವಿದ್ದಿಲ್ಲ ಆದರೂ ಪರಿಷ ತ್ತಿನಲ್ಲಿ ಮೊದಲು ಶ್ರೀ ಮೋದಿ ಮತ್ತು ಪ್ರಯುಸ್ [illegible] ಶ್ರೀರ ಲೀಜ ಇವರ ಭಾಷಣಗಳಾಗಿ ಚರ್ಚೆಯು ಸುರುವಾಯಿತೆಂದೂ, ಪರಿ ಷತ್ತು ಚರ್ಚೆಯು ಮುಗಿಯದೆ ಪುನಃ ಮರು ದಿನಕ್ಕೆ ಮುಂದೆ ಬಿದ್ದಿತೆಂದೂ ತಿಳಿಯುತ್ತದೆ ಲ್ಯಾಂಕೆಶಾಯರ ಮಂಡಳದಲ್ಲಿಯ ಓರ್ವ ಸಭಾ ಸರಾದ ಮಿ ಟ್ರಾಥರನ್ ಇವರು ವೈದ್ಯಕೀಯ ಸಲಹೆಗನುಸಾರವಾಗಿ ಶನಿವಾರ ದಿವಸ ಇಂ ಗ್ಲಂಡಕ್ಕೆ ಹೋದರು.

ಜಪಾನಿ ಶಿಷ್ಟ ಮಂಡಳದವರು ಕಳೆದ ೩ ನ ದಿವಸ ಸಂಜೆಯಲ್ಲಿ ಗಿರಣಿ ಸಂಘದ ಒಡೆ ಯರನ್ನು ಅವರ ಕಚೇರಿಯಲ್ಲಿ ಕಾಣತಕ್ಕವರಿ ದ್ದಾರೆ (ಅ ಪ್ರೆ)

ಗಿರಣಿ ಶಿಷ್ಟಮಂಡಲದವರು ಮಹಾತ್ಮರನ್ನು ಕಂಡರು.

ಮುಂಬಯಿ ತಾ|| ೧೯— ಅಹಮ್ಮದಾ ಬಾದದ ಗಿರಣಿ ಒಡೆಯರ ಶಿಷ್ಟಮಂಡಲದವರು ಕಳೆತ್ತಿನ ದಿವಸ ಮುಂಜಾನೆ ಮಹಾತ್ಮರನ್ನು ಕಂಡು, ಕಸ್ತು ಹಾಗು ಕೂಲಿಕಾರ ಸಂಘದ ನ [illegible] ದ ಸಂಬಂಧವಾಗಿ ಮಹಾತ್ಮರೊ ಡನೆ ವಿಚಾರವಿನಿಮಯ ಮಾಡಿದರು ಶ್ರೀ ಕಸ್ತೂರಭಾಯಿ ಲಾಲಭಾಯಿಯವರು ಈ ಶಿಷ್ಟ ಮಂಡಲದ ನೇತೃತ್ವ ವಹಿಸಿದ್ದರು ಈ ವಿಚಾ ರವಿನಿಮಯದ ಕಾಲದಲ್ಲಿ ಅಹಮ್ಮದಾಬಾದದ ಕೂಲಿಕಾರ ಮುಖಂಡರಾದ ಶ್ರೀ. ಶಂಕರಲಾಲ ಬ್ಯಾಂಕರ ಮೊದಲಾದವರೂ ಬಂದಿದ್ದರು ವಾ ದ ಬಗೆಹರಿಯಿತೋ ಇಲ್ಲವೋ ತಿಳಿದು ಬಂ ದಿಲ್ಲ (ಅ ಪ್ರೆ)

ಮುಂಬಯಿ ತಾ|| ೧೯—ಅಹಮ್ಮದಾಬಾ ದ ಗಿರಣಿ ಒಡೆಯರ ಶಿಷ್ಟಮಂಡಲದವರು ಕೂ ಲಿಗಾರ ಚಳವಳಿಯ ಸಂಘಟಕರಾದ ಶ್ರೀ ಶಂ ಕರಲಾಲ ಬ್ಯಾಂಕರ ಇವರ ಇದಿರಿನಲ್ಲಿ ಮಹಾ ತ್ಮರ ಮುಂದೆ ತಮ್ಮ ಹೇಳಿಕೆಯ ಸ್ಪಷ್ಟಪಡಿಸಿ ದರು ಮಹಾತ್ಮರು ಜಗಳವನ್ನು ಬಗೆಹರಿ ಸಿಕೊಳ್ಳಲು ಚವ ಸಲಾಲ ಪರೀಖ ಹಾಗು ಶಂ ಕರಲಾಲ ಬ್ಯಾಂಕರ ಇವರ ಶಾಂತಿಮಂಡಲವ ನ್ನು ಏರ್ಪಡಿಸಿಕೊಳ್ಳಲು ಸೂಚಿಸಿದರು ಈ ವಂಶ ಜನಿಗೆ ಉಭಯಪಕ್ಷ ಒಪ್ಪಿದರೆ ಈ ಮಂಡಲದವರಿಗೆ ನ್ಯಾಯವನ್ನು ಬಗೆಹರಿಸುವ ದುರ್ಲಗದೆ ಇದ್ದಲ್ಲಿ ಆಮೇಲೆ ಸ್ವತಃ ಮಹಾ ತ್ಮರೇ ವಿಚಾರ ಮಾಡುವರು (ಅಪ್ರೆ)

ಗಾಂಧಿ—ಪುರುಷೋತ್ತಮದಾಸರ ಭೆಟ್ಟಿ.

ಮುಂಬಯಿ ತಾ|| ೧೯— ಮಹಾತ್ಮರು ಕಳೆತ್ತಿನ ದಿವಸ ಮಧ್ಯಾಹ್ನದಲ್ಲಿ ಸರ್ ಪುರು ಷೋತ್ತಮದಾಸ ಠಾಕುರದಾಸ ಇವರನ್ನು ಕಾ ಣತಕ್ಕವರಿದ್ದಾರೆ (ಅ ಪ್ರೆ)

ಮಹಾತ್ಮರು ಅಹಮ್ಮದಾಬಾದಕ್ಕೆ

ಮುಂಬಯಿ ತಾ|| ೧೯- ಮಹಾತ್ಮಾ ಗಾಂಧಿಯವರು ನಾಳಿನ ದಿವಸ ರಾತ್ರಿ ಗುಜರಾ ಥ ವಿದ್ಯಾಪೀಠ ಗ್ರಂಥಾಲಯದ ಹೊಸ ಕಟ್ಟಡ ದ ತಳಹದಿಯನ್ನು ಕೂಡಿಸಲು ಅಹಮ್ಮದಾ ಬಾದಕ್ಕೆ ಪ್ರಯಾಣ ಮಾಡುವರು ಅಲ್ಲಿಯ ಕಾರ್ಯಕ್ರಮವನ್ನು ಮುಗಿಸಿಕೊಂಡು ಶುಕ್ರ ವಾರ ದಿವಸ ಮುಂಜಾನೆ ಅವರು ತಿರುಗಿ ಮುಂ ಬಯಿಗೆ ಬರುವರು (ಅ ಪ್ರೆ)

ಮಹಾತ್ಮರು ವರ್ಧಾದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವರು.

ಮುಂಬಯಿ ತಾ|| ೧೯— ಮಹಾತ್ಮರು ಅಹಮ್ಮದಾಬಾದದ ಕಾರ್ಯವನ್ನು ಮುಗಿಸಿ ಕೊಂಡು ತಿರುಗಿ ಮುಂಬಯಿಗೆ ಬಂದ ನಂತರ ಮುಂಬಯಿಯಲ್ಲಿ ಒಂದು ದಿವಸ ನಿಂತು, ಆ ಮೇಲೆ ವರ್ಧಾಕ್ಕೆ ಪ್ರಯಾಣ ಮಾಡುವರು ಅ ಲ್ಲಿ ಅವರು ತಮ್ಮ ಪ್ರಕೃತಿಯನ್ನು ಸುಧಾರಿಸಿ ಕೊಳ್ಳಲು ಒಂದು ತಿಂಗಳವರೆಗೆ ಸಂಪೂರ್ಣ ವಿ ಶ್ರಾಂತಿ ತೆಗೆದುಕೊಳ್ಳುವರು (ಅ ಪ್ರೆ)

ಹಾಯಕೋರ್ಟಿನಲ್ಲಿ ರಾಷ್ಟ್ರಧ್ವಜ.

ಅಲಹಾಬಾದ ತಾ|| ೧೫ ಓರ್ವ ಕಾಂ ಗ್ರೆಸ್ ಸ್ವಯಂಸೇವಕನು ಕಳೆತ್ತಿನ ದಿವಸ ಮುಖ್ಯ ನ್ಯಾಯಾಧೀಶರಾದ ಮಿ ರಚಪಾಲಸಿಂ ಗ ಇವರ ಕೋರ್ಟಿನಲ್ಲಿ ಸದ್ದಿಲ್ಲದೆ ಪ್ರವೇಶಮಾ ಡಿ ಅಲ್ಲಿ ರಾಷ್ಟ್ರಧ್ವಜವನ್ನು ಹಚ್ಚಿ, "ಇನ್‌ಕ್ವಿ ಲಾಬ ಝಿಂದಾಬಾದ" ಎಂದು ಕೂಗಿದನು. ಅಲ್ಲಿಯ ಓರ್ವ ಮುಸಲ್ಮಾನನ ಅಧಿಕಾರಿಯು, ಕೂಡಲೆ ಅವನ ಬಾಯಿಯನ್ನು ಮುಚ್ಚಿ ಒದರು ವದನ್ನು ನಿಲ್ಲಿಸಿದನು ನಂತರ ಅವನ ಮೇಲೆ ಖಟ್ಲೆ ನಡೆದು, ಅವನಿಗೆ ೫೦ ರೂ. ದಂಡ ಇಲ್ಲ ವೆ ೧ ತಿಂಗಳ ಕೈದು ಹೀಗೆ ಶಿಕ್ಷೆಯಾಯಿತು

ಗಾಂಧಿ-ರಂಗಸ್ವಾಮಿ ಸಂಭಾಷಣ

ಮುಂಬಯಿ ತಾ ೧೯— ಮದ್ರಾಸದ ಮಿ ರಂ ಗಸ್ವಾಮಿ ಅಯ್ಯಂಗಾರರು ಗಾಂಧಿ ಹಾಗು ಇವಾಹಿರ [illegible] ರಾಜಕೀಯ ಸಂಭಾಷಣ ಮುಗಿಸಿ, ಮಧ್ಯಾಹ್ನ ದಲ್ಲಿ ಮದ್ರಾಸಕ್ಕೆ ಹೊರಟು ಹೋದರು ಪ್ರಯಾಣ ದ [illegible] ವಲ್ಲಿ ಎ ಸ ಎಸ್ [illegible] ಅವರು ಅವರಿಗೆ ಉಪಹಾರ ಕೊಟ್ಟರು [illegible] ರು ರಂಗಸ್ವಾಮಿಯವರು ಮಹಾತ್ಮರು ಹಾಗು ಬ್ರಿಟಿಶ ಸಂಪ್ರದಾಯದವರು ಇಬ್ಬರಿಗೂ ಹೊಂದಿಕೊಂಡಿರು ಅರು ವದರಿಂದ, ಅವರಿಂದ ದೇಶಕ್ಕೆ ಹಿತ್ಯಾದ ಲಾಭವಾಗಬ ಹುದೆಂದು ಹೇಳಿದರು

ಸರ್ವ್ಹಂಟ್ಸ ಆಫ್ ಇಂಡಿಯಾ ಸೊಸಾಯಟಿಯ ಲಬಲೆಯವರು ಕಳೆತ್ತು ಮಹಾತ್ಮರೊಡನೆ ಸ್ವಲ್ಪ ಹೊತ್ತು ರಾಜಕೀಯ ವಿಷಯಗಳ ಬಗ್ಗೆ ಚಚೆ ಮಾಡಿ ದರು ಅ ಪ್ರೆ

ಮಿ. ಆ್ಯಂಡ್ರ್ಯೂಜರ ಪ್ರಯಾಣ

ಮುಂಬಯಿ ತಾ ೧೯ ಮಿ ಸಿ ಎಫ್ ಆ್ಯಂ ಡ್ರ್ಯೂಜರು ವಯಲಿಟಿಜಾ ಹಡಗದಿಂದ ಸೆಪ್ಟಂಬರ ೧೯ನೆ ತಾರೀಖಿನ ದಿವಸ ಲಂಡನಕ್ಕೆ ಹೊರಡತಕ್ಕವರಿದ್ದಾರೆ ಅವರು ಜಾನೇವರಿ ಕೊನೆಯ ವರೆಗೆ ಅಲ್ಲಿ ಇದ್ದು, ಆ ಮೇಲೆ ಶಾಂತಿನಿಕೇತನಕ್ಕೆ ಹಿಂತಿರುಗುವರು

ಪಾಟಣಾ ತಾ|| ೧೬— ದೀನಾಪೂರದ ಹೆಗ್ಗಯ [illegible] ಜನ ಕೆಲಸಗಾರರು ಅಲ್ಲಿಯ ಅನೇಕ ವ್ಯಕ್ತಿ ಕಾಯದೆಭಂಗದ ಬಗ್ಗೆ ಉಪದೇಶ ಮಾಡುತ್ತ ನಡೆ ದಿದ್ದರು ಪೋಲೀಸ ಅಧಿಕಾರಿಗಳು ಅಲ್ಲಿಗೆ ಹೋಗಿ ಎಂಟರನ್ನು ಸೆರೆ ಹಿಡಿದರು

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ| ೧೯

ಜವಾರಿ ಹತ್ತಿ	೧೦೫
ಅಕ್ಲಂಡ ಹತ್ತಿ	೧೦೩-೧೦೫
ವಿಲಾಯತಿ ಹತ್ತಿ	೯೭-೯೮
ನ್ಯೂಕ್ರಾಸ ಹತ್ತಿ	೧೦೩-೧೦೪
ಜೀನ ಅರಳಿ	೭೮ ೮೦
ಡಬ್ಬಲ್ ರೂಲ ಅರಳಿ	೭೩-೭೫
ಸಾಜಿನ ಅರಳಿ	೭೮-೭೦
ಜೋಳ	೧೨ ೧೪
ಗೋದಿ	೬|-೭|||
ಹೆಸರು ಜವಾರಿ	೯||-೧೪
ಉದ್ದು	೬|
ಕಡ್ಲಿ	೬
ಕುಸಬಿ	೧೧-೧೧|
ಔಡಲ	೧೦
ಅಗಸಿ	೭
ಬೆಳ್ಳಿ ಭಂಗಾರ	
ಭಂಗಾರ	೩೩|
ಬೆಳ್ಳಿ	[illegible]

[illegible]

ಸೋಮವಾರ ಸಂಜೆಯಲ್ಲಿ ಇಲ್ಲಿಯ ರಾ ಜಾ ಲಖಮನಗೌಡಾ ಸರದೇಸಾಯಿ ಹಾಯ ಸ್ಕೂಲಿನಲ್ಲಿ ಬೆಳಗಾಂವಿಯ ಲಿಂಗರಾಜ ಆರ್ಟ್ಸ ಕಾಲೇಜದ ಇಂಗ್ಲೀಷ ಪ್ರೊಫೆಸರರಾ ಶ್ರೀ ಶ್ರೀನಿವಾಸ ಅಯ್ಯಂಗಾರ ಇವರು "ವಾಙ್ಮಯ ವಿನೋದ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು

ನವಲಗುಂದ ಮುನಸಿಪಾಲಟಿಯ ಸೆಕ್ರೆ ಟರಿಯಾದ ಶಿಪ್ಪಾಬೆರಿ ವ ಸರದೇಶಪಾಂಡೆ ಇವ ರ ಮೇಲೆ ಮುನಸಿಪಾಲಟಿಯ ಹಣವನ್ನು ಎತ್ತಿ ಹಾಕಿದ ಬಗ್ಗೆ ಖಟ್ಲೆ ನಡೆದಿತ್ತಷ್ಟೆ ಸೆಶನ್ಸ ಜಡ್ಜ ರಾದ ಮಿ [illegible] ನ ಇವರು ಮೊನ್ನಿನ ದಿವಸ ತೀ ರ್ಪು ಹೇಳಿ, ಅಪರಾಧಪರು ಹಾಗು ಖೊಟ್ಟಿ ಸಹಿಯ ಬಗ್ಗೆ ಕೂಡಿ, ಆರೋಪಿಗೆ ೨೫ ವರ್ಷ ಕೈದು ಹಾಗು ೫೦೦ ರೂಪಾಯಿ ದಂಡ ಹೀಗೆ ಶಿಕ್ಷೆ ವಿಧಿಸಿದರು. ಸರಕಾರದ ಪರವಾಗಿ ಸರ ಕಾರಿ ವಕೀಲರಾದ ಶ್ರೀ ಸಾವುಕಾರರು, ಮ್ಯುನ ಸಿಪಾಲಟಿಯ ಪರವಾಗಿ ಶ್ರೀ ಗಿರಿಮಲ್ಲಪ್ಪ ನವಲ ಗುಂದ ವಕೀಲರೂ ಆರೋಪಿಯ ಪರವಾಗಿ ಶ್ರೀ ಕಬ್ಬೂರ ಹಾಗು ಗದುಗಿನ ಸ್ವಾಮಿರಾವ ಜೋಶಿ ಯವರೂ ಕೆಲಸ ನಡಿಸಿದ್ದರು

ನಾಟಕಪ್ಪದ ಇಂದಿನ ಕಾರ್ಯಕ್ರಮ

ನಾಟಕಾಲಂಕಾರ ಶ್ರೀ ಗರೂಡ ಸದಾಶಿವ ರಾಯರು ನಾತಪಟ್ಟ ಮಂಡಳದ ಪರವಾಗಿ ಸಾ ಯಂಕಾಲ ೬| ಗಂಟೆಗೆ ಇಲ್ಲಿಯ ಮುನಸಿಪಾಲ ಟಿ ಆಫೀಸಿನಲ್ಲಿ "ಕನ್ನಡನಾಡಿನ ನಾಟ್ಯರಂಗ" ಎಂಬ ವಿಷಯದ ಮೇಲೆ ಭಾಷಣ ಮಾಡುವರು

ಬೈಲಹೊಂಗಲದಲ್ಲಿ ಇಬ್ಬರಿಗೆ ಶಿಕ್ಷೆ

ಬೈಲಹೊಂಗಲ ತಾ ೧೮— ತಾ. ೧೫ನೇ ದಿ ವಿಠ್ಠಲ ಜಯಾಕರ ಮತ್ತು ಓರ್ವ ಸ್ವಯಂಸೇವಕರು ರಾಷ್ಟ್ರಧ್ವಜವನ್ನು ಮೆರಿಸುತ್ತ, ಜಯಜಯಕಾರ ಮಾಡು ತ್ತ ಬೀದಿಗುಂಟ ನಡೆದಿದ್ದರು ಪೋಲೀಸರು ಅವರ ನ್ನು ಸೆರೆಹಿಡಿದು ಖಟ್ಲೆ ಗುದರಿಸಿದರು ಮಾಜಿ ಸ್ಟ್ರೇಟರು ಪ್ರತಿಯೊಬ್ಬರಿಗೆ ೩ ತಿಂಗಳ ಶಿಕ್ಷೆ ವಿಧಿಸಿ ದರು.

ಪ್ರೊ. ಸುದರ್ಶನದಾಸರು

ಶ್ರೀ ಆರ್ ಎಸ್ ವಾಗಳೆಯೆಂಬವರೊ ಬ್ಬರು ನಮಗೆ ಇಂಗ್ಲೀಷಿನಲ್ಲಿ ಒಂದು ಪತ್ರ ಬರೆ ದು ಈ ಊರಲ್ಲಿ ಪ್ರೊ ಸುದರ್ಶನದಾಸ ಎಂಬ ವರು ಮಾಡಿ ತೋರಿಸಿದ ಶಕ್ತಿ ಪ್ರಯೋಗಗಳ ನ್ನು ಕುರಿತು ಟೀಕಿಸಿರುವರು ಅದರ ಸಾರಾಂಶ ವೇನಂದರೆ— "ಪ್ರೊ ಸುದರ್ಶನದಾಸ ಇವರು ಶಕ್ತಿ ಪ್ರಯೋಗಗಳೆಂದು ಮಾಡಿ ತೋರಿಸುವ ಕೆಲವು ಪ್ರಯೋಗಗಳು ನಿಜವಾಗಿ ಶಕ್ತಿ ಪ್ರಯೋ ಗಗಳಾಗಿರದೆ, ಯುಕ್ತಿ ಪ್ರಯೋಗಗಳಾಗಿರುತ್ತವೆ ಯೋಗಬಲದಿಂದ ಅವರು ಹಾಗೆ ಮಾಡುತ್ತಾ ರೆಂದು ಜನರು ತಿಳಿಯಕೂಡದು, ಹೋದ ಸಲ ಅವರು ಹರಿದ ಸರಪಳಿಯು ನಿಜವಾಗಿ ಗಟ್ಟಿ ಸರಪಳಿ ಯಿದ್ದಿಲ್ಲವೆಂಬುದನ್ನು ಪ್ರಸಂಗ ಬಂದರೆ ನಾನು ಸಿದ್ಧಮಾಡಿ ತೋರಿಸಬಲ್ಲೆನು!

ಇವರ ಸತ್ಯಾಸತ್ಯತೆಯನ್ನು ಕುರಿತು ಜನ ರು ವಿಚಾರ ಮಾಡಬೇಕು ಸಂಪಾದಕ'

ಕನ್ನಡಿಗ.

ಧಾರವಾಡ— [illegible] ತಾರೀಖು [illegible]

ಖಾದಿಯ ಜಯಂತ್ಯುತ್ಸವವು.

ಗಾಂಧಿಯವರ ಜಯಂತ್ಯುತ್ಸವದ ನಿಮಿತ್ತವಾಗಿ ಖಾದಿ ಖಾತೆಯು ಕರ್ನಾಟಕ ಖಾತೆಯವರು ೨೦—೯—೩೩ ರಿಂದ ೩—೧೦—೩೩ ರವರೆಗೆ ಖಾದಿ ಪ್ರಸಾರವನ್ನು ವಿಶೇಷ ಜೋರಿನಿಂದ ಮಾಡುವುದನ್ನು ಗೊತ್ತುಪಡಿಸಿ, ಎರಡು ವಾರಗಳ ವರೆಗೆ ಖಾದಿಯ ದರವನ್ನು ರೂಪಾಯಿಗೆ ಒಂದು ಆಣೆಯಂತೆ ಇಳಿಸಿರುತ್ತಾರೆ. ಖಾದಿಯ ವಿಷಯವಾಗಿ ಹೊಸದಾಗಿ ಹೇಳಬೇಕಾದುದೇನೂ ಈಗ ಉಳಿದಿಲ್ಲ. ಮಾಡಬೇಕಾದುದು ಮಾತ್ರ ಬಹಳೇ ಉಳಿದಿದೆ. ಖಾದಿಗೆ ಇತ್ತೀಚೆಗೆ ಇಳಿಗಾಲವು ಬಂದಿದೆ. ದೇಶದಲ್ಲಿಯ ರಾಜಕೀಯ ಪರಿಸ್ಥಿತಿಯು ಒಂದು ಕಾರಣ. ಹಿಂದೀ ಗಿರಣೀಕಾರರ ಮಲಾಶೆಯು ಮತ್ತೊಂದು ಕಾರಣ. ವಿಲಾಯತಿ ಮತ್ತು ಜಪಾನ ಅರಿವೆಗಳ ಸ್ಪರ್ಧೆಯು ಮೂರನೆಯ ಬಲವತ್ತರವಾದ ಕಾರಣ. ಇವೆಲ್ಲ ಶತ್ರುಗಳ ಕೈಯೊಳಗಿಂದ ಪಾರಾಗಿ, ಬದುಕಿ ಬೆಳೆಯಬೇಕಾಗಿದ [illegible] ಖಾದಿ [illegible] ತಮ್ಮ ಪವಿತ್ರ ಧರ್ಮವೆಂದೇ ಭಾವಿಸಿ ಅದನ್ನು ಕೊಳ್ಳುವವರದೊಂದು ವರ್ಗವು [illegible] ಖಾದಿಯು ಹೊರಡುತ್ತದೆ. ಖಾದಿಯಲ್ಲಿ ಅನೇಕ ನಮೂನೆಯ ಸುಂದರ ಅರಿವೆಗಳು ಹುಟ್ಟುತ್ತವೆ ಆದಕಾರಣ ಈಗ ಆ ದರ ಕಡೆಗೆ [illegible] ಕೊಡುವವರಿಗೂ ಅದನ್ನು ಕೊಳ್ಳಲು ಹಿಂಜರಿಯುವ ಕಾರಣವಿಲ್ಲ. ಆದರೆ ನಾವು [illegible]ವೇನಂದರೆ— ಅವೆಲ್ಲ ಕಾರಣಗಳು ಗೌಣ ಕಾರಣಗಳು ನಾವು ನಿಮಗೆ ಹೇಳುವುದು "ಖಾದಿಯು ನಮ್ಮದು" ಎಂದೇ ಅದನ್ನು ಕೊಳ್ಳಿರಿ. ಅದು ಒರಟಿರಬಹುದು ತುಟ್ಟಿಯಿರಬಹುದು. ಆದರೂ ಅದನ್ನು ಕೊಳ್ಳುವುದರಲ್ಲಿ ಶಕ್ಯವಿದ್ದಷ್ಟು ಸ್ವಾರ್ಥತ್ಯಾಗ ಬುದ್ಧಿಯನ್ನು ಸಂಪಾದಿಸಿರಿ. ಈಗಿನ ಕಠಿಣ ದಿನಗಳಲ್ಲಿ, ಅದರಲ್ಲಿಯೂ ಜಪಾನ ದೇಶವು ಅತ್ಯಂತ ಅಗ್ಗವಾಗಿ ಮಾರುವ ಈಗಿನ ಕಾಲದಲ್ಲಿ ಬಡವರಿಗೆ ತುಟ್ಟಿಯಾದ ಖಾದಿಯನ್ನು ಕೊಳ್ಳಿರೆಂದು ಹೇಳುವುದು ಅನ್ಯವಹಾರ್ಯವೇನೂ ಕೆಲವರಿಗೆ ತೋರಬಹುದು. ಆ ತರಹದ ಆಕ್ಷೇಪವನ್ನು ನಾವು ಸಹಿಸಿಯೂ ಅವಷ್ಟು ಮಟ್ಟಿಗೆ ಖಾದಿಯನ್ನೇ ಕೊಳ್ಳಿರೆಂದು ನಾವು ಹೇಳುವವರು. ಇದಕ್ಕೆ ಮತ್ತೇನೂ ಕಾರಣವಿಲ್ಲ. ನಮ್ಮ ದೇಶವು ಅರಿವೆಯ ವಿಷಯದಲ್ಲಿ ಪೂರ್ಣ ಸ್ವರಾಜ್ಯವನ್ನು ಸಂಪಾದಿಸಬೇಕಾದರೆ ನಾವು ಖಾದಿಗೆ ಶರಣು ಹೋಗದೆ ನಿರ್ವಾಹವಿಲ್ಲ. ನಮ್ಮ ದೇಶದ ಗಿರಣಿಗಳಲ್ಲಿ ಹೊರಡುವ ಅರಿವೆಗಳೂ ಅಲ್ಪ ಸ್ವಲ್ಪ ಸ್ವದೇಶಿ ಅರಿವೆಗಳೇನೋ ಸರಿ. ಆದರೆ ಅವು ಖಾದಿಗೆ ಸಹಕಾರಿಯಾಗಿ ನಿಂತರೆ ಮಾತ್ರವೇ ಅವುಗಳಿಗೆ ನಾವು ಇಂಬುಗೊಡಬೇಕಲ್ಲದೆ, ಅವು ಖಾದಿಯನ್ನು ಮೂಲೆಗುಂಪಾಗಿ ಮಾಡುತ್ತಿದ್ದರೆ, ಅವನ್ನು ಸರ್ವಥಾ ಬರಗೊಡಬಾರದು. ಈಗ ಖಾದಿಗೆ ಆ ಬಗೆಯ ಅಂಜಿಕೆಯುಂಟು. ಆದಕಾರಣ, ನಾವು ಸರ್ವರಿಗೂ ಎಚ್ಚರಕೊಡುವುದೇನಂದರೆ, ದೀರ್ಘ ದೃಷ್ಟಿಯನ್ನಿಟ್ಟು ನೀವು ಖಾದಿಯನ್ನೇ ಕೊಳ್ಳಿರಿ. ಇದು ಗಾಂಧಿಯವರ ಜಯಂತ್ಯುತ್ಸವವು ಮಾತ್ರವಲ್ಲದೆ ಖಾದಿಯ ಜಯಂತ್ಯುತ್ಸವವೆಂದೇ ಭಾವಿಸಿರಿ. ಏಕೆಂದರೆ, ಖಾದಿ ಮತ್ತು ಗಾಂಧಿ ಇವೆರಡು ಅದಲು ಬದಲು ಮಾಡಲಿಕ್ಕೆ ಬರುವ ಶಬ್ದಗಳು

ಕಿರಿನುಡಿಗಳು.

ಬಂದುಸ್ಥಾನದಲ್ಲಿ ರಾಷ್ಟ್ರೀಯತ್ವದ ಕಲ್ಪನೆಯು ಹೊಂಟ [illegible] ಕಳವಾಣದ ಮೇಲೆ ಆಗಿಹೋಗಿದ್ದರೂ, ಇನ್ನೂ ವರೆಗೆ [illegible] ಎನ್ನುವವರಿಗೆ ಅದರ ನಿಜವಾದ ಅರ್ಥವು ಹೊಳೆಯದಿರುವುದು ನಮ್ಮ ದುರ್ದೈವವು. ಇದರ ಅಚ್ಚ ಹೊಸ ಉದಾಹರಣೆಯೆಂದರೆ [illegible] ಮದ್ರಾಸ ಕಾಲೇಜಿನ [illegible] ಕರ್ನೂಲ, ಬಳ್ಳಾರಿ ಮತ್ತು ಅನಂತಪುರ ಈ ಐದು ಜಿಲ್ಲೆಗಳಿಗೋಸ್ಕರ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಉದ್ದೇಶದಿಂದ ಮದ್ರಾಸ ಲೆಜಿಸ್ಲೆಟಿವ ಕೌನ್ಸಿಲಿನ ಅಧ್ಯಕ್ಷರೂ, ಸರಕಾರದವರೂ ಮದ್ರಾಸ ಕಾಯದೆಮಂಡಳದಲ್ಲಿ ಶ್ರೀವೆಂಕಟೇಶ್ವರ ಯುನಿವ್ಹರ್ಸಿಟಿ ಬಿಲ್ ಎಂಬುದೊಂದು ಕಾಯದೆ ಮಸೂದೆಯನ್ನು ತರಬೇಕೆಂದು ೧೮—೯—೩೩ನೆ ದಿವಸ ಒಂದು ಗೊತ್ತುವಳಿಯನ್ನು ಮಾಡಿಕೊಂಡಿದ್ದು. ಈ ಐದು ಜಿಲ್ಲೆಗಳಲ್ಲಿ ಭಾಷೈಕ್ಯವಿಲ್ಲ, ಸಂಸ್ಕೃತಿಯ ಐಕ್ಯವಿಲ್ಲ. ಅಲ್ಲದೆ ಈ ಐದೇ ಜಿಲ್ಲೆಗಳಿಗೆ ಮಾತ್ರವೇ ತಿರುಪತಿಯ ವೆಂಕಟೇಶ್ವರ ನಿಧಿಯ ಸಂಬಂಧವೇನೋ ತಿಳಿಯದಂತಾಗಿದೆ. ವಿಶ್ವವಿದ್ಯಾಲಯದ ಹೊಸ ಕಲ್ಪನೆಯೆಂದರೆ ಭಾಷಾನ್ವಯ ವಿಶ್ವವಿದ್ಯಾಲಯಗಳನ್ನು ಹೊರಡಿಸುವುದು. ಇದರಿಂದಲೇ ರಾಷ್ಟ್ರೀಯತ್ವವು ಬೆಳೆಯುತ್ತದಲ್ಲದೆ ಮಿಕ್ಕ ಯಾವ ಬಗೆಯ ವಿಶ್ವವಿದ್ಯಾಲಯದಿಂದಲೂ ಅದು ಸಾಧ್ಯವಿಲ್ಲ. ಅಂದಬಳಿಕ ತೆಲಗು-ಕನ್ನಡ-ಮಿಶ್ರವಾದಂಥ ಹಂಚಿಕೆಯ ವಿಶ್ವವಿದ್ಯಾಲಯಗಳ ಹುಚ್ಚು ಕಲ್ಪನೆಯೂ ತಿರುಪತಿಯ ಮನ್ನಿಸಿಪಲ ಕೌನ್ಸಿಲದ ತಲೆಯಲ್ಲಿ ಏಕೆ ಸೇರಿತೋ ದೇವರೇ ಬಲ್ಲ.

ಬಾಗಲಕೋಟೆಯ ಪತ್ರ.

ಬಾಗಲಕೋಟೆ ತಾ॥ ೧೬—

ಊರಲ್ಲಿ ಪ್ಲೇಗಿನ ಉಪದ್ರವವು ಆರಂಭವಾಗಿದೆ. [illegible] ಇಲಿ ಬೀಳುವದಲ್ಲದೆ ಈ ವಾರ ಆ ಬೇನೆಯಿಂದ ಮೃತಪಟ್ಟರು. ಊರ ಓಣಿಗಳಲ್ಲಿಯೂ ಇಲಿಗಳು ಬೀಳುತ್ತಿರುವವು. [illegible] ತಪ್ಪಿಸಿಕೊಳ್ಳುವದು ಕಷ್ಟಕಟ್ಟಿಗೆ ಆಗಿದೆ. ಆದರೆ ಮ್ಯುನಿಸಿಪಾಲಿಟಿಯವರು ಯಾವ ಪ್ರತಿಬಂಧಕ ಉಪಾಯಗಳನ್ನು ಯೋಜಿಸದೆ ಇನ್ನೂ ಸ್ವಸ್ಥ ನಿದ್ರಿಸುತ್ತಿರುವರು.

ನಾಡಹಬ್ಬದ ಸಿದ್ಧತೆಯು ಉತ್ಸಾಹದಿಂದ ನಡೆದಿದೆ. ವ್ಯಾಖ್ಯಾನಕ್ಕಾಗಿ ಆಲೂರ ವೆಂಕಟರಾಯರು, ಮಳಿಯೆ ಗೋವರ್ಧನರಾಯರು, ಪ್ರೊ. [illegible], ಭಟ್ಟಿಗೇರಿ ಕೃಷ್ಣಶರ್ಮಾ, ಶ್ರೀಮತಿ ಗಿರಿಜಾಬಾಯಿ ಇಳ್ಳಿಗಿಮಠ, ಕೇಶವರಾವ ಗೋಖಲೆ, [illegible]

[illegible] ಮೇಲೆ ಪ್ರೋತ್ಸಾಹ [illegible] ಸಂಚಾರ ಶಿಬಿರದ [illegible] ನಡೆಯುತ್ತಿದೆ

[illegible] ಸಂಘವು [illegible] ಕಾರ್ಯವನ್ನು [illegible] ಮಾಡಿದೆ. ಅದರ ಬಗ್ಗೆ [illegible] ಕಾರ್ಯದರ್ಶಿಗಳಾದ [illegible] ಟಗೇರಿ ಆಚಾರ್ಯರಿಗೆ ಅದರ ಸಂಚಾಲನೆಯನ್ನು ಮಂಡಲದವರು ಒಪ್ಪಿಸಿದ್ದಾರೆ. ಸಂಘವು ಸದ್ಯಕ್ಕೆ ಎ. ಆಯ್. ಎಸ್. ಎ. ಕೆಲಸಗಾರರಿಗೆ ಉತ್ತಮ ತರದ ಹಂಜಿಗಳನ್ನು ಪೂರೈಸಿಕೊಡುವ ಕಾರ್ಯವನ್ನು ಕೈಕೊಂಡಿದೆ.

ಇಲ್ಲಿಯ ಭಗಿನಿ ಮಂಡಳದಲ್ಲಿ ಒಂದು ಜಗಳ ಎದ್ದಿತ್ತು. ಭಗಿನಿ ಮಂಡಲದ ಹೆಸರು ದಿಕ್ತಿನ್ನು ಬದಲು ಮಾಡಬೇಕೆಂದು ಕೆಲ ಸಾಂಸ್ಕೃತ ಮಹಿಳೆಯರ ಯತ್ನ ನಡೆದಿತ್ತು. ಆದರೆ ಮೊನ್ನೆ ೮ನೇ ತಾರೀಖಿನ ದಿವಸ ಕೂಡಿದ ಅವರ ಸಾಧಾರಣ ಸಭೆಯಲ್ಲಿ ಬಹುಮತದಿಂದ ಹಾಗೆ ಮಾಡಬಾರದೆಂದು ನಿರ್ಣಯವಾಯಿತು.

ಗಾಂಧಿ ಜಯಂತಿಯಲ್ಲಿ ಹೆಚ್ಚಾಗಿ ಖಾದಿಯನ್ನು ಮಾರುವ ಬಗ್ಗೆ ಖಾದಿ ಪ್ರೇಮಿಗಳು ಪ್ರಯತ್ನ ನಡಿಸಿರುವರು.

ಧರ್ಮವೀರ ಆಟ್ಟಿ, ಕಮಲಾಚಾರ್ಯರು ವಿಜಾಪುರ ಜೇಲಿನಿಂದ ಬಿಡುಗಡೆ ಹೊಂದಿದ್ದು ಇನ್ನೆರಡು ದಿವಸಕ್ಕೆ ಇಲ್ಲಿಗೆ ಬರತಕ್ಕವರಿದ್ದಾರೆ. ಇವರು ಪ್ರಾಣೋತ್ಕ್ರಮಣವಾದರೂ ಚಿಂತೆಯಿಲ್ಲ, ಧರ್ಮಶಕ್ತಿಗಳನ್ನೂ, ಶೀಲವನ್ನೂ ಅತಿಕ್ರಮಿಸಲಿಕ್ಕಾಗದೆಂದು ೪ ತಿಂಗಳು ಬಾಯಲ್ಲಿ ಹನಿ ನೀರು ಹಾಕದೆ ಕಾರಾಗೃಹದಲ್ಲಿ ಕಾಲ ಕಳೆದರು. ಆಚಾರ್ಯರ ದರ್ಶನ ಲಾಭವನ್ನು ಜನರು ಆನಂದದಿಂದ ಕಾಯುತ್ತಿರುವರು.

ಬಳ್ಳಾರಿಯ ಪತ್ರ.

ಬಳ್ಳಾರಿ ತಾ॥ ೧೬—

ಗಾಂಧಿ ಜಯಂತಿ— ಜಿಲ್ಲಾ ಅಸ್ಪೃಶ್ಯ ಸೇವಾ ಸಂಘದವರು ಹರಿಜನ ಶಾಲೆಗಳಲ್ಲಿಯೂ, ಭಜನಾ ಮಂದಿರಗಳಲ್ಲಿಯೂ, ಪ್ರಾರ್ಥನೆ, ಭಜನೆಗಳನ್ನು ಏರ್ಪಡಿಸಿ ಮಕ್ಕಳಿಗೆಲ್ಲ ಮಿಠಾಯಿ ಹಂಚಿದರು. ಹರಿಜನ ಬಾಲ-ಬಾಲೆಯರು ಈ ದಿನ (೧೬—೯—೩೩) ಶನಿವಾರ ಹಿಂದೂ ಪಂಚಾಂಗದ ಪ್ರಕಾರ ಗಾಂಧಿಯವರ ಜನ್ಮದಿನವಾದ್ದರಿಂದ ಸ್ನಾನವಮಾಡಿ, ಶುಭ್ರವಸ್ತ್ರಧಾರಿಗಳಾಗಿ ಗಾಂಧಿ ಪ್ರಾರ್ಥನೆಯಲ್ಲಿ ಭಾಗ ತೆಗೆದುಕೊಂಡರು.

ಪುರಸಭೆ— ೧೬—೯—೩೩ ನೇ ಪುರಸಭೆಯಲ್ಲಿ ಮಳೆಯ ಅನಾಹುತದಲ್ಲಿ [illegible] ಬಂದೆಪಟ್ಟವರಿಗೆ ಸಹಾಯ ಮಾಡಲು ೨೦೦ ರೂಪಾಯಿ ಮಂಜೂರ ಮಾಡಿದರು. ಪುರಸಭೆಯ ಮೇಲ್ವಿಚಾರಣೆಗೆ ಸರಕಾರದವರು ಕಮೀಶನರನ್ನು ಕಳುಹಿಸಬಾರದೆಂದು ಠರಾಯಿಸಿದರು. ಚೀಫ ಮಿನಿಸ್ಟರರನ್ನು ಕಾಣಲು ಒಂದು ಡೆಪ್ಯುಟೇಶನ್ ಇಷ್ಟರಲ್ಲಿಯೇ ಹೊರಡುವದಿದೆ.

ಹರಿಜನ ಬಾಲಿಕಾಶಾಲೆಯು— ಈ ಊರಿನ ಮಹಿಳಾ ಹಿತವಾದಿ ಮಂಡಲದಿಂದ ನಡೆಯುತ್ತಿದ್ದ ಹರಿಜನ ಬಾಲಿಕಾ ಶಾಲೆಗೆ [illegible] ಇಸ್ಸಲಾಂಡ (ದಕ್ಷಿಣ ಆಫ್ರಿಕಾ) ಹಿಂದೂ ಮಂಡಲದವರು ೧೦೦ ರೂಪಾಯಿ ಕಳುಹಿಸಿರುವರು. ಈ ಊರಿನ ಹರಿಜನ ಸೇವಾ ಸಂಘದವರು ಶ್ರೀ ಠಕ್ಕರರವರಿಗೆ ಬರೆದಿದ್ದರು. ಅವರ ಮೂಲಕ ಈ ದಾನವು ಸಿಕ್ಕಿದೆ.

ಆಂಧ್ರದ "ಕೃಷ್ಣದೇವರಾಯ"— ಅನಂತಪುರದ ಆಂಧ್ರರೂ, ಪರಸ್ಥಳದಿಂದ ಬಂದ ಕೆಲವು ಆಂಧ್ರರೂ ಕಲೆತು, ಕೃಷ್ಣದೇವರಾಯ ಗ್ರಂಥಮಾಲೆಯನ್ನಾರಂಭಿಸಿ, ತೆಲುಗು ಪುಸ್ತಕಗಳನ್ನು ಪ್ರಸಿದ್ಧಪಡಿಸಲಿರುವರು. ಬಳ್ಳಾರಿ [illegible] ಊರ ತಹಶೀಲದಾರರಾದ ಶ್ರೀರಂಗ ಬ್ರಹ್ಮರವರೇ ಈ ಗ್ರಂಥಮಾಲೆಯ ಅಧ್ಯಕ್ಷರು. ಮೇಲೆ ಪ್ರೋತ್ಸಾಹಕ್ಕೇನು ಕಡಿಮೆ?

ತಾ॥ ೧೬ನೇ ದಿವಸ ಈ ಗ್ರಂಥಮಾಲೆಯ ವಾರ್ಷಿಕೋತ್ಸವವಾಯಿತು. ಅನಂತಪುರದಿಂದ, ಕರ್ನೂಲಿನಿಂದ ಶ್ರೀ ಹರಿ ಸರ್ವೋತ್ತಮರಾಯರೂ ಬಂದಿದ್ದರು. ಮುಖ್ಯ ಉಪನ್ಯಾಸಕರಾದ ಶ್ರೀ ಸರ್ವೋತ್ತಮರಾಯರು ಕೃಷ್ಣದೇವರಾಯನು ಆಂಧ್ರನಿದ್ದನೆಂಬುದನ್ನೂ [illegible] ಯು ರಾಯಲಸೀಮೆಗೆ ಸೇರಬೇಕಾಗಿರುವ [illegible]ಯವನ್ನೂ ತೆಲಗಿನಲ್ಲಿ ವರ್ಣಿಸಿದರು. [illegible] ಳದ ಅನೇಕರ ಭಾಷಣಗಳಾದವು. [illegible] ದಕ್ಕೆ ಕೂಡ ಪ್ರಾಶಸ್ತ್ಯ ಕೊಡಲಿಕ್ಕೆ [illegible] ಹೇಳಿದುದು ಸ್ತುತ್ಯ! ಬೆಕ್ಕಿನಾಶ್ರಯದಲ್ಲಿಯ ಬಾಳ್ವೆ ಹೇಗೋ ತಿಳಿಯದು! ವಿಶೇಷ [illegible] ಕೆಯು ಅನಾವಶ್ಯಕ. ಕನ್ನಡಿಗರು ಎಚ್ಚ[illegible] ಳ್ಳಬೇಕು.

ಹುಬ್ಬಳ್ಳಿಯ ಪತ್ರ.

ಇಲ್ಲಿ ನೇ. ಶಾಮದಾರ ಗಸ್ತ[illegible] ಬಂದಾಗ್ಗೆ ಸೆಟಲ್‌ಮೆಂಟವನ್ನು [illegible] ಹೋಗುವರಂತೆ. ಅದಕ್ಕಾಗಿ ಈಗಿನಿಂದ[illegible] ಕದ ಬೀದಿಯ ಮೇಲೆ ಹಳ್ಳ ಹಾಕಿ [illegible] ನೆಟ್ಟಗೆ ಮಾಡುವದು ನಡೆದಿದೆ. [illegible] ದೇ ಇರಲಿ, ಬೀದಿಯು ನೆಟ್ಟಗಾದರೆ ಸಾಕು[illegible]

ಇಲ್ಲಿಯ ನಾಡಹಬ್ಬಕ್ಕೆ ಶ್ರೀಯುತ[illegible] ರಾಜಪುರೋಹಿತ, ಕೃಷ್ಣಶರ್ಮಾ ಬೆಟ[illegible] ಸಾಲಿ, ಕೇಶವರಾವ ಗೋಖಲೆ, ಕೃಷ್ಣ[illegible] ಮುದವೀಡು, ಸದಾಶಿವರಾವ ಗರೂಡ, [illegible] ಕೃಷ್ಣರಾವ ಬೆಳವಿ, ಪ್ರೊ. ಕುಮ್ಮಣ್ಣಶೆಟ್ಟಿ[illegible] ರು ಬರುವರಾಗಿ ತಿಳಿಯುತ್ತದೆ. ಬೆಂಗ[illegible] ಶ್ರೀಮತಿ ಉಡಿಪಿ ಲಕ್ಷ್ಮೀಬಾಯಿಯವ[illegible] ಬಿತಣ ಹೋಗಿದೆ.

ಇಲ್ಲಿಯ ವಿಜಯನಗರ ಸ್ಮಾರಕ ಸ[illegible] ನಿಧಿಗೆ ತಮ್ಮದೊಂದು ಧರ್ಮಾರ್ಥ ಪ್ರ[illegible] ಮಾಡಿ ಸಹಾಯ ಮಾಡಲು ಪ್ರೊ. ಸು[illegible] ದಾಸ, ಎಂ. ಎಸ್‌ಸಿ ಇವರಿಗೆ ಸ್ಮಾರಕ[illegible] ದವರು ವಿನಂತಿ ಮಾಡಿಕೊಂಡಿರುವರು.

ಇಲ್ಲಿಯ ಪ್ರಸಿದ್ಧ ಶ್ರೀಮಂತರಾದ [illegible] ರಾಮಚಂದ್ರನಾಯಕ ಗೋವಿಂದ[illegible] ಕಲಘಟಗಿ ಎಂಬ ಲಕ್ಷಾಧೀಶರು ಕ್ಷಯ[illegible] ಯಿಂದ ಪೀಡಿತರಾಗಿದ್ದರು. ಅವರು [illegible] ಮುಂಬಯಿಗೆ ಹೋದಾಗ ಅಲ್ಲಿಯೇ ಮೃ[illegible] ಟ್ಟರೆಂದು ಸುದ್ದಿ ಬಂದಿದೆ

ಶೀಘ್ರದಲ್ಲಿ ಇಲ್ಲಿಂದ "ಶಿಕ್ಷಕ ಬ[illegible]" ಎಂಬ ಮಾಸ ಪತ್ರಿಕೆಯು ಹೊರಡತಕ್ಕದ್ದಿ[illegible]

ಮೋಡವು ಒಂದೇ ಸವನೆ ಕವಿದಿದ್ದು [illegible] ಳೆಯು ಸಣ್ಣ ಕೆಳಕಾಗಳು ಆಗಾಗ್ಗೆ ಬೀ[illegible] ಲಿವೆ. ಹವೆಯು ತಂಪಾಗಿದೆ. ಎಲ್ಲಿ ನೋ[illegible] ಕೆಸರು—ಕೆಮ್ಮು—ನೆಗಡಿ!

ಬೆಳಗಾಂವಿಯ ಸುದ್ದಿ.

ಹಿಂಡಲಗಿ ಜೇಲಿನಲ್ಲಿ ಶಿಕ್ಷೆ [illegible] ಸುತ್ತಿರುವ ಧಾರವಾಡದ ಶ್ರೀ [illegible] ಅಗಳಗಟ್ಟಿಯವರು ತಾ॥ ೩೦ ನೇ ದಿವಸ[illegible] ಯ ಅವಧಿಯನ್ನು ಮುಗಿಸಿಕೊಂಡು ಬಿ[illegible] ಡುಗಡೆಹೊಂದತಕ್ಕವರಿದ್ದಾರೆ.

ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರು [illegible] ಕೆಲಸದ ನಿಮಿತ್ತವಾಗಿ ಜೇಲಿನಲ್ಲಿ ಉ[illegible] ಕೈಕೊಂಡಿದ್ದರಷ್ಟೆ. ಆದರೆ ಈಗ ಅವರ[illegible] ಕೆಯ ಮನ್ನಿಸಲ್ಪಟ್ಟಿರುವದಾದ್ದರಿಂದ [illegible] ಉಪವಾಸವನ್ನು ಮುರಿದಿರುವರೆಂದು [illegible] ತ್ತದೆ. ಶ್ರೀ ಗುದ್ಲೆಪ್ಪನವರು ಒಟ್ಟು [illegible] ನ ಉಪವಾಸ ಮಾಡಿದರು.

ರಿಝರ್ವ್ ಬ್ಯಾಂಕ ಮಸೂದೆಯ ಸಿಲೆಕ್ಟ ಕಮಿಟಿಯ ಸಭಾಸದರು.

ಸಿಮಲಾ ತಾ|| ೧೮— ಅಸೆಂಬ್ಲಿಯಲ್ಲಿ ಈ ಹೊತ್ತಿನ ದಿವಸ ಪ್ರೆಸಿಡೆಂಟರಾದ ಸರ್ ಷಣ್ಮುಖಂ ಚೆಟ್ಟಿಯವರು, ಸರ್ ಜಾರ್ಜ ಶುಸ್ಟರ ಇವರು, ರಿಝರ್ವ್ ಬ್ಯಾಂಕ ಮಸೂದೆಯ ಸಿಲೆಕ್ಟ ಕಮಿಟಿಗೆ ಅಸೆಂಬ್ಲಿ ಸಭೆಯಲ್ಲಿದ್ದ ಕೆಳಗಿನ ಸಭಾಸದರು ಆರಿಸಲ್ಪಟ್ಟಿರುವರೆಂದು ತಿಳಿಸಿದರು. ಅವರೆಂದರೆ—

೧ ಸರ್ ಜಾರ್ಜ ಶುಸ್ಟರ
೨ ಸರ್ ಆ ವಿಜಯ ಅಯ್ಯಂಗಾರ

(ಸ್ವತಂತ್ರ ಪಕ್ಷ)

೩ ಎಸ್. ಸಿ ಮಿತ್ರ ,,
೪ ಅಝುರ ಅಲ್ಲಿ ,,
೫ ವಿದ್ಯಾಸಾಗರ ಪಾಂಡ್ಯ ,,
೬ ಗಯಾಪ್ರಸಾದ ಸಿಂಗ (ರಾಷ್ಟ್ರೀಯ ಪಕ್ಷ)
೭ ಭೂಪತಸಿಂಗ ,,
೮ ಬಿ ದಾಸ (ಡೆಮಾಕ್ರ್ಯಾಟಿಕ ಪಕ್ಷ)
೯ ಸರದಾರ ಸಂತಸಿಂಗ ,,
೧೦ ಯಾಮೀನಖಾನ (ಮುಸಲ್ಮಾನ ಪಕ್ಷ)
೧೧ ಎಸ್ ಆರ್. ಪಂಡಿತ (ಮಧ್ಯವರ್ತಿ ಪಕ್ಷ)
೧೨ ಸರ್. ಅಬ್ದುಲ್ಲಾ ಸುಹ್ರವರ್ದಿ
೧೩ ಸರದಾರ ಹಿಹಾಲಸಿಂಗ
೧೪ ಸರ್ ಲೆಸ್ಲಿ ಹಡಸನ್

(ಯುರೋಪಿಯನ್ ಸಂಗಡ)

ಕೌನ್ಸಿಲ್ ಆಫ್ ಸ್ಟೇಟದಲ್ಲಿ ಈ ಹೊತ್ತಿನ ದಿವಸ ಫಾಯನಾನ್ಸ ಸೆಕ್ರಟರಿ ಟೇಲರ ಇವರು ಕೌನ್ಸಿಲ್ ಆಫ್ ಸ್ಟೇಟಿನಿಂದ ಮೇಲಿನ ಕಮಿಟಿಗೆ ಕೆಳಗಿನವರು ನಿಯಮಿಸಲ್ಪಟ್ಟಿರುವರೆಂದು ತಿಳಿಸಿದರು. ಅವರೆಂದರೆ ೧ ಬಿ. ಕೆ ಬಸು. ೨ ಚಾಂಡೆಸಿಂಗ ೩ ಮಲಿಕ ಹಯಾತಖಾನ ೪ ಅಣ್ಣಾಮಲೈ ಚೆಟ್ಟಿಯರ್ ೫ ಜಿ. ನಾರಾಯಣಸ್ವಾಮಿ ಚೆಟ್ಟಿ ೬ ಸಯ್ಯದ ಮಹದ ಪಾದಶಹಾ ೭ ಸರ್ ಹೋರ್ಮಸಜಿ ಮೆಹತಾ ೮ ಪಿಠಾಪೂರ ರಾಜರು ೯ ಮಹಮ್ಮದ ಸುಹ್ರವರ್ದಿ ೧೦ ಜೆ. ಎಚ್. ಹೆಂಡರಸನ್ ೧೧ ರಾಯಬಹದ್ದೂರ ಮಥುರಾಪ್ರಸಾದ ಮೆಹ್ರೋತ್ರಾ ೧೨ ರಾಜಾರಾಮ ಶರಣದಾಸ ೧೩ ಸಯ್ಯದ ಹುಸೇನ ಇಮಾಮ ೧೪ ಮಿ ಟೇಲರ, ಫಾಯನಾನ್ಸ ಸೆಕ್ರಟರಿ

(ಅ ಪ್ರ)

ಮಿದನಾಪುರದಲ್ಲಿ ನಿರ್ಬಂಧಗಳ ಜಾರಿಗೆ

ಮಿದನಾಪುರ ತಾ|| ೧೮— ಈ ದಿನದ ವಿಶೇಷ ಗ್ಯಾಝೆಟ್‌ದಲ್ಲಿ ಮಿದನಾಪುರ ಜಿಲ್ಹೆಯ ಸಲುವಾಗಿ ತಾ|| ೧೬ನೆ ದಿವಸ ಕೊಡಲ್ಪಟ್ಟ ಪ್ರಕಟನೆಯಲ್ಲಿಯ ನಿರ್ಬಂಧಗಳ ರೂಪರೇಷೆಗಳು ಪ್ರಸಿದ್ಧ ಮಾಡಲ್ಪಟ್ಟಿವೆ. ಈ ನಿರ್ಬಂಧಗಳು ಏನೆಂದರೆ— ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಯಾರಿಗೆ ಹೇಳುವರೋ ಅವರು ಒಂದು ತಿಂಗಳವರೆಗೆ ತಮ್ಮ ಮನೆಯನ್ನು ಬಿಟ್ಟು ಹೊರಬೀಳತಕ್ಕದ್ದಲ್ಲವೆಂದು ಅಪ್ಪಣೆ ಮಾಡಬಹುದು. ಮತ್ತು ಅಂತಹ ಹಾದಿಯಿಂದ ಅಲ್ಲದೆ ಅಂತಹ ವಾಹನದಿಂದ ಸಂಚರಿಸತಕ್ಕದ್ದಲ್ಲವೆಂದು ಆಜ್ಞೆ ವಿಧಿಸಬಹುದು. ಪ್ರತಿಯೊಬ್ಬರು ತಮ್ಮ ಜಾತಿ, ತಮ್ಮ ಉದ್ಯೋಗ, ಮತ್ತು ತಮ್ಮ ಪಿಂಗಳ ಪತ್ರ ಸಾದವಾಗಿಯೇ ಉಡುಪುಗಳನ್ನು ಧರಿಸಬೇಕೆಂತು ನಿರ್ಬಂಧ ಮಾಡಲ್ಪಟ್ಟಿದೆ. ಈ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸಿದವರಿಗೆ ಹೆಚ್ಚೆಂದರೆ ೬ ತಿಂಗಳ ಕೈದು, ಅಲ್ಲವೆ ದಂಡ ಅಲ್ಲವೆ ಕೈದು ಹಾಗು ದಂಡ ಇವೆರಡನ್ನೂ ವಿಧಿಸುತ್ತಾರೆಂದು ಹೇಳಲಾಗುತ್ತದೆ. - (ಅ ಪ್ರ)

ಹಿಂದುಸ್ಥಾನ

ಹೊನ್ನಿನ ಹೊಳೆ—ತಾ| ೧೬ಕ್ಕೆ ಮುಗಿಯುವ ಒಂದು ವಾರದಲ್ಲಿ ಒಟ್ಟು ೯೨ ಲಕ್ಷ ೪೫ ಸಾವಿರ ೭೭ ರೂಪಾಯಿಯ ಭಂಗಾರವು ಮುಂಬಯಿಯಿಂದ ಪರದೇಶಕ್ಕೆ ಹೋಯಿತು. ಇಂಗ್ಲಂಡವು ಸುವರ್ಣ ಪರಿಮಾಣವನ್ನು ಬಿಟ್ಟಂದಿನಿಂದ ಈ ವರೆಗೆ ಒಟ್ಟು ೧ ಅಬ್ಜ ೮೭ ಕೋಟಿ ೨೪ ಲಕ್ಷ ೨೭ ಸಾವಿರ ೧೨೩ ರೂಪಾಯಿ ಭಂಗಾರವು ಇಲ್ಲಿಂದ ಪರದೇಶಕ್ಕೆ ಹೋಗಿರುತ್ತದೆ.

೫೦ ಜನರ ಮುಸಲ್ಮಾನರಾದರು — ಮೋಪ್ಲಾಫಿಲ್ ಇಸ್ಲಾಮ ಸಭೆಯವರು ಆಗಸ್ಟ ತಿಂಗಳದಲ್ಲಿ ಒಟ್ಟು ೩೪ ಗಂಡಸರು ಮತ್ತು ೧೬ ಸ್ತ್ರೀಯರಿಗೆ ಮುಸಲ್ಮಾನ ಧರ್ಮದ ದೀಕ್ಷೆಯನ್ನು ಕೊಟ್ಟರು.

ಅಸೆಂಬ್ಲಿಯಲ್ಲಿ ಖಾದಿಯ ಮಾರಾಟ— ಗಾಂಧಿ ಜಯಂತಿ ನಿಮಿತ್ತವಾಗಿ ಅಸೆಂಬ್ಲಿಯ ಓರ್ವ ಸಭಾಸದರಾದ ಗಯಾ ಪ್ರಸಾದಸಿಂಗರು ತಾ॥ ೧೬ನೆ ದಿವಸ ಕೆಲವರನ್ನು ಕೂಡಿಕೊಂಡು ಅಸೆಂಬ್ಲಿ ಸಭಾಸದರಲ್ಲಿ ಖಾದಿಯ ಮಾರಾಟ ಮಾಡಿದರು

ಮಹಾತ್ಮರು ಮಿದನಾಪುರಕ್ಕೆ ಹೋಗಬೇಕು— ಕಲಕತ್ತೆಯ "ಸ್ಟಾರ ಆಫ್ ಇಂಡಿಯಾ" ಪತ್ರದಲ್ಲಿ ಮಹಾತ್ಮರು ಹಾಗು ಪಾರ್ಲಿಮೆಂಟಿನ ಸಭಾಸದರಾದ ಮಿ. ಹೆಲ್ಸ ಇವರ ಪತ್ರವ್ಯವಹಾರವು ಪ್ರಸಿದ್ಧವಾಗಿದೆ ಮಿ ಹೆಲ್ಸ ಇವರು ತಮ್ಮ ಪತ್ರದಲ್ಲಿ ಮಹಾತ್ಮರಿಗೆ "ನೀವು ಮಿದನಾಪುರದಲ್ಲಿ ಹೋಗಿ ವಾಸ ಮಾಡಬೇಕು ಅಂದರೆ ಅಲ್ಲಿಯ ಪರಾಕ್ರಮ ಅತ್ಯಾಚಾರ ವೃತ್ತಿಯು ಇಲ್ಲದಂತಾಗುವದು" ಎಂದು ಸೂಚಿಸಿದ್ದಾರೆ

ಆಗಸ್ಟ ೩೧ನೆ ತಾರೀಖಿನ ದಿವಸ ಮಹಾತ್ಮರಿಗೆ ಬರೆದ ಪತ್ರದಲ್ಲಿ ಅವರು ಅನ್ನುವದೇನಂದರೆ— ನೀವು ನಿಮ್ಮ ವೃದ್ಧಾಪ್ಯದಲ್ಲಿ ಸೆರೆಮನೆಯನ್ನು ಸೇರುವದು ನನ್ನ ದೃಷ್ಟಿಯಿಂದ ಅಪರಾಧವಾಗಿ ತೋರುತ್ತದೆ ನೀವು ಸೆರೆಮನೆಯಿಂದ ಹೊರಗೆ ಉಳಿಯುವದರಿಂದ ಆಗುವಷ್ಟು ಲಾಭವು ಸೆರೆಮನೆಯೊಳಗೆ ಹೋದರೆ ಆಗುವದಿಲ್ಲ. ಈ ಸಮಯದಲ್ಲಿ ಜನರಿಗೆ ನಿಮ್ಮ ಸಲಹೆಯು ಅವಶ್ಯವಿದೆ ನೀವು ಯಾವತ್ತು ಪಕ್ಷಗಳಲ್ಲಿ ಸಂಘಟನೆ ಮಾಡಿ, ಬ್ರಿಟಿಶ ಸಾಮ್ರಾಜ್ಯದಲ್ಲಿ ಮಿತ್ರತ್ವದಿಂದ ಉಳಿಯಲು ಕಲಿಸಬೇಕು. ಮಿತ್ರರ ಸಲುವಾಗಿ ಆದರೂ ಸೆರೆಮನೆಗೆ ಹೋಗಬೇಡಿರಿ.

ಮಹಾತ್ಮರು ಈ ಪತ್ರಕ್ಕೆ ಉತ್ತರರೂಪವಾಗಿ ಬರೆದುದೇನಂದರೆ— ಸೆರೆಮನೆಗೆ ಹೋಗಬೇಕೆಂಬ ಇಚ್ಛೆಯಿಂದ ನಾನು ಸೆರೆಮನೆಗೆ ಹೋಗುತ್ತಿರುವದಿಲ್ಲ ಸಹಕಾರದ ಬಗ್ಗೆ ಪ್ರಯತ್ನಿಸುತ್ತಿರುವಾಗ ಸೆರೆಮನೆವಾಸವು ಘಟಿಸಿದರೆ ಅದನ್ನು ಸ್ವಸಂತೋಷದಿಂದ ಸ್ವೀಕರಿಸುತ್ತೇನೆ

ಮುಲತಾನ ಸೆರೆಮನೆಯಲ್ಲಿ ಅನ್ನತ್ಯಾಗ

ಇಲ್ಲಿಯ ಹಳೇ ಸೆಂಟ್ರಲ್ ಸೆರೆಮನೆಯಲ್ಲಿಯ ರಾಜಕೀಯ ಕೈದಿಗಳು ಅನ್ನತ್ಯಾಗವನ್ನು ಪ್ರಾರಂಭ ಮಾಡಿ ಇಂದಿಗೆ ೧೫ ದಿನಗಳಾದವು ಈ ಕೈದಿಗಳಲ್ಲಿ ಕಾಮಾಗಾಟಾ ಮಾರೂದ ಹರನಾಮಸಿಂಗ, ಭಗತಸಿಂಗ ಒಳಸಂಚಿನ ಖಟ್ಲೆಯ ಪಂಡಿತ ಕಿಶೋರಿಲಾಲ ಮತ್ತು ಭಾಯಿ ಕರ್ತಾರಸಿಂಗ. ಪ್ಯಾರಾಸಿಂಗ, ಚೇತಸಿಂಗ, ಸುರೇಣಸಿಂಗ, ಮಾನಸಿಂಗ ಮೊದಲಾದವರು ಇರುತ್ತಾರೆ ಇವರಲ್ಲಿ ನಾಲ್ವರ ಸ್ಥಿತಿಯು ಚಿಂತಾಜನಕವಾಗಿದೆ ಸೆರೆಮನೆಯಲ್ಲಿಯ ಅನ್ನವು ಚನ್ನಾಗಿರುವದಿಲ್ಲವೆಂದು ಈ ಕೈದಿಗಳ ತಕರಾರು ಇದೆ ಈ ಸತ್ಯಾಗ್ರಹವು ಅಧಿಕಾರಿಗಳ ಕೆಲವೊಂದು ಹೊಸ ನಿಯಮಗಳನ್ನು ಮಾಡಿದ್ದರ ವಿರುದ್ಧವಾಗಿ ಇರುತ್ತದೆ

ನೋಟೀಸು

ಯಾವತ್ತು ಜನರಿಗೆ ತಿಳಿಸುವದೇನಂದರೆ, ನರಗುಂದದಲ್ಲಿ ತಾ|| ೨೦-೯-೩೩ ಇಸ್ವಿಯಿಂದಾ ತಾ|| ೨೮-೯-೧೯೩೩ ಇಸ್ವಿವರೆಗೆ ಯಾರೂ ಜಾತ್ರೆಯನ್ನು ಕೂಡಿಸಬಾರದು ಅಂತಾ ನಾಮದಾರ ಮುಂಬಯಿ ಸರಕಾರದವರು ಜ್ಯಾದಾ ಜಾಹೀರನಾಮೆಯನ್ನು ತೆಗೆದಿರುತ್ತಾರೆ ಮತ್ತು ಈ ಜಾತ್ರೆಯ ದೆಶಿಂದಾ ತಾ|| ೧೯-೯-೧೯೩೩ ಇಸ್ವಿಯಿಂದಾ ನರಗುಂದಕ್ಕೆ ಜಾತ್ರೆಯ ಸಲುವಾಗಿ ಯಾರೂ ಹೋಗಬಾರದಂತಾ ಮನಾಯಿ ಮಾಡಿರುತ್ತಾರೆ

L. N. Brown
18-9-1933 District Magistrate
Dharwar

ಬಾಸುತಕರ ಬ್ರದರ್ಸ

ಇವರ ಯಶವಂತ ಟೇಲರಿಂಗ ಫರ್ಮದಲ್ಲಿ ಯಾವತ್ತು ನಮೂನೆಯ ಫ್ಯಾಶನೇಬಲ್ ಅರಿವೆಗಳನ್ನು ಟಾಯಿಮ್‌ಶೀರ ಹೊಲಿದು ಕೊಡುತ್ತದೆ. ಗ್ರಾಹಕರು ತ್ವರೆಮಾಡಬೇಕು

೧೪-೯ ಬಾಸುತಕರ ಬ್ರದರ್ಸ
ಗುಳೇದಗುಡ್ಡ

ಕರ್ನಾಟಕ ವೈಭವ

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ.
ಸಂಪಾದಕರು:- ಮೊಹರೆ ಹಣಮಂತರಾಯರು

[illegible] ಸಂಗಪ್ಪ ಬಸವಂತ ಮುಗಳಿ [illegible] ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ನೋ. ಬಿ ೨೭೨೭ — यत् परवशं दुःखं । यदात्मवशं सुखम् ॥ मनु — ನಿತ್ಯಪತ್ರ ೧ ಬಿಲೆ ೩ ಪೈ

ಕನ್ನಡಿಗ

ಸಂಪಾದಕರು— ಆಲೂರ ವೆಂಕಟರಾಯರು.

ವರ್ಷ ೧೦] ಧಾರವಾಡ- ರವಿವಾರ ಆಶ್ವಿನ ಶುದ್ಧ ೪ ಶಕೆ ೧೮೫೧ ತಾ॥ ೨೭-೧೦-೨೯ [ಸಂಚಿಕೆ ೧೧೦

ಇನಸ್ಯುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಟೆಡ್
ಕರ್ನಾಟಕ ಇನಸ್ಯುರನ್ಸ
ಕಂಪನಿಯೇ
ಉತ್ತಮವಾದುದು

ಇನಸ್ಯುರನ್ಸ
...ಯುನಾಯಟೆಡ್
...ಇ. ಕಂ. ಲಿ.
ಧಾರವಾಡ
...ವಿಮೆ ಇಳಿಸಿರಿ

ಮದ್ರಾಸ ಇಲಾಖೆಯಲ್ಲಿ ಬಾಂಬಿನ ಸ್ಫೋಟ

ಮದ್ರಾಸ ತಾ ೧೧— ರವಿವಾರ ಪಟ್ಟಿಯ ಶ್ರೀಮತ್ ಪುತ್ತೂರು ಎಂಬಲ್ಲಿ ಪೋಲೀಸ ಠಾಣೆ, ಸಬ್ ಜೇಲ ಮತ್ತು ಇತರ ಸರಕಾರೀ ಅಧಿಕಾರಿಗಳು ಇರುವ ಸ್ಥಳದಲ್ಲಿ ಒಂದು ಕಟ್ಟಡದ ಮೇಲೆ ಬಾಂಬು ಒಗೆಯಲ್ಪಟ್ಟಿತು. ಸುದೈವದಿಂದ ಬಾಂಬು ಕಟ್ಟಡಕ್ಕೆ ಸ್ಪರ್ಶಿಸದೆ ಕೆಳಗೆ ಬಿದ್ದಿತು. ಕಾವಲುಗಾರನಿಗಾದ ಗಾಯವಾಗಿದೆ. ಪೋಲೀಸರು ಬಾಂಬಿನ ಸಪ್ಪಳ ಕೇಳಿ ಅಲ್ಲಿಗೆ ಬರುವದರೊಳಗಾಗಿ ಕಿಡಿಗೇಡಿಯು ಓಡಿ ಹೋಗಿದ್ದನು (ಅ ಪ್ರೆ)

ವ್ಹಾಯಿಸರಾಯರ ವಿಷಾದ ಪ್ರದರ್ಶನ

ಮದ್ರಾಸ ತಾ॥ ೨೧— ವ್ಹಾಯಿಸರಾಯರು ಜಿನರಾಜದಾಸ ಇವರಿಗೆ ತಾರು ಕಳಿಸಿ, ಡಾ. ಬಿಝಂಟ ಇವರ ನಿಧನದ ಸುದ್ದಿಯನ್ನು ಕೇಳಿ ತಮಗೆ ಬಹಳೇ ವಿಷಾದವಾಯಿತೆಂದೂ, ಅವರು ತಮ್ಮೊಡನೆ ಕೂಡಿ ನಡೆದಿದ್ದನ್ನು ತಾವು ಎಂದೂ ಮರೆಯುವಂತಿಲ್ಲವೆಂದೂ ವಿಷಾದ ವ್ಯಕ್ತ ಮಾಡಿದ್ದಾರೆ. (ಅ ಪ್ರೆ)

ಡಾ ಬಿಝಂಟರ ಬಗ್ಗೆ ಸರೋಜಿನಿ ದೇವಿಯವರ ಪ್ರಶಂಸೋದ್ಗಾರ

ಮದ್ರಾಸ ತಾ॥ ೨೧— ಸೌ. ಸರೋಜಿನಿ ದೇವಿ ನಾಯುಡು ಇವರು ಇಲ್ಲಿಗೆ ತಾರು ಮಾಡಿ, ಡಾ ಆನಿ ಬಿಝಂಟರ ಉತ್ಸಾಹವು ಹೊಗಳತಕ್ಕಂತಹದಿತ್ತೆಂದೂ, ಅವರು ತಮ್ಮ ಈ ಉತ್ಸಾಹದಿಂದ ಹಿಂದ ಸ್ಥಾನದ ಹೆಗ್ಗಳಿಯ ವಿಷಯಕ್ಕೆ ಹಿಂದೀ ಜನರಲ್ಲಿ ಹೆಚ್ಚಾದ ವಿಶ್ವಾಸವನ್ನು ಹುಟ್ಟಿಸಿದ್ದರೆಂದೂ ಧನ್ಯವಾದಗಳನ್ನು ಅರ್ಪಿಸಿದ್ದಾರೆ (ಅ ಪ್ರೆ)

ಕಲಾತದ ಖಾನರು.

ಸಿಮಲಾ ತಾ॥ ೨೧— ಹಿಂದ ಸ್ಥಾನ ಸರಕಾರದವರು ಒಂದು ಪ್ರಕಟಣೆ ಹೊರಡಿಸಿ, ಜಿರಗಾ ಕಲಾತ ಸರದಾರರ ಶಿಫಾರಸುಗಳ ಮೇರೆಗೆ ಗತಿಸಿದ ಖಾನರವರ ಎರಡನೆ ಚಿರಂಜೀವರಾದ ಕಹುದಾ ಆಹಮ್ಮದಯಾರ ಇವರನ್ನು ಕಲಾತದ ಖಾನರನ್ನಾಗಿ ನಿಯಮಿಸಿರುತ್ತದೆ ಎಂದು ಪ್ರಸಿದ್ಧ ಮಾಡಿರುತ್ತಾರೆ (ಅ ಪ್ರೆ)

ಮುಂಬಯಿ ಕಾರ್ಪೊರೇಶನದಲ್ಲಿ ವಿಷಾದ ಪ್ರದರ್ಶನ

ಮುಂಬಯಿ ತಾ॥ ೨೧— ಮುಂಬಯಿ ಕಾರ್ಪೊರೇಶನದ ಈ ಹೊತ್ತಿನ ಸಭೆಯಲ್ಲಿ ಮಿಸೆಸ ಬಿಝಂಟ ಇವರ ನಿಧನದಿಂದ ದೇಶಕ್ಕಾದ ಹಾನಿಯ ಬಗ್ಗೆ ದುಃಖವು ವ್ಯಕ್ತಮಾಡಲ್ಪಟ್ಟಿತು. ಯಾವ ಕಾರ್ಯವೂ ಜರುಗದೆ ಅದು ಮುಂದರಿಸಲ್ಪಟ್ಟಿತು.

ಮುಂಬಯಿ ಪೇಟೆಯಲ್ಲಿಯೂ ಅವರ ಪುಣ್ಯಸ್ಮರಣಾರ್ಥವಾಗಿ ಮುಚ್ಚಲ್ಪಟ್ಟಿತ್ತು (ಅ ಪ್ರೆ)

ಸರಹದ್ದದಲ್ಲಿ ಗೊಂದಲ

ಸಿಮಲಾ ತಾ॥ ೨೧— ಆಫ್ರೀದಿಯರು ಪುನಃ ಗೊಂದಲ ಮಾಡಲು ಶುರುವು ಮಾಡಿದರಿಂದ ನಿನ್ನಿನ ದಿವಸ ಗಂಡ ಪೊ ಬಿದಿಗಳನ್ನು ಎರಗು ಹಾಕುವರೆಗೆ ಕಾರ್ಯ ಮಾಡಿತು. ರಸ್ತೆ ಮತ್ತು ಶ್ಯಾಂಗ ಶಿಬಿರಗಳ ಮಧ್ಯದಲ್ಲಿ ಬೀದಿಯ ಸಂರಕ್ಷಣೆಗಾಗಿ ಇಡಲ್ಪಟ್ಟಿರುವ ಸೈನಿಕರಲ್ಲಿ ಮೂವರು ಮರಣಹೊಂದಿದ್ದು, ಒಬ್ಬನಿಗೆ ಗಾಯವಾಗಿದೆ. ಆಕಾಶ ಮಾರ್ಗದಿಂದ ದಾಳಿಗಾರರನ್ನು ಪತ್ತೆ ಹಚ್ಚುವದು ಇನ್ನೂ ಸಾಗಿದ್ದು ಮತ್ತಾವ ಅನಾಹುತವು ಸಂಭವಿಸಿರುವದಿಲ್ಲ. (ಅ ಪ್ರೆ)

ಸರ್ ಸೆಟನಾರವರು ವಿಲಾಯತಿಗೆ ಹೊರಟರು.

ಕರಾಚಿ ತಾ॥ ೨೦— ಸರ್ ಫಿರೋಜ ಸೆಟನಾ ಇವರು ಈ ಹೊತ್ತಿನ ದಿವಸ ಕಲಕತ್ತಾ ವಿಮಾನದಿಂದ ಇಲ್ಲಿಗೆ ಬಂದು, ಜಾಯಿಂಟ ಕಮಿಟಿಯ ಕಾರ್ಯದ ಸಲುವಾಗಿ ಟಪಾಲು ವಿಮಾನದಿಂದ ಕೂಡಲೆ ಲಂಡನಕ್ಕೆ ಪ್ರಯಾಣ ಮಾಡಿದರು

ಅಹಮ್ಮದಾಬಾದದಲ್ಲಿ ಕಾಯದೆಭಂಗ

ಅಹಮ್ಮದಾಬಾದ ತಾ॥ ೧೯— ಗುಜರಾಥ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಚೇರಿಯನ್ನು ಕೈವಶ ಮಾಡಿಕೊಳ್ಳಲು ಪ್ರಯತ್ನ ಮಾಡಿದ ಬಗ್ಗೆ ಈ ಹೊತ್ತಿನ ದಿವಸ ಇಬ್ಬರನ್ನು ಸೆರೆಹಿಡಿಯಿತು. ಈ ಸುದ್ದಿಯು ಪೋಲೀಸರಿಗೆ ಮೊದಲೇ ತಿಳಿದು ಬಂದಿದ್ದರಿಂದ ಅವರು ಮುಂಗಡವಾಗಿ ಅಲ್ಲಿಗೆ ಹೋಗಿ ಕುಳಿತುಕೊಂಡಿದ್ದರು

ಜಾಯಿಂಟ ಕಮಿಟಿಯ ಹಿಂದೀ ಪ್ರತಿನಿಧಿಗಳ ನಿಷೇಧ

ಅಲಹಾಬಾದ ತಾ॥ ೨೦— ಅಖಿಲ ಭಾರತ ಸ್ವಾತಂತ್ರ್ಯ ಸಂಘದ ಕಾರ್ಯಕಾರೀ ಮಂಡಲದವರು ಮೊನ್ನಿನ ತಮ್ಮ ಸಭೆಯಲ್ಲಿ, ಬಿಳೀ ಕಾಗದದಲ್ಲಿಯ ಸೂಚನೆಗಳು ಪಾರ್ಲಮೆಂಟ ರಾಜ್ಯಪದ್ಧತಿಗೆ ವ್ಯತಿರಿಕ್ತವಾದವುಗಳಿವೆಯೆಂದು ನಿಷೇಧ ಮಾಡಿ, ಜಾಯಿಂಟ ಕಮಿಟಿಯಲ್ಲಿ ಭಾಗ ತೆಗೆದುಕೊಂಡ ಹಿಂದೀ ಪ್ರತಿನಿಧಿಗಳ ಬಗ್ಗೆ ತಿರಸ್ಕಾರ ವ್ಯಕ್ತಮಾಡಿದರು.

ಪಂ. ಜವಾಹಿರರಿಗೆ ಅಧ್ಯಕ್ಷಪದ.

ಆಕ್ಟೋಬರ ೭ನೆ ತಾರೀಖಿನ ದಿವಸ ಅಕೋಲಾದಲ್ಲಿ ವರ್‍ಹಾಡ ಪ್ರಾಂತಿಕ ಯುವಕ ಪರಿಷತ್ತು ನೆರೆಯತಕ್ಕದ್ದಿದ್ದು, ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಪಂಡಿತ ಜವಾಹಿರ ಅವರಿಗೆ ಆಮಂತ್ರಣ ಕೊಟ್ಟಿರುತ್ತದೆ.

ಲೇಡಿ ವುಯಿಲಿಂಗಡನ್ನರಿಗೆ ಸವಡು ಇಲ್ಲ.

ಸಿಮಲಾ ಖಾದಿ ಭಂಡಾರದ ಮ್ಯಾನೇಜರರು ಲೇಡಿ ವುಯಿಲಿಂಗಡನ್ನರಿಗೆ ಒಂದು ಪತ್ರವನ್ನು ಬರೆದು "ನೀವು ಕಸ್ತೂರಿಬಾಯಿಯವರ ಮುಂದೆ ಖಾದಿ ನಿಮ್ಮ ಭೆಟ್ಟಿಗೆ ಬಂದಾಗ ಖಾದಿಯ ಸೀರೆಯನ್ನು ಕೊಂಡುಕೊಳ್ಳುವ ಬಗ್ಗೆ ಇಚ್ಛೆಯನ್ನು ವ್ಯಕ್ತ ಮಾಡಿದ್ದಿರಿ. ಈಗ ಗಾಂಧಿ ಜಯಂತಿಯ ನಿಮಿತ್ತ ಭಾಂಡಾರದಲ್ಲಿ ಬೇರೆ ಬೇರೆ ತರದ ಸೀರೆಗಳನ್ನು ಕೇಳಿಸಿರುತ್ತದೆ. ಅವುಗಳನ್ನು ನಿಮಗೆ ತೋರಿಸಲು ಬರಬೇಕನ್ನುತ್ತೀರೆ ತಿಳಿಸುವದಾಗಬೇಕು" ಎಂದು ಕೇಳಿಕೊಂಡಿದ್ದರು. ಈ ಪತ್ರಕ್ಕೆ ಅವರ ಪರವಾಗಿ ಅವರ ಕಾರ್ಯದರ್ಶಿಗಳಿಂದ ಲೇಡಿ ವುಯಿಲಿಂಗಡನ್ನರಿಗೆ ಈಗ ಸ್ವಲ್ಪವರೂ ಸವಡು ಇಲ್ಲವಾದ್ದರಿಂದ ಬೇಡಿಕೆಯನ್ನು ಅಲ್ಲಗಳೆಯಲು ವಿಷಾದವಾಗುತ್ತದೆ ಎಂಬ ಆಶಯದ ಉತ್ತರ ಬಂದಿದೆ

ಭೂಕಂಪದಿಂದ ೫೦೦೦ ಜನರು ಸತ್ತರು.

ಟೋಕಿಯೋ ತಾ॥ ೧೯— ಉತ್ತರ ಪೋರಮೋಸದ ಭಾಗದಲ್ಲಿ ತಾ॥ ೨೦ರಿಂದ ತಾ॥ ೨೧ನೆ ಆಗಸ್ಟದ ವರೆಗೆ ಮೇಲಿಂದ ಮೇಲೆ ಭೂಕಂಪ ಸಂಭವಿಸಿದ್ದರಿಂದ, ೫೦೦೦ ಜನರು ಪ್ರಾಣಕ್ಕೆ ಎರವಾಗಿರುವರೆಂದು ಸುದ್ದಿ ಬಂದಿದೆ. ಒಂದು ಪೋಲೀಸ ಚೌಕಿಯಲ್ಲಿಯ ಯಾವತ್ತೂ ಪೋಲೀಸರು ಕಲ್ಲುಗಳ ಹೊರತಕ್ಕೆ ಸಿಕ್ಕು ಮರಣ ಹೊಂದಿದರು

ಅಸೆಂಬ್ಲಿ ಸಭಾಸದರ ಆಕಸ್ಮಿಕ ಮರಣ.

ಸಿಮಲಾ ತಾ॥ ೧೯— ಅಸೆಂಬ್ಲಿಯ ಓರ್ವ ಸಭಾಸದರಾದ ಶ್ರೀ ಬಿ ಎನ್ ಮಿತ್ರ ಇವರು ಈ ಹೊತ್ತಿನ ದಿವಸ ಮುಂಜಾನೆ ಸ್ನಾನ ಮಾಡುತ್ತಿರುವಾಗ ಒಮ್ಮಿಂದೊಮ್ಮೆ ಮೂರ್ಛೆಹೊಂದಿ, ಹೃದಯವಿಕಾರದಿಂದ ಮರಣ ಹೊಂದಿದರು.

ಮತ್ತೆ ದಾಂಡೀ ಯಾತ್ರೆ

ಸುರತ— ಶಾಂತಿ ಪರೀಖ, ಜಯಂತಿ ಪರೀಖ ಮೊದಲಾದ ೬ ಜನ ಸ್ವಯಂಸೇವಕರು, ಶ್ರೀಮತಿ ಸೀತಾಬಹೆನ ಮಂಜಾಬಹೆನ ಎಂಬ ಇಬ್ಬರು ಸ್ತ್ರೀಯರು ದಾಂಡಿಯ ಕಡೆಗೆ ಹೊರಟಿದ್ದರು. ಪೋಲೀಸರು ಅವರನ್ನು ನವಸಾರಿ ಎಂಬಲ್ಲಿ ಸೆರೆ ಹಿಡಿದರು. ಇದಕ್ಕಿಂತ ಪೂರ್ವದಲ್ಲಿ ಇದೇ ಅಪರಾಧಕ್ಕೋಸ್ಕರ ಬೇರೆ ನಾಲ್ವರಿಗೆ ಶಿಕ್ಷೆಯಾಗಿದೆ.

ಹೊರಗಿಂತ ತುರಂಗವೇ ಒಳಿತು.

ಲ್ಯಾಲಪುರ— ಇಲ್ಲಿಯ ಕಾಂಗ್ರೆಸ ಕಮಿಟಿಯ ಸರ್ವಾಧಿಕಾರಿಯಾದ ಸರದಾರ ಹ. ಮದನಸಿಂಗ ಲಂಗಾ ಇವರು ಜಾಮೀನು ಕೊಡಲು ನಿರಾಕರಿಸಿದ್ದರಿಂದ, ಅವರಿಗೆ ೧ ವರ್ಷ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು. ಆಕ್ಷೇಪಕರವಾದ ಭಾಷಣ ಮಾಡಿದ್ದೇ ಇವರ ಅಪರಾಧ

ಪಿಕೆಟಿಂಗ ಚಳವಳಿ.

ಕಲಕತ್ತಾ— ಗಾಂಧಿ ಜಯಂತಿಯ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಶ್ರೀಮತಿ ಪ್ರಭಾನಲಿನಿ ಘಂಡ ಮತ್ತು ಬೇರೆ ಇವರು ಸ್ವಯಂಸೇವಕರಿಗೆ ಬೇರೆ ಬೇರೆ ತರದ ಶಿಕ್ಷೆ ವಿಧಿಸಲ್ಪಟ್ಟಿದೆ

ಸ್ವಾತಂತ್ರ್ಯ ಚಳವಳಿಗೆ ಜಿನೀವಾದ ಬೆಂಬಲ

ಜಿನೀವಾ ತಾ॥ ೧೯— ಹಿಂದೀ ಅಂತರರಾಷ್ಟ್ರೀಯ ಮಂಡಳದವರು ಪ್ರೊ. ಎಡ್ಮಂಡ ಪ್ರಿವ್ಹಟ್ ಇವರ ಅಧ್ಯಕ್ಷತೆಯ ಕೆಳಗೆ ಸಭೆಯಲ್ಲಿ ಕೂಡಿ, ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಡತಕ್ಕದ್ದೆಂದೂ, ಬ್ರಿಟಿಶ ಮತ್ತು ಹಿಂದೀ ರಾಷ್ಟ್ರೀಯ ಪಕ್ಷದವರ ಜಗಳವನ್ನು ರಾಷ್ಟ್ರಸಂಘಕ್ಕೆ ಒಪ್ಪಿಸಬೇಕೆಂದೂ, ಸರಹದ್ದ ಪ್ರಾಂತದಲ್ಲಿಯ ವಿಮಾನದಿಂದ ಬಾಂಬಿನ ಸುರಿವ ಕೆಲಸವನ್ನು ನಿಲ್ಲಿಸತಕ್ಕದ್ದೆಂದೂ ನಿರ್ಣಯ ಮಾಡಿಕೊಂಡರು

ಶ್ರೀ ಭೂಲಾಭಾಯಿ ದೇಸಾಯಿ ಇವರು ಸಾಲ್ಲೆ ಸೆಂಟ್ರಾಲ ಎಂಬಲ್ಲಿ ಭಾಷಣ ಮಾಡುವಾಗ ಕಾಂಗ್ರೆಸದ ಗುರಿಯನ್ನೂ ಮತ್ತು ಅದರ ಉದ್ದೇಶವನ್ನೂ ವಿವೇಚಿಸಿ ಹೇಳಿದರು.

ಈ ಸಭೆಯಲ್ಲಿ ಶ್ರೀ ಸುಭಾಷಚಂದ್ರ ಬೋಸರಾದರೂ ಭಾಷಣ ಮಾಡಿದರು.

ಆಲ್ ಇಂಡಿಯಾ ಕಾಂಗ್ರೆಸ ಕಮಿಟಿ ಕೂಡಿಸುವ ಬಗ್ಗೆ ಅರ್ಜಿ

ಮುಂಬಯಿ ತಾ॥ ೨೦— ಶ್ರೀ ಪುರುಷೋತ್ತಮದಾಸ ತ್ರಿಕಮದಾಸ, ಜಮನಾದಾಸ ದ್ವಾರಕಾದಾಸ ಮೊದಲಾದವರು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಸಭೆಯು ಕರೆಯಲ್ಪಡುವಂತೆ ಪ್ರಯತ್ನ ನಡಿಸಿರುತ್ತಾರೆ. ಈ ಬಗ್ಗೆ ಕಮಿಟಿ ಸಭಾಸದರಿಂದ ಅರ್ಜಿಯು ಬಂದಲ್ಲಿ ಸಭೆಯನ್ನು ಕರೆಯಲಾಗುವದೆಂದು ಪಂಡಿತ ಜವಾಹಿರರ ಆಶ್ವಾಸನ ದೊರೆತದ್ದರಿಂದ, ಅರ್ಜಿಯನ್ನು ತಯಾರ ಮಾಡಿ ಅದರ ಮೇಲೆ ಅಷ್ಟು ಜನ ಸಭಾಸದರ ಸಹಿಗಳನ್ನು ತೆಗೆದುಕೊಳ್ಳಲಾಗಿದೆ. ಈ ಅರ್ಜಿಯು ಇನ್ನು ಒಂದೆರಡು ದಿವಸಗಳಲ್ಲಿ ಪಂಡಿತ ಜವಾಹಿರರ ಕಡೆಗೆ ಕಳಿಸಲ್ಪಡುವದು.

ಕನ್ನಡಿಗ.

ಧಾರವಾಡ— ಶನಿವಾರ ತಾರೀಖು ೨೩—೯—೧೯೩೪

ರೈತರ ಬಗ್ಗೆ ಗವ್ಹರ್ನರ ಸಾಹೇಬರ ಅದ್ಭುತ ಪ್ರೇಮ.

ಮೊನ್ನಿನ ೧೯ ನೆಯ ತಾರೀಖಿನ ದಿವಸ ಮುಂಬಯಿ ಗವ್ಹರ್ನರರಾದ ಸಾಯಿಕ್ಸ ಸಾಹೇಬರು ಮುಂಬಯಿಯಲ್ಲಿ ಒಂದು ಭಾಷಣ ಮಾಡುವಾಗ ಇಲ್ಲಿಯ ರೈತರ ಬಗ್ಗೆ ಅತ್ಯಂತ ಸಹಾನುಭೂತಿಯನ್ನು ತೋರಿಸಿದರು. ರೈತರ ವಿಷಯಕ ಆ ಪ್ರೇಮವು ಈಗ ಅವರ ಹೃದಯದಿಂದ ಉಕ್ಕಿ ಹೊರಚೆಲ್ಲಿ ಹೊಳೆಯಾಗಿ ಹರಿದು ಪಶ್ಚಿಮ ಸಮುದ್ರವನ್ನು ಸೇರಿ, ಅವರೊಡನೆ ವಿಲಾಯತಿಗೆ ಹೊರಟು ಹೋಗುತ್ತದೆ! ಏಕೆಂದರೆ, ಅವರು ತಮ್ಮ ಅಧಿಕಾರ ಸೂತ್ರಗಳನ್ನು ತೀವ್ರವೇ ಕೆಳಗಿಟ್ಟು ಈ ದೇಶಕ್ಕೆ ನಮಸ್ಕಾರ ಮಾಡಿ ಹೊರಟು ಹೋಗತಕ್ಕವರಿರುವರು. ಅವರು ಬಂದು ೪–೪॥ ವರುಷಗಳಾದವು. ಇಲ್ಲಿಯ ವರೆಗೆ ರೈತರ ಬಗ್ಗೆ ಒಮ್ಮೆಯಾದರೂ ಕಳಕಳಿಯ ಸಹಾನುಭೂತಿಯನ್ನು ಅವರು ತೋರಿಸಲಿಲ್ಲ. ಒಮ್ಮೆಯಾದರೂ ರೈತರ ದುಃಖ ನಿವಾರಣೆಯ ಬಗ್ಗೆ ಒಂದಾದರೂ ಉಪಾಯವನ್ನು ಕೈಕೊಳ್ಳಲಿಲ್ಲ. ಈಗ ಹೊರಟು ಹೋಗುವ ಕಾಲಕ್ಕೆ ಮಾತ್ರ ಬರಿ ಸಹಾನುಭೂತಿಯನ್ನು ತೋರಿಸಿ ಪ್ರಯೋಜನವೇನು? ಅದರಿಂದ ಪಾಪ, ಅವರಾದರೂ ಏನು ಮಾಡಿಯಾರು? ಅವರು ಬಂದ ಬಳಿಕ ಈ ಪ್ರೇಮದ ಬೀಜವನ್ನು ಬಿತ್ತಿ, ಅದಕ್ಕೆ ಹೀಗೆ ಅಂಕುರ ಒಡೆಯಲಿಕ್ಕೆ ನಾಲ್ಕು ನಾಲ್ಕೂವರೆ ವರುಷ ಬೇಡವೆ?

ಹೀಗೆ ಈ ಬಡ ರೈತರ ಬಗ್ಗೆ ಪ್ರೇಮದ ಉದ್ಗಾರಗಳನ್ನು ಅವರು ಏಕೆ ತೆಗೆದಿರಬಹುದು? ಏಕೆಂಬುದು ಅವರ ಆ ಭಾಷಣದಲ್ಲಿಯೇ ಸ್ಪಷ್ಟವಾಗಿ ಹೊರಬಿದ್ದಿದೆ. ಈಗ ಮುಖಂಡರೆಂದು ಹೇಳಿಕೊಳ್ಳುವವರು ಅರ್ಥಾತ್ ಕಾಂಗ್ರೆಸಿನವರೇ ಮುಂತಾದವರು ಆ ರೈತರ ನಿಜವಾದ ಮುಖಂಡರಲ್ಲವೆಂಬ ಮಾತನ್ನು ಒತ್ತಿ ಒತ್ತಿ ಹೇಳಬೇಕಾಗಿದೆ. ಈ ಗವ್ಹರ್ನರ ಸಾಹೇಬರಿಗೆ ದಂಪಾಧನವಾದ ಸರಕಾರವು ಕೊಡಲಿರುವ ಹೊಸ ರಾಜ್ಯಕೀಯ ಸುಧಾರಣೆಗಳಿಂದ ರೈತರು ಸ್ವತಂತ್ರರಾಗಿ ಹಗಲಿರುಳು ಈ ಆಳರಸರಿಗೆ ಉದ್ದಂಡ ಆಜ್ಞಾಧಾರಕರೆಂದು ತಮ್ಮನ್ನು ಹಾಡಿ ಹರಿಸಬೇಕೆಂಬ ಬಲವಾದ ಇಚ್ಛೆಯಿರುವುದು ಈ ಗವ್ಹರ್ನರ ಸಾಹೇಬರಿಗೆ.

ಗವ್ಹರ್ನರ ಸಾಹೇಬರು ಬಡ ರೈತರ ಉದ್ಧಾರದ ಬಗ್ಗೆ ಹೊಸದೊಂದು ಯೋಜನೆಯನ್ನು ತಯಾರಿಸಿರುವರಂತೆ. ಆ ಯೋಜನೆಯನ್ನು ತಾವು ಈ ದೇಶದಿಂದ ಕಾಲು ತೆಗೆಯುವ ಮುಂಚೆಯೇ ಅಮಲಿನಲ್ಲಿ ತರುವವರಿದ್ದಾರೆ. ಈಗ ಬಡರೈತರನ್ನು ಪಟ್ಟಣಿಗರು ಮಾತಾಡಿಸುವುದಿಲ್ಲ. ನಾಮದವರಿಂದ ಹಳ್ಳಿಗರನ್ನೂ ಪಟ್ಟಣಿಗರನ್ನೂ ಒಂದೆಡೆಗೆ ತಂದು ಅವರೊಳಗೆ ಸಹಾನುಭೂತಿಯನ್ನು ಹುಟ್ಟಿಸುವುದಕ್ಕೋಸ್ಕರ ಗವ್ಹರ್ನರ ಸಾಹೇಬರು ತೆಗೆದ ಯುಕ್ತಿಯೆಂದರೆ ದರ್ಬಾರು ಗಳನ್ನು ಕೂಡಿಸುವುದು! ಅಂಥವೊಂದು ಭವ್ಯವಾದ ದರ್ಬಾರವನ್ನು ಎಷ್ಟಕ್ಕೂ ಮುಂಚೆ ಕಾಣುವ ಶುಭವು ನಮ್ಮ ಕರ್ನಾಟಕದ ಪಾಲಿಗೇ ಬಂದಿದೆ! ಇದೇ ತಿಂಗಳ ೩೦ ನೆಯ ತಾರೀಖಿನ ದಿವಸ ಬೆಳಗಾವಿಯಲ್ಲಿ ಈ ದರ್ಬಾರನ್ನು ಕೂಡಿಸುವುದು ಗೊತ್ತಾಗಿದೆ. ಆ ದರ್ಬಾರಿಗೆ ಹಳ್ಳಿಹಳ್ಳಿಗಳಿಂದ ಗೌಡರೇ ಮುಂತಾದವರು ತಂಡ ತಂಡವಾಗಿ ಕಳೆಯುವರು. ಅಲ್ಲದೆ ಇಂದಿನ ವರೆಗೆ ಸರಕಾರದವರ ಹೇಳಿಕೆಯಂತೆ ಕೆಲಸ ಮಾಡಿದ ಮುಖ್ಯ ಹಿರಿಯರುಗಳನ್ನು ಕರೆಯುವವರಿದ್ದಾರೆ. ಎರಡನೇ ದರ್ಬಾರು ೩ ನೆಯ ಅಕ್ಟೋಬರ ದಿವಸ ಸುರತ ಪಟ್ಟಣದಲ್ಲಿ ಕೂಡ್ರುವದು. ಈ ಗವ್ಹರ್ನರ ಸಾಹೇಬರು ರೈತರ ಉದ್ಧಾರಾರ್ಥವಾಗಿ ತೆಗೆದ ಉಪಾಯಗಳನ್ನು ಚಿಕ್ಕ ಪುಸ್ತಕದಿಂದ ಮುದ್ರಿಸಿ ಹಂಚತಕ್ಕವರಿರುವರು. ಕೊನೆಯ ಅಂದರೆ ೩ ನೆಯ ದರ್ಬಾರು ಪುಣೆ ಪಟ್ಟಣದಲ್ಲಿ ಕೂಡುವುದು. ಆ ಮೇಲೆ ಪೂರ್ಣ ಯೋಜನೆಯು ಹೊರಬೀಳುವುದಿದೆ.

ಒಳ್ಳೇದು. ನಿರೀಕ್ಷಿಸುವ. ಗವ್ಹರ್ನರ ಸಾಹೇಬರಿಗೆ ಹೋಗುವ ಕಾಲಕ್ಕಾದರೂ ಬುದ್ಧಿ ಬಂದಿದೆಯೋ ಹೇಗೆ ಎಂಬುದನ್ನು ನೋಡುವ. ಬಡರೈತರು ಬರಗಾಲದ ದವಡೆಯಿಂದ ಪಾರಾಗಲಿಕ್ಕೇನಾದರೂ ಉಪಾಯವನ್ನು ಗವ್ಹರ್ನರ ಸಾಹೇಬರು ಯೋಜಿಸುವರೋ, ಕೇಳುವ ಸರಕಾರದವರು ತಮ್ಮ ಕಿಸೆಗೆ ಕೈ ಹಚ್ಚದ ಹೊರತು ಬಡರೈತರ ಉದ್ಧಾರವೆಂದಿಗೂ ಆಗದು. ಇರಲಿ, ರೈತರೇ, ಗವ್ಹರ್ನರ ಸಾಹೇಬರು ಹೊರಟು ಹೋಗುವಾಗ ಕೊಡುವ ಪ್ರಸಾದವನ್ನು ಸ್ವೀಕರಿಸಲು ಕೈ ಚಾಚಿರಿ.

ರಾಜಾ ಇವರಿಗೆ ಶಿಕ್ಷೆ.

ಮುದ್ರಾಸ ತಾ॥ ೨೦— ಫೋರ್ಥ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಈ ಶುಕ್ರವಾರ ದಿವಸ ಶ್ರೀ ಎಮ್. ಡಿ. ರಾಜಾ ಇವರ ಖಟ್ಲೆಯ ತೀರ್ಪು ಹೇಳಿ, ೫೦೦ ರೂಪಾಯಿಯ ಜಾಮೀನು ಒಳಿದು ಕೊಡುವದಲ್ಲದೆ, ಸದ್ವರ್ತನದ ಬಗ್ಗೆ ೫೦೦ ರೂಪಾಯಿ ಎರಡು ಜಾಮೀನುಗಳನ್ನು ಕೊಡಲು ಆಜ್ಞೆ ವಿಧಿಸಿದರು. ಇದರಂತೆ ನಡೆಯಲು ನಿರಾಕರಿಸಿದರೆ ೧ ವರ್ಷ ಕಠಿಣ ಶಿಕ್ಷೆ ಅನುಭವಿಸಬೇಕೆಂದು ಹೇಳಿದರು. ರಾಜಾ ಇವರು ಜಾಮೀನು ಕೊಡಲು ನಿರಾಕರಿಸಿದರು.

ರಾಣಿಬೆನ್ನೂರಲ್ಲಿ ನಾಲ್ವರಿಗೆ ಶಿಕ್ಷೆ.

ಬ್ಯಾಡಗಿ ತಾ॥ ೨೦— ಮರಿಸ್ವಾಮಿ ಹಿರೇಮಠ, ಗಂಗಾಧರ, ಸದಾಶಿವಪ್ಪ ಮತ್ತು ಚನಬಸಪ್ಪ ಈ ನಾಲ್ವರು ಸ್ವಯಂಸೇವಕರು, ಸರದೇಶಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ತಾ॥ ೨ನೇ ದಿವಸ ಸೆರೆ ಹಿಡಿಯಲ್ಪಟ್ಟಿದ್ದರು. ರಾಣಿಬೆನ್ನೂರ ಮ್ಯಾಜಿಸ್ಟ್ರೇಟರ ಮುಂದೆ ಅವರ ವಿಚಾರಣೆ ನಡೆದು ಅವರಿಗೆ ಪ್ರತ್ಯೇಕವಾಗಿ ೬ ತಿಂಗಳ ಕಠಿಣ ಶಿಕ್ಷೆಯಾಯಿತು.

ಮಹಾತ್ಮರು ಮುಂಬಯಿಗೆ ಬಂದರು

ಮುಂಬಯಿ ತಾ॥ ೧೨— ಮಹಾತ್ಮಾ ಗಾಂಧಿಯವರು ಅಹಮ್ಮದಾಬಾದದಿಂದ ಈ ಶುಕ್ರವಾರ ದಿವಸ ಮುಂಜಾನೆ ಗುಜರಾಥ ಮೇಲಿನಿಂದ ಇಲ್ಲಿಗೆ ಬಂದರು. ಸ್ಥಳಿಕ ಕಾಂಗ್ರೆಸ್ ಪುಢಾರಿ ಮತ್ತು ಹರಿಜನ ಕೆಲಸಗಾರರು, ಅವರಿಗೆ ಪ್ರತ್ಯೇಕವಾಗಿ ಅವರೊಡನೆ ವಿಚಾರ ವಿನಿಮಯ ಮಾಡಿದರು. ಅಸಮ್ಮದಾಬಾದದ ಗಿರಣಿ ಕಾರ್ಮಿಕ ಶಿಷ್ಟಮಂಡಳದವರಾದರೂ ಮುಂಜಾನೆ ಅವರ ಭೆಟ್ಟಿ ಬಂದು ಕೂಲಿಕಾರ ಸಂಘ ಮತ್ತು ತಮ್ಮಲ್ಲಿಯ ತಂಟೆಗಳನ್ನು ಬಗೆಹರಿಸಿಕೊಳ್ಳಲು ಮಾಡುವ ಪ್ರಯತ್ನ ನಡೆಸಿರುವದಾಗಿ ತಿಳಿಸಿದರು.

(ಅ ಪ್ರೆ)

ಸಾವಡಾ ದೊರೆಗಳ ಸ್ವಾಗತ

ಸಿಮಲಾ ತಾ॥ ೨೧— ವ್ಹಾಯಿಸರಾಯರು ಈ ಶುಕ್ರವಾರ ದಿವಸ ಜಪಾನಿ ಶಿಷ್ಟಮಂಡಲದ ಧ್ಯಕ್ಷರಾದ ಸರ್ಟ ಸಿ ಮಿಯೂ ಸಾವಡಾ ದೊರೆಗಳನ್ನು ಆದರದಿಂದ ಬರಮಾಡಿಕೊಂಡರು.

(ಅ ಪ್ರೆ)

ಮಹಾತ್ಮರು ವರ್ಧಾಕ್ಕೆ ಹೋಗುವರು

ಮುಂಬಯಿ ತಾ॥ ೨೨— ಮಹಾತ್ಮಾ ಗಾಂಧಿಯವರು ಈ ಶುಕ್ರವಾರ ದಿವಸ ಸಂಜೆಯಲ್ಲಿ ನಾಗಪುರ ಮೇಲಿನಿಂದ ವರ್ಧಾಕ್ಕೆ ಪ್ರಯಾಣ ಮಾಡತಕ್ಕವರಿದ್ದಾರೆ. (ಅ ಪ್ರೆ)

೨೫ ಸ್ಥಾನಬದ್ಧ ಕೈದಿಗಳು ದೇವಲಿಗೆ ಬಂದರು.

ಅಜಮೀರ ತಾ॥ ೨೧—ಬಂಗಾಲದ ೨೫ ಸ್ಥಾನಬದ್ಧ ಕೈದಿಗಳ ಮತ್ತೊಂದು ಗುಂಪು ಈ ಶುಕ್ರವಾರ ದಿವಸ ದೇವಲಿಗೆ ಬಂದು ಮುಟ್ಟಿತು. ದೇವಲಿಯಲ್ಲಿ ಈಗ ಒಟ್ಟು ೨೭೫ ಸ್ಥಾನಬದ್ಧ ಕೈದಿಗಳು ಆದಂತಾಯಿತು.

(ಅ ಪ್ರೆ)

ಖಾದಿ ಮಾರಿದ್ದಕ್ಕೆ ಹಿಡಿದರು.

ಸುರತ ತಾ॥ ೨೦— ಶ್ರೀ ಗೋಬಿಂದಲಾಲ ಮಿರಮಟಿಯಾ, ಚೋಟುಭಾಯಿ, ಶ್ರೀಮತಿ ಜ್ಯೋತ್ಸ್ನಾ ಶುಕ್ಲ ಮತ್ತು ಜಯಮತಿ ಮುನಸಿ ಇವರು ಈ ಶುಕ್ರವಾರ ದಿವಸ ಮುಖ್ಯ ಬೀದಿಯಲ್ಲಿ ಖಾದಿ ಮಾರುತ್ತ ನಿಂತುಕೊಂಡಾಗ, ಪೋಲೀಸರು ಅವರನ್ನು ವ್ಯವಹಾರಕ್ಕೆ ಅಡ್ಡಿ ಮಾಡುತ್ತಿರುವರೆಂಬ ನೆವದಿಂದ ಸೆರೆಹಿಡಿದುಕೊಂಡು ಹೋದರು.

ಅಭಯ ಆಶ್ರಮವು ಕಾಯದೆಗೆ ವಿರುದ್ಧವಾಯಿತು.

ಕಲಕತ್ತಾ ತಾ॥ ೨೦— ಬಂಗಾಲ ಸರಕಾರದವರು ಕೋಮಿಲಾ ಅಭಯ ಆಶ್ರಮವನ್ನು ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ಮೇರೆಗೆ ವಿರುದ್ಧ ಮಾಡಿದ್ದಾರೆ.

ಹುಬ್ಬಳ್ಳಿಯ ಪತ್ರ.

ಹುಬ್ಬಳ್ಳಿ ತಾ॥ ೨೨— ಸೋಮವಾರ ದಿವಸ ರಾತ್ರಿ ೧೦ ಗಂಟೆಗೆ ಇಲ್ಲಿಯ ನಾರಾಯಣ ವ್ಯಾಯಾಮ ಮಂದಿರದಲ್ಲಿ ಧಾರವಾಡದ ಶ್ರೀ ಕುಲಕರ್ಣಿ ಶ್ರೀನಿವಾಸರು ನಾಡಹಬ್ಬದ ಅಂಗವಾಗಿ, ಆಧುನಿಕ ಕನ್ನಡ ನಾಟಕಗಳಲ್ಲಿಯ ಕೆಲವು ದೃಶ್ಯಗಳ ಪ್ರದರ್ಶನವನ್ನೂ ಮತ್ತು ಅಭಿನಯವನ್ನೂ ಮಾಡಿ ತೋರಿಸಿದರು. ಇಲ್ಲಿಯ ಕಾರ್ಯಕ್ರಮವನ್ನು ಮುಗಿಸಿಕೊಂಡು ಅವರು ಬಾಗಲಕೋಟೆ ಮತ್ತು ವಿಜಾಪುರಕ್ಕೆ ಹೋಗುವರು.

ನಿನ್ನಿನ ದಿವಸ ಭಾರತ ವ್ಯಾಯಾಮ ಮಂದಿರದವರು ತಮ್ಮ ಶಕ್ತಿಪ್ರಯೋಗಗಳನ್ನು ಮಾಡಿ ತೋರಿಸಿದರು.

ಇಹವೃತ್ತ

ಶ್ರೀ ಬಸವೇಶ್ವರ ನಾಟ್ಯ ಸಂಘ ಸೋಮವಾರ ತಾ॥ ೨೪ನೆ ದಿವಸ ಶ್ರೀ ಪಟ್ಟಾಭಿಷೇಕ ನಾಟಕವನ್ನಾಡಿ ಅದರ ಉತ್ಪನ್ನವನ್ನು ಮಾಳಮಡ್ಡಿಯ ವೀರಶೈವ ಜನಾಸಂಘಕ್ಕೆ ಕೊಡುವರು.

ನಾಡಹಬ್ಬದ ಇಂದಿನ ಕಾರ್ಯಕ್ರಮ

ಬೆಳಗಾವಿಯ ಶ್ರೀ ಗೋವಿಂದ ಶಾಸ್ತ್ರಿಯವರು ಮುನಸಿಪಾಲಟಿ ಹೈಸ್ಕೂಲ ಮೇಲೆ ಸಾಯಂಕಾಲ ೬॥ ಗಂಟೆಗೆ ಕನ್ನಡ ಟಕ ಏಕೀಕರಣದ ಗುಟ್ಟು ಮತ್ತು ಮಹತ್ವ ಈ ವಿಷಯವಾಗಿ ವ್ಯಾಖ್ಯಾನ ಮಾಡುವರು.

ಮುಖಂಡರ ದುಃಖೋದ್ಗಾರ

ಬ್ಯಾ ಜಿನ್ನಾ— ಡಾ. ಬಿರ್ಖುಂಡ "ಹೋಮ ರೂಲ ಲೀಗ" ವನ್ನು ಸ್ಥಾಪಿಸಿ ಹಿಂದೀ ರಾಷ್ಟ್ರೀಯತ್ವವನ್ನು ಕಾಯ್ದುಕೊಳ್ಳಲು ಬಹಳ ಸಹಾಯ ಮಾಡಿದರು. ಅವರ ಕರ್ತೃತ್ವಶಕ್ತಿಯು ಅಗಾಧವಾದದ್ದಿತ್ತು. ಅವರ ನಿಧನದಿಂದ ಆದ ಹಾನಿಯು ತುಂಬಿ ಬರುವಹಾಗಿಲ್ಲ.

ಬಾಗಿಲುಕೋಟೆಯ ಪತ್ರ.

ಆದಿತ್ಯವಾರ ರಾತ್ರಿ ೧೦ ಗಂಟೆಗೆ ಇಲ್ಲಿಯ ಕಾಟನ್ ಮಾರ್ಕೆಟದಲ್ಲಿರುವ ಶೆಟ್ಟರ ಸಂಗಣ್ಣನವರ ವಖಾರಕ್ಕೆ ಬೆಂಕಿ ಬಿದ್ದು, ನೂರಗಟ್ಟಲೆ ಅರಳೆ ಅಂಡಿಗೆಗಳೂ, ಕಾಳುಕಡಿಯು ಚೀಲಗಳೂ ಭಸ್ಮವಾದವು. ವಖಾರದ ಕಟ್ಟಡವು ಕೆಲಮಟ್ಟಿಗೆ ನಾಶವಾಗಿದೆ. ಒಟ್ಟು ಸುಮಾರು ೧೫-೨೦ ಸಾವಿರ ರೂಪಾಯಿಗಳ ಹಾನಿಯಾಗಿರಬಹುದೆಂದು ಜನ ಅಂದಾಜು. ಬೆಂಕಿ ಆರಿಸಲಿಕ್ಕೆ ಜನರ ಸಹಾಯವು ಹೆಚ್ಚಾಗಿ ಸಿಕ್ಕದಿಲ್ಲದೆ, ಮುನಸಿಪಾಲಟಿಯ ನೀರು ಹೊಡೆಯುವ ಮೋಟಾರದಿಂದಲೂ ಬಹಳ ಸಹಾಯವಾಯಿತು.

ಬಸವೇಶ್ವರ ಹಾಯಸ್ಕೂಲದ ಗ್ಯಾದರಿಂಗು ಯಥಾಸಾಂಗವಾಗಿ, ನಾಟಕದ ಆರಂಭಕ್ಕೆ ಈ ಬೆಂಕಿಯ ಗೊಂದಲವೆದ್ದಿದ್ದರಿಂದ ಅದನ್ನು ಶಾಂತಗೊಳಿಸಲು ಪ್ರೇಕ್ಷಕರೂ ಪಾತ್ರ ವಹಿಸಿದವರೂ ಕೂಡಿಯೇ ಅಲ್ಲಿಗೆ ಧಾವಿಸಿದರು. ಗ್ಯಾದರಿಂಗದ ಕಾರ್ಯಕ್ರಮವು ಸುಂದರವಾಗಿತ್ತು.

ಊರಲ್ಲಿ ಇಲಿ ಬೀಳುವದು ಹೆಚ್ಚಿದೆ. ನೈರ್ಮಲ್ಯ ಜುಚ್ಚಾದರ ಹೊರತು ಮುನಸಿಪಾಲಟಿಯ ಉಳಿದ ಪ್ಲೇಗು ಪ್ರತಿಬಂಧಕ ಉಪಾಯಗಳು ಇನ್ನೂ ಸಾಕಷ್ಟು ತೋರಿಸಿದಂತಾಗಿಲ್ಲ.

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಲ ಮತ್ತು ರಂಗನಿ)

ಹುಬ್ಬಳ್ಳಿ ತಾ॥ ೨೨ (ಮಧ್ಯಾಹ್ನ ೧೨ ಗಂಟೆ)

ಜವಾರಿ ಹತ್ತಿ	೧೦೫
ಅಪ್ಲಂಡ ಹತ್ತಿ	೧೨೨-೧೦೩
ವಿಲಾಯತಿ ಹತ್ತಿ	೯೬-೯೮
ಸ್ಯಾಕ್ರಾಸ ಹತ್ತಿ	೧೨೩
ಜೀನ ಅರಳೆ	೭೮
ಡಬ್ಬಲ್ ರೂಲ ಅರಳೆ	೭೦-೭೩
ಸಾಜಿನ ಅರಳೆ	೬೨-೬೩
ಜೋಳ	೧೧ ೧೪
ಗೋದಿ	೩॥-೬॥।
ಹೆಸರು ಜವಾರಿ	೯-೧೨
ಉದ್ದು	೩-೬।
ಕಡ್ಲಿ	೫॥-೬
ಕುಸಬಿ	೧೧॥
ಎಳ್ಳಿ	೧೧॥-೧೨

ಬೆಳ್ಳಿ ಭಂಗಾರ

ಭಂಗಾರ	೩೩।=
ಬೆಳ್ಳಿ	೬-

ಮೈಸೂರ ಸಂಸ್ಥಾನದ ಸುದ್ದಿಗಳು

ಸಿಮುಲಾದಲ್ಲಿ ನಡೆಯುವ ಹಿಂದೀ ಜವಾಬ್ದಾರಿ ಸಂಬಂಧದ ವಿಚಾರ ವಿನಿಮಯದಲ್ಲಿ ಸಲಹೆ ಕೊಡಲು, ಮೈಸೂರು ಸರ್ವತ್ರದವರು ತಮ್ಮ ಪರವಾಗಿ ಶ್ರೀ ನಲಿನಿ ಜನ ಸರಕಾರ, ಸಕ್ಲತವಾಲಾ ಹಾಗು ಸಿ. ವೆಂಕಟರಮಣ ಅಯ್ಯಂಗಾರ ಇವರನ್ನು ಸಲಹೆಗಾರರನ್ನಾಗಿ ನಿಯಮಿಸಿದ್ದಾರೆ

ದಿವಾಣರಾದ ಸರ್ ಮಿರ್ಜಾ ಇಸ್ಮಾಯಿಲ ದಸರಾ ಮಹೋತ್ಸವದಲ್ಲಿ ಭಾಗ ತಗೆದುಕೊಳ್ಳಲಿಕ್ಕೆ ತಾ॥ ೧೨ನೆ ದಿವಸ ಮುಂಜಾನೆ ಬೆಂಗಳೂರಿಂದ ರಾಜಧಾನಿಗೆ ಪ್ರಯಾಣ ಮಾಡಿದರು

ಮೈಸೂರ ಪ್ರಜಾ ಪ್ರತಿನಿಧಿ ಮಂಡಳದ ಆ ಅಧಿವೇಶನವು ತಾ॥ ೨೧ನೆ ದಿವಸ ಪ್ರಾರಂಭವಾಗುವದು ಪ್ರಾರಂಭದಲ್ಲಿ ದಿವಾಣರು ಬೇರೆ ಬೇರೆ ಖಾತೆಗಳಲ್ಲಿ ನಡೆದ ಕಾರ್ಯ ಪ್ರಸಂಗಗಳನ್ನು ವಿವೇಚಿಸಿ ಹೇಳಿ ಲಂಡನದಲ್ಲಿ ತಾವು ಮಾಡಿದ ಕಾರ್ಯವನ್ನಾದರೂ ತಿಳಿಸುವರೆಂದು ಅನುಮಾನ ಮಾಡಿದೆ

ಶಂಟರ ವಿ (ಡಿಯಟ್ ಕಾಲೇಜದ ಯೂನಿಯನ್ನಿನ ಆಶ್ರಯದಲ್ಲಿ ಕಾಲೇಜು ಭಾಷಣ ಸಂಗಣದಲ್ಲಿ ತಾ॥ ೧೮ನೆ ದಿವಸ "ವಿಜ್ಞಾನ ಶೈಲೀ ಈಗಿನ ನಿರುದ್ಯೋಗ ಮತ್ತು ಇನ್ನಿತರ ತೊಂದರೆಗಳುಂಟಾಗಿವೆ" ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು

ಮೈಸೂರು ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳ ಹತ್ತಿರ ಕೆಲವು ಮುಸಲ್ಮಾನರು ಈಗ ಶಾಲೆಗಳಲ್ಲಿ ಇದಲ್ಪಟ್ಟಿರುವ ಹಿಂದೂಸ್ತಾನದ ಚರಿತ್ರೆಯಲ್ಲಿ ಟೀಪೂ ಸುಲ್ತಾನರ ವಿಷಯದಲ್ಲಿ ತಪ್ಪು ತಿಳುವಳಿಕೆಯನ್ನು ಕೊಟ್ಟಿದ್ದು, ಸುಲ್ತಾನನು ಹಿಂದೂ ದ್ವೇಷಿಯಾಗಿದ್ದನೆಂದು ಅದರಿಂದ ತಿಳಿದುಬರುತ್ತದೆ ಆದರೆ ಸತ್ಯಾಂಶವು ಬೇರೆಯಾಗಿದ್ದು ಸರ್ವಜನ ಪ್ರೀತರಾಗಿದ್ದರೆಂದೂ ತಿಳಿಸಿ ಇದಕ್ಕಾಗಿ ಈ ಚರಿತ್ರೆಯಲ್ಲಿ ಬದಲಾವಣೆಯನ್ನು ಮಾಡಬೇಕೆಂದು ಆ ಮುಸಲ್ಮಾನರು ಹೇಳು ಇದನ್ನು ವಿದ್ಯಾಭ್ಯಾಸದ ಇಲಾಖೆ ಅಧಿಕಾರಿಗಳು ಪರಾಮರ್ಶಿಸುವರೆಂದು ತಿಳಿದಿದೆ

ತಾ॥ ೧೬ನೆ ದಿವಸ ಸಾಯಂಕಾಲ ೬ ಗಂಟೆಗೆ ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕೋತ್ಸವವು ಡಾ ಸರ್ ಸಿ ವ್ಹಿ ರಾಮನ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ವಾಯ್ ಎಂ ಸಿ ಎ ವ್ಯಾಖ್ಯಾನ ಭವನದಲ್ಲಿ ಪ್ರಾರಂಭವಾಯಿತು ಸಂಗೀತ, ಕಾರ್ಯದ ವರದಿ, ಇವುಗಳೆಲ್ಲವೂ ಆದ ಮೇಲೆ ಅಧ್ಯಕ್ಷರ ಭಾಷಣವು ಸುರುವಾಯಿತು ಅಧ್ಯಕ್ಷರು ಭಾಷಣದಲ್ಲಿ, ಪತ್ರಿಕೋದ್ಯೋಗಿಗಳು ತಮ್ಮನ್ನು ಲಕ್ಷಿಸದೆ ಸತ್ಯದ ಮೇಲೆ ಗುರಿಯಿಟ್ಟು ಕೆಲಸಮಾಡಬೇಕೆಂದೂ ಜನರಿಗೆ ನಮ್ಮ ದೇಶದಲ್ಲಿ ಪತ್ರಿಕೆಗಳ ಮೇಲೆ ಅಷ್ಟೊಂದು ವಿಶ್ವಾಸವಿಲ್ಲದಿರುವದು ಒಂದು ಶೋಚನೀಯ ಸಂಗತಿಯೆಂದೂ, ಪರದೇಶದಲ್ಲಿ ಪ್ರತಿಯೊಬ್ಬನು ಪತ್ರಿಕೆಯನ್ನೋದದೆ ಮುಂದಿನ ಕೆಲಸವನ್ನೇ ಮಾಡುವದಿಲ್ಲವೆಂದೂ, ನಮ್ಮ ದೇಶದಲ್ಲಿ ಜನರ ಅಭಿರುಚಿ ಹೊರತು ಪತ್ರಿಕೆಗಳು ಸ ಕಾರದ ಸಹಾಯದಿಂದಲೂ ಬಹಳ ಕೊಂದರೆಯುಂಟೆಂದು ಹೇಳಿದರು

ಇತ್ತ ಬಳ್ಳಾಪುರದಲ್ಲಿ ಇದೇ ಸಪ್ಟೆಂಬರ ತಾರೀಖಿನಿಂದ ಮೈಸೂರು ವಿಶ್ವವಿದ್ಯಾಲಯದ ಶಿಕ್ಷಣ ಸಮಿತಿಯು ಭಾಷಣ ಸಪ್ತಾಹ ಪ್ರಾರಂಭವಾಗಿದೆ

ಮೈಸೂರು ದಸರಾ ಮಹೋತ್ಸವ.

ಮೈಸೂರು ತಾ॥ ೨೧—ದಸರಾ ಮಹೋತ್ಸವವು ಈ ಹೊತ್ತಿನ ದಿವಸ ಮುಂಜಾನೆ ಪ್ರಾರಂಭವಾಯಿತು ಮಹಾರಾಜರು ೧೦ ಗಂಟೆಗೆ ತಮ್ಮ ದರ್ಬಾರವನ್ನು ಕೂಡಿಸಿ, ೧೦ ಮಿನೀಟಿಗೆ ಸಿಂಹಾಸನಾರೂಢರಾದರು ಆ ಸಮಯದಲ್ಲಿ ಸನ್ಮಾನಾರ್ಥವಾಗಿ ೨೧ ತೋಫುಗಳು ಹಾರಿಸಲ್ಪಟ್ಟವು ಮಹಾರಾಜರು ಮೊದಲು ಕಲಶಪೂಜೆ ನವಗ್ರಹ ಪೂಜೆಗಳನ್ನು ಮುಗಿಸಿಕೊಂಡು, ಸಿಂಹಾಸನದ ಹತ್ತರ ಹೋಗಿ ಪಲ ಪೂಜೆಯನ್ನು ಸಾಂಗಮಾಡಿದರು ಆಮೇಲೆ ಅವರು ಮಠ, ದೇವಾಲಯ ಮತ್ತು ವೈದಿಕ ಮಂಡಳಿಯಿಂದ ಒಂದ ಕಾಣಿಕೆಗಳನ್ನು ಸ್ವೀಕರಿಸಿದರು ಇಷ್ಟಾದ ಬಳಿಕ ಮಹಾರಾಜರು ಸೈನ್ಯದ ನಿರೀಕ್ಷಣೆ ಮಾಡಿದರು ನಂತರ ಸಭಿಕರು ರಾಜನಿಷ್ಠೆ ಪ್ರದರ್ಶನವಾಗಿ ದರಬಾರವು ಸಮಾಪ್ತವಾಯಿತು

ಪ್ರದರ್ಶನದ ಅನಾವರಣ ಸಮಾರಂಭವು ಈ ಹೊತ್ತಿನ ದಿವಸ ಮುಂಜಾನೆ ಜರುಗಿತು

ವಕೀಲರು ಹೆಚ್ಚಾದರು

ಈದರ ಸಂಸ್ಥಾನದ ಅಧಿಪತಿಗಳು, ಸಂಸ್ಥಾನದಲ್ಲಿ ಈಗ ಸಾಕಷ್ಟು ವಕೀಲರು ಇರುವರೆಂಬ ಕಾರಣದಿಂದ ಸಂಸ್ಥಾನದಲ್ಲಿಯ ವಕೀಲಿಯ ಪರೀಕ್ಷೆಯನ್ನು ರದ್ದು ಪಡಿಸಿದ್ದಾರೆ

ಡಾ ಕುಲಕರ್ಣೀಜ

ಲೆಬೊರೋಟರಿ ಮುಂಬಯಿ ನಂಬರ ೧೨

ಬಾಟ್ಲಿ ಕಿಮ್ಮತ್ತು ೧—೧೨—೦

ಕೆಮಿಸ್ಟರಲ್ಲಿಯೂ ದೊರೆಯುದು

ಬತ್ತಾಗಿ ರೋಗ
ತಾಯಿತಿ ...

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸರಗು, ಬಿಳೀಸರಗು, ಕೆಂಪು ಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ಪಿ. ಟಿ. ಕೆರೂರ ಅ್ಯಾಂಡ ಸನ್ಸ್

ಮೆಡಿಕಲ್ ಸ್ಟೋರ್ಸ

ಬಾಗಲಕೋಟೆ.

೧೮-೬

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ!**



ನ್ಯೂ ಓರಿಯಂಟಲ್ ಕಂ.

"ನೀಲಗಿರಿ ಎಣ್ಣೆ"

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗ ಗುಣಕಾರಕ್ಕ ಇರುತ್ತದೆ. ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗಿನ್ಮಾ, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗಾ ಪತ್ರ ವ್ಯವಹಾರ ಮಾಡಬೇಕು ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ ಟೋಣಪಿ ಅ್ಯಾಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಗದಗ ಶ್ರೀ ದತ್ತಾತ್ರೇಯ ನಾಟಕ ಸಂಘದವರು

ಶನಿವಾರ ತಾ॥ ೨೩-೯-೩೩ನೇ ದಿವಸ ರಾತ್ರಿ

ಸತ್ಯಸಂಕಲ್ಪ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು.

ತ್ವರೆ ಮಾಡಿರಿ **ತ್ವರೆ ಮಾಡಿರಿ**

ಶ್ರೀ ಸದಾಶಿವರಾವ ಗರೂಡ ಇವರಿಂದ ರಚಿತವಾದ

"ಸತ್ಯಸಂಕಲ್ಪ"

ನಾಟಕದ ಪುಸ್ತಕಗಳು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಬೆಲೆ ೧೦೦ರು ದೊರೆಯುವ ಸ್ಥಳ—ಶಿವಪ್ಪ ಟೆಂಗಿನಕಾಯಿ ಇವರ ಬಂಗಲೆಯಲ್ಲಿರುವ
ಶ್ರೀ ದತ್ತಾತ್ರೇಯ ನಾಟಕ ಮಂಡಳಿ ಧಾರವಾಡ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೫-೮-೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ.

೩೦-೯-೩೩

"ಬದರೀ ನಾರಾಯಣನ ದರ್ಶನ"

ಗಾ ೧ ಸಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿವೆ ಇದರಲ್ಲಿ ಎಂಟು ಫೋಟೊಗಳಿರುವವು.

ಬೆಲೆ —೦ ೬-೬ ಮಾತ್ರ, ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ೮ ೩
ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ, ಧಾರವಾಡ.



ಕಿರ್ಲೋಸ್ಕರ

ಕಲ್ಯಾಣ ಶೇಂಗಾ ಯಂತ್ರ

——:(o):——

ಒಂದು ತಾಸಿನಲ್ಲಿ ೬೫ ರಿಂದ ೮೦ ಪಲ್ಲಗಳ ವರೆಗೆ ಶೇಂಗಾಗಳನ್ನು ಒಡೆಯುವದು ಇದು ೫-೬ ಚೀಲ ಶೇಂಗಾ ಒಡೆಯುವದು. ಹೆಚ್ಚಿನ ಮಾಹಿತಿ ಬಗ್ಗೆ ಈ ಹೊತ್ತೇ ಬರೆಯಿರಿ.

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ ಜಿ.(ಸಾತಾರಾ)



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

[illegible]

ಶುದ್ಧ ಸ್ವದೇಶಿ [illegible]
ದಂತಮಂಜನ

ಇದರ ಉಪಯೋಗದಿಂದ ಹಲ್ಲು ಬೆಳ್ಳಗಾಗಿಯೂ, ಒಸಡೆಗಳು ಗಟ್ಟಿಯಾಗಿ [illegible] ಬಾಯಿಯು [illegible]ವಾಗಿಯೂ, ಆಗು[illegible] 'ಹೇಸಿಗುಳು'' ಪಸಡೆಗಳ ರಕ್ತಸ್ರಾವ[illegible] ಕಲು ಸರ್ವೋತ್ಕೃಷ್ಟವಾದ ವನಸ್ಪತಿ[illegible] ಆಯುರ್ವೇದ [illegible] ಗ [illegible] "ಕಚ್ಚೂರ" ದಂತ[illegible] [illegible] ಹಾಗೂ [illegible] ವಿವಿಧ ವರ್ಣಗಳಿಂದ [illegible] ದಂತಮಂಜನವನ್ನು ಉ[illegible] ಗಿಸಿಯೇ ಇದರ ಗುಣಗಳನ್ನು [illegible] ಬೇರೆ ಕೇವಲ ವರ್ಣನೆಯಿಂದ ಅ[illegible] ಯುಕ್ತರಪ್ಪ ಕನ್ನಡಿಗರೇ, ಕನ್ನಡ [illegible] ಮಾಲನ್ನು ನೋಡಲು ಕೊಂಡು "ವ[illegible] ಮಾರ ಗಡಿ" ಎಂಬ ನಾಣ್ಣುಡಿಯಂತೆ [illegible] ದಿ ಸ್ವದೇಶೀ ವಸ್ತುಗಳನ್ನು ಪಯೋಗಿಸಿ [illegible]ಜ್ಯದ ಹಾದಿಯನ್ನು ಹಿಡಿಯಿರಿ.

ಒಮ್ಮೆ ಮಾಲು ತರಿಸಿ, ಉಪಯೋ[illegible] ಅನುಭವ ಪಡೆಯಿರಿ

[illegible]
ಹೆಚ್ಚಿನ ಸುಧಾರಣೆಯುಳ್ಳ [illegible]

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ತಾರೀಖು ೧೬-೭-೧೯೩೩ ರಿಂದ ತಾ| ೯-೩-೩೩ ರ ವರೆಗೆ ಇಡೀ ಭರತಖಂಡ (ಹಿಂದುಸ್ಥಾನ)ದ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಹೊಗಳಿಕೆಗಳನ್ನೂ, ಸುವರ್ಣಪದಕಗಳನ್ನೂ, [illegible]ಗಳನ್ನೂ ಪಡೆದಿರುತ್ತದೆ

ಶ್ರೀ ಕಾಶೀ [illegible] ಕ್ಷೇತ್ರಗಳ

[illegible]

ಚಾರ್ಜು ಬಹಳ ಸುಲಭ! [illegible]

ಪ್ರೇಕ್ಷಣೀಯ ನೋಟ! [illegible]

ಈ ಶ್ರೀ ಗೌರೀಶಂಕರ ಸ್ಪೆಶಲ್ ಟ್ರೇನು [illegible] **ತಾರೀಖು** (ಶಕೆ ೧೮೫೫ ಆಶ್ವಯುಜ ಶು|| ೧೩) ದಿವಸ ಹುಬ್ಬಳ್ಳಿ ಬಿಟ್ಟು [illegible] ಸ್ಟೇಶನದಿಂದ **ಹೊರಟು**, ಈ ಕೆಳಗೆ ನಮೂದಿಸಿದಂತೆ ಕ್ರಮವಾಗಿ

೧ ಪಂಢರಪುರ ಅಶ್ವೀಜ ಶು|| ೨		೧೯ [illegible]	೨೬	೩೭ [illegible]	೫
೨ ಕಾಶೀ	೨-೮	೨೦ ಅಯೋಧ್ಯೆ	೨೭	೩೮ [illegible]	೧-೧೨
೩ ಮುಂಬಯಿ	೫-೬-೭	೨೧ ಅಲ್ಲಾಬಾದ	,,	೩೯ [illegible] [illegible]	
೪ ಸೋಮನಾಥ (ವಡಗಾಂವ)	೮-೯	೨೨ ಪ್ರಯಾಗ	೨೮ ೨೨	೪೦ [illegible] [illegible] ೯-೨೦-೩	
೫ [illegible]	,,	೨೩ ಶ್ರೀಕಾಶಿ	[illegible] ನವ್ಹೆಂಬರ ತಾ|| ೧	೪೧ [illegible]	೨೫
೬ [illegible] (ದ್ವಾರಕಾ)	೧೦ ೧೧	೨೪ [illegible]		೪೨ [illegible]	೨೩
೭ [illegible] (ದ್ವಾರಕಾ)	೧೨-೧೩	೨೫ ಗಯಾ		೪೩ [illegible]	
೮ ಅಹಮ್ಮದಾಬಾದ	೧೪	೨೬ ರಾವರಿ [illegible]	೪	೪೪ [illegible]	೨೬
೯ [illegible]	,,	೨೭ ಗಿರಿ		೪೫ [illegible]	೨೮
೧೦ [illegible]	೧೫	೨೮ [illegible]	೬	೪೬ [illegible]	,,
೧೧ [illegible]	೧೬	೨೯ ಕಲಕತ್ತಾ	[illegible]	೪೭ ಬೆಂಗಳೂರ	೨೬
೧೨ [illegible]	೧೬	೩೦ ಜಗನ್ನಾಥ ಪುರಿ	೮	೪೮ ಮೈಸೂರ	೨೯
೧೩ ಮಥುರಾ	೧೮ ೧೯	೩೧ [illegible]	೯		
೧೪ ಗೋಕುಲ	,,	೩೨ ರಾಜಮಹೇಂದ್ರಿ	೧೦		
೧೫ ವೃಂದಾವನ	,,	೩೩ ಬೆಜವಾಡ	೧೧		
೧೬ ಗೋವರ್ಧನ	,,	೩೪ ಮದ್ರಾಸು	೧೨ ೧೩		
೧೭ ದಿಲ್ಲಿ	೨೦-೨೧	೩೫ ಶಿವಕಂಚಿ	೧೪		
೧೮ [illegible]	೨೨-೨೪	೩೬ ವಿಷ್ಣುಕಂಚಿ	,,		

ಈ ಎಲ್ಲ [illegible] ಗಳನ್ನು ಸುತ್ತಿಕೊಂಡು [illegible] ತಾರೀಖು (ಶಕೆ ೧೮೫೫ ಮಾರ್ಗಶಿರ ಶು|| ೧೨ [illegible]) ಮುಂಬಯಿ [illegible] ಹುಬ್ಬಳ್ಳಿ [illegible] ವನ್ನು ಸೇರುವದು.

ಟ್ರೇನಿನಲ್ಲಿ ಒಬ್ಬರಿಗೆ ೩ ಜನರ ಸ್ಥಳವು [illegible]
ಈ ಎಲ್ಲ [illegible]
೨೦ ರೂಪಾಯಿ ಥರ್ಡಕ್ಲಾಸ [illegible] ರೂಪಾಯಿಗಳು ಮಾತ್ರ. ಟಿಕೇಟು ಪಡೆಯಬೇಕು [illegible]

[illegible] ಕ್ಲಾಸಿನವರು ೫೦ ರೂ ದರ್ಜಕ್ಲಾಸಿನವರು ೨೫ ರೂ ಅಡ್ವಾನ್ಸ್ ಕಳಿಸತಕ್ಕದ್ದು. [illegible] ೧೨ ವರ್ಷದ ಒಳಗಿನ ವಯಸ್ಸಿನ ಮಕ್ಕಳಿಗೆ ಅರ್ಧಚಾರ್ಜು ತೆಗೆದುಕೊಳ್ಳ[illegible] ವರು [illegible] ವೈಷ್ಣವಾದಿ ಎಲ್ಲಾ ಮತದವರಿಗೂ, ವೀರಶೈವರಿಗೂ ಪ್ರತ್ಯೇಕವಾಗಿ [illegible] ಮತ್ತು ದಿವಸದ ೨ ಊಟಗಳಿಗೆ ೧೨ ಆಣೆ ಕೊಡಬೇಕಾಗುವದು ಟ್ರೇನಿನಲ್ಲಿ [illegible] ದಸ್ತುಗಳಿರುವದರಿಂದ ವೀರಶೈವರ ಆಚಾರಕ್ಕೆ ಸುಕೂಲವುಂಟು [illegible] ಕನ್ನು ತರಿಸಿಕೊಳ್ಳತಕ್ಕದ್ದು. ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾ[illegible] ಜವಾನರು, ಡಾಕ್ಟರರೂ ಫೋಟೋಗ್ರಾಫರರೂ [illegible] ಇರುವರು ಹೋದಸಾರೆ ನ[illegible] ನಿನಲ್ಲಿ ಕಡಮಾಡಿಬಂದವರಿಗೆ ಸ್ಥಳ ಸಿಗದೆ ಹೋದ್ದರಿಂದ ಬಹಳ ಜನರು ನಿರಾಶೆಪಟ್ಟರು [illegible] ಟಿಕೇಟುಗಳಿಗಾಗಿ ತ್ವರೆಮಾಡತಕ್ಕದ್ದು

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವ[illegible]

ಶ್ರೀ ಗೌರೀಶಂಕರ ಕಂಪನಿಯ ಎಂಜನ್ ರೆಂಟೆಗಳು— [illegible] ಕಂಪನಿಯು [illegible] [illegible] ವರ್ಷ [illegible] ಹಾಗು [illegible] ಬಹಳ [illegible] ಗಳು [illegible] ಶ್ರೀ ಗೌರೀಶಂಕರ ಕಂಪನಿಗೆ [illegible] ಅಂಜನ್ ರೆಂಟೆಯು ಹೆಚ್ಚಿನ [illegible] [illegible]

ಜಿ. ಎ ಶಿರೂರ
ಮ್ಯಾನೇಜರ, ಶ್ರೀ ಗೌರೀಶಂಕರ ಯಾತ್ರಾಕಂಪನಿ, ಹುಬ್ಬಳ್ಳಿ
ಬಾಗಲಕೋಟೆ ಏಜಂಟ:— ಜಿ ಎಚ್ ಚನಪ್ಪಾ ಬಾಕ್‌ಸೇಲರ.

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು [illegible] ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು [illegible] ವರು ಬೇಗನೆ ನಮಗೆ ಆರ್ಡರಕೊಟ್ಟು ನೋಡಬೇಕು. ಹೈದರಾಬಾದಿನಿಂದಲೇ [illegible] ಗಳು ಪರಸ್ಥಳಕ್ಕೆ ಹೋಗಿ, ಅಲ್ಲಿಯ ಬಿಜಿನೆಸ್ಸ್‌ಗಳು ಅದರ ಮೇಲೆ ಬಿದ್ದು [illegible] ಕ್ಷವೆ ನೋಡಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಡಿಮೆ ಕ್ರಯಕ್ಕೆ ದೊರೆಯುವದಲ್ಲದೆ [illegible] ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವದು. [illegible]

ಗವಳಿಗುಡ್ ಹೈದರಾಬಾದ (ಡೆಕ್ಕನ್) **ಡಿ ಜಿ ಬೆಮ್ಮಲಗಿ**

ಬಾಸುತಕರ ಬ್ರದರ್ಸ

ಇವರ ಯಶವಂತ ಟೇಲರಿಂಗ ಫರ್ಮ[illegible]ದಲ್ಲಿ ಯಾವತ್ತೂ ನಮೂನೆಯ ಫ್ಯಾಶನೇಬಲ್ [illegible]ಗಳನ್ನು ಟಾಯಿಲರ ಹೊಲಿದು **ಕೊಡುತ್ತದೆ. ಗ್ರಾಹಕರು ತ್ವರೆಮಾಡಬೇಕು**

[illegible] ಬಾಸುತಕರ ಬ್ರದರ್ಸ
ಗುಳೆ [illegible]

ಕನ್ನಡಿಗನ ಚಂದಾ ವಿವ[illegible]

	ಸ್ಥಳೀಕರಿಗೆ	ಪರಸ್ಥ[illegible]
ತಿಂಗಳಿಗೆ	೧-೩-೬	೦-೧[illegible]
೩ ತಿಂಗಳಿಗೆ	೧-೪-೦	[illegible]
೬ ತಿಂಗಳಿಗೆ	೨-೮-೦	೫-[illegible]
ವರ್ಷಕ್ಕೆ	೫-೦-೦	೬-[illegible]

ವ್ಯವಸ್ಥಾ[illegible]

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ [illegible] ಯಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ಕನ್ನಡಿಗ

ಸಂಪಾದಕರು— ಆಲೂರ ವೆಂಕಟರಾಯರು.

ಧಾರವಾಡ— ರವಿವಾರ [illegible]

ಮದ್ರಾಸದಲ್ಲಿ ಭಯಂಕರ ಹೊಡೆದಾಟ.

[illegible]

[illegible] ತಾ|| ೨೨— ನಿನ್ನಿನ ದಿವಸ [illegible] ಯಲ್ಲಿ ಭಯಂಕರ ಹೊಡೆದಾಟವಾಗಿ ೧೩ ಜನ ಪೋಲೀಸರಿಗೂ ೬೦ ಜನರಿಗೂ ಗಾಯಗಳಾಗಿವೆ. [illegible] ಒಂದು ಹಿಂದೂ ದೇವಾಲಯದ ಟ್ರಸ್ಟಿಗಳು ಹಾಗು ಪೂಜಾರಿಗಳಲ್ಲಿ ಮೊದಲಿನಿಂದ ವೈಮನಸ್ಸು ಇತ್ತು. ನಿನ್ನಿನ ದಿವಸ [illegible] ಲಯದ ರಥೋತ್ಸವದ ಕಾಲಕ್ಕೆ [illegible] ದೇವಾಲಯದಲ್ಲಿ [illegible] ಟ್ರಸ್ಟಿ [illegible] ಪೋಲೀಸರ [illegible]. ಇದನ್ನು ಕಂಡು ಪೂಜಾರಿಗಳು [illegible] ಕಲ್ಲುಗಳನ್ನು ಒಗೆಯಹತ್ತಿದರು. ಇಷ್ಟರಲ್ಲಿ [illegible] ಪೋಲೀಸ ಕಮೀಶನರು ಕೆಲವು ಪೋಲೀಸರೊಂದಿಗೆ ಹೊಡೆದಾಟದ ಸ್ಥಳಕ್ಕೆ [illegible] ಜನರನ್ನು ಅಲ್ಲಿಂದ ಅಟ್ಟಿದರು. ಈ ಸಂಬಂಧವಾಗಿ ೩೫ ಜನರು ಸೆರೆ ಹಿಡಿಯಲ್ಪಟ್ಟಿದ್ದಾರೆ. (ಅ ಪ್ರ)

ಮಹಾತ್ಮರು ವರ್ಧಾಕ್ಕೆ ಹೊರಟರು.

ಮುಂಬಯಿ ತಾ|| ೨೨— ಮಹಾತ್ಮಾಜಿಯವರು ಈ ಹೊತ್ತಿನ ಸಂಜೆಯ [illegible] ಮೇಲದಿಂದ ವರ್ಧಾಕ್ಕೆ ಹೊರಟರು. [illegible] ಸಂಗಡ [illegible] ಮತ್ತು ಇತರ ಸಹಕಾರಿಗಳೂ [illegible]. [illegible] ಪ್ರಯಾಣದ ಸಮಯದಲ್ಲಿ [illegible] ಸ್ಟೇಶನ್ನಿನಲ್ಲಿ ಜನರು ವಿಶೇಷ ನೆರೆದಿದ್ದರು. [illegible] ಗಾಡಿಯು ಹೊರಡುವದಕ್ಕಿಂತ ಸ್ವಲ್ಪ ಮೊದಲೇ ಸ್ಟೇಶನಕ್ಕೆ ಬಂದು, ಹರಿಜನ ಕಾರ್ಯದ ಸಲುವಾಗಿ ಧನಸಹಾಯ ಮಾಡಬೇಕೆಂದು ನೆರೆದವರಿಗೆ ವಿನಂತಿ ಮಾಡಿಕೊಂಡರು. ಅವರು ವಿನಂತಿ ಮಾಡಿಕೊಂಡ ಕೂಡಲೆ ಅನೇಕ ಜನರು ಹಣವನ್ನೂ ಆಭರಣಗಳನ್ನೂ ಭರ ಭರನೆ ಕೊಟ್ಟರು.

[illegible] ವರ್ಧಾದಲ್ಲಿ ಮೂರುವಾರ [illegible] ವಿಶ್ರಾಂತಿ ತೆಗೆದುಕೊಳ್ಳುವರು. ಆದರೆ ಈ ಅವಧಿಯಲ್ಲಿ ಪ್ರಕೃತಿಯು ಸಂಪೂರ್ಣ ಸುಧಾರಿಸದಿದ್ದಲ್ಲಿ ಅವರು ಅಲ್ಲಿ ಹೆಚ್ಚು ಕಾಲ ಉಳಿಯಬಹುದು. (ಅ ಪ್ರ)

ಅಸೆಂಬ್ಲಿ ಅಧ್ಯಕ್ಷರು ಕಲಕತ್ತೆಗೆ

ಸಿಮಲಾ ತಾ|| ೨೨— ಅಸೆಂಬ್ಲಿಯ ಅಧ್ಯಕ್ಷರಾದ ಸರ್ ಷಣ್ಮುಖಂ ಚೆಟ್ಟಿಯವರು ಈ ಹೊತ್ತಿನ ದಿವಸ ಕಲಕತ್ತೆಗೆ ಹೊರಟರು. ಅವರು ಅಲ್ಲಿಂದ ಮದ್ರಾಸಕ್ಕೆ ಹೋಗಲಿದ್ದಾರೆ. (ಅ ಪ್ರ)

[illegible] ಸಿಕ್ಕಿತ್ತು.

[illegible] ತಾ|| ೨೨— ಪೋರಬಂದರಿಗೆ [illegible] ಎಂಬ [illegible] ಹಡಗಿನಲ್ಲಿ [illegible] ಬಿಸ್ಕಿಟ [illegible] ಸಿಕ್ಕಿವೆಯೆಂದು [illegible] ಸುದ್ದಿ ಬಂದಿದೆ. ಈ ಸಂಬಂಧವಾಗಿ ಪೋಲೀಸರು [illegible] ವಿಚಾರಣೆ ನಡೆಸುತ್ತಿದ್ದಾರೆ. (ಅ ಪ್ರ)

ಘಾಯನಾಸ್ಸ ಸೆಕ್ರೆಟರಿಗಳ ಆಗಮನ.

ಸಿಮಲಾ ತಾ|| ೨೨— ಸರ್ ಜಾರ್ಜ ಶುಸ್ಟರ ಇವರು ಈ ಹೊತ್ತಿನ ದಿವಸ ಇಂಗ್ಲಂಡದಿಂದ ತಿರುಗಿ ಬಂದು, [illegible] ಖಾತೆಯ ಕಾರ್ಯಭಾರವನ್ನು ವಹಿಸಿಕೊಂಡರು. [illegible] ಕಾರ್ಯನಿರ್ವಹಿಸುತ್ತಿದ್ದ [illegible] ಇವರು [illegible] ಬ್ಯಾಂಕ [illegible]. ಸಂಬಂಧದಲ್ಲಿ ಕೆಲಸ ಮಾಡಲು ನಿಯಮಿಸಲ್ಪಟ್ಟಿದ್ದಾರೆ. (ಅ ಪ್ರ)

ಇರಾಣದಲ್ಲಿ ಧ್ವಜದ ಗೊಂದಲ

ಸಿಮಲಾ ತಾ|| ೨೨— ಇರಾಣದ [illegible] ದಲ್ಲಿ ಸಂಭವಿಸಿದ ಧ್ವಜದ ಗೊಂದಲದ ಸಂಬಂಧವಾಗಿ ಈಗ ಸಿಮಲಾದಲ್ಲಿರುವ ಇರಾಣದ [illegible] ಬ್ರಿಟಿಶ [illegible] ನಂತರ— ಈ ಸಂಬಂಧವಾಗಿ ಬ್ರಿಟಿಶ ವಕೀಲ [illegible] ಮತ್ತು ಪರರಾಷ್ಟ್ರ ಖಾತೆಯವರು [illegible] ಮಾತುಕತೆ ನಡೆಸಿದರು. ಈ ಸಮಯದಲ್ಲಿ ಇರಾಣದ ಪರರಾಷ್ಟ್ರ ಖಾತೆಯವರು [illegible] ಬ್ರಿಟಿಶ ವಕೀಲರು [illegible] ವನ್ನು ಸ್ವೀಕರಿಸಿದರು. ಈ ಸಂಬಂಧವಾಗಿ ಬ್ರಿಟಿಶ ಸರಕಾರದವರು [illegible] ವ್ಯಕ್ತ ಮಾಡಿರುವದಿಲ್ಲವಾದ್ದರಿಂದ [illegible] ಈ ಸಂಬಂಧವಾಗಿ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯು ಅತಿಶಯೋಕ್ತಿಯದ್ದಾಗಿದೆ. (ಅ ಪ್ರ)

ಜಪಾನಿ ಹಾಗು ಹಿಂದೀ ಪ್ರತಿನಿಧಿಗಳ ಎದುರುಗೊಳ್ಳುವಿಕೆ

ಸಿಮಲಾ ತಾ|| ೨೨— ಜಪಾನಿ ಶಿಷ್ಟ ಮಂಡಲದವರು ಹಾಗು ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳು ಈ ಹೊತ್ತಿನ ದಿವಸ [illegible] ಭೆಟ್ಟಿಯಾದರು. ನಾಳಿನ ದಿವಸ [illegible] ವಿಚಾರಿಸಲ್ಪಡುವದು. (ಅ ಪ್ರ)

ಕಾಮಗಾರರ ಮುತ್ತಿಗೆ ೨೦೦ ಜನರ ಕೈದೆ

[illegible] ತಾ|| ೨೨— [illegible] ಮುತ್ತಿಗೆ [illegible] ಜನರನ್ನು ಕೈದೆ ಮಾಡಲಾಗಿದೆ.

[illegible] ಕಾರ್ಯ [illegible] ನ್ನು ಬಿಟ್ಟಿರದಿದ್ದ [illegible] ಮುಂದುವರಿಸಿದ [illegible] ತಾ|| [illegible] ದಿವಸ [illegible] ಪಟ್ಟಣದ [illegible] ೨೦೦ ಜನ ಕಾರ್ಮಿಕರನ್ನು ಕೊಂಡು ಅವರ [illegible] ಕೈವಶ ಮಾಡಿಕೊಂಡರು. ಯಾರ [illegible] ವಿಶ್ವಾಸನೀಯವಾದ [illegible] ಆದರೆ [illegible] ಪುನಃ ಕೈವಶ ಮಾಡಿಕೊಂಡಿರುವರೆಂದು ದಟ್ಟವಾದ ವಾರ್ತೆ ಹಬ್ಬಿದೆ. (ಅ ಪ್ರ)

ಮುಖಂಡರ ದೇಹೋದ್ಧಾರ

ಶ್ರೀ ಜಯಕರ— ಹಿಂದೀ ಸ್ವಾತಂತ್ರ್ಯ ಯುದ್ಧದ ಧುರಂಧರರು [illegible].

ಶ್ರೀ ಕೃಷ್ಣಮೂರ್ತಿ— [illegible].

ಡಾ ಟಾಗೋರ— [illegible].

ಕೃಷ್ಣ ಮೆನನ್— [illegible] ಹಿಂದೀ ಸ್ವಾತಂತ್ರ್ಯಕ್ಕೋಸ್ಕರ [illegible].

ರಾಜಾ [illegible] ರಾಮಮೋಹನರಾಯ [illegible] ಸಮಾಜ ಸುಧಾರಕರು [illegible] ಹಿಂದುಸ್ಥಾನದ ರಾಷ್ಟ್ರೀಯ ಚಳವಳಿಯ ಆಧಾರಸ್ತಂಭ [illegible].

[illegible] ಮಹಾಜನರ ಉತ್ಸವದ [illegible] ವರ್ತಮಾನಗಳು.

[illegible]

ಧಾರವಾಡ— ತಾ|| ೨೩ನೇ ದಿವಸ [illegible] ಸಂಜೆ [illegible] ಗಂಟೆಯ [illegible] ವತಿಯಿಂದ [illegible] ಶ್ರೀ ಕೇಶವರಾವ ಗೋಖಲೆಯವರ ವ್ಯಾಖ್ಯಾನವಾಯಿತು. 'ಕರ್ನಾಟಕ ಏಕೀಕರಣದ ಗುಟ್ಟು ಹಾಗು ಮಹತ್ವ' ಇದೇ ವ್ಯಾಖ್ಯಾನದ ವಿಷಯವಾಗಿತ್ತು.

ಹುಬ್ಬಳ್ಳಿ ತಾ|| ೨೩— ನಿನ್ನಿನ ದಿವಸ ಸಂಜೆಯಲ್ಲಿ [illegible] ಮಂಡಳದ ಪರವಾಗಿ [illegible] ಶ್ರೀ ಕೇಶವರಾವ ಗೋಖಲೆಯವರು "ಕರ್ನಾಟಕ ಏಕೀಕರಣ" ಎಂಬ ವಿಷಯದ ಮೇಲೆ ಭಾಷಣ ಮಾಡಿ ವಿಜಯನಗರದ ಸ್ಮಾರಕೋತ್ಸವವನ್ನು [illegible] ರಲ್ಲಿ ಜಂಪೆಯಲ್ಲಿ ಕನ್ನಡಿಗರೆಲ್ಲರೂ ಒಟ್ಟಾಗಿ ನೆರವೇರಿಸಬೇಕೆಂದು ಹೇಳಿದರು.

ಇಲ್ಲಿ ನಾಡಹಬ್ಬದ ಪರವಾಗಿ ತೆರೆಯಲ್ಪಟ್ಟ ಪ್ರದರ್ಶನದಲ್ಲಿ ಶ್ರೀ [illegible] ಪ್ರತಿಮೆ, [illegible] ಮುಂತಾದವರ ಫೋಟೋಗಳೂ, ಶ್ರೀ [illegible] ಕೌಶಲ್ಯಯುಕ್ತವಾದ [illegible] ಅಂಗಡಿಯೂ, ರಾಮದಾಸ ಕೆಮಿಕಲ್ ಸ್ಟೋರ್ಸಿನವರ ಅಂಗಡಿಯೂ ತೆರೆಯಲ್ಪಟ್ಟಿವೆ. [illegible] ಮುಂತಾದವುಗಳು ಚೆನ್ನಾಗಿವೆ. ಧಾರವಾಡ ಇತಿಹಾಸ ಮಂಡಲದ ಫೋಟೋ, [illegible] ಮೊದಲಾದವುಗಳೂ, ಹುಬ್ಬಳ್ಳಿಯ [illegible] ಗ್ರಂಥಗಳ ಪ್ರದರ್ಶನಕ್ಕೆ ವಿಶೇಷ ಕಳೆಯನ್ನುಂಟು ಮಾಡಿವೆ.

ಬೆಳಗಾವಿ— ನಾಡಹಬ್ಬದ ಉತ್ಸವದ ಮಂಡಳದ ಪರವಾಗಿ ತಾ|| ೨೨ನೇ ದಿವಸ ಶ್ರೀ ಹಾಲಭಾವಿ [illegible] ಅಧ್ಯಕ್ಷತೆಯ ಕೆಳಗೆ ಪಂಡಿತ ಹುಲಿಕವಿಯವರು 'ಪ್ರಾಚೀನ ಕನ್ನಡ ಕಾವ್ಯದ ಕೆಲವು ಗುಣಗಳು' ಎಂಬ ವಿಷಯದ ಮೇಲೆ ಭಾಷಣ ಮಾಡಿದರು.

ಅಥಣಿ— ಇಲ್ಲಿಯ ಕರ್ನಾಟಕ ಭುವನ [illegible] ದಿನಗಳ ವರೆಗೆ ನಾಡಹಬ್ಬವನ್ನು ಆಚರಿಸುವವರಿದ್ದಾರೆ.

ನಾಗಠಾಣ— ನಾಡಹಬ್ಬ ಮಂಡಳದ ವತಿಯಿಂದ ತಾ|| ೨೨ನೇ ದಿವಸ ಸಂಜೆಗೆ ಇಲ್ಲಿಯ ಕನ್ನಡ ಶಾಲೆಯಲ್ಲಿ ಕರ್ನಾಟಕ [illegible] ಶ್ರೀ ಆಲೂರ ವೆಂಕಟರಾಯರು "ಕರ್ನಾಟಕದ ಸಂಘಟನೆ" ಎಂಬ ವಿಷಯವಾಗಿ ಉಪನ್ಯಾಸ ಕೊಟ್ಟರು.

ಕನ್ನಡಿಗ.

ಧಾರವಾಡ— ರವಿವಾರ ತಾರೀಖು ೨೮—[illegible]—೧೯೩೪

ಖಾದಿಯಲ್ಲಿಯೂ ಕರ್ನಾಟಕವೇ ?

ಈ ಸಲ ನಾಡಹಬ್ಬವೂ ಗಾಂಧಿಜಯಂತಿಯೂ ಎರಡೂ ಕೂಡಿ ಬಂದಿರುವುದರಿಂದ ನಾಡಹಬ್ಬಕ್ಕೆ ಮತ್ತಿಷ್ಟು ಕಳೆ ಏರಿದೆ. ಇದೇ ಅವಸರದಲ್ಲಿ, ವಿಜಯನಗರದ ಸ್ಮರಣೋತ್ಸವದ ಕಲ್ಪನೆಗೂ ಎಲ್ಲೆಡೆಯಿಂದಲೂ ಪ್ರೋತ್ಸಾಹನವು ದೊರೆಯುತ್ತಿರುವುದರಿಂದ ತ್ರಿವೇಣೀಸಂಗಮವಾದಂತಾಗಿದೆ. ನಾಡಹಬ್ಬದ ವಿಷಯವಾಗಿ ಕನ್ನಡಿಗರು ಮಾಡಬೇಕಾಗಿರುವ ಕರ್ತವ್ಯಗಳನ್ನು ನಿವೇದಿಸಿಯೇ ಇರುವೆವು. ವಿಜಯ ನಗರ ಸ್ಮರಣೋತ್ಸವದ ಸಿದ್ಧತೆಯನ್ನು ಮಾಡಲಿಕ್ಕೆ ಇದು ಅನುಕೂಲ ಕಾಲವು. ಆ ಸಂಬಂಧವಾಗಿ ನಾವು ಮಾಡಬೇಕಾದ ಮುಖ್ಯಕರ್ತವ್ಯವೆಂದರೆ ಪ್ರತಿಯೊಂದು ಊರಲ್ಲಿ ಮುಂಚೆ ತಾತ್ಪೂರ್ತಿಕ ಸಮಿತಿಗಳನ್ನು ಸ್ಥಾಪಿಸುವುದು. ಹೀಗೆ ಅನೇಕ ಕಡೆಗೆ ಮಂಡಳಗಳು ಈ ಹಬ್ಬದಲ್ಲಿ ಸ್ಥಾಪಿತವಾದರೆ, ತೀವ್ರವೇ ಯಾವುದೊಂದು ಸ್ಥಳದಲ್ಲಿ ಅಖಿಲ ಕರ್ನಾಟಕವೆಲ್ಲ ಒಂದು ಸಭೆಯನ್ನೇರ್ಪಡಿಸಿ ಆ ಬಗೆಗೆ ಹಣವನ್ನು ಕಳಿಸಿಕೊಡುವುದು. ಇತಿಹಾಸ ಬರೆಯಿಸುವುದು ಇವೇ ಮುಂತಾದ ಉದ್ಯೋಗಗಳಿಗೆ ಕೈಹಾಕಬೇಕಾಗುತ್ತದೆ. ಅಲ್ಲಿಯವರೆಗೆ ನಾವು ಹಣಕೂಡಿಸುವ ಕಾರ್ಯವನ್ನು ಕೈಕೊಳ್ಳಕೂಡದು. ಅಖಿಲ ಕರ್ನಾಟಕ ಸಭೆಯನ್ನು ಕೂಡಿಸುವ ಭಾರವನ್ನು ಬೆಳಗಾಂವಿ, ಹುಬ್ಬಳ್ಳಿಗಳಂಥ ಈಗಾಗಲೇ ಈ ವಿಷಯದಲ್ಲಿ ಹೆಚ್ಚು ಉತ್ಸಾಹವನ್ನು ತೋರಿಸುವ ಪಟ್ಟಣಗಳು ಮಿಕ್ಕ ಪಟ್ಟಣಗಳು ಮಾಡಬೇಕೆಂದು ನಮ್ಮ ನಮ್ರ ಸೂಚನೆ.

ಇನ್ನು ಖಾದಿಯ ವಿಷಯವಾಗಿ ಈ ಹಬ್ಬದಲ್ಲಿ ನಮ್ಮ ಕರ್ತವ್ಯವೇನಿರುವುದೆಂಬುದನ್ನು ನಾವು ಈ ಲೇಖದಲ್ಲಿ ಹೇಳುತ್ತೇವೆ. ಈ ಸಂಬಂಧವಾಗಿಯೂ ನಾವು ಹೇಳುವುದು ಒಂದೇ ಮುಖ್ಯಮಾತು. ಅದೇನೆಂದರೆ— ಈ ವಿಷಯದಲ್ಲಿಯೂ ಕರ್ನಾಟಕದ ದೃಷ್ಟಿಯನ್ನು ಇಡತಕ್ಕದ್ದು. 'ಹೋದಲ್ಲಿ ಬಂದಲ್ಲಿ ಇವರು ಕರ್ನಾಟಕವನ್ನೇಕೆ ತರುವರು' ಖಾದಿಯೇನೂ ಕರ್ನಾಟಕವೊಂದಕ್ಕೆ ಸಂಬಂಧಿಸಿದ ಪ್ರಶ್ನೆಯಲ್ಲ, ಇಲ್ಲಿಯೂ ಈ ಪ್ರಾಂತಿಕ ಅಭಿಮಾನ ಎಂದು ಮೋರೆ ಮುದುಡಿಕೊಳ್ಳುವ ಜನರು ಕನ್ನಡಿಗರಲ್ಲಿಯೇ ಅದರಲ್ಲಿಯೂ ದುಃಖದ ಸಂಗತಿಯೆಂದರೆ ಕಾಂಗ್ರೆಸ ಕೆಲಸಗಾರರಲ್ಲಿಯೇ ಈಗ ಸಹ ಅನೇಕರಿರುವರು. ಅವರಿಗೆ ಇನ್ನೂ ರಾಷ್ಟ್ರೀಯತ್ವದ ನಿಜವಾದ ಕಲ್ಪನೆಯಾಗಿಲ್ಲವೆಂದೇ ನಾವು ಪುನಃ ಪುನಃ ಹೇಳುವುದು. ಹಿಂದುಸ್ಥಾನದ ಹಿತಕ್ಕೆ ವಿರುದ್ಧವಾಗದೆ ಇದ್ದ ಸರ್ವ ಕಾರ್ಯಗಳಲ್ಲಿ ನಮ್ಮ ಕೆಲಸಗಾರರಲ್ಲಿ ಕರ್ನಾಟಕ ದೃಷ್ಟಿಯು ಬೇಕು. ಖಾದಿಯ ಕಾರ್ಯವು ಹಾಗೆ ವಿರುದ್ಧವಿರುವುದಿಲ್ಲವೆಂಬುದಷ್ಟೇ ಅಲ್ಲ, ಅದು ಬಹಳ ಪೋಷಕವಾದುದೇ ಇರುತ್ತದೆ. ಮಹಾತ್ಮಾಗಾಂಧಿಯವರು ಯಾವಾಗಲೂ ಅವರವರು ತಮ್ಮ ತಮ್ಮ ಭಾಗದಲ್ಲಿ ಖಾದಿಯು ಹೆಚ್ಚು ಹುಟ್ಟುವಂತೆ ಮಾಡಿರಿ ಎಂದು ಉಪದೇಶಿಸುವುದರ ಮರ್ಮವಾದರೂ ಇದೇ. ಪ್ರತಿಯೊಬ್ಬನು ತನ್ನ ಮನೆಯಲ್ಲಿ, ತನ್ನ ಊರಲ್ಲಿ, ತನ್ನ ಭಾಗದಲ್ಲಿ, ತನ್ನ ಪ್ರಾಂತದಲ್ಲಿ ಎಷ್ಟು ಬಗೆಯ ಖಾದಿಯು ಹುಟ್ಟುವುದು ಶಕ್ಯದಿಯೋ ಅಷ್ಟಲ್ಲ ಮಾದರಿಗಳನ್ನು ಹುಟ್ಟಿಸುವ ಯೋಜನೆ ಮಾಡಬೇಕು. ನಮ್ಮ ಕನ್ನಡಿಗರ ದೃಷ್ಟಿಯನ್ನು ಈ ಮಾತಿನ ಕಡೆಗೆ ಎಳೆಯುವುದೇ ಈ ಲೇಖದ ಉದ್ದೇಶ. ಈಗ ನಾವೇನು ಹಾಗೆ ಮಾಡುತ್ತಿರುವುದಿಲ್ಲವೋ? ಎಂದು ಅನೇಕರು ಕೇಳಬಹುದು. ಕೆಲವರು ಮಾಡುತ್ತಿರಬಹುದು. ಆದರೆ ಬಹು ಜನರು ಮಾಡುವುದಿಲ್ಲವೆಂದು ಹೇಳಬಲ್ಲೆವು. ವಿಶೇಷತಃ ಖಾದಿಯಲ್ಲಿ ಪ್ರತ್ಯಕ್ಷ ಕಾರ್ಯಮಾಡುವವರು ಲಕ್ಷ್ಯವನ್ನು ಇತ್ತ ಎಳೆಯಲಿಚ್ಛಿಸುತ್ತೇವೆ. ಕರ್ನಾಟಕದಲ್ಲಿ ತರ ತರದ ಖಾದಿ ಹುಟ್ಟಲಿಕ್ಕೆ ಬಹಳೇ ಅಸ್ಪದವುಂಟು. ಈ ಮಾತಿನ ವಿಚಾರವನ್ನು ಮಾಡುವಾಗ ನಾವು ಉತ್ಕೃಷ್ಟವಾದ ಹತ್ತಿಯನ್ನು ಬೆಳೆಸುವ ಮೊದಲ್ಗೊಂಡು ವಿಚಾರ ಮಾಡಬೇಕಾಗುತ್ತದೆ. ಉದ್ದ ಎಳೆಯ ಹತ್ತಿಯು ಹೇಗೆ ಬೆಳೆಯಬೇಕು, ನೂಲು ತೆಗೆಯುವ ಜನರು ಉತ್ಕೃಷ್ಟ ನೂಲು ಹೇಗೆ ತೆಗೆದಾರು, ಇವೇ ಮುಂತಾದ ಪ್ರತಿಯೊಂದು ಸಂಗತಿಯ ವಿಚಾರವನ್ನು ಮಾಡುವುದು ಆವಶ್ಯವಿದೆ. ಇತ್ತೀಚೆಗೆ ಈ ಚಿಕ್ಕಪುಟ್ಟದಾಗಿ ತೋರುವ ಸಂಗತಿಗಳ ಕಡೆಗೆ ಜನರು ದುರ್ಲಕ್ಷ್ಯಮಾಡಿದಂತೆ ತೋರುತ್ತದೆ. ಅದೇ ಬಗೆಯಾಗಿ, ತರತರದ ಮಾದರಿಗಳನ್ನು ಮಾಡುವ ಉದ್ಯೋಗವೂ ಸಾಕಷ್ಟು ನಡೆದಿರುವದಿಲ್ಲ. ಕಂಬಳಿಯು ಖಾದಿಯಲ್ಲಿ ಬರುತ್ತದೆಂಬ ಮಾತು ಅನೇಕರು ಮರೆತೇ ಬಿಡುತ್ತಾರೆ. ಕಂಬಳಿಯನ್ನು ನೇಯಿಸುವುದರಲ್ಲಿಯೂ ಅದನ್ನು ಹೆಚ್ಚು ಚೆಲುವಾಗಿಯೂ ನುಣುಪಾಗಿಯೂ ಮಾಡುವುದರಲ್ಲಿಯೂ ನಾವು ಮನಸ್ಸು ಹಾಕಬೇಕಾಗಿದೆ. ಧಾಬಳಿ, ಹೊತ್ತುಕೊಳ್ಳುವ ಶಾಲುಗಳನ್ನು ನಾವು ತಯಾರಿಸಬಹುದು. ಮುಖ್ಯವಾಗಿ ಈ ವಿಷಯಗಳ ವಿಚಾರವನ್ನು ಕರ್ನಾಟಕದ ದೃಷ್ಟಿಯಿಂದ ಮಾಡತೊಡಗಿದರೆ ಅನೇಕ ಸಂಗತಿಗಳು ತಾವೇ ಹೊಳೆಯುವವು.

ಮಹಾತ್ಮರು ವರ್ಧಾಕ್ಕೆ ಬಂದರು.

ವರ್ಧಾ ತಾ॥ ೨೩. ಮಹಾತ್ಮಾ ಗಾಂಧಿಯವರು ಉಪೋಷಿತ ದಿವಸ ಮುಂಜಾನೆ ನಾಗಪುರ ಮೇಲಿಂದ, ಶ್ರೀ ಕಸ್ತೂರಿಬಾಯಿ, ಮೀರಾಬೇನ, ಪ್ರೇಲನಾಗಿ, ಪ್ರೋಲಿಯವರೊಂದಿಗೆ ಇಲ್ಲಿಗೆ ಬಂದರು. [illegible] ನಾಗರಿಕರು ಊರಲ್ಲಿಯ ಕೆಲಸಗಾರರೂ ಅವರ ಸ್ವಾಗತ [illegible] ಸ್ಟೇಶನಕ್ಕೆ ಬಂದಿ[illegible] ನಾಗಿಯೂ ಹಾಗು ಕ್ರಮ ಕಟ್ಟಿಕೆಯೂ ಕಂಡರು. ಆದರೂ ಅವರಲ್ಲಿ ಉಲ್ಹಾಸ ವೃತ್ತಿಯು ಕಳೆದೋರುತ್ತಿತ್ತು.

ಮಹಾತ್ಮರು, ಸೇಟ ಜಮನಾಲಾಲರ ಬಿಡಾರಕ್ಕೆ ಹೋದರು. ಅವರು ಮಾಡುವದಕ್ಕೆ ಹೋಗಿ ಅಕ್ಟೋಬರ ೧೫ರ ವರೆಗೆ ಇಲ್ಲಿ ಇರಲು ಒಪ್ಪಿಕೊಂಡಿರುವರೆಂದು ಗೊತ್ತಾಗುತ್ತದೆ. ಜವಾಹರಾ ಮಹಾತ್ಮರಿಗೆ ಒಂದು ವರುಷದವರೆ ಸಂಪೂರ್ಣ ವಿಶ್ರಾಂತಿ ಕೊಡಲು ನಿಶ್ಚಯಿಸಿದ್ದರಿಂದ, ಈ ತಿಂಗಳ ಕೊನೆಯ ವರೆಗೆ ಮಹಾತ್ಮರ ಭೆಟ್ಟಿಗೆ ಯಾರನ್ನೂ ಬಿಡುವದಿಲ್ಲ. ([illegible])

" ಗರ್ಭಗುಡಿ "

ಇದು ಶ್ರೀ ಶಿವರಾಮ ಕಾರಂತರು ಬರೆದ ಸಾಮಾಜಿಕ ಫಾರ್ಸು. ತಾ॥ ೨೨ ನೆಯ ದಿವಸ ಕರ್ನಾಟಕ ಕಾಲೇಜದ ನಾಟ್ಯ ಸಂಘದವರಿಂದ ಅಭಿನಯಿಸಲ್ಪಟ್ಟಿತು. ಇತ್ತೀಚೆಗೆ ಬ್ರಾಹ್ಮಣ ಸಮಾಜದಲ್ಲಿ ಬೇರೂರಿದ ಅಸ್ಪೃಶ್ಯ ದೇವರಿಗೆ ಕೂ, ಅನೀತಿಪರ ಆಚರಣೆಗಳೂ ಗಿ ಚಿತ್ರಿಸಲ್ಪಟ್ಟಿವೆ. ಉಡುಪಿ ಮಠಗಳ ಸನ್ನಿಧಿಗಳಲ್ಲಿ ಬ್ರಾಹ್ಮಣರಿಂದಾಗುವ ಅನೀತಿ ವಿಷಯಕ ಆಚರಣೆಗಳ ಬಗ್ಗೆ, ದಕ್ಷಿಣ ಕನ್ನಡ ಜಿಲ್ಲೆಯ ವೃತ್ತಪತ್ರಿಕೆಗಳಲ್ಲಿ ಆಗಾಗ ಅಕ್ಷೇಪಾರ್ಹ ಸಂಗತಿಗಳು ಪ್ರಕಟವಾಗಿವೆ. ಇಂತಹ ಆಕ್ಷೇಪಾರ್ಹ ಕೆಲ ಕೃತಿಗಳು ಈಗ ರಂಗಭೂಮಿಯ ಮೇಲೆ ಬಂದಿವೆಂಬುದು 'ಗರ್ಭಗುಡಿ' ಯಿಂದ ಸ್ಪಷ್ಟವಿದೆ. ಬ್ರಾಹ್ಮಣ ಸಮಾಜದ ಅವನತಿಯು ಹೆಚ್ಚುಗುತ್ತ ನಡೆದ ಈ ನ ಕಾಲದಲ್ಲಿ ಇಂತಹ ಫಾರ್ಸುಗಳು ಸಮಾಜವನ್ನು ಹೊಡೆದೆಬ್ಬಿಸಲು ಉಪಯೋಗವಾದರೂ ಆಗಬಹುದು.

ಆದರೆ ಇಂತಹ ಕೃತಿಗಳು ಪ್ರತ್ಯಕ್ಷವಾಗಿ ತೋರಿಸಲ್ಪಡತಕ್ಕದು ಅತ್ಯವಶ್ಯ. ದುಡ್ಡು ಕೊಟ್ಟು ನೋಡಲಿಕ್ಕೆ ಬರುವವರು ದುಡ್ಡಿದ್ದವರೇ ಮಾತ್ರ. ಗುಡಿ, ಛಾವಡಿ, ಬೈಲುಗಳಲ್ಲಿ ಪ್ರಯೋಗಿಸಿ ಸಮಾಜದಲ್ಲಿ ಚೈತನ್ಯವುಂಟಾಗುವಂತೆ ಬಳಸಲ್ಪಡುವದು ಆವಶ್ಯವಲ್ಲವೇ? 'ಅಮೇಚೂರ' ಜನರಿಗೆ ಖರ್ಚು ವ್ಯವಸಾಯಿಕ ಕಂಪನಿಗಳಂತೆ ಹೆಚ್ಚಾಗಿ ಬರುವದಿಲ್ಲ. ಆದರಿಂದ ಲೋಕಸಂಗ್ರಹ ಕಾರ್ಯವನ್ನು ಆ ಬಗೆಯಿಂದ ಮಾಡುವ ಹೊಣೆಯನ್ನು 'ಅಮೇಚೂರ'ರು ಹೊರುವದು ವಿಹಿತವಲ್ಲವೇ ?

ಅಸ್ಪೃಶ್ಯರ ವಿಷಯವೂ ಈ ಫಾರ್ಸಿನಲ್ಲಿ ತೊಡಕಿಸಲ್ಪಟ್ಟಿದೆ. " ಅಸ್ಪೃಶ್ಯೋದ್ಧಾರದ ಮೆಟ್ಟಲು ಪರಿಮಿತಿಯಾಗಿರಬೇಕು, 'ರೋಟಿಬೇಟಿ' ಗಳ ವರೆಗೆ ಮೆಟ್ಟಲುಗಳು ಬಂದರೆ, ನಮಗೆ ಒಪ್ಪಿಗೆಯಿಲ್ಲ" ಎಂ ಎಂದಾಗಿ ಗುಣಗುಟ್ಟುತ್ತ ಮನೆಯಲ್ಲಿ ಕುಳಿತಿರುವ ಕರ್ಮಠರು ತಮ್ಮ ಖಂಡಿತವಾದ ಮತವನ್ನೂ ಅದಕ್ಕಿದ್ದ ಸಾಧಕ ಬಾಧಕ ವಿಚಾರಗಳನ್ನೂ ಸಮಾಜದಲ್ಲಿ ಮಂಡಿಸಲು ಮುಂದೊರೆಯಬಾರದೇ, ಅಷ್ಟೆ ಚೈತನ್ಯ. ಮನೆಯಲ್ಲಿ ಕೈಲಾಗದವರಂತೆ ಕುಳಿತುಕೊಳ್ಳುವ ಕಾಲವಿದಲ್ಲೆಂಬುದನ್ನು ಮರೆಯಕೂಡದು.

ಇನ್ನು 'ಗರ್ಭಗುಡಿ' ಯ ಅಭಿನಯದ ಬಗ್ಗೆ ೧೩ ಜನ ನಟರಲ್ಲಿ ಶ್ರೀ ಶ್ರೀನಿವಾಸದ ಶಾಸ್ತ್ರಿ, ಶ್ರೀ ಆರ್. ಡಿ. ಕಾಗಾರ ಭಾನುಕೋಟಿ, ನಾಗೇಶ ಚಂದ್ರಶಾನಿ ಈ ಮೂವರು ಕ್ರಮದಿಂದ ಪ್ರಶಸ್ತಿ ಹೊಂದಿ, ಪದಕಗಳನ್ನು ದೊರಕಿಸಿದ್ದು ಅವರಿಗೆ ಭೂಷಣವೇ. ಒಂಬತ್ತು ಮಂದಿ ತಮ್ಮ ಪಾತ್ರಗಳನ್ನು ಸರಿಯಾಗಿ ವಹಿಸಿದರು. ಗುಂಡಪ್ಪನು ರಂಗಭೂಮಿಗೆ ತೀರ ಹೊಸಬನೇನೋ ಎಂಬಂತೆ ತೋರಿಸಿಕೊಂಡನು. ಕ್ರೀಡಾದಂಗಳದವರೂ ಪಣ್ಣಪ್ಪನೂ 'ಪಾಪು' ಆಗಬಹುದು. ಲಕ್ಷ್ಮಪ್ಪನು ಈ ನಾಟಕದಲ್ಲಿ ಮಹತ್ವದ ಪಾತ್ರ. ಈ ಮುದುಕಿಗೆ ಶಕ್ಯಾಂಶ ಅವನೇ ಕೋ ಅಭಿನಯಿಸಲಿಲ್ಲ. ಪ್ರೇಕ್ಷಕರಿಗೆ ಬೇಸರ ಕಾಣದಂತೆ ಕೆಲವರು, ಬೆನ್ನು ಅಗಾಗ ತೋರಿಸುತ್ತ ಇನ್ನಿತರರೂ ರಂಗಭೂಮಿಯಲ್ಲಿ ನಟಿಸುತ್ತಿದ್ದುದು ಸರಿಯಲ್ಲ.

ಕರ್ನಾಟಕ ಕಾಲೇಜದ ಆಟಪಟಕ್ಕಗಳಲ್ಲಿ ಕರ್ನಾಟಕ ಭಾಷೆಗೇನೇ ಎಲ್ಲ ರೀತಿಯಿಂದಲೂ ಪ್ರಶಸ್ತಿ ದೊರಕತಕ್ಕದ್ದು. ಆಭಾರಪ್ರದರ್ಶನ, ಹಸ್ತಪತ್ರಿಕೆ, ಅಭಿನಂದನೆ ಮೊದಲಾದವುಗಳಲ್ಲಿ ಇಂಗ್ಲೀಷ ಬಳಕೆಯು ಇರುತ್ತಿದ್ದುದು ಅಷ್ಟೊಂದು ಭೂಷಣವಲ್ಲ.

ಸ್ಥಳೀಕ ಚಂದಾದಾರರ ಬಿನ್ನಹ.

ಧಾರವಾಡದ ನಗರವಾಸಿಗಳಿಗೆ 'ಕನ್ನಡಿಗ' ನ ಕಳೆದ [illegible] ದಿಂದ ಬರುತ್ತಿರುವನಷ್ಟೇ ? ಈ [illegible] ಸಂಖ್ಯೆಯ ಜನರು ಚಂದಾ [illegible] ಆಶ್ರಯ ಕೊಟ್ಟಿದ್ದಕ್ಕಾಗಿ ನಾವು ಅವರಿಗೆ ಧನವಾದ [illegible] ಸಿ. ಈಗ ಪಾವತಿ ತೆಗೆದುಕೊ[illegible] ಬರುವ ನಮ್ಮ ಹುಡುಗರ ಕೈಯ[illegible] ಚಂದಾ ಹಣ ಕೊಟ್ಟು, ಪಾವತಿ [illegible] ಯಬೇಕಾಗಿ ಬೇಡಿಕೊಳ್ಳುತ್ತೇವೆ.

ಇಹವೃತ್ತ

ನಾಡಹಬ್ಬದ ಕಾರ್ಯಕ್ರಮ

ತಾ॥ ೨೪— ಪ್ರೊ. ಸಾಸನೂರ ವ್ಯಾಖ್ಯಾನ ವಿಷಯ— ಹೊಸ ಕನ್ನಡ ಸೃಷ್ಟಿ

ತಾ॥ ೨೫— ಡಾ. ಕುಮ್ಮಿನಕಟ್ಟಿ ಎಚ್ ಡಿ ಇವರ ವ್ಯಾಖ್ಯಾನ ವಿಷಯ ಯನಶಾಸ್ತ್ರದ ಸ್ಥಾನ

ಸ್ಥಳ— ಮುನಸಿಪಾಲಿಟಿ ಅಟ್ಟ ಸಂಜೆಯ ೬॥ ಗಂಟೆ

ಮೈಸೂರ ಸಂಸ್ಥಾನದ ಸುದ್ದಿಗಳು

ಬೆಂಗಳೂರ ತಾ॥ ೨೧—

ಮೈಸೂರ ಸಂಸ್ಥಾನದ ಅಸ್ಪೃಶ್ಯೋದ್ಧಾರಣ ಸಂಘದವರು ಸಪ್ಟೆಂಬರ ೨೪ನೇ ದಿವಸ ಅಖಿಲ ಮೈಸೂರ ಸಂಸ್ಥಾನದಲ್ಲಿ ಹರಿಜನ ದಿನಾಚರಣೆ ಮಾಡಬೇಕೆಂದು [illegible] ಮಾಡಿಕೊಂಡಿದ್ದಾರೆ.

ಅಸ್ಪೃಶ್ಯತೆಯ ಮೈಸೂರ ಸ[illegible] ಸಮ್ಮೇಲನವನ್ನು ಇದೇ ಸಪ್ಟೆಂಬರ ೨೬[illegible] ರೀಖು ಪ್ರಾತಃಕಾಲ ೯ ಗಂಟೆಗೆ ಮೈಸೂರ[illegible] ಗರ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಮುಖ್ಯವರಾಜರಾದ ಸರ್ ಶ್ರೀ ಕಂಠೀರವ ನರಸಿಂಹರಾಜ ಒಡೆಯರ ಬಹದ್ದೂರರವರು [illegible] ರಂಭ ಮಾಡಲು ಒಪ್ಪಿರುತ್ತಾರೆ. ಮುದ್ರಾ[illegible] ಪ್ರಧಾನ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ದಿ ಬ ಎಂ. ರಾಮಸ್ವಾಮಿ ಬಿ ಎ ಬಿ. ಎಲ್. ರವರು ಅಧ್ಯಕ್ಷತೆಯನ್ನು ವಹಿಸುವರು. ಸಮ್ಮೇಲನವು ೨೬ ಮತ್ತು ೨೭ ತಾರೀಖುಗಳ ವರೆಗೆ ನಡೆಯುವದು.

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಲ ಪತ್ತಿ ಕಂಪನಿ)

ಹುಬ್ಬಳ್ಳಿ ತಾ॥ ೨೩ (ಮಧ್ಯಾಹ್ನ ೨ಗಂಟೆ)

ಜವಾರಿ ಹತ್ತಿ	೧೯೫
ಅಷ್ಟಂಡ ಹತ್ತಿ	೧೨೫-೧೨೩
ವಿಲಾಯತಿ ಹತ್ತಿ	೯೬-೯೮
ಸ್ಕ್ಯಾಕ್ಸ ಹತ್ತಿ	೧೧೨ ೧೧೩
ಜೀನ ಅರಳೆ	೭೮-೮೦
ಪಬ್ಬುಲ್ ದೂಲ ಅರಳೆ	೭೦-೭೩
ಸಾಜನ ಅರಳೆ	೭೦-೭೨
ಜೋಳ	೧೭-೧೮
ಗೋದಿ	೬॥-೭॥
ಹೆಸರು ಜವಾರಿ	೯-೧೨
ಉದ್ದು	೬-೭।
ಕಡಲೆ	೫॥-೬
ಕುಸಬಿ	೧॥
ತುರಿ	೧೧೬-೨೨

ಬೆಳ್ಳಿ ಭಂಗಾರ

ಭಂಗಾರ	
ಬೆಳ್ಳಿ	

ಲಾಹೋರದಲ್ಲಿ ಬಾಂಬ

ಲಾಹೋರ ತಾ ೨೨— ಅನಾರಕಲಿ ಪೇಟೆಯಲ್ಲಿ ಆಚೆಯ ಬೀದಿಯಲ್ಲಿರುವ ಒಂದು ಸ್ಟೇಶನರಿ ಅಂಗಡಿಯಲ್ಲಿ ಈಹೊತ್ತಿನ ದಿವಸ ರಾತ್ರಿ ೧೦ ಗಂಟೆಗೆ ಭಯಂಕರವಾದದ್ದೊಂದು ಬಾಂಬು ಸ್ಫೋಟವಾಯಿತು. ಈ ಸ್ಫೋಟದಿಂದ ಅಂಗಡಿಯಲ್ಲಿಯ ಆಳಿಗೆ ಭಯಂಕರ ಗಾಯ ಸಂಭವಿಸಿದೆ. ಈ ಬಾಂಬು ಬಂಗಲೆದ ಹತ್ತಿರವಲ್ಲಿಯೇ ಹಾರಿದ್ದರಿಂದ ಬಾಗಿಲುಗಳು ಪುಡಿಪುಡಿಯಾಗಿ ಬಿದ್ದಿರುತ್ತವೆಂದೂ, ಮತ್ತು ಅಪರಿಮಿತ ಹಾನಿ ಸಂಭವಿಸಿದೆಯೆಂದೂ ತಿಳಿಯುತ್ತದೆ.

(ಕ ಪ್ರ)

ಮಹಾತ್ಮಾ ಗಾಂಧಿಯವರಿಗೆ ಲಖನೌ ಪರಿಷತ್ತಿನ ಬೆಂಬಲ

ಲಖನೌ ತಾ|| ೨೩— ಇಲ್ಲಿ ಕೂಡಿದ ಸಂಯುಕ್ತ ಪ್ರಾಂತದ ಕಾಂಗ್ರೆಸ ಮುಖಂಡರ ಔಪಚಾರಿಕ ಪರಿಷತ್ತು ಈಹೊತ್ತು ಮಧ್ಯಾಹ್ನದಲ್ಲಿ ಸಮಾಪ್ತವಾಯಿತು ರಫಿ ಅಹಮ್ಮದ ಕಿದವಾಯಿಯವರು ಪರಿಷತ್ತಿನ ಸಂಬಂಧವಾಗಿ ಕೆಳಗಿನಂತೆ ಪ್ರಕಟನೆ ಹೊರಡಿಸಿದ್ದಾರೆ

ಸಂಯುಕ್ತಪ್ರಾಂತದ ಕಾಂಗ್ರೆಸ್ ಕಮಿಟಿಯವರು ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಆರ್ಥಿಕ ವಿಷಯದಲ್ಲಿ ವಿಶೇಷವಾದ ಬದಲಾವಣೆಯಾಗಬೇಕೆಂಬ ಅಭಿಪ್ರಾಯವುಳ್ಳವರಿದ್ದು, ಮಹಾತ್ಮರು ಈ ಅಭಿಪ್ರಾಯಕ್ಕೆ ತಮ್ಮ ಒಪ್ಪಿಗೆ ಕೊಟ್ಟಿದ್ದನ್ನು ನೋಡಿ ಸಂತೋಷವಾಗುತ್ತದೆ. ಈ ಆರ್ಥಿಕ ಬದಲಾವಣೆಯೆಂದರೆ ಧನಿಕರ ಹಿತಸಂಬಂಧದಲ್ಲಿ ಸಾಮಾನ್ಯರಿಗೆ ಅನುಕೂಲವಾಗುವಂತೆ ಬದಲಾವಣೆಯಾಗುವದೇ ಇರುತ್ತದೆ. ಪರಿಷತ್ತಿನಲ್ಲಿ ಕಾಂಗ್ರೆಸದ ಸದ್ಯದ ಕಾರ್ಯ ಹಾಗು ಸ್ವಾತಂತ್ರ್ಯ ಯುದ್ಧವನ್ನು ಮುಂದರಿಸುವ ಮಾರ್ಗ ಇವುಗಳ ಬಗ್ಗೆಯೂ ಚರ್ಚೆಯಾಯಿತು ಮಹಾತ್ಮರು ಈ ಸಂಬಂಧವಾಗಿ ವ್ಯಕ್ತಮಾಡಿದ ಅಭಿಪ್ರಾಯಗಳೂ ವಿಚಾರ ಮಾಡಲ್ಪಟ್ಟವು

(ಕ ಪ್ರ)

ಸಂಯುಕ್ತಪ್ರಾಂತದಲ್ಲಿ ದಂಗೆ ಫೌಜದಾರನ ಕೊಲೆ

ಲಖನೌ ತಾ ೨೨— ಮೋಹನಲಾಲಗಂಜ ವಿಭಾಗದ ಕರೋರಾ ಎಂಬ ಹಳ್ಳಿಯಲ್ಲಿ ಇಲ್ಲಿಯ ಜನರು ಮೋಹನಲಾಲಗಂಜದ ಫೌಜದಾರನಾದ ಪಂಡಿತ ಶ್ರೀ ಪ್ರಕಾಶ ಹಾಗು ಪೋಲೀಸರ ಮೇಲೆ ಏರಿ ಹೋಗಿ ಅವರನ್ನು ಥಳಿಸಿದ್ದರಿಂದ, ಫೌಜದಾರರು ಮರಣಹೊಂದಿದ್ದಲ್ಲದೆ ಇಬ್ಬರು ಪೋಲೀಸರಿಗೆ ಭಯಂಕರ ಗಾಯವಾಗಿದೆಯೆಂದು ಸುದ್ದಿ ಬಂದಿದೆ ಫೌಜದಾರರು ಕೆಲವು ಜನ ಪೋಲೀಸರೊಂದಿಗೆ ಅಲ್ಲಿನ ಎರಡು ಪಂಗಡಗಳಲ್ಲಿ ಉದ್ಭವಿಸಿದ್ದ ಜಗಳದ ಕಾರಣವನ್ನು ಪತ್ತೆ ಹಚ್ಚಲು ಈ ಹಳ್ಳಿಗೆ ಹೋಗಿದ್ದರು ಆದರೆ ಒಂದು ಪಂಗಡದವರು ಅವರು ಕೆಲವು ಕೊಂಡ ಮನೆಯನ್ನು ಮುತ್ತಿದ್ದರು ಪೋಲೀಸರು ಇದನ್ನು ಕಂಡು ಅಲ್ಲಿಗೆ ಓಡಿ ಹೋಗಲು ಹೋದರು ಆದರೆ ಅವರು ಪ್ರತಿಯಾಗಿ ಅವರ ಮೇಲೆ ಸಿಟ್ಟಿಗೆದ್ದು ಅವರ ಮೇಲೆ ಏರಿ ಹೋಗಿ ಲಾಠಿ ಬಡಿಗೆಗಳಿಂದ ಅವರನ್ನು ಗಾಯಗೊಳಿಸಿದರು ಈ ಗೊಂದಲದಲ್ಲಿ ಮೇಲ್ಕಂಡವರು ಭಯಂಕರ ಗಾಯಹೊಂದಿದರು ಅವರನ್ನು ವೈದ್ಯಕೀಯ ಕಾಲೇಜ ಆಸ್ಪತ್ರೆಗೆ ಕಳಿಸಲಾಯಿತು. ಪಂಡಿತ ಶ್ರೀ ಪ್ರಕಾಶರು ಆಸ್ಪತ್ರೆಗೆ ಒಯ್ಯಲ್ಪಡುತ್ತಿರುವಾಗ ಹಾದಿಯಲ್ಲಿಯೇ ಮರಣಹೊಂದಿದರು. ಉಳಿದ ಇಬ್ಬರನ್ನು ಆ

ಡಾ. ಬಿರ್ಖುಂಟರ ಬಗ್ಗೆ ಡಾ ಅಲಿವರ್‌ರವರ ಪ್ರಶಂಸೋದ್ಗಾರ

ಡಾ. ಅಲಿವರ್— ಡಾ. ಬಿರ್ಖುಂಟರವರು ಹಳೆ ದಿವಸ ಒದು ತಿದ್ದರು. ಅವರ ಜೀವನವು ಉದಾತ್ತವಾದುದು ಅವರು ತಮ್ಮ ದೇಹವನ್ನೆಲ್ಲ ಹಿಂದುಸ್ಥಾನದ ಉದ್ಧಾರದಲ್ಲಿಯೂ ಮತ್ತು ಜನ ಕಲ್ಯಾಣದಲ್ಲಿಯೂ ಸವೆಸಿದರು ಅವರು ಹಿಂದುಸ್ಥಾನದವರಾಗಿರದಿದ್ದರೂ, ಅವರು ನಮ್ಮೆಲ್ಲರಗಿಂತ ಹಿಂದುಸ್ಥಾನಕ್ಕೆ ಹೆಚ್ಚಾಗಿ ಹೊಂದಿಕೊಂಡಿದ್ದರು ಅವರು ತಮ್ಮ ಜೀವಿತಕಾಲದಲ್ಲಿ ಮಾಡಿದ ಬೇರೆ ಬೇರೆ ಕಾರ್ಯಗಳನ್ನು ಹಿಂದೀ ಜನರು ಎಂದಿಗೂ ಮರೆಯುವಂತಿಲ್ಲ. ಅವರು ತಮ್ಮ ಉದಾಹರಣೆಯಿಂದ, ಉದಾರ ಹೃದಯರು ಯಾವದೇ ರಾಷ್ಟ್ರದವರಿದ್ದರೂ ಅವರು ತಮ್ಮ ರಾಷ್ಟ್ರದ ಉನ್ನತಿಯ ಬಗ್ಗೆ ಪ್ರಯತ್ನಿಸುವಂತೆ ಬೇರೆ ರಾಷ್ಟ್ರಗಳ ಉನ್ನತಿಯ ಬಗ್ಗೆ ಆದರೂ ಪ್ರಯತ್ನಿಸುವರೆಂಬುದನ್ನು ಜಗತ್ತಿನ ನಿದರ್ಶನಕ್ಕೆ ತಂದುಕೊಟ್ಟಿದ್ದಾರೆ ಹಿಂದುಸ್ಥಾನಕ್ಕಾಗಿ ಅವರು ಮಾಡಿದ ಸೇವೆಯನ್ನು ಲಕ್ಷದಲ್ಲಿ ತಂದಲ್ಲಿ, ಅವರಿಗೆ "ಭಾರತೀಯ ಜನನಿ" ಎಂದು ಸಂಭೋದಿಸುವದೇ ಯೋಗ್ಯವಾಗಿದೆ ಹಿಂದೀ ಜನರು, ಅವರ ಸೇವೆಯ ಬಗ್ಗೆ ಅವರಿಗೆ ಋಣಿಯಾಗಿ, ನಿರಂತರವೂ ಅವರ ಪುಣ್ಯಸ್ಮರಣೆ ಮಾಡುವರೆಂದು ನಂಬಿದ್ದೇನೆ.

ಡಾ. ಕುಲಕರ್ಣೀಜ

ಲೆಬೊರೋಟರಿ ಮುಂಬಯಿ ನೆಂಬರ ೧೨

ಬಾಟ್ಲಿ ಕಿಮ್ಮತ್ತು ೧—೨—೦

ಕೆಮಿಸ್ಟರಲ್ಲಿಯೂ ದೊರೆಯುದು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸೆರಗು, ಬಿಳೇಸೆರಗು, ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ಜಿ. ಕೆ. ಕರೂರ ಕ್ಯಾಂಡ ಸನ್ಸ
ಮೆಡಿಕಲ ಸ್ಟೋರ್ಸ

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ

ದರದಲ್ಲಿ ಸೋವಿ!



ನ್ಯೂ ಓರಿಯಂಟಲ್ ಕಂ.

"ನೀಲಗಿರಿ ಎಣ್ಣೆ"

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ನೆಗಡಿ, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ವಗೈರೆ ಕೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ. ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕೆ. ಟೂಣಸಿ ಕ್ಯಾಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ|| ೨೫-೮-೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಭವಾನಿ ಆಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ.

೩೦-೯-೩೩

"ಬದರೀ ನಾರಾಯಣನ ದರ್ಶನ"

ಗೌರೀಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ಫೋಟೋಗಳಿರುವವು. ಬೆಲೆ —೦ ೬-೬ ಮಾತ್ರ; ಅಂಚೆವೆಚ್ಚ ಬೇರೆ. ಪರಿಸಿಂತ ರಾಘವೇಂದ್ರ ಗಲಗಲಿ ಬಿ ಎ ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟ, ಧಾರವಾಡ.

ತ್ವರೆ ಮಾಡಿರಿ

ತ್ವರೆ ಮಾಡಿರಿ

ಶ್ರೀ ಸದಾಶಿವರಾವ ಗರೂಡ ಇವರಿಂದ ರಚಿತವಾದ

"ಸತ್ಯಸಂಕಲ್ಪ"

ನಾಟಕದ ಪುಸ್ತಕಗಳು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿವೆ.

ಬೆಲೆ ೧-೦ ೦ ರು. ದೊರೆಯುವ ಸ್ಥಳ:—ಶಿವಪ್ಪ ಟೆಂಗಿನಕಾಯಿ ಇವರ ಬಂಗಲೆಯಲ್ಲಿರುವ ಶ್ರೀ ದತ್ತಾತ್ರಯ ನಾಟಕ ಮಂಡಳಿ ಧಾರವಾಡ

ರಾಮಾಶ್ರಯ ಬುಕ್‌ಡಿಪೋ ಧಾರವಾಡ ಇವರಲ್ಲಿಯೂ ಗರೂಡರವರ ಪುಸ್ತಕಗಳು ದೊರೆಯುವವು.

Public Notice.

The Public are hereby informed that our ~~Exhibition~~ Excursion train will not run on the 1 st of October 1933 as advertised as no arrangements have been made by the Railway Company.

23-9 33

Sd/ G. H. Shirur,
Organiser
Shri Gouri Shankar Co, Hubli.

ಗೌರೀಶಂಕರ ಕಂಪನಿ, ಹುಬ್ಬಳ್ಳಿ

ಈ ಸಂಚಿಕೆಯ ೪ನೇ ಪುಟದಲ್ಲಿ ಶ್ರೀ ಗೌರೀಶಂಕರ ಕಂಪನಿಯ ಜಾಹೀರಾತದಲ್ಲಿ ಹೇಳಿದ ಪ್ರಕಾರ ನಮ್ಮ ಯಾತ್ರಾ, ಉಗಿಬಂಡಿಯು ...

ಹಾಗಾಸಾ [illegible]



ಕರ್ನಾಟಕ ಕೆಮಿಕಲ್ ವರ್ಕ್ಸ್, ಬಳ್ಳಾರಿ.

[illegible]

ಶ್ರೀ ಗೌರೀಶಂಕರ [illegible] ಹುಬ್ಬಳ್ಳಿ

[illegible]

ಮಾನಪತ್ರಿಕೆಗಳನ್ನು, ಸುವರ್ಣಪದಕಗಳನ್ನೂ, [illegible] ಪಡೆದಿರುತ್ತದೆ

ಶ್ರೀಕಾಶೀ [illegible] ಲಂಕಾಕ್ಷೇತ್ರಗಳ

ಮಹಾಯಾತ್ರಾ ಪ್ರವಾಸ

ಚಾರ್ಜು ಬಹಳ ಸುಲಭ! **ಉತ್ತಮ ವ್ಯವಸ್ಥೆ!**

ಶ್ರೇಷ್ಠತೆಯ ನೋಟ! **ಸ್ವರ್ಗದ ಸೋಪಾನ!**

ಈ ಶ್ರೀ ಗೌರೀಶಂಕರ ಸ್ಪೇಶಲ್ ಟ್ರೇನು [illegible] ಹುಬ್ಬಳ್ಳಿ [illegible] ಕ್ರಮವಾಗಿ

೧ [illegible]	೧೯ [illegible]	೩೭ [illegible]
೨ [illegible]	೨೦ ಅಯೋಧ್ಯೆ	೩೮ [illegible]
೩ ಮುಂಬಯಿ	೨೧ ಅಲ್ಲಾಬಾದ	೩೯ [illegible]
೪ [illegible]	೨೨ ಪ್ರಯಾಗ	೪೦ [illegible]
೫ [illegible]	೨೩ [illegible]	೪೧ [illegible]
೬ [illegible]	೨೪ [illegible]	೪೨ [illegible]
೭ [illegible]	೨೫ ಗಯಾ	೪೩ [illegible]
೮ [illegible]	೨೬ [illegible]	೪೪ [illegible]
೯ [illegible]	೨೭ ಗಿರಿ	೪೫ [illegible]
೧೦ [illegible]	೨೮ [illegible]	೪೬ ಶ್ರೀರಂಗ
೧೧ [illegible]	೨೯ [illegible]	೪೭ ಬೆಂಗಳೂರ
೧೨ [illegible]	೩೦ [illegible]	೪೮ [illegible]
೧೩ ಮಥುರಾ	೩೧ [illegible]	
೧೪ ಗೋಕುಲ	೩೨ [illegible]	
೧೫ ಬೃಂದಾವನ	೩೩ [illegible]	
೧೬ ಗೋವರ್ಧನ	೩೪ ಮದ್ರಾಸ	
೧೭ ದಿಲ್ಲಿ	೩೫ [illegible]	
೧೮ [illegible]	೩೬ [illegible]	

ಈ ಎಲ್ಲ ಮಹಾಯಾತ್ರಾ ಸ್ಥಳಗಳನ್ನು ಸುತ್ತಿಕೊಂಡು [illegible] ಹುಬ್ಬಳ್ಳಿಗೆ [illegible]

[illegible]

ಮೇಲೆ ಗೊತ್ತುಪಡಿಸಿ ಬರೆದಿರುವ ತಾರೀಖಿಗೆ ತಪ್ಪದೆ ಟ್ರೇನು ಹೊರಡುವದು

ಶ್ರೀ ಗೌರೀಶಂಕರ ಕಂಪನಿಯ [illegible]

ಬಿ. ಎ. [illegible]

ಮ್ಯಾನೇಜರು, ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ

ಬಾಗಲಕೋಟೆ ಏಜಂಟ:— [illegible]

ಕಟ್ಟ್ವಾ

[illegible]

ಅನುಭವ ಪಡೆಯಿರಿ

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. [illegible] ಕರ್ನಾಟಕ ಜನರಿಗೆ [illegible] ದೊರೆಯುವದು.

ನವಳಿಗುಡ್ ಹೈದರಾಬಾದ (ಡೆಕ್ಕನ್) [illegible]

ಬಾಸುತಕರ ಬ್ರದರ್ಸ

[illegible]

ಕನ್ನಡಿಗನ ಚಂದಾ ವಿವರ.

[illegible]

[illegible] ಕನ್ನಡಿಗ [illegible] ಧಾರವಾಡದಲ್ಲಿ ಪ್ರಸಿದ್ಧಿಸಿದರು

ರಿ. ನಂ. ಬಿ. ೨೭೮೮

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್॥ ಮನು.

ನಿತ್ಯಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು—ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿದಿನವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಮಂಗಳವಾರ ಆಶ್ವೀಜ ಬಹುಳ ೭ ಶಕೆ ೧೮೫೫ ತಾ॥ ೨೪-೧೦-೧೯೩೩ [ಸಂಚಿಕೆ ೧೯೫

ಇನಸ್ಯುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುರನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಪಯೋಗಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ವಿಠ್ಠಲಭಾಯಿಯವರ ಚಿಂತಾಜನಕ ಸ್ಥಿತಿ

ಮುಂಬಯಿ ತಾ॥ ೨೩ — ಶ್ರೀ ಸುಭಾಷ ಚಂದ್ರ ಬೋಸ ಇವರು ಜಿನೀವಾ ಬಳಿಯಲ್ಲಿಯ ... ಲಿಗ್ನೀಯರ ಗ್ರಾಮದಿಂದ ಎಂಬಲ್ಲಿಂದ ... ನೆ ದಿವಸ ರಾತ್ರಿ ೯—೧೦ ಗಂಟೆಗೆ ಅ... ಸೋಸಿಯೇಟೆಡ್ ಪ್ರೆಸದವರಿಗೆ ತಾರು ಮಾಡಿ, ... ವಿಠ್ಠಲಭಾಯಿ ಪಟೇಲ ಇವರು ಹೃದಯವಿ... ದಿಂದ ಬಹಳ ಅಸ್ವಸ್ಥರಾಗಿರುವರೆಂದು ತಿಳಿಸಿದ್ದಾರೆ. (ಅ ಪ್ರೆ)

ಮುಂಬಯಿಯಲ್ಲಿ ಮಹಿಲಾ ಪರಿಷತ್ತು.

ಶ್ರೀಮತಿ ವಿದ್ಯಾಗೌರಿಯವರ ಭಾಷಣ

ಮುಂಬಯಿ ತಾ॥ ೨೩— ಮುಂಬಯಿ ... ಮಹಿಲಾ ಮಂಡಲದವರು ಕೂಲಿಕಾ... ಸ್ತ್ರೀಯರ ಸಲುವಾಗಿ ಏರ್ಪಡಿಸಿದ ಮುಂಬ... ಪ್ರಾಂತಿಕ ಮಹಿಲಾ ಪರಿಷತ್ತು ಈ ಹೊತ್ತಿ... ದಿವಸ ಶ್ರೀಮತಿ ವಿದ್ಯಾಗೌರಿ ನೀಲಕಂಠ ಇ... ಅಧ್ಯಕ್ಷತೆಯ ಕೆಳಗೆ ಪ್ರಾರಂಭವಾಯಿತು ... ಪತ್ತಿನ ಕಾರ್ಯಕ್ರಮವು ನಾಲ್ಕು ದಿವಸಗ... ವರೆಗೆ ನಡೆಯುವದಿದ್ದು, ಈ ಅವಧಿಯಲ್ಲಿ ಅ... ಕ ಜನ ಮುಖಂಡರ ಭಾಷಣಗಳು ಆಗತಕ್ಕ...

ಶ್ರೀಮತಿ ವಿದ್ಯಾಗೌರಿಯವರು ತಮ್ಮ ... ಷಣದಲ್ಲಿ ಹಿಂದೀ ಕೂಲಿಕಾರರು ಎಂಥಹ ಭ... ಕರ ದುಃಸ್ಥಿತಿಯಲ್ಲಿ ಕಾಲಕಳೆಯುತ್ತಿರುವ... ದನ್ನು ವರ್ಣಿಸಿ ಹೇಳಿದ್ದೇನೆಂದರೆ— ಸ... ಕೂಲಿಕಾರರು ಎಂಥಹ ಹೃದಯದ್ರಾವಕ ... ಸ್ಥಿತಿಯಲ್ಲಿ ಕೊಳೆಯುತ್ತಿರುವರೆಂಬುದನ್ನು ಅ... ಲಸ ಮಾಡುತ್ತಿರುವ ಹೆಣ್ಣು ಮಹಿಲಾ... ಕಳದವರು ಹೇಳುವದು ಶಕ್ಯವಿಲ್ಲ. ಕೂ... ಲಿಕಾರರು ಇರುವಲ್ಲಿ ಸಾಕಷ್ಟು ಬೆಳಕು ಇ... ದಿಲ್ಲ, ಇಷ್ಟೇ ಅಲ್ಲದೆ ಅವು ಆರೋಗ್ಯಕಾರ... ಗಳು ಇರುವದಿಲ್ಲ. ಕೆಲವು ಕೋಣೆಗಳು ... ರುಗಳಿಗೂ ಸಹ ಇರಲು ಅಯೋಗ್ಯವಾದವು ... ಇರುತ್ತವೆ. ಕೂಲಿಕಾರರಲ್ಲಿ ದುಷ್ಟ ವ್ಯಸ... ಬೆಳೆದು ಅವರು ಕೋರ್ಟಿಗೆ ಎಳೆಯಲ್ಪ... ಡುತ್ತಿರುವದು ಅವರ ಈ ಇರುವಿಕೆಯ ದುಷ್ಪರಿ... ಣಾಮವಾಗಿದೆ.

ಶ್ರೀಮತಿ ವಿದ್ಯಾಗೌರಿಯವರು ಮತ್ತೂ ... ದ್ದೇನೆಂದರೆ— ಒಡೆಯರಲ್ಲಿ ಮತ್ತು ... ಕಾರರಲ್ಲಿ ಧೃಢವಾದ ಸಹಕಾರ ಹಾಗೂ ... ಸಂಬಂಧವು ಬೆಳೆಯುವದು ಅವಶ್ಯವಿದೆ ... ರವರು ಮತ್ತು ಮ್ಯುನಸಿಪಾಲಿಟಿಯು ... ಕೂಲಿಕಾರರಲ್ಲಿಯ ನಿರಕ್ಷರತೆಯನ್ನು ... ಗಲಾಡಿಸಲು ಪ್ರಯತ್ನ ಮಾಡುವದು ... ವಿದೆ ಅವರಿಗೆ ಓದುವಂತಹಗಳನ್ನು ಕಲಿ... ಹವರನ್ನು ಸುಶಿಕ್ಷಿತರನ್ನಾಗಿ ಮಾಡಿದರೆ ... ರು ತಮ್ಮ ಕಾಳಜಿಯನ್ನು ತಾವೇ ಕೈಕೊಳ್ಳುವರು

ಕೂಲಿಕಾರರ ಸಂಬಂಧವಾಗಿ ರಾಯಲ್ ಕಮೀಶನದವರು ಮಾಡಿದ ಶಿಫಾರಸುಗಳ ಬಗ್ಗೆ ಶ್ರೀಮತಿ ವಿದ್ಯಾಗೌರಿಯವರು, ಸರಕಾರದವರು ಆ ಶಿಫಾರಸುಗಳನ್ನು ಕೃತಿಯಲ್ಲಿ ತರುವದು ಅವಶ್ಯವಿದೆಯೆಂದು ಹೇಳಿದರು ಕೊನೆಯಲ್ಲಿ ಅವರು, ದಣಿವರನ್ನೂ ಸಂಗತದವರೂ ಒಟ್ಟಿಗೆ ಕೂಡಿ ವಿಚಾರ ವಿನಿಮಯ ಮಾಡಿ, ಕೂಲಿಕಾರರಿಗೆ ಅವರ ಕೆಲಸಕ್ಕೆ ತಕ್ಕ ಕೂಲಿಯನ್ನು ಕೊಡದಿದ್ದರೆ ಮತ್ತು ಉದ್ಯೋಗದ ಪ್ರಾಪ್ತಿಯನ್ನು ಕಾಂತವನ್ನು ಮಾಡದೆ ಸರಿಯಾಗಿ ಹಂಚಿ ಕೊಡದಿದ್ದರೆ, ಪರಿಣಾಮವು ಏನಾಗುವದೆಂಬುದು ಹೇಳಲಿಕ್ಕೆ ಬಾರದು ಎಂದು ನುಡಿದರು

ಪರಿಷತ್ತಿನಲ್ಲಿ ಡಾ ಆನಿ ಬೆಝಂಟ ಇವರ ನಿಧನದ ಬಗ್ಗೆ ದುಃಖ ಪ್ರದರ್ಶಕ ನಿರ್ಣಯವು ಸ್ವೀಕೃತವಾಗಿ ಸಂಪೂರ್ತಿಸಲ್ಪಟ್ಟಿತು. (ಅ ಪ್ರೆ)

ಮುಂಬಯಿಯಲ್ಲಿ ಕೋಚೀನ ಮಹಾರಾಜರು

ಮುಂಬಯಿ ತಾ॥ ೨೪— ಕೋಚೀನ ಮಹಾರಾಜರು ಇಲ್ಲಿಯ " ಬಾಂಬೇ ಮ್ಯಾನೇಜಮೆಂಟ "ದಲ್ಲಿ ತಮ್ಮ ಬಿಡಾರ ಒಗೆದಿರುವರು. ಅವರು ದಕ್ಷಿಣ ಹಿಂದೀ ಜನರ ಶಿಕ್ಷಣದ ಪ್ರಗತಿಗಾಗಿ ಸಂಘದವರು ವಹಿಸಿದ ಪರಿಶ್ರಮವನ್ನು ಶ್ಲಾಘಿಸಿ, ಸಂಘವು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಆಶೆಯನ್ನು ವ್ಯಕ್ತಮಾಡಿದರು.

ಮಹಾರಾಜರಿಗೆ ಈ ಹೊತ್ತಿನ ದಿವಸ ಸಂಜೆಯಲ್ಲಿ ಇಲ್ಲಿಯ ಕೋಚೀನ ನಿವಾಸಿಗಳು ಮತ್ತು ಕೇರಳ ಸಮಾಜದವರು ಮಾನಪತ್ರಗಳನ್ನು ಅರ್ಪಿಸಿದರು. ಮಹಾರಾಜರು ಸಂಜೆಯಲ್ಲಿ ಪತಿಯಾಲಾ ಅರಮನೆಯಲ್ಲಿ ಕೇರಳ ನಿವಾಸಿಗಳಿಗೆ ಸಂತೋಷಕೂಟವನ್ನು ಏರ್ಪಡಿಸಿದ್ದರು ನಾಳಿನ ದಿವಸ ಸಂಜೆಯಲ್ಲಿ ಟಾಟಾ ಕಂಪನಿಯವರು ಮಹಾರಾಜರಿಗೆ ಸಂತೋಷಕೂಟವನ್ನು ಕೊಡತಕ್ಕವರಿದ್ದಾರೆ ಇದನ್ನು ಮುಗಿಸಿಕೊಂಡು ಮಹಾರಾಜರು ಸ್ಪೇಶಲ್ ಗಾಡಿಯಿಂದ ನಾಸಿಕಕ್ಕೆ ಪ್ರಯಾಣ ಮಾಡುವರು.

(ಅ ಪ್ರೆ)

ಹೊನ್ನಿನ ಹೊಳೆ

ಮುಂಬಯಿ ತಾ॥ ೨೪— ಅಕ್ಟೋಬರ ೨೩ ನೇ ತಾರೀಖಿಗೆ ಮುಗಿಯುವ ಒಂದು ವಾರದಲ್ಲಿ ಇಲ್ಲಿಂದ ೧ ಕೋಟಿ ೨೪ ಲಕ್ಷ ೬೨ ಸಾವಿರ ೬೫೦ ರೂಪಾಯಿಯ ಭಂಗಾರವು ಇಂಗ್ಲಂಡ ಹಾಗು ಯುರೋಪದ ಕಡೆಗೆ ಹೋಯಿತು ಗ್ರೇಟಬ್ರಿಟನವು ಸುವರ್ಣ ಪರಿಮಾಣವನ್ನು ಬಿಟ್ಟಂದಿನಿಂದ ಇವರೆಗೆ ಇಲ್ಲಿಂದ ಒಟ್ಟು ೧೪೪ ಕೋಟಿ ೬೮ ಲಕ್ಷ ೮೯ ಸಾವಿರ ೫೭೫ ರೂಪಾಯಿ ಭಂಗಾರವು ಪರದೇಶಕ್ಕೆ ಹೋಗಿರುತ್ತದೆ

(ಅ ಪ್ರೆ)

ಅಜಮೀರದಲ್ಲಿ ಮೋಟರದ ಅಪಘಾತ

ಅಜಮೀರ ತಾ॥ ೨೩— ಪ್ರ್ಯಾಟೆಂಟ ಲಂಡನದ ಈ. ಟಿಪ್ಪನೆಲ್ ಇವರ ಚಿರಂಜೀವನಾದ ಜೆ. ಎಚ್. ಟಿಪ್ಪನೆಲ್ ಇವನು ಈ ಹೊತ್ತಿನ ದಿವಸ ಮುಂಜಾನೆ ಮೋಟರ ಅಪಘಾತದಲ್ಲಿ ಸಿಲುಕಿ ಮರಣ ಹೊಂದಿದನು. ಅವನು ತನ್ನ ಇಬ್ಬರು ಗೆಳೆಯರೊಂದಿಗೆ ಮೋಟರದಲ್ಲಿ ನಸೀರಾಬಾದಕ್ಕೆ ಹೊರಟಿದ್ದನು. ಆದರೆ ಮೋಟರು ನಸೀರಾಬಾದದ ಸಮೀಪದಲ್ಲಿ ಒಂದು ಕಲ್ಲಿಗೆ ಹಾಯ್ದು ೧೨ ಫೂಟು ಆಳವಾದ ಒಂದು ತಗ್ಗಿನಲ್ಲಿ ಬಿದ್ದು ಬಿಟ್ಟಿತು. ಟಿಪ್ಪನೆಲ್‌ನ ತಲೆಯೊಡೆದು ಅವನು ತಕ್ಷಣವೇ ಮರಣಹೊಂದಿದನು. ಇಬ್ಬರು ಗೆಳೆಯರಿಗೆ ಮಾತ್ರ ಅಲ್ಲಲ್ಲಿ ಸ್ವಲ್ಪ ಗಾಯ ಸಂಭವಿಸಿತು ಅವರು ಮುಂಜಾನೆಯವರೆಗೆ ಮೂರ್ಛಾವಸ್ಥೆಯಲ್ಲಿಯೇ ಬಿದ್ದಿದ್ದರು ನ ಶವ ಒಬ್ಬನು ನಸೀರಾಬಾದಕ್ಕೆ ಅಂದು ಶುಶ್ರೂಷಾವಾಹನವನ್ನು ತೆಗೆದುಕೊಂಡು ಹೋದನು ಆದರೆ ಅಷ್ಟರಲ್ಲಿ ಟಿಪ್ಪನೆಲ್‌ನು ಸತ್ತು ಹೋಗಿದ್ದನು ಅಂತ್ಯವಿಧಿಯು ಸಂಜೆಯಲ್ಲಿ ಜರುಗಿಸಲ್ಪಟ್ಟಿತು ಅಜಮೀರ ಹಾಗು ನಸೀರಾಬಾದದಿಂದ ಉಚ್ಚ ಅಧಿಕಾರಿಗಳೂ, ಮೇಜರ ಜೆ ಧರಾಮ ಅಧಿ...ಕರರೂ ಮತ್ತು ಮೇಯೋ ಕಾಲೇಜದ ಪ್ರಿನ್ಸಿಪಾಲರಾದ ಮಿ. ಸ್ಕ್ವೈರ ಇವರೂ ಅಂತ್ಯವಿಧಿಯ ಕಾಲಕ್ಕೆ ಪ್ರತ್ಯಕ್ಷ ಇದ್ದರು.

ಟಿಪ್ಪನೆಲ್ ಇವನು ೨೪ ವರ್ಷದವನಿದ್ದು, ಮೊನ್ನಿನ ಜುಲೈ ತಿಂಗಳದಲ್ಲಿ ಮೇಯೋ ಕಾಲೇಜದ " ಗೃಹಪೋಷಕ " ನಾಗಿ ಇಲ್ಲಿಗೆ ಬಂದಿದ್ದನು. (ಅ ಪ್ರೆ)

ಮುಂಬಯಿಯಲ್ಲಿ ಮೋಟಾರ ಅಪಘಾತ.

ಮುಂಬಯಿ ತಾ॥ ೨೪— ಬರ್ಟಿವಿಸಲ್ ಬ್ಯಾಂಕ ಕಂಪನಿಯ ಎಫ್. ಎಲ್. ಅಲನ್‌ಸನ್ ಎಂಬವನು, ಮತ್ತೊಬ್ಬ ಇಂಗ್ಲೀಷ ಗೃಹಸ್ಥನನ್ನು ಕೂಡಿಕೊಂಡು ಈ ಹೊತ್ತಿನ ದಿವಸ ಮುಂಜಾನೆ ಮೋಟಾರದಲ್ಲಿ ಹೊರಟಾಗ ಮುಂಬಯಿ ಜಿಮಖಾನಾ ಬಳಿಯಲ್ಲಿ ಮೋಟರು ಅಪಘಾತಕ್ಕೆ ಸಿಲುಕಿದ್ದರಿಂದ, ಇಬ್ಬರಿಗೂ ಭಯಂಕರ ಗಾಯ ಸಂಭವಿಸಿತು. ಅವರನ್ನು ಕೂಡಲೇ ಸೆಂಟ ಜಾರ್ಜ ಆಸ್ಪತ್ರಿಗೆ ಹಾಕಿತು. ಆದರೆ ಅಲನ್‌ಸನ್ ಎಂಬವನು ಸ್ವಲ್ಪ ಹೊತ್ತಿನಲ್ಲಿಯೇ ಮರಣ ಹೊಂದಿದನು ಮೋಟರು ಗೋಡೆಗೆ ಹಾಯ್ದು ಮುರಿದು ಬಿದ್ದಿದ್ದರಿಂದಲೇ ಈ ಅಪಘಾತ ಸಂಭವಿಸಿತು. (ಅ ಪ್ರೆ)

ಈ ಹೊತ್ತಿನ ದಿವಸ ಮುಂಜಾನೆ ಸಂಭವಿಸಿದ ಮೋಟಾರ ಅಪಘಾತದ ವಿಶೇಷವಾಗಿ ತಿಳಿದು ಬಂದಿರುವದೇನೆಂದರೆ- ಅಲನ್‌ಸನ್ ಕಾರಿನ ಎಲ್. ಎಚ್. ಡಿಲ್ ರಾಬಿನ್‌ಸನ್ ಮತ್ತು ಮೆಟಿಕಾಫ್ ಇವರು ಮೋಟಾರದಲ್ಲಿ ಮನೆಯ ಕಡೆಗೆ ಹೋಗುತ್ತಿದ್ದರು ಅಲನ್‌ಸನ್‌ನು ಮೋಟರ ಹೊಡೆಯುತ್ತಿದ್ದನು ಮೋಟರ ಜಿಮಖಾನಾ ಸಮೀಪದಲ್ಲಿ ಒಮ್ಮೆಗೆ ಅಲನ್‌ಸನ್‌ನ ಹಟಿಯಲ್ಲಿ ಕೊಡಗಿದ್ದರಿಂದ, ಮೋಟರು ಗೋಡೆಗೆ ಹಾಯ್ದು ಅಪಘಾತ ಸಂಭವಿಸಿತು. ಅಲನ್‌ಸನ್ ಮತ್ತು ಕಾರ್‌ರಿಲ್ ಇವರಿಗೆ ಭಯಂಕರ ಗಾಯವಾಯಿತು ಉಳಿದವರಿಬ್ಬರು ಪಾರಾದರು ಇಷ್ಟರಲ್ಲಿ ಪೋಲೀಸರು ಅಲ್ಲಿಗೆ ಬಂದು ನಾಲ್ವರನ್ನು ಸೆಂಟ ಜಾರ್ಜ ಆಸ್ಪತ್ರಿಗೆ ಹಾಕಿದರು ಅಲನ್‌ಸನ್‌ನು ತಕ್ಷಣವೇ ಮರಣ ಹೊಂದಿದನು ಕಾರ್‌ರಿಲ್ ಇವರ ಪ್ರಕೃತಿಯು ಚಿಂತಾ ಜನಕವಿದ್ದರೂ, ಅವರು ಜೀವದಿಂದ ಉಳಿಯಬಹುದೆಂದು ಆಶೆಯಿದೆ ಉಳಿದವರಿಬ್ಬರು ಉಪಚಾರ ಹೊಂದಿ ಮನೆಗೆ ಹೋದರು ಅಲನ್‌ಸನ್‌ನ ಅಂತ್ಯವಿಧಿಯು ಸಂಜೆಯಲ್ಲಿ ಜರುಗಿತು (ಅ ಪ್ರೆ)

ರತ್ನಾಗಿರಿ ಜಿಲ್ಲೆಯ ಶಿಕ್ಷಕರ ಗೋಳಾಟ.

ರತ್ನಾಗಿರಿ ತಾ॥ ೨೩-ರತ್ನಾಗಿರಿ ಜಿಲ್ಹೆಯಲ್ಲಿಯ ಪ್ರಾಥಮಿಕ ಶಿಕ್ಷಕರಿಗೆ ಆಗಸ್ಟ ತಿಂಗಳದ ಪಗಾರವು ಸಿಕ್ಕಿರುವದಿಲ್ಲ ಜಿಲ್ಹಾ ಬೋರ್ಡದವರು ಸರಕಾರಿ ಗ್ರ್ಯಾಂಟು ಬರುವ ವರೆಗೆ ಯಾವ ರೀತಿಯಿಂದಲೂ ಅವರಿಗೆ ಸಹಾಯ ಮಾಡುವದು ಶಕ್ಯವಿಲ್ಲ ಜಿಲ್ಹಾ ಸಂಘದ ಅಧ್ಯಕ್ಷರು ಶಿಕ್ಷಣ ಖಾತೆಯ ಡಾಯರೆಕ್ಟರರಿಗೆ ತಾರು ಮಾಡಿ, ಸದ್ಯಕ್ಕೆ ಸ್ವಲ್ಪ ಗ್ರ್ಯಾಂಟು ಕೊಟ್ಟು ಸಂಕಟವನ್ನು ನಿವಾರಣ ಮಾಡಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ (ಅ ಪ್ರೆ)

ಮುಂಬಯಿಯಲ್ಲಿ ಹರಿಜನ ದಿನ.

ಮುಂಬಯಿ ತಾ॥ ೨೩— ಹರಿಜನ ದಿನದ ನಿಮಿತ್ತವಾಗಿ ನಿನ್ನಿನ ದಿವಸ ವನಿತಾ ವಿಶ್ರಾಮ ಭವನದಲ್ಲಿ ಪ್ರಚಂಡವಾದ ಸಾರ್ವಜನಿಕ ಸಭೆ ಸೇರಿತ್ತು. ಸೌ. ಲೀಲಾವತಿ ಮುನಶಿಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಸೌ. ಹಾಕ್ಸರ ಸುಖಠಾಣಕರ, ಸೌ. ರತನದೇವಿ ಮೆಹತಾ ಮೊದಲಾದವರು ಸಭೆಯಲ್ಲಿ ಭಾಷಣ ಮಾಡಿ, ಹರಿಜನರ ಕುಂದು ಕೊರತೆಗಳನ್ನು ಹೋಗಲಾಡಿಸಬೇಕೆಂದೂ, ಹರಿಜನರು ಹಿಂದೂ ಜಾತಿಯಿಂದ ಸಿಡಿದು ಬಿದ್ದರೆ ಹಿಂದೂ ಜನರ ಬಹುಸಂಖ್ಯಾಕತ್ವವು ಇಲ್ಲದಂತಾಗುವದೆಂದು ಹೇಳಿದರು. ಸಭೆಯಲ್ಲಿ ಇತರ ಹಿಂದೂ ಜನರಂತೆ ಹರಿಜನರಿಗೂ ಎಲ್ಲ ಹಕ್ಕುಗಳನ್ನು ಕೊಡಬೇಕೆಂದು ನಿರ್ಣಯಿಸಲ್ಪಟ್ಟಿತು.

ಗ್ರಾಮದೇವಿ ದೇವಾಲಯದಲ್ಲಿ ಈ ನಿಮಿತ್ತವಾಗಿ ಸಂಕೀರ್ತನೆ ನಡೆಯಿತು. ಯಾವತ್ತು ಜಾತಿಗಳ ಜನರು ಅದರಲ್ಲಿ ಭಾಗ ತೆಗೆದುಕೊಂಡಿದ್ದರು. (ಅ ಪ್ರೆ)

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು ೨೬—೧೦—೧೯೩೪

ಅಲ್ಲಲ್ಲಿಯ ನಾಡಹಬ್ಬಗಳು.

ಕರ್ನಾಟಕದಲ್ಲಿ ನಾಡಹಬ್ಬಗಳ ಉತ್ಸವವು ಪ್ರಾರಂಭವಾಗಿ ೧೬ ವರ್ಷಗಳಾದವು. ಈ ಅವಧಿಯಲ್ಲಿ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಮಾತ್ರ ಈ ಹಬ್ಬವು ಆಚರಿಸಲ್ಪಡುತ್ತಲಿದೆ. ಆದರೆ ಹಳ್ಳಿಹಳ್ಳಿಗಳಲ್ಲಿಯೂ, ಕರ್ನಾಟಕದ ಪ್ರತಿಯೊಂದು ಭಾಗದಲ್ಲಿಯೂ ಇದರ ಪ್ರಸಾರವಾಗಿಲ್ಲ. ಬಳ್ಳಾರಿ, ಕಾರವಾರ, ಕೊಡಗುಗಳಲ್ಲಿಯ ಕನ್ನಡಿಗರು ನಾಡಹಬ್ಬದ ಮಹತಿಯನ್ನು ಇನ್ನೂ ಕಂಡುಕೊಂಡಂತೆ ಕಾಣುವದಿಲ್ಲ.

ಮೈಸೂರ ಪ್ರಾಂತದಲ್ಲಿ ಈ ಹಬ್ಬವು ಅತ್ಯಂತ ವೈಭವದಿಂದ ಅಲ್ಲಿಯ ರಾಜಧಾನಿಯಲ್ಲಿ ಆಚರಿಸಲ್ಪಡುತ್ತಲಿದ್ದುದೇನೋ ನಿಜ. ಆದರೆ ಅದಕ್ಕೆ ನಾಡಹಬ್ಬದ ಸ್ವರೂಪವಿಲ್ಲ. ಸರಕಾರೀ ದರಬಾರದ ಪದ್ಧತಿಯ ಮೇಲೆ ಅದರ ಏರ್ಪಾಡಾಗಿದೆ.

ಇದು ರಾಜರ ಹಬ್ಬವಷ್ಟೇ ಅಲ್ಲ; ಭೂಮಿತಾಯಿಯ ಎಲ್ಲ ಮಕ್ಕಳ ಹಬ್ಬವು. ಇದಕ್ಕೆ ಒಂದೇ ಪ್ರತ್ಯಂತರವು ಸಾಕು. ನವನೋಮಿಯನ್ನು ಮಾಡದ ಮನೆ ನಮ್ಮ ನಾಡಿನಲ್ಲಿ ಯಾವುದಾದರೂ ಉಂಟೆ! ಶ್ವಾಸೋಚ್ಛ್ವಾಸ ಮಾಡುತ್ತಿದ್ದೂ ತಾನು ಉಸುರಾಡಿಸುತ್ತಿರುವ ಅರಿವು ಹಲವರಿಗಿರುವುದಿಲ್ಲ. ಹಾಗೆ ನಾವು ಅರಿವು ಇಲ್ಲದೆ ನವರಾತ್ರಿ ಹಬ್ಬವನ್ನು ನಡಿಸಿರುವೆವು. ಇನ್ನು ಮೇಲೆ ಅರವಿನಿಂದ ನಾಡಿನ ಅರಿವೆಯಿಂದ ಈ ಹಬ್ಬವನ್ನು ಮಾಡಲಾರಂಭಿಸಬೇಕು. ಪ್ರಜ್ಞೆಯಿಂದ ಶ್ವಾಸೋಚ್ಛ್ವಾಸ ನಡಿಸಿದರೆ ಪ್ರಾಣಾಯಾಮ ಫಲವು ದೊರೆವುದು. ಅರಿವಿನಿಂದ ನವರಾತ್ರಿಯನ್ನು ಸಾಂಗ ಮಾಡಿದರೆ ನಾಡಿನಲ್ಲಿ ಶಕ್ತಿ ಸಂಚಾರವಾಗತಕ್ಕದಿದೆ.

ದೇಶದಲ್ಲಿ ಬುದ್ಧಿಶಕ್ತಿ, ಶರೀರ ಶಕ್ತಿ, ಧನಶಕ್ತಿಗಳು ಬೆಳೆಯುವುದಕ್ಕೆ ಎಲ್ಲರೂ ಸಂಘಟಿತವಾಗಿ ನಾಡಹಬ್ಬವನ್ನು ಆಚರಿಸುವಂತಹ ಬೇರೊಂದು ಉಪಾಯವಿಲ್ಲ. ಈ ದೃಷ್ಟಿಯಿಂದಲೇ ಈಗ ಉಪನ್ಯಾಸಗಳ ಮೂಲಕ ಜನರಲ್ಲಿ ಜ್ಞಾನಪ್ರಸಾರ ಮಾಡುವ ಕೆಲಸವು ಆರಂಭವಾಗಿದೆ. ಶರೀರ ಶಕ್ತಿಯನ್ನು ತರುಣರಲ್ಲಿ ಹೆಚ್ಚಿಸುವುದಕ್ಕೆ ಧಾರವಾಡ, ಪುತ್ತೂರ ಮೊದಲಾದ ಒಂದೆರಡು ಕಡೆಗೆ ಕೆಲವು ಶಕ್ತಿ ಪ್ರಯೋಗಗಳೂ, ಆಟ ಕವಾಯತುಗಳೂ ಆಗುತ್ತಿದ್ದರೂ ಎಲ್ಲೆಡೆಗೂ ಅಷ್ಟು ಸಮರ್ಪಕವಾಗಿ ಅವುಗಳ ಏರ್ಪಾಟು ಆಗಿಲ್ಲ. ಧಾರವಾಡದ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಉತ್ಸಾಹಿ ತರುಣ ಸಂಚಾಲಕರು ಈ ಬಗೆಯ ಸಂಘಟನೆಯ ಪ್ರಯತ್ನವನ್ನು ಮಾಡುವ ಪ್ರಬಲವಾದ ಇಚ್ಛೆಯುಳ್ಳವರಾಗಿರುವರು. ಆದರೆ ಅನೇಕ ಆಕಸ್ಮಿಕ ಕಾರಣಗಳಿಂದ ಇದು ಅವರಿಂದ ಅವರಿಗೇ ಸಮಾಧಾನಕರವಾಗಿ ಆಗಲೊಲ್ಲದಾಗಿದೆ. ಆದರೆ ಬೇರೆ ಬೇರೆ ಕಡೆಯ ಮಾನವಮಿಯ ಉತ್ಸವ ಮಂಡಳಿಯವರು ಈ ಮಲ್ಲಸಜ್ಜನ ವ್ಯಾಯಾಮ ಶಾಲೆಯವರೊಡನೆ ಸಹಕರಿಸಿ ಕೆಲಸ ಮಾಡಿದರೆ ಶಕ್ತಿಸಂವರ್ಧನೆಯ ಕಾರ್ಯವು ಕರ್ನಾಟಕದಲ್ಲೆಲ್ಲ ಬಹು ಸೊಗಸಾಗಿ ನಡೆಯಬಹುದೆಂದು ನಮ್ಮ ವಿಶ್ವಾಸವಿದೆ. ಪ್ರೊ ಅಯ್ಯಂಗಾರರ ಕೈಯಲ್ಲಿ ಕಲಿತ ತರುಣರು ಈ ಕಾರ್ಯಕ್ಕಾಗಿ ಸಿದ್ಧರಾಗಿದ್ದಾರೆ. ಶಕ್ತಿಸಾಧನೆಯ ಕಾರ್ಯದಲ್ಲಿ ಕರ್ನಾಟಕದ ಪ್ರಗತಿಯು ಕೌತುಕಾಸ್ಪದವಾಗಿದೆ. ನಾಡಹಬ್ಬಗಳಲ್ಲಿ ಇಂತಹ ಬೆರಗುಗೊಳಿಸುವ ಶಕ್ತಿಪ್ರಯೋಗಗಳನ್ನು ತೋರಿಸಿದಲ್ಲಿ ಹುಡುಗರಿಗೂ ಹರೆಯದವರಿಗೂ ಅದು ಆದರ್ಶವಾಗುವದು. ಕುಸ್ತಿ, ಈಸುವದು, ಓಡುವ ಮೊದಲಾದ ಪರ್ಯಾತ್ತುಗಳಿಗಾಗಿ ಅಖಿಲ ಕರ್ನಾಟಕ ಶಕ್ತಿಸಾಧನಾ ಸಂಘವೊಂದು ಇಂತಹ ಸಮಯಗಳಲ್ಲಿಯೇ ಏರ್ಪಟ್ಟರೆ ಬಂಗಾರಕ್ಕೆ ಕುಂದಣ ಸೇರಿದಂತಾಗುವುದು.

ಪ್ರದರ್ಶನಗಳ ಸ್ತುತ್ಯವಾದ ಉಪಕ್ರಮವು ದೊಡ್ಡ ದೊಡ್ಡ ಊರುಗಳಲ್ಲಿಂತೂ ಅನುಕರಣಾರ್ಹವಾಗಿದೆ. ಸ್ವದೇಶಿ ವಸ್ತು ಪ್ರದರ್ಶನಗಳು ಸ್ವದೇಶಿ ಪ್ರಸಾರಕ್ಕೆ ಬಹಳ ಪ್ರೋತ್ಸಾಹಕವಾಗಿವೆಯೆಂಬ ಬಗ್ಗೆ ಯಾರಲ್ಲಿಯೂ ಮತಭೇದವಿಲ್ಲ. ಆದರೂ ಅಲ್ಲಲ್ಲ ಅನುಭವಿಕರಾದ ಕೆಲಸಗಾರರ ಕೊರತೆಯಿರುವುದರಿಂದ ಪ್ರದರ್ಶನಗಳನ್ನು ಏರ್ಪಡಿಸುವುದು ಕಷ್ಟವಾಗಿದೆ. ಹೀಗಿದ್ದರೂ ಹುಬ್ಬಳ್ಳಿಯಲ್ಲಿ ಈ ಸಾರೆ ಪ್ರದರ್ಶನದ ಯೋಜನೆಯನ್ನು ಕೊನೆಗಾಣಿಸಿದ್ದು ಅಭಿನಂದನೀಯವಾಗಿದೆ.

ಈ ಸಾರೆ ಹೋದ ವರುಷಕ್ಕಿಂತಲೂ ಹೆಚ್ಚು ಊರುಗಳಲ್ಲಿ ಮಾನವಮಿ ಉತ್ಸವಗಳು ಆಗಿವೆ. ಮುಂಬಯಿಯಲ್ಲಿಯೂ ಕನ್ನಡಿಗರೆಲ್ಲರೂ ಸೇರಿ ನಾಡಹಬ್ಬವನ್ನು ಆರಂಭಿಸಿದುದು ಈ ಹಬ್ಬದ ಲೋಕಪ್ರಿಯತೆಯನ್ನು, ಕರ್ನಾಟಕದ ಅಭಿಮಾನವು ಹೇಗೆ ಭರದಿಂದ ಪ್ರಸಾರವಾಗುತ್ತಿರುವುದೆಂಬುದನ್ನು ವ್ಯಕ್ತಪಡಿಸುತ್ತದೆ. ಈ ವರುಷದ ನಾಡಹಬ್ಬದ ಕಾರ್ಯಕ್ರಮವು ಗದಗಿನಲ್ಲಿ ಪುತ್ತೂರಿನಷ್ಟು ಸರ್ವಾಂಗ ಸುಂದರವಾದ ಕಾರ್ಯಕಲಾಪಗಳ ವಿವರವು ಬೇರೆ ಯಾವ ಊರಲ್ಲಿಯೂ ಆಗಿಲ್ಲವೆಂದು ಹೇಳಬಹುದು. ನಾಡಹಬ್ಬವನ್ನು ವಿಜೃಂಭಣೆಯಿಂದ ಹೇಗೆ ಆಚರಿಸಬೇಕೆಂಬುದಕ್ಕೆ ಪುತ್ತೂರಿನವರು ಕರ್ನಾಟಕಕ್ಕೆಲ್ಲ ಮಾದರಿಯನ್ನೇ ಹಾಕಿಕೊಟ್ಟರೆಂದು ಹೇಳಬಹುದು. ಪುತ್ತೂರ ಬಗ್ಗೆ ವಿಸ್ತಾರವಾಗಿ ನಾವು ಮತ್ತೆ ಬರೆಯುವೆವು.

ಕೊನೆಯ ಮಾತೆಂದರೆ, ನಾಡಹಬ್ಬವು ಬರೆ ಹೊಸತೆ ಗಡಿಬಿಡಿಯಿಂದೆದ್ದು, ಕೈಗೆ ಸಿಕ್ಕವರನ್ನು ಹಿಡಿದು ವ್ಯಾಖ್ಯಾನ ಮಾಡಿಸಿ, ಏನಾದರೊಂದು ಕಾರ್ಯಕ್ರಮವಾಯಿತೆಂದು ಮಾತ್ರ ತೃಪ್ತಿಗೊಳ್ಳುವ ಆಟವನ್ನು ಬಿಟ್ಟು ಸಂಘಟಿತ ರೀತಿಯಿಂದ ಮುಂದಿನ ವರ್ಷದಿಂದಾದರೂ ಆಚರಿಸತಕ್ಕದ್ದು.

ವೀರ ತಪಸ್ವಿನೀ ರಾಣಿ ಬಿಷ್ಣೋಬಿಮ್ಮನವರ ನಿಧನದ ದುಃಖ ಪ್ರದರ್ಶನಕ್ಕಾಗಿ ಧಾರವಾಡ ಮುನಿಸಿಪಾಲಿಟಿಯ ಸಭೆಯು ನಿನ್ನಿನ ದಿನ ಶ್ರೀ ಜೋಗರಾಯರ ಸೂಚನೆಯಂತೆ ಮುಂದರಿಸಲ್ಪಟ್ಟಿತು.

ಮಹಾತ್ಮರ ಸಂದೇಶ

ವರ್ಧಾ ತಾ॥ ೨೫— ಮ. ಗಾಂಧಿಯವರು ಹರಿಜನ ದಿನದ ನಿಮಿತ್ತವಾಗಿ ನಿನ್ನಿನ ದಿವಸ ಕೆಳಗಿನಂತೆ ಸಂದೇಶ ಕೊಟ್ಟರು.

ಹರಿಜನ ದಿನದ ಈ ಶುಭಪ್ರಸಂಗದಲ್ಲಿ ಶುದ್ಧ ಹಿಂದೂ ಜನರೆಲ್ಲರು ಹರಿಜನ ಸ್ತ್ರೀ ಪುರುಷರನ್ನು ಪವಿತ್ರವಾದ ಭಾವನೆಯಿಂದ ಕಾಣತೊಡಗುವರೆಂದು ನನಗೆ ಆಶೆಯಿದೆ. ಏಕೆಂದರೆ ಹೀಗೆ ಮಾಡಿದರೇನೇ ಅಸ್ಪೃಶ್ಯತೆಯನ್ನು ಹೋಗಲಾಡಿಸುವದು ಅತ್ಯವಶ್ಯನಿದೆಯೆಂದು ಶುದ್ಧ ಹಿಂದೂ ಸ್ತ್ರೀ ಪುರುಷರಿಗೆ ಖಾತ್ರಿಯಾಗುವದು.

(ಅ ಪ್ರೆ)

ಲಾಹೋರದಲ್ಲಿ ಹರಿಜನ ದಿನ

ಲಾಹೋರ ತಾ॥ ೨೫— ಈಹೊತ್ತಿನ ದಿವಸ ಹರಿಜನ ದಿನವು ಇಲ್ಲಿ ಯಥಾಕ್ರಮವಾಗಿ ಜರುಗಿತು. ಪ್ರಮುಖ ವೈದ್ಯರು ಮತ್ತು ಹಕೀಮರು ಹರಿಜನ ವಸತಿಗಳಿಗೆ ಹೋಗಿ ಸ್ವಚ್ಛತೆಯ ಬಗ್ಗೆ ಅವರಿಗೆ ಉಪದೇಶಿಸಿದರು.

(ಅ ಪ್ರೆ)

ಸೌ ಕಸ್ತೂರಿಬಾಯಿಯವರ ಪ್ರಯಾಣ

ವರ್ಧಾ ತಾ॥ ೨೫— ಸೌ॥ ಕಸ್ತೂರಿಬಾಯಿ ಗಾಂಧಿಯವರು ಮೀರಾಬೇನರಿಂದ ಕೂಡಿಕೊಂಡು ತಾ॥ ೨ನೆ ದಿವಸ ನಾಗಪುರಕ್ಕೆ ಖಾದಿ ಭಾಂಡಾರವನ್ನು ಉದ್ಘಾಟನ ಮಾಡಲು ಹೋಗತಕ್ಕವರಿದ್ದಾರೆ.

(ಅ ಪ್ರೆ)

ನಾಗಪುರದಲ್ಲಿ ಹರಿಜನ ದಿನ

ವರ್ಧಾ ತಾ॥ ೨೫— ನಿನ್ನಿನ ದಿವಸ ಹರಿಜನ ದಿನದ ನಿಮಿತ್ತವಾಗಿ ಶೇಟ ಜಮುನಲಾಲರ ಅಧ್ಯಕ್ಷತೆಯ ಕೆಳಗೆ ಸಭೆ ಕೂಡಿ, ಯರೋಡಾ ಒಪ್ಪಂದವನ್ನು ದೃಢೀಕರಿಸುವ ನಿರ್ಣಯವು ಸ್ವೀಕರಿಸಲ್ಪಟ್ಟಿತು. ಈ ನಿಮಿತ್ತವಾಗಿ ಡಾ॥ ಸ್ಪೀಗಲ್ ಮೊದಲಾದವರು ಹರಿಜನರ ಮನೆಗಳನ್ನು ಸಂದರ್ಶಿಸಿದರು.

(ಅ ಪ್ರೆ)

ವರ್ಧಾ ತಾಲೂಕದಲ್ಲಿ ಒಂದು ವರ್ಷದ ಅವಧಿಯಲ್ಲಿ ಒಟ್ಟು ೧೪೫ ಬಾವಿಗಳು ಮತ್ತು ೩೬ ದೇವಾಲಯಗಳು ಅಸ್ಪೃಶ್ಯರಿಗೆ ಮುಕ್ತದ್ವಾರ ಇಡಲ್ಪಟ್ಟಿವೆ.

ವರ್ಧಾ ತಾ॥ ೬— ಡಾ. [illegible]ಯವರು ಮಹಾತ್ಮಾಜಿಯವರ ಪ್ರಕೃತಿಯನ್ನು ಪರೀಕ್ಷಿಸಿದರು. ಮಹಾತ್ಮರ ಪ್ರಕೃತಿಯು ಸಮಾಧಾನಕರವಾಗಿದೆ. ಅವರ ತೂಕವು [illegible] ಇದ್ದು ಕಡಿಮೆಯಾಗಿದೆಯೆಂದು [illegible] ಮಹಾತ್ಮರು ವಿಶ್ರಾಂತಿಯನ್ನು ತೆಗೆದುಕೊಳ್ಳುವರೆಂದೂ ಪ್ರಕಟಿಸಿದ್ದಾರೆ.

ಸಂಬಂಧಪಟ್ಟ ಬೇರೆ ಬೇರೆ ಸಂಸ್ಥೆಗಳಿಗೆ [illegible] ಸೌ. ಕಮಲಾದೇವಿ ಚಟ್ಟೋಪಾಧ್ಯಾಯ ಹಾಗು ಸೋಫಿಯಾ [illegible] ಅವರು ಇಲ್ಲಿಗೆ ಬಂದಿದ್ದು, ಮಹಾತ್ಮಾಜಿಯವರೊಡನೆ ವಿಚಾರವಿನಿಮಯ ಮಾಡುತ್ತಲಿದ್ದಾರೆ.

ಸಾವಿರಾರು ಜನರು ನೆರೆದಿದ್ದ ಒಂದು [illegible] ಸಭೆಯಲ್ಲಿ ಮಹಾತ್ಮಾಜಿಯವರ ಭಾಷಣವಾಯಿತು. ಅವರು ಸ್ವತಃ ಭಾಷಣಮಾಡದೆ [illegible] ಬರೆದು ಕೊಟ್ಟ [illegible] ಅವರು [illegible] ಹರಿಜನ ಕಾರ್ಯವನ್ನೇ ಮಾಡುವೆವೆಂದು [illegible] ಜನರು ಅಸ್ಪೃಶ್ಯತೆಯನ್ನು ನಿವಾರಿಸಬೇಕೆಂದೂ ಹಿಂದೂ ಧರ್ಮದ ಈ ಕಳಂಕವನ್ನು ತೆಗೆದು ಹಾಕಬೇಕೆಂದೂ ಬೇಡಿಕೊಂಡರು.

ಬುದ್ಧ ಭಿಕ್ಷುಗಳು, ಬೌದ್ಧ ಧರ್ಮದ ಪುನರುಜ್ಜೀವನವೂ ಪ್ರಸಾರವೂ ಹೇಗಾಗಬಹುದೆಂದು ಕೇಳಿದ್ದಕ್ಕೆ ಗಾಂಧಿಯವರು ಅವರಿಗೆ ತಮ್ಮ ಉತ್ತರ ಬರೆದು ಕೊಟ್ಟರು. ಹಿಂದುಸ್ಥಾನದಲ್ಲಿ ಬುದ್ಧ ಧರ್ಮದ ತತ್ವಗಳ ಪುನರುಜ್ಜೀವನವೂ ಅವು ಪ್ರಸಾರಗೊಳ್ಳಬೇಕೆಂಬ ಬುದ್ಧ [illegible] ಇಚ್ಛೆಯ ಬಗ್ಗೆ ಮಹಾತ್ಮರು ಸಹಾನುಭೂತಿಯನ್ನು ತೋರಿಸಿ ಬುದ್ಧನ ಉಪದೇಶವು ಹಿಂದೂ ಧರ್ಮದಲ್ಲಿ ಸೇರ್ಪಡೆಯಾಗಿರುವುದೆಂದೂ ಬುದ್ಧನ ತತ್ವಗಳು ಹಿಂದುಸ್ಥಾನದಲ್ಲಿಯೇ [illegible] ಸ್ಥಿತಿಯಲ್ಲಿರುವವೆಂದೂ ಹೇಳಿದರು. [illegible] ಪುನರುಜ್ಜೀವನವಾಗಬೇಕಾದರೆ, [illegible] ಬಾಯಿಯಿಂದ ಆಡಿದರೆ ಸಾಲದು, ಬದಲಾಗಿ [illegible] ನಮ್ಮ ದಿನದ ನಡತೆಯಲ್ಲಿ [illegible] ಮತ್ತು ನಾವು [illegible] ಪ್ರಕಾಶವನ್ನೂ ಸ್ಫೂರ್ತಿಯನ್ನೂ ಕೊಡುವ ಪರಮಾತ್ಮನನ್ನು ಭಕ್ತಿಯಿಂದ ಪ್ರಾರ್ಥನೆಯಲ್ಲಿ ವಿಶ್ವಾಸವಿಡಬೇಕು. (ಅ ಪ್ರೆ ತಂತಿ)

[illegible]ರದಾರರ ಮುಂದೆ ಗವ್ಹರ್ನರರ ಗ್ರಾಮಸಂಘಟನೆ

ಮುಂಬಯಿ ತಾ॥ ೧೦— ಗವ್ಹರ್ನರರು [illegible] ಗ್ರಾಮ ಸಂಘಟನೆಯ ಕಲ್ಪನೆಯು [illegible] ಜೋಡಿಸಿದ [illegible] ದಿನ ಪುಣೆಯಲ್ಲಿ ಸರದಾರ ಮತ್ತು [illegible] ಇನಾಮದಾರರ [illegible] ಭಾಷಣದಲ್ಲಿ ಅಂದದ್ದು — ಗ್ರಾಮೋದ್ಧಾರದ ಸಲುವಾಗಿ ಕೆಲಸ ಮಾಡುವವರು ತಮ್ಮೊಳಗೆ ಪ್ರತಿಯೊಂದು [illegible] ವರ್ಗದ ಮತ್ತು ಜಾತಿಯ ಗಂಡಸರನ್ನೂ [illegible] ಹಿಂದುಸ್ಥಾನದ ಶಾಂತಿಯು ಮತ್ತು [illegible] ಈ ಗ್ರಾಮೋದ್ಧಾರದ ಕಾರ್ಯವನ್ನು [illegible] ಸರದಾರರೂ ಇನಾಮದಾರರೂ [illegible] ಭಾಗ ತೆಗೆದುಕೊಂಡರೆ [illegible] ಉತ್ಪನ್ನವಾದ [illegible] ಕೊಡುವ [illegible] ನಿಮ್ಮ [illegible] ಬಹಳ ದೊಡ್ಡ ಜವಾಬದಾರಿಯು ಇರುತ್ತದೆಂಬುದನ್ನು ಮರೆಯಬೇಡಿರಿ " ಎಂಬುದಾಗಿ ಹೇಳಿದರು. ಈ ಸಂಬಂಧವಾಗಿ ಈಗ ಎಷ್ಟೋ ಸಂಗತಿಯಾಗಿರುವುದೇನೂ ವಿಶ್ವವಿದ್ಯಾಲಯದ ಶಿಕ್ಷಣವನ್ನು ಪಡೆದು ಮರಳಿ ತಮ್ಮ ಹಳ್ಳಿಗಳಿಗೆ ಹೋಗುವ ತರುಣರು ಅಲ್ಲಿರುವ ಒಕ್ಕಲಿಗರ ಬಗ್ಗೆ ಸಹಾನುಭೂತಿಯಿಂದ ವರ್ತಿಸಿದರೆ ಮುಂಬಯಿಯ ಆವರು ಒಕ್ಕಲಿಗರಿಗೆ ಬಹಳ ಉಪಕಾರವನ್ನು ಮಾಡಬಲ್ಲರೆಂದೂ ಗವ್ಹರ್ನರ ಸಾಹೇಬರು ಅಂದರು. ಕೊನೆಗೆ ಅವರಿಗೆ ರಕ್ಷ್ಯವಿದ್ದಲ್ಲಿ ಪಂಚಾಯತಿ ಸಭೆ, ಕೋ ಆಪರೇಟಿವ್ಹ ಸೊಸಾಯಟಿ, ಇವೇ ಮುಂತಾದವುಗಳಲ್ಲಿ ಸದಸ್ಯರಾಗುವುದಕ್ಕೂ ಹಿಂದೆ ತಮ್ಮ ಹಿರಿಯರು ಹೇಗೆ ರೈತರ ಮುಂದಾಳುಗಳೆಂದೆನಿಸಿಕೊಂಡಿದ್ದರೋ ಹಾಗೆ ತಾವು ಮುಂದಾಳುಗಳಾಗಬೇಕೆಂದೂ ಗವ್ಹರ್ನರ ಸಾಹೇಬರು ಉಪದೇಶಿಸಿದರು. ತಮ್ಮೊಳಗೆ ಐಕ್ಯವನ್ನು ಮಾಡಿಕೊಂಡು, ಒಬ್ಬರಿಗೊಬ್ಬರು ಸಮಾಧಾನದಿಂದ ವರ್ತಿಸಿ ಪ್ರತಿಯೊಂದು ಬಗೆಯಿಂದ ಹಳ್ಳಿಯ ಸುಧಾರಣೆಯನ್ನು ಮಾಡುವ ಸಲುವಾಗಿ ತಮ್ಮ ವರ್ಗವನ್ನು ಬಲಪಡಿಸಿಕೊಳ್ಳಬೇಕೆಂದು ಗವ್ಹರ್ನರರು ಹೇಳಿಕೆ ಮತ್ತು ಸರದಾರರು ತಮಗೆ ರಾಜಕೀಯ ಸುಧಾರಣೆಯಲ್ಲಿ ವಿಶೇಷ ಪ್ರಾತಿನಿಧ್ಯವಿರಬೇಕೆಂದು [illegible] ಇದೀಗ ಇಂಗ್ಲಂಡದಲ್ಲಿ ಹಿಂದುಸ್ಥಾನದ ಸೆಕ್ರೆಟರಿಗಳು ಜಾಯಿಂಟ ಸಿಲೆಕ್ಟ ಕಮೀಟಿಯ ಮುಂದೆ ಇಟ್ಟಿರುವರೆಂಬುದು [illegible] ಕೊಡುವ ಸುದ್ದಿಯೆಂದು ಜನರು ಕೇಳಿದರು. [illegible] ಲಕ್ಷ್ಯವಿಟ್ಟು [illegible] ಕಾಲ ಮೇಲೆ ನಿಲ್ಲಬೇಕಾಗುತ್ತದೆಂದೂ ಸರದಾರರು [illegible] ಕಾರ್ಯದಿಂದ ತಮ್ಮ ಯೋಗ್ಯತೆಯನ್ನು ಕಾಯ್ದುಕೊಳ್ಳಬೇಕೆಂದು ಹಾಗೆ ಮಾಡಿದರೆ ಜನತೆಯು ಅವರಿಗೆ ಸಹಾಯಮಾಡಿ ಅವರನ್ನು ಪೂಜ್ಯಬುದ್ಧಿಯಿಂದ ನೋಡುವರೆಂದೂ ಗವ್ಹರ್ನರರು ಹೇಳಿದರು. (ಅ ಪ್ರೆ ತಂತಿ)

[illegible] ನ [illegible] ಹಿಂದೂ ಮಹಾಸಭೆಯ [illegible]

ಕೊಲ್ಹಾಪುರ ತಾ ೯— ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಳವು ಸೇರಿ ಗಳಿಕೆ ಒಕ್ಕಲಿಗರ [illegible] ಗಳಿಗೆ ಒಪ್ಪಿಗೆಯನ್ನಿತ್ತಿತು. ಈ ಸಾರೆ [illegible] ಕೊಲ್ಹಾಪುರದಲ್ಲಿ [illegible]

ಅಖಿಲ [illegible] ಹಿ ಪ್ರ. [illegible] ಪರಮಾನಂದ [illegible] ಅಧ್ಯಕ್ಷರು. ಇವರ [illegible] ಇಲ್ಲಿಗೆ [illegible] ಜನರು [illegible] ಮೆರವಣಿಗೆಯಲ್ಲಿ [illegible] ಬಹು ದೊಡ್ಡ ಮೆರವಣಿಗೆ [illegible] ವಿಜಯಾನಂದ [illegible] ನಡೆಯಿತು. (ಅ ಪ್ರೆ ತಂತಿ)

ಜಪಾನ ಹಾಗು ಹಿಂದೀ ವ್ಯಾಪಾರಸ್ಥರ ಕೂಟ

ಸಿಮ್ಲಾ ತಾ ೯— ಇಂದು ಎರಡೂ ದೇಶದ ಪ್ರತಿನಿಧಿಗಳು [illegible]. ಜಪಾನಿನ ಪ್ರತಿನಿಧಿಗಳು ಸಭೆಯ ಮುಂದೆ ವಿಚಾರಕ್ಕಾಗಿ ಇರಿಸಿದ ಸೂಚನೆಗಳು ಹಿಂದೀ ಪ್ರತಿನಿಧಿಗಳ ಮನಸಿಗೆ ಒಪ್ಪಿಗೆಯಾಗುವಂತೆ ಇಲ್ಲವೆಂದು ತಿಳಿಯುತ್ತದೆ. [illegible] ಹಿಂದೀ ಪ್ರತಿನಿಧಿಗಳು ತಮ್ಮ [illegible] ತಿಳಿಸತಕ್ಕವರಿರುವರು. (ಅ ಪ್ರೆ ತಂತಿ)

ಪ್ರಜಾ ಪ್ರಭುತ್ವದ ಸ್ವರಾಜ್ಯ ಪಕ್ಷಕ್ಕೆ ಬಲವಾದ ವಿರೋಧ

ಮುಂಬಯಿ ತಾ॥ ೧೦

ಇದುವರೆಗೆ ಈ ಪಕ್ಷದ ಮೊದಲ ಸಭೆ ಸಭೆಯು ಸುಸೂತ್ರವಾಗಿ ನಡೆಯಲಿಲ್ಲ. [illegible] ಮಾರು ಹಾಕುಗಳ ಬಿರುಗಳ, [illegible] ಗಳ ಗರ್ಜನೆ ನಡೆದೇ ಇದ್ದಿತು. ಡಾ. ಜಮನಾದಾಸ ಮೆಹ್ತಾ ಅವರು ಈ ಸಂಗತಿ [illegible] ಹೇಳಲು ಮುಂದೆ ಬಂದರು. [illegible] ಮಾತು [illegible] ಮಾತಿಗೆ [illegible] ಮೇಲಿಂದ ಪ್ರಶ್ನೆಗಳ ಸುರಿಮಳೆಯಾಗುತ್ತಲಿತ್ತು.

ಗಾಂಧಿ ಪಕ್ಷವು ಬಹಳ ಕೈಯೆತ್ತಿರುವುದರಿಂದ ತಮ್ಮ ಹೊಸ ಪಕ್ಷವನ್ನು ತೆರೆಯುವ

ಡಿ. ಬಿ. ಕಾಲೇಜಿಯವರ ಕರ್ನಾಟಕದ ಪ್ರವಾಸ

ಡಿ. [illegible] ಕಾಲೇಜಿಯವರು [illegible] ವರೂರ, [illegible] ಮೈಸೂರು, ಮುಂತಾದ [illegible] ಸಂದರ್ಶಿಸಿದರು. [illegible] ಮಾನಪತ್ರಗಳೂ ಔತಣ ಸಮಾರಂಭಗಳೂ ಅರ್ಪಿಸಲ್ಪಟ್ಟವು. [illegible] ಗಾರ್ಡನ [illegible] ಬಂದವರ [illegible] ಮಾನಪತ್ರ [illegible] ದರ್ಶನ [illegible] ಸಮಾರಂಭಿಸಿದರು. ಶಿಕ್ಷಣ [illegible] ಜಗತ್ತಿನ ಪ್ರಸಿದ್ಧ ನೋಟಗಳೂ, ಹಳ್ಳಿ ಮಕ್ಕಳ ಕೈಗಾರಿಕೆಯ ಕೌಶಲ್ಯದ ವಸ್ತುಗಳು ಇವೇ ಮುಂತಾದ ಪದಾರ್ಥಗಳು ಪ್ರೇಕ್ಷಣೀಯವಾಗಿದ್ದವು. ರಾತ್ರಿ [illegible] ಕಂಪನಿಯ ಶಿಕ್ಷಣ ವಿಷಯಕ ಸುಂದರವಾದ ಚಿತ್ರಪಟವು ತೋರಿಸಲ್ಪಟ್ಟಿತು. ಮತ್ತು ಕನ್ನಡ [illegible] ನಾಟಕಗಳನ್ನು ವಿದ್ಯಾರ್ಥಿಗಳು ಅಭಿನಯಿಸಿದರು.

ಮಧ್ಯಾಹ್ನ ಮತ್ತು ಸಾಯಂಕಾಲಗಳಲ್ಲಿ [illegible] ಮುನಿಸಿಪಾಲಿಟಿ ಲೋಕಲ ಬೋರ್ಡುಗಳ ಶಿಕ್ಷಕ [illegible] ಜಿಲ್ಹಾ ಮತ್ತು ತಾಲೂಕ ಪ್ರಾಥಮಿಕ ಶಿಕ್ಷಕರ [illegible] ಮಾನಪತ್ರವನ್ನರ್ಪಿಸಿದರು. ದಿವಾನ [illegible] ಮಾನಪತ್ರಗಳಿಗೆ ಉತ್ತರ ಕೊಡುವಾಗ [illegible] ಶಿಕ್ಷಣದ ಬಗ್ಗೆ ಉಪದೇಶ ಮಾಡಿ [illegible] ಬೆಳಗಾವಿಯ ಕಾಲೇಜಿಗಾಗಿ [illegible] ಉಪಕಾರ ಮಾಡಿದರೆ. [illegible] ಸರಕಾರದ ಸಹಾಯವು ದೊರೆಯಿತೆಂದೂ ಇಷ್ಟು ದಿವಸ ಉತ್ತರ ಕಡೆಯ ಕಾಲೇಜುಗಳಿಗೆ [illegible] ಗ್ರ್ಯಾಂಟು ದೊರೆಯುತ್ತಿದೆ [illegible] ಕಾಲೇಜುಗಳಿಗೂ ಹಂಚಲ್ಪಡುತ್ತದೆಂದು ಅವರು [illegible] ಸ್ವಾಭಾವಿಕವಾದ [illegible] ವ್ಯಕ್ತಪಡಿಸಿದರು.

ಡಿ. [illegible] ಕಾಲೇಜಿಯವರು [illegible] ಪ್ರವಾಸ [illegible] ಕಾರಿನ ದಿಕ್ಕಿನಿಂದ ಪುಣೆಗೆ ಹೋದರು.

● [illegible] ಉಂಟಾಗಿದೆಯೆಂಬುದನ್ನು [illegible]

[illegible] ವಾಗ್ಮಿಗಳಿಗೆ [illegible] ಸಭೆ [illegible] ಪ್ರಾರಂಭಿಸಿದರು. [illegible] ತರುವಾಯ ಸಭೆಯು ಮುಗಿಯಿತು.

(ಅ ಪ್ರೆ ತಂತಿ)

ಕನ್ನಡಿಗ.

ಧಾರವಾಡ— ಬುಧವಾರ ತಾರೀಖು [illegible]—೧೦—೧೯೩೩

ಹಿಂದುಸ್ಥಾನವು ಹೋದರೆ ಸಾಮ್ರಾಜ್ಯವು ಸಾಯುವುದು.

ಹಿಂದಕ್ಕೆ ಮುಂಬಯಿ ಇಲಾಖೆಯ ಗವ್ಹರ್ನರರಾಗಿದ್ದ ಲಾರ್ಡ ಲಾಯಿಡರು ೬ ನೆಯ ತಾರೀಖಿನ ದಿವಸ ಬರ್ಮಿಂಗ ಹ್ಯಾಮದಲ್ಲಿ ಕೂಡಿದ ಸಭೆಯಲ್ಲಿ ಮಾತಾಡುವಾಗ 'ಹಿಂದುಸ್ಥಾನವು ಹೋದರೆ ಸಾಮ್ರಾಜ್ಯವು ಸಾಯುವುದು' ಎಂಬದಾಗಿ ಉದ್ಗಾರ ತೆಗೆದಿರುವರು. ಅದುವು ಇದೇ ಇಂಗ್ಲೀಷರ ಹೊಟ್ಟೆಯೊಳಗಿರುವ ಬೇನೆಯು. ಲಾರ್ಡ ಲಾಯಿಡರೇನೋ ಹಾಗೆ ಅದನ್ನು ಸ್ಪಷ್ಟವಾಗಿ ಆಡಿತೋರಿಸಿದರು. ಮಿಕ್ಕವರು ಮಾತ್ರ ಇಷ್ಟು ಸ್ಪಷ್ಟವಾಗಿ ಆಡಿತೋರಿಸುವುದಿಲ್ಲ. ಆದರೂ ಎಲ್ಲರ ಹೊಟ್ಟೆಯೊಳಗಿನ ಎದೆಗುದಿಯು ಇದೇ. ಬಿಳಿಯ ಕಾಗದದ ಪತಾಕೆಯನ್ನು ಎತ್ತಿಹಿಡಿದು "ಇಗೋ ಇಲ್ಲಿ ನೋಡಿ, ನಾವು ಹಿಂದುಸ್ಥಾನಕ್ಕೆ ಎಂದೂ ಯಾರೂ ಕೊಡದಿದ್ದ ಸ್ವರಾಜ್ಯದ ಉದಾರವಾದ ಕಾಣಿಕೆಯನ್ನು ಕೊಡುತ್ತಿದ್ದೇವೆ. ಬನ್ನಿರಿ, ಸ್ವೀಕರಿಸಿರಿ" ಎಂಬದಾಗಿ ಉಚ್ಚ ಧ್ವನಿಯಲ್ಲಿ ಕೂಗುತ್ತಿರುವ ಬಿಳಿಯ ಕಾಗದದ ಜನಕರಾದ ಸರ್ ಸ್ಯಾಮುಎಲ್ ಹೋರರೇನು. ಆ ಬಿಳೀಕಾಗದವು ಭಯಂಕರ ಕಾಗದವು, ಅದು ನಮ್ಮ ಹಿಂದುಸ್ಥಾನವನ್ನು ನಮ್ಮಿಂದ ಕಸಿದುಕೊಂಡು ಬಿಡುತ್ತದೆ ಎಂಬುದಾಗಿ ಹೂಲಿಯನ್ನೆಬ್ಬಿಸಿದ ಚರ್ಚಹಿಲರೇನು. ಉದಾರ ಮತವಾದಿಗಳೆಂದು ಹೇಳಿಕೊಳ್ಳುವ ಲಿಬರಲ ಪಕ್ಷವೇನು, ಅಥವಾ ಬಡಜನರ ಕೈವಾರಿಗಳೆಂದು ಹೇಳಿಕೊಳ್ಳುವ ಲೇಬರ ಪಕ್ಷವೇನು? ಎಲ್ಲರೂ ಒಂದೇ ಮೂಲೆಯೊಳಗಿನ ಮಣಿಗಳೇ. ಯಾರಿಗೂ ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡ-ವುದು ಬೇಡ. ಅವರಲ್ಲಿ ಭೇದವಿದ್ದರೆ ಅದು ಇಷ್ಟೇ. ಭೇದವು ಅದೇನೆಂದರೆ, ಹಿಂದುಸ್ಥಾನದ ಜನರಿಗೆ ಮೋಹಕ ಶಬ್ದಗಳ ಬಲೆಯಲ್ಲಿ ಹಾಕಿ ಅನೇಕ ವರ್ಷಗಳವರೆಗೆ ಆಳುತ್ತ ಹೋಗಬೇಕೆಂದು ಹಲವರು, ಮುಂಗೈ ಜೋರಿನ ಮೇಲೆ ಆಳುತ್ತ ಹೋಗಬೇಕೆಂದು ಕೆಲವರು. ಬ್ರಿಟಿಶರು ತಮ್ಮ ಕೈಯಲ್ಲಿ ಸಿಕ್ಕ ಹಿಂದುಸ್ಥಾನವನ್ನು ಬಿಟ್ಟುಕೊಡಲಿಕ್ಕೆ ಒಪ್ಪದಿದ್ದರೆ ಅದೇನೂ ಆಶ್ಚರ್ಯದ ಮಾತಲ್ಲ. ಅದು ಸಾಮಾನ್ಯ ಮಾನವ ಸ್ವಭಾವ? ಅದಕ್ಕಾಗಿ ನಮಗೆ ದುಃಖವೂ ಆಗುವುದಿಲ್ಲ. ಆದರೆ ಈ ಜನರು ತಾವು ಆಕಾಶದಿಂದ ಇಳಿದು ಬಂದವರಂತೆ ಸೋಗು ಏಕೆ ಹಾಕಿಕೊಳ್ಳಬೇಕು? ಈಗ ನಾಲ್ಕಾರು ವರ್ಷಗಳಿಂದಂತೂ ಇವರ ಆಡಂಬರಕ್ಕೆ ಎಣೆಯಿಲ್ಲದಾಗಿದೆ. ಹಿಂದುಸ್ಥಾನಕ್ಕೆ ಹೊಸ ರಾಜಕೀಯ ಹಕ್ಕುಗಳನ್ನು ಕೊಡುವ ಪ್ರಶ್ನೆಯು ಹೊರಟಾಗಿನಿಂದು ಬ್ರಿಟಿಶ ಜನರು ಒಮ್ಮೆ ಅತ್ತಂತೆ ಮಾಡುತ್ತಾರೆ, ಮತ್ತೊಮ್ಮೆ ಮೊರೆಯನ್ನು ಒರಸಿದಂತೆ ಮಾಡುತ್ತಾರೆ. ಪಾಪ, ಹಿಂದುಸ್ಥಾನದ ಜನರು ಸ್ವರಾಜ್ಯವಿಲ್ಲದೆ ನಮ್ಮ ಆಳಿಕೆಯಲ್ಲಿ ಎಷ್ಟು ದಿವಸ ಇರಬೇಕು. ಹೋಗಲಿ, ಈಗ ಅವರು ಜಾಣರಾಗಿದ್ದಾರೆ. ಆದ ಕಾರಣ ಅವರಿಗೆ ಕೆಲವು ಹಕ್ಕುಗಳನ್ನು ಕೊಟ್ಟುಬಿಡೋಣ' ಎಂಬದಾಗಿ ಗಂಭೀರವಾಗಿ ಮಾತನಾಡಿ, ಕೊನೆಗೆ ಮೆಲ್ಲನೆ 'ಆದರೆ ಇಷ್ಟರಲ್ಲಿ ನಾವು ಕೈಬಿಟ್ಟರೆ ಅಲ್ಲಿ ಅನವಸ್ಥೆಯಾಗುವುದು. ಆದ ಕಾರಣ, ಅವರ ಹಿತಕ್ಕೋಸ್ಕರವೇ ಕೆಲವು ವರ್ಷ ಅವರಿಗೆ ಸ್ವರಾಜ್ಯವನ್ನು ಕೊಡೋಣಬೇಡ' ಎಂದು ಉಸುರುತ್ತಾರೆ. ಸರ್ ಸಾಮ್ಯುಎಲ್ಲ ಹೋರರ ಉದಾಹರಣೆಯನ್ನೇ ತೆಗೆದುಕೊಳ್ಳಿರಿ. ಅವರ ಮಾತಿನ ಸುರಿಮಳೆ ಎಷ್ಟು, ಶಬ್ದಗಳ ಜಾಲವೆಷ್ಟು. ತಾವೇನೋ ಹಿಂದುಸ್ಥಾನದ ಉದ್ಧಾರ ಮಾಡಲಿಕ್ಕೆ ಆಕಾಶದಿಂದಿಳಿದು ಬಂದ ದೇವದೂತರಂತೆ ಅವರು ಒಯ್ಯಾರ. ಇತ್ತ ಹಿಂದುಸ್ಥಾನದ ಜನರ ಕಡೆಗೆ ಮೋರೆ ತಿರುವಿ, "ಇಗೋ ನಿಮಗೆ ನಾನು ಕೊಡುತ್ತಿರುವ ಸ್ವರಾಜ್ಯದಾನದಂಥ ದಾನಗಳನ್ನು ಹಿಂದಕ್ಕೆ ಯಾರೂ ಕೊಟ್ಟಿಲ್ಲ. ನಮ್ಮ ಜನರು ಇಷ್ಟೇಕೆ ಉದಾರರಾಗಿದ್ದೀ" ಎಂಬದಾಗಿ ಬೈದು ಹಿಂದಕ್ಕೆ ಜಗ್ಗುತ್ತಿರುವರು. ಆದ ಕಾರಣ ನೀವು ತಕರಾರು ಮಾಡದೆ ಕೊಡುವುದನ್ನು ಸ್ವೀಕರಿಸಿ ಸಂತುಷ್ಟರಾಗಿರಿ" ಎಂದು ಸ್ಯಾಮುಎಲ್ಲ ಹೋರರು ಹೇಳುತ್ತಿರುತ್ತಾರೆ. ಅದೇ ಅವರು ತಮ್ಮ ಮೋರೆಯನ್ನು ಹಿಂಜಗ್ಗುವ ಪಕ್ಷದವರಾದ ಚರ್ಚಹಿಲ ಮುಂತಾದವರ ಕಡೆಗೆ ತಿರುಗಿಸಿದ ಕೂಡಲೇ ಅವರಿಗೆ ಹೇಳುವುದೇನೆಂದರೆ, "ತಮ್ಮಗಳಿರಾ, ಗಾಬರಿಯಾಗಬೇಡಿರಿ. ಹಿಂದುಸ್ಥಾನಕ್ಕೆ ನಾನು ಕೊಡುತ್ತಿರುವ ಸ್ವರಾಜ್ಯದಿಂದ ಹಿಂದುಸ್ಥಾನವು ಕೈಬಿಟ್ಟು ಹೋಗುವುದೆಂದು ತಿಲಪ್ರಾಯವೂ ತಿಳಿಯಬೇಡಿರಿ. ಅವರಿಗೆ ನಾನು ಕೊಡುತ್ತಿರುವ ಸ್ವರಾಜ್ಯದಲ್ಲಿ ಒಂದು ಕೀಲವನ್ನಿಟ್ಟಿರುವೆನು. ಆ ಕೀಲವನ್ನು ನಾವು ಬೇಕಾದಾಗ ತಿರುಗಿಸಿ, ಅವರ ಸ್ವರಾಜ್ಯಯಂತ್ರವನ್ನು ನಮ್ಮ ಕಡೆಗೆ ಎಳೆದುಕೊಳ್ಳಬಹುದು. ಆ ಕೀಲವು ಯಾವುದೆಂದರೆ "ಸುಸಂರಕ್ಷಣೆಯ ಉಪಾಯಗಳು" (Safe-guards) ಎಂಬುದು" ಎಂಬದಾಗಿ ಹೋರ ಸಾಹೇಬರು ಚರ್ಚ ಹಿಲ್ಲರ ಕಿವಿಯಲ್ಲಿ ಮೆಲ್ಲನೆ ಹೇಳುತ್ತಾರೆ. ಇಂಗಿತವೇನು? ಹಿಂದುಸ್ಥಾನದ ಜನರ ಮೋರೆಗೆ ಮಂಕು ಬೂದಿಯನ್ನು ಬಡಿಯಬೇಕೆಂಬುದೇ ಅಲ್ಲವೆ?

ಬ್ರಿಟಿಶ ಜನರು ಈ ಸ್ವರಾಜ್ಯ ದಾನದ ಫಾರ್ಸನ್ನು ಯಾವ ರೀತಿಯಿಂದ ನಡಿಸಿದ್ದಾರೆಂಬುದನ್ನು ನೋಡಬೇಕಾದರೆ ಇಂಗ್ಲಂಡದಲ್ಲಿ ನಡೆದಿರುವ ಅವರ ಸಭೆಗಳನ್ನು ನೋಡಬೇಕು. ಮೊನ್ನೆ ೬ನೆ ತಾರೀಖಿನ ದಿವಸ ಬರ್ಮಿಂಗ ಹ್ಯಾಮದಲ್ಲಿ ಕಾನ್ಸರ್ವೇಟಿವ್ಹ ಪಕ್ಷದ ದೊಡ್ಡದೊಂದು ಸಭೆ ಕೂಡಿತ್ತು. ೩೦೦೦ ಪ್ರತಿನಿಧಿಗಳು ನೆರೆದಿದ್ದರು. ವ್ಹಾಯಕಾವುಂಟ ವೋಮರೆಂಬವರು ಒಂದು ಸೂಚನೆಯನ್ನು ಸಭೆಯ ಮುಂದೆ ಇಟ್ಟರು. ಈಗಿನ ನ್ಯಾಶನಲ್ ಗವ್ಹರ್ನಮೆಂಟಿನಲ್ಲಿ ತಮಗೆ ವಿಶ್ವಾಸವಿರುತ್ತದೆಂದೂ ಆದರೂ ಆರ್ಥಿಕ [Finance] ಹಿಂದುಸ್ಥಾನದ ಸಂರಕ್ಷಕ [Defence] ಪೋಲೀಸ [Police] ಮತ್ತು ಹಿಂದುಸ್ಥಾನದ ಜನತೆಯ ಕಲ್ಯಾಣ ಇವುಗಳ ಸಂಬಂಧವಾಗಿ ಬಿಳೀಕಾಗದದಲ್ಲಿ ಮಾಡಿದ ಸೂಚನೆಗಳು ತಮಗೆ ಭೀತಿದಾಯಕವಾಗಿರುವವೆಂದು ಆ ಸೂಚನೆಯ ಆಶಯವಿತ್ತು. ಇದರ ಮೇಲೆ ಆ ಸಭೆಯಲ್ಲಿ ದೊಡ್ಡದೊಂದು ವಾಗ್ವಾದವು ನಡೆಯಿತು. ಈಗಿನ ಸರಕಾರದಲ್ಲಿ ವಿಶ್ವಾಸವಿರುತ್ತದೆಂಬುದನ್ನು ಹಾಗೆಯೇ ಇಡಬೇಕೆಂದೂ ಆದರೆ ಜಾಯಿಂಟ ಸಿಲೆಕ್ಟ ಕಮಿಟಿಯ ವರದಿಯು ಹೊರಬೀಳುವವರೆಗೆ ಈ ಸಭೆಯು ಸುಮ್ಮನಿರಬೇಕೆಂದೂ ಹಲವರ ಅಭಿಪ್ರಾಯವಾಯಿತು. ಈ ವಾಗ್ವಾದದಲ್ಲಿಯೇ ಲಾರ್ಡ ಲಾಯಿಡರು ನಾವು ಮೇಲೆ ಕೊಟ್ಟ ಉದ್ಗಾರಗಳನ್ನು ನುಡಿದರು. ಹಿಂದುಸ್ಥಾನವು ಕೈಬಿಟ್ಟು ಹೋದರೆ ಸಾಮ್ರಾಜ್ಯವು ಸಾಯುವುದೆಂಬುದಷ್ಟೇ ಅಲ್ಲ, ಹಿಂದುಸ್ಥಾನದಲ್ಲಿ ಅರಾಜಕತೆಯುಂಟಾಗುವುದೆಂದು ಅವರ ಎಂಬಿಕೆ. ಆ ಸಭೆಯಲ್ಲಿ ಒಬ್ಬನು ಹಿಂದುಸ್ಥಾನಕ್ಕೆ ರಾಜಕೀಯ ಹಕ್ಕುಗಳನ್ನು ಕೊಡುವಾಗ ಬ್ರಿಟಿಶ ವ್ಯಾಪಾರಕ್ಕೆ ಧಕ್ಕೆ ತಗಲದಂತೆ ಜಾಗ್ರತೆಯನ್ನು ಕೊಡಿರಿ ಎಂದು ಹೇಳಿದರು. ಮತ್ತೊಬ್ಬರು ಬಿಳೀ ಕಾಗದದಿಂದ ನಮ್ಮ ಸಾಮ್ರಾಜ್ಯಕ್ಕೆ ಧಕ್ಕೆ ಆಗದಂತೆ ಎಚ್ಚರ ವಹಿಸಿರಿ ಎಂದು ಹೇಳಿದರು. ಅಂತೂ ಎಲ್ಲರ ಭಾಷಣದಲ್ಲಿ ಒಂದೇ ಪಲ್ಲವಿ. ಅದೇನೆಂದರೆ ಹಿಂದುಸ್ಥಾನದ ಮೇಲಿನ ಹಿಡಿತವನ್ನು ಬಿಗಿಯಾಗಿ ಮಾಡುವುದು. ಹೀಗಿದ್ದರೂ ನಮ್ಮಲ್ಲಿಯ ಕೆಲವರಿಗೆ ಬಿಳೀ ಕಾಗದದ ಹುಚ್ಚು ಬಿಡಲೊಲ್ಲದು.

ಅಹಮುದಾಬಾದಿನ ಗಿರಣಿಗಳ ಕೂಲಿಕಾರರ ಮತ್ತು ಒಡೆಯರ ಜಗಳವು ಬಗೆಹರಿಯಲಿಲ್ಲ

"ನಾನು ನಡುವೆ ಬೀಳಬೇಕಿದ್ದರೆ ನೀವಿಬ್ಬರೂ ನನ್ನ ಮಾತು ಕೇಳುವೆನೆಂದು ಮಾತು ಕೊಡಬೇಕು." — ಗಾಂಧೀಜಿ

ಅಹಮ್ಮದಾಬಾದ ತಾ॥ [illegible]೦

ಇಲ್ಲಿಯ ಗಿರಣಿಗಳ ಒಡೆಯರ ಕೂಟದ ಹಿರಿಯಾಳಾದ ಶ್ರೀ ಚಮನಲಾಲ ಪರೇಖರು ಮಹಾತ್ಮಾ ಗಾಂಧಿಯವರಿಗೆ ಒಂದು ಪತ್ರ ಬರೆದು ತಾವು ಒಡೆಯರ ಮತ್ತು ಕೂಲಿಕಾರರ ನಡುವೆ ಸಂಧಾನ ಮಾಡತಕ್ಕ ಮಂಡಲದ ಅಧ್ಯಕ್ಷ ಪದವಿಗೆ ರಾಜೀನಾಮೆಯನ್ನು ಕೊಟ್ಟಿರುವುದಾಗಿ ಪ್ರಕಟ ಪಡಿಸಿದ್ದಾರೆ.

ಇದಕ್ಕೆ ಮಹಾತ್ಮಾ ಗಾಂಧಿಯವರು ವಾರ್ಧೇಯಿಂದ ಒಂದು ಪತ್ರ ಬರೆದು ತಮ್ಮ ಮನಸಿನಾಳದ ನೋವನ್ನು ತಿಳಿಸಿರುವರು. "ಸಂಧಾನ ಕಾರ್ಯವು ಕೈಗೂಡದಿದ್ದರೂ ವಿಷಾದವಿಲ್ಲ. ಕೊನೆಯ ತನಕ ಸರಳವಾಗಿ ಬಂದಂತೆ ಅಸಂಭವದ ಚರ್ಚೆಯಲ್ಲಿಯೆ ನಿಮಗೆ ಅಡ್ಡಿಗಳು ಬಂದದನ್ನು ಕೇಳಿಯಂತೂ ಇನ್ನಿಷ್ಟು ದುಃಖಿತನಾದೆನು. ನಾನು ಎರಡೂ ತಂಡದವರಿಂದ ಕೇಳಿಕೊಳ್ಳದೆ ಏನನ್ನೂ ಹೇಳಲಾರೆ. ಇಂಥಹ ಜಗಳಗಳನ್ನು ಪಂಚರ ಕಡೆಗೆ ಒಪ್ಪಿಸುವುದು ಅವಶ್ಯಕ. ಕೂಲಿಕಾರ ಸಂಘದ ಕಾರ್ಯದರ್ಶಿಗಳು ನನ್ನನ್ನು ಕಾಡು ತಮ್ಮ ವಿವರಗಳನ್ನೆಲ್ಲ ಹೇಳಿದರು. ಆದರೆ ನಾನೇನೂ ನಿರ್ಧರಿಸಲಿಲ್ಲ; ನನಗೆ ಬಗೆಹರಿಸಲು ನೀವು ಹೇಳುತ್ತಿದ್ದರೆ ನೀವಿಬ್ಬರೂ ಅದಕ್ಕೆ ಒಪ್ಪಿಕೊಂಡು ಹಾಗೆ ಬರೆದುಕೊಂಡೆ ನನ್ನೆಡೆಗೆ ಬರಬೇಕು."

(ಅ ಪ್ರ ತಂತಿ)

ಮಿದನಾಪುರದ ಅಧಿಕಾರಿಗಳಿಗೆ ಅಧಿಕಾರಗಳು ಇನ್ನೂ ಕಡಿಮೆಯೆ ಇವೆಯಂತೆ.

ಕಲಕತ್ತಾ ತಾ॥ ೧೨— ಬಂಗಾಲ ಸರಕಾರದ ೩ನೆಯ ತಾ॥ ದಿನ ರಾಯಸ [ಕಮ್ಯುನಿಕ್]ದಲ್ಲಿ ಕಾಣಿಸಿದ ಸಂಗತಿಗಳನ್ನು ಅಲ್ಲಗಳೆದು ಮಿದ್ನಾಪುರ ಯುರೋಪೀಯರು ಲಂಡನ್ನಿನ ಮೋರ್ನಿಂಗ ಪೋಸ್ಟ ಪತ್ರಿಕೆಯಲ್ಲಿ ಒಂದು ಪತ್ರವನ್ನು ಪ್ರಕಟಿಸಿರುವರು. ಈಗ ಮಿದನಾಪುರದ ಅಧಿಕಾರಿಗಳಿಗೆ ಕೊಟ್ಟಿರುವ ಅಧಿಕಾರಗಳು ಸಾಕಲ್ಲಿಲ್ಲ. ಅವುಗಳನ್ನು ಇನ್ನೂ ಹೆಚ್ಚಿಸಬೇಕು. ಅಪ್ಪಣೆ ಪಡೆಯದೆ ಯಾವನಾದರೂ ಪಿಸ್ತೂಲು ಗುಂಡು ಮುಂತಾದವುಗಳನ್ನು ಹತ್ತಿರ ಇಟ್ಟುಕೊಂಡಿದ್ದರೆ ಅವನನ್ನು ಆಲಿಸದೆ ನೇಣಿಗೆ ಗಲ್ಲಿಗೇರಿಸುವ ಅಧಿಕಾರವನ್ನು ಕೊಡಲಿಕ್ಕೆ ಬೇಕು. ಸರಕಾರದವರು ಅಧಿಕಾರಿಗಳ ಕೈಕಟ್ಟಿದರೆಂದು ನಾವು ಹೇಳಲ್ಲ; ಈಗಿನ ಕಾಯದೆಗಳ ಮೇರೆಗೆ ಅವರ ಅಧಿಕಾರಗಳು ಅಪೂರ್ಣವಾಗಿವೆ. ಮಿ ಬರ್ಜ ಇವರ ಕೊಲೆಯಾದ ಬಳಿಕ ಹೆಚ್ಚಿನ ಅಧಿಕಾರಗಳನ್ನು ಕೊಡುವ ಅವಶ್ಯಕತೆಯು ಸರಕಾರಕ್ಕೆ ಹೊಳೆದು ಅದು ಹಾಗೆ ಆ ಅಧಿಕಾರಗಳನ್ನು ಕೊಟ್ಟಿತು.

[ಅ ಪ್ರ ತಂತಿ]

ಮದರಾಸ ಸೆರೆಮನೆಯಲ್ಲಿ ಅನ್ನತ್ಯಾಗ.

ಮದ್ರಾಸ ತಾ॥ [illegible]— ಮದರಾಸ ಸೆರೆಮನೆಯಲ್ಲಿ [illegible] ಜನ ಕಾಂಗ್ರೆಸ ಕೈದಿಗಳುಗಳು ಸರಿಯಾದ ಅನ್ನವನ್ನು ನೀಡದ್ದರಿಂದ ಊಟ ಮಾಡದಿರುವರು. ಎರಡು ದಿನಗಳಾದರೂ ಏನೂ ತಕ್ಕೊಂಡಿಲ್ಲ. (ಅ ಪ್ರ ತಂತಿ)

ಇದಸ್ಪತ್ರ

ಧಾರವಾಡ [illegible] ಕಾಯಿಸ್ಕೂಲಿನ ವಾರ್ಷಿಕ ಆಟವು [illegible]— ೧೯ನೆಯ ತಾರೀಖಿನಲ್ಲಿ ಜರಗುವವು. ಆಗ ಆಟ ನೋಟಗಳಾಗುವವಲ್ಲದೆ, [illegible]ನೆಯ ತಾರೀಖಿನ ದಿವಸ ಪ್ರೊ. [illegible] ಅವರ ಅಧ್ಯಕ್ಷತೆಯಲ್ಲಿ ಭಾಷಣವು [illegible] ಮತ್ತು [illegible]ನೆಯ ತಾರೀಖಿನ ದಿವಸ ಶ್ರೀ ಕೆ. ಎಸ್. ಪಟೇಲ ಡಿಸ್ಟ್ರಿಕ್ಟ ಸಿವಿಲ್ ಇನ್ಸಪೆಕ್ಟರ [illegible] ಬಹುಮಾನಗಳು ಹಂಚಲ್ಪಡುವವು.

[illegible] ದಿವಸಗಳಿಂದ ಮಳೆ ಸುರಿಯುತ್ತಲಿದೆ

ಬ್ಯಾಡಗಿ ಸುದ್ದಿಯು

ಬ್ಯಾಡಗಿ ತಾ॥ ೮— ಮೊನ್ನೆ ಇಲ್ಲಿ ಹಾವೇರಿ ಪೋಲೀಸ ಇನಸ್ಪೆಕ್ಟರರು ರಾತ್ರಿ [illegible] ಘಂಟೆ ಸುಮಾರಿಗೆ ಒಂದು ಜೂಜುಗಾರರ ಮನೆಗೆ ರಿಝರ್ವ ಪೋಲೀಸರಿಂದ ಮುತ್ತಿಗೆ ಹಾಕಿಸಿ ಅಲ್ಲಿದ್ದ [illegible] ಜೂಗಾರಿ ಜನರನ್ನು ಕೈದು ಮಾಡಿ ಪೋಲೀಸ ಠಾಣ್ಯದಲ್ಲಿ ತಂದು ಕೂಡಿಸಿದರು. ಮಧ್ಯಾನ್ಹಕ್ಕೆ [illegible] ಜನರನ್ನು ಜಾಮೀನಿನ ಮೇಲೆ ಬಿಟ್ಟು ಬಾಕಿ [illegible] ಜನರಿಗೆ ಜಾಮೀನ ಇಲ್ಲದ್ದರಿಂದ ಅವರನ್ನು ರಾಣೇಬಿನ್ನೂರಿಗೆ ಒಯ್ದರು. ಎಲ್ಲ ಜನರ ಮೇಲೆ ಖಟ್ಲೆ ಹಾಕುತ್ತಾರೆ. ಮತ್ತು ಇಲ್ಲಿ ಪ್ಲೇಗ ಕಮ್ಮಿ ಆಗಿರುತ್ತದೆ. ಹವಾ ಚನ್ನಾಗಿದೆ.

ಹುಬ್ಬಳ್ಳಿ ಪತ್ರ

ಹುಬ್ಬಳ್ಳಿ ತಾ॥ ೯— ಇಲ್ಲಿ ನಿನ್ನೆ ರಾತ್ರಿ ೭ ಘಂಟೆಯಿಂದ ಅರ್ಧ ತಾಸಿನ ವರೆಗೆ ಕಲ್ಲು ಸುರಿದಂತೆ ಮಳೆ ಸುರಿಯಿತು. ಗುಡುಗೂ ಮಿಂಚೂ ಜೋರಾಗಿದ್ದವು.

ಇಂದು ಮಧ್ಯಾನ್ಹ ೧೨ ಇಂದ ೧ ಗಂಟೆಯ ವರೆಗೆ ಗುಡುಗು-ಮಿಂಚಿನಿಂದ ಯುಕ್ತವಾಗಿ ಮೇಘರಾಜನು ನೀರೇ ನೀರು ಮಾಡಿಬಿಟ್ಟನು. ಆದರಿಂದ ನಾ. ಮಂತ್ರಿಗಳ ತಾಂಬೂಲ ವಾನಪತ್ರ ಸಮಾರಂಭಗಳ ವೇಳೆಗೆ ಕಲ್ಲಿ ಇದೆ. ಹೆಚ್ಚು ಕಡಿಮೆ ಮಾಡಬೇಕಾಯಿತು.

ಸಂಜೆ ೬ ಘಂಟೆಯಿಂದ ಪುನಃ ತಾಸೆರಡು ತಾಸು ಬಹಳೇ ಜೋರಿನಿಂದ ಮಳೆ ಸುರಿಯಿತು. ಮಳೆ, ಗುಡುಗು, ಸಿಡ್ಲು, ಮಿಂಚು ಇವುಗಳ ಆರ್ಭಟವು ವಿಶೇಷವಾಗಿತ್ತು.

ವಿಜಯನಗರ

ಈ ಸಮಾರಂಭ ಮಹೋತ್ಸವವನ್ನು ಹೇಗೆ ಜರುಗಿಸಬೇಕು?

ಸ್ವ ಸಂಪಾದಕರೆ,

ಕರ್ನಾಟಕತ್ವ ... ಹಿತ ಸಂರಕ್ಷಣೆಗಾಗಿ ... ತೇಲುಕೆಗಳನ್ನು ... ಆದ ತಾವು ನನ್ನ ಈ ಮಾತುಗಳನ್ನು ಗಮನಿಸಿ ... ನ್ನು ಕೊಟ್ಟು ಈ ವಿಷಯದಲ್ಲಿ ತಮ್ಮ ... ಕಸವಾದ ವಿಚಾರಗಳನ್ನು ಜನರ ... ಕೋರುತ್ತೇನೆ

... ನ್ನು ಮೂರು ವರ್ಷಗಳೊಳಗಾಗಿ ... ಟಕದಲ್ಲಿ ಒಂದು ಲಕ್ಷ ರೂಪಾಯಿಗ ... ಇಲ್ಲದಷ್ಟು ಹಣವನ್ನು ಕೂಡಿಸಿ ನಗರ ಸ್ಮಾರಕೋತ್ಸವವನ್ನು ನೆರವೇ ... ಎಂದು ವಿಚಾರವು ನಡೆದಿದೆಯಷ್ಟೆ ಈ ... ಸಮಾರಂಭವು ಕರ್ನಾಟಕಕ್ಕೆ ... ಹಿತ ... ವಾಗಿ ವಿಚಾರ ಮಾಡುವುದು ...

[illegible] ... ಸಾಹಿತ್ಯ, ಇತಿಹಾಸ ... ವಿಷಯಗಳ ... ಕಾರ್ಯಗಳನ್ನು ... ಕಾಣುವಂತೆ ಮಾಡುವ ... ತಲೆದೋರುತ್ತಲಿದೆ

... ಕರ್ನಾಟಕ ... ಗಳ ಕಾಲಕ್ಕೆ ಈ ಸಮಾರಂಭವನ್ನು ... ನಿಶ್ಚಿತವಾದ ... ಇದೇ ... ಇತ್ತೀಚಿನ ... ಮೂಲಕ ನನಗೆ ಈ ಮಹೋತ್ಸವ ... ಎನ್ನಿಸುತ್ತಲಿದೆ

ಮಹೋತ್ಸವವನ್ನು ಮಾಡುವ ಉದ್ದೇಶವಾವುದು? ... ಕ್ರಿಯಾಗಬೇಕು. ... ಎಂಬುದೆ ಒಳ್ಳೆ? ಈ ... ನೋಡಿದರೆ ... ಜನ ... ಬಾಳಿನ ... ರೂ ಒಂದು ವಿಶೇಷ ಯೋಜನೆಯ ... ದರೆ ಲೇಸಾಗಲಿಕ್ಕಿಲ್ಲವೆ?

ಸಂದರ್ಭದಲ್ಲಿ ಹಾಗೆ ಸಮಾರಂಭ ... ಷ್ಟು ... ದಲ್ಲಿ ... ಸಿದ ಹಣದ ... ವಿಶ್ವವಿದ್ಯಾನಿಲಯದ ಸಲುವಾಗಿ ... ರೆ ಅದು ಹೆಚ್ಚು ಹಿತಕರವೂ ಶಲ್ಯಾ ... ವೂ ಆಗಲಿಕ್ಕಿಲ್ಲವೆ?

... ದ ನಾವೆಲ್ಲ ... ಅವರ ವಂಶಜರೆಂದು ... ಕೈಗೆ ... ಆಗಿದೆ ... ದೇಹವು ... ಶಿಗರನ್ನು ಬೌದ್ಧಿಕ ದಾಸ್ಯದಲ್ಲಿಯೂ ... ಈ ಮೂರೂ ... ಆರಿ ಹೃದಯಕ್ಕೆ ಸುತ್ತಲಿದಯು ನ



... ವಿದ್ಯಾ ... ವು ಕರ್ನಾಟಕ ... ಪುನರುಜ್ಜೀವನ ... ಸ್ಥಾಪಿಸುವುದಕ್ಕಾಗಿ ... ಪ್ರಯತ್ನ ಗಳನ್ನು ... ಒಂದು ಲಕ್ಷ ರೂಪಾಯಿಗಳನ್ನು ಕೂಡಿಸುವ ... ಬಿಟ್ಟರೆ

... ಕನ್ನಡ ... ಕರ್ನಾಟಕ ... ವಿದ್ಯಾಪೀಠವೆಂಬ ... ಸಂಸ್ಥೆ ... ವಾಗಿಯೆ ಸ್ಥಾಪಿಸಿಯೆ] ... ಕರ್ನಾಟಕವು ... ... ನಾನು ... ಮಾತಿನ ... ಈ ಸಂಸ್ಥೆಯ ... ಉತ್ತರ ಕರ್ನಾಟಕವನ್ನು ... ಈ ... ಒಂದು ವಿಶ್ವವಿದ್ಯಾಲಯವನ್ನು ... ವಿಜಯನಗರದ ಸ್ಮಾರಕೋತ್ಸವ ... ಒಂದು ಲಕ್ಷಕ್ಕಿಂತ ಹೆಚ್ಚು ರೂಪಾಯಿಗಳು ... ಲಕ್ಷಗಟ್ಟಲೆ ರೂಪಾಯಿಗಳನ್ನು ಆಗಾಗ್ಗೆ ಕೂಡಿಸ ... ಆಗದ ಮಾತು.

... ವಿಜಯನಗರದ ಹೆಸರಿನಲ್ಲಿ ... ವಿಶ್ವವಿದ್ಯಾಲಯದ ... ಕರ್ನಾಟಕ ... ಸಿಂಹಾಸನ ... ಕನ್ನಡನಾಡನ್ನು ಉಳಿಸಬೇಕೆಂದು ... ನೆ

ಶಂ. ಬಾ. ಜೋಶಿ

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇನಟೆ ಮತ್ತು ಕಂಪನಿ)

ಹುಬ್ಬಳ್ಳಿ ತಾ| ೧೦ ಮಧ್ಯಾಹ್ನ ೧೧ ಗಂಟೆ)

ಜವಾರಿ ಹತ್ತಿ	೧೨೩-೧೦೬
ಅಪ್ಲಂಡ ಹತ್ತಿ	೧೨೨-೧೦೩
ವಿಲಾಯತಿ ಹತ್ತಿ	[illegible]
ನ್ಯೂಕ್ರ್ಯಾಕ ಹತ್ತಿ	[illegible]
ಜೀನ ಅರಳಿ	[illegible]
ಡಬಲ್ ರೋಲ ಅರಳಿ	[illegible]
ಸಾಜಿನ ಅರಳಿ	[illegible]
ಜೋಳ	[illegible]
ಗೋದಿ	[illegible]
ಹೆಸರು ಬವಂರಿ	[illegible]
ಉದ್ದು ,,	[illegible]
ಕಡ್ಲಿ ,,	[illegible]
ಕಡ್ಲಿ ತಾಸಗಂಪ	[illegible]
ಕುಸಬಿ	[illegible]
ಹುರಳಿ	[illegible]

ಬೆಳ್ಳಿ ಬಂಗಾರ

ಬಂಗಾರ	[illegible]
ಬೆಳ್ಳಿ	[illegible]

ಮುಂಬಯಿ ಪೇಟೆಯ ಧಾರಣೆ

ಬಂಗಾರ	[illegible]
ಬೆಳ್ಳಿ	[illegible]

ಅರಳಿ ಮಧ್ಯಾಹ್ನ ...

ಹತ್ತಿ ಬಡೋಚ	೧೮೯-೦-೦

ಡಾ. ಕುಲಕರ್ಣೀಜ
ಲೆಬೊರೆಟರಿ ಮುಂಬಯಿ ನಂಬರ ...
ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು



ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

... ಬಿಳೇಸೆರಗು, ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ... ನಡಸೋವು, ಅಶಕ್ತತಾ ... ವಿಕಾರಗಳು ... ಗರ್ಭಸಂಬಂಧಿ ಎಲ್ಲ ವಿಕಾರಗಳು ನಷ್ಟವಾಗಿ ಗರ್ಭಧಾರಣ ... ಆಗುತದೆ ... ಪ್ರಕೃತಿ ... ಅಗುತ್ತದೆ

ಏಜಂಟ ... ಬಾಗಲಕೋಟೆ

ಪತ್ರಿಕೆಯ ವರ್ಗಣಿ ವಿವರ

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	[illegible]	೦-೧೨-೦
೩ ತಿಂಗಳಿಗೆ	[illegible]	೨-೮-೦
೬ ತಿಂಗಳಿಗೆ	[illegible]	೫-೦-೦
ವರ್ಷಕ್ಕೆ	[illegible]	೯-೦-೦

ವ್ಯವಸ್ಥಾಪಕ

ಕನ್ಯಾಗತದ ಅಪೂರ್ವ ಯಾತ್ರೆ! **ಕ್ಷೇತ್ರಗಳ ಪ್ರೇಕ್ಷಣೀಯ ಸೋಟ!!**

ಸ್ಥಾಪನೆ.

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ರೇಲ್ವೆ ಕಂಪನಿಯಿಂದ ಪರವಾನಿಗೆಯನ್ನು ಪಡೆದಿರುತ್ತದೆ.

ಶ್ರೀ ಕಾಶಿ, ರಾಮೇಶ್ವರ, ಲಂಕಾ ಮೊದಲಾದ ಕ್ಷೇತ್ರಗಳ ಯಾತ್ರೆಗಾಗಿ

ಶ್ರೀ ಗೌರೀಶಂಕರ ಟ್ರೇನು

ತಾ|| ೨೨ ಅಕ್ಟೋಬರ ೧೯೩೩ ನೇ ದಿವಸ ಹೊರಡುತ್ತದೆ.

ಸೆಕಂಡಕ್ಲಾಸ ೩೧೦ ರೂ **ಥರ್ಡಕ್ಲಾಸ ೧೪೦ ರೂ.**

ಕೂಡಲೇ ಅಡ್ವಾನ್ಸ ಕಳಿಸಿ ಟಿಕೇಟ ಪಡೆಯಿರಿ

ಟ್ರೇನು ಹೊರಡಿಸುವದಕ್ಕೆ ರೇಲ್ವೆ ಕಂಪನಿಯಿಂದ ಪರವಾನಗಿಯನ್ನು ಪಡೆದಿರುತ್ತದೆ. ಹುಬ್ಬಳ್ಳಿಯ ಶ್ರೀ ಗೌರೀಶಂಕರ ಯಾತ್ರಾ ಟ್ರೇನ ಭರತಖಂಡ ಮತ್ತು ಲಂಕಾಯಾತ್ರೆಗೋಸುಗ ಇದೇ ಅಕ್ಟೋಬರ ತಿಂಗಳ ... ನೇ ದಿವಸ ಹೊರಡಲಿಕ್ಕೆ ಪೂರ್ಣ ತಯಾರಿಯಲ್ಲಿರುವದು

ನಮ್ಮ ಟ್ರೇನಿನಲ್ಲಿ ಸ್ಟೇಟ್ ... ರೂ, ಜಮೀನದಾರರೂ ಪದವೀಧರರೂ, ವಿದ್ಯಾರ್ಥಿಗಳೂ ... ದರ್ಜೆ ಗವರ್ನಮೆಂಟ ಆಫೀಸರರೂ ಪ್ರಯಾಣ ಮಾಡತಕ್ಕವರಿರುವದರಿಂದ ಪ್ರಾರಂಭದಿಂದ ಕೊನೆಯವರೆಗೂ ಉತ್ತಮ ವ್ಯವಸ್ಥೆ ಮಾಡಲ್ಪಡುವದು

೧೨ ವರ್ಷಕ್ಕೊಮ್ಮೆ ಬರುವ ಪುಣ್ಯಪ್ರದವಾದ ಕನ್ಯಾಗತದ

ಇದೇ ಮಾರ್ಗಶೀರ್ಷ ಮಾಸದಲ್ಲಿಯ ಅಪೂರ್ವ ಯಾತ್ರೆಯು!

ಅಲಕ್ಷಿಸಿದರೆ ಪುನಃ ಸಿಗಲರಿಯದು!! **ಸ್ವಲ್ಪೇ ಟಿಕೀಟುಗಳು ಉಳಿದಿವೆ!!!**

ತ್ವರೆ ಮಾಡಿರಿ!!!! ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದೂ, ಹೆಚ್ಚಿನ ಅನುಭವ ಹಾಗು ಸ ಧಾರಣೆಯುಳ್ಳದ್ದೂ ಆಗಿರುವ ದರ್ಬಾರೀ ಸಿಸ್ತಿನ ಘನತೆಯುಳ್ಳ

ಶ್ರೀ ಗೌರೀಶಂಕರ ಕಂಪನಿಯ

೨ ನೇ ಯಾತ್ರಾ ಪ್ರವಾಸವು

೧ ನೇ ಯಾತ್ರೆಯನ್ನು ಸುಖವಾಗಿಯೂ, ಯಶಸ್ವಿಯಾಗಿಯೂ ಪೂರೈಸಿ ಕೆಲಮಟ್ಟಿಗೆ ಕರ್ನಾಟಕದ ಹಾಗು ಮಹಾರಾಷ್ಟ್ರದ ಸೇವೆಯನ್ನು ಮಾಡಿ ಯಾತ್ರಿಕರಿಂದ ಸುವರ್ಣ ಪದಕ, ಮಾನಪತ್ರ, ಸದಭಿಪ್ರಾಯ, ಧನ್ಯವಾದಗಳನ್ನು ಪಡೆದಿದೆ

ರೇಲ್ವೆ ಕಂಪನಿಯಲ್ಲಿ ಹಣವನ್ನು ಡಿಪಾಜಿಟ್ ಆಗಿ ಇಟ್ಟು ರೇಲ್ವೆ ಕಂಪನಿಯಿಂದ ಪರವಾನಗಿ ಪಡೆದಿದೆ ಶ್ರೀ ಗೌರೀಶಂಕರ ಕಂಪನಿಯ ಚಾಲತೀ ಠೇವ ಖಾತೆಯು ಹುಬ್ಬಳ್ಳಿಯ ಇಂಪೀರಿಯಲ್ ಬ್ಯಾಂಕಿನಲ್ಲುಂಟು.

೧ ಕೊಲ್ಹಾಪುರ ೨೩ ಅಕ್ಟೋಬರ	೧೯ ದಿಲ್ಲಿ ೧೨–೧೩–೧೪	೩೫ ಮದ್ರಾಸ (ಸಮುದ್ರಸ್ನಾನ) ೮–೯
೨ ಶ್ರೀಶೈಲ (ಜ್ಯೋತಿರ್ಲಿಂಗ) ೨೬–೨೭	೨೦ ಹರಿದ್ವಾರ ೧೫–೧೬	೩೬ ಶಿವಕಂಚಿ [illegible]
೩ ಮುಂಬಯಿ (ಸಮುದ್ರ) ೨೮–೨೯ ೩೦	೨೧ ಋಷಿಕೇಶ	೩೭ ವಿಷ್ಣುಕಂಚಿ
೪ ದ್ವಾರಕಾ (ಸಮುದ್ರ ಪಕ್ಷಿ ಹಡಗದಿಂದ) ೩೧–೩೦	೨೨ ಲಕ್ನೋ ೧೭	೩೮ ಕುಂಭಕೋಣಂ [illegible]
೫ ಸೋಮನಾಥ (ಜ್ಯೋತಿರ್ಲಿಂಗ)	೨೩ ಅಯೋಧ್ಯೆ ೧೮	೩೯ ರಾಮೇಶ್ವರ (ಜ್ಯೋತಿರ್ಲಿಂಗ ಸಮುದ್ರಸ್ನಾನ) ೧೦ ೧೧
೬ ಪಾಲೀಟಾನಾ (ಜೈನ ಕ್ಷೇ) ೪೧	೨೪ (ಪ್ರಯಾಗ ತ್ರಿವೇಣಿ) ಅಲಹಾಬಾದ ೧೯–೨೦	೪೦ ಕೊಲಂಬೋ [ಹಡಗದಿಂದ ಲಂಕಾ] ೧೩–೧೪ ೧೫
೭ ಪಾವಾಗಢ ೧ ನವ್ಹೆಂಬರ	೨೫ ಶ್ರೀಕಾಶಿ (ಜ್ಯೋತಿರ್ಲಿಂಗ) ೨೧–೨೨–೨೩–೨೪ ೨೫	೪೧ ಕ್ಯಾಂಡಿ [ಲಂಕಾ] ೧೬
೮ ಅಬುಪರ್ವತ (ಜೈನತೀರ್ಥಕ್ಷೇ) ನವ್ಹೆಂಬರ ೩–೪	೨೬ ಸಾರನಾಥ (ಬೌದ್ಧತೀರ್ಥ)	೪೨ ಕನ್ಯಾಕುಮಾರಿ [ಸಮುದ್ರಸ್ನಾನ] ೧೮
೯ ಅಹಮ್ಮದಾಬಾದ ೪	೨೭ ಗಯಾ ಬೌದ್ಧತೀರ್ಥ ೨೬–೨೭	೪೩ ಧನುಷ್ಕೋಟಿ [ಸಮುದ್ರಸ್ನಾನ] ಹಡಗದಿಂದ
೧೦ ಸಾಬರಮತಿ	೨೮ ರಾಜಗಿರಿ (ಜೈನತೀರ್ಥ ಬಿಸಿನೀರಿನ ಸೆಲೆಯ ಸ್ನಾನ)	೪೪ ಮಧುರೆ [ಶಕ್ತಿಪೀಠ] ೧೭
೧೧ ಬಡೋದೆ ೫	೨೯ ಇಸ್ರಿ [illegible]	೪೫ ತ್ರಿಚನಾಪಳ್ಳಿ [ಟೌನ್ ಸ್ಟೇಶನ್] ೧೮
೧೨ ಉಜ್ಜಯನಿ (ಜ್ಯೋತಿರ್ಲಿಂಗ) ೬–೭	೩೦ ಪಾರಸನಾಥ (ಜೈನತೀರ್ಥ) ಸಮ್ಮೇತ ಶಿಖರ	೪೬ ಶ್ರೀರಂಗ (ವಿಷ್ಣುತೀರ್ಥ) ೧೮
೧೩ ಓಂಕಾರೇಶ್ವರ (ಜ್ಯೋತಿರ್ಲಿಂಗ)	೩೧ ಕಲಕತ್ತಾ ೩೦ ಡಿಸೆಂಬರ ೧–೨	೪೭ ಬೆಂಗಳೂರ ೧೯
೧೪ ಆಗ್ರಾ ೯–೯	೩೨ ಜಗನ್ನಾಥ ಪುರಿ (ಸಮುದ್ರ ಸ್ನಾನ) ೪	೪೮ ಮೈಸೂರ ೨೦–೨೧
೧೫ ಮಥುರಾ ೯–೧೦	೩೩ ವಿಶಾಖಪಟ್ಟಣ (ಸಮುದ್ರ ಸ್ನಾನ) ೬	೪೯ ಹುಬ್ಬಳ್ಳಿ ೨೩
೧೬ ಗೋಕುಲ	೩೪ ರಾಜಮಹೇಂದ್ರಿ (ಗೋದಾವರಿ ಸ್ನಾನ) ೭	
೧೭ ವೃಂದಾವನ		
೧೮ ಗೋವರ್ಧನ		

ಕ್ಷೇತ್ರಗಳ ಮುಂದೆ ತಾರೀಖುಗಳನ್ನು ಬರೆದಿರುವ ಸ್ಟೇಶನ್ನುಗಳಲ್ಲಿ ಮಾತ್ರ ಟ್ರೇನು ನಿಲ್ಲುವದು. ಇದೇ ಮುಕ್ಕಾಮಿನಿಂದ ಉಪಕ್ಷೇತ್ರಗಳ ಯಾತ್ರೆಯನ್ನು ಮಾಡಿಕೊಳ್ಳತಕ್ಕದ್ದು. ಮೇಲೆ ಬರೆದಂತೆ ಎಲ್ಲ ಯಾತ್ರಾಸ್ಥಳಗಳನ್ನು ಪೂರೈಸಿಕೊಂಡು ಟ್ರೇನು ಡಿಶಂಬರ ೨೩ ನೇ ತಾರೀಖು ... ದಿವಸ ಮುಂಜಾನೆ ಹುಬ್ಬಳ್ಳಿ ಪಟ್ಟಣಕ್ಕೆ ಬಂದು ತಲುಪುವದು.

ರೇಲ್ವೆ ಪಡಿ ... ಇಟ್ಟುಕೊಳ್ಳುವ ಸ್ಥಳದ ಒಡಿತೀ ಸೇರಿ ಸೆಕಂಡಕ್ಲಾಸ ೩೧೦ ರೂ ಥರ್ಡಕ್ಲಾಸ ೧೪೦ ರೂ ಮಾತ್ರ ೩ ವರ್ಷದ ಮೇಲ್ಪಟ್ಟ ೧೨ ವರ್ಷದ ಒಳಗಿನ ಮಕ್ಕಳಿಗೆ ಅರ್ಧ ಚಾರ್ಜ ಎಲ್ಲಿ ಟ್ರೇನು ಹತ್ತಿದರೂ ಮೇಲ್ಕಾಣಿಸಿದ ಚಾರ್ಜನ್ನೇ ಕೊಡಬೇಕಾಗುವದು ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳವು ಕೊಡಲ್ಪಡುವದು ಆದ್ದರಿಂದ ಮೇಲೆ ಬರೆದಿರುವ ಚಾರ್ಜ ಬಹಳ ಸುಲಭವಾದದ್ದು ಟಿಕೇಟ ಪಡೆಯಬೇಕಾದಲ್ಲಿ ಕೂಡಲೆ ಅಡ್ವಾನ್ಸ ಕಳಿಸತಕ್ಕದ್ದು ಯಾತ್ರಿಕರ ಯೋಗ್ಯ ಅಡಚಣಿ ಕಂಡುಬಂದಲ್ಲಿ ಅಥವಾ ಟ್ರೇನು ಹೊರಡದಿದ್ದಲ್ಲಿ ಯಾತ್ರಿಕರು ಕೊಟ್ಟ ಅಡ್ವಾನ್ಸ ಅಥವಾ ಪೂರ್ಣ ಹಣವು ಪರತ ಕೊಡುವದರಲ್ಲಿ ಬರುವದು ಶ್ರೀ ಗೌರೀಶಂಕರ ಕಂಪನಿಯ ಯಾವತ್ತೂ ಹಣವು ಹುಬ್ಬಳ್ಳಿ (ಸರಕಾರಿ) ಇಂಪೀರಿಯಲ್ ಬ್ಯಾಂಕಿನಲ್ಲಿದ್ದ ವದರಿಂದ ಯಾತ್ರಿಕರಿಂದ ಬಂದ ಹಣವಾದರೂ ಸದರ ಬ್ಯಾಂಕಿನಲ್ಲಿ ಸುರಕ್ಷಿತವಾಗಿರುವದು

ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ ನೌಕರರೂ ಇರುವರು. ಯಾತ್ರಿಕರ ಅನುಕೂಲತೆಗಾಗಿ ದವಾಖಾನೆ ಅಗಸರು, ಫೋಟೋಗ್ರಾಫರ, ಲಾಯಬ್ರರಿ, ಪೋಸ್ಟ ಆಫೀಸ, ಯಾತ್ರಿಕರ ಠೇವಿನ ಹಣದ ಸುರಕ್ಷಿತತೆಗಾಗಿ ಟ್ರೇಜರಿ ಇರುವವು. ಸದರ ಕಂಪನಿಯ ಮಾಲೀಕರಾದ ಮಿ| ಜಿ ಎ ಶಿರೂರ ಇವರಿಂದ ಸಾಧ್ಯವಿರುವ ಮುಕ್ಕಾಮುಗಳಲ್ಲಿ ... ಮುಂತಾದ ಪ್ರಸಿದ್ಧ ಸ್ಥಳಗಳು ಮ್ಯಾಜಿಕ್ ಲ್ಯಾಂಟರ್ನದ ಚಿತ್ರದಿಂದ ತೋರಿಸಲ್ಪಡುವವು. ... ಮೇಲೆ ಬರೆದಿರುವ ಎಲ್ಲ ಕ್ಷೇತ್ರಗಳ ಸಚಿತ್ರ ಚರಿತ್ರೆ (ಗಾಯಿಡ) ಮಿ| ಜಿ ಎ ಶಿರೂರ ಇವರಿಂದ ಕನ್ನಡದಲ್ಲಿ ಬರೆಯಲ್ಪಟ್ಟದ್ದು ಶ್ರೀ ಗೌರೀಶಂಕರ ಕಂಪನಿಯ ಆಫೀಸಿನಲ್ಲಾಗಲಿ ಟ್ರೇನಿನಲ್ಲಾಗಲಿ ರೂ ... ಗಳ ಕ್ರಯಕ್ಕೆ ಸಿಗುವದು. ಇಳಕೊಳ್ಳುವ ಸ್ಥಳ ಹಡಗ ಮೋಟರ ಟಾಂಗಾ ಮುಂತಾದವುಗಳ ವ್ಯವಸ್ಥೆಗೋಸುಗ ಟ್ರೇನು ಹೊರಡುವ ದಕ್ಕೆ ವ್ಯವಸ್ಥಾ ಮ್ಯಾನೇಜರರು ವ್ಯವಸ್ಥೆಗಾಗಿ ಮುಂದೆ ಹೋಗುವರು ಬ್ರಾಹ್ಮಣ ವೀರಶೈವರಿಗೂ ಪ್ರತ್ಯೇಕವಾಗಿ ಅಡಿಗೆ ಊಟಗಳ ವ್ಯವಸ್ಥೆಯು ಇಳಕೊಂಡ ಸ್ಥಳದಲ್ಲಿಯೇ ಆಗುವದು. ವೀರಶೈವ ಆಚಾರದನುಕೂಲತೆಗಾಗಿ ಟ್ರೇನಿನಲ್ಲಿ ಪಟ್ಟದ ಸ್ವಾಮಿಗಳಿರುವರು ಟ್ರೇನಿನಲ್ಲಿ ಎಲ್ಲ ಧರ್ಮದವರಿಗೂ ಸರಿಯಾಗಿ ಮೇಲ್ವಿಚಾರಣೆ ಮಾಡಲ್ಪಡುವದು ಏರೋಪ್ಲೇನ [ವಿಮಾನ] ದಲ್ಲಿ ಸಂಚರಿಸಲಿಚ್ಛಿಸುವವರಿಗೆ ಕಲಕತ್ತಾ ಮುಕ್ಕಾಮಿನಲ್ಲಿ ವಿಮಾನದ ವ್ಯವಸ್ಥೆ ಮಾಡಿದೆ ೧೫ ಮಿನಿಟುಗಳ ವೇಳೆ ಸಂಚರಿಸುವದಕ್ಕೆ ೧೦ ರೂ ಚಾರ್ಜ ಕೊಡಬೇಕಾಗುವದು

ಶ್ರೀ ಗೌರೀಶಂಕರ ಕಂಪನಿಯವರು ಪ್ರಸಂಗವಿಶೇಷದಲ್ಲಿ ರೇಲ್ವೆ ಕಂಪನಿಯವರ ಅನುಮತಿಯಿಂದ ಪ್ರೊಗ್ರಾಮಿನಲ್ಲಿ ಬದಲಾವಣೆಗಳನ್ನು ಮಾಡಬಹುದು ಚಳಿಗಾಲ ಸುರುವಾಗುವದರೊಳಗಾಗಿ ಉಷ್ಣ ಪ್ರದೇಶದ ಸಮುದ್ರಭಾಗದ ಮದ್ರಾಸ ಕಡೆಗೆ ಬರುವದರಿಂದ ದಂಡಿ ಭಯವಿಲ್ಲ ಹೆಚ್ಚಿನ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು ಏಜಂಟರಿಗೆ ಯೋಗ್ಯ ಕಮೀಶನ್ ಸಿಗುವದು

ಶ್ರೀ ಗೌರೀಶಂಕರ ಕಂಪನಿಯ ಏಜನ್ ರಂಟಿಗಳು— ಸದರ ಕಂಪನಿಯ ಏಜಂಟರು ... ಗಳಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ಶೆಟ್ಕೀರ ಹಾಗು ವತನದಾರರ ಬಹಳ ಪಡಿಯುಗಳು ಕಿರ್ದಿ ಮಾಡಿ ಕೊಡಲ್ಪಟ್ಟಿವೆ ೧೯೩೪ ನೇ ಇಸ್ವಿಯ ಬೇಸಗಿಯೊಳಗಾಗಿ ... ಕಿರ್ದಿ ಮಾಡಿಕೊಡುವದು ಇರುವದು ... ಇದ್ದರೆ ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳ ಕಳಿಸತಕ್ಕದ್ದು ಅರ್ಜಿಯ ಫಾರ್ಮುಗಳೂ ... ಮಾಹಿತಿ ಪತ್ರಿಕೆಗಳೂ ... ಪುಕ್ಕಟೆಯಾಗಿ ಕಳಿಸಲ್ಪಡುವವು ... ಕಮಿಶನ ಕೊಡಲ್ಪಡುವದು

ನಮ್ಮ ಕಂಪನಿಯ ಯಾತ್ರಾ ಪ್ರವಾಸದಲ್ಲಿ ಕಂಡುಬಂದ ಅನುಭವ ಹಾಗು ಸ್ವ ಕ್ಯಾಮೆರಾದಿಂದ ತೆಗೆದುಕೊಂಡು ಬಂದ ಫೋಟೋಗಳು ಇವುಗಳಿಂದ ಧಾರ್ಮಿಕ, ಉದ್ಯೋಗ ಸಾರ್ವಜನಿಕ ವಿಷಯಗಳಿಗನುಸರಿಸಿ 'ಶ್ರೀ ಗೌರೀಶಂಕರ'' ಎಂಬ ಸಚಿತ್ರ ವಾರಪತ್ರಿಕೆಯು ಕನ್ನಡದಲ್ಲಿ ಶ್ರೀ ಗೌರೀಶಂಕರ ಕಂಪನಿಯಿಂದ ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವದು

ತಾ| ... ೧೯೩೩ ಚಿತ್ರಕಾರರು [ಫೋಟೋಗ್ರಾಫರ] ಹಾಗು ಸಂಪಾದಕರು

ಆಫೀಸು

ಶ್ರೀ ಸಿದ್ಧಾರೂಢ ಬಿಲ್ಡಿಂಗಿನ ಎದುರಿನಲ್ಲಿ **ಜಿ. ಎ ಶಿರೂರ**

ಸ್ಟೇಶನ್ ರಸ್ತೆ ಹುಬ್ಬಳ್ಳಿ ಶ್ರೀ ಗೌರೀಶಂಕರ ಕಂಪನಿಯ ಚಾಲಕ

ಮದ್ರಾಸ್ ಮತ್ತು ಸದರ್ನ ಮರಾಠಾ ರೇಲ್ವೆ ಕಂ, ಲಿ

(ಇಂಗ್ಲಂಡದಲ್ಲಿ ಸ್ಥಾಪಿತವಾದದ್ದು)

ನೋಟೀಸು.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ ಇವರ ಒಗ್ಗೆ ಯಾತ್ರಿಕರ ಸಲುವಾಗಿ ಒಂದು ಸ್ಪೇಶಲ್ ಉಗಿಬಂಡಿಯನ್ನು ಹುಬ್ಬಳ್ಳಿಯಿಂದ ತಾರೀಖು ೨೨ ನೇ ಅಕ್ಟೋಬರ ೧೯೩೩ ಈ ದಿವಸ ಬಿಡುವಂತೆ ಪಕ್ಕಾ ವ್ಯವಸ್ಥೆ ಮಾಡಿರುತ್ತದೆ

ದಾವಣಗೇರೆಯ ದಕ್ಷಿಣ ಭಾಗದ (ಅಂದರೆ ತೋಳಹುಣಸೆಯಿಂದ ಬೆಂಗಳೂರಿನ) ಪ್ರಯಾಣಿಕರಿಗೆ ಈ ಗಾಡಿಯಲ್ಲಿ ಹೋಗಗೊಡಲಿಕ್ಕಿಲ್ಲ

ಸಹಿ ಆರ್ ಇ ಪಿ .

ಡಿಸ್ಟ್ರಿಕ್ಟ ಟ್ರಾನ್ಸ್‌ಪೋರ್ಟೇಶನ್ ಸುಪರಿಂಟೆಂಡೆಂಟ (ಟ್ರಾಫಿಕ್) ಹುಬ್ಬಳ್ಳಿ

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದು ಸಂಧಿವಾತ ..., ತಲೆನೋವು, ಛಳಿಜ್ವರ ... ಕೆಮ್ಮು ಕಿವಿ ಸೋರುವಿಕೆ, ... ಎಲ್ಲ ... ಬೇನೆಗಳಿಗೂ ಅತ್ಯುತ್ತಮ ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ ಟೋಣಪಿ ಆ್ಯಂಡ ಕಂಪನಿ,

ಕೊಪ್ಪೀಕರ ರೋಡ, ಹುಬ್ಬಳ್ಳಿ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ನಂ. ಬಿ. ೨೭೬೫

यद्यत् परवशं दुःखं । यद्यदात्मवशं सुखम् ॥ मनु

ಕನ್ನಡಿಗ

ಸಂಪಾದಕರು — ಆಲೂರ ವೆಂಕಟರಾಯರು.

ಸೋಮವಾರ ಹೊರತಾಗಿ ಪ್ರತಿನಿತ್ಯವೂ ಪ್ರಸಿದ್ಧವಾಗುವದು

ವರ್ಷ ೧೦]   ಧಾರವಾಡ— ಗುರುವಾರ ಆಶ್ವಿನ ಬಹುಳ ... ತಾ|| ...   [ಸಂಚಿಕೆ ೧೪೭

ಇನಸ್ಸೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್ಸೂರನ್ಸ
ಕಂಪನಿಯೇ
ಉತ್ತಮವಾದುದು.

ಹಿಂದುಸ್ಥಾನ

ನಿಜಾಮ ಸಾಹೇಬರಿಗೆ ಮೊಮ್ಮಗ

ಹೈದರಾಬಾದ ಸಂಸ್ಥಾನದ ಯುವರಾಜ್ಞಿಯವರು ತಮ್ಮ ತವರ ಮನೆಯಲ್ಲಿ ಗಂಡು ಕೂಸನ್ನು ಪಡೆದಿರುತ್ತಾರೆಂದು ಸುದ್ದಿ ಬಂದಿದೆ

ಪಂಜಾಬ ಸರಕಾರದವರ ರೋಹಟಕ ... ಕರ್ನಾಳ ಜಿಲ್ಹೆಯಲ್ಲಿ ಮಹಾಪೂರದಿಂ ಪೀಡಿತರಾದ ಜನರ ಪ್ರತ್ಯಕ್ಷ ಅವಲೋಕನ ಮಾಡಿದ ನಂತರ ೮ ಆಣೆಗಿಂತ ಕಡಿಮೆ ಸೀಕು ಬಂದವರಿಗೆ ಎಲ್ಲ ಕಪ್ಪ ಸೂಟ ಮತ್ತು ... ಬಂದವರಿಗೆ ಅರ್ಧ ಹಸ್ತ ಸೂಟ ಬಿಡುತ್ತಾ... ಇದಲ್ಲದೆ ಮತ್ತೊಂದು ಜಿಲ್ಹೆಯಲ್ಲಿ ದು... ಗ್ರಸ್ತರಿಗೆ ಬರಗಾಲ ನಿವಾರಕ ಫಂಡಿನಿಂ... ಸಾವಿರ ರೂಪಾಯಿ ಸಹಾಯ ಮಾಡಿ...

ನಾಥದ್ವಾರಾ (ಉದೇಪುರ ಸಂಸ್ಥಾನ ದ...) ಭಾಟಿಯಾ ವೈಷ್ಣವ ಸಮಾಜದ ಧರ್ಮ... ರಾಗಿರುವ ಶ್ರೀ ತಿಲಕಾಯತ ಮಹಾರಾಜ ಗೋವರ್ಧನಲಾಲಜಿ ಇವರು ಕೆಲವು ದಿವಸಗಳ ಹಿಂದೆ ಸಿಮುಲಾದಲ್ಲಿ ಇತ್ತಿದ್ದರಿಂದ ಅವರ... ಗೆ ಯಾವು ಬಾಬೇಕೆಂಬ ಬಗ್ಗೆ ತರ್ಕವಿತರ್ಕಗಳು ನಡೆದವೆ ಅವರ ಮಗನಾದ ಶ್ರೀ ... ದಾಮೋದರಲಾಲಜಿ ಇವರು ಕ್ರಮಪ್ರಾಪ್ತವಾಗಿ ... ಯ ಮೇಲೆ ಬರತಕ್ಕವರು ಆದರೆ ತಮ್ಮ ... ಯ ಹಯಾತಿಯಲ್ಲಿ ಇವರು ಅಲ್ಲಿಯ ... ಎಂ. ಓರ್ವ ರಾಜನ ಮಗಳನ್ನು ... ವಾಗಿದ್ದರಿಂದ ವೈಷ್ಣವ ಸಮಾಜದವರು ... ನ್ನು ಅಯೋಗ್ಯರನ್ನಾಗಿ ಮಾಡಿದರು ... ಉದೇಪುರದ ಮಹಾರಾಜರು ವೈಷ್ಣವ ಸ... ಜದ ಮುಂದಾಳುಗಳ ಸಭೆಯನ್ನು ಉದೇಪುರದಲ್ಲಿ ಕರೆದಿದ್ದಾರೆ

ಕರೀಮಭಾಯಿ ಗುಂಪಿನ ಒಟ್ಟು ೧೬ ನೂ... ಗಿರಣಿಗಳಲ್ಲಿ ೭ ಗಿರಣಿಗಳ ಮುಂದಿನ ವ್ಯವಸ್ಥೆ ... ರೂಪಗೊಂಡಿದೆ ಈ ೭ ಗಿರಣಿಗಳಲ್ಲಿ ... ಯ ವ್ಯವಸ್ಥೆಯನ್ನು ಮುಂಬಯಿಯ ... ಇಂಗ್ಲೀಷ ಕಂಪನಿಯ ವ್ಯವಸ್ಥಾಪಕರು ... ಸುತ್ತಾರೆಂದು ಸುದ್ದಿ ಬಂದಿದೆ

ಜವಾಹರಲಾಲ ನೆಹರು ಇವರ ತಂಗಿಯಾದ ಕೃಷ್ಣಾ ನೆಹರು ಇವರ ವಿವಾಹದ ಸಮಾರಂಭವು ಅಲ್ಲಹಾಬಾದದಲ್ಲಿ ಇದೇ ತಿಂಗಳ ೨೦ನೇ ತಾರೀಖಿಗೆ ಮುಂಬಯಿಯ ಬಾರಿಸ್ಟರ ಗುಣೋ... ಹತ್ತಿಸಿಂಗ ಇವರೊಡನೆ ಜರಗುವದು ... ಹದ ಸಿದ್ಧತೆಯು ಜೋರಿನಿಂದ ನಡೆದಿದ್ದು ... ಕಮಲಾ ನೆಹರು ಮತ್ತು ಸೌ. ವಿಜಯಲಕ್ಷ್ಮೀ ಪಂಡಿತ ಇವರು ಸಾಮಾನ ಕೊಂಡ್ಯೊಯ್ಯಲು ಮುಂಬಯಿಗೆ ಹೋಗಿದ್ದಾರೆ

ನಾಗಪೂರದ ಜನರಲ್ ಅವಾರಿ ಇವರು ... ಫರ್ಡ್ಕ್ಕೆ ಹೋಗಿದ್ದು ಜವ ನಾಲಾಲ ಬ... ಇವರಲ್ಲಿ ಇಳಕೊಂಡಿದ್ದಾರೆ ಅವರನ್ನು ... ಗತೀಕರಿಸಲು ಮಿಸ್ ಸೋಫಿಯಾ ಸೋ... ಮತ್ತು ಇತರ ಸ್ಥಾನಿಕ ಕೆಲಸಗಾರರು ... ಶನದಲ್ಲಿ ಬಂದಿದ್ದರು.



ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ|| ... | **ಕೃಷ್ಣರಾವ ಅಂಕಲಿಗಿ**
ಮ್ಯಾನೇಜಿಂಗ ಡಾಯರೆಕ್ಟರ

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಿದ್ದೇವೆ ... ಗ್ಯಾರಂಟಿ ಮಾಲು ಕಳಿಸಲ್ಪಡುವದು ಬೇರೆ ಸಾವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ ಹೈದರಾಬಾದಿನಿಂದಲೇ ತಬಲೆಗಳು ಕರಸಿಟ್ಟುಕೊಳ್ಳಿ, ... ನಿಮಗೆ ... ಮೊದಲೇ ನಮಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವವಲ್ಲದೆ, ನಮ್ಮ **ಕರ್ನಾಟಕ** ಜನರಿಗೆ ಖಾತ್ರಿಪೂರ್ವಕ ಮಾಲು ದೊರೆಯುವವು. ತಾ|| ...
ಗವಳಿಗಡ್ ಹೈದರಾಬಾದ, ಡೆಕ್ಕನ್) ಬಿ ಜಿ ಚಿಮ್ಮಲಗಿ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪೇಟಿ, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ
೩೦-೯-೩೩

ಹುಬ್ಬಳ್ಳಿ ಪೇಟೆಯ ಧಾರಣೆ

(ಶೇವಡೆ ಮತ್ತು ಕಂಪನಿ)

(ಹುಬ್ಬಳ್ಳಿ ತಾ|| ೧೧ ಮಧ್ಯಾಹ್ನ ೧ ಗಂಟೆ)

ಜವಾರಿ ಹತ್ತಿ	೧೦೫-೧೦೬
ಜಿಪ್ಸಂಡ ಹತ್ತಿ	೧೦೨-೧೦೪
ವಿಲಾಯತಿ ಹತ್ತಿ	೯೫ ೯೭
ನ್ಯೂಕ್ರಾಸ ಹತ್ತಿ	೧೧೨
ಜೀನ ಅರಳಿ	೭೩-೭೪
ಡಬ್ಬಲ್ ರೂಲ ಅರಳಿ	೬೬-೬೭
ಸಾಜಿನ ಅರಳಿ	೬೬-೬೭
ಜೋಳ	೧೨-೧೪
ಗೋದಿ	೬॥-೭
ಹೆಸರು ಬೇಳಿ	೯-೧೨
ಉದ್ದು ,,	೬॥-೭
ಕಡ್ಲಿ ,,	೭
ಕಡ್ಲಿ ಶಾಸಗಾಂವ	೫॥-೫॥।
ಗುಜಬಿ	೧೩॥
ಹುರಳಿ	೧೩

ಬೆಳ್ಳಿ ಬಂಗಾರ

ಬಂಗಾರ	೩೨॥≡
ಬೆಳ್ಳಿ	॥

ಮುಂಬಯಿ ಪೇಟೆಯ ಧಾರಣೆ

(ಆಕ್ಟೋಬರ ತಾ|| ೧೦ ಸಂಜೆ ೫ಕ್ಕೆ)

ಬಂಗಾರ	೩೩-೧ ೬
ಬೆಳ್ಳಿ	೫೬-೪-೦

ಅರಳಿ ಮಧ್ಯಾಹ್ನ ೨ಕ್ಕೆ

ಹತ್ತಿ ಬರೋಚ	೧೮೯-೫-೦

ಕನ್ನಡಿಗ.

ಧಾರವಾಡ— ಗುರುವಾರ ತಾರೀಖು ೧೫—೧೦—೧೯೩೧

ಕನ್ನಡಿಗರೂ ಸಾಹಿತ್ಯ ಸಮ್ಮೇಲನವೂ.

ಕರ್ನಾಟಕವನ್ನು ಒಂದುಗೂಡಿಸುವ ಅನೇಕ ಪ್ರಯತ್ನಗಳಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಲನವು ಅನೇಕ ದೃಷ್ಟಿಯಿಂದ ಮಹತ್ವವಾದ ದು. ಮೈಸೂರಿನವರೂ ಮಂಗಳೂರಿನವರೂ ಧಾರವಾಡದವರೂ ಒಂದೆಡೆಗೆ ಕಲೆಯುವುದಕ್ಕೆ ಈಗ ಇದಕ್ಕಿಂತ ಹೆಚ್ಚಿನ ಸಂಸ್ಥೆ ಇಲ್ಲವು ದಿಲ್ಲ. ಭಾಷೆಯು ರಾಷ್ಟ್ರದ ಪ್ರಾಣವು ಭಾಷೆಯ ತಳಹದಿಯ ಮೇಲೆಯೇ ನಮ್ಮ ರಾಷ್ಟ್ರೀಯತ್ವದ ಕಟ್ಟಡವು ಕಟ್ಟಲ್ಪಡಬೇಕೆಂಬ ತತ್ವವು ಈಗ ಸರ್ವಮಾನ್ಯವಾಗಿರುವುದರಿಂದ, ರಾಷ್ಟ್ರೀಯತ್ವದ ಬೆಳವಣಿಗೆಗೂ ಈ ಸಾಹಿತ್ಯ ಸಮ್ಮೇಲನಗಳು ಬಹಳೇ ಪೋಷಕವಾಗುತ್ತವೆ. ಅಲ್ಲದೆ ಇಂದು ಒಂದೇ ಜಾತಿಯ, ಒಂದೇ ಪಕ್ಷದ, ಒಂದೇ ಮತದ ಅಥವಾ ಒಂದೇ ಪಂಥದ ಸಭೆಯಲ್ಲ. ಆದಕಾರಣ, ಈ ಸಮ್ಮೇಲನದಲ್ಲಿ ಜನರೆಲ್ಲರಿಗೂ ಭಾಗ ತೆಗೆದುಕೊಳ್ಳಲಿಕ್ಕೆ ಬರುವಷ್ಟು ವಿಶಾಲ ಸಭೆಯಲ್ಲಿಯೂ ಅವಕಾಶವಿರುವದಿಲ್ಲ. ಮೇಲಾಗಿ, ಈ ಸಮ್ಮೇಲನವು ರಾಜಕಾರಣದಿಂದ ಅಲಿಪ್ತವಾಗಿರುವ ಕಾರಣ ಇದರಲ್ಲಿ ಸರಕಾರದ ನೌಕರರು ರಾಜಕಾರಣದಲ್ಲಿ ಮನಸ್ಸು ಹಾಕಲು ಇಚ್ಛೆಯುಳ್ಳವರು ಇವರೇ ಮುಂತಾದವರೆಲ್ಲರೂ ಭಾಗ ತೆಗೆದುಕೊಳ್ಳಬಹುದು. ಹೀಗೆ ಭಾಷೆ, ರಾಷ್ಟ್ರೀಯತ್ವ, ಜಾತಿ ಪಂಥಗಳ ಐಕ್ಯ, ಭಿನ್ನ ವರ್ಗಗಳ ಏಕೀಕರಣ ಇವೇ ಮೊದಲಾದವುಗಳಿಗೆಲ್ಲಕ್ಕೂ ಈ ಸಾಹಿತ್ಯ ಸಮ್ಮೇಲನಗಳು ಕೇಂದ್ರಸ್ಥಾನವಾಗುವುದರಿಂದ, ಈ ಸಾಹಿತ್ಯ ಸಮ್ಮೇಲನಗಳಿಗೆ ಬೇರೆ ಸಭೆಗಳಿಗಿಂತ ಹೆಚ್ಚಿಗೆ ಮಹತ್ವ ಪ್ರಾಪ್ತವಾಗಿರುತ್ತದೆ.

ಆದರೆ, ಕರ್ನಾಟಕದಲ್ಲಿ ಈಗ ಅವು ನಿಜವಾಗಿಯೇ ಹಾಗೆ ಆಗಿವೆಯೋ ಎಂಬುದನ್ನು ಕನ್ನಡಿಗರು ಸ್ವಲ್ಪ ಶಾಂತ ಮನಸ್ಸಿನಿಂದ ವಿಚಾರ ಮಾಡಿ ನೋಡಬೇಕು. ಹಾಗೆ ಮಾಡಿದರೆ, ಕನ್ನಡಿಗರು ಎಷ್ಟು ಕರ್ತವ್ಯ ಪರಾಙ್ಮುಖರಾಗಿರುವರೆಂಬುದು ತಾನೇ ಗೊತ್ತಾಗುವುದು. ವರ್ಷಕ್ಕೊಮ್ಮೆ ಕೂಡುವ ಇಂಥ ಸಮ್ಮೇಲನಗಳಿಗೆ ನೂರಾರು ಪ್ರತಿನಿಧಿಗಳು ಕಲೆಯಬೇಕಾದರೆ ಸಾಕುಬೇಕಾಗಿ ಹೋಗುತ್ತದೆ. ಹಿಂಡುಗಟ್ಟಿ ಕೂಡಬೇಕಾದಲ್ಲಿ ಹಿಡಿಯಷ್ಟು ಜನರು ಬರುವುದನ್ನು ನೋಡಿ ಕನ್ನಡಿಗರ ಭಾವೀ ಏಳ್ಗೆಯನ್ನು ಬಯಸುವವರ ಹೃದಯದಲ್ಲಿ ಚುಚ್ಚಲಿಕ್ಕಿಲ್ಲವೆ? ಸಾಹಿತ್ಯ ಸಮ್ಮೇಲನದಲ್ಲಿ ರಾಜಕಾರಣದ ಆರ್ಭಟವೇನೋ ಇಲ್ಲವೆಂಬುದು ನಿಜ. ರಾಜಕಾರಣದ ಸಭೆಗಳು ಮಳೆಬಂದಾಗ ಮಾತ್ರ ಆರ್ಭಟಿಸಿ ಹರಿಯುವ ಹಳ್ಳಗಳಂತಿರುತ್ತವೆ. ಸಾಹಿತ್ಯ ಸಮ್ಮೇಲನಗಳಾದರೋ ಹನ್ನೆರಡೂ ತಿಂಗಳು ಹರಿಯುವ ಶಾಂತವಾದ ಮತ್ತು ನಿಧಾನವಾದ ನದಿಗಳಂತಿರುತ್ತವೆ. ಈ ನದಿಗಳ ಹರಿಯುವಿಕೆಯ ಮೇಲಿಂದ ನೀರಿನ ನಿಜವಾದ ಪ್ರಾಶಸ್ತ್ಯವು ಎಷ್ಟೆಂಬುದು ತಿಳಿಯಬರುತ್ತದೆ. ಆದಕಾರಣ, ಕನ್ನಡಿಗರು ಈ ಸಾಹಿತ್ಯ ಸಮ್ಮೇಲನಗಳನ್ನು ಪುಷ್ಟಗೊಳಿಸಲಿಕ್ಕೆ ಸರ್ವ ಪ್ರಯತ್ನಗಳನ್ನು ಮಾಡಬೇಕು.

ಸಾಹಿತ್ಯ ಸಮ್ಮೇಲನಗಳು ನೀರಸವಾಗಿರುತ್ತವಾದುದರಿಂದ ಅದಕ್ಕೆ ಜನರು ಹೋಗುತ್ತಿರುವುದಿಲ್ಲವೆಂಬುದೇನೋ ಕೆಲವು ಅಂಶದಿಂದ ನಿಜವಾದ ಮಾತೇ ಸರಿ. ಆದರೆ ಕೇವಲ ಕರ್ತವ್ಯತತ್ಪರರಾದ ಜನರು ಹೆಚ್ಚಾಗಬಾರದೋ? ಅಂಥ ಜನರು ಹೆಚ್ಚಾಗುವುದೇ ಉನ್ನತಿಯ ಲಕ್ಷಣವು. ಸಮ್ಮೇಲನಗಳನ್ನು ನಡಿಸುವವರೂ ಜನತೆಯನ್ನು ಆಕರ್ಷಿಸುವುದಕ್ಕೆ ಅನೇಕ ತರಹದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಕವಿ ಸಮ್ಮೇಲನವು ಈ ತರಹದ ಮನೋರಂಜಕವಾದ ಮತ್ತು ಉಪಯುಕ್ತವಾದ ಕಾರ್ಯಕ್ರಮವಾಗಿದೆ. ನಾಟಕಗಳನ್ನು ಆಡಿದರೆ ಜನರು ನೆರೆಯಬಹುದು. ಲಾವಣಿ ಕೀರ್ತನೆ ಮುಂತಾದವುಗಳೂ ಜನರನ್ನು ಎಳೆಯಬಹುದು. ದಾಸಕೂಟಗಳನ್ನೇರ್ಪಡಿಸಿದರೆ ಜನತೆಗೆ ಆಕರ್ಷಣವಾಗಬಹುದು. ಪ್ರದರ್ಶನಗಳು ಸಮ್ಮೇಲನಗಳನ್ನು ಬೆಳಿಸುವುದಕ್ಕೆ ಒಳ್ಳೇ ಸಾಧನಗಳು. ವಿಚಾರ ಮಾಡಿದರೆ ಹೀಗೆಯೇ ನಮಗೆ ಮತ್ತೂ ಅನೇಕ ಮಾರ್ಗಗಳು ಗೊತ್ತಾಗಬಹುದು. ಸಾಹಿತ್ಯ ಸಮ್ಮೇಲನವನ್ನು ಕೇಂದ್ರವಾಗಿಟ್ಟುಕೊಂಡು ಮಿಕ್ಕ ಅನೇಕ ಸಾಂಸ್ಕೃತಿಕ ಸಮ್ಮೇಲನಗಳನ್ನು ನೆರೆಯಿಸಬಹುದು. ಭಾಷಾವಿಷಯಕ ಚಳವಳದ ಮುಖ್ಯ ಭಾಗವನ್ನು ತೆಗೆದುಕೊಳ್ಳುವವರು ಶಾಲೆಯ ಮಾಸ್ತರ ಜನರು. ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಶಿಕ್ಷಕರಲ್ಲಿ ಈಗ ಈ ವಿಷಯವಾಗಿ ಅಕ್ಷಮ್ಯವಾದ ಔದಾಸೀನ್ಯವು ಕಂಡುಬರುತ್ತದೆ. ರಾಜಕೀಯ ಮುಂತಾದ ಚಳವಳಗಳಲ್ಲಿ ಅವರು ಏಕೆ ಭಾಗತೆಗೆದುಗೊಳ್ಳುವುದಿಲ್ಲವೆಂಬುದಕ್ಕೆ ಕಾರಣವಿರುತ್ತದೆ. ಆದರೆ ಇವುಗಳಲ್ಲಿ ಅವರು ಏಕೆ ಭಾಗ ತೆಗೆದುಕೊಳ್ಳಬಾರದು? ಇದರಿಂದ ಅವರು ದೇಶೋನ್ನತಿಗೆ ತಮ್ಮಿಂದ ಆಗಬಹುದಾದ ಸಹಾಯವನ್ನು ಮಾಡುವುದಕ್ಕೂ ಹಿಂಜರಿಯುತ್ತಾರೆಂದಾಗುವುದಿಲ್ಲವೆ? ಈಗ ಸರಕಾರಿ ಶಿಕ್ಷಕರಿಗೆ ಮಿಕ್ಕವರಿಗಿಂತಲೂ ಸುಸ್ಥಿತಿಯಿರುತ್ತದೆ. ಆದಕಾರಣ, ಅವರು ಪ್ರತಿವರ್ಷ ತಪ್ಪದೆ ಸಮ್ಮೇಲನಗಳಿಗೆ ಹೋದರೆ ಉಪಕಾರವಾಗುತ್ತದೆ. ಅಖಿಲ ಕರ್ನಾಟಕ ಶಿಕ್ಷಕರ ಸಮ್ಮೇಲನವೊಂದನ್ನು ಏರ್ಪಡಿಸಿ ಈಗ ಪ್ರಾಥಮಿಕ ಶಿಕ್ಷಕರೇ ಮುಂತಾದವರು ಪ್ರತ್ಯಪ್ರತ್ಯೇಕವಾಗಿ ಜರುಗಿಸುವ ಈ ಶಿಕ್ಷಣ ಸಮ್ಮೇಲನಗಳನ್ನು ಕೇಂದ್ರೀಕರಿಸಿ ಸಮ್ಮೇಲನದ ಕಾಲಕ್ಕೆ ಅದನ್ನು ಕರೆಯುವುದು ಉಚಿತವಲ್ಲವೆ? ಅಖಿಲ ಕರ್ನಾಟಕ ಪ್ರಾಧ್ಯಾಪಕರ ಪರಿಷತ್ತು, ಅಖಿಲ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು, ಇವೇ ಮುಂತಾದವುಗಳನ್ನು ಕರೆದರೆ ಸಾಹಿತ್ಯ ಸಮ್ಮೇಲನಕ್ಕೆ ಕಳೆಯೇರಲಾರದೆ? ಸಾರಾಂಶ, ಕನ್ನಡಿಗರು ತಮ್ಮ ಆಲಸ್ಯವನ್ನು ಝಾಡಿಸಿ ಚಟುವಟಿಕೆಯನ್ನು ತೋರಿಸಿ ತಾವೂ ಮನುಷ್ಯರಿರುವರೆಂಬುದನ್ನು ಜಗತ್ತಿಗೆ ತೋರಿಸಬೇಕು.

ಕೊನೆಗೆ ನಾವು ಹುಬ್ಬಳ್ಳಿಯವರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ ನಾತಾಳ ರಜೆಯು ತೀರ ಸಮೀಪಕ್ಕೆ ಬಂದಿತು. ಹುಬ್ಬಳ್ಳಿಯ ಕಡೆಯಿಂದ ಮೂರುಸಾವಿರ ರೂಪಾಯಿಗಳವರು ಅದನ್ನು ಕಾಣಿಸುವುದಕ್ಕೆ ಆಮಂತ್ರಣವನ್ನಿತ್ತಿರುವರು. ಹಿಂದಕ್ಕೆ ಹುಬ್ಬಳ್ಳಿಯಲ್ಲಿ ಕೂಡಬೇಕೆಂದು ಗೊತ್ತಾಗಿದ್ದರೂ ಅದನ್ನು ಹುಬ್ಬಳ್ಳಿಯವರು ಕೂಡಿಸಿರುವುದಿಲ್ಲ. ಈ ವರ್ಷವೂ ಪುನಃ ಅದನ್ನು ಕೂಡಿಸದಿರುವುದು ಉಚಿತವಾಗಲಾರದು. ವಿಜಯನಗರ ಸಾಮ್ರಾಜ್ಯೋತ್ಸವದ ಸಿದ್ಧತೆಯನ್ನೂ ಅದೇ ಕಾಲಕ್ಕೆ ಮಾಡುವ ಕನ್ನಡಿಗರದೊಂದು ದೊಡ್ಡ ಕರ್ತವ್ಯವು ಮಾಡುವುದು ಉಳಿದಿರುತ್ತದೆಂಬುದನ್ನು ಮರೆಯಬಾರದು. ಇವೆಲ್ಲ ಸಂಗತಿಗಳ ವಿಚಾರಮಾಡಿ ಹುಬ್ಬಳ್ಳಿಯವರು ಈ ನಾತಾಳ ರಜೆಯಲ್ಲಿ ಕನ್ನಡಿಗರಿಗೆ ಕಣ್ಣಹಬ್ಬವನ್ನುಂಟು ಮಾಡಿ ಕೊಡುವರೆಂದು ಆಶಿಸುತ್ತೇವೆ.

ಪತ್ರವ್ಯವಹಾರ.

ಶ್ರೀ 'ಕನ್ನಡಿಗ'ನ ಸಂಪಾದಕರಿಗೆ.—

ನಮಸ್ಕಾರಗಳು

'ಕನ್ನಡಿಗ'ನ ನಿನ್ನಿನ ಸಂಚಿಕೆಯಲ್ಲಿ ಶ್ರೀ ಜೋಶಿ ಶಂಕರರಾಯರ ಪತ್ರವನ್ನು ಓದಿದೆನು. ಆ ಪತ್ರದಲ್ಲಿ ವ್ಯಕ್ತವಾದ ಅವರ ವಿಚಾರ ಸರಣಿ ಮನನೀಯವಾಗಿರುವುದೆಂದು ನಾನು ಹೇಳಬೇಕಾದೀತು. ಈಗ ಅನೇಕ ವರ್ಷಗಳಿಂದ ಅಖಿಲ ಕರ್ನಾಟಕದ ವಿದ್ಯಾಪೀಠವೊಂದು ನಿರ್ಮಿಸಲ್ಪಡಬೇಕೆಂಬ ವಿಚಾರವು ಮುಂದಾಳುಗಳಲ್ಲಿ ನಡೆದದ್ದಾವುದು. ಎಷ್ಟೋ ಕಾರಣಗಳಿಂದ ಆ ವಿಚಾರದ ಪ್ರಗತಿಗೆ ತಡೆಯುಂಟಾಗಿದ್ದರ ಮೂಲ ಏನೇನೋ ಕಣ್ಮರೆಯಾಗಿಲ್ಲ. ಅದನ್ನು ಈಗ ನಡೆಸುವ ಕಾಲವು ಬಂದಿರುವುದು. ಈಗ ಕನ್ನಡಿಗರು ಮನಮುಟ್ಟಿ ಪ್ರಯತ್ನಿಸಿದರೆ ಅವರ ಪ್ರಯತ್ನವು ಸಫಲವಾಗದಿರದು. 'ಜನಸಾಮಾನ್ಯರಿಗೆ ಹೊಸ ಬಾಳಿನ ಬೆಳಕನ್ನು ಕೊಡುವ ಅವುದಾದರೂ ಒಂದು ವಿಶೇಷ ಯೋಜನೆಯನ್ನು' ಈ ಸಂದರ್ಭದಲ್ಲಿ ಕೈಕೊಳ್ಳುವ ಮಾತ್ರವಾಗ ಕೈಕೊಳ್ಳಬೇಕು? ಇಂತಹ ಯೋಜನೆಯೆಂದರೆ ಅಖಿಲ ಕರ್ನಾಟಕ ವಿದ್ಯಾಪೀಠದ ಯೋಜನೆಯೊಂದೇ. ಶ್ರೀ ಶಂಕರರಾಯರಂತೆ ನಾನಾವರೂ ಅಭಿಪ್ರಾಯಪಡುವೆನು. ಈ ಅಭಿಪ್ರಾಯಕ್ಕೆ ಮಾನ್ಯತೆಯನ್ನೀಯುವ ಕನ್ನಡಿಗರಾರಾದರೂ ಇರಬಹುದೆಂದು ನನಗೆ ತೋರದು. ಶ್ರೀ ಶಂಕರರಾಯರ ವಿಚಾರಕ್ಕೆ ಪುಷ್ಟಿಯನ್ನಿತ್ತು, ಅದರ ಪ್ರಚಾರವನ್ನು ಮಾಡಿ ಅದಕ್ಕೆ ಮೂರ್ತಸ್ವರೂಪವು ಬರುವಂತೆ ಈ ಪ್ರೋತ್ಸಾಹದಲ್ಲಿ ಪ್ರಯತ್ನಗಳು ನಡೆವುದು ಅತ್ಯವಶ್ಯವು. ಕರ್ನಾಟಕವನ್ನು ಪರರ ಆಕ್ರಮಣದಿಂದ ಬಿಡುಗಿಸಲು ಇದು ಅತ್ಯುತ್ತಮ ಸಂಧಿ. ವಿಜಯನಗರ ಸಾಮ್ರಾಜ್ಯ ಸ್ಥಾಪನಾ ದಿನದ ಸ್ಮಾರಕದ ಉತ್ಸವವು ಅಖಿಲ ಕರ್ನಾಟಕ ವಿದ್ಯಾಪೀಠದ ಸ್ಥಾಪನೆಯಿಂದಲ್ಲದೆ ಬೇರಾವುದರಿಂದಲೂ ಸಾಂಗವಾಗಿ ನೆರವೇರದೆಂದು ಒತ್ತಿಯಾಗಿ ಹೇಳಿ ಶ್ರೀ ಶಂಕರರಾಯರ ವಿಚಾರಕ್ಕೆ ಪುಷ್ಟಿಯನ್ನು ಕೊಟ್ಟು ಕನ್ನಡದ ಅಭಿಮಾನಿಗಳೆಲ್ಲರೂ ಈ ಕಾರ್ಯಕ್ಕೆ ಕೈಹಚ್ಚಿ ಮುಂದುವರಿಯಬೇಕೆಂದು ಅವರನ್ನು ನಮ್ರನಾಗಿ ಪ್ರಾರ್ಥಿಸುತ್ತೇನೆ. ೧೦-೧೦-೧೯೩೧

ಸಾಲಿ ರಾಮಚಂದ್ರರಾಯರು.

ಕರ್ನಾಟಕ ಹೈಸ್ಕೂಲ್ ಧಾರವಾಡ

ಜಗದ್ಗುರು ಕೃಷ್ಣಮೂರ್ತಿಗಳಿಗೆ

ಪ್ರತಿವಾರ ೨೦೦೦ ಪೌಂಡುಗಳ ಕರಿ!

"ನಾನು ದೇವರ ಅವತಾರವೆಂದು ಜನರು ನನ್ನ ಮೂರ್ತಿ, ಚಿತ್ರಗಳ ಪೂಜೆ ನಡಿಸಿದ್ದು ನನಗೆ ಬೇಡವದಿಲ್ಲ. ಮನುಷ್ಯನಲ್ಲಿ ದೇವರು ವಾಸವಾಗಿದ್ದಾನೆ. ಆದರೆ ಈ ಬಗೆಯಾಗಿ ಪೂಜೆ ಪುನಸ್ಕಾರಗಳು ಸರಿಯಲ್ಲ. ನನ್ನನ್ನು ಲಕ್ಷ್ಮಿಯು ಹೋದ ಹೋದಲ್ಲಿ ನೆರಳಿನಂತೆ ಬೆಂಬತ್ತಿರುವಳು. ಹಾಲೆಂಡಿನಲ್ಲಿ ಒಂದು ಭವ್ಯವಾದ ಮಹಲನ್ನೂ ಅದರ ಸುತ್ತಲಿನ ೫೦೦೦ ಎಕರೆ ಭೂಮಿಯನ್ನೂ ಒಬ್ಬನು ಅರ್ಪಿಸಿದ ಆಗ್ರಹವನ್ನು ವಹಿಸಿದನು. ಹೊಲವುಳ್ಳ

ಕರ್ನಾಟಕದ ಸುದ್ದಿಗಳು.

ಸರ್ ಎಂ ವಿ. ಯವರು ಪಾಶ್ಚಿಮಾತ್ಯದೇಶಗಳಲ್ಲಿ ಸಂಚರಿಸಿ ಕೆಲವು ಆಕರ್ಷಣೀಯ ವಸ್ತುಗಳನ್ನು ನಗರ ಶೃಂಗಾರಕ್ಕೆ ತಂದಿರುತ್ತಾರೆ. ಇವರಲ್ಲಿ ವಿದ್ಯುಚ್ಛಕ್ತಿಯ ಜಲಮಾಪಕ ಯಂತ್ರವು ಮುಖ್ಯವಾಗಿದೆ. ಇದನ್ನು ಕ್ಲಾಕ್ ಟವರಿನಲ್ಲಿ ಇಟ್ಟಿರುವರು. ದೀಪಗಳು ಈ ಯಂತ್ರದಲ್ಲಿ ಆರಿ ಹತ್ತುವದರಿಂದ ದೂರಕ್ಕೆ ಇದರ ಭಾವಾ ಪ್ರವಾಸದ ದೃಶ್ಯವು ರಮಣೀಯವಾಗಿ ಕಂಗೊಳಿಸುತ್ತದೆ. ಮೈಸೂರಿನಲ್ಲಿಯ ಅಸಂಖ್ಯಾತ ಪ್ರಜೆಗಳು ಈ ಕೌತುಕವನ್ನು ನೋಡಿ ಆನಂದಿಸುತ್ತಿರುವರು.

ಕುರುಡರು ನಾಟಕವನ್ನಾಡಿದರು.

ಮೈಸೂರ ನಗರ ಮಂದಿರದಲ್ಲಿ ಹೋದ ಶನಿವಾರ ರಾತ್ರಿ ಕುರುಡ ಮೂಕರ ಶಾಲೆಯ ವಿದ್ಯಾರ್ಥಿಗಳ 'ಧ್ರುವ ವಿಜಯ' ವೆಂಬ ನಾಟಕವನ್ನು ಶ್ರೀ ಎಸ್. ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು. ಮಹಾರಾಜರ ಖಾಸಗಿ ಸೆಕ್ರೆಟರಿಗಳಾದ ಸರ ಚಾರ್ಲ್ಸ ಟಾಡ್ ಹಂಟರವರು ನಾಟಕಕ್ಕೆ ಬಂದಿದ್ದರು. ಆ ಕುರುಡರ ಅಂದವಾದ ಅಭಿನಯದಿಂದ ಎಲ್ಲರೂ ಅಪರಿಮಿತವಾದ ಆನಂದ ಹೊಂದಿದರು. ನಾಟಕವು ಮುಗಿದ ಮೇಲೆ ಹರಿಕಥಾ ಪ್ರವೀಣ ಬಾಲಭಾರತಿ ಯಡುಗಿರಿಯ ವೈಷ್ಣವರು ಒಂದು ಸುವರ್ಣಪದಕವನ್ನು ಅರ್ಪಿಸಿದರು.

ಹುಬ್ಬಳ್ಳಿಯ ಟೀಮಿನವರಿಗೆ ಜಯ

ಮೈಸೂರ ದಸರಾ ಕ್ರಿಕೆಟ ಟೀಮಿಯರ ಪಂದ್ಯಾಟದ ಕಡೆಯ ಆಟದಲ್ಲಿ ಹುಬ್ಬಳ್ಳಿ ಟೀಮಿನವರಿಗೂ ಬೆಂಗಳೂರ ಅಮೆಚೂರ್ಸ್ ಟೀಮಿನವರಿಗೂ ಆಟವು ನಡೆದು ಹುಬ್ಬಳ್ಳಿಯವರು ೧೦೫ ಓಟಗಳನ್ನೂ ಬೆಂಗಳೂರಿನವರು ೭೫ ಓಟಗಳನ್ನೂ ಮಾಡಿ ಹುಬ್ಬಳ್ಳಿಯವರಿಗೆ ಜಯ ದೊರೆಯಿತು.

ಇಹವೃತ್ತ

ನಿನ್ನಿನ ದಿವಸ ಮಳೆ ಸುರಿದುದರಿಂದ ಹೋದ ರವಿವಾರ, ಊರೆಲ್ಲ ರಾತ್ರಿ ಕತ್ತಲೆಯಿದ್ದರೂ ಸಹ, ಮುನಸಿಪಾಲಿಟಿಯವರು ವಿದ್ಯುದ್ದೀಪಗಳನ್ನು ಬೀದಿಗಳಿಗೆ ಹಚ್ಚಿದ್ದಿಲ್ಲ. ಇದೇನು ಕರ ಕೊಡುವವರ ಮೇಲಿನ ಮಮತೆಯೋ?

ವ ಸಿನೆಮಾ ಚಿತ್ರಪಟದವರು ಪ್ರತಿವಾರ ೨೦೦೦ ಪೌಂಡುಗಳನ್ನು ಕೊಡುವೆವೆಂದು ಹೇಳಿದರು. ಆದರೆ ನನಗಿದಾವುದೂ ಬೇಡ. ನಾನೊಬ್ಬ ತಿರುಕ, ವಿಶ್ವಸಂಚಾರಿ, ವಿಶ್ವಕುಟುಂಬಿ. ಆತ್ಮಾನಂದದ ಅಮೃತವನ್ನು ಕುಡಿದು ಅಮರತ್ವವನ್ನು ಪಡೆವುದೊಂದೇ ನನ್ನ ಗುರಿ. ಜಗದ್ಗುರುವೆಂದು ನಾನೆಂದೂ ನನ್ನ ಅಂತರಾಳದಲ್ಲಿ ಭಾವಿಸಿಕೊಂಡಿಲ್ಲ. ಅಥವಾ ಬೇರೆಯವರು ಅದರಂತೆ ಹಾಗೆ ಹೇಳಿದರೆ ಅಲ್ಲಗಳೆಯಲೂ ಹೋಗುವುದಿಲ್ಲ" ಎಂದು ಜಗದ್ಗುರು ಕೃಷ್ಣಮೂರ್ತಿಗಳು ಪ್ರಸಿದ್ಧಪಡಿಸಿದ್ದಾರೆ.

ಮುಂಬಯಿ ಶೇರ ಬಜಾರದ ಗೊಂದಲ.

"ಕನ್ನಡಿಗ" ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

ಕರೀಮಭಾಯಿ ಗಿರಣಿಗಳ ದೆಸೆಯಿಂದ ಜನರಲ್ಲಿ ಎದೆಯೊಡಿಕೆ.

ಮುಂಬೈ ತಾ|| ೧೦ ದುಡ್ಡಿನ ಪೇಟೆಯ ಮೂಲಕ ಇಲ್ಲಿಯ ಕರೀಮಭಾಯಿ ಗಿರಣಿಗಳ ಅವಸ್ಥೆಯು ಏನಾಗುವದೋ ಎಲ್ಲರಿಗೂ ಎದೆಯೊಡೆಕೆಯಾಗಿದೆ. ಇಲ್ಲಿಯ ಭಾಟಿಯಾರ ಬಹಳ ಹಳೆಯದೊಂದು ದಲಾಲಿ ಅಂಗಡಿಯವರ ಕೆಲವು ಬ್ಯಾಂಕುಗಳಲ್ಲಿದ್ದ ತಮ್ಮ ಹಣವನ್ನು ತಿರಿಗಿ ತೆಗೆದುಕೊಳ್ಳಹತ್ತಿರುವರು ಬ್ಯಾಂಕಿನವರು ತಮ್ಮಲ್ಲಿರುವ ಹಣವನ್ನೆಲ್ಲ ಅವರು ಕೇಳಿದಂತೆ ಕೊಡ ಹತ್ತಿರುವರು

(ಅ ಪ್ರೆ ತಂತಿ)

ಮುಂಬಯಿ ಶೇರ ಬಜಾರದ ಗೊಂದಲ

ಮುಂಬಯಿ ತಾ|| ೧೧— ಕರೀಂಮಭಾಯಿ ಅವರ ಗಿರಣಿಗಳ ಹಾಗು ಒಂದು ಸುಪ್ರಸಿದ್ಧ ಭಾಟಿಯಾ ಪೇಟೆಯ ಸಾಂಪತ್ತಿಕ ಅಡಚಣಿಯ ಮೂಲಕ ಶೇರುದಾರರು ಒಂದೇ ಸವನೇ ಮೊದ್ದ ರಕಮುಗಳನ್ನು ಬ್ಯಾಂಕುಗಳಿಂದ ತೆಗೆಯಹತ್ತಿದ್ದರಿಂದ ಎರಡು ದಿವಸ ಎಲ್ಲ ಕೊಡುಕೊಳುವು ಶಾಂತವಾಗಿ ಇವತ್ತು ಬೆಳಿಗ್ಗೆ ಬ್ಯಾಂಕಿನ ವ್ಯವಹಾರವು ಅನಪೇಕ್ಷಿತವಾದ ಶೀಘ್ರಗತಿಯಿಲ್ಲದ್ದರಿಂದ ಸುಲಭವಾಗಿ ಸಾಗಿತು. ಆದರೂ ಮುಂಬಯಿ ಸ್ಟಾಕ್-ಎಕ್ಸ್‌ಚೇಂಜ ಡಾಯರೆಕ್ಟರರು ಗಿರಣಿಗಳ ಶೇರುಗಳ ಆಗುಹೋಗುಗಳ ವ್ಯವಹಾರವನ್ನು ಸದ್ಯಕ್ಕೆ ನಿಲ್ಲಿಸಿದ್ದನ್ನು ಪುನಃ ಪ್ರಾರಂಭಿಸುವರೋ ಅಥವಾ ಹಾಗೆಯೇ ಮುಂದೆ ಸಾಗಿಸುವರೋ ಎಂಬುವನ್ನು ನೋಡುವದು ಅವಶ್ಯವಾಗಿದೆ. ಕರೀಮಭಾಯಿ ಗುಂಪಿನ ಗಿರಣಿಗಳಿಗೆ ಸಂಬಂಧಪಟ್ಟ ಆಸ್ತಿಪಾಸ್ತಿಗಳನ್ನು ಬೇಕಾದಂತೆ ಮಾರಲಿಕ್ಕೆ ಸಿದ್ಧರಾದ ಕೆಲವು ಜನರಿಗೆ ಸ್ಟಾಕ-ಎಕ್ಸ್‌ಚೇಂಜದ ಅಧ್ಯಕ್ಷರು ದಾದ ಮಾಡಿ ಗೊಂದಲವನ್ನೆಬ್ಬಿಸಬೇಡಿರೆಂದು ನಿಕ್ಷೂನದಿಂದ ತಿಳಿಸಿದ್ದರೆಂದು ತಿಳಿಯುತ್ತದೆ. ಕರೀಮಭಾಯಿ ಗುಂಪಿನ ಗಿರಣಿಗಳ ಆರ್ಥಿಕ ಸಂಕಟದಿಂದ ವ್ಯವಹಾರದಲ್ಲಿ ಉಂಟಾದ ಬಿಗುತನದಿಂದ ವ್ಯವಹಾರದಲ್ಲಿ ಉಂಟಾದ ತೊಡಕಿನ ಮೂಲಕ ಗಿರಣಿಗಳ ಶೇರುಗಳ ಉಗಡ ವ್ಯವಹಾರವನ್ನು ಇನ್ನು ಕೆಲವು ದಿವಸಗಳ ವರೆಗೆ ನಿಲ್ಲಿಸಬೇಕಾದೀತೆಂಬುವನ್ನು ತಾವು ಹೇಳಲಾರೆವು. ಕೆಲವು ಜನ ದಲಾಲರಿಗೆ ಸ್ಟಾಕ್-ಎಕ್ಸ್‌ಚೇಂಜದ ಅಧ್ಯಕ್ಷರು ತಿಳಿಸಿರುವದಾಗಿಯೂ ಸಹ ತಿಳಿದಿದೆ. ಕರೀಮಭಾಯಿ ಗುಂಪಿನ ಗಿರಣಿಗಳ ವ್ಯವಸ್ಥೆಯನ್ನು ಬೇರೆಯವರಿಗೆ ಒಪ್ಪಿಸುವ ವಿಷಯವಾಗಿ ನಡೆದಿರುವ ಮಾತು ಕತೆ ಸಂಬಂಧವಾಗಿ ಏನಾದರೂ ಸ್ಪಷ್ಟವಾಗಿ ತಿಳಿದಿರುವವರೆಗೆ ಶೇರುಗಳ ವ್ಯವಹಾರವು ಮುಂದೆ ಸಾಗಲಾರದೆಂದು ಆ ವ್ಯವಹಾರವನ್ನು ಬಲ್ಲವರು ಹೇಳುತ್ತಾರೆ. (ಅ ಪ್ರೆ ತಂತಿ)

ಬ್ಯಾಂಕಿನ ಮುಂದೆ ಗೊಂದಲ

ಕರಾಚಿ ತಾ|| ೧೨— ಸೆಂಟ್ರಲ ಬ್ಯಾಂಕ ಆಫ್ ಇಂಡಿಯಾದವರ ಸಂಗಡ ಕರೀಮಭಾಯಿಯವರು ಮಾತುಕತೆ ಆರಂಭಿಸಿರುವರೆಂಬ ಸುದ್ದಿಯು ಮುಂಬಯಿಯಿಂದ ಬಂತು, ಇಲ್ಲಿ ಆ ಬ್ಯಾಂಕಿನ ಮುಂದೆ ಗಿರಾಕಿಗಳ ದೊಡ್ಡದೇ ಗೊಂದಲವಾಯಿತು. ಆದರೆ ಬ್ಯಾಂಕಿನವರು ಗಿರಾಕಿಗಳಿಗೆ ಅವರು ಬೇಡಿದ ಹಣವನ್ನು ಆ ಕ್ಷಣವೇ ಕೊಟ್ಟು ಸಮಾಧಾನ ಮಾಡಿದರು. (ಅ ಪ್ರೆ ತಂತಿ)

ದಕ್ಷಿಣದ ಸರದಾರರಿಗೆ ಗವ್ಹರ್ನರರ ಉತ್ತರ

ಪುಣೆ ತಾ|| ೧೧— ದಕ್ಷಿಣದ ಸರದಾರರು ಇವತ್ತು ಕೊಟ್ಟ, ಕೊನೆಯ ಬಿನ್ನವತ್ತಳಿಕೆಗೆ ಉತ್ತರ ಕೊಡುವಾಗ ಗವ್ಹರ್ನರರು ಅವರ ರಾಜನಿಷ್ಠೆಗಾಗಿಯೂ ಕಠಿಣ ಕಾಲದಲ್ಲಿ ಅವರು ಸರಕಾರಕ್ಕೆ ಕೊಟ್ಟ ನೆರವಿಗಾಗಿಯೂ ಅವರ ಉಪಕಾರ ಸ್ಮರಿಸಿದರು. "ನಿಮ್ಮಿಂದ ಹಾಗೂ ಕಾಯಿದೆಗನುಸಾರವಾಗಿ ನಡೆಯುವ ನಾಗರಿಕ ಜನರಿಂದ ಸರಕಾರಕ್ಕೆ ದೊರೆತ ವಿಶೇಷ ಸಹಾಯವು ಸಿಗದಿದ್ದರೆ ನನ್ನಿಂದ ನನ್ನ ಕರ್ತವ್ಯಗಳನ್ನೂ ಹೊಣೆಗಾರಿಕೆಯನ್ನೂ ಯೋಗ್ಯವಾಗಿ ಕೊನೆಗಾಣಿಸುವದು ಬಹಳ ಬಿಗಿಯಾಗುತ್ತಿತ್ತು" ಎಂದು ಅವರು ಹೇಳಿದರು. ನೀವು ಸಮಾಜದಲ್ಲಿ ಸ್ಥಿರವಾಗಿ ತಳ ಊರಿದವರೂ ಸರಕಾರ ಮತ್ತು ಹಳ್ಳಿಯ ಪ್ರಜೆಗಳ ನಡುವಿನ ಜೋಡಣೆಯ ಸರಪಳಿಯೂ ಆಗಿರುವಿರೆಂದೂ ಹೇಳಿದರು. ಸರಕಾರದವರು ನಿಮ್ಮ ಸೇವೆಯನ್ನು ಯಾವಾಗಲೂ ಒಪ್ಪಿಕೊಂಡಿರುವದರಿಂದ ದೇಶದ ಮುಂದಿನ ಆಡಳಿತೆಯಲ್ಲಿ ನಿಮಗೂ ತಕ್ಕ ಪಾಲು ದೊರೆಯುವದೆಂಬ ಆಶೆಯನ್ನು ಅವರು ವ್ಯಕ್ತಪಡಿಸಿದರು. ಕೊನೆಯಲ್ಲಿ ಅವರು ಶಾಂತಿ ಮತ್ತು ಉತ್ಕರ್ಷಗಳು ನೆಲೆಸಲಿ ನೆಲೆಗೊಳ್ಳಲೆಂಬ ಅಭಿಲಾಷೆಯನ್ನು ಬಿಚ್ಚಿ ತೋರಿಸಿ ಸ್ವದೇಶದ ಜನರ ಹಾಗು ಸರಕಾರದ ಸೇವೆಯನ್ನು ತಮ್ಮ ಹಿರಿಯರ ಪರಂಪರೆಯನ್ನನುಸರಿಸಿ ರಾಜನಿಷ್ಠೆಯಿಂದ ಮಾಡುವದಲ್ಲದೆ ಹೊಸ ವ್ಯವಸ್ಥೆಯಲ್ಲಿಯೂ ತಮ್ಮ ಐತಿಹಾಸಿಕ ಪರಂಪರೆಗೆ ಅನುರೂಪವಾದ ಸ್ಥಾನವನ್ನು ಪಡೆದು ಅದನ್ನು ಕಾಯ್ದುಕೊಳ್ಳುವರೆಂಬ ಇಚ್ಛೆಯನ್ನು ಪ್ರಕಟ ಮಾಡಿದರು [ಅ ಪ್ರೆ ತಂತಿ]

ವಿಮಾನಗಳ ಹೋಗು ಬರುವಿಕೆ

ಕರಾಚಿ ತಾ|| ೧೧— ರಂಗೂನ ಟಪಾಲ ವಿಮಾನವು ಇವತ್ತೆ ಮುಂಜಾನೆ ೮ ಕ್ಕೆ ಇಲ್ಲಿಗೆ ಬಂದಿತು. ಮತ್ತು ಪರದೇಶದ ಟಪಾಲ ವಿಮಾನವು ೫ ಯಾಣಿಕರನ್ನು ಮತ್ತು ೧೧೧ ಪೌಂಡು ತೂಕವುಳ್ಳ ಟಪಾಲು ತಕ್ಕೊಂಡು ಇವತ್ತೆ ಮುಂಜಾನೆ ೯-೪೫ ಕ್ಕೆ ಹೊರಬಿತ್ತು

(ಅ ಪ್ರೆ. ತಂತಿ)

ಸಂಯುಕ್ತ ಪ್ರಾಂತದಲ್ಲಿ ಮುಖಂಡರ ಭೆ.

ಅಲಹಾಬಾದ ತಾ|| ೧೦ – ಇವತ್ತಿನ ದಿವಸ ಆನಂದ ಭುವನದಲ್ಲಿ ಸಂಯುಕ್ತ ಪ್ರಾಂತದೊಳಗಿನ ಪ್ರಮುಖ ಕಾಂಗ್ರೆಸ ಕಾರ್ಯಕರ್ತರ ಸಭೆಯಾಯಿತು. ಸಭೆಯ ಕೆಲಸವು ಗುಪ್ತರೀತಿಯಿಂದ ಜರುಗಿತು. ಕಾಶಿಯ ಶ್ರೀ ಪ್ರಕಾಶರವರು ಅದರ ಅಧ್ಯಕ್ಷರಾಗಿದ್ದರು. ಪಂಡಿತ ಜವಾಹರಲಾಲ ನೇಹರು, ಪುರುಷೋತ್ತಮದಾಸ ಟಂಡನ ಮುಂತಾದ ಕಾಂಗ್ರೆಸಿನ ಮುಖಂಡರು ವಾದವಿವಾದದಲ್ಲಿ ಭಾಗ ತಕ್ಕೊಂಡರು. ಉಳಿದ ವಿಷಯಗಳಂತೆ ಜಮೀನ್ದಾರರ ಸಂಬಂಧವಾಗಿಯೂ ಚರ್ಚೆಯಾಯಿತೆಂದು ತಿಳಿಯುತ್ತದೆ (ಅ ಪ್ರೆ ತಂತಿ)

ಗವ್ಹರ್ನರರ ಸ್ವಾಗತದ ಸಿದ್ಧತೆ

ನಡಿಯಾದ ತಾ|| ೧೧— ಸಾರಂಗಪುರದ ಶ್ರೀ ನಾಮದಾರ ಮುಂಬಯಿ ಗವ್ಹರ್ನರರು ತಾರೀಖು ೨೭ ಕ್ಕೆ ಬರುವವರಿದ್ದದರಿಂದ ಅವರ ಸ್ವಾಗತದ ಸಿದ್ಧತೆಯು ಭರ್ಜರಿಯಿಂದ ನಡೆದದೆ

(ಅ ಪ್ರ ತಂತಿ)

ಕೂಲಿಕಾರರ ಬಗ್ಗೆ ಕೂಲಿಕಾರರ ಪ್ರತಿನಿಧಿಗಳ ಅಭಿಪ್ರಾಯ.

ಮುಂಬಯಿ ತಾ|| ೧೦— ಈಗ ಸಿಮ್ಲೆಯಲ್ಲಿ ನಡೆದಿರುವ ಜಪಾನ-ಇಂಗ್ಲಂಡ ಹಿಂದೀ ವರ್ತಕರಲ್ಲಿ ನಡೆದಿರುವ ಚರ್ಚೆಯು ಒಪ್ಪಂದವನ್ನು ಕುರಿತು ಶ್ರೀ ಬಖಲೆ ಮತ್ತು ಬಿ ಶಿವರಾಯರು ಅನ್ನುವದು— ಹಿಂದೀ ಕೂಲಿಕಾರರ ಬಗ್ಗೆ ಕೆಲವು ಮಾತುಗಳನ್ನು ವಾಯಿದೆ ಬಿಟ್ಟು ಸ್ಪಷ್ಟವಾಗಿ ಹೇಳುವದು ಅಗತ್ಯ. ಈಗಿನ ಒಂದು ವರ್ಷದಲ್ಲಿ ಹೊಸ ಕೈಗಾರಿಕೆಗಳನ್ನು ಹೊಂದಿಸಿದರೆ, ಅದರಿಂದ ಜನರಲ್ಲಿಯ ನಿರುದ್ಯೋಗಿತನವು ಕಡಿಮೆ ಆಗುವದು. ಅದರಿಂದ ಎಲ್ಲರಂತೆ ನಾವೂ ನಮ್ಮ ಕೈಗಾರಿಕೆಯನ್ನು ಗಟ್ಟಿಮುಟ್ಟಾದ ತಳಹದಿಯ ಮೇಲೆ ಕಟ್ಟಲು ಆತುರರಾಗಿದ್ದೇವೆ ಈಗ ಎಷ್ಟೋ ಕಡೆಗೆ ಕೂಲಿಕಾರರ ಕೂಲಿಯನ್ನು ಬಹಳ ಇಳಿಸಿರುವದನ್ನು ನೋಡಿದರೆ, ನಮಗೆ ಬಹು ಭಯವೆನಿಸುತ್ತದೆ. ಕೂಲಿಕಾರರ ಸ್ಥಿತಿಯನ್ನೂ ಅವರ ಜೀವನದ ಮಟ್ಟವನ್ನೂ ಸುಧಾರಿಸುವದು ಇವೆಲ್ಲ ರಾಷ್ಟ್ರದ ಸಂಪನ್ನತೆಗೆ ಅತ್ಯಂತ ಜೀವಾಳದ ಕೆಲಸಗಳೆಂದು ಎಲ್ಲರೂ ಮನಗಂಡಿದ್ದಾರೆ. ಕೂಲಿಕಾರರ ಮೇಲೆ ಯಾವ ವಿಧದ ಭಯಂಕರ ಪರಿಣಾಮ ಆಗುವದೆಂಬುದನ್ನು ಕುರಿತು ಯೋಚಿಸಿದೆ, ಹಿಂದುಸ್ತಾನ ಸರಕಾರದವರು ಮತ್ತು ಮಾಲೀಕರುಗಳನ್ನು ಕಡಿಮೆಗೊಳಿಸುವ ಧೋರಣೆಯನ್ನು ನಡೆಸಿರುವದಾಗಿ ಕಾಣುತ್ತದೆ. ಕೈಗಾರಿಕೆಯನ್ನು ಪುನರುಜ್ಜೀವಿಸಲು ಬೇರೆ ದಾರಿಯನ್ನೂ ಸೂಚಿಸಿದ ಬಳಿಕ ಅವರು ಅಂದದ್ದು— ಸರಕಾರದವರು ಮತ್ತು ಗಿರಣಿಯ ಒಡೆಯರು ಇಬ್ಬರು ಕೂಡಿ ಇದನ್ನು ನಿರ್ಣಯಿಸುವದೇನಿದ್ದರೆ, ತಮ್ಮ ಮೇಲೆ ಹೆಚ್ಚಿನ ಭಾರ ಭಾರವಣೆಗಳನ್ನು ಹೊತ್ತುಕೊಳ್ಳುವಂತಿದೆ (ಅ ಪ್ರೆ ತಂತಿ)

ಲಾಹೋರ ಕಾರಾಗೃಹದಲ್ಲಿ ಪ್ರಾಯೋಪವೇಶನ.

ಲಾಹೋರ ತಾ|| ೧೧— ಇಲ್ಲಿಯ ಸೆಂಟ್ರಲ ಜೇಲಿನೊಳಗಿನ ಸುಮಾರು ೧೦೦ ಜನ ಸೆರೆಯಾಳುಗಳು ತಮಗೆ ಒಳ್ಳೆಯ ಊಟವು ಸಿಗುವದಿಲ್ಲವೆಂಬ ಕಾರಣದಿಂದ ಮೊನ್ನೆ ಸಂಜೆಯಿಂದ ಪ್ರಾಯೋಪವೇಶನಕ್ಕೆ ಆರಂಭಿಸಿದ್ದಾರೆ. ಜೇಲ ಸುಪರಿಂಟೆಂಡೆಂಟರು ಇದರ ಬಗ್ಗೆ ವಿಚಾರ ಮಾಡಿ ತಕ್ಕವಿದ್ದ ಮಟ್ಟಿಗೆ ವ್ಯವಸ್ಥೆ ಮಾಡ ಹತ್ತಿದ್ದಾರೆ. ಸೆರೆಯಾಳುಗಳು ತಾವು ಇಲ್ಲಿ ಪಟ್ಟ ಹಿಂಸೆಗಳ ವಿಷಯವಾಗಿ ಅಧಿಕಾರಿಗಳ ಸಂಗಡ ಮಾತು, ಕತೆಗೆ ಸ್ವಷ್ಟ, ಅವಕಾಶವು ಇರುವದಿಲ್ಲವೆಂದು ತಕರಾರುಮಾಡಿದರು. ಅಧಿಕಾರಿಗಳು ಅವರ ಹಟಮಾರಿಗಳೆಂದು ಹೇಳಿ ಅವರನ್ನು ಬೇರೊಂದು ವಿಭಾಗಕ್ಕೆ ವರ್ಗ ಮಾಡಿದರು. ಈ ಸೆರೆಯಾಳುಗಳಲ್ಲಿ ರಾಜಕೈದಿಗಳು ಯಾರೂ ಇಲ್ಲ

ಇನ್ನೊಂದು ಈಗ ಬಂದ ಸುದ್ದಿಯಿಂದ, ಪ್ರಾಯೋಪವೇಶನವು ಮೊದಲಿನಂತೆಯೇ ಇದೆಯೆಂದೂ ಮತ್ತೆ ಕೆಲವರು ಸೆರೆಯಾಳುಗಳು ಅದರ ಸಾಹಿಸಿದವರನ್ನು ತಿರುಗಿ ತಮ್ಮೊಳಗೆ ಕೂಡಿಸಬೇಕೆಂಬ ಹಟ ತೊಟ್ಟಿರುವರೆಂದೂ ಇಲ್ಲಿಯವರೆಗೆ ಅವರೆಲ್ಲ ಪ್ರಾಯೋಪವೇಶನ ಮಾಡುವರೆಂದೂ ತಿಳಿಯ ಬರುತ್ತದೆ;

.(ಅ ಪ್ರೆ ತಂತಿ)

ಕಾಯದೆಮಂಡಲದ ಮುದ್ದತು ಬೆಳಿಸಿಸಕೂಡದು.

ಮದ್ರಾಸು ತಾ|| ೧೦— ಮದ್ರಾಸು ಕಾಯದೆ ಮಂಡಲದಲ್ಲಿ ವಿರೋಧ ಪಕ್ಷದ ನಾಯಕರಾದ ಡಾ ಸುಬ್ಬರಾಯನ ಅವರು ಈಗಿನ ಕಾಯದ ಮಂಡಲದ ಮುದ್ದತು ಬೆಳಿಸಕೂಡದೆಂಬ ಠರಾವು ತರುವವರಿದ್ದಾರೆ

[ಅ ಪ್ರೆ ತಂತಿ]

ಕಾನಪುರದಲ್ಲಿ ಬಡಿದಾಟ.

ಹೊಸ ದಿಲ್ಲಿ ತಾ|| ೧೦ – ಕಾನಪುರದೊಳಗೆ ಸೆಪ್ಟೆಂಬರದ ಕೊನೆಯವಾರದಲ್ಲಿ ಒಂದು ದೊಡ್ಡ ಕಾಳಗವಾಯಿತು. ಬಡಿದಾಟವು ಎರಡು ದಿವಸ ನಡೆಯಿತು. ಬಹಳ ಜನರಿಗೆ ಗಾಯವಾಯಿತು. ಹೊಸ ಯಾರ್ಕದಿಂದ ಪಟ್ಟಣವು ಇನ್ನೂ ತುರ್ಕರ ಅಧೀನದಲ್ಲಿಯೇ ಇರುವುದೆಂದು ತಿಳಿಯುತ್ತದೆ. ಆದರೆ, ಹಳೆಯ ಯಾರ್ಕದಿಂದ ಪಟ್ಟಣವನ್ನು ಜೋತಾನದ ಸೈನಿಕರೇ ತಮ್ಮ ಕೈಯಲ್ಲಿ ಗಟ್ಟಿಯಾಗಿ ಹಿಡಿದಿರುವರೆಂದು ಸುದ್ದಿ ಬಂದಿದೆ. [ಅ ಪ್ರೆ ತಂತಿ]

ಕೊನೆಯ ಒಪ್ಪಟ್ಟು.

ಸಿಮ್ಲಾ ತಾ|| ೧೦— ಗಿರಣಿಕಾರರ ಪ್ರತಿನಿಧಿಗಳು, ಮತ್ತು ಕತ್ತರಿಯನ್ನು ಬೆಳೆಯುವ ಮತ್ತು ಕೈಮಗ್ಗದ ವ್ಯವಸಾಯದವರ ಪ್ರತಿನಿಧಿಗಳು ಬಹಳ ಜೊತ್ತಿನ ವರೆಗೆ ತಮ್ಮ ತಮ್ಮೊಳಗೆ ವಿಚಾರವಿನಿಮಯ ಮಾಡಿ ಮೂರು ವ್ಯವಸಾಯಗಳನ್ನು ಕಾಯುವ ಮತ್ತು ಎಲ್ಲರಿಗೂ ಐಕ್ಯಮತ್ಯವಾದ ರಾಷ್ಟ್ರೀಯ ದೃಷ್ಟಿಯನ್ನು ಪುರಸ್ಕರಿಸುವ ಗೊತ್ತುವಳಿಯನ್ನು ಮಾಡಿಕೊಂಡಿರುವದಾಗಿ ಬಂದಿದೆ. ಇದರಿಂದ ಈಗ ನಡೆದಿರುವ ವ್ಯಾಪಾರೀ ಮಾತುಕತೆಗಳ ಬಹಳ ಪರಿಣಾಮಗಳುಂಟಾಗುವದೆಂದು ಊಹೆ. (ಅ ಪ್ರೆ ತಂತಿ)

ಧ್ವಜವಂದನೆಗಾಗಿ ಶಿಕ್ಷೆ

ಮುಂಬಯಿ ತಾ|| ೯— ವಿಜಯದಶಮಿ ದಿನ ಚೌಪಾಟಿಯ ಮೇಲೆ ಪೋಲೀಸರ ಅಪ್ಪಣೆ ಮೀರಿ ಧ್ವಜವಂದನೆ ಮಾಡಿದ್ದಕ್ಕೆ ನಾಲ್ವರು ಸ್ವಯಂಸೇವಕರನ್ನು ಹಿಡಿಯಲಾಗಿ ಮೊದಲಿನ ಮೂವರಿಗೆ ೬ ತಿಂಗಳೂ ಕೊನೆಯವನಿಗೆ ೪ ತಿಂಗಳೂ ಶಿಕ್ಷೆಯಾಯಿತು

ಕಾಯದೇ ಮಂಡಲಗಳ ಕೊನೆ.

ಮುಂಬೈ ತಾ|| ೧೦, ವೆಸ್ಟರ್ನ ಇಂಡಿಯಾ ಲಿಬರಲ್ ಸಂಘದವರು ಸಭೆ ಸೇರಿ, ಕೆಳಗಿನಂತೆ ನಿರ್ಣಯಿಸಿದ್ದಾರೆ:— "೧೯೩೧ ರ ಮೊದಲು ಹೊಸ ಸುಧಾರಣೆಗಳು ಬರುವಂತಿಲ್ಲದಿದ್ದರೆ, ಈಗಿದ್ದ ಕಾಯದೇ ಮಂಡಲಗಳ ಅವಧಿಯನ್ನು ಬೆಳೆಸಕೂಡದು" (ಅ ಪ್ರೆ ತಂತಿ)

ಕ್ರಾಂತಿಕಾರನಿಗೆ ಗಲ್ಲು.

ಕಲಕತ್ತಾ ತಾ|| ೧೦ – ದಿನೇಶ ಮುಜುಮದಾರರಿಗೆ ಗಲ್ಲಿನ ಹಾಗೂ ಜಗದಾನಂದ ಮುಕರ್ಜಿ ಮತ್ತು ನಲಿನೀ ದಾಸರಿಗೆ ಕರಿನೀರಿನ ಶಿಕ್ಷೆ ವಿಧಿಸಲ್ಪಟ್ಟಿದೆ. ನಾರಾಯಣದಾಸ ಬ್ಯಾನರ್ಜಿಯು ನಿರಪರಾಧಿಯೆಂದು ನಿರ್ಣಯವಾಗಿದೆ ಲಾಯಸೆನ್ಸ ಇಲ್ಲದೆ, ಶಸ್ತ್ರ ಹಾಗೂ ಮದ್ದುಗಳಿದ್ದವೆಂದು ಎಲ್ಲರ ಅಪರಾಧ, ದಿನೇಶ ಹಾಗೂ ಜಗದಾನಂದರು ಕೊಲೆ ಮಾಡಲು ಪ್ರಯತ್ನಿಸಿದ್ದರೆಂದು ಆರೋಪ ಇದ್ದಿತು. ಕರಿನೀರಿನ ಶಿಕ್ಷೆಯು ವಿಧಿಸಲ್ಪಟ್ಟ ದಿನೇಶ ಹಾಗೂ ಅಪರಾಧಿಯೆಂದು ಜಾಹೀರ ಪಡಿಸಲ್ಪಟ್ಟ ಬ್ಯಾನರ್ಜಿ ಇವರಿಗೆ ಆಶ್ರಯ ಕೊಟ್ಟ ಅಪರಾಧಕ್ಕಾಗಿ ಜಗದಾನಂದರ ಮೇಲಿದ್ದಿತು. (ಅ ಪ್ರೆ ತಂತಿ)

ಕನ್ಯಾಗತದ ಅಪೂರ್ವ ಯಾತ್ರೆ! **ಕ್ಷೇತ್ರಗಳ ಪ್ರೇಕ್ಷಣೀಯ ನೋಟ!!**

ಚಾರ್ಜು ಸುಲಭ.

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ರೇಲ್ವೆ ಕಂಪನಿಯಿಂದ ಪರವಾನಿಗೆಯನ್ನು ಪಡೆದಿರುತ್ತದೆ.

ಶ್ರೀ ಕಾಶಿ, ರಾಮೇಶ್ವರ, ಲಂಕಾ ಮೊದಲಾದ ಕ್ಷೇತ್ರಗಳ ಯಾತ್ರೆಗಾಗಿ

ಶ್ರೀ ಗೌರೀಶಂಕರ ಟ್ರೇನು

ತಾ॥ ೨೨ ಅಕ್ಟೋಬರ ೧೯೩೩ನೇ ದಿವಸ ಹೊರಡುತ್ತದೆ.

ಸೆಕೆಂಡಕ್ಲಾಸ ೩೦೦ ರೂ. **ಥರ್ಡಕ್ಲಾಸ ೧೮೦ ರೂ.**

ಕೂಡಲೇ ಅಡ್ವಾನ್ಸ ಕಳಿಸಿ ಟಿಕೇಟ್ ಪಡೆಯಿರಿ

ಟ್ರೇನು ಹೊರಡಿಸುವದಕ್ಕೆ ರೇಲ್ವೆ ಕಂಪನಿಯಿಂದ ಪರವಾನಗಿಯನ್ನು ಪಡೆದಿರುತ್ತದೆ. ಹುಬ್ಬಳ್ಳಿಯ ಶ್ರೀ ಗೌರೀಶಂಕರ ಯಾತ್ರಾ ಟ್ರೇನು ಭರತಖಂಡ ಮತ್ತು ಲಂಕಾಯಾತ್ರೆಗೋಸುಗ ಇದೇ ಅಕ್ಟೋಬರ ತಿಂಗಳ ೨೨ ನೇ ತಾರೀಖಿನ ದಿವಸ ಹೊರಡಲಿಕ್ಕೆ ಪೂರ್ಣ ತಯಾರಿಯಲ್ಲಿರುವದು

ನಮ್ಮ ಟ್ರೇನಿನಲ್ಲಿ ಪ್ರಸಿದ್ಧರಾದ ವರ್ತಕರೂ, ಜಮೀನದಾರರೂ, ಪದವೀಧರರೂ, ವಿದ್ಯಾರ್ಥಿಗಳೂ ಹಾಗೂ ರಿಟಾಯರ್ಡ ಗವ್ಹರ್ನಮೆಂಟ ಆಫೀಸರರೂ ಪ್ರಯಾಣ ಮಾಡತಕ್ಕವರಿರುವದರಿಂದ ಪ್ರಾರಂಭದಿಂದ ಕೊನೆಯವರೆಗೂ ಉತ್ತಮ ವ್ಯವಸ್ಥೆ ಮಾಡಲ್ಪಡುವದು.

೧೨ ವರ್ಷಕ್ಕೊಮ್ಮೆ ಬರುವ ಪುಣ್ಯಪ್ರದವಾದ ಕನ್ಯಾಗತದ

ಇದೇ ಮಾರ್ಗಶೀರ್ಷ ಮಾಸದಲ್ಲಿಯ ಅಪೂರ್ವ ಯಾತ್ರೆಯು!

ಅಲಕ್ಷಿಸಿದರೆ ಪುನಃ ಸಿಗಲರಿಯದು!! **ಸ್ವಲ್ಪೇ ಟಿಕೀಟುಗಳು ಉಳಿದಿವೆ!!!**

ತ್ವರೆ ಮಾಡಿರಿ!!! ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದೂ, ಹೆಚ್ಚಿನ ಅನುಭವ ಹಾಗು ಸಂಘಾರಣೆಯುಳ್ಳದ್ದೂ ಆಗಿರುವ ದರ್ಬಾರೀ ಸಿಸ್ತಿನ ಘನತೆಯುಳ್ಳ

ಶ್ರೀ ಗೌರೀಶಂಕರ ಕಂಪನಿಯ

೨ ನೇ ಯಾತ್ರಾ ಪ್ರವಾಸವು

೧ ನೇ ಯಾತ್ರೆಯನ್ನು ಸುಖವಾಗಿಯೂ, ಯಶಸ್ವಿಯಾಗಿಯೂ ಪೂರೈಸಿ ಕೆಲವು ಟ್ರೇನಿಗೆ ಕರ್ನಾಟಕದ ಹಾಗು ಮಹಾರಾಷ್ಟ್ರದ ಸೇವೆಯನ್ನು ಮಾಡಿ ಯಾತ್ರಿಕರಿಂದ ಸುವರ್ಣ ಪದಕ, ಮಾನಪತ್ರ, ಸದಭಿಪ್ರಾಯ, ಧನ್ಯವಾದಗಳನ್ನು ಪಡೆದಿದೆ

ರೇಲ್ವೆ ಕಂಪನಿಯಲ್ಲಿ ಹಣವನ್ನು ಡಿಪಾಜಿಟ್ ಆಗಿ ಇಟ್ಟು ರೇಲ್ವೆ ಕಂಪನಿಯಿಂದ ಪರವಾನಗಿ ಪಡೆದಿದೆ ಶ್ರೀ ಗೌರೀಶಂಕರ ಕಂಪನಿಯ ಚಾಲತೀ ಲೇವ ಖಾತೆಯು ಹುಬ್ಬಳ್ಳಿಯ ಇಂಪೀರಿಯಲ್ ಬ್ಯಾಂಕಿನಲ್ಲುಂಟು.

೧ ಕೊಲ್ಹಾಪುರ ೨೪ ಅಕ್ಟೋಬರ	೧೯ ದಿಲ್ಲಿ ೧೨-೧೩-೧೪	೩೫ ಮದ್ರಾಸ (ಸಮುದ್ರಸ್ನಾನ) ೯-೧೦
೨ ನಾಸಿಕರೋಡ (ಜ್ಯೋತಿರ್ಲಿಂಗ) ೨೫-೨೫	೨೦ ಹರಿದ್ವಾರ ೧೫-೧೬	೩೬ ಶಿವಕಂಚಿ ೮
೩ ಮುಂಬಯಿ (ಸಮುದ್ರ) ೨೬-೨೭-೨೮	೨೧ ಹೃಷಿಕೇಶ	೩೭ ವಿಷ್ಣುಕಂಚಿ
೪ ದ್ವಾರಕಾ (ಸಮುದ್ರದಲ್ಲಿ ಹಡಗದಿಂದ) ೨೯-೩೦	೨೨ ಲಕ್ನೋ ೧೮	೩೮ ಕುಂಭಕೋಣಂ ೯
೫ ಸೋಮನಾಥ (ಜ್ಯೋತಿರ್ಲಿಂಗ)	೨೩ ಅಯೋಧ್ಯಾ ೧೯	೩೯ ರಾಮೇಶ್ವರ (ಜ್ಯೋತಿರ್ಲಿಂಗ ಸಮುದ್ರಸ್ನಾನ) ೧೦ ೧೧
೬ ಪ್ರಭಾಸ (ತ್ರಿವೇಣಿ) ೩೧	೨೪ (ಪ್ರಯಾಗ ತ್ರಿವೇಣಿ) ಅಲ್ಲಾಬಾದ ೧೯-೨೦	೪೦ ಧನುಷ್ಕೋಡಿ [ಹಡಗ ಕಟ್ಟಿದ ಬಂದರು] ೧೨-೧೩-೧೪
೭ ಪುಷ್ಕರಗಡ ೧ ನವ್ಹೆಂಬರ	೨೫ ಕಾಶಿ (ಜ್ಯೋತಿರ್ಲಿಂಗ) ೨೧-೨೨-೨೩-೨೪-೨೫	೪೧ ಕ್ಯಾಂಡಿ [ಲಂಕಾ] ೧೫
೮ ಅಹಮದಾಬಾದ (ಜ್ಯೋತಿರ್ಲಿಂಗ) ನವ್ಹೆಂಬರ ೨-೩	೨೬ ಸಾರನಾಥ (ಬೌದ್ಧಕ್ಷೇತ್ರ)	೪೨ ಕನ್ಯಾಕುಮಾರಿ [ಸಮುದ್ರಸ್ನಾನ] ೧೬
೯ ಅಬ್ಬುಪಹಾಡ ೪	೨೭ ಗಯಾ ಬೌದ್ಧಕ್ಷೇತ್ರ ೨೬-೨೭	೪೩ ಧನುಷ್ಕೋಡಿ [ಸಮುದ್ರ ಸ್ನಾನ] ಹಡಗದಿಂದ
೧೦ ಪುಷ್ಕರ	೨೮ ರಾಜಗಿರಿ (ಕ್ಷೇತ್ರ ಬಿಸಿ ನೀರಿನ ಕೆರೆಯ ಸ್ನಾನ)	೪೪ ಮದುರೆ [ಕ್ಷೇತ್ರ] ೧೬
೧೧ ಅಜ್ಮೀರ ೫	೨೯ ಪುರಿ ೨೮-೨೯	೪೫ ತ್ರಿಚನಾಪಳ್ಳಿ [ಅಂಬರ ಸ್ಥಳ] ೧೭
೧೨ ಉಜ್ಜಯಿನಿ (ಜ್ಯೋತಿರ್ಲಿಂಗ) ೬-೭	೩೦ ಜಗನ್ನಾಥ (ಕ್ಷೇತ್ರ) ಸಮುದ್ರ ಸ್ನಾನ	೪೬ ಶ್ರೀರಂಗ (ವಿಷ್ಣುಕ್ಷೇತ್ರ) ೧೮
೧೩ ಓಂಕಾರೇಶ್ವರ (ಜ್ಯೋತಿರ್ಲಿಂಗ)	೩೧ ಕಲಕತ್ತಾ ೩೦ ಡಿಸೆಂಬರ ೧-೨	೪೭ ಬೆಂಗಳೂರ ೧೯
೧೪ ಆಗ್ರಾ ೮-೯	೩೨ ಜಗನ್ನಾಥ ಪುರಿ (ಸಮುದ್ರ ಸ್ನಾನ) ೪	೪೮ ಮೈಸೂರ ೨೦-೨೧
೧೫ ಮಥುರಾ ೯-೧೦	೩೩ ವಿಶಾಖಪಟ್ಟಣ (ಸಮುದ್ರ ಸ್ನಾನ) ೬	೪೯ ಹುಬ್ಬಳ್ಳಿ ೨೨
೧೬ ಗೋಕುಲ	೩೪ ರಾಜಮಹೇಂದ್ರಿ (ಗೋದಾವರಿ ಸ್ನಾನ) ೭	
೧೭ ವೃಂದಾವನ		
೧೮ ಕುರುಕ್ಷೇತ್ರ		

ಕ್ಷೇತ್ರಗಳ ಮುಂದೆ ತಾರೀಖುಗಳನ್ನು ಬರೆದಿರುವ ಸ್ಟೇಶನ್ನುಗಳಲ್ಲಿ ಮಾತ್ರ ಟ್ರೇನು ನಿಲ್ಲುವದು. ಅದೇ ಮುಕ್ಕಾಮಿನಿಂದ ಉಳಿದವುಗಳ ಯಾತ್ರೆಯನ್ನು ಮಾಡಿಕೊಳ್ಳತಕ್ಕದ್ದು. ಮೇಲೆ ಬರೆದಂತೆ ಎಲ್ಲ ಯಾತ್ರಾಸ್ಥಳಗಳನ್ನು ಪೂರೈಸಿಕೊಂಡು ಟ್ರೇನು ಡಿಸೆಂಬರ ೨೨ ನೇ ತಾರೀಖು ಪುಷ್ಯ ಶು॥ ೬ ಶುಕ್ರವಾರ ದಿವಸ ಮುಂಜಾನೆ ಹುಬ್ಬಳ್ಳಿ ಪಟ್ಟಣಕ್ಕೆ ಬಂದು ತಲುಪುವದು.

ರೇಲ್ವೆ ವಡಗು ಆಯಾ ಕ್ಷೇತ್ರಗಳಲ್ಲಿ ಇಳಕೊಳ್ಳುವ ಸ್ಥಳದ ಬಾಡಿಗೆ ಸೇರಿ ಸೆಕೆಂಡಕ್ಲಾಸ ೩೦೦ ರೂ. ಥರ್ಡಕ್ಲಾಸ ೧೮೦ ರೂ. ಮಾತ್ರ ೩ ವರ್ಷದ ಮೇಲ್ಪಟ್ಟು ೧೨ ವರ್ಷದೊಳಗಿನ ಹುಡುಗರಿಗೆ ಅರ್ಧ ಚಾರ್ಜು ಎಲ್ಲ ಟ್ರೇನು ಹತ್ತುವರೂ ಮೇಲ್ಕಾಣಿಸಿರುವ ಚಾರ್ಜನ್ನೇ ಕೊಡಬೇಕಾಗುವದು. ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳವು ಕೊಡಲ್ಪಡುವದರಿಂದ ಮೇಲೆ ಬರೆದಿರುವ ಚಾರ್ಜು ಬಹಳೇ ಸುಲಭವಾದದ್ದು. ಟಿಕೆಟ್ ಪಡೆಯಬೇಕಾದಲ್ಲಿ ಕೂಡಲೆ ೫೦ ರೂ ಅಡ್ವಾನ್ಸ ಕಳಿಸತಕ್ಕದ್ದು. ಯಾತ್ರಿಕರ ಯೋಗ್ಯ ಅಡಚಣೆ ಕಂಡುಬಂದಲ್ಲಿ ಅಥವಾ ಟ್ರೇನು ಹೊರಡದಿದ್ದಲ್ಲಿ ಯಾತ್ರಿಕರು ಕೊಟ್ಟ ಅಡ್ವಾನ್ಸ ಅಥವ ಪೂರ್ಣ ಹಣವು ಪರತ ಕೊಡುವದರಲ್ಲಿ ಬರುವದ. ಶ್ರೀ ಗೌರೀಶಂಕರ ಕಂಪನಿಯ ಮಾನಪತ್ರ ಹಣವು ಹುಬ್ಬಳ್ಳಿ, (ಸರಕಾರೀ) ಇಂಪೀರಿಯಲ್ ಬ್ಯಾಂಕಿನಲ್ಲಿನ ಖಾತೆಯಿಂದ ಯಾತ್ರಿಕರಿಂದ ಬಂದ ಹಣವಾದರೂ ಸದರ ಬ್ಯಾಂಕಿನಲ್ಲಿ ಸುರಕ್ಷಿತವಾಗಿರುವದು

ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕ ರಸ್ಥರೂ ನೌಕರರೂ ಇರುವರಲ್ಲದೆ ಯಾತ್ರಿಕರ ಅನುಕೂಲತೆಗಾಗಿ ದವಾಖಾನೆ ಡಾಕ್ಟರು, ಫೋಟೋಗ್ರಾಫರ, ಲಾಯಬ್ರರಿ, ಪೋಸ್ಟ ಆಫೀಸ, ಯಾತ್ರಿಕರ ರೊಖ ಹಣದ ಸುರಕ್ಷಿತತೆಗಾಗಿ ಟ್ರೇಜರಿ ಇರುವವು. ಸದರ ಕಂಪನಿಯ ಮಾಲಕರಾದ ಮಿ॥ ಜಿ ಎ ಶಿರೂರ ಇವರಿಂದ ಸಾಧ್ಯವಿರುವ ಮುಕ್ಕಾಮುಗಳಲ್ಲಿ ಬಡೋದಾ, ಮುಂತಾದ ಪ್ರಸಿದ್ಧ ಸ್ಥಳಗಳು ಮ್ಯಾಜಿಕ್ ಲ್ಯಾಂಟರ್ನದ ಚಿತ್ರದಿಂದ ತೋರಿಸಲ್ಪಟ್ಟು ಲೆಕ್ಚರ ಕೊಡಲ್ಪಡುವದು. ಮೇಲೆ ಬರೆದಿರುವ ಎಲ್ಲ ಕ್ಷೇತ್ರಗಳ ಸಚಿತ್ರ ಚರಿತ್ರೆ (ಗಾಯಿಡ) ಮಿ॥ ಜಿ ಎ ಶಿರೂರ ಇವರಿಂದ ಕನ್ನಡದಲ್ಲಿ ಬರೆಯಲ್ಪಟ್ಟದ್ದು ಶ್ರೀ ಗೌರೀಶಂಕರ ಕಂಪನಿಯ ಆಫೀಸಿನಲ್ಲಾಗಲಿ ಟ್ರೇನಿನಲ್ಲಾಗಲಿ ರೂ ೨-೮-೦ ಗಳ ಕ್ರಯಕ್ಕೆ ಸಿಗುವದು. ಇಳಕೊಳ್ಳುವ ಸ್ಥಳ ಹಡಗ ಮೋಟರ ಟಾಂಗಾ ಮುಂತಾದವುಗಳ ವ್ಯವಸ್ಥೆಗೋಸುಗ ಟ್ರೇನು ಹೊರಡುವ ಮೊದಲೇ ವ್ಯವಸ್ಥಾ ಮ್ಯಾನೇಜರರು ವ್ಯವಸ್ಥೆಗಾಗಿ ಮುಂದೆ ಹೋಗುವರು. ಬ್ರಾಹ್ಮಣರಿಗೂ ವೀರಶೈವರಿಗೂ ಪ್ರತ್ಯೇಕವಾಗಿ ಅಡಿಗೆ ಊಟಗಳ ವ್ಯವಸ್ಥೆಯು ಇಳಕೊಂಡ ಸ್ಥಳದಲ್ಲಿಯೇ ನಡೆಯುವದು. ವೀರಶೈವ ಆಚಾರದನುಕೂಲತೆಗಾಗಿ ಟ್ರೇನಿನಲ್ಲಿ ಪಟ್ಟದ ಸ್ವಾಮಿಗಳಿರುವರು ಟ್ರೇನಿನಲ್ಲಿ ಎಲ್ಲ ಧರ್ಮದವರಿಗೂ ಸರಿಯಾಗಿ ಮೇಲ್ವಿಚಾರಣೆ ಮಾಡಲ್ಪಡುವದು. ಎರೋಪ್ಲೇನ [ವಿಮಾನ] ದಲ್ಲಿ ಸಂಚರಿಸಲಿಚ್ಛಿಸುವವರಿಗೆ ಕಲಕತ್ತಾ ಮುಕ್ಕಾಮಿನಲ್ಲಿ ವಿಮಾನದ ವ್ಯವಸ್ಥೆ ಮಾಡಿದ್ದು ೧೫ ಮಿನಿಟುಗಳ ವೇಳೆ ಸಂಚರಿಸುವದಕ್ಕೆ ೧೦ ರೂ. ಚಾರ್ಜು ಕೊಡಬೇಕಾಗುವದು

ಶ್ರೀ ಗೌರೀಶಂಕರ ಕಂಪನಿಯವರು ಪ್ರಸಂಗವಿಶೇಷದಲ್ಲಿ ರೇಲ್ವೆ ಕಂಪನಿಯವರ ಅನುಮತಿಯಿಂದ ಪ್ರೋಗ್ರಾಮಿನಲ್ಲಿ ಬದಲಾವಣೆಗಳನ್ನು ಮಾಡಬಹುದು. ಚಳಿಗಾಲ ಸುರುವಾಗುವದರೊಳಗಾಗಿ ಉಷ್ಣ ಪ್ರದೇಶದ ಸಮುದ್ರಭಾಗದ ಮದ್ರಾಸ ಕಡೆಗೆ ಬರುವದರಿಂದ ಥಂಡಿಯ ಭಯವಿಲ್ಲ ಹೆಚ್ಚಿನ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು ಎಜಂಟರಿಗೆ ಯೋಗ್ಯ ಕಮೀಶನ್ ಸಿಗುವದು

ಶ್ರೀ ಗೌರೀಶಂಕರ ಕಂಪನಿಯ ಏಜಂಟ್ ರೆಂಟೆಗಳು— ಸದರ ಕಂಪನಿಯ ಏಜಂಟರಿಗೆ ಟಿಗಳಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಹೆಯ ರೈತರ ಹಾಗು ವಕೀಲರ ಉತ್ತರ ಕರ್ನಾಟಕದ ಕೀರ್ತಿ ಮಾಡಿ ಕೊಡಲ್ಪಟ್ಟಿವೆ ೧೯೩೪ ರ ಅಸ್ತಿಯ ಬೇಸಗಿಯಲ್ಲಾದರೂ ಕೀರ್ತಿ ಮಾಡಿಕೊಡುವದಲ್ಲದೆ ಆಗುವದು ಇಂಥ ಜನರು ಕೀರ್ತಿ ಮಾಡಿಕೊಳ್ಳುವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸಬೇಕು ಅವರಿಗೆ ಧಾರ್ಮಿಕ ಏಜಂಟ್ ರೆಂಟೆಯ ಹೆಚ್ಚಿನ ಮಾಹಿತಿ ಪತ್ರಿಕೆಗಳು ಬೇಡಿದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು ಏಜಂಟರಾಗಲಿಚ್ಛಿಸುವವರು ಕೂಡಲೆ ತಿಳಿಸತಕ್ಕದ್ದು ಯೋಗ್ಯ ಕಮೀಶನ ಕೊಡಲ್ಪಡುವದು

ನಮ್ಮ ಕಂಪನಿಯ ಯಾತ್ರಾ ಪ್ರವಾಸದಲ್ಲಿ ಕಂಡುಬಂದ ಅನುಭವ ಹಾಗು ಪ್ರವಾಸದಲ್ಲಿ ಕ್ಯಾಮರಾದಿಂದ ತೆಗೆದುಕೊಂಡು ಬಂದ ಫೋಟೋಗಳು ಇವುಗಳಿಂದ ಧಾರ್ಮಿಕ, ಔದ್ಯೋಗಿಕ ಸಾಮಾಜಿಕ ವಿಷಯಗಳಿಗನುಸರಿಸ ‘ಶ್ರೀ ಗೌರೀಶಂಕರ’’ ಎಂಬ ಸಚಿತ್ರ ವಾರಪತ್ರಿಕೆಯು ಕನ್ನಡದಲ್ಲಿ ಶ್ರೀ ಗೌರೀಶಂಕರ ಕಂಪನಿಯಿಂದ ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವದು.

ತಾ॥ ೪-೧೦-೧೯೩೩ ಚಿತ್ರಕಾರರು [ಫೋಟೋಗ್ರಾಫರ] ಹಾಗು ಸಂಪಾದಕರು

ಆಫೀಸು

ಶ್ರೀ ಸಿದ್ಧಾರೂಢ ಬಿಲ್ಡಿಂಗಿನ ಎದುರಿನಲ್ಲಿ **ಜಿ. ಎ ಶಿರೂರ**

ಸ್ಟೇಶನ್ ರಸ್ತೆ ಹುಬ್ಬಳ್ಳಿ ಶ್ರೀ ಗೌರೀಶಂಕರ ಕಂಪನಿಯ ಚಾಲಕರು.

ಮದ್ರಾಸ್ ಮತ್ತು ಸದರ್ನ ಮರಾಠಾ ರೇಲ್ವೆ ಕಂ, ಲಿ.

(ಇಂಗ್ಲಂಡದಲ್ಲಿ ಸ್ಥಾಪಿತವಾದದ್ದು)

ನೋಟೀಸು.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ ಇವರ ಒಗ್ಗೆ ಯಾತ್ರಿಕರ ಸಲುವಾಗಿ ಒಂದು ಸ್ಪೇಶಲ್ ಉಗಿಬಂಡಿಯನ್ನು ಹುಬ್ಬಳ್ಳಿಯಿಂದ ತಾರೀಖು ೨೨ ನೇ ಅಕ್ಟೋಬರ ೧೯೩೩ ಈ ದಿವಸ ಬಿಡುವಂತೆ ತಕ್ಕ ವ್ಯವಸ್ಥೆ ಮಾಡಿರುತ್ತದೆ

ದಾವಣಗೇರಿಯ ದಕ್ಷಿಣ ಭಾಗದ (ಅಂದರೆ ತೋಳಹುಣಸಿಯಿಂದ ಬೆಂಗಳೂರ ವರೆಗೆಯ) ಪ್ರಯಾಣಿಕರಿಗೆ ಈ ಗಾಡಿಯಲ್ಲಿ ಹೋಗಗೊಡಲಿಕ್ಕಿಲ್ಲಾ

ಸಹಿ ಆರ್. ಆ ಪರ್.

ಡಿಸ್ಟ್ರಿಕ್ಟ ಟ್ರಾನ್ಸಪೋರ್ಟೇಶನ್ ಸುಪರಿಂಟೇಂಡೆಂಟ (ಟ್ರಾಫಿಕ್) ಹುಬ್ಬಳ್ಳಿ

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

“ ನೀಲಗಿರಿ ಎಣ್ಣೆ ”

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು. ಇ ಸ್ಪತಿ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ. ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕ ಟೋಣಪಿ ಆ್ಯಂಡ ಕಂಪನಿ,

ಕೊಪ್ಪೀಕರ ರೋಡ, ಹುಬ್ಬಳ್ಳಿ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೩೭೭೮

ಯತ್ ಪರವಶಂ ದುಃಖಂ । ಯದಾತ್ಮವಶಂ ಸುಖಮ್ ॥ ಮನು

ನಿತ್ಯ ಪತ್ರಿಕೆ ೩ ಪೈ.

ಇನಸ್ಸುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಸುರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ದಿ ಯುನಾಯಿಟೆಡ
ಕರ್ನಾಟಕ ಇ. ಕಂ. ಲಿ
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಶುಕ್ರವಾರ ಅಶ್ವಿನ ಬಹುಳ ೯ ಶಕೆ ೧೮೫೩ ತಾ॥ ೧೨-೧೦-೩೩ [ಸಂಚಿಕೆ ೧೧೯೬





ರಗಳು, ಬಿಳೇರೋಗ ಕೆಂಪು ರೋಗ ... ಸರಿಯಾಗಿ ... ಎಲ್ಲ ವಿಕಾರಗಳಿಗೆ ... ಗರ್ಭಧಾರಣ ... ಮೇಲೆ ಕೆಡದು ಕೊಳ್ಳಲು ಪ್ರಕೃತಿ ನಿರೋಗಿ ವಸ್ತು ಸಿದ್ಧವಿದೆ.

ಎಲ್ಲ ಔಷಧಿ ಅಂಗಡಿಗಳಲ್ಲಿಯೂ ದೊರೆಯುವದು.

ಬಿ. ಟಿ. ಕರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ.

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ
ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ
ಧಾರವಾಡ ತಾ॥ ೨೫ ೮-೩೩
ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಉತ್ತಮ ತಬಲೆಗಳು.

ಹೈದರಾಬಾದ ತಬಲೆಗಳು ಪ್ರಸಿದ್ಧವೆಂಬುದು ಎಲ್ಲರಿಗೂ ಗೊತ್ತುಂಟು. ನಾವು ಉತ್ತಮ ಕಾರಾಗೀರರನ್ನು ಇಟ್ಟು ತಯಾರಿಸುತ್ತಲಿದ್ದೇವೆ ಖಾತ್ರಿಯಿಂದ ಗ್ಯಾರಂಟಿ ಮಾಲು ಕಳಿಸಲ್ಪಡುವದು ಬೇರೆಯವರಿಗೆ ಆರ್ಡರಕೊಟ್ಟು ಮೋಸಹೋಗಬೇಡಿರಿ ಹೈದರಾಬಾದಿನಿಂದಲೇ ತಬಲೆಗಳು ಪರಪಟ್ಟಣಕ್ಕೆ ಹೋಗಿ, ಅಲ್ಲಿಯ ವರ್ತಕರು ಅವರ ಮೇಲೆ ಬಿಸ್ತು ನಿಮಗೆ ಒದು ಕೃಪೆ ಮೊದಲೇ ಇಲ್ಲಿಗೆ ಆರ್ಡರ ಕಳಿಸಿದರೆ ಕಮ್ಮಿ ಕ್ರಯಕ್ಕೆ ದೊರೆಯುವದಲ್ಲದೆ, ನಮ್ಮ ಕರ್ನಾಟಕ ಜನರಿಗೆ ಖಾತ್ರಿಪೂರ್ವಕ ಕೆಲಸ ದೊರೆಯುವದು. ತಾ॥ ೨-೯-೩

ಗವಳಿಗಡ್ ಹೈದರಾಬಾದ (ಡೆಕ್ಕನ್) ಬಿ ಜೆ ಚಿಮ್ಮಲಗಿ

ಭವಾನಿ ಅಯರ್ನ ವರ್ಕ್ಸ, ಧಾರವಾಡ
ಕಬ್ಬಿಣದ ಪಲಂಗು, ಸ್ಟ್ಯಾಂಡ, ತೊಟ್ಟಿಲು ಮತ್ತು ವಾಡಿಕೆಯ ಬಾಗಿಲು ತಯಾರಾಗುತ್ತವೆ
೩೦-೯-೩೩

ಕನ್ನಡ ತರುಣರೇ ಮುಂದೇನು ಗತಿ?

ತಿಂದೇನೆಂದರೆ ಅನ್ನವಿಲ್ಲ. ಮಾಡೇನೆಂದರೆ ಕೆಲಸವಿಲ್ಲ, ಈ ಪರಿ ನಮ್ಮ ಸ್ಥಿತಿಯಾಗಿದೆ ಸುಸ್ಥಿತಿಯಿಲ್ಲದ ಅನೇಕರಿಗೆ ನಿತ್ಯದ ಜೀವಿತಾರ್ಥವನ್ನು ಕೂಡ ಮರ್ಯಾದೆಯಿಂದ ಸಾಗಿಸುವುದು ಈಗ ದುಃಸಾಧ್ಯವಾಗುತ್ತಿರುವದು ವೃದ್ಧರಕಿಂತಲೂ ತರುಣರ ಸ್ಥಿತಿಯು ಹೆಚ್ಚು ದೀನವಾಗಿರುವದು. ಆಯುಷ್ಯದ ಅತ್ಯಂತ ಅಮೌಲ್ಯವಾದ ಭಾಗವನ್ನು ಅವರು ನಿರುದ್ಯೋಗಿಗಳಾಗಿ ಅನಾಹತರಂತೆ ಕಳೆಯಬೇಕಾಗಿದೆ ನಾವು ಮಾಡಬೇಕಾದರೂ ಏನು ? ಎಂದು ಅನೇಕ ತರುಣರು ಪ್ರಶ್ನೆಯನ್ನ ಮಾಡುತ್ತಿರುವರು. ಆದರೆ ನಮಗೆ ಮಾಡಲಿಕ್ಕೆ ಬರುತ್ತದಾದರೂ ಏನು ? ಬಿಳೀ ಕಾಗದದ ಮೇಲೆ ಎರಡು ಕರೀ ಗೆರೆಗಳನ್ನು ಎಳೆಯಲು ಬಂದಾಕ್ಷಣಕ್ಕೆ ನಮಗೆ ಯಾವದೊಂದು ವಿದ್ಯೆಯಾಗಲಿ. ಕಲೆಯಾಗಲಿ ಬಂದಂತಾಗಲಿಲ್ಲ ಶಿಕ್ಷಣದ ಪೊಳ್ಳು ದುರಭಿಮಾನ ಮಾತ್ರ ನಮ್ಮಲ್ಲಿ ಯಥೇಚ್ಛವಾಗಿ ಸೇರುವದು ಈಗಿನ ಶಿಕ್ಷಣದಿಂದ ನಮಗೆ ಸಿಗುವದೆಂದರೆ ಒಂದು ಕಾರಕೂನೀ ಕೆಲಸವು ಆದರೆ ಆ ಕೆಲಸಕ್ಕೆ ಒಬ್ಬ ಮ್ಯಾಟ್ರಿಕ್ ಆಗದವನೂ ಹಾಗೂ ಒಬ್ಬ ಬಿ ಎ ಆದವನೂ ಅರ್ಜಿಗಳನ್ನು ಕೊಟ್ಟರೆ ಅನುಭವಿಕ ಉದ್ಯೋಗಸ್ಥನು ಆ ಕೆಲಸವನ್ನು ಮ್ಯಾಟ್ರಿಕ್ ಆಗದವನಿಗೇ ಕೊಟ್ಟಾನೇ ಹೊರತು ಬಿ ಎ ಆದವನಿಗೆ ಕೊಡುವದಿಲ್ಲ. ಇದು ನಮ್ಮ ಶಿಕ್ಷಣದ ಲಾಭ! ಆದರೆ ಹೀಗೆ ಬಿಟ್ಟು ಮರೆಯುತ್ತ ಕುಳಿತರೆ ಹೊಟ್ಟೆ ತುಂಬಲಾರದು. ಜಗದ್ವಿಖ್ಯಾತ ವಿಜಯನಗರದ ಸಾಮ್ರಾಜ್ಯವನ್ನು ಸ್ಥಾಪಿಸಿದ ಪ್ರತಾಪಶಾಲಿಗಳ ಸಂತತಿಯವರೆಂದು ಹೇಳಿಕೊಳ್ಳುವ ನಾವು ಈಗಿನ ನಮ್ಮ ಈ ಸತ್ವಹೀನತೆಯನ್ನು ... ನಾಚಿಕೆಯಾದದಷ್ಟು ಅಧೋಗತಿಗೆ ಮುಟ್ಟಿರುವೆವೆಂದು ನಾನು ತಿಳಿಯುವದಿಲ್ಲ ನಮ್ಮಲ್ಲಿ ಉತ್ತವಾಗಿರುವ ಮನಸ್ಸತ್ವವನ್ನು ನೋಡಲು ನಾವು ಜಾಗೃತ ಮಾಡಿಕೊಳ್ಳಬೇಕು ಸುಮ್ಮನೆ ಕುಳಿತಿಂದು ಅನಾಥರಂತೆ ಜೀವಧಾರಣ ಮಾಡುವದರಲ್ಲಿ ಶ್ರೇಯವಿಲ್ಲ ಆದರೆ ವ್ಯಕ್ತಿಕ ಪ್ರಯತ್ನದಿಂದ ನಮ್ಮ ಉದ್ಧಾರವಾಗುವದು ಶಕ್ಯವಿಲ್ಲ ಅದಕ್ಕೆ ಬಲವಾದ ಸಂಘಟಿತ ಚಟುವಟಿಕೆಯು ಬೇಕು ಮತ್ತು ಅದರ ಗೂಢ ರೀತಿಗಳನ್ನು ತರುಣರೇ ನಿರ್ಧರಿಸಬೇಕು ಅಲ್ಲದೆ ಈ ಬಗ್ಗೆ ತಮ್ಮ ವಿಚಾರಗಳೇನಿರುವವೆಂಬದನ್ನು ನಮ್ಮ ಪ್ರಾಂತದ ತರುಣರು ಮುಚ್ಚುಮರೆಯಿಲ್ಲದೆ ಕನ್ನಡಿಗದ ಮುಖಾಂತರ ಮೊದಲು ಪ್ರಕಟ ಮಾಡಬೇಕೆಂದು ಅವರಿಗೆ ನನ್ನ ಆಗ್ರಹದ ಸೂಚನೆ ಇದೆ. ತಾ॥ ೧೧—೧೦—೩೩

ವಿಠ್ಠಲ ಕೃಷ್ಣ ಮಾಳವೇಕರ.
ಮುಷ್ಟಿಗಿ

ಕನ್ನಡಿಗ.

ಧಾರವಾಡ— ಶುಕ್ರವಾರ ತಾರೀಖು ೧೩—೧೦—೧೯೩೩

ಇದು ಶಸ್ತ್ರಸಂನ್ಯಾಸದ ಸೋಗು.

ಜಗತ್ತಿನ ಲಕ್ಷ್ಯವು ಈಗ ಜಿನೀವ್ಹಾ ಪಟ್ಟಣದಲ್ಲಿ ಮಿ ಆರ್ಥರ ಹಿಂಡರಸನ್ನ ಇವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ೧೬ ನೆಯ ತಾರೀಖಿನ ದಿವಸ ಅಂದರೆ ಬರುವ ಸೋಮವಾರ ದಿವಸ ಕೂಡಲಿಕ್ಕಿದ್ದಿರುವ ಶಸ್ತ್ರ ಸಂನ್ಯಾಸ ಪರಿಷತ್ತಿನ ಕಡೆಗೆ ಸೆಳೆದಿರುತ್ತದೆ ಮಹಾಯುದ್ಧವಾದ ನಂತರ ಈ ಶಸ್ತ್ರ ಸಂನ್ಯಾಸದ ಕಲ್ಪನೆಯು ಹುಟ್ಟಿತು ಮಹಾಯುದ್ಧದಲ್ಲಿ ಮಿತಿ ಮೀರಿ ಆದ ಪ್ರಾಣಹಾನಿ ದ್ರವ್ಯಹಾನಿ ಇವುಗಳಿಂದ ಎಲ್ಲ ರಾಷ್ಟ್ರಗಳೂ ಬೇಸತ್ತು ಹೋದವು. ಜರ್ಮನಿಯು ಇಡೀ ಜಗತ್ತನ್ನೇ ಸ್ವಾಧಾಕ್ರಾಂತವಾಗಿ ಮಾಡುವ ಸಿದ್ಧತೆಯಿಂದ ಮಹಾಯುದ್ಧಕ್ಕೆ ಸನ್ನದ್ಧವಾಗಿತ್ತು. ಆದಕಾರಣ, ಜರ್ಮನಿ ರಾಷ್ಟ್ರದ ಈ ರಾಕ್ಷಸ ವೃತ್ತಿಗೆ ಬೇಗನೆ ಲಂಗದಾಣ ಹಾಕದಿದ್ದರೆ ಅದು ಒಂದಿಲ್ಲೊಂದು ದಿನ ಇಡೀ ಜಗತ್ತನ್ನೇ ನುಂಗುವುದೆಂಬ ಅಂಜಿಕೆಯೂ ಎಲ್ಲರಿಗೆ ಹುಟ್ಟಿತು ಸುದೈವದಿಂದ ಜರ್ಮನ ರಾಷ್ಟ್ರವು ಸೋತುದದರಿಂದ ಆಗಿನ ಮಟ್ಟಿಗೆ ಆ ಅಂಜಿಕೆಯು ತಪ್ಪಿತೆನ್ನೋಣ ನಿಜ ಆದರೆ ಮಿತ್ರರಾಷ್ಟ್ರಗಳು ಗೆದ್ದರೂ ಗೆಲುವಿನ ಸೊಕ್ಕು ಅವರಲ್ಲಿ ಉಳಿಯಲಿಲ್ಲ. ಏಕೆಂದರೆ ಅವುಗಳ ಕೈಕಾಲುಗಳೂ ಸಂಪೂರ್ಣವಾಗಿ ಸೋತಿದ್ದವು ಇವೆಲ್ಲ ಕಾರಣಗಳ ಮೂಲಕ, ಯುರೋಪಖಂಡದಲ್ಲಿ ಮಹಾಯುದ್ಧವಾಗದಂತೆ ಎಚ್ಚರ ಪಡುವುದಕ್ಕೆ ಯಾವ ಉಪಾಯವನ್ನು ಕೈಕೊಳ್ಳಬೇಕೆಂಬ ವಿಚಾರವು ಸಹಜವಾಗಿ ಹುಟ್ಟಿ ಇನ್ನು ಮುಂದೆ ಯಾರೂ ತಮ್ಮ ಶಸ್ತ್ರಾಸ್ತ್ರಗಳನ್ನು ಬೆಳೆಸುವ ಗೋಜಿಗೆ ಹೋಗಬಾರದೆಂದೂ, ಹಾಗೆ ಯಾರಾದರೂ ಮಾಡಿದರೆ ಮಿಕ್ಕವರು ಅವರ ಆಟವನ್ನು ನಡೆಯಗೊಡಬಾರದೆಂದೂ ಹೀಗೆ ಮಾಡಿದರೆ ಯುರೋಪಖಂಡದಲ್ಲಿ ಮಹಾಯುದ್ಧವು ತಪ್ಪುವದೆಂದೂ ಜಯ ಹೊಂದಿದ ರಾಷ್ಟ್ರಗಳಿಗೆ ಎನಿಸಿದ್ದರಿಂದ, ಒಂದು ಸಭೆ ಕರೆದು ಎಲ್ಲರೂ ಇದರ ವಿಚಾರವನ್ನು ಮಾಡಬೇಕೆಂದು ಗೊತ್ತಾಗಿ ೧೯೩೨ ನೆಯ ಇಸ್ವಿಯ ಫೆಬ್ರುವರಿಯಲ್ಲಿ ಈ ಶಸ್ತ್ರಸನ್ಯಾಸ ಪರಿಷತ್ತು ಕರೆಯಲ್ಪಟ್ಟಿತು ಆಗ ಅದರ ಚರ್ಚೆಯು ಪೂರ್ಣವಾಗಲಿಲ್ಲ ಅದಕ್ಕೋಸ್ಕರ ಈಗ ಪುನಃ ಅದು ನೆರೆಯುವದಿದೆ. ಈ ಪರಿಷತ್ತಿಗೆ ಯಶಸ್ಸು ಬಂದರೆ ಮಾತ್ರ ಕೆಲವು ವರ್ಷ ಯುರೋಪದಲ್ಲಿ ಶಾಂತತೆ ಉಳಿಯಬಹುದು. ಇಲ್ಲದಿದ್ದರೆ ಮತ್ತೆ ಮಹಾಯುದ್ಧವು ಹತ್ತಿಕೊಳ್ಳದೇ ಇರದ ಕಾರಣವೇ ಈ ಸಭೆಗೆ ಇಷ್ಟು ಮಹತ್ವವು. ಆದರೆ ಮದ್ಯೆನವದ ಸಂಗತಿಯೆಂದರೆ ಹಾಗೆ ಈ ಸಭೆಗೆ ಯಶಸ್ಸು ಬರುವ ಲಕ್ಷಣಗಳಿಲ್ಲ

ಇದಕ್ಕೆ ಕಾರಣವೆಂದರೆ, ಯಾವ ರಾಷ್ಟ್ರಕ್ಕೂ ಮನಸ್ಸಿನಿಂದ ಶಸ್ತ್ರ ಸನ್ಯಾಸವು ಬೇಕಾಗಿಯಿಲ್ಲ ಯಾವ ರಾಷ್ಟ್ರವೂ ಅದು ತನಗೆ ಬೇಡೆಂದೆನ್ನುವುದಿಲ್ಲ ಶಸ್ತ್ರ ಸನ್ಯಾಸವಾಗಬೇಕೆಂಬ ತತ್ವದ ಕಡೆಕ್ಕೆ ಶುದ್ಧ ಮನಸಿದ್ದರೆ ಮಾತ್ರ ಅದು ಸಾಧ್ಯವಾದೀತು ಹಾಗಿಲ್ಲದೆ ಶಸ್ತ್ರ ಸಂನ್ಯಾಸವಾದರೆ ತನ್ನ ಸುರಕ್ಷತೆಯು ಅಳಿಯುವುದೆಂಬ ದುರ್ಬುದ್ಧಿಯು ಇದ್ದರೆ, ಅದು ಹೇಗೆ ಸಾಧ್ಯವಾಗಬೇಕು? ಆದಕಾರಣ, 'ನೀನು ಮುಂಚೆ ಶಸ್ತ್ರ ಸಂನ್ಯಾಸವನ್ನು ಮಾಡು, ಆ ಮೇಲೆ ನಾನು ಮಾಡುತ್ತೇನೆ' ಎಂದೇ ಎಲ್ಲರೂ ಅನ್ನಹತ್ತಿದ್ದಾರೆ ಇಂಗ್ಲಂಡ ಫ್ರಾನ್ಸ ಇಟಲಿ ಅಮೇರಿಕಾ ಇವು ನಾಲ್ಕು ಜಗತ್ತಿನೊಳಗೆ ಈಗ ಅತ್ಯಂತ ಬಲಾಢ್ಯ ರಾಷ್ಟ್ರಗಳು ಶಸ್ತ್ರ ಸನ್ಯಾಸವು ಬೇಕಾದುದೂ ಇವುಗಳಿಗೆ ಬೇಡಾದುದೂ ಇವುಗಳಿಗೇ ಶಸ್ತ್ರಗಳ ಅಂಜಿಕೆ ಹೋದರೆ ಈಗಿನ ತಮ್ಮ ಸಾಮ್ರಾಜ್ಯವು ಅಬಾಧಿತವಾಗಿ ಉಳಿಯುತ್ತದಾದುದರಿಂದ ಇವರಿಗೆ ಶಸ್ತ್ರ ಸನ್ಯಾಸ ಬೇಕು ಆದರೆ ಜರ್ಮನಿ, ಜಪಾನ ರಶಿಯಾ ಮುಂತಾದ ರಾಷ್ಟ್ರಗಳು ಒಳಗಿಂದೊಳಗೆ ತಮ್ಮ ಶಸ್ತ್ರಾಗಾರವನ್ನು ಬೆಳೆಸಿಕೊಂಡರೆ ಇವರದೇನಾಗತಿ? ಆದ ಕಾರಣ ಇವರಿಗೆ ಶಸ್ತ್ರಸಂನ್ಯಾಸ ಬೇಡ ರಶಿಯಾ ದೇಶವೊಂದಕ್ಕೆ ಮಾತ್ರ ನಿಜವಾಗಿ ಶಸ್ತ್ರಸಂನ್ಯಾಸ ಬೇಕಾಗಿದ್ದಂತೆ ತೋರುತ್ತದೆ ಇದಕ್ಕೆ ಕಾರಣವೆಂದರೆ, ರಶಿಯಾ ದೇಶದಲ್ಲಿ ಈಗ ಸಮಾಜಕ್ರಾಂತಿಯು ನಡೆದಿದ್ದು ರಶಿಯಾ ದೇಶದ ಲಕ್ಷ್ಯವು ತನ್ನ ಉನ್ನತಿಯ ಕಡೆಗೆ ಹೆಚ್ಚಿಗೆ ಇರುತ್ತದೆ ಅದಕ್ಕೆ ಈಗ ಶಾಂತತೆಯು ನಿಜವಾಗಿಯೇ ಬೇಕಾಗಿದೆ ಆದರೆ ರಶಿಯಾ ದೇಶವನ್ನು ಕೇಳುವವರಾರು? ಎಲ್ಲ ರಾಷ್ಟ್ರಗಳೂ ತೀವ್ರವೇ ಶಸ್ತ್ರಸಂನ್ಯಾಸವನ್ನು ಮಾಡಬೇಕೆಂದು ರಶಿಯಾ ದೇಶವು ಹೇಳಿದ ಕೂಡಲೇ ಹೀಗೇ ಹೇಳುವುದು ಸೋಗು ಯಾರೂ ಅದನ್ನು ಮಾನ್ಯಮಾಡುವುದಿಲ್ಲವೆಂಬುದು ಗೊತ್ತಿದ್ದ ಕಾರಣ, ತಾನು ಬಹಳ ಸಂಭಾವಿತವೆಂದು ತೋರಿಸುವುದಕ್ಕೆ ಅದು ಹಾಗೆ ಹೇಳುವುದೆಂದು ಅದರ ಮೇಲೆ ಮಿಕ್ಕವರ ಆಕ್ಷೇಪ ಆದರೆ, ರಶಿಯಾದೇಶವು ಬಾಲ್ಟಿಕ್ ಸಂಸ್ಥಾನ, ಪೋಲಂಡ, ರುಮೇನಿಯಾ, ಸೆಕ್ಲೋವ್ಹಾಕಿಯಾ ಮತ್ತು ತುರ್ಕಸ್ಥಾನ ಇವುಗಳೊಡನೆ ಸಂಧಿಯನ್ನು ಮಾಡಿಕೊಂಡು ತನಗೆ ಅಂತಃಕರಣಪೂರ್ವಕವಾಗಿಯೇ ಶಸ್ತ್ರಸನ್ಯಾಸವು ಬೇಕಾಗಿದೆಂಬುದನ್ನು ತೋರಿಸಿರುವರು ಇಂಗ್ಲಂಡ, ಫ್ರಾನ್ಸ, ಇಟಲಿ ಮತ್ತು ಅಮೇರಿಕಾ ಇವು ನಾಲ್ಕು ರಾಷ್ಟ್ರಗಳ ಮನಸ್ಸು ಬಹುಶಃ ಒಂದು ಅವುಗಳಿಗೆ ಜರ್ಮನ ದೇಶದ ಏಳಿಗೆಯು ಕಣ್ಣಲ್ಲಿ ತಿವಿಯುತ್ತಿದೆ ತಮ್ಮ ತಮ್ಮೊಳಗಿನ ಅವಿಶ್ವಾಸವಂತೂ ಇದ್ದೇ ಇರುತ್ತದೆ ಇಂಗ್ಲಂಡದ ಪರಿಯಿಂದ ಮಿ॥ ಬಾಲ್ಡವಿನ್ ಇವರು ಹೇಳಿದ್ದೇನೆಂದರೆ ಮಿಕ್ಕ ರಾಷ್ಟ್ರಗಳು ಪ್ರಮಾಣಕ್ಕಿಂತ ಹೆಚ್ಚಿಗೆ ಶಸ್ತ್ರಗಳನ್ನು ಇಟ್ಟಿರುವವೆಂದು ಕಂಡುಬಂದರೆ ನಾವೂ ಬೆಳೆಸುವವರೇ ಇಟಲಿಯು ಫ್ರಾನ್ಸ ದೇಶಕ್ಕೆ ಮಿಕ್ಕ ಶಸ್ತ್ರಾಸ್ತ್ರಗಳಲ್ಲಿ ಸಮವಾಗಿದ್ದರೂ ಇಟಲಿಯ ಹತ್ತರ ಫ್ರಾನ್ಸದ ಹತ್ತರ ಇದ್ದಷ್ಟು ಯುದ್ಧದ ಹಡಗುಗಳಿರುವುದಿಲ್ಲ ಆದಕಾರಣ ಫ್ರಾನ್ಸದೇಶವು ನಿಶಸ್ತ್ರವಾಗಲೊಪ್ಪಿದರೆ ತಾನು ಒಪ್ಪುವುದು ಇಲ್ಲದಿದ್ದರೆ ಇಲ್ಲವೆಂದು ಅದರ ಅಂಬೋಣ ಇದಕ್ಕೆ ವಿರುದ್ಧವಾಗಿ ಫ್ರಾನ್ಸದೇಶವು ಅನ್ನುವದೇನೆಂದರೆ " ನಮಗೆ ಇದಾವುದೂ ಬೇಕಾಗಿಲ್ಲ ಜಗತ್ತಿನಲ್ಲಿ ಮುಂದೆ ಶಾಂತತೆಯನ್ನು ಕಾಯುವೆವೆಂದು ಯಾರಾದರೂ ಹೊಣೆ ಹೊರುವಂತಿದ್ದರೆ ಮಾತ್ರ ನಮಗೆ ನಿಃಶಸ್ತ್ರೀಕರಣವು ಬೇಕು. ಇಲ್ಲವಾದರೆ ಬೇಡ "ಜರ್ಮನ ರಾಷ್ಟ್ರವು ಮೊನ್ನೆ ೮ ನೆಯ ತಾರೀಖಿನ ದಿವಸ ಸರಳವಾದ ಮತ್ತು ಸ್ಪಷ್ಟವಾದ ಉತ್ತರವನ್ನು ಕೊಟ್ಟುಬಿಟ್ಟಿದೆ ಅದೇನೆಂದರೆ—ಜರ್ಮನ ರಾಷ್ಟ್ರವು ಮಿಕ್ಕ ರಾಷ್ಟ್ರಗಳಿಗೆ ಸಮಾನವಾದುದೆಂಬ ಮಾತನ್ನು ಒಪ್ಪಿಸುವವರೆಗೆ ಶಸ್ತ್ರಸಂನ್ಯಾಸದ ಮಾತೇ ಬೇಡ ಎಂದು ಇಂದ ಪರಿಸ್ಥಿತಿಯಲ್ಲಿ ಇದ ಪರಿಷತ್ತಿಗೆ ಯಶಸ್ಸು ದೊರೆಯುವುದು ಹೇಗೆ? ಇಷ್ಟು ಮಾತ್ರ ನಿಜ ಅದೇನೆಂದರೆ ಪರಿಷತ್ತಿನಲ್ಲಿ ಏನಾದರೂ ನಿಶ್ಚಯವಾಗದಿದ್ದರೆ ಎಲ್ಲ ರಾಷ್ಟ್ರಗಳೂ ಮತ್ತೆ ಮಹಾಗಂಡಾಂತರಕ್ಕೆ ಒಳಗಾಗುವವು ಈ ಅಂಜಿಕೆಯೇ ಅವರಿಗೆ ಯಾವುದೊಂದು ರೀತಿಯಲ್ಲಿ ರಾಜೀ ಆಗಲಿಕ್ಕೆ ಪ್ರೇರಿಸಿದರೆ ಪ್ರೇರಿಸಬೇಕು

ವಿಜಯ ನಗರೋತ್ಸವ.

ವಿಜಯನಗರ ಸಾಮ್ರಾಜ್ಯದಿಂದ ನೆರವೇರಿಸಲ್ಪಟ್ಟ ಮಹತ್ಕಾರ್ಯಗಳು ಅನೇಕಾನೇಕವಾಗಿರುವವು ಆದರೆ ಅತ್ಯಂತ ಮಹತ್ವದ ಮಹತ್ಕಾರ್ಯವೆಂದರೆ ಹಿಂದು ಧರ್ಮಕ್ಕೆ ಆದರಿಂದಾದ ಉಪಕಾರವು. ಪರದೇಶದಿಂದ ಬಂದ ಬಹು ಪ್ರಬಲವಾದ ಶಕ್ತಿಯೊಂದು ಹಿಂದು ಧರ್ಮದ ಮೇಲೆ ನುಗ್ಗಿ ತನ್ನ ಮರಣೋನ್ಮುಖವಾಗಿ ಮಾಡಿತ್ತು ಹಿಂದು ಸಂಸ್ಕೃತಿಯೂ ಜರ್ಜರಿತವಾಗಿತ್ತು ಮುಂದೆ ಆ ಶಕ್ತಿಗೆ ತಡೆಯಿಲ್ಲದಾಗಿದ್ದರೆ ಹಿಂದು ಧರ್ಮವು ನಾಮಶೇಷವಾಗುತ್ತಿತ್ತೆಂಬ ಎದರಲ್ಲಿ ಸಂದೇಹವಿಲ್ಲ. ಆದರೆ ಭಗವಂತನ ಕೃಪೆಯಿಂದ ವಿಜಯನಗರ ಸಾಮ್ರಾಜ್ಯವು ಸ್ಥಾಪಿಸಲ್ಪಟ್ಟು, ಆದಕ್ಕೆ ಪ್ರಬಲವಿರೋಧಿಯಾದ ಮತ್ತೊಂದು ದಿವ್ಯಶಕ್ತಿ ಹುಟ್ಟಿ ಹಿಂದು ಧರ್ಮದ ಮೇಲೆ, ಹಿಂದು ಸಂಸ್ಕೃತಿಯ ಮೇಲೆ ಬರುತ್ತಿರುವ ಮಾರಣಾಂತಿಕ ಆಘಾತವನ್ನು ತಡೆಯಿತು. ಅದರಿಂದ ಹಿಂದು ಧರ್ಮವೂ ಹಿಂದು ಸಂಸ್ಕೃತಿಯೂ ವಿಕಾಸಗೊಂಡು ಉಜ್ವಲವಾಗಿ ಪ್ರಕಾಶಿಸಲು ಅನುವಾಯಿತು ಇಂತಹ ಅನುಪಮೇಯವಾದ ಸೇವೆಯನ್ನು ಗೈದ ಆ ಸಾಮ್ರಾಜ್ಯದ ಸ್ಥಾಪನಾದಿನದ ಸ್ಮಾರಕೋತ್ಸವವು ನಮ್ಮಿಂದ ಈಗ ನೆರವೇರಿಸಲ್ಪಡತಕ್ಕಾಗಿರುವುದು. ಸಾಮ್ರಾಜ್ಯ ಸ್ಥಾಪನೆಯಿಂದ ಮಹತ್ಕಾರ್ಯವು ನೆರವೇರಿದರೆ ಆ ಸ್ಥಾಪನಾದಿನದ ಸ್ಮಾರಕೋತ್ಸವದಿಂದಲೂ ಆ ಬಗೆಯದೇ ಮಹತ್ಕಾರ್ಯವು ನೆರವೇರಬೇಕಲ್ಲವೆ? ನಾಲ್ಕಾರು ಸಮ್ಮೇಳನಗಳನ್ನು ನೆರೆಯಿಸಿಯಾಗಲಿ, ಪ್ರದರ್ಶನಗಳನ್ನು ತೆರೆದಿಯಾಗಲಿ, ಪುಸ್ತಕಗಳನ್ನು ಪ್ರಸಿದ್ಧಿಸಿಯಾಗಲಿ ನಿಬಂಧಗಳನ್ನು ಓದಿಯಾಗಲಿ ಭಾಷಣಗಳನ್ನು ಮಾಡಿಯಾಗಲಿ ಸ್ಮಾರಕೋತ್ಸವವನ್ನು ಮಾಡಿಬಿಟ್ಟರೆ ಅದು ವಿಜಯ ನಗರ ಸಾಮ್ರಾಜ್ಯ ಸ್ಥಾಪನೆಯ ಗೌರವಕ್ಕೆ ಯೋಗ್ಯವಾಗದು ಕನ್ನಡನಾಡಿನ ವೈಶಿಷ್ಟ್ಯವನ್ನು, ವ್ಯಕ್ತಿತ್ವವನ್ನು ಶಾಶ್ವತವಾಗಿ ಬೆಳಗಿಸಿ ಉಳಿಸಲು ಸಮರ್ಥವಾದ ಸಂಸ್ಥೆಯ ಸ್ಥಾಪನೆಯಿಂದಲೇ ಯೋಗ್ಯವಾದ ಸ್ಮಾರಕವಾಗುವುದು ಇಂತಹ ಸಂಸ್ಥೆಯೆಂದರೆ ಅಖಿಲ ಕರ್ನಾಟಕ ವಿದ್ಯಾಪೀಠವೇ ಎಂದು ಎಲ್ಲರೂ ಒಪ್ಪಬೇಕಾದ ಮಾತು. ಕನ್ನಡಿಗರು ಪರಿಸ್ಥಿತಿಯನ್ನರಿತು ವಿದ್ಯಾಪೀಠದ ಸ್ಥಾಪನೆಗೋಸುಗ ಒಂದೇ ಮನದಿಂದ ಪ್ರಯತ್ನ ಮಾಡುವ ಕಾಲವು ಈಗ ಒದಗಿರುವುದು ನಾವು ಈ ಸಂಧಿಯನ್ನು ವ್ಯರ್ಥವಾಗಿ ಹೋಗಗೊಟ್ಟರೆ ನಮ್ಮ ಅಸ್ತಿತ್ವಕ್ಕೆ ಬಲವಾದ ಆಘಾತವು ತಟ್ಟದಿರದೆಂಬುದು ನಾವೆಲ್ಲರೂ ತಿಳಿಯಲಿಕ್ಕೆ ಬೇಕು ತೆಲುಗರ ವಿದ್ಯಾಪೀಠವು ಅಸ್ತಿತ್ವದಲ್ಲಿ ಬಂದಿರುವುದು ಮಹಾರಾಷ್ಟ್ರದವರು ವಿದ್ಯಾಪೀಠದ ಸ್ಥಾಪನೆಗೋಸುಗ ಅಹೋರಾತ್ರಿ ಪ್ರಯತ್ನಿಸುತ್ತಿರುವರು ತೆಲುಗು ಮಹಾರಾಷ್ಟ್ರ ಈ ನಾಡುಗಳ ನಡುವೆ ಸಿಕ್ಕಿದ ನಮ್ಮ ನಾಡು ಸಕಾಲದಲ್ಲಿ ಎಚ್ಚೆತ್ತು ಕಾರ್ಯಪ್ರವೃತ್ತವಾಗದಿದ್ದರೆ ಬಾಳುಗೇಡಾಗುವ ಹೊತ್ತು ಬಾರದಿರದು. ಒಂಕೆಲ್ಲಿ ಬಿದ್ದು ಒನಕೆಯ ಏಟುಗಳನ್ನು ತಿನ್ನುವ ಪ್ರಸಂಗವನ್ನು ತಪ್ಪಿಸುವುದಿದ್ದರೆ ವಿದ್ಯಾಪೀಠದ ಸಂಸ್ಥಾಪನೆಗೋಸುಗ ಈಗಲೆ ನಾವು ಕಾರ್ಯವನ್ನು ಆರಂಭಿಸಬೇಕು

ಸಾಲಿ ರಾಮಚಂದ್ರರಾಯ

ಕರ್ನಾಟಕ ಹಾಯಸ್ಕೂಲ್ ಧಾರವಾಡ

ಇತಿವೃತ್ತ

ಸರಕಾರೀ ಹಾಯಸ್ಕೂಲಿನ ಗ್ಯಾದರಿಂಗಿನಲ್ಲಿ ಪ್ರೊ, ಪರಾಂಜಪೆಯವರು ಹೇಳಿದ್ದರ ಸಾರಾಂಶ:—ವಿದ್ಯಾರ್ಥಿಗಳಾಗಲಿ ದೊಡ್ಡವರಾಗಲಿ ಎಲ್ಲರೂ ಒಂದು ಮಾತನ್ನು ಪೂರ್ಣ ... ಯುತ್ತಾರೆ ತಾವು ಯಾವದೇ ಕೆಲಸ ... ದರೂ ಅನ್ಯರಿಗೆ ತಮ್ಮಿಂದ ಏನೂ ತೊಂದರೆಯಾಗದಂತೆ ಪ್ರವರ್ತಿಸುವದು ಅತ್ಯ... ಇದನ್ನು ಈಗಿನ ಜನರು ಹೆಚ್ಚಾಗಿ ಮರೆಯು ... ಲಿದ್ದಾರೆ

"ನಮಗೆ ಸಾಕಷ್ಟು ಸುಧಾರಣೆ ಸಿಗದ್ದಕ್ಕೆ ನಾವೇ ಕಾರಣ"

ಶಾ ಶಾಸ್ತ್ರಿಗಳ ಸಂದೇಶ.

ತಿರುಪ್ಪು...—ಸೆಪ್ಟಂಬರ ೯ ತಿರುಪುರದಲ್ಲಿ ... ಲೋಕಬೋರ್ಡ ಹಾಗೂ ಬೇರೆ ಸಂಘದವರು ... ನಾ ಶಾಸ್ತ್ರಿಗಳಿಗೆ ಕೊಟ್ಟ ಬಿನ್ನಹ ಪತ್ರಗಳ ... ಉತ್ತರ ಕೊಡುವಾಗ ನಾ ಶಾಸ್ತ್ರಿಯವರು ... ದ್ದು'— ದುಂಡು ಮೇಜಿನ ಪರಿಷತ್ತಿಗೆ ಹೋ... ಹಿಂದೀ ಪ್ರತಿನಿಧಿಗಳಲ್ಲಿ ಒಮ್ಮತವಿಲ್ಲದ್ದರಿಂ... ಲೇ ಹೊಸ ಸುಧಾರಣೆಗಳು ಕೈಗೂಡಲಿಕ್ಕೆ ... ವಾಯಿತು ಅದ್ದರಿಂದ ನಾವಿನ್ನು ನಮ್ಮಲ್ಲಿ ... ಯದಂತೆಬ ಕ್ಕಟ್ಟು ಮಾಡಿಕೊಳ್ಳಬೇಕು. ಒ... ಟ್ಟಿನ ಬುದ್ಧಿಯು ನಮ್ಮ ಜನರಲ್ಲಿ ಬೇರೂರ... ಕೆಂದರೆ ನಾವು ಅನೇಕ ದಿನಗಳ ವರೆಗೆ ಸು... ವಸ್ಥೆಯಿಂದ ಕೆಲಸ ನಡಿಸದೆ ಗತಿಯಿಲ್ಲ; ಮತ್ತು ಜನರು ಜಾತೀಯ ಕಲ್ಪನೆಗಳನ್ನು ಪೂರಾ ಹ... ಯಲಿಕ್ಕೆಬೇಕು ಎಂದು ಹೇಳಿದರು

ಸಶಸ್ತ್ರ ದರವಡೆ

ಬಂಗಾಲದಲ್ಲಿ 'ಶಿಂಗಾರಿಸೂಲ'ನೆಂಬ ... ಳ್ಳಿಯಲ್ಲಿ ಸಶಸ್ತ್ರ ದರವಡೆಯು ಒಂದು ... ಯಲ್ಲಿಯಾಯಿತು ಒಬ್ಬ ಮನುಷ್ಯನು ಗುಂ... ತಗಲಿ ಸತ್ತನು ಬಾರಿಸಾಲದ ನಲಿನೀದಾಸನೆಂ... ವನನ್ನು ಪೋಲೀಸರು ದಸ್ತಗಿರಿ ಮಾಡಿರ... ಅವನ ಮೇಲಿನ ಖಟ್ಲೆಯ ವಿಚಾರಣೆಗೋ... ಸ್ಪೆಶಲ್ ಟ್ರಿಬ್ಯುನಲ್ ನೇಮಿಸಲ್ಪಟ್ಟಿದೆ ... ಶಾರ್ಪ್ ಕೆ ಸಿ ಚಂದರ ಸೂಲ್ಕಿ ಸಯ್ಯದ ನಸರು... ತುಲ್ಲಾ ಎಂಬವರು ನ್ಯಾಯಾಧೀಶರಾಗಿದ್ದ...

ಮಹರ್ಷಿ ದಯಾನಂದರ ಸ್ಮಾರಕೋತ್ಸವ

ಆರ್ಯ ಸಮಾಜದ ಸಂಸ್ಥಾಪಕರಾದ ಮಹರ್ಷಿ ದಯಾನಂದ ಸರಸ್ವತಿಗಳ ಅರ್ಧ... ಸಾಂವತ್ಸರಿಕೋತ್ಸವವು ೨೪ ನೆಯ ತಾರೀ... ಭರತಖಂಡದಲ್ಲಿ ಎಲ್ಲ ಕಡೆಗೆ ಬಹಳ ಸ... ದಿಂದ ಜರಗಲಿದೆ ಆಜಮೀರನವರು ವಿವಿಧ ... ರಿಷತ್ತುಗಳನ್ನು ಜರುಗಿಸುವ ಏರ್ಪಾಟ... ಮಾಡಿದ್ದಾರೆ

ಬಿಡುಗಡೆ ಮತ್ತು ನೋಟೀಸು

ಕರಾಚಿ ತಾ॥ ೯—ಮುಂಬಯಿ ಕಾಯ... ಮಂಡಲದ ಹಳೇ ಸಭಾಸದರೂ ಹಾಗು ಕ... ಕಾಂಗ್ರೆಸ ಮುಖಂಡರು ಆಗಿದ್ದ ನಾರಾಯ... ದಾಸ ಬೇಚರ ಇವರಿಗಿಲ್ಲಿಯ ಅವಧಿಯು ಮ... ದದ್ದರಿಂದ ನಾಶಿಕ ಸೆರೆಮನೆಯಿಂದು ಬಿಡುಗ... ಹೊಂದಿ ಇಲ್ಲಿಗೆ ಬಂದ ಕೂಡಲೆ ಹೆಚ್ಚಿನ ಅಧಿ... ರದ ಕಾಯದೆ ಅನ್ವಯ ಕಾಯದೆಭಂಗದ ... ಪಳಿದ ಲ್ಲಿ ಯಾವ ಭಾಗವನ್ನು ತೆಗೆದುಕೊ... ಬಾರದೆಂದು ಅವರಿಗೆ ನೋಟೀಸು ಮಾಡ... ಗಿದೆ

ನಮಗೆ ಒಪ್ಪಂದವು ಬೇಕಾಗಿಲ್ಲ

ಪಂ ಜವಾಹಿರಲಾಲ ನೆಹರು

"ಕನ್ನಡಿಗ" ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

...ಬ್ಬ ಮುಖಂಡರ ಅಭಿಪ್ರಾಯ.

ಮುಂಬಯಿ ತಾ|| ೧೨— ಕರಾಚಿಯ ಕಾಂಗ್ರೆಸ ಮುಖಂಡರಾದ ಶ್ರೀ ಸಿಧ್ವರವರು ಈಗ ಮುಂಬಯಿಗೆ ಬಂದಿದ್ದಾರೆ. ವರ್ತಮಾನ ಪತ್ರದ ಸುದ್ದಿಗಾರರಿಗೆ ಅವರು ಹೀಗೆ ಹೇಳಿದರು:— ಆಲ ಇಂಡಿಯಾ ಕಾಂಗ್ರೆಸ ಕಮಿಟಿಯ ... ಕರೆಯಬೇಕೆಂದು ಪಂಡಿತ ಮಾಲವೀಜಿಯವರು ವಿನಂತಿ ಮಾಡಿಕೊಂಡಿದ್ದಾರೆ. ಅದಕ್ಕೆ ನನ್ನ ಒಪ್ಪಿಗೆಯದೆ. ಸದ್ಯಕ್ಕೆ ರಾಷ್ಟ್ರದಲ್ಲಿ ಒಕ್ಕಟ್ಟಿನ ಅವಶ್ಯಕತೆಯು ಬಹಳವಿರುತ್ತದೆ, ...ಲ್ಲ ಕಡೆಗೆ ಜಾತಿಜಾತಿಗಳಲ್ಲಿ ಕಲಹ ಉಂಟಾಗಿದೆ. ಇದು ಸರಿಯಲ್ಲ. ಕರಾಚಿಯಲ್ಲಿ ಇಷ್ಟು ...ವಸ ಅದರ ಹೆಸರು ಸಹ ಇದ್ದಿಲ್ಲ. ಆದರೆ ಈಗ ಅದು ಅಲ್ಲಿ ತುಂಬಿ ಹೋಗಿದೆ ... ಜನರು ತಮ್ಮ ತಮ್ಮ ಜಾತಿಗಳ ಅಭಿಮಾನದಿಂದಲೇ ಕೆಲಸ ಮಾಡುತ್ತಿದ್ದಾರೆ. ಹಿಂದು ಮುಸಲ್ಮಾನರ ನಡುವೆಯಷ್ಟೇ ಜಗಳವಿದೆ ...ತಲ್ಲ. ಸಿಂಧ-ಹಿಂದುಗಳೂ ಗುಜರಾಥ ಹಿಂದುಗಳೂ ಒಬ್ಬರನ್ನು ಕಂಡರೆ ಮತ್ತೊಬ್ಬರಿಗೆ ಆಗುವದಿಲ್ಲ. ಕಾಯದೆಮಂಡಲದಲ್ಲಿ ಕಾಂಗ್ರೆಸಿನ ಜನರು ಹೋಗುವುದು ಸರಿಯಾಗಿರಬಹುದು. ಆದರೆ ಅದರ ಬಗ್ಗೆ ವಿಚಾರ ಮಾಡುವ ಹೊತ್ತು ಇನ್ನೂ ಬಂದಿಲ್ಲ (ಅ ಪ್ರೆ ತಂತಿ)

ಪಟೇಲರ ಚಿಂತಾಜನಕ ಸ್ಥಿತಿ

—ಮುಂಬಯಿಗೆ ಸುಭಾಷ ಬಾಬು ಅವರ ತಂತಿ ಬಂದಿರುತ್ತದೆ. ಶ್ರೀಯುತ ವಿಠ್ಠಲಭಾಯಿ ಪಟೇಲರವರ ದೇಹಸ್ಥಿತಿಯು ಕೆಟ್ಟಾಗಿದೆಯಂತೆ. ಅವರ ಪ್ರಕೃತಿಯು ಚಿಂತಾಜನಕವಾಗಿರುತ್ತದಂತೆ. ಅವರ ಪುಪ್ಪುಸಗಳಲ್ಲಿ ಬಾವು ಉಂಟಾಗಿದೆ. ಆದರಿಂದ ಅವರ ರೋಗವು ಕಡಿಮೆಯಾಗುವುದರ ಬದಲು ಹೆಚ್ಚುತ್ತಲಿದೆ [ಅ. ಪ್ರೆ ತಂತಿ]

ಸುರೇಂದ್ರನಾಥ ಗುಪ್ತರಿಗೆ ೭ ವರ್ಷ ಕಠಿಣ

ಕಲಕತ್ತಾ ತಾ|| ೧೧

ಚೀಫ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟರು ಸುರೇಂದ್ರನಾಥ ದತ್ತ ಗುಪ್ತರಿಗೆ ಲಾಯಸೆನ್ಸವಿಲ್ಲದೆ ಪಿಸ್ತೂಲನ್ನೂ ಹದಿನೇಳು ಕಾಡತೂಸುಗಳನ್ನೂ ಇಟ್ಟುಕೊಂಡುದುದಕ್ಕಾಗಿ ...ವನ್ನು ಮುರಿಬದಿಯುವ ಕಾಯದೆಯ ... ೭ ವರ್ಷ ಕಠಿಣ ಶಿಕ್ಷೆ ವಿಧಿಸಿದರು. (ಅ ಪ್ರೆ ತಂತಿ)

ಉಗಿಹಡಗಕ್ಕೆ ಬೆಂಕಿ ಹತ್ತಿತು.

ಮುಂಬಯಿ ತಾ|| ೧೨— ಸಿಂದೆ ಸ್ಟೀಮ ಕಂಪಿಗೆ ಸಂಬಂಧಪಟ್ಟ ಜಲಪಲಕ ಹೆಸರಿನ ... ಹಡಗವು ಮುಂಬಯಿ ಬಂದರಕ್ಕೆ ಬಂತು. ...ಕ್ಕೆ ಬುಧವಾರ ರಾತ್ರಿ ಬೆಂಕಿಹತ್ತಿ ಹಾನಿಯಾಯಿತು. ಹಡಗಿಗೂ ಅದರೊಳಗಿನ ಸರಕುಗಳಿಗೂ ಬೆಂಕಿಯಿಂದ ಎಷ್ಟು ಹಾನಿಯಾಯಿತೆಂಬುದು ಇನ್ನೂ ತಿಳಿದಿಲ್ಲ. ಆದರೂ ತಕ್ಕಮಟ್ಟಿಗೆ ಹಾನಿಯಾಯಿತೆಂದು ಹೇಳಬಹುದು. ಅರ... ಗಂಟೆಗಳಿಗೆ ಬೆಂಕಿ ಹತ್ತಿ ಕೊನೆ ಹಾವದು ರಾತ್ರಿ ೯ ಗಂಟೆಗೆ ಕಾಣಿಸಿತು. ಬೆಂಕಿ ವೇಗದಿಂದ ಹಬ್ಬಿತು. ಫಾಯರ ಬ್ರಿಗೆಡಿಗೆ ತಿಳುಹಲು ಅವರು ಆರು ಬಂಬಿಗಳೊ... ಉಗಿಹಡಗವಿದ್ದಲ್ಲಿಗೆ ಬಂದರು. ಮತ್ತು ಆ ತಾಸಿನೊಳಗೆ ಬೆಂಕಿಯನ್ನು ಆರಿಸಿದರು. (ಅ. ಪ್ರೆ. ತಂತಿ)

ಎಮ್. ಸಿ. ಸಿ. ಟೀಮಿಗೆ ಗವ್ಹರ್ನರರ ಸ್ವಾಗತ.

ಮುಂಬಯಿ ತಾ|| ೧೩ ಎಮ್ ಸಿ ಸಿ ಟೀಮಿನ ಕಪ್ತಾನರಾದ ಡಾಕ್ಟರ ಜಾರ್ಡಿನ್‌ರಿಗೆ ಮುಂಬಯಿ ಗವ್ಹರ್ನರರು ಸಂದೇಶ ಕಳಿಸಿದ್ದೇನೆಂದರೆ ಹಿಂದುಸ್ಥಾನದ ಪ್ರವಾಸದ ಬಗ್ಗೆ ಇವತ್ತು ಬರಲಿರುವ ಜಾರ್ಡಿನ್ ಮುಂತಾದ ಎಮ್, ಸಿ, ಸಿ, ಯವರಿಗೆ ನಾನು ಮುಂಬಯಿ ಇಲಾಖೆಯ ಪರವಾಗಿ ಸುಸ್ವಾಗತವನ್ನೀಯುತ್ತೇನೆ. ಹಿಂದುಸ್ಥಾನಕ್ಕೆ ಟೆಸ್ಟಮ್ಯಾಚ್ ಆಡುವ ಯೋಗ್ಯತೆಯನ್ನು ಕೊಟ್ಟದ್ದಕ್ಕಾಗಿ ನಾವು ಬಹಳ ಆನಂದ ಪಡುವದಲ್ಲದೆ ನಮ್ಮ ವಿರುದ್ಧ ಆಡಲಿಕ್ಕೆ ಇಷ್ಟು ಕಸಿದಾದ ಹುರಿಯಾಳುಗಳನ್ನು ಆರಿಸಿದುದು ಅಭಿಮಾನಾಸ್ಪದವಾಗಿದೆ. ಜಾರ್ಡಿನ್‌ರು ಕಪ್ತಾನರಾದುದು ನನಗಂತೂ ವಿಶೇಷ ಆನಂದವಾಗಿದೆ. ಯಾಕಂದರೆ ಮುಂಬಯಿಯಲ್ಲಿ ಕ್ರಿಕೆಟ ಆಟಕ್ಕೆ ಅವರ ತಂದೆಯವರ ಸಂಬಂಧ ಬಹಳ ದಿವಸಗಳಿಂದ ಇರುವದಲ್ಲದೆ ಅವರಾದರೂ ಮುಂಬಯಿಯಲ್ಲಿಯೇ ಹುಟ್ಟಿದ್ದಾರೆ. ಹಿಂದುಸ್ಥಾನವು ನಮಯಕ್ಕೆ ತಕ್ಕಂತೆ ವರ್ತಿಸುವದೆಂದೂ ಮುಂಬಯಿ ಇಲಾಖೆಯು ನಮ್ಮ ವಿರುದ್ಧ ಆಡುವ ಹುರಿಯಾಳನ್ನು ಯೋಗ್ಯ ಪ್ರಮಾಣದಲ್ಲಿ ಪೂರೈಸುವದೆಂದೂ ನಂಬಿದ್ದೇವೆ (ಅ ಪ್ರೆ ತಂತಿ)

ಶೇರ ಬಜಾರವು ಬಂದಾಯಿತು.

ಮುಂಬಯಿ ತಾ|| ೧೩— ಶೇರ ದಲಾಲರು ತಮ್ಮ ಅಕ್ಟೋಬರ ವಾಯಿದೆಯ ಹಣವನ್ನು ಸಲ್ಲಿಸದಿದ್ದರಿಂದ ಅವರನ್ನು ಕಸೂರುಗಾರರಾಗಿ ತಮ್ಮ ಸಭೆಯಲ್ಲಿ ಮುಂಬಯಿ ಸ್ಟಾಕ ಎಕ್ಸ್ಚೇಂಜದವರು ನಿರ್ಣಯಿಸಿ ಈ ದಿನ ವ್ಯವಹಾರ ಬಂದಿಟ್ಟರು. ಮತ್ತೂ ಕರೀಮಭಾಯಿ ಗಿರಣಿಗಳ ಸಮಾಚಾರವು ಸುಲಲಿತವಾಗಿ ನಡೆಯುವವರೆಗೆ ಶೇರ ಮಾರ್ಕೆಟಿನ ಅಗಾವು ವ್ಯವಹಾರವನ್ನೆಲ್ಲ ಬಂದಿಟ್ಟಿದ್ದಾರೆ (ಅ ಪ್ರೆ ತಂತಿ)

ಹಿಂದೂ ಮಹಾಸಭೆಯ ಅಧಿವೇಶನವು

ಅಜಮೀರ ತಾ|| ೧೧— ಹಿಂದೂ ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ಜಯಶಂಕರ ದೀಕ್ಷಿತ ಇವರು ಇಲ್ಲಿಗೆ ಬಂದಿದ್ದಾರೆ. ಅಧಿವೇಶನದ ತಯಾರಿಯು ಮುಗಿದಂತಾಯಿತು ದಿಲ್ಲಿಯಿಂದ ಲಾಲಾ ನಾರಾಯಣದಾಸರವರು ವಿಮಾನ ಮಾರ್ಗವಾಗಿ ಬಂದಿದ್ದಾರೆ. ನಿಯೋಜಿತ ಅಧ್ಯಕ್ಷರಾದ ಭಾಯಿ ಪರಮಾನಂದರವರೂ ವಿಮಾನದಿಂದಲೇ ೧೩ನೆಯ ತಾರೀಖಿನ ದಿವಸ ಮುಂಜಾನೆ ಬರುವರು ಹಿಂದೂ ಮಹಾಸಭೆಯ ಬೇರೆ ಕೆಲವರು ಮುಖಂಡರೂ ಬಂದಿದ್ದಾರೆ ಅಧಿವೇಶನಕ್ಕೆ ಕೆಲವು ಸಹಾನುಭೂತಿಯ ಸಂದೇಶಗಳು ಬಂದಿರುತ್ತವೆ ಪಂಡಿತ ಮದನಮೋಹನ ಮಾಲವೀಯವರಿಗೆ ಜಡ್ಡು ಆಗಿರುವುದರಿಂದ ಅವರು ಅಧಿವೇಶನಕ್ಕೆ ಬರಲಾರರು. ಸಹಾನುಭೂತಿಯ ಸಂದೇಶವನ್ನು ಕಳಿಸಿದ್ದಾರೆ. ೧೩ನೆಯ ತಾರೀಖಿನ ದಿವಸ ಅಧ್ಯಕ್ಷರು ಬರುವರು ಮತ್ತು ಅವರ ಮೆರವಣಿಗೆಯಾಗುವದು. ೧೪ನೆಯ ತಾರೀಖಿನ ದಿವಸ ಅಧಿವೇಶನಕ್ಕೆ ಪ್ರಾರಂಭವಾಗಿ, ಅಧ್ಯಕ್ಷರ ಹಾಗು ಸ್ವಾಗತಾಧ್ಯಕ್ಷರ ಭಾಷಣಗಳಾಗುವವು (ಅ ಪ್ರೆ ತಂತಿ)

ಅಲಹಾಬಾದದಲ್ಲಿ ಕಾಂಗ್ರೆಸ ಕೆಲಸಗಾರರ ಸಭೆ.

ಅಲಹಾಬಾದ ತಾ|| ೧೧— ಅಲಹಾಬಾದದಲ್ಲಿ ನೆರೆದ ಕಾಂಗ್ರೆಸ ಕೆಲಸಗಾರರ ಸಭೆಯಲ್ಲಿ ಅನೇಕ ದಿವಸಗಳವರೆಗೆ ಚರ್ಚೆಯಾದ ನಂತರ ಕೆಳಗಿನಂತೆ ಗೊತ್ತುವಳಿಗಳು ಪಾಸು ಮಾಡಲ್ಪಟ್ಟವು 'ನಮ್ಮ ನಮ್ಮದ ಧ್ಯೇಯವು ಪೂರ್ಣ ಸ್ವಾತಂತ್ರ್ಯವು ಇರುವುದು ಹಿಂದುಸ್ಥಾನವು ಈಗ ಸಾಮ್ರಾಜ್ಯದ ಭೋಗ ಭೂಮಿಯಾಗಿರುವುದು ಅದನ್ನು ಸಾಮ್ರಾಜ್ಯದ ಹಿಡಿತದಿಂದ ಮುಕ್ತಗೊಳಿಸಬೇಕು ಹಿಂದುಸ್ಥಾನದ ರಾಷ್ಟ್ರೀಯತ್ವದ ಮತ್ತು ಬ್ರಿಟಿಷ ಸಾಮ್ರಾಜ್ಯತ್ವದ ನಡುವೆ ಒಪ್ಪಂದವಾಗಕೂಡದು ಮತ್ತು ಸ್ವಾತಂತ್ರ್ಯವು ದೊರೆಯುವವರೆಗೆ ಸ್ವಾತಂತ್ರ್ಯ ಯುದ್ಧವು ನಡೆಯಬೇಕು. ಈ ಠರಾವು ತಂದವರು ಪಂ ಜವಾಹಿರಲಾಲ ನೆಹರೂರವರು ಪುಷ್ಟಿಯನ್ನು ಕೊಟ್ಟವರು ಪುರುಷೋತ್ತಮದಾಸ ಟಂಡನ್ನರು (ಅಪ್ರೆ ತಂತಿ)

ಸೆರೆಯಾಳುಗಳ ಪ್ರಾಯೋಪವೇಶ.

ಲಾಹೋರ ತಾ|| ೧೧— ಲಾಹೋರ ಸೆಂಟ್ರಲ ಜೇಲಿನೊಳಗೆ ಪ್ರಾಯೋಪವೇಶನ ಮಾಡುತ್ತಿದ್ದ ಸೆರೆಯಾಳುಗಳಲ್ಲಿ ಸುಮಾರು ೧೦೦ ಜನರು ಇವತ್ತು ಸಂಜೆಗೆ ಅನ್ನವನ್ನು ಸ್ವೀಕರಿಸಿದರೆಂದು ತಿಳಿಯುತ್ತದೆ (ಅ. ಪ್ರೆ ತಂತಿ)

ಹೊಲಕ್ಕೆ ಬೆಂಕಿ ಹಚ್ಚಿದರು.

ಅಹಮದಾಬಾದ ತಾ|| ೧೨— ಗುಜರಾಥ ಸಮಾಚಾರವೆಂಬ ದೈನಿಕ ವರ್ತಮಾನ ಪತ್ರದಲ್ಲಿ ಕೆಳಗಿನ ಸುದ್ದಿಯು ಪ್ರಸಿದ್ಧವಾಗಿದೆ, ಖೇಡಾ ಜಿಲ್ಹಾ ಬೋರ್ಡಿನವರು ಅಲ್ಲಿಯ ಬಾವಿಗಳಲ್ಲಿ ಹರಿಜನರ ಮುಂತಾದ ಎಲ್ಲ ಜನರು ನೀರು ತುಂಬಬಹುದೆಂದು ಠರಾವು ಮಾಡಿದರು, ಆ ಮೇರೆಗೆ ಒಬ್ಬ ಹರಿಜನ ಶಿಕ್ಷಕನ ಹೆಂಡತಿಯು ಸಾರ್ವಜನಿಕ ಬಾವಿಯಿಂದ ನೀರು ತಂದಳು, ಅದುದರಿಂದ ಧರ್ಮನಿಷ್ಠ ಹಿಂದುಗಳು ಹರಿಜನರ ಹೊಲಕ್ಕೆ ಬೆಂಕಿ ಹಚ್ಚಿದರೆಂದು ಆರೋಪವಿದೆ, ಹರಿಜನರು ಪೋಲೀಸರ ಕಡೆಗೆ ಇದರ ಬಗ್ಗೆ ತಕರಾರು ಮಾಡಿದ್ದಾರೆ, (ಅ. ಪ್ರೆ. ತಂತಿ)

ಕೈದಿಗಳ ಅನ್ನತ್ಯಾಗ

ಲಾಹೋರ ತಾ|| ೧೧— ಲಾಹೋರ ತುರಂಗದಲ್ಲಿದ್ದ ಅಜಮಾಸು ೨೦೦ ಕೈದಿಗಳು ಇವತ್ತಿನ ದಿವಸ ಮುಂಜಾವಿನ ಅನ್ನವನ್ನು ನಿರಾಕರಿಸಿದರು ಇದಂ ಹೊರತಾಗಿ ಅನ್ನಸತ್ಯಾಗ್ರಹದ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ (ಅ ಪ್ರೆ ತಂತಿ)

ರೇಲ್ವೆ ಹಾಗೂ ಮೋಟಾರುಗಳ ಮೇಲಾಟ.

ಸಿಮಲಾ ತಾ|| ೧೨— ಹಿಂದೀ ರೇಲ್ವೆ ಪರಿಷತ್ತಿನಲ್ಲಿ ಸರ ಜೋಸೆಫ್ ಭೋರರು ಅಂದದ್ದು ರೇಲ್ವೆ ಹಾಗೂ ಮೋಟರುಗಳ ಮೇಲಾಟದ ಪ್ರಶ್ನೆಯ ಬಗ್ಗೆ ಬಂದ ಅನೇಕ ಸೂಚನೆಗಳೂ ಅತ್ಯಂತ ಜಾಗ್ರತೆಯಿಂದ ಪರೀಕ್ಷಿಸಲ್ಪಟ್ಟಿವೆ ಹಿಂದುಸ್ಥಾನದಂಥ ಬಡದೇಶದಲ್ಲಿ ಸಹಕಾರದಿಂದ ರೇಲ್ವೆ ಹಾಗೂ ಮೋಟಾರಗಳ ಕಾರ್ಯ ನಡೆಯದಿದ್ದರೆ ಗತ್ಯಂತರವೇ ಇಲ್ಲ (ಅ ಪ್ರೆ ತಂತಿ)

ದವಾಖಾನೆಯಿಂದ ತಿರುಗಿ ಸೆರೆಮನೆಗೆ

ಪಾಟಣಾ ತಾ|| ೧೧— ಬಾಬು ರಾಜೇಂದ್ರಪ್ರಸಾದ ಇವರು ಇಲ್ಲಿಯ ದವಾಖಾನೆಯೊಳಗೆ ಔಷಧೋಪಚಾರಕ್ಕಾಗಿ ಇರುತ್ತಿದ್ದರು. ಇವತ್ತು ಸಂಜೆಗೆ ಅವರನ್ನು ಅಲ್ಲಿಂದ ಒಯ್ದು ಪಾಟಣಾ ಜಿಲ್ಹೆಯ ಸೆರೆಮನೆಗೆ ಕರಕೊಂಡು ಹೋದರು. ಅವರನ್ನು ಹೀಗೆ ಒಯ್ಯುವರೆಂದು ಮೊದಲು ಯಾರ ಮನಸಿನಲ್ಲಿಯೂ ಇದ್ದಿಲ್ಲ ಅವರ ಗಂಟು ಗದಡಿಯನ್ನು ಲಗುಬಗೆಯಿಂದ ಕಟ್ಟಿದರು. ಅವರಾದರೂ ನಗುನಗುತ ನಗೆಯಿಂದ ತಮ್ಮ ಬಳಗದವರಿಗೆ ನಮಸ್ಕಾರ ಮಾಡಿ ಹೊರಟರು. ಅವರ ಮೈಯಲ್ಲಿ ಇನ್ನೂ ಜಡ್ಡು ಇದೆ. ಅವರ ಪ್ರಕೃತಿಯನ್ನು ಇವತ್ತು ಮತ್ತೊಮ್ಮೆ ಎಕ್ಸ ಕಿರಣದಿಂದ ಪರೀಕ್ಷಿಸಿದರು. (ಅ. ಪ್ರೆ, ತಂತಿ)

೧೪ಳಲ ಕಲಹವು

ರಾಜಶಾಹಿ ನಾಟೋರ ಪಟ್ಟಣದಲ್ಲಿ ಶ್ರಿಪ್ತ್ರಕೋಡ ೧೪ಳನೆ ಕಲಹನಂತೆ ೨ ತಿಂಗಳವರೆಗೆ ಸಭೆ ಮೊದಲಾದವುಗಳನ್ನು ಮುನಸಿಪಾಲಟಿಯ ಮೇರೆಯಲ್ಲಿಯೂ ಮ ಡಬಾರದೆಂದು ಹುಕುಮು ಹೊರಟಿದೆ (ಅ ಪ್ರೆ ತಂತಿ)

ಕರ್ನಾಟಕದ ಸುದ್ದಿಗಳು.

ಮುಂಬಯಿ ಗವ್ಹರ್ನರರು ನಡಿಸಿದ ಹಳ್ಳಿಯ ಸುಧಾರಣೆಯ ಚಳವಳಿಯನ್ನು ವಿಜಾಪುರ ಜಿಲ್ಹೆಯಲ್ಲಿಯೂ ಬಳಕೆಯಲ್ಲಿ ತರಲು ವಿಜಾಪುರ ಕಲೆಕ್ಟರರು ಜಿಲ್ಹೆಯ ಮಾಮಲೇದಾರರನ್ನೆಲ್ಲ ನೆರೆಯಿಸಿ ಹಳ್ಳಿಯ ಸುಧಾರಣೆಯ ಕಾರ್ಯ ನಡಿಸುವ ವಿಚಾರ ಮಾಡುವವರಿದ್ದಾರೆ.

ಮಂಗಳೂರಿನಲ್ಲಿ ಹೂ ಮತ್ತು ಕಾಯಿಪಲ್ಲೆಗಳ ಪ್ರದರ್ಶನವು ಜಿಲ್ಹೆಯ ಕಲೆಕ್ಟರರಿಂದ ೭ನೇ ತಾರೀಖಿಗೆ ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ ಸ್ಕೂಲಿನಲ್ಲಿ ತೆರೆಯಲ್ಪಟ್ಟಿತು. ಈ ತರಹದ ಪ್ರಯತ್ನವು ಮಂಗಳೂರ ಜಿಲ್ಹೆಯಲ್ಲಿಯೇ ಮೊದಲನೇಯದು

ವಿಲಾಯತಿಯಲ್ಲಿಯ ಹಾಯಿ ಕಮಿಶನರ ಆಫೀಸಿನಲ್ಲಿದ್ದ ಮತ್ತು ಹಿಂದುಸ್ಥಾನದ ವ್ಯಾಪಾರದ ಮಾರ್ಗ ಪ್ರಚಾರಕ ಅಧಿಕಾರಿಗಳಾದ ಮಿ ಬಿ ಡಿ. ಅಲ್ಲಿ ಇವರು ಹಿಂದುಸ್ಥಾನದ ಸರಕುಗಳನ್ನು ಪರದೇಶಗಳಿಗೆ ಹೆಚ್ಚಾಗಿ ಕಳಿಸುವದಕ್ಕೆ ಯೋಗ್ಯ ವ್ಯವಸ್ಥೆ ಮಾಡುವ ಕುರಿತು ಹಿಂದುಸ್ಥಾನದಲ್ಲೆಲ್ಲ ಸಂಚಾರ ಮಾಡುತ್ತಿದ್ದಾರೆ. ಅವರು ಮೊನ್ನೆ ಮೊನ್ನೆ ಮಂಗಳೂರಿಗೆ ಬಂದು ಅಲ್ಲಿಯ ವ್ಯಾಪಾರಸ್ಥರೊಡನೆ ಮಂಗಳೂರಿನ ವ್ಯಾಪಾರ ಮತ್ತು ಸರಕುಗಳ ಬಗ್ಗೆ ವಿಚಾರವಿನಿಮಯ ಮಾಡಿದರು. ಕೂಡಿದ ವ್ಯಾಪಾರಸ್ಥರು ಮಂಗಳೂರ ಚೇಂಬರ ಆಫ್ ಕಾಮರ್ಸವೆಂಬ ಸಂಸ್ಥೆಯನ್ನು ಸ್ಥಾಪಿಸುವರೆಂಬ ಆಶ್ವಾಸನಕೊಟ್ಟರು

ಮೈಸೂರ ಸಂಸ್ಥಾನದ ವಿಶ್ವವಿದ್ಯಾಲಯ ಪರೀಕ್ಷೆಗಳಿಗೆ ೧೯೩೫ನೇ ಇಸ್ವಿ ಜೂನ "ಸಂಗೀತ" ಐಚ್ಛಿಕ ವಿಷಯವಾಗಿ ಇಟ್ಟಿರುವದಾಗಿ ಸರಕಾರದವರು ಪ್ರಸಿದ್ಧಿಸಿದ್ದಾರೆ. ಇಷ್ಟು ದಿವಸ ಸಂಗೀತ ಶಾಸ್ತ್ರವು ಪರೀಕ್ಷೆಯ ವಿಷಯಗಳಲ್ಲಿ ಒಂದಾಗಿದ್ದಿಲ್ಲ

ಬ್ರಿಟಿಶ ಪ್ರಧಾನ ಮಂಡಳದ ಅವಸರದ ಸಭೆ.

ಲಂಡನ ತಾ|| ೯— ಇವತ್ತಿನ ದಿವಸ ಡಾವ್ನಿಂಗ ಸ್ಟ್ರೀಟದಲ್ಲಿಯ ಮುಖ್ಯ ಪ್ರಧಾನರ ಕಚೇರಿಯಲ್ಲಿ ಪ್ರಧಾನ ಮಂಡಳದ ಅವಸರದ ಸಭೆಯು ಕೂಡಿತ್ತು. ಜರ್ಮನಿಯು ರಾಷ್ಟ್ರಸಂಘದಿಂದ ಜಿನೇವ್ಹಾಕ್ಕೆ ಹೋಗಿದ್ದರಿಂದ ಇವರ ಹೊರತು ಎಲ್ಲ ಸಭಾಸದರು ಸಭೆಗೆ ಬಂದಿದ್ದರು.

ಕನ್ಯಾಗತದ ಅಪೂರ್ವ ಯಾತ್ರೆ! **ಕ್ಷೇತ್ರಗಳ ಪ್ರೇಕ್ಷಣೀಯ ನೋಟ!!**

ಚಾರ್ಜು ಸುಲಭ.

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ರೇಲ್ವೆ ಕಂಪನಿಯಿಂದ ಪರವಾನಿಗೆಯನ್ನು ಪಡೆದಿರುತ್ತದೆ.

ಶ್ರೀ ಕಾಶಿ, ರಾಮೇಶ್ವರ, ಲಂಕಾ ಮೊದಲಾದ ಕ್ಷೇತ್ರಗಳ ಯಾತ್ರೆಗಾಗಿ ಶ್ರೀ ಗೌರೀಶಂಕರ ಟ್ರೇನು

ತಾ॥ ೨೨ ಅಕ್ಟೋಬರ ೧೯೩೬ನೇ ದಿವಸ ಹೊರಡುತ್ತದೆ.

ಸೆಕಂಡಕ್ಲಾಸ ೩೧೦ ರೂ. **ಥರ್ಡಕ್ಲಾಸ** ೧೪೦ ರೂ.

ಕೂಡಲೇ ಅಡ್ವಾನ್ಸ ಕಳಿಸಿ ಟಿಕೇಟ್ ಪಡೆಯಿರಿ

ಟ್ರೇನು ಹೊರಡಿಸುವದಕ್ಕೆ ರೇಲ್ವೆ ಕಂಪನಿಯಿಂದ ಪರವಾನಗಿಯನ್ನು ಪಡೆದಿರುತ್ತದೆ. ಹುಬ್ಬಳ್ಳಿಯ ಶ್ರೀ ಗೌರೀಶಂಕರ ಯಾತ್ರಾ ಟ್ರೇನು ಭರತಖಂಡ ಮತ್ತು ಲಂಕಾ ಯಾತ್ರೆಗೋಸುಗ ಇದೇ ಅಕ್ಟೋಬರ ತಿಂಗಳ ೨೭ ನೇ ತಾರೀಖಿನ ದಿವಸ ಹೊರಡಲಿಕ್ಕೆ ಪೂರ್ಣ ತಯಾರಿಯುಲ್ಲಿರುವದು

ನಮ್ಮ ಟ್ರೇನಿನಲ್ಲಿ ಪ್ರಸಿದ್ಧರಾದ ವರ್ತಕರೂ, ಜಮೀನದಾರರೂ, ಪದವೀಧರರೂ, ವಿದ್ಯಾರ್ಥಿಗಳೂ ಹಾಗೂ ರಿಟಾಯರ್ಡ ಗವ್ಹರ್ನಮೆಂಟ ಅಧಿಕಾರಿಗಳೂ ಪ್ರಯಾಣ ಮಾಡತಕ್ಕವರಿರುವದರಿಂದ ಪ್ರಾರಂಭದಿಂದ ಕೊನೆಯವರೆಗೂ ಉತ್ತಮ ವ್ಯವಸ್ಥೆ ಮಾಡಲ್ಪಡುವದು.

೧೨ ವರ್ಷಕ್ಕೊಮ್ಮೆ ಬರುವ ಪುಣ್ಯಪ್ರದವಾದ ಕನ್ಯಾಗತದ,
ಇದೇ ಮಾರ್ಗಶೀರ್ಷ ಮಾಸದಲ್ಲಿಯ ಅಪೂರ್ವ ಯಾತ್ರೆಯು!
ಅಲಕ್ಷಿಸಿದರೆ ಪುನಃ ಸಿಗಲಾರಿಯದು!! **ಸ್ವಲ್ಪೇ ಟಿಕೀಟುಗಳು ಉಳಿದಿವೆ!!!**

ತ್ವರೆ ಮಾಡಿರಿ!!!! ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದೂ, ಹೆಚ್ಚಿನ ಅನುಭವ ಹಾಗು ಸುಧಾರಣೆಯುಳ್ಳದ್ದೂ ಆಗಿರುವ ದರ್ಜಾರೀ ಸಿಸ್ಟಿನ ಘನತೆಯುಳ್ಳ

ಶ್ರೀ ಗೌರೀಶಂಕರ ಕಂಪನಿಯ

೨ ನೇ ಯಾತ್ರಾ ಪ್ರವಾಸವು

೧ ನೇ ಯಾತ್ರೆಯನ್ನು ಸುಖವಾಗಿಯೂ, ಯಶಸ್ವಿಯಾಗಿಯೂ ಪೂರೈಸಿ ಸೆಲವುಟ್ಟಿಗೆ ಕರ್ನಾಟಕದ ಹಾಗು ಮಹಾರಾಷ್ಟ್ರದ ಸೇವೆಯನ್ನು ಮಾಡಿ ಯಾತ್ರಿಕರಿಂದ ಸುವರ್ಣ ಪದಕ ಮಾನಪತ್ರ, ಸದಭಿಪ್ರಾಯ, ಧನ್ಯವಾದಗಳನ್ನು ಪಡೆದಿದೆ.

ರೇಲ್ವೆ ಕಂಪನಿಯಲ್ಲಿ ಹಣವನ್ನು ಡಿಪಾಜಿಟ್ ಆಗಿ ಇಟ್ಟು ರೇಲ್ವೆ ಕಂಪನಿಯಿಂದ ಪರವಾನಗಿ ಪಡೆದಿದೆ. ಶ್ರೀ ಗೌರೀಶಂಕರ ಕಂಪನಿಯ ಚಾಲತೀ ಠೇವ ಖಾತೆಯು ಹುಬ್ಬಳ್ಳಿಯ ಇಂಪೀರಿಯಲ್ ಬ್ಯಾಂಕಿನಲ್ಲುಂಟು.

೧ ಹಂಪೀಪುರ ೨೭ ಅಕ್ಟೋಬರ	೧೯ ದಿಲ್ಲಿ ೧೨-೧೪-೧೫	೩೫ ಸಿಂದಾ ಪ್ರ (ಸಮುದ್ರಸ್ನಾನ) ೬-೭
೨ ಕೊಲ್ಹಾಪುರ (ಮೋಟಾರಿನಿಂದ) ೨೮-೨೯	೨೦ ಹರದ್ವಾರ ೧೫-೧೬	೩೬ ಶಿವಕಂಚಿ ೮
೩ ಮುಂಬಯಿ (ಸಮುದ್ರ) ೩೦-೩೧-೨೮	೨೧ ಹ. ಹೃಷೀಕೇಶ	೩೭ ವಿಷ್ಣುಕಂಚಿ
೪ ವೇರಾವಳ (ಸಮುದ್ರದಲ್ಲಿ ಹಡಗಿನಿಂದ) ೨೯-೩೦	೨೨ ಲಖನೌ ೧೭	೩೮ ಕುಂಭಕೋಣಂ ೯
೫ ಸೋಮನಾಥ (ಮೋಟಾರಿನಿಂದ)	೨೩ ಅಯೋಧ್ಯೆ ೧೮	೩೯ ರಾಮೇಶ್ವರ (ಪ್ರೇಕ್ಷಣೀಯ ಸಮುದ್ರಸ್ನಾನ) ೧೦-೧೧
೬ ದ್ವಾರಕಾ (ತೀರ್ಥಕ್ಷೇತ್ರ) ೩೧	೨೪ (ಪ್ರಯಾಗತ್ರಿವೇಣಿ) ಅಲಹಾಬಾದ ೧೯-೨೦	೪೦ ಕೊಲಂಬೋ [ಹಡಗ ರೇಲ್ವೆ ದಿಂದ ಲಂಕಾ] ೧೨-೧೩-೧೪
೭ ಸುದಾಮಪುರಿ ೧ ನವ್ಹೆಂಬರ	೨೫ ಕಾಶಿ (ಪ್ರೇಕ್ಷಣೀಯ) ೨೧-೨೨-೨೩-೨೪-೨೫	೪೧ ಕ್ಯಾಂಡಿ [ಲಂಕಾ] ೧೫
೮ ಅಬುಪರ್ವತ (ಪ್ರೇಕ್ಷಣೀಯ) ನವ್ಹೆಂಬರ ೨-೩	೨೬ ಸಾರನಾಥ (ಬೌದ್ಧತೀರ್ಥ)	೪೨ ತಲೈಮನ್ನಾರ [ಸಮುದ್ರಸ್ನಾನ] ೧೬
೯ ಅಜಮೀರ ೪	೨೭ ಗಯಾ ಬೌದ್ಧ ತೀರ್ಥ ೨೬-೨೭	೪೩ ಧನುಷ್ಕೋಡಿ [ಸಮುದ್ರಸ್ನಾನ] ಹಡಗದಿಂದ
೧೦ ಪುಷ್ಕರಮ್	೨೮ ರಾಜಗಿರಿ (ಪ್ರೇಕ್ಷಣೀಯ ಬಿಸಿ ನೀರಿನ ಸೆಲೆಯ ಸ್ನಾನ)	೪೪ ಮದುರೆ [ಶಕ್ತಿಪೀಠ] ೧೭
೧೧ ಜಯಪುರ ೫	೨೯ ಪಾಟ್ನಾ ೨೮-೨೯	೪೫ ತ್ರಿಚನಾಪಳ್ಳಿ [ಜಂಕ್ಷನ್ ಸ್ಟೇಶನ್] ೧೮
೧೨ ಆಗ್ರಾ (ಪ್ರೇಕ್ಷಣೀಯ) ೬-೭	೩೦ ವೈಜನಾಥ (ಜ್ಯೋತಿರ್ಲಿಂಗ) ಡಿಸೆಂಬರ ೧	೪೬ ಶ್ರೀರಂಗ (ವಿಷ್ಣುತೀರ್ಥ) ೧೮
೧೩ ಫತೇಪುರಸಿಕ್ರಿ (ಪ್ರೇಕ್ಷಣೀಯ)	೩೧ ಕಲಕತ್ತಾ ೩೦ ಡಿಸೆಂಬರ ೧-೨	೪೭ ಬೆಂಗಳೂರು ೧೯
೧೪ ಮಥುರಾ ೯-೧೦	೩೨ ಜಗನ್ನಾಥಪುರಿ (ಸಮುದ್ರ ಸ್ನಾನ) ೩	೪೮ ಮೈಸೂರು ೨೦-೨೧
೧೫ ಗೋಕುಲ	೩೩ ವಿಶಾಖಪಟ್ಟಣ (ಸಮುದ್ರ ಸ್ನಾನ) ೪	೪೯ ಹುಬ್ಬಳ್ಳಿ ೨೨
೧೬ ವೃಂದಾವನ	೩೪ ರಾಜಮಹೇಂದ್ರಿ (ಗೋದಾವರಿ ಸ್ನಾನ) ೫	
೧೭ ಗೋವರ್ಧನ		

ಕ್ಷೇತ್ರಗಳ ಮುಂದೆ ತಾರೀಖುಗಳನ್ನು ಬರೆದಿರುವ ಸ್ಟೇಶನ್ನುಗಳಲ್ಲಿ ಮಾತ್ರ ಟ್ರೇನು ನಿಲ್ಲುವದು. ಅದೇ ಮುಕ್ಕಾಮಿನಿಂದ ಉಳಿದವುಗಳ ಯಾತ್ರೆಯನ್ನು ಮಾಡಿಕೊಳ್ಳತಕ್ಕದ್ದು. ಮೇಲೆ ಬರೆದಂತೆ ಎಲ್ಲ ಯಾತ್ರಾಸ್ಥಳಗಳನ್ನು ಪೂರೈಸಿಕೊಂಡು ಟ್ರೇನು ಡಿಸೆಂಬರ ೨೨ ನೇ ತಾರೀಖು ಪುಷ್ಯ ಶು॥ ೬ ಶುಕ್ರವಾರ ದಿವಸ ಮುಂಜಾನೆ ಹುಬ್ಬಳ್ಳಿ ಪಟ್ಟಣಕ್ಕೆ ಬಂದು ತಲುಪುತ್ತದೆ.

ರೇಲ್ವೆ ಪಡಗು ಅನೇಕ ಕ್ಷೇತ್ರಗಳಲ್ಲಿ ತಿರುಗುವ ಸ್ಥಳದ ಖರ್ಚಿಗೆ ಸೇರಿ ಸೆಕಂಡಕ್ಲಾಸ ೩೧೦ ರೂ ಥರ್ಡಕ್ಲಾಸ ೧೪೦ ರೂ. ಮಾತ್ರ ೩ ವರ್ಷದ ಮೇಲ್ಪಟ್ಟ ೧೨ ವರ್ಷದ ಒಳಗಿನ ಮಕ್ಕಳಿಗೆ ಅರ್ಧ ಚಾರ್ಜು ಎಲ್ಲಿ ಟ್ರೇನು ಹತ್ತಿದರೂ ನೇಲ್ಕಾಣಿಸಿರುವ ಚಾರ್ಜನ್ನೇ ಕೊಡಬೇಕಾಗುವದು. ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳವು ಕೊಡಲ್ಪಡುವದು. ಆದ್ದರಿಂದ ಮೇಲೆ ಬರೆದಿರುವ ಚಾರ್ಜು ಬಹಳೇ ಸುಲಭವಾದದ್ದು. ಟಿಕೆಟ್ ಪಡೆಯಬೇಕಾದಲ್ಲಿ ಕೂಡಲೇ ಅಡ್ವಾನ್ಸ ಕಳಿಸತಕ್ಕದ್ದು. ಯಾತ್ರಿಕರ ಯೋಗ್ಯ ಅಡಚಣೆ ಕಂಡುಬಂದಲ್ಲಿ ಅಥವಾ ಟ್ರೇನು ಹೊರಡದಿದ್ದಲ್ಲಿ ಯಾತ್ರಿಕರು ಕೊಟ್ಟ ಅಡ್ವಾನ್ಸ ಅಥವಾ ಪೂರ್ಣ ಹಣವು ಮರತ ಕೊಡಲ್ಪಡುವದು. ಶ್ರೀ ಗೌರೀಶಂಕರ ಕಂಪನಿಯ ಯಾವತ್ತೂ ಹಣವು ಹುಬ್ಬಳ್ಳಿ (ಸರಕಾರಿ) ಇಂಪೀರಿಯಲ್ ಬ್ಯಾಂಕಿನಲ್ಲಿರುವದರಿಂದ ಯಾತ್ರಿಕರಿಂದ ಬಂದ ಹಣವಾದರೂ ಸದರ ಬ್ಯಾಂಕಿನಲ್ಲಿ ಸುರಕ್ಷಿತವಾಗಿರುವದು

ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಸ್ಥರೂ ನೌಕರರೂ ಇರುವರು. ಯಾತ್ರಿಕರ ಅನುಕೂಲತೆಗಾಗಿ ದವಾಖಾನೆ, ಅಗಸರು, ಫೋಟೋಗ್ರಾಫರ, ಲಾಯಬ್ರರಿ, ಪೋಸ್ಟ ಆಫೀಸ, ಯಾತ್ರಿಕರ ಠೇವಿನ ಹಣದ ಸುರಕ್ಷಿತಕ್ಕಾಗಿ ಟ್ರೇಜರಿ ಇರುವವು. ಸದರ ಕಂಪನಿಯ ಮಾಲಕರಾದ ಮಿ॥ ಜಿ ಎ. ಶಿರೂರ ಇವರಿಂದ ಸಾಧ್ಯವಿರುವ ಮುಕ್ಕಾಮುಗಳಲ್ಲಿ ಬದರೀನಾಥ, ಮುಂತಾದ ಪ್ರಸಿದ್ಧ ಸ್ಥಳಗಳು ಮ್ಯಾಜಿಕ್ ಲ್ಯಾಂಟರ್ನದ ಚಿತ್ರದಿಂದ ತೋರಿಸಲ್ಪಟ್ಟು ಲೆಕ್ಚರ ಕೊಡಲ್ಪಡುವದು. ಮೇಲೆ ಬರೆದಿರುವ ಎಲ್ಲ ಕ್ಷೇತ್ರಗಳ ಸಚಿತ್ರ ಚರಿತ್ರೆ (ಗಾಯ... ಮಿ॥ ಜಿ ಎ ಶಿರೂರ ಇವರಿಂದ ಕನ್ನಡದಲ್ಲಿ ಬರೆಯಲ್ಪಟ್ಟದ್ದು ಶ್ರೀ ಗೌರೀಶಂಕರ ಕಂಪನಿ ಆಫೀಸಿನಲ್ಲಾಗಲಿ ಟ್ರೇನಿನಲ್ಲಾಗಲಿ ರೂ. ೨-೫-೦ ಗಳ ಕ್ರಯಕ್ಕೆ ಸಿಗುವದು. ಇಳಿಕೊಳ್ಳುವ ಸ್ಥಳ ಪಡಗ, ಮೋಟರ ಟಾಂಗಾ ಮುಂತಾದವುಗಳ ವ್ಯವಸ್ಥೆಗೋಸುಗ ಟ್ರೇನು ಹೊರಡುವ ಮೊದಲೇ ವ್ಯವಸ್ಥಾ ಮ್ಯಾನೇಜರರು ವ್ಯವಸ್ಥೆಗಾಗಿ ಮುಂದೆ ಹೋಗುವರು. ಬ್ರಾಹ್ಮಣರಿಗೂ ವೀರಶೈವರಿಗೂ ಪ್ರತ್ಯೇಕವಾಗಿ ಅಡಿಗೆ ಊಟಗಳ ವ್ಯವಸ್ಥೆಯು ಇಳಿಕೊಂಡ ಸ್ಥಳದಲ್ಲಿಯೇ ಆಗುವದು. ವೀರಶೈವ ಆಚಾರದನುಕೂಲತೆಗಾಗಿ ಟ್ರೇನಿನಲ್ಲಿ ಪಟ್ಟದ ಸ್ವಾಮಿಗಳಿರುವರು. ಟ್ರೇನಿನಲ್ಲಿ ಎಲ್ಲ ಧರ್ಮದವರಿಗೂ ಸರಿಯಾಗಿ ಮೇಲ್ವಿಚಾರಣೆ ಮಾಡಲ್ಪಡುವದು. ಏರೋಪ್ಲೇನ [ವಿಮಾನ] ದಲ್ಲಿ ಸಂಚರಿಸ ಬಿಚ್ಛಿಸುವವರಿಗೆ ಕಲಕತ್ತಾ ಮುಕ್ಕಾಮಿನಲ್ಲಿ ವಿಮಾನದ ವ್ಯವಸ್ಥೆಯಿದ್ದು ೧೫ ಮಿನಿಟುಗಳ ವೇಳೆ ಸಂಚರಿಸುವದಕ್ಕೆ ೧೦ ರೂ. ಚಾರ್ಜು ಕೊಡಬೇಕಾಗುವದು.

ಶ್ರೀ ಗೌರೀಶಂಕರ ಕಂಪನಿಯವರು ಪ್ರಸಂಗವಿಶೇಷದಲ್ಲಿ ರೇಲ್ವೆ ಕಂಪನಿಯವರ ಅನುಮತಿಯಿಂದ ಪ್ರೋಗ್ರಾಮಿನಲ್ಲಿ ಬದಲಾವಣೆಗಳನ್ನು ಮಾಡಬಹುದು. ಚಳಿಗಾಲ ಸುರುವಾದದರೊಳಗಾಗಿ ಉಷ್ಣ ಪ್ರದೇಶದ ಸಮುದ್ರಭಾಗದ ಮದ್ರಾಸ ಕಡೆಗೆ ಬರುವದರಿಂದ ಥಂಡಿ ಭಯವಿಲ್ಲ ಹೆಚ್ಚಿನ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು. ಎಜಂಟಗೆ ಯೋಗ್ಯ ಕಮೀಶನ್ ಸಿಗುವದು

ಶ್ರೀ ಗೌರೀಶಂಕರ ಕಂಪನಿಯ ಎಂಜಿನ್ ರೇಟಿಗಳು— ಸದರ ಕಂಪನಿಯ ಎಂಜಿನ್ ರೇಟಿಗಳಿಂದ ಈಗ ೩ ವರ್ಷಗಳಿಂದ ಧಾರವಾಡ ಜಿಲ್ಹೆಯ ರೈತರ ಹಾಗು ವತನದಾರರ ಬಹಳ ಕರಬುಗಳು ತೀರ ಮಾಡಿ ಕೊಡಲ್ಪಟ್ಟಂತೆ ೧೯೩೬ ನೇ ಇಸ್ವಿಯ ಬೇಸಗೆಯಲ್ಲಿ ದರೂ ತೀರ್ಮಾನಿಕೊಡುತ್ತ ಬರುವದು ಕಾರಣ ಅವೇಸು ತೀರ ಮಾಡಿಸತಕ್ಕವರು ತೀವ್ರ ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸಲ್ಪಟ್ಟು ಅರ್ಜಿಯ ಫಾರ್ಮುಗಳೂ ಎಂಜಿನ್ ರೇಟಿಯ ಹೆಚ್ಚಿನ ಮಾಹಿತಿ ಪತ್ರಿಕೆಗಳೂ ಬೇಕಾದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು ಏಜಂಟರಾಗಬಿಚ್ಛಿಸುವವರು ಕೂಡಲೆ ತಿಳಿಸತಕ್ಕದ್ದು ಯೋಗ್ಯ ಕಮೀಶನ್ ಕೊಡಲ್ಪಡುವದು

ನಮ್ಮ ಕಂಪನಿಯು ಯಾತ್ರಾ ಪ್ರವಾಸದಲ್ಲಿ ಕಂಡುಬಂದ ಅನುಭವ ಹಾಗು ಕ್ಯಾಮರಾದಿಂದ ತೆಗೆದುಕೊಂಡು ಬಂದ ಫೋಟೋಗಳು ಇವುಗಳಿಂದ ಧಾರ್ಮಿಕ, ವಿದ್ಯಾ, ಸಾಮಾಜಿಕ ವಿಷಯಗಳಿಗನುಸರಿಸಿ "ಶ್ರೀ ಗೌರೀಶಂಕರ" ಎಂಬ ಸಚಿತ್ರ ವಾರಪತ್ರಿಕೆ ಕನ್ನಡದಲ್ಲಿ ಶ್ರೀ ಗೌರೀಶಂಕರ ಕಂಪನಿಯಿಂದ ತೀವ್ರದಲ್ಲಿಯೇ ಪ್ರಕಟಿಸಲ್ಪಡುವದು.

ತಾ॥ ೯-೧೦-೧೯೩೬ ಚಿತ್ರಕಾರರು [ಫೋಟೋಗ್ರಾಫರ] ಹಾಗು ಸಂಪಾದಕರು

ಆಫೀಸು
ಶ್ರೀ ಸಿದ್ಧಾರೂಢ ಬಿಲ್ಡಿಂಗಿನ ಎದುರಿನಲ್ಲಿ **ಜಿ. ಎ. ಶಿರೂರ**
ಸ್ಟೇಶನ್ ರಸ್ತೆ ಹುಬ್ಬಳ್ಳಿ ಶ್ರೀ ಗೌರೀಶಂಕರ ಕಂಪನಿಯ ಚಾಲ...

ಮದ್ರಾಸ್ ಮತ್ತು ಸದರ್ನ ಮರಾಠಾ ರೇಲ್ವೆ ಕಂ,

(ಇಂಗ್ಲಂಡದಲ್ಲಿ ಸ್ಥಾಪಿತವಾದದ್ದು)

ನೋಟೀಸು.

ಶ್ರೀ ಗೌರೀಶಂಕರ ಯಾತ್ರಾ ಕಂಪನಿ, ಹುಬ್ಬಳ್ಳಿ ಇವರ ಬಗ್ಗೆ ಯಾತ್ರಿಕರ ಸಲುವಾಗಿ ಒಂದು ಸ್ಪೇಶಲ್ ಉಗಿಬಂಡಿಯನ್ನು ಹುಬ್ಬಳ್ಳಿಯಿಂದ ತಾರೀಖು ೨೨ ನೇ ಅಕ್ಟೋಬರ ೧೯೩೬ ಈ ದಿವಸ ಬಿಡುವಂತೆ ಪಕ್ಕಾ ವ್ಯವಸ್ಥೆ ಮಾಡಿರುತ್ತದೆ.

ದಾವಣಗೇರಿಯ ದಕ್ಷಿಣ ಭಾಗದ (ಅಂದರೆ ತೋಳಹುಣಸಿಯಿಂದ ಬೆಂಗಳೂರಿನ ವರೆಗಿನ... ಯ) ಪ್ರಯಾಣಿಕರಿಗೆ ಈ ಗಾಡಿಯಲ್ಲಿ ಹೋಗಗೊಡಲಿಕ್ಕಿಲ್ಲ.

ಸಹಿ **ಆರ್. ಆ. ಹಸ್.**
ಡಿಸ್ಟ್ರಿಕ್ಟ ಟ್ರಾನ್ಸ್‌ಪೋರ್ಟೇಶನ್ ಸುಪರಿಂಟೆಂಡೆಂಟ (ಟ್ರಾಫಿಕ್) ಹುಬ್ಬಳ್ಳಿ

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋ...**



ನ್ಯೂ ಓರಿಯಂಟಲ್ ಕಂ...

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ... ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು, ... ವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಕುರುಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ್ಸ್:— ಜಿ. ಕೆ. ಟೊಣಪಿ ಆ್ಯಂಡ ಕಂಪನಿ
ಕೊಪ್ಪೀಕರ ರೋಡ, ಹುಬ್ಬಳ್ಳಿ

ಈ ಪತ್ರಿಕೆಯನ್ನು ಕೇಂದ್ರಾಫ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम् ॥ मनु.

ನಿತ್ಯ ಪತ್ರಬೆಲೆ ೩ ಪೈ.

ಇನಸ್ಯೂರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯೂರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯೂರನ್ಸ
ಸ್ವದೇಶೀಯ ಪ್ರದೇಶ ದಲ್ಲಿಯೇ ಬೇಕಾದವರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:—ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಶನಿವಾರ ಆಶ್ವೀನ ಬಹುಳ [illegible] ಶಕೆ ೧೮೫೫ ತಾ॥ [illegible] [ಸಂಚಿಕೆ [illegible]



ಬ್ಯಾಡಗಿಯ ಪತ್ರ.

ಇಲ್ಲಿ ಸುಮಾರು ದಿನಗಳಿಂದ ಕಾಳೆಯು ಹಗಲು ರಾತ್ರಿ ಕಲ್ಲು ಸುರಿದಹಾಗೆ ಸುರಿದು ಬಿಡದೆ ಮಳೆಯಿಂದ ಸೀಕರಿಗಳು ಕೆತಲಿಕ್ಕೆ ಹತ್ತಿರುತ್ತವೆ. ಒಟ್ಟಿನ ಗೋಳ ಜನಸ್ಸು ಹೇಳಬಾರದು. ಊರಲ್ಲಿ ಪ್ಲೇಗು ವಗೈರೆ ಯಾವ ತರದ ರೋಗಗಳು ಹೇಳಲು ಇಲ್ಲದೆಯು ಚೆನ್ನಾಗಿದೆ.

ಇಲ್ಲಿಯ ಮುನಸಿಪಾಲಿಟಿ ಸಂಗಡಗಳ ಸಂಬಂಧಿ ರಂಜೀ ಕಾರ್ಯವು ರಾವ ಬಹದ್ದೂರ ದೇವಿಹೊಸೂರ ಶೆಟ್ಟರು ಹಾವೇರಿ ಮುನಸಿಪಾಲಟಿಯು ಪ್ರೆಸಿಡೆಂಟ, ಶ್ರೀಯುತ ಮುತಿವಾಳ ಪ್ಪನವರು ಹತ್ತಿ ಮತ್ತು ಬ್ಯಾಡಗಿಯ ಜೀವಾಜಿ ಎಸ್ಕರ್ಣಂಡ ಕುಲಕರ್ಣಿ ಈ ಮೂವರ ನೇತೃತ್ವದ ಕೆಲಸ ಒಳ್ಳೆ ಭಾವದಿಂದ ನಡೆದಿದ್ದು ಶೀಘ್ರವಲ್ಲಿಯೇ ರಾಜೀಯಾಗುವ ಲಕ್ಷಣವಿದೆ.

ಕರ್ನಾಟಕದ ಸುದ್ದಿಗಳು.

ಗದಗ— ತಾರೀಖಿನ ಆಕ್ಟೋಬರ ೧೯೩೩ ನೆಯ ದಿನ ಇಲ್ಲಿಯ ಕನ್ನಡಿಗರ ಕೂಟದ ಕಚೇರಿಯಲ್ಲಿ ಶ್ರೀ ನ ರಾಯ ಅಂಗಡಿ ಹುಯಿಲಗೋಳ ಇವರ ಅಧ್ಯಕ್ಷತೆಯಲ್ಲಿ ಪ್ರತಿಷ್ಠಿತ ಜನರ ಸಭೆ ಸೇರಿ ವಿಜಯ ನಗರ ಸ್ಮಾರಕೋತ್ಸವ ಸಂಘವು ಸ್ಥಾಪಿಸಲ್ಪಟ್ಟಿತು.

ಈವಾರ ಇಲ್ಲಿಯ ಶ್ರೀ ಕೊಟ್ರಪ್ಪನವರು ನಾರಾಯಣರಾವ ವೈದ್ಯ ಕುಂಬಿ ಈಶ್ವರಪ್ಪ ಮೊದಲಾದ ರಾಜ ಬಂದಿಗಳು ಬಿಡುಗಡೆ ಹೊಂದಿದರು

ಮೈಸೂರು:—ದಸರೆಯ ಪ್ರದರ್ಶನದಲ್ಲಿ ಭಾಗವಹಿಸಿದ್ದ ಪ್ರದರ್ಶಕರು ಶ್ರೀ. ಎಸ್ ಧನರಾಜರ ಅಧ್ಯಕ್ಷತೆಯಲ್ಲಿ ಸೇರಿ ದಸರೆಯ ಪ್ರದರ್ಶನದ ಕಾಲಕ್ಕೆ ಪೋಲೀಸನವರು ಅಸಭ್ಯ ರೀತಿಯಿಂದ ವರ್ತಿಸಿದ ಬಗ್ಗೆ ದುಃಖಪ್ರದರ್ಶಿಸಿ ಈ ಗೊತ್ತುವಳಿಯನ್ನು ಮಹಾರಾಜರಿಗೆ ತಿಳಿಸಿದರು.

ಪೋಸ್ಟಲ್ ಯುನಿಯನ್ನದ ಈ ಸಲದ ಅಧಿವೇಶನವು ಹುಬ್ಬಳ್ಳಿಯಲ್ಲಿ [illegible] ಕ್ಕೆ ಕೂಡುವದು.

ದಿ ಕಂಬಳಿಯವರು ಹುಬ್ಬಳ್ಳಿಗೆ ಬಂದಾಗ್ಗೆ ಗುಜರಾಥಿ ಶಾಲೆಗೂ ಭೆಟ್ಟಿಯನ್ನು ಕೊಟ್ಟರು ಹುಬ್ಬಳ್ಳಿಯಲ್ಲಿ ಗುಜ್ಜರು ಅವರನ್ನು ಅತ್ಯಂತ ವಿಜೃಂಭಣೆಯಿಂದ ಸ್ವಾಗತೀಕರಿಸಿದರು.

ಕಲಬುರಗಿ— ಇಲ್ಲಿಯ ಬ್ರಾಹ್ಮಣ ಬ್ರಾಹ್ಮಣೇತರಲ್ಲಿ "ನೃಸಿಂಹದೇವರನ್ನು ಅವಮಾನ ಮಾಡಿದರೆಂಬ" ಭಾವನೆಯಿಂದ ಮನಸ್ತಾಪ ಉಂಟಾಗಿ ಈ ಸಾರೆ ವೀರಶೈವರ ದಸರಾ ಮಹೋತ್ಸವವು ನಿಂತಿದ

ಮುಂಡಗೋಡ:— ಇಲ್ಲಿಯ "ಶ್ಯಾಕಭೋಗರ ನೌಕರನಾದ ಮಾರುತಿರಾಯನೆಂಬವನು ಗಣಪತಿ ಎಂಬ ಕರುಣನನ್ನು ಪುಸ್ತಕದಿಂದ ಕೊಲೆ ಮಾಡಿ ಸಿಕ್ಕಬಿದ್ದನು ಅತನ ವಿಚಾರಣೆಯಾಗಿ ಅವನಿಗೂ ಅವನ ಸಹಾಯಕರಾದ ಬೇರೆ ಇಬ್ಬರಿಗೂ ಆಜನ್ಮ ಕಾರಾಗ್ರಹವಾಸ ಶಿಕ್ಷೆಯಾಯಿತು

ಡಾ. ಕುಲಕರ್ಣೀಜ
ಲೆಬೊರೋಟರಿ ಮುಂಬೈ
ನಂಬರ ೧
ಬಾಟ್ಲಿ ಕಿ. ೧ ರೂ ೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು



ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸೆರಗು, ಬಿಳೇಸೆರಗು, ಕೆಂಪು ಸೆರಗು ತಿಂಗಳಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು, ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ ಬಾಣಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದೆ.

ಟಿ. ಕರೂರ ಅಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ.
೧೮-೬

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ
ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ
ಕುಟುಂಬ ಸಂರಕ್ಷಣ ನಿಧಿ.
ಎಲ್ಲರಿಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ
ಧಾರವಾಡ ತಾ॥ [illegible] } ಕೃಷ್ಣರಾವ ಅಂಕಲಗಿ ಮ್ಯಾನೇಜಿಂಗ ಡಾಯರೆಕ್ಟರ



ಕಿರ್ಲೋಸ್ಕರ
ಕಲ್ಯಾಣ ಶೆಂಗಾ ಯಂತ್ರ
—— ೩(೦)೩ ——
ಒಂದು ತಾಸಿನಲ್ಲಿ [illegible] ರಿಂದ [illegible] ಚೀಲಗಳ ವರೆಗೆ ಶೇಂಗಾಗಳನ್ನು ಒಡೆಯುವದು ಇದು [illegible]
ಚೀಲ ಶೆಂಗಾ ಒಡೆಯುವದು ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗೆ ಬರೆಯಿರಿ
ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ ಜಿ.(ಸಾತಾರಾ)

ಭವಾನಿ ಅಯರ್ನ ವರ್ಕ್ಸ, ಧಾರವಾಡ
ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮನೆಕೆಯ ಬಾಗಿಲು ತಯಾರ ಗುತ್ತವೆ
೩೦-೯-೩೩

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು
ದೊರೆಯುವ ಸ್ಥಳ
ಗದಗ ಶ್ರೀ ದತ್ತಾತ್ರೇಯ ಬುಕ್ ಡೆಪೋ
ಕಹಾಪುರ ಪೇಟ ಗದಗ
೧೮-೧೦ ಖಿ.

ಕನ್ನಡಿಗ.

ಧಾರವಾಡ— ಶನಿವಾರ ತಾರೀಖು ೧೪—೧೦—೧೯೩೩.

ಕರ್ನಾಟಕಕ್ಕೆ ಗವ್ಹರ್ನರರ ಸಾಹೇಬರ ಆಗಮನ.

ಮುಂಬೈ ಇಲಾಖೆಯ ಗವ್ಹರ್ನರರು ಮೊನ್ನೆ ಮೊನ್ನೆ ಬೆಳಗಾಂವಿಗೆ ಬಂದು ಹೋದರು ಮುಂದಿನ ತಿಂಗಳಲ್ಲಿ ಧಾರವಾಡ, ಗೇರಸೊಪ್ಪಾಗಳಿಗೆ ಆಗಮಿಸತಕ್ಕವರಿದ್ದಾರೆ ಇಲಾಖೆಯಲ್ಲಿಯ ಶ್ರೇಷ್ಠ ಅಧಿಕಾರಿಗಳು, ಪ್ರಜೆಗಳನ್ನು ಸಂದರ್ಶಿಸಲು ಉಪದೇಶಿಸು ಹೊಸದಲ್ಲ ಪರಂಪರಾಗತವಾದುದು. ಅದರ ಪ್ರಜೆಗಳಿಗೂ ಅಧಿಕಾರಿಗಳಿಗೂ ಸಂಬಂಧವುಂಟಾಗದೆ, ಪ್ರಜೆಗಳ ಕಷ್ಟ ನಷ್ಟಗಳನ್ನು ತಿಳಿದುಕೊಳ್ಳದೇ, ಪ್ರಭುಗಳು ಸಂಚಾರಮಾಡಿ ಹೋದರೆ ಅದರಿಂದಾಗುವ ಲಾಭವೇನು? ಗವ್ಹರ್ನರ ಸಾಹೇಬರ ಸುತ್ತು ಮುತ್ತು ಸಂಚಾರದಲ್ಲಿ ಕೇವಲ ಅಧಿಕಾರಿಗಳೇ ಇರುತ್ತಾರೆ. ಊರಲ್ಲಿ ಆಗುವ ದರ್ಬಾರುಗಳಿಗೆ ಅಧಿಕಾರಿಗಳಿಗೆ ಪ್ರೀಯವಿದ್ದ ಜನರೂ, ಕೇವಲ ಸರಕಾರದ ದೃಷ್ಟಿಯನ್ನೇ ಮಂಡಿಸುವ ಜನರೂ ಆಮಂತ್ರಿತವಾಗುವ ಕಾರಣ, ರಯ್ಯತರ ಕುಂದು ಕೊರತೆಗಳ ನಿಜಸ್ಥಿತಿಯು ಸಾಹೇಬರಿಗೆ ತಿಳಿಯದೇ ಹೋಗುತ್ತದೆಂಬ ನ್ನ ಪ್ರಜಾಪಕ್ಷದ ಜನರು ಮೇಲಿಂದ ಮೇಲೆ ಸರಕಾರಕ್ಕೆ ನಿವೇದಿಸುತ್ತ ಬಂದಿದ್ದರೂ ಕೂಡ, ಅತ್ತ ಸರಕಾರದ ದೃಷ್ಟಿ ಈವರೆಗೂ ಹೋಗದಿದ್ದುದು ನಮ್ಮ ದುರ್ದೈವವೇ ಸರಿ

ಗವ್ಹರ್ನರರು ಮೊನ್ನೆ ಬೆಳಗಾಂವಿಗೆ ಬಂದಾಗ್ಯೆ ನೌಕರರು ಗುಂಪು ಗುಂಪಾಗಿ ಬೆಳಗಾಂವಿಗೆ ಹೋದರು. ಇವರೇನು ತಮ್ಮ ಜೇಬಿನಲ್ಲಿಯ ಹಣ ವೆಚ್ಚಮಾಡಿ ಹೋಗುವದಿಲ್ಲ ಪ್ರವಾಸ ವೆಚ್ಚವೇ ಸಾವಿರಾರು ರೂಪಾಯಿಗಳ ವರೆಗೆ ಆಗಬೇಕು. ರೈತರ ಹಣ ರೈತರ ಉಪಯೋಗಕ್ಕಾಗಿ ಆಗದೇ ದೊಡ್ಡ ನೌಕರರ ಕಿಸೆ ತುಂಬುವದಕ್ಕಾಗಲಿ, ಇ ದವೇ ಅನ್ಯಕಾರ್ಯಕ್ಕಾಗಿ ವ್ಯಯವಾಗಬಾರದೆಂಬುದೇ ನಮ್ಮ ಅಭಿಪ್ರಾಯ ಸರಕಾರದವರು ಎಲ್ಲ ಕಡೆಗೂ "ರಿಟ್ರೆಂಚಮೆಂಟ" ಎಂಬದಾಗಿ ಉಳಿತಾಯ ಮಾಡತೊಡಗಿದ ಈಗಿನ ಮುಗ್ಗಿನ ಮುಗ್ಗಟ್ಟಿನ ಕಾಲದಲ್ಲಿ ದರ್ಬಾರುಗಳು ಅತ್ಯವಶ್ಯವೋ ಹೇಗೆಂಬುದನ್ನು ಯೋಚಿಸಬೇಕು. ಇನ್ನು ಗವ್ಹರ್ನರರ ಆಗಮನದಿಂದ ರೈತರ ಹಣವೆಚ್ಚವಾದರೂ ಆಗಲಿ ಆ ವೆಚ್ಚಕ್ಕೆ ತಕ್ಕಂತೆ ರೈತರಿಗೆ ಲಾಭವಾದರೆ ಸಂತೋಷವೇ. ಕರ್ನಾಟಕದಲ್ಲಿ ಗವ್ಹರ್ನರರು ಸಂಚರಿಸುವರೆಂದ ಬಳಿಕ, ಕರ್ನಾಟಕ ಪ್ರಾಂತದ ಇಂದಿನ ಕೊರತೆಗಳೇನೆಂಬುದನ್ನು ಅವರು ತಿಳಿದುಕೊಳ್ಳಬೇಡವೇ? ಬಹುಜನ ಸಮಾಜದ ಕೊರತೆಗಳ ಕಲ್ಪನೆಯು ಕೂಡ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಬರುವದಿಲ್ಲ. ಈಗ ಕರ್ನಾಟಕಕ್ಕೆ ಬೇಕಾದುದು ಏಕೀಕರಣ ನಮ್ಮ ಪ್ರಾಂತವು ಉರ್ಜಿತ ಸ್ಥಿತಿಗೆ ಬರಬೇಕಾದರೆ ಏಕೀಕರಣದ ವಿನಃ ಅದೆಂದಿಗೂ ಆಗದೆಂಬುದನ್ನು ಪ್ರಜಾಪಕ್ಷದ ಜನರೆಲ್ಲ ತಮ್ಮ ಅನುಭವದಿಂದ ಕಂಡುಹಿಡಿದಿದ್ದಾರೆ. ಆದರೆ ಒಡೆದು ಹಂಚಿಹೋದ ಕರ್ನಾಟಕ ದೇಶವನ್ನು ಪುನಃ ಒಂದುಗೂಡಿಸುವದು ಅತ್ಯವಶ್ಯವೆಂಬುದರ ಅರಿವು ಕೂಡ ನಮ್ಮ ಅಧಿಕಾರಿಗಳಿಗಿಲ್ಲ ಎಂದಮೇಲೆ ಕೇವಲ ಅಧಿಕಾರಿಗಳ ಮುಖಾಂತರ ಪ್ರಜೆಗಳ ಕಷ್ಟಗಳನ್ನು ತಿಳಿದುಕೊಳ್ಳುವ ಕ್ರಮವನ್ನು ಗವ್ಹರ್ನರರು ಇಟ್ಟರೆ, ಅದರಿಂದ ಪ್ರಜೆಗಳಿಗೆ ಲಾಭವಾಗುವದು ಹೇಗೆ?

ಕರ್ನಾಟಕಕ್ಕೆ ವಿಶ್ವವಿದ್ಯಾಲಯವು ಬೇಕು, ಬಂದರ ಬೇಕು, ಹಾಯಕೋರ್ಟ ಬೇಕು ಇವೆಲ್ಲವನ್ನು ಒಂದೊಂದಾಗಿ ಸಾಧಿಸಿಕೊಳ್ಳುವದು ಸುಲಭವೆಂದು ಕೆಲವರನ್ನಬಹುದು. ಆದರೆ ಪ್ರತ್ಯೇಕ ಪ್ರಾಂತವು ನಮಗೆ ದೊರೆಯದ ವಿನಃ ಇವೆಲ್ಲವುಗಳನ್ನು ನಾವು ಸಾಧಿಸಿಕೊಳ್ಳುವದು ಸಾಧ್ಯವಾಗಲಾರದು. ಇದನ್ನು ಚನ್ನಾಗಿ ಅರಿತ ಕನ್ನಡಿಗರೇನು ಈವರೆಗೆ ಸುಮ್ಮನೆ ಕುಳಿತಿಲ್ಲ ೧೯೧೭ರಿಂದ ಒಂದೇ ಸವನೆ ಏಕೀಕರಣದ ಚಳವಳಿಯು ಸಾಗಿದೆ. ಪ್ರಾಂತಿಕ ಪರಿಷತ್ತುಗಳು ಜಾತಿಯ ಪರಿಷತ್ತುಗಳು, ಮುನಸಿಪಾಲಿಟಿ ಲೋಕಲ್ ಬೋರ್ಡುಗಳು, ಕಾಯದೆಮಂಡಲಗಳು, ನಮ್ಮ ನಾಡಿನಲ್ಲಿಯ ಪ್ರಮುಖ ಮುಂದಾಳುಗಳು ಈ ಎಲ್ಲರೂ ಬಹುವಿಧದಿಂದ ಪುನಃ ಪುನಃ ಏಕೀಕರಣದ ವಿಷಯವನ್ನು ಎತ್ತಿ ಹಿಡಿದದ್ದುಂಟು ಗವ್ಹರ್ನರರು ಹಿಂದಕ್ಕೆ ಕರ್ನಾಟಕವನ್ನು ಸಂಚರಿಸಿದ್ದಾಗ್ಗೆ, ಅವರಿಗೆ ಅರ್ಪಿಸಿದ ಮಾನಪತ್ರಗಳಲ್ಲಿಯೂ ಈ ವಿಷಯವು ಕಾಣಿಸಲ್ಪಟ್ಟಿದೆ. ನಮ್ಮ ಪ್ರಾಂತವು ಪ್ರತ್ಯೇಕವಾದರೆ ಸಿಂಧದಂತೆ ಹಾನಿಯಾಗದೆಂಬದನ್ನೂ ತನ್ನ ಆರ್ಥಿಕ ಭಾರವನ್ನು ತಾನೇ ಹೊತ್ತುಕೊಂಡು ಹೋಗುವದೆಂಬದನ್ನೂ ಪುಸ್ತಕಗಳು ಪತ್ರಕಗಳ ಮುಖಾಂತರ ಸಿದ್ಧಮಾಡಿದೆ ಇವೆಲ್ಲ ಪ್ರಕಟವಾದಾಗ್ಯೂ ಗವ್ಹರ್ನರ ಸಾಹೇಬರಾಗಲಿ ಅವರ ಖಾತೆಯವರಾಗಲಿ ಅವುಗಳಿಗೆ ಸಮಂಜಸ ಉತ್ತರ ಕೊಟ್ಟಿಲ್ಲ ಅಥವಾ ಕರ್ನಾಟಕವು ಪ್ರಕಟಿಸಿದ ಈ ಉತ್ಪನ್ನದ ಅಂಕಿಗಳು ಸುಳ್ಳಾಗಿವೆಂಬುದನ್ನೂ ಧೈರ್ಯದಿಂದ ಹೇಳಿಲ್ಲ ಕರ್ನಾಟಕದ ಪ್ರಜೆಗಳಿಗೆ ಜೀವಾಳವಾಗಿರುವ ಈ ಪ್ರಶ್ನೆಯನ್ನು ಸರಕಾರವು ವಿಚಾರಿಸಲಿಕ್ಕೆ ಒಲ್ಲದು ಯಾವದೋ ಒಂದು ಮೂಲೆಯಲ್ಲಿ ಯಾವನೋ ಒಬ್ಬನು ಒಂದು ಭಾಷಣ ಮಾಡಿದರೆ, ರಾಜದ್ರೋಹವಾಯಿತೆಂಬುದು ಸರಕಾರದ ಲಕ್ಷಕ್ಕೆ ತಕ್ಷಣವೇ ಬರುತ್ತದೆ ಆದರೆ, ೧೫ ವರ್ಷಗಳಿಂದಲೂ ಧಾರಾಡಂಗುವಾಗಿ ಸರಕಾರದ ಎಲ್ಲ ಖಾತೆಯವರಿಗೂ ಕೇಳಿಸುವಂತೆ ಕಾಣಿಸುವಂತೆ, ವ್ಯವಸ್ಥಿತವಾಗಿ ನಡೆಸಿದ ಸಂಗತಿಯು ಮಾತ್ರ ಸರಕಾರಕ್ಕೆ ತಿಳಿಯಬಾರದೇಕೆ?

ಯಾವದೊಂದು ವಿಷಯವು ಸರಕಾರದ ಮುಂದೆ ಬಂದಕೂಡಲೇ, ಜನರ ಬೆಂಬಲವಿಲ್ಲೆಂದು ಅದನ್ನು ಸರಕಾರವು ಹೊಡೆದು ಹಾಕುವದುಂಟು. ಆದರೆ ಕನ್ನಡಿಗರ ಏಕೀಕರಣ ಪ್ರಶ್ನೆಗೆ ಕನ್ನಡ ನಾಡಿನಲ್ಲಿದ್ದ ಎಲ್ಲ ಜಾತಿಯ, ಎಲ್ಲ ಪಂಗಡಗಳ ಬೆಂಬಲವಿದೆಂಬುದು, ಆಯಾ ಜಾತಿಯ ಪರಿಷತ್ತುಗಳಲ್ಲಿಯೂ ಪಂಗಡಗಳ ಪ್ರಕಟನೆಗಳಲ್ಲಿಯೂ ಸ್ಪಷ್ಟಪಡಿಸಲ್ಪಟ್ಟಿದೆ ಮುನಸಿಪಾಲಿಟಿ ಲೋಕಲ್ ಬೋರ್ಡುಗಳಲ್ಲಿಯೂ ಏಕೀಕರಣದ ಠರಾವುಗಳಾಗಿವೆ ಕೊಡಗಿನ ಸಣ್ಣ ಭಾಗದ ಕಾಯದೆ ಮಂಡಲದಿಂದ ದಿಲ್ಲಿಯ ಕೌನ್ಸಿಲ್ ಆಫ್ ಸ್ಟೇಟದವರೆಗೆ ಈ ವಿಷಯ ಚರ್ಚೆಯಾಗಿದೆ ಎಂದಮೇಲೆ ಕನ್ನಡಿಗರ ಬೆಂಬಲ ಈ ಪ್ರಶ್ನೆಗಿಲ್ಲೆಂಬ ಮಾತಿನಲ್ಲಿ ಏನೂ ಹುರುಳಿಲ್ಲವೆಂಬುದು ಸ್ಪಷ್ಟವಿದೆ ಸರಕಾರದ ಎರಡನೇ ಆತಂಕವೆಂದರೆ ಉತ್ಪನ್ನದ ವಿಷಯ ಸ್ವತಂತ್ರ ಪ್ರಾಂತ ನಿರ್ಮಾಣಕ್ಕೆ ಬೇಕಾಗುವಷ್ಟು ಉತ್ಪನ್ನವು ಆಗಲಾರದೆಂಬ ಬಗ್ಗೆ ಅವರಿಗೆ ಕೂಡ ಸಂದೇಹ ಈ ಸಂದೇಹವಲ್ಲಿ ಏನೂ ತಥ್ಯಾಂಶವಿಲ್ಲೆಂಬುದನ್ನು ಕರ್ನಾಟಕ ಏಕೀಕರಣ ಬಗ್ಗೆ ಪ್ರಕಟವಾದ ಪುಸ್ತಕಗಳಲ್ಲಿ ಸಿದ್ಧಪಡಿಸಲ್ಪಟ್ಟಿದೆ ಎಂದ ಮೇಲೆ ಇಲಾಖಾಧಿಪತಿಗಳು ಕರ್ನಾಟಕದ ಕೇಂದ್ರವಾದ ಧಾರವಾಡಕ್ಕೆ ಬಂದು, ಕರ್ನಾಟಕದ ಜೀವಾಳವಾದ ಏಕೀಕರಣ ಪ್ರಶ್ನೆಯನ್ನು ಬಿಡಿಸದಿದ್ದರೂ, ಈ ಬಗ್ಗೆ ಇಲ್ಲಿಯ ಜನರ ಸಂಗಡ ವಿಚಾರವಿನಿಮಯವಾಯಿತು. ಎಲ್ಲ ಸಂಗತಿಗಳನ್ನು ವಿಶದವಾಗಿ ತಿಳಿದುಕೊಂಡು ಹೋಗದಿದ್ದರೆ, ಕರ್ನಾಟಕಕ್ಕೆ ಬಂದು ಹೋದ ಪ್ರಯೋಜನವಾದರೂ ಏನು?

ಅಖಿಲ ಭಾರತ ಶುದ್ಧಿ ಹಾಗೂ ಮಹಿಳಾ ಪರಿಷತ್ತುಗಳು. ಜಪಾನದ ಪ್ರತಿನಿಧಿಗಳು.

ಅಜಮೀರ ತಾ ೧೩— ಅಜಮೀರದಲ್ಲಿ ನಡೆದಿರುವ ಶುದ್ಧಿ ಪರಿಷತ್ತಿಗೆ ಪಂಜಾಬದ ಮಹಾತ್ಮಾ ಹಂಸರಾಜರು ಅಧ್ಯಕ್ಷರೆಂದು ಆರಿಸಲ್ಪಟ್ಟದ್ದು ಅಖಿಲ ಭಾರತೀಯ ಮಹಿಳಾ ಪರಿಷತ್ತಿಗೆ ಶ್ರೀ ಶನ್ನೋದೇವಿ ಆರಿಸಲ್ಪಟ್ಟದ್ದು ಈ ದಿನ ಅವರಿಬ್ಬರೂ ಪರಿಷತ್ತುಗಳಿಗಾಗಿ ಇಲ್ಲಿಗೆ ಬಂದು ತಲ್ಪಿದರು. ನಾಳೆ ಜಪಾನ ಮತ್ತು ಕಲಕತ್ತೆಯ ಮಹಾಬೋಧಿ ಸಂಘಗಳ ಮುಖ್ಯ ಆಚಾರ್ಯರಾದ ಪೂಜೆ ಮತ್ತು ಜಕಾಸು ಇವರನ್ನು ಜನರಲ್ ಸೆಕ್ರೆಟರಿಗಳಾದ ಬ್ರಹ್ಮಚಾರಿ ದೇವಪ್ರಿಯ ಒಲಿಸಿಂಹರು ಬರಮಾಡಿಕೊಳ್ಳುವರು ಇವರು ಈ ಸಂಪತ್ತಿಗೆ ಪ್ರತಿನಿಧಿಗಳಾಗಿ ಬರುವರಲ್ಲದೆ ಇನ್ನೂ ಆರು ಮಂದಿ ಸದಸ್ಯರು ಬರುವವರಿದ್ದಾರೆ ಅಖಿಲ ಭಾರತೀಯ ನೇಪಾಳೀ ಸಂಘದವರು ಚೀನದಿಂದ ಬಂದ ಜಯಾದ್ರಿ ಎಂಬ ಭಿಕ್ಷುವನ್ನೂ ತಿಬೇಟದ ಒಬ್ಬ ಭಿಕ್ಷುವನ್ನೂ ನಾಳೆ ಸತ್ಕರಿಸುವವರಿದ್ದಾರೆ

ರಾಜಾ ಲಖಮಗೌಡಾ ಸರದೇಸಾಯಿ ಹಾಯಸ್ಕೂಲಿನ ೪ ನೆಯ ವಾರ್ಷಿಕ ಸಮ್ಮೇಲನವು

ಮೊ॥ ಕ ಎ ೯ ವಕೀಲ ದಕ್ಷಿಣಭಾಗದ ಎ. ಇನಸ್ಪೆಕ್ಟರ ಇವರ ಅಧ್ಯಕ್ಷತೆಯಲ್ಲಿ ತಾರೀಖು ೬-೭ ಇವೆರಡು ದಿವಸ ನಡೆಯಿತು ಸಮ್ಮೇಲನದಲ್ಲಿ ತರ್ಯತ್ತುಗಳು ಹಾಗೂ ಗಾಯನವೂ ಇದ್ದದ್ದಲ್ಲದೆ ಲಾವಣಿ ಪದಗಳೂ ಆದವು ಕನ್ನಡ ಸಂಸ್ಕೃತ, ಇಂಗ್ಲೀಷ ನಾಟಕಗಳೂ ಬೇರೆ ಬೇರೆ ತರಹದ ಫಾರ್ಸುಗಳೂ ಆದವು ನಾಟಕಗಳಲ್ಲಿಯೂ ಆಟ ಪಾಟಗಳಲ್ಲಿಯೂ ಗಾಯನವಿನೋದದಲ್ಲಿಯೂ ಹೊಸ ಹುರುಪು ಕಂಗೊಳಿಸಿತು. ಗುರುಗಳೂ ಶಿಷ್ಯರೂ ಭೇದಭಾವವನ್ನು ಮರೆತು ಆನಂದ ಸಾಗರದಲ್ಲಿ ಮುಳುಗಿದ್ದರು ಒಟ್ಟಿನ ಮೇಲೆ ಈ ಶಾಲೆಯ ಈವರ್ಷದ ಸಮ್ಮೇಲನವು ಒಳ್ಳೇ ಯಶಸ್ವಿಯಾಗಿ ಪರಿಣಮಿಸಿತು.

ಓರ್ವ ಪ್ರೇಕ್ಷಕ

ಸುದ್ದಿಗಳು

—ಪಂಡಿತ ಹೃದಯನಾಥ ಕುಂಝರು ಅವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ. ಸರಕಾರವು ಪರಿಣತ ಚಳವಳಿಗೆ ಅನುಕೂಲವಿಲ್ಲ. ಹೊರಗಿನಿಂದ ಸಹಾನುಭೂತಿಯನ್ನು ತೋರಿಸುತ್ತಾರೆ ಆದರೆ ಮನಸಿನೊಳಗೆ ಅದರ ವಿರುದ್ಧವಾಗಿದ್ದಾರೆ

—ಮೀರಜೆಯ ಹತ್ತರ ಒಂದು ಹಳ್ಳಿಯೊಳಗೆ ಒಂದು ಎಮ್ಮೆಗೆ ಕೋಣ ಹುಟ್ಟಿತು ಅದಕ್ಕೆ ಎರಡು ಮೋರೆಗಳು, ಏಳು ಕಾಲುಗಳು ಎರಡು ಬಾಲಗಳು ಇಂತೂ ತಿಕಿಟು. ಹೆಚ್ಚಿಹಣ ಗಳಸಲಿಕ್ಕೆ ಒಂದು ಮಾರ್ಗವಾಯಿತು

ಇಹವೃತ್ತ

ಧಾರವಾಡ ಹುಬ್ಬಳ್ಳಿಗಳ ನಡುವೆ ರಿಟರ್ನ ಟಿಕೇಟುಗಳನ್ನು ಪ್ರಾರಂಭಿಸಬೇಕೆಂದು ರೇಲ್ವೆ ಕಂಪನಿಗೆ 'ಕನ್ನಡಿಗ' ನು ಸೂಚಿಸಿದ್ದನು ಆ ಸೂಚನೆಯ ವಿಚಾರವನ್ನು ತಾವು ಮಾಡುವರಿವೆನಾಗಿ ಕಂಪನಿಯವರು ಪತ್ರ ಮುಖಾಂತರ ತಿಳಿಸಿದ್ದಾರೆ

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೧೩ ಮಧ್ಯಾಹ್ನ ೧೧ ಗಂಟೆ

ಜವಾರಿ ಹತ್ತಿ,	೧೦೨ ೧೦೩	ಜೋಳ	೧೨.[illegible]
ಅಕ್ಷಂತ,	೧೦೩.೧೦೩	ಗೋದಿ	[illegible]
ವಿಲಾಯಿತಿ,	೯೫.೯೭	ಉದ್ದು	[illegible]
ಸಾಮ್ಯ ಕಾಟನ.	೧೦೮-೧೧೦	ಕಡ್ಲಿ	[illegible]
ಕುಸಬಿಯರಳೆ	೭೩-೭೮	ಕಡ್ಲಿ ಕಾ.	[illegible]
ದಪ್ಪಶೇಂಗಾ	೬೬.೬೭	ತೊಗರಿ	[illegible]
ಸಾಧಾರಣ ಅರಳೆ	೬೬.೬೭	ಹುರಳಿ	[illegible]
ಹೆಸರು ಜವಾರಿ	೯೧೨		

ಬೆಳ್ಳಿ ಬಂಗಾರ

ಬಂಗಾರ	೩೨॥=	ಬೆಳ್ಳಿ	[illegible]

ಮುಂಬಯಿ ಪೇಟೆಯ ಧಾರಣೆ

ಅಕ್ಟೋಬರ ತಾ॥ ೧೨ ಸಂಜೆ ೫ಕ್ಕೆ

ಬಂಗಾರ	೪೩-೧೦-೦	ಬೆಳ್ಳಿ	೫೬-೭-[illegible]

ಅರಳೆ ಮಧ್ಯಾಹ್ನ ೧೨ಕ್ಕೆ

ಹತ್ತಿ ಬಡೋಚ	ಏಪ್ರಿ	೧೮೮-೪	
ಶೇಂಗಾ	೨೫-೯-೬	ಫೆಬ್ರುವರಿ	

ದೇಶಿ ಗಿರಣಿಗಳ ಬಟ್ಟೆಗಳನ್ನು ಕೊಳ್ಳಬಾರದು.

ಅಲಹಾಬಾದ ತಾ॥ ೧೨ ಸಂಯುಕ್ತ ಪ್ರಾಂತದ ಕೆಲಸಗಾರರ ಪರಿಷತ್ತು ಇಂದು ಜರುಗಿತು ಮಹತ್ವದ ಠರಾವುಗಳೆಲ್ಲ ಪ್ರಸಿದ್ಧಿಸಲ್ಪಟ್ಟಿವೆ. ನಿನ್ನೆ ಪ್ರಕಟಿಸಲ್ಪಟ್ಟ ನಿರ್ಣಯಗಳಲ್ಲದೇ ರಾಜಕೀಯ ಸ್ವಾತಂತ್ರ್ಯದೊರೆತರೂ ಸಾಮಾಜಿಕ ಹಾಗೂ ಆರ್ಥಿಕ ಸ್ವಾತಂತ್ರ್ಯವು ದೊರೆಯದ ವಿನಃ ಜನ ಸಾಮಾನ್ಯರನ್ನು ಮುಳುಗಿಸಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವ ಸ್ವಾರ್ಥಿಗಳ ಹಾವಳಿ ನಿಲ್ಲದೆಂಬ ಮತ್ತು ದೇಶೀ ಗಿರಣಿಗಳ ಬಟ್ಟೆಗಳನ್ನು ಕೂಡ ಕೊಳ್ಳಕೂಡದೆಂಬ ಠರಾವುಗಳೂ ಸ್ವೀಕರಿಸಲ್ಪಟ್ಟಿವೆ.

(ಅ ಪ್ರೆ ತಂತಿ)

ಆರು ಜನರು ಸತ್ತರು.

ವಿಝಗಪಟ್ಟಮ್ ತಾ ೧೩- ಬಾಣ ಬಿರುಸುಗಳನ್ನು ಸಿದ್ಧಪಡಿಸುತ್ತಿರುವಾಗ್ಗೆ ನಿನ್ನೆ ರಾತ್ರಿ ಮದ್ದಿನಿಂದ ದಗ್ಗೆಂದು ಉರಿಯದ್ದು ಆರು ಜನರು ಕೂಡಲೇ ಸತ್ತರು ಎಂಟು ಜನರಿಗೆ ಗಾಯವಾಗಿವೆ. ಕಟ್ಟಡವು ಕುಸಿಬಿದ್ದಿದೆ

(ಅ ಪ್ರೆ ತಂತಿ)

ಕಾಂಗ್ರೆಸ್ಸಕ್ಕೆ ಮಾಲವೀಯರವರ ಬಿನ್ನಹ.

" ಕನ್ನಡಿಗ " ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

"ರಾಷ್ಟ್ರಕ್ಕೆ ದಾರಿ ತೋರಿಸುವ ಸಮಯ ಇದೇ !"

ಕಾಂಗ್ರೆಸದಲ್ಲಿ ಒಡಕೆಂದರೆ ಆತ್ಮಹತ್ಯೆ

ಪಂಡಿತ ಮದನಮೋಹನ ಮಾಲವೀಯರು ಕೆಳಗಿನಂತೆ ಪ್ರಕಟನೆಯನ್ನು ಹೊರಡಿಸಿದ್ದಾರೆ ಅದರ ಸಾರಾಂಶ— ಮಹಾತ್ಮಾ ಗಾಂಧಿಯವರಲ್ಲಿ ಶಪ್ಪನ್ನೆಣಿಸುವವರೊಡನೆ ನಾನು ಕೂಡಲಾರೆ ಕಾಂಗ್ರೆಸಗಾರರಲ್ಲಿ ಒಕ್ಕಟ್ಟು ಇದ್ದದ್ದನ್ನು ಕಂಡು ಯಾರಿಗೂ ಆಶ್ಚರ್ಯವೆನಿಸಲಿಕ್ಕಿಲ್ಲ. ಕಾಂಗ್ರೆಸವರು ಈ ಬಗ್ಗೆ ಚನ್ನಾಗಿ ವಿಚಾರಿಸಲಿಕ್ಕೆ ಬೇಕು ಆದರೆ ನಮ್ಮ ಜನರು ಸ್ವವಹಾರಜ್ಞಾನ ಮತ್ತು ಸ್ವದೇಶಾಭಿಮಾನವುಗಳ ಬಲದಿಂದ ಯಾವುದೊಂದು ದಂಡೆಯನ್ನು ಮುಟ್ಟಲಿಕ್ಕೆ ನಮ್ಮೊಡನೆ ಸಹಕರಿಸಲಿಕ್ಕೆ ಬೇಕು

ಒಕ್ಕಟ್ಟಿರಬೇಕು

ದೇಶದ ಹಿತದ ದೃಷ್ಟಿಯಿಂದ ಇಂದಿನಷ್ಟು ಕಾಂಗ್ರೆಸದಲ್ಲಿ ಒಕ್ಕಟ್ಟಿನ ಅವಶ್ಯಕತೆ ಎಂದೂ ಇರಲಿಲ್ಲ ಎಲ್ಲ ಪಂಗಡದವರ ಒಕ್ಕಟ್ಟು ಮಾಡುವದೇ ಇಂದು ನಾವೆಲ್ಲರೂ ಸಾಧಿಸುವ ಮುಖ್ಯಕಾರ್ಯ ಈಗ ರಾಷ್ಟ್ರದ ರಾಜ್ಯಭಾರವು ಜನತೆಗೆ ಮೀರಿದ ಭಾರವಾಗಿದೆ ಆ ಭಾರದ ಕೆಳಗೆ ಜನರು ನರಳುತ್ತಿದ್ದಾರೆ ಆಡಳಿತದ ಕ್ರಮವು ದಿನದಿನಕ್ಕೆ ಕೊಂಕಾಗುತ್ತಿದೆ ಜನರ ಇಚ್ಛೆಗಿಯನ್ನು ಮೂಲೆಗೊತ್ತಿ ರಾಜ್ಯವಾಳುವ ದು ಶಕ್ಯವಿಲ್ಲೆಂಬುದು ಸತ್ಯಾಗ್ರಹ ಸಂಗರದಿಂದ ಸಿದ್ಧವಾಗಿದೆ. ನಮ್ಮ ಜನರ ಮುಖದ ಮೇಲೆ ತುಳಿಯಲು ನಮ್ಮ ಮುಂದೆ ಬಳಿಯ ಕಾಗದವನ್ನು ಬ್ರಿಟಿಶರು ಎಸೆಯುವರೆಂದಿದ್ದಾರೆ ಇದೀಗ ಸ್ವಮ್ಯವೇ ಇಂದು ಮೀರಿದ ಗಂಡಾಂತರದೊಳಗಿಂದ ಸಾಗುತ್ತಿದೆ ೩೫ ಕೋಟಿ ಜನರ ಹಣೇಬರಹವು ನಾಲ್ಕು ಜನ ಸಂಸ್ಥಾನಿಕರ ಮುಂದೆ ಒತ್ತೆಯಾಗಿದೆ ನಮ್ಮ ಜನರಲ್ಲಿಯ ಒಡಕು ಇಂಗ್ಲಂಡದಲ್ಲಿಯ ಮತ್ತು ಹಿಂದುಸ್ಥಾನದಲ್ಲಿ ಯ ಆಳಿಕೆಯ ಧೋರಣೆಯೇ ಕಾರಣವೆಂಬುದು ಸ್ಪಷ್ಟವಿದೆ

ಸಂಘಟಿತ ಕಾರ್ಯಕ್ರಮ

ಹೀಗೆ ನಮ್ಮ ಪರಿಸ್ಥಿತಿಯು ಬಹು ವಿಲಕ್ಷಣವಾಗಿದೆ, ನಮ್ಮ ಕೋಟಿಗಟ್ಲೆ ಬಂಧುಗಳ ಹಿತದ ದೃಷ್ಟಿಯಿಂದ ನಮ್ಮಲ್ಲಿಯ ಅತ್ಯಂತ ಬುದ್ಧಿವಂತರಾದವರೆಲ್ಲರೂ ಒಟ್ಟಾಗಿ ಸೇರಿ ದೇಶದ ರಾಷ್ಟ್ರೀಯ ಧೋರಣೆಯನ್ನು ನಿರ್ಧರಿಸುವ ದು ಅವಶ್ಯವಿದೆ ಆದ್ದರಿಂದ ನಾವಿನ್ನು ಬೇಗ ನೇ ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಸಭೆಯನ್ನು ಕೂಡಿಸುವದು ಅತ್ಯಂತ ಅವಶ್ಯವಿದೆ

ಎಂ. ಸಿ. ಸಿ. ಕ್ರಿಕೆಟ ಟೀಮಿನ ನಾಯಕರ ಮುಲಾಖತ

ಮುಂಬಯಿ ತಾ|| ೧೨— ಇಂಗ್ಲಂಡದಿಂದ ಮುಲ್ತಾನ ಹಡಗದಿಂದ ಬಂದ ಎಂ. ಸಿ. ಸಿ. ಕ್ರಿಕೆಟ ಟೀಮಿನ ನಾಯಕರಾದ ' ಜಾರ್ಡಿನ ' ರವರು ತಮ್ಮ ಮುಲಾಖತಿಯಲ್ಲಿ ರೂಟರ ಪ್ರತಿನಿಧಿ ಅಸೋಸಿಯೇಟೆಡ ಪ್ರೆಸ್ಸಿನ ಪ್ರತಿನಿಧಿಗಳಿಗೆ ಹೇಳಿದ್ದೇನಂದರೆ—

ಹಿಂದುಸ್ಥಾನದವರ ಸ್ವಾಗತವನ್ನು ನಾವು ಆದರಪೂರ್ವಕ ಸ್ವೀಕರಿಸುತ್ತೇವೆ. ಹಿಂದುಸ್ಥಾನದ ಆಟಗಾರರು ಹೋದವರ್ಷ ಇಂಗ್ಲಂಡಿಗೆ ಬಂದು ಅಲ್ಲಿ ಬಿತ್ತಿದ ಮಿತ್ರತ್ವದ ಬೀಜವನ್ನು ಇಲ್ಲಿ ಸ್ಥಿರಗೊಳಿಸಲು ಪ್ರಯತ್ನಿಸುವೆವು ಹಿಂದುಸ್ಥಾನದವರು ನಮ್ಮಲ್ಲಿ ಬಂದಾಗ್ಗೆ ಅವರು ತಮ್ಮ ಆಟದ ಉತ್ಕೃಷ್ಟತೆಯಿಂದ ನಮ್ಮನ್ನು ಆನಂದಗೊಳಿಸಿದರು. ಅವರ ಆಟದ ನೈಪುಣ್ಯವನ್ನು ನಾವು ಚನ್ನಾಗಿ ಕಂಡೆವು ಆ ನೈಪುಣ್ಯವು ಅತ್ಯಂತ ಪ್ರಬಲವಾಗಿರುವದೆಂದು ನಮಗೆ ಅನಿಸುವುದು. ನಾವು ಬಂದವರೆಲ್ಲರು ತರುಣರಾಗಿರುವೆವು. ಹೆಸರಾದ ಕೆಲವು ಆಟಗಾರರು ನಮ್ಮೊಡನೆ ಬಂದಿಲ್ಲವಾದರೂ ಹೆಸರನ್ನು ಪಡೆಯಲು ಯೋಗ್ಯರಾದ ತರುಣರು ನಮ್ಮಲ್ಲಿರುವರೆಂದು ಹೇಳದಿರಲಾರೆನು ನಮ್ಮ ಹಿಂದುಸ್ಥಾನದವರ ಪ್ರೇಮವು ವೃದ್ಧಿಯಾಗಬೇಕೆಂದು ನಮ್ಮ ಆಶೆ. [ಅ ಪ್ರೆ ತಂತಿ]

ವ್ಹಾಯಿಸರಾಯರು ಮಿ|| ಜಾರ್ಡಿನ ಇವರಿಗೆ ಕೆಳಗಿನಂತೆ ತಂತಿಯಿಂದ ಸ್ವಾಗತವನ್ನು ಮಾಡಿರುವರು. " ನಿಮ್ಮನ್ನು ನಾನು ಮುಂಬಯಿಗೆ ಆನಂದದಿಂದ ಸ್ವಾಗತಿಸುವೆನು ಮತ್ತು ನಿಮ್ಮ ಪ್ರವಾಸವು ಸುಖವಾಗಲೆಂದು ಆಶಿಸುವೆನು. ನಾನೂ ಒಬ್ಬ ಕ್ರಿಕೆಟ ಆಟಗಾರನಾಗಿದ್ದೆನು ನೀವು ದಿಲ್ಲಿಗೆ ಬಂದ ಬಳಿಕ ನನ್ನ ಆಟಗಾರರೊಡನೆ ನೀವು ಆಡುವದನ್ನು ನೋಡಿ ಆನಂದಪಡಬೇಕೆಂದು ಇಚ್ಛಿಸುತ್ತೇನೆ [ಅ ಪ್ರೆ ತಂತಿ]

ಮಿ|| ಜಾರ್ಡನರವರಿಗೆ ಬಂದ ಸ್ವಾಗತದ ತಂತಿಗಳಲ್ಲಿ ಪೋರಬಂದರ, ಪತಿಯಾಳ, ಜಾಮನಗರ, ಪಟೌಡಿ, ವೆಸ್ಟರ್ನ ಇಂಡಿಯಾ ಕ್ರಿಕೆಟ ಅಸೋಶಿಯೇಶನ ಮತ್ತು ಬೇರೆ ಕ್ರಿಕೆಟ ಮಂಡಲದವರ ತಂತಿಗಳಿರುವವು [ಅ ಪ್ರೆ ತಂತಿ]

ಮುಲ್ತಾನ ಹಡಗವು ಬಂದಾಕ್ಷಣ ಬಂದೊಡನೆ ಪ್ರೇಕ್ಷಕರು ಮಿತ್ರರು ಜಾರ್ಡಿನ ಇವರನ್ನು ಗುರುತಿಸಿದರು ಮೊದಲು ಅವರನ್ನು ಬೋಟಿನಲ್ಲಿ ಹೋಗಿ ಕಂಡವರೆಂದರೆ ಪ್ರಸಿದ್ಧ ಖಾತೆಯ ಅಧಿಕಾರಿಗಳಾದ ಜೆಸಿಂಗ್ಸರ ಅವರು ಮುಂಬಯಿ ಗವರ್ನರ ಸಂದೇಶವನ್ನು ಮುಟ್ಟಿಸಿದರು. ಜಾರ್ಡಿನ್‌ರು ಆ ಸಂದೇಶವನ್ನು ಆನಂದದಿಂದ ಓದಿಕೊಂಡರು. ಆಮೇಲೆ ಪತ್ರಿಕಾ ಪ್ರತಿನಿಧಿಗಳು ಅವರನ್ನು ಕಂಡರು

(ಅ. ಪ್ರೆ. ತಂತಿ)

ಅನ್ನತ್ಯಾಗವು ಬಂದಾಯಿತು.

ಲಾಹೋರ ತಾ|| ೧೨ ಲಾಹೋರ ಮಧ್ಯವರ್ತಿ ತುರುಂಗದಲ್ಲಿ ಅನ್ನತ್ಯಾಗವನ್ನು ಮಾಡಿದ ಸೆರೆಯಾಳುಗಳೆಲ್ಲ ನಿನ್ನೆ ಸಾಯಂಕಾಲ ಊಟ ಮಾಡಿದರು.

(ಅ ಪ್ರೆ ತಂತಿ)

ಖಾನ ಬಹಾದ್ದೂರರು ದಾವೆ ಮಾಡಿದರು.

ಅಹಮದಾಬಾದ ತಾ|| ೧೨— ಖಾನ ಬಹಾದ್ದೂರ ಅಂತಿಯಾ ಎಂಬ ಹೆಸರಿನ ಒಬ್ಬ ಪೋಲಿಸ ಅಧಿಕಾರಿಗಳು ಗಿರಣಿಯ ಏಜಂಟರಾಗಿದ್ದ ಶೇಟ ಅಂಬಾಲಾಲ ಸಾರಾಭಾಯಿಯವರ ಮೇಲೂ, ಗುಜರಾಥ ಕ್ಲಬ್ಬಿನ ಬೇರೆ ಸಭಾಸದರ ಮೇಲೂ, ಅವರು ತಮ್ಮ ಹೆಸರನ್ನು ಕ್ಲಬ್ಬಿನ ಯಾದಿಯೊಳಗಿಂದ ತೆಗೆದು ಹಾಕಿದರೆಂಬ ಕಾರಣದಿಂದ ಒಂದು ದಿವಾಣಿ ದಾವೆ ಮಾಡಿದ್ದಾರೆ. ಅದರ ಸುನಾವಣಿಗೆ ಇವೊತ್ತು ಆರಂಭವಾಯಿತು. ಖಾನ ಬಹಾದ್ದೂರ ಅವರು ತಮ್ಮ ಸಾಕ್ಷಿಯಲ್ಲಿ ಹೀಗೆ ಹೇಳಿದರು. ೧೯೩೦ ನೆಯ ಇಸವಿಯಲ್ಲಿ ಮೇ ತಿಂಗಳದೊಳಗೆ ಶ್ರೀಮತಿ ಸರೋಜಿನಿ ನಾಯಡು ಮೊದಲಾದ ಕಾಂಗ್ರೆಸ ಮುಖಂಡರ ನೇತೃತ್ವದಲ್ಲಿ ಕಾಂಗ್ರೆಸಿನ ಸ್ವಯಂ ಸೇವಕರು ಧಾರಸಾನಾ ಎಂಬಲ್ಲಿ ಸರಕಾರಿ ಉಪ್ಪಿನ ಆಗರಗಳ ಮೇಲೆ ದಾಳಿ ಮಾಡಿದರು ಅದೇ ಕಾಲಕ್ಕೆ ಅಲ್ಲಿ ನನ್ನ ನೇಮಣೂಕು ಆಗಿತ್ತು ಸ್ವಯಂ ಸೇವಕರನ್ನು ತಿರುಗಿ ಕಳಿಸುವುದೂ ಮುಖಂಡರನ್ನು ಹಿಡಿದು ಅವರ ಮೇಲೆ ಖಟ್ಲೆ ಹಾಕುವುದೂ ಇದೇ ನನ್ನ ಕೆಲಸವಾಗಿತ್ತು. ಗಾಂಧಿಜಿಯವರನ್ನು ನಾನೇ ಸೆರೆ ಹಿಡಿದೆನು ಗುಜರಾಥ ಕ್ಲಬ್ಬಿನಿಂದ ನನ್ನ ಹೆಸರನ್ನು ಯಾಕೆ ತೆಗೆದರೆಂಬುವದನ್ನು ನನಗೆ ತಿಳಿಯಲ್ಲ ಆದರೆ ಕಾಂಗ್ರೆಸ ಚಳವಳಿಗೆ ಸಹಾನುಭೂತಿಯುಳ್ಳವರು ಸಮಾಜದಲ್ಲಿ ನನ್ನ ಬೆಲೆ ಕಡಿಮೆಯಾಗಬೇಕೆಂದೂ ಉಳಿದ ಸರಕಾರಿ ನೌಕರರಿಗೆ ತಮ್ಮ ಕರ್ತವ್ಯ ಮಾಡಲಿಕ್ಕೆ ಅಡ್ಡಿಯಾಗಬೇಕೆಂದೂ, ಹೀಗೆ ಮಾಡಿರಬಹುದೆಂದು ನನಗೆ ಅನಿಸುತ್ತದೆ. (ಅ ಪ್ರೆ ತಂತಿ)

ಎಂ. ಸಿ. ಸಿ. ಕ್ರಿಕೆಟ್ ಆಟಗಾರರ ಗುಂಪಿಗೆ ಮುಂಬೈಯಲ್ಲಿ ಸ್ವಾಗತ.

ಮುಂಬೈ ತಾ|| ೧೨—ಎಂ. ಸಿ. ಸಿ. ಗುಂಪಿನವರು ಮುಲ್ತಾನ ಹಡಗಿನಿಂದ ಬಂದರು. ಉಪಾಧ್ಯಕ್ಷರಾದ ಸರ ಚುನಿಲಾಲ ಮೇಹತಾ ಅವರು ಹಿಂದುಸ್ಥಾನದ ಕ್ರಿಕೆಟ್ ಮಂಡಲದವರ ಕಾರ್ಯದರ್ಶಿಗಳು ಅವರಿಗೆ ಆತ್ಯಾದರದಿಂದ ಸ್ವಾಗತವಿತ್ತರು. ಬೇರೆ ಅನೇಕ ಪ್ರತಿಷ್ಠಿತರು ಬಂದಿದ್ದರು. ಮಿ. ಜಾರ್ಡಿನ್ ಇವರು ಮೊದಲಿಗರಾದವರು ಧ್ವನಿವಾಹಕ ಯಂತ್ರದಿಂದ ಹಿಂದುಸ್ಥಾನಕ್ಕೆ ತಮ್ಮ ಸಂದೇಶಗಳನ್ನು ಸಾರಿದರು ಸರ ಚುನಿಲಾಲರು ಕ್ರಿಕೆಟ ಆಟದ ಗುಂಪಿನವರಿಗೆ ಸ್ವಾಗತವನ್ನು ಸಲ್ಲಿಸುವಾಗ ಅಂದದ್ದು:—ಇಂದು ನಾನು ನಿಮ್ಮ ಗುಂಪಿನವರಿಗೆ ವಿಶೇಷವಾಗಿ ಮಿ|| ಜಾರ್ಡಿನರಿಗೆ ನನ್ನ ಹೃತ್ಪೂರ್ವಕದ ಸ್ವಾಗತವೀಯುವೆ ಜಾರ್ಡಿನ್‌ರು ತಮ್ಮ ಹುಟ್ಟೂರಾದ ಹಿಂದುಸ್ಥಾನಕ್ಕೆ ಬಂದಿದ್ದು ಅವರ ತಂದೆಯವರ ' ಸಂತತಿ ಎಂದೂ ಹಿಂದೂ ಜನರಿಗೆ ಮರೆಯದಷ್ಟು ಕ್ರಿಕೆಟ್ ಆಟಗಾರರಲ್ಲಿ ಪ್ರಸಿದ್ಧವಿವೆ, ಹಿಂದುಸ್ಥಾನಕ್ಕೆ ನೀವು ಬರುವ ಸರತಿಯು ಇದೇ ಮೊದಲನೆಯದಿದ್ದು ನಿಮ್ಮ ಗುಂಪಿನವರು ಆಟದೊಳಗೆ ಶ್ರೇಯಸ್ಸನ್ನು ಪಡೆಯುವರೆಂದು ತುಂಬಾ ನಂಬಿದ್ದೇನೆ. ಮಿ|| ಜಾರ್ಡಿನ್ನರು ಸರ ಚುನಿಲಾಲರ ಸ್ವಾಗತಕ್ಕೆ ಉತ್ತರ ಕೊಡುವಾಗ ಮುಂಬೈ ಪಟ್ಟಣವು ನನ್ನ ಹುಟ್ಟೂರು ನಾನು ಅಂತಿಂತಹ ಸೊಟ್ಟಪಟ್ಟೆ ದವನಲ್ಲ. ಮುಂಬೈಯಲ್ಲಿಯ ದೊಡ್ಡನೈನ್ ನಮಗೆ ಹಿಂದಿನದೆಲ್ಲ ನೆನಪು ಆಗಿ ನನ್ನ ಮೈ ರೋಮಾಂಚನವಾಯಿತು ನಮ್ಮೊಡನೆ ಈಗ ಕೆಲ ಕ್ರಿಕೆಟ್ ಪಟುಗಳು ಬರದ್ದರಿಂದ ಸ್ವಲ್ಪ ನಿರಾಸೆಯಾಗುವ ಸಂಭವವಿದೆ. ಆದರೂ ನಮಗೆ ಗೆಲವಾಗುವದರಲ್ಲಿ ಸಂದೇಹ ತೋರುವದಿಲ್ಲ (ಅ. ಪ್ರೆ. ತಂತಿ)

ಗೋವರ್ಧನಲಾಲ ಸ್ವಾಮಿಗಳ ಮಠದ ಅವಸ್ಥೆ

ಮುಂಬೈ ತಾ|| ೧೨— ನಾಥದ್ವಾರ ಮಠದ ವ್ಯಾಜ್ಯವು ಉದೇಪುರ ದರ್ಬಾರದವರಿಂದ ಬಗೆಹರಿಸಲಾಯಿತು ಅದರಲ್ಲಿ ಅವರು ಕೊಟ್ಟ ತೀರ್ಪು ಕೆಳಗಿನಂತೆ ಇದೆ ' ಶ್ರೀ ದಾಮೋದರ ಇವರನ್ನು ಪಟ್ಟಗಟ್ಟಿದೆ ಅವರ ಅಜ್ಞಾನ ವಯಸ್ಸಿನ ಮಗುವನ್ನು ಸ್ವಾಮಿಯನ್ನಾಗಿ ನಿಯಮಿಸಬೇಕು ದಾಮೋದರ ಇವರ ತಿವರೆಗಿನ ಕೃತಿಗಳನ್ನು ನೋಡಿದರೆ ಅವರು ಆ ಸ್ವೈಕ್ಷವ ಮಠದ ಗಾದಿಗೆ ಯೋಗ್ಯರಲ್ಲವೆಂದು ಕಂಡುಬಂದಿದೆ ಆದ್ದರಿಂದ ಹಿಂದುಸ್ಥಾನದ ಎಲ್ಲ ಭಾಗಗಳಿಂದ ಇನ್ನೆರಡು ಜನ ಪಂಚರನ್ನು ನಿಯಮಿಸಿ ಅವರ ಕೈಯಲ್ಲಿ ಸಂಸ್ಥಾನದ ಆಡಳಿತೆಯನ್ನು ಸಾಗಿಸುವ ಮತ್ತು ಅಜ್ಞಾನ ವಯಸ್ಸಿನ ಮಗನಿಗೆ ತಕ್ಕ ಶಿಕ್ಷಣ ಕೊಡುವ ಅಧಿಕಾರ ಕೊಡಲಾಗಿದೆ ಈ ಪಂಚರಲ್ಲಿ ಪಂ ರಮಾಕಾಂತ ಮಾಲವೀಯ, ಪಂ ಮದನಮೋಹನ ಮಾಲವೀಯ ಇವರು ' ಉದೇಪುರ ದರ್ಬಾರದವರು ಈ ಸೋಲಿಸಿಟರ್‌ನ್ನು ಸ್ವೀಕ್ಷವ ಜನರ ಇಚ್ಛೆಯನುಸರಿಸಿ ಮಾಡಿದ್ದಾರೆ (ಅ ಪ್ರೆ ತಂತಿ)

೧೯೩೩ ಮಾರ್ಚಕ್ಕೆ ಕೌನ್ಸಿಲ ಚುನಾವಣೆಗಳು

ಮುಂಬೈ ತಾ|| ೧೨—ಪಾರ್ಲಮೆಂಟಿನಲ್ಲಿ ಹಿಂದುಸ್ಥಾನದ ಹೊಸ ರಾಜ್ಯ ಪದ್ಧತಿಯ ಬಿಲ್ಲನ್ನು ಮಂಡಿಸಿದೊಡನೆಯೆ ೧೯೩೨ ಇಸ್ವಿಯ ನವಂಬರ ತಿಂಗಳಲ್ಲಿ ಹಿಂದುಸ್ಥಾನಕ್ಕೆ ಒಂದು ಕಮಿಶನ್ನ ಕಳಿಸಲ್ಪಡುವದು. ಈ ಕಮಿಶನ್ನಿನವರು ಮತದಾನದ ಕ್ಷೇತ್ರವನ್ನು ಬೆಳಸುವ ಕೆಲಸ ಕೈಕೊಳ್ಳುವರು. ಈ ಕಮಿಶನ್ನಿಗೆ ಸರ ಜಾನ್ ಕೇರ ಸಾಹೇಬರು ಚೇರಮನ್ನರು ಈ ಕಮಿಶನ್ನಿನವರು ತಮ್ಮ ಕೆಲಸ ಮೂರು ನಾಲ್ಕು ತಿಂಗಳವರೆಗೆ ನಡಿಸುವರು ಇದಾದ ತರುವಾಯ ಅಂದರೆ ೧೯೩೩ ಮಾರ್ಚ ತಿಂಗಳು ಮುಗಿಯುವದರಲ್ಲಿ ಪ್ರಾಂತಿಕ ಕೌನ್ಸಿಲ್ಲಿನ ಚುನಾವಣೆಗಳು ನಡೆಯುವವು

(ಅ ಪ್ರೆ ತಂತಿ)

ಭಾಯಿ ಪರಮಾನಂದರ ಭಾಷಣ

ಅಜಮೀರ ತಾ|| ೧೨ ಅಜಮೀರದಲ್ಲಿ ನಡೆದ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಭಾಯಿ ಪರಮಾನಂದರು ತಮ್ಮ ಭಾಷಣದಲ್ಲಿ ಅನ್ನುವದು—ಹಿಂದೂ ಜನರು ಭವಿಷ್ಯವೆಂದರೆ ತಗ್ಗಿತ್ತಲೆ ಜೀವಂತ ಬಾಳಬೇಕೆಂದರೆ ಅವರು ಈಗ ಮೀರಿದ ಸಾಹಸ ನಡಿಸತಕ್ಕದ್ದು ಬಿಳಿಯ ಪತ್ರಿಕೆಯಲ್ಲಿಯ ಜಾತಿಯ ಪ್ರಶ್ನದ ಬಗ್ಗೆ ಮಾತನಾಡುವಾಗ ಜಾತಿ ಜಾತಿಗಳಲ್ಲಿರುವ ಗಾಢಾಂತರಗಳ ಬಗ್ಗೆ ಬ್ರಿಟಿಶ ಮುತ್ಸದಿಗಳು ಬಹು ಜಾಗರೂಕರಾಗಿರಬೇಕು ಅವರೀಗಿನ ಧೋರಣೆಯು ಹಿಂದುಸ್ಥಾನಕ್ಕೆ ವಿರುದ್ಧವಿದೆ

ಮುಸಲ್ಮಾನರ ಕಾಲು ತುಳಲಿಕ್ಕಾಗದು ಇನ್ನು ಮುಂದೆ ನಾವು ಬ್ರಿಟಿಶ ಧ್ವಜದ ಕೆಳಗೆ ಮುಸಲ್ಮಾನರ ಹಿಂದಿಂದೆ ಕುಣಿಯಲಾಗದು ತಮ್ಮ ಮೇಲೆ ಇಂಥ ಅಪಮಾನ, ಅನ್ಯಾಯಗಳು ಬ್ರಿಟಿಶರ ಆಳಿಕೆಯಲ್ಲಿ ನಡೆದರೆ, ಆ ತಪ್ಪು ಅವರದಲ್ಲ, ಒಂದು ವೇಳೆ ಮುಸಲ್ಮಾನರು ಪರಾಕಿಗೊಂಡು ಮನಬಂದಂತೆ ಗದ್ದಲ ಎಬ್ಬಿಸಿದರೆ ಅದರಿಂದ ಸಾಮ್ರಾಜ್ಯಕ್ಕೆ ಧಕ್ಕೆ ತಗಲದಿರದು

[ಅ. ಪ್ರೆ ತಂತಿ]

ಗವ್ಹರ್ನರರೂ ಉಗ್ರಪಕ್ಷವೂ

ಪುಣೆ ತಾ|| ೧೨— ಪುಣೆ ಪಟ್ಟಣದವರು ಗವ್ಹರ್ನರರಿಗೆ ಕೊಟ್ಟ ವನಭೋಜನದ ಕಾಲಕ್ಕೆ ಅವರು ಭಾಷಣ ಮಾಡಿದ್ದು- ಸರಕಾರದ ಧೋರಣವು ಏನೇ ಇರಲಿ, ಕಳೆದ ಐದು ವರ್ಷಗಳಲ್ಲಿ ಉಗ್ರ ಪಕ್ಷದವರು ಸರಕಾರವನ್ನು ಬುಡಮೇಲು ಮಾಡಲು ಪ್ರಯತ್ನಿಸಿದ್ದರ ಪರಿಣಾಮವು ರಾಷ್ಟ್ರಕ್ಕೆ ವಿಘಾತುಕವಾಗದೆ ಇರುತ್ತಿರಲಿಲ್ಲ ಆದರ ದೇಶದಲ್ಲಿಯ ಶ್ರೀಮಂತರು ತಮ್ಮ ಹೊಣೆಯನ್ನರಿತು ಸಹಾಯ ಮಾಡಿದ್ದು ವಿಶೇಷ ಜಾತಿ ಜಾತಿಗಳಲ್ಲಿ ಐಕ್ಯವು ಕೂಡಲೇ ಒದಗದಿದ್ದರೆ ಸದನಶೀರ ಸುಧಾರಣೆಯು ಸರಿಯಾಗಿ ಹಿಂದುಸ್ಥಾನದಲ್ಲಿ ಸಾಗದು [ಅ ಪ್ರೆ ತಂತಿ]

ಕನ್ಯಾಗತದ ಅಪೂರ್ವ ಯಾತ್ರೆ! **ಕ್ಷೇತ್ರಗಳ ಪ್ರೇಕ್ಷಣೀಯ ನೋಟ!!**

ಚಾರ್ಜು ಸುಲಭ.

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ರೇಲ್ವೆ ಕಂಪನಿಯಿಂದ ಪರವಾನಿಗೆಯನು ಪಡೆದಿರುತ್ತದೆ.

ಶ್ರೀ ಕಾಶಿ, ರಾಮೇಶ್ವರ, ಲಂಕಾ ಮೊದಲಾದ ಕ್ಷೇತ್ರಗಳ ಯಾತ್ರೆಗಾಗಿ
ಶ್ರೀ ಗೌರೀಶಂಕರ ಟ್ರೇನು

ತಾ|| ೨೨ ಅಕ್ಟೋಬರ ೧೯೩೩ನೇ ದಿವಸ ಹೊರಡುತ್ತದೆ.

ಸೆಕಂಡಕ್ಲಾಸ ೩೧೦ ರೂ **ಥರ್ಡಕ್ಲಾಸ ೧೪೦ ರೂ.**

ಕೂಡಲೇ ಅಡ್ವಾನ್ಸ ಕಳಿಸಿ ಟಿಕೇಟ್ ಪಡೆಯಿರಿ

ಟ್ರೇನು ಹೊರಡಿಸುವದಕ್ಕೆ ರೇಲ್ವೆ ಕಂಪನಿಯಿಂದ ಪರವಾನಗಿಯನ್ನು ಪಡೆದಿರುತ್ತದೆ. ಹುಬ್ಬಳ್ಳಿಯ ಶ್ರೀ ಗೌರೀಶಂಕರ ಯಾತ್ರಾ ಟ್ರೇನು ಭರತಖಂಡ ಮತ್ತು ಲಂಕಾ ಯಾತ್ರೆಗೋಸುಗ ಇದೇ ಅಕ್ಟೋಬರ ತಿಂಗಳ ೨೨ ನೇ ತಾರೀಖಿನ ದಿವಸ ಹೊರಡಲಿಕ್ಕೆ ಪೂರ್ಣ ತಯಾರಿಯಲ್ಲಿರುವದು

ನಮ್ಮ ಟ್ರೇನಿನಲ್ಲಿ ಪ್ರಸಿದ್ಧರಾದ ವರ್ತಕರೂ, ಜಮೀನದಾರರೂ, ಪದವೀಧರರೂ, ವಿದ್ಯಾರ್ಥಿಗಳೂ ಹಾಗೂ ರಿಟಾಯರ್ಡ ಗವ್ಹರ್ನಮೆಂಟ ಆಫೀಸರರೂ ಪ್ರಯಾಣ ಮಾಡತಕ್ಕವರಿರುವದರಿಂದ ಪ್ರಾರಂಭದಿಂದ ಕೊನೆಯವರೆಗೂ ಉತ್ತಮ ವ್ಯವಸ್ಥೆ ಮಾಡಲ್ಪಡುವದು

೧೨ ವರ್ಷಕ್ಕೊಮ್ಮೆ ಬರುವ ಪುಣ್ಯಪ್ರದವಾದ ಕನ್ಯಾಗತದ
ಇದೇ ಮಾರ್ಗಶೀರ್ಷ ಮಾಸದಲ್ಲಿಯ ಅಪೂರ್ವ ಯಾತ್ರೆಯು!

ಅಲಕ್ಷಿಸಿದರೆ ಪುನಃ ಸಿಗಲರಿಯದು!! **ಸ್ವಲ್ಪೇ ಟಿಕೀಟುಗಳು ಉಳಿದಿವೆ!!!**

ತ್ವರೆ ಮಾಡಿರಿ!!!! ಹೆಚ್ಚು ವಿಶ್ವಾಸಕ್ಕೆ ಪಾತ್ರವಾದದ್ದೂ, ಹೆಚ್ಚಿನ ಅನುಭವ ಹಾಗೂ ... ದಾರಿಯು ... ಆಗಿರುವ ದರ್ಬಾರೀ ಸಿಸ್ಟಿಮ ... ತ್ರ

ಶ್ರೀ ಗೌರೀಶಂಕರ ಕಂಪನಿಯ

೨ ನೇ ಯಾತ್ರಾ ಪ್ರವಾಸವು

೧ ನೇ ಯಾತ್ರೆಯನ್ನು ಸುಖವಾಗಿಯೂ, ಯಶಸ್ವಿಯಾಗಿಯೂ ಪೂರೈಸಿ ಕೆಲಮಟ್ಟಿಗೆ ಕರ್ನಾಟಕದ ಹಾಗು ಮಹಾರಾಷ್ಟ್ರದ ಸೇವೆಯನ್ನು ಮಾಡಿ ಯಾತ್ರಿಕರಿಂದ ಸುವರ್ಣ ಪದಕ ಮಾನಪತ್ರ, ಸದಭಿಪ್ರಾಯ, ಧನ್ಯವಾದಗಳನ್ನು ಪಡೆದಿದೆ

ರೇಲ್ವೆ ಕಂಪನಿಯಲ್ಲಿ ಹಣವನ್ನು ಡಿಪಾಜಿಟ್ ಆಗಿ ಇಟ್ಟು ರೇಲ್ವೆ ಕಂಪನಿಯಿಂದ ಪರವಾನಗಿ ಪಡೆದಿದೆ ಶ್ರೀ ಗೌರೀಶಂಕರ ಕಂಪನಿಯ ಚಾಲತೀ ಲೇವ ಖಾತೆಯು ಹುಬ್ಬಳ್ಳಿಯ ಇಂಪೀರಿಯಲ್ ಬ್ಯಾಂಗಿನಲ್ಲುಂಟು

೧ ಪಂಢರಪುರ ೨೩ ಅಕ್ಟೋಬರ	೧೯ ದಿಲ್ಲಿ ೧೨ ೧೩–೧೪	೩೫ ಮದ್ರಾಸ (ಸಮುದ್ರ ಸ್ನಾನ) ೬–೭
೨ ಶೇಗಾಂವ (ಗಜಾನನ ಮ...) ೨೫ ೨೬	೨೦ ಹರದ್ವಾರ ೧೫–೧೬	೩೬ ಶಿವ ಕಂಚಿ ೮
೩ ಮುಂಬಯಿ (ಸಮುದ್ರ) ೨೮–೨೯ ೩೦	೨೧ ಋಷಿಕೇಶ	೩೭ ವಿಷ್ಣು ಕಂಚಿ
೪ ದ್ವಾರಕಾ (ಸಮುದ್ರದಲ್ಲಿ ಹಡಗದಿಂದ) ೩೧–೧	೨೨ ಲಖನೌ ೧೭	೩೮ ಕುಂಭಕೋಣಂ ೯
೫ ಸೋಮನಾಥ (ಜ್ಯೋತಿರ್ಲಿಂಗ)	೨೩ ಅಯೋಧ್ಯೆ ೧೮	೩೯ ರಾಮೇಶ್ವರ (ಜ್ಯೋತಿರ್ಲಿಂಗ ಸಮುದ್ರಸ್ನಾನ) ೧೦ ೧೧
೬ ... (ಜ್ಯೋತಿರ್ಲಿಂಗ) ೪೧	೨೪ (ಪ್ರಯಾಗ ತ್ರಿವೇಣಿ) ಅಲ್ಲಾಹಾಬಾದ ೧೯–೨೦	೪೦ ಕೊಲಂಬೋ [ಹಡಗ ... ದಿಂದ] ೧೨–೧೩ ೧೪
೭ ... ನವ್ಹೆಂಬರ	೨೫ ಕಾಶಿ (ಜ್ಯೋತಿರ್ಲಿಂಗ) ೨೧–೨೨–೨೩–೨೪ ೨೫	೪೧ ಕ್ಯಾಂಡಿ [ಲಂಕಾ] ೧೫
೮ ... (... ದ್ವಾರಕಾ) ...	೨೬ ಸಾರನಾಥ (ಬೌದ್ಧತೀರ್ಥ)	೪೨ ಕನ್ಯಾಕುಮಾರಿ [ಸಮುದ್ರ ಸ್ನಾನ] ೧೬
೯ ಅಹಮ್ಮದಾಬಾದ	೨೭ ಗಯಾ ಬೌದ್ಧತೀರ್ಥ ೨೬–೨೭	೪೩ ಧನುಷ್ಕೋಟಿ [ಸಮುದ್ರ ಸ್ನಾನ] ಹಡಗದಿಂದ
೧೦ ಸಾಬರಮತಿ	೨೮ ವೈದ್ಯನಾಥ (ಜ್ಯೋತಿರ್ಲಿಂಗ ... ನದಿ ಸ್ನಾನ)	೪೪ ಮದುರೆ [ಶಕ್ತಿಪೀಠ] ೧೭
೧೧ ಬರೋಡ	೨೯ ... ೨೮–೨೯	೪೫ ತ್ರಿಚನಾಪಳ್ಳಿ [ಟಾವನ್ ಕ್ಷೇತ್ರ] ೮
೧೨ ಉಜ್ಜಯಿನಿ (ಜ್ಯೋತಿರ್ಲಿಂಗ)	೩೦ ಪಾರಸನಾಥ (ಜೈನತೀರ್ಥ) ಸಮ್ಮೇದ ಶಿಖರ	೪೬ ಶ್ರೀರಂಗ (ವಿಷ್ಣುಕ್ಷೇತ್ರ) ೧೮
೧೩ ಓಂಕಾರೇಶ್ವರ (ಜ್ಯೋತಿರ್ಲಿಂಗ)	೩೧ ಕಲಕತ್ತಾ ೩೦ ಡಿಸೆಂಬರ ೧–೨	೪೭ ಬೆಂಗಳೂರ ೧೯
೧೪ ಆಗ್ರಾ	೩೨ ಜಗನ್ನಾಥ ಪುರಿ (ಸಮುದ್ರ ಸ್ನಾನ) ೪	೪೮ ಮೈಸೂರ ೨೦–೨೧
೧೫ ಮಥುರಾ ೯–೧೦	೩೩ ವಿಶಾಖಪಟ್ಟಣ (ಸಮುದ್ರ ಸ್ನಾನ) ೬	೪೯ ಹುಬ್ಬಳ್ಳಿ ೨೨
೧೬ ಗೋಕುಲ	೩೪ ರಾಜಮಹೇಂದ್ರಿ (ಗೋದಾವರಿ ಸ್ನಾನ) ೭	
೧೭ ವೃಂದಾವನ		
೧೮ ಗೋವರ್ಧನ		

ಕ್ಷೇತ್ರಗಳ ಮುಂದೆ ತಾರೀಖುಗಳನ್ನು ಬರೆದಿರುವ ಸ್ಟೇಶನ್ನುಗಳಲ್ಲಿ ಮಾತ್ರ ಟ್ರೇನು ನಿಲ್ಲುವದು. ಅದೇ ಮುಕ್ಕಾಮಿನಿಂದ ಉಳಿದವುಗಳ ಯಾತ್ರೆಯನ್ನು ಮಾಡಿಕೊಳ್ಳತಕ್ಕದ್ದು ಮೇಲೆ ಬರೆದಂತೆ ಎಲ್ಲ ಯಾತ್ರಾಸ್ಥಳಗಳನ್ನು ಪೂರೈಸಿಕೊಂಡು ಟ್ರೇನು ಡಿಶಂಬರ ೨೨ ನೇ ತಾರೀಖು ಪುಷ್ಯ ಶು| ೬ ಶುಕ್ರವಾರ ದಿವಸ ಮುಂಜಾನೆ ಹುಬ್ಬಳ್ಳಿ ಪಟ್ಟಣಕ್ಕೆ ಬಂದು ತಲುಪುವದು.

ರೇಲ್ವೆ ... ಕ್ಷೇತ್ರಗಳಲ್ಲಿ ... ಸೆಕಂಡ ಕ್ಲಾಸ ೩೧೦ ರೂ ಥರ್ಡಕ್ಲಾಸ ೧೪೦ ರೂ ಮಾತ್ರ ... ವರ್ಷದ ... ಒಳಗಿನ ಮಕ್ಕಳಿಗೆ ಅರ್ಧ ಚಾರ್ಜ ಎಲ್ಲಿ ಟ್ರೇನು ಹತ್ತಿದರೂ ಗೊತ್ತುಪಡಿಸಿರುವ ಚಾರ್ಜನ್ನೇ ಕೊಡ

... ಟ್ರೇನಿನಲ್ಲಿ ... ಇಚ್ಛೆ ಸ್ಥಳವು ಕೊಡಲ್ಪಡುವದು ಅದ್ದರಿಂದ ... ಸುಲಭವಾದ ... ಪಡೆಯಬೇಕಾದಲ್ಲಿ ಕೂಡಲೆ ... ಯಾತ್ರಿಕರಿಗೆ ಯೋಗ್ಯ ಅಡಚಣಿ ಕಂಡ ಬಂದಲ್ಲಿ ಅದವಾ ಟ್ರೇನು ಹೊರಡದಿದ್ದಲ್ಲಿ ಯಾತ್ರಿಕರು ಕೊಟ್ಟ ಅಡ್ವಾನ್ಸ ಅಥವಾ ಪೂರ್ಣ ಹಣವು ಮರತ ಕೊಡುವ ... ಶ್ರೀ ಗೌರೀಶಂಕರ ಕಂಪನಿಯ ಯಾವತ್ತೂ ಹಣವು ಹುಬ್ಬಳ್ಳಿ (ಸೆಂಟ್ರಲ್) ಇಂಪೀರಿಯಲ್ ಬ್ಯಾಂಕಿನಲ್ಲಿ ಇಡುವದರಿಂದ ಯಾತ್ರಿಕರಿಂದ ಬಂದ ಹಣವಾದರೂ ಸದರ ಬ್ಯಾಂಕಿನಲ್ಲಿ ಸುರಕ್ಷಿತವಾಗಿರುವದು

ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕಾರಿಗಳೂ ನೌಕರರೂ ಇರುವರಲ್ಲದೆ ಯಾತ್ರಿಕರ ಅನುಕೂಲತೆಗಾಗಿ ದವಾಖಾನೆ ಆಗಸರ, ಫೋಟೋಗ್ರಾಫರ ಲಾಯಬ್ರರಿ, ... ರೇಡಿಯೊ ... ಟ್ರೇಜರಿ ಇರುವವು ಸದರ ಕಂಪನಿಯ ... ಇವರಿಂದ ... ಮುಕ್ಕಾಮುಗಳಲ್ಲಿ ... ಪ್ರಸಿದ್ಧ ಸ್ಥಳಗಳು ಮ್ಯಾಜಿಕ್ ಲ್ಯಾಂಟರ್ನದ ಚಿತ್ರದಿಂದ ತೋರಿಸಲ್ಪಡುವವು ... ಕ್ಷೇತ್ರಗಳ ಚಿತ್ರ ಚರಿತ್ರೆ ... ಇವರಿಂದ ಕನ್ನಡದಲ್ಲಿ ಬರೆದ ... ಶ್ರೀ ಗೌರೀಶಂಕರ ಕಂಪನಿಯ ಆಫೀಸಿನಲ್ಲಿ ... ಟ್ರೇನಿನ ... ರೂ ... ಕ್ರಯಕ್ಕೆ ಸಿಗುವವು. ... ಸ್ಥಳ ... ಮುಕ್ಕಾಮುಗಳಲ್ಲಿ ... ಟ್ರೇನ ... ವ್ಯವಸ್ಥಾ ಮ್ಯಾನೇಜರರ ವ್ಯವಸ್ಥೆಗಾಗಿ ಮುಂದೆ ಹೋಗುವರು ಬ್ರಾಹ್ಮಣರಿಗೂ ... ಪ್ರತ್ಯೇಕವಾಗಿ ಅಡಿಗೆ ಊಟಗಳ ವ್ಯವಸ್ಥೆಯು ಇಳಕೊಂಡ ಸ್ಥಳದಲ್ಲಿಯೇ ... ಲಿಂಗಾಯತ ಶೈವ ಆಚಾರದವರ ಕೂಟಿಗಾಗಿ ಟ್ರೇನಿನಲ್ಲಿ ಪಟ್ಟದ ಸ್ವಾಮಿಗಳಿರುವರು ಟ್ರೇನಿನಲ್ಲಿ ಎಲ್ಲ ಧರ್ಮದವರಿಗೂ ಸರಿಯಾಗಿ ... ಮಾಡಲ್ಪಡುವದು ಎರೋಪ್ಲೇನ [ವಿಮಾನ] ದಲ್ಲಿ ಸಂಚರಿಸಲಿಚ್ಛಿಸುವವರಿಗೆ ಕಲಕತ್ತಾ ಮುಕ್ಕಾಮಿನಲ್ಲಿ ವಿಮಾನಿನ ವ್ಯವಸ್ಥೆ ಮಾಡಿದ್ದು ... ನಿಮಿಟುಗಳ ವೇಳೆ ಸಂಚರಿಸುವದಕ್ಕೆ ... ರೂ ಚಾರ್ಜ ಕೊಡಬೇಕಾಗುವದು

ಶ್ರೀ ಗೌರೀಶಂಕರ ... ರೇಲ್ವೆ ಕಂಪನಿಯವರ ... ಬದಲಾವಣೆಗಳನ್ನು ಮಾಡಬಹುದು ಚಳಿಗಾಲ ಶುರುವಾಗುವದರಿಂದ ಉತ್ತರ ಪ್ರದೇಶದ ... ಮದ್ರಾಸಕಡೆಗೆ ಬರುವದರಿಂದ ... ಭಯ ... ಹೆಚ್ಚಿನ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು ಎಜಂಟರಿಗೆ ಯೋಗ್ಯ ಕಮೀಶನ್ ಸಿಗುವದು

ಶ್ರೀ ಗೌರೀಶಂಕರ ಕಂಪನಿಯ ಎಂಜನ್ ರೆಂಟಿಗಳು— ಸದರ ಕಂಪನಿಯ ಎಂಜಿನ್ ... ೨ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರ ಹಾಗು ... ಮಾಡಿ ಕೊಡಲ್ಪಟ್ಟಿವೆ ... ಬೇಸಗೆಯಲ್ಲಿ ... ಶ್ರೀ ಗೌರೀಶಂಕರ ಕಂಪನಿಗೆ ... ಕಳಿಸಲ್ಪಡುವವು ... ಕಮೀಶನ ಕೊಡಲ್ಪಡುವದು

ನಮ್ಮ ಕಂಪನಿಯ ಯಾತ್ರಾ ಪ್ರವಾಸದಲ್ಲಿ ಕಂಡ ... ಅನುಭವ ಹಾಗು ಸ್ವತಃ ಕ್ಯಾಮರಾದಿಂದ ತೆಗೆದುಕೊಂಡ ... ಫೋಟೋಗಳು ಇವುಗಳಿಂದ ಧಾರ್ಮಿಕ ಔದ್ಯೋಗಿಕ ಸಾಮಾಜಿಕ ವಿಷಯಗಳಿಗನುಸರಿಸಿ "ಶ್ರೀ ಗೌರೀಶಂಕರ" ಎಂಬ ಸಚಿತ್ರ ಪಾರಪತ್ರಿಕೆಯು ಕನ್ನಡದಲ್ಲಿ ಶ್ರೀ ಗೌರೀಶಂಕರ ಕಂಪನಿಯಿಂದ ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವದು.

ತಾ| ...೧೯೩೩ ಚಿತ್ರಕ ... [ಫೋಟೋಗ್ರಾಫರ] ಹಾಗು ಸಂಪಾದಕರು

ಆಫೀಸು
ಶ್ರೀ ಸಿದ್ಧಾರೂಢ ಬಿಲ್ಡಿಂಗಿನ ಎದುರಿನಲ್ಲಿ **ಜಿ. ಎ ಶಿರೂರ**
ಸ್ಟೇಶನ್ ರಸ್ತೆ ಹುಬ್ಬಳ್ಳಿ ಶ್ರೀ ಗೌರೀಶಂಕರ ಕಂಪನಿಯ ಚಾಲಕರು

"ಬದರೀ ನಾರಾಯಣನ ದರ್ಶನ"

ಗೌರೀಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು ಉತ್ತರದವಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ನಿರೂಪಿಸಲ್ಪಟ್ಟಿದೆ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎರಡು ನಕಾಶಗಳಿರುವವು.
ಬೆಲೆ—೦ ೬-೬ ಮಾತ್ರ, ಅಂಚೆವೆಚ್ಚ ಬೇರೆ ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

"ನೀಲಗಿರಿ ಎಣ್ಣೆ"

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇನ್ನತ್ತದೆ ಸಂಧಿವಾತ ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು ಕಿವಿ ಸೋರವಿಕೆ, ಮುಕ್ಕು ಇತರ ಎಲ್ಲ ಬಾವು ವಗೈರೆ ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ—ಜಿ ಕೆ ಟಿಂಬಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ರ. ನಂ. ಬಿ. ೨೭೮೮

यथत् परवशं दुखं । यथदात्मवशं सुखम्॥मनु.

ನಿತ್ಯ ಪತ್ರಬೆಲೆ ೩ ಪೈ.

ಇನಸ್ಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಸ್ಯುಅರನ್ಸ
ಸ್ವದೇಶದ ಧನವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇವರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ರವಿವಾರ ಆಶ್ವೀನ ಬಹುಳ ೧೧ ಶಕೆ ೧೮೬೦ ತಾ॥ ೧೬-೧೦-೩೮ [ಸಂಚಿಕೆ ೧೪೮



ಈ ಕಂಪನಿಯು ಬಳ್ಳಾರಿಯಿಂದ ಗದಗಿಗೆ ಬಂದಿರುತ್ತದೆ. ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು.

ಬ್ಯಾಡಗಿ ಶ್ರೀ ಲಿಂಗರಾಜ ಲಾಯಬ್ರರಿಯ ಅವ್ಯವಸ್ಥೆ.

ಲಾಯಬ್ರರಿ ಅಂದರೆ ಒಂದೊಂದು ಸಾರ್ವಜನಿಕ ಸಂಸ್ಥೆ. ಇದನ್ನೇನು ನಮ್ಮ ಬ್ಯಾಡಗಿ ಜನರು ತಿಳಿಯದೆ ಇರುವದು ಹೇಗಿದ್ದು ನಮ್ಮ ಬ್ಯಾಡಗಿ ಲಾಯಬ್ರರಿಯು ಕ್ಷೀಣಾವಸ್ಥೆಯಲ್ಲಿ ಏಕೆ ಇರಬೇಕು? ಇಲ್ಲಿ ಸರ್ವರೂ ವ್ಯಾಪಾರಸ್ಥರು ಅವರಿಗೆ ವ್ಯಾಪಾರವನ್ನು ಬಿಟ್ಟು ಲಾಯಬ್ರರಿಗೆ ಹೋಗಿ ಓದಲಿಕ್ಕೆ ಅವಕಾಶ ದೊರೆಯದು ಇದು ನಿಜ ಇದರೆ ಅದರ ವ್ಯವಸ್ಥೆಯ ಬಗ್ಗೆ ಅವಕಾಶ ದೊರೆತಾಗ ಕೇಳಲಿಕ್ಕೆ ಮತ್ತು ನೋಡಲಿಕ್ಕೆ ಸಹಾ ಬಾರದಿಲ್ಲವೆ? ಸುಮ್ಮ ಸುಮ್ಮನೆ ಕಾರಕೂನ ಹಾಗೂ ಆಳಿನ ಖರ್ಚನ್ನು ತುಂಬಬೇಕೆ? ಅಥವಾ ಬ್ಯಾಡಗಿ ವ್ಯಾಪಾರಸ್ಥರು ಬಹಳ ಉದಾರಸ್ಥರೆನ್ನಬೇಕು. ಯಾಕಂದರೆ ವಾರ್ಷಿಕ ಹದಿನಾರು ನೂರು (೧೬೦೦)ರೂ ಇರುತ್ತದೆ. ಎಷ್ಟೋ ಜನರು ಪೂರಾ ವರ್ಗಣಿ ಕೊಡುತ್ತಾರೆ ಇಷ್ಟು ಮೇಲಾದರೂ ಸರ್ವರೂ ಲಾಯಬ್ರರಿಯ ಮೇಲೆ ಪೂರ್ಣ ಮನಸು ಇಟ್ಟು ಲಾಯಬ್ರರಿಯನ್ನು ನಡಿಸಬೇಕು. ಆ ಹೊತ್ತಿನ ಪತ್ರ ಆ ಹೊತ್ತು ಎಂದೂ ಸಿಗುವದಿಲ್ಲ. ವ್ಯವಸ್ಥಾಪಕರು ತಮ್ಮ ತಮ್ಮ ಮನೆಗೆ ಒಯ್ದು ನಾಲ್ಕಾರು ದಿನದ ಮೇಲೆ ಕೊಡುತ್ತಾರೆ. ಇನ್ನು ಮುಂದಾದರೂ ಇವರು ಹಾಗೆ ಮಾಡಬಾರದು ಲಾಯಬ್ರರಿಗೆ ಹಿಂದಿ ಪತ್ರವಿಲ್ಲ ಒಂದು ಹಿಂದೀ ಪತ್ರ ಅವಶ್ಯಬೇಕು. ಆದ್ದರಿಂದ ಸಂಸ್ಥೆಯ ವ್ಯವಸ್ಥಾಪಕರು ಜಾಗರೂಕರಾಗಬೇಕೆಂದು ವಿನಂತಿ

ಓರ್ವ ವಾಚನ-ಭಿಮಾನಿ, ಬ್ಯಾಡಗಿ

ಕರ್ನಾಟಕದ ಸುದ್ದಿಗಳು.

ಮೈಸೂರ ಪಟ್ಟಣದ ಮುನಸಿಪಲ್ ಮಂದಿರದಲ್ಲಿ ಮೈಸೂರಿನ ಶಾತಯ್ಯನವರಾದ ಶ್ರೀ. ವೆಂಕಟಕೃಷ್ಣಯ್ಯನವರ ತೈಲ ಚಿತ್ರವನ್ನು ಇಡಬೇಕೆಂದು ನಿರ್ಣಯವಾಯಿತು

ಚಿಂತಾಮಣಿಯ ಶ್ರೀಮಹಾಲಕ್ಷ್ಮಮ್ಮನ್ನು ಮುಸಲ್ಮಾನರು ತಮ್ಮ ಮನೆಗೆ ಎಳೆದುಕೊಂಡು ಹೋದುದರ ವ್ಯಾಜ್ಯವು ಕೋಲಾರ ಮ್ಯಾಜಿಸ್ಟ್ರೇಟರ ಮುಂದೆ ನಡೆದಿದೆ. ಪ್ರತಿವಾದಿಯರ ಪರವಾಗಿ ವಕೀಲರು ಹುಡಿಗೆಯು ಸ್ವಸಂತೋಷದಿಂದ ತಂದೆಯ ಮನೆ ಬಿಟ್ಟು ಮುಸಲ್ಮಾನರ ಮನೆ ಸೇರಿದಳು ಎಂದು ಸಾಕ್ಷಿಗಳಿಂದ ಸಿದ್ಧ ಮಾಡಿದ್ದಾರೆ ವ್ಯಾಜ್ಯ ಮುಂದಕ್ಕೆ ಹಾಕಲಾಗಿದೆ

ಮೈಸೂರ ಸರಕಾರದವರು ತಮ್ಮ ಸೇವಿಂಗ್ಸ ಬ್ಯಾಂಕಿನ ಬಡ್ಡಿಯ ದರವನ್ನು ನೂರಕ್ಕೆ ೪ ರಿಂದ ೩॥ ವರೆಗೆ ಇಳಿಸಿದ್ದಾರೆ

ಉಡಪಿಯಲ್ಲಿ ನವರಾತ್ರಿಯ ಕೊನೆಯ ದಿನ ಅಲ್ಲಿಯ ಮಿತ್ರ ಮಂಡಳದವರು ನಾಟ್ಯೋತ್ಸವವನ್ನು ಮಾಡಿದರು

ಬರುವ ಮದ್ರಾಸ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ ಎ. ಬಿ ಶೆಟ್ಟಿಯವರು ಮಂಗಳೂರ ಜಿಲ್ಲೆಯ ರಿ ಪೆಟ್ಲನೆಂಟ ಕೆಲಸವನ್ನು ಹಿಂತೆಗೆಯಬೇಕೆಂದು ಸೂಚಿಸುವವರಿದ್ದಾರೆ.



ಡಾ ಕುಲಕರ್ಣೀಯ
ಲೆಬೊರೇಟರಿ ಮುಂಬೈ
ನಂಬರ ೧೨
ಬಾಟ್ಲಿ ಕಿ. ೧-೧೨-೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು.

ಜನಾರ್ದನ ಬಾಡಿಗುಳಿ

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸರಗು, ಬಳೀಸರಗು, ಕೆಂಪು ಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ
೧೫-೭

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ
ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೪-೫-೩೩
} ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ



ವಹಿವಾಟಿಯರ ಇಷ್ಟ
ಲಕ್ಷಕೊಡಿರಿ.
ಕಿರ್ಲೋಸ್ಕರ
ಕಬ್ಬಿಣ
ಫರ್ನಿಚರ
ಬಗ್ಗೆ
ಸ್ಪ್ರಿಂಗ ಕಾಟು, ಖುರ್ಚಿ, ಸ್ಟೂಲ, ತೊಟ್ಟಿಲ ಇತ್ಯಾದಿ
ಅತ್ಯುತ್ತಮ ಮಾಲು
ಅತಿ ಸಣ್ಣ ಜಾಗೆಯಲ್ಲಿ ಸಹ ಇವುಗಳ ಉಪಯೋಗವು ಬಹಳ ಆಗುವದು. ಹೆಚ್ಚಿನ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಿರ್ಲೋಸ್ಕರ ಬಂಧುಗಳು ಲಿ. } ಕಿರ್ಲೋಸ್ಕರ ವಾಡಿ.
ಜಿ (ಸಾತಾರಾ)

ಭವಾನಿ ಅಯರ್ನ ವರ್ಕ್ಸ, ಧಾರವಾಡ
ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಕನ್ನಡಿಗ.

ಧಾರವಾಡ— ರವಿವಾರ ತಾರೀಖು ೧೫—೧೦—೧೯೩೩

ಹುಬ್ಬಳ್ಳಿಯೂ ಕರ್ನಾಟಕ ಸಾಹಿತ್ಯ ಸಮ್ಮೇಲನವೂ.

ಹುಬ್ಬಳ್ಳಿಯವರು ಈ ವರ್ಷದ ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ಕರೆಯುತ್ತಾರೆಂದು ಕನ್ನಡಿಗರು ನಿರೀಕ್ಷಿಸುತ್ತಿರುವರು. ಹುಬ್ಬಳ್ಳಿಯು ಉತ್ತರ ಕರ್ನಾಟಕದಲ್ಲಿ ಎಲ್ಲಕ್ಕೂ ದೊಡ್ಡ ಪಟ್ಟಣವು, ವ್ಯಾಪಾರದ ದೊಡ್ಡ ಸಂಸ್ಥಾನವು. ಇಂಥ ಪಟ್ಟಣದಲ್ಲಿ ಕನ್ನಡಿಗರ ಕೂಟ ಕಲೆಯಬೇಕೆಂಬುದು ಸಹಜವಾಗಿಯೇ. ವಿಶೇಷ ಪ್ರಸಂಗವು ಹುಬ್ಬಳ್ಳಿಯಲ್ಲಿ ಮೂರಸಾವಿರ ಮಠಾಧೀಶರ ನೇತೃತ್ವವು ಪರಿಣಾಮಕಾರಿಯಾಗುವುದರಿಂದಲೂ, ಈ ಸಾರೆಯ ಸಮ್ಮೇಲನಕ್ಕೆ ಮೂರುಸಾವಿರ ಮಠದ ಶ್ರೀಗಳವರ ಆಶ್ರಯವಿರುವುದರಿಂದಲೂ, ಹುಬ್ಬಳ್ಳಿಯು ಕರ್ನಾಟಕಕ್ಕೆಲ್ಲಕ್ಕೂ ಮಧ್ಯವರ್ತಿ ನಗರವಾಗಿರುವುದರಿಂದಲೂ ಈ ಸಲದ ಸಮ್ಮೇಲನಕ್ಕೆ ಅನೇಕ ದೃಷ್ಟಿಯಿಂದ ಕಳೆಯಿರಬಹುದೆಂದು ಆಶೆಯುಂಟು. ಆದಕಾರಣ, ಕನ್ನಡಿಗರ ಕಣ್ಣುಗಳೆಲ್ಲವೂ ಹುಬ್ಬಳ್ಳಿಯವರು ಯಾವಾಗ ಸಮ್ಮೇಲನವನ್ನು ಕರೆಯುವರೋ ಎಂದು ಹಾದಿ ನೋಡುತ್ತವೆ. ನಮ್ಮ ಹುಬ್ಬಳ್ಳಿಯ ಕನ್ನಡ ಬಂಧುಗಳು ಕನ್ನಡಿಗರ ಅಪೇಕ್ಷೆಯನ್ನು ಶೀಘ್ರವೇ ಪೂರ್ಣಮಾಡುವರೋ?

ಈ ಸಮ್ಮೇಲನದ ಸಿದ್ಧತೆಯು ಇಷ್ಟರಲ್ಲಿಯೇ ಪ್ರಾರಂಭವಾಗಬೇಕಾಗಿತ್ತು. ಏಕೆಂದರೆ ಪ್ರತ್ಯಕ್ಷ ಸಮ್ಮೇಲನದಗಿಂತಲೂ ಮುಂಚೆ, ಈ ವಿಷಯದಲ್ಲಿ ಅನೇಕ ತರಹದ ಕಾರ್ಯಗಳನ್ನು ಮಾಡುವುದು ಅವಶ್ಯವಿರುತ್ತದೆ. ಹುಬ್ಬಳ್ಳಿಯಲ್ಲಿ ಭಾಷಾವಿಷಯಕ ಜಾಗ್ರತಿಯನ್ನು ಮಾಡುವುದಕ್ಕೆ ಇದು ಒಳ್ಳೇ ಸಂದಿಯು. ಪ್ರತಿಯೊಂದು ಊರಲ್ಲಿ ಅಲ್ಪಸ್ವಲ್ಪ ಜಾತಿಭೇದಗಳು ಮತಭೇದಗಳು ಪಕ್ಷಭೇದಗಳು ಇದ್ದೇ ಇರುತ್ತವೆ. ಯಾವ ಊರಲ್ಲಿ ಇಲ್ಲ! ಆದರೆ ಭಾಷಾವಿಷಯಕ ಪ್ರಶ್ನೆಯು ಹೊರಟಾಗ ನಾವು ಅವೆಲ್ಲವನ್ನೂ ಮರೆತುಬಿಡುತ್ತೇವೆಂಬುದನ್ನು ತೋರಿಸುವುದಕ್ಕೆ ಈ ಸಮ್ಮೇಲನವು ಒಳ್ಳೇ ಸುಸಂಧಿಯು. ಕರ್ನಾಟಕ ಸಾಹಿತ್ಯಸಮ್ಮೇಲನದಿಂದ ಹುಬ್ಬಳ್ಳಿಯ ವ್ಯಾಪಾರಸ್ಥರಲ್ಲಿಯೂ ಕರ್ನಾಟಕದ ವ್ಯಾಪಾರಸ್ಥರಲ್ಲಿಯೂ ವಿಶೇಷ ಜಾಗ್ರತಿಯುಂಟಾಗುವುದೆಂದು ಆಶಿಸಲಿಕ್ಕೆ ಮಾರ್ಗವಿದೆ. ವ್ಯಾಪಾರಸ್ಥರೆಂದರೆ ವಿದ್ಯಾವಿಷಯಕ ಚಳವಳಿಗಳಲ್ಲಿ ಹಿಂದುಳಿದವರೆಂದು ಈಗ ಸಾಮಾನ್ಯತಃ ಗ್ರಹಿಕೆಯಿರುತ್ತದೆ. ಅದನ್ನು ದೂರ ಮಾಡಬೇಕಾದರೆ ಕರ್ನಾಟಕದ ವ್ಯಾಪಾರಸ್ಥರು ಈ ಸಲ ಹುಬ್ಬಳ್ಳಿಯಲ್ಲಿಯೇ ಸಮ್ಮೇಲನವನ್ನು ಕೂಡಿಸಿ ತಮ್ಮ ಚಟುವಟಿಕೆಗಳನ್ನು ತೋರಿಸಬೇಕು. ಭಾಷೆಗೂ ವ್ಯಾಪಾರಸ್ಥರಿಗೂ ಅನೇಕ ಬಗೆಯಿಂದ ಸಂಬಂಧವುಂಟಾಗುತ್ತದೆ. ಕನ್ನಡದಲ್ಲಿ ವ್ಯಾಪಾರ ವಿಷಯಕ ಶಬ್ದಗಳದೊಂದು ದೊಡ್ಡ ಕೊರತೆಯಿರುತ್ತದೆ. ಅದೇನೋ ರೆನೆ ಬಡಿಗ, ಕಮ್ಮಾರ ಮುಂತಾದ ಉದ್ಯೋಗಸ್ಥರ ಪರಿಭಾಷೆಯ ಶಬ್ದಗಳೂ ಇನ್ನೂ ಒಂದೆಡೆಗೆ ಸಂಕಲಿತವಾಗಿಲ್ಲ. ಈಗ ಪ್ರಚಾರದಲ್ಲಿರುವ ವ್ಯಾಪಾರವಿಷಯಕ ಶಬ್ದಗಳು ಬಹುಶಃ ಗುಜರಾಥೀ ಶಬ್ದಗಳು. ಅವುಗಳ ಬದಲು ಅದಷ್ಟು ಮಟ್ಟಿಗೆ ಕನ್ನಡ ಶಬ್ದಗಳನ್ನು ಪ್ರಚಾರದಲ್ಲಿ ತರಲಿಕ್ಕೆ ಬೇಕಾಗಿದೆ. ಕನ್ನಡ ವ್ಯಾಪಾರಸ್ಥರು ತಮ್ಮ ಲೆಕ್ಕಪತ್ರಗಳನ್ನು ಇನ್ನೂ ಕನ್ನಡದಲ್ಲಿ ಬರೆಯುವ ರೂಢಿಯು ಸಾರ್ವತ್ರಿಕವಾಗಿಲ್ಲ. ಅದಕ್ಕೋಸ್ಕರ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬುದನ್ನು ಎಲ್ಲರೂ ಯೋಚಿಸಬೇಕಾಗಿದೆ. ಸಾರಾಂಶ— ಹುಬ್ಬಳ್ಳಿಯ ವರ್ತಕರೂ ಕರ್ನಾಟಕದ ಮಿಕ್ಕ ವರ್ತಕರೂ ಮನಸ್ಸು ಹಾಕಬೇಕಾದ ಅನೇಕ ವಿಷಯಗಳಿರುತ್ತವೆ.

ಮತ್ತೊಂದು ವಿಶೇಷವೇನೆಂದರೆ ಈ ಸಾರೆಯ ಸಮ್ಮೇಲನದ ಕಾಲಕ್ಕೆ ವಿಜಯನಗರ ಸ್ಮಾರಕೋತ್ಸವದ ಕೇಂದ್ರ ಸಭೆಯನ್ನು ಸ್ಥಾಪಿಸುವುದಕ್ಕೋಸ್ಕರ, ಅಖಿಲ ಕರ್ನಾಟಕ ಸಭೆಯೊಂದನ್ನು ಕರೆಯುವುದು ಅವಶ್ಯವಿದೆ. ವಿಜಯನಗರ ಸ್ಮಾರಕೋತ್ಸವವು ಸಾಂಸ್ಕೃತಿಕ ಉತ್ಸವವು. ಅದಕ್ಕೂ ರಾಜಕಾರಣಕ್ಕೂ ಪ್ರತ್ಯಕ್ಷ ಸಂಬಂಧವೇನೂ ಇಲ್ಲ. ಆದಕಾರಣ, ಆ ಸ್ಮಾರಕೋತ್ಸವದ ಕೇಂದ್ರ ಸಭೆಯನ್ನು ಸ್ಥಾಪಿಸುವುದಕ್ಕೆ ಕರ್ನಾಟಕ ಸಾಹಿತ್ಯ ಸಮ್ಮೇಲನದ ಕಾಲಕ್ಕೇ ಸಭೆ ಕರೆಯುವುದು ಲೇಸು. ಬಳ್ಳಾರಿಯಲ್ಲಿ ಅಖಿಲ ಹಿಂದ ಸ್ಥಾನದ ಸ್ವದೇಶಿ ಪ್ರದರ್ಶನವು ನಾತಾಳ ರಜೆಯಲ್ಲಿ ಜರುಗತಕ್ಕದ್ದಿದೆ. ಆ ಕಾಲಕ್ಕೆ ವಿಜಯನಗರ ಸ್ಮಾರಕೋತ್ಸವದ ಸಭೆಯನ್ನು ಕರೆಯಬೇಕೆಂದು ಕೆಲವರ ಅಭಿಪ್ರಾಯ. ಆದರೆ ಪ್ರದರ್ಶನಕ್ಕೆ ಕೆಲವೊಂದು ತರಹದ ಮಂದಿಯೇ ವಿಶೇಷವಾಗಿ ಹೋಗುವ ಸಂಭವವಿರುವದರಿಂದ ಈ ಸಭೆಯನ್ನು ಸಾಹಿತ್ಯ ಸಮ್ಮೇಲನದೊಂದಿಗೆ ಕರೆಯುವುದು ವಿಹಿತವೆಂದು ಅನೇಕರ ಅಭಿಪ್ರಾಯವಿದೆ. ಹುಬ್ಬಳ್ಳಿಯವರು ಯಾವುದೇ ಕಾರಣದಿಂದ ಕರ್ನಾಟಕ ಸಾಹಿತ್ಯಸಮ್ಮೇಲನವನ್ನು ಕರೆಯದಿದ್ದರೆ [ಈಸಲ ಅವರು ಹಾಗೆ ಕರೆಯದೆ ಇರಲಾರರೆಂದು ನಾವು ನಂಬುತ್ತೇವೆ.] ಬಳ್ಳಾರಿಯಲ್ಲಾಗಲಿ, ಗದುಗಿನಲ್ಲಾಗಲಿ ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ಕೂಡಿಸುವ ಏರ್ಪಾಡನ್ನು ಮಾಡಬೇಕಾಗುತ್ತದೆ. ಅಂತೂ, ಯಾವುದೊಂದು ಮಾತು ಶೀಘ್ರವೇ ನಿಶ್ಚಯವಾಗುವುದು ಅವಶ್ಯವಿದೆ. ಏಕೆಂದರೆ ನಾತಾಳ ರಜೆಗೆ ದಿವಸಗಳು ಬಹಳ ಉಳಿಯಲಿಲ್ಲ.

ಈಸಲದ ಸಾಹಿತ್ಯ ಸಮ್ಮೇಲನಕ್ಕೆ ಹೊಸ ಕಳೆಯು ಬರುವುದಕ್ಕೆ ಹುಬ್ಬಳ್ಳಿಯವರು ಇದರ ಜತೆಗೆ ಶಕ್ಯವಾದಷ್ಟು ಮಿಕ್ಕ ಸಮ್ಮೇಲನಗಳನ್ನೂ ಪ್ರದರ್ಶನಗಳನ್ನೂ ಕೂಡಿಸುವರೆಂದು ಆಶಿಸುತ್ತೇವೆ.

ಟಿಪ್ಪಣಿ:— ಹುಬ್ಬಳ್ಳಿಯಲ್ಲಿ ಸಾಹಿತ್ಯ ಸಮ್ಮೇಲನದ ಏರ್ಪಾಡು ನಡೆದಿದೆಯೆಂದು ಇದೀಗ ಸುದ್ದಿ ಬಂದಿದೆ.

ಸಂಪಾದಕ

ಹಿಂದುಸ್ತಾನ

ಉಜನಿಸಾದಲ್ಲಿ ನಡೆದಿರುವ ಹಿಂದು ಮಹಾ ಸಭೆಗೆ ೩೦ ಸಾವಿರ ಪ್ರತಿನಿಧಿಗಳು ಬಂದಿರುವರು. ಅಧ್ಯಕ್ಷರ ಮೆರವಣಿಗೆಯನ್ನು ಆನೆಯ ಅಂಬಾರಿಯಲ್ಲಿ ಹೊರಡಿಸಿದ್ದರು.

ಸತ್ಯಾಗ್ರಹದಿಂದ ಸ್ವಾತಂತ್ರ್ಯ ಸಿಗಲಾರದೆಂದು ಸ್ವಾಮಿ ಪರಮಾನಂದರ ಮತ.

ಸಂಯುಕ್ತ ಪ್ರಾಂತದಲ್ಲಿ ನಡೆದಿರುವ ಮುಖಂಡರ ಸಭೆಯವರು ಕೆಳಗಿನಂತೆ ನಿರ್ಣಯಗಳನ್ನು ಮಾಡಿದರು—ವಯಸಿಗೆ ಬಂದ ಎಲ್ಲರಿಗೆ ಮತ ಕೊಡುವ ಹಕ್ಕು ಇರಬೇಕು. ಇಂಥ ಮತದಾರರಿಂದ ಆರಿಸಲ್ಪಟ್ಟ ಪ್ರತಿನಿಧಿಗಳ ಮಹಾ ಸಭೆ ಇರಬೇಕು. ಅಲ್ಪ ಸಂಖ್ಯಾಕರ ಪ್ರಶ್ನೆಯನ್ನು ಬಗೆಹರಿಸುವ ಅಧಿಕಾರವು ಈ ಸಭೆಯವರಿಗೇ ಇರತಕ್ಕದ್ದು. ರಾಜಕೀಯ ಆರ್ಥಿಕ ಸ್ವಾತಂತ್ರ್ಯ ಸಂಪಾದಿಸುವದು ಮುಖ್ಯ ಗುರಿಯಾಗಿರಬೇಕು. ಸ್ವದೇಶಿಯ ಪ್ರದರ್ಶನಗಳಲ್ಲಿ ಹಿಂದೀ ಗಿರಣಿಗಳಲ್ಲಾದ ಸರಕನ್ನು ಸ್ವದೇಶಿ ಎನ್ನಲಾಗದು. ಬ್ರಿಟಿಶ ಸರಕಾರದೊಡನೆ ಕೂಡಿ ನಡೆಯುವವರನ್ನು ವಿರೋಧಿಸಬೇಕು.

ಓರಿಸಾ ನೆರೆ ಹಾವಳಿಯಲ್ಲಿ ಸಿಕ್ಕು ಕಂಗೆಟ್ಟ ಜನರ ಸಹಾಯಕ್ಕೆಂದು ಮುಂಬೈಯವರು ೧೯ ಸಾವಿರ ರೂಪಾಯಿ ಕೊಡಬೇಕೆಂದು ಮಾಡಿದ್ದಾರೆ.

ನಯಪಾಮದಲ್ಲಿ ಮತ್ತೆ ಬಂಡಾಯ ನಡೆದಿದ್ದು ಅರಸುಮನೆತನದ ಮಹಾದೇವ ಎಂಬ ಒಬ್ಬ ರಾಜಪುತ್ರನು ರಾಜಧಾನಿಯ ಮೇಲೆ ಸಾಗಿ ಬರುವನೆಂದು ಸುದ್ದಿ.

ಅಖಿಲ ಭಾರತ ಕಾಂಗ್ರೆಸ ಕಮಿಟಿಯನ್ನು ಸೇರಿಯಬೇಕೆಂಬ ಪಂಡಿತ ಮಾಲವೀಯರ ಮತಕ್ಕೆ ಮಿ. ಸಿಧ್ವರು ಬೆಂಬಲ ಕೊಟ್ಟಿದ್ದಾರೆ.

ಬ್ರಹ್ಮದೇಶದಿಂದ ಬಂದ ಜಲಪಾಲಕ ಎಂಬ ಸರಕಿನ ಹಡಗಿಗೆ ಬೆಂಕಿ ಹತ್ತಿ ೧ ಲಕ್ಷದ ವರೆಗೆ ಹಾನಿ ತಟ್ಟಿತು.

ಬೆಳಗಾವಿ

ತಾ. ೧೩ ಇಲ್ಲಿಯ ರೇಲ್ವೆ ಗೇಟಿನ ಹತ್ತರ ಇರುವ ಕಿಲ್ಲೆಯ ಕಂದಕದಲ್ಲಿ ೩೫ ವರ್ಷದ ಒಬ್ಬನ ಹೆಣವು ತೇಲುತ್ತಿದ್ದದ್ದು ಇಂದು ಮಧ್ಯಾಹ್ನ ೧ ॥ ಘಂಟೆಗೆ ಕಂಡು ಬಂತು. ಕೂಡಲೇ ಪೋಲಿಸರು ಬಂದು ಪಂಚನಾಮೆ ಮಾಡಿದರು, ಆದರೆ ಸತ್ತವನು ಯಾರೆಂಬದು ಗೊತ್ತಾಗಲಿಲ್ಲ.

ಹುಕ್ಕೇರಿ ತಾಲೂಕಿನ ಇಬ್ಬರು ಕುಲಕರ್ಣಿಯವರು ನಾಣ್ಯ ಮಾಡಿದ್ದಕ್ಕೆ ಹಿಡಿಯಲ್ಪಟ್ಟು ಅವರ ವಿಚಾರಣೆಯಾಗಿ ಇಬ್ಬರಿಗೂ ೭ ವರ್ಷ ಸಶ್ರಮ ಶಿಕ್ಷೆಯಾಯಿತು. ಒಬ್ಬನು ಈ ಮೊದಲೇ ಒಮ್ಮೆ ೩ ವರ್ಷ ತುರಂಗವಾಸವನ್ನು ಅನುಭೋಗಿಸಿರುವನು.

ಗರೂಡ ಸದಾಶಿವರಾಯರು ಕುತ್ತನ್ನು ದಾಟಿದರು.

ಗದಗಿನಿಂದ ಹಾವೇರಿಗೆ ಬರುವಾಗ್ಗೆ ಮೋಟರು ಅಪಘಾತಕ್ಕೆ ಒಳಗಾಗಿ ಸವಣೂರ ಹತ್ತರ ಹೊರಳಿಬಿತ್ತು. ಸಹ ಕುಟುಂಬ ಮತ್ತು ನಾಲ್ಕು ಚಿಕ್ಕ ಮಕ್ಕಳೊಡನೆ ಮೋಟರಿನಲ್ಲಿ ಶ್ರೀ ಗರೂಡರಿದ್ದರು. ಗಿಡಕ್ಕೆ ಢಕ್ಕೆ ಹೊಡೆದು ಮೋಟರು ಹೊರಳಿ ಬಿದ್ದದ್ದಕ್ಕೆ ಬೀದಿ ಪಕ್ಕದಲ್ಲಿ ಮೂವತ್ತು ಫೂಟ ಅಂದಾಜ ಹೊಂಡವಿದ್ದರೂ ಯಾರಿಗೂ ಏನೂ ಅಪಾಯವಾಗದೆ ದೇವರ ದಯದಿಂದ ಸಕಲರೂ ಉಳಿದುಕೊಂಡರು. ಗಿಡವು ಅಡ್ಡಾಗದಿದ್ದರೆ ಮೋಟರು ನೇರವಾಗಿ ಮುಂದೆ ಇಪ್ಪತ್ತು ಫೂಟಿನಷ್ಟು ಅಗಲದ ಆಳವಾದ ಹಾಳಭಾವಿಯಲ್ಲಿ ಬೀಳುತ್ತಿತ್ತು.

ಇಹವೃತ್ತ

ಧಾರವಾಡ ಟ್ರೇನಿಂಗ ಕಾಲೇಜಿನ ಮಿ. ಎಚ್ ಕೂಪರವರು ಆರು ವಾರ ರಜೆಯ ಮೇಲೆ ಹೋಗಿದ್ದು ಅವರ ಜಾಗೆಗೆ ಸಧ್ಯಕ್ಕೆ ಮಿ. ಜೋಶಿಯವರು ನೇಮಿಸಲ್ಪಟ್ಟಿರುವರು.

ನಿನ್ನಿನ ಮಳೆಯಿಂದ ಇಲ್ಲಿ ಅನೇಕ ಮನೆಗಳು ಬಿದ್ದಿವೆ.

ಕಲಘಟಗಿಯ ಮಹಾದೇವ ಜೋಶಿಯವರು ವಿಸಾಪುರ ಜೇಲಿನಿಂದ ಬಿಡುಗಡೆ ಹೊಂದಿ ಇಲ್ಲಿಗೆ ನಿನ್ನೆ ಬಂದಿರುವರು.

ಹುಬ್ಬಳ್ಳಿಯ ಪತ್ರ

ನಿನ್ನೆ ಸಂಜೆಗೆ ೨ ನೇ ನಂಬರ ಕನ್ನಡ ಗಂ. ಶಾ. ಶಾಲೆಯಲ್ಲಿ ಹುಬ್ಬಳ್ಳಿ ನಾಗರಿಕರ ಸಭೆಯು ಶ್ರೀ ಮಿರ್ಜಿವಕೀಲರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಈವರ್ಷ ನಾತಾಳಿಯಲ್ಲಿ ಇಲ್ಲಿ ಕೂಡಲಿರುವ ಸಾಹಿತ್ಯ ಸಮ್ಮೇಲನದ ಬಗ್ಗೆ ಒಂದು ಮಂಡಲವು ಏರ್ಪಟ್ಟಿತು. ಶ್ರೀ ಖಾವಟೆ ವಕೀಲರು ಆ ಮಂಡಲದ ಅಧ್ಯಕ್ಷರಾಗಿಯೂ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಈ ಮಂಡಲದಲ್ಲಿ ಕೆಳಗೆ ಬರೆದ ಸದ್ಗೃಹಸ್ಥರೂ ಕೆಲಸ ಮಾಡಲು ಒಪ್ಪಿರುವರು.

೧ ಶ್ರೀ ಗಾಂವಕರ, ೨ ಶ್ರೀ ನಾಳವೇಕರ ವಕೀಲರು, ೩ ಶ್ರೀ ಬ್ಯಾಹಟ್ಟಿ ಹಾಯಸ್ಕೂಲ, ೪ ಶ್ರೀ ಮೊಕಾಶಿ ೫ ಶ್ರೀ ಎಲ್ ಎಸ್ ಪಾಟೀಲ ಸಂಕೇಶ್ವರ ೬ ಶ್ರೀ ನಾದರಪಳ್ಳಿ, ೭ ಶ್ರೀ ಘೂಸನೂರ ಶ್ರೀ ಪಿ. ಜಾದವ ೯ ಶ್ರೀ ಮಿರ್ಜಿ

ನಿನ್ನೆ ಮಧ್ಯಾಹ್ನ ೨॥ ಘಂಟೆಯಿಂದ ೩ ಘಂಟೆಯವರೆಗೆ ಒಂದೇ ಸಮನೇ ಮಳೆ ಹೊಡೆಯಿತು. ಬೀದಿಗಳೆಲ್ಲ ನೀರಿನಿಂದ ತುಂಬಿದ್ದವು.

ತಾ|| ೧೨ ನೇ ದಿವಸ ಸಂಜೆಗೆ ಮಂಗಳೂರಿನ ಸುಪ್ರಸಿದ್ಧ ಶ್ರೀ ಪಂಜೆ ಮಂಗೇಶರಾಯರು ಇಲ್ಲಿಯ ಪ್ರಾಥಮಿಕ ಶಿಕ್ಷಕರೆದುರಿಗೆ ಬಹಳೇ ಪರಿಣಾಮ ಕಾರಿಯಾಗಿ ಬಾಲಕರ ಶಿಕ್ಷಣದ ವಿಷಯವಾಗಿ ಮಾತನಾಡಿದರು. ತಾವು ಬರೆದ ೧೨ ಕವಿತೆಗಳನ್ನು ಅಂದು ತೋರಿಸಿದರು. ಪರಿಣಾಮವೆಂದರೆ ಇಲ್ಲಿಯ ಕೆಲ ಕನ್ನಡ ಶಾಲಾ ಮಾಸ್ತರರು ಹಸ್ತಲಿಖಿತ ಮಾಸಿಕ ಪುಸ್ತಕಗಳನ್ನು ತಮ್ಮ ತಮ್ಮ ಶಾಲೆಯಲ್ಲಿ ಪ್ರಾರಂಭಿಸಬಹುದೆಂದು ಕಂಡು ಬಂದಿತು.

ತಾ|| ೧೩ ನೇ ದಿವಸ ಮುಂಜಾನೆ ಇಲ್ಲಿಯ ವರ್ಕಶಾಪಿನಲ್ಲಿ ಫಾರ್ಮಂಡರೀ ಖಾತದ ಭೊರಮಣ್ಣರು ತಮ್ಮ ಕಾಲಿನಲ್ಲಿಯ ಏಕಾ ಏಕಿ ಮರಣ ಹೊಂದಿದರು. ಇವರ ಮರಣದಿಂದ ೩ ಕರ್ಮಚಾರಿಗಳು ಸಾಂಟ ಕೊಟ್ಟಿದ್ದರು.

ಶಿಕ್ಷಣ ಸಪ್ತಾಹವು ಮೊನ್ನೆ ಬುಧವಾರಕ್ಕೆ ಮುಗಿಯಿತು. ಕರ್ನಾಟಕದ ಎಲ್ಲ ಕಡೆಯ ಶಿಕ್ಷಕರು ತಂಡತಂಡವಾಗಿ ನೆರೆದಿದ್ದರು. ಕರ್ನಾಟಕದ ಈ ಶಿಕ್ಷಣ ಸಮ್ಮೇಲನಕ್ಕೆ ಅಧ್ಯಕ್ಷರಾಗುವ ಯೋಗ್ಯತೆಯುಳ್ಳವರು ಕರ್ನಾಟಕದಲ್ಲಿ ಯಾರೂ ಇಲ್ಲವೇ? ಮೈಸೂರ ಕಡೆಗಾದರೂ ದೊರೆಯಬಹುದಿತ್ತಲ್ಲ? ಉತ್ತರ ದಿಕ್ಕಿನ ಮೋಹವು ಇನ್ನೂ ಕನ್ನಡಿಗರಲ್ಲಿ ಬಿಟ್ಟಿಲ್ಲವೆಂದು ತೋರುತ್ತದೆ. ಇತ್ತಕಡೆಯವರು ಉತ್ತರದ ಕಡೆಗೆ ಇಂಥ ಸ್ಥಾನಗಳಿಗಾಗಿ ಎಂದಾದರೂ ಆಮಂತ್ರಿಸಲ್ಪಟ್ಟಿರುವರೇ? ನೋಡಬೇಕು. ನಮ್ಮ ಈ ವರ್ಷದ ಸಾಹಿತ್ಯ ಸಮ್ಮೇಲನಕ್ಕೆ ಯಾವದಿಕ್ಕಿನವರು ಅಧ್ಯಕ್ಷರಾಗಬೇಕೆಂದು ದನ್ನು!

ಮುಂದಿನ ವರ್ಷ (೧೯೩೪) ಶಿಕ್ಷಣ ಸಮ್ಮೇಲನವು ಬೆಳಗಾವಿ ಜಿಲ್ಲೆಯಲ್ಲಿ ಕೂಡಬೇಕಾಗಿ ಆಮಂತ್ರಣವನ್ನು ಗೋಕಾವಿ ಶಾಲೆಯ ಶ್ರೀ ಪಾಟೀಲರವರು ಕೊಟ್ಟರು ಮತ್ತು ಅದನ್ನು ಅಧ್ಯಕ್ಷರು ಸರ್ವರ ಸಮ್ಮತಿಯಿಂದ ಸ್ವೀಕರಿಸಿದರು.

ರಾಜಕಾರಣವು ಸ್ವದೇಶಿಗೆ ಪ್ರೈಲಿಗೆಯು.

"ಕನ್ನಡಿಗ" ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

ದೇಶಿಯೂ ರಾಜ್ಯಕಾರ್ಯವೂ.

ಅಜಮೀರ ತಾ॥ ೧೪ ಅಖಿಲ ಭಾರತ ಸ್ವದೇಶಿ ಕೈಗಾರಿಕೆಯ ಪ್ರದರ್ಶನವು ಅಜಮೀರ ರಜಪುತಸ್ಥಾನದ ಸರಕಾರಿ ಏಜಂಟರಾದ ಕ್ಲ ಅಜಲಿವ್ಹರ ಅಧ್ಯಕ್ಷತೆಯಲ್ಲಿ ತೆರೆಯಲು ಪ್ರದರ್ಶನ ಮಂಡಲದ ಅಧ್ಯಕ್ಷರಾದ ಬ ಹರಬಿಲಾಸ ಶಾರದಾ ಅವರು, ತಮ್ಮ ಪ್ರಾರಂಭದ ಭಾಷಣದಲ್ಲಿ ಅಂದದ್ದು— ಹಿಂದೂಸ್ಥಾನ ಸರಕಾರದವರ ಇತ್ತೀಚೆಗೆ ಸ್ವದೇಶಿ ಕೈಗಾರಿಕೆಗಳ ರಕ್ಷಣೆಯಲ್ಲಿ ಸಾಕಷ್ಟು ಪ್ರೋತ್ಸಾಹಿಸುತ್ತಿರುವದು ಮತ್ತು ಯೋಗ್ಯ ಕಾರಣದಿಂದ ರಕ್ಷಣೆಯ ಧೋರಣೆಯನ್ನು ಅವಲಂಬಿಸಿರುವುದ ಬಹು ಸಂತೋಷದ ಮಾತಾದಾಗ್ಯೂ, ಸರಕಾರದವರು ಕಬ್ಬಿಣ ಉಕ್ಕು, ಬಟ್ಟೆ, ಕಾಗದ, ಬೆಂಕಿಪೆಟ್ಟಿಗೆ, ಇವುಗಳಿಗೆ ರಕ್ಷಣೆ ಕೊಟ್ಟು ಹತ್ತಿಯ ಮೇಲಿನ ಸುಂಕವನ್ನು ತೆಗೆದು ಹಾಕಲಿಕ್ಕೆ ಬೇಕು ಅಲ್ಲ ದೆ ಜಪಾನದಿಂದ ಹಿಂದುಸ್ಥಾನಕ್ಕೆ ಬರುವ ಸರಕುಗಳ ಮೇಲೆ ಜಕಾತಿ ಹಾಕಬೇಕು.

ಅಧ್ಯಕ್ಷರಾದ ಕರ್ನಲ್ ಅಜಲಿವ್ಹರು ತಮ್ಮ ಭಾಷಣದಲ್ಲಿ ರಾಜಕಾರ್ಯದಿಂದ ಅಲಿಪ್ತವಾಗಿ ಶುದ್ಧ ಸ್ವದೇಶಿಗೆ ಅವಶ್ಯ ಬೆಂಬಲ ಕೊಡುವದು, ಮತ್ತು ಸರಕಾರದವರು ಹಿಂದೀ ಜನರಿಗೆ ಎಲ್ಲ ವಿಧದ ಉತ್ತೇಜನ ಕೊಡಲಿಕ್ಕೆ ತಯಾರವರಲ್ಲದೆ ಹುಡುಗರಿಗೆ ಕೈಗಾರಿಕೆಯ ಶಿಕ್ಷಣ ಒದಗಿಸಲು ಯಾವಾಗಲೂ ಸಿದ್ಧರಿರುವರು ಎಂದರು.

(ಅ ಪ್ರೆ ತಂತಿ)

ಸೆರೆಯಾಳುಗಳ ಸಂಖ್ಯೆ ಕರಗಿತು.

ಮದ್ರಾಸ ತಾ॥ ೧೩— ಮದ್ರಾಸ ಇಲಾಖೆ ಸೆರೆಮನೆಯಲ್ಲಿ ಸತ್ಯಾಗ್ರಹ ಮೂಲಕ ಸೆರೆ ಹೊಂದ ಸೆರೆಯಾಳುಗಳು ಅಕ್ಟೋಬರ ೧ನೇ ತಾರೀಖಿನ ವರೆಗೆ ೩೦೯ ಜನರಿದ್ದರು ಇವರಲ್ಲಿ ಹದಿಂದಿ ಹೆಂಗಸರು ಇದ್ದಾರೆ

(ಅ ಪ್ರೆ ತಂತಿ)

ಸಿಮಲೆಯಲ್ಲಿ ವರ್ತಕರ ಚರ್ಚೆ.

ಸಿಮಲಾ ತಾ॥ ೧೩— ಪ್ರತಿನಿಧಿಗಳ ಸಭೆ ನಡೆಯುವ ಸೋಮವಾರ ಕೂಡುವದು ಅಲ್ಲಿ ತಜ್ಞರು ತಮ್ಮತಮ್ಮೊಳಗಿನ ಮತಭೇದವನ್ನು ಕಡಿಮೆ ಮಾಡುವರೆಂದು ಅಪೇಕ್ಷೆಯು ಜಪಾನದವರು ಇಲ್ಲಿಯ ತಮ್ಮ ಸಭಾರುಗಳಿಂ ಲಕ್ಷ ವಾರವಷ್ಟು ಅರಿವೆಯನ್ನು ಬೇಕೆಂದು ಹೇಳುತ್ತಾರೆ ೩೦೦೦ ವಾರಗಳಿಗಿಂತ ಹೆಚ್ಚಿಗೆ ಇಡಕೂಡದೆಂದು ಇಲ್ಲಿಯ ಗಿರಣಿಯವರ ಹಿಂಜೋಣವದೆ ಮುಂದಿನ ಜಕಾತಿಯ ಬಗ್ಗೆ ಸಂಬಂಧವಾಗಿಯೂ ಚರ್ಚೆ ನಡೆದದೆ ಜಪಾನದವರು ಕಡಿಮೆ ಅರಿವೆಯನ್ನು ಸಂಗ್ರಹದಲ್ಲಿಡಲಿ ಒಪ್ಪಿದರೆ ಹಿಂದುಸ್ಥಾನದವರೂ ಜಕಾತಿಯನ್ನು ಕಡಿಮೆ ಮಾಡಲಿಕ್ಕೆ ಒಪ್ಪಬಹುದೆಂದು ತೋರುತ್ತದೆ ಖಾಸಗಿ ಸಲಹೆಗಾರರಲ್ಲಿ ಕೆಲವರು ತಮ್ಮ ತಮ್ಮ ಸ್ಥಳಗಳಿಗೆ ತಿರುಗಿ ಹೋಗಿದ್ದಾರೆ ಲ್ಯಾಂಕೆಶಾಯರ ಪ್ರತಿನಿಧಿಗಳು ಬಂದ ೨೦ನೆಯ ತಾರೀಖಿಗೆ ತಿರುಗಿ ಹೋಗುವವರಿದ್ದರು ಆದರೆ ಅವರು ಇನ್ನೂ ಕೆಲ ದಿವಸ ಇಲ್ಲಿಯೇ ಇರಬಹುದೆಂದು ತೋರುತ್ತದೆ

[ಅ ಪ್ರೆ ತಂತಿ]

ಶ್ರೀ. ಸರೋಜಿನೀ ದೇವಿಯವರ ಸಂದೇಶ.

ಮುಂಬಯಿ ತಾ॥ ೧೩— ನಿಜಾಮ ಸಾಹೇಬರು ತಮ್ಮ ಸಂಸ್ಥಾನದಲ್ಲಿಯ ಎಲ್ಲ ಪ್ರಜೆಗಳ ಏಳಿಗೆ ಬೆಳೆಸಿಗೆ ತಕ್ಕ ಅನುಕೂಲತೆಗಳನ್ನು ಕಲ್ಪಿಸಿಕೊಡಲಾಗುವದೆಂದೂ ಎಲ್ಲಮತದವರ ಬಗ್ಗೆ ಸಹಾನುಭೂತಿ ಇರುವದಾಗಿಯೂ ಪ್ರಕಟಿಸಿದ ರೀತಿ ನಿಜಾಮ ರಾಜ್ಯದ ಪ್ರಜೆಗಳಲ್ಲಿ ನಿಜಾಮರ ಸಾರ್ವಜನಿಕ ವಿಷಯದಲ್ಲಿ ... ಹಕ್ಕುಗಳು ಉಳಿಸುತ್ತವೆ ಅವನ್ನು ಸಾಮಾಜಿಕ ದೃಷ್ಟಿಯಿಂದ ತೋರ್ಪಡಿಸಲು ನಿಜಾಮ ಪ್ರಜೆಗಳು ನಾಳೆ ೧೫ ನೇ ತಾರೀಖಿಗೆ ಹೈದರಾಬಾದಿನಲ್ಲಿ ಒಂದು ನಾಗರಿಕರ ಸಭೆ ನೆರೆಯಿಸುವವರಿದ್ದಾರೆ. ಅದಕ್ಕೆ ಶ್ರೀ ಸರೋಜಿನೀ ದೇವಿಯವರು ತಮ್ಮ ಸಂದೇಶ ಕಳಿಸಿದ್ದಾರೆ. ಅದರಲ್ಲಿ ಅವರು ಅನ್ನುವದು ಎಲ್ಲ ಜಾತಿಯ ಜನರು ಒಕ್ಕಟ್ಟಾಗಿ ಒಂದೆಡೆಯಲ್ಲಿ ಸೇರಿ ಸಭೆ ನೆರೆಯಿಸಲು ಸಿದ್ಧವಾಗಿರುವ ಈ ಸಮಯ ನೋಡಿ ನನಗೆ ಸಂತೋಷವಾಗುವದಲ್ಲದೆ, ನಿಜಾಮ ಸಾಹೇಬರಿಗೆ ಕೃತಜ್ಞತೆಯನ್ನು ತೋರ್ಪಡಿಸುವ ಕಾರ್ಯದಲ್ಲಿ ನಾನೂ ಭಾಗಿಯಾಗಿರುವೆ ನಿಜಾಮ ಸಾಹೇಬರು ತಮ್ಮ ಪ್ರಜೆಗಳ ನ್ಯಾಯ್ಯ ಹಕ್ಕುಗಳನ್ನರಿತು ಅವರಿಗೆ ತಮ್ಮ ಸಂಸ್ಥಾನದೊಳಗೆ ಯೋಗ್ಯ ಹೆಚ್ಚಿನ ಕೆಲಸಗಳನ್ನು ಕೊಡಲು ಮುಂದೆ ಬಂದಿರುವದು ಬಹು ಸಮಾಧಾನದ ಸಂಗತಿ. ಇನ್ನು ತಮ್ಮ ಯೋಗ್ಯತೆಯನ್ನು ಸಿದ್ಧ ಪಡಿಸುವ ಭಾರವು ಪ್ರಜೆಗಳ ಮೇಲೆ ಬಿದ್ದಿದೆ ಇದರಲ್ಲಿ ಅವರು ತಮ್ಮ ರಾಷ್ಟ್ರೀಯ ಧ್ಯೇಯಗಳಾದ ಪರಮತ ಸಹಿಷ್ಣುತೆ, ಸಂಸ್ಕೃತಿ ಐಕ್ಯ ಇವೆಲ್ಲ ಗುಣಗಳನ್ನು ತಾಳಿಕೊಂಡು ಪೂರ್ಣಗೊಳಿಸ ಬೇಕಲ್ಲದೆ, ಹಿಂದುಸ್ಥಾನದೊಳಗೆ ಹಿರಿದಾದ ಸಂಸ್ಥಾನವೆನಿಸಿದ ನಿಜಾಮ ರಾಜ್ಯವನ್ನು ಅಧ ನಿಜ ಜ್ಞಾನ ಮತ್ತು ಬೆಳಗೆಯ ಮೂಲಕ ಎಲ್ಲ ವಿಷಯಗಳಲ್ಲಿ ಮುಂದರಿದ ಜನಾಂಗವನ್ನಾಗಿ ಮಾಡಲು ಹೆಣಗುವರೆಂದು ಆಸ. (ಅ ಪ್ರೆ ತಂತಿ)

ಹರಿಜನ ಕಾರ್ಯಕ್ಕಾಗಿ ಮಹಾತ್ಮರ ಪಯಣ

ವಂಬಯಿ ತಾ॥ ೧೪— ಮಹಾತ್ಮರ ಆರೋಗ್ಯವು ಈಗಿನಂತೆಯೇ ಸುಧಾರಿಸುತ್ತ ನಡೆದರೆ, ಹರಿಜನ ಕಾರ್ಯಪ್ರಚಾರಕ್ಕಾಗಿ ಅವರು ಮುಂದಿನ ತಿಂಗಳ ೮ ನೇ ತಾರೀಖಿಗೆ ಹೊರಡುವರೆಂದು ಹರಿಜನ ಪತ್ರಿಕೆಯಿಂದ ತಿಳಿಯುತ್ತದೆ ಮಹಾತ್ಮರು ಎಲ್ಲೆಡೆಯಲ್ಲಿ ತಿರುಗಿ ಹರಿಜನಕಾರ್ಯಕ್ಕಾಗಿ ದ್ರವ್ಯನಿಧಿಯನ್ನು ಕೂಡಿಸುವರು ಅಲ್ಲಲ್ಲಿಯ ಸನಾತನ ವಾದಿಗಳನ್ನು ಕಂಡು ಅವರೊಡನೆ ಮಾತಾಡುವರು ಮತ್ತು ಅಲ್ಲಲ್ಲಿಯ ಆದಿ ಜನರ ಕೇರಿಗಳಿಗೆ ಹೋಗುವರು ಮಹಾತ್ಮರು ತಮ್ಮಲ್ಲಿಗೆ ಬರಬೇಕೆಂದು ಅಪೇಕ್ಷೆಯುಳ್ಳವರು ಮಹಾತ್ಮರೊಡನೆ ಇರುವ ಮಿ. ರಕ್ಕರರೊಡನೆ ಪತ್ರವ್ಯವಹಾರ ನಡೆಸಿ, ಅವರಿಗೆ ತಮ್ಮಲ್ಲಿಗೆ ಬರಲಿಕ್ಕೆ ಕೇಳಿಕೊಂಬೇಕು.

(ಅ ಪ್ರೆ ತಂತಿ)

ಅಜಮೀರಕ್ಕೆ ಬುದ್ಧ ಭಿಕ್ಷುಗಳು.

ವರ್ಧಾ ತಾ॥ ೧೪ ಮಹಾತ್ಮರೊಡನೆ ವಾಸವಾಗಿದ್ದ ಜಪಾನ ಬುದ್ಧ ಭಿಕ್ಷುಗಳವ ಘೂ ಜಕಾತ್ಸಿಯ ವರು ನಿನ್ನಿನ ದಿನ ಅಜಮೀರಕ್ಕೆ ಸಾಗಿದರು

(ಅ ಪ್ರೆ ತಂತಿ)

ವಿಶಾಖಾ ಪಟ್ಟಣ ತಾ॥ ೧೩— ಮದ್ದಿನ ಮನೆಯಲ್ಲಿ ಸ್ಫೋಟವಾದ ಮೂಲಕ ಮದ್ದಿನ ಮನೆಯ ಯಜಮಾನನು ಸತ್ತನಲ್ಲದೆ ಮತ್ತೆ ಕೆಲವರು ಸತ್ತರಷ್ಟೆ! ಸುಟ್ಟ ಸ್ಥಳವನ್ನು ನೋಡಲಿಕ್ಕೆ ಜಿಲ್ಹೆಯ ಮ್ಯಾಜಿಸ್ಟ್ರೇಟರೂ, ಪೋಲೀಸರೂ ಹೋಗಿದ್ದರು [ಅ ಪ್ರೆ ತಂತಿ]

ಹಿಂದೀ ಹಡಗಗಳ ಪರಿಸ್ಥಿತಿ

ಮುಂಬಯಿ ತಾ॥ ೧೩— ಸಿಂಧೆ ಸ್ಟೀಮ ನ್ಯಾವಿಗೇಶನ ಕಂಪನಿಯ ೧೪ನೆಯ ಸಾಮಾನ್ಯ ಸಭೆಯು ಕೂಡಿದಾಗ ಅದರ ಚೇರಮನ್ನರಾದ ವಾಲಚಂದ ಹಿರಾಚಂದ ಇವರು ತಮ್ಮ ಭಾಷಣದಲ್ಲಿ ಹಿಂದುಸ್ಥಾನ ಸರಕಾರದವರು ಸಮುದ್ರದಲ್ಲಿಯ ವ್ಯಾಪಾರ ಮಾಡುವುದಕ್ಕೋಸ್ಕರ ಹಿಂದೀ ಹಡಗಗಳಿಗೂ ಸಾಕಷ್ಟು ಅವಕಾಶ ಕೊಡ, ವದು ಅವಶ್ಯವಿರುತ್ತದೆಂಬುದನ್ನು ಒತ್ತಿ ಹೇಳಿದರು. ಮತ್ತೆ ಅವರು ಹೇಳಿದ್ದೇನೆಂದರೆ ಹೊಸ ರಾಜಕೀಯ ಸುಧಾರಣೆಯಲ್ಲಿ ಹಿಂದೀ ಉದ್ಯೋಗಗಳಿಗೆ ಸೌಕರ್ಯಗಳನ್ನು ಕಲ್ಪಿಸಿ ಕೊಡುವ ಅಧಿಕಾರವು ಹಿಂದೀ ಶಾಸನ ಮಂಡಲಗಳಿಗೆ ಕೊಡಲ್ಪಡದಿದ್ದರೆ ಅದರ ಪರಿಣಾಮವು ಹಿಂದೀ ರಾಷ್ಟ್ರಕ್ಕೆ ಬಹಳ ಘಾತುಕವಾದುದು ಆಗುವುದು ಏಕೆಂದರೆ ಮುಂದೆ ಸಹ ಹಿಂದುಸ್ಥಾನವು ಬ್ರಿಟಿಶ ವ್ಯಾಪಾರಸ್ಥರ ಸುಲಿಗೆಯ ಕ್ಷೇತ್ರವಾಗಿಯೇ ಉಳಿಯುವುದು ಮತ್ತು ಹಿಂದುಸ್ಥಾನದ ಹಿತಸಂಬಂಧಗಳೆಲ್ಲವೂ ಇನ್ನೂ ಅನೇಕ ವರ್ಷಗಳವರೆಗೆ ಬ್ರಿಟಿಶರಿಗೆ ಒತ್ತಿಯಾಗಿಯೇ ಉಳಿಯುವವು.

ಹಡಗುಪಡೆಯ ಕೆಲಸಗಳಲ್ಲಿ ಹಿಂದೀ ಜನರನ್ನು ಸೇರಿಸಿಕೊಳ್ಳುವ ಸಂಬಂಧವಾಗಿ ಅವರು ಹೇಳಿದ್ದೇನೆಂದರೆ, ಈವರೆಗೆ ನೌಕಾಶಿಕ್ಷಣವನ್ನು ಕೊಡುವ ಸಲುವಾಗಿ ಡಫರಿನ ಹಡಗದಲ್ಲಿ ಶಿಕ್ಷಣ ಹೊಂದಿದವರಲ್ಲಿ ೨೩ ಜನರನ್ನು ಮಾತ್ರವೇ ತೆಗದುಕೊಂಡಿರುವರೆಂದೂ ಈ ವರ್ಷ ೬ ಅಥವಾ ೮ ಜನರನ್ನು ತೆಗೆದುಕೊಳ್ಳಬಹುದೆಂದು ಹೇಳಿದರು. ಜಪಾನ ದೇಶದವರು ನಮ್ಮ ದೇಶವನ್ನು ತಮ್ಮ ಅಕ್ಕಿಯಿಂದ ತುಂಬುತ್ತಿರುವದರಿಂದ ಗುಂಡಾಂತರವು ರಂಗೂನ ಅಕ್ಕಿಗೆ ಉಂಟಾಗಿರುವದು. ಅದರ ಸಲುವಾಗಿಯೂ ಹಿಂದೀ ಹಡಗಗಳ ಶಕ್ತಿಯನ್ನು ಬೆಳೆಸುವುದು ಅವಶ್ಯವಿದೆಯೆಂದು ಅವರು ಹೇಳಿದರು. ಕೊನೆಗೆ ಸರಕಾರದವರು ಹಡಗಗಳ ಇಂಜಿನಿಯರನ್ನು ತಯಾರಿಸುವುದಕ್ಕೆ ಸರಕಾರದವರು ಇನ್ನೂ ಏನೂ ಮಾಡಿಲ್ಲವೆಂಬ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿ ಅವರು ತಮ್ಮ ಭಾಷಣ ಮುಗಿಸಿದರು

(ಅ. ಪ್ರೆ ತಂತಿ)

ಡಾ. ಹರ್ಡೀಕರರಿಗೆ ಶಸ್ತ್ರಕ್ರಿಯೆಯು ಅವಶ್ಯಕತೆ

ವರ್ಧಾ ತಾ॥ ೧೪- ಈ ದಿನ ಡಾ॥ ಹರ್ಡೀಕರರ ಪ್ರಕೃತಿಯನ್ನು ಇಲ್ಲಿಯ ಡಾಕ್ಟರರು ಸಿವ್ಹಿಲ್ ಸರ್ಜನರು ನೋಡಿದರು ಮೊದಲನೇ ಗಾಡಿಯಿಂದಲೇ ಮುಂಬೈಗೆ ಹೋಗಲು ಮಹಾತ್ಮರು ಹೇಳಿದ ಮೇರೆಗೆ ಡಾಕ್ಟರರು ನಾಗಪುರ-ಅಮರಾವತಿಯಲ್ಲಿಯ ತಮ್ಮ ಕಾರ್ಯಕ್ರಮಗಳನ್ನೆಲ್ಲ ನಿಲ್ಲಿಸಿ ಮುಂಬೈಗೆ ತೆರಳಿದರು ಕರ್ನಾಟಕದಲ್ಲಿ ನೆರೆಯುವ ಮುಂಬರ ಪರಿಷತ್ತಿನ ಮೂಲಕ ೨೩ನೇ ತಾರೀಖಿನೊಳಗಾಗಿ ಶಸ್ತ್ರಕ್ರಿಯೆ ಮಾಡಿಸಿಕೊಳ್ಳಲಿಕ್ಕೆ ತಮಗೆ ಸಾಧ್ಯವಿಲ್ಲೆಂದು ಡಾಕ್ಟರರು ಹೇಳಿದರು ೨೩ನೆ ತಾ॥ ವರೆಗೆ ತಾವು ಕರ್ನಾಟಕದಲ್ಲಿ ಆಡ್ಡಾಡುವವರಿದ್ದುದರಿಂದ ಆ ಮೇಲೆ ಮಾಡಿಸಿಕೊಳ್ಳುವೆನೆಂದರು.

[ಅ. ಪ್ರೆ ತಂತಿ]

ಒರ್ವ ಕ್ರೈಸ್ತನಿಗೆ ಲಿಂಗಧಾರಣ.

ಧುಳೆಯಲ್ಲ ಶ್ರೀ ಜಗದ್ಗುರು ವಿರೂಪಾಕ್ಷಾಚಾರ್ಯರ ಹಸ್ತದಿಂದ ಮುಂಬೈ ರೇಲ್ವೆ ಲೈನ ಇನಸ್ಪೆಕ್ಟರನಾದ ಚನ್ನಪ್ಪ ತಿಗಳಿ ಎಂಬವನಿಗೆ ಲಿಂಗಧಾರಣೆಯ ವಿಧಿಯು ವಿಧ್ಯುಕ್ತವಾಗಿ ಯಿಂದ ಸಂಪೇರಿಸಲ್ಪಟ್ಟಿತು.

ಕರ್ನಾಟಕದಲ್ಲಿ ಹರಿಜನ ಕಾರ್ಯ

ಬೆಳಗಾವಿ ಜಿಲ್ಲೆಯಲ್ಲಿ ಹಿಂದಕ್ಕೆ ಕೆಲಸ ಮಾಡಿದ ಶ್ರೀ ಬಿದರಿ ನಾಮನರಾಯರು ಸೇವ ನೆಯಿಂದ ಎಂಟಿಮ್ಮ ಸಂಗಡ ಬೈಲಹೊಂಗಲ ತಾಲೂಕಿನ ಊರುಗಳಿಗೆ ಹೋಗಿ ಅಲ್ಲಲ್ಲಿಯ ಜನರೊಡನೆ ಹರಿಜನರ ಕಾರ್ಯದ ಬಗ್ಗೆ ಚರ್ಚೆ ಮಾಡಿದರು

ಮಂಗಳೂರಿನ ಹರಿಜನ ಸೇವಾ ಸಂಘದವರು ಅಸ್ಪೃಶ್ಯತಾ ನಿವಾರಣೆಯ ನಾಟಕಕ್ಕೆ ಸ್ಪರ್ಧೆಯ ಕಾಣಿಕೆಯನ್ನಿಟ್ಟಿದ್ದರು ಸ್ಪರ್ಧೆಗೆ ಯೋಗ್ಯವಾದ ನಾಟಕಗಳು ಬರದಿದ್ದರೂ ಬಂದ ೬ ನಾಟಕಗಳಲ್ಲಿ ೩ ಜನ ವಿದ್ಯಾರ್ಥಿಗಳೇ ಇದ್ದು ಸಮಾಧಾನ ಕಾಣಿಕೆ ಎಂದು ಮಡಿಕೇರಿಯ ಸೆಂಟ್ರಲ್ ಸ್ಕೂಲಿನ ವಿದ್ಯಾರ್ಥಿ ಅಣ್ಣಪ್ಪನವರಿಗೆ ಬೆಳ್ಳಿಯ ಪದಕ ಕೊಡಲಾಗುವದಂತೆ

ಹುಬ್ಬಳ್ಳಿ ಪೇಟೆಯ ಧಾರಣೆ

(ಶೇಂಗಾ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೧೪ ಮಧ್ಯಾಹ್ನ ೧೧ ಗಂಟೆ)

ಜವಾರಿ ಹತ್ತಿ	೧೦೨-೧೦೩	ಜೋಳ	೧೨-೧೪
ಅಣ್ಣಿಗೇರಿ	೧೦೨-೧೦೩	ಗೋದಿ	೩॥-೭
ವಿಲಾಯತಿ	೯೫-೯೭	ಉದ್ದು	೬॥-೭
ಕುಮಟಾ	೧೦೯-೧೧೦	ಕಡ್ಲಿ	೬ ೬।
ಜಯವಂತ	೭೩ ೭೪	ಕಡ್ಲಿ ಕಾ. ಕಾ	೫॥
ಪಟ್ಟೆಗಾಲು ಕ.	೬೬ ೬೭	ಶೇಂಗಾ	೧೨।
ಸಾಜಿನ ಅರಳಿ	೬೬ ೬೭	ಹುರಳಿ	೧೪
ಹೆಸರು ಜವಾರಿ	೯ ೧೨		
ಸಿಂಗಾಪುರ ಹೆಸ ೩॥-೬		ಹತ್ತಿ ಕಾಳು	೫೬

ಬೆಳ್ಳಿ ಬಂಗಾರ

ಬಂಗಾರ	೩೨॥ =	ಬೆಳ್ಳಿ	॥-

ಮುಂಬಯಿ ಪೇಟೆಯ ಧಾರಣೆ

ಅಕ್ಟೋಬರ ತಾ॥ ೧೩ ಸಂಜೆ ೫ಕ್ಕೆ

ಬಂಗಾರ	೩೩-೦ ೯	ಬೆಳ್ಳಿ	೫೭-೮ ೦

ಅರಳಿ

ಹತ್ತಿ ಬಡೋಚ	ಏ ಪ್ರಿ	೧೮೯-೮
ಶೇಂಗಾ	೨೬-೯-೨	ಫೆಬ್ರುವರಿ

ಹುಕ್ಕೇರಿಯ ಆರೋಗ್ಯಭವನದ ಪರವಾಗಿ ಯಿಂದ ಬೆಳಗಾವಿಯ ಡಾ. ಕೊಕಟನೂರರು ವಿಜಾಪುರಕ್ಕೆ ಹೋಗಿದ್ದರು ಹಿಂದ ವೈಭವ ನಾಟ್ಯ ಸಮಾಜದವರು ಒಂದು ನಾಟಕ ಮಾಡಿ ಅದರ ಹುಟ್ಟುವಳಿಯನ್ನು ಅವರಿಗೆ ಸಲ್ಲಿಸುವವರಿದ್ದಾರೆ

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ವರದಿಯನ್ನು ಕನ್ನಡದಲ್ಲಿ ಪ್ರಕಟಿಸಬೇಕೆಂದು ಶ್ರೀ ಸುಬ್ಬರಾವ ಸೆಟ್ಟರು ಸೂಚಿಸಿದ್ದಕ್ಕೆ ದಿವಾಣರು ವಿಚಾರ ಮಾಡುತ್ತೇನೆ ಎಂದು ಮಾತು ಕೊಟ್ಟಿದ್ದಾರೆ.

ಕನ್ಯಾಗತದ ಅಪೂರ್ವ ಯಾತ್ರೆ! **ಕ್ಷೇತ್ರಗಳ ಪ್ರೇಕ್ಷಣೀಯ ನೋಟ!!**

ಚಾರ್ಜು ಸುಲಭ.

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

ರೇಲ್ವೆ ಕಂಪನಿಯಿಂದ ಪರವಾನಿಗೆಯನ್ನು ಪಡೆದಿರುತ್ತದೆ.

ಶ್ರೀ ಕಾಶಿ, ರಾಮೇಶ್ವರ, ಲಂಕಾ ಮೊದಲಾದ ಕ್ಷೇತ್ರಗಳ ಯಾತ್ರೆಗಾಗಿ
ಶ್ರೀ ಗೌರೀಶಂಕರ ಟ್ರೇನು

ತಾ|| ೨೨ ಅಕ್ಟೋಬರ ೧೯೩೩ನೇ ದಿವಸ ಹೊರಡುತ್ತದೆ.

ಸೆಕೆಂಡಕ್ಲಾಸ ೩೧೦ ರೂ **ಥರ್ಡಕ್ಲಾಸ** ೧೪೦ ರೂ.

ಕೂಡಲೇ ಅಡ್ವಾನ್ಸ ಕಳಿಸಿ ಟಿಕೇಟ್ ಪಡೆಯಿರಿ

ಟ್ರೇನು ಹೊರಡಿಸುವದಕ್ಕೆ ರೇಲ್ವೆ ಕಂಪನಿಯಿಂದ ಪರವಾನಗಿಯನ್ನು ಪಡೆದಿರುತ್ತದೆ. ಹುಬ್ಬಳ್ಳಿಯ ಶ್ರೀ ಗೌರೀಶಂಕರ ಯಾತ್ರಾ ಟ್ರೇನು ಭರತಖಂಡ ಮತ್ತು ಲಂಕಾಯಾತ್ರೆಗೋಸುಗ ಇದೇ ಅಕ್ಟೋಬರ ತಿಂಗಳ ೨೨ ನೇ ತಾರೀಖಿನ ದಿವಸ ಹೊರಡಲಿಕ್ಕೆ ಪೂರ್ಣ ತಯಾರಿಯಲ್ಲಿರುವದು

ನಮ್ಮ ಟ್ರೇನಿನಲ್ಲಿ ಪ್ರಸಿದ್ಧರಾದ ವರ್ತಕರೂ, ಸಾವಕಾರರೂ ಪದವೀಧರರೂ, ವಿದ್ಯಾರ್ಥಿಗಳೂ ಹಾಗೂ ರಿಟಾಯರ್ಡ ಗವರ್ನಮೆಂಟ ಅಧಿಕಾರಿಗಳೂ ಪ್ರಯಾಣ ಮಾಡತಕ್ಕವರಿರುವದರಿಂದ ಪ್ರಾರಂಭದಿಂದ ಕೊನೆಯವರೆಗೂ ಉತ್ತಮ ವ್ಯವಸ್ಥೆ ಮಾಡಲ್ಪಡುವದು

೧೨ ವರ್ಷಕ್ಕೊಮ್ಮೆ ಬರುವ ಪುಣ್ಯಪ್ರದವಾದ ಕನ್ಯಾಗತದ
ಇದೇ ಮಾರ್ಗಶೀರ್ಷ ಮಾಸದಲ್ಲಿಯ ಅಪೂರ್ವ ಯಾತ್ರೆಯು!
ಅಲಕ್ಷಿಸಿದರೆ ಪುನಃ ಸಿಗಲರಿಯದು!! **ಸ್ವಲ್ಪೇ ಸೀಟುಗಳು ಉಳಿದಿವೆ!!!**

ತ್ವರೆ ಮಾಡಿರಿ!!!! ಹೆಚ್ಚು ವಿಶ್ವಾಸಕ್ಕೆ ಪಾತ್ರನಾದದ್ದೂ, ಹೆಚ್ಚಿನ ಅನುಭವ ಹಾಗೂ ಸುಧಾರಣೆಯುಳ್ಳದ್ದೂ ಆಗಿರುವ ದರ್ಬಾರೀ ಸಿಸ್ಟಿನ ಘನತೆಯುಳ್ಳ

ಶ್ರೀ ಗೌರೀಶಂಕರ ಕಂಪನಿಯ

೨ ನೇ ಯಾತ್ರಾ ಪ್ರವಾಸವು

೧ ನೇ ಯಾತ್ರೆಯನ್ನು ಸುಖವಾಗಿಯೂ, ಯಶಸ್ವಿಯಾಗಿಯೂ ಪೂರೈಸಿ ಕೆಲವು ಕ್ಕಿಗೆ ಕರ್ನಾಟಕದ ಹಾಗು ಮಹಾರಾಷ್ಟ್ರದ ಸೇವೆಯನ್ನು ಮಾಡಿ ಯಾತ್ರಿಕರಿಂದ ಸುವರ್ಣ ಪದಕ ಮಾನಪತ್ರ, ಸದಭಿಪ್ರಾಯ, ಧನ್ಯವಾದಗಳನ್ನು ಪಡೆದಿದೆ

ರೇಲ್ವೆ ಕಂಪನಿಗೆ ಯುಕ್ತ ಹಣವನ್ನು ಡಿಪಾಜಿಟ್ ಆಗಿ ಇಟ್ಟು ರೇಲ್ವೆ ಕಂಪನಿಯಿಂದ ಪರವಾನಗಿ ಪಡೆದಿದೆ ಶ್ರೀ ಗೌರೀಶಂಕರ ಕಂಪನಿಯ ಚಾಲತೀ ಲೇವ ದೇವಿಯು ಹುಬ್ಬಳ್ಳಿಯ ಇಂಪೀರಿಯಲ್ ಬ್ಯಾಂಗಿನಲ್ಲುಂಟು

೧ ಶಂಕೇಶ್ವರ ೨೨ ಅಕ್ಟೋಬರ	೧೯ ದಿಲ್ಲಿ ೧೨ ೧೩-೧೪	೩೫ ಮದ್ರಾಸ (ಸಮುದ್ರಸ್ನಾನ) ೬ ೭
೨ [illegible] (ಕೊಲ್ಹಾಪುರದಿಂದ) ೨೪-೨೫	೨೦ ಹರದ್ವಾರ ೧೫-೧೬	೩೬ ಶಿವಕಂಚಿ ೮
೩ ಮುಂಬಯಿ (ಸಮುದ್ರ) ೨೬-೨೭-೨೮	೨೧ ಹೃಷಿಕೇಶ	೩೭ ವಿಷ್ಣುಕಂಚಿ
೪ ವೇರಾವಳ (ಸಮುದ್ರದಲ್ಲಿ ಹಡಗದಿಂದ) ೨೯-೩೦	೨೨ ಲಖನೌ ೧೭	೩೮ ಚಿದಂಬರಂ ೯
೫ ಸೋಮನಾಥ (ವೇರಾವಳದಿಂದ)	೨೩ ಅಯೋಧ್ಯೆ ೧೮	೩೯ ರಾಮೇಶ್ವರ (ಧನುಷ್ಕೋಟಿ ಸಮುದ್ರಸ್ನಾನ) ೧೦ ೧೧
೬ ದ್ವಾರಕಾ (ಕೃಷ್ಣತೀರ್ಥ) ೩೧	೨೪ (ಪ್ರಯಾಗತ್ರಿವೇಣಿ) ಅಲಹಾಬಾದ ೧೯-೨೦	೪೦ [illegible] [ಹಡಗ ರೇಲ್ವೆಯಿಂದ ಲಂಕಾ] ೧೨-೧೩ ೧೪
೭ ಬೇಟದ್ವಾರಕಾ ೧ ನವ್ಹೆಂಬರ	೨೫ ಕಾಶೀ (ಕ್ಷೇತ್ರ [illegible]) ೨೧-೨೨-೨೩-೨೪ ೨೫	೪೧ ಕ್ಯಾಂಡಿ [ಲಂಕಾ] ೧೫
೮ [illegible] (ಜೈನತೀರ್ಥಕ್ಷೇತ್ರ) ನವ್ಹೆಂಬರ ೨ ೩	೨೬ ಸಾರನಾಥ (ಬೌದ್ಧತೀರ್ಥ)	೪೨ [illegible] [ಸಮುದ್ರಸ್ನಾನ] ೧೬
೯ ಅಹಮ್ಮದಾಬಾದ ೪	೨೭ ಗಯಾ ಬೌದ್ಧತೀರ್ಥ ೨೬-೨೭	೪೩ ಧನುಷ್ಕೋಟಿ [ಸಮುದ್ರಸ್ನಾನ] ಹಡಗದಿಂದ
೧೦ [illegible]	೨೮ ರಾಜಗಿರಿ (ಜೈನತೀರ್ಥ ಬಿಸಿ ನೀರಿನ ಹೊಳೆಯ ಸ್ನಾನ)	೪೪ ಮದುರೆ [ಶಕ್ತಿಪೀಠ] ೧೭
೧೧ ಬರೋಡ ೫	೨೯ [illegible] ೨೮-೨೯	೪೫ ತ್ರಿಚನಾಪಳ್ಳಿ [ಜಂಕ್ಷನ್ ಸ್ಟೇಶನ್] ೧೮
೧೨ [illegible] ([illegible])	೩೦ ಪಾರಸನಾಥ (ಜೈನತೀರ್ಥ) [illegible]	೪೬ ಶ್ರೀರಂಗ (ವಿಷ್ಣುಪೀಠ) ೧೯
೧೩ [illegible] ([illegible])	೩೧ ಕಲಕತ್ತಾ ೩೦ ಡಿಸೆಂಬರ ೧-೨	೪೭ ಬೆಂಗಳೂರ ೧೯
೧೪ [illegible] ೮-೯	೩೨ ಜಗನ್ನಾಥಪುರಿ (ಸಮುದ್ರ ಸ್ನಾನ) ೩	೪೮ ಮೈಸೂರ ೨೦ ೨೧
೧೫ ಮಥುರಾ ೯-೧೦	೩೩ [illegible] (ಸಮುದ್ರ ಸ್ನಾನ) ೪	೪೯ ಹುಬ್ಬಳ್ಳಿ ೨೨
೧೬ ಗೋಕುಲ	೩೪ ರಾಜಮಹೇಂದ್ರಿ (ಗೋದಾವರಿ ಸ್ನಾನ) ೫	
೧೭ ವೃಂದಾವನ		
೧೮ [illegible]		

ಕ್ಷೇತ್ರಗಳ ಮುಂದೆ ತಾರೀಖುಗಳನ್ನು ಬರೆದಿರುವ ಸ್ಟೇಶನ್ನುಗಳಲ್ಲಿ ಮಾತ್ರ ಟ್ರೇನು ನಿಲ್ಲುವದು. ಅದೇ ಮುಕ್ಕಾಮಿನಿಂದ ಉಳಿದವುಗಳ ಯಾತ್ರೆಯನ್ನು ಮಾಡಿಕೊಳ್ಳತಕ್ಕದ್ದು. ಮೇಲೆ ಬರೆದಂತೆ ಎಲ್ಲ ಯಾತ್ರಾಸ್ಥಳಗಳನ್ನು ಪೂರೈಸಿಕೊಂಡು ಟ್ರೇನು ಡಿಸೆಂಬರ ೨೨ ನೇ ತಾರೀಖು ಪುಷ್ಯ ಶು|| ೬ ಶುಕ್ರವಾರ ದಿವಸ ಮುಂಜಾನೆ ಹುಬ್ಬಳ್ಳಿ ಪಟ್ಟಣಕ್ಕೆ ಬಂದು ತಲುಪುವದು.

ರೇಲ್ವೆ ಪಡಗು ಆಯಾ ಕ್ಷೇತ್ರಗಳಲ್ಲಿ ಇಳಕೊಳ್ಳುವ ಸ್ಥಳದ ಬಾಡಿಗೆ ಸೇರಿ ಸೆಕೆಂಡಕ್ಲಾಸ ೩೧೦ ರೂ ಥರ್ಡಕ್ಲಾಸ ೧೪೦ ರೂ ಮಾತ್ರ ೩ ವರ್ಷದ ಮೇಲ್ಪಟ್ಟ ೧೨ ವರ್ಷದ ಒಳಗಿನ ಮಕ್ಕಳಿಗೆ ಅರ್ಧ ಚಾರ್ಜು ಎಲ್ಲಿ ಟ್ರೇನು ಹತ್ತಿದರೂ ನಿರ್ಣಯಿಸಿರುವ ಚಾರ್ಜನ್ನೇ ಕೊಡಬೇಕಾಗುವದು ಟ್ರೇನಿನಲ್ಲಿ ಒಬ್ಬರಿಗೆ ಇಬ್ಬರ ಸ್ಥಳವು ಕೊಡಲ್ಪಡುವದು. ಆದ್ದರಿಂದ ಬರೆದಿರುವ ಚಾರ್ಜು ಬಹಳೇ ಸುಲಭವಾದದ್ದು ಟಿಕೇಟ್ ಪಡೆಯಬೇಕಾದಲ್ಲಿ ಕೂಡಲೇ ಅಡ್ವಾನ್ಸ ಕಳಿಸತಕ್ಕದ್ದು ಯಾತ್ರಿಕರ ಯೋಗ್ಯ ಅಡಚಣಿ ಕಂಡುಬಂದಲ್ಲಿ ಅಥವಾ [illegible] ಕೆಲಂದವಿದ್ದಲ್ಲಿ ಯಾತ್ರಿಕರು ಕೊಟ್ಟ ಅಡ್ವಾನ್ಸ ಅಥವಾ ಪೂರ್ಣ ಹಣವು ಪರತ ಕೊಡಲ್ಪಡುವದು ಶ್ರೀ ಗೌರೀಶಂಕರ ಕಂಪನಿಯು ಯಾವತ್ತೂ ಹಣವು ಹುಬ್ಬಳ್ಳಿ (ಸ್ಟೇಶನ) ಇಂಪೀರಿಯಲ್ ಬ್ಯಾಂಕಿನಲ್ಲಿರುವದರಿಂದ ಯಾತ್ರಿಕರಿಂದ ಬಂದ ಹಣವಾದರೂ ಸದರ ಬ್ಯಾಂಕಿನಲ್ಲಿ ಸುರಕ್ಷಿತವಾಗಿರುವದು

ಟ್ರೇನಿನಲ್ಲಿ ಶ್ರೀ ಗೌರೀಶಂಕರ ಕಂಪನಿಯ ಅಧಿಕ ರಸ್ತರೂ ನೌಕರರೂ ಇರುವರು ಯಾತ್ರಿಕರ ಅನುಕೂಲತೆಗಾಗಿ ದವಾಖಾನೆ ಅಗಸರು ಫೋಟೋಗ್ರಾಫರ, ಲಾಯಬ್ರರಿ, ಪೋಸ್ಟ ಆಫೀಸ, ಯಾತ್ರಿಕರ ರೇವಿನ ಹಣದ ಸುರಕ್ಷಿತತೆಕ್ಕಾಗಿ ಟ್ರೇಜರಿ ಇರುವವು ಸದರ ಕಂಪನಿಯ ಮಾಲಕರಾದ ಮಿ| ಜಿ ಎ ಶಿರೂರ ಇವರಿಂದ ಸಾಧ್ಯವಿರುವ ಮುಕ್ಕಾಮುಗಳಲ್ಲಿ [illegible] ನಾಥ, ಮುಂತಾದ ಪ್ರಸಿದ್ಧ ಸ್ಥಳಗಳು ಮ್ಯಾಜಿಕ್ ಲ್ಯಾಂಟರ್ನದ ಚಿತ್ರದಿಂದ ತೋರಿಸಲ್ಪಟ್ಟು ಲೆಕ್ಚರ ಕೊಡಲ್ಪಡುವದು ಮೇಲೆ ಬರೆದಿರುವ ಎಲ್ಲ ಕ್ಷೇತ್ರಗಳ ಸಚಿತ್ರ ಚರಿತ್ರೆ (ಗಾಡು) ಮಿ| ಜಿ ಎ ಶಿರೂರ ಇವರಿಂದ ಕನ್ನಡದಲ್ಲಿ ಬರೆಯಲ್ಪಟ್ಟದ್ದು ಶ್ರೀ ಗೌರೀಶಂಕರ ಕಂಪನಿ ಆಫೀಸಿನಲ್ಲಾಗಲಿ ಟ್ರೇನಿನಲ್ಲಾಗಲಿ ರೂ ೨-೮-೦ ಗಳ ಕ್ರಯಕ್ಕೆ ಸಿಗುವದು. ಇಳಕೊಳ್ಳುವ ಸ್ಥಳ ಪಡಗ, ಮೋಟರ ಟಾಂಗಾ ಮುಂತಾದವುಗಳ ವ್ಯವಸ್ಥೆಗೋಸುಗ ಟ್ರೇನು ಹೊರಡುವ ಮೊದಲೇ ವ್ಯವಸ್ಥಾ ಮ್ಯಾನೇಜರರು ವ್ಯವಸ್ಥೆಗಾಗಿ ಮುಂದೆ ಹೋಗುವರು ಬ್ರಾಹ್ಮಣ ವೀರಶೈವರಿಗೂ ಪ್ರತ್ಯೇಕವಾಗಿ ಅಡಿಗೆ ಊಟಗಳ ವ್ಯವಸ್ಥೆಯು ಇಳಕೊಂಡ ಸ್ಥಳದಲ್ಲಿಯೇ ಆಗುವದು ವೀರಶೈವ ಆಚಾರದನುಕೂಲತೆಗಾಗಿ ಟ್ರೇನಿನಲ್ಲಿ ಪಟ್ಟದ ಸ್ವಾಮಿಗಳಿರುವರು ಟ್ರೇನಿನಲ್ಲಿ ಎಲ್ಲ ಧರ್ಮದವರಿಗೂ ಸರಿಯಾಗಿ ಮೇಲ್ವಿಚಾರಣೆ ಮಾಡಲ್ಪಡುವದು ಏರೋಪ್ಲೇನ [ವಿಮಾನ] ದಲ್ಲಿ ಸಂಚರಿಸಲಿಚ್ಛಿಸುವವರಿಗೆ ಕಲಕತ್ತಾ ಮುಕ್ಕಾಮಿನಲ್ಲಿ ವಿಮಾನಿನ ವ್ಯವಸ್ಥೆ ಮಾಡಿದ್ದು ೧೫ ಮಿನಿಟುಗಳ ವೇಳೆ ಸಂಚರಿಸುವದಕ್ಕೆ ೧೦ ರೂ ಚಾರ್ಜು ಕೊಡಬೇಕಾಗುವದು

ಶ್ರೀ ಗೌರೀಶಂಕರ ಕಂಪನಿಯವರು ಪ್ರಸಂಗವಿಶೇಷದಲ್ಲಿ ರೇಲ್ವೆ ಕಂಪನಿಯವರ ಅನುಮತಿಯಿಂದ ಪ್ರೊಗ್ರಾಮಿನಲ್ಲಿ ಬದಲಾವಣೆಗಳನ್ನು ಮಾಡಬಹುದು ಚಳಿಗಾಲ ಪ್ರಾರಂಭವಾಗುವದರೊಳಗಾಗಿ ಉಷ್ಣ ಪ್ರದೇಶದ ಸಮುದ್ರಭಾಗದ ಮದ್ರಾಸ ಕಡೆಗೆ ಬರುವದರಿಂದ ಥಂಡಿಯ ಭಯವಿಲ್ಲ ಹೆಚ್ಚಿನ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು ಎಜಂಟರಿಗೆ ಯೋಗ್ಯ ಕಮೀಶನ್ ಸಿಗುವದು

ಶ್ರೀ ಗೌರೀಶಂಕರ ಕಂಪನಿಯ ಎಜಂಟರುಗಳು— ಸದರ ಕಂಪನಿಯ ಎಜಂಟರು [illegible] ೩ ವರ್ಷಗಳಿಂದ ಧಾರವಾಡ ಜಿಲ್ಲೆಯ ರೈತರ ಹಾಗು ವರ್ತಕರ [illegible] ಗಳು [illegible] ಮಾಡಿ ಕೊಡಲ್ಪಟ್ಟಂತೆ ೧೯೩೩ ನೇ ಇಸ್ವಿಯ ಬೇಸಗೆಯಲ್ಲಿ [illegible] ಮಾಡಿಕೊಡುತ್ತ ಬರುವದು [illegible] ಮಾಡಿಸತಕ್ಕವರು ಶೀಘ್ರ ಶ್ರೀ ಗೌರೀಶಂಕರ ಕಂಪನಿಗೆ ಅರ್ಜಿಗಳನ್ನು ಕಳಿಸತಕ್ಕದ್ದು ಅರ್ಜಿಯ ಫಾರ್ಮುಗಳೂ ಎಜಂಟರ ಬಗ್ಗೆ ಹೆಚ್ಚಿನ ಮಾಹಿತಿ ಪತ್ರಿಕೆಗಳೂ ಬೇಕಾದವರಿಗೆ ಪುಕ್ಕಟೆಯಾಗಿ ಕಳಿಸಲ್ಪಡುವವು ಎಜಂಟರಾಗಬಯಸುವವರು ಕೂಡಲೆ ತಿಳಿಸತಕ್ಕದ್ದು ಯೋಗ್ಯ ಕಮಿಶನ್ ಕೊಡಲ್ಪಡುವದು

ನಮ್ಮ ಕಂಪನಿಯು ಯಾತ್ರಾ ಪ್ರವಾಸದಲ್ಲಿ ಕಂಡುಬಂದ ಅನುಭವ ಹಾಗು ಪ್ರವಾಸದಿಂದ ತೆಗೆದುಕೊಂಡು ಬಂದ ಫೋಟೋಗಳು ಇವುಗಳಿಂದ ಧಾರ್ಮಿಕ, ಔದ್ಯೋಗಿಕ ಸಾಮಾಜಿಕ ವಿಷಯಗಳಿಗನುಸರಿಸಿ "ಶ್ರೀ ಗೌರೀಶಂಕರ" ಎಂಬ ಸಚಿತ್ರ ವಾರಪತ್ರಿಕೆಯು ಕನ್ನಡದಲ್ಲಿ ಶ್ರೀ ಗೌರೀಶಂಕರ ಕಂಪನಿಯಿಂದ ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವದು

ತಾ|| ೮-೧೦-೧೯೩೩ ಚಿತ್ರಕಾರರು [ಫೋಟೋಗ್ರಾಫರ] ಹಾಗು ಸಂಪಾದಕರು

ಆಫೀಸು
ಶ್ರೀ ಸಿದ್ಧಾರೂಢ ಬಿಲ್ಡಿಂಗಿನ ಎದುರಿನಲ್ಲಿ
ಸ್ಟೇಶನ್ ರಸ್ತೆ ಹುಬ್ಬಳ್ಳಿ

ಜಿ ಎ ಶಿರೂರ
ಶ್ರೀ ಗೌರೀಶಂಕರ ಕಂಪನಿಯ ಚಾಲಕರು

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎರಡು ನಕಾಶಗಳಿರುವವು ಬೆಲೆ —೦ ೬-೬ ಮಾತ್ರ, ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.
" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದು ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೋಡಿಗೆಮ್ಮು, ಕೆಮ್ಮು ಕಿವಿ ಸೋಲಿ, ವ ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ್ :— ಜಿ. ಕೆ ಟೊಣಪಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕರ್ನಾಟಕ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ನಂ. ಬಿ. ೨೭೫೫

यथत् परवशं दुःखं । यथदात्मवशं सुखम्॥मनु.

ನಿತ್ಯ ಪತ್ರ ಬೆಲೆ ೩ ಪೈ.

ಇನಸ್ಯುರನ್ಸ

ಜೀವವಿಮೆ ಇಳಿಸಲು ದಿ ಯುನಾಯಿಟೆಡ ಕರ್ನಾಟಕ ಇನಸ್ಯುರನ್ಸ ಕಂಪನಿಯೇ ಉತ್ತಮವಾದುದು.

ಕನ್ನಡಿಗ

ಇನಸ್ಯುರನ್ಸ

ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ. ದಿ ಯುನಾಯಿಟೆಡ್ ಕರ್ನಾಟಕ ಇ. ಕಂ. ಲಿ. ಧಾರವಾಡ ಇವರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:—ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

[ವರ್ಷ ೧೦] ಧಾರವಾಡ— ಮಂಗಳವಾರ ಆಶ್ವೀನ ಬಹುಳ ೧೩ ಶಕೆ ೧೮೫೫ ತಾ॥ ೧೭-೧೦-೩೩ [ಸಂಚಿಕೆ ೧೪೯

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇ ಎಕ್ಕ್ರದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಬೋಡಿಗೆಮ್ಮು, ಕೆಮ್ಮು ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಪಿ. ಕೆ. ಟೋಪಿ ಆ್ಯಂಡ ಕಂಪನಿ, ಕೊಪ್ಪೀಕರ ರೋಡ, ಹುಬ್ಬಳ್ಳಿ

ಭವಾನಿ ಅಯರ್ನ ವರ್ಕ್ಸ್, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಡಾ. ಬೈಲೂರ

ಇವರ ಔಷಧಗಳು

ಆರೋಗ್ಯದ ಚೂರ್ಣ } ಬಾ ೬ ೧—೪—೦ { ಥಂಡಿ ಉರಿಯ ಗುಳಿಗೆಗಳು ಬಾ. ೬. ೦—೮—೦

ಕಾಪಸಾಯಿರೆಪ್— ನೆಗಡಿ, ಗೆಣ್ಣುಕ, ವೈಲಿ, ಹವೆಯಿಂದು ಆಗುವ ಫುಪ್ಪುಸದ ವಿಕಾರಗಳು, ಉರಿ, ಇವನ್ನು, ಇನ್‌ಫ್ಲುಯೆಂಝಾ, ಹಿಕ್ಕಿ ಹಾರಿವಿಕೆ (ಸಬಾ), ಕೋಳಗೆಮ್ಮು, ಇವುಗಳ ಮೇಲೆ ಜೋತಾಗಿ ಸಣ್ಣ ಹುಡುಗರ ಅಥವಾ ದೊಡ್ಡವನ ಸ್ವಾರ ನಿವೋದಿಸಾ ದೇಶಿಯ ಮೇಲೆ ನನ್ನ ಕಾಫ್‌ಸಾಯಿರೆಪ್ ಔಷಧದ ಉಪಯೋಗವು ಜನ್ಯ ಆಗುವದರಿಂದ ಎಲ್ಲರಿಗೂ ತಿಳಿಸುತ್ತೇವೆ ಈ ಕಾಫ್‌ಸಾಯಿರೆಪ್‌ವನ್ನು ಸಣ್ಣ ವಕ್ಕರಿಗಾಗಲೀ ದೊಡ್ಡವರಿಗಾಗಲೀ ಯಾವದೆ ಸ್ಥಿತಿ ಎಲ್ಲಿ ಅನುಪಾನ ಪತ್ರಿಕೆಯಲ್ಲಿ ಬರೆದಂತೆ ಕೊಡಲು ಅಡ್ಡಿಯಿಲ್ಲ. ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು. ಕಿ ಸಣ್ಣ ಬಾ. ೦-೬-೦ ದೊಡ್ಡ ಬಾ. ೦-೧೨-೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳಬಹುದು.

ಇ. ರೂ ಕಿಂತ ಹೆಚ್ಚಿಗೆ ಔಷಧಗಳನ್ನು ತರಿಸ್ಕೊಳ್ಳುವವರಿಗೆ ೧೨ ಟಕ್ಕೆ ಕಮಿಶನ್ ಮತ್ತು ವ್ಯಾಪಾರಿಗಳಿಗೆ ಪೂರ್ಣ ಸವಲತ್ತು ಕೊಡಲ್ಪಡುವದು.

ಪತ್ರ:— ಡಾ॥ ಹರಿ ಮಹಾದೇವ ಬೈಲೂರ ದ ಬೆಳಗಾವ

ಬಾಗಲಕೋಟಿ ಏಜಂಟ— ಬಿ. ಟಿ ಕೆರೂರ ಆ್ಯಂಡ ಸನ್ಸ, ಮೆಡಿಕಲ್ ಸ್ಟೋರ್ಸ

ಜಾಹೀರಾತಿನ ಸಲುವಾಗಿ ಸ್ಥಳ

ಕರ್ನಾಟಕದ ಕೂಲಿಗೇಡಿ ತರುಣರು.

ಹಲವೊಂದು ದಿನಗಳಿಂದ ಪಗಲಿರುಳು ನಮ್ಮ ಕೂಲಿಗೇಡಿತನ ಹಾಗೂ ಅದರ ನಿವಾರಣೆಯ ಬಗ್ಗೆ ನಾನು ವಿಚಾರಿಸುತ್ತಿದೆ ನಿನ್ನಿನ ಕನ್ನಡಿಗದಲ್ಲಿ ನಮ್ಮ ಉದಾರ ಅಂತಃಕರಣದ ಬಂಧುಗಳೊಬ್ಬರು ಈ ತರಹದ ವಿಚಾರಗಳಿಗೆ ಒಳ್ಳೇ ಉತ್ಸಾಹಕೊಡುವ ಆಶೆ ತೋರಿಸಿದ್ದಾರೆ. ನಮಗೆ ಸಾಕಷ್ಟು ಸವಲತ್ತು (Scope) ಕೊಡದೇ ನಮ್ಮ ವಿಚಾರಗಳನ್ನು ಮನ್ನಿಸದೇ ತಮ್ಮ ಮನಸ್ಸಿಗೆ ಬಂದ ಹಾದಿಯನ್ನು ತೋರಿಸುವ ಹಿರಿಯರು ಕರ್ನಾಟಕದಲ್ಲಿ ಬಹಳ ಈಗ ಪ್ರತಿಯೊಬ್ಬ ಸುಶಿಕ್ಷಿತ, ಅಶಿಕ್ಷಿತ ತರುಣರ ಮುಂದಿರುವ ಪ್ರಶ್ನೆ ಏನೆಂದರೆ ಹೊಟ್ಟೆತುಂಬುವ ಬಗೆ. ಪರರ ಉದ್ಯೋಗ ವ್ಯವಸಾಯಗಳನ್ನೇ ನಾವೂ ಮಾಡತೊಡಗಿದರೆ, ನಮ್ಮ ನಮ್ಮಲ್ಲಿ ಸ್ಪರ್ಧೆ (Competion) ಹತ್ತಿ ಸ್ವಲ್ಪಾವಧಿಯಲ್ಲಿ ಅವರೂ ನಾವೂ ಕೂಡೇ ದಿವಾಳಿ ತೆಗೆಯುವ ಸಂಭವ ಬರುತ್ತದೆ ಕಾರಣ ನಾವು ಯಾವಾಗಲೂ ಹೊಸ ಹೊಸ ಉದ್ಯೋಗ ಕೈಗಾರಿಕೆಗಳನ್ನು ಹುಡುಕಬೇಕು

ನಮ್ಮ ಕರ್ನಾಟಕದಲ್ಲಿ ಇನ್ನೂ ಪ್ರಾರಂಭವಾಗದ ಉದ್ಯೋಗಗಳಲ್ಲಿ ಮಾತಾಡುವ ಸಿನೇಮಾ ಕಂಪನಿಯನ್ನು ತೆಗೆಯುವದೊಂದಾಗಿದೆ ನಮ್ಮಲ್ಲಿ ಸಂಗೀತಜ್ಞರೂ, ಚಿತ್ರಕಾರರೂ, ನಟನಟಿಯರ ಅಭಾವವೇ ಇದಕ್ಕೆ ಕಾರಣವಲ್ಲ, ಆದರೆ ದುಡ್ಡಿನ ಹಾಗೂ ಭಾಷೆಯ ಅಭಿಮಾನದ ಕೊರತೆ. ಪರದೇಶಗಳಲ್ಲಿಯ ಕಂಪನಿಗಳ ಹಾಗೂ ನಮ್ಮ ದೇಶಗಳಲ್ಲಿಯ ಕಂಪನಿಗಳ ಸಂಖ್ಯೆಗಳನ್ನು ನೋಡಿದರೆ, ನೂರರಲ್ಲಿ ಒಂದು ಅಂಶದಷ್ಟು ಕೂಡಾ ನಮ್ಮ ದೇಶದಲ್ಲಿ ಇಲ್ಲವೆಂದು ಕೆಳಗಿನ ಕೋಷ್ಟಕದ ಮೇಲಿಂದ ಕಂಡುಬರುವದು

	ಸಿನೇಮಾ ಥೇಟರ	ಮಾತಾಡುವ ಥೇಟರ
ಅಮೇರಿಕಾ	೨೦೦೦೦	೧೩೫೦೦
ಇಂಗ್ಲಂಡ	೪೮೫೦	೪೧೦೦
ಫ್ರಾನ್ಸ	೩೧೫೦	೧೨೦೦
ಹಿಂದುಸ್ಥಾನ	೬೭೫	೮೭

ಕಾರಣ ನಮ್ಮಲ್ಲಿಯ ಸಾವುಕಾರರೂ ಹಾಗು ಭಾಷೆಯ ಅಭಿಮಾನಿಗಳೂ ಇತ್ತ ಲಕ್ಷ್ಯಕೊಟ್ಟಲ್ಲಿ ಹಲವೊಂದು ಪ್ರಮಾಣದಿಂದವಾದರೂ ಈ ಕೂಲಿಗೇಡಿತನವು ಕಡಿಮೆಯಾಗುವದೆಂದೂ ಅದರಿಂದ ಭಾಷೆಯ ಅಭಿಮಾನ ತಾಳಿದಂತಾಗುವದೆಂದೂ ನನ್ನ ಭರವಸೆ.

ಶಂಕರ ದೇಸಾಯಿ.

ಅಖಿಲ ಭಾರತ ಶಿಕ್ಷಣ ಸಂಸ್ಥೆಯ ಕಚೇರಿ.

ಇದೇ ತಿಂಗಳ ೨೧ನೆಯ ತಾರೀಖಿನ ದಿವಸ ಸಂಜೆಯ ೪ ಘಂಟೆಗೆ ಹಾವೇರಿಪೇಟೆಯಲ್ಲಿರುವ ಶ್ರೀ ಶಿವಯೋಗೀಶ್ವರ ಸಂಸ್ಕೃತ ಕಾಲೇಜದಲ್ಲಿ ಮಹಾ ಸಭೆಯ ಅಧ್ಯಕ್ಷರು ಮಧ್ಯವರ್ತಿ ಕಮಿಟಿಯನ್ನು ಕರೆದಿರುತ್ತಾರೆ ಅದೇ ಕಾಲಕ್ಕೆ ಶಿಕ್ಷಣ ಪರಿಷತ್ತಿನ ವಿಷಯಗಳೂ ನಡೆಯುವವು ಆದ್ದರಿಂದ ವಿದ್ಯಾಭಿಮಾನಿಗಳೂ, ಕಲಾಕೋವಿದರೂ, ಶಿಕ್ಷಣಾನುಭವಶಾಲಿಗಳೂ ಆದ ಯಾವತ್ತು ವೀರಶೈವ ಬಂಧುಭಗಿನಿಯರು ಅವಶ್ಯವಾಗಿ ಆ ಸಭೆಗೆ ಬರಬೇಕೆಂದು ಕಾರ್ಯದರ್ಶಿಗಳಾದ ಎಸ್ ವಾಯ ಗುಮ್ಮಗೋಳರು ಪ್ರಾರ್ಥಿಸುತ್ತಾರೆ

ಡಾ ದಯಾಬಾಯಿ ಹರಿ ಇವರ ಮೇಲಿನ ಅರ್ಜಿಯ ಪ್ರತಿಧ್ವನಿ

(ನಮ್ಮ ಸ್ವಂತ ಸುದ್ದಿಗಾರರಿಂದ)

೧೯೩೦ನೇ ಇಸ್ವಿಯ ದಿಸೆಂಬರ ತಿಂಗಳಲ್ಲಿ ತಮ್ಮಪ್ಪಾ ಮಟ್ಟಿ ಎಂಬವನು ವಿಮೆನ್ಸ ಹಾಸ್ಪಿಟಲ್ ಹುಬ್ಬಳ್ಳಿಯ ಲೇಡಿ ಡಾಕ್ಟರ ದಯಾಬಾಯಿ ಹರಿ ಇವರು ಅವನ ಪೈಕಿ ಒಬ್ಬ ಹೆಣ್ಣು ಮಗಳು ಪ್ರಸೂತಿಗೆ ಬಂದಾಗ್ಗೆ ಡಾಕ್ಟರರು ದುಡ್ಡು ಬೇಡಿದರೆಂತಲೂ ಮತ್ತು ಅವರು ಕೊಡಲಿಲ್ಲವಾದ್ದರಿಂದ ಅತ್ಯಾವಸ್ಥೆಯಲ್ಲಿದ್ದ ರೋಗಿಯನ್ನು ಹೊರಗೆ ಹಾಕಿದರೆಂತಲೂ ಹುಬ್ಬಳ್ಳಿಯ ರೆಸಿಡೆಂಟ ಮ್ಯಾಜಿಸ್ಟ್ರೇಟರ ಮುಂದೆ ಮೇಲಿನ ತಮ್ಮಪ್ಪ ಎಂಬವನು ಸದರ ವಿಷಯದ ಬಗ್ಗೆ ಅರ್ಜಿ ಕೊಟ್ಟಿದ್ದನಷ್ಟೇ ಸದರ ಅರ್ಜಿಯಂತೆ ವಿಚಾರಣೆ ಮಾಡಿ ಮಿ॥ ಜೆ ಎಫ್. ಬಿ ಹಾರ್ಟಶಾರ್ನ ಕಲೆಕ್ಟರ ಧಾರವಾಡ ಇವರು ಸುಳ್ಳು ಫಿರ್ಯಾದಿಯನ್ನು ಮಾಡಿರುವನೆಂದು ಸದರ ತಮ್ಮಪ್ಪನ ಮೇಲೆ ಇ ಪಿ ಕೋ. ೨೧೧ರ ಪ್ರಕಾರ ಖಟ್ಲೆ ಹಾಗಿದ್ದರು. ಮೊನ್ನೆ ಸಪ್ಟಂಬರ ೧೫ನೇ ತಾರೀಖಿಗೆ ಖಟ್ಲೆಯು ಶುರು ಆಗಿ ಡಾ॥ ಹರಿ ನರ್ಸ ಲೀಲಾಬಾಯಿ ಮುಂತಾದವರ ಸಾಕ್ಷಿಗಳಾದವು ಇಂದು ಮಿ॥ ಎಸ್ ಬಿ ಮಾನಗೋಳಿ ಮತ್ತು ಕಲ್ಲಪ್ಪ [ಗುತಿ ವಕೀಲರ ಕಾರಕೂನ] ಇವರ ಸಾಕ್ಷಿಗಳಾದವು

ದೇ. ಕರ್ನಾಡ ಸದಾಶಿವರಾಯರನ್ನು ಸೆರೆ ಹಿಡಿದರು

ಶ್ರೀ ಸದಾಶಿವರಾಯರನ್ನು ಮುಂಬೈ ಸರಕಾರದವರ ಅಪ್ಪಣೆಯಂತೆ ೧೪ನೇ ತಾರೀಖಿನ ದಿವಸ ಸೆರೆ ಹಿಡಿದರು. ಅವರ ವಿಚಾರಣೆಯು ಅಂಕೋಲೆಯ ಮ್ಯಾಜಿಸ್ಟ್ರೇಟರ ಮುಂದೆ ನಡೆಯುವದಿದೆ ಶ್ರೀ ರಾಯರು ಪಿತ್ತಜ್ವರದಿಂದ ನರಳುತ್ತಿದ್ದಾರೆ ಈ ಸ್ಥಿತಿಯಲ್ಲಿ ಅಂಕೋಲೆಗೆ ಹೋಗಲಿಕ್ಕಾಗದೆಂದು ಡಾಕ್ಟರರ ಮತ. ಹೀಗೆಂಬರ ೧೮ನೇ ತಾರೀಖಿಗೆ ನಾವು ಸ್ವತಃ ಅಂಕೋಲೆಗೆ ಹೋಗುವೆನೆಂದು ದೇ. ರಾಯರು ಪೋಲೀಸರಿಗೆ ಹೇಳಿದರು.

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು ೧೭—೧೦—೧೯೩೩

ಉಗೆಬಂಡೆಗಳ ಆಡಳಿತ.

೧೯೩೨-೧೯೩೩ ನೆಯ ಇಸ್ವಿಯ ಉಗೆಬಂಡೆಗಳ ಆಡಳಿತದ ಕಚ್ಚಾವರದಿಯು ರೇಲ್ವೆ ಚೀಫ ಕಮೀಶನರರಾದ ಮಿ ಎಂ ಪ್ಲಿ ಬ್ರಾಶೆ ಮತ್ತು ರೇಲ್ವೆಗಳ ಫಾಯನ್ಯಾನ್ಸಿಯಲ್ ಕಮೀಶನರರಾದ ಶ್ರೀ. ಪಿ ಆರ್ ರಾವ [ಇವರು ಕರ್ನಾಟಕಸ್ಥರು] ಇವರಿಬ್ಬರಿಂದ ತಯಾರಿಸಲ್ಪಟ್ಟು ಪ್ರಸಿದ್ಧವಾಗಿದೆ. ಇದರಿಂದ ಕಂಡುಬರುವದೇನೆಂದರೆ- ಹಿಂದುಸ್ಥಾನದ ರೇಲ್ವೆಗಳ ಒಟ್ಟು ಉತ್ಪನ್ನವು ಈ ವರ್ಷದಲ್ಲಿ 81½ ಕೋಟಿ ರೂಪಾಯಿ ಇರುತ್ತದೆ. ಒಟ್ಟು ಖರ್ಚು 61¾ ಕೋಟಿ ರುಪಾಯಿಗಳು, ಅಂತೂ ಈ ವರ್ಷ ಒಟ್ಟು ಉಳಿತಾಯವು ೨೩ ಕೋಟಿ ರೂಪಾಯಿ ಈ ೨೩ ಕೋಟಿ ರುಪಾಯಿಗಳು ರೇಲ್ವೆಗಳ ಸಂಬಂಧವಾಗಿ ಖರ್ಚುಮಾಡಿದ ಬಂಡವಲದ ಮೇಲಿನ ಬಡ್ಡಿಯನ್ನು ಮುಟ್ಟಿಸಲಿಕ್ಕೆ ಸಾಲದೆ ಹೋದವು ಈ ಭಂಡವಲದ ಮೇಲೆ ಬಡ್ಡಿಕೊಡತಕ್ಕದ್ದು. ಒಟ್ಟು ಸುಮಾರು ೩೩ ಕೋಟಿ ರೂಪಾಯಿ. ಆದ ಕಾರಣ ಈ ವರ್ಷ, ಬಡ್ಡಿಯನ್ನು ಮುಟ್ಟಿಸಲಿಕ್ಕೆ ೧೦ ಕೋಟಿ ರೂಪಾಯಿಗಳನ್ನು ಕೈಯಿಂದ ತೆತ್ತಬೇಕಾಯಿತು

ಹಿಂದಕ್ಕೆ ಹಿಂದುಸ್ಥಾನ ಸರಕಾರದವರ ಜಮಾಖರ್ಚಿನ ಲೆಕ್ಕದಲ್ಲಿಯೇ ಈ ರೇಲ್ವೆಗಳ ಜಮಾ ಖರ್ಚಿನ ಲೆಕ್ಕವೂ ಕೂಡಿ ಹೋಗುತ್ತಿತ್ತು. ಆದರೆ ಈಗ ಒಂಬತ್ತು ವರ್ಷಗಳಿಂದ ರೇಲ್ವೆಗಳ ಆದಾಯ ವ್ಯಯದ ಲೆಕ್ಕವು ಪ್ರತ್ಯೇಕವಾಗಿ ಇಡಲ್ಪಡುತ್ತದೆ ಪ್ರತಿವರ್ಷ ರೇಲ್ವೆಗಳು ಹಿಂದುಸ್ಥಾನ ಸರಕಾರಕ್ಕೆ ಸುಮಾರು ೬ ಕೋಟಿ ರೂಪಾಯಿಗಳನ್ನು ಮುಟ್ಟಿಸುತ್ತವೆ. ಈ ವರ್ಷಗಳಲ್ಲಿ ಮೊದಲಿನ ಆರು ವರ್ಷ ರೇಲ್ವೆಗಳು ಭರಭರಾಟಿಯ ಸ್ಥಿತಿಯಲ್ಲಿ ಇದ್ದವು ೧೯೨೯—೩೦ನೆ ವರ್ಷವೇ ಅವುಗಳ ಭರಭರಾಟಿಯ ಪರಮಾವಧಿಯ ಕಾಲವು ಆ ವರ್ಷ ಅವುಗಳ ಉತ್ಪನ್ನವು ಸುಮಾರು ೧೦೪ ಕೋಟಿ ರೂಪಾಯಿ ಇತ್ತು. ಅಂತೂ ಇತ್ತೀಚಿಗೆ ಅವುಗಳ ಉತ್ಪನ್ನವು ಸುಮಾರು ೧೯॥ ಕೋಟಿಯಷ್ಟು ಕಡಿಮೆಯಾಗಿರುತ್ತದೆಂದು ಹೇಳಬಹುದು. ಹೀಗಾಗುವುದಕ್ಕೆ ಅನೇಕ ಕಾರಣಗಳುಂಟು. ಮೋಟಾರುಗಳ ಪ್ರವಾಸವು ಹೆಚ್ಚಿಗೆ ಆಗಿರುವುದರಿಂದ ರೇಲ್ವೆಗಳಿಗೆ ಸುಮಾರು ಎರಡು ಕೋಟಿ ರೂಪಾಯಿಗಳ ಹಾನಿ ತಗಲಿದೆ ಜಗತ್ತಿನಲ್ಲಿ ಬೆಳೆದಿರುವ ಆರ್ಥಿಕ ಜಾಡ್ಯದ ಮೂಲಕವೂ ರೇಲ್ವೆಗಳ ಉತ್ಪನ್ನವು ಕಡಿಮೆಯಾಗಿದೆ. ರೇಲ್ವೆ ಟ್ರಾಫಿಕದ ಉತ್ಪನ್ನವು ಸುಮಾರು ೨೩ ಕೋಟಿ ರೂಪಾಯಿ ಮಾತ್ರವೇ ಇರುತ್ತದೆ ಇಷ್ಟು ಕಡಿಮೆ ಉತ್ಪನ್ನವು ಈ ಒಂಬತ್ತು ವರ್ಷಗಳಲ್ಲಿ ಎಂದೂ ಆಗಿದ್ದಿಲ್ಲ ರೇಲ್ವೆ ಪ್ರವಾಸಿಕರಿಂದ ರೇಲ್ವೆಗಳಿಗೆ ಆಗುವ ಉತ್ಪನ್ನವು ೧೦೦ಕ್ಕೆ ೧೯ ರಷ್ಟು ಕಡಿಮೆ ಆಗಿರುತ್ತದೆ. ಮಾಲುಗಳಿಂದಾಗುವ ಉತ್ಪನ್ನವು ೧೦೦ಕ್ಕೆ ೧೨॥ ಯಷ್ಟು ಕಡಿಮೆ ಆಗಿರುತ್ತದೆ ಪ್ರವಾಸಿಕರಿಂದ ಬರುವ ಉತ್ಪನ್ನವು ಬಹುಶಃ ಹೋದ ವರುಷದಷ್ಟೇ ಇದ್ದರೂ ಮಾಲಿನ ಉತ್ಪನ್ನವು ಹೋದ ವರ್ಷಕ್ಕಿಂತಲೂ ೧೦೦ಕ್ಕೆ ೩ ರಷ್ಟು ಇಳಿದಿರುತ್ತದೆ ಹತ್ತಿ, ಕಬ್ಬಿಣ, ಉಕ್ಕು, ಬೀಜ, ಕಟ್ಟು ಇವು ಹೋದ ವರ್ಷಕ್ಕಿಂತಲೂ ರೇಲ್ವೆಯಿಂದ ೧೦೦ಕ್ಕೆ ೧೦ರಂತೆ ಹೆಚ್ಚಿಗೆ ಕಳುಹಿಸಲ್ಪಟ್ಟವು. ಆದರೆ ಎಣ್ಣೆಯ ಕಾಳುಗಳು, ಗೋದಿ ಅಕ್ಕಿ ಮುಂತಾದ ಆಹಾರ ಪದಾರ್ಥಗಳು ಸಕ್ಕರೆ, ಚಿಮಣಿಯೆಣ್ಣೆ ಪೆಟ್ರೋಲ ಇವು ಕಡಿಮೆ ಪ್ರಮಾಣದಿಂದ ಹೋದವು

ಹಿಂದುಸ್ಥಾನದಲ್ಲಿ ಅನೇಕ ರೇಲ್ವೆ ಕಂಪನಿಗಳಿರುವವು ಅವುಗಳಲ್ಲಿ ಈಸ್ಟ ಇಂಡಿಯನ್ನ ಜಿ. ಆಯ. ಪಿ. ಮತ್ತು ಎಸ್. ಆಯ. ಆರ್. ಈ ರೇಲ್ವೆಗಳಿಗೆ ಹೋದ ವರ್ಷಕ್ಕಿಂತ ಈ ವರ್ಷ ಹುಸು ಲಾಭವೇ ಆಯಿತು. ಈಸ್ಟರ್ನ ಬಂಗಾಲ ಮತ್ತು ಬಿ. ಬಿ. ಸಿ. ಆಯ. ರೇಲ್ವೆಗಳ ಸ್ಥಿತಿಯು ಹೋದ ವರ್ಷದಂತೆಯೇ ಇತ್ತು. ಆದರೆ ಆಸಾಮ ಬಂಗಾಲ ರೇಲ್ವೆ, ಎಮ್. ಎಸ್ ಎಮ್ ರೇಲ್ವೆ, ಬಂಗಾಲ ನಾಗಪುರ ರೇಲ್ವೆ ಇವೇ ಮುಂತಾದವುಗಳಿಗೆ ಹೋದ ವರ್ಷಕ್ಕಿಂತ ಹೆಚ್ಚಿಗೆ ಹಾನಿಯು ತಗಲಿತು. ಕರ್ನಾಟಕದಲ್ಲಿಯ ಎಮ್. ಎಸ್. ಎಮ್. ರೇಲ್ವೆಕ್ಕೆ ಈ ವರ್ಷ ೧೯ ಲಕ್ಷ ರೂಪಾಯಿಗಳ ಹಾನಿಯು ತಟ್ಟಿರುತ್ತದೆ.

೧೯೩೩ನೆಯ ಇಸ್ವಿಯಲ್ಲಿ ಹಿಂದಿನ ಎರಡು ವರ್ಷಗಳಲ್ಲಿಯಂತೆಯೇ ಹೊಸ ರೇಲ್ವೆಗಳನ್ನು ಕಟ್ಟುವ ಗೋಜಿಗೆ ಕಂಪನಿಗಳು ಹೋಗಲೇ ಇಲ್ಲ ಯಾಕಂದರೆ, ಹೊಸ ರೇಲ್ವೆಗಳನ್ನು ಕಟ್ಟುವದಕ್ಕೆ ಬೇಕಾಗುವ ಭಂಡವಲಿಗೆ ಯೋಗ್ಯ ಬಡ್ಡಿ ತೀರುವಷ್ಟು ಉತ್ಪನ್ನವಾದರಷ್ಟೇ ಹೊಸ ಭಂಡವಲು ಸಿಗುವುದು ಹಾಗೆ ಉತ್ಪನ್ನವಾದೀತೆಂಬ ಭರವಸೆಯಿರುವುದಿಲ್ಲ ಆದಕಾರಣ ಹೊಸ ರೇಲ್ವೆಗಳನ್ನು ಕಟ್ಟಲಿಕ್ಕೆ ಬೇಕಾಗುವ ಭಂಡವಲವನ್ನು ಪೂರೈಸುವವರು ಯಾರು ?

೧೯೩೨-೩೩ನೆಯ ಇಸ್ವಿಯಲ್ಲಿ ರೇಲ್ವೆದಿಂದ ಪ್ರವಾಸ ಮಾಡಿದ ಪ್ರವಾಸಿಕರ ಸಂಖ್ಯೆಯು ಅತಿಶಯ ಕಡಿಮೆ ಅಂದರೆ ೪೯೨ ಕೋಟಿ ಮಾತ್ರವೇ ಇತ್ತು ೧೯೨೨-೨೩ರಿಂದ ಇತ್ತೀಚಿನ ವರ್ಷಗಳಲ್ಲಿ ಈ ವರ್ಷದಷ್ಟು ಪ್ರವಾಸಿಕರ ಸಂಖ್ಯೆ ಎಂದೂ ಕಡಿಮೆ ಇದ್ದಿಲ್ಲ ಹೋದ ವರ್ಷಕ್ಕಿಂತಲೂ ಈ ವರ್ಷ ೩೫ ಲಕ್ಷ ಪ್ರವಾಸಿಕ ಜನರು ಕಡಿಮೆ ಇದ್ದರು ಆದರೆ, ರೇಲ್ವೆಯ ಭರಭರಾಟಿಯ ವರ್ಷ ಅಂದರೆ ೧೯೨೯-೩೦ನೆಯ ಇಸ್ವಿಯಲ್ಲಿ ಈ ವರ್ಷಕ್ಕಿಂತ ೧೩ ಕೋಟಿ ಜನರು ಹೆಚ್ಚಿಗೆ ಪ್ರವಾಸಿಕರಿದ್ದರು

ಇದರ ಮೇಲಿಂದ ನೋಡುತ್ತಿರಲು ರೇಲ್ವೆದವರಿಗೆ ಮೋಟಾರಿನ ಅಂಜಿಕೆಯು ಏಕೆ ಉಂಟಾಗಿದೆಂಬುದು ಗೊತ್ತಾಗುವುದು ರೇಲ್ವೆದವರು ಪ್ರವಾಸಿಕರ ಸುಖದ ಕಡೆಗೆ ಲಕ್ಷ ಕೊಟ್ಟರೆ ಈಗಿನ ಆರ್ಥಿಕ ಹೀನಸ್ಥಿತಿಯನ್ನು ಲಕ್ಷದಲ್ಲಿ ತಂದು ರೇಲ್ವೆ ದರಗಳನ್ನು ಕಡಿಮೆ ಮಾಡಿದರೆ ಮಾತ್ರ ಅವರ ದುಃಸ್ಥಿತಿಯು ದೂರಾಗಬಹುದಲ್ಲದೆ, ಇಲ್ಲದಿದ್ದರೆ ಅದು ಎಂದಿಗೂ ದೂರಾಗದು

ಕಿರಿನುಡಿಗಳು.

ನಾಳಿನಿಂದ “ಗೋರಕ್ಷಣ ಸಪ್ತಾಹ” ವೆಂಬದೊಂದು ರಾಷ್ಟ್ರೀಯ ಮಹತ್ವದ ಪ್ರಚಂಡ ಕಾರ್ಯವು ಇಡೀ ಹಿಂದುಸ್ಥಾನದಲ್ಲಿ ಅನೇಕ ಮಹತ್ವದ ಸ್ಥಳಗಳಲ್ಲಿ ಜರುಗತಕ್ಕದ್ದಿರುವದು. ಗೋರಕ್ಷಣವೆಂಬದು ಹಿಂದುಸ್ಥಾನದ ಸಂಪದಭ್ಯುದಯದ ತಳಹದಿಯು ಒಕ್ಕಲತನಕ್ಕೆ ಗೋವಿನ ಸಂತತಿಯಾದ ಬಸವಣ್ಣನೇ ಮೂಲಾಧಾರ ಬಸವಣ್ಣನು ಬಳಲಿ ಬೆಂಡಾಗುವಂತೆ ಮಾಡಿದಾಗ ಮಾತ್ರ ಜನರು ಕಾಳು ಕಡಿಗಳನ್ನು ಕೊಂಡು ಬಾಳಿವೆ ಮಾಡಬಲ್ಲರು ಹತ್ತಿಯನ್ನು ಬಿತ್ತಿ ಬೆಳೆದು ಒಟ್ಟು ಒಡವೆಗಳನ್ನು ಕಾಣಬಲ್ಲರು ಹಾಗೆಯೇ ಒಕ್ಕಲತನದ ದುಡಿಮೆಗೆ ಅವಶ್ಯವಾಗಿ ಬೇಕಾಗುವ ವೈಕಸುವನ್ನು ಒಕ್ಕಲಿಗನ ಸಂತತಿಗೆ ಕೊಡುವವಳೂ ಗೋಮಾತೆಯೇ! ಹೀಗೆ ದೇಶದ ಬೆನ್ನೆಲುಬು ಗಣಿಯಾದ ಒಕ್ಕಲಿಗನಿಗೆ ಗೋಮಾತೆಯು ಕೈ ಬಿಟ್ಟರೆ ಬೇರೆ ಗತಿಯೇ ಇಲ್ಲ ಆದರೆ ಈಗ ಒಕ್ಕಲಿಗನೇ ಅವಳ ಕೈ ಬಿಟ್ಟದ್ದರಿಂದ ಆಕೆಗೂ ಅವನಿಗೂ ಸಂಬಂಧವಿಲ್ಲದಿರುವ ಹೊತ್ತು ಬಂದಿದೆ ಇದನ್ನು ಸರಿಪಡಿಸಬೇಕಾದರೆ ಗೋರಕ್ಷಣದ ಹೊರತು ಬೇರೆ ದಾರಿಯುಲ್ಲ ?

ಒಕ್ಕಲತನವೇ ಮುಖ್ಯ ಉದ್ಯೋಗವಾಗಿರುವ ಈ ದೇಶದಲ್ಲಿ ಒಕ್ಕಲತನದಂತೆಯೇ ಬೇರೆ ಬೇರೆ ವ್ಯವಸಾಯಗಳಿಗೂ ಗೋಮಾತೆಯೇ ಮೂಲವೆಂದನ್ನು ಬಿಚ್ಚಿ ಹೇಳಬೇಕಾಗಿಲ್ಲ ಆದದರಿಂದ ದೇಶದ ಆರ್ಥಿಕ ಸ್ಥಿತಿಯನ್ನೇ ಮಾರ್ಪಡಿಸಬೇಕೆಂದು ಬಯಸುವವರು ಗೋರಕ್ಷಣವನ್ನು ಅಂದರೆ ಆಕಳುಗಳ ಪೋಷಣೆಯನ್ನು ಕೈಕೊಳ್ಳದೆ ಗತ್ಯಂತರವೇ ಇಲ್ಲ ನಮ್ಮ ಇಲಾಖೆಯ ಗವ್ಹರ್ನರರು ಒಕ್ಕಲಿಗರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಕುರಿತು ಕರಳು ಹರಿತನದಿಂದ ಪ್ರಯತ್ನ ಮಾಡುವದೊಂದು ವಿಸ್ತಾರವಾದ ಯೋಜನೆಯನ್ನು ಸಿದ್ಧಪಡಿಸಿ ಪ್ರಕಟಿಸಿ ಅದರ ಚರ್ಚೆಯನ್ನು ನಾಲ್ಕೂ ಕಡೆಗೆ ನಡಿಸಿದ್ದಾರೆ ಆದರೆ ಅವರಿಂದ ಮುಂದೆ ಮಾಡಿದ ಯುಕ್ತಿ ಪ್ರಯುಕ್ತಿಗಳಲ್ಲಿ ಹಾಕಿದ ಹಂಚಿಕೆಗಳಲ್ಲಿ ಮಾಡಿದ ಯೋಜನೆಗಳಲ್ಲಿ ಈ ವಿಷಯದ ಸಮಾವೇಶವಿದ್ದಂತೆ ಕಂಡು ಬರುವದೇ ಇಲ್ಲ ಗವ್ಹರ್ನರ ದೊರೆಗಳೊಡನೆ ರೈತರ ಸುಖ ದುಃಖಗಳನ್ನು ಚರ್ಚಿಸುವ ಭಾಗ್ಯವಂತರು ಈ ವಿಷಯವನ್ನು ಗಮನಿಸಿದರೆ ಸರಿಯಾಗಲಿಕ್ಕಿಲ್ಲವೆ ?

ಬೇರೆ ಕಡೆಯ ಮಾತುಗಳು ಹೇಗಿದ್ದರೂ ನಮ್ಮ ಕನ್ನಡ ನಾಡಿನಲ್ಲಿ ಈ ಗೋರಕ್ಷಣದ ವಿಷಯವು ಬಹಳ ಮಟ್ಟಿಗೆ ದುರ್ಲಕ್ಷಿಸಲ್ಪಟ್ಟಿದೆಯೆಂಬುದು ಬಹಳ ವಿಷಾದದ ಸಂಗತಿಯು ೧೯೨೪ ರಲ್ಲಿ ಇಲ್ಲಿ ಒಳ್ಳೇ ರಭಸದಿಂದೆದ್ದ ಗೋರಕ್ಷಕಾರ್ಯವು ಎಂದೋ ಯಾವಾಗಲೋ ಮುಗ್ಗಿ ಮಸಣಗೂಡಿತು. ೧೯೨೭ ರಲ್ಲಿ ಮಹಾತ್ಮಾ ಗಾಂಧಿಯವರು ಇಲ್ಲಿಗೆ ಬಂದಾಗ್ಗೆ ಅವರ ವರದ ಹಸ್ತದಿಂದ ಕೂಡಿಸಲ್ಪಟ್ಟ ಗೋಶಾಲೆಯು ತಳಗಲ್ಲು ಅಲ್ಲಿಯೇ ಸಮಾಧಿಯನ್ನು ಹೊಂದಿತು ಹೀಗೆ ಧಾರವಾಡದಲ್ಲಿಯೂ ಕರ್ನಾಟಕದ ಬೇರೆ ಮುಖ್ಯ ನಗರಗಳಲ್ಲಿಯೂ ಗೋರಕ್ಷಣವೆಂಬುದು ಜನರ ಕನಸುಮನಸುಗಳಿಂದಲೂ ಹಾರಿಹೋದಂತಾಗಿದೆ ಇದು ಕನ್ನಡ ನಾಡಿನ ಉತ್ಕರ್ಷವನ್ನು ಬಯಸುವವರಿಗೆ ಒಪ್ಪತಕ್ಕ ಮಾತೇ ಅಲ್ಲ ಆದರಿಂದ ನಾಳಿನಿಂದ ಪ್ರಾರಂಭವಾಗುವ ಗೋರಕ್ಷಣ ಸಪ್ತಾಹದಲ್ಲಿ ಇಲ್ಲಿಯವರೂ ಬೇರೆಕಡೆಯವರೂ ಆಕಳುಗಳ ಪಾಲನ ಪೋಷಣೆಯ ವಿಷಯವನ್ನು ಒಂದೆರಡು ದಿನಗಳ ಮಟ್ಟಿಗಾದರೂ ವಿಚಾರಕ್ಕೆ ತೆಗೆದುಕೊಂಡು ಉಪಕ್ರಮ ಮಾಡಬೇಕೆಂದು ಸೂಚಿಸುವದು ನಮ್ಮ ಕರ್ತವ್ಯವೆಂದು ನಾವು ತಿಳಿದು ಇಂದು ಈ ವಿಷಯವನ್ನೆತ್ತಿದ್ದೇವೆ ಮಹಾನೋಮಿಯ ಮಹೋತ್ಸವವು ಇಡೀ ಕನ್ನಡ ನಾಡಿನಲ್ಲಿ ಈಗ ಜರುಗುತ್ತ ನಡೆದಿರುವಂತೆಯೇ ಈ ಗೋರಕ್ಷಣ ಸಪ್ತಾಹವೆಂಬುದು ಕನ್ನಡ ನಾಡಿನ ಪುರಾತನ ಪರಂಪರೆಯ ಹಟ್ಟಿಯ ಹಬ್ಬವೆಂಬ ಹೆಸರಿನಿಂದ ಪಾಲಿಸಲ್ಪಡುತ್ತಿದರೆ ಸಂಸ್ಕೃತಿ ಸಂಗೋಪನಕ್ಕೆ ಕೂಡಾದ ಮತ್ತೊಂದು ಮಹತ್ಕಾರ್ಯವನ್ನು ಕನ್ನಡಿಗರು ಕೈಕೊಂಡಂತಾಗುವದು.

ಕರ್ನಾಟಕದ ಸುದ್ದಿಗಳು.

ಹಾವೇರಿ ಹಾಯಸ್ಕೂಲದಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಫೀ ತೆಗೆದುಕೊಳ್ಳಬಾರದೆಂದು ಗೊತ್ತಾಗಿದೆ ಎಂದು ಸುದ್ದಿ

ಕಾರವಾರ ಜಿಲ್ಹೆಯಿಂದ ಒಟ್ಟಿಗೆ ೧೮ ಜನ ವಿದ್ಯಾರ್ಥಿಗಳು ಹಿಂದೀ ಪರೀಕ್ಷೆಗೆ ಕುಳಿತಿದ್ದರು ಇವರಲ್ಲಿ ಏಳು ಮಂದಿ ಗಂಡು ಹುಡುಗರು ಮಿಕ್ಕವರು ಹೆಣ್ಣು ಮಕ್ಕಳು ಇದ್ದರು ಮೈಸೂರ ಶ್ರೀ ಸುಬ್ಬರಾಯರು ಮತ್ತು ಕಾರವಾರದ ಶ್ರೀ ದಿನಕರ ದೇಸಾಯರು ಬಹಳ ಸಾಹಸಪಟ್ಟರು ಪಂಡಿತ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಒಂದು ಹಿಂದೀ ಪ್ರಚಾರ ಸಭೆಯು ಸ್ಥಾಪಿತವಾಯಿತು

ಶಹಾಪುರ (ಬೆಳಗಾವಿ)ದಲ್ಲಿಯ ಕನ್ನಡ ಶಾಲೆಯನ್ನು ಸಂಸ್ಥಾನದ ಇನಸ್ಪೆಕ್ಟರು ನೋಡಿ ಶಾಲೆಯ ವಿಷಯವಾಗಿ ಯಾಕ್ಷಿಸುವ ಭಾಷೆ ಕೊಟ್ಟರು

ಹಿಂದುಸ್ಥಾನ

ಬಡೋದೆಯ ಗಾಯಕವಾಡ ಮಹಾರಾಜರು ಈ ವಾರದಲ್ಲಿಯೇ ಹಿಂದುಸ್ಥಾನಕ್ಕೆ ಬರುವವರಿದ್ದಾರೆ

ಪಂಜಾಬ ಇಲಾಖೆಯ ಕಿಸಾನ ಸಂಘದ ಕಾರ್ಯದರ್ಶಿಗಳಾದ ಸರ್ದಾರ ಗುರಬಚನ ಸಿಂಗರಿಗೆ ಲಾಹೋರ ಮ್ಯಾಜಿಸ್ಟ್ರೇಟರು ಅವರ ಒಳ್ಳೇ ನಡತೆಯ ಬಗ್ಗೆ ೨ ಸಾವಿರ ರೂಪಾಯಿ ಕೇಳಲು ಸಿಂಗರು ಸೆರೆಮನೆಗೆ ಹೋಗುವದೇ ಲೇಸೆಂದರು

ಅಹಮ್ಮದಾಬಾದ ಮುನಸಿಪಾಲಿಟಿಯ ಮುಖ ವರ್ಷದ ಆಯ್ಕೆ ನಡೆದು ೩೫ ಸ್ಥಳಗಳಲ್ಲಿ ೨೫ ಸ್ಥಳಗಳನ್ನು ಕಾಂಗ್ರೆಸ ಪಂಗಡದವರು ಗೆದ್ದಿದ್ದಾರೆ

ಹಿಂದಿ ವ್ಯಾಪಾರೀ ಪ್ರಗರ್ಶನದ ಉಗೆಬಂಡಿಯು ಇಡೀ ಹಿಂದುಸ್ಥಾನದಲ್ಲಿ ಅಡ್ಡಾಡಲಿಕ್ಕೆಂದು ಹೊರಡುವದು ಮೊದಲು ಅದು ಪುಣೆಗೆ ಹೋಗುವದು

ಹಿಂದೂ ಮಹಾ ಸಭೆಯವರು ಮಾಡಿದ ಗೊತ್ತುಗಳಲ್ಲಿ ಕೆಲಸವಿಲ್ಲದವರ ದೆಸೆಯಿಂದ ಅಲ್ಲಲ್ಲಿ ಕೈಗಾರಿಕೆಯಮನೆಗಳನ್ನು ಸ್ಥಾಪಿಸುವದೂ ಒಂದು

ವರ್ಧೆಯ ಶ್ರೀ ಮಣಿಲಾಲ ಕೋಠಾರಿಯವರು ಗಾಂಧಿ ಜಯಂತಿಯ ನಿಮಿತ್ತ ಜನರಿಂದ ಆರು ಸಾವಿರ ರೂಪಾಯಿ ಕೂಡಿಸಿ ಬಡವರಿಗೆ ಹರಿಜನರಿಗೆ ಧರ್ಮಾರ್ಥವಾಗಿ ಖಾದಿಯನು ಹಂಚಿದರು

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡಿ ವಸ್ತು ಕಂಪನಿ)

ಹುಬ್ಬಳ್ಳಿ ತಾ॥ ೧೬ ಮಧ್ಯಾಹ್ನ ೧೧ ಗಂಟೆ

ಜವಾರಿ ಹತ್ತಿ	೧೦೨ ೧೦೭	ಜೋಳ	೧೨.೯॥
ಅಪ್ಲಂಡ ,,	೧೦೨-೧೦೩	ಗೋದಿ	೬॥೬॥
ವಿಲಾಯತಿ ,,	೯೫ ೯೭	ಉದ್ದು	೬॥-೭
ಹಿಂಗ್ವಾಸ.	೧೦೮-೧೧೦	ಕಡ್ಲಿ	೬ ೬।
ಕೇನಅಂಬ	೭೩-೭೮	ಕಡ್ಲಿ ಜಾ. ೫॥ ೫॥	
ದಪ್ಪಲ್ದೂಲ್ಕ	೬೬-೬೭	ಕುಸಬಿ	೧೨॥
ಸಾಹಿನ ಅರಳೆ	೬೬-೬೭	ಹುರಳಿ	೧೩
ಹೆಸರು ಜವಾರಿ	೯ ೧೨		
ಶೇಂಗಾ ಕಾಯಿ ಹೊ	೮	ಹತ್ತಿಕಾಳು	೫೫

ಬೆಳ್ಳಿ ಬಂಗಾರ

ಬಂಗಾರ	೩೨	ಬೆಳ್ಳಿ	॥-

ಪಟೇಲರು ಗುಣ ಹೊಂದುತ್ತಲಿದ್ದಾರೆ.

"ಕನ್ನಡಿಗ" ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

ವಿ. ಜೆ. ಪಟೇಲರು ಗುಣಹೊಂದುತ್ತಲಿದ್ದಾರೆ.

ಮುಂಬೈ ತಾ|೧೫ ಡಾ. ಗೋವರ್ಧನ ದಾಸ ಪಟೇಲರಿಗೆ ಸುಭಾಷ ಬೋಸರು ತಂತಿ ಕೊಟ್ಟು ವಿ ಜೆ ಪಟೇಲರ ಆರೈಕೆ ಮಾಡಲು ನೀವೇ ಹೊರಟಿದ್ದು ಬರಬೇಕೆಂದು ಕೇಳಿಕೊಂಡಿದ್ದಕ್ಕೆ ಡಾಕ್ಟರರು ಈ ದಿನ ರಾತ್ರಿ ಕರಾಚಿಗೆ ಹೋಗಿ ಅಲ್ಲಿಂದ ವಿಮಾನದ ಮೂಲಕ ಸ್ವಿಝರ್ಲಂಡಕ್ಕೆ ತಲ್ಪುವರು. ಪಟೇಲರು ಗುಣಹೊಂದುತ್ತಲಿದ್ದಾರೆಂದು ಡಾ ಗೋವರ್ಧನದಾಸರಿಗೆ ತಾರಾ ಸುದ್ದಿಯೂ ಬಂದಿದೆ. ಪಟೇಲರಿಗೆ ಬೇಗ ಗುಣವಾಗಬೇಕೆಂದು ಪ್ರಾರ್ಥಿಸಲು ಇಂದು ಚೌಪಾಟಿಯ ಮೈದಾನದಲ್ಲಿ ಸಾರ್ವಜನಿಕ ಸಭೆ ಸೇರುವದಿದೆ. ಶ್ರೀಮತಿ ಸರೋಜಿನಿ ನಾಯ್ಡು, ದಾಸ ಮೊದಲಾದವರು ಮಾತನಾಡುವರು.

(ಅ ಪ್ರೆ ತಂತಿ)

ಹಿಂದೂ ಮಹಾ ಸಭೆ

ಅಜಮೀರ ತಾ||೧೪ ಹಿಂದೂ ಮಹಾ ಸಭೆಯ ವಿಷಯನಿಯಾಮಕ ಕಮಿಟಿಯು ನಿನ್ನೆ ರಾತ್ರಿ ಕೂಡಿತ್ತು. ಸುದ್ದಿಗಾರರಿಗೆ ಒಳಗೆ ಪ್ರವೇಶವಿರಲಿಲ್ಲ. ಆದರೆ ಮೂರು ಠರಾವುಗಳು ಸ್ವೀಕೃತವಾಗಿವೆಯೆಂತೆ. ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಗೊತ್ತಾದ ಹಿಂದೂ-ಮುಸಲ್ಮಾನ ಐಕ್ಯದ ಬಗ್ಗೆಯೂ ಆ ವಿಷಯದಲ್ಲಿ ಹಿಂದುಗಳಿಗೆ ಯಾವ ಪ್ರಗತಿಯಾಗಿದೆಂಬ ಬಗ್ಗೆಯೂ ಮೊದಲನೇ ಗೊತ್ತುವಳಿಯಿದೆ. ವ್ಯವಸಾಯ ಸಾಧನಗಳಿಲ್ಲದ ಹಿಂದೂ ತರುಣರಿಗಾಗಿ ಔದ್ಯೋಗಿಕ ಮಂದಿರವನ್ನು ಸ್ಥಾಪಿಸಬೇಕಾಗಿ ಎರಡನೇ ಠರಾವು. ರೈತರ ಹಾಗೂ ಕೂಲಿಕಾರರ ಬವಣೆಯ ಬಗ್ಗೆ ಸಹಾನುಭೂತಿಯನು ಪ್ರದರ್ಶಿಸಿ ಬಂಡವಲುಗಾರರನ್ನು ಶಕ್ತಿ ಜಾಹುವ ಚಳವಳಿಯನ್ನು ಮೂರನೇ ಗೊತ್ತುವಳಿಯಿಂದ ನಿಷೇಧಿಸಲಾಯಿತು. ಅಂತರ ರಾಷ್ಟ್ರೀಯ ಸಹಾನುಭೂತಿಯನ್ನು ಸಂಪಾದಿಸಲು ಹಿಂದೂ ಮಹಾ ಸಭೆಯು ಶಿಷ್ಟ ಮಂಡಲವನ್ನು ಜಿನೇವಾಕ್ಕೆ ಕಳಿಸಬೇಕೆಂದೂ ಗೊತ್ತಾಗಿದೆ. ಲಾಸೇನ ಒಪ್ಪಂದದ ಮೇರೆಗೆ ಇಂಗ್ಲಂಡ ಹಾಗೂ ಹಿಂದುಸ್ಥಾನಗಳು ಆ ಪರಿಷತ್ತಿನ ಮೂಲ ಸಭಾಸದರು. ಯುರೋಪದ ಅಲ್ಪ ಜಾತೀಯರ ಹಕ್ಕುಗಳ ಬಗ್ಗೆ ಅವರು ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಇಂಗ್ಲಂಡ ಸರಕಾರವು ಆ ಕಮಿಟಿಯ ನಿರ್ಣಯಗಳನ್ನು ಮನ್ನಿಸಲೇ ಬೇಕಾಗಿದೆ. ಹಾಗೆ ಮಾಡದಿದ್ದರೆ ಆ ಅಂತರ ರಾಷ್ಟ್ರೀಯ ನಿರ್ಣಯವನ್ನು ಮುರಿದಂತಾಗುವದು.

(ಅ ಪ್ರೆ ತಂತಿ)

ಸಿಮಲೆಯ ವ್ಯಾಪಾರಿ ಚರ್ಚೆ

ಸಿಮಲೆಯಲ್ಲಿ ನಡೆದಿರುವ ಹಿಂದೀ-ಜಪಾನಿ ವ್ಯಾಪಾರಗಳ ಪ್ರತಿನಿಧಿಗಳ ಚರ್ಚೆಗಳು ಮುರಿದು ಹೋಗುತ್ತವೇನೋ ಎಂದು ಬೆದರಿಕೆ. ಜಪಾನಿ ಉತ್ಪತ್ತಿಯ ಬಟ್ಟೆಯ ಮೇಲೆ ನೂರಕ್ಕೆ ೭೫ ಜಕಾತಿ ಹೇರಬೇಕೆಂದು ಹಿಂದೀ ಪ್ರತಿನಿಧಿಗಳ ಮತ. ಆದರೆ ಜಪಾನೀ ಪ್ರತಿನಿಧಿಗಳು ನೂರಕ್ಕೆ ೪೦ರ ಮೇಲ್ಪಟ್ಟ ಜಕಾತಿಗೆ ಒಪ್ಪುವದಿಲ್ಲ.

ಲಖನೌದಲ್ಲಿ ಮುಸಲ್ಮಾನರ ಪರಿಷತ್ತು.

ಸಾಲಿಮ ಪುರದ ಮಹಾರಾಜರು ಮುಸಲ್ಮಾನರ ಬೇರೆ ಬೇರೆ ಸಂಗಡಗಳ ಮುಂದಾಳುಗಳಿಗೆ ಅಕ್ಟೋಬರ ತಿಂಗಳ ೨೯ ಮತ್ತು ೩೦ನೆಯ ತಾರೀಖಿಗೆ ಲಖನೌದಲ್ಲಿ ಸಭೆ ಸೇರಲು ಆಮಂತ್ರಣವನ್ನಿತ್ತಿರುವರು. ಅಲ್ಲಿ ಚೆನ್ನಾಗಿ ವಿಚಾರ ಮಾಡಿಕೊಂಡು ಮುಂದೆ ನವ್ಹಂಬರ ತಿಂಗಳಲ್ಲಿ ಮುಸಲ್ಮಾನರ ಎಲ್ಲ ಸಂಗಡಗಳ ಸಭೆಯೊಂದನ್ನು ಕರೆಯುವ ವಿಚಾರ ಮಾಡಿದಾರೆ. ಮುಸಲ್ಮಾನರ ಎಲ್ಲ ಸಂಗಡದವರ ಅಭಿಪ್ರಾಯದ ಮೇರೆಗೆ ಒಕ್ಕಟ್ಟಿನ ಸಾರ್ವಜನಿಕ ಕಾರ್ಯಕ್ರಮವೊಂದನ್ನು ಅನುಸರಿಸುವರು. ಆದೇ ಕಾಲಕ್ಕೆ ಇಂಡಿಯಾ ಪೆಲಿಸ್ಟಾಯಿನ್ ಮತ್ತು ಆಲ್ ಇಂಡಿಯಾ ಖಿಲಾಫತ್ ಪರಿಷತ್ತುಗಳನ್ನು ಕರೆಯುವ ವಿಚಾರವಿದೆ.

(ಅ ಪ್ರೆ ತಂತಿ)

ಸಿನೇಮಾಕ್ಕೆ ಗವ್ಹರ್ನರರ ಆಶೀರ್ವಾದ

ಮುಂಬಯಿ ತಾ|| ೧೪— ಮುಂಬೈಯಲ್ಲಿ ರೀಗಲ್ ಸಿನೇಮಾ ಗೃಹವನ್ನು ತೆರೆಯುವಾಗ ನಾಮದಾರ ಗವ್ಹರ್ನರ ಸಾಹೇಬರು ಮಾತನಾಡಿದ್ದು— ಸಿನೇಮಾ ಗೃಹಗಳು ಈಗಿನ ದಿನದ ಜನ ಜೀವನದೊಳಗೆ ಮುಖ್ಯವಾಗಿವೆ. ಮುಂಬೈಯಂಥ ಪಟ್ಟಣವು ಕೂಡ ಆ ವಿಷಯದಲ್ಲಿ ಎಲ್ಲ ಜನಾಂಗಗಳಂತೆ ಮುಂದರಿಯಲಿಕ್ಕೆಬೇಕೆಂಬುದು ಅವಶ್ಯವು. ಇಂದು ಎಲ್ಲೆಡೆಯಲ್ಲಿ ಕೈಗಾರಿಕೆಯು ಬೆಳವಣಿಗೆಯು ಗಡಲವೆಬ್ಬಿದೆಯಷ್ಟೇ. ಇಂಥ ಕೈಗಾರಿಕೆಗಳಲ್ಲಿ ಸಿನೇಮಾದ ಅಭಿವೃದ್ಧಿಯೂ ಒಂದು. ಈಗಿನ ಉನ್ನತಿಗೆ ಸಿನೇಮಾಗಳು ಸಹಕಾರಿಯಾಗುವಂತಾಗಬೇಕು. ಹಿಂದುಸ್ಥಾನದಲ್ಲಿ ಈ ಕೈಗಾರಿಕೆಯು ಇತ್ತೀಚೆ ಪ್ರಾರಂಭವಾಗಿದ್ದರೂ ಅದು ಮುಂದೆ ಹಾರಗಾಲಿನಿಂದ ಓಡುವದೆಂದು ಭಾವಿಸಿದ್ದೇನೆ.

(ಅ ಪ್ರೆ ತಂತಿ)

ಸರ ಜಹಾಂಗೀರರ ಬೋಧ.

ಮುಂಬೈ ತಾ|| ೧೪ ವೆಸ್ಟರ್ನ ಇಂಡಿಯಾ ಲಿಬರಲ್ ಫೆಡರೇಶನ್‌ದ ಸಭೆಯು ಭಾರತ ಸೇವಕ ಸಮಾಜದಲ್ಲಿ ನಡೆದಾಗ ಸರ ಕಾವಸಜಿ ಜಹಾಂಗೀರರವರು ಅಂದದ್ದು—ಮಂದಳ ಪಕ್ಷದವರು ತಮ್ಮ ಸಾಧ್ಯವನ್ನು ಸಾಧಿಸಲಿಕ್ಕೆ ತಮ್ಮ ನಾಲಿಗೆ-ಲೆಕ್ಕಣಿಕೆಗಳನ್ನು ಸಂಯಮಿಸಿದ ಪದ್ಧತಿಯಿಂದ ಉಪಯೋಗಿಸುವದೇ ಉಪಾಯವೆಂದು ತಿಳಿದರು. ಕಾಂಗ್ರೆಸಕ್ಕೆ ಪೂರ್ಣ ಸ್ವರಾಜ್ಯ ಬೇಕು. ಮಂದಳರಿಗೆ ಸಾಮಂತ ಸ್ವರಾಜ್ಯ ಬೇಕು. ಅವರಿವರಲ್ಲಿ ಇಷ್ಟೇ ಭೇದ. ಅವರವರ ಸಾಧನದಲ್ಲಿಯೂ ಭೇದವಿದೆ. ಈಗಿನ ರಾಜಕೀಯ ಪರಿಸ್ಥಿತಿಯು ಬಹು ಗಡಚಾಗಿದೆ. ಎಲ್ಲ ಹಿಂದೀ ಜನರು ಒಂದಾಗಿ ಹೊಸ ರಾಜ್ಯ ಶಾಸನ ಪದ್ಧತಿಯನ್ನು ಕಾರ್ಯಕಾರಿಯನ್ನಾಗಿ ಮಾಡಬೇಕು. ಬಿಳಿಯ ಪತ್ರಿಕೆಯು ಮೂರು ದುಂಡು ಮೇಜಿನ ಪರಿಷತ್ತುಗಳ ಫಲವಾಗಿದೆ. ಮೇಲಾಗಿ ಎಲ್ಲ ಹಿಂದೀ ಜನರ ಒಪ್ಪಿಗೆಗೆ ಅದೊಂದು ಸಾಮಾನ್ಯ ದಾರಿಯಾಗಿದೆ. ಅದರಲ್ಲಿಯ ಅನೇಕ ಕೊಂಕುಗಳನ್ನು ನಾವು ಶಾಸನ ಪಟ್ಟು ಚಳವಳಿಯಿಂದ ಮಾರ್ಪಡಿಸಿಕೊಳ್ಳಲಿಕ್ಕೆಬೇಕು. ಆದುದರಿಂದ ನಾನು ನಿಮಗೆಲ್ಲ ಬಿನ್ನವಿಸಿಕೊಳ್ಳುವದೇನಂದರೆ ನೀವು ಬಿಳಿಯ ಪತ್ರಿಕೆಯನ್ನು ಕಾರ್ಯಕಾರಿಯನ್ನಾಗಿ ಮಾಡಿತೋರಿಸಿ. ಆದರಿಂದ ಆದಷ್ಟು ಹೆಚ್ಚಿನ ಲಾಭ ಪಡೆರಿ.

(ಅ ಪ್ರೆ ತಂತಿ)

ಹೋರಸಾಹೇಬರ ರೋಗ ಚಿಕಿತ್ಸೆ.

ಆಕ್ಸಫರ್ಡ ಕಾಂಝರವೇಟಿವರ ಸಭೆಯಲ್ಲಿ ಮಾತಾಡುವಾಗ ಭಾರತ ಮಂತ್ರಿಗಳಾದ ಸರ ಹೋರ ಅನ್ನುವದು, ಹಿಂದುಸ್ಥಾನಕ್ಕೆ ಹೊಣೆಗಾರಿಕೆಯ ಸ್ವರಾಜ್ಯ ಯೋಗ್ಯವಲ್ಲವೆನ್ನುವವರು ಇಲ್ಲಿ ಕೆಲವರಿರಬಹುದು. ಇಂಥ ಎಲ್ಲ ಸಂಶಯಗಳನ್ನು ಒತ್ತಟ್ಟಿಗಿರಿಸಿ ನಾವು ನಮ್ಮ ತಲೆ ಝುಳ ಝುಳ ಮಾಡಿಕೊಂಡು ಇನ್ನು ಮುಂದೆ ಯೋಚಿಸಬೇಕಾಗಿದೆ. ಈಗಿನ ವ್ಯಾಪಾರದ ಮನ್ನಷ್ಟಿನ ಸಮಯದಲ್ಲಿ ಹಿಂದುಸ್ಥಾನದಲ್ಲಿಯ ಕ್ರಾಂತಿಕಾರಕರಿಗೆ ಹೆದರುವ ಕಾರಣವಿಲ್ಲ. ಇನ್ನು ವ್ಯಾಪಾರದ ವಿಷಯವಾಗಿ ಕೇಳಬೇಕೆಂದರೆ ಬಿಳಿಯ ಪತ್ರಿಕೆಯ ಯೋಜನೆಗಳು ಜಾರಿಯಲಿ ಬಂದರೆ ವ್ಯಾಪಾರದ ಮುಂದಿಯು ಕನ್ನಾರೆ ಮರೆಯಾಗುವದು. ಇಂಗ್ಲಂಡದಲ್ಲಿಯ ಮರುಣ ಪೀಳಿಗೆಯು ಹಿಂದುಸ್ಥಾನದ ಭಾವೀ ಸ್ಥಿತಿಯ ಬಗ್ಗೆ ನಿರಾಸೆಪಡಲಾಗದು.

(ಅ ಪ್ರೆ ತಂತಿ)

ಹಿಂದು ಮಹಾಸಭೆಯಲ್ಲಾದ ಗೊತ್ತುಗಳು.

ಅಜಮೀರ ತಾ ೧೬ ಹಿಂದುಮಹಾಸಭೆಯ ಎರಡನೇ ದಿನದ ಅಧ್ಯಕ್ಷರು ಪ್ರಾರಂಭಕ್ಕೆ ಡಾ ಬೆಸೆಂಟರ ಮರಣದ ಬಗ್ಗೆ ದುಃಖದರ್ಶಕ ಗೊತ್ತುವಳಿಯನ್ನು ಮಂಡಿಸಿದರು. ಆ ಮೇಲೆ ಸಭೆಗೆ ಒಪ್ಪಿಸಲಾದನಂತರ ಬಂಗಾಲದ ಡಾ ಮುಕರ್ಜಿಯವರು ಅಲ್ಪಸಂಖ್ಯಾಕರ ಪ್ರಶ್ನವನ್ನು ಸಭೆಯಲ್ಲಿ ಮಂಡಿಸುವಾಗ "ಹಿಂದುಸ್ಥಾನಕ್ಕೆ ವಿರೋಧವಿದ್ದರು ಅವನ್ನು ಲಕ್ಷಿಸದೆ ಅಲ್ಪಸಂಖ್ಯಾಕರ ತೀರ್ಪು ಅವರ ಮೇಲೆ ಹೇರಲಾಗಿದೆ. ಬಂಗಾಲದಲ್ಲಿ ನೂರಕ್ಕೆ ೪೫ರ ವರೆಗೆ ಹಿಂದೂ ಜನರ ಗೋಳು ಬ್ರಿಟಿಶ ಸರಕಾರದಿಂದ ನಿವಾರಿಸಲ್ಪಡದ್ದರಿಂದ ನಾವಿನ್ನು ರಾಷ್ಟ್ರ ಸಂಘದವರಿಗೆ ಈ ಗೋಳನ್ನು ಅರಿಕೆ ಮಾಡಿಕೊಳ್ಳಬೇಕಾಗಿದೆ. ಜಗದಲ್ಲಿ ಶಾಂತಿಯಾಗಬೇಕೆಂದರೆ, ಯುರೋಪಿಯ ಅಲ್ಪಸಂಖ್ಯಾಕರಿಗೆ ಹಚ್ಚಿದ ತತ್ವವನ್ನೇ ಹಿಂದೀ ಅಲ್ಪಸಂಖ್ಯಾಕರಿಗೂ ಹಚ್ಚಲಿಕ್ಕೆಬೇಕು" ಅಂದರು. ಈ ಗೊತ್ತುವಳಿಯು ಒಮ್ಮತದಿಂದ ಆಯಿತು. ಕೂಲಿಯವರ ಮತ್ತು ರೈತರ ಸ್ಥಿತಿಗಳನ್ನು ಸುಧಾರಿಸುವ ಬಗ್ಗೆ ಸಹಾನುಭೂತಿಯ ಸೂಚನೆಯು ಮಂಡಿಸಲ್ಪಟ್ಟರೂ ಜಮೀನದಾರ ಮತ್ತು ಸಾವುಕಾರ ವರ್ಗವನ್ನು ಪೂರಾ ಅಳಿಸಿಬಿಡುವ ವಿಷಯದಲ್ಲಿ ಅಸಮ್ಮತಿ ತೋರ್ಪಡಿಸುವ ಮೂರನೇ ಗೊತ್ತುವಳಿ ಆಯಿತು. ಸಿಂಧವನ್ನು ಬೇರ್ಪಡಿಸಬಾರದು. ಹಿಂದೂ ತರುಣರಲ್ಲಿ ಕೆಲಸಗೇಡಿತನ ಬೆಳೆಯುತ್ತಿರುವದಕ್ಕೆ ಏನಾದರೂ ಉಪಾಯವಮಾಡಬೇಕು ಎಂಬುವ ಬಗ್ಗೆ ನಿರ್ಧಾರಗಳಾದವು. ಹಿಂದುಸ್ಥಾನದೊಳಗಿರುವ ಹಿಂದುಗಳೆಲ್ಲರು ಕೌನ್ಸಿಲ್ಲುಗಳನ್ನು ಕೈಯಲ್ಲಿ ತೆಗೆದುಕೊಳ್ಳಲು ಅವಶ್ಯವಿರುವ ಕಾರ್ಯಗಳನ್ನು ನಡಿಸಬೇಕೆಂಬುವ ಸೂಚನೆಯು ಸಭೆಯಲ್ಲಿ ಮಂಡಿಸಲ್ಪಟ್ಟಾಗ ಶ್ರೀ ರಾಜಕುಮಾರ ಎಂಬವರು ಅದಕ್ಕೆ ವಿರೋಧಿಸುವಾಗ ಮಹಾತ್ಮರು ಕೌನ್ಸಿಲ್ ಪ್ರವೇಶಕ್ಕೆ ಒಪ್ಪದ್ದರಿಂದ ಅದು ಅಪ್ರಸ್ತುತವೆಂದರು. ಶ್ರೀ ಪದ್ಮಜಿಯವರು ಮಾತನಾಡುವಾಗ ಕಾಂಗ್ರೆಸ್ಸಿನ ಧೋರಣೆಯನ್ನು ಖಂಡಿಸಿ ಅಸ್ಪೃಶ್ಯರ ದೇವಾಲಯ ಪ್ರವೇಶದ ಬಿಲ್ಲಿನ ಚರ್ಚೆ ನಡೆದ ಕಾಲದಲ್ಲಿ ದೇವಾಲಯ ಪ್ರವೇಶ ಬಿಲ್ಲಿಗೆ ಅನುಕೂಲವಾಗುವಂತೆ ಅಸೆಂಬ್ಲಿಯ ಸಭಿಕರ ಮನ ಒಲಿಸಲು ಮಹಾತ್ಮರು ಶ್ರೀ ರಾಜಗೋಪಾಲಾಚಾರ್ಯ, ದೇವಿದಾಸ ಮುಂತಾದವರನ್ನು ಕಳಿಸಿದ ಸಂಗತಿ ಹೇಳಿದರು.

(ಅ ಪ್ರೆ ತಂತಿ)

ಲಾಹೋರ ಶೀಖರ ಪರಿಷತ್ತು

ಲಾಹೋರ ತಾ|| ೧೬— ಖಾಲಸಾ ದರ್ಬಾರ ಮತ್ತು ಮಧ್ಯವರ್ತಿ ಸೀಖ ಸಂಘದ ಸಭೆ ಇವೆರಡರ ಕೂಡಲ ಸಭೆಗಳು ನೆರೆದ ಸಮಯದಲ್ಲಿ ಸರ್ದಾರ ಮಂಗಲಸಿಂಗರು ಸರಕಾರದವರ ಜಾತಿಯ ತೀರ್ಪನ್ನು ಖಂಡಿಸಿದರು, ಮತ್ತು 'ಶುದ್ಧ ರಾಷ್ಟ್ರೀಯ ತಳಹದಿಯ ಮೇಲೆ ಇಲ್ಲದ ಯಾವ ರಾಜ್ಯ ಪದ್ಧತಿಯನ್ನು ಶೀಖರು ಒಪ್ಪಲಾರರು. ಕೌನ್ಸಿಲ, ಮಂತ್ರಿಮಂಡಲ, ಮುಂತಾದವುಗಳಲ್ಲಿಯೂ ಜಾತಿಯ ಗೊಂದಲ ನಡೆಯಲಾಗದು ಯಾಕಂದರೆ ಇನ್ನು ಮುಂದೆ ಹಳ್ಳಿಗರ ಆರ್ಥಿಕ ಶೈಕ್ಷಣಿಕ ಸ್ಥಿತಿಗಳಲ್ಲಿ ಸುಧಾರಣೆಯಾಗಲಿಕ್ಕೆಬೇಕು. ಅದರಂತೆ ಸ್ವದೇಶಿ ಖಾದಿ ಇವುಗಳ ಪ್ರಸಾರ ಅಸ್ಪೃಶ್ಯತಾ ನಿವಾರಣೆ ಹೆಂಡದಂಗಡಿ ಇವುಗಳ ವಿರುದ್ಧ ಗದ್ದಲ ನಡಿಸಲಿಕ್ಕೆಬೇಕು ೧೯೧೪—೧೯೩೬ ಇಸ್ವಿಯ ರಾಜಕೀಯ ಸೆರೆಯಾಳುಗಳನ್ನು ಬಿಡಬೇಕು' ಅಂದರು.

[ಅ ಪ್ರೆ ತಂತಿ]

ಪರದೇಶ

ಜರ್ಮನಿಯ ಅಧ್ಯಕ್ಷರಾದ ಮಿ|| ಹಿಟ್ಲರವರು ಹಿಂದುಸ್ಥಾನದ ವಿಷಯವಾಗಿ ತಾವು ಬರೆದಿರುವ ಒಂದು ಪುಸ್ತಕದಲ್ಲಿ "ಹಿಂದುಸ್ಥಾನವು ಇಂಗ್ಲಿಷರ ಕೈ ಬಿಡುವದರಲ್ಲಿದ್ದರೂ, ಇಂಗ್ಲೀಷರು ಅದನ್ನು ಕಳಕೊಳ್ಳಲಾರರು, ಹಿಂದೂ ಜನರು ಎಷ್ಟು ಎದ್ದರೂ ಅದರಲ್ಲಿ ಅವರಿಗೆ ಜಯವಾಗದು. ಬೇರೆ ಜನಾಂಗಕ್ಕಿಂತ ಬ್ರಿಟಿಶರು ಆಳಿಕೆಯಲ್ಲಿರುವದೇ ಹಿತವೆಂದು ನನ್ನ ಮತ.

ಜರ್ಮನಿಯು ರಾಷ್ಟ್ರಸಂಘದಿಂದ ಒಡೆಯಿತು.

ಜರ್ಮನರು ರಾಷ್ಟ್ರಸಂಘದೊಳಗಿಂದ ಒಡೆದ ಸುದ್ದಿ ಬಂದಿದೆ. ತಮಗೆ ಬೇರೆ ರಾಷ್ಟ್ರಗಳಷ್ಟೇ ಮರ್ಯಾದೆ ದೊರೆಯಬೇಕೆಂದು ಜರ್ಮನರ ಅಸಮಾಧಾನ. ಸ್ವಾಭಿಮಾನಕ್ಕೆ ಭಂಗ ಬರುವಂಥ ಯಾವ ಒಪ್ಪಂದಕ್ಕೂ ಜರ್ಮನಿಯು ಒಪ್ಪಲಾರದೆಂದು ಜರ್ಮನಿಯ ಛಾನ್ಸಲರರಾದ ಹಿಂಡೆನಬರ್ಗರ ಮತ.

ಕೊನೆಯುಚ್ಚು

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು ೧೬—೧೦—೧೯೩೪

ಉಗೆಬಂಡಿಗಳ ಆಡಳಿತ.

೧೯೩೩-೧೯೩೪ ನೆಯ ಇಸ್ವಿಯ ಉಗೆಬಂಡಿಗಳ ಆಡಳಿತದ ಕಚ್ಚಾವರದಿಯು ರೇಲ್ವೆ ಚೀಫ ಕಮೀಶನರರಾದ ಮಿ. ಎಂ. ಪ್ಲಿ. ಬ್ರಾಕೆ ಮತ್ತು ರೇಲ್ವೆಗಳ ಫಾಯನ್ಯಾನ್ಸಿಯಲ್ ಕಮೀಶನರರಾದ ಶ್ರೀ. ಪಿ. ಆರ್. ರಾವ [ಇವರು ಕರ್ನಾಟಕಸ್ಥರು] ಇವರಿಬ್ಬರಿಂದ ತಯಾರಿಸಲ್ಪಟ್ಟು ಪ್ರಸಿದ್ಧವಾಗಿದೆ. ಇದರಿಂದ ಕಂಡು ಬರುವದೇನೆಂದರೆ ಹಿಂದುಸ್ಥಾನದ ರೇಲ್ವೆಗಳ ಒಟ್ಟು ಉತ್ಪನ್ನವು ಈ ವರ್ಷದಲ್ಲಿ 84½ ಕೋಟಿ ರೂಪಾಯಿ ಇರುತ್ತದೆ. ಒಟ್ಟು ಖರ್ಚು 61¾ ಕೋಟಿ ರುಪಾಯಿಗಳು, ಅಂತೂ ಈ ವರ್ಷ ಒಟ್ಟು ಉಳಿತಾಯವು ೨೩ ಕೋಟಿ ರೂಪಾಯಿ. ಈ ೨೩ ಕೋಟಿ ರುಪಾಯಿಗಳು ರೇಲ್ವೆಗಳ ಸಂಬಂಧವಾಗಿ ಖರ್ಚುಮಾಡಿದ ಬಂಡವಲದ ಮೇಲಿನ ಬಡ್ಡಿಯನ್ನು ಮುಟ್ಟಿಸಲಿಕ್ಕೆ ಸಾಲದೆ ಹೋದವು. ಈ ಭಂಡವಲದ ಮೇಲೆ ಬಡ್ಡಿ ಕೊಡತಕ್ಕದ್ದು ಒಟ್ಟು ಸುಮಾರು ೩೩ ಕೋಟಿ ರೂಪಾಯಿ. ಆದ ಕಾರಣ ಈ ವರ್ಷ, ಬಡ್ಡಿಯನ್ನು ಮುಟ್ಟಿಸಲಿಕ್ಕೆ ೧೦ ಕೋಟಿ ರೂಪಾಯಿಗಳನ್ನು ಕೈಯಿಂದ ತೆತ್ತಬೇಕಾಯಿತು.

ಹಿಂದಕ್ಕೆ ಹಿಂದುಸ್ಥಾನ ಸರಕಾರದವರ ಜಮಾಖರ್ಚಿನ ಲೆಕ್ಕದಲ್ಲಿಯೇ ಈ ರೇಲ್ವೆಗಳ ಜಮಾಖರ್ಚಿನ ಲೆಕ್ಕವು ಕೂಡಿ ಹೋಗುತ್ತಿತ್ತು. ಆದರೆ ಈಗ ಒಂಬತ್ತು ವರ್ಷಗಳಿಂದ ರೇಲ್ವೆಗಳ ಆದಾಯ ವ್ಯಯದ ಲೆಕ್ಕವು ಪ್ರತ್ಯೇಕವಾಗಿ ಇಡಲ್ಪಡುತ್ತದೆ. ಪ್ರತಿವರ್ಷ ರೇಲ್ವೆಗಳು ಹಿಂದುಸ್ಥಾನ ಸರಕಾರಕ್ಕೆ ಸುಮಾರು ೬ ಕೋಟಿ ರೂಪಾಯಿಗಳನ್ನು ಮುಟ್ಟಿಸುತ್ತವೆ. ಈ ವರ್ಷಗಳಲ್ಲಿ ಮೊದಲಿನ ಆರು ವರ್ಷ ರೇಲ್ವೆಗಳು ಭರಭರಾಟೆಯ ಸ್ಥಿತಿಯಲ್ಲಿ ಇದ್ದವು. ೧೯೨೯—೩೦ನೆ ವರ್ಷವೇ ಅವುಗಳ ಭರಭರಾಟೆಯ ಪರಮಾವಧಿಯ ಕಾಲವು. ಆ ವರ್ಷ ಅವುಗಳ ಉತ್ಪನ್ನವು ಸುಮಾರು ೧೦೪ ಕೋಟಿ ರೂಪಾಯಿ ಇತ್ತು. ಅಂತೂ ಇತ್ತೀಚೆಗೆ ಅವುಗಳ ಉತ್ಪನ್ನವು ಸುಮಾರು ೧೯॥ ಕೋಟಿಯಷ್ಟು ಕಡಿಮೆಯಾಗಿರುತ್ತದೆಂದು ಹೇಳಬಹುದು. ಹೀಗಾಗುವದಕ್ಕೆ ಅನೇಕ ಕಾರಣಗಳುಂಟು. ಮೋಟಾರುಗಳ ಪ್ರವಾಸವು ಹೆಚ್ಚಿಗೆ ಆಗಿರುವುದರಿಂದ ರೇಲ್ವೆಗಳಿಗೆ ಸುಮಾರ ಎರಡು ಕೋಟಿ ರೂಪಾಯಿಗಳ ಹಾನಿ ತಗಲಿದೆ. ಜಗತ್ತಿನಲ್ಲಿ ಬೆಳೆದಿರುವ ಆರ್ಥಿಕ ಜಾಡ್ಯದ ಮೂಲಕವೂ ರೇಲ್ವೆಗಳ ಉತ್ಪನ್ನವು ಕಡಿಮೆಯಾಗಿದೆ. ರೇಲ್ವೆ ಟ್ರಾಫಿಕಿನ ಉತ್ಪನ್ನವು ಸುಮಾರು ೨೩ ಕೋಟಿ ರೂಪಾಯಿ ಮಾತ್ರವೇ ಇರುತ್ತದೆ. ಇಷ್ಟು ಕಡಿಮೆ ಉತ್ಪನ್ನವು ಈ ಒಂಭತ್ತು ವರ್ಷಗಳಲ್ಲಿ ಎಂದೂ ಆಗಿದ್ದಿಲ್ಲ. ರೇಲ್ವೆ ಪ್ರವಾಸಿಕರಿಂದ ರೇಲ್ವೆಗಳಿಗೆ ಆಗುವ ಉತ್ಪನ್ನವು ೧೦೦ಕ್ಕೆ ೧೯ ರಷ್ಟು ಕಡಿಮೆ ಆಗಿರುತ್ತದೆ. ಮಾಲುಗಳಿಂದಾಗುವ ಉತ್ಪನ್ನವು ೧೦೦ಕ್ಕೆ ೧೬॥ ಯಷ್ಟು ಕಡಿಮೆ ಆಗಿರುತ್ತದೆ. ಪ್ರವಾಸಿಕರಿಂದ ಬರುವ ಉತ್ಪನ್ನವು ಬಹುಶಃ ಹೋದ ವರುಷದಷ್ಟೇ ಇದ್ದರೂ ಮಾಲಿನ ಉತ್ಪನ್ನವು ಹೋದ ವರ್ಷಕ್ಕಿಂತಲೂ ೧೦೦ಕ್ಕೆ ೩ ರಷ್ಟು ಇಳಿದಿರುತ್ತದೆ. ಹತ್ತಿ, ಕಬ್ಬಿಣ, ಉಕ್ಕು, ಬೀಜ ಕಟ್ಟು ಇವು ಹೋದ ವರ್ಷಕ್ಕಿಂತಲೂ ರೇಲ್ವೆಯಿಂದ ೧೦೦ಕ್ಕೆ ೧೦ರಂತೆ ಹೆಚ್ಚಿಗೆ ಕಳುಹಿಸಲ್ಪಟ್ಟವು. ಆದರೆ ಎಣ್ಣೆಯ ಕಾಳುಗಳು, ಗೋದಿ ಅಕ್ಕಿ ಮುಂತಾದ ಆಹಾರ ಪದಾರ್ಥಗಳು ಸಕ್ಕರೆ, ಚಿಮಣಿಯೆಣ್ಣೆ ಪೆಟ್ರೋಲ ಇವು ಕಡಿಮೆ ಪ್ರಮಾಣದಿಂದ ಹೋದವು.

ಹಿಂದುಸ್ಥಾನದಲ್ಲಿ ಅನೇಕ ರೇಲ್ವೆ ಕಂಪನಿಗಳಿರುವವು. ಅವುಗಳಲ್ಲಿ ಈಸ್ಟ ಇಂಡಿಯನ್ನ, ಜಿ. ಆಯ. ಪಿ. ಮತ್ತು ಎಸ್. ಆಯ. ಆರ್. ಈ ರೇಲ್ವೆಗಳಿಗೆ ಹೋದ ವರ್ಷಕ್ಕಿಂತ ಈ ವರ್ಷ ಹೆಚ್ಚು ಲಾಭವೇ ಆಯಿತು. ಈಸ್ಟರ್ನ ಬಂಗಾಲ ಮತ್ತು ಬಿ. ಬಿ. ಸಿ. ಆಯ. ರೇಲ್ವೆಗಳ ಸ್ಥಿತಿಯು ಹೋದ ವರ್ಷದಂತೆಯೇ ಇತ್ತು. ಆದರೆ ಆಸಾಮ ಬಂಗಾಲ ರೇಲ್ವೆ, ಎಮ್. ಎಸ್. ಎಮ್. ರೇಲ್ವೆ, ಬಂಗಾಲ ನಾಗಪುರ ರೇಲ್ವೆ ಇವೇ ಮುಂತಾದವುಗಳಿಗೆ ಹೋದ ವರ್ಷಕ್ಕಿಂತ ಹೆಚ್ಚಿಗೆ ಹಾನಿಯು ತಗಲಿತು. ಕರ್ನಾಟಕದಲ್ಲಿಯ ಎಮ್. ಎಸ್. ಎಮ್. ರೇಲ್ವೆಕ್ಕೆ ಈ ವರ್ಷ ೧೯ ಲಕ್ಷ ರೂಪಾಯಿಗಳ ಹಾನಿಯು ತಟ್ಟಿರುತ್ತದೆ.

೧೯೩೩ನೆಯ ಇಸ್ವಿಯಲ್ಲಿ ಹಿಂದಿನ ಎರಡು ವರ್ಷಗಳಲ್ಲಿಯಂತೆಯೇ ಹೊಸ ರೇಲ್ವೆಗಳನ್ನು ಕಟ್ಟುವ ಗೋಜಿಗೆ ಕಂಪನಿಗಳು ಹೋಗಲೇ ಇಲ್ಲ. ಯಾಕಂದರೆ, ಹೊಸ ರೇಲ್ವೆಗಳನ್ನು ಕಟ್ಟುವದಕ್ಕೆ ಬೇಕಾಗುವ ಭಂಡವಲಿಗೆ ಯೋಗ್ಯ ಬಡ್ಡಿ ತೆರಬಹುದಷ್ಟು ಉತ್ಪನ್ನವಾದರಷ್ಟೇ ಹೊಸ ಭಂಡವಲು ಸಿಗುವುದು. ಹಾಗೆ ಉತ್ಪನ್ನವಾದೀತೆಂಬ ಭರವಸೆಯಿರುವುದಿಲ್ಲ. ಆದಕಾರಣ ಹೊಸ ರೇಲ್ವೆಗಳನ್ನು ಕಟ್ಟಲಿಕ್ಕೆ ಬೇಕಾಗುವ ಭಂಡವಲವನ್ನು ಪೂರೈಸುವವರು ಯಾರು ?

೧೯೩೩-೩೪ನೆಯ ಇಸ್ವಿಯಲ್ಲಿ ರೇಲ್ವೆದಿಂದ ಪ್ರವಾಸ ಮಾಡಿದ ಪ್ರವಾಸಿಕರ ಸಂಖ್ಯೆಯು ತೀರ ಕಡಿಮೆ ಅಂದರೆ ೪೯೨ ಕೋಟಿ ಮಾತ್ರವೇ ಇತ್ತು. ೧೯೨೨-೨೩ರಿಂದ ಇತ್ತೀಚಿನ ವರ್ಷಗಳಲ್ಲಿ ಈ ವರ್ಷದಷ್ಟು ಪ್ರವಾಸಿಕರ ಸಂಖ್ಯೆ ಎಂದೂ ಕಡಿಮೆ ಇದ್ದಿಲ್ಲ. ಹೋದ ವರ್ಷಕ್ಕಿಂತಲೂ ಈ ವರ್ಷ ೩೯ ಲಕ್ಷ ಪ್ರವಾಸಿಕ ಜನರು ಕಡಿಮೆ ಇದ್ದರು. ಆದರೆ, ರೇಲ್ವೆಯ ಭರಭರಾಟೆಯ ವರ್ಷ ಅಂದರೆ ೧೯೨೯-೩೦ನೆಯ ಇಸ್ವಿಯಲ್ಲಿ ಈ ವರ್ಷಕ್ಕಿಂತ ೧೩ ಕೋಟಿ ಜನರು ಹೆಚ್ಚು ಪ್ರವಾಸಿಕರಿದ್ದರು.

ಇದರ ಮೇಲಿಂದ ನೋಡುತ್ತಿರಲು ರೇಲ್ವೆದವರಿಗೆ ಮೋಟಾರಿನ ಅಂಜಿಕೆಯು ಏಕೆ ಉಂಟಾಗಿದೆಂಬುದು ಗೊತ್ತಾಗುವುದು. ರೇಲ್ವೆದವರು ಪ್ರವಾಸಿಕರ ಸುಖದ ಕಡೆಗೆ ಲಕ್ಷ ಕೊಟ್ಟರೆ, ಜನರ ಆರ್ಥಿಕ ಹೀನಸ್ಥಿತಿಯನ್ನು ಲಕ್ಷದಲ್ಲಿ ತಂದು ರೇಲ್ವೆ ದರಗಳನ್ನು ಕಡಿಮೆ ಮಾಡಿದರೆ, ಅವರ ದುಃಸ್ಥಿತಿಯು ದೂರಾಗಬಹುದಲ್ಲದೆ, ಇಲ್ಲದಿದ್ದರೆ ಅದು ಎಂದಿಗೂ ದೂರಾಗದು.

ಕಿರಿನುಡಿಗಳು.

ನಾಳೆಯಿಂದ “ಗೋರಕ್ಷಣ ಸಪ್ತಾಹ” ವೆಂಬದೊಂದು ರಾಷ್ಟ್ರೀಯ ಮಹತ್ವದ ಪ್ರಚಂಡ ಕಾರ್ಯವು ಇಡೀ ಹಿಂದುಸ್ಥಾನದಲ್ಲಿ ಅನೇಕ ಮಹತ್ವದ ಸ್ಥಳಗಳಲ್ಲಿ ಜರುಗತಕ್ಕದ್ದಿರುವದು. ಗೋರಕ್ಷಣವೆಂಬದು ಹಿಂದುಸ್ಥಾನದ ಸಂಪದಭ್ಯುದಯದ ತಳಹದಿಯು. ಒಕ್ಕಲತನಕ್ಕೆ ಗೋವಿನ ಸಂತತಿಯಾದ ಬಸವಣ್ಣನೇ ಮೂಲಾಧಾರ. ಬಸವಣ್ಣನು ಬಳಲಿ ಬೆಂಡಾಗುವಂತೆ ದುಡಿದಾಗ ಮಾತ್ರ ಜನರು ಕಾಳು ಕಡಿಗಳನ್ನು ಕೊಂಡು ಬಾಳುವೆ ಮಾಡಬಲ್ಲರು. ಹತ್ತಿಯನ್ನು ಬಿತ್ತಿ ಬೆಳೆದು ಬಟ್ಟೆ ಒಡವೆಗಳನ್ನು ಕಾಣಬಲ್ಲರು. ಹಾಗೆಯೇ ಒಕ್ಕಲತನದ ದುಡಿಮೆಗೆ ಅವಶ್ಯವಾಗಿ ಬೇಕಾಗುವ ಮೈ ಕಸುವನ್ನು ಒಕ್ಕಲಿಗನ ಸಂತತಿಗೆ ಕೊಡುವವಳೂ ಗೋಮಾತೆಯೇ ! ಹೀಗೆ ದೇಶದ ಮೇಟಿಯು ಗಣಿಯಾದ ಒಕ್ಕಲಿಗನಿಗೆ ಗೋಮಾತೆಯು ಕೈ ಬಿಟ್ಟರೆ ಬೇರೆ ಗತಿಯೇ ಇಲ್ಲ. ಆದರೆ ಈಗ ಒಕ್ಕಲಿಗನೇ ಅವಳ ಕೈ ಬಿಟ್ಟಿದ್ದರಿಂದ ಅವಳಿಗೂ ಅವನಿಗೂ ಸಂಬಂಧವೇ ಕಡಿಯುವ ಹೊತ್ತು ಬಂದಿದೆ. ಇದನ್ನು ಸರಿಪಡಿಸಬೇಕಾದರೆ ಗೋರಕ್ಷಣದ ಹೊರತು ಬೇರೆ ದಾರಿಯುಂಟೆ ?

ಒಕ್ಕಲತನವೇ ಮುಖ್ಯ ಕಸಬಿಯಾಗಿರುವ ಈ ದೇಶದಲ್ಲಿ ಒಕ್ಕಲತನದಂತೆಯೇ ಬೇರೆ ಬೇರೆ ವ್ಯವಸಾಯಗಳಿಗೂ ಗೋಮಾತೆಯೇ ಮೂಲವೆಂಬದನ್ನು ಬಿಚ್ಚಿ ಹೇಳಬೇಕಾಗಿಲ್ಲ. ಆದುದರಿಂದ ದೇಶದ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕೆಂದು ಬಯಸುವವರು ಗೋರಕ್ಷಣವನ್ನು ಅಂದರೆ ಆಕಳುಗಳ ಪೋಷಣೆಯನ್ನು ಕೈಕೊಳ್ಳದೆ ಗತ್ಯಂತರವೇ ಇಲ್ಲ. ನಮ್ಮ ಇಲಾಖೆಯ ಗವರ್ನರರು ಒಕ್ಕಲಿಗರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಕುರಿತು ಸರಕಾರ ತನದಿಂದ ಪ್ರಯತ್ನ ಮಾಡುವದೊಂದು ವಿಸ್ತಾರವಾದ ಯೋಜನೆಯನ್ನು ಸಿದ್ಧಪಡಿಸಿ [illegible] ಅದರ ಚರ್ಚೆಯನ್ನು ನಾಲ್ಕು ಕಡೆಗೆ ನಡಿಸಿದ್ದಾರೆ. ಆದರೆ ಅವರಿಂದ ಮುಂದೆ ಮಾಡಿದ ಯುಕ್ತಿ ಪ್ರಯುಕ್ತಿಗಳಲ್ಲಿ ಹಾಕಿದ ಹಂಚಿಕೆಗಳಲ್ಲಿ ಮಾಡಿದ ಯೋಜನೆಗಳಲ್ಲಿ ಈ ವಿಷಯದ ಸಮಾವೇಶವಿದ್ದಂತೆ ಕಂಡು ಬರುವದೇ ಇಲ್ಲ. ಗವರ್ನರ ದೊರೆಗಳೂ ಅವರ ಸುಖ ದುಃಖಗಳನ್ನು ಚರ್ಚಿಸುವ ಭಾಗ್ಯವಂತರು ಈ ವಿಷಯವನ್ನು ಗಮನಿಸಿದರೆ ಸರಿಯಾಗಲಿಕ್ಕಿಲ್ಲವೆ ?

ಬೇರೆ ಕಡೆಯ ಮಾತುಗಳು ಹೇಗಿದ್ದರೂ ನಮ್ಮ ಕನ್ನಡ ನಾಡಿನಲ್ಲಿ ಈ ಗೋರಕ್ಷಣದ ವಿಷಯವು ಬಹಳ ಮಟ್ಟಿಗೆ ದುರ್ಲಕ್ಷಿಸಲ್ಪಟ್ಟಿದೆಯೆಂಬುದು ಬಹಳ ವಿಷಾದದ ಸಂಗತಿಯು. ೧೯೦೯ ರಲ್ಲಿ ಇಲ್ಲಿ ಒಳ್ಳೇ ರಭಸದಿಂದೆದ್ದ ಗೋರಕ್ಷಣಕಾರ್ಯವು ಎಂದೋ ಯಾವಾಗೋ ಮುಗ್ಗಿ ಮಸಣಗೂಡಿತು. ೧೯೨೭ ರಲ್ಲಿ ಮಹಾತ್ಮಾ ಗಾಂಧಿಯವರು ಇಲ್ಲಿಗೆ ಬಂದಾಗ್ಗೆ ಅವರ ವರದ ಹಸ್ತದಿಂದ ಕೂಡಿಸಲ್ಪಟ್ಟ ಗೋಶಾಲೆಯ ತಳಗಲ್ಲು ಅಲ್ಲಿಯೇ ಸಮಾಧಿಯನ್ನು ಹೊಂದಿತು. ಹೀಗೆ ಧಾರವಾಡದಲ್ಲಿಯೂ ಕರ್ನಾಟಕದ ಬೇರೆ ಮುಖ್ಯ ನಗರಗಳಲ್ಲಿಯೂ ಗೋರಕ್ಷಣವೆಂಬುದು ಜನರ ಕನಸುಮನಸುಗಳಿಂದಲೂ ಹಾರಿಹೋದಂತಾಗಿದೆ. ಇದು ಕನ್ನಡ ನಾಡಿನ ಉತ್ಕರ್ಷವನ್ನು ಬಯಸುವವರಿಗೆ ಒಪ್ಪತಕ್ಕ ಮಾತೇ ಅಲ್ಲ. ಆದರಿಂದ ನಾಳೆಯಿಂದ ಪ್ರಾರಂಭವಾಗುವ ಗೋರಕ್ಷಣ ಸಪ್ತಾಹದಲ್ಲಿ ಇಲ್ಲಿಯವರೂ ಬೇರೆಕಡೆಯವರೂ ಆಕಳುಗಳ ಪಾಲನ ಪೋಷಣೆಯ ವಿಷಯವನ್ನು ಒಂದೆರಡು ದಿನಗಳ ಮಟ್ಟಿಗಾದರೂ ವಿಚಾರಕ್ಕೆ ತೆಗೆದುಕೊಂಡು ಉಪಕ್ರಮ ಮಾಡಬೇಕೆಂದು ಸೂಚಿಸುವದು ನಮ್ಮ ಕರ್ತವ್ಯವೆಂದು ನಾವು ತಿಳಿದು ಇಂದು ಈ ವಿಷಯವನ್ನೆತ್ತಿದ್ದೇವೆ. ಮಹಾನೋಮಿಯ ಮಹೋತ್ಸವವು ಇಡೀ ಕನ್ನಡ ನಾಡಿನಲ್ಲಿ ಈಗ ಹಬ್ಬುತ್ತ ನಡೆದಿರುವಂತೆಯೇ ಈ ಗೋರಕ್ಷಣ ಸಪ್ತಾಹವೆಂಬುದು ಕನ್ನಡ ನಾಡಿನ ಪುರಾತನ ಪರಂಪರೆಯ ಹಬ್ಬವೆಂಬ ಹೆಸರಿನಿಂದ [illegible] ಸಂಸ್ಕೃತಿ ಸಂಗೋಪನಕ್ಕೆ ಹೋರಾಡ ಮತ್ತೊಂದು ಮಹತ್ಕಾರ್ಯವನ್ನು ಕನ್ನಡಿಗರು ಕೈಕೊಳ್ಳತಕ್ಕದ್ದಾಗುವದು.

ಕರ್ನಾಟಕದ ಸುದ್ದಿಗಳು.

ಹಾವೇರಿ ಹಾಯಸ್ಕೂಲದಲ್ಲಿ ಹರಿಜನ ವಿದ್ಯಾರ್ಥಿಗಳಿಗೆ ಫೀ ತೆಗೆದುಕೊಳ್ಳಬಾರದೆಂದು ಗೊತ್ತಾಗಿದೆ ಎಂದು ಸುದ್ದಿ.

ಕಾರವಾರ ಜಿಲ್ಹೆಯಿಂದ ಒಟ್ಟಿಗೆ ೧೮ ಜನ ವಿದ್ಯಾರ್ಥಿಗಳು ಹಿಂದೀ ಪರೀಕ್ಷೆಗೆ ಕುಳಿತಿದ್ದರು. ಇವರಲ್ಲಿ ಏಳು ಮಂದಿ ಗಂಡು ಹುಡುಗರು ಮಿಕ್ಕವರು ಹೆಣ್ಣು ಮಕ್ಕಳು ಇದ್ದರು. ಮೈಸೂರ ಶ್ರೀ ಸುಬ್ಬರಾಯರು ಮತ್ತು ಕಾರವಾರದ ಶ್ರೀ ದಿನಕರ ದೇಸಾಯರು ಬಹಳ ಸಾಹಸಪಟ್ಟರು. ಪಂಡಿತ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಒಂದು ಹಿಂದೀ ಪ್ರಚಾರ ಸಂಘವು ಸ್ಥಾಪಿತವಾಯಿತು.

ಶಹಾಪುರ (ಬೆಳಗಾವಿ)ದಲ್ಲಿಯ ಕನ್ನಡ ಶಾಲೆಯನ್ನು ಸಂಸ್ಥಾನದ ಇನಸ್ಪೆಕ್ಟರು ನೋಡಿ ಶಾಲೆಯ ವಿಷಯವಾಗಿ ಯಾವ ಸುವ ಭಾಷೆ ಕೊಟ್ಟರು.

ಹಿಂದುಸ್ಥಾನ

ಬಡೋದೆಯ ಗಾಯಕವಾಡ ಮಹಾರಾಜರು ಈ ವಾರದಲ್ಲಿಯೇ ಹಿಂದುಸ್ಥಾನಕ್ಕೆ ಬರುವವರಿದ್ದಾರೆ.

ಪಂಜಾಬ ಇಲಾಖೆಯ ಶೀಖ ಸಂಘದ ಕಾರ್ಯದರ್ಶಿಗಳಾದ ಸರ್ದಾರ ಗುರುಚರಣಸಿಂಗರಿಗೆ ಲಾಹೋರ ಮ್ಯಾಜಿಸ್ಟ್ರೇಟರು ಅವರ ಒಳ್ಳೇ ನಡತೆಯ ಬಗ್ಗೆ ೨ ಸಾವಿರ ರೂಪಾಯಿ ಕೇಳಲು ಸಿಂಗರು ಸೆರೆಮನೆಗೆ ಹೋಗುವದೇ ಲೇಸೆಂದರು.

ಅಹಮ್ಮದಾಬಾದ ಮುನಸಿಪಾಲಿಟಿಯ ಮುಂದಿನ ವರ್ಷದ ಆಯ್ಕೆ ನಡೆದು ೩೫ ಸ್ಥಳಗಳಲ್ಲಿ ೨೫ ಸ್ಥಳಗಳನ್ನು ಕಾಂಗ್ರೆಸ ಪಂಗಡದವರು ಗೆದ್ದಿದ್ದಾರೆ.

ಹಿಂದಿ ವ್ಯಾಪಾರೀ ಪ್ರದರ್ಶನದ ಉಗೆ ಬಂಡಿಯು ಇಡೀ ಹಿಂದುಸ್ಥಾನದಲ್ಲಿ ಅಡ್ಡಾಡಲಿಕ್ಕೆಂದು ಹೊರಡುವದು. ಮೊದಲು ಅದು ಪುಣೆಗೆ ಹೋಗುವದು.

ಹಿಂದೂ ಮಹಾಸಭೆಯವರು ಮಾಡಿದ ಗೊತ್ತುಗಳಲ್ಲಿ ಕೆಲಸವಿಲ್ಲದವರ ದೆಸೆಯಿಂದ ಅಲ್ಲಲ್ಲಿ ಕೈಗಾರಿಕೆಯ ಮನೆಗಳನ್ನು ಸ್ಥಾಪಿಸ ಬೇಕೆಂದು.

ವರ್ಧೆಯ ಶ್ರೀ ಮಣಿಲಾಲ ಕೊಠಾರಿಯವರು ಗಾಂಧಿ ಜಯಂತಿಯ ನಿಮಿತ್ತ ಜನರಿಂದ ಆರು ಸಾವಿರ ರೂಪಾಯಿ ಕೂಡಿಸಿ ಬಡವರಿಗೆ ಹರಿಜನರಿಗೆ ಧರ್ಮಾರ್ಥವಾಗಿ ಖಾದಿಯನ್ನು ಹಂಚಿದರು.

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೧೬ ಮಧ್ಯಾನ್ಹ ೧೧ ಗಂಟೆ

ಜವಾರಿ ಹತ್ತಿ	೧೦೨ ೧೦೩	ಜೋಳ	೧೨-೧೪॥
ಅಮೇರಿಕ ,,	೧೦೨-೧೦೪	ಗೋದಿ	೬॥೬॥
ವಿಲಾಯತಿ ,,	೯೫ ೯೬	ಉದ್ದು	೬॥।
ಕಂಬೋಡಿಯಾ ,,	೧೦೪-೧೧೦	ಕಡ್ಲಿ	೬ ೬
ಶೇಂಗಾ	೭೩-೭೪	ಕಡ್ಲಿ ಕಾ. ಹಿ॥	॥
ಕಬ್ಬಿಣಬೀಜ	೬೬ ೬೭	ಕುಸುಬಿ	೧೩॥
ಸಾಸವಿ	೬೬ ೬೭	ಹುರಳಿ	೧೪
ಹೆಸರು ಜವಾರಿ	೯ ೧೨		
ಲಿಂಗಾಯತ ಹತ್ತಿ	೪	ಹತ್ತಿ ಕಾಳು	೫೩

ಬೆಳ್ಳಿ ಬಂಗಾರ

ಬಂಗಾರ	೩೨	ಬೆಳ್ಳಿ	॥-

ಪಟೇಲರು ಗುಣ ಹೊಂದುತ್ತಲಿದ್ದಾರೆ.

" ಕನ್ನಡಿಗ " ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

ವಿ. ಜೆ. ಪಟೇಲರು ಗುಣಹೊಂದುತ್ತಲಿದ್ದಾರೆ.

ಮುಂಬೈ ತಾ। ೧೫ ಡಾ ಗೋವರ್ಧನದಾಸ ಪಟೇಲರಿಗೆ ಸುಜಾಕ ಬೋಸರು ಶಾಂತಿ ಸ್ವಿ ವಿ ಜೆ ಪಟೇಲರ ಆರೈಕ ಮಾಡಲು ನೇ ಹೊರಟಿದ್ದು ಬರಬೇಕೆಂದು ಕೇಳಿಕೊಂಡ ಡಾಕ್ಟರರು ಈ ದಿನ ರಾತ್ರಿ ಕರಾಚಿಗೆ ಗಿ ಅಲ್ಲಿಂದ ವಿಮಾನಿನ ಮೂಲಕ ಸ್ವಿಝರ ಕ್ಕೆ ತಲ್ಪುವರು ಪಟೇಲರು ಗುಣಹೊಂದುತ್ತಲಿದ್ದಾರೆಂದು ಡಾ ಗೋವರ್ಧನದಾಸರಿಗೆ ತಾ ಸುದ್ದಿಯೂ ಬಂದಿದೆ ಪಟೇಲರಿಗೆ ಬೇಗ ಗುಣವಾಗಬೇಕೆಂದು ಪ್ರಾರ್ಥಿಸಲು ಇಂದು ಚೌಪಾಟಿಯ ಮೈದಾನದಲ್ಲಿ ಸಾರ್ವಜನಿಕ ಸೆರುವದಿದೆ ಶ್ರೀಮತಿ ಸರೋಜನಿ ನ್ಯಾಯ್ಡು ದಾಸ ಮೊದಲಾದವರು ಮಾತನಾಡು

(ಆ ಪ್ರೆ ತಂತಿ)

ಹಿಂದೂ ಮಹಾ ಸಭೆ

ಅಜಮೀರ ತಾ ॥ ೧೪ ಹಿಂದೂ ಮಹಾ ಯ ವಿಷಯನಿಯಾಮಕ ಕಮಿಟಿಯು ನಿನ್ನೆ ರಾತ್ರಿ ಕೂಡಿತ್ತು. ಸುದ್ದಿಗಾರರಿಗ ಒಳಗೆ ಪ್ರವೇಶವಿಲ್ಲಿಲ್ಲ ಆದರೆ ಮೂರು ಠರಾವುಗ ಸ್ವೀಕೃತವಾಗಿವೆಯಂತೆ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಗೊತ್ತಾದ ಹಿಂದೂ ಮುಸಲ್ಮಾನ ಐಕ್ಯದ ಬಗ್ಗೆಯೂ ಆ ವಿಷಯದಲ್ಲಿ ಹಿಂದುಗಳಿಗೆ ಯಾವ ಪ್ರಗತಿಯಾಗಿದೆಂಬ ಬಗ್ಗೆಯೂ ಮೊದಲನೇ ಗೊತ್ತುವಳಿಯಿದೆ ವ್ಯವಸಾಯ ಧಂಗಳಿಲ್ಲದ ಹಿಂದೂ ತರುಣರಿಗಾಗಿ ಔದ್ಯೋಗಿಕ ಮಂದಿರವನ್ನು ಸ್ಥಾಪಿಸಬೇಕಾಗಿ ಎರಡನೇ ಠರಾವು ರೈತರ ಹಾಗೂ ಕೂಲಿಕಾರರ ವಾದ ಬಗ್ಗೆ ಸಹಾನುಭೂತಿಯನು ಪ್ರದರ್ಶಿಸಿ ಬಂಧನದಲ್ಲಿರುವವರನ್ನು ಶಿಕ್ಷೆ ಹಾಕುವ ಚಳುವಳಿಯನ್ನು ಮೂರನೇ ಗೊತ್ತುವಳಿಯಿಂದ ಪ್ರತಿಭಟಿಸಲಾಯಿತು ಅಂತರ ರಾಷ್ಟ್ರೀಯ ಸಹಾನುಭೂತಿಯನ್ನು ಸಂಪಾದಿಸಲು ಹಿಂದೂ ಮಹಾ ಸಭೆಯ ಶಿಷ್ಟ ಮಂಡಲವನ್ನು ಜಿನೇವಾಕ್ಕೆ ಕಳಿಸಬೇಕೆಂದೂ ಗೊತ್ತಾಗಿದೆ ಲಾಸಿ ನ ಠರಾವಿನ ಮೇರೆಗೆ ಇಂಗ್ಲಂಡ ಹಾಗೂ ಹಿಂದುಸ್ಥಾನಗಳು ಆ ಪರಿಷತ್ತಿನ ಮೂಲ ಸಭಾಸದರಿರುವದರಿಂದ ಯುರೋಪದ ಅಲ್ಪ ಜಾತೀಯರ ಹಕ್ಕುಗಳ ಬಗ್ಗೆ ಅವರು ಒಂದು ಕಮಿಟಿಯನ್ನು ನೇಮಿಸಿದ್ದಾರೆ ಇಂಗ್ಲಂಡ ಸರಕಾರವು ಆ ಕಮಿಟಿಯ ನಿರ್ಣಯಗಳನ್ನು ಮನ್ನಿಸಲೇ ಬೇಕಾಗಿದೆ ಹಾಗೆ ಮಾಡದಿದ್ದರೆ ಆ ಅಂತರ ರಾಷ್ಟ್ರೀಯ ನಿರ್ಣಯವನ್ನು ಮುರಿದಂತಾಗು

(ಆ ಪ್ರೆ ತಂತಿ)

ಸಿಮ್ಲೆಯ ವ್ಯಾಪಾರಿ ಚರ್ಚೆ

ಸಿಮ್ಲೆಯಲ್ಲಿ ನಡೆದಿರುವ ಹಿಂದೀ ಜಪಾನಿ ವ್ಯಾಪಾರಿಗಳ ಪ್ರತಿನಿಧಿಗಳ ಚರ್ಚೆಗಳು ಸಫಲಗೆ ಆಗುತ್ತವೇನೋ ಎಂದು ಬೆದರಿಕೆ ಜಪಾನಿ ಹತ್ತಿಯ ಬಟ್ಟೆಯ ಮೇಲೆ ನೂರಕ್ಕೆ ೫೦ ಜಕಾತಿ ಹೇರಬೇಕೆಂದು ಹಿಂದೀ ಪ್ರತಿನಿಧಿಗಳ ಮತ, ಆದರೆ ಜಪಾನೀ ಪ್ರತಿನಿಧಿಗಳು ನೂರಕ್ಕೆ ೪೦ರ ಮೇಲ್ಪಟ್ಟ ಜಕಾತಿಗೆ ಒಪ್ಪಲಿಲ್ಲ

ಲಖನೌದಲ್ಲಿ ಮುಸಲ್ಮಾನರ ಪರಿಷತ್ತು.

ಸಾಲೆಮ ಪುರದ ಮಹಾರಾಜರು ಮುಸಲ್ಮಾನರ ಬೇರೆ ಬೇರೆ ಪಂಗಡಗಳ ಮುಂದಾಳುಗಳಿಗೆ ಅಕ್ಟೋಬರ ತಿಂಗಳ ೨೯ ಮತ್ತು ೩೦ ನೆಯ ತಾರೀಖಿಗೆ ಲಖನೌದಲ್ಲಿ ಟಿ ಪಾರ್ಟಿ ಅಮಂತ್ರಣವನ್ನಿತ್ತಿರುವರು ಅಲ್ಲಿ ಚೆನ್ನಾಗಿ ವಿಚಾರ ಮಾಡಿಕೊಂಡು ಮುಂದೆ ನವ್ಹಂಬರ ತಿಂಗಳಲಿ ಮುಸಲ್ಮಾನರ ಎಲ್ಲ ಪಂಗಡಗಳ ಸಭೆಯೊಂದನ್ನು ಕರೆಯುವ ವಿಚಾರ ಮಾಡಿದಾರೆ ಮುಸಲ್ಮಾನರ ಎಲ್ಲ ಪಂಗಡದವರ ಅಭಿಪ್ರಾಯದ ಮೇರೆಗೆ ಒಕ್ಕಟ್ಟಿನ ಸಾರ್ವಜನಿಕ ಕಾರ್ಯಕ್ರಮವೊಂದನ್ನು ಅನುಸರಿಸುವರು. ಅದೇ ಕಾಲಕ್ಕೆ ಇಂಡಿಯಾ ಪೆಲಿಸ್ಟಾಯಿನ್ ಮತ್ತು ಅಲ್ ಇಂಡಿಯಾ ಖಿಲಾಫತ್ ಪರಿಷತ್ತುಗಳನ್ನು ಕರೆಯುವ ವಿಚಾರವಿದೆ

(ಆ ಪ್ರೆ ತಂತಿ)

ಸಿನೇಮಾಕ್ಕೆ ಗವ್ಹರ್ನರರ ಆಶೀರ್ವಾದ

ಮುಂಬಯಿ ತಾ॥ ೧೪— ಮುಂಬೈಯಲ್ಲಿ ರೀಗಲ್ ಸಿನೇಮಾ ಗೃಹವನ್ನು ತೆರೆಯುವಾಗ ನಾಮದಾರ ಗವ್ಹರ್ನರ ಸಾಹೇಬರು ಮಾತನಾಡಿದ್ದು ಸಿನೇಮಾ ಗೃಹಗಳು ಈಗಿನ ದಿನದ ಜನ ಜೀವನದೊಳಗೆ ಮುಖ್ಯವಾಗಿವೆ ಮುಂಬೈಯಂಥ ಪಟ್ಟಣವು ಕೂಡ ಆವಿಷಯದಲ್ಲಿ ಎಲ್ಲ ಜನಾಂಗಗಳಂತೆ ಮುಂದರಿಯಲಿಕ್ಕೆಬೇಕೆಂಬುದು ಅವಶ್ಯವು ಇಂದು ಎಲ್ಲೆಡೆಯಲ್ಲಿ ಕೈಗಾರಿಕೆಯ ಬೆಳವಣಿಗೆಯು ಗದಲವೆದ್ದಿದೆಯಷ್ಟೇ ಆದಕ್ಕೆ ಕೈಗಾರಿಕೆಗಳಲ್ಲಿ ಸಿನೇಮಾದ ಅಭಿವೃದ್ಧಿಯೂ ಒಂದು ಈಗಿನ ಉನ್ನತಿಗೆ ಸಿನೇಮಾಗಳು ಸಹಕಾರಿಯಾಗುವಂತಾಗಬೇಕು ಹಿಂದುಸ್ಥಾನದಲ್ಲಿ ಈ ಕೈಗಾರಿಕೆಯು ಇತ್ತೀಚೆ ಪ್ರಾರಂಭವಾಗಿದ್ದರೂ ಅದು ಮುಂದೆ ಹಾರಗಾಲಿನಿಂದ ಓಡುವದೆಂದು ಭಾವಿಸಿದ್ದೇನೆ

(ಆ ಪ್ರೆ ತಂತಿ)

ಸರ ಜಹಾಂಗೀರರ ಬೋಧ.

ಮುಂಬೈ ತಾ॥ ೧೪ ವೆಸ್ಟರ್ನ ಇಂಡಿಯಾ ಲಿಬರಲ್ ಫೆಡರೇಶನ್‌ದ ಸಭೆಯು ಭಾರತ ಸೇವಕ ಸಮಾಜದಲ್ಲಿ ನಡೆದಾಗ ಸರ ಕಾವಸಜಿ ಜಹಾಂಗೀರರವರು ಅಂದದ್ದು—ಮರುಳ ಪಕ್ಷದವರು ತಮ್ಮ ಸಾಧ್ಯವನ್ನು ಸಾಧಿಸಲಿಕ್ಕೆ ತಮ್ಮ ನಾಲಿಗೆ-ಲೆಕ್ಕಣಿಕೆಗಳನ್ನು ಸಧಾಸಿದ ಪದ್ಧತಿಯಿಂದ ಉಪಯೋಗಿಸುವದೇ ಉಪಾಯವೆಂದು ತಿಳಿದರು. ಕಾಂಗ್ರೆಸಕ್ಕೆ ಪೂರ್ಣ ಸ್ವರಾಜ್ಯ ಬೇಕು ಮರುಳರಿಗೆ ಸಾಮಂತ ಸ್ವರಾಜ್ಯ ಬೇಕು ಅವರಿವರಲ್ಲಿ ಇಷ್ಟೇ ಭೇದ ಅವರವರ ಸಾಧನದಲ್ಲಿಯೂ ಭೇದವಿದೆ. ಈಗಿನ ರಾಜಕೀಯ ಪರಿಸ್ಥಿತಿಯು ಬಹು ಗಡಚಾಗಿದೆ ಎಲ್ಲ ಹಿಂದೀ ಜನರು ಒಂದಾಗಿ ಹೊಸ ರಾಜ್ಯ ಶಾಸನ ಪದ್ಧತಿಯನ್ನು ಕಾರ್ಯಕಾರಿಯನ್ನಾಗಿ ಮಾಡಬೇಕು. ಬಿಳಿಯ ಪತ್ರಿಕೆಯು ಮೂರು ದುಂಡು ಮೇಜಿನ ಪರಿಷತ್ತುಗಳ ಫಲವಾಗಿದೆ ಮೇಲಾಗಿ ಎಲ್ಲ ಹಿಂದೀ ಜನರ ಒಪ್ಪಿಗೆಗೆ ಅದೊಂದು ಸಾಮಾನ್ಯ ದಾರಿಯಾಗಿದೆ ಅದರಲ್ಲಿಯ ಅನೇಕ ಕೊಂಕುಗಳನ್ನು ನಾವು ಶಾಂತ ಪಟ್ಟು ಚಳವಳಿಯಿಂದ ಮಾರ್ಪಡಿಸಿಕೊಳ್ಳಲಿಕ್ಕೆ ಬೇಕು ಆದುದರಿಂದ ನಾನು ನಿಮಗೆಲ್ಲ ಬಿನ್ನವಿಸಿಕೊಳ್ಳುವದೇನಂದರೆ ನೀವು ಬಿಳಿಯ ಪತ್ರಿಕೆಯನ್ನು ಕಾರ್ಯಕಾರಿಯನ್ನಾಗಿ ಮಾಡಿತೋರಿಸಿ ಅದರಿಂದ ಅದಷ್ಟು ಹೆಚ್ಚಿನ ಲಾಭ ಪಡೆರಿ.

(ಆ ಪ್ರೆ ತಂತಿ)

ಹೋರಸಾಹೇಬರ ರೋಗ ಚಿಕಿತ್ಸೆ.

ಆಕ್ಸಫರ್ಡ ಕಾಂಝರವೇಟಿವರ ಸಭೆಯಲ್ಲಿ ಮಾತಾಡುವಾಗ ಭಾರತ ಮಂತ್ರಿಗಳಾದ ಸರ ಹೋರು ಅನ್ನುವದು ಹಿಂದುಸ್ಥಾನಕ್ಕೆ ಹೊಣೆಗಾರಿಕೆಯ ಸ್ವರಾಜ್ಯ ಯೋಗ್ಯವಲ್ಲವೆನ್ನುವವರು ಇಲ್ಲಿ ಕೆಲವರಿರಬಹುದು ಇಂಥ ಎಲ್ಲ ಸಂಶಯಗಳನ್ನು ಒತ್ತಟ್ಟಿಗಿರಿಸಿ ನಾವು ನಮ್ಮ ತಲೆ ಧೂಳ ಧೂಳ ಮಾಡಿಕೊಂಡು ಇನ್ನು ಮುಂದೆ ಯೋಚಿಸಬೇಕಾಗಿದೆ ಈಗಿನ ವ್ಯಾಪಾರದ ಪ್ರವೃತ್ತಿನ ಸಮಯದಲ್ಲಿ ಹಿಂದುಸ್ಥಾನದಲ್ಲಿಯ ಕ್ರಾಂತಿಕಾರಕರಿಗೆ ಹೆದರುವ ಕಾರಣವಿಲ್ಲ ಇನ್ನು ವ್ಯಾಪಾರದ ವಿಷಯವಾಗಿ ಕೇಳಬೇಕೆಂದರೆ ಬಿಳಿಯ ಪತ್ರಿಕೆಯ ಯೋಜನೆಗಳು ಜಾರಿಯಲಿ ಬಂದರೆ ವ್ಯಾಪಾರದ ಸಂದಿಯು ಸನ್ನಾರೆ ಮರೆಯಾಗುವದು ಇಂಗ್ಲಂಡದಲ್ಲಿಯ ಪ್ರಮಾಣ ಸೀಳಿಗೆಯು ಹಿಂದುಸ್ಥಾನದ ಭಾವೀ ಸ್ಥಿತಿಯ ಬಗ್ಗೆ ನಿರಾಸೆಪಡಲಾಗದು

(ಆ ಪ್ರೆ ತಂತಿ)

ಹಿಂದು ಮಹಾಸಭೆಯಲ್ಲಾದ ಗೊತ್ತುಗಳು.

ಅಜಮೀರ ತಾ ೧೬ ಹಿಂದುಮಹಾಸಭೆಯ ಎರಡನೇ ದಿನದ ಅಧ್ಯಕ್ಷರ ಪ್ರಾರಂಭಕ್ಕೆ ಡಾ ಪೆಂಟರ ಮರಣದ ಬಗ್ಗೆ ದುಃಖಪ್ರದರ್ಶನ ಗೊತ್ತುವಳಿಯನ್ನು ಮಂಡಿಸಿದರು ಅದರ ಬಳಿಗೆ ಒಪ್ಪಿತವಾದನಂತರ ಬಂಗಾಲದ ಡಾ ಮುಕರ್ಜಿಯವರು ಅಲ್ಪಸಂಖ್ಯಾಕರ ಪ್ರಶ್ನವನ್ನು ಸಭೆಯಲ್ಲಿ ಮಂಡಿಸುವಾಗ " ಹಿಂದುಸ್ಥಾನಗಳ ವಿರೋಧವಿದ್ದರು ಅವನ್ನು ಲಕ್ಷಿಸದೆ ಅಲ್ಪಸಂಖ್ಯಾಕರ ತೀರ್ಪು ಅವರ ಮೇಲೆ ಹೇರಲಾಗಿದೆ ಬಂಗಾಲದವರನ್ನೇ ತೆಗೆದುಕೊಂಡು ನೂರಕ್ಕೆ ೮೦ ರವರೆಗೆ ಹಿಂದೂ ಜನರ ಗೋಳು ಬ್ರಿಟಿಶ ಸರಕಾರದಿಂದ ನಿವಾರಿಸಲ್ಪಡದ್ದರಿಂದ ನಾವಿನ್ನು ರಾಷ್ಟ್ರ ಸಂಘದವರಿಗೆ ಈ ಗೋಳನ್ನು ಅರಿಕೆ ಮಾಡಿಕೊಳ್ಳಬೇಕಾಗಿದೆ ಜಗದಲ್ಲಿ ಶಾಂತಿಯಾಗಬೇಕೆಂದರೆ, ಯುರೋಪಿಯ ಅಲ್ಪಸಂಖ್ಯಾಕರಿಗೆ ಹಚ್ಚಿದ ತತ್ವವನ್ನೇ ಹಿಂದೀ ಅಲ್ಪಸಂಖ್ಯಾಕರಿಗೂ ಹಚ್ಚಲಿಕ್ಕೆಬೇಕು " ಅಂದರು ಈ ಗೊತ್ತುವಳಿಯು ಒಮ್ಮತದಿಂದ ಆಯಿತು ಕೂಲಿಯವರ ಮತ್ತು ರೈತರ ಸ್ಥಿತಿಗಳನ್ನು ಸುಧಾರಿಸುವ ಬಗ್ಗೆ ಸಹಾನುಭೂತಿಯ ಸೂಚನೆಯು ಮಂಡಿಸಲ್ಪಟ್ಟರೂ ಜಮೀನದಾರ ಮತ್ತು ಸಾವುಕಾರ ವರ್ಗವನ್ನು ಪೂರಾ ಅಳಿಸಿಬಿಡುವ ವಿಷಯದಲ್ಲಿ ಅಸಮ್ಮತಿ ತೋರ್ಪಡಿಸುವ ಮೂರನೇ ಗೊತ್ತುವಳಿ ಆಯಿತು. ಸಿಂಧವನ್ನು ಬೇರ್ಪಡಿಸಬಾರದು. ಹಿಂದೂ ತರುಣರಲ್ಲಿ ಕೆಲಸಗೇಡಿತನ ಬೆಳೆಯುತ್ತಿರುವದಕ್ಕೆ ಏನಾದರೂ ಉಪಾಯ ಮಾಡಬೇಕು ಎಂಬವ ಬಗ್ಗೆ ನಿರ್ಧಾರಗಳಾದವು ಹಿಂದುಸ್ಥಾನದೊಳಗಿರುವ ಹಿಂದುಗಳೆಲ್ಲರು ಕೌನ್ಸಿಲ್ಲುಗಳನ್ನು ಕೈಯಲ್ಲಿ ತೆಗೆದುಕೊಳ್ಳಲು ಅವಶ್ಯವಿರುವ ಕಾರ್ಯಕಗಳನ್ನು ನಡಿಸಬೇಕೆಂಬುವ ಸೂಚನೆಯು ಸಭೆಯಲ್ಲಿ ಮಂಡಿಸಲ್ಪಟ್ಟಾಗ್ಗೆ ಶ್ರೀ ರಾಜಕುಮಾರ ಎಂಬವರು ಅದಕ್ಕೆ ವಿರೋಧಿಸುವಾಗ ಮಹಾತ್ಮರು ಕೌನ್ಸಿಲ್ ಪ್ರವೇಶಕ್ಕೆ ಒಪ್ಪದ್ದರಿಂದ ಅದು ಅಪ್ರಸ್ತುತವೆಂದರು ಶ್ರೀ ಪದ್ಮಜಿಯವರ ಮಾತನಾಡುವಾಗ ಕಾಂಗ್ರೆಸ್ಸಿನ ಧೋರಣೆಯನ್ನು ಖಂಡಿಸಿ ಅಸ್ಪೃಶ್ಯರ ದೇವಾಲಯ ಪ್ರವೇಶದ ಬಿಲ್ಲಿನ ಚರ್ಚೆ ನಡೆದ ಕಾಲದಲ್ಲಿ ದೇವಾಲಯ ಪ್ರವೇಶ ಬಿಲ್ಲಿಗ ಅನುಕೂಲವಾಗುವಂತೆ ಅಸೆಂಬ್ಲಿಯ ಸಭಿಕರ ಮನ ಒಲಿಸಲು ಮಹಾತ್ಮರು ಶ್ರೀ ರಾಜಗೋಪಾಲಾಚಾರ್ಯ ದೇವಿದಾಸ ಮುಂತಾದವರನ್ನು ಕಳಿಸಿದ ಸಂಗತಿ ಹೇಳಿದರು

(ಆ ಪ್ರೆ ತಂತಿ)

ಲಾಹೋರ ಶೀಖರ ಪರಿಷತ್ತು

ಲಾಹೋರ ತಾ॥ ೧೬— ಖಾಲಸಾ ದರ್ಬಾರ ಮತ್ತು ಮಧ್ಯವರ್ತಿ ಶೀಖ ಸಂಘದ ಸಭೆ ಇವೆರಡರ ಕೂಡಲ ಸಭೆಗಳು ನೆರೆದ ಸಮಯದಲ್ಲಿ ಸರ್ದಾರ ಮಂಗಳಸಿಂಗರು ಸರಕಾರದವರ ಜಾತಿಯ ತೀರ್ಪನ್ನು ಖಂಡಿಸಿದರು, ಮತ್ತು ' ಶುದ್ಧ ರಾಷ್ಟ್ರೀಯ ತಳಹದಿಯ ಮೇಲೆ ನಿಲ್ಲದ ಯಾವ ರಾಜ್ಯ ಪದ್ಧತಿಯನ್ನು ಶೀಖರು ಒಪ್ಪಲಾರರು ಕೌನ್ಸಿಲ ಮಂತ್ರಿಮಂಡಲ, ಮುಂತಾದವುಗಳಲ್ಲಿಯೂ ಜಾತಿಯ ಗೊಂದಲ ನಡೆಯಲಾಗದು ಯಾಕಂದರೆ ಇನ್ನು ಮುಂದೆ ಹಳ್ಳಿಗರ ಆರ್ಥಿಕ ಶೈಕ್ಷಣಿಕ ಸ್ಥಿತಿಗಳಲ್ಲಿ ಸುಧಾರಣೆಯಾಗಲಿಕ್ಕೆಬೇಕು ಅದರಂತೆ ಸ್ವದೇಶಿ ಖಾದಿ ಇವುಗಳ ಪ್ರಸಾರ ಅಸ್ಪೃಶ್ಯತಾ ನಿವಾರಣೆ ಹೆಂಡದಂಗಡಿ ಇವುಗಳ ವಿರುದ್ಧ ಗದ್ದಲ ನಡಿಸಲಿಕ್ಕೆಬೇಕು ೧೯೩೪—೩೫ ಇಸ್ವಿಯ ರಾಜಕೀಯ ಸೆರೆಯಾಳುಗಳನ್ನು ಬಿಡಬೇಕು ಅಂದರು

[ಆ ಪ್ರೆ ತಂತಿ]

ಪರದೇಶ

"ಪರರ ಉದ್ಯೋಗ ವ್ಯವಸಾಯಗಳನ್ನು ನಾವು ಮಾಡಹತ್ತಿದರೆ ನಮ್ಮನಮ್ಮಲ್ಲಿ ಸ್ಪರ್ಧೆ ಹತ್ತಿ ಸ್ವಲ್ಪಾವಧಿಯಲ್ಲಿ ಅವರೂ ನಾವೂ ಕೂಡಿ ದಿವಾಳಿ ತೆಗೆಯುವ ಸಂಭವಬರುತ್ತದೆ." ಈ ಶ್ರೀ ಶಂಕರ ದೇಸಾಯಿ ಇವರ ಈ ವಿಚಾರಕ್ಕೆ ನಾನು ಒಪ್ಪುವದಿಲ್ಲ. ನಮ್ಮ ದೇಶದಲ್ಲಿ ಮುಖ್ಯವ್ಯವಸಾಯವೆಂದರೆ ಒಕ್ಕಲತನ ಇದು ಮೊದಲ್ಗೊಂಡು ಮಿಕ್ಕ ಅನೇಕ ಉದ್ಯೋಗಗಳು ಅಶಿಕ್ಷಿತರ ಕೈಯಲ್ಲಿದ್ದದರಿಂದ ಅವುಗಳಿಂದ ಸಾಕಷ್ಟು ಫಲ ಬರದೇ ಅವರ ಹೊಟ್ಟೆ ಸಹ ತುಂಬುವದಿಲ್ಲ ಮತ್ತು ಸ್ಪರ್ಧೆಗೆ ಆಸ್ಪದವಿಲ್ಲ.

ಇಲ್ಲಿ ಒಕ್ಕಲತನದ ಗ್ರ್ಯಾಜ್ಯುಯೇಟರು ಬಹಳ ಮಂದಿ ಇದ್ದು ಅವರು ಬಹುತರವಾಗಿ ಸರಕಾರೀ ಚಾಕರಿಯಲ್ಲಿ ತೊಡಗಿರುತ್ತಾರೆ. ಆದರೆ ನಮಗೆ ತಮ್ಮತಮ್ಮ ಹಳ್ಳಿ ಮತ್ತು ಹೊಲಗಳಲ್ಲಿ ಸ್ವತಃ ಕೆಲಸ ಮಾಡುವ ಗ್ರ್ಯಾಜುಯೇಟ ಒಕ್ಕಲಿಗರು ಬೇಕಾಗಿರುವರು ಅದರಂತೆ ಗ್ರ್ಯಾಜುಯೇಟ ಶಿಲ್ಪಿ ಗ್ರ್ಯಾಜುಯೇಟ ಮದಗಾರ (Tanner) ಮುಂತಾದ ಪ್ರತ್ಯಕ್ಷ ಕೆಲಸ ಮಾಡುವವರು ದಕ್ಷಿಣಿಗೆ ಬಿದರೆ ನಾವಕಾರರೆಂಬುವವರ ಅಲ್ಪ ಸ್ವಲ್ಪ ದುಡ್ಡು ಕಾಲವಾನಕ್ಕೆ ಅನುಸರಿಸಿ ಅಂಜಿ ಒಳಗೆ ಒಟ್ಟಿ ಕಾಡದೆ ಪೈಲಿಗ ಬಿದ್ದು ಜೀವಿತದ ಆವಶ್ಯಕ ವಸ್ತುಗಳು (ಸೀನೆಮಾದಂಥ ಅನಾವಶ್ಯಕಗಳಲ್ಲ) ನಮ್ಮ ದೇಶದಲ್ಲಿಯೇ ಹಳ್ಳಿಕೈಗಾರಿ ಹುಟ್ಟಿ (Cottage Industries) ಪರದೇಶಿ ವಸ್ತುಗಳು ನಮ್ಮಲ್ಲಿ ಈಗಿನಂತೆ ಧುಮುಕುವದು ಬಂದಾಗಿ "ಕರ್ನಾಟಕ ಕೂಲಿಗೇಡಿ ತರುಣರ ಹೊಟ್ಟೆ ಪ್ರಶ್ನೆಯು" ತನ್ನಿಂದ ತಾನೇ ಬಿಡಬಹುದೆಂದು ನನ್ನ ಭರವಸೆ ಮನೆ ಹಾಳು ಮಾಡುವ ಸಿನೇಮಾದ ಕಡೆಗೆ ಓಡುವದು ಅವಶ್ಯ ಬೀಳಲಿಕ್ಕಿಲ್ಲ ತಾ॥ ೧೭-೧೦-೩೩

ತಮ್ಮ
ಕೃಷ್ಣ ದೀಕ್ಷಿತ ವಕೀಲ

ರೇಲ್ವೆ ಕಂಪನಿಗಳಲ್ಲಿ ಲಂಚ ಕಟ್ಟಾಯಿತು.

ಎಮ್. ಎಸ್ ಎಮ್. ರೇಲ್ವೆ ಕಂಪನಿಯ ಏಜಂಟರು ಒಂದು ಆಪ್ಪಣೆ ಹೊರಡಿಸಿದ್ದು ಅದರಲ್ಲಿ ಹೀಗೆ ಬರೆದಿದ್ದಾರೆ— ನಮ್ಮ ರೇಲ್ವೆ ಇಲಾಖೆಯ. ಯಾವ ನೌಕರನೂ ಲಂಚ ತೆಗೆದುಕೊಳ್ಳಕೂಡದು ಅದರಂತೆ ರೇಲ್ವೆ ಇಲಾಖೆಯನ್ನು ಸೇರಲು ಅಪೇಕ್ಷೆ ಪಡುವವನೂ ಕೂಡ ಯಾರಿಗೂ ಲಂಚ ಕೊಡಕೂಡದು ಲಂಚ ಕೊಟ್ಟಿದ್ದಾದರೆ ಆತನು ಕೆಲಸಕ್ಕೆ ಅಯೋಗ್ಯನೆಂದು ಗಣಿಸಲ್ಪಡುವನು.

ನಾಗಿಣೀದೇವಿಯ ಲೀಲೆ.

ಹೊಸದಿಲ್ಲಿ ತಾ॥ ೧೯— ಮಿಸ್ ನಾಗಿಣಿಯು ದಿಲ್ಲಿಯಲ್ಲಿರುವಳೆಂದು ಸುದ್ದಿ ಬಂದಿದೆ ಆವಳೀಗ ಮಥುರೆಯಲ್ಲಿರುವದಾಗಿ ತಿಳಿಯುತ್ತದೆ. ಡಾ. ಅನ್ಸಾರಿ ಅವರು ಬೇಗನೆ ವರ್ಧಾಕ್ಕೆ ಹೋಗಿ ಮಹಾತ್ಮರನ್ನು ಕಂಡು ದಿಲ್ಲಿಯಲ್ಲಿ ನಡೆದದ್ದನ್ನೆಲ್ಲ ಮಹಾತ್ಮರಿಗೆ ತಿಳಿಸುವವರಿದ್ದಾರೆ ದಿಲ್ಲಿಯಲ್ಲಿ ತಮ್ಮಲ್ಲಿಗೆ ಆಕೆ ಒಮ್ಮೆಂದೊಮ್ಮೆ ಕಂಡುಕೊಳ್ಳಲಿಕ್ಕೆ ಬಂದಾಗ "ನಾನು ನನ್ನ ಮನೆಯಲ್ಲಿ ಆಕೆಯನ್ನು ಇಟ್ಟುಕೊಳ್ಳಲಿಕ್ಕೆ ಸ್ಪಷ್ಟವಾಗಿ ಬೇಡವೆಂದೆ" ಆದರೆ "ನಿಮ್ಮಲ್ಲಿ ಇರಿಸಿಕೊಳ್ಳಲಿಕ್ಕೆ ಗಾಂಧೀಜಿಯವರು ನನಗೆ ಅಪ್ಪಣೆ ಕೊಟ್ಟಿರುವರು. ಬೇಕಾದರೆ, ಅವರು ಅಪ್ಪಣೆ ಕೊಟ್ಟ ಸಂಗತಿಯನ್ನು ನಿಮಗೆ ನಾನು ತಂತಿಯಿಂದ ಗೊತ್ತುಮಾಡಿ ಕೊಡುವೆ" ಎಂದು ಹೇಳಿದಳು. ಆದರೂ, "ಆಕೆಯ ರಟ್ಟೆ ಹಿಡಿದು ಹೊರಗೆ ಹಾಕಲಿಕ್ಕೆ ಕೂಡ ನಾನು ತಕ್ಕ ಮನೆಯವರಿಗೆ ಹೇಳಿದೆ. ಇನ್ನೊಮ್ಮೆ ಆಕೆ ನನ್ನ ಮನೆಗೆ ಬಂದು ನನ್ನನ್ನು ಕಂಡಿದ್ದರೆ, ನಾನು ಆಕೆಯನ್ನು ಪೋಲೀಸರ ಕೈಗೆ ಕೊಡುತ್ತೇನೆಂದು ಗಾಂಧಿಜಿಯವರಿಗೆ ತಂತಿಬಿಟ್ಟೆ" ಆ "ನೀಲಾ ನಾಗಿಣಿಯು ಇನ್ನೊಮ್ಮೆ ನಿಮ್ಮಲ್ಲಿ ಬಂದರೆ, ಆಕೆಯನ್ನು ಪೋಲೀಸರ ಕೈಗೆ ಕೊಡಿರಿ" ಎಂದು ಅವರಿಂದ ಉತ್ತರ ಬಂತು ಎಂದು ಅಂದಿದ್ದಾರೆ (ಅ ಪ್ರೆ ತಂತಿ)

ಕನ್ನಡಿಗ.

ಧಾರವಾಡ— ರವಿವಾರ ತಾರೀಖು ೨೬—೧೧—೧೯೩೩

ಪಂಡಿತ ಮಾಲವೀಯರ ಪ್ರಕಟನೆ.

ಪಂಡಿತ ಮದನಮೋಹನ ಮಾಲವೀಯರು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕೂಡಿಸುವುದು ಅವಶ್ಯವಿರುತ್ತದೆಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದಾಗಿನಿಂದ ಪುನಃ ಈ ಪ್ರಶ್ನೆಗೆ ಮಹತ್ವವು ಪ್ರಾಪ್ತವಾಗಿದೆ. ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಗಳಾದ ಪಂಡಿತ ಜವಾಹಿರಲಾಲ ಇವರು ಹಾಗೆ ಕಮಿಟಿಯನ್ನು ಕರೆಯಲು ಇನ್ನೂ ಪೂರಾ ಮನಸ್ಸುಳ್ಳವರಾಗಿಲ್ಲ. ಆದರೆ ದೇಶದ ಈಗಿನ ಪರಿಸ್ಥಿತಿಯನ್ನು ನೋಡಲು ಅವರು ತೀವ್ರವೇ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕೂಡಿಸುವದು ಉಚಿತವೆಂದು ನಮಗೆ ತೋರುತ್ತದೆ. ಸಾರ್ವಜನಿಕ ಚಳವಳಿವೆಂದರೆ ಅದು ಈಗ ದೇಶದಲ್ಲಂತೂ ಇನ್ನೂ ಬಿರುಗಾಳಿ ಬಿಟ್ಟಂತೆ ಹೋಗುವ ಚಳವಳಿಯಿರುತ್ತದೆ. ಮಹಾತ್ಮಾ ಗಾಂಧಿಯವರಂಥ ಅಸಾಮಾನ್ಯ ಪುರುಷರೇ ಮಾತ್ರ ಅದನ್ನು ಕೆಲಕಾಲದವರೆಗಾದರೂ ತಮ್ಮ ಅಂಕಿತದಲ್ಲಿಟ್ಟುಕೊಳ್ಳುವುದಕ್ಕಿದೆ. ಅನ್ಯರಿಗೆ ಅದು ಶಕ್ಯವಿಲ್ಲ. ಈಗ ಸದ್ಯಕ್ಕಂತೂ ಅವರ ಕೈಗಳು ಕೂಡ ನಿಂತು ಹೋದಂತೆ ತೋರುತ್ತದೆ. ಅವರು ಒಂದು ವರ್ಷ ಈ ವಿಷಯದಲ್ಲಿ ಮೌನವನ್ನು ತಾಳುವುದನ್ನು ನಿಶ್ಚಯ ಮಾಡಿರುವುದರಿಂದ, ಅಲ್ಲಿಯವರೆಗೆ ದೇಶವು ಯಾವ ಮಾರ್ಗವನ್ನು ಸ್ವೀಕರಿಸಬೇಕೆಂಬ ವಿವಂಚನೆಯಲ್ಲಿ ತೊಡಗಿದೆ. ಮಹಾತ್ಮಾ ಗಾಂಧಿಯವರ ಅನುಯಾಯಿಗಳಿಗೂ ಕೂಡ ದಿಕ್ಕು ತೋಚದಾಗಿದೆ. ವೈಯಕ್ತಿಕ ಕಾಯದೆಭಂಗವು ಇನ್ನೂ ನಿಲ್ಲಿಸಲ್ಪಟ್ಟಿರುವುದಿಲ್ಲವೆಂಬುದೇನೋ ನಿಜ. ಆ ಗೋಷ್ಠಿ ... ಲಾಭವನ್ನು ತೆಗೆದುಕೊಂಡು, ದೇಶದಲ್ಲೆಲ್ಲ ವೈಯಕ್ತಿಕ ಕಾಯದೆಭಂಗದ ಬಿರುಗಾಳಿಯನ್ನೆಬ್ಬಿಸಿದರೆ, ಈ ಒಂದು ವರ್ಷದ ಅವಧಿಯಲ್ಲಿ ದೇಶವು ಪುನಃ ಸಾಮುದಾಯಿಕ ಕಾಯದೆಭಂಗಕ್ಕೆ ಸಿದ್ಧವಾಗಬಹುದು. ಆದರೆ, ನಮ್ಮ ದೇಶದಲ್ಲಿ ರಾಜಕಾರಣವು ಇನ್ನೂ ಬಾಲ್ಯಾವಸ್ಥೆಯಲ್ಲಿ ಇರುವದರಿಂದ ತತ್ವಗಳಿಗಿಂತಲೂ ವ್ಯಕ್ತಿಗಳ ಕಡೆಗೆ ನೋಡಿಯೇ ಚಳವಳಿಗಳು ನಡೆಯುತ್ತಿವೆ. ಆದಕಾರಣ, ಸಾಮುದಾಯಿಕ ಕಾಯದೆಭಂಗಕ್ಕೆ ಪೂರ್ವಭಾವಿಯಾಗಿ ವೈಯಕ್ತಿಕ ಕಾಯದೆಭಂಗದ ಚಳವಳವನ್ನು ಜೋರಿನಿಂದ ನಡಿಸಬೇಕೆಂದು ಹಲವರ ಮನಸ್ಸಿನಲ್ಲಿದ್ದರೂ, ಅದು ಅವರಿಂದ ಶಕ್ಯವೋ ಹೇಗೆ ಎಂಬ ಸಂದೇಹದಿಂದ ವೈಯಕ್ತಿಕ ಕಾಯದೆಭಂಗಕ್ಕೆ ಅನುಕೂಲವಿದ್ದವರು ಕೂಡ, ಈಗ ಅನುಮಾನ ಮಾಡಹತ್ತಿರುವರು. ಇದಾಯಿತು, ಕಾಯದೆಭಂಗಕ್ಕೆ ಅನುಕೂಲವಿದ್ದವರ ಸ್ಥಿತಿ.

ಇನ್ನು, ಮುಂಚಿನಿಂದಲೇ ಈ ವಿಷಯದಲ್ಲಿ ಅರಮನಸ್ಸುಳ್ಳವರೂ ಇತ್ತೀಚಿಗೆ ಅದರಲ್ಲಿ ವಿಶ್ವಾಸವನ್ನು ಕಳೆದುಕೊಂಡವರೂ ತೀವ್ರವೇ ಕಾಯದೆಭಂಗವನ್ನು ಸದ್ಯಕ್ಕಂತೂ ನಿಲ್ಲಿಸಿಯೇ ಬಿಡಬೇಕೆಂದೂ ಅದರ ಬದಲು, ಕಾಯದೆಮಂಡಲಗಳ ಪ್ರವೇಶ ಮತ್ತು ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮ ಇವುಗಳನ್ನು ಕೈಕೊಳ್ಳಬೇಕೆಂದೂ ಅನ್ನುತ್ತಾರೆ. ಈ ಜನರ ಕೂಗು ಇತ್ತೀಚಿಗೆ ಹೆಚ್ಚಾಗಿದೆ. ಇವರು ಮದ್ರಾಸ ವರ್‍ಹಾಡ, ಮುಂಬಯಿ ಮಹಾರಾಷ್ಟ್ರ ಮುಂತಾದ ಕಡೆಗೆ ತಮ್ಮ ಸಭೆಗಳನ್ನೇರ್ಪಡಿಸಿಕೊಂಡು, ಕಾಂಗ್ರೆಸ್ಸಿನಲ್ಲಿ ತೀವ್ರವೇ ಯಾವುದೊಂದು ಮಾತಿನ ನಿರ್ಣಯವಾಗದಿದ್ದರೆ, ಕಾಂಗ್ರೆಸ್ಸನ್ನು ಕೇಳದೆ, ತಮಗೆ ಸರಿತೋರಿದ ಮಾರ್ಗವನ್ನವಲಂಬಿಸಬೇಕೆಂಬ ಯೋಚನೆಯಲ್ಲಿ ಇರುವರು. ಅಜಮೀರದಲ್ಲಿ ಕೂಡಿದ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಭಾಯಿ ಪರಮಾನಂದರು ಹಿಂದೂ ಜನರ ಹಿತಕ್ಕೆ ವಿರುದ್ಧವಾಗಿರುವ ಕಾಂಗ್ರೆಸ್ಸಿನ ಧೋರಣವನ್ನು ಬಲವಾಗಿ ಟೀಕಿಸಿ ಕಾಯದೆಮಂಡಲ ಪ್ರವೇಶವನ್ನು ಎತ್ತಿ ಹಿಡಿದಿರುವರು. ಶ್ರೀ ಜಮುನಾದಾಸ ಮೇಥಾ ಮತ್ತು ಸಿಂಧದ ಪ್ರಮುಖ ಕಾಂಗ್ರೆಸಕರ್ತರಾದ ಸ್ವಾಮಿ ಗೋವಿಂದಾನಂದರಂಥವರು ಮಹಾತ್ಮಾ ಗಾಂಧಿಯವರ ಮೇಲೆ ಮಾಡಿದ ಕಡುತರವಾದ ಟೀಕೆಯನ್ನು ಒದಿಗಿಟ್ಟರೂ ಈಗಿನ ಇಡೀ ಪರಿಸ್ಥಿತಿಯ ಮೇಲಿಂದ ಪಂಡಿತ ಮದನಮೋಹನ ಮಾಲವೀಯರು ಪ್ರಕಟಿಸಿದಂತೆ ತೀವ್ರವೇ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕರೆಯುವುದೇ ಉತ್ತಮವಾದ ಮಾರ್ಗವೆಂದು ನಮಗೆ ತೋರುತ್ತದೆ. ಅದರ ಹೊರ್ತು, ಬೇರೆ ಯಾವ ಸುಲಭವಾದ ಉಪಾಯವು ಕಾಣುವುದಿಲ್ಲ. ರಾಜಕಾರಣದಲ್ಲಿ ಎಲ್ಲವೂ ತಮ್ಮ ಮನಸ್ಸಿನಂತೆಯೇ ಆಗಬೇಕೆಂದು ಯಾರೂ ಬಯಸಬಾರದು. ಇಡೀ ರಾಷ್ಟ್ರದ ಧೋರಣವೂ ಒಮ್ಮೊಮ್ಮೆ ತಪ್ಪಬಹುದು, ಇಲ್ಲವೆಂತಿಲ್ಲ. ಆದರೆ ಅದಕ್ಕೆ ಉಪಾಯವಿಲ್ಲ. ಹಾಗೆ ಆಗುತ್ತದೆಂದು ತಿಳಿದು, ಸಭೆಯನ್ನು ಕೂಡಿಸುವುದನ್ನೇ ಬಿಡುವುದು ವಿಹಿತವಲ್ಲ. ಪಂಡಿತ ಜವಾಹಿರಲಾಲ ನೇಹರೂ ಇವರು ಸೂಜ್ಞರಿರುವದರಿಂದ ಅವರಿಗೂ ಈ ಸಭೆಯನ್ನು ಕರೆಯುವ ಆವಶ್ಯಕತೆಯುಂಟಾಗಬಹುದೆಂಬ ಮಾತು ಹೊಳೆದಂತೆ ತೋರುತ್ತದೆ. ಆದುದರಿಂದಲೇ, ಅವರು ಸಂಯುಕ್ತಪ್ರಾಂತದಲ್ಲಿ ಕೂಡಿದ ಮುಖಂಡರ ಸಭೆಯಲ್ಲಿ ದೇಶದ ಮುಂದೆ ನಾವು ಆರ್ಥಿಕ ಯೋಜನೆಯೊಂದನ್ನು ಇಡತಕ್ಕವರಿರುವೆವೆಂದೂ ಆ ಉದ್ದೇಶದಿಂದ ಅದನ್ನು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಮಂಜೂರು ಮಾಡಿಕೊಳ್ಳಲಿಕ್ಕಿರುವೆವೆಂದೂ ಹೇಳಿದರು. ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯು ಕೂಡಿದಾಗ ಅದರಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಮುಂದಿಡುವುದಕ್ಕೆ ಪ್ರತಿಯೊಬ್ಬರಿಗೂ ಅಧಿಕಾರವಿರುತ್ತದೆ. ಹೇಗಿದ್ದರೂ ತೀವ್ರವೇ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕರೆಯಬೇಕಾಗುವುದೆಂದು ತೋರುತ್ತದೆ.

ಈ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಪ್ರತಿಯೊಂದು ಪ್ರಾಂತದವರು ತಮ್ಮ ಪ್ರಾಂತದ ಪ್ರಾಮಾಣಿಕ ಅಭಿಪ್ರಾಯವನ್ನು ಇಡಬಯಸಬೇಕೆಂದು ನಮ್ಮ ಸೂಚನೆ. ಹಾಗೆ ಮಾಡದೆ ಇದ್ದರೆ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯು ರಾಷ್ಟ್ರದ ನಿಜವಾದ ಪ್ರತಿಬಿಂಬವಾಗದೆ ಹೋಗಿ, ಮುಂದೆ ಕಾರ್ಯಕ್ಕೆ ಹಾನಿತಟ್ಟುವ ಸಂಭವವುಂಟು. ಕಾಯದೆಭಂಗವನ್ನು ಪೂರ್ಣವಾಗಿ ನಿಲ್ಲಿಸಿ ಬಿಡಬೇಕೆಂದೆನ್ನುವವರು ಅದರ ಬದಲು ಸೋಜ್ವಲವಾದ ಕಾರ್ಯಕ್ರಮವನ್ನು ... ... ಈಗ ಇವರು ಕಾಯದೆಮಂಡಲ ಪ್ರವೇಶದ ಕೂಗನ್ನು ... ... ಆದರೆ ಈ ಕಾಯದೆಮಂಡಲ ಪ್ರವೇಶದ ಪ್ರಶ್ನೆಯು ಇಷ್ಟರಲ್ಲಿಯೇ ಏಕೆ ... ... ನಮಗೆ ತಿಳಿಯದಾಗಿದೆ. ಹೊಸ ರಾಜಕೀಯ ಸುಧಾರಣೆಗಳು ... ... ರು ಕೊಡಲಿರುವ ಹಕ್ಕುಗಳಲ್ಲಿ ಕೂಡ, ಇನ್ನೂ ಎಷ್ಟೆಷ್ಟು ಹಕ್ಕುಗಳು ... ಹೋಗುತ್ತವೆಯೋ ಗೊತ್ತಿಲ್ಲ. ಬಿಳೀ ಕಾಗದವು ಕೊಡುವ ಸುಧಾರಣೆಗಳು ಅತಿಶಯವಾಗಿ ಸಮಾಧಾನಕಾರಕವಾಗಿದ್ದರೆ ಮುಂದ ಪಕ್ಷದವರಿಗೂ ಕೂಡ ಎಲ್ಲಿ ಕಾಯದೆ ಮಂಡಲಗಳಿಗೆ ಬಹಿಷ್ಕಾರ ಹಾಕುವ ಪ್ರಸಂಗ ಬರುವುದೋ ಏನೋ! ಹೀಗಿರಲು ಕಾಂಗ್ರೆಸ್ಸಿಗೆ ಸಂಬಂಧಿಸಿದ ಈ ... ಇಷ್ಟರಲ್ಲಿಯೇ ಕಾಯದೆಮಂಡಲ ಪ್ರವೇಶವನ್ನು ಮಾಡಿಯೇ ಬಿಡಬೇಕೆಂದು ಏಕೆ ನಿಶ್ಚಯಿಸಬೇಕು? ಹೀಗೆ ನಿಶ್ಚಯಿಸುವದೆಂದರೆ, ಇಂಗ್ಲಂಡವು ಚಲ್ಲುವ ತುಣುಕು ಎಷ್ಟೇ ಚಿಕ್ಕದಿದ್ದರೂ ನಾವು ಅದನ್ನು ಆಯುವವರೇ ಎಂದು ಸಾರಿದಂತಾಗವುದಿಲ್ಲವೆ? ಇರಲಿ. ಇನ್ನೂ ಮತಗಳ ವಿಚಾರಗಳಾಗುವುದಕ್ಕೆ ಮುಂಚೆ ನಿರ್ಣಯಂತೂ ಕೂಡಬೇಕಲ್ಲವೆ?

ಇಹವೃತ್ತ

ಸ್ವೈ ದಿ ಬ ರೊದ್ದ ಶ್ರೀನಿವಾಸರಾಯರು

ಸ್ವೈ. ದಿ. ಬ. ರೊದ್ದ ಶ್ರೀನಿವಾಸರಾಯರ ಭಾವಚಿತ್ರದ ಅನಾವರಣ ಸಮಾರಂಭವು ಇಲ್ಲಿಯ ಶ್ರೀ ಶಾಂತೇಶ ವಾಚನಾಲಯದಲ್ಲಿ ಸುಪ್ರಸಿದ್ಧ ನಾಗರಿಕರೂ ಮುಂಬಯಿ ಕಾಯದೆ ಮಂಡಲದ ಸದಸ್ಯರೂ ಆದ ಶ್ರೀ ದೇಸಾಯಿ ಹಣಮಂತರಾಯರ ಹಸ್ತದಿಂದ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು.

ಮೊದಲು ಶ್ರೀ ಆಲೂರ ವೆಂಕಟರಾಯರು ರೊದ್ದ ರಾಯರು ಕನ್ನಡ ನಾಡಿಗೆ ಮಾಡಿದ ಮಹದುಪಕಾರವನ್ನು ಸಮಯೋಚಿತವಾಗಿ ಒಪ್ಪಿಸಿ ಶ್ರೀ ದೇಸಾಯಿ ಹಣಮಂತರಾಯರಿಗೆ ದಿ. ಬ. ರವರ ಭಾವಚಿತ್ರದ ಅನಾವರಣ ಮಾಡಲು ಬಿನ್ನವಿಸಿದರು. ಶ್ರೀ ದೇಸಾಯರೂ ಕರ್ನಾಟಕ ಪಿತಾಮಹರಾದ ದಿ. ಬ. ರವರು ತಮಗೆ ತಂದೆಯ ಸಮಾನರಾಗಿದ್ದುದರಿಂದ ಈ ಕಾರ್ಯಕ್ಕೆ ತಮ್ಮನ್ನು ಆರಿಸಿದ್ದು ತಮಗೆ ಹೆಚ್ಚಿನ ಗೌರವದ ಸಂಗತಿಯೆಂದು ಹೇಳಿದರು. ಕೊನೆಗೆ ಶ್ರೀ ಮುದವೀಡು ಕೃಷ್ಣರಾಯರು ದಿ. ಬ. ರವರು ಕನ್ನಡ ನಾಡ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳಿ ಎಲ್ಲರಿಗೂ ವಂದನೆಗಳನ್ನರ್ಪಿಸಿದರು.

ಶಾಂತೇಶ ವಾಚನಾಲಯದವರು ದೀಪಾವಳಿಯಲ್ಲಿ ಜ್ಞಾನದೀಪ ಜ್ಯೋತಿಯನ್ನು ಬೆಳಗುವ ಹೊಸ ಉಪಕ್ರಮವನ್ನು ಹೂಡಿದ್ದಾರೆ. ನಿನ್ನೆ ಸಾಯಂಕಾಲಕ್ಕೆ ಶ್ರೀ ಸಾಲೀ ರಾಮಚಂದ್ರರಾಯರು ಮುದ್ದಣ್ಣ ಕವಿಯ ಜೀವನದೊಳಗಿನ ಸಂಗತಿಯನ್ನು ಹೇಳಿದರು. ಪ್ರೊ. ಗೋಕಾಕರವರು ಅಧ್ಯಕ್ಷರಾಗಿದ್ದರು. ಶ್ರೀ ಪಂಜೆ ಮಂಗೇಶರಾಯರೂ ಈ ಸಂದರ್ಭದಲ್ಲಿ ಬಂದಿದ್ದು ಕಬ್ಬಿನ ಮೇಲೆ ಜೇನು ಇಟ್ಟಂತಾಗಿದೆ. ಇಂದು ಸಂಜೆಯ ೬ ಗಂಟೆಗೆ ಇದೇ ವಿಷಯವು ಮುಂದೆ ಸಾಗಿಸಲಾಗುವದು. ಶ್ರೀ ಮಂಗೇಶರಾಯರೂ ಭಾಷಣ ಮಾಡುವರು. ... ... ಹೀಗೆಯೇ ಮುಂದೆ ಇಂದಿನ ಮತ್ತು ನಾಳಿನ ಉಪನ್ಯಾಸಗಳು ಕವಿ ವಸಂತ ಕಟ್ಟಡದಲ್ಲಿ ಜರಗುವ ಏರ್ಪಾಡು ಮಾಡಲಾಗಿದೆ.

ಆದಿಪಂಪನ ಜಯಂತಿ

ಕಾರ್ತಿಕ ಶುದ್ಧ ಪಂಚಮಿ ದಿನ ಅಂದರೆ ಸೋಮವಾರ ದಿನ ಕನ್ನಡ ಕವಿ ಸಮ್ರಾಟನ ಆದಿಪಂಪನ ಜಯಂತಿ ಇಂದಿನಿಂದ ಶಾಂತೇಶ ವಾಚನಾಲಯದಲ್ಲಿ ನಡೆದಿರುವ ಸಾಹಿತ್ಯೋತ್ಸವ ವಿಶೇಷ ಉತ್ಸಾಹದಿಂದ ನಡೆಯುವದಿದೆ.

ಧಾರವಾಡದ ಕರ ಕೊಡುವವರ ಗೋಳು

ಧಾರವಾಡ ನಗರ ಸಭೆಯು ವಾರ್ಷಿಕೋತ್ಪನ್ನವು ವರ್ಷಕ್ಕೆ ೧ ಲಕ್ಷ ರೂಪಾಯಿಯ ವರೆಗೆ ಇದೆ ... ... ತವಿದೆ. ಎಲ್ಲ ನಗರ ಸಭೆಗಳಿಗಿಂತ ನಮ್ಮ ನಗರ ಸಭೆಯ ಕರಗಳು ನಾಗರಿಕರಿಗೆ ಭಾರವಾದವುಗಳು ಇರುತ್ತವೆ. ವಿಷಯ ಇರದೆ ಏನು ಮಾಡಿಯಾವು! ಖರ್ಚು ಬಹಳವಂತೆ ನಾಲ್ವತ್ತು ಸಾವಿರ ಜನ ಸಂಖ್ಯೆಯ ಈ ಶಹರದ ಆರೋಗ್ಯ ದೀವಿಗೆ ನೀರು ಪೂರೈಸಲ್ಪಡಬೇಕು ಈ ವೆಚ್ಚದಲ್ಲಿ. ಆದರೆ ಈ ಸೌಕರ್ಯಗಳನ್ನು ನಗರ ಸಭೆಯವರ ಹೇಗೆ ಪೂರೈಸುವರೆಂಬದನ್ನು ನೋಡಬೇಕು. ಮೊದಲು ಮಾರ್ಗಗಳು. ಧಾರವಾಡದಲ್ಲಿಯ ಅನೇಕ ಹೆದ್ದಾರಿಗಳ ಸ್ಥಿತಿಯು ಏನೋ ಸಮಾಧಾನಕರವಾಗಿದ ಎನ್ನಬಹುದು. ಆದರೆ ಕಿರಿದಾರಿಗಳ ಸ್ಥಿತಿಯೇನು? ಆ ದಾರಿಗಳಲ್ಲಿ ಅನೇಕ ಕಂದರಗಳನ್ನು ಕಾಣಬಹುದು. ತೀಕ್ಷ್ಣವಾದ ದಾರಿಯ ಕಲ್ಲುಗಳು ಬಡ ಒರಿಗಾಲಿನ ನಾಗರಿಕರನ್ನು ಅಳಿಸಿಬಿಡುವವು. ಕೆಲವು ಕಚ್ಚಾ ದಾರಿಗಳಂತೂ 'ದಾರಿ' ಎಂದು ಗುರ್ತಿಸಲು ಅಸಾಧ್ಯವಾಗಿವೆ. ದೊಡ್ಡ ಜನರು ಇರುವ ಮಾಳಮಡ್ಡಿಯಲ್ಲಿಯ ಕಚ್ಚಾ ದಾರಿಗಳು ಕಲ್ಲುಗಳನ್ನು ಕಂಡು ಕತವಾದನವಾಯಿತು. ಹೆಣ್ಣು ಮಕ್ಕಳ ಶಾಲೆಯ ಬದಿಗಿರುವ ದಾರಿಯಲ್ಲಿ ಅನೇಕ ಹಳ್ಳಗಳು ತುಂಬಿಯುತ್ತಿರುವವು. ಕಾಲುವೆಗಳಿಲ್ಲ. ಮೇಲೆ ಎಲ್ಲಿ ಹರಿಯಬೇಕು? ನೀರು ನಿಲ್ದಾಣದ ಹೆದ್ದಾರಿಯ ಮೇಲೆ ಪತ್ರಾವಳಿಯವರ ದಾರಿಗೆ ಹೊಂದಿ ಮರೆಮಾಡಿಕೊಂಡು ಇರುವ ವಾಯು ... ದ ಗಂಧ ವಾಸವನ್ನು ಸವಿಯದ ನಾಗರಿಕನಿಲ್ಲ. ಊರಿಗೆ ಹೋಗುವ ಗಡಬಿಡಿಯಲ್ಲಿ ತೋಚಿಲಿಕ್ಕಿಲ್ಲ ಈ ಕಲ್ಪನೆ ಬಡದಾರಿ ಹೋಕರಿಗೆ. ಕೆಲವು ಹೆದ್ದಾರಿಯ ಮೇಲೆ ಅನೇಕ ಸಂಕಷ್ಟಗಳುಂಟು. ಅವುಗಳನ್ನು ದಾಟಿ ಹೋಗಲು 'ನೇತ್ರಬಂಧನೆ' ಮಾಡಬೇಕಾಗುತ್ತದೆ. ಹೀಗೆ ಹೋಗುತ್ತಿರಲು ಮೋಟಾರು ಎದುರಿಗೆ ಬಂದರೆ ಪ್ರತಿಯೊಬ್ಬನು 'ಮೋಹರಮ್ಮದ' ಹುಲಿಯಾಗಲು ತಡವಾಗದು. ದಾರಿಗೆ ಹೊಂದಿ ಕಸಗಳನ್ನು ಚಲ್ಲುವ 'ಕುಂಡೆ'ಗಳನ್ನು ಇಡುವ ಯೋಜನೆ ಚನ್ನಾಗಿದೆ. ಆದರೆ ಕಸಗಳನ್ನು ಅಲ್ಲಿಯೇ ಚಲ್ಲುವ ಯೋಗ್ಯ ಯೋಜನೆಯು ಮಾಡಲ್ಪಟ್ಟಿಲ್ಲ. ಬ್ರಾಹ್ಮಣರ ಕೇರಿಗಳಲ್ಲಿ ಬ್ರಾಹ್ಮಣರು 'ಮಡಿಗಂಪ' ... ಳನ್ನು ದೂರದಲೇ ಬಿಸುಟುವರು. ಆ ಮಾತೆ ನೋಡಬೇಕು ಚಂದ. ಪ್ರತಿ ಮನೆಯ ... ತಿಪ್ಪೆಯಾಗುವದು ಸ್ವೀಕ

ಮಹಾತ್ಮರೂ ಗುರುವಾಯೂರಿನ ದೇವಾಲಯವೂ.

" ಕನ್ನಡಿಗ " ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

ನ ಮೇಲೆ ಇರುವ ಕಾಂಡಿಗಳಲ್ಲಿ ಯಾರು ಲ್ಲವದಿಲ್ಲ ಆದ್ದರಿಂದ ಈ ಬಗ್ಗೆ ಯೋಗ್ಯ ಬಸ್ತು ಆಗಬೇಕು ಬೀದಿಯಲ್ಲಿ ಮಕ್ಕಳ ಸರ್ಜನೆ ಮಾಡಿಸುವದನ್ನು ತಡೆ ಹಾಕ . ಈ ಬಗ್ಗೆ ಯೋಗ್ಯ ಬಂದೋಬಸ್ತ ದೆ ಇದ್ದರೆ, ರೋಗ ಪ್ರಸಾರವಾಗಲು ಹಿಡಿಯಲಾರದ ಮಾಳಮಾರಡಿಯಲ್ಲಿ ಉಳಿದ ಹಳ ಜನರಿಗೆ ಸಾಯಬು ಆದ್ದರಿಂದ ಅವರು ರಹದಾರಿಗಳನ್ನು ಪ್ರದೇಶವನ್ನು ಆಶ್ರಯಿಸುವದು ಹೀಗೆ ದ್ದನ್ನು ಹಾಲಗೇರಿ ದಂಡೆಯ ಮೇಲೆ ಎ ರ್ಕಿನ ದೊಡ್ಡ ಕಾಲುವೆ ಮಾರ್ಕೇಟ ಮೆಯಲ್ಲಿ ನೋಡಬಹುದು ಎಲ್ಲ ಕಡೆ ಈ ಬಗೆಯ ನಿರ್ಬಂಧನೆಗಳ ಬೋ ನೋ ಅಲ್ಲಲ್ಲಿಗೆ ತೋರುತ್ತವೆ ಆದರೆ ಪ್ರಯೋಜನವೇನೂ ಆಗಿಲ್ಲ ಮೂತ್ರ ನೆಯು ಕೆಲವು ಏರ್ಪಾಡುಗಳು ಆಗಿದ್ದ ವು ಸಮಾಧಾನಕರವಾಗಿಲ್ಲ ಅವು ಹೆ ಮಾಡಲ್ಪಡಬೇಕು? ಉಳಿದ ನ್ಯೂನ ಗಳ ವಿಷಯವನ್ನು ಈ ಮೊದಲೇ ಕನ್ನ ಸೂಚಿಸಿರುವೆನು ಹೀಗೆ ಸೌಕರ್ಯಗಳ ದಗಿಸಿದರೆ ಕೇಳಬೇಕೆ ನಮ್ಮ ನಗರ ಶೋಭೆ ಕಟ್ಟಿದಕ್ಕೆ ಉತ್ಪನ್ನಿಗೆ ಆಗುವು ಉಸುವದು ಉದಿದ್ದಯಿತು

ಓರ್ವ ನಾಗರಿಕ

ಪಂಡಿತ ಮಾಲವೀಯರಿಗೆ ಆಂಡ್ರೂಜರ ಭೆಟ್ಟಿ

ಮಸೂರಿ ತಾ। ೯ ರೆವ್ಹ ಆ್ಯಂಡ್ರೂಜರು ಲ್ಲಿಗೆ ಬಂದರು. ಹಿಂದುಸ್ಥಾನ ಮತ್ತು ಡದಲ್ಲಿಯ ಸಾಮಾನ್ಯ ರಾಜಕೀಯ ಪ ಯನ್ನು ಕುರಿತು ಪಂಡಿತ ಮಾಲವೀಯ ಮೂರು ತಾಸುಗಳ ವರೆಗ ಅವರು ತಿದರು ನಾಳೆ ಹೊರಡುವವರು ನಿ ಇಲ್ಲಿ ಮಳೆ ಜಡಿಗಟ್ಟಿ ಬೀಳುತ್ತದೆ ಕೆಟ್ಟ ಹವೆಯೇ ಮುಂದೆ ಇದ್ದರೆ ಪಂಡಿ ಲವೀಯರು ಇಲ್ಲಿಂದ ಬೇಗ ತಳಕಿತ್ತು.

ಉಗಿಬಂಡಿ ಉರುಳಿತು.

ಬೆಂಗಳೂರು ತಾ। ೨೦ ಚೊರಾಗಪೇಟೆ ಹೋಗುವ ಬೆಂಗಳೂರಿನ ಉಗಿಬಂಡಿಯು ರವಿನ ದಿನ ಚಿಕ್ಕಬಳ್ಳಾಪುರ-ಗಿಡ್ನ ನಡುವೆ ೧೧ ಘಂಟೆಗೆ ಹಳಿಯಿಂದ ರು ಸರಕು ತುಂಬಿದ ಏಳು ಡಬ್ಬಿಗಳು ಮೂರನೇ ವರ್ಗದ ಡಬ್ಬಿ, ಒಂದು ಮು ಲಿನ ಡಬ್ಬಿ ಹೀಗೆ ಬುಡಮೇಲಾದವು ಫರ್ಲಾಂಗಿನ ವರೆಗೆ ರೈಲ ದಾರಿಯು ಂಡ ಕೊಚ್ಚಿಕೊಂಡು ಹೋಗಿದೆ ಎಂ ಗಳ ವರೆಗೆ ರೈಲಿನ ದಾರಿ ಕಟ್ಟಾಗಿದೆ ವಾದ ಸಂಗತಿ ಇದು ವರೆಗೆ ತಿಳಿದಿಲ್ಲ

ಗಾನಿಸ್ಥಾನದಲ್ಲಿ ವೇದಾಭ್ಯಾಸ.

ಲಾಹೋರ ತಾ। ೨೨— ಇದ ವರೆಗೆ ಹಿಂ ವೇದಗಳನ್ನು ಜರ್ಮನರಷ್ಟೇ ಓದುತ್ತಿದ್ದ ರಿ, ತುರ್ಕಸ್ಥಾನದ ಹೊಸ ಶಿಕ್ಷಣ ಕ್ರ ಕಗೂ ವೇದಾಭ್ಯಾಸವನ್ನೊಂದು ವಿಷಯ ಸೇರಿಸಿದ್ದಾರೆ ವೇದಗಳ ಭಾಷಾಂತರ ಲ್ಲ ಜನ ತಜ್ಞ 'ಯುರೋಪಿಯನ್ನ ನಿಯಮಿಸಿದ್ದಾರೆಂದು ತಿಳಿಯುತ್ತದೆ.

ಗುರುವಾಯೂರಿನ ದೇವಾಲಯದ ಬಗ್ಗೆ ಮಹಾತ್ಮರ ಮತ

ಪುಣೆ ತಾ। ೨೦ — ಹರಿಜನರ ವಿಷಯ ವಾಗಿ ಕೇರಳದ ಸುದ್ದಿಗಾರನಿಗೆ ಉತ್ತರ ಕೊಡುವಾಗ ಮಹಾತ್ಮರು ಯೋಗ್ಯ ಕಾಲ ಒದಗಿದರೆ ಮತ್ತು ಕೇಲಪ್ಪನವರೂ ಬರಿಯ ಗುರುವಾಯುವಿನ ದೇವಾಲಯವನ್ನು ಹರಿಜನರಿಗೆ ತೆರವಿಡಲಿಕ್ಕಲ್ಲದೆ ಅನೇಕ ದೇವಾಲಯ ಗಳನ್ನು ತೆರವಿಡಲಿಕ್ಕೆ ನಮ್ಮ ಜೀವಗಳನ್ನು ಗಂಡಾಂತರಕ್ಕೆ ಗುರಿ ಮಾಡಬೇಕಾಗುವದು ಎಂದು ಹೇಳಿದರು ಅದಕ್ಕೆ ಸುದ್ದಿಗಾರನು ' ಈಗಂತೂ ದೇವಾಲಯ ಪ್ರವೇಶದ ಕಟ್ಟಳೆಯು ಸಡಿಲವೆ ತೂಗಾಡುತ್ತಿದ್ದು 'ಕೇಲಪ್ಪನವರನ್ನೊಳಗೊಂಡು ಮಿಕ್ಕ ಎಲ್ಲ ಕಾರ್ಯಕರ್ತರು ಹರಿಜನರ ಕೆಲಸ ಮಾಡುವದರಲ್ಲಿ ಇದ್ದುದರಿಂದ ಗುರುವಾಯುವಿನ ಮಂದಿರ ಪ್ರವೇಶಕ್ಕೆ ಅಪ್ಪಣೆ ದೊರಕಿಸಿಕೊಡುವ ಭಾರವು ಗಾಂಧಿಜಿಯವರ ಮೇಲೆಯೇ ಇದೆ ಆದುದರಿಂದ ಅದನ್ನು ಕೈಕೊಳ್ಳಬೇಕೆಂದು ಗಟ್ಟಿಸಿ ಕೇಳಿದನು ಅದಕ್ಕೆ ಗಾಂಧಿಜಿಯವರು "ಗುರುವಾಯುವಿನ ದೇವಾಲಯ ಪ್ರವೇಶದ ಪ್ರಶ್ನೆ ವು ಒಬ್ಬನ ಕೆಲಸವಲ್ಲ ಅದರ ಮೇಲೆ ಒಂದರೆ ದೇವರು ತಾನಾಗಿಯೇ ಒದಗಿಸಿ ತರುವನು ಹಿಂದುಸ್ಥಾನದಲ್ಲಿ ಅಸ್ಪೃಶ್ಯತೆಯು ಇರುವ ವರೆಗೆ ನನಗಂತೂ ಸಮಾಧಾನವಾಗದು' ಎಂದರು

ಅ ಪ್ರೆ ತಂತಿ

ಶ್ರೀ ಕೃಷ್ಣಾ ನೆಹರು ಅವರ ವಿವಾಹ.

ಅಲ್ಲಾಹಾಬಾದ ತಾ। ೨೦ ಪಂಡಿತ ಮೋತಿಲಾಲ ನೆಹರು ಅವರ ಎರಡನೇ ಮಗಳಾದ ಶ್ರೀ ಕೃಷ್ಣಾ ನೆಹರು ಅವರ ಮದುವೆಯು ಬ್ಯಾರಿಸ್ಟರ ಮ. ಹತ್ತೀಸಿಂಗ ಎಂಬ ಜೈನ ಗೃಹಸ್ಥನೊಡನೆ ಮುಂಬೈಯಲ್ಲಿ ನಿರ್ವಿಘ್ನದಿಂದ ಆನಂದ ಭುವನದಲ್ಲಿ ಬೆಳಿಗ್ಗೆ ಜರಗಿತು ಸಿವ್ಹಿಲ್ ಮ್ಯಾರೇಜದ ರಜಿಸ್ಟ್ರಾರರಾದ ಮಿ. ಎ. ಸಿ ಬ್ಯಾನರ್ಜಿಯವರು ವಧೂ-ವರರ ಸೆರಗನ್ನು ಕೂಡಿ ಕಟ್ಟಿದರು ಶ್ರೀ ಸ್ವರೂಪರಾಣಿಯವರನ್ನು ಮದುವೆಯ ವೇದಿಕೆಯ ಮೇಲೆ ಕಂಡರು ಪರ ಸಪ್ರು ಶ್ರೀ ಸರೋಜಿನಿನಾಯ್ಡು, ಕಸ್ತೂರಬಾಯಿ ಲಾಲಭಾಯಿ ಪುರುಷೋತ್ತಮದಾಸ ಠಾಕೂರದಾಸ ಮತ್ತು ಒಳಗದವರು ಬಂದಿದ್ದರು ಮಹಾತ್ಮರು ವಧೂವರರಿಗೆ ಆಶೀರ್ವಾದ ಕಳಿಸಿದ್ದರು (ಅ. ಪ್ರ. ತಂತಿ)

ಪಟೇಲರ ದೇಹಸ್ಥಿತಿ ಚಿಂತಾಜನಕವಾಗಿದೆ

ಮುಂಬೈ ತಾ। ೨೧ ವಿ ಜೆ ಪಟೇಲರ ದೇಹಸ್ಥಿತಿಯ ಬಗ್ಗೆ ಸುಭಾಸ ಬೋಸರಿಂದ ಗೋವರ್ಧನದಾಸ ಮತ್ತು ಕಂಪನಿಗೆ ಕೆಳಗಿನ ತಂತಿ ಬಂದಿದೆ ಜ್ವರ ನಿಲ್ಲಲೊಲ್ಲದು ಡಾಕ್ಟರರ ಅಭಿಪ್ರಾಯ ಸಮಾಧಾನಕರವಿಲ್ಲ ಪ್ರಕೃತಿಯು ಹೆಚ್ಚು ಅವಗುಣ ಹೊಂದಿದೆ ಮುಂಬೈಯಲ್ಲಾದ ಸಭೆಯ ಬಗ್ಗೆ ಸರೋಜಿನಿ ದೇವಿಯವರು ಕೊಟ್ಟ ತಂತಿಯನ್ನು ಪಟೇಲರು ಸಂಭ್ರಮದಿಂದ ಓದಿಕೊಂಡು ಕೃತಜ್ಞತೆಯನ್ನು ವ್ಯಕ್ತಪಡಿಸಿ, ಎಲ್ಲರನ್ನೂ ನೆನೆಸಿಕೊಂಡರು ಅ ಪ್ರೆ ತಂತಿ

ಚಿಂತಾಮಣಿ ಮಹಾಲಕ್ಷ್ಮಮ್ಮನ ಅಪಹಾರ ವ್ಯಾಜ್ಯ.

ಮಹಾಲಕ್ಷ್ಮಮ್ಮನ ಮೊಕದ್ದಮೆಯು ಒಂದು ವಿಚಿತ್ರವ ದಪ್ಪ ಒದಗ ಎಷ್ಟೋ ಆಶ್ಚರ್ಯಕರವಾದ ಸಂಗತಿಗಳಿವೆ ಕೋರ್ಟಿನಲ್ಲಿ ನಡೆದ ವಿಚಾರಗಳನ್ನೆಲ್ಲಾ ನಮ್ಮ ಪತ್ರಿಕೆಯಲ್ಲಿ ವಿಶದವಾಗಿ ಕೊಟ್ಟಿದ್ದೇವೆ ಈ ದಿನ ಆ ಅಂಶಗಳನ್ನೆಲ್ಲಾ ಕೇಳಿರಿಸಿ ಇಲ್ಲಿ ಕೊಡುತ್ತೇವೆ

ರಾಮುಸ್ವಾಮಿ ಪಂಡಿತರ ಹೇಳಿಕೆ

ನಾನು ೧೮೬೯ ವರ ಷದ ಮುದುಕ ೨೨-೩ ೩೩ ನೇ ರಾತ್ರಿ ನನ್ನ ಮಗಳು ಮಹಾಲಕ್ಷ್ಮಮ್ಮನು ಮಾಯವಾದಳು ನಾನು ನನ್ನ ಬಂಧುಗಳ ಮನೆಯಲ್ಲೆಲ್ಲಾ ಹುಡುಕಿದೆ. ಎಲ್ಲಿಯೂ ಸಿಕ್ಕಲಿಲ್ಲ ಪೋಲಿಸ ಸಬ್ ಇನಸ್ಪೆಕ್ಟರಲ್ಲಿ ಕೇಳಿಕೊಂಡೆ ಅವರು " ಹೋದರೆ ಹೋದಳು, ಹೋಗಯ್ಯ " ಎಂದು ಕಳುಹಿಸಿದರು ಮನೆಗೆ ಬಂದು ಅಳುತ್ತ ಕುಳಿತೆ ಮಾರನೇ ಬೆಳಿಗ್ಗೆ ಪೋಲೀಸ್ ಸ್ಟೇಶನ್ನಿಗೆ ಹೋದೆ ಅಲ್ಲಿ ನನ್ನ ಮಗಳನ್ನು ನೋಡಿದೆ ಪೋಲೀಸ ಇನಸ್ಪೆಕ್ಟರು " ಅವಳು ಮುಸಲ್ಮಾನ ಜಾತಿಗೆ ಸೇರುತ್ತಾಳೆಂದು ' ಹೇಳಿದರು ಅವಳು ಕುಲಭ್ರಷ್ಟಳಾಗಿದ್ದಾಳೆಂದು ಹೇಳಿದರು. ಆದರೆ ನಾನು ಮನೆಗೆ ಕರೆದುಕೊಂಡು ಹೋಗುತ್ತೇನೆಂದು ಹೇಳಿ ನನ್ನ ಹುಡುಗಿಯನ್ನು ಕಾನ್‌ಸ್ಟೇಬಲ್ ಸಂಗಡ ಮನೆಗೆ ಕಳಿಸುವುದಾಗಿ ಪೋಲೀಸಿನವರು ಹೇಳಿದರು ಸಂಧ್ಯಾಕಾಲದವರೆಗೆ ಕಾದರೂ ಬರಲೇ ಇಲ್ಲ ಮುಸಲ್ಮಾನರು ನನ್ನ ಮಗಳಿಗೆ ' ಸೀಖಾ ' ಆಗುತ್ತದೆಂದು ಡಂಗುರ ಹೊಡೆದರು. ಕೊಟ್ಟಿಪ್ಪರಿದು ಅವಳನ್ನು ಹೇಗಾದರೂ ಮಾಡಿ ಮನೆಗೆ ಕರೆತರಬೇಕೆಂದು ಹೋದೆ ಮುಸಲ್ಮಾನರ ಗಲಾಟೆಯಲ್ಲಿ ಕರೆತರಲಾಗಲಿಲ್ಲ ಕತ್ತಲೆ, ಮಾರ್ಗದಲ್ಲಿ ಬಿದ್ದೆ. ಎದ್ದೆ ಪುನಃ ಮನೆಗೆ ಬಂದು ಬಿದ್ದೆ ಅಲ್ಲಿಗೆ ನನ್ನ ಅವಸ್ಥೆ ಮುಗಿಯಿತು

ಹುಡುಗಿಯ ಹೇಳಿಕೆ.

ನಾನು ವಿಧವೆ ಗಂಡ ಸತ್ತು ೯ ತಿಂಗಳಾಯಿತು ತಂದೆಯ ಮನೆಯಲ್ಲಿದ್ದೆ ನನಗೆ ತಲೆ ಬೋಳಿಸಿ ಮಡಿ ಮಾಡಬೇಕೆಂದು ಮನೆಯವರ ಯೋಚಿಸಿದರು ಅದನ್ನು ಸಹಿಸಲಾಗದೆ ಬೆಂಗಳೂರಿಗೆ ಹೋಗಬೇಕೆಂದು ಗೃಹತ್ಯಾಗ ಮಾಡಿದೆ ನಮ್ಮ ಚಿಕ್ಕಪ್ಪನ ಮನೆಗೆ ಹೋಗುತ್ತಿದೆ ಮುಸಲ್ಮಾನರು ಬಂದು ಹಿಡಿದುಕೊಂಡರು ಹೆದರಿಸಿದರು ಮುಖದ ಮೇಲೆ ಉಗುಳಿದರು ಮುಖಕ್ಕೆ ಮುಸುಕು ಹಾಕಿದರು ಬಲಾತ್ಕಾರದಿಂದ ಎಲ್ಲಿಗೊ ಹೊತ್ತುಕೊಂಡು ಹೋದರು ಪ್ರಾಣಭೀತಿಯನ್ನುಂಟು ಮಾಡಿದರು ಏನೋ ಕುಡಿಸಿದರು ಜ್ಞಾನ ತಪ್ಪಿಸಿದರು ಏನೇನೋ ಹೇಳಿಕೊಟ್ಟರು ಮುಸಲ್ಮಾನರ ಜಾತಿಗೆ ಸೇರುವಂತೆ ಮಾಡಿದರು ಪೋಲೀಸ ಇನಸ್ಪೆಕ್ಟರ ಮುಸಲ್ಮಾನ್ ಜಾತಿಗೆ ಸೇರು ಎಂದು ಹೇಳಿಕೊಟ್ಟರು ನಮ್ಮ ಅಪ್ಪನ ಮನೆಗೆ ಹೋಗಬೇಕೆಂದು ಹಟತೊಟ್ಟೆ ಪುನಃ ಮುಸಲ್ಮಾನರು ಎಳೆದುಕೊಂಡು ಹೋದರು ಸ್ಕೂಲಿನಲ್ಲಿ ಬಚ್ಚಿಟ್ಟರು ಸೇಟಸಾಬಿಯ ಮನೆಗೆ ಎಳೆದುಕೊಂಡು ಹೋದರು ಅಲ್ಲಿ ಮುಸಲ್ಮಾನರೆಲ್ಲಾ ಸೇರಿದರು ಬಲಾತ್ಕಾರದಿಂದ ಮುಸಲ್ಮಾನ ಜಾತಿಗೆ ಸೇರಿಸಿದರು ಬಲಾತ್ಕಾರದಿಂದ ಚಾಕುವನ್ನು ತೆಗೆದು ಹೊಡೆಯುತ್ತೇವೆಂದು ಹೆದರಿಸಿ ಹುಬ್ಬು ಮುಡಿಸಿದರು ಹೊಸ ಸೀರೆ ಉಡಿಸಿದರು ಸಲಾಮ ಎಂಬುವನಿಗೆ ಕೊಟ್ಟು ನಿಖಾ ಮಾಡಿದರು ಸೇಟ ಸಾಬರ ಹೆಂಡತಿ ಒಂದು ಕೋಣೆಯಲ್ಲಿ ಕೂಡಿದರು ಸಲಾಮನು ಬಂದು ನನ್ನನ್ನು ಹೆದರಿಸಿ, ನನ್ನ ಮೇಲೆ ಅತ್ಯಾಚಾರವನ್ನು ನಡೆಸಿದ ಆ ಮೇಲೆ ಏನೇನೋ ಹೇಳಿ ಬರೆಸಿಕೊಂಡರು ಆ ಮೇಲೆ ಪೋಲೀಸರು ಕರೆತಂದು ತಂದೆ ಮನೆಗೆ ಬಿಟ್ಟರು

ಅಪರಾಧಿಗಳ ಹೇಳಿಕೆ

೧-೨ ನೇ ಅಪರಾಧಿಗಳು- ನಮಗೇನೂ ಗೊತ್ತಿಲ್ಲನಾವು ಬಂತಾಮಣಿಯಲ್ಲಿ ಇರಲೇ ಇಲ್ಲ

೩ ನೇ ಅಪರಾಧಿ ಬಾಬಾಸಾಬರ ಹೇಳಿಕೆ

ನಾನು ಊರಿನಲ್ಲಿರಲಿಲ್ಲ ಬುಧವಾರ ರಾತ್ರಿ ಬಂದೆ (ಸಲಾಮನು ಮದುವೆ ಆದು) ನನ್ನ ಜೊತೆಯಲ್ಲಿ ಬಂದ ಊರ ಬಾಗಿಲಿನಲ್ಲಿ ಜನಗಳ ಗುಂಪು ಸೇರಿತ್ತು ಹುಡಿಗಿ ಕೂತಿದ್ದಳು ಅಲ್ಲಿದ್ದ ಮುಸಲ್ಮಾನರು ಇವಳಿಗೆ ಮದುವೆ ಮಾಡಬೇಕೆಂದರು ನನಗೆ ಆ ಪಂಚಾಯತಿ ಬೇಡ ಅಂತಾ ಹೇಳಿ ಮಸೀತಿಗೆ ಹೋದೆ ನಾನು ಮನೆಗೆ ಬರುವಷ್ಟರಲ್ಲಿ ಮನೆಯಲ್ಲೆಲ್ಲಾ ಮದುವೆ ಸಂಭ್ರಮ ಹುಡುಗ ನಮ್ಮ ಸಲಾಂ ಹುಡುಗಿ ಮಹಲಕ್ಷ್ಮಮ್ಮ ಇಬ್ಬರು ಖುದ್ದಾ ಖುದ್ದು ರಾಜೆಯಿಂದ ಮದುವೆಗೆ ಸಿದ್ಧರಾದರು ಎಲ್ಲರೂ ಒಪ್ಪಿದರು ಏನಾದರೂ ಸರಕಾರದ ತಂಟೆ ಬರುತ್ತದೆಂದು ಎಲ್ಲಾ ಪಂಚಾಯತಿ ಫೈಸಲಾಗಿದೆಯೆಂದರು ಹುಡುಗಿಯು ೨೦ ವರ್ಷದವಳೆಂದಳು ಮದುವೆ ಆಗಿಹೋಯಿತು ಇನಸ್ಪೆಕ್ಟರು ಹುಡುಗಿಯನ್ನು ಕಳುಹಿಸಬೇಕೆಂದು ಬಂದರೆ ಕರೆದುಕೊಂಡು ಹೋಗಿ ಎಂದೆ ಅವರಿಗೂ ಸಕ್ಕರೆ, ಬಾದಾಮಿ, ಖಾರಾ ಶರಾಯಿ ಕೊಟ್ಟು ಕಳಿಸಿದೆವು

ಸಲಾಮನ ಹೇಳಿಕೆ

ಮುಸಲ್ಮಾನರೆಲ್ಲರೂ ಈ ಹುಡುಗಿಯನ್ನು ಮದುವೆಯಾಗಬೇಕೆಂದು ಹೇಳಿದರು ನಾನು ಒಪ್ಪಲಿಲ್ಲ ಎಲ್ಲರೂ ನನ್ನನ್ನು ಒಪ್ಪಿಸಿದರು ಹುಡುಗಿಯು ನನ್ನನ್ನು ಹರ್ಷದಿಂದ ವರಿಸಿದಳು ರಾಜೆಯಿಂದ ನನ್ನನ್ನು ಮದುವೆಯಾದಳು ಸಂತೋಷದಿಂದ ನನ್ನೊಡನೆ ೪ ದಿವಸ ಬಾಳಿದಳು ಪೋಲೀಸರು ಕರೆದುಕೊಂಡು ಹೊರಟು ಹೋದರು

ಮ್ಯಾಜಿಸ್ಟ್ರೇಟರ ತೀರ್ಪು.

ಮ್ಯಾಜಿಸ್ಟ್ರೇಟರ ತೀರ್ಪು ಈ ರೀತಿ ಇದೆ —

ಹುಡುಗಿಯ ವಯಸ್ಸು ೧೩ಕ್ಕಿಂತ ಕಡಿಮೆಯಾಗಿದೆ ಎಂದು ಸ್ಕೂಲು ರಿಜಿಸ್ಟರಿನಿಂದಲೂ ಲೇಡಿ ಡಾಕ್ಟರರ ಸಾಕ್ಷ್ಯದಿಂದಲೂ ರುಜುವಾತಾಗಿದೆ ಅವಳು ಮೈನರೆಂಬುದು ರುಜುವಾತಾಗಿದೆ ನಮಗೆ ತಿರುಗಿ ಬರಬೇಕೆಂಬ ಉದ್ದೇಶ್ಯದಿಂದ ಮನೆ ಬಿಟ್ಟು ಹೊರಟವಳಲ್ಲ ಅವಳು ಸ್ವತಂತ್ರ ಜೀವನ ಮಾಡಬೇಕೆಂಬ ಉದ್ದೇಶ್ಯದಿಂದ ಹೊರಟಿದಳು ಆದ್ದರಿಂದ ಕಿಡ್ನ್ಯಾಪಿಂಗ್ (ಅಪಹಾರದ) ಅಪರಾಧವು ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ.

ಬಲಾತ್ಕಾರದ [ಅಬ್ಡಕ್ಷನ್] ಬಗ್ಗೆ ಪೋಲೀಸ ಇನಸ್ಪೆಕ್ಟರರ ನಡವಳಿಕೆಗಳನ್ನು ಕ್ಷಮಿಸುವುದು ಅಸಾಧ್ಯ ಆತನೇ ಜವಾಬ್ದಾರಿ ಹುಡುಗಿಯು ತಂದೆ ಮನೆ ಬಿಟ್ಟು ಹೋಗುತ್ತಿದ್ದಾಗ ದಾರಿಯಲ್ಲಿ ಮುಸಲ್ಮಾನರು ಅವಳಿಗೆ ಏನನ್ನೋ ಕುಡಿಸಿದರು ಅವಳನ್ನು ಮುಸಲ್ಮಾನ ಜಾತಿಗೆ ಸೇರಿಸಬೇಕೆಂದು ಅವಳನ್ನು ಬಲಾತ್ಕರಿಸಿದರು. ಅವಳನ್ನು ಮುಸಲ್ಮಾನ ಜಾತಿಗೆ ಸೇರಿಸಿಕೊಂಡು ಅವಳನ್ನ ನಾಲ್ಕನೇ ಅಪರಾಧಿ [ಸಲಾಮನಿಗೆ] ಕೊಟ್ಟು ಮದುವೆ ಮಾಡಿದರು ಎಲ್ಲವನ್ನೂ ಬಲಾತ್ಕಾರದಿಂದ ಮಾಡಿದರೆಂದು ಹುಡುಗಿಯು ಹೇಳುತ್ತಾಳೆ ಆದರೆ ಎಲ್ಲವನ್ನೂ ಅವಳ ಖುದ್ದ ರಾಜಿಯಿಂದ ಮಾಡಿಸಿದರೆಂದು ಅಪರಾಧಿಗಳು ಹೇಳುತ್ತಾರೆ ಏನಾದರ ಇರಲಿ ಅವಳು ಮೈನರ್ ಹುಡುಗಿ ಅವಳ ಒಪ್ಪಿಗೆಯು ಒಪ್ಪಿಗೆಯಲ್ಲ ೧-೨ನೇ ಅಪರಾಧಿಗಳನ್ನು ೩೬೬ನೇ ಸೆಕ್ಷನ್ ಪ್ರಕಾರ ಸೆಶನ್ಸ ಕಮ್ಮಿಟ್ ಮಾಡಿದ್ದೇವೆ

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ ದಂತಮಂಜನ.

ಈ ಕಂಪನಿಯು ಬಳ್ಳಾರಿಯಿಂದ ಗದಗಿಗೆ ಬಂದಿ ಎತ್ತಿತೆ ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು



ಡಾ ಕುಲಕರ್ಣೀಯ
ರಿಡೊರೋಟರಿ ಮುಂ
ನಂಬ
ಬಾಟ್ಲಿ ಕಿ ೧—೩—೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಗರಗು, ಬಿಳೀಪರಗು, ಕೆಂಪು ಪರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರು, ವಿಕೆ ಬೆನ್ನು ಹಿಡಿಯೋಣ ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತದೆ ಬಾಣಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ

ಬಿ ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡುಯವರ

ಮೇಹಸಂಜೀವನೀ ಯಣ್ಣೆ

ಪತಿವ್ರತೆಯಾದ ತನ್ನ ಹೆಂಡತಿಯಲ್ಲಿಯೇ ಅತಿ ಸಂಭೋಗ ಮಾಡುವದರಿಂದ ಅನರ್ಥಕಾರಿಯಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟ ಸ್ತ್ರೀಯರಲ್ಲಿ ತಮ್ಮ ಪ್ರಾಯದಿಂದ ಅನೋಘ ವಸ್ತುವನ್ನು ದಾರಿಯಲ್ಲಿ ಹಾಳುಮಾಡಿಕೊಂಡು—ಮೇಹವ್ರಣ, ಬಿಳುಪು, ಭಗಂದರ, ತೊಡೆವಾಳ, ಮುಸುಕು, ಬಾಕಿ ಪರಮ, ಪವಿತ್ರ ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ನಿರಂತರವೂ ಬಾಧೆಪಡುತ್ತಿರುವ ನಮ್ಮ ದೇಶೀಯರಾದ ಜನಾಂಗಕ್ಕೆ ಈ ಔಷಧವು ಅಮೃತ ಕಲಶವಿದ್ದಂತೆ ನವಜೀವನವನ್ನೇ ಕಲ್ಪಿಸತಕ್ಕದ್ದಾಗಿರುವದು ತಕ್ಕ ಔಷಧ ಬಳಸದಿದ್ದರೆ ದೇಹಕ್ಕಾವರಿಸಿರುವ ಮೇಹರೋಗವು ತಲೆತಲಾಂತರಗಳ ವರೆಗೂ ಹಬ್ಬುತ್ತಾ ತನ್ನ ಕಾರ್ಯವನ್ನು ಆ ವಂಶದಲ್ಲಿ ನೆಲೆಗೊಳಿಸುವದೆಂಬುದೇ ವೈದ್ಯಶಾಸ್ತ್ರಜ್ಞರ ಅಭಿಪ್ರಾಯವಾಗಿದೆ ಈ "ಮೇಹಸಂಜೀವನಿ ಯಣ್ಣೆ"ಯ ಸೇವನೆಯಿಂದ ಸ್ತ್ರೀಪುರುಷರ ಸಂಭವಿಸುವ— ಬಿಳುಪು, ಕೆಂಪು, ಹಸರು ಮುಂತಾದ ೧೮ ವಿಧ ಪ್ರಮೇಹರೋಗಗಳು, ಉರಿಮೂತ್ರ, ಮೂತ್ರಕುಚ್ಛ್ರ, ಮೇಹಚಳುಕು, ಮೇಹಗಂಟುಗಳು, ನಾಭೀವ್ರಣ, ಮೇಹವಾಯು, ತೊಡೆಬಾಳ, ಭಗಂದರ, ಪವಿತ್ರ ಮುಂತಾದ ಬಾಧ್ಯಗಳು ಬುಡದೊಂದಿಗೆ ನಾಶವಾಗುವದಲ್ಲದೆ, ಈ ಯಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಪ್ರಾಪ್ತವಾಗುವ ಅಸ್ರಾವ ಋತುವಾಗುವಿಕೆ ತುರಿಕೆ, ಪ್ರದರ ಮುಂತಾದ ರೋಗಗಳು ನಿವಾರಣವಾಗುವವು ಕ್ರಯ ಶೀಸೆ ೧ಕೆ ೨—೦—೦

ಯೋಗ್ಯತಾಪತ್ರಗಳು— (೧) ನಿಮ್ಮ ಮೇಹಸಂಜೀವನೀ ಯಣ್ಣೆಯನ್ನು ತರಿಸಿ ಉಪಯೋಗಿಸಿ ನೋಡಿದಲ್ಲಿ ತುಂಬಾ ಪ್ರಯೋಜನವು ಕಂಡುಬಂದದ್ದರಿಂದ ಈ ಯಣ್ಣೆಯನ್ನು ನನ್ನ ವೈದ್ಯಶಾಲೆಯಲ್ಲಿ ಹೆಚ್ಚು ಖರ್ಚಾದೀತೆಂದು ಯೋಚಿಸುವೆನು ಮ॥ ರಾ॥ ಕೆ ಎಸ್ ಗೋವಿಂದಶಾಸ್ತ್ರಿ, ಆಯುರ್ವೇದ ಭೂಷಣ ಆರೋಗ್ಯಾಶ್ರಮ, ಕೊಡಿಯಾಲ್‌ಬೈಲ ಪೋಸ್ಟ್, ಮಂಗಳೂರು (೨) ನಿಮ್ಮ ಮೇಹಸಂಜೀವನೀ ಯಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಿಗಳ ಕೃತಜ್ಞತೆಗೆ ಪಾತ್ರನಾಗಿರುವೆನು ಮ॥ ರಾ॥ ಉಗ್ಗಪ್ಪಕೋಡಿ ಈಶ್ವರಭಟ್ಟ ವೈದ್ಯ, ಕಿಲಿಂಜಗ್ರಾಮ, ವಿಟಲ್‌ಪೋಸ್ಟ್, ದಕ್ಷಿಣ ಕನ್ನಡ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು,
ಆಂಗ್ಲೋ ಭಾರತೀ ವೈದ್ಯಶಾಲಾ
೬೯೧ ಹಲಸೂರಪೇಟೆ, ಬೆಂಗಳೂರು ಸಿಟಿ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ನಾಗಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜೀರ್ಣ ಅರ್ಧ ಕಿಮ್ಮತ್ತು ಗಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಡಜನಿಗೆ ಭರಪೂರ ಕಮೀಶನ್ ಕಿಮ್ಮತ್ತು ೧ಕೆ ೦—೦ ಅಂಚೆ ವೆಚ್ಚ ಬೇರೆ

ಮ್ಯಾನೇಜ ರಾಘವ ಫಾರ್ಮಸಿ ಗೋಕಾಕ ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦—೬—೬	೦ ೧೩ ೦
೩ ತಿಂಗಳಿಗೆ	೧—೪—೦	೨—೨ ೦
೬ ತಿಂಗಳಿಗೆ	೨—೭—೦	೫—೦—೦
ವರ್ಷಕ್ಕೆ	೦—೫—೦	೯—೦—೦

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪— ೦—೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ

ಶಹಾಪುರ ಪೇಟ ಗದಗ

ಜನಪದ ಹಿತವನ್ನು ಸಾಧಿಸುವ ಪ್ರಮುಖ ರಾಷ್ಟ್ರೀಯ ಸಚಿತ್ರ ವಾರಪತ್ರಿಕೆ

'ಅರುಣೋದಯ'

ಸಂಪಾದಕರು ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ ಎಲ್‌ಎಲ್ ಬಿ

ವಾ ಚ ೬—೦—೦ ವ ೮ ೩—೧—೦ ವ್ಹಿ ಪಿ

ಇದರಲ್ಲಿ ಸುಪ್ರಸಿದ್ಧ ವಿದ್ವಾಂಸ ಲೇಖಕ ವಿವಿಧ ವಿಷಯಗಳ ಮೇಲೆ ವಿಚಾರ ಪರಿಪ್ಲುತವಾದ ಲೇಖನಗಳು ಬರುವವಲ್ಲದೆ ದೇಶವಿದೇಶಗಳ ಮಹತ್ವದ ಸಂಗತಿಗಳು ಪ್ರತಿವಾರದಲ್ಲಿಯೂ ಕೊಡಲ್ಪಡುವವು ಉದ್ಬೋಧಕವಾದ ಸಣ್ಣ ಸಣ್ಣ ಕಥೆಗಳೂ ರಸಭರಿತವಾದ ಕವಿತೆಗಳೂ ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಸೃಷ್ಟಿಚಮತ್ಕಾರಗಳೂ ಶಾಸ್ತ್ರೀಯ ಶೋಧಗಳೂ ಕಾಲಕಾಲಕ್ಕೆ ಕೊಡಲ್ಪಡುವವು. ಇಡೀ ಕರ್ನಾಟಕದಲ್ಲಿ ಇದರ ಪ್ರಚಾರವಿರುವದರಿಂದ ವ್ಯಾಪಾರಸ್ಥರಿಗೆ ಪ್ರಚಾರಕ್ಕೆ ಉತ್ತಮ ಸಾಧನ ಕಾಯಮ ಜಾಹೀರಾತದಾರರಿಗೆ ವಿಶೇಷ ಸವಲತ್ತು ದೊರೆಯುವದು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ಕೇಳಿಕೊಳ್ಳಬೇಕು

ಮ್ಯಾನೇಜರ

ಅರುಣೋದಯ' ಬೆಳಗಾವ

The Madrs and Southern maratha Railway Company Ltd.

(Incorporated in England)

Notice

The running of the excursion special train from Hubli on the 22nd instant has been cancelled as Messrs Gauri Shankar Excursion Special Train Co , Hubli are unable to collect the passengers in time.

HUBLI
17-10 1933

R E Nunn
Dist Trans Supdt Traffic

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ರಿ. ನಂ. ಬಿ. ೨೭೬೮ — यथत् परवशं दुखं । यथदात्मवशं सुखम्॥मनु — ನಿತ್ಯ ಪತ್ರ, ಬೆಲೆ ೩ ಪೈ

ಇನಸ್ಯುರೆನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುರೆನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯುರೆನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:—ಆಲೂರ ವೆಂಕಟರಾಯರು.
ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಸಿದ್ಧಪಡಿಸಲ್ಪಡುವದು

ವರ್ಷ ೧೦] ಧಾರವಾಡ— ಮಂಗಳವಾರ ಕಾರ್ತೀಕ ಶುದ್ಧ ೬ ಶಕೆ ೧೮೫೫ ತಾ॥ ೨೪-೧೦-೩೩ [ಸಂಚಿಕೆ ೧೫೩

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ — ದರದಲ್ಲಿ ಸೋವಿ

ನ್ಯೂ ಓರಿಯಂಟೆಲ್ ಕಂ.
" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ನೆಗಡಿ, ಕೆಮ್ಮು, ಕಿವಿ ಸೋರು..., ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ. ಟೋಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗು..., ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎರಡು ನಕಾಶೆಗಳಿರುವವು. ಬೆಲೆ—೦ ೬-೬ ಮಾತ್ರ; ಅಂಚೆವೆಚ್ಚ ಬೇರೆ ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ॥ ೨೫-೮-೩೩ — ಕೃಷ್ಣರಾವ ಅಂಕಲಿಗಿ, ಮ್ಯಾನೇಜಿಂಗ ಡಾಯರೆಕ್ಟರ

[I]N THE HIGH COURT OF JUDICATURE AT BOMBAY

[ ] ORDINARY ORIGINAL CIVIL JURISDICTION

In the matter of the Indian Companies' Act VII of 1913

And

In the matter of the Karnatak Industrial Bank Limited, a Joint [Sto]ck Company incorporated under the Indian Companies' Act VII of 1913 [an]d having its registered office at No 1761 Gandhi Chowk, Dharwar

By an order made by the High Court of Judicature at Bombay in [the] above matter dated the 17th day of October 1933 on the petition of [the] Dharwar Bank Limited it was ordered that the Karnatak Industrial [Ban]k Limited be wound up by the court under the provisions of the Indian [Com]panies' Act, 1913. And it was further ordered that all subsequent [pro]ceedings in the winding up be had in the District Court at Dharwar [wi]th liberty to the said District court to appoint an Official Liquidator for [th]e purpose of conducting the proceedings in the winding up

Dated this 17th day of October 1933.

Hibara & Co.

Attorneys for the Dharwar Bank Limited.

ಶ್ರೀ. ಕೆಂಪಣ್ಣನವರ ಅಲಿಪ್ತತೆ.

ಗಾರ್ಡನ್ ಕಮಿಟಿಯಲ್ಲಿ ತಮ್ಮನ್ನು ಸೇರಿಸಿಕೊಳ್ಳಿರೆಂದು ತಾವು ಯಾರಿಗೂ ಹೇಳಲಿಕ್ಕೆ ಹೋಗಿಲ್ಲ ಹಾಗೂ ಯಾರಿಗೂ ಹೇಳಿಲ್ಲ ವೆಂದು ಶ್ರೀ. ಕೆಂಪಣ್ಣನವರು 'ಕನ್ನಡಿಗ'ನ ಪ್ರತಿನಿಧಿಗೆ ಹೇಳಿದ್ದಾರೆ ಆದರೆ ಇದರಿಂದ ಬಹು ಸಂಖ್ಯಾಕ ಪಂಗಡದ ಮಿ ಸೀರಜಾದೆ ಹಾಗೂ ಮಿ ಹನಸಿಯವರು ಶ್ರೀ. ಕೆಂಪಣ್ಣನವರನ್ನು ಗಾರ್ಡನ್ ಕಮಿಟಿಯಲ್ಲಿ ಸೇರಿಸಿಕೊಂಡದರ ಇಂಗಿತವು ಸ್ಪಷ್ಟವಾಗುವದಿಲ್ಲ ಈ ಸೇರ್ಪಡೆಯಾಗುವದರ ಮುಂಚೆ ಬಹು ಸಂಖ್ಯಾಕ ಸರದಾರ ಮಹಾಬೂಬ ಅಲೀಖಾನರ ಹಾಗೂ ಅಲ್ಪ ಸಂಖ್ಯಾಕರ ನಡುವೆ ರಾಜೀ ಸಂಧಾನಗಳು ನಡೆದಿದ್ದವೋ? ಇಲ್ಲವೊ? ಆ ಸಂಧಾನಗಳನ್ನು ನಡಿಸಲಿಕ್ಕೆ ಶ್ರೀ ಕೆಂಪಣ್ಣನವರು ತಮ್ಮ ಬಿನ್ ಶರತ ಸಮ್ಮತಿಯನ್ನು ಕೊಟ್ಟಿದ್ದರೋ ಇಲ್ಲವೋ? ಮುಂದೆ ಆ ಸಂಧಾನದ ಪರ್ಯವಸಾನವೆಂದು ಗಾರ್ಡನ್ ಕಮಿಟಿಯಲ್ಲಿ ಶ್ರೀ ಕೆಂಪಣ್ಣವರ ಸೇರ್ಪಡೆಯಾಯಿತೋ ಇಲ್ಲವೋ? ಈ ವಿಶಿಷ್ಟ ಪ್ರಶ್ನೆಗಳಿಗೆ ಶ್ರೀ ಕೆಂಪಣ್ಣವರ ಉತ್ತರಗಳೇನಿರುವವು?

ಹುಬ್ಬಳ್ಳಿ — ರಿಪೋರ್ಟರ್
ತಾ। ೨೨-೧೦-೩೩

ಗಾಂಧಿ ಜಯಂತಿಯೂ ಕರ್ನಾಟಕದಲ್ಲಿ ಖಾದೀ ಮಾರಾಟವೂ

ಸಪ್ಟಂಬರ ೨೦ ರಿಂದ ಅಕ್ಟೋಬರ ೮ರ ವರೆಗೆ ಗಾಂಧೀ ಜಯಂತಿಯ ಕಾಲಕ್ಕೆ ಚರಖಾ ಸಂಘದ ವತಿಯಿಂದ ಕರ್ನಾಟಕದಲ್ಲಿ ಒಟ್ಟು ೧೮೬೨೫ ರೂ ಗಳ ಖಾದೀ ಮಾರಾಟವಾಗಿದ್ದು ಅದರ ವಿವರ —

೧ ಬೆಂಗಳೂರು	೩೯೨೨	೯ ತುಮಕೂರ	೮೫೦
೨ ಹುಬ್ಬಳ್ಳಿ	೧೨೬೩	೧೦ ವಿಜಾಪುರ	೬೪೦
೩ ಧಾರವಾಡ	೧೨೫೦	೧೧ ಬಾಗಲಕೋಟೆ	೨೯೫
೪ ಹಾಸನ	೧೧೨೨	೧೨ ನಿಪ್ಪಾಣಿ	೫೬೦
೫ ಶಿವಮೊಗ್ಗೆ	೧೦೧೭	೧೩ ಹಾವೇರಿ	೫೫೫
೬ ಗದಗ	೧೦೨೮	೧೪ ದಾವಣಗೆರಿ	೪೦೨
೭ ಚಿಕ್ಕಮಗಳೂರ	೮೬೦	೧೫ ಸಿರಸಿ	೨೬೩
೮ ಬೆಳಗಾವಿ	೮೪೦	೧೬ ಮಂಗಳೂರು	೧೭೬

ಕರ್ನಾಟಕದ ಆರೋಗ್ಯ.

(ಅಕ್ಟೋಬರ ೭ರಿಂದ ೧೪)

ಸರಕಾರೀ ರಿಪೋರ್ಟದಿಂದ

ಪ್ಲೇಗು—	ಬಂದದ್ದು	ಸತ್ತದ್ದು
ವಿಜಾಪುರ ಜಿಲ್ಹೆ	೪೩೫	೩೦೫
ಬೆಳಗಾವಿ ಜಿಲ್ಹೆ	೪೪೪	೨೬೨
ಧಾರವಾಡ ಜಿಲ್ಹೆ	೨೯೨	೧೫೪
ಸೊಲ್ಲಾಪುರ ಜಿಲ್ಹೆ	೫೯	೨೯
ಕಾರವಾರ ಜಿಲ್ಹೆ	೨	೧

ಮಾರಿಕಾ ಬೇನೆಯಿಂದ ವಿಜಾಪುರ ಜಿಲ್ಹೆಯಲ್ಲಿ ೧೬ ಜನರೂ, ಸೊಲ್ಲಾಪುರದಲ್ಲಿ ೬ ಜನರೂ ಸತ್ತರು, ವಿಜಾಪುರ ಜಿಲ್ಹೆಯಲ್ಲಿ ४೧ ಜನರಿಗೂ ಸೊಲ್ಲಾಪುರ ಜಿಲ್ಹೆಯಲ್ಲಿ ೨ ಜನರಿಗೂ ಕಾಲರಾ ಅಂಟಿಗೊಂಡಿತ್ತು.

ವೈಲಿ ಬೇನೆಯು ಧಾರವಾಡ ಜಿಲ್ಹೆಯಲ್ಲಿ ೩೫ ಮಂದಿಗೆ ಅಂಟಿತ್ತು. ಇಬ್ಬರು ತೀರಿದರು ಕಾರವಾರ ಜಿಲ್ಹೆಯಲ್ಲಿ ೭ ಜನರಿಗೆ ಬಂದಿದೆ ಮುಂತಾಗಿ ವೇರೆಯಲ್ಲಿ ಇನ್‌ಫ್ಲುಯಂಝಾದಿಂದ ಓರ್ವನು ಸತ್ತನು

ಪ್ಲೇಗನಿವಾರಣೋಪಾಯ ಮತ್ತು ಧಾರವಾಡ ನಗರ ಸಭೆಯು.

[ಲೇಖಕ.- ಹಿತೈಷೀ ಧಾರವಾಡ]

ಧಾರವಾಡದಲ್ಲಿ ಪ್ಲೇಗು ಸಣ್ಣ ಪ್ರಮಾಣದಿಂದ ಸುರುವು ಆಗಿ ೭-೮ ತಿಂಗಳಾಗುತ್ತ ಬಂದಿದೆ ಇಲಿಗಳನ್ನು ಹಿಡಿಯಲಿಕ್ಕೆ ಬಲಿಗಳನ್ನು ಮುನಸಿಪಾಲಟಿಯವರು ಪೂರೈಸುತ್ತಿರುವರು. ಮೊದಲೇ ಸ್ವಚ್ಛ ವಿಸ್ತೃತ, ಆರೋಗ್ಯಕಾರಕ ವಿರಳ ವಂಥ ಶ್ರೀಮಂತರ ಮನೆಗಳಲ್ಲಿ ಸದರ ಬಲಿಗಳನ್ನು ಕೂಡುತ್ತ ಹೋದರೆ ಅದರ ಉಪಯೋಗವಾಗದು.

ಮಂಗಳವಾರ ಪೇಟೆಯಲ್ಲಿಯ ಕೆಲವು ದೂಷಿತ ಓಣಿಗಳಲ್ಲಿ, ಶುಕ್ರವಾರ ಪೇಟೆಯಲ್ಲಿ ಸಂಡಿಗೊಂಡ ಗಲ್ಲಿ ಮೂಲಿ ಮುಂಗೆ ಓಣಿಗಳಲ್ಲಿಯೂ ಇವುಗಳನ್ನು ಪೂರೈಸುವ ಏರ್ಪಾಟಾಗಬೇಕು

ಕಸಗೂಡಿಸುವರಿಗೆ ಪ್ರೋತ್ಸಾಹನವನ್ನಿತ್ತು ತಮ್ಮ ಕೆಲಸದಲ್ಲಿ ಹೆಚ್ಚು ದಕ್ಷರಾಗುವಂತೆ ಪ್ರೇರಿಸಬೇಕು

ಗಟಾರಗಳಲ್ಲಿಯ ನೀರು ಮಲೆತು ನಿಲ್ಲದಂತೆ ವ್ಯವಸ್ಥೆಯಾಗಬೇಕು. ಇಲಿಗಳು (ಪ್ಲೇಗ ವಾಹಕವೆಂದು ಕಂಡುಬಂದಕೂಡಲೇ) ಸಿಕ್ಕರೆ ಅವುಗಳನ್ನು ದೂರ ಪ್ರದೇಶದಲ್ಲಿ ಆಳವಾದ ತೆಗ್ಗಿನಲ್ಲಿ ಹುಗಿಯಬೇಕು

ಪರ ಊರಿನಿಂದ ದೂಷಿತ ಜನರು ಬರುತ್ತಿದರೆ, ಆ ಆ ಕುಟುಂಬದ ಸಂಬಂಧಿಕರು, ಅದರ ಬೇನೆಯು, ಎರಡನೆಯವರಿಗೆ ತಗಲದಂತೆ ಎಚ್ಚರ ಪಡಬೇಕು

ಮುನಸಿಪಾಲಟಿಯ ನೌಕರರು, ಆ ಆ ಸ್ಥಳಗಳಿಗೆ ಮೇಲಿಂದ ಮೇಲೆ ಭೆಟ್ಟಿಕೊಟ್ಟು, ಜನರ ಹಿತಾಹಿತವನ್ನು ಪರ್ಯಾಲೋಚಿಸಿ, ಅವರ ತಕರಾರುಗಳನ್ನು ನಿವಾರಿಸಲು ಮನವಿಟ್ಟು ಯತ್ನಿಸಬೇಕು.

ಜನರು ತಮ್ಮನ್ನು ಆರಿಸಿಕೊಟ್ಟದ್ದರಿಂದ ಅವರಿಗೆ ಕೃತಜ್ಞರಾಗಿ ಜನಹಿತ ಕಾರ್ಯವನ್ನೆಸಗಬೇಕು ಕರಪಟ್ಟಿ ತೆತ್ತಿ ತ್ರಸ್ತವಾದ ಜನತೆಯು ಕೂಡಿಟ್ಟ ಹಣವನ್ನು ಭವ್ಯವಾದ ನಗರ ಮಂದಿರ ಕಟ್ಟಿಸಲಿಕ್ಕೆ ವ್ಯಯಮಾಡಿದಂತೆ, ದೊಡ್ಡ ಪಗಾರವನ್ನು, ಅಯೋಗ್ಯ ಜನರಿಗೆ ಕೊಟ್ಟು " ಅವ್ಯಾಪಾರೇಷು ವ್ಯಾಪಾರವೆಂಬಂತೆ " ಆಚರಿಸಬಾರದೆಂದು, ಸೂಚಿಸುತ್ತೇನೆ. ಮೊದಲೇ ಬಡತನದಿಂದ ಬೆಂದು, ಕೊರಗಿ ಕಾಲನಿಗೆ ತುತ್ತಾಗುತ್ತಿರುವ ಜನಸಂಖ್ಯೆಯನ್ನು ಪ್ಲೇಗದ ಹಾವಳಿಯಿಂದ ಸಂರಕ್ಷಿಸಲಿಕ್ಕೆ ಮುನಸಿಪಾಲಟಿಯ ಸದಸ್ಯರು ಶೀಘ್ರ ಮುಂದೆ ಬರಬೇಕೆಂದು ಕೋರುತ್ತೇನೆ

ಕನ್ನಡಿಗ.

ಧಾರವಾಡ— ಮಂಗಳವಾರ ತಾರೀಖು ೨೪—೧೦—೧೯೩೩

ಹಿಂದೂ ಮುಸಲ್ಮಾನರ ಕರಾರೂ ಹಿಂದೂ ಮಹಾಸಭೆಯೂ.

ಈ ವರ್ಷ ಅಜಮೀರದಲ್ಲಿ ೧೩—೧೦—೩೩ನೆಯ ದಿವಸದಿಂದ ಕೂಡಿದ ಹಿಂದೂ ಮಹಾಸಭೆಗೆ ಒಂದು ಬಗೆಯ ವಿಶೇಷವಾದ ಮಹತ್ವವಿತ್ತು. ಏಕೆಂದರೆ ಈ ಸಲ ಅಜಮೀರಿನಲ್ಲಿ ಆಗ ಆರ್ಯಸಮಾಜ ಸ್ಥಾಪಕರಾದ ದಯಾನಂದ ಸರಸ್ವತಿಯವರ ಅರ್ಧ ಶತಮಾನದ ಪುಣ್ಯತಿಥಿಯ ಮಹೋತ್ಸವವಿತ್ತು. ಅದರಿಂದ ಪಟ್ಟಣವು ಆರ್ಯ ಸಮಾಜದವರ [illegible] ಯು ಈ ಸಲದ ಹಿಂದೂ ಮಹಾಸಭೆಗೆ ಆರ್ಯ ಸಮಾಜದ ಪ್ರಮುಖ ಮುಖಂಡರಾದ ಭಾಯಿ ಪರಮಾನಂದರವರಂಥ ವರ್ಚಸ್ವಿಯುಳ್ಳ ಪುರುಷರು ಅಧ್ಯಕ್ಷರು ಆಗಿದ್ದರು. ಈ ಹಿಂದೂ ಸಭೆಯಲ್ಲಿ ಹಿಂದೂ ಜನರ ಹಿತಕ್ಕೆ ಅತ್ಯಂತ ಘಾತುಕವಾಗಿ ತೋರುತ್ತಿರುವ ಹಿಂದೂ ಮುಸಲ್ಮಾನರ ನಡುವಿನ ಒಪ್ಪಂದದ ಬಗ್ಗೆ ಚರ್ಚೆಯಾಗತಕ್ಕದ್ದಿತ್ತು. ಇವೆಲ್ಲ ಕಾರಣಗಳಿಂದ [illegible] ವಿಶೇಷ ಮಹತ್ವವು ಪ್ರಾಪ್ತವಾಗಿತ್ತು.

ಹಿಂದೂ ಮಹಾಸಭೆಯು ಸ್ಥಾಪನವಾಗಿ [illegible] ಯು ೧೯೧೫ನೆಯ ಸಭೆಯು ವಿಟಿಶ ರಾಜಕಾರಣದಲ್ಲಿ ಹಿಂದೂ [illegible] ನಡುವೆ ಕಲಹ ಹೆಚ್ಚುವ ಧೋರಣವನ್ನು ಬ್ರಿಟಿಶ ಸರಕಾರದವರು [illegible] ದಾಗ ಹಿಂದೂ ಜನರು ತಮ್ಮ ಹಿತವನ್ನು ಸಂರಕ್ಷಿಸಿಕೊಳ್ಳುವುದರ [illegible] ತೆಗೆದರು. ಅಂದಿನಿಂದ ಈ ಸಭೆಯು ಹಿಂದೂ ಜನರ ವಿಶೇಷ ಹಿತವನ್ನು ರಕ್ಷಿಸುವದಕ್ಕೆ ತನಗೆ ತಿಳಿದ ರೀತಿಯಲ್ಲಿ ಪ್ರಯತ್ನ ಮಾಡುತ್ತಿರುವದು. ರಾಷ್ಟ್ರೀಯ ಸಭೆಯು ಇಡೀ ಹಿಂದೀ ಜನರ ಹಿತ ಸಂಬಂಧವನ್ನು ಸಂರಕ್ಷಿಸುವ ಸಭೆಯು. ಹೀಗೆ ಅದು ಇಡೀ ಹಿಂದುಸ್ಥಾನದ ಹಿತವನ್ನು ಕಾಯ್ದುಕೊಳ್ಳುವಾಗ, ವಿಶಿಷ್ಟ ಜಾತಿಯ ಹಿತದ ಕಡೆಗೆ ಅಷ್ಟು ಲಕ್ಷ್ಯಕೊಡುವದಿಲ್ಲ. ಇದರಿಂದ, ಕೆಲವೊಮ್ಮೆ ವಿಶಿಷ್ಟ ಜಾತಿಗಳಿಗೆ ಅನ್ಯಾಯವಾಗುತ್ತದೆ. ಆದಕಾರಣ, ಹಿಂದೂ ಸಭೆ ಮುಸ್ಲೀಮಲೀಗದಂಥ ಜಾತಿವಿಶಿಷ್ಟ ಸಂಸ್ಥೆಗಳು ಆಯಾ ಪರಿಸ್ಥಿತಿಗನುಸರಿಸಿ ಕಾಂಗ್ರೆಸ್ಸಿಗೆ ನೇರ ಮೇಲೆ ಎಚ್ಚರಿಕೆಯನ್ನು ಕೊಡುತ್ತ ಬಂದಿವೆ. ಆದರೆ ಒಟ್ಟಿನ ಮೇಲೆ ರಾಷ್ಟ್ರೀಯ ಸಭೆಯು ಅದನ್ನು ದುರ್ಲಕ್ಷಿಸಿಯೇ ನಡೆಯುತ್ತ ಬಂದಿದೆ. ಈ ದುರ್ಲಕ್ಷ್ಯದ ಪರಮಾವಧಿಯು ರಾಜಕೀಯ ಕ್ಷೇತ್ರದಲ್ಲಿ ಬ್ರಿಟಿಶ ಸರಕಾರದವರು ಹಿಂದೂ ಮುಸಲ್ಮಾನರ ನಡುವೆ ಮಾಡಿದ ಒಪ್ಪಂದದ ಕರಾರು ಇರುತ್ತದೆ. ಇದಕ್ಕೆ ಮಹಾತ್ಮಾ ಗಾಂಧಿಯವರೂ ಸಮ್ಮತಿಯನ್ನು ಕೊಟ್ಟಿರುವುದರಿಂದ ಈಗ ಅದಕ್ಕೆ ಒಂದು ಬಗೆಯ ಸರ್ವಾನುಮತದ ಮುದ್ರೆಯು ಬಿದ್ದಂತಾಗಿದೆ. ಆದರೆ ಆ ಕರಾರಿನ ಮೂಲಕ ಮುಸಲ್ಮಾನರಿಗೆ ಪ್ರಮಾಣಕ್ಕಿಂತ ಅಧಿಕವಾಗಿ ಹಕ್ಕುಗಳು ದೊರೆತಿರುತ್ತವೆಂದೂ ಅದರಿಂದ ಕೊನೆಯವರೆಗೆ ಹಿಂದೂಗಳಿಗೆ ಅನ್ಯಾಯವಾಗಿರುತ್ತದೆಂದೂ ಹಿಂದೂ ಮಹಾಸಭೆಯ ಅಂಬೋಣ. ಆದರೆ, ರಾಷ್ಟ್ರೀಯ ಸಭೆಯ ವರ್ಚಸ್ಸಿನ ಮುಂದೆ ಈ ಹಿಂದೂ ಮಹಾಸಭೆಯ ವರ್ಚಸ್ಸು ಬೀಳತೊಲ್ಲದು. ಆದಕಾರಣ, ಹಿಂದೂ ಸಭೆಯವರ ಅಭಿಪ್ರಾಯವನ್ನು ಕೇಳದೆ, ರಾಷ್ಟ್ರವು ಆ ಕರಾರಿಗೆ ಒಪ್ಪಿಗೆಯನ್ನು ಕೊಟ್ಟುಬಿಟ್ಟಿದೆ. ಈಗ, ಹಿಂದೂ ಮಹಾಸಭೆಯವರು ಪುನಃ ಎಚ್ಚತ್ತು ಆ ಕರಾರನ್ನು ರದ್ದುಪಡಿಸಿಕೊಳ್ಳಲಿಕ್ಕೆ ಏನು ಮಾಡಬೇಕೆಂಬ ವಿವಂಚನೆಯಲ್ಲಿ ಬಿದ್ದಿರುವರು. ಅದಕ್ಕೆ ಯುರೋಪದಲ್ಲಿರುವ 'ಲೀಗ ಆಫ ನೇಶನ' ಅಂದರೆ ರಾಷ್ಟ್ರಸಂಘದ ಮುಂದೆ ಈ ಮಾತನ್ನು ಇಡಬೇಕೆಂದು ಹಿಂದೂ ಮಹಾಸಭೆಯವರಿಗೆ ಎನಿಸುತ್ತದೆ. ಮಹಾಯುದ್ಧದ ನಂತರ ರಾಷ್ಟ್ರಸಂಘದ ಮುಂದೆ ಯುರೋಪಖಂಡದ ಪ್ರತಿಯೊಂದು ರಾಷ್ಟ್ರದಲ್ಲಿರುವ ಅಲ್ಪಸಂಖ್ಯಾಕ ಜನರ ಹಿತವನ್ನು ಎಲ್ಲರೂ ಕೂಡಿ, ಸಂರಕ್ಷಿಸಬೇಕೆಂದು ಗೊತ್ತಾಯಿತು. ಆಗ ಅಲ್ಪಸಂಖ್ಯಾಕರೆಂದರೆ ಯಾರು, ಅವರ ಹಿತವನ್ನು ರಕ್ಷಿಸುವುದೆಂದರೇನು, ಇವೇ ಮುಂತಾದ ಪ್ರಶ್ನೆಗಳು ಚರ್ಚಿಸಲ್ಪಟ್ಟು ಕೆಲವೊಂದು ನಿಯಮಗಳು ಮಾಡಲ್ಪಟ್ಟಿರುತ್ತವೆ. ಯಾವ ರಾಷ್ಟ್ರದಲ್ಲಿಯೂ ಒಂದೇ ಕುಲದ ಅಥವಾ ಒಂದೇ ಧರ್ಮದ ಅಥವಾ ಒಂದೇ ಭಾಷೆಯ ನಾಡುತ ಜನರು ಇರುವುದಿಲ್ಲ. ಪ್ರತಿಯೊಂದು ರಾಷ್ಟ್ರದಲ್ಲಿ ಅನ್ಯಕುಲ (Race) ಅನ್ಯಧರ್ಮ [Religion] ಅಥವಾ ಅನ್ಯಭಾಷೆಯ ಜನರು ಇದ್ದೇ ಇರುತ್ತಾರೆ. ಅಂಥವರು ಆ ರಾಷ್ಟ್ರದೊಳಗೆ ಶಕ್ಯವಾದ ಮಟ್ಟಿಗೆ ತಾದಾತ್ಮ್ಯವನ್ನು ಹೊಂದಬೇಕೆಂಬುದನ್ನು ಯುರೋಪಖಂಡದ ರಾಷ್ಟ್ರಗಳು ಈಗ ಸಿದ್ಧಾಂತವಾಗಿ ಇಟ್ಟುಕೊಂಡಿರುವವು. ಹೀಗೆ ಮನಸ್ಸಿನಿಂದ ಸರ್ವ ವಿಧದಿಂದಲೂ ತಾದಾತ್ಮ್ಯಹೊಂದಿದವರಿಗೆ ಮಾತ್ರ ವಿಶಿಷ್ಟ ಹಕ್ಕುಗಳು ದೊರೆಯುತ್ತವೆ. ತಮ್ಮ ಕುಲ ತಮ್ಮ ಧರ್ಮ ಮತ್ತು ತಮ್ಮ ಭಾಷೆ ಇವುಗಳನ್ನು ರಕ್ಷಿಸಿಕೊಳ್ಳುವ ಹಕ್ಕು ಪ್ರಾಪ್ತವಾಗಬೇಕಾದರೆ ಆ ಕುಲ, ಆ ಧರ್ಮ ಅಥವಾ ಆ ಭಾಷೆಯ ಜನರು ಇಡೀ ರಾಷ್ಟ್ರದ ಜನಸಂಖ್ಯೆಯ ಮಾನದಿಂದ ಕನಿಷ್ಠ ಪಕ್ಷಕ್ಕೆ ೧೦೦ಕ್ಕೆ ೨೦ ರಷ್ಟಾದರೂ ಇರಬೇಕೆಂದು ನಿಯಮವಿದೆ. ಈ ನಿಯಮವನ್ನು ಹಿಂದುಸ್ಥಾನಕ್ಕೆ ಹಚ್ಚಿದರೆ ಬ್ರಾಹ್ಮಣೇತರರಿಗಾಗಲಿ, ಅಂತ್ಯಜರಿಗಾಗಲಿ ಅಥವಾ ಶೀಖ ಜನರಿಗಾಗಲಿ ಯಾವ ವಿಶಿಷ್ಟವಾದ ಹಕ್ಕುಗಳು ಪ್ರಾಪ್ತವಾಗುವುದಿಲ್ಲ. ಅದೇ ಮೇರೆಗೆ ಕ್ರಿಶ್ಚಿಯನ್ನ ಪಾರ್ಶಿ ಮುಂತಾದವರಿಗೂ ಈ ಹಕ್ಕುಗಳು ಪ್ರಾಪ್ತವಾಗುವುದಿಲ್ಲ. ಮುಸಲ್ಮಾನರೊಬ್ಬರಿಗೆ ಮಾತ್ರವೇ ಪ್ರಾಪ್ತವಾಗುತ್ತವೆ. ಹೀಗೆ ಮುಸಲ್ಮಾನರಿಗೆ ವಿಶಿಷ್ಟ ಹಕ್ಕುಗಳನ್ನು ಕೊಡುವುದು ಉಚಿತವಾದಾಗ್ಯೂ, ಅದು ಪ್ರಮಾಣ ಮೀರಿರಬಾರದು. ಈಗ ಹಿಂದು ಮುಸಲ್ಮಾನರ ನಡುವಿನ ಕರಾರಿನಿಂದ ಮುಸಲ್ಮಾನರಿಗೆ ದೊರೆತ ರಾಜಕೀಯ ಹಕ್ಕುಗಳು ಪ್ರಮಾಣ ಮೀರಿರುವುದರಿಂದ ಅದನ್ನು ರದ್ದು ಪಡಿಸಿಕೊಳ್ಳುವುದಕ್ಕೆ ರಾಷ್ಟ್ರಸಂಘಕ್ಕೆ ಶರಣು ಹೋಗಬೇಕೆಂದು ಹಿಂದೂ ಸಭೆಯವರ ಅಂಬೋಣ.

ಹಿಂದು ಮುಸಲ್ಮಾನರ ನಡುವೆಯಾಗಲಿ ಸವರ್ಣ ಮತ್ತು ಅಸ್ಪೃಶ್ಯರ ನಡುವೆಯಾಗಲಿ ಇರುವ ಕರಾರು ಹಿಂದೂಗಳಿಗೆ ಅನ್ಯಾಯದವಿರುತ್ತವೆಂಬುದಕ್ಕೆ ವಿಲಪ್ರಾಯ ಸಂದೇಹವಿಲ್ಲ. ಈ ಜನರಿಗೆ ನಾವು ಹೆಚ್ಚಿಗೆ ರಾಜಕೀಯ ಹಕ್ಕುಗಳನ್ನು ಕೊಟ್ಟರೆ ಅವರು ಸ್ವರಾಜ್ಯಪ್ರಾಪ್ತಿಗೆ ಅನುಕೂಲರಾಗುತ್ತಾರೆಂಬ ಭಾವನೆಯೇ ಹೀಗೆ ಅವರಿಗೆ ಪ್ರಮಾಣ ಮೀರಿ ಹಕ್ಕುಗಳನ್ನು ಕೊಡಲಿಕ್ಕೆ ಮೂಲ ಕಾರಣವು. ಆದರೆ ಇದರಿಂದ ಅವರು ಸಂತುಷ್ಟರಾಗಿ ನಮಗೆ ಸಹಾಯ ಮಾಡುವರೆಂದು ನಾವು ಅಪೇಕ್ಷಿಸಬಾರದು. ಅವರು ಸರ್ವ ವಿಧದಲ್ಲಿಯೂ ಹಿಂದುಗಳೊಡನೆ ತನ ಯರಾದರೆ ನಮಗೂ ಬೇಕು. ಆದರೆ ಅದು ಸಾಧ್ಯವಿಲ್ಲ. ಹಕ್ಕುಗಳನ್ನು ತೆಗೆದುಕೊಂಡು ಪುನಃ ಅವರು ಅಲಿಪ್ತರಾಗಿ ಉಳಿಯುವ ಸಂಭವವೇ ಹೆಚ್ಚು. ಹೀಗಿದ್ದರೂ ಹಿಂದೂ ಮಹಾಸಭೆಯವರು ರಾಷ್ಟ್ರಸಂಘದ ಕಡೆಗೆ ಧಾವಿಸುವುದು ಮಾತ್ರ ನಮಗೆ ಸರಿಯಾಗಿ ತೋರುವುದಿಲ್ಲ. ಅದರಿಂದ ಇಷ್ಟಕಾರ್ಯವು ಕೈಗೂಡಲಾರದು. ನಾವು ನಮ್ಮೊಳಗೇ ಈ ಸಮಸ್ಯೆಯನ್ನು ಬಿಡಿಸಿಕೊಳ್ಳಬೇಕು.

ಇಹವೃತ್ತ

ಹವೆ — ಬೆಳಿಗ್ಗೆ ಮುಗಿಲು ಮೋಡದಿಂದ ಕೂಡಿದ್ದು ಮಧ್ಯಾಹ್ನಕ್ಕೆ ಬಿಸಿಲು ಬೀಳುವದು. ಈ ವರೆಗೆ ವಿಶೇಷ ಬೇಸಿಗೆಯಿಲ್ಲ.

ಉಪನ್ಯಾಸ— ವಿದ್ಯಾವರ್ಧಕ ಸಂಘದಲ್ಲಿ ಮೊನ್ನೆ ಪ್ರೊ. ಗೋಕಾಕ ಇವರ ಅಧ್ಯಕ್ಷತೆಯಲ್ಲಿ ಶ್ರೀ ಸಾಲಿ ರಾಮಚಂದ್ರರಾಯರು ಮುದ್ದಣ್ಣ ಕವಿಯ ಬಗ್ಗೆ ಉಪನ್ಯಾಸ ಮಾಡಿದರು. ಶ್ರೀ ಪಂಚೆ ಮಂಗೇಶರಾಯರು ಮುದ್ದಣ್ಣಕವಿಯ ಹೊಸತನ ಹಾಸ್ಯ ಇವುಗಳನ್ನು ಕುರಿತ ಅನೇಕ ಉದಾಹರಣೆ ಕೊಟ್ಟು ಮಾತನಾಡಿದರು.

ನಿನ್ನಿನ ದಿವಸ ಶ್ರೀ ಸಾಲಿಯವರ ವ್ಯಾಖ್ಯಾನವೇ ಮುಂದುವರಿದು ಕೊನೆಗಂಡಿತು. ಆದಿಪಂಪನ ಜಯಂತಿಯು ಬಗ್ಗೆ ಪ್ರೊ. ಸಾಸನೂರರೂ ಪ್ರೊ. ಜಹಾಗೀರದಾರರೂ ಮಾತನಾಡಿದರು.

ಬಳ್ಳಾರಿ ಜಿಲ್ಲೆಯಲ್ಲಿ ಹರಿಜನ ಕಾರ್ಯ

ಶ್ರೀ ವಿವೇಕಾನಂದ ಹರಿಜನ ಶಾಲೆಯ ಪ್ರಾರಂಭೋತ್ಸವ

ಬಳ್ಳಾರಿ ಜಿಲ್ಲಾ ಹರಿಜನ ಸೇವಾ ಸಂಘದವರ ಆಶ್ರಯದಲ್ಲಿ ಶುಕ್ರವಾರ ತಾ೨೦-೧೦-೩೩ ಸಾಯಂಕಾಲ ಹರಿಜನ ಮಕ್ಕಳಿಗಾಗಿ ಬಾಣಗೇರಿ ಹರಿಜನ ದೇವಾಲಯದಲ್ಲಿ ಒಂದು ಪ್ರಾಥಮಿಕ ಶಾಲೆಯು ಶ್ರೀಮಾನ್ ವಸುಪಾಲಪ್ಪನವರಿಂದ ಪ್ರಾರಂಭವಾಯಿತು. ಊರಿನ ಕೆಲ ಪ್ರಮುಖರೂ, ಹರಿಜನ ಕ್ಷೇಮಾಸಕ್ತಿಯುಳ್ಳ ಕೆಲವರೂ ನೆರೆದಿದ್ದರು. ಹರಿಜನ ಮಕ್ಕಳು ಸ್ನಾನ ಮಾಡಿ ಶುಭ್ರ ವಸ್ತ್ರಗಳನ್ನು ಧರಿಸಿದ್ದರು. ಪೂಜೆಯಾದ ಮೇಲೆ ಎಲ್ಲಾ ಮಕ್ಕಳೂ ಅಕ್ಷರಾಭ್ಯಾಸವನ್ನು ಮಾಡಿದರು. ಹರಿಜನ ಸೇವಾ ಸಂಘದ ಕಾರ್ಯದರ್ಶಿ ಶ್ರೀ ಕೇಶವರಾಯರು ಮಕ್ಕಳಿಗೆ ಸ್ಲೇಟು, ಬಳಪಗಳನ್ನು ಉಚಿತವಾಗಿ ಹಂಚಿದರು. ಜಿಲ್ಲೆಯ ಪ್ರಮುಖ ಕಾರ್ಯಕರ್ತರಲ್ಲೊಬ್ಬರಾದ ಶ್ರೀ ಸಿದ್ದಪ್ಪನವರು ಶಾಲೆಯನ್ನು ನಡೆಸಲೊಪ್ಪಿರುವರಲ್ಲದೆ, ತಾಲೂಕ ಹರಿಜನ ಸಂಘದ ಕಾರ್ಯದರ್ಶಿಗಳಾಗಿ ಅಸ್ಪೃಶ್ಯತಾ ನಿವಾರಣೆ ಹರಿಜನೋದ್ಧಾರದ [ಬ್ಗ್ಯ] ಕೆಲಸ ಮಾಡಲೊಪ್ಪಿರುವವರು ಎಲ್ಲಾ ಕೇರಿಗಳ ಹುಡುಗರನ್ನೂ ಒಂದೆಡೆಯಲ್ಲೇ ಸೇರಿಸಲು ಪ್ರಯತ್ನಗಳು ನಡೆದಿವೆ. ಹಗಲು ಕೂಲಿ ಕೆಲಸಕ್ಕೆ ಹೋಗುವ ಯುವಕರಿಗಾಗಿ ಒಂದು ರಾತ್ರಿ ಶಾಲೆಯು ನಡೆಯಲು ಏರ್ಪಾಟು ನಡೆದಿದೆ.

ಬೋರ್ಡು ಹೈಸ್ಕೂಲದಲ್ಲಿ ಹರಿಜನ ವಿದ್ಯಾರ್ಥಿಗಳು

ಈ ಸಲ ನಾಲ್ಕು ಜನ ವಿದ್ಯಾರ್ಥಿಗಳು ಹೈಸ್ಕೂಲಿಗೆ ದಾಖಲಾಗಿರುವರು. ಪರಸ್ಥಳದಿಂದ ಬಂದು ೪ ಮತ್ತು ೫ ಫಾರಂಗಳಲ್ಲಿ ಅಭ್ಯಸಿಸುವ ಇಬ್ಬರು ಹುಡುಗರು ನಿಸ್ಸಹಾಯರಾಗಿರುವರು. ಅವರ ಪೋಷಕರು ಕಾರ್ಯದರ್ಶಿಗಳನ್ನು ಕಂಡು ತಕ್ಕ ಸಹಾಯವನ್ನು ಬೇಡಿದರು. ಜಿಲ್ಲಾ ಬೋರ್ಡಿನವರು ಹರಿಜನರಿಗೆ ವಿದ್ಯಾಭ್ಯಾಸದ ಬಗ್ಗೆ ಶಾಲಾ ವೇತನಗಳನ್ನು ಈ ಒಳಗಾಗಿ ಮಾಫಿ ಮಾಡಿದ್ದಾರೆ. ಊಟ ಬಟ್ಟೆ ಇರಲಿಕ್ಕೆ ಸ್ಥಳ ಇವುಗಳಿಗೆ ತಕ್ಕ ಏರ್ಪಾಡನ್ನು ಮಾಡಬೇಕಾಗಿದೆ. ಶೀಘ್ರದಲ್ಲೇ ಆಸರೆ ದೊರೆಯಬಹುದೆಂಬ ನಿರೀಕ್ಷಣೆ ಇದೆ.

ಉಚಿತ ಔಷಧ ಸಹಾಯ

ಜಿಲ್ಲಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೇಶವರಾಯರು—ಮಲೇರಿಯಾ ಜ್ವರದಿಂದಲೂ ಕಜ್ಜಿ, ಹುಣ್ಣು ನಿಂದಲೂ ನರಳುತ್ತಿದ್ದ ಹರಿಜನರಿಗೆ ಔಷಧಗಳನ್ನು ಹಂಚಿದರು. ಈ ಊರಿನ ಪ್ರಮುಖ ಮುಖಂಡರೂ ಪ್ರಸಿದ್ಧ ಡಾಕ್ಟರೂ ಆದ ಶ್ರೀ ರಾವ ರಾಯರು ಹರಿಜನ ರೋಗಿಗಳನ್ನು ಉಚಿತವಾಗಿ ಶುಶ್ರೂಷೆ ಮಾಡಲು ಒಪ್ಪಿರುವುದು ಆನಂದದಾಯಕವಾದ ವಿಷಯ. ಶ್ರೀ ರಾಮರಾಯರು ಅಸ್ಪೃಶ್ಯತಾನಿವಾರಣೆ ಹರಿಜನೋದ್ಧಾರಗಳ ಬಗ್ಗೆ ಶ್ರದ್ಧೆ ವಹಿಸಿದ್ದು ತಾಲೂಕ ಹರಿಜನಸೇವಾ ಸಂಘದ ಉಪಾಧ್ಯಕ್ಷರಾಗಿದ್ದಾರೆ.

ಹರಿಜನ ಸೇವಾಸಂಘದ ಶಾಖೆ

ಅಖಿಲ ಭಾರತ ಹರಿಜನ ಸೇವಾ ಸಂಘದ ಕಾರ್ಯಭಾಗ ಉದ್ದೇಶಗಳನ್ನು ಸಾಗಿಸಲು ಬಳ್ಳಾರಿ ಜಿಲ್ಲಾ ಸಭೆಗೆ ಸಂಬಂಧಿಸಿದ ತಾಲೂಕ ಶಾಖೆಯು ಇಲ್ಲಿ ಸ್ಥಾಪಿತವಾಯಿತು. ಸುಮಾರು ೨೦ ವರ್ಷಗಳಿಂದಲೂ ಸಾರ್ವಜನಿಕ ಕಾರ್ಯದಲ್ಲಿ ತೊಡಗಿ ಕಳೆದ ಅನೇಕ ವರ್ಷಗಳಿಂದ ಜಿಲ್ಲಾ ಕಾಂಗ್ರೆಸ ಅಧ್ಯಕ್ಷರಾಗಿದ್ದ ಶ್ರೀ ವಸುಪಾಲಪ್ಪ ಇಜಾರಿ ಇವರೇ ತಾಲೂಕ ಸಮಿತಿ ಅಧ್ಯಕ್ಷರಿರಲು ಒಪ್ಪಿರುವರು. ಕಾರ್ಯಕಾರಿ ಸಮಿತಿಯಲ್ಲಿ ಹರಿಜನರಿರುವರು.

ಅಧ್ಯಕ್ಷ ಶ್ರೀ ವಸುಪಾಲಪ್ಪ ಇಜಾರಿ ಬಿ ಎ

ಉಪಾಧ್ಯಕ್ಷ ಶ್ರೀ ಡಾಕ್ಟರ ರಾಮರಾವ ಎಲ್ ಎಮ್ ಪಿ

ಕಾರ್ಯದರ್ಶಿ ಸಿದ್ದಪ್ಪ ಬೊಮ್ಮನಹಳ್ಳಿ

ಕಾರ್ಯಕಾರಿಣೀ ಸಮಿತಿ ೧ ಶ್ರೀ ವಿಜಯರಾವ ೨ ರಾಮಪ್ಪ ೩ ಶಂಕರಪ್ಪ ಬ್ಯಾಂಕರ್ ೪ ಎ. ಗೋಪಾಲ ಕೃಷ್ಣಾಚಾರ್ಯ

ಹುಬ್ಬಳ್ಳಿ ಪೇಟೆಯ ಧಾರಣಿ

(ಕೀವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ|| ೨೩ ಮಧ್ಯಾಹ್ನ ೧೨ ಗಂಟೆ)

ಜಯಧರ ಹತ್ತಿ	೧೦೩ ೧೦೪	ಜೋಳ	೩.೨೪|
ಅಪ್ಲಂಡ ,,	೧೦೩ ೧೦೪	ಗೋದಿ	೩|||೭
ವಿಜಾಪುರ ,,	೯೫ ೯೭	ಉದ್ದು	೬|||೬
ಸ್ಯಾಸ್ಯಾಸ ,,	೧೨೮—೧೨೦	ಕಡ್ಲಿ	[illegible]
ಶೇಂಗಾ ಅರಳಿ	೭೩-೭೪	ಕಡ್ಲಿ ಕಾಳು	[illegible]
ಹಪ್ಪಳ ಕಾಳು	೬೬ ೬೭	[illegible]	[illegible]
ಗಾಣದ ಅರಳಿ	೬೬-೬೭	ಹುರಳಿ	[illegible]
ಹೆಸರು ಕಾಳು	೯ ೧೩		
ಹಿಂಡಿ ಕಾಯಿ ಹೂ	೬||	ಹತ್ತಿಕಾಳು	[illegible]

ಬೆಳ್ಳಿ ಬಂಗಾರ

ಬಂಗಾರ	೩೧|||-	ಬೆಳ್ಳಿ

ದೇ. ವಿಠ್ಠಲಭಾಯಿ ಪಟೇಲರು ಸ್ವರ್ಗಸ್ಥರಾದರು.

"ಕನ್ನಡಿಗ" ನಿಗಾಗಿ ತರಿಸಿದ ಸ್ಪೆಶಲ್ ತಾರಿನ ಸುದ್ದಿಗಳು.

ಪಟೇಲರ ಬೇನೆ ಬೆಳೆಯುತ್ತಿದೆ

ಮುಂಬಯಿ ತಾ|| ೨೨— ಇಲ್ಲಿಯ ವಾಗ ಸಾಯಿಯವರಿಗೆ ದೇ ಸುಭಾಷಚಂದ್ರರಿಂದ ದೇ. ವಿಠ್ಠಲಭಾಯಿ ಪಟೇಲರ ಸ್ವಾಸ್ಥ್ಯದ ಬಗ್ಗೆ ತಂತಿ ಬಂದಿದ್ದು, ಅದು ಚಿಂತ್ಯವಾಗಿರುವದಾಗಿ ತಿಳಿಯುತ್ತದೆ.

[ಅ ಪ್ರ ತಂತಿ]

ಪಟೇಲರಿಗೆ ತೀರ ಅಸ್ವಸ್ಥ.

ಮುಂಬಯಿ ತಾ|| ೨೨ ದೇ ಪಟೇಲ ವಿಠ್ಠಲಭಾಯಿಯವರ ಅಶಕ್ತತೆ ಬೆಳೆಯುತ್ತಿದ್ದು ಅವರು ಗುಣ ಹೊಂದಾಗುವದು ಎಂಗ ವಾಕಡೋ ಎಂದು ಹೇಳುತ್ತದೆ. [ಅ ಪ್ರ ತಂತಿ]

ವಿಠ್ಠಲಭಾಯಿ ಪಟೇಲರು ಸ್ವರ್ಗಸ್ಥರಾದರು.

ಮುಂಬಯಿ ತಾ| ೨೩— ದೇ ವಿಠ್ಠಲ ಪಟೇಲರು ವ್ಹಿಯಾನ್ನಾದಲ್ಲಿ ಮಡಿದ ವಾರ್ತೆ ಬಂದೊಡನೆ, ಇಲ್ಲಿಯ ವ್ಯಾಪಾರದ ಸಂಸ್ಥೆಗಳು ತಮ್ಮ ವ್ಯವಹಾರ ನಿಲ್ಲಿಸಿದರು ಅಷ್ಟೇ ಅಲ್ಲ ಮುಂಬಯಿ ಚೆನಿವಾರ ಕಟ್ಟಿ, ಹತ್ತಿಬಜಾರ ಮುಂತಾದ ಪೇಟೆಗಳು ಕೂಡ ಮುಚ್ಚಲ್ಪಟ್ಟವು.

ಅ ಪ್ರ ತಂತಿ

ಸುಭಾಷ್ಚಂದ್ರರ ದುಃಖೋದ್ಗಾರ

ಮುಂಬಯಿ ತಾ|| ೨೩— ಅಸೋಸಿಯೇಟೆಡ್ ಪ್ರೆಸ್ಸಿನ ಸುದ್ದಿಗಾರನು ವ್ಹಿಯಾನ್ನಾದಲ್ಲಿ ಸ್ವಾಮಿ ಈ ಉದ್ದಿಶ್ಯವಾಗಿಯೇ ಕಾಣಲಿಕ್ಕೆ ಹೋದಾಗ ಅವರು ಅಂದದ್ದು:— ಶ್ರೀ ವ್ಹಿ. ಜೆ ಪಟೇಲರು ಮಡಿದದ್ದರಿಂದ ಹಿಂದುಸ್ಥಾನಕ್ಕೆ ಒಂದು ಮಹಾನ ಒಬ್ಬ ಹಿಂದ ಪುತ್ರನು ಕಳೋ ದಂತಾಯಿತು ಹಿಂದುಸ್ಥಾನಕ್ಕೆ ಬಹು ದಿವಗ ಳ ಉಪಯೋಗಬೀಳುವಂಥ ಅನೇಕ ಕಾರ್ಯಗಳು ಕಳೆದ ೧೦ ವರ್ಷಗಳಲ್ಲಿ ವಾಯು ವು.

ಅ ಪ್ರ ತಂತಿ

ಲೆಸ್ಲಾಯಿನ ದಿನಾಚರಣೆ.

ಮುಂಬಯಿ ತಾ|| ೨೩— ಇವತ್ತಿನ ದಿನಮಾನ ಡಾ. ಕೌಶಲಜಲ್ಲಿಯವರು ಮುಸಲ್ಮಾನರನ್ನು ಉದ್ದೇಶಿಸಿ ಪತ್ರಿಕೆ ತೆಗೆದಿದ್ದು, ಅದರ ಅವರು ಅನ್ನುವದೇನಂದರೆ ಪ ಲೆಸ್ಟಾಯಿನ ಅರಬರಿಗೆ ತಮ್ಮ ಸಹಾನುಭೂತಿಯನ್ನು ತೋರಿಸುವದರ ಬಗ್ಗೆ ೨೭ ನೇ ರಜಬದಿನ [ನವ್ಹಂಬರ ೧೬] ವನ್ನು ಸ್ಥಾನದಲ್ಲೆಲ್ಲ ಪೆಲೆಸ್ಟಾಯಿನ್ನ ದಿನವೆಂದು ಆಚರಣೆ ಮಾಡ ಬೇಕು. ಮತ್ತು ಅವತ್ತೇ ಎಲ್ಲ ಕಡೆಗೂ ಮೆರವಣಿಗೆ ಹಾಗೂ ನಿಷೇಧಪರ ಸಭೆಗಳಾಗಬೇಕು ಅಂದಿದ್ದಾರೆ. ಅ ಪ್ರ ತಂತಿ

ಕೃಷ್ಣಾದೇವಿಗೆ ಮಹಾತ್ಮರ ಉಡುಗರೆ.

ಅಲ್ಲಹಾಬಾದ ತಾ| ೨೧ - ಪಂ ಮೋತೀಲಾಲ ನೆಹರು ಅವರ ಮಗಳಾದ ಶ್ರೀ ಕೃಷ್ಣಾದೇವಿ ಅವರ ಮದುವೆಯ ಕಾಲದಲ್ಲಿ ಮಹಾತ್ಮಾ ಗಾಂಧಿಯವರು ಕೈನೂಲಿನಿಂದ ನೂತ ಎರಡು ಮಾಲೆಗಳ ಉಡುಗರೆಯಾಗಿ ಕಳಿಸಿ ವಧೂ-ವರರು ಅವುಗಳನ್ನು ಕೊರಳಲ್ಲಿ ಹಾಕಿಕೊಳ್ಳಬೇಕೆಂಬ ತಮ್ಮ ಅಪೇಕ್ಷೆಯನ್ನು ತಿಳಿಸಿದ್ದರು.

ಅ ಪ್ರ ತಂತಿ

ಮುಸ್ಲೀಮ ಸಂಘದ ಪರಿಷತ್ತು.

ಕಲಕತ್ತೆ ತಾ|| ೨೧— ಅಖಿಲ ಭಾರತ ಮುಸ್ಲೀಮ ಸಂಘದ ೨೩ ನೆಯ ಪರಿಷತ್ತು ಪೇಶಾವರದಲ್ಲಿ ಡ್ಯಾ ಅಬ್ದುಲ್ ಅಝೀಝ್ ಅಧ್ಯಕ್ಷತೆಯಲ್ಲಿ ನೆರೆಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಅನ್ನುವದು:— ನಮ್ಮ ಅಪೇಕ್ಷೆಗೆ ತಕ್ಕಂತೆ ಜಾತಿಯ ತೀರ್ಪು ಸಲ್ಲಿ ನಮಗೆ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿಲ್ಲವೆಂಬುದು ತಿಳಿದ ವಾತಾಗಿದ್ದರೂ ಮುಸಲ್ಮಾನರಾದ ನಾವು ಜಾತಿಯ ತೀರ್ಪಿನಲ್ಲಿಯ ಒಪ್ಪಂದಕ್ಕೆ ಒಪ್ಪಲಿಕ್ಕಬೇಕು ಯಾಕಂದರೆ, ನಮ್ಮ ಬೇಡಿಕೆಯು ನ್ಯಾಯ್ಯವಿರುವದೆಂದೂ ಮನಗಂಡ ಮುಖ್ಯ ಮಂತ್ರಿಗಳು ನಮಗೆ ಕೊಟ್ಟಿರುವ ನಿಶ್ಚಿತವಾದ ಆಶ್ವಾಸನಗಳಿಗನುಸಾರವಾಗಿ ಅವು ಅದರಲ್ಲಿ ಬರೆಯಲ್ಪಟ್ಟಿವೆ ಹಿಂದೂ-ಮುಸಲ್ಮಾನರಲ್ಲಿ ಐಕ್ಯವಾದರೆ, ಅವರವರ ಹಿತಾಹಿತಗಳು ಒಂದೇ ಸರದೊಳಗಿನ ಮಣಿಯಂತಾಗುವವು. ಆ ಮೇಲೆ ಸರಕಾರದವರು ಬೇಕಾದ ಸುಧಾರಣೆಗಳನ್ನು ಮಾಡಲಿ! ಅವುಗಳಿಂದೇನೂ ಪರಿಣಾಮವಾಗದು. (ಅ ಪ್ರ ತಂತಿ)

ಕಲಕತ್ತೆ ತಾ| ೨೨— ಅಖಿಲ ಭಾರತ ಮುಸ್ಲಿಮ ಸಂಘದ ಪರಿಷತ್ತು, ಇಂದು ಮುಗಿಯಿತು ಅನೇಕ ನಿರ್ಣಯಗಳಾದವು ಬಂಗಾಲದಲ್ಲಿ ನಡೆದ ಅತ್ಯಾಚಾರಗಳನ್ನು ಖಂಡಿಸಿ, ಅವುಗಳನ್ನು ಬೇರು ಸಹಿತ ಕಿತ್ತು ಹಾಕಲಿಕ್ಕೆ ಸರಕಾರದವರಿಗೆ ತಮ್ಮ ಬೆಂಬಲಕೊಟ್ಟರು ಹಿಂದೂ ಮಹಾಸಭೆಯವರು ಮಾತ್ರ ಜಾತೀಯ ತೀರ್ಪನ್ನು ಕೆದರಿ ತೆಗೆದು ಕೌನ್ಸಿಲ್ಲುಗಳಲ್ಲಿ ಮುಸಲ್ಮಾನರ ಪ್ರಾತಿನಿಧ್ಯವನ್ನು ಕಡಿಮೆ ಮಾಡಿರೆಂದು ಗುಣುಗುಟ್ಟಿದ್ದಕ್ಕಾಗಿ ಹೀಗಳೆದರು

ಅ ಪ್ರ ತಂತಿ

ಅಹಮ್ಮದಾಬಾದ ತಾ| ೨೧— ಅಸ್ಪೃಶ್ಯತಾ ನಿವಾರಣೆಯ ಗುಜರಾಥ ಶಾಖಾ ಸಭೆಯ ಸ್ಥಳವು ಮಹಾತ್ಮರ ಅಪೇಕ್ಷೆಯಂತೆ ಸಾಬರಮತಿ ಆಶ್ರಮಕ್ಕೆ ಬದಲಾಯಿಸಲಾಯಿತು.

ಅ ಪ್ರ ತಂತಿ

ನರಿಮನ್ನರ ಬಿಡುವು.

ವಿಜಾಪುರ ತಾ|| ೨೩— ಮುಂಬಯಿ ಕಾಂಗ್ರೆಸ ಕಮಿಟಿಯ ಮಾಜೀ ಅಧ್ಯಕ್ಷರಾದ ಕೆ ಎಫ್. ನರೀಮನ್ನರು ಇತ್ತ ಮುಂಚಿನ ಶಿಕ್ಷೆಯ ಅವಧಿಯು ಮುಗಿದದ್ದರಿಂದ ಇಲ್ಲಿಯ ಯರವಡೆ ತುರಂಗದಿಂದ ಬಿಡುಗಡೆ ಹೊಂದಿದರು ಇವತ್ತು ಸಂಜೆಗೆ ಮುಂಬಯಿಗೆ ಹೊರಡುವರು

ಅ ಪ್ರ ತಂತಿ

ಪ್ರಾಗತಿಕ ಪರಿಷತ್ತಿನ ನಿರ್ಣಯಗಳು.

ಅಲ್ಲಹಾಬಾದ ತಾ| ೨೩—ಸಂಯುಕ್ತ ಪ್ರಾಂತದ ಪ್ರಾಗತಿಕ ಪರಿಷತ್ತಿನಲ್ಲಾದ ನಿರ್ಣಯಗಳು—ಸರಕಾರದವರು ದಬ್ಬಾಳಿಕೆ ನಡೆಸಿದ್ದರಿಂದ ದೇಶದಲ್ಲಿ ಅಸಮಾಧಾನವುಂಟಾಗಿದೆ ಕಾಂಗ್ರೆಸದವರಾದರೂ ಇನ್ನು ಮುಂದೆ, ಸತ್ಯಾಗ್ರಹ ನಿಲ್ಲಿಸಬೇಕು. ಅದು ಎಲ್ಲ ತಂಗಡದವರ ಒಕ್ಕಟ್ಟಿಗೆ ಒಂದು ಅಡ್ಡಗಲ್ಲಾಗಿದೆ ಬಿಳಿಯ ಪತ್ರಿಕೆಯಲ್ಲಿಯ ಯೋಜನೆಗಳು ಎಲ್ಲರಿಗೂ ತುಂಬಾ ಅಸಮಾಧಾನಕರವಾಗಿವೆ ಅವೆಕೊಳಗೆ ಎಲ್ಲೆಲ್ಲಿಯೂ ಹಿಂದೂ ಜನರ ಯೋಗ್ಯತೆಯ ವಿಷಯದಲ್ಲಿ ಅಪನಂಬಿಗೆಯೇ ಕಂಡು ಬರುತ್ತದೆ ಆದರಿಂದ ಹಿಂದೂ ಜನರ ತೃಪ್ತಿಯಾಗುವದು ಒತ್ತಟ್ಟಿಗಿರಲಿ, ಅವರ ರಾಜಕೀಯ ಸ್ಥಿತಿಯೂ ಸುಧಾರಿಸದು (ಅ. ಪ್ರ. ತಂತಿ)

ಸಭೆಯನ್ನು ಮುಂದೂಡಿದರು.

ಅಮರೇಲಿ ತಾ|| ೨೩ ಕಾಠೇವಾಡ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಪ್ರೋ ಅಭ್ಯಂಕರ ಹಾಗೂ ಇತರ ಸ್ವಾಗತ ಸಮಿತಿಯ ಸಭಾಸದರು ವಿಚಾರಮಾಡಿ ಪರಿಷತ್ತಿನ ಸಭೆಯನ್ನು ೨೮-೨೯ ಅಕ್ಟೋಬರದಿಂದ ನವ್ಹಂಬರ ೧೧-೧೨ ತಾರೀಖುಗಳಿಗೆ [ಶನಿವಾರ ಸೋಮವಾರ] ಮುಂದುವರಿಸಿರುತ್ತಾರೆ ಅ ಪ್ರ ತಂತಿ

ಬಿಳೇಪತ್ರಿಕೆಯೋ ! ಬಿಳೇ ಹಾಳೆಯೋ!

ಅಲ್ಲಹಾಬಾದ ತಾ ೨೧— ಸಂಯುಕ್ತ ಪ್ರಾಂತದ ಪ್ರಾಗತಿಕರ ೮ನೇ ಪರಿಷತ್ತು ಈ ದಿನ ಮಧ್ಯಾನ್ಹ ಅಲ್ಲಹಾಬಾದ ಮೇಯೋ ಮಂದಿರದಲ್ಲಿ ನೆರೆಯಿತು. ಸ್ವಾಗತ ಸಂಘದ ಚೇರಮನ ರಾದ ಶ್ರೀ ಕೃಷ್ಣರಾಯರು. ಬಿಳಿಯ ಪತ್ರಿಕೆಯನ್ನು ಕುರಿತು ಟೀಕಿಸುವಾಗ ಅಂದದ್ದು- ಈಗಿನ ಬಿಳಿಯ ಪತ್ರಿಕೆಯಲ್ಲಿ ಬದಲಾವಣೆಯಾಗದಿದ್ದರೆ, ಪ್ರಾಗತಿಕರು ಒಪ್ಪುವದೆಂಥ ಮಾತು! ಈಗಿರುವಂತೆ ನೋಡಿದರೆ ಬಿಳಿಯ ಪತ್ರಿಕೆಯ ಯೋಜನೆಯು ಹಿಂದಿ ರಾಷ್ಟ್ರೀಯತ್ವಕ್ಕೆ ಜನರಿಗೆ ಆಡಳಿತದ ಅಧಿಕಾರ ಕೊಡದ, ಆಡಳಿತದ ವೆಚ್ಚವನ್ನೂ ದಂಡಿನ ವೆಚ್ಚವನ್ನೂ ಕಡಿಮೆ ಮಾಡದ, ಮತ್ತು ದೇಶದ ಆರ್ಥಿಕ, ನೈತಿಕ ಏಳಿಗೆಗೆ ಸಾಧಕವಾಗದಂಥ ಸುಧಾರಣೆಯು ಯಾವ ದೇಶಾಭಿಮಾನಿಯನ್ನೂ ತೃಪ್ತಿಗೊಳಿಸಲರಿಯದವು ಹೊಸ ರಾಜ್ಯ ಪದ್ಧತಿಯ ಈಗಿನ ಯೋಜನೆಯು ಇಂಥ ಯಾವ ಅಧಿಕಾರವನ್ನೂ ಕೊಡುವದಿಲ್ಲವೆಂದೇ ತಿಳಿದೇ ಜನರಲ್ಲಿ ಬಿಳಿಯ ಪತ್ರಿಕೆಯ ವಿಷಯದಲ್ಲಿ ಅಸಂತೋಷವುಂಟಾಗಿ ವಿರೋಧದ ಗಲಭೆ ಎದ್ದಿದೆ (ಅ ಪ್ರ ತಂತಿ)

ಅಲ್ಲಹಾಬಾದ ತಾ| ೨೧— ಸಂಯುಕ್ತ ಪ್ರಾಂತ ಪ್ರಾಗತಿಕರ ೮ನೇ ಪರಿಷತ್ತು ಶ್ರೀ ಸೇನರ ಅಧ್ಯಕ್ಷತೆಯಲ್ಲಿ ನೆರೆಯಿತು ತಮ್ಮ ಭಾಷಣದಲ್ಲಿ ಅವರು "ಬಿಳಿಯ ಪತ್ರಿಕೆಯೆಂದರೆ ಯೋಜನೆಗಳಿಗಿಂತ ಸಂರಕ್ಷಣೆ ನಿರ್ಬಂಧನೆಗಳ ಪಟ್ಟಿಯೇ ಆಗಿರುವದೆನ್ನಬಹುದು ಹಿಂದೀ ಜನರ ಆಕಾಂಕ್ಷೆಗಳನ್ನು ತೃಪ್ತಿಪಡಿಸುವದೇ ಬಿಳಿಪತ್ರಿಕೆಯ ಉದ್ದೇಶವಿದ್ದರ ಅದು ವ್ಯರ್ಥವೆಂದೇ ಹೇಳಲಿಕ್ಕೆಬೇಕು ಬ್ರಿಟಿಶರ ಹಿತರಕ್ಷಣೆಗಾಗಿಯೇ ಹೊಸ ಯೋಜನೆಯು ಇದ್ದರೆ, ಅದು ಸಾಧ್ಯವಾಯಿತೆಂದೇ ಹೇಳಬಹುದು, ಸ್ವರಾಜ್ಯ ದಾರಿಯ ಮೇಲಿನ ಇದೊಂದು ಮುಂದಡಿಎಂದು ಅದು ದೂರಿರುವದೆಂದು ಹೇಳಬೇಕಾಗುವದು ಹೊಸ ರಾಜ್ಯ ಘಟನೆಯಂತೆ ನೋಡಿದರೆ, ಬಿಳಿಪತ್ರಿಕೆಯು ನಮ್ಮನ್ನೆಷ್ಟು ಮಾತ್ರವೂ ಮುಂದಕ್ಕೆ ಒಯ್ಯದೆ ತಿರುಗಿ ಹಿಂದೆಳೆಯುವದು. "ಹೀಗಂದು ಕೊನೆಗೆ ಎಲ್ಲರೂ ಒಕ್ಕಟ್ಟಾಗಿರಿ! ಶಾಸನ ಭಂಗಕ್ಕೆ ಸೇರಬೇಡಿರಿ ಯೋಗ್ಯ ದಾರಿಯಿಂದ ತಾಯ್ನಾಡಿನ ಸೇವೆ ಮಾಡಿರಿ! ಮತ್ತು ಅದರಲ್ಲಿಯೇ ನಿಮ್ಮ ದೇಶಸವೆಯಿರಿ' ಎಂದು ಹೇಳಿ ತಮ್ಮ ಮಾತು ಮುಗಿಸಿದರು (ಅ ಪ್ರ ತಂತಿ)

ಕರಾಚಿಯಲ್ಲಿ ಎಂ. ಸಿ. ಸಿ. ಗುಂಪು

ಕರಾಚಿ ತಾ| ೨೧— ಕರಾಚಿಯಲ್ಲಿ ಎಂ. ಸಿ. ಸಿ ಗುಂಪಿನವರ ಮೂರನೇ ಮ್ಯಾಚ್ ನಡೆದಿದೆ ೪೦೦೦ ನೋಟಕರು ಬಂದಿದ್ದರು. ಎಂ. ಸಿ ಸಿ ಗುಂಪಿನವರು ೧೪೦ ಮಿನಿಟುಗಳಲ್ಲಿ ೧೧೦ ಓಟಗಳನ್ನು ಮಾಡಿದರು

ಸವಿನಯಾಂತಿನಿಂದ ಕೆಲಸವಾಗದು.

ಅಜಮೀರ ತಾ| ೨೧ ಹಿಂದೂ ಮುಸಲ್ಮಾನರ ಐಕ್ಯವು ಒರಿಯು ಸವಿ ಮಾರ್ಗದಿಂದ ಆಗದು ಸಂಶಯಿಸುವರು ನಮ್ಮ ಒಡಕು ಹುಟ್ಟಿಸುತ್ತಿರುವರು ಮುಸಲ್ಮಾನರೊಡನೆ ಮೊದಲೇ ಮಾತಾಡಿಕೊಂಡು ಹಿಂದೂಗಳಿಗೆ ಹೇಳಿ ಇಂಗು ಹಚ್ಚಬೇಕೆಂಬುದನ್ನು ಅವರು ಮೊದಲೇ ಮಾತಾಡಿಟ್ಟದ್ದರಿಂದ ಮುಸಲ್ಮಾನರಾದರೂ ತಮಗಾದ ಲಾಭವನ್ನು ಬಿಟ್ಟು ಸರಕಾರದವರ ಹೇಳಿಕೆಯಂತೆ ನಡೆದು ಸ್ವಾತಂತ್ರ್ಯದ ಗುರಿಯನ್ನು ಮರೆತರು ಜಾತಿವಾದಿಗಳೊಡನೆ ಜಗಳಾಡದೆ ನಮ್ಮ ಗತಿ ನೆಟ್ಟಗಾಗುವದಿಲ್ಲ ಎಂದು ಮುಂತಾಗಿ ವೃತ್ತಪತ್ರದವರೊಡನೆ ಭಾಯಿ ಪರಮಾನಂದರು ಮಾತಾಡಿದ್ದಾರೆ

ವೀರಶೈವ ಮಹಾ ಸಭೆಯ ಮಧ್ಯವರ್ತಿ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ತಾ ೧೫ ೧೦

ಈ ಸಭೆಯು ಇಂದು ಮಧ್ಯಾನ್ಹ ೪-೩೦ಕ್ಕೆ ಮುರುಘರಾಜೇಂದ್ರ ಬೋರ್ಡಿಂಗದಲ್ಲಿಯ ಸಂಸ್ಕೃತ ಕಾಲೇಜದ ಕಟ್ಟಡದಲ್ಲಿ ಪ್ರಾರಂಭವಾಯಿತು ಸಭೆಯಲ್ಲಿ ಹಿರಿಯರಾದ ರಾ ಸಾ ಇಳಕಲ್ಲರವರು ಅಧ್ಯಕ್ಷಸ್ಥಾನಕ್ಕೆ ವಿರಾಜಮಾನರಾಗಿದ್ದರು ಸಭೆಗೆ ಹರ್ಡೇಕರ ಮಂಜಪ್ಪನವರೂ ಕರವೀರಪ್ಪ ಕುಲಕರ್ಣಿ ನಲವಡಿ ಮೊದಲಾದ ಧಾರವಾಡ ಜಿಲ್ಹೆಯ ಪ್ರಮುಖರೂ ವಿಜಾಪುರ ಜಿಲ್ಹೆಯವರೂ ಬೆಂಗಳೂರಿನ ಶಿವಿಯವರೂ ಮಹಾರಾಷ್ಟ್ರದವರೂ ಬಂದಿದ್ದರು ಮೊದಲು ಸಭಾ ಹಿರಿಯರು ಇಂದಿನ ಸಭೆಗೆ ಕಳಿಸಿದ ಮಹನೀಯರ ಸಂದೇಶಗಳನ್ನು ಓದಿಹೇಳಿದರು ನಂತರ ಸಭೆಯ ಉದ್ದೇಶವನ್ನೂ ಕಾರ್ಯವನ್ನೂ ವಿವರಿಸಿದರು ಈ ವರೆಗೆ ಸಭೆಗೆ ಬಂದ ಗೊತ್ತುವಳಿಗಳನ್ನು ಓದಿದರು ಹಾಗೂ ಆ ಗೊತ್ತುವಳಿಗಳನ್ನು ಹೇಗೆ ಕಾರ್ಯರಂಗದಲ್ಲಿ ತರಬೇಕೆಂಬ ಬಗ್ಗೆ ಕ್ರಮಬದ್ಧವಾದ ಸೂಚನೆಗಳನ್ನು ತಿಳಿಸಿದರು. ಆ ಮೇಲೆ ಇಲ್ಲಿಯ ಅನೇಕ ಮಹನೀಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಮಹಾಸಭೆಯು ಗೊತ್ತುವಳಿಗಳೆಂದರೆ—

೧ ಧಾರ್ಮಿಕ ಸುಧಾರಣೆ ೨ ಕರ್ನಾಟಕ ಏಕೀಕರಣ ೩ ಐಕ್ಯಮತ್ಯ ೪ ಗ್ರಾಮಸುಧಾರಣೆ ೫ ಶಿಕ್ಷಣ ಸುಧಾರಣೆ ೬ ವ್ಯಾಪಾರ ವಿಷಯ ಮೊದಲಾದವುಗಳು. ಈ ವಿಷಯಗಳನ್ನು ಕಾರ್ಯರೂಪದಲ್ಲಿ ತರಲು ಸ್ವಯಂಸೇವಕರು, ಉಪದೇಶಕರು ಬೇಕೆಂದು ಬಹಳ ಜನರ ಕೇಳಿಕೆ ಇತ್ತು. ಇದಾದ ಮೇಲೆ ಎಲ್ಲ ವಿಷಯಗಳನ್ನು ಸಂಘಟಿತ ರೂಪಕ್ಕೆ ತರುವ ಯೋಜನೆಯನ್ನು ಯೋಜಿಸಲಾಯಿತು

ನಿಜಾಂ ಹೈದರಾಬಾದದಲ್ಲಿ ಕನ್ನಡ ಬ್ರಾಹ್ಮಣ ಹುಡುಗರ ಸಲುವಾಗಿ ಒಂದು ಗುರುಕುಲ ಪದ್ಧತಿಯ ಪಾಠಶಾಲೆ ಪ್ರಾರಂಭಿಸಲಾಗಿದೆ. ಇದಕ್ಕೆ ಹೈಕೋರ್ಟ ಜಜ್ಜರಾದ ಶ್ರೀ ಗಿರಿರಾಯರ ಪೂರ್ಣ ಆಶ್ರಯವಿದೆ ಹುಡುಗರಿಗೆ ಸಂಧ್ಯಾವಂದನ ನಿತ್ಯಕರ್ಮ ಮಂತ್ರಪಾಠ ಮುಂತಾದವುಗಳನ್ನು ಕಲಿಸುವರು ವಾರಕ್ಕೊಮ್ಮೆ ಉಪನ್ಯಾಸಗಳು ನಡೆಯುವವು



ಡಾ. ಕುಲಕರ್ಣೀಯ

ಲೆಬೊರೋಟರಿ ಮುಂಬೈ ನಂಬ ೧೨

ಬಾಟ್ಲಿ ಕಿ. ೧-೧೨-೦

ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸರಗು, ಬಿಳೀಸರಗು, ಕೆಂಪು ಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತದೆ ಬಾಣಂತಿತನ ಆದಮೇಲೆ ತಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದೆ.

ಬಿ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ
೧೮-೭

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡುಯವರ

ಮೇಹಸಂಜೀವನೀ ಯೆಣ್ಣೆ

ಪತಿವ್ರತೆಯಾದ ತನ್ನ ಹೆಂಡತಿಯಲ್ಲಿಯೆ ಅತಿ ಸಂಭೋಗ ಮಾಡುವವರಿಂದ ಅನರ್ಥಕ್ಕೆರವಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟ ಸ್ತ್ರೀಯರಲ್ಲಿ ತಮ್ಮ ... ಅಮೋಘ ವಸ್ತುವನ್ನು ಧಾರೆಯೆರೆದು ಹಾಳು ಮಾಡಿಕೊಂಡು—ಮೇಹವ್ರಣ, ಬಿಳುಪು, ಭಗಂದ ... ನವಾಳ, ಮುಸುಕು, ಟಾಕಿ, ಪರಮ, ಪವಿತ್ರ ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ನಿರಂತರವೂ ಬಾಧೆಪಡುತ್ತಿರುವ ನಮ್ಮ ದೇಶೀಯರಾದ ಯೌವನಸ್ಥರಿಗೆ ಈ ಔಷಧವು ಅಮೃತ ಕಲಶವಿದ್ದಂತೆ ನವ ಜೀವನವನ್ನೇ ಕಲ್ಪಿಸತಕ್ಕದ್ದಾಗಿರುವದು. ಈ ಔಷಧ ಬೀಳದಿದ್ದರೆ ದೇಹಕ್ಕಾವರಿಸಿರುವ ಮೇಹರೋಗವುಶ್ಚಿತಲೆತಲಾಂತರಗಳ ವರೆಗೂ ಹಬ್ಬುತ್ತಾ ತನ್ನ ಕಾರ್ಯವನ್ನು ಆ ವಂಶವಲ್ಲಿ ನೆಲೆಗೊಳಿಸುವದೆಂಬುದೇ ವೈದ್ಯಶಾಸ್ತ್ರಜ್ಞರ ತಾತ್ಪರ್ಯವಾಗಿದೆ. ಈ "ಮೇಹಸಂಜೀವನೀ ಯೆಣ್ಣೆ"ಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸುವ— ಬಿಳುಪು, ಕೆಂಪು, ಹಸರು ಮುಂತಾದ ೧೮ ವಿಧ ಪ್ರಮೇಹರೋಗಗಳು, ಉಷ್ಣ ಮೂತ್ರ, ಮುಸುಕುಹಣ್ಣು, ಮೇಹಚಳುಕು, ಮೇಹಚಟ್ಟೆಗಳು, ನಾಭಿವ್ರಣ, ಮೇಹವಾಯುವ್ವ ತೊಡೆಬಾಳ, ಭಗಂದರ, ಟಾಕಿ, ಪವಿತ್ರ ಮುಂತಾದ ಜಾಡ್ಯಗಳು ಬುಡದೊಂದಿಗೆ ನಾಶವಾಗುವಲ್ಲದೆ, ಈ ಯೆಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಪ್ರಾಪ್ತನಾಗುವ ಆಶ್ರಮ ಋತುವಾಗುವಿಕೆ ಋತುಶೂಲೆ, ಪ್ರದರ ಮುಂತಾದ ರೋಗಗಳು ನಿರ್ವಾಮವಾಗುವವು. ಕ್ರಯ ಶೀಸೆ ೧ಕೆ ೨—೦—೦

ಯೋಗ್ಯತಾಪತ್ರಗಳು.— (೧) ನಿಮ್ಮ ಮೇಹಸಂಜೀವನೀ ಯೆಣ್ಣೆಯನ್ನು ತರಿಸಿ ಉಪಯೋಗಿಸಿ ನೋಡಿದಲ್ಲಿ ತುಂಬಾ ಪ್ರಯೋಜನವು ಕಂಡುಬಂದವ್ದರಿಂದ ಈ ಯೆಣ್ಣೆಯನ್ನು ನನ್ನ ವೈದ್ಯಶಾಲೆಯಲ್ಲಿ ಹೆಚ್ಚು ಖರ್ಚಾದೀತೆಂದು ಯೋಚಿಸುವೆನು. ಮ॥ ರಾ॥ ಕೆ. ಎಸ್. ಗೋವಿಂದಶಾಸ್ತ್ರಿ, ಆಯುರ್ವೇದ ಭೂಷಣ, ಆರೋಗ್ಯಾಶ್ರಮ, ಕೊಡಿಯಾಲ್‌ಬೈಲ ಪೋಸ್ಟ್, ಮಂಗಳೂರು (೨) ನಿಮ್ಮ ಮೇಹಸಂಜೀವನೀ ಯೆಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಿಗಳ ಕೃತಜ್ಞತೆಗೆ ಪಾತ್ರನಾಗಿರುವೆನು ಮ॥ ರಾ॥ ಉಗ್ಗಪ್ಪಕೋಡಿ ಕಾಶಭಟ್ಟ ವೈದ್ಯ, ಕೆಲಿಂಜಗ್ರಾಮ, ವಿಟಲ್‌ಪೋಸ್ಟ್, ದಕ್ಷಿಣ ಕನ್ನಡ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು,

ಆಂಗ್ಲೋ ಭಾರತೀ ವೈದ್ಯಶಾಲಾ
೪೯೧, ಹಲಸೂರಪೇಟೆ, ಬೆಂಗಳೂರು ಸಿಟಿ

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ. ಆರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ. ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ

ಮ್ಯಾನೇಜರ:- ರಾಘವ ಭಾವ. ಸಿ ಗೋಕಾಕ ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳೀಕರಿಗೆ	ಪರಸ್ಥಳದವರಿ
ತಿಂಗಳಿಗೆ	೦-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೦-೫-೦	೯-೦-೦

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪- ೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡೀಪೊ
ಕಹಾಪುರ ಪೇಟೆ ಗದಗ

ಜನಪದ ಹಿತವನ್ನು ಸಾಧಿಸುವ ಪ್ರಮುಖ ರಾಷ್ಟ್ರೀಯ ಸಚಿತ್ರ ವಾರಪತ್ರಿ

'ಅರುಣೋದಯ'

ಸಂಪಾದಕರು.- ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ ಎಲ್‌ಎಲ್ ಬಿ.

ವಾ ಚ ೨-೮-೦ ಮ. ಆ. ೨-೧೨-೦ ವ್ಹಿ ಪಿ

ಇದರಲ್ಲಿ ಸುಪ್ರಸಿದ್ಧ ವಿದ್ವಾನ್ ಲೇಖಕರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಪ್ಲುತವಾದ ಲೇಖನಗಳು ಬರುವವಲ್ಲದೆ ದೇಶವಿದೇಶಗಳ ಮಹತ್ವದ ಸಂಗತಿಗಳು ಪ್ರತಿವಾರದಲ್ಲಿಯೂ ಕೊಡಲ್ಪಡುವವು ಉದ್ಬೋಧಕವಾದ ಸಣ್ಣ ಸಣ್ಣ ಕಥೆಗಳೂ ರಸಭರಿತವಾದ ಕವಿತೆಗಳೂ ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಸೃಷ್ಟಿಚಮತ್ಕಾರಗಳೂ ಶಾಸ್ತ್ರೀಯ ಶೋಧಗಳೂ ಕಾಲಕಾಲಕ್ಕೆ ಕೊಡಲ್ಪಡುವವು. ಇಡೀ ಕರ್ನಾಟಕದಲ್ಲಿ ಇದರ ಪ್ರಚಾರವಿರುವದರಿಂದ ವ್ಯಾಪಾರಸ್ಥರಿಗೆ ಪ್ರಚಾರಕ್ಕೆ ಉತ್ತಮ ಸಾಧನ. ಕಾಯಮ ಜಾಹೀರಾತದಾರರಿಗೆ ವಿಶೇಷ ಸವಲತ್ತು ದೊರೆಯುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ಕೇಳಿಕೊಳ್ಳಬೇಕು.

ಮ್ಯಾನೇಜರ
'ಅರುಣೋದಯ' ಬೆಳಗಾವ

The Madrs and Southern maratha Railway Company Ltd.

(Incorporated in England)

Notice

The running of the excursion special train from Hubli on the 22nd instant has been cancelled as Messrs. Gauri Shank Excursion Special Train Co., Hubli are unable to collect the passengers in time.

HUBLI
17-10-1933

R. E. Nunn
Dist. Trans. Supdt. Traffic

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಂ. ಬಿ. ೨೭೮೮

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ ಮನು

ನಿತ್ಯ ಪತ್ರ ಬೆಲೆ ೩ ಪೈ

ನಮ್ಮ ಉರನ್ನ
ವಿಮೆ ಇಳಿಸಲು
ಯುನಾಯಿಟೆಡ್
ಕರ್ನಾಟಕ ಇನ್ಸ್ಯುರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯ ಪ್ರಸಿದ್ಧವಾಗುವದು

[ಸಂ ೧೦]

ಧಾರವಾಡ— ಬುಧವಾರ ಕಾರ್ತಿಕ ಶುದ್ಧ ೭ ಶಕೆ ೧೮೫೫ ತಾ॥ ೨೫-೧೦-೩೩

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು. ಇದು ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೊಡಿಗೆನೋವು, ಕೆಮ್ಮು, ಕಿವಿಸೋರ್ರು ವಗೈರೆ ಇತರ ಎಲ್ಲ ಬಾವು ಮತ್ತು ಗಾಯಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ. ವಿಶೇಷ ಮಾಹಿತಿಗಾಗಿ ಪತ್ರವ್ಯವಹಾರ ಮಾಡಬೇಕು.
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕೆ ಟೋಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

" ಬದರೀ ನಾರಾಯಣನ ದರ್ಶನ "

ಗೌರೀಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗು ವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಅನೇಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶೆಗಳಿರುವವು. ಬೆಲೆ ೦-೬-೬ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿ ಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೫-೮-೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು. ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆ ಯುವವು.

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಕರ್ನಾಟಕ ಟಾಯಿಮ್ಸ.

ಸಂಪಾದಕರು:— ಎಚ್. ಎಸ್. ಶಿವಲಿಂಗಶಾಸ್ತ್ರಿಗಳು.

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗುತ್ತಿರುವ ಒಂದೇ ಒಂದು ವಾರಪತ್ರ.

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಅನೇಕ ವಿಷಯಗಳು ನಿರ್ಭಿಡೆಯಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವರ್ತಮಾನಗಳೂ ಪ್ರಕಟಿಸಲ್ಪಡುವವು. ವಾರ್ಷಿಕ ವರ್ಗಣಿ— ಸ್ಥಳಿಕರಿಗೆ ೨—೧೩—೦ ಪರಸ್ಥಳದವರಿಗೆ ಅಂಚೆ ವೆಚ್ಚ ಸೇರಿ ರೂ ೩—೬—೦

ವ್ಯವಸ್ಥಾಪಕರು.
ಕರ್ನಾಟಕ ಟಾಯಿಮ್ಸ ಕಾರ್ಯಾಲಯ ಧಾರವಾಡ

ಪತ್ರವ್ಯವಹಾರ.

ಒಕ್ಕಲತನದ ಗ್ರ್ಯಾಜ್ಯುಏಟರು

ಮಾ॥ ರಾ॥ ರಾ॥ ವಿ. ಎಸ್. ಕೃಷ್ಣದೀಕ್ಷಿತರು ಕರ್ನಾಟಕದ ತರುಣರಿಗೆ ಉದ್ಯೋಗವನ್ನು ಸೂಚಿಸಿ ನೌಕರಿಯ ಮೃಗಜಲಕ್ಕೆ ಲುಬ್ಧರಾಗದಂತೆ ಎಚ್ಚರಿಕೆ ಕೊಟ್ಟದ್ದು ಬಹು ಜನರಿಗೆ ಮಾನ್ಯವಾಗಿದೆ. ಶ್ರೀ ದೀಕ್ಷಿತರು ವ್ಯಾಯಾಮ ಪ್ರಿಯರೂ, ಸಾರ್ವಜನಿಕ ಕಾರ್ಯ ಪುರಸ್ಕಾರವನ್ನು ಕೈಕೊಳ್ಳಲು ಅರ್ಹರೂ ಲಕ್ಷ್ಮೀ ಸಾನ್ನಿಧ್ಯವನ್ನು ಪಡೆದವರೂ ಆಗಿದ್ದಾರೆಂಬ ಮಾತು ನಿರ್ವಿವಾದವಾಗಿದೆ. ಅನೇಕ ಸುಶಿಕ್ಷಿತ ತರುಣರು ಶ್ರೀ ದೀಕ್ಷಿತರಂಥ ನಾಯಕರನ್ನು ಸೇರಿಕೊಂಡು ಆ ನಾಯಕರ ಆಜ್ಞೆಯ ಪ್ರಕಾರ ಹೊಸ ಉದ್ಯೋಗದಲ್ಲಿ ತೊಡಗಲು ಹಾತೊರೆಯುತ್ತಿದ್ದಾರೆ. ಆದರೆ ಶ್ರೀ ದೀಕ್ಷಿತರು ತಮ್ಮ ಕೈಗೆ ಕೆಸರು ಹತ್ತದಂತೆ ಒಕ್ಕಲತನದ ಪದವೀಧರರು ತಮ್ಮ ತಮ್ಮ ಹಳ್ಳಿಗಳಲ್ಲಿ ತಮ್ಮ ತಮ್ಮ ಹೊಲಗಳನ್ನು ಮಾಡಿಕೊಂಡಿರಬೇಕು" ಎಂಬ ಸಲಹೆಯನ್ನು ಮಾಡಿದ ಉಪದೇಶವನ್ನು ಮಾಡಿದುದು ಆಶ್ಚರ್ಯ. ಶ್ರೀ ದೀಕ್ಷಿತರಲ್ಲಿ ಉತ್ಪತ್ತಿರುವ ಉತ್ಸಾಹವು ಉತ್ತರೋತ್ತರ ಅಭಿವೃದ್ಧಿಯಾಗತಕ್ಕ ಯಾವದಾದರೊಂದ ಉದ್ಯೋಗವನ್ನು ಪ್ರಾರಂಭಿಸುವದರಲ್ಲಿ ಪ್ರವಹಿಸಿ ತರುಣರಿಗೆ ಉದ್ಯೋಗಕ್ಕೆ ಅನುಕೂಲ ಮಾತ್ರ ಬರುವಂತೆ ತೀವ್ರ ವ್ಯವಸ್ಥೆಯಾದರೆ ಕರ್ನಾಟಕದ ತರುಣರು ಶ್ರೀ ದೀಕ್ಷಿತರಿಗೆ ಚಿರಕಾಲ ಋಣಿಯಾಗುವರು. ತರುಣರ ಸಂಘವು ಧಾರವಾಡದಲ್ಲಿ ಸ್ಥಾಪಿಸಲ್ಪಡಬೇಕು. ಶ್ರೀ ದೀಕ್ಷಿತರು ಅದಕ್ಕೆ ಅಧ್ಯಕ್ಷರಾಗಬೇಕು. ಎಂದರೆ ಈ ಯುವನೀಯರ ಸ್ನೇಹದಿಂದ ಉದ್ಯೋಗ ಪ್ರಿಯತೆಯು ತರುಣರಲ್ಲಿ ಬೆಳೆಯಬೇಕು. ಚಿಕ್ಕ ಪುಟ್ಟ ಕೈಗಾರಿಕೆ ಒಕ್ಕಲತನದ ಬಾಬುಗಳನ್ನು ಅವರೆಲ್ಲ ಕೈಕೊಳ್ಳಬೇಕು. ಶ್ರೀ. ದೀಕ್ಷಿತರು ಮನಸ್ಸು ಹಾಕಿದರೆ ಈ ಕಾರ್ಯವು ಸುಲಭ ಸಾಧ್ಯವೆಂಬದು ನನ್ನ ನಿಶ್ಚಿತಾಭಿಪ್ರಾಯ. ಪರಮೇಶ್ವರನು ಶ್ರೀ ದೀಕ್ಷಿತರ ಕಷ್ಟಾರ್ಜಿತ ದೇಹ ಸಂಪತ್ತನ್ನೂ ಧನ ಸಂಚಯವನ್ನೂ ಕನ್ನಡಿಗರ ಉದ್ಧಾರಕ್ಕಾಗಿ ಉಪಯೋಗಿಸಲು ಅವರಿಗೆ ಪ್ರೇರಿಸಿ ಕನ್ನಡಿಗರನ್ನು ಕಾಯುವನೇನೋ ನೋಡುವಾ. ತಮ್ಮ

ರಾಯಚೂರ ಪುರುಷೋತ್ತಮಾಚಾರ್ಯ
ವಕೀಲ ಧಾರವಾಡ

ಶ್ರೀ ಅಶ್ವತ್ಥನರಸಿಂಹ ದೇವಸ್ಥಾನ.

ಬೆಳಗಾಂವಿಯ ' ಸಂಯುಕ್ತ ಕರ್ನಾಟಕ ' ದಲ್ಲಿ ೧೦ ನೇ ತಾ॥ ೩೩ ನೇ ದಿವಸ " ಅಶ್ವತ್ಥನರಸಿಂಹ ದೇವಸ್ಥಾನವೂ ಸದ್ಯಃ ನಡೆದಿರುವ ವಾದವೂ " ಎಂಬ ಲೇಖವನ್ನು ಪ್ರಸಿದ್ಧ ಪಡಿಸಿದ ಸಭ್ಯಗೃಹಸ್ಥರ ಸನ್ನಿಧಿಗೆ—

೧ ಶ್ರೀ ಕ್ಷೇತ್ರದಲ್ಲಿ ತಾ॥ ೨೧-೮-೩೩ನೇ ಸೂರ್ಯ ಗ್ರಹಣದ ಪರ್ವಕಾಲದಲ್ಲಿ ಸಾರ್ವಜನಿಕ ದೊಡ್ಡ ಸಭೆಯು ಕೂಡಿ ಸರ್ವಾನುಮತದಿಂದ ಪಾಸುಮಾಡಿದ ಠರಾವುಗಳನ್ನು ತಾ॥ ೩೧-೮-೩೩ ನೇ ' ಸಂಯುಕ್ತ ಕರ್ನಾಟಕ ' ದಲ್ಲಿ ಪ್ರಸಿದ್ಧಪಡಿಸಿರುತ್ತೇವೆ.

ಹೀಗಿದ್ದಾಗ್ಯೂ ತಾವು ಆ ಸಾರ್ವಜನಿಕ ಸಭೆಯ ಠರಾವುಗಳನ್ನು ಲಕ್ಷ್ಯಕ್ಕೆ ತಾರದೆ ನಿಮ್ಮ ಪ್ರಕಟನೆಯ ಉದ್ದೇಶಗಳನ್ನು ಬಿಟ್ಟುಕೊಟ್ಟು ಉಭಯ ಸಂಸ್ಥೆಗಳ ಕಾರ್ಯಕರ್ತರಿಗೂ ವಿಚಾರ ವಿನಿಮಯ ಮಾಡದೆ, ದೇವಸ್ಥಾನಕ್ಕೆ ಸಂಬಂಧಪಟ್ಟ ಪತ್ರ ದಾರ ವಹಿವಾಟದಾರರನ್ನು ಕೇಳಿಗಳಿರಿ (ಈ ಬಗ್ಗೆ ಶ್ರೀ ನಾರಾಯಣರಾವ ಜೋಶಿಯವರ ಮುಂದೆ ಎಲ್ಲ ಮಾಹಿತಿ ಹೇಳಿದಾಗ್ಯೂ ಕೂಡ) ಪ್ರತ್ಯಕ್ಷ ಬಂದು ನೋಡಿ ಸಾಧಕ ಬಾಧಕ ವಿಚಾರಮಾಡದೆ ವಿನಾಕಾರಣ ವಾದ ಹೂಡಿದ ಅನಧಿಕಾರಿಗಳಾದ ನಾರಾಯಣ ಕೃಷ್ಣ ದಾಸ್ತಿಕೊಪ್ಪ ಇವರಿಗೇನೇ ದೇವಸ್ಥಾನದ ಧರ್ಮಶಾಲೆಯ ಜೀರ್ಣೋದ್ಧಾರದ ಕೆಲಸದ ಪ್ಲ್ಯಾನ ಎಸ್ಟಿಮೇಟ ತಯಾರ ಮಾಡಲಿಕ್ಕೆ ಹೇಳ್ಯಾಣಿದ ಠರಾವಿನಲ್ಲಿ ಇದ್ದ ನಾರಾಯಣರಾಯರ ಒಪ್ಪಿಗೆಯ ಸಮ್ಮತಿ ಪಡೆದು ಗೊತ್ತುಪಡಿಸಿದ್ದು ಎಲ್ಲರಿಗೂ ತುಂಬಾ ವಿಷಾದಕರವಾದ ಸಂಗತಿಯಾಗಿದೆ.

೨ ಅದ್ದರಿಂದ ಸಭ್ಯಗೃಹಸ್ಥರೇ? ಈ ದೇವಸ್ಥಾನಕ್ಕೆ ಸಂಬಂಧಪಟ್ಟ ಯಾವತ್ತು ಜನರ ಪರಕಾರ್ಯವನ್ನ ಬೆಳಗಾಂವಿಯಲ್ಲಿಯೇ ನಿವೆಲ್ಲ ಕುಳಿತು ಪಡೆದುಕೊಳ್ಳುವದು ಆಗದಮಾತು. ಅದ್ದರಿಂದ ಯಾವತ್ತು ಕಾರ್ಯಕರ್ತರಿಗೆ ನಿಜವಾದ ಸಹಕಾರ್ಯವನ್ನು ಪಡೆಕೊಂಡು ಕೈಕೊಂಡ ಕಾರ್ಯವು ಪೂರ್ಣ ಯಶಸ್ವಿಯಾಗಬೇಕೆಂಬ ಹೇತುವು ನಿಮ್ಮದಿದ್ದರೆ ತಾ॥ ೧೭-೧೧-೩೩ನೇ ದಿವಸ ಗೊತ್ತುಪಡಿಸಿದ ದೇವಸ್ಥಾನದ ಧರ್ಮಶಾಲೆಯ ಜೀರ್ಣೋದ್ಧಾರದ ಪ್ಲ್ಯಾನ ಎಸ್ಟಿಮೇಟ ತಯಾರಮಾಡಲಿಕ್ಕೆ ಗೊತ್ತುಪಡಿಸಿದವರ ಹೆಸರನ್ನು ಕೂಡಲೇ ರದ್ದುಪಡಿಸಿರಿ. ನಾಳಿನ ಕಾರ್ತೀಕೋತ್ಸವಕ್ಕೆ ಸುತ್ತುಮುತ್ತಲಿನ ಹಳ್ಳಿಯ ಹೆಂಗಸರೂ ಹುಡುಗರೂ ಕೂಡಿ ೨೦೦-೩೦೦ ಜನರು ಮಾತ್ರ ಬರುವರು. ಕಾರಣ ಅಗ್ಗಿ ಸಾರ್ವಜನಿಕ ಸಭೆಯನ್ನು ಕೂಡಿಸುವದು ವಿಹಿತವಾಗಲಾರದು. ಅದರಿಂದ ಬರುವ ವೈಶಾಖೋತ್ಸವಕ್ಕೆ ಯಾವತ್ತರೂ ಅವಶ್ಯಬರಬೇಕಾಗಿ ನಮ್ಮೆಲ್ಲರ ನಮ್ರ ವಿನಂತಿ ಅದೆ. ಯಾಕಂದರೆ ಆಗ್ಗೆ ದೂರದೂರಿನ ಸಾವಿರಾರು ದೊಡ್ಡ ದೊಡ್ಡ ಜನರು ನೆರೆಯುತ್ತಾರೆ. ಎರಡೂ ಸಂಸ್ಥೆಯವರು ಮಾಡಿದ ಕಾರ್ಯಗಳು ಕಂಡು ಬರುವವು. ಎಲ್ಲ ಮಾಹಿತಿಯೂ ತಿಳಿಯುವದು. ಸಂಪೂರ್ಣ ಪರಿಸ್ಥಿತಿಯೂ ಕಂಡುಬರುವದು. ಆ ಮೇಲೆ ಬೇಕಾದಷ್ಟು ಹೊಸ ಏರ್ಪಾಡುಗಳ ವಿಚಾರ ಮಾಡಿರಿ. ಅಂದರೇನೇ ನೀವು ಕೈಕೊಂಡ ಕಾರ್ಯ ಸಾಕಷ್ಟು ಯಶಸ್ವಿಯಾದೀತೆಂದು ನಮಗೆನಿಸುತ್ತದೆ. ಇತಿ ತಾ॥ ೨೦-೧೦-೩೩

ವಾಮನರಾವ ಕುಲಕರ್ಣಿ
ವೈ. ಪ್ರ. ಮಂಡಳ ಮ್ಯಾ. ಕ. ಮೆಂಬರ
ಅನಂತಾಚಾರ್ಯ ಹುಬ್ಬಳ್ಳಿ
ಕಾ. ಪ್ರ. ಮಂಡಳ ಚೇರ್ಮನ

ಕನ್ನಡಿಗ.

ಧಾರವಾಡ— ಬುಧವಾರ ತಾರೀಖು ೨೫—೧೦—೧೯೩೩.

ಹಾಯ್, ಹುಲಿಯು ಗುಡುಗು ಅಡಗಿತು !

ವೀರ ವಿಠ್ಠಲಭಾಯಿ ಪಟೇಲ ಇವರು ರವಿವಾರ ದಿನ ಮಧ್ಯಾಹ್ನ ೧-೩೦ ಗಂಟೆಗೆ ಸ್ವಿಟ್ಝರಲಂಡದಲ್ಲಿ ಮೃತ ಪಟ್ಟರೆಂಬ ಹೃದಯವಿದಾರಕವಾದ ಸಂತಿ ಸಾರ್ವಿಯು ಬಂದ ಕೂಡಲೆ "ಹಾಯ್ ಹುಲಿಯ ಗುಡುಗು ಅಡಗಿತು" ಎಂಬ ಉದ್ಗಾರಗಳು ಕತ್ತರಿಸಿ ಹಿಂದೀ ಮನುಷ್ಯನ ಹೃದಯದೊಳಗಿಂದ ಒಮ್ಮೆಲೆ ಹೊರಹೊಮ್ಮಲಿಕ್ಕೆ ಸಾಕು! ವರಿಷ್ಠ ಕಾಯದೆಮಂಡಲದ ಅಧ್ಯಕ್ಷರಾಗಿ ಒಂದೇ ಸವನೆ ಗುಡುಗಾಡಿದ ಈ ಹುಲಿಯ ಆ ಅಬ್ಬರವು ಇನ್ನೂ ನಮ್ಮ ಕಿವಿಯಲ್ಲಿ ಇಡಗಿದೆ. ಸರಕಾರದವರೊಡನೆ ಮಲ್ಲಯುದ್ಧ ನಡೆಸಿ ಕಾಯದೆಗಳ ಪೇಚುಗಳಲ್ಲಿ ಅವರನ್ನು ಒತ್ತಿ ಹಿಡಿದು ಹಣ್ಣು ಮಾಡಿದ ಈ ಯುದ್ಧಮಲ್ಲನ ಕುಸ್ತಿಯ ಹಿಡತಗಳ ನೋಟವು ಇನ್ನೂ ನಮ್ಮ ಕಣ್ಣೆದುರಿಗೆ ಕಟ್ಟಿದೆ. ಕಾಯದೆಮಂಡಳಗಳ ರಣಾಂಗಣದಲ್ಲಿ ಕಾಯದೆಗಳ ಶಸ್ತ್ರಾಸ್ತ್ರಗಳಿಂದ ಕಾಲುಮೆಟ್ಟಿ ರೀತಿಯಿಂದ ಅವರೊಡನೆ ಹೋರಾಡಿ ಜಯಶ್ರೀಯನ್ನು ಕೊರಳೊಳಗೆ ಹಾಕಿಕೊಂಡ ಈ ಕಲಿಯ ವೀರವೃತ್ತಿಯು ನಮ್ಮ ಹೃದಯದಲ್ಲಿ ಉಜ್ವಲವಾಗುವಂಥ ಭಾವನೆಗಳನ್ನು ಹುಟ್ಟಿಸುತ್ತದೆ. ವೀರ ವಿಠ್ಠಲಭಾಯಿಯವರಂಥ ಪುರುಷಸಿಂಹನು ರಣದಲ್ಲಿ ಮಡಿದರೆ ಅವರು 'ವೀರ'ರೆಂಬುದು ಹೇಳಬೇಕಾದದ್ದಿಲ್ಲ. ಪ್ರತ್ಯಕ್ಷ ಶಸ್ತ್ರಾಸ್ತ್ರಗಳಿಂದ ಜರ್ಜರಿತರಾಗಿ ರಣಾಂಗಣದಲ್ಲಿ ಮಡಿಯಲಿಲ್ಲವೇನೋ ಸರಿ. ಆದರೆ, ಇದರಿಂದ ಅವರು ವೀರರಲ್ಲವೆಂದು ಹೇಳಲಿಕ್ಕೆ ಆಗಲಾರದು. ಈಗ ಹಿಂದೀ ಜನರಿಗೂ ಆಳರಸರಿಗೂ ನಡೆದಿರುವ ಈ ಶಿಕ್ಕಾಟವು ಒಂದು ರೀತಿಯಿಂದ ನೋಡಲು ಪ್ರತ್ಯಕ್ಷ ಯುದ್ಧಕ್ಕಿಂತಲೂ ಹೆಚ್ಚಿನ ಯುದ್ಧವು. ಇದರಲ್ಲಿ ಹೊಕ್ಕವರಿಗೆ ಸಹಿಸಬೇಕಾದ ಹೊಡತಗಳ ಪೆಟ್ಟುಗಳು ಪ್ರತ್ಯಕ್ಷ ಕತ್ತಿ ಕಠಾರಿಗಳಿಗಿಂತ ಹೆಚ್ಚಿಗೆ ಗಾಯಮಾಡುವಂಥವು. ಆಕ್ಷಿಸಿ ಇಲ್ಲಿ ಪೆಟ್ಟು ಕೊಡಲಿಕ್ಕೆ ಮಾರ್ಗವಿಲ್ಲ. ಪೆಟ್ಟು ಬಡಿಸಿಕೊಳ್ಳುವುದೊಂದೇ ಇಲ್ಲಿಯ ವೀರರ ವೀರವೃತ್ತಿಗೆ ಅವಕಾಶವು. ವೀರ ವಿಠ್ಠಲಭಾಯಿಯವರಿಗೆ ಈ ಯುದ್ಧದಲ್ಲಿ ಎಷ್ಟೆಷ್ಟು ಗಾಯಗಳುಂಟಾಗಿದ್ದವೆಂಬುದು ಗೊತ್ತಿದ್ದವರಿಗೆ ಅವರು ಪ್ರತ್ಯಕ್ಷ ಯುದ್ಧದಲ್ಲಿ ಮಡಿಯದಿದ್ದರೂ ಅವರು ಈ ಅಪ್ರತ್ಯಕ್ಷ ಯುದ್ಧದಲ್ಲಿಯೇ ವೀರರಂತೆ ಮಡಿದರೆಂಬುದು ಗೊತ್ತಾಗುವುದು. ಅವರು ದೂರದ ಪರದೇಶದಲ್ಲಿ ಹಾಸಿಗೆಯಲ್ಲಿ ನರಳುತ್ತ ಸತ್ತಿರುವರೆಂದು ನಾವು ತಿಳಿಯುವುದಿಲ್ಲ. ಹಗಲಿರುಳು ಹಿಂದುಸ್ಥಾನದ ಪೂರ್ಣ ಸ್ವಾತಂತ್ರ್ಯವನ್ನು ಕನಕರಿಸುತ್ತಿರುವ ಇವರು ಹಾಗೆ ಹಾಸಿಗೆಯಲ್ಲಿ ಹೊರಳಾಡಿ ಸತ್ತರೆಂದು ಹೇಳುವುದು ಹೇಗೆ? ಸತತವಾದ ಸ್ವಾತಂತ್ರ್ಯ ಸ್ಮರಣೆಯ ಚಿಂತೆಯಿಂದ ಅವರ ಕರಳುಗಳು ಬಹು ದಿನಗಳಿಂದ ಒಂದೇ ಸಮನೆ ಕತ್ತರಿಸುತ್ತ ಬಂದಿದ್ದವು. ಮೊದಲೇ ಸ್ವಭಾವತಃ ಅಶಕ್ತರು ಮುಪ್ಪಿನವರು. ಇಂಥ ಸ್ಥಿತಿಯಲ್ಲಿ ದೇಶದ ಸ್ವಾತಂತ್ರ್ಯಕ್ಕೋಸ್ಕರ ಅಮೇರಿಕೆಯಂಥ ದೂರದೇಶಕ್ಕೆ ಹೋಗಿ, ದೇಹದ ಪರಿವೆಯಿಲ್ಲದೆ, ಅಮೇರಿಕೆಯಲ್ಲಿ ಪ್ರವಾಸ ಮಾಡಿ ಹಿಂದೀ ಜನರ ಆಕಾಂಕ್ಷೆಗಳನ್ನೂ ಕೊರತೆಗಳನ್ನೂ ದುಃಖಗಳನ್ನೂ ಆ ಜನರ ಮುಂದೆ ಇಟ್ಟಾಗಿನಿಂದ ಅವರ ದುರ್ಬಲ ಶರೀರವು ದಿನದಿನಕ್ಕೆ ಕೃಶವಾಗುತ್ತ ಹೋಯಿತು. ಅದರಲ್ಲಿ ಹೃದಯವಿಕಾರದ ಬೇನೆಯು ಕೂಡಿತು. ಹೋದ ಎಪ್ರಿಲ ತಿಂಗಳಿಂದ ಅವರು ಈ ಹೃದಯವಿಕಾರಕ್ಕಾಗಿ ಔಷಧೋಪಚಾರವನ್ನು ಪಡೆಯುತ್ತಿದ್ದರು. ೧೦ನೆಯ ಸಪ್ಟಂಬರ ದಿವಸ ಪಟೇಲರವರು ವ್ಹಿಯೆನ್ನಾ ನಗರವನ್ನು ಬಿಟ್ಟು ಜಿನೀವ್ಹಾ ಪಟ್ಟಣಕ್ಕೆ ಔಷಧೋಪಚಾರಕ್ಕೋಸ್ಕರ ಹೋದರು. ಈ ದೂರದ ಪ್ರವಾಸವು ಅವರ ಶರೀರದ ಮೇಲೆ ಮತ್ತಷ್ಟು ಕೆಟ್ಟ ಪರಿಣಾಮವನ್ನುಂಟು ಮಾಡಿತು. ಸಪ್ಟಂಬರ ೨೧ನೆಯ ತಾರೀಖಿನಿಂದ ಒಂದು ವಾರದವರೆಗೆ ಅವರ ದೇಹಸ್ಥಿತಿಯು ಅತ್ಯಂತ ಗಂಡಾಂತರಕ್ಕೊಳಗಾಗಿತ್ತು. ಆ ಕಾಲಕ್ಕೆ ದೇ. ಸುಭಾಷ ಬೋಸರವರು ಹಗಲಿರುಳು ಅವರ ಶುಶ್ರೂಷೆಯನ್ನು ಮಾಡಿದರು. ಆಗ ಅವರ ಪ್ರಕೃತಿಯು ಗುಣವಾಗಹತ್ತಿತು. ಆದರೆ, ಅವರು ಗಂಡಾಂತರದೊಳಗಿಂದ ಪಾರಾದರೆಂದು ಹೇಳಲಿಕ್ಕೆ ಬರುವಷ್ಟು ಅವರಿಗೆ ಗುಣವಾಗಲೇ ಇಲ್ಲ. ಮೇಲಾಗಿ ತಾವು ಈಸಲ ಈ ಬೇನೆಯೊಳಗಿಂದ ಪಾರಾಗುವುದಿಲ್ಲವೆಂದು ಅವರು ಪದೆ ಪದೆ ಅನ್ನುತ್ತಿದ್ದರು. ಆಮೇಲೆ ಕೊನೆಗೆ ಅವರು ಈ ಬೇನೆಯಲ್ಲಿಯೇ ದೇಹಾವಸಾನವನ್ನು ಹೊಂದಿದರು! ಈಶ ಇಚ್ಛೆಗೆ ಉಪಾಯವಿಲ್ಲ. ಅವರಂಥ ಧೀರೋದಾತ್ತರು ಮರಣ ಹೊಂದಿದರೂ ಅವರು ಚಿರಂಜೀವಿಗಳೇ. ಏಕೆಂದರೆ ವಿಠ್ಠಲಭಾಯಿಯವರ ಹುಟ್ಟು ಸಾರ್ಥಕವಾಗಿದೆ. ಅವರು ಜನ್ಮಕ್ಕೆ ಬಂದ ತಮ್ಮ ಉದ್ದೇಶವನ್ನು ಪರಿಪೂರ್ಣ ಮಾಡಿಕೊಂಡಿರುವರು. ಯಾವ ಕಾರ್ಯಕ್ಕೋಸ್ಕರ ದೇವರು ಇಂಥ ಜನರಿಗೆ ಜನ್ಮ ಕೊಟ್ಟಿರುವನೋ! ಅಂಥ ಕಾರ್ಯವು ಮುಗಿಯುವವರೆಗೆ ಅವರು ಸಾಯುವುದಿಲ್ಲ; ಆ ಕಾರ್ಯವು ಮುಗಿದ ಬಳಿಕ ಒಂದು ಅರಗಳಿಗೆ ಕೂಡ ಇರುವುದಿಲ್ಲ. ವೀರ ವಿಠ್ಠಲಭಾಯಿಯವರು ತಮ್ಮ ಕ್ಷೇತ್ರದಲ್ಲಿ ಮಾಡಿದ ಕಾರ್ಯದಿಂದ ಅವರು ಚಿರಂಜೀವಿಗಳಾಗಿರುವರು. ಮಹಾತ್ಮಾ ಗಾಂಧಿ ಲೋಕಮಾನ್ಯ ಟಿಳಕ ದೇಶಬಂಧುದಾಸ ದೇಶಬಂಧು ಮೋತೀಲಾಲ ನೇಹರು ದೇಶಭಕ್ತ ಲಾಲಾಲಜಪತರಾಯರಂಥ ಮೊದಲನೆಯ ವರ್ಗದ ವೀರ ಮಣಿಗಳ ಮಾಲಿಕೆಯಲ್ಲಿ ಸೇರಲಿಕ್ಕೆ ಯೋಗ್ಯರಿರುವರು. ೧೪—೧೫ ವರ್ಷಗಳ ಹಿಂದೆ ವಿಜಾಪುರದಲ್ಲಿ ಮುಂಬಯಿ ಇಲಾಖಾ ರಾಜಕೀಯ ಪರಿಷತ್ತಿನ ಅಧ್ಯಕ್ಷರಾಗಿ ಬಂದಾಗಿನ ಇವರ ಭವ್ಯ ಮೂರ್ತಿಯನ್ನು ಕರ್ನಾಟಕಸ್ಥರು ಮರೆಯುವದೆಂತು?

ಬೆಳಗಾವಿ ಪತ್ರ.

ಬೆಳಗಾವಿ ತಾ. ೨೩-೧೦-೩೩ [ನಮ್ಮ ವರದಿಗಾರರಿಂದ] ಗ-ಟಿ ಕಾಂಗ್ರೆಸ ಕಾರ್ಯಕಾರಿ ಸಭೆಯು ಗಂಗಾಧರರಾಯರ ಮನೆಯಲ್ಲಿ ಕೂಡಿರುವದು. ಸುದ್ದಿಗಾರರನ್ನು ಒಳಗೆ ಬಿಟ್ಟಿರುವದಿಲ್ಲ.

ರಿಟೈರ್ಡ ಫಸ್ಟ ಕ್ಲಾಸ ಸಬ್ ಜಜ್ಜರಾದ ಶ್ರೀ ಬಿ ಕಾವತಕರ ಶಹಾಪೂರ ಇವರು ಸಂಜೆಯ ೪॥ ಘಂಟೆಗೆ ಹೃದಯಕ್ರಿಯೆ ನಿಂತು ಪ್ರಾಣಹೊಂದಿದರೆಂದು ತಿಳಿಸಲು ವಿಷಾದವಾಗುವದು. ಇವರು ಕಳೆದ ತಿಂಗಳಲ್ಲಿ ಶಹಾಪೂರ ಲಾಯಬ್ರರಿಗೆ ಒಂದು ಸಾವಿರ ರೂಪಾಯಿ ದಾನ ಮಾಡಿರುವರು.

ಮುಂಜಾನೆ ೪ರಿಂದ ಮುಗಿಲಲ್ಲಿ ಮೋಡ ಹಾಕಿದೆ. ನಡುನಡುವೆ ಸೂರ್ಯ ದರ್ಶನವಾಗುವದು. ಬಿಟ್ಟಿರುವ ಬಹಳೇ ಆಗುತ್ತಿರುವದು. ಮಳೆಯ ಲಕ್ಷಣಗಳು ತೋರುತ್ತಿವೆ.

ಬೆಳಗಾವಿಯ ಸಭೆ

ಕರ್ನಾಟಕದ ಎಲ್ಲ ಜಿಲ್ಲೆಗಳ ಹಲವು ಮುಖಂಡರು ಬೆಳಗಾವಿಯಲ್ಲಿ ೨೨ ನೇ ತಾ॥ ದಿನ ಕೂಡಿ, ದೇಶದ ಇಂದಿನ ಪರಿಸ್ಥಿತಿಯನ್ನೂ ಕರ್ನಾಟಕದ ವಿಶಿಷ್ಟ ಪ್ರಶ್ನೆಗಳನ್ನೂ ವಿವೇಚಿಸಿದರು. ಆದರ ಫಲಿತಾಂಶ — [೧] ಕಾಂಗ್ರೆಸ್ಸದ ಹಿಂದಿನ ಠರಾವುಗಳಾಗಲಿ ಕಾರ್ಯಕ್ರಮವಾಗಲಿ ಬದಲು ಮಾಡುವ ಅಧಿಕಾರ ಕಾಂಗ್ರೆಸ್ಸಿನಿಂದ ಅಧಿಕಾರ ಪಡೆದ ಸಂಸ್ಥೆಗಳಿಗೆ ಮಾತ್ರ ಉಂಟು. ಆ ಸಕೃತ ಜನರಾಗಲಿ, ಸಂಸ್ಥೆಗಳಾಗಲಿ, ಹೀಗೆ ಬದಲಾಯಿಸಲು ಪ್ರಯತ್ನಿಸುವದು ರಾಷ್ಟ್ರಕ್ಕೆ ಹಿತಕರವಾದುದಲ್ಲ. [೨] ಪುಣೆಯ ಪರಿಷತ್ತಿನಲ್ಲಿ ಶ್ರೀ ಅಣೆಯವರು ಅಪ್ಪಣೆ ಕೊಡಿಸಿದ ಸ್ವತಂತ್ರ ಕಾರ್ಯಕ್ರಮವನ್ನು ಕರ್ನಾಟಕ ಪ್ರಾಂತವು ಕೊನೆಗಾಣಿಸಬೇಕೆಂದೇ ಎಲ್ಲರ ಮನಸ್ಸಿತ್ತು. ವ್ಯಕ್ತಿಶಃ ಕಾಯದೆಭಂಗ ಮಾಡಲು ಅನುಕೂಲವಿಲ್ಲದವರು ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮಕ್ಕೆ ಲಕ್ಷ್ಯಕೊಡಬೇಕು. [೩] ವಿಠ್ಠಲಭಾಯಿ ಪಟೇಲರ ನಿಧನದ ಬಗ್ಗೆ ದುಃಖ ಪ್ರದರ್ಶನ ಮಾಡಿದನಂತರ ಸಭೆ ವಿಸರ್ಜನೆಯಾಯಿತು.

ಪಟೇಲರ ಮರಣಕ್ಕಾಗಿ ದುಃಖಪ್ರದರ್ಶನ ಮಾಡುವ ಸಾರ್ವಜನಿಕ ಸಭೆ ೨೪ಕ್ಕೆ ಸೇರಿತ್ತು. ಶ್ರೀಯುತರಾದ ಗಂಗಾಧರರಾವ ದೇಶಪಾಂಡೆ, ಹುಬಲಗಿ, ಜೋಶಿ ಮೊದಲಾದವರ ಭಾಷಣಗಳಾದವು.

ಧಾರವಾಡ ಸ್ಕೂಲ ಬೋರ್ಡಿನ ದಾವೆ.

ಮಾಸ್ತರರೇ ಗೆದ್ದರು.

ಇಲ್ಲಿಯ ಪ್ರಾಥಮಿಕ ಶಾಲೆಯ ಗಾತ್ತಲ ಮಾಸ್ತರರು ಸ್ಕೂಲ ಬೋರ್ಡಿನ ಮೇಲೆ ಅನ್ಯಾಯವಾಗಿ ಪಗಾರದಲ್ಲಿ ಕಾಟ ಕಸರು ಮಾಡಿದರೆಂಬ ಕಾರಣ ದಾವೆಯನ್ನು ಮಾಡಿದ್ದರು. ಅದು ಇಲ್ಲಿಯ ಸಬ್ ಜಜ್ಜ ನಾಡಗೀರರ ಮುಂದೆ ನಡೆದು ಕೆಳಗಿನಂತೆ ತೀರ್ಪು ಹೇಳಲ್ಪಟ್ಟಿತು—

ಸ್ಕೂಲ ಬೋರ್ಡಿನವರು ಪಗಾರದಲ್ಲಿ ಕಾಟಕಸರು ಮಾಡಿದ್ದು ಬೇಕಾಯದೆಶೀರವಿರುತ್ತದೆ. ಆದ್ದರಿಂದ ಈಗ ಕಾಟಕಸರ ಮಾಡಿದ ಪಗಾರ ಹಾಗೂ ಬಡ್ಡಿಗಳು ಕೊಡಲ್ಪಡಬೇಕು.

ಈ ದಾವೆಯನ್ನು ವಾದಿಯ ಪತಿಯಿಂದ ಶ್ರೀ ಜಠಾರರು ಪ್ರತಿವಾದಿಯ (ಸ್ಕೂಲ ಬೋರ್ಡಿನ) ಪತಿಯಿಂದ ಸಂಜೀವರಾವ ಆಲೂರ ಇವರು ನಡಿಸಿದರು. ಇಷ್ಟಕ್ಕೆ ಮುಗಿಯದೆ ಇದು ಹಾಯಕೋರ್ಟಿನ ವರೆಗೆ ಹೋಗುವದೆಂದು ಕೇಳಿಕೆ ಇದೆ.

ಇಹವೃತ್ತ

ನಿನ್ನೆ ಸಾಯಂಕಾಲ ಬಹಳ ಮಳೆಯಾಯಿತು. ಮುಕ್ಕಾಲು ತಾಸಿನ ವರೆಗೆ ದಾರಿಗಳಲ್ಲಿ ನೀರು ಹರಿಯಿತು.

ಮೊನ್ನೆ ಮುನಸಿಪಾಲಟಿಯ ಸ್ಕೂಲ ಬೋರ್ಡಿನಲ್ಲಿ ಚೇರಮನ್ನರು ೫ ಘಂಟೆಯ ಸಭೆಯನ್ನು ೪॥ ಘಂಟೆಗೆ ಕೂಡಿಸಿದರಂತೆ. ಠರಾವನ್ನು ತಿರುವಿ ಇಟ್ಟಿದ್ದರೆಂಬ ಆರೋಪವಿದೆ. ಆದ್ದರಿಂದ ಎರಡನೆಯ ಬಣದ ಸಾಹೇಬರು ಪ್ರಸಿಡೆಂಟರನ್ನು ಕರೆದು ಠರಾವನ್ನು ಕೀಲಿ ಹಾಕಿದರು.

ಶ್ರೀ ವಿಠ್ಠಲಭಾಯಿ ಪಟೇಲರ ನಿಧನಕ್ಕಾಗಿ ದುಃಖ ಪ್ರದರ್ಶಿಸಲು ಸಾರ್ವಜನಿಕ ಸಭೆ ಕರೆದು ಕೂಡುವದಿದೆಯೆಂದು ಶ್ರೀ ಹುಕ್ಕೇರಿಕರ ರಾಮರಾಯರು ತಿಳಿಸಿದ್ದಾರೆ. ಸ್ಥಳ, ವೇಳೆಗಳು ಈ ಮುಂದೆ ಪ್ರಕಟಿಸಲ್ಪಡುವವು.

ಮಹಾತ್ಮರಿಗೆ ಕರ್ನಾಟಕದ ಆಮಂತ್ರಣ

ಕರ್ನಾಟಕ ಪ್ರಾಂತದ ಅಸ್ಪೃಶ್ಯತಾ ನಿವಾರಣಾ ಸಭೆಯು ಬೆಳಗಾಂವಿಯಲ್ಲಿ ೨೨ಕ್ಕೆ ಸೇರಿತು. ಮಹಾತ್ಮರು ಕರ್ನಾಟಕ ಪ್ರಾಂತವನ್ನು ಸಂಚರಿಸಬೇಕೆಂದು ಆಮಂತ್ರಣವು ತಂತಿಯಿಂದ ಕಳಿಸಲ್ಪಟ್ಟಿತು.

ವೀರಶೈವ ಮಹಾ ಸಭೆಯು

ಮಧ್ಯವರ್ತಿ ಸಭೆ

ತಾ ೨ ನಿನ್ನೆಯ ದಿವಸ ಸಭೆಯು ಇಂದು ಬೆಳಗ್ಗೆ ಮತ್ತೆ ಪ್ರಾರಂಭವಾಯಿತು. ಇಂದಾದರೂ ಸಭೆಗೆ ಬಹಳ ಜನರು ಬಂದಿದ್ದರು. ಗೊತ್ತುವಳಿಗಳನ್ನು ಕಾರ್ಯರೂಪಕ್ಕೆ ತರಲು ಒಂದು ಸಬ್ ಕಮಿಟಿಯು ಸ್ಥಾಪಿಸಲ್ಪಟ್ಟಿತು. ದಾನ-ದೀನ-ರಕ್ಷಣ] ಮ-ಠಯ್ಯಾ ಜಂಗಿನ (ಕರ್ನಾಟಕ ಏಕೀಕರಣ) ಮುಪ್ಪಪ್ಪ ಹರ್ಡೇಕರ ಮುರಘಯ್ಯಾ ಬಾಬೂಜಿ ಕರವೀರಪ್ಪ ಕಾಬೋರ್ಡಿ ನಾಗಪ್ಪ ಅಬ್ದುಲಪುರ ಮುಸಿಯಪ್ಪ ಚನ್ನಪ್ಪ ರಾಮಚೂರ ಚಂದ್ರಶೇಖರಯ್ಯಾ ಅಡ್ವೋಕೇಟ ದ ವಣಗೇರಿ ನಂಜುಂಡಯ್ಯ ವಕೀಲ ಹೊಸಮೇಟಿ ಮೊದಲಾದ ಸಭಾಸದರು ಇಳಿದ ಕೆಲಸಗಳನ್ನು ಮಾಡಬೇಕೆಂದು ಗೊತ್ತುವಳಿಯಾಯಿತು. ವೀರಶೈವ ಸಂಸ್ಕೃತ ವಿದ್ಯಾಲಯವನ್ನು ಏರ್ಪಡಿಸುವ ಯೋಜನೆಗೆ ನಾಲ್ಕು ಜನರ ಒಂದು ಮಂಡಲವು ಸ್ಥಾಪಿಸಲ್ಪಟ್ಟಿತು. ಹರ್ಡೇಕರ ಮಂಜಪ್ಪನವರ ಜನರಲ್ ಸೆಕ್ರೆಟರಿಗಳಾಗಿಯೂ ಕರವೀರಪ್ಪ ಕಾಬಡಗೀಯವರು ಅವರ ಸಹಾಯಕರಾಗಿಯೂ ನಿಯಮಿಸಲ್ಪಟ್ಟರು.

ಕೊಟ್ಟೂರಿನ ಪತ್ರ.

ಬಳ್ಳಾರಿ ಜಿಲ್ಲಾ ಹರಿಜನ ಸೇವಾಸಂಘದ ಕಾರ್ಯದರ್ಶಿಗಳಾದ ಶ್ರೀ ಕೇಶವರಾಯರು ಇಲ್ಲಿಗೆ (ತಾ॥ ೨೧) ಬಂದು ತಾಲೂಕ ಹರಿಜನ ಸೇವಾ ಸಂಘವನ್ನು ಸ್ಥಾಪಿಸಿದರು. ಕಾರ್ಯಕರ್ತರು ಒಂದು ವರ್ಷದವರೆಗೆ ಇರುವರು.

ತಾಲೂಕ ಹರಿಜನ ಸೇವಾಸಂಘ ಕೊಟ್ಟೂರು

ಅಧ್ಯಕ್ಷ:— ಸಣ್ಣರುದ್ರಪ್ಪ ಭದ್ರಶೆಟ್ಟಿ

ಕಾರ್ಯದರ್ಶಿ:— ಗೌಡಪ್ಪ ಬಣಗಾರ

೧ ಶ್ರೀ. ಹನುಮಣ್ಣ (ಹರಿಜನ) ೨ ಶ್ರೀ ಜಿ ಶರಣಪ್ಪ ೩. ಶ್ರೀ ಹನುಮಂತರಾವ ೪ ಶ್ರೀ ಚಿನ್ನಯ್ಯಾ ಇವರು ಸಭಾಸದರು.

ಹುಬ್ಬಳ್ಳಿಯಲ್ಲಿ ೨೪ನೇ ತಾ॥ ದಿವಸ ಮುಂಜಾನೆ ೭॥ ಗಂಟೆ ಸುಮಾರಕ್ಕೆ ದಾಜಿಬಾನ ಪೇಟೆಯಲ್ಲಿ ಒಬ್ಬ ವೃದ್ಧ ಮನುಷ್ಯನು ರಸ್ತೆಯಲ್ಲಿ ಏಕಾಏಕಿ ಬಿದ್ದು ಮೃತಪಟ್ಟನು.

ಪಟೇಲರ ಕೊನೆಯ ಸಂದೇಶ ಹಾಗೂ ಮುಖಂಡರ ಅಳಲು

"ಕನ್ನಡಿಗ" ನಿಗಾಗಿ ತರಿಸಿದ 'ಅಸೋಸಿಯೇಟೆಡ್ ಕಂಪನಿ'ಯ ತಂತಿಗಳು

ಮುಖಂಡರ ಅಳಲು.

ಕೈ. ಪಟೇಲರ ಬಗ್ಗೆ ಮಹಾತ್ಮರ ಪ್ರಶಂಸೆ.

ವರ್ಧಾ ತಾ ೧೫— ಅಸೋಸಿಯೇಟೆಡ್ ಪ್ರೆಸ್ ಸದ್ದಿಗಾರನು ದೇ ಪಟೇಲರ ಮರಣವನ್ನು ಕುರಿತು ಮಹಾತ್ಮರನ್ನು ಕಂಡು ಮಾತಾಡಲು ಅವರಂದದ್ದು ಹಿಂದುಸ್ಥಾನದ ದೆಸೆಯಿಂದ ಮೀರಿ ಕಷ್ಟಪಡುವ ಹಾಗೂ ಗಟ್ಟಿಗರಾದ ರಾಜಕಾರ್ಯ ನಿಷ್ಣಾತರನ್ನ ಒಬ್ಬರಾದರು. ಪಟೇಲರು ಇದ್ದದಂತೆ ... ಅವರ ಸ್ವಾರ್ಥತ್ಯಾಗ, ಕೈಕೊಂಡ ಕೆಲಸದ ವ್ಯವಹಾರಶಕ್ತಿ ಇವೆಲ್ಲವು ಪ್ರಶಂಸೆಗೆ ಮೀರಿದ ಗುಣಗಳಾಗಿದ್ದವು. ಅವರ ಕಾರ್ಯ ನಿರ್ವಹಣ ಸಾಮರ್ಥ್ಯವು ಅಗಾಧವಾಗಿದ್ದಿತು. ಮುಂಬೈ ಕಾರ್ಪೋರೇಶನ್ನಿನ ಅಧ್ಯಕ್ಷ ಮತ್ತು ... ಅಧ್ಯಕ್ಷರ ... ದಿನದ ಕೆಲಸವನ್ನೆಲ್ಲ ಎಳ್ಳಷ್ಟು ಬಿಡದೆ ಅವರು ಪೂರೈಸಿದರೆಂದು ಅನೇಕರು ಹೇಳುತ್ತಾರೆ. ನಿಜ ಈ ಸಂದುಕಟ್ಟಿನಲ್ಲಿ ಅವರ ಸಾವೆಂದರೆ, ಒದೆದು ಕಾಣುವಂಥ ಹಿಂದುಸ್ಥಾನದ ಹಾನಿ. ಬಾಬು ಸುಭಾಷ ... ದೇ. ವಿಠ್ಠಲಭಾಯಿಯವರ ಗಂಡಾಂತರದಲ್ಲಿ ಮೀರಿ ಶ್ರಮಪಟ್ಟು ಆರೈಕೆ ಮಾಡಿದ್ದಕ್ಕಾಗಿ ಅವರಿಗೆ ಧನ್ಯವಾದ ಕೊಡದೆ ನಾನು ಸುಮ್ಮನಿರಲಾರೆ. (ಅ ಪ್ರೆ ತಂತಿ)

ಶ್ರೀ ಭುಲಾಭಾಯಿ ದೇಸಾಯಿಯವರು:– ತಮ್ಮ ಮಿಕ್ಕ ಜೀವಮಾನವನ್ನು ದೇಶಕ್ಕಾಗಿ ... ಸ್ವಲ್ಪ ಜನರಲ್ಲಿ ವಿಠಲಭಾಯಿಯವರು ಒಬ್ಬರು. ಸ್ವತಂತ್ರ ಹಿಂದುಸ್ಥಾನದ ಪಾರ್ಲಮೆಂಟಿನ ಅಧ್ಯಕ್ಷರಾಗುವ ಪಟ್ಟಕ್ಕೆ ಅವರ ... ಇದ್ದಿತು. ಅವರಂಥ ಧೋರಣರು ನಮಗೆ ದೊರೆಯುವದು ಅಪರೂಪ.

ಬ್ಯಾ ಜಯಕರ:– ಹಿಂದುಸ್ಥಾನದ ದೆಸೆಯಿಂದ ಒದಗಿ ಬರುವ ಬಲ್ಲಿದ ... ಇಲ್ಲದಂತಾದರು.

ಮಿ ಎನ್ ಎಂ ಜೋಸಿ– ಶ್ರೀ ಪಟೇಲರು ಅಸೆಂಬ್ಲಿಯ ಕೆಚ್ಚೆದೆಯ ಅಧ್ಯಕ್ಷರಿದ್ದರು. ಅವರ ಸಾವೆಂದರೆ ಹಿಂದುಸ್ಥಾನಕ್ಕೆ ದೊಡ್ಡ ಹಾನಿ.

ಸರ ಹರಿಸಿಂಗ ಗೌರರು:– ಶ್ರೀ ಪಟೇಲರು ಸ್ವತಂತ್ರ ವೃತ್ತಿಯ ... ಅಸೆಂಬ್ಲಿಯ ಸ್ವಾತಂತ್ರ್ಯ ಮತ್ತು ಭಾರಣೆಯ ... ಅಧ್ಯಕ್ಷರೆಂದು ಅವರ ಹೆಸರು ... ಅಕ್ಷಯವಾಗಿ ಇದೆ ...ದಲ್ಲಿ ಅಡ್ಡಿ ಇಲ್ಲ.

ರಿಝರ್ವ ಬ್ಯಾಂಕ ಕಮಿಟಿಯ ಕೆಲಸ

ಹೊಸ ದಿಲ್ಲಿ ತಾ|| ೨೨— ರಿಝರ್ವ ಬ್ಯಾಂಕ ಕಮಿಟಿಯವರು ಹಲವು ಸಾಕ್ಷಿದಾರರನ್ನು ನಿಮಂತ್ರಿಸಬೇಕೆಂದು ನಿಶ್ಚಯಿಸಿದ್ದಾರೆ. ನಿಮಂತ್ರಿತ ಗೃಹಸ್ಥರಲ್ಲಿ ಇಂಪೀರಿಯಲ್ ಬ್ಯಾಂಕು, ಪಂಜಾಬ ನ್ಯಾಶನಲ್ ಬ್ಯಾಂಕು, ಸೆಂಟ್ರಲ್ ಬ್ಯಾಂಕು, ಬ್ಯಾಂಕ ಆಫ ಇಂಡಿಯಾ, ಅಲ್ಲದೆ ಕೆಲವು ಎಕ್ಸಚೇಂಜ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಸ್ವದೇಶಿಯ ಬ್ಯಾಂಕುಗಳು ಇವೇ ಮುಂತಾದ ಬ್ಯಾಂಕುಗಳಿಂದ ಪ್ರತಿನಿಧಿಗಳಿರುವರು. ಉಳಿದ ಸಾಕ್ಷಿದಾರರಲ್ಲಿ ಸರ ಆಸ್ಬೋರ್ನ ಸ್ಮಿಥರು, ಸರ ಪುರುಷೋತ್ತಮದಾಸ ... ರಾಯ ಒಹಾದ್ದೂರ ಬದ್ರಿದಾಸರು, ಪ್ರೊ ... ವಾಲಾ ಮತ್ತು ರಾಮದಾಸಪಂತಲು ಅವರಿರುವರು. (ಅ ಪ್ರೆ ತಂತಿ)

ಕೈ. ವಿಠ್ಠಲಭಾಯಿಯವರ ಬಗ್ಗೆ ಪ್ರಚಂಡ ಸಭೆ.

ಮುಂಬೈ ತಾ ೨೩ ನಿನ್ನೆ ಚೌಪಾಟಿಯ ಮೇಲೆ ಇಲ್ಲಿಯ ನಾಗರೀಕರ ಪ್ರಚಂಡ ಸಭೆಯು ಕೈ. ವಿಠಲಭಾಯಿ ಪಟೇಲರ ಮರಣದ ದೆಸೆಯಿಂದ ದುಃಖ ಪ್ರದರ್ಶಿಸಲು ಸೇರಿತ್ತು. ಮಿ ನಾರಿಮನ್ನರು ಅಧ್ಯಕ್ಷರಿದ್ದರು. ದೇ. ವಿಠಲಭಾಯಿಯವರ ಮರಣದ ನಿಮಿತ್ತ ಇಡೀ ಹಿಂದೂ ರಾಷ್ಟ್ರವೇ ಶೋಕಗ್ರಸ್ತವಾಗಿರುವದು. ಅವರ ಮರಣದಿಂದ ಹಿಂದುಸ್ಥಾನಕ್ಕೆ ಭಾರಿಯಾದ ಹಾನಿಯಾಗಿರುವದು. ದೇ. ಪಟೇಲರು ಮಹಾ ಪ್ರವೇಶಾಭಿಮಾನಿಗಳು. ಅಖಂಡವಾಗಿ ರಾಷ್ಟ್ರ ಹಿತ ಕಾರ್ಯದಲ್ಲಿ ಸೇವೆ ಸಲ್ಲಿಸಿದವರು. ತಮ್ಮ ಅಸಾಧಾರಣ ಬುದ್ಧಿಪ್ರಭೆಯಿಂದ ಹಿಂದೂಗಳ ಹೆಸರನ್ನು ಬೆಳಗಿಸಿದವರು. ಆದರಿಂದ ಇಂಥವರು ದೇಶಕ್ಕೆ ಮಾಡಿದ ಸೇವೆಯುಳ್ಳ ಸೇವೆಗಳಿಗೆ ಒಪ್ಪುವಂಥದೊಂದು ಸ್ಮಾರಕವನ್ನು ಮಾಡಬೇಕು. ಮತ್ತು ಅವರ ಮರಣದ ಸ್ಮೃತಿಗಾಗಿ ಒಂದು ಮಂಡಲ ಸ್ಥಾಪಿಸಬೇಕು, ಎಂಬುವ ಬಗ್ಗೆ ಮಹತ್ವದ ಠರಾವುಗಳಾದವು. ಈ ಸಭೆಯಲ್ಲಿ ಎಲ್ಲ ಸಮಾಜದ ಪ್ರತಿನಿಧಿಗಳು ದೇ. ಪಟೇಲರ ಬಗ್ಗೆ ಬೇರೆ ಬೇರೆ ಗುಣ ವರ್ಣಿಸಿದರು. ಅಧ್ಯಕ್ಷರಾದ ಶ್ರೀ ನಾರಿಮನ್ನರು ಅಂದದ್ದು — ದೇ ಪಟೇಲರು ಮಹಾ ಮಹಾ ದೇಶಭಕ್ತರ ಪರಿಕರವಾಗಿ ದೇಶಕ್ಕಾಗಿ ದುಡಿದವರು. ಮರಣವನ್ನು ಮರಣದಲ್ಲಿ ನೋಡೆಂಬುವ ಅವರ ಬಲು ಕೆಚ್ಚಿನಿಂದ ಸ್ವಾರ್ಥ ತ್ಯಾಗವನ್ನು ತಮ್ಮ ಹಿಂದೆ ತರುಣರಿಗಾಗಿ ಬಿಟ್ಟು ಹೋಗಿದಾರೆ. ಆದುದರಿಂದ ತರುಣರಿಷ್ಟು ದೇ. ಪಟೇಲರು ಸಂಪಾದಿಸಿದ ಸ್ವರಾಜ್ಯವನ್ನು ... ಪಟೇಕೆಂದರೆ, ಅವರಿಗಿಂತ ಮಿಗಿಲಾಗಿ ಮುಂದುವರಿಸಬೇಕು" ಇಂದಿನ ಮಾಳಗಾರರಲ್ಲಿ ಬ್ಯಾ ... ನೋಹತಾ ಶ್ರೀ ಜಮ್ನಾದಾಸ ದ್ವಾರಕಾದಾಸ ಶ್ರೀ ಲೀಲಾವತಿ ಮುನಶಿ, ಸರದಾರ ಜವಿಯರ್ ಸಿಂಗ ಮುಂತಾದವರು ... ದೇ. ಪಟೇಲರ ಶವವನ್ನು ಹಿಂದುಸ್ಥಾನಕ್ಕೆ ತಂದ ಇಲ್ಲಿಯೇ ಅಂತ್ಯವಿಧಿ ಮಾಡಲ್ಪಡುವದೆಂದು ಎಲ್ಲರಿಗೂ ತಿಳಿಸಲಾಯಿತು.

ಮುಂಬೈಯಲ್ಲಿರುವ ಪೂರ್ವ ಹಿಂದುಸ್ಥಾನ ... ಸಂಘದವರು ನಾಸಿಕ ಹರಿದ ಸೆಯಲ್ಲಿರುವ ಸರ್ದಾರ ವಲ್ಲಭಭಾಯಿಯವರಿಗೆ ದುಃಖ ಪ್ರದರ್ಶನದ ತಂತಿಯನ್ನು ಕಳಿಸಿದರು. [ಅ ಪ್ರೆ ತಂತಿ]

ಪುಂಡಗಾರನು ಸಿಕ್ಕನು.

ಪೆಶಾವರ ತಾ ೨೧— ಹಿಂದೀ–ಅಫಗಾಣ ಮೇರೆಯಲ್ಲಿ ಇಲ್ಲದ ಗೊಂದಲವೆಬ್ಬಿಸಲು ಲೇವಾಣಿ ಪಕೀರನೇ ಮುಖ್ಯ ಕಾರಣನೆಂದು ಈಗ ನಿಶ್ಚಿತವಾಗಿದೆ. ತಾರ್ಜನದಲ್ಲಿ ಹಿಡಿಯಲ್ಪಟ್ಟ ವೇಳೆಯಲ್ಲಿ ಅಫಗಾಣ ಸರಕಾರದವರ ಕ್ಷಮಾಪತ್ರವು ಈತನ ಕಿಸೆಯಲ್ಲಿ ಸಿಕ್ಕಿತು ಅವನನ್ನು ತಿರಿಗಿ ಅಫಗಾಣಿಸ್ಥಾನಕ್ಕೆ ಕಳಿಸುವ ವರ್ತಮಾನವಿದೆ. (ಅ ಪ್ರೆ ತಂತಿ)

ಅತ್ತೆಯ ಮನೆಗೆ ಹೊರಟ ಮೊದಲಗಿತ್ತಿ.

ಅಲ್ಹಾಬಾದ ತಾ. ... ದಕ್ಷಿಣಿಗರು ಶಮ್ಮ ಪತ್ನಿ ಶ್ರೀ ಕೃಷ್ಣಾ ನೆಹರು ಅವರೊಡನೆ ಅಹಮ್ಮದಾಬಾದಕ್ಕೆ ಹೊರಟರು. ಅವರನ್ನು ಕಳಿಸಲು, ಪಂ ಜವಾಹರಲಾಲ ಮತ್ತು ಬೇರೆ ಒಳಗಿನವರು ಸ್ಟೇಶನಕ್ಕೆ ಹೋಗಿದ್ದರು. (ಅ ಪ್ರೆ ತಂತಿ)

ಸಾಯುವಾಗ ಹಿಂದೀ ಸ್ವಾತಂತ್ರ್ಯದ ಪ್ರಾರ್ಥನೆ.

ಜಿನೀವಾ ತಾ ೨೨ ಅಸೆಂಬ್ಲಿಯ ಹಿಂದಿನ ಅಧ್ಯಕ್ಷರಾದ ಶ್ರೀ ವಿಠ್ಠಲಭಾಯಿ ಪಟೇಲರ ಪ್ರಕೃತಿಯು ... ನಡೆದು ಇಂದು ಮುಂಜಾನೆ ... ಘಂಟೆಗೆ ಹೃದಯ ಕ್ರಿಯೆ ನಿಂತು ಹೋದದ್ದರಿಂದ ಮರಣಹೊಂದಿದರು. ಬೆಳಿಗ್ಗೆ ಎರಡು ಗಂಟೆಯವರೆಗೆ ಅವರಿಗೆ ಪ್ರಾಣವಾಯುವನ್ನು ಪೂರೈಸಿದ್ದರಿಂದ ಕೊನೆಯವರೆ. ಅವರು ಎಚ್ಚರಿಕೆಯಿಂದಿದ್ದರು. ಸಾಯುವಾಗ ಅವರ ಬಳಿಯಲ್ಲಿ ಶ್ರೀ ಸುಭಾಷ ... ಮತ್ತು ಲೋಕಾವಾಲಾ ಇವರಿದ್ದರು.

ಪ್ರಾಣ ಬಿಡುವ ಮುಂಚೆ ಅವರು ಹಿಂದುಸ್ಥಾನಕ್ಕೆ ಕೊಟ್ಟ ಕೊನೆಯ ಸಂದೇಶ— **ಹಿಂದುಸ್ಥಾನ ಮತ್ತು ಪರದೇಶದಲ್ಲಿರುವ ನನ್ನ ಮಿತ್ರರಿಗೆಲ್ಲ ನನ್ನ ಆಶೀರ್ವಾದ, ಹಿಂದುಸ್ಥಾನಕ್ಕೆ ಬೇಗ ಸ್ವಾತಂತ್ರ್ಯ ಸಿಗಲೆಂಬುದೇ ದೇವರಲ್ಲಿ ನನ್ನ ಪ್ರಾರ್ಥನೆ**

ಖಾನ ಅಬ್ದುಲ ಗಫಾರಖಾನರ ಪ್ರಯಾಣ

ಪಾಟನಾ ತಾ ೨೧— ಖಾನ ಅಬ್ದುಲ ಗಫಾರಖಾನರು ಕಲಕತ್ತೆಗೆ ಹೋಗುವ ದಾರಿಯಲ್ಲಿ ನಿನ್ನೆ ಸಂಜೆ ಇಲ್ಲಿಗೆ ಬಂದರು. ಶನಿವಾರ ದಿನ ಸಂಜೆ ಇಲ್ಲಿ ನಾಗರಿಜನರ ಸಭೆಯೊಳಗೆ ಅವರ ವ್ಯಾಖ್ಯಾನವಾಯಿತು. ಅದರಲ್ಲಿ ಅವರು ಅಂದದ್ದು— ಹಿಂದೂ ಮಹಾಸಭೆ ಹಿಂದೂ ದೇಶದ ರಾಜಕೀಯ ಮೋಕ್ಷಕ್ಕಾಗಿ ಕೂಟ ಸಂಸ್ಥೆಯಲ್ಲ. ಹಿಂದೂ ಮುಸಲ್ಮಾನರ ದೇಶವೆಂಬುದು ಒಂದು ಕೊನೆಯು ... ಮುಸಲ್ಮಾನರ ಘೋರ ... ಇದರ ಫಲವೇ ಹಿಂದೂ ಮಹಾಸಭೆಯು ಹಿಂದೂಗಳ ಹಕ್ಕು ಹಾಗೂ ಹಿತ ಸಂರಕ್ಷಣೆ ಮತ್ತು ಅವರಲ್ಲಿ ಹಿಂದೂತ್ವದ ಭಾವನೆಯನ್ನು ಎಚ್ಚರಗೊಳಿಸುವದೇ ಮಹಾಸಭೆಯ ಗುರಿ. ಕಾಂಗ್ರೆಸಿನ ಧೋರಣೆ ಕಾರ್ಯಕ್ರಮ ಇವೆರಡರಲ್ಲಿಯೂ ಮಹಾತ್ಮರು ಮುಂದಾಳು. ಸೇವಾ ಜಿನ ಪರಿಷತ್ತಿನಲ್ಲಿ ಹಿಂದೂ-ಮುಸಲ್ಮಾನರ ಐಕ್ಯವೆಂದು ಕೊಳ್ಳೀ ದೆವ್ವದ ಬೆನ್ನು ಹತ್ತಿದ್ದು ತಪ್ಪಾಯಿತು.' (ಅ ಪ್ರೆ ತಂತಿ)

ಅಫಗಾಣ ಸರಕಾರದ ಮುಷ್ಯೈತ್ತಿಕೆ.

ಪೇಶಾವರ ತಾ|| ೨೧— ಅಫಗಾಣಿಸ್ಥಾನ ಸರಕಾರದವರು ಬಿನ್ನವಿಸಿಕೊಂಡ ಪ್ರಕಾರ ಲೇವಣಿ ಪಕೀರನು ಕಾಬೂಲಕ್ಕೆ ಕಳಿಸಲ್ಪಡುವನೆಂದು ತಿಳಿದಿದೆ. ಅವನನ್ನು ತಿರುಗಿಕೆ ಡುವ ಬಗ್ಗೆ ನಡೆದ ಮಾತುಕತೆಗಳು ಪೂರ್ಣವಾಗಿಲ್ಲ ಕಾಬೂಲದಿಂದ ಮನ್ನಣೆ ದೊರೆತ ಕೂಡಲೇ ಅವನನ್ನು ಅಫಗಾಣ ಸರಕಾರದವರ ಕಡೆಗೆ ಒಪ್ಪಿಸುವರು. ಈಗ ಫಕೀರನನ್ನು ಅಟಕ ಕಿಲ್ಲೆದಲ್ಲಿಟ್ಟಿದ್ದಾರೆ [ಅ ಪ್ರೆ ತಂತಿ)

ಅಸೆಂಬ್ಲಿ ಅಧ್ಯಕ್ಷರ ಕಚೇರಿಯು ಮುಚ್ಚಲ್ಪಟ್ಟಿತು.

ಹೊಸದಿಲ್ಲಿ ತಾ ೨೨ ಇಂದು ಅಸೆಂಬ್ಲಿಯ ಅಧ್ಯಕ್ಷರ ಕಚೇರಿಯು ಕೈ ವಿಠ್ಠಲಭಾಯಿ ಪಟೇಲರ ಮರಣದ ಬಗ್ಗೆ ಮುಚ್ಚಲ್ಪಟ್ಟಿತ್ತು ಈ ಕಚೇರಿಯನ್ನು ಹೊಸದಾಗಿ ಹುಟ್ಟಿಸಿದವರು ಪಟೇಲರೇ ಇಲ್ಲಿಯ ಕಾಲೇಜುಗಳು ತೆರೆದಿರಲಿಲ್ಲ ಇಂದು ದಿಲ್ಲಿಯಲ್ಲಿ ಹರತಾಳ ಪಾಲಿಸುವ ಪ್ರಯತ್ನ ನಡೆದಿದೆ

(ಅ ಪ್ರೆ ತಂತಿ)

ಪುಣೆಯಲ್ಲಿ ಪ್ಲೇಗನಿವಾರಣೆಗೆ ಚಲಚಿತ್ರ ಪಟಗಳು.

ಮುಂಬಯಿ ತಾ ೨೨ ಪುಣೆಯಲ್ಲಿ ತಾ|| ೨೦ಕ್ಕೆ ಮುಗಿದ ವಾರದಲ್ಲಿ ಪ್ಲೇಗ ಬೇನೆ ಒಂದವರ ಮತ್ತು ಮರಣ ಸಂಖ್ಯೆಯ ಪ್ರಮಾಣವು ಬಹಳ ಕಡಿಮೆಯಾಗಿದೆ. ಇದೇ ವಾರದಲ್ಲಿ ... ಮಂದಿಗೆ ಪ್ಲೇಗ ಬೇನೆಯು ಬಂದಿತು ಮತ್ತು ... ಮರಣಗಳಾದವು. ಕೋದ ವಾರದಲ್ಲಿ ೧೧೯ ಮಂದಿಗೆ ಬೇನೆಯು ಬಂದಿದ್ದು ೧೦೧ ಮರಣಗಳಾಗಿದ್ದವು. ಇಲಿ' ಮತ್ತು 'ಇಲಿಗಳ ಕಾಟವೆಂಬ' ಎರಡು ಚಲಚ್ಚಿತ್ರ ಪಟಗಳು ಜನರಿಗೆ ತೋರಿಸಲ್ಪಟ್ಟವು [ಅ ಪ್ರೆ ತಂತಿ]

ನರಿಮನ್ನರಿಗೆ ಮುಂಬಯಿಯಲ್ಲಿ ಸ್ವಾಗತ

ಮುಂಬೈ ತಾ. ೨೨ ಮುಂಬೈ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭಾಪತಿಗಳೂ, ಕಾಂಗ್ರೆಸ್ಸ ಕಾರ್ಯಕಾರಿ ಮಂಡಲದ ಮಾಜಿ ಸಭಾಸದರೂ ಆದ ಶ್ರೀ ನರೀಮನ್ನರು ವಿಜಾಪುರ ತುರಂಗದಿಂದ ಬಿಡುಗಡೆ ಹೊಂದಿ ಇಂದು ಮುಂಜಾನೆ ಮುಂಬೈಗೆ ತಲ್ಪಿದರು. ರೇಲ್ವೆ ಸ್ಟೇಶನ್ನಕ್ಕೆ ಅನೇಕ ಕಾಂಗ್ರೆಸ್ಸ ಭಕ್ತರು ಬಂದಿದ್ದು, ನರೀಮನ್ನರಿಗೆ ಪ್ರೇತ್ಯಪೂರ್ವಕವಾದ ಸ್ವಾಗತವನ್ನಿತ್ತರು. ನರಿಮನ್ನರು ಪೂಮಾಲೆಗಳಿಂದ ಪುನಃ ಪುನಃ ದೇಶ ಸೇವಿಕೆಯರಿಂದ ಸತ್ಕರಿಸಲ್ಪಟ್ಟನಂತರ ಊರಿಗೆ ಮೋಟಾರದಿಂದ ಹೋದರು [ಅ ಪ್ರೆ ತಂತಿ]

ಪತ್ರಿಕಗಳ ಅಭಿಪ್ರಾಯ

ಕಲಕತ್ತಾ, ತಾ|| ೨೨— ವಿ ಜೆ ಪಟೇಲರ ಮರಣದ ಬಗ್ಗೆ ಎಲ್ಲ ಪತ್ರಿಕೆಗಳೂ ವಿಷಾದ ವ್ಯಕ್ತಗೊಳಿಸಿವೆ 'ಸ್ಟೇಟ್ಸಮನ್' ಪತ್ರಿಕೆ ಬರೆದುದು— ಪಟೇಲರು ಹಿರಿದಾದ ಯೋಧ್ಧರು ಮಿತ್ರರೂ, ಶತ್ರುಗಳೂ ಸಹ ಅವರ ಬಗ್ಗೆ ವಿಷಾದ ಪಡಲೇಬೇಕು ಕಡೆ ಕಡೆಗೆ ಯಮನ ಗೊಡಲು ಅವರು ಬಹುಕಾಲ ಕಾದಾಡಿದ್ದು ವಿಶೇಷವೇ. 'ಅಮೃತಬಜಾರ'ವು ಅಂದದ್ದು— ರಾಷ್ಟ್ರದ ಸೇವೆಗಾಗಿ ವೇಣಬತ್ತಿಯ ಎರಡೂ ತುದಿಗಳಂತೆ ಆತ್ಮಸನ್ನೇ ಪಟೇಲರು ಆಹುತಿ ಕೊಟ್ಟರು. ಅವರ ಅಸ್ಥಿಗಳು ಕೂಡ ನಮಗೆ ಅತ್ಯಂತ ಮಹತ್ವದ ಭೌತಿಕ ಒಡವೆಗಳು [ಅ. ಪ್ರೆ. ತಂತಿ]

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡೆ ವಸ್ತು ಕಂಪನಿ)

ಹುಬ್ಬಳ್ಳಿ ತಾ|| ೨೨ ಮಧ್ಯಾಹ್ನ ೧೧ ಗಂಟೆ

ಜವಾರಿ ಹತ್ತಿ	೧೦೨–೧೦೩	ಜೋಳ	೧೩–೧೪
ಅಪ್ಲೆಂಡ ,,	೧೦೨–೧೦೪	ಗೋದಿ	೬||–೬||
ವಿಲಾಯತಿ ,,	೯೫–೯೭	ಉದ್ದು	೬|| ೮
ಮ್ಯಾಕ್ಸಾಸ,	೧೦೯–೧೧೦	ಕಡ್ಲಿ	೬
ಜೀನಅರಳಿ	೭೩–೭೪	ಕಡ್ಲಿ ಕಾ, ಹ್ಯಾಂ	೫||
ದಬ್ಬಲ್‌ಪೂಲ ಅ	೬೬–೬೭	ಶೇಂಗಾ ೧೩–೧೪	
ಸಾಜಿನ ಅರಳಿ	೬೬–೬೭	ಕುಸಬಿ	೧
ಬೆಸಲು ಅರಳಿ	೯ ೧೨		
ಶಿಂಗಾಪುರಿಯ ಹೊ	೪–೪||	ಹತ್ತಿಕಾಳು	

ಬೆಳ್ಳಿ ಬಂಗಾರ

ಬಂಗಾರ	೩೧||=	ಬೆಳ್ಳಿ	

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ ದಂತಮಂಜನ.



ಡಾ|| ಕುಲಕರ್ಣೀಜ
ಲೆಬೊರೋಟರಿ ಮುಂಬೈ
ನಂಬ ೩
ಬಾಟ್ಲಿಗೆ ೧-೨-೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸೆರಗು, ಬಿಳೀಸೆರಗು, ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ ನರಸ್ನೋವು ಅಶಕ್ತತಾ ... ಗರ್ಭಸಂಬಂಧಿ ಎಲ್ಲ ವಿಕಾರಗಳು ... ಬಾಣಂತಿತನ ಆದ ... ಪ್ರಕೃತಿ ... ಸದೃಢ ಆಗುತ್ತದ.

ಬಿ ಟಿ ಕೆರೂರ ಬ್ರಾಂಡ ಸನ್ಸ,
ನೆಶನಲ್ ಸ್ಟೋರ್ಸ ಬಾಗಲಕೋಟ.
೧೮-೭

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡುಯವರ

ಮೇಹಸಂಜೀವನೀ ಯೆಣ್ಣೆ

ಪತಿವ್ರತೆಯಾದ ತನ್ನ ಹೆಂಡತಿಯ ಸ್ಥಿತಿಯು ಅತಿ ಕುಚೇಷ್ಟೆಗಳಿಂದ ಅನರ್ಥಕ್ಕೆ ಒಳಗಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟ ಸ್ತ್ರೀಯರಲ್ಲಿ ತಮ್ಮ ... ಕಾಲ ಕಳೆಯುವದು ... ಬಿಳುಪು, ಭಗಂದರ, ... ಟುಕಿ ಪರಮ, ಸವಿತ್ರ ಮುಂತಾದ ರೋಗಗಳ ... ನಿರಂತರವೂ ಬಾಧೆಪಡುತ್ತಿರುವ ನಮ್ಮ ಜೀವಿಗಳಾದ ಯಾವನಸ್ಥರಿಗೆ ಈ ಔಷಧವು ಅಮೃತ ಕಲಶವಿದ್ದಂತೆ ನವಜೀವನವನ್ನೇ ಕಲ್ಪಿಸತಕ್ಕದ್ದಾಗಿರುವದು ತಕ್ಕ ಔಷಧ ಬೀಳದಿದ್ದರೆ ದೆಹಕ್ಕಾವರಿಸಿರುವ ಮೇಹರೋಗವು ತಲೆತಲಾಂತರಗಳವರೆಗೂ ಹಬ್ಬುತ್ತಾ ತನ್ನ ಕಾರ್ಯವನ್ನು ಆ ವಂಶದಲ್ಲಿ ನೆಲೆಗೊಳಿಸುವದೆಂಬುದೇ ವೈದ್ಯಶಾಸ್ತ್ರಜ್ಞರ ತಾತ್ಪರ್ಯವಾಗಿದೆ ಈ "ಮೇಹಸಂಜೀವನೀ ಯೆಣ್ಣೆ"ಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸಿರುವ— ಬಿಳುಪು, ಕೆಂಪು, ಹಸರು ಮುಂತಾದ ಹಲವು ವಿಧ ಪ್ರಮೇಹರೋಗಗಳು, ಉರಿಮೂತ್ರ, ಮೂತ್ರಕೃಚ್ಛ್ರ, ಮೇಹಚಳುಕು, ಮೇಹಬಟ್ಟೆಗಳು, ನಭಿವ್ರಣ, ಮೇಹವಾಯು, ಕೊಡೆಬಾಳ, ಭಗಂದರ, ಟುಕಿ, ಸವಿತ್ರ ಮುಂತಾದ ಜಾಡ್ಯಗಳು ಬುಡದೊಂದಿಗೆ ನಷ್ಟವಾಗುವವಲ್ಲದೆ ಈ ಯೆಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಪ್ರಾಪ್ತವಾಗುವ ಅಕ್ರಮ ಋತುವಾಗುವಿಕೆ ಋತುಶೂಲೆ, ಪ್ರದರ ಮುಂತಾದ ರೋಗಗಳು ನಿರ್ಮೂಲವಾಗುವವು ಕ್ರಯ ಶೀಸೆ ೧ಕ್ಕೆ ೨—೦—೦

ಯೋಗ್ಯತಾಪತ್ರಗಳು— (೧) ನಿಮ್ಮ ಮೇಹಸಂಜೀವನೀ ಯೆಣ್ಣೆಯನ್ನು ತರಿಸಿ ಉಪಯೋಗಿಸಿ ನೋಡಿದಲ್ಲಿ ತುಂಬಾ ಪ್ರಯೋಜನವು ಕಂಡುಬಂದದ್ದರಿಂದ ಈ ಯೆಣ್ಣೆಯನ್ನು ನನ್ನ ವೈದ್ಯಶಾಲೆಯಲ್ಲಿ ಹೆಚ್ಚು ಖರ್ಚಾದೀತೆಂದು ಯೋಚಿಸುವೆನು ಮ|| ರಾ|| ಕೆ ಎಸ್ ಗೋವಿಂದಶಾಸ್ತ್ರಿ, ಆಯುರ್ವೇದ ಭೂಷಣ, ಆರೋಗ್ಯಾಶ್ರಮ, ಕೊಡಿಯಾಲ್‌ಬೈಲ ಪೋಸ್ಟ್, ಮಂಗಳೂರು (೨) ನಿಮ್ಮ ಮೇಹಸಂಜೀವನೀ ಯೆಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಿಗಳ ಕೃತಜ್ಞತೆಗೆ ಪಾತ್ರನಾಗಿರುವೆನು ಮ|| ರಾ|| ಉಗ್ಗಪ್ಪು ಕೋಡಿ ಅಣ್ಣಭಟ್ಟ ವೈದ್ಯ, ಕೆಲಿಂಜಗ್ರಾಮ, ವಿಟಲ್‌ಪೋಸ್ಟ್, ದಕ್ಷಿಣ ಕನ್ನಡ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು,
ಆಂಗ್ಲೋ ಭಾರತೀ ವೈದ್ಯಶಾಲಾ
೪೫೧, ಹಲಸೂರುಪೇಟೆ, ಬೆಂಗಳೂರು ಸಿಟಿ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜೀರ್ಣ ಅರ್ಧ ಶಿವ ... ಯಿಂದ ಕಳೆಯುತ್ತೇವೆ ... ಕಮ್ಮಿತ್ತು ... ಪೆಟ್ಟಿ ಬೇರೆ
ವ್ಯಾನೇಜರ್—ರಾಘವ ಭಾವ ಕಾಸಿ ಗೋಕಾಕ
ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಹೊರಸ್ಥಳದವರಿಗೆ
ತಿಂಗಳಿ	೧-೭-೬	೦-೧೩-೦
೪ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೦-೦	೫-೦-೦
ವರ್ಷಕ್ಕೆ	೦-೫-೦	೯-೦-೦

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ
೧೪ ೦ ೩೩ ಗದಗ ಶ್ರೀ ದತ್ತಾತ್ರೇಯ ಬುಕ ಡಿಪೋ
ಕಹಾಪುರ ಪೇಟೆ ಗದಗ

ಜನಪದ ಹಿತವನ್ನು ಸಾಧಿಸುವ ಪ್ರಮುಖ ರಾಷ್ಟ್ರೀಯ ಸಚಿತ್ರ ವಾರಪತ್ರಿಕೆ

'ಅರುಣೋದಯ'

ಸಂಪಾದಕರು— ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ ಎಲ್‌ಎಲ್ ಬಿ
ವಾರ್ಷಿಕ ೩-೮-೦ ಮು. ಅ ೨-೧೨-೦ ವ್ಹಿ ಪಿ

ಇದರಲ್ಲಿ ಸುಪ್ರಸಿದ್ಧ ವಿದ್ವಾನ್ ಲೇಖಕರ ವಿವಿಧ ವಿಷಯಗಳ ಮೇಲೆ ವಿಚಾರ ಪರಿಪ್ಲುತವಾದ ಲೇಖನಗಳು ಬರುವವಲ್ಲದೆ ದೇಶವಿದೇಶಗಳ ಮಹತ್ವದ ಸಂಗತಿಗಳು ಪ್ರತಿವಾರದಲ್ಲಿಯೂ ಕೊಡಲ್ಪಡುವವು ಉದ್ಬೋಧಕವಾದ ಸಣ್ಣ ಸಣ್ಣ ಕಥೆಗಳೂ ರಸಭರಿತವಾದ ಕವಿತೆಗಳೂ ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಸೃಷ್ಟಿಚಮತ್ಕಾರಗಳೂ ಶಾಸ್ತ್ರೀಯ ಶೋಧಗಳೂ ಕಾಲಕಾಲಕ್ಕೆ ಕೊಡಲ್ಪಡುವವು ಇಡೀ ಕರ್ನಾಟಕದಲ್ಲಿ ಇದು ಪ್ರಚಾರವಿರುವದರಿಂದ ವ್ಯಾಪಾರಸ್ಥರಿಗೆ ಪ್ರಚಾರಕ್ಕೆ ಉತ್ತಮ ಸಾಧನ ಕಾಯಮ ಜಾಹಿರಾತದಾರರಿಗೆ ವಿಶೇಷ ಸವಲತ್ತು ದೊರೆಯುವದು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ಕಳಿಸಿಕೊಳ್ಳಬೇಕು ವ್ಯಾನೇಜರ
'ಅರುಣೋದಯ' ಬೆಳಗಾವ

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ
ಸಂಪಾದಕರು— ಮೊಹರೆ ಹಣಮಂತರಾಯರು

ಸಪ್ಟೆಂಬರ ೩ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡಹತ್ತಿದೆ ವಿಚಾರ ಪರಿಪ್ಲುತವಾದ ಲೇಖಗಳೂ, ಖಂಡ ತುಂಡಿನ ನುಡಿಗಳೂ, ಬಿಸಿ ಬಿಸಿ ಸುದ್ದಿಗಳು ಬೇಕಾಗಿದ್ದರೆ ಇಂದೇ ಓದಿರಿ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೧೩—೦
ವ್ಯವಸ್ಥಾಪಕರು— '**ಕರ್ನಾಟಕ ವೈಭವ**' ವಿಜಾಪುರ.

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಂ. ಬಿ. ೨೭೮೮ यथत् परवशं दुखं । यद्यदात्मवशं सुखम्॥मनु· ನಿತ್ಯ ...

ಕನ್ನಡಿಗ

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

...ಕರು:— ಅಲೂರ ವೆಂಕಟರಾಯರು.

[... ೧೦] ಧಾರವಾಡ – ಗುರುವಾರ ಕಾರ್ತಿಕ ಶುದ್ಧ ೮ ಶಕೆ ೧೮೫೫ ತಾ॥ ೨೬-೧೦-೩೩ [ಸಂಚಿಕೆ ೧೫೫

...ನಸ್ಸ್ಯುಅರನ್ಸ

...ವಿಮೆ ಇಳಿಸಲು
...ಯುನಾಯಿಟೆಡ್
...ಟಕ ಇನಸ್ಸ್ಯುಅರನ್ಸ
ಕಂಪನಿಯೇ
...ತ್ತಮವಾದುದ್ದು.

ಇನಸ್ಸ್ಯುಅರನ್ಸ

ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇವರಲ್ಲಿಯೇ ವಿಮೆ ಇಳಿಸಿರಿ

ನಕಲೀ ಮಾಲಿಗೆ ಮೋಸಹೋಗಬೇಡಿರಿ!

...ಅತ್ಯುತ್ತಮ ದರದಲ್ಲಿ ಸೂವಿ



ನ್ಯೂ ಓರಿಯಂಟಲ್ ಕಂ.

“ ನೀಲಗಿರಿ ಎಣ್ಣೆ ”

...ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ...ತ, ಎದೆನೋವು, ತಲೆನೋವು, ಛಳಿಜ್ವರ, ಮೊಣಿಗೆನೋವು, ಕೆಮ್ಮು ಕಿವಿ ಸೋರು ...ಕ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋ ...ಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕೆ. ಟೋಣಪಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

“ ಬದರೀ ನಾರಾಯಣನ ದರ್ಶನ ”

...ಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗು ...ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ...ಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಭರಿಸಲ್ಪಟ್ಟಿದೆ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶೆಗಳಿರುವವು. ೦-೬-೬ ಮಾತ್ರ, ಅಂಚೆಖರ್ಚು ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

...ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿ ...ಗಾಗಿ ಬರೆಯಿರಿ

ಧಾರವಾಡ ತಾ॥ ೨೫ ೮ ೩೩ } ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ

ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು. ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿ... ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆ...

...ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಕರ್ನಾಟಕ ಟಾಯಿಮ್ಸ.

ಸಂಪಾದಕರು:— ಎಚ್. ಎಸ್ ಶಿವಲಿಂಗಶಾಸ್ತ್ರಿಗಳು.

ಕಳೆದ ಹನ್ನೆರಡು ವರ್ಷಗಳಿಂದ ಬಂದುಳಿವವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ.

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಭಯ ಪಕ್ಷ... ಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ:— ಸ್ಥಳಿಕರಿಗೆ –೧೩ ೦ ಪರಸ್ಥಳದವರಿಗೆ ಅಂಚೆ ಮಾಸ್ಟ ಸೇರಿ ರೂ. ೩—೧೨ ೦

ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸ ಕಾರ್ಯಾಲಯ ಧಾರವಾಡ.

ಮುದ್ದಣ್ಣ ಕವಿಯ ಹೊಸ ಪರಿಚಯ.

[ಮೊನ್ನೆ ಮೊನ್ನೆ ರಾಂತೇಶವಾಚನಾಲಯದವರಿಂದ ಏರ್ಪಡಿಸಲ್ಪಟ್ಟ ಮುದ್ದಣ್ಣ ಕವಿಯ ಉಪನ್ಯಾಸಗಳ ಕಾರ್ಯಕ್ರಮದಲ್ಲಿ ಶ್ರೀ ಪಂಜೇ ಮಂಗೇಶರಾಯರು ಮಾಡಿದ ಭಾಷಣದ ಸಾರಾಂಶವು]

ಲೇಖಾಂಕ ೧.

ಮುದ್ದಣ್ಣ ಕವಿಯು ದಕ್ಷಿಣ ಕನ್ನಡದವನು ನಾನೂ ದಕ್ಷಿಣ ಕನ್ನಡದವನೇ ಮೇಲಾಗಿ ನಾವೀರ್ವರು ಒಂದೇ ಶಿಕ್ಷಣ ಶಾಲೆಯಲ್ಲಿ ಕೆಲಸ ಮಾಡಿದವರು ಆದುದರಿಂದ ಆತನಿಗೂ ನನಗೂ ತುಂಬಾ ಪರಿಚಯ ಆದರೆ ಆತನು ಇಂತಹ ಅಸಾಮಾನ್ಯ ಕವಿಯಾಗಿರಬೇಕೆಂಬ ಅರಿವು ನನಗೆ ಆತನ ಜೀವಮಾನ ಕಾಲದಲ್ಲಿ ಇರಲಿಲ್ಲ ಶಬ್ದಮಣಿದರ್ಪಣ ಶಬ್ದಾನುಶಾಸನ ಕಿಟೆಲ್ ನಿಘಂಟುಗಳ ಸಂಗಡ ಆತನು ಕನ್ನಡದ ಪ್ರಾಚೀನ ಗ್ರಂಥಗಳನ್ನು ಓದಿರಬಹುದು ವ್ಯಾಸಂಗಮಾಡಿರಬಹುದು. ಆದರೆ, ಅಷ್ಟರಿಂದಲೇ ಆತನು ಇಂತಹ ಪ್ರಚಂಡ ಕವಿಯಾದನೆಂದು ಹೇಳಲು ಬರಲಾರದು. ನಾನು ಆತನ ಐದರಷ್ಟು ಪುಸ್ತಕಗಳನ್ನಾದರೂ ಓದಿದ್ದೇನೆಂದು ಹೇಳಬಲ್ಲೆ. ಹತ್ತು ಹದಿನೈದು ಮಡಿಯಷ್ಟು ಪುಸ್ತಕಗಳನ್ನು ಅರೆದುಕೊಂಡು ಕುಡಿದಂತೆ ಓದಿದವರೂ ಇಲ್ಲಿ ಅನೇಕರಿರಬಹುದು. ಆದರೆ ಅಷ್ಟರಿಂದ ನಾವೆಲ್ಲರೂ “ ಮುದ್ದಣ್ಣ ” ನಂಥಹ ಕವಿಗಳಾಗುವದು ಸಾಧ್ಯವಿಲ್ಲ, ಅವನು ಶಾರದೆಯ ಚೊಚ್ಚಲುಮಗನು ಅವಳ ಕರುಳಿನ ಕಕ್ಕುಲತೆಯ ವರಪ್ರಸಾದವನ್ನು ಹೊಂದಿದವನು. ಅವಳ ಕರುಣಾಕಟಾಕ್ಷದಿಂದಿಳಿದ ಅಮೃತಗಂಗೆಯಲ್ಲಿ ಯಥೇಚ್ಛ ಈಜಾಡಿ ಅವಗಾಹನ ಮಾಡಿದವನು ಆದುದರಿಂದಲೇ ಆತನು ಇಡೀ ಕನ್ನಡನಾಡಿನಲ್ಲಿ ಅರ್ವಾಚೀನ ಕವಿಕುಲ ಲಲಾಮನಾಗಿ ಹೋಗಿದ್ದಾನೆ. ಬರಿಯ ಪುಸ್ತಕಗಳ ಪಠಣದಿಂದ ಈ ಶ್ರೇಷ್ಠಪದವಿಯು ದೊರೆಯದು, ಅನನ್ಯ ಮನಸ್ಕರಾಗಿ ಶಾರದಾ ಮಾತೆಯ ಉಪಾಸನೆಯನ್ನು ಜನ್ಮ ಜನ್ಮಾಂತರಗಳಲ್ಲಿ ಮಾಡಿದ ಮಹಾಪುರುಷರಿಗೆ ಮಾತ್ರ ಆ ಸ್ಥಾನವು ದೊರೆಯಬಹುದು

ಕನ್ನಡನಾಡು ಕವಿತೆಯ ಬೀಡು; ಕವಿಗಳ ನಾಡು; ಪ್ರತಿಭೆಯ ತವರುಮನೆ ಎಂಬುದು ಪ್ರಸಿದ್ಧವಾಗಿದೆ. ಆದರೆ ನಮ್ಮ ಪುರಾಣ ಕವಿಗಳೆಲ್ಲ ಕಾವ್ಯ ನಿರ್ಮಾಣ ವಿಷಯದಲ್ಲಿ ಒಂದು ಬಗೆಯ ನಿಯಮಾವಲಿಗೆ ಕಟ್ಟುಬಿದ್ದವರು. ಗಣಪತಿ ವಾಯು ಶಾರದೆ, ಇನ್ನೂ ಹಲಕೆಲವು ದೇವಗುರುದ್ವಿಜಾದಿಗಳ ಆಶೀರ್ವಾದವನ್ನು ಕೋರುವದು; ಬಳಿಕ ಒಂದು ಬಗೆಯ ಆತ್ಮಪ್ರೌಢಿಯ ವರ್ಣನೆ, ಕೊನೆಗೆ ಕುಕವಿಗಳ ಹಾಗು ಚಿಕಿತ್ಸಕರ ವಿಷಕರ ನಿರ್ಭರ್ತ್ಸನೆ ಇಷ್ಟೆಲ್ಲಾ ಆದ ಬಳಿಕ ಕಾವ್ಯಾರಂಭ ಇದು ಬಹುಶಃ ನಮ್ಮ ಪ್ರಾಚೀನ ಕವಿಗಳ ಪರಂಪರೆ ಆದರೆ ಮುದ್ದಣ್ಣನು ಈ ಪರಂಪರೆಯ ಪರಿಯನ್ನು ಹರಿದು ಒಗೆದಿದ್ದಾನೆ. ತನಗೆ ಹೊಳೆದ ಹೊಸದೊಂದು ದಾರಿಯಿಂದ ಕಾವ್ಯ ನಿರ್ಮಾಣದ ಹೊಸ ಪರಿಯನ್ನು ಕನ್ನಡಿಗರಿಗೆ ತೋರಿಸಿಕೊಟ್ಟಿದ್ದಾನೆ ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಕಂಡುಬರುವ ಅಸ್ವಾಭಾವಿಕ ರ ಶಬ್ದಾಲಂಕಾರಗಳ ಪ್ರತಿಬಿಂಬವು ಈತನ ಶ್ರೀರಾಮಪಟ್ಟಾಭಿಷೇಕದಲ್ಲಿ ಕಂಡು ಬರುತ್ತದೆ ಆದರೆ ಅದು ಆತನ ಹೊಸಕಾವ್ಯ ಅನಲ್ಲ ಮೊದಲು ರತ್ನಾವಳೀ ಕಲ್ಯಾಣ, ಕುಮಾರವಿಜಯ ಎಂಬ ಎರಡು ಯಕ್ಷಗಾನ ಪ್ರಬಂಧಗಳನ್ನೇನೋ ಆತನು ಬರೆದಿರುವನು, ಅದ್ಭುತ ರಾಮಾಯಣವೂ ಈತನದೊಂದು ಉದ್ದಾಮ ಕಾವ್ಯವಾಗಿದೆ ಆದರೆ ರಾಮಾಶ್ವಮೇಧವು ಇವನ ಕಾವ್ಯಗಳೊಳಗೆ ಮುಕುಟಮಣಿ. ಅದು ಹೇಗೆಂಬುದನ್ನು ತುಸು ವಿಚಾರಿಸುವಾ.

ಪ್ರಾಚೀನ ಕಾವ್ಯನಿರ್ಮಾಣ ಶಾಸ್ತ್ರದಿಂದ ಪರಂಪರೆಯ ಕಟ್ಟನ್ನು ಈತನು ಹರಿದೊಗೆದನೆಂಬುದು ಇಲ್ಲಿ ಒಡೆದು ಕಾಣುವದು ಪ್ರಚಂಡ ಮಳೆಗಾಲದ ಮನೋಹರ ವರ್ಣನೆಯಿಂದ ರಾಮಾಶ್ವಮೇಧವನ್ನಾರಂಭಿಸಿದ್ದಾನೆ ಮಳೆಗಾಲಕ್ಕೆ ದುರ್ದಿನವೆನ್ನುವದುಂಟು. ಆದರೂ ಇದರ ಪ್ರಚಂಡವೂ ಪ್ರಬಲವೂ ಕೌತುಕಾಸ್ಪದವೂ ಆದ ಸ್ವರೂಪವನ್ನು ಕಣ್ಣಾರೆ ಕಾಣಬೇಕಾದರೆ ನಮ್ಮ ದಕ್ಷಿಣ ಕನ್ನಡಕ್ಕೇ ಹೋಗಬೇಕು ನೋಡಿರಿ! ಅಲ್ಲಿಯ ಬಿರು ಯಥಾರ್ಥ ಪ್ರತಾಪವು ಕಣ್ಣಿಗೆ ಬೀಳುವದು. ಆ ಪ್ರತಾಪವನ್ನೆ ಮುದ್ದಣ್ಣನು ಅತಿಯಲ್ಲಿ ಹೃದಯಂಗಮವಾಗಿ ವರ್ಣಿಸಿದ್ದಾನೆ ಹೀಗೆ ಕೃತಿಯನ್ನಾರಂಭಿಸುವದು ಕವಿಗೆ ಅಶುಭವೆಂದು ಹೇಳುವದುಂಟು. ಮಹಾರಾಷ್ಟ್ರದ ಅಣ್ಣಾ ಕಿರ್ಲೋಸ್ಕರರು ತಮ್ಮ ರಾಮರಾಜ್ಯ ವಿಯೋಗ ನಾಟಕದ ಸಂವಿಧಾನಕವನ್ನು “ ಸುಟಲಾ ಪಿತೃದಿಕೇಚಾ ವಾರಾ ” ಎಂಬ ಮಂಗಲದ ವರ್ಣನೆಯ ಪದ್ಯದಿಂದಲೇ ಪ್ರಾರಂಭಿಸಿರುವದರಿಂದ ಅದೇ ಅವರ ಕೊನೆಯ ನಾಟಕವಾಯಿತೆಂದು ಹೇಳುತ್ತಾರೆ ನಮ್ಮ ಮುದ್ದಣ್ಣನಿಗೂ ಹೀಗೇ ಆಯಿತೇನೋ ತಿಳಿಯದು ಇಂಗ್ಲಿಷ ವಿದ್ಯಾಭ್ಯಾಸದ ವಿಶೇಷ ಪರಿಚಯ ಕೂಡಾ ಇಲ್ಲದೆ ಪಾಶ್ಚಾತ್ಯ ಗ್ರಂಥಕಾರರಲ್ಲಿ ಸಾಮಾನ್ಯವಾಗಿ ಕಂಡುಬರುವ ಈ ಪದ್ಧತಿಯು ಮುದ್ದಣ್ಣನ ಪ್ರತಿಭೆಗೆ ಎಲ್ಲಿಂದ ಹೋಯಿತೆಂಬುವದನ್ನು ಹೇಳಲಾಗದು.

(ಮುಂದೆ ಸಾಗುವದು)

ತಿದ್ದುಪಡೆ.

ನಿನ್ನಿನ ಸಂಚಿಕೆಯಲ್ಲಿ ‘ಅಶ್ವತ್ಥ ನರಸಿಂಹ ದೇವಸ್ಥಾನ’ಎಂಬ ಲೇಖದಲ್ಲಿ ಅನಂತಾಚಾರ್ಯ ಹಟ್ಟಿಹೊಳ್ಳಿ ಹೆಸರಿನ ಕೆಳಗೆ “ಶ್ರಾವ ಮಂಡಳ ಚಿಟ್ಣೀಸ” ಎಂದು ಬಿದ್ದಿದೆ ಆದರೆ ಅದು ವಾಮನರಾವ ಕುಲಕರ್ಣಿ ಇವರ ಹೆಸರಿನ ಕೆಳಗೆ ಪ್ರಕಟವಾಗಬೇಕಾಗಿತ್ತು

ಕನ್ನಡಿಗ.

ವಾರ ತಾರೀಖು ೨ - ೧೯೩೩

ರಿಝರ್ವ ಬ್ಯಾಂಕು.

ಹಿಂದುಸ್ಥಾನಕ್ಕೆ ಹೊಸ ರಾಜಕೀಯ ಸುಧಾರಣೆಗಳನ್ನು "ಈಗ ಕೊಡುವೆವು, ಇದೀಗಲೆ ಕೊಡುವೆವು" ಎಂದು ಬ್ರಿಟಿಶರು ಹೇಳುತ್ತ ೪೬ ವರ್ಷಗಳಾಗಿ ಹೋದವು. ಈ ವಿಷಯದಲ್ಲಿ ಅವರು ತೋರಿಸುವ ಗಡಬಿಡಿಯನ್ನು ನೋಡಿದರೆ "ಪಾಪ, ಹಿಂದುಸ್ಥಾನಕ್ಕೆ ಅತಿ ಶೀಘ್ರವಾಗಿ ರಾಜಕೀಯ ಸುಧಾರಣೆಗಳನ್ನು ಕೊಡಲು, ಎಷ್ಟು ಉತ್ಸುಕರಾಗಿರುವರು" ಎಂದು ಸಕೃದ್ದರ್ಶನಕ್ಕೆ ತೋರುವುದು. ಆದರೆ, ಮದುವೆಯ ಮನೆಯ ಪುರೋಹಿತನ ಗಡಬಿಡಿಯಂತೆ ಈ ಗಡಬಿಡಿಯೆಲ್ಲವೂ ಬಾಯಿಯಲ್ಲಿಯೇ ಉಳಿಯುತ್ತದೆ. ಕೃತಿಯನ್ನು ನೋಡಿದರೆ, ಅದರಲ್ಲಿ ಗಡಬಿಡಿಯೇನೂ ಕಾಣುವುದಿಲ್ಲವೆಂಬುದಷ್ಟೇ ಅಲ್ಲ, ಬುದ್ಧಿಪೂರ್ವಕವಾಗಿ ಒಂದಿಲ್ಲೊಂದು ನೆವದಿಂದ ರಾಜಕೀಯ ಸುಧಾರಣೆಯನ್ನು ಕೊಡುವ ಕಾಲವನ್ನು ಆದಷ್ಟು ಮುಂದಕ್ಕೆ ತಳ್ಳುವ ಪ್ರಯತ್ನವು ನಡೆದಿರುವುದೆಂಬುದು ಗೊತ್ತಾಗುವುದು. ಮಧ್ಯವರ್ತಿ ಸರಕಾರದಲ್ಲಿ ಲೋಕಮತಕ್ಕೆ ಜವಾಬದಾರಿಯುಳ್ಳ ರಾಜ್ಯವ್ಯವಸ್ಥೆಯನ್ನು ಕೊಡುವ ಮುಂಚೆ ಹಿಂದುಸ್ಥಾನದಲ್ಲಿ 'ರಿಝರ್ವ ಬ್ಯಾಂಕು' ತೆಗೆಯುವುದು ಅವಶ್ಯವಿರುವುದೆಂಬುದೊಂದು ನೆವವನ್ನು ಬ್ರಿಟಿಶರಲ್ಲಿ ಕೆಲವರು ಹೂಡಿದರು. ಇದಕ್ಕೆ ಕಾರಣವೇನೆಂದರೆ ಹಿಂದುಸ್ಥಾನವು ಇಂಗ್ಲಂಡಕ್ಕೆ ವಿಪರೀತ ಸಾಲವನ್ನು ಕೊಡಬೇಕಾಗಿರುವುದು. ಇಂಗ್ಲಿಷ ಜನರು ಇಲ್ಲಿಯ ರೇಲ್ವೆ ಕಂಪನಿ ಮುಂತಾದವುಗಳಲ್ಲಿ ತಮ್ಮ ಧನವನ್ನು ತೊಡಗಿಸಿರುವರು. ಪೆನಶನ್ ಜನರಿಗೆ ಇಂಗ್ಲಂಡದಲ್ಲಿ ಪೆನಶನ್ ಮುಟ್ಟಬೇಕಾಗಿರುವುದು. ಇದೆಲ್ಲ ಸಾಲವನ್ನು ಸುರಕ್ಷಿತವಾಗಿ ಮುಟ್ಟಿಸುತ್ತೇವೆಂದು ಹಿಂದುಸ್ಥಾನವು ಹೊಣೆಯನ್ನು ಹೊರದಿದ್ದರೆ ಹಿಂದುಸ್ಥಾನಕ್ಕೆ ಮಧ್ಯವರ್ತಿ ರಾಜ್ಯಪದ್ಧತಿಯಲ್ಲಿ ಸ್ವರಾಜ್ಯವನ್ನು ಕೊಡುವುದು ಶಕ್ಯವಿಲ್ಲವೆಂದು ಬ್ರಿಟಿಶ ಮುತ್ಸದ್ದಿಗಳು ಅನ್ನಹತ್ತಿದರು. ಬ್ರಿಟಿಶ ಮುತ್ಸದ್ದಿಗಳು ಅನ್ನುವುದೇನಂದರೆ "ನಾವೇನೋ, ನಿಮಗೆ ಜವಾಬದಾರವುಳ್ಳ ಮಧ್ಯವರ್ತಿ ರಾಜ್ಯಪದ್ಧತಿಯನ್ನು ಕೊಡಬೇಕೆಂದು ಯೋಚಿಸಿದರೂ, ಬ್ರಿಟಿಶ ಭಂಡವಲಗಾರರೇ ಮುಂತಾದವರು ಹಾಗೆ ಆದನ್ನು ಕೊಡಗೊಡಿಸಲೊಲ್ಲರು. ಏಕೆಂದರೆ, ಹೀಗೆ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ಕೊಟ್ಟುಬಿಟ್ಟರೆ ನಮಗೆ ಸಾಲ ಬಡ್ಡಿ ಪೆನಶನ್ ಮುಂತಾದವುಗಳು ಸುರಕ್ಷಿತವಾಗಿ ಮುಟ್ಟುವುದಕ್ಕೆ ಗತಿಏನು? ಎಂದು ಅವರು ನಮ್ಮನ್ನು ಕೇಳುತ್ತಾರೆ. ಆದಕಾರಣ, ಮೊದಲು ನಾವು ಆ ಬಗ್ಗೆ ಅವರಿಗೆ ನಂಬಿಗೆ ಹುಟ್ಟುವಂತೆ ಮಾಡುವುದು ಅವಶ್ಯವಿದೆ. ಅದಕ್ಕೋಸ್ಕರ, ರಿಝರ್ವ ಬಾಂಕು ಎಂಬದೊಂದು ದೊಡ್ಡ ಬ್ಯಾಂಕನ್ನು ಹಿಂದುಸ್ಥಾನದಲ್ಲಿ ತೆಗೆದು ಆ ಬ್ಯಾಂಕಿನಲ್ಲಿ ಹಿಂದುಸ್ಥಾನದ ಹಣವು ಸುರಕ್ಷಿತವಾಗಿ ಪ್ರತಿವರ್ಷ ಕೂಡಿ ಬೀಳುತ್ತದೆಂದು ಕಂಡುಬಂದರೆ ಆ ಬಳಿಕ ಹಿಂದೀ ಜನರ ಕೈಯಲ್ಲಿ ಮಧ್ಯವರ್ತಿ ಸರಕಾರದ ರಾಜ್ಯ ಸೂತ್ರಗಳನ್ನು ಕೊಡಬಹುದು ಎಂದು ಬ್ರಿಟಿಶ ಮುತ್ಸದ್ದಿಗಳು ಹೇಳಿದ ಕಾರಣ ಈ ರಿಝರ್ವ ಬ್ಯಾಂಕಿನ ಕಲ್ಪನೆಯು ಹೊರಟಿತು. ಈಗ ಇಂಥದೊಂದು ಬ್ಯಾಂಕನ್ನು ತೀವ್ರವೇ ತೆಗೆದು ಬಿಡುವ ಅವಸರದಲ್ಲಿ ಅವರು ಇರುವರು.

ಈಗ ರಿಝರ್ವ ಬ್ಯಾಂಕಿನ ಈಗಿನ ರಚನೆಯಿಂದ ಹಿಂದುಸ್ಥಾನಕ್ಕೆ ಒಟ್ಟಿನ ಮೇಲೆ ಹಾನಿಯಾಗುವುದೋ ಲಾಭವಾಗುವುದೋ ಎಂಬ ಬಗ್ಗೆ ಹಿಂದುಸ್ಥಾನದ ತಜ್ಞರಲ್ಲಿಯೇ ಮತಭೇದವಿರುವುದು. ಅದು ಹೇಗಿದ್ದರೂ ಈಗ ಬ್ರಿಟಿಶ ಮುತ್ಸದ್ದಿಗಳು ಅದನ್ನು ತೆಗೆದೇ ಬಿಡುವೆವೆಂದು ಸಾರಿ ಬಿಟ್ಟಿರುವರು. ಇಷ್ಟೇ ಅಲ್ಲ, ರಾಜಕೀಯ ಸುಧಾರಣೆಗಳನ್ನು ಆಮಲಿನಲ್ಲಿ ತರುವ ಪೂರ್ವದಲ್ಲಿ ಈ ರಿಝರ್ವ ಬ್ಯಾಂಕಿನ ಸ್ಥಾಪನೆಯಾಗಿ ಅದು ಚೆನ್ನಾಗಿ ಕೆಲಸ ಮಾಡಹತ್ತುವುದು ಅವಶ್ಯವೆಂದು ಅವರು ಹೇಳಿರುವರು. ಆದಕಾರಣ, ಈ ರಿಝರ್ವ ಬ್ಯಾಂಕಿನ ರಚನೆ ಹೇಗಿರಬೇಕು, ಅದರ ಅಧಿಕಾರ ಮರ್ಯಾದೆ ಎಷ್ಟಿರಬೇಕೆಂಬ ಬಗ್ಗೆ ಮಾತ್ರವೇ ಈಗ ಚರ್ಚೆ ನಡೆದಿದೆ. ರಿಝರ್ವ ಬ್ಯಾಂಕಿನ ರಚನೆ ಹೇಗಿರಬೇಕೆಂಬ ಬಗ್ಗೆ ಅದಕ್ಕೋಸ್ಕರವೇ ನೇಮಿಸಲ್ಪಟ್ಟ ಕಮಿಟಿಯ ರಿಪೋರ್ಟ ಹೊರಬಿದ್ದಿದೆ. ಮಧ್ಯವರ್ತಿ ರಿಝರ್ವ ಬ್ಯಾಂಕಿನ ಮುಖ್ಯ ಕಾರ್ಯಗಳು ಎರಡು [೧] ಚಲನ ವ್ಯವಸ್ಥೆ [೨] ದೇಶದೊಳಗಿನ ಭಂಡವಲವನ್ನು ಕೂಡಿ ಹಾಕಿ ಮತ್ತು ಅದನ್ನು ದೇಶದಲ್ಲಿ ಪ್ರಸಾರದಲ್ಲಿ ಇಟ್ಟು ಉದ್ಯೋಗ ಧಂದೆಗಳಿಗೆ ಅದರ ಉಪಯೋಗವನ್ನು ಮಾಡಿಕೊಳ್ಳುವುದು. ಈ ರಿಝರ್ವ ಬ್ಯಾಂಕಿನ ಭಂಡವಲು ೫ ಕೋಟಿ ರೂಪಾಯಿ. ಒಂದೊಂದು ಶೇರಿನ ಬೆಲೆ ೫೦೦ ರೂಪಾಯಿ. ೨ ಶೇರುಗಳನ್ನು ಕೊಂಡವರಿಗೆ ಮತಾಧಿಕಾರ. ಒಬ್ಬ ವ್ಯಕ್ತಿಗೆ ಶೇರ ಹೆಚ್ಚಿದರೆ ಹತ್ತು ಮತಗಳನ್ನು ಕೊಡುವ ಹಕ್ಕು ಇರತಕ್ಕದ್ದು. ಈ ಬ್ಯಾಂಕಿನ ಆಡಳಿತೆಯು ೧೨ ಜನ ಡಾಯರೆಕ್ಟರ ಕೈಯಲ್ಲಿ ಇರತಕ್ಕದ್ದು. ಈ ೧೨ ಜನರಲ್ಲಿ ೪ ಜನ ಡಾಯರೆಕ್ಟರರನ್ನು ನೇಮಿಸುವ ಅಧಿಕಾರವು ಗವ್ಹರ್ನರ ಜನರಲ್ಲರವರಿಗೆ ಇರತಕ್ಕದ್ದು. ಮಿಕ್ಕ ೮ ಡಾಯರೆಕ್ಟರರು ಶೇರಹೋಲ್ಡರ ಜನರಿಂದ ಆರಿಸಲ್ಪಡತಕ್ಕವರು. ಹೀಗೆ ಸಾಮಾನ್ಯತಃ ಇದರ ರಚನೆ ಇರುತ್ತದೆ. ಶೇರಹೋಲ್ಡರ ಜನರಿಂದ ಹಣ ಕೂಡಿಸುವುದಕ್ಕಿಂತ ಸರಕಾರದವರೇ ತಮ್ಮ ಭಂಡವಲದಿಂದ ಇದನ್ನು ತೆಗೆಯಬೇಕೆಂದೂ ಬ್ಯಾಂಕಿನ ನಿಯಾಮಕ ಮಂಡಲದಲ್ಲಿ ಕಾಯದೆಮಂಡಲದ ಪ್ರತಿನಿಧಿಗಳಿರಬೇಕೆಂದೂ ಕೆಲವರ ಮತ. ಭಂಡವಲು ಹಿಂದೀ ಜನರಿಂದಲೇ ಕೂಡಿಸಲ್ಪಟ್ಟರೆ ಒಳಿತು. ಹಾಗೆ ಆಗದೆ ಯುರೋಪಿಯನ್ನರಿಂದಲೂ ಭಂಡವಲವನ್ನು ತೆಗೆದುಕೊಂಡರೆ ಯುರೋಪಿಯನ್ನರ ಕೈಯಲ್ಲಿ ಈ ಬ್ಯಾಂಕಿನ ವ್ಯವಸ್ಥೆ ಹೋಗುವುದೆಂದು ಒಂದು ಅಂಜಿಕೆ. ಮತ್ತು ಈ ಬ್ಯಾಂಕ ರಾಜಕೀಯ ವಾತಾವರಣದಿಂದ ಅಲಿಪ್ತವಾಗಿ ಉಳಿಯದಿದ್ದರೆ ಅದರಲ್ಲಿ ಕಂಗಡಗಳಾಗಿ ಮತ್ತಿಷ್ಟು ಹಾನಿಯಾಗುವುದೆಂದೂ ಒಂದು ಅಂಜಿಕೆ. ಇವುಗಳ ವಿಷಯವಾಗಿ ಮತ್ತೊಮ್ಮೆ ಬರೆಯುವೆವು.

ಬೆಂಗಳೂರ ಪತ್ರ.

ತಾ॥ ೨೨-೧೦-೩೩ ಮ॥ ರಾ॥ ಡಿ ವಿ ಗುಂಡಪ್ಪನವರೂ, ಡಾ. ಮೈಲವಾಗಂದವರೂ ಮತ್ತು ಇಲ್ಲಿಯ ಅಡ್ವೋಕೇಟರಾದ ಮಿರ್ಲೆ ಲಕ್ಷ್ಮೀನಾರಣಪ್ಪನವರೂ ಮೈಸೂರು ಯೂನಿವರ್ಸಿ ಸೆನೇಟ ಮೆಂಬರುಗಳಾಗಿ ಚುನಾಯಿಸಲ್ಪಟ್ಟಿದ್ದಾರೆ.

ಈ ಸಾರಿ ಎಂದಿನಂತೆ ಮೈಸೂರ ನ್ಯಾಯ ವಿಧಾಯಕ ಸಭೆಯು ದಿವಾನ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಡಿಸೆಂಬರ ೧೮ ನೇ ತಾರೀಖು ಮಧ್ಯಾನ್ಹ ೧೨ ಗಂಟೆಗೆ ಅಠಾರ ಕಚೇರಿಯಲ್ಲಿ ನಡೆಯುವದು.

ಈಗ ಕೆಲವು ದಿನಗಳ ಹಿಂದೆ (೩-೮-೩೩) ಬಸವನ ಗುಡಿಯಲ್ಲಿ ಎಲೆಕ್ಟ್ರಿಕ್ ಅನಾಹುತ ಸಂಭವಿಸಿ ಇಲ್ಲಿಯ ಅಡ್ವೋಕೇಟ ಮಿ॥ ಬಿ ಕೆಂಪಣ್ಣನವರ ಮಗ ಮಿ॥ ಬಿ ಕೆ ನಂಜಪ್ಪ ಎಂಬಾತನೂ ಮತ್ತು ಒಬ್ಬ ಕೂಲಿಯವನೂ ಆಕಸ್ಮಿಕ ಮರಣ ಹೊಂದಿದ್ದರು. ಈ ಅನಾಹುತವು ಇಲಾಖೆಯವರ ಅಜಾಗರೂಕತೆ (Carelessness) ದಿಂದ ನಡೆಯಿತೆಂದು ನಾಲ್ಕು ಜನ ನೌಕರರನ್ನು ಸಸ್‌ಪೆಂಡ್ ಮಾಡಿದ್ದರಷ್ಟೇ? ಆ ಸಂಧರ್ಭದಲ್ಲಿ ಇಲಾಖೆಯ ಚೀಫ್ ಲೈನ್ ಇನಸ್ಪೇಕ್ಟರ ಮಿ॥ ಎಂ ಬಿ ಟಿ ನಾರಾಯಣರವರು ಈ ಅನಾಹುತಕ್ಕೆ ಕಾರಣರೆಂದು ಆ ಪಾದನೆ ಮಾಡಿ ಪೋಲೀಸರವರಿಂದ ದಸ್ತಗೀರ ಮಾಡಲ್ಪಟ್ಟಿದ್ದರು. ಈಗ ಇವರನ್ನು ಜಾಮೀನಿನ ಮೇಲೆ ಬಿಟ್ಟಿದ್ದಾರೆ. ಮೊಕದಮೆಯು ನಡೆಯುತ್ತಿದೆ.

ಮೈಸೂರು ಸಂಸ್ಥಾನದ ಮಹಿಳಾ ಪರಿಷತ್ತು, ಮುಂದಿನ ತಿಂಗಳ ಮೊದಲನೆಯ ವಾರದಲ್ಲಿ ಶಿವಮೊಗ್ಗದಲ್ಲಿ ನಡೆಯುವದು. ಲೇಡಿ ಮಿರ್ಜಾರವರು ಇದರ ಅಧ್ಯಕ್ಷತೆಯನ್ನು ವಹಿಸುತ್ತಾರೆ.

ಕರ್ನಾಟಕ

ಬೆಳಗಾಂವಿ ಜಿಲ್ಹಾ ಸಾಹಿತ್ಯ ಸಮ್ಮೇಲನವು ಅಲ್ಲಿ ಕೂಡುವದು, ಇಲ್ಲಿ ಕೂಡುವದು ಎಂಬ ಹೊಯ್ದಾಟವನ್ನು ತಪ್ಪಿಸಿಕೊಂಡಂತಾಗಿದೆ. ಡಿಸೆಂಬರ ತಿಂಗಳಲ್ಲಿ ಅಥಣಿಯಲ್ಲಿ ಸಮ್ಮೇಲನವು ಕೂಡಬೇಕೆಂದು ಗೊತ್ತಾಗಿದ್ದು ಶ್ರೀ ವೆಂಕಟರಾವ ಜೋಶಿ ವಕೀಲರನ್ನು ಹಂಗಾಮಿ ಅಧ್ಯಕ್ಷರಾಗಿಯೂ ಶ್ರೀ ಕೆ ಎನ್ ತಳಹಳ್ಳಿಯವರನ್ನು ಕಾರ್ಯದರ್ಶಿಯವರಾಗಿಯೂ ಆರಿಸಲ್ಪಟ್ಟಿದ್ದಾರೆಂದು ತಿಳಿಯುತ್ತದೆ.

ಮೈಸೂರಿನ ವೃದ್ಧ ಪಿತಾಮಹರಾದ ವೆಂಕಟ ಕೃಷ್ಣಯ್ಯನವರ ದೇಹಸ್ಥಿತಿಯು ಕೆಟ್ಟದ್ದು ಈಗ ಕೆಮ್ಮುಬಿಕ್ಕು ಜೋರಾಗಿ ಸಾಮಾನ್ಯ ದೇಹಸ್ಥಿತಿಯು ಆಶಾಜನಕವಾಗಿದೆ.

ಬೆಂಗಳೂರ ೧ ನೇ ಗಲಭೆಯ ಫಲವಾಗಿ ಬಿ ಕೆ ಗರುಡಾಚಾರ್ಯರು ಅಬ್ಕಾರಿಖಾನರ ಮೇಲೆ ೧೦ ಸಾವಿರ ರೂಪಾಯಿ ಮಾನನಷ್ಟದ ದಾವೆ ಮಾಡಿದ್ದರಷ್ಟೇ. ಅಬ್ಕಾರಿಖಾನರು ಕ್ಷಮೆ ಬೇಡಿದುದರಿಂದ ಮೊಕದ್ದಮೆಯನ್ನು ಹಿಂದೆಗೆದುಕೊಳ್ಳಲಾಯಿತು.

ಮೈಸೂರ ಸಂಸ್ಥಾನದಲ್ಲಿ ವ್ಯಾಪಾರದ ಪತಿಮೂಲಿಯಾದ ದೊಡ್ಡ ಬಳ್ಳಾಪುರದಲ್ಲಿ ವ್ಯಾಪಾರಿಗಳು ಕೂಡಿ ತಮ್ಮದೊಂದು ವ್ಯಾಪಾರಿ ಸಂಘವನ್ನು ಮಾಡಿಕೊಂಡರು.

೬ ಆಗ್ರೆಯಲ್ಲಿ ಜಿಲ್ಹಾ ಬ್ರಾಹ್ಮಣರ ಸಭೆಯನ್ನು ನವ್ಹೆಂಬರ ೧೫ಕ್ಕೆ ನಡೆಯಬೇಕೆಂದು ಗೊತ್ತಾಗಿದೆ.

ವೀರಶೈವ ಮಹಾ ಸಭೆಯ ಮಧ್ಯವರ್ತಿ ಸಭೆಯು ಡಿಸೆಂಬರ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಕೂಡುವದೆಂದು ತಿಳಿಯುತ್ತದೆ.

ಹುಬ್ಬಳ್ಳಿಯ ಸಿದ್ಧೇಶ್ವರ ತಿಜೋರಿ ಕಂಪನಿಯವರ ನಿರುಪಂ ಹೈದ್ರಾಬಾದ ಸ್ಟೇಟ ಬ್ಯಾಂಕಿನ ಲಕ್ಷ್ಮೀ ವಾಸಸ್ಥಳದ ಹೆಬ್ಬಾಗಿಲವನ್ನು ಮಾಡಿಕೊಟ್ಟಿದ್ದರಷ್ಟೇ, ಈ ಹೆಬ್ಬಾಗಿಲದ ಕಲಾಕೌಶಲ್ಯತೆಯನ್ನೂ ಭದ್ರತೆಯನ್ನೂ ನೋಡಿ ಅಖಿಲ ಹಿಂದುಸ್ಥಾನದಲ್ಲಿ ಪ್ರಸಿದ್ಧವಾದ ಸೆಂಟ್ರಲ ಬ್ಯಾಂಕ ಆಫ ಇಂಡಿಯಾ ಲಿಮಿಟೆಡ್ ಇವರು ತಮ್ಮ ಬ್ಯಾಂಕುಗಳ ಸಲುವಾಗಿ ಹೆಬ್ಬಾಗಿಲುಗಳನ್ನು ತಯಾರಿಸಿ ಕೊಡುವದಕ್ಕಾಗಿ ಈ ಕಂಪನಿಯವರಿಗೆ ಆರ್ಡರ ಕೊಟ್ಟಿದ್ದಾರೆಂದು ತಿಳಿಯುತ್ತದೆ.

ಕರ್ನಾಟಕ ಭಾಗದ ಧಾರವಾಡ ಬೆಳಗಾವ, ವಿಜಾಪುರ ಮತ್ತು ಕಾರವಾರ ಜಿಲ್ಹೆಗಳಲ್ಲಿಯ ಪ್ರಾಥಮಿಕ ಶಿಕ್ಷಣ ಸಂಘಗಳ ಪುನರ್ಜೀವನ ಮಾಡುವ ಬಗ್ಗೆ ವಿಚಾರವು ನಡೆದಿದೆ. ಇದರ ಬಗ್ಗೆ ಹೋದ ತಿಂಗಳ ೧೧ ನೇ ತಾರೀಖಿಗೆ ಹುಬ್ಬಳ್ಳಿಯಲ್ಲಿ ಕರ್ನಾಟಕ ಶಿಕ್ಷಣ ಸಪ್ತಾಹವು ನಡೆದಾಗ್ಗೆ ಪೂರ್ವ ವಿಚಾರವಾಗಿ

ಇಹವೃತ್ತ

೩ ನೇ ನವಂಬರಕ್ಕೆ ಗವರ್ನರರು ಊರಿಗೆ ಬಂದಾಗ್ಗೆ ಇಲ್ಲಿಯ ಕನ್ನಡ ಅಮೆರರು ಕನ್ನಡ, ಇಂಗ್ಲೀಷ ನಾಟಕಗಳನ್ನು ನಯಿಸತಕ್ಕವರಿದ್ದಾರೆ. ಬಳ್ಳಾರಿಯ ಸಿದ್ಧ ನಟರಾದ ಟಿ ರಾಘವಾಚಾರ್ಯರು ನಾಟಕಗಳಲ್ಲಿ ಅಭಿನಯಿಸುವರು.

ಇಲ್ಲಿಯ ಎಸ್ ಎಮ್ ಬ್ಯಾಂಕದ ಮೇಲೆ ನಿನ್ನೆ ವಿಠ್ಠಲಭಾಯಿ ಪಟೇಲರ ದ ಒಗ್ಗೆ ದುಃಖಪ್ರದರ್ಶಿಸುವದಕ್ಕಾಗಿ ನೆರೆದಿತ್ತು. ಶ್ರೀ ಜೋಗ ವಕೀಲರು ಅಧ್ಯ ಗಿದ್ದರು. ಸಭೆಯ ಕಾರ್ಯವು ಸಾಯಂ ೬॥ ಘಂಟೆಗೆ ಪ್ರಾರಂಭವಾಯಿತು. ಮ ಅಧ್ಯಕ್ಷರು ಸಭೆಯ ಉದ್ದೇಶವನ್ನು ದರು. ಗೊತ್ತುವಳಿಗೆ ಶ್ರೀ ದತ್ತಾತ್ರಯ ಮಂಕರರು ಹುಕ್ಕೇರಿ ರಾಮರಾಯರು ಕೊಪ್ಪೀಕರರು ಪುಷ್ಟಿಯನ್ನು ಕೊಟ್ಟರು ಲೆ ಶ್ರೀ ಸಂರಣಕರ ವಕೀಲರು ಎರ ಗಳಲ್ಲಿ ತರುಣರಿಗೆ ವಿಠ್ಠಲ ಭಾಯಿ ಪಟೇ ಸಾಹಸಿಗಳಾಗಿರಿ ಎಂದು ಉಪದೇಶಿಸಿದ ಧ್ಯರು ಸಮಾರೋಪಣೆಯ ಮಾತುಗಳ ೪ ಕೆಳಗಿನ ಗೊತ್ತುವಳಿಯನ್ನು ಓದಿದ ಖಿಲಮಾನವ ಜಾತಿಯ ಉದ್ಧಾರಕ್ಕಾ ಸ್ವಾತಂತ್ರ್ಯಕ್ಕಾಗಿಯೂ ಹಗಲಿರುಳು ಸ್ವಾರ್ಥತ್ಯಾಗಿಗಳಾದ ವಿಠ್ಠಲಭಾಯಿಯವ ನಕ್ಕಾಗಿ ಈ ಸಭೆಯು ಅತ್ಯಂತ ದುಃಖ ವ್ಯಕ್ತ ಮಾಡುತ್ತದೆ' ಈ ಗೊತ್ತುವಳಿ ಎಲ್ಲರೂ ಎದ್ದು ನಿಂತು ಸಮ್ಮತಿಸಿದರು

ಹುಬ್ಬಳ್ಳಿ ಪೇಟೆಯ ಧಾರ

(ಕೇನಡಿ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೨೫ ಮಧ್ಯಾನ್ಹ ೧

ಅವಾರಿ ಹತ್ತಿ	೧೦೨ ೧೦೪	ಜೋಳ ೧
ಅಕ್ಕಂಕ ,,	೧೦೨ ೧೦೪	ಗೋದಿ ೬
ವಿಲಾಯತಿ ,,	೯೫ ೯೭	ಉದ್ದು
ಸ್ಟೇಪಲ್‌ಸ್ಟ .	೧೦೮-೧೧೦	ಕಡ್ಲಿ
ಶೇಂಗಾಬೀಜ	೭೩ ೭೪	ಕಡ್ಲಿ ಹು
ಡಬ್ಬಳ ಕೂಲ ಅ	೬೬ ೬೭	ಕುಸಬಿ
ಸಾಜಿನ ಅರಳೆ	೬೬-೬೭	ಹುರಳಿ
ಹೆಸರು ಅವಾರಿ	೯ ೧೨.	
ಶಿಂಗಾಕಾಯಿ ಹೊ	೪-೪॥	ಹತ್ತಿಕಾಳು

ಬೆಳ್ಳಿ ಬಂಗಾರ

ಬಂಗಾರ ೩೧॥ = ಬೆಳ್ಳಿ

ಧಾರವಾಡದಲ್ಲಿ ನಾಮದಾರ ಗವ್ಹರ್ನರ ಮನದ ನಿಮಿತ್ತವಾಗಿ ನವ್ಹೆಂಬರ ೩ ನೇ ಖಿಗೆ ಆಗಲಿರುವ ಕರ್ನಾಟಕ ಸ್ಕೌಟರ ಲನದ ಕಾಲಕ್ಕೆ ನಾಲ್ಕು ಜಿಲ್ಹೆಯಲ್ಲಿಯ ಮಿಕ ಶಿಕ್ಷಕರ ಸಾಧಾರಣ ಸಭೆಯು ಲ್ಪಟ್ಟಿದ್ದು ಆ ಸಭೆಗೆ ಎಲ್ಲ ಪುರುಷ ಶಾ ಶಿಕ್ಷಕರು ಬರಬೇಕೆಂದು ಮುಂಬಯಿ ಪ್ರಾಥಮಿಕ ಶಿಕ್ಷಕ ಸಂಘದ ಸಹಕಾರ್ಯ ಗಳಾದ ಶ್ರೀ ಕಿರೆಸೂರ ಇವರು ತಿಳಿಸಿದ

ವಿಜಾಪುರ ಸರುಣ ಮುಸಲ್ಮಾನ ಳಾದ ಶ್ರೀ ಜಾನವೇಕರ ಇವರು ವಿಜಾ ನಸಿಪಾಲ್ಟಿಯ ಅಧ್ಯಕ್ಷಸ್ಥಾನಕ್ಕೆ ಬಹು ದ ಆರಿಸಲ್ಪಟ್ಟರು.

ರಿಝರ್ವ ಬ್ಯಾಂಕ ಕಮಿಟಿಯ ಪಟೇಲ ವಿಠ್ಠಲಭಾಯಿಯವರ ಬಗ್ಗೆ ಶ ಪರ ಗೊತ್ತುವಳಿ ಆಯಿತು.

ಪಟೇಲರ ಬಗ್ಗೆ ಜವಾಹರಲಾಲರ ಭಕ್ತಿ

"ಕನ್ನಡಿಗ" ನಿಗಾಗಿ ತರಿಸಿದ 'ಆಸೋಶಿಯೇಟೆಡ್ ಕಂಪನಿ'ಯ ತಂತಿಗಳು

ಪಟೇಲರ ಬಗ್ಗೆ ಜವಾಹಿರಲಾಲರ ಭಕ್ತಿ

ಅಲಹಾಬಾದ ತಾ|| ೨೪ ಪಂಡಿತ ಜವಾಹಿರಲಾಲರ ಪ್ರಕಟನೆ—ಆರೋಗ್ಯದಿಂದಿದ್ದರೂ ಸರಿ ಬೇನೆಯಲ್ಲಿದ್ದರೂ ಸರಿ ಹಿಂದುಸ್ಥಾನದಲ್ಲಿ ಸ್ಥಿರವಿ ಆಸ್ತೇ ಹೋಗಿದ್ದರೂ ಅಸ್ತೇ. ಸ್ವರ್ಗಸ್ಥರಾದ ವಿಠ್ಠಲಭಾಯಿಯವರು ಯಾವಾಗಲೂ ಭರತಖಂಡದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರು! ಮರಣೋನ್ಮುಖರಾದಾಗ್ಗೆ ಅವರ ಬಾಯಿಂದ ಹೊರಬಿದ್ದ ಕಟ್ಟಕಡೆಯ ಶಬ್ದಗಳು ಕೂಡ ಇದೇ ರಹಸ್ಯವನ್ನು ಧ್ವನಿತ ಮಾಡಿದವು ಮತ್ತು ಅದೇ ಅವರ ಪ್ರಾಣವನ್ನೂ ನುಂಗಿತು ಸ್ವಾತಂತ್ರ್ಯದ ಉಚ್ಚಧ್ಯೇಯವೆಂಬ ಜ್ವಾಲಾಮುಖಿಯು ನಮ್ಮಲ್ಲಿಯ ಅನೇಕ ವೀರಭಟರನ್ನು ನುಂಗಿದೆ. ಮತ್ತೂ ಭರತಖಂಡದ ಇನ್ನೂ ಅನೇಕಾನೇಕ ಪುತ್ರ-ಪುತ್ರಿಯರನ್ನು ಅದು ನುಂಗುವದು ಆದರೆ ನಮ್ಮ ರಾಷ್ಟ್ರಧರ್ಮವು ಅಚ್ಚಳಿಯದೇ ಉಳಿದ. ಯುದ್ಧವು ಮುಂದರಿಯುತ್ತಲಿದೆ, ಈ ಮುಂದೆಯೂ ಮುಂದರಿಯುವದೂ ಖಂಡಿತ ಧ್ಯೇಯವು ಸಾಧ್ಯವಾಗುವವರೆಗೆ ಎಂದೂ ನಿಲ್ಲಲಾರದು ವಿಠ್ಠಲಭಾಯಿಯವರ ಸಂಗಡ ಭುಜಕ್ಕೆ ಭುಜಹಚ್ಚಿ ಒಂದೇ ಧ್ಯೇಯ ಸಾಧನೆಗಾಗಿ ಕಾರ್ಯಮಾಡುವ ಸುದೈವದ್ದಂಥ ನಮ್ಮನ್ನು ಅವರ ಮರಣವು ತಪ್ತವಾದ ಶೋಕಾಗ್ನಿಯಲ್ಲಿ ಮುಳುಗಿಸಿದೆ ನಾಶಿಕ ರಂಗದಲ್ಲಿ ಏಕಾಂತವಾದ ಕೋಣೆಯಲ್ಲಿ ಸ್ತಂಭ ಅವರ ಒಂಧು ವಲ್ಲಭಭಾಯಿಯವರ ಮನವು ಈ ಮರಣವಾರ್ತೆಯಿಂದ ಅದೆಷ್ಟು ತಲ್ಲಣಗೊಂಡಿರಬೇಕು (ಅ ಪ್ರೆ ತಂತಿ)

ಮಾಲವೀಯವರ ಶೋಕ ಸಂದೇಶ

ಮೈಸೂರಿ ತಾ|| ೨೪ ಪಟೇಲರ ನಿಧನದ ಬಗ್ಗೆ ಪಂಡಿತ ಮಾಲವೀಯವರು ಅಂದರು: ನನ್ನ ಪ್ರಿಯ ಮಿತ್ರರಾದ ವಿಠ್ಠಲಭಾಯಿಯವರು ಸ್ವರ್ಗಸ್ಥರಾದುದನ್ನು ಕೇಳಿ ನನಗೆ ಅತ್ಯಂತ ವ್ಯಥೆಯಾಗಿದೆ ತಾಯ್ನಾಡಿನ ಸ್ವಾತಂತ್ರ್ಯ ರಂಗದಲ್ಲಿ ಅವರು ವೀರ ಭಟರು! ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ! ಇವರ ಮರಣದಿಂದ ಹಿಂದುಸ್ಥಾನಕ್ಕೆ ಮತ್ತಿಷ್ಟು ಹಾನಿಯಾಯಿತು ಅವರ ಕುಟುಂಬದವರಿಗೂ, ವಲ್ಲಭಭಾಯಿ ಪಟೇಲರಿಗೂ ನನ್ನ ಕಳವಳದ ಶೋಕ ಸಂದೇಶವನ್ನು ಕಳಿಸುತ್ತೇನೆ [ಅ. ಪ್ರೆ. ತಂತಿ]

ಸರೋಜನಿಯವರ ದುಃಖೋದ್ಗಾರ!

ಮುಂಬೈ ತಾ|| ೨೫ ಸರೋಜನಿಯವರು ಹೇಳಿದ್ದು:—ವ್ಯಕ್ತಿಶಃ ನನ್ನ ಗೆಳೆಯರೆಂದೂ ರಾಜಕಾರಣದಲ್ಲಿ ನನ್ನ ಸಂಗಡ ಹೋರಾಡಿದಂಥ ಬಂಧುವೆಂದೂ ಎರಡೂ ವಿಧದಿಂದ ನಾನು ವಿಠ್ಠಲಭಾಯಿಯವರ ಮರಣಕ್ಕಾಗಿ ಅತಿಶಯವಾಗಿ ಶೋಕಿಸುತ್ತಿರುವೆ ಎಂದು ಕಗ್ಗದ ಸ್ವಾತಂತ್ರ್ಯಾಭಿಲಾಷೆಯುಳ್ಳಂಥ ದೇಶಭಕ್ತನೂ ನಿರ್ಭಯನಾದ ವೀರನೂ. ಸ್ವಾತಂತ್ರ್ಯಕ್ಕಾಗಿ ಹೂಡಿದ ಸಂಗ್ರಾಮದಲ್ಲಿ ನಿರುಪಮನೂ ಆದ ರಣಧೀರನನ್ನು ಹಿಂದುಸ್ಥಾನವೀಗ ಕಳೆದುಕೊಂಡಿದೆ! ಸಾಯುವಾಗ ಕೂಡ ವಿಠ್ಠಲಭಾಯಿಯವರ ಕೈಯಲ್ಲಿದ್ದ ಖಡ್ಗವು ತನ್ನ ಒರೆಯನ್ನು ಸೇರಲೇ ಇಲ್ಲ! (ಅ ಪ್ರೆ. ತಂತಿ)

ಜಪಾನ ಲ್ಯಾಂಕ್ಯಾಶಯರದವರಿಗೆ ಅಳತೆಗೆಟ್ಟ ಬೆಲೆಯೋ?

ಹೊಸದಿಲ್ಲಿ ತಾ|| ೨೪ ಜಪಾನ-ಹಿಂದುಸ್ಥಾನ ಪರಿಷತ್ತಿಗೆ ಸಲಹೆಗಾರರಾದ ಶ್ರೀಯುತ ಕಸ್ತೂರಭಾಯಿ ಲಾಲಭಾಯಿ ಶ್ರೀರಾಮ ಮತ್ತು ಡಿ ಪಿ ಖೈತಾನ ಇವರೆಲ್ಲ ಹಿಂದುಸ್ಥಾನ ಸರಕಾರದ ವ್ಯಾಪಾರ ಖಾತೆಯ ಮುಖ್ಯಸ್ಥರಾದ ಸರ ಜೋಸೆಫ್ ಭೋರರಿಗೆ ಪತ್ರ ಬರೆದದ್ದು — ಹಿಂದುಸ್ಥಾನದ ಹತ್ತಿಯನ್ನು ಜಪಾನದವರು ಕೊಳ್ಳಲು ನಿರಾಕರಿಸಿದ್ದರಿಂದುಂಟಾದ ಕಠಿಣ ಪರಿಸ್ಥಿತಿಯನ್ನು ನಿವಾರಿಸುವದಕ್ಕಾಗಿ ಜಪಾನದಿಂದ ಬಟ್ಟೆಗಳನ್ನು ಕನಿಷ್ಟ ಇಂತಿಷ್ಟರದಿಂದ ಲಾದರೂ ಹಿಂದುಸ್ಥಾನವು ಕೊಳ್ಳಬೇಕೆಂಬ ಸೂಚನೆಗೆ ಮನ್ನಣೆಯನ್ನೀಯಬೇಕೆಂಬುದು ನಮ್ಮನ್ನು ಚಿಂತಿಸಲ್ಲಿರಿಸಿತು ಈಗಿದ್ದ ಆಮದ ಜಕಾತಿಯನ್ನೂ ಲೆಕ್ಕಿಸದೆ ಜಪಾನದಿಂದ ಹೇರಳವಾಗಿ ಬಟ್ಟೆಗಳು ಬರುತ್ತಿರುವದರಿಂದ ಹಿಂದೀ ಗಿರಣಿಗಳು ತಮ್ಮ ಹುಟ್ಟುವಳಿಯನ್ನು ಅತಿಶಯವಾಗಿ ಕಡಿಮೆ ಮಾಡಬೇಕಾಗಿದೆ ಹಿಂದೀಯರ ಈ ವ್ಯವಸಾಯವು ಉನ್ನತ ಸ್ಥಿತಿಗೆ ಬರಬೇಕಾದರೆ ಭದ್ರವಾಗಿ ಅದು ಸಂರಕ್ಷಿಸಲ್ಪಡಬೇಕೆಂಬದನ್ನು ನಾವು ಇಲ್ಲಿ ಒತ್ತಿ ಹೇಳುತ್ತೇವೆ ಅದರ ಸ್ಥಿತಿಯು ಕೆಟ್ಟದ್ದಾದರೆ ಪರಿಣಾಮವು ಅತಿಶಯ ಭಯಾನಕವಾಗುವದು ಜಪಾನ ಹಾಗೂ ಲ್ಯಾಂಕಾಶಾಯರದ ಔದ್ಯೋಗಿಕ ಶಿಷ್ಟಮಂಡಲದವರ ಸಂಗಡ ಒಪ್ಪಂದ ಮಾಡಿಕೊಳ್ಳಲು ನಮಗೆ ಅಶಕ್ಯವಾದದ್ದು ನಾವು ಒಪ್ಪಂದಕ್ಕಾಗಿ ಸಿದ್ಧರಿಲ್ಲವೆಂತಲ್ಲ ಆದರೆ ನಮ್ಮ ಮಾನವ ಯೋಗ್ಯದೆ ಹಾಗೂ ಹಿಂದೀ ವ್ಯವಸಾಯಕ್ಕೆ ನ್ಯಾಯವಾದ ಸಂರಕ್ಷಣೆಗಳನ್ನು ನಾವು ಲಕ್ಷಿಸಲೇಬೇಕಲ್ಲವೇ? ಮೇಲ್ಕಾಣಿಸಿದ ಎರಡೂ ಶಿಷ್ಟ ಮಂಡಲದವರ ಪ್ರಸಾದಕ್ಕಾಗಿ ಅಳತೆಗೆಟ್ಟ ಬೆಲೆ ಕೊಡಬೇಕಾಗುವದೆಂಬದು ಸ್ಪಷ್ಟವಾಗಿ ನಮಗೆ ತಿಳಿದೊಡನೆ ನಾವು ಒಪ್ಪಂದವನ್ನು ನಿರಾಕರಿಸುವಂಥ ಪ್ರಸಂಗ ಬಂದಿತು (ಅ ಪ್ರೆ. ತಂತಿ)

ಹಡಗವು ಮುಳುಗಿತು!

ಕಲಕತ್ತಾ ತಾ|| ೨೪ ಬಂಗಾಲ ಉಪಸಾಗರದಲ್ಲಿ ೬೫೦ ಟನ್ನಿನ ಹಡಗವು ಬಿರುಗಾಳಿಯಲ್ಲಿ ಸಿಕ್ಕು ಮುಳುಗಿತು ಸಿಲೋನ ಬಂದರದಿಂದ ಅದು ಅಕ್ಯಾಬಕ್ಕೆ ಹೊರಟಿತ್ತು. ಸುದೈವದಿಂದ ಹಡಗಿನ ಕೆಲಸಿಗರಾರೂ (Crew) ಸಾಯಲಿಲ್ಲ ಅವರೆಲ್ಲ ಬೋಟಿನಲ್ಲಿ ಸಂಚರಿಸುತ್ತಿರುವಾಗ ಚಂದ್ವಾಲಿ ಹಡಗದಿಂದ ಉಳಿಸಲ್ಪಟ್ಟರು (ಅ. ಪ್ರೆ. ತಂತಿ)

ಈಸ್ಟ ಇಂಡಿಯಾ ಹತ್ತೀ ಸಂಘದವರ ನಿರ್ಣಯ

ಮುಂಬಯಿ ತಾ|| ೨೫— ಈಸ್ಟ ಇಂಡಿಯಾ ಹತ್ತಿಯ ಸಂಘದ ಡಾಯರೆಕ್ಟರ ಸಭೆ ಈ ದಿನ ಸೇರಿದು "ಸಂಘದ ಅಧ್ಯಕ್ಷರಾದ ಶ್ರೀ ಹರಿದಾಸ ಮಾಧವದಾಸರು ಈಗ ದಿಲ್ಲಿಯಲ್ಲಿದ್ದು ಅವರಿಗೆ ತತ್‌ಕ್ಷಣವೇ ತಂತಿಯಿಂದ ಕೆಳಗಿನಂತೆ ಹಿಂದುಸ್ಥಾನ ಸರಕಾರದವರಿಗೆ ತಿಳಿಸಲು ಅಧಿಕಾರ ಕೊಡಬೇಕೆಂದು" ನಿಶ್ಚಿತವಾಯಿತು ಅದರ ವಿವರ— ಜಪಾನದವರು ಕಚ್ಚಾ ಹತ್ತಿಯನ್ನು ಕೊಂಡುಕೊಳ್ಳುವದರ ಪ್ರಮಾಣವು ೧೫ ಲಕ್ಷ ಗಂಟುಗಳಿಗಿಂತ ಕಡಿಮೆ ಇರಲಾಗದು. ಮತ್ತು ಯಾವುದೇ ಒಪ್ಪಂದವಾದರೂ ಹತ್ತೀ

ಪತ್ರವ್ಯವಹಾರ.

ಕನ್ನಡಿಗ ಸಂಪಾದಕರಿಗೆ.

ಮಾಳಮಡ್ಡಿಯ ಜನರ ಗೋಳಾಟ

ಮಾಳಮಡ್ಡಿಯ ರಸ್ತೆಗಳು ಎಂದೂ ದುರಸ್ತಿ ಕಂಡಿಲ್ಲ ಈ ವರ್ಷ ಮಳೆ ಬಹಳಾಗಿ ದಾರಿಯ ಮೇಲೆಲ್ಲಾ ನೀರು ಹರಿದು ದಾರಿಯಲ್ಲಿ ದೊಡ್ಡ ದೊಡ್ಡ ತಗ್ಗುಗಳು ಬಿದ್ದಿವೆ ಗಾಡಿಗಳು ಸುರಕ್ಷಿತ ಹಾಯುವಂತೆ ಇಲ್ಲ ವಿಶೇಷವಾಗಿ ಮುದವೇಡಕರರ ಮನೆಯಿಂದ ಟಿ ಎಸ್ ಕುಲಕರ್ಣಿಯವರ ಬಂಗಲೇದ ಮುಂದೆ ಹಾಯ್ದು ಎಮ್ಮೀಕೆರೆಯ ಮೇಲಿಂದ ಸ್ಟೇಶನ್ನದ ದಾರಿಗೆ ಕೂಡುವವರೆಗೆ ದಾರಿಯು ಅತಿಶಯ ಕೆಟ್ಟುಹೋಗಿದೆ

ಮಾಳಮಡ್ಡಿಯಲ್ಲಿ ಇನ್ನೂ ಪೂರಾ ವಿದ್ಯುದ್ದೀಪ ಹಾಕಿಲ್ಲ ಗಾಯಕೊಂಡೆ ಇವರ ಬಂಗ್ಲೆದ ಪೂರ್ವದ ಮೂಲೆಯಿಂದ ಸ್ಟೇಶನ್ನದಾರಿ ಕೂಡುವ ತನಕ ರಾತ್ರಿ ದೀಪಗಳೇ ಇರುವದಿಲ್ಲ ಇದನ್ನು ಹಲವು ಸ್ವತಃ ಪ್ರೆಸಿಡೆಂಟರ ಲಕ್ಷ್ಯಕ್ಕೆ ತಂದರು ಆದರೆ ಏನೂ ಉಪಯೋಗವಾಗಲಿಲ್ಲ ಎಮ್ಮೆಯ ಕೆರೆಯ ಮೇಲೆ ಎಷ್ಟೋ ಸಾರೆ ಹಾವುಗಳನ್ನು ಕಂಡಿದ್ದೇವೆ, ಇದನ್ನು ಸಹ ಪ್ರೆಸಿಡೆಂಟರ ದೃಷ್ಟಿಗೆ ತಂದೆವು.

ರಸ್ತೆಯಲ್ಲಿ ಕಸ ಗೂಡಿಸುವವರು ಮನಸ್ಸಿಗೆ ಬಂದಾಗ್ಗೆ ರಸ್ತೆ ಉಡುಗುತ್ತಾರೆ ಮೊನ್ನೆ ದಿಪಾವಳಿ ಹಬ್ಬದಲ್ಲಿ ಗುರುವಾರ ಮತ್ತು ಶುಕ್ರವಾರ (ಅಮವಾಸ್ಯ ಮತ್ತು ಪಾಡ್ಯ) ದಿವಸ ಕಸ ಉಡುಗುವವರು ಬಂದೇ ಇಲ್ಲ. ಅದರ ದಾಡೇ ಇಲ್ಲ ಮಾಳಮಡ್ಡಿಯಲ್ಲಿ ಬಹುತೇಕ ಬ್ರಾಹ್ಮಣರು ಇದ್ದ ಪ್ರಾವೆಗಳು ಹಾರಾಡಿ ಎತ್ತಲದ ಮನೆಗಳಲ್ಲಿ ಬೀದವು, ಕಸದ ಗುಂಡಿಗಳು ಯಾವಾಗಲೂ ತುಂಬಿ ಹೊಂಚಲ್ಲಿರುತ್ತವೆ ಕಸ ತೆಗೆಯುವ ಮೋಟಾರ ಊರಲ್ಲಿ ಮಾತ್ರ ಕಾಣುತ್ತದೆ ಮಾಳಮಡ್ಡಿಗೆ ಎಂದೂ ಬಂದಿಲ್ಲ ವೇಳೆ ವೇಳೆಗೆ ಕಸಾ ತೆಗೆಯುವದಿಲ್ಲ ಈ ಎಲ್ಲ ಸಂಗತಿಗಳು ತಮ್ಮ ಪತ್ರದ್ವಾರ ಮುನಸಿಪಲಟಿ ಅಧಿಕಾರಿಗಳು ಲಕ್ಷ್ಯಕ್ಕೆ ಬರಲೆಂದು ಹಾರೈಸುತ್ತೇನೆ ತಾ|| ೨೪-೧೦-೩೩

ನಿಮ್ಮ

ಟಿ ಯಸ್ ಕುಲಕರ್ಣಿ ಟ್ರ್ಯಾಕ್ಸ ಪೇಂಟರ

ಕೈ ಪಟೇಲರ ಶವವು ಹಿಂದುಸ್ಥಾನಕ್ಕೆ.

ಜಿನೀವಾ ತಾ|| ೨೫—ಕೈ ಪಟೇಲರ ಕೊನೆಗಾಲದ ಅಪೇಕ್ಷೆಯಂತೆ ಅವರ ಶವವು ಹಿಂದುಸ್ಥಾನಕ್ಕೆ ಒಯ್ಯಲಗುವದು ಅಕ್ಟೋಬರ ೨೬ ನೇ ತಾರೀಖಿಗೆ ಹೊರಡುವ ವ್ಹಿಕ್ಟೋರಿಯಾ 'ಟಾಲಿಯನ್' ಹಡಗದಿಂದ ಅವರ ಶವವು ಇಲ್ಲಿಂದ ಹೊರಟು ನವೆಂಬರ ತಿಂಗಳ ೪-೫ ತಾರೀಖಿಗೆ ಮುಂಬೈಗೆ ಬರುವದು

ಬೆಳೆಯುವವರ ಹಿತವನ್ನು ಅವರು ಕಾಯಲಿಕ್ಕೆ ಬೇಕು ಈ ಮುಖ್ಯ ತತ್ವಗಳಂತೆ, ನೋಡಿದರೆ ಹತ್ತೀ ಬೆಳೆಯುವವರು ಈಗಾಗಲೇ ಅನೇಕ ದಿನಗಳಿಂದ ಮೂಲ ಬೆಲೆಗಿಂತ ಬಹು ಕಡಿಮೆ ದರದಿಂದ ಹತ್ತಿಯನ್ನು ಮಾರಿ ಬಹಳ ನಾಶಕ್ಕೆ ಗುರಿಯಾಗಿದ್ದಾರೆ ಇದರಿಂದ ಇಡೀ ದೇಶವೇ ಅಪಾಯಕ್ಕೆ ಈಡಾಗಿದೆ" [ಅ ಪ್ರೆ ತಂತಿ.

ಹಿಂದುಸ್ಥಾನ

ಮದ್ರಾಸದಲ್ಲಿ ೨೩ನೇ ತಾರೀಖಿನ ದಿವಸ ವಿಠ್ಠಲಭಾಯಿ ಪಟೇಲರ ಮರಣದ ಬಗ್ಗೆ ಯಿಂದ ಮಹಾಜನರ ಸಭೆ ನೆರೆದು ದುಃಖ ಪ್ರದರ್ಶಕ ನಿರ್ಣಯ ಪಾಸಾಯಿತು ಶ್ರೀ. ರಾಮದಾಸ ಪಂತುಲು ಅವರು ಅಧ್ಯಕ್ಷರಿದ್ದರು.

ಮುಂದಿನ ಸೋಮವಾರ ನಡೆಯುವ ಮದ್ರಾಸ ಕೌನ್ಸಿಲ್ಲಿನಲ್ಲಿ ಡಾ. ಸುಬ್ಬರಾಯನ್ನರು 'ಭಾರತೀಯ ಅಸೆಂಬ್ಲಿಯ ಮೊದಲನೇ ಅಧ್ಯಕ್ಷರಾದ ಶ್ರೀ ಪಟೇಲರ ಮರಣದ ಬಗ್ಗೆ ಈ ಸಭೆಯು ವ್ಯಸನವಾಗುತ್ತದೆಂದು' ಎಂಬ ಸೂಚನೆ ತರುವವರಿದ್ದಾರೆ

ಕನ್ನಡ ಕವಿಗಳಲ್ಲಿ ಬಿನ್ನಹ

ನಮ್ಮ ಕನ್ನಡ ನಾಡಿನಲ್ಲಿ ಸ್ವದೇಶೀ ವಸ್ತುಗಳ ಹೆಚ್ಚಳಕ್ಕಾಗಿ ಕನ್ನಡ ನಾಡಿನ ಕಲಾ-ಕೈಗಾರಿಕೆಗಳ ಅಭಿವೃದ್ಧಿಗಾಗಿ ಜನತೆಯನ್ನು ಪ್ರೇರೇಪಿಸುವದಕ್ಕೆ ಹಾಗೂ ಅಂತಃಕರಣವನ್ನು ಸ್ವದೇಶಾಭಿಮಾನದಿಂದ ತುಂಬಲಿಕ್ಕೆ ಸಾಹಿತ್ಯವು ಬೇಕಾಗಿದೆ ಜನ ಸಾಮಾನ್ಯರೆಲ್ಲರನ್ನು ಈ ಒಗೆಯಾಗಿ ಎಚ್ಚರಿಸಲು ಹಾಡು ಲಾವಣಿ ಪದ್ಯವೇ ಸಮರ್ಥವಾದವೆಂದು ಬೇರೆ ಹೇಳಬೇಕಾಗಿಲ್ಲ ಆದ್ದರಿಂದ ಆ ಕೊರತೆಯನ್ನು ಕನ್ನಡಿಗರು ನೀಗಲಾಡುವದಕ್ಕೆ, ಬಳ್ಳಾರಿಯಲ್ಲಿ ಕೂಡುವ ಅಖಿಲ ಭಾರತೀಯ ಸ್ವದೇಶೀ ಪ್ರದರ್ಶನದ ವೇಳೆಗೆ ಇಂಥ ಹಾಡು-ಲಾವಣಿ-ಪದ್ಯಗಳನ್ನೆಲ್ಲ ಕೂಡಿಸಿ ಒಂದು ಪುಸ್ತಕ ಹೊರಡಿಸಬೇಕೆಂದು ಮಾಡಿದ್ದೇವೆ ಸ್ವದೇಶೀ ಪುರಸ್ಕಾರದ ವೇಳೆಗೆ ಹಾಡಗಳು ರಾಜಕಾರಣ ಬಿಟ್ಟೇ ಇರುವದು ಹೆಚ್ಚು ಸಮಂಜಸ ಅದ್ದರಿಂದ ಕವಿಗಳು ತಮ್ಮ ಪದ್ಯಗಳಲ್ಲಿ ರಾಜಕಾರಣವು ಸಮಾವೇಶವಾಗದಂತೆಯೂ ಜನಜೀವನಕ್ಕೆ ರುಚಿಸುವಂತೆಯೂ ಸ್ವದೇಶಿ ಪ್ರಸಾರದಿಂದ ಆಗುವ ಲಾಭ ಅದು ಆಗದಿದ್ದರೆ ಆಗುವ ಹಾನಿ ಅದರಿಂದ ದೇಶದ ಮೇಲಾಗುವ ಪರಿಣಾಮ ಮುಂತಾದ ಸಂಗತಿಗಳನ್ನೊಳಗೊಂಡ ಹಾಡು-ಲಾವಣಿ-ಪದ್ಯಗಳನ್ನು ಥಾಟ ಸಹಿತ ತಮ್ಮ ಹೆಸರು ಮುಂತಾದವನ್ನು ವಿಶದವಾಗಿ ಬರೆದು ಕೆಳಗಿನ ವಿಳಾಸಕ್ಕೆ ಬೇಗನೆ ಕಳಿಸಬೇಕಾಗಿ ನಮ್ರ ವಿನಂತಿ

ಸ್ವದೇಶೀ ಸಭೆ ಧಾರವಾಡ

ಕೊನೆಯುಚ್ಚು





ಸ್ತ್ರೀಯರ ವಿಕಾರದ ಮೇಲೆ
ರಾಮಬಾಣ ಔಷಧವು

[illegible]

ಬಿ. ಟಿ. ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ

ಡಾ. ಭೈಲೂರ

ಇವರ ಔಷಧಗಳು

ಶಾಪಸಾಬಿ. ರೆಸ್— ನೆಗಡಿ, ಗೊಬ್ಬರ, ಪ್ಲೇಗ, ಕವೆಯಿಂದಾ ಟಾಗುವ ಫ್ಲಸ್ [illegible], ಕೆಮ್ಮು, ಇನ್‌ಫ್ಲುಯೆಂಝಾ, ಹೊಟ್ಟೆ [illegible] ಮೇಲೆ [illegible] ಬೇನೆಗಳ ಮೇಲೆ ಸನ್ನ ಔಷಧವು [illegible] ಉಪಯೋಗವು [illegible] ಯಾವದೆ [illegible] ಪತ್ರಿಕೆಯಲ್ಲಿ ಬರೆದಂತೆ [illegible] ಸಂಗ್ರಹಕ್ಕೆ ಯೋಗ್ಯವಾಗಿರುವದು. [illegible]

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗನ್ನು ತರಿಸಿಕೊಳ್ಳಬಹುದು.

[illegible] ಔಷಧಗಳನ್ನು [illegible]

[illegible] ವ್ಯಾಪಾರಿಗಳಿಗೆ [illegible] ಕೊಡಲ್ಪಡುವದು

ಪತ್ತೆ:— ಡಾ॥ ಹರಿ ಮಹಾದೇವ ಭೈಲೂರ ದ ಬೆಳಗಾವ

ಬಾಗಲಕೋಟೆ ಏಜಂಟ— ಬಿ. ಟಿ ಕೆರೂರ ಆ್ಯಂಡ ಸನ್ಸ, ಮೆಡಿಕಲ್ ಸ್ಟೋರ್ಸ

ನಾಯಿಸ ವ್ಯಾರಿ

ಚಂದ್ರಪ್ರಭಾ— ಈ ಔಷಧದಿಂದ [illegible] ಗುಣ [illegible] ಏಜಂಟರಿಗೆ [illegible] ಬೇರೆ

ವ್ಯಾನೇಜರ:- ರಾಘವ ಧಾಮಣೆಸಿ ಗೋಕಾಕ
ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವರಿಗೆ
ತಿಂಗಳ	[illegible]	[illegible]
೩ ತಿಂಗಳಿಗೆ	[illegible]	[illegible]
೬ ತಿಂಗಳಿಗೆ	[illegible]	[illegible]
ವರ್ಷಕ್ಕೆ	[illegible]	೪-೦-೦

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ಗದಗ ಶ್ರೀ ದತ್ತಾತ್ರೇಯ ಬುಕ್ ಡೀಪೊ
ರಹಾಪುರ ಪೇಟ ಗದಗ

ಜನಪದ ಹಿತವನ್ನು ಸಾಧಿಸುವ ಪ್ರಮುಖ ರಾಷ್ಟ್ರೀಯ ಸಚಿತ್ರ ವಾರಪತ್ರಿ

'ಅರುಣೋದಯ'

ಸಂಪಾದಕರು ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ ಎಲ್ ಎಲ್ ಬಿ

ಇದರಲ್ಲಿ ಸುಪ್ರಸಿದ್ಧ ವಿದ್ವಾನ್ ಲೇಖಕರ ವಿವಿಧ ವಿಷಯಗಳ ಮೇಲೆ ವಿಚಾರ ಪೂರ್ಣವಾದ ಲೇಖನಗಳು ಬರುವವಲ್ಲದೆ ದೇಶ ವಿದೇಶದ ಮಹತ್ವದ ಸಂಗತಿಗಳು ಪ್ರವಾಹದಲ್ಲಿಯೂ ಕೊಡಲ್ಪಡುವವು ಉದ್ಬೋಧಕವಾದ ಸಣ್ಣ ಸಣ್ಣ ಕಥೆಗಳೂ ರಸಭರಿತವಾದ ಕವಿತೆಗಳೂ ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಸೃಷ್ಟಿ ಚಮತ್ಕಾರಗಳ ಶಾಸ್ತ್ರೀಯ ಶೋಧಗಳೂ ಕಾಲಕಾಲಕ್ಕೆ ಕೊಡಲ್ಪಡುವವು. ಇಡೀ ಕರ್ನಾಟಕದಲ್ಲಿ ಇದು ಪ್ರಚಾರವಾಗುವದರಿಂದ ವ್ಯಾಪಾರಸ್ಥರಿಗೆ ಪ್ರಚಾರಕ್ಕೆ ಉತ್ತಮ ಸಾಧನ [illegible] ದಾತರಿಗೆ ವಿಶೇಷ ಸವಲತ್ತು ದೊರೆಯುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಬೇಕು.

ವ್ಯವಸ್ಥಾಪಕರು
'ಅರುಣೋದಯ' ಬೆಳಗಾವ

ಕಿರ್ಲೋಸ್ಕರ



ಕಲ್ಯಾಣ ಶೇಂಗಾ ಯಂತ್ರ

ಒಂದು ತಾಸಿನಲ್ಲಿ [illegible] ಚೀಲಗಳ ಶೇಂಗಾಗಳನ್ನು ಒಡೆಯುವದು. [illegible] ಶೇಂಗಾ ಒಡೆಯುವದು. ಹೆಚ್ಚಿನ ಮಾಹಿತಿ ಬಗ್ಗೆ ಈ ಹೊತ್ತೇ ಬರೆರಿ
ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ ಜಿ. (ಸಾತಾರಾ)

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ
ಸಂಪಾದಕರು:— ಮೊಹರೆ ಹಣಮಂತರಾಯರು.

ಸಪ್ಟೆಂಬರ [illegible] ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡಪತ್ತಿ ವಿಚಾರ ಪರಿಪ್ಲುತವಾದ ಲೇಖಗಳೂ, ಚಂದ ಚುಂಚಿನ ನುಡಿಗಳೂ ಬಿಸಿ ಬಿಸಿ ಸುದ್ದಿಗ [illegible] ವಾರ್ಷಿಕ ಚಂದಾ [illegible]

ವ್ಯವಸ್ಥಾಪಕ:- 'ಕರ್ನಾಟಕ ವೈಭವ' ವಿಜಾಪುರ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम्॥मनु.

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕೆಂದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರುಃ—ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦]   ಧಾರವಾಡ— ಶುಕ್ರವಾರ ಕಾರ್ತಿಕ ಶುದ್ಧ ೬ ಶಕೆ ೧೮೫೩ ತಾ॥ ೨-೧೧-೩೧   [ಸಂಚಿಕೆ ೨೫

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ   ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು. ಇದು ಸಂಧಿವಾತ ಎದೆನೋವು, ತಲೆನೋವು, ಛಳಿಜ್ವರ, ಮೂಗಿನೆಗಮ್ಮು, ಕೆಮ್ಮು, ಕಿವಿ ನೋವು ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟಃ— ಜಿ. ಕೆ ಟೋಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಪ್ರಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎರಡು ನಕಾಶಗಳಿರುವವು. ಬೆಲೆ—೦-೬-೬ ಮಾತ್ರ, ಅಂಚೆವೆಚ್ಚ ಬೇರೆ ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳುಃ- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೫ ೮ ೩೩

ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ

ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಅಗಡಿಕೆರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಕರ್ನಾಟಕ ಟಾಯಿಮ್ಸ್.

ಸಂಪಾದಕರುಃ— ಎಚ್ ಎಸ್ ಶಿವಲಿಂಗಶಾಸ್ತ್ರಿಗಳು.

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಪಯುಕ್ತ ವಿಷಯಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿಃ— ಸ್ಥಳಿಕರಿಗೆ ೨—೧೨—೦ ಪರಸ್ಥಳದವರಿಗೆ ಅಂಚೆ ವೆಚ್ಚ ಸೇರಿ ರೂ ೩—೨—೦

ವ್ಯವಸ್ಥಾಪಕರು.

ಕರ್ನಾಟಕ ಟಾಯಿಮ್ಸ್ ಕಾರ್ಯಾಲಯ ಧಾರವಾಡ

ಮುದ್ದಣ್ಣ ಕವಿಯ ಹೊಸ ಪರಿಚಯ.

[ಶ್ರೀ ಪಂಜೇ ಮಂಗೇಶರಾಯರ ಭಾಷಣದ ಸಾರಾಂಶ.]

ಲೇಖಾಂಕ ೨ *

ದಕ್ಷಿಣ ಕನ್ನಡದ ವರ್ಷಾಕಾಲದಲ್ಲಿ ಮಳೆಯು ಕಲ್ಲುಕಟ್ಟಿ ಸುರಿಯುವಾಗ ಮುದ್ದಣ್ಣ ಕವಿಯು ರಾಜಸಂಸ್ಥಾನದಿಂದ ಮನೆಗೆ ಒಂದಿದ್ದಾನೆ ಅಂಗಣಕ್ಕೆ ಬಂದ ಕೂಡಲೆ ಅವನ ಅಂಗನೆಯು ಕಂಡಿದ್ದಾಳೆ ಗಂಡನ ಆ ಅಪಾಯ ಅವಸ್ಥೆಯನ್ನು ಕಂಡು ಮನಮರುಗಿ ಕೆಸರು ಮೆತ್ತಿದ ಕಾಲು ತೊಳೆದು ಒರಸಿ ಸೀರೆ ನನ್ನಿತು ಉಳ್ಳರಿಸಿ ಕುಡಿಯಲಿಕ್ಕೆ ಬಿಸಿ ಬಿಸಿ ಕೆನೆಯ ಹಾಲುಕೊಟ್ಟು ತಿನ್ನಲಿಕ್ಕೆ ಬಾಳೆಹಣ್ಣು ಕೊಟ್ಟು ಸೊಂಲಿ ವೀಳ್ಯವನ್ನಿತ್ತು ಆತನನ್ನು ಉಪಚರಿಸಿದ ಒಳಿಕ ಮಳೆಯಲ್ಲಿ ಮನೆಯಲ್ಲಿ ಒಬ್ಬಳೇ ಕುಳಿತು ಬೇಜಾರಪಟ್ಟ ಅವಳು ಹೊತ್ತು ಹೋಗುವದಕ್ಕೊಂದು ಕಥೆಯನ್ನಾದರೂ ಹೇಳಬಾರದೇ ಎಂದು ಗಂಡನನ್ನು ಕೇಳುವಳು. ಈಕೆಯ ಹೆಸರು ಮನೋರಮೆ! ಮುದ್ದಣ್ಣನಿಗೆ ಈ ಹೆಸರು ಎಲ್ಲಿಂದ ಹೊಳೆದಿರಬೇಕೆಂಬುದೂ ಒಂದು ವಿಚಾರಣೀಯವಾದ ಮಾತೇ ಆಗಿದೆ. ನಮ್ಮ ಕನ್ನಡನಾಡಿನಲ್ಲಿ ಈ ಬಗೆಯ ಹೆಸರುಗಳು ಇಪ್ಪತ್ತು ಮೂವತ್ತು ವರ್ಷಗಳ ಹಿಂದೆ ಇರಲಿಲ್ಲ ಈಗೀಗ ಬಂಗಾಲಿ ಮರಾಠೀ ಕಾದಂಬರಿಗಳ ಓದು ನಮ್ಮಲ್ಲಿ ಬಳಕೆಗೆ ಬಂದ ಬಳಿಕ ನಮ್ಮ ಮನೆಗಳಲ್ಲಿ ಆ ಹೆಸರುಗಳು ಅತಿಕ್ರಮಣ ನಡೆಸಿವೆ ಒಂದು ಸಾವಿರದಾ ಎಂಟುನೂರಾ ತೊಂಬತ್ತರ ನಂತರ ನಮ್ಮಿತ್ತ ಕಡೆಗೆ ಬಂದ ಮರಾಠೀ ನಾಟಕ ಕಂಪನಿಗಳು ವಿಕ್ರಮ ಶಶಿಕಲಾ ಸತ್ಯವಿಜಯ ಎಂಬ ನಾಟಕಗಳನ್ನು ಆಡುತ್ತಿದ್ದವು ಈ ಸತ್ಯವಿಜಯ ನಾಟಕದಲ್ಲಿ ನಾಯಿಕೆಯ ಹೆಸರು ಮನೋರಮಾ ಎಂದಿದೆ. ಇದೇ ಹೆಸರನ್ನು ಮುದ್ದಣ್ಣನು ಎತ್ತಿರಲಿಕ್ಕೆ ಸಾಕು ಈ ಹೆಸರು ಹೆಂಡತಿಯನ್ನು ಕರೆಯಲಿಕ್ಕೂ ಗಂಡನಿಗೆ ಬಹಳ ಅನುಕೂಲವಾಗಿದೆ ಅವಳ ಹೆಸರು ಬಾಯಿಯಿಂದ ಆಡಿದಂತೆಯೂ ಆಗುವದಿಲ್ಲ "ಮನೋ" "ರಮೆ"! ನೋಡಿ ಅನ್ವರ್ಥಕವಾಗುತ್ತದೆ, ಮುದ್ದಣ್ಣನಂತಹ ಅನುಕೂಲ ದಾಂಪತ್ಯದ ವಿಷಯದಲ್ಲಿ! ನಮ್ಮಲ್ಲಿ ಹೆಂಡತಿಯನ್ನು ಕರೆಯುವದಕ್ಕೆ ಏನಾದರೂ ಒಂದು ಪ್ರೀತಿಯ ಹೆಸರು ಇಟ್ಟುಕೊಳ್ಳುವದುಂಟು. ಅದೂ ಹುಚ್ಚಾ ಪಚ್ಚಾ ಇಲ್ಲವೆ ಏ ಎನೇ ಓಯ್ ಎಂದು ಸಂಬೋಧನ ವಿಶೇಷದಿಂದಲೇ ಕೆಲವರು ಕರೆಯುವದೂ ಉಂಟು ಇವೆಲ್ಲ ಅಪ್ರಬುದ್ಧ ಮಾರ್ಗಗಳು (Uncultured ways) ನನ್ನ ಮಿತ್ರರೂ ಕರ್ನಾಟಕದ ಪ್ರಸಿದ್ಧ ಪ್ರತಿಭಾವಂತ ಕವಿಗಳೂ ಲೇಖಕರೂ ಆದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರರಿಗೂ ಇದೇ ಸಮಸ್ಯೆ ಒಂದು ದಿವಸ ಬಿದ್ದಿತ್ತಂತೆ! ವಿಚಾರ ಮಾಡಿ ಮಾಡಿ ಕೊನೆಗೆ " ಅತ್ತೇ ಮಗಳೇ " ಎಂದು ಕರೆಯುವದನ್ನು ಅವರು ನಿಶ್ಚಯಿಸಿದರಂತೆ! ನನಗೂ ಮೊದಲು ಇದು ಸರಿಯೆನಿಸಿತು ಆದರೆ ನಾವು ಕನ್ನಡಿಗರಾದರೂ ಮನೆಯಲ್ಲಾಡುವ ಮಾತು ಕೊಂಕಣಿಯಾದದ್ದರಿಂದ ನಮ್ಮ ಮನೆಯವರಿಗೆ ಕನ್ನಡದ ಸಾಹಿತ್ಯ ಗುಟ್ಟು ತಿಳಿಯದು. ಒಂದು ಸಲ ನಾನೂ ಮನೆಯಲ್ಲಿ " ಅತ್ತೇ ಮಗಳೇ" ಎಂಬ ಪ್ರಯೋಗ ಮಾಡಿ ನೋಡಿದೆ ಕೂಡಲೆ ಮನೆಯ ಯಜಮಾನತಿಯವರು " ಏನಿದು ಹುಚ್ಚು? ನಿಮ್ಮ ಅತ್ತೆಯು ಎಂದೋ ಸತ್ತು ಹೋಗಿದ್ದಾಳೆ ಮಗಳು ಸ್ಕೂಲಿಗೆ ಹೋಗಿದ್ದಾಳೆ! ಯಾರನ್ನು ಕರೆದಿರಿ? ಎಂದು ನನ್ನನ್ನು ಗದರಿಸಿಬಿಟ್ಟರು. ಈ ಅನುಭವದಿಂದ ನೋಡಿದರೆ ಮನೋರಮೆ " ಎಂಬ ಹೆಸರು ಬಹು ಸೊಗಸಾಗಿ ತೋರುವದಲ್ಲವೆ ' ಇದನ್ನೇ ನಮ್ಮ ಮುದ್ದಣ್ಣನು ಎತ್ತಿದ್ದಾನೆಂದು ಹೇಳಿದರೆ ಆಭಾಸವಾಗದಲ್ಲ?

ಮರಾಠೀ ನಾಟಕಗಳ ವರ್ಚಸ್ಸವು [Influence] ಮುದ್ದಣ್ಣನ ಮೇಲಾಗಿತ್ತೆಂಬುದಕ್ಕೆ ಅವನ ಕೃತಿಯಲ್ಲಿ ಇನ್ನೊಂದು ದೃಷ್ಟಾಂತ ತೋರುವದು. ಮುದ್ದಣ್ಣನು ಕೇಳುತ್ತಾನೆ- ಯಾವ ಕತೆ ಹೇಳಲಿ? ಭೋಜ ಪ್ರಬಂಧವೇ ವಿಕ್ರಮ ವಿಜಯವೇ ಮಹಾವೀರ ಚರಿತವೇ? ಎಂದು ಇವುಗಳಲ್ಲಿ ಭೋಜ ಪ್ರಬಂಧವಿದೆ. ಮಹಾವೀರ ಚರಿತವೂ ಇದೆ "ವಿಕ್ರಮವಿಜಯ"ವೆಂಬುದು ಇಲ್ಲವೇ ಇಲ್ಲ. ಆಗಲೇ ಹೇಳಿದ ಎರಡೂ ಮರಾಠೀ ನಾಟಕಗಳ ಒಂದೊಂದು ಪದವನ್ನು ಎತ್ತಿ ಮುದ್ದಣ್ಣನು "ವಿಕ್ರಮವಿಜಯ"ವೆಂಬುದಾಗಿ ಸಂಯುಕ್ತ ಪದವನ್ನು ಮಾಡಿದನೆನ್ನಲು ಪ್ರತ್ಯವಾಯವೇನು? ಮುದ್ದಣ್ಣನ ಈ ಪ್ರಶ್ನೆಗೆ ಮನೋರಮೆಯು ಕೊಟ್ಟ ಉತ್ತರವೂ ಮಾರ್ಮಿಕವಾಗಿದೆ "ಇಕ್ಷಿ ನನಗಿದೊಂದು ಸೇರದು 'ಎಂದು ಅವಳು ಹೇಳಿದ್ದಾಳೆ "ಇಕ್ಷಿ" ಎಂಬುದು ನಮ್ಮತ್ತಕಡೆಗೆ ಹೆಣ್ಣುಮಕ್ಕಳು ತಿರಸ್ಕಾರ ತುಚ್ಛತೆ ಮೊದಲಾದ ಅಸತ್ಯಭಾವವನ್ನು ತೋರಿಸುವದಕ್ಕೆ ಬಾಯಿಯಿಂದ ತೆಗೆಯುವ ಉದ್ಗಾರವು ಮರಾಠೀ ನಾಟಕಗಳು ಗಂಡಸರಾದ ನಿಮಗೆ ಏನೋ ಒಂದು ದೊಡ್ಡ ಮನೋರಂಜಕ ಸಾಧನವಾಗಿದ್ದರೂ ಆ ಮಾತಿನ ಗಂಧವನ್ನು ತಿಳಿಯದ ನನ್ನಂಥ ಹೆಂಗಸಿಗೆ ಅದು ಮನಕ್ಕೆ ತಟ್ಟದೆಂಬ ಭಾವದಿಂದಲೇ ಮನೋರಮೆಯು "ಇಕ್ಷಿ" ಎಂಬ ಮಾತನ್ನು ಮೋರೆಯನ್ನು ಕಿವುಚಿ ಅಂದಿರಲಿಕ್ಕೆ ಸಾಕು ನಮ್ಮ ಹೆಣ್ಣು ಮಕ್ಕಳು ಕನ್ನಡ ಸಂಸ್ಕೃತಿಯ ಮೇಲೆ ಬೇರೆ ಸಂಸ್ಕೃತಿಗಳ ಆಘಾತವಾಗದಂತೆ ಅದನ್ನು ಹೇಗೆ ರಕ್ಷಿಸುತ್ತಿದ್ದಾರೆಂಬುದಕ್ಕೆ ಇದೊಂದು ದೃಷ್ಟಾಂತವಾಗಿದೆ.

* ೧ ನೇ ಲೇಖವನ್ನು ೨೮-೧೦-೩೧ ನೇ ದಿನದ ' ಕನ್ನಡಿಗ ' ದಲ್ಲಿ ಪ್ರಕಟಿಸಿದೆ

ಕನ್ನಡಿಗ

ಶುಕ್ರವಾರ ತಾರೀಖು [illegible]

ಪ್ರಾಗತಿಕರ ಅಧೋಗತಿ

ರಾಷ್ಟ್ರೀಯ ಸಭೆಯ [illegible] ಕಾಲ ಮಂದ ಪಕ್ಷವೆಂಬುದು [illegible] ಆಗ ಆ ಸಭೆಯ ಸೂತ್ರಗಳನ್ನು [illegible] ಮುಂದೆ ಮಂದಪಕ್ಷದವರೆನ್ನಿಸಿಕೊಂಡವರ ಕೈಯಲ್ಲಿ ಇದ್ದವು. [illegible] ಇಸ್ವಿಯ [illegible] ಕ್ಕೆ ವಂಗಭಂಗ ಚಳವಳಿಯು ಜೋರಿನಿಂದ ನಡೆದಾಗ, ರಾಷ್ಟ್ರೀಯ ಅಥವಾ ವೀರ ಪಕ್ಷವು ಉತ್ಪನ್ನವಾಯಿತು. ಆಗ, ಹಿಂದೆ ಬೀಳುತ್ತ ನಡೆದಿರುವ ಪಕ್ಷಕ್ಕೆ ಮಂದ ಪಕ್ಷವೆಂದು ಹೆಸರು ಬಿದ್ದಿತು. ಆ ಪಕ್ಷವೇ ಮುಂದೆ ತನ್ನ [illegible] ಇನ್ನೂವರೆಗೆ ಅಂಟಿಕೊಳ್ಳುತ್ತಲೇ ಬಂದಿರುವುದು. ಇತ್ತೀಚೆಗೆ ಅದು ಪ್ರಾಗತಿಕ ಪಕ್ಷವೆಂಬ ಭವ್ಯವಾದ ನಾಮವನ್ನು ಧಾರಣ ಮಾಡಿರುವುದು. ಆದರೆ ಹೆಸರು 'ಕ್ಷೀರಸಾಗರಭಟ್ಟ, ಕುಡಿಯಲಿಕ್ಕೆ ಮಜ್ಜಿಗೆ ಇಲ್ಲ' ವೆಂಬಂತೆ ಅವರ ಗತಿಯಾಗಿದೆ. ಮೊಟ್ಟಮೊದಲು ಅವರ ಕೈಯಲ್ಲಿ ರಾಷ್ಟ್ರೀಯ ಪಕ್ಷದ ಸೂತ್ರಗಳು ಇದ್ದ ಕಾರಣ, ಆ ಬಲದ ಮೇಲೆ ಅದು [illegible] ಆದರೆ ದೇಶವು ಮುಂದೆ ಓಡುತ್ತಿರುವಾಗ ರಾಷ್ಟ್ರೀಯ ಸಭೆಯನ್ನು ಹಿಂದೆ ನೂಕುವ ಅವರ ಧೋರಣವನ್ನು ರಾಷ್ಟ್ರವು ಹೇಗೆ ಎತ್ತಿ ಹಿಡಿದೀತು? ಆದುದರಿಂದ ಶೀಘ್ರವೇ ಅದು ರಾಷ್ಟ್ರೀಯ ಸಭೆಯ ಪದದಿಂದ ಚ್ಯುತವಾಯಿತು. ರಾಷ್ಟ್ರೀಯ ಸಭೆಯ ಸೂತ್ರಗಳು ರಾಷ್ಟ್ರೀಯ ಪಕ್ಷದವರ ಕೈಯಲ್ಲಿ ಹೋದವು. ಆದರೂ ಈ ಮಂದ ಪಕ್ಷ ಅಥವಾ ಪ್ರಾಗತಿಕ ಪಕ್ಷದವರಿಗೆ ತಮ್ಮ ಹಳೆಯ ತತ್ವಗಳ ಮೇಲಿನ ವಿಶ್ವಾಸವು ಕಡಿಮೆಯಾಗಲಿಲ್ಲ. ಆದಕಾರಣ ದೇಶವು ಮುಂದೆ ಮುಂದೆ ಹೋದಂತೆ ಈ ಪಕ್ಷವು ಹಿಂದೆ ಹಿಂದೆ ಹೋಗಹತ್ತಿದೆ. ದೇಶವು ಊರ್ಧ್ವಗತಿಯನ್ನು ಅವಲಂಬಿಸುತ್ತ ಹೋದಂತೆ ಇದು ಒಬ್ಬುತ್ತ ಅಧೋಗತಿಗೆ ಇಳಿಯಲಾರಂಭಿಸಿದೆ. ರಾಷ್ಟ್ರೀಯ ಪಕ್ಷವು ಮುಂದೆ ಅಸಹಕಾರ ಪಕ್ಷವಾಗಿಯೂ, ಸತ್ಯಾಗ್ರಹ ಪಕ್ಷವಾಗಿಯೂ ಕೊನೆಗೆ ಶಾಸನಭಂಗ ಪಕ್ಷವಾಗಿಯೂ ಮುಂದೆ ಮುಂದಕ್ಕೆ ಅಡಿ ಇಡಹತ್ತಿದೆ. ಆದರೆ ಈ ಮಂದ ಅಥವಾ ಪ್ರಾಗತಿಕ ಪಕ್ಷವು ಮಾತ್ರ ಇದ್ದಲ್ಲಿಯೇ ಉಳಿದಿವೆಂಬುದಷ್ಟೇ ಅಲ್ಲ, ಹೆಚ್ಚಿಗೆ ಕೆಳಗೆ ಇಳಿಯಹತ್ತಿದೆ. ದೇ. ಮೇಥಾ, ದೇ. ಗೋಖಲೆ ಇವರಲ್ಲಿ ಇದ್ದ ತೇಜವು ಕೂಡ ಈ ಪಕ್ಷದಲ್ಲಿ ಈಗ ಉಳಿದಿರುವುದಿಲ್ಲ. ಅಲ್ಲದೆ ಆಗ ಅದರಲ್ಲಿದ್ದ ಒಕ್ಕಟ್ಟು ಕೂಡ ಉಳಿದಿರುವುದಿಲ್ಲ. ದೇ. ಸಪ್ರು, ದೇ. ಜಯಕರರ ಮೋರೆ ಒಂದು ಕಡೆಗೆ ನಾವು. ಶಾಸ್ತ್ರಿಯವರ ಮೋರೆ ಮತ್ತೊಂದು ಕಡೆಗೆ. ದೇ. ಚಿಂತಾಮಣಿಯವರ ದಾರಿ ಮೂರನೆಯದೊಂದು. ಹೀಗೆ ಇವರ ಸ್ಥಿತಿಯಾಗಿರುವುದು. ಆದರೂ, ಇವರಲ್ಲಿ ಒಂದು ಬಗೆಯ ಸಾಮ್ಯವು ಇನ್ನೂ ಇದೆ. ಅದು ಏತರಲ್ಲಿ ಎಂದರೆ ಬಿಳಿಬುರುಕುತನದಲ್ಲಿ.

ಈ ಮಂದ ಅಥವಾ ಪ್ರಾಗತಿಕರ ಆ ಬಿಳಿಬುರುಕುತನದ ತತ್ವಗಳಾದರೂ ಯಾವವು ಎಂದು ನೀವು ಕೇಳಬಹುದು. ಸ್ವಲ್ಪದಲ್ಲಿ ಹೇಳುವುದಾದರೆ ಅವನ್ನು ಹೀಗೆಂದು ಹೇಳಬಹುದು. ಬ್ರಿಟಿಶ ಸಾಮ್ರಾಜ್ಯದಲ್ಲಿಯೂ ಬ್ರಿಟಿಶ ಜನತೆಯಲ್ಲಿಯೂ ಅಪರಂಪಾರವಾದ ವಿಶ್ವಾಸ, ಅದರ ಮೂಲಕ ಕೊನೆಯವರೆಗೆ ಬ್ರಿಟಿಶ ಸಾಮ್ರಾಜ್ಯದಲ್ಲಿ ಹಿಂದುಸ್ಥಾನವು ಉಳಿಯಬೇಕೆಂಬ ಉತ್ಕಟವಾದ ಆಶೆ. [illegible] ಸೌಮ್ಯತಮವಾದ ಸಾಧನಗಳ ಉಪಯೋಗ, ಪ್ರತ್ಯಕ್ಷ ಪ್ರತಿಕಾರವನ್ನುಂಟುಮಾಡುವ (Direct Action) ಸಾಧನಗಳಿಂದ, ಶಾಸನಭಂಗವೇ ಮುಂತಾದ ಕೊನೆಯ [illegible] ಉಲ್ಪಸರನ್ನು [illegible] ತೋರಿಸುತ್ತ, [illegible] ಎಂದಾದರೊಮ್ಮೆ ಬ್ರಿಟಿಶರ [illegible] [illegible] ಈ ಪಕ್ಷದ ತತ್ವಗಳು [illegible] ಈ ಪಕ್ಷವು [illegible] ಗುವುದು [illegible] ಯವಾಗಿ [illegible] ವು. ಆದರೂ ಈ ಪಕ್ಷದವರು [illegible] ಅಂಟಿಕೊಂಡು [illegible] ಧೈರ್ಯವು ಹುಟ್ಟಿ ನಡೆಸ್ಸ[illegible]

[illegible] ಈ [illegible] ಪಕ್ಷ [illegible] ಕೆಲವು [illegible] ತ್ತ ಬಿಳಿಯ [illegible] ದರೆ [illegible] ರಾಷ್ಟ್ರೀಯ ಪಕ್ಷದ [illegible] ಹಿಂದೆ ಮುಂದೆ [illegible] ಅವರಿಗೂ ಒಪ್ಪಿಗೆ ಇದೆ. ಮುಖ್ಯತ [illegible] ಹಿಂದೀ ಜನರ ಕೈಗೆ [illegible] ರಾಷ್ಟ್ರೀಯ ಸುಧಾರಣೆಯು [illegible] ಗ ಬೇಕೆಂಬುದು ಇವರಿಗೂ ಒಪ್ಪಿಗೆ ಇದೆ. ಮನು ರಾಷ್ಟ್ರೀಯ ಸುಧಾರಣೆಗಳನ್ನು [illegible] ರಲ್ಲಿ ಇವರು ವೀರಪಕ್ಷದವರಿಗಿಂತ [illegible] ದು ಹೆಜ್ಜೆ ಮುಂದೆಯೇ ಇರುತ್ತದೆ. [illegible] ವವರನ್ನು [illegible] ಬಾಣಗಳಿಂದ ಬೆದರಿಸುವುದರಲ್ಲಿಯೂ ಇವರು ವೀರಪಕ್ಷದವರಿಗಿಂತಲೂ ಮುಂದೇ ಇರುತ್ತಾರೆ. ಆದರೆ ಸರಕಾರದವರಿಗೆ ಗೊತ್ತು, ಈ ಪ್ರಾಗತಿಕರ ಬಾಣಬಿರುಸುಗಳೆಂದರೆ ಮನುಗಳಲ್ಲಿಯ ಜೀವದ ಬಾಣ ಬಿರುಸುಗಳೆಂಬುದು. ಅವರು ಅವುಗಳನ್ನು [illegible] ದಲ್ಲಿ ಹಾರಿಸುತ್ತ ವಿನೋದವನ್ನು ನೋಡುತ್ತಿರೆಂಬುದು ಅಂದಮೇಲೆ ಅವರು ಅವುಗಳಿಗೆ ಏಕೆ ಅಂಜುತ್ತಾರೆ? ಇದೇ ಬಗೆಯ ಬಾಣ [illegible] ಗಳನ್ನು ಪ್ರಾಗತಿಕ ಪಕ್ಷದವರು ಮೊನ್ನೆ ೨೨ನೆಯ ತಾರೀಖಿನ ದಿವಸ ಅಲ್ಲಾಬಾದದಲ್ಲಿ ಕೂಡಿದ ಸಂಯುಕ್ತಪ್ರಾಂತದ ಪ್ರಾಗತಿಕರ ಸಭೆಯಲ್ಲಿ ಹಾರಿಸಿದ್ದಾರೆ. ಆ ಸಭೆಯಲ್ಲಿ ಅವರು ತೋರಿಸಿದ ಪೌರುಷವು ಯಾರಿಗೆ ಗೊತ್ತಿಲ್ಲ?

ಕರ್ನಾಟಕದ ಕಾರಖಾನೆದಾರರಿಗೆ

ಅಖಿಲ ಕರ್ನಾಟಕ ಸ್ವದೇಶೀ ಸಭೆಯ ಪರವಾಗಿ ನಾವು ಸನ್ ೧೯೩೧ರಲ್ಲಿ ಸ್ವದೇಶೀ ಕೈಪಿಡಿಯೊಂದನ್ನು ಹೊರಡಿಸಿದ್ದೆವಷ್ಟೆ? ಅಲ್ಲಿಂದ ಈ ವರೆಗಿನ ಎರಡು ವರ್ಷಗಳ ಸಮಯದ ಸ್ವದೇಶೀ ವ್ರತದ ಪುರಸ್ಕಾರದಿಂದಲೂ, ನಮ್ಮ ಜನರೊಳಗಿನ ಸ್ವದೇಶೀ ಪ್ರೇಮದ ಹೆಚ್ಚಳದಿಂದಲೂ ಎಷ್ಟೋ ಹೊಸ ಕಾರಖಾನೆಗಳು ನಮ್ಮಲ್ಲಿ ಹುಟ್ಟಿವೆ. ಆದ್ದರಿಂದ ಈ ಹೊಸ ಕಾರಖಾನೆಗಳ ಜತೆಗೆ ಮೊದಲಿನ ಕಾರಖಾನೆಗಳನ್ನು ಕೂಡ ಯಾವತ್ತರಿಗೂ ಪರಿಚಯ ಮಾಡಿಕೊಟ್ಟು ಸ್ವದೇಶೀ ಪ್ರಚಾರವನ್ನು ಹಾಗೂ ಆ ಮೂಲಕ ಕರ್ನಾಟಕದ ಕಾರಖಾನೆದಾರರಿಗೆ ಕೈಗಾರಿಕೆಗೆ ಕಲಾಕೌಶಲ್ಯಕ್ಕೆ ಉದ್ಯೋಗ ಧಂದೆಗಳಿಗೆ ಉತ್ತೇಜನವಾಗಬೇಕೆಂಬ ಉದ್ದೇಶದಿಂದ ನಾವು ಇದೇ ಡಿಶೆಂಬರ ತಿಂಗಳ ೧೯ನೇ ತಾರೀಖಿಗೆ [illegible] ಯಲ್ಲಿ ಕೂಡುವ ಅಖಿಲ ಭಾರತೀಯ ಸ್ವದೇಶಿ ಪ್ರದರ್ಶನದ ವೇಳೆಗೆ ಸ್ವದೇಶೀ ಕೈಪಿಡಿಯೊಂದನ್ನು ಪ್ರಕಟಿಸುವವರಿದ್ದೇವೆ. ಅದರಲ್ಲಿ ನಮ್ಮ ಕರ್ನಾಟಕದೊಳಗಿನ ಯಾವತ್ತು ಕಾರಖಾನೆಗಳ ಹೆಸರುಗಳನ್ನೂ, ಅವರು ತಯಾರಿಸುವ ವಸ್ತುಗಳನ್ನೂ, ಅವರಿಗೆ ಯಾವ ತರಹದ [illegible] ಮುದ್ರಿಸುತ್ತೇವೆ. ಮುದ್ರಣವು ಇದೇ ನವಂಬರ ೧ನೇ ತಾರೀಖಿಗೆ ಆರಂಭವಾಗುವದು. ಆದ್ದರಿಂದ ಈ ಸ್ವದೇಶೀ ಕೈಪಿಡಿಯಲ್ಲಿ ತಮ್ಮ ಹೆಸರು ಬರಬೇಕೆಂದು ಇಚ್ಛಿಸುವ ಕಾರಖಾನೆದಾರರು ತಮ್ಮ ಕಾರಖಾನೆಯ [illegible] ಕಾರಖಾನೆಗೆ [illegible] ಸಂಗತಿಯನ್ನೂ ವಿಶದವಾಗಿ ಕೆಳಗಿನ ವಿಳಾಸಕ್ಕೆ ಕೂಡಲೇ ನವಂಬರ ೧ನೇ ತಾರೀಖಿನೊಳಗೆ ಕಳಿಸಬೇಕಾಗಿ ವಿನಂತಿ.

ನಾವು ಹೊರಡಿಸುವ ಈ ಸ್ವದೇಶೀ ಕೈಪಿಡಿಯು ವ್ಯಾಪಾರಸ್ಥರಿಗೆ-ಕಾರಖಾನೆದಾರರಿಗೆ ಸ್ವದೇಶೀ ಪ್ರಚಾರಕರಿಗೆ ಹಾಗೂ ಯಾವತ್ತು ಸ್ವದೇಶೀ ವಸ್ತು ಸೇವಿಗಳಿಗೆ ಅತ್ಯುಪಯುಕ್ತವಾದದ್ದು ಆಗುವದರಲ್ಲಿ ಸಂಶಯವಿಲ್ಲ.

ರಾ. ಶ್ರೀ. ಮುಕ್ಕೇರಿಕರ
ಧಾರವಾಡ

ಕೊನೆಗೆ ಚರ್ಚಿಲ್ಲರು ನುಡಿದರು.

ಲಂಡನ್ ತಾ। ೨೫— ನಿನ್ನೆ ಜಾಯಿಂಟ ಪಾರ್ಲಮೆಂಟರಿ ಕಮೀಟಿಯ ಮುಂದೆ ಮಿ। ವಿನ್‌ಸ್ಟನ್ ಚರ್ಚಿಲ್ಲರು ಹಿಂದುಸ್ಥಾನಕ್ಕೆ ಕೊಡಬೇಕಾದ ಸುಧಾರಣೆಗಳ ಬಗ್ಗೆ ತಮ್ಮ ವಿಚಾರಗಳನ್ನೊಳಗೊಂಡ ಪತ್ರಿಕೆ ಕೊಟ್ಟರು. ಅದರಲ್ಲಿ ಅವರ ವಿಚಾರಗಳು ಕೆಳಗೆ ಬರೆದ ಪ್ರಕಾರ ಇರುತ್ತವೆ.

೧ ವರ್ಷದೊಳಗೆ ಸ್ವರಾಜ್ಯ ಮತ್ತು ರಾಜ್ಯಘಟನೆ ಇವುಗಳಲ್ಲಿ ವಿಶೇಷ ಅಭ್ಯಂತರವಿದೆ. ೨ ಮಧ್ಯವರ್ತಿ ಸರಕಾರದ ಘಟನೆಯಲ್ಲಿ ಹೆಚ್ಚು ಕಡಿಮೆ ಮಾಡದೆ ಕೆಳಗಿನ ಬಂಧನಗಳನ್ನು [illegible] ಪ್ರಾಂತಿಕ ಸ್ವರಾಜ್ಯ (?) ವನ್ನು ಕೊಡಲಿಕ್ಕೆ ಅಡ್ಡಿ ಇಲ್ಲ. ಬಂಧನಗಳು ಯಾವವೆಂದರೆ, [illegible] ಪ್ರಾಂತಗಳಿಗೆ ಕೊಟ್ಟ ಅಧಿಕಾರವನ್ನು ತಿರುಗಿ ತಕ್ಕೊಳ್ಳುವ ಅಧಿಕಾರವು ಪಾರ್ಲಮೆಂಟಿಗೆ ಇರಬೇಕು. (೨) ಹೊಸ ಸುಧಾರಣೆಗಳ ಘಟನೆಯು ಹ್ಯಾಗೆ ಸಾಗುತ್ತದೆಯೋ ಎಂಬವನ್ನು ಅನೇಕ ವರ್ಷ ನೋಡಬೇಕು. ಅದ್ದರಿಂದ ಇಷ್ಟರಲ್ಲಿಯೇ ಕೂಡಲೆ ರಾಜ್ಯಘಟನೆಯಲ್ಲಿ ಹೆಚ್ಚು ಕಡಿಮೆ ಮಾಡುವ ವಿಚಾರವನ್ನು ಬಿಡಬೇಕು. (೩) ಗವ್ಹರ್ನರ ಪ್ರಾಂತಗಳಲ್ಲಿ ಬಾವಿಶಹರು ಒಬ್ಬ ಅಥವಾ ಡೆಪ್ಯೂಟಿ ಗವ್ಹರ್ನರನ್ನು ನೇಮಿಸಬೇಕು. ಅಂದರೆ ಇಂಪೀರಿಯಲ್ ಪೋಲೀಸ ಖಾತೆಯ ಅಭಾವದಲ್ಲಿ ಪೋಲೀಸ ಮತ್ತು ನ್ಯಾಯಖಾತೆಯ ಮೇಲೆ ಮೇಲ್ವಿಚಾರಣೆ ಕೆಲಸವನ್ನು ಇವರಿಗೆ ಒಪ್ಪಿಸಬಹುದು. (೪) ಹಿಂದುಸ್ಥಾನ ಸರಕಾರದವರಿಂದ ಪ್ರಾಂತಿಕ ಸರಕಾರಗಳಿಗೆ ಸಿಗುವ ಸಹವು ಯೋಗ್ಯ ಪ್ರಕಾರ ವಿನಿಯೋಗ ಆಗುತ್ತಿದೆಯೋ ಇಲ್ಲವೋ ಎಂಬುದನ್ನು ನೋಡಲಿಕ್ಕೆ ಇನಸ್ಪೇಕ್ಟರರನ್ನು ನಿಯಮಿಸಬೇಕು.

ಚರ್ಚಿಲ್ಲರು ಸಾಕ್ಷಿಗೆ ನಿಂತಾಗ ಪ್ರಶ್ನೆಗಳ ಸುರಿಮಳೆಯಾಯಿತು. ತಮ್ಮ [illegible] ಸೂಚನೆಯಿಂದ ಪ್ರಾಂತಿಕ ಸ್ವರಾಜ್ಯಕ್ಕೆ ಬಾಧೆ ತಟ್ಟುವದಿಲ್ಲೆಂದೂ, ಮಧ್ಯವರ್ತಿ ಸರಕಾರವು ಸಂಸ್ಥಾನಿಕರಿಗೆ ಬದಲಾಗಬೇಕೆಂಬ ಇಚ್ಛೆ ಇದೆ ಎಂಬುದಕ್ಕೆ ತಮ್ಮ ಒಪ್ಪಿಗೆ ಇಲ್ಲೆಂದೂ ನುಡಿದರು. ಲಾರ್ಡ ಅರ್ವಿನ್ನರು ಚರ್ಚಿಲ್ಲರು ಸರಕಾರದ ಮಂತ್ರಿಗಳಿದ್ದಾಗ ತೆಗೆದ ಉದ್ಗಾರದ ಕಡೆಗೆ ಅವರ ಲಕ್ಷ್ಯ ಎಳೆದು ಇರುಕಿನಲ್ಲಿ ತಂದು ಅವರ ಸಾಕ್ಷಿಯು ಇನ್ನೂ ಪೂರ್ಣವಾಗಲಿಲ್ಲ.

ಕರ್ನಾಟಕ ತರುಣರೇ ಏಳಿರಿ.

[illegible] ಬೆಂಗಳೂರು [illegible] ನಗರ ಸ್ಮಾರಕೋತ್ಸವದಲ್ಲಿ ಕರ್ನಾಟಕದ ಬಗ್ಗೆ ನಿಮಗಿರುವ ನಿಜ ಪ್ರೇಮವನ್ನು ಕಾರ್ಯತಃ ವ್ಯಕ್ತಪಡಿಸಲು ಈಗಿನಿಂದಲೇ ಸಂಘಟಿತವಾಗಿ ಪ್ರಾಣಾಯಾಮ ಅಂಗ ಸಾಧನೆಗಳನ್ನು ಸಾಗಿಸಲು ನಿಶ್ಚಯಿಸಿರಿ. ಕರ್ನಾಟಕ ಭವನದ ನಡುವಣೆ [illegible] ಯ ಧ್ವಜಾರೋಹಣ ಮಾಡಿದಲ್ಲಿಯೇ ಕರ್ನಾಟಕ ಪಿತಾಮಹರಾದ ದಿ। ಬ। ಆಲೂರ ವೆಂಕಟರಾಯರ ಮುಪ್ಪಿನ [illegible] ವಟಿಕೆಯನ್ನು ಹೊಸರಕ್ತ ತುಂಬಿದ ನಿಮ್ಮ ಕರಗಳು ಹಿಡಿಯಬಾರದೇ? ನಿಮ್ಮ ಮೇಲೆ ಮಮತೆಯನ್ನು ನಿಸ್ವಾರ್ಥ ಬುದ್ಧಿಯಿಂದ ನಡಿಸಿದ ಆ ಮಾನನೀಯ ಮಹಾರಾಯರ ಆತ್ಮವು ಶಾಂತವಾಗಬೇಕೆಂಬ ಉತ್ಕಟಾಪೇಕ್ಷೆಯು ನಿಮ್ಮಲ್ಲಿದ್ದದ್ದಾದರೆ ಕರ್ನಾಟಕದ ವಿದ್ಯಾರ್ಥಿ ಒಂದುಗೂಡಿ ವಿದ್ಯಾರಣ್ಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿ ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚಾರ ಮಾಡಿ ಪ್ರತಿಯೊಂದು ಹಾಯಸ್ಕೂಲಿನಲ್ಲಿ ಯೋಗ್ಯ ಸಂಖ್ಯೆಯುಳ್ಳ ಸಂಘವನ್ನು ಸ್ಥಾಪನೆ ಮಾಡುವ ಹುರುಪನ್ನು ಎಲ್ಲ ತರುಣರಲ್ಲಿಯೂ ತುಂಬಿಸಿರಿ. [illegible] ನೇ ತಾರೀಖಿನೊಳಗಾಗಿ ಯಾವತ್ತು ಸಂಘಗಳನ್ನು ಏಕತ್ರ ಕೂಡಿಸಿ ಆ ಮಹೋತ್ಸವದಲ್ಲಿ ನೀವು ಹೊರಬಹುದಾದ ಕಾರ್ಯಭಾರವನ್ನು ನಿರ್ಧರಿಸ್ಸ ಹಚ್ಚಿಕೊಳ್ಳಿರಿ. [illegible] ಮುಖಂಡರು ನಿಮ್ಮ ಉತ್ಸಾಹಕ್ಕೆ ಶಿಸ್ತಿಗೂ ಬೆಂಗಾವಲಾಗಿ ಯತ್ನದ ತಮ್ಮ ಕಾರ್ಯವನ್ನು ಹೆಚ್ಚು ಉತ್ಸಾಹದಿಂದ ಸಾಗಿಸುವರು. ಸರ್ವತೋಮುಖವಾಗಿ ಯಶಸ್ವಿಯಾಗಲರ್ಹವಾದ ಈ ಮಹೋತ್ಸವವನ್ನು ದೇವ ಋಷಿ ಪಿತೃ ಸಂಘರ್ಷದೀ [illegible] ಉತ್ಸವ ಇದೆಂದು ಉಬ್ಬಿನ ಹಬ್ಬವೇ ಹಾಡಿ ಹರಿ ಶ್ರೀ ವಿದ್ಯಾರಣ್ಯರಿಗೇಸ್ಕಾರ ವರ್ಣ ವೃಷ್ಟಿಯನ್ನು ಕರೆದಂತೆ ಈಗ ಪುಷ್ಪವೃಷ್ಟಿಯನ್ನಾದರೂ ಉತ್ಸವ ಕಾಲದಲ್ಲಿ ವರು [illegible] ಪುರಃಸರವಾದ ಈ ಬಸ್ಸನ್ನ [illegible] ಪಾಲಿಸಿ ಉತ್ಸವವನ್ನು ಪೂರ್ತಿಗೊಳಿಸುವರಾಗಲು ಮರೆಯಬೇಡಿರೆಂದು ಗಳಾಚೆ ಬೇಡಿಕೊಳ್ಳುವ

ಕನ್ನಡಿಗರ ಅಡಿಯಾಳು
ರಾಯಚೂರ ಪುರುಷೋತ್ತಮಾಚಾರ್ಯ
ವಕೀಲ

ಇಹವೃತ್ತ

ಗವ್ಹರ್ನರ ಸಾಹೇಬರ ಆಗಮನದ ಸಿದ್ಧತೆ ಇಲ್ಲಿ ಒತ್ತರದಿಂದ ನಡೆದಿದೆ. ಎಡ್ವರ್ಡ ತೋಟವನ್ನು ರಮಣೀಯವಾಗಿ ಮಾಡಿದ್ದಾರೆ. ಗವರ್ನಮೆಂಟ ಹಾಯಸ್ಕೂಲಿನಲ್ಲಿ ಸ್ಕಾಟಿಂಗ [illegible] ಸಿದ್ಧತೆ ಒತ್ತರದಿಂದ ನಡೆದಿದೆ. ವಿದ್ಯುದ್ದೀಪಗಳ ಯೋಜನೆಯಾಗಿದೆ. ಪ್ರದರ್ಶನದ [illegible] ಆಗಿದೆ. ಅನೇಕ ದರ್ಶನೀಯ ವಸ್ತುಗಳು ಬಂದಿವೆ.

ಮೋಟಾರ ಓಣಿಯ [illegible] ದಾರಿಯ ದುರಸ್ತಿಗಾಗಿ ಕಲ್ಲುಗಳ ಗುಂಪುಗಳು ಅಡ್ಡತಿಡ್ಡಾಗಿ ಹಾಕಲ್ಪಟ್ಟವೆಯಾದ್ದರಿಂದ ನಿನ್ನೆ ಒಬ್ಬ ಸಾಯಕಲ್ ಹೊಡೆಯುವವನು ಬಿದ್ದು ಧಕ್ಕೆ ತಿಂದನು. ಮುನಸಿಪಾಲ್ಟಿಯವರು ಇಂತಹ ಅವ್ಯವಸ್ಥೆಯ ಕಡೆಗೆ ಲಕ್ಷ್ಯ ಕೊಡುವರೋ?

ಹುಬ್ಬಳ್ಳಿ ಪೇಟೆಯ ಧಾರಣೆ

(ಶೇವಣಿ ಮತ್ತು ಕಂಪನಿ)

ಹುಬ್ಬಳ್ಳಿ ತಾ। ೨೫ ಮಧ್ಯಾನ್ಹ ೧

ಜವಾರಿ ಹತ್ತಿ	೧೦೩-೧೦೩	ಜೋಳ ೧
ಅರ್ಧ ಜ ,,	೧೦೨-೧೦೨	ಗೋದಿ ೬
ವಿಲಾಯತಿ ,,	೯೫-೯೭	ಉಂಡ್ಯಾ
ಸ್ಟ್ಯಾಂಡರ್ಡ್ ,,	೧೦೫-೧೧೦	ಕಡ್ಲಿ
ಶೇಂಗಾ	೭೩-೭೮	ಕಡ್ಲಿ ಕಾ.
ಡಬ್ಬಲ ಮೂಲ ಶಿ.	೬೬-೬೭	ಶೆಂಗ್ರಿ ೧
ಸಾಜಿನ ಅಕ್ಕಿ	೬೬-೬೭	ಹುರಳಿ
ಹೆಸರು ಜವಾರಿ	೯ ೧೩	
ಶಿಂಗಾಡದಾಯಿ ತೆಲ	೪-೪॥	ಹತ್ತಿಕಾಳು

ಬೆಳ್ಳಿ ಬಂಗಾರ

ಬಂಗಾರ	೩೧॥ =

ಹಿಂದೀ ಈಸುಗಾರನೇ ಜಗತ್ತಿನಲ್ಲಿ ಮೇಲು

"ಕನ್ನಡಿಗ" ನಿಗಾಗಿ ತರಿಸಿದ 'ಅಸೋಶಿಯೇಟೆಡ್ ಕಂಪನಿ'ಯ ತಂತಿಗಳು

ಹಿಂದೀ ಈಸುಗಾರನೇ ಜಗತ್ತಿನಲ್ಲಿ ಮೇಲು!

೭೯ ಗಂಟೆ ನೀರಿನಲ್ಲಿಯೇ!

ರಂಗೂನ ತಾ॥ ೨೪ ಬಂಗಾಲದ ಸುಪ್ರಸಿದ್ಧ ಈಸುಗಾರ ಪಿ. ಕೆ. ಘೋಷರು ಸಪ್ಟಂಬರ ೯ ತಾರೀಖಿನಲ್ಲಿ ೭೨ ಗಂಟೆ ೧೮ ಮಿನೀಟು ಈಸಿದ್ದರು. ಈಗ ಅವರು ಮತ್ತೊಮ್ಮೆ ರಂಗೂನಿನ ರಾಯಲ್ ಸರೋವರದಲ್ಲಿ ಒಂದೇಸವನೆ ೭೯ ಗಂಟೆ ಈಸಿದರು. ಮತ್ತೂ ಒಂದು ಸಲ ೭೯ ಗಂಟೆಯವರೆಗೆ ಈಸಿದರು. ಜಗತ್ತಿನಲ್ಲಿ ಸುಪ್ರಸಿದ್ಧ ಈಸುಗಾರರಲ್ಲಿ ೭೯ ಘಂಟೆಯನ್ನು ಮೀರಿ ಈವರೆಗೆ ಯಾರೂ [illegible] ಈಸಿದ್ದಿಲ್ಲ. ಘೋಷರು ೨೩ ನೇ ತಾ॥ ಮುಂಜಾನೆ ೮-೬ ಗಂಟೆಗೆ ಜಲದಲ್ಲಿ ಪ್ರವೇಶಿಸಿ, ಅಕ್ಟೋಬರ ೨೬ ನೇ ಮಧ್ಯಾಹ್ನ ೩-೪೦ ಗಂಟೆಗೆ ನೀರಿನ ಹೊರ ಬಿದ್ದರು. ಅಂತೂ ೭೯ ಗಂಟೆ [illegible] ಮಿನೀಟ ಆದಂತಾಯಿತು. [ಅ ಪ್ರೆ ತಂತಿ]

ಮಹಾತ್ಮರ ಮಧ್ಯಸ್ಥಿಕೆ.

ಅಹಮ್ಮದಾಬಾದ ೨೩-೧೦ ೩೧

ಅಹಮ್ಮದಾಬಾದದಲ್ಲಿ ಗಿರಣಿಗಳ ಮಾಲಕರು ಮತ್ತು ಕೂಲಿಕಾರರ ನಡುವೆ ನಡೆದ ವ್ಯಾಜ್ಯವನ್ನು ಕುರಿತು ಮ. ಗಾಂಧಿಯವರೊಡನೆ ಮಾತಾಡಲು ವರ್ಧಾಕ್ಕೆ ಹೋದ ಶ್ರೀ ವಲ್ಲಭಭಾಯಿ ಪಟೇಲರವರು ಈ ಹೊತ್ತು ಗಿರಣಿ ಮಾಲಿಕರ ಮಂಡಲಕ್ಕೆ ತಂತಿಯನ್ನು ಕಳಿಸಿರುವರು. ಗಿರಣಿ ಮಾಲಿಕರ ಮಂಡಲವು ಗಿರಣಿಗಳ ಲಭ್ಯಾಂಶ ಪತ್ರಗಳನ್ನು ಪಂಚಾಯತಿಗೆ ಒಪ್ಪಿಸಬೇಕೆಂದು ಗಾಂಧಿಯವರು ಕೇಳಿರುವರು. ಮತ್ತು ತಾವು ಮಧ್ಯಸ್ಥಿಕೆಯನ್ನು ವಹಿಸಲು ಒಪ್ಪುವರು. ವರ್ಧಾದಲ್ಲಿರ ವಾಗಲಿ ನವಂಬರ ೮ ನೆಯ ತಾರೀಖಿನೊಳಗೆ ಕೂಲಿಕಾರರ ಮಂಡಳದ ನೂಲುವ ಶಾಖೆಗಳಲ್ಲಿಯ ಸ್ಪೂಲ್ ಸಾಯಿಡ ವರ್ಕಿಂಗ ಮತ್ತು ಧನಸಂಚಯ ಮತ್ತು ವರ್ಗಣಿ ಈ ಪ್ರಶ್ನೆಗಳನ್ನು ಕುರಿತು ಅವರು ವಿಚಾರಿಸುವರು. ಮತ್ತು ಕೂಲಿಯನ್ನು ಎಷ್ಟು ಕಡಿಮೆ ಮಾಡಬೇಕೆಂಬ ಪ್ರಶ್ನೆಯನ್ನು ಕುರಿತು ಅವರು ತಮ್ಮ ಸ್ಥಳದಲ್ಲಿ ಇನ್ನೊಬ್ಬರನ್ನು ಮಧ್ಯಸ್ಥ ಮಾಡಲು ಸೂಚಿಸ ವರು. (ಅ ಪ್ರೆ ತಂತಿ)

ಎಂ. ಸಿ. ಸಿ. ಯವರಿಗೆ ಮಾನಪತ್ರ

ಕರಾಚಿ ತಾ॥ ೨೪— ಕರಾಚಿ ಮುನಸಿಪಾಲಟಿಯ ವತಿಯಿಂದ ಎಮ್ ಸಿ ಸಿ ಕ್ರಿಕೆಟ್ ತಂಡದ ಜ್ಯಾರ್ಡಿನ ಮತ್ತು ಇತರ ಸಭಾಸದರಿಗೆ ಇಂದು ಮುಂಜಾನೆ ಮಾನಪತ್ರ ಅರ್ಪಿಸಲ್ಪಟ್ಟಿತು. ಸಂತೋಷ ಕೂಟವೂ ಏರ್ಪಡಿಸಲ್ಪಟ್ಟಿತ್ತು. ಅ ಪ್ರೆ ತಂತಿ

ಜಪಾನದ ಅಕ್ಕಿಯೇ ಅಗ್ಗವಾಗುವದು !

ಕರಾಚಿ ತಾ॥ ೨೩— ಜಪಾನದಿಂದ ಹಿಂದುಸ್ಥಾನಕ್ಕೆ ೭೦೦೦ ಟನ್ ಅಕ್ಕಿಯು ಬರುವದು. ಕರಾಚಿ ಹಿಂದೀ ವರ್ತಕರ ಸಂಘದವರು ಹಿಂದುಸ್ಥಾನ ಸರಕಾರಕ್ಕೆ ಈ ಬಗ್ಗೆ ತಕರಾರು ಕೊಟ್ಟು ಅನ್ನುವದೇನಂದರೆ, ಹಿಂದುಸ್ಥಾನದಲ್ಲಿಯ ಅಕ್ಕಿಗಿಂತ ಜಪಾನದವರು ಅಗ್ಗವಾಗಿ ಮಾರುತ್ತಾರೆ. ಆದ್ದರಿಂದ ಹಿಂದುಸ್ಥಾನಕ್ಕೆ ಜಪಾನದ ಅಕ್ಕಿಯೇ ಬರದಂತೆ ಸರಕಾರದವರು [illegible] ಮಾಡಬೇಕು [ಅ ಪ್ರೆ ತಂತಿ]

ಕುಮಾರಿಗೆ ೪ ವರ್ಷ ಕಠಿಣ ಶಿಕ್ಷೆ.

ಕಲಕತ್ತಾ ತಾ॥ ೨೪— ಅಪ್ಪಣೆಯಿಲ್ಲದೆ ಮದ್ದು ಗುಂಡುಗಳನ್ನು ಇಟ್ಟುಕೊಂಡದಕ್ಕಾಗಿ ಅಲೀಪುರ ಸ್ಪೆಶಲ್ ಮ್ಯಾಜಿಸ್ಟ್ರೇಟರು ಡಿಯೋಸೆಸನ್ ಕಾಲೇಜದ ಪಾಲ್ಕನೇ ವರ್ಷದ ವಿದ್ಯಾರ್ಥಿನಿ ಕುಮಾರಿ ಜ್ಯೋತಿಕಣಾ ದತ್ತ ಇವಳಿಗೆ ೪ ವರ್ಷ ಕಠಿಣ ಶಿಕ್ಷೆ ವಿಧಿಸಿದರು. [ಅ ಪ್ರೆ ತಂ]

ಮಾಲವೀಯರಿಗೆ ದಂತರೋಗ.

ಮಸೂರಿ ತಾ॥ ೨೪— ಬಹು ದಿನಗಳಿಂದ ಪಂಡಿತ ಮಾಲವೀಯರು ಅಸ್ವಸ್ಥರಾಗಿದ್ದರೆ ದಂತರೋಗ [Pyorrhoea] ವೇ ಇವರ ಈ ಅಸ್ವಸ್ಥತೆಗೆ ಕಾರಣವೆಂದು ಡಾಕ್ಟರರ ಮತವಾದ್ದರಿಂದ, ಪಂಡಿತರ ಹಲ್ಲುಗಳನೆಲ್ಲ ಡಾ ಪ್ರಕಾಶರು ಕಿತ್ತಿ ತೆಗೆದರು [ಅ ಪ್ರೆ ತಂತಿ]

ಜಪಾನದವರಿಂದ ಪತ್ರವೇ?

ಮುಂಬಯಿ ತಾ॥ ೨೬— ಲ್ಯಾಂಕೆಶಾಯರ ಶಿಷ್ಟ ಮಂಡಲದವರು ದಿಲ್ಲಿಯಿಂದ ಇಲ್ಲಿಗೆ ಬಂದರು. ಹೊಸದಿಲ್ಲಿಯಲ್ಲಿದ್ದ ಜಪಾನದ ಶಿಷ್ಟ ಮಂಡಲದವರಿಂದಲೂ ತಮಗೆ ಏನಾದರೂ ಬರೆಯು ಬರಬಹುದೆಂದು ಮುಂಬಯಿ ಗಿರಣಿಗಳ ಮಾಲಕರು ಆಶಿಸುತ್ತಾರೆ. ತದನಂತರವಲ್ಲಿಯೇ ನಮ್ಮ ನಿಜ ಪರಿಸ್ಥಿತಿ ಯೇನೆಂಬುದು ತಿಳಿಯುವದೆಂದು ಮುಖ್ಯಸ್ಥರು ಅ ಪ್ರೆ ಪ್ರತಿನಿಧಿಗೆ ಹೇಳಿದರು. [ಅ ಪ್ರೆ ತಂತಿ]

ರಾಜೇಂದ್ರ ಪ್ರಸಾದರ ಅಸ್ವಸ್ಥತೆ.

ಪಾಟ್ನಾ ತಾ॥ ೨೬ ಕೆಲ ಕಾಲದಿಂದ ಅಸ್ವಸ್ಥರಾಗಿದ್ದ ಬಾಬೂ ರಾಜೇಂದ್ರ ಪ್ರಸಾದರಿಗೆ ಮತ್ತೊಂದು ಸಲ ದಮ್ಮಿನ ವಿಕಾರ ಉಂಟಾಗಿದ್ದರಿಂದ ಅವರನ್ನು ಪುನಃ ತುರ್ತಾಗಿ ದವಾಖಾನೆಗೆ ತಂದಿರುವರು. [ಅ ಪ್ರೆ ತಂತಿ]

ಲ್ಯಾಂಕಾಶಾಯರ ಶಿಷ್ಟ ಮಂಡಲವು ಮುಂಬೈಗೆ

ಹೊಸದಿಲ್ಲಿ ತಾ॥ ೨೪ ಲ್ಯಾಂಕಾಶಾಯರದ ಶಿಷ್ಟ ಮಂಡಲದವರು ಮುಂಬೈಗೆ ತೆರಳಿದರು. ಮುಂದೆ ಅವರು ಲಂಡನ್ನಕ್ಕೆ ಹೊರಡತಕ್ಕವರು. ನಿನ್ನೆ ಜಪಾನ ಶಿಷ್ಟ ಮಂಡಲದವರ ಸಂಗಡ ಮಾತಾಡಿಕೊಂಡದ್ದರಿಂದ, ಮುಂಬೈ ಗಿರಣಿಗಳ ಒಡೆಯರ ಸಂಗಡ ಮಹತ್ವದ ವಿಚಾರವಿನಿಮಯ ಮಾಡುವರಾಗಿ ನಿರೀಕ್ಷಿಸಲ್ಪಟ್ಟಿದೆ [ಅ ಪ್ರೆ ತಂತಿ]

ಹಿಂದೀ ವೈಮಾನಿಕನು ಪೃಥ್ವೀ ಪ್ರದಕ್ಷಣೆಗಾಗಿ

ಝುಲರಾ ಪಟ್ಟಣ ತಾ॥ ೨೪ ಸುಪ್ರಸಿದ್ಧ ಹಿಂದೀ ವೈಮಾನಿಕರಾದ ಚವಲಾ ಇವರು ಈ ಊರಿಂದ ನಿನ್ನಿನ ದಿನ ತಮ್ಮ ಪೃಥ್ವಿಯ ಪ್ರದಕ್ಷಣೆಗಾಗಿ ಹೊರಟರು ಮಧ್ಯಾಹ್ನ ೩ ಘಂಟೆಗೆ ದಿಲ್ಲಿಯ ಕಡೆಗೆ ಹೊರಟರು. ಕರಾಚಿಯಿಂದ ಇಂಗ್ಲಂಡಕ್ಕೆ ಮುಂದೆ ಸಾಗುವರು. ಅಮೇರಿಕಾ ಜಪಾನಗಳನ್ನು ಸುತ್ತಿ ಮರಳಿ ಹಿಂದುಸ್ಥಾನಕ್ಕೆ ಬರುವರು (ಅ ಪ್ರೆ ತಂತಿ

ಗಿರಣಿ ಒಡೆಯರು ದಿವಾಳಿ ತೆಗೆದರು.

ಮುಂಬಯಿ ತಾ ೨೪ ಪ್ರಸಿದ್ಧ ವ್ಯಾಪಾರಸ್ಥರೂ ಗಿರಣಿಗಳ ಮಾಲಕರೂ ಆದ ಮೆ. ಸ್ಸ. ಯಯ ಕರೀಮಭಾಯ ಇಬ್ರಾಹಿಮ ಸನ್ಸ ಲಿಮಿಟೆಡ್ ಕಂಪನಿಯವರು ಕರೀಮ ಭಾಯ ಕಂಪನಿಯವರೂ ಸ್ವಂತ ಇಚ್ಛೆಯಿಂದ ದಿವಾಳಿ ತೆಗೆದರು (ಅ ಪ್ರೆ ತಂತಿ)

ಬಂಗಾಲ ಹಿಂಸಕರ ಚಳವಳಿ ಸರಕಾರದ ಪತ್ರಕ

ಕಲಕತ್ತಾ ತಾ॥ ೨೪— ಬಂಗಾಲದಲ್ಲಿ ಈ ವರ್ಷ ಹಿಂಸಕರ ಚಳವಳಿ ಹೆಚ್ಚಿತು. ಇಂದಿನ ಬಂಗಾಲದ ಗ್ಯಾಝೆಟಿನಲ್ಲಿ ಪ್ರಸಿದ್ಧವಾದ ಚಿಲ್ಲಿಯ ಪೋಲೀಸ ಖಾತೆಯ ರಿಪೋರ್ಟಿನ ಸಮಾಲೋಚನೆಯು ಸರಕಾರದ [illegible] ದಿಸ ವರ್ಷಕ್ಕಿಂತ ಈ ವರ್ಷ [illegible] ಚಳವಳಿಯ ಸ್ವರೂಪವು ಹೆಚ್ಚಿನದೆಂದು [illegible] ಮಾಡಿದ ಘೋರ [illegible] ಸಂಖ್ಯೆಯು ಹೆಚ್ಚಾಗಿದ್ದರಿಂದಲೂ [illegible] ಯಲ್ಲಾದ ಅತ್ಯಾಚಾರಗಳನ್ನು ಲಕ್ಷಿಸಿ, ಇದು ಹಿಂಸಕರ ಚಳವಳಿಯು ಅತ್ಯಂತ [illegible] ದ ನಿದರ್ಶಕವಾಗಿರುವದೆಂದು ಧ್ವನಿತವಾಗಿದೆ. ಕ್ರಾಂತಿಕಾರಿಗಳ ಸಂಖ್ಯೆಯು [illegible] ಆ ಸ್ಥಳೀಯ [illegible] ದವರು ಗುಪ್ತ ಪೋಲೀಸ ಖಾತೆಗೆ ಜನವತ್ತು [illegible] ಸಹಾಯವನ್ನು ಕೊಟ್ಟ [illegible] ಪ್ರಾಂತದ ಹೆಸರನ್ನು ಕೆಡಿಸಿದ ಈ ಹಿಂಸಕ ಚಳವಳಿ [illegible] ಪೂರಾ ನಾಮಶೇಷವಾಗುವಂತೆ [illegible] ಸಿನ ಕಾರ್ಯವಾಗಲು ನೆರವಾಗುವದು ಅವಶ್ಯವಾಗಿದೆಯೆಂದು ಪ್ರಕಟಿಸಿದ್ದಾರೆ (ಅ ಪ್ರೆ ತಂತಿ

ಇಂಜೀನು ಹಳಿ ತಪ್ಪಿತು.

೧೨ ಜನರಿಗೆ ಅಪಾಯ

ಮುಂಬೈ ೨೬ ಈ ತಯ ರೇಲ್ವೇದ ಸುಪರಿಂಟೆಂಡೆಂಟರು ದಿನಾಪುರದಿಂದ ತಂತಿ ಕೊಟ್ಟದೇನಂದರೆ.—೨೬ ನೆ ತಾ ದಿನ ಬೆಳಗಿನ ಆರು ಗಂಟೆಗೆ ಮುಂಬೈ ಮೇಲು ಹಳಿ ತಪ್ಪಿತು ಇಂಜೀನು ಹಾಗೂ ಇತರ ಡಬ್ಬಿಗಳೂ ಹಳಿ ಹೊರಗೆ ಇಳಿದವು ಕೂಡಲೇ ಬೇರೊಂದು ಗಾಡಿಯು ಅದರ ಸಹಾಯಕ್ಕಾಗಿ ಕಳಿಸಲ್ಪಟ್ಟಿತು [illegible] ಪ್ರವಾಸಿಕರು ಮೊಗಲಸರಾಯಿಗೆ ಬಂದರು ೧೨ ಜನರಿಗೆ ಅಪಾಯವಾಗಿದೆ ಔಷಧೋಪಚಾರವು ನಡೆಸಲ್ಪಟ್ಟಿದೆ [ಅ ಪ್ರೆ ತಂತಿ]

ಪಟೇಲರಿಗಾಗಿ ದುಃಖಪ್ರದರ್ಶನ ಮಾಡಲು ಗಿರಣಿ ಬಂದಾಗಲಿಲ್ಲ.

ಅಹಮ್ಮದಾಬಾದ ತಾ॥ ೨೬ ಕೂಲಿಕಾರರ ಬಗ್ಗೆ ಮತ್ತೊಂದು ವಾದವು ಇಲ್ಲಿ ಹುಟ್ಟಿದೆ ಪಟೇಲರ ಮರಣದ ಬಗ್ಗೆ ದುಃಖ ಪ್ರದರ್ಶನಕ್ಕೆಂದು ಗಿರಣಿಗಳನ್ನು ಮುಚ್ಚಬೇಕಾಗಿ ಕೂಲಿಕಾರರ ಸಂಘದವರು ಗಿರಣಿ ಒಡೆಯರ ಸಂಘಕ್ಕೆ ಬರೆದಿದ್ದರಾಗಿ ತೋರುತ್ತದೆ ಇದಕ್ಕೆ ಗಿರಣಿ ಒಡೆಯರು ಒಪ್ಪಲಿಲ್ಲ ಗಿರಣಿ ಸಂಘದ ಅಧ್ಯಕ್ಷರಾದ ಚಮನಲಾಲ ಪರೀಖ ಇವರ ನಾಲ್ಕು ಗಿರಣಿಗಳ ಕೂಲಿಕಾರರು ಅರ್ಧ ದಿನದವರೆಗೆ ಕೆಲಸಕ್ಕೆ ಹೋಗದೇ ನಿಂತರು ಇದಕ್ಕೆ ಪ್ರತೀಕಾರವಾಗಿ ಗಿರಣಿಯವರು ಕೂಲಿಕಾರ ಸಂಘದ ಚಂದಾ ವಸೂಲಿಯು ಕೆಲಸಕ್ಕೆ ಅಡ್ಡಿ ಮಾಡುವ ಆಲೋಚನೆ ಮಾಡಿದ್ದರು ಈ ವಿಷಯವು ಮಹಾತ್ಮರಿಗೆ ತಿಳಿಸಲಾಯಿತು ಚಂದಾ ವಸೂಲಿಗೆ ಅತಂಕ ಮಾಡುವದು ಅಯೋಗ್ಯವೂ ಕ್ರಮಬಾಹ್ಯವೂ ಎಂದು ಮಹಾತ್ಮರು ಮತ್ತು ಈ ಪ್ರಶ್ನೆಯನ್ನು ಪಂಚರ ಮುಂದೆ ಇಡಬೇಕೆಂದು ಮಹಾತ್ಮರು ಸೂಚಿಸಿದರು [ಅ ಪ್ರೆ ತಂತಿ]

ರಿಝರ್ವ ಬ್ಯಾಂಕ ಬಿಲ್ಲು ಸಿಲೆಕ್ಟ ಕಮೀಟಿಯ ಕಾರ್ಯಕಲಾಪ.

ಹೊಸದಿಲ್ಲಿ ತಾ॥ ೨೪ ಇವತ್ತಿನ ದಿವಸ ಸಭೆಯಲ್ಲಿ ಬ್ಯಾಂಕು [illegible] ಹಣದ್ದಿಸ [illegible] ಬೇಕೋ ಈ ಬಗ್ಗೆ ಚರ್ಚೆ [illegible] ಮೂಲಧನವು ಆಗಿ [illegible] ಇಂದಿಗಿಂತ [illegible] ಇರಬೇಕೆಂದು [illegible] ಬಹುಮತವು [illegible] ಬಗ್ಗೆ [illegible] ಎಂಬುದರ [illegible] ಉಪಹಾರದ ನಂತರ [illegible] ರಿಝರ್ವ ಬ್ಯಾಂಕ [illegible] ಯ ಬಗ್ಗೆ ಚರ್ಚೆ ಯಾಗಿ ಸಭಾಪತಿಗಳ ನಾಗರಿಕರ ಸೇರ್ಪಡಿಸಬಾರದೆಂದು ಬಹುಮತವು ತಂಡ [illegible]

ಧಾರವಾಡ ಪ್ರಾಂತದ ಟಪಾಲು ಮಂಗಳೂರಿಗೆ ೩ನೇ ದಿನ

ಹುಬ್ಬಳ್ಳಿಯಿಂದ ಘಟಕಳ ಬೈಂದೂರ ಮಾರ್ಗವಾಗಿ ಧಾರವಾಡ ಪ್ರಾಂತದ ಟಪಾಲು ಮಂಗಳೂರಿಗೆ ಹೋಗುತ್ತಿದ್ದರಿಂದ ಹೋಗುತ್ತಿದ್ದದ್ದು ೩ನೇ ದಿನವೇ ಮಂಗಳೂರಿಗೆ ತಲುಪುವದೆಂದು, ಮೊದಲಿನಂತೆ ಬಿಜಾಪುರ ಪೇಟೆಯ ಮಾರ್ಗವಾಗಿ ಈಗ ಹೋಗುವದಿಲ್ಲೆಂದೂ ಮುಂಬಯಿಯ ಪೋಸ್ಟ ಮಾಸ್ತರ ಜನರಲ್ಲರು 'ಕನ್ನಡಿಗನಿಗೆ' ತಿಳಿಸುತ್ತಾರೆ

ಮುಸಲ್ಮಾನ ಮುಖಂಡರ ಸಭೆ

ಹೊಸದಿಲ್ಲಿ ತಾ॥ ೨೪— ಸಾಲೇಮಾಬಾದ ಮಹಾರಾಜರು ಮುಸಲ್ಮಾನ ಜನಾಂಗದ ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿ ಒಕ್ಕಟ್ಟು ಮಾಡುವದಕ್ಕೆ ಲಖನೌದಲ್ಲಿ ತಾ॥ ೧೧-೧೨ ನವಂಬರಕ್ಕೆ ಮುಸಲ್ಮಾನರ ಮುಖಂಡರ ಸಭೆ ಕರೆದಿದ್ದಾರೆ

ನರೇಂದ್ರ ಮಂಡಲವು ಕೂಡುವದು

ಹೊಸದಿಲ್ಲಿ ತಾ॥ ೨೪— ನರೇಂದ್ರ ಮಂಡಲದ ಮುಂದಿನ ಸಭೆಯು ಹೊಸದಿಲ್ಲಿಯಲ್ಲಿ ಮಾರ್ಚ [೧೯೩೨] ೧೯ ರಿಂದ ೨೩ ರವರೆಗೆ ಕೂಡುವದೆಂದು ಪತ್ರಿಕವು ಹೊರಬಿದ್ದಿದೆ.

ಸ್ವಯಂಸೇವಕರು ಬೇಕು

ಮುಂಬಯಿ ತಾ॥ ೨೪— ಜಮಾಯತ ಸಿಂಗ ಇವರು ಇವತ್ತೇ ಪತ್ರಿಕೆ ತೆಗೆದಿದ್ದು- ಪಟೇಲರ ಶವವು ಇಲ್ಲಿಗೆ ಬಂದಾಗ ಪ್ರಚಂಡ ಮೆರವಣಿಗೆ ತೆಗೆಯಬೇಕೆಂದು ನಿಶ್ಚಿತವಾಗಿದೆ ಲಕ್ಷಗಟ್ಟಲೆ ಜನರು ಅವರ ಅಂತ್ಯದರ್ಶನಕ್ಕೆ ಬರುತ್ತಿರುವದರಿಂದ ವ್ಯವಸ್ಥೆಯನ್ನಿಡಲಿಕ್ಕೆ ಎಲ್ಲಿಲ್ಲೆಂದರೂ ೫೦೦೦ ಸ್ವಯಂಸೇವಕರು ಬೇಕಾಗಿದ್ದಾರೆಂದು ಅಂದಿದ್ದಾರೆ

ಐಯರ್ಲಂಡದ ಸಹಾನುಭೂತಿ

ಡಬ್ಲಿನ್ನ ತಾ॥ ೨೪— ಹಿಂದುಸ್ಥಾನಕ್ಕೆ ಪಟೇಲರ ನಿಧನದಿಂದಾದ ಅಪರಿಮಿತ ಹಾನಿಯ ಬಗ್ಗೆ ಸಹಾನುಭೂತಿ ಪರವಾದ ಸಂದೇಶವನ್ನು ಇಂಡೋ ಐಯರಿಶ್ ಇಂಡಿಪೆಂಡನ್ಸ ಲೀಗಿನ ಅಧ್ಯಕ್ಷರಾದ ಮಿಸೆಸ್ ಮಾಡಮಾಕ ಬ್ರಾಯಿಡ ರು ಹಿಂದೀ ಜನರಿಗೆ ಕೊಟ್ಟಿದ್ದಾರೆ

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ ದಂತಮಂಜನ.

ಈ ಕಂಪನಿಯು ಬಳ್ಳಾರಿಯಿಂದ ಗದಗಿಗೆ ಬಂದಿರುತ್ತದೆ ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು

ಡಾ ಬಿ ಎಚ್ ಕೇಸ್ಕರ

ಲೇಓ ಗೋಟಿರಿ ವ ಒಟ್ಟಿ ನಂಬ ೧೨

ಬಾಟ್ಲಿ ಕಿ ೧-೨-೦ ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸರಗು, ಬಿಳೇಸರಗು ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ ಸಡನೋವು ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನಟ್ಟಗಾಗಿ ಗರ್ಭಧಾರಣವಾಗುತ್ತದೆ ಬಾಣಂತಿತನ ಆದ ನಂತರ ಬಳಸುವುದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದೆ

ಬಿ ಟಿ ಕೆರೂರ ಆ್ಯಂಡ ಸನ್ಸ ಮೆಡಿಕಲ್ ಸ್ಟೋರ್ಸ ಬಾಗಲಕೋಟೆ ೧೮-೭

ಡಾ. ಬೈಲೂರ

ಇ ವಿ ಔಷಧಗಳು

ದ ಅಗ್ನಿಜ ಚೂರ್ಣ ಬಾ ಕಿ ೧—೪—೦	ಥಂಡಿ ಜ್ವರಯ ಗುಳಿಗೆಗಳು ಬಾ ಕಿ ೦—೮—೦

ಕೆಪಸಾಯಿರೇಸ್— ನೆಗಡಿ, ಗೂರ್ಲು, ದಮ್ಮು, ಹವೆಯಿಂದುಂಟಾಗುವ ಜ್ವರ ವಿಕಾರಗಳು, ಉರಿ, ಶೀವು, ಇನ್ಫ್ಲುಯೇಂಜಾ ಹೊಟ್ಟೆ ಶೂಲೆ ಎಂಥ (ಬಯಾ) ತೆರೆಯಲಿಕ್ಕೆ, ಇವುಗಳ ಮೇಲೆ ಮೊದಲಿಗಿ ಚಿಣ್ಣ ಹುಡುಗರ ಅಥವಾ ದೊಡ್ಡವರ ಮೇಲೆ ಪ್ರಯೋಗಿಸಬಹುದು ಮೇಲೆ ಸನ್ನ ಕಾರ್ಯಸಾಧಕ ಔಷಧ ಉಪಯೋಗವು ಜನರಿಗೆ ಆಗುವದರಿಂದ ಪ್ರಸಿದ್ಧಿ ತಿಳಿಸುತ್ತೇವೆ ಈ ಕಾರ್ಯಸಾಯ ಕೆಲಸ ಬಹು ಮನೆಗಳಲ್ಲಿ ದೊಡ್ಡವರಿಗಾಗಲಿ ಯಾವದೆ ಸ್ಥಿತಿ ಇದ್ದರೂ ಸಹ ಪತ್ರಿಕೆಗಳಲ್ಲಿ ಬರೆದಂತೆ ಉಪಯೋಗಿಸಬಹುದು ಇದು ಸಂಗ್ರಹಕ್ಕೆ ಯೋಗ್ಯವಾಗಿರುವದು ಕಿ ಸಣ್ಣ ಬಾ ೦-೬-೦ ದೊಡ್ಡ ಬಾ ೧-೨-೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳಬಹುದು.

೨ ರೂ ಕಿಂಮತ್ತಿನ ಔಷಧಗಳನ್ನು ಕೊಳ್ಳುವವರಿಗೆ ೧೨ ಟಕ್ಕೆ ಕಮಿಶನ ಏಜಂಟರಿಗೆ ಪೂರ್ಣ ಕಮಿಶನ ಕೊಡಲಾಗುವದು

ಪತ್ತೆ— ಡಾ॥ ಜಿ ಎಚ್ ಮಹಾದೇವ ಬೈಲೂರ ದ ಬೆಳಗಾವ

ಬಾಗಲಕೋಟೆ ಎಜಂಟ— ಬಿ ಟಿ ಕೆರೂರ ಆ್ಯಂಡ ಸನ್ಸ ಮೆಡಿಕಲ್ ಸ್ಟೋರ್ಸ

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಆಜಾರ ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦ ೮-೦ ಅಂಚ ವೆಚ್ಚ ಬೇರೆ

ಮ್ಯಾನೇಜರ -ರಾಘವ ಫಾರ್ಮಸಿ ಗೋಕಾಕ ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವರಿ
ತಿಂಗಳಿಗೆ	೧ ೬-೬	೦ ೧೩-೦
೬ ತಿಂಗಳಿಗೆ	೧-೩-೦	೨-೮ ೦
೬ ತಿಂಗಳಿಗೆ	೨-೮ ೦	೫-೦-೦
ವರ್ಷಕ್ಕೆ	೦-೫-೦	೯-೦-೦

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪ ೦-೨೨ ಗದಗ ಶ್ರೀ ದತ್ತಾತ್ರೇಯ ಬುಕ್ ಡೀಪೊ ಶಹಾಪುರ ಪೇಟ ಗದಗ

ಜನಪದ ಹಿತವನ್ನು ಸಾಧಿಸುವ ಪ್ರಮುಖ ರಾಷ್ಟ್ರೀಯ ಸಚಿತ್ರ ವಾರಪತ್ರಿ

'ಅರುಣೋದಯ'

ಸಂಪಾದಕರು ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ ಎಲ್‌ಎಲ್ ಬಿ

ವಾ ಚ ೨-೦ ವ. ಅ ೨-೧೨-೦ ವ್ಹಿ ಪಿ

ಇದರಲ್ಲಿ ಸುಪ್ರಸಿದ್ಧ ವಿದ್ವಾನ್ ಲೇಖಕರ ವಿವಿಧ ವಿಷಯಗಳ ಮೇಲೆ ವಿಚಾರ ಪೂರ್ಣವಾದ ಲೇಖನಗಳು ಬರುವಲ್ಲದೆ ದೇಶವಿದೇಶಗಳ ಮಹತ್ವದ ಸಂಗತಿಗಳು ಪ್ರತಿವಾರದಲ್ಲಿಯೂ ಕೊಡಲ್ಪಡುವವು ಉದ್ಬೋಧಕವಾದ ಸಣ್ಣ ಸಣ್ಣ ಕಥೆಗಳೂ ರಸಭರಿತವಾದ ಕವಿತೆಗಳೂ ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಸೃಷ್ಟಿಚಮತ್ಕಾರಗಳೂ ಶಾಸ್ತ್ರೀಯ ಶೋಧಗಳೂ ಕಾಲಕಾಲಕ್ಕೆ ಕೊಡಲ್ಪಡುವವು ಇಡೀ ಕರ್ನಾಟಕದಲ್ಲಿ ಇದರ ಪ್ರಚಾರವಿರುವದರಿಂದ ವ್ಯಾಪಾರಸ್ಥರಿಗೆ ಪ್ರಚಾರಕ್ಕೆ ಉತ್ತಮ ಸಾಧನ ಕಾಯಮ ಜಾಹೀರಾತದಾರರಿಗೆ ವಿಶೇಷ ಸವಲತ್ತು ದೊರೆಯುವದು ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ಕೇಳಿಕೊಳ್ಳಬೇಕು ಮ್ಯಾನೇಜರ

'ಅರುಣೋದಯ' ಬೆಳಗಾವ

ಕಿರ್ಲೋಸ್ಕರ



ಕಲ್ಯಾಣ ಶೆಂಗಾ ಯಂತ್ರ

—— ಃ(೦)ಃ——

ಒಂದು ತಾಸಿನಲ್ಲಿ ೭೫ ರಿಂದ ೮೦ ಚೀಲಗಳ ವರೆಗೆ ಶೆಂಗಾಗಳನ್ನು ಒಡೆಯುವದು ಇದು ೫-೬ ಚೀಲ ಶೆಂಗಾ ಒಡೆಯುವದು ಹೆಚ್ಚಿನ ಮಾಹಿತಿ ಬಗ್ಗೆ ಈ ಕೊತ್ತೇ ಬರೆರಿ

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್

ಕಿರ್ಲೋಸ್ಕರವಾಡಿ ಜಿ.(ಸಾತಾರಾ)

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ

ಸಂಪಾದಕರು— ಮೊಹರೆ ಹಣಮಂತರಾಯರು

ಸಪ್ಟೆಂಬರ ೩ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡಹತ್ತಿದೆ. ವಿಚಾರ ಪರಿಪೂರ್ಣವಾದ ಲೇಖಗಳೂ, ಬಂಡ ತುಂಡಿನ ನುಡಿಗಳೂ, ಬಿಸಿ ಬಿಸಿ ಸುದ್ದಿಗಳೂ ಬೇಕಾಗಿದ್ದರೆ ಇಂದಿನ್ನೇ ಓದಿರಿ ವ ಷಿ ಕ ಚಂದಾ ಅಂಚೆವೆಚ್ಚ ಸೇರಿ ೩—೧೨—೦

ವ್ಯವಸ್ಥಾಪಕ— 'ಕರ್ನಾಟಕ ವೈಭವ' ವಿಜಾಪುರ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲ ತಯಾರಾಗುತ್ತವೆ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ನಂ· ಬಿ. ೨೭೮೮

यद्यत् परवशं दुःखं । यद्यदात्मवशं सुखम्॥मनु·

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಸ್ಯುಅರನ್ಸ
ವವಿಮ ಇಳಿಸಲು
ಯುನಾಯಿಟೆಡ್
ರ್ನಾಟಕ ಇನಸ್ಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ಚಾಲಕರು:—ಆಲೂರ ವೆಂಕಟರಾಯರು.

[ಸಂಚಿಕೆ ೧೫೭

[೯ ೧೦] ಧಾರವಾಡ- ಶನಿವಾರ ಕಾರ್ತಿಕ ಶುದ್ಧ ೧೦ ಶಕೆ ೧೮೫೫ ತಾ॥ ೨೮-೧೦-೩೩

ಕರ್ನಾಟಕ ಟಾಯಿಮ್ಸ.
ಸಂಪಾದಕ : ಎಚ ಎಸ್ ಶಿವಲಿಂಗಶಾಸ್ತ್ರಿಗಳು
ಕಳೆದ ಹನ್ನೆರಡು ವರ್ಷಗಳಿಂದ ಹಿಂದ ಳಿದವರ ಹಿತಕ್ಕಾಗಿ ನಿರಂತರ
ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ
ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಭಯ ಪಕ್ಷ
ಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ
ವರ್ತಮಾನಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ:— ಸ್ಥಳಿಕರಿಗೆ
—೧೨ ೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ ೩—೦೨ ೦
ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸ ಕಾರ್ಯಾಲಯ ಧಾರವಾಡ

ಭವಾನಿ ಅಯರ್ನ ವರ್ಕ್ಸ, ಧಾರವಾಡ
ದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಉದ್ಯೋಗವು ಬೇಕೆ?
ರೀವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್
ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!
ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿವೆ.
(೧) ಬಿಳಿ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್
(೨) ಮೂಸಿಕ್ ಧಾಮ "ಬಿಯರ್ (೩) ಉತ್ತಮ ಹಾಗೂ ಬಹಳ ಸೋಯಿ
ನ್ ಹೊಸ ಮೋಟಾರ ಸಾಯಕಲ್ (೪) ಸಬಕಾರ (೫) ಮೋಟಾರ ಮತ್ತು
ಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾ
ಸೋಲ ಏಜನ್ಸಿಗಳು ನಮ್ಮ ಕಡಿಗೆ ಇರುತ್ತವೆ
ನಮ್ಮ ಹದ್ದು:—
ನದಿಯಿಂದ ದಕ್ಷಿಣಕ್ಕೆ ಮುಂಬಯಿ ಇಲಾಖೆ ೨) ಮದ್ರಾಸ ಇಲಾಖೆ (೩) ಮೈಸೂರ
ನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ
ತೀರ (೫) ನೈಝಾಮ ರಾಜ್ಯ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ
ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವ
ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು
ಸೂ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ...ಡೀಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು
ಜುಂಡೇಕರ ಯಕಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಶನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ಜಾಹೀರ ನೋಟೀಸು.

ದಿ ಸದರ್ನ ಮರಾಠಾ ಅರ್ಬನ್ ಕೋ-ಆಪರೇಟಿವ್ಹ ಕ್ರೆಡಿಟ್ ಬ್ಯಾಂಕ ಲಿಮಿಟೆಡ್, ...ಡ ಇವರು ಧಾರವಾಡ ಕಾಳಿನ ಮಾರ್ಕೇಟಿನಲ್ಲಿ ವಖಾರದ ಸಲುವಾಗಿ ಒಂದು ಕಟ್ಟಡ ಕಟ್ಟಿಸುವವರಿದ್ದಾರೆ ಕಟ್ಟಡದ ಕಿಮ್ಮತ್ತು ರೂ ೧೧೦೦೦ ಆಗಬಹುದೆಂದು ಅಂದಾಜು ಮಾಗಿದೆ ಸದರೀ ಕಟ್ಟಡವನ್ನು ಕಟ್ಟಿಕೊಡುವವರು ಸನ್ ೧೯೩೩ನೇ ಇಸ್ವಿ ನವ್ಹಂಬರ ೧೧ನೇ ತಾರೀಖಿನ ಸಂಜೆಯ ೫ ಘಂಟೆಯ ಒಳಗಾಗಿ, ಬ್ಯಾಂಕಿಗೆ ತಲುಪುವಂತೆ ...ಸು ಮಾಡಿ ಲಖೋಟೆಯ ಮೇಲೆ, ವಖಾರದ ಟೆಂಡರೆಂದು ಬರೆದು ಕಳುಹಿಸಿ ಕೊಡ... ಮತ್ತು ಅದರ ಕೂಡ ೨೦೦ ರೂ ಠೇವು ಬ್ಯಾಂಕಿನಲ್ಲಿಡಬೇಕು. ನಾಮಂಜೂರಾದ ...ದಾರರಿಗೆ, ಬಡ್ಡಿ ಇಲ್ಲದೆ ಠೇವಿನ ಹಣ ಪರತ ಕೊಡುವದರಲ್ಲಿ ಬರುವದು

ಕಟ್ಟಡದ ನಕಾಶೆಯನ್ನು, ಅಂದಾಜು ಪಟ್ಟಿಯನ್ನು ಕಾಂಟ್ರ್ಯಾಕ್ಟದ ಕರಾರ ಪತ್ರಗ... ಟೆಂಡರ ಕೊಡಲಿಚ್ಛಿಸುವವರು, ಬ್ಯಾಂಕಿನಲ್ಲಿ ಬ್ಯಾಂಕಿನ ವೇಳೆಯಲ್ಲಿ ಬಂದು ನೋಡ...ಬಹುದು

ಧಾರವಾಡ
೫-೧೧-೧೯೩೩

Sd/- G A Hiremath
ಚೇರಮನ್,
ದಿ ಸ. ಮ. ಅ. ಕೊ. ಕ್ರೆ. ಬ್ಯಾಂಕ ಲಿ ಧಾರವಾಡ

ಮುದ್ದಣ್ಣ ಕವಿಯ ಹೊಸ ಪರಿಚಯ.

[ಶ್ರೀ ಪಂಜೇ ಮಂಗೇಶರಾಯರ ಭಾಷಣದ ಸಾರಾಂಶ.]

ಲೇಖಾಂಕ ... *

ಅನೇಕಾನೇಕ ಗುಟ್ಟಿನ ಮಾತುಗಳನ್ನು ಈ ಕವಿಯ ವಿಷಯದಲ್ಲಿ ನಾವು ವಿಚಾರ ಮಾಡಿ ತಿಳಿಯಕೊಳಬಹುದು ರಾಮಾಯಣಕ್ಕೆ ಸಂಬಂಧಿಸಿದ ಕತೆಯನ್ನೇ ಹೇಳೆಂದು ಮನೋರಮೆಯು ಕೇಳುವಾಗ "ಅಳಿದೊಡಂ ಉಳಿದೊಡಂ ಸದ್ ಬಟ್ಟೆಯಂ ತೋರ್ಪ" ಎಂಬ ವಿಶೇಷಣ ಪದವನ್ನು ಅವಳು ರಾಮಾಯಣಕ್ಕೆ ಹಚ್ಚಿದ್ದಾಳೆ ಅಂದರೆ ಶ್ರೀ ರಾಮಚರಿತ್ರವು ಮೋಕ್ಷಪ್ರದವಾಗಿರುವಂತೆಯೇ ಇಹದಲ್ಲಿಯೂ ಸನ್ಮಾರ್ಗ ಬೋಧಕವಾಗಿರುವುದೆಂದು ಅವಳು ಹೇಳಿದಂತೆಯೇ ಸರಿ! ಇದರಿಂದ ನೋಡಿದರ ನಮ್ಮ ಹೆಣ್ಣು ಮಕ್ಕಳ ಆಧ್ಯಾತ್ಮಿಕ ಹಾಗೂ ಆಧಿಭೌತಿಕ ಜೀವನದಲ್ಲಿ ಆರ್ಯ ಸಂಸ್ಕೃತಿಯು ತಿರುಳು ನೆಲಿಸಿಕೊಂಡಿರುವದು ಕಂಡುಬರುತ್ತದೆ ಮುಂದೆ ಮುದ್ದಣ್ಣನು ಕತೆಯನ್ನು ಹೇಳುವದಕ್ಕೆ ಆರಂಭಿಸಿ "ಸ್ವಸ್ತಿ ಸುರಾಸುರೇಂದ್ರ ಮಹೇಂದ್ರ ಫಣೀಂದ್ರ" ಮುಂತಾದ ವಾಕ್ಯವನ್ನುಚ್ಚರಿಸಿದೊಡನೆಯೇ ಮನೋರಮೆಯು ಬೆಪ್ಪಾಗಿ "ಇದನ್ನೇನು ಆರಂಭಿಸಿದೆ? ನಾನು ರಾಮಚಂದ್ರ ಚರಿತ್ರವನ್ನು ಹೇಳೆಂದರೆ ನೀನು ಬಸದೀಂದ್ರ ಚರಿತವನ್ನು ಹೇಳತೊಡಗಿದೆ' ಎಂದು ಕೇಳಿದ್ದಾಳೆ ಜೈನ ಧರ್ಮದಲ್ಲಿ ಬಸದಿಯ ಅರ್ಚಕರಿಗೆ 'ಇಂದ್ರ'ರೆಂಬ ಹೆಸರು ನಮ್ಮತ್ತ ರಪಗಂಟು ಹೆಣ್ಣು ಮಕ್ಕಳಿಗ 'ಇಂದ್ರ' ಶಬ್ದದಿಂದ ಅದೇ ಅರ್ಥ ಬೋಧವಾಗುವದೆಂಬ ಭಾವ ಮನೋರಮೆಯ ಈ ಮಾತಿನಲ್ಲಿ ಧ್ವನಿತವಾಗಿದೆ ಒಂದು ಕಡೆಗೆ 'ಗಡಸುಗಾತಿ' ಎಂಬ ಪ್ರಯೋಗವನ್ನು ಮುದ್ದಣ್ಣನು ತನ್ನ ಹೆಂಡತಿಗೆ ಉಪಯೋಗಿಸಿದ್ದಾನೆ 'ಗಡಸು' ಎಂಬ ಶಬ್ದವು ತುಳುವು ಭಾಷೆಯಲ್ಲಿ ಈಯಲಾದ ಎಮ್ಮೆಯ ... ಮಣಕಕ್ಕೆ ಉಪಯೋಗಿಸಲ್ಪಡುತ್ತದೆ ಇದರ ಮೇಲಿಂದ ಮನೋರಮೆಯ ಆಗಿನ ಅವಸ್ಥೆಯನ್ನು ನಾವು ತರ್ಕಮಾಡಿ ತಿಳಿಯಬಹುದು ಹೀಗೆ ಮುದ್ದಣ್ಣನ ಕೃತಿಯಲ್ಲಿ ಅವನ ಸ್ವಂತ ಜೀವನದ ನಿದರ್ಶಕವಾದ ಎಷ್ಟೋ ಸಂದರ್ಭಗಳನ್ನು ಆತನು ತನಗೆ ಸ್ವಾಭಾವಿಕವಾದ ಪ್ರತಿಭೆಯ ಪ್ರತಾಪದಿಂದ ಅತ್ಯಂತ ಹೃದಯಂಗಮವಾಗಿಯೂ ಬೋಧಪ್ರದವಾಗಿಯೂ ಕಲಿಸಿ ನಮಗೆಲ್ಲ ಹಬ್ಬದೂಟವನ್ನು ಉಣಿಸಿರುವನೆಂದು ಹೇಳಲು ಯಾವ ಆತಂಕವೂ ತೋರುವದಿಲ್ಲ.

ಇನ್ನೊಂದು ಮಾತನ್ನು ಹೇಳಿ ನಾನು ಮುಗಿಸಬಯಸುವೆನು ಆ ಮಾತೆಂದರೆ, ಮುದ್ದಣ್ಣನು ಚಿತ್ರಿಸಿದ ಸೀತೆಯ ಪಾತ್ರ ಆದಿ ಕವಿಯಾದ ವಾಲ್ಮೀಕಿಯೂ ಇನ್ನೂ ಬೇರೆ ಬೇರೆ ಕವಿಗಳೂ ಚಿತ್ರಿಸಿದ ಸೀತೆಗಿಂತಲೂ ನಮ್ಮ ಮುದ್ದಣ್ಣನ ... ಮೇಲು ... ಯಾಗಿದ್ದಾಳೆ ಇವಳಲ್ಲಿ ಅಚ್ಚಗನ್ನಡ ಮನೆಯೊಡತಿಯ ಒಳದಿ ... ಒಡಮೂಡಿವೆ ಇವಳ ವಿಷಯವನ್ನು ಅನ್ಯೋನ್ಯ ಬೆಳಸದೆ ನಾನೊಂದೇ ಮಾತಿನಲ್ಲಿ ನಿಮ ಗೆ ದರ ... ನ್ನು ತೋರಿಸಿ ಕೊಡಲು ಯತ್ನಿಸುವೆನು ರಾಮನ ಅಪ್ಪಣೆಯಂತೆ ಲಕ್ಷ್ಮಣನು ಅವಳನ್ನು ಅಡವಿಗೆ ಕರೆಕೊಂಡು ಒಂದಾಗ್ಗೆ ದುಃಖಭಾರದಿಂದ ... ಆತನ ಹೃದಯವು ಮುಂದಡಿ ಇಡಗೊಡದ ಮೂಲಕ ಮೆಲ್ಲನೆ ನಡೆಯುವಾತನು ಹಿಂದುಳಿಯುತ್ತಾನೆ. ಋಷಿಗಳ ಆಶ್ರಮಕ್ಕೆ ಹೋಗಿ ಅವರ ಪತ್ನಿಯರ ಸತ್ಸಂಗವನ್ನಾವಾಗ ಹೊಂದುವೆನೋ ಎಂಬ ಲವಲವಿಕೆಯು ಪಟ್ಟಾಗಿದ್ದ ಸೀತೆಯು ಮುಂದಾಗುತ್ತಾಳೆ. ಆಗ ಹಿಂದೆ ಬಿದ್ದ ಮೈದುನನನ್ನು ಕಂಡು "ತುಂಬಿದ ಬಸುರಿಯಾದ ನನ್ನಂತಹ ಹೆಂಗುಸಿಗಿಂತಲೂ ನೀನು ಮೆಲು ನಡಿಗೆಯವನೇಕಾದೆ? ಎಂದು ಸೀತೆಯು ಪ್ರಶ್ನೆಮಾಡುತ್ತಾಳೆ ಇದೊಂದೇ ವಾಕ್ಯದಲ್ಲಿ ಎಷ್ಟೊಂದು ಭಾವಗಳು ತುಂಬಿತುಳುಕುತ್ತಿರುವುವೆಂಬುದನ್ನು ತಾವು ಗ್ರಹಿಸಬಹುದು. ಶ್ರೀರಾಮನು ತನ್ನ ಮೇಲಿನ ಅಪವಾದ ನಿರಾಕರಣಕ್ಕೆಂದು ಸೀತೆಯನ್ನು ಅಡವಿಗಟ್ಟಿದ ನಷ್ಟ? ಇದನ್ನು ಲಕ್ಷ್ಮಣನ ಬಾಯಿಯಿಂದ ಕೇಳಿದೊಡನೆಯೇ ಸೀತೆಗಾದ ಕಷ್ಟವನ್ನೆಷ್ಟೆಂದು ಬಣ್ಣಿಸಬೇಕು? ಈ ಸಂದರ್ಭದಲ್ಲಿ ತನ್ನ ನಿಷ್ಕಳಂಕತೆಯ ಪರಿಹಾರಕ್ಕಾಗಿ ತಾನೇ ಸಾಕಿ ಸಲುಹಿದ ಕುರಿಯನ್ನು ಬಲಿಕೊಡುವ ಕುರುಬನಿಗೆ ಸೀತೆಯು ರಾಮನನ್ನು ಹೋಲಿಸಿದ್ದಾಳೆ ಈ ಉಪಮೆಯಲ್ಲಿ ಎಂಥ ರಹಸ್ಯವು ಅಡಕವಾಗಿದೆಂಬವನ್ನು ತಾವು ಗಮನಿಸಬೇಕು ಕೊನೆಗೆ ಶ್ರೀ ರಾಮಚಂದ್ರನಲ್ಲಿ ಯಾವ ಅಪರಾಧವನ್ನೂ ಹೊರಿಸಲಾರದೆ ಹೆಣ್ಣಾಗಿ ಹುಟ್ಟಿ ಬಂದ ತನ್ನ ಅದೃಷ್ಟವನ್ನೇ ದೂಷಿಸಿಕೊಂಡು ತನ್ನ ಕಣ್ಮುಲಕೆಯ ಬೆಳಗದವರಿಗೂ ಗೆಳತಿಯರಿಗೂ ತನ್ನ ಪ್ರೀತಿಯ ವಸ್ತುಗಳನ್ನು ಕಾಣಿಕೆಯಾಗಿ ಕಳಿಸುವಾಗ ಲಕ್ಷ್ಮಣನ ಮಡದಿಯಾದ ಊರ್ಮಿಳೆಯನ್ನು ಸೀತೆಯು ಬಿಟ್ಟಿಲ್ಲವೆಂಬುದು ಅವಳ ಅಂತರಂಗದ ಔದಾರ್ಯಕ್ಕೆ ಸಾಕ್ಷಿಯಾಗಿದೆ ಋಷಿಪತ್ನಿಯರಿಗಾಗಿ ತಂದ ಬಾಗಿನ ಸಾಮಗ್ರಿಗಳನ್ನು ಅಯೋಧ್ಯೆಯ ಒಡ ಹೆಣ್ಣುಮಕ್ಕಳಿಗೆ ಮುಟ್ಟಿಸುವದಕ್ಕಾಗಿ ತಿರುಗಿ ತೆಗೆದುಕೊಂಡು ಹೋಗಲು ಮೈದುನನಿಗೆ ಹೇಳುವ ಸೀತೆಯ ಅಂತಃಕರಣದಲ್ಲಿ ತನ್ನ ಅನ್ಯಾದೃಶ ಆಪತ್ಕಾಲದಲ್ಲಿಯೂ ಪರೋಪಕಾರ ಧರ್ಮ ಬುದ್ಧಿಗಳು ಎಂತಹ ಉತ್ಕರ್ಷಾವಸ್ಥೆಯಲ್ಲಿವೆಂಬುದು ಒಡೆದು ಕಾಣುತ್ತದೆ ಇಂಥ ಸೀತೆಯನ್ನು ಮುದ್ದಣ್ಣನ ಕೃತಿಯಲ್ಲಲ್ಲದೆ ಅನ್ಯತ್ರ ನಾವು ಕಾಣಲಾರೆವು ಬಂಗಾಲದ ಸುಪ್ರಸಿದ್ಧ ಕವಿಗಳಾದ ಬಂಕಿಮಚಂದ್ರರು ತಮ್ಮ "ಸೀತಾವನವಾಸ" ದಲ್ಲಿ ಚಿತ್ರಿಸಿದ ಸೀತೆಗಿಂತಲೂ ನಮ್ಮ ಮುದ್ದಣ್ಣನ ಸೀತೆಯು ಮಿಗಿಲಾಗಿರುವಳೆಂದು ನಾನು ಹೇಳಬಲ್ಲೆನು. ಇಷ್ಟೇ ಏಕೆ ಮನುಷ್ಯ ಭಾವಗಳ ದಿಗ್ದರ್ಶನದಲ್ಲಿ ಪ್ರತಿಭೆಯುಳ್ಳನೆಂದು

[೨ನೇ ಪುಟ ನೋಡಿರಿ]

* ೧-೨ನೇ ಲೇಖಭಾಗಗಳನ್ನು ೨೬ ೨೭ ತಾರೀಖುಗಳಲ್ಲಿ ಪ್ರಕಟಿಸಿದೆ.

ಕನ್ನಡಿಗ.

ಶನಿವಾರ ತಾರೀಖು ೨೮-೧೦-೧೯೩೩

ಕನ್ನಡಿಗರೂ, ಕಾಂಗ್ರೆಸ್ಸೂ

ಇದೀಗ ಹಿಂದುಸ್ಥಾನದ ಪ್ರತಿಯೊಂದು ಪ್ರಾಂತದಲ್ಲಿ ಕಾಂಗ್ರೆಸ್ಸಿನ ಈಗಿನ ಧೋರಣದ ಬಗ್ಗೆ ಒಂದು ಬಗೆಯ ಒಡಕಾಯಿತೆಂದಾಗ ನಮ್ಮ ಕರ್ನಾಟಕದ ಕಾಂಗ್ರೆಸ ಕಾರ್ಯಕರ್ತರಲ್ಲಿ ಕೆಲವರು ೨೩ನೆಯ ತಾರೀಖಿನ ದಿವಸ ಬೆಳಗಾಂವಿಯಲ್ಲಿ ಖಾಸಗೀ ಸಭೆಯನ್ನು ಕೂಡಿಸಿ ಗುಪ್ತವಾಗಿ ಚರ್ಚೆ ನಡಿಸಿ, ಕೊನೆಗೆ ರಾಷ್ಟ್ರೀಯ ಸಭೆಯ ಈಗಿನ ಧೋರಣವನ್ನು ಸರ್ವಾನುಮತದಿಂದಲೂ ಎತ್ತಿ ಹಿಡಿದಿರುವರು ಒಂದು ರೀತಿಯಿಂದ ಶ್ಲಾಘನೀಯವೇ ಸರಿ. ದೇಶ ನಾಯಕರು ತಾವು ವಿಜಾಪುರದ ಸೆರೆಮನೆಯಲ್ಲಿ ಎರಡು ವರ್ಷಗಳ ಶಿಕ್ಷೆಯನ್ನನುಭೋಗಿಸಿ ಹೊರಗೆ ಬಂದ ಕೂಡಲೆ ಬೃಹತ್ಕರ್ನಾಟಕ ಪತ್ರಿಕೆಗೆ ಚೆನ್ನಾಗಿ ಎಚ್ಚರಿಕೆ ಕೊಡುವ ಪತ್ರಿಕೆಯನ್ನು ಹೊರಡಿಸಿ ಅದರಲ್ಲಿ ಸ್ಪಷ್ಟವಾಗಿ ಹೇಳಿದಂತೆ, ಇಡೀ ಭರತಖಂಡದಲ್ಲಿ ಒಂದೇ ಒಂದು ಎಲ್ಲಕ್ಕೂ ಪ್ರಮುಖ ಸಂಸ್ಥೆಯಾದ ರಾಷ್ಟ್ರೀಯ ಸಭೆಯ ವರ್ಚಸ್ಸಿಗೆ ಯಾವ ರೀತಿಯಿಂದಲೂ ಕುಂದು ಉಂಟಾಗದಂತೆ ಅದನ್ನು ಮುಟ್ಟಿಗೆ ಎಚ್ಚರಪಡುವುದು ಪ್ರತಿಯೊಬ್ಬ ಹಿಂದೀ ಮನುಷ್ಯನ ಕರ್ತವ್ಯವಾಗಿದೆ. ರಾಷ್ಟ್ರೀಯ ಸಭೆಯಲ್ಲಿ ಆದ ನಿರ್ಣಯಗಳು ಕೆಲವೊಮ್ಮೆ ನಿಮಗೆ ಸೇರಲಿಕ್ಕಿಲ್ಲ ಅಥವಾ ಕೆಲಕೆಲವು ಕಾರಣಗಳಿಂದ ಆ ಸಭೆಯು ನಿಮ್ಮ ಅಭಿಪ್ರಾಯಕ್ಕೆ ತಪ್ಪು ದಾರಿಯನ್ನು ಹಿಡಿದೂ ಇರಬಹುದು. ಆದರೆ, ಆ ಕಾರಣಕ್ಕಾಗಿ ಅದರಿಂದ ಒಡೆದು ಹೊರಬೀಳುವುದು ಎಂದಿಗೂ ಸರಿಯಾಗಲಾರದು. ಹಿಂದಕ್ಕೆ ಮಂದ ಪಕ್ಷದವರು ಹೀಗೆ ಒಡೆದು ಹೋಗಿ ಬೇರೆ ಸಂಸ್ಥೆಯನ್ನು ಸ್ಥಾಪಿಸಿರುವರು. ಈಗ ಮಹಾತ್ಮಾ ಗಾಂಧಿಯವರ ವಿರುದ್ಧವಾಗಿಯೂ ಕಾಂಗ್ರೆಸ್ಸಿನ ಈಗಿನ ಧೋರಣದ ವಿಷಯವಾಗಿಯೂ ಅಸಂತುಷ್ಟರಾದ ಹಲವರು ಸಾಮಾನ್ಯವಾಗಿ ಅದೇ ತರಹದ ಒಡೆದು ಹೋಗುವ ಅಂಜಿಕೆಯನ್ನು ಹಾಕಹತ್ತಿರುವರು. ಇಂಥ ಸಮಯದಲ್ಲಿ ಕರ್ನಾಟಕದ ಕೆಲವು ಕಾರ್ಯಕರ್ತರು ಕೂಡಿಯೇ ಏಕಾಗಲೊಲ್ಲದು, ತಮ್ಮ ತಮ್ಮೊಳಗೇ ಚರ್ಚಿಸಿ ಕಾಂಗ್ರೆಸ್ಸಿನ ವರ್ಚಸ್ಸಿಗೆ ಧಕ್ಕೆ ತಗಲದಂಥ ಧೋರಣವನ್ನು ಸ್ವೀಕರಿಸಿದ್ದು ಅಭಿನಂದನೀಯವೇ ಸರಿ.

ಕರ್ನಾಟಕವು ರಾಜಕಾರಣದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಪ್ರಾಂತವು. ಆದರೆ, ಕರ್ನಾಟಕದ ಸ್ವಭಾವವು ನಿಷ್ಕಪಟಿಯಾದುದರಿಂದ ಅದು ತನ್ನ ಸ್ವಭಾವಕ್ಕನುಸಾರವಾಗಿ ಬಾಲ್ಯಕ್ಕೂ ತನ್ನ ನಿಷ್ಕಪಟ ಸ್ವಭಾವಕ್ಕೂ ಅನುರೂಪವಾದ, ಶ್ರದ್ಧೆಯಿಂದ ಅನುಕರಣ ಮಾಡುವ ಧೋರಣವನ್ನೇ ಸ್ವೀಕರಿಸುತ್ತ ಬಂದಿದೆ. ಅದು ಬಹುಶಃ ಸ್ವತಂತ್ರವಾಗಿ ವಿಚಾರ ಮಾಡುವ ಗೋಜಿಗೆ ಹೋಗುವುದಿಲ್ಲ. ತನ್ನ ಕೈಲಾದಷ್ಟು ಮಟ್ಟಿಗೆ ಕಾಂಗ್ರೆಸ್ಸಿನ ಗೊತ್ತುವಳಿಗಳನ್ನು ಕಾರ್ಯತಃ ಅಮಲಿನಲ್ಲಿ ತರುವುದಕ್ಕೆ ಪ್ರಯತ್ನಿಸುತ್ತ ಬಂದಿದೆ. ಆದುದರಿಂದಲೇ, ಇಲ್ಲಿ ಮಿಕ್ಕ ಪ್ರಾಂತಗಳಂತೆ ಪಕ್ಷ ಪರಪಕ್ಷಗಳು ಕಡಿಮೆ. ಇಲ್ಲವೆಂದರೂ ಸಲ್ಲುವುದು. ಆದರೆ, ಇದು ಒಂದು ರೀತಿಯಿಂದ ಶ್ಲಾಘನೀಯವಾದರೂ ಕೊನೆಯವರೆಗೆ ಉಳಿಯತಕ್ಕ ಸ್ಥಿತಿಯಲ್ಲ. ಮನುಷ್ಯನು ದೊಡ್ಡವನಾದಂತೆ, ಅತನಲ್ಲಿ ಸ್ವತಂತ್ರ ವಿಚಾರಗಳು ತಲೆದೋರುವುದು ಬೆಳಾಗುತ್ತದೆ; ಸ್ವತಂತ್ರ ವಿಚಾರಗಳು ಬೆಳೆದಂತೆ, ಮತಭೇದಗಳುಂಟಾಗುವುದು ಸ್ವಾಭಾವಿಕವು ಮತ್ತು ಆ ಮತಭೇದಗಳುಂಟವಂತೆ ಮುಂದೆ ಒಮ್ಮೊಮ್ಮೆ ಪಕ್ಷಗಳು ಕೂಡ ಬೆಳೆಯಬಹುದು. ಆದರೆ, ಅದಕ್ಕೋಸ್ಕರ ನಾವು ಮರುಗಬೇಕಾದ ಕಾರಣವಿಲ್ಲ. ಈ ತರದ ಕರ್ನಾಟಕದ ... ಮುಂದಿನ ಅವಸ್ಥೆಯು ಸ್ವಾತಂತ್ರ್ಯ ಬೆಳಕಗಳೆಂದು ತಿಳಿದು ನಾವು ಆ ತರದ ಮತಭೇದಗಳಿಗಾಗಿ ಅನುಮಾನಿಸದೆ ನಡೆಯಬೇಕು ಮತ್ತು ಆ ಮತಭೇದಗಳನ್ನು ಮುಚ್ಚಿಡದೆ ಪ್ರಕಟಿಸದೆ ಅವುಗಳಿಗೆ ಆಸ್ಪದಕೊಟ್ಟು, ಅವುಗಳನ್ನು ತಾವು ಬಿಡಿಸಿ ಒಲಿಸಿಕೊಳ್ಳಲು ಯತ್ನಿಸುವುದೇ ಉಚಿತವು. ಕರ್ನಾಟಕವು ಸ್ವಭಾವತಃ ... ಕೂಡ ಇಲ್ಲಿಯೂ ಈಗ ಕಾಂಗ್ರೆಸ್ಸಿನ ಧೋರಣದ ಬಗ್ಗೆ ಮತಭೇದವನ್ನು ... ಪ್ರದರ್ಶಿಸಹತ್ತಿರುವರೆಂಬುದು ಮುಂಬಯಿ ಕ್ರಾನಿಕಲ ಪತ್ರದ ೨೧ನೆಯ ತಾರೀಖಿನ ಸಂಚಿಕೆಯಲ್ಲಿ 'ವಾಲ್ಮೀಕಿ' ಎಂಬವರು ಬರೆದ "ಕರ್ನಾಟಕದ ರಾಜಕೀಯ ಮನಸ್ಸು" ಎಂಬ ಲೇಖನದಿಂದ ಗೊತ್ತಾಗುವುದು. ಹಿಂದಕ್ಕೆ ಪುಣೆಯಲ್ಲಿ ಪರಿಷತ್ತು ಕೂಡುವ ಮುಂಚೆ, ಗದಗಿನಲ್ಲಿ ಅಲ್ಲಿಯ ಕಾಂಗ್ರೆಸ ಕಾರ್ಯಕರ್ತರು ಕೂಡಿ ವಿಚಾರ ಮಾಡಿ ಕಾನೂನುಭಂಗವನ್ನು ನಿಲ್ಲಿಸುವುದಕ್ಕೆ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಕರ್ನಾಟಕದ ಪ್ರತಿನಿಧಿಗಳು ಪ್ರಯತ್ನಿಸಬೇಕೆಂದು ಒತ್ತಿ ಹೇಳಿದ್ದರೆಂದು ಈ 'ವಾಲ್ಮೀಕಿ' ಯವರು ತಮ್ಮ ಪತ್ರದಲ್ಲಿ ಬರೆಯುತ್ತಾರೆ ಮತ್ತು ಕರ್ನಾಟಕದ ಮನಸ್ಸು ಕಾನೂನುಭಂಗವನ್ನು ನಿಲ್ಲಿಸುವುದರ ಕಡೆಗೆ ಇರುತ್ತದೆಂದೂ ಇಲ್ಲಿಯ ಕಾರ್ಯಕರ್ತರು ಅದನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾರೆಂದೂ ಈ ಲೇಖಕರು ಮೊನ್ನೆ ಬೆಳಗಾಂವಿಯಲ್ಲಿ ಕೂಡಿದ ಸಭೆಯ ವಿರುದ್ಧವಾಗಿ ಆಕ್ಷೇಪವನ್ನೆತ್ತಿರುವರು. ಇಲ್ಲಿ ಈಗ ನಾವು ಹೇಳತಕ್ಕದ್ದು— ಬೆಳಗಾಂವಿಯಲ್ಲಿ ಕೂಡಿಸಿದ ಸಭೆಗೆ ಹೆಚ್ಚಿಗೆ ವ್ಯಾಪಕ ಸ್ವರೂಪವನ್ನು ಕೊಟ್ಟಿದ್ದರೆ ಒಳಿತಾಗುತ್ತಿತ್ತು. 'ವಾಲ್ಮೀಕಿ' ಯು ತನ್ನ ಪತ್ರದಲ್ಲಿ ಹೇಳುವಂತೆ ಕರ್ನಾಟಕದವರ ಮನಸ್ಸಿನಲ್ಲಿ ಕಾನೂನುಭಂಗವನ್ನು ನಿಲ್ಲಿಸಬೇಕೆಂದು ಇರುತ್ತದೆಯೋ ಇಲ್ಲವೋ ಎಂಬುದನ್ನು ನಾವು ಹೇಳಲಾರೆವು. ಆದರೆ, ಈ ತರಹದ ಆಕ್ಷೇಪಗಳಿಗೆ ಅವಕಾಶಕೊಡದಂತೆ ಇಲ್ಲಿಯ ಕಾರ್ಯಕರ್ತರಿಗೆ ಮಾಡಲು ಬರುತ್ತಿತ್ತೆಂದು ಮಾತ್ರ ಹೇಳಬಲ್ಲೆವು. ಇನ್ನು, ಈಗ ಕೂಡಿದ ಸಭೆಗೆ ಯಾವ ಜನರನ್ನು ಯಾವ ಧೋರಣವನ್ನವಲಂಬಿಸಿ ಕರೆದಿದ್ದರೆಂಬುದು ನಮಗೆ ಗೊತ್ತಿಲ್ಲ, ಅಲ್ಲದೆ ಪುನಃ ಇಡೀ ಕರ್ನಾಟಕದ ಸಾರ್ವಜನಿಕ ಸಭೆಯನ್ನು ಕೂಡಿಸುವುದು ಕಾರ್ಯಕರ್ತರ ವಿಚಾರವಿದೆಯೋ ಹೇಗೆ ಎಂಬುದೂ ನಮಗೆ ಗೊತ್ತಿಲ್ಲ. ಹಾಗಿದ್ದರೆ ಮಾತ್ರ 'ವಾಲ್ಮೀಕಿ' ಯವರು ಇಷ್ಟರಲ್ಲಿ ಆಕ್ಷೇಪವನ್ನು ಎತ್ತಿಕೊಂಡದ್ದು ಅಪ್ರಸ್ತುತವೇ ಸರಿ.

ಇರಲಿ, ಅದು ಹೇಗಿದ್ದರೂ ಕಾಂಗ್ರೆಸ್ಸಿನಲ್ಲಿ ಕಾಯದೇಶೀರ ರೀತಿಯಿಂದ ಬದಲು ಆಗುವವರೆಗೆ ತಾವು ಕಾಂಗ್ರೆಸ್ಸಿನ ಆಜ್ಞೆಯನ್ನು ಪಾಲಿಸುವರೆಂದು ಆ ಕೆಲವು ಕಾಂಗ್ರೆಸ್ಸಿನ ಕಾರ್ಯಕರ್ತರು ಗೊತ್ತು ಮಾಡಿದ್ದು ಅನುಚಿತವಾಯಿತೆಂದು ನಮಗಂತೂ ತೋರುವುದಿಲ್ಲ.

[ಮೊದಲನೆಯ ಪುಟದಿಂದ ಸಾಗಿದ್ದು]

ಜಗದ್ವಿಖ್ಯಾತನಾದ ಶೇಕ್ಸಪಿಯರನು ನಿರ್ಮಿಸಿದ ಸ್ತ್ರೀ ಪಾತ್ರಗಳಲ್ಲಿ ಸಿಂಬೆಲಾಯಿನ ನಾಟಕದೊಳಗಿನ ಇಮೋಜನ್ ನಾಯಿಕೆಯು ಮಾತ್ರ ಏನೋ ಅಲ್ಪ ಸ್ವಲ್ಪ ನಮ್ಮ ಮುದ್ದಣ್ಣನ ಸೀತೆಯ ಹಾಗೆ ತೋರುವಳು ಆದರೆ ಇವಳನ್ನು ಸರಿಗಟ್ಟಲಾರಳೆಂಬುದು ನಿಃಸಂದೇಹ.

ಹೀಗೆ ಮುದ್ದಣ್ಣನ ಕಾವ್ಯ ಪ್ರತಿಭೆಯೊಳಗಿನ ಕೆಲವು ಸಂದರ್ಭಗಳ ಗುಟ್ಟನ್ನು ತಮಗೆ ತಿಳಿಸಲು ನಾನು ಯತ್ನ ಮಾಡಿದ್ದೇನೆ. ಇದೇ ದಾರಿಯಿಂದ ಅವನ ಗ್ರಂಥಗಳ ಪರಿಶೀಲನ ಮಾಡಿ ಅವನ ಯೋಗ್ಯತೆಯನ್ನರಿತುಕೊಂಡು ಅವನಂತೆಯೇ ತಿರುಳ್ಗನ್ನಡ ಪ್ರತಿಭೆಯನ್ನು ತೋರಗೊಡುವ ಅನೇಕಾನೇಕ ಕವಿಗಳು ಕನ್ನಡ ನಾಡಿನಲ್ಲಿ ಹುಟ್ಟಿಬೆಳೆಯಲೆಂದು ನಾನು ಬಯಸುತ್ತೇನೆ.

ಹೀಗೆ ಹೇಳಿ ಶ್ರೀ ಪಂಜೆ ಮಂಗೇಶರಾಯರು ಮುದ್ದಣ್ಣ ಕವಿಯ ವಿಮರ್ಶೆಯನ್ನು ಅಂದಿನ ವ್ಯಾಖ್ಯಾನವಾಗಿಸಿ ವಿರಮಿಸಿದರು.

ಬಳ್ಳಾರಿ ಪತ್ರ

ಬಳ್ಳಾರಿ ತಾ|| ೨೩— ನಿನ್ನೆ ಸಾಯಂಕಾಲ ... ಮೈದಾನದಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿ ಪಟೇಲರ ನಿಧನದ ಬಗ್ಗೆ ಬಳ್ಳಾರಿ ... ಪುರ ಜನರು ತಮ್ಮ ದುಃಖವನ್ನು ವ್ಯಕ್ತಪಡಿಸಿದರು.

ದಿವಂಗತ ಪಟೇಲರ ಅನುಪಮ ಧೈರ್ಯ-ಸಾಹಸ, ರಾಜಕಾರಣ ಕುಶಲತೆ, ದೇಶಾಭಿಮಾನ ಇವುಗಳ ಬಗ್ಗೆ ಶ್ರೀ ... ರಾವ, ಸುಬ್ರಹ್ಮಣ್ಯ, ಕೆ ಟಿ ... ಇವರು ಮಾತಾಡಿದರು. ಕೊನೆಯಲ್ಲಿ ಎಲ್ಲರೂ ಎದ್ದು ನಿಂತು ದುಃಖಸೂಚಕ ಠರಾವನ್ನು ಪಾಸು ಮಾಡಿದರು.

ಈ ಊರಿನ ಕ್ರೈಸ್ತ ಯುವಕರು ಒಂದು ನಾಟಕವನ್ನಾಡಿ, ಅದರಲ್ಲಿ ಉಳಿದ ಸುಮಾರು ೧೫೦ ರೂ ಗಳಿಗೆ ಬಟ್ಟೆಯನ್ನು ಕೊಂಡು, ಇಲ್ಲಿಗೆ ೧೧ ಮೈಲ ದೂರವಿರುವ ಸೋಕ ಗ್ರಾಮದಲ್ಲಿ ಮಳೆಯ ಹಾವಳಿಯಿಂದ ಸರ್ವಸ್ವವನ್ನೂ ಕಳೆದುಕೊಂಡ ಸುಮಾರು ೪೦ ಹರಿಜನ ಕುಟುಂಬಿಕರಿಗೆ ಉಚಿತವಾಗಿ ಹಂಚಿದರು. ಈ ಕಾರ್ಯದಲ್ಲಿ ಸರ್ವರೂ ಭಾಗವಹಿಸಿಕೊಂಡರು.

ಬೆಂಗಳೂರ ಪತ್ರ

ಬೆಂಗಳೂರ ತಾ|| ೨೫— ಈದಿನ ಬೆಂಗಳೂರಿನಲ್ಲಿ ದಿವಂಗತ ಶ್ರೀಯುತ ವಿ. ಜೆ ಪಟೇಲರವರ ಸ್ಮರಣಾರ್ಥವಾಗಿ ಮುಖ್ಯ ಬೀದಿಗಳ ಹಿಂದೂ ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟಿದ್ದವು.

ವೈಶ್ಯ ಸ್ತ್ರೀ ಮುಸಲ್ಮಾನರಿಗೆ?

ಕೋಲಾರದ ಊರಿನಲ್ಲಿರುವ ವೈಶ್ಯರ ಜಾತಿಗೆ ಸೇರಿದ ಸುಮಾರು ೨೦-೨೫ ವರ್ಷದ ವೆಂಕಟಲಕ್ಷ್ಮಮ್ಮ ಎಂಬವಳು ತಾನು ಮುಸಲ್ಮಾನ ಜಾತಿಗೆ ಸೇರುವೆನೆಂಬುದಾಗಿ ಬೆಂಗಳೂರಿನ ಸಿಟಿ ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ತಾ॥ ೨೪-೧೦-೩೩ ರಲ್ಲಿ ಅರ್ಜಿ ಹಾಕಿಕೊಂಡಿರುವಳು. ಇವರ ಲಾಯರು ಬೆಂಗಳೂರಿನ ವಿ. ಖಲೀಲ್‌ರವರು. ಕೋಲಾರದಲ್ಲಿಯೇ ಇರುವ ಮುಸ್ತಫಾ ಎಂಬವನನ್ನು ಮದುವೆಯಾಗಬೇಕೆಂದು ವದಂತಿ ಇದೆ.

ಗಂಧದ ಎಣ್ಣೆ ವ್ಯಾಜ್ಯ.
ಏಳು ಲಕ್ಷದ ತೀರ್ಪು

ತಾ|| ೨೪-೧೦-೩೩ನೇ ದಿನ ಈ ಅನೇಕ ದಿನಗಳಿಂದ ನಡೆಯುತ್ತಿದ್ದ ಗಂಧದ ಎಣ್ಣೆಯ ಮೊಕದ್ದಮೆಯಲ್ಲಿ ಈ ಊರಿನ ಡಿಸ್ಟ್ರಿಕ್ಟ ಮತ್ತು ಸೆಷನ್ಸ್ ಜಡ್ಜರಾದ ಮಿ|| ಎ ಶ್ರೀನಿವಾಸ ರಾಘವಾಚಾರ್ಯರು ತೀರ್ಪು ಕೊಟ್ಟರು. ಸರಕಾರದವರು ಎಸ್ಸೆನ್ಸ ಸ್ಟೋರ್ಸ್ ಕಂಪನಿಯ ಡಾಯರೆಕ್ಟರರ ಮೇಲೂ ಮತ್ತು ಬಿ ಸೀತಾರಾಮಾಚಾರ್ಯರ ಮೇಲೂ ಈ ಮೊಕದ್ದಮೆಯನ್ನು ಹೂಡಿದ್ದರು. ಈಗ ಆ ಡಾಯರೆಕ್ಟರುಗಳ ಮೇಲೂ ಬಿ ಸೀತಾರಾಮಾಚಾರ್ಯರ ಮೇಲೂ ಏಳು ಲಕ್ಷ ರೂಪಾಯಿಗಳಿಗೆ ಡಿಕ್ರಿಯಾಯಿತು.

ಇತರ ವೃತ್ತ

ಇಲ್ಲಿಯ ರಹಿವಾಸಿಗಳಾದ ಉತ್ತಂಗಿ ಚನ್ನಪ್ಪನವರು ಸರ್ವಜ್ಞ ವಚನವನ್ನು ಇಂಗ್ಲೀಷಕ್ಕೆ ಭಾಷಾಂತರಿಸುವ ಕಾರ್ಯ ಪ್ರಾರಂಭಿಸಿರುವರು ... ದರು ಪದ್ಯ ರೂಪದಲ್ಲಿಯೇ ಆಗಬೇಕಾಗಿದೆ ... ತ್ತು ಸರ್ವಜ್ಞ ... ಇಂಗ್ಲೀಷ ಪುಸ್ತಕ ಬರೆಯುತ್ತಿರುವರು

ರಿಝರ್ವ ಬ್ಯಾಂಕ ಬಿಲ್ಲಿನ ಕಾರ್ಯ

ಹೊಸದಿಲ್ಲಿ ತಾ|| ೨೫ — ಈ ದಿನ ರಿಝರ್ವ ಬ್ಯಾಂಕ ಬಿಲ್ಲಿನ ಸಿಲೆಕ್ಟ ಕಮಿಟಿಯ ... ಸ ಮುನ್ನಡೆದು ಬ್ಯಾಂಕಿನ ಡಾಯರೆಕ್ಟರ ... ಮತ್ತು ಗವ್ಹರ್ನರ ವಿಷಯವಾಗಿ ವಿಚಾರ ... ಯಿತು. ಗವ್ಹರ್ನರ ... ಡೆಪ್ಯುಟಿ ಗವ್ಹರ್ನರ ... ಹೀಗೆ ಇದ್ದರು ಹಿಂದೂ ... ಇರಬೇಕೆಂದ ಎಲ್ಲರು ಮತದಾಬ್ಬರು. ಡಾಯರೆಕ್ಟರ ಬೋರ್ಡಿನಲ್ಲಿ ... ಮತ್ತು ಸರಕಾರ ... ಪ್ರತಿನಿಧಿ ... ಬೇಕೆಂದು ಚರ್ಚೆ ನಡೆಯಿತು. ಈ ಬಿಲ್ಲಿನ ... ಕಲಮುಗಳ ... ವಿಚಾರ ಮಾತ್ರ ಆ ಬ್ಯಾಂಕಿನ ಮುಖ್ಯ ಕಚೇರಿಯ ಬಗ್ಗೆ ಚರ್ಚೆ ನಡೆದು ... ಬಂದೇ ... ಸೆಂಟ್ರಲ್ ಬೋರ್ಡಿನ ... ಟನೆಯ ಸಂಬಂಧವಾಗಿಯೂ ವಿಶೇಷ ... ನಡೆದು ... ಬಿಲ್ಲಿನ ... ಬೋರ್ಡಿನಲ್ಲಿ ಸಹಕಾರಿ ಬ್ಯಾಂಕುಗಳ ಇಬ್ಬರು ಪ್ರತಿನಿಧಿಗಳು ಇರಬೇಕೆಂದು ಕೆಲವರ ಮತವಿತ್ತು! ಗವ್ಹರ್ನರನ ಸಂಬಳ ತಿಂಗಳಿಗೆ ೬ ಸಾವಿರ ... ಡೆಪ್ಯುಟಿ ಗವ್ಹರ್ನರ ೦ ಸಾವಿರದ ವರೆಗೆ ಇರಬೇಕೆಂದು ಕಮಿಟಿಯ ... ಅಭಿಪ್ರಾಯ ... ಪಾಲುಗಾರರಿಂದ ಆರಿಸಲ್ಪಟ್ಟ ಡಾಯರೆಕ್ಟರ ... ಅವಧಿಯು ೫ ವರ್ಷ ಇರತಕ್ಕದ್ದು. ಪಾಲುಗಾರರು ತಮ್ಮ ವಿಭಾಗದಲ್ಲಿಯ ಪಾಲುಗಾರರಲ್ಲಿ ... ಜನರನ್ನು ಸ್ಥಾನಿಕ ಬೋರ್ಡಿನ ... ತೆಗೆದುಕೊಳ್ಳಬೇಕು. ಸೆಂಟ್ರಲ್ ಬೋರ್ಡಿನವರು ... ರು ಜನರನ್ನು ನಿಯಮಿಸಿಕೊಳ್ಳಬೇಕೆಂದು ... ಶ್ಚಿತವಾಗಿದೆ.

೧೯ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನ ಹುಬ್ಬಳ್ಳಿ

ಇದೇ ಡಿಸೆಂಬರ ತಿಂಗಳ ಕಡೆಯ ವಾರದಲ್ಲಿ ಹುಬ್ಬಳ್ಳಿಯಲ್ಲಿ ೧೯ನೆಯ ಕರ್ನಾಟಕ ಸಾಹಿತ್ಯ ಸಮ್ಮೇಲನವನ್ನು ಕರೆಯಬೇಕೆಂದು ನಿರ್ಣಯವಾಗಿದೆ. ನಿಶ್ಚಿತ ತಾರೀಖುಗಳನ್ನು ಹಿಂದಿನಿಂದ ತಿಳಿಸುತ್ತೇವೆ. ಸಾಹಿತ್ಯ ಪರಿಷತ್ತಿನ ವಿಷಯಕ್ಕೆ ಸೂಚನೆಗಳನ್ನು ಮಾಡತಕ್ಕವರೂ ತಮ್ಮ ಹೆಸರಿಗೆ ಮಾಡತಕ್ಕದ್ದೆಂದು ... ತ್ತು ಹೆಚ್ಚಿನ ಸಂಗತಿಗಳನ್ನು ಪ್ರಕಟಿಸುತ್ತ ಹೋಗುವೆವೆಂದು ಸಮ್ಮೇಲನದ ಮುಖ್ಯ ಕಾರ್ಯದರ್ಶಿಗಳಾದ ಚಂದ್ರಶೇಖರ ಶಾಸ್ತ್ರಿ, ... ರಣತೀರ್ಥ ಹುಬ್ಬಳ್ಳಿ ಇವರು ಪ್ರಕಟನೆ ... ದ್ದಾರೆ.

ಹುಬ್ಬಳ್ಳಿ ಪೇಟೆಯ ಧಾರಣೆ
(ಶೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ|| ೨೭ ಮಧ್ಯಾಹ್ನ ೧೧ ಗಂ...

ಜವಾರಿ ಹತ್ತಿ	೧೦೩-೧೦೭	ಜೋಳ	[illegible]
ಅಪ್ಲ ಂಡ	೧೦೩-೧೦೪	ಗೋಧಿ	[illegible]
ವಿಲಾಯತಿ	೯೫-೯೭	ಉದ್ದು	[illegible]
ನ್ಯೂಕಾಟನ	೧೦೯-೧೧೧	ಅಡಿ...	[illegible]
ಶೇಂಗಾ	೭೩-೭೪	[illegible]	[illegible]
ದಪ್ಪ ಲಾಂಗ	೬೬-೬೭	[illegible]	[illegible]
ಸಾಜಿನ ಅರಳೆ	೬೬-೬೭	ಜಿರಿಗೆ	
ಹೆಸರು ಜವಾರಿ	೯೧೩		
ಶಿಂಗಾಡಾಯಿ ಬೀಜ	೪-೪||	ಹತ್ತಿಕಾಳು	

ಬೆಳ್ಳಿ ಬಂಗಾರ

ಪಟೇಲರ ಶವವು ಸ್ವದೇಶಕ್ಕೆ ಹೊರಟಿತು.

"ಕನ್ನಡಿಗ" ನಿಗಾಗಿ ತರಿಸಿದ 'ಅಸೋಸಿಯೇಟೆಡ್ ಕಂಪನಿ'ಯ ತಂತಿಗಳು

ಪಟೇಲರ ಶವವು ಸ್ವದೇಶಕ್ಕೆ ಹೊರಟಿತು.

ಮುಂಬಯಿ ತಾ॥ ೨— ಈ ರೊಜಲೀ ಆದ ಏರ್ಪಾಟಿನಪ್ರಿ ಪೆಟ್ರು ಗಡಿಸೆ ವ—ಡಿದ ೦೦ವ ನವ್ಹಂಬರ ೧ನೇ ತಾರಿಖಿಗೆ ಮುಂಬಯಿಗೆ ಮುಟ್ಟುವ 'ನಾಠಕುಂಡಾ' ಹಡಗಿನಿಂದ ಪಟೇಲರ ಶವವು ಇಂಗ್ಲಂಡಿನಿಂದ ಸ್ವದೇಶಕ್ಕೆ ಹೊರಟಿತು ಸಂಗಡ ಗೋವರ್ಧನದಾ ಪಟೇಲರು ಇದ್ದಾರೆ ಎಂದು ಮುಂಬಯಿ ಬೀಳದ ಅಸೋಸಿಯೇಟೆಡ್ ಪ್ರೆಸ ಸುದ್ದಿಗಾರ ಕಂಪನಿಗೆ ಮಾರ್ಸೇಲೀಸದಿಂದ ಇನತ್ತಿನ ದಿವಸ ಹದಲ ತಂತಿ ವಾರ್ತೆಯಿಂದ ತಿಳಿಸಿದ್ದಾರೆ

(ಅ ಪ್ರೆ ತಂತಿ)

ಡಾ. ಹರ್ಡಿಕರರ ಪ್ರಕೃತಿ.

ಮುಂಬಯಿ ತಾ॥ ೨೭— ಡಾ. ಹರ್ಡಿಕರರು ಇವತ್ತು ಮದ್ರಾಸ ಎಕ್ಸ್‌ಪ್ರೆಸ್ ಗಾಡಿಯಿಂದ ಇಲ್ಲಿಗೆ ಬಂದರು. ಡಾ. ಗುಪ್ತೆಯವರು ಅವರ ಪ್ರಕೃತಿ ಪರೀಕ್ಷಿಸಿ ಅವಸ್ಯ ಬೇಗನೆ ಶಸ್ತ್ರಕ್ರಿಯೆ ಮಾಡಬೇಕೆಂದೂ, ಹರ್ಡಿಕರರು ಪೂರ್ಣ ವಿಶ್ರಾಂತಿಯನ್ನು ತೆಗೆದುಕೊಳ್ಳಬೇಕೆಂದೂ ಹಲವು ಕೇಳಿದ್ದರು. ಡಾಕ್ಟರರು ಮುಂಬಯಿಯಲ್ಲಿ ಮೂರು ವಾರಗಳ ವರೆಗೆ ಇರಬೇಕಾಗಿ ತಿಳಿಯುತ್ತದೆ

(ಅ ಪ್ರೆ ತಂತಿ)

ರೇಲ್ವೆ ಅಪಘಾತವೂ, ಡಿ. ಮ್ಯಾಜಿಸ್ಟ್ರೇಟರೂ

ಮುಂಬಯಿ ತಾ॥ ೨— ವೊಗಲಕರಾಯಿ ಹತ್ತಿರ ಮುಂಬಯಿ ಕಲಕತ್ತೆ ಟಪಾಲ ಗಾಡಿಯು ಹಳಿ ತಪ್ಪಿ ಬಿದ್ದ ಗ್ಗೆ ಅಸೋಸಿಯೇಟೆಡ್ ಪ್ರೆಸ ಸುದ್ದಿಗಾರ ಕಂಪನಿಯವರು ವಿಚಾರಿಸಿದ್ದಕ್ಕೆ ಗಾಡಿಯು ಒಮ್ಮೆಲೆ ಕೆಳ ಆ ಭಾಗ ಇಂಜಿನ ಮತ್ತು ಡಬ್ಬಿಯ ಜೋಡಿಕೆಗಳು ಮುಂದು ಹೋದವು ಸಂಕಯುಕ್ತ ಏನೂ ಆಸ್ಪದವಿಲ್ಲ ೧೩ ಜನರಿಗೆ ಅಪಾಯ ವಾದರೂ ವಿಶೇಷ ಅಪಾಯವಾಗಿಲ್ಲ ಯಾರೂ ಸತ್ತಿಲ್ಲ ಗಾಡಿಯಲ್ಲಿ ಇದ್ದ ಒಬ್ಬ ಯುರೋಪಿಯನ್ನ ಸ್ತ್ರೀಯಳು ಏನೂ ಅಪಾಯವಾಗದೆ ಪಾರಾದಳು ಘಾಯ ಹೊಂದಿದ ಹಿಂದೀ ಜನರಲ್ಲಿ ಅಧಿಕೊಳ್ಳುವಂಥವರು ಯಾರೂ ಇದ್ದಿಲ್ಲ ನಾನು ಸ್ವತಃ ಘಾಯ ಹೊಂದಿರುವವರನ್ನು ಅಪಾಯದ ಸ್ಥಳವನ್ನು ನೋಡಿ ಬಂದಿದ್ದೇನೆ ಎಂದು ಬನಾರಸದ ಡಿ. ಮ್ಯಾ. ರು ಉತ್ತರ ರೂಪವಾಗಿ ತಂತಿ ಕಳಿಸಿದ್ದಾರೆ

(ಅ ಪ್ರೆ ತಂತಿ)

ಸ್ತ್ರೀಯರ ಹಕ್ಕು ಬಾಧ್ಯತೆಗಳು.

"ಮುಂಬೈ ತಾ॥ ೨೬— ಲಂಡನ್ನ ಪಾರ್ಲಮೆಂಟಿನ ಕಮಿಟಿಯ ಮುಂದೆ ಹಿಂದೀ ಸ್ತ್ರೀಯರ ಪರವಾಗಿ ಸಾಕ್ಷಿ ಕೊಟ್ಟ ರಾಜಕುಮಾರಿ ಅಮೃತ ಕುವರ ಮತ್ತು ವಿ.ಸೆಸ್ ಹಮೀದಲ್ಲಿಯವರು ಹಿಂದೀ ರಾಷ್ಟ್ರೀಯ ಸ್ತ್ರೀ ಸಂಘದ ಆಶ್ರಮದಲ್ಲಿ ನಿನ್ನೆ ಸಂಜೆಗೆ ನೆರೆದ ಸಭೆಯಲ್ಲಿ ವ್ಯಾಖ್ಯಾನ ಕೊಟ್ಟರು ಶ್ರೀಮತಿ ನಾಯುಡು ಅವರು ಅಧ್ಯಕ್ಷರು. ಶ್ರೀಮತಿ ರಾಜಕುಮಾರಿಯವರು ಬಿಳಿಯ ಪತ್ರಿಕೆಯಲ್ಲಿಯ ಯೋಜನೆಗಳನ್ನು ಟೀಕಿಸುವಾಗ "ಹಿಂದೀ ಹೆಂಗಸರಿಗೆ ವಿಶೇಷ ಬಗೆಯ ಸೌಲಭ್ಯ ಸ್ತ್ರೀ ರೀತಿ ನಾಗರಿಕತೆಯ ಸ್ಥಾನ ಸಾರ್ವಜನಿಕ ಸೇವಾಕಾರ್ಯಗಳಿಗೆ ಗಂಡಸರಿಗೆ ದೊರೆಯುವಷ್ಟು ಹಲವು ಮುಂತಾದ ವಿಷಯಗಳಷ್ಟು ಶಿಕ್ಷಣ ಕಮೀಶನಿನವರು ಒಪ್ಪುವ ಅಗತ್ಯವೆಂದು ಒತ್ತಿ ಹೇಳಿದರು. ಕೆಲವು ... ಕೊಟ್ಟ ಮತದಾನದ ಮತ್ತು ... ಆ ವ್ಯವಸ್ಥೆ ಮಾಡುವದು ಸಂಬಂಧಗಳಾಗಿ ಮಾತಾಡುವಾಗ "ಸವರ್ಣ ಜನರ ... ನು ಒಡೆ ಹಟವಾದಿಗಳು ... ಸಾಮಾಜಿಕ ಶೈಕ್ಷಣಿಕ ಸ್ಥಾನಗಳ ವಿರುದ್ಧವಿರುವದರಿಂದ ನಾವು ಒಪ್ಪುವದಿಲ್ಲ" ಎಂದರು. ಜಾತಿಯ ದೃಷ್ಟಿಯಿಂದ ಎಲ್ಲ ರೀತಿಯ ಹೆಂಗಸರ ಸಂಘಗಳ ಕೈಯ್ಯಡವ ಒಗ್ಗೆ 'ಈ ಜಾತಿಯ ವಿಷಯವು ಒಟ್ಟಾದ ಹೆಂಗಸರಲ್ಲಿ ನೆರವೇರಬೇಕೆಂದು ಹಿಂದು ನಗರ ಆವಲ್ಲೆ ಯಲ್ಲ ಹೆಂಗಸರಿಗೆ ಜಾತಿಯ ಪ್ರಮಾಣದಲ್ಲಿ ಪ್ರಾತಿನಿಧ್ಯ ಕೊಡುವ ಬಿಳಿಯ ಪತ್ರಿಕೆಯ ಯೋಜನೆಯನ್ನು ಹೆಂಗಸರೆಲ್ಲರೂ ವಿರೋಧಿಸಲೇಬೇಕು" ಅಂದರು

ನಂತರ ಮಿಸೆಸ್ ಹಮೀದಲ್ಲಿಯವರು ಅದನ್ನು ಅನುಮೋದಿಸಿ ನಮ್ಮ ಹೆಂಗಸರಿಗೆ ಜಾತಿಯ ಪ್ರಾತಿನಿಧ್ಯ ಬೇಡ ಅವರು ಕೇವಲ ಜಾತಿಭೇದ ... ನ್ಯಾಯಾಲಯಕ್ಕೆ ಇಂದ ಕೌನ್ಸಿಲುಗಳಿಗೆ ನಾವು ಒಪ್ಪಲಾರೆವು ಜಿನೀವಾದಲ್ಲಿ ನೆರೆದ ಅಂತರ ರಾಷ್ಟ್ರೀಯ ಸ್ತ್ರೀಯರ ಪರಿಷತ್ತಿನ ಸಾಕ್ಷಿ "ಯುರೋಪದವರಿಗೆ ಹಿಂದೂ ಸ್ತ್ರೀಯರ ಚಳವಳಿಯ ವಿಷಯ ವೇನೂ ಗೊತ್ತಿಲ್ಲ ಅದ್ದರಿಂದ ಪಾಶ್ಚಾತ್ಯ ದೇಶಗಳಲ್ಲಿ ಪರ ಮತ ಪ್ರಚಾರ ಮಾಡುವ ಹೊಗದ ... ವಿಷಯವನ್ನು ಬೇರೆ ಜನಾಂಗಗಳವರಿಗೆ ತಿಳಿಸಿ ಕೊಡುವ ಪ್ರಚಾರ ಕಾರ್ಯ ನಡೆಯುವದು ಅವಶ್ಯವೆಂದು ಹೇಳಿದರು

ಅಧ್ಯಕ್ಷರಾದ ಶ್ರೀಯುತ ನಾಯುಡು ಅವರು ಮುಗಿಸುವಾಗ "ಹಿಂದೀ ಸ್ತ್ರೀ ಪ್ರತಿನಿಧಿಗಳು ಶಿಕ್ಷಣ ಕಮಿಟಿಯ ವದಿ ಸ್ತ್ರೀಯರಿಗೆ ನಾಗರಿಕತೆಯ ಪೂರ್ಣ ಹಕ್ಕು ಸಿಗಬೇಕೆಂದು ಕೇಳಿಕೊಂಡಿದ್ದು ಯೋಗ್ಯವಿದೆ ಹಾಗೆ ಅವರೆ ಗಂಡಸರೊಡನೆ ಮಾತ್ರ ಭುಜದಿಂದ ಭುಜ ಹಚ್ಚಿ ಕೆಲಸ ಮಾಡುವಾಗ ಅವರಿಗೆ ತಕ್ಕ ಸವಲತ್ತುಗಳು ದೊರೆತು ಅವರ ಹೊಣೆಯೂ ಅವರಿಗೆ ತಿಳಿದು ಬರುವದು" ಎಂದು ಮಾತನಾಡಿದರು

(ಅ ಪ್ರೆ ತಂತಿ)

ಮುಂಬಯಿ ಗಿರಣಿಕಾರರ ಔದಾರ್ಯ

ಮುಂಬಯಿ ತಾ॥ ೨೭ ಇಲ್ಲಿಯ ಹತ್ತಿಯ ಗಿರಣಿಗಳ ಸಂಘದವರು ಈ ದಿನದ ತಮ್ಮ ಸಭೆಯಲ್ಲಿ ಬ್ರಿಟಿಷ ಹತ್ತಿಯ ಬಟ್ಟೆಗಳ ಸಂಕರ ಮೋಟ್ರೆಗಳನ್ನು ೨ ವರ್ಷಗಳ ವರೆಗೆ ನವರಕ್ಕೆ ೫ ರಂತೆ ಕಡಿಮೆ ಮಾಡುವ ಸಿದ್ಧತೆ ಸೂಚನೆಯನ್ನು ಚರ್ಚೆಯಲ್ಲ ತೀರ್ಮಾನಿಸಿದರು

(ಅ ಪ್ರೆ ತಂತಿ)

ರೆವ್ಹಿನ್ಯೂ ಖಾತೆಯ ಪರೀಕ್ಷೆಯು.

ಬೆಳಗಾಂವ ಇಲ್ಲಿ ತಾ॥ ೧೧ ಕ್ಕೆ ಗೆ ಡೆದ ರೆವ್ಹಿನ್ಯೂ ಖಾತೆಯ ಸಬ್ ಸರ್ವಿಸ ಪರೀಕ್ಷೆಯಲ್ಲಿ ಕೆಳಗೆ ಕಾಣಿಸಿದವರು ಪಾಸಾಗಿದ್ದಾರೆ.— ಗಿ ಎಂ ಆರ್ ಸಿ ಪಟ್ಟಣಶೆಟ್ಟಿ (ಗೋಕಾಕ) ವಿ ಬಿ ಜಿ ಕೌಜಲಗಿ ಬಿ ಎ (ಪರಸಗಡ) ಮಿ ಜಿ ಎನ್ ಬರಡ [ಅಥಣಿ] ಆ ಮಿ. ಎಂ ಎ ಇನಾಮದಾರ [ಬೆಳಗಾಂವ]

ಬಡೋದೆಯ ಪ್ರಜೆಗಳ ಬೇಡಿಕೆ

ಅಮರೇಲಿ ತಾ॥ ೨೭— ಮಿ. ಅಬ್ಬಾಸ ತಯಾಬ್ಜಿ ಯವರ ಅಧ್ಯಕ್ಷತೆ ಯಲ್ಲಿ ಬಡೋದೆಯ ಸಂಸ್ಥಾನದ ಪ್ರಜೆಗಳ ಪರಿಷತ್ತು ನೆರೆದಿತ್ತು ಸ್ವಾಗತಾಧ್ಯಕ್ಷರಾದ ಮಿ ಮೋಹನಲಾಲರು ಮೊದಲು "ಒಕ್ಕಲಿಗರು ಸಾಲದಲ್ಲಿ ಮುಳುಗಿದವರು ಹಳ್ಳಿ ಸಹಕಾರಿ ಸಂಘಗಳು ಸ್ಥಾಪಿಸಲ್ಪಟ್ಟಿದ್ದರೂ ಒಕ್ಕಲಿಗರ ಸಾಲುಗಾರಿಕೆಯು ಮುಗಿಯುದಾಗಿದೆ ಆದ್ದರಿಂದ ಸರಕಾರಿ ಸಂಘಗಳಲ್ಲಿ ಸುಧಾರಣೆ ಮಾಗಬೇಕಾಗಿದೆ ಬಡೋದೆ ಮಹಾರಾಜರು ಜವಾಬದಾರಿಕೆಯ ಸ್ವರಾಜ್ಯ ಕೊಡಲಿಕ್ಕೆ ಬೇಕು" ಎಂದು ಮುಂತಾಗಿ ಮಾತನಾಡಿದ ಬಳಿಕ ಅಧ್ಯಕ್ಷರಾದ ಶ್ರೀ ಮಿ ತಯಾಬ್ಜಿ ಯವರು "ಜನರು ಮುಂದೆ ಪ್ರಜೆಗಳ ಗೋಳನ್ನು ಕೇಳುವದು ಪ್ರಜೆಗಳ ಕಷ್ಟವನ್ನು ಅದನ್ನು ತಿಳಿದು ಸರಿಪಡಿಸುವದು ಸರಕಾರದ ಕರ್ತವ್ಯ, ಪ್ರಜೆಗಳ ಗೋಳನ್ನು ಕಿವಿಗೆ ಹಾಕಿಕೊಳ್ಳದಿದ್ದರೆ, ಪ್ರಜೆಗಳು ಅಸಹಕಾರಕ್ಕೆ ಒಲಿದರೆ ಅದು ಯಾರ ತಪ್ಪು?" ಎಂದು ಮುಂತಾಗಿ ಭಾಷಣ ಮಾಡಿದರು

ಹೈದರಾಬಾದ ತರುಣ ಪರಿಷತ್ತು.

ಸಿಂಧ ಹೈದ್ರಾಬಾದ ತಾ॥ ೨೭— ಸಿಂಧ ಹೈದರಾಬಾದದಲ್ಲಿ ಈ ದಿನ ತರುಣರ ಸಾಮಾಜಿಕ ಪರಿಷತ್ತು ನೆರೆದಿತ್ತು. ೨೦೦ ಮಂದಿ ಹೆಂಗಸರು ಪ್ರತಿನಿಧಿಗಳು ೨ ದಿನಗಳು ಸಾರ್ವಜನಿಕ ದೃಷ್ಟಿಯಿಂದ ಒಂದೇ ಯೋಗ್ಯತೆಯುಳ್ಳ ಬೇರೆ ಬೇರೆ ಹಿಂದೂ ಜಾತಿಯವರಲ್ಲಿ ಲಗ್ನವಾಗಬೇಕು ಹಳ್ಳಿ ಜಾತಿಯ ನಿರ್ಬಂಧವಿರಕೂಡದು ಜಾತಿ ಭೇದಗಳನ್ನು ಅಳಿಸಲೇಬೇಕು ಅದಾಗದೆ ಹಿಂದೂಗಳ ಉನ್ನತಿ ಆಗದು. ವರದಕ್ಷಿಣೆಯ ಪದ್ಧತಿಯನ್ನು ಖಂಡಿಸಿದರು. ಹಳ್ಳಿಗಳ ಶಾಲೆಗಳಲ್ಲಿ ಕಲಿಯಲಿಕ್ಕೆ ಕಳಿಸಿದುದ್ದು ಹಾಳು ಮಾಡಿಕೊಳ್ಳುವ ಜನ್ನಗಳ ದ್ವಿಕ ಚಿಕ್ಕ ಚಿಕ್ಕ ಮಕ್ಕಳಾಗಿಯ ಕೈಗಾರಿಕೆಗಳನ್ನ ಕಲಿಸಬೇಕು ತರುಣರು ಕೆಲಸವಿಲ್ಲದೇ ಕೈಮುಗಿದು ಕುಳಿತುಕೊಳ್ಳಬಾರದೆ, ಮತ್ತು ಕೀಳು ಎಂದು ಕೆಲಸದ ಹೋಲಿಕೆಯ ಭ್ರಮೆ ಹೊಂದಿರದೆ ಯಾವ ಕೆಲಸಕ್ಕೆ ಹಿಂಜರಿಯದಿರಿ ಅದೇ ಮುಂತಾದ ನಿರ್ಣಯಗಳಾದವು

ಕರ್ನಾಟಕ

ಸೊಲ್ಲಾಪುರ ಜಿಲ್ಲೆಯ ಲೋಕಲ ಬೋರ್ಡಿನವರು ತಮ್ಮ ಜಿಲ್ಲೆಯಲ್ಲಿಯ ಬೇರೆ ಬೇರೆ ಗ್ರಾಮ ಪಂಚಾಯತಿಗಳ ಸಹಾಯಕ್ಕೆಂದು ೧೫೦೦ ರೂಪಾಯಿ ಮಂಜೂರಿಸಿರುವರು

ಕರ್ನಾಟಕ ಸಂಸ್ಥಾನಗಳಲ್ಲಿಯ ಸ್ತ್ರೀಯರ ಪರಿಷತ್ತು ಸಿದ್ದರೋಗ್ಗಿಯಲ್ಲಿ ನವೆಂಬರ ತಿಂಗಳ ೩-೪ನೇ ತಾರೀಖುಗಳಲ್ಲಿ ನಡೆಯುವದಿದೆ. ದಿವಾಣ ಪತ್ನಿಯವರು ಅಧ್ಯಕ್ಷರಾಗುವರು ಸ್ತ್ರೀ ವಿಷಯಕ ಲೇಖನಗಳ ಒಂದು ಪ್ರದರ್ಶನವೂ ಮಂಡಿಸಲಾಗುವದು

ಕೈ. ವಿಠಲಭಾಯಿ ಪಟೇಲರ ಮರಣದ ದೆಸೆಯಿಂದ ದುಃಖ ವ್ಯಕ್ತ ಪಡಿಸಲು ಬೆಳಗಾವಿಯಲ್ಲಿ ಸಭೆ ಆಯಿತು. ಶ್ರೀ ಬೆಳವಿಯವರು ಅಧ್ಯಕ್ಷರು. ಶ್ರೀ ದೇಶಪಾಂಡೆ ಗಂಗಾಧರರಾವ ಕೌಜಲಗಿ ಹಣಮಂತರಾವ ಮುಂತಾದವರ ಭಾಷಣಗಳಾದವು.

ಶ್ರೀ ದೇವಾಂಗ ಮಹಾಸಭೆಯ ಜಯಂತ್ಯುತ್ಸವ ಕಾಲಕ್ಕೆ ದೇವಾಂಗ ಧರ್ಮ ಪ್ರಸಾರಕ ಸಮಾಜದವರು ೩೦ರಿಂದ ೩೧ ದಿನ ಜರುಗಿಸುವವರಿದ್ದಾರೆ

ಹಂಪೆ ಹೊಸಪೇಟೆಯ ಶ್ರೀ ಕೃಷ್ಣೇಂದ್ರ ಗುರುಗಳ ಉತ್ಸವ ಸಮಿತಿಯವರು ಶ್ರೀ ಕೃಷ್ಣೇಂದ್ರ ಗುರುಗಳ ಉತ್ಸವವನ್ನು ಆಕ್ಟೋಬರ ೩೧ ಮತ್ತು ನವಂಬರ ೧ನೇ ತಾ॥ ದಿನಗಳಲ್ಲಿ ನೆರವೇರಿಸುವವರಿದ್ದಾರೆ

ವಿಜಯ ನಗರ ಸ್ಮಾರಕೋತ್ಸವ ಕಾಲಕ್ಕೆ ಹೈಸ್ಕೂಲ ಪ್ರದರ್ಶನ ಮಾಡುವದು ಅವಶ್ಯವಿರುವದೆಂದು ವಿಜಾಪುರದ ಶ್ರೀ ಅಧ್ಯ ಅನಂತಾಚಾರ್ಯರು ಅಭಿಪ್ರಾಯ ಪಟ್ಟಿದ್ದಾರೆ

ಮೈಸೂರ ಸಂಸ್ಥಾನದ ಒನೇ ಮಹಿಳಾ ಪರಿಷತ್ತು ಶಿವಮೊಗ್ಗೆಯಲ್ಲಿ ನವ್ಹಂಬರ ೩-೪ನೇ ತಾರೀಖುಗಳಲ್ಲಿ ಕೂಡ ವದಿದ್ದು ಆ ಭೃಷ್ಠ ಸ್ಥಾನವನ್ನು ದಿವಾನರ ಪತ್ನಿಯವರು ಅಲಂಕರಿಸ ಲಿದ್ದಾರೆ ಆ ಕಾಲಕ್ಕೆ ಬೇರೆ ಬೇರೆ ವಿಷಯಗಳ ನೆಲಿನ ಸ್ತ್ರೀಯರ ಕೈಯಿಂದ ಪ್ರದರ್ಶನವು ವಿಚಾರಿಸಿ ಪಡೆಂಡು ತಿಳಿದಿದೆ.

ಮೈಸೂರ ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಭೆಯು ತಾ॥ ೧೧-೩ ದಿನ ಪ್ರಿನ್ಸಿಪಾಲ ಗೋರವರ ಅಧ್ಯಕ್ಷತೆಯಲ್ಲಿ ನೆರೆದು ವಿಠ್ಠಲಭಾಯಿ ಪಟೇಲರ ಮರಣದ ಅನುತಾಪದ ಸೂಚನೆಯು ಪಾಸಾಯಿತು

ಬೆಳಗಾವಿಯ ಸುಪ್ರಸಿದ್ಧ ನಾಗರಿಕರೂ ಸರಕಾರಿ ವಕೀಲರೂ ಮತ್ತು ಬೆಳಗಾವಿ ಮುನಿಸಿಪಾಲಿಟಿಯ ಅಧ್ಯಕ್ಷರೂ ಆದ ಶ್ರೀ ಪಳಿವಿ ವಕೀಲರು ಆ ಸಿ ಜಜ್ಜರನ್ನಾಗಿ ಮಾಡಿದೆಯೆಂದು ಬೆಳಗಾವಿ ಮುನಸಿಪಾಲಿಟಿಯು ನಾವು ದಾರ ಗವ್ಹರ್ನರ ಸಾಹೇಬರಿಗೆ ಮೊನ್ನೆ ಮೊನ್ನೆ ಬೆಳಗಾವಿಯಲ್ಲಿ ಕೊಟ್ಟ ಮಾನ ಪತ್ರಕ್ಕೆ ಉತ್ತರ ಕೊಡುವಾಗ ಹೋಗಿದ್ದರಷ್ಟೇ ಈಗ ಶ್ರೀ ಪಳವಿಯವರನ್ನು ಸಾತಾರಕ್ಕೆ ಆಸಿ ಜಜ್ಜರನ್ನಾಗಿ ಮಾಡಿದ್ದಾರೆಂದೂ ಡಾಕ್ಟರ ಪರೀಕ್ಷೆಗೆ ತವರು ಮುಂಬಯಿಗೆ ಹೋದವರೆಂದೂ ತಿಳಿಯುತ್ತದೆ

ವಿಠ್ಠಲಭಾಯಿ ಪಟೇಲರ ನಿಧನ ಶೋಕವಾರ್ತೆಗಾಗಿ ತಾ॥ ೨೪-೧೦-೩೩ ನೇ ದಿವಸ ವಿಜಾಪುರದ ಪೇಟೆಯು ಒಂದು ಇಡಲ್ಪಟ್ಟಿತ್ತು

ಮೈಸೂರ ದಿವಾನರಾದ ಸರ ಮಿರ್ಜಾ ಇಸ್ಮಾಯಿಲ್‌ರ ಜೀವಂಜೀವ ಹುಮಾಯೂನ ಮಿರ್ಜಾ ಇವರನ್ನು ನವ್ಹಂಬರ ೧ನೇ ತಾರೀಖಿನಿಂದ ದಿವಾನರ ಪರ್ಸನಲ್ ಅಸಿಸ್ಟಂಟರಾಗಿ ನಿಯಮಿಸಲ್ಪಟ್ಟಿರುವರೆಂದು ಸರಕಾರೀ ಪ್ರಕಟನೆಯಾಗಿದೆ

ಗೋರಕ್ಷಣ ಸಪ್ತಾಹವು.

ಈ ವರ್ಷ ಇಡೀ ಹಿಂದುಸ್ತಾನದಲ್ಲಿ ೩೦೦ ಊರುಗಳಲ್ಲಿ ಆಚರಿಸಲ್ಪಟ್ಟಿತು ಕರ್ನಾಟಕದಲ್ಲಿ ಬೆಳಗಾವಿ, ಸೊಲಾಪುರ, ಕೊಲ್ಹಾಪುರ, ಮಿರಜ ಜಮಖಂಡಿ, ಗುಲಬುರ್ಗಾ ಮೊದಲಾದ ಕಡೆಗಳಲ್ಲಿ ಜರುಗಿಸಲ್ಪಟ್ಟಿತು ಹೋದ ವರ್ಷ ೩ ೩೦ ಹಿಂದುಸ್ತಾನದಲ್ಲಿ ಈ ಸಪ್ತಾಹವು ೨೩೦ ಸ ಊರುಗಳಲ್ಲಿ ಮಾತ್ರ ಜರುಗಿದ್ದು ಈ ವರ್ಷ ಹೋದ ಸಾರೆಗಿಂತಲೂ ೧೫೦ ಸ್ಥಳಗಳಲ್ಲಿ ಹೆಚ್ಚಿಗೆ ಜರುಗಿಸಲ್ಪಟ್ಟಿದೆ ದಂಭಂಗಾದ ಮಹಾರಾಜರ ಮತ್ತು ಗ್ವಾಲೀರ ಸಂಸ್ಥಾನದ ಅಧಿಕಾರಿಗಳು ತಮ್ಮ ಸ್ಥಳಗಳಲ್ಲಿ ಸ್ಥಳ ಭಾಗ ವಹಿಸಿದ್ದು ತಿಳಿದುಬರುತ್ತದೆ

ಕರ್ನಾಟಕ ಕೆಮಿಕಲ್ ವರ್ಕ್ಸ, ಗದಗ.

ಡಾ ಕುಲಕರ್ಣೀಜ
ಲೆಬೊರೋಟರಿ ಮುಂಬೈ
ನಂಬರ ೧೨

ಬಾಟ್ಲಿಕೆ ೧-೧೨-೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು

ಪ್ರಸೂತಿ ಸಂಜೀವನಿ

ಸ್ತ್ರೀಯರ ವಿಕಾರದ ಮೇಲೆ
ರಾಮಬಾಣ ಔಷಧವು

ರಗು, ಬಿಳೀಸರಗು, ಕೆಂಪು ಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದೇ ಇಕೆ ಬೆನ್ನು ಹಿಡಿಯೋಣ, ನಡಸೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣ ವಾಗುತ್ತದೆ ಬಾಣಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದೆ.

ಬಿ ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟಿ
೧೮೬

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೧-೬-೬	೦-೧೨-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೦-೫-೦	೯-೦-೦

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ
" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೆ ಉಪಯೋಗವಾಗುವಂಥಾದ್ದು ಇರುತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ ಮೋಡಿಗೆವಾಯು, ಕೆಮ್ಮು ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ವಕ್ತ ರೀತಿಗಳಿಗೂ ಅತ್ಯುತ್ತಮ ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ ಕೆ ಟೋಣಸಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಆರಾಮ ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ

ವ್ಯಾನೇಜರ:-**ರಾಘವ ಫಾರ್ಮಸಿ ಗೋಕಾಕ**
ಜಿ ಬೆಳಗಾವ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೫ ೮ ೩೩

ಕೃಷ್ಣರಾವ ಅಂಕಲಗಿ
ವ್ಯಾನೇಜಿಂಗ ಡಾಯರೆಕ್ಟರ

ದಿ ಹುಬಳಿ ಇಲೆಕ್ಟ್ರಿಸಿಟಿ ಕಂಪನಿ ಲಿಮಿಟೆಡ್
ಜಾಹೀರ ನೋಟೀಸ

ಕೆಳಗೆ ಸಹಿ ಮಾಡಿದ ವ್ಯಾನೇಜಿಂಗ ಏಜಂಟರಾದ ಮೆ॥ ಅವಟೆ ಅ್ಯಂಡ ಕಂಪನಿ ತಿಳಿಸುವದೇನಂದರೆ —

ನಾಮದಾರ ಮುಂಬಯಿ ಹಾಯಕೋರ್ಟಿನಲ್ಲಿ ನಡೆದ ಅಪೀಲ್ ನಂ ೭೭೧ನೇ ದಾವೆದಲ್ಲಿ ಹಾಜರಾದ ಕೆಲವು ಕಾಗದ ಪತ್ರಗಳ ಮುಖಾಂತರ ಮೇಲಿಂದ ನಮಗೆ ಹೀಗೆ ತಿಳಿದುಬರುತ್ತದಲ್ಲಾ ಮಿ॥ ಎಸ್. ಆರ್ ಪಾಟೀಲ, ಮಿ। ಹನಮಂತಪ್ಪ ಪುಂಡ್ಲಿಕಪ್ಪ ಬೆಳಮಕರ ಮಿ॥ ಜಿ ಎನ್ ಮಡಿಮನ್ ವ ಮಿ॥ ಭೀಮಪ್ಪಾ ಗಂಗಾಧರಪ್ಪಾ ದಿವಟೆ ಇವರು ಸದ್ರಿ ಕಂಪನಿಯ ಡಾಯರೆಕ್ಟರರಿದ್ದೇವೆಂತಾ ವ ಕಂಪನಿಯ ತರ್ಫೆಯಿಂದ ಸಾಲಾ ತೆಗೆಯಲಿಕ್ಕೆ ತಮಗೆ ಅಧಿಕಾರ ಇದೆಯಂತಾ ವ ಸದ್ರಿ ಹಣ ಕಂಪನಿಯ ಕೆಲಸ ಬಗೆಯಿಂದ ಬೇಕಾಗಿದೆಯಂತಾ ವಗೈರೆ ತರಹದ ಗೈರ ಸಮಜೂತಗಳನ್ನು ಜನರಿಗೆ ಕೊಟ್ಟು ಅವರ ಕಡೆಯಿಂದಾ ದೊಡ್ಡ ದೊಡ್ಡ ರಕಮುಗಳನ್ನು ಸಾಲಾ ತೆಗೆದಿದ್ದಾರೆ, ವ ತೆಗೆಯತಕ್ಕವರಿದ್ದಾರೆ ಅಂತಾ ತಿಳಿಯುತ್ತದ. ಆದರೆ ಈ ನೋಟೀಸಿನಿಂದ ತಿಳಿಸುವದೇನಂದರೆ ಸದ್ರಿ ಡಾಯರೆಕ್ಟರರೆಂದು ಹೇಳಿಕೊಳ್ಳುವ ಮೇಲ್ಕಾಣಿಸಿದವರ ಪೈಕಿ ಮಿ। ಪಾಟೀಲ ಇವರ ಹೊರ್ತಾಗಿ ಬಾಕಿ ಉಳಿದವರು ಸದ್ರಿ ಕಂಪನಿಯ ಕಾಯದೇಶೀರ ಡಾಯರೆಕ್ಟರರಿರುವದಿಲ್ಲಾ ಸದ್ರಿಯವರಿಗೆ ಮತ್ತು ಮಿ। ಎಸ್ ಆರ್ ಪಾಟೀಲ ಇವರಿಗೆ ಸಹ ಕಂಪನಿಯ ಪತಿಯಿಂದ ಸಾಲಾ ತೆಗೆಯಲಿಕ್ಕೆ ಏನೇನೂ ಅಧಿಕಾರವಿರುವದಿಲ್ಲಾ. ಈ ವಳಗಾಗಿ ಇವರಿಗೆ ಯಾರಾದರೂ ಸಾಲಾ ಕೊಟ್ಟಿದ್ದರೆ ಆ ಸಾಲವು ಈ ಕಂಪನಿಯ ಮೇಲೆ ಯಾವದೇ ರೀತಿಯಿಂದ ಬಂಧನಕಾರಕ ಇರುವದಿಲ್ಲಾ, ಸದ್ರಿಯವರು ಮಾಡಿದ ಅಥವಾ ಮಾಡುವ ಸಾಲದಿಂದಾ ಕಂಪನಿಗೆ ಯಾವ ತರಹದಿಂದಲೂ ಫಾಯದೆ ಆಗಿಲ್ಲಾ ವ ಆಗುವದಿಲ್ಲಾ ಸದ್ರಿಯವರು ಕಂಪನಿಯ ತರ್ಫೆಯಿಂದಾ ಅಂತಾ ಕೆಲವು ಪ್ರೋ ಕಳ ರಯಾವ್ರಗಳನ್ನು ಮಾಡಿದ್ದಾರೆಯಂತಾ ಸಹ ತಿಳಿಯುತ್ತದೆ.

ಅವು ಕಂಪನೀಯ ಠರಾವುಗಳಿರುವದಿಲ್ಲಾ ಸದ್ರಿಯವರು ಸದರಿ ಪ್ರೋಕಳ ಠರಾವುಗಳನ್ನು ಜನರಿಗೆ ತೋರಿಸಿ ಅವರ ಗೈರ ಸಮಜೂತ ಮಾಡುವ ಸಂಭವವಿರುತ್ತದೆ ಆದ್ದರಿಂದ ಸದ್ರಿಯವರಿಗೆ ಯಾರೂ ಕಂಪನಿಯ ಹೆಸರಿನಿಂದ ಯಾವ ಸಾಲಾ ಕೊಡಬಾರದು ಇದರ ಕೊಟ್ಟರೆ ಅದಕ್ಕೆ ಕಂಪನಿಯು ಜವಾಬ್ದಾರರಾಗಲಿಕ್ಕಿಲ್ಲಾ ತಿಳಿಯುವದು.

For The Hubli Electricity Co Ltd
ಹುಬ್ಬಳ್ಳಿ
ತಾ॥ ೨೬-೯-೧೯೩೩
Amate & Co
Managing Agents

ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಮಾಡುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ
೧೯-೧೦-೩೩ ಗದಗ **ಶ್ರೀ ದತ್ತಾತ್ರೇಯ ಬುಕ್ ಡೆಪೊ**
ಶಹಾಪುರ ಪೇಟೆ ಗದಗ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನೋಂ. ಬಿ. ೨೭೮೫ ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ ಮನು ಸಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಪಾದಕರು:— ಆಲೂರ ವೆಂಕಟರಾಯರು. ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಸಿದ್ಧಪಡುವದು

ವರ್ಷ ೧೦] ಧಾರವಾಡ— ರವಿವಾರ ಕಾರ್ತಿಕ ಶುದ್ಧ ೧೧ ಶಕೆ ೧೮೫೫ ತಾ॥ ೨೯-೧೦-೩೩ [ಸಂಚಿಕೆ ೧೫೮

ಇನಸ್ಶುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಶುಅರನ್ಸ
ಕಂಪನಿಯೇ
ಉತ್ತಮವಾದುದು

ಇನಸ್ಶುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇವರಲ್ಲಿಯೇ ವಿಮೆ ಇಳಿಸಿರಿ.

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ನ್ಯೂ, ಪೆಡಲ್ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿವೆ

(೧) ಬಿಳಿ, ಹಳದಿ ಕೆಂಪು ಚಿಮಣಿಯೆಣ್ಣೆ ಕೂಡ್ ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುಸಿಕ್ ಥಾಮಸ್ ಬಿರ್ (೩) ಉತ್ತಮ ಹಾಗೂ ಬಹಳ ಸೋಯಿಸ್ ನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರೆ (೫) ಮೋಟಾರ ಮತ್ತು ಸಾಯಕಲ್‌ಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತ ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡಿಗೆ ಇರುತ್ತವೆ

ನಮ್ಮ ಹದ್ದು —

ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ ೨ ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇದು ಸಬ್ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅದವಾ ಸಮಕ್ಷಮ ಭೆಟ್ಟಿಯಾಗಬೇಕು.

ನ ೩೦ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು.

ಹುಂಡೇಕರ ಯಳಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಸನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ಸುಲಭ ಶಾಸ್ತ್ರೀಯ ಡಾ॥ ಜಿ. ಬಿ. ಯಂದರ ಸುಲಭ ಸ್ವಾಸ್ಥ್ಯ!

ಸುಗಂಧ ನಶ್ಯದ ಪುಡಿ

ಲೋಕ ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯನ್ನು ಹಿಡಿ ಏರ್ಪಟ್ಟು, ಸಾವಿರಾರ ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತ ಆರೋಗ್ಯಕಾರಕ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಗುಣವಾಗುವ ವ್ಯಾಧಿಗಳು ಯಾವ ವೆಂದರೆ— ಪೀನಸ, ಒಂದೆತಲೆನೋವು, ತಲೆಯ ಸ್ನಾಯು ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು [illegible] ಉಂಟಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಇಂತಹ ವ್ಯಾಧಿಗಳನ್ನು [illegible] ಜ್ಞಾನದ ಶಕ್ತಿಯನ್ನು ಹೆಚ್ಚು ಮಾಡುತ್ತದೆ. [illegible] ಈ ಸುಗಂಧ ನಶ್ಯದ ಪುಡಿ [illegible] ಯನ್ನು [illegible] ಪರಿಮಳವಾಗ [illegible]. ಇದನ್ನು ಅನೇಕ ಪ್ರಭುಗಳು [illegible] ಕುಟುಂಬ [illegible] ವಾಗಿ ಉಪಯೋಗಿಸುತ್ತಾರೆ [illegible] ಬಹುದು [illegible] ೪ ಆಣೆ, ವ್ಹಿ. ಪಿ. ೪ ಆಣೆ [illegible] ಒಂದಕ್ಕೆ ೨–೮–೦ ವ್ಹಿ. ಪಿ. ಚಾರ್ಜ ೮ ಆಣೆ

ವಿಳಾಸ:— **ಗುರುಬಸವ ಅಂಡ್ ಕಂಪನಿ, ಲಿಮಿಟೆಡ್**

ಪೋ. ಬಾ. ೫೧೧ [illegible]

[illegible]

ಮಾಳಮಡ್ಡಿಯ ಜನರ ಗೋಳಾಟ

ಎರಡನೆಯ ಬಗೆ.

[illegible] ೨೬-೧೦-೩೩ ರ ಸಂಚಿಕೆಯಲ್ಲಿ ನನ ನನ 'ಪರಾಗ' ಶ್ರೀಮಾನ್ ಕುಲಕರ್ಣಿ ತಮ್ಮಾಜೀರಾಯರು ಬರೆಯುವ ಲೇಖವನ್ನು ಓದಿ ನನಗೊಂದು ದೊಡ್ಡ ಕೌತುಕವೆನಿಸಿತು ಯಾಕೆಂದಿರೋ? ಮಾಳಮಡ್ಡಿಯ ಜನರ ಗೋಳಾಟವನ್ನು ಅವರು ಧೈರ್ಯದಿಂದ ಬೈಲಿಗೆಳೆದದಕ್ಕೆ. ಧಾರವಾಡದೊಳಗೆ ಈ ಭಾಗದಲ್ಲಿ ಜನವಸತಿಯು ಬೆಳೆದು ಸುಮಾರು ಎಪ್ಪತ್ತರಿಂದಲೂ ೫೦ ವರ್ಷಕ್ಕಿಂತ ಹೆಚ್ಚು ಕಾಲವು ಸವೆದು ಹೋಗಿದೆ. ಈ ಅವಧಿಯಲ್ಲಿ ಇಲ್ಲಿಯ ನಾಗರಿಕರ ಸುಖಸೌಕರ್ಯಗಳ ಕಡೆಗೆ ನಗರ ಸಭೆಯು ಒಂದೇ ಸವನೇ ದುರ್ಲಕ್ಷವ ಮಾಡುತ್ತಲೇ ಬಂದಿದೆ. ಅನೇಕಸಾರೆ ಇಲ್ಲಿಯ ವರ್ತಮಾನ ಪತ್ರಗಳಲ್ಲಿ ಅನೇಕ ಬಗೆಯ ಅನಾನುಕೂಲಗಳ ವಿಷಯವಾಗಿ ಅನಾಮಧೇಯವಾದ ಅನೇಕ ಲೇಖಗಳು ಪ್ರಸಿದ್ಧವಾಗಿವೆ. ಅವೆಲ್ಲ ಅಡವಿಯ ಆಕ್ರೋಶಗಳಾಗಿ ಎಲ್ಲಿಯೋ ಅಡಗಿ ಹೋಗುವ ಅನುಭವ ನಮಗೆಲ್ಲ ಬಂದಿದೆ. ಈಗೀಗ ನಾಲ್ಕಾರು ಸಾರೆ ಒಂದೇ ವಿಷಯವು ನಿಮ್ಮ ಪತ್ರದ ಮುಖಾಂತರ ನಿವೇದಿಸಲ್ಪಟ್ಟದ್ದೂ ಉಂಟು. ಆದರೆ, ಅವುಗಳೆಲ್ಲ ಗಾಳಿಯೊಳಗೆ ಬೆರೆತು ಹೋದಂತೆ ನಿಷ್ಫಲವಾಗಿವೆಂಬುದನ್ನು ಎಲ್ಲರೂ ಬಲ್ಲರು. ಅನಾಮಧೇಯ ಬರಹಗಳನ್ನು ಯಾರು ಯಾಕೆ ಕೇಳಬೇಕು! ಮಾಳಮಡ್ಡಿಯ ಭಾಗದಲ್ಲಿ ಸುಶಿಕ್ಷಿತರ ವಸತಿಯೇ ಬಹಳ. ನಾಗರೀಕರ ಕರ್ತವ್ಯಗಳ ಅರಿವು ಅವರಿಗೆ ತುಂಬಾ ಉಂಟೆಂಬ ಭಾವನೆ. ನಗರ ಸಭೆಯವರು ನಗರದ ತಮ್ಮ ವಿಭಾಗವನ್ನು ಸವತಿ ಗಣ್ಣಿನಿಂದ ನೋಡುವರೆಂಬುದು ಅವರಿಗೆ ತಿಳಿಯದ ಮಾತಲ್ಲ. ಹಾಗೆಯೇ ಇಲ್ಲಿಯ ಜನರೆಲ್ಲ ಸುಸಂಪನ್ನರೆಂಬ ಪ್ರವಾದವಿದ್ದುದರಿಂದ ಈ ಭಾಗದಲ್ಲಿಯೇ ನಗರ ಸಭೆಯ ಆದಾಯವು ಹೆಚ್ಚೆಂಬದನ್ನೂ ಅವರು ಬಲ್ಲರು. ನಾಲ್ಕು ಜನ ಕೂಡಿದಾಗ್ಗೆ ನಗರ ಸಭೆಯ ಆಡಳಿತೆಯ ವಿಷಯವಾಗಿ ಯಥೇಚ್ಛವಾಗಿ ಟೀಕೆಯ ಸುರಿಮಳೆ ಗರೆಯುವದು. ಆದರೇನು? ಬೈಲಿಗೆಳೆಯುವ ಧೈರ್ಯವನ್ನು ಯಾರೂ ಮಾಡರು. ಸಭೆಗೆ ಸಲ್ಲತಕ್ಕ ಹಣವನ್ನು ಸ್ವಾಮಿಗಳ ಕಾಣಿಕೆಯೋ ಬಕಾಸುರನ ಬಿನ್ನಾಯವೋ ಎಂಬಂತೆ ಸುಮ್ಮನೇ ಸಲ್ಲಿಸಿಬಿಡುವರು. ಅಲ್ಲದೆ ತಮ್ಮ ಅನುವು ಆವಶ್ಯಕತೆಗಳನ್ನು ನಿವಾರಿಸಿಕೊಳ್ಳಲು ಯಾವ ಬಗೆಯಿಂದಲೂ ಮುಂದಾಗರು. ಇದು ಇಷ್ಟು ದಿವಸಗಳ ಅನುಭವ. ಆದರೆ ಶ್ರೀ ಕುಲಕರ್ಣಿ ತಮ್ಮಾಜೀರಾಯರು ಇದಕ್ಕೆ ಅಪವಾದವಾದರು. ಇಲ್ಲಿಯ ನಗರ ಸಭೆಗೆ ಇವರು ಒಂದಾನೊಂದು ಕಾಲಕ್ಕೆ ಪ್ರಮುಖಾಧಿಕಾರಿಗಳಾಗಿದ್ದವರು. ಜನರ ಕಷ್ಟ ನಿಷ್ಠುರಗಳ ಅನುಭವಗೊಂಡವರು. ಮೇಲಾಗಿ ಸರಕಾರದ ದೊಡ್ಡ ಅಧಿಕಾರವನ್ನು ಪೂರೈಸಿ ನಿವೃತ್ತರಾದ ಸಂಪನ್ನ ಸ್ಥಿತಿಯವರು. ಇಂಥವರ ಕೂಗಿಗೆ ಬೆಲೆ ಬಾರದೆ ಹೇಗೆ ಹೋದೀತು?

ಶ್ರೀಮಾನ್ ತಮ್ಮಾಜೀರಾಯರು ಮಾಳಮಡ್ಡಿಯ ಬೀದಿಗಳು ಬೀದಿಯ ದೀಪಗಳು, ಕಸದ ಗುಂಡಿಗಳು ಈ ಮೂರು ವಿಷಯಗಳನ್ನು ಸೂಕ್ಷ್ಮವಾಗಿ [illegible] ಒಂದೇ ದೃಷ್ಟಾಂತವನ್ನು [illegible] ಹೇಳಿದ್ದಾರೆ. ಪ್ರೇತನ ಬೀದಿಗಳನ್ನು ಸ್ವೀಕರದಿಂದ ಕಲೆಕ್ಟರ ಬಂಗ್ಲೆಯ [illegible] ಮಿಶನ್ ಕಂಪಾವುಂಡಿನಿಂದ [illegible] ದಿಬ್ಬದ ನೆತ್ತಿಯನ್ನು ಮುಟ್ಟುವದಾರಿಯನ್ನು ಬಿಟ್ಟು ಮಿಕ್ಕ ಕಡೆಗಲ್ಲ ಮಾರ್ಗದ ತ್ರಿಯಲ್ಲಿಗಲೀ ಊರಬ್ಲಾಗಲೀ ಬೀದಿಗಳ ಅವಸ್ಥೆಯು ಒಂದೇ. ವಿದ್ಯಾರ್ಥಿಗಳು ಇದ್ದರೂ ರಾತ್ರಿ [illegible] ರವರಿಗೆ ಒಂದೊಂದು ದಿನ ಆತ್ತುವದೇ ಇಲ್ಲ. ಕಗ್ಗತ್ತಲಲ್ಲಿ ದನಗಳ ಹಿಂಡು ಊರು ಸೇರುವಾಗ ಎತ್ತರ [illegible] ಮನೆಯ ಹಾದಿಯನ್ನು ಹಿಡಿದ [illegible] ಹೋಗುವ ಮಾಳಮಡ್ಡಿಯ ಜನರಿಗೆ ಸುರಕ್ಷಿತವಾಗಿ ಮನೆಮುಟ್ಟುವದೆಂದರೆ ಅದೊಂದು ಹಬ್ಬ. ನನಗೇ ೨-೪ ಸಾರೆ ಈ ಅನುಭವ ಬಂದಿದೆ. ಶ್ರೀ. ಚಂದಾವರಕರ ವಕೀಲರ ಮನೆದಾಟಿ ಮಿಶನ್ ಚರ್ಚಿಗೆ ಬರುವದರೊಳಗಾಗಿ ಮೂರು ಸಾರೆ ನಾನು ಎಡಗಡೆಯ ಆಳವಾದ ಗಟಾರದಲ್ಲಿ ಬೀಳುವದು ಕೇವಲ ದೈವಲೀಲೆಯಿಂದ ತಪ್ಪಿದೆ!

ಆದರೆ ನನ್ನಂಥ ಬಡಪಾಯಿಯ ಯಾರಿಗೆ ದೂರಿಕೊಳ್ಳಬೇಕು? ಮನೆಗೆ ನೀರಿಲ್ಲವೆಂದು ಈಗ ಹನ್ನೆರಡು ವರ್ಷಗಳಿಂದ ಪಲ್ಲವವಾದ್ಯ ಮಾಡಿದ್ದಾಯಿತು. ಪ್ರಮುಖಾಧಿಕಾರಿಗಳಿಗೆ ಹೇಳಿಕೊಂಡದ್ದಾಯಿತು. ಅಧ್ಯಕ್ಷರ ಅವಗಾಹನೆಗೆ ತಂದು ಕೊಟ್ಟದ್ದಾಯಿತು. ಆದರೇನು? "ಒಳ್ಳೊಳ್ಳೇ ದೇವರು ಉಳ್ಳಿರುತ್ತಿರುವಾಗ ಕಳ್ಳೇ ದೇವರು ಕೌಲು ಬೇಡಿತಂತೆ!" ಎಂಬ ಗಾದೆ ಮಾತು ಪ್ರತಿವೊಂದು ಸಾರೆ ನನಗೆ ಅನುಭವಕ್ಕೆ ಬಂದು ಬಾಯಿಮುಚ್ಚಿಕೊಂಡು ಕೂಡಬೇಕಾಗಿದೆ. ಅವರೂ ನಮ್ಮ ನಗರ ಸಭೆ ನಮ್ಮ ಪ್ರತಿನಿಧಿಗಳು, ನಮ್ಮ ಅಧ್ಯಕ್ಷರು ಎಂಬ ಅಭಿಮಾನ ಬಿಡುವದಿಲ್ಲ ನೋಡಿ! ಏನಿದ್ದರೂ ಒಮ್ಮೆ ಯಾದರೂ ಅವರಿಗೆ ಕರುಣ ಬಂದೀತೆಂಬ ಆಶೆ ತಪ್ಪುವದಿಲ್ಲವಲ್ಲ! ಆದ್ದರಿಂದ ಮನೆಗೆ ಹೋಗಿ, ಆಫೀಸಿಗೆ ಹೋಗಿ ಭೆಟ್ಟಿಯಾಗಿ, ಹೇಳಿಕೊಂಡು, ಕೇಳಿಕೊಂಡು ತಿಂಗಳುಗಟ್ಟಲೆ ಬೇಡಿಕೊಂಡು ಅನುಗ್ರಹವಾದೀತೆಂದು ಬಾಯಿ ತೆರೆದುಕೊಂಡು ಕಾದಿದ್ದೇನೆ. ಈಗ ಎರಡು ತಿಂಗಳುಗಳಲ್ಲಂತೂ ಅವರ ಸುತ್ತಲೂ ಕೆಲಸಗಳ ವ್ಯಾಪ್ತಿಗೆ ಬಿದ್ದಂತಾಗಿ ಚಿತ್ತಕ್ಕೆ ಸ್ವಾಸ್ಥ್ಯವಿಲ್ಲದಾಗಿ ನನ್ನ ವಿಷಯಕ್ಕೆ ಗಮನಕೊಡಲು ಅವಕಾಶವೇ ಇಲ್ಲ. ಪಾಪ, ಅವರಿಗೆ ಈಗಂತೂ ಗವರ್ನರ ದೊರೆಗಳು ಬರತಕ್ಕವರು. ಈ ಕೋಲಾಹಲದಲ್ಲಿ ಊಟಕ್ಕಿಂತಲೂ ಅವಕಾಶವಿರಲಿಕ್ಕಿಲ್ಲ. ನಮ್ಮ ಅಧ್ಯಕ್ಷರಿಗೂ ಬೇರೆ ಅಧಿಕಾರಿಗಳಿಗೂ ಇವಷ್ಟಾಗಿ ಹೋದ ಮೇಲಾದರೂ ಶ್ರೀ ತಮ್ಮಾಜೀರಾಯರ ಪುಣ್ಯದಿಂದ ಇತ್ತ ಕಡೆಗೆ ತಮ್ಮ ದೃಷ್ಟಿಯನ್ನು ನಗರ ಸಭೆಯ ಅಧ್ಯಕ್ಷರೂ ಪ್ರಮುಖಾಧಿಕಾರಿಗಳೂ ಹೊರಳಿಸುವರೋ ಹೇಗೆಂಬದನ್ನು ನೋಡಬಹುದಷ್ಟೆ? ಅಂತೂ ಈ ಅಪಾತ್ರರನ್ನು ಕಣ್ಣೆದುರಿಗೆ ಹಿಡಿದ ಶ್ರೀ ತಮ್ಮಾಜೀರಾಯರಿಗೆ ನನ್ನ ಅನೇಕ ವಂದನೆಗಳನ್ನು ಅರ್ಪಿಸುವರೆನು ಪತ್ರ ಬೆಳೆ [illegible]

೨೭-೧೦-೩೩ ಮುದವೀಡು ಕೃಷ್ಣರಾಯ

ಕನ್ನಡಿಗ.

ರವಿವಾರ ತಾರೀಖು ೨೯-೧೦-೧೯೩೩

ರಾಷ್ಟ್ರೀಯ ಸಭೆಯೂ, ರಾಷ್ಟ್ರವೂ.

ನಿನ್ನಿನ ನಮ್ಮ ಹಿರಿಯ ಬರಹವಾದ 'ಕರ್ನಾಟಕವೂ ಕಾಂಗ್ರೆಸ್ಸೂ' ಎಂಬುದರಲ್ಲಿ ನಾವು ಬೆಳಗಾಂವಿಯಲ್ಲಿ ಕೂಡಿದ ಕರ್ನಾಟಕದ ಕೆಲವು ಮುಖಂಡರು ಮಾಡಿದ ನಿರ್ಣಯದ ವಿಷಯವಾಗಿ ವಿವೇಚಿಸಿದೆವು. ರಾಷ್ಟ್ರೀಯ ಸಭೆಯ ವರ್ಚಸ್ಸಿಗೆ ಕುಂದನ್ನು ತಾರದಿರುವುದಕ್ಕೆ ರಾಷ್ಟ್ರೀಯ ನಿರ್ಣಯಗಳಿಗನುಸಾರವಾಗಿ ನಡೆದುಕೊಳ್ಳುವುದಕ್ಕೆ ಕರ್ನಾಟಕವು ಸಿದ್ಧವಾದ ಮನಸಿಯಿಂದೂ ಹೇಳಿದೆವು. ಹೀಗೆ ಆಯಾ ಪ್ರಾಂತಗಳು ರಾಷ್ಟ್ರೀಯ ಸಭೆಯನ್ನು ಎತ್ತಿ ಹಿಡಿಯುವ ಧೋರಣವು ಸರಿಯಾಗಿದ್ದಂತೆಯೇ ರಾಷ್ಟ್ರೀಯ ಸಭೆಯೂ ಈ ವಿಷಯದಲ್ಲಿ ತಾನು ಮಾಡತಕ್ಕ ಕರ್ತವ್ಯವನ್ನು ಮರೆಯುವುದು ಉಚಿತವಲ್ಲ. ರಾಷ್ಟ್ರೀಯ ಸಭೆಯ ಕರ್ತವ್ಯವೆಂದರೆ, ರಾಷ್ಟ್ರದ ನಿಜವಾದ ಮನಸ್ಸನ್ನು ಕಂಡು ಹಿಡಿಯುವುದು. ಇದು ಬಹಳ ಕಠಿಣವಾದ ಕೆಲಸವು. ಪ್ರತಿಯೊಂದು ಪಕ್ಷಕ್ಕೂ ಪ್ರತಿಯೊಬ್ಬ ಮುಖಂಡನಿಗೂ ರಾಷ್ಟ್ರೀಯ ಸಭೆಯಲ್ಲಿ ತನ್ನ ವರ್ಚಸ್ಸೇ ಉಳಿಯಬೇಕೆಂದು ಎನಿಸುವುದು ಸಹಜವು. ಹಾಗೆ ಅದು ಅಥವಾ ಅವರು ಪ್ರಯತ್ನ ಪಡುವುದೂ ಅನ್ಯಾಯವಲ್ಲ. ಆದರೆ ಹೀಗೆ ಪ್ರಯತ್ನಿಸುವಾಗ ಸರಳವಾದ, ನ್ಯಾಯವಾದ ಮತ್ತು ಯೋಗ್ಯವಾದ ರೀತಿಯನ್ನವಲಂಬಿಸಬೇಕಲ್ಲದೆ, ಪಕ್ಷಾಭಿನಿವೇಶದಿಂದಾಗಲಿ, ಸ್ವಮತಾಭಿನಿವೇಶದ ಮೂಲಕವಾಗಿ ಆಗಲಿ ತನ್ನ ಪಕ್ಷವೇ ಅಥವಾ ತನ್ನ ಮತವೇ ಅಲ್ಲಿ ಉಳಿಯಬೇಕೆಂದು ವರ್ತಿಸುವುದು ಅನ್ಯಾಯ್ಯವು. ಇಲ್ಲಿಯವರೆಗಿನ ರಾಷ್ಟ್ರೀಯ ಸಭೆಯ ಒಳಗಿನ ಮೂಲವನ್ನು ಶೋಧಿಸಿದರೆ ನಮಗೆ ಅವುಗಳ ಬುಡಕ್ಕೆ ಈ ತರಹದ ಅತಿರೇಕ ಪಕ್ಷಾಭಿಮಾನವು ಅಥವಾ ಸ್ವತತ್ವಾಭಿಮಾನವೇ ಇರುತ್ತದೆಂದು ಕಂಡುಬರುವುದು. ಈ ತರತನ ಅಭಿಮಾನದ ಮೂಲಕ ಮಂದಪಕ್ಷದವರು ರಾಷ್ಟ್ರೀಯ ಸಭೆಯನ್ನು ಬಿಟ್ಟು ಹೋದರು. ಸ್ವರಾಜ್ಯ ಪಕ್ಷಕ್ಕೂ ಅಸಹಕಾರ ಪಕ್ಷಕ್ಕೂ ಹಿಂದಕ್ಕೆ ಘನಘೋರ ಸಂಗ್ರಾಮವಾಗುವದಕ್ಕೂ ಈ ತರಹದ ಅತಿರೇಕಾಭಿಮಾನವೇ ಕಾರಣವಾಗಿತ್ತು. ಈಗ ಅಸಹಕಾರ ಪಕ್ಷದಲ್ಲಿಯೇ ಕಾನೂನುಭಂಗ ಪಕ್ಷಕ್ಕೂ ಕಾನೂನುಭಂಗವನ್ನು ನಿಲ್ಲಿಸಬೇಕೆಂಬ ಪಕ್ಷಕ್ಕೂ ಜಗಳವುಂಟಾಗಿರುವುದಕ್ಕೂ ಈ ತರಹದ ಹಠಾಗ್ರಹವೇ ಕಾರಣವೆಂದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ಯಾವ ಪಕ್ಷವು ಹಠಾಗ್ರಹವಿಷ್ಟವಾದುದು ಎಂಬುದನ್ನು ನಾವು ಇಷ್ಟರಲ್ಲಿ ಹೇಳಲಾರೆವು. ಎರಡೂ ಪಕ್ಷಗಳ ಅಂದೋಲನದಲ್ಲಿ ಸತ್ಯಾಂಶವು ಸ್ವಲ್ಪ ಇದ್ದೇ ಇದೆ. ಆದರೆ, ಅದರಲ್ಲಿ ಪಕ್ಷಾಭಿನಿವೇಶದ ಅಥವಾ ಮಾನಾಪಮಾನದ ಪ್ರಶ್ನೆಯ ಬೆರಿಕೆಯು ಆಗಿರುತ್ತದೆ. ಕಾನೂನುಭಂಗವನ್ನು ನಿಲ್ಲಿಸಬೇಕೆಂಬವರೆಲ್ಲರೂ ಅಪ್ರಾಮಾಣಿಕರು, ಆಡಂಬರ ಪ್ರಿಯರು ಎಂದೂ ಕಾನೂನುಭಂಗವನ್ನು ಮುಂದುವರಿಸಬೇಕೆಂಬವರೆಲ್ಲರೂ ಪ್ರಾಮಾಣಿಕರೂ ಆಡಂಬರ ವಿರಹಿತರೂ ಸಾಧುಗಳೂ ಎಂದೂ ನಾವು ಹೇಳುವುದಿಲ್ಲ. ಎರಡೂ ಪಕ್ಷದಲ್ಲಿ ಈ ತರಹದ ಆಡಂಬರ ಪ್ರಿಯ ಮತ್ತು ಅಪ್ರಾಮಾಣಿಕ ವ್ಯಕ್ತಿಗಳನ್ನು ಬಿಟ್ಟುಕೊಟ್ಟು, ಕೇವಲ ಅಂತಃಕರಣ ಪೂರ್ವಕವಾಗಿ ಕಾನೂನುಭಂಗವನ್ನು ನಿಲ್ಲಿಸಬೇಕು ಅಥವಾ ಬಾರದು ಎಂಬವರ ಅಭಿಪ್ರಾಯಗಳನ್ನಷ್ಟೇ ಪ್ರತಿಯೊಬ್ಬನೂ ವಿಚಾರಮಾಡತಕ್ಕದ್ದು. ಹಾಗೆ ಅಪ್ರಾಮಾಣಿಕ ಅಥವಾ ಆಡಂಬರ ಪ್ರಿಯ ಜನರಿಗೆ ನಾವು ಹೇಳತಕ್ಕದ್ದೇನೆಂದರೆ ರಾಜಕಾರಣದಲ್ಲಿಯ ಈ ವೃತ್ತಿಯನ್ನು ನೀವು ಬದಿಗಿಡಿರಿ, ಮತ್ತು ಪರಸ್ಪರ ಟೀಕೆ ಮಾಡುವಾಗ ಆಯಾ ವ್ಯಕ್ತಿಗಳಿಗೆ ಅಥವಾ ಮಹಾಪುರುಷರಿಗೆ ಗೌರವಯುಕ್ತವಾದ ಶಬ್ದಗಳಿಂದ ಟೀಕಿಸಿರಿ. ಟೀಕೆ ಮಾಡುವಾಗ ನೀವು ನಿಮ್ಮ ತತ್ವವನ್ನು ತಿಳಿಸುವ ಪ್ರಯತ್ನವನ್ನು ಬಿಡಬೇಡಿರಿ, ಆ ತತ್ವಗಳನ್ನು ಮಂಡಿಸುವಾಗ ಪ್ರತಿಪಕ್ಷದವರ ತಪ್ಪುತೋರಿದ ತತ್ವಗಳನ್ನು ಚೆನ್ನಾಗಿ ಖಂಡಿಸುವುದಕ್ಕೂ ತಿಳಿಸುವ ಪ್ರಯತ್ನವೂ ಒಂದು ಮುಂದೆ ನೋಡಬೇಡಿರಿ. ಆದರೆ ಯಾವಾಗಲೂ ಪಕ್ಷಾಭಿನಿವೇಶವನ್ನು ಅಥವಾ ಸ್ವತತ್ವಾಭಿನಿವೇಶವನ್ನು ಬದಿಗಿಡಿರಿ.

ನಾವು ಕೇವಲ ತತ್ವಗಳ ವಿವೇಚನೆಯನ್ನು ಇಷ್ಟು ಉದ್ದವಾಗಿ ಮಾಡುವುದಕ್ಕೆ ಕಾರಣವೇನೆಂದರೆ ಈಗ ಉಭಯ ಪಕ್ಷಗಳಲ್ಲಿಯೂ ಕೆಲಮಟ್ಟಿಗೆ ಆದರ ಅಭ್ಯಾಸವು ಕಂಡು ಬರುತ್ತದೆ. ಕಾನೂನುಭಂಗವನ್ನು ನಿಲ್ಲಿಸಬೇಕೆನುವವರು ನಿಷ್ಕಾರಣವಾಗಿ ಮಹಾತ್ಮಾ ಗಾಂಧಿಯವರನ್ನು ವಾಗ್ಜಾಲದಿಂದ ಪೀಡಿಸಹತ್ತಿದ್ದಾರೆ. ತದ್ವಿರುದ್ಧವಾಗಿ, ಕಾನೂನುಭಂಗವನ್ನು ನಿಲ್ಲಿಸಬಾರದೆನ್ನುವವರು ಹೇಗಾದರೂ ಮಾಡಿ ಕಾಂಗ್ರೆಸ್ಸಿನಲ್ಲಿ ಕೊನೆಯವರೆಗೆ ತಮ್ಮ ಪ್ರಾಬಲ್ಯವೇ ಉಳಿಯಬೇಕೆಂಬ ಆಕಾಂಕ್ಷೆಯುಳ್ಳವರಾದಂತೆ ತೋರುತ್ತದೆ. ಇಲ್ಲದಿದ್ದರೆ ಪಂಡಿತ ಜವಾಹಿರಲಾಲರಂದವರಿಗೆ ಈಗಿನ ವಿಲಕ್ಷಣ ಸ್ಥಿತಿಯಲ್ಲಿ ಆಲ ಇಂಡಿಯಾ ಕಾಂಗ್ರೆಸ ಸಭೆಯನ್ನು ಕರೆಯಬಾರದೆಂದೇಕೆ ಬದ್ಧಿ ಹುಟ್ಟಬೇಕು?

ಈ ವಿಷಯದಲ್ಲಿ ಮಹಾತ್ಮಾ ಗಾಂಧಿಯವರ ಮನಃಸ್ಥಿತಿಯು ಸ್ಪಷ್ಟವಾಗಿದೆ. ಹಿಂದಕ್ಕೆ ರಾಷ್ಟ್ರೀಯ ಸಭೆಯಲ್ಲಿ ತಮ್ಮ ತತ್ವಗಳು ನಡೆಯುವಾದಕಾಲದಲೆ ಅವರು ಹಿಂದಕ್ಕೆ ಸರಿದು ವಿರುದ್ಧಪಕ್ಷದವರಿಗೆ ತಮ್ಮ ಪ್ರಯೋಗಗಳನ್ನು ಮಾಡಿ ನೋಡಲಿಕ್ಕೆ ಅನುವು ಕೊಟ್ಟರು. ಈಗ, ಅವರಿಗೆ, ಕಾನೂನ ಭಂಗದ ವಿರುದ್ಧವೆದ್ದ ಬಂಡಾಯವನ್ನು ನೋಡಿ ಈಗಿನ ಸ್ಥಿತಿಯಲ್ಲಿ ತಾವು ಹಿಂದಕ್ಕೆ ಸರಿಯುವುದೇ ಉಚಿತವೆಂದು ತೋರಿದ್ದರಿಂದಲೇ ಅವರು ಯುಕ್ತಿಯಿಂದ ತಮ್ಮ ಸ್ವಂತದ ಮಟ್ಟಿಗೆ ಒಂದು ವರ್ಷ ಹಿಂದಕ್ಕೆ ಸರಿದು ನಿಂತಿರುವರೆಂದು ನಮ್ಮ ಅಭಿಪ್ರಾಯವು. ಆದ ಕಾರಣ, ಈಗ ರಾಷ್ಟ್ರದ ಮುಂದೆ ಒಂದೇ ಪ್ರಶ್ನೆಯಿರುತ್ತದೆ. ಅದೇನೆಂದರೆ ಈಗಿನ ಸ್ಥಿತಿಯಲ್ಲಿ ಕಾಯದೆಭಂಗವನ್ನು ಸದ್ಯದ ಮಟ್ಟಿಗಾದರೂ ನಿಲ್ಲಿಸಿಬಿಡುವುದು ಯೋಗ್ಯವೋ ಹೇಗೆ. ಮತ್ತು ಹಾಗೆ ನಿಲ್ಲಿಸುವುದಾದರೆ, ವಿಧಾಯಕ ಕಾರ್ಯಕ್ರಮವನ್ನು ಮಾತ್ರವೇ ಕೈಕೊಳ್ಳಬೇಕೋ ಅಥವಾ ಕಾಯದೆಮಂಡಳ ಪ್ರವೇಶವನ್ನೂ ಅವಲಂಬಿಸಬೇಕೋ ಎಂಬುದು. ಈ ಬಗ್ಗೆ ನಮ್ಮ ಅಭಿಪ್ರಾಯವೇನಿರುತ್ತದೆಂಬುದನ್ನು ಮುಂದೆ ಹೇಳುವೆವು.

ವಿದ್ಯಾರ್ಥಿಗಳ ಅನ್ನತ್ಯಾಗ.

ಬೆಂಗಳೂರಲ್ಲಿಯ ನರಸಿಂಹರಾಜ ವಿದ್ಯಾರ್ಥಿ ವಸತಿಗೃಹದಲ್ಲಿಯ ೧೫ ಹರಿಜನ ವಿದ್ಯಾರ್ಥಿಗಳು ತಾ|| ೨೫ ರಿಂದ ಅನ್ನತ್ಯಾಗ ಕೈಕೊಂಡಿದ್ದಾರೆ. ಅಧಿಕಾರಿಗಳು ತಮ್ಮನ್ನು ಕೆಟ್ಟರೀತಿಯಿಂದ ನಡಿಸಿಕೊಳ್ಳುತ್ತಿರುವರೆಂಬುದೇ ಅವರ ತಕರಾರು. ಅವರು ಸರಕಾರೀ ಅಧಿಕಾರಿಗಳವರೆಗೂ ತಮ್ಮ ದೂರು ಹೇಳಿದರು. ಆದರೆ ಅವರ ಈ ಪ್ರಯತ್ನವಾದರೂ ಅಯಶಸ್ವಿಯಾಯಿತು. ವಸತಿಗೃಹ ಮಂಡಲದವರು ಸಭೆಯಲ್ಲಿ ಸೇರಿ, ಅನ್ನತ್ಯಾಗವು ನಿಲ್ಲದಿದ್ದರೆ ವಸತಿಗೃಹವನ್ನು ಮುಚ್ಚಿಬಿಡುವದಾಗಿ ನಿರ್ಧರಿಸಿಕೊಂಡರು.

ಕ್ರೈಸ್ತ ಸಮಿತಿಯೂ-ಕ್ರೈಸ್ತ ಶಿಕ್ಷಕರು.

ನಮ್ಮ ಕ್ರೈಸ್ತ ವಿದ್ಯಾ ಸಮಿತಿಗಳು ಹಿಂದುಸ್ಥಾನದಲ್ಲಿ ಪ್ರಾರಂಭವಾಗಿ ಬಹಳ ದಿನಗಳಾದವು. ಈ ಸಮಿತಿಯವರು ನಮ್ಮ ಕರ್ನಾಟಕದಲ್ಲಿ ಅನೇಕ ಇಂಗ್ಲೀಸ ಕನ್ನಡ ಶಾಲೆಗಳನ್ನು ನಡೆಯಿಸುತ್ತ ಬಂದಿರುವರು. ಇದೀಗ ಒದಗಿದ ದುರ್ಭಿಕ್ಷದ ಕಾಲವು ಈ ಸಮಿತಿಗೂ ಬಂದೊದಗಿದೆ. ಈ ಸಮಿತಿಯ ಪ್ರಾಥಮಿಕ ಶಿಕ್ಷಕರ ಗೋಳಾಟವಂತೂ ಹೇಳಲಾಸಲ್ಲ. ಈ ವರೆಗೆ ಈ ಶಿಕ್ಷಕರಿಗೆ ದೊರೆಯುತ್ತಿದ ಪಗಾರಕ್ಕೆ ಕತ್ತರಿ ಬಂದಿದೆ. ಮೊದಲು ನಮ್ಮ ಅನ್ ಟ್ರೇಂಡ ಶಿಕ್ಷಕರು ೧೫ಕ್ಕೆ ದುಡಿಯುತ್ತಿದ್ದು ಇದೀಗ ೧೦ ರೂಪಾಯಕ್ಕೆ ದುಡಿಯುವ ಹೊತ್ತು ಬಂದಿದೆ. ಮೊದಲು ಈ ಕಡತವು ಕೆಲವು ದಿನಗಳ ವರೆಗೆ ಎಂದು ಇದ್ದು, ಅದು ಮೊನ್ನೆಯ ಜಾನೆವಾರಿಯಿಂದ ಒಂದು ಕಡಿಮೆಯ ಪ್ರಮಾಣನೇ ಗೊತ್ತು ಮಾಡಲ್ಪಟ್ಟಿದೆ. ಈ ಬಗ್ಗೆ ಸಮಿತಿಯವರನ್ನು ಕೇಳಿದರೆ ಶಾಲೆಗಳನ್ನೇ ಬಂದು ಮಾಡುತ್ತೇವೆ ಎಂದು ಹೇಳುತ್ತಾರೆ. ನಮ್ಮ ಮಿತ್ರರಿಗಳು.

ಆದ್ದರಿಂದ ಈ ಗೋಳಾಟವನ್ನು ಮೊನ್ನೆ ಕರ್ನಾಟಕ ಕ್ರೈಸ್ತ ಸಂಘದವರು ಶಿಕ್ಷಣ ಮಂತ್ರಿಗಳಿಗೆ ಅರಿಕೆ ಮಾಡಿಕೊಂಡರು. ಆದರೆ ಅವರಿಂದ ಸಮಾಧಾನಕಾರಕವಾಗಿ ಉತ್ತರ ಬರಲಿಲ್ಲ. ಹೀಗಾಗಿ ನಮ್ಮ ಗೋಳಾಟವನ್ನು ಯಾರೂ ಕೇಳುವವರಿಲ್ಲದಂತಾಗಿದೆ. ಸರಿ ನಮ್ಮದಾದರೂ ಜೀವನ ಜೀವನವನ್ನು ಸಾಗಿಸುವದಕ್ಕೆ ಸಿಗತಕ್ಕಷ್ಟು ಪಗಾರವು ಸಿಕ್ಕದೆ ಹೋದರೆ ಏನು ಮಾಡು.

ನಮಗೆ ಎಜ್ಯುಕೇಶನಲ್ ಆ್ಯಕ್ಟದ ಪ್ರಕಾರ (ಏ) ಗ್ರ್ಯಾಂಟ ದೊರೆಯತಕ್ಕದಿದ್ದು ಸಿಕ್ಕಿಲ್ಲ. ಕೊಡುತ್ತಿದ್ದ 'ಗ್ರ್ಯಾಂಟದ' ವಿನಯೋಗವು ಸರಿಯಾಗಿ ನಡೆದಿದೆಯೋ ಎಂಬದನ್ನು ಸರಕಾರೀ ವಿದ್ಯಾ ಇಲಾಖೆಯವರು ವಿಚಾರಿಸಿಲ್ಲ ವಿಚಾರಿಸುವುದೂ ಇಲ್ಲ. ಏಕೆ ಕೇಳಬಾರದು? ನಮ್ಮನ್ನು ಕ್ರೈಸ್ತರೆಂದು ತಿರಸ್ಕರಿಸುವರೇ. ಕೊನೆಯಲ್ಲಿ ಹೇಳುವದೆಂದರೆ ನಮ್ಮ ವಿದ್ಯಾ ಸಂಸ್ಥೆಗಳಿಗೆ ಈ ಕಾರ್ಯ ಮಾಡಲು ಆಗುವದಿಲ್ಲ. ಆದ್ದರಿಂದ ಸ್ಥಳಿಕ ನಗರ ಸಭೆಯವರು ನಮ್ಮ ವಿದ್ಯಾ ಸಂಸ್ಥೆಗಳನ್ನು ಕೈಯಲ್ಲಿ ತೆಗೆದುಕೊಂಡು ನಮ್ಮನ್ನು ರಕ್ಷಿಸಬೇಕೆಂದು ಪ್ರಾರ್ಥಿಸುತ್ತೇನೆ. ತಾ| ೨೭-೧೦-೩೩

ಗುರುಪುತ್ರ ಜಾನ್ ಕರಿ ಮಿಶನ ಕಂಪೌಂಡ
ಧಾರವಾಡ

ಗೋಕಾಕದ ಸುದ್ದಿ

ತಾ|| ೨೫ನೆ ದಿವಸ ವ್ಯವಹಾರೋತ್ತೇಜಕ ವಾಚನಾಲಯದಲ್ಲಿ ಶ್ರೀ ಶ್ರೀನಿವಾಸರಾವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಾಗರಿಕರ ಸಭೆ ಸೇರಿ ವಿಠ್ಠಲಭಾಯಿ ಪಟೇಲರ ನಿಧನದ ಬಗ್ಗೆ ದುಃಖ ಪ್ರದರ್ಶನ ಮಾಡಲ್ಪಟ್ಟಿತು. ಶ್ರೀ ಮಾಧವರಾವ ಕರಗುಪ್ಪಿ ಡಾ. ಕಡಲಗಿ, ಶಿವಲಿಂಗಪ್ಪ ಪಾಟೀಲ ಮೊದಲಾದವರ ಭಾಷಣಗಳಾದವು.

ತಾ|| ೨೬ನೇ ದಿವಸ ಶ್ರೀ ವೆಂಕಟೇಶ ವಾಚನಾಲಯದಲ್ಲಿ ಕವಿಭೂಷಣ ಬೆಟಗೇರಿಯವರು ಜನಪದ ಸಾಹಿತ್ಯ ಎಂಬ ವಿಷಯದ ಮೇಲೆ ಭಾಷಣ ಮಾಡಿದರು.

ಹವಾಮಾನ—ಊರಲ್ಲಿ ಸಾಧಾರಣವಾಗಿ ಕಾಲರಾ ಬೇನೆಯು ಇರುವದು.

ರಾಜಾ ಇವರ ಬಿಡುಗಡೆ

ಮದ್ರಾಸ ತಾ|| ೨೫ ಜಾಮೀನು ಕೇಳದೆ ಒಂದು ವರ್ಷ ಕಾರಾಗೃಹವಾಸಕ್ಕೆ ತೆರಳಿದ ಶ್ರೀ ರಾಜಾರವರ ಬಗ್ಗೆ ಯಾರೋ ಜಾಮೀನು ಕೊಟ್ಟಿದ್ದರಿಂದ ಅವರು ಬಿಡುಗಡೆ ಹೊಂದಿದ್ದಾರೆ.

ಇಹವೃತ್ತ

ಇಲ್ಲಿ ೨೬ ಪೋಲೀಸರ ಸ್ಥಳಗಳು ತೆರವಿದ್ದವು. ಈ ಸ್ಥಳಗಳಿಗೆ ೪೦೦ ಜನರ ಅರ್ಜಿಗಳು ಬಂದಿದ್ದವು. ಇವರಲ್ಲಿ ಮ್ಯಾಟ್ರಿಕುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರೂ ಇದ್ದರು.

ಹಿಂದುಸ್ಥಾನ

ಅಖಿಲ ಭಾರತ ಜಾಂಬೂರಿ ದಲದ ಮುಖಂಡರಾದ ಶ್ರೀ ಗುರುರಾವ ಬೇವೂರ ಸಿ. ಆಯ್. ಈ. ಆಯ್. ಸಿ. ಎಸ್. ಇವರು ಯುರೋಪದಿಂದ ತಾ|| ೨೬ ನೇ ದಿವಸ ಮುಂಬಯಿಗೆ ತಿರುಗಿ ಬಂದರು. ಸಾಟ ಸೆಕ್ರೆಟರಿಗಳು ಸ್ಕೌಟ ವಾಸ್ತರರ ಮೊದಲಾದವರು ಅವರಿಗೆ ಬಂದರದಲ್ಲಿ ಸ್ವಾಗತ ಮಾಡಿದರು.

ಮುಂಬಯಿ ಮುನಸಿಪಾಲಿಟಿಯಲ್ಲಿ ತೆರವು ಬಿದ್ದಿರುವ ಒಂದು ಸಭಾಸದ ಸ್ಥಳಕ್ಕೆ ಪಿ. ಬಾಲೂ ಇವರು ಈ ಮೊದಲೇ ಹುರಿಯಾಳಾಗಿ ನಿಂತಿರುವದರಿಂದ ಅವರಿಗೆ ಪ್ರತಿ ಸ್ಪರ್ಧಿಯಾಗಿ ನಿಲ್ಲುವರು ತಮ್ಮ ಇಚ್ಛೆಯಿಲ್ಲವೆಂದು ಶ್ರೀ ವಿ. ಮನ್ನರು ತಮ್ಮ ಮುಂದೆ ಸ್ಪಷ್ಟವಾಗಿ ಹೇಳಿದವರೆಂದು ಶ್ರೀ ಸಾವರಕರರು ಪ್ರಸಿದ್ಧ ಮಾಡಿದ್ದಾರೆ.

ನಾತಾಳ ಬಿಡುವಿನಲ್ಲಿ ಮದ್ರಾಸದಲ್ಲಿ ಮದ್ರಾಸ ಇಲಾಖೆಯ ಯುವಕರ ಪರಿಷತ್ತು ಸೇರತಕ್ಕದ್ದಿರುವದು. ಈ ಪರಿಷತ್ತಿಗೆ ಪಂ. ಜವಾಹಿರಲಾಲ ನೆಹರೂ ಇವರು ಅಧ್ಯಕ್ಷರಾಗುವ ಸಂಭವವಿದೆ.

ಮುಂಬೈ ಇಲಾಖೆಯಲ್ಲಿಯ ಸಹಕಾರಿ ... ಳವಳಿಯ ತಜ್ಞರೆಂದು ರಿಝರ್ವ ಬ್ಯಾಂಕ ವಿಷಯದ ಮುಂದೆ ಸಾಕ್ಷಿ ಕೊಡಲು ಪುಣೆ ಪ್ರೊ ಕಾಳೆಯವರಿಗೆ ಮುಂಬೈ ಸರಕಾರದವರು ಆಮಂತ್ರಣ ಕೊಟ್ಟಿರುವರು.

ಕಲಕತ್ತಾ, ತಾ|| ೨೬ ಕಲಕತ್ತೆಯ ... ರು ಘರಾಣದ ಅಂಗಡಿಯವರು ಜನರ ಹು... ಎಳೆಯಲಿಕ್ಕೆ ಫೋನೋ ಮುಂತಾದವುಗಳ ... ಪಚ್ಚುವಂತೆ ಹೆಂಗಸರ ಮತ್ತು ಹೆಣ್ಣು ಹು... ಯರ ನಾಚ ಮುಂತಾದವುಗಳನ್ನು ನಡಿಸುತ್ತಿದ್ದರು. ಕೆಲವು ಅಂಗಡಿಯವರು ಪರದೇಶದಿಂದ ನಾಚಕ್ಕಾಗಿ ಸ್ತ್ರೀಯರನ್ನು ಕರೆಸುತ್ತಿದ್ದರು. ಈ ಅಸಭ್ಯವಾದ ನಡತೆಯನ್ನು ನಿಲ್ಲಿಸಬೇಕೆಂದು ಕಲಕತ್ತೆಯ ಹುಕುಂ ಹೊರಟಿದೆ.

ಹುಬ್ಬಳ್ಳಿ ಪೇಟೆಯ ಧಾರಣೆ
(ಕೇವಣಿ ಮತ್ತು ಕಂಪನಿ)

ಹುಬ್ಬಳ್ಳಿ ತಾ|| ೨೮ ಮಧ್ಯಾಹ್ನ ೧೨ ಗಂ...

ಜವಾರಿ ಹತ್ತಿ	೧೧೨ ೧೧೪	ಜೋಳ	೧೨.
ಅಪ್ಲೇಂಡ ,,	೧೧೨ ೧೧೩	ಗೋದಿ	೬॥
ಬಿಲ್ಲಾಯತಿ ,,	೯೫-೯೭	ಅಕ್ಕಿ	
ಕ್ಯಾಂಬೋಡಿಯಾ .	೧೧೮–೧೦೦	ಕಡ್ಲಿ	
ಶೇಂಗಾ	೭೪ ೭೮	ಕಡ್ಲಿ ಬೇಳೆ	
ಡಬ್ಬಲ್‌ದಾಣಿ	೬೬ ೬೭	ಕುಸುಬೆ ೧೨	
ಜಾಡಿಸ ಕಪ್ಪು	೬೬-೬೭	ಹುರಳಿ	
ಹೆಸರು ಜವಾರಿ	೯ ೧೨		
ಶಿಂಗಾಪುರಾ ಹೊ	೪-೪॥	ಹತ್ತಿಕಾಳು	

ಬೆಳ್ಳಿ ಬಂಗಾರ

ಬಂಗಾರ	೩೫	ಬೆಳ್ಳಿ

ಇಂಗ್ಲೀಷ-ಜಪಾನ ಶಿಷ್ಟ ಮಂಡಲ ಸಭೆ!

" ಕನ್ನಡಿಗ " ನಿಗಾಗಿ ತರಿಸಿದ 'ಅಸೋಶಿಯೇಟೆಡ್ ಕಂಪನಿ'ಯ ತಂತಿಗಳು

ಇಂಗ್ಲೀಷ-ಜಪಾನ ಶಿಷ್ಟ ಮಂಡಲ ಸಭೆ.

ಮುಂಬಯಿ ತಾ॥ ೨೬— ಲ್ಯಾಂಕಾಶಾಯರದ ಹತ್ತಿಕಾರಖಾನೆಗಳ ಶಿಷ್ಟ ಮಂಡಲದ ಮುಖಂಡರಾದ ಸರ ವಿಲಿಯಂ ಕ್ಲೇಅರ ಲೀಜ ಇವರನ್ನು ಅಸೋಸಿಯೇಟೆಡ್ ಪ್ರೆಸ್ಸಿನ ಸುದ್ದಿಗಾರನು ಕಂಡು ಮಾತಾಡಿದನು. ಸಿಮಲೆಯ ಲ್ಲಿಯ ಸಭೆಯಲ್ಲಿ ಜಪಾನ ಔದ್ಯೋಗಿಕ ಪ್ರತಿನಿಧಿಗಳೊಡನೆ ಒಪ್ಪಂದವಾದ ಕಳಗಿನ ಸಂಗತಿಯನ್ನು ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಬಹುದೆಂದು ಅವರು ಮುಂದಿನ ವಿಚಾರ ಹೇಳಿದರು. ಆವರಂದದ್ದು— ಇದರ ಬಗ್ಗೆ ಮತ್ತು ನಾಳೆ ನಡೆಯುವ ಹಿಂದೀ ಔದ್ಯೋಗಿಕ ಪ್ರತಿನಿಧಿಗಳ ಸಭೆಯ ಪರಿಣಾಮದ ಬಗ್ಗೆ ಟೀಕೆಯಾಗುವದೆಂದು ನನ್ನ ಆಸೆ. ಬ್ರಿಟಿಶ ಶಿಷ್ಟಮಂಡಲದವರು ಜಪಾನ ಪ್ರತಿನಿಧಿಗಳೊಡನೆ ಬಹು ಅಂತಃಕರಣ ಪೂರ್ವಕವಾಗಿ ನಡೆದುಕೊಂಡರು. ಮೊದಲು ಸಭೆಯ ಕೆಲಸವು ಬ್ರಿಟಿಶ ಶಿಷ್ಟ ಮಂಡಲದ ಪ್ರಮುಖರಾದ ಸರ ಕ್ಲೇಅರ ಲೀಜರಿಂದಲೇ ಪ್ರಾರಂಭಿಸಲ್ಪಟ್ಟಿತು. ಬ್ರಿಟಿಶರ ಹತ್ತಿಯ ಹಾಗು ಕೃತ್ರಿಮ ರೇಶ್ಮೆಯ ಕೈಗಾರಿಕೆಯು ಕಾರಖಾನೆಗಳು ಜಪಾನದವರೊಡನೆ ಏರಾಟೆಯಿಂದ ಒಂದೇ ಪೇಟೆಯಲ್ಲಿ ಸರಕುಗಳ ಬೆಲೆ ಇಳಿಸಿ ವ್ಯಾಪಾರ ನಡಿಸಿದ್ದರಿಂದ ಎಂದೂ ಇಲ್ಲದ ಪರಿಸ್ಥಿತಿ ಉತ್ಪನ್ನವಾಯಿತು. ಇದರ ಎಲ್ಲರ ವಿಚಾರದಿಂದ ಯಾವುದೊಂದು ಸ್ವತಂತ್ರದಾರಿಯನ್ನು ಹುಡುಕಿ ತೆಗೆಯಲಿಕ್ಕಾದೀತೆಂದು ಬ್ರಿಟಿಶರ ಬಂದಿದ್ದರು. ಜಪಾನರ ಕಾರ್ಯ ಸಾಧಕತೆಯನ್ನು ಬ್ರಿಟಿಶರು ಬಹಳ ಹೊಗಳಿದ್ದಲ್ಲದೆ, ಈಗ ಹಾಕಿದ ಮಾರ್ಗದಿಂದ ನಡೆದು ಕೆಲಸವಾಗುವದೆಂದರೆ, ಜಪಾನ ಕಾರಖಾನೆಯವರಿಗೆ ಎಷ್ಟು ಕಷ್ಟವಿದೆಯೆಂಬುದನ್ನು ಅವರು ವ್ಯಕ್ತ ಮಾಡಿತೋರಿಸಿದರು. ಇದುವರೆಗೆ ತಮಗೂ ಜಪಾನದವರಿಗೂ ನಡೆದುಕೊಂಡು ಬಂದಂತೆಯೇ ಮುಂದಾದರೂ ಜಪಾನದವರೊಡನೆ ಪ್ರೀತಿಯಿಂದ ನಡೆಯಲು ಬ್ರಿಟಿಶ ಶಿಷ್ಟಮಂಡಲವು ಎಷ್ಟು ಆತುರರಿರುವರೆಂಬುವನ್ನು ಅವರು ಹೇಳಿದರ

ಜಪಾನರ ಹೇಳಿಕೆ.

ಮುಂದಿನ ಸಭೆಗಳಲ್ಲಿ ಜಪಾನರ ಶಿಷ್ಟ ಮಂಡಲದ ಮುಖ್ಯಸ್ಥರು ಜಪಾನದ ಮತವನ್ನು ಮಂಡಿಸುವಾಗ ಅಂದದ್ದು— ಹಿಂದುಸ್ತಾನದಲ್ಲಿಯ ಹತ್ತಿಯ ಚಿಕ್ಕ ಪುಟ್ಟ ಸರಕುಗಳ ವ್ಯಾಪಾರದ ವಿಷಯವಾಗಿ ಮಾತನಾಡುವದೇ ನಾವು ಇಲ್ಲಿಯವರೆಗೆ ಬಂದಿರುವದರ ಮುಖ್ಯ ಉದ್ದೇಶ. ಅದು ಬೇಗ ಬಗೆಹರಿಯುವದೆಂದು ನಮ್ಮ ಆಶೆ

ಜಪಾನದಲ್ಲಿಯ ಇತ್ತೀಚಿನ ಹತ್ತಿಯ ಕೈಗಾರಿಕೆಯ ಬಗ್ಗೆ ಮಾತನಾಡುವಾಗ ಅವರಂದದ್ದು— ಜಪಾನಿಯರು ವ್ಯವಹಾರದೊಳಗೆ ಬಹು ಪ್ರಾಮಾಣಿಕರು ಮತ್ತು ಸರಳರಿದ್ದುದರಿಂದ ಪರದೇಶದಲ್ಲಿ ಅವರ ವ್ಯಾಪಾರ ಬೆಳೆಯಲಿಕ್ಕೆ ಕಾರಣವಾಯಿತು. ಬ್ರಿಟಿಶ ಪ್ರತಿನಿಧಿಗಳು ಕೂಲಿಕಾರ ಜೀವನ ಪದ್ಧತಿ, ಕೆಲಸದ ಸ್ಥಿತಿಗತಿಗಳು ಇವುಗಳ ಬಗ್ಗೆ ಅನೇಕ ಆಕ್ಷೇಪಣೆಗಳನ್ನು ಎತ್ತಿದರೂ, ಜಪಾನದಲ್ಲಿಯ ಕೈಗಾರಿಕೆಯ ಕೆಲಸಗಾರರ ಸ್ಥಿತಿ, ಅವರ ಬಾಳ್ವೆಯ ಪದ್ಧತಿಗಳಲ್ಲಿ ಮೇಲೆ ಮೆಲ್ಲಗೆ ಸುಧಾರಣೆಯಾಗುತ್ತದೆ. ಆದ್ದರಿಂದ, ಜಪಾನ ಕಾರಖಾನೆಗಳಲ್ಲಿ ಕೂಲಿಯೆಂದರೆ ಹೆಸರಿಗೆ ಮಾತ್ರ ಇರುವ ಪಟ್ಟಿಗೆ ಬರುತ್ತದೆ.

ಆ ವೇಳೆ ಹಿಂದೂ ಕಾರಖಾನೆಗಾರರ ಸಂಗತ ತಾವು ಮಾತನಾಡುವ ಧೋರಣೆಯನ್ನು ಕುರಿತು ಹೇಳುವಾಗ " ಹಿಂದುಸ್ಥಾನಕ್ಕೆ ಇಂತಿಷ್ಟು ಪ್ರಮಾಣದಲ್ಲಿಯೇ ಸರಕು ಕಳಿಸುವ ಬಗ್ಗೆ ತಾವು ಹಿಂದುಗಳೊಡನೆ ಮಾತಾಡಿಕೊಂಡು ಅದರಂತೆ ನಡೆಯುವೆವು. ಸಂಕದ ಪ್ರಶ್ನವನ್ನು ಸಮಾಧಾನಕರವಾಗುವಂತೆ ಇಳಿಸಲಿಕ್ಕೆ ಬೇಕಾದ ಸರಕಿನ ಪ್ರಮಾಣವನ್ನು ಇಳಿಸಿದರೆ, ಬೆಲೆಯ ಮೇಲೆ ಅವರ ಪರಿಣಾಮವಾಗುವದು ಅಂದರು.

ಬ್ರಿಟಿಶರ ಹೇಳಿಕೆ

ವ್ಯಾಪಾರದ ಏರಾಟೆಯ ವಿಷಯದಲ್ಲಿ ಬ್ರಿಟಿಶರ ಹಿತವನ್ನು ಲಕ್ಷ್ಯಕ್ಕೆ ತರಲಿಕ್ಕೆಬೇಕು ಎಂದು ೧೯೧೪ ಇಂದಿನ ಗೊತ್ತುವಳಿಯನ್ನು ಒಪ್ಪಲಿಕ್ಕೆ ಹೇಳಿದರು. ಅದು ಕೆಳಗಿನಂತೆ ಇದೆ— ಸಿಮಲೆಯಲ್ಲಿ ನೆರೆದ ಜಪಾನ ಮತ್ತು ಬ್ರಿಟಿಶ ಪ್ರತಿನಿಧಿಗಳು ತಮ್ಮ ತಮ್ಮೊಳಗೆ ಏರಾಟೆಯ ಪ್ರಶ್ನವನ್ನು ಪರಸ್ಪರ ಹಿತದ ಪೃಷ್ಟಿಯಿಂದ ಬಗೆ ಹರಿಸಿಕೊಳ್ಳಲು ಅಧಿಕೃತರಾಗಿದ್ದಾರೆ. ಆದುದರಿಂದ ಎಲ್ಲ ದೇಶದವರು ಇನ್ನು ಮುಂದೆ ಇದೇ ರೀತಿಯ ಸಂಬಂಧವನ್ನಿಟ್ಟುಕೊಳ್ಳುವದು ಅವಶ್ಯವಿದೆ. ಈಗ ತಗ್ಗಿರುವ ವ್ಯಾಪಾರದ ಸ್ಥಿತಿಯು ಬದಲಾಗಿ ಅದರಲ್ಲಿ ಸುಧಾರಣೆಯಾದರೆ ಯೋಗ್ಯರೀತಿಯಿಂದ ಏರಾಟೆ ನಡಿಸಲು ಅನುಕೂಲವಾಗುತ್ತದೆ. ಹಿಂದೀ ಪೇಟೆಯಲ್ಲಿ ಬ್ರಿಟಿಶ ಹತ್ತಿಯ ಸರಕುಗಳ ಬಗ್ಗೆ ನಾವು ಹಿಂದುಸ್ಥಾನ ಸರಕಾರದವರಲ್ಲಿ ಅರಿಕೆಮಾಡಿಕೊಂಡಿದ್ದೇವೆ. ಅವರಿಂದಿನ್ನೂ ಉತ್ತರ ದೊರೆತಿಲ್ಲ. ಸರಕಾರಿ ತಜ್ಞ ಮತ್ತು ವ್ಯವಹಾರತಜ್ಞರೊಡನೆ ನಾವು ಕಚ್ಚಾಹತ್ತಿಯ ಬಗ್ಗೆ ಮಾತಾಡಿದ್ದಾಯಿತು. ಅದರ ವಿಚಾರ ನಾವು ಇಂಗ್ಲಂಡಕ್ಕೆ ಹೋದಮೇಲೆ ಸ್ಪಷ್ಟವಾಗುವದು. (ಅ ಪ್ರೆ ತಂತಿ)

ನಾವಿಕ ಪರೀಕ್ಷೆಗೆ ಉಮೇದವಾರರು

ಮುಂಬಯಿ ತಾ॥ ೨೮— ನಾವಿಕ ಶಿಕ್ಷಣ ಕೊಡುವ 'ಡಫರಿನ' ವೆಂಬ ಹಡಗಿನಲ್ಲಿ ಉಮೇದವಾರರನ್ನು ತಕ್ಕೊಳ್ಳುವ ಪರೀಕ್ಷೆಗೆ ೧೯೩ ಮಂದಿ ಮುಂದೆ ಬಂದಿದ್ದಾರೆ. ಈ ಪರೀಕ್ಷೆಯು ಆಕ್ಟೋಬರ ೩೦—ರಿಂದ ಮುಂಬಯಿ, ಕರಾಚಿ, ಲಾಹೋರ, ದಿಲ್ಲಿ, ಲಖನೌ, ಪಾಟ್ನಾ, ಕಲಕತ್ತಾ, ಮದ್ರಾಸ, ಮತ್ತು ರಂಗೂನ ಈ ಕೇಂದ್ರಗಳಲ್ಲಿ ಆಗುವದು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ತಾ॥ ೧೫ನೆ ಜಾನೆವರಿ ೧೯೩೪ನೆ ದಿವಸ ಹಡಗದಲ್ಲಿ ಸೇರ್ಪಡೆಗೊಂಡವರು [ಅ ಪ್ರೆ ತಂತಿ]

ರಾಜ ಕೈದಿಗಳಿಗೆ ಪುನಃ ಶಿಕ್ಷೆ

ಅಲಹಾಬಾದ ತಾ॥ ೨೬—ಫೈಜಾಬಾದ ತುರಂಗದಲ್ಲಿಯ 'ಬ' ವರ್ಗದ ರಾಜ ಕೈದಿಗಳಿಗೆ ಬೇರೆ ಬೇರೆ ಅಪರಾಧಗಳ ಸಲುವಾಗಿ ಅಧಿಕಾರಿಗಳು ಪುನಃ ಶಿಕ್ಷೆಯನ್ನು ವಿಧಿಸಿರುವರೆಂದು ಪಂಡಿತ ಜವಾಹಿರರು ಒಂದು ಪತ್ರಿಕೆ ತೆಗೆದು ಪ್ರಸಿದ್ಧ ಮಾಡಿರುತ್ತಾರೆ. ಈ ರಾಜ ಕೈದಿಗಳನ್ನು ಬೇರೆ ಕೋಣೆಗಳಲ್ಲಿ ಹಿಂಗಡಿಸಿ ಇಟ್ಟಿದ್ದು, ಅವರ ಭೆಟ್ಟಿ ಪತ್ರವ್ಯವಹಾರ ಮೊದಲಾದ ಸವಲತ್ತುಗಳನ್ನು ಕಸಿದ ಕೊಂಡಿರುತ್ತಾರೆ.

ಹೊಸದಿಲ್ಲಿ ೨೬—ಮಹಾತ್ಮಾ ಗಾಂಧಿಯವರು ತಾ॥ ೧೫ನೆ ದಿವಸ ದಿಲ್ಲಿಗೆ ಹೋಗುವವರಿದ್ದು ಅಲ್ಲಿ ೧೨ದಿವಸ ಬಿಡಾರ ಬಿಡತಕ್ಕವರಿದ್ದಾರೆ

ಕೆಲಸವಿಲ್ಲದ ಜರ್ಮನಿಯ ೮೦೦ ಶಾಸ್ತ್ರಜ್ಞರು

ಜರ್ಮನಿಯಲ್ಲಿಯ ಈಗಿನ ರಾಜಕೀಯ ಧೋರಣೆಯ ಮೂಲಕ ೮೦೦ ಮಂದಿ ಜ್ಯೂ ಜಾತಿಯ ಶಾಸ್ತ್ರಜ್ಞರು ಕೆಲಸವಿಲ್ಲದೆ ಕುಳಿತಿರುವರು. ಇವರಲ್ಲಿ ಕೆಲವರು ಪ್ರೊಫೆಸರರು ಕೆಲವರು ಅಸಿಸ್ಟಂಟ ಪ್ರೊಫೆಸರರು ಇದ್ದು ಅವರೆಲ್ಲರಿಗೆ ಕೆಲಸವಿಲ್ಲ. ಈಗ ತಮ್ಮದೊಂದು ಸಂಘವನ್ನು ಏರ್ಪಡಿಸಿಕೊಂಡು, ಉದ್ಯೋಗ ದೊರಕಿಸುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಇವರು ಈ ಉದ್ದೇಶ್ಯವಾಗಿ ಜಗತ್ತಿನೊಳಗಿನ ಬೇರೆ ಬೇರೆ ಕಡೆಯ ಜನರೊಡನೆ ಪತ್ರವ್ಯವಹಾರ ನಡಿಸಿದ್ದಾರೆ. ಸುಪ್ರಸಿದ್ಧ ಸರ ಸಿ ವ್ಹಿ ರಾಮನ್ ಇವರಿಗೆ ಸೇರಿದ ಸಂಘದವರಿಂದ ಒಂದು ಪತ್ರವು ಬಂದಿದ್ದು ಹಿಂದುಸ್ಥಾನದಲ್ಲಿಯ ವಿಶ್ವವಿದ್ಯಾಲಯ ಮೊದಲಾದ ಬೌದ್ಧಿಕ ಕೇಂದ್ರಗಳಲ್ಲಿ ನಿರುದ್ಯೋಗಿಗಳಾಗಿ ಕುಳಿತವರಿಗೆ ಏನಾದರೂ ಕೆಲಸ ಸಿಕ್ಕುವ ಸಂಭವವಿದೆಯೋ ಹೇಗೆ ಎಂದು ಅವರು ಕೇಳಿದ್ದಾರೆ.

ಕಾಲೇಜ ಬೋರ್ಡಿನ ಮೇಲೆ ಕೆಂಪು ಪತ್ರ

ಮೀರಟ ತಾ॥ ೨೭ ಈ ಹೊತ್ತಿನ ದಿವಸ ಇಲ್ಲಿಯ ಕಾಲೇಜ ನೋಟೀಸ ಬೋರ್ಡಿನ ಮೇಲೆ ಕಲಕತ್ತೆಯ ಸಮಾಜ ಸತ್ತಾವಾದಿ ಪಂಗಡದ ಪಕ್ಷದಿಂದ ಒಂದು ಕೆಂಪು ಪತ್ರವು ಅಂಟಿಸಲ್ಪಟ್ಟಿದ್ದು ಕಂಡು ಬಂತು. ಈ ಪತ್ರವು ಒಟ್ಟು ೪ ಕಾಗದಗಳಲ್ಲಿ ಇತ್ತು. ಅದರಲ್ಲಿ ಮಹಾತ್ಮಾ ಗಾಂಧಿಯವರ ರಾಜಕಾರಣದ ಮೇಲೆ ಕಡುತರವಾದ ಟೀಕೆಯಿತ್ತು. ಇದಲ್ಲದೆ ಮಹಾತ್ಮರು ಸರಕಾರದೊಡನೆ ಸಹಕಾರ ಮಾಡಿ ಒಕ್ಕಲಿಗರು ಹಾಗು ಕೂಲಿಕಾರರ ಕ್ರಾಂತಿಯನ್ನು ತಡೆಹಿಡಿದಿರುವರೆಂದೂ ಈ ಕಾರಣ ಸಮಾಜ ಸತ್ತಾವಾದಿ ಪಕ್ಷವನ್ನೇ ಸ್ವೀಕರಿಸುವದು ಅತ್ಯವಶ್ಯವಿದೆಯೆಂದೂ 'ಅದರಲ್ಲಿ ಉಲ್ಲೇಖವಿತ್ತು. ಪೋಲೀಸರು ಈ ಪತ್ರವನ್ನು ಜಪ್ತ ಮಾಡಿಕೊಂಡು ಹೋದರು.

ಮುಂಬಯಿ ಕಾರ್ಪೋರೇಶನದಲ್ಲಿ ದುಃಖ ಪ್ರದರ್ಶನ

ಮುಂಬಯಿ ತಾ॥ ೨೬— ಮುಂಬಯಿ ಕಾರ್ಪೋರೇಶನದ ಮೊದಲಿನ ಅಧ್ಯಕ್ಷರೂ ಪರಿಷ್ಟ ಕಾಯದೆ ಮಂಡಳದ ಮೊದಲನೇ ಲೋಕನಿಯುಕ್ತ ಅಧ್ಯಕ್ಷರೂ ಆದ ವಿಠ್ಠಲಭಾಯಿ ಪಟೇಲರವರ ನಿಧನದ ಬಗ್ಗೆ ಈ ಹೊತ್ತಿನ ಕಾರ್ಪೋರೇಶನದ ಸರ್ವ ಸಾಧಾರಣ ಸಭೆಯಲ್ಲಿ ದುಃಖ ಪ್ರದರ್ಶಕ ನಿರ್ಣಯ ಮಾಗಿ ಸಭೆಯು ಮುಂದರಿಸಲ್ಪಟ್ಟಿತು

೧೧ ಸಾವಿರ ರೂಪಾಯಿಹೋದವು

ಕೆಲವು ತರುಣರು ರಂಗಪೂರ ಜಿಲ್ಲೆಯ ನಂದಗಾ ಎಂಬಲ್ಲಿ ಓರ್ವ ಸಾಹುಕಾರನ ಮನೆಯನ್ನು ದರೋಡೆ ಮಾಡಿ, ಒಂದು ಬಂದೂಕು ಮತ್ತು ೧೧ ಸಾವಿರ ರೂಪಾಯಿಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆ. ಈ ಸಂಬಂಧವಾಗಿ ಅಧಿಕಾರಿಗಳು ಸಂಶಯದಿಂದ ಅಮಾರಸರಿ ಸ್ಟೇಶನದಲ್ಲಿ ೧೦ವರು ತರುಣರನ್ನು ಸೆರೆ ಹಿಡಿದಿರುತ್ತಾರೆ ಇದಲ್ಲದೆ ಅವರು ಅನೇಕ ಮನೆಗಳನ್ನು ಶೋಧಿಸಿ ಮಾಡಿರುತ್ತಾರೆ

ಹರಿಜನ ಸಂಖ್ಯೆ

ಒಂದು ಕಾಲಕ್ಕೆ ಹರಿಜನರ ಸಂಖ್ಯೆಯು ಹಿಂದುಸ್ಥಾನದಲ್ಲಿ ೬ ಕೋಟಿ ಇರುವದೆಂದು ಸಂಶಯವಾಸದಿಂದ ಎಲ್ಲರೂ ಹೇಳುತ್ತಿದ್ದರು. ಸಾಯಮನ್ನ ಕಮಿಶನ್ನವರು ೫ ಕೋಟಿ ೫೦ ಲಕ್ಷ ಹರಿಜನರಿರುವರೆಂದು ಹೇಳಿದಾಗಿನಿಂದ ಅದನ್ನೇ ಎಲ್ಲರೂ ಆಧಾರವೆಂದಿಟ್ಟುಕೊಂಡಿದ್ದರು. ಆದರೆ ಶ್ರೀ ಮುಟಿ ಎಂಬ ವೆಂಕಟಾಚಾರ್ಯ ಶಾಸ್ತ್ರಿಯು ಗೃಹಸ್ಥರು ಬರೆದ ಅಸ್ಪೃಶ್ಯ ವಿಚಾರವೆಂಬ ಪುಸ್ತಕದಲ್ಲಿ ಹರಿಜನರ ಸಂಖ್ಯೆಯು ೧ ಕೋಟಿ ೪೫ ಲಕ್ಷ ಇರುವದೆಂದು ಬರೆದಿದ್ದಾರೆ

ಒಂದೇ ದಿನ ೨ ಸಾವಿರ ಲಗ್ನಗಳು.

ರೋಮ ತಾ॥ ೨೬ ಇಟಲಿ ದೇಶದಲ್ಲಿ ಸಂತಾನ ಸಂಪತ್ತಿಯು ಕಡಿಮೆಯಾಗುತ್ತಿರುವದರಿಂದ ಅಲ್ಲಿಯ ಫ್ಯಾಸಿಸ್ಟ ಸರಕಾರದವರು ೩೦ನೇ ಆಕ್ಟೋಬರ ತಾರೀಖನ್ನು ವಿವಾಹೋತ್ಸವ ದಿನವೆಂದು ನಿಶ್ಚಯಿಸಿದ್ದು ಆ ದಿನ ೨೦೦೦ ಮದುವೆಗಳು ನಡೆಯತಕ್ಕವಿವೆ. ಪ್ರಾರ್ಥನೆಯಾದನಂತರ ಮದುಮಗ ಮದುಮಗಳ ಮೆರವಣಿಗೆ ಹೊರಡಿಸಲಾಗುವದು ಅಂದು ಮಿ॥ ಮುಸೋಲಿನಿಯವರು ಸ್ವತಃ ಕಾಣಿಕೆಗಳನ್ನರ್ಪಿಸ ವವರಿದ್ದಾರೆ

ಮುಂಬಯಿ ಇಲಾಖೆಯ 'ಪೋಸ್ಟಮನ್' ಪರಿಷತ್ತು

ಮುಂಬಯಿ ಇಲಾಖೆಯ ಆರನೆ ಪೋಸ್ಟಮನ್ ಮತ್ತು ಲೋವರ ಗ್ರೇಡ ಸ್ಟಾಫ್ ಪರಿಷತ್ತು ತಾ॥ ೨೫ನೇ ದಿನಸ ಹುಬ್ಬಳ್ಳಿಯ ಮಲ್ಲಿಕಾರ್ಜುನ ನಾಟಕ ಗೃಹದಲ್ಲಿ ಪ್ರಾರಂಭವಾಯಿತು ಮೊದಲು ಸ್ವಾಗತಾಧ್ಯಕ್ಷರಾದ ಪಿ. ಎಸ್. ಬಿ. ಕರಜಗಿ ವಕೀಲರ ಭಾಷಣವಾದ ಬಳಿಕ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಆರ್. ಆರ್. ಬಖಲೆ ಎಂ ಎಲ್. ಸಿ ಇವರ ಭಾಷಣವಾಯಿತು. ಇಲಾಖೆಯ ಯಾವತ್ತು ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಸ್ವಾಗತಪದ, ಅಧ್ಯಕ್ಷರ ಪರಿಚಯ ಅಧ್ಯಕ್ಷರ ಭಾಷಣ, ವಂದನೆ ಓದುವದು ಇವುಗಳು ಕ್ರಮವಾಗಿ ಕನ್ನಡ, ಉರ್ದು ಮತ್ತು ಮರಾಠಿ ಭಾಷೆಗಳಲ್ಲಿ ನಡೆದವು

ಜರ್ಮನಿಯಿಂದ ಹೊರಬಿದ್ದರ ಗತಿ

ಜರ್ಮನಿಯಿಂದ ಅನೇಕ ಜ್ಯೂಜನರು ಹೊರಗೆ ಹಾಕಲ್ಪಟ್ಟಿರುವರು. ಅವರಿಗೆ ಆಶ್ರಯ ಕೊಡಬೇಕೆಂದು ಜೇಮ್ಸ ಮ್ಯಾಕಡೋನಾಲ್ಡರವರ ಅಧ್ಯಕ್ಷತೆಯಲ್ಲಿ ಒಂದು ಸಂಸ್ಥೆ ಸ್ಥಾಪಿಸಲ್ಪಟ್ಟಿದೆ

ಹುಬ್ಬಳ್ಳಿ ಪತ್ರ.

ಶ್ರೀ ಸರಸ್ವತಿ ವಿದ್ಯಾರಣ್ಯ ವಾಚನಾಲಯದ ಜಯಂತ್ಯುತ್ಸವವು ನವ್ಹಂಬರ ತಿಂಗಳ ಮೊದಲನೆ ವಾರದಲ್ಲಿ ಜರುಗುವದಿದ್ದು, ಬೆಳಗಾವಿ ಕಾಲೇಜದ ಪ್ರಿನ್ಸಿಪಾಲರಾದ ಡಾ ಸಂದೀಮರ ಇವರು ಆ ದಿನದ ಕಾರ್ಯಕ್ರಮಕ್ಕೆ ಅಧ್ಯಕ್ಷರಾಗುವರೆಂದು ತಿಳಿಯುತ್ತದೆ.

ಇಲ್ಲಿಗೆ ಲಲಿತಕಲಾ ದರ್ಶ ಕಂಪನಿಯು ಬಂದಾಗ ವಿಜಯನಗರ ಸ್ಮಾರಕೋತ್ಸವಕ್ಕೆ ೨೫೦ ರೂಪಾಯಿಗಳ ವಾಗ್ದಾನ ಮಾಡಿದ್ದರಷ್ಟೆ. ಈಗ ತಾವು ಮಾಡಿದ ವಾಗ್ದಾನವನ್ನು ಮಾಡಿಲ್ಲವೆಂದು ಅವರು ಪ್ರಸಿದ್ಧಿಸಿರುವರಂತೆ! ಆದರೆ ಇದ್ದ ಸಂಗತಿಯು ಹೊರಬೀಳುವದೇದ. ತಿಳಿಯುತ ದೆ ಅಮೇಲೆ ಏನಾಗುವದೋ ನೋಡಬೇಕು

ಸರ್ ಕ್ಲೇರ ಲೀಜರು ಹೊರಟರು.

ಮುಂಬಯಿ ತಾ॥ ೨೮— ಹಿಂದುಸ್ಥಾನಕ್ಕೆ ಬಂದ ಬ್ರಿಟಿಶ ನಲಿನ ಶಿಷ್ಟ ಮಂಡಳದ ಅಧ್ಯಕ್ಷರಾದ ಸರ್ ವಿಲಿಯಮ್ ಕ್ಲೇರ ಲೀಜ ಇವರು ಈ ಹೊತ್ತಿನ ದಿವಸ ಎಸ್ ಎಸ್. ರಜಪುತಾನಾ ಹಡಗದಿಂದ ಇಂಗ್ಲಂಡಕ್ಕೆ ಹೊರಟು ಹೋದರು (ಅ ಪ್ರೆ ತಂತಿ)



ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಡಾ. ಕುಲಕರ್ಣೀಜ
ಲೆಬೋರೋಟರಿ ಮುಂಬೈ
ನಂಬರ ೧೨
ಬಾಟ್ಲಿ ಕಿ. ೧-೧೨-೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ
ರಾಮಬಾಣ ಔಷಧವು

ಗರಗು, ಬಿಳೀಸೆರಗು, ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ. ಬೆನ್ನು ಹಿಡಿಯೋಣ, ನಡಸೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದೆ.

ಬಿ. ಟಿ. ಕೆರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ.
೧೮-೬

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ.
“ ನೀಲಗಿರಿ ಎಣ್ಣೆ ”

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ಸಂಧಿವಾತ, ಎದೆಸೋವು, ತಲೆಸೋವು, ಛಳಿಜ್ವರ, ಮೊಣಕಾಲಿಗೆ ಬಾವು, ಕೆಮ್ಮು, ಕಿವಿ ಸೋರು ವಿಕೆ ಮತ್ತು ಇತರ ಎಲ್ಲ ಜಾತ್ರ ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ. ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕೆ. ಟೊಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ॥ ೨೫-೮-೩೩

ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ.

ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು. ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೯-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡೆಪೋ
ಕಲಾಪುರ ಪೇಟೆ ಗದಗ

ಸಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ. ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ. ಪಿ ಯಿಂದ ಕಳಿಸುತ್ತೇವೆ. ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ— **ರಾಘವ ಫಾರ್ಮಸಿ ಗೋಕಾಕ**
ಜಿ. ಬೆಳಗಾವ

ಕನ್ನಡಿಗನ ಚಂದಾ ವಿವರೆ.

		ಸ್ಥಳಿಕರಿಗೆ	ಪರಸ್ಥಳದವರಿಗೆ
	ತಿಂಗಳಿಗೆ	೧-೬-೬	೧-೧೨-೦
೩	ತಿಂಗಳಿಗೆ	೧-೪-೦	೨-೮-೦
೬	ತಿಂಗಳಿಗೆ	೨-೮-೦	೫-೦-೦
	ವರ್ಷಕ್ಕೆ	೦-೫-೦	೯-೦-೦

ಕರ್ನಾಟಕ ಟಾಯಿಮ್ಸ್.

ಸಂಪಾದಕರು:— **ಎಚ್. ಎಸ್. ಶಿವಲಿಂಗಶಾಸ್ತ್ರಿಗಳು.**

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ.

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಪಯುಕ್ತ ವಿಷಯಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವಿವಿಧ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು. ವಾರ್ಷಿಕ ವರ್ಗಣಿ— ಸ್ಥಳಿಕರಿಗೆ ರೂ. ೨—೧೨—೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ. ೩—೧೪—೦

ವ್ಯವಸ್ಥಾಪಕರು.
ಕರ್ನಾಟಕ ಟಾಯಿಮ್ಸ್ ಕಾರ್ಯಾಲಯ ಧಾರವಾಡ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು. ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ.



ಕಿರ್ಲೋಸ್ಕರ

ಕಲ್ಯಾಣ ಶೇಂಗಾ ಯಂತ್ರ

——:(o):——

ಒಂದು ತಾಸಿನಲ್ಲಿ ೭೫ ರಿಂದ ೮೦ ಚೀಲಗಳವರೆಗೆ ಶೇಂಗಾಗಳನ್ನು ಒಡೆಯುವದು. ಇದು ೫-೬ ಚೀಲ ಶೇಂಗಾ ಒಡೆಯುವದು. ಹೆಚ್ಚಿನ ಮಾಹಿತಿ ಬಗ್ಗೆ ಈ ಕೂಡಲೆ ಬರೆಯಿರಿ.

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್,
ಕಿರ್ಲೋಸ್ಕರವಾಡಿ, ಜಿ.(ಸಾತಾರಾ)

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ **ಶ್ರೀಕಂಠ ಕರ್ನಾಟಕ ಪುಸ್ತಕ ಭಾಂಡಾರಕ್ಕೇ ಬನ್ನಿರಿ.**

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम्॥ मनु

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್‌ಸ್ಯುರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನಸ್ಯುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ.ಕಂ.ಲಿ.
ಧಾರವಾಡ
ಇವರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:—ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಮಂಗಳವಾರ ಕಾರ್ತಿಕ ಶುದ್ಧ [illegible] ಶಕೆ ೧೮೫೫ ತಾ॥ [illegible]-೧೦-೩೩ [ಸಂಚಿಕೆ [illegible]

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿವೆ

(೧) ಬಿಳಿ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ [illegible] (೨) ಮ್ಯುನಿಚ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯಿ[illegible]ನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರೆ (೫) ಮೋಟಾರ ವ ಸ್ತು ಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನಿನ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ

ನಮ್ಮ ಹದ್ದು.—

[illegible]ಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ ೨ ಮದ್ರಾಸ ಇಲಾಖೆ (೩) ಮೈಸೂರ[illegible]ನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ [illegible] ತೀರ (೫) ನೈಋತ್ಯ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರು[illegible] ಸಬ್ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

ಸೂ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ [illegible]ಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಳಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಸನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ಜಾಹೀರ ನೋಟೀಸು.

ದಿ ಸದರ್ನ ಮರಾಠಾ ಅರ್ಬನ್ ಕೋ-ಆಪರೇಟಿವ್ಹ ಕ್ರೆಡಿಟ್ ಬ್ಯಾಂಕ ಲಿಮಿಟೆಡ್, [illegible] ಇವರು ಧಾರವಾಡ ಶಹರಿನ ಮಾರ್ಕೇಟಿನಲ್ಲಿ ವಖಾರದ ಸಲುವಾಗಿ ಒಂದು ಕಟ್ಟಡ ಕಟ್ಟುವವರಿದ್ದಾರೆ ಕಟ್ಟಡದ ಕಿಮ್ಮತ್ತು ರೂ ೧೧೦೦೦ ಆಗಬಹುದೆಂದು ಅಂದಾಜು [illegible]ಗಿದೆ ಸದರೀ ಕಟ್ಟಡವನ್ನು ಕಟ್ಟಲಿಚ್ಛಿಸುವವರು ಸನ್ ೧೯೩೩ನೇ ಇಸ್ವಿ ನವ್ಹಂಬರ ೧[illegible]ನೇ ತಾರೀಖಿನ ಸಂಜೆಯ ೫ ಘಂಟೆಯ ಒಳಗಾಗಿ, ಬ್ಯಾಂಕಿಗೆ ತಲುಪುವಂತೆ [illegible] ಮಾಡಿ ಲಖೋಟಿಯ ಮೇಲೆ, ವಖಾರದ ಟೆಂಡರೆಂದು ಬರೆದು ಕಳುಹಿಸಿ ಕೊಡ[illegible] ಮತ್ತು ಅದರ ಕೂಡ ೧೦೦ ರೂ. ಠೇವು ಬ್ಯಾಂಕಿನಲ್ಲಿಡಬೇಕು. ನಾಮಂಜೂರಾದ ದಾರರಿಗೆ, ಬಡ್ಡಿ ಇಲ್ಲದೆ ಠೇವಿನ ಹಣ ಪರತ ಕೊಡುವದರಲ್ಲಿ ಬರುವದು.

ಕಟ್ಟಡದ ನಕಾಶೆಯನ್ನು, ಅಂದಾಜು ಪಟ್ಟಿಯನ್ನು, ಕಾಂಟ್ರ್ಯಾಕ್ಟದ ಕರಾರ ಪತ್ರಗ[illegible] ನೋಡಲಿಚ್ಛಿಸುವವರು, ಬ್ಯಾಂಕಿನಲ್ಲಿ, ಬ್ಯಾಂಕಿನ ವೇಳೆಯಲ್ಲಿ ಬಂದು ನೋಡ[illegible]ಹುದು.

Sd/- G A Hiremath
ಧಾರವಾಡ ಚೇರಮನ್,
[illegible]-೧೦-೧೯೩೩. ದಿ ಸ ಮ. ಅ. ಕೊ ಕ್ರೆ ಬ್ಯಾಂಕ ಲಿ ಧಾರವಾಡ

[illegible]ದ ಹಿತವನ್ನು ಸಾಧಿಸುವ ಪ್ರಮುಖ ರಾಷ್ಟ್ರೀಯ ಸಚಿತ್ರ ವಾರಪತ್ರಿಕೆ

'ಅರುಣೋದಯ'

ಸಂಪಾದಕರು - ಶ್ರೀ ವೆಂಕಟೇಶ ಶ್ರೀನಿವಾಸ ಪಂಡಿತ ಎಲ್‌ಎಲ್ ಬಿ

ವಾ ಚ. ೨-೮-೦ ಮ. ಆ ೨-೧೨-೦ ವ್ಹಿ ಪಿ

ಇದರಲ್ಲಿ ಸುಪ್ರಸಿದ್ಧ ವಿದ್ವಾನ್ ಲೇಖಕರ ವಿವಿಧ ವಿಷಯಗಳ ಮೇಲೆ ವಿಚಾರ ಪರಿ[illegible]ದ ಲೇಖನಗಳು ಬರುವವಲ್ಲದೆ ದೇಶವಿದೇಶಗಳ ಮಹತ್ವದ ಸಂಗತಿಗಳು, ಪ್ರತಿ [illegible]ಯೂ ಕೊಡಲ್ಪಡುವವು ಉದ್ಬೋಧಕವಾದ ಸಣ್ಣ ಸಣ್ಣ ಕಥೆಗಳೂ ರಸಭರಿತವಾದ [illegible] ಚಿತ್ರಪ್ರಪಂಚದೊಳಗಿನ ವಿಚಿತ್ರ ಸಂಗತಿಗಳೂ, ಸೃಷ್ಟಿ ಚಮತ್ಕಾರಗಳೂ [illegible] ಶೋಧಗಳೂ ಕಾಲಕಾಲಕ್ಕೆ ಕೊಡಲ್ಪಡುವವು ಇಡೀ ಕರ್ನಾಟಕದಲ್ಲಿ ಇದರ [illegible]ವದರಿಂದ ವ್ಯಾಪಾರಸ್ಥರಿಗೆ ಪ್ರಚಾರಕ್ಕೆ ಉತ್ತಮ ಸಾಧನ ಕಾಯಮ ಜಾಹೀ[illegible]ರರಿಗೆ ವಿಶೇಷ ಸವಲತ್ತು ದೊರೆಯುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ [illegible] ಬರೆದು ಕೇಳಿಕೊಳ್ಳಬೇಕು.

ಮ್ಯಾನೇಜರ
'ಅರುಣೋದಯ' ಬೆಳಗಾವ

ಹುಬ್ಬಳ್ಳಿ ಮ್ಯುನಸಿಪಾಲಟಿಯ ಕಾರಭಾರ

ಮನಬಂದಂತೆ ವೆಚ್ಚ

ಕರಕೊಡುವ ವರಿಗೆ ಹಿತವಿಲ್ಲ ಹುಬ್ಬಳ್ಳಿ ಮುನಸಿಪಾಲಟಿಯ ಕಾರಭಾರವು ಕರಕೊಡುವವರ ದೃಷ್ಟಿಯಿಂದ ಹಿತಕರವಿಲ್ಲವೆಂದು ಧಾರಾಳವಾಗಿ ಹೇಳಬಹುದು ಇವರ ಆರೋಗ್ಯದ ವ್ಯವಸ್ಥೆಯನ್ನು ನೋಡಿದವರ ಇವರಿಗೆ ಆರೋಗ್ಯ ಶಾಸ್ತ್ರದ ಪ್ರಾಥಮಿಕ ಶಿಕ್ಷಣವು ಕೂಡ ಇದ್ದಿಲ್ಲ ವೆಂದು ಹೇಳಲು ಬರುವಂತಿಲ್ಲ ದಾರಿಗಳು ಒಡೆದ ಹರಿಗಡೆದರೂ ಅವು ಖಡಿಗಳನ್ನು ಕ[illegible]ಣುವದಿಲ್ಲ ಸಂಜೆಯ ದೀಪಗಳಿಲ್ಲ ವಿದ್ಯುತ ಶಕ್ತಿಯು ಮುಗ್ಗಲಿಲ್ಲಿದ್ದರೂ ಅದರ ಉಪಯೋಗವನ್ನು ಮಾಡಿಕೊಳ್ಳುವ ಇಚ್ಛೆಯು ಅವರಿಗಿಲ್ಲ ಕೆರೆಯು ತುಂಬಿ ಕೋಡಿಯೊಡೆದರೂ ಸಾಕಷ್ಟು ನೀರು ದೊರೆಯುವದಿಲ್ಲ. ಈಗಿನಂಥ ಕಷ್ಟದ ಕಾಲದಲ್ಲಿ ಒಂದು ಕಾಸು ದೊರಕಿಸುವದು ಎಷ್ಟು ಕಠಿಣವಾಗಿದೆಯೆಂಬುದು ಎಲ್ಲರಿಗೂ ಗೊತ್ತೇ ಇದೆ ಇಂಥ ಕೆಟ್ಟಕಾಲದಲ್ಲಿ ಕೂಡ ಕರಕೊಡುವವರು ಹೊಟ್ಟೆಯನ್ನು ಕಟ್ಟಿ ಕೊಟ್ಟ ಕರದ ಹಣವನ್ನು ಮುನಸಿಪಾಲಟಿಯವರು ಹೇಗೆ ಮನಸೋಕ್ತ ವೆಚ್ಚಮಾಡುತ್ತಾರೆಂಬುದು ಕೆಳಗಿನ ಉದಾಹರಣೆಗಳಿಂದ ಸ್ಪಷ್ಟವಾಗುತ್ತದೆ

ವಕೀಲರ ಫೀ

ಹೆಚ್ಚಿನ ಫೀ ತಿರುಗಿ ಬರಬೇಕು— ವಕೀಲರಿಗೆ ದೊರೆಯತಕ್ಕ ಫೀ ದರವು 'ಪ್ಲೀಡರ್ಸ ಆ್ಯಕ್ಟ' ನಲ್ಲಿ ನಮೂದಿಸಿದೆ ಅದಕ್ಕೂ ಹೆಚ್ಚಿನ ಫೀ ದೊರೆಯಬೇಕಾದಲ್ಲಿ ಅವರು ಪಕ್ಷಕಾರರ ಸಂಗಡ ಕರಾರು ಮಾಡಿ ಆ ಕರಾರದಂತೆ ಫೀಯನ್ನು ತಕ್ಕೊಳ್ಳಬಹುದು ಅಂತಹ ಕರಾರವಿಲ್ಲದಿದ್ದರೆ ವಕೀಲರ ಕಾನೂನಿನಲ್ಲಿ ಕಾಣಿಸಿದ್ದರಕಿಂತಲೂ ಹೆಚ್ಚಿನ ಫೀಯನ್ನು ಅವರಿಗೆ ತೆಗೆದುಕೊಳ್ಳಲಿಕ್ಕೆ ಬರುವದಿಲ್ಲ. ಅಂಥ ಕರಾರು ಇಲ್ಲದ ಹುಬ್ಬಳ್ಳಿ ಮುನಸಿಪಾಲಟಿಯ ವಕೀಲರು ಮುನಸಿಪಾಲಟಿಯ ಕಡೆಯಿಂದ ಹೆಚ್ಚಿನ ಫೀಯನ್ನು ತಕ್ಕೊಂಡರೆಂದೂ ಮತ್ತು ಆ ಹೆಚ್ಚಿನ ಫೀ ಹಣವನ್ನು ಅವರ ಕಡೆಯಿಂದ ತಿರುಗಿ ತೆಗೆದುಕೊಳ್ಳಬೇಕೆಂದೂ ಸರಕಾರೀ ಲೆಕ್ಕ ಪರೀಕ್ಷಕರು (ಆಡಿಟರ್ಸ) ತಿಳಿಸಿದ್ದಾರಂತೆ

ಇಂಟೆರ ಪ್ಲೀಡರ ದಾವೆಗಳು— ೧೯೩೧-೩೨ ರಲ್ಲಿ ಮುನಸಿಪಾಲಟಿಯವರು ಕೋರ್ಟ ಖರ್ಚಿಗಾಗಿ ವಿಶೇಷತಃ ಇಂಟೆರ ಪ್ಲೀಡರ ದಾವೆಗಳಿಗಾಗಿ ಘನವಾಗಿ ಹಣ ವೆಚ್ಚಮಾಡಿದರು ಆದರೆ ಈ ಇಂಟೆರ ಪ್ಲೀಡರ ದಾವೆಯೆಂದರೆ ಏನೆಂದು ಹಲವರು ಪ್ರಶ್ನೆ ಮಾಡಬಹುದು ದಾರಿಯನ್ನು ಅಗಲು ಮಾಡುವದಕ್ಕಾಗಿ ಅಥವಾ ಬೇರೆ ಕೆಲಸಕ್ಕಾಗಿ ನಿನ್ನ ಮನೆಯನ್ನು ಇಂತಿಷ್ಟು ದರದಂತೆ ಹಣಕೊಟ್ಟು ತಕ್ಕೊಳ್ಳುತ್ತೇವೆಂದು ಒಬ್ಬ ಕಲ್ಲಪ್ಪನೆಂಬವನಿಗೆ ನೋಟೀಸು ಕೊಟ್ಟು ಅವನ ಮನೆಯನ್ನು ಮುನಸಿಪಾಲಟಿಯವರು ತಕ್ಕೊಂಡರೆಂದು ತಿಳಿಯಿರಿ ಮುಂದೆ ನಿಂಗಪ್ಪನೆಂಬ ಮತ್ತೊಬ್ಬನು ಕಲ್ಲಪ್ಪನಿಗೆ ಕೊಡತಕ್ಕ ಹಾನಿಯ (ಕಾಂಪನ್ಸೇಶನ್) ಹಣದ ಕೆಲವು ಭಾಗವು ತನಗೆ ದೊರೆಯಬೇಕೆಂದು ಮುನಸಿಪಾಲಟಿಗೆ ತಿಳಿಸುತ್ತಾನೆ ಆಗ್ಗೆ ಕಲ್ಲಪ್ಪನ ಹಣವನ್ನು ಕೇಳಹೋದರೆ 'ನಿಂಗಪ್ಪನ ನಿನಗೆ ದೊರೆಯುವ ಹಾನಿಯ ಹಣದಲ್ಲಿ ತನಗೂ ಕೆಲವು ಭಾಗವು ದೊರೆಯಬೇಕೆಂದು ತಿಳಿಸಿದ್ದಾನೆಂದೂ ನೀವಿಬ್ಬರೂ ನಿಮ್ಮ ವ್ಯಾಜ್ಯವನ್ನು ಕೋರ್ಟಿನಲ್ಲಿ ತೀರಿಸಿಕೊಂಡು ಬಂದ ಹೊರತು ಹಣವು ದೊರೆಯಲಾರದೆಂತಲೂ ಮುನಸಿಪಾಲಟಿಯವರು ಅವನಿಗೆ ತಿಳಿಸುತ್ತಾರೆ ಆದರೆ ಕಲ್ಲಪ್ಪ ಹಾಗೂ ನಿಂಗಪ್ಪ ಇವರಿಬ್ಬರ ಒಳಿಯಲ್ಲಿ ನ್ಯಾಯವಾಗಿ ವೆಚ್ಚ ಮಾಡಲಿಕ್ಕೆ ಹಣವಿರುವದಿಲ್ಲ ಆದ್ದರಿಂದ "ಇಬ್ಬರ ನ್ಯಾಯ ಮೂರನೆಯವನಿಗೆ ಆಯು" ವೆಂಬಂತೆ ಅವರಿಬ್ಬರ ನ್ಯಾಯವು ಮುನಸಿಪಾಲಟಿಯ ವಕೀಲರ ಸುಗ್ಗಿಗೆ ಮಾತ್ರ ಕಾರಣವಾಗುತ್ತದೆ. ಯಾಕಂದರೆ ಮುನಸಿಪಾಲಟಿಯವರು ಕೊಡತಕ್ಕ ಹಣದಲ್ಲಿ ಕಲ್ಲಪ್ಪ—ನಿಂಗಪ್ಪ ಇವರು ತಮ್ಮಿಬ್ಬರ ಹಕ್ಕು ಇದೆಯೆಂದು ಎನ್ನುವದರಿಂದ ದಿವಾಣಿ ಕೋರ್ಟಿನವರು ಅದನ್ನು ನಿರ್ಣಯಿಸಬೇಕೆಂದು ಮುನಸಿಪಾಲಟಿಯವರು ದಾವೆಯನ್ನು ಹಚ್ಚುತ್ತಾರೆ ಈ ದಾವೆಗೆ 'ಇಂಟರ ಪ್ಲೀಡರ ಸೂಟ' ಎಂದು ಹೆಸರು

೧೫ ರು ಕೊಡುವಲ್ಲಿ ೫೦ ರು. ಫೀ ಕೊಟ್ಟರು.

ಇಂತಹ ಇಂಟೆರ ಪ್ಲೀಡರ ದಾವೆಗೆ ೧೫ ರು. ಫೀ ಯೆಂದು ಕಾಯದೆಯು ಸಾರುತ್ತದೆ ಕೋರ್ಟಿನವರು ಕೊಡಿಸುವದೂ ಅಷ್ಟೇ ಫೀ ಬಡೆದಾಡುವವರು ಕಲ್ಲಪ್ಪ-ನಿಂಗಪ್ಪ ಆದರಲ್ಲಿ ಮುನಸಿಪಾಲಟಿಯ ವಕೀಲರಿಗೆ ಕೆಲಸವೇ ಇಲ್ಲ. ಹೀಗಿದ್ದರೂ ಕೂಡ ಮುನಸಿಪಾಲಟಿಯ ವಕೀಲರಾದ ಶ್ರೀ ಮಾಳಗಿ ಇವರಿಗೆ ಇಂತಹ ಒಂದೊಂದು ದಾವೆಗೆ ೫೦ ರುಪಾಯಿಯಂತೆ ಫೀ ಮುನಸಿಪಾಲಟಿಯವರಿಂದ ದೊರೆಯಿತು। ಇಂತಹ ದಾವೆಗಳನ್ನು ಹೊಸ ವಕೀಲರು ೧೫ ರುಪಾಯಿಗಳಿಗೆ ನಡಿಸಬಹುದಾಗಿತ್ತು ಅದನ್ನು ನಡಿಸಲಿಕ್ಕೆ ನುರಿತ ವಕೀಲರ ಅವಶ್ಯಕತೆಯೇ ಇದ್ದಿಲ್ಲ ಹೀಗಿದ್ದಾಗ್ಯೂ ೧೫ ರುಪಾಯಿ ಕೊಡುವಲ್ಲಿ ೫೦ ರುಪಾಯಿ ಕೊಟ್ಟು ಮುನಸಿಪಾಲಟಿಯವರು ಶ್ರೀ ಮಾಳಗಿ ವಕೀಲರನ್ನು ನಿಯಮಿಸಿದ್ದೇಕೆ? (ಮುಂದೆ ಸಾಗುವದು)

—ಕರ ಕೊಡುವ

ಹುಬ್ಬಳ್ಳಿ ಪತ್ರ.

ಆಕ್ಟೋಬರ ೩೧ ಹಾಗು ನವ್ಹೆಂಬರ ೧ ಈ ಎರಡು ದಿವಸ ಹಳೇ ಹುಬ್ಬಳ್ಳಿಯಲ್ಲಿರುವ ಶ್ರೀ. ಕೃಷ್ಣೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಗಳವರ ಆರಾಧನೆ ನಡೆದು ವೇದ, ಸಂಧ್ಯಾ, ಸಂಸ್ಕೃತ ಮುಂತಾದ ವಿಷಯಗಳಲ್ಲಿ ಪರೀಕ್ಷೆ ತೆಗೆದು[illegible]ಳ್ಳಲ್ಪಟ್ಟ ಬದು ಮತ್ತು ಇನಾಮು ಕೊಡಲ್ಪಟ್ಟವು. ಶ್ರೀ ಸಾವಕಾರ ಮಾಸ್ತರರು ಪ್ರ[illegible]ಕ್ಷ ಬಹುಮಾನ ನೂರು ತೋರಿಸಿದವರಿಗೆ [illegible] ಇಟ್ಟಿರುವರ

ನವ್ಹೆಂಬರ ೬ನೇ ತಾರೀಖಿಗೆ ನೇ. ಸಾ. ಗವ್ಹರ್ನರರು ಇಲ್ಲಿಗೆ ಬರುವರು ಆಗ ಇಲ್ಲಿಯ ರೆಲ್ವೆ ವರ್ಕ್‌ಶಾಪ್ ಹಾಗು ಸೆಟಲ್‌ಮೆಂಟಗಳಿಗೆ ಹೋಗುವರು.

ಕನ್ನಡಿಗ

ಮಂಗಳವಾರ ತಾರೀಖು ೩೧-೧೦-೧೯೩೩

ಕರ್ನಾಟಕವೂ, ಕಾಂಗ್ರೆಸ್ಸಿನ ಧೋರಣವೂ.

ಹಿಂದಿನ ಎರಡು ಸಂಚಿಕೆಗಳಲಿ ಕಾಂಗ್ರೆಸ್ಸಿನ ಸಂಬಂಧವಾಗಿ ಜನತೆಯು ಕರ್ತವ್ಯವೇನೆಂಬುದನ್ನೂ ಜನತೆಯ ಸಂಬಂಧವಾಗಿ ಕಾಂಗ್ರೆಸ್ಸಿನ ಕರ್ತವ್ಯವೇನೆಂಬುದನ್ನೂ ವಿವೇಚಿಸಿದೆವು. ಇಂದು, ಈಗಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನ ಕಾರ್ಯಕ್ರಮದ ವಿಷಯವಾಗಿ ನಮ್ಮ ಕರ್ನಾಟಕವು ಯಾವ ತರಹದ ಧೋರಣವನ್ನು ಸ್ವೀಕರಿಸುವುದು ಉಚಿತವಾದುದೆಂಬ ಬಗ್ಗೆ ನಮ್ಮ ಅಭಿಪ್ರಾಯವೇನಿರುತ್ತದೆಂಬುದನ್ನು ಹೇಳುವೆವು. ಮುಖ್ಯತಃ ನಾವು ನೆನಪಿನಲ್ಲಿಡತಕ್ಕ ಮೊದಲನೆಯ ಮಾತೇನೆಂದರೆ— ಕಾಂಗ್ರೆಸ್ಸಿನ ಸಂಬಂಧವಾಗಿ ಪ್ರಾಂತಗಳು ಮಾಡತಕ್ಕ ಕರ್ತವ್ಯಗಳು ಮೂರು ವಿಧವಾಗಿವೆ. ಒಂದನೆಯದು, ಕಾಂಗ್ರೆಸ್ಸಿನ ಗೊತ್ತುವಳಿಗಳನ್ನು ಆಯಾ ಪ್ರಾಂತದವರು ಆದಷ್ಟು ಮಟ್ಟಿಗೆ ಬಳಕೆಯಲ್ಲಿ ತರುವುದು. ಎರಡನೆಯದು, ಕರ್ನಾಟಕ ಪ್ರಾಂತದ ರಾಜಕೀಯ ಪರಿಸ್ಥಿತಿಯನ್ನು ನಿಜವಾದ ಪರಿಸ್ಥಿತಿಯನ್ನು ಅದು ಇಲ್ಲಿಯ ಆಯಾ ಕಾಲದ ಕಾಂಗ್ರೆಸ್ಸಿನ ಕಾರ್ಯಕರ್ತರಿಗೆ ಅನುಕೂಲವಾದುದೇ ಇರಲಿ, ಇಲ್ಲದಿರಲಿ, ಅದನ್ನು ಇದ್ದಕ್ಕಿದ್ದಂತೆ ಪ್ರಾಮಾಣಿಕವಾಗಿ ಕಾಂಗ್ರೆಸ್ಸಿನ ಮುಂದೆ ಇಡುವುದು. ಮೂರನೆಯದು ಕಾಂಗ್ರೆಸ್ಸಿನ ಧೋರಣಕ್ಕೆ ಪೋಷಕವಾಗುವಂತೆ, ಆಯಾ ಪ್ರಾಂತಗಳ ವಿಶಿಷ್ಟ ರಾಜಕೀಯ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಕೈಕೊಳ್ಳಬೇಕಾದ ಪ್ರಾಂತೀಯ ಚಳವಳಿಗಳನ್ನು ಕೈಕೊಳ್ಳುವುದು. ಈ ಮೂರು ಬಗೆಯ ಕರ್ತವ್ಯಗಳಲ್ಲಿ ಮೊದಲನೆಯದೊಂದನ್ನೇ ಈಗ ಕಾಂಗ್ರೆಸ್ಸಿನ ಕಾರ್ಯಕರ್ತರು ಮಾಡುತ್ತಿರುವರೆಂದೂ, ಎರಡನೆಯ ಕರ್ತವ್ಯದ ಕಡೆಗೆ ಸಾಕಷ್ಟು ಲಕ್ಷ್ಯವನ್ನು ಪೂರೈಸುತ್ತಿರುವದಿಲ್ಲವೆಂದೂ, ಮೂರನೆಯದನ್ನು ಅದಕ್ಕೂ ಹೆಚ್ಚಿಗೆ ದುರ್ಲಕ್ಷಿಸಿರುವರೆಂದೂ ನಮ್ಮ ಅಭಿಪ್ರಾಯ. ಈ ವಿಷಯಕ್ಕೆ ಕೆಲವರಲ್ಲಿ ಮತಭೇದವಿರಬಹುದು. ಆದರೆ ವೃತ್ತಪತ್ರದ ಸಂಪಾದಕರೆಂದು ನಾವು ನಮಗೆ ತೋರಿದ ಅಭಿಪ್ರಾಯವನ್ನು ಆದಷ್ಟು ವಿನಯಪೂರ್ವಕವಾಗಿ ಜನತೆಯ ಮುಂದಿಡುವುದು ನಮ್ಮ ಕರ್ತವ್ಯವೆಂದು ನಾವು ಭಾವಿಸುತ್ತೇವೆ.

ಇರಲಿ ಸದ್ಯಕ್ಕೆ ಕರ್ನಾಟಕವು ಕಾಂಗ್ರೆಸ್ಸಿನ ಸಂಬಂಧವಾಗಿ ಯಾವ ಧೋರಣವನ್ನು ಸ್ವೀಕರಿಸಬೇಕೆಂಬುದನ್ನು ಹೇಳುವ. ಇದು ನಾವು ಮೇಲೆ ಹೇಳಿದ ಮೂರು ವರ್ಗಗಳಲ್ಲಿ ಎರಡನೆಯ ವರ್ಗದಲ್ಲಿ ಬೀಳುತ್ತದೆ. ಅಂದರೆ ಕರ್ನಾಟಕದ ನಿಜವಾದ ಅಭಿಪ್ರಾಯವನ್ನೂ ಇಲ್ಲಿಯ ನಿಜವಾದ ಪರಿಸ್ಥಿತಿಯನ್ನೂ ಕಾಂಗ್ರೆಸ್ಸಿನಲ್ಲಿ ಪ್ರತಿಬಿಂಬಿಸುವುದಕ್ಕೆ ಯತ್ನಿಸುವುದು ಮಹತ್ವದ ಕರ್ತವ್ಯವಾಗಿದೆ. ಮೊದಲನೆಯ ಕರ್ತವ್ಯವನ್ನು ಬೆಳಗಾಂವಿಯ ಕೆಲವು ಕಾಂಗ್ರೆಸ್ಸಿನ ಕಾರ್ಯಕರ್ತರು ಸಮಾಧಾನಕಾರಕವಾಗಿ ಜರುಗಿಸಿದಂತೆ, ಎರಡನೆಯದರ ವಿಷಯದಲ್ಲಿ ಅವರು ತಮ್ಮ ಕರ್ತವ್ಯವನ್ನು ಅಷ್ಟು ಸಮಾಧಾನಕಾರಕವಾಗಿ ಜರುಗಿಸಲಿಲ್ಲವೆಂದು ನಮಗೆ ತೋರುತ್ತದೆ. ಏಕೆಂದರೆ, ಆ ಸಭೆಯ ಗೊತ್ತುವಳಿಯಲ್ಲಿ ಕರ್ನಾಟಕವು ಈಗಿನ ಸ್ಥಿತಿಯಲ್ಲಿ ಮುಂದೆ ಯಾವ ಧೋರಣವನ್ನು ಸ್ವೀಕರಿಸಬೇಕೆಂಬುದು ಚೆನ್ನಾಗಿ ಒಡಮೂಡಿಲ್ಲ. ಇಲ್ಲಿ ಆ ವಿಷಯವಾಗಿ ನಾವು ನಮ್ಮ ಅಭಿಪ್ರಾಯವನ್ನು ಕೊಡುವೆವು.

ಕಾನೂನುಭಂಗ ಚಳವಳಿಯನ್ನು ನಿಲ್ಲಿಸುವ ವಿಷಯದಲ್ಲಿ ಕಾಂಗ್ರೆಸ್ಸಿನ ಕಾರ್ಯಕರ್ತರುಗಳಲ್ಲಿ ಅಭಿಪ್ರಾಯ ಏನಿರುತ್ತದೆಂಬುದನ್ನು ಹೇಳುವುದು ಹೊರಗಿನ್ದ ನಮಗೆ ಶಕ್ಯವಿಲ್ಲ. ಆದರೆ ನಮಗೆ ತೋರುವುದೇನೆಂದರೆ ಕಾಂಗ್ರೆಸ್ಸು ಇಲ್ಲಿಯವರೆಗೆ ಪರಿಶ್ರಮಪಟ್ಟು ಮುಂದೆ ಇಡುತ್ತ ಹೋಗಿದ್ದ ಹೆಜ್ಜೆಗಳನ್ನು ಆದಷ್ಟು ಮಟ್ಟಿಗೆ ಹಿಂದಕ್ಕೆ ಸರಿಸದಿರುವುದಕ್ಕೆ ಪರಿಶ್ರಮಪಟ್ಟು ಪ್ರಯತ್ನಿಸಬೇಕು. ಅಂದರೆ, ಕಾನೂನುಭಂಗದ ಅಸ್ತ್ರವನ್ನು ಪೂರ್ಣವಾಗಿ ಬದಿಗಿಟ್ಟು ಕಾನೂನುಮಂಡಳ ಪ್ರವೇಶದ [illegible] ಎತ್ತಿ ಹಿಡಿಯುವುದು ಸರಿಯಾದುದಲ್ಲ. ಈಗ ಕಾನೂನುಭಂಗದ ಬುದಕ್ಕಿರುವ ತತ್ವವು ಪೂರ್ಣವಾಗಿ ನಿರ್ನಾಮವಾದರೂ, ಸಂಪೂರ್ಣವಾಗಿ [illegible] ಸಮಾಧಾನವೂ ಆಗಿರುತ್ತದೆಂದು ನಮಗೆ ತೋರುವುದಿಲ್ಲ. ಆದರೆ [illegible] ಇದ್ದಲ್ಲಿಯೇ ನಿಲ್ಲಿಸುವುದಕ್ಕಾದರೂ ಯತ್ನಿಸಿರಿ. ಈ ದೃಷ್ಟಿಯಿಂದ ವಿಚಾರಮಾಡಲು, ಕಾಂಗ್ರೆಸ್ಸಿನವರು ವೈಯಕ್ತಿಕ ಕಾಯದೆಭಂಗವನ್ನು ನಿಲ್ಲಿಸುವುದು ಸರಿಯಾಗದೆಂಬುದು ಸ್ಪಷ್ಟವಾಗುತ್ತದೆ. ಈ ಇಂಥ ಧೋರಣದಲ್ಲಿಯೇ ಯಾರಿಗೆ ಸಂಪೂರ್ಣವಾಗಿ ಅವಿಶ್ವಾಸವಿರುತ್ತದೆಯೋ ಅಂಥವರು ಇದನ್ನು ಸ್ವೀಕರಿಸಲೇಬೇಕೆಂದು ನಾವು ಹೇಳುವುದಿಲ್ಲ. ಅಂಥವರು ಈ ಕಾಂಗ್ರೆಸ್ಸಿನ ಧೋರಣವನ್ನು ವಿರೋಧಿಸುವುದು ಅನ್ಯಾಯವೂ ಅಲ್ಲ. ಆದರೆ, ಯಾರಿಗೆ ಇನ್ನೂ ಕಾನೂನುಭಂಗ ಚಳವಳದಲ್ಲಿ ವಿಶ್ವಾಸವಿದೆಯೋ, ಮತ್ತು ಯಾರು ಕೇವಲ ಈಗಿನ ಸರಕಾರದ ದಬ್ಬಾಳಿಕೆಗೆ ಬೆದರಿ ಕಾಂಗ್ರೆಸ್ಸು ಹಿಂದಕ್ಕೆ ಸರಿಯಬೇಕೆಂದು ಹೇಳುವರೋ ಅಂಥವರ ವಿಷಯವಾಗಿ ಮಾತ್ರ ನಾವು ಆಕ್ಷೇಪವನ್ನೆತ್ತದೆ ಇರಲಾರೆವು. ವೈಯಕ್ತಿಕ ಕಾಯದೆಭಂಗವು ಸಾಮುದಾಯಿಕ ಕಾಯದೆಭಂಗಕ್ಕೆ ಪೂರ್ವಸಿದ್ಧತೆಯು ಒಂದು ಪ್ರಕಾರದ ಶಿಕ್ಷಣವು ಆದೇ. ಸರ್ವಸ್ವೀಯೆಂದೂ ನಾವು ಹೇಳುವುದಿಲ್ಲ. ಇಂದಿಲ್ಲ ನಾಳೆ, ಸಾಮುದಾಯಿಕ ಕಾಯದೆಭಂಗದ ಮೂಲಕವೇ ಸ್ವರಾಜ್ಯವು ಸಿಗುತ್ತದೆಂದು ನಿಮಗೆ ವಿಶ್ವಾಸವಿದ್ದರೆ, ಯಾರಿಗೆ ಈ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣವನ್ನು ಹೊಂದಬೇಕೆಂದಿರುವುದೋ ಅವರು ಈ ವೈಯಕ್ತಿಕ ಕಾನೂನುಭಂಗ ಶಾಲೆಯಲ್ಲಿ ಶಿಕ್ಷಣವನ್ನು ಹೊಂದಲಿ, ಅಲ್ಲದೆ ಇದನ್ನು ಜೀವಂತವಿಡುವುದರಿಂದ, ರಾಷ್ಟ್ರದ ಉಷ್ಣತಾಮಾಪಕ ಯಂತ್ರದ ಪಾರಜವು ಎಲ್ಲಿಯವರೆಗೆ ಏರಿರುತ್ತದೆಂಬುದನ್ನು ತಿಳಿಯಲೂ ಅವಕಾಶವಾಗುತ್ತದೆ. ಆದರೆ ಇದಾಯಿತು ತತ್ವವಿವೇಚನ. ಇನ್ನು ಕರ್ನಾಟಕದ ಜನತೆಯ ಮನಸ್ಸು ದಬ್ಬಾಳಿಕೆಯಿಂದ ಈಗ ತೀರ ಕುಗ್ಗಿಯೇ ಹೋಗಿದ್ದರೆ ಕೇವಲ ಆಡಂಬರಕ್ಕಾಗಿ ವೈಯಕ್ತಿಕ ಕಾನೂನುಭಂಗಕ್ಕೆ ಕರ್ನಾಟಕವು ಸಿದ್ಧವಿರುತ್ತದೆಂದು ಹೇಳುವದರಲ್ಲಿ ವಿಶೇಷ ಅರ್ಥವಿಲ್ಲ. ಅದು ಹೇಗಿದೆ ಎಂಬುದನ್ನು ನಿರ್ಣಯಿಸುವುದು ನಮಗೆ ಶಕ್ಯವಿಲ್ಲ. ಆದರೆ ನಮಗೆ ತೋರುವುದೇನೆಂದರೆ ಕರ್ನಾಟಕವು ವೈಯಕ್ತಿಕ ಕಾನೂನುಭಂಗವನ್ನು ಕಾಂಗ್ರೆಸ್ಸಿನವರು ಎತ್ತಿ ಹಿಡಿಯಬೇಕೆಂದು ಕಾಂಗ್ರೆಸ್ಸಿಗೆ ಸಲಹೆಕೊಡುವುದಾದರೆ ಕರ್ನಾಟಕದಲ್ಲಿ ಕನಿಷ್ಠಪಕ್ಷಕ್ಕೆ ೫೦-೬೦ ಕಾಂಗ್ರೆಸ್ಸಿನ ಪ್ರಸಿದ್ಧ ಕಾರ್ಯಕರ್ತರು ತಾವು ಪ್ರತ್ಯಕ್ಷ ಕಾರ್ಯಮಾಡಲು ಸಿದ್ಧರಾಗಿರಬೇಕು. ಅಂದರೆ, ಅವರ ಉದಾಹರಣೆಯಿಂದ ಹಳ್ಳಿ ತರುಣರು ಹುರುಪುಗೊಂಡು ಮುಂದೆ ಬರಬರುತ್ತ ರಾಷ್ಟ್ರವು ಸಾಮುದಾಯಿಕ ಕಾಯದೆಭಂಗಕ್ಕೆ ಸಿದ್ಧವಾಗಬಹುದು. ಅಲ್ಲದೆ ಈ ಚಳವಳದಲ್ಲಿ ಮಧ್ಯವರ್ಗಕ್ಕಿಂತಲೂ ಕೆಳಗಿನ ಮತ್ತು ಮೇಲಿನ ವರ್ಗದ ಕೆಲವು ಜನರೇ ಹೆಚ್ಚಿಗೆ ಸೇರುವ ಸಂಭವವಿರುತ್ತದೆಂಬುದನ್ನು ಲಕ್ಷ್ಯದಲ್ಲಿ ತಂದು ಯಾರಿಗೆ ಈ ಕಾರ್ಯಕ್ರಮದಲ್ಲಿ ಸಂಪೂರ್ಣ ವಿಶ್ವಾಸವಿರುತ್ತದೆಯೋ ಮತ್ತು ಯಾರು ಕೇವಲ ವ್ಯಾವಹಾರಿಕ ಅಥವಾ ಆರ್ಥಿಕ ಅಡಚಣಿಗಳಿಗೋಸ್ಕರವೇ ಇದರಲ್ಲಿ ಸೇರಲು ಹಿಂಜರಿಯುತ್ತಿರುವರೋ ಅಂಥ ವರ್ಗವು ಇಂದಿಲ್ಲ ನಾಳೆ ಮುಂದೆ ಬರುವ ಯೋಜನೆಯನ್ನು ಮಾಡಬೇಕು. ನಾವು ಮೇಲೆ ಹೇಳಿದಂಥ ಪರಿಸ್ಥಿತಿಯು ಕರ್ನಾಟಕದಲ್ಲಿ ಇನ್ನೂ ಇರದಿದ್ದರೆ ಆ ಸಂಬಂಧವಾಗಿ ಸ್ಪಷ್ಟವಾದ ತಮ್ಮ ಅಭಿಪ್ರಾಯವನ್ನು ಕಾಂಗ್ರೆಸ್ಸಿನ ಮುಂದೆ ಇಡಬೇಕು. ಸಾರಾಂಶ, ಕರ್ನಾಟಕದ ಕಾಂಗ್ರೆಸ್ಸಿನ ಕಾರ್ಯಕರ್ತರು ಕರ್ನಾಟಕದ ನಿಜವಾದ ಕನ್ನಡಿಗರಾಗಬೇಕಲ್ಲದೆ, ಯಾವ ರೀತಿಯಿಂದಲೂ ಆತ್ಮವಂಚನೆಯನ್ನು ಮಾಡಿಕೊಳ್ಳಬಾರದು, ಅಥವಾ ಅನ್ಯರಿಗೆ ವೃಥಾ ಆಶೆಯನ್ನು ಕೊಡಬಾರದು, ಹೀಗೆ ಕರ್ನಾಟಕದ ನಿಜವಾದ ಅಭಿಪ್ರಾಯವನ್ನರುಹಿದ ಬಳಿಕ, ಮುಂದೆ ಕಾಂಗ್ರೆಸ್ಸಿನವರ ಆಜ್ಞೆಯಾದಂತೆ ವರ್ತಿಸಬೇಕು.

ಬ್ರಿಟಿಶ ಶಿಷ್ಟಮಂಡಲದ ಪ್ರಕಟನೆ.

ಬ್ರಿಟಿಶ ಶಿಷ್ಟಮಂಡಲದ ಅಧ್ಯಕ್ಷರಾದ ಸರ್ ವಿಲಿಯಮ್ ಕ್ಲೇರ ಲೀಜರವರು ತಾ। ೨೮ ನೇ ದಿವಸ ವಿಲಾಯತಿಗೆ ತಿರುಗಿ ಹೊರಟು ಹೋಗುವ ಮುಂದೆ ಕೆಳಗೆ ಕಾಣಿಸಿದ ಪ್ರಕಟನೆಯನ್ನು ಅಸೋಸಿಯೇಟೆಡ್ ಪ್ರೆಸ್ಸಿಗೆ ಪ್ರಸಿದ್ಧಿಸಲು ಕೊಟ್ಟರು.

“ಹಿಂದುಸ್ಥಾನಕ್ಕೆ ಬಂದ ಬಳಿಕ ನಾವು ಅನೇಕ ಕಾರ್ಯಗಳಲ್ಲಿ ತೊಡಗಿಕೊಂಡದ್ದರಿಂದ ನಮ್ಮ ಕಾರ್ಯವನ್ನು ಪತ್ರಿಕೆಗಳ ಮುಖಾಂತರವಾಗಿ ಹಿಂದೀ ಜನರಿಗೆ ತಿಳಿಸಿಕೊಡುವದು ನಮಗೆ ಶಕ್ಯವಾಗಲಿಲ್ಲ. ಇದಲ್ಲದೆ ಈ ಚರ್ಚೆಯನ್ನು ಪ್ರಕಟಮಾಡಿದರೆ ಯಾರೊಡನೆ ನಾವು ಮಾತುಕತೆ ನಡೆಸಿದ್ದೆವೋ ಅವರ ವಿಶ್ವಾಸ ಘಾತವನ್ನು ಮಾಡಿದಂತಾಗುವದೆಂದು ನಮಗೆ ಅನಿಸಿತು. ಈ ಬಗ್ಗೆ ನಮಗೆ ವಿಷಾದವಾಗುತ್ತದೆ. ಯಾಕಂದರೆ ಪರಸ್ಪರ ಸಹಕಾರ ಮತ್ತು ಪರಸ್ಪರಾವಲಂಬನೆ ಇವುಗಳ ಮೇಲೆಯೇ ನಮ್ಮ ವ್ಯಾಪಾರವು ನೆಲೆಯೂರಿ ನಿಂತಿದ್ದು, ಅದು ಬಹುಜನರಿಗೆ ಗೊತ್ತಾದಷ್ಟು ಒಳ್ಳೆಯದೆ ದೇ ನಂಬಿಗೆಯಿದೆ. ಅನ್ಯಾಯದಿಂದ ಲಾಭವನ್ನು ಪಡೆದುಕೊಳ್ಳುವ ಧೋರಣವು ನಮಗೆ ಸಮ್ಮತವಿಲ್ಲ. ಉಭಯ ಪಕ್ಷಗಳಿಗೆ ಸರಿಯಾದ ಪ್ರಮಾಣದಲ್ಲಿ ಸವಲತ್ತು ದೊರಕಿಸಿಕೊಡುವ ಧೋರಣವೇ ನಿಜವಾದ ಧೋರಣವಾಗಿದೆಯೆಂದು ನಮಗೆ ಗೊತ್ತಿದೆ. ಹಿಂದುಸ್ಥಾನದಲ್ಲಿ ಕಾಲಿಟ್ಟಂದಾರಿಂದಲೂ ಹಿಂದಿ ಜನರು ನಮ್ಮೊಡನೆ ಒಳ್ಳೆ ಪ್ರೇಮಭಾವದಿಂದ ವರ್ತಿಸಿದರು. ವರ್ತಕರೂ ಉದ್ಯಮಿಗಳೂ ನಮ್ಮೊಡನೆ ಬಹು ಸ್ನೇಹಭಾವದಿಂದ ನಡೆದುಕೊಂಡರು. ಉಭಯತರಲ್ಲಿ ಬಿಚ್ಚು ಮನಸ್ಸಿನಿಂದ ಚರ್ಚೆ ನಡೆಯಿತು. ನಮ್ಮ ಅಭಿಪ್ರಾಯಗಳಿಗೆ ಒಪ್ಪದ ಕೆಲವು ಜನರು ತಮ್ಮ ಮನಸಿನಲ್ಲಿ ನಮ್ಮ ವಿಷಯಕ್ಕೆ ಒಳ್ಳೇ ಅಭಿಪ್ರಾಯವೇ ಇದೆ ಎಂಬುದನ್ನು ನಮ್ಮ ನಿದರ್ಶನಕ್ಕೆ ತಂದು ಕೊಟ್ಟರು. ಪತ್ರಿಕೆಗಳವರೂ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೂಡ ನಮ್ಮೊಡನೆ ಚತುರ ರೀತಿಯಲ್ಲಿ ವರ್ತಿಸಿದವು. ಹಿಂದೀ ಜನರು ನಮ್ಮ ವಿಚಾರಗಳ ಬಗ್ಗೆ ಸಹಾನುಭೂತಿಯನ್ನು ತೋರಿಸುವದು ಅವಶ್ಯವಿದೆಯೆಂದು ನಾವು ಅಪೇಕ್ಷೆ ಮಾಡಿಕೊಂಡಿರುವಂತೆ, ಗ್ರೇಟಬ್ರಿಟನದಲ್ಲಿಯ ನೂಲಿನ ಉದ್ಯೋಗಸ್ಥರಿಗೆ ಹಿಂದಿ ಜನರ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ತಿಳಿಸಿಕೊಡುವದಕ್ಕೆ ಈ ಪ್ರವಾಸದಿಂದ ನಾವಾದರೂ ಸಮರ್ಥರಾಗಬಹುದೆಂದು ನನಗೆ ತೋರುತ್ತದೆ. ಇಂಗ್ಲಂಡ ಮತ್ತು ಹಿಂದುಸ್ಥಾನಗಳ ನಾಗರಿಕರು ಯಾವ ದೇ ರೀತಿಯಿಂದ ಪೂರ್ವಗ್ರಹ ದೂಷಿತರಾಗದೆ, ಪರಸ್ಪರರು ಪರಸ್ಪರರ ವಿಚಾರಗಳನ್ನು ವಿಮರ್ಶೆ ಮಾಡ[illegible] [illegible] ವಿಷಯವನ್ನು ಪರಿಶೀಲಿಸುವ ವಿಷಯವಾದ ಕರ್ತವ್ಯವು ಬೇರೊಂದಿಲ್ಲ.

ಜಪಾನಿ ಔದ್ಯೋಗಿಕ ಶಿಷ್ಟ ಮಂಡಳರ ಕೂಡ ನಡಿಸಿದ ಮಾತುಕತೆಯ ವಿಷಯವಾಗಿ ನಾನು ಹೇಳುವದೇನಂದರೆ —ಉಭಯತರ ವ್ಯಾಪಾರದ ಪ್ರತಿನಿಧಿಗಳನ್ನು ಕೂಡಿಸಲು [illegible] [illegible] ಇದರ ಮಹತ್ವವನ್ನು [illegible] ಹೇಳುವದು ನನಗೆ ಬೇಡವಾಗಿದೆ. ಹಿಂ[illegible] ಪೇಟೆಯ ಬಗ್ಗೆ ನಡೆದ ಚರ್ಚೆಯು ಬಗ್ಗೆ [illegible] ಶಿಷ್ಟ ಮಂಡಳದವರಿಗೆ ಕೆಲವೊಂದು ಮಹತ್ವದ [illegible] ಈ ಕಾರಣ ಮಹತ್ವದ [illegible] ನು ಮಾಡುವದು ನಮಗೆ ಸಾಧ್ಯವಾಗಲಿಲ್ಲ. [illegible] ದಿಯಲ್ಲಿ ಉಭಯತರ ಅಭಿಪ್ರಾಯಗಳು [illegible] ಸಿದ್ಧ ಮಾಡಲ್ಪಟ್ಟಿವೆ. ಇದಲ್ಲದೆ ಪರಸ್ಪರ ತಮ್ಮ ತಮ್ಮ ತೊಡಕುಗಳನ್ನು ಯಾವ [illegible] ಯಲ್ಲಿ ಬಿಡಿಸುವದು ನಿಹಿತವಾಗಿರುವದೋ ದಾದರೂ ಇದರಲ್ಲಿ ತೋರಿಸಲ್ಪಟ್ಟಿದೆ. ಹಿಂ[illegible] ಸ್ಥಾನದ ಹೊರತಾಗಿ ಇತರ ದೇಶಗಳ ಪೇಟೆಗಳಲ್ಲಿ ಈ ವಾದಿಂದ ಬಹಳ ಉಪಯುಕ್ತವಾಗದನಾಗಿ ಪರಿಣಮಿಸುವದೆಂದು ನಾ ತಿಳಿದುಕೊಂಡಿದ್ದೇನೆ. ಚರ್ಚೆಯ ಕಾಲ[illegible] ಕಂಡು ಬಂದ ಸುಮನಸ್ಸು ಲಂಡನದಲ್ಲಿ [illegible] ಲಿರುವ ಪರಿಷತ್ತಿನಲ್ಲಿಯೂ ಕಂಡು ಬರುವ[illegible] ದು ನನಗೆ ವಿಶ್ವಾಸವಿದೆ.

ಹಿಂದೀ ಉದ್ಯಮಿಗಳೊಡನೆ ನಾವು [illegible] ಸಿದ ಚರ್ಚೆಯ ಸಂಬಂಧವಾಗಿ ನಾನು [illegible] ಏನೂ ಹೇಳಬೇಕಾಗಿಲ್ಲ. ಗಿರಣಿ ಸಂಘ[illegible] ಡೆಯರು ಪ್ರಸಿದ್ಧ ಮಾಡಿದ ಸರ್ವ ಸಮ್ಮತ[illegible] ದ ವರದಿಯಿಂದಲೇ ಯಾವತ್ತೂ ಸ್ಪಷ್ಟ[illegible] ಎರಡು ದೇಶಗಳ ಉದ್ಯಮಿಗಳು ಸಂರಕ್ಷಣ[illegible] ಥ ಗಡಚಾದ ಸಮಸ್ಯೆಯ ವಿಷಯದಲ್ಲಿ [illegible] ತಿ ಸರ್ವ ಸಮ್ಮತವಾದ ತೀರ್ಮಾನು ಮಾ[illegible] ಕೊಂಡಿದ್ದುದು ಔದ್ಯೋಗಿಕ ಐತಿಹ್ಯದಲ್ಲಿ [illegible] ತೀಯವಾದ ವಿಷಯವಾಗಿದೆಯೆಂದು ನನಗೆ [illegible] ನಿಸುತ್ತದೆ. ಪರಸ್ಪರ ವಿರೋಧಿಯಾದ [illegible] ಸಂಬಂಧಗಳಲ್ಲಿ ಐಕ್ಯವನ್ನುಂಟು ಮಾಡುವ[illegible] ದೇಶಗಳ ಸರಕಾರಗಳೇ ಇಂತಹ ವಿಷಯದ [illegible] ಕೊನೆಯ ನಿರ್ಣಯ ಮಾಡುವ ಪದ್ಧತಿ[illegible] ಪ್ರಚಾರದಲ್ಲಿ ಇದೆ. ನಾವು ಅನುಕಂಪಿದ ಕಾರ್ಯ[illegible] ಯನ್ನು ಉಭಯತರೂ ಸ್ವಾರ್ಥತ್ಯಾಗ ಮಾಡ[illegible] ಪ್ರಸಂಗವಿರುವದರಿಂದ ನಾವು ಉಭಯತ[illegible] ಬೇಕಿಗೊಳಗಾಗುವ ಸಂಭವವಿದೆ. ಆದರೆ ನಾ[illegible] ಒಪ್ಪಂದ ಮಾಡಿಕೊಳ್ಳಲಿಲ್ಲವಾದರೆ, ಸರಕಾ[illegible] ವರು ನಮ್ಮ ಸಲುವಾಗಿ ಒಪ್ಪಂದ ಮಾಡಿಕೊ[illegible] ವದು ಖಂಡಿತ. ಆದ್ದರಿಂದ ನಾವು ಈಗ ಸ್ವೀ[illegible] ಕರಿಸಿದ ಮಾರ್ಗವೇ ಜಾಣತನದ್ದಾಗಿರುವದೆಂ[illegible] ದರಲ್ಲಿ ಸಂದೇಹವಿಲ್ಲ.

ಸರ್ ವಿಲಿಯಮ್‌ರು ಪ್ರಕಟನೆಯ [illegible] ನೆ ಸಾಲ್ಲಿ ಹಿಂದುಸ್ಥಾನ ಸರಕಾರದ ಆಭಾರ [illegible] ನ್ನಿಸಿ, ಉಲ್ಲೇಖಿಸಿರುವದೇನಂದರೆ—ಹಿಂದು[illegible] ಸ್ಥಾನಕ್ಕೆ ಬಂದು ನಾವು ಪ್ರಾರಂಭಿ[illegible] ಈ ಅಧ್ಯಾಯವು ಅಂದರೆ ಹಿಂದೀ ಪೇಟೆಯ [illegible] ನಮ್ಮ ವ್ಯಾಪಾರ ಮತ್ತು ಹಿಂದಿ ಜನರ [illegible] ಸಂಬಂಧ ಚರ್ಚೆಯು ಇಷ್ಟಕ್ಕೆ ಮುಗಿದಂ[illegible] ಲ್ಲಿಲ್ಲ. ನಮಗೆ ಪುನಃ ಬರುವದಾಗದಿದ್ದರೆ [illegible] ಮ್ಮ ಸಹಕಾರಿಗಳು ಬರಬಹುದು. ನ[illegible] ಈಗ ಇಲ್ಲಿ ಭೆಟ್ಟಿಯಾದ ಅನೇಕ ಜನ ಹಿಂದಿ[illegible] ತ್ರರು ಇಂಗ್ಲಂಡದಲ್ಲಿ ನಮ್ಮನ್ನು ಕಂಡು[illegible] ವರೆಂದು ನಮಗ ಆಶಯಿದೆ. ವ್ಯಾಪಾರದ [illegible] ಬಂಧವಾಗಿ ನಾವು ಪ್ರಾರಂಭ ಮಾಡಿದ [illegible] ಯದಲ್ಲಿ ಹಿಂದಿ ಜನರೆಲ್ಲರೂ ಸಹಾನುಭೂ[illegible] ಯನ್ನು ತೋರಿಸಿ ವಿಧಾಯಕ ಸಲಹೆಗಳ[illegible] ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇ[illegible]

(ಅ ಪ್ರ ಸಂ)

ಡಾ ಜಾರ್ಕೆರರ ಶಸ್ತ್ರಕ್ರಿಯೆ

[ಸ್ವೀಕೃತ ಸುದ್ದಿ]

ಮುಂಬೈ ತಾ ೩೦— ಡಾ ಜಾರ್ಕೆರರ [illegible] ಪರದ ಬಗ್ಗೆ ಶಸ್ತ್ರಕ್ರಿಯೆ ಆಯಿತು. ಯಶಸ್ವಿ [illegible] ಪ್ರಕೃತಿಯು ಚನ್ನಾಗಿದೆ.

ಜಮುನಾಲಾಲ ಹಾಗು ಡಾ. ಅಲಿವರ್‌ರ ರಾಜೀನಾಮೆ.

"ಕನ್ನಡಿಗ" ನಿಗಾಗಿ ತರಿಸಿದ 'ಅಸೋಶಿಯೇಟೆಡ್ ಕಂಪನಿ'ಯ ತಂತಿಗಳು

ಅಲಹಾಬಾದ ತಾ॥ ೨೯ ಅಖಿಲ ಭಾರತ ಕಾಂಗ್ರೆಸ್ ಸಭೆಯ ಕೋಶಾಧ್ಯಕ್ಷರಾದ ಶೇಟ ಜಮನಲಾಲ ಬಾಜ ಇವರು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿ ಜನರಲ್ ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದು ತಮ್ಮ ಕೋಶಾಧ್ಯಕ್ಷ ಪದವಿಗೂ ಮತ್ತು ಕಾಂಗ್ರೆಸ್ ವರ್ಕಿಂಗ ಕಮಿಟಿಯ ಸಭಾಸದತ್ವಕ್ಕೂ ರಾಜೀನಾಮೆ ಕೊಟ್ಟಿರುತ್ತಾರೆ ಇವರಂತೆ ಡಾ ಅಲವರ್ ಇವರಾದರೂ ವರ್ಕಿಂಗ ಕಮಿಟಿಗೆ ರಾಜಿನಾಮೆ ಕೊಟ್ಟಿರುತ್ತಾರೆ ಜನರಲ್ ಸೆಕ್ರೆಟರಿಯವರಾದ ಪಂಡಿತ ಜವಾಹಿರಲಾಲರು ಅವರಿಗೆ ತಿರುಗಿ ಉತ್ತರ ಬರೆದು ರಾಜೀನಾಮೆಯನ್ನು ಸ್ವೀಕರಿಸುವ ಅಧಿಕಾರವು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಗೆ ಇರುವದರಿಂದ ಬರುವ ಸಭೆಯಲ್ಲಿ ಈ ವಿಷಯವನ್ನು ಇಡಲಾಗುತ್ತದೆಂದೂ, ಅಲ್ಲಿಯ ವರೆಗೆ ಕೋಶಾಧ್ಯಕ್ಷರಾಗಿ ಉಳಿಯತಕ್ಕದ್ದೆಂದೂ ಕೇಳಿಕೊಂಡಿದ್ದಾರೆ

ಶೇಟ ಜಮನಲಾಲರು ತಮ್ಮ ಪತ್ರದಲ್ಲಿ ಕೆಳಗಿನಂತೆ ಕಾರಣ ತೋರಿಸಿರುವರು ಅದೇನಂದರೆ—ನಾನು ಈ ವರೆಗೆ ಜೇಲಿಗೆ ಹೋಗದೆ ಇದ್ದದ್ದು ನನ್ನ ಮನಸ್ಸಿಗೆ ಬಹಳ ವ್ಯಥೆಯನ್ನುಂಟು ಮಾಡಿದೆ ಇದಕ್ಕೆ ನನ್ನ ಪ್ರಕೃತಿಯ ಪರಿಸ್ಥಿತಿಯೇ ಕಾರಣ ಮತ್ತು ಕಾರಣವಿದ್ದಾಗ್ಯೂ ಸತ್ಯಾಗ್ರಹ ಹಾಗೂ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ವಿಶ್ವಾಸವಿದ್ದಂಥ ನನ್ನಂಥವನು ಜೇಲಿಗೆ ಹೋಗದೆ ಜವಾಬದಾರಿ ಸ್ಥಳವನ್ನು ಹಿಡಕೊಂಡು ಕೂಡುವದು ಸರಿಯಾಗಿರುವದಿಲ್ಲವೆಂದು ನನಗೆ ಎನಿಸುತ್ತಿದೆ ನನ್ನ ಮಾನಸಿಕ ಮತ್ತು ಶಾರೀರಿಕ ಪರಿಸ್ಥಿತಿಯು ಸುಧಾರಿಸಬೇಕಾದರೆ ಇನ್ನೂ ಕೆಲವು ದಿನಗಳು ಹೋಗಬೇಕಾಗುವವು ನಾನು ರಾಜೀನಾಮೆಯನ್ನು ಕೊಟ್ಟ ಮಾತ್ರಕ್ಕೆ ನಾನು ಇನ್ನು ಮುಂದೆ ಕಾಂಗ್ರೆಸ ಕಾರ್ಯಕ್ರಮದಲ್ಲಿ ಭಾಗ ವಹಿಸುವದಿಲ್ಲವೆಂದು ಅರ್ಥ ಮಾಡಿಕೊಳ್ಳಬಾರದು ನಾನು ನನ್ನ ಶಕ್ತಿಗನುಸಾರವಾಗಿ ಆ ಕಾರ್ಯಕ್ರಮವನ್ನು ಸಾಗಿಸದೆ ಇರಲಾರೆ

ಡಾ ಅಲವರು ರಾಜೀನಾಮೆಯನ್ನು ಕಳಿಸುವಾಗ ಮಹಾತ್ಮಾ ಗಾಂಧಿಯವರಿಗೆ ಬರೆದಿದ್ದೇನೆಂದರೆ—ಕೆಲವೊಂದು ಖಾಸಗಿ ಕಾರಣಗಳ ಸಲುವಾಗಿ ನಾನು ಪುನಃ ವಕೀಲಿಯನ್ನು ಪ್ರಾರಂಭ ಮಾಡುವ ಪ್ರಸಂಗವು ಬಂದಿದೆ ಹೀಗೆ ವಕೀಲಿಯನ್ನು ಪ್ರಾರಂಭ ಮಾಡಿ ನಾನು ವರ್ಕಿಂಗ ಕಮಿಟಿ ಹಾಗೂ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯಲ್ಲಿ ಉಳಿಯುವದು ಸಮಂಜಸ ತೋರುವದಿಲ್ಲ ಕಾಂಗ್ರೆಸದ ಸಂಬಂಧದಲ್ಲಿ ನನ್ನಲ್ಲಿ ಜವಾದ ಭಕ್ತಿಯಿದ್ದುದರಿಂದಲೇ ನಾನು ಅದಕ್ಕೆ ಎಳ್ಳಷ್ಟಾದರೂ ಧಕ್ಕೆ ಬರುವ ಸ್ಥಿತಿಯಲ್ಲಿ ಇರಬಯಸುವದಿಲ್ಲ ಹೀಗೆ ಮಾಡುವದರಿಂದ ನಾನು ಸಾರ್ವಜನಿಕ ಸೇವೆಯಿಂದಾಗಲಿ ಇಲ್ಲವೆ ದೇಶ ಸೇವೆಯಿಂದಾಗಲಿ ನಿವೃತ್ತನಾಗುವೆನೆಂದು ಯಾರೂ ತಿಳಿದುಕೊಳ್ಳಕೂಡದು ಪರಮಾತ್ಮನ ಮನಸಿನಲ್ಲಿ ಇದ್ದುದಾದರೆ ನಾನು ನನ್ನ ಕೊನೆಯುಸಿರಿರುವ ವರೆಗೂ ನನ್ನ ಶಕ್ತಿಗನುಸಾರವಾಗಿ ದೇಶ ಕಾರ್ಯವನ್ನು ಸಾಗಿಸುವೆನು

(ಅ. ಪ್ರೆ ತಂತಿ)

ಬ್ರಿಟಿಶ ಶಿಷ್ಟಮಂಡಲ ಹಾಗು ಗಿರಣಿ ಸಂಘದವರಲ್ಲಿಯ ಕರಾರು

ಮುಂಬಯಿ ತಾ॥ ೨೮— ಬ್ರಿಟಿಶ ನೂಲಿ ಶಿಷ್ಟಮಂಡಲದ ಅಧ್ಯಕ್ಷರಾದ ಸರ್ ವಿಲಿಯಮ್ ಕ್ಲೇರಲೀಜ ಹಾಗು ಮುಂಬಯಿ ಗಿರಣಿ ಒಡೆಯರ ಸಂಘದ ಅಧ್ಯಕ್ಷರಾದ ಶ್ರೀ ಎಚ್ ಪಿ ಮೋದಿ ಇವರ ಕೆಳಗಿನ ಅರ್ಥದ ಕರಾರುಗಳಾಗಿವೆ

ಹಿಂದಿ ಹಾಗು ಬ್ರಿಟಿಶ ನೂಲಿನ ಉದ್ಯಮಿಗಳ ಪ್ರತಿನಿಧಿಗಳಲ್ಲಿ ತಾ॥ ೧೯ನೆ ಸಪ್ಟೆಂಬರದಿಂದ ಮುಂಬಯಿಯಲ್ಲಿ ಪ್ರಾರಂಭವಾದ ಚರ್ಚೆಗೆ ಅನುಸಾರವಾಗಿ, ಕೆಳಗಿನ ಗೊತ್ತುಗಳು ತೀರ್ಮಾನಿಸಲ್ಪಟ್ಟಿದ್ದು, ಈ ಗೊತ್ತುಗಳು ಮುಂಬಯಿ ಗಿರಣಿ ಸಂಘದವರಿಗೂ ಹಾಗು ಬ್ರಿಟಿಶ ನೂಲಿನ ಶಿಷ್ಟಮಂಡಲದವರಿಗೂ ಬಂಧನಕಾರಕವಾಗಿವೆ ಪರಿಷತ್ತಿನಲ್ಲಿ ಉಭಯ ಪಕ್ಷದವರಲ್ಲಿಯು ಒಳ್ಳೆ ಬಿಚ್ಚು ಮನಸಿನಿಂದ ಮಾತುಕತೆ ನಡೆದಿದ್ದರಿಂದ ಉಭಯತರಿಗೂ ಅದರಿಂದ ಲಾಭವಾಗಿರುವದಲ್ಲದೆ, ಪರಸ್ಪರರು ಪರಸ್ಪರರಲ್ಲಿ ವಿಷಯಕ್ಕೆ ಹೆಚ್ಚಾದ ಆದರವೂ, ಪ್ರೀತಿಯೂ ಹುಟ್ಟಿದೆ ಉಭಯ ಪಕ್ಷದವರೂ ಇನ್ನು ಹೆಚ್ಚಾದ ಸಂಪರ್ಕ ಬೆಳಸಿ ತಮ್ಮ ತಮ್ಮ ಉದ್ಯೋಗಗಳ ಅಭಿವೃದ್ಧಿಯನ್ನು ಮಾಡಿಕೊಳ್ಳುವರೆಂದೂ ಮತ್ತು ಇಂತಹ ಪ್ರಸಂಗಗಳು ಪುನಃ ಒದಗಿದಲ್ಲಿ ಈಗಿನಂತೆಯೆ ಪುನಃ ವಿಚಾರ ವಿನಿಮಯ ಮಾಡಲು ಎರಡೂ ಪಕ್ಷದವರು ಮುಂದೆ ಬರುವರೆಂದೂ ನಮೂದಿಸಲಾಗಿದೆ ಹತ್ತಿಯ ಮೇಲಿನ ಸುಂಕವು ಒಂದು ಪೌಂಡಿಗೆ ಅರ್ಧ ಆಣೆಯಂತೆ ಇದ್ದು, ಇದು ಇನ್ನು ಮುಂದೆ ಈಗಿನಕಿಂತ ಹೆಚ್ಚಿಗೆ ಆಗಲಾರದೆಂದು ಭಾವಿಸಿ, ಉಭಯತರು ಕೆಳಗಿನಂತೆ ಕರಾರು ಮಾಡಿಕೊಂಡಿದ್ದಾರೆ ೧ ಹಿಂದೀ ಹತ್ತಿಯ ಉದ್ಯೋಗವು ಪ್ರಗತಿಯನ್ನು ಹೊಂದಬೇಕಾದರೆ ಬ್ರಿಟಿಶ ಸಾಮ್ರಾಜ್ಯದ ನೂಲು ಮತ್ತು ಜವಳಿ ಆಯಾತಗಳಿಂದ ಅದನ್ನು ಸಂರಕ್ಷಿಸುವದು ಅವಶ್ಯವೆಂದೂ ಪರದೇಶಗಳಲ್ಲಿಯ ಅಗ್ಗವಾದ ಬೆಲೆಯ ಆವಕಗಳ ಮೂಲಕ ಬ್ರಿಟಿಶ ಸಾಮ್ರಾಜ್ಯದ ಉದ್ಯೋಗದಕ್ಕಿಂತ ಹಿಂದಿ ಉದ್ಯೋಗಕ್ಕೆ ಹೆಚ್ಚಾದ ಪ್ರಮಾಣದಲ್ಲಿ ಸಂರಕ್ಷಣೆ ಕೊಡುವದು ತಪ್ಪವಾಗಿರುವದೆಂದೂ ಗೊತ್ತಾಯಿತು. [೨] ೧೯೩೧ ನೇ ಅಕ್ಟೋಬರದಲ್ಲಿ ಯಾವತ್ತು ಆಯಾತಗಳ ಮೇಲೆ ಹೇರಿದ ಹೆಚ್ಚಿನ ಸುಂಕವನ್ನು ತೆಗೆದೊಗೆಯುವಷ್ಟು ದೇಶದ ಕಂದಾಯದ ಸ್ಥಿತಿಯು ಸುಧಾರಿಸಿರುವದೆಂದು ಹಿಂದುಸ್ಥಾನ ಸರಕಾರಕ್ಕೆ ಕಂಡು ಬಂದಲ್ಲಿ ಹಿಂದೀ ಪಕ್ಷದವರು ಬ್ರಿಟಿಶ ಸಾಮ್ರಾಜ್ಯದ ಆಯಾತಗಳ ಮೇಲೆ ಸುಂಕವನ್ನು ಹೇರಲು ಯಾವದೇ ಹೊಸ ಸೂಚನೆಗಳನ್ನು ಮಾಡತಕ್ಕದ್ದಲ್ಲ [೩] ನೂಲಿನ ವಿಷಯದಲ್ಲಿ ಹಿಂದೀ ಪಕ್ಷದವರು ಬ್ರಿಟಿಶ ಸಾಮ್ರಾಜ್ಯದ ಆಯಾತಗಳ ವಿಷಯದಲ್ಲಿ ಸರಕಿನ ಬೆಲೆಗನುಸಾರವಾಗಿ ೧೦೦ ಕ್ಕೆ ೫ರಂತೆ ಸುಂಕ ಮತ್ತು ಒಂದು ಪೌಂಡಿಗೆ ೫ ದುಡ್ಡಿನಂತೆ ವಿಶೇಷ ಸುಂಕವನ್ನು ಹೇರಲಿಕ್ಕೆ ಒಪ್ಪಿಕೊಂಡಿರುತ್ತಾರೆ [೪] ಕೃತಕ ರೇಶಿಮೆಯ ಜವಳಿ ವಿಷಯದಲ್ಲಿ ಹಿಂದೀ ಪಕ್ಷದವರು ಕೆಳಗಿನದಕ್ಕೆ ಒಪ್ಪಿಗೆ ಕೊಟ್ಟಿರುತ್ತಾರೆ ಬ್ರಿಟಿಶ ಸಾಮ್ರಾಜ್ಯದ ಕೃತಕ ರೇಶಿಮೆಯ ಆಯಾತದ ವಿಷಯದಲ್ಲಿ ಆ ರೇಶಿಮೆಯು ಸಂಪೂರ್ಣವಾಗಿ ಕೃತಕ ರೇಶಿಮೆಯದ್ದರೆ ಅದರ ಮೇಲಿನ ಸುಂಕವು ಅದರ ಬೆಲೆಗನುಸಾರವಾಗಿ ೧೦೦ ಕ್ಕೆ ೩೦ ರಂತೆ ಇಲ್ಲವೆ ಒಂದು ಚಚ್ಚೌಕು ಯಾರ್ಡಿಗೆ ೨॥ ಆಣೆಯಂತೆ ಇರತಕ್ಕದ್ದು. ಈ ಜವಳಿಯಲ್ಲಿ ಅರಳಿ ನೂಲು, ರೇಶಿಮೆ ಇವೆರಡೂ ಕೂಡಿದ್ದರೆ ಅದರ ಮೇಲೆ ೧೦೦ ಕ್ಕೆ ೩೦ ರಂತೆ ಇಲ್ಲವೆ ಒಂದು ಚಚ್ಚೌಕು ಯಾರ್ಡಿಗೆ ೨ ಆಣೆಯಂತೆ ಸುಂಕ ಇರತಕ್ಕದ್ದು (೫) ಬ್ರಿಟಿಶ ಸಾಮ್ರಾಜ್ಯ ಇಲ್ಲವೆ ಇತರ ಪರದೇಶಿ ಪೇಟೆಗಳಲ್ಲಿ ಬ್ರಿಟಿಶ ನೂಲು ಹಾಗು ಜವಳಿ ಸರಕುಗಳಿಗೆ ಏನಾದರೂ ಸೌಲಭ್ಯಗಳು ದೊರೆತದ್ದೇ ಆದಲ್ಲಿ, ಹಿಂದೀ ಸರಕುಗಳಿಗೂ ಆ ಸೌಲಭ್ಯವು ದೊರೆಯುವಂತೆ ಮಾಡಬೇಕು. ಯಾವದೇ ಪೇಟೆಯಲ್ಲಿ ಹಿಂದುಸ್ಥಾನದ ಸರಕುಗಳಿಗೆ ಸ್ವತಂತ್ರವಾದ ಪ್ರವೇಶವಿಲ್ಲದಿದ್ದಲ್ಲಿ ಹಿಂದುಸ್ಥಾನವು ಆಗ ಬ್ರಿಟಿಶ ಸಾಮ್ರಾಜ್ಯಕ್ಕೆ ದೊರೆಶಿದ್ದರಲ್ಲಿಯೇ ಭಾಗ ವಹಿಸತಕ್ಕದ್ದು ಯಾವ ಪರದೇಶಗಳಲ್ಲಿ ಹಿಂದುಸ್ಥಾನದಲ್ಲಿಯ ಗಿರಣಿಗಳ ಸಂಬಂಧವಿಲ್ಲವೋ ಆ ದೇಶಗಳೊಡನೆ ಹಿಂದಿ ಕಾರಖಾನೆದಾರರ ಸಂಪರ್ಕವು ಬೆಳೆಯುವಂತೆ ಮ್ಯಾಂಚೆಸ್ಟರ ವರ್ತಕ ಸಂಘದವರು ತಮ್ಮ ವರ್ಚಸ್ಸನ್ನು ಉಪಯೋಗಿಸತಕ್ಕದ್ದು [೬] ಹಿಂದೀ ಕಚ್ಚಾ ಹತ್ತಿಯ ವಿಷಯದಲ್ಲಿ ಹಿಂದೀ ಪಕ್ಷದವರು ಬ್ರಿಟಿಶ ಸಾಮ್ರಾಜ್ಯದಲ್ಲಿ ಈ ಕಚ್ಚಾ ಹತ್ತಿಯು ಹೆಚ್ಚು ಹೆಚ್ಚು ಉಪಯೋಗಿಸಲ್ಪಡುವಂತೆ ಪ್ರಯತ್ನ ನಡಿಸುವದು ಅವಶ್ಯವಿದೆಯೆಂದು ಹೇಳಿದರು ಈ ಸಂಬಂಧವಾಗಿ ಯೋಗ್ಯವಾದ ಉಪಾಯ ಕೈಕೊಳ್ಳಬೇಕೆಂದು ತಮ್ಮಲ್ಲಿಯ ಉದ್ಯೋಗಸ್ಥರಿಗೆ ಶಿಫಾರಸು ಮಾಡುವದಲ್ಲದೆ, ಈ ಬಗ್ಗೆ ನಡೆದ ಕಾರ್ಯಕಲಾಪಗಳನ್ನು ಆಗಾಗ್ಗೆ ತಿಳಿಸುತ್ತ ಹೋಗಲಾಗುವದೆಂದು ಬ್ರಿಟಿಶ ಶಿಷ್ಟಮಂಡಳದವರು ಆಶ್ವಾಸನ ಕೊಟ್ಟರು. ಹಿಂದೀ ಹತ್ತಿ ಉದ್ಯೋಗದ ಹಿತಸಂರಕ್ಷಣೆಯ ಸಂಬಂಧವಾಗಿ ಇತರ ಮಾರ್ಗಗಳಿಂದಾದರೂ ಪ್ರಯತ್ನ ಮಾಡುವದು ಅವಶ್ಯವಿದೆಯೆಂದು ಗೊತ್ತಾಯಿತು ಈ ಕರಾರುಗಳು ೧೯೩೫ ನೇ ಡಿಸೆಂಬರ ೩೧ ನೇ ತಾರೀಖಿನ ವರೆಗೆ ಬಳಕೆಯಲ್ಲಿ ಇರುವವು

(ಅ ಪ್ರೆ ತಂತಿ)

ಕೇಳಕರ ಪಂಗಡದವರ ಪರಿಷತ್ತು.

ಡೆಮಾಕ್ರ್ಯಾಟಿಕ್ ಸ್ವರಾಜ್ಯ ಪಂಗಡದವರು ಕರೆದ ಬೃಹನ್ಮಹಾರಾಷ್ಟ್ರ ರಾಜಕೀಯ ಪರಿಷತ್ತು ತಾ॥ ೨೮ನೇ ದಿವಸ ಬ್ಯಾ. ರಾಮರಾವ ದೇಶಮುಖರ ಅಧ್ಯಕ್ಷತೆಯ ಕೆಳಗೆ ಮುಂಬಯಿಯಲ್ಲಿ ಪ್ರಾರಂಭವಾಯಿತು ಯಾವತ್ತು ಭಾಷಣಕಾರರು ತಮ್ಮ ಭಾಷಣಗಳಲ್ಲಿ ಸದ್ಯದ ಕಾಂಗ್ರೆಸ್ಸದ ಧೋರಣವನ್ನು ಕಡುತರವಾಗಿ ಟೀಕಿಸಿ, ಕಾಂಗ್ರೆಸ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿ ಅದು ಕಾರ್ಯಪ್ರವೃತ್ತವಾಗುವಂತೆ ಮಾಡುವದು ಅವಶ್ಯವಿದೆಯೆಂದು ಹೇಳಿದರು ಸ್ವಾಗತ ಕಮಿಟಿಯ ಅಧ್ಯಕ್ಷರಾದ ಜಮನದಾಸ ಮೆಹತಾ ಇವರು ತಮ್ಮ ಭಾಷಣದಲ್ಲಿ, ಸದ್ಯಕ್ಕೆ ಕಾಂಗ್ರೆಸ ಪಕ್ಷದವರು ಮಂಗಭ ವನ್ನು ವಹಿಸಿರುವರೆಂದೂ, ಅವರು ಆಲಸ್ಯದಲ್ಲಿ ಕಾಲ ಕಳೆಯುತ್ತಿರುವರೆಂದೂ ಟೀಕಿಸಿದರು. ಮತ್ತು ಈ ಸಮಯದಲಿ ಜನರು ಮಹಾತ್ಮರ ಮರುಳು ಮಾತನ್ನು ನಂಬಿ ಅವರನ್ನು ಹಿಂಬಾಲಿಸತಕ್ಕದ್ದಲ್ಲವೆಂದೂ ಪುನಃ ಚೇತರಿಸಿಕೊಂಡು ಉಚಿತವಾದ ಕಾರ್ಯ ಮಾಡಲು ಉಜ್ಜುಗಿಸಬೇಕೆಂದೂ ಹೇಳಿದರು ಅವಶ್ಯವಿದ್ದಲ್ಲಿ ಕಾಂಗ್ರೆಸದಿಂದ ಸಿಡಿದು ಹೋಗಿ ತಾವು ಬೇರೊಂದು ಪಕ್ಷವನ್ನು ಸ್ಥಾಪಿಸಿಕೊಳ್ಳಲು ಹಿಂದುಮುಂದೆ ನೋಡುವದಿಲ್ಲವೆಂದು ಅಭಿಪ್ರಾಯಪಟ್ಟರು

ಶ್ರೀ ನರಸೋಪಂತ ಕೇಳಕರ ಇವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕಾಂಗ್ರೆಸದ ಕಾರ್ಯಕ್ರಮದಲ್ಲಿ ಬದಲಾವಣೆ ಮಾಡುವದು ಅವಶ್ಯವಿದೆಯೆಂದೂ, ಹೀಗೆ ಬದಲಾವಣೆ ಮಾಡಿ ಅವರು ಕೌನ್ಸಿಲ್ ಪ್ರವೇಶವನ್ನು ತಮ್ಮ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಲ್ಲಿ ಹೊಸ ರಾಜಕೀಯ ಪಂಗಡಗಳನ್ನು ಸ್ಥಾಪಿಸುವ ಪ್ರಸಂಗ ಬರುವದಿಲ್ಲವೆಂದೂ ಹೇಳಿದರು ಸದ್ಯದ ಗಡಿಬಿಡಿಯ ಸಮಸ್ಯೆಯು ಬಗೆ ಹರಿಯಬೇಕಾದರೆ ಕಾಯದೆ ಮಂಡಳಗಳನ್ನು ವಶಪಡಿಸಿಕೊಳ್ಳದ ಹೊರತು ಗತ್ಯಂತರವಿಲ್ಲವೆಂದು ಅವರು ನುಡಿದರು

(ಅ ಪ್ರೆ ತಂತಿ)

ಕೌನ್ಸಿಲ್ಲಿನ ಹುಚ್ಚು !

ಮುಂಬಯಿ ತಾ॥ ೬೦

ಬೃಹನ್ಮಹಾರಾಷ್ಟ್ರ ರಾಜಕೀಯ ಪರಿಷತ್ತಿನ ಅಧಿವೇಶನವು ಇಂದು ಸಮಾಪ್ತವಾಯಿತು. ಪರಿಷತ್ತಿನಲ್ಲಿ ಅನೇಕ ನಿರ್ಣಯಗಳು ತೀರ್ಮಾನವಾಗಿವೆ ಮೊದಲನೇ ಠರಾವಿನ್ವಯ, ಈ ಪಂಗಡಕ್ಕೆ ಡೆಮಾಕ್ರ್ಯಾಟಿಕ್ ಸ್ವರಾಜ್ಯ ಪಂಗಡವೆಂದೂ ಈ ಪಂಗಡದ ಧ್ಯೇಯವು ನ್ಯಾಯ ಮತ್ತು ಶಾಂತವಾದ ಮಾರ್ಗಗಳಿಂದ ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ದೊರಕಿಸುವದು ಇರುತ್ತದೆಂದೂ ಗೊತ್ತಾಯಿತು. ಇದಲ್ಲದೆ ಈ ಪಂಗಡವು ಕಾಂಗ್ರೆಸದಲ್ಲಿ ಒಂದು ಒಳ ಪಂಗಡವಾಗಿ ಉಳಿಯಬೇಕೆಂದೂ, ಅಂದರೆ ಈ ಪಂಗಡದ ಪ್ರತಿಯೊಬ್ಬ ಸಭಾಸದನು ಕಾಂಗ್ರೆಸದ ಸಭಾಸದನಾಗಿರಲೇಬೇಕೆಂದೂ, ಈ ಸಭಾಸದತ್ವದ ನಿಯಮವು ಪಬ್ಲಿಕರು ಕಾಯದೆಗಳಿಂದ ಕಾಂಗ್ರೆಸ್ ಸಂಸ್ಥೆಗಳು ಅಕ್ರಮ ಕೂಟಗಳಾಗಿರುವ ವರೆಗೆ ಬಳಕೆಯಲ್ಲಿ ಬರಬಾರದೆಂದೂ ನಿರ್ಣಯವಾಯಿತು ಈ ಪಂಗಡದವರು ಗ್ರಾಮ ಪಂಚಾಯತಿಗಳನ್ನು ಮೊದಲು ಮಾಡಿಕೊಂಡ, ಪ್ರಾಂತಿಕ ಹಾಗು ಸಂಯುಕ್ತ ಶಾಸನ ಸಭೆ ಇವೇ ಮೊದಲಾದ ಯಾವತ್ತು ಪ್ರಾತಿನಿಧಿಕ ಸಂಸ್ಥೆಗಳಲ್ಲಿ ಸೇರ್ಪಡೆ ಹೊಂದತಕ್ಕದ್ದೆಂದು ತೀರ್ಮಾನವಾಯಿತು ಜಾತೀಯ ನಿರ್ಣಯವು ಪ್ರಜಾಪ್ರಭುತ್ವದ ತತ್ವಕ್ಕೆ ಅಂದಾಳ ಬಡಿದಿದೆಯೆಂದೂ, ಬಿಳೇ ಕಾಗದದಲ್ಲಿಯ ಸೂಚನೆಗಳು ಅತಿಶಯ ಅಸಮಾಧಾನಕರವಾಗಿವೆಯೆಂದೂ ಪರಿಷತ್ತಿನಲ್ಲಿ ಸಂತಾಪ ವ್ಯಕ್ತ ಮಾಡಲ್ಪಟ್ಟಿತು

(ಅ ಪ್ರೆ ತಂತಿ)

ವಿಠ್ಠಲಭಾಯಿಯವರ ಉತ್ತರಕ್ರಿಯೆ

ವರ್ಧಾ ತಾ॥ ೨೮— ವಿಠ್ಠಲಭಾಯಿಯವರ ಉತ್ತರಕ್ರಿಯೆಯ ಸಂಬಂಧದಲ್ಲಿ ಶ್ರೀ ಸುಭಾಸಚಂದ್ರ ಬೋಸ ಇವರಿಂದ ಮಹಾತ್ಮಾಗಾಂಧಿಯವರ ಕಡೆಗೆ ಕೆಳಗಿನ ಅರ್ಥದ ತಂತಿಯ ವಾರ್ತೆಯು ಬಂದಿದೆ

"ವಿಠ್ಠಲಭಾಯಿಯವರ ಕಳೇಬರವನ್ನು ನಾರಕುಂಡಾ ಹಡಗದಿಂದ ಹಿಂದುಸ್ಥಾನಕ್ಕೆ ಕಳಿಸಿರುತ್ತದೆ. ಹಡಗವು ತಾ॥ ೯ನೇ ನವ್ಹಂಬರ ದಿವಸ ಮುಂಬಯಿಗೆ ತಲಪುವದು. ಅವರ ಉತ್ತರಕ್ರಿಯೆಯನ್ನು ವಲ್ಲಭಭಾಯಿಯವರೇ ಮಾಡುವದು ಯೋಗ್ಯವಾಗಿ ತೋರುತ್ತದೆ ಕಾರಣ ಈ ಬಗ್ಗೆ ಏರ್ಪಾಡು ಮಾಡಿರಿ"

ಈ ಬಗ್ಗೆ ಮಹಾತ್ಮರ ಅಭಿಪ್ರಾಯವು ಏನಿರುವುದೆಂದರೆ— ಇದೇನು ಸಾಧ್ಯವಿಲ್ಲ. ಯಾಕಂದರೆ ವಲ್ಲಭಭಾಯಿಯವರು ನಿರ್ಬಂಧದಲ್ಲಿಯೇ ಲೆ ಹೊರಗೆ ಬರಲು ಒಪ್ಪಿಕೊಳ್ಳುವ ಸಂಭವವಿಲ್ಲ ವಲ್ಲಭಭಾಯಿಯವರು ಉತ್ತರಕ್ರಿಯೆ ಜರುಗಿಸಲು ಶಕ್ತರಾಗದ್ದು ದುರ್ದೈವದ ಸಂಗತಿಯಾಗಿದ್ದರೂ, ಈ ಪರಿಸ್ಥಿತಿಯಲ್ಲಿ ಉಪಾಯವಿಲ್ಲದಾಗಿದೆ ಆದ್ದರಿಂದ ವಲ್ಲಭಭಾಯಿಯವರ ದೊರತು ಇದಕ್ಕೆ ಯೋಗ್ಯರಾದವರೆಂದರೆ ವಲ್ಲಭಭಾಯಿಯವರ ಚಿರಂಜೀವರಾದ ಶ್ರೀ ದಹ್ಯಾಭಾಯಿಯವರೆಂದು ನಾನು ಸೂಚಿಸದೆ ಇರಲಾರೆ

[ಅ ಪ್ರೆ ತಂತಿ]

ಹಾಂಗೋಲ



ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಡಾ. ಕುಲಕರ್ಣೀಜ
ಲೆಬೋರೋಟರಿ ಮುಂಬೈ
ನಂಬ ೧೩
ಬಾಟ್ಲಿ ಕಿ. ೧-೧೨-೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಗರಗು, ಬಿಳೇಸರಗು, ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿದ್ದಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ ಬಾಣಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ.

ದಿ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ.
೧೮-೬

ಕನ್ನಡಿಗನ ಚಂದಾ ವಿವರ.

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦-೧೨-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೦-೫-೦	೯-೦-೦

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ
"ನೀಲಗಿರಿ ಎಣ್ಣೆ"

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದ್ದು ತಲೆಶೂಲೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಚುಗಿವ್ವು, ನೆಗಡಿ, ಕಿವಿ ಸೋರು ವಿಕೆ, ವಗೈರೆ ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವವು

ಏಜಂಟ:— ಜಿ. ಕೆ ಟೋಣಪಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಸಾರಿಸ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಒಳ್ಳೇ ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ. ಪಿ. ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ

ಮ್ಯಾನೇಜರ:-**ರಾಘವ ಫಾರ್ಮಸಿ ಗೋಕಾಕ**
ಜಿ ಬೆಳಗಾವ

ಕರ್ನಾಟಕ ಟಾಯಿಮ್ಸ.

ಸಂಪಾದಕರು:— **ಎಚ್ ಎಸ್ ಶಿವಲಿಂಗಶಾಸ್ತ್ರಿಗಳು.**

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ.

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಪಯುಕ್ತ ವಿಷಯಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವಿವಿಧ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ:— ಸ್ಥಳೀಕರಿಗೆ ರೂ ೨—೧೨—೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ ೩—೧೨—೦

ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸ ಕಾರ್ಯಾಲಯ ಧಾರವಾಡ

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ॥ ೨೫-೮ ೩೩ — **ಕೃಷ್ಣರಾವ ಅಂಕಲಿಗಿ**, ಮ್ಯಾನೇಜಿಂಗ ಡಾಯರೆಕ್ಟರ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. **ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ.** ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಕಿರ್ಲೋಸ್ಕರ



ಕಲ್ಯಾಣ ಶೇಂಗಾ ಯಂತ್ರ

——:(o):——

ಒಂದು ತಾಸಿನಲ್ಲಿ ೭೫ ರಿಂದ ೮೦ ಶೇರುಗಳ ವರೆಗೆ ಶೇಂಗಾಗಳನ್ನು ಒಡೆಯುವದು ಇದು ೫-೬ ಚೀಲ ಶೇಂಗಾ ಒಡೆಯುವದು ಹೆಚ್ಚಿನ ಮಾಹಿತಿ ಒಗ್ಗೆ ಈ ಕೆಳಗೆ ಬರೆರಿ

ಕಿರ್ಲೋಸ್ಕರ ಬಂಧುಗಳು ಲಿಮಿಟೆಡ್
ಕಿರ್ಲೋಸ್ಕರವಾಡಿ ಜಿ.(ಸಾತಾರಾ)

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩ **ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ**
ಕಹಾಪುರ ಪೇಟೆ ಗದಗ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾಗಾರಕ್ಕೇ ಬನ್ನಿರಿ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನೋಂ. ಬಿ. ೨೭೮೮

यथत् परवशं दुःख । यथदात्मवशं सुखम्॥ मनु

ನಿತ್ಯ ಪತ್ರ ಬೆಲೆ ೩ ಪೈ

ಇನ್ಸ್ಯೂರನ್ಸ
ವಿಮೆ ಇಳಿಸಲು
ಯುನಾಯಿಟೆಡ್
ಕರ್ನಾಟಕ ಇನ್ಸ್ಯೂರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನ್ಸ್ಯೂರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು—ಆಲೂರ ವೆಂಕಟರಾಯರು.

ಸೋಮ-ವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

[೧೦] ಧಾರವಾಡ— ಬುಧವಾರ ಕಾರ್ತಿಕ ಶುದ್ಧ ೧೪ ಶಕೆ ೧೮೫೫ ತಾ| ೧-೧೧-೩೩ [ಸಂಚಿಕೆ ೧೬೦

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿ
ಗಳಿಗಾಗಿ ಬರೆಯಿರಿ

ಧಾರವಾಡ
ತಾ|| ೨೫ ೮ ೩೩

ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

...ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ

(೧) ಬಿಳೀ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್ಆಯಿಲ್ ಮತ್ತು ಗ್ಯಾಸ್ ...ರ್ (೨) ಮುನಿಚ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯಿ...ನ್ ಹೊಸ ಮೋಟಾರ ಸಾಯಕಲ್ (೪) ಸಿಮೆಂಟ (೫) ಮೋಟಾರ ವ ಸ್ತು...ಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾ... ಸೋಲ ಏಜನ್ಸಿಗಳು ನಮ್ಮ ಕಡಿಗೆ ಇರುತ್ತವೆ

ನಮ್ಮ ಹದ್ದು:—

...ಳಿಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ ೨ ಮದ್ರಾಸ ಇಲಾಖೆ (೩) ಮೈಸೂರ ...ನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ...ದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರು... ಸಬ್ಬ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

...ಸೂ. ಬೇಕಾದರೆ ೧೫ ದಿವಸಗಳವರೆಗೆ
ಧಾರವಾಡ ಮಾಳಮಡ್ಡಿಯಲ್ಲಿರುವ
...ಹೀಕರ ವಕೀಲರ ಬಂಗ್ಲೆಯಲ್ಲಿ
ಭೆಟ್ಟಿಯಾಗಬಹುದು

ಹುಂಡೇಕರ ಯಳಲಾಸಪೂರ
ಕ್ಯಾಂಡ ಕೋ ದೇವಕರಣ ಮ್ಯಾನ್ಸನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

(ಬರೆದವ—ನಾಹು)

ಸಾಹಿತ್ಯ ಸಮ್ಮೇಳನವು ಎಂದು ಕೂಡು ವುದು, ಎಲ್ಲಿ ಕೂಡುವುದ ಎಂಬುದೇ ಮೊದಲು ಎಷ್ಟೋ ದಿನಗಳ ವರೆಗೆ ಗೊತ್ತಾಗುವದಿಲ್ಲ ಸ್ಥಳ ನಿರ್ಣಯವು ಆದ ಮೇಲೆ ಕಾಲನಿರ್ಣಯ ಕ್ಕೆ ಕೆಲವು ಕಾಲವು ಕಳೆದು ಹೋಗುತ್ತದೆ.

ಹಾಗೂ ಹೀಗೂ ಮಾಡಿ ಡಿಸೆಂಬರಿನಲ್ಲಿ ಕೊನೆಯವಾರದಲ್ಲಿ . ಯಲ್ಲಿ ಸಾಹಿತ್ಯ ಸಮ್ಮೇಳನವು ಸೇರುವುದು ' ಎಂದು ಒಂದು ಪ್ರಕಟನೆಯು ನವಂಬರ ಕೊನೆಯ ವಾರದಲ್ಲಿ ಹೊರಬೀಳುವುದು

ಆ ಮೇಲೆ ಅಧ್ಯಕ್ಷರು ಯಾರು? ಎಂಬ ಮಾತಿನ ವಿಚಾರಕ್ಕೆ ಆರಂಭ! ಸ್ವಾಗತ ಸಮಿತಿಯವರು ಮೂವರ ಹೆಸರುಗಳನ್ನು ಬೆಂಗಳೂರ ಸಾ ಪರಿಷತ್ಕಾರ್ಯಾಲಯಕ್ಕೆ ಬರೆದು ತಿಳಿಸಬೇಕು. ಪರಿಷತ್ತಿನ ಕಾರ್ಯದರ್ಶಿಗಳು ಆ ಮೂವರಲ್ಲಿ ಕ್ರಮವಾಗಿ ಒಬ್ಬೊಬ್ಬರನ್ನೇ ಪತ್ರವ್ಯವಹಾರ ಮೂಲಕ ಕೇಳಿ ಸಮ್ಮತಿಯನ್ನು ಪಡೆಯಬೇಕು!

ಇಷ್ಟೆಲ್ಲವೂ ಆಗುವದರೊಳಗಾಗಿ ಡಿಸೆಂಬರ ಕೊನೆಯ ವಾರವೆ ಬಂದು ಬಿಡುವುದು ಆ ಮೇಲೆ ತಂತಿಗಳ ಮೇಲೆ ಓಡಾಟಕ್ಕೆ ತೆರಪಿಲ್ಲ! ಅಂತೂ ಇಂತೂ ಒಂದು ವರವನ್ನು ಗೊತ್ತುಪಡಿಸಿ ಸಮ್ಮೇಲನದ ಮುಹೂರ್ತವನ್ನು ಸಾಧಿಸಿಕೊಂಡು ಬಿಡುವುದು? ' ಇನ್ನು ಹುಡುಗಿಯನ್ನು ಹೆಚ್ಚು ಕಾಲ ಮನೆಯಲ್ಲಿ ಇಟ್ಟುಕೊಳ್ಳುವ ಹಾಗಿಲ್ಲ ' ಎಂಬುವಂಥಹ ಸ್ಥಿತಿಯು ಬರುತ್ತಲೆ ಹಾದಿ ಹೋಕ ವರನನ್ನು ಹಿಡಿದು ತಂದು ಮಾಲೆ ಹಾಕಿ ಕಳಿಸುವ ಕನ್ಯಾಪಿತನಂತೆ ಸ್ವಾಗತಸಮಿತಿಯವರು ಸಾಧಾರಣವಾಗಿ ನಡೆದುಕೊಳ್ಳುವುದುಂಟ . ಇದರ ಅರ್ಥವು ಎಲ್ಲರೂ ಈ ವರೆಗೆ ಹೀಗೆಯೆ ಮಾಡಿದರು ಎಂದು ಮಾತ್ರ ತಿಳಿದುಕೊಳ್ಳಬಾರದು ಕಣ್ವಋಷಿಯು ಶಕುಂತಲೆಗೆ ಅಂದಂತೆ ಅಜ್ಞಾನದಿಂದ ಕಣ್ಣುಮುಚ್ಚಿಕೊಂಡು ಮಾಲೆ ಹಾಕಿದರೂ ಅದು ಒಳ್ಳೆಯ ವರನ ಕೊರಳಿಗೆ ಬಿದ್ದಿರುವುದು ನಿಜ. ಆದರೆ ಇನ್ನು ಮುಂದೆಯೂ ಹೀಗೆಯೆ ನಡೆದುಕೊಳ್ಳಬೇಕೆಂದು ಮಾತ್ರ ಯಾರೂ ಹೇಳಲಾರರು

ಸಮ್ಮೇಳನವು ಸೇರುವುದಕ್ಕೆ ಕನಿಷ್ಠ ಮೂರು ತಿಂಗಳಾದರೂ ಮೊದಲೆ ಅಧ್ಯಕ್ಷರು ಯಾರಾಗಬೇಕೆಂಬುದರ ನಿರ್ಣಯವು ಆಗಬೇಕೆಂದು ಪರಿಷತ್ತಿನ ನಿಯಮಾವಲಿಗಳಲ್ಲಿ ಒಂದು ನಿಬಂಧನೆಯಾಗುವ ಅವಶ್ಯಕತೆಯಿದೆ

ಅಧ್ಯಕ್ಷರು ಯಾರು ಆಗಬೇಕೆಂಬ ನಿರ್ಣಯವು ಮೊದಲೆ ಆಗಿ ಬಿಟ್ಟರೆ ಆ ಅಧ್ಯಕ್ಷರಾಗತಕ್ಕ ಸದ್ಗೃಹಸ್ಥರಿಗೂ ಸ್ವಲ್ಪ ಓದಿ ಅಭ್ಯಾಸ ಮಾಡಿ ತಮ್ಮ ಉಪನ್ಯಾಸವನ್ನು ಸಿದ್ಧಗೊಳಿಸಲಿಕ್ಕೆ ಅನುಕೂಲವಾಗುತ್ತದೆ ಇಲ್ಲವಿದ್ದರೆ ಉದ್ವಕ್ಕೆ ಹಾಗೆ ಬಂದು ಗಡಿಬಿಡಿಯಲ್ಲಿ (ಬರೆದ, ಬರೆಯಲಿಕ್ಕೆ ಬಹುತರ ಸಮಯ ಸಿಗುವುದೇ ಇಲ್ಲ) ವ್ಯಾಸ ಪೀಠದ ಮೇಲೆ ನಿಂತ ಉಂಟಾದ ಆವೇಶದಲ್ಲಿ ಉಪನ್ಯಾಸ ಮಾಡಿ ಹೋಗಬೇಕಾಗುವುದು.

ಸಾಹಿತ್ಯ ಸಮ್ಮೇಲನದ ಅಧ್ಯಕ್ಷರು ಎಂದ ಬಳಿಕ ನಾಲ್ಕೈದು ಬಾಳುವ ಹೊಸ ಹೊಸ ಸಿದ್ಧಾಂತಗಳನ್ನು ಇಲ್ಲವೆ ಹೊಸ ಹೊಸ ತಿಳುವಳಿಕೆಗಳನ್ನು ಬಿಡಿಸಿ ಜನರ ಮುಂದೆ ಇಡಬೇಕು ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಬೆಳಕನ್ನಿಕ್ಕುವ ಅಧ್ಯಕ್ಷೀಯ ಭಾಷಣಗಳು ಎಷ್ಟಿವೆ ನಮ್ಮಲ್ಲಿ? ನಾವು ಈ ಬಗೆಯ ಹ ನಿಗೆ ಒಳಗಾಗಬಾರದಾಗಿದ್ದರೆ ಅಧ್ಯಕ್ಷರನ್ನು ೩ ತಿಂಗಳ ಮೊದಲೆ ಆರಿಸಬೇಕು

ಇನ್ನೂ ಕೆಲವು ದೃಷ್ಟಿಯಿಂದಲೂ ಇದರಿಂದ ಲಾಭಗಳಿವೆ. ಅದನ್ನು ಇನ್ನೊಮ್ಮೆ ವಿಚಾರಿಸುವೆ

ಚಿತ್ರದುರ್ಗದ ಸಮಾಚಾರ.

ಈ ಊರಲ್ಲಿ ಪ್ಲೇಗು ಜಾಡ್ಯವು ಸುರುವಾಗಿ ೨-೩ ತಿಂಗಳಾಯಿತು ಈಗ ರೋಗದ ಸೋಂಕು ಎಲ್ಲಕಡೆಯಲ್ಲಿಯೂ ಹರಡುತ್ತಿದ್ದರಿಂದ ಜನರು ಊರು ಬಿಟ್ಟು ಗುಡಿಸಲುಗಳಲ್ಲಿ ಇರಹತ್ತಿದ್ದಾರೆ ಸ್ಥಳಿಕ ಸಂಸ್ಥೆಯವರು ಜನರ ಕ್ಷೇಮಕ್ಕಾಗಿ ಮುತುವರ್ಜಿಯಿಂದ ಕೆಲಸಮಾಡುತ್ತಿರುವರು

ಇಲ್ಲಿಯ ೧ನೇ ದರ್ಜೆಯ ನ್ಯಾಯಸ್ಥಾನದಲ್ಲಿ ಚಿತ್ರದುರ್ಗದ ಫಲಹಾರದ ಅಂಗಡಿಯ ಒಡೆಯರಾದ ನಾರಾಯಣಪ್ಪನವರು ಉಡುಪಿಯ ಪೇಜಾವರ ಮಠದ ಸ್ವಾಮಿಗಳಮೇಲೆಯೂ ಜಾವಡಗೇರಿಯ ಜಮದಗ್ನಿ ಶ್ರೀನಿವಾಸಚಾರ್ಯರ ಮೇಲೆಯೂ ಹೂಡಿರುವ ಮಾನನಷ್ಟದ ಮೊಕದ್ದಮೆಯು ಸುಮಾರು ೨ ವರ್ಷಗಳಿಂದ ನಡೆಯುತ್ತಲಿರುವದು ಜಮದಗ್ನಿ ಶ್ರೀನಿವಾಸರಾಯರು ಈ ಮೊಕದ್ದಮೆಯನ್ನು ಈ ನ್ಯಾಯಸ್ಥಾನದಿಂದ ಬೇರೊಂದು ನ್ಯಾಯಸ್ಥಾನಕ್ಕೆ ವರ್ಗಾಯಿಸಬೇಕಾಗಿ ಮೈಸೂರಿನ ಉಚ್ಚನ್ಯಾಯಸ್ಥಾನಕ್ಕೆ ಅರ್ಜಿಹಾಕಿಲುವದಾಗಿ ತಿಳಿದು ಬಂತು ಈ ಮೊಕದ್ದಮೆಯು ಇನ್ನೂ ಎಷ್ಟುದಿವಸ ನಡೆಯಬೇಕೋ!

ಸ್ವೀಕಾರ

೧ ಹುಬ್ಬಳ್ಳಿ ಮಹಾತ್ಮಾ ಗಾಂಧಿ ಸಂಘಾಲಕರು ಒಂದಾಣೆ ಮಾಲೆ, ಬೆಳಗಾವಿ
೨ ಅಸ್ಪೃಶ್ಯತಾ ನಿವಾರಣೆ, ಶ್ರೀ ಬಿ ಆರ್ ಕೇಶವರಾವ ಬಳ್ಳಾರಿ
೩ ಮುಗಿಲು ಶ್ರೀ ಗಾಂವಕರ, ಕನ್ನಡ ಸಾಹಿತ್ಯ ಸಂಘ, ಹುಬ್ಬಳ್ಳಿ
೪ ಮಳೆಗಾಲದ ಹಾಳೆಹಾಡು ಶ್ರೀ ದಿವೇಕರ ಕೃಷ್ಣರಾಯರು ಧರ್ಮಾಪತಿ
೫ ಸ್ವದೇಶಾಭಿಮಾನಿ, ದಸರೆಯ ವಿಶೇಷ ಸಂಚಿಕೆ

ವಿಮರ್ಶೆಯು ಯಥಾವಕಾಶ

...ನ್ನೆ ತಪ್ಪಲಿ! ಅಪೂರ್ವ ಸಂಧಿ!! ತ್ವರೆಮಾಡಿ!!!

...ಪೂರ್ಣ ನಾಟ್ಯಗೃಹದಲ್ಲಿ ತಾ|| ೩-೧೧-೩೩ ರಾತ್ರಿ ೧೦ ಗಂಟೆಗೆ

ಕನ್ನಡ ಅಮೇಚೂರ ಸಂಘದವರ

ನಾಟ್ಯಪ್ರಯೋಗ

ಸುಪ್ರಸಿದ್ಧ ನಟರಾದ ಬಳ್ಳಾರಿಯ ಶ್ರೀಮಾನ್ ಟಿ ರಾಘವಾಚಾರ್ಯರು
ಪಾತ್ರವನ್ನು ವಹಿಸುವರು

' ಹಿಂಚಣಿ ಹಾಕ್ಸರನ ಪೇಚಾಟ'' (ಇಂಗ್ಲೀಷ ಫಾರ್ಸ) (೨) 'ಹೋಮರೂಲು'

(೩) "ಹರಿಜನಸ್ವರ"

ಟಿ ಕೀಟು ಕರ್ನಾಟಕ ಸಾಹಿತ್ಯ ಮಂದಿರದಲ್ಲಿ ಸಿಕ್ಕುವವು

ಧೀರೇಂದ್ರ ಗುಂಡೀಕರ
ಕಾರ್ಯದರ್ಶಿ

ಕನ್ನಡಿಗ

ಬುಧವಾರ ತಾರೀಖು ೧-೧೧-೧೯೩೩

ಒಕ್ಕಟ್ಟಿನ ಆವಶ್ಯಕತೆ

ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ಇದು ಬಹಳ ಇಕ್ಕಟ್ಟಿನ ಸಮಯವು. ಏಕೆಂದರೆ, ಇತ್ತ ಸರಕಾರದ ಅತ್ಯುಗ್ರ ಮತ್ತು ಅತ್ಯಂತ ಅನ್ಯಾಯವಾದ ದಬ್ಬಾಳಿಕೆಯ ಧೋರಣದಿಂದ ರಾಷ್ಟ್ರೀಯ ಸಭೆಗೆ ಬಲವಾದ ಪೆಟ್ಟು ಬಿದ್ದಿದೆ. ಇತ್ತ ಆ ಪೆಟ್ಟಿನಿಂದ ಕಾಂಗ್ರೆಸ್ಸಿನೊಳಗಿನ ಈಗಿನ ಧೋರಣದಲ್ಲಿ ವಿಶ್ವಾಸವಿಲ್ಲದವರೂ, ವಿಶ್ವಾಸವಿದ್ದರೂ ಕೈಕಾಲು ಕಳೆದುಕೊಂಡವರೂ ಒಂದಿಲ್ಲೊಂದು ನೆವದಿಂದ ರಾಷ್ಟ್ರೀಯ ಸಭೆಯ ವಿರುದ್ಧವಾಗಿ ಹೂಲಿಯನ್ನೆಬ್ಬಿಸಿರುವರು. ರಾಷ್ಟ್ರೀಯ ಸಭೆಯ ವರ್ಚಸ್ಸಿಗೇ ಅವರಿಂದ ಕುಂದುಂಟಾಗಹತ್ತಿದೆ. ಇದು ಪ್ರತಿಯೊಬ್ಬನೂ ವಿಷಾದಪಡತಕ್ಕ ಸಂಗತಿಯು. ನಾವು ಹಿಂದಕ್ಕೆ ೨೯ ನೆಯ ಅಕ್ಟೋಬರ ತಾರೀಖಿನ ದಿವಸದ 'ಹೊಸ ಬಣಗಳ ಹೆದರಿಕೆ' ಎಂಬ ಸತ್ಯ ಅಗ್ರಲೇಖದಲ್ಲಿ ಬರೆದಂತೆ, ಎಲ್ಲಿ ನೋಡಿದಲ್ಲಿ ಹೊಸ ಬಣಗಳು ಹುಟ್ಟುವ ಹೆದರಿಕೆಯು ದಿನದಿನಕ್ಕೆ ಹೆಚ್ಚಾಗಹತ್ತಿದೆ. ಮುಂಬಯಿಯಲ್ಲಿ ಮೊನ್ನೆ ಅಕ್ಟೋಬರ ೨೮-೨೯ನೆಯ ತಾರೀಖುಗಳಲ್ಲಿ ಕೂಡಿದ ಬೃಹನ್ಮಹಾರಾಷ್ಟ್ರ ಪರಿಷತ್ತಿನಲ್ಲಿ ಆದ ಗೊತ್ತುವಳಿಗಳಿಂದ ನಮ್ಮ ಈ ಹೆದರಿಕೆಯೂ ಕಡಿಮೆಯಾಗುವಂತಿಲ್ಲ. ಈ ಸಭೆಯವರು ರಾಷ್ಟ್ರೀಯ ಸಭೆಯ ಧ್ಯೇಯವನ್ನೇ ಅಂಗೀಕರಿಸಿರುವದೂ, ಆ ಪಕ್ಷವು ರಾಷ್ಟ್ರೀಯ ಸಭೆಯೊಳಗಿನದೇ ಒಂದು ಒಳಪಕ್ಷವಾಗಿರಬೇಕೆಂದು ಗೊತ್ತುಪಡಿಸಿರುವದೂ ಇದ್ದದ್ದರಲ್ಲಿಯೇ ಸಮಾಧಾನಕರವಾದ ಸಂಗತಿಯೇ ಸರಿ. ಏಕೆಂದರೆ, ನಾವು ಹಿಂದೆ ಹಿಂದೆ ಪ್ರತಿಪಾದಿಸುತ್ತ ಬಂದಿರುವಂತೆ ಪ್ರತಿಯೊಬ್ಬ ಹಿಂದೀ ಮನುಷ್ಯನು ಅವಶ್ಯವುಳ್ಳಾಗ ರಾಷ್ಟ್ರೀಯ ಸಭೆಯೊಳಗಿದ್ದೇ ಒಗ್ಗೂಡಬೇಕಲ್ಲದೆ, ಒಡೆದು ಹೋಗಿ ಹೊರಗೆ ನಿಂತು ಹೊಸ ಪಕ್ಷವನ್ನು ಸ್ಥಾಪಿಸಕೂಡದು. ಆದುದರಿಂದ ಈಗ ಮುಂಬಯಿಯಲ್ಲಿ ಹುಟ್ಟಿದ ಡೆಮೊಕ್ರೆಟಿಕ ಸ್ವರಾಜ್ಯ ಪಕ್ಷದವರು ನಿರ್ಣಯಿಸಿದ್ದು ಇಷ್ಟರಮಟ್ಟಿಗೆ ಯೋಗ್ಯವೇ ಆಯಿತು. ಆದರೆ ರಾಷ್ಟ್ರೀಯ ಸಭೆಯ ಒಳಸಂಸ್ಥೆಗಳು ಬೇಕಾಯಿದೇಶೀರವೆಂದು ಈಗ ಸರಕಾರದವರು ನಿರ್ಣಯಿಸಿದ್ದು ರದ್ದು ಆಗುವವರೆಗೆ ಮಾತ್ರ ಡೆಮೊಕ್ರ್ಯಾಟಿಕ ಸ್ವರಾಜ್ಯ ಪಕ್ಷದ ಸದಸ್ಯನು ರಾಷ್ಟ್ರೀಯ ಸಭೆಯ ಸದಸ್ಯನಿರಲೇ ಬೇಕೆಂದು ನಿರ್ಬಂಧವಿಲ್ಲವೆಂದು ಈ ಸಭೆಯವರು ಗೊತ್ತುವಳಿಯನ್ನು ಮಾಡಿರುವದರಿಂದ ಸದ್ಯಕ್ಕಂತೂ ಅವರು ರಾಷ್ಟ್ರೀಯ ಸಭೆಯ ಹೊರಗೆ ನಿಂತು ಕಾರ್ಯಮಾಡುವವರೆಂದು ಹೇಳಿದಂತಾಯಿತು. ಇದು ಸರಿಯಾಗಲಿಲ್ಲ. ಏಕೆಂದರೆ ಪಂಡಿತ ಜವಾಹಿರಲಾಲ ಇವರು ಈಗ ತುರ್ತು ಆಲ್ ಇಂಡಿಯಾ-ಕಾಂಗ್ರೆಸ ಕಮಿಟಿಯನ್ನು ಕರೆಯಬಹುದುದೆಂದು ತೋರುತ್ತದೆ. ಏಕೆಂದರೆ ಸ್ವಾಮಿ ಗೋವಿಂದಾನಂದ ಇವರು ಬರೆದ ಪತ್ರಕ್ಕೆ ಅವರು ಕೊಟ್ಟ ಉತ್ತರದಿಂದ ಈಗ ಪಂಡಿತ ಜವಾಹಿರಲಾಲ ಇವರು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ತೀವ್ರವೇ ಕರೆಯಬಹುದೆಂದು ಊಹಿಸಲು ಅಡ್ಡಿ ಇಲ್ಲ. ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕರೆಯುವದಕ್ಕೆ ಬೇಕಾಗುವ ಕನಿಷ್ಠ ಸಂಖ್ಯೆಯ ಸಹಿಗಳನ್ನು ಮಾಡಿಯೇ ಅರ್ಜಿಯನ್ನು ಕಳಿಸಲಿಕ್ಕೆ ಕಾರಣವಿಲ್ಲವೆಂದೂ ಆಯಾ ಜನರು ಪ್ರತ್ಯೇಕವಾಗಿ ಸಹಿಗಳನ್ನು ಕಳಿಸಿದರೆ ಸಾಕೆಂದು ಹೇಳಿರುವರು. ಹೀಗೆ ಆಲ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ತೀವ್ರವೇ ಕೂಡಿಸಿ ಬಿಟ್ಟರೆ ಅರ್ಧಕ್ಕರ್ಧ ಜಗಳಗಳು ಕಡಿಮೆಯಾಗಬಹುದು. ಆ ಬಳಿಕ ಪಂಡಿತ ಜವಾಹಿರಲಾಲ ಜನರಲ್ ಸೆಕ್ರೆಟರಿಯವರೆಂದು ಸಭೆ ಕೂಡಿಸದಿದ್ದ ದೋಷವು ಹೊರಟುಹೋಗುವದು. ಹೀಗೆ ಡೆಮೊಕ್ರ್ಯಾಟಿಕ್ ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದವರು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಕೂಡಿಸುವ ಪ್ರಯತ್ನವನ್ನು ಮಾಡಿದರೆ ಒಳಿತಾಗುತ್ತಿತ್ತೆಂದು ನಮ್ಮ ಅಭಿಪ್ರಾಯ. ಹಾಗೆ ಮಾಡುವದನ್ನು ಬಿಟ್ಟು ಹೊಸ ಬಣದ ಆವಶ್ಯಕತೆ ಏನಿತ್ತು? ಇರಲಿ. ಈಗ ಮದನಮೋಹನ ಮಾಲವೀಯರು ಇಚ್ಛಿಸಿದಂತೆ ಕಾಂಗ್ರೆಸ್ಸಿನ ಒಳಗಿನ ಮತ್ತು ಹೊರಗಿನ ಎಲ್ಲ ಪಕ್ಷಗಳನ್ನು ಒಂದೆಡೆಗೆ ಕೂಡಿಸಿ ಅಲ್ಲಿ ಇಡೀ ಹಿಂದುಸ್ಥಾನದ ಒಕ್ಕಟ್ಟನ್ನು ಮಾಡಿದರಂತೂ ಬಂಗಾರವೇ ಆಗುವದು.

ನ್ಯಾಯಿಸರಾಯರು ಇಂಗ್ಲಂಡಕ್ಕೆ ಹೋಗುವರು

ಹೊಸದಿಲ್ಲಿ ತಾ|೨೯— ನ್ಯಾಯಿಸರಾಯ ಲಾರ್ಡ ವೆಲಿಂಗ್ಡನ್ನರು ಬರುವ ಎಪ್ರಿಲ್ ತಿಂಗಳ ಕೊನೆ ಮೇ ತಿಂಗಳದಲ್ಲಿ ನಾಲ್ಕು ತಿಂಗಳ ರಜ ತೆಗೆದುಕೊಂಡು ವಿಲಾಯತಿಗೆ ಹೋಗುವವರಿದ್ದಾರಾಗಿ ತಿಳಿಯುತ್ತದೆ. ಅವರ ಸಂಗಡ ಅವರ ಪತ್ನಿ, ಅವರ ಖಾಸಗಿ ಕಾರ್ಯದರ್ಶಿ ಮತ್ತು ಇತರ ಕೆಲವು ಅಧಿಕಾರಿಗಳಾದವರೂ ಹೋಗಬಹುದು.

ಕಾಂಗ್ರೆಸ್ಸು ಸತ್ತಿರುವದಿಲ್ಲ.

ಕಲಕತ್ತಾ, ತಾ|೨೯— ವಿಠ್ಠಲ ಭಾಯಿ ಪಟೇಲರವರ ನಿಧನದ ಬಗ್ಗೆ ದುಃಖವನ್ನು ವ್ಯಕ್ತಪಡಿಸುವದಕ್ಕೆ ಹೌರಾ ನಗರ ಭವನದಲ್ಲಿ ಶನಿವಾರ ದಿವಸ ಸಭೆ ಕೂಡಿತು. ಮೇಯರರಾದ ಶ್ರೀ ಸಂತೋಷ ಕುಮಾರ ಬಸು ಇವರು ಅಧ್ಯಕ್ಷರಾಗಿದ್ದರು. ಅವರು ತಮ್ಮ ಭಾಷಣದಲ್ಲಿ ವಿಠ್ಠಲಭಾಯಿಯವರ ಗುಣವರ್ಣನೆ ಮಾಡಿ, ಈ ಬಳೀಕ ಈಗಿನ ಯುಗದಲ್ಲಿ ಯಾವತ್ತರೂ ಕಾಂಗ್ರೆಸ್ಸನ್ನು ಹಿಂಬಾಲಿಸದೆ ಹೋದರೆ ಗತ್ಯಂತರವಿಲ್ಲವೆಂದು ನುಡಿದರು. ಮತ್ತು ಕಾಂಗ್ರೆಸ್ಸು ಸತ್ತಿರುವದಿಲ್ಲವೆಂದೂ, ಅದು ಸಾಯುವದು ಶಕ್ಯವಿಲ್ಲವೆಂದೂ ಒಬ್ಬನೇ ಒಬ್ಬ ಭಾರತೀಯನು ಜೀವಿಸಿರುವ ವರೆಗೂ ಅದಕ್ಕೆ ಮರಣವೆಂಬುದು ಇಲ್ಲವೆಂದೂ ಅವರು ಹೇಳಿದರು. ಆ ಬಳಿಕ ಜೆ. ಸಿ. ಗುಪ್ತ ಇವರ ಭಾಷಣವಾಗಿ ವಿಷಾದ ಪ್ರದರ್ಶಕ ನಿರ್ಣಯವು ಪಾಸು ಮಾಡಲ್ಪಟ್ಟಿತು.

ಮಹಾತ್ಮರ ಕಾರ್ಯಕ್ರಮ.

ಲಖನೌ ತಾ||— ಮಹಾತ್ಮಾ ಗಾಂಧಿಯವರು ಜಾನೇವಾರಿ ೨ ನೆ ವಾರದಲ್ಲಿ ಸಂಯುಕ್ತ ಪ್ರಾಂತದ ಪ್ರವಾಸವನ್ನು ಪ್ರಾರಂಭಮಾಡಿ, ಫೆಬ್ರುವರಿ ೪ ನೇ ತಾರೀಖಿಗೆ ಈ ಪ್ರಾಂತದ ಪ್ರವಾಸವನ್ನು ಮುಗಿಸುವರು. ಆ ಬಳಿಕ ಅವರು ತಾ ೧೧ ರ ವರೆಗೆ ಅಲಹಾಬಾದದಲ್ಲಾಗಲಿ ಇಲ್ಲವೆ ಮತ್ತಾವದಾದರೂ ಯೋಗ್ಯ ಸ್ಥಳದಲ್ಲಿ ವಿಶ್ರಾಂತಿ ತೆಗೆದುಕೊಂಡು ಬಿಹಾರಕ್ಕೆ ಹೊರಡುವರು.

ಸುಭಾಸಚಂದ್ರರ ಪ್ರಕೃತಿ.

ಜಿನೀವಾ ತಾ|| ೨೯— ಸುಭಾಸಚಂದ್ರ ಬೋಸ ಇವರು ದಿವಂಗತ ವಿಠ್ಠಲಭಾಯಿಯವರ ಕಳೇಬರವನ್ನು ಮಾರ್ಸೇಲಿಸಕ್ಕೆ ಮುಟ್ಟಿಸಿ ಇಲ್ಲಿಗೆ ತಿರುಗಿ ಬಂದಿರುವರು.

ಅವರ ಪ್ರಕೃತಿಯು ಪುನಃ ಸೂಕ್ಷ್ಮವಾಗಿರುವದರಿಂದ ಡಾಕ್ಟರರು ಅವರಿಗೆ ವೈದ್ಯಕೀಯ ಸಲಹೆಗಾಗಿ ಸ್ವಿಟ್ಸರ್ಲಂಡದ ಒಂದು ಆಸ್ಪತ್ರೆ ಸ್ಥಾನಕ್ಕೆ ಹೋಗಲು ಹೇಳಿಕೊಂಡಿದ್ದಾರೆ.

ಕೋಬೆ ಹಿಂದೀ ಜನರ ದುಃಖಪ್ರದರ್ಶನ.

ಕೋಬೆ ತಾ. ೨೯— ಇಲ್ಲಿಯ ಹಿಂದೀ ಜನರು ವಿಠ್ಠಲಭಾಯಿಯವರ ನಿಧನದ ಬಗ್ಗೆ ದುಃಖಪ್ರದರ್ಶನ ಮಾಡಲು ಈ ಹೊತ್ತಿನ ದಿವಸ ಸಭೆಯಲ್ಲಿ ಸೇರಿದ್ದರು. ವಿಠ್ಠಲಭಾಯಿಯವರ ನಿಧನದಿಂದ ಭಾರತ ಸ್ವಾತಂತ್ರ್ಯವೀರನ ಕಣ್ಮರೆಯಾಗಿ ಹಿಂದಿ ಸ್ಥಾನಕ್ಕೆ ಅಪಾರವಾದ ಹಾನಿಯಾಯಿತೆಂದು ಸಭೆಯಲ್ಲಿ ನಿರ್ಣಯವಾಯಿತು.

ಶ್ರೀಮತಿ ಕಮಲಾದೇವಿಯವರು.

ಗುಂಟೂರು ತಾ| ೨೯— ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಅವರೊಂದಿಗೆ ಸೆರೆಗೊಳಗಾದ ಬೇರೆ ಇಬ್ಬರು ಸ್ವಯಂಸೇವಕರನ್ನು ಪೋಲೀಸ ಅಧಿಕಾರಿಗಳು ಈ ಹೊತ್ತಿನ ದಿವಸ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ಅವರೆಲ್ಲರನ್ನು ಇನ್ನು ೧೦ ದಿವಸ ಹಾಗೆಯೆ ಕೈದಿನಲ್ಲಿಡಲು ಅಪ್ಪಣೆ ವಿಧಿಸಿದರು.

ಇವರ ಮೇಲೆ ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ೧೭ (೧) ನೇ ಕಲಮಿನ ಅನ್ವಯ ಖಟ್ಲೆ ನಡೆಯುವದೆಂದು ತಿಳಿಯುತ್ತದೆ.

ಆರೋಪಿಗಳು ವಕೀಲರ ಮೂಲಕ ಮಾಡಿಕೊಂಡ ಜಾಮೀನಿನ ಅರ್ಜಿ ವಿಚಾರಣೆಯು ನಾಳಿನ ದಿವಸ ಆಗುವದನ್ನು, ಮ್ಯಾಜಿಸ್ಟ್ರೇಟರು ಪೋಲೀಸರಿಗೆ ಈ ಬಗ್ಗೆ ನೋಟೀಸು ತೆಗೆದಿದ್ದಾರೆ.

ಕೇಳಕರ ಸಂಗಡದ ಅಧಿಕಾರಿಗಳು

ಹೋದ ಸಂಡೇ ತಾರೀಖಿನ ದಿವಸ ಮುಂಬಯಿಯಲ್ಲಿ ಕೂಡಿದ ಬೃಹನ್ಮಹಾರಾಷ್ಟ್ರ ರಾಜಕೀಯ ಪರಿಷತ್ತಿನಲ್ಲಿ ಸ್ಥಾಪಿತವಾದ ಡೆಮೊಕ್ರೆಟಿಕ ಸ್ವರಾಜ್ಯ ಪಕ್ಷಕ್ಕೆ ಕೆಳಗಿನ ಸದ್ಗೃಹಸ್ಥರು ಅಧಿಕಾರಿಗಳಾಗಿ ಆರಿಸಲ್ಪಟ್ಟಿದ್ದಾರೆ.

೧ ಶ್ರೀ ನರಸೋಪಂತ ಕೇಳಕರ, ಅಧ್ಯಕ್ಷರು ೨ ಆರ್ ಎಂ ದೇಶಮುಖ, ಕಾರ್ಯಕಾರಿ ಮಂಡಳದ ಅಧ್ಯಕ್ಷರು ೩ ಜಮನಾದಾಸ ಮೆಹತಾ ಜನರಲ್ ಸೆಕ್ರೆಟರಿ, ೪ ಶ್ರೀ ವಂಡಲೀಕ ೫ ರಾಜಮಾಚೆ ೬ ಬಾಮಣಗಾಂವಕರ ೭ ಓಗಲೆ ಇವರು ಗೌಣ ಕಾರ್ಯದರ್ಶಿಗಳು ೮ ಬಿ ವ್ಹಿ ಗೋಖಲೆ ೯ ಜೆ ವ್ಹಿ ಸಾವರಕರ, ಕೋಶಾಧಿಕಾರಿಗಳು.

ಕರ್ನಾಟಕದ ಆರೋಗ್ಯ

[ಅಕ್ಟೋಬರ ೧೪ರಿಂ೨೧]

ಸರಕಾರಿ ಸಂದಿಯಿಂದ

ಪ್ಲೇಗು—	ಬಂದದ್ದು	ಸತ್ತದ್ದು
ವಿಜಾಪುರ ಜಿಲ್ಲೆ	೪೨೪	೨೯೬
ಬೆಳಗಾವಿ ಜಿಲ್ಲೆ	೨೧೯	೧೫೫
ಧಾರವಾಡ ಜಿಲ್ಲೆ	೨೧೭	೧೧೭
ಸೊಲ್ಲಾಪುರ	೭೫	೪೭

ಮಾರಿಕಾ ಜೇನೆಯಿಂದ ವಿಜಾಪುರ ಜಿಲ್ಲೆಯಲ್ಲಿ ೨೪ ಜನರೂ, ಬೆಳಗಾವಿ ಜಿಲ್ಹೆಯಲ್ಲಿ ೫೯ ಜನರೂ, ಸೊಲ್ಲಾಪುರ ಜಿಲ್ಹೆಯಲ್ಲಿ ೧೧ ಜನರೂ ಸತ್ತರು. ವಿಜಾಪುರ, ಬೆಳಗಾವ ಮತ್ತು ಸೊಲ್ಲಾಪುರ ಈ ಜಿಲ್ಹೆಗಳಲ್ಲಿ ಕ್ರಮವಾಗಿ [೬೨] [೮೭] [೪] ಜನರಿಗೆ ಮಾರಿಕಾ ಅಂಟಿಗೊಂಡಿತ್ತು.

ಪೈಲಿ ಜೇನೆಯು ಧಾರವಾಡ ಜಿಲ್ಹೆಯಲ್ಲಿ ೩೦ ಜನರಿಗೆ ಬಂದಿತ್ತು. ೩ ಜನರು ಸತ್ತರು. ಕಾರವಾರ ಜಿಲ್ಹೆಯಲ್ಲಿ ೨೩ ಜನರಲ್ಲಿ ಒಬ್ಬನು ಸತ್ತನು. ವಿಜಾಪುರ ಜಿಲ್ಹೆಯಲ್ಲಿ ಇಬ್ಬರಿಗೆ ಬಂದಿದೆ.

ಇಹವೃತ್ತ.

ಧಾರವಾಡ- ಹುಬ್ಬಳ್ಳಿಗಳ ನಡುವೆ ರಿಟರ್ನ ತಿಕೀಟು ಇಡುವದರಿಂದ ಕಂಪನಿಗೆ ಹಾನಿ ಆಗುವದಿಲ್ಲೆಂದು ಹುಬ್ಬಳ್ಳಿಯ ಡಿ. ಟಿ. ಎಸ್. ರು 'ಕನ್ನಡಿಗ' ನಿಗೆ ಬರೆದು ತಿಳಿಸಿದ್ದಾರೆ.

ಕರ್ನಾಟಕ ವಿದ್ಯಾವರ್ಧಕ ಸಂಘವು ಓರ್ವ ಪ್ರಚಾರಕನನ್ನು ತಮ್ಮ ಧ್ಯೇಯ ಪ್ರಸಾರಕ್ಕಾಗಿ ನೇಮಿಸಬೇಕೆಂದು ಮಾಡಿದ್ದಾರೆ.

ನಾ. ದಿ. ಬ. ಕಂಬಳಿಯವರು ... ದಿವಸ ಈ ಊರಿಗೆ ಬಂದು ೬ ದಿನ ಇರಲಿದ್ದಾರೆ.

ಪೆನಶನ್ ಮಾಮಲೇದಾರರಾದ ಶ್ರೀ ಕೋಳಿ ತಿರುಮಲರಾಯರನ್ನು ಧಾರವಾಡ ಬ್ಯಾಂಕಿನವರು ತಮ್ಮ ಆಡಳಿತ ಕರಜನ್ನಾಗಿ ವಸೂಲಿಯ ಅಧಿಕಾರಿಗಳನ್ನಾಗಿಯೂ ನೇಮಿಸಿಕೊಂಡಿದ್ದಾರೆ. ಶ್ರೀ ತಿರುಮಲರಾಯರ ದಾಕ್ಷಿಣ್ಯದಿಂದ ಕೆಲಸ ಮಾಡತಕ್ಕವರಿಂದ ಬ್ಯಾಂಕಿನ ಕೆಲಸವು ಇನ್ನಾದರೂ ಸುಸಂಘಟಿತವಾಗಿ ಸಾಗುವದೆಂದು ಆಶಿಸುತ್ತೇವೆ.

ಸಾಹಿತ್ಯ ಚಟುವಟಿಕೆಗಳು.

ಮೈಸೂರ ವಿಶ್ವವಿದ್ಯಾನಿಲಯದ ... ಯದಲ್ಲಿ ಶ್ರೀ ಬಿ. ಎಂ. ಶ್ರೀ ಕಂಠಯ್ಯನವರು ಕೋಲಾರದ ನಗರ ಭವನದಲ್ಲಿ ೨೭ ನೆ ಶುಕ್ರವಾರ ಮತ್ತು ೨೮ ನೆ ಶನಿವಾರ ಸಂಜೆ ... ಘಂಟೆಗೆ 'ಪ್ರಾಚೀನ ಮತ್ತು ಆಧುನಿಕ ಕನ್ನಡ ಸಾಹಿತ್ಯದ ಚಲನ ವಲನಗಳು' ಎಂಬ ವಿಷಯವಾಗಿ ಎರಡು ಭಾಷಣಗಳನ್ನು ಮಾಡಿದರು.

ಪಂಡಿತ ರಘುಪತ್ಯಾಚಾರ್ಯರು (ಮೈಸೂರು) ಕನ್ನಡ ನಿಘಂಟುವೊಂದನ್ನು ಬಹಳ ಕಾಲದಿಂದ ಪ್ರಯತ್ನ ಮಾಡಿದ್ದಾರೆ. ಮೂರು ಭಾಗಗಳಾಗಿವೆ. ... ಗಗಳಲ್ಲಿ ಈ ನಿಘಂಟನ್ನು ಮುಗಿಸುವ ಯೋಜನೆ ಮಾಡಿದ್ದಾರೆ.

ಬೆಳಗಾಂವಿಯಲ್ಲಿ ಕನ್ನಡ ಸಾಹಿತ್ಯ ಮತ್ತು ಲಲಿತ ಕಲೆಗಳ ಸೇವೆಗಾಗಿ ಕೆಲವು ತರುಣರು 'ಕಲಾಸಂಘ' ಒಂದನ್ನು ಸ್ಥಾಪಿಸಿದರು. ... ಕವಿಯ ವಿಮರ್ಶಗ್ರಂಥ ಪ್ರಕಟ ಮಾಡಬೇಕೆಂದು ಗೊತ್ತು ಮಾಡಿರುವರು.

ಮುಂಬಯಿಯಲ್ಲಿ ಡಿಸೆಂಬರ್ ತಿಂಗಳಲ್ಲಿ 'ಕವಿ ರವೀಂದ್ರರ ವಾರ' ಎಂಬ ಒಂದು ಸಾಹಿತ್ಯೋತ್ಸವವನ್ನು ನಡೆಸುವ ಏರ್ಪಾಡು ನಡೆಯುತ್ತದೆ. ಆ ಕಾಲಕ್ಕೆ ರವೀಂದ್ರರು ಭಾರತೀಯ ವಿದ್ಯಾರ್ಥಿಗಳೊಂದಿಗೆ ಬಂದು ಉತ್ಸವದಲ್ಲಿ ಭಾಗಿಗಳಾಗುವರಂತೆ.

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡೇವ ಕ್ತ ಕಂಪನಿ)

ಹುಬ್ಬಳ್ಳಿ ತಾ|| ೩೦ ಮಧ್ಯಾಹ್ನ ೧೧ ಗಂಟೆ

ಜಯವಂತ ಹತ್ತಿ	೧೮೩ ೧೮೩	ಜೋಳ	[illegible]
ಅಪ್ಲೆಂಡ ,,	೧೭೩ ೧೮೩	ಗೋದಿ	[illegible]
ವಿಲಾಯತಿ ,,	೯೫ ೯೭	ಉದ್ದು	[illegible]
ಸಮ್ಮಿಶ್ರಿತ ,,	೧೦೭–೧೧೦	ಕಡ್ಲಿ	[illegible]
ಶೇಂಗಾ	೭೩-೭೪	ಕಡ್ಲಿ ...	[illegible]
ದಪ್ಪಲಕಾಳು ಅ	೬೬-೬೭	ಕುಸಬಿ	[illegible]
ಸಾಳಿವ ಅರಳೆ	೬೬-೬೭	ಹುರಳಿ	[illegible]
ಹೆಸರು ಅರಾರಿ	೯ ೧೨		
ಶೇಂಗಾ-ಯ ಹೆ	೪||-೪||	... ಕಾಳು	[illegible]

ಬೆಳ್ಳಿ ಬಂಗಾರ

ಬಂಗಾರ	೩೨||-	ಬೆಳ್ಳಿ

ಡಾ. ಪಟ್ಟಾಭಿಯವರಿಗೆ ಪುನಃ ಶಿಕ್ಷೆ.

"ಕನ್ನಡಿಗ" ನಿಗಾಗಿ ತರಿಸಿದ 'ಅಸೋಶಿಯೇಟೆಡ್ ಕಂಪನಿ'ಯ ತಂತಿಗಳು

ಪಟ್ಟಾಭಿಯವರಿಗೆ ಪುನಃ ಶಿಕ್ಷೆ.

ಮಚಲಿ ಪಟ್ಟಣಮ್ ತಾ|| ೩೦—ಕಾಂಗ್ರೆಸ್ ವರ್ಕಿಂಗ ಕಮಿಟಿಯ ಮೊದಲಿನ ಸಭಾಸದರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಈ ಹೊತ್ತಿನ ದಿನ ಪರದೇಶಿ ಬಟ್ಟೆಯ ಅಂಗಡಿಯ ಮುಂದೆ ಪಿಕೆಟಿಂಗ ಪ್ರಾರಂಭಿಸಿದ್ದರು. ಪೋಲೀಸ ಅಧಿಕಾರಿಗಳು ಕೂಡಲೆ ಅವರನ್ನು ಬಂಧಿಸಿ ಸಬ್ ಡಿವ್ಹಿಜನಲ್ ಮ್ಯಾಜಿಸ್ಟ್ರೇಟ ಮುಂದೆ ವಿಚಾರಣೆಗೆ ನಿಲ್ಲಿಸಿದರು. ಮ್ಯಾಜಿಸ್ಟ್ರೇಟರು ಅವರಿಗೆ ೬ ತಿಂಗಳ ಕಠಿಣ ಕೈದು ಹಾಗು ೫೦೦ ರೂಪಾಯಿ ದಂಡ ಹೀಗೆ ಶಿಕ್ಷೆ ವಿಧಿಸಿದರು.

(ಅ ಪ್ರೆ ತಂತಿ)

ಮತ್ತೆ ಸರ್ವಪಕ್ಷೀಯ ಪರಿಷತ್ತು.

ಡೆಹರಾಡೂನ್ ತಾ೩೧— ಪಂಡಿತ ಮದನಮೋಹನ ಮಾಲವಿಯಾ ಇವರು ಪತ್ರಿಕಾ ಪ್ರತಿನಿಧಿಗಳ ಮುಂದೆ ಈ ಹೊತ್ತಿನ ದಿವಸ ಹೇಳಿದೇನಂದರೆ—ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯನ್ನು ಕರೆಯಬೇಕಾಗಿ ನಾ ಪತ್ರ ಪಾಸದರಿಂದ ಅರ್ಜಿಯು ಎಂವಲ್ಲಿ ತಾವು ಅದನ್ನು ಕೂಡಿಸಲು ತಾವು ಸಿದ್ಧರಿರುವದಾಗಿ ಪಂಡಿತ ಜವಾಹಿರಲಾಲರು ಅಭಿಪ್ರಾಯ ವ್ಯಕ್ತ ಮಾಡಿರುವರು. ಕಾಂಗ್ರೆಸ್ ಜನರು ಈ ವಿಷಯವಾಗಿ ತನ್ನೊಂದು ಉತ್ಸಾಹವುಳ್ಳವರಾಗಿಲ್ಲವೆಂಬ ಅವರ ಅಭಿಪ್ರಾಯವಾಗಿದೆ. ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ ಯಾವತ್ತು ರಾಷ್ಟ್ರೀಯ ರಾಜಕೀಯ ಪಂಗಡದವರು ಯಾವದೇ ಒಂದು ಸಂಘಟಿತವಾದ ಕಾರ್ಯಕ್ರಮವನ್ನು ಗೊತ್ತು ಮಾಡಿಕೊಂಡಲ್ಲಿ ಅದು ಕೇವಲ ನಾತ್ತ್ವಿಕವಾದದ್ದಾಗುವದೆಂದು ಒಂದು ಪಕ್ಷದವರ ಅಂಬೋಣವಿದೆಯೆಂದು ಪಂಡಿತ ಜವಾಹಿರರು ಹೇಳುತ್ತಾರೆ. ಯಾಕಂದರೆ ಸರ್ವಪಕ್ಷೀಯ ಪರಿಷತ್ತು ಪುನಃ ಕೂಡಿದಲ್ಲಿ ಅಲ್ಲಿ ಈ ಪ್ರಶ್ನೆಯ ಬಗ್ಗೆ ಪುನಃ ವಿಚಾರ ಮಾಡಲೇಬೇಕಾಗುವದು. ಆದ್ದರಿಂದ ಆಲ ಇಂಡಿಯಾ ಕಾಂಗ್ರೆಸ್ ಕಮಿಟಿಯನ್ನು ಕರೆದು ಕಾಂಗ್ರೆಸ್‌ನರ ಮೇಲೆ ಅನವಶ್ಯಕವಾದ ಭಾರವನ್ನು ಹೇರುವದು ತಮಗ ಸರಿದೋರುವದಿಲ್ಲವೆಂದು ಪಂಡಿತ ಜವಾಹಿರರ ಮತವಾಗಿದ

ಪಂಡಿತ ಜವಾಹಿರರ ಈ ವಿಚಾರ ಸರಣಿ ವಿಚಾರಣೀಯವಾಗಿದೆ. ಕಳೆದ ನವ್ಹೆಂಬರ ಹಾಗೂ ಡಿಸೆಂಬರ ತಿಂಗಳದಲ್ಲಿ ಅಲಹಾಬಾದದಲ್ಲಿ ಒಂದು ಸರ್ವ ಪಕ್ಷೀಯ ಪರಿಷತ್ತು ಕೂಡಿತ್ತು. ಅದು ಆಗ ಮುಂದರಿಸಲ್ಪಟ್ಟಿದ್ದು ಈಗಿನ ತನಕ ಪುನಃ ಕೂಡಿರುವದಿಲ್ಲ. ಈ ಸಮಯದಲ್ಲಿ ಹೊಸ ತಳಹದಿಯ ಮೇಲೆ ಆ ಪರಿಷತ್ತಿನ ಕೂಗಲಿ ಇಲ್ಲವೆ ರಾಷ್ಟ್ರೀಯ ಪರಿಷತ್ತನ್ನಾಗಲಿ ಕೂಡಿಸುವದು ಅವಶ್ಯವಿದೆಯೆಂದು ಕೆಲವರು ವಿಚಾರ ಮಾಡಿಕೊಂಡಿರುತ್ತಾರೆ.

ಯಾವದಾದರೂ ಒಂದು ಸಂಘಟಿತವಾದ ಕಾರ್ಯಕ್ರಮವನ್ನು ಗೊತ್ತು ಮಾಡುವದು ಅವಶ್ಯವಾಗಿದೆಯೆಂದು ಪಂಡಿತ ಮಾಲವೀಯರಿಗೆ ತೋರಿ ಬಂದಿದ್ದರಿಂದ, ಅವರು ಬೇರೆ ಬೇರೆ ಮೂರು ಪಂಗಡಗಳ ಮುಖಂಡರೊಡನೆ ಪತ್ರವ್ಯವಹಾರ ಸುರುವು ಮಾಡಿದ್ದಾರೆಂದೂ ಇತ್ತು ಈ ವಿಷಯವಾಗಿ ಅವರ ಅಭಿಪ್ರಾಯಗಳನ್ನು ವಿಚಾರಿಸಿದ್ದಾರೆಂದೂ ಅಸೋಸಿಯೇಟೆಡ್‌ರಿಗೆ ತಿಳಿದು ಬಂದಿದೆ.

ಇಂತಹ ಪರಿಷತ್ತು ಕೂಡುವದೇ ಆದಲ್ಲಿ, ಬರುವ ತಿಂಗಳ ಮುಂಗಡ ಸೂಚನೆಯಿಂದ ಅದು ಕೂಡಿಸಲ್ಪಡುವದು (ಅ. ಪ್ರೆ. ತಂತಿ)

ಮದ್ರಾಸದಲ್ಲಿ ಕಾಂಗ್ರೆಸ ಸ್ವರಾಜ್ಯ ಪಕ್ಷ.

ಮದ್ರಾಸ ತಾ॥ ೩೦— ನಿನ್ನಿನ ದಿವಸ ಸಂಜೆಯಲ್ಲಿ ಇಲ್ಲಿಯ ಪ್ರಮುಖ ಕಾಂಗ್ರೆಸ ಕೆಲಸಗಾರರು ಕಾಂಗ್ರೆಸ ಸ್ವರಾಜ್ಯ ಪಕ್ಷವನ್ನು ಸ್ಥಾಪಿಸುವ ಕುರಿತು ಕಾಂಗ್ರೆಸ ಭವನದಲ್ಲಿ ಸಭೆ ಮಾಡಿದರು. ಡಾ. ಸತ್ಯಮೂರ್ತಿಯವರು ಅಧ್ಯಕ್ಷಸ್ಥಾನ ಸ್ವೀಕರಿಸಿದರು. ಸಭೆಯಲ್ಲಿ ಪರಸ್ಪರ ವಿಚಾರ ವಿನಿಮಯವಾದ ಬಳಿಕ ನಿವಿಧ ಕಾರ್ಯಕ್ರಮಗಳನ್ನೊಳಗೊಂಡ ಒಂದು ಯೋಜನೆಯು ಸಿದ್ಧ ಮಾಡಲ್ಪಟ್ಟಿತು. ಈ ಯೋಜನೆಯಲ್ಲಿ ಬಿಳೇ ಕಾಗದದ ವಿರುದ್ಧವಾಗಿ ಚಳವಳಿ ಹೂಡುವುದು ಜಾತಿಯ ನಿರ್ಣಯವನ್ನು ವಿರೋಧಿಸುವುದು ಯೋಗ್ಯ ಸಮಯವು ಬಂದ ಕೂಡಲೆ ಶಾಸನ ಸಭೆಯಲ್ಲಿ ಭಾಗತೆಗೆದುಕೊಳ್ಳುವಂತೆ ಮತದಾರರಿಗೆ ಶಿಕ್ಷಣ ಕೊಡುವುದು, ಕಾಂಗ್ರೆಸದ ಮುಖ್ಯ ಕಾರ್ಯಕ್ರಮಗಳನ್ನು ಸಾಗಿಸುವದು ಇವೇ ಮೊದಲಾದ ಭಾಗಗಳಿವೆ [ಅ ಪ್ರೆ ತಂತಿ]

ನರಿಮನ್ನರ ಪ್ರಕಟಣೆ.

ಮುಂಬಯಿ ತಾ॥ ೨೮— ಮೊನ್ನೆ ಮುಂಬಯಿಯಲ್ಲಿ ಕೂಡಿದ ಬೃಹನ್ಮಹಾರಾಷ್ಟ್ರ ರಾಜಕೀಯ ಪರಿಷತ್ತಿನಲ್ಲಿ ಜಮನಾದಾಸರು ನರಿಮನ್ನರ ವಿಷಯವಾಗಿ ಕೆಲವೊಂದು ಉದ್ಗಾರ ಹೊರಡಿಸಿದ್ದರು. ಈ ಬಗ್ಗೆ ನರಿಮನ್ನರು ಒಂದು ಪ್ರಕಟನೆ ಹೊರಡಿಸಿ ಅನ್ನುವದೇನಂದರೆ—

ಖಾಸಗಿ ನಿರೋಪವು ಜಾಹೀರ ಪರಿಷತ್ತಿನಲ್ಲಿ ಉಲ್ಲೇಖಿಸಲ್ಪಡುವದೆಂದು ನನ್ನ ಕಲ್ಪನೆಯೇ ಇರಲಿಲ್ಲ. ಈ ನಿರೋಪದಲ್ಲಿ ಅವರು ವಿವರ್ಣಸ್ತ ಮಾಡಿರದಿದ್ದರೂ ನೈತಿಕ ದೃಷ್ಟಿಯಿಂದ ಅದು ತಪ್ಪೆನಿಸುವದು. ಜಮನಾದಾಸರ ಕಾಂಗ್ರೆಸದ ಕೆಲಸಗಾರರಲ್ಲಿ ಒಬ್ಬರೆಂದು ಬಗೆದು ತುರಂಗದೊಳಗಿನಿಂದ ನಿರೋಪ ಕಳಿಸಿ ಅವರ ಚಳವಳಿಗೆ ನಾನು ಸಹಾನುಭೂತಿ ತೋರಿಸಿದೆ. ಒದರೆ ನಾನು ಈ ಕಾಲಕ್ಕೆ ಈ ಹೊಸ ಪಕ್ಷವು ಕಾಂಗ್ರೆಸದೊಳಗೆ ಇರತಕ್ಕದ್ದೆಂದು ಸೂಚನೆ ಮಾಡಿದ್ದೆ. ಶ್ರೀ ಜಮನಾದಾಸರು ನನ್ನ ಅಭಿಪ್ರಾಯವನ್ನು ವಿಕೃತ ಸ್ವರೂಪದಲ್ಲಿ ಮಂಡಿಸಿದ್ದರಿಂದ, ಅಸತ್ಯಕ್ಕಿಂತ ಅದು ಹೆಚ್ಚು ಅನಿಷ್ಟಕರವಾಗಿದೆ. ಜಮನಾದಾಸರ ಈ ಪ್ರಯತ್ನವು ಕಾಂಗ್ರೆಸದ ವಿರುದ್ಧವಾಗಿ ಬಂಡೆಬ್ಬಿಸುವದೇ ಇರುತ್ತದೆಂದು ಹೇಳಬೇಕಾದೆ. ಇಂದು ಕಾಂಗ್ರೆಸದಲ್ಲಿ ಬಹುಮತದಿಂದ ನಿರ್ಣಿತವಾದ ಗೊತ್ತುಗಳು ಯಾವತ್ತು ಕಾಂಗ್ರೆಸ ಜನರಿಗೆ ಬಂಧನಕಾರಕವಿರುತ್ತವೆ. ಈ ರೀತಿಯಿಂದ ಕಾಂಗ್ರೆಸದ ಆಜ್ಞೆಯನ್ನು ಮೆಟ್ಟಿ ನಡೆಯುವ ಜನರಿಗೆ ನಾನು ಕಾಂಗ್ರೆಸ ದ್ರೋಹಿಯೆಂದು ವಿಶೇಷಣ ಕೊಡಲು ಎಳ್ಳಷ್ಟೂ ಹಿಂಜರಿಯುವದಿಲ್ಲ

ಕೆಮಾಲಪಾಶಾ ಅವರ ಮನೋಬಯಿಕೆ

ಅಂಗೋರಾ ತಾ॥ ೨೯—ತುರ್ಕಸ್ಥಾನದಲ್ಲಿ ಪ್ರಜಾಸತ್ತಾತ್ಮಕ ರಾಜ್ಯವು ಸ್ಥಾಪಿತವಾಗಿ ಇಂದಿಗೆ ೧೦ ವರ್ಷಗಳಾಗಿದ್ದರಿಂದ ಈ ನಿಮಿತ್ತವಾಗಿ ಈ ಹೊತ್ತಿನ ದಿವಸ ಇಲ್ಲಿ ಉತ್ಸವವು ಬಹಳ ವಿಜೃಂಭಣೆಯಿಂದ ಸಾಗಿತು. ಮುಸ್ತಾಫಾ ಕೆಮಾಲ ಪಾಶಾ ಇವರು ಧ್ವನಿವಾಹಕ ಯಂತ್ರದ ದ್ವಾರಾ ರಾಷ್ಟ್ರಕ್ಕೆ ಕೆಳಗಿನ ಸಂದೇಶ ಕೊಟ್ಟರು:

ತುರ್ಕಸ್ಥಾನವು ಜಗತ್ತಿನ ಸುಧಾರಿಸಿದ ರಾಷ್ಟ್ರಗಳಲ್ಲಿ ಒಂದಾಗುವಂತೆ ನಾವು ಪ್ರಯತ್ನಪೂರ್ವಕವಾಗಿ ಕೆಲಸ ಮಾಡುವೆವು. ನಮ್ಮ ದೇಶದ ಸಂಸ್ಕೃತಿಯು ಇತರ ಯಾವದೇ ಸುಧಾರಿಸಿದ ರಾಷ್ಟ್ರದ ಸಂಸ್ಕೃತಿಗೆ ಒಂದಾಗಬಾರದೇ ಎಂದು ಬಯಸುತ್ತೇನೆ. ಇದೇನೂ ನನಗೆ ಅಸಾಧ್ಯ ತೋರುವದಿಲ್ಲ. ನಾವು ನಮ್ಮ ಮನೋಭಿಷ್ಟೆಯನ್ನು ೧೫ ವರ್ಷಗಳಲ್ಲಿ ಸಫಲ ಮಾಡಿಕೊಳ್ಳಬಹುದೆಂದು ನನಗೆ ನಂಬಿಗೆಯಿದೆ

ಕರ್ನಾಟಕ

ಸವದತ್ತಿ ಮ್ಯುನಿಸಿಪಾಲಿಟಿಯ ಯಲ್ಲಮ್ಮನ ಗುಡ್ಡದ ಸರಹದ್ದಿನ ಕಾರ್ಯದಲ್ಲಿ ದುಡ್ಡು ತಿಂದ ಆರೋಪದ ಬಗ್ಗೆ ಸರ್ ಓವ್ಹರಸೀಯರರಾದ ದತ್ತಾತ್ರೆಯ ಕುಲಕರ್ಣಿ ಹಾಗು ಬಸವಣ್ಣೆಪ್ಪ ಶೆಟ್ಟಿ ಇವರಿಗೆ ಕ್ರಮವಾಗಿ ೩ ತಿಂಗಳ ಕೈದು ೨೫೦ ರೂಪಾಯಿ ದಂಡ, ೩ ತಿಂಗಳ ಕೈದು ೪೦೦ ರೂಪಾಯಿ ದಂಡ ಹೀಗ ಶಿಕ್ಷೆಯಾಯಿತು. ದಂಡದಿಂದ ಬಂದ ಹಣದಲಿ ೬೦೦ ರೂಪಾಯಿಗಳನ್ನು ಮುನಿಸಿಪಾಲಟಿಗೆ ಕೊಡಿಸಿರುವರು

ಮೊನ್ನೆ ರವಿವಾರ ದಿವಸ ಬೆಳಗಾಂವಿಯಲ್ಲಿ ಅಭ್ಯಾಸ ಮಂಡಲದ ಪರವಾಗಿ 'ಹಳ್ಳಿಯ ಸಾಹಿತ್ಯ'ದ ಮೇಲೆ ಚರ್ಚೆ ನಡೆಯಿತು. ಶ್ರೀ ಪ್ರಲ್ಹಾದ ಕುಲಕರ್ಣಿ ಮತ್ತು ಶ್ರೀ ರಂಗಪ್ಪ ಪೋದ್ದಾರ ಇವರು ಹಳ್ಳಿಯ ಸಾಹಿತ್ಯದ ವಿಷಯವಾಗಿ ಉಪನ್ಯಾಸ ಮಾಡಿದರು

ಬಳ್ಳಾರಿಯ ಶ್ರೀ ಶಿವಾನಂದ ಮುದ್ರಣಾಲಯದ ಒಡೆಯರಾದ ಶ್ರೀ ಕೋಳೂರ ಶಾಸ್ತ್ರಿಗಳು 'ಶಿವಸಂದೇಶ' ವೆಂಬ ಕನ್ನಡ ವಾರಪತ್ರಿಕೆಯನ್ನು ಹೊರಡಿಸುವರೆಂದು ತಿಳಿಯುತ್ತದೆ

ಕೀರ್ತಿಶೇಷರಾದ ಶ್ರೀ ಎಚ್ ರಾಮಯ್ಯನ ಸ್ಮಾರಕದ ಬಗ್ಗೆ ೧ ಲಕ್ಷ ರೂಪಾಯಿ ಕೂಡಿಸಾತ ಏರ್ಪಾಡು ನಡೆದಿದೆ. ತಾ ೫ನೇ ದಿವನ ಬೆಂಗಳೂರ ಒಕ್ಕಲಿಗರ ಸಂಘದಲ್ಲಿ ಈ ಬಗ್ಗೆ ಸಭೆ ಸೇರತಕ್ಕದ್ದಿದೆ

ಮೈಸೂರ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ಸದಸ್ಯರ ಆರಿಸುವಿಕೆಯು ೧೯೩೪ನೇ ಮಾರ್ಚ ೫ನೇ ತಾರೀಖಿಗೆ ನಡೆಯುವದು

ಚಿಂತಾಮಣಿ ಬ್ಯಾಂಕ ಅಪಹಾರ ಖಟ್ಲೆಯು ೧ನೇ ತಾರೀಖಿನಿಂದ ಕೋಲಾರದ ಡಿಸ್ಟ್ರಿಕ್ಟ ಜಜ್ಜರ ಮುಂದೆ ಸುರುವಾಗುವದು. ಜಜ್ಜರು ವಿಚಾರಣೆಯನ್ನು ಒಂದು ವಾರದಲ್ಲಿ ಮುಗಿಸುವರು

ಮೈಸೂರು ಸಹಕಾರ ಪ್ರಚಾರಕ ಸಂಘದವರು ತಾ॥ ೪ನೆ ನವ್ಹೆಂಬರ ದಿವಸ ಅಖಿಲ ಸಹಕಾರಿಗಳ ಒನಾಂಗಗಳ ದಿನವನ್ನು ಮೈಸೂರ ಸಂಸ್ಥಾನದಲ್ಲಿ ಎಲ್ಲೆಡೆಯಲ್ಲಿಯೂ ಜರುಗಿಸಬೇಕೆಂದು ಆಜ್ಞೆ ಹೊರಡಿಸಿದ್ದಾರೆ

ಮಂಗಳೂರ ಜಿಲ್ಹೆಯ ಕಲ್ಯಾಣಪುರ ಮನೆತನಕ್ಕೆ ಸೇರಿದ ಪ್ರೇಮಾನಂದರೆಂಬೊಬ್ಬ ಕಾಂಗ್ರೆಸ ಕಾರ್ಯಕರ್ತರು ವಿಸಾಪುರ ಜೇಲಿನಲ್ಲಿ ಸಪ್ಟೆಂಬರ ೨೫ನೆಯ ದಿವಸ ರೋಗದಿಂದ ಮೃತಪಟ್ಟರೆಂದೂ, ಅವರು ಅತ್ಯಂತ ನಿಃಸ್ವಾರ್ಥಿಗಳೂ ಅಹಂಕಾರ ವಿಹೀನರೂ ಆಗಿದ್ದರೆಂದೂ ತಿಳಿಸಿ ಶ್ರೀ ಕಾಮದಕರ ದತ್ತರಾಯರು ಕರ್ನಾಟಕವು ಪ್ರೇಮಾನಂದರ ಪುಣ್ಯ ಸ್ಮರಣವನ್ನು ಮಾಡಬೇಕೆಂದು ಸೂಚಿಸಿರುವರು

ಅಲ್ಲೀಯ ಸುದ್ದಿಗಳು.

ಧಾರ್ ಸಂಸ್ಥಾನದಲ್ಲಿ ಬದ್ರಾಪುರ ಎಂಬ ಹಳ್ಳಿಯ ಹತ್ತಿರ ಮಳೆಯ ಜೊತೆಯಲ್ಲಿ ಮೀನುಗಳು ಬಿದ್ದವಂತೆ! ಆ ಹಳ್ಳಿಯವರು ಸುಮಾರು ೧೦೦ ಮೀನುಗಳನ್ನು ಆರಿಸಿ ಪೋಲೀಸು ಸ್ಟೇಶನ್ನಿಗೆ ತೆಗೆದುಕೊಂಡು ಹೋಗಿ ಕೊಟ್ಟರಂತೆ. ಅದರಲ್ಲಿ ಒಂದು ಮೀನಿನ ತಲೆಯಲ್ಲಿ ೫೦ ಪೌಂಡು ಬಾಳುವ ಒಂದು ಮುತ್ತು ಇತ್ತಂತೆ.

ಅಮೇರಿಕದಲ್ಲಿ ನಿಗ್ರೋ ಜನಗಳಿಗಾಗಿಯೇ ೧೫೦ ವಾರಪತ್ರಿಕೆಗಳಿವೆ. ಅವು ಸುಮಾರು ೬,೦೦,೦೦೦ ಚಂದಾದಾರರಿದ್ದಾರೆ. ಇವುಗಳ ಜೊತೆಗೆ ಮತಧರ್ಮ ವಿದ್ಯಾಭ್ಯಾಸ, ವಾಣಿಜ್ಯ ವ್ಯಾಪಾರ ಇವುಗಳಿಗೆ ಸಂಬಂಧಪಟ್ಟ ಮಾಸಪತ್ರಿಕೆಗಳೂ ಇವೆ

ಜಪಾನಿನಲ್ಲಿ ಭೂ ಕಂಪವೆಂದರೆ ಬಹಳ ಸಾಮಾನ್ಯ. ಪ್ರತಿದಿನ ಸುಮಾರು ೨೦ ಮಂದಿಗೆ ಕಮ್ಮಿಯಿಲ್ಲದಂತೆ ಸಾಯುವರು. ಕಳೆದ ೧೦ ವರ್ಷಗಳಲ್ಲಿ ಸುಮಾರು ೨೨,೭೮೦ ಸಲ ಭೂಕಂಪವಾಗಿದೆ. ೭೭೮೦ ಜನರು ಮೃತಪಟ್ಟಿರುವರು

ಲಂಡನ್ನಿನಲ್ಲಿ ಒಂದು ಅಪೂರ್ವ ವಸ್ತುಪ್ರದರ್ಶನವಾಯಿತು. ಅಲ್ಲಿ ತನಗೆ ತಾನೇ 'ಟೈಪು' ಮಾಡುವ ಟೈಪ್‌ರೈಟಿಂಗ ಯಂತ್ರವು ಪ್ರದರ್ಶಿಸಲ್ಪಟ್ಟಿತ್ತು. ಒಂದು ಮನೆಗೆ ಹಾಕಿದ ಬೀಗವನ್ನು ಯಾರಾದರೂ ಕದ್ದು ತೆಗೆದರೆ ಯಾವ ಬೀಗದ ಕೈಯಿಂದ ತೆಗೆದರು ಎಷ್ಟು ಹೊತ್ತಿನಲ್ಲಿ ತೆಗೆದರು ಎಂಬುದನ್ನು ಬರೆದಿಡುವ ಒಂದು ಯಾಂತ್ರ ಸಾಧನವನ್ನು ಇಟ್ಟಿದ್ದರು

ಮದ್ರಾಸಿನ ವಿಶ್ವವಿದ್ಯಾನಿಲಯವೊಂದರಲ್ಲಿ ಒಬ್ಬರು ವ್ಯಾಖ್ಯಾನಕಾರರಿದ್ದಾರೆ. ಅವರಿಗೆ ಬಲಗಡೆ ಹೃದಯವಿದೆಯಂತೆ! ಅನ್ನಕೋಶವು ಎಡಭಾಗದಲ್ಲಿದೆ

ತಾತಯ್ಯನವರ ಪ್ರಕೃತಿ.

ಮೈಸೂರಿನ ವೃದ್ಧ ಪಿತಾಮಹರಾದ ಶ್ರೀ ಎಂ ವೆಂಕಟ ಕೃಷ್ಣಯ್ಯನವರು ಈಗ ಒಂದು ವಾರದಿಂದ ಅಸ್ವಸ್ಥರಿರುವರಷ್ಟೆ. ಅವರ ಪ್ರಕೃತಿಯು ಈಗ ಆಶಾಜನಕವಿದೆಯೆಂದೂ ಕೆಮ್ಮು ಸ್ವಲ್ಪ ಕಡಿಮೆಯಾಗಿದೆಯೆಂದೂ ತಿಳಿಯುತ್ತದೆ. ಡಾ ಸಿ ಕೃಷ್ಣಸ್ವಾಮಿಯವರು ಅವರ ಶುಶ್ರೂಷೆ ಮಾಡುತ್ತಿರುವರು

ಮದ್ರಾಸ ಶಾಸನ ಸಭೆ.

ಮದ್ರಾಸ ತಾ॥ ೩೦—ಮದ್ರಾಸ ಇಲಾಖೆಯ ಶಾಸನ ಸಭೆಯ ಅಧಿವೇಶನವು ಈ ದಿವಸ ಪ್ರಾರಂಭವಾಯಿತು. ನಾ. ಗವ್ಹರ್ನರರು ಪ್ರಾರಂಭ ಭಾಷಣ ಮಾಡಿ ಕೌನ್ಸಿಲದ ಆಯುಷ್ಯವು ಒಂದು ವರ್ಷದ ವರೆಗೆ ಬೆಳಿಸಲ್ಪಟ್ಟಿದೆಯೆಂದೂ, ಕ್ರಾಂತಿಕಾರಕರು ಹೊರಗಿನಿಂದ ಅಧಿಕವಾಗಿ ಬರುತ್ತಿರುವರೆಂದೂ ಹೇಳಿದರು

ಕೊನೆಯುಬ್ಬು.



ಡಾ. ಕುಲಕರ್ಣೀಜ
ಲೆಬೊರೋಟರಿ ಮುಂಬೈ
ನಂಬ ೧೪
ಬಾಟ್ಲಿ ೩. ೧-೨-
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು



ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಕರಗು, ಬಿಳೇಕರಗು, ಕೆಂಪು ಕರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ಸೆಟ್ಟಗಾಗಿ ಗರ್ಭಧಾರಣವಾಗುತದೆ ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ

ಬಿ. ಟಿ. ಕರೂರ ಆ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ
೧೮-೬

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**

ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರಗ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಖೋಕಲಿ ಗೆಮ್ಮು, ಕೆಮ್ಮು ಕಿವಿ ಸೋರು ವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಸೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗಾಗಿ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟರು:— **ಜಿ. ಕೆ ಟೋಣಪಿ ಆ್ಯಂಡ ಕಂಪನಿ,**
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕರ್ನಾಟಕ ಟಾಯಿಮ್ಸ್.

ಸಂಪಾದಕರು: **ಎಚ್ ಎಸ್ ಶಿವಲಿಂಗಶಾಸ್ತ್ರಿಗಳು.**

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಪಯುಕ್ತ ವಿಷಯಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವಿವಿಧ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ:— ಸ್ಥಳಿಕರಿಗೆ ರೂ. ೨—೧೩—೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ ೩—೧೨ ೦

ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸ ಕಾರ್ಯಾಲಯ ಧಾರವಾಡ

ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು. ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩ **ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ**
ಕಹಾಪುರ ಪೇಟೆ ಗದಗ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ನಾರಿನ ವೈರಿ

ಚಂದ್ರಪ್ರಭಾ — ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರ್ಪೂರ ಕಮೀಶನ್ ಕಿಮ್ಮತ್ತು ರೂ ೦ ೮-೦ ಅಂಚೆ ವೆಚ್ಚ ಬೇರೆ

ಮ್ಯಾನೇಜರ— **ರಾಘವ ಫಾರ್ಮಸಿ ಗೋಕಾಕ**
ಜಿ ಬೆಳಗಾವ

ಕನ್ನಡಿಗನ ಜಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವರಿಗೆ
೧ ತಿಂಗಳಿಗೆ	೦-೬-೬	೦-೧೨-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦



ಮಿತವ್ಯಯದ ಇಚ್ಛೆ ಹೊಂದಿರುವವರು
ಲಕ್ಷ್ಯಕೊಡಿರಿ.
ಕಿರ್ಲೋಸ್ಕರ
ಕಬ್ಬಿಣ
ಫರ್ನಿಚರ

ಸ್ಪ್ರಿಂಗ ಕಾಟ, ಖುರ್ಚಿ, ಸ್ಟೂಲ, ತೊಟ್ಟಿಲ ಇತ್ಯಾದಿ

ಅತ್ಯುತ್ತಮ ಮಾಲು

ಅತಿ ಸಣ್ಣ ಜಾಗೆಯಲ್ಲಿ ಸಹ ಇವುಗಳ ಉಪಯೋಗವು ಸಹಜ ಆಗುವದು ಹಚ್ಚಿನ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಿರ್ಲೋಸ್ಕರ ಬಂಧುಗಳು ಲಿ. } **ಕಿರ್ಲೋಸ್ಕರ ವಾಡಿ.**
ಜಿ (ಸಾತಾರಾ)

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎರಡು ನಕಾಶೆಗಳಿರುವವು. ಬೆಲೆ:—೦-೬-೬ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹನುಮಂತಾಚಾರ್ಯ ಹಿಂಡಾರ ಮಂಗಳವಾರ ಪೇಟೆ ಧಾರವಾಡ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ **ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.**

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲಿಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೭೮ यथत् परवशं दुःखं । यद्यदात्मवशं सुखम् ॥ मनु ನಿತ್ಯ ಪತ್ರ ಬೆಲೆ ೩ ಪೈ

ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್‌ಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನಸ್ಯುಅರನ್ನು
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ.ಕಂ.ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು. ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಗುರುವಾರ ಕಾರ್ತಿಕ ಶುದ್ಧ ೧೫ ಶಕೆ ೧೮೫೫ ತಾ|| ೨-೧೧-೩೩ [ಸಂಚಿಕೆ ೧೬೧

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ
ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ
ಧಾರವಾಡ ತಾ|| ೨೫-೮-೩೩ } ಕೃಷ್ಣರಾವ ಅಂಕಲಗಿ, ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?
ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್
ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!
ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿವೆ.
(೧) ಬಿಳೀ, ಹಳದಿ, ಕೆಂಪು ಚಿಮಣಿಯಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಯಿಲ್ (೨) ಮುಸಿಚ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋವಿ ವೆರ್ನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರೆ (೫) ಮೋಟಾರ ಮತ್ತು ಟ್ಸಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ
ನಮ್ಮ ಹದ್ದು —
) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ ೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರು ದೆ ಸಬ್ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು
ಹಿಷ ಸೂ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಕುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು
ಹುಂಡೇಕರ ಯಕಲಾಸಪೂರ
ಅ್ಯಂಡ ಕೋ ದೇವಕರಣ ಮ್ಯಾನ್ಸನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ಲಕ್ಷವಿಟ್ಟಿರಿ! ಅಪೂರ್ವ ಸಂಧಿ!! ತ್ವರೆಮಾಡಿರಿ!!!
ನ್ಯೂ ಪೂರ್ಣಾ ನಾಟ್ಯಗೃಹದಲ್ಲಿ ತಾ|| ೩-೧೧-೩೩ ರಾತ್ರಿ ೧೦ ಗಂಟೆಗೆ
ಕನ್ನಡ ಅಮೇಚೂರ ಸಂಘದವರ
ನಾಟ್ಯಪ್ರಯೋಗ
ಸುಪ್ರಸಿದ್ಧ ನಟರಾದ ಬಳ್ಳಾರಿಯ ಶ್ರೀವಾನ್ ಟಿ ರಾಘವಾಚಾರ್ಯರು ಪಾತ್ರವನ್ನು ವಹಿಸುವರು
(೧) "ಹಿಂಚಿಕೆ ಹಾಕ್ಸರನ ಪೇಚಾಟ" (ಇಂಗ್ಲೀಷ ಫಾರ್ಸ) (೨) "ಹೋಮರೂಲು"
(೩) "ಹರಿಜನ್ವಾರ"
ಟಿ ಕೀಟು ಕರ್ನಾಟಕ ಸಾಹಿತ್ಯ ಮಂದಿರದಲ್ಲಿ ಸಿಕ್ಕುವವು.
ಧೀರೇಂದ್ರ ಗುಂಡೇಕರ
ಕಾರ್ಯದರ್ಶಿ

ಅಖಿಲ ಭಾರತ ಸ್ವದೇಶಿ ಪ್ರದರ್ಶನ ಬಳ್ಳಾರಿ.

(ಪ್ರಕಟನೆ ೪)

ಅಖಿಲ ಭಾರತ ಸ್ವದೇಶಿ ವಸ್ತು ಪ್ರದರ್ಶನವು ತಾ|| ೧೩ ನೇ ಡಿಸೆಂಬರ ಸುಮಾರಕ್ಕೆ ತೆರೆಯಲ್ಪಟ್ಟು, ೧೫ ದಿನಗಳ ವರೆಗೆ ನಡೆಯುವದು. ಮಂಡಳದವರು ಈ ಅವಧಿಯನ್ನು ಬೆಳೆಸಬಹುದು ಇಲ್ಲವೆ ಕಡಿಮೆ ಮಾಡಬಹುದು

ಈ ಪ್ರದರ್ಶನದಲ್ಲಿ ಕೇವಲ ಸ್ವದೇಶಿ ವಸ್ತುಗಳಿಗೇನೇ ಅಂದರೆ ಹಿಂದೀ ಭಾಂಡವಲು ಮತ್ತು ಹಿಂದೀ ಕೂಲಿಕಾರರಿಂದ ಹಿಂದುಸ್ಥಾನದಲ್ಲಿ ತಯಾರಾದ ಪದಾರ್ಥಗಳಿಗಷ್ಟೇ ಪ್ರವೇಶವಿದೆ ಅರಿವೆಗಳಲ್ಲಿ ಕೈಯಿಂದ ನೂತ ಕೈಮಗ್ಗದ ಮೇಲೆ ತಯಾರ ಮಾಡಲ್ಪಟ್ಟ ಖಾದಿ ಅರಿವೆಗೆ ಮಾತ್ರ ಅನುವುಂಟು.

ಪ್ರದರ್ಶನದಲ್ಲಿ ತಮ್ಮ ತಮ್ಮ ವಸ್ತುಗಳನ್ನು ಪ್ರದರ್ಶಿಸಬೇಕೆನ್ನುವವರಿಗೆ ಬಾಡಿಗೆಯ ಸ್ಥಳಗಳನ್ನು ಏರ್ಪಡಿಸಿರುತ್ತದೆ. ಈ ಸ್ಥಳಗಳಲ್ಲಿ ೫ ಭಾಗಗಳನ್ನು ಮಾಡಿದ್ದು, ಅವುಗಳ ಬಾಡಿಗೆಯು ೨೦ ರು ಯಿಂದ ೪೦ ರು ವರೆಗೆ ಇದೆ ಪ್ರದರ್ಶನದಲ್ಲಿ ಅಂಗಡಿ ತೆರೆಯುವವರ ಸಲುವಾಗಿ ಊಟ ಹಾಗು ಬಿಡಾರದ ವ್ಯವಸ್ಥೆಯನ್ನು ಮಾಡಿರುತ್ತದೆ. ಇವಲ್ಲದೆ ವಿದ್ಯುದ್ದೀಪ, ನಳ ಮೊದಲಾದವುಗಳು ಒದಗಿಸಿ ಕೊಡಲ್ಪಡುವವು

ಮಂಡಳದವರು ಬೇರೆ ಬೇರೆ ರೇಲ್ವೆ ಕಂಪನಿಗಳಿಂದ ಪ್ರದರ್ಶನಕ್ಕೆ ಬರುವ ಸಾಮಾನುಗಳ ಬಗ್ಗೆ ಸವಲತ್ತಿನ ದರವನ್ನು ದೊರಕಿಸಿದ್ದಾರೆ ಪ್ರದರ್ಶನದಲ್ಲಿ ಅಂಗಡಿ ತೆರೆಯಲಿಚ್ಛಿಸುವವರು ಕಾರ್ಯದರ್ಶಿಗಳ ಕಡೆಗೆ ಬಾಡಿಗೆಯ ಹಣವನ್ನು ಮುಂಗಡ ಕಳಿಸಿ ತಾ|| ೨೫ ನೇ ನವ್ಹೆಂಬರದೊಳಗಾಗಿ ಅರ್ಜಿ ಮಾಡಬೇಕು

ಬಾಡಿಗೆಯನ್ನು ಕೊಟ್ಟು ಅಂಗಡಿ ಹಿಡಿಯಲು ಶಕ್ತರಾಗದಿದ್ದವರ ಮತ್ತು ಚಿಲ್ಲರ ಕಾರಖಾನೆದಾರರ ಸಾಮಾನುಗಳ ಸಲುವಾಗಿ ಮಂಡಳದವರು ಮೂರು ಅಂತಸ್ತಿನದೊಂದು ಕಟ್ಟಡವನ್ನು ಹಿಡಿದಿದ್ದಾರೆ ಮಂಡಳದವರು ಇಂಥವರ ವಸ್ತುಗಳನ್ನು ಇಲ್ಲಿ ಪ್ರದರ್ಶಿಸುವರು ಮತ್ತು ಮಾರಾಟ ಮಾಡುವರು ಈ ಬಗ್ಗೆ ಮಂಡಳದವರು ಪ್ರತಿಯೊಂದು ಚಚ್ಚೌಕು ಫೂಟಿಗೆ ೧ ರೂಪಾಯಿಯಂತೆ ತೆಗೆದುಕೊಳ್ಳುವರು ಇದಲ್ಲದೆ ಮಾರಾಟದ ಹಣದಲ್ಲಿ ೧೦೦ ಕ್ಕೆ ೬| ಕಮೀಶನ್ ತೆಗೆದುಕೊಳ್ಳುವರು. ಪ್ರದರ್ಶನದ ಸ್ಥಳದಲ್ಲಿ ಯಾರಾದರೂ ಔದ್ಯೋಗಿಕ ಪ್ರಯೋಗ ಮೊದಲಾದವುಗಳನ್ನು ಮಾಡಿ ತೋರಿಸುವವರಿದ್ದರೆ ಅವರು ಮೊದಲೇ ಮಂಡಳದ ಅನುಮತಿಯನ್ನು ಪಡೆದುಕೊಳ್ಳಬೇಕು ರಾಜಕೀಯ ಚಳವಳಿಗೆ ಅನುವು ಇಲ್ಲ

ಬೇರೆ ಬೇರೆ ಪ್ರಾಂತ ಹಾಗು ಸಂಸ್ಥಾನಗಳ ಔದ್ಯೋಗಿಕ ಮತ್ತು ಒಕ್ಕಲತನ ಖಾತೆಯವಂಗೂ ತಜ್ಞರಿಗೂ ನಿಮ್ಮ ನಿಮ್ಮ ವಸ್ತುಗಳನ್ನು ಪ್ರದರ್ಶನದಲ್ಲಿ ಮಂಡಿಸಬೇಕೆಂದೂ ಪ್ರಯೋಗಮಾಡಿ ತೋರಿಸಬೇಕೆಂದೂ ಕೇಳಿಕೊಂಡಿದೆ ಈ ಪ್ರದರ್ಶನದ ಸಮಯಕ್ಕೆ ಹೂಗಳ ಪ್ರದರ್ಶನ, ಆರೋಗ್ಯಸಪ್ತಾಹ, ಶಿಶುಸಪ್ತಾಹ ಇವುಗಳೂ ಇತರ ಮುಖ್ಯ ಮುಖ್ಯ ಪರಿಷತ್ತುಗಳೂ ನಡೆಯತಕ್ಕವಿವೆ

ವಿಶೇಷ ಸಂಗತಿಗಳಿಗಾಗಿ ಕಾರ್ಯದರ್ಶಿಗಳೊಡನೆ ಪತ್ರವ್ಯವಹಾರ ಮಾಡಬೇಕು

ಬಳ್ಳಾರಿ } ಆರ್. ಎಸ್. ಹುಕ್ಕೇರಿಕರ.
ಪ್ರಕಟನಾಧಿಕಾರಿ
ಅ ಭಾ ಸ್ವದೇಶಿ ಪ್ರದರ್ಶನ

ಮಲ್ಲಸಜ್ಜನ ವ್ಯಾಯಾಮ ಶಾಲೆ.

ಧಾರವಾಡದ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಕೆಲವು ಉತ್ಸಾಹಿ ಸಭಾಸದರು 'ಕರ್ನಾಟಕ ಅಮೇಚೂರ ಭಾರವೆತ್ತುವ ಸಂಸ್ಥೆ'ಯನ್ನು ಸ್ಥಾಪಿಸಿಕೊಂಡಿದ್ದಾರೆ ಈ ಸಂಘದ ಉದ್ದೇಶವೆಂದರೆ ಅಖಿಲ ಕರ್ನಾಟಕದ ಜನರನ್ನು ದೃಢಕಾಯ ಹಾಗು ಶಕ್ತಿವಂತರನ್ನಾಗಿ ಮಾಡುವದು ಇರುತ್ತದೆ ಈ ಉದ್ದೇಶವನ್ನು ಸಾಧಿಸಿಕೊಳ್ಳುವದಕ್ಕೆ ಸಂಘದವರು ಪ್ರತಿವರ್ಷವೂ ಭಾರ ಎತ್ತುವ ಸ್ಪರ್ಧೆಯನ್ನು ಏರ್ಪಡಿಸುವರು ಈ ಸ್ಪರ್ಧೆಯಲ್ಲಿ ಅಖಿಲ ಕರ್ನಾಟಕದ ಯಾವದೇ ಭಾಗದ ಜನರು ಭಾಗತೆಗೆದುಕೊಳ್ಳಬಹುದು ಸ್ಪರ್ಧೆಯಲ್ಲಿ ಮೇಲು ಬಂದವರಿಗೆ ಪದಕಗಳನ್ನೂ ಪ್ರಶಸ್ತಿ ಪತ್ರಗಳನ್ನೂ ಕೊಡುವರು

ಈ ವರ್ಷ ಕೆಲವು ಆರ್ಥಿಕ ಅಡಚಣೆಗಳ ಸಲುವಾಗಿ ಈ ಸ್ಪರ್ಧೆಯನ್ನು ಕೇವಲ ಧಾರವಾಡ ಜಿಲ್ಹೆಯ ಮಟ್ಟಿಗೇನೇ ಇಟ್ಟಿರುತ್ತದೆ. ಸ್ಪರ್ಧೆಯು ನಾತಾಳ ಬಿಡುವಿನಲ್ಲಿ ನಡೆಯುವದು ಸ್ಪರ್ಧೆಯ ವಿಷಯಗಳೆಂದರೆ—

೧ ಟೂ ಹ್ಯಾಂಡ್ಸ ಡೆಡ್ ಲಿಫ್ಟ
೨ ಸಿಂಗಲ್ ಹ್ಯಾಂಡ ಸ್ನ್ಯಾಚ
೩ ಟೂ ಹ್ಯಾಂಡ್ಸ ಕ್ಲೀನ ಆ್ಯಂಡ ಫ್ರಂಟ ಜರ್ಕ.

ಪ್ರವೇಶ ಫೀ ಮತ್ತು ಇತರ ವಿಷಯಗಳಿಗಾಗಿ ಶ್ರೀ ಎಚ್ ಜಿ ರೇಗೆ ಸವ್ರಾಷುರ, ಗೌರವಕಾರ್ಯದರ್ಶಿ, ಇವರಿಗೆ ಬರೆದುಕೊಳ್ಳಬೇಕು

ಸ್ವೀಕಾರ

ಹೊಸ ನಮೂನೆ ಕ್ಯಾಲೆಂಡರು—

ಹುಬ್ಬಳ್ಳಿಯ ವಾಗ್ವಿಲಾಸ ಮುದ್ರಣಾಲಯದವರು ಮೊನ್ನಿನ ದೀವಳಿಗೆಯಲ್ಲಿ ಹೊಸ ನಮೂನೆಯ ಕ್ಯಾಲೆಂಡರನ್ನು ಪ್ರಕಟಿಸಿದ್ದಾರೆ. ಈ ವರ್ಷದ ದೀವಳಿಗೆಯಿಂದ ದೀವಳಿಗೆಯವರೆಗೂ ಇದಕ್ಕೆ ಸರಿಸಮವಾಗಿ ಜೊತೆಯಲ್ಲಿಯೂ ಇಂಗ್ಲೀಷ ತಾರೀಖುಗಳು ದೊಡ್ಡ ಅಂಕಿಗಳಿಂದ (೧|| ಇಂಚು) ಮುದ್ರಿಸಲ್ಪಟ್ಟು ಪ್ರತಿದಿನದಲ್ಲಿ ಒಂದೊಂದು ಗಾದೆಯ ಮಾತುಗಳಿವೆ ಈ ಬಗೆಯ ಕ್ಯಾಲೆಂಡರುಗಳು ಕನ್ನಡದಲ್ಲಿರಲಿಲ್ಲ. ಈ ಕೊರತೆಯನ್ನು ಶ್ರೀ ಶಿವನಾಗಪ್ಪನವರು ದೂರ ಮಾಡಿದ್ದು ಸ್ತುತ್ಯ

ಕನ್ನಡಿಗ

ಗುರುವಾರ ತಾರೀಖು ೨-೧೧-೧೯೩೩

ಹುಟ್ಟು ಹಿಂದಕ್ಕೆ ಕಡೆದಂತೆ, ಡೋಣಿ ಮುಂದಕ್ಕೆ ಹೋಗುವದು.

ಹಿಂದಿನ ಲೇಖಗಳಲ್ಲಿ ರಾಷ್ಟ್ರೀಯ ಸಭೆಯ ವಿಷಯವಾಗಿಯೂ ಅದರ ಸಂಬಂಧವಾಗಿ ಕರ್ನಾಟಕವು ಮಾಡತಕ್ಕ ಕರ್ತವ್ಯದ ವಿಷಯವಾಗಿಯೂ ಬರೆದೆವು. ಇಂದು, ಈಗಿನ ಪರಿಸ್ಥಿತಿಯಲ್ಲಿ ರಾಷ್ಟ್ರವು ಯಾವ ಧೋರಣವನ್ನು ಸ್ವೀಕರಿಸಬೇಕೆಂಬ ವಿಷಯವಾಗಿಯೂ ರಾಷ್ಟ್ರೀಯ ಸಭೆಯು ಮುಂದಿನ ಮಾರ್ಗಕ್ರಮದ ವಿಷಯವಾಗಿಯೂ ನಮ್ಮ ಅಭಿಪ್ರಾಯವೇನಿರುತ್ತದೆಂಬುವದನ್ನು ಧಾರಾಳವಾಗಿ ತಿಳಿಸುವೆವು.

ಅನೇಕ ಕಾರಣಗಳ ಮೂಲಕ ಹಿಂದುಸ್ಥಾನದ ರಾಜಕಾರಣದಲ್ಲಿ ರಾಷ್ಟ್ರೀಯ ಸಭೆಗೆ ಎಲ್ಲಕ್ಕೂ ಹೆಚ್ಚು ಗೌರವದ ಸ್ಥಾನವು ಪ್ರಾಪ್ತವಾಗಿದೆ. ಆ ಸ್ಥಾನದ ಮರ್ಯಾದೆಯನ್ನು ರಕ್ಷಿಸುವುದಕ್ಕೆ ನಾವೆಲ್ಲರೂ ಪ್ರಯತ್ನಿಸಬೇಕೆಂದೂ, ರಾಷ್ಟ್ರೀಯ ಸಭೆಯೂ ಆ ಸ್ಥಾನಕ್ಕೆ ತಕ್ಕಂತೆ ವರ್ತಿಸಬೇಕೆಂದೂ ಹೇಳಿಯೇ ಇರುವೆವು. ಇತ್ತೀಚಿನ ೧೦-೧೨ ವರ್ಷಗಳಲ್ಲಿ ರಾಷ್ಟ್ರೀಯ ಸಭೆಗೆ ಅಪೂರ್ವವಾದ ಮಹತ್ವವು ಪ್ರಾಪ್ತವಾಗುವುದಕ್ಕೆ ಅದರ ಸೂತ್ರಗಳು ಮಹಾತ್ಮಾ ಗಾಂಧಿಯವರಂಥ ಅಲೌಕಿಕ ವ್ಯಕ್ತಿಯ ಕಡೆಗೆ ಹೋದದ್ದೇ ಕಾರಣವೆಂಬುದನ್ನು ನಾವು ಮರೆಯಕೂಡದು. ಇವೆರಡು ಮಾತುಗಳನ್ನು ನಾವು ಲಕ್ಷ್ಯದಲ್ಲಿಟ್ಟು ನಾವು ರಾಷ್ಟ್ರದ ಮುಂದಿನ ಗತಿಯನ್ನು ನಿರ್ಣಯಿಸಬೇಕು. ರಾಷ್ಟ್ರೀಯ ಸಭೆಗೆ ಅಪೂರ್ವವಾದ ಮಹತ್ವವು ಪ್ರಾಪ್ತವಾಗುವುದಕ್ಕೆ ಅನೇಕ ಕಾರಣಗಳುಂಟೆಂದು ನಾವು ಹೇಳಿದೆವಷ್ಟೆ. ಅವುಗಳಲ್ಲಿ ಮಹತ್ವದ ಕಾರಣವೆಂದರೆ ಬ್ರಿಟಿಶ ಆಳಿಕೆಯ ಇಲ್ಲಿಯ ನಿಜವಾದ ಪರಿಸ್ಥಿತಿಯನ್ನು ದುರ್ಲಕ್ಷಿಸಿ ಬುದ್ಧಿ ಪೂರ್ವಕವಾಗಿಯಾಗಲಿ, ಅಬುದ್ಧಿಪೂರ್ವಕವಾಗಿಯಾಗಲಿ ಈ ಪ್ರಗತಿ ಪ್ರವಾಹದಲ್ಲಿ ತೇಲುತ್ತಿರುವ ಹಿಂದೀ ರಾಷ್ಟ್ರದ ನೌಕೆಯನ್ನು ತಮ್ಮ ಅಚಾತುರ್ಯದಿಂದಲೇ ಮುಂದಕ್ಕೆ ನೂಕಿಸಲು ಸಹಾಯ ಮಾಡುತ್ತಿರುವದು. ಮುಂದೆ ಹೋಗುವ ರಾಷ್ಟ್ರನೌಕೆಯನ್ನು ಹಿಂದೆ ಹಿಂದೆ ಜಗ್ಗಲಿಕ್ಕೆ ಅವರ ಪ್ರಯತ್ನ. ಅವರು ಅದಕ್ಕಾಗಿ ಅನೇಕ ದಬ್ಬಾಳಿಕೆಗಳ ಹುಟ್ಟುಗಳಿಂದ ಪ್ರವಾಹವನ್ನು ಹಿಂದಕ್ಕೆ ನೂಕಿಸುತ್ತಿರುವರು. ಅವರು ಹೇಗೆ ಹೇಗೆ ಆ ಪ್ರವಾಹವನ್ನು ಹಿಂದಕ್ಕೊತ್ತಲು ಯತ್ನಿಸುವರೋ ಹಾಗೆ ಹಾಗೆ ಈ ರಾಷ್ಟ್ರನೌಕೆಯು ಮುಂದೆ ಮುಂದಕ್ಕೆ ಸಾಗುತ್ತಿರುವುದೆಂಬುದನ್ನು ಅವರು ಮರೆಯುತ್ತಾರೆ. ಸಾರಾಂಶ ಆಳರಸರ ದಬ್ಬಾಳಿಕೆಗಳೇ ನಮ್ಮ ಪ್ರಗತಿಗೆ ಸಹಾಯಮಾಡುವ ಸಾಧನಗಳು. ಈ ದೃಷ್ಟಿಯಿಂದ ವಿಚಾರಮಾಡಿದರೆ ಈಗಿನ ಅತ್ಯುಗ್ರ ದಬ್ಬಾಳಿಕೆಯ ಮೂಲಕ, ರಾಷ್ಟ್ರದ ಬಾಹ್ಯವು ಬೆದರಿದಂತೆ ತೋರಿದರೂ ಅದು ನಿಜವಾಗಿ ಬೆದರಿಲ್ಲ. ಅದರ ಶ್ವಾಸ ನಿರೋಧವು ಮಾತ್ರವೇ ಆಗಿದೆ. ಈ ತರಹದ ಶ್ವಾಸನಿರೋಧದಿಂದ ಮನುಷ್ಯನ ಶಕ್ತಿಯು ಬೆಳೆಯುವಂತೆಯೇ ರಾಷ್ಟ್ರದ ಶಕ್ತಿಯೂ ಬೆಳೆಯುತ್ತದೆ. ಒಟ್ಟಿಗೆ ಈಗಿನ ದಬ್ಬಾಳಿಕೆಯು ರಾಷ್ಟ್ರಕ್ಕೆ ಒಂದು ಬಗೆಯ ಪ್ರಾಣಾಯಾಮವನ್ನು ಮಾಡಲಿಕ್ಕೆ ಹಚ್ಚಿರುವದು. ಆದುದರಿಂದಲೇ ತಾತ್ಪೂರ್ತಿಕ ಸ್ತಬ್ಧತೆಯು ದೇಶದಲ್ಲಿ ತೋರುತ್ತಿರುತ್ತದೆ. ಆದಕಾರಣ ನಾವು ನಮ್ಮ ಮುಂದಿನ ಕಾರ್ಯಕ್ರಮವನ್ನು ನಿರ್ಣಯಿಸುವಾಗ ಈ ಮಾತನ್ನು ಮುಂಚೆ ಧ್ಯಾನದಲ್ಲಿ ಇಡಬೇಕು.

ಮಂದಪಕ್ಷದವರೂ ಕಾನೂನುಭಂಗವನ್ನು ನಿಲ್ಲಿಸಬೇಕೆಂದು ಉಪದೇಶಿಸುವ ಪಕ್ಷದವರೂ ಮುಖ್ಯವಾಗಿ ಈ ಮೇಲೆ ಹೇಳಿದ ತತ್ವವನ್ನು ಮರೆಯುತ್ತಾರೆ. ತಾತ್ಪೂರ್ತಿಕವಾಗಿಯಾದರೂ ಕಾನೂನುಭಂಗದ ಚಳವಳಿಯನ್ನು ನಿಲ್ಲಿಸುವುದೆಂದರೆ ರಾಷ್ಟ್ರವು ಈಗ ಮಾಡುತ್ತಿರುವ ಪ್ರಾಣಾಯಾಮಕ್ಕೆ ಪ್ರತಿಬಂಧವನ್ನುಂಟುಮಾಡುವುದು. ಆದಕಾರಣ ರಾಷ್ಟ್ರದಲ್ಲಿ ನವಚೇತನವನ್ನುಂಟುಮಾಡುವ ಈ ಮಾರ್ಗವನ್ನು ಎಂದೂ ಸ್ವೀಕರಿಸಕೂಡದೆಂದು ನಾವು ಧಾರಾಳವಾಗಿ ಅಭಿಪ್ರಾಯ ಪಡುತ್ತೇವೆ. ಈಗ ಆಳರಸರು ರಾಷ್ಟ್ರವನ್ನು ಬಾಯಿಯಲ್ಲಿ ದಬ್ಬಾಳಿಕೆಯ ಬಲವಾದ ಚಂಡಿಗೆ ತುರುಕಿರುವುದರಿಂದ ಕೆಲಹೊತ್ತು ಉಸುರುಗಟ್ಟಿದಂತೆ ಆಗಿರುತ್ತದೆಂಬುದೇನೂ ಸುಳ್ಳಲ್ಲ. ಹೀಗೆ ಬಹಳ ಕಾಲ ಉಸುರುಗಟ್ಟಿದರೆ ರಾಷ್ಟ್ರವು ಸತ್ತೇ ಹೋದೀತೆಂದು ಮಾತ್ರ ಯಾರೂ ಹೆದರುವ ಕಾರಣವಿಲ್ಲ. ಏಕೆಂದರೆ, ರಾಷ್ಟ್ರದ ಜೀವನವು ಮನುಷ್ಯ ಜೀವದಂತೆ ಅಮರವು. ಅದು ಎಂದೂ ಸಾಯುವುದಿಲ್ಲ. ಈಗಿನ ಪೀಳಿಗೆಯು ನಾಶಹೊಂದಬಹುದು, ಈಗಿನ ಕಾಲದ ಜನರು ಕೆಲಕಾಲ ನಿರ್ವೀರ್ಯರಾಗಬಹುದು. ಆದರೆ ಕೊನೆಯವರೆಗೆ ಹೀಗಾಗುತ್ತದೆಂದು ಅಂಜುವ ಕಾರಣವಿಲ್ಲ.

ಆದಕಾರಣ, ರಾಷ್ಟ್ರೀಯ ಸಭೆಯು ವೈಯಕ್ತಿಕ ಕಾಯದೆಭಂಗವನ್ನು ನಿಲ್ಲಿಸಿದರೆ ಪ್ರಯೋಜನವೇನು? ಆ ಗರಡೀಮನೆಯೊಳಗಿಂದ ತರುಣರನ್ನು ಹೊರಗೆ ತೆಗೆದು ನೀವು ಅವರನ್ನು ಕಾಯದೆಮಂಡಳ ಪ್ರವೇಶದ ಗರಡೀಮನೆಯಲ್ಲಿ ಹಾಕಬೇಕೆನ್ನುವಿರಾ? ಛೇ, ಅದು ತರವಲ್ಲ. ಕಾನೂನುಮಂಡಲ ಪ್ರವೇಶದ ಚಳವಳಿಯಿಂದ ರಾಷ್ಟ್ರದಲ್ಲಿ ಯಾವ ಶಕ್ತಿಯೂ ನಿರ್ಮಾಣವಾಗದು. ಆದಕಾರಣ, ರಾಷ್ಟ್ರವು ಆ ಪ್ರಶ್ನೆಯನ್ನು ಎತ್ತಬಾರದು.

ಇನ್ನು ಮಹಾತ್ಮಾ ಗಾಂಧಿಯವರ ಅಥವಾ ರಾಷ್ಟ್ರೀಯ ಸಭೆಯು ಈಗ ಕೈಕೊಂಡಿರುವ ಧೋರಣದಲ್ಲಿ ವಿಶ್ವಾಸವೇ ಇಲ್ಲದಿದ್ದರೆ, ಅದಕ್ಕಿಂತ ಹೆಚ್ಚು ಉಜ್ವಲವಾದ ಮಾರ್ಗವನ್ನು ರಾಷ್ಟ್ರಕ್ಕೆ ತೋರಿಸುವುದಿದ್ದರೆ ತೋರಿಸಿರಿ. ಕಾನೂನುಮಂಡಳ ಪ್ರವೇಶದ ಮಾರ್ಗವು ಹಾಗೆ ಉಜ್ವಲವಾದ ಮಾರ್ಗವೆಂದು ನಮಗೆ ತೋರುವುದಿಲ್ಲ. ಆದಕಾರಣ, ಈಗ ಕೆಲವು ಕಾಲ, ಕಾನೂನುಭಂಗ ಚಳವಳಿಗೆ ಜೋರು ಬಾರದಂತಿದ್ದರೆ ರಾಷ್ಟ್ರವು ಕೆಲವು ಕಾಲ ವಿಧಾಯಕ ಕಾರ್ಯಗಳಲ್ಲಿ ಮನಸ್ಸು ಹಾಕಬೇಕಲ್ಲದೆ, ಕಾನೂನುಮಂಡಲ ಪ್ರವೇಶದ ಚಳವಳಿಯಲ್ಲಿ ವ್ಯರ್ಥಕಾಲಹರಣ ಮಾಡಬಾರದು. ರಾಷ್ಟ್ರೀಯ ಸಭೆಯು ಯಾವ ಮಾರ್ಗವನ್ನು ಸ್ವೀಕರಿಸಬೇಕೆಂಬುದು ಕೊನೆಗೆ ರಾಷ್ಟ್ರದ ಬಹುಮತದ ಮೇಲೆ ಅವಲಂಬಿಸಿರುವುದರಿಂದ ಒಂದುವೇಳೆ ಕಾನೂನುಭಂಗವನ್ನು ನಿಲ್ಲಿಸುವದಕ್ಕೆ ಬಹುಮತವಾದರೆ ರಾಷ್ಟ್ರವು ಶಾಂತವಾಗಿ ಹಿಂದಕ್ಕೆ ಸರಿದು ಅವರಿಗೆ ಆ ವ್ಯರ್ಥ ಪ್ರಯೋಗವನ್ನು ಮಾಡಿಕೊಡಬೇಕಲ್ಲದೆ ಹಟಕ್ಕೆ ಬೀಳಬಾರದು. ಕಾನೂನುಮಂಡಳ ಪ್ರವೇಶ ಮಾಡುವವರೂ ಸಿದ್ಧಿಲ್ಲದೆ ಹೋದರೆ ಅಲ್ಲಿ ತಮ್ಮ ಸಾಮರ್ಥ್ಯವು ನಿರುಪಯೋಗವೆಂದರಿತ ಬಳಿಕ ತಾವೇ ತಿರುಗಿ ಬರುವರು.

ಜಿಲ್ಲೆಯ ಒಕ್ಕಲಿಗರ ಸ್ಥಿತಿಯನ್ನು ಸುಧಾರಿಸಲು ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬುದರ ಬಗ್ಗೆ ವಿಚಾರಮಾಡಲು ನಾಳಿನ ರವಿವಾರ ಬೆಳಗಾವಿಯ ಸೆಂಟ್ರಲ್ ಬ್ಯಾಂಕಿನಲ್ಲಿ ಸಭೆ ಸೇರುವದಿದೆ.

ಗವರ್ನರ ಸಾಹೇಬರ ಕಾರ್ಯಕ್ರಮ.

ಪುಣೆಯಿಂದ ೧ನೇ ತಾ|| ದಿನ ಸಾಯಂಕಾಲ ೯-೧೦ಕ್ಕೆ ಬಿಟ್ಟು ಕೊಲ್ಲಾಪುರಕ್ಕೆ ಮರುದಿನ ಬೆಳಿಗ್ಗೆ ೯ ಗಂಟೆಗೆ ಹೋಗಿ ರೆಸಿಡೆನ್ಸಿಯಲ್ಲಿದ್ದು, ಅಂದೇ ರಾತ್ರಿ ೧೧ ಕ್ಕೆ ರೇಲ್ವೆ ಸ್ಟೇಶನ್ನಿನಿಂದ ಹೊರಟು ಧಾರವಾಡಕ್ಕೆ ೩ನೇ ತಾ|| ದಿನ ಮುಂಜಾನೆ ೭-೪೦ ಕ್ಕೆ ತಲಪುವರು. ನಂತರ ಚಹವನ್ನು ಗಾಡಿಯಲ್ಲಿಯೇ ತೆಗೆದುಕೊಳ್ಳುವರು. ೮-೫೫ ಕ್ಕೆ ಸಾರ್ವಜನಿಕವಾಗಿ ಕಲೆಕ್ಟರ ಸಾಹೇಬರು, ಸಿವಿಲ್ ಸರ್ಜನ್, ಡಿ ಎಸ್ ಪಿ. ಕಾಯದೇ ಮಂಡಳದ ಸಭಾಸದರು, ಸರದಾರರು, ದಿವಾನ ಬಹದೂರರು ಇವರನ್ನೆಲ್ಲ ಗವರ್ನರರಿಗೆ ಪರಿಚಯ ಮಾಡಿಕೊಡುವರು.

ಮ್ಯುನಸಿಪಾಲಿಟಿಯ ಮಾನ ಪತ್ರವನ್ನು ೯-೧೦ ಕ್ಕೆ ಗವರ್ನರರು ಸ್ವೀಕರಿಸಲು ಮುನಸಿಪಾಲಿಟಿಯ ಕಟ್ಟಡಕ್ಕೆ ತೆರಳುವರು.

೯-೪೫ ಕ್ಕೆ ಪೋಲೀಸ ಪರೇಡನ್ನು ಹೆಡ್ ಕ್ವಾರ್ಟರದಲ್ಲಿ ನಿರೀಕ್ಷಿಸಿ, ಪೋಲೀಸರಿಗೆ ಉಪದೇಶಿಸುವರು. ಇವರ ಭಾಷಣವನ್ನು ಕನ್ನಡದಲ್ಲಿ ಡೆಪ್ಯುಟಿ ಸುಪರಿಂಟೆಂಡೆಂಟರು ಭಾಷಾಂತರಿಸುವರು.

೧೦-೧೫ ಕ್ಕೆ ಲಿಂಗಾಯತ ಭವನದಲ್ಲಿ ಜಿಲ್ಲಾ ಲೋಕಲ್ ಬೋರ್ಡಿನ ಹಾಗೂ ಲಿಂಗಾಯತ ವಿದ್ಯಾವರ್ಧಕ ಸಂಸ್ಥೆಯವರ ಮಾನ ಪತ್ರವನ್ನು ಸ್ವೀಕರಿಸುವರು. ಮುನಸಿಪಾಲಿಟಿ, ಲೋಕಲ್ ಬೋರ್ಡಿನ ಮಾನ ಪತ್ರಗಳನ್ನು ಸಂಸ್ಥೆಗಳ ಅಧ್ಯಕ್ಷರು ಓದುವರು. ಲಿಂಗಾಯತ ವಿ. ವ. ಸಂಸ್ಥೆಯ ಮಾನ ಪತ್ರವನ್ನು ಶ್ರೀ. ನಲವಡಿಯವರು ಓದುವರು. ೧೧ ಘಂಟೆಗೆ ಟ್ರೇನಿಂಗ ಕಾಲೇಜ ಶಾಲೆಯನ್ನು ಗವರ್ನರರು ಸಂದರ್ಶಿಸುವರು ಅಲ್ಲಿಯೇ 'ಅಪ್ಸರ ಕೇರ' ಸಂಸ್ಥೆಯ ಸಭಾಸದರ ಪರಿಚಯವನ್ನು ಸಾಹೇಬರಿಗೆ ಮಾಡಿ ಕೊಡುವವರಲ್ಲಿ ಬರುವರು.

ಮಧ್ಯಾಹ್ನ ೧೨॥ ಯಿಂದ ಅರ್ಧ ಗಂಟೆಯ ವರೆಗೆ ಕೆಳಗಿನ ಶಿಷ್ಟಮಂಡಲಿಯವರನ್ನು ಹಕ್ಕುಪತ್ರ ಪಡಿತಿಗಳ ವರೆಗೆ ಪ್ರತ್ಯೇಕವಾಗಿ ಗವರ್ನರರು ಸ್ವೀಕರಿಸುವರು (೧) ಇನಾಮದಾರರು (೨) ಅಸ್ಪೃಶ್ಯರು (೩) ಹಿಂದೀ ಕ್ರಿಶ್ಚಿಯನ್ನರು ೧೨॥ ಗಂಟೆಗೆ ಲೇಡೀ ಸಾಯಕ್ಸರು ಸಿವಿಲ್ ಹಾಸ್ಪಿಟಲನ್ನು ಸಂದರ್ಶಿಸುವರು ೧-೧೫ಕ್ಕೆ ಸ್ಮಾರ್ಟ ಸಾಹೇಬರಲ್ಲಿ ಸಾಹೇಬರು ಇನ್ನಿತರ ಅತಿಥಿಗಳೊಂದಿಗೆ ಊಟ ಮಾಡುವರು. ನಂತರ ೩ ಗಂಟೆಗೆ ಸರಕಾರೀ ಹಾಯಸ್ಕೂಲದಲ್ಲಿ ಬಾಯಸ್ಕಾಟರ ಆಟವನ್ನು ನಿರೀಕ್ಷಿಸುವರು. ೪-೩೦ ಗಂಟೆಗೆ ಕರ್ನಾಟಕ ಕಾಲೇಜದ ಬಾಯ ಬ್ರಿಯಲ್ಲಿ ಸರದಾರ ಹೆಬಳಿಕರರು ಸಂತೋಷ ಕೂಟವನ್ನು ಗವರ್ನರರಿಗಾಗಿ ಏರ್ಪಡಿಸುವರು. ಆರು ಘಂಟೆಗೆ ಯುರೋಪಿಯನ್ನರ ಜಮಖಾನಕ್ಕೆ ಹೋಗಿ ೮-೩೦ ಕ್ಕೆ ಕಲೆಕ್ಟರ ಸಾಹೇಬರಲ್ಲಿ ಊಟಕ್ಕೆ ತೆರಳುವರು.

ಇದಿಷ್ಟು ಧಾರವಾಡದ ಕಾರ್ಯಕ್ರಮವಾಯಿತು. ಸಿರಸಿ, ಸಿದ್ದಾಪುರ, ಗೇರಸೊಪ್ಪ, ಬಂಕಾಪುರ ಮತ್ತು ಹುಬ್ಬಳ್ಳಿಯ ಕಾರ್ಯಕ್ರಮಗಳನ್ನು ನಾಳಿನ ಸಂಚಿಕೆಯಲ್ಲಿ ಕೊಡುತ್ತದೆ.

ರವಿವಾರ ದಿವಸ ರಾತ್ರಿ ವಿಜಾಪುರ ಸೆರೆಮನೆಯೊಳಗಿಂದ ಐವರು ಕೈದಿಗಳು ಕೋಣೆಯ ಸಲಿ ಗೆಗಳನ್ನು ಮುರಿದು ಪಾರಾಗಿ ಹೋಗಿದ್ದಾರೆ ಒಬ್ಬನು ಇದಕ್ಕೆ ಒಲ್ಲೆಂದು ಹೇಳಿದ್ದರಿಂದ ಅವನು ಅವನ ಬಾಯಿಯಲ್ಲಿ ಹಂಚು ತುರುಕಿ ಹೋಗಿದ್ದರು.

ಬೆಳಗಾಂವಿಯ ಕಲೆಕ್ಟರರು ಅಲ್ಲಿಯ ಮುನಸಿಪಾಲಿಟಿ ಅಧ್ಯಕ್ಷರಿಗೆ ಒಂದು ಪತ್ರವನ್ನು ಬರೆದು ಊರಿನ ಸ್ವಚ್ಛತೆಯನ್ನು ಕಾಯುವ ಬಗ್ಗೆ ಕೆಲವು ಸೂಚನೆ ಕೊಟ್ಟಿರುವರು.

ಇಹವೃತ್ತ.

ಈ ಹೊತ್ತಿನಿಂದ ಮೂರು ದಿನಗಳವರೆಗೆ ಸರಕಾರಿ ಹಾಯಸ್ಕೂಲ ಬೈಲಿನಲ್ಲಿ ೨ನೆ ಕರ್ನಾಟಕ ಸ್ಕೌಟ ರ್‍ಯಾಲಿ'' ಯು ಕೂಡುವದು. ಬೇರೆ ಬೇರೆ ಭಾಗಗಳಿಂದ ಸುಮಾರು ೨೦೦೦ ಜನ ವಿದ್ಯಾರ್ಥಿಗಳೂ, ಶಿಕ್ಷಕರೂ, ಸ್ಕೌಟ ಮಾಸ್ತರರೂ ಇದರಲ್ಲಿ ಭಾಗ ತೆಗೆದುಕೊಳ್ಳಲು ಬರುತ್ತಾರೆ.

ಈದಿನ ೭-೩೦ರಿಂದ ವಂದೇಮಾತರಂದದೊಂದಿಗೆ ಕಾರ್ಯಕ್ರಮವು ಮುಂಜಾನೆ ಪ್ರಾರಂಭವಾಗುವದು. ಸಾಯಂಕಾಲ ೫ರಿಂದ ೬॥ ವರೆಗೆ ಮೆರವಣಿಗೆಯಿದೆ.

ಮುಂಬಯಿ ಕರ್ನಾಟಕ ಪ್ರಾಥಮಿಕ ಶಿಕ್ಷಕರ ಸಭೆಯು ತಾ|| ೪ ನೆಯ ದಿವಸ ಮಧ್ಯಾಹ್ನ ೨ ಗಂಟೆಯಿಂದ ಚಿಕ್ಕಮಕ್ಕಳ ಮಾದರಿ ಶಾಲೆಯಲ್ಲಿ ಜರುಗುತ್ತಲ್ಲಿದೆ.

ಮುಬೈನಿಯಲ್ಲಿ ಪೋಸ್ಟಮನ್ನರ ಪರಿಷತ್ತನ್ನು ತೀರಿಸಿಕೊಂಡು ರಾ ಬಖಲೆಯವರು ಈ ಊರಿಗೆ ಬಂದಿದ್ದರು. ಇಲ್ಲಿ ಕೆಲ ಮುಖಂಡರನ್ನು ಕರ್ನಾಟಕ ಹಾಯಸ್ಕೂಲ, ಸೆಟ್ಲಮೆಂಟುಗಳನ್ನು ಸಂದರ್ಶಿಸಿದರು. ಈ ದಿನ ಬೆಳಗಾಂವಿಗೆ ಹೋಗುವರು.

ಡಾ. ಹರ್ಡೀಕರರ ಪ್ರಕೃತಿ.

ಡಾ ಹರ್ಡೀಕರರ ಪ್ರಕೃತಿಯು ಚನ್ನಾಗಿದೆ. ಅವರು ಮುಂಬಯಿಗೆ ಹೋದ ಕೂಡಲೆ ಡಾ ಗುಪ್ತೆಯವರು ಅವರ ಪ್ರಕೃತಿಯನ್ನು ಪರೀಕ್ಷಿಸಿ ಒಂದು ತಿಂಗಳ ವರೆಗೆ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಅವರಿಗೆ ಹೇಳಿದರು. ಶನಿವಾರ ೩ನೆ ದಿವಸಕ್ಕೆ ಕೆ. ಇ. ಎಂ ಆಸ್ಪತ್ರೆಯಲ್ಲಿ ಅವರ ಶಸ್ತ್ರಕ್ರಿಯೆಯಾಯಿತು. ಡಾ' ದೇಶಮುಖರು ಶಸ್ತ್ರಕ್ರಿಯೆ ಮಾಡಿದರು. ಈ ಸಮಯದಲ್ಲಿ ಡಾ ಸಾರಡೆ ಮತ್ತು ಡಾ ಗುಪ್ತೆಯವರು ಪ್ರತ್ಯಕ್ಷ ಇದ್ದರು. ಶಸ್ತ್ರಕ್ರಿಯೆಯು ಅರ್ಧ ಗಂಟೆಯಲ್ಲಿ ಯಶಸ್ವಿಯಾಗಿ ಕೊನೆಗಂಡಿತು. ಅವರು ಇನ್ನೂ ೧೫ ದಿನಗಳ ವರೆಗೆ ಆಸ್ಪತ್ರೆಯಲ್ಲಿ ಇರಬೇಕಾಗುವದೆಂದು ಡಾಕ್ಟರರು ಅಭಿಪ್ರಾಯಪಟ್ಟಿರುವರು.

ಡಾ. ಹರ್ಡೀಕರರಿಗೆ ಬೇಗನೆ ಗುಣವಾಗಿ ಅವರಿಂದ ಹೆಚ್ಚಿನ ದೇಶಸೇವೆ ಘಟಿಸಲೆಂದು ನಾವು ಹಾರೈಸುತ್ತೇವೆ.

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಣಿ ಮತ್ತು ಕಂಪನಿ)

ಹುಬ್ಬಳ್ಳಿ ತಾ|| ೧ ಮಧ್ಯಾಹ್ನ ೧ಗಂ

ಜವಾರಿ ಹತ್ತಿ	೧೦೨ ೧೦೪	ಜೋಳ	೧೨.೫
ಅಪ್ಲೆಂಡ ,,	೧೦೨.೧೦೪	ಗೋದಿ	[illegible]
ಬಿಂಗಾಮತಿ ,,	೯೫-೯೭	ಉದ್ದು	[illegible]
ಕಮ್ಮಟ್ಸ .	೧೦೫-೧೧೦	ಕಡ್ಲಿ	[illegible]
ಅಗಸಿಅರಳೆ	೭೩-೭೫	ಕಡ್ಲಿ ಕಾ.	[illegible]
ಶೆಟ್ಟಿಬೀಜ	೬೬.೭೭	ಬೆಲ್ಲ	[illegible]
ಸಾಬಣ ಅರಳೆ	೬೬.೬೭	ಮುರಿ	[illegible]
ಜಗಳು ಜವಾರಿ	೯-೧೨		
ಶೇಂಗಾಬೀಜ ಹೆಜ	೪೯-೪॥	ಹತ್ತಿಕಾಳು	[illegible]

ಬೆಳ್ಳಿ ಬಂಗಾರ

ಬಂಗಾರ ೩೩||- ಬೆಳ್ಳಿ [illegible]

ಮುಂಬಯಿ ಪೇಟೆಯ ಧಾರಣೆ

(ತಾ|| ೩೧ ಸಂ' ೫)

ಬಂಗಾರ ೩೩-೧೩-೬ ಬೆಳ್ಳಿ ೫೫-೯-

ಶೇಂಗಾ ೨೬-೧೧-೦

ಸರಕಾರಿ ಸಾಲ ಪತ್ರ (೩॥) ೮೯-

ಭಡೋಚ ಹತ್ತಿ ಎಪ್ರಿಲ್ ಮೇ ೧೮೯-

ಸರ್. ರುಸ್ತುಂ ವಕೀಲರ ಮರಣ.

"ಕನ್ನಡಿಗ" ನಿಗಾಗಿ ತರಿಸಿದ ಅಸೋಶಿಯೇಟೆಡ್ ಕಂಪನಿಯ ತಂತಿಗಳು

ಸರ್ ರುಸ್ತುಂ ವಕೀಲರ ಮರಣ.

ಮುಂಬಯಿ ತಾ| ೧— ಮುಂಬಯಿ ಸರಕಾರದ ಸ್ಥಾನಿಕ ಸಂಸ್ಥೆಗಳ ಮಂತ್ರಿಗಳಾದ ಸರ್ ರುಸ್ತುಂ ವಕೀಲರು ಈ ಹೊತ್ತು ಮುಂಜಾನೆ ಮರಣ ಹೊಂದಿದರು. ಸ್ವಲ್ಪ ದಿನಗಳ ಹಿಂದೆ ಒಮ್ಮೆಲೆ ಒಡ್ಡಾಗಿದ್ದರಿಂದ ಇವರು ಎರಡು ಮೂರು ದಿವಸದ ಹಿಂದೆ ಹೊಟ್ಟೆಯಲ್ಲಿಯ ಹುಣ್ಣಿನ ಬಗ್ಗೆ ಶಸ್ತ್ರಕ್ರಿಯೆ ಮಾಡಿಸಿಕೊಂಡಿದ್ದರು.

ನಾ. ಗವ್ಹರ್ನರರು ಪ್ರವಾಸದ ಮೇಲೆ ಇದ್ದುದರಿಂದ ಶವಸಂಸ್ಕಾರದ ಸಮಯದಲ್ಲಿ ಅವರಿಗೆ ಬರುವದಾಗಲಿಲ್ಲ. ದಂಡಿನ ಕಾರ್ಯದರ್ಶಿ ಮಿ ಜರ ಪ್ರಾಂಕ್ಸ ಇವರು ಗವ್ಹರ್ನರರ ಪ್ರತಿನಿಧಿಗಳಾಗಿ ಬಂದಿದ್ದರು. [ಅ ಪ್ರೆ ತಂತಿ]

ಆ್ಯಂಡ್ರೂಜರ ಆಗಮನ

ನಾಗಪುರ ತಾ|| ೧೧—ರೆವ್ಹೆರೆಂಡ ಸಿ ಎಫ್ ಆ್ಯಂಡ್ರೂಜ ಇವರು ಈ ಹೊತ್ತು ಸಂಜೆಗೆ ದಿಲ್ಲಿಯಿಂದ ಇಲ್ಲಿಗೆ ಬಂದರು. ಅವರು ಈ ದಿನಸ ಭಾಯಿ ಪರಮಾನಂದರನ್ನು ಕಂಡು ಸದ್ಯದ ರಾಜಕೀಯ ಪರಿಸ್ಥಿತಿಯ ಸಂಬಂಧವಾಗಿ ಅವರೊಡನೆ ವಿಚಾರ ವಿನಿಮಯ ಮಾಡಿ, ನಾಳಿನ ದಿವಸ ಮಹಾತ್ಮರ ಭೆಟ್ಟಿಗೆ ವರ್ಧಾಕ್ಕೆ ಹೋಗುವರು. [ಅ ಪ್ರೆ ತಂತಿ]

ಹಿಂದೂ-ಮುಸಲ್ಮಾನ ಐಕ್ಯವು ಶಕ್ಯವಿಲ್ಲ

ನಾಗಪುರ ತಾ|| ೫— ಹಿಂದೂ ಮಹಾಸಭೆಯ ಅಧ್ಯಕ್ಷರಾದ ಭಾಯಿ ಪರಮಾನಂದ ಇವರು ಈ ಹೊತ್ತು ಸಂಜೆಗೆ ಹಿಂದೂ ಜನರ ಸಭೆಯಲ್ಲಿ ಭಾಷಣ ಮಾಡಿದರು. ಜಾತಿಯ ಪ್ರಶ್ನೆಯನ್ನು ಯಾವತ್ತೂ ಜಾತಿಯವರಿಗೆ ಸಮಾಧಾನಕರವಾಗುವಂತೆ ಬಿಡಿಸಿದಲ್ಲಿ ಮಾತ್ರ ಅದರತಿಯು ಯಶಸ್ವಿಯಾಗುವದೆಂದು ಅವರು ಹೇಳಿದರು. ಇದಲ್ಲದೆ ಹಿಂದೂ-ಮುಸಲ್ಮಾನರ ಐಕ್ಯದಿಂದ ನಡೆಯದ ಹೊರತು ಸ್ವರಾಜ್ಯ ಸಿಗುವದಿಲ್ಲವೆಂಬ ಮಾತು ಕೇವಲ ಭ್ರಮೆಯಾಗಿದೆಯೆಂದೂ, ಮಹಾತ್ಮಾ ಗಾಂಧಿಯವರು ಅನೇಕ ಸಾರೆ ಈ ಬಗ್ಗೆ ಪ್ರಯತ್ನ ಮಾಡಿದ ಗ್ಯಾಕ್ಟರಿಗೆ ಯಶಸ್ಸು ಸಿಗುವ ಸಂಭವವಿಲ್ಲವೆಂದೂ ನುಡಿದರು. ಕೊನೆಯಲ್ಲಿ ಅವರು ಜಾತಿ ನಿರ್ಣಯದಲ್ಲಿ ಯೋಗ್ಯವಾದ ತಿದ್ದುಪಡೆಯಾಗುವಂತೆ ಹಿಂದೂ ಜನರೆಲ್ಲರೂ ಸಂಘಟಿತ ರೀತಿಯಿಂದ ಪ್ರಯತ್ನ ಮಾಡಬೇಕೆಂದು ಬಿನ್ನವಿಸಿಕೊಂಡರು. (ಅ ಪ್ರೆ ತಂತಿ)

ಚಿತಗಾಂಗದಲ್ಲಿ ಕೈದು.

ಕಲಕತ್ತಾ ತಾ| ೩೧— ಓರ್ವ ಬಂಗಾಲಿ ತರುಣನು ಕೆಲವು ತಿಂಗಳಗಳಿಂದ ಪೋಲೀಸರ ಕೈಕ್ಕೆ ಸಿಕ್ಕದೆ ಎಲ್ಲಿಯೋ ಅದೃಶ್ಯನಾಗಿದ್ದನು. ಈಗ ಅವನು ಚಿತಗಾಂಗ ಎಂಬಲ್ಲಿ ಸಿಗಲು ಪೋಲೀಸರು ಕ್ರಿಮಿನಲ್ ಲಾ ಅಮೆಂಡಮೆಂಟ ಕಾಯದೆಯ ಅನ್ವಯ ಅವನನ್ನು ಸೆರೆ ಹಿಡಿದ್ದಾರೆ. [ಅ ಪ್ರೆ ತಂತಿ]

೭ ಜನರಿಗೆ ಹದ್ದುಪಾರು

ಮಿದನಾಪುರ ತಾ|| ೩೧ – ಮಿದನಾಪುರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಇಲ್ಲಿ ೭ ಜನರಿಗೆ ೪೮ ತಾಸಿನಲ್ಲಿ ಮಿದನಾಪುರ ಜಿಲ್ಲೆಯೊಳಗಿಂದ ಹೊರಬಿದ್ದು ಹೋಗಬೇಕೆಂದು ಅಪ್ಪಣೆ ವಿಧಿಸಿದ್ದಾರೆ. ಈ ೭ ಜನರಲ್ಲಿ ಕೆಲವು ಪ್ರಮುಖ ಗೃಹಸ್ಥರಿರುವರು. [ಅ ಪ್ರೆ ತಂತಿ]

ಇನ್ನೂ ಕೈದಿನಲ್ಲಿರಲಿ

ಕಲಕತ್ತಾ ತಾ| ೧೧— ಮಿದನಾಪುರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ| ಬರ್ಜ ಇವರ ಕೊಲೆಯ ಸಂಬಂಧವಾಗಿ ಕೈದಿಗೊಳಗಾದ ಶಾಂತಿರಂಜನ ಘೋಷ, ಸುನೀತಿ ಕುಮಾರ ಬ್ಯಾನರ್ಜಿ ಮತ್ತು ವ್ರಜವಿಹಾರಿ ವರ್ಮಾ ಇವರನ್ನು ಪೋಲೀಸರ ವಿಚಾರಣೆಯು ಮುಗಿಯುವ ವರೆಗೆ ಅವರ ಸ್ವಾಧೀನದಲ್ಲಿಯೇ ಇಡಲು ಆಜ್ಞೆಯಾಗಿದೆ. [ಅ ಪ್ರೆ ತಂತಿ]

ಕಮಲಾದೇವಿಯವರ ಜಾಮೀನ ಅರ್ಜಿಗೆ ನಕಾರ

ಗುಡಿವಾಡಾ ತಾ| ೩೧— ತಾ| ೨೭ನೆ ದಿವಸ ಕೈದಿಗೊಳಗಾದ ಸೌ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಬೇರೆ ಇಬ್ಬರ ಜಾಮೀನ ಅರ್ಜಿಗಳನ್ನು ಸ್ಥಳೀಕ ಮ್ಯಾಜಿಸ್ಟ್ರೇಟರು ನಿರಾಕರಿಸಿರುವರು. [ಅ ಪ್ರೆ ತಂತಿ]

ಕೌನ್ಸಿಲ್ ಪಕ್ಷಕ್ಕೆ ವಿರೋಧ

ಮದ್ರಾಸ ತಾ|| ೩೦— ನಿನ್ನಿನ ದಿವಸ ಇಲ್ಲಿಯ ಕಾಂಗ್ರೆಸ ಭವನದಲ್ಲಿ ಸ್ವರಾಜ್ಯ ಪಕ್ಷದ ಸಭೆ ಕೂಡಿತು. ವಿರೋಧ ಪಕ್ಷದವರು ಸಭೆಯ ಹೊತ್ತಿಗೆ ಅಲ್ಲಿಗೆ ಬಂದು ಕಾಂಗ್ರೆಸಕ್ಕೆ ವಿರುದ್ಧವಾದ ಕಾರ್ಯಕ್ರಮವನ್ನು ಕಾಂಗ್ರೆಸ ಭವನದಲ್ಲಿ ಗೊತ್ತು ಪಡಿಸುವದು ಸರಿಯಾಗುವದಿಲ್ಲವೆಂದು ಅಡ್ಡಿ ಮಾಡಿದರು. ಸಭೆಯ ಕಾರ್ಯವು ಪ್ರಾರಂಭವಾಯಿತು. ಕೂಡಲೆ ವಿರೋಧಕರು ಅಡ್ಡಿ ಮಾಡಿದರು. ಸಭೆಯವರು ಹೊರಬಿದ್ದು ಹೋಗಲು ಅವರಿಗೆ ಹೇಳಿಕೊಂಡರು. ಅವರೆಲ್ಲರು ಹೊರಗೆ ಬಂದು ಅಲ್ಲಿಯೇ ಸಭೆ ಮಾಡಿಕೊಂಡು ನಿಷೇಧವನ್ನು ಪ್ರದರ್ಶಿಸಿದರು.

ಮಾರವಾಡಿ ಸ್ತ್ರೀಯರ ಪರಿಷತ್ತು.

ಕಲಕತ್ತಾ ತಾ|| ೩೦— ಅಖಿಲ ಭಾರತ ಮಾರವಾಡಿ ಮಹಿಲಾ ಪರಿಷತ್ತಿನ ಅಧಿವೇಶನವು ತಾ|| ೨೮-೨೯ ನೇ ದಿವಸ ಇಲ್ಲಿ ಕೂಡಿತ್ತು. ಸೌ ಜಾನಕಿಬಾಯಿ ಬಜಾಜ ಇವರು ಅಧ್ಯಕ್ಷಸ್ಥಾನ ಸ್ವೀಕರಿಸಿದ್ದರು. ಸಭೆಯಲ್ಲಿ ಗೋಷಾ ಪದ್ಧತಿ ಬಾಲವಿವಾಹ ವರದಕ್ಷಿಣೆಯ ರೂಢಿ ಮತ್ತು ಸ್ವತಂತ್ರ ಮತದಾರ ಸಂಘ ಇವುಗಳ ಬಗ್ಗೆ ನಿಷೇಧ ಆದದ್ದಲ್ಲದೆ, ಅಸ್ಪೃಶ್ಯತಾ ನಿವಾರಣೆಗೆ ಬೆಂಬಲವೂ ಕೊಡಲ್ಪಟ್ಟಿತು. ಈ ಅಧಿವೇಶನಕ್ಕೆ ಡಾ ಪಿ ಸಿ ರಾಯರೂ ಬಂದಿದ್ದರು.

ವಲ್ಲಭಭಾಯಿಯವರ ಬಗ್ಗೆ ಮಧ್ಯಸ್ತಿಕೆ.

ಮುಂಬಯಿ ತಾ|| ೩೦— ವಿಠ್ಠಲಭಾಯಿಯವರ ಅಂತ್ಯಸಂಸ್ಕಾರದಲ್ಲಿ ಭಾಗತೆಗೆದುಕೊಳ್ಳಲು ಸರಕಾರದವರು ವಲ್ಲಭಭಾಯಿಯನ್ನು ಬಿಡುಗಡೆ ಮಾಡುವದು ವಿಹಿತವಾಗಿರುವದೆಂದು ಜನತೆಯ ಅಭಿಪ್ರಾಯವಿದ್ದು ಕೆಲವು ನಚೀಸ್ಟ ಮುಂದಾಳುಗಳು ಈ ರೀತಿ ಪ್ರಯತ್ನ ನಡಿಸಿರುವರು. ಅವರು ಈ ಬಗ್ಗೆ ವಾಯಿಸರಾಯರ ಕಡೆಗೆ ಓರ್ವ ಮಧ್ಯಸ್ಥಗಾರರನ್ನು ಕಳಿಸಿರುವರೆಂದು ಕೇಳಬರುತ್ತಿದೆ.

ಸರದಾರರ ಬಿಡುಗಡೆ ಬಗ್ಗೆ ಲಂಡನ್ನದಲ್ಲಿಯೂ ಪ್ರಯತ್ನ ಮಾಡಿ ನೋಡಬೇಕೆಂದು ಮುಂಬಯಿಯಿಂದ ಬ್ಯಾ ಜಯಕರರಿಗೆ ಒಂದು ತಂತಿಯು ಹೋಗಿದೆ.

ಲಾಹೋರದಲ್ಲಿ ಬಾಂಬು.

ಲಾಹೋರ ತಾ|| ೩೦ ನಿನ್ನಿನ ದಿವಸ ರಾತ್ರಿ ಇಬ್ಬರು ತರುಣರು ಒಂದು ಟಾಂಗೆಯಲ್ಲಿ ಮಾಲ ರಸ್ತೆಯ ಮೇಲೆ ಹೋಗುತ್ತಿದ್ದರು. ಆಗ ಪೋಲೀಸರು ಅವರ ಟಾಂಗೆಯನ್ನು ನಿಲ್ಲಿಸಿ, ಅವರ ಝಡತಿಮಾಡಿದರು. ಅವರ ಹತ್ತರ ಒಂದು ಬಾಂಬು ಒಂದು ಕರಾರಿಸಿಕ್ಕವು. ಕೂಡಲೆ ಅವರು ಅವರನ್ನು ಸೆರೆ ಹಿಡಿದು ಒಯ್ದರು. ಈ ತರುಣರು ಓರ್ವ ಯುರೋಪಿಯನ್ನನ ಮೇಲೆ ಬಾಂಬು ಒಗೆಯುವ ಉದ್ದೇಶವನ್ನಿಟ್ಟುಕೊಂಡಿದ್ದರೆಂದು ಪೋಲೀಸರ ಸಂಶಯವಿದೆ.

ಇಂಗ್ಲಂಡದ ಗೆಳೆತನ ಬೇಕು ಹೇಲ್ಸರಿಗೆ ಜವಾಹಿರರ ಉತ್ತರ

ಕಲಕತ್ತಾ ತಾ|| ೩೧— ಮಿ|| ಹೇಲ್ಸ ಇವರು ಕಳಿಸಿದ ಪತ್ರಕ್ಕೆ ಉತ್ತರ ಕೊಡುವಾಗ ಪಂಡಿತ ಜವಾಹಿರರು ಅನ್ನುವದೇನಂದರೆ— ರಾಷ್ಟ್ರೀಯ ಯುದ್ಧದ ಸಮಯದಲ್ಲಿ ಎಂಜನೆ ರಾಷ್ಟ್ರಗಳ ಬಗ್ಗೆ ವೈಮನಸು ಹುಟ್ಟುವದು ಬಹು ವಿಷಾದಾಸ್ಪದವಾಗಿದೆ. ಆದರೂ ನಾವು ಹಿಂದೀ ಚಳವಳಿಯನ್ನು ಪ್ರೇಮ, ದಯಾ ಪರಸಹಿಷ್ಣುತೆ ಇವೇ ಮೊದಲಾದ ತತ್ವಗಳ ಮೇಲೆ ನಡಿಸಿಕೊಂಡು ಹೋಗುವ ಪ್ರಯತ್ನ ಮಾಡುತ್ತೇವೆ.

ಹಿಂದಿ-ಬ್ರಿಟಿಶ ಸಂಬಂಧವು ಪೂರ್ಣವಾಗಿ ಕಡಿದು ಹೋಗಬೇಕೆಂದು ನನ್ನ ಇಚ್ಛೆಯಿರುವದಿಲ್ಲ. ಇಂಗ್ಲಂಡದ ಯಾವತ್ತು ಸಂಬಂಧವನ್ನು ಹರಿದುಕೊಂಡು ಅವರೊಡನೆ ಶತೃವೆಂದು ಸೆಡ್ಡು ಹೊಡೆದು ನಿಲಬೇಕೆಂಬ ಕಲ್ಪನೆಯು ನನ್ನ ಕನಸು ಮನಸಿನಲ್ಲಿ ಸಹ ಇಲ್ಲ. ಎರಡೂ ರಾಷ್ಟ್ರಗಳು ಸಂಸಮಾನವಾದ ದರ್ಜೆಯಿಂದ ನಡೆದುಕೊಂಡರೆ ಮಾತ್ರ ಎಂದೂ ರಾಷ್ಟ್ರಗಳಲ್ಲಿ ಚಿರವಾದ ಗೆಳೆತನವು ನೆಲೆಗೊಳ್ಳುವದು. ವಿಧಾಯಕ ಕಾರ್ಯಕ್ರಮವು ಮಾಡುವ ಮುಂದೆ ವಿಘಾತಕ ಸಂಗತಿಗಳು ನಡೆಯತಕ್ಕದ್ದಲ್ಲವೆಂದು ನನಗೂ ಎನಿಸುತ್ತದೆ. ಆದರೆ ಹಳೇ ಮನೆಯ ದುರಸ್ತಿ ಮಾಡುವಾಗ ಅನೇಕ ಸಲ ಮನೆಯ ಯಾವತ್ತು ಭಾಗಗಳನ್ನು ಬಿಚ್ಚಬೇಕಾಗುವದೆಂಬದನ್ನು ಲಕ್ಷದಲ್ಲಿಡಬೇಕು.

ಸರ್ ಸಪ್ರೂರವರ ಮನವಿ

ಸರ್ ತೇಜ ಬಹಾದ್ದೂರ ಸಪ್ರೂರವರು ಜಾಯಿಂಟ ಕಮಿಟಿಯವರ ಸನ್ನಿಧಿಗೆ ಒಂದು ಮನವಿಯನ್ನು ಕಳಿಸಿರುತ್ತಾರೆ. ಇಂಥಹ ದೀರ್ಘವಾದ ಮನವಿಯನ್ನು ಈ ವರೆಗೆ ಯಾವ ರಾಜಕಾರಣಜ್ಞನೂ ಹೊರಡಿಸಿರುವದಿಲ್ಲ. ಶ್ರೀ ಜಯಕರ ಎನ್ ಎಮ್ ಜೋಶಿ ಮತ್ತು ರಂಗಸ್ವಾಮಿಯವರು ಜಾಯಿಂಟ ಕಮಿಟಿಗೆ ಬೇರೆ ಬೇರೆ ಪತ್ರಗಳನ್ನು ಬರೆದು ಸಪ್ರೂರವರ ಅಭಿಪ್ರಾಯವು ತಮಗೆ ಸಮ್ಮತವಿದೆಯೆಂದು ತಿಳಿಸಿದ್ದಾರೆ. ಈ ಮನವಿಯು ಕೆಲವು ದಿನಗಳ ಮೇಲೆ ಹಿಂದುಸ್ಥಾನ ಹಾಗು ಇಂಗ್ಲಂಡದಲ್ಲಿ ಏಕ ಕಾಲಕ್ಕೆ ಪ್ರಸಿದ್ಧಿಸಲ್ಪಡುವದು.

ಸಾವಿರಾರು ರೂಪಾಯಿ ಹೋದವು

ರತ್ನಾಗಿರಿ ತಾ|| ೩೧— ಜಂಜೀರಾ ಸಂಸ್ಥಾನದೊಳಗಿನ ಒಂದು ಪೋಸ್ಟ ಚೀಲದೊಳಗಿಂದ ೪೭೫೦ ರೂಪಾಯಿ ಹೋಗಿವೆ. ಕಳವಾದದ್ದರಲ್ಲಿ ೩ ಸಾವಿರ ರೂಪಾಯಿಯ ನೋಟುಗಳು ಇದ್ದು ಅವುಗಳ ನಂಬರಗಳನ್ನು ಸಂಸ್ಥಾನದವರು ಪ್ರಸಿದ್ಧ ಮಾಡಿರುತ್ತಾರೆ.

ಲ್ಯಾಂಕೆಶಾಯರ ಕರಾರಿಗೆ ವಿರೋಧ

ಲಖನೌ ತಾ| ೩೦— ಲಖನೌ ಸ್ವದೇಶಿ ಸಂಘದವರು ತಮ್ಮ ಸರ್ವಸಾಧಾರಣ ಸಭೆಯಲ್ಲಿ ಮುಂಬಯಿ ಗಿರಣಿಕಾರರು ಲ್ಯಾಂಕೆಶಾಯರ ಪ್ರತಿನಿಧಿಗಳೊಡನೆ ಮುಂಬಯಿಯಲ್ಲಿ ಮಾಡಿಕೊಂಡ ಒಪ್ಪಂದವು ತಮಗೆ ಸಮ್ಮತವಿಲ್ಲವೆಂದು ನಿರ್ಣಯಿಸಿರುತ್ತಾರೆ.

ಅಲಹಾಬಾದ ತಾ| ೩೦— ಶೇಟ ಕಸ್ತೂರಭಾಯಿ ಲಾಲಭಾಯಿಯವರು ಅಸೋಸಿಯೇಟೆಡ್ ಪ್ರೆಸ್ಸಿನವರಿಗೆ ಸ್ರ್ಯಂಟಿನಿ ಕೊಟ್ಟು ಕರಾರಿನಿಂದ ಹಿಂದೀ ಜವಳಿ ಉದ್ಯೋಗಕ್ಕೆ ಧಕ್ಕೆ ತಗಲುವದೆಂದೂ, ಮುಂಬಯಿ ಗಿರಣಿ ಒಡೆಯರು ಕರಾರಿಗೆ ಒಪ್ಪಿಕೊಂಡಿದ್ದು ಆಶ್ಚರ್ಯಕಾರಕವಾಗಿದೆಯೆಂದೂ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಕರ್ನಾಟಕ

ತಾ|| ೨೭ ನೇ ದಿವಸ ರಾಣೆಬೆನ್ನೂರು ಪೋಲೀಸರು ಪಿಕೆಟಿಂಗದ ಸಂಬಂಧದಲ್ಲಿ ಮೂವರು ಹೆಂಗಸರನ್ನು ಮತ್ತು ಒಬ್ಬ ಹುಡುಗನನ್ನು ಕೈದುಮಾಡಿದ್ದಾರೆ. ಈ ನಾಲ್ವರು ರಿತ್ತಿಯಿಂದ ಬಂದಿದ್ದರು.

ಗದಗ ಮ್ಯುನಸಿಪಾಲಟಿ ದವಾಖಾನೆಯ ಹತ್ತರ ಇದ್ದ ಹೊಸ ಕಟ್ಟಡಕ್ಕೆ ಭವಾನಿಶಾ ಧರ್ಮಸಿ ಕಜಾಡಿ ಎಂಬ ಹೆಸರು ಇರುವದನ್ನು ಈ ಹೆಸರನ್ನು ತೆಗೆದೊಗೆಯಬೇಕೆಂದು ಕಲೆಕ್ಟರರು ಅಪ್ಪಣೆ ಮಾಡಿರುವರಂತೆ!

ಬೆಳಗಾವ ಮುನಸಿಪಾಲಟಿಯ ತಾ|| ೩೦ ನೆಯ ಸರ್ವ ಸಾಧಾರಣ ಸಭೆಯಲ್ಲಿ ವಿಠ್ಠಲಭಾಯಿಯವರ ನಿಧನದ ಬಗ್ಗೆ ದುಃಖ ಸೂಚಕ ನಿರ್ಣಯವು ತಿರ್ಮಾನವಾಯಿತು.

ಅಲ್ಲಲ್ಲಿಯ ಸುದ್ದಿಗಳು.

ಮುಲತ್ತಾನ ತುರಂಗದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಡಾ. ಸತ್ಯಪಾಲ ಇವರು ತಾ|| ೧೯ನೆ ದಿವಸ ಬಿಡುಗಡೆ ಹೊಂದಿದರು.

೧೯೨೭-೨೮ ರಲ್ಲಿ ಮುಂಬಯಿ ಸರಕಾರದವರು ಜುನ್ನರ ಮುನಸಿಪಾಲಟಿಗೆ ೧೫೦೦ ರೂ ಪ್ರಾಥಮಿಕ ಶಿಕ್ಷಣದ ಗ್ರ್ಯಾಂಟು ಕಡಿಮೆ ಕೊಟ್ಟರು. ಚೀಫ ಆಫೀಸರರು ಮತ್ತು ಸೆಕ್ರೆಟರಿಯವರು ಪುಣೆ ಮೊದಲನೆ ವರ್ಗದ ಕೋರ್ಟಿನಲ್ಲಿ ಭಾರತ ಮಂತ್ರಿಗಳ ಮೇಲೆ ದಾವೆ ಮಾಡಿದರು. ದಾವೆಯು ಗೊತ್ತಾದ ಅವಧಿಯಲ್ಲಿ ಮಾಡಲ್ಪಟ್ಟಿಲ್ಲವೆಂದು ಕಾರಣ ತೋರಿಸಿ ಗ್ರ್ಯಾಂಟು ಕೊಡುವದು ಸರಕಾರದವರಿಗೆ ಬಂಧನಕಾರಕವಿಲ್ಲವೆಂದು ಜಡ್ಜರು ದಾವೆಯನ್ನು ಹಿಡಿಯಲಿಲ್ಲ. ಮ್ಯುನಸಿಪಾಲಟಿಯವರು ಈ ನಿರ್ಣಯದ ವಿರುದ್ಧವಾಗಿ ಡಿಸ್ಟ್ರಿಕ್ಟ ಕೋರ್ಟಿಗೆ ಅಪೀಲು ಮಾಡಿದರು. ಸರಕಾರಿ ವಕೀಲ ಶ್ರೀ ಗುಪ್ತೆ ಇವರು, ಮ್ಯುನಸಿಪಾಲಟಿಗೆ ಸರಕಾರದವರು ಗ್ರ್ಯಾಂಟು ಕೊಡಲೇಬೇಕೆಂದು ಕಾಯದೆಯಲ್ಲಿ ಹೇಳಿಲ್ಲವೆಂದೂ ಸರಕಾರದವರು ಮ್ಯುನಿಸಿಪಾಲಟಿಗೆ ಸಹಾಯವೆಂದು ಹಣ ಕೊಡುತ್ತಿರುವರೆಂದೂ ಶಾಲೆಯನ್ನು ಸಾಗಿಸುವದು ಮ್ಯುನಸಿಪಾಲಟಿಯ ಅವಶ್ಯ ಕರ್ತವ್ಯವಿದೆಯೆಂದೂ ಪ್ರತಿಪಾದಿಸಿದರು. ಕೋರ್ಟು ಸರಕಾರಿ ವಕೀಲರ ಅಂಬೋಣವನ್ನು ಮಾನ್ಯ ಮಾಡಿ ದಾವೆಯನ್ನು ನಿರಾಕರಿಸಿದೆತು. ಕ್ರೋನಿಕಲ

ಕಲೆಕ್ಟರರ ಪ್ರವಾಸ ಕ್ರಮ.

ನವಲಗುಂದ	ತಾ|| ೯ ರಿಂದ	೧೨	ಪರ್ಯಂತರ
ನರಗುಂದ	೧೩ ರಿಂದ	೧೫	,,
ರೋಣ	೧೬ ರಿಂದ	೨೩	,,
ಕೋಟುಮಚಗಿ	೨೪ ರಿಂದ	೨೭	,,
ಗದಗ	೨೮ ರಿಂದ	೧	ಡಿಸೆಂಬರ.
ಡಂಬಳ	೨ ರಿಂದ	೬	,,
ಹೊಸಪೇಟ	೭ ರಿಂದ	೧೧	,,

ಡಾ. ಕುಲಕರ್ಣೀಯ
ಲೆಬೊರೋಟರಿ ಮುಂಬೈ
ನಂಬರ ೧೩
ಬಾಟ್ಲಿ ಕಿ. ೧-೩-೦
ಎಲ್ಲ ಔಷಧಿಕಾರರಲ್ಲಿಯೂ
ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ
ರಾಮಬಾಣ ಔಷಧವು

ಸೆರಗು, ಬಿಳೀಸೆರಗು, ಕೆಂಪು ಸೆರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತದೆ. ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಢ ಆಗುತ್ತದೆ.

ಬಿ. ಟಿ. ಶಿರೂರ ಅ್ಯಂಡ ಸನ್ಸ,
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ
೧೮-೩

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ

ನ್ಯೂ ಓರಿಯಂಟಲ್ ಕಂ.

"ನೀಲಗಿರಿ ಎಣ್ಣೆ"

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ ಮೋಚಿಗೆಮ್ಮು, ಕೆಮ್ಮು ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ ಟೋಣಪಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಆಡಬ ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ

ಮ್ಯಾನೇಜರ:- ರಾಘವ ಫಾರ್ಮಸಿ ಗೋಕಾಕ
ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೧-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ಜಾಹೀರ ನೋಟೀಸು.

ದಿ ಸದರ್ನ ಮರಾಠಾ ಅರ್ಬನ್ ಕೋ-ಆಪರೇಟಿವ್ಹ ಕ್ರೆಡಿಟ್ ಬ್ಯಾಂಕ ಲಿಮಿಟೆಡ್, ಧಾರವಾಡ ಇವರು ಧಾರವಾಡ ಶಾಲೆನ ಮಾರ್ಕೇಟಿನಲ್ಲಿ ವಖಾರದ ಸಲುವಾಗಿ ಒಂದು ಕಟ್ಟಡವನ್ನು ಕಟ್ಟುವವರಿದ್ದಾರೆ ಕಟ್ಟಡದ ಕಿಮ್ಮತ್ತು ರೂ ೧೭೦೦ ಆಗಬಹುದೆಂದು ಅಂದಾಜ ಮಾಡಲಾಗಿದೆ ಸದರೀ ಕಟ್ಟಡವನ್ನು ಕಟ್ಟಿಕೊಡುವವರು ಸನ್ ೧೯೩೩ನೇ ಇಸ್ವಿ ನವ್ಹೆಂಬರ ತಿಂಗಳ ೧೦ನೇ ತಾರೀಖಿನ ಸಂಜೆಯ ೫ ಘಂಟೆಯ ಒಳಗಾಗಿ, ಬ್ಯಾಂಕಿಗೆ ತಲಪುವಂತೆ ಮೊಹರು ಮಾಡಿ ಲಖೋಟೆಯ ಮೇಲೆ, ವಖಾರದ ಟೆಂಡರೆಂದು ಬರೆದ ಕಳುಹಿಸಿ ಕೊಡಬೇಕು. ಮತ್ತು ಅದರ ಕೂಡ ೨೦೦ ರೂ. ಠೇವು ಬ್ಯಾಂಕಿನಲ್ಲಿಡಬೇಕು. ನಾಮಂಜೂರಾದ ಟೆಂಡರದಾರರಿಗೆ, ಬಡ್ಡಿ ಇಲ್ಲದೆ ಠೇವಿನ ಹಣ ಪರತ ಕೊಡುವದರಲ್ಲಿ ಬರುವದು

ಕಟ್ಟಡದ ನಕಾಶೆಯನ್ನು, ಅಂದಾಜು ಪಟ್ಟಿಯನ್ನು ಕಾಂಟ್ರ್ಯಾಕ್ಟದ ಕರಾರ ಪತ್ರಗಳನ್ನು ಟೆಂಡರ ಕೊಡಲಿಚ್ಛಿಸುವವರು, ಬ್ಯಾಂಕಿನಲ್ಲಿ ಬ್ಯಾಂಕಿನ ವೇಳೆಯಲ್ಲಿ ಬಂದು ನೋಡಿಕೊಳ್ಳಬಹುದು

Sd/- G A. Hiremath

ಧಾರವಾಡ ಚೇರಮನ್,
೨೫-೧೦-೧೯೩೩ ದಿ ಸ ಮ. ಅ. ಕೊ ಕ್ರೆ ಬ್ಯಾಂಕ ಲಿ ಧಾರವಾಡ

ಕರ್ನಾಟಕ ಟಾಯಿಮ್ಸ್.

ಸಂಪಾದಕರು:— ಎಚ್ ಎಸ್ ಶಿವಲಿಂಗಶಾಸ್ತ್ರಿಗಳು.

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಪಯುಕ್ತ ವಿಷಯುಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವಿವಿಧ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ:— ಸ್ಥಳೀಕರಿಗೆ ರೂ ೨—೧೩—೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ. ೩—೧೨—೦

ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸ್ ಕಾರ್ಯಾಲಯ ಧಾರವಾಡ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಚಿಲಿ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

"ಬದರೀ ನಾರಾಯಣನ ದರ್ಶನ"

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ನಿರೂಪಿಸಲ್ಪಟ್ಟಿದೆ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎರಡು ನಕಾಶಗಳುಂಟು ಬೆಲೆ—೦-೬-೬ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ.

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ
ಕಲಾಪುರ ಪೇಟೆ ಗದಗ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಸ್ಪ್ರಿಂಗ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇ ಬನ್ನಿರಿ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುಧೋಳಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೮೮

यद्यत् परवशं दुःखं । यद्यदात्मवशं सुखम् ॥ मनु

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಶುಕ್ರವಾರ ಕಾರ್ತಿಕ ಬಹುಳ ೧ ಶಕೆ ೧೮೫೮ ತಾ॥ ೬-೧೧-೩೬ [ಸಂಚಿಕೆ ೧೬೨

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ. ತಾ॥ ೨೫-೮ ೩೬ } ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳಿ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಮಿಲ್ (೨) ಮುಸಿಜ್ ದಾಮಸ್ ಬೀರ್ (೩) ಉತ್ತಮ ಹಾಗೂ ಅಗ್ಗದ ಸೋಯು ಹೊಸ ಮೋಟಾರ ಸಾಯಕಲ್ (೪) ಸಬಕಾರ (೫) ಮೋಟಾರ ವಸ್ತುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ.

ನಮ್ಮ ಹದ್ದು.—

ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸ್ಟೇಟ ಸಂಪೂರ್ಣ (೪) ಮುಂಬಯಿಯಿಂದ ಕಾರವಾರದ ಬಂದರದ ವರೆಗೆ ಸಂಪೂರ್ಣ ಸಮುದ್ರತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ಸಗ್ಗೆರೆ ಇರುವ ಸಬ್ಬ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ನಮೂ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಬ್ಳೀಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಳಲಾಸಪೂರ
ಆಂಡ ಕೋ ದೇವಕರಣ ಮ್ಯಾನ್ಸನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನೋಡಿರಿ! ಅಪೂರ್ವ ಸಂಧಿ!! ತ್ವರೆಮಾಡಿರಿ!!!

ಪೂರ್ಣ ನಾಟ್ಯಗೃಹದಲ್ಲಿ ತಾ॥ ೭-೧೧-೩೬ ರಾತ್ರಿ ೧೦ ಗಂಟೆಗೆ

ಕನ್ನಡ ಅಮೇಚೂರ ಸಂಘದವರ

ನಾಟ್ಯಪ್ರಯೋಗ

"**ಯಮನ ಸೋಲು**" (ಒಂದು ಪೌರಾಣಿಕ ಅಪಹಾಸ್ಯ) (೨) "**ಹೋಮರೂಲು**"

(೩) "ಹರಿಜನ್ವಾರ"

ವಿ ಸೂ ತಿಕೀಟು ಕರ್ನಾಟಕ ಸಾಹಿತ್ಯ ಮಂದಿರದಲ್ಲಿ ಸಿಕ್ಕುವವು.

ಧೀರೇಂದ್ರ, ಗುಂಜೀಕರ
ಕಾರ್ಯದರ್ಶಿ

ಬಾಗಲಕೋಟೆಯ ಪತ್ರ.

(ತಾ॥ ೨-೧೧-೩೬)

ಹಗಲು ಬಿಸಿಲು ಚನ್ನಾಗಿ ಕಾಯುತ್ತಿದೆ ಆದಾಗ್ಯೂ ಹಳೆಯಲ್ಲಿ ಗಂಡಿ ಕೂಡಿದೆ ಪ್ಲೇಗು ಹೆಚ್ಚುತ್ತಲಿದೆ ಗಂಗಾವತಿ ಓಣಿಯ ಜನರು ಓಣಿ ಖಾಲಿ ಮಾಡಹತ್ತಿ ಬೈಲಿಗೆ ಬಂದಿರುವರು.

ಇಲ್ಲಿಯವರೇ ಆದರೂ ಪುಣೆಯಲ್ಲಿ ಇರುತ್ತಿದ್ದ ಬಾಗಲಕೋಟಕರ ಎಂಬ ಪ್ರಸಿದ್ಧ ಗಾಯಕರು, ದಿವಾಳಿ ಹಬ್ಬಕ್ಕೆಂದು ಇಲ್ಲಿಗೆ ಬಂದಿದ್ದು ಪ್ಲೇಗಿನಿಂದ ಮಲಗಿರುವರು ಅವರು ೧ ತಿಂಗಳ ಹಿಂದೆ ಪ್ಯಾಲಿ ಚುಚ್ಚಿಕೊಂಡಿದ್ದರಂತೆ.

ಇಲ್ಲಿಯ ಕೆಲವು ವಿದ್ಯಾರ್ಥಿಗಳು "ತರುಣ ತಂಡ" ವೆಂಬ ಸಂಘವನ್ನು ಹೊರಡಿಸಿರುವರು ಕನ್ನಡ ವಾಙ್ಮಯ ಸೇವೆಯೇ ಸಂಘದ ಗುರಿ 'ಉದಯ' ವೆಂಬುದೊಂದು ಕೈಬರಹದ ಮಾಸಪತ್ರಿಕೆಯನ್ನು ಈಗ ತಂಡದವರು ತೆಗೆಯಹತ್ತಿದ್ದಾರೆ ಈ ಸಂಘದ ಮಾರ್ಗದರ್ಶಕರು ಕನ್ನಡ ವಾಙ್ಮಯ ಭಕ್ತರಾದ ಶ್ರೀ ಹನುಮಸಾಗರ ವಾಸುದೇವಾಚಾರ್ಯರು ಸಂಘದವರು ಮೊನ್ನೆ ಮುಗಳಿ ರಂಗರಾಯರನ್ನು ಸಂಘಕ್ಕೆ ಆಮಂತ್ರಿಸಿಕೊಂಡು ಅವರ ಸಲಹೆ ಸೂಚನೆಗಳನ್ನು ಕೇಳಿಕೊಂಡರು ಅಗ ಸಂಘಕ್ಕೆ ತಮ್ಮ ಆಟ್ಟಿಕವನ್ನು ಕೊಟ್ಟ ಶ್ರೀಮಂತ ಹುತ್ತಕ್ಕ ದೇಸಾಯಿಯವರೂ ಬಂದಿದ್ದು, ಸಂಘದ ಬಗ್ಗೆ ತಮಗಿರುವ ಅಭಿಮಾನವನ್ನು ವ್ಯಕ್ತಮಾಡಿದರು.

ಶನಿವಾರ ಸಾಯಂಕಾಲಕ್ಕೆ ಪ್ರೊ ಮುಗಳಿಯವರು ಕನ್ನಡ ೧ ನೇ ನಂಬರ ಶಾಲೆಯಲ್ಲಿ 'ಸಾಹಿತ್ಯ ಮತ್ತು ಸಂಸ್ಕೃತಿ' ಈ ವಿಷಯದ ಮೇಲೆ ಉಪನ್ಯಾಸ ಕೊಟ್ಟರು ಕೊನೆಗೆ ಅಧ್ಯಕ್ಷರಾದ ಶ್ರೀ ಧಾರವಾಡ ವಕೀಲರು ಆಧುನಿಕ ಕನ್ನಡ ವಾಙ್ಮಯವು ತಪ್ಪು ದಿಶೆಯನ್ನು ಹಿಡಿದು ಸಾಗಿದೆಯೆಂದು ವಿಷಾದ ವ್ಯಕ್ತಮಾಡಿದರು

ಪ್ರೊ ಸಿ ಎಸ್ ಬಾಗಿ, ಎಂ ಎ ಬಿ ಟಿ ಲಿಂಗರಾಜ ಆರ್ಟ್ಸ ಕಾಲೇಜ ಬೆಳಗಾವ ಇವರು ಪುನಃ ಬಸವೇಶ್ವರ ಹಾಯಸ್ಕೂಲಿಗೆ ಅಧ್ಯಕ್ಷರಾಗಿ ಶೀಘ್ರವೇ ಬರುವರು

ವಾಸುದೇವ ಅಮೇಚೂರ ನಾಟಕ ಸಂಘದವರು ಇನ್ನೊಂದು ತಿಂಗಳೊಪ್ಪತ್ತಿನಲ್ಲಿಯೇ ಪ್ರೊ ಮುಗಳಿಯವರು ಬರೆದ 'ನಿಹಿಲೆ' ಎಂಬ ಐತಿಹಾಸಿಕ ನಾಟಕವನ್ನಾಗಲಿ ಅಥವಾ ಶ್ರೀ. ಹುಯಿಲಗೋಳ ನಾರಾಯಣರಾಯರ "ಸ್ತ್ರೀ ಧರ್ಮರಹಸ್ಯ" ವನ್ನಾಗಲಿ ಆಡಿಸಬೇಕೆಂದು ಗೊತ್ತುಮಾಡಿಕೊಂಡು ಅದರ ಪೂರ್ವಸಿದ್ಧತೆಯಲ್ಲಿದ್ದಾರೆ

ಹುಬ್ಬಳ್ಳಿಯ ಸಿಟಿ ಹಾಯಸ್ಕೂಲದ ವ್ಯವಸ್ಥಾಪಕ ಮಂಡಳಿಯವರು ನವ್ಹೆಂಬರ ೧ ನೇ ತಾರೀಖಿನಿಂದ ಹೆಣ್ಣುಮಕ್ಕಳಿಗೆ ಮಾಧ್ಯಮಿಕ ಶಿಕ್ಷಣವನ್ನು ಕೊಡುವ ವರ್ಗಗಳನ್ನು ಪ್ರಾರಂಭಿಸಿದ್ದಾರೆ ಸೌ ಸೀತಾಬಾಯಿ ಶಿರೂರ ಹಾಗು ಸೌ ಪ್ರಸನ್ನಾಬಾಯಿ ಬೆಣಗಾವ ಇವರು ಶಿಕ್ಷಣ ಕೊಡುವ ಕೆಲಸ ನಡೆಸುವರು.

ಅತ್ತೆಯ ಮನೆಯ ಕಾಟಕ್ಕೆ ಅಬಲೆಯ ಆಹುತಿ

ಇಲ್ಲಿಯೇ ಸಮೀಪದಲ್ಲಿರುವ ಕೆರೂರ ಗ್ರಾಮದಲ್ಲಿ, ಶನಿವಾರ ೨೬ನೇ ತಾರೀಖಿಗೆ ಸಂಜೆಯ ೫ ಗಂಟೆಗೆ, ತಮ್ಮಣ್ಣ ನಾಡಗೀರ ಎಂಬ ಬ್ರಾಹ್ಮಣನ ಮನೆಯಲ್ಲಿ ಅವನ ಸೊಸೆ ಉರುಲು ಹಾಕಿಕೊಂಡು ಪ್ರಾಣಕೊಟ್ಟಳು ಶವದ ಪಂಚನಾಮೆಯ ಕಾಲಕ್ಕೆ ಒಂದು ಪತ್ರ ಸಿಕ್ಕಿ ಅದರಲ್ಲಿ ಮಾವ ಮತ್ತು ಮೈದುನನ ಉಪದ್ರವವು ದಿನೇ ದಿನೇ ಅಸಹ್ಯವಾಗಹತ್ತಿರುವದರಿಂದ ತಾನು ತನ್ನ ಇಹಲೋಕ ಯಾತ್ರೆಯನ್ನು ಈ ಪರಿ ಮುಗಿಸಬೇಕಾಯಿತೆಂದು ಬರೆದಿರುವದಂತೆ ಮೈಮೇಲೆ ಬಡಿಗೆ ಹೊಡತದ ಗುರುತುಗಳಿದ್ದವೆಂದೂ, ಆತ್ಮಹತ್ಯೆ ಅಷ್ಟೆ ದೋಷ ಅಲ್ಲವೆಂದೂ ಕೆಲವು ಜನರು ಆಡಿಕೊಳ್ಳುತ್ತಿರುವರು. ಆದರೆ ಅದರ ಬಗ್ಗೆ ಪೋಲೀಸರ ಶೋಧವು ನಡೆದಿದ್ದು ನಿಜಾಂಶವು ಅಲ್ಪಾವಧಿಯಲ್ಲಿಯೇ ಹೊರಬೀಳುವದು

ಹುಬ್ಬಳ್ಳಿ ಮುನಸಿಪಾಲಿಟಿಯ ಆರೋಗ್ಯದ ವಿಲಕ್ಷಣ ಕಲ್ಪನೆ.

ಊರ ಮಧ್ಯದಲ್ಲಿಯ ಹೊಂಡದಲ್ಲಿ ಕಸದ ಗಾಡಿಗಳನ್ನು ಸುರುವುತ್ತಿರುವರು!

ಹುಬ್ಬಳ್ಳಿ ಮುನಸಿಪಾಲಿಟಿಯವರು ಮರಾಠಾವಿರಮುರದ ಹಿಂದಿನ ಹೊಂಡವನ್ನು ಮುಚ್ಚಲು ಉಪಕ್ರಮಿಸಿರುವರು ಅದಕ್ಕಾಗಿ ಊರೊಳಗಿನ ಕಸವನ್ನೆಲ್ಲಾ ತುಂಬಿ ತಂದು ದಿನಾಲು ಅದರಲ್ಲಿ ಸುರುವುತ್ತಿರುವರು ಆ ಕಸವು ಕೊಳೆತು ಈಗ ಆ ಭಾಗದಲ್ಲೆಲ್ಲ ದುರ್ಗಂಧ ನಾತಪಡಗಿರುವದು ಜನವಸ್ತಿಯ ಮಧ್ಯದಲ್ಲಿರುವ ನೀರುಳ್ಳ ಹೊಂಡದಲ್ಲಿ ಕಸವನ್ನು ಸುರುವಿ ಅನಾರೋಗ್ಯದ ಅಸಹ್ಯವಾದ ಹುಟ್ಟನ್ನು ಹುಟ್ಟಿಸುವ ಈ ನಗರ ಪಿತಾಮಹರ ಜಾಣತನಕ್ಕೇನೆನ್ನಬೇಕು? ನಾ ಗವರ್ನರ ಸಾಹೇಬರು ಹುಬ್ಬಳ್ಳಿಗಾಡರಿಗೆ ಆರೋಗ್ಯದ ಪಾಠಗಳನ್ನು ಕಲಿಸಬೇಕೆಂದು ಹಂಬಲಿಸುತ್ತಿರುವರು ಆದರೆ ಸಾಕಾಗದು. ಹುಬ್ಬಳ್ಳಿಗೆ ಬಂದಾಗ್ಗೆ ನಮ್ಮ ನಗರ ಪಿತಾಮಹರಿಗೆ ಒಂದೆರಡು ಪಾಠಗಳನ್ನು ಕಲಿಸಿದರೆ ಒಳಿತಾಗಲಿಕ್ಕಿಲ್ಲವೇ? ಮೋಟಾರಿನಲ್ಲಿ ಕೂತು ಹೋದರೆ ಗುರುತಿದ್ದನ ಹೊಂಡವು ಹುಬ್ಬಳ್ಳಿ ಮುನಸಿಪಾಲಿಟಿಯ ಉಪಕಾರದಿಂದ ಎರಡು ಮಿನಿಟಿನದು ಕೂಡ ಹಾದಿಯಿಲ್ಲ

ರೇಟಿಪೇಯರ

ಡಾ ಹರ್ಡೀಕರರು ಹಾಗು ಸ್ವಯಂಸೇವಕರು — ಪಟೇಲರ ಉತ್ತರಕ್ರಿಯೆಯ ಸ್ವಯಂಸೇವಕರ ಉಪಕುಂಡಳದವರು ಸೋಮವಾರ ದಿವಸ ಶ್ರೀ ಪರಿಮನ್ನರವರ ಅಧ್ಯಕ್ಷತೆಯ ಕೆಳಗೆ ಅವರ ಮನೆಯಲ್ಲಿ ಸಭೆ ಮಾಡಿಕೊಂಡು ೨ ಸ್ವಯಂಸೇವಕರ ಯಾವತ್ತು ವ್ಯವಸ್ಥೆಯು ಡಾ ಹರ್ಡೀಕರರ ಕೈಯಲ್ಲಿ ಇರತಕ್ಕದೆಂದು ನಿಶ್ಚಿತವಾಯಿತು

ಕನ್ನಡಿಗ

'ಕನ್ನಡಿಗ'ನ ಸಚಿತ್ರ ಸ್ಪೆಶಲ್ ಸಂಚಿಕೆ.

ಇಂದು ಹಾಗು ನಾಳೆ ಸಾಯಂಕಾಲ 'ಕನ್ನಡಿಗ'ನ ವಿಶೇಷ ಸಂಚಿಕೆ ಹೊರಡುವದು ಇದರಲ್ಲಿ ಈ ಊರಲ್ಲಿ ಇಂದಿನಿಂದ ನಡೆಯುವ ವಿಶೇಷ ಚಟುವಟಿಕೆಗಳೆಲ್ಲ ಸಚಿತ್ರವಾಗಿ ಪ್ರಕಟಿಸಲ್ಪಡುವವು ಬೆಲೆ ಒಂದೇ ಬಿಲ್ಲಿ ಪ್ರತಿಗಳು ಸಾಯಂಕಾಲ ಐದುಗಂಟೆಗೆ ಮಾರಾಟಕ್ಕಾಗಿ ಸಿದ್ಧವಾಗುವವು.

ಶುಕ್ರವಾರ ತಾರೀಖು ೩-೧೧-೧೯೩೩

ಸಹಕಾರಿ ಜಂಗಮಗಳ ಜಾತ್ರೆ

ಇಂದು, ಧಾರವಾಡದಲ್ಲಿ ಸರಕಾರದವರೊನೆ ಸಹಕಾರ ಮಾಡುವ ಹಿಂದೀ ಜಂಗಮಗಳ ಖಂಡವಾದ ಜಾತ್ರೆ. ಊರಲ್ಲಿ ಎಲ್ಲಿ ನೋಡಿದಲ್ಲಿ ಜಂಗಮ ಜಂಗುಳಿಯು ಜಂಗು ಕಟ್ಟಿಕೊಂಡು ಕೈಯಲ್ಲಿ ಬೆತ್ತಗಳನ್ನು ಹಿಡಿದುಕೊಂಡು ತಂತಂಡವಾಗಿ ತಿರುಗಾಡುತ್ತದೆ ಸಾಯಿಕ್ಸ ಸಾಹೇಬರಮುಖಾವಲೋಕನ ಮತ್ತು ಹಸ್ತಾಂದೋಲನ ತತ್ಪರವಾದ ಮಹಾವೃಂದವು ಮುಂದೆಗರು ದಿಂದ ಮುಂದಡಿ ಇಡುತ್ತಿದೆ ಸಾಯಿಕ್ಸ ಸಾಹೇಬರ ಸೇವೆಗೆ ಸಜ್ಜವಾದ ಸ್ವಯಂಸೇವಕ ಸಂಘವು ನಿಃಶಬ್ದವಾಗಿ ಸುಳಿದಾಡುತ್ತಿದೆ ಪರಾಕು ಹೇಳುವ ಭಟ್ಟಂಗಿಗಳ ಬಳಗವು ಬೀದಿಬೀದಿಗಳಲ್ಲಿ ಅಲೆದಾಡುತ್ತಿದೆ. ಕುಣಿ [Cub] ಮೊದಲ್ಗೊಂಡು ಹಿರಿಹಿರಿಯ ಝೂಳದ ಕುದುರೆಕಸೆಗಳು ಡೋಲಾಯಮಾನವಾಗಿ ಹೇಂಕರಿಸುತ್ತ ಫೇಂಕರಿಸುತ್ತ ಮೆರೆದಾಡುತ್ತಿವೆ ಸೀಳುಗಳ ಮಧುರನಿನಾದ, ಬ್ಯಾಂಡುಗಳ ಭಯಂಕರ ಸಪ್ಪಳ ಕೊಂಬು ಕಹಳೆಗಳು ಮೊಳಗುತ್ತಿವೆ ಬಾಂಗಾ ಮೋಟಾರುಗಳು ಓಡುತ್ತಿವೆ

ಈ ದೊಡ್ಡ ಜಾತ್ರೆ ಕೂಡಿದ್ದು ತೇರಿನ ಸಲುವಾಗಿ. ಗವ್ಹರ್ನರ ಸಾಹೇಬರ ತೇರು ಇಂದು ಎಳೆಯಲ್ಪಡುವುದಿದೆ ತೇರನ್ನು ಜಗ್ಗಲಿಕ್ಕೆ ಈ ಸಾವಿರಾರು ಸಹಕಾರಿಗಳು ನಾ ಮುಂದೆ ನೀಮುಂದೆ ಎಂದು ಎಸವುತ್ತ, ತಡವುತ್ತ ಮುಗ್ಗರಿಸುತ್ತ, ಧಾವಿಸುತ್ತಿರುವರು. ಸಹಕಾರಿ ಸಮೂಹವು ಸಾಯಿಕ್ಸ ಸಾಹೇಬರ ಮಹಾಪ್ರಸಾದವನ್ನು ಸ್ವೀಕರಿಸುವುದಕ್ಕೆ ಕೈಚಾಚುತ್ತಿದೆ ಸಾಯಿಕ್ಸಾರಾಧನಾ ತತ್ಪರವಾದ ಈ ಭೂತಗಣವು ಅನನ್ಯಭಾವದಿಂದ ಆ ಶಿವನನ್ನು ಸ್ತುತಿಸುತ್ತಿದೆ. ಸಾಯಿಕ್ಸಸಾಹೇಬರು ಹೋದ ಹೋದಲ್ಲಿ ಸುವಾಸಿನಿಯರು ಆರತಿಗಳನ್ನೆತ್ತುವವರಿದ್ದಾರೆ ಮಂಗಳ ಪದಗಳನ್ನು ಪಾಡುವವರಿದ್ದಾರೆ ಸಾರಾಂಶ, ಇಂದು ಸಹಕಾರಿಗಳಿಗೆ ಹಿಡಿಸಲಾರದ ಸಂಭ್ರಮ, ಅಸಹಕಾರಿಗಳಿಗೆ ಹೇಳಲಾರದ ವಿಭ್ರಮ

ಯಾವ ಧಾರವಾಡದಲ್ಲಿ ಎರಡು ವರ್ಷಗಳ ಹಿಂದೆ, ಅಸಹಕಾರಿಗಳು ರಾಷ್ಟ್ರಧ್ವಜವನ್ನೆತ್ತಬೇಕೆಂಬ ಅಂಬೇಕೆಯಿಂದ ಸ್ಫಾಟಿಕ ಸಮ್ಮೇಲನವು ನಿಲ್ಲಿಸಲ್ಪಡಬೇಕಾಯಿತೋ ಆ ಧಾರವಾಡದಲ್ಲಿ ಇಂದು ಈ ವಿಲಕ್ಷಣ ನೋಟ ! ದೈವಲೀಲೆ ವಿಚಿತ್ರವೆಂದೆನ್ನಬೇಕಲ್ಲವೆ ?

ಪತ್ರಿಕಾರರ ಕಟ್ಟು.

ಜೆರೂಸಲೇಮ ತಾ|| ೩೧— ಅಧಿಕಾರಿಗಳು ಪತ್ರಿಕೆಗಳ ಮೇಲೆ ಕೆಲವೊಂದು ಲೇಖಗಳನ್ನೂ ಸುದ್ದಿಗಳನ್ನೂ ಪ್ರಸಿದ್ಧಿ ಸಬಾರದೆಂದು ಗದೆ ಹೇರಿದ್ದರಿಂದ ಅರಬಸ್ತಾನದಲ್ಲಿಯ ಯಾವತ್ತು ಪತ್ರಕಾರರು ತಮ್ಮ ತಮ್ಮ ಪತ್ರಿಕೆಗಳ ಪ್ರಕಟನೆಯನ್ನು ನಿಲ್ಲಿಸಿದ್ದಾರೆ

ಪೋರ್ತುಗಾಲದಲ್ಲಿ ಮುಂಜಿಯುವರು

ಪಾಟಿಣಾ ತಾ|| ೩೧- ಇಲ್ಲಿಯ ಜಗತ್ ನಾರಾಯಣಲಾಲ ಇವರಿಗೆ ಡಾ ಮುಂಜೆಯವರಿಂದ ವಿಮಾನ ಮಾರ್ಗವಾಗಿ ಒಂದು ಪತ್ರವು ಬಂದಿದೆ; ಅದರಲ್ಲಿ ಅವರು ತಾವು ಪೋರ್ತುಗಾಲದಲ್ಲಿ ಅಲ್ಲಿಯ ಪ್ರಜಾಸತ್ತಾಧಿಕಾರಿಗಳನ್ನು ಕಂಡು ಹಿಂದುಸ್ತಾನದಲ್ಲಿಯ ಮಹಾಸಭೆಯ ಕೆಲಸದ ಸಲುವಾಗಿ ಮಾತಾಡಿದೆನೆಂದು ಬರೆದಿದ್ದಾರೆ

ಬೈರಾಗಿಗಳ ಮೋಸ.

[ಸ್ವಂತ ಸುದ್ದಿಗಾರರಿಂದ]

ಬೆಂಗಳೂರ ತಾ|| ೩೦ ಶಂಕರಪುರದಲ್ಲಿ ಶಂಕರ ಮಠದ ಬಳಿ ಕಾಳಿ ಗುಡಿ ಇದೆ ಕೆಲವು ದಿನಗಳ ಹಿಂದೆ ಒಂದು ದಿನ ವೀರಕೇಸರಿಯ ಸಂಪಾದಕರಾದ ಶ್ರೀಯುತ ಸೀತಾರಾಮಶಾಸ್ತ್ರಿಗಳ ಮಗ [ವಯಸ್ಸು ೧೦-೧೧ ಇರಬಹುದು] ಈ ಗುಡಿಯ, ಮುಂದೆ ಹೋಗುತ್ತಿದ್ದ ಆಗ ಒಬ್ಬ ಉತ್ತರ ದೇಶದ ಬೈರಾಗಿಯು ಇವನನ್ನು ಕೂಗಿ ಒಂದು ಕರೀ ದಾರವನ್ನು ಕೈಗೆ ಕಟ್ಟಿ ನಾಲ್ಕಾಣೆ ಕೊಡೆಂದನ. 'ಹುಡುಗನು ಕೊಡ ವದಿಲ್ಲವೆಂದನು' ಅನಂತರ ಅದೇ ಬೈರಾಗಿಯು ಹುಡುಗನಿಗೆ 'ಹೊಗಲಿ ತೆಗೆದುಕೋ' ಎಂದು ಕೊಂಚ ಸಕ್ಕರೆ ಕೊಟ್ಟನು ತಿನ್ನುತ್ತಲೆ ಹುಡುಗನಿಗೆ ಬುದ್ಧಿ ಭ್ರಮೆ ಯಾಯಿತು ಸುಮಾರು ೨-೮ ದಿನ ಹುಡುಗನಿಗೆ ಎಸ್ನೊ ತಿಳಿಯದು ಎಲ್ಲಿಯೋ ಹುಡುಗ ತಪ್ಪಿಸಿಕೊಂಡಿದ್ದಾನೆಂದು ತಿಳಿದಿದ್ದರು ಮೊನ್ನೆ ಹಲಸೂರ ಪೇಟೆಯ ಒಂದು ಅಶ್ವತ್ಥ ಕಟ್ಟೆಯ ಮೇಲೆ ಹುಡುಗನು ಮಲಗಿದ್ದನು ಅವನನ್ನು ಬಲ್ಲವರು ಮನೆಗೆ ಕರೆದುಕೊಂಡು ಬಂದರು ೩ ದಿನಗಳಿಂದ ಆಹಾರ ಅನ್ನಗಳಿಲ್ಲದೆ ಹುಡುಗ ಶಿಂಗಟ್ಟಿ ಹೋಗಿದ್ದಾನೆ

ದುಃಖ ಪ್ರದರ್ಶನದ ತಂತಿ

ವರ್ಧಾ ತಾ|| ೧— ಬ್ರಹ್ಮ ದೇಶದ ಮೊನಿವಾ ಎಂಬಲ್ಲಿಯ ಗುಲಾಮ ಮಹಮ್ಮದ ಇವರು ಮಹಾತ್ಮರಿಗೆ ಒಂದು ತಂತಿಯನ್ನು ಕಳಿಸಿ, ಅಲ್ಲಿಯ ಭಾರತೀಯರು ಗ್ರ್ಯಾಂಡ ಸಿನೇಮಾ ಗೃಹದಲ್ಲಿ ಪ್ರಚಂಡ ಸಭೆ ಮಾಡಿಕೊಂಡು ಅಸೆಂಬಿಯ ಪೂರ್ವಾಧ್ಯಕ್ಷರಾದ ವಿಠ್ಠಲ ಭಾಯಿಯವರ ನಿಧನದ ಬಗ್ಗೆ ದುಃಖ ಪ್ರದರ್ಶಕ ನಿರ್ಣಯ ಮಾಡಿಕೊಂಡಿರುವರೆಂದು ತಿಳಿಸಿರುವರು. ಇದಲ್ಲದೆ ಸರದಾರ ವಲ್ಲಭಭಾಯಿಯವರಿಗೆ ಅವರ ದುಃಖದಲ್ಲಿ ತಾವು ಸಮಭಾಗಿಗಳಿರುವದಾಗಿ ತಿಳಿಸಬೇಕೆಂದು ಅವರು ಕೇಳಿಕೊಂಡಿದ್ದಾರೆ

[ಅ ಪ್ರೆ ತಂತಿ]

ಫಕೀರ ಅಲಿಂಗಾರರ ಚಳವಳಿ?

ಪೇಶಾವರ ತಾ|| ೧— ಫಕೀರ ಅಲಿಂಗಾರರು ಇನ್ನು ಮುಂದೆ ಯಾವ ಚಳವಳಿ ಹೂಡುವರೆಂಬುದನ್ನು ನಿಶ್ಚಿತವಾಗಿ ತಿಳಿದು ಬಂದಿಲ್ಲವೆಂದೂ ಅವರು ಬೇರೆಕಿನಿಂದ ಎಣಿಸುವಷ್ಟು ಸಲಾರಝಾಯಿ ಮತ್ತು ಮಹಮುಂಡ ಅನುಯಾಯಿಗಳೊಂದಿಗೆ ಒಂದು ಸ್ಥಳದಿಂದ ಒಂದು ಸ್ಥಳಕ್ಕೆ ತಿರುಗುತ್ತಿರುವರೆಂದೂ ಬಜಾರದಿಂದ ಸುದ್ದಿ ಬಂದಿದೆ

[ಅ ಪ್ರೆ ತಂತಿ]



"ವಂದೇ ಮಾತರಮ್" ಪದವನ್ನು ಹಾಡುತ್ತ ಸ್ಕಾಟರೆಲ್ಲ ತಮ್ಮ 'ಸ್ಕಾಟ' ಧ್ವಜವಂದನೆ ಮಾಡುತ್ತಿರುವರು.

ಮಹಾತ್ಮರ ಮಿತ್ರರ ಮರಣ.

ಜೋಹಾನಸಬರ್ಗ ತಾ|| ೩೧- ಮಹಾತ್ಮಾಗಂಧಿಯವರ ಚಿರಪರಿಚಿತ ಮಿತ್ರರಾದ ಶ್ರೀ ಪಿ ಕೆ ಟಿ ನಾಯಡು ಇವರು ಈ ಹೊತ್ತು ಮರಣ ಹೊಂದಿದರು ಇವರು ಟ್ರಾನ್ಸವಾಲ ಹಿಂದೀ ಕಾಂಗ್ರೆಸ್ಸದ ಅಧ್ಯಕ್ಷರಿದ್ದರು

ನಾಗಪುರ ತಾ|| ೨೯—ಅಸೆಂಬ್ಲಿಯ ಸಭಾಸದರಾದ ರಾ ಬ ಎಸ್ ಆರ್ ಪಂಡಿತ ಇವರು ನಾಗಪುರ ವಿಶ್ವವಿದ್ಯಾಲಯದ ಮೇಲೆ ೪ಲಕ್ಷ ೮ ಸಾವಿರ ರೂಪಾಯಿಯ ದಾವೆ ಮಾಡಿದ್ದಾರೆ. ರಾ ಬ ಡಿ ಲಕ್ಷ್ಮೀನಾರಾಯಣ ಇವರು ವಿಶ್ವಾಸಪತ್ರ ಮಾಡಿ ವಿಶ್ವವಿದ್ಯಾಲಯಕ್ಕೆ ಬಿಟ್ಟುಕೊಟ್ಟ ೩೪ ಲಕ್ಷ ರೂಪಾಯಿಗಳ ಮೇಲೆ ತಮ್ಮ ಹಕ್ಕು ಇದೆಯೆಂದೂ, ತಾವು ಅವರ ಜೀವ ಮಾನದಲ್ಲಿ ಅವರ ಸಲುವಾಗಿ ದುಡಿದಿರುವೆವೆಂದೂ ತಕರಾರು ಕೊಟ್ಟಿದಾರೆ ಈ ದಾವೆಯ ವಿಚಾರಣೆಯು ಇನ್ನು ೩-೪ ದಿನಗಳಲ್ಲಿ ಸುರುವಾಗುವದು

ಕಾಶಗರದ ಸುದ್ದಿ.

ಪೇಶಾವರ ತಾ|| ೧— ಹೊಸ ಪಟ್ಟಣವು ಅಕ್ಟೋಬರ ೧೫ನೆ ತಾರೀಖಿನ ದಿವಸ ಶತ್ರುಗಳ ಕೈವಶವಾಗಿದ್ದು, ಅದು ಇನ್ನೂ ವರೆಗೆ ಅವರ ಆಧೀನದಲ್ಲಿಯೇ ಇರುವದೆಂದೂ, ಯುದ್ಧವು ಹಾಗೆಯೇ ನಡೆದಿದೆಯೆಂದೂ ಕಾಶಗರದಿಂದ ಸುದ್ದಿ ಬಂದಿದೆ ಯೋಜಾ ನಿಯಾಝಾಜಿಯ ರಾಯಭಾರಿಗಳು ಕುಥೇರದಿಂದ ಕಾಶಗರಕ್ಕೆ ಬಂದಿದ್ದಾರೆ ಆಗಸ್ಟ ತಿಂಗಳದಲ್ಲಿ ಯೋಜಾ ನಿಯಾಝು ಮತ್ತು ಚೀನಿ ಜನರಲ್ಲಿ ಆದ ಒಡಂಬಡಿಕೆಯು ಚೀನಿ ಜನರಿಂದ ಮುರಿಯಲ್ಪಟ್ಟಿದೆಯೆಂದೂ, ಚೀನಿ ಸೈನಿಕರು ಕಿಲಜ್ಞಾ ಜಿಲ್ಲೆಯಲ್ಲಿ ದಂಡೆತ್ತಿ ಬಂದಿದ್ದರೆಂದೂ ಗೊತ್ತಾಗುತ್ತದೆ. ಯೋಜಾ ನಿಯಾಝುರು ಸ್ವಲ್ಪ ದಿನಗಳ ಹಿಂದೆ ಯುದ್ಧದಲ್ಲಿ ಸೋತರಷ್ಟೆ. ಟರಘಾನದ ಸೇನಾಪತಿಗಳಾದ ಮಾಚಂಗಕಿಂಗ ಟಂಗಾನ ಇವರೇ ಅವರನ್ನು ಸೋಲಿಸಿದವರೆಂದು ಈಗ ಗೊತ್ತಾಗುತ್ತದೆ

ಮಾನಪತ್ರವಹುದೆ ?

ಗವರ್ನರ ಸಾಹೇಬರಿಗೆ ನಾಳೆ ಕೊಡತಕ್ಕ ಮಾನಪತ್ರವನ್ನು ಮುನಸಿಪಾಲಟಿಯ ಜನರಲ್ ಬಾಡಿಯಲ್ಲಿ ವಿಚಾರಿಸುವದು ಅವಶ್ಯವಿತ್ತು ಅವರ ಅಧ್ಯಕ್ಷರು ಈ ಹಕ್ಕನ್ನು ತಳ್ಳಿದ್ದರಿಂದ ನಾನು ಇದಕ್ಕೆ ನನ್ನ ಸಹಿ ಮಾಡಿಲ್ಲ ತಾ|| ೨-೧೧-೩೩

ಶ್ರೀಪಾದರಾವ ಶಿರೋಳಕರ

ಅಲ್ಲಲ್ಲಿಯ ಸುದ್ದಿಗಳು.

ನೆರೆಹಾವಳಿಯಿಂದ ಸಂಕಟಕ್ಕೊಳಗಾದ ಓಡಿಸಾ ಜನರ ಕಷ್ಟನಿವಾರಣಾರ್ಥವಾಗಿ ಈ ವರೆಗೆ ೧೫೦೦೦ ರೂ ಕೂಡಿದೆಯೆಂದು ಮಧುರಾದಾಸ ತ್ರಿಕಮಜಿಯವರು ಪ್ರಸಿದ್ಧಿಸಿರುತ್ತಾರೆ

ಮೋರವಿ ಮಹಾರಾಜರು ಓಡಿಸಾ ಜನರ ಕಷ್ಟನಿವಾರಣ ಹಾಗು ಹರಿಜನ ಉದ್ಧಾರದ ಸಲುವಾಗಿ ೨೦೦೦ ರೂ. ಕೊಟ್ಟಿರುವರು.

ಮೊದಲನೆ ಎಲ್. ಎಲ ಬೀ ಪರೀಕ್ಷೆಯ ಫಲಿತಾಂಶವು ಮೊದಲು ಪ್ರಸಿದ್ಧ ಮಾಡಿ ಪಡುವ ತಾ|| ೯ನೆ ನವೆಂಬರಕ್ಕೆ ಅಲ್ಲ ತಾ|| ೪ನೆ ನವ್ಹೆಂಬರ ೩|| ಗಂಟೆಗೆ ಆಗುವದೆಂದು ಮುಂಬಯಿ ವಿಶ್ವವಿದ್ಯಾಲಯದವರು ಪ್ರಸಿದ್ಧ ಮಾಡಿರುತ್ತಾರೆ

ಕಲೆಕ್ಟರ ಕಚೇರಿಯ 'ಕ್ಯಾಂಪ'

ಧಾರವಾಡ ಜಿಲ್ಹೆಯ ಕಲೆಕ್ಟರ ಕಚೇರಿಯ 'ಕ್ಯಾಂಪ' ಕೆಳಗಿನಂತೆ ಇರುವದು.

ನವಲಗುಂದ	೪ ರಿಂದ	೧೧	ನವ್ಹೆಂಬರ	ಇನಸ್ಪೆಕ್ಶನ್
ನರಗುಂದ	೧೨ ರಿಂದ	೧೫	ನವ್ಹೆಂಬರ	ಇನಸ್ಪೆಕ್ಶನ್
ರೋಣ	೧೬ ರಿಂದ	೨೩	ನವ್ಹೆಂಬರ	ಇನಸ್ಪೆಕ್ಶನ್
ಗದಗ	೨೪ ರಿಂದ	೩	ಡಿಸೆಂಬರ	ಜಮಾಬಂದಿ
ಮುಂಡರಗಿ	೪ ರಿಂದ	೧೧	ಡಿಸೆಂಬರ	ಜಮಾಬಂದಿ

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡೆ ವ. ಮ್ಯಾ ಕಂಪನಿ)

ಹುಬ್ಬಳ್ಳಿ ತಾ|| ೨ ಮಧ್ಯಾಹ್ನ ೧೨ ಗಂಟೆ

ಅಮರ ಹತ್ತಿ	೧೦೩-೧೦೬	ಜೋಳ	೧೩
ಅಮೆರಿಕ	೧೦೨-೧೦೪	ಗೋಧಿ	[illegible]
ವಿಲಾಯತಿ	೯೫-೯೭	ಕಡ್ಲಿ	[illegible]
ಕ್ಯಾಂಡಿ	೧೦೮-೧೧೦	ಶೇಂಗಾ	[illegible]
ಜೀನಗಳ	೭೫-೭೮	ಶೇಂಗಾ ಕಾ. ಕಾ	[illegible]
ದಬ್ಬಲೋಡ	೬೬-೬೭	ಕುಸುಬಿ	೧೩-೧೫
ಸಾಣಿಸ ಬಿಳಿ	೬೬-೬೭	ಗುರೆಳ್ಳು	೧೪
ಜೇಡರ ಬಿಳಿ	೯೧೨		
ಶೇಂಗಾಬೀಜ	೮೧-೮||	ಹತ್ತಿ ಕಾಳು	[illegible]

ಬೆಳ್ಳಿ ಬಂಗಾರ

ಬಂಗಾರ ೩೨||- ಬೆಳ್ಳಿ

ಮುಂಬಯಿ ಪೇಟೆಯ ಧಾರಣೆ

(ತಾ|| ೧ ಸಂಜೆ ೫)

ಬಂಗಾರ ೩೨-೧೪-೦ ಬೆಳ್ಳಿ ೫೬—೧೦-೦

ಶೇಂಗಾ ೨೬-೧೦-೦

ಸರಕಾರ ಸಾಲ ಪತ್ರ (೩||) ೮೯-

ಭಡೋಚ ಹತ್ತಿ ಎಪ್ರಿಲ್ ಮೇ ೧೯೦-

ಸೌ ಕಮಲಾದೇವಿಯವರ ಬಿಡುಗಡೆ.

"ಕನ್ನಡಿಗ" ನಿಗಾಗಿ ತರಿಸಿದ ಅಸೋಶಿಯೇಟೆಡ್ ಕಂಪನಿ'ಯ ತಂತಿಗಳು

...ಲಾದೇವಿಯವರ ಬಿಡುಗಡೆ.

...ರವಾಡ ತಾ|| ೧- ಸೌ. ಕಮಲಾ ...ಚಟ್ಟೋಪಾಧ್ಯಾಯ ಇವರು ಜಾಮೀನಿನ ಬಿಡುಗಡೆ ಮಾಡಲ್ಪಟ್ಟಿರುತ್ತಾರೆ.

(ಅ ಪ್ರೆ ತಂತ್ರಿ)

ಕಾಠೇವಾಡ ಸಂಸ್ಥಾನ ಪ್ರಜಾಪರಿಷತ್ತು.

...ಲಿ ತಾ|| ೧— ಕಾಠೇವಾಡ ಸಂ ...ಪ್ರಜಾಪರಿಷತ್ತಿನ ಅಧಿವೇಶನವು ತಾ೧೯ ...ನೆ ನವ್ಹೆಂಬರದ ದಿವಸ ಇಲ್ಲಿ ಸೇರತ ... ಸಿದ್ಧತೆಯು ಭರದಿಂದ ನಡೆದಿದೆ. ...ಶನದಲ್ಲಿ ಅಖಿಲ ಭಾರತ ಸಂಯುಕ್ತ ರಾ...ನೆ ಮತ್ತು ಸಂಸ್ಥಾನ ಸಂರಕ್ಷಣೆ ಮಸೂ...ಗಳ ಸಂಬಂಧವಾಗಿ ವಿಚಾರವಾಗುವ ...ತಿಳಿಯುತ್ತದೆ. ಅಧಿವೇಶನಕ್ಕೆ ಕಾಠೇ...ಯಾವತ್ತು ಭಾಗಗಳಿಂದ ಅನೇಕ ಜನ ...ನಿಧಿಗಳಾಗಿ ಬರತಕ್ಕವರಿದ್ದಾರೆ ಅಧ್ಯ...ರು ಅಭ್ಯಂಕರ ಇವರು ತಾ|| ೨೯ನೆ ಮುಂಜಾನೆ ಬರುವರು- [ಅ ಪ್ರೆ ತಂತಿ]

...ಬಯಿ ಅಸ್ಪೃಶ್ಯಸೇವಕ ಸಮಾಜದ ವರದಿ.

ಮುಂಬಯಿ ತಾ|| ೧ ಮುಂಬಯಿ ಪ್ರಾಂ... ಸ್ಪೃಶ್ಯ ಸೇವಕ ಸಮಾಜದವರು ತಮ್ಮ ...ದ ಒಂದು ವರದಿಯನ್ನು ಇದೀಗ ಪ್ರಸಿದ್ಧ ...ಸುತ್ತಾರೆ ಮುಂಬಯಿ ಮತ್ತು ಮುಂ...ಬು ಉಪನಗರಗಳಲ್ಲಿ ಕೂಡಿ ಒಟ್ಟು ೨೨ ...ಲಯಗಳು ಅಸ್ಪೃಶ್ಯರಿಗೆ ಮುಕ್ತದ್ವಾರ...ಲ್ಪಟ್ಟಿವೆಯೆಂದೂ, ಹರಿಜನ ಉದ್ಧಾರ ...ಕ್ಕಾಗಿ ಒಟ್ಟು ೫೦೦೦೦ ರು ನಿಧಿ ಕೂಡಿದೆ ...ಊ ವರದಿಯಿಂದ ತಿಳಿಯುತ್ತದೆ ಈ ...ಸಾವಿರ ರೂಪಾಯಿಯಲ್ಲದೆ. ಮುಂಬ... ಕೆಲವು ವ್ಯಾಪಾರಸ್ಥರು ೭೦ ಸಾವಿರ ...ಯಿಯ ವಚನಕೊಟ್ಟು, ಈ ಹಣವೆಲ್ಲ ಪ್ರಾಂತದೊಳಗಿನ ಹರಿಜನ ಶಿಕ್ಷಣಕ್ಕೆ ...ಗಬೇಕೆಂದು ಆಶೆಯನ್ನು ವ್ಯಕ್ತಮಾಡಿ... ಈ ಹಣದಲ್ಲಿ ೧೨೦ ಕ್ಕೆ ೫೦ ರಂತೆ ...ಮಧ್ಯವರ್ತಿ ಸಂಘದವರಿಗೆ ಹೋಗಿದೆ ...ಹರಿಜನ ಹುಡುಗ ಹುಡುಗಿಯರಿಗೆ ಶಿಷ್ಯ...ಕೊಟ್ಟಿರುವದಲ್ಲದೆ, ಹರಿಜನ ಬಾಲಕ ಬಾ...ಕರಿಗಾಗಿ ೭ ರಾತ್ರಿ ಶಾಲೆಗಳನ್ನೂ, ...ಶಾಲೆಯನ್ನೂ, ತೆಗೆದಿರುವರು

[ಅ ಪ್ರೆ ತಂತಿ]

ಹರಿಜನರ ಕೂಡ ಜಗಳ

ಮದ್ರಾಸ ತಾ|| ೧— ಕನ್ನಾನೂರ ಬಳಿ ಒಂದು ಹಳ್ಳಿಯೊಳಗೆ ಅಲ್ಲಿಯ ಹರಿಜನ ... ಹಿಂದೂ ಜನರಲ್ಲಿ ದೇವಾಲಯದ ...ಪಿನ ಸಂಬಂಧವಾಗಿ ಜಗಳವಾಯಿತೆಂದು ...ಕ್ಷದಿಂದ ಸುದ್ದಿ ಬಂದಿದೆ ಈ ನಿಮಿ... ಪೋಲೀಸರು ಕೆಲವು ಪ್ರಮುಖ ಜನರನ್ನು ...ಕೊಂಡು ೩೬ ಜನರನ್ನು ಸೆರೆ ಹಿಡಿದರು

(ಅ ಪ್ರೆ ತಂತಿ

ಪೇಶಾವರ ತಾ|| ೧— ಮಹಮಂಡ ...ಯಾತ್ರಿಯ ಕಾಲಕ್ಕೆ ಸಿದ್ಧವಾದ ಮಾ...ನ್ನು ರಕ್ಷಿಸುವ ಬಗ್ಗೆ ಹಾಲಿಮಝಾಯಿ ... ಮತ್ತು ಒರಕ್ಷೈನ ಬೇಲ ಈ ಜಾತಿಯ ...ಡನೆ ಸಂಪೂರ್ಣವಾದ ವ್ಯವಸ್ಥೆಯಾಗಿ ...ಂದು ಸುದ್ದಿ ಬಂದಿದೆ (ಅ ಪ್ರೆ ತಂತಿ)

ವಿನಿಮಯ ದರದ ಪರಿಶೀಲನ

ಮುಂಬಯಿ ತಾ|| ೧—ಈಸ್ಟ ಇಂಡಿಯಾ ಅರಳಿ ಸಂಘದ ಡಾಯರೆಕ್ಟರ ಮಂಡಳದವರು ಕೆಳಗೆ ಕಾಣಿಸಿದ ನಿರ್ಣಯ ಮಾಡಿಕೊಂಡಿದ್ದಾರೆ ರಿಝರ್ವ ಬ್ಯಾಂಕ ಮಸೂದೆಯಿಂದ ಈಗಿದ್ದ ರುಪಾಯಿಯ ೧೮ ಪೇನಸ ದರವನ್ನು ಶಾಶ್ವತ ಮಾಡುವದನ್ನು ವಿರೋಧ ಮಾಡಲಿಕ್ಕೂ ಮತ್ತು ರೂಪಾಯಿಯ ದರವನ್ನು ಕೂಡಲೆ ಇಳಿಸುವದಕ್ಕೂ ಹೊರಟ ಕರನ್ಸಿ ಲೀಗದ ಉದ್ದೇಶವು ಈ ಸಭೆಗೆ ಮಾನ್ಯವಿದೆ ಹಿಂದುಸ್ಥಾನದಲ್ಲಿಯ ಹಿಂದೀ ಮತ್ತು ಯುರೋಪಿಯನ್ ವ್ಯಾಪಾರಸ್ಥರಲ್ಲಿ ಈ ಮಾತಿನ ಬಗ್ಗೆ ವಿಶೇಷ ಮತಭೇದವಿಲ್ಲ. ಆದ್ದರಿಂದ ಸರಕಾರದವರ ರುಪಾಯಿಯ ವಿನಿಮಯ ದರದ ತಮ್ಮ ಧೋರಣವನ್ನು ಬದಲು ಮಾಡುವ ವೇಳೆಯು ಸಮಿಪಕ ಬಂದಿದೆಯೆಂದೂ, ಮತ್ತು ಆ ಬಗ್ಗೆ ಕೂಡಲೆ ಉಪಾಯ ಕೈಕೊಂಡು, ಹಿಂದುಸ್ಥಾನದ ವ್ಯಾಪಾರ, ಕೈಗಾರಿಕೆ ಒಕ್ಕಲತನ, ಉದ್ಯೋಗ ಧಂಧೆ ಇವುಗಳಿಗೆ ಹೆಚ್ಚು ಹಿತವಾಗುವಂತೆ ರುಪಾಯಿಯ ದರವನ್ನು ಇಳಿಸಬೇಕೆಂದೂ ಈ ಸಭೆಯು ಅಭಿಪ್ರಾಯ ಪಡುತದೆ

(ಅ ಪ್ರೆ ತಂತಿ)

ಹಿಂದೀ-ಜಪಾನಿ ಅರಳಿ ಪ್ರತಿನಿಧಿಗಳ ಕರಾರು

ಹೊಸದಿಲ್ಲಿ ತಾ|| ೧— [ಮೊದಲನೆಯ ಕರಾರಿನ ಬಗ್ಗೆ] ಜಪಾನದ ಅರಳಿ ಪ್ರತಿನಿಧಿಗಳು ಓಸಾಕಾ ಮತ್ತು ಟೋಕಿಯೋಗಳಿಂದ ಸಲಹೆಗಳು ಬರುವವೇನೆಂದು ಹಾದಿ ನೋಡಹತ್ತಿದ್ದಾರೆ. ಓಸಂಕಾಕ್ಕೆ ಹೋದ ಇಬ್ಬರು ಸರಕಾರಿ ಅಧಿಕಾರಿಗಳಿಗೆ ಜಪಾನಿ ಸರಕಾರ ಹಾಗು ಗಿರಣಿಕಾರರಲ್ಲಿ ಐಕ್ಯಮತವನ್ನುಂಟು ಮಾಡುವದು ಶಕ್ಯವಾಗಿಲ್ಲವೆಂದು ತಿಳಿಯುತ್ತದೆ ಅವರು ಜಪಾನಿ ಗಿರಣಿ ಒಡೆಯರನ್ನು ಕರಕೊಂಡು ಮುಂದಿನ ಆಲೋಚನೆ ಮಾಡಲು ಟೋಕಿಯೋಕ್ಕೆ ಬರತಕ್ಕವರಿದ್ದಾರೆ ಜಪಾನಿ ಗಿರಣಿ ಒಡೆಯರು ತಮ್ಮ ಹಟವನ್ನು ಬಿಟ್ಟುಗೊಟ್ಟು ಒಪ್ಪಂದ ಮಾಡಿಕೊಳ್ಳಲು ಸಿದ್ಧವಾಗದಿದ್ದ ಸರಕಾರವು ಸ್ವತಂತ್ರರೀತಿಯಿಂದ ಸೂಚನೆಗಳನ್ನು ವಿಚಾರ ಮಾಡಿ ಸಾವಡಾ ದೊರೆಗಳಿಗೆ ತಮ್ಮ ನಿರ್ಣಯದಂತೆ ನಡೆದುಕೊಳ್ಳಲು ತಿಳಿಸುವದು ಹಿಂದುಸ್ಥಾನ ಸರಕಾರ ಹಾಗು ಜಪಾನ ಸರಕಾರದ ಸೂಚನೆಗಳಲ್ಲಿ ಒಳಸರಕಿನ ಅಂತರವು ೧೦ ಲಕ್ಷ ಯಾರ್ಡ ಇರುತ್ತದೆ

[ಅ ಪ್ರೆ ತಂತಿ]

ಸ್ಕಾಟ ಧ್ವಜದ ಸುತ್ತಲೂ ಸ್ಕಾಟರಿಲ್ಲರು ನೆರೆದದ್ದು

ಮಹಾತ್ಮರು ಒಳಿತಾಗಿದ್ದಾರೆ.

ವರ್ಧಾಗಂಜ ತಾ|| ೧ ನಾಗಪುರದ ಡಾ. ಖರೆ ಹಾಗು ವರ್ಧಾದ ಡಾ ಶೆರ್ಲೇಕರ ಮತ್ತು ವರದ ಸಾಂಡೆಯವರು ಈ ಹೊತ್ತಿನ ದಿವಸ ಒಂದು ವಾರದ ನಂತರ ಮಹಾತ್ಮರನ್ನು ಪುನಃ ಪರೀಕ್ಷಿಸಿದರು ಅವರ ತೂಕವು ೧೦೭ ಪೌಂಡು ಇದ್ದು, ರಕ್ತ ಪ್ರವಾಹವು ೧೫೫ ಸಿಸ್ಟೋಲಿಕ್, ೯೫ ಡಾಯೊಸ್ಟೋಲಿಕ್ ಇದೆ ಅವರ ಪ್ರಕೃತಿ ಮಾನವು ಚನ್ನಾಗಿದೆ [ಅ ಪ್ರೆ ತಂತಿ]

ವರ್ಧಾದಲ್ಲಿ ನರಿಮನ್ನರು

ವರ್ಧಾ ತಾ|| ೧—ಮುಂಬಯಿಯ ಕೆ ಎಫ್ ನರಿಮನ್ನರು ನಿನ್ನಿನ ದಿವಸ ಇಲ್ಲಿಗೆ ಬಂದು ಮಹಾತ್ಮರೊಡನೆ ಖಾಸಗಿ ರೀತಿಯಿಂದ ಚರ್ಚೆ ಮಾಡಿದರು [ಅ ಪ್ರೆ ತಂತಿ]

ಆ್ಯಂಡ್ರೂಜ- ಪರಮಾನಂದರ ಆಗಮನ

ವರ್ಧಾ ತಾ|| ೧—ರೆವ್ಹರೆಂಡ ಸಿ. ಎಫ್ ಆ್ಯಂಡ್ರೂಜ ಮತ್ತು ಭಾಯಿ ಪರಮಾನಂದ ಇವರು ಈ ಹೊತ್ತು ಇಲ್ಲಿಗೆ ಬಂದರು ಶ್ರೀ ಗಣೇಶ ಪಾಂಡೆ, ಜೋಶಿ ಮೊದಲಾದವರು ಪರಮಾನಂದರಿಗೆ ಸ್ಟೇಶನ್‌ದಲ್ಲಿ ಸ್ವಾಗತ ಮಾಡಿದರು

[ಅ ಪ್ರೆ ತಂತಿ[

ಹೊಸದಿಲ್ಲಿ ತಾ|| ೧—[ಎರಡನೆ ಕರಾರು] ಹಿಂದೀ ಜಪಾನಿ ಅರಳಿ ಪ್ರತಿನಿಧಿಗಳಲ್ಲಿ ಸಾಗಿದ ಒಪ್ಪಂದದ ಮಾತುಕತೆಗಳು ಈಗ ತೀರ ವಿರುದ್ಧವಾದ ದಿಶೆಯನ್ನು ಹಿಡಿದಿವೆ ಹಿಂದೀ ಪಕ್ಷದವರು ಯಾವದ ದರೂ ಮತ್ತೊಂದು ಯೋಜನೆಯಿಂದ ತಾ|| ೧೦ನೆ ನವ್ಹೆಂಬರದೊಳಗಾಗಿ ಒಪ್ಪಂದ ಮಾಡಿಕೊಳ್ಳುವ ಹಾದಿ ಇದೆಯೇನೆಂದು ವಿಚಾರ ಮಾಡತೊಡಗಿದ್ದಾರೆ ಹಿಂದುಸ್ಥಾನ ಸರಕಾರದವರು ಕಳೆದ ವಾರದಲ್ಲಿ ತಮ್ಮ ಸೂಚನೆಯ ಅಂದೋಲಣವನ್ನು ಹೇಳಿದ್ದರಷ್ಟೆ ಅವರು ಈಗ ಅದರಲ್ಲಿ ತಿದ್ದುಪಡಿ ಮಾಡಿರುವರು ಈ ತಿದ್ದುಪಡಿಯಿಂದ ಅರಳಿ ಮತ್ತು ನೂಲಿನ ಹಿತಸಂಬಂಧಗಳನ್ನು ಸ್ವಲ್ಪ ಬಿಟ್ಟಂತಾಗಿದೆ ಇದರಿಂದ ಎಷ್ಟು ಸವಲತ್ತು ಕೊಡಬೇಕೋ ಅಷ್ಟು ಸವಲತ್ತು ತೋರಿಸಿರುತ್ತದೆ ಹಿಂದೀ ಪಕ್ಷದವರು ನೊದಲೇ ಇಷ್ಟು ಮಾಡಿದ್ದರೆ ಗುಣವಾಗುತ್ತಿತ್ತಲ್ಲ ಎಂದು ಆಶ್ಚರ್ಯ ಪಡಹತ್ತಿದ್ದಾರೆ ಗಿರಣಿ ಉದ್ಯೋಗದವರು ತಾವು ಈಗ ಹೊಂದಿರುವದಕ್ಕಿಂತ ೪೦೦ ಇಲ್ಲವೆ ೫೦೦ ಲಕ್ಷ ಯಾರ್ಡ ಅರಿವೆಯನ್ನು ಹೆಚ್ಚಿಗೆ ಹೊರತಿಸತಕ್ಕದ್ದೆಂದೂ ಇವರಿಗೆ ಉಪಕಾರವೆಂದು ಸರಕಾರದವರು ಮತ್ತು ಹತ್ತಿ ಬೆಳೆಯುವವರು ಹಿಂದುಸ್ಥಾನದಲ್ಲಿ ಹೆಚ್ಚಾಗಿ ಉಳಿದ ಹತ್ತಿಗೆ ಹೊರಗಿನ ಪೇಟೆಗಳಲ್ಲಿ ಗಿರಾಕಿಗಳನ್ನು ದೊರಕಿಸತಕ್ಕಳಬೇಕೆಂದೂ ಒಂದು ಯೋಜನೆ ಮುಂದೆ ಬಂದಿದೆ ಅಸೆಂಬ್ಲಿಯ ಸಭಾಸದರಾದರೂ ಈ ಒಪ್ಪಂದವು ತಾ|| ೧೦ನೆ ನವಂಬರದೊಳಗಾಗಿ ಮುಗಿಯಲೇ ಬೇಕೆಂದು ಸರಕಾರಕ್ಕೆ ಒತ್ತಾಯ ಮಾಡಹತ್ತಿದ್ದಾರೆ [ಅ ಪ್ರೆ ತಂತಿ]

ರುಸ್ತುಂ ವಕೀಲರ ಅಂತ್ಯಸಂಸ್ಕಾರ.

ಮುಂಬಯಿ ತಾ|| ೧— ಸ್ಥಾನಿಕ ಸಂಸ್ಥೆಗಳ ಮಂತ್ರಿಗಳಾದ ರುಸ್ತುಂ ವಕೀಲರನಿಧನದ ನಿಮಿತ್ತವಾಗಿ ಈ ಹೊತ್ತಿನ ದಿವಸ ಸೆಕ್ರೆಟರಿಯೇಟ ಕಚೇರಿ, ಪೋಲೀಸ ಕೋರ್ಟುಗಳು ಮತ್ತು ಇತರ ಕಚೇರಿಗಳು ಮುಚ್ಚಲ್ಪಟ್ಟಿದ್ದವು ಅವರ ಅಂತ್ಯ ಸಂಸ್ಕಾರದ ಕಾಲಕ್ಕೆ ಅನೇಕ ಜನ ಅವರ ಮಿತ್ರರೂ, ಆಪ್ತರೂ, ಸರಕಾರಿ ಅಧಿಕಾರಿಗಳೂ, ಪ್ರತಿಷ್ಠಿತ ಗೃಹಸ್ಥರೂ ಬಂದಿದ್ದರು ಗವ್ಹರ್ನರ ಹಾಗು ಮುಂಬಯಿ ಸರಕಾರದ ಪರವಾಗಿ ಗೃಹ ಕಾರ್ಯದರ್ಶಿ ಮತ್ತು ಖಾಸಗಿ ಕಾರ್ಯದರ್ಶಿ ಇವರು ಪ್ರತಿನಿಧಿಗಳಾಗಿ ಬಂದಿದ್ದರು (ಅ. ಪ್ರೆ. ತಂತಿ)

(ಹಿಂದುಗಡೆ ಬಂದ ತಂತಿ)

ವಕೀಲರ ಸ್ಮರಣಾರ್ಥ

ಮುಂಬೈ ಕಾರ್ಪೋರೇಶನದ ಸಭೆ, ಮೋದಿಯವರ ಸೂಚನೆಯಂತೆ ಮುಂದುವರಿಸಲ್ಪಟ್ಟಿತು

ವ್ಯಾಪಾರಿ ಸಾಕ್ಷಿದಾರರು

ಮುಂಬಯಿ ತಾ|| ೧—ಹಿಂದೀ ವ್ಯಾಪಾರಿ ಹಾಗು ಔದ್ಯೋಗಿಕ ಮಹಾ ಮಂಡಳದ ಅಧ್ಯಕ್ಷರು ಸರಾಫರ ಹಾಗು ದೇಶಿಯ ಬ್ಯಾಂಕರವರ ಪರವಾಗಿ ರಿಝರ್ವ ಬ್ಯಾಂಕ ಮಸೂದೆಯ ಜಾಯಿಂಟ ಸಿಲೆಕ್ಟ ಕಮಿಟಿಯ ಮುಂದೆ ಸಾಕ್ಷಿ ಹೇಳಲು ಶ್ರೀ ಚುನಿಲಾಲ ಬಿ ಮೆಹತಾ ಇವರನ್ನು ನಿಯಮಿಸಿದ್ದಾರೆ, ಆ ಪ್ರಕಾರ ಮೆಹತಾ ಇವರು ಈ ಹೊತ್ತಿನ ರಾತ್ರಿ ಗಾಡಿಗೆ ದಿಲ್ಲಿಗೆ ಹೋಗುವವರಿದ್ದಾರೆ [ಅ ಪ್ರೆ ತಂತಿ]

ಪೋಲಿಸ ಠಾಣೆಯಲ್ಲಿ ಶೋಚನೀಯ ಮರಣ.

ಕಲಕತ್ತಾ ತಾ|| ೧— ಕಲಕತ್ತಾ ಪೋಲೀಸ ಮುಲಖಾನದ ಇನ್ಸ್ಪೆಕ್ಟರರಾದ ಎಚ್. ಈ. ಲೆಹರಿ ಇವರ ಆಪ್ತರಾದ ಇನ್ಸ್ಪೆಕ್ಟರ ಮಜುಮದಾರ ಇವರು ನಿನ್ನಿನ ದಿವಸ ಲಾಲಬಜಾರ ಪೋಲೀಸ ಠಾಣೆಯೊಳಗೆ ಶೋಚನೀಯ ರೀತಿಯಲ್ಲಿ ಮರಣ ಹೊಂದಿದರು ಮುಲಖಾತದ ಓರ್ವ ಅಧಿಕಾರಿಯು ಅವರ ಕೈಯಲ್ಲಿ ಒಂದು ಪಿಸ್ತೂಲು ಕೊಟ್ಟು ಅದನ್ನು ಒಂದು ಭದ್ರವಾದ ಕೋಣೆಯಲ್ಲಿ ಇಡಲು ತಿಳಿಸಿದನು ಪಿಸ್ತೂಲಿನೊಳಗೆ ಕಾಡತೂಸು ಇದ್ದದ್ದು ಆ ಅಧಿಕಾರಿಗೆ ಗೊತ್ತಿರಲಿಲ್ಲ ಕೋಣೆಯಲ್ಲಿ ಅದನ್ನು ಇಡುವ ಮುಂದೆ ಏನೋ ತಪ್ಪಾಗಿ ಗುಂಡು ಒಮ್ಮಿಂದೊಮ್ಮೆ ಹಾರಿ ಚಕ್ರಪಾಣಿಯವರ ಎದೆಗೆ ಬಡಿಯಿತು, ಕೂಡಲೆ ಜೀವ ಹೋಯಿತು.

(ಅ. ಪ್ರೆ. ತಂತಿ)

ಮುಂಬಯಿಯಲ್ಲಿ ಗಿರಣಿ ಕೂಲಿಕಾರರ ಕಟ್ಟು.

ಮುಂಬಯಿ ತಾ|| ೧—ಇಲ್ಲಿಯ ಬೇರೆ ಬೇರೆ ನಾಲ್ಕು ಗಿರಣಿಗಳಲ್ಲಿಯ ೨೫೦೦ ಜನ ಕೂಲಿಕಾರರು, ಗಿರಣಿ ಒಡೆಯರು ಊಟದ ಭತ್ಯೆಯನ್ನು ಕಡಿಮೆ ಮಾಡಿದ್ದರಿಂದ ಈ ಹೊತ್ತಿನಿಂದ ಕಟ್ಟು ಮಾಡಿರುತ್ತಾರೆ ಈ ಕಾರಣ ನಾಲ್ಕು ಗಿರಣಿಗಳು ಈ ಹೊತ್ತಿನ ದಿವಸ ಮುಚ್ಚಿದ್ದವು.

(ಅ. ಪ್ರೆ ತಂತಿ)



ಡಾ ಕುಲಕರ್ಣೀಜ ಲೆಬೊರೋಟರಿ ಮುಂ
ನಂಬರ ೧೨
ಬಾಟ್ಲಿ ಕಿ. ೧-೧-೦ ಎಲ್ಲ ಕೆಮಿಸ್ಟರಲ್ಲಿಯು ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಕರಗು, ಬಿಳೀಕರಗು, ಕೆಂಪು ಕರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ ನಡನೋವು ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನಷ್ಟವಾಗಿ ಗರ್ಭಧಾರಣವಾಗುತ್ತದೆ ಬಾಣಂತಿತನ ಆದ ಮೇಲೆ ತೆಗದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದೆ.

ಬಿ ಟಿ. ಕರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ
೧೮-೬

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.
" ನೀಲಗಿರಿ ಎಣ್ಣೆ

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೊಟ್ಟೆಬೇನೆ, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ ಟೋಣಪಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ನಾರಿನ ವ್ಯೆರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಆರು ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ. ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚ ವೆಚ್ಚ ಬೇರೆ.

ಮ್ಯಾನೇಜರ:-**ರಾಘವ ಭಾವ ಕಸಿಗೋಕಾಕ**
ಜ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	**ಪರಸ್ಥಳದವರಿಗೆ**
ತಿಂಗಳಿಗೆ	೦-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೨-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯಾಪಾರಿಗಳಿಗೆ ಕಮೀಶನ್ } ಅಸ್ಪೃಶ್ಯತಾ ನಿವಾರಣೆ. { **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಸ್ತಿ ಪತ್ರಗಳು ಬಂದಿವೆ. ಅಡ್ವಾನ್ಸಿಲ್ಲದೆ ವ್ಹಿ. ಪಿ ಕಳುಹಿಸುವುದಿಲ್ಲ. ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೦ **ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ**

ಕರ್ನಾಟಕ ಟಾಯಿಮ್ಸ್.

ಸಂಪಾದಕರು:— **ಎಚ್ ಎಸ್ ಶಿವಲಿಂಗಶಾಸ್ತ್ರಿಗಳು.**

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಪಯುಕ್ತ ವಿಷಯಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವಿವಿಧ ವರ್ತಮಾನಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ:— ಸ್ಥಳಿಕರಿಗೆ ರೂ ೨—೧೪—೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ ೩—೧೨—೦

ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸ ಕಾರ್ಯಾಲಯ ಧಾರವಾಡ

ಪ್ರಕಾಶ.

ಮುಸಲ್ಮಾನರ ಮತ್ತು ಇತರ ಹಿಂದುಳಿದ ಸಮಾಜಗಳ ಉತ್ಕರ್ಷಕ್ಕಾಗಿ ಹೋರಾಡುವ ಒಂದೇ ಒಂದಾದ ವಾರಪತ್ರವು.

ಇದರಲ್ಲಿ ರಾಜಕೀಯ ಸಾಮಾಜಿಕ, ನೈತಿಕ ಔದ್ಯೋಗಿಕ ಶೈಕ್ಷಣಿಕ ಆರ್ಥಿಕ ಮುಂತಾದ ವಿಷಯಗಳ ಮೇಲೆ ಉತ್ತಮ ಲೇಖಗಳು ಬರೆಯಲ್ಪಡುವವು. ಇದಲ್ಲದೆ ಸಮಸ್ತ ಭಾಗಗಳ ವಿವಿಧ ತಾಜಾ ವರ್ತಮಾನಗಳೂ ಪ್ರಕಟಿಸಲ್ಪಡುವವು. ಆದ್ದರಿಂದ ಎಲ್ಲರೂ ಶೀಘ್ರವಾಗಿ ಚಂದಾದಾರರಾಗಿ ಲಾಭವನ್ನು ಪಡೆಯಬೇಕು ವಾರ್ಷಿಕ ಚಂದಾ ಸ್ಥಳಿಕರಿಗೆ ೩-೨-೦ ಪರಸ್ಥಳದವರಿಗೆ ೩-೮-೦ ಮ್ಯಾನೇಜರ — **'ಪ್ರಕಾಶ' ಧಾರವಾಡ**

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ನಿರೂಪಿಸಲ್ಪಟ್ಟಿದೆ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶೆಗಳ ವೆ ಬೆಲೆ:—೦-೬-೦ ಮಾತ್ರ, ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಜಿ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೦ **ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ**
ಕಡಾಪುರ ಪೇಟೆ ಗದಗ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು. ಸ್ಟ್ಯಾಂಡು, ತೊಟ್ಟಿಲು ಮತ್ತು ಮುಚ್ಚಿಕೆಯ ಬಾಗಿಲು ತಯಾರಾಗುತ್ತವೆ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ನಂ. ಬಿ. ೨೭೮೮

ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಂ ॥ ಮನು

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುಅರನ್ಸ
...ವವಿಮೆ ಇಳಿಸಲು

ಕನ್ನಡಿಗ

ಇನಸ್ಯುಅರನ್ಸ
...ದೇಶದ ಹಣವನ್ನು ಪ್ರದೇಶ
...ಯೇ ಉಳಿಸಬೇಕಾದರೆ
ಯುನಾಯಿಟೆಡ್
ಟಕ ಇ ಕಂ.ಲಿ.
ಧಾರವಾಡ
...ಲ್ಲಿಯೇ ವಿಮೆ ಇಳಿಸಿರಿ

ಪ್ರಕಟಿಸಲ್ಪಡುವದು.

ರಿ ನಂ ಬಿ. ೨೭೮೮] ಸಂಪಾದಕರು—ಅಲೂರ ವಂಕಟರಾಯರು. [ನಿತ್ಯ ಪತ್ರ ಬೆಲೆ ೩ ಪೈ

ವರ್ಷ ೧೦] ಧಾರವಾಡ— ಶುಕ್ರವಾರ ಕಾರ್ತಿಕ ಬಹುಳ ೧ ತಾ॥೩-೧೧-೧೯೩೩ [ಸಚಿತ್ರ ವಿಶೇಷ ಸಂಚಿಕೆ

(ರೇಲ್ವೆ ಟ್ರೇನಿನಿಂದ ಗವ್ಹರ್ನರರು ಆಗಮಿಸಿದ್ದು)



ಗವರ್ನರರು ' ಗಾರ್ಡ ಆಫ್ ಆನರ ' ಸ್ವೀಕರಿಸಿದ್ದು

ನಾಯಿಕ್ಸಸಾಹೇಬರೂ ಹೋಸ್ಪಿಟಲ್ ಇ..ಟಿಯ ಗವರ್ನರರೂ



ಪೋಲೀಸ ಹೆಡ್‌ಕ್ವಾರ್ಟರದಲ್ಲಿ ಸಲಾಮು

ಸಾ...ಕೆ

ಹುಬ್ಬಳ್ಳಿ

೧ ಗಂಟೆಗೆ ಹುಬ್ಬಳ್ಳಿಗೆ ಬರು ...ಂಟೆಗೆ ಹೋಗಿ ಬಂಡಿಯಲ್ಲಿಳು ...ಳ್ಳುವರು ...೩೦ ಗಂಟೆಗೆ ...ಗೆ ಮ್ಯುನಸಿಪಾಲಿಟಿ ...ವನ್ನ ಸ್ವೀಕರಿಸುವರು ... ...ಕಾಶಾಪಕ್ಕೆ ಭೆಟ್ಟಿ ಕೊಡು ...ಂದ ೯-೧೦ ವರೆಗೆ ಹೋಗಿ ...ರ ಮಹಾಜಾಬ ಅಲ್ಲೀಖಾನ ...ಲ್ ಪಾಟೀಲ, ವ್ಹಿ. ಎಸ್. ...ರ್ ದೇಸಾಯಿ, ಟಿ. ವ್ಹಿ. ಮ್ಯುನಸಿಪಾಲಿಟಿಯ ಅಧ್ಯಕ್ಷ ಲಕ್ಷ್ಮೇಶ್ವರ, ರಾ ಸಾ. ಮೊ ...ನ್ ಸೇಲ ಸೊಸಾಯಿಟಿಯ ನಾರಾಯಣರಾವ ಪಾಯಿಲ ರಾ ಸಾ ಎಸ್ ಆರ್. ಕುಂ ...ಹುಬ್ಬಳ್ಳಿ, ಎಸ್. ಎಸ್ ನಾ ...ರ ಇವರಿಗೆ ಭೆಟ್ಟಿ ಕೊಡು

...ಕ್ಸ ಇವರು ಸಂಜೆಯ ... ಮಕ್ಕಳ ದವಾಖಾನೆಯನ್ನು ಹೋಗುವರು
೬ ಗಂಟೆಗೆ ಗವ್ಹರ್ನರರು ಶಿಕ್ಷ... ...ಂಜಿಯಿಗೆ ಪ್ರಯಾಣ ಮಾ

...ಗರಾಜವಾಚನಾಲಯವು

...೧೦ ಇನೆ ತರ ಐಕರ್ನಾಟಕದ ...ಡಿಗಿಯ ಶ್ರೀ ಲಿಂಗರಾಜ ವಾ ...ಯದರ್ಶಿಗಳು ಪ್ರಸಿದ್ಧ ಮಾ ಸಂಬಂಧವಾಗಿ ಬ್ಯಾಡಿಗಿಯ ಓ ಮಾಸಿಗಳು ' ಕನ್ನಡಿಗ ' ಕ್ಕೆ ಸಿದ್ದಾರೆ ಪತ್ರದ ಸಾರಾಂಶ ...ಗದಲ್ಲಿ ಈ ಮೊದಲು ಪ್ರಸಿದ್ಧ ...ವು ದ್ವೇಷದಿಂದ ಬರೆಯಲ್ಪ ...ತ್ತ ಪತ್ರವನ್ನು ಚನ್ನಾಗಿ ನಿ ...ರುವದಿಲ್ಲ ಆ ಹೊತ್ತಿನ ಪ ...ತ್ರ ಸಿಗದೆ ಇದ್ದದ್ದು ಆಕ್ಸರಶಃ ನವಕರರನ್ನು ಕೇಳಿದರೆ ವಿಷಾ ...ತ್ತಾನೆ ಆಶ್ರಯದಾತರೂ, ಸಭಾಪದರೂ ವಾಚನಾಲಯ ...ನ್ನು ಓ... ...ತ್ತಾರೆಂದು ಬರೆ ...ವ ... ಮಕ್ಕಳ ಆ...ದ್ದ ಚಳ ...ಂದು ... ಪತ್ರವನ್ನು ... ...ದೆ ಚಲುವ-ಚಂದ್ರಾಮ-... ...ಟೀಕಿಸಿರುವಿರಿ. ತಾವು ಈ ಕಾರ್ಯವು ಸ್ತುತ್ಯವಿದೆ ... ... ನಿತ್ಯ, ವಾರ, ಪಕ್ಷ, ಮಾಸ ... ... ಕಾಲಕ್ಕೆ ಸಿಗುವಂತೆ

...ದ ಡಿ. ಡಿ. ಸಿ. ಯವರ ...ವಾಸ ಕ್ರಮ

...ಗಂಟೆ ಹುಬ್ಬಳ್ಳಿ ಜಮಾಬಂದಿ
... ೩೦ „ ತಿರಮಲಕೊಪ್ಪ „
... „ ... „
...ದ ೩೦ „ ಅಣ್ಣೀಗೇರಿ „

ಕನ್ನಡಿಗ

ಶಿಕ್ಷಣ ಪುರವಣಿ

ಡಾ. ಗುಲಕರ್ಣೀಜ
ರಿಜಿಸ್ಟರ್ಡ್ ನಂಬರ

ಧಾರವಾಡ—ಕನ್ನಡಿಗ ಶುಕ್ರವಾರ ತಾ-೬-೧೧-೧೯೩೩ ಇಸ್ವಿ ಸಚಿತ್ರ-ವಿಶೇಷಸಂಚಿಕೆ.

ಮಾನಪತ್ರಗಳು.

ಈ ಹೊತ್ತಿನ ದಿವಸ ನಾ. ಗವ್ಹರ್ನರ್ ಸಾಹೇಬರಿಗೆ ಮ್ಯುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಲೋಕಲ್ ಬೋರ್ಡ ಮತ್ತು ಲಿಂಗಾಯತ ವಿದ್ಯಾವರ್ಧಕ ಸಂಸ್ಥೆಯವರು ಮಾನಪತ್ರಗಳನ್ನು ಕೊಡುವವರಿದ್ದುದರಿಂದ, ಮ್ಯುನಿಸಿಪಾಲಿಟಿಯ ಸುತ್ತುಮುತ್ತಲು ಮತ್ತು ಆ ಆ ಸ್ಥಳಗಳಲ್ಲಿ ಪೋಲೀಸರ ಬಿಗಿಯಾದ ಕಾವಲು ಇತ್ತು. ಮೋಟಾರ ಸ್ಟ್ಯಾಂಡ ಮತ್ತು ವಿದ್ಯಾವರ್ಧಕ ಸಂಘದಿಂದ ಪಾಸು ಇಲ್ಲದವರನ್ನು ಮುಂದೆ ಬಿಡುತ್ತಿರಲಿಲ್ಲ. ಹೋಗುವವರನ್ನು ಪ್ರತಿ ಹೆಜ್ಜೆಗೆ ಪರೀಕ್ಷೆ ಮಾಡಿ ಬಿಡುತ್ತಿದ್ದರು. ಮ್ಯುನಿಸಿಪಾಲಿಟಿ ದ್ವಾರದಲ್ಲಿ ಮತ್ತು ಕಟ್ಟಡ ಮೇಲೆ ಪೋಲೀಸರು ಪಾಸು ಇದ್ದವರನ್ನೇ ಬಿಡುತ್ತಿದ್ದರು.

ನಾ. ಗವ್ಹರ್ನರರು ಕಾರ್ಯಕ್ರಮಕ್ಕನುಸಾರವಾಗಿ ಮೊದಲು ಮ್ಯುನಿಸಿಪಾಲಿಟಿಗೆ ಬಂದರು. ಯಾವತ್ತೂ ಜನರು ಅವರು ಬಂದ ಕೂಡಲೆ ಎದ್ದು ನಿಂತು ಅವರ ಸ್ವಾಗತ ಮಾಡಿದರು. ಗವ್ಹರ್ನರರ ಕೂಡ ದಿ. ಬ. ಕಂಬಳಿಯವರೂ ಬಂದಿದ್ದರು. ಗವ್ಹರ್ನರರು ಸ್ಥಾನಾಪನ್ನರಾದ ಬಳಿಕ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಶ್ರೀ ಜೋಗ ಇವರು ಮಾನಪತ್ರವನ್ನು ಓದಿ ಚಂದನದ ಕರಂಡಕದಲ್ಲಿ ಅದನ್ನು ಅರ್ಪಿಸಿದರು. ಮಾನಪತ್ರಕ್ಕೆ ತಮ್ಮ ಸಹಿ ಹಾಕದೆ ಇದ್ದ ಓರ್ವ ಸಭಾಸದರಾದ ಶ್ರೀಪಾದರಾವ ಕಿರ್ಲೋಸ್ಕರ ಇವರ ಸಮಾರಂಭಕ್ಕೆ ಬಂದಿರಲಿಲ್ಲ.

ಮಾನಪತ್ರದಲ್ಲಿ ಮ್ಯುನಿಸಿಪಾಲಿಟಿಯವರು ತಾವು ಊರಲ್ಲಿ ನೀರಿನ ಸೌಕರ್ಯದ ಬಗ್ಗೆ ಈ ವರೆಗೆ ಮಾಡಿದ ಕಾರ್ಯವನ್ನೂ ಮತ್ತು ಮುಂದೆ ಕೈಕೊಳ್ಳಬೇಕಾದ ಕೆಲಸವನ್ನೂ ನಿರ್ದೇಶ ಮಾಡಿದ್ದಲ್ಲದೆ, ಊರಿನ ಆರೋಗ್ಯದ ಬಗ್ಗೆ ಇದ್ದದರಲ್ಲಿಯೇ ಕೆಲಸ ಮಾಡಬೇಕಾಯಿತೆಂದು ಹೇಳಿಕೊಂಡಿದ್ದರು. ಊರಿನ ಕರದ ಭಾರವು ಪ್ರತಿ ಮನುಷ್ಯನಿಗೆ ೫ ರೂಪಾಯಿಯ ಮೇಲೆ ಇದ್ದು ಈ ಭಾರವು ಯಾವತ್ತೂ ಮ್ಯುನಿಸಿಪಾಲಿಟಿಗಳಿಗಿಂತ ಹೆಚ್ಚಿರುತ್ತದೆಂದೂ, ತಮ್ಮ ಅಧಿಕಾರದಲ್ಲಿದ್ದ ಎಲ್ಲ ಪ್ರಾಥಮಿಕ ಶಾಲೆಗಳಿಗೆ ಸ್ವತಂತ್ರ ಕಟ್ಟಡಗಳಿಲ್ಲವೆಂದೂ, ಆದ್ದರಿಂದ ಸರಕಾರದವರು ಹಣ ಕೊಟ್ಟು ಸಹಾಯ ಮಾಡದಿದ್ದರೆ ಶಿಕ್ಷಣ ಕಾರ್ಯವು ಕುಂಠಿತವಾಗುವದೆಂದೂ ಉಲ್ಲೇಖ ಮಾಡಿದ್ದರು.

ಕರ್ನಾಟಕದ ಜೀವಾಳವಾದ ಏಕೀಕರಣ ವಿಷಯವನ್ನು ಮ್ಯುನಿಸಿಪಾಲಿಟಿಯವರು ನಿರ್ದೇಶ ಮಾಡಿದ್ದು ಉಚಿತವೇ ಆಗಿತ್ತು. ಕರ್ನಾಟಕದಕ್ಕಿಂತ ಕಡಿಮೆ ಉತ್ಪನ್ನವುಳ್ಳ ಮತ್ತು ಜನಮನದ ಬೇಡಿಕೆಯಿಲ್ಲದ ಸಿಂಧ-ಓರಿಸಾಗಳಿಗೆ ಸ್ವತಂತ್ರ ಪ್ರಾಂತ ಕೊಡುವದು ನಿರ್ಣಯ ಮಾಡಿ, ಗೌರ್ನಮೆಂಟಿನಿಂದ ಸಂಸ್ಥೆಗಳೂ, ಸಾರ್ವಜನಿಕರೂ ಸ್ವತಂತ್ರ ಪ್ರಾಂತವನ್ನು ಏಕಮನದಿಂದ ಬೇಡುತ್ತಿರಲು ಆ ಬೇಡಿಕೆಯನ್ನು ಪೂರ್ತಿಸದಿರುವದು ಉಚಿತವಾಗಿರುವದಿಲ್ಲವೆಂದೂ, ಈ ಭಾಗವು ಇಬ್ಭಾಗದಲ್ಲಿದ್ದುದರಿಂದಲೇ ಸರಕಾರದವರು ಲಕ್ಷ್ಯ ಕೊಡುವದಿಲ್ಲವೆಂಬ ಅಂಜಿಕೆಯು ಪ್ರಬಲವಾಗುತ್ತ ಹೋಗುವದೆಂದೂ, ಗವ್ಹರ್ನರರು ಈ ಬಗ್ಗೆ ಹಿಂದುಸ್ತಾನ ಸರಕಾರ ಹಾಗೂ ಇಂಡಿಯಾ ಸರಕಾರದವರ ಲಕ್ಷ್ಯ ಎಳೆಯಬೇಕೆಂದು ಬೇಡಿಕೊಂಡಿದ್ದರು. ಮಾನಪತ್ರದಲ್ಲಿ ಕರ್ನಾಟಕ ಕಾಲೇಜದೊಳಗೆ ಶೀಘ್ರವೇ ಬಿ. ಎಸ್‌ಸಿ. ಮತ್ತು ಎಂ. ಎಸ್‌ಸಿ. ವರ್ಗಗಳನ್ನು ತೆರೆಯಬೇಕೆಂದೂ, ಈ ವಿಷಯದಲ್ಲಿ ಜನರ ಮೇಲೆ ಭಾರ ಹಾಕತಕ್ಕದ್ದಲ್ಲವೆಂದೂ ಬಿನ್ನವಿಸಿಕೊಂಡಿದ್ದರು.

ನಾ. ಗವ್ಹರ್ನರರು ತಮ್ಮ ಉತ್ತರದಲ್ಲಿ ಮಾನಪತ್ರ ಕೊಟ್ಟ ಬಗ್ಗೆ ಮ್ಯುನಿಸಿಪಾಲಿಟಿಯ ಆಭಾರ ಮನ್ನಿಸಿ ಹೇಳಿದ್ದೇನಂದರೆ ಕರದ ಭಾರವು ಇತರ ಸ್ಥಳಗಳಲ್ಲಿ ೬ ರೂಪಾಯಿಗಳಿಗಿಂತ ಹೆಚ್ಚು ಇದ್ದ ಉದಾಹರಣೆ ಇವೆಯೆಂದೂ, ಪರೀಕ್ಷೆಯಲ್ಲಿ ಉತ್ತೀರ್ಣರಾದ ತಕ್ಕ ಶಿಕ್ಷಣ ಹೊಂದಿದ ಸ್ಯಾನಿಟರಿ ಇನಸ್ಪೆಕ್ಟರರನ್ನು ನಿಯಮಿಸಿಕೊಳ್ಳುವ ದಿವಸ ಊರಿನ ಆರೋಗ್ಯವು ಸುಧಾರಿಸುವದಿಲ್ಲವೆಂದೂ ಹೇಳಿದರು. ಶಾಲೆಗಳ ಕಟ್ಟಡಗಳ ಬಗ್ಗೆ ಬೇಡಿದ ಧನ ಸಹಾಯದ ಬಗ್ಗೆ ಈಗ ಸರಕಾರದವರು ತಾವೇ ಹಣದ ಅಡಚಣೆಯಲ್ಲಿರುವರೆಂದೂ, ಮ್ಯುನಿಸಿಪಾಲಿಟಿಯವರು ಉತ್ಪನ್ನವನ್ನು ಬೆಳೆಸಿಕೊಂಡು ಸಾಗಿಸಿಕೊಳ್ಳಬೇಕೆಂದೂ ಸರಕಾರದವರಿಂದ ಹಣವನ್ನು ಅಪೇಕ್ಷಿಸಬಾರದೆಂದೂ ಹೇಳಿದರು. ಕರ್ನಾಟಕ ಏಕೀಕರಣದ ಬಗ್ಗೆ ಉತ್ತರ ಕೊಡುವಾಗ ಗವ್ಹರ್ನರರು ಕನ್ನಡಿಗರ ಆಕಾಂಕ್ಷೆಯನ್ನು ಉಲ್ಲೇಖಿಸಿ, ಇಂದಿನ ಹಣದ ಅಡಚಣೆಯ ಕಾಲದಲ್ಲಿ ಪ್ರತ್ಯೇಕ ಪ್ರಾಂತ ನಿರ್ಮಾಣ ಮಾಡುವದು ಕಠಿಣವೆಂದು ನುಡಿದರು.

ಕರ್ನಾಟಕ ಕಾಲೇಜದಲ್ಲಿ ಮುಂದಿನ ವರ್ಷದಿಂದ ಬಿ. ಎಸ್‌ಸಿ ವರೆಗೆ ಸಾಯನ್ಸ ವರ್ಗಗಳು ಸುರುವಾಗುವವೆಂದು ಹೇಳಿ, ಮನೋಹರ ನೋಟ ಮತ್ತು ಆರೋಗ್ಯಕಾರಕ ಹವೆಯಿಂದ ಕೂಡಿದ ಧಾರವಾಡಕ್ಕೆ ಎರಡನೇ ಸಾರೆ ಬಂದು ಹೋಗಲು ಅನುವು ದೊರಕಿಸಿಕೊಟ್ಟದಕ್ಕೆ ಪುನಃ ಮ್ಯುನಿಸಿಪಾಲ್ಟಿಯ ಆಭಾರ ಮನ್ನಿಸಿ ಕುಳಿತುಕೊಂಡರು. ನಂತರ ಸ್ವಲ್ಪ ಹೊತ್ತಿನ ಮೇಲೆ ಸಭೆ ವಿಸರ್ಜನೆಯಾಯಿತು.

ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಮಾನಪತ್ರಕ್ಕೆ ಉತ್ತರ ಕೊಡುವಾಗ ಗವರ್ನರರು, ಲೋಕಲ್ ಫಂಡನ್ನು ಹೆಚ್ಚಿಸಬೇಕೆಂದೂ 'ಕೇವಲ ಕರ್ನಾಟಕದಲ್ಲಿ ಮಾತ್ರ ಕಾಲೇಜಕ್ಕಾಗಿ ಜನರು ಹಣ ಕೂಡಿಸಿ ಸರಕಾರಕ್ಕೆ ಕೊಟ್ಟಿರುವರೆಂಬುದು ಸರಿಯಲ್ಲ; ಡೆಕ್ಕನ ಕಾಲೇಜು, ಸಾಯನ್ಸ ಕಾಲೇಜು ಮೊದಲಾದ ಎಲ್ಲ ಕಡೆಯಲ್ಲಿಯೂ ಬೇರೆ ಬೇರೆ ಶಿಕ್ಷಣ ಸಂಸ್ಥೆಗಳಿಗಾದರೂ ಅಲ್ಲಲ್ಲಿಯವರು ಹಣವನ್ನು ದಾನಮಾಡಿರುವರು. ಕರ್ನಾಟಕ ಕಾಲೇಜದಲ್ಲಿ ಸಾಯನ್ಸದ ಪೂರ್ಣ ಶಿಕ್ಷಣವು ದೊರೆಯುವಂತೆ ಮುಂದಿನ ವರ್ಷದಿಂದ ಏರ್ಪಡಿಸಲಾಗುವದು' ಎಂದೂ ನುಡಿದರು. ಲಿಂಗಾಯತ ವಿದ್ಯಾವರ್ಧಕ ಸಂಸ್ಥೆಯವರ ಮಾನಪತ್ರದಲ್ಲಿ ವೀರಶೈವರನ್ನು ಹೆಚ್ಚಾಗಿ ಸರಕಾರಿ ನೌಕರಿಯಲ್ಲಿ ಸೇರಿಸಿಕೊಳ್ಳಬೇಕೆಂದು, ಕೇವಲ ಜಾತೀಯ ಅಭಿಮಾನವು ಅತಿರೇಕವಾಗಬಾರದೆಂದು ಸಾಹೇಬರವರು ಉಪದೇಶಿಸಿ, ಈ ಸಂಸ್ಥೆಯ ಕಟ್ಟಡಗಳಿಗೆ ಗ್ರ್ಯಾಂಟು ಕೊಡುವದು ಈಗಿನ ಆರ್ಥಿಕ ಸ್ಥಿತಿಯಲ್ಲಿ ಕಠಿಣವೆಂದೂ ಹೇಳಿ ಕರ್ನಾಟಕ ಚೇಂಬರ ಆಫ ಕಾಮರ್ಸ ಕೋ ಆಪರೇಟಿವ ಸೊಸಾಯಟಿ ಮೊದಲಾದವುಗಳು ಪ್ರತ್ಯೇಕವಾಗಿ ಸರಕಾರಕ್ಕೆ ಕೇಳಿಕೊಂಡರ, ಕಾಯದೇ ಮಂಡಲಕ್ಕೆ ಪ್ರತಿನಿಧಿಗಳನ್ನು ಆರಿಸಿಕೊಡುವ ಹಕ್ಕು ಕೊಡುವ ವಿಚಾರ ಮಾಡಲ್ಪಡುವದೆಂದೂ, ಕರ್ನಾಟಕದ ಬಂದರ, ರೇಲ್ವೆ ಮೊದಲಾದ ಅನೇಕ ಸಂಗತಿಗಳು ತನಗೆ ಗೊತ್ತಿರುವವೆಂದೂ ಹೇಳಿದರು.

ಬಾಲಚಮೂಗಳ ಕೂಟ

ಧ್ಯಾಹ್ನಕ್ಕೆ ೩ ಗಂಟೆಗೆ ಬಂದ ಕೂಡಲೆ ಕವಾಯತಿಯವರು 'ಸ್ವಾಗತ ಮಾಡಿದರು. ನಂತರ ಸ್ಕಾವುಟರು ದಾರದ ಮೇಲೆ ನಡೆಯುವದು ಮಸಿಗೆ ಬೆಂಕಿ ಹತ್ತಿದಾಗ ಜನರನ್ನು ಉಳಿಸುವದು ಬಿ ಕೆಸಿ ಇದ ನು ಮತ್ತು ಗಾಯಹೊಂದಿದವರನ್ನು ಮಾಡು ವಾಯುಪ್ಲನ ಸ್ಟ್ರೇಚರದ ಮೇಲೆ ಒಯ್ಯುವದು ಮೊದಲಾದ ಕೆಲಸಗಳನ್ನು ಮಾಡಿತೋರಿಸಿದರು.

೧ ನವದತ್ತಿಯ ಅಯ್ಯಪ್ಪನು ಗಂಟೆ ಒಂದು ತೂಕದ ಕಬ್ಬಿಣದ ಇರಿ ಹತ್ತಿದ ೭ ತುಂಬಿದ ಕೊಡಗಳನ್ನು ಒಮ್ಮೆಲೆ ನೆಗಿಸಿದನು. ೨ ರಾಣೇಬೆನ್ನೂರಿನ ಶಂಕರರ ಲಘುಹಾರಗಳ ಕುಣಿತವು ಬಹಳ ಸೊಗಸಾಗಿತ್ತು. ೩. ಕಲಘಟಗಿಯ ಬುರಡಿ ಮಾಸ್ತರರು ಯೋಗಾಸನಗಳನ್ನು ಚನ್ನಾಗಿ ಹಾಕಿದರು. ೪. ಬೆಳಗಾಂವಿ ಗುಂಪಿನವರ ಪ್ರಥಮ ಚಿಕಿತ್ಸಾ ಕಾರ್ಯವು ಸೊಗಸಾಗಿತ್ತು. ೫. ಶ್ರೀ ರಾವ ಮಾಸ್ತರ ಮಗನು ಕಣ್ಣು ಕಟ್ಟಿಕೊಂಡು ಸ್ಕಾವುಟಿನ ಬಗೆಬಗೆಯ ಗಂಟುಗಳನ್ನು ಹಾಕಿದನು. ೬. ಹಾಂಗ್ಲಿಯ ಮುಖಿಸಕರನೆಂಬ ನಿಮ್ನ ಕುಮಾರನು 'ಶಿಕ್ಷಣ' ವಿಷಯಕ್ಕೆ ಅಸ್ಖಲಿತ ವ್ಯಾಖ್ಯಾನ ಕೊಟ್ಟನು.

೭. ಕಿತ್ತೂರ ಗುರುಕುಲ ಸ್ಕೂಲಿನ ವಿದ್ಯಾರ್ಥಿಗಳು ಅನೇಕ ಕೆಲಸಗಳನ್ನು ಮನೋರಂಜಕವಾಗಿ ಮಾಡಿದರು. ಕಡೆಗೆ ಗವರ್ನರರ ಭಾಷಣವಾಯಿತು. ಆಶೀರ್ವಾದಪೂರ್ವಕ ಅವರನ್ನು ಬೀಳ್ಕೊಡಲಾಯಿತು.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಕಲೀ ವ
ಗುಣದಲ್ಲಿ ಅತ್ಯುತ್ತಮ



ಈ ಎಣ್ಣೆಯು ಎಲ್ಲ ತರದ ಸಂಧಿವಾತ, ಎದೆನೋವು, ತಲೆನೋವು, ನಡು ಇತ್ಯಾದಿ ಎಲ್ಲ ನೋವು ಗಳ ಅನುಭವ ತೆಗೆದುಕೊಳ್ಳಿ
ಪಾರ್ವತಿ ರಸ್ತೆ ...ಗೆ

ನಾ:
ಸಂಪಾದಕರು: —
ಕಳೆದ ಹನ್ನೆರಡು ವರ್ಷ
ಚಾಲುಗಾ...
ಇದರಲ್ಲಿ ಸಾಮಾಜಿಕ ರಾ...
ವಿಷಯಗಳು ನಿರ್ದಾಕ್ಷಿಣ್ಯದಿಂದ
ವಿವಿಧ ವರ್ತಮಾನಗಳೂ
ರೂ ... ೦ ಪರಸ್ಥಳದವ

ಕನ
ಅಗಡಿಕರ ಇ...
ಮಿದುಳಿಗೆ ಶಕ್ತಿ ಕೊಡುವ
ಸುವದು. ಬೆಲೆ ಬಾಟ್ಲಿ ಒಂದಕ್ಕೆ
ಯುವವು

ಗರುಡರವರ ಅಚ್ಛಾದ
೧೪ ೧೦'೩೩

ಭವಾನಿ ಅಂಗ...
ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿ...

ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ

ಈ ಪತ್ರಿಕೆಯನ್ನು ರಂಗನಾ[redacted]ಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಂ. ಬಿ. ೨೭೬೬

ಯತ್ ಪಾಪ ದುರ । ಯದ್ಯದಾತ್ಮವಶ ಸ್ಯಾತ್ ।। ಮನು

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುಅರನ್ಸ

ಜೀವವಿ ಇಳಿಸಲು

ಇನಸ್ಯುಅರನ್ಸ

ಪ್ರದೇಶದ ಹಣವನ್ನು ಪ್ರದೇಶದಲ್ಲಿಯೇ ಉಳಿಸಬೇಕಾದರೆ

ಯುನಾಯಿಟೆಡ್ ಕರ್ನಾಟಕ ಇ ಕಂ ಲಿ

ಧಾರವಾಡ

ದಲ್ಲಿಯೇ ವಿಮೆ ಇಳಿಸಿರಿ

ಪ್ರಕಟಿಸಲ್ಪಡುವುದು

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು.   [ನಿತ್ಯ ಪತ್ರ ಬೆಲೆ ೩]

ವರ್ಷ ೧೦]   ಧಾರವಾಡ— ಶನಿವಾರ ಕಾರ್ತಿಕ ಬಹುಳ ೩ ತಾ।।೮-೧೧ ೧೯೩೩   [ಸಚಿತ್ರ ವಿಶೇಷ ಸಂಚಿಕೆ

ಬಾಲ ಚವುಗಳಿಗೆ ಉಪದೇಶ   ಧ್ವಜ   ಬಾಲ ಚವುಗಳು ಕಟ್ಟಿದ ಪೆ ಕುನೆಯನ್ನು ನೋಡುವ

ಹುಬ್ಬಳ್ಳಿ

ಗಂಟೆಗೆ ಹುಬ್ಬಳ್ಳಿಗೆ ಬರು ಂಟೆಗೆ ಹು ಬಂಡಿಯಲ್ಲಿ ಉ ಬರುವರು ಗಂಟೆಗೆ ಪುನಸಿಪಾಲಿಟಿ ವನ ವರು ಶ್ರೀಶೈಪಕ್ಕೆ ಭೆಟ್ಟಿ ಕೊಡು ಂದ ೧೦ ವರೆಗೆ ಜೋಗೆ ರ ಮಹಾಜನ ಅಲ್ಲೀಸಾಬ ಪಾಟೀಲ ಎಸ್ ರ್ ದೇಸಾಯಿ, ಟಿ. ಪ್ಪ ಮುನಸಿಪಾಲಿಟಿಯ ಅಧ್ಯಕ್ಷ ಲಕ್ಷ್ಮೇಶ್ವರ ರಾ ಸಾ ಮಾ ಕೆನ್ ಸಲ ಸೊಸಾಯಿಟಿಯ ನಾರಾಯಣರಾವ ಹುಯಿಲ ರಾ ಸಾ ಎಸ್ ಆರ್ ಅಂ ಹುಬ್ಬಳ್ಳಿ ಎಸ್ ಎಸ್ ನಾ ನ್ನಾರ ಇವರಿಗೆ ಭೆಟ್ಟಿ ಕೊಡು

ಕ್ಕ ಇವರು ಸಂಜೆಯ ಮಕ್ಕಳ ದವಾಖಾನೆಯನ್ನು ನೋಡುವರು ಗಂಟೆಗೆ ಗವ್ಹರ್ನರರು ಪಶ್ಚಿ ರೇಲ್ವೆಗೆ ಪ್ರಯಾಣ ಮಾ

ಗರಾಜವಾಚನಾಲಯ

ನೆ ತರ ಕನಾಟಕದ ಶ್ರೀಯ ಲಿಂಗರಾಜ ವಾ ಯ-ದರ್ಜೆಗಳು ಪ್ರಸಿದ್ಧ ಮಾ ಸಂಬಂಧವಾಗಿ ಬ್ಯಾಡಿಗಿಯ ಮಾಸ್ತಿಗಳ ಕನ್ನಡಿಗ' ಕ್ಕೆಗೆ ಸಿದ್ದಾರೆ ಪತ್ರದ ಸಾರಾಂಶ ಡಿಗದಲ್ಲಿ ಈ ಮೊದಲು ಪ್ರಸಿದ್ಧ ಇವು ದ್ವೇಷದಿಂದ ಬರೆಯಲ್ಪ ನೀವು ಪತ್ರವನ್ನು ಚನ್ನಾಗಿ ನಿ ರ ವದಿಲ್ಲ ಆ ಹೊತ್ತಿನ ಕ ಸಿಗದೆ ಇದ್ದದ್ದು ಆಶ್ಚರ್ಯ ನವಕರನ್ನು ಕೇಳಿದರೆ ವಿಷಾ ಲಿಕಾನೆ ಕ್ರಮದಾತರೂ ಸಭಾಸದರೂ ವಾಚನಾಲಯ ಳನು ದು ಪತ್ರವನ್ನು ಕ ಡದೆ ತಿಲುವ-ಚಂಪ್ರಾಮುರಾ ಗಿ ಟೀಕಿಸಿರುವಿರಿ ತಾವು ಈ ರ್ಯವು ಪ್ರತ್ಯಕ್ಷವಿದೆ ಇ ನಿತ್ಯ ವಾರ ಪತ್ರ, ನೂಸ ಕಾಲಕ್ಕೆ ಸಿಗುವಂತೆ

ವ ಎ. ವಿ. ಸಿ. ಯವರ ಪ್ರವಾಸಕ್ರಮ

ನ್ಹೆಂಬರ ಹುಬ್ಬಳ್ಳಿ ಜಮಾಬಂದಿ

ತಿರವುಲಕೊಪ್ಪ ,,

,,

೨೫ರಿಂದ ೩೦ ಅಣ್ಣಿಗೇರಿ ,,

ಧಾರವಾಡ ... ದಿನ ಮಾಡಿ ಕೋ ಶ್ರೀ ಬ್ಯಾಂಕ ಲಿ ಧಾರವಾಡ

ಕನ್ನಡಿಗ ರಾಷ್ಟ್ರೀಯ ಶುದ್ಧ

ತಾ ಕುಲಕರ್ಣಿ

ನಂಬರ ೩



ಬಾಯ್‌ಸ್ಕೌಟ ಕಾರ್ಯಕ್ರಮ.

ನೇಕ ನಾಮದಾರ ಗವ್ಹರ್ನರ ಸಾಹೇಬರು ಸ್ಕೌಟ ರ್‍ಯಾಲಿ ಕ್ಯಾಂಪಿಗೆ ಬಂದ ಕೂಡಲೆ ಮ|| ಕಲೆಕ್ಟರ ಸಾಹೇಬರು ಮೆ|| ಖಾಸ, ಡಿ: ಜಟ್ಟಿ, ರಾ. ಬ. ಅಂಗಡಿ, ನಾಮದಾರ ಮಹಬೂ ಬಲ್ಲಾಖಾಸ, ಮೆ! ಜಿ ಎಸ್ ಕೊಯಿಮತ್ತೂರ, ರಂಗ ... ಮೊದಲಾದವರ ಪರಿಚಯವನ್ನು ಗವ್ಹರ್ನರ ಸಾಹೇ ... ಸಾಹೇಬರು ಅವರೊಡನೆ ಹಸ್ತಾಂ ದೋಲನವನ್ನು ... ನಂತರ ಸ್ಕೌಟ ಪಂಗಡಗಳು ತೋರಿಸಿದ ಬೇರೆ ಬೇರೆ ಕಸರತ್ತುಗಳನ್ನು ನೋಡಿದರು ತರು ವಾಯ ಸ್ಕೌಟ ಸಿಕಾಸಿಯ ಹತ್ತರ ನಿಂತುಕೊಂಡು ಎಲ್ಲ ಸ್ಕೌಟ ಪಂಗಡಗಳ ಸಲಾಮು ಸ್ವೀಕರಿಸಿದರು. ನಂತರ ಗವ್ಹರ್ನರ ಸಾಹೇಬರು ತಮ್ಮ ಭಾಷಣದಲ್ಲಿ ಹೇಳಿದ್ದೇನಂದರೆ ಸ್ಕೌಟ ಸಂಘದ ಮೂರು ಮುಖ್ಯ ತತ್ವಗಳೆಂದರೆ ದೇವ, ದೇಶ ಮತ್ತು ಅರಸ ಇವರ ಸೇವ ಮಾಡುವದು, ಮತ್ತು ಅದರ ಮುಖ್ಯ ಧ್ಯೇಯಮಂತ್ರವು ಯಾವಾಗಲೂ ಸಿದ್ಧರಾಗಿರ ಬೇಕು (Be prepared) ಎಂಬುದು. ಈ ತತ್ವಗಳಿಗೆ ಅನುಗುಣ ವಾಗುವಂತೆ ಸ್ಕೌಟರು ಶಿಕ್ಷಣವನ್ನು ಪಡೆದದ್ದಾದರೆ ಅವರು ಉತ್ತಮ ನಾಗರೀಕರಾಗುವರೆಂಬುದರಲ್ಲಿ ಸಂದೇಹವಿಲ್ಲ. ಈಗ ಹಿಂದುಸ್ಥಾನದಲ್ಲಿ ಬರಲಿರುವ ಹೊಸ ರಾಜ್ಯ ಘಟನೆಯನ್ನು ಚನ್ನಾಗಿ ನಿರ್ವಹಿಸಲಿಕ್ಕೆ ಮತ್ತು ಅದನ್ನು ಯಶಸ್ವಿಯಾಗಿ ಮಾಡಲಿಕ್ಕೆ ಸಿಬಂದಿ ಸ್ಕೌಟರ ಅವಶ್ಯಕತೆಯು ಬಹಳ ಇದೆ. ಕಾರಣ ನೀವು ಕೇವಲ ಪಟ್ಟಣಗಳಲ್ಲಿಯೇ ಈ ದಳದ ವಿಷಯ ವಾಗಿ ಕಾರ್ಯವನ್ನು ಕೈಕೊಳ್ಳದೆ ಹಳ್ಳಿ ಹಳ್ಳಿಗೆ ಹೋಗಿ ಅಲ್ಲಿಯ ಜನರಲ್ಲಿ ಸ್ವಚ್ಛತೆ, ಸ್ವಾಯತ್ತತೆ, ಶಿಕ್ಷಣ ಮತ್ತು ಇನ್ನು ಮುಂತಾದ ವಿಷಯಗಳ ಪ್ರಸಾರದ ಬಗ್ಗೆ ಸಂಘಟನೆಗ ಳನ್ನು ಮಾಡುವದು ಅವಶ್ಯವದೆ. ಇದಲ್ಲದೆ ಜನರ ಆರೋಗ್ಯ ವನ್ನು ಬೆಳಸಲಿಕ್ಕೂ ನೀವು ಶಕ್ತಿವರ್ಧಕ ಸಂಸ್ಥೆಗಳನ್ನು ತೆಗೆ ದು ಆಯಾ ತತ್ವಗಳನ್ನು ಅವರಲ್ಲಿ ಬೀರಬೇಕು. ಅಂದರೆ ಜನಾಂ ಗವು ಸರ್ವಾಂಗಸುಂದರವಾಗಿ ಸುಧಾರಿಸುವದೆಂಬುದರಲ್ಲಿ ಸಂ ದೇಹವಿಲ್ಲ. ಇದಲ್ಲದೆ ಈ ದಲದಿಂದ ಹರಿಜನ ಉದ್ಧಾರವೂ ಆಗುವದು. ಯಾಕೆಂದರೆ ಸ್ಕೌಟರಲ್ಲಿ ಜಾತಿಭೇದವಿಲ್ಲ ಕಾರಣ ಅಸ್ಪೃಶ್ಯತೆಯು ತಾನಾಗಿಯೇ ಲಯವಾಗುವದು! ನೀವು ಈ ವಿಷಯಗಳನ್ನು ಲಕ್ಷದಲ್ಲಿಟ್ಟು ಆ ಪ್ರಕಾರ ವರ್ತಿಸುವಿ ರೆಂದು ನಾನು ನಂಬಿದ್ದೇನೆ.

ಗವ್ಹರ್ನರ ಸಾಹೇಬರ ಭಾಷಣವಾದ ಬಳಿಕ ಅವರಿಗೆ ಹಾರ ಹಾಕಿದರು ಮತ್ತು ಸ್ಕೌಟರು ಮಾಡಿದ ಲಾರಿ ಕಮಾನಿನೊಳ ಗಿಂದ ಹಾಯ್ದು ಗವ್ಹರ್ನರ ಸಾಹೇಬರು ತಮ್ಮ ಮುಂದಿನ ಕಾರ್ಯಕ್ರಮವನ್ನು ಜರಗಿಸುವದಕ್ಕೆ ತೆರಳಿದರು. ಒಟ್ಟಿನ ಮೇಲೆ ಸ್ಕೌಟ ರ್‍ಯಾಲಿಯು ಯಶಸ್ವಿಯಾಯಿತೆನ್ನಲಿಕ್ಕೆ ಅಡ್ಡಿ ಇಲ್ಲ. ಇದರ ಶ್ರೇಯಸ್ಸು ಮೆ. ಖಾಸ. ಮತ್ತು ರಾಮಸ್ವಾಮಿ ಕೊಯಿಮುತ್ತೂರ, ಸೀಲಗಾರ, ಸಾಹುಕಾರ ಜಮಾದಾರ ಮೊದಲಾದವರನ್ನು ಬಹು ಅಂಶದಿಂದ ಕೂಡಿದೆ. ಹೊರಗಿನಿಂದ ಬಂದ ಸುಮಾರು ೧೦೦೦ ಸ್ಕೌಟರ ಊಟದ ವ್ಯವಸ್ಥೆಯಾದ ದೂ ಚನ್ನಾಗಿತ್ತು ಇದರಲ್ಲಿ ಹಾಸನದಿಂದ ಬಂದ ಸ್ಕೌಟ ಪಂ ಗಡದವರು ಒಳ್ಳೇ ಸಹಾಯಮಾಡಿದರು. ಕ್ಯಾಂಪಫಾಯರದ ಮೊದಲನೇ ದಿವಸದ ಕಾರ್ಯಕ್ರಮವು ಚನ್ನಾಗಿತ್ತು ಆದರೆ ಎರಡನೇ ದಿನ ಅಷ್ಟೊಂದು ಆಕರ್ಷಕವಾಗಿರಲಿಲ್ಲ. ಹೊರಗಿ ನಿಂದ ಬಂದ ಸ್ಕೌಟರಲ್ಲಿ ಶಿಸ್ತು ಇಲ್ಲದ್ದರಿಂದ ಗದ್ದಲವಾಗಿ ಅದನ್ನು ತೀವ್ರವೇ ನಿಲ್ಲಿಸಬೇಕಾಯಿತು. ಈ ಕೂಟದಲ್ಲಿ ಹೆಚ್ಚು ಪದಕವನಿಗೆ ದಿ. ಬಿ. ಕಂಬಳಿಯವರು ಪದಕ ಮೊದ ಲಾದ ಬಹುಮಾನಗಳನ್ನು ... ಮತ್ತು ಕಡೆಗೆ ... ಸ್ಕೌಟ ಸಿಕಾಸಿ ಮತ್ತು ... ಕೂಟದ ವಿಸರ್ಜನವಾ ಯಿತು

ಗವರ್ನರರ ಸಮಾಚಾರಗಳು

(ತಾ. ೧೧ ...)

... ... ಹೋಗುವ ... ...

... ... ಗವರ್ನರರು ... ಕೊಂಡು ... ... ಕಾಯುವೇ ಮುಂ ... ... ದಿವಾನ ಬಹದ್ದೂ ರರನ್ನೂ ಗವರ್ನರರಿಗೆ ... ಮಾಡಿಕೊಟ್ಟರು. ಪೋ ಲೀಸ 'ಗಾರ್ಡ ಆಫ ಆನರ' ... ಯವರೆಗೆ ... ...

ಸ್ಟೇಶನ್ನು ... ನಗರ ಮಂದಿರ ಸರಕಾರಿ ... ಕರ್ನಾಟಕ ಕಾಲೇಜುಗಳು ಶೃಂಗ ರಿಸಲ್ಪಟ್ಟಿವೆ.

... ... ವಾಗಗಳಿಂದಲೂ ಬಂದಿದ್ದಾರೆ

ಪೋಲೀಸ ಪರೇಡ

ನಿನ್ನೆ ಮುಂಜಾನೆ ... ಗವರ್ನರರು ಪೋಲೀಸ ಪರೇಡನ್ನು ... ಕ್ವಾರ್ಟರದಲ್ಲಿ ಸಂದರ್ಶಿಸಿದರು ಸಾಲು ಹಿಡಿದು ನಿಂತ, ಕಾನಸ್ಟೇಬಲ್ಲರಿಂದ ... ವರೆ ಗೆ ಎಲ್ಲರ ಮುಂದೆ ಹಾಯ್ದು, ಕೆಲವು ಅಧಿಕಾರಿಗಳ ಸಂಗಡ ಗವರ್ನರರು ಮಾತನಾಡಿದರು. ಮೊನ್ನಿನ ಕಾಯುದೇಭಂಗ ಚಳವಳದಲ್ಲಿ ಧಾರವಾಡದ ಪೋಲೀಸರು ಮಾಡಿದ ಕಾರ್ಯ ಕ್ಕಾಗಿ ಪೋಲೀಸರನ್ನು ಗವರ್ನರರು ಅಭಿನಂದಿಸಿ, ಪುಣೆ ಯಲ್ಲಿ ಅವರು ಮಾಡಿದ ... ಲಕ್ಷದಲ್ಲಿಡಬೇ ಕೆಂದು ಹೇಳಿದರು.

ಬೋರ್ಸ್ಟಲ್ ಶಾಲೆ

೧೧-೩೦ ಗಂಟೆಯ ಸುಮಾರಕ್ಕೆ ಗವರ್ನರರು ಈ ಶಾಲೆ ಯನ್ನು ಸಂದರ್ಶಿಸಿದರು. ... ಸ್ಥಳದಲ್ಲಿ ಸ್ಟಾರ್ಟ ಸಾಹೇಬರಿಂದ ... ಕಲಿತುಕೊಂಡು ಬಹುಕಾಲ ಕಾಯ್ದು ... ಸಂಘದ ಸಭಾಸದ ರನ್ನು ಸಾಹೇಬರು ... ಮಾತನಾ ಡಿದರು.

ಕೊನೆಯ ಚುಕ್ಕೆ

ನಕಲೀ .

ಗುಣದಲ್ಲಿ ಅತ್ಯುತ್ತಮ

ಈ ಎಣ್ಣೆಯು ಎಲ್ಲ ತರ ಸಂಧಿವಾತ, ಎದೆನೋವು, ತಲೆ ನೋವು, ಮತ್ತು ಇತರ ಎಲ್ಲ ಬಾ ಗಿಕ ಅನುಭವ ತೆಗೆದುಕೊಳ್ಳಿರಿ ವ್ಯಾಪಾರಸ್ಥರ

ಕನ

ಸಂಪಾದಕರು:

ಕಳೆದ ಹನ್ನೆರಡು ವ:

ಬೆಳಗಾವ

ಇದರಲ್ಲಿ ಸಾಮಾಜಿಕ ...

ವಿಷಯಗಳು ವಿದ್ಯಾರ್ಥಿಗಳಿಂದ

ವಿವಿಧ ವರ್ತಮಾನಸಾರಗಳೂ

ರೂ. ೨—೧೩ ... ಪರಸ್ಥಳದ

ಕ

ಅಗಡಿಕರ ಇ...

ಮಿದುಳಿಗೆ ಶಕ್ತಿ ಕೊಡು ಸುವದು. ಬೆಲೆ ಬಾಟ್ಲಿ ಒಂದಕ್ಕೆ ಯುವವು.

ಗರುಡರವರ ಅಚ್ಛಾದ

೧೪-೧೦-೩೩

ಭವಾನಿ ಅಯ್ಯ

ಕಬ್ಬಿಣದ ಪಲಂಗು, ಸ್ಟ್ಯಾಂಡು,

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

... ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ

ಈ ಪತ್ರಿಕೆಯನ್ನು ರಂ[redacted]ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ನಂ. ಬಿ. ೨೭೮೪ यद्यत् परवशं दुःखं । यद्यदात्मवशं सुखम्॥ मनु. ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:— ಆಲೂರ ವೆಂಕಟರಾಯರು.

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ಶನಿವಾರ ಕಾರ್ತಿಕ ಬಹುಳ ೨ ಶಕೆ ೧೮೫೫ ತಾ॥ ೪-೧ -೩೧ ಸಂಚಿಕೆ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ. ತಾ॥ ೨೫-೮ ೩೩ | ಕೃಷ್ಣರಾವ ಅಂಕಲಗಿ, ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ

(೧) ಬಿಳೀ, ಹಳದಿ ಕೆಂಪು ಚಿಮಣಿಯೆಣ್ಣೆ ಕ್ರೂಡ್ ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುನಿಚ್ ಫೇಮಸ್ ಬಿಯರ್ ( ) ಉತ್ತಮ ಹಾಗೂ ಬಹಳ ಸೋಯಿ ರ್ಜನ್ ಹೊಸ ಮೋಟಾರ ಸಾಯಕಲ್ (೪) ಸಟಕಾರ (೫) ಮೋಟಾರ ವಸ್ತು ಸ್ಸಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ.

ನಮ್ಮ ಹದ್ದು:—

ಪುಣೆಯಿಂದ ದಕ್ಷಿಣ ಇಡೀ ಯ ಇಲಾಖೆ ಮದ್ರಾಸ ಇಲಾಖೆ (೪) ಮೈಸೂರ ಸ್ಥಾನ ಸಂಪೂರ್ಣ (೪ ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖ (೬) ಇಡೀ ಗೋವಾಪ್ರಾಂತ ವಗೈರೆ ಇರುವೆ ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ಕೊ. ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ದೇಶಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಕಲಾಸಪೂರ ಆ್ಯಂಡ ಕೋ ದೇವಕರಣ ಮ್ಯಾನ್ಶನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ಗವ್ಹರ್ನರರ ಕಾರ್ಯಕ್ರಮ.

ಸಿರ್ಸಿ

೪ನೇ ತಾರೀಖು ಮುಂಜಾನೆ ೮-೧೫ಕ್ಕೆ ಗವ್ಹರ್ನರರು ಮೊಟಾರದಿಂದ ಸಿರ್ಸಿಗೆ ಪ್ರಯಾಣ ಮಾಡುವರು ಮಧ್ಯಾಹ್ನ ೨ ಗಂಟೆಗೆ ಮುನಿಸಿಪಾಲಟಿಯ ಹಳ್ಳೇದ ಪೇಟೆಗೆ ಬಂದು ಅಲ್ಲಿ ಅಸ್ಪೃಶ್ಯ ವರ್ಗದವರು ಈ ಸಮಯದಲ್ಲಿ ಅವರಿಗೆ ಮಾನಪತ್ರವನ್ನು ಅರ್ಪಿಸುವರು. ಸಂಘದ ಅಧ್ಯಕ್ಷರಾದ ಎಸ್ ಪಿ. ಪಂಡಿತ ಇವರು ಮಾನಪತ್ರವನ್ನು ಓದುವರು ಗವ್ಹರ್ನರರ ಉತ್ತರವು ಮಾಮಲೇದಾರರಿಂದ ಕನ್ನಡದಲ್ಲಿ ಭಾಷಾಂತರಿಸಲ್ಪಡುವದು ೧೨-೫೫ ಕ್ಕೆ ಗವ್ಹರ್ನರರು ಒಕ್ಕಲತನದ ಹುಟ್ಟುವಳಿ. ಹಸ್ತಿದಂತ, ಚಂದನ ಮೊದಲಾದ ಸಾಮಾನುಗಳ ಪ್ರದರ್ಶನವನ್ನು ಸಂದರ್ಶಿಸುವರು. ೧ ಗಂಟೆಗೆ ಅವರು ಮಿ ಎ ಎಸ್. ಕಾಮತ ಹೋಡ ಇವರ ಅಕ್ಕಿಯ ಕೊಟ್ಟು ತೆಗೆಯುವ ಗಿರಣಿಯನ್ನು ನೋಡಲು ಹೋಗುವರು ೧-೨೦ ಗಂಟೆಗೆ ಡಿಸ್ಟ್ರಿಕ್ಟ ಬಂಗಲೆಯಲ್ಲಿ ಉಪಹಾರ ಮೇಜವಾನಿ ಕೊಡಲ್ಪಡುವದು. ೨-೩೦ ಗಂಟೆಗೆ ನಿಲೇಕಣಿ ಎಂಬ ಹಳ್ಳಿಗೆ ಹೋಗುವರು. ಅಲ್ಲಿಯ ಮಸಾಲೆ ತೋಟದ ಒಡೆಯರಾದ ಶ್ರೀ ವ್ಹಿ ವ್ಹಿ ನಿಲೇಕಣಿ ಇವರು ಗವ್ಹರ್ನರರನ್ನು ಸ್ವಾಗತೀಕರಿಸುವರು ೨-೧೫ ಗಂಟೆಗೆ ಗವ್ಹರ್ನರರು ಸಿರ್ಸಿಯಿಂದ ೯ ಮೈಲಿನ ಮೇಲಿರುವ ತ್ಯಾಗಲಿ ಎಂಬ ಹಳ್ಳಿಗೆ ಹೋಗಿ ಅಲ್ಲಿಯ ಮಸಾಲೆಯ ತೋಟವನ್ನು ಸಂದರ್ಶಿಸುವದಲ್ಲದೆ ಅಡಿಕೆಗಳನ್ನು ಹೇಗೆ ತಯಾರ ಮಾಡುವರೆಂಬುದನ್ನಾದರೂ ನೋಡುವರು ಆ ವೇಳೆ ಗವ್ಹರ್ನರರು ಪಟೇಲರ ಮನೆಗೆ ಹೋಗುವರು ಪಟೇಲರು ಗವ್ಹರ್ನರರಿಗೆ ಯಾಲಕ್ಕಿಯಿಂದ ತಯಾರ ಮಾಡಿದ ಮಾಲೆಯನ್ನು ಹಾಕುವರು ೪-೧೫ ಕ್ಕೆ ಗವ್ಹರ್ನರರು ತ್ಯಾಗಲಿಯಿಂದ ಜೋಗಕ್ಕೆ ಹೋಗುವರು

ಸಿದ್ದಾಪುರ

ಗವ್ಹರ್ನರರು ೫ನೇ ತಾರೀಖು ಮಧ್ಯಾಹ್ನ ೩ ಗಂಟೆಗೆ ಜೋಗ ಬಿಟ್ಟು ೩-೨೫ ಗಂಟೆಗೆ ಸಿದ್ದಾಪುರ ತಾಲೂಕ ಕಚೇರಿಗೆ ಬಂದು ಮುಟ್ಟುವರು ತಾಲೂಕ ಲೋಕಲ್ ಬೋರ್ಡದವರು ಅವರಿಗೆ ಮಾನಪತ್ರವನ್ನು ಅರ್ಪಿಸುವರು ಗವ್ಹರ್ನರರ ಉತ್ತರವನ್ನು ಮಾಮಲೇದಾರರು ಕನ್ನಡದಲ್ಲಿ ಭಾಷಾಂತರಿಸಿ ಹೇಳುವರು ಆ ಮೇಲೆ ಗವ್ಹರ್ನರರು ಪುನಃ ಜೋಗಕ್ಕೆ ಪ್ರಯಾಣ ಮಾಡುವರು

ಬಂಕಾಪುರ

೩ ೬ ೩ ಮುಂಜಾನೆ ೭-೪೫ ಗಂಟೆಗೆ ಗವ್ಹರ್ನರರು ಜೋಗ ಬಿಟ್ಟು ೧೧-೪೫ ಗಂಟೆಗೆ ಬಂಕಾಪುರಕ್ಕೆ ಬರುವರು ಅಲ್ಲಿ ದನಕರುಗಳ ಕೊಟ್ಟಿಗೆಯನ್ನು ಸಂದರ್ಶಿಸುವರು ಆ ಮೇಲೆ ೧೨ ಗಂಟೆಗೆ ಬಂಕಾಪುರ ಬಿಡುವರು

ಹುಬ್ಬಳ್ಳಿ

ಮಧ್ಯಾಹ್ನ ೧ ಗಂಟೆಗೆ ಹುಬ್ಬಳ್ಳಿಗೆ ಬರುವರು. ೧-೩೦ ಗಂಟೆಗೆ ಹೊಗೆ ಬಂಡಿಯಲ್ಲಿ ಉಪಹಾರ ತೆಗೆದುಕೊಳ್ಳುವರು ೨-೩೦ ಗಂಟೆಗೆ ಮ್ಯುನಸಿಪಲ ಆಫೀಸಿಗೆ ಹೋಗಿ ಮ್ಯುನಸಿಪಾಲಿಟಿಯ ಮಾನಪತ್ರವನ್ನು ಸ್ವೀಕರಿಸುವರು ೩ ಗಂಟೆಗೆ ರೇಲ್ವೆ ವರ್ಕಶಾಪಕ್ಕೆ ಭೆಟ್ಟಿ ಕೊಡುವರು ೩-೫೦ ರಿಂದ ೪ ೧೦ರ ವರೆಗೆ ಹೊಗೆ ಬಂಡಿಯಲ್ಲಿ ಸರದಾರ ಮಹಾಬೂಬ ಅಲ್ಲೀಖಾನ ರಾ ಬ ಬಿ ಎಲ್ ಪಾಟೀಲ, ವ್ಹಿ ಎಸ್. ಜೋಗ, ಎಚ್ ಆರ್ ದೇಸಾಯಿ, ಟಿ. ವ್ಹಿ. ಕೋಟಿ, (ಗದಗ ಮುನಸಿಪಾಲಿಟಿಯ ಅಧ್ಯಕ್ಷರು) ಎಸ್ ಬಿ ಲಕ್ಷ್ಮೇಶ್ವರ, ರಾ ಸಾ ಮಾನವಿ (ಗದಗ ಕಾಟನ್ ಸೇಲ ಸೊಸಾಯಿಟಿಯ ಪ್ರತಿನಿಧಿಗಳು) ನಾರಾಯಣರಾವ ಹುಯಿಲಗೋಳ, ಗದಗ, ರಾ ಸಾ ಎಸ್. ಆರ್. ಕುಂಭಕೋಣಮ್, ಹುಬ್ಬಳ್ಳಿ, ಎಸ್. ವಿಸ್ ನಾಯಿಕ, ರಾಣೆಬೆನ್ನೂರ ಇವರಿಗೆ ಭೆಟ್ಟಿ ಕೊಡುವರು

ಲೇಡಿ ಸ್ಟಾಯಿಕ್ಸ ಇವರು ಸಂಜೆಯ ೫ ಗಂಟೆಗೆ ಹೆಣ್ಣುಮಕ್ಕಳ ದವಾಖಾನೆಯನ್ನು ನೋಡಿಕೊಂಡು ಹೋಗುವರು

ಸಂಜೆಯ ೬ ಗಂಟೆಗೆ ಗವ್ಹರ್ನರರು ಪತ್ನಿ ಸಮೇತರಾಗಿ ಮುಂಬಯಿಗೆ ಪ್ರಯಾಣ ಮಾಡುವರು

ಬ್ಯಾಡಗಿಲಿಂಗರಾಜವಾಚನಾಲಯ.

ತಾ॥ ೨೨ ೧೦ ೩೩ನೆ ತರುಣಕರ್ನಾಟಕದ ಸಂಚಿಕೆಯಲ್ಲಿ ಬ್ಯಾಡಗಿಯ ಶ್ರೀ ಲಿಂಗರಾಜ ವಾಚನಾಲಯದ ಕಾರ್ಯದರ್ಶಿಗಳು ಪ್ರಸಿದ್ಧ ಮಾಡಿದ ಬರಹದ ಸಂಬಂಧವಾಗಿ ಬ್ಯಾಡಗಿಯ ಓರ್ವ ವಾಚನಾಭಿಮಾನಿಗಳು 'ಕನ್ನಡಿಗ'ನಿಗೆ ಒಂದು ಪತ್ರ ಕಳಿಸಿದ್ದಾರೆ ಪತ್ರದ ಸಾರಾಂಶವೆಂದರೆ— ಕನ್ನಡಿಗದಲ್ಲಿ ಈ ಮೊದಲು ಪ್ರಸಿದ್ಧ ಮಾಡಲ್ಪಟ್ಟ ಲೇಖವು ದ್ವೇಷದಿಂದ ಬರೆಯಲ್ಪಟ್ಟಿರುವದಿಲ್ಲ. ನೀವು ಪತ್ರವನ್ನು ಚೆನ್ನಾಗಿ ನಿರೀಕ್ಷಿಸಿದಂತೆ ತೋರುವದಿಲ್ಲ. ಆ ಹೊತ್ತಿನ ಪತ್ರಗಳು ಆ ಹೊತ್ತು ಸಿಗದೆ ಇದ್ದದ್ದು ಅಕ್ಷರಶಃ ನಿಜವಿರುತ್ತದೆ ನವಕರರನ್ನು ಕೇಳಿದರೆ ಏನಾದರೂ ನೆವ ಹೇಳುತ್ತಾನೆ ಅಧ್ಯಕ್ಷರೂ ದಾನಶೂರರೂ, ಸಭಾಸದರೂ ವಾಚನಾಲಯದೊಳಗಿನ ಪತ್ರಗಳನ್ನು ಒಯ್ಯುತ್ತಾರೆಂದು ಬರೆದಿಲ್ಲ ವ್ಯವಸ್ಥಾಪಕರು ಮತ್ತು ಅವರ ಜನರು ಒಯ್ಯುತ್ತಾರೆಂದು ಬರೆದಿದೆ ಪತ್ರವನ್ನು ಸರಿಯಾಗಿ ನೋಡದೆ ಚಲುವ-ಚಂದ್ರಾಮ-ಈ ಮಣ್ಣ ಮುಂತಾಗಿ ಟೀಕಿಸಿರುವಿರಿ. ತಾವು ಈ ವರೆಗೆ ಮಾಡಿದ ಕಾರ್ಯವು ಸ್ತುತ್ಯವಿದೆ ಇನ್ನ ಮೇಲಾದರೂ ನಿತ್ಯ, ವಾರ, ಪಕ್ಷ, ಮಾಸ ಪತ್ರಿಕೆಗಳು ವಾಚಕರಿಗೆ ಕಾಲಕ್ಕೆ ಸಿಗುವಂತೆ ಮಾಡಬೇಕು

೩ನೇ ಭಾಗದ ಡಿ. ಡಿ. ಸಿ. ಯವರ ಪ್ರವಾಸಕ್ರಮ

೬ರಿಂದ ೧೫ ನವ್ಹೆಂಬರ ಹುಬ್ಬಳ್ಳಿ ಜಮಾಬಂದಿ
೧೬ರಿಂದ ೨೦ „ ತಿರಮಲಕೊಪ್ಪ
೨೧ರಿಂದ ೨೪ „ ಬಿದನಹಳ್ಳಿ
೨೫ರಿಂದ ೩೦ „ ಅಣ್ಣಿಗೇರಿ

ಜಾಹೀರ ನೋಟೀಸು.

ದಿ ಸದರ್ನ ಮರಾಠಾ ಅರ್ಬನ್ ಕೋ-ಆಪರೇಟಿವ್ಹ ಕ್ರೆಡಿಟ್ ಬ್ಯಾಂಕ ಲಿಮಿಟೆಡ್, ಧಾರವಾಡ ಇವರು ಧಾರವಾಡ ಕಾಳಿನ ಮಾರ್ಕೇಟಿನಲ್ಲಿ ವಖಾರದ ಸಲುವಾಗಿ ಒಂದು ಕಟ್ಟಡವನ್ನು ಕಟ್ಟುವವರಿದ್ದಾರೆ ಕಟ್ಟಡದ ಕಿಮ್ಮತ್ತು ರೂ ೧೧೦೦೦ ಆಗಬಹುದೆಂದು ಅಂದಾಜ ಮಾಡಲಾಗಿದೆ ಸದರೀ ಕಟ್ಟಡವನ್ನು ಕಟ್ಟಿಕೊಡುವವರು ಸನ್ ೧೯೩೩ನೇ ಇಸ್ವಿ ನವ್ಹೆಂಬರ ತಿಂಗಳ ೧೧ನೇ ತಾರೀಖಿನ ಸಂಜೆಯ ೫ ಘಂಟೆಯ ಒಳಗಾಗಿ, ಬ್ಯಾಂಕಿಗೆ ಅಲಸ್ಟವಂಶಿ ಹೆಸರು ಮಾಡಿ ಲಖೋಟೆಯ ಮೇಲೆ, ವಖಾರದ ಟೆಂಡರೆಂದು ಬರೆದು ಕಳಿಸಿ ಕೊಡಬೇಕು ಮತ್ತು ಅದರ ಕೂಡ ೨೦೦ ರೂ ಠೇವು ಬ್ಯಾಂಕಿನಲ್ಲಿಡಬೇಕು. ನಾಪಾಸಾದ ಟೆಂಡರದಾರರಿಗೆ, ಬಡ್ಡಿ ಇಲ್ಲದೆ ಠೇವಿನ ಹಣ ಪರತ ಕೊಡುವದರಲ್ಲಿ ಬರುವದು

ಕಟ್ಟಡದ ನಕಾಶೆಯನ್ನು ಅಂದಾಜು ಪಟ್ಟಿಯನ್ನು ಕಾಂಟ್ರ್ಯಾಕ್ಟದ ಶರ್ತಿನ ಪತ್ರಗಳನ್ನು ಟೆಂಡರ ಕೊಡಲಿಚ್ಛಿಸುವವರು ಬ್ಯಾಂಕಿನ ಕಚೇರಿಯ ವೇಳೆಯಲ್ಲಿ ಬಂದು ನೋಡಬಹುದು.

Sd/- C. A. Hiremath
ಚೇರಮನ್,
ದಿ ಸ. ಮ. ಅ. ಕೊ ಕ್ರೆ ಬ್ಯಾಂಕ ಲಿ ಧಾರವಾಡ

ಧಾರವಾಡ
೨೫-೧೦-೧೯೩೩.

ಕನ್ನಡಿಗ

[illegible]ವಾರ ತಾರೀಖು [illegible]

ನಮ್ಮ ದುರ್ದೈವವೋ ಬ್ರಿಟಿಶರ ಸುದೈವವೋ?

ಸ್ವದೇಶಿ ಚಳವಳವು ಹುಟ್ಟಲಿಕ್ಕೆ ಮುಖ್ಯ ಕಾರಣವು ವಿಲಾಯತಿಯ ಮಾಲು ನಮ್ಮಲ್ಲಿಗೆ ಬರುವುದು. ನಮ್ಮ ದೇಶದಿಂದ ಹತ್ತಿಯು ಹೊರಗೆ ಹೋಗುತ್ತದೆ. ಅದರ ಬದಲು ಪಕ್ಕಾ ಮಾಲು ಅಲ್ಲಿಂದಲೂ ಮಿಕ್ಕ ದೇಶಗಳಿಂದಲೂ ಇಲ್ಲಿಗೆ ಬರುತ್ತದೆ. ಇಲ್ಲಿಯ ಗಿರಣಿಗಳಲ್ಲಿ ನಮಗೆ ಬೇಕಾಗುವಷ್ಟು ಮಾಲು ತಯಾರಾಗವುದಿಲ್ಲ. ಚಂದ ಚಂದ ಅರಿವೆಗಳನ್ನು ಕೊಂಡುಕೊಳ್ಳುವ ನಮ್ಮ ಜನರ ಮೋಹವು ಕಡಿಮೆಯಾಗುವ ವರೆಗೆ ಈ ಪ್ರಶ್ನೆಯು ಸಮಾಧಾನಕರವಾಗಿ ಬಿಡಿಸಲಾರದು. ಇತ್ತೀಚೆಗೆ ಜಪಾನದ ಜನರು ತಮ್ಮ ಅಗ್ಗವಾದ ಅರಿವೆಗಳಿಂದ ಇಡೀ ಜಗತ್ತಿನ ಪೇಟೆಯನ್ನೇ ಆಕ್ರಮಿಸಿ ಬಿಟ್ಟಿರುವರು. ಹೀಗೆ ನಮ್ಮ ವ್ಯಾಪಾರಕ್ಕೆ ವಿಲಾಯತಿ ಮತ್ತು ಜಪಾನ ಇವೆರಡೂ ದೊಡ್ಡ ಶತ್ರುಗಳು. ಹಿಂದೀ ಗಿರಣಿಕಾರರನ್ನು ಜಪಾನದ ಆಕ್ರಮಣದಿಂದ ಸಂರಕ್ಷಿಸುವುದಕ್ಕೆಂದು ಜಪಾನದ ಮಾಲಿನ ಮೇಲೆ ೧೦೦ಕ್ಕೆ ೭೫ರಷ್ಟು ಭಾರೀ ಕರವು ಹೇರಲ್ಪಟ್ಟಿದ್ದರೂ ತಮ್ಮ ಮಾಲನ್ನು ಇಲ್ಲಿ ವಿಲಾಯತಿಯ ಮತ್ತು ಇಲ್ಲಿಯ ಗಿರಣಿಗಳ ಮಾಲಿಗಿಂತಲೂ ಅಗ್ಗವಾಗಿ ಮಾರುತ್ತಾರೆ. ಮತ್ತು ಇಲ್ಲಿಯ ಹತ್ತಿಯನ್ನು ಕೊಳ್ಳುವುದನ್ನೇ ಬಿಡುವೆವೆಂದು ಹೆದರಿಕೆ ಹಾಕಿದ್ದಾರೆ. ಆದಕಾರಣ ಈ ಪ್ರಶ್ನೆಯ ವಿಚಾರವನ್ನು ಮಾಡುವ ಕುರಿತು ಜಪಾನ ಸರಕಾರದವರು ತಮ್ಮ ಪ್ರತಿನಿಧಿಗಳನ್ನು ಇಲ್ಲಿಯ ಸರಕಾರದವರ ಕಡೆಗೆ ಕಳುಹಿಸಿರುವರು. ಅಲ್ಲದೆ, ಜಪಾನದ ವ್ಯಾಪಾರಸ್ಥರೂ ತಮ್ಮ ಪ್ರತಿನಿಧಿಗಳನ್ನು ಇಲ್ಲಿಗೆ ಕಳುಹಿಸಿರುವರು. ಇದೇ ಕಾಲಕ್ಕೆ ಲ್ಯಾಂಕಶಾಯರದ ವ್ಯಾಪಾರಸ್ಥರ ಪ್ರತಿನಿಧಿಗಳೂ ಬಂದಿರುವರು. ಹಿಂದೀ ವ್ಯಾಪಾರಸ್ಥರ ಪ್ರತಿನಿಧಿಗಳೂ ಕೂಡಿರುವರು. ಇವರೆಲ್ಲರ ನಡುವೆ, ವ್ಯಾಪಾರದ ಸಂಬಂಧವಾಗಿ ಎಲ್ಲರಿಗೂ ಸಮ್ಮತವಾಗುವ ಕರಾರು ಆಗಬಹುದೇ ಹೇಗೆ ಎಂಬುದನ್ನು ನೋಡಬೇಕಾಗಿತ್ತು. ಆ ಮೇರೆಗೆ ಜಪಾನದವರಿಗೂ ಹಿಂದೀ ಸರಕಾರದವರಿಗೂ ಮಾತುಕತೆಗಳಾಗಿ ಕೆಲವು ಮಾತುಗಳ ಬಗ್ಗೆ ಒಡಂಬಡಿಕೆಯಾದಂತೆ ಆಗಿದೆ. ಜಪಾನದ ಮಾಲಿನ ಮೇಲೆ ಹಿಂದೀ ಸರಕಾರದವರು ಈಗ ಹೇರಿದ ೧೦೦ಕ್ಕೆ ೭೫ ಕರವನ್ನು ೫೦ಕ್ಕೆ ಇಳಿಸಲಿಕ್ಕೆ ಒಪ್ಪಿರುವರು. ಜಪಾನವು ಪ್ರತಿವರ್ಷ ೪೦ ಕೋಟಿ ವಾರ ಅರಿವೆಯನ್ನು ಈ ದೇಶಕ್ಕೆ ಕಳುಹಿಸಬಹುದು. ಮತ್ತು ಅದು ಈ ದೇಶದಿಂದ ೧೫ ಲಕ್ಷ ಹತ್ತಿಯ ಗಂಟುಗಳನ್ನು ಕೊಳ್ಳಲೇಬೇಕು. ಹೀಗೆ ಜಪಾನ ಮತ್ತು ಹಿಂದುಸ್ಥಾನದ ನಡುವೆ ಯಾವುದೇ ಒಂದು ರೀತಿಯಿಂದ ಒಪ್ಪಂದವು ಆಗುವ ಸಂಭವವಿದೆ. ಜಪಾನವು ಈ ದೇಶಕ್ಕೆ ೧೯೩೨-೩೩ರಲ್ಲಿ ತಾವು ಕಳುಹಿಸಿದಷ್ಟು ಅರಿವೆಯನ್ನು ಅಂದರೆ ೫೫ ಕೋಟಿ ವಾರು ಅರಿವೆಯಷ್ಟು ಕಳಿಸಲಿಕ್ಕೆ ತಮಗೆ ಪರವಾನಿಗಿ ಇರಬೇಕೆಂದು ಕೇಳಿತು. ಅದಕ್ಕೆ ಇಲ್ಲಿಯ ಸರಕಾರವು ಒಪ್ಪಲಿಲ್ಲ. ಕೊನೆಗೆ ಹೋದ ೩ ವರ್ಷಗಳ ಅಂದಾಜನ್ನು ತೆಗೆದು ಅಷ್ಟು ಮಾಲನ್ನು ಜಪಾನವು ಈ ದೇಶಕ್ಕೆ ಕಳುಹಿಸಲು ಅಡ್ಡಿ ಇಲ್ಲವೆಂದು ಗೊತ್ತಾಗಿದೆ. ಈ ಅಂದಾಜು ಸುಮಾರು ೩೦ ಕೋಟಿ ವಾರು ಆಗುತ್ತದೆ. ಆದರೆ, ಹಿಂದೀ ಸರಕಾರದ ಪಕ್ಷದಿಂದ ಸರ- ಭೋರೆ ಇವರು [illegible] ಕೊ[illegible]ರುವರು. ಸಾರಾಂಶ ಇಷ್ಟೇ [illegible] ನವು ಇಂತಿಷ್ಟು ಹತ್ತಿಯನ್ನು ಕೊಂಡುಕೊಳ್ಳಲು ಒಪ್ಪಬೇಕು. ಅಂದರೆ ಜಪಾನವು ಈ ದೇಶಕ್ಕೆ ಇಂತಿಷ್ಟು ಅರಿವೆಯನ್ನು ಕಳಿಸಲು ಅಡ್ಡಿಯಿಲ್ಲವೆಂದು ಹಿಂದೀ ಸರಕಾರವು ಜಪಾನಿನ ಮಾಲಿನ ಕರವನ್ನು ಇಳಿಸಬಹುದೆಂದೂ ಗೊತ್ತಾಗಿದೆ.

ಆದರೆ ಲ್ಯಾಂಕಶಾಯರದವರ ಪಾತ್ರ [illegible] ಯಾವ ಬಗೆಯ [illegible] ಸಿದ್ಧರಿದ್ದ [illegible] ವರ್ಷ [illegible] ಹೆಚ್ಚಿಗೆ [illegible] ನೆಂದು ಮಾತ್ರ [illegible] ಚಮತ್ಕಾರವೆನಂದರೆ ಈಗ ಮುಂಬಯಿ ಗಿರಣಿಕಾರರು ಲ್ಯಾಂಕಶಾಯರದವರ [illegible] ಮಾಡಿಕೊಂಡಿರುವರೆಂದು [illegible] ಮುಂಬಯಿ ಗಿರಣಿಕಾರರ [illegible] ಮಿ। ಮೋದೀ ಇವರು ಈ ಒಪ್ಪಂದಕ್ಕೆ ಮೂಲ ಕಾರಣರು. ಮೊದಲಿನಿಂದಲೂ ಇವರ ಒಲವು ಲ್ಯಾಂಕಶಾಯರದವರ ಕಡೆಗೆ. ಆದರೆ ಮುಂಬಯಿ ಗಿರಣಿಕಾರರು ಮೊನ್ನೆ [illegible] ಮಾಡಿ ಮಿ। ಮೋದೀ ಇವರು [illegible] ವರೊಡನೆ ಒಪ್ಪಂದ ಮಾಡಿಕೊಳ್ಳುವುದು ಅನ್ಯಾಯವೆಂದು ಹೇಳಿದ್ದರು. ಈಗ ಅವರ [illegible] ಬಲಿಬಿದ್ದು ಅವರು [illegible] ಇಷ್ಟು ನೋಡಿದರೆ ನಾವು [illegible] ಕೋ [illegible] ಬ್ರಿಟಿಶರು [illegible] ತಿಳಿಯುವದಾಗಿದೆ. ಲ್ಯಾಂಕಶಾಯರದವರು [illegible] ಹಿಂದುಸ್ಥಾನ ಮಿತ್ರತ್ವವನ್ನು ಮಾಡಿಕೊಳ್ಳಲಿಕ್ಕೆ ಏನಾದರೂ [illegible] ಗೆ ಲ್ಯಾಂಕಶಾಯರದವರು ಯಾವ ತರದ [illegible] ಬಗೆಯನ್ನು ಕೊಡದಿದ್ದರೂ ಅವರೊಡನೆ ರಾಜೀ ಮಾಡಿಕೊಂಡು ಲ್ಯಾಂಕಶಾಯರದ ಮಾಲಿನ ಕರದಲ್ಲಿ ೧೦೦ಕ್ಕೆ ೫ ರಷ್ಟು ಕಡಿಮೆ ಮಾಡಲಿಕ್ಕೆ ಮುಂಬಯಿ ಗಿರಣಿಕಾರರು ಒಪ್ಪಿದರೆಂಬ ಬಗ್ಗೆ ಲ್ಯಾಂಕಶಾಯರದವರು ಅತಿ ದಾನಶೂರರೆನ್ನಬೇಕೋ ಅಥವಾ ನಮ್ಮವರು ಅತಿ ಮರುಳರೆನ್ನಬೇಕೋ ತಿಳಿಯದು. ಹೀಗೆ ಮಿ। ಮೋದೀ ಇವರ ಮರುಳಾಗುವುದಕ್ಕೆ ಅವರು ಕೊಟ್ಟ ಕೆಲವು [illegible] ಆಶ್ವಾಸನಗಳೇ ಕಾರಣವಂತೆ. ಲ್ಯಾಂಕಶಾಯರದವರ ಮಾತಿಗೆ ನಾವು ಒಪ್ಪದಿದ್ದರೆ ಅವರು ವಿಲಾಯತಿಯ ಕಾಗದದಿಂದ ನಮಗೆ ದೊರೆಯಬಹುದಾದ ರಾಜಕೀಯ ಹಕ್ಕುಗಳಿಗೆ ಅಡ್ಡ ಬರುವರಂತೆ. ಆದಕಾರಣ, ಅವರ ಮನಸ್ಸನ್ನು ನೋಯಿಸಬಾರದೆಂದು ಮಿ। ಮೋದೀ ಇವರ ಅಂಬೋಣ! ಇದು ಎಂಥ ಹುಚ್ಚುತನವು! ಬಿಳೀ ಕಾಗದದಿಂದ ನಮಗೆ ದೊರೆಯುವ ಭಾಗ್ಯವೂ ಅಷ್ಟರಲ್ಲಿಯೇ ಇದೆ. ಆದಕಾರಣ, ಈ ಕ್ಷುದ್ರ ಕಾರಣಕ್ಕಾಗಿ, ನಮ್ಮ ಗಿರಣಿಕಾರರು ತಮ್ಮ ಹಿತಶತ್ರುಗಳೊಡನೆ ಒಪ್ಪಂದ ಮಾಡಿಕೊಳ್ಳುವುದಕ್ಕಿಂತ ಹೆಚ್ಚಿನ ಮೂರ್ಖತನವು ಯಾವದಿದೆ?

ನರಿಮನ್ನರ ಪ್ರಕಟನೆ

ಮುಂಬಯಿ ತಾ। ೨— ಶ್ರೀ ಕೆ ಎಫ್ ನರಿಮನ್ ಇವರು ಒಂದು ಉದ್ದವಾದ ಪ್ರಕಟನೆ ಹೊರಡಿಸಿ ಕಾಂಗ್ರೆಸದ ಸಧ್ಯದ ಧೋರಣವು ತಮಗೆ ಸಮ್ಮತವಿಲ್ಲವೆಂದೂ, ಯಾವತ್ತು ಕಾಂಗ್ರೆಸ ಪಕ್ಷಗಳಲ್ಲಿ ಐಕ್ಯವನ್ನುಂಟು ಮಾಡಿ ಅವರೆಲ್ಲರು ಕಾಂಗ್ರೆಸದೊಳಗಿದ್ದೇ ಹೋರಾಡಿ ರಾಷ್ಟ್ರೀಯ ಸಭೆಯ ಕೀರ್ತಿಯನ್ನು ಕಾಪಾಡಿಕೊಳ್ಳುವದು ಅವಶ್ಯವಿದೆಯೆಂದೂ ಉಲ್ಲೇಖಿಸಿರುವರು. ಅವರು ಮತ್ತೆ ಅನ್ನುವದೇನಂದರೆ- ಕಾಂಗ್ರೆಸದ ಸಧ್ಯದ ಧೋರಣವು ಅಸ್ಪಷ್ಟವಾಗಿದೆ. ಯಾವತ್ತು ಪಕ್ಷಗಳಲ್ಲಿ ಐಕ್ಯವನ್ನುಂಟು ಮಾಡಲು ವಿಶೇಷ ಪ್ರಯತ್ನ ವಹಿಸಿದ್ದಾಯಿತು. ಆದರೆ ಯಶಸ್ವಿ ಆಗಲಿಲ್ಲ. ಕಾಂಗ್ರೆಸ ಜನರಲ್ಲಿ ಈಗಿನಷ್ಟು ಒಳಭೇದವು ಹಿಂದೆ ಎಂದೂ ಇರಲಿಲ್ಲ. ಮ. ಗಾಂಧಿಯವರು ರಾಜಕೀಯ ಚಳವಳಿಯ ಮುಖಂಡರಾಗಿರುವ ವರೆಗೆ ಅವರ ಮೇಲೆ ಭಕ್ತಿ ಇದ್ದವರು ಅವರನ್ನು ಅನುಸರಿಸಿಯೇ [illegible] ಅನುಸರಿಸುವ [illegible] ಶಕ್ತಿಗೆ [illegible] ಕೊಟ್ಟು [illegible] ಅಂಧತನದಿಂದ ನಡೆಸಿಕೊಂಡು ಹೋಗಬಾರದಾಗಿ ಕಾಂಗ್ರೆಸ ಜನರಿಗೆ ನಾನು ಎಚ್ಚರ ಕೊಡುತ್ತೇನೆ. ಈಗಿನ ಪರಿಸ್ಥಿತಿಯನ್ನು ಸೂಕ್ಷ್ಮ ರೀತಿಯಿಂದ ಅವಲೋಕನ ಮಾಡಿದರೆ ಕಾಂಗ್ರೆಸದ ಹಿಂದಿನ [illegible] ಅಧಿಕಾರ [illegible] ಕಡಿಮೆಯಾಗುತ್ತ ನಡೆದಿದೆ ಎಂದೂ ಈ [illegible] ವ್ಯವಸ್ಥೆ ಮಾಡದಿದ್ದಲ್ಲಿ ಅನರ್ಥ ಉಂಟಾಗುವದೆಂದೂ ಯಾರಿಗಾದರೂ ತೋರದೆ ಇರದು. ಪುಣೆಯಲ್ಲಿ ನಡೆದ ಪರಿಷತ್ತಿನ ಸಂಬಂಧವಾಗಿ ನನ್ನ ಅಭಿಪ್ರಾಯವೆಂದರೆ ಗಾಂಧಿ [illegible] ಮುಖ್ಯ [illegible] ಗಳ ವಿಷಯದಲ್ಲಿ ಕಿಂಚಿತ್ತು ಅಂತರವಿದೆ. ಕಾಂಗ್ರೆಸಕ್ಕೆ ಒಳ್ಳೆಯ ನಿಷ್ಠೆಯಿಂದ ನಡೆದುಕೊಳ್ಳುವ ಡಾ. ಅನ್ಸಾರಿ ಮೌ. ಅಬ್ದುಲ್ ಕಲಾಮ ಆಝಾದ ಇವರು ಪುಣೆಯ ಪರಿಷತ್ತಿನ ಕಾಲದಲ್ಲಿ ಮಹತ್ವದ [illegible] ಆ [illegible] ಪರಿಷತ್ತಿನವರ [illegible] ನೋಡದಿದ್ದದು ವಿಷಾದಕರವಾಗಿದೆ. [illegible] ಆಧ್ಯಾತ್ಮಿಕ ಧರ್ಮಸಿದ್ಧಾಂತ [illegible] ಪಂಡಿತ ಜವಾಹರರ ಶಕ್ತಿಯು ಎಷ್ಟಿದೆಯೆಂಬುದು ನನಗೆ ಗೊತ್ತಿದೆ. ಆದರೆ ಈ ಕಾಲದ [illegible] ಹಿಂದುಸ್ಥಾನದ ರಾಜಕೀಯ [illegible] ಮತ್ತು ವಿಶೇಷವಾಗಿ ಕಾಂಗ್ರೆಸದಲ್ಲಿ ಸಂಘಟನೆ ಬೇಕಾಗಿತ್ತು. ಈ ಒಳಭೇದಗಳನ್ನು ನಾವು ಎಷ್ಟು [illegible] ಅಲಕ್ಷಿಸುವದು ಸರಿಯಾಗಿರುವದಿಲ್ಲ. ಕಾಂಗ್ರೆಸ ಜನರಲ್ಲಿ ಉತ್ಸಾಹವು ಕಡಿಮೆಯಾಗಿದ್ದಕ್ಕೆ ಮೂಲ ಕಾಂಗ್ರೆಸ [illegible] ಅಧಿಕಾರವು ಕಡಿಮೆಯಾದದ್ದು ಮತ್ತು ಕೆಲವು ಕಾಂಗ್ರೆಸ ಜನರು ಕಾಂಗ್ರೆಸನ್ನು [illegible] ಸ್ವತಂತ್ರ ರೀತಿಯಲ್ಲಿ ವರ್ತಿಸುತ್ತಿರುವದು ಕಾರಣವಾಗಿದೆ. ಕೆಲವು ಪ್ರಾಂತದವರು ಕಾಂಗ್ರೆಸದ ಹೊರಗೆ ಸ್ವತಂತ್ರ ಸಂಘಗಳನ್ನು ಸ್ಥಾಪಿಸಿಕೊಳ್ಳತೊಡಗಿದ್ದರ ವಿಷಯವಾಗಿ ಪಂಡಿತರು [illegible] ಕಾಂಗ್ರೆಸದವರು ಈಗ ಕಾಂಗ್ರೆಸದ ಘಟನೆಯನ್ನು ಪುನಃ ವಿಚಾರ ಮಾಡಿ, ಅದರ ವರ್ಚಸ್ಸು ಮೊದಲಿನಂತೆ ಉಳಿಯುವಂತೆ ಮಾಡಬೇಕೆಂದು ಅಭಿಪ್ರಾಯಪಟ್ಟಿರುವರು.

ಪುಣೆ ಪರಿಷತ್ತಿನಲ್ಲಿಯ ತೀರ್ಮಾನವು ಕಾಂಗ್ರೆಸ ಜನರಿಗೆ ಬಂಧನಕಾರಕವಿಲ್ಲವೆಂದು ಆಕ್ಷೇಪವನ್ನೆತ್ತಿ ನರಿಮನ್ನರು ಅನ್ನುವದೇನಂದರೆ— ಅಲ್ಲಿಯ ತೀರ್ಮಾನಗಳು ಕೇವಲ ಸಲಹೆಗಳ ಸ್ವರೂಪದವಿದ್ದವಲ್ಲದೆ ಕೊನೆಯ ನಿರ್ಣಯಗಳಾಗಿರಲಿಲ್ಲ. ಅಲ್ಲಲ್ಲಿಯ ಪ್ರಾಂತಿಕ ಮತ್ತು ಸ್ಥಾನಿಕ [illegible] ಗಳಿಗೆ ರಾಷ್ಟ್ರೀಯ ಪಾರ್ಲಮೆಂಟದ ಸಮ್ಮತಿ ಸಿಗದ ವಿನಾ ಅವು ರಾಷ್ಟ್ರೀಯ ಕಾರ್ಯಕ್ರಮವಿಲ್ಲವೆ [illegible] ರಾಷ್ಟ್ರೀಯ [illegible] ಗಳಲ್ಲಿ ಗಣಿಸಲ್ಪಡಲಾರವು. ಯಾವ ಕಾಲದಲ್ಲಿ ಕಾಂಗ್ರೆಸದ ಮೇಲೆ ಹಲ್ಲೆ ನಡೆದು ಅದರ ಪ್ರತಿಷ್ಠೆಗೆ ಕುಂದುಂಟಾಗುತ್ತಿದೆಯೋ ಆಗ ಅದರ ಪ್ರತಿಷ್ಠೆಯನ್ನು ಕಾಯ್ದುಕೊಳ್ಳಲು ಪ್ರಯತ್ನ ಮಾಡುವದು ಕಾಂಗ್ರೆಸ ಜನರ ಕರ್ತವ್ಯ [illegible] ಕಾಂಗ್ರೆಸ ಜನರ ಕರ್ತವ್ಯವಾಗಿದೆ ಎಂಬ ಭಾವನೆಯಿಂದ ವಿಚಾರ ವಿನಿಮಯ ಮಾಡಲು ಕೂಡಿದಲ್ಲಿ, ಸಧ್ಯದ ಕಗ್ಗಂಟನ್ನು ಬಿಡಿಸುವ ಯೋಜನೆಯನ್ನು ಅವರು ಕಂಡು ಹಿಡಿಯುವರೆಂದು ನನಗೆ ಅನಿಸುತ್ತದೆ.

ಮಹಾತ್ಮಾ ಗಾಂಧಿಯವರ ಪ್ರಜಾಸ್ವಾತಂತ್ರ್ಯ ವೃತ್ತಿಯನ್ನು ಕುರಿತು ನರಿಮನ್ನರು ಅನ್ನುವದೇನಂದರೆ— ಈ ವಿಷಯದಲ್ಲಿ ಕಾಂ[illegible] ಬೇಡುವ ಹಕ್ಕುಗಳನ್ನು ಮಹಾತ್ಮರು [illegible] ವರಿಗಾದರೂ ಕೊಡಬೇಕು. ಮಹಾತ್ಮಾ ಗಾಂಧಿಯವರೇ ಇನ್ನು ಕೆಲವು ದಿವಸ ಮುಖಂಡರಾಗಿರಬೇಕೆಂದು ಪಂಡಿತ ಜವಾಹಿರರ ಅಂಬೋಣಕ್ಕೆ ನನ್ನ ನನ್ನ ಒಪ್ಪಿಗೆಯಿದೆ. [illegible] ತ್ವವು ಯಾವಾಗಲೂ ರಾಜಕಾರಣವನ್ನು ಅವಲಂಬಿಸಬೇಕು. ಗಾಂಧಿ ಮತ್ತು ಜವಾಹರಲಾಲ ಇವರಿಬ್ಬರೂ ಕಾಂಗ್ರೆಸ ಸಂಸ್ಥೆಯ [illegible] ಅನುಯಾಯಿಗಳು ಮತ್ತು ಯೋಗ್ಯರಾಗಿರುವದರಿಂದ ನಾನು ಅವರಿಗೆ [illegible] ಹಕ್ಕು ಬಾಧ್ಯತೆಗಳನ್ನು ಕಾಯ್ದುಕೊಳ್ಳಲು ವಿನಂತಿ ಮಾಡಿಕೊಳ್ಳುತ್ತೇನೆ. ಯಾಕಂದರೆ [illegible] ನನ್ನನ್ನು ಕೇಳಿದರೆ ಪ್ರಜಾಸ್ವಾತಂತ್ರ್ಯದ ಹ[illegible] ಗಳನ್ನು ಮರಿಯುವದು ಹಿಂದೀ ರಾಷ್ಟ್ರ[illegible]ತ್ವದ ಬೆಳವಣಿಗೆಗೆ ಘಾತಕವಾಗುವದೆಂದೂ, [illegible] ಯುದೆ ಭಂಗವು ತಾತ್ಕಾಲಿಕವಾಗಿ ನಿಲ್ಲಿಸಿಬಿಟ್ಟರೆ ಅದರಿಂದ ಆಗುವ ಹಾನಿಗಿಂತ ಹೆಚ್ಚು ಹಾನಿ ಸಂಭವಿಸುವದೆಂದೂ ಹೇಳದೆ [illegible] ಆದ್ದರಿಂದ ಯಾವತ್ತು ಮುಖಂಡರು [illegible] ಮಿತ್ರರಿಗೆ ನಾನು ಒತ್ತಿ ಹೇಳುವದೇನಂದರೆ ಸದ್ಯದ ಸ್ಥಿತಿಯನ್ನು ಪುನಃ ವಿಚಾರ ಮಾಡಿ ನೋಡಿರಿ. ಮತ್ತು [illegible] ವಯಸ್ಸಿನಲ್ಲಿ [illegible] ದುಕೊಂಡಂತೆ ನಡೆದುಕೊಳ್ಳಿರಿ. ಆದರೆ [illegible] ತನ್ನ ಇಳಿವಯಸಿನಲ್ಲಿ ರಾಷ್ಟ್ರೀಯ ಗೃಹಕ್ಕೆ [illegible] ರಾವ ಹಾಕಿದಂತೆ ಕುರಾವ ಹಾಕಬೇಡಿರಿ.

ನರಿಮನ್ನರು ಮತ್ತೊಂದು ಪ್ರಶ್ನೆಯ [illegible] ದ ಟಿಪ್ಪಣಿಯಲ್ಲಿ ಅನ್ನುವದೇನಂದರೆ— [illegible] ಪ್ರಕಟನೆಯು ನಾನು ಮಹಾತ್ಮರ ಭೆಟ್ಟಿ ತೆಗೆದುಕೊಳ್ಳುವ ಮೊದಲು ತಯಾರಾದದ್ದು [illegible] ಆದರೆ ಮಹಾತ್ಮರೊಡನೆ ವಿಚಾರ ವಿನಿಮಯ ಮಾಡಲಾಗಿ ಅವರು ಬಹುಮತದಂತೆ ನಡೆದುಕೊಳ್ಳಲು ಸಿದ್ಧರಿರುವರೆಂಬುದು ತೋರಿಬಂದಿತು. ಈ ಕಾರಣ ಕಾಂಗ್ರೆಸದೊಳಗೆ ಸುಧಾರಣೆ [illegible] ಬಯಸುವವರು ಕೆಲವು ಸಭಾಸದರ [illegible] ಹೋದ ವರ್ಚಸ್ಸನ್ನು ಪುನಃ ಪ್ರಸ್ಥಾಪಿ[illegible] ಕಡೆಗೆ ಲಕ್ಷ ಕೊಡಬೇಕು. ಮತ್ತು ಮಹಾತ್ಮ[illegible] ಹದೊಳಗಿಂದ ಹೊರ[illegible] ಯತ್ನ ಮಾಡಿ ನಿಜವಾದ ನಿರ್ಣಯವು ಬೀಳುವಂತೆ ಪ್ರಯತ್ನ ಮಾಡುವೆವು.

(ಅ ಪ್ರ ಸಂಕೆ)

ಇಹವೃತ್ತ.

ಅಖಿಲ ಹಿಂದುಸ್ಥಾನ ಸಹಕಾರ ದಿನದ ನಿಮಿತ್ತವಾಗಿ ಈ ಹೊತ್ತಿನ ದಿವಸ ಲಿಂಗಾಯತ ವಿದ್ಯಾವರ್ಧಕ ಸಂಸ್ಥೆಯ ಸಭಾಗೃಹದಲ್ಲಿ ಸಂಜೆಯ ೬ ಗಂಟೆಗೆ ಸಾರ್ವಜನಿಕ ಸಭೆ ಸೇರುವದಿದೆ.

ಕೊನೆಯುಬತ್ತು.

ಆಯರ್ವಿನ್-ಸುಭಾಸರ ಪತ್ರಗಳು.

"ಕನ್ನಡಿಗ" ನಿಗಾಗಿ ತರಿಸಿದ ಅಸೋಶಿಯೇಟೆಡ್ ಕಂಪನಿ'ಯ ತಂತಿಗಳು

ಆಯರ್ವಿನ್-ಸುಭಾಸರ ಪತ್ರವ್ಯವಹಾರ.

ಮುಂಬಯಿ ತಾ|| ೩— ಅಸೋಶಿಯೇಟೆಡ್ ಪ್ರೆಸ್ಸದವರ ಆಯರ್ವಿನರು ದಿವಂಗತ ವಿಠ್ಠಲಭಾಯಿಯವರಿಗೆ ಬರೆದ ಪತ್ರ ಹಾಗು ಶ್ರೀ ಸುಭಾಷರು ಅದಕ್ಕೆ ಕೊಟ್ಟ ಉತ್ತರ ಇವುಗಳದೊಂದು ಪ್ರತಿಯನ್ನು ಸ್ವೀಕರಿಸಿರುತ್ತಾರೆ ಈ ಪ್ರತಿಯು ಸ್ವಿಜರ್ಲಂಡದಿಂದ ಬಂದಿದೆ ಆಯರ್ವಿನರು ತಮ್ಮ ಪತ್ರದಲ್ಲಿ ನಾನು ನಿಮ್ಮನ್ನು ಕೆಲವು ದಿನಗಳ ಹಿಂದೆ ನೋಡಿದ್ದೆ ಆಗಾದರೂ ನೀವು ಅಸ್ವಸ್ಥರಿದ್ದಿರಿ ಈಗ ಮಿಸ್ ಹ್ಯಾರಿಸನ್‌ರಿಂದ ನಿಮ್ಮ ಪ್ರಕೃತಿಯ ವಿಷಯವಾಗಿ ನನಗೆ ಒಂದು ಪತ್ರ ಬಂದಿದೆ ಈ ಪತ್ರವನ್ನು ನೋಡಿ ನನಗೆ ಸುಮ್ಮನೆ ಕೂಡುವದಾಗಲಿಲ್ಲ ಕೆಳಗಿನಂತೆ ಪತ್ರಬರೆಯಬೇಕೆಂದು ಮನಸ್ಸಿನಲ್ಲಿ ಬಂತು ಇದರಿಂದ ನಾವು ಇಬ್ಬರೂ ಹಿಂದೆ ಸ್ಥಾನದ ಸಾರ್ವಜನಿಕ ಕಾರ್ಯಗಳಲ್ಲಿ ಪರಸ್ಪರ ಅನೇಕ ಸಾರೆ ವಿಚಾರವಿನಿಮಯ ಮಾಡಿರುವಾಗ್ಯೂ ನಾವಿಬ್ಬರು ಅದರಿಂದ ದೂರ ಇರುವದೇ ಒಳಿತು ಆದರೆ ನಾನು ನನ್ನ ಹಾಗು ಲೇಡಿ ಆಯರ್ವಿನ್ ಇವರ ಪರವಾಗಿ ನಿಮ್ಮ ಅಸ್ವಾಸ್ಥ್ಯದಲ್ಲಿ ನಿಮಗೆ ಸಹಾನುಭೂತಿಯನ್ನು ತೋರಿಸದೆ ಇರಲಾರೆವು ನೀವು ದುರ್ಘಟವಾದ ಪ್ರಸಂಗಗಳಲ್ಲಿ ಕಾಲಕಳೆಯಬೇಕಾದ್ದರಿಂದ ಹೀಗೆ ನೀವು ಬಹು ಸಂಕಟಕ್ಕೆ ಒಳಗಾಗಬೇಕಾಯಿತೆಂದು ನಾನು ಹೇಳದೆ ಇರಲಾರೆ. ನಾನು ಆಗಾಗ್ಗೆ ನಿಮ್ಮನ್ನು ಸ್ಮರಿಸುತ್ತಿರುತ್ತೇನೆ

ಶ್ರೀ ಸುಭಾಷರು ಆಯರ್ವಿನರಿಗೆ ಉತ್ತರರೂಪವಾಗಿ ಬರೆದಿರುವದೇನಂದರೆ—ನೀವು ಕೊಟ್ಟು ಕಳಿಸಿದ ಸಹಾನುಭೂತಿ ಸಂದೇಶದ ಬಗ್ಗೆ ವಿಠ್ಠಲಭಾಯಿಯವರು ನಿಮ್ಮ ಹಾಗು ಲೇಡಿ ಆಯರ್ವಿನರ ಆಭಾರ ಮನ್ನಿಸಲು ನನಗೆ ತಿಳಿಸಿರುವರು ವಿಠ್ಠಲಭಾಯಿಯವರು ಈಗ ಹೇಳಲು ಬಾರದಂತಹ ವೇದನೆಯಿಂದ ಒಳಲುತ್ತಿರುವರು ಇಂತಹ ಸಮಯದಲ್ಲಿ ನೀವು [illegible] ಲೇಡಿ ಆಯರ್ವಿನರು ಈ ಸಂದೇಶ ಕೊಟ್ಟು ಕಳುಹಿದ್ದು ನಿಮ್ಮ ಸೌಜನ್ಯವನ್ನೇ ವ್ಯಕ್ತಮಾಡುತ್ತದೆ ಆದರೆ ಅವರಿಗೆ ತಾವೇ ನಿಮಗೆ ಉತ್ತರ ಬರೆಯಲು ಸಮರ್ಥರಾಗದಕ್ಕೆ ವಿಷಾದವಾಗಿದೆ ಆದರೆ ಸ್ವಲ್ಪ ಗುಣ ಹೊಂದಿದ ಕೂಡಲೆ ಹಾಗೆ ಮಾಡಲಾಗುತ್ತದೆಂದು ತಿಳಿಸಲು ಹೇಳಿದ್ದಾರೆ ನಿಮ್ಮ ಸಂದೇಶವು ಅವರಿಗೆ ಬಹು ಸಮಾಧಾನವನ್ನುಂಟು ಮಾಡಿತು ಅವರ ಪ್ರಕೃತಿಯು ನಿದಾನವಾಗಿ ಸುಧಾರಿಸುತ್ತ ನಡೆದಿದೆಯೆಂದೂ ರೋಗ ಪರೀಕ್ಷಕರ ಅಭಿಪ್ರಾಯವು ಅಷ್ಟೇನೂ ಅನುಕೂಲವಿಲ್ಲವೆಂದೂ ತಿಳಿಸಲು ವಿಷಾದವಾಗುತ್ತದೆ [ಅ ಪ್ರೆ ತಂತಿ]

ಸರಕಾರದ ವಿರೋಧ.

ಮುಂಬಯಿ ತಾ|| ೩ ಮುಂಬಯಿ ಸರಕಾರದವರು ದೀರ್ಘವಾದ ಒಂದು ಪ್ರಕಟನೆ ಹೊರಡಿಸಿ ವಿಠ್ಠಲಭಾಯಿಯವರ ಅಂತ್ಯಸಂಸ್ಕಾರವನ್ನು ಚೌಪಾಟಿ ದಂಡೆಯಲ್ಲಿ ಮಾಡಲು ಅಪ್ಪಣೆ ಕೊಡಬೇಕೆಂದು ಕೇಳಿಕೊಂಡ ಮುನಸಿಪಲ [illegible] ಬಿನ್ನಹವನ್ನು ನಿರಾಕರಿಸಿರುತ್ತಾರೆ [illegible] ಈಗ ತಾವು ಅಪ್ಪಣೆ ಕೊಟ್ಟದ್ದೇ ಆದಲ್ಲಿ [illegible] ರೂಢಿ ಬೀಳುವದೆಂದೂ ಇತರ ಹಿಂದೂ [illegible] ಮತ್ತು ದಾನಶೂರರು ಇದೇ ರೀತಿ ಬಿನ್ನಹ ಮಾಡಿಕೊಳ್ಳುವರೆಂದೂ ಉಲ್ಲೇಖಿಸಿರುತ್ತದೆ

(ಹಿಂದುಗಡೆ ಬಂದದ್ದು)

ಮುಂಬಯಿ ತಾ [illegible]— ಸರಕಾರದವರು ತಮ್ಮ ಪ್ರಕಟನೆಯಲ್ಲಿ ಅನ್ನುವದೇನಂದರೆ— ದಿವಂಗತ ಲೋಕಮಾನ್ಯರ ಅವಶೇಷಗಳನ್ನು ಚೌಪಾಟಿಯಲ್ಲಿ ಕಾಯ್ದಿಡಲು ಸರಕಾರದವರು ಕಾಯ್ದಿಡಲು ಸರಕಾರದವರು ಹಿಂದಕ್ಕೆ ಅಪ್ಪಣೆ ಕೊಟ್ಟದ್ದೇ ಈ ಅರ್ಜಿಗೆ ಕಾರಣವಿರಬಹುದು ಆದರೆ ಆಗಿನ ವೇಳೆಯು ಹುಹೊತ್ತು ವಿಚಾರವನ್ನು ಸಹ ಮಾಡಲಿಲ್ಲ ಮುಂದೆ [illegible] ದಾರಿ ತೊಡಕುಗಳ ಕಡೆಗೆ ಲಕ್ಷ್ಯ ಕೊಡಲಿಕ್ಕೆ ಕೂಡಲೆ ಅಪ್ಪಣೆ ಕೊಟ್ಟೆವು ಸರಕಾರದವರು ಈಗ ಈ ವಿಷಯದಲ್ಲಿ ದಿವಂಗತ ಟಿಳಕರ ಅಸ್ತಿಗಳನ್ನು ಅಲ್ಲಿ ಇಡಲು ಅಪ್ಪಣೆ ಕೊಟ್ಟದ್ದರಿಂದ ತಮಗೆ ಒಂದ ಅನೆ ಭವದಿಂದ ಹೀಗೆ ನಿರ್ಣಯ ಮಾಡಿರುತ್ತಾರೆ ಲೋಕಮಾನ್ಯರ ಅಸ್ತಿಗಳನ್ನು ಅಲ್ಲಿ ಹುಗಿದ ತರುವಾಯ ಆ ಸ್ಥಳವು ಅಪವಿತ್ರ ಮಾಡಲ್ಪಟ್ಟಿದೆಯೆಂದು ಕರಾರಗಳು [illegible] ದಿದ್ದಲ್ಲದೆ ಈ ಬಗ್ಗೆ ದಟ್ಟವಾದ ಸುದ್ದಿಯಾದರೂ ಹಬ್ಬಿತ್ತು ಈ ಸುದ್ದಿಯು ನಿಜವಿರಲಿ ಇಲ್ಲವೆ ಇರಲಿ, ಮುಂಬಯಿಯಂಥ ಪಟ್ಟಣದಲ್ಲಿ ಯಾವುದಾದರೂ ಒಂದು ಸಾರ್ವಜನಿಕ ಬೈಲನ್ನು ದಿವಂಗತರ ವಿಶೇಷತಃ ದಿವಂಗತರಾದ ಸಾರ್ವಜನಿಕ ಪುರುಷರ ಪುಣ್ಯಸ್ಮರಣಾರ್ಥವಾಗಿ ಉಪಯೋಗಿಸಿಕೊಳ್ಳುವದು ನ್ಯಾಯವಾಗಿರುವದಿಲ್ಲ ವೆಂದು ಹೊಳೆಯದೆ ಇರದು ಲೋಕಮಾನ್ಯರ ವಿಷಯದಲ್ಲಿ ಅಪ್ಪಣೆ ಕೊಟ್ಟಾಗ ಅಲ್ಲಿ ಸ್ಮಾರಕ ಸ್ತಂಭವನ್ನಾಗಲಿ, ಕಂಪೌಂಡನ್ನಾಗಲಿ ಕಟ್ಟತಕ್ಕದ್ದಲ್ಲವೆಂದು ನಿರ್ಬಂಧ ಹಾಕಿತ್ತು. ಆದರೆ ಈ ಕರಾರನ್ನು ಪಾಲಿಸುವದು ಶಕ್ಯವಾಗಲಿಲ್ಲ. ಈ ಅರ್ಜಿಯಲ್ಲಿ ಸ್ಮಾರಕ ಸ್ತಂಭದ ಬಗ್ಗೆ ವಿನಂತಿಯಿರದಿದ್ದರೂ ಅಸ್ತಿಗಳನ್ನು ಹುಗಿಯಲು ಅಪ್ಪಣೆ ಕೊಟ್ಟಲ್ಲಿ ಕೆಲವು ದಿನದ ತರುವಾಯ ಸ್ಮಾರಕ ಸಂಭದ ಬೇಡಿಕೆಯು ಅರ್ಜಿಯು ಬರಬಹುದು ಆದ್ದರಿಂದ ಈ ವಿನಂತಿಯನ್ನು ಮಾನ್ಯಮಾಡುವದು ಕಠಿಣವಿದೆ ಈಗ ಎರಡನೆ ಸಲ ಅಪ್ಪಣೆ ಕೊಟ್ಟಲ್ಲಿ, ಬೇರೆ ಯಾವದಾದರೂ ಇದೇ ರೀತಿ ಅರ್ಜಿ ಮಾಡಿಕೊಳ್ಳುವರು ಸರಕಾರದವರು ಬಗ ತಮ್ಮ ದೃಷ್ಟಿಯನ್ನು ವಿಸ್ತಾಸ್ತಾರ ಮಾಡಬೇಕಾಗುವದು ರಾಜಕಾರಣದಿಂದ ಲಬ್ಧಪ್ರತಿಷ್ಠರಾದ ದಾನಶೂರ ಶಾಸ್ತ್ರಿನೆ ಉದ್ಯೋಗ ದಂಧೆಗಳಲ್ಲಿ ಹೆಸರಾದ ಗೃಹಸ್ಥರ ಸಂಬಂಧದಲ್ಲಿ ಇದೇ ರೀತಿ ವಿನಂತಿ ಬಂದಲ್ಲಿ ಅದನ್ನು ನಿರಾಕರಿಸುವುದು ಸರಕಾರದವರಿಗೆ ಕಠಿಣ ಹೋಗುವದು ಆದ್ದರಿಂದ ಅಪ್ಪಣೆ ಕೊಡುವದು ಅಥವಾ ಬಿಡುವದು ಸೂಕ್ಷ್ಮವಾದ ವಿಷಯವಾಗಿದೆ ಇದಲ್ಲದೆ ಆ ಸ್ಥಳವು ಹಿಂದೂ ಜನರ ಸ್ಮಶಾನಭೂಮಿ ಹಾಗೂ ಸಮಾಧಿಸ್ಥಾನ ಆಗುವದು ಚೌಪಾಟಿ ಬೈಲು ಸಾರ್ವಜನಿಕ ಬೈಲು ಇರುವದರಿಂದ ಅದನ್ನು ಈ ಮೇಲಿನ ಕಾರ್ಯಗಳಿಗೆ ಉಪಯೋಗಿಸುವ ಬಗ್ಗೆ ಉತ್ತೇಜನ ಕೊಡುವದು ಸರಿಯಾಗಿರುವದಿಲ್ಲವೆಂದು ಸರಕಾರಕ್ಕೆ ಅನಿಸುತ್ತದೆ ಹಿಂದೂ ಜಾತಿಯ ಪ್ರಮುಖ ಗೃಹಸ್ಥರಿಗೆ ಅವರ ಮರಣದ ತರುವಾಯ ಯೋಗ್ಯವಾದ ಮಾನ ಮರ್ಯಾದೆ ಮಾಡಲು ಇದಕ್ಕಿಂತ ಇತರ ಹಾದಿಗಳು ಇವೆಯೆಂದು ಸರಕಾರದವರಿಗೆ ಕಂಡು ಬಂದಿದೆ ವಸ್ತುಸ್ಥಿತಿ ಹೀಗಿರುವದರಿಂದ ಸರಕಾರದವರು ಅರ್ಜಿಯನ್ನು ನಿರಾಕರಿಸಿರುತ್ತಾರೆ [ಅ ಪ್ರೆ ತಂತಿ]

ಅಲ್ಲಲ್ಲಿಯ ಸುದ್ದಿಗಳು.

ಮದ್ರಾಸ ಸರಕಾರದವರು ತಾ|| ೧ನೇ ಗ್ಯಾಜೆಟಿನಲ್ಲಿ ಮದ್ರಾಸ ಲೋಕಲ್ ಬೋರ್ಡ ಕಾಯದೆಯ [illegible]ನೆ ಕಲಮಿಗೆ ಒಂದು ಉಪಸೂಚನೆ ಹೊರಡಿಸಿ, ಪಂಚಾಯತರ ಅಧೀನದಲ್ಲಿಯ ಯಾವತ್ತು ಭಾವಿ ಕೆರೆ, ಕಾಲವೆ ಮೊದಲಾದವುಗಳಲ್ಲಿ ಯಾವತ್ತು ಜಾತಿಯವರಿಗೆ ಮುಕ್ತದ್ವಾರವಿದೆಯೆಂದು ಪ್ರಸಿದ್ಧ ಮಾಡಿರುತ್ತಾರೆ

ಬಂಗಾಲ ಹಿಂದೂ ಸಂಸ್ಥೆಯ ನಿರುದ್ಯೋಗಿತನದ ಬಗ್ಗೆ ವಿಚಾರ ವಿನಿಮಯ ಮಾಡಲು ರಾಂಚಿ ಮಿ ಡಾ ಸಿಂಗ್ ರಾಣಿಯವರು ನಾಲ್ಕು ಬಿಹಾರದಲ್ಲಿ ರಾಂಚಿಯೊಳಗೆ ಸಿಂಧ ಹಿಂದು ಆರ್ಥಿಕ ಪರಿಷತ್ತನ್ನು ಕರೆದಿದ್ದಾರೆ

ಮಹಾತ್ಮರು ತಮ್ಮ ಪ್ರವಾಸದಲ್ಲಿ ತನ್ನೂರಿಗೆ ಬಂದು ಭೆಟ್ಟಿ ಕೊಟ್ಟು ಹೋಗಲೇಬೇಕೆಂಬ ಉದ್ದೇಶದಿಂದ ಲಾಂಜಿಯ ಪಾಟೀಲರು [illegible] ಅವರಿಂದ ಉಪವಾಸ ಕೈಕೊಂಡಿದ್ದಾರೆ

ಶಾಲೀಮಪುರ ರಾಜಾ ಇವರು ತಾ|| [illegible] ಹಾಗೂ [illegible]ಕ್ಕೆ ಕರೆದ ಮುಸಲ್ಮಾನ ಅನಾಥ ಚಾರಿತ ಪರಿಷತ್ತಿನ ಸಿದ್ಧತೆಯು ಭರದಿಂದ ಸಾಗಿದೆ ಪರಿಷತ್ತಿಗೆ ೭೦ ಜನ ಪ್ರತಿನಿಧಿಗಳು ಬರತಕ್ಕವರಿದ್ದಾರೆ ಮೌಲಾನಾ ಆಜಾದ್, ಖ್ವಾಜಾ ನಿಜಾಮಿ ವಾಫಿ ದಾವುದಿ, ಮೌ ಶೌಕತ ಅಲಿ ಆಸಫ ಅಲಿ ಡಾ ಅನ್ಸಾರಿ ಮೊದಲಾದ ಮುಸಲ್ಮಾನರು ಪ್ರಮುಖರಾಗಿರುವರು ದೇಶದ ಈಗಿನ ಯಾವತ್ತು ಮುಸಲ್ಮಾನರು ಸಂಘಟಿತರಾಗಲು ಏನು ಮಾಡತಕ್ಕದ್ದೆಂಬುದೇ ಈ ಸಭೆಯಲ್ಲಿ ಚರ್ಚೆಯಾಗತಕ್ಕದ್ದಿದೆ

ಹೌಸ ಆಫ್ ಕಾಮನ್ಸ ಸಭೆಯ ಮಿ ಫೆಲ್ನ ಇವರ [illegible] ಕಲಕತ್ತೆಯಿಂದ ಕಾಮನ್ಸ ಸಭೆಯ ಪರವಾಗಿ ಶ್ರೀ ಪ್ರಫುಲ್ಲ ಘೋಷರನ್ನು ಕಳುವದರಲಿ ಜಗತ್ತ ನೋಡಿ ನೇಲು ಒಂದಿದ್ದಕ್ಕೆ ಅಭಿನಂದಿಸಿದ್ದಾರೆ

ಲಾಂಜೆಯಲ್ಲಿಯ ಕೋಟೀಶ್ವರ ಎಂಬ ದೊಂದು ಪ್ರಾಚೀನ ದೇವಾಲಯವು ತಾ|| ೫ನೆ ದಿವಸ ಹರಿಜನರಿಗೆ ಮುಕ್ತದ್ವಾರ ಮಾಡಲ್ಪಟ್ಟಿದೆ ಈ ಊರು ಬಾಲಘಾಟ ಜಿಲ್ಹೆಯಲ್ಲಿ ಇರುವದ

ಹುಬ್ಬಳ್ಳಿ ಪೇಟೆಯ ಧಾರಣೆ

(ಶೇವಡೆ ಆ ಕೃ ಕಂಪನಿ)

ಹುಬ್ಬಳ್ಳಿ ತಾ|| ೩ ಮಧ್ಯಾನ್ಹ ೧೨ ಗಂಟೆ

ಜವಾರಿ ಹತ್ತಿ	೧೦೩ ೧೦೩	ಜೋಳ	೧೩ ೧೪||
ಅಮೇರಿಕ	೧೦೩ ೧೦೩	ಗೋದಿ	೬| ೬|||
ಕುಮಟಾ	೯೫ ೯೭	ಉದ್ದು	೬||| ೭
ಸ್ಟಾಂಡರ್ಡ	೧ ೮೭ ೧೦	ಕಡ್ಲಿ	೬ ೬|
ಜೇಡಿ ಅರಳಿ	೭೩ ೭೪	ಕಡ್ಲಿ ಕಾ.	೫|| ೫||
ದಪ್ಪ ಶೇಂಗಾ	೬೬ ೬೭	ಕುಸುಬಿ	೧೩
ಸಣ್ಣ ಅರಳಿ	೬೬ ೬೭	ಗುರೆಳ್ಳು	೧೪
ಹೆಸರು ಜವಾರಿ	೯ ೧೩		
[illegible] ತಾ	೫ ೫|	ಹತ್ತಿಕಾಳು	೫೬

ಬೆಳ್ಳಿ ಬಂಗಾರ

ಬಂಗಾರ	೩೩||	ಬೆಳ್ಳಿ	||-

ವಿಜಯ ಸಿನೇಮಾ ಧಾರವಾಡ.

ತಾರೀಖು ೪. ಶನಿವಾರದಿಂದ ಸುರುವು.

ಕ್ರೂರ ಪಶುಗಳಿಂದ ತುಂಬಿದ

ಮಾತಾಡುವ ಭಯಂಕರ ಜಂಗಲ ಚಿತ್ರಪಟ.

ಜಂಗಲ ಜವಾಹೀರ.

ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ಸರಗು, ಬಿಳೇಸರಗು, ಕೆಂಪು ಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿರುವಿಕೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ. ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತ್ತದೆ. ಬಾಣಂತಿತನ ಆದ ಮೇಲೆ ತೆಗೆದುಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದ.

ಬಿ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ.
೧೮-೬

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.
"ನೀಲಗಿರಿ ಎಣ್ಣೆ"

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದರಿಂದ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋತಿಗೆಮ್ಮು, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿ ಪತ್ರ ವ್ಯವಹಾರ ಮಾಡಬೇಕು

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ ಟೋಣಪಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಿಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ:- ರಾಘವ ಭಾವ ಕೆಸಿಗೋಳಕರ
ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳೀಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯಾಪಾರಿಗಳಿಗೆ ಕಮೀಶನ್ | ಅಸ್ಪೃಶ್ಯತಾ ನಿವಾರಣೆ. | **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ. ಅಡ್ವಾನ್ಸಿಲ್ಲದೆ ವ್ಹಿ. ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ, ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೩ **ಟಿ ಎ ಕೇಶವರಾವ್ ಗ್ರಾಹ್ಮಣ ಬೀದಿ ಬಳ್ಳಾರಿ.**

ಪ್ರಕಾಶ.

ಮುಸಲ್ಮಾನರ ಮತ್ತು ಇತರ ಹಿಂದುಳಿದ ಸಮಾಜಗಳ ಉತ್ಕರ್ಷಕ್ಕಾಗಿ
ಹೋರಾಡುವ ಒಂದೇ ಒಂದಾದ ವಾರಪತ್ರವು

ಇದರಲ್ಲಿ ರಾಜಕೀಯ ಸಾಮಾಜಿಕ, ನೈತಿಕ ಔದ್ಯೋಗಿಕ ಶೈಕ್ಷಣಿಕ ಆರ್ಥಿಕ ಮುಂತಾದ ವಿಷಯಗಳ ಮೇಲೆ ಉತ್ತಮ ಲೇಖಗಳು ಬರೆಯಲ್ಪಡುವವು ಇದಲ್ಲದೆ ಸಮಸ್ತ ಭಾಗಗಳ ವಿವಿಧ ತಾಜಾ ವರ್ತಮಾನಗಳೂ ಪ್ರಕಟಿಸಲ್ಪಡುವವು. ಆದ್ದರಿಂದ ಎಲ್ಲರೂ ತೀವ್ರವಾಗಿ ಚಂದಾದಾರರಾಗಿ ಲಾಭವನ್ನು ಪಡೆಯಬೇಕು ವಾರ್ಷಿಕ ಚಂದಾ ಸ್ಥಳೀಕರಿಗೆ ೩-೦-೦ ಪರಸ್ಥಳದವರಿಗೆ ೩-೮-೦

ಮ್ಯಾನೇಜರ — '**ಪ್ರಕಾಶ**' **ಧಾರವಾಡ**

"ಬದರೀ ನಾರಾಯಣನ ದರ್ಶನ"

ಗೌರೀಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ನಿರೂಪಿಸಲ್ಪಟ್ಟಿತ್ತು ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶೆಗಳಿರುವವು. ಬೆಲೆ—೦-೬-೬ ಮಾತ್ರ; ಅಂಚೆವೆಚ್ಚ ಬೇರೆ ನರಸಿಂಹ ರಾಘವೇಂದ್ರ ಗಲಗಲಿ ಹಿ. ಕಿ.

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ **ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇ ಬನ್ನಿರಿ**

ಕರ್ನಾಟಕ ಟಾಯಿಮ್ಸ.

ಸಂಪಾದಕರು:— **ಎಚ್ ಎಸ್ ಶಿವಲಿಂಗಶಾಸ್ತ್ರಿಗಳು.**

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉಪಯುಕ್ತ ವಿಷಯಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ಭಾಗಗಳ ವಿವಿಧ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ:— ಸ್ಥಳೀಕರಿಗೆ ರೂ. ೨—೧೩—೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ. ೩—೧೨-೦

ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸ ಕಾರ್ಯಾಲಯ ಧಾರವಾಡ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪ ೧೦-೩೩ **ಗದಗ ಶ್ರೀ ದತ್ತಾತ್ರೇಯ ಬುಕ್ ಡೆಪೋ**
ಕಹಾಪುರ ಪೇಟೆ ಗದಗ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು. ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೪೮

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು: — ಆಲೂರ ವೆಂಕಟರಾಯರು

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ರವಿವಾರ ಕಾರ್ತಿಕ ಬಹುಳ ೩ ಶಕೆ ೧೮೫೫ ತಾ॥ ೫-೧೧-೩೩ [ಸಂಚಿಕೆ ೧೬೪

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿ ಗಳಿಗಾಗಿ ಬರೆಯಿರಿ

ಧಾರವಾಡ. ತಾ॥ ೨೫-೮ ೩೩ } ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ವೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳೀ, ಹಳದಿ, ಕೆಂಪು ಚಿಮಣಿಯಣ್ಣಿ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುನಿಚ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯು ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರ (೫) ಮೋಟಾರ ಮತ್ತು ಬಸ್ಸುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡಿಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝ್ಯಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ ಸಬ್ಬ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

ವಿಶೇಷ ಸೂ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿಯ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಳಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಶನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**

ನ್ಯೂ ಓರಿಯಂಟಲ್ ಕಂ.

"ನೀಲಗಿರಿ ಎಣ್ಣೆ"

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೊಟ್ಟೆಬೇನೆ, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ. ಟೊಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಕಂಠರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ

ಹುಬ್ಬಳ್ಳಿ ಮ್ಯುನಸಿಪಾಲಟಿ ಕಾರಭಾರ.

ಜನತೆಯ ಆರೋಗ್ಯದ ಕಡೆಗೆ ಅನಾಸ್ಥೆ.

ಹುಬ್ಬಳ್ಳಿ ಮ್ಯುನಸಿಪಾಲಟಿಯವರು ನಾಗರಿಕರ ಆರೋಗ್ಯದ ಕಡೆಗೆ ಸಾಕಷ್ಟು ಲಕ್ಷ್ಯಕೊಡುವದಿಲ್ಲವೆಂಬುದನ್ನು ಒಂದೆರಡು ಉದಾಹರಣೆಗಳನ್ನು ಕೊಟ್ಟು ವಿವರಿಸುತ್ತೇನೆ

೧ ಶ್ರೀ ಗುರುಸಿದ್ದಪ್ಪನವರ ಹೊಂಡವನ್ನು ತುಂಬುವ ಕೆಲಸವು ಸುರುವು ಆಗಿರುತ್ತದೆ ಊರಲ್ಲಿಯ ಕಸವನ್ನು ಚಕ್ಕಡಿಗಟ್ಟಲೆ ಹೊಂಡದಲ್ಲಿ ಸುರುವುತ್ತಾರೆ. ಹೊಂಡದಲ್ಲಿ ನೀರು ಇವೆ ಕಸ ಚಲ್ಲುವದರಿಂದ ಹೊಲಸು ನಾತ ಬರುತ್ತದೆ ಹೊಂಡದ ಹತ್ತರ ಜನರ ವಾಸಸ್ಥಳಗಳು ಇವೆ ಇದರಿಂದ ಅವರ ಆರೋಗ್ಯಕ್ಕೆ ಹಾನಿಯಾಗುತ್ತದೆ ನೀರು ಸಂಪು ಮಾಡಿ ತೆಗಿಸಿ ಕಸ ಚಲ್ಲುವ ವ್ಯವಸ್ಥೆಯಾಗಬೇಕು ಮತ್ತು ಕಸದಿಂದ ಕೆಟ್ಟ ದುರ್ಗಂಧ ಬರದಂತೆ ವ್ಯವಸ್ಥೆಯಾದರೆ ಜನರಿಗೆ ಹಿತವಾಗುತ್ತದೆ.

೨ ಮಾರ್ಕೆಟಿನ ಹತ್ತರ ಇರುವ ಒಕ್ಕಲಿಗರಿಯವರ ಓಣಿಯನ್ನು ಅಗಲುಮಾಡುವದಕ್ಕೆ ಮನೆಗಳನ್ನು ಕೆಡವಿ ಎಷ್ಟೋ ದಿವಸಗಳಾದವು ಬೀದಿಯ ಎರಡೂ ಮಗ್ಗಲಿನ ಗಟಾರುಗಳು ಹುಗಿದುಹೋದವು ಹೊಸ ಗಟಾರುಗಳು ಆಗಲೇ ಇಲ್ಲ ಮಗ್ಗಲಿಗಳ ಮನೆಗಳ ನೀರು ಬೀದಿಯ ಮೇಲೆ ಹರಿದು ಹೋಗಲಿಕ್ಕೆ ಮಾರ್ಗವಿಲ್ಲದಂತಾಯಿತು ಬೀದಿಯಲ್ಲೆಲ್ಲ ರೊಜ್ಜು ಈ ಹಾದಿಯಿಂದಲೇ ಅನೇಕ ಜನರು ಕಾಯಿಪಲ್ಲೆ, ಕಾಳುಕಡಿ ಮತ್ತು ಕಿರಾಣಿ ಸಾಮಾನುಗಳನ್ನು ಕೊಂಡುಕೊಳ್ಳಲಿಕ್ಕೆ ಪೇಟೆಗೆ ಹೋಗುತ್ತಾರೆ ಇಂತಹ ರಹದಾರಿ ರಸ್ತೆಯನ್ನು ಈ ಪರಿಯಾಗಿ ಗಟಾರಗಳನ್ನು ಕಟ್ಟದೆ ಬಿಡುವದರಿಂದ ಜನರಿಗೆ ಎಷ್ಟು ತ್ರಾಸವಾಗುತ್ತದೆಂಬುದನ್ನು ಆ ಹಾದಿಯಿಂದ ಹೋಗದವರಿಗೆ ತಿಳಿಯದು ಹುಡುಗರು ಮತ್ತು ಹೆಣ್ಣುಮಕ್ಕಳ ಗೋಳಂತೂ ಹೇಳಿಯಲ್ಲ.

೩ ಇದರಂತೆ ರಾಧಾಕೃಷ್ಣ ದೇವರ ಗುಡಿಯ ಓಣಿಯನ್ನು ಅಗಲು ಮಾಡುವದಕ್ಕಾಗಿ ಮನೆಗಳನ್ನು ಕೆಡವಿ ಅನೇಕ ತಿಂಗಳುಗಳ ವರೆಗೆ ರಸ್ತೆ ಮಾಡದೆ ಬಿಡುವದರಲ್ಲಿ ಬಂತು, ಗಟಾರಗಳ ಹಿಂದಿರುವ ಕಟ್ಟಡಗಳನ್ನು ಕೆಡವಿ ಬೈಲು ಮಾಡಿದ್ದರಿಂದ ರಸ್ತೆ ಹಾಗು ಬೈಲಾದ ಜಾಗೆಯ ನಡುವೆ ಗಟಾರಗಳು ಬಂದವು ಇದ್ದರಿಂದ ಗಟಾರಗಳಲ್ಲಿ ಬೀಳುವ ಭಯ ಬಹಳಾಗಿ ಜನರು ಬೇರೆ ಆ ಹಾದಿಯನ್ನು ಬಿಡುವ ಹೊತ್ತು ಬಂತು. ಜಗಿ ಮಣ್ಣು ರಸ್ತೆಯ ಮೇಲೆ ಬಿದ್ದಿದ್ದರಿಂದ ಮಳೆಗಾಲದಲ್ಲಂತೂ ಜಾರಿಕೊಂಡು ಬೀಳಲಿಕ್ಕೆ ಬಹಳ ಅನುಕೂಲವಾಯಿತು. ಆದರೆ ದಿ ಬ ಕಂಬಳಿಯವರ ಆಗಮನದಿಂದ ಈ ಭಾಗದಲ್ಲಿ ವಾಸವಾಗಿರುವವರ ಹಾಗು ಅಡ್ಡಾಡುವವರ ದೈವ ತೆರೆಯಿತು ಈ ಹಾದಿಯಿಂದ ದಿ ಬಹದ್ದೂರರು ತಮ್ಮ ಮನೆಗೆ ಹೋಗುವ ವಾಡಿಕೆಯಿದ್ದದ್ದರಿಂದ ಅವರ ಆಗಮನದ ಪೂರ್ವದಲ್ಲಿ ಈ ರಹದಾರಿಯು ದುರಸ್ತಾಗಿದ್ದು ನಮ್ಮ ಸುದೈವವೇ ಸರಿ

ಈ ತರಹದ ಬೇರೆ ಉದಾಹರಣೆಗಳನ್ನು ಕೊಟ್ಟು ಲೇಖ ಬೆಳೆಸುವದರಲ್ಲಿ ತಾತ್ಪರ್ಯವಿಲ್ಲ ಅನ್ನ ಆಗಿದೆಂಬುದನ್ನು ಒಂದು ಅಗಳ ಹಿಚುಕಿ ನೋಡಿದರೆ ಸಾಕು

ರೇಟಿಸೇಯರ

'ಹರಿಜನ'ದಲ್ಲಿಯ ಲೇಖ

ಮದ್ರಾಸ ತಾ। ೩—ಈ ಹೊತ್ತಿನ 'ಹರಿಜನ' ಸಂಚಿಕೆಯಲ್ಲಿ ಮಹಾತ್ಮರು ತಮ್ಮ ಭಾವಿ ಪ್ರವಾಸದ ಸಂಬಂಧವಾಗಿ ಲೇಖವನ್ನು ಬರೆದು, ಪ್ರವಾಸದಲ್ಲಿ ಕೂಡಿದ ಹಣವನ್ನು ಹೇಗೆ ಖರ್ಚು ಮಾಡುವದು ಎಂದು ಅನೇಕರು ತಮಗೆ ಪ್ರಶ್ನೆ ಕೇಳಿಸುವರೆಂದು ಉಲ್ಲೇಖಿಸಿದ್ದಾರೆ. ಪ್ರವಾಸದಲ್ಲಿ ಕೂಡಿದ ಯಾವತ್ತು ಹಣವು ಮಧ್ಯವರ್ತಿ ಮಂಡಳಕ್ಕೆ ಒಪ್ಪಿಸಲ್ಪಡುವದು ಅವರಿಗೆ ಹಣವನ್ನು ಒಪ್ಪಿಸುವಾಗ ಹಣವು ಎಲ್ಲಿಂದ ಬಂದಿರುತ್ತದೆಯೋ ಆ ಸ್ಥಳ, ತಾಲೂಕ, ಜಿಲ್ಲಾ ಇಲ್ಲವೆ ಪ್ರಾಂತ ಇವುಗಳಿಗೆ ಅದನ್ನು ಖರ್ಚು ಮಾಡಬೇಕೆಂದು ಸಲಹೆ ಕೊಡಲಾಗುವದು ಇದು ಸರ್ವ ಸಾಧಾರಣ ನಿಯಮವಾಯಿತು. ನಾನು ಕೆಲವು ಸ್ಥಳಗಳಲ್ಲಿ ದೊಡ್ಡ ದೊಡ್ಡ ನಿಧಿಗಳನ್ನು ಸ್ವೀಕರಿಸುವವನಿದ್ದೇನೆ ಈ ಹಣವು ಮಾತ್ರ ಅವಶ್ಯವಿದ್ದ ಸ್ಥಳದಲ್ಲಿ ಹರಿಜನರಿಗಾಗಿ ಉಪಯೋಗಿಸಲ್ಪಡುವದು ಆ ಆ ಸ್ಥಳಗಳಲ್ಲಿ ಕೂಡಿಸಿದ ಹಣವನ್ನು ಆ ಸ್ಥಳಗಳಿಗೇನೆ ಉಪಯೋಗಿಸಬೇಕೆಂದು ನಿಯಮವನ್ನು ಮಾಡಿದರೆ, ನಿಧಿಯನ್ನು ಕೂಡಿಸುವದರ ಉದ್ದೇಶವೇ ಬಿಟ್ಟಿಲ್ಲದಂತಾಗುವದು. ಅಲ್ಲಲ್ಲಿಯ ಕೆಲಸಗಾರರು ನನಗೆ ಈ ಕಾರ್ಯದಲ್ಲಿ ತುಂಬಾ ಸಹಾಯ ಮಾಡುವರೆಂದು ನಾನು ನಂಬಿದ್ದೇನೆ (ಅ. ಪ್ರೆ. ತಂತಿ)

ಮದ್ರಾಸ ತಾ। ೩—ಶ್ರೀ. ಕಮಲಾದೇವಿ ಚಟ್ಟೋಪಾಧ್ಯಾಯರು ಈ ಹೊತ್ತು ಮುಂಜಾನೆ ಗಾಡಿಯಿಂದ ಮುಂಬಯಿಗೆ ಪ್ರಯಾಣ ಮಾಡಿದರು [ಅ ಪ್ರೆ. ತಂತಿ]

ಮುನಸಿಪಾಲಿಟಿಯ ಅಧ್ಯಕ್ಷರಿಗೆ

ಹೋಗಲಾಯಕೇ,

ಗವ್ಹರ್ನರ ಸಾಹೇಬರಿಗೆ ಮಾನಪತ್ರ ಕೊಟ್ಟಾಗ್ಗೆ ಆಮಂತ್ರಣಗಳನ್ನು ತಾವು ಕೊಡುವಾಗ್ಗೆ ನಾಗರಿಕರ ಯಾವ ಯಾವ ಸಂಗತಿ, ಮಾನ್ಯತೆಗಳನ್ನು ತಾವು ವಿಚಾರ ಮಾಡಿದಿರೆಂಬುದನ್ನು ತಿಳಿಸಬಲ್ಲಿರಾ? ಮುನಸಿಪಾಲ್ಟಿಗೆ ಅರ್ಜಿಗಳ ವರೆಗೆ ಕರಕೊಡುವಂಥ ಪ್ರತಿಷ್ಠಿತ ನಾಗರಿಕರಿಗೆ ನೀವು ಆಮಂತ್ರಣ ಕೊಡಲಿಲ್ಲವೇಕೆ! ನಿಮ್ಮ ವರ್ತನೆಯ್ಕಾಗಿ ಊರಲ್ಲಿಯ ಅನೇಕ ನಾಗರಿಕರಿಗೆ ನಿಮ್ಮ ಒಗ್ಗೆ ಸಂಶಯ ಬಂದಿದೆ ನೀವು ಸಕಾರಣವಾಗಿ ಉತ್ತರ ಕೊಡಬಲ್ಲಿರಾ?

ತಮ್ಮ ನಾಗರಿಕ

ಕನ್ನಡಿಗ

ರವಿವಾರ ತಾರೀಖು ೫ ೧೧-೧೯೩೩

ಸ್ಕಾಯಿಕ್ಸ ಸಾಹೇಬರ ಶುಷ್ಕ ಆಶೀರ್ವಾದ.

ಗವ್ಹರ್ನರ ಸಾಹೇಬರು ನಿನ್ನಿನ ದಿನ ಧಾರವಾಡಕ್ಕೆ ಬಂದರು, ನೋಡಿದರು, ಮಾತಾಡಿದರು, ಹೊಂಟು ಹೋದರು. ಮಾನಪತ್ರಗಳ ಸಮಾರಂಭಗಳು ನಡೆದವು. ಮ್ಯುನಸಿಪಾಲಟಿ ಡಿಸ್ಟ್ರಿಕ್ಟ ಲೋಕಲಬೋರ್ಡು, ಅಸ್ಪೃಶ್ಯರ ಲಿಂಗಾಯತ ಎಜ್ಯುಕೇಶನ ಸೊಸಾಯಟಿ ಇನಾಂದಾರ ಸಂಘ ಮುಂತಾದವುಗಳು ಮಾನಪತ್ರಗಳನ್ನು ಸಮರ್ಪಿಸಿದವು. ಗವ್ಹರ್ನರ ಸಾಹೇಬರು ಸ್ಕಾವುಟ ರ್‍ಯಾಲಿ ನೋಡಿ ಸಂತೋಷಪಟ್ಟರು. ಶ್ರೀಮಂತ ಹೆಬ್ಬಳ್ಳಿ ಜಹಾಗೀರದಾರರಾದ ಸರದಾರ ಲಕ್ಷ್ಮಣರಾಯರು ಗವ್ಹರ್ನರರಿಗೆ ತೋಟದೂಟಕ್ಕೆ ಕರೆದಿದ್ದರು. ಗವ್ಹರ್ನರ ಸಾಹೇಬರು ಬೋರಸ್ಟಾಲ ಶಾಲೆ ಹೆಡ್‌ಕ್ವಾರ್ಟರ್ಸ ಮುಂತಾದವುಗಳನ್ನು ಸಂದರ್ಶಿಸಿದರು. ಗೊತ್ತಾದ ಕಾರ್ಯಕ್ರಮವನ್ನು ಮುಗಿಸಿಕೊಂಡು ಶಿಂಶಿಗೆರಸಪ್ಪೆಗಳ ಕಡೆಗೆ ತೆರಳಿದರು

ಆದರೆ, ಗವ್ಹರ್ನರ ಸಾಹೇಬರು ಒಂದರೇಕೆ ಹೋದರೇಕೆ ಎಂಬ ಪ್ರಶ್ನೆಯು ನಾಗರಿಕರ ಮನಸ್ಸಿನಲ್ಲಿ ಬರುವುದು ಸಹಜವಿದೆ. ಗವ್ಹರ್ನರ ಸಾಹೇಬರು ಈ ಊರಿಗೆ ಬಂದುದು ಎರಡನೆಯ ಸಲ. ನಾಲ್ಕು ವರ್ಷಗಳ ಹಿಂದೆ ಬಂದಿದ್ದರು. ಆಗ ಅವರು ಹೊಸದಾಗಿ ಬಂದಿದ್ದರಿಂದ, ಅವರು ತಮ್ಮ ಆಳಿಕೆಯಲ್ಲಿ ತಮ್ಮಿಂದಾದಷ್ಟು ಇಲ್ಲಿಯ ಜನರ ದುಃಖಗಳನ್ನು ಹೋಗಲಾಡಿಸಬಹುದೆಂಬ ಆಶೆಯಾದರೂ ಇತ್ತು. ಈ ಸಲವಾದರೋ, ಅವರು ಸ್ವಲ್ಪ ದಿನಗಳಲ್ಲಿ ಈ ದೇಶಬಿಟ್ಟು ಹೊರಟುಹೋಗತಕ್ಕವರಿದ್ದಾರೆ. ಅಂದಬಳಿಕ, ಅವರು ಇಲ್ಲಿ ಬಂದು ಮಾಡುವದೇನು? ನಾಗರಿಕರು ಅವರ ಮುಂದೆ ತಮ್ಮ ದುಃಖಗಳನ್ನು ತೋಡಿಕೊಂಡರೆ ಆಗುವುದೇನು?

ಆದರೂ, ಶಿಷ್ಟಾಚಾರವನ್ನು ಪಾಲಿಸಲೇಬೇಕು. ನೋಡಿರಿ. ಅಪ್ರಕಾರ ಸರಕಾರದವರೊಡನೆ ಸಹಕಾರ ಸಂಸ್ಥೆಗಳೆಲ್ಲವೂ ತಮ್ಮ ತಮ್ಮ ದುಃಖಗಳನ್ನೂ ತೋಡಿಕೊಂಡವು. ಅವಕ್ಕೆ ಗವ್ಹರ್ನರ ಸಾಹೇಬರು ಏನು ಉತ್ತರ ಕೊಟ್ಟಿರುವರೆಂಬುದು ಈಗ ಸರ್ವರೂ ಸಹಜವಾಗಿ ಊಹಿಸಬಹುದಾದ ಸಂಗತಿಯಾಗಿದೆ. ಜನತೆಯು ಸರಕಾರಕ್ಕೆ ಕೇಳುವುದು ಹಣ ಕೊಡಬೇಕೆಂದು, ಅವರು ಉತ್ತರ ಹೇಳುವುದು ಹಣವಿಲ್ಲವೆಂದು. ಮ್ಯುನಿಸಿಪಾಲಟಿಯಿಂದ ಧಾರವಾಡದ ನಾಗರಿಕರ ಮೇಲೆ ಬಟ್ಟಿಗೆ ೫ ರೂಪಾಯಿಯಷ್ಟು ಭಾರ ಬೀಳುತ್ತದೆ. ಆದಕಾರಣ, ಸರಕಾರದವರು ಧನಸಹಾಯ ಮಾಡಬೇಕೆಂದು ಕೇಳಿದರು. ೫ ರೂಪಾಯಿಯೇನೂ ಬಹಳ ಅಲ್ಲ. ಬೇರೆ ಕಡೆಗಳಿಗಿಂತಲೂ ಹೆಚ್ಚು ಕರವು ಕೊಡಬಿದ್ದಿದೆ. ಆದಕಾರಣ ಇನ್ನೂ ಹೆಚ್ಚಿಗೆ ಕರವನ್ನು ಹೇರಿ ಕೆಲಸ ಸಾಗಿಸಿರೆಂದು ಗವ್ಹರ್ನರ ಸಾಹೇಬರು ಹೇಳಿ ಸಹಾನುಭೂತಿಯನ್ನು ತೋರಿಸಿದರು. ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಲೋಕಲಫಂಡನ್ನು ಹೆಚ್ಚಿಸುವುದು ಈಗಿನ ದಿನಗಳಲ್ಲಿ ಸರಿಯಲ್ಲವಾದುದರಿಂದ ಅದಕ್ಕೆ ಹಣ ಕೊಡಿರೆಂದು ಕೇಳಿದರು. ಲೋಕಲಫಂಡನ್ನು ಬೆಳೆಸಿಯೇ ಹಣ ವಸೂಲ ಮಾಡಬೇಕಲ್ಲದೆ, ಸರಕಾರದವರು ಕೊಡಲಾರರೆಂದು ಹೇಳಿದರು. ಅನೇಕ ಹಳ್ಳಿಗಳಲ್ಲಿ ಕುಡಿಯಲಿಕ್ಕೆ ನೀರು ಇಲ್ಲ. ಡಿಸ್ಟ್ರಿಕ್ಟ ಲೋಕಲಬೋರ್ಡಿನವರ ಪ್ರತಿವರ್ಷ ೫ ಸಾವಿರ ರೂಪಾಯಿ ಅದರ ಸಲುವಾಗಿ ವೆಚ್ಚ ಮಾಡುತ್ತಾರೆ, ಅದು ಏತಕ್ಕೂ ಸಾಲದು. ಆದಕಾರಣ ಅದಕ್ಕೋಸ್ಕರ ಧನ ಸಹಾಯ ಮಾಡಿರೆಂದೂ ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಕೇಳಿದರು. ಅದೂ ಸಫಲವಾಗಲಿಲ್ಲ. ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಈಗ ಜಿಲ್ಹೆಯಲ್ಲಿ ಏಳು ದನದ ಆಸ್ಪತ್ರೆಗಳನ್ನು ನಡಿಸಿರುವರು. ಅದರ ಖರ್ಚು, ನಷ್ಟಗಳ ನೋಡಿದರೆ, ಇಲಾಖಾ ಸರಕಾರವು ಕೊಡತಕ್ಕದ್ದು. ಅದೇ ಮೇರೆಗೆ ಜಿಲ್ಹೆಯಲ್ಲಿರುವ ೬೦೦ ಮೈಲು ರಸ್ತೆಗಳಲ್ಲಿಯ ದೊಡ್ಡ ದೊಡ್ಡ ರಾಜಮಾರ್ಗಗಳ ಖರ್ಚನ್ನು ಇಲಾಖಾ ಸರಕಾರದವರು ಕೊಡತಕ್ಕದ್ದು. ಅವೆರಡೂ ಖರ್ಚನ್ನು ಇಲಾಖಾ ಸರಕಾರವು ನೋಡಿಕೊಳ್ಳಬೇಕೆಂದು ಕೇಳಿದರು. ಅದಕ್ಕೂ ಸಮಾಧಾನ ದೊರೆಯಲಿಲ್ಲ.

ಹೀಗೆ ಪ್ರಜೆಗಳಿಗೆ ಇರುವ ಮುಖ್ಯ ಕೊರತೆಯಾಗಲಿ ಧನದ ವಿಷಯಕ್ಕೆ ಸರಕಾರದವರು ಏನೂ ಸಹಾಯ ಮಾಡಲಿಕ್ಕೆ ಸಿದ್ಧರಿಲ್ಲದ ಬಳಿಕ, ಅವರು ಮಾಡುವ ಉಪದೇಶವು ಶುಷ್ಕವಾದ ಉಪದೇಶವಲ್ಲವೆ?

ಇದಾದ ಬಳಿಕ ಧಾರವಾಡ ಮತ್ತು ಧಾರವಾಡ ಜಿಲ್ಹೆಯ ಜನರ ದುಃಖಗಳ ನಿವಾರಣೋಪಾಯ ಇನ್ನು ಗವ್ಹರ್ನರ ಸಾಹೇಬರು ಕನ್ನಡಿಗರೆಲ್ಲರಿಗೂ ಇರುವ ಸಾಮಾನ್ಯ ದುಃಖಗಳ ಬಗ್ಗೆ ಏನು ಹೇಳಿದರು ನೋಡುವ. ಮುನಿಸಿಪಾಲಟಿಯವರೂ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನವರೂ ಲಿಂಗಾಯತ ಎಜ್ಯುಕೇಶನ ಸೊಸಾಯಿಟಿಯವರೂ ಈ ವಿಷಯವನ್ನು ಗವ್ಹರ್ನರರ ಮುಂದೆ ಇಟ್ಟ ಬಗ್ಗೆ ಅವರನ್ನು ಅಭಿನಂದಿಸದೆ ಇರಲಾರೆವು. ಇನಾಂದಾರ ಸಂಘದವರ ದೃಷ್ಟಿಯು ಮಾತ್ರ ಇನ್ನೂ ಇಷ್ಟು ಸಂಕುಚಿತವಾಗಿರುವುದು ಆಶ್ಚರ್ಯವು. ಕರ್ನಾಟಕ ಏಕೀಕರಣದ ಪ್ರಶ್ನೆಯೇ ಅತ್ಯಂತ ಮಹತ್ವದ ಪ್ರಶ್ನೆಯು. ಸಿಂಧ ಒರಿಸಾ ಪ್ರಾಂತಗಳಿಗಿಂತ ಈ ಪ್ರಾಂತಕ್ಕೆ ಏಕೀಕರಣದ ಅವಶ್ಯಕತೆಯಿದ್ದು ಸರಕಾರದವರು ಪುನಃ ಹಣದ ಕುಂಟನೆವವನ್ನು ಹಾಕುತ್ತಾರೆ. ಏಕೀಕರಣಕ್ಕೆ ಹಣದ ಅಡಚಣಿಯೆಂದೂ ಗವ್ಹರ್ನರರ ಅಂಬೋಣ ಇದು ಸುಳ್ಳು ನೆವವು.

ಸರಕಾರದವರ ಮನಸ್ಸಿನಲ್ಲಿ ಬಂದರೆ ಸಿಂಧ ಪ್ರಾಂತದಂತೆ ಈ ಪ್ರಾಂತಕ್ಕೂ ಪ್ರತ್ಯೇಕ ಪ್ರಾಂತವನ್ನು ಕೊಡಬಲ್ಲರು. ಇರಲಿ, ಇದ್ದ ಪ್ರಶ್ನೆಗಳಲ್ಲಿಯೇ ಸಂತೋಷದ ಸಂಗತಿಯೆಂದರೆ, ಕರ್ನಾಟಕದ ಏಕೀಕರಣಕ್ಕೆ ಜನರ ಬೇಡಿಕೆ ಇಷ್ಟು ದಿವಸ ಸರಕಾರವು ಒಪ್ಪಿದ್ದಿಲ್ಲ. ಈಗಾದರೂ ಅದು ಯಾವತ್ತೂ ಕನ್ನಡಿಗರ ಜೀವಾಳದ ಪ್ರಶ್ನೆಯೆಂಬುದು ಅವರ ಧ್ಯಾನಕ್ಕೆ ಬಂದಂತೆ ತೋರುತ್ತದೆ. ವಿಶ್ವವಿದ್ಯಾಲಯದ ಅಡಚಣಿಗಳ ಬಗ್ಗೆ ಗವ್ಹರ್ನರರ ಹೇಳಿದಂತೆ ನಮ್ಮ ಕಾಯದೆ ಮಂಡಳದ ನಮ್ಮ ಪ್ರತಿನಿಧಿಗಳು ಮುಂದೆ ಹೆಜ್ಜೆ ಇಟ್ಟು ಅದರಲ್ಲಿ ಕರ್ನಾಟಕಕ್ಕೆ ಯೋಗ್ಯಸ್ಥಾನವನ್ನು ದೊರಕಿಸಿ ಕೊಡುವರೇನು? ಕರ್ನಾಟಕವು ಮುಂಬಯಿ ಪುಣೆಗಳಿಂದ ಬಹಳ ದೂರ ಇರುವದರಿಂದಲೇ ಕರ್ನಾಟಕಕ್ಕೆ ಅತೀಶಯ ಅನ್ಯಾಯವಾಗಿರುತ್ತದೆಂಬ ಮಾತನ್ನು ಎಲ್ಲರೂ ಒತ್ತಿ ಒತ್ತಿ ಹೇಳಿದುದನ್ನು ಸರಕಾರದವರು ನೆನಪಿನಲ್ಲಿಡುವರೇ? ಲಿಂಗಾಯತರೂ ಇನಾಮುದಾರೂ, ಅಸ್ಪೃಶ್ಯರೂ ತಮಗೆ ಸರಕಾರಿ ನೌಕರಿ ಮುಂತಾದವುಗಳಲ್ಲಿ ವಿಶೇಷ ಹಕ್ಕುಗಳು ಬೇಕೆಂದು ಬೇಡಿದರು. ಸರಕಾರದವರು ತಮ್ಮ ಆಡಳಿತೆಗೆ ಬಾಧ ಒದಗದಂತೆ ಶಕ್ಯವಾದ ಮಟ್ಟಿಗೆ ಅವರ ಬೆನ್ನು ಚಪ್ಪರಿಸುವ ಧೋರಣವನ್ನು ಸ್ವೀಕರಿಸಿಯೇ ಇರುವರೆಂದು ಗವ್ಹರ್ನರರು ಹೇಳಿದರು.

ಕಲ್ಲಪನ್ನಳ್ಳಿಕ್ಕೆ ಬಿ ಎಸ್ ಸಿ ಎಂ ಎಸ್ ಸಿ ಕ್ಲಾಸನ್ನು ಬರುವ ಜೂನದಿಂದ ಪ್ರಾರಂಭಿಸುವ ಮತ್ತು ಟ್ರೇನಿಂಗ ಕಾಲೇಜನ್ನು ಪ್ರಾರಂಭಿಸುವ ಆಶೆಯನ್ನು ಮಾತ್ರ ಗವ್ಹರ್ನರರು ಕೊಟ್ಟಿರುವರು.

ಫರ್ಸ್ಟ ಎಲ್. ಎಲ್. ಬಿ. ಪರೀಕ್ಷೆಯ ಪರಿಣಾಮ

೧೯೩೩ನೇ ಅಕ್ಟೋಬರದಲ್ಲಿ ನಡೆದ ಫರ್ಸ್ಟ ಎಲ್ ಎಲ್ ಬಿ ಪರೀಕ್ಷೆಯಲ್ಲಿ ಕೆಳಗಿನ ನಂಬರದವರು ಉತ್ತೀರ್ಣ ಹೊಂದಿರುತ್ತಾರೆ.

ಸೆಕೆಂಡಕ್ಲಾಸ

[illegible]

ಪಾಸು

[illegible]

ಪಾಸಾದವರಲ್ಲಿ ಕೆಳಗಿನ ನಂಬರದವರಿಗೆ ಸೆಕೆಂಡ ಎಲ್ ಎಲ್ ಬಿ ಯ ಟರ್ಮ ತುಂಬಲು ಸಮ್ಮತಿ ಕೊಟ್ಟಿದೆ

[illegible]

[ಸ್ಪೆಶಲ್ ತಂತಿ]

ಸೂಚನೆ—ಬಿ ಏ ಹಾಗು ೨ನೇ ಎಲ್ ಎಲ್ ಬಿ ಪರೀಕ್ಷೆಗಳ ಪರಿಣಾಮವು ಸಹ ಕನ್ನಡಿಗದಲ್ಲಿ ಪ್ರಕಟಿಸಲ್ಪಡುವದು

ಇವೆಲ್ಲ ಸರಿ ಆದರೆ ಗವ್ಹರ್ನರರು ಕರ್ನಾಟಕದ ಈ ಕೇಂದ್ರಕ್ಕೆ ಬಂದದ್ದೇಕೆ? ಎಂಬ ಪ್ರಶ್ನವು ಉಳಿದೇ ಉಳಿಯುತ್ತದೆ. ಕಾಯದೇ ಭಂಗ ಚಳವಳಿಯಲ್ಲಿ ಧಾರವಾಡವು ಸರಕಾರದ ವಕ್ರ ದೃಷ್ಟಿಗೆ ಗುರಿಯಾಗಿತ್ತು. ಅವರ ಉಗ್ರಶಾಸನಗಳೂ ಇಲ್ಲಿ ಜನರನ್ನು ಕೊಡಕಿನಲ್ಲಿ ಕೆಡವಿದಾ ಯಿತು. ಎಲ್ಲಿ ಕಾಂಗ್ರೆಸ್ಸು ತಲೆಯೆತ್ತಿತ್ತೋ ಅಲ್ಲಿಯೇ "ಇದು ನೋಡಿ ನಾವೀಗ ಮರೆಸುತ್ತಿರುವೆವು ಕಾಂಗ್ರೆಸ್ಸದ ನಿರ್ನಾಮವಾಗಿಲ್ಲವೇ" ಎಂದು ಜನರಲ್ಲಿ ತಿಳಿಸಲಿಕ್ಕೆ ಗವ್ಹರ್ನರರು ಬಂದಿರಬಹುದೋ? ಶಿರಸಿ ಸಿದ್ದಾಪುರಗಳಿಗಾದರೂ ಇದೇ ದೃಷ್ಟಿಯನ್ನಿಟ್ಟೇ ಹೋಗಿರಬಹುದೇನು?

ಇಹವೃತ್ತ.

ಬೆಳಗಾವಿಯ ಅ॥ ಜಜ್ಜ ಮೆಹತಾರವರು ಆಕಸ್ಮಾತ್ತಾಗಿ ನೊನ್ನೆ ತೀರಿಕೊಂಡದ್ದರಿಂದ ಅವರ ಸ್ಮರಣಾರ್ಥ ಇಲ್ಲಿಯ ಮುನಸುಫ ಕೋರ್ಟನಲ್ಲಿ ನೆನ್ನೆ ಉಲ್ಲೇಖವು ಮಾಡಲ್ಪಟ್ಟಿತು ಆ ಕಾಲದಲ್ಲಿ ಕೋರ್ಟಿನ ಕೆಲಸ ನಿಲ್ಲಿಸಲ್ಪಟ್ಟಿತ್ತು.

ಧಾರವಾಡದ ಕನ್ನಡ ಅಮೋಚರರು ಶುಕ್ರವಾರ ರಾತ್ರಿ ಪ್ರೊ ಜಹಗೀರದಾರ ಕೃತ "ಹರಜನ್ಯಾರ" ಮೊದಲಾದ ಕೆಲವು ದೃಶ್ಯಗಳನ್ನು ಅಭಿನಯಿಸಿದರು. ಪ್ರೊ ಜಹಗೀರದಾರರು ಸ್ವತಃ ಪಾತ್ರ ವಹಿಸಿದ್ದರು. ಜಹಗೀರದಾರರ ನಾಟಕಗಳಲ್ಲಿ ಜನರಿಗೆ ತೋರುವ ಕ್ಲಿಷ್ಟತೆ "ಹರಜನ್ಯಾರ"ದಲ್ಲಿರಲಿಲ್ಲ. ಲೇಡೀ ಸ್ಕಾಯಿಕ್ಸರು ಕಲೆಕ್ಟರ ಜಜ್ಜ ಸ್ಪಾರ್ಟ ಸಾಹೇಬ ಮೊದಲಾದವರೊಡನೆ ನಾಟಕಕ್ಕೆ ಬಂದಿದ್ದರು

ಸಹಕಾರೀ ದಿನಾಚರಣೆ

ಎಂನೇ ತಾರೀಖಿನ ದಿನ ಇಲ್ಲಿಯ ಲಿಂಗಾಯತ ನಗರ ಮಂದಿರದಲ್ಲಿ ಸಹಕಾರಿ ದಿನಾಚರಣೆಯು ಜರುಗಿಸಲಾಯಿತು. ಶ್ರೀ ಬಿಕ್ಕೋಜಿ ಪಂಡಿತಪ್ಪನವರು ಅಧ್ಯಕ್ಷರಿದ್ದರು

ಬೆಂಗಳೂರಪತ್ರ.

[ನಮ್ಮ ಸ್ವಂತ ಸುದ್ದಿಗಾರರಿಂದ]

ಹೊಸ ಕೆಲಸ

ತಾರೀಖು ೩ ೧೧-೩೩

ಈ ಕೆಲವು ದಿನಗಳ ಹಿಂದೆ ಅಕಾಲ ಮರಣಕ್ಕೆ ತುತ್ತಾದ ಮೈಸೂರ ಸರ್ಕಾರದ ಕೋಆಪರೇಟಿವ್ ರಜಿಸ್ಟ್ರಾರಾಗಿದ್ದ ಶ್ರೀಯುತ ಕೆ ಎಚ್ ರಾಮಯ್ಯನವರ ಮಕ್ಕಳಿಗೆ ಸರಕಾರದವರು ಅಸಿಸ್ಟೆಂಟ್ ಕಮಿಷನರ್ ಕೆಲಸವನ್ನು ಕೊಡುವವರಾಗಿ ಸುದ್ದಿ.

ನಂಜನಗೂಡು ಕರ್ನಾಟಕ ಸಂಘ

ಮೇಲ್ಕಂಡ ಸಂಘದವರು ನಂಜನಗೂಡಿನಲ್ಲಿ ಶ್ರೀಮಾನ್ ಬಿ ಎಂ ಶ್ರೀ ಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನವನ್ನು ನಡೆಸುವರು. ಇದರ ಜೊತೆಯಲ್ಲಿ ಕವಿ ಸಮ್ಮೇಳನವೂ ಜರುಗುವದು

ವೃದ್ಧ ಪಿತಾಮಹರು

ಶ್ರೀಮಾನ್ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು ದಿನೇ ದಿನೇ ಗುಣಮುಖರಾಗುತ್ತಿದಾರೆ. ಈಗ ಆಸ್ಪತ್ರೆಯಿಂದ ಮನೆಗೆ ಬಂದಿದ್ದಾರೆ

ನ್ಯಾಯಸರಾಯರ ಆಗಮನ

ಡಿಸೆಂಬರ ತಾ॥ ೩ ನ್ಯಾಯಸರಾಯರು ಇಲ್ಲಿಗೆ ಬರುವರು ೩ ೪ ೫ ನೇ ತಾರೀಖು ಮೈಸೂರಿನಲ್ಲಿದ್ದು ಪುನಃ ೬ ನೇ ತಾರೀಖಿಗೆ ಬರುವರು

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಲ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೪ ಮಧ್ಯಾನ್ಹ ೧೧ ಗಂ

ಜವಾರಿ ಹತ್ತಿ	೧೦೩ ೧೦೩	ಜೋಳ	[illegible]
ಅಮ್ರೀಕ ,	೧೦೩ ೧೦೩	ಗೋದಿ	[illegible]
ಶಿವಾಜಿ ,	[illegible]	ಅಕ್ಕಿ	[illegible]
ಸಿಂಧ್ಯಾ ,	೧೦೮-೧೧೦	ಕಡ್ಲಿ	[illegible]
ಚೀನಕಾಯಿ	೭೩ ೭೪	[illegible]	[illegible]
ದ್ವಿಪದಹೂಲ	[illegible]	ಕುಸಬಿ	[illegible]
ಶಾಬಕ ಬೀಜ	[illegible]	ಮೆಣಸು	[illegible]
ಹಸರು ಜವಾರಿ	[illegible]		
ಹಿಂಗಾಣಾಯು ಹಾ	೫-೫	ಹತ್ತಿಕಾಳು	[illegible]

ಬೆಳ್ಳಿ ಬಂಗಾರ

ಬಂಗಾರ	[illegible]	ಬೆಳ್ಳಿ

ಹೇಲ್ಸರಿಗೆ ಜವಾಹಿರರ ಪತ್ರ

"ಕನ್ನಡಿಗ" ನಿಗಾಗಿ ತರಿಸಿದ ಆಸೋಶಿಯೇಟೆಡ್ ಕಂಪನಿ 'ಯ ತಂತಿಗಳು

ಪಂ. ಜವಾಹಿರರ ಮತ

ಅಲಹಾಬಾದ ತಾ। ೩— ಮಿ ಎಚ್, ಹೇಲ್ಸರು ಕೆಲವು ಪತ್ರಗಳಲ್ಲಿ ಪ್ರಕಟಿಸಿರುವ ಗತಿಯನ್ನು ಕುರಿತು ಪಂಡಿತ ಜವಾಹಿರಲಾಲ ಅನ್ನುವದು "ನನ್ನ ಮತ್ತು ಅವರ ಮತ ಕೆಲವು ಮುಖ್ಯ ವಿಷಯಗಳಲ್ಲಿಯೇ ಭೇದವದು ಹೀಗಿದ್ದರೂ, ನನಗೂ ಅವರಿಗೂ ಕೂಡುವಂಥ ಕೆಲವು ಮಾತುಗಳಿರುವವು. ಯ ಪತ್ರಿಕೆಯು ಪ್ರತಿಯೊಂದು ಹಿಂದೂ ತಿಯರಿಗೆ ಒಪ್ಪಿತವಿಲ್ಲವೆಂಬುವ ಅವರ ಮಾತು ಸಂಪೂರ್ಣ ನಿಜವಿದೆ. ಈ ವರೆಗೆ ಕಾಂಗ್ರೆಸ್ಸಿನವರು ಬಿಳಿಯ ಪತ್ರಿಕೆಯ ಬಗ್ಗೆ ತುಂಬಾ ದಾಸೀನರಿದ್ದರು, ಯಾಕಂದರೆ, ಅದು, ಹಿಂದೂ ಜನರ ಸ್ಥಿತಿ ತಿಳಿದುಕೊಳ್ಳದೆ, ಪೂರ್ತಿ ತಿಳುವಳಿಕೆಯಿಂದ ಮಾಡಲ್ಪಟ್ಟ ಯೋಜನೆಯು ಇದ್ದು, ಅದರಿಂದ ಹಿಂದೂ ಜನರ ಸುರಕ್ಷತೆಯೂ ಆಗದೆಂದು ಹಿಂದೂಗಳ ಮತ. ಹಿಂದುಸ್ಥಾನದ ಭವಿತವ್ಯವು ದಿಲ್ಲಿ ಹಿಂದೂ ಜನರಿಂದಲೇ ನಿಶ್ಚಯಿಸಲ್ಪಡುವದು ವಿನಾ ನಾಲ್ಕು ಜನರಿಂದಲ್ಲ. ಎಲ್ಲರ ಮತಗಳಿಂದ ಅಸೆಂಬ್ಲಿಗೆ ಆರಿಸಲ್ಪಟ್ಟ ಪ್ರತಿನಿಧಿಗಳಿಂದಲೇ ಮುಂದಿನ ಕಾರ್ಯ ನಡಿಸುವದೇ ಒಳ್ಳೇ ದಾರಿ"

ಸಂರಕ್ಷಣದ ವಿಷಯವಾಗಿ ಹೇಳಬೇಕೆಂದರೆ ಗ್ರೇಟ ಬ್ರಿಟನ್ನವನ್ನು ಬಿಟ್ಟರೆ ಹಿಂದುಸ್ಥಾನದ ಸ್ಥಿತಿಯು ಸುರಕ್ಷಿತವಾಗುವದೆಂದು ಪಂಡಿತ ಜವಾಹಿರಲಾಲರಿಗೆ ಅನಿಸುವದಿಲ್ಲ. ಯಾ ವ್ಯಕ್ತಿಯಾಗಲಿ ಅಥವಾ ಒಂದು ಸಂಘವಾಗಲಿ ಹಿಂದುಸ್ಥಾನದ ಈಗಿನ ಮತ್ತು ಮುಂದಿನ ಗತಿಯ ಬಗ್ಗೆ ಮಾತಾಡುವವರಿದ್ದರೆ ಅವರೊಡನೆ ಸಂತೋಷದಿಂದ ಚರ್ಚಿಸಲು ನಾವು ಸಿದ್ಧರಿರುವೆವು. ಆದರೆ ಮಿ ಹೇಲ್ಸರ ಸೂಚನೆಯಂತೆ ಬೇಕೆ ಬೇಕು ಸಂಘದವರು ಒಟ್ಟಿಗೆ ಸೇರಿ ವಿಚಾರ ಮಾಡುವದೇನೂ ಅಷ್ಟು ಪ್ರಯೋಜನಕಾರಿಯಾಗಿ ಕಾಣುವದಿಲ್ಲವೆಂದು ತಿಳಿಸಿ ತೋರಿಸಿದ್ದಾರೆ.

ಶ್ರೀ ಸ್ವರೂಪರಾಣಿಯವರ ಪ್ರಕೃತಿ ಚನ್ನಾಗಿದೆ. ಜ್ವರ ಮತ್ತು ನೋವು ಕಡಿಮೆ ಯಾಗಿದೆ [ಅ ಪ್ರೆ ತಂತಿ]

ಅಸೆಂಬ್ಲಿಯ ಸಭೆ.

ನ್ಯೂ ಡೊಸದಿಲ್ಲಿ ತಾ॥ ೩—ಅಸೆಂಬ್ಲಿಯ ಅಧಿವೇಶನವು ತಾ॥ ೧೬ನೆ ನವ್ಹಂಬರದ ಒದಲು ತಾ॥ ೨೦ನೆ ನವ್ಹಂಬರ ದಿವಸ ಕೂಡುವದೆಂದು ಪ್ರಕಟನೆ ಹೊರಟಿದೆ [ಅ ಪ್ರೆ ತಂತಿ]

ರಿಝುರ್ವ ಬ್ಯಾಂಕ.

ಹೊಸದಿಲ್ಲಿ ತಾ॥ ೩— ರಿಝುರ್ವ ಬ್ಯಾಂಕ ಕಮೀಟಿಯಲ್ಲಿರುವ ಅಸೆಂಬ್ಲಿ ಸಭಾಸದರಲ್ಲಿ ಸರಕಾರದವರಿಂದ ರಿಝುರ್ವ ಬ್ಯಾಂಕ ಮಸೂದೆಯಲ್ಲಿ ತಿದ್ದುಪಡಿ ಮಾಡುವ ಅಧಿಕಾರವನ್ನು ಸ್ಪಷ್ಟ ರೀತಿಯಿಂದ ದೊರಕಿಸಬೇಕೆಂದು ಚಳವಳಿ ನಡೆದಿದೆ. ಅವರು ಸರ್ ಜಾರ್ಜ ಶೆಸ್ಟೂರಿ ಇವರ ಸ್ಪಷ್ಟೀಕರಣದಿಂದಾಗಲಿ ಇಲ್ಲವೇ ಸರ್ ಹೋರ ಇವರ ಪ್ರಕಟನೆಯಿಂದಾಗಲಿ ಸಂತುಷ್ಟರಾಗಿಲ್ಲ. ರಿಝುರ್ವ ಬ್ಯಾಂಕ ಕಾಯದೆಯನ್ನು ತಿದ್ದುಪಡಿ ಮಾಡಲು ಶಾಸನ ಮಂಡಳಗಳಿಗೆ ಅಧಿಕಾರವಿರತಕ್ಕದ್ದು ಎಂದು ಅವರ ಅಭಿಪ್ರಾಯವಾಗಿದೆ. ಈ ತಿದ್ದುಪಡಿಗೆ ಪಾರ್ಲಮೆಂಟ ಸ್ಟೇಟ್ ಸೆಕ್ರೆಟರಿ ಇಲ್ಲವೆ ಗವ್ಹರ್ನರ ಜನರಲ್‌ರ ಸಮ್ಮತಿಯು ಅವಶ್ಯವಿರುವದಿಲ್ಲ. ಮುಂದವರು ತಾ॥ ೨೦ ನೇ ನವ್ಹಂಬರದೊಳಗೆ ವರದಿ ತೂರಡಿಸಲು ಶಕ್ತರಾಗುವದಿಲ್ಲವೆಂದು ತಿಳಿಯುತ್ತದೆ (ಅ ಪ್ರೆ ತಂತಿ)

ಲೆವಾನಿ ಫಕೀರ

ಪೇಶಾವರ ತಾ॥ ೩ ಹಿಂದ ಸ್ಥಾನ ಸರಕಾರ ಹಾಗೂ ಅಫಗಾನ ಸರಕಾರದವರ ನಡುವೆ ಆದ ಒಪ್ಪಂದಕ್ಕಾನುಸಾರವಾಗಿ ಲೆವಾನಿ ಫಕೀರರು—ಅಕ್ಟೋಬರ ಮಧ್ಯದಲ್ಲಿ ಸೆರೆ ಹಿಡಿಯಲ್ಪಟ್ಟಿದ್ದರು. ಇವರು ಎರಡು ವರ್ಷಗಳಿಂದ ಹಿಂದಿ ಅಫಗಾನ ಸರಹದ್ದಿನಲ್ಲಿ Peace ಹಂಚಿದ್ದೆ ಅವರನ್ನು ಸೆರೆ ಹಿಡಿಯಲು ಕಾರಣವಾಗಿತ್ತು. ಈಗ ಅವರಿಗೆ ಕಾಬೂಲಿಗೆ ಹೋಗಲು ಅಪ್ಪಣೆ ದೊರೆತಿದೆ. ಅವರು ತಮ್ಮ ಒಬ್ಬ ಮಿತ್ರನೊಂದಿಗೆ ನಿನ್ನಿನ ದಿವಸ ಕಾಬೂಲಕ್ಕೆ ಹೊರಟರು. ಅಟಕ ಜಿಲ್ಲೆಯಲ್ಲಿ ಅವರು ಬಂಧನದಲ್ಲಿರುವಾಗ, ನ ದಿರಶಹಾ ಇವರು ಅವರಿಗೆ ನೀವು ಕಾಬೂಲಕ್ಕೆ ಬಂದಿದ್ದಾದರೆ ನಿಮ್ಮನ್ನು ಪ್ರೇಮಿಸುವೆವು ಎಂದು ಬರೆದ ಪತ್ರವು [illegible] ಹತ್ತರ ಸಿಕ್ಕಿರುತ್ತದೆ [ಅ ಪ್ರೆ ತಂತಿ]

ಕೈ. ಪಟೇಲರ ಶವದ ವ್ಯವಸ್ಥೆ

ಮುಂಬೈ ತಾ॥ ೩. ಕೈ ವಿಠ್ಠಲಭಾಯಿಯವರ ಶವದ ದಹನವನ್ನು ಚೌಪಾಟಿಯ ಉಸುಬಿನಲ್ಲಿ ಮಾಡಲಿಕ್ಕೆ ಮುಂಬೈ ಸರಕಾರದವರು ಒಪ್ಪಿಗೆ ಕೊಡಲಿಲ್ಲ. ಶವದ ವ್ಯವಸ್ಥೆಗಾಗಿ ನಿರ್ಮಿಸಲ್ಪಟ್ಟ ಬೋರ್ಡಿನವರ ಸಭೆಯು ನಾಳೆ ಶ್ರೀ ಸರೋಜಿನಿ ನಾಯುಡು ಅವರ ಅಧ್ಯಕ್ಷತೆಯಂತೆ ಕರೆಯಲ್ಪಟ್ಟಿದೆ. ಸರಕಾರದವರು ಕೊಟ್ಟ ಉತ್ತರವನ್ನು ಕುರಿತು ವಿಚಾರಿಸಲು ಶ್ರೀ ನಾಯುಡುದೇವಿಯವರು ಬೋರ್ಡಿನವರೊಡನೆ ವಿಚಾರ ನಡಿಸಿದ್ದಾರೆ. ಅಸೋಸಿಯೇಟೆಡ್ ಪ್ರೆಸ್ಸಿನ ಸುದ್ದಿಗಾರನು ಶ್ರೀ ಸರೋಜಿನಿದೇವಿಯವರನ್ನು ವಿಚಾರಿಸಲು ಈ ವಿಷಯವನ್ನು ಕುರಿತು ತಿರಿಗಿ ವಿಚಾರ ನಡಿಸಿರುವೆವು. ಆದ್ದರಿಂದ ನನಗಿನ್ನೂ ನಿರಾಸೆಯಾಗಿಲ್ಲ. ಶವದ ದಹನಕ್ಕೆ ಸರಕಾರದಿಂದ ಅಪ್ಪಣೆ ಪಡೆಯಲು ಬೋರ್ಡಿನವರು ತಮ್ಮ ಕೈಯೊಳಗಿದ್ದಷ್ಟು ಸಂಸ್ಕಾರದ ಮಾನ ಒಲಿಸುವರು. ಪಟೇಲರು ರಾಷ್ಟ್ರೀಯ ಮುಖಂಡರಾದ್ದರಿಂದ ಅವರಿಗೆ ರಾಷ್ಟ್ರದಿಂದ ಮರ್ಯಾದೆಯಾಗುವದು. ಅವರ ಅಂತ್ಯವಿಧಿಯು ಹಿಂದೂ ಪದ್ಧತಿಯಂತೆಯೇ ಆಗುವದಿದ್ದರೂ ಸರಕಾರದವರು ಬೇಕೆಂದು ತೆಗೆದ ತಮ್ಮ ಪ್ರಕಟನೆಯಲ್ಲಿ ಜಾತಿ ಜಾತಿಗಳಲ್ಲಿ ಗೊಂದಲವಾದೀತೆಂದು ಅಂದುದಕ್ಕಾಗಿ ನನಗೆ ವ್ಯಸನವಾಗುತ್ತದೆ. ಕೈ ವಿಠ್ಠಲಭಾಯಿಯವರ ದೆಸೆಯಿಂದ ದುಃಖ ವ್ಯಕ್ತ ಪಡಿಸಲು ಸಾರ್ವಜನಿಕ ಸಭೆ ನೆರೆಯಿಸಬೇಕೆಂದು ಶ್ರೀ ದೇವಿಯವರು ಮುಂಬೈ ಪಟ್ಟಣಶೆಟ್ಟರಿಗೆ (ಶರೀಫ) ಮನವಿ ಕಳಿಸಿದ್ದಾರೆ. ಇದು ಮೇಲೆ ಎಲ್ಲ ಜಾತಿಯ ಮುಂಬೈ ಮುಖಂಡರ ಅಂಕಿತಗಳಿವೆ. ಸ್ಥಾನಿಕ ಅಧಿಕಾರಿಗಳು ಶವದ ಬಗ್ಗೆ ಬೇರೆ ವ್ಯವಸ್ಥೆಗಳನ್ನು ಚನ್ನಾಗಿ ಮಾಡಿದ್ದಕ್ಕಾಗಿ ಶ್ರೀ ಸರೋಜಿನಿ ದೇವಿಯವರು ಅವರನ್ನು ಬಹು ಪರಿಯಿಂದ ಹೊಗಳಿದರು. ನಾಳೆ ಬೋರ್ಡಿನ ಸಭೆ ನೆರೆದು ಮುಂದಿನ ವಿಚಾರವಾಗಿ ಪ್ರಕಟನೆ ಹೊರಡಿಸಲಾಗುವದು. ಹಡಗಿನಿಂದ ಇಳಿಸಿದ ಮೇಲೆ ಪಟೇಲರ ಶವವು ಕೆಡಬಾರದಂತೆ ಅವರ ಮಿತ್ರರು ತಕ್ಕ ಏರ್ಪಾಡು ಮಾಡಿದ್ದು, ಇದ್ದ ಕೃದ್ದಂತೆ ಅದನ್ನು ಪೆಟ್ಟಿಗೆಯಲ್ಲಿ ಹಾಕಿಕೊಂಡು ಅವರ ಬಾಂಧವರು ಸ್ಮಶಿ ನಕ್ಕೆ ಒಯ್ಯುವ ಏರ್ಪಾಟನ್ನು ಮಾಡಲಾಗಿದೆ.

ಕೈ ವಿಠ್ಠಲಭಾಯಿಯವರ ಶವ ಸಂಸ್ಕಾರ ಮಂಡಲದ ಕಾರ್ಯದರ್ಶಿಗಳು ತಿಳಿಸುವದೇನಂದರೆ, ಅವರ ಶವವು ೯ನೇ ತಾರೀಖಿನ ದಿನ ಸಂಜೆಗೆ ಮುಂಬೈಗೆ ತಲ್ಪುವದು. ಅದನ್ನು ಡೋಣಿಯಿಂದ ಮನೆಗೆ ಒಯ್ಯುವರು. ಮರುದಿನ ಬೆಳಿಗ್ಗೆ ಸ್ಮಶಾನಕ್ಕೆ ಹೊರಡುವದು. ೧೦ನೇ ತಾರೀಖನ್ನು ದುಃಖದ ದಿನವೆಂದು ಪಾಲಿಸುವದು ಗೊತ್ತಾಗಿದೆ [ಅ ಪ್ರೆ ತಂತಿ]

ದೇವಾಸ ಸಂಸ್ಥಾನದ ದುರ್ಗತಿ

ಮದ್ರಾಸ ತಾ। ೧— ದೇವಾಸ ಸಂಸ್ಥಾನದ ಮಹಾರಾಜರ ಒಬ್ಬ ಸ್ನೇಹಿತರಾಯರ ವಿಜಂಟರಿಂದ ಅಕ್ಟೋಬರ ೨೩ ನೇ ತಾರೀಖಿಗೆ ಒಂದು ಪತ್ರ ಪ್ರಕಟವಾಗಿದ್ದು ಅದರಲ್ಲಿ ಅನ್ನುವದು—ದೇವಾಸ ಸಂಸ್ಥಾನದ ಸ್ಥಿತಿಯು ಬಹು ಚಿಲ್ಲಾಪಿಲ್ಲಿಯಾಗಿ, ಈಗ ಸಂಸ್ಥಾನದ ಬೊಕ್ಕಸದಲ್ಲಿ ಏನೂ ಹಣ ಇಲ್ಲ. ಇದ್ದರಿಂದ ಮಹಾರಾಜರು ತಮ್ಮ ಇಚ್ಛೆಯಿಂದಲೇ ಸಂಸ್ಥಾನ ಬಿಟ್ಟು ಹೋಗಿದ್ದಾರೆ. ಈಗಿನ ಸಂದರ್ಭದಲ್ಲಿ ದೇವಾಸ ಸಂಸ್ಥಾನದಲ್ಲಿ ಸ್ವರಾಜ್ಯವಿಲ್ಲ. ಮಹಾರಾಜರು ನವಂಬರ ೧೦ ನೇ ತಾರೀಖಿಗೆ ಮುಂಚೆ ಸಂಸ್ಥಾನಕ್ಕೆ ಮರುಳದಿದ್ದರೆ, ಹಿಂದುಸ್ಥಾನ ಸರಕಾರದವರು ತಮ್ಮ ಇಚ್ಛೆಯಂತೆ ತಮ್ಮ ಕೈಗೆ ಸಂಸ್ಥಾನದ ಆಳಿಕೆಯನ್ನು ತೆಗೆದುಕೊಳ್ಳುವರು ಎಂದು ಮದ್ರಾಸ ಮೇಲ ಪತ್ರಿಕೆಯಿಂದ ತಿಳಿಯುತ್ತದೆ [ಅ ಪ್ರೆ ತಂತಿ]

ಕ್ರಾಂತಿಕಾರರ ಸುಳಿದಾಟ.

ಕಲಕತ್ತಾ ತಾ। ೧೩— ಬಂಗಾಲದಲ್ಲಿಯ ಗುಪ್ತ ಕ್ರಾಂತಿಕಾರರ ಚಳವಳಿಗೆ ಸಂಬಂಧಪಟ್ಟ ಜೋಗೇಂದ್ರನಾಥ ಬ್ಯಾನರ್ಜಿ ಮತ್ತು ಪೇರಿ ಇಬರಲ್ಲಿ ಸಿಡಿ ಮದ್ದಿನ ಸಾಮಾನುಗಳು ಇದ್ದದ್ದಕ್ಕಾಗಿ ಮತ್ತು ಅವರು ಬೇರೆಯವರಿಗೆ ದುರ್ಬೋಧನೆ ಮಾಡಿದ್ದಕ್ಕಾಗಿ ಕಲಕತ್ತೆಯ ಚೀಫ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ನಡೆದು ಆರೋಪ ವಿಡಲಾಯಿತು

ಕಲಕತ್ತೆಯ ಉತ್ತರ ಭಾಗದಲ್ಲಿರುವ ಮೂವರಲ್ಲಿ ಕೆಲವು ಸಿಡಿಮದ್ದಿನ ಸಾಮಾನುಗಳು ಸಿಕ್ಕದ್ದಕ್ಕಾಗಿ ಸೆರೆ ಹಿಡಿದಿದ್ದಾರೆ [ಅ ಪ್ರೆ ತಂತಿ]

ರಿಝುರ್ವ ಬ್ಯಾಂಕಿನ ಕಮೀಟಿಯ ಚರ್ಚೆ.

ಹೊಸದಿಲ್ಲಿ ತಾ॥ ೩— ಇಡಗಂಟಿನ [ರಿಝುರ್ವ] ಬ್ಯಾಂಕಿನ ಕಮೀಟಿಯವರು ಇಂದು ತಮ್ಮ ಚರ್ಚೆಯನ್ನು ಬಹಳ ಹುರುಪಿನ ವರೆಗೆ ನಡಿಸಿದರು. ಇಂಪೀರಿಯಲ್ ಬ್ಯಾಂಕಿನ ಪ್ರತಿನಿಧಿಗಳಿಗೆ ಅನೇಕ ಪ್ರಶ್ನೆಗಳನ್ನು ಕೇಳಿ ಅವರಿಂದ ಅವಶ್ಯವಿರುವ ಸಂಗತಿಯನ್ನ ತಿಳಿದುಕೊಳ್ಳುವದಾಯಿತು. ಬ್ಯಾಂಕಿನ ಸಂಘಟನೆಯ ಪರೀಕ್ಷಣ ಕಾರ್ಯವು ಬಹಳ ಹುರುಪಿನಿಂದ ಪ್ರಾರಂಭವಾಯಿತು. ಆನುತ್ಪಾದಕ ಶಾಖೆಗಳು ಬ್ಯಾಂಕಿನ ಆಡಳಿತ ಮತ್ತು ಅದು ಹಿಂದೀ ಜನರ ಕೈಯಲ್ಲಿರುವ ಬಗ್ಗೆ ಕಮೀಟಿಯವರು ಬಹು ತಿಳನೋಟದಿಂದ ಪ್ರತಿನಿದಿಗಳ ಪರೀಕ್ಷಣೆ ಮಾಡಿದರು [ಅ ಪ್ರೆ ತಂತಿ]

ಗೋಕಾಕದ ಸುದ್ದಿ

ಗೋಕಾಕ ತಾಲೂಕ ಪೈಕೀ ಮಮದಾಪೂರ ಗ್ರಾಮದಲ್ಲಿ ಕುರುಬರು ಬಡಿದಾಡಿದರು. ಕೆಲವರಿಗೆ ಘಾಯವಾಗಿ ಅವರು ಗೋಕಾಕದ ದವಾಖಾನೆಗೆ ಬಂದರೆಂಬ ಸುದ್ದಿಯಿದೆ.

ಹವಾಮಾನ:— ಊರಲ್ಲಿ ಕಾಲರಾ ಬೇನೆ ವಿನೂ ಇಲ್ಲಾ ಹವೆಯು ಚನ್ನಾಗಿ ಇರುತ್ತದೆ

ರಾಣೇಬೆನ್ನೂರಿನ ಪತ್ರ.

೧ ಇಲ್ಲಿ ಪ್ಲೇಗ ಬೇನೆಯು ಹಣಿ ಹಾಕಿದ ಕೂಡಲೇ ನಗರ ಸಭೆಯವರು ಮುಂಜಾಗರೂಕತೆಯ ಉಪಾಯಗಳನ್ನೆಲ್ಲ ಕೈಕೊಂಡು ಬಹಳ ಹಾಗಿ ದುಡ್ಡು ಖರ್ಚುಮಾಡಿ ಚೆಂಕಯಿಬ್ಲೆಂದು ಆಲೋಚಿಸಿ ಪ್ರತಿಬಂಧಕ ವ್ಯವಸ್ಥೆ ಯೋಜನೆಗಳನ್ನು ಬಹಳ ದಕ್ಷತೆಯಿಂದ ಊರಲ್ಲಿ ತಂದದ್ದರಿಂದ ಪ್ಲೇಗು ಸ್ವಲ್ಪದರಲ್ಲೇ ಇಲ್ಲಂದಲ್ಲೇ ಕಾಗ್ಗ ಒಡಮ ಹೋಗಿದೆ. ಇದಕ್ಕಾಗಿ ನಗರ ಸಭೆಯವರು ಅಭಿನಂದನಾರ್ಹರೇ ಸರಿ. ಇದೇ ರೀತಿ ಎಲ್ಲ ಸಾರ್ವಜನಿಕ ಕಾರ್ಯಗಳಿಗೆ ಬಹಳ ದಕ್ಷತೆಯಿಂದ ಲಕ್ಷ್ಯ ಪೂರೈಸುತ್ತಿರಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ

೨ ಇಲ್ಲಿಯ ಹಾಯಸ್ಕೂಲನ್ನು ದಿವಾಳಿಯ ರಜೆಯ ನಿಮಿತ್ಯವಾಗಿ ಶಾಲೆಯ ಹೆಡ್ ಮಾಸ್ತರ ಮಿ ಚಂದಾವರಕರರು ಸ್ಕೂಲಬೋರ್ಡಿನಿಂದ ನಿರ್ಣಿತವಾದ ಅವಧಿಯಕಿಂತ ೭ ದಿವಸ ಮುಂಚಿತವಾಗಿಯೇ ಅನಧಿಕೃತವಾಗಿ ಬಂದುಮಾಡಿ ಹೋದರು. ಹೋದ್ದರಿಂದ ಸ್ಕೂಲ ಬೋರ್ಡಿನವರು ಅವರ ಈ ವರ್ತನದ ಬಗ್ಗೆ ಸಿಟ್ಟಾಗಿದ್ದು ಇದರಲ್ಲಿ ತಕ್ಕ ಶಾಸನ ಮಾಡಬೇಕೆಂದು ನಡಿದಿದೆ ಎಂದು ಕೇಳುತ್ತೇವೆ। ಹೆಡ್ ಮಾಸ್ತರರದು ತಪ್ಪಾಗಿರುವದೆಂದೂ ಇದೊಂದು ಸ್ವಾಭಿಮಾನದ ಪ್ರಶ್ನೆಯಾಗಿ [illegible] ಮಾಸ್ತರರು ತಮ್ಮ [illegible] ವ್ರಾದ್ಧ ಪಕ್ಷಗಳಿದ್ದ ದಿವಸ ಅರ್ಧ ದಿವಸದ ರಜೆಯನ್ನು ಕೊಡಿರಿ ಎಂದು ಜಂಗಲಾಟ ಬೇಡಿಕೊಂಡರು. ಸ್ಕೂಲ ಬೋರ್ಡಿನ ಅಪ್ಪಣೆ ಇಲ್ಲದೆ ಕೊಡಲಿಕ್ಕೆ ಆಗುವದಿಲ್ಲವೆಂದು ಖಂಡಿತವಾಗಿ ಹೇಳಿದರು. ಈಗ ಮುಂಚಿತವಾಗಿ ೭ ದಿವಸಗಳ ರಜಾ ಬೇಡಲಿಕ್ಕೆ ಯಾವ ಧೈರ್ಯ ಬಂತೋ ತಿಳಿಯವಾಗದೆ

೩ ಇಲ್ಲಿಯ ಹೆಣ್ಣುಮಕ್ಕಳ ಶಾಲೆಯ ಮುಖ್ಯ ಅಧ್ಯಾಪಕರು (ಹೆಡ್ ಮಿಸ್ಟ್ರೆಸ್) ಒಬ್ಬ ಅಸಿಸ್ಟಂಟ ಮಾಸ್ತರಿಣಿಗೆ ಶಾಲೆಯಲ್ಲಿಯೇ ರೂಲ ಕಟ್ಟಿಗೆಯಿಂದ ಹೊಡೆದಳೆಂಬ ಆಪವಾದದ ಮೇಲೆ ಇಲ್ಲಿಯ ಬೆಂಚ ಕೋರ್ಟಿನಲ್ಲಿ ಫಿರ್ಯಾದಿ ಬಿದ್ದಿದೆ. ಇನ್ನೂ ಪ್ರಾರಂಭವಾಗಿಲ್ಲ. ಇದರಲ್ಲಿ ಯಾಂದೇ ತಪ್ಪು ಇದ್ದರೆ ರಾಜೀಯಾಗುವದು ಉತ್ತಮ ಕೆಲಸವು. ಆದರೆ ರಾಜೀ ಆಗದಂತೆ ವಾದಿ ಪ್ರತಿವಾದಿಯರ ಹಿಂದಿರುವ ಪ್ರೋತ್ಸಾಹಕರು ಪ್ರತಿಬಂಧ ಮಾಡುತ್ತಿರುವದಾಗಿ ಕೇಳುತ್ತೇವೆ. ಸಮಾಜದ ಎದುರಿಗೆ ಒಂದೆ ಮೇಲೆ ಇವರಾದರೂ ರಾಜೀ ಮಾಡಿಸುವದು [illegible] ಕೋರ್ಟಿಗೆ ಹೋಗುವದೋ ಏನೋ [illegible] ಆದಲ್ಲಿ [illegible]

ಕೊನೆಯ ಚಕ್ರ

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ ದಂತಮಂಜನ.

ಈ ಕಂಪನಿಯು ಅಲ್ಕಾರಿಯಿಂದ ಗದಗಿಗೆ ಬಂದಿರುತ್ತದೆ. ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು



ಕರ್ನಾಟಕ ಕೆಮಿಕಲ್ ವರ್ಕ್ಸ— ಗದಗ.

ಡಾ ಕುಲಕರ್ಣೀಯ
ಲೆಬೊರೋಟರಿ ಮುಂಬೈ
ನಂಬರ ೩
ಬಾಟ್ಲಿ ೫ ರೂ.
ಎಲ್ಲ ಕೆಮಿಸ್ಟರಲ್ಲಿಯೂ ದೊರೆಯುವದು.



ಸ್ತ್ರೀಯರ ವಿಕಾರದ ಮೇಲೆ ರಾಮಬಾಣ ಔಷಧವು

ನರಗು, ಬಿಳೇಶರಗು, ಕೆಂಪು ಶರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿದ್ದರೆ ವಿಳೆ, ಬೆನ್ನು ಹಿಡಿಯೋಣ, ನಡನೋವು, ಅಶಕ್ತತಾ ವಗೈರೆ ವಿಕಾರಗಳು ಗುಣವಾಗುತ್ತವೆ ಗರ್ಭಸಂಬಂಧಿ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣವಾಗುತದೆ ಬಾಣಂತಿತನ ಆದ ಮೇಲೆ ತೆಗೆದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸಧೃಡ ಆಗುತ್ತದೆ.

ಎ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ
೧೮-೭

ವಿಜಯ ಸಿನೇಮಾ ಧಾರವಾಡ.

ತಾರೀಖು ೪. ಶನಿವಾರದಿಂದ ಸುರುವು.

ಕ್ರೂರ ಪಶುಗಳಿಂದ ತುಂಬಿದ
ಮೂಕಾಡುವ ಭಯಂಕರ ಜಂಗಲ ಚಿತ್ರಪಟ.

ಜಂಗಲ ಜವಾಹೀರ.

ನಾರಿನ ವ್ಯೆರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ ಆರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ:-ರಾಘವ ಭಾವ ರಸಿ ಗೋಕಾಕ
ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವರಿಗೆ
೧ ತಿಂಗಳಿಗೆ	೦-೬-೬	೦-೧೩-೦
೩ ತಿಂಗಳಿಗೆ	೧-೪-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯಾಪಾರಿಗಳಿಗೆ ಕಮೀಶನ್ } ಅಸ್ಪೃಶ್ಯತಾ ನಿವಾರಣೆ. { ಪ್ರಚಾರಕರಿಗೆ ಸುಸಮಯ

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಸ್ತ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಭ್ಯಾಸಿಸಿಲ್ಲದೆ ವ್ಹಿ ಕಳುಹಿಸುವುದಿಲ್ಲ ಕ್ರಯ ೧-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೩ ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ

ಪ್ರಕಾಶ.

ಮುಸಲ್ಮಾನರ ಮತ್ತು ಇತರ ಹಿಂದುಳಿದ ಸಮಾಜಗಳ ಉತ್ಕರ್ಷಕ್ಕಾಗಿ
ಹೋರಾಡುವ ಒಂದೇ ಒಂದಾದ ವಾರಪತ್ರವು

ಇದರಲ್ಲಿ ರಾಜಕೀಯ ಸಾಮಾಜಿಕ, ನೈತಿಕ ಔದ್ಯೋಗಿಕ ಶೈಕ್ಷಣಿಕ ಆರ್ಥಿಕ ಮುಂತಾದ ವಿಷಯಗಳ ಮೇಲೆ ಉತ್ತಮ ಲೇಖಗಳು ಬರೆಯಲ್ಪಡುವವು ಇದಲ್ಲದೆ ಸಮಾಜಗಳ ವಿವಿಧ ಶಾಖಾ ವರ್ತಮಾನಗಳೂ ಪ್ರಕಟಿಸಲ್ಪಡುವವು. ಆದ್ದರಿಂದ ಎಲ್ಲರೂ ತೀವ್ರ ಚಂದಾದಾರರಾಗಿ ಲಾಭವನ್ನು ಪಡೆಯಬೇಕು ವಾರ್ಷಿಕ ಚಂದಾ ಸ್ಥಳಿಕರಿಗೆ ೩-೦-೦ ಸ್ಥಳದವರಿಗೆ ೩-೮-೦ ಮ್ಯಾನೇಜರ — 'ಪ್ರಕಾಶ' ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ
೧೪-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡೀಪೋ
ಕಣಾಪುರ ಪೇಟ ಗದಗ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಪೆರೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ಕೊಪ್ಪೆಲು ಮತ್ತು ಮಡಿಚುವ ಬಾಗಿಲು ತಯಾರಾಗು

ಈ ಪತ್ರಿಕೆಯನ್ನು ಕಂಗಳಾಫ ಬಳವಂತ ಮುಧೋಳ ಕೀರ್ತಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ನಂ. ಬಿ. ೨೭೮೮

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು: — ಆಲೂರ ವೆಂಕಟರಾಯರು

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಮಂಗಳವಾರ ಕಾರ್ತಿಕ ಬಹುಳ ೫ ಶಕೆ ೧೮೫೫ ತಾ|| ೭-೧೧-೩೩ [ಸಂಚಿಕೆ ೧೬೫

ಇನ್ಸ್ಯುರನ್ಸ

ಜೀವವಿಮೆ ಇಳಿಸಲು ದಿ ಯುನಾಯಿಟೆಡ್ ಕರ್ನಾಟಕ ಇನ್ಸ್ಯುರನ್ಸ ಕಂಪನಿಯೇ ಉತ್ತಮವಾದುದು

ಇನ್ಸ್ಯುರನ್ಸ

ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ. ದಿ ಯುನಾಯಿಟೆಡ್ ಕರ್ನಾಟಕ ಇ. ಕಂ. ಲಿ. ಧಾರವಾಡ ಇವರಲ್ಲಿಯೇ ವಿಮೆ ಇಳಿಸಿರಿ.

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ.
ತಾ|| ೨೫-೮ ३३ } ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ.

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳೀ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್ ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುಸಿಜ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯಿಯ ಹೊಸ ಮೋಟಾರ ಸಾಯಕಲ್ (೪) ಸಟಕಾರಿ (೫) ಮೋಟಾರ ವಸ್ತುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ.

ನಮ್ಮ ಹದ್ದು:—

ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ ೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾ ಪ್ರಾಂತ ನಗೈರೆ ಇವುಗಳಲ್ಲಿ ಸಬ್ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ನಿಮಗೆ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಳಲಾಸಪೂರ ಆ್ಯಂಡ ಕೋ ದೇವಕರಣ ಮ್ಯಾನ್ಶನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಅತ್ಯುತ್ತಮ ದರದಲ್ಲಿ ಕೊಡಿ



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ವಾತ, ಎದೆನೋವು, ತಲೆನೋವು, ಛಳಿಜ್ವರ, ಬೋಡಿಗೆಮ್ಮು, ಕೆಮ್ಮು, ಕಿವಿ ಸೋರು ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ. ಟೊಣಪಿ ಆ್ಯಂಡ ಕಂಪನಿ, ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಕಂಠರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ



೧ನೇ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರ ಪಡೆದಿದೆ

೨ನೇ ಮಹಾಯಾತ್ರಾ ಪ್ರವಾಸವು

ರೇಲ್ವೆ ಕಂಪನಿಯಿಂದ ಪರವಾನಗೀ ಪಡೆಯಲ್ಪಟ್ಟಿರುತ್ತದೆ

ತಾ|| ೨೯-೧೨-೧೯೩೩ ರಿಂದ ೨೫-೨-೧೯೩೪ ರ ವರೆಗೆ

ಮುಂಬಯಿ, ಉಜ್ಜನಿ, ದಿಲ್ಲಿ ಶ್ರೀಕಾಶಿ, ಗಯಾ, ಕಲ್ಕತ್ತಾ, ಮದ್ರಾಸು, ರಾಮೇಶ್ವರ ಲಂಕಾ, ಮೈಸೂರ ಮೊದಲಾದ ಅಲ ಪುಣ್ಯ ಕ್ಷೇತ್ರಗಳ ಯಾತ್ರಾ ಸುಯೋಗವು ಸೆಕೆಂಡ ಕ್ಲಾಸ ೩೧೦ ರೂ. ಥರ್ಡ ಕ್ಲಾಸ ೧೪೦ ರೂ ಮಾತ್ರ ಟಿಕೇಟ ಪಡೆಯತಕ್ಕವರು ಕೂಡಲೇ ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ವಿಶೇಷ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು

ಜಮೀನದಾರರ ಕಾಮಧೇನು.

ಸದರ ಕಂಪನಿಯ ಎಂಜಿನ್ ರೆಂಟೆಗಳಿಂದ ಕಳೆದ ಮೂರು ವರ್ಷಗಳಂತೆ ಬರುವ ೧೯೩೪ನೇ ಇಸವಿಯ ಬೇಸಿಗೆಯಲ್ಲಾದರೂ ಪಡ ಜಮೀನುಗಳು ಯೋಗ್ಯ ದರದಲ್ಲಿ ತಿದ್ದಿ ಮಾಡಿ ಕೊಡಲ್ಪಡುವವು

ಆಫೀಸ: ಸ್ಟೇಶನ್ ರೋಡ ಹುಬ್ಬಳ್ಳಿ ತಾ|| ೩-೧೧-೧೯೩೩

ಜಿ. ಎ. ಶಿರೂರ.
ಆರ್ಗನೈಜರ

ಕರ್ನಾಟಕ ಸಾಹಿತ್ಯ ಪರಿಷತ್ತು ಹುಬ್ಬಳ್ಳಿ

ಹುಬ್ಬಳ್ಳಿಯಲ್ಲಿ ಜರಗುವ ಅಖಿಲ ಕರ್ನಾಟಕ ೧೯ನೇ ಸಾಹಿತ್ಯ ಪರಿಷತ್ತಿಗೆ ಸಾಹಿತ್ಯ ಸೇವೆಯನ್ನು ಮಾಡಿದ ಯೋಗ್ಯರಾದ ಅಧ್ಯಕ್ಷರನ್ನು ಆರಿಸಬೇಕಾಗಿದೆ ಆದ್ದರಿಂದ ಎಲ್ಲಾ ಭಾಗದ ಜನರು ತಮಗೆ ಗೊತ್ತಿದ್ದ ಹೆಸರನ್ನು ಅವಶ್ಯವಾಗಿ ನಮ್ಮ ಕಡೆಗೆ ಕಳಿಸಿದರೆ ಸ್ವಾಗತ ಸಂಘದವರಿಗೆ ಅನುಕೂಲವಾಗುತ್ತದೆ ಕಾರಣ ಇದೇ ನವಂಬರ ೧೫ ತಾರೀಖಿನೊಳಗೆ ತಿಳಿಸಬೇಕೆಂದು ವಿನಂತಿಯುಂಟು. ಸಾಹಿತ್ಯ ಪರಿಷತ್ತಿನ ಕೂಡ ಕವಿ ಸಮ್ಮೇಲನವೂ ಆಗುತ್ತದೆ. ಆದ್ದರಿಂದ ಕವಿ ಸಮ್ಮೇಲನದ ಅಧ್ಯಕ್ಷರು ಯಾರಿರಬೇಕೆಂಬುದರ ಸೂಚನೆಯನ್ನೂ ಕಳಿಸಬೇಕು.

ಜನರಲ್ ಸೆಕ್ರೆಟರಿ
ಚಂದ್ರಶೇಖರ ಶಾಸ್ತ್ರಿ ವ್ಯಾಕರಣ ತೀರ್ಥ
೧೯ ನೇ ಸಾಹಿತ್ಯ ಪರಿಷತ್ತು ಹುಬ್ಬಳ್ಳಿ

ಧಾರವಾಡದ ಕ್ರೈಸ್ತರ ಶಿಷ್ಟ ಮಂಡಳವು.

ತಾರೀಖು ೫ ನೆಯ ನವ್ಹೆಂಬರ ದಿನ ಈ ಸಂಘದ ಪ್ರತಿನಿಧಿಗಳಾದ ಮಿ. ಮೆಶ್ಯಾ ರೇ. ಬಂಕಾಪುರ, ಮಿ ಡುವಾರ್ಟೆ, ಮಿ ಮೆಚ್ಯಾಡೋ, ಮಿ ಹಳ್ಳಿಕೇರಿ ಹೆಗಡೆ, ಡಾ ಪ್ರಭಾಕರ, ಮಿ ಬಂಗೇರಾ ಮೊದಲಾದವರು ಗವ್ಹರ್ನರ ದೊರೆಗಳನ್ನು ಕಾಣಲು ಮಧ್ಯಾಹ್ನ ೧ ಘಂಟೆಗೆ ಮಿಶನ್ ಕಂಪೌಂಡಿನಿಂದ ತೆರಳಿದರು. ಪ್ರತಿನಿಧಿಗಳು ಕಾಲ ನ2ಗೆಯೊಳಗೇ ತಿರುಗಿದರು ಕಲೆಕ್ಟರ ದೊರೆಗಳ ಬಂಗಲೆಯಲ್ಲಿ ಗವ್ಹರ್ನರ ದೊರೆಗಳನ್ನು ಕಂಡರು ಮೊದಲು ಪರಿಚಯದ ಕೆಲಸವು ನಡೆದನಂತರ ಶಿಷ್ಟ ಮಂಡಳದವರು ತಮ್ಮ ಬೇಡಿಕೆಗಳನ್ನು ಮುಂದೆ ಇಟ್ಟರು. ಆ ಬೇಡಿಕೆಗಳೆಂದರೆ— (೧) ಕ್ರೈಸ್ತವಿದ್ಯಾರ್ಥಿಗಳಿಗೆ ಪ್ರತ್ಯೇಕ ಶಿಷ್ಯವೇತನವನ್ನು ಕಲ್ಪಿಸುವದು (೨) ನಗರ ಸಭೆಗಳಲ್ಲಿ ಡಿ. ಲೋಕಲ್ ಬೋರ್ಡುಗಳಲ್ಲಿ ಕ್ರೈಸ್ತರಿಗೆ ವಿಶೇಷ ಸ್ಥಳಗನ್ನು ನಿರ್ಮಿಸುವದು (೩) ಸರಕಾರದ ನೌಕರಿಗಳಲ್ಲಿ ಕ್ರೈಸ್ತರಿಗೆ ವಿಶೇಷ ಸೌಲಭ್ಯಗಳನ್ನು ಕೊಡುವದು.

ಈ ಬೇಡಿಕೆಗಳಿಗೆ ಉತ್ತರರೂಪವಾಗಿ ಗವರ್ನರ ದೊರೆಗಳು (೧) ಸ್ಪರ್ಧೆಗಳಲ್ಲಿ ಮೇಲಾದ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯನ್ನು ಕೊಡುವೆವು [೨] ಸಾಮಾನ್ಯ ಚುನಾವಣೆಯಲ್ಲಿ ಮೇಲು ಪಡೆಯಿರಿ [೩] ಈಗಾದರೂ ನಾವು ಸರಕಾರೀ ಉದ್ಯೋಗಗಳನ್ನು ಕೊಡುತ್ತಬಂದಿದ್ದೇವೆ. ಮುಂದೆಯಾದರೂ ಈ ಬಗ್ಗೆ ವಿಶೇಷ ಕಾಳಜಿಯನ್ನು ತೆಗೆದುಕೊಳ್ಳುವೆವು ಎಂಬುದಾಗಿ ಉತ್ತರ ಕೊಟ್ಟರು ಅಂತೂ ನಮಗೆ ಸಿಕ್ಕದ್ದು ಇಷ್ಟೆ. ಧಾರವಾಡದ ಶಿಷ್ಟ ಮಂಡಳವು ಸಮಾಜದ ಸುಖಕ್ಕಾಗಿ ಶ್ರಮ ವಹಿಸಿದುದಕ್ಕಾಗಿ ನಾವು ಋಣಿಯಾಗಿದ್ದೇವೆ

ಮಿಶನ್ ಕಂಪೌಂಡ ನಿಮ್ಮ
ಧಾರವಾಡ ೬-೧೧-೩೩ ಗು ಜಾ. ಆರ

ಚಿತ್ರದುರ್ಗದ ಸಮಾಚಾರ

[ತಾ|| ೪-೧೧-೩೩]

ಪ್ಲೇಗಿನ ಉದ್ದೇಶ್ಯವಾಗಿ ಮುಚ್ಚಲ್ಪಟ್ಟಿದ್ದ ಇಲ್ಲಿಯ ಶಾಲೆಗಳ ಪುನಃ ತೆರೆಯಲ್ಪಟ್ಟಿವೆ. ಆರೋಗ್ಯ ಖಾತೆಯವರ ಅಭಿಪ್ರಾಯವು ಶಾಲೆಗಳು ಇನ್ನೂ ಕೆಲವು ಕಾಲ ಮುಚ್ಚಬೇಕೆಂದಿದ್ದಂತೆ ಶಾಲೆಗಳ ಕೆಲವುತರಗತಿಗಳು ಶಾಂತ ನಿಕೇತನದಂತೆ ಬೈಲಿನಲ್ಲಿ ನಡೆಸಲ್ಪಡುತ್ತಿವೆ ಯೆಂದು ವರ್ತಮಾನ

ಇಲ್ಲಿ ಪ್ಲೇಗಿನೊಂದಿಗೆ ಮಲೇರಿಯಾ ಉಪದ್ರವವು ಹೆಚ್ಚಾಗಿದೆ

ಕನ್ನಡಿಗ

ಮಂಗಳವಾರ ತಾರೀಖು ೬-೧೧-೧೯೩೦

ಹಳ್ಳಿಗಳ ಪುನರ್ಘಟನೆ

ಇತ್ತೀಚೆಗೆ ಜನತೆಯ ಮುಂದಾಳುಗಳ ಅಕ್ಷವೂ ಸರಕಾರದವರ ಲಕ್ಷ್ಯವೂ ಹಳ್ಳಿಗಳ ಕಡೆಗೆ ಹೋಗುತ್ತಿರುವುದು ಹಳ್ಳಿಗರ ಸುದೈವವು ಆದರೆ ಹಳ್ಳಿಗಳ ಉದ್ಧಾರದ ವಿಷಯವಾಗಿ ಮಾತಾಡುವಾಗ, ಹಳ್ಳಿಗಳ ಹಿತಕ್ಕಿಂತಲೂ ತಮ್ಮ ಸ್ವಂತ ಹಿತವೇ ಈ ಜನರ ಕಣ್ಣಿನ ಮುಂದೆ ಇರುವುದು ಕಂಡು ಬರುತ್ತದೆ ಜನತೆಯ ಮುಂದಾಳುಗಳೆಂದೆನ್ನಿಸಿಕೊ[illegible] ಬರ[illegible] ಈಗ ಪಟ್ಟಣವಾಸಿಗಳು [illegible] ಬಗೆಗೆ ಸಾಕ್ಷಾತ್ ಕಲ್ಪನೆ ಇವರಿಗೆ ಇರುವುದಿಲ್ಲ ಪಟ್ಟಣಗಳಲ್ಲಿ ವಾಸಿಸುವ ಮುಖಂಡರಿಗೂ ಹಳ್ಳಿಯ ಜನರಿಗೂ ಸಂಬಂಧವುಂಟಾಗುವುದು ಹಲಕೆಲವು ಸಮಯಗಳಲ್ಲಿ ಮಾತ್ರ [illegible] ಲೋಕಲ್‌ಬೋರ್ಡ [illegible] ಡಿಸ್ಟ್ರಿಕ್ಟ್ ಲೋಕಲ್‌ಬೋರ್ಡು, ಮುಂಬಯಿ ಕಾಯದೆಮಂಡಳ ಇವುಗಳಿಗೆ ಸದಸ್ಯರನ್ನಾರಿಸುವ ಕಾಲದಲ್ಲಿಯೂ ಕೋಆಪರೇಟಿವ್ಹ ಸಂಘಗಳ ಚಳವಳಿಗಳ ಕಾಲದಲ್ಲಿಯೂ ಪಟ್ಟಣಗಳಲ್ಲಿ ಇದ್ದುಕೊಂಡು ಈ ಮಾದರಿಯ ಸಂಸ್ಥೆಗಳಿಗೆ ಸದಸ್ಯರಾಗಿ ಆರಿಸಿ ಬರುವ ಪ್ರಸಂಗ ಒದಗಿದಾಗ ವಿಶೇಷವಾಗಿ ಹಳ್ಳಿಯ ಜನರ ಸಂಬಂಧವು ಉಂಟಾಗುತ್ತದೆ. ಕಾಂಗ್ರೆಸ್ಸಿನ ಅಥವಾ ಮಿಕ್ಕ ಸಾರ್ವಜನಿಕ ಚಳವಳಿಗಳನ್ನು ಮಾಡುವವರಿಗೂ ಕೂಡ ಹಳ್ಳಿಗಳ ಸಂಬಂಧವು ವರ್ಷದಲ್ಲಿ ಕೆಲವು ಸಲ ಮಾತ್ರವೇ ಉಂಟಾಗುತ್ತವೆ. ಖಾದಿಯ ಪ್ರಸಾರದ ಕಾಲಕ್ಕೆ ಮತ್ತು ಕಾಯದೆಭಂಗದ ಕಾಲಕ್ಕೆ ಈ ಬಗೆಯ ಸಂಬಂಧವು ಮೇಲಿಂದಮೇಲೆ ಉಂಟಾಗುತ್ತಿತ್ತು ಹೀಗೆ ಕೆಲವು ಅಕಸ್ಮಾತದ ಪ್ರಸಂಗಗಳನ್ನು ಬಿಟ್ಟರೆ ಬಹುಶಃ ಪಟ್ಟಣಿಗರು ಹಳ್ಳಿಯವರ ಹಿತದ ಕಲುವಾಗಿ ಉದಾಸೀನರೇ ಆಗಿರುತ್ತಾರೆಂದು ಹೇಳಬಹುದು

ಆದುದರಿಂದ, ಹಳ್ಳಿಗಳ ಪುನರ್ಘಟನೆಯ ಪ್ರಶ್ನೆಯನ್ನು ಬಿಡಿಸುವುದು ಇಂಥ ಜನರಿಂದ ಆಗದು. ಹಳ್ಳಿಗಳ ಸುಖದುಃಖಗಳನ್ನು ಆಸ್ಥೆಯಾಗಿಯೂ ಸತತವಾಗಿಯೂ ಅಭ್ಯಾಸಮಾಡದೆ ಇಂಥ ಪ್ರಶ್ನೆಗಳನ್ನು ಬಿಡಿಸಲಿಕ್ಕೆ ಯಾರೂ ಹೋಗಬಾರದು ಹಳ್ಳಿಗಳ ಸ್ಥಿತಿಯನ್ನು ತಿಳಿದುಕೊಳ್ಳುವುದಕ್ಕೆ ಅಲ್ಲಿಯ ಜನರೊಡನೆ ತಾದಾತ್ಮ್ಯವನ್ನು ಪಡೆಯಬೇಕಾಗುತ್ತದೆ. ಹಳ್ಳಿಗರೆಂದರೆ ಈಗ ಅನೇಕ ಅನಾನುಕೂಲತೆಗಳಿಗೆ ಆಗರವಾಗಿವೆ ಪಟ್ಟಣಗಳಲ್ಲಿಯ ಜನರು ನವೀನ ಸುಧಾರಿಸಿದ ಕಾಲದ ಲಾಭಗಳನ್ನು ಹೊಂದುತ್ತಾರೆ ಹಾನಿಗಳನ್ನು ಸಹಿಸುತ್ತಾರೆ. ಹೊಸ ಕಾಲದ ಹಲವು ಲಾಭಗಳು ಪಟ್ಟಣಿಗರಿಗೆ ದೊರೆಯುವಂತೆ ಹಳ್ಳಿಗರಿಗೆ ದೊರೆಯುವುದಿಲ್ಲ. ಉಚ್ಚ ಶಿಕ್ಷಣವನ್ನು ತೆಗೆದುಕೊಳ್ಳಿರಿ ಇದರ ಲಾಭವೂ ಈಗ ಪಟ್ಟಣಿಗರಿಗೆ ಮಾತ್ರವೇ ದೊರೆಯುತ್ತಿದೆ ಹೊಸ ಕಾಲದ ವ್ಯಸನಗಳು ಮಾತ್ರ ಕೆಳಗಿಳಿದು ಹಳ್ಳಿಗರನ್ನು ಮುಟ್ಟುವಂತೆ ಶಿಕ್ಷಣವು ಹಳ್ಳಿಗಳಿಗೆ ಹೋಗಿ ತಲುಪುವುದಿಲ್ಲ ಸಾರಾಂಶ, ಹಳ್ಳಿಗರಿಗೆ ಹಾನಿಗಳು ಮಾತ್ರ, ಪಟ್ಟಣಿಗರಿಗೆ ಲಾಭಗಳು [illegible]

[illegible] ಈ ಹೀನ [illegible] ಮುಂದಾಗಬೇಕಾದರೆ [illegible] ಹಳ್ಳಿಗಳು ಯಾವ ಬಗೆಯಾಗಬೇಕೆಂಬುದನ್ನು ಚಿತ್ರವನ್ನು [illegible] ಮನಸ್ಸಿನಲ್ಲಿ ತರಬೇಕು. ಈ ಪ್ರಶ್ನೆಯ ವಿಚಾರವನ್ನು ಎರಡು ಬಗೆಯಿಂದ ಮಾಡಬಹುದು ಪಾಶ್ಚಿಮಾತ್ಯ ಸುಧಾರಣೆಗಳಿಂದ ನಮ್ಮ ಪಟ್ಟಣಗರಿಗೆ ಉಂಟಾದ ಸುಖಸೌಕರ್ಯಗಳೆಲ್ಲವನ್ನೂ ಹಳ್ಳಿಗರಿಗೆ ಒದಗಿಸಿಕೊಟ್ಟು ಅವರನ್ನು ಪಟ್ಟಣಿಗರಿಗೆ ಆದಷ್ಟು ಮಟ್ಟಿಗೆ ಸರಿಯಾಗುವಂತೆ ಮಾಡುವುದು ಈ ಧ್ಯೇಯವನ್ನು ಮೈಸೂರಿನ ದಿವಾನರಾದ ಸರ್ ಮಿರಝಾ ಇಸ್ಮಾಯಿಲ್ ಇವರು ತಮ್ಮೆದುರಿಗೆ ಇಟ್ಟುಕೊಂಡಿರುವಂತೆ ಕಾಣುತ್ತದೆ ಆದುದರಿಂದಲೇ ಅವರು ವಿದ್ಯುದ್ದೀಪಗಳನ್ನು ಆದಷ್ಟು ಹೆಚ್ಚಿನ ಹಳ್ಳಿಗಳಿಗೆ ಪೂರೈಸಿಕೊಡಹತ್ತಿರುವರು ಅದೇ ಮೇರೆಗೆ ಹಳ್ಳಿಗಳಲ್ಲಿ ವಾಸಿಸುವ ಜನರು [illegible] ಕ್ರಿಕೆಟ [illegible] ಸೌಕರ್ಯಗಳನ್ನು ಪಡೆದು ಪ್ರತಿಯೊಂದು ರೀತಿಯಲ್ಲಿ ಅವರು ಪಟ್ಟಣಿಗರನು[illegible] ಆನ ಕರಣವಾಡಬೇಕೆಂದು ಹಲವರ ಅಭಿಪ್ರಾಯ ಇದಕ್ಕೆ ನಿರುದ್ಧ [illegible] ಇವ ಸ್ಥಿತಿ [illegible] [illegible] ಎಂಬುದಾಗಿ ಹಲವರ ಅಭಿಪ್ರಾಯ [illegible] ಹೇಳುತ್ತಾರೆ ಇವರ [illegible] ಯದಂತೆ ಹಳ್ಳಿಗರು ತಮ್ಮ [illegible] ಜೀವನವನ್ನೇ [illegible] ಇರಬೇಕಲ್ಲದೆ [illegible] ಆಡಂಬರ ಜೀವನವನ್ನು ಅನು[illegible] ಎಂದು ಇರುತ್ತದೆ ಆದರೆ, ನಿಜವಾಗಿ ವಿಚಾರಮಾಡಿ ನೋಡಿದರೆ ಸತ್ಯವಾದ ಸುಧಾರಣೆಯ ಮಾರ್ಗವು ಇವೆರಡು ಬಿಂದುಗಳ ಮಧ್ಯದಲ್ಲಿ ಇರುತ್ತದೆ ಪಟ್ಟಣಿಗರಂತೆ ಹಳ್ಳಿಗರನ್ನು ವಿಲಾಸಭೋಗಗಳಲ್ಲಿ ಮುಳುಗಿಸಿಬಿಡುವುದೂ ತರವಲ್ಲ ಅಥವಾ ಹಿಂದಿನ ಜನರಂತೆ ಅವರನ್ನು ಒಂದು ಪೆಟ್ಟಿಗೆಯಲ್ಲಿ ಮುಚ್ಚಿಟ್ಟು ಉಸಿರು ನಿಲ್ಲಿಸಿಬಿಡುವುದೂ ತರವಲ್ಲ ಹಳ್ಳಿಗರಿಗೆ ಪಟ್ಟಣದಲ್ಲಿ ದೊರೆಯಬಹುದಾದ ಶಿಕ್ಷಣವೇ ಮುಂತಾದ ಸುಖಸೌಕರ್ಯಗಳನ್ನು ನಾವು ಪೂರೈಸಿಕೊಡಲೇಬೇಕು. ಹಾಗೆಯೇ ವಿಲಾಸಭೋಗಗಳಲ್ಲಿಯೂ ಯಾವುದೊಂದು ಮರ್ಯಾದೆಯವರೆಗೆ ನಾವು ಈಗಿನ ದಿವಸಗಳನ್ನು ಪೂರೈಸಿಕೊಡದಿದ್ದರೆ ಸರಿಹೋಗುವದಿಲ್ಲ ಹಿಂದಿನ ಸಾದಾಜೀವನದ ಧ್ಯೇಯವನ್ನು ಸದಾಕಾಲ ಮುಂದೆ ಇಟ್ಟುಕೊಂಡೂ, ವಿಲಾಸಗಳೂ ಸುಖಗಳೂ ಅವರಿಗೆ ಏನೂ ದೊರೆಯದಂತೆ ಮಾಡುವುದು ಉಚಿತವಾಗಲಾರದು ಆದಕಾರಣ, ನಾವು ಎಲ್ಲರೂ ಮುಂದೆ ನೆನಪಿನಲ್ಲಿಡತಕ್ಕ ಮಾತೇನಂದರೆ ಹಳ್ಳಿಗಳನ್ನು ಸುಧಾರಿಸುವ ಬಗ್ಗೆ ವಿಚಾರ ಮಾಡುವಾಗ ಅವರನ್ನು ಯಾವ ಧ್ಯೇಯಕ್ಕೆ ಒಯ್ದು ತಲುಪಿಸುವದು. ನಮ್ಮ ಉದ್ದೇಶವಿರುತ್ತದೆಂಬುದನ್ನು ನಾವು ಮುಂಚೆ ಮನಸಿನಲ್ಲಿ ಗಟ್ಟಿಮಾಡಿಕೊಳ್ಳಬೇಕು ಅಂದರೆ, ಆ ಧ್ಯೇಯವನ್ನು ಸಾಧಿಸುವುದಕ್ಕೆ ತಕ್ಕ ಉಪಾಯಗಳನ್ನು ಯೋಚಿಸಲಿಕ್ಕೆ ಒಳಿತಾಗುತ್ತದೆ

ಬೆಂಗಳೂರ ಪತ್ರ

[ಸ್ವಂತ ಬಾತ್ಮೀದಾರನಿಂದ]

ಮುಷ್ಕರಕರು

ಮೈಸೂರ ತಾ|| ೪— ನಿನ್ನೆ ರಾತ್ರಿ ಸುಖವಾಗಿ ನಿದ್ದೆಯು ಆಗಲಿಲ್ಲ. ಸಾಯಂಕಾಲದಿಂದ ಕೆಮ್ಮು ಹೆಚ್ಚಾಗಿದೆ ಬೆನ್ನು ಹಾಗು ಉರಿಯು ಕಡಿಮೆಯಾಗಿದೆ

ಚಿಂತಾಮಣಿಯ ಹತ್ಯೆ

ಕೋಲಾರ ಚಿಂತಾಮಣಿಯ ಹತ್ಯೆಯ ನ್ಯಾಯ ವಿಚಾರಣೆಯು ವರಿಷ್ಠ ನ್ಯಾಯಾಧೀಶರ ಎದುರಿನಲ್ಲಿ ನಡೆದಿದೆ.

ಮುರಿದ್ಹೋದ ಹೆಣ್ಣು

ಬೆಂಗಳೂರು ತಾ|| ೪— ನಿನ್ನೆ ಜಕ್ಕರಾಯನ ಕೆರೆಯ ಹತ್ತಿರ ಮರದ ಮೇಲಿಂದ ಬಿದ್ದ [illegible] ಬಾವನ ದೇಹವು ಸಿಕ್ಕಿದೆ ಹೀಗೆ ಹೇಗಾಯಿತು ಎಂಬುದರ ಬಗ್ಗೆ ಪೊಲೀಸರಿಂದ ವಿಚಾರಣೆ ನಡೆದಿದೆ

ಸುಭಾಷರ ಸಂದೇಶ.

ಮುಂಬಯಿ ತಾ|| ೩— ವಿಠ್ಠಲಭಾಯಿಯವರ ಮರಣದ ವಿಷಯಕ್ಕೆ ಜಿನೇವಾದಿಂದ ಸುಭಾಷರು, ಫ್ರೀ ಪ್ರೆಸ್ ಅಸೋಶಿಯೇಟೆಡ್ ಪ್ರೆಸ್ಸಿಗೆ ಹೀಗೆ ಬರೆದಿದ್ದಾರೆ " ರಾಂಚಿಯಲ್ಲಿ ಕೊನೆಗ ಪ್ರಾಣ ಬಿಡುವಿಟ್ಟ ಕೂಸು ದಿವಸಗಳಲ್ಲಿಯೇ ವಿಠ್ಠಲಭಾಯಿ ಯವರು ಪರದೇಶದಲ್ಲಿ ಕಾಲವಾದದ್ದೊಂದು ನಮ್ಮ ರಾಷ್ಟ್ರಕ್ಕೆ ದೊಡ್ಡ ಹಾನಿಯೇ ಸರಿ ಇದರಿಂದ ಅಲ್ಪಕಾಲದಲ್ಲಿಯೇ ನಮ್ಮ ರಾಷ್ಟ್ರೀಯ ಚಳವಳಿಯು ಬಲವಾದ ಎರಡೂ ಆಧಾರಸ್ತಂಭಗಳು ಅಳಿದವು ಇಂಥ ರಾಷ್ಟ್ರಸೇವಕರು [illegible] ಇಂಗ್ಲಂಡಿಗೆ ಸೇರಿಸಿ ನಮ್ಮ ಸ್ವಾತಂತ್ರ್ಯ ಧ್ಯೇಯದ ಸಲುವಾಗಿ [illegible] ಹೆಚ್ಚಾಗಿ [illegible] ಹತ್ತಬೇಕು ಹಿಂದುಸ್ಥಾನ [illegible] ಸಂದೇಹವಿಲ್ಲ [illegible] ಆಗಲಿ, [illegible] ವಯ [illegible] ತಮ್ಮ [illegible] ದೇಶಸೇವೆಯನ್ನು ಮಾಡುವುದರ [illegible] ಅವರ ವಿಚಾರ ಮತ್ತು ಯತ್ನಗಳು ನಡೆದಿರುತ್ತಿದ್ದವು ತಮ್ಮ ಆಯುಷ್ಯದ ಕೊನೆಗೆ ತಾರಿ ವಿಷಯಕ್ಕೆ ಅವರ ಮನಸ್ಸಿನಲ್ಲಿ ಎಷ್ಟು ಸಹ [illegible] ತಮ್ಮ ದೇಶಬಾಂಧವರಿಗೂ ಹಿಂದುಸ್ಥಾನದಲ್ಲಿಯ ಮತ್ತು ಜಗತ್ತಿನಲ್ಲಿಯ ತಮ್ಮ ಎಲ್ಲ ಸ್ನೇಹಿತರಿಗೂ ತಮ್ಮ ಆಶೀರ್ವಾದಗಳನ್ನು ಕೊಟ್ಟು ಕೊನೆಯ ಮತ್ತು ಮರಣಕಾಲವು ಸಮೀಪಿಸಿದಾಗ್ಗೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಶೀಘ್ರವೇ ಪ್ರಾಪ್ತವಾಗಲೆಂದು ಬೇಡಿಕೊಂಡರು ಮಾತೃಭೂಮಿಯಲ್ಲಿಯೇ ತಮ್ಮ ಕಡೆಯ ಅಂತ್ಯವಿಧಿಯಾಗಬೇಕೆಂದು [illegible] ಇಚ್ಛಿಸಿದರು ಅವರ ಜಡದೇಹವು ಮುಂಬಯಿಗೆ ತಲುಪಿದಾಗ್ಯೆ, ಇಂಥ ಮಹಾತ್ಮನೂ ರಾಷ್ಟ್ರವೀರನೂ ಆದವನಿಗೆ ಯೋಗ್ಯವಾದ ಸ್ವಾಗತವು ಆಗದಿರಲಾರದೆಂದು ನಾನು ನಂಬಿದ್ದೇನೆ ಮುಂಬಯಿ ನಗರಾಧಿಪತಿ ಅಥವಾ ಲೇಜಿಸ್ಲೇಟಿವ್ಹ ಅಸೆಂಬ್ಲಿಯ ಅಧ್ಯಕ್ಷರೆಂದಿಷ್ಟೇ ಅಲ್ಲ ಆದರೆ ಸ್ವಾತಂತ್ರ್ಯಯುದ್ಧದ ಮುತ್ಸದ್ದಿಯೆಂದು ಅವರು ನಮ್ಮಲ್ಲಿ ಚಿರಸ್ಮರಣೀಯರಾಗಿ ಉಳಿಯುವರು ಅಂತ್ಯವಿಧಿಯಾದ ಕೂಡಲೇ ಅವರ ದೇಶಬಾಂಧವರು ಅವರಿಗೆ ತಕ್ಕ ಸ್ಮಾರಕವನ್ನು ನಿರ್ಮಿಸುವ ಕೆಲಸವನ್ನು ಕೈಕೊಳ್ಳಬೇಕೆಂದು ನಾನು ಸೂಚಿಸುತ್ತೇನೆ ಆದರೆ ಇಂಥ ಸ್ಮಾರಕಗಳು ಕಲ್ಲಿನ ಮೂರ್ತಿಗಳ ಸ್ವರೂಪವಾಗಿರದೆ ಅವರ ಜೀವನದ ಧ್ಯೇಯವು ಸಾಧ್ಯವಾಗುವದಕ್ಕೆ ಬೇಕಾಗುವ ಕಾರ್ಯಗಳನ್ನು ಸ್ಥಾಪಿಸುವ ಸ್ವರೂಪವಾಗಿರಬೇಕು [ಅ ಪ್ರೆ ಸಂ]

ಬೆಂಕಿಯ ಹಾವಳಿ

ಮುಂಬಯಿ ೩-೧೧-೩೩ ಇವತ್ತು ಮಧ್ಯಾಹ್ನ ಮಲಬಾರ ಹಿಲ್ಲದ ಹತ್ತಿರವಿರುವ ವಾಳಕೇಶ್ವರ ಬೀದಿಯಲ್ಲಿ ಒಂದು ದೊಡ್ಡ ಕಟ್ಟಡಕ್ಕೆ ಬೆಂಕಿ ಹತ್ತಿ ಸುಮಾರು ೫೦ ಸಾವಿರ ರೂಪಾಯಿಯ ಹಾನಿಯಾಯಿತು ಆರು ಕಡೆಯ ನೀರು ಬಂಬಿನ ಯಂತ್ರಗಳು ಒಂದೇ ಸವನೆ ಪ್ರಯತ್ನಿಸಿ ಮೂರು ತಾಸುಗಳಲ್ಲಿ ಅಗ್ನಿದೇವನನ್ನು ನೊಂದಿಸಿ ಶಾಂತ ಮಾಡಿದರು ಆ ಮನೆಯಲ್ಲಿಯ ಎಲ್ಲ ಜನರು ಸುರಕ್ಷಿತವಾಗಿ ಹೊರಬಿದ್ದರು ಆದರೆ ಮೇಲುಪ್ಪರಿಗೆಯ ಮೇಲೆ ಚಾವಣಿಯಲ್ಲಿಂದ ಹೊರಬೀಳಲು ಮಾರ್ಗ ಕಾಣದೆ ಇಬ್ಬರು ಜವಾನರು ಒಳ್ಳೇ ಜಾಣತನದಿಂದ ಹತ್ತಿರವಿರುವ [illegible] ಗೆ ಹೋಗಿ ಬಿದ್ದು ಪಾರಾದರು ಅವರಲ್ಲಿ ಸುರ್ವೆ [illegible] ಎಂಬವನ ಮಾತ್ರ ಹಿಡಿದ ಟೊಂಗಿಯು ಮುರಿದು ಛಾವಣಿ ಮೇಲಿಂದ ಬಿದ್ದು ಗಾಯ ಹೊಂದಿ ಉಳಿದ ಹೊಗೆಗಳಿಂದ ಉಸಿರುಗಟ್ಟಿ ನಿಶ್ಚೇಷ್ಟಿತನಾಗಿ ಬಿದ್ದರು ಆದರೆ ತಾತ್ಕಾಲ ಪ್ರಥಮ ಚಿಕಿತ್ಸೆಯು ಸಿಗಲು ಸ್ಮೃತಿ ಬಂದಿತು ಈ ಕಟ್ಟಡವು ವಿಮೆ ಕಂಪನಿಯಿಂದ ರಕ್ಷಿತವಾಗಿದೆ [ಅ ಪ್ರೆ ಸಂ]

ಇಹವೃತ್ತ.

ವಿ.ಕನ್ ಹಾಯಸ್ಕೂಲಿನಲ್ಲಿ [illegible] ದೊರೆಗಳವರ ಅಧ್ಯಕ್ಷತೆ[illegible] ಕೆಳಗೆ [illegible] [illegible] ಜೀವನಮಿ[illegible] ಎಂಬ [illegible] ವಾಗಿ ಇಂಗ್ಲಿಷಿನಲ್ಲಿ ಅಸ್ಖಲಿತವಾಗಿ [illegible] ಮಾಡಿದರು

ಕಾಠೇವಾಡದ ಪ್ರಜಾ ಪರಿಷತ್

ಅಮ್ರೇಲಿ ತಾ|| ೫-೧೧-೩೩ ಕಾಠೇವಾಡ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ [illegible] ರರು ಇವತ್ತು ಬೆಳಿಗ್ಗೆ ಇಲ್ಲಿಗೆ ಬಂದು ಮು[illegible] ರು. ಅಲ್ಲಿ ಊರಲ್ಲಿ ಮೆರವಣಿಗೆಯು ನಡೆ[illegible] ಸಂಜೆಯ ನಾಲ್ಕು ಗಂಟೆಗೆ ಸರಿಯಾಗಿ [illegible] ಗೆ ಒಂದು ೧೦೦ ಮಂದಿ ಮುಖಂಡರು [illegible] ಸ್ವಾಗತ ಕಮಿಟಿಯ ಅಧ್ಯಕ್ಷರ [illegible] ಷಣ [illegible] ಮಹಾತ್ಮಾ ಗಾಂಧಿ ರವಾನಿಸಿದ [illegible] ಜೇ ಮತ್ತು ಬಾಬು ಪುರುಷೋತ್ತಮ[illegible] ಟಂಡನ್ ಮತ್ತು ಅಬ್ಬಾಸ ತಯ್ಯಬಜಿ [illegible] ಆಶೀರ್ವಾದ ಪತ್ರಗಳು ಓದಲ್ಪಟ್ಟವು [illegible] ಗಳಲ್ಲಿ [ಪರಿಷತ್ತಿನವರು [illegible] ಮಾಡ[illegible] ಸ್ವೀಕರಿಸಬೇಕೆಂದು ಮಹಾತ್ಮರ [illegible] ತ್ತು ಇವತ್ತೇ ರಾತ್ರಿ ವಿಷಯ ಸೂಚ[illegible] ಮಿಟಿಯು ನೆರೆದು ನಾಳೆ ಮತ್ತೆ [illegible] ಕೂಡುವದು [ಅ. ಪ್ರೆ ಸಂ]

ಕಳ್ಳರೇ ಕೊತ್ವಾಲನನ್ನು ಜಡಿದರು

ತಿನೇವಲ್ಲಿ ತಾ|| ೪-೧೧-೩೩ ಕಲ್ಲಶೇ[illegible] ಎಂಬ ಪೋಲೀಸನೊಬ್ಬನು ೩ನೇ ತಾರೀ[illegible] ವಕ ನಯುವಳುರಿಚ ಗ್ರಾಮದಲ್ಲಿ [illegible] ಚೋರನನ್ನು ಹಿಡಿಯಲಿಕ್ಕೆ ಹೋದಾಗ [illegible] ನಿಂದ ಯಾರಿಂದಲೋ ಹೊಡೆಯಲ್ಪಟ್ಟು [illegible] ದನು [ಅ ಪ್ರೆ ಸಂ]

ಜಾಮೀನು ಹಿಡಿಯಗಿಲ್ಲ

ಲಾಹೋರ—೪-೧೧-೩೩ ಇಲ್ಲಿ [illegible] ಉಚ್ಚ ಮಾರ್ಟಿನ ಸಾಹೇಬರು ಲಾಹೋ[illegible] ರೀ ತಾರೀಖು ಬಾಂಬಿನ ಪ್ರಕರಣದಲ್ಲಿ [illegible] ಧೀಕಲ್ಪಟ್ಟ ರಾದ ಶಿವ ಕುಮಾರ ಸರ[illegible] ಬುಕದ ಜಾಮೀನು ತೆಗೆದುಕೊಂಡು [illegible] ಶೀರ ಬಿಡುಗಡೆಯಾಗಬೇಕೆಂದು [illegible] ದ ಅರ್ಜಿಯನ್ನು ಹಿಡಿಯಲಿಲ್ಲ [ಅ ಪ್ರೆ [illegible]

ಪಂಜಾಬ ಕಾನೂನು ಮಂಡ[illegible] ಮುಂದೊಡಿತು

ಪಂಜಾಬ ಲೆಜಿಸ್ಲೇಟಿವ್ಹ ಕೌನ್ಸಿ[illegible] ಸಭೆಗೆ ಮಂಡಿಸಲ್ಪಟ್ಟ [illegible] ಸುವ ತಾರೀಖು, ಇನ್ನೂ ನಿಯಮಿಸ[illegible] [ಅ ಪ್ರೆ [illegible]

ಹುಬ್ಬಳ್ಳಿ ಪೇಟೆಯ ಧಾ[illegible]

(ಕಿಂಡಿ ಹ.ತ್ತಿ ಕಂಡಿ)

ಹುಬ್ಬಳ್ಳಿ ತಾ|| ೫ ಮಧ್ಯಾಹ್ನ ೧[illegible]

ಜಯವಂತ ಹತ್ತಿ	೧೧೦-೧೧೫	[illegible]	[illegible]
ಅಕ್ಕಲಕೋಟೆ ,,	೧೦೦-೧೧೫	[illegible]	[illegible]
ಕಿರಾಣಾ ,,	[illegible]	[illegible]	[illegible]
ಕುಮಟಾ ,,	೧೦೫-೧೧೦	[illegible]	[illegible]
[illegible]	೬೦ ೩೦	[illegible]	[illegible]
[illegible]	೬೦ ೬೫	[illegible]	[illegible]
[illegible]	೬೫-೭೦	[illegible]	[illegible]
[illegible]	೯ ೧೦		
[illegible]	೮-೧೧	[illegible]	

ಬೆಳ್ಳಿ ಬಂಗಾರ

ಬಂಗಾರ	[illegible]

ಕರ್ನಲ್ ಥಾರ್ಬರ್ನರ ಜೀವದ ಮೇಲೆ ಗಂಡಾಂತರ.

" ಕನ್ನಡಿಗ " ನಿಗಾಗಿ ತರಿಸಿದ ಅಸೋಸಿಯೇಟೆಡ್ ಕಂಪನಿ 'ಯ ತಂತಿಗಳು

ಕರ್ನಲ್ ಥಾರ್ಬರ್ನರ ಜೀವದ ಮೇಲೆ ಗಂಡಾಂತರ.

ಅಜಮೀರ ತಾ॥ ೪— ಇಂದಿನ ದಿನ ರಜಪೂತ ಸ್ಥಾನದ ವೈದ್ಯಖಾತೆಯ ಮುಖ್ಯ ಅಧಿಕಾರಿಗಳೂ ಸಿವ್ಹಿಲ್ ಸರ್ಜನರೂ ಆದ ಕರ್ನಲ ಎಚ್ ಎಚ್ ಥಾರ್‌ಬಾರ್ನ ಇವರ ಜೀವವನ್ನು ತೆಗೆದುಕೊಳ್ಳುವುದಕ್ಕೆ ಮಾಡಿದ ಪ್ರಯತ್ನವು ಅವರ ಧೈರ್ಯದ ಮೂಲಕ ನಿಷ್ಫಲವಾಯಿತು. ಯಾವನೋ ಒಬ್ಬ ಹಿಂದೂ ತರುಣನು ಅವರ ಫಿಟ್ಟಿಯ ಸನಿವನಕ್ಕೆ ಹೋಗಿ ಸನ್ನಿನ ಕಠಾರಿಯನ್ನು ಹಿರಿದನು. ಅಷ್ಟರಲ್ಲಿ ಅವರು ಹಿಂದಕ್ಕೆ ಸರಿದದ್ದರಿಂದ ಉಳಿದುಕೊಂಡರು. ತರುಣನು ಹಿಡಿಯಲ್ಪಟ್ಟನು [ಅ ಪ್ರೆ ತಂತಿ]

ದೇವಾಸ ಸಂಸ್ಥಾನದ ಭವಿತವ್ಯತೆ.

ಹೊಸದಿಲ್ಲಿ ತಾ॥ ೫— ಹಿರಿಯದೇವಾಸ ಸಂಸ್ಥಾನದ ಮಹಾರಾಜರ ಸಂಬಂಧದಿಂದ ಸರಕಾರವು ನಡೆಯಿಸಿದ ಚೌಕಶಿಯ ಪರಿಣಾಮವು ಅವರಿಗೆ ಕಟ್ಟಿಗೆ ಹಚ್ಚುವ ಪವಕಿಯಲ್ಲಿ ಮಹಾರಾಜರು ಕೂಡಲೇ ತಿರುಗಿ ಬಾರದಿರಲಿಕ್ಕೆ ಇಚ್ಛಿಸಿದರು ಅವರನ್ನು ಗಾದಿಯಿಂದ ತಳ್ಳುವದಿರದೆ ತೀವ್ರವೇ ಅವರು ತಮ್ಮ ರಾಜ್ಯದಲ್ಲಿ ಯಾವ ಸುಧಾರಣೆ ಮಾಡಬೇಕೆಂಬ ಬಗ್ಗೆ ಯೋಜನೆಯ ಸಂಬಂಧದಿಂದ ಈ ಚವಕಶಿಯು ಇರುತ್ತದೆಂದು ಊಹಿಸಲಾಗಿದೆ [ಅ ಪ್ರೆ ತಂತಿ]

ಜೆ. ಕೃಷ್ಣಮೂರ್ತಿಯವರ ಭವಿಷ್ಯ.

ಮುಂಬಯಿ ತಾ॥ ೬— ಇವತ್ತು ಕೃಷ್ಣಮೂರ್ತಿಯವರು ಹಿಂದುಸ್ಥಾನಕ್ಕೆ ಮರಳಿ ಬಂದರು. ಬಗ್ಗೆ ಅವರು ಅಸೋಸಿಯೇಟೆಡ್ ಪ್ರೆಸ್ಸಿಗೆ ತಿಳಿಸಿದ್ದೇನಂದರೆ—

ಸ್ವಲ್ಪ ದಿವಸಗಳಲ್ಲಿಯೇ ಇಡೀ ಜಗತ್ತನ್ನು ವ್ಯಾಪಿಸುವಂಥ ಮಹಾ ಪರಿಸ್ಥಿತಿ ಉಂಟಾಗುವದೆಂದು ನನಗೆ ಅನ್ನಿಸುತ್ತದೆ. ಯಾಕಂದರೆ ಪ್ರತಿಯೊಂದು ರಾಷ್ಟ್ರದ ಆರ್ಥಿಕ ಸ್ಥಿತಿಯಲ್ಲಿ ಪರಸ್ಪರ ವಿರೋಧ ಬೆಳೆಯುತ್ತ ನಡೆದಿದೆ. [illegible] ಪ್ರತಿಯೊಂದು ರಾಷ್ಟ್ರವು ಜಗತ್ತಿನಲ್ಲಿ ತನ್ನದೇ ದೊಡ್ಡ ರಾಷ್ಟ್ರವಾಗಬೇಕೆಂದು ಹವಣಿಸುತ್ತಿರುವರು. [illegible] ರಾಷ್ಟ್ರಗಳಲ್ಲಿ ಕಂಡು ಬರುವ ರಾಷ್ಟ್ರೀಯತ್ವದ ಅತಿರೇಕವನ್ನು ಹಳಿದ [illegible] ರಾಷ್ಟ್ರೀಯತ್ವದಿಂದ ಹಿಂದುಸ್ಥಾನವು ದೂರ ಇರಬೇಕೆಂದ ಅಂದರು.

[illegible] ರಾಷ್ಟ್ರವು ಸಧ್ಯದಲ್ಲಿ ಆಗುವ ಚಳುವಳಿಯ ಬಗ್ಗೆ ಹೇಳಿದ್ದೇನಂದರೆ- [illegible] ರಾಷ್ಟ್ರದ ಬಗ್ಗೆ ತಮ್ಮ ಹೇಳಿಕೆಯನ್ನು ಜನರು ಸ್ವೀಕರಿಸುವರೋ ಇಲ್ಲವೋ ಎಂಬ ಬಗ್ಗೆ ತಮಗೆ ಸಂಶಯವಿದೆಯೆಂದು ಹೇಳಿದರು

ತಮ್ಮ ಬಗ್ಗೆ ಅನಿ ಬಿಸೆಂಟರ ನಿಧನದ ಬಳಿಕ ಅವರ ಮುಂದಾಳತ್ವವನ್ನು ವಹಿಸುವರೆಂಬ ವೃತ್ತಪತ್ರದಲ್ಲಿಯ ಸುದ್ದಿಯ ಬಗ್ಗೆ ಕೇಳಲು ಅವರು ಅದನ್ನು ಪೂರ್ತಾ ಅಲ್ಲಗಳೆದರಲ್ಲದೆ ಅನಿ ಬಿಸೆಂಟರವರು ಪ್ರತಿಷ್ಠೆ ಇರುವವರಿಗೆ ತಮ್ಮ ತಮ್ಮ ತತ್ವಗಳ ವಿಷಯಗಳಲ್ಲಿ ಪ್ರತ್ಯೇಕ ವ್ಯಾಖ್ಯಾನ ನಡೆಯಿಸಿಕೊಂಡರು ಎಂದು ಅಂದರು [ಅ ಪ್ರೆ ತಂತಿ]

ಕೃಷ್ಣಮೂರ್ತಿಯವರ ಮುಂದಿನ ಪ್ರವಾಸ

ಮುಂಬಯಿ ತಾ॥ ೬— ಕೃಷ್ಣಮೂರ್ತಿಯವರು ಕೆಲ ದಿನ ಮುಂಬಯಿಯಲ್ಲಿ ಇದ್ದು ಮುಂದೆ ಅಡ್ಯಾರಕ್ಕೆ ಹೋಗುವರು [ಅ ಪ್ರೆ ತಂತಿ]

ಹಿಂದುಸ್ಥಾನ ಜಪಾನ ವ್ಯಾಪಾರಿ ಚರ್ಚೆ

ಹೊಸದಿಲ್ಲಿ ತಾ॥ ೫— ಜಪಾನ ಸರಕಾರದ ಮುಖ್ಯ ಪ್ರತಿನಿಧಿಯಾದ ಸಾವಡಾ ಇವರಿಗೆ ಗುರುವಾರದ ನಾಳಿನ ದಿವಸ ಈ ಚರ್ಚೆಯು ನಡೆಯುವದು ಇಷ್ಟರಲ್ಲಿ ಸರ ಭೋರ ಇವರು ಸಹಕಾರಿಗಳೊಡನೆ ಮಾತಾಡಿಕೊಂಡು ನಾನುದಾರ ಸಾವಡಾ ಇವರಿಗೆ ಭೆಟ್ಟಿಯಾಗಿ ಜಪಾನದವರ ಬೇಡಿಕೆಗಳ ವಿಷಯವಾಗಿ ಹಿಂದುಸ್ಥಾನ ಸರಕಾರದವರ ಅಭಿಪ್ರಾಯವೇನಿರುವದೆಂಬದನ್ನು ತಿಳಿಸುವರು. [ಅ ಪ್ರೆ ತಂತಿ]

ಸಿದ್ದಾಪುರದಲ್ಲಿ ಕಾಲೆತ್ತುಗಳ ದರ್ಬಾರ.

ಸಿದ್ದಾಪುರ ತಾ॥ ೫— ಮುಂಬಯಿ ಗವರ್ನರರಾದ ಸರ್ ಫ್ರೆಡರಿಕ್ ಸಾಯಿಕ್ಸ ಇವರು ಈ ಕೊತ್ತಿನ ದಿವಸ ಇಲ್ಲಿ ದರ್ಬಾರು ಕೆರೆದರು. ಈ ಸ್ಥಳವು ಕರನಿರಾಕರಣೆಯ ಚಳವಳಿಯ ವೇಳೆಯಲ್ಲಿ ಒಳ್ಳೇ ಪ್ರಮುಖಸ್ಥಾನ ಪಡೆದಿತ್ತು. ಕಾರವಾರ ಜಿಲ್ಹೆಯಲ್ಲಿ ದರ್ಬಾರ ಕೆರೆಯಲು ತಮಗೆ ಸಂಧಿಯನ್ನು ದೊರಕಿಸಿಕೊಟ್ಟದ್ದಕ್ಕಾಗಿ ಗವರ್ನರರು ಮೊದಲು ಪಾಟೀಲರ ಆಭಾರ ಮನ್ನಿಸಿ ನಂತರ ಹೇಳಿದ್ದೇನಂದರೆ—

ಕಾರವಾರ ಜಿಲ್ಹೆಯ ಸ್ಥಿತಿಯು ೩ ವರ್ಷಗಳ ಹಿಂದೆ ಬಹು ಗಂಡಾಂತರದ್ದಾಗಿತ್ತು. ಆದರೆ ಅಲ್ಲಿಯೂ ಈಗ ಸ್ಥಿತಿಗತಿಯು ಸುಧಾರಿಸ ತೊಡಗಿದೆಯೆಂದು ಹೇಳಲು ಸಂತೋಷವಾಗುತ್ತದೆ

ತಿರುಗಿ ಶಹರಾತ ನಗರಗಳಿಗೆ ಒಂದು ಸೇರಿ ಕೊಂಡಿದ್ದಕ್ಕೆ ಗವರ್ನರರು ಪಾಟೀಲರನ್ನು ಅಭಿನಂದನ ಮಾಡಿ ಈ ಸಮಯದಲ್ಲಿ ಯಾವ ಸ್ತ್ರೀ ವಿನಾಯಿತಿ ಕಾರ್ಯಕ್ರಮ ಕೈಕೊಳ್ಳಬೇಕೆಂದೂ, ಕಾರ್ಯಕರ ವರ್ಗಗಳ ಉತ್ಸವಾದವುಗಳ ಕುರಿತು ಹೇಳಿದರು.

ಕಾಯದೆಭಂಗ ಚಳವಳಿಯಲ್ಲಿ ಕಾರವಾರ ಜಿಲ್ಹೆಯು ಮಾಡಿ ತೋರಿಸಿದ ಕಾರ್ಯವನ್ನು ಉಲ್ಲೇಖಿಸುತ್ತ ಗವರ್ನರರು ಅನ್ನುವದೇನಂದರೆ—

ಕಾಯದೆಭಂಗದ ಮುಖ ತರು ಕರನಿರಾಕರಣೆ ಚಳವಳಿ ಈ ಜಿಲ್ಹೆಯನ್ನು ಅರಿಸಿದ್ದು ದೊಂದು ಸರಕಾರದವರು ಚಳವಳಿಯನ್ನು ನಿಲ್ಲಿಸಲು ಅನೇಕ ವಿಧಗಳಿಂದ ಪ್ರಯತ್ನ ಮಾಡಿದಾಗ್ಯೂ ಬಗೆ ಹರಿಯಲಿಲ್ಲ. ಚಳವಳಿಗಾಗಿ ಒಂದೇ ತಪ್ಪಿನ ಮೂರು ವರ್ಷಗಳ ವರೆಗೆ ಎಲ್ಲಿಂದೂ ತಡಾಯ ಬಂತು. ಆದಕಾರಣ ಸರಕಾರದವರು ಕಾಯದೆಭಂಗದ ವಿರುದ್ಧವಾಗಿ ಕಾಯದೆ ತೆಗೆಯಬೇಕಾಯಿತು. ಈಗ ಎಲ್ಲರೂ ಶಾಂತರೂ ಸುವಿಚಾರಿಗಳೂ ಆಗಿರುವರೆಂಬುದನ್ನು ಕಂಡು ನನಗೆ ಸಂತೋಷವಾಗುತ್ತದೆ

ಇಷ್ಟಾದಬಳಿಕ ಗವ್ಹರ್ನರರು ಸರಕಾರದವರು ಕೈಕೊಂಡ ಯೋಜನೆಯನ್ನು ಕುರಿತು ಕೆಲವೊಂದು ಮಾತು ಹೇಳಿದರು ಯೋಜನೆಯಿಂದ ಕೃಷಿಗೆ ಹೇಳತಕ್ಕದ್ದು ಲಾಭವಾಗುತ್ತದೆಂದು ಹೇಳಿದರು ಹಾಗೆಯೇ 'ಆದರೆ ಈ ಯೋಜನೆಗಳು ಪೂರ್ಣ ಕೃತಿಯಲ್ಲಿ ಬಂದು ಫಲ ಸಿಗಬೇಕಾದರೆ ಎಷ್ಟೋ ವರ್ಷಗಳು ಹೋಗಬೇಕಾಗುವದೆಂಬುದನ್ನು ಮಾತ್ರ ನೆನೆಯಬೇಕಿದೆ ನಾನು ಈ ಕೊತ್ತಿನ ದಿವಸ ಇಲ್ಲಿ ನಿಮಗೆ ಒಂದು ಸಂತೋಷದ ಸುದ್ದಿ ತಂದಿದ್ದೇನೆ ಈ ಸುದ್ದಿಯು ಈ ಕ್ಷಣ ಯಾವತ್ತನ್ನು ಆನಂದದಲ್ಲಿ ಮುಳುಗಿಸಿ ಇರುವು ಈ ಕಾಲೂಕಿನ ಜಪ್ತ ನಡಾ ಧಾನ ವ್ಯಕ್ತಿ ಮೊದಲಾದವುಗಳನ್ನು ಕಂಡು, ಮುಂಬಯಿ ಸರಕಾರದವರು ಅಧಿಕೃತ ಬಾಕಿ ಎಂದು ವಸೂಲ ಮಾಡಿದ ಯಾವತ್ತು ಪತ್ತೆ ಹಣವನ್ನು ತಿರುಗಿ ಕೊಡಬೇಕೆಂದು ಅಪ್ಪಣೆ ಕೊಟ್ಟಿರುವರು ' ಎಂದು ಹೇಳಿದರು

ಈ ಹಣವು ಒಟ್ಟು ೧೧೦೦೦ ರೂ. ಈಗ ಒಡೆದು [illegible] ಗ್ರಾಮ ಸಂಘಟನೆ ಯೋಜನೆ ನೋಡಲು ವೇಗ ಕ ಬಗ್ಗೆ ಭಾಷಣ ಮಾಡಿ ಈ ಗ್ರಾಮ ಸಂಘಟನೆಯಲ್ಲಿ ಎಲ್ಲರೂ ಕಳಕಳಿಯಿಂದ ಸಹಾಯ ಮಾಡಬೇಕೆಂದು ಬಿನ್ನವಿಸಿಕೊಂಡು ಕುಳಿತರು [ಅ. ಪ್ರೆ ತಂತಿ]

ಮೋಟಾರಿಗೆ ಇಂಜಿನ್ನು ಹಾಯಿತು

ಮುಂಬಯಿ ೬-೧೧-೩೩. ಇದೇ ೩ನೇ ತಾರೀಖಿಗೆ ಕ್ವೆಟ್ಟದಲ್ಲಿ ಒಂದು ಇಂಗ್ಲೀಷ ಸೈನ್ಯದ ಮೋಟಾರ ಗಾಡಿಯು ರೈಲು ಮಾರ್ಗವನ್ನು ದಾಟುವಾಗ್ಗೆ ಹಳಿಗುಂಟ ಬರುವ ರೈಲ ಎಂಜಿನಿಂದ ತೊಡಕಬಿದ್ದು ಮೋಟಾರಿನಲ್ಲಿದ್ದ ೬ ಜನರಿಗೆ ಘಾಯವಾಗಿ ಒಬ್ಬನು ಮೃತಪಟ್ಟನು [ಅ ಪ್ರೆ ತಂತಿ]

ಡಾ. ಅನ್ಸಾರಿ ಮುಂಜೆ ಮೊದಲಾದವರು ಸ್ವದೇಶಕ್ಕೆ ಬಂದರು

ಮುಂಬಯಿ ತಾ॥ ೬— ಇವತ್ತು ಮುಂಜಾನೆ 'ವಿಕ್ಟೋರಿಯಾ' ಎಂಬ ಇಟಾಲಿಯನ್ ಹಡಗವು ಬರುವ ವೇಳೆಗಿಂತ ೪ ತಾಸು ತಡವಾಗಿ ಮುಂಬಯಿಗೆ ಬಂದಿತು ಅದರ ಕೂಡ ಬಂದ ಪ್ರತಿಷ್ಠಿತರಲ್ಲಿ ದಕ್ಷಿಣ ಹೈದರಾಬಾದದ ನಿಜಾಮರ ಮಕ್ಕಳಾದ ಮೋಜಾಮಜಾ ಬಹಾದ್ದೂರ ಮತ್ತು ಅವರ ಪತ್ನಿಯವರೂ, ಅಲ್ಲಿಯ ಮುಖ್ಯ ಮಂತ್ರಿಯವರ ಮಗನೂ ಜೆ. ಕೃಷ್ಣಮೂರ್ತಿ, ಡಾ. ಅನ್ಸಾರಿ ಮತ್ತು ಡಾ ಮುಂಜೆ ಇವರು ಇದ್ದರು. ಹೈದರಾಬಾದದ ಯುವರಾಜ ಮತ್ತು ಯುವರಾಜ್ಞಿಯವರನ್ನು ಇದಿರುಗೊಳ್ಳಲು ಮುಖ್ಯ ಮಂತ್ರಿಯಾದ ಮಹಾರಾಜಾ ಸರ್ ಕಿಶನಲಾಲ ಪ್ರಸಾದ ಇವರೂ ಮತ್ತು ಕೃಷ್ಣಮೂರ್ತಿಯವರನ್ನು ಉತ್ಸಾಹದಿಂದ ಇದಿರುಗೊಳ್ಳಲು ಅವರ ಎಷ್ಟೋ ಥಿಯಾಸಫಿಸ್ಟ ಮಿತ್ರರೂ, ಮೆಚ್ಚುಗಳವರೂ ಒಂದಿದ್ದರು. ಡಾಕ್ಟರ ಅನ್ಸಾರಿಯವರನ್ನು ಇದಿರುಗೊಳ್ಳಲು ಶ್ರೀ ಗೋಲಾಬಾಯಿ ಕೌಶಿಕಬಳ್ಳಿಯವರು ಅನೇಕ ಹಿಂದು-ಮುಸಲ್ಮಾನ ವಿ ಪ್ರರೊಂದಿಗೆ ಕೂಡಿದ್ದರು. ಪಂಡಿತ ಗೌರಿಶಂಕರ ಮುಂತಾದ ಹಿಂದು ಮಹಾಸಭೆಯ ಕೆಲ ಕಾರ್ಯಕರ್ತರು ಡಾ. ಮುಂಜೆಯವರನ್ನು ಸ್ವಾಗತಮಾಡಿದರು

ಹಿಂದುಸ್ಥಾನದ ಸಂಗತಿಗಳು ತಮಗೆ ಗೊತ್ತಿರದ್ದರಿಂದ ಈಗಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಏನೂ ಹೇಳುವದಿಲ್ಲ ಎಂದು ಡಾ. ಅನ್ಸಾರಿಯವರು ಹೇಳಿದರು [illegible] ಪರಿಷತ್ತಿಗೆ ಹೋಗಿದ್ದ ಡಾ ಮುಂಜೆಯವರು, ಬಿಳಿಯ ಕಾಗದದ ಸೂಚನೆಗಳಿಗೆ ಯಾವ ಕೊನೆಯ ಸ್ವರೂಪವು ಬರುವದೆಂಬದನ್ನು ಹೇಳಲಿಕ್ಕೆ ಯಾರಿಗೂ ಬರುವದಿಲ್ಲೆಂದು ಅಂದರು ಇವತ್ತಿದ್ದರಲ್ಲಿಯೇ ಸಮಾಧಾನದ ಸಂಗತಿಯೇನಂದರೆ- ಚರ್ಚಿಲ್ ಮತ್ತು ಅವರ ಬಂಗಡದವರು ಬಿಳಿಯ ಕಾಗದದ ಸೂಚನೆಗಳಿಗೆ ಎಷ್ಟು ವಿರೋಧ ಮಾಡತಕ್ಕದ್ದಾರೋ ಅಷ್ಟೇ ಉತ್ಸುಕತೆಯಿಂದ ಸರ್ ಹೋರ ಇವರು ಬ್ರಿಟಿಶ ಮಂತ್ರಿಮಂಡಲದಲ್ಲಿಯ ತಮ್ಮ ಸಹಕಾರಿಗಳ ಸಹಾಯದಿಂದ ಹಾದುಂಟ ತಮ್ಮ ಬಿಳಿಯ ಕಾಗದದಲ್ಲಿಯ ಸೂಚನೆಗಳು ಮಂಜೂರವಾಗುವಂತೆ ಕೆಲಸ ಮಾಡಲು [illegible] ಹಿಂದುಸ್ಥಾನವು [illegible] ಎಲ್ಲವೂ [illegible] ಯ ವಾತಾವರಣ

ಜಾತಿಯ ನಿರ್ಣಯವನ್ನು ಟೀಕಿಸಿ ಮುಂದೆ ಅಂದದ್ದೇನಂದರೆ [illegible] ಹಿಂದೂ ಜನರಿಗೆ [illegible] ನಿರ್ಣಯವನ್ನು ಹಿಂದೂ [illegible] ಸಾಧ್ಯವಿಲ್ಲದಿದ್ದರೂ ನಿರ್ಣಯಕ್ಕೆ ಹಿಂದುಸ್ಥಾನದಲ್ಲೆಲ್ಲ ಎದ್ದ ವಿರೋಧವನ್ನು ನೋಡಿ ಬ್ರಿಟಿಶ ಸರಕಾರದವರು ಅದರಲ್ಲಿ ತಿದ್ದುಪಡಿ ಮಾಡುವರೆಂಬ ಆಶೆ ತಮಗಿದೆಯೆಂದೂ ಹೇಳಿದರು

(ಅ ಪ್ರೆ)

ಬಿ ಎ ಪರೀಕ್ಷೆ ಪರಿಣಾಮವು

೧೯೩೩ ನೇ ಅಕ್ಟೋಬರದಲ್ಲಿ ನಡೆದ ಬಿ ಎ ಮತ್ತು ಬಿ ಎಸ್. ಸಿ. ಪರೀಕ್ಷೆಗಳಲ್ಲಿ ಕೆಳಗಿನ ನಂಬರದವರು ಉತ್ತೀರ್ಣ ಹೊಂದಿದ್ದಾರೆ

ಬಿ. ಎ ಪರೀಕ್ಷೆ

ಫರ್ಸ್ಟಕ್ಲಾಸ ಆನರ್ಸ ನಂಬರ ೧೯೩೩

ಸೆಕಂಡ ಕ್ಲಾಸ ಆನರ್ಸ ನಂಬರ [illegible]

ಪಾಸು.

[illegible]

ಬಿ. ಎಸ್. ಸಿ. ಪರೀಕ್ಷೆ

ಕೆಳಗಿನ ನಂಬರದವರು ಸರ್ [illegible] ವಿಷಯಗಳಲ್ಲಿ ಉತ್ತೀರ್ಣ ಹೊಂದಿದ್ದಾರೆ.

[illegible]



ಡಾ ಕುಲಕರ್ಣೀಯ
ಲೆಬೊರೇಟರಿ ಮುಂಬೈ
ನಂಬ ೯
ಒಟ್ಟು ಕಿ. ೧-೫-೦
ಎಲ್ಲ ಕೆಮಿಸ್ಟರಲ್ಲಿಯೂ
ದೊರೆಯುವದು.

ಸ್ತ್ರೀಯರ ವಿಕಾರದ ಮೇಲೆ
ರಾಮಬಾಣ ಔಷಧವು

ಸರಗು, ಬಿಳೀಸರಗು, ಕೆಂಪು ಸರಗು ತಿಂಗಳಿಗೊಮ್ಮೆ ಸರಿಯಾಗಿ ಮುಟ್ಟಾಗದಿ. ಎಕೆ. ಬೆನ್ನು ಹಿಡಿಯೋಣ, ನಡನೋವು ಅಶಕ್ತತಾ ಮುಂತಾದ ವಿಕಾರಗಳು ಗುಣವಾಗು ತ್ತವೆ. ಗರ್ಭಕೋಶದ ಎಲ್ಲ ವಿಕಾರಗಳು ನೆಟ್ಟಗಾಗಿ ಗರ್ಭಧಾರಣ ವಗುತದೆ. ಬಾಣಂತಿತನ ಆದ ಮೇಲೆ ಕೆಗದು ಕೊಳ್ಳಲು ಪ್ರಕೃತಿ ನಿರೋಗಿ ಮತ್ತು ಸದೃಢ ಆಗುತ್ತದೆ

ಬಿ. ಟಿ. ಕೆರೂರ ಅ್ಯಂಡ ಸನ್ಸ
ಮೆಡಿಕಲ್ ಸ್ಟೋರ್ಸ ಬಾಗಲಕೋಟೆ

ವಿಜಯ ಸಿನೇಮಾ ಧಾರವಾಡ.

ತಾರೀಖು ೮. ಶನಿವಾರದಿಂದ ಸುರುವು.

ಕ್ರೂರ ಪಶುಗಳಿಂದ ತುಂಬಿದ
ಮಾತಾಡುವ ಭಯಂಕರ ಜಂಗಲ ಚಿತ್ರಪಟ.

ಜಂಗಲ ಜವಾಹೀರ.

ನಾರಿಸ ವೈರಿ

ಚಂದ್ರಪ್ರಭಾ ಈ ಔಷಧದಿಂದ ೩ ದಿವಸದಲ್ಲಿಯೇ ಅಜೀರ್ಣ ಗುಣ ... ಕಿವ್ಹ ತ್ತ ಕಳಿಸಿದಲ್ಲಿ ವ್ಹಿ. ಪಿ. ಯಿಂದ ಕಳಿಸುತ್ತೇವೆ ಏಜಂಟರಿಗೆ ಭಪೂರ ಮಿ ಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ

ಮ್ಯಾನೇಜರ ರಾಘವ ಫಾರ್ಮಸಿ ಗೋಕಾಕ ಜಿ ಬೆಳಗಾವ

ಕನ್ನಡಿಗನ ಚಂದಾ ವಿವರ.

	ಸ್ಥಳಿಕರಿಗೆ	ಪರಸ್ಥಳದವರಿಗೆ
ತಿಂಗಳಿಗೆ	೦-೬-೬	೦-೧೩-೦
ತಿಂಗಳಿಗೆ	೧-೮-೦	೨-೮-೦
೬ ತಿಂಗಳಿಗೆ	೨-೮-೦	೫-೦-೦
ವರ್ಷಕ್ಕೆ	೫-೦-೦	೯-೦-೦

ವ್ಯಾಪಾರಿಗಳಿಗೆ ಕಮೀಶನ್ } ಅಸ್ಪೃಶ್ಯತಾ ನಿವಾರಣೆ. { ಪ್ರಚಾರಕರಿಗೆ ಸುಸಮಯ

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದ ಕ್ಕ ಕ ಸ್ಮೃತಿ ಸೂತ್ರಾದಿಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ ಧರ್ಮಗುರುಗಳ ಉಕ್ತಿ. ದೇಶಕ್ಕೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ. ದೊಡ್ಡ ದೊಡ್ಡ ವ್ಯಕ್ತಿ ಪತ್ರಗಳು ಬಂದಿವೆ. ಅದ್ಯಾಗ್ಯಿಲ್ಲವೆ ವ್ಹಿ. ಪಿ. ಕಳುಹಿಸುವದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ. ಉಚಿತ ಅಂಚಿಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಘದವರಿಗೂ ಹೆಚ್ಚಿನ ಕಮೀಶನ್

೬-೧೧-೩೩ ಟಿ ಬಿ ಕೇಶವರಾವ್ ಕೃಷ್ಣಾ ಬೀದಿ ಬಳ್ಳಾರಿ.

ಜಾಹೀರಾತ.

ದಿ ಧಾರವಾಡ ಬ್ಯಾಂಕ ಧಾರವಾಡ ಇದರ ಮ್ಯಾನೇಜರ ಕಡೆಯಿಂದ ಸಾರ್ವಜನಿಕರಿಗೆ ತಿಳಿಸುವದೇನಂದರೆ...

ತಾ॥ ೧ನೇ ನವ್ಹಂಬರ ೧೯೩೩ನೇ ಇಸ್ವಿಯಿಂದ ನಮ್ಮ ಬ್ಯಾಂಕಿನ ಕೆಲಸದ ತಾಸುಗಳು ಕೆಳಗೆ ಬರೆದ ಪ್ರಕಾರ ಮಾಡಲ್ಪಟ್ಟಿವೆ.

ಬೆಳಿಗ್ಗೆ ೮ ರಿಂದ ೧೧ ೩೦ ಮಧ್ಯಾಹ್ನ ೩ ರಿಂದ ೬-೩೦

ಈ ಬ್ಯಾಂಕಿನ ಕೂಡ ವ್ಯವಹಾರ ಇಟ್ಟವರು ಅಗರ ಮಾಡತಕ್ಕವರು ಮೇಲೆ ನಮೂದಿಸಿದ ವೇಳೆಯಲ್ಲಿ ಬರಬೇಕು. ತಿಳಿಯುವದು.

ಧಾರವಾಡ
ತಾ॥ ೬-೧೧-೩೩

T. N. Kadakol
General Manager & Administrative Officer

ಗರುಡರವರ ಅಚ್ಚಾದ ಸಚಿತ್ರ ಸಂಗೀತ ನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ
೧॥ ೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ
ಶಹಾಪೂರ ಪೇಟೆ ಗದಗ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಭವಾನಿ ಆಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಸಾಮಾನು, ಸ್ಟ್ಯಾಂಡು, ತೊಟ್ಟಿಲು ಮತ್ತು ಮನೆಯ ಬಾಗಿಲು ತಯಾರಾಗುತ್ತವೆ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ನಂ. ಬಿ. ೨೭೮೮

ಕನ್ನಡಿಗ

ನಿತ್ಯ ಪತ್ರ ಬೆಲೆ ೩ ಪೈ

ಸಂಪಾದಕರು:— ಆಲೂರ ವೆಂಕಟರಾಯರು

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಬುಧವಾರ ಕಾರ್ತಿಕ ಬಹುಳ ೭ ಶಕೆ ೧೮೫೩ ತಾ॥ ೯-೧೨-೩೧ [ಸಂಚಿಕೆ ೧೭೬

ಇನಸ್ಯುಲಿರನ್ಸ

ಜೀವವಿಮೆ ಇಳಿಸಲು ದಿ ಯುನಾಯಿಟೆಡ್ ಕರ್ನಾಟಕ ಇನಸ್ಯುಲಿರನ್ಸ ಕಂಪನಿಯೇ ಉತ್ತಮವಾದುದು.

ಇನಸ್ಯುಅರನ್ಸ

ಪ್ರಸ್ತೀಲದ ಹಣವನ್ನು ಪ್ರತೇಕ ದಲ್ಲಿಯೇ ಉಳಿಸಬೇಕಾದರೆ. ದಿ ಯುನಾಯಿಟೆಡ್ ಕರ್ನಾಟಕ ಇ. ಕಂ. ಲಿ. ಧಾರವಾಡ ಇದರಲ್ಲಿಯೇ ವಿಮೆ ಇಳಿಸಿರಿ

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾನೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ. ತಾ॥ ೨೫-೮ ೩೧ } ಕೃಷ್ಣರಾವ ಅಂಕಲಿಗಿ ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣಿ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳೀ, ಹಳದಿ, ಕೆಂಪು ಚಿಮಣಿಯಣ್ಣಿ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಯಿಲ್ (೨) ಮುನಿಚ್ ಧಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋವಿ ರ್ಣನ್ ಹೊಸ ಮೋಟಾರ ಸಾಯಕಲ್ (೪) ಸಬಕಾರ (೫) ಮೋಟಾರ ಮತ್ತು ಕ್ಸ್ಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾಗಳ ಸೋಲ ಏಜನ್ಸಿಗಳು ನಮ್ಮ ಕಡಿಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝ್ಯಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುವದೆ ಸಬ್ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ವಿಶೇಷ ಸೂ. ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಳಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಶನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

“ ನೀಲಗಿರಿ ಎಣ್ಣಿ ”

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ಸಂಧಿವಾತ, ಎದೆನೋವು, ತಲೆನೋವು, ಭಳಜ್ವರ, ಮೋಡಿಗೆಮ್ಮು, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಕೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕೆ. ಬೊಂಬಿ ಆ್ಯಂಡ ಕಂಪನಿ, ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

೧ನೇ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರ ಪಡೆದಿದೆ.

೨ನೇ ಮಹಾಯಾತ್ರಾ ಪ್ರವಾಸವು

ರೇಲ್ವೆ ಕಂಪನಿಯಿಂದ ಪರವಾನಗೀ ಪಡೆದುಕೊಂಡಿರುತ್ತದೆ.

ತಾ॥ ೨೮-೧೨-೧೯೩೧ ರಿಂದ ೨೫-೨-೧೯೩೨ ರ ವರೆಗೆ

ಮುಂಬಯಿ, ಉಜ್ಜಯಿ, ದಿಲ್ಲಿ, ಶ್ರೀಕಾಶಿ, ಗಯಾ, ಕಲ್ಕತ್ತಾ, ಮದ್ರಾಸ, ರಾಮೇಶ್ವರ ಲಂಕಾ, ಮೈಸೂರ ಮೊದಲಾದ ೮೮ ಪುಣ್ಯ ಕ್ಷೇತ್ರಗಳ ಯಾತ್ರಾ ಸುಯೋಗವು. ಸೆಕಂಡ ಕ್ಲಾಸ ೩೧೦ ರೂ. ಥರ್ಡಕ್ಲಾಸ ೧೮೦ ರೂ. ಮಾತ್ರ ಟಿಕೇಟು ಪಡೆಯತಕ್ಕವರು ಕ್ಲಾಕ ರೆ ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ವಿಶೇಷ ಮಾಹಿತಿ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು

ಜಮೀನದಾರರ ಕಾಮಧೇನು.

ಸದರ ಕಂಪನಿಯ ಎಂಜಿನ್ ರೆಂಟಿಗಳಿಂದ ಕಳೆದ ಮೂರು ವರ್ಷಗಳಿಂತ ಬರುವ ೧೯೩೨ನೇ ಇಸವಿಯ ಬೇಸಿಗೆಯಲ್ಲಾದರೂ ಪಡ ಜಮೀನುಗಳು ಯೋಗ್ಯ ದರದಲ್ಲಿ ಕಿರ್ದಿ ಮಾಡಿ ಕೊಡಲ್ಪಡುವವು.

ಆಫೀಸು ಸ್ಟೇಶನ್ ರೋಡ ಹುಬ್ಬಳ್ಳಿ ತಾ॥ ೬-೧೧-೧೯೩೧ — ಜಿ. ಎ. ಶಿರೂರ, ಆರ್ಗನೈಝರ

ಶ್ರೀ ದೇವಾಂಗ ಮಹರ್ಷಿಯ ಜಯಂತಿಯ ಉತ್ಸವಗಳು

ಇಲಕಲ್ಲ

ಶ್ರೀ ದೇವಾಂಗ ಮಹರ್ಷಿಯ ಜಯಂತಿಯು ಕಾರ್ತೀಕ ಶು॥ ೧೫ ಶಕೆ ೧೮೫೩ ನೇ ಸೋಮವಾರ ಇಲ್ಲಿಯ ದೇವಾಂಗ ತರುಣ ಸಂಘದಿಂದ ಅತಿ ವಿಜೃಂಭಣೆಯಿಂದ ಜರುಗಿಸಲ್ಪಟ್ಟಿತು.

ನಂತರ ಸಾಯಂಕಾಲ ನಾಲ್ಕು ಘಂಟೆಯ ಮೇಲೆ ಶ್ರೀ ಬನಶಂಕರೀ ದೇವಸ್ಥಾನದಲ್ಲಿ ಶ್ರೀ ದೇವಾಂಗ ಧರ್ಮ ಪ್ರಸಾರಕ ಸಮಾಜದ ಅಧ್ಯಕ್ಷರಾದ ಶ್ರೀ ಅಮರಪ್ಪ ಬಾಳಪ್ಪ ಬಿಜ್ಜಲ ಇವರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿತು ಶ್ರೀ ಸಂಣ ಅಮರಪ್ಪ ಬಿಜ್ಜಲ ಇವರು ಪುರಾಣೋಕ್ತವಾದ ಶ್ರೀ ದೇವಾಂಗ ಮಹರ್ಷಿಯ ಉತ್ಪತ್ತಿಯನ್ನು ವಿಶದೀಕರಿಸಿದರು. ಆ ಮೇಲೆ ಶ್ರೀ ದೇವಾಂಗ ಧರ್ಮ ಪ್ರಸಾರಕ ಸಮಾಜದ ಜನರಲ್ ಸೆಕ್ರೆಟರಿಗಳಾದ ಶ್ರೀ ಫಕೀರಪ್ಪ ಬರದವಾಡ ಇವರು ಮೂವತ್ತು ಮೂರು ಕೋಟಿ ದೇವಾನುದೇವತೆಗಳಿಗೆ ವಸ್ತ್ರಗಳನ್ನು ನಿರ್ಮಿಸಿ ಅಂಗರಕ್ಷಣೆ ಮಾಡಿದನೆಂದು ಪುರಾಣವು ಘಂಟಾಘೋಷವಾಗಿ ಸಾರುತ್ತದೆ ಆದರೆ ಅಂಥವರ ವಂಶಜರಾದ ನಾವು ಇಡೀ ಭರತ ಖಂಡಕ್ಕೆ ಕೃತ್ಸ್ನಾಗಿರಲಿ ನಮ್ಮ ಉಡು ತೊಡಿಗೆಗಳಿಗೇನೇ ಪರದೇಶಗಳ ಕಡೆಗೆ ಮೋರೆ ತಿರುವಿದ್ದೇವೆ ಇನ್ನೂ ಅಲ್ಪಸ್ವಲ್ಪ ಆರ್ಯ ಮಹಿಳೆಯರು ನಮ್ಮಿಂದ ತಯಾರಾಗುವ ಸೀರೆ ಕುಪ್ಪಸಗಳನ್ನು ಧರಿಸುವದರಿಂದ ನಮ್ಮ ಜನಾಂಗಕ್ಕೆ ಕೆಲಮಟ್ಟಿಗೆ ಹೊಟ್ಟೆಗೆ ಸಿಗಲಿಕ್ಕೆ ಅವಕಾಶವಾಗಿದೆ ಆದರೂ ಕ್ರಮೇಣವಾಗಿ ಬಿಡುತ್ತಾ ನಡೆದಿತ ವರು ಈ ಕ್ರಮವು ಹತ್ತೆಂಟು ವರ್ಷ ಸಾಗಿತೆಂದರೆ ಎಲ್ಲ ನೇಯಿಗೆಯ ವ್ಯವಸಾಯದವರು ತಮ್ಮ ತಮ್ಮ ಮಗ್ಗಗಳನ್ನು ಎರಗಬೇಕಾಗುತ್ತದೆ ಅದಕ್ಕಾಗಿ ದ ಕಾಲಕ್ಕನುಸರಿಸಿ ನಮ್ಮಲ್ಲಿ ಕೈಮಗ್ಗದ ಕೈನೂಲಿನ ಮತ್ತು ಲೀಶಿಮೆಯ ವ್ಯವಸಾಯವನ್ನು ಹೆಚ್ಚು ಸುಸಂಘಟಿತ ರೀತಿಯಿಂದ ಮಾಡಿಕೊಂಡು ಪುನರುಜ್ಜೀವನಗೊಳಿಸಿದರೇನೇ ನಮ್ಮ ಗತಿಯು ಇತ್ಯಾದಿ ಹೇಳಿದರು. ಶ್ರೀ ಶಿವಶಂಕರಪ್ಪ ಸಕ್ರಿ ಬಿ.ಎ ಇವರು ಜಯಂತಿಯುಂದರೇನು ಅದರ ಉದ್ದೇಶವೇನು ಎಂಬುದನ್ನು ಹೇಳಿದರು. ಮೊದಲೇ ಗೊತ್ತುಪಡಿಸಿಕೊಂಡ ಪ್ರಕಾರ ದೇವಾಂಗ ಮಠಸ್ಥರಿಗೂ, ಅರ್ಚಕರಿಗೂ ಲಿಂಗದಪುರಿಗೂ ನಾನಾ ವೈರಾಗಿಗಳಿಗೂ ಕೈನೂಲಿನ ಕೈಮಗ್ಗದ ವಸ್ತ್ರಗಳನ್ನು ಕೊಟ್ಟದ್ದಲ್ಲದೆ ಅಸ್ಪೃಶ್ಯರಿಗೂ ಅಂಗಹೀನರಿಗೂ ಅನಾಥರಿಗೂ ಸದರಿ ವಸ್ತ್ರಗಳಲ್ಲಿ ಸ್ತ್ರೀಯರಿಗೆ ಒಂದೊಂದು ಖಾದಿ ಖಣ ಮಕ್ಕಳಿಗೆ ಖಾದಿ ಟೊಪ್ಪಿಗೆಗಳನ್ನು ಹಂಚಲಾಯಿತು ಉಳಿದ ಆರೇಳು ನೂರು ಜನ ಬಡವರಿಗೆ ಫಲಾಹಾರ ಒಂದೊಂದು ಮುಷ್ಟಿ ಹೀಗೆ ಕೊಡಲ್ಪಟ್ಟದ್ದಾಯಿತು.

ಗದಗ ಬೆಟಗೇರಿ

ಮೊದಲೇ ಸಮಾಜದಿಂದ ಪ್ರಸಿದ್ಧವಾದ ಪ್ರಕಾರ ಇಲ್ಲಿಯ ದೇವಾಂಗ ಸಮಾಜದಿಂದ ಉತ್ಸವವು ಜರುಗಿಸಲಾಯಿತು.

ಘಟಕೋಳ (ಸಂಸ್ಥಾನ ಕೊಲ್ಹಾಪುರ)

ಇಲ್ಲಿ ಸಮಾಜದಿಂದ ಜಾಹೀರ ಮಾಡಲ್ಪಟ್ಟ ಪ್ರಕಾರ ಶ್ರೀ ದೇವಾಂಗ ಮಹರ್ಷಿಯ ಜಯಂತ್ಯುತ್ಸವವು ಒಳ್ಳೆ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಆ ದಿನ ಎಲ್ಲರೂ ಹಬ್ಬದಂತೆ ಆಚರಿಸಿ ತಮ್ಮ ತಮ್ಮಲ್ಲಿ ಸದರ ಪ್ರಕ್ರಣವನ್ನಾಚರಿಸಿದರು.

ಕನ್ನಡಿಗ

ಬುಧವಾರ ತಾರೀಖು ೮-೧೧-೧೯೩೩

ರಿಝರ್ವ ಬ್ಯಾಂಕು.

ನಾವು ನಮ್ಮ ೨೬-೧೦-೩೩ನೆಯ ಇಸ್ವಿಯ ಅಗ್ರಲೇಖದಲ್ಲಿ ರಿಝರ್ವ ಬ್ಯಾಂಕಿನ ವಿಷಯವಾಗಿ ಬರೆಯುವಾಗ, ರಿಝರ್ವ ಬ್ಯಾಂಕಿನ ಮುಖ್ಯ ಕಾರ್ಯಗಳು ಎರಡು [೧] ಚಲನ ವ್ಯವಸ್ಥೆ [೨] ದೇಶದೊಳಗಿನ ಬಂಡವಲವನ್ನು ಕೂಡಿಹಾಕಿ ಮತ್ತು ಅದನ್ನು ಪ್ರಸಾರದಲ್ಲಿ ಇಟ್ಟು ಉದ್ಯೋಗ ಧಂದೆಗಳಿಗೆ ಅದರ ಉಪಯೋಗವನ್ನು ಮಾಡಿಕೊಡುವುದು. ಇವೆರಡೂ ಕಾರ್ಯಗಳು ಹಿಂದುಸ್ಥಾನಕ್ಕೆ ಹಿತವಾಗುವಂತೆ ನಡೆಯಬೇಕಾದರೆ ಮುಖ್ಯವಾಗಿ ಅದರ ರಚನೆಯು ಸುದೃಢವಾಗಿರಬೇಕು. ಆದರೆ ಈಗ ಸರಕಾರದವರು ಅದಕ್ಕೆ ಕೊಡಲಿಚ್ಛಿಸುವ ಸ್ವರೂಪವನ್ನು ನೋಡಿದರೆ, ಅದು ಕೇವಲ ಸರಕಾರದ ಒಂದು ಶಾಖೆಯಾದಂತೆ ಆಗುವುದು. ಜೊತೆಗೆ ಅದರಲ್ಲಿ ಜನತೆಯ ಪ್ರಾತಿನಿಧ್ಯದ ಪ್ರಾಬಲ್ಯವು ಉಳಿಯುವುದಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಅದು ಹೇಗೆ ಎಂಬುದನ್ನು ನಾವು ಇಂದು ಇಲ್ಲಿ ತೋರಿಸುವೆವು.

ವರ್ತುಲಾಕಾರ ಪರಿಷತ್ತಿನಲ್ಲಿ ಈ ರಿಝರ್ವ ಬ್ಯಾಂಕಿನ ಪ್ರಶ್ನೆಯು ಚರ್ಚಿಸಲ್ಪಟ್ಟಿತು. ಇಂಥದೊಂದು ಬ್ಯಾಂಕು ಇರುವುದು ಅವಶ್ಯವೆಂದು ಗೊತ್ತಾದಾಗ ಅದರ ರಚನೆಯು ಹೇಗಿರಬೇಕೆಂಬ ಬಗ್ಗೆ ವಿಚಾರವಾಗಿ ಅದರ ಬಂಡವಲವನ್ನು ಖಾಸಗೀ ರೀತಿಯಿಂದ ಶೇರುಗಳನ್ನು ಕೂಡಿಸಬೇಕೆಂದು ಗೊತ್ತಾಯಿತು. ಹಾಗೆ ಮಾಡಿದರೆ, ಬ್ಯಾಂಕಿನ ಕಾರಭಾರವು ರಾಜಕಾರಣದಿಂದ ಅಲಿಪ್ತವಾಗಿ ಉಳಿಯುವುದೆಂಬ ತಿಳುವಳಿಕೆಯಿಂದ ಈ ಶೇರಹೋಲ್ಡರ ಬ್ಯಾಂಕಿನ ಕಲ್ಪನೆಗೆ ಅನೇಕರು ಪುಷ್ಟಿಯನ್ನು ಕೊಟ್ಟರು. ಆದರೆ, ಹೀಗೆ ರಾಜಕಾರಣದಿಂದ ಅದು ನಿಜವಾಗಿಯೇ ಅಲಿಪ್ತವಾಗಿ ಉಳಿಯಬೇಕಾದರೆ ಅದರಲ್ಲಿ ಹಿಂದೀ ಜನರ ಹಣವು ಹೆಚ್ಚಾಗಿ ಇರತಕ್ಕದ್ದು. ನಮ್ಮ ಅಧಿಕಾರಿಗಳ ವರ್ಚಸ್ಸಿಗೆ ಒಳಗಾಗದೆ ಕಾಯದೆಮಂಡಲಗಳ ಅಧಿಕಾರದ ಕೆಳಗೆ ಇರತಕ್ಕದ್ದು. ಹೀಗಿದ್ದರೆ ಮಾತ್ರವೇ ಆ ಬ್ಯಾಂಕಿನಿಂದ ಒಳ್ಳೇ ಪರಿಣಾಮವಾಗುವುದು. ಇಲ್ಲದಿದ್ದರೆ ಇಲ್ಲ. ೧೯೨೭ರ ನೆಯ ಇಸ್ವಿಯಲ್ಲಿ ಸರ್ ಬ್ಲಾಕೆಟ್ ಇವರು ಈ ತರಹದ ರಿಝರ್ವ ಬ್ಯಾಂಕನ್ನು ಇಲ್ಲಿ ಸ್ಥಾಪಿಸುವ ಪ್ರಶ್ನೆ ಎತ್ತಿದ್ದರು. ಆಗ ಪಂ. ಮಾಲವಿಯರು ಅದು ಕಾಯದೆ ಮಂಡಳದ ಅಧಿಕಾರದಲ್ಲಿ ಇರಬೇಕೆಂದು ವಾದಿಸಿ, ಬ್ಲಾಕೆಟ್ ಇವರನ್ನು ವಿರೋಧಿಸಿದ್ದರು. ಆದರೆ ಈಗ ನೋಡಬೇಕು. ಇದರ ರಚನೆಯಲ್ಲಿ ಅಧಿಕಾರಿಗಳ ವರ್ಚಸ್ಸೇ ಹೆಚ್ಚಾಗಿ ಉಳಿಯುವ ಸಂಭವವಿದೆ. ಈಗ ರಿಝರ್ವ ಬ್ಯಾಂಕಿನ ಕೆಲಸವನ್ನು ಇಂಪೀರಿಯಲ್ ಬ್ಯಾಂಕು ಕೆಲಮಟ್ಟಿಗೆ ಮಾಡುತ್ತಿರುತ್ತದೆ. ಅದರ ಬದಲು ಈಗ ಹೊಸದಾಗಿ ತೆರೆಯಲ್ಪಡುವ ರಿಝರ್ವ ಬ್ಯಾಂಕಿನ ರಚನೆಯೂ ಬಹುಶಃ ಈ ಇಂಪೀರಿಯಲ್ ಬ್ಯಾಂಕಿನ ರಚನೆಯಂತೆಯೇ ಇರುತ್ತದೆ. ಇಂಪೀರಿಯಲ್ ಬ್ಯಾಂಕಿನ ಸ್ಥಾಪನೆಯಿಂದ ಮಿಶ್ರ ಬ್ಯಾಂಕುಗಳು ಕುಗ್ಗಿ ಹೋಗಿವೆ. ಆ ಇಂಪೀರಿಯಲ್ ಬ್ಯಾಂಕಿನಲ್ಲಿಯಾದರೋ ಯುರೋಪಿಯನ್ನರ ಪ್ರಾಬಲ್ಯವೇ ಇದೆ. ಸೆಂಟ್ರಲ್ ಬೋರ್ಡಿನ ಮೇಲಿರುವ ೧೬ ಜನ ಡಾಯರೆಕ್ಟರರಲ್ಲಿ ೯ ಜನರು ಯುರೋಪಿಯನ್ನರು ಇರುತ್ತಾರೆ. ಮ್ಯಾನೇಜಿಂಗ ಗವ್ಹರ್ನರರೂ ಸೆಕ್ರೆಟರಿಗಳೂ ಕೋಶಾಧ್ಯಕ್ಷರೂ ಎಲ್ಲರೂ ಇಂಗ್ಲಿಷ ಜನರೇ. ಇನ್ನು ಮುಂದೆ ಬರುವ ರಿಝರ್ವ ಬ್ಯಾಂಕಿನಲ್ಲಿಯೂ ಹೀಗೆ ಯುರೋಪಿಯನ್ನರ ಪ್ರಾಬಲ್ಯವೇ ಉಳಿಯುವ ಸಂಭವವಿದೆ. ಹಾಗೆ ಆದರೆ ಈ ಬ್ಯಾಂಕಿನಿಂದ ಹಿಂದುಸ್ಥಾನಕ್ಕೆ ಲಾಭವಾಗುವುದು ಎಂತು? ಮ್ಯಾನೇಜಿಂಗ ಗವ್ಹರ್ನರರನ್ನು, ಡೆಪ್ಯುಟಿ ಗವ್ಹರ್ನರರನ್ನು ನೇಮಿಸುವ ಅಧಿಕಾರವು ಹಿಂದುಸ್ಥಾನದ ಗವ್ಹರ್ನರ ಜನರಲ್ ಇವರಿಗೆ ಇರುತ್ತದೆ. ಅದೇ ಮೇರೆಗೆ ನಾಲ್ಕು ಜನ ಡಾಯರೆಕ್ಟರರನ್ನು ನೇಮಿಸುವ ಅಧಿಕಾರವೂ ಗವ್ಹರ್ನರ ಜನರಲ್ ಇವರಿಗೇ ಇರುತ್ತದೆ. ಅಂದಬಳಿಕ ಈ ರಿಝರ್ವ ಬ್ಯಾಂಕಿನಲ್ಲಿ ಯುರೋಪಿಯನ್ನರ ಪ್ರಾಬಲ್ಯವೇ ಉಳಿಯುವುದೆಂದು ತಿಳಿಯಲು ಅಡ್ಡಿ ಏನು? ಗವ್ಹರ್ನರ ಜನರಲ್‌ರು ಸಾಮಾನ್ಯತಃ ತಾವಾಗಿ ಹಿಂದೀ ಮನುಷ್ಯರನ್ನು ಆ ಸ್ಥಳಗಳಿಗೆ ನೇಮಿಸುವರೆಂದು ತಿಳಿಯುವುದು ಮೂರ್ಖತನವು. ಇನ್ನು ೧೨ ಜನ ಡಾಯರೆಕ್ಟರರಲ್ಲಿ ಉಳಿದ ೮ ಜನ ಡಾಯರೆಕ್ಟರರನ್ನು ಆರಿಸುವ ಅಧಿಕಾರವು ಮಾತ್ರ ಶೇರ್‌ಹೋಲ್ಡರರವರಿಗೆ ಇರುತ್ತದೆಂಬುದು ಸುಳ್ಳಲ್ಲ. ಆದರೆ ಇದರಲ್ಲಿ ಹಿಂದೀ ಜನರು ಆರಿಸಿ ಬರಬೇಕಾದರೆ ಈ ಬ್ಯಾಂಕಿಗೆ ಬೇಕಾಗುವ ಬಂಡವಲವು ಹಿಂದೀ ಜನರಿಂದ ಹಣ ತೆಗೆದುಕೊಂಡು ಕೂಡಿಸಲ್ಪಡಬೇಕು. ಹಾಗೆ ಈಗಿನ ಬಿಲ್ಲಿನಲ್ಲಿ ನಿರ್ಬಂಧವಿಲ್ಲ. ಅಂದಬಳಿಕ ಉಪಯೋಗವೇನು? ಕನಿಷ್ಠ ೧೦೦ಕ್ಕೆ ೭೫ ರಷ್ಟು ಬಂಡವಲವಾದರೂ ಹಿಂದೀ ಜನರದಿರಬೇಕೆಂದು ಈ ಕಾಯದೆಯಲ್ಲಿ ನಿರ್ಬಂಧ ಹಾಕಬೇಕಾಗಿ ಹಿಂದೀ ಜನರ ಬೇಡಿಕೆ. ಈಗ ಈ ಬಿಲ್ಲು ಸಿಲೆಕ್ಟ ಕಮಿಟಿಯ ಕಡೆಗೆ ಒಪ್ಪಿಸಿದ್ದು ಆ ಕಮಿಟಿಯವರು ಜನರ ಅಭಿಪ್ರಾಯವನ್ನು ಕೇಳಹತ್ತಿರುವರು. ಈ ತರಹದ ಬೇಡಿಕೆಯು ಆ ಕಮಿಟಿಯ ಮುಂದೆ ಇಡಲ್ಪಟ್ಟಿದೆ. ಇದರಂತೆ ಈಗಿನ ಬಿಲ್ಲಿನಲ್ಲಿ ಬದಲು ಆಗುವುದೋ ಹೇಗೆ ಎಂಬುದನ್ನು ನೋಡಬೇಕು. ಒಂದು ವೇಳೆ ಬದಲು ಆದರೂ ಕೂಡ, ಎಲ್ಲಿಯವರೆಗೆ ಗವ್ಹರ್ನರ ಜನರಲ್‌ರು ತಮ್ಮ ಮನಸ್ಸಿಗೆ ಬಂದ ಮ್ಯಾನೇಜಿಂಗ ಗವರ್ನರರನ್ನು ನೇಮಿಸುವರೋ ಅಲ್ಲಿಯವರೆಗೆ ಇಂಥ ಬ್ಯಾಂಕಿನಲ್ಲಿ ಯುರೋಪಿಯನ್ನರ ಪ್ರಾಬಲ್ಯವು ಉಳಿದೇ ಉಳಿಯುವುದು. ಇರಲಿ. ಈಗ ಸಿಲೆಕ್ಟ ಕಮಿಟಿಯವರು ತಮ್ಮ ವರದಿಯನ್ನು ಲೆಜಿಸ್ಲೇಟಿವ್ಹ ಅಸೆಂಬ್ಲಿಗೆ ಒಪ್ಪಿಸುವ ಮುದ್ದತು ನವೆಂಬರ ೨೦ನೇ ತಾರೀಖಿನ ವರೆಗೆ ಬೆಳೆಸಲ್ಪಟ್ಟಿದೆ. ಮತ್ತು ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಸಭೆಯು ಪ್ರಾರಂಭವಾಗುವ ಮುದ್ದತೂ ನವ್ಹೆಂಬರ ೨೧ನೇ ತಾರೀಖಿಗೆ ಇಡಲ್ಪಟ್ಟಿದೆ. ಅಲ್ಲಿಯವರೆಗೆ ಮತ್ತಾವ ಸೂಚನೆಗಳು ಬರುವವೋ ನೋಡಬೇಕಾಗಿದೆ.

ಲಾಹೋರ ಮತ್ತು ಕರಾಚಿಗಳಲ್ಲಿಯೂ ಇದರ ಶಾಖೆಗಳಿರಬೇಕೆಂದೂ ಬ್ಯಾಂಕುಗಳಿಗೆ ಪ್ರಾತಿನಿಧ್ಯವಿರುವಂತೆ ಖಾಸಗೀ ಸರಾಫರಿಗೂ ಇದರಲ್ಲಿ ಪ್ರಾತಿನಿಧ್ಯವಿರಬೇಕೆಂದೂ ತಾವಾಗಿ ಸೂಚನೆ ಬಂದಿವೆ. ಅಲ್ಲದೆ, ಈಗ ಕರನ್ಸಿ ಆಫೀಸಿನಲ್ಲಿರುವ ಅಧಿಕಾರಿಗಳನ್ನು ರಿಝರ್ವ ಬ್ಯಾಂಕಿನಲ್ಲಿ ಸಮಾವೇಶ ಮಾಡಿಕೊಳ್ಳಬೇಕೆಂದೂ ಸೂಚನೆಯು ಬಂದಿದೆ. ಇವೆಲ್ಲ ಸಣ್ಣಪುಟ್ಟ ಸೂಚನೆಗಳಲ್ಲದೆ, ಯಾವ ಮಹತ್ವದ ಸೂಚನೆಯ ಮೇಲೆ ಹಿಂದುಸ್ಥಾನದ ಭಾವೀ ಆರ್ಥಿಕ ಸ್ಥಿತಿಯು ಅವಲಂಬಿಸಿರುತ್ತದೆಯೋ ಆ ಸೂಚನೆಯ ವಿಚಾರವನ್ನು ಅಂದರೆ ರೂಪಾಯಿಯ ಬೆಲೆಯನ್ನು ಇಳಿಸುವ ವಿಚಾರವನ್ನು ರಿಝರ್ವ ಬ್ಯಾಂಕಿನ ಸಿಲೆಕ್ಟ ಕಮಿಟಿಯವರು ಏನು ಮಾಡುವರೋ ನೋಡಬೇಕಾಗಿದೆ. ಈ ಮಧ್ಯದಲ್ಲಿ, ಈ ಕಾಯದೆಯನ್ನು ಮಾಡುವ ಅಧಿಕಾರವು ಇಲ್ಲಿಯ ಲೆಜಿಸ್ಲೇಟಿವ್ಹ ಅಸೆಂಬ್ಲಿಗೇ ಇರುತ್ತದೆಯೋ ಇಲ್ಲವೋ ಎಂಬ ಸಂದೇಹವು ಉತ್ಪನ್ನವಾಗಿ ಅದು ಇಲ್ಲಿಯ ಲೆಜಿಸ್ಲೇಟಿವ್ಹ ಅಸೆಂಬ್ಲಿಗೇ ಇರುತ್ತದೆಂಬುದನ್ನು ಹಿಂದೀ ಜನರು ಗಟ್ಟಿ ಮಾಡಿಕೊಳ್ಳಬೇಕಾಗಿದೆ.

ಹುಬ್ಬಳ್ಳಿಯಲ್ಲಿ ಗವ್ಹರ್ನರರ ದೊರೆಗಳು.

ತಾರೀಖು—೬-೧೧-೩೩

ನೇ. ನಾ. ಗವ್ಹರ್ನರ ಸಾ|| ಈ ಹೊತ್ತು ಮಧ್ಯಾಹ್ನಕ್ಕೆ ಹುಬ್ಬಳ್ಳಿಗೆ ಬಂದರು.

ಹುಬ್ಬಳ್ಳಿಯ ನಗರ ಭವನವು ಸುಂದರವಾಗಿ ಶೃಂಗರಿಸಲ್ಪಟ್ಟಿತ್ತು. ಈ ಸಂಭ್ರಮಕ್ಕಾಗಿ ನಗರ ಭವನದ ಅಟ್ಟದ ಮೇಲೆ ಇಲೆಕ್ಟ್ರಿಕ್ ದೀಪ ಫ್ಯಾನ್ ಮುಂತಾದವುಗಳ ಏರ್ಪಾಡು ಆಗಿತ್ತು. ನೇ. ನಾ. ಗವರ್ನರರು ಕೂಡತಕ್ಕ ಮೇಜಿಗೆ ರೇಶಿಮೆ ಮಖಮಲ್ಲುಗಳಿಂದ ಯುಕ್ತವಾದ ಟೇಬಲ್ ಕ್ಲಾಥ್ ಹಾಕಿದ್ದರು. ಅದಕ್ಕೆ ಹೊಂದ ಜರದ ಲೇಸ ವರ್ಕಿನ ಕೆಲಸವು ಸಹ ಪ್ರೇಕ್ಷಣೀಯವಾಗಿದ್ದಿತು.

ಗವರ್ನರರು ಬರುವದಕ್ಕಿಂತ ಅರ್ಧ ತಾಸು ಮುಂಚಿತವಾಗಿ ನಿಮಂತ್ರಿಸಲ್ಪಟ್ಟ ಗೃಹಸ್ಥರು ತಮ್ಮ ತಮ್ಮ ಸ್ಥಳದಲ್ಲಿ ಕುಳಿತಿದ್ದರು. ಯಾವತ್ತು ಕಾರ್ಯಕ್ರಮವು ಸುವ್ಯವಸ್ಥೆಯಿಂದ ನೆರವೇರಿತು.

ಪ್ರಾರಂಭದ ಶಿಷ್ಟಾಚಾರಗಳಾದನಂತರ ನಗರ ಸಭೆಯ ಅಧ್ಯಕ್ಷರಾದ ಸರದಾರ ಮಹಬೂಬ ಅಲ್ಲಿಖಾನ ಸಾ|| ರು ಮಾನಪತ್ರವನ್ನೋದಿ, ಇಲೆಕ್ಟ್ರಿಕ್ ದೀಪಗಳಿಂದ ಶೋಭಿತವಾದ ಬೆಳ್ಳಿ ಕರಂಡೆಯಲ್ಲಿ ಅದನ್ನು ಹಾಕಿ ಗವರ್ನರರಿಗೆ ಒಪ್ಪಿಸಿದರು.

ಆ ಮೇಲೆ ಗವರ್ನರರು ಪತ್ನಿ ಸಮೇತರಾಗಿ ಮ್ಯುನಸಿಪಾಲಿಟಿಯ ಸುತ್ತಲೂ ನಿರ್ಮಿಸಲ್ಪಟ್ಟಿರುವ ಲೇಡಿ ಸಾಯಿಕ್ಸ ತೋಟವನ್ನು ನೋಡಲು ಹೊರಟರು. ಕಾರಂಜಿಯ ಹತ್ತರ ಹೊಸದಾಗಿ ಸಿಮೆಂಟಿನಿಂದ ಸಿದ್ಧಪಡಿಸಿದ ಆಸನದ ಮೇಲೆ ದಂಪತಿಗಳು ಕುಳಿತಾಗ ಫೋಟೋ ತೆಗೆಯುವವರು ಬೆನ್ನು ಹತ್ತಿ ನಡೆದೇ ಇದ್ದರು.

ತೋಟ ನೋಡುವದು ಮುಗಿದ ಕೂಡಲೆ ಅವರು ವರ್ಕಶಾಪ ನೋಡಲಿಕ್ಕೆ ಹೋದರು. ಲೇಡಿ ಸಾಯಿಕ್ಸರು ಹೆಣ್ಣು ಮಕ್ಕಳ ದವಾಖಾನೆಯನ್ನು ಸಂದರ್ಶಿಸಿದರು. ಮತ್ತು ಸ್ಟೇಶನ್ನದಲ್ಲಿರುವ ಅವರ ಸ್ಪೆಶಲ್ ಟ್ರೇನಿನ ಹತ್ತರ ಕೆಲವು ಪ್ರಮುಖರ ಭೆಟ್ಟಿಯನ್ನು ಗವರ್ನರರು ತೆಗೆದುಕೊಂಡರು.

ಸಂಜೆಯ ಸುಮಾರು ೭ ಘಂಟೆಗೆ ಸ್ಪೆಶಲ್ ಟ್ರೇನು ಮುಂಬೈ ಮಾರ್ಗವಾಗಿ ಹೊರಟಿತು.

ನಾ|| ದಿ. ಬ. ಕಂಬಳಿಯವರು ತಾರೀಖು ೭-೧೧-೩೩ನೇ ದಿನ ಮೇಲ ಗಾಡಿಯಿಂದ ಮುಂಬೈಗೆ ಹೋದರು.

ಮಿ. ಜೇಮ್ಸ-ಅರಳಿಕಟ್ಟಿಯವರ ತಪ್ಪು ಲೆಖ್ಖವು

ನೆಲ್ಸನ್ ಕಂಪನಿಯವರ ಚಹಾ ಏಜಂಟರೂ, ಮತ್ತು ಶಿವಾಜಿ ಕೆಮಿಕಲ್ ವರ್ಕ್ಸ ಕಂಪನಿಯ ಮ್ಯಾನೇಜರರಾದ ಮಿ. ಜೇಮ್ಸ ಅರಳಿಕಟ್ಟಿ ಇವರು ತಮ್ಮಲ್ಲಿ ಕಾರಕೂನರನ್ನಾಗಿ ನೇಮಿಸಿಕೊಂಡ ಮಿ. ಪಾಲ ಎಸ್. ಗೋಕಾವಿ ಇವರು ಹಣದ ಅಪರಾ ತಪರಾ ಮಾಡಿರುವರೆಂದು ಖಟ್ಲೆ ಮಾಡಿದ್ದರು. ಅದು ೩ ತಿಂಗಳವರೆಗೆ ನಡೆದು ಕಡೆಗೆ ಮೆಹರ್ಬಾನ ಸಿಟಿ ಮ್ಯಾಜಿಸ್ಟ್ರೇಟ ಬೆಳಗಾವ ಇವರು ತೀರ್ಪು ಕೊಟ್ಟಿದ್ದೇನೆಂದರೆ—

ಮೆ|| ಜೇಮ್ಸ ಅರಳಿಕಟ್ಟಿ ಇವರ ಲೆಖ್ಖಪತ್ರಗಳು ಯೋಗ್ಯ ರೀತಿಯಿಂದ ಇಟ್ಟಿಲ್ಲ; ಆರೋಪಿಯಾದ ಮಿ. ಪಾಲ ಎಸ್. ಗೋಕಾವಿಯು ನಿರ್ದೋಷಿಯಾಗಿದ್ದಾನೆ ಎಂದು ಇದೇ ತಿಂಗಳ ೬ನೇ ತಾರೀಖಿಗೆ ತೀರ್ಪು ಹೇಳಿ ಖಟ್ಲೆ ಬಿಟ್ಟು ಬಿಟ್ಟರು.

ಭೋಪಾಳದಲ್ಲಿ ಜೂಜುಗಾರರ ಕೈದು.

ಭೋಪಾಳ ತಾ|| ೭— ಇಲ್ಲಿ ಕೆಲವು ಜುಗಾರರನ್ನು ರೇಲ್ವೆ ಪೋಲೀಸರೂ ಸ[illegible]ನ ಪೋಲೀಸರೂ ಕೂಡಿ ಒಂದೆಂಡು ಸಾವಿ[illegible] ಲೀಚಾರ ಮಾಡಿ ಹಿಡಿದರು. ಈ ಕೈದಿಗ[illegible] ಚಾರವು ಕ್ರಿಮಿನಲ್ ಕೋರ್ಟಿನ ವ್ಯಾಜ್ಯ[illegible]ದುರಿಗೆ ನಡೆಯತಕ್ಕದ್ದಿದೆ.

[ಅ ಪ್ರೆ ಸಂ]

ಮುಂಬಯಿ ಹಾಯಕೋರ್ಟಿನ [illegible] ನ್ಯಾಯಾಧೀಶರು

ಮುಂಬಯಿ ತಾ| ೭ — ಮುಂಬಯಿ[illegible] ಯಕೋರ್ಟಿನ ನ್ಯಾಯಾಧೀಶರಾದ ನಾಮ[illegible] ಡಬ್ಲ್ಯೂ ಟಿ ಡಬ್ಲ್ಯೂ ಬೇಕರ ಇವರು ಮು[illegible] ತಿಂಗಳ ೭ನೇ ತಾ| ಸೇವಾನಿವೃತ್ತರಾಗು[illegible]ರಿದ್ದದರಿಂದ ಅವರ ಬದಲಾಗಿ ಎನ್[illegible] ವಾಡಿಯಾ ಬಾರ-ಅಟ್-ಲಾ ಆಯ್ ಸಿ ಎಸ್[illegible] ವರನ್ನು ಮುಂಬಯಿ ಹಾಯಕೋರ್ಟಿನ [illegible] ನ್ಯಾಯಾಧೀಶರನ್ನಾಗಿ ನೇಮಿಸಲು ಬಾದ[illegible] ಸರಕಾರದವರು ಅನುಮತಿ ಕೊಟ್ಟಿದ್ದಾರೆ[illegible] ಇವತ್ತಿನ ಸರಕಾರಿ ಪ್ರಕಟನೆಯು ಸಾರು[illegible]

[ಅ ಪ್ರೆ ಸಂ]

ಪಟೇಲರ ಅಂತ್ಯ ಸಂಸ್ಕಾ[illegible]

ಮುಂಬಯಿ ತಾ| ೭— ಮುಂಬಯಿ[illegible] ಕಾರದವರು ಪಟೇಲರ ಶವಕ್ಕೆ ಅಂತ್ಯ ಸಂಸ್ಕಾ[illegible]ವನ್ನು ಚೌಪಾಟಿಯಲ್ಲಿ ಮಾಡಲಿಕ್ಕೆ ಪ[illegible] ಕೊಟ್ಟಿದ್ದರಿಂದ ರಾಣಿಯ ಬೇದಿಯಲ್ಲಿರುವ [illegible]ದೂ ಸ್ಮಶಾನ ಭೂಮಿ ಯಾದ ಸೋನಾಪುರ[illegible]ಲ್ಲಿ ಪಟೇಲರ ಶವದ ಅಂತ್ಯ ಸಂಸ್ಕಾರ[illegible] ನಾಳಿನ ಶುಕ್ರವಾರ ದಿವಸ ಮಾಡ[illegible] ನಿಶ್ಚಯಿಸಿದೆಯೆಂದು ಪಟೇಲರ ಅಂತ್ಯ ಸಂ[illegible]ರ ಕಮಿಟಿಯವರು ಪ್ರಕಟಿಸಿದ್ದಾರೆ.

ಹಡಗವು ಬಂದೊಡನೆ ಶವವನ್ನು [illegible]ಕೊಂಡು ಅವರ ಆಪ್ತರೂ ಮತ್ತು ಅಂತ್ಯ ಸಂಸ್ಕಾರ ಕಮಿಟಿಯವರು ಖಾಸಗಿ ರೀತಿಯ[illegible] ಉಪಚಾರ ಮಾಡುವರು. ತಾರೀಖು [illegible] ದಿನ ರಾತ್ರಿ ವರೆಗೆ ಶವವು ಕೊಳೆಯಬಾರದ[illegible]ಗೆ ಯೋಗ್ಯ ವ್ಯವಸ್ಥೆ ಮಾಡಲಾಗಿದೆ. ಮ[illegible]ನ ಮುಂಜಾನೆ ಸೋನಾಪುರ ತನಕ ಶವದ [illegible]ಟ್ಟಿಗೆಯನ್ನು ಮೆರಿಯಿಸಿ, ಅಲ್ಲಿ ಪೆಟ್ಟಿಗೆಯ[illegible] ತೆರೆದು ಸಾರ್ವಜನಿಕರಿಗೆ ಅವರ ಕೊನೆಯ ದ[illegible]ನವು ಆಗುವದು. ಹಿಂದುಸ್ಥಾನದ ಎಲ್ಲ ಭಾ[illegible]ಗಳಿಂದ ಗಡಿಪಾರಾಗಿದ್ದ ಮುಂದಾಳುವಿನ [illegible]ತ್ಯ ದರ್ಶನವನ್ನು ತೆಗೆದುಕೊಳ್ಳಲಿಕ್ಕೆ [illegible] ಅನೇಕ ಮಿತ್ರರೂ ಮತ್ತು ಅವರಲ್ಲಿ ಮೆ[illegible]ಳ್ಳವರೂ ಬರುವರು.

[ಅ ಪ್ರೆ ಸಂ]

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ|| ೭ ಮಧ್ಯಾಹ್ನ ೧೧ ಗಂ[illegible]

ಜವಾರಿ ಹತ್ತಿ	೧೦೦-೧೦೩	ಜೋಳ	[illegible]
ಅಷ್ಟೇಲ ,,	೧೦೦-೧೦೩	ಗೋದಿ	[illegible]
ಬಿಸಾಯತಿ ,,	೯೪-೯೫	ಉದ್ದು	[illegible]
[illegible]	೧೦೮-೧೧೦	ಕಡ್ಲಿ	[illegible]
[illegible]	೬೮-೭೦	ಕಡ್ಲಿ [illegible]	[illegible]
[illegible]	[illegible]	ಕುಸುಬಿ	[illegible]
[illegible]	[illegible]	[illegible]	
[illegible]	[illegible]		
[illegible]	[illegible]	[illegible]	

ಬೆಳ್ಳಿ ಬಂಗಾರ

ಬಂಗಾರ	[illegible]	ಬೆಳ್ಳಿ

ಶ್ರೀ. ವಿಠ್ಠಲಭಾಯಿಯವರ ಸ್ಮಶಾನ ಯಾತ್ರೆ.

" ಕನ್ನಡಿಗ " ನಿಗಾಗಿ ತರಿಸಿದ' ಅಸೋಶಿಯೇಟೆಡ್ ಕಂಪನಿ ' ಯ ತಂತಿಗಳು

ಶ್ರೀ. ವಿಠ್ಠಲಭಾಯಿಯವರ ಸ್ಮಶಾನ ಯಾತ್ರೆ.

ಮುಂಬಯಿ ತಾ|| ೭— ವಿಠ್ಠಲಭಾಯಿಯವರ ಅಂತ್ಯವಿಧಿ ನಿರ್ವಾಹಕ ಕಮೀಟಿಯವರು ನಿನ್ನೆ ಸಂಜೆಗೆ ಸಭೆಗೂಡಿ ಗೊತ್ತುಮಾಡಿದ್ದೇನಂದರೆ— ಶ್ರೀ ವಿಠ್ಠಲಭಾಯಿಯವರ ದೇಹವು ಮುಂಬಯಿಯ ಮೋಲ ಧಕ್ಕೆಗೆ ಬಂದಾಗ್ಗೆ ಅದರ ಸಂದರ್ಶನಕ್ಕೆ ಅವರ ಕೆಲವು ಅಪ್ತೇಷ್ಟರೂ, ಕೆಲವು ಮಿತ್ರರೂ ಮತ್ತು ಕಮೀಟಿಯ ಮೆಂಬರರಷ್ಟೇ ಹೋಗಿ ಅದನ್ನು ಜೀ. ಟಿ ಆಸ್ಪತ್ರಿಗೆ ಖಾಸಗಿ ರೀತಿಯಿಂದ ಒಯ್ಯತಕ್ಕದ್ದೆಂದೂ ರಾತ್ರಿ ಮಟ್ಟಿಗೆ ಅದನ್ನು ಅಲ್ಲಿ ಇಟ್ಟು ಮರುದಿನ ಮುಂಜಾನೆ ಬೇಲಾರ್ಡ ಪಿಯರಕ್ಕೆ ಒಯ್ದು ಅಲ್ಲಿಂದ ಮೆರವಣಿಗೆ ಹೊರಡಿಸಿ ಕ್ವೀನ್ಸ ಬೀದಿಯಗುಂಟ ಹೋಗಿ ಅಲ್ಲಿಯ ಸ್ಮಶಾನದಲ್ಲಿ ಅದರ ಅಂತ್ಯವಿಧಿಯನ್ನು ಜರಗಿಸತಕ್ಕದ್ದು

[ಅ ಪ್ರೆ ತಂತಿ]

ವಿಠ್ಠಲಭಾಯಿಯವರ ಶವಸಂಸ್ಕಾರ.

ಮುಂಬಯಿ ತಾ|| ೭— ಚೌಪಾಟಿಯ ಮೇಲೆ ಅಂತ್ಯಸಂಸ್ಕಾರವನ್ನು ಮಾಡಲಿಕ್ಕೆ ಸರಕಾರದವರು ಪರವಾನಿಗೆಯನ್ನು ಕೊಡದ್ದರಿಂದ ಈ ಸಂಸ್ಕಾರವನ್ನು ಎಲ್ಲಿ ಮಾಡಬೇಕೆಂಬ ಬಗ್ಗೆವಿಚಾರ ಮಾಡಲಿಕ್ಕೆ ವ್ಹಿ. ಜೆ. ಪಟೇಲರ ಶವಸಂಸ್ಕಾರ ಕಮೀಟಿಯವರು ಇಂದು ಮಧ್ಯಾಹ್ನದಲ್ಲಿ ಸಭೆ ಕೂಡಿಸುವವರಿದ್ದಾರೆ.

[ಅ ಪ್ರೆ ತಂತಿ]

ಹೊಸ ಗವರ್ನರರ ಆಗಮನ

ಮುಂಬಯಿ ತಾ|| ೭— ಸರ್ ಫ್ರೆಡರಿಕ್ಸ್ ಮತ್ತು ಲೇಡೀ ಸಾಯಿಕ್ಸರು ಶನಿವಾರ ಡಿಸೆಂಬರ ತಾ| ೯ ದಿವಸ ವಿಲಾಯತಿಗೆ ಹೊರಡುವರೆಂದು ಇವರ ಸ್ಥಾನಕ್ಕೆಂದು ನಿಯೋಜಿಸಿದ ನೇಕನಾಮದಾರ ಲಾರ್ಡ ಬ್ರಾಬೋರ್ನರು ಪತ್ನಿ ಸಮೇತರಾಗಿ ಮುಂಬಯಿಗೆ ಶುಕ್ರವಾರ ತಾ| ೮ ದಿವಸ ಬರಬಹುದೆಂದೂ ಮುಂಬಯಿ ಸರಕಾರದ ಪ್ರಕಟನೆಯಿಂದ ತಿಳಿಯುತ್ತದೆ.

[ಅ ಪ್ರೆ ತಂತಿ]

ಕಾಠೇವಾಡ ಸಂಸ್ಥಾನ ಪ್ರಜಾ ಪರಿಷತ್ತು.

ಅಮ್ರೇಲಿ ತಾ|| ೭— ಇವತ್ತು ಮುಂಜಾನೆ ಪುನಃ ಕೂಡಿದಾಗ್ಗೆ ಕೆಲವು ಅಭಿನಂದನ ಪತ್ರಗಳು ಓದಲ್ಪಟ್ಟವು ಮೂರು ದಿವಸ ಸಭೆಕೂಡಿ ಕಾಠೇವಾಡ ಪ್ರಜಾಪರಿಷತ್ತಿನಲ್ಲಿ ಕೆಳಗೆ ಬರೆದ ಠರಾವುಗಳು ಪಾಸಾಗಿ ಪರಿಷತ್ತಿನ ಸಮಾಪ್ತಿಯಾಯಿತು.

ಆ ಠರಾವುಗಳಲ್ಲಿ ಮುಖ್ಯವಾದವು ಯಾವವೆಂದರೆ— ೧ ವಲ್ಲಭಭಾಯಿಯವರ ಮರಣದ ಬಗ್ಗೆ ದುಃಖ ಪ್ರದರ್ಶನ ೨ ಬಿಳೀಕಾಗದದಲ್ಲಿ ಗೊತ್ತು ಪಡಿಸಿದ ಫೆಡರೇಶನ್ ರಾಜ್ಯಪದ್ಧತಿಯನ್ನು ನಿಷೇಧಿಸಿ ಸಂಸ್ಥಾನದ ಪ್ರಜೆಗಳ ಅಗತ್ಯವಾದ ಬೇಡಿಕೆಗಳನ್ನು ಪುನಃ ಕೇಳಿರುವರು ೩ ಬಿಕಾನೇರ ಕಾನ್‌ಸ್ಪಿರಸಿ ಖಟ್ಲೆಯನ್ನು ತೆಗೆದು ಹಾಕಬೇಕೆಂಬುದು. ೪ ಸ್ಟೇಟ್ಸ ಪ್ರೊಟೆಕ್ಶನ ಬಿಲ್ಲನ್ನು ನಿಷೇಧಿಸಿರುವದೂ ಮತ್ತು ಅಸೆಂಬ್ಲಿ ಮೆಂಬರರು ಅದನ್ನು ಪಾಸು ಮಾಡಬಾರದೆಂದು ಬೇಡಿಕೊಂಡಿರುವದು.

[ಅ ಪ್ರೆ ತಂತಿ)

ಹರಿಜನ ನಾಟಕದಲ್ಲಿ ಗೊಂದಲ.

ಕಲಕತ್ತೆ ತಾ|| ೭ – ಇಲ್ಲಿಯ ಕಾರಂಥಿಯನ್ ನಾಟಕ ಗೃಹದಲ್ಲಿ ಕಳೆದ ರವಿವಾರ ಹರಿಜನರ ಪ್ರಗತಿಯ ಬಗ್ಗೆ ಒಂದು ನಾಟಕ ಮಾಡಲ್ಪಟ್ಟಿತ್ತು. ನಾಟಕದ ಹೆಸರು 'ಗರೀಬ ಕಾ ಲೋರಕ್' ಒಬ್ಬ ಹರಿಜನರ ಹುಡುಗೆಯು ನೀರು ಜಗ್ಗಲಿಕ್ಕೆ ಹೋದಾಗ ಹಿಂದುಗಳು ಆಕೆಯನ್ನು ಹೊಡೆದಟ್ಟುವ ದೃಶ್ಯವು ಬಂದೊಡನೆ ನಾಟಕದಲ್ಲಿ ಕೆಲವರು ಶಗಣಿ ಮುಂತಾದ್ದನ್ನು ತೆಗೆದುಕೊಂಡು ರಂಗಸ್ಥಳಕ್ಕೆ ನುಗ್ಗಿ ನಾಟಕ ನಿಲ್ಲಿಸಲು ಪ್ರಯತ್ನಿಸಿದರು ಮತ್ತೊಂದು ಗುಂಪಿನವರು ಎದ್ದುದರಿಂದ ಕೈ ಕೈ ಲಗ್ಗೆ ಹತ್ತುವ ಮಟ್ಟಿಗೆ ಗೊಂದಲ ಮುಂದುವರಿಯಿತು. ಇದರಲ್ಲಿ ಅನೇಕರಿಗೆ ಗಾಯವಾಯಿತು. ಪೋಲೀಸರು ಗೊಂದಲ ನಡೆಸುವವರನ್ನು ಅಲ್ಲಿಯೇ ಹಿಡಿದರು

(ಅ ಪ್ರೆ ತಂತಿ)

ದೇವಾಸ ಮಹಾರಾಜರ ಉದ್ಗಾರ

ಪಾಂಡಿಚೇರಿ ತಾ| ೫— ಅಸೋಸಿಯೇಟೆಡ್ ಪ್ರೆಸ್ಸಿನ ಸುದ್ದಿಗಾರನಿಗೆ ಹಿರಿಯ ದೇವಾಸ ಮಹಾರಾಜರು ಹೇಳಿದ್ದೇನಂದರೆ- ಹಿಂದುಸ್ಥಾನ ಸರಕಾರದಿಂದ ತಮಗೆ ಒಂದು ಬಿಟ್ಟುನಿಟ್ಟಿನ ಪತ್ರವು ಬಂದಿರುವದೆಂದು ಒಪ್ಪಿಕೊಂಡರು ಮತ್ತು ಅದಕ್ಕೆ ಉತ್ತರವನ್ನು ಕೊಟ್ಟಿರುವೆವೆಂದು ಹೇಳಿದರು ಆದರೆ ಅದರಲ್ಲಿಯ ವಿಸ್ತೃತ ಸಮಾಚಾರವನ್ನು ಮಾತ್ರ ಹೇಳಲಿಲ್ಲ ಮತ್ತು ತಮ್ಮ ಈರ್ಮಾನ ಸಾರವಾಗಿ ಸಂಭವಿಸುವದನ್ನೆಲ್ಲವನ್ನೂ ದೇವರ ಮೇಲೆ ಭಾರವನಿಟ್ಟು ಸಮಾಧಾನದಿಂದ ತಾಳಿಕೊಳ್ಳತಕ್ಕದ್ದೆಂದೂ ಎಲ್ಲವೂ ದೇವರನ್ನೇ ಕಾದಿದೆಯೆಂದೂ ಉದ್ಗಾರ ತೆಗೆದರು.

[ಅ ಪ್ರೆ ತಂತಿ)

ಅಸೆಂಬ್ಲಿಯಲ್ಲಿಯ ಕಾರ್ಯ ಕಲಾಪಗಳು.

ಹೊಸದಿಲ್ಲಿ ತಾ|| ೭— ಜಪಾನದವರೊಡನೆ ಮಾಡಬೇಕಾದ ವ್ಯಾಪಾರಿ ಒಪ್ಪಂದದ ಮಸೂದೆಯನ್ನು ಬರೆಯುವ ವಿಚಾರ ನಡೆದಿದೆ; ಇದುವರೆಗೆ ಹಿಂದುಸ್ಥಾನ ಸರಕಾರದವರು ಪರರಾಜ್ಯದವರೊಡನೆ ಈ ಬಗ್ಗೆಯ ವ್ಯಾಪಾರದ ಒಪ್ಪಂದ ಮಾಡಿಕೊಂಡಿರದ್ದರಿಂದ ಒಳ್ಳೇ ತಜ್ಞರ ಅಭಿಪ್ರಾಯ ಕೇಳಿಕೊಂಡು ಇದರ ಮಸೂದೆಯನ್ನು ಸಿದ್ಧಪಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಈ ಕೆಲಸವು ಬೇಗ ಮುಗಿಯತಕ್ಕದಲ್ಲ. ಆದರೆ, ಒಪ್ಪಂದದ ಕರಾರುಗಳಲ್ಲಿಯ ಸುಂಕದ ಬದಲಾವಣೆಗಳಿಗೆ ಕಟ್ಟಳೆಯ ಸ್ವರೂಪ ಕೊಡಬೇಕೆಂದು ಸುಂಕದ ಬಿಲ್ಲು ನಾಳಿನ ೨೦ ನೇ ತಾರೀಖಿಗೆ ನಡೆಯುವ ಅಸೆಂಬ್ಲಿಯಲ್ಲಿ ಮಂಡಿಸಲ್ಪಡುವದಿದೆ. ರಿಝರ್ವ ಬ್ಯಾಂಕಿನ ಜಾಯಿಂಟ ಕಮೀಟಿಯ ವರದಿಯು ೨೮ ನೇ ತಾರೀಖಿಗೆ ಅಸೆಂಬ್ಲಿಯಲ್ಲಿ ಮಂಡಿಸಲಾಗುವದು ೨೦ ನೇ ತಾರೀಖಿಗೆ ಅಸೆಂಬ್ಲಿಯು ನಡೆದು ಅದೇ ದಿನ ಶ್ರೀ. ವಿಠ್ಠಲಭಾಯಿ ಪಟೇಲರ ಬಗ್ಗೆ ದುಃಖ ಪ್ರದರ್ಶಕ ಗೊತ್ತುವಳಿಯಾಗಿ ಅವರ ಸ್ಮರಣಾರ್ಥವಾಗಿ ಅಷ್ಟಕ್ಕೆ ಅಸೆಂಬ್ಲಿಯ ಅಂದಿನ ಕೆಲಸ ಮುಗಿಯುವದು. [ಅ ಪ್ರೆ ತಂತಿ]

ಹೊಳೆಯಲ್ಲಿ ದೋಣಿ ಮುಳುಗಿತು.

ಹೊಸದಿಲ್ಲಿ ತಾ|| ೬ ಫತ್ತೇಗಢದ ಒಬ್ಬ ಸುದ್ದಿಗಾರನು ಹಿಂದುಸ್ಥಾನ ಟಾಯಿಮ್ಸಕ್ಕೆ ಕೆಳಗಿನಂತೆ ತಂತಿ ಕಳಿಸಿದ್ದಾನೆ ೩೦೦ ಮಂದಿ ಯಾತ್ರಿಕರು ಯಮುನಾ ನದಿಯ ಆಚೆಯ ದಂಡೆಯಲ್ಲಿ ಸ್ನಾನ ಮಾಡಲಿಕ್ಕೆಂದು ಹೋಗುತ್ತಿರುವಾಗ ಏಕಾಏಕಿಯಾಗಿ ಮುಳುಗಿತು ೩೫ ಮಂದಿ ಜೀವಂತ ಉಳಿದಿದ್ದು ೫೦ ಹೆಣಗಳು ಸಿಕ್ಕಿವೆ, ಉಳಿದವರ ಹೆಣಗಳು ಸಿಕ್ಕಿಲ್ಲ

[ಅ ಪ್ರೆ ತಂತಿ]

ಹಿಂದೂ-ಜಪಾನ ವ್ಯಾಪಾರಿ ಚರ್ಚೆಯು ಮುಕ್ತಾಯ

ಹೊಸದಿಲ್ಲಿ ತಾ|| ೬– ಈ ದಿನ ಸರಕಾರದ ಎಲ್ಲ ಪ್ರತಿನಿಧಿಗಳ ಸಭೆ ಆಯಿತು ಎ.|| ಸಾವಡಾ ಅವರು ಬಂದಿದ್ದರು. ಹಿಂದು-ಜಪಾನ ಸರಕಾರದವರ ವ್ಯಾಪಾರಿ ಒಪ್ಪಂದದ ಮುಖ್ಯ ಮುಖ್ಯ ಮಾತುಗಳ ನಿಷ್ಕರ್ಷೆಯಾದಂತಾಯಿತು ಇನ್ನು ಮಸೂದೆಯಲ್ಲಿ ಕೊನೆಯ ಪೆಟ್ಟು ಕಡಿತಗಳನ್ನು ಮಾಡುವದೊಂದ ಉಳಿದಿದೆ ಹತ್ತನೆಯ ತಾರೀಖಿನ ಸಮಯಕ್ಕೆ ಹತ್ತಿಗು ಕರಾರಿನ ಮಸೂದೆಯು ಸಿದ್ಧವಾಗುವದು ಮಿಕ್ಕದ್ದೆಲ್ಲ ೧೫ ನೇ ತಾರೀಖಿಗೆ ಸಿದ್ಧವಾಗುವದು ನವೆಂಬರ ೧೦ ನೇ ತಾರೀಖಿನಿಂದ ನಂಬರು ಬಳಿಕೆಯಲ್ಲಿ ಬರುವ ಬಗ್ಗೆ ಏರ್ಪಾಡು ಮಾಡಲಾಗುವದು ಹಿಂದು-ಜಪಾನ ವ್ಯಾಪಾರಿ ಒಪ್ಪಂದವನ್ನು ಕಟ್ಟಳೆಗೊಳಿಸಲು ಸರಕಾರದವರು ಅಸೆಂಬ್ಲಿಯಲ್ಲಿ ಬೇಗನೇ ಒಂದು ಬಿಲ್ಲು ಮಂಡಿಸುವವರಿದ್ದಾರೆ ಇಂದಿನ ಚರ್ಚೆಯ ವಿಷಯವೆಲ್ಲ ಮುಖ್ಯವಾಗಿ ಜಪಾನದ ಹೆದರಿಕೆ ಬಗ್ಗೆ ಇದ್ದಿತು ಅದ್ದರಿಂದ, ಹಿಂದುಸ್ಥಾನದ ಹತ್ತಿಯನ್ನು ಜಪಾನರು ಕೊಂಡುಕೊಳ್ಳುವ ಪ್ರಮಾಣವನ್ನು ಇಳಿಸಬೇಕೆಂದು ಕೇಳಿದರು ಜಪಾನದ ಮಾತಿಗೆ ಎಲ್ಲಿಯ ವರೆಗೆ ಒಪ್ಪಬಹುದೆಂಬ ವಿಷಯವಾಗಿ ಹಿಂದುಸ್ಥಾನ ಸರಕಾರದವರು ಸ್ಪಷ್ಟವಾಗಿ ಹೇಳಿದರು ಮತ್ತು ಇಂದಿನ ಮಾತುಗಳನ್ನೇ ಆಧಾರವಾಗಿಟ್ಟುಕೊಂಡು ಕರಾರು ಮಾಡಿಕೊಳ್ಳಬೇಕೆಂದು ಜಪಾನದವರು ಮನಗಂಡರು, ಆದರಂತೆ ಅವರು ಟೋಕಿಯೋದಲ್ಲಿಯ ಅಧಿಕಾರಿಗೆ ಹಿಂದುಸ್ಥಾನ ಸರಕಾರದವರೊಡನೆ ರೀತಿ ಪ್ರಕಾರ ತಿಳಿಸುವರು [ಅ ಪ್ರೆ ತಂತಿ]

ನಾಗಪುರ ಸಭೆಯಲ್ಲಿ ಗೊಂದಲ

ನಾಗಪುರ ತಾ|| ೭—ಕಳೆದ ಅಸೆಂಬ್ಲಿಯ ಕೌನ್ಸಿಲಿನಲ್ಲಿ ಹರಿಜನರ ದೇವಾಲಯ ಪ್ರವೇಶ ಬಿಲ್ಲಿಗೆ ವಿರುದ್ಧವಾಗಿ ಬೇರೆ ಬೇರೆ ಪ್ರಾಂತದ ೧೧೦ ಜನ ಸನಾತನಿಗಳು ಒಂದು ಪ್ರಕಟನೆ ಹೊರಡಿಸಿ ಸಾರ್ವಜನಿಕ ಮತ ತಿಳಿದುಕೊಳ್ಳಲಿಕ್ಕೆಂದು ಹಂಚಿದ್ದಾರೆ ಅವರ ಅಭಿಪ್ರಾಯವೇನಂದರೆ, ದೇವಾಲಯ ಪ್ರವೇಶವು ಹಲವು ಕಾಲಾಂತರಗಳಿಂದ ನಡೆದು ಬಂದ ಹಿಂದೂ ಧರ್ಮ-ಮತ್ತು ಪದ್ಧತಿಯ ಮೂಲ ತತ್ವಗಳಿಗೆ ವಿರುದ್ಧವಿದೆ ವ್ಹಿಕ್ಟೋರಿಯಾ ಮಹಾರಾಣಿಯವರು ಧರ್ಮದಲ್ಲಿ ಕೊಟ್ಟ ಅಭಿವಚನಕ್ಕೆ ಈಗಿನ ಬಿಲ್ಲು ವಿರೋಧಕವಾಗಿದ್ದರಿಂದ ಇದನ್ನು ನಾವು ಎದುರಿಸದೆ ಗತಿಯಿಲ್ಲ

ಪೇಶಾವರ ತಾ|| ೬— ವಾಯವ್ಯ ಪ್ರಾಂತದ ಕೌನ್ಸಿಲವು ಇವತ್ತು ವ್ಹಿಕ್ಟೋರಿಯಾ ಹಾಲಿನಲ್ಲಿ ಸಮಾವೇಶವಾಯಿತು. ಪ್ರಶ್ನೋತ್ತರಗಳಾದನಂತರ ಇಂಡಿಪೆಂಡೆಂಟ ಪಾರ್ಟಿಯ ಮುಖಂಡರಾದ ಮಲಿಕ ಖುದಾ ಬಕ್ಷರ ಸೂಚನೆಯ ಪ್ರಕಾರ ನಾ ಪಟೇಲರ ಬಗ್ಗೆ ಪೂಜ್ಯ ಬುದ್ಧಿಯನ್ನು ವ್ಯಕ್ತಗೊಳಿಸುವದಕ್ಕಾಗಿ ನಿರ್ವಾಹದವರಿಗೆ ಸಭೆಯನ್ನು ಬಿಟ್ಟರು ಆ ನಂತರ ವಾಯವ್ಯ ಪ್ರಾಂತಕ್ಕೆ ಬೆಂಬಲ ಕೊಟ್ಟ ಇವರ ಅಕಾಲಿಕ ಮರಣದ ಬಗ್ಗೆ ದುಃಖ ಪ್ರದರ್ಶನ ಠರಾವನ್ನು ಒಮ್ಮತದಿಂದ ಪಾಸು ಮಾಡಿದರು

[ಅ ಪ್ರೆ ತಂತಿ]

ಪ್ಯಾಲಿಸ್ಟಾಯಿನದಲ್ಲಿಯ ಮುಸಲ್ಮಾನರು ಪರಿಸ್ಥಿತಿ

(೧) ಬಿಳೇ, ಹಳದಿ, ಕೆಂಪು ಚಿಮಣಿಯಣ್ಣೆ ಕ್ರೂಡ್ ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮ್ಯೂನಿಚ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋವಿ ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಟಕಾರ (೫) ಮೋಟಾರ ವ ಸ್ತು ಬಸ್ಸುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ ಸಬ್ ಏಜಂಟರು ಬೇಕಾಗಿದ್ದಾರೆ. ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

ವಿಶೇಷ ಸೂ. ಬೇಕಾದರೆ ೧೫-ದಿವಸಗಳವರೆಗೆ ... ಆಡ ಮಾಳಮಡ್ಡಿಯಲ್ಲಿರುವ ... ಹುಂಡೇಕರ ವಕೀಲರ ಬಂಗ್ಲೆಯಲ್ಲಿ ... ಭೆಟ್ಟಿಯಾಗಬಹುದು.

ಹುಂಡೇಕರ ಯಳಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಸನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ.

“ ನೀಲಗಿರಿ ಎಣ್ಣೆ ”

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು ಕಿವಿ ನೋವು ವಿಸ್ತುತ ... ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ. ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಪಿ. ಕೆ ಟೋಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ... ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಕಂಗೆಟ್ಟ ರೈತರು ಏನು ಮಾಡಬೇಕು?

‘ ಬಾಗಿಲನ್ನು ತೆರೆಯಬೇಕಾದರೆ ಅದನ್ನು ನೂಕಿಸಬೇಕ ’ [Push ... and it will open] ಎಂಬ ಅರ್ಥದ್ದೊಂದು ಇಂಗ್ರಜೀ ನಾಣ್ಣುಡಿಯುಂಟು. ಈ ಜಗತ್ತಿನಲ್ಲಿ ಪ್ರಯತ್ನ ಮಾಡುವ ಹೊರತ ಯಾವ ಕಾರ್ಯವೂ ಸಾಧ್ಯವಾಗುವದಿಲ್ಲ. ನಮ್ಮಲ್ಲಿಯ ಒಕ್ಕಲಿಗನು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಉಳಿದಿರುವನು ಸಣ್ಣ ಹುಡುಗರಿಗೆ ಬೇನೆ ಬಂದರೆ ನೋಡುತ್ತಾರೆ ಆದರೆ ಜಡ್ಡಿನ ಕಾರಣವೇನು? ತಮಗೆ ಎಲ್ಲಿ ನೋಯಿಸುತ್ತದೆ? ಮುಂತಾದ ವಿಷಯಗಳು ಅವರಿಗೆ ತಿಳಿಯುವದಿಲ್ಲ ಅದರಂತೆಯೇ ನಮ್ಮ ಒಕ್ಕಲಿಗನ ಸ್ಥಿತಿಯಾಗಿರುವದು ಅವನಿಗೆ ತನ್ನ ಈ ದುಸ್ಥಿತಿಯ ಕಾರಣದ ಅರಿವೇ ಇರುವದಿಲ್ಲ ಅವನು ದೈವವಾದಿಯು. ಜಗತ್ತಿನಲ್ಲಿಯ ಎಲ್ಲ ಸಂಗತಿಗಳೂ ಪರಮೇಶ್ವರನ ಆಜ್ಞಾನುಸಾರವಾಗಿಯೇ ಜರಗುತ್ತವೆಯಲ್ಲದೆ ಅದರಲ್ಲಿ ಸ್ವಲ್ಪೇತರವನ್ನುಂಟು ಮಾಡಲಿಕ್ಕೆ ಮನುಷ್ಯಮಾತ್ರನಿಗೆ ಅಸಾಧ್ಯವೆಂದು ಅವನ ದೃಢನಂಬಿಕೆ. ಅವನ ಪ್ರಯತ್ನವಾದವು ಗೊತ್ತೇ ಇಲ್ಲ.

ಎಲ್ಲ ಮಾತಿನಲ್ಲಿಯೂ ಈಶ್ವರನ ಮೇಲೆ ಭಾರಹಾಕುವದು ಒಂದು ರೀತಿಯಿಂದ ಯೋಗ್ಯವಾಗಿದ್ದರೂ ಪ್ರಯತ್ನ ಮಾಡುವದನ್ನು ಬಿಟ್ಟು ಬಿಡುವದು ಮಾತ್ರ ಹಾನಿಕಾರಕವು ಈಗಿನ ಮನ್ವಂತರದಲ್ಲಿ ಯಾವದೇ ಜನಾಂಗದ ಹಿತಾಹಿತವು ಆಯಾ ಜನಾಂಗದಲ್ಲಿಯ ಸರ್ವಸಾಮಾನ್ಯ ಜನರ ಮೇಲೆ, ಅದರಲ್ಲಿಯ ಮುಂದಾಳುಗಳ ಮೇಲೆ, ಅದರಲ್ಲಿಯ ರಾಜಕಾರಣ ಧುರೀಣರ ಮೇಲೆ ಹಾಗೂ ಅವರಲ್ಲಿಯ ಅನೇಕ ವ್ಯಕ್ತಿಗಳ ಮೇಲೆ ಅವಲಂಬಿಸಿರುತ್ತದೆ ಬಲವಂತನೇ ಬದುಕುವನೆಂಬ (Survival of the fittest) ತತ್ವದ ಮೇಲೆ ಈಗಿನ ಜಗತ್ತಿನಲ್ಲಿಯ ಎಲ್ಲ ವ್ಯವಹಾರವೂ ಸಾಗುತ್ತಿರುವಾಗ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಬಾಳಿನ ಭದ್ರತೆಯನ್ನು ಮಾಡಿಕೊಳ್ಳುವದಲ್ಲದೆ ಅದರ ವಿಕಾಸವಾಗುವಂತೆ ಸಹ ಪ್ರಯತ್ನ ನಡೆಸತಕ್ಕದ್ದು. ಸುಮ್ಮನೇ ಕೈಮುಚ್ಚಿಕೊಂಡು ಕುಳಿತರೆ ಏನೂ ಆಗುವದಿಲ್ಲ

ನಮ್ಮ ಜಿಲ್ಲೆಯ ಎಲ್ಲ ರೈತರು ಈ ತರಹದ ಗೋಳು ಶಾಗೀಬರದ (೧೮೨೬ ಇಸ್ವಿ) ನಂತರ ಇಲ್ಲಿಯವರೆಗೆ ಸಂಭವಿಸಿದ್ದಿಲ್ಲ ಹಿಂದುಸ್ಥಾನದಲ್ಲಿಯ ದೀನ ಮತ್ತು ಮೂಕನ ಒಕ್ಕಲಿಗನಿಗಲ್ಲದೆ ವಿಲಾಯತಿಯ ಒಕ್ಕಲಿಗನಿಗೆ ಇಂಥ ಸ್ಥಿತಿಯು ಒದಗಿದ್ದರೆ ಅವನು ದೇವರ ಮೇಲಾಗಲೀ ದೈವದ ಮೇಲಾಗಲೀ ಭಾರವನ್ನೊಗೆದು ಹೀಗೆ ಕೂಳಿತು ಕೊರಗುತ್ತಿರುತ್ತಿದ್ದಿಲ್ಲ ಅವನು ತನ್ನ ದಾರಿದ್ರ್ಯದ ಕಾರಣವನ್ನು ಶೋಧಿಸಿ ತೆಗೆದು ಅದನ್ನು ನಿವಾರಿಸುವದು ತನ್ನಿಂದಾಗದಿದ್ದರೆ ಹಿಂದೆ ಮುಂದೆ ನೋಡದೆ ತನ್ನ ಮುಂದಾಳುಗಳನ್ನೂ ರಾಜ್ಯಭಾರವನ್ನು ಸಾಗಿಸುತ್ತಿರುವಂಥ ಹುದ್ದೇದಾರರನ್ನು ಕಂಡುಕೊಂಡು ತನಗೆ ಇಂಥ ಸ್ಥಿತಿಯನ್ನು ತರಲಿಕ್ಕೆ ಕಾರಣರಾರೆಂಬುದನ್ನು ಒತ್ತಿ ಕೇಳುತ್ತಿದ್ದನು ದೇಶದಲ್ಲಿ ಸುಖಶಾಂತಿಯು ನೆಲೆಗೊಳ್ಳುವಂತೆ ಮಾಡುವ ಕೆಲಸವು ದೇಶದ ಮುಂದಾಳುಗಳೆಂದು ಹೂಗಳಿಸಿಕೊಂಡು ಪಾರ್ಲಮೆಂಟ ಸಭೆಯಲ್ಲಿ ಹೋಗಿ ಕೂಡ್ರುವಂಥವರದೆಂಬುದನ್ನರಿತ ವಿಲಾಯತಿಯ ಒಕ್ಕಲಿಗನು ಅವರ ಕರ್ತವ್ಯದ ಮತ್ತು ಜೋಖಿಮದಾರಿಕೆಯ ಎಚ್ಚರಿಕೆಯನ್ನು ಅವರಿಗೆ ಕೊಡುತ್ತಿದ್ದನು.

ನಮ್ಮಲ್ಲಿಯ ಒಕ್ಕಲಿಗನಾದರೂ ದೈವವನ್ನವಲಂಬಿಸಿ ಕುಳಿತುಕೊಳ್ಳದೆ ವಿಲಾಯತಿಯ ಒಕ್ಕಲಿಗನ ಅನುಕರಣವನ್ನು ಮಾಡಬೇಕೆಂದು ನಮ್ಮ ಸೂಚನೆ ಮುನಸಿಪಾಲಿಟಿ, ಲೋಕಲ ಬೋರ್ಡ ಅಥವಾ ಕಾಯದೇ ಕೌನ್ಸಿಲ ಮುಂತಾದ ಲೋಕನಿಯುಕ್ತ ಸಂಸ್ಥೆಗಳ ಸಭಾಸದತ್ವದ ಬಹುಮಾನವನ್ನು ದೊರಕಿಸುವ ಹಂಬಲವಿದ್ದವರು ನಮ್ಮ ಸಮಾಜದಲ್ಲಿ ಅನೇಕರುಂಟು ಆದರೆ ಅಂಥ ಬಹುಮಾನದ ಸಂಗಡ ಜೋಖಿಮದಾರಿಕೆಯ ಹೊರೆಯನ್ನೂ ಹೊತ್ತುಕೊಳ್ಳಬೇಕಾಗುತ್ತದೆಂಬವನ್ನು ಮಾತ್ರ ಅವರು ಅರಿಯರು ತಾವು ಆರಿಸಿಕೊಟ್ಟ ಸಭಾಸದನು ಆರಿಸಿಕೊಟ್ಟ ನಂತರ ಯಾವ ಬಗೆಯಾಗಿ ವರ್ತಿಸುವನೆಂಬದನ್ನೂ ಜನರು ನಿರೀಕ್ಷಿಸುವದಿಲ್ಲವಾದ್ದರಿಂದಲೇ ಪ್ರತಿಯೊಂದು ವಿಷಯದಲ್ಲಿ ಇಂಥ ಅನಾಸ್ಥೆಯು ಕಂಡು ಬರಹತ್ತಿದೆ

ಒಕ್ಕಲಿಗರ ಸ್ಥಿತಿಯು ತೀರ ಕೀಳಾಗಿದೆಯೆಂಬುದು ಎಲ್ಲರಿಗೂ ಮನವರಿಕೆಯಾಗಿದೆ, ಆದ್ದರಿಂದ ಒಕ್ಕಲಿಗರೆಲ್ಲರೂ ತಮ್ಮ ತಮ್ಮ ತಾಲೂಕಿನಲ್ಲಿ ಸಣ್ಣ ದೊಡ್ಡ ಸಭೆಗೂಡಿಸಿ ತಮ್ಮ ಆರ್ಥಿಕ ಸ್ಥಿತಿಯ ವಿವೇಚನೆಯನ್ನು ಮಾಡಬೇಕು. ಮತ್ತು

೧) ತಮ್ಮ ಸಹಾಯದಿಂದ ಆರಿಸಿ ಬಂದ ಕಾಯದೇ ಕೌನ್ಸಿಲದ ಸಭಾಸದರನ್ನು ಬರಮಾಡಿಕೊಂಡು ಅವನ ಮುಂದೆ ಈ ವಿಷಯವನ್ನು ಮಂಡಿಸಿ ಅದರ ಬಗ್ಗೆ ಏನಾದರೊಂದು ಉಪಾಯವನ್ನು ಮಾಡಲೇ ಬೇಕೆಂದು ಹೇಳಬೇಕು

೨) ತಮ್ಮ ತಾಲೂಕಿನ ಮಾಮಲೇದಾರ ಕಚೇರಿಯ ಮೇಲೆ ಹೋಗಿ ಈ ಎಲ್ಲ ಸಂಗತಿಗಳನ್ನೂ ಅವರ ಕಣ್ಣಿದರಿಗೆ ತಂದು ಕೊಟ್ಟು ಆವುಗಳ ನಿವಾರಣೆಯ ಸಲುವಾಗಿ ಅವರ ಸಹಾಯವನ್ನು ಕೇಳಿಕೊಳ್ಳಬೇಕು. ಒಂದು ವೇಳೆ ತಮ್ಮ ಕೈಯಲ್ಲಿ ಏನೂ ಇಲ್ಲವೆಂದು ಅವರು ಹಾರಿಸಿಕೊಂಡು ಬಿಟ್ಟರೆ ಅದೇ ಬೇಡಿಕೆಯನ್ನು ಕಲೆಕ್ಟರರ ಕಡೆಗೆ ಒಯ್ಯಬೇಕು.

ಈ ವಿಧವಾಗಿ ಪ್ರಯತ್ನ ಮಾಡಿದ ಮೇಲೆ ಸಹ ಬೇಡಿಕೆಯು ಪೂರ್ತಿಯಾಗದಿದ್ದರೆ ಮತ್ತು ಇಂಥ ಸರಕಾರದ ಸಂಗಡ ಸಂಬಂಧವನ್ನು ... ಮಾಡಿದ ದೈವವನ್ನು ಬೇಕಾದರೆ ... ಅಲ್ಲದೆ ಏನೂ ಪ್ರಯತ್ನ ಮಾಡದೆ ... ಲೆ ಭಾರವನ್ನೊಗೆದು ... ಕೃಥಾರದೆಂಬದೇ ನಮ್ಮ ಸಲಹೆ ...

ಕನ್ನಡಿಗ

ಶನಿವಾರ ತಾರೀಖು. ೧೧-೧೧-೧೯೩೩

ನ್ಯಾಯಖಾತೆ.

೧೯೩೨ನೆಯ ಇಸ್ವಿಯ ಮುಂಬಯಿ ಇಲಾಖೆಯ ... ಯ ... ಅಡಿ ... ದಿಂದ ... ದ್ಧವಾಗಿ ... ನೇಕ ಬೋಧಪ್ರದ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಎತ್ತೀಚಿಗೆ ಕೋರ್ಟಿನ ದಾವೆಗಳು ಬಹಳ ಕಡಿಮೆಯಾಗಿರುವವೆಂದು ಅನೇಕರ ತಿಳುವಳಿಕೆ. ಆದರೆ ಈ ವರದಿಯನ್ನು ಓದಿದರೆ ಅದು ತಪ್ಪೆಂದು ಕಂಡುಬರುವುದು ಏಕೆಂದರೆ ೧೯೩೧ನೆಯ ಇಸ್ವಿಯಲ್ಲಿ ಈ ಇಲಾಖೆಯಲ್ಲಿ ಒಟ್ಟು ೧೭೩೪೪೩ ದಾವೆಗಳು ದಾಖಲಾದವು ಅದೇ ೧೯೩೧ನೆಯ ಇಸ್ವಿಯಲ್ಲಿ ೮೫೧೦೯ ದಾವೆಗಳು ಕಡಿಮೆ ದಾಖಲ ಆಗಿದ್ದವು. ವಕೀಲ ಬಹಳಾಗಿರುವದರಿಂದ, ದಾವೆಗಳು ಕಡಿಮೆ ದಾಖಲ ಆಗುವಂತೆ ಸಕೃದ್ದರ್ಶನಕ್ಕೆ ಭಾಸವಾಗುತ್ತದೆ. ಈಗಿನ ಮುಗ್ಗಟ್ಟಿನ ದಿವಸಗಳಲ್ಲಿ ಸಹ, ಕೋರ್ಟಿಗೆ ಅಷ್ಟು ಹೆಚ್ಚು ದಾವೆಗಳು ಬರುವುದು ಸುಲಕ್ಷಣವಲ್ಲ ಆದರೆ ಈಗಿನ ನ್ಯಾಯ ಕೊಡುವ ರೀತಿಯಲ್ಲಿಯೇ ದೋಷವಿರುವುದರಿಂದ, ಕೋರ್ಟಿಗೆ ಹೋಗುವ ಚಟವು ತಪ್ಪುವುದಿಲ್ಲ ಮೂಲ ನ್ಯಾಯ ಪದ್ಧತಿಯಲ್ಲಿಯೇ ಸುಧಾರಣೆಯಾಗದ ಹೊರತು, ಈ ಸ್ಥಿತಿಯು ಬದಲಾಗಲಾರದು. ಈ ದಾವೆಗಳಲ್ಲಿ ಧಾರವಾಡ ಮತ್ತು ಬೆಳಗಾಂವಿಯಲ್ಲಿ ೫ ಸಾವಿರದಿಂದ ೧೦ ಸಾವಿರದವರೆಗೆ ದಾಖಲಾಗಿವೆ. ೧೯೩೨ನೆಯ ಇಸ್ವಿಯಲ್ಲಿ ಒಟ್ಟು ಇಲಾಖೆಯಲ್ಲಿ ೫ ಕೋಟಿ ೩೫ ಲಕ್ಷ ... ರೂಪಾಯಿಗಳ ದಾವೆಗಳು ದಾಖಲಾಗಿವೆ ಮುಂಬಯಿ ಪಟ್ಟಣದ ಹೊರಗಿರುವ ಸಿವ್ಹಿಲ್ ಕೋರ್ಟುಗಳಿಂದ ೫೦೮೦ ಅಪೀಲುಗಳು ಆಗಿವೆ. ೧೯೩೨ನೆಯ ವರ್ಷದಲ್ಲಿ ಹಾಯಕೋರ್ಟಿನ ಉತ್ಪನ್ನ ... ರೂಪಾಯಿ ಇರುತ್ತದೆ ಸರಕಾರದವರು ತಮ್ಮ ವರದಿಯಲ್ಲಿ ಒಟ್ಟು ನ್ಯಾಯಖಾತೆಯ ಉತ್ಪನ್ನ ಮತ್ತು ಖರ್ಚು ಇವುಗಳನ್ನು ಕೊಟ್ಟು ಅವುಗಳ ವಿವರಗಳನ್ನು ಕೊಟ್ಟಿದ್ದರೆ ಒಳಿತಾಗುತ್ತಿತ್ತು.

೧೯೩೨ನೆಯ ಇಸ್ವಿಯ ಕೊನೆಗೆ ೧೦ ಹಾಯಕೋರ್ಟ ಜಡ್ಜರೂ ೧ ತಾತ್ಪೂರ್ತಿಕ ಹೆಚ್ಚಿನ ಜಡ್ಜರೂ ೧೭ ಜನ ಡಿಸ್ಟ್ರಿಕ್ಟ ಜಡ್ಜರೂ ೧೦ ಅಸಿಸ್ಟಂಟ ಜಡ್ಜರೂ, ೧ ಚೀಫ ಜಡ್ಜನೂ ಮತ್ತು ೫ ಪ್ರೆಸಿಡೆನ್ಸಿ ಸ್ಮಾಲಕಾಜ ಕೋರ್ಟ ಜಡ್ಜರೂ ೨ ಪ್ರಾವ್ಹಿನ್ಸಿಯಲ್ ಸ್ಮಾಲಕಾಜಕೋರ್ಟ ಜಡ್ಜರೂ ... ಜನ ಒಂದನೇ ವರ್ಗ ಸಬಜಡ್ಜರೂ ... ಎರಡನೇ ವರ್ಗ ಸಬಜಡ್ಜರೂ ಕೆಲಸ ಮಾಡುತ್ತಿದ್ದರು. ಈ ವರ್ಷದಲ್ಲಿ ಒಟ್ಟು ನಿಕಾಲೆ ಆದ ದಾವೆಗಳ ಸಂಖ್ಯೆ ... ಇರುತ್ತದೆ ಇವುಗಳಲ್ಲಿ ... ದಾವೆಗಳು ಅಂದರೆ ೧೦೦ಕ್ಕೆ ... ದಾವೆಗಳು ಚವಕಸಿಗೆ ಬರುವ ಪೂರ್ವದಲ್ಲಿಯೇ ನಿಕಾಲೆಯಾದವು. ... ದಾವೆಗಳು ಅಂದರೆ ೧೦೦ಕ್ಕೆ ... ದಾವೆಗಳು ಏಕತರ್ಫಿ ನಿಕಾಲೆಯಾದವು ... ದಾವೆಗಳಲ್ಲಿ ಅಂದರೆ ೧೦೦ಕ್ಕೆ ... ದಾವೆಗಳಲ್ಲಿ ಪ್ರತಿವಾದೀರು ದಾವೆಗಳಿಗೆ ಒಪ್ಪಿದ್ದರಿಂದ ನಿಕಾಲೆಯಾದವು ... ದಾವೆಗಳು ಅಂದರೆ ೧೦೦ಕ್ಕೆ ... ದಾವೆಗಳು ರಾಜೀ ಆಗಿ ನಿಕಾಲೆಯಾದವು ... ದಾವೆಗಳು ಅಂದರೆ ನೂರಕ್ಕೆ ... ದಾವೆಗಳು ಪೂರ್ಣ ಚವಕಸಿಯ ನಂತರ ನಿಕಾಲೆಯಾದವು ... ಅಂದರೆ ನೂರಕ್ಕೆ ... ದಾವೆಗಳು ಪಂಚರ ಕಡೆಗೆ ಹೋಗಿ ನಿಕಾಲೆಯಾದವು ಈ ಅಂಕಿಗಳ ಮೇಲಿಂದ ನಮಗೆ ಏನು ಕಂಡುಬರುವುದು? ಈ ದೇಶದಲ್ಲಿ ನಿಷ್ಕಾರಣವಾಗಿ ಕೋರ್ಟಿಗೆ ಎಷ್ಟು ಹಣ ಹಾಳಾಗುತ್ತದೆಂಬುದು ಗೊತ್ತಾಗುವುದಿಲ್ಲವೆ? ಏಕೆಂದರೆ ಒಟ್ಟು ದಾವೆಗಳಲ್ಲಿ ಸುಮಾರು ೧೦೦ಕ್ಕೆ ... ಅಂದರೆ ಒಂದು ಮೂರಾಂಶ ದಾವೆಗಳಲ್ಲಿ ಮಾತ್ರ ನಿಜವಾಗಿ ತಕರಾರಿಗೆ ಆಸ್ಪದ ಇದ್ದಂತೆ ತೋರುತ್ತದೆ ಅವುಗಳು ಪೂರ್ಣ ಚವಕಸಿಯಾಗಿ ನಿಕಾಲೆಯಾಗಿವೆ ಮಿಕ್ಕ ಎರಡು ಮೂರಾಂಶ ದಾವೆಗಳು ನಟ್ಟ ನಡುವೇ ಯಾವದೊಂದು ರೀತಿಯಿಂದ ನಿಕಾಲೆಯಾಗಿರುತ್ತವೆ ಈ ಎರಡು ಮೂರಾಂಶ ದಾವೆಗಳನ್ನು ಜನ ... ಜಾಣರಾಗಿದ್ದರೆ ತಪ್ಪಿಸಲಿಕ್ಕೆ ಬರುತ್ತಿತ್ತು. ಅವರಲ್ಲಿಯೂ ೧೦೦ಕ್ಕೆ ... ದಷ್ಟು ದಾವೆಗಳು ರಾಜೀ ಆಗಿ ನಿಕಾಲೆಯಾಗಿವೆ ಈ ದಾವೆಗಳನ್ನಂತೂ ಸಹಜವಾಗಿ ತಪ್ಪಿಸಲಿಕ್ಕೆ ಬರುತ್ತಿತ್ತು ದಾವೆ ಮಾಡುವ ಪೂರ್ವದಲ್ಲಿಯೇ ತಮ್ಮ ತಮ್ಮೊಳಗಾಗಲಿ ಅಥವಾ ಪಂಚರ ಮುಖಾಂತರವಾಗಿಯಾಗಲಿ ರಾಜೀ ಆಗಲಿಕ್ಕೆ ಬರುತ್ತಿದ್ದಿಲ್ಲವೆ? ಆದರೆ ಅದಕ್ಕೆ ನಮ್ಮ ಜನರ ಮನೋರಚನೆಯಲ್ಲಿಯೇ ಮೂಲತಃ ಬದಲು ಆಗಬೇಕಾಗಿದೆ ಕೋರ್ಟಿಗೆ ಹೋಗುವುದೆಂದರೆ ಅದೊಂದು ಜೂಜಿನ ಆಟವಿದ್ದಂತೆ ಆಗಿದೆ ಹಿಂದಕ್ಕೆ ಅಸಹಕಾರ ಚಳವಳದಲ್ಲಿ ಕೋರ್ಟಿಗೆ ಹೋಗುವ ಹವ್ಯಾಸವು ಜನರಲ್ಲಿ ಬಹಳ ಕಡಿಮೆಯಾಗಿತ್ತು. ಕೋರ್ಟಿಗೆ ಹೋಗುವುದನ್ನು ಆದಷ್ಟು ತಪ್ಪಿಸುವುದರ ಕಡೆಗೆ ಜನರ ಮನಸ್ಸಿನ ಒಲವು ಆಗಿತ್ತು. ಅದೇ ಮುಂದೆ ಬೆಳೆದಿದ್ದರೆ ಇಂದಿಗೆ ಈ ದೇಶದಲ್ಲಿ ಕೋರ್ಟಿಗೆ ಹಾಳಾಗುವ ಖರ್ಚಿನಲ್ಲಿ ಕನಿಷ್ಠ ಅರ್ಧದಷ್ಟು ಖರ್ಚವರೂ ಉಳಿಯಬಹುದಾಗಿತ್ತು. ಈ ಮೇಲಿನ ಅಂಕಿಗಳಿಂದ ಲೆಕ್ಕಿಸುವ ಸಂಗತಿಯೆಂದರೆ ೧೦೦ರಲ್ಲಿ ೫ರಷ್ಟು ದಾವೆಗಳು ಮಾತ್ರವೇ ಪಂಚರ ಕಡೆಗೆ ಹಾಕಲ್ಪಟ್ಟವು ಇದು ಬಹಳ ಅಲ್ಪಸಂಖ್ಯೆಯು ಮುಂಚಿನ ಕಾಲದಲ್ಲಿ 'ದೈವದವರು' ಅಥವಾ ಪಂಚರು ಎಂದರೆ ಅವರಿಗೆ ಒಂದು ಬಗೆಯ ಗೌರವವಿತ್ತು. ವಸ್ತುತಃ ಅದೇ ಮಾರ್ಗವನ್ನು ಪ್ರತಿಯೊಬ್ಬನು ಅನುಸರಿಸತಕ್ಕದ್ದು ಆದರೆ ನಾವು ಮೇಲೆ ಹೇಳಿದಂತೆ, ಹೀಗಾಗುವುದಕ್ಕೆ ಇದೇ ಜನತೆಯ ಮನೋವೃತ್ತಿಯಲ್ಲಿಯೇ ಬದಲಾಗುವುದು ಅವಶ್ಯವಿದೆ ವಿಶೇಷತಃ ಪಂಚರೆಂಬವರು ಊರೊಳಗಿನ ಪ್ರಮುಖರೂ ನ್ಯಾಯಾನ್ಯಾಯವನ್ನು ನಿಃಪಕ್ಷಪಾತದಿಂದ ಹೇಳುವವರೂ ಆಗಿರಬೇಕು ಅಂಥವರು ಸಿಕ್ಕುವುದಿಲ್ಲವೆಂಬ ಕಾರಣದಿಂದಲೂ, ಈ ಪದ್ಧತಿಯು ರೂಢಿಯಲ್ಲಿ ಬರಲಿಕ್ಕೆ ವಿಲಂಬವಾಗಿದೆ ಸುಶಿಕ್ಷಿತರೆಂದೆನಿಸಿಕೊಳ್ಳುವವರಾದರೂ ಈ ಪದ್ಧತಿಯನ್ನು ಕೋರ್ಟಿಗೆ ಹೋಗುವ ಪೂರ್ವದಲ್ಲಿ ಅವಲಂಬಿಸಿ ಮಿಕ್ಕವರಿಗೆ ಮೇಲ್ಪಂಕ್ತಿಯನ್ನು ಹಾಕಿ ಕೊಡುವುದು ಅವಶ್ಯವು ಈಗ ಕಾಂಗ್ರೆಸ್ಸಿನವರು ಅನೇಕ ವಿಧಾಯಕ ಕಾರ್ಯಗಳನ್ನು ಮಾಡಬೇಕೆಂದಿರುವರಷ್ಟೆ ಆದರೆ, ಹಿಂದಿನಂತೆ ಈ ಸಲ, ಈ ತರಹದ ಪಂಚ ಕೋರ್ಟುಗಳ ವಿಚಾರವು ಪ್ರಾಮುಖ್ಯವಾಗಿ ಸೂಚಿಸಲ್ಪಟ್ಟಿರುವುದಿಲ್ಲ ಹಾಗೆ ಆಗುವುದು ಅವಶ್ಯವಿದೆ ವಿಶೇಷತಃ ಹಳ್ಳಿಗಳ ಪುನರ್ಘಟನೆಯ ವಿಚಾರ ಮಾಡುವಾಗ ನಾವು ಈ ಪ್ರಶ್ನೆಯ ವಿಚಾರವನ್ನು ಅವಶ್ಯವಾಗಿ ಮಾಡಬೇಕು ಮುಂಚೆ ಹಳ್ಳಿಯವರು ಕೋರ್ಟುಗಳಿಗೆ ಹೋಗಲಿಕ್ಕೆ ಹೆದರುತ್ತಿದ್ದರು ಈಗ ಪಟ್ಟಣಿಗರಿಗಿಂತಲೂ ಅವರೇ ಮುಂದುವರಿದಿದ್ದಾರೆ ಇರಲಿ, ನ್ಯಾಯಖಾತೆಯ ಉತ್ಪನ್ನವು ಕಡಿಮೆಯಾಗುವುದು ದೇಶದ ಸಂಗತಿಯ ಒಂದು ಚಿನ್ಹವು ಅದು ಇನ್ನೂ ಕಂಡುಬರುವುದಿಲ್ಲ

ಲಂಡನ್ನದಲ್ಲಿ ಕಡೆದಿರುವ ಜಾಯಿಂಟ ಪಾರ್ಲಿಮೆಂಟ ಕಮೀಟಿಯ ಮುಂದೆ ಸಾಕ್ಷಿ ಕೊಡಲಿಕ್ಕೆ ಬ್ರಹ್ಮದೇಶದಿಂದ ಏಳುಮಂದಿ ಪ್ರತಿನಿಧಿಗಳು ಹೋದರು.

ಹರಿಜನ ಕಾರ್ಯಕ್ಕಾಗಿ ಒಬ್ಬ ಮಹಿಳೆಯರ ತ್ಯಾಗ.

ನಾಗಪುರ ತಾ|| ೮— ಮಹಾತ್ಮರು ಈಗ ಹರಿಜನ ಕಾರ್ಯದ ದೆಸೆಯಿಂದ ಪಯಣ ನಡಿಸಿದ್ದು, ಆ ವ ರೀ ಗ ಆ ದೇ ಕಾ ರ್ಯ ದ ಸಲುವಾಗಿ ನಾಗಪುರಕ್ಕೆ ಹೋಗಿದ್ದಾರೆ ನಾಗಪುರದ ನಾಗರಿಕರು ಹರಿಜನ ಕಾರ್ಯಕ್ಕಾಗಿ ಮಹಾತ್ಮರಿಗೆ ೧೨೦ ರೂಪಾಯಿ ಒಪ್ಪಿಸಿದರು ಶ್ರೀಮತಿ ಟಕಳೆ ಎಂಬುವ ಮಹಿಳೆಯರು ೩೦೦ ರೂಪಾಯಿ ಬೆಲೆಯ ತಮ್ಮ ಭಂಗಾರ ಬಳೆಯನ್ನು ಒಪ್ಪಿಸಿದರು ನಾಗಪುರದ ಮುಖಂಡರಾದ ಡ್ಯಾ. ಅಭ್ಯಂಕರರವರ ಧರ್ಮಪತ್ನಿಯವರು ತಮ್ಮಲ್ಲಿದ್ದ ಬಿದ್ದ ಎರಡು ಭಂಗಾರ ಬಳೆಗಳನ್ನು ಕೊಟ್ಟಾಗ ಮಹಾತ್ಮರ ಕಣ್ಣುಗಳಲ್ಲಿ ನೀರು ತುಳುಕಿದವು ಮಹಾತ್ಮರು ಹರಿಜನರನ್ನು ಕುರಿತು ಮಾತನಾಡುವಾಗ "ಕುಡಿಯುವದನ್ನು ಬಿಡಿರಿ ಜೂಜಾಡಬೇಡಿರಿ ಎಲ್ಲರಂತೆ ಸ್ವಚ್ಛವಾಗಿರಲಿಕ್ಕೆ ಕಲಿಯಿರಿ, ನಿರ್ಮಲವಾಗಿರ ತೊಡಗಿದರೆ, ಸ ವರ್ಣರ ಜನರು ಕೂಡ ನಿಮ್ಮೊಡನೆ ಕೂಡಿ ನಡೆಯುವರು" ಎಂದರು

ಪಂ. ಮಾಲವೀಯರೊಡನೆ ಚರ್ಚೆ

ಅಲಹಾಬಾದ ತಾ| ೯—ಶ್ರೀ ನರೀಮನ್ನರು ಮತ್ತು ಡಾ. ಅನ್ಸಾರಿಯವರಿಗೆ ಅಲ್ಲಾಹಾಬಾದಕ್ಕೆ ಬರಲಿಕ್ಕೆ ಬಿನ್ನಪತ್ರಿಕೆಗಳು ಹೋಗಿವೆ. ಪಂಡಿತ ಮಾಲವೀಯರು ಸ್ವದೇಶಿಯ ಪ್ರದರ್ಶನ ತೆರೆಯುವ ದೆಸೆಯಿಂದ ಇಲ್ಲಿ ಬಂದಿದ್ದು ಅವರೊಡನೆ ರಾಜಕೀಯ ಚರ್ಚೆ ನಡೆಯುವದಿದೆ

ಭೂಮಿಯ ತೆರಿಗೆಯಲ್ಲಿ ಬಿಡುವಳಿಬೇಕು.

ರಾಣಿ ತಾ|| ೭— ಕಲ್ಯಾಣದಲ್ಲಿಯ ಮುಂಬಯಿ ಕೌನ್ಸಿಲರಾದ ಮಿ|| ಝುಂಝಾರರಾಯರವರ ಅಧ್ಯಕ್ಷತೆಯಲ್ಲಿ ಜಮೀನದಾರ ಮತ್ತು ಒಕ್ಕಲಿಗರ ಸಂಘದ ಕಾರ್ಯಕಾರಿ ಮಂಡಲದ ಸಭೆಯಾಗಿ "ಕಳೆದ ೨ ವರ್ಷಗಳಿಂದ ಸರಕಾರದವರು ಭೂಮಿಯ ವಿಷಯದಲ್ಲಿ ತೋರಿಸಿದ ಸಾಲಭ್ಯಗಳು ಸಾಕಷ್ಟಿಲ್ಲದ್ದರಿಂದಲೂ, ಭತ್ತ, ಹುಲ್ಲು ಹಾಗೂ ಮಿಕ್ಕ ಕ ಳಕತಿಗಳ ಧಾ ಣೆ ಇಳಿದದ್ದರಿಂದಲೂ ಹಿಂದಕ್ಕೆ ಕೊಟ್ಟ ತೆರಿಗೆಯ ನಿಲುವಳಿಯನ್ನು ಪೂರಾ ಬಿಡಬೇಕು" ಎಂದು ಗೊತ್ತು ಮಾಡಿದರು

ಪೆರೋಲ ಮುರಿದದ್ದಕ್ಕಾಗಿ ಶಿಕ್ಷೆ

"ಹಸರಿತ್ತಿಯಲ್ಲಿಯ ಶ್ರೀ ಹಳ್ಳೀಕೇರಿ ಗುದ್ಲೆಪ್ಪನವರ ಅಣ್ಣಂದಿರಾದ ಶ್ರೀ ಮಹಾದೇವಪ್ಪನವರು ವಿಸ್ಸಾಪುರ ಜೇಲಿನಿಂದ ... ಸರಕಾರದವರಿಂದ ಇಡಲ್ಪಟ್ಟಿದ್ದರು. ಆದರೆ, ಅಲ್ಲಿ ಕಟ್ಟಳೆ ಮುರಿದು ಅವರು ಹೊಸರಿತ್ತಿಗೆ ಹೋಗಿ ಅಲ್ಲಿಯ ಫೌಜದಾರರಿಗೆ ತಿಳಿಸಿದರು ಆದರ ದೆಸೆಯಿಂದ ಶ್ರೀ ಮಹಾದೇವಪ್ಪನವರಿಗೆ ಒಂದು ವರ್ಷದ ಶಿಕ್ಷೆ ಅಥವಾ ೫೦೦ ರೂಪಾಯಿ ದಂಡವೆಂದು ತೀರ್ಪು ಹೇಳಿದರು ಅವರನ್ನು ಈಗ ಹಿಂಡಲಗಿ ಸೆರೆಮನೆಗೆ ಒಯ್ದಿದ್ದಾರೆ

ಬಾಗಲಕೋಟೆಯಲ್ಲಿ ಪ್ಲೇಗನಿವಾರಣೋಪಾಯ

ಬಾಗಲಕೋಟೆಯ ಮುನಸಿಪಾಲಟಿಯು ಪ್ಲೇಗ ಪ್ರತಿಬಂಧನಕ್ಕಾಗಿ ಒಂದು ಕಮೀಟಿ ನೇಮಿಸಿದ್ದಾರೆ ಡಾ ಅಸ್ಕೀಕರವರು ಅದರ ಕಾರ್ಯದರ್ಶಿಗಳು ತಾ|| ೯ ರಿಂದ ೧೫ ದಿನ ಈ ಕಮೀಟಿಯು ಒಳ್ಳೆ ಭರದಿಂದ ಕೆಲಸ ಮಾಡುವದು, ಮೈಲಿ ಹಚ್ಚುವದು, ಮನೆಗಳನ್ನೂ ಗಟಾರುಗಳನ್ನೂ ತೊಳೆಯುವದು, ಇಲಿಗಳನ್ನು ನಾಶಪಡಿಸುವದು ವ್ಯಾಖ್ಯಾನ ಕೊಡುವದು ಹಾಗೂ ಜಾಹೀರ ಪತ್ರಿಕೆಗಳನ್ನು ಹಂಚುವದು ಇವೇ ಮೊದಲಾದ ಕೆಲಸಗಳು ಉತ್ಸಾಹದಿಂದ ನಡೆದಿವೆ.

ಇಹವೃತ್ತ.

ನಾಳೆ ವಿಜಯ ಸಿನೇಮಾದಲ್ಲಿ 'ಇ... ಸುಂದರ' ಪ್ರಾರಂಭವಾಗುವದು ಅದೇ ... ದಸಲ ಪ್ರಭಾತ ಚಿತ್ರಪಟದ ಕಾಲಕ್ಕೆ ... ಗೊಂದಲ ಆಗಬಾರದೆಂಬುದಕ್ಕೆ ವ್ಯವಸ್ಥಾಪಕರು ಲಕ್ಷ ತೆಗೆದುಕೊಳ್ಳಬೇಕು

ಹಿಂದುಸ್ಥಾನ

ಸಿಂಧ ಹೈದರಾಬಾದದಲ್ಲಿ ಹೊಂ... ಪ್ರಭಾತ ಎಂಬ ಪತ್ರಿಕೆಯ ಸಂಪಾದಕರನ್ನು ಯಾವನೊ ಒಬ್ಬ ಮುಸಲ್ಮಾನನು ಕಬ್ಬಿಣದ ... ಯಿಂದ ಹೊಡೆದು ಓಡಿ ಹೋಗಿರುವನು ಇನ್ನೂ ಸಿಕ್ಕಿಲ್ಲ

ವರ್ಧಾದಲ್ಲಿ ಮಹಾತ್ಮರಿಗೆ ಹರಿಜನ ಕಾರ್ಯಕ್ಕೆಂದು ೭೬೦ ರೂಪಾಯಿಗಳ ಥೈಲಿ ಒಪ್ಪಿಸಿದರು ಮಹಾತ್ಮರ ಸಂಗಡ ... ಯು, ಶ್ರೀ ಅಮೃತಲಾಲ ಠಕ್ಕರ, ಡಾ|| ... ಮುಂತಾದವರಿರುವರು

ಜಮಖಂಡಿ ಪತ್ರ

ತಾರೀಖು ೭-೧೧-೩೩

ಈ ದಿವಸ ಶ್ರೀಮಂತ ಸರಕಾರರವರ ಜನ್ಮ... ಹುಟ್ಟಿದ ದಿವಸ ಇದ್ದು ಆ ನಿಮಿತ್ತ ಸಾಯಂಕಾಲ ೬|| ಘಂಟೆಗೆ ದರಬಾರ ಕೂಡಿತ್ತು. ಊರಲ್ಲಿ ಇನ್ನೂ ಪ್ಲೇಗು ಪೂರ್ಣವಾಗಿ ನಷ್ಟವಾಗಿ... ಇದ್ದಾಗ್ಯೂ ಸ್ಟೇಟ ಡಾಕ್ಟರರು, ಇತರ ವೈದ್ಯರು ಡಾಕ್ಟರಗಳು, ಮತ್ತು ಮುನಸಿಪಾಲಟಿ ಕಮೀಟಿಯವರೂ ಪ್ರತಿಬಂಧಕ ಉಪಾಯಗಳನ್ನು ತೀವ್ರವೇ ಕೈಕೊಂಡು ರೋಗವು ಹರಡದ ಬಗ್ಗೆ ಪ್ರಯತ್ನಿಸಿದ ವಿಷಯವಾಗಿ ಶ್ರೀಮಂತರು ತಮ್ಮ ಭಾಷಣದಲ್ಲಿ ಸಂತೋಷ ವ್ಯಕ್ತ ಮಾಡಿದರು.

ಖಾಸಗಿ ಉತ್ಪನ್ನದ ಪೈಕಿ ೬| ಸಾವಿರ ರೂಪಾಯಿಯ ಸೂಟು ಬಿಟ್ಟಿದ್ದ ಜಾಹೀರ ಮಾಡಿದರು.

ಊರಲ್ಲಿ ಇಲೆಕ್ಟ್ರಿಸಿಟಿ ಹಗಲು ರಾತ್ರಿ ... ದೇ ಚಾಲು ಇರುವ ಹೊಸ ಏರ್ಪಾಡು ಆದದ್ದು ಅದರ ಉಪಯೋಗ ಔದ್ಯೋಗಿಕ ಧಂದೆಗಳ ಕಡೆಗೆ ಅವಶ್ಯ ಮಾಡಿಕೊಳ್ಳಬೇಕಾಗಿ ಜನರಿಗೆ ಸೂಚನೆಯನ್ನಿತ್ತರು.

ಏಜಂಟರ ಹಸ್ತದಿಂದ ಇಲ್ಲಿಯ ಸಂಸ್ಥಾನ ಕಾಯದೆ ಮಂಡಲವು ಸ್ಥಾಪಿತವಾದಂದಿನಿಂದ ಅದರ ಅಧಿವೇಶನ ವಿಚಾರವು ಇದುವರೆಗೆ ಆಗಿಲ್ಲವೆಂದು ಪ್ರಜೆಗಳು ಎಳ್ಳಷ್ಟೂ ಅಧೀರರಾಗಬಾರದೆಂದು ಹೇಳಿ ಯೋಗ್ಯ ಕಾಲಕ್ಕೆ ಸದರ ಮಂಡಳದ ಅಧಿವೇಶನವನ್ನು ... ಮುಂಗಾಲದ ಅಂದರೆ ಸನ್ ೧೯೩೪-೩೫ರ ಬಜೆಟ್ ಪ್ರತಿನಿಧಿಗಳ ಎದುರಿಗೆ ಚರ್ಚೆಗಾಗಿ ಇಡುವದರ ಬಗ್ಗೆ ಆಶ್ವಾಸನ ಕೊಟ್ಟರು ಶ್ರೀ ಶ್ರೀಮಂತರ ಮತ್ತು ರಾಜಕುಟುಂಬದ ಆಯುರಾರೋಗ್ಯ ಚಿಂತನೆಯಾದ ನಂತರ ದರಬಾರ ಮುಗಿಯಿತು.

ದರಬಾರ ಸಮಾರಂಭ ಮುಗಿದ ಕೂಡಲೆ ಶ್ರೀಮಂತ ಬಾಬಾಸಾಹೇಬ ಜಾಹಗೀರದಾರ ಶ್ರೀಮಂತ ... ಟೀ ಪಾರ್ಟಿ ಕೊಟ್ಟರು.

ಜಮಖಂಡಿಯಲ್ಲಿ ವ್ಯಾಪಾರ ಸಂಘವೊಂದು ಸ್ಥಾಪನೆಯಾಗುವ ಮಾರ್ಗದಲ್ಲಿ ಇದೆ.

ಹುಬ್ಬಳ್ಳಿ ಪೇಟೆಯ ಧಾರಣೆ

(ಸೇವಕರ ಮುಖ್ಯ ಕಂಪನಿ)

ಹುಬ್ಬಳ್ಳಿ ತಾ|| ೧೦ ಮಧ್ಯಾಹ್ನ ೧೧ ಗಂಟೆ ದೇಶಭಕ್ತ ಪಟೇಲರ ನಿಧನಕ್ಕಾಗಿ ದುಃಖ ಪ್ರದರ್ಶಕ ಸಭೆ ... ಇಂದಿನ ಮಾರ್ಕೆಟ ಒಂದು ಅರ್ಧ ದಿವಸದಿಂದ ... ಮುಚ್ಚಿದ್ದು ...

ದಿವಂಗತ ಪಟೇಲರ ಸ್ಮಶಾನ ಯಾತ್ರೆ

ಕೈ. ಪಟೇಲರ ಸ್ಮಶಾನ ಯಾತ್ರೆ.

ಮುಂಬೈ ತಾ॥ ೧೫— ಈ ದಿನ ಬೆಳಿಗ್ಗೆ ೬-೩೦ ಕ್ಕೆ ವಿಠ್ಠಲಭಾಯಿಯವರ ಶವದ ಮೆರವಣಿಗೆಯು ಬ್ಯಾಲಾರ್ಡ ಇಸ್ಟೇಟದಿಂದ ಹೊರಟಿತು. ದೊಡ್ಡ ದೊಡ್ಡ ಹೂಮಾಲೆ, ಹಾಗೂ ನಿಶಾನಿಗಳಿಂದ ಶವವು ಮುಚ್ಚಿತು. ಆಪ ಬಂಧುಗಳು, ಇಷ್ಟಮಿತ್ರರು, ಸಂಸ್ಕಾರ ಮಂಡಲದ ಸಭಾಸದರು ಮತ್ತು ಸಾರ್ವಜನಿಕರು ಶವಕ್ಕೆ ಪುಷ್ಪಮಾಲೆಗಳನ್ನು ಹಾಕುವದರಿಂದ ವೇಳೆ ದೇಶಸೇವಿಕೆಯರು, ಸ್ವಯಂಸೇವಕರ ತಂಡದಿಂದ ಸ್ಮಶಾನಯಾತ್ರೆ ನಡೆಯಿತು. ಆಪ್ತರಲ್ಲಿ ಶ್ರೀ ವಲ್ಲಭಭಾಯಿಯವರ ಚಿರಂಜೀವರಾದ ಶ್ರೀ. ದಯಾಭಾಯಿ, ಹೆಣ್ಣುಮಗಳಾದ ಶ್ರೀ. ಮಣಿಬೇನ, ಅಲ್ಲದೆ ಶ್ರೀ. ಸರೋಜಿನೀ ನಾಯುಡು, ಮಿ. ಹಾರ್ನಿಮನ್ನ, ಶ್ರೀ. ಜಮ್ನಾದಾಸ ಮೆಹತಾ, ಮಿ. ಬ್ರೇಲವಿ ಮುಂತಾದವರಿದ್ದರು. ಎರಡು ಬದಿಯಲ್ಲಿ ಸಾವಿರಾರು ಜನ ಸುವ್ಯವಸ್ಥಿತ ರೀತಿಯಿಂದ ಎಲ್ಲ ಜಾತಿಯ ಜನರು ನಿಂತಿದ್ದರು. ಪೋಲೀಸರು ಅದೇ ಕೆಲಸಕ್ಕೆಂದು ಕಳಿಸಲ್ಪಟ್ಟ ಸ್ವಯಂಸೇವಕರೂ ಅತ್ಯುತ್ತಮ ವ್ಯವಸ್ಥೆಯನ್ನಿಟ್ಟಿದ್ದರು. ಮೆರವಣಿಗೆಯ ಮೂಲಕ ಬಹಳ ಹೊತ್ತಿನವರೆಗೆ ಜನರ ಹಾಯ್ದಾಟ, ಬಂಡಿಗಳ ಓಡಾಟ ಇವುಗಳು ತಡೆದಿದ್ದವು. ಪೋಲೀಸ ಪಾರ್ಟಿಯು, ಅಧಿಕಾರಿಗಳು, ಮೆರವಣಿಗೆಯ ಬೆಂಬಲಕ್ಕಿದ್ದರು. ಮೆರವಣಿಗೆಯು ವ್ಯಾಕ್ಸಿನ ಟವೇ ಹತ್ತಿರ ಬಂದಾಗ ನಾಲ್ಕು ಹೆಂಗಸರು ಮೃತ ಪುಣ್ಯಾತ್ಮನ ಮುಖನೋಡಬೇಕೆಂದು ತಡೆದಾಗ ದಾರಿಯಲ್ಲಿ ಅರ್ಧಘಂಟೆ ಕಾಲ ನಿಲ್ಲಬೇಕಾಯಿತು. ಶವದ ಮುಖ ಮುಚ್ಚಿಕೊಂಡು ಒಯ್ಯುವದು ಹಿಂದೂ ಪದ್ಧತಿಗೆ ವಿರುದ್ಧವಾದುದೆಂದು ಆ ಹೆಂಗಸರು ತಕರಾರ ಮಾಡಿದರು. ಅವರನ್ನು ಶ್ರೀ ಸರೋಜಿನೀ ದೇವಿಯವರು ಸಂತವಿಸಿದ ಬಳಿಕ ಅವರು ಸುಮ್ಮನಾದರು. ಮುಂದೆ ಮೆರವಣಿಗೆಯು ಅಖಂಡವಾಗಿ ನಡೆಯಿತು. ಮಸಿಪಾಲಿಟಿ ಕಟ್ಟಡಕ್ಕೆ ಸ್ಮಶಾನ ಯಾತ್ರೆಯು ಮುಟ್ಟಿದ ಮೇಲೆ, ಮುಂಬಯಿ ಪಟ್ಟಣದ ಮೇಯರ ಸಾಹೇಬರು ಅಲ್ಲಿಯೇ ಕೈಯಲ್ಲಿ ಹೂಮಾಲೆಯನ್ನು ಹಿಡಿದುಕೊಂಡು ನಿಂತಿದ್ದು ಅದನ್ನು ಶವಕ್ಕೆ ಅರ್ಪಿಸಿದರು. ಈ ದಿನ ಮುಂಬೈಯಲ್ಲಿ ಕೈ. ಪಟೇಲರ ಸ್ಮರಣೆಗಾಗಿ ಹರತಾಳ ಪಾಲಿಸಲ್ಪಟ್ಟಿದೆ.

[ಅ ಪ್ರೆ ಸಂಘ]

ಮುಂಬಯಿ ತಾ॥ ೧೫ — ಶ್ರೀ ಪಟೇಲರ ಶವದ ಮೆರವಣಿಗೆಯು (ಸೋನಾಪುರಕ್ಕೆ ಮುಂಬಯಿಯ ಸ್ಮಶಾನ ಭೂಮಿಗೆ) ಬಂದು ಮುಟ್ಟಿತು. ಸ್ಮಶಾನವು ಕಲ್ಪಿಸಿದಂತೆ ಜನಸಂಖ್ಯೆಯು ಮಿತಿಮೀರಿತು. ಮಾರ್ಗದಲ್ಲಿ ಜನರು ಹೂಮಾಲೆಗಳಿಂದಲೂ ಕುಂಕುಮಾದಿ ದ್ರವ್ಯಗಳಿಂದಲೂ ದೇಹವನ್ನು ಪೂಜಿಸಿ ವಿಠ್ಠಲಭಾಯಿಯವರ ಮೇಲಿನ ತಮ್ಮ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದರು. ಕಡೆಗೆ ದರ್ಶನಕ್ಕೆ ಬಂದ ಜನರ ಸಂಖ್ಯೆಯು ಹೆಚ್ಚಾಗಿ ಸ್ಮಶಾನದ ಮಾರ್ಗವು ಮುಚ್ಚಿಹೋಯಿತು. ಪೋಲೀಸರ ಸಹಾಯದಿಂದ ಮಾರ್ಗವಾದ ಬಳಿಕ ೧೨ ಗಂಟೆಗೆ ಒಂದು ಎತ್ತರವಾದ ಗದ್ದುಗೆಯ ಮೇಲೆ ಎಲ್ಲರ ದರ್ಶನವಾಗುವಂತೆ ದೇಹವು ಇಡಲ್ಪಟ್ಟಿತು. ಸಾಯಂಕಾಲ ೬ ಘಂಟೆಗೆ ಸರಿಯಾಗಿ ಅಂತ್ಯವಿಧಿಗಳು ತೀರಿಸಲ್ಪಟ್ಟವವು

(ಅ ಪ್ರೆ ಸಂಘ)

ಹಡಗದಲ್ಲಿ ಕೈ. ವಿಠ್ಠಲಭಾಯಿಯವರ ಶವವು

ಮುಂಬಯಿ ತಾ॥ ೯—

ದಿವಂಗತ ವಿಠ್ಠಲಭಾಯಿ ಪಟೇಲರ ಶವವು ಇವತ್ತಿನ ದಿವಸ ಸಂಜೆಗೆ 'ಸರ್ಗ ಂಡಾ' ಹಡಗದಿಂದ ಮುಂಬಯಿಗೆ ತಲುಪಿತು. ಪೋಲಿಸ್ಟೇಶನಕ್ಕೆ ವಿಠ್ಠಲಭಾಯಿಯವರ ಮಿತ್ರರೂ ಆಪ್ತೇಷ್ಟರೂ ಮತ್ತು ದೀನಬಂಧು ಆ್ಯಂಡ್ರೂಜ ಇವರೇ ಮೊದಲಾದ ಪ್ರತಿಷ್ಠಿತ ಜನರೂ ಹೋಗಿದ್ದರು. 'ದಹನವಿಧಿ' ಕಮಿಟಿಯ ಸಭಾಸದರೂ ಇದ್ದರು. ಸಭಾಸದರು ಹಡಗದ ಮೇಲೆ ಹೋಗಿ ಶವದ ಪೆಟ್ಟಿಗೆಯನ್ನು ನೋಡಿದರು. ಆ ಮೇಲೆ ಪೆಟ್ಟಿಗೆಯು ಕೆಳಗೆ ತರಲ್ಪಟ್ಟಿತು. ವತ್ತು ಅದಕ್ಕೆ ಪುಷ್ಪಮಾಲೆಗಳು ಅರ್ಪಿಸಲ್ಪಟ್ಟ ನಂತರ ಪೆಟ್ಟಿಗೆಯನ್ನು ಜಿ ಟಿ ದವಾಖಾನೆಗೆ ಒಯ್ದರು. ನಾಳೆ ಮುಂಜಾನೆ ಪ್ರೇತ ಯಾತ್ರೆಯ ಮೆರವಣಿಗೆಯು ಹೊರಡುವದು

(ಅ ಪ್ರೆ ಸಂಘ)

ಅಫಗಾನ ಪಟ್ಟ ಯಾರಿಗೆ?

ಪೇಶಾವರ ತಾ॥೯—

ಅಫಗಾನಿಸ್ಥಾನದ ಅಮೀರರಾದ ನಾದಿರಶಹಾ ಇವರು 'ಅರ್ಕ' ಅರಮನೆಯಿಂದ ಅಕ್ಷರದಿಂದ ಹೊರಬೀಳುವ ಕಾಲಕ್ಕೆ ಕೆಲವು ಅರಮನೆಯ ಸೇವಕರು ಅವರ ಮೇಲೆ ಮೂರು ಸಲ ಗುಂಡು ಹಾಕಿದರು. ಮತ್ತು ಆ ಮೇಲೆ ಕಠಾರಿಯಿಂದ ಇರಿದು ಕೊಂದರೆಂಬ ಪೇಶಾವರದಲ್ಲಿ ಹಬ್ಬಿದ ಸುದ್ದಿಯಂತೆ ತಿಳಿಯುತ್ತದೆ. ಈ ಸುದ್ದಿಯು ಕೂಡಲೇ ಗಡಿನಾಡಿನಲ್ಲೆಲ್ಲ ಮೆಲ್ಲಗೆ ಹಬ್ಬಿತು. ಈ ವರೆಗೂ ಯಾವ ತರದ ಗೊಂದಲವೂ ಎದ್ದಿಲ್ಲ. ಯುದ್ಧ ಮಂತ್ರಿಯಾದ ಶಾಹ ಮಹಮ್ಮದಖಾನನು ಉತ್ತರ ಪ್ರಾಂತದಲ್ಲಿರುತ್ತಾನೆ. ಸದ್ಯಕ್ಕೆ ದೇಶದಲ್ಲೆಲ್ಲ ಶಾಂತತೆಯಿದ್ದು ಮೋಟಾರಿನ ಪ್ರವಾಸವು ಯಥಾಪ್ರಕಾರ ತಡೆಯಿಲ್ಲದೆ ಸಾಗಿದೆ.

ಈಗ ಸದ್ಯಕ್ಕೆ ಅಫಗಾನಿಸ್ಥಾನದಲ್ಲಿ ಶಾಂತಿಯಿದೆ; ಆದರೆ, ಅಫಗಾನಿಸ್ಥಾನದ ಪಟ್ಟಕ್ಕೆ ಹಾತೊರೆಯುವವರದೊಂದು ಗದ್ದಲ ನೇಳುವ ಲಕ್ಷಣಗಳು ತೋರುತ್ತಿವೆ. ಯುದ್ಧಮಂತ್ರಿಗಳಾದ ಶಹಾ ಮಹಮ್ಮದರವರು ಒಬ್ಬರನ್ನು ಅವರೊಬ್ಬರನ್ನು ಅಮೀರರನ್ನಾಗಿ ಮಾಡಿರುವರೆಂದು ಸುದ್ದಿ ಹರಡಿದೆ.

ಪ್ಯಾರೀಸದಲ್ಲಿಯ ಅಫಗಾನ ಮಂತ್ರಿಗಳಾದ ಶಹಾ ವಾಲೀಖಾನರು ಮತ್ತು ಅಹಮ್ಮದಝೋಯಿ ಜಾತಿಯ ಚಮಶುದ್ದೀನರು ಕೂಡ ಪಟ್ಟವನ್ನು ಹಿಡಿಯುವರೆಂದು ಕೆಲವರ ತರ್ಕ; ಆದರೆ, ಹಿಂದಿನ ಅಮೀರರಾದ ಅಮಾನುಲ್ಲಾಖಾನರು ತಿರುಗಿ ಬಂದರೆ ಒಳಿತಾಗುವದೆಂದು ಸಾರ್ವಜನಿಕರಲ್ಲಿ ಒಂದು ತಂಗಡದ ಅಭಿಪ್ರಾಯ

(ಅ ಪ್ರೆ ಸಂಘ)

ಮಂದಿರ ಪ್ರವೇಶ ಬಿಲ್ಲು

ಮುಂಬಯಿ ತಾ॥ ೯-

ಸಿ ಎಸ್ ರಂಗಯ್ಯರ ಇವರು ಅಸೆಂಬ್ಲಿಯಲ್ಲಿ ಅಸ್ಪೃಶ್ಯ ಮಂದಿರ ಪ್ರವೇಶದ ಸಂಬಂಧವಾಗಿ ತಂದ್ದ ಮಸೂದೆಯು ಈ ಹೊತ್ತು ಮುಂಬಯಿ ಸರಕಾರೀ ಗ್ಯಾಝೀಟದಲ್ಲಿ ಪ್ರಸಿದ್ಧವಾಗಿದೆ. ಮಸೂದೆಯ ಮೇಲೆ ಎಲ್ಲ ಹಿಂದೂ ಸಂಗತಿಗಳ ಮತವನ್ನು ತೆಗೆದುಕೊಳ್ಳುವದೆ ಅದರ ಉದ್ದೇಶವಾಗಿದೆ. (ಅ ಪ್ರೆ ಸಂಘ)

ಗಿರಣಿ ಒಡೆಯರ ಗೋಳು.

ಮುಂಬಯಿ ತಾ॥ ೧೦— ರೂಪಾಯಿಯ ವಿನಿಮಯ ದರವನ್ನು ಇಳಿಸಲಿಕ್ಕೆ ಬೇಕೆಂದು ಮುಂಬಯಿ ಗಿರಣಿ-ಒಡೆಯರ ಸಂಘದವರು ಹಿಂದುಸ್ಥಾನ ಸರಕಾರಕ್ಕೆ ದುಂಬಾಲ ಬಿದ್ದು ಈಗ ತಾನೇ ಒಂದು ತಂತಿಯನ್ನು ಕಳಿಸಿದ್ದಾರೆ. ಅದರಲ್ಲಿ ಅವರು "ದೇಶದಲ್ಲಿ ಜನರ ಆರ್ಥಿಕ ಸ್ಥಿತಿ ಮತ್ತು ಜನರ ಕೊಳ್ಳುವ ಶಕ್ತಿಯನ್ನು ಸುಧಾರಿಸಲಿಕ್ಕೆ ರೂಪಾಯಿಯ ಬೆಲೆಯನ್ನು ಸರಕುಗಳಷ್ಟೇ ಏರಿ ಬೇಕೆಂದು" ಮುಖ್ಯ ಕಾರಣಗಳ ಸರಕಾರದವರ ಲಕ್ಷ ಎಳೆದಿದ್ದಾರೆ. ಅಲ್ಲದೆ, ಈಗಿದ್ದಂತೆ, ರೂಪಾಯಿ ಮತ್ತು ಬ್ರಿಟಿಶ ನಾಣ್ಯದ ಬೆಲೆಯಿಂದ ಪರದೇಶದ ವ್ಯಾಪಾರ ವಿಳಂಬ, ಒಕ್ಕಲಿಗರ ಕೊಳ್ಳುವ ಶಕ್ತಿಯು ಕಡಿಮೆಯಾಗಿದೆಯೆಂದೂ ದೂರಿಟ್ಟಿರುವರು

(ಅ ಪ್ರೆ ಸಂಘ)

ಖೈಬರ ಮಾರ್ಗವು ಬಂದ ಯಿತು

ನ್ಯೂ ದಿಲ್ಲಿ ತಾ॥ ೦—

ಸರಹದ್ದಿನ ಮೇಲೆ ಶಾಂತತೆಯಿದೆ. ಆದರೂ ಅಫಗಾನಿಸ್ಥಾನದಲ್ಲಿ ಏನಾದರೂ ಗೊಂದಲವೆದ್ದು ಅದರ ಪರಿಣಾಮವಾಗಬಾರದೆಂಬ ಅಂಜಿಕೆಯಿಂದ ಖೈಬರ ಮಾರ್ಗದಿಂದ ಯಾರೂ ಒಳಗೆ ಬರಕೂಡದಂತೆ ಹಿಂದುಸ್ಥಾನ ಸರಕಾರದ ವ್ಯವಸ್ಥೆ ಇಡಲ್ಪಟ್ಟಿದೆ.

(ಅ ಪ್ರೆ ಸಂಘ)

ವಲ್ಲಭಭಾಯಿಯವರ ಬಗ್ಗೆ ಸರಕಾರೀ ಪ್ರಕಟನೆಯು

ಮುಂಬಯಿ ತಾ॥ ೯-

ಕೆಳಗಿನಂತೆ ಸರಕಾರೀ ಪ್ರಕಟನೆಯು ಹೊರಬಿದ್ದಿದೆ. ೧೮೨೭ನೇ ಕಾನೂನಿನನ್ವಯ ಬಂಧಿಸಲ್ಪಟ್ಟ ಸರಕಾರೀ ಸೆರೆಯಾಳಾಗಿದ್ದ ಶ್ರೀ ವಲ್ಲಭಭಾಯಿ ಪಟೇಲರನ್ನು ತಮ್ಮ ಸಹೋದರರಾದ ವಿಠ್ಠಲಭಾಯಿ ಇವರ ಅಂತ್ಯವಿಧಿಯ ಕಾಲಕ್ಕೆ ಬಿಟ್ಟುಕೊಡಬೇಕೆಂದು ಕೆಲವು ಜನರ ಕಡೆಯಿಂದ ವಿನಂತಿಯು ಬಂದಿರುತ್ತದೆ. ಸರ್ಕಾರೀ ಕಾನೂನಿನ ಪ್ರಕಾರ ರಾಜಕೀಯ ಸೆರೆಯಾಳು ಯಾವ ಕಾರಣದಿಂದಲೂ ತಾತ್ಪೂರ್ತಿಕ ಬಿಡುಗಡೆ ಮಾಡಲಿಕ್ಕೆ ಅನುಕೂಲತೆ ಇಲ್ಲ. ಬಿನ್ ಶರ್ತಿನಿಂದ ಮುಕ್ತತೆ ಮಾಡಿದರೆ ಬಂಧನದ ಹುಕುಮವನ್ನು ರದ್ದು ಮಾಡಬೇಕಾಗುವದು ಮತ್ತು ಅವಧಿ ಮೀರಿದ ಕ್ಷಣವೇ ಅವರನ್ನು ಮತ್ತೆ ಹೊಸ ಹುಕುಮಿನ ಪ್ರಕಾರ ಬಂಧಿಸಬೇಕಾಗುವದು. ಕಾರಣ ಸರಕಾರದವರು ಶ್ರೀ ವಲ್ಲಭಭಾಯಿಯವರನ್ನು ಗುರುವಾರದಿಂದ ಶನಿವಾರ ಮುಂಜಾನೆ ೬ವರೆಗೆ ಬಿಡಲು ಸಿದ್ಧರಿರುವರೆಂದೂ ಮತ್ತು ಹಾಗೆ ಮಾಡುವದಾದರೆ ಶ್ರೀಯುತರು ಆ ಅವಧಿಯಲ್ಲಿ ಯಾವದೇ ರಾಜಕೀಯ ಕಾರ್ಯದಲ್ಲಿ ಭಾಗ ತೆಗೆದುಕೊಳ್ಳುವದಿಲ್ಲವೆಂದೂ ಹಾಗೂ ಭಾಷಣ ಮಾಡುವದಿಲ್ಲವೆಂದೂ ಮತ್ತು ಅವಧಿಯು ಮುಗಿದ ಕೂಡಲೆ ಪುನಃ ಬಂಧನ ಮಾಡುವದಕ್ಕೋಸ್ಕರ ನಿಯಮಿಸಿದ ವೇಳೆಗೆ ಮತ್ತು ನಿಯಮಿಸಿದ ಜಾಗೆಯಲ್ಲಿ ಹಾಜರ ಆಗುವವೆಂದೂ ವಚನ ಕೊಟ್ಟರೆ ಮಾತ್ರ ಹಾಗೆ ಮಾಡುವೆವೆಂದು ಶ್ರೀ ವಲ್ಲಭಭಾಯಿಯವರಿಗೆ ತಿಳಿಸಿದರು. ಈ ಪ್ರಕಾರ ಶ್ರೀ ವಲ್ಲಭಭಾಯಿಯವರು ವಚನ ಕೊಡಲಿಕ್ಕೆ ನಿರಾಕರಿಸಿದ್ದರಿಂದ ಅವರನ್ನು ಮುಕ್ತಮಾಡಲಾಗಲಿಲ್ಲ.

(ಅ ಪ್ರೆ ಸಂಘ)

ಡಾ. ಆಲಮರಿಗೆ ಹಾಯಕೋರ್ಟಿನಿಂದ ನೋಟೀಸು.

ಲಾಹೋರ ತಾ॥ ೧೦— "ದೇಶದ ಶಕ್ತಿಯನ್ನು ಬೇಕೆಂದು ಮುರಿದದ್ದರಿಂದ ನಿಮ್ಮ ವಕೀಲಿಯ ಸನದನ್ನೇಕೆ ಕಸಿದುಕೊಳ್ಳಲಾಗಬಾರದು ಅಥವಾ ನಿಮ್ಮನ್ನು ಬೇರೆ ಕಡೆಗೆ ಒಯ್ಯಲಾರದೆಂದು ಇದಕ್ಕೆ ನಿಮ್ಮ ಆಧಾರಗಳೇನಾದರೂ ತೋರಿಸಬೇಕು." ಎಂಬುವ ಅರ್ಜಿಯನ್ನು ಹಾಯಕೋರ್ಟಿನ ಮೂರು ಮಂದಿ ಸರಕಾರಿ ಜಡ್ಜರ ಮುಂದೆ ಆ್ಯಡವ್ಹೋಕೇಟರು ಮಂಡಿಸಿದರು.

೧೯೩೦ ಇಸ್ವಿಯಲ್ಲಿ ೧೨೪ ಅ ಕಲಮಿನಂತೆ ಅವರಿಗೆ ರಾಜದ್ರೋಹದ ದೆಸೆಯಿಂದ ಶಿಕ್ಷೆಆಯಿತು. ಮುಂದೆ ೧೯೩೨ ಇಸ್ವಿಯಲ್ಲಿ ಅದೇ ಕಾರಣದಿಂದ ೨ ವರ್ಷ ಶಿಕ್ಷೆ ಆಯಿತು. ಈಗ ಅವರು ಮತ್ತೆ ತಮ್ಮ ವಕೀಲಿ ನಡಿಸಿದ್ದರಿಂದ ಅವರಮೇಲೆ ಮೇಲ್ಕಾಣಿಸಿದ ನೋಟೀಸು ಹೊರಡಿಸಿದ್ದಾರೆ. [ಅ ಪ್ರೆ ಸಂಘ]

ಶಾರೀರಿಕ ಶಿಕ್ಷಣದಲ್ಲಿ ಖಾನದೇಶ ಜಿಲ್ಹೆಯೇ ಮುಂದೆ

ಅಮರಾವತಿ ತಾ॥ ೬—

ಜರ್ಮನಿಯಲ್ಲಿ ಶಿಕ್ಷಣ ಪಡೆದು ಬಂದ ಡಾ॥ ಕೋಶರ್ಡೇಕರರ ಯೋಜನೆಯನ್ನು ಮಾನ್ಯ ಮಾಡಿ ಖಾನದೇಶ ಜಿಲ್ಹಾ ಲೋಕಲ್‌ಬೋರ್ಡಿನವರು ತಮ್ಮ ಶಾಲೆಗಳಲ್ಲಿಯ ವಿದ್ಯಾರ್ಥಿಗಳಿಗೆ ಒತ್ತಾಯದ ಅಂಗಸಾಧನ ಶಿಕ್ಷಣವನ್ನು ಕೊಡುವದಾಗಿ ನಿಶ್ಚಯಿಸಿದ್ದಾರೆ. ಉಳಿದ ಜಿಲ್ಲೆಗಳಿಗೂ ಈ ಶಿಕ್ಷಣವು ಸಿಗುವ ವ್ಯವಸ್ಥೆಯನ್ನೇ ಮಾಡಿರುವರೆಂದು ತಿಳಿಯುತ್ತದೆ

ಆದರೆ ನಮ್ಮ ಜಿಲ್ಹೆಯ ಲೋಕಲಬೋರ್ಡಿನವರು ಮಾತ್ರ ಇಂಥ ಒತ್ತಾಯದ ಕೆಲಸಗಳನ್ನು ಎಂದೂ ಕೈಕೊಳ್ಳುವದಿಲ್ಲ. ಯಾಕೆಂದರೆ "ಅಹಿಂಸಾ ಪರಮೋಧರ್ಮಃ"

೨೧ ಲಕ್ಷ ರೂಪಾಯಿ ಖರ್ಚು

ಹಿಂದುಸ್ಥಾನದೊಳಗಿನ ಪ್ರತಿಯೊಬ್ಬ ಸೋಲ್ಜರನ ಕ್ಯಾಂಪದ ಖರ್ಚು ತಿಂಗಳಿಗೆ ನೂರು ರೂಪಾಯಿ ಬೀಳುತ್ತದಂತೆ! ಈ ಲೆಖ್ಖದಿಂದ ೬ ಸಾವಿರ ಸೋಲ್ಜರರ ಖರ್ಚೆಂದು ೨೧ ಲಕ್ಷ ರೂಪಾಯಿ ಖರ್ಚಾಗುವವೆಂದು ಸರಕಾರೀ ಲೆಖ್ಖದಿಂದ ತಿಳಿಯುತ್ತದೆ

ಸರಕಾರಿ ಗ್ಯಾಝೀಟು

ಧಾರವಾಡದ ಅಫೀಸಿಯೇಟಿಂಗ ಹೋಮ್ ಇನಸ್ಪೇಕ್ಟರರಾದ ಮಿ ಚಂದಾವರಕರರನ್ನು ಜಿಲ್ಹೆಯ ಅಫೀಸಿಯೇಟಿಂಗ ಡೆಪ್ಯುಟಿ ಡಿವ್ಹಿಜನಲ್ ಇನಸ್ಪೇಕ್ಟರರೆಂದು ನಿಯಮಿಸಲಾಗಿದೆ

ವಿಜಾಪುರ ಮುನಸೀಪಾಲಿಟಿಯ ಸಭಾಸದರಾದ ಕೈ. ಬಸನಗೌಡ ಪಾಟೀಲರ ಸ್ಥಳಕ್ಕೆ ಶ್ರೀ ಧರಮಪ್ಪ ಸವಣೂರರು ಸಭಾಸದರಾಗಿ ನಿಯಮಿಸಲ್ಪಟ್ಟಿದ್ದಾರೆ

ಕೊನೆಯುಬ್ಬು



ಶತಾವರೀ ಕಾರ್ಡಿಯಲ್



ಸ್ತ್ರೀಯರ ೧೨ ಬೇನೆಗೂ ರಾಮಬಾಣ ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ೧ಕ್ಕೆ ರು ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು:—"ಧಾರವಾಡ ಫಾರ್ಮಸಿ ಹಾಗೂ ದಾಳಿಗಾ ಫಾರ್ಮಸಿ"
ಡಾ ಕುಲಕರ್ಣಿಯವರ
೧೧-೧೧ ಲ್ಯಾಬೋರೇಟರಿ ನಂಬ ೧೨

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ
ಮ್ಯಾನೇಜರ:-ರಾಘವ ಫಾರ್ಮಸಿ ಗೋಕಾಕ ಜಿ ಬೆಳಗಾವ

"ಕೇವಲ ಒಂದೇ ವಾರ! ಕೇವಲ ಒಂದೇ ವಾರ"

ವಿಜಯ ಸಿನೇಮಾ ಧಾರವಾಡ.

ರವಿವಾರ ತಾ॥ ೧೨-೧೧-೩೩ ರಿಂದ ಸುರುವು.

ಮೋಹಕ ಅಭಿನಯದಿಂದಲೂ ಮಧುರ ಮತ್ತು ಸ್ವಚ್ಛ ಕಂಠದಿಂದಲೂ ಬಹು ಪ್ರಶಂಸನೆಯನ್ನು ಪಡೆದ ಮಾಸ್ಟರ ಘೋಡಕ, ಮತ್ತು ಶಾಸ್ತ್ರೋಕ್ತ ಗಾಯನದಿಂದಲೂ ಅಭಿನಯ ಕೌಶಲ್ಯದಿಂದಲೂ ಪ್ರಸಿದ್ಧಿಯನ್ನು ಪಡೆದ ಕುಮಾರಿ ಶಾಂತಾ ಆಪ್ಟೆ ಇವರು ಕೆಲಸ ಮಾಡಿದ

ಮಾತಾಡುವ ಮತ್ತು ಹಾಡುವ ಚಿತ್ರಪಟ.

ಶ್ಯಾಮ ಸುಂದರ

ಶ್ರೀಕೃಷ್ಣನ ಪ್ರೇಮದ ಆಟ, ಪೆಂದ್ಯಾನ ವಿನೋದ, ಬಾಗವಾನನ ಅಂಗಡಿಯಲ್ಲಿ ಶ್ರೀಕೃಷ್ಣನು ಮಾಡಿದ ಕಳವು ಅದರ ಆರೋಪವು ಯಾರ ಮೇಲೆ ಬಂದಿತು! ಮಧುರ ಕೊಳಲು, ಮನೋರಂಜಕ ಹಾಡುಗಳು ಇವುಗಳನ್ನು ಕೇಳಿರಿ

ವೇಳೆ:— ೭, ೧೦-೩೦ ಗಂಟೆಗೆ

ರವಿವಾರ ಮತ್ತು ಮಂಗಳವಾರ ಹಗಲು ೪ ಗಂಟೆಗೆ

ದರ:— ರೂ ೧ ಆಣೆ ೮, ೪, ೩, ೨, ಸ್ತ್ರೀಯರಿಗೆ ಆಣೆ ೨

ಇಂಥ ಅಪೂರ್ವ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ವ್ಯಾಪಾರಿಗಳಿಗೆ ಕಮೀಶನ್ } ಅಸ್ಪೃಶ್ಯತಾ ನಿವಾರಣೆ. { **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ಮೊದಲಾದ ಧರ್ಮಗುರುಗಳ ಉಪದೇಶವೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸೂಚನೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಡ್ವಾನ್ಸಿಲ್ಲದೆ ವ್ಹಿ ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೩ ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೯-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ
ಕಾಶಾಪುರ ಪೇಟೆ ಗದಗ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಚೆಯ ಬಾಗಿಲು ತಯಾರಾಗುತ್ತವೆ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

೧ನೇ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರ ಪಡೆದಿದೆ

೨ನೇ ಮಹಾಯಾತ್ರಾ ಪ್ರವಾಸವು

ರೇಲ್ವೆ ಕಂಪನಿಯಿಂದ ಪರವಾನಗಿ ಪಡೆಯಲಾಗಿರುತ್ತದೆ

ತಾ॥ ೨೯-೧೨-೧೯೩೩ ರಿಂದ ೨೫-೨-೧೯೩೪ ರ ವರೆಗೆ

ಮುಂಬಯಿ, ಉಜ್ಜನಿ, ದಿಲ್ಲಿ ಶ್ರೀಕಾಶಿ, ಗಯಾ, ಕಲ್ಕತ್ತಾ ಮದ್ರಾಸ, ರಾಮೇಶ್ವರ ಲಂಕಾ, ಮೈಸೂರ ಮೊದಲಾದ ೮೮ ಪುಣ್ಯ ಕ್ಷೇತ್ರಗಳ ಯಾತ್ರಾ ಸುಯೋಗವು ಸೆಕೆಂಡ ಕ್ಲಾಸ ೩೧೦ ರೂ ಥರ್ಡಕ್ಲಾಸ ೧೦ ರೂ ಮಾತ್ರ ಟಿಕೇಟ್ ಪಡೆಯತಕ್ಕವರು ಕೂಡಲೆ ೨೫ ರೂ ಅಡ್ವಾನ್ಸ ಕಳಿಸತಕ್ಕದ್ದು ವಿಶೇಷ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು

ಜಮೀನದಾರರ ಕಾಮಧೇನು.

ಪತಿ ಕಂಪನಿಯ ಎಂಜಿನ್ ರಂಟೆಗಳಿಂದ ಕಳೆದ ಮೂರು ವರ್ಷಗಳಿಂದ ಬರಿಗಾಲಿನ ಇನಮಿಯ ಜಿ ಸಿಗೆಯಲ್ಲಾದರೂ ಪಡ ಜಮೀನುಗಳು ಯೋಗ್ಯ ದರದಲ್ಲಿ ಕಿಸಿ ಮಾಡಿ ಕೊಡಲ್ಪಡುವವು

ಆಫೀಸು ಸ್ಟೇಶನ್ ರೋಡ ಹುಬ್ಬಳ್ಳಿ ಜಿ ಎ ಶಿರೂರ.
ತಾ॥ ೩-೧೧-೧೯೩೩ ಆರ್ಗನೈಜರ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಮಾಡುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಕರ್ನಾಟಕ ಟಾಯಿಮ್ಸು.

ಸಂಪಾದಕರು: - **ಎಚ್ ಎಸ್ ಶಿವಲಿಂಗಶಾಸ್ತ್ರಿಗಳು**

ಕಳೆದ ಹನ್ನೆರಡು ವರ್ಷಗಳಿಂದ ಹಿಂದುಳಿದವರ ಹಿತಕ್ಕಾಗಿ ನಿರಂತರ ಹೆಣಗಾಡುತ್ತಿರುವ ಒಂದೇ ಒಂದು ವಾರಪತ್ರ

ಇದರಲ್ಲಿ ಸಾಮಾಜಿಕ ರಾಜಕೀಯ ಔದ್ಯೋಗಿಕ ಶೈಕ್ಷಣಿಕ ಮುಂತಾದ ಉತ್ತಮ ವಿಷಯಗಳು ನಿರ್ದಾಕ್ಷಿಣ್ಯದಿಂದ ಚರ್ಚಿಸಲ್ಪಡುವವಲ್ಲದೆ, ಪ್ರಪಂಚದ ಸಮಸ್ತ ವಿವಿಧ ವರ್ತಮಾನಸಾರಗಳೂ ಪ್ರಕಟಿಸಲ್ಪಡುವವು ವಾರ್ಷಿಕ ವರ್ಗಣಿ—ಸ್ಥಳಿಕ ರೂ ೨—೧೨—೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ರೂ ೩—೧೨—೦

ವ್ಯವಸ್ಥಾಪಕರು
ಕರ್ನಾಟಕ ಟಾಯಿಮ್ಸು ಕಾರ್ಯಾಲಯ ಧಾರವಾಡ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲಿಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ರ. ನಂ. ಬಿ. ೨೭೬೮

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು

ಸೋವಿ ದರದ ಜೊತೆಗಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ರವಿವಾರ ಕಾರ್ತಿಕ ಬಹುಳ ೧೦ ಶಕೆ ೧೮೫೫ ತಾ|| ೧೨-೧೧-೩೩ [ಸಂಚಿಕೆ ೧೭೦

ಇನಸ್ಯುಅರನ್ಸ

ಜೀವವಿಮೆ ಇಳಿಸಲು
ದಿ ಯುನಾಯಿಟೆಡ
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯುಅರನ್ಸ

ಪ್ರದೇಶದ ಹಣವನ್ನು ಪ್ರದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿ ಗಳಿಗಾಗಿ ಬರೆಯಿರಿ

ಧಾರವಾಡ | ಕೃಷ್ಣರಾವ ಅಂಕಲಿಗಿ
ತಾ|| ... | ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

ಸೋವಿ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳಿ, ಹಳದಿ, ಕೆಂಪು ಬಣ ಚಿಮಣಿ ಎಣ್ಣಿ ಕ್ರೂಡ್ ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುಸಿಕ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯ ... ಹೊಸ ಮೋಟಾರ ಸಾಯಕಲ್ (೪) ... (೫) ಮೋಟಾರ ವಸ್ತು ... ಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾ ... ಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ... ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ಕಾರವಾರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮನ ಇಡೀ ಇಲಾಖೆ (೬) ... ಗೋವಾಪ್ರಾಂತ ... ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

... ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು | ಹುಂಡೇಕರ ಯಳಲಾಸಪೂರ ... ಮ್ಯಾನೇಜಿಂಗ ಏಜಂಟ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

... ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು, ಇದು ... ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೊಟ್ಟೆನೋವು, ಕೆಮ್ಮು, ಕಿವಿ ಸೋರು ... ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕೆ. ಟೋಣಪಿ ಅಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ.

ಧಾರವಾಡದ ... ಕರ್ನಾಟಕ ಪುಸ್ತಕ ಭಾಂಡಾರಕ್ಕೇ ಬನ್ನಿರಿ.

ಹುಬ್ಬಳ್ಳಿ ಮುನಸಿಪಾಲಟಿಯ ಕಾರಭಾರ

ಮನಬಂದಂತೆ ಮನಬಲ್ಲಷ್ಟು ವೆಚ್ಚ

[ಲೇಖಾಂಕ ೨]

ಪರವಾನಗಿಯ ವಿನಃ ಮನೆ ಕಟ್ಟಿದ ಖಟ್ಲೆಕ್ಕೆ ತಜ್ಞ ವಕೀಲರೇಕೆ ಬೇಕಾಗಿತ್ತು?

ಶ್ರೀ ಹುಚ್ಚಪ್ಪ ಬಿಜಾಪುರೆಯವರು ಮುನಸಿಪಾಲಟಿಯ ಪರವಾನಗಿಯಿಲ್ಲದೆ ಮನೆಯನ್ನು ಕಟ್ಟಿದ್ದಕ್ಕಾಗಿ ಅವರ ಮೇಲೆ ಮುನಸಿಪಾಲಟಿಯವರು ಫೌಜದಾರೀ ಖಟ್ಲೆಯನ್ನು ಮಾಡಿದರು ಬೆಂಚ ಕೋರ್ಟಿನಿಂದ ಅವರಿಗೆ ಐದು ರೂಪಾಯಿಯ ದಂಡವಾಯಿತು. ಇಂಥ ಖಟ್ಲೆಗಳನ್ನು ಬೇರೆ ಕಡೆಗೆ ಮುನಸಿಪಾಲಟಿಯ ನೌಕರರೇ ನಡಿಸುತ್ತಾರೆ. ಹುಬ್ಬಳ್ಳಿ ಮುನಸಿಪಾಲಟಿಯಲ್ಲಿ ಇಂಥ ನೌಕರರು ಇಲ್ಲದಿದ್ದರೆ ಸಾಧಾರಣ ವಕೀಲರು ಇಂಥ ಖಟ್ಲೆಗಳನ್ನು ನಡಿಸಬಲ್ಲರು. ಶ್ರೀ ಮಾಳಗಿಯವರಂಥ ಹೆಸರಾದ ತಜ್ಞ ವಕೀಲರಿಗೆ ಹೆಚ್ಚಿನ ಫೀ ಕೊಡುವ ಕಾರಣ ವಿದ್ದಿಲ್ಲ. ಆದರೂ ಮುನಸಿಪಾಲಟಿಯವರು ಶ್ರೀ ಮಾಳಗಿಯವರಿಗೆ ಈ ಖಟ್ಲೆಕ್ಕೆ ಒಂದು ನೂರು ರೂಪಾಯಿಯ ಫೀಯನ್ನು ಕೊಟ್ಟಿದ್ದಾರೆ.

ಕೋರ್ಟಿನವರು ೨೫ ರೂ. ವೆಚ್ಚ ಕೊಡಿಸಿಸಿದರು ಮುನಸಿಪಾಲಟಿಯವರು. ೭೦೦ ರೂ. ಫೀ ಕೊಟ್ಟರು.

ಹುಬ್ಬಳ್ಳಿಯ ಹೆಸರಾದ ಧನಿಕರೂ ನಾಗರಿಕರೂ ಆದ ಶ್ರೀ ಪರುತಪ್ಪ ಹುಬ್ಬಳ್ಳಿ ಇವರು ಹುಬ್ಬಳ್ಳಿ ಮುನಸಿಪಾಲಟಿಯ ಮೇಲೆ ತಮ್ಮ ಅಪಮಾನ ಮಾಡಿದ್ದಕ್ಕಾಗಿ ದಾವೇ ಮಾಡಿದ್ದರು. ಆ ದಾವೆಯನ್ನು ದಿವಾಣೀ ಕೋರ್ಟಿನವರು ಮುದ್ದತಿಯಲ್ಲಿಲ್ಲವೆಂದು ತೆಗೆದುಹಾಕಿ ವಾದಿಯ ಕಡೆಯಿಂದ ಪ್ರತಿವಾದಿಗೆ ೨೫ ರೂಪಾಯಿ ವೆಚ್ಚ ಕೊಡಿಸಿದರು. ಈ ದಾವೆಯಲ್ಲಿ ಮುನಸಿಪಾಲಟಿಯವರು ಶ್ರೀ ಮಾಳಗಿಯವರಿಗೆ ೭೦೦ [ಏಳುನೂರು] ರೂಪಾಯಿ ಫೀ ಕೊಟ್ಟರು!

೮೬೨ ರೂಪಾಯಿಯ ನಿರರ್ಥಕ ಹಾಳು.

ಶ್ರೀ ಪರುತಪ್ಪ ಹುಬ್ಬಳ್ಳಿ ಇವರು ತಮ್ಮ ಹೆಸರನ್ನು ಮತದಾರರ ಯಾದಿಯಲ್ಲಿ ಹಾಕಬೇಕೆಂದು ಧಾರವಾಡದ ಜಜ್ಜ ಕೋರ್ಟಿಗೆ ಅರ್ಜಿಯನ್ನು ಮಾಡಿದ್ದರು. ಇಂಥ ದೊಡ್ಡ ನಾಗರಿಕರ ಹೆಸರು ಮತದಾರರ ಯಾದಿಯಲ್ಲಿ ಯಾಕೆ ಬರಲಿಲ್ಲವೋ ತಿಳಿಯದು. ಜಜ್ಜ ಕೋರ್ಟಿನವರು ಅವರ ಹೆಸರನ್ನು ಮತದಾರರ ಯಾದಿಯಲ್ಲಿ ಹಾಕಬೇಕೆಂದು ನಿರ್ಣಯಿಸಿದರು. ಅದೇ ಕೊನೆಯ ನಿರ್ಣಯ. ಆ ನಿರ್ಣಯದ ಮೇಲೆ ನಾವು ಹೈಕೋರ್ಟಿಗೆ ಅಪೀಲು ಅಥವಾ ರಿವ್ಹಿಜನವಿಲ್ಲ. ಹಿಗಿದ್ದಾಗ್ಯೂ ಮುನಸಿಪಾಲಟಿಯವರು ೧೬೨ ರೂಪಾಯಿಗಳನ್ನು ವೆಚ್ಚ ಮಾಡಿ ನಾಮದಾರ ಹೈಕೋರ್ಟಿಗೆ ರಿವ್ಹಿಜನ ಅರ್ಜಿಯನ್ನು ಮಾಡಿದರು. ಆದರೆ ಹೈಕೋರ್ಟಿನವರು ಅರ್ಜಿಯನ್ನು ಮಾಡಲಿಕ್ಕೆ ಕಾಯಿದೆಯ ಬಲ ಬರುವದಿಲ್ಲವೆಂದು ಅದನ್ನು ತೆಗೆದುಹಾಕಿದರು. ಈ ೧೬೨ ರೂಪಾಯಿಗಳನ್ನು ನಿರರ್ಥಕ ವೆಚ್ಚ ಮಾಡಿದ್ದಕ್ಕಾಗಿ ಯಾರು ಜವಾಬದಾರರು?

ಶ್ರೀ ಪರುತಪ್ಪನವರ ಅರ್ಜಿಯ ಹಾದಿಯ ಇನ್ನೂ ಕೆಲವು ಅರ್ಜಿಗಳು ಜಜ್ಜ ಕೋರ್ಟಿಗೆ ಆದವು. ಅವುಗಳಲ್ಲಿ ಪ್ರತಿಯೊಂದು ಕೇಸಿಗೆ ಶ್ರೀ ಮಾಳಗಿಯವರಿಗೆ ಮುನಸಿಪಾಲಟಿಯಿಂದ ಐವತ್ತು ರೂಪಾಯಿಯಂತೆ ಫೀ ದೊರೆಯಿತು. ಮುನಸಿಪಾಲಟಿಯು ಹೀಗೆ ಐವತ್ತು ರೂಪಾಯಿಯ ಫೀಯನ್ನು ಕೊಡುವ ಕರಾರವನ್ನು ಮೊದಲೇ ಮಾಡಿತ್ತೋ? ಆ ಬಗ್ಗೆ ಬರಹದ ಪುರಾವೆಯು ಅದೆಯೋ? ಕರಾರು ಮಾಡಿದ್ದರೆ ಈ ಖಟ್ಲೆಗಳಲ್ಲಿ ಕೋರ್ಟಿನವರು ಕೊಡಿಸಿದ ವೆಚ್ಚದಲ್ಲಿ ವಕೀಲರ ಫೀ ಎಷ್ಟಿದೆ? ಹೆಚ್ಚಿನ ಫೀಯ ಕರಾರು ಮೊದಲೇ ಆಗಿರದಿದ್ದರೆ ಅದನ್ನು ಕೊಡಲಿಕ್ಕೆ ಮುನಸಿಪಾಲಟಿಗೆ ಅಧಿಕಾರವಿರುತ್ತದೋ?

ಶ್ರೀ ಮಾಳಗಿಯವರ ೧೩೬೪ ರೂ. ಯ ಬಿಲ್ಲನ್ನು ಮಂಜೂರ ಮಾಡಲಿಕ್ಕೆ ಇಷ್ಟೊಂದು ಅವಸರವೇಕೆ?

ಶ್ರೀ ಮಾಳಗಿಯವರಿಗೆ ಸಲ್ಲಿಸಿದ ೧೩೬೪ [ಒಂದು ಸಾವಿರದಾ ಇನ್ನೂರಾ ಅರವತ್ನಾಲ್ಕು] ರೂಪಾಯಿಗಳನ್ನು ಮಂಜೂರ ಮಾಡುವ ಠರಾವು ೧೯೩೧—೩೨ನೇ ವರ್ಷದ ಕೊನೆಯ ಮೀಟಿಂಗಿನಲ್ಲಿ ಕೊನೆಯದಾಗಿತ್ತು. ಆಗ ಮುಂಚಿತ್ತು ಸಭಾಸದರಲ್ಲಿ ಒಂಬತ್ತು ಜನರು ಮಾತ್ರ ಹಾಜರಿದ್ದರು. ಆ ಸಭೆಗೆ ಹಾಜರಿದ್ದ ಶ್ರೀ ಮಾಳಗಿಯವರು ಈ ಸಮಯದಲ್ಲಿ ಸಭೆಯನ್ನು ಬಿಟ್ಟು ಹೋಗಿದ್ದರು. ವಕೀಲರ ಕಾಯಿದೆಯಲ್ಲಿ ನಿರ್ಧರಿಸಲ್ಪಟ್ಟದ್ದರ ಕಿಂತಲೂ ಹೆಚ್ಚು ಫೀಯನ್ನು ಆಕರಿಸಿ ತಯಾರಿಸಿದ ಶ್ರೀ ಮಾಳಗಿಯವರ ಬಿಲ್ಲನ್ನು ಒಂಬತ್ತರ ಕಿಂತಲೂ ಹೆಚ್ಚು ಸಮ ... ಜನವಾದ ಮೆಂಬರರ ಸಂಖ್ಯೆಯು ಹಾಜರಿದ್ದ ... ಬೈಠಕಿನಲ್ಲಿ ಚರ್ಚಿಸಲ್ಪಟ್ಟು ಮಂಜೂರಾಗಿದ್ದರೆ ಹೆಚ್ಚು ಹಿತವಾಗುತ್ತಿದ್ದಿಲ್ಲವೇ? ೧೩೬೪ ರೂಪಾಯಿಗಳ ಈ ದೊಡ್ಡ ಬಿಲ್ಲನ್ನು ಮೊದಲಿಲ್ಲ ... ಕೊನೆಯ ಮೀಟಿಂಗದಲ್ಲಿ ಹೀಗೆ ಅವಸರದಿಂದ ಮಂಜೂರ ಮಾಡಿದ್ದೇಕೆ?

" ರೇಟ ಪೇಯರ "

ರಶಿಯಾದಲ್ಲಿ ಸ್ವಾತಂತ್ರ್ಯ ಸ್ಮಾರಕ

ಮಾಸ್ಕೊ ತಾ|| ೭— ರಶಿಯಾದಲ್ಲಿ ಸ್ವಾತಂತ್ರ್ಯದ ೧೬ ನೇ ಸ್ಮಾರಕೋತ್ಸವವು ನಾ ... ನಿಂದ ಒಳ್ಳೆ ವಿಜೃಂಭಣೆಯಿಂದ ನೆರವೇರಿಸಲ್ಪಡುವದು. ಮಾಸ್ಕೋ ಪಟ್ಟಣವು ... ರಿಸಲ್ಪಟ್ಟು ಒಳ್ಳೇ ಪ್ರದರ್ಶನಗಳು ... ಬೀದಿಗಳಿಗೆ ಅಲ್ಲಲ್ಲಿ ಅಸ್ತ್ರಗಳೂ, ಬಂಡಿಗಳೂ ಕ್ರೀಡಾ ಸಂಘಗಳೂ ತೋರುತ್ತಿವೆ.

ಸಾಹಿತ್ಯ ಪರಿಷತ್ತಿಗಾಗಿ ನಾಟಕ

ಬಾಗಲಕೋಟೆಯ ವಾಸುದೇವ ಅಮ ... ಟಕರು ಸಾಹಿತ್ಯ ಪರಿಷತ್ತಿಗಾಗಿ ತಮ್ಮ ಕೊ ... ನಾಟಕವನ್ನಾಡ ತೋರಿಸಲ್ಕ ಪರಿಷತ್ತಿಗೆ ...

ಕನ್ನಡಿಗ

ರವಿವಾರ ತಾರೀಖು ೧೨-೧೧-೧೯೩೩

ಕರ್ನಾಟಕ ಏಕೀಕರಣ

ಕರ್ನಾಟಕವು ಅತ್ಯಂತ ಸುಪ್ರಸಿದ್ಧವಾದ ಪ್ರಾಂತವು ಹಿಂದಕ್ಕೆ ಇದು ಎಷ್ಟು ಸ್ವೈಭವಯುಕ್ತವಾಗಿತ್ತೋ ಅಷ್ಟು ಅದು ಈಗ ಹೀನಸ್ಥಿತಿಗೆ ಇಳಿದಿದೆ ಇದಕ್ಕೆ ಮೂಲ ಕಾರಣವು ಅದು ಅನೇಕ ಕಡೆಗೆ ವಿಭಾಗಿಸಲ್ಪಟ್ಟಿರುವುದು ಇದು ಕನ್ನಡಿಗರ ಲಕ್ಷ್ಯಕ್ಕೆ ಅನೇಕ ವರ್ಷಗಳವರೆಗೆ ಬಂದಿದ್ದಿಲ್ಲ ಈಗಲಾದರೂ ಅದರ ಸ್ವತಂತ್ರ ಕಲ್ಪನೆಯು ಸುಶಿಕ್ಷಿತರಲ್ಲಿ ಅನೇಕರಿಗೆ ಇರುವದಿಲ್ಲ ಹಿಂದುಸ್ಥಾನಕ್ಕೆ ಸ್ವರಾಜ್ಯವು ಬೇಕೆಂಬ ಕಲ್ಪನೆಯು ಹಿಂದೀ ಜನರ ಮನಸ್ಸಿನಲ್ಲಿ ಬರಲಿಕ್ಕೆ ಅನೇಕ ವರ್ಷಗಳು ಬೇಕಾದವು ೧೯೦೬ ರಲ್ಲಿಯ ಇಸ್ವಿಯ ಕಾಂಗ್ರೆಸ್ಸಿನಲ್ಲಿ ಪಿತಾಮಹರಾದ ದಾದಾಭಾಯಿಯವರು ಅದಕ್ಕೆ ಮೂರ್ತ ಸ್ವರೂಪವನ್ನು ಕೊಟ್ಟರು ಅಲ್ಲಿಯವರೆಗೆ ಹಿಂದೀ ಜನರು ತಮ್ಮ ಭಿನ್ನ ಭಿನ್ನ ಕೊರತೆಗಳನ್ನು ಸರಕಾರದವರ ಮುಂದೆ ಇಡುತ್ತಿದ್ದರು. ನಮ್ಮ ಸರಕಾರಿ ಖರ್ಚನ್ನು ಕಡಿಮೆ ಮಾಡಿರಿ, ನಮ್ಮಲ್ಲಿ ಸಿವಿಲ ಸರ್ವಿಸ ಪರೀಕ್ಷೆ ಇಡಿರಿ, ನ್ಯಾಯಖಾತೆ ಮುಲಕಿ ಜವಾಬದಾರಿ ಖಾತೆಗಳನ್ನು ವಿಂಗಡಿಸಿರಿ, ಇವೇ ಮುಂತಾದ ಬೇಡಿಕೆಗಳನ್ನು ರಾಷ್ಟ್ರೀಯ ಸಭೆಯು ಸರಕಾರದವರ ಮುಂದೆ ಇಡುತ್ತಿತ್ತು ಅವೆಲ್ಲವೂ ನಿಷ್ಫಲವಾಗಿದ್ದವು ಎಲ್ಲಿಯೋ ಒಂದೆರಡು ದುಃಖಗಳನ್ನು ಸ್ವಲ್ಪಸ್ವಲ್ಪ ದೂರ ಮಾಡಲಿಕ್ಕೆ ಒಂದೆಡೆಗೆ ಪ್ರಯತ್ನಿಸಿದರೆ ಮತ್ತೊಂದೆಡೆಗೆ ಮತ್ತೆ ಹಲವು ಹೊಸ ದುಃಖಗಳು ಉದ್ಭವಿಸುವಂತೆ ಮಾಡುತ್ತಿದ್ದರು. ಅಂತೂ ನಮ್ಮ ದೇಶದ ಸ್ಥಿತಿಯು ಹರಕು ಕವದಿಯಂತೆ ಆಗಿತ್ತು ಒಂದು ಕಡೆಗೆ ಅದನ್ನು ಹೊಲಿಯುವ ಪ್ರಸಂಗದಲ್ಲಿ ಅದು ಮತ್ತೊಂದು ಕಡೆಗೆ ಹರಿಯುತ್ತಿತ್ತು ಇದು ಅನೇಕ ವರ್ಷಗಳವರೆಗೆ ಮುಖಂಡರ ಲಕ್ಷ್ಯಕ್ಕೂ ಕೂಡ ಬಂದಿರಲಿಲ್ಲ ಕೊನೆಗೆ ಅದು ಹಾಗೆ ಲಕ್ಷ್ಯಕ್ಕೆ ಬಂದಿತು ಮತ್ತು ಸ್ವರಾಜ್ಯವನ್ನು ಪ್ರಧಮತಃ ದೊರಕಿಸುವುದೇ ಇನ್ನುಳಿದ ದುಃಖಗಳ ನಿವಾರಣೆಗೆ ಮೂಲ ಔಷಧವೆಂಬುದು ತಿಳಿಯಿತು

ಕರ್ನಾಟಕವಾದರೂ ಈ ತತ್ವವನ್ನು ಅನುಸರಿಸಿ ತಮ್ಮ ಪ್ರಾಂತದ ಏಕೀಕರಣವಾದ ಹೊರತು ತಮ್ಮ ದುಃಖಗಳ ನಿವಾರಣವು ಅಶಕ್ಯವಾಗಿ ಆಗುವುದಿಲ್ಲವೆಂಬುದನ್ನು ಅರಿಯಬಾರದು? ಕರ್ನಾಟಕವು ಮುಂಬಯಿ ಮದ್ರಾಸಗಳಿಂದ ದೊರೆಯಾಗಿದೆ, ಕರ್ನಾಟಕದಲ್ಲಿ ಸಾಕಷ್ಟು ಉಗಿಬಂಡಿಗಳಿಲ್ಲ! ಕರ್ನಾಟಕಕ್ಕೆ ಬಂದರವಿಲ್ಲ! ಕರ್ನಾಟಕದಲ್ಲಿ ದೊಡ್ಡ ದೊಡ್ಡ ಕಾರಖಾನೆಗಳಿಲ್ಲ! ಕರ್ನಾಟಕದ ವ್ಯಾಪಾರವು ಬೆಳೆಯಲೊಲ್ಲದು! ಕರ್ನಾಟಕದಲ್ಲಿ ಶಾಲೆ ಕಾಲೇಜುಗಳು ಇಲ್ಲ! ಕರ್ನಾಟಕದ ಜನತೆಯು ಶಿಕ್ಷಣದಲ್ಲಿ ಹಿಂದೆಬಿದ್ದಿದೆ. ಕರ್ನಾಟಕಸ್ಥರಿಗೆ ದೊಡ್ಡ ದೊಡ್ಡ ಸರಕಾರಿ ನೌಕರಿಗಳು ಸಿಕ್ಕಲೊಲ್ಲವು, ಕರ್ನಾಟಕದ ಡಾಕ್ಟರರು, ಇಂಜನೀಯರರು, ಶಿಕ್ಷಣ, ಮ್ಯುನಿಸಿಪಾಲಿಟಿ, ಅರಣ್ಯ ಖಾತೆ, ಪೋಲೀಸ ಖಾತೆ ಮುಂತಾದ ಸ್ಥಾನಗಳು ಸರಕಾರ ದರಬಾರದ ನವಕರಿ ಸಿಗುವ ಖಾತೆಗಳಲ್ಲಿ ಕರ್ನಾಟಕೇತರರ ಪ್ರಾಬಲ್ಯವೇ ಇದೆ ಆದರೂ ಕನ್ನಡಿಗರ ಆಕಾಂಕ್ಷೆಗಳನ್ನು ತಕ್ಕಮಟ್ಟಿಗೆ ಪ್ರಯತ್ನಿಸುತ್ತಾರೆ ಮುಂಬಯಿ ವಿಶ್ವವಿದ್ಯಾಲಯದಲ್ಲಿಯೂ ಮದ್ರಾಸ ವಿಶ್ವವಿದ್ಯಾಲಯದಲ್ಲಿಯೂ ಕರ್ನಾಟಕದ ಪ್ರತಿನಿಧಿಗಳು ಸೇರುವುದೇ ಕಠಿಣ ಸೇರಿದರೂ ತೀರ ಅಲ್ಪಸ್ವಲ್ಪ ಸ್ಥಳಗಳು ಇವರ ಪಾಲಿಗೆ ಬರುತ್ತವೆ ಹೀಗೆ ಕೆಲಕೆಲವು ಸ್ಥಳಗಳು ಇವರಿಗೆ ಆಕಸ್ಮಿಕವಾಗಿ ಸಿಕ್ಕರೂ ಇವರ ಆಟವು ಆ ವಿಶ್ವವಿದ್ಯಾಲಯಗಳಲ್ಲಿ ಏನೂ ನಡೆಯುವುದಿಲ್ಲ ... ಮಂಡಲಗಳಲ್ಲಿಯೂ ಇದೇ ಹಣೆಬರಹ ಹೀಗೆ ಎಲ್ಲಿ ನೋಡಿದಲ್ಲಿ ಕರ್ನಾಟಕಸ್ಥರು ಮೋರೆಯನ್ನು ಕೆಳಗೆ ಹಾಕಿಕೊಂಡು ಕುಳಿತುಕೊಳ್ಳಬೇಕಾಗಿದೆ ... ನಿಜ ... ಇವೆಲ್ಲ ಕೊರತೆಗಳನ್ನು ... ದಕ್ಷ ಕರ್ನಾಟಕಸ್ಥರೇ ... ನಮ್ಮ ನಾಡಿನದೇ ಆದರೆ ಆ ದುಃಖಗಳು ಇದ್ದಕ್ಕಿದ್ದ ಹಾಗೆಯೇ ಇರುತ್ತವೆ. ಬದಲಿಗೆ ಕೆಲವುಗಳಲ್ಲಿ ನಾವು ಮೊದಲಿಗಿಂತಲೂ ಹಿಂದೆ ಬೀಳಹತ್ತಿರುವೆವು ಏಕೆಂದರೆ ನಾವು ನಿಂತಲ್ಲಿಯೇ ನಿಂತುಕೊಂಡು ಅನ್ಯರು ಪ್ರಗತಿಪರರಾದರೆ ಅವರಿಗೂ ನಮಗೂ ಇರುವ ಅಂತರವು ದಿನದಿನಕ್ಕೆ ಹೆಚ್ಚಾಗುತ್ತಲೇ ಹೋಗುವುದಲ್ಲವೆ? ಆದಕಾರಣ ಈಗಲಾದರೂ ಕರ್ನಾಟಕಸ್ಥರು ಎಚ್ಚತ್ತು ಇನ್ನೆಲ್ಲ ತಮ್ಮ ಕೊರತೆಗಳಿಗೆ ಕರ್ನಾಟಕದ ಏಕೀಕರಣವೇ ಮುಖ್ಯ ಮದ್ದೆಂಬುದನ್ನು ಅರಿತು ತಮ್ಮ ಶಕ್ತಿಸರ್ವಸ್ವವನ್ನೆಲ್ಲ ಆ ಏಕೀಕರಣವನ್ನು ಸಂಪಾದಿಸುವುದರಲ್ಲಿ ವಿನಿಯೋಗಿಸಬೇಕು

ಆದರೆ, ಹೀಗೆ ಆಗಬೇಕಾದರೆ ಕರ್ನಾಟಕಸ್ಥರಿಗೆ ತಮ್ಮ ನಿಜವಾದ ದುಃಖಗಳಿಗೆ ಏಕೀಕರಣವೇ ಔಷಧವೆಂಬ ಮಾತು ಚೆನ್ನಾಗಿ ಮನದಟ್ಟಾಗಬೇಕಾಗುತ್ತದೆ ಹಾಗೆ ಇನ್ನೂ ಆಗಿರುವುದಿಲ್ಲ. ಇಷ್ಟೇ ಅಲ್ಲ, ಕೆಲವರು ಇನ್ನೂ ಕೂಡ ಈ ವಿಷಯದಲ್ಲಿ ಸಾಶಂಕವೃತ್ತಿಯುಳ್ಳವರಾಗಿರುತ್ತಾರೆ ಇದಕ್ಕೆ ಅನೇಕ ಕಾರಣಗಳುಂಟು. ಕೆಲವರಿಗೆ ಲಿಂಗಾಯತರು ಕರ್ನಾಟಕದಲ್ಲಿ ಬಹು ಸಂಖ್ಯಾಕರಿರುವುದರಿಂದಲೇ ಅವರು ಏಕೀಕರಣವನ್ನು ಇಚ್ಛಿಸುತ್ತಾರೆಂದೂ ಕರ್ನಾಟಕದ ಏಕೀಕರಣವಾದರೆ ಬ್ರಾಹ್ಮಣರ ವರ್ಚಸ್ಸು ಹೊರಟು ಹೋಗುವದೆಂದೂ ಅಂಜಿಕೆ. ಇದು ಕೇವಲ ಸ್ವಾರ್ಥ ಬುದ್ಧಿಯ ಪರಿಣಾಮವು ಆದರೆ ನಾವು ಈ ಜನರನ್ನು ಕೇಳುವುದು ಇಡೀ ಹಿಂದುಸ್ಥಾನದಲ್ಲಿ ಬ್ರಾಹ್ಮಣರು ಎಷ್ಟು ಅಲ್ಪಸಂಖ್ಯಾಕರಿರುವರೆಂಬುದನ್ನು ಇವರು ಲಕ್ಷ್ಯಕ್ಕೆ ತರಬಾರದೆ? ಹೀಗೆ ಅವರು ತೀರ ಸ್ವಲ್ಪ ಜನರಿರುವರೆಂಬ ಕಾರಣದಿಂದ ಬ್ರಾಹ್ಮಣರು ಹಿಂದುಸ್ಥಾನಕ್ಕೆ ಸ್ವರಾಜ್ಯವೇ ಬೇಡವೆಂದು ಪ್ರತಿಪಾದಿಸುವುದು ಉಚಿತವಾದೀತೊ? ಇಲ್ಲ ಅದೇ ಮೇರೆಗೆ ಕರ್ನಾಟಕದಲ್ಲಿ ಲಿಂಗಾಯತರು ಬಹುಸಂಖ್ಯಾಕರಿರುವುದರಿಂದ ನಾವು ಕರ್ನಾಟಕ ಏಕೀಕರಣವನ್ನು ಬೇಡಬಾರದೆಂಬುದು ಮೂರ್ಖತನದ್ದಾಗುವುದು ಮತ್ತೆ ಕೆಲವರಿಗೆ ನಿಜವಾಗಿ ಹೃದಯದಲ್ಲಿ ಕರ್ನಾಟಕದ ಏಕೀಕರಣವು ಬೇಕಾಗಿದ್ದರೂ ಅನೇಕ ವರ್ಷಗಳ ಸಂಸ್ಕಾರದ ಮೂಲಕ ಅವರಿಗೆ ಏಕೀಕರಣವು ಬೇಡಾಗಿದೆ ಮುಂಬಯಿ ಇಲಾಖೆ ಮದ್ರಾಸ ಇಲಾಖೆ ಮುಂತಾದ ವಿಭಾಗಗಳಾಗಿ ಬಹಳ ವರ್ಷಗಳಾಗಿ ಹೋದವು ಈ ಅವಧಿಯಲ್ಲಿ ಆಯಾ ಭಾಗಗಳಲ್ಲಿಯ ಜನರಿಗೆ ಆಯಾ ಇಲಾಖೆಗಳ ಅನ್ಯ ಭಾಷೆಗಳ ಜನರೊಡನೆ ಸಂಬಂಧವು ಬೆಳೆದಿದೆ ಒಂದು ಬಗೆಯ ಸ್ನೇಹ ಭಾವವೂ ಉತ್ಪನ್ನವಾಗಿದೆ ಆ ಮೋಹವು ಈಗ ಏಕೀಕರಣದ ಮಾರ್ಗದಲ್ಲಿ ಅಡ್ಡ ಬರುತ್ತದೆ ಇದಾದರೂ ಯುಕ್ತವಲ್ಲ. ಹೀಗೆ ಸ್ವಲ್ಪ ವರ್ಷಗಳ ಸಂಸ್ಕಾರಕ್ಕಾಗಿ ಹಿಂದೆ ಅನೇಕ ಶತಮಾನಗಳ ವರೆಗಿದ್ದ ನಮ್ಮ ಸಂಬಂಧವನ್ನು ನಾವು ಮರೆತು ಬಿಡಬೇಕೋ? ಇದಲ್ಲದೆ, ಮಿಕ್ಕ ಭಾಷೆಯವರಲ್ಲಿ ಈಗ ಭಾಷಾ ಭಾವನೆಯು ಜಾಗ್ರತವಾಗಿರುವದರಿಂದ ಅವರು ನಮ್ಮ ಭಾಷೆಯವರನ್ನು ದೂರದಿಂದ ನೋಡುತ್ತಿರುವರು ಅಲ್ಲದೆ, ಭಾಷೆಯು ಸಂಸ್ಕೃತಿಯ ಮೂಲವು ಭಾಷೆಯೆಂಬ ದೇಹಕ್ಕೆ ಸಂಸ್ಕೃತಿ ...

ಕರ್ನಾಟಕ ಕೂಲಿಗೇಡಿ ತರುಣರಿಗೆ

ನಮ್ಮ ಕನ್ನಡ ನಾಡಿನ ತರುಣರು ಉದ್ಯೋಗವಿಲ್ಲದೆ ತಿರುಗುವದು ಪ್ರತಿ ದಿನ ಕಂಡು ಬರುವದು ಈ ತೊಂದರೆಯನ್ನು ಹೋಗಲಾಡಿಸುವ ಯೋಜನೆಗಳನ್ನು ಅನೇಕರು ಮಂಡಿಸುತ್ತಿರುವರು ಇದೀಗ ಮತ್ತೊಂದು ಯೋಜನೆ

ನಮ್ಮ ದಿನಕರರಸ್ತ ಉತ್ತುಂಗಿಯವರು ಓದುವಿಗೆ ಪರದೇಶದವರ ಕಡೆಗೆ ನೋಡದಂತೆ ಇಲ್ಲಿಯೇ ತಯಾರಿಸುತ್ತಿರುವರು ಹಿಂದಕ್ಕೆ ಡಾ ಮುಂಗ ಇನಸ್ಪೆಕ್ಟರರು ಬಂದಾಗ ಖಡುವಿನ ಬೆಸೆಯಿಂದ ನೀವು ಸ್ವಾವಲಂಬಿಗಳಾಗಿರೆಂದು ಉಪದೇಶಿಸಿದ್ದೇ ಅವರ ಈ ಯೋಜನೆಗೆ ಕಾರಣವಾಯಿತು ಕಾಣುವ ಮಟ್ಟಿಗೆ ಕಡುವಿನ ರೂಪ ಕೊಡುವದು ಅಚ್ಚರಿಯ ವಿಷಯವಲ್ಲ ಇದು ಅತ್ಯಂತ ಸುಲಭ ವಿಷಯ ಸ್ವಲ್ಪ ಭಾಂಡವಲು ಶ್ರಮವಾದರೂ ಕಡಿಮೆ ಹೀಗೆ ಮಾಡುವದರಿಂದ ವಿಶೇಷ ಹಣವನ್ನು ಗಳಿಸಿಕೊಳ್ಳಬಹುದು ಉತ್ತುಂಗಿಯವರು ಅದರಲ್ಲಿ ಪ್ರಗತಿಯನ್ನು ಹೊಂದಿ ಈಗ ಒಣ್ಣದ ಕಡವಗಳನ್ನು ತಯಾರಿಸುತ್ತಿರುವರು ಹೀಗೆ ತಯಾರ ಮಾಡುವವರು ಮುಂಬಯಿ ಕರ್ನಾಟಕದಲ್ಲಿ ಇವರೊಬ್ಬರೆಂದೇ ಹೇಳಬಹುದು. ಇವರು ತಯಾರ ಮಾಡಿದ ಕಡುವಗಳನ್ನು ನಮ್ಮ ಊರಿನ ಎಲ್ಲ ಶಾಲೆಗಳಲ್ಲೂ ಉಪಯೋಗಿಸುವರು. ಈಗ ಎಲ್ಲೆಲ್ಲಿಯೋ ಶಾಲೆ ಕಾಲೇಜುಗಳಲ್ಲಿ ಈ ಸಾವ ನುಗಳನ್ನು ಪರದೇಶದಿಂದ ತರಿಸುವ ದುಃಖದಾಯಕ ಪ್ರಸಂಗವಿದೆ ಅದನ್ನು ಕರ್ನಾಟಕದ ಕೂಲಿಗೇಡಿ ತರುಣರು ಲಕ್ಷ್ಯಕ್ಕೆ ತೆಗೆದುಕೊಂಡು ಅದನ್ನು ನಿವಾರಣ ಮಾಡಬೇಕೆಂದು ಬಿನ್ನವಿಸುತ್ತೇನೆ 'ಆನಂದ'

ಧಾರವಾಡ ೯-೧೧-೩೩

ವೈಷ್ಣವ ಏಕಾದಶಿ.

ಕಾರ್ತಿಕ ಕೃಷ್ಣ ಪಕ್ಷದ ಈ ಏಕಾದಶಿಯು ಸೋಮವಾರವೋ ಮಂಗಳವಾರವೋ ಎಂಬ ಬಗ್ಗೆ ಮತಭೇದವಿದ್ದುದು ಸರಿಯಲ್ಲೆಂಬ ಬಗ್ಗೆ ಹುಬ್ಬಳ್ಳಿಯ ವೇ|| ಮಧ್ವಾಚಾರ್ಯ ದಂಡಾಪುರ ಹಾಗೂ ರಾಮಾಚಾರ್ಯ ಕಟ್ಟಿ ಇವರು ಒಂದು ವಿಸ್ತಾರವಾದ ಲೇಖವನ್ನು ಕಳಿಸಿದ್ದು, ಮಂಗಳವಾರವೆ ಸರ್ವತ್ರ ಏಕಾದಶಿ ಎಂದು ಬರೆದಿದ್ದಾರೆ ಈ ವಿಸ್ತೃತ ಲೇಖವು ವಾದಗ್ರಸ್ತವಾಗಬಹುದು. ಇಂಥವುಗಳನ್ನು ನಾದಕ್ಕೆ ಅನುಕೂಲವಾಗುವಂತೆ ಕನಿಷ್ಠ ಗಾಂಭೀರ್ಯ ಮೊದಲು ಪ್ರಕಟಿಸಲು ಕಳಿಸಿದ್ದಾರೆ ಸರಿಯಾಗಿತ್ತು.

ಕೊಲೆಯ ಬಗ್ಗೆ ಜನರು ಏನೆನ್ನುವರು?

ಪೇಶಾವರ ತಾ|| ೯— ನಾದೀರಶಹರ ಕೊಲೆಯ ಬಗ್ಗೆ ಕಂಡವರು ಕಂಡಂತೆ ಆಡುತ್ತಿರುವರು ಜನರಿಗೆ ಬಹು ಪ್ರಿಯನಿರಾವ ಫಕೀರ ಶೋರಿ ಮಾಲಂಗ ಎಂಬುವನನ್ನ ಶೂಲಕ್ಕೇರಿಸಿದ್ದೇ ನಾದಿರಶಹರಿಗೆ ಮುಳುವಾಯಿತೆಂದೂ, ಲೇವಾದೀ ಫಕೀರನನ್ನು ಹಾಗೇ ಕೊಲ್ಲಬೇಕೆಂದು ಅವರ ಅಪೇಕ್ಷೆ ಇತ್ತೆಂದೂ, ಈ ಮೇರೆಗೆ ಫಕೀರರನ್ನು ಕಾಡುತ್ತಿರುವದು ಧರ್ಮ ಮೂಢ ಜನರಿಗೆ ಸರಿ ಬಾರದ್ದರಿಂದಲೂ, ಇದೇ ನಾದೀರಶಹರ ಮರಣಕ್ಕೆ ಕಾರಣವಾಯಿತೆಂದೂ ಕೆಲವರ ತಿಳುವಳಿಕೆ

ಕಸುಬಳವು ಯಾವಾಗಲೂ ತನ್ನ ಜಾಗೆಯನ್ನು ಕಟ್ಟುತ್ತಿರುತ್ತದೆ ಆದ ಕಾರಣ ನಾವು ನಮ್ಮ ಸಂಸ್ಕೃತಿಯನ್ನು ಕಾಯ್ದುಕೊಳ್ಳಬೇಕಿದ್ದರೆ ಭಾಷೆಗೆ ಶರಣು ಹೋಗದೆ ಗತಿಯಿಲ್ಲವೆಂಬುದನ್ನರಿತು ಎಲ್ಲರೂ ಮುಂದೆ ಇದನ್ನ ಸಾಧಿಸಿಕೊಳ್ಳಲು ಹೆಣಗಾಡಬೇಕು

ಇಹವೃತ್ತ.

ನಿನ್ನೆ ಮಧ್ಯಾಹ್ನ ೨|| ಗಂಟೆಗೆ ಡೈರೆಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಶನ್‌ರವರು ಧಾರವಾಡಕ್ಕೆ ಬಂದು ಇಲ್ಲಿಯ ಶಾಲೆ ಕಾಲೇಜಗಳಿಗೆ ಭೆಟ್ಟಿ ಕೊಟ್ಟು ಕಾರವಾರಕ್ಕೆ ಹೋಗಿದರು

ನಿನ್ನೆ ಮಧ್ಯಾಹ್ನಕ್ಕೆ ಒಮ್ಮೆಲೆ ಮೋಡ ಕವಿದು ೧೦ ನಿಮಿಷಗಳವರೆಗೆ ಜೋರಾಗಿ ಮಳೆಯಾಯಿತು.

ಚಾತುರ್ಮಾಸದಲ್ಲಿ ಈ ಊರಲ್ಲಿದ್ದ ಶುಕ್ರಗೆ ಮಠದ ಶ್ರೀಗಳವರು ೧೫ ದಿನಗಳ ಹಿಂದೆ ಹೆಬ್ಬಳ್ಳಿಗೆ ಹೋಗಿದ್ದರಷ್ಟೆ! ೩-೪ ದಿನಗಳಲ್ಲಿ ಪುನಃ ಈ ಊರಿಗೆ ಬರತಕ್ಕವರಿದ್ದಾರೆ ಹೆಬ್ಬಳ್ಳಿಯಲ್ಲಿ ಶ್ರೀಮಂತ ಸರದಾರ ದಾದಾಸಾಹೇಬರ ಭವ್ಯವಾದ ವಾಡೇದಲ್ಲಿಯೇ ಶ್ರೀಗಳು ಆತಿಥ್ಯವನ್ನು ಹೊಂದಿ ಸಂತುಷ್ಟರಾಗಿದ್ದಾರಂತೆ!

ಸಾರ್ವಜನಿಕ ಸಭೆ

ಶ್ರೀಯುತರುಗಳಾದ ೧ ಬಿ ಎಲ್ ಪಾಟೀಲ ೨ ಟಿ ಟಿ ಮಜುಮದಾರ ೩ ಎನ್ ಕೆ ದೀಕ್ಷಿತ ೪ ಎ ಎನ್ ಕಾಮತ ೫ ಪಿ ಬಿ ಜೋಳಭಾವಿ ೬ ಪಿ ಎನ್ ಜೋಗ ೭ ಡಿ ಆರ್ ನೆಲವಗಿ ೮ ಡಿ ಪಿ ಪತ್ರಾವಳಿ ೯ ಜಿ ಎಸ್ ಕುಲಕರ್ಣಿ ೧೦ ಪಿ ಜೆ ರಾಯಚೂರ ಇವರ ಸಹಿಯುಳ್ಳ ಕೆಳಗಿನ ಪ್ರಕಟನೆ ಹೊರಟಿದೆ

ಅಖಿಲ ಕರ್ನಾಟಕದವರು ೧೯೩೬ನೇ ಇಸ್ವಿಯಲ್ಲಿ ವಿಜಯನಗರ ಸ್ಮಾರಕೋತ್ಸವವನ್ನು ಜರುಗಿಸಲು ನಿಶ್ಚಯಿಸಿದ್ದು ಎಲ್ಲರಿಗೂ ಗೊತ್ತಿದೆ ಆ ಕಾರ್ಯವನ್ನು ಮುಂದೆಗೊಳಿಸುವದಕ್ಕಾಗಿ ೧] ಧಾರವಾಡದಲ್ಲಿ ಒಂದು ಮಂಡಲವನ್ನು ಏರ್ಪಡಿಸಲು, ೨[ಆ ಮಂಡಲಕ್ಕೆ ಧನ ಸಹಾಯವನ್ನು ಒದಗಿಸಲಿಕ್ಕೆ ಯೋಜನೆ ಮಾಡಲು ಮತ್ತು, ೩] ಈ ಕಾರ್ಯಕ್ಕಾಗಿ ಅಖಿಲ ಕರ್ನಾಟಕದ ಸಹಾಯವನ್ನು ದೊರಕಿಸುವ ರೀತಿಯನ್ನು ಕುರಿತು ವಿಚಾರಿಸಲು, ಧಾರವಾಡ ನಾಗರಿಕರ ಸಾರ್ವಜನಿಕ ಸಭೆಯು ರವಿವಾರ ೧೯-೧೧-೩೩ ದಿನ ಸಾಯಂಕಾಲ ೬ ಗಂಟೆಗೆ ವಿದ್ಯಾವರ್ಧಕ ಸಂಘದಲ್ಲಿ ಸೇರುವದು

ಕರ್ನಾಟಕ ವ್ಯಾಪಾರಿ ಸಂಘದ ತಂತಿ.

ಗದಗಿನಲ್ಲಿದ್ದ ಕರ್ನಾಟಕ ವ್ಯಾಪಾರಿ ಸಂಘದ ಕಾರ್ಯದರ್ಶಿಗಳಾದ ಮಿ ಬಳ್ಳಾರಿ ವೀರಭದ್ರಪ್ಪನವರು ಹಿಂದುಸ್ಥಾನ ಸರಕಾರದ ಖಾತೆಯ ಕಾರ್ಯದರ್ಶಿಗಳಿಗೆ ಕೆಳಗಿನ ತಂತಿ ಕಳಿಸಿದ್ದಾರೆ ಹಿಂದುಸ್ಥಾನದ ವ್ಯಾಪಾರಿ ಸಂಘದವರು ರೂಪಾಯಿಯ ವಿನಿಮಯ ದರವನ್ನು ಇಳಿಸಲಿಕ್ಕೆ ಒಪ್ಪಿಗೆ ಕೊಟ್ಟಿದ್ದಕ್ಕೆ ಈ ... ತುಂಬ ಬಲಕೊಡುತ್ತದೆ ಹಿಂದುಸ್ಥಾನ ಸರಕಾರದವರು ಈ ವಿಷಯದಲ್ಲಿ ದಿನಗಳೆದರೆ ... ಕ್ಕಲಿಗರಲ್ಲಿ ತೀವ್ರ ಅಸಂತೋಷ ಹುಟ್ಟಲು ಕಾರಣವಾಗಬಹುದು

ಹುಬ್ಬಳ್ಳಿ ಪೇಟೆಯ ಧಾರಣೆ

(ಕೇಸರಿ ಕುತ್ತು ಕಂಪನಿ)

ಹುಬ್ಬಳ್ಳಿ ತಾ|| ೧೧ [ಮಧ್ಯಾಹ್ನ ೧೧ ಗಂಟೆ]

ಜವಾರಿ ಹತ್ತಿ	೧೦೦೧೦೨	ಜೋಳ	೧೨.[illegible]
ಅಕ್ಕಡಿ	೧೦೦.೧.೩	ಗೋಧಿ	[illegible]
ವಿಲಾಯತಿ	೯೯ ೯೫	ಉಪ್ಪು	[illegible]
ಹ್ಯಾಟ್ರೇಸ	೧೦೪-೧೦೬	ಶೇಂಗಾ	[illegible]
ಜೀನರಿ	೬೮ ೭೦		[illegible]
ವಪ್ಪಲೂರ	೬೪-೬೫		[illegible]
ಸಾಹುಕಾರಿ	೬೪-೬೫		[illegible]
ಹೆಸರು ಜವಾರಿ	೯-೧೩		
ತಿಂಗಳಾಯಿ			[illegible]

ಬೆಳ್ಳಿ ಬಂಗಾರ

ಬಂಗಾರ [illegible]

ದಿವಂಗತ ವಿಠ್ಠಲಭಾಯಿಯವರ ಕೊನೆಯ ಸಂಸ್ಕಾರ.

ಕೈ. ವಿಠ್ಠಲಭಾಯಿಯವರ ಕೊನೆಯ ಸಂಸ್ಕಾರ.

ಮುಂಬೈ ತಾ|| ೧೧— ಕೊನೆಯ ಸಂಸ್ಕಾರ ನಡೆಯುವ ಮೊದಲು ಸಾವಿರಾರು ಜನರು ವಿಠ್ಠಲಭಾಯಿಯವರ ಶವದ ದರ್ಶನ ಮಾಡಿಕೊಂಡರು. ಈ ಮೇರೆಗೆ ದರ್ಶನದ ಗದ್ದಲವು ಸಂಜೆಯ ೭ ಘಂಟೆಯ ವರೆಗೆ ನಡೆಯಿತು. ಸಂಸ್ಕಾರ ನಡೆಯುವದಿದ್ದ ಮೂಲಕ ಸ್ಮಶಾನ ಭೂಮಿಯ ಬಾಗಿಲ ತೆರೆಯಲ್ಪಟ್ಟಿತು. ದೇ. ವಲ್ಲಭಭಾಯಿಯವರ ಮಕ್ಕಳಾದ ಚಿ. ದಯಾಭಾಯಿಯವರು ಹಿಂದೂ ಶಾಸ್ತ್ರ ಪದ್ಧತಿಯಂತೆ ಅಂತ್ಯ ಸಂಸ್ಕಾರ ಕ್ರಿಯೆಗಳನ್ನು ಮಾಡಿದರು. ಹಲವು ಜನರು ಗಂಧದ ಕಟ್ಟಿಗೆಯ ಚೂರುಗಳನ್ನು ಕೈಗಳಲ್ಲಿ ತಂದಿದ್ದು ಚಿತೆಯ ಮೇಲೆ ಎಸೆದರು. ದಯಾಭಾಯಿಯರು ಅಗ್ನಿಯನ್ನಿಟ್ಟರು. ಶ್ರೀ ಸರೋಜಿನೀ ದೇವಿಯರು ಕೈ. ಪಟೇಲರ ಗುಣಗಳನ್ನು ನೆನಸಿಕೊಂಡು ಮಾತಾಡುವಾಗ ಅಂದದ್ದು—ವಿಠ್ಠಲಭಾಯಿಯವರ ದೇಹವು ಬೂದಿಯಾದರೂ, ಅವರ ಚೈತನ್ಯ ಲಕ್ಷಗಟ್ಟಲೆ ಹಿಂದೂ ಜನರ ಎದೆಗೂಡುಗಳಲ್ಲಿ, ಮತ್ತು ದೇಶದ ಉದ್ಧಾರಕ್ಕಾಗಿ ನಡೆವ ಪ್ರಯತ್ನಗಳಲ್ಲಿ ಬೇರು ಬಿಟ್ಟಿದೆ. ದೇ. ಸುಭಾಷ ಬೋಸರು ಕೊನೆಗಾಲದಲ್ಲಿ ಅವರ ಬಗ್ಗೆ ತೋರಪಡಿಸಿದ ಭಕ್ತಿಯು ಅಪ್ರತಿಮ. ಪಟೇಲರ ಮುಖವನ್ನು ನೋಡಬೇಕೆಂದು ಲಂಡನಿನಿಂದ ವಿಮಾನದಲ್ಲಿ ಹೊರಟ ಗೋವರ್ಧನದಾಸ ಪಟೇಲರು ಸಹ ಒಂದು ದಿನ ತಡವಾಗಿಯೇ ಅಲ್ಲಿಗೆ ತಲ್ಪಿದರು. ದೇವರು ವಿಠ್ಠಲಭಾಯಿಯ ವರಿಗೆ ಸದ್ಗತಿಯನ್ನೀಯಲಿ!!

ಶ್ರೀ ಜಮ್ನಾದಾಸ ಮೆಹತಾ ಅವರು ಕೈ. ವಿಠ್ಠಲಭಾಯಿಯವರ ಗುಣ ವರ್ಣಿಸುವಾಗ "ಇಂದು ಸಾವಿರಾರು ಜನರು ನೆರೆದು ವಿಠ್ಠಲಭಾಯಿಯವರಿಗೆ ಮಾಡಿದ ಕೊನೆಯ ಮರ್ಯಾದೆಯಲ್ಲಿಯೇ ಅವರ ಜನಪ್ರಿಯತೆಯು ವ್ಯಕ್ತವಾಗುತ್ತಿದೆ. ಹಿಂದೂ ಜನರ ಹೃದಯಗಳಲ್ಲಿಯ ಅತ್ಯಂತ ಪ್ರೀತಿಯ ತಾವನ್ನೇ ಪಟೇಲರು ಹಿಡಿದುಕೊಂಡಿರುವರು! ಎಂದು" ಅಂದರು.

[ಅ ಪ್ರೆ ತಂತಿ]

ಅಮೃತಸರದ ಪೇಟೆ ಸುಟ್ಟಿತು.

ಅಮೃತಸರ ತಾ|| ೧೦— ಅಮೃತಸರ ಪಟ್ಟಣದ ಮಧ್ಯದಲ್ಲಿರುವ ಜವಳೀ ಪೇಟೆಗೆ ನಿನ್ನೆ ಬೆಂಕಿ ಹತ್ತಿ ಸುಮಾರು ೧೭ ಜವಳಿಯ ಅಂಗಡಿಗಳು ಸುಟ್ಟವು. ೫ ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿದೆ. ಅಮೃತಸರದ ಬೆಂಕಿ ಆರಿಸುವವರಿಗೆ ಲಾಹೋರದವರೂ ಸಹಾಯ ಮಾಡಿದ್ದರಿಂದ ೬ ಘಂಟೆಗಳಲ್ಲಿಯೇ ಬೆಂಕಿಯು ಕಡಿಮೆಯಾಯಿತು. (ಅ ಪ್ರೆ ತಂತಿ)

ಡಾ. ಸತ್ಯಪಾಲರ ಬಿಡುಗಡೆ

ಮುಲ್ತಾನ ತಾ|| ೧೦— ಪಂಜಾಬದ ಸುಪ್ರಸಿದ್ಧ ಪುಢಾರಿಗಳಾದ ಡಾ|| ಸತ್ಯಪಾಲ ಇವರು ಮುಲ್ತಾನ ಸೆಂಟ್ರಲ್ ಜೇಲಿನಿಂದ ಈ ಹೊತ್ತು ಮುಂಜಾನೆ ಬಿಡುಗಡೆ ಹೊಂದಿದರು. ಜೇಲಿನ ಬಾಗಿಲಿನಲ್ಲಿ ಲಾಲಾ ಪಿಂಡಿದಾಸ ಶ್ರೀ ಕೇದಾರನಾಥ ಸೈಗಲ ಇವರೇ ಮೊದಲಾದ ಪ್ರಮುಖ ಕಾಂಗ್ರೆಸ ಕಾರ್ಯಕರ್ತರು ಅವರನ್ನು ಸ್ವಾಗತಿಸಿದರು. ಆ ಮೇಲೆ ಊರ ಪ್ರಮುಖ ಬೀದಿಗಳಲ್ಲಿ ಡಾಕ್ಟರರ ಮೆರವಣಿಗೆ ಜರುಗಿಸಲ್ಪಟ್ಟಿತು. ಡಾಕ್ಟರರು ಉಲ್ಲಸದಿಂದಿದ್ದು ಈ ರಾತ್ರಿ ಲಾಹೋರದ ಕಡೆಗೆ ಹೊರಡುವರು.

(ಅ. ಪ್ರೆ. ತಂತಿ)

ಅಫಗಾಣಿಸ್ಥಾನದಲ್ಲಿದ್ದ ಬಿರುಗಾಳಿ.

ಪೇಶಾವರ ತಾ|| ೧೦— ಅಫಗಾಣಿಸ್ಥಾನದ ಪ್ರಯಾಣಿಕರ ಹೇಳಿಕೆಯಂತೆ ನೋಡಿದರೆ ಹೊಸ ಬಾದಶಹರಾದ ಜಹೀರಶಹಾ ಅವರಿಗಾದ ಪಟ್ಟವೂ ಇನ್ನೂ ಸುರಕ್ಷಿತವಿಲ್ಲ. ಎರಡನೇ ಕೊಲೆಗಳಾಗಬಹುದೆಂದೂ ಸುದ್ದಿ ಇದೆ. ಬಾದಶಹರ ಕೊಲೆಯು ಪೆಟೆಯಿಂದ ಮತ್ತೆ ಯಾವ ದೇಶ ಕೊಲೆಗಳು ಆಗುವವೋ ಹೇಗೆಂಬುದರ ನಿಯಮವಿಲ್ಲದಾಗಿದೆ. ಈ ಬಗೆಯ ಸುದ್ದಿಗಳು ಕಾಬೂಲು ಜಾತಿಯ ಜನರಲ್ಲಿ ಹಬ್ಬುತ್ತಿವೆ. ಎಲ್ಲವೂ ಈಗ ಸ್ವಸ್ಥವಿದ್ದರೂ ಯಾವಾಗ ಯಾವ ಅನಾಹುತಗಳು ಏಳುವವೆಂಬುದು ಗೊತ್ತಿನದಲ್ಲ. ಅದರೂ ಕಾಬೂಲಿನ ವಾತಾವರಣವು ಬಹು ದೂಷಿತವಿದೆ. ನಾದಿರಶಹರನ್ನು ಅರಮನೆಯ ಆಳುಗಳು, ಮತ್ತು ದೊಡ್ಡವರು ಕೊಂದರೆಂಬ ಸುದ್ದಿಯು ಇನ್ನೂ ಸರಕಾರದವರಿಂದ ನಿಶ್ಚಿತವಾಗಿರದಿದ್ದರೂ, ಕಾಬೂಲಿನಲ್ಲಿ ಕೊಲೆಯಾದ ಅರ್ಧ ತಾಸಿಗೆ ಅಲ್ಲಿಂದ ಹೊರಟ ಪ್ರಯಾಣಿಕನಿಂದ ಅವರ ಕೊಲೆಯಾದದ್ದು ನಿಶ್ಚಿತವೆಂದು ತಿಳಿಯುತ್ತದೆ. ಬುಧವಾರ ದಿನ ಮಧ್ಯಾಹ್ನ ೩ ಗಂಟೆಯ ಸಮಯಕ್ಕೆ ಪಿಸ್ತೂಲಿನ ಸಪ್ಪಳ ಕೇಳಿತೆಂದೂ, ಆ ಮೇಲೆ ನಾದೀರಶಹರ ಕೊಲೆ ಆಯಿತೆಂಬ ಗದ್ದಲ ಎದ್ದಿತೆಂದೂ ಅವರ ಹೇಳಿಕೆ. [ಅ ಪ್ರೆ ತಂತಿ]

ಅಫಗಾಣಿಸ್ಥಾನದಲ್ಲಿ ಶಾಂತತೆ.

ಮುಂಬೈ ತಾ|| ೧೧— ಮುಂಬಯಿಯಲ್ಲಿಯ ಅಫಗಾಣ ವಕೀಲರಿಗೆ ಕಾಬೂಲದಿಂದ ಕೆಳಗೆ ಕಾಣಿಸಿದಂತೆ ತಂತಿ ಬಂದಿದೆ "ಬಾದಶಹ ಜಹೀರಶಹರು ಮತ್ತು ಅರಮನೆಯವರು ಸುಖವಾಗಿದ್ದಾರೆ. ದೇಶದಲ್ಲೆಲ್ಲ ಸಮಾಧಾನವಿದೆ" ಅಫಗಾಣಿಸ್ಥಾನದಲ್ಲಿಯ ತುರ್ಕಸ್ಥಾನ ರಾಜಪ್ರತಿನಿಧಿಗಳಾದ ನಂಮದಾರ ಮಹಮ್ಮದ ತೌಕಶ ಬೇಯವರು ನವೆಂಬರ ೬ ನೇ ತಾರೀಖಿನ ದಿನ ಮುಂಬಯಿಗೆ ಬಂದಿದ್ದರು. ಅವರು ಕೂಡಲೇ ಫ್ರಾಂಟಿಯರ ಮೇಲದಿಂದ ಕಾಬೂಲಕ್ಕೆ ಇಂದೇ ರಾತ್ರಿ ಹೊರಡುವವರಿದ್ದಾರೆ.

[ಅ ಪ್ರೆ ತಂತಿ]

ನಾದೀರಶಹರ ಕೊಲೆಗಾರ?

ಮುಂಬೈ ತಾ|| ೧೧— ಅಫಗಾಣಿಸ್ಥಾನದ ಬಾದಶಹರಾದ ಗಾಝಿ ನಾದೀರ ಶರನ್ನು ಕೊಂದವನ ಹೆಸರು ಅಬ್ದುಲ್ ಖಲೀಕ ಈತ ಯಾವುದೋ ಒಂದು ಕೀಳು ವಂಶದವನು. ಕೊಲೆಯು ಕೋಟೆಯಲ್ಲಿದ್ದ ಅರಮನೆಯಲ್ಲಿಯೇ ಆಯಿತು. ತತ್‌ಕ್ಷಣವೇ ಕೊಲೆಗಾರನನ್ನು ಸೆರೆ ಹಿಡಿದು ವಿಚಾರಣೆ ನಡೆಸಿರುವರೆಂದು ಮುಂಬೈಯಲ್ಲಿಯ ಅಫಗಾಣ ವಕೀಲರಿಗೆ ತಂತಿ ಬಂದಿದೆ. (ಅ ಪ್ರೆ, ತಂತಿ)

ಹಿಂದೂ-ಜಪಾನ ವ್ಯಾಪಾರಿ ಒಪ್ಪಂದ.

ಹೊಸದಿಲ್ಲಿ ತಾ|| ೧೦ – ಹಿಂದೂ-ಜಪಾನ ವ್ಯಾಪಾರಿ ಪ್ರತಿನಿಧಿಗಳ ಒಪ್ಪಂದವು ಕೊನೆಯ ಮೆಟ್ಟಿಗೆ ಬರುತ್ತಿದೆ. ಕಿರುಕುಳ ಭೇದಗಳ ಮತು ನಡೆದು ಮುಂದಿನವಾರದಷ್ಟರಲ್ಲಿಗೆ ಸಂಪೂರ್ಣವಾಗಿ ಈ ಮಾತಿನ ಚರ್ಚೆ ಮುಗಿದು ಕೂಡಲೇ ಅದು ಸಹಿಕೆಯಲ್ಲಿ ತರಬಾಗುವದು.

[ಅ ಪ್ರೆ ತಂತಿ]

ಮುಂಬೈ ಶೇರ ಮಾರ್ಕೇಟ ಪುನಃ ಪ್ರಾರಂಭವಾಯಿತು

ಮುಂಬೈ ತಾ|| ೧೧ ಆರು ವಾರಗಳ ನಂತರ ಮುಂಬೈ ಶೇರ ಮಾರ್ಕೇಟದ ಮುಂಗಡ ಶಾಖೆಯು ಇಂದು ಪುನಃ ಪ್ರಾರಂಭವಾಯಿತು. ಕರೀಮಭಾಯಿ ಗಿರಣಿಗಳ ಆರ್ಥಿಕ ಗೊಂದಲದ ಕಾರಣದಿಂದ ಇದು ಮುಚ್ಚಲ್ಪಟ್ಟಿತ್ತೆಂಬದನ್ನು ಸ್ಮರಣೆಗೆ ತರಬಹುದು. ಈಗ ಕರೀಮಭಾಯಿ ಗಿರಣಿಗಳ ಗೊಂದಲವೆಲ್ಲ ಮಾಯವಾದದರಿಂದ ಡಾಯರೆಕ್ಟರ ಮಂಡಲದವರು ಗಿರಣಿಗಳ ಶೇರ ವ್ಯವಹಾರವನ್ನು ಮತ್ತೆ ಪ್ರಾರಂಭಿಸಿದ್ದಾರೆ. ಮೊದಲು ಈ ವ್ಯವಹಾರವು ಮಂದವಾಗಿ, ಕಡೆಕಡೆಗೆ ಸುಧಾರಿಸಿತು. [ಅ ಪೆ ತಂತಿ]

ಅಮಾನುಲ್ಲಾ ಸಾಹೇಬರ ಮತ.

ರೋಮ ತಾ|| ೯— ಇಂದು ಬೆಳಿಗ್ಗೆ ರಾಯಟರ ಕಂಪನಿಯ ಸುದ್ದಿಗಾರನು ಅಮಾನುಲ್ಲಾ ಅರಸರ ಭೆಟ್ಟಿಗೆಂದು ಹೋಗಿದ್ದನು. ಅಫಗಾಣಿಸ್ಥಾನದ ನಾದೀರಶಹರ ಕೊಲೆಯ ಮಾತು ಹೊರಟಾಗ ಅಮಾನುಲ್ಲಾ ರಾಜರು ಅಂದದ್ದು— ಅಫಗಾಣಿಸ್ಥಾನದಲ್ಲಿ ಶಾಂತಿಯು ನೆಲೆಗೊಂಡು ಅದು ಊರ್ಜಿತಾವಸ್ಥೆಗೆ ಮುಟ್ಟಿದ್ದನ್ನು ನೋಡಬೇಕೆಂದೇನೋ ನನ್ನ ಜೀವದ ಹಂಬಲ. ಸಂಶಯವಿಲ್ಲದ ಜನಾಂಗಗಳೊಡನೆ ಸ್ನೇಹ ಬೆಳೆಸದೆ ಅಫಗಾಣಿಸ್ಥಾನವು ಸಂಪೂರ್ಣವಾಗಿ ತನ್ನ ಸಾರ್ವಭೌಮತ್ವವನ್ನು ಕಾಯ್ದುಕೊಳ್ಳುವದೆ ನನಗೆ ಬೇಕು. ಇದ್ದಾದರೂ ಅಫಗಾಣಿಸ್ಥಾನವು ಪಾಶ್ಚಾತ್ಯರ ಧ್ಯೇಯಗಳನ್ನು ಮೆಲ್ಲಗೆ ಒಂದೊಂದಾಗಿ ಜೀರ್ಣಿಸಿಕೊಳ್ಳುವದೆಂದು ನನ್ನ ನಂಬಿಗೆ. ನನ್ನ ಸುಧಾರಣೆ, ಮತ್ತು ಕಾರ್ಯಕ್ರಮಕ್ಕೆ ಅಫಗಾಣಿಸ್ಥಾನವು ಒಪ್ಪಿದರೆ ನನ್ನ ದೇಶ ಸೇವೆ ಮಾಡಲು ನಾನು ಯಾವಾಗಲೂ ಸಿದ್ಧನಿರುವೆ. ನಾದೀರಶಹರ ಆಳಿಕೆಯು ಒಲು ಬಲುಮೆಯದಿತ್ತು.

ಮುಂಬಯಿ ಗಿರಣಿಕಾರರ ಘಾತುಕತನ

ಅಲ್ಲಾಬಾದ ತಾ|| ೯ — ಈ ದಿನ ಪಂಡಿತ ಮಾಲವೀಯರು ಸ್ವದೇಶಿಯ ಪ್ರದರ್ಶನವನ್ನು ತೆರೆದರು. ಈ ಸಮಯಕ್ಕೆ ಪಂಡಿತ ಜವಾಹಿರಲಾಲ, ಸೌ. ಕಮಲಾ ನೆಹರು, ವಿಜಯ ಲಕ್ಷ್ಮಿ ನೆಹರು ಮೊದಲಾದವರು ಬಂದಿದ್ದರು. ಪಂಡಿತ ಜವಾಹಿರಲಾಲರು ಆ ಸಮಯಕ್ಕೆ ಒಂದು ಭಾಷಣ ಮಾಡಿದರು. ಆಗ ಅಂದದ್ದು— ಮುಂಬೈ ಗಿರಣಿಯ ಒಡೆಯರು ಲ್ಯಾಂಕ್ಯಾಶಾಯರದ ಪ್ರತಿನಿಧಿಗಳೊಡನೆ ಒಪ್ಪಂದ ಮಾಡಿಕೊಂಡಿದ್ದು ಬಹು ಘಾತುಕವು. ಕಾಂಗ್ರೆಸದವರೊಡನೆ ಅವರು ಮಾಡಿಕೊಂಡ ಒಪ್ಪಂದವನ್ನು ವಿಸಾರಿ ನಡೆದರು.

ಕಾಮನ್ಸ ಸಭೆಯಲ್ಲಿ ಹಿಂದುಸ್ಥಾನದ ಸುದ್ದಿ.

ಲಂಡನ್ನ ತಾ|| ೯ ಕಾಮನ್ಸ ಸಭೆಯಲ್ಲಿ ಮಿ. ಡೇವಿಡ್ ಗ್ರೆನ್‌ಫೆಲ್ಲ ಎಂಬುವ ಸಭಾಸದರು ಕೇಳಿದ್ದು— ಗಾಂಧಿಯವರು ಈಗ ಶಾಂತಿಗಾಗಿ ಹಾತೊರೆಯುತ್ತಿದ್ದ ಲಕ್ಷಣ ವ್ಯಕ್ತವಾಗಿದ್ದರೆ, ಹಿಂದುಸ್ಥಾನ ಸರಕಾರದವರು ಬಲುಮೆಯ ಕಟ್ಟಳೆಗಳನ್ನು ಸದ್ಯಕ್ಕೆ ನಿಲ್ಲಿಸಿ, ವಿಚಾರಣೆ ಮಾಡದೆ ಸೆರೆಯಲ್ಲಿಟ್ಟವರನ್ನು ಬಿಡಬೇಕು.

ಇದಕ್ಕೆ ಉತ್ತರ ಕೊಡುವಾಗ ಭಾರತ ಮಂತ್ರಿಗಳಾದ ಸರ ಹೋರ ಸಾಹೇಬರು ಅಂದದ್ದು— ಗಾಂಧಿಯವರ ಭಾಷಣಗಳಲ್ಲಿ ಆ ತರದ

ಕರ್ನಾಟಕ

ಮದ್ರಾಸಿನಲ್ಲಿ ಬಹು ದಿನಗಳಿಂದ ಹೊರಡುವದೆಂದು ಹಾರೈಸಿಕೊಂಡಿದ್ದ ಜನವಾಣಿ ದಿನಪತ್ರಿಕೆಯು ಡಬಲ್ ಕ್ರಾವುನ್ ಎಂಟು ಪುಟಗಳಿಂದ ಹೊರಟಿದೆಯಂತೆ. ವಾರ್ಷಿಕ ಚಂದಾ ೧೨ ರೂಪಾಯಿ.

ಮೈಸೂರಿನ ಶಾಸ್ತ್ರಿಯವರ ನಿಧನದ ದೆಸೆಯಿಂದ ಮೈಸೂರಿನವರಿಗಾದ ದುಃಖವನ್ನು ತೋರ್ಪಡಿಸಲು ಮೈಸೂರಲ್ಲಿ ನಾಗರಿಕರ ದೊಡ್ಡ ಸಭೆ ನೆರೆದು ಮುಖಂಡರ ಭಾಷಣಗಳಾಗಿ ದುಃಖ ಸೂಚಕ ನಿರ್ಣಯವಾಯಿತು.

ವಿಜಾಪುರ ಮುನಿಸಿಪಾಲ್ಟಿಯ ಸಭೆ ನೆರೆದು ಕೈ. ವಿಠ್ಠಲಭಾಯಿ ಪಟೇಲರ ಬಗ್ಗೆ ಆದರ ವ್ಯಕ್ತಪಡಿಸಲಾಯಿತು.

ಸೊಲ್ಲಾಪುರಕ್ಕೆ ದೀನಬಂಧು ಆಂಡ್ರ್ಯೂಜರು ೯ನೇ ತಾರೀಖಿಗೆ ಬಂದರು. ಅಲ್ಲಿ ಹೊಸ ಧರ್ಮಾರ್ಥ ಆಸ್ಪತ್ರೆಯ ಮೂರೆಗಲ್ಲನ್ನಿಡುವ ಸಮಾರಂಭವು ಅವರಿಂದ ನಡೆಯಿತು.

ಹಿಂದುಸ್ಥಾನ

ಬಂಗಾಲದಲ್ಲಿಯ ಕ್ರಾಂತಿಕಾರಕರ ಗುಪ್ತ ಕಟ್ಟುಗಳನ್ನು ಬೇರು ಸಹಿತವಾಗಿ ಕಡಿದುಹಾಕಬೇಕೆಂದು ಬಂಗಾಲ ಸರಕಾರದವರು ಹೊಸ ಕಟ್ಟಳೆಯನ್ನು ಮಾಡುವ ವಿಚಾರದಲ್ಲಿರುವರು.

ಸಂಯುಕ್ತ ಪ್ರಾಂತದಲ್ಲಿಯ ಖಲೀಲಾಬಾದ ಎಂಬಲ್ಲಿ ಒಕ್ಕಲಿಗರ ಪರಿಷತ್ತಾಗಿ, ಬೇರೆ ಬೇರೆ ಕಡೆಗೆ ಅನೇಕರ ವ್ಯಾಖ್ಯಾನಗಳಾದವು. ಜನಸಮೂಹವು ಬಹಳ ನೆರೆದದ್ದರಿಂದ ವ್ಯಾಖ್ಯಾತರು ಆನೆಯ ಮೇಲೆ ಕುಳಿತುಕೊಂಡು ಮಾತಾಡಿದರಂತೆ.

ಅಹಮ್ಮದನಗರದಲ್ಲಿ ನೆರೆಯುವ ಸ್ವದೇಶೀ ಪ್ರದರ್ಶನಕ್ಕೆ ಬರಲಿಕ್ಕೆ ಪಂಡಿತ ಜವಾಹಿರಲಾಲರಿಗೆ ಮಂಡಲದವರು ನಿಮಂತ್ರಣ ಕೊಟ್ಟಿದ್ದಾರೆ.

ಪರದೇಶ.

ರಶಿಯದ ಒಬ್ಬ ಗ್ರಂಥಕಾರನು ಒಂದು ಅತ್ಯುತ್ತಮವಾದ ವಾಙ್ಮಯ ಗ್ರಂಥ ಬರೆದದ್ದರಿಂದ ಅವನಿಗೆ ೧೯೩೩ ಇಸ್ವಿಯ ವಾಙ್ಮಯದ ನೊಬೆಲ್ ಬಹುಮಾನ ದೊರಕಿದೆ.

ಆಯರ್ಲಂಡದ ಒಂದು ಪರಿಷತ್ತಿನಲ್ಲಿ ಮಾತನಾಡುವಾಗ ಮಿ. ಡಿ. ವ್ಯಾಲೆರಾ ಅವರು ಅಂದದ್ದು—ರಾಜನಿಷ್ಠೆಯ ಪ್ರತಿಜ್ಞೆ ಮಾಡುವ ಪದ್ಧತಿಯನ್ನು ನಾವು ತೆಗೆದು ಹಾಕುವವರಿದ್ದೇವೆ. ನಾವು ಅಧಿಕಾರಾರೂಢರಾದವರೆಗೆ ನಮ್ಮ ಕಂಡಾಯದೊಳಗಿನ ಒಂದು ಕಾಸನ್ನು ನಮ್ಮ ದೇಶದ ಹೊರಗೆ ಕಳಿಸಲಾರೆವು. ಗ್ರೇಟಬ್ರಿಟನ್ನದವರೊಡನೆ ನಾವು ಸಹಕರಿಸಿದರೂ, ನಮ್ಮ ಧೋರಣೆಯನ್ನು ನಿಶ್ಚಯಿಸಲು ನಾವೇ ಬಾಧ್ಯಸ್ಥರು.

ಬರುವ ಡಿಸೆಂಬರ ತಿಂಗಳ ೧೫ನೇ ತಾರೀಖಿನಿಂದ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಮೊದಲಿನಂತೆ ಸೆರೆ ಸಿಂದಿಯ ವ್ಯಾಪಾರ ನಡೆಯುವದಂತೆ.

ಲಕ್ಷಣವೇನೂ ತೋರುವದಿಲ್ಲ. ಸೆರೆಯಾಳುಗಳನ್ನು ಬಿಡುವ ಸಂಬಂಧವಾಗಿ ಸರಕಾರದವರ ಧೋರಣೆ ನಿಶ್ಚಿಯವದೆಂಬುದು ಪ್ರಸಿದ್ಧವಿದೆ. ಆದ್ದರಿಂದ, ಅದರಲ್ಲಿ ಬದಲಾವಣೆಯಾಗುವದಿಲ್ಲ.

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ ದಂತಮಂಜನ.

ಈ ಕಂಪನಿಯು ಚಕ್ಕಾರಿಯಿಂದ ಗದಗಿಗೆ ಬಂದಿರುತ್ತದೆ. ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು.

ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮಬಾಣ ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು. ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು:— ಧಾರವಾಡ ಫಾರ್ಮಸಿ ಹಾಗೂ ದಾಳಿಗಾ ಫಾರ್ಮಸಿ ಹಾ ಕುಲಕರ್ಣಿಯವರ ಲ್ಯಾಬೋರೇಟರಿ ನಂಬ ೧೨

೧೧-೧೧

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಚ್ಚು ಗುಣ. ಜರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ-ರಾಘವ ಫಾರ್ಮಸಿ ಗೋಕಾಕ ಜಿ. ಬೆಳಗಾವ

ಕೇವಲ ಒಂದೇ ವಾರ! ಕೇವಲ ಒಂದೇ ವಾರ!!

ವಿಜಯ ಸಿನೇಮಾ ಧಾರವಾಡ.

ರವಿವಾರ ತಾ॥ ೧೨-೧೧-೩೩ ರಿಂದ ಸುರುವು.

ಅಭಿನಯದಿಂದಲೂ ವಿಧ ಮತ್ತು ಸ್ವಚ್ಛ ಕಂಠದಿಂದಲೂ ಬಹು ಪ್ರಸಿದ್ಧಿಯನ್ನು ಪಡೆದ

ಮಾಸ್ಟರ ಮೋಡಕ

ಮತ್ತು ಶಾಸ್ತ್ರೋಕ್ತ ಗಾಯನದಿಂದಲೂ ಅಭಿನಯ ಕೌಶಲ್ಯದಿಂದಲೂ ಪ್ರಶಂಸನೆಯನ್ನು ಪಡೆದ

ಕುಮಾರಿ ಶಾಂತಾ ಆಪ್ಟೆ

ಇವರು ಕೆಲಸ ಮಾಡಿದ

ಮಾತಾಡುವ ಮತ್ತು ಹಾಡುವ ಚಿತ್ರಪಟ.

ಶ್ಯಾಮ ಸುಂದರ

ಶ್ರೀಕೃಷ್ಣನ ಪ್ರೇಮದ ಆಟ, ಪೆಂದ್ಯಾನ ವಿನೋದ, ಬಾಗವಾನನ ಅಂಗಡಿಯಲ್ಲಿ ಶ್ರೀಕೃಷ್ಣನು ಮಾಡಿದ ಕಳವು ಅದರ ಆರೋಪವು ಯಾರ ಮೇಲೆ ಬಂದಿತು! ವ ಧ.ರ ಕೊಳಲು, ಮನೋರಂಜಕ ಹಾಡುಗಳು ಇವುಗಳನ್ನು ಕೇಳಿರಿ

ವೇಳೆ:— ಸಂಜೆಯ ೭, ರಾತ್ರಿ ೧೦-೩೦ ಗಂಟೆಗೆ

ರವಿವಾರ ಮತ್ತು ಮಂಗಳವಾರ ಹಗಲು ೪ ಗಂಟೆಗೆ

ದರ:— ರೂ ೧ ಆಣೆ ೯, ೪, ೩, ೨, ಸ್ತ್ರೀಯರಿಗೆ ಆಣೆ ೨

ಇಂಥ ಅಪೂರ್ವ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

೧ನೇ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಪ್ರಶಂಸಪತ್ರ ಪಡೆದಿದೆ

೨ನೇ ಮಹಾಯಾತ್ರಾ ಪ್ರವಾಸವು

ರೇಲ್ವೆ ಕಂಪನಿಯಿಂದ ಪರವಾನಗೀ ಪಡೆಯಲಾಗಿರುತ್ತದೆ

ತಾ॥ ೨೯-೧೨-೧೯೩೩ ರಿಂದ ೨೫-೨-೧೯೩೪ ರ ವರೆಗೆ

ಮುಂಬಯಿ, ಉಜ್ಜನಿ, ದಿಲ್ಲಿ ಶ್ರೀಕಾಶಿ, ಗಯಾ, ಕಲ್ಕತ್ತಾ, ಮದ್ರಾಸ, ರಾಮೇಶ್ವರ ಲಂಕಾ, ಮೈಸೂರ ಮೊದಲಾದ ೪೮ ಪುಣ್ಯ ಕ್ಷೇತ್ರಗಳ ಯಾತ್ರಾ ಸುಯೋಗವು ಸೆಕಂಡ ಕ್ಲಾಸ ... ಥರ್ಡ ಕ್ಲಾಸ ... ರೂ ಮಾತ್ರ ಟಿಕೇಟ ಪಡೆಯತಕ್ಕವರು ಕೂಡಲೇ ... ಅಡ್ವಾನ್ಸ ... ವಿಶೇಷ ಮಾಹಿತೀ ಪತ್ರಿಕೆ ... ಬೇಡಿದವರಿಗೆ ಕಳಿಸಲ್ಪಡುವವು

ಜಮೀನದಾರರ ಕಾಮಧೇನು.

ನಮ್ಮ ಕಂಪನಿಯ ಎಂಜಿನ್ ರೆಂಟಿಗಳಿಂದ ಕಳೆದ ವರುಷ ವರ್ಷಗಳಂತೆ ಬರುವ ೧೯೩೪ನೇ ಇಸವಿಯ ಬೇಸಿಗೆಯಲ್ಲಾದರೂ ಪಡ ಜಮೀನುಗಳು ಯೋಗ್ಯ ದರದಲ್ಲಿ ಕಿರಿ ಮಾಡಿ ಕೊಡಲ್ಪಡುವವು

ಆಫೀಸು ಸ್ಟೇಶನ್ ರೋಡ ಹುಬ್ಬಳ್ಳಿ ತಾ॥ ೩-೧೧-೧೯೩೩

ಜಿ ಎ ಶಿರೂರ, ಆರ್ಗನೈಜರ

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿರ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎಂಟು ನಕಾಶೆಗಳಿರುವವು. ಬೆಲೆ—೦-೬-೦ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ.ಎ

ಹನುಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಆಗಡಿಕರ ಬ್ರದರ್ಸ ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩

ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ ಪಂಚಾಕ್ಷರ ಪೇಟೆ ಗದಗ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಟ್ಟಣದ ಪಲಂಗು, ಸ್ಟ್ಯಾಂಡು, ಕೊಪ್ಪರು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಪ್ರಚಾರಿಗಳಿಗೆ ಕಮೀಶನ್ | ಅಸ್ಪೃಶ್ಯತಾ ನಿವಾರಣೆ. | ಪ್ರಚಾರಕರಿಗೆ ಸುಸಮಯ

(ಕೊಟ್ಟೂರು ದೀನ ಸೇವಾ ಸಂಘದ ಪ್ರಕಟಣ ಕ್ರಮ)

ವರಲಿ ಶ ಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ ಧರ್ಮಗುರುಗಳ ಉಪದೇಶವೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಡ್ವಾನ್ಸಿಲ್ಲದೆ ವ್ಹಿ. ಪಿ. ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ. ಉಚಿತವಾಗಿ ಹಂಚಲು ಬಯಸುವ ಪ್ರೋತ್ಸಾಹಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೬-೧೧-೩೩ ಟಿ ಎ ಕೇಶವರಾವ್ ಶಾ ಕೃ ಜ ಬೀದಿ ಬಳ್ಳಾರಿ.

ಈ ಪತ್ರಿಕೆಯನ್ನು ಕಂಗಳಾಳ ಬಳವಂತ ಮಹಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೨೮

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು: — ಆಲೂರ ವೆಂಕಟರಾಯರು

ಸೋಮವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಮಂಗಳವಾರ ಕಾರ್ತೀಕ ಬಹುಳ ೨ ಶಕೆ ೧೮೫೫ ತಾ|| ೧೪-೧೧-೩೩ [ಸಂಚಿಕೆ ೧೭೧

ಇನಸ್ಯುಅರನ್ಸ
ಜೀವವಿಮೆ ಇಳಿ
ದಿ ಯುನಾಯಿಟೆಡ
ಕರ್ನಾಟಕ ಇನಸ್ಯುಅರ
ಕಂಪನಿಯೇ
ಉತ್ತಮವಾದುದು

ಇನಸ್ಯುಅರನ್ಸ
ಪ್ರದೇಶದ ಹಣವನ್ನು ಪ್ರದೇಶ
ದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ
ತಾ|| ೨೫-೮-೩೩
ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣಿ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿವೆ

(೧) ಬಿಳೀ, ಹಳದಿ, ಕೆಂಪು ಚಿಪ ಣಿಯಣ್ಣಿ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮ್ಯುನಿಚ್ ಫಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯಿ ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರೆ (೫) ಮೋಟಾರ ಮತ್ತು ಎತ್ತಿನಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡಿಗೆ ಇರುತ್ತವೆ

ನಮ್ಮ ಹದ್ದು —

೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ ೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ ಸಬ್ಬ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು

ವಿಶೇಷ ಸೂ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಕಲಾಸಪೂರ ಆ್ಯಂಡ ಕೋ ದೇವಕರಣ ಮ್ಯಾನ್ಶನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೋಡಿಗೆಮ್ಮ, ಕೆಮ್ಮು ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ ಟೋಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಕಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಗ್ರಂಥ ವಿಮರ್ಶೆ.

ಶ್ರೀಮದ್ಭಗವದ್ಗೀತೆಚೆ ರಚನಾಂತರವೆಂಬ ಮರಾಠಿ ಗ್ರಂಥದ ಕರ್ತರು ಅದನ್ನು ತಮ್ಮ ಗೋತ್ರವಾದ "ಭಾರದ್ವಾಜ" ಎಂಬ ಹೆಸರಿನಿಂದ ಪ್ರಕಟಿಸಿರುತ್ತಾರೆ ಗೀತೆಯ ವಿಷಯದಲ್ಲಿ ಇದೊಂದು ಅಪೂರ್ವವಾದ ಗ್ರಂಥ ಇದರಲ್ಲಿ ಗ್ರಂಥಕರ್ತರು ಗೀತೆಯ ಯಾವತ್ತು ಶ್ಲೋಕಗಳನ್ನು ಆಧ್ಯಾತ್ಮಿಕ ಆಧಿದೈವಿಕ ಮತ್ತು ಆಧಿಭೌತಿಕವೆಂಬ ಮೂರು ತತ್ವಗಳ ಮೇಲೆ ವಿಭಾಗಿಸಿ, ಆಯಾ ತರಹದ ಶ್ಲೋಕಗಳನ್ನು ಆರಿಸಿ ತೆಗೆದು ಹೊಸದಾಗಿ ೧೮ ಆಧ್ಯಾಯಗಳನ್ನು ಕಲ್ಪಿಸಿ ಅವಕ್ಕೆ ಅರ್ಜುನ ವಿಷಾದಯೋಗ, ಸಾಂಖ್ಯಯೋಗ ಅಕ್ಷರ ಬ್ರಹ್ಮಯೋಗ, ಜ್ಞಾನಯೋಗ, ಪುರುಷೋತ್ತಮಯೋಗ ಮುಂತಾಗಿ ಹೆಸರುಗಳನ್ನು ಕೊಟ್ಟಿರುವರು ಗೀತೆಯಲ್ಲಿ ಅನೇಕ ಕಡೆಯಲ್ಲಿ ಪುಟ ದ್ವಿರುಕ್ತಿ, ತಾತ್ಪರ್ಯ ಸಂಬಂಧಾಭಾವ ಇವೇ ಮುಂತಾದ ದೋಷಗಳಿರುತ್ತವೆಂಬ ಕಾರಣದಿಂದ ಇವರು ಈ ರಚನಾಂತರವನ್ನು ಕಲ್ಪಿಸಿರುವರು ಗೀತೆಯಲ್ಲಿ ಹಿಂದಕ್ಕೂ ಕೂಡ ಪಾಠಾಂತರಗಳು ಸೇರಿವೆ ಕೆಲವು ಪ್ರತಿಗಳಲ್ಲಿ ಶ್ಲೋಕಗಳು ಕಡಿಮೆ ಇವೆ ಕೆಲವುಗಳಲ್ಲಿ ಹೆಚ್ಚು ಇವೆ. ಅದಕಾರಣ ಹೀಗ ರಚನಾಂತರವನ್ನು ತಾವು ಕಲ್ಪಿಸಿದ ಮಾತ್ರಕ್ಕೆ ದೋಷಕ್ಕೆಪಾತ್ರರಾಗಲಾರರೆಂದು ಇವರ ಎಂಬೋಣ

ವಿಶ್ವರಚನೆಯು ಈಶ್ವರಶಕ್ತಿ ಬ್ರಹ್ಮಶಕ್ತಿ, ವಿರಾಟಶಕ್ತಿಗಳ ತ್ರಿಸಂಮಿಶ್ರಘಟನೆಯುಳ್ಳದ್ದಾಗಿರುವುದೆಂದೂ ಇದಕ್ಕೆಅನುಗುಣವಾಗಿ ವ್ಯಕ್ತಿಘಟನೆಯು ಆತ್ಮ ಜೀವ ಮತ್ತು ದೇಹವೆಂಬುದಾಗಿ ತ್ರಿಸಂಮಿಶ್ರವಾಗಿರುವುದೆಂದೂ ಅದಕಾರಣ ಈ ಮೂರು ಅಂದರೆ, ಆಧ್ಯಾತ್ಮಿಕ ಆಧಿ ದೈವಿಕ ಮತ್ತು ಆಧಿ ಭೌತಿಕ ತತ್ವಗಳ ಮೇಲೆ ಗೀತೆಯನ್ನು ವಿಭಾಗಿಸಬೇಕೆಂದೂ ಇವರು ಹೇಳಿ ಹಾಗೆ ಮಾಡಿ ತೋರಿಸಿರುವರು

ಇವರು ಗೀತೆಯ ವಿಷಯದಲ್ಲಿ ಅತ್ಯಂತ ಪೂಜ್ಯಬುದ್ಧಿಯುಳ್ಳವರಾಗಿರುವರು ತಮ್ಮ ತಮ್ಮ ಅಭ್ಯಾಸದ ಸಲುವಾಗಿ ಗೀತೆಯಲ್ಲಿ ತಮತಮಗೆ ತೋರಿದಂತೆ ವಿಭಂಗ ಮಾಡಲು ಯಾರಿಗೂ ಅಡ್ಡಿ ಇರುವುದಿಲ್ಲ ಇದೊಂದು ರೀತಿಯಲ್ಲದೆ, ಗೀತೆಯನ್ನು ಇನ್ನೂ ಕೆಲವು ರೀತಿಯಲ್ಲಿ ವಿಭಾಗಿಸಬಹುದು ಉದಾ— ಧರ್ಮ ಜ್ಞಾನವೆಂಬುದಾಗಿಯೂ ಕರ್ಮಜ್ಞಾನ ಭಕ್ತಿಯೆಂಬುದಾಗಿಯೂ ಅಥವಾ ಧ್ಯೇಯ ಮತ್ತು ಸಾಧನಗಳು ಎಂಬುದಾಗಿಯೂ ವಿಭಾಗಿಸಿ ಅಭ್ಯಾಸಮಾಡಬಹುದು ಆದರೆ ಮೂಲಗೀತೆಯ ಈ ರಚನಾಂತರಗಳು ತಮ್ಮ ತಮ್ಮ ಅಭ್ಯಾಸಕ್ಕೆ ಮಾತ್ರವೇ ಉಪಯೋಗವಾಗುವವಲ್ಲದೆ ಅವಕ್ಕೆ ಮೂಲಗೀತೆಯ ಬೆಲೆ ಬರಲಾರದು ಅಲ್ಲದೆ, ಗೀತೆಯ ಮೂಲ ಸೌಂದರ್ಯವೂ ಹೋಗುವದು ಇನ್ನು ಗ್ರಂಥಕರ್ತರಿಗೆ ಕಾಣುವ ದ್ವಿರುಕ್ತಿ ಮುಂತಾದ ದೋಷಗಳು ನಿಜವಾಗಿ ದೋಷಗಳಲ್ಲಿ ಸೂಕ್ಷ್ಮವಾಗಿ ಅಭ್ಯಾಸ ಮಾಡಿದರೆ ಆದ್ವಿರುಕ್ತಿ ಮುಂತವುಗಳನ್ನು ಮಾಡುವದಕ್ಕೆ ಕಾರಣ ವಿಶೇಷಗಳನ್ನು ನಾವು ಅಲ್ಲಿ ಕಾಣಬಹುದು ಇದಲ್ಲದೆ ಗ್ರಂಥಕರ್ತರು ಮಾಡಿದ ಬ್ರಹ್ಮ ಈಶ್ವರ ವಿರಾಟವೆಂಬ ವಿಭಾಗವೂ ನಿರ್ದುಷ್ಟವಾಗಿಲ್ಲ ಜೀವ ಜಡ ಪರಮಾತ್ಮವೆಂಬುದಾಗಿ ಮಧ್ವಾಚಾರ್ಯರು ವಿಭಾಗಮಾಡಿರುವರು. ಇರಲಿ, ಗ್ರಂಥಕರ್ತರು ಗೀತೆಯ ವಿಷಯವಾಗಿ ಅತ್ಯಂತ ಪೂಜ್ಯಬುದ್ಧಿಯನ್ನು ಇಟ್ಟುಕೊಂಡು ಈ ರಚನಾಂತರವನ್ನು ಮಾಡಿರುವದರಿಂದ, ಇದು ಅಭ್ಯಾಸ ಮಾಡಲಿಕ್ಕೆ ಯೋಗ್ಯ ಗ್ರಂಥವಾಗಿದೆ

ಹುಬ್ಬಳ್ಳಿಯ ಪತ್ರ.

[ಸ್ವಂತ ಸುದ್ದಿಗಾರನಿಂದ]

ತಾ|| ೧೧-೧೧-೩೩

ಶ್ರೀ ವಿಠ್ಠಲಭಾಯಿಯವರ ಮರಣದ ಬಗ್ಗೆ ಹುಬ್ಬಳ್ಳಿಯಲ್ಲಿ ೧೦ನೇ ತಾರೀಖು ದುಃಖದ ದಿನವೆಂದು ಆಚರಿಸಲ್ಪಟ್ಟಿತು ಬಹುತರ ಎಲ್ಲ ಅಂಗಡಿಗಳು ಬಂದಿಡಲ್ಪಟ್ಟಿದ್ದವು ಸರಾಫಗಟ್ಟಿಯಲ್ಲಿ ಒಂದೂ ಅಂಗಡಿಯು ತೆಗೆಯಲ್ಪಟ್ಟಿದ್ದಿಲ್ಲ ಆನೆಯ ಮೇಲೂ ಪಲ್ಲಕ್ಕಿಯಲ್ಲಿಯೂ ಶ್ರೀ ವಿಠ್ಠಲರ ಭಾವ ಚಿತ್ರವನ್ನು ಇಟ್ಟುಕೊಂಡು ಊರಲ್ಲಿಯ ಪ್ರಮುಖ ಬೀದಿಗಳಲ್ಲಿ ದೊಡ್ಡ ಮೆರವಣಿಗೆ ತೆಗೆದಿದ್ದರು ಸಾಯಂಕಾಲಕ್ಕೆ ಗುಳೇದನಕೇರಿಯ ಬೈಲಿನಲ್ಲಿ ಮೂರು ಸಾವಿರ ಜನರ ಪ್ರಚಂಡ ಸಭೆಯಾಗಿ ದುಃಖಪ್ರದರ್ಶಕ ಗೊತ್ತುವಳಿಯನ್ನು ಪಾಸು ಮಾಡಿದರು ಮತ್ತು ಶ್ರೀ ವಿಠ್ಠಲಭಾಯಿಯವರ ಭಾವಚಿತ್ರವನ್ನು ಮುನಸಿಪಲ್ ಹಾಲಿನ ಒಂದು ಪ್ರಸಿದ್ಧ ಸ್ಥಳದಲ್ಲಿ ನೇತಾಡಲು ಇಡಬೇಕೆಂದು ಮುನಸಿಪಾಲಿಟಿಗೆ ವಿನಂತಿ ಮಾಡಿಕೊಳ್ಳುವ ಎರಡನೇ ಗೊತ್ತುವಳಿಯೂ ಪಾಸಾಯಿತು. ಮತ್ತು ನಾಗರಿಕರೊಬ್ಬರು ಇದಕ್ಕೆ ತಗಲುವ ಎಲ್ಲ ವೆಚ್ಚವನ್ನು ನೋಡಿಕೊಳ್ಳಲು ಒಪ್ಪಿದ್ದಾರೆ ಎಲ್ಲರೂ ಎದ್ದು ನಿಂತು ಮೌನದಿಂದ ಪ್ರಾರ್ಥನೆಮಾಡಿದ ಬಳಿಕ ಸಭಾ ವಿಸರ್ಜನೆಯಾಯಿತು.

ಊರಲ್ಲಿ ಪ್ಲೇಗಿನ ಇಲಿ ಬೀಳಹತ್ತಿವೆ ಲೋಕಮತ ಕಾರ್ಯಾಲಯ ಹಾಗೂ ಫೀರಿಯವರ ಪ್ರೆಸ್ಸಿನಲ್ಲಿ ಇಲಿ ಬಿದ್ದಿರುವದಾಗಿ ತಿಳಿಯುತ್ತದೆ

೧೯ನೆಯ ಸಾಹಿತ್ಯ ಸಮ್ಮೇಲನ ಹುಬ್ಬಳ್ಳಿ

(ತಾ|| ೧೦ನೇ ದಿನ ಕೂಡಿದ ಸ್ವಾಗತ ಸಭೆಯಲ್ಲಿ ಗೊತ್ತಾಗಿದ್ದು)

ಡಿಶಂಬರ ತಾ|| ೨೯-೩೦-೩೧ ಗಳಲ್ಲಿ ಕೂಡಿಸಬೇಕೆಂದು ಗೊತ್ತಾಗಿದೆ

ಅಧ್ಯಕ್ಷರು (ಸೂಚನೆ) ೧ ಆರ್. ನರಸಿಂಹಾಚಾರ್ಯ ೨ ಗೋವಿಂದ ಪೈ ೩ ಆರ್. ಶಾಮಶಾಸ್ತ್ರಿ ೪ ಟಿ ಎಸ್ ವೆಂಕಣ್ಣಯ್ಯ ೫. ಕೆ. ವ್ಹಿ ಪುಟ್ಟಪ್ಪಾ

ಕವಿಸಮ್ಮೇಲನ (ಸೂಚನೆ) ಅಧ್ಯಕ್ಷರು ೧. ಕೆ ವ್ಹಿ ಪುಟ್ಟಪ್ಪಾ

ನಾಟ್ಯ ಸಮ್ಮೇಲನ [ಸೂಚನೆ] ಅಧ್ಯಕ್ಷರು ೧ ಪಂಡಿತ ತಾರಾನಾಥರು ೨ ಶ್ರೀಮತಿ ಕನಕ ಲಕ್ಷ್ಮಮ್ಮಾ ೩ ಟಿ ಪಿ. ಕೈಲಾಸಂ

ಪ್ರದರ್ಶನ ವ್ಯವಸ್ಥಾಪಕರು ೧. ಶಿವಶಂಕರಪ್ಪ ದೇವಪುರ ೨ ಬಿ ಜಿ ಸರಾಫ,

ಕನ್ನಡಿಗ

ಮಂಗಳವಾರ ತಾರೀಖು: ೧೪-೧೧-೧೯೩೩

ಸಾಹಿತ್ಯ ಸಮ್ಮೇಲನಕ್ಕೆ ಸೂಚನೆಗಳು.

ಕರ್ನಾಟಕ ಸಾಹಿತ್ಯ ಪರಿಷತ್ತು ಸ್ಥಾಪನವಾಗಿ ೧೮ ವರ್ಷಗಳಾದವು ಈ ಅವಧಿಯಲ್ಲಿ ಕನ್ನಡ ವಾಙ್ಮಯದ ಉನ್ನತಿಯು ಎಷ್ಟು ಆಗಬೇಕೋ ಅಷ್ಟು ಆಗಿಲ್ಲವೆಂದು ಹಲವರ ಆಕ್ಷೇಪ ಇದಕ್ಕೆ ವಿರುದ್ಧವಾಗಿ, ಕರ್ನಾಟಕ ಸಾಹಿತ್ಯ ಪರಿಷತ್ತು ಇಂತಿಂಥ ಕಾರ್ಯಗಳನ್ನು ಮಾಡಿರುವುದೆಂಬುದರ ಯಾದಿಯು ಕೆಲವು ತಿಂಗಳ ಹಿಂದೆ ಪ್ರಸಿದ್ಧಿಸಲ್ಪಟ್ಟಿತು. ನಾವು ಈ ವಾದದಲ್ಲಿ ಬೀಳಲಿಚ್ಛಿಸುವುದಿಲ್ಲ ಇದಕ್ಕೆ ಕಾರಣವೇನಂದರೆ ಇದು ಈ ರೀತಿಯಿಂದ ಬಗೆಹರಿಯದ ವಾದ ಪ್ರತಿಯೊಬ್ಬನು ಅದನ್ನು ತನ್ನ ತನ್ನ ಮನಸ್ಸಿನ ಒಲವಿಗೆ ಅನುರೂಪವಾಗಿಯೂ ಆಕಾಂಕ್ಷೆಗೆ ಅನುಗುಣವಾಗಿಯೂ ಬಿಡಿಸುತ್ತಾನೆ ಅಲ್ಲದೆ, ಇದನ್ನು ಬಿಡಿಸುವಾಗ ಹಿಂದಿನ ಕಾಲದ ಪರಿಸ್ಥಿತಿಯು ಈಗಿನವರ ಲಕ್ಷ್ಯದಲ್ಲಿ ಬಾರದ್ದರಿಂದಲೂ ಇದಕ್ಕೆ ಉತ್ತರ ಕೊಡುವಾಗ ದೋಷಗಳುಂಟಾಗುತ್ತವೆ. ಅದಕಾರಣ, ಈ ಜಗಳವನ್ನು ಮತ್ತೆ ಕೆದರಿ ತೆಗೆಯುವುದಕ್ಕೆ ನಾವು ಇಚ್ಛಿಸುವುದಿಲ್ಲ. ಇಂದು ನಾವು ಈ ಸಂಬಂಧವಾಗಿ ಮಾಡಬೇಕಾದುದೇನು, ಮುಂದೆ ಯಾವ ಧೋರಣವನ್ನು ಸ್ವೀಕರಿಸಬೇಕೆಂಬುದನ್ನಷ್ಟೇ ಹೇಳುವೆವು ಆಗತಕ್ಕಷ್ಟು ಕಾರ್ಯವಾಗಿಲ್ಲವೆಂಬುದನ್ನಂತೂ ಎಲ್ಲರೂ ಒಪ್ಪಬೇಕಷ್ಟೇ? ಸರಿ. ಆ ‘ ಆಗತಕ್ಕಷ್ಟು ’ ಎಷ್ಟು ಎಂಬ ಬಗ್ಗೆಯೂ ಆಗದಿರುವುದಕ್ಕೆ ಕಾರಣವುಂಟೋ ಹೇಗೆ ಎಂಬ ಬಗ್ಗೆಯೂ ವಿಚಾರಿಸಿ ಫಲವೇನು? ಇರಲಿ, ನಾವು ಇಂದು ಅದು ಮಾಡಬೇಕಾದ ಕಾರ್ಯವಾವುದೆಂಬುದನ್ನು ಯೋಚಿಸಿದರೆ, ನಮಗೆ ಕಂಡು ಬರುವುದೇನಂದರೆ, ಅದು ಇಡೀ ಕರ್ನಾಟಕದ ಸಾಂಸ್ಕೃತಿಕ ಜೀವನದ ಕೇಂದ್ರ ಸಂಸ್ಥೆಯಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಅದು ಹಿಡಿಯಬೇಕು. ಕನಿಷ್ಠ ಪಕ್ಷಕ್ಕೆ ಅದು ಕನ್ನಡ ವಾಙ್ಮಯದ ಪ್ರಶ್ನೆಯನ್ನು ವಿವಿಧ ದೃಷ್ಟಿಯಿಂದ ಬಿಡಿಸಲು ಯತ್ನಿಸಬೇಕು ಕನ್ನಡ ವಾಙ್ಮಯದಲ್ಲಿ ಹಳೆಯ ಹಲಕೆಲವು ಗ್ರಂಥಗಳ ಪುನರುಜ್ಜೀವನವಾದ ಮಾತ್ರಕ್ಕೆ ಅಥವಾ ವಿಶಿಷ್ಟತರಹದ ಒಂದು ವಾಙ್ಮಯವು ಹೊರಟ ಮಾತ್ರಕ್ಕೆ ಕಾರ್ಯವಾಗಲಿಲ್ಲ ಕನ್ನಡ ಭಾಷೆಯ ಪ್ರಶ್ನೆಯು ಬಹಳ ಗಹನವಾದ ಪ್ರಶ್ನೆಯು ಅದರ ಮಾರ್ಗದಲ್ಲಿ ನೂರೆಂಟು ವಿಘ್ನಗಳಿರುತ್ತವೆ ಅವೆಲ್ಲವನ್ನೂ ಸಮಾಧಾನಕಾರವಾಗಿ ಬಿಡಿಸಲು ಪ್ರಯತ್ನಿಸುವುದು ಪರಿಷತ್ತಿನ ಕರ್ತವ್ಯವು ನಾವು ಈ ವಿಷಯವನ್ನು ಇಲ್ಲಿ ಸ್ಥೂಲವಾಗಿ ಮಾತ್ರವೇ ಸೂಚಿಸಬಲ್ಲೆವಲ್ಲದೆ ವಿಸ್ತಾರವಾಗಿ ಬರೆಯುವುದು ಶಕ್ಯವಿಲ್ಲ ಅಲ್ಲದೆ ಹಾಗೆ ಬರೆಯಲಿಕ್ಕೆ ನಮಗೆ ಅವಕಾಶವೂ ಉಳಿಯಲಿಲ್ಲ. ದಿಗ್ದರ್ಶನಾರ್ಥವಾಗಿ ನಾವು ಗಡಿನಾಡಿನ ಮಹತ್ವದ ಪ್ರಶ್ನೆಯನ್ನು ವಿಚಾರ ಮಾಡಬೇಕಾಗಿದೆ ವಿಶ್ವವಿದ್ಯಾಲಯದ ವಿಷಯವನ್ನಂತೂ ಕೇಳುವವರೇ ಇಲ್ಲದಾಗಿದೆ ಮಹಾರಾಷ್ಟ್ರದವರು ತಮ್ಮದೊಂದು ಶಾಶ್ವತವಾದ ಸಂಸ್ಥೆಯನ್ನೂ ನಿಧಿಯನ್ನೂ ಸ್ಥಾಪಿಸಿ ಪ್ರತ್ಯಕ್ಷ ಕಾರ್ಯಕ್ಕೆ ಹತ್ತಿರುವರು- ನಮ್ಮಲ್ಲಿ ಆ ಪ್ರಶ್ನೆಯು ಅವರಿಗಿಂತಲೂ ಮುಂಚಿತವಾಗಿ ಹೊರಟಿದ್ದರೂ ‘ ಹುಟ್ಟಿದವರ ಅಣ್ಣ, ಬೆಳೆದವರ ತಮ್ಮ ’ ಎಂಬಂತೆ ನಮ್ಮ ಸ್ಥಿತಿಯಾಗಿದೆ. ಇದೇ ದೃಷ್ಟಿಯಿಂದ ವಿಚಾರ ಮಾಡುತ್ತ, ಹೋದರೆ ಅನೇಕ ವಿಷಯಗಳು ಹೊಳೆಯುವವು ಒಟ್ಟಿಗೆ, ನಾವು ಇಲ್ಲಿ ಸೂಚಿಸುವದೇನಂದರೆ ಕನ್ನಡ ಭಾಷೆಯ ಪ್ರಶ್ನೆಯೆಂದರೆ ಕನ್ನಡ ನಾಡಿಯಲ್ಲಿ ಕೆಲವು ಕವಿಗಳೂ ಕತೆಗಾರರೂ ಹುಟ್ಟಿದ ಮಾತ್ರಕ್ಕೆ ಕಾರ್ಯವಾಗಲಿಲ್ಲವೆಂಬುದರ ಅರಿವು ನಮ್ಮಲ್ಲಿ ಉಂಟಾಗಬೇಕಾಗಿದೆ

ಏನು ಮಾಡಬೇಕೆಂಬುದನ್ನು ವಿಸ್ತಾರವಾಗಿ ಹೇಳುವ ಕಾರಣವೇ ಇಲ್ಲ ನಮಗಿಂತ ಮುಂದೆ ಹೋದ ಭಾಷೆಗಳ ಪ್ರಯತ್ನಗಳನ್ನು ನೋಡಿದರೆ ತಾನೆ ಗೊತ್ತಾಗುವುದು ಕೇವಲ ಗ್ರಂಥಗಳ ಬೆಳವಣಿಗೆಯ ವಿಷಯವನ್ನು ಯೋಚಿಸಿರಿ. ನಮ್ಮ ವಾಙ್ಮಯದ ಮುಖಂಡರು ಮಹಾರಾಷ್ಟ್ರದ ಪ್ರಯತ್ನಗಳನ್ನು ಪರೀಕ್ಷಿಸಿದರೆ, ನಾವು ಇನ್ನೂ ಎಷ್ಟು ಹಿಂದೆ ಉಳಿದಿರುವೆವೆಂಬುದು ತಿಳಿದು ಬರುವುದು. ಪರಿಷತ್ಪತ್ರಿಕೆಯಲ್ಲಿ ಈ ದೇಶದ ವಿವಿಧ ಭಾಷೆಗಳಲ್ಲಿ ಪ್ರತಿವರ್ಷ ಹುಟ್ಟುವ ಪುಸ್ತಕಗಳ ಸಂಖ್ಯೆ ಮತ್ತು ಅವುಗಳ ವರ್ಗೀಕರಣ ಇವುಗಳನ್ನು ತುಲನಾತ್ಮಕವಾಗಿ ಕೊಟ್ಟರೆ ಒಳ್ಳೆಯದಾಗುವದು. ಮೈಸೂರಿನ ಮಹಾರಾಜರು ಕನ್ನಡ ಭಾಷೆಯ ವಿಷಯದಲ್ಲಿ ಬಹಳ ಅಭಿಮಾನವುಳ್ಳವರಾಗಿರುವುದೂ ಪ್ರೋತ್ಸಾಹನ ಕೊಡುತ್ತಿರುವುದೂ ನಿಜ ಆದರೆ ಅವರ ಔದಾರ್ಯದ ಉಪಯೋಗವನ್ನು ನಾವು ಸರಿಯಾದ ರೀತಿಯಲ್ಲಿ ಮಾಡಿಕೊಳ್ಳುವುದಿಲ್ಲವೆಂದು ನಾವು ಹೇಳದೆ ಇರಲಾರೆವು ಅದೇ ಬರೋಡೆಯ ಸಂಸ್ಥಾನವನ್ನು ತೆಗೆದುಕೊಳ್ಳಿರಿ ಬರೋಡೆಯ ಮಹಾರಾಜರು ಸ್ವತಃ ಮರಾಠರಿದ್ದರೂ ಅವರು ಆಳುವುದು ಗುಜರಾತದ ಮೇಲೆ ಆದುದರಿಂದ, ಅವರು ಅವೆರಡೂ ಭಾಷೆಗಳಿಗೆ ಆಶ್ರಯದಾತರಾಗಿರುವರು ಮರಾಠಿ ಭಾಷೆಯಲ್ಲಿ ಉದ್ಗ್ರಂಥಗಳು ಹೊರಡುವುದಕ್ಕೆ ಅವರು ಕೊಟ್ಟ ಚಿಕ್ಕ ಕಾಣಿಕೆಗಳನ್ನು ಬಿಟ್ಟರೂ ‘ ಸಯಾಜೀ ಸಾಹಿತ್ಯಮಾಲೆ ’ ಎಂಬುದೊಂದು ಮಾಲೆಯು ಅವರ ಔದಾರ್ಯಕ್ಕೆ ಸಾಕ್ಷಿಯಾಗಿದೆ ಈ ಮಾಲೆಯ ವತಿಯಿಂದ ಸುಮಾರು ೨೦೦ ರ ಮೇಲೆ ಉದ್ಗ್ರಂಥಗಳು ಪ್ರಸಿದ್ಧವಾಗಿವೆ ಅಲ್ಲದೆ ಸಯಾಜೀ ಬಾಲಜ್ಞಾನ ಮಾಲೆಯ ವತಿಯಿಂದ ಸುಮಾರು ಒಂದು ನೂರು ಚಿಕ್ಕಗ್ರಂಥಗಳು ಪ್ರಸಿದ್ಧವಾಗಿವೆ ಸಯಾಜಿ ಸಾಹಿತ್ಯ ಮಾಲೆಯ ಸಲುವಾಗಿ ಎರಡು ಲಕ್ಷ ರೂಪಾಯಿಗಳ ರಕಮು ಬೇರೆ ತೆಗೆದಿಡಲ್ಪಡಲಾಗಿದೆ ಯಾವ ಗ್ರಂಥಗಳು ಯಾರಿಂದ ಬರೆಯಲ್ಪಡಬೇಕೆಂಬುದನ್ನು ನಿರ್ಣಯಿಸುವುದಕ್ಕೆ ವಿದ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸ್ವತಂತ್ರವಾದ ಕಮಿಟಿಯು ಏರ್ಪಡಿಸಲ್ಪಟ್ಟಿದೆ ಗ್ವಾಲ್ಹೇರ ಸಂಸ್ಥಾನದ ಭಾಷೆ ಹಿಂದುಸ್ಥಾನೀ ಆದರೂ, ಸಂಸ್ಥಾನಿಕರು ಮರಾಠಿಗರಿರುವುದರಿಂದ ಅವರು ಗ್ರಂಥಗಳಿಗೆ ಉತ್ತೇಜನ ಕೊಡುವುದಕ್ಕೆಂದು ಪ್ರತಿವರ್ಷ ೫ ಸಾವಿರ ರೂಪಾಯಿ ಬೆಚ್ಚ ಮಾಡುತ್ತಿದ್ದರು ಕೊಲ್ಹಾಪುರದ ಸಂಸ್ಥಾನಿಕರು ಕೂಡಾ ೬ ಸಾವಿರ ಟ್ರಸ್ಟ ನಿಧಿ ತೆಗೆದಿಟ್ಟಿರುವರು ಇಂದೂರಿನಲ್ಲಿ ಶ್ರೀಮಂತ ಹೋಳಕರ ಸರಕಾರದವರು ೧೯೧೭ ರಿಂದ ಹೋದವರ್ಷದವರೆಗೆ ೧೪೫೮೦ ರೂಪಾಯಿಗಳನ್ನು ಗ್ರಂಥಕರ್ತರಿಗೆ ಭಕ್ಷೀಸು ಕೊಟ್ಟಿರುವರು ಅಲ್ಲದೆ, ೨೬೫೦ ರೂಪಾಯಿಗಳನ್ನು ಪ್ರಕಾಶನಕ್ಕೆ ಸಹಾಯ ದ್ರವ್ಯವನ್ನಿತ್ತಿರುವರು ಅಲ್ಲದೆ ದೇವಾಸದ ರಾಜರು ಪ್ರತಿವರ್ಷ ಮರಾಠಿ ಭಾಷೆಯ ಉತ್ಕೃಷ್ಟ ಗ್ರಂಥಕ್ಕೆ ೨೦೦ ರೂಪಾಯಿ ಕೊಡುವರು ಮೇಲಾಗಿ ಡೆಕ್ಕನ್ ವ್ಹರ್ನ್ಯಾಕ್ಯುಲರ ಟ್ರಸ್ಟ ಸೋಸಾಯಿಟಿ ಎಂಬುದು ಬಹಳ ಹಳೆಯ ಸಂಸ್ಥೆಯಿದ್ದು ಅದು ಸಾರ್ವಜನಿಕ ಫಂಡು ಕೂಡಿಸಿರುವುದು ೧೮೯೦ ನೆಯ ಇಸ್ವಿಯಿಂದ ಇದು ನೂರಾರು ಗ್ರಂಥಗಳಿಗೆ ಉತ್ತೇಜನ ಕೊಟ್ಟಿದೆ ಹೊಸ ವಾಙ್ಮಯವನ್ನು ಹುಟ್ಟಿಸಲಿಕ್ಕೆ ೩೦೫೦೦ ರೂಪಾಯಿ ವೆಚ್ಚಮಾಡಿದೆ ಮರಾಠಿ ಅಕ್ಷರದಲ್ಲಿ ಕ್ರಾಂತಿನಡೆದಿದೆ ಶ್ರೀ ದಾತೆ ಬಿ ಎ ಎಂಬವರು ಮರಾಠಿ ಮೋನೋಟಾಯಿಪ ತಯಾರಿಸಿದ್ದಾರೆ ಇದೆಲ್ಲವನ್ನು ನಾವು ಅರಿತುಕೊಂಡರೆ ನಮ್ಮ ಹೀನ ಸ್ಥಿತಿಯು ತಿಳಿದು ಬರುವುದು

ಆದರೆ ನಮ್ಮ ಕರ್ನಾಟಕದಲ್ಲಿಯ ಇವೆಲ್ಲಕ್ಕಿಂತಲೂ ವಿಶೇಷವಾದ ಪ್ರಶ್ನೆಯೆಂದರೆ ವಿವಿಧ ಭಾಗಗಳಲ್ಲಿಯ ವಾಙ್ಮಯ ಸೇವಕರಲ್ಲಿ ಪ್ರೀತಿ ವಿಶ್ವಾಸಗಳು ಬೆಳೆಯುವದು ಮಂಗಳೂರಿನವರು ತಮ್ಮನ್ನು ಇತ್ತ ಕಡೆಯವರು ದುರ್ಲಕ್ಷಿಸುತ್ತಾರೆಂದೂ ಧಾರವಾಡದವರನ್ನು ಮೈಸೂರಿನವರು ದುರ್ಲಕ್ಷಿಸುತ್ತಾರೆಂದೂ ಮೈಸೂರಿನವರು ಬಾಕ್ಯವರು ತಮಗೆ ಸಹಾಯ ಮಾಡುವದಿಲ್ಲವೆಂದೂ ಭಾವಿಸಹತ್ತಿದರೆ ನಮ್ಮ ಕರ್ನಾಟಕದ ಉನ್ನತಿಯು ಕುಂಠಿತವಾಯಿತೆಂದೇ ತಿಳಿಯಬೇಕು ಹಿಂದಕ್ಕೆ ಅನೇಕ ಪ್ರಸಂಗಗಳಲ್ಲಿ ಹೀಗೆ ತಪ್ಪುತಿಳುವಳಿಕೆಗಳುಂಟಾಗಿವೆ ಈಗ ಪುನಃ ಹೋದ ವರ್ಷದಿಂದ ಈ ತರಹದ ಭಾವನೆಯು ಬೆಳೆಯುತ್ತದೆ ಎಲ್ಲಕ್ಕೂ ಮುಂಚೆ ನಾವು ಇದನ್ನು ಬೇರು ಸಹಿತವಾಗಿ ಕಿತ್ತು ಒಗೆಯಬೇಕು ಅದಕ್ಕೋಸ್ಕರ ಪುನಃ ಕನ್ನಡ ಗ್ರಂಥಕರ್ತರ ಸಮ್ಮೇಲನವನ್ನು ಕರೆಯುವದು ಇಷ್ಟವೆಂದು ನಮಗೆ ತೋರುತ್ತದೆ ೧೯೦೭ ಮತ್ತು ೧೯೦೮ ನೆಯ ಇಸ್ವಿಗಳಲ್ಲಿ ಆ ತರಹದ ಸಮ್ಮೇಲನಗಳು ಧಾರವಾಡದವರಿಂದ ಕರೆಯಲ್ಪಟ್ಟಿದ್ದವು ಅವೇ ಮುಂದೆ ಸಾಹಿತ್ಯ ಪರಿಷತ್ತು ಮತ್ತು ಸಮ್ಮೇಲನಗಳಿಗೆ ಮೂಲವಾದವು ಮುಂಚೆಯೂ ಈ ದಿಶೆಯಲ್ಲಿ ಕೆಲವು ಪ್ರಯತ್ನಗಳಾಗಿವೆ ಆದರೆ ಈಗಿನ ಪ್ರಸಂಗದಲ್ಲಿ ಹುಬ್ಬಳ್ಳಿಯವರು ಸಾಹಿತ್ಯ ಸಮ್ಮೇಲನದ ಕಾಲಕ್ಕೆ ಗ್ರಂಥಕರ್ತರದೊಂದು ಪ್ರತ್ಯೇಕ ಸಮ್ಮೇಲನವನ್ನು ಕೂಡಿಸಿ ಅಲ್ಲಿಯೂ ಮತಭೇದಗಳ ಅನೇಕ ವಿಷಯಗಳನ್ನು ಮನಬಿಚ್ಚಿ ಚರ್ಚಿಸಿದರೆ ಮನಸ್ಸುಗಳು ಸ್ವಚ್ಛವಾಗುವದಕ್ಕೆ ಮಾರ್ಗವಾಗುವುದೆಂದು ನಮ್ಮ ಅಭಿಪ್ರಾಯ.

ಕರ್ನಾಟಕ ಏಕೀಕರಣ

ಮದ್ರಾಸ ಕೌನ್ಸಿಲ್ಲದಲ್ಲಿ ಪಾಸಾಯಿತು!

೧೧ನೆಯ ತಾರೀಖಿನಲ್ಲಿ ಮದ್ರಾಸ ಕಾಯದೆ ಮಂಡಲದಲ್ಲಿ ಮದ್ರಾಸವನ್ನೇ ರಾಜಧಾನಿಯನ್ನಾಗಿಟ್ಟುಕೊಂಡು ಆಂಧ್ರ ಪ್ರಾಂತವನ್ನು ಪ್ರತ್ಯೇಕಿಸಬೇಕೆಂಬ ಠರಾವು ಬಂದಿತು. ಕೇರಳ, ಕರ್ನಾಟಕಗಳನ್ನು ಪ್ರತ್ಯೇಕಿಸಬೇಕೆಂಬ ಉಪಸೂಚನೆಗಳೂ ಚರ್ಚಿಸಲ್ಪಟ್ಟವು ಸರಕಾರವು ಇದನ್ನು ವಿರೋಧಿಸಿತು. ಭಾರತಮಂತ್ರಿ, ಹಾಗೂ ಹಿಂದುಸ್ಥಾನ ಸರಕಾರಗಳು ಒಪ್ಪದ ವಿನಃ ಈ ಪ್ರಶ್ನೆಯನ್ನು ಬಿಡಿಸುವದು ಸಾಧ್ಯವಿಲ್ಲೆಂದೂ, ಸುಧಾರಣೆಗಳು ಬರುವ ಕಾಲದಲ್ಲಿ ಇದನ್ನು ವಿಚಾರಿಸುವದು ಯುಕ್ತವಲ್ಲವೆಂದೂ ಪ್ರತ್ಯೇಕ ಪ್ರಾಂತವು ದೊರೆಯದಿದ್ದರೂ ಕೂಡ ಆಂಧ್ರರ ಕೊರತೆಗಳನ್ನು ದೂರೀಕರಿಸುವದು ಸಾಧ್ಯವಿದೆಯೆಂದೂ ದಿವಾಣೀ ಖಾತೆಯ ಮಂತ್ರಿಗಳು ಹೇಳಿದರು ಆಂಧ್ರದ ವಾರ್ಷಿಕ ಉತ್ಪನ್ನವು ೬೦೭ ಲಕ್ಷ ರೂ. ಆಗುವದೆಂದೂ, ವೆಚ್ಚವೆಲ್ಲ ಹೋಗಿ ೧೮ ಲಕ್ಷ ಉಳಿಯುವದೆಂದೂ ಚರ್ಚೆಯಲ್ಲಿ ಉಲ್ಲೇಖಿಸಲ್ಪಟ್ಟಿತು ಕಡೆಗೆ ಆಂಧ್ರವನ್ನು ಪ್ರತ್ಯೇಕಿಸಬೇಕೆಂಬ ಠರಾವು ಪಾಸಾಗಲಿಲ್ಲ, ಕೇರಳವನ್ನು ಬೇರ್ಪಡಿಸಬೇಕೆಂಬ ಉಪಸೂಚನೆಯೂ ಬಿದ್ದು ಹೋಯಿತು! ಆದರೆ ಸ್ವಾರಸ್ಯವೆಂದರೆ, ಶ್ರೀಯುತ ಸಿ. ಎಸ್. ಭಟ್ಟರು ತಂದ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತ ದೊರಕಬೇಕೆಂಬ ಉಪಸೂಚನೆಯು ಮಾತ್ರ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು! ಉಪಸೂಚನೆ ಯಂತೆ ಮೂಲ ಠರಾವನ್ನು ಸರಿಪಡಿಸಿ, ಮತಕ್ಕೆ ಹಾಕಲು ಅದೂ ಸಹ ಪಾಸಾಯಿತು! ಸರಕಾರೀ ಅಧಿಕಾರಿಗಳು ಮತದಾನದಲ್ಲಿ ಭಾಗ ತೆಗೆದುಕೊಳ್ಳಲಿಲ್ಲ

ಇಹವೃತ್ತ.

“ ಮುಂಬಯಿ ಇಲಾಖಾ ಲೋಕಲ್ ಸೆಲ್ಫ್ ಗವ್ಹರ್ನಮೆಂಟ ಇನ್‌ಸ್ಟಿಟ್ಯೂಟ [ಸ್ಥಾನಿಕ ಸ್ವರಾಜ್ಯ ಸಂಘ] ದ ಪರವಾಗಿ ಧಾರವಾಡದಲ್ಲಿ ‘ ಸ್ಥಾನಿಕ ಸ್ವರಾಜ್ಯ ’ ಎಂಬ ಕನ್ನಡ ತ್ರೈಮಾಸಿಕ ಪತ್ರಿಕೆಯು ಧಾರವಾಡದ ವಕೀಲರಾದ ಶ್ರೀಯುತ ದೇವನಗೌಡ ಲಿಂಗನಗೌಡ ಪಾಟೀಲ ಬಿ ಎ ಎಲ್ ಎಲ್ ಬಿ ಇವರ ಸಂಪಾದಕತ್ವದಲ್ಲಿ ಹೊರಡಿಸುವದು ನಿಶ್ಚಿತವಾಗಿದ್ದು, ಮೊದಲನೆಯ ಸಂಚಿಕೆಯು ಇದೇ ನವ್ಹಂಬರ ತಿಂಗಳ ೧೫ನೇ ತಾರೀಖಿನ ದಿವಸ ಪ್ರಸಿದ್ಧವಾಗುವದೆಂದು ತಿಳಿಯುತ್ತದೆ

ಕಿತ್ತೂರ ಚನ್ನಮ್ಮ ನಾಟಕದ ಪ್ರಯೋಗ ದಿಂದ ಹಿಂದೂ ಮುಸಲ್ಮಾನ ಜನರಲ್ಲಿ ಅಸಂತೋಷ ಉಂಟಾಗುವದೆಂದು ಕೆಲ ಮಹಮ್ಮದೀಯರು ಅರ್ಜಿ ಮಾಡಿಕೊಂಡಿದ್ದರು ಆಕ್ಷೇಪಯುಕ್ತವಾದ ಭಾಗವಾವುದೆಂದು ದನ್ನು ನೋಡಲಿಕ್ಕೆ ಪರಾಗ ವಕೀಲರು ಬಂದಿದ್ದರು ಆಕ್ಷೇಪಾರ್ಹವಾದ ಕೆಲ ಭಾಗ ತೆಗೆದು ಹಾಕಿ ನಾಟಕವನ್ನು ಮಾಡಲಿಕ್ಕೆ ಅಪ್ಪಣೆ ಕೊಡಬಹುದೆಂದು ಶ್ರೀ ಪುರಾಣಿಕ ಮತ್ತು ಬಟ್ಟೆ ರಿಂದು ನಾಟ್ಯಕಲಾದರ್ಶ ಕಂಪನಿಯ ಮ್ಯಾನೇಜರು ತಿಳಿಸುತ್ತಾರೆ

ವಿಜಯ ಸಿನೇಮಾದಲ್ಲಿ ‘ಶ್ಯಾಮಸುಂದರ’ ವೆಂಬ ಮಾತಾಡುವ ಚಿತ್ರಪಟವನ್ನು ರವಿವಾರದಿಂದ ತೋರಿಸುತ್ತಲಿದ್ದಾರೆ, ಇದು ಅತ್ಯಂತ ಲೋಕಪ್ರಿಯ ವಾದ ಚಿತ್ರಪಟ, ಮುಖ್ಯ ನಟ ಪೋಡಕನೆಂಬ ಬಾಲಕನ ಅಭಿನಯ. ರೂಪಗಳು ಬಹು ಮನೋಹರವಾಗಿವೆ ಪೊನ್ನಿನಿಂದ ಈ ಚಿತ್ರಪಟಕ್ಕೆ ಧಾರವಾಡಿಗರಿಂದ ಆಶ್ರಯ ಚನ್ನಾಗಿ ದೊರೆಯುತ್ತಲಿದೆ ಗದ್ದಲ ವಿಶೇಷವಿದ್ದರೂ ಸಿನೇಮಾದ ವ್ಯವಸ್ಥಾಪಕರು. ಪ್ರೇಕ್ಷಕರಿಗೆ ತೊಂದರೆಯಾಗದಂತೆ ಕನ್ನಡಿಗ’ನು ಈ ಮೊದಲೇ ಸೂಚಿಸಿದ ಪ್ರಕಾರ ವ್ಯವಸ್ಥೆಯನ್ನು ದಕ್ಷತೆಯಿಂದ ಮಾಡುತ್ತಲಿದ್ದಾರೆ.

ದೇವಾಸ ಮಹಾರಾಜರಿಗೆ ವ್ಹಾಯಿಸರಾಯರ ಉತ್ತರ.

ದಿಲ್ಲಿ ತಾ|| ೧೨— ದೇವಾಸ ಮಹಾರಾಜರಿಗೆ ವ್ಹೈಸರಾಯರು ಉತ್ತರವೆಂದು ಒಂದು ಪತ್ರ ಕಳಿಸಿದ್ದು ಅದರಲ್ಲಿ “ ಪೊಲಿಟಿಕಲ್ ಏಜಂಟರು ಏಜಂಟರು ನಿಮಗೆ ಕಳಿಸಿದ ಪತ್ರದಲ್ಲೇನೂ ಹೆಚ್ಚು ಕಡಿಮೆ ಮಾಡಲಿಕ್ಕೆ ಬರುವದಿಲ್ಲವೆಂದು ಪೂರ್ಣ ವಿಚಾರಮಾಡಿ ನಾವು ನಿಮಗೆ ತಿಳಿಸಬೇಕಾಗುತ್ತದೆ ” ಎಂದು ಬರೆದಿದ್ದಾರಂತೆ? ಅಂದರೆ ಪೊಲಿಟಿಕಲ್ ಏಜಂಟರು ಹೇಳಿದ ಅವಧಿಯಲ್ಲಿ ಮಹಾರಾಜರು ದೇವಾಸಕ್ಕೆ ಹೋಗದಿದ್ದರೆ ಹಿಂದುಸ್ಥಾನ ಸರಕಾರದವರು ಸಂಸ್ಥಾನದ ಆಳಿಕೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವಂತೆ ಕಾಣುತ್ತದೆ.

ಹುಬ್ಬಳ್ಳಿಪೇಟೆಯ ಧಾರಣೆ

(ಶೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ|| ೧೩ [ಮಧ್ಯಾಹ್ನ ೧೨ ಗಂಟೆ]

ಜವಾರಿ ಹತ್ತಿ	೧೦೦ ೧೦೩	ಜೋಳ	೧೩-೧೪
ಅಪ್ಲಂಡ ,,	೧೦೦-೧೦೩	ಗೋದಿ	೬|||-೭
ವಿಲಾಯತಿ ,,	೯೪-೯೫	ಉದ್ದು	೬|||
ಕಮ್ಟಾಸ ,,	೧೦೮-೧೧೦	ಕಡ್ಲಿ	೬-೬
ಶೇಂಗಾಕಾಳ	೬೮-೭೦	ಕಡ್ಲಿ ಕಾ.	೫||
ದಬ್ಬರೀಬೂಳ ಆ.	೬೪ ೬೫	ಕುಸುಬಿ ೧೩	
ಸಾಣಿನ ಆರಳಿ	೬೪-೬೫	ಹುರಳಿ ೧೪	
ಹೆಸರು ಜವಾರಿ	೯ ೧೩		
ಶೆಂಗಾಕಾಯಿ ಹೊ	೫|	ಹತ್ತಿಕಾಳು	೬|

ಬೆಳ್ಳಿ ಬಂಗಾರ

ಬಂಗಾರ	೩೨|	ಬೆಳ್ಳಿ	||-

ಮಹಾತ್ಮಾಗಾಂಧಿಯವರನ್ನು ಕೊಲ್ಲುವೆವು

ಮಹಾತ್ಮರಿಗೆ ಎಚ್ಚರಿಕೆಯ ಸೂಚನೆ.

ನಾಗಪುರ ತಾ॥ ೧೩—"ಹರಿಜನ ಉದ್ಧಾರ ಕಾರ್ಯನಿಲ್ಲಿಸದಿದ್ದರೆ, ಮಹಾತ್ಮರನ್ನು ಕೊಲ್ಲುವೆವು"! ಎಂಬರ್ಥದ ವಊಕ ಪತ್ರಗಳು ನಾಗಪುರ ಪ್ರಾಂತಿಕ ಅಸ್ಪೃಶ್ಯತಾ ನಿವಾರಕ ಮಂಡಲದ ಅಧ್ಯಕ್ಷರಾದ ಡಾ॥ ಖರೆಯವರಿಗೆ ಬಂದಿದೆ (ಅ ಪ್ರೆ ತಂತಿ]

ಮಹಾತ್ಮರ ಪ್ರಕೃತಿಯು.

ವರ್ಧಾಗಂಜ ತಾ॥ ೨—ಡಾ॥ ಸ್ವಾಂತನ ಸಾರಿಯವರು ಇವತ್ತೆ ಮುಂಜಾನೆ ಇಲ್ಲಿಗ ಬಂದು ಮಹಾತ್ಮಾಗಾಂಧಿಯವರ ಪ್ರಕೃತಿಯನ್ನು ಪರೀಕ್ಷಿಸಿ ಕೆಳಗಿನಂತೆ ಪ್ರಕಟನೆಯನ್ನು ತೆಗೆದಿದ್ದಾರೆ ಗಾಂಧಿಜಿಯವರ ತೂಕವು ೯೪ ರಿಂದಾ ೧೦೪ ಪೌಂಡುಗಳ ವರೆಗೆ ಏರಿದ್ದು ಅವರ ಪ್ರಕೃತಿ ಮಾನವು ಸಮಾಧಾನಕರವಾಗಿದೆ. ನಾಡಿಯ ಒತ್ತಾಯವು ೬೫ ರಿಂದ ಅಂಕ್ಕೆ ಇಳಿದಿದ್ದು ಪಚನಕ್ರಿಯೆಯು ಚನ್ನಾಗಿದೆ ಇನ್ನು ಮೇಲೆ ಅವರು ತಮ್ಮ ಪ್ರಕೃತಿಯ ಮೇಲೆ ಉದಾಸರಾಗದೆ ವಿಶೇಷ ಕಾಳಜಿಯನ್ನೂ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ ಮತ್ತು ಅವರ ದೇಶ ಸಂಚಾರದ ಕಾರ್ಯದಲ್ಲಿ ನಡು ನಡುವೆ ಅವರಿಗೆ ಸಾಕಷ್ಟು ವಿಶ್ರಾಂತಿಯನ್ನು ಪೂರೈಸಬೇಕೆಂದು ಕಾರ್ಯಕರ್ತರಿಗೆ ನನ್ನ ಬಿನ್ನಹ, ಡಾಕ್ಟರ ಸಾಹೇಬರು ಬೋಪಾಳ ಮಾರ್ಗವಾಗಿ ದಿಲ್ಲಿಗೆ ಹೊರಟರು (ಅ ಪ್ರೆ ತಂತಿ)

"ತತ್ತಿಯ ಪ್ರಹಾರವೂ ಪ್ರೇಮದ ಕುರುಹೇ?

ಮಹಾತ್ಮಾಜಿಯವ ಸಂದರ್ಶನ

ವರ್ಧಾಗಂಜ ತಾ॥ ೧—ನಾಗಪುರದ ಸಭೆಯಲ್ಲಿ ವಿದ್ಯಾರ್ಥಿಗಳು ಗಾಂಧಿಜಿಯ ಮೇಲೆ ಕೋಳಿಯ ತತ್ತಿಗಳನ್ನು ಒಗೆದರೆಂದೂ ಹಾಗೂ ಸಂಯುಕ್ತ ಪ್ರಾಂತದಲ್ಲಿ ಹರಿಜನರು ಮಹಾತ್ಮಾಜಿಯವರನ್ನು ಬಹಿಷ್ಕರಿಸಬೇಕೆನ್ನುವರೆಂದೂ ಪ್ರಸಿದ್ಧವಾದ ಸದ್ದಿಯ ಬಗ್ಗೆ ಮಹಾತ್ಮಾಜಿಯವರನ್ನು ಸಂದರ್ಶಿಸಲು ಅವರು "ತತ್ತಿಗಳನ್ನು ನನ್ನ ಮೇಲೆ ಒಗೆದರೆಂಬ ಸುದ್ದಿಯನ್ನು ನಾನು ಮೊದಲಿಗೆ ಪತ್ರಿಕೆಯ ಮುಖಾಂತರವಾಗಿಯೇ ತಿಳಿದೆನು ನನ್ನ ಮೇಲೆ ತತ್ತಿಗಳು ಒಗಯಲ್ಪಟ್ಟದ್ದನ್ನು ನಾನು ನೋಡಲಿಲ್ಲ ಹಾಗೂ ಆಗ ಯಾವತರದ ಗದ್ದಲವೂ ನನಗೆ ಕಂಡು ಬರಲಿಲ್ಲ. ಆಗ ಒಂದು ವೇಳೆ ನನ್ನ ಮೇಲೆ ತತ್ತಿಗಳನ್ನು ಒಗೆದಿದ್ದರೆ ಅದೇನು ನನಗೆ ಹೊಸ ಅನುಭವವಾಗುತ್ತಿದ್ದಿಲ್ಲ ಯಾಕಂದರೆ ತಾ॥ ೧೩-೧೧-೧೮೯೬ ನೆಯ ದಿವಸ ನಾತಾಲದಲ್ಲಿ ಯುರೋಪಿಯನ್ ಜನರದೊಂದು ಗುಂಪು ನನ್ನ ಮೇಲೆ ತತ್ತಿಗಳನ್ನು ಒಗೆಯಿತು. ಆ ತತ್ತಿಗಳನ್ನು ನಾನು ನಿಜವಾದ ಪ್ರೇಮದ ದ್ಯೋತಕವನ್ನು ಹೇಗೋ ಹಾಗೆ ಆನಂದದಿಂದ ಸ್ವೀಕರಿಸಿದೆನು. ನಾಗಪುರದ ಸಭೆಯಲ್ಲಿ ಒಂದು ವೇಳೆ ನನ್ನ ಮೇಲೆ ತತ್ತಿಗಳು ಒಗೆಯಲ್ಪಟ್ಟಿದ್ದರೆ ಅವುಗಳನ್ನು ಅಲ್ಲಿ ನೆರೆದ ವಿದ್ಯಾರ್ಥಿಗಳ ಪ್ರೇಮದ ದ್ಯೋತಕದಂತೆಯೇ ನಾನು ಸ್ವೀಕರಿಸುತ್ತಿದ್ದೆನು" ಎಂದು ಹೇಳಿದರು

ಸಂಯುಕ್ತ ಪ್ರಾಂತದ ಬಹಿಷ್ಕಾರದ ಬಗ್ಗೆ ಅವರು "ಆ ವಿಷಯವಾಗಿ ನನಗೆ ಗೊತ್ತಿಲ್ಲ ಆದರೆ ಗಿರ್ಲಾಲನೆಂಬು ಇಸ್ಪಿಯಲ್ಲಿ ನಾನ. ಲಂಡನಕ್ಕೆ ತೆರಳಿದಂದಿನಿಂದ ನನಗೆ ಬಹಿಷ್ಕಾರದ ಸಂಬಂಧವಿದೆ ಅಸ್ಪೃಶ್ಯರ ಬಗ್ಗ ಇದ್ದ ತಮ್ಮ ವರ್ತನದ ವಿಷಯವಾಗಿ ಸವರ್ಣ ಹಿಂದುಗಳಲ್ಲಿ ಪಶ್ಚಾತ್ತಾಪವನ್ನು ಹುಟ್ಟಿಸುವದೇ ನನ್ನ ಪ್ರವಾಸದ ಗುರಿಯು ಧರ್ಮದ ಹೆಸರಿನಲ್ಲಿ ಹಾಗು ಆತ್ಮ ಬುದ್ಧಿಯ ಮೊದಲನೆಯ ಪೆಟ್ಟೆಂದು ಕೈಕೊಳ್ಳಲ್ಪಟ್ಟ ಈ ಪ್ರವಾಸದ ಮೇಲೆ ಬಹಿಷ್ಕಾರದ ಬೆದರಿಕೆಯ ಪರಿಣಾಮವೇನೇ ಆದರೂ ಸಭೆಗಳಿಗೆ ಬರುವ ಸಾವಿರಾರ ಜನರ ಉತ್ಸಾಹ ಹಾಗೂ ಧನ ಸಹಾಯ ಮಾಡುವ ಅವರ ಉದಾರ ಇಚ್ಛೆ ಇವುಗಳನ್ನು ಗಮನಿಸದೆ ಕೇವಲ ಇಲ್ಲದ ಸುದ್ದಿಗಳಿಗೆ ಮುಂಬಯಿ ಪತ್ರಿಕೆಯು ಮಹತ್ವ ಕೊಟ್ಟದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ ಆ ಪತ್ರವು ಅಸ್ಪೃಶ್ಯತಾ ನಿವಾರಣ ಚಳವಳಿಗೆ ಅಷ್ಟೊಂದು ಲಕ್ಷ್ಯಗೊಡುವದಿಲ್ಲ ಅಸ್ಪೃಶ್ಯತೆಯು ಬರದಿಂದ ನಾಶವಾಗಹತ್ತಿದೆಂಬ ಬಗ್ಗೆ ಈ ಸಭೆಗಳೇ ಸಾಕ್ಷಿಯಾಗಿವೆ ಇದಕ್ಕೆ ಹೆಚ್ಚಿನ ಆಧಾರವನ್ನು ಯಾರೂ ಬೇಡರು. ಅಸ್ಪೃಶ್ಯತೆಯು ನಾಶವಾಗುತ್ತಿದೆಯೆಂದರೆ ಜನತೆಯ ಮನಸ್ಸು ಸಂಪೂರ್ಣವಾಗಿ ಬದಲಾಗಿದೆಯೆಂಬರ್ಥವಲ್ಲ. ಆದರೆ ಕಳೆದ ನಾಲ್ಕು ದಿನಗಳಲ್ಲಿ ತೋರಿ ಬಂದ ಉತ್ಸಾಹವು ಕಡೆತನಕ ಉಳಿದರೆ ಅಸ್ಪೃಶ್ಯತೆಯೆಂಬ ರಾಕ್ಷಸನು ಅಲ್ಪಾವಧಿಯಲ್ಲಿಯೇ ನಿರ್ಮೂಲನಾಗುವನೆಂದೆನ್ನುವದರಲ್ಲಿ ಏನೂ ಸಂದೇಹವಿಲ್ಲ"

(ಅ ಪ್ರೆ ತಂತಿ]

ಡಾ. ಜೀವರಾಜರ ಬಿಡುಗಡೆ.

ಮುಂಬೈ ತಾ॥ ೧೩—ಮುಂಬೈ ಗೋವರ್ಧನದಾಸ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಡಾ. ಜೀವರಾಜ ಮೆಹತಾ ಅವರು ನಿನ್ನೆ ವಿಜಾಪುರ ಸೆರೆಮನೆಯಿಂದ ಬಿಡುಗಡೆ ಹೊಂದಿದರು. ಡಾಕ್ಟರರಿಗೆ ಸತ್ಯಾಗ್ರಹದ ಬೆಸೆಯಿಂದ ಆರ್ಡಿನನ್ಸ ಕಟ್ಟಳೆಯಂತೆ ಶಿಕ್ಷೆಯಾಗಿತ್ತು. ಹಿಂದ ಒಮ್ಮೆ ಬಿಡುಗಡೆಯಾಗಿ ಮತ್ತೆ ಅವರನ್ನು ಸೆರೆಹಿಡಿದಿದ್ದರೆಂಬುವದು ಎಲ್ಲರಿಗೂ ಗೊತ್ತಿರಲಿಕ್ಕೆ ಸಾಕು [ಅ ಪ್ರೆ ತಂತಿ)

ಕೋಚೀನ ಮಹಾರಾಜರ ಸಂಚಾರ

ಕಾನಪುರ ತಾ॥ ೧೩— ಕೋಚೀನದ ಮಹಾರಾಜರು ಇವತ್ತೆ ಮುಂಜಾನೆ ೫ ಗಂಟೆಗೆ ಇಲ್ಲಿಗೆ ಬಂದರು ಕಲೆಕ್ಟರರಾದ ಮಿರ್ಝಾ ಮಹಮ್ಮದ ಹುಸೇನ ಮತ್ತು ಪ್ರಿನ್ಸಿಪಾಲ ಭಟ್ಟಾಚಾರ್ಜಿ ಇವರೇ ಮೊದಲಾದವರು ಅವರನ್ನು ಸ್ವಾಗತಿಸಿ ಪುಷ್ಪಮಾಲೆಗಳನ್ನರ್ಪಿಸಿದರು ಕ್ಯಾಪ್ಟನ್ ಪೈ ಇವರು ಇಲ್ಲಿಯ ಮಲಿಯಾಳೀ ಜನರ ಪರವಾಗಿ ಮಹಾರಾಜರಿಗೆ ಮಾನಪತ್ರವನ್ನರ್ಪಿಸಿದರು. ದಿವಾನರಾದ ರಾಯಬಹಾದ್ದೂರ ಕಸ್ತೂರಿ ರಂಗ ಅಯ್ಯರ ಇವರ ಮಹಾರಾಜರ ಪರವಾಗಿ ಉತ್ತರ ಕೊಟ್ಟರು ಮಹಾರಾಜರು ಮಲಿಯಾಳಿಯಲ್ಲಿ ಮಾತನಾಡಿ ತಮ ಜನರ ಕುಶಲತೆಯ ಬಗ್ಗೆ ಆನಂದವನ್ನು ವ್ಯಕ್ತಪಡಿಸಿದರು ಗಂಗಾಸ್ನಾನವನ್ನು ತೀರಿಸಿಕೊಂಡು ಈ ಹೊತ್ತು ರಾತ್ರಿ ಪಾಟಣಾದ ಕಡೆಗೆ ತೆರಳುವರು [ಅ ಪ್ರೆ ತಂತಿ]

ಪಂಡಿತ ಜವಾಹಿರಲಾಲರ ವ್ಯಾಖ್ಯಾನ

ಬನಾರಸ ತಾ॥ ೧೩—ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ತಮ್ಮ ಮೂರನೇ ವ್ಯಾಖ್ಯಾನದಲ್ಲಿ ಪಂಡಿತ ಜವಾಹಿರಲಾಲರು ಅಂದದ್ದು—"ಇಂದಿನ ಅನೇಕ ಸಂಕಟಗಳ ನಿವಾರಣೆಗೆ ಸಮಾಜಾಧಿಪತ್ಯ ಪದ್ಧತಿಯೊಂದೇ ನಿರ್ವಾಹವಿದೆ" ಪಂ ಜವಾಹಿರಲಾಲರು ಅಲ್ಹಾಬಾದಕ್ಕೆ ಮರಳುವರು. ಮಸೂರಿಗೆ ಹೋದ ಪಂ. ಮಾಲವೀಯರು ಕಾಶಿಗೆ ತಿರುಗಿ ನಿನ್ನೆ ಬಂದರು

[ಅ ಪ್ರೆ ತಂತಿ]

'ಲೆವಾನಿ ಫಕೀರನ ಸಂಬಂಧವಿಲ್ಲ'

ನಾದಿರಶಹಾ ಇವರ ಕೊಲೆಯ ಬಗ್ಗೆ ಅಫಗಾನ ಹಾಗೂ ಬ್ರಿಟಿಶ ಅಧಿಕಾರಿಗಳ ಅಭಿಪ್ರಾಯ.

ಹೊಸದಿಲ್ಲಿ ತಾ॥ ೧೧—ನಾದೀರಶಹಾ ಇವರ ಕೊಲೆಗೆ ಲೇವಾನಿ ಫಕೀರನ ಸಂಬಂಧವಿದೆಯೆಂದೂ ಹಾಗು ಸದ್ಯದ ರಾಜಮನೆತನಕ್ಕೆ ಮುಲ್ಲಾ ಜನರು ರಾಜನಿಷ್ಠರಿರುವದಿಲ್ಲೆಂದೂ ತಿಳಿದುಕೊಳ್ಳಲು ಯಾವ ಕಾರಣವೂ ತಮಗೆ ಕಂಡು ಬರುವದಿಲ್ಲೆಂದು ಬ್ರಿಟಿಶ ಹಾಗು ಅಫಗಾನ ಅಧಿಕಾರಿಗಳು ಮನ್ನಿನ ವೇಳಾವರದಿಂದ ಇಲ್ಲಿಯ ವರೆಗೆ ಬಂದ ಸುದ್ದಿಗಳು ಸಮಾಧಾನಕರವಿರುವವು ಕೊಲೆಗೆ ದೇಶದಲ್ಲಿ ಪಸರಿಸಿದ ಅಸಂತೋಷವು ಕಾರಣವಾಗಿರದೆ ಅಮಾನುಲ್ಲಾರಿಗೆ ಅನುಕೂಲವಿರುವ ಹಾಗು ಪ್ರಬಲ ಚರ್ಖಿ ಮನೆತನವನ್ನು ಎತ್ತಿ ಹಿಡಿಯಬೇಕೆನ್ನುವ ಒಬ್ಬ ತಲೆ ತಿರುಕನ ಕೃತಿಯಾಗಿದೆಯೆಂದು ಇಲ್ಲಿಯ. ಕೆಲವು ಜನ ಗೆ ತಿಳಿದು ಬರುತ್ತದ ಕಾಬೂಲದಲ್ಲಿ ಅಶಾಂತತೆಯುಂಟಾಗಿದೆಯೆಂಬ ಸುದ್ದಿಯು ನಿರಾಧಾರವಿರುವದೆಂದು ಇಲ್ಲಿಗೆ ಬಂದ ಅಧಿಕೃತ ಸುದ್ದಿಯಿಂದ ಕಂಡುಬರುವದು

ಅ ಪ್ರೆ ತಂತಿ

ಅಫಘಾಣಿಸ್ತಾನದಲ್ಲಿ ಶಾಂತತೆ.

ಮುಂಬಯಿ ತಾ॥ ೧೨—ಇಲ್ಲಿಯ ಅಫಘಾನ ವಕೀಲರಿಗೆ ನಿನ್ನಿನ ದಿವಸ ಕೆಳಗಿನಂತೆ ಅಫಗಾನ ಸರಕಾರದಿಂದ ಕಾಬೂಲದಿಂದ ತಂತಿಯು ಬಂದಿದೆ ಪರಮೇಶ್ವರನ ಕೃಪೆಯಿಂದ ದೇಶದಲ್ಲೆಲ್ಲ ಕಡೆಗೂ ಶಾಂತತೆಯು ಹಬ್ಬಿದೆ ಬೇರೆ ಬೇರೆ ಪ್ರಾಂತಗಳಿಂದ ಜನರ ವಿಧೇಯತೆಯ ಗೊತ್ತುವಳಿಗಳು ರಾಜಧಾನಿಗೆ ತಲುಪಿರುತ್ತವೆ ಇಡೀ ರಾಷ್ಟ್ರದ ಅತ್ಯಂತ ದುಃಖವನ್ನು ವ್ಯಕ್ತಗೊಳಿಸುವ ನಾದೀರಶಹರ ಅಂತ್ಯ ವಿಧಿಗಳೆಲ್ಲ ಮುಗಿದವು ಮುಖ್ಯ ಮಂತ್ರಿಯಾದ ಸರದಾರ ಹಾಶಿಮಖಾನರು ತಮ್ಮ ಸಂಚಾರವನ್ನು ತೀರಿಸಿಕೊಂಡು ೨೩ನೇ ತಾರೀಖಿನ ದಿವಸ ಉಳಿದ ಮಂತ್ರಿಗಳೊಡನೆ ಕಾಬೂಲಕ್ಕೆ ಒಯ್ದರು ರಾಜಕಾರಭಾರವು ಎಂದಿನಂತೆ ಸುಸೂತ್ರವಾಗಿ ಸಾಗಿದೆ [ಅ ಪ್ರೆ ತಂತಿ]

ಅಫಗಾಣಿಸ್ಥಾನದ ಸುದ್ದಿ.

ಅಫಗಾನರ ರಾಜನಿಷ್ಠೆ

ಪೇಶಾವರ ತಾ॥ ೧೩—ಜಲಾಲಾಬಾದ ಗವ್ಹರ್ನರರಿಂದ ಅಫಗಾಣ ವ್ಯಾಪಾರಿ ಅಧಿಕಾರಿಗೆ ಕೆಳಗಿನಂತೆ ತಂತಿ ಬಂದಿದೆ--ಈಗ ಅಫಗಾಣಿಸ್ಥಾನದಲ್ಲಿ ಶಾಂತಿಯು ನೆಲೆಗೊಂಡಿದೆ, ಝಾಹೀರ ಶಹರೇ ಬಾದಶಹರಾದದ್ದು ತಮ್ಮ ಸುದೈವವೆಂದ ಬಗದು ಅಫಗಾಣರು ಅವರಿಗೆ ತಮ್ಮ ಪ್ರಜಾನಿಷ್ಠೆಯನ್ನು ಸಾರಿ ಸರಿ ಸಲ್ಲಿಸಿದ್ದಾರೆ ಖೈಬರ ಕಣಿವೆಯ ದಾರಿಯಿಂದ ಅಫಗಾಣಿಸ್ಥಾನದೊಳಗೆ ಹೊರ ದೇಶದ ಸರಕು ಹೋಗುವದು ಪೂರಾ ತಪ್ಪಿಲ್ಲ ಇಂದು ಕಾಬೂಲಿಗೆ ಎಂಟು ಲಾರಿಗಳು ಹೋದವು ಮತ್ತು ಜಲಾಲಾಬಾದದಿಂದ ಮೂರು ಬಂದವು [ಅ. ಪ್ರೆ ತಂತಿ]

ಡಾ. ಸತ್ಯಪಾಲರಿಗೆ ಮರ್ಯಾದೆ.

ಲಾಹೋರ ತಾ॥ ೧೬— ಲಾಹೋರದ ನಾಗರಿಕರು ಡಾ ಸತ್ಯಪಾಲರ ಅಭಿನಂದನಾರ್ಥವಾಗಿ ಸಭೆ ಕೂಡಿಸಿದಾಗ ಅವರು ಅಂದದ್ದು—"ಮಹಾತ್ಮರು ರಾಜಕಾರ್ಯದಿಂದ ಎಂದೂ ದೂರ ನಿಲ್ಲಲರಿಯರು ಅವರು ಮಾಡುವ ಎಲ್ಲ ಕಾರ್ಯವು ದೇಶದ ಸ್ವಾತಂತ್ರ್ಯಕ್ಕಾಗಿಯೇ ಇರುವದೆ ಇದು ಖಂಡಿತ ಸ್ವರಾಜ್ಯವು ಬೇಡಿ ದೊರೆಯುವ ವಸ್ತುವಲ್ಲ, ಅದನ್ನು ಗಳಿಸಬೇಕಾಗುವದು" (ಅ ಪ್ರೆ ತಂತಿ]

ಕೊಲೆಯ ನಿಜಸಂಗತಿ.

ಹೊಸದಿಲ್ಲಿ ತಾ॥ ೧೫–ಸರಕಾರಿ ಪತ್ರಿಕೆಯಿಂದ ನಿಶ್ಚಿತವಾದ ಸಂಗತಿ ಏನೆಂದರೆ— ಅಫಗಾನ ಬಾದಶಹರಾದ ನಾದೀರಶಹರು ಅರ್ಕಲಿರ ಮನೆಯಲ್ಲಿ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚುವ ಕಾಲಕ್ಕೆ ಜನರ ದಟ್ಟಣೆಯೊಳಗಿಂದ ಗುಂಡುಗಳ ಅವರ ಮೇಲೆ ಹಾರಿಸಲ್ಪಟ್ಟವು ನಾದಿರಶಹರ ಎದೆಯಲ್ಲಿ ಗುಂಡುಗಳು ನಟ್ಟಿದ್ದರಿಂದ ತತ್‌ಕ್ಷಣವೇ ಅವರು ಸತ್ತು ಬಿದ್ದರು ಗುಲಾಮ ನಬಿ ಎಂಬ ಆಳಿನ ಮಗನೇ ನಾದೀರಶಹರನ್ನು ಕೊಂದವನು ಅವನನ್ನು ವಿದ್ಯಾರ್ಥಿಗಳು ಹಿಡದು ಬಿಸಿಗೊಳಿಸಹತ್ತಿದ್ದಾಗ ಪೋಲೀಸರು ಬಿಡಿಸಿದರು [ಅ ಪ್ರೆ ತಂತಿ)

ವಿಜಯನಗರ ಸ್ಮಾರಕೋತ್ಸವ

ಈ ಉತ್ಸವದ ಬಗ್ಗೆ ಮೊದಲೇ ಗೊತ್ತಾದ ಮೇರೆಗೆ ಮೊನ್ನಿನ ದಿವಸ ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆ ಧಾರವಾಡದ ನಾಗರಿಕರ ಸಭೆ ಕೂಡಿತ್ತು. ಶ್ರೀ ವ್ಹಿ. ಬಿ ಹಾಳಭಾವಿಯವರು ಅಧ್ಯಕ್ಷರಾಗಿದ್ದರು ರಾ ಬ ಬಿ. ಎಚ್ ಪಾಟೀಲ, ವಿಶ್ವನಾಥರಾವ ಜೋಗ, ವೆಂಕಟರಾವ ಆಲೂರ, ಮುದವೀಡ ಕೃಷ್ಣರಾಯರು, ಪ್ರೊ. ಪತ್ರಾವಳಿ, ಡಾ ಕಬ್ಬೂರ, ಪುರುಷೋತ್ತಮಾಚಾರ್ಯ ರಾಯಚೂರ ಇವರೇ ಮೊದಲಾದ ಪ್ರಮುಖ ನಾಗರಿಕರು ಸಭೆಗೆ ಬಂದಿದ್ದರು ಆರಂಭಕ್ಕೆ ಶ್ರೀ ರಾಯಚೂರ ವಕೀಲರು ಸಭೆಯ ಉದ್ದೇಶವನ್ನು ಮತ್ತು ವಿಜಯನಗರದ ಸ್ಮಾರಕೋತ್ಸವದ ಸಂಬಂಧವಾಗಿ ಇಲ್ಲಿಯ ವರೆಗೆ ನಡೆದ ಕಾರ್ಯವನ್ನು ನಿವೇದಿಸಿದರು. ಆ ಮೇಲೆ 'ಸಭೆಯ ಕಾರ್ಯವನ್ನು ಇಂದೇ ಕೊನೆಗಾಣಿಸಬೇಕೆಂಬ ಬಗ್ಗೆ ಆಲೂರ, ಮುದವೀಡು ಮೊದಲಾದವರ ಭಾಷಣಗಳಾದವು ಕಡೆಗೆ ಮುಧೋಳಕರ ಇವರ ಸೂಚನೆಯ ಮೇರೆಗೆ ರಾ ಬ, ಪಾಟೀಲ, ಜೋಗ, ನಲವಡಿ, ಹಾಳಭಾವಿ, ರಾಯಚೂರ ಇವರೇ ಮೊದಲಾದ ೧೪ ಜನರ ಒಂದು ಸ್ಥಾನಿಕ ಮಂಡಳವು ಸ್ಥಾಪನವಾಯಿತು. ಶ್ರೀ ಹಾಳಭಾವಿಯವರೇ ಅದಕ್ಕೆ ಅಧ್ಯಕ್ಷರು. ಶ್ರೀ. ಜೋಗ ಇವರು ಕೋಶಾಧಿಕಾರಿಗಳು ಮತ್ತು ಶ್ರೀ ಮ.ಧೋಳಕರ ಇವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು ಹೆಚ್ಚಿನ ಸಭಾಸದರನ್ನು ಮಂಡಳದಲ್ಲಿ ಸೇರಿಸಿಕೊಳ್ಳಲಿಕ್ಕೆ ಮಂಡಳಕ್ಕೆ ಅಧಿಕಾರವು ಕೊಡಲ್ಪಟ್ಟಿತು.

ಆ ಮೇಲೆ 'ಹುಬ್ಬಳ್ಳಿ'ಯ ಮಂಡಳದವರು ತಮ್ಮ ಮಂಡಳದ ಪರವಾಗಿ ಹುಬ್ಬಳ್ಳಿಯಲ್ಲಿ ಇದೇ ೨೬ ನೇ ತಾರೀಖಿನ ದಿವಸ ಒಂದು ಅಖಿಲ ಕರ್ನಾಟಕದ ಮುಖಂಡರ ಪ್ರಾಸ್ತಾವಿಕ ಸಭೆಯನ್ನು ವಿಚಾರ ವಿನಿಮಯಕ್ಕಾಗಿ ಕರೆಯಬೇಕೆಂದು ಶ್ರೀ ಮುದವೀಡು ಕೃಷ್ಣರಾಯರು ಸೂಚಿಸಿದರು ಹುಬ್ಬಳ್ಳಿಯಿಂದ ಪ್ರತಿನಿಧಿಗಳಾಗಿ ಬಂದ ಶ್ರೀ ಮೊಕಾಶಿಯವರು ತಾವು ಪ್ರಾಸ್ತಾವಿಕ ಸಭೆಯನ್ನು ಕರೆಯುತ್ತೇವೆಂದು ಆಶ್ವಾಸನ ಕೊಟ್ಟರು. ಸೂಚನೆಯು ಸ್ವೀಕೃತವಾಯಿತು.



ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗಳಿಗೆ ರಾಮಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು ೧॥ ಎಲ್ಲ ಕಡೆಗು ದೊರೆಯುತ್ತದೆ.

ಧಾರವಾಡದ ಏಜಂಟರು:— **ಧಾರವಾಡ ಫಾರ್ಮಸಿ ಹಾಗೂ ಬಾಳಿಗಾ ಫಾರ್ಮಸಿ ಡಾ ಕುಲಕರ್ಣಿಯವರ**

೧೧-೧೧ ಲ್ಯಾಬೋರೇಟರಿ ನಂಬರ್ ೩

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ. ಆರ್ಡರ್ ಕಿಮ್ಮತ್ತು ಕಳಿಸಿದಲ್ಲಿ ವ್ಹಿ. ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ. ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ:-**ರಾಘವ ಫಾರ್ಮಸಿ ಗೋಕಾಕ** ಜಿ. ಬೆಳಗಾವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ

೧ನೇ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರ ಪಡೆದಿದೆ

೨ನೇ ಮಹಾಯಾತ್ರಾ ಪ್ರವಾಸವು

ರೇಲ್ವೆ ಕಂಪನಿಯಿಂದ ಪರವಾನಗೀ ಪಡೆಕೊಂಡಿರುತ್ತದೆ

ತಾ॥ ೨೯-೧೨-೧೯೩೩ ರಿಂದ ೨೫-೨-೧೯೩೪ ರ ವರೆಗೆ

ಮುಂಬಯಿ, ಉಜ್ಜನಿ, ದಿಲ್ಲಿ, ಶ್ರೀಕಾಶಿ, ಗಯಾ, ಕಲ್ಕತ್ತಾ, ಮದ್ರಾಸ, ರಾಮೇಶ್ವರ ಲಂಕಾ, ಮೈಸೂರ ಮೊದಲಾದ ೬೮ ಪುಣ್ಯ ಕ್ಷೇತ್ರಗಳ ಯಾತ್ರಾ ಸುಯೋಗವು **ಸೆಕಂಡ ಕ್ಲಾಸ** ೩೧೦ ರೂ. **ಥರ್ಡಕ್ಲಾಸ** ೧೮೦ ರೂ ಮಾತ್ರ ಟಿಕೇಟ್ ಪಡೆಯತಕ್ಕವರು ಕೂಡಲೇ **೨೫ ರೂ.** ಅಡ್ವಾನ್ಸ ಕಳಿಸತಕ್ಕದ್ದು. ವಿಶೇಷ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿ**ಸಲ್ಪಡುವವು**

ಜಮೀನದಾರರ ಕಾಮಧೇನು.

ನಮ್ಮ ಕಂಪನಿಯು ಎಂಜಿನ್ ರೆಂಟಿಗಳಿಂದ ಕಳೆದ ಮೂರು ವರ್ಷಗಳಂತೆ ಬರುವ **೧೯೩೪ನೇ ಇಸವಿಯ** ಬೇಸಿಗೆಯಲ್ಲಾದರೂ ಪಡ ಜಮೀನುಗಳು ಯೋಗ್ಯ ದರದಲ್ಲಿ ಕಿರ್ದೀ **ಮಾಡಿ ಕೊಡಲ್ಪಡುವವು**

ಆಫೀಸು ಸ್ಟೇಶನ್ ರೋಡ ಹುಬ್ಬಳ್ಳಿ — **ಜಿ ಎ. ಶಿರೂರ.**

ತಾ॥ ೩-೧೧-೧೯೩೩ — ಆರ್ಗನೈಜರ

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, **ಪುರಾಣೇತಿಹಾಸ,** ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ **ಐತಿಹಾಸಿಕ ಪಟ್ಟಣಗಳ** ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎಂಟು ನಕಾಶೆಗಳಿರುವವು. **ಬೆಲೆ—೦-೬-೦** ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ **ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ**

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿ**ಸುವದು.** ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆ**ಯುವವು**

ಕೆ ಅಗಡಿಕರ ಬ್ರದರ್ಸ

ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩ **ಗದಗ ಶ್ರೀ ದತ್ತಾತ್ರೇಯ ಬುಕ್ ಡೀಪೊ**

ಶಹಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ## ಅಸ್ಪೃಶ್ಯತಾ ನಿವಾರಣೆ. { **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ ಧರ್ಮಗುರುಗಳ ಉಪದೇಶವೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಡ್ವಾನ್ಸಿಲ್ಲದೆ ವ್ಹಿ ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೬-೧೧-೩೩ **ಟಿ. ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.**

ಕುಲಬಕ್ತ್ರವು **ಡಾ ಜಿ ಬಿ, ಯಮರ** ಕುಲಭ ಕ್ರಮ !

ಸ ಗಂಧ ನಶ್ಯದ ಪುಡಿ

ಲೋಕ ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಕಂಪು ಹಿಡಿ ಇಟ್ಟು, ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾರು ಆರೋಗ್ಯಶಂಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಚ್ಛವಾಗುವ ವ್ಯಾಧಿಗಳು ಯಾವವೆಂದರೆ ಪಿನಸಿ, ಒಂಟಿತಲೆನೋವು, ಕಿವಿಯ ಕ್ರಿಮಿ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನು ಸ್ವಚ್ಛಪಡಿಸಿ ಜ್ಞಾನಶಕ್ತಿಯನ್ನು ಹೆಚ್ಚು ಮಾಡುತ್ತದೆ. ಮೂರು ಬೊಟ್ಟು ಸಾಧಾರಣ ನಶ್ಯದ ಜೊತೆ ಈ ಸುಗಂಧ ನಶ್ಯದ ಪುಡಿಯನ್ನು ಒಂದು ಚಿಮುಟಿಗೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು, ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ್ಟಾಗಿ ಕಳುಹಿಸಬಹುದು ಬುಡ್ಡಿ ಒಂದಕ್ಕೆ ಕ್ರಯ ೪ ಆಣೆ, ವ್ಹಿ. ಪಿ ೪ ಆಣೆ ಡಜನ್ ಒಂದಕ್ಕೆ ೨—೮—೦ ವ್ಹಿ. ಪಿ, ಚಾರ್ಜ ೮ ಆಣೆ

ವಿಳಾಸ— **ಗುರುಬಸವ ಅಂಡ್ ಕಂಪನಿ, ಲಿಮಿಟೆಡ್**

ಪೋ. ಬಾ. ೫೯೦ ಪಾರ್ಕಟೌನ ಮದರಾಸು.

ದಯಮಾಡಿ ತಮ್ಮ ಹೆಸರನ್ನು ಅಡ್ರೆಸ್ಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೭೮

ನಿತ್ಯ ಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು

ಸೋವಿ-ದರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಬುಧವಾರ ಕಾರ್ತಿಕ ಬಹುಳ ೧೩ ಶಕೆ ೧೮೫೫ ತಾ॥ ೧೫-೧೧-೩೩ [ಸಂಚಿಕೆ ೧೭೨

ಇನಸ್ಯುರೆನ್ಸ

ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನಸ್ಯುರೆನ್ಸ
ಕಂಪನಿಯೇ
ಉತ್ತಮವಾದುದು.

ಇನಸ್ಯುರೆನ್ಸ

ಪ್ರದೇಶದ ಹಣವನ್ನು ಪ್ರದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇವರಲ್ಲಿಯೇ ವಿಮೆ ಇಳಿಸಿರಿ.

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ. ತಾ॥ ೨೫-೮ ೩೩ } ಕೃಷ್ಣರಾವ ಅಂಕಲಿಗಿ ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳೀ, ಹಳದಿ, ಕೆಂಪು ಚಿಮಣಿಯಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುಸಿಚ್ ಥಾಮಸ್ ಬೀರ್ (೩) ಉತ್ತಮ- ಹಾಗೂ ಬಹಳ ಸೋವಿಯ ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಟಕಾರ (೫) ಮೋಟಾರ ಮತ್ತು ಚಕ್ಕಡಿಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ

ನಮ್ಮ ಹದ್ದು:—

೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ ೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ಕಾರವಾರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ. ಸಬ್ಬ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ವಿಶೇಷ ಸೂ. ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಕಲಾಸಪೂರ
ಅ್ಯಂಡ ಕೋ ದೇವಕರಣ ಮ್ಯಾನ್ಸನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ

ನ್ಯೂ ಓರಿಯಂಟಲ್ ಕಂ.

“ ನೀಲಗಿರಿ ಎಣ್ಣೆ ”

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದು ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೊಟ್ಟೆನೋವು, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಕೆ. ಟೊಣಪಿ ಅ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಕಂಠ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಕನ್ನಡ ಪ್ರಾಥಮಿಕ ಪಠ್ಯ ಪುಸ್ತಕಗಳಲ್ಲಿದ್ದ ಚಿತ್ರಗಳು.

ಸರಕಾರದ [illegible]

ಮುಚ್ಚಿರ ವರೋ?

ಕನ್ನಡ ಶಾಲೆಗಳಲ್ಲಿ ಇಟ್ಟಿರುವ ಪಠ್ಯಪುಸ್ತಕಗಳಲ್ಲಿಯ ಚಿತ್ರಗಳನ್ನು ನೋಡಿದರೆ ಯಾರಿಗೂ ಆಶ್ಚರ್ಯವಾಗದಿರದು. ಪ್ರಕಟನೆಯ ಅಧಿಕಾರವು ಪುಣೆಯ ದಾತಾರ ಕಂಪನಿಗೆ ದೊರೆಯುವ ಮೊದಲು ಚಿತ್ರಗಳು ವಿಷಯಗಳಿಗೆ ಅನುಸಾರವಾಗಿದ್ದವು. ಆದರೆ ದಾತಾರವರು ಆ ಅಧಿಕಾರವನ್ನು ಪಡೆದುಕೊಂಡ ಮೇಲೆ ಇದರಲ್ಲಿಯಾದ ಮಾರ್ಪಾಡು ನಗೆಗೇಡಾಗಿದೆ. ಅವರು ಕನ್ನಡ ಹಾಗೂ ಮರಾಠೀ ಪುಸ್ತಕಗಳನ್ನು ಪ್ರಕಟಿಸುತ್ತಿರುವರು. ಸರಿ. ತಮಗೆ ಅನುಕೂಲವಾಗಬೇಕೆಂದೂ ವಿಶೇಷ ಖರ್ಚಾಗಬಾರದೆಂದೂ ಎರಡೂ ಪುಸ್ತಕಗಳಿಗೆ ಒಂದೇ ಬಗೆಯ ಪಡಿಯಚ್ಚುಗಳನ್ನು ಉಪಯೋಗಿಸುತ್ತಿರುವರು. ಆದರೆ ವಿಷಯದ ಕಡೆಗೆ ನೋಡದೆ ಹೀಗೆ ಚಿತ್ರಗಳನ್ನು ಉಪಯೋಗಿಸಿರುವದರಿಂದ ಅತ್ಯಂತ ನಗೆಗೇಡಾಗಿದೆ. ಇಷ್ಟವಿದ್ದವರು ಮೊದಲನೆಯ ಪುಸ್ತಕದಲ್ಲಿ ೧೧ನೇ ಪಾಠವನ್ನು ನೋಡಬೇಕು. ಅದರಲ್ಲಿ ಕನ್ನಡ ಹುಡುಗರು ಪಂಕ್ತಿಗೆ ಚಿತ್ರದ ಕೆಲಸನ್ನಗಳನ್ನು ಆಣಿ ಮಾಡಿದ ಕತೆ ಇದೆ. ಆದರೆ ಚಿತ್ರದಲ್ಲಿ ಒಬ್ಬ "**ಪಂತೋಜಿ**" ಯು ಒಳಿ ನಾಲ್ಕೆಂಟು ಹುಡುಗರು ಕುಳಿತು ಬಾಳೆ ಹಣ್ಣು ಕಿತ್ತಳೆ ಹಣ್ಣುಗಳನ್ನು ತಿನ್ನುವದನ್ನು ಚಿತ್ರಿಸಿದ್ದಾರೆ. ಕಣ್ಣು ಮುಚ್ಚಣಿಕೆ ಎಂಬ ಮತ್ತೊಂದು ಪಾಠವಿದೆ. ಅದರಲ್ಲಿ ರಂಗೆ, ಗಂಗೆ ಅನ್ನುವಳು 'ಸುಂದರಿ ಬಾ ಕಣ್ಣು ಮುಚ್ಚುತ್ತೇನೆ' ಎನ್ನುತ್ತಾರೆ. ಈ ಚಿತ್ರದಲ್ಲಿ ಹೆಣ್ಣು ಮಕ್ಕಳ ಬದಲು ಒಬ್ಬ ಟೊಣಪ ಹುಡುಗನ ಕಣ್ಣುಗಳನ್ನು ಓರ್ವ ಹುಡಿಗೆ ಮುಚ್ಚುತ್ತಾಳೆ! ಆ ಟೊಣಪನಿಗೆ ನಾವು ಸುಂದರಿಯನ್ನಬೇಕೆಂದು ದಾತಾರವರ ಆಗ್ರಹವೋ? ಹಾಗೇ ಮೂರನೆಯ ಪುಸ್ತಕದಲ್ಲಿ 'ಬಿತ್ತಿದ್ದನ್ನು ಬೆಳೆಯೋ' ಎಂಬ ಪಾಠದಲ್ಲಿ ಕಳ್ಳರನ್ನು **ಕೆರೆಯಲ್ಲಿ** ಕೆಡವಿದ ವಿಷಯವಿದ್ದರೂ ದಾತಾರವರು ಅವನ್ನು ಭಾವಿಯಲ್ಲಿ ನೂಕಿದ್ದಾರೆ! ಹೀಗೆ ಅನೇಕ ದೋಷಗಳಿವೆ. ಈ ಬಗೆಯ ಪಡಿಯಚ್ಚುಗಳಿಂದ ಕೂಡಿದ ಪುಸ್ತಕಗಳು ಪ್ರಕಟವಾಗಿ ಬಹಳ ದಿನಗಳಾಗಿವೆ. ಆದರೆ ಯಾರೂ ಅವುಗಳ ಕಡೆಗೆ ನೋಡದೇ ಇದ್ದುದು ಆಶ್ಚರ್ಯವಲ್ಲವೇ? ಇನ್ನಾದರೂ ಈ ತಪ್ಪುಗಳನ್ನು ತಿದ್ದುಕೊಳ್ಳಬೇಕೆಂದು ದಾತಾರವರಿಗೆ ಹೇಳುತ್ತೇವೆ. ಅವರು ಈ ದೋಷಗಳಿಂದ ಕೂಡಿದ ಚಿತ್ರಗಳನ್ನು ಪ್ರಕಟಿಸಿದ್ದರೂ ಕೂಡ ಸಾವಿರಾರು ರೂಪಾಯಿ ಪಗಾರ ತಿನ್ನುವ ಸರಕಾರದ ವಿದ್ಯಾಖಾತೆಯವರು ಕಣ್ಣು ಮುಚ್ಚಿಕೊಂಡು ಕುಳಿತಿರುವದೇಕೆ? ಕನ್ನಡ ಪುಸ್ತಕಗಳನ್ನು ಕನ್ನಡೇತರರಿಗೆ ಅಚ್ಚು ಹಾಕಿಸಲು ಕೊಡಬಾರದೆಂಬುದನ್ನು ಸರಕಾರವು ಈಗಾದರು ಅರಿತುಕೊಳ್ಳಲಿ! ಕರ್ನಾಟಕವು ಸರಕಾರಕ್ಕೆ ಯಾವಾಗಲಾದರೂ ಮಲ ಮಕ್ಕಳೋ ನಾದಿಯಲ್ಲಿದೆಂದು ಕನ್ನಡಿಗರು ಮೇಲಿಂದ ಮೇಲೆ ಹೇಳುತ್ತಿರುವದಕ್ಕೆ ಇದೂ ಒಂದು ಸಾಕ್ಷಿ.

ಮಹಾತ್ಮರ ಸಂಚಾರ.

ಮಹಾತ್ಮರು ಈಗ ನಾಗಪುರ ನೆರೆಹೊರೆಯಲ್ಲಿ ಸಂಚಾರ ನಡಿಸಿದ್ದಾರೆ. ನಾಗಪುರದಿಂದ ಭಂಡಾರಾ ಪರ್ಡಿ, ಮಹಾಗಾವ, ಕಹಾಘು ರ, ತುಮುಸರ ಗೊಂದಿಯಾ ಮುಂತಾದ ಊರುಗಳಿಗೆ ಹೋಗಿದ್ದರು. [illegible] ಪರ ಮುನಿಸಿಪಾಲಿಟಿಯವರು [illegible] ೧೦೦೧ ರೂ, ಬಂಡಾರಾ ಮುನಸಿಪಾಲಿಟಿಯವರು ೨೦೦೦ ರೂ ಗೋಂದಿಯಾ ಮುನಸಿಪಾಲಿಟಿಯವರು ೨೦೫೧ ರೂ, ಅರ್ಪಿಸಿದರು, ಅಲ್ಲದೆ ಹಲವರು ವಸ್ತು ಒಡವೆಗಳನ್ನು ಕೊಟ್ಟರು, ಅವುಗಳನ್ನು ಲಿಲಾವ ಮಾಡಲಾಗಿ ೩೫೦೦ ರೂಪಾಯಿ ಬಂದವು

ಅಖಿಲ ಭಾರತ ಕಾಂಗ್ರೆಸ ಮಂಡಲಿ

ಸಾತಾರೆ ತಾ॥ ೧೧ – ಈಗಿನ ರಾಜಕೀಯ ಸ್ಥಿತಿಯನ್ನು ಕುರಿತು ವಿಚಾರಿಸಲು ಆಲ್ ಇಂಡಿಯಾ ಕಾಂಗ್ರೆಸ ಸಭೆಯನ್ನು ನೆರೆಯಿಸಬೇಕೆಂದು ಮಹಾರಾಷ್ಟ್ರದೊಳಗಿನ ೩೪ ಮಂದಿ ಮುಖಂಡರು ತಮ್ಮ ಅಂಕಿತಗಳಿಂದ ಒಂದು ಪತ್ರವನ್ನು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಗ ಬರೆದಿದ್ದಾರೆ

ಸಂಯುಕ್ತ ಘಟನೆಯಲ್ಲಿ ಸಂಸ್ಥಾನಿಕರು

ಹೊಸದಿಲ್ಲಿ ತಾ॥ ೧೨—ಹಿಂದುಸ್ಥಾನದ ಹೊಸ ರಾಜ್ಯ ಘಟನೆಯಲ್ಲಿ ಸಂಸ್ಥಾನಿಕರ ಸೇರ್ಪಡೆಯಾಗುವದೋ ಇಲ್ಲವೋ ಎಂದು ಇದುವರೆಗೆ ಅನುಮಾನವಿದ್ದಿತು. ಆದರೆ, ಸಂಸ್ಥಾನಿಕರ ಮನೆತನದ ಮರ್ಯಾದೆಯನ್ನು ಲಕ್ಷಿಸಿ ಸಂಯುಕ್ತ ಪ್ರಾತಿನಿಧಿಕ ಸಂಸ್ಥೆಯಲ್ಲಿ ಅವರಿಗೆ ಪ್ರಾ[illegible]ವನ್ನು ಕೊಡಬೇಕು ಎಂಬುದ ಹಿಂದುಸ್ಥಾನ ಸರಕಾರದವರ ಯೋಜನೆಗೆ ಎಷ್ಟೋ ಸಂಸ್ಥಾನಿಕರು ಒಪ್ಪಿರುವರು ಎಂದು ಪ್ರಸಿದ್ಧವಾಗಿದೆ. ಆದಾದ ಮೇಲೆ ಮೇಲಿನ ಯೋಜನೆಗೆ ಒಪ್ಪುವ ಸಂಸ್ಥಾನಿಕರು ತಮ್ಮ ಒಪ್ಪಿಗೆ ಇರುವದೆಂದು ಮನಗಾಣಿಸಿಕೊಡಲು ಒಪ್ಪಂದ ಪತ್ರಿಕೆಯ ಮೇಲೆ ಅಂಕಿತ ಹಾಕುವರು, ತರುವಾಯ ಈಗಿರುವ ಅರಸರ ಮಂಡಳವು ಇಲ್ಲದಂತಾಗುವದು

ಚಿಂತಾಮಣಿ ಮಹಾಲಕ್ಷ್ಮಮ್ಮನ ಸ್ವಾಜ್ಯದ ಪುನರ್ವಿಚಾರಣೆ ನಡೆದಿದೆ.

ಮದ್ರಾಸದ ಶ್ರೀ ಸತ್ಯಮೂರ್ತಿಯವರು ಮೈಸೂರು ಬೆಂಗಳೂರಿಗ ಬಂದು ವ್ಯಾಖ್ಯಾನಗಳನ್ನು ಕೊಟ್ಟು ಹೋದರು. ಅವರ ಭಾಷಣಗಳು ಅಷ್ಟೊಂದು ಪರಿಣಾಮಕಾರಿಯಾಗಲಿಲ್ಲೆಂದು ಕೆಲವರು ಗುಣಗುಟ್ಟುವರು.

ಸಂಕೇಶ್ವರದ ದೇ. ಭ ಚನ್ನಪ್ಪ ಶಂಕರೆಪ್ಪ ಕಲ್ಲೂರರು ೨ ವರ್ಷದ ಕಠಿಣ-ಶಿಕ್ಷೆಯನ್ನು ಮುಗಿಸಿ ಬನೇ ತಾ॥ ದಿನ ಬಿಡುಗಡೆ ಹೊಂದಿದರು. ಶ್ರೀಯುತ ಸಂಗನಗೌಡಾ ಪಾಟೀಲ ದೇವಲಾಪುರ ಬಿಡುಗಡೆ ಹೊಂದಿದ್ದಾರೆ

ತಿದ್ದುಪಡಿ

ನಿನ್ನಿನ ಅಂದರೆ ೧೪-೧೧-೩೩ನೇ ತಾರೀಖಿನ ಪತ್ರಿಕೆಯಲ್ಲಿ ೩ನೇ ಪುಟದಲ್ಲಿಯ ಮೊದಲನೇ ಕಾಲಮಿನಲ್ಲಿ ಪ್ರಾರಂಭಕ್ಕೆ 'ಮಹಾತ್ಮರಿಗೆ ಎಚ್ಚರಿಕೆಯ ಸೂಚನೆ' ಎಂಬ ತಲೆಬರಹದ ಸುದ್ದಿಯಲ್ಲಿ "ಮಹಾತ್ಮರನ್ನು ಕೊಲ್ಲುವೆವು" ಎಂದು ಇದ್ದಲ್ಲಿ

ಕನ್ನಡಿಗ

ಬುಧವಾರ ತಾರೀಖು ೧೫-೧೧-೧೯೩೩

ಕರ್ನಾಟಕದ ಏಕೀಕರಣವು ಎಂದಾಗಬೇಕು?

ಮದ್ರಾಸ ಕೌನ್ಸಿಲ್ಲದಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ಸ್ವೀಕರಿಸಲ್ಪಟ್ಟ ಗೊತ್ತುವಳಿಯ ಸುದ್ದಿಯನ್ನು ನಿನ್ನೆಯೇ ನಾವು ಪ್ರಕಟಿಸಿದ್ದೇವೆ. ಈ ಕೌನ್ಸಿಲ್ಲದಲ್ಲಾದ ಚರ್ಚೆಯ ಬಗ್ಗೆ ಇಂದು ಹೆಚ್ಚಿನ ಕೆಲಸಂಗತಿಗಳು ನಮ್ಮ ಹಸ್ತಗತವಾಗಿವೆ. ಮದ್ರಾಸವನ್ನೇ ರಾಜಧಾನಿಯನ್ನಾಗಿಟ್ಟುಕೊಂಡು ಆಂಧ್ರ ಪ್ರಾಂತವನ್ನು ಪ್ರತ್ಯೇಕಿಸಬೇಕೆಂಬ ಠರಾವು ಸ್ವೀಕೃತವಾಗಲಿಲ್ಲ. ಆದರೆ ಹೊಸ ಸುಧಾರಣೆಗಳೊಂದಿಗೆಯೇ ಆಂಧ್ರ ಹಾಗೂ ಕರ್ನಾಟಕ ಪ್ರಾಂತಗಳನ್ನು ಪ್ರತ್ಯೇಕವಾದ ಆಡಳಿತೆಗೆ ಸೇರಿಸಬೇಕೆಂಬ ಗೊತ್ತುವಳಿಯು ಕೊನೆಗೆ ೫೩ ವಿರುದ್ಧ ೧೮ ಮತಗಳಿಂದ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು. ೨೧ ಜನರು ಮತಕೊಡಲೇ ಇಲ್ಲ. ಗೊತ್ತುವಳಿಯು ಇಂಗ್ಲೀಷಿನಲ್ಲಿ ಹೀಗಿದೆ:—

"This Council recommends to the Government that they may be pleased to urge upon the Government of India and the Secretary of State the great and urgent necessity of creating the Andhra Province and a Karnátaka Province simultaneously with the inauguration of the new constitution in India."

ಮದ್ರಾಸ ಇಲಾಖೆಯನ್ನೇ ಭಾಷಾನ್ವಯ ತತ್ವದಂತೆ ವಿಂಗಡಿಸಬೇಕೆಂದು ಶ್ರೀ ಎ ರಂಗನಾಥ ಮುದ್ಲಿಯಾರರು ತಂದ ಉಪಸೂಚನೆಯೂ, ಕೇರಳ ಪ್ರಾಂತವನ್ನು ಸಹ ಪ್ರತ್ಯೇಕಿಸಬೇಕೆಂಬ ಉಪಸೂಚನೆಯೂ, ಆಂಧ್ರದ ರಾಜಧಾನಿ ಹಾಗೂ ಗಡಿಸೀಮೆಗಳನ್ನು ನಿರ್ಣಯಿಸುವದಕ್ಕಾಗಿ ಒಂದು ಮಂಡಲ ಬೇಕೆಂಬ ಉಪಸೂಚನೆಯೂ ಬಿದ್ದು ಹೋದವು ಆದರೆ ಮಂಗಳೂರಿನ ಶ್ರೀಯುತ ಭಟ್ಟರು ತಂದ ಕರ್ನಾಟಕವನ್ನೂ ವಿಂಗಡಿಸಬೇಕೆಂಬ ಉಪಸೂಚನೆಯು ಮಾತ್ರ ೧೯ ವಿರುದ್ಧ ೧೭ ಮತಗಳಿಂದ ಪಾಸಾಯಿತು.

'ಈ ಗೊತ್ತುವಳಿಯ ಕಾಲಕ್ಕೆ ನಡೆದ ವಾದದಲ್ಲಿ ಮದ್ರಾಸ ಸರಕಾರದ ವತಿಯಿಂದ ಮುಖ್ಯವಾದ ವಿರೋಧವಿದ್ದುದು ಆರ್ಥಿಕ ದೃಷ್ಟಿಯಿಂದ. ಹೊಸ ಸುಧಾರಣೆಯ ಕಾಲವು ಸಮೀಪಿಸಿದ ಈಗಿನ ಸಮಯದಲ್ಲಿ ಹೆಚ್ಚಿಚ್ಚು ವೆಚ್ಚದ ವಿಷಯಗಳನ್ನು ಎತ್ತುವದೇಕೆಂದು ಅವರು ಸಾಧಿಸಿದ್ದಾರೆ ಆದರೆ ಭಾಷಾನ್ವಯ ತತ್ವಕ್ಕೆ ಅವರು ತಪ್ಪಾಗಿಸಿ, ಜನತೆಯಲ್ಲಿ ಈ ವಿಷಯಕ್ಕಿದ್ದ ಪ್ರೇಮ ಜಾಗ್ರತೆಗಳನ್ನು ಒಪ್ಪಿರುವರು ಮುಂಬೈ ಗವರ್ನರರು ಸಹ ಧಾರವಾಡದ ಮುನಸೀಪಾಲಟಿಗೆ ಉತ್ತರ ಕೊಡುವಾಗ್ಗೆ ಇದೇ ಅರ್ಥವನ್ನು ಧ್ವನಿತಮಾಡಿರುವರು

ಮದ್ರಾಸ ಹಾಗೂ ಮುಂಬೈ ಇಲಾಖೆಗಳು ಬೇರೆ ಬೇರೆ ಆಡಳಿತದಲ್ಲಿವೆಯಷ್ಟೇ? ಆದರೂ ಕೂಡ ಈ ಎರಡೂ ಆಡಳಿತದಲ್ಲಿಯ ಸರಕಾರದ ಮುಖ್ಯಸ್ಥರು ಜನತೆಯ ಬೆಂಬಲವನ್ನು ಲಕ್ಷಿಸುವೆವೆಂದು ಹೇಳಿದ್ದಾ, ಹಾಗೆಯೇ ಆರ್ಥಿಕ ಪ್ರಶ್ನೆಯನ್ನು ಮುಂದೊಡ್ಡಿ, ಈ ಭಾಷಾನ್ವಯ ವಿಷಯವನ್ನು ಮುಂದರಿಸಬೇಕೆಂದೂ ಹೇಳಿದ್ದೂ ಮಹತ್ವದವಿವೆ. ಯಾಕಂದರೆ ಹಿಂದಕ್ಕೆ ಈ ಪ್ರಾಂತವಿಭಜನೆಯ ಪ್ರಶ್ನೆ ಹೊರಟಾಗ್ಗೇ "ಜನತೆಯ ಬೆಂಬಲವಿಲ್ಲ ಆದ್ದರಿಂದ ನಾವಿದನ್ನು ಲಕ್ಷಿಸಲಾರೆವು" ಎಂಬುದಾಗಿಯೇ ಪ್ರಾಂತಿಕ ಹಾಗೂ ಮಧ್ಯವರ್ತಿ ಸರಕಾರಗಳು ಬಹು ದರ್ಪದಿಂದ ಹೇಳುತ್ತಿದ್ದವು ಈಗ ಆ ದರ್ಪೋಕ್ತಿಗಳಾಗಲಿ, ಜನರ ಬೆಂಬಲವಿಲ್ಲೆಂಬ ನೆವವಾಗಲಿ ಮುಂದೆ ಮಾಡಲ್ಪಟ್ಟಿಲ್ಲ ಇದೊಂದು ಸುಲಕ್ಷಣವೇ ಎಂದೆನ್ನಬೇಕು ಮದ್ರಾಸ ಸರಕಾರದ ವತಿಯಿಂದ ಮೊನ್ನಿನ ದಿವಸ ಕೌನ್ಸಿಲದಲ್ಲಿ ಹೀಗೆ ಹೇಳಲ್ಪಟ್ಟಿದೆ: — "The Government are anxious to consider the opinion of this House on the resolution. They will consider any resolution passed by the House on the subject with greatest care and seriousness."

ಇದರ ಅರ್ಥ:- ಈ ಠರಾವಿನ ಬಗ್ಗೆ ಈ ಸಭೆಯ ಮತವನ್ನು ಲಕ್ಷಿಸಲು ಸರಕಾರದವರು ಆತುರರಾಗಿದ್ದಾರೆ ಈ ವಿಷಯದ ಮೇಲೆ ಯಾವದೇ ರೀತಿಯಿಂದ ನಿರ್ಣಯವಾದರೂ ಆದೇ ನಿರ್ಣಯವನ್ನು ಅತ್ಯಂತ ದಕ್ಷತೆಯಿಂದಲೂ ಅವರು ವಿಚಾರಿಸುವರು.

ಇವೆಲ್ಲವನ್ನೂ ವಿಚಾರಿಸಿ ಇದೀಗ ಕನ್ನಡಿಗರು ಮಾಡಬೇಕಾದ ಕಾರ್ಯವೊಂದಿದೆ. ಜನತೆಯ ಬೆಂಬಲವಿಲ್ಲೆಂಬ ಸರಕಾರದ ಕೂಗು ಮಾಯವಾಗಿದ್ದರಿಂದ ನಾವೀಗ ಸರಕಾರದ ಬೆನ್ನು ಹತ್ತಿ ನಮಗೆ ಬೇಕಾದ ಏಕೀಕರಣವನ್ನು ಸಾಧಿಸಿಕೊಳ್ಳಬೇಕು. ಕರ್ನಾಟಕದ ಮಟ್ಟಿಗೆ ನೋಡಿದರೆ ಪ್ರಾಂತವು ತನ್ನ ವೆಚ್ಚವನ್ನು ತಾನೇ ಹೊತ್ತುಕೊಂಡು ಹೋಗುವದೆಂಬದು ಪತ್ರಿಕೆಗಳಿಂದ ಈಗಾಗಲೇ ಸಿದ್ಧ ಮಾಡಲ್ಪಟ್ಟಿದೆ. ಆದ್ದರಿಂದ ಸರಕಾರವು ಮುಂದೊಡ್ಡಿದ ಆರ್ಥಿಕ ಪ್ರಶ್ನೆಯ ನೆವದಲ್ಲಿ ಏನೂ ಅರ್ಥವಿಲ್ಲ ಮದ್ರಾಸ ಕೌನ್ಸಿಲ್ಲದಲ್ಲಿ ಕರ್ನಾಟಕ ಏಕೀಕರಣದ ವಿಷಯವು ಎರಡು ಸಲ ಪಾಸಾದಂತಾಯಿತು ಕೊಡಗು ಕೌನ್ಸಿಲ್ಲದಲ್ಲಿಯಂತೂ ಪಾಸಾಗಿಯೇ ಹೋಗಿದೆ. ಮುಂಬೈ ಕೌನ್ಸಿಲ್ಲದಲ್ಲಿ ಈ ವಿಷಯವು ಚರ್ಚಿಸಲ್ಪಟ್ಟಿದ್ದರೂ ಸರಕಾರದ ಪ್ರಯತ್ನದಿಂದ ಅದು ಪಾಸಾಗಲಿಲ್ಲ ಪಾಸಾಗಿದ್ದರೂ ಕರ್ನಾಟಕದ ವತಿಯಿಂದ ಮುಂಬೈ ಕೌನ್ಸಿಲ್ಲದಲ್ಲಿದ್ದ ಪ್ರತಿನಿಧಿಗಳೆಲ್ಲರೂ ಇದಕ್ಕೆ ಒಮ್ಮನಸ್ಸಿನಿಂದ ಒಪ್ಪಿಗೆಯನ್ನಿತ್ತದ್ದರಿಂದ, "ಜಾಯಿಂಟ ಪಾರ್ಲಮೆಂಟರಿ ಕಮೀಟಿಯ" ರಿಪೋರ್ಟಿನ ಪ್ರಕಾರ ಈ ಠರಾವು ಪಾಸಾಗಿದೆಯೆಂದೇ ಹಿಂದುಸ್ಥಾನ ಸರಕಾರವು ತಿಳಿದುಕೊಳ್ಳಬೇಕಾಗುತ್ತದೆ ಆದ್ದರಿಂದ ಕರ್ನಾಟಕಕ್ಕೆ ಸಂಬಂಧಪಟ್ಟ ಈ ಮೂರೂ ಬ್ರಿಟಿಶ ಆಡಳಿತಗಳಲ್ಲಿ ಏಕೀಕರಣದ ಠರಾವು ಪಾಸಾಗಿದೆಂಬದನ್ನು ನ್ಯಾಯಿ ಸರಾಯರ ಹಾಗೂ "ಜಾಯಿಂಟ ಪಾರ್ಲಮೆಂಟರಿ ಕಮೀಟಿ" ಯವರ ನಿದರ್ಶನಕ್ಕೆ ಕನ್ನಡಿಗರೀಗ ತಂದು ಕೊಟ್ಟು, ಸರಕಾರದ ಕಾಯದೆಯನ್ನು ತೃಪ್ತಿಪಡಿಸಿದ ಈ ಏಕೀಕರಣವನ್ನು ತೀವ್ರವೇ ಒದಗಿಸಿಕೊಡಬೇಕೆಂದು ಒತ್ತಾಯ ಪಡಿಸಬೇಕು

ಈ ಕಾರ್ಯವನ್ನು ಹೇಗೆ ಮಾಡಬೇಕು? ಯಾರು ಮಾಡಬೇಕು? ಎಂಬ ಪ್ರಶ್ನೆಯನ್ನು ನಿದ್ರೆಯಲ್ಲಿದ್ದ ಕರ್ನಾಟಕ ಏಕೀಕರಣ ಸಂಘವು ಕೂಡಲೇ ಎಚ್ಚತ್ತು, ಬಿಡಿಸಬೇಕಾಗಿ ಸೂಚಿಸುತ್ತೇವೆ ಕೇವಲ ಏಕೀಕರಣಕ್ಕಾಗಿಯೇ ಹೊರಟ ಏಕೀಕರಣ ಸಂಘವೇ ಈಗ ಎಚ್ಚರಿಯದಿದ್ದರೆ "ಕರ್ನಾಟಕದ ಏಕೀಕರಣವು ಎಂದು" ಎಂಬದಾಗಿ ಕನ್ನಡಿಗರು ಕೇವಲ ತಾಳ ಕುಟ್ಟುತ್ತ ಕೂಡ್ರುವ ಪ್ರಸಂಗ ಬರಬಹುದು ಆದ್ದರಿಂದ ಕಾರ್ಯ ದರ್ಶಿಗಳು ಜಾಗ್ರತೆಯಿಂದ ಈ ಕಾರ್ಯವನ್ನು ಕೈಕೊಳ್ಳತಕ್ಕದ್ದು.

ಸರದಾರ ವೀರನಗೌಡರ ಬಿಡುಗಡೆ.

ಕರ್ನಾಟಕದ ಸರದಾರರೆಂದು ಖ್ಯಾತಿ ಹೊಂದಿದ ಪಾಟೀಲ ವೀರನಗೌಡರು ೧೫ನೆಯ ತಾರೀಖಿನ ದಿನ ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಹಿಂಡಲಗಿ ತುರಂಗದಿಂದ ಬಿಡುಗಡೆ ಹೊಂದಿದರು ಇವರ ದೇಹಸ್ಥಿತಿಯು ಚನ್ನಾಗಿದೆ. 'ಕ' ವರ್ಗದ ಕಠಿಣ ತಪಶ್ಚರ್ಯೆಯನ್ನು ಎರಡು ವರ್ಷ ಮುಗಿಸಿಕೊಂಡರು

ಬಳ್ಳಾರಿಯ ಪತ್ರ.

(ಸ್ವಂತ ಸುದ್ದಿಗಾರರಿಂದ ತಾ॥ ೧೩-೧೧-೩೩)

ಬಳ್ಳಾರಿ ಜಿಲ್ಲಾ ಬ್ರಾಹ್ಮಣರಸಭೆ.

ನಿನ್ನೆಯ ದಿನ ಸಾಯಂಕಾಲ ಮುನಿಸಿಪಲ್ ಹೈಸ್ಕೂಲಿನಲ್ಲಿ ಬ್ರಾಹ್ಮಣ ಸಭೆಯ ಹಿತೈಷಿಗಳೂ, ಸದಸ್ಯರೂ, ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆಯ ಉದ್ದೇಶಗಳನ್ನೂ, ನಿಯಮಗಳನ್ನೂ ನಿಶ್ಚಯ ಮಾಡಿದರು

೧೮ ವರ್ಷಕ್ಕೆ ಮೀರಿದ ಬ್ರಾಹ್ಮಣ ಸ್ತ್ರೀಯರಾಗಲೀ ಪುರುಷರಾಗಲೀ ಸದಸ್ಯರಾಗಬಹುದು. ೫೦೦ ಕೊಡುವ ಮಹನೀಯರು, ಪೋಷಕರು ೨೦೦ ಕೊಡುವವರು ಆಜನ್ಮ ಸದಸ್ಯರು ಆಗಬಹುದು. ವಿಶೇಷ ಮತ್ತು ಸಾಮಾನ್ಯ ಸದಸ್ಯರ ವಾರ್ಷಿಕ ಚಂದಾ ೩ ಮತ್ತು ೧ ಇರಬೇಕೆಂದು ನಿರ್ಣಯಿಸಲ್ಪಟ್ಟಿತು. ದೇಶ, ಪರದೇಶಗಳಲ್ಲಿ ಓದುವ ಜಿಲ್ಲೆಯ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ವೇತನ ಕೊಡುವುದು ಉದ್ಯೋಗಗಳಿಲ್ಲದವರಿಗೆ ಉದ್ಯೋಗಕ್ಕೇರ್ಪಡಿಸುವುದು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಬ್ರಾಹ್ಮಣರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದೇ ಸಭೆಯ ಉದ್ದೇಶಗಳೆಂದು ತಿಳಿಯಿತು ಈ ಸಭೆಯು ರಿಜಿಸ್ಟರಾಗಲಿಕ್ಕಿದೆ ಅಧ್ಯಕ್ಷ—ಶ್ರೀ ಟಿ. ರಾಘವ ಬಿ. ಎ ಬಿ ಎಲ್ ಉಪಾಧ್ಯಕ್ಷರು-(೧) ಟಿ ಶಾಮರಾವ ರಿಟಾಯರ್ಡ ಸಬ್ ಜಜ್ [೨] ನಗರೂರು ನಾರಾಯಣರಾವ ಬಿ ಎ ಬಿ ಎಲ್ ಕಾರ್ಯದರ್ಶಿ ಪಿ ರಾಘವೇಂದ್ರಚಾರ್ಯ ಕೋಶಾಧ್ಯಕ್ಷ ಪಿ ನರಸಿಂಹರಾವ್

ಕರ್ನಾಟಕ

ಸರದಾರ ವ್ಹಿ ವ್ಹಿ ಪಾಟೀಲರು ಹಿಂಡಲಗಿ ಸೆರೆಮನೆಯಿಂದ ೧೫ನೇ ತಾರೀಖಿನ ದಿನ ಬಿಡುಗಡೆ ಹೊಂದಿದರು ಅವರು ಆರೋಗ್ಯವಾಗಿದ್ದಾರೆ ಅವರಿಗೆ ೨ ವರ್ಷ ಕಠಿಣ ಶಿಕ್ಷೆಯಾಗಿತ್ತು ಅವರು 'ಕ' ವರ್ಗದ ಸೆರೆಯಾಳುಗಳಿದ್ದರು

ಹಿಂದುಸ್ಥಾನ

ಹಿಂದೂ-ಮುಸಲ್ಮಾನ ಒಕ್ಕಟ್ಟಿನ ದೆಸೆಯಿಂದ ಸಾಲೇಮಪುರದ ಮಹಾರಾಜರು ಲಖನೌದಲ್ಲಿಯ ತಮ್ಮ ಅರಮನೆಯಲ್ಲಿ ಪ್ರಮುಖರಾದ ಮುಸಲ್ಮಾನರ ಒಂದು ಸಭೆಯನ್ನು ನೆರೆಯಿಸಿದ್ದಾರೆ ಈ ಸಭೆಯಲ್ಲಿ ಡಾ ಅನ್ಸಾರಿ, ಮೌ ಅಬುಲ್ ಕಲಂ ಅಝಾದ, ಮೌ ಶೌಕತ ಅಲ್ಲಿ, ಮಿ ಅಬುಲ್ ಮಝುದಸಿಂಧೀ, ಮಿ ಆಸಫಲ್ಲಿ, ಮಿ ಶೇರವಾನಿಯವರಿದ್ದಾರೆ

ನೆರೆ ಹಾವಳಿಯಿಂದ ಲೆನ್ನವೆಲ್ಲಿ ಜಿಲ್ಹೆಯಲ್ಲಿ ಹಾಹಾಕಾರವೆದ್ದಿದೆ ಜನರು ಊರು ಬಿಡುತ್ತಿದ್ದಾರೆ ಅಖಂಡವಾಗಿ ಎರಡು ದಿನಗಳವರೆಗೆ ಮಳೆ ಸುರಿಯುತ್ತಿರುವದರಿಂದ ನಿತ್ತೂರು ಎಂಬುವ ಊರೇ ನೀರಿನಲ್ಲಿದ್ದು ಸರಕಾರಿ ಕಟ್ಟಡಗಳು ಕೂಡ ಬಿದ್ದಿವೆ

ರಾಜಕುಮಾರಿ ಅಮೃತ ಕುವರರ ಅಧ್ಯಕ್ಷತೆಯಲ್ಲಿ ನೆರೆದ ಪಂಜಾಬ ಮಹಿಳೆಯರ ಪರಿಷತ್ತಿನಲ್ಲಿ ಸಂತತಿ ನಿರೋಧನದ ನಿರ್ಣಯವು ತಿರಸ್ಕರಿಸಲ್ಪಟ್ಟಿತು

ಲಾಹೋರ ಮುನಿಸಿಪಾಲಿಟಿಯವರು ತಮ್ಮಲ್ಲಿ ಕೆಲಸಕ್ಕಿರುವ ಹರಿಜನರಿಗಾಗಿ ಒಂದು ಚಿಕ್ಕ ಕೇರಿಯನ್ನು ಕಟ್ಟಿ ಕೊಡಬೇಕೆಂಬುವ ಗೊತ್ತನ್ನು ಎಲ್ಲರ ಅನುಮತಿಯಿಂದ ಮಾಡಿರುವರು ಅಲ್ಲದೆ, ಅವರ ಕೇರಿಯಲ್ಲಿ ನೀರು ಹಾಗೂ ಬೆಳಕಿನ ವ್ಯವಸ್ಥೆ ಮಾಡಿಕೊಡಬೇಕೆಂದೂ ಯೋಚಿಸಿದ್ದಾರೆ ವರಾಡ ಪ್ರಾಂತದಲ್ಲಿಯ ಅಕೋಲೆ ರಾಯಪುರ, ಅಕೋಟ ಮುಂತಾದ ಮುನಿಸಿಪಾಲಿಟಿಯವರು ತಮ್ಮಲ್ಲಿಗ ಬರಬೇಕೆಂದು ಬಿನ್ನವಿಸಿಕೊಂಡಿದ್ದಾರೆ

ಪರದೇಶ.

ಇಟಲಿಯವರ ಅನುಮತಿಯಿಂದ ಜರ್ಮನರು ಬ್ರಿಟನ್ನ, ಫ್ರಾನ್ಸ, ಇಟಲಿ, ಪೋಲಂಡ, ಇಷ್ಟು ರಾಷ್ಟ್ರದವರದೊಂದು ಪರಿಷತ್ತನ್ನು ಸ್ವಿತ್ಝರಲಂಡದಲ್ಲಿ ನೆರೆಯಿಸುವವರಿದ್ದಾರೆಂದು ತಿಳಿಯುತ್ತದೆ.

ಮುಂಬಯಿ ಪೇಟೆಯ ಧಾರಣೆ.

[ತಂತಿಯಿಂದ ಬಂದದ್ದು ಮುಂಬೈ ತಾ॥ ೧೪]

ಬೆಳ್ಳಿ ಚಿನೀ [ಖುರೆ]	ರೂ—ಆ—ಪೈ
ಹಾಜರ ಭಾವ	೫೩ - ೧೪ - ೦
,, ೧ನೇ ವಾಯದೆ	೫೭ - ೦ - ೦
,, ೨ನೇ ವಾಯದೆ	೫೭ - ೩ - ೦

ಬೆಳ್ಳಿಯ ಧಾರಣಿ ಇಂದು ಸ್ಥಿರವಿದೆ

ಬಂಗಾರ ಮಿಂಟ ಪಾಟ್ಲಾ

[ಹಾಜರ ಭಾವ]	೩೨ - ೮ - ೩
,, ೧ನೇ ವಾಯದೆ	೩೨ - ೯ - ೦
,, ೨ನೇ ವಾಯದೆ	೩೨ - ೯ - ೩

ಈ ದಿನ ಬಂಗಾರದ ವ್ಯವಹಾರ ಸ್ತಬ್ಧವಿದೆ.

	ಶಿಲಿಂಗ ಪೇನ್ಸ
ಬ್ಯಾಂಕ (ಟಿ ಟಿ)	೧—೫-೨೯|೩೨
ದರ್ಶನಿ ಬ್ಯಾಂಕ ಬಿಲು	ಸದರ
ಮೂರು ತಿಂಗಳ ದಿ. ನಿ	
[ಕ್ರೆಡಿಟ್]	೧—೬-೧
ಮೂರು ತಿಂಗಳ ದರ್ಶನಿ	ಮುಂಗಡ
ಮಾರಾಟ [ಟಿ ಟಿ]	೧— ೫-೬|

[ಅ ಪ್ರ ಸಂಶ]

ಹುಬ್ಬಳ್ಳಿಪೇಟೆಯ ಧಾರಣೆ

(ಕೇವಡೆ ಹುತ್ತು ಕಂಪನಿ)

ಹುಬ್ಬಳ್ಳಿ ತಾ॥ ೧೪ [ಮಧ್ಯಾಹ್ನ ೧೧ ಗಂಟೆ]

ಜವಾರಿ ಹತ್ತಿ	೧೦೦-೧೦೨	ಜೋಳ	೧೨-೨೪॥
ಅಪ್ಲಂಡ ,,	೧೦೭-೧೦೨	ಗೋಧಿ	೬॥-೭
ವಿಲಾಯತಿ ,,	೯೪-೯೫	ಜದ್ದು	೬॥।.೭
ಕಂಬೋಡಿಸ ,,	೧೦೮-೧೧೦	ಕಡ್ಲಿ	೬-೬।
ಶೇಂಗಾ ಅರಳೆ	೬೮-೭೦	ಕಡ್ಲಿ ಕಾ.	೫॥-೫॥
ಬಿಳ್ಳಿ ಶರ್ಮ ಅ.	೬೪-೬೫	ಕುಸುಬಿ ೧೨	
ಸಾಳಿಕ ಅರಳೆ	೬೪-೬೫	ಹ ರಳ ೧೪	
ಹೆಸರು ಜವಾರಿ	೯೧೨		
ಶಿಂಗಾಡಾಯು	೫।-೫॥	ಹತ್ತಿಕಾಳು	೫೯-೬೦

ಬೆಳ್ಳಿ ಬಂಗಾರ

ಬಂಗಾರ ೩೨।- ಬೆಳ್ಳಿ ॥-

ಹಿಂದೂ ಮಹಾ ಸಭೆಯ ಧೋರಣೆಯ ಖಂಡನೆ.

ಹಿಂದೂ ಮಹಾ ಸಭೆಯ ಧೋರಣೆಯ ಖಂಡನೆ.

ಕಾಶಿ ತಾ॥ ೧೩—ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೆಕ್ಕರಿದ ಸಭೆಯಲ್ಲಿ ನಿನ್ನೆಯ ದಿನ ರಾತ್ರಿ ಪಂಡಿತ ಜವಾಹಿರಲಾಲರು ಹಿಂದೂ ಮಹಾಸಭೆಯ ಇತ್ತೀಚಿನ ಚಟುವಟಿಕೆಗಳನ್ನು ಖಂಡಿಸಿ ಅಂದದ್ದು—ಹಿಂದೂ ಮಹಾ ಸಭೆಯೆಂದರೆ, ಹಿಂದೂ ಜನರ ಪಕ್ಷಕಟ್ಟಿ ಮಾತಾಡುವಂತೆ ನಟಿಸಿ, ಹಿಂದೂ ಸಮಾಜದ ಹಿಂದೆಳೆಯುವ ಗುಂಪು ಇರುವದೆಂದು ಮೊದಲಿನಿಂದಲೂ ನನ್ನ ತಿಳುವಳಿಕೆ ಇದ್ದಿತು, ಹಿಂದೂ ಮಹಾ ಸಭೆಯು ಹಿಂದೂಗಳ ಪ್ರಾತಿನಿಧಿಕ ಸಂಸ್ಥೆಯಾಗಿರುವದೆಂಬುವ ಮಾತು ದೂರ ಉಳಿದಿದೆ. ಅಜಮೀರಿನಲ್ಲಿ ನೆರೆದ ಮಹಾಸಭೆಯಲ್ಲಿ ರಾಷ್ಟ್ರೀಯ ಮುಖವಾಡ ಹಾಕಿಕೊಂಡು ಮಹಾ ಸಭೆಯವರು ಶುದ್ಧ ಸಂಕುಚಿತ ದೃಷ್ಟಿಯ ಜಾತಿವಾದಕ್ಕೆ ಬೆಂಬಲಗೊಟ್ಟರು, ಇಷ್ಟೇ ಅಲ್ಲದೆ, ಹಿಂದೀ ದೊಡ್ಡ ಜಮೀನದಾರರನ್ನು ಎತ್ತಿ ಹಿಡಿಯಲಿಕ್ಕೂ ಇಚ್ಛಿಸಿದರು. ಮಹಾ ಸಭೆಯ ಹೊಣೆಗಾರ ಮುಖಂಡರೇ ತಮ್ಮ ಬಾಯಿಂದ 'ಹಿಂದೂ ಮಹಾ ಸಭೆಯ ಧೋರಣೆಯು ಪರಕೀಯ ಸರಕಾರದವರೊಡನೆ ಸಹಕರಿಸುವದಿದ್ದು ಹಾಗೆ ನಮ್ಮವರನ್ನೇ ನಾವು ಪರಕೀಯರ ಮುಂದೆ ಬಯ್ದರೆ, ನಮಗೆ ಕೆಲವು ತುಣುಕುಗಳು ದೊರೆಯಬಹುದು" ಎಂದು ಸಾರಿದ್ದಾರೆ. ತರುವಾಯ ಅಧ್ಯಕ್ಷರಾದ ಪಂಡಿತ ಮಾಲವೀಯರು ತಮ್ಮ ಭಾಷಣದಲ್ಲಿ "ಮಹಾ ಸಭೆಯವರು ಇಂದು ಗೊತ್ತುವಳಿಗಳನ್ನು ಮಾಡಿದ್ದು ತಪ್ಪು. ನಾನು ಇಂಥವರೊಡನೆ ಸಹಕರಿಸಲಾರೆ, ಆದಾಗ್ಯೂ ಪಂಡಿತ ಜವಾಹಿರಲಾಲರ ಇಷ್ಟು ಕಟು ಶಬ್ದಗಳಿಂದ ಮಹಾ ಸಭೆಯನ್ನು ಖಂಡಿಸುವದಿದ್ದಿಲ್ಲ ಅವರು ಚಿತ್ರಿಸಿದ್ದರಲ್ಲೂ ಹಿಂದೂ ಮಹಾ ಸಭೆಯ ಸ್ಥಿತಿಯು ಇಟ್ಟಿಲ್ಲ ಎಂದರು (ಅ ಪ್ರೆ ತಂತಿ)

ಸುಧಾರಕರಿಗೂ ಸನಾತನಿಗಳಿಗೂ ಲಗ್ಗೆ!

ಕಾನಪುರ ತಾ॥ ೧೪— ನಿನ್ನೆ ರಾತ್ರಿ ವರ್ಣಾಶ್ರಮ ಸ್ವರಾಜ್ಯ ಸಂಘದವರು ಕೆಲವು ವಿಷಯಗಳ ಚರ್ಚೆಗಾಗಿ ಬೇಕೆಂದು ಒಂದು ಸಭೆ ಕರೆಯಿಸಿದ್ದರು. ಸುಧಾರಕ ಮತ್ತು ಸನಾತನ ಪಕ್ಷದವರಲ್ಲಿ ಘನವಾದ ಚರ್ಚೆ ನಡೆದು, ಕೊನೆಗೆ ಜಗಳಾಗಿ ಬಾಯಿ ಹತ್ತಿತು ಈ ಗಲಾಟೆಯಲ್ಲಿ ಕುರ್ಚಿಗಳು, ಸ್ಟೂಲುಗಳು, ಬೆಂಚುಗಳು ಮುರಿದವು ಕಲ್ಲುಗಳು ಎಸೆಯಲ್ಪಟ್ಟವು ಒಬ್ಬ ವಿದ್ಯಾರ್ಥಿಯು ಚೂರಿಯಿಂದ ಇರಿಯಲ್ಪಟ್ಟನು ಈ ಸುದ್ದಿಯು ಪೋಲೀಸರಿಗೆ ತಿಳಿಯಲು ಅವರು ಬಂದು ಗೊಂದಲವನ್ನು ಮುರಿದರು (ಅ ಪ್ರೆ ತಂತಿ]

ಹರಿಜನರಿಗೆ ಪ್ರತ್ಯೇಕ ಶಾಲೆಬೇಡ.

ಅಹಮ್ಮದಾಬಾದ ತಾ॥ ೧೩—ಇಲ್ಲಿಯ ಅಸ್ಪೃಶ್ಯ ಮುಂದಾಳುಗಳಾದ ಶ್ರೀ ಕಿಶಾಭಾಯಿ ವಾಘೇಲಾ ಇವರು ಗಾಂಧಿಜಿಯವರಿಗೆ ಒಂದು ಪತ್ರವನ್ನು ಬರೆದಿದ್ದು ಅಸ್ಪೃಶ್ಯರ ಸಲುವಾಗಿ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಬಾರದೆಂತಲೂ ಮತ್ತು ಮುನಸಿಪಾಲಿಟಿಗಳಲ್ಲಿ ನೌಕರಿಯಲ್ಲಿದ್ದ ಹರಿಜನರ ಸ್ಥಿತಿಗತಿಯನ್ನು ವಿಚಾರಿಸಬೇಕೆಂತಲೂ ಮಹಾತ್ಮರಿಗೆ ಅದರಲ್ಲಿ ವಿನಂತಿ ಮಾಡಿಕೊಂಡಿದ್ದಾರೆ [ಅ ಪ್ರೆ ತಂತಿ)

ಸನಾತನಿಗಳಿಗೆ ಪೋಲೀಸರಿಂದ ಅರ್ಧಚಂದ್ರ.

ಮಹಾತ್ಮಾ ಗಾಂಧಿಯವರ ಅಸ್ಪೃಶ್ಯ ಮಂದಿರ ಪ್ರವೇಶದ ಚಳವಳಿಯ ವಿಷಯವಾಗಿ ಸ್ಥಾನಿಕ ವರ್ಣೀಯ ಹಿಂದುಗಳ ಮತವೇನಿದೆಯೆಂಬುವದನ್ನು ತಿಳಿದುಕೊಳ್ಳುವದಕ್ಕಾಗಿ ನಿನ್ನಿನ ದಿವಸ ಇಲ್ಲಿ ಒಂದು ಸಾರ್ವಜನಿಕ ಸಭೆಯು ಕೂಡಿತ್ತು ಶೇಠ ಜಮುನಾಲಾಲ ಬಜಾಜ ಇವರು ಅಧ್ಯಕ್ಷರಿದ್ದರು ಕೆಲಕಾಲ ಸಭೆಯು ನಡೆದ ಮೇಲೆ ಉತ್ತರ ದಿಕ್ಕಿನಿಂದ ಕೆಲವು ಸನಾತನಿಗಳು ಮನಬಂದಂತೆ ಒದರುತ್ತ ಮತ್ತು ಕಲ್ಲುಗಳನ್ನು ಬೀಸಾಟುತ್ತ ಸಭೆಯಲ್ಲಿ ಬಂದರು. ಇಷ್ಟರಲ್ಲಿಯೇ ಪೋಲೀಸರು ಈ ಗುಚ್ಛೋದ್ಯೋಗಿಗಳನ್ನು ಹೊರಗೆ ಹಾಕಿ ಶಾಂತತೆಯನ್ನುಂಟು ಮಾಡಿದ ಮೇಲೆ ಸಭೆಯ ಕೆಲಸವು ನಿರ್ವಿಘ್ನದಿಂದ ಸಾಗಿತು ಮಹಾತ್ಮರ ಚಳವಳಿಗೆ ಸಹಾನುಭೂತಿಯನ್ನು ತೋರಿಸುವ ಗೊತ್ತುವಳಿಯು ಅಂಗೀಕೃತವಾಯಿತು (ಅ ಪ್ರೆ ತಂತಿ

ಕೌನ್ಸಿಲಿನ ಅವಧಿ ಬೆಳೆಯಿತು.

ಮುಂಬೈ ತಾ॥ ೧೩— ಹಿಂದುಸ್ಥಾನಕ್ಕೆ ಕೊಡತಕ್ಕ ರಾಜಕೀಯ ಸುಧಾರಣೆಗಳನ್ನು ಬ್ರಿಟಿಶ್ ಸರಕಾರವು ವಿಚಾರ ಮಾಡುತ್ತಿರುವದರಿಂದ ದೇಶದಲ್ಲುಂಟಾದ ಅಸಾಮಾನ್ಯ ಪರಿಸ್ಥಿತಿಯ ಮೂಲಕ ಮುಂಬೈ ಕಾಯದೇ ಮಂಡಳದ ಅವಧಿಯನ್ನು ಗವ್ಹರ್ನರ ಸಾಹೇಬರಿಂದ ಒಂದು ವರ್ಷದ ಮಟ್ಟಿಗೆ ಬೆಳೆಸಲಾಗಿದೆಯೆಂದು ಇವತ್ತಿನ ಗ್ಯಾಝೆಟಿನ ವಿಶೇಷಾಂಕವು ಸಾರುತ್ತದೆ [ಅ ಪ್ರೆ ತಂತಿ]

ಮುಸಲ್ಮಾನರ ಪರಿಷತ್ತು.

ಲಖನೌ ತಾ॥ ೧೩— 'ಸಾಲೆಮಪೂರ ಗೃಹ'ದಲ್ಲಿ ನಡೆದ ಮುಸಲ್ಮಾನ ಮುಖಂಡರ ಖಾಸಗೀ ಸಂಭಾಷಣೆಯು ನಿನ್ನೆ ಸಂಜೆಗೆ ಮುಗಿದವು ಡಿಶೆಂಬರ ೧೭-೧೮ ನೇ ತಾರೀಖಿಗೆ ಸರ್ವ ಪಕ್ಷೀಯ ಮುಸಲ್ಮಾನರ ಪರಿಷತ್ತಿಂದನ್ನು ಲಖನೌದಲ್ಲಿ ಕೂಡಿಸಬೇಕೆಂದು ನಿಶ್ಚಯವಾಯಿತು ಪರಿಷತ್ತಿಗೆ ಮದ್ರಾಸದ ಮೌಲಾನಾ ಮುತರ್ಜನಾ ಬಹಾದ್ದೂರ ಇವರನ್ನು ಅಧ್ಯಕ್ಷರಾಗಿ ಆಮಂತ್ರಿಸಲಾಗಿದೆ. ಅಖಿಲ ಭಾರತೀಯ ಖಿಲಾಫತ್ ಪರಿಷತ್ತು ಅದೇ ವೇಳೆಗೆ ೧೫-೧೬ ನೇ ತಾರೀಖಿಗೆ ಲಖನೌದಲ್ಲಿ ಕೂಡುವದು ನಾದಿರಶಹರ ಬಗ್ಗೆ ದುಃಖ ಪ್ರದರ್ಶನದ ಠರಾವು ಖಿಲಾಫತ್ ಸಭೆಯಲ್ಲಿ ಪಾಸಾಯಿತು [ಅ ಪ್ರೆ ತಂತಿ]

ಗಡಿನಾಡಿನಲ್ಲಿ ಶಾಂತತೆ.

ಕ್ವೆಟ್ಟಾ ತಾ॥ ೧೩—ಗಡಿನಾಡಿನ ಎಲ್ಲ ತಂಡಗಳಲ್ಲಿ ಶಾಂತತೆಯಿದೆಯೆಂದೂ ಮತ್ತು ಎಲ್ಲ ತಂಡಗಳು ಅಫಘಾನಿಸ್ತಾನದ ಹೊಸ ಅರಸರಿಗೆ ತಮ್ಮ ನಿಷ್ಠೆಯನ್ನು ವ್ಯಕ್ತ ಮಾಡಿರುವರೆಂದೂ ತಿಳಿಯುತ್ತದೆ [ಅ ಪ್ರೆ ತಂತಿ]

ಕೊಲೆಗಾರನಾರು?

ಹೊಸದಿಲ್ಲಿ ತಾ॥ ೧೩—ನಾದೀರಶಹರನ್ನು ಕೊಲೆ ಮಾಡಿದವನು ಓರ್ವ ವಿದ್ಯಾರ್ಥಿಯಂತೆ! ಅವನಿಗೆ ತಕ್ಕ ಶಿಕ್ಷೆಯಾದ ಬಗ್ಗೆ ಯಾವ ಸುದ್ದಿಯೂ ಇಲ್ಲ (ಅ ಪ್ರೆ ತಂತಿ)

ಜಹೀರ ಶಹರಿಗೆ ಪಟ್ಟ.

ಹೊಸದಿಲ್ಲಿ ತಾ॥ ೧೪—ಕಾಬೂಲದಲ್ಲಿ ನಡೆದ ಸಂಗತಿಯನ್ನು ಕಣ್ಣಾರೆ ಕಂಡವನೊಬ್ಬನು ಹೇಳುವದು ನಾದೀರಶಹರ ಕೊಲೆಯಾದ ಕೂಡಲೆ ಪಾರ್ಲಮೆಂಟಿನ ಸಭಾಸದರೆಲ್ಲರೂ ಸೇರಿದರು ನಾದೀರಶಹರ ತಮ್ಮಂದಿರು ಜಹೀರ ಶಹರನ್ನು ಪಟ್ಟಕ್ಕೆ ಕುಳ್ಳಿರಿಸಬೇಕೆಂದರು ಅದರಂತೆ, ಒಮ್ಮತದಿಂದ ಜಹೀರಶಹರು ಅಫಗಾಣಿಸ್ತಾನದ ರಾಜರೆಂದು ದೇಶದಲ್ಲೆಲ್ಲ ಸಾರಲ್ಪಟ್ಟಿತು [ಅ ಪ್ರೆ ತಂತಿ

ಕೊಲೆಯ ಬಗ್ಗೆ ವಿಶೇಷ ಸುದ್ದಿ.

ಹೊಸದಿಲ್ಲಿ ತಾ॥ ೧೩—ಕಣ್ಣಾರೆ ಕಂಡವನೊಬ್ಬನು ಹೇಳುವದು—ಬುಧವಾರ ೮ನೇ ತಾರೀಖಿನ ದಿನ [ಮಧ್ಯಾಹ್ನ ೩ ಗಂಟೆಗೆ] ಕಾಬೂಲ ದಿಲ್‌ಖುಷ್ ಅರಮನೆಯ ಬೈಲಿನಲ್ಲಿ ಶಿಕ್ಷಣ ಖಾತೆಯವರೊಂದು ವಾರ್ಷಿಕ ಇನಾಮು ಸಮಾರಂಭವನ್ನು ಏರ್ಪಡಿಸಿದ್ದರು ಐದು ನೂರು ಮಂದಿ ವಿದ್ಯಾರ್ಥಿಗಳು ಇಲ್ಲದೆ ಮುಖ್ಯ ಮುಖ್ಯ ಗೃಹಸ್ಥರು ಬಂದಿದ್ದರು ಅವರು ೩-೪೦ ಗಂಟೆಗೆ ತಮ್ಮ ದಿವಾಣಖಾನೆಯಿಂದ ಹೊರಗೆ ಬಂದು ಎಲ್ಲರಿಂದ ಸಲಾಂ ತೆಗೆದುಕೊಂಡರು. ಬ್ಯಾಂಡಿನವರು ರಾಷ್ಟ್ರಗೀತವನ್ನು ಬಾರಿಸಿದರು ಬಾದಶಹರು ತಮ್ಮ ಶರೀರ ರಕ್ಷಕರೊಂದಿಗೆ ಸಭೆಯ ಸ್ಥಳಕ್ಕೆ ಬಂದರು ಅದೇ ತಾನೇ ಬಂದರ ಹಿಂದೊಂದು ಹೀಗೆ ಮೂರು ಗುಂಡುಗಳ ಸಪ್ಪಳವಾಯಿತು ಬಾದಶಹರು ತತ್ತರಿಸುತ್ತ ಒಲಗಡೆ ಬಿದ್ದರು ಆಗ್ಗೆ ಯುವರಾಜರು ಅಡ್ಡ ಬಂದರು ಕೊಲೆಗಾರನಿಗೂ ಬಾದಶಹರಿಗೂ ಒಂದು ಯಾರ್ಡ ಮಾತ್ರ ಅಂತರವಿದ್ದಿತು ನೆರೆದ ವಿದ್ಯಾರ್ಥಿಗಳು ಕೊಲೆಗಾರನ ಮೇಲೆ ಬಿದ್ದು ಅವನನ್ನು ಹಿಂಸೆ ಪಡಿಸಿದರು. ಆದರೆ ಯುದ್ಧ ಮಂತ್ರಿಗಳು ವಿದ್ಯಾರ್ಥಿಗಳಿಂದ ಅವನನ್ನು ಬಿಡಿಸಿ ಪೋಲೀಸರಿಗೆ ಒಪ್ಪಿಸಿದರು ತರುವಾಯ ಜನರು ನೆರೆದು ಒಂದೇ ಒಂದು ಗೊಂದಲ ನಡಿಸಿದರು. ಸೋಲ್ಜರರು ಸಿಟ್ಟಿನಿಂದ ಏಳುವಂತೆ ಕಾಣಿಸಿತು. ಆಗ ಯುದ್ಧ ಮಂತ್ರಿಗಳು ತಮ್ಮ ಕಟ್ಟಾಜ್ಞೆಯಿಂದ ಎಲ್ಲವನ್ನು ಶಮನಗೊಳಿಸಿದರು

ಬಾದಶಹರ ದೇಹವನ್ನು ಒಳಗೆ ಒಯ್ಯಲಾಯಿತು ಆ ವೇಳೆ ೧೦ ನಿಮಿಷಗಳಿಗೆ ಅವರ ಜೀವ ಹೋಯಿತು ಸಮಾಚಾರದಲ್ಲಿ ಅವರ ಕುಟುಂಬದವರು ಇದ್ದರು ಎದೆಯಲ್ಲಿ ಒಂದು ಹೊಟ್ಟೆಯಲ್ಲಿ ಒಂದು ಹೀಗೆ ಗುಂಡು ನಟ್ಟಿದ್ದವು (ಅ ಪ್ರೆ ತಂತಿ)

ಪೇಶ್ವೆ ಕಾಗದ ಪತ್ರಗಳಲ್ಲಿಯ ಆಯ್ಕೆಗಳು.

ಮುಂಬೈ ಸರಕಾರದವರು ರಾವಸಾಹೇಬ ಸರದೇಸಾಯರಿಂದ ಮೇಲ್ಕಂಡ ಪುಸ್ತಕ ಮಾಲೆಯ ೩೨ ನೇ ಗ್ರಂಥವನ್ನು ಪ್ರಸಿದ್ಧಪಡಿಸಿದ್ದಾರೆ ಈ ಗ್ರಂಥದಲ್ಲಿಯ ಕಾಗದ ಪತ್ರಗಳಿಂದ ಪೇಶ್ವೆ ಅರಸರ ಮನೆತನದ ಸ್ಥಿತಿಯು ಹೇಗಿತ್ತೆಂಬದು ತಿಳಿಯುವದು ಅಲ್ಲದೆ ಅವರ ಸಾಮಾಜಿಕ, ಶೈಕ್ಷಣಿಕ ಚಟುವಟಿಕೆಗಳು, ಆಟಪಾಟ, ಪ್ರಯಾಣ ಸಾಕಿದ ಪ್ರಾಣಿಗಳು ವಸ್ತ್ರ ಒಡವೆ, ಮುಂತಾದವುಗಳ ವಿಷಯ ಜ್ಞಾನವಾಗುವದು., ಪೇಶ್ವೆ ಅರಸರಲ್ಲಿ ಯಾರ್‍ಯಾರಿಗೆ ಯಾವ್ಯಾವ ವಿಷಯದ ರುಚಿಯಿದ್ದಿತು, ಎಂಬುದು ಒಳ್ಳೆ ಕಾಣುವದು. ಪೇಶ್ವೆಯ ಅರಸರ ಹೆಂಗಸರಿಗೆ ಓದು ಬರಹ ಬರುತ್ತಿತ್ತು. ಕಲ್ಲು ಕಟೆಯುವ ಕಲೆಯು ಪೂರ್ಣ ಸ್ಥಿತಿಗೆ ಮುಟ್ಟಿತ್ತು. ಪುಣೆಯಲ್ಲಿಯ ಮೊದಲನೇ ಬ್ರಿಟಿಷ ರೆಸಿಡೆಂಟರಾದ ಸರ ಚಾರ್ಲಸ ಮೆಲೆಟ್ಟರು ಎಲ್ಲಕ್ಕೂ ಮೊದಲು ಪೇಶ್ವೆ ದರಬಾರದಲ್ಲಿ ಬಣ್ಣದ ಚಿತ್ರ ಪಟಗಳನ್ನು ತೂಗ ಹಾಕಲಿಕ್ಕೆ ಹಚ್ಚಿದರು ಪೇಶ್ವೆಯ ಕಾಗದ ಪತ್ರಗಳಿಂದ ಪೇಶ್ವೆಯ ಸಂಬಂಧವಾದ ಹಲವು ಸಂಗತಿಗಳು ತಿಳಿದು ಬರುತ್ತವೆ ಈ ಪುಸ್ತಕದ ಬೆಲೆ ರೂ ೨-೫-೦ ಸಿಗುವ ವಿಳಾಸ—ಗವ್ಹರ್ನಮೆಂಟ ಬುಕ್ ಡಿಪೋ

ಕರ್ನಾಟಕ ಪತ್ರಿಕೋದ್ಯೋಗಿಗಳ ಸಂಘ.

ಈ ಸಂಘವು ೧೯೩೮ ನೇ ಇಸ್ವಿಯಲ್ಲಿ ಸ್ಥಾಪಿತವಾಯಿತು ಕರ್ನಾಟಕ ಪತ್ರಿಕಾ ಕರ್ತರ ಮೊದಲನೇ ಪರಿಷತ್ತು ಬಾಗಲಕೋಟೆಯಲ್ಲಿಯೂ ಎರಡನೇ ಪರಿಷತ್ತು ಬೆಳಗಾವಿಯಲ್ಲಿಯೂ ಕೂಡಿ ದೇಶದಲ್ಲಿಯ ರಾಜಕೀಯ ಪರಿಸ್ಥಿತಿಯ ಮೂಲಕ ಮತ್ತು ನನ್ನ ಕಾರಾಗೃಹವಾಸದ ಮೂಲಕ ಈ ಸಂಘದ ಕೆಲಸವು ಆಗಬೇಕಾಗುವಷ್ಟು ಆಗಲಿಲ್ಲವೆಂದು ವ್ಯಸನ ಪಡಬೇಕಾಗಿದೆ ಪ್ರೆಸ್ ಕಾಯಿದೆ ಮತ್ತು ಆರ್ಡಿನನ್ಸುಗಳನ್ನು ನಿಷೇಧಿಸಿ ವಾಯಿಸರಾಯರಿಗೆ ಆಯಾ ಕಾಲಕ್ಕೆ ತಂತಿಗಳನ್ನು ಕಳಿಸಿತು. ಇನ್ನು ಮುಂದೆ ಸಂಘದ ಚಟುವಟಿಕೆಗಳು ಹೆಚ್ಚಾಗುವದು ಅವಶ್ಯವಿರುತ್ತದೆ ಪತ್ರಿಕಾ ಕರ್ತರ ಪರಿಷತ್ತನ್ನು ಕೂಡಿಸುವದಾದರೂ ಅವಶ್ಯವಿರುತ್ತದೆ. ಹುಬ್ಬಳ್ಳಿಯಲ್ಲಿ ಕೂಡುವ ಸಾಹಿತ್ಯ ಪರಿಷತ್ತಿನ ಕಾಲಕ್ಕೆ ಈ ಪರಿಷತ್ತನ್ನು ಕೂಡಿಸಬಹುದು. ಹುಬ್ಬಳ್ಳಿಯ ಸ್ವಾಗತ ಸಂಘದವರು ಈ ಪರಿಷತ್ತಿನ ವ್ಯವಸ್ಥೆಯನ್ನು ಮಾಡಲಿಕ್ಕೆ ಒಪ್ಪಿಕೊಳ್ಳುವದು ಮುಖ್ಯ ವಿಷಯ. ಇದರ ಬಗ್ಗೆ ನಾನು ಅವರ ಹುಬ್ಬಳ್ಳಿಯವರ ಕೂಡ ಪತ್ರವ್ಯವಹಾರ ನಡಿಸಿದ್ದೇನೆ. ಕರ್ನಾಟಕದಲ್ಲಿಯ ಎಲ್ಲ ಪತ್ರಕರ್ತರು ತಮ್ಮ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಬೇಕು

ಮೋಹರೆ ಹಣಮಂತರಾಯ
ಕಾರ್ಯದರ್ಶಿ ಕ ಪ ಸಂಘ

ಬಡ ರೈತರ ಕಷ್ಟ ನಿವಾರಣೆ.

ಜೋಗ ಹಾಗೂ ಪಾಟೀಲರು ಪ್ರಯತ್ನಿಸುವರು

ಮಳೆಯಾಗದ್ದರಿಂದಲೂ ಕೆಲ ಕಡೆಗೆ ಹೆಚ್ಚಾಗಿ ಮಳೆಯಾಗಿಯೂ ಬೆಳೆ ಬಾರದ ಮೂಲಕ ಹಾಗೂ ಈಗಿನ ಮಂದಿಯ ಮೂಲಕ ದಿನೇ ದಿನೇ ಕುಗ್ಗುತ್ತ ನಡೆದ ಬಡ ರೈತರ ಸ್ಥಿತಿಯ ಬಗ್ಗೆ ಶ್ರೀಯುತರುಗಳಾದ ಜೋಗ ವಿಶ್ವನಾಥರಾಯರೂ ರಾವಬಹಾದ್ದೂರ ಪಾಟೀಲರೂ ವಿಚಾರ ಮಾಡುತ್ತಿರುವರೆಂದು ತಿಳಿಯುತ್ತದೆ ರೈತರಿಗಾಗಿ ಸರಕಾರದಿಂದ ಯಾವ ರೀತಿಯಲ್ಲಿ ಸಹಾಯ ಕಾರ್ಯಗಳನ್ನು ಸಂಪಾದಿಸಬೇಕೆಂಬದನ್ನು ಅವರು ಯೋಚಿಸುತ್ತಿರುವರು ಈ ಜಿಲ್ಲೆಯಲ್ಲಿದ್ದ ಇತ್ತೀಚಿನ ಕೌನ್ಸಿಲದಾರರ ಸಂಗಡ ಅವರಿಬ್ಬರೂ ಈ ವಿಷಯದಲ್ಲಿ ವಿಚಾರವಿನಿಮಯ ಮಾಡುತ್ತಿರುವರಂತೆ,

ತಮ್ಮ ಯೋಜನೆ ಹಾಗೂ ವಿಚಾರವಿನಿಮಯಗಳನ್ನು ಇವರಿಬ್ಬರೂ ಬೇಗನೇ ಮುಗಿಸುವರಾಗಿ ಆಶೆಯಿದೆ ಯಾಕಂದರೆ ಕೌನ್ಸಿಲಿನ ಬೈಠಕವು ಜಾನೇವರಿಯಲ್ಲಿ ಪ್ರಾರಂಭವಾಗುವದಿದೆ ತಡವಾದರೆ ಎಚ್ಚತ್ತಿದ್ದರ ಲಾಭವೂ ಕೂಡ ಆಗದು

ಕೊನೆಯುಚ್ಚು

ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುಸ್ಥಿತವಾಗುತ್ತದೆ ಬಾಟ್ಲಿ ಕಿ. ರು ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು — **ಧಾರವಾಡ ಫಾರ್ಮಸಿ ಹಾಗೂ ಬಾಳಿಗಾ ಫಾರ್ಮಸಿ**
ಗಾ ಕುಲಕರ್ಣಿಯವರ ...
೧೧-೧೧ ಲ್ಯಾಬೋರೇಟರಿ ನಂಬ ೩

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ೧ ಅಡಿ ಗಿಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ. ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ:-**ರಾಘವ ಫಾರ್ಮಸಿ ಗೋಕಾಕ** ಜಿ. ಬೆಳಗಾವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ



೧ನೇ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರ ಪಡೆದಿದೆ

೨ನೇ ಮಹಾಯಾತ್ರಾ ಪ್ರವಾಸವು

ರೇಲ್ವೆ ಕಂಪನಿಯಿಂದ ಪರವಾನಗೀ ಪಡೆಕೊಂಡಿರುತ್ತದೆ

ತಾ॥ ೨೯-೧೨-೧೯೩೩ ರಿಂದ ೨೫-೨-೧೯೩೪ ರ ವರೆಗೆ

ಮುಂಬಯಿ, ಉಜ್ಜನಿ, ದಿಲ್ಲಿ ಶ್ರೀಕಾಶಿ, ಗಯಾ, ಕಲ್ಕತ್ತಾ, ಮದ್ರಾಸ, ರಾಮೇಶ್ವರ ಲಂಕಾ, ಮೈಸೂರ ಮೊದಲಾದ ೮೮ ಪುಣ್ಯ ಕ್ಷೇತ್ರಗಳ ಯಾತ್ರಾ ಸುಯೋಗವು **ಸೆಕಂಡ ಕ್ಲಾಸ** ೩೧೧ ರೂ **ಥರ್ಡಕ್ಲಾಸ** ೧೪೦ ರೂ ಮಾತ್ರ **ಟಿಕೇಟ** ಪಡೆಯತಕ್ಕವರು ಕೂಡಲೇ ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು. ವಿಶೇಷ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು

ಜಮೀನದಾರರ ಕಾಮಧೇನು.

ಸದರಿ ಕಂಪನಿಯ ಎಂಜಿನ್ ರೆಂಟೆಗಳಿಂದ ಕಳೆದ ಮೂರು ವರ್ಷಗಳಂತೆ ಬರುವ ೧೯೩೪ನೇ ಇಸವಿಯ ಬೇಸಿಗೆಯಲ್ಲಾದರೂ ಪಡ ಜಮೀನುಗಳು ಯೋಗ್ಯ ದರದಲ್ಲಿ ಕಿರ್ದೀ ಮಾಡಿ ಕೊಡಲ್ಪಡುವವು

ಆಫೀಸು ಸ್ಟೇಶನ್ ರೋಡ ಹುಬ್ಬಳ್ಳಿ **ಜಿ ಎ. ಶಿರೂರ.**
೮ ತಾ॥ ೩-೧೧-೧೯೩೩ ಆರ್ಗನೈಜರ

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ ಇದರಲ್ಲಿ ಎರಡು ನಕಾಶೆಗಳಿರುವವು ಬೆಲೆ—೦-೬-೬ ಮಾತ್ರ, ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. **ಬೆಲೆ ಬಾಟ್ಲಿ** ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ
೧೮-೧೦-೩೩ **ಗದಗ ಶ್ರೀ ದತ್ತಾತ್ರೇಯ ಬುಕ್ ಡೀಪೊ**
ಶಹಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ## ಅಸ್ಪೃಶ್ಯತಾ ನಿವಾರಣೆ. { **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ ಶ್ರೀಶಂಕರ, ರಾಮಾನುಜ ಮಧ್ವ, ಬಸವೇಶ್ವರ ಮಗ್ಗೈರಿ ಧರ್ಮಗುರುಗಳ ಉಕ್ತಿಗಳಂತೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಡ್ವಾನ್ಸಿಲ್ಲದೆ ವ್ಹಿ ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೩ **ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.**

ಕೇವಲ ನಾಲ್ಕೇ ದಿವಸ! **ಕೇವಲ ನಾಲ್ಕೇ ದಿವಸ !!**

ವಿಜಯ ಸಿನೇಮಾ ಧಾರವಾಡ.

ಸರಸ್ವತಿ ಫಿ ಕಂ ಸುಪ್ರಸಿದ್ಧ ಮಾತಾಡುವ, ಹಾಡುವ ಚಿತ್ರಪಟ.

ಶ್ಯಾಮ ಸುಂದರ

ವೇಳೆ:— ೬, ೧೦-೩೦ಕ್ಕೆ **ರವಿವಾರ, ಮಂಗಳವಾರ ಹಗಲು ೪ ಕ್ಕೆ**

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೇ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ ಕಲ್ಲು] ಗಳು ಬೇಕಾಗಿವೆ, ಮಾರುವವರು ಕನ್ನಡಿಗ ಕಾರ್ಯಾಲಯದಲ್ಲಿ ತಿಳಿಸಬೇಕು

(೧೦ ಕನ್ನಡಿಗ ಕಾರ್ಯಾಲಯ

Moderate fees! ***Excellant Results!!***

The NEW COACHING CLASSES

For High School & College Students

Fort Dharwar **N R Sunkad B. A.**
13 November 1933 **D R. Kengeur B A.**

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ
ಸಂಪಾದಕರು:— **ಮೊಹರೆ ಹಣಮಂತರಾಯರು**

ಸಪ್ಟೆಂಬರ ೩ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ **ಹೊರಡಹತ್ತಿದೆ**. ವಿಚಾರ ಪರಿಪೂರ್ಣವಾದ ಲೇಖಗಳೂ ಖಂಡ ತುಂಡಿನ ನುಡಿಗಳೂ, ಬಿಸಿ ಬಿಸಿ ಸುದ್ದಿಗಳ ಬೇಕಾಗಿದ್ದರೆ ಇದನ್ನೇ ಓದಿರಿ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೧೨—೦

ವ್ಯವಸ್ಥಾಪಕರು- **'ಕರ್ನಾಟಕ ವೈಭವ'** ವಿಜಾಪುರ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ವಂಡಿಕೆಯ ಬಾಗಿಲು ತಯಾರಾಗುತ್ತವೆ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲಿಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ಬಿ. ೨೭೭೮

ನಿತ್ಯ ಪತ್ರ ಬೆಲೆ ೩ ಪೈ

ಇನ್ಸ್ಯುಲರನ್ಸ
ಜೀವಿಮೆ ಇಳಿಸಲು
ಯುನಾಯಿಟೆಡ್
ಕರ್ನಾಟಕ ಇನ್ಸ್ಯುಲರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನ್ಸ್ಯುಲರನ್ಸ
ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ.ಕಂ.ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:— ಆಲೂರ ವೆಂಕಟರಾಯರು

ಸೋಮವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

[೧೦] ಧಾರವಾಡ— ಗುರುವಾರ ಕಾರ್ತಿಕ ಬಹುಳ ೧೪ ಶಕೆ ೧೮೫೫ ತಾ|| ೧೬-೧೧-೩೩ [ಸಂಚಿಕೆ ೧೬೩

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಾಗಿ ಬರೆಯಿರಿ

ಧಾರವಾಡ.
ತಾ|| ೨೫-೮-೩೩

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಉದ್ಯೋಗವು ಬೇಕೆ?

ಅಗ್ಗದ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಇಂಥ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳಿ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ (೨) ಮುನಿಚ್ ಫಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯಿ ಹೊಸ ಮೋಟಾರ ಸಾಯಕಲ್ (೪) ಸಬಕಾರ (೫) ಮೋಟಾರ ವಸ್ತು ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನು ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ.

ನಮ್ಮ ಹದ್ದು:—

ಕಿಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುವಲ್ಲಿ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ಸೂ. ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ದೀಕ್ಷಿತರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಕುಂದೇಕರ ಯಳಲಾಸಪೂರ ಆ್ಯಂಡ ಕೋ ದೇವಕರಣ ಮ್ಯಾನ್ಸನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಅತ್ಯುತ್ತಮ ದರದಲ್ಲಿ ಸೋವಿ

ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ. ವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು, ಕಿವಿ ಸೋರುವದು ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ. ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ. ಟೋಣಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಕರ್ನಾಟಕ ಏಕೀಕರಣಕ್ಕೆ ಕೇಸರಿ ಪತ್ರದ ಬೆಂಬಲ

ಮಹಾರಾಷ್ಟ್ರದ ಮುಖಪತ್ರವಾದ "ಕೇಸರಿ" ಪತ್ರಿಕೆಯು ಕರ್ನಾಟಕ ಏಕೀಕರಣದ ವಿಷಯಕ್ಕೆ ನವಂಬರ ೧೪ನೆಯ ತಾರೀಖಿನ ಸಂಚಿಕೆಯಲ್ಲಿ ಹೀಗೆ ಬರೆದಿದೆ.

ಹೊಸ ರಾಜ್ಯಘಟನೆಯಲ್ಲಿ ಕರ್ನಾಟಕದ್ದೊಂದು ಸ್ವತಂತ್ರ ಪ್ರಾಂತವನ್ನು ನಿರ್ಮಿಸಬೇಕು, ಅದರಲ್ಲಿ ಕನ್ನಡ ಭಾಷೆಯನ್ನಾಡುವ ಜನರದಷ್ಟೇ ಅಂತರ್ಭಾವವಾಗಬೇಕೆಂಬ ವಿಷಯಕ್ಕೆ ಕರ್ನಾಟಕದಲ್ಲಿ ಆಂದೋಲನವು ನಡೆದಿದೆ. ಧಾರವಾಡದ ಮುನಸಿಪಾಲಿಟಿಯವರು ಗವ್ಹರ್ನರರಿಗೆ ಮಾನಪತ್ರವಿತ್ತ ಕಾಲಕ್ಕೆ ಈ ಬೇಡಿಕೆಯು ಉಚ್ಚಾರವಾದರೂ ಮಾನಪತ್ರದಲ್ಲಿ ಮಾಡಲಾಗಿತ್ತು. ಆದರೆ ಗವ್ಹರ್ನರರು ಈ ಬಯಕೆಗೆ ಸ್ಪಷ್ಟವಾಗಿ ನಕಾರ ಹೇಳಿದ್ದಲ್ಲದೆ ಇನ್ನು ಮುಂದೆ ಬರಲಿರುವ ಸಂಯುಕ್ತ ರಾಜ್ಯಘಟನೆಯಲ್ಲಿ ಘಟಕಗಳು ಹೆಚ್ಚಾದಷ್ಟು ರಾಜ್ಯಕಾರಭಾರದ ವೆಚ್ಚವೂ ಬೆಳೆಯುವದೆಂಬ ಕಾರಣವನ್ನು ಹೇಳಿದರು ಸಿಂಧ ಅಥವಾ ಓರಿಸಾ ಪ್ರಾಂತಗಳನ್ನು ಬೇರ್ಪಡಿಸುವಾಗ ಯಾವ ಸರಕಾರಕ್ಕೆ ಈ ವೆಚ್ಚದ 'ಬೆಚ್ಚ"ವು ಬಾಧಿಸಲಿಲ್ಲವೊ ಅದೇ ಸರಕಾರಕ್ಕೆ ಈ ಬೆಚ್ಚವನ್ನು ತಮ್ಮ ಅನುಕೂಲತೆಯ ಸಲುವಾಗಿ ಜನರ ಮುಂದೆ ನಿಲ್ಲಿಸಲು ಮಾತ್ರ ಬರುತ್ತದೆ! ಇದು "ಅನೇಕ ರೂಪಾ ನೃಪನೀತಿ" ಯೊಳಗಿನದೊಂದು ಗಾರುಡವೆಂದೇ ಹೇಳಬೇಕು ಸಿಂಧ, ಓರಿಸಾ, ಸರಹದ್ದು ಪ್ರಾಂತ ಮುಂತಾದ ಬೇರೆ ಬೇರೆ ಸಣ್ಣ ಪ್ರಾಂತಗಳನ್ನು ನಿರ್ಮಿಸುವದರಿಂದ ಮಧ್ಯವರ್ತಿ ಸರಕಾರದವರು ಎಷ್ಟು ಭೂರ್ದಂಡವನ್ನು ತೆತ್ತಬೇಕಾಗುವದೊ ಅಥವಾ ಈಗಲೆ ತೆತ್ತಬೇಕಾಗುತ್ತಿರುವದೊ ಅದು ಕರ್ನಾಟಕ ಪ್ರಾಂತವನ್ನು ಬೇರ್ಪಡಿಸುವದರಿಂದ ಎಷ್ಟುಮಟ್ಟಿಗೆ ಬೆಳೆಯಬಹುದಾಗಿದ್ದಿತು? ಮದ್ರಾಸಿನ ಕಾನೂನ ಮಂಡಲದಲ್ಲಿ ಭಾಷಾನುಗುಣವಾದ ಪ್ರಾಂತರಚನೆಯ ಯೋಜನೆಯ ವಿಷಯಕ್ಕೆ ಮೊನ್ನೆ ಮೊನ್ನೆ ಚರ್ಚೆಯಾಗಿ ಮದ್ರಾಸ ಇಲಾಖೆಯಲ್ಲಿ ವಿಭಾಗಗಳನ್ನು ಮಾಡಬಾರದೆಂದೂ ತಮಿಳು ಮತ್ತು ತೆಲಗು ಪ್ರಾಂತಗಳನ್ನು ಬೇರ್ಪಡಿಸಬಾರದೆಂದೂ ಬಹುಮತದಿಂದ ನಿರ್ಣಯವಾಯಿತು ಆದರೆ ಮದ್ರಾಸ ಇಲಾಖೆಯೊಳಗಿನ ಕರ್ನಾಟಕ ವಿಭಾಗವನ್ನು ಮಾತ್ರ ಬೇರ್ಪಡಿಸಬೇಕೆಂಬ ಉಪಸೂಚನೆಯು ಇದೇ ವಾದವಿವಾದದ ಕಾಲಕ್ಕೆ ಮಂಜೂರಾಯಿತು ಈ ಕರ್ನಾಟಕ ಭಾಗವನ್ನು ಮುಂಬೈ ಇಲಾಖೆಯೊಳಗಿನ ಕರ್ನಾಟಕ ವಿಭಾಗದೊಂದಿಗೆ ಕೂಡಿಸುವದರಿಂದ ಆಗುವ ಹೊಸ ಕರ್ನಾಟಕ ಪ್ರಾಂತವು ಸಿಂಧ ಅಥವಾ ಓರಿಸಾ ಪ್ರಾಂತಕ್ಕಿಂತ ಚಿಕ್ಕದಾಗಲಾರದು ಆದುದರಿಂದ ಮುಂಬಯಿ ಸರಕಾರದವರು ಈ ಬೇಡಿಕೆಯ ಬಗ್ಗೆ ಇನ್ನೊಮ್ಮೆ ವಿಚಾರ ಮಾಡಬೇಕು.

ಗ್ರಂಥ ವಿಮರ್ಶೆ.

" ಶ್ರೀ ವಿದುರಾಶ್ವತ್ಥ ಕ್ಷೇತ್ರ "

ಈ ಚಿಕ್ಕ ಗ್ರಂಥವನ್ನು ಶ್ರೀ ರಾಮಾನಂದ ಸ್ವಾಮಿಯವರು ಬರೆದಿದ್ದು ಶ್ರೀ ದುರ್ಗಾದೇವಿ ಪೀಠದವರು ಯಾತ್ರಿಕರ ಸಲುವಾಗಿ ಪ್ರಸಿದ್ಧ ಮಾಡಿದ್ದಾರೆ ಬೆಲೆ ೨ ಆಣೆ

ಈ ಕ್ಷೇತ್ರವು ಮೈಸೂರ ಸಂಸ್ಥಾನದ ಕೋಲಾರ ಜಿಲ್ಲೆಯಲ್ಲಿ ಹರಿಯುವ ಪಿನಾಕಿನಿ ನದಿಯ ತೀರದಲ್ಲಿ ಅದೆ. ಈ ಪುಸ್ತಕದಲ್ಲಿ ಕ್ಷೇತ್ರದ ವರ್ಣನೆ ಅದರ ಪ್ರಾಚೀನತ್ವ, ಮಹಿಮೆ, ಅನೇಕ ಯಾತ್ರಿಕರಿಗೆ ಬಂದ ದೃಷ್ಟಾಂತಗಳು ಯಾತ್ರಿಕರಿಗೆ ಅನುಕೂಲತೆಗಳು ಇವೇ ಮುಂತಾದ ಅನೇಕ ಸಂಗತಿಗಳು ವಿವರಿಸಲ್ಪಟ್ಟಿರುತ್ತವೆ.

ಈ ಕ್ಷೇತ್ರದಲ್ಲಿ ಧರ್ಮ ಕಾರ್ಯಗಳನ್ನು ಮಾಡುವ ಅನುಕೂಲತೆಯುಂಟೆಂದು ಪುಸ್ತಕದ ಕಡೆಗೆ ಒಂದು ಪಟ್ಟಿಯು ಕೊಡಲ್ಪಟ್ಟಿದೆ. ಆದರಿಂದ ಯಾವ ಯಾವ ಕಾರ್ಯಗಳಿಗೆ ಎಷ್ಟೆಷ್ಟು ಕಾಣಿಕೆಯನ್ನು ಕ್ಷೇತ್ರಕ್ಕೆ ಸಲ್ಲಿಸಬೇಕೆಂಬುದು ತಿಳಿಯುವುದು

ಯಾತ್ರಿಕರು ಈ ಪುಸ್ತಕದ ಉಪಯೋಗ ಮಾಡಿಕೊಂಡು ಲೇಖಕರ ಹಾಗೂ ಪ್ರಕಾಶಕರ ಶ್ರಮವನ್ನು ಸಫಲಗೊಳಿಸಲಿ.

" ಖಾದಿಯು ಬಡವರ ಕಾಮಧೇನು "

ಇದು ಸದ್ಯದ ಸಾಮಾಜಿಕ ಪರಿಸ್ಥಿತಿಯನ್ನು ಅನುಲಕ್ಷಿಸಿ ಬರೆದ ಒಂದು ಚಿಕ್ಕ ದೃಶ್ಯ ಪ್ರಬಂಧವು ಇದನ್ನು ಶ್ರೀಮಾನ್ ಎಂ. ಡಿ. ಆಳ್ವಾರ ಐಯ್ಯಂಗಾರರವರು ಬರೆದಿದ್ದಾರೆ ಶ್ರೀರಾಮಸೇವಾ ಭಕ್ತಮಂಡಲಿ, ಮಲ್ಲೇಶ್ವರಂ ಬೆಂಗಳೂರ ಇವರು ಪ್ರಸಿದ್ಧ ಮಾಡಿದ್ದಾರೆ. ಪುಟ ೩೮ ಬೆಲೆ ೦—೨—೦

ಇದರಲ್ಲಿ ಮದ್ಯಪಾನ, ನಾಟಕ, ಸಿನೇಮಾ, ವೇಶ್ಯಾಗಮನ ಇವೇ ಮುಂತಾದ ದುಶ್ಚಟಗಳಿಂದಾಗುವ ಕೆಟ್ಟ ಪರಿಣಾಮಗಳು ಪ್ರಸಂಗೋಚಿತವಾಗಿ ಹೇಳಲ್ಪಟ್ಟಿದ್ದರೂ, ಖಾದಿಯ ವಸ್ತ್ರಗಳ ಉಪಯೋಗಕ್ಕೇ ಹೆಚ್ಚು ಮಹತ್ವಕೊಟ್ಟು ಪ್ರಬಂಧದ ಹೆಸರು " ಖಾದಿಯು ಬಡವರ ಕಾಮಧೇನು " ಎಂದು ಇಡಲ್ಪಟ್ಟಿರುವುದು. ಅಂದರೆ ಖಾದಿಯನ್ನು ಉಪಯೋಗಿಸುವದರಿಂದ ಎಲ್ಲ ಬಗೆಯ ದುಶ್ಚಟಗಳು ತಮ್ಮಷ್ಟಕ್ಕೆ ತಾವೆ ಬಿಟ್ಟು ಹೋಗಿ ಮನುಷ್ಯನು ಸುಖ ಹೊಂದುವನೆಂದು ಹೇಳುವದೇ ಲೇಖಕನ ಉದ್ದೇಶವಿದ್ದಂತೆ ತೋರುವುದು

ಈ ಪುಸ್ತಕದಲ್ಲಿ ಆಯಾ ಪಾತ್ರಗಳಿಗೆ ತಕ್ಕಂತೆ ಭಾಷೆಯು ಉಪಯೋಗಿಸಲ್ಪಟ್ಟಿರುವುದು ಕೆಳಗೆ ಕೊಟ್ಟ ಶಬ್ದಗಳನ್ನು ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿಕೊಳ್ಳುವುದು. ಭ್ರಾಂತು [ಪು. ೨] ನಾಗರಿಕ [ಪು ೯—೨] ಕೋಟ್ಯಾಂತರ [ಪು ೧೩] ಪತಿಗೆ (ಪು.೧೯)

ತಿದ್ದುಪಡಿ

ಮೊನ್ನಿನ ಅಂದರೆ ೯ ೧೧-೩ನೇ ತಾರೀಖಿನ ಪತ್ರಿಕೆಯಲ್ಲಿ ೩ನೇ ಪುಟದಲ್ಲಿಯ ಮೊದಲನೇ ಕಾಲಮಿನಲ್ಲ ಪ್ರಾರಂಭಕ್ಕೆ 'ಮಹಾತ್ಮರಿಗೆ ಎಚ್ಚರಿಕೆಯ ಸೂಚನೆ' ಎಂಬ ತಲೆಬರಹದ ಸುದ್ದಿಯಲ್ಲಿ "ಮಹಾತ್ಮರನ್ನು ಕೊಲ್ಲುವೆವು" ಎಂದು ಇದ್ದಲ್ಲಿ ಡಾ '' ಖರೆಯವರನ್ನು ಕೊಲ್ಲುವೆವು " ಎಂದು ಓದಬೇಕು.

ಕನ್ನಡಿಗ

ಗುರುವಾರ ತಾರೀಖು ೧೬ ೧೧-೧೯೩೩

ವಿಜಯನಗರ ಉತ್ಸವ.

ವಿಜಯನಗರದ ಉತ್ಸವದ ಸಿದ್ಧತೆಯನ್ನು ಕರ್ನಾಟಕವು ಮಾಡಬೇಕಾಗಿರುವದಷ್ಟೆ! ಆ ಸಂಬಂಧವಾಗಿ ಅನೇಕ ಕಮೀಟಿಗಳು ಅನೇಕ ಕಡೆಗೆ ಸ್ಥಾಪಿತವಾಗಿದ್ದರೂ ಧಾರವಾಡದಲ್ಲಿ ಧಾರವಾಡದ ಮಟ್ಟಿಗೆ ಇನ್ನು ಕಮೀಟಿಯ ಸ್ಥಾಪನೆಯಾಗಿದ್ದಿಲ್ಲ ಎರಡು ವರ್ಷಗಳ ಹಿಂದೆ ನಾಡಹಬ್ಬದ ಕಾಲದಲ್ಲಿ ಈ ಉತ್ಸವದ ವಿಚಾರವು ಸ್ಥಿರವಾದಾಗ್ಗ ಇಡೀ ಕರ್ನಾಟಕದ ಕೇಂದ್ರ ಸಭೆಯೊಂದನ್ನು ಸ್ಥಾಪಿಸುವ ಉದ್ದೇಶದಿಂದ ಒಂದು ಕಮೀಟಿಯು ಸ್ಥಾಪಿಸಲ್ಪಟ್ಟಿತ್ತು. ಆದರೆ ಪ್ರತ್ಯಕ್ಷ ಕಾರ್ಯವನ್ನು ಅದು ಬಹಳ ಸ್ವಲ್ಪ ಮಾಡಿತ್ತು, ನಾವು ಹಿಂದಕ್ಕೆ ಹೇಳಿದಂತೆ ಎಲ್ಲಕ್ಕೂ ಮುಂಚೆ ಮಾಡಬೇಕಾದುದು ಅಖಿಲ ಕರ್ನಾಟಕದ ಪ್ರತಿನಿಧಿಗಳನ್ನು ಕರೆದು ಮುಖ್ಯ ಸಂಸ್ಥೆಯನ್ನೇರ್ಪಡಿಸುವುದು ಈ ಸಲ ಹುಬ್ಬಳ್ಳಿಯಲ್ಲಿ ಕೂಡುವ ಸಾಹಿತ್ಯ ಸಮ್ಮೇಲನದ ಕಾರ್ಯಕ್ಕೆ ಆ ಬಗೆಯ ಸಭೆಯು ಕೂಡಿಸಲ್ಪಡಬೇಕೆಂದು ಜನರ ಇಚ್ಛೆಯಿತ್ತು. ಆ ಮೇರೆಗೆ ಹುಬ್ಬಳ್ಳಿಯವರು ಇದನ್ನು ಕೂಡಿಸುವದನ್ನು ನಿರ್ಣಯಿಸಿದುದಕ್ಕಾಗಿ ನಾವು ಅವನ್ನು ಅಭಿನಂದಿಸುತ್ತೇವೆ. ಹಾಗೆಯೇ ಹುಬ್ಬಳ್ಳಿಯವರು ಈ ತಿಂಗಳಲ್ಲಿ ಮುಂಚೆ ಅಖಿಲ ಕರ್ನಾಟಕದ ಕೆಲವು ಜನರೊಂದು ಪ್ರಾಸ್ತಾವಿಕ ಸಭೆಯನ್ನು ಕರೆಯುವದನ್ನು ನಿಶ್ಚಯಿಸಿರುವುದೂ ಒಳಿತೇ ಆಯಿತು. ಏಕೆಂದರೆ ಈ ಪ್ರಾಸ್ತಾವಿಕ ಸಭೆಯಲ್ಲಿ ಈ ವಿಷಯದ ಸಾದ್ಯಂತ ಚರ್ಚೆಯಾದರೆ ಉತ್ಸವದ ಸ್ಥೂಲವಾದ ರೂಪರೇಷೆಯನ್ನು ಗೊತ್ತುಪಡಿಸುವದಕ್ಕೆ ಅನುವು ಆಗುತ್ತದೆ

ಈ ಉತ್ಸವದ ಸಂಬಂಧದಿಂದ ಒಂದು ಕಮೀಟಿಯನ್ನು ನೇಮಿಸಲಿಕ್ಕೆ ಮೊನ್ನೆ ೧೨-೧೧-೩೩ನೆಯ ದಿವಸ ರಿಟಾಯರ್ಡ ಸಬ್‌ಜಜ್ಜರೂ ಇತಿಹಾಸ ಭಕ್ತರೂ ಆದ ಶ್ರೀ ಹಾಳಭಾವಿ ಇವರ ಅಧ್ಯಕ್ಷತೆಯಲ್ಲಿ ಧಾರವಾಡದ ನಾಗರಿಕರ ಸಭೆ ಗೂಡಿ ಒಂದು ಕಮೀಟಿಯು ಸ್ಥಾಪಿತವಾಗಿದೆ ಈ ಕಮೀಟಿಗೆ ಧಾರವಾಡದ ನಾಗರಿಕರು ವಿಶೇಷ ಜನರು ಬರಲಿಲ್ಲವೆಂದು ಸಭೆಯಲ್ಲಿ ಹಲವರ್ರು ವಿಷಾದವನ್ನು ವ್ಯಕ್ತಪಡಿಸಿದರು. ಮತ್ತು ಸಭೆ ಮಾಡಿದವರಲ್ಲಿ ಕೂಡ ಅನೇಕರು ಬಾರದುದಕ್ಕೆ ಆಶ್ಚರ್ಯಪಟ್ಟರು ಆದರೂ, ಕೊನೆಗೆ ಒಂದು ಕಮೀಟಿಯು ಸ್ಥಾಪನವಾದುದು ಸುದೈವವೆಂದೇ ಅನ್ನಬೇಕು. ಧಾರವಾಡದಲ್ಲಿ ಸಾರ್ವಜನಿಕ ಜೀವನದ ಕಡೆಗೆ ಲಕ್ಷ್ಯಕೊಡುವ ಧನಿಕರು ಕಡಿಮೆ ಬೆಳಗಾಂವಿಯಲ್ಲಿ ದೇ. ಬೆಳವಿ, ದೇ. ಜೋಶಿ ಮುಂತಾದವರೂ ವಿಜಾಪುರದಲ್ಲಿ ದೇ. ಶ್ರೀನಿವಾಸರಾವ ಕೌಜಲಗಿಯವರಂಥವರೂ ಪ್ರತಿಯೊಂದು ಸಾರ್ವಜನಿಕ ಚಟುವಟಿಕೆಯಲ್ಲಿ ಭಾಗವಹಿಸಿಕೊಳ್ಳುತ್ತಿರುವುದರಿಂದ ಅಲ್ಲಿಯ ಸಾರ್ವಜನಿಕ ಸಂಸ್ಥೆಗಳಿಗೆ ಒಂದು ಬಗೆಯ ಸ್ಥೈರ್ಯ ಬಂದಿರುತ್ತದೆ ಆ ಸ್ಥಿತಿ ಇಲ್ಲಿ ಇಲ್ಲ ಆದರೂ ಈಗ ಕಮೀಟಿಯಾಗಿರುವುದರಿಂದ, ಇನ್ನಾದರೂ ಧಾರವಾಡದವರು ಎಚ್ಚತ್ತು ಕರ್ತವ್ಯದಕ್ಷರಾಗುವರೆಂದು ನಂಬಿದ್ದೇವೆ ಧಾರವಾಡದಲ್ಲಿ ಜಹಾಗೀರದಾರರು ದೇಸಾಯಿ ದೇಶಪಾಂಡೆ ಮುಂತಾದವರಿಗೂ ಕೊರತೆಯಿಲ್ಲ ಅವರೆಲ್ಲರೂ ಈ ಉತ್ಸವದಲ್ಲಿ ಮನಸ್ಸು ಹಾಕಿ, ಕರ್ನಾಟಕ ಸಂಸ್ಕೃತಿಯನ್ನು ಉದ್ಧರಿಸುವ ಪುಣ್ಯವನ್ನು ಕಟ್ಟಿಕೊಳ್ಳಬೇಕೆಂದು ಬೇಡಿಕೊಳ್ಳುತ್ತೇವೆ

ವಿಜಯನಗರ ಮಹೋತ್ಸವವೆಂದರೆ ಇಡೀ ಕರ್ನಾಟಕದಲ್ಲಿ ನವಚೈತನ್ಯವನ್ನು ಹುಟ್ಟಿಸುವುದಕ್ಕೆ ಒಂದು ಸುಸಂಧಿಯು ಈ ಉತ್ಸವವು ಸಹಕಾರಿಗಳು ಮತ್ತು ಅಸಹಕಾರಿ ಇವರಿಬ್ಬರಿಗೂ ಜೋಡಿಸುವ ಕೊಂಡಿಯು, ಸರಕಾರದ ನೌಕರರಿಗೂ ವಕೀಲರೇ ಮುಂತಾದ ಸ್ವತಂತ್ರ ಉದ್ಯೋಗ ಮಾಡುವವರಿಗೂ ತಳಹು ಹಾಕುವದಕ್ಕೆ ಈ ಉತ್ಸವವು ಬಹಳ ಉಪಯೋಗವು ಳ್ಳದ್ದು. ಬಹುಶಃ ಸರಕಾರದ ನೌಕರರೆಂದರೆ ತಮಗೂ ದೇಶಕ್ಕೂ ಏನೂ ಸಂಬಂಧವಿಲ್ಲವೆಂದು ಬಗೆಯುತ್ತಿರುತ್ತಾರೆ ಅಂದರೆ, ಈ ಉತ್ಸವವು ಕೇವಲ ಸಾಂಸ್ಕೃತಿಕ ಉತ್ಸವವಾದದರಿಂದ ಇದರಲ್ಲಿ ಭಾಗ ತೆಗೆದುಕೊಳ್ಳಲಿಕ್ಕೆ ಅವರಿಗೆ ಸದಜವಾಗಿ ಬರುತ್ತದೆ ಇಂಥ ಸುಸಂಧಿಯನ್ನು ಅವರು ಕಳೆದುಕೊಳ್ಳದೆ, ಅನಾಯಾಸದಿಂದ ಒದಗಿಬಂದಿರುವ ಈ ಉತ್ಸವದಲ್ಲಿ ತನುಮನಧನದಿಂದ ಸಹಾಯ ಮಾಡಿ ದೇಶ ಸೇವೆಯನ್ನು ಮಾಡುವ ಪುಣ್ಯವನ್ನು ಕಟ್ಟಿಕೊಳ್ಳಬೇಕು. ಈ ಉತ್ಸವವು ಇಂಥದೊಂದು ಪಂಥದ, ಜಾತಿಯ ಉತ್ಸವವಾಗದೆ ಇಡೀ ಕರ್ನಾಟಕದ ಯಾವತ್ತು ಪಂಥ, ವರ್ಣ, ಜಾತಿ ಪಂಗಡಗಳ ಜನರು ಇದರಲ್ಲಿ ಕಾರ್ಯ ಮಾಡಬಹುದಾಗಿದೆ ಉತ್ಸವದ ಸಿದ್ಧತೆಯನ್ನು ಕರ್ನಾಟಕವು ಭರದಿಂದ ಮಾಡುವುದ ಅವಶ್ಯ ದಿವಸಗಳು ಬಹಳ ಉಳಿಯಲಿಲ್ಲ. ಮಾಡತಕ್ಕ ಕಾರ್ಯಗಳ ಗುಡ್ಡದ ರಾಶಿಯು ಇವರಿಗೆ ಬಿದ್ದಿದೆ ಆದಕಾರಣ ಕನ್ನಡಿಗರು ತ್ವರೆ ಮಾಡಬೇಕೆಂದು, ಹೇಳಿ ಹೆಚ್ಚಿಗೆ ಬರೆಯಲು ಅವಕಾಶವಿಲ್ಲದುದರಿಂದ ಇಲ್ಲಿಗೆ ಮುಗಿಸುತ್ತೇವೆ

ಕೃಷ್ಣಾತಟಾಕದಲ್ಲಿ ನಕ್ಷತ್ರ ಇಷ್ಟಿ.

ನಾಳೆ ಮಾರ್ಗಶಿರ್ಷ ಶುದ್ಧ ಪ್ರತಿಪದೆಯ ದಿವಸ ಬಾಗಲಕೋಟೆ ಸಮೀಪದಲ್ಲಿ ಇರುವ ಸೀತಿಮನಿಯ ಕೃಷ್ಣಾತಟಾಕದ "ನಕ್ಷತ್ರ ಇಷ್ಟಿ" ಎಂಬದೊಂದು ಸತ್ರವು ಆರಂಭವಾಗುವದಿದೆ. ಆ ಕಾಲಕ್ಕೆ ಒಂದೇ ಗ್ರಹದಲ್ಲಿ ಕೂಡ ಲಿರುವ ಸಪ್ತ ಗ್ರಹಗಳ ಶಾಂತಿಗಾಗಿ ಈಯಜ್ಞವಿರುವದಂತೆ ಸಪ್ತ ಗ್ರಹಗಳು ಒತ್ತಟ್ಟಿಗೆ ಸೇರುವದರಿಂದ ಜನಪೀಡೆಯುಂಟಾಗುವದೆಂದು ಜೋತಿಷ್ಯ ಶಾಸ್ತ್ರದ ಸಿದ್ಧಾಂತವು ಜನ ಸೀಡೆಯನ್ನು ತಪ್ಪಿಸುವದಕ್ಕಾಗಿ ಬಳ್ಳಾರಿಯ ವೇದಮೂರ್ತಿ ಮಳಗಿ ಪಾಂಡುರಂಗಾಚಾರ್ಯರೆಂಬುವರು ಇದನ್ನು ಹೂಡಿರುವರು ಸತ್ರವು ೭ ದಿನಗಳವರೆಗೆ ನಡೆಯುತ್ತಿದ್ದು ಅನ್ನಸಂತರ್ಪಣವೂ ಒಂದು ಅದರ ಮುಖ್ಯಾಂಗವಾಗಿದೆ. ಅದೇ ಸಮಯಕ್ಕೆ ಬಾಗಲಕೋಟೆಯ ಪ್ರಸಿದ್ಧ ವೇದಾಂತಿಗಳೂ, ಪುರಾಣಿಕರೂ ಆದ ವೇದ ಶಾಸ್ತ್ರಸಂಪನ್ನ ಮಳಗಿ ವೆಂಕಟಾಚಾರ್ಯರ ಶ್ರೀ ಭಾಗವತ ಸಪ್ತಾಹವು ಅಲ್ಲಿ ನಡೆಯುವದೊಂದು ವಿಶೇಷವು

ಕನ್ನಡದಲ್ಲಿಯೂ ಮಾತಿನ ಚಿತ್ರಪಟವೇ ?

ಸಿನೇಮಾಗಳಲ್ಲಿ ತೋರಿಸಲ್ಪಡುವ ಚಿತ್ರಪಟಗಳ ಭಾಷೆ ಕನ್ನಡ ಇರುವದು ಅಪರೂಪ, ಮಾತಿನ ಚಿತ್ರಗಳಂತೂ ಕನ್ನಡದಲ್ಲಿ ಇಲ್ಲವೇ ಇಲ್ಲ. ಈ ಅಭಾವದ ಮೂಲಕ ಉತ್ತರ ಕರ್ನಾಟಕದ ಸಿನೇಮಾ ಗೃಹಗಳು ಹಿಂದಿ ಮಾತಿನ ಚಿತ್ರಪಟಗಳಿಂದಲೂ, ದಕ್ಷಿಣ ಕರ್ನಾಟಕದ ಸಿನೇಮಾ ಗೃಹಗಳು ತೆಲಗು ಅಥವಾ ತಮಿಳು ಚಿತ್ರಪಟಗಳಿಂದಲೂ ಮುಸುಕಲ್ಪಟ್ಟಿವೆ ಕನ್ನಡವು ಹಿಂದೆ ಸರಿಯಲು ಕನ್ನಡ ಮಾತಿನ ಚಿತ್ರಗಳ ಅಭಾವವೂ ಈಗಿನ ದಿನಗಳಲ್ಲಿ ಕಾರಣವಾಗಿದೆ, ಯಾಕೆಂದರೆ ಅನ್ಯ ಭಾಷೆಗಳ ವರ್ಚಸ್ಸು ಕರ್ನಾಟಕದ ಮೇಲೆ ಆ ಆ ಭಾಷೆಗಳಲ್ಲಿದ್ದ ಉತ್ತಮ ನಾಟಕ ಮಾಸಿಕ, ದೈನಿಕ ಮೊದಲಾದವುಗಳಿಂದ ಈಗಾಗಲೇ ಎಷ್ಟೋ ಆಗಿದೆ ಈಗಿನ ಯುಗದ ಮಾತಿನ ಚಿತ್ರಗಳೂ ಈ ವರ್ಚಸ್ಸನ್ನು ಗಟ್ಟಿಯಾಗಿ ಮಾಡಲು ಕಾರಣವಾಗಿವೆ ಆದ್ದರಿಂದ ಕನ್ನಡಿಗರು ಈ ವಿಷಯದ ಕಡೆಗೆ ಉದಾಸೀನರಾಗಿರುವದು ಯುಕ್ತವಲ್ಲ

'ಶ್ರೀಯುತ ವಾಮನರಾವ ಮಾಸ್ತರರ ಸಮಿಉದೇವಿ' ನಾಟಕವನ್ನು ಸಂಗೀತ ಸಹಿತವಾಗಿ ಚಿತ್ರಪಟದಲ್ಲಿ ಹಿಡಿಯುವದು ಗೊತ್ತಾಗಿದೆಂಬುವನ್ನು ಕೇಳಿ ಕನ್ನಡಿಗರಿಗೆ ಸಂತೋಷವಾಗದಿರದು. ಆದವಾನಿಯಲ್ಲಿ ನಾಟಕವಾಡುತ್ತಿದ್ದ ಈ ಕಂಪನಿಯು ಈ ತಿಂಗಳೊಳಗಾಗಿ ಕಲಕತ್ತೆಗೆ ಹೋಗುವದು ಅಲ್ಲಿ ಚಿತ್ರಪಟದಲ್ಲಿ 'ಸಮಿಉ' ನಾಟಕವನ್ನು ಹಿಡಿಯುವ ಕಾರ್ಯ ಪ್ರಾರಂಭವಾಗುವದು ಕಲಕತ್ತೆಗೆ ಹೋಗಿಬರುವ ವೆಚ್ಚವನ್ನೂ ಕಲಕತ್ತೆಯಲ್ಲಿರುವವರೆಗೆ ಬಂಗಲೆ ಬಾಡಿಗೆ, ಅಲ್ಲಿ ಸಂಚರಿಸುವ ವಾಹನ ವೆಚ್ಚ ಮೊದಲಾದವುಗಳನ್ನೂ ಚಿತ್ರಪಟ ಕಂಪನಿಯವರು ಸಹಿಸಿ, ವಾಮನರಾಯರ ಕಂಪನಿಗೆ ಐದು ಸಾವಿರ ರೂಪಾಯಿ ಕೊಡುವದಾಗಿ ತಿಳಿಯುತ್ತದೆ. ಒಟ್ಟು ಕೆಲಸ ಮುಗಿಯಲು ೨॥ ತಿಂಗಳು ಬೇಕಾಗುತ್ತವಂತೆ.

ಶ್ರೀರಂಗಂ ವ್ಯವಸಾಯಕ ಮತ್ತು ಕೈಗಾರಿಕೆ ವಸ್ತು ಪ್ರದರ್ಶನ

ಡಿಶಂಬರತಿಂಗಳಲ್ಲಿ ಶ್ರೀರಂಗದಲ್ಲಿ ಜರುಗುವ ವೈಕುಂಠ ಏಕಾದಶಿ ಉತ್ಸವಗಳ ಕಾಲದಲ್ಲಿ ಹಿಂದುಸ್ಥಾನದ ಎಲ್ಲಾ ಭಾಗಗಳಿಂದಲೂ ಸುಮಾರು ಪತ್ತು ಲಕ್ಷಕ್ಕಿಂತಲೂ ಹೆಚ್ಚಾಗಿ ಜನರು ಸೇರುವರಷ್ಟೆ. ಆ ಕಾಲದಲ್ಲಿ ಡಿಶಂಬರು ೨೧ ನೇ ತಾ॥ ನಿಂದ ಜನವರಿ ೧೦ ನೇ ತಾ॥ ನ ತನಕ ವ್ಯವಸಾಯಕ ಮತ್ತು ಕೈಗಾರಿಕೆ ವಸ್ತು ಪ್ರದರ್ಶನವೊಂದನ್ನು ನಡೆಸಬೇಕೆಂದು, ತಿರುಚನಾಪಳ್ಳಿ ಜಿಲ್ಲಾ ವ್ಯವಸಾಯದ ಸಂಘದವರು ನಿಶ್ಚಯಿಸಿ ಜಿಲ್ಲಾ ಕಲೆಕ್ಟರರಾದ ಇ. ಬಿ. ಕೊಬ್ಬಾಲ್ಡ ಐ ಸಿ ಎಸ್‌ರವರೇ ಈ ಕಮೀಟಿಯ ಅಧ್ಯಕ್ಷರು

ಕಳೆದ ಬಾರಿ ತಿರುಚನಾಪಳ್ಳಿಯಲ್ಲಿ ನಡೆದ ವಸ್ತು ಪ್ರದರ್ಶನ ಬಹಳ ಯಶಸ್ವಿಯಾಗಿ ಜರುಗಿತು ಬಹು ಮಂದಿ ಪ್ರೇಕ್ಷಕರು ಬಂದಿದ್ದಲ್ಲದೆ ಪ್ರದರ್ಶಕರಿಗೂ, ಪ್ರಜೆಗಳಿಗೂ ಲಾಭವಾಯಿತು ಇದನ್ನು ನೋಡಿ ನಮಗೆ ಮತ್ತೊಂದು ಭಾರಿ ಪ್ರದರ್ಶನವನ್ನು ಏರ್ಪಡಿಸಿದರೆ, ಅದರಿಂದ ಇನ್ನೂ ಹೆಚ್ಚಿನ ಪ್ರಯೋಜನವಾಗುವುದೆಂಬ ಭಾವನೆಯುಂಟಾಗಿ ಈಗ ಈ ಪ್ರದರ್ಶನವನ್ನು ನಡೆಸಲು ಉತ್ತೇಜಿತರಾಗಿದ್ದೇವೆ

ಕಮಿಟಿಯವರು ನಾನಾ ವಿಧವಾದ ಕೈಗಾರಿಕೆಗಳನ್ನು [ನೆಯಿಗೆ, ಬಣ್ಣಹಾಕುವುದು, ಬಟ್ಟೆಗಳ ಮೇಲೆ ಹೂವು ಹಾಕುವುದು, ಇತ್ಯಾದಿ] ಕಣ್ಣಿದರಿಗೆ ತೋರಿಸಲು ತಕ್ಕ ಸಾಹಿತ್ಯಗಳನ್ನು ಮಾಡಿಕೊಡುವರು ಆ ರೀತಿ ಪ್ರದರ್ಶಿಸಲು ಇಚ್ಛಿಸುವವರು ವ್ಯವಸ್ಥಾಪಕರೊಂದಿಗೆ ಪತ್ರವ್ಯವಹಾರ ನಡೆಸಬಹುದು.

ಸ್ತ್ರೀಯರ ಶಾಖೆ

ಸ್ತ್ರೀಯರು ತಮ್ಮ ಬುದ್ಧಿ ಕುಶಲತೆಯನ್ನು ತೋರ್ಪಡಿಸುವಂತೆ ಕಸೂತಿ ಕೆಲಸ, ನಕ್ಷಿ ಕೆಲಸ, ಹೆಣಿಗೆ ಕೆಲಸ, ಮಣಿ ಕೆಲಸ. ಗೊಂಬೆ ಕೆಲಸ, ಮುಂತಾದವುಗಳನ್ನು ಪ್ರದರ್ಶಿಸಲು ಅನುಕೂಲವಾಗಿ ಒಂದು ಪ್ರತ್ಯೇಕವಾದ ಸ್ತ್ರೀಯರ ಶಾಖೆಯನ್ನು ತೆರೆಯಲಾಗುವುದು ಸ್ತ್ರೀಯರಿಗಾಗಿ ಮಳಿಗೆ ಬಾಡಿಗೆಯಲ್ಲಿ ರಿಯಾಯಿತಿಯುಂಟು

ಪ್ರಖ್ಯಾತರಾದವರ ನಾಟಕಗಳು ಸಂಗೀತ ಕಚೇರಿಗಳು, ಭಾಷಣಗಳು ನಡೆಯುವವು

ಅರ್ಜಿಗಳು ವ್ಯವಸ್ಥಾಪಕರಿಗೆ ಡಿಶಂಬರ್ ೧೫ನೇ ತಾರೀಖನ್ನು ಮೀರದಂತೆ ಬಂದು ತಲಪಬೇಕು ಪ್ರತಿ ಮಳಿಗೆಯಲ್ಲೂ ೫೦ ಕ್ಯಾಂಡಲ್ ಪವರಿನ ಎಲೆಕ್ಟ್ರಿಕ್ ದೀಪವಿರುವುದು, ಪ್ರದರ್ಶಕರಿಗೆ ರಿಯಾಯಿತಿ ದರ ಹಾಕಬೇಕೆಂದು ರೈಲ್ವೆ ಇಲಾಖೆಯೊಡನೆ ಪತ್ರವ್ಯವಹಾರ ನಡೆಸುತ್ತಿದ್ದೇವೆ ಆದುದರಿಂದ ಸಾಮಾನುಗಳನು ತಯಾರು ಮಾಡುವವರು, ಕೈಗಾರಿಕೆ ಉದ್ಯೋಗಿಗಳು, ವ್ಯಾಪಾರಿಗಳು ಮುಂತಾದವರು ನಮ್ಮೊಡನೆ ಸಹಕರಿಸಿ, ಜಾಗ್ರತೆಯಾಗಿ ಮಳಿಗೆಗಳನ್ನು ತೆಗೆದುಕೊಂಡು, ನಮ್ಮ ಪ್ರಯತ್ನವು ಯಶಸ್ವಿಯಾಗಿ ಜರಗುವಂತೆ ಮಾಡಬೇಕೆಂದು ಕೋರುತ್ತೇವೆ

ವ್ಯವಸ್ಥಾಪಕ

ಶ್ರೀ ರಂಗಂ ಎಗ್ಸಿಬಿಷನ್,
ತೆಪ್ಪಕುಳಂ ತಿರುಚನಾಪಳ್ಳಿ

ಮುಂಬಯಿಯಲ್ಲಿ ಕನ್ನಡ ನಾಟಕ

ಮೊನ್ನೆ ಶುಕ್ರವಾರ ದಿವಸ ಸರಸ್ವತಿ ಅ. ವೇಚ್ಯೂರರು ಬಾಲಿವಾಲಾ ಥಿಯೇಟರಿನಲ್ಲಿ 'ಶಹಾಶಿವಾಜಿ' ಎಂಬ ಕನ್ನಡ ನಾಟಕವನ್ನಾಡಿದರು ಥಿಯೇಟರವು ಪ್ರೇಕ್ಷಕರಿಂದ ತುಂಬಿ ತುಳುಕುತ್ತಿತ್ತು. ಅಭಿನಯವು ಪ್ರೇಕ್ಷಕರ ಮನಸ್ಸನ್ನು ಎಳೆಯುವಂತೆ ಇದ್ದಿತು ಈ ನಾಟಕದ ಯಾವತ್ತು ಗಳಿಕೆಯು ಶಿರಾಳಿಯ (ಕಾರವಾರ ಜಿಲ್ಲೆ) ಯ ಚಿತ್ರಪುರ ಮಠದ ಸಹಾಯಾರ್ಥವಾಗಿ ಕೊಡಲ್ಪಟ್ಟಿತು

ಶಹಾಪುರದಲ್ಲಿ ಕನ್ನಡಶಾಲೆ

ಶಹಾಪುರ [ಬೆಳಗಾವ]ದಲ್ಲಿ ವೆಂಕಟೇಶ ಮಂದಿರದೊಳಗೆ ಶ್ರೀಯುತ ಪಾರ್ಶ್ವಾಡ್ಕರ ಇವರ ಮೇಲ್ವಿಚಾರಣೆಯಲ್ಲಿ ನಿಯಮಿತ ಕನ್ನಡ ಶಾಲೆಯು ಪ್ರಾರಂಭವಾಗಿದ್ದು ಈಗ್ಗೆ ೬೦ ಹುಡುಗರಿದ್ದಾರೆ

ಹುಬ್ಬಳ್ಳಿಪೇಟೆಯ ಧಾರಣೆ
(ಕೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೧೫ [ಮಧ್ಯಾಹ್ನ ೧೧ ಗಂಟೆ]

ಜವಾರಿ ಹತ್ತಿ	೧೦೦-೧೦೩	ಜೋಳ	೧೩-೧೪॥
ಅಮೇರಿಕ "	೧೦೦-೧೦೩	ಗೋದಿ	೬॥-೭
ವಿಲಾಯತಿ "	೯೪ ೯೫	ಕಡ್ಲಿ	೬॥-೭
ಮ್ಯಾಕಾನ್ಸ "	೧೦೮-೧೧೦	ಅಕ್ಕಿ	೬-೭
ಶೇಂಗಾ ಅರಳೆ	೬೮-೭೦	ಅಕ್ಕಿ ಶಾ.	೫೫-೬॥
ಡಬ್ಬಲ್‌ರೂಲ ಅ.	೬೪-೬೫	ಕುಸುಬಿ	೧೨
ಸಾಜಿನ ಅರಳೆ	೬೪-೬೫	ಹುರಳಿ	೧೩
ಹೆಸರು ಜವಾರಿ	೯-೧೨		
ಶೇಂಗಾಕಾಯಿ	೫॥-೫॥	ಹತ್ತಿಕಾಳು	೬೦

ಬೆಳ್ಳಿ ಬಂಗಾರ

ಬಂಗಾರ	೩೨೪ =	ಬೆಳ್ಳಿ ।

ಸುಭಾಸ ಭೋಸರನ್ನು ಪುನಃ ಕೈದಿಸಿರಿ.

ಸುಭಾಸ ಭೋಸರನ್ನು ಪುನಃ ಕೈದಿಸಿರಿ.

ಲಂಡನ್ ತಾ॥ ೧೦

ಸುಭಾಸ ಬೋಸರು ಪರದೇಶಗಳಲ್ಲಿರುವಾಗ ಅವರ ನಡೆ ನುಡಿಗಳು ರಾಜದ್ರೋಹಯುಕ್ತವಾಗಿರುವವೆಂದೂ ಆದಕ್ಕಾಗಿ ಅವರು ಹಿಂದುಸ್ಥಾನಕ್ಕೆ ತಿರುಗಿ ಬಂದ ಕೂಡಲೇ ಅವರನ್ನು ಪುನಃ ಕೈದು ಮಾಡಬೇಕೆಂದೂ ಸರ್ ಹಾಲ್ಕರ ನ್ಯಾಯಿಲ್ಸರೆಂಬವರು ಪಾರ್ಲಮೆಂಟಿನಲ್ಲಿ ಕೇಳಿದ್ದಕ್ಕೆ ಹಿಂದುಸ್ಥಾನ ಸರಕಾರದವರು ಈ ವಿಷಯದಲ್ಲಿ ವಿಚಾರಿಸುವದಕ್ಕೆ ಸ್ವತಂತ್ರರಿರುವರೆಂದು ಹೋಂ ಸಾಹೇಬರು ಉತ್ತರ ಕೊಟ್ಟರು.

ಆನಂದ ಬಝಾರ ಪತ್ರಿಕೆ ಹೊಸ ಜಾಮೀನು

ಕಲಕತ್ತಾ ತಾ॥ ೧೪—'ಆನಂದ ಬಝಾರ'ವೆಂಬ ದೈನಿಕದಲ್ಲಿ ಅರಾಜಕತೆಯ ಲೇಖನವನ್ನು ಪ್ರಸಿದ್ಧಿಸಿರುವರೆಂದು ಬಂಗಾಲ ಸರಕಾರದವರು ಅದಕ್ಕೆ ೪ ಸಾವಿರ ರೂಪಾಯಿ ಜಾಮೀನು ಬೇಡಿದ್ದಾರೆ. ಅದರಲ್ಲಿಯ ೨ ಸಾವಿರ ರೂಪಾಯಿಯು ಕೊಡಲ್ಪಟ್ಟಿದೆ [ಅ ಪ್ರೆ ತಂತಿ]

ಖೈಬರ ಘಟ್ಟವು ಮುಚ್ಚಲ್ಪಟ್ಟಿಲ್ಲ

ಪೇಶಾವರ ತಾ॥೧೬ ಸರಕಾರಿ ಪ್ರಕಟನೆಯು ಹೀಗಿದ್ದೆ— ಖೈಬರ ಘಟ್ಟವು ಮುಚ್ಚಲ್ಪಟ್ಟಿಲ್ಲ ಆದರೆ ಹಿಂದುಸ್ಥಾನದಿಂದ ಅಫಗಾಣಿಸ್ಥಾನಕ್ಕೆ ಹೋಗುವ ಪ್ರೇಕ್ಷಕರಿಗೆ ನಿರ್ಬಂಧವಿಯಿದೆ. ಅಫಗಾನದಿಂದ ಹಿಂದುಸ್ಥಾನಕ್ಕೆ ಬರುವವರಿಗೆ ಯಾವ ಬಗೆಯ ಆತಂಕವೂ ಇಲ್ಲ.

ತುರಕಸ್ಥಾನದ ಮಂತ್ರಿಗಳಾದ ಶೌಕತಬೇ ಇವರು ಕಾಬೂಲದ ಕಡೆಗೆ ಇಂದೇ ಹೊರಟರು. [ಅ ಪ್ರ ತಂತಿ]

ಕಾಂಗ್ರೆಸ್ ಕಾರ್ಯಕ್ರಮದ ಬಗ್ಗೆ ಸತ್ಯಪಾಲರ ಅಭಿಪ್ರಾಯ.

ಲಾಹೋರ ತಾ॥ ೧೪ - ಡಾ. ಸತ್ಯಪಾಲರು ಪತ್ರಕರ್ತರಿಗೆ ಹೇಳಿದ್ದೇನಂದರೆ:— ಅ ಭಾ. ಕಾಂಗ್ರೆಸ ಕಮೀಟಿಯು ಸಭೆಯನ್ನು ಕರೆಯಬೇಕೆಂದು ನನ್ನ ಮತ ಈ ಸಭೆಯು ದೇಶದ ಇಂದಿನ ಪರಿಸ್ಥಿತಿಯನ್ನು ನಿರೀಕ್ಷಿಸಿ. ಗತ ಸಂಗತಿಗಳನ್ನೆಲ್ಲ ಶೋಧಿಸಿ, ಮುಂದೆ ಮಾಡತಕ್ಕಾದ ಕೆಲಸದ ಬಗ್ಗೆ ಒಂದು ಕಾರ್ಯಕ್ರಮವನ್ನು ಗೊತ್ತುಪಡಿಸತಕ್ಕದ್ದು ಆದರೆ ಸಭಾಸದರೆಲ್ಲ ಉದಾಸೀನರಾಗಿದ್ದಂತೆ ತೋರುತ್ತದೆ ಅಥವಾ ಗಾಂಧೀಜಿಯವರನ್ನು ವಂತೆ ಸಭೆಯಲ್ಲಿ ಯಾವ ನಿರ್ಣಯವಾಗಬಹುದೆಂಬದನ್ನು ಈಗಲೇ ತಿಳಿದುಕೊಂಡು ಸುಮ್ಮನಿರಬಹುದು. ಇನ್ನೆಲ್ಲಮಾಡುವದಕ್ಕಿಂತ ಮಹಾತ್ಮಾ ಗಾಂಧಿ ಹಾಗೂ ಪಂಡಿತ ಜವಾಹಿರಲಾಲರು ಕೂಡಿಕೊಂಡು ತಾವೇ ಪ್ರತಿಯೊಂದು ಪ್ರಾಂತದಿಂದ ಕೆಲ ರಾಷ್ಟ್ರೀಯರನ್ನು ಕರೆಯಿಸಿ, ಇಂದಿನ ನಿಜಸ್ಥಿತಿಯ ಅಭಾವ ತಿಳಿದು, ಒಂದು ಕಾರ್ಯಕ್ರಮವನ್ನು ಗೊತ್ತುಪಡಿಸಿ, ಅ. ಭಾ ಸಭೆಯ ಮುಂದೆ ಕೊನೆಯ ನಿರ್ಣಯಕ್ಕಾಗಿ ಮಂಡಿಸಬಹುದು. [ಅ. ಪ್ರೆ ತಂತಿ]

ಕರ್ನಾಟಕ ಅಸ್ಪೃಶ್ಯರ ಸಭೆ.

ಕರ್ನಾಟಕ ಅಸ್ಪೃಶ್ಯ ವಿದ್ಯಾವರ್ಧಕ ಸಂಘದ ೨ನೆಯ ವಾರ್ಷಿಕ ಸಭೆ ನಾಳಿನ ರವಿವಾರ ಸಾಯಂಕಾಲ ೫ ಗಂಟೆಗೆ ಬೆಳಗಾವಿಯಲ್ಲಿ ಶ್ರೀ ಮುಜುಮದಾರ ವಕೀಲರ ಕಚೇರಿಯಲ್ಲಿ ಜರುಗುವದು.

ಇಬ್ಬರು ಮೋಸಗಾರರು ಸಿಕ್ಕರು.

ಕಲಕತ್ತಾ ತಾ॥ ೧೪— ಕಲಕತ್ತೆಯ ಮಾರವಾಡಿ ಪೇಟೆಯಲ್ಲಿಯ ಒಬ್ಬ ವ್ಯಾಪಾರಿಯ ಅಂಗಡಿಯಲ್ಲಿ ಇಬ್ಬರು ಮೋಸಗಾರರು ಬಂದು ತಾವು ಹಿಂದುಸ್ಥಾನ ಸ್ವಾತಂತ್ರ್ಯಸೇನೆಯವರೆಂದೂ ತಮಗೆ ಹತ್ತು ಸಾವಿರ ರೂಪಾಯಿಗಳು ಬೇಕಿದ್ದು ಅವನ್ನು ಕೊಡಲೇ ಬೇಕೆಂದೂ ಕೇಳಲು ಅಂಗಡಿಯವರು ಅವರಿಗೆ ಮರುದಿವಸ ಬರಹೇಳಿದರು ಮರುದಿನ ಬಾಲು ಅಡಿಗಿಕೊಂಡು ಕುಳಿತಂಥ ಪೋಲೀಸರು ಅವರನ್ನು ಸೆರೆ ಹಿಡಿದರು. [ಅ ಪ್ರೆ ತಂತಿ]

ಜರ್ಮನಿಯಲ್ಲಿ ಹಿಟ್ಲರರ ಯಶಸ್ಸು

ಬರ್ಲಿನ್ ತಾ॥ ೧೬—ಹೊಸ ಚುನಾವಣಿಯಲ್ಲಿ ಹಿಟ್ಲರರಿಗೆ ೧೯೩೬೨೩೬ ಮತಗಳು ಬಿದ್ದು ಅವರೇ ಯಶಸ್ವಿಯಾದರು ಇದರಿಂದ ಜರ್ಮನಿಯಲ್ಲಿ ಇವರು ಎಷ್ಟು ಲೋಕಪ್ರಿಯರಿರುವರೆಂಬುದೂ ಉಳಿದ ಕೆಲ ರಾಷ್ಟ್ರಗಳು ಇವರ ವಿಷಯಕ್ಕೆ ಹೊಟ್ಟೆ ಉರಿಯುವದೂ, ಶಂಖವಾದ್ಯ ಹುಟಿಸುವದೂ ಕೇವಲ ಅಸೂಯದಿಂದೆಂಬದೂ ಸ್ಪಷ್ಟವಾಗುತ್ತದೆ

ಬರ್ಜ ಸಾಹೇಬರ ಹೆಂಡತಿಗೆ ಸಹಾಯ.

ಲಂಡನ್ ತಾ॥ ೧೩—ಕೆಲವು ದಿನಗಳ ಹಿಂದೆ ವಿ ದನಾಪುರದಲ್ಲಿ ಕೊಲ್ಲಲ್ಪಟ್ಟ ಬರ್ಜ ಸಾಹೇಬರ ಹೆಂಡತಿಗೆ ದ್ರವ್ಯ ಸಹಾಯದ ವ್ಯವಸ್ಥೆಯು ಸ್ವಲ್ಪ ದಿನಗಳಲ್ಲಿಯೆ ಆಗುವದೆಂದು ಹೋಂ ಸಾಹೇಬರು ಪಾರ್ಲಮೆಂಟಿನ ಒಬ್ಬ ಮೆಂಬರರಿಗೆ ಉತ್ತರ ಕೊಟ್ಟರು.

ಶ್ರೀಮಧ್ವಸಿದ್ಧಾಂತೋತ್ತೇಜಕ ಸಭಾ ಧಾರವಾಡ

೩೮ ನೆಯ ವರ್ಷದ ಸಭೆ

ವಾರ್ಷಿಕ ಪದ್ಧತಿಯ ಪ್ರಕಾರ ಧಾರವಾಡದಲ್ಲಿ ಶ್ರೀ ಮನ್ಮಧ್ವಸಿದ್ಧಾಂತೋತ್ತೇಜಕ ಸಭೆಯು ಇದೇ ಮಾರ್ಗಶೀರ್ಷ ಶುದ್ಧ ೮-೯-೧೦ (ದಿಸೆಂಬರ ತಿಂಗಳ ೨೭-೨೮-೨೯ ನೆಯ ತಾರೀಖು) ಆದಿತ್ಯವಾರ ಸೋಮವಾರ ಮತ್ತು ಮಂಗಳವಾರ ಈ ಮೂರು ದಿವಸ ನಡೆಯುವದು ಸ್ಥಳ ಪ ಸ್ಥಳದ ಯಾವತ್ತು ಮತಾಭಿಮಾನಿಗಳು ಸಮಾರಂಭಕ್ಕೆ ಅಗತ್ಯವಾಗಿ ಬರಬೇಕೆಂದು ಕಾರ್ಯದರ್ಶಿಯವರು ತಿಳಿಸುತ್ತಾರೆ

ಜಗತ್ಪ್ರಸಿದ್ಧ ಲಿಂಡ್ರಮ ಎಂಬ ಆಟಗಾರನ ಆಗಮನವು.

ಜಗತ್ತಿನಲ್ಲಿ ಬಿಲಿಯರ್ಡ ಆಟದಲ್ಲಿ ಎಲ್ಲರನ್ನೂ ಜಯಿಸಿದಂಥ ಲಿಂಡ್ರಮ್ ಎಂಬವನು ಇದೇ ೮ ನೇ ತಾರೀಖಿಗೆ ಮುಂಬಯಿಗೆ ಬರುವವನಿದ್ದಾನೆ ಈ ಆಟವನ್ನು ಬಲ್ಲವರಿಗೆ ನೋಡುವುದಕ್ಕೆ ಒಳ್ಳೇ ಸಂಧಿ. (ಈ ಆಟವೆಂದರೆ ಒಂದು ಸಂಪದವಾದ ಮೇಜಿನಮೇಲೆ ಉರುಳುವ ಮೂರು ಆಂದವಾದ ಗುಂಡುಗಳನ್ನು ಒಂದು ಕೋಲು ತುದಿಯಿಂದ ಯುಕ್ತಿಯಿಂದಲೂ ನಿಪುಣತೆಯಿಂದಲೂ ಉರುಳಿಸುವದು)

ಶ್ರೀರಂಗ ಕಾಮತರನ್ನು ಹಿಡಿದರು

ಬೈಲಹೊಂಗಲದ ತರುಣ ಕಾರ್ಯಕರ್ತರಾದ ಶ್ರೀರಂಗ ಕಾಮತರು ಮೊನ್ನೆ ಶುಕ್ರವಾರ ದಿನ ಹೊಂಗಲದಲ್ಲಿ ಪಿಕೆಟಿಂಗ್ ಮಾಡಿದ್ದರಿಂದ ಅವನ್ನು ಬಂಧಿಸಿದ್ದಾರೆ. ಕಾಮತರೊಡನೆ ಮತ್ತೆ ಕೆಲವು ಸ್ವಯಂಸೇವಕರನ್ನು ಕೈಸೆರೆಮಾಡಿದ್ದಾರೆ.

ಬೆಳಗಾವಿಯಲ್ಲಿ ಸೂರ್ಯನಮಸ್ಕಾರದ ಪಂದ್ಯಾಟ.

ಬರುವ ನಾತಾಳಿಯ ಸೂಟಿಯಲ್ಲಿ ವಿದ್ಯಾರ್ಥಿಗಳಿಗಾಗಿ ಸೂರ್ಯನಮಸ್ಕಾರದ ಪಂದ್ಯಾಟಗಳನ್ನಿಟ್ಟಿರುವರು

೧ ತಾಸಿನಲ್ಲಿ ಎಲ್ಲಕ್ಕೂ ಹೆಚ್ಚು ನಮಸ್ಕಾರಗಳನ್ನು ಹಾಕಿದವರಿಗೆ ಬೆಳಗಾವಿ ವಿದ್ಯಾರ್ಥಿ ಸಂಘದವರ ವತಿಯಿಂದ ಒಂದು ಚಿನ್ನದ ಢಾಲು ಬಹುಮಾನಾರ್ಥವಾಗಿ ಕೊಡಲ್ಪಡುವದು ಈ ಪಂದ್ಯಾಟದಲ್ಲಿ ಕರ್ನಾಟಕದಲ್ಲಿಯ ಮತ್ತು ಬೆಳಗಾವಿ ಜಿಲ್ಹೆಯ ಹತ್ತಿರದ ಸಂಸ್ಥಾನಗಳಲ್ಲಿಯ ವಿದ್ಯಾರ್ಥಿಗಳು ೮ ಆಣೆ ಪ್ರವೇಶ ಫೀ ಕೊಟ್ಟು ಸೇರಿಕೊಳ್ಳಬಹುದು

ಸತ್ಯಾಗ್ರಹಿಗೆ ವಕೀಲಿ ಮಾಡಲು ನಿರ್ಬಂಧ

ಅಜಮೀರ ತಾ॥ ೧೨- ಶ್ರೀಯುತ ವಿಶ್ವಂಭರ ನಾಥ ಭಾರ್ಗವ ಇವರು ಅ ಭಾ. ಕಾಂಗ್ರೆಸ್ಸ ಕಮೆಟಿಯ ಸಭಾಸದರು ಅವರಿಗೆ ಕಾಯದೇಭಂಗಕ್ಕಾಗಿ ೧ ವರ್ಷ ಕಠಿಣ ಶಿಕ್ಷೆಯಾಗಿತ್ತು ಈಗ ತುರಂಗದಿಂದ ಬಿಡುಗಡೆಹೊಂದಿ ಬಂದಿದ್ದು ಅವರು ಪುನಃ ವಕೀಲಿ ಪ್ರಾರಂಭಿಸುವವರಿದ್ದರು: ಆದರೆ ಅಜಮೀರ ಮಾರವಾಡದ ನ್ಯಾಯ ಖಾತೆಯ ಕಮಿಶನರು ಅವರಿಗೆ ಹಾಗೆ ಮಾಡಲು ಪ್ರತಿಬಂಧಿಸಿದ್ದಾರೆ

ಹಜರತ್ ಅಬ್ದುಲ್ ಗನಿಯವರ ನಿಧನ

[ಸ್ಪೇಶಲ್ ತಂತಿ]

ಬಾಗಲಕೋಟೆ ತಾ॥ ೧೫—

ಹಜರತ್ ಅಬ್ದುಲ್‌ಗನಿ ಇಂಜಿನಿಯರರು ಇಂದು ಮುಂಜಾನೆ ೮ ಗಂಟೆಗೆ ಮಡಿದರೆಂದು ತಿಳಿಸಲು ವಿಷಾದವಾಗುತ್ತದೆ. ಪ್ಲೇಗಿನಿಂದ ಮಡಿದಿರಬೇಕೆಂಬ ಸಂಶಯವಿದೆ. ಮಹಮ್ಮದೀಯ ಜಾತಿಯವರಲ್ಲಿ ಇವರು ಅತ್ಯಂತ ಅಗ್ರಗಣ್ಯರಾದ ಮುಂದಾಳುಗಳಾಗಿದ್ದರು. ಗನೀ ಸಾಹೇಬರು ಬಹು ಧಾರ್ಮಿಕ ನಿಷ್ಠೆಯುಳ್ಳವರು ತಮ್ಮ ಜ್ಞಾತೀಯರ ಸಂಘಟನೆಯ ಕಾರ್ಯಕ್ಕಾಗಿಯೇ ಅವರು ಇತ್ತಿತ್ತ ತಮ್ಮ ಎಲ್ಲ ವೇಳೆ ಬುದ್ಧಿ ಶಕ್ತಿಗಳನ್ನು ಉಪಯೋಗಿಸುತ್ತಿದ್ದರು ಮುಸಲ್ಮಾನರಲ್ಲಿ ಅವರ ವರ್ಚಸ್ಸು ಅತಿಶಯವಾಗಿದ್ದಿತು ಈ ಊರಿನ ಸುಂದರವಾದ ಪಂಚಾಮಸೀದೆಯೂ ಅಲ್ಲಿಯೇ ಸ್ಥಾಪಿತವಾದ ಧಾರ್ಮಿಕ ಪಾಠಶಾಲೆಯೂ ತಮ್ಮ ಬಂಧುಗಳ ಉನ್ನತಿಗಾಗಿ ಗನಿಯವರು ಪ್ರಯತ್ನಿಸುತ್ತಿದ್ದರೆಂಬುದಕ್ಕೆ ಸಾಕ್ಷಿಯಾಗಿವೆ ಇವರು ಮುನಸಿಪಾಲಟಿಯಲ್ಲಿ ಸರಕಾರದಿಂದ ಸಭಾಸದರಾಗಿ ನೇಮಿಸಲ್ಪಟ್ಟಿದ್ದರು ಸಾರ್ವಜನಿಕ ಕಾರ್ಯಗಳಲ್ಲಿ ಉತ್ಸಾಹದಿಂದ ಭಾಗತೆಗೆದುಕೊಳ್ಳುತ್ತಿದ್ದರು ಇತರ ಧರ್ಮದವರ ಸಂಗಡ ಬಂಧುಭಾವದಿಂದಲೇ ನಡೆಯುತ್ತಿದ್ದರು ಆದ್ದರಿಂದ ಎಲ್ಲರೂ ಇವರಿಗೆ ಆದರ ತೋರಿಸುತ್ತಿದ್ದರು ಅತ್ಯಂತ ಸಂಪೂರ್ಣವಾದ ಹರತಾಳವು ಊರಲ್ಲೆಲ್ಲ ಇಂದು ಆಚರಿಸಲ್ಪಟ್ಟಿತು ೪ ಗಂಟೆಗೆ ಅಭೂತಪೂರ್ವವಾದ ಸ್ಮಶಾನ ಯಾತ್ರೆಯು ಜರುಗಿತು ಎಲ್ಲ ಧರ್ಮದವರೂ ಕೂಡಿ ಪಂಚಾ ಮಸೀದಿಯಲ್ಲಿ ದುಃಖಪ್ರದರ್ಶನ ಸಭೆಯನ್ನು ನೆರೆವೇರಿಸಿದರು ಎಲ್ಲ ಜಾತೀಯ ಮುಖಂಡರ ಭಾಷಣಗಳಾದವು

ಬಾಗಲಕೋಟಿ ಪತ್ರ

ಊರಲ್ಲಿ ಪ್ಲೇಗು ಹಬ್ಬಹತ್ತಿದೆ ಇಷ್ಟು ದಿನ ಕಿಲ್ಲೆದಲ್ಲಿ ಮಾತ್ರ ಹಾವಳಿ ನಡೆಸಿದ್ದ ಈ ಪಿಡುಗು ಈಗ ಊರು ತುಂಬ ಹರಿದಾಡಹತ್ತಿದೆ ಈ ಮೂರು ದಿನ ಈ ಬೇನೆಯಿಂದ ಹಾಗೆ ಹಿಡಿದವರ ಸಂಖ್ಯೆ ೪—೫ ವರೆಗೆ ಏರಹತ್ತಿದೆ. ಜನರಾದರೂ ಊರ ಬಿಡುವ ಗಡಿಬಿಡಿ ನಡೆಸಿದ್ದಾರೆ ಈಗಾಗಲೆ ಕಲಾದಗಿ ದಾರಿಯಗುಂಟ ನೂರಾರು ಛಪ್ಪರಗಳು ನಿಂತಿವೆ

ಪದ್ಮಾಬಾಯಿ ಶಿವಮೊಗ್ಗಿ ಎಂಬ ಬಾಲವಿಧವೆಯು ತನ್ನ ತಂದೆಯ ಮನೆಯಿಂದ ಹೊರಬಿದ್ದು ಡಾ॥ ಬಾರ್ಲೀಯವರ ಸಹಾಯದಿಂದ ಊರನ್ನೂ ಬಿಟ್ಟು ಹೋಗಿದ್ದಳು ನಂತರ ಶ್ರೀ. ಬಾರ್ಲಿಯೊಡನೆ ಅವಳ ಪುನರ್ವಿವಾಹ ಆಗುವದಿದೆ ಎಂಬ ವಾರ್ತೆಯೂ ಹರಡಿತ್ತು- ಆದರೆ ಈಗ ಪದ್ಮಾಬಾಯಿ ಇವಳು ಪುನರ್ವಿವಾಹದ ವಿಚಾರವನ್ನು ಬಿಟ್ಟುಗೊಟ್ಟು, ವರ್ಧಾದಲ್ಲಿರುವ ಗಾಂಧೀ ಆಶ್ರಮದಲ್ಲಿರ ಹತ್ತಿರು ವಳೆಂದೂ, ಸ್ವಾವಲಂಬಿಯಾಗಿ ಸಮಾಜ ಸೇವೆ ಮಾಡುವ ಸಾಮರ್ಥ್ಯವನ್ನು ಸಂಪಾದಿಸುವ ದೃಷ್ಟಿಯಿಂದ ಅಲ್ಲಿ ಶಿಕ್ಷಣ ಹೊಂದುತ್ತಿರುವಳೆಂದೂ ಸುದ್ದಿ ಬಂದಿದೆ ಡಾ॥ ಬಾರ್ಲಿ ಇವರಾದರು ತಮ್ಮ ಮನೆಯವರನ್ನೆಲ್ಲ ಕರೆಯಿಸಿಕೊಂಡು ಕಾಶೀಪಟ್ಟಣದಲ್ಲಿ ವಾಸಿಸುತ್ತಿರುವರು,

'ಕರ್ನಾಟ ಭಗಿನಿ ಮಂಡಲ' ದ ಶಾಖೆಯಾದ ಈ ಊರ 'ಭಗಿನೀ ಮಂಡಲ'ಕ್ಕೆ ಕಳೆದ ವರ್ಷ ರಾಜಕೀಯ ಕೆಲಸದ ವೈಲಿಗೆ ಆದಂತಾಗಿದ್ದು ಮಡಿವಂತಿನಿಯರಾದ ಹೆಣ್ಣುಮಕ್ಕಳಿಗೆ ಅದರಲ್ಲಿ ಕಲೆತು ಕೆಲಸ ಮಾಡಲು ಅನುಕೂಲವಿಲ್ಲವಾಗಿದೆ ಎಂಬ ಕಲ್ಪನೆಯಿಂದ 'ಭಗಿನೀ ಸಮಾಜ' ವೆಂಬ ಬೇರೊಂದು ಸ್ತ್ರೀಯರ ಸಂಘವು ಇಲ್ಲಿ ಈಗ ಸ್ಥಾಪಿತವಾಗಿದೆ. ಅದರ ಹುಟ್ಟು ಇಲ್ಲಿಯ ಸ್ಕೂಲಬೋರ್ಡ ಸದಸ್ಯಿನಿಯರಾದ ಶ್ರೀಮತಿ ಲಕ್ಷ್ಮೀಬಾಯಿ ಪದಕಿ ಇವರ ಮನೆಯ ಅಟ್ಟದ ಮೇಲೆ. ಸಂಘದ ಅಧ್ಯಕ್ಷಿಣಿ ಶ್ರೀಮತಿ ಅಂಬೂಬಾಯಿ ಕಾಥವಟೆ ಇರುವರಂತೆ? ಸಂಘದ ಘಟನೆ ಗೊತ್ತುಗುರಿಗಳು ಇನ್ನೂ ಅಷ್ಟು ಸ್ಪಷ್ಟವಾಗಿ ನಿರ್ದಿಷ್ಟವಾಗಿಲ್ಲವಾಗಿ ತೋರುತ್ತಿದೆ; ಆದರೂ ಸಂಘದ ಕಾರ್ಯ ಉತ್ಸಾಹದಿಂದ ಸಾಗಿದೆ ಇದು ಈ ಊರ ಸ್ತ್ರೀಯರಿಗೆ ಶೋಭಾವಹವೇ ಆಗಿದೆ ಎಂದು ಸುಶಿಕ್ಷಿತ ತರುಣರಿಗೂ ಹಿರಿಯರಿಗೂ ಹಿಗ್ಗಾಗಿದೆ.

ಇಲ್ಲಿಯ ಸಿನೆಮಾ ಕಂಪನಿಯು ಮುರಿದು ಎಲ್ಲ ಸಾಮಾನುಗಳು ವರ್ಕಶಾಪಿನ ಥೇಟರದ ತಗಡುಗಳನ್ನು ಸಹ ಕಿತ್ತಿ ಮಾರಿದರು ಊರಲ್ಲಿ ಸಿನೆಮಾ ಇಲ್ಲವಾಯಿತೆಂದು ಹೌಸುಳ್ಳವರಿಗೆ ವಿಷಾದವಾಗಿದೆ

ಕರ್ನಾಟಕದ ಆರೋಗ್ಯ

[ನವಂಬರ ೪ರ ವರೆಗೆ ಸರಕಾರ ರಿಪೋರ್ಟದಿಂದ]

ಪ್ಲೇಗು	ಬಂದದ್ದು	ಸತ್ತಿದ್ದು
ವಿಜಾಪುರ	೬೩೬	೩೮೬
ಬೆಳಗಾವಿ	೨೪೪	೧೬೫
ಧಾರವಾಡ	೧೮೧	೬೫
ಸೊಲ್ಲಾಪುರ	೯೬	೬೪
ಕಾರವಾರ	೬	೧

ಬೆಳಗಾವಿ ಸೊಲ್ಲಾಪುರ ಜಿಲ್ಹೆಗಳಿಗಾಗಿ ಒಬ್ಬೊಬ್ಬ ಸ್ಪೆಶಲ್ ಡಾಕ್ಟರರು ನೇಮಿಸಲ್ಪಟ್ಟಿದ್ದಾರೆ

ಮಾರಿಕಾ	ಬಂದದ್ದು	ಸತ್ತಿದ್ದು
ವಿಜಾಪುರ	೧೦೫	೪೪
ಬೆಳಗಾವಿ	೨೭	೧೬
ಸೊಲ್ಲಾಪುರ	೯	೮

ಮೈಲಿ	ಬಂದದ್ದು	ಸತ್ತಿದ್ದು
ಧಾರವಾಡ	೭	೩
ಕಾರವಾರ	೫	೧
ಸೊಲ್ಲಾಪುರ	೧೯	೬



ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮ ಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು. ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು:— ಧಾರವಾಡ ಫಾರ್ಮಸಿ ಹಾಗೂ ಬಾಳಿಗಾ ಫಾರ್ಮಸಿ

ಡಾ ಕುಲಕರ್ಣಿಯವರ

೧೧-೧೧ ಲ್ಯಾಬೋರೇಟರಿ ನಂಬರ ೧೨

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ. ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ. ಪಿ ಯಿಂದ ಕಳಿಸುತ್ತೇವೆ. ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ. ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ:-**ರಾಘವ ಫಾರ್ಮಸಿ ಗೋಕಾಕ** ಜಿ. ಬೆಳಗಾವ

ಶ್ರೀ ಗೌರೀಶಂಕರ ಕಂಪನಿ ಹುಬ್ಬಳ್ಳಿ



೧ನೇ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಯಾತ್ರಿಕರಿಂದ ಮಾನಪತ್ರ ಪಡೆದಿದೆ

೨ನೇ ಮಹಾಯಾತ್ರಾ ಪ್ರವಾಸವು

ರೇಲ್ವೆ ಕಂಪನಿಯಿಂದ ಪರವಾನಗೀ ಪಡಕೊಂಡಿರುತ್ತದೆ.

ತಾ|| ೨೯-೧೨-೧೯೩೩ ರಿಂದ ೨೫-೨-೧೯೩೪ ರ ವರೆಗೆ

ಮುಂಬಯಿ, ಉಜ್ಜನಿ, ದಿಲ್ಲಿ, ಶ್ರೀಕಾಶಿ, ಗಯಾ, ಕಲ್ಕತ್ತಾ, ಮದ್ರಾಸು, ರಾಮೇಶ್ವರ ಲಂಕಾ, ಮೈಸೂರ ಮೊದಲಾದ ೮೮ ಪುಣ್ಯ ಕ್ಷೇತ್ರಗಳ ಯಾತ್ರಾ ಸುಯೋಗವು **ಸೆಕಂಡ ಕ್ಲಾಸ** ೩೧೧ ರೂ **ಥರ್ಡಕ್ಲಾಸ** ೧೪೦ ರೂ ಮಾತ್ರ ಟಿಕೇಟ್ ಪಡೆಯತಕ್ಕವರು ಕೂಡಲೇ ೨೫ ರೂ. ಅಡ್ವಾನ್ಸ ಕಳಿಸತಕ್ಕದ್ದು ವಿಶೇಷ ಮಾಹಿತೀ ಪತ್ರಿಕೆಗಳು ಬೇಡಿದವರಿಗೆ ಕಳಿಸಲ್ಪಡುವವು.

ಜಮೀನದಾರರ ಕಾಮಧೇನು.

ನಮ್ಮದರ ಕಂಪನಿಯು ಎಂಜಿನ್ ರಂಟೆಗಳಿಂದ ಕಳೆದ ಮೂರು ವರ್ಷಗಳಂತೆ ಬರುವ ೧೯೩೪ನೇ ಇಸವಿಯ ಬೇಸಿಗೆಯಲ್ಲಾದರೂ ಪಡ ಜಮೀನುಗಳು ಯೋಗ್ಯ ದರದಲ್ಲಿ ಶಿರ್ದೀ ಮಾಡಿ ಕೊಡಲ್ಪಡುವವು

ಆಫೀಸು ಸ್ಟೇಶನ್ ರೋಡ ಹುಬ್ಬಳ್ಳಿ — **ಜಿ ಎ. ಶಿರೂರ.**

ತಾ|| ೩-೧೧-೧೯೩೩ — ಆರ್ಗನೈಜರ

“ ಬದರೀ ನಾರಾಯಣನ ದರ್ಶನ ”

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶಗಳಿರುವವು. ಬೆಲೆ—೦-೬-೬ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು. ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಕೆ ಅಗಡಿಕರ ಬ್ರದರ್ಸ

ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೨೮-೧೦-೩೩ **ಗದಗ ಶ್ರೀ ದತ್ತಾತ್ರೇಯ ಬುಕ್ ಡೆಪೋ**

ಕಡಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ಅಸ್ಪೃಶ್ಯತಾ ನಿವಾರಣೆ. { **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ. ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ. ಅಡ್ವಾನ್ಸಿಲ್ಲದೆ ವ್ಹಿ ಪಿ. ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್.

೬-೧೧-೩೩ **ಟಿ. ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.**

ಕೇವಲ ನಾಲ್ಕೇ ದಿವಸ ! **ಕೇವಲ ನಾಲ್ಕೇ ದಿವಸ !!**

ವಿಜಯ ಸಿನೇಮಾ ಧಾರವಾಡ.

ಸರಸ್ವತಿ ಫಿ ಕಂ ಸುಪ್ರಸಿದ್ಧ ಮಾತಾಡುವ ಹಾಡುವ ಚಿತ್ರಪಟ.

ಶ್ಯಾಮಸುಂದರ

ವೇಳೆ:— ೬, ೧೦-೩೦ಕ್ಕೆ **ರವಿವಾರ, ಮಂಗಳವಾರ ಹಗಲು ೪ಕ್ಕೆ**

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೇ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ ಕಲ್ಲು] ಗಳು ಬೇಕಾಗಿವೆ. ಮಾರುವವರು ಕನ್ನಡಿಗ ಕಾರ್ಯಾಲಯದಲ್ಲಿ ತಿಳಿಸಬೇಕು.

C/o **ಕನ್ನಡಿಗ ಕಾರ್ಯಾಲಯ**

Moderate fees! ***Excellent Results!!***

The NEW COACHING CLASSES

For High School & College Students

Fort Dharwar — **N. R Sunkad B. A.**

13 November 1933 — **D R. Kengsur B. A.**

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ

ಸಂಪಾದಕರು:— ಮೊಹರೆ ಹಣಮಂತರಾಯರು.

ಸಪ್ಟೆಂಬರ ೩ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡುತ್ತಿದೆ. ವಿಚಾರ ಪರಿಪ್ಲುತವಾದ ಲೇಖನಗಳೂ, ಖಂಡ ತುಂಡಿನ ನುಡಿಗಳೂ, ಬಿಸಿ ಬಿಸಿ ಸುದ್ದಿಗಳೂ ಬೇಕಾಗಿದ್ದರೆ ಇದನ್ನೇ ಓದಿರಿ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೧೨—೦

ವ್ಯವಸ್ಥಾಪಕ- ‘ಕರ್ನಾಟಕ ವೈಭವ’ ವಿಜಾಪುರ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು. ಸ್ಟ್ಯಾಂಡು, ತೊಟ್ಟಿಲು ಮತ್ತು ಪಡಿಕೆಯ ಬಾಗಿಲು ತಯಾರಾಗುತ್ತವೆ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ನಂ. ಬಿ. ೨೭೮೮ | ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ
ಕರ್ನಾಟಕ ಇನ್‌ಸ್ಯುರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಯುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು:– ಆಲೂರ ವೆಂಕಟರಾಯರು | ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಶುಕ್ರವಾರ ಕಾರ್ತಿಕ ಬಹುಳ ೩೦ ಶಕೆ ೧೮೫೫ ತಾ॥ ೧೭-೧೧-೩೩ [ಸಂಚಿಕೆ ೧೭೪

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ, ತಾ॥ ೨೫-೮-೩೩ | ಕೃಷ್ಣರಾವ ಅಂಕಲಿಗಿ, ಮ್ಯಾನೇಜಿಂಗ ಡಾಯರೆಕ್ಟರ.

ಉದ್ಯೋಗವ ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳಿ, ಹಳದಿ, ಕೆಂಪು ಬಣ್ಣದ ಎಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮ್ಯುನಿಚ್ ಫೇಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋಯಿ ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರೆ (೫) ಮೋಟಾರ ವಸ್ತುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ.

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ. ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು; ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ವಿಶೇಷ ಸೂ. ಬೇಕಾದರೆ ೧೫ ದಿವಸಗಳವರೆಗ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಕಲಾಸಪೂರ ಅ್ಯಂಡ ಕೋ ದೇವಕರಣ ಮ್ಯಾನ್ಶನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ | **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ. ಟೋಪಿ ಅ್ಯಂಡ ಕಂಪನಿ, ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಕಂಠರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಏಕೀಕರಣಕ್ಕಾಗಿ ಕರ್ನಾಟಕದ ಕೂಗು.

ಆರ್ಥಿಕ ಕಾರಣಗಳು.

[ವಿಜಾಪುರ ಜಿಲ್ಲಾ ಸ್ಕೂಲ ಬೋರ್ಡಿನ ಚೇರಮನ್ನರಾದ ಶ್ರೀ. ಎಸ್ ಟಿ ಪಾಟೀಲ ಬಿ ಎ ಎಲ್. ಎಲ್ ಬಿ ಇವರು ಮುಂಬಯಿ ಟಾಯಿಮ್ಸಕಾರರಿಗೆ ಬರೆದ ಪತ್ರವು]

ಸಂಪಾದಕರೇ,

ನೇಕನಾಮದಾರ ಗವ್ಹರ್ನರ ಸಾಹೇಬರು ಕರ್ನಾಟಕದ ಜಿಲ್ಹೆಗಳಿಗೆ ಇತ್ತಲಾಗಿ ಕೊಟ್ಟ ಭೆಟ್ಟಿಯಿಂದ ಪ್ರೇರಿತರಾಗಿ ನೀವು ಕನ್ನಡಿಗರ ಜೀವಾಳದ ಬೇಡಿಕೆಯಾದ ಏಕೀಕರಣ ಮತ್ತು ಸ್ವತಂತ್ರ ಪ್ರಾಂತ ರಚನೆ ಇವುಗಳ ಬಗ್ಗೆ ನಿಮ್ಮ ಪತ್ರದಲ್ಲಿ ಬರೆದದ್ದು ಸ್ತುತ್ಯವೇ ಸರಿ ಇತ್ತೀಚೆಗೆ ಕೆಲವು ವರ್ಷಗಳಿಂದ ಕರ್ನಾಟಕಕ್ಕಾಗಿ ಸ್ವತಂತ್ರ ಪ್ರಾಂತವನ್ನು ನಿರ್ಮಿಸುವದರ ಸಲುವಾಗಿ ಕರ್ನಾಟಕದಲ್ಲೆಲ್ಲ ಚಳವಳ ಹುಟ್ಟಿಗೆದೆಯೆಂದು ನೀವು ನಿಮ್ಮ ಲೇಖದಲ್ಲಿ ಒಪ್ಪಿರುವಿರಿ. ಆದರೆ ಮದ್ರಾಸ ಇಲಾಖೆಯಲ್ಲಿಯ ಕನ್ನಡಿಗರು ಮುಂಬಯಿ ಇಲಾಖೆಯ ಕನ್ನಡಿಗರೊಡನೆ ಸಹಕಾರ ಮಾಡಲು ಇಚ್ಛಿಸುವದಿಲ್ಲವೆಂದು ನೀವು ಸಾಧಿಸಿದ್ದು ನಿಜವಿಲ್ಲ ಮೊನ್ನೆ ಮೊನ್ನೆ ಮದ್ರಾಸ ಇಲಾಖೆಯ ಕಾಯದೆ ಮಂಡಲವು ಕರ್ನಾಟಕವನ್ನು ಬೇರೊಂದು ಸ್ವತಂತ್ರವಾದ ಪ್ರಾಂತವನ್ನಾಗಿ ಮಾಡಬೇಕೆಂಬ ಠರಾವನ್ನು ಸ್ವೀಕರಿಸಿದೆ ಇದಲ್ಲದೆ ಮದ್ರಾಸ ಇಲಾಖೆಯ ಕನ್ನಡ ಜಿಲ್ಲೆಗಳ ಲೋಕಲ್ ಬೋರ್ಡುಗಳು ಒಮ್ಮನಸ್ಸಿನಿಂದ ಇದಕ್ಕೆ ತಮ್ಮ ಸಂಮತಿಯನ್ನು ಕೊಟ್ಟು ಸ್ವತಂತ್ರ ಪ್ರಾಂತವನ್ನು ಬೇಡಿರುವವು

ಈ ಸ್ವತಂತ್ರ ಪ್ರಾಂತದ ಆರ್ಥಿಕ ಪ್ರಶ್ನೆಯನ್ನು ಇವರ ಪುರಸ್ಕರ್ತರು ಚೆನ್ನಾಗಿ ವಿಚಾರ ಮಾಡದೆ ಹಾರಿಸಿ ಬಿಟ್ಟಿರುವರೆಂಬದಾಗಿ ನೀವು ಬರೆದದ್ದು ನಮ್ಮ ದುರ್ದೈವವೇ ಸರಿ. ಯಾಕೆಂದರೆ ಈ ಯೋಜನೆಯ ಪುರಸ್ಕರ್ತರು ಈ ವಿಷಯವನ್ನು ತಮ್ಮ ಕಣ್ಣು ಮುಂದೆ ಯಾವಾಗಲೂ ಇಟ್ಟುಕೊಂಡಿದ್ದಾರಲ್ಲದೆ, ಈ ದೊರೆಯುವ ಉತ್ಪನ್ನ ಮತ್ತು ವೆಚ್ಚದ ಆಯಿ.ಕೆಗಳ ಮೇಲಿಂದಲೇ ವಿಚಾರ ಮಾಡಲಾಗಿ ಕರ್ನಾಟಕವು ಸ್ವತಂತ್ರ ಪ್ರಾಂತವಾದರೆ ಅದು ಸಂಪೂರ್ಣವಾಗಿ ಸ್ವಾವಲಂಬಿಯಾಗುವದೆಂದು ಸಿದ್ಧಪಡಿಸಿ ಒಂದು ಪತ್ರಿಕೆಯನ್ನು ಸಹ ಪ್ರಕಟಿಸಿರುವರು ಸ್ವತಂತ್ರ ಪ್ರಾಂತವಾದರೆ ಮುಂದಾಗಬಹುದಾದ ಸುಧಾರಣೆಗಳಿಂದ ಬರುವ ಹೆಚ್ಚಿಗೆ ಉತ್ಪನ್ನವನ್ನು ಇದರಲ್ಲಿ ಸಮ್ಮಿಳಿಸಿ ಸೇರಿಸುವದಂತೂ ಇರಲಿ. ಈಗ ಸ್ವತಂತ್ರ ಪ್ರಾಂತಗಳಾಗಲಿರುವ ಸಿಂಧ ಮತ್ತು ಒರಿಸಾ ಪ್ರಾಂತಗಳಿಗಿರುವ ತೊಂದರೆಗಳು ಈ ಪ್ರಾಂತಕ್ಕಿರುವದಿಲ್ಲ ಹೀಗೆ ಸ್ವತಂತ್ರವಾಗಲು ಕರ್ನಾಟಕಕ್ಕೆ ಹಲವು ತೊಂದರೆಗಳಿರುವವೆಂಬ ನಾ. ಗವ್ಹರ್ನರರ ಮಾತನ್ನು ನಾವು ಅಲ್ಲಗಳೆಯದಿದ್ದರೂ ಆ ತೊಂದರೆಗಳನ್ನು ದೂರೀಕರಿಸುವದು ಅವಶ್ಯವಾದದ್ದೆಂದು ನಾವು ಸೂಚಿಸದೆ ಇರಲಾರೆವು. ಈ ವಿಷಯವಾಗಿ ಕರ್ನಾಟಕದ ಮುಖಂಡರು ಸರಕಾರ ಮತ್ತು ಜನತೆಯ ಮುಂದೆ ವಿಧಾಯಕ ಕಾರ್ಯಕ್ರಮವನ್ನು ಇಟ್ಟಿರುವರು ಸರಕಾರದವರು ಈಗ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸುವದು ಅವಶ್ಯವಿದೆ. ನಿಜಸ್ಥಿತಿಯ ಪೂರ್ಣ ವಿಚಾರ ಮಾಡದೆ ಆರ್ಥಿಕ ಪ್ರಶ್ನೆಯ ಭೂತವನ್ನು ಎಬ್ಬಿಸುವದು ಸರ್ವಥಾ ನ್ಯಾಯವಲ್ಲ. ಒರಿಸಾ ಮತ್ತು ಸಿಂಧ ಪ್ರಾಂತಗಳ ವಿಷಯದಲ್ಲಿ ನೇಮಿಸಿದ ಪ್ರಕಾರ ಸರಕಾರದವರು ಈ ಪ್ರಶ್ನೆಯ ಸಾಧ್ಯಾಸಾಧ್ಯದ ವಿಚಾರಕ್ಕಾಗಿ ಒಂದು ತಜ್ಞರ ಮಂಡಲವನ್ನು ನಿಯಮಿಸಲಿ

ಮುಂಬಯಿ ಸರಕಾರವು ಕರ್ನಾಟಕದ ಜಿಲ್ಹೆಗಳನ್ನು ಪಕ್ಷಪಾತದಿಂದ ನಡಿಸಿಕೊಳ್ಳುತ್ತದೆಂದು ಅನ್ನಲಿಕ್ಕೆ ಬರಲಾರದೆಂದು ನೀವು ಬರೆದಿರುತ್ತೀರಿ ಆದರೆ ಮುಂಬೈ ಸರಕಾರದವರು ಕರ್ನಾಟಕದಲ್ಲಿ ಮಾಡಿದ ಒಂದೆರಡು ಲೋಕೋಪಯುಕ್ತ ಕಾರ್ಯಗಳನ್ನಾದರೂ ಸಿದ್ಧಪಡಿಸಿ ತೋರಿಸಬೇಕೆಂದು ನನ್ನ ಆಹ್ವಾನವಿದೆ. ಕರ್ನಾಟಕದ ಎಷ್ಟೋ ಜಿಲ್ಹೆಗಳು ಬರಗಾಲದಿಂದ ಹಾಳಾಗಿ ಹೋಗುತ್ತಿದ್ದರೂ ಅದರ ನಿವಾರಣೆಗಾಗಿ ಯಾವ ಯೋಜನೆಯೂ ಇದುವರೆಗೆ ಸರಕಾರದಿಂದ ಪ್ರಾರಂಭವಾಗಿಲ್ಲ. ಇಷ್ಟೇ ಅಲ್ಲ ಸಿಂಧಬಂಧ ಮರುಭೂಮಿಯನ್ನು ತೋಟವನ್ನಾಗಿ ಮಾಡಲು ಹೊರಟ ಸರಕಾರವು ಕೋಟಿಗಟ್ಟಲೆ ರೂಪಾಯಿಗಳನ್ನು ವೆಚ್ಚಿಸಿಂದ ತುಂಬಿದ ಕಾನಡಾ ಜಿಲ್ಹೆಗಳನ್ನು ಅಡವಿಗಳನ್ನಾಗಿ ಮಾಡಿದೆ ಕರ್ನಾಟಕದ ನೈಸರ್ಗಿಕ ಬಂದರಗಳೆಲ್ಲ ದುರ್ಲಕ್ಷಿಸಲ್ಪಟ್ಟಿವೆ. ಮತ್ತು ಅಗಾಧವಾದ ನೈಸರ್ಗಿಕ ಶಕ್ತಿಗಳು ಉಪಾಯಗಳಿಲ್ಲದೆ ಹಾಳಾಗಿ ಹೋಗುತ್ತಲಿವೆ ಕರ್ನಾಟಕವು ಸ್ವತಂತ್ರ ಪ್ರಾಂತವಾದಲ್ಲಿ ಈ ಶಕ್ತಿಗಳ ಯೋಜನೆಯು ಜನತೆಯ ಸುಧಾರಣೆಗಾಗಿ ಉಪಯೋಗಿಸಲ್ಪಡುವವೆಂಬದರಲ್ಲಿ ಸಂದೇಹವಿಲ್ಲ. ಮುಂಬಯಿ ಕಾಯದೆ ಮಂಡಲದಲ್ಲಿ ಸಹ ಸಿಂಧ ಮತ್ತು ಗುಜರಾಥ ಪ್ರಾಂತಗಳಿಗಿರುವಷ್ಟು ಪ್ರಾತಿನಿಧ್ಯವು ಕರ್ನಾಟಕಕ್ಕಿರುವದಿಲ್ಲ. ಕಾರಣ ಕರ್ನಾಟಕದ ಏಕೀಕರಣವನ್ನು ಬೇಡುವದು ಕೇವಲ ಅದರ ಸಂಸ್ಕೃತಿಯ ಅಥವಾ ಭಾಷೆಯ ವಿಷಯವಾಗಿಲ್ಲ ಆದರೆ ಅದು ಆರ್ಥಿಕ ಪುನರುಜ್ಜೀವನಕ್ಕಾಗಿ

ಮೈಸೂರ ಸಂಸ್ಥಾನದ ಭಾಷೆ

ಮೈಸೂರ ಸಂಸ್ಥಾನದಲ್ಲಿ ಒಟ್ಟು ೧೭೫೬೧ (ಹಳ್ಳಿಗಳಿಗೂ ಪಟ್ಟಣಗಳೂ ಕೂಡಿ) ಗ್ರಾಮಗಳಿವೆ ೧೯೩೧ ಫೆಬ್ರುವರಿ ೨೬ ನೇ ತಾರೀಖಿಗೆ ಈ ಸಂಸ್ಥಾನದ ಒಟ್ಟು ಜನಸಂಖ್ಯೆಯು ೬೫ ಲಕ್ಷವಿತ್ತು, ಇದರಲ್ಲಿ ಕನ್ನಡವು ಮಾತೃಭಾಷೆಯಾಗಿರುವವರ ಸಂಖ್ಯೆಯು ೪೫ ಲಕ್ಷ. ಈ ೬೫ ಲಕ್ಷ ಜನರಲ್ಲಿ ೨೮ ಸಾವಿರ ಜನರು ಬೇರೊಂದು ಭಾಷೆಯನ್ನು ಮಾತಾಡಬಲ್ಲರು ಈ ೨೮ ಸಾವಿರದಲ್ಲಿ ೨೬ ಸಾವಿರ ಜನರ ತೆಲುಗು ಮಾತನಾಡುತ್ತಾರೆ

ಕನ್ನಡಿಗ

ಶುಕ್ರವಾರ ತಾರೀಖು ೧೬-೧೧-೧೯೩೩

ಸರಕಾರದ ಸಂಕುಚಿತ ಮನಸ್ಸು.

ವಿಠ್ಠಲಭಾಯಿ ಪಟೇಲರಂಥ ವಿಭೂತಿಯ ಮರಣದಿಂದ ಅಖಂಡ ಭರತಖಂಡವೆಲ್ಲ ಶೋಕ ಸಾಗರದಲ್ಲಿ ಮುಳುಗಿ ಹೋಗಿದೆ. ಇವರ ಕೊನೆಯ ಸಂಸ್ಕಾರದ ಸಮಯದಲ್ಲಿ ಸರಕಾರದವರು ತೋರಿಸಿದ ವೃತ್ತಿಯು ಅತ್ಯಂತ ಸಂಕುಚಿತವಾಗಿತ್ತೆಂಬದನ್ನು ಯಾರಾದರೂ ಕಾಣಬಹುದು. ಚೌಪಾಟಿಯ್ಮೈದಾನಿನಲ್ಲಿ ತಮ್ಮ ಶವದ ದಹನ ಕಾರ್ಯವು ನಡೆಯಬೇಕೆಂದು ವಿಠ್ಠಲಭಾಯಿಯವರ ಕೊನೆಯ ಆಶೆಯಿದ್ದಿತು. ಚೌಪಾಟಿಯಲ್ಲಿಯೇ ಇದು ಜರುಗತಕ್ಕದ್ದೆಂದು ಮುಂಬೈಯಲ್ಲಿ ಜನಸಾಮಾನ್ಯರೆಲ್ಲರೂ ಇಚ್ಛಿಸುತ್ತಿದ್ದರು. ಆದರೆ ಪ್ರಜೆಗಳ ಮತವನ್ನು ಸರಕಾರದವರು ಮನ್ನಿಸಲಿಲ್ಲ. ಹಿಂದುಸ್ಥಾನದ 'ಪಾರ್ಲಮೆಂಟ'ಎಂದು ಬ್ರಿಟಿಶರೆಲ್ಲ ಆತ್ಮತೆಯಿಂದ ನುಡಿಯುತ್ತಿರುವ ಅಸೆಂಬ್ಲಿಗೆ ವಿಠ್ಠಲಭಾಯಿಯವರು ಬಹುಕಾಲ ಅಧ್ಯಕ್ಷರಾಗಿದ್ದರೆಂಬದನ್ನಾದರೂ ಸರಕಾರದವರು ಲಕ್ಷಿಸಿ ತಮ್ಮ 'ಪಾರ್ಲಮೆಂಟ'ದ ಅಧ್ಯಕ್ಷರ ಕೊನೆಯ ಸಂಸ್ಕಾರದ ಸಮಯಕ್ಕೆ ಕೊಂಚಾದರೂ ಔದಾರ್ಯವನ್ನು ತೋರಿಸಿ, ಚೌಪಾಟಿಯಲ್ಲಿಯೇ ದಹನ ಕಾರ್ಯ ನೆರವೇರುವಂತೆ ಮಾಡಿದ್ದರೆ ಲಕ್ಷೋಪಲಕ್ಷ ಹಿಂದೀಯರ ಮನಸ್ಸನ್ನು ಸರಕಾರವು ಸಂತೋಷಗೊಳಿಸಿದಂತಾಗುತ್ತಿತ್ತು. ಅಂಥ ಸಮಯವನ್ನು ಸರಕಾರದವರು ಕಳೆದುಕೊಂಡರು.

ಶವದ ಪೆಟ್ಟಿಗೆಯನ್ನು ಹಡಗದಿಂದ ಇಳಿಸುವಲ್ಲಿಯೂ ಸಹ ಸರಕಾರದವರು ಅನೇಕ ಒಗಟು ನಿರ್ಬಂಧನೆಗಳನ್ನು ಹಾಕಿ, ಜನತೆಗೆ ಅಪ್ರಿಯರಾಗಿದ್ದಾರೆ. ವಿಠ್ಠಲಭಾಯಿಯವರು ಎಂದು ಮಡಿದರು? ಹೇಗೆ ಮಡಿದರು? ಎಲ್ಲಿ ಮಡಿದರು? 'ಯಾವ ಬೇನೆಯಿಂದ ಮಡಿದರು' ಎಂಬ ಬಗ್ಗೆ ಜಿನೇವ್ದಾದ ಅಧಿಕಾರಿಗಳಿಂದ ಸರ್ಟಿಫಿಕೇಟು ಬೇಕೆಂದೂ, ಈ ಸರ್ಟಿಫಿಕೇಟನ್ನು ತೋರಿಸದಿದ್ದರೆ ಶವದ ಪೆಟ್ಟಿಗೆಯನ್ನು ಹಿಂದುಸ್ಥಾನದಲ್ಲಿ ಪ್ರವೇಶಿಸಲು ಅಪ್ಪಣೆ ಕೊಡೆವೆಂದೂ ಸರಕಾರದವರು ಪ್ರಕಟನೆ ಹೊರಡಿಸಿದ್ದನ್ನು ಕಂಡು ಬಹು ಕಳವಳವುಂಟಾಗುತ್ತದೆ. ಹೊರಗಿನಿಂದ ಹಿಂದುಸ್ಥಾನಕ್ಕೆ ಬರುವ ಅನೇಕ ವಸ್ತುಗಳಂತೆಯೇ ಈ ರಾಷ್ಟ್ರದ ವೀರನ ಈ ಕಳೇಬರವನ್ನೂ ಸರಕಾರವು ಕಠಿಣವಾದ ಕಟ್ಟಳೆಗೆ ಗುರಿ ಮಾಡಿದ್ದು ಸರಿಯಲ್ಲ. ಅಪವಾದವೆಂದು ಸರಕಾರವು ಕೆಲ ವಿಶಿಷ್ಟ ಪ್ರಸಂಗಗಳಲ್ಲಿ ಕಾಯಿದೆಯ ಕಠೋರತೆಯನ್ನು ಕೊಂಚ ಸಡಿಲು ಮಾಡುವದುಂಟು. ಹೀಗೆ ಸಡಿಲಿಸುವ ಪದ್ಧತಿಯೇನು ಸರಕಾರದ ವ್ಯವಹಾರದಲ್ಲಿ ಹೊಸದಲ್ಲ. ಎಂದ ಮೇಲೆ ವಿಠ್ಠಲಭಾಯಿಯಂಥ ಮಹಾ ರಾಷ್ಟ್ರಭಕ್ತನ ಕೊನೆಯ ಸಂಸ್ಕಾರದ ಕಾಲಕ್ಕೆ ಕೆಲವು ಕಟ್ಟಳೆಗಳನ್ನು ಸಡಿಲಿಸಿದ್ದರೆ, ಸರಕಾರದ ಔದಾರ್ಯವೇ ಹೆಚ್ಚಾಗುತ್ತಲಿದ್ದಿತು.

ವಿಠ್ಠಲಭಾಯಿಯವರ ಅಂತ್ಯ ವಿಧಿಯು ಅವರ ತಮ್ಮಂದಿರಾದ ವಲ್ಲಭಭಾಯಿಯವರಿಂದ ನಡೆಯಬೇಕೆಂದು ಅನೇಕರು ಬಯಸಿದ್ದರು. ಈ ಸಮಯದಲ್ಲಿ ಅವರ ಬಿಡುಗಡೆ ಮಾಡಬೇಕೆಂದು ಸರಕಾರಕ್ಕೆ ಪ್ರಖ್ಯಾತರಾದ ಪ್ರಾಗತಿಕರಿಂದ ಸಹ ಸೂಚನೆಗಳು ಹೋಗಿದ್ದವು. ಆದರೆ ಅವರನ್ನು ಬಿಡುವದಿಲ್ಲೆಂದು ಖಂಡತುಂಡಾಗಿ ಸರಕಾರವು ಹೇಳಿದ್ದರಿಂದ ಅದೊಂದು ಬಾಧೆ ಜರುಗುತ್ತಿತ್ತು. ಬಿಡುವ ಇಚ್ಛೆ ತಮಗಿತ್ತೆಂದೂ ಸರದಾರ ವಲ್ಲಭಭಾಯಿಯವರೇ ನಿರಾಕರಿಸಿದರೆಂದೂ ಪ್ರಕಟಿಸಿದ್ದು ಸಮಂಜಸವಾಗದು. ಯಾಕಂದರೆ ಸರದಾರರು ಒಪ್ಪಲಾರದಂಥ ಕರಾರುಗಳನ್ನು ಹಾಕಿ ಅವರೇ ಹೊರಗೆ ಬರಲು ನಿರಾಕರಿಸಿದರೆಂದು ಹೇಳುವದರಕ್ಕಿಂತ ಅವರು ಒಪ್ಪುವಂಥ ಕರಾರುಗಳನ್ನು ಮಾತ್ರ ಹಾಕಿದ್ದರೆ ಸರಕಾರದ ಉದಾರ ಬುದ್ಧಿಯು ಹೊರ ಬೀಳುತ್ತಿತ್ತು. ೩-೪ ದಿನ ಹೊರಗಿದ್ದರೆ ಸರದಾರರು ಬ್ರಿಟಿಶ ಸಾಮ್ರಾಜ್ಯದ ತಳಗಳನ್ನೇನು ಅಲ್ಲಾಡಿಸುತ್ತಿರಲಿಲ್ಲವಷ್ಟೆ? ಎಂದ ಬಳಿಕ ಸರಕಾರಕ್ಕೆ ಅಷ್ಟು ಸಂಕೋಚವೇಕೆ ಅಂತ ತಿಳಿಯದು.

ಹುಬ್ಬಳ್ಳಿ ನ್ಯೂ ಇಂಗ್ಲಿಷ್ ಸ್ಕೂಲಿನ ಸ್ತುತ್ಯ ಸಾಹಸ

ಧಾರವಾಡ ಜಿಲ್ಹೆಯಲ್ಲಿ ಹೆಣ್ಣುಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ಇಂಗ್ಲೀಶ ಹಾಯಸ್ಕೂಲು ಇಲ್ಲದಿರುವದು ವಿಷಾದಕರ ಸಂಗತಿಯಾಗಿದೆ. ಧಾರವಾಡದಲ್ಲಿ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಎಸ್. ಎಲ್. ಸಿ. ಇಯತ್ತೆಯವರೆಗೆ ಕಲಿಸುವ ಒಂದು ಸರಕಾರೀ ಶಾಲೆಯು ಇರುವದೇನೋ ನಿಜ. ಆದರೆ ಹೆಣ್ಣುಮಕ್ಕಳಲ್ಲಿ ಈಗ್ಗೆ ನಡೆದ ಪ್ರಗತಿಯನ್ನೂ ಮತ್ತು ಬೇರೆ ಬೇರೆ ಶಾಲೆಗಳಲ್ಲಿಯ ವಿದ್ಯಾರ್ಥಿನಿಯರು ಕ್ರಮೇಣ ಬೆಳೆಯುತ್ತಿರುವ ಸಂಖ್ಯೆಯನ್ನೂ ನೋಡಿದರೆ ಹೆಣ್ಣುಮಕ್ಕಳ ಹಾಯಸ್ಕೂಲಿನ ಅವಶ್ಯಕತೆಯು ಎಷ್ಟಿರುವದೆಂಬುದು ಗೊತ್ತಾಗುವದು. ಈ ವಿಷಯದಲ್ಲಿ ಹುಬ್ಬಳ್ಳಿಯ ನ್ಯೂ ಇಂಗ್ಲಿಶ ಸ್ಕೂಲಿನವರು ಶಾಲೆಯಲ್ಲಿ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ವರ್ಗಗಳನ್ನು ಬರುವ ಹೊಸ ವರುಷದಿಂದ (ಜೂನತಿಂಗಳದಿಂದ) ಸುರು ಮಾಡುವರೆಂದು ತಿಳಿಸಲು ಆನಂದವಾಗುತ್ತದೆ.

ಅದಕ್ಕೆ ಬೇಕಾಗುವ ವಿದ್ಯಾ ಖಾತೆಯ ಮಂಜೂರಿಯು ಈಗಾಗಲೆ ದೊರಕಿದೆಯಂತೆ.

ವರ್ಗಗಳ ವೇಳೆಯು ಗಂಡು ಹುಡುಗರ ಸಂಗಡ ಕೂಡದಂತೆ ಮುಂಜಾನೆ ಇಡಲ್ಪಟ್ಟಿದ್ದು ಹಳೆಯ ಸಂಪ್ರದಾಯದ ಸದ್ಗೃಹಸ್ಥರೂ ಕೂಡ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಲು ಅನುಕೂಲವಿರುವದು. ಬಿ. ಎ. (ಆನರ್ಸ) ಪಾಸಾದ ಶಿಕ್ಷಕಿಯನ್ನು ನೇಮಿಸಕೊಳ್ಳಲಾಗಿದ. ವಿದ್ಯಾರ್ಥಿನಿಯರ ಸಂಖ್ಯೆಯು ಹೆಚ್ಚಾದಂತೆ ಮತ್ತೆ ಹೆಚ್ಚಿಗೆ ಶಿಕ್ಷಕಿಯರನ್ನು ನೇಮಿಸಿಕೊಳ್ಳುವದಲ್ಲಿ ಬರುವದು.

ಶಾಲೆಯಲ್ಲಿಯ ವಿದ್ಯಾರ್ಥಿನಿಯರ ಸಂಖ್ಯೆಯು ಸದ್ಯಕ್ಕೆ ೩೦ಕ್ಕೆ ಮಿಕ್ಕಿದ್ದು ಹೊಸ ವ್ಯವಸ್ಥೆಯಾದ ಬಳಿಕ ಸಂಖ್ಯೆಯು ಇಮ್ಮಡಿ ಮುಮ್ಮಡಿಯಾಗುವದರಲ್ಲಿ ಸಂದೇಹವಿಲ್ಲ. ಸಾಕಷ್ಟು ವಿದ್ಯಾರ್ಥಿನಿಯರು ಶಾಲೆಗೆ ಬರಲಿಕ್ಕೆ ಸಿದ್ಧರಾದ ಮೇಲೆ ಶಾಲೆಯನ್ನು ಹೊರಡಿಸುವದು ಅಷ್ಟೇನೂ ಕಠಿಣವಲ್ಲ. ಆದರೆ ಶಾಲೆಯನ್ನು ಹೊರಡಿಸಿ ಜನರಲ್ಲಿ ಒಂದು ತರದ ವಿದ್ಯೆಯ ರುಚಿಯನ್ನು ಹುಟ್ಟಿಸಿ ವಿದ್ಯಾರ್ಥಿಗಳನ್ನು ಆಕರ್ಷಿಸುವದು ಹೆಚ್ಚು ಶ್ರೇಯಸ್ಸುಂಟು.

ನ್ಯೂ ಇಂಗ್ಲೀಶ ಸ್ಕೂಲಿನಲ್ಲಿ ಸುರುವಾಗಲಿರುವ ವರ್ಗಗಳು ಸ್ವಲ್ಪಕಾಲದಲ್ಲಿಯೇ ಒಂದು ಹೆಣ್ಣುಮಕ್ಕಳ ಹಾಯಸ್ಕೂಲಾಗಿ ಪರಿಣಮಿಸಲೆಂದು ಹಾರೈಸುತ್ತೇವೆ.

ಹೊಸ ಉಪಕ್ರಮದ ಬಗ್ಗೆ ನ್ಯೂ ಇಂಗ್ಲಿಶ ಸ್ಕೂಲಿನ ಅಧಿಕಾರಿಗಳನ್ನು ಅಭಿನಂದಿಸದೆ ಇರಲಾರೆವು. ಹುಬ್ಬಳ್ಳಿಯ ನಾಗರಿಕರು ಈ ಹೊಸವ್ಯವಸ್ಥೆಯಿಂದ ಶಕ್ಯವಿದ್ದಷ್ಟು ಲಾಭವನ್ನು ಪಡೆಯಬೇಕು. ಮತ್ತು ವರ್ಗಗಳು ಲೋಕಪ್ರಿಯವಾಗಿ ಉತ್ತರೋತ್ತರದ ಅಭಿವೃದ್ಧಿಯನ್ನು ಹೊಂದುವರೆಂದು ಕೋರುತ್ತೇವೆ.

ದೇವಾಲಯ ಪ್ರವೇಶದ ಕಾಯದೆ

ಶ್ರೀರಂಗ ಅಯ್ಯರರ ಮಸೂದೆ

ಹುಬ್ಬಳ್ಳಿ ತಾ|| ೧೬-೧೧-೩೩

ಸಾರ್ವಜನಿಕ ದೇವಾಲಯಗಳಲ್ಲಿ ಪ್ರವೇಶ ಮಾಡಲಿಕ್ಕೆ ಹರಿಜನರಿಗೆ ಕಾಯದೆಯು ಅತೀತ ವಿರಬಾರದೆಂದು ಶ್ರೀ ರಂಗಯ್ಯರರು ವರಿಷ್ಠ ಕಾಯದೆ ಮಂಡಳದಲ್ಲಿ ಸಮ್ಮತಿ ಪ್ರಾಧಾನ್ಯವುಳ್ಳ ಒಂದು ಕಾಯದೆಯ ಮಸೂದೆಯನ್ನು ತಂದಿರುವರಷ್ಟೆ. ಆ ಮಸೂದೆಯನ್ನು ಮಂಜೂರಿಗಿಡುವ ಪೂರ್ವದಲ್ಲಿ ಅದರ ಬಗ್ಗೆ ದೇಶದಲ್ಲಿ ಏನು ಅಭಿಪ್ರಾಯವಿರುತ್ತದೆಂಬದನ್ನು ತಿಳಿದುಕೊಳ್ಳುವ ನಿಮಿತ್ಯ ಕಾಯದೆ ಮಂಡಳದವರು ಅದರ ವಿಚಾರಣೆಯನ್ನು ಮುಂದೆ ಹಾಕಿರುವರು. ಈಗ ಮುಂಬೈ ಸರಕಾರದವರು ಸದರ ಮಸೂದೆಯನ್ನು ತಮ್ಮ ಗ್ಯಾಝೇಟಿನಲ್ಲಿ ಪ್ರಸಿದ್ಧಪಡಿಸಿ ಅದರ ಬಗ್ಗೆ ಇಲಾಖೆಯೊಳಗಿನ ಜನರ ಅಭಿಪ್ರಾಯವನ್ನು ಕೇಳಿರುವರು. ಮತ್ತು ಸದರ ಅಭಿಪ್ರಾಯಗಳನ್ನು ೧೯೩೪ನೇ ಇಸ್ವಿಯ ಎಪ್ರಿಲ್ ೩೦ನೇ ತಾರೀಖಿನೊಳಗಾಗಿ ತಮಗೆ ಮುಟ್ಟಿಸಬೇಕೆಂದು ತಿಳಿಸಿರುವರು. ಶ್ರೀ ರಂಗೈಯ್ಯರರ ಕಾಯದೆಯು ಅತ್ಯಂತ ಸೌಮ್ಯಸ್ವರೂಪದ್ದಾಗಿದ್ದು ಸಮ್ಮತಿ ಪ್ರಾಧಾನ್ಯವಿದೆ. ಅಂದರೆ ಯಾವದಾದರೊಂದು ದೇವಾಲಯದ ಚಾಲಕರ ಅಥವಾ ಭಕ್ತರ ಬಹುಮತವುಳ್ಳ ಸಮ್ಮತಿಯ ವಿನಃ ಅದರಲ್ಲಿ ಹರಿಜನರ ಪ್ರವೇಶವಾಗಲಾರದು. ಈಗಿನ ಪರಿಸ್ಥಿತಿಯಲ್ಲಿ ಹಿಂದೂ ಸಮಾಜದ ಧ್ರುವೀಕರಣಕ್ಕೂ ಪ್ರಗತಿಗೂ ಈ ತರಹದ ಕಾಯದೆಯಾಗುವದು ಅತ್ಯಂತ ಅವಶ್ಯವಿರುವದೆಂದು ಬಹು ಜನರು ಒಡಂಬಡುವರು. ಆದರೆ ಹಲವು ಸನಾತನೀಯ ದುರಾಗ್ರಹಿಗಳು ತಮ್ಮಲ್ಲಿಯ ಶಕ್ತಿ ಸರ್ವಸ್ವವನ್ನು ಒಟ್ಟುಗೂಡಿಸಿ ಅದಕ್ಕೆ ವಿರೋಧಿಸದೆ ಬಿಡಲಾರರು. ಹಲವು ಕಡೆಯಲ್ಲಿ ಅವರು ಈಗಾಗಲೇ ಹೆಚ್ಚಿನ ಸಂಖ್ಯೆ ತಕರಾರುಗಳನ್ನು ಉಪಸ್ಥಿತಿಸಿರುವರೆಂದು ತಿಳಿಯುತ್ತದೆ. ಅದಕ್ಕಾಗಿ ಪ್ರಾಗತಿಕರು ಈ ವಿಷಯದಲ್ಲಿ ಸ್ವಸ್ಥ ಕುಳಿತು ಉಪಯೋಗವಿಲ್ಲ. ಶ್ರೀ ರಂಗಅಯ್ಯರರ ಕಾಯದೆಯ ಸದುದ್ದೇಶವನ್ನು ಬಹುಜನ ಸಮಾಜಕ್ಕೆ ತಿಳಿಹೇಳಿ ಅವರ ಮತವು ಸದರ ಕಾಯದೆಗೆ ಅನುಕೂಲವಾಗುವಂತೆ ಯತ್ನಿಸುವದು ಪ್ರತಿಯೊಬ್ಬ ಹಿಂದೂ ಸಮಾಜದ ಹಿತಚಿಂತಕನ ಕರ್ತವ್ಯವಾಗಿದೆ. ಆದ್ದರಿಂದ ಪ್ರಾಗತಿಕ ವಿಚಾರಗಳುಳ್ಳ ಕರ್ನಾಟಕಸ್ಥರೆಲ್ಲರೂ ಈಗಿನಿಂದಲೇ ಪ್ರಯತ್ನವನ್ನಾರಂಭಿಸಿ ಶ್ರೀರಂಗಅಯ್ಯರರ ಮಸೂದೆಗೆ ಬಹುಜನ ಸಮಾಜದ ಬಹು ದೊಡ್ಡ ಬೆಂಬಲವಿರುವದೆಂದು ಸರಕಾರದ ಖಾತ್ರಿಮಾಡಲಿಕ್ಕೆ ಮಾನಸಿಕ ಮಾಡಬಾರದೆಂದ ನನ್ನ ಸೂಚನೆಯಿದೆ.

ವಿಠ್ಠಲ ಕೃಷ್ಣ ನಾಳವೇಕರ
ಹುಬ್ಬಳ್ಳಿ

ಗಿರಣಿ ಬಟ್ಟೆಗಳ ವ್ಯಾಪಾರ ಹೆಚ್ಚಾಯಿತು

ಅಹಮ್ಮದಾಬಾದ ತಾ|| ೧೪— ದೀಪಾವಳಿಯಿಂದೀಚೆ ಇಲ್ಲಿಯ ಗಿರಣಿಗಳ ಬಟ್ಟೆಯ ವ್ಯಾಪಾರವು ದಿನಾಲು ಹೆಚ್ಚುತ್ತಲಿದೆ. ಗಿರಣಿಗಳಲ್ಲಿ ಪ್ರತಿದಿನ ತಯಾರಾಗುತ್ತಿರುವ ಬಟ್ಟೆಗಳೆಲ್ಲ ಗಿರಣಿಗಳಿಂದ ಹೊರಬಿದ್ದ ಕೂಡಲೇ ಮಾರಾಟವಾಗುತ್ತಲಿವೆ. ಎಂಥಹ ಮಾಲಿದ್ದರೂ ವ್ಯಾಪಾರಾಗಿದೆ. ಗೋದಾಮಿನಲ್ಲಿದ್ದ ಹಿಂದಿನ ಶಿಲ್ಕು ಸಹ ಮಾರಾಟವಾಗಿದೆ. ಇಷ್ಟಾದರೂ ಬಟ್ಟೆಗಳ ಬೆಲೆ ಮಾತ್ರ ಹೆಚ್ಚಾಗಿಲ್ಲ. ಯಾಕಂದರೆ ಈಗಿನ ವ್ಯಾಪಾರವು ಸಣ್ಣ ಪ್ರಮಾಣದಲ್ಲಿದೆ. ದೊಡ್ಡ ಆರ್ಡರುಗಳು ಬಾರದಿರುವದೇ ಮುಖ್ಯ ಕಾರಣ. ಹೊಸ ಹೊಸ ನಮೂನೆಯ ಬಟ್ಟೆಗಳನ್ನು ತಯಾರಿಸುವ ಗಿರಣಿಗೆ ಬಿಡುವೇ ಇಲ್ಲ. ಹಳೆಯ ನಮೂನೆಯನ್ನೇ ಇಟ್ಟುಕೊಂಡಿರುವ ಗಿರಣಿಗಳಿಗೆ ಮಾತ್ರ ಕೊಂಚ ತೊಂದರೆಯಿದೆ.

ಇಹವೃತ್ತ.

ಕಾರವಾರ ಜಿಲ್ಹೆಯಲ್ಲಿಯ ಪರಿಸ್ಥಿತಿಯ ಮೂಲಕ ನಿರಾಶ್ರಿತರಾದ ಕುಟುಂಬಗಳಲ್ಲಿಯ ಬಾಲಕರಿಗಾಗಿ ಶಿವಮೊಗ್ಗೆಯಲ್ಲಿ ಏರ್ಪಡಿಸಲ್ಪಟ್ಟ ಬಾಲಕಾಶ್ರಮದ ವ್ಯವಸ್ಥೆಯನ್ನು ನೋಡಲಿಕ್ಕೆಂದು ಶ್ರೀ ಕರಮರಕರರು ಅಲ್ಲಿಗೆ ಹೋಗಿದ್ದರು. ಆಶ್ರಮದ ಕಾರ್ಯಕ್ರಮವನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಆಶ್ರಮದ ಮುಂದಿನ ವ್ಯವಸ್ಥೆಯನ್ನು ಕುರಿತು ಆಶ್ರಮದ ವ್ಯವಸ್ಥಾಪಕರೊಡನೆ ಚರ್ಚೆ ಮಾಡಿ ಶ್ರೀ ಕರಮರಕರರು ನಿನ್ನಿನ ದಿನ ಧಾರವಾಡಕ್ಕೆ ಮರಳಿ ಬಂದರು.

ಇಲ್ಲಿಯ ಸೋಮೇಶ್ವರ ದೇವಸ್ಥಾನದಲ್ಲಿ ಕೆಲ ದಿನಗಳ ಹಿಂದೆ ದೇವಸ್ಥಾನದ ರಿಪೇರಿಗಾಗಿ ಇಟ್ಟ ಸಿಮೆಂಟಿನ ಎರಡು ಚೀಲಗಳನ್ನು ಆರೋ ಪುಣ್ಯಾತ್ಮರು ಅಪಹರಿಸಿರುವರೆಂದು ಹಿತೈಷಿಗಳೊಬ್ಬರು ತಿಳಿಸುತ್ತಾರೆ. ಕದ್ದವರು ರೆಂಬುದನ್ನು ಗೊತ್ತುಹಚ್ಚಿಕೊಟ್ಟವರಿಗೆ ಶ್ರೀ ಸಿಂಗಪ್ಪಾ ಸಾಂಬ್ರಾಣಿಯವರು ಒಂದು ರೂಪಾಯಿ ಇನಾಮು ಕೊಡುವರು.

ಸ್ವೀಕಾರ.

ಧಾರವಾಡದ ರಾಮನಾಥ್ರಯ ಬುಕ್‌ಡಿಪೋ ಇವರಿಂದ ೧೯೩೪ನೇ ಇಸ್ವಿಯ ಕ್ಯಾಲೆಂಡರ ಬಂದಿದೆ. ಪಂಚಮ ಜಾರ್ಜರವರೊಂದಿಗೆ ಹಿಂದೀ ಉಡುಪಿನಲ್ಲಿ ಪಂಡಿತ ಮದನ ಮೋಹನ ಮಾಲವೀಯರೂ, ಮಹಾರಾಣಿಯವರ ಜೊತೆಯಲ್ಲಿ ಭಾರತೀಯ ಸಂಸ್ಕೃತಿಯ ದ್ಯೋತಕವಾದ ಸೀರೆ ಕುಪ್ಪಸಗಳನ್ನು ತೊಟ್ಟ ಸರೋಜಿನಿ ದೇವಿಯರೂ ಕುಳಿತಿರುವಾಗ್ಗೆ ಭಾರತೀಯರ ಜೀವನುಗಳಾದ ಮಹಾತ್ಮರು ಜಾರ್ಜರವರೊಂದಿಗೆ ಸ್ವಾತಂತ್ರ್ಯಾಂದೋಲನ ಮಾಡುತ್ತಿರುವಂಥ ಸಚಿತ್ರ ಕ್ಯಾಲೆಂಡರವಿದ್ದು ನಾವು ಇದನ್ನು ಆದರದಿಂದ ಸ್ವೀಕರಿಸುತ್ತೇವೆ.

ಅಲ್ಲಲ್ಲಿಯ ಸುದ್ದಿಗಳು.

ಸುಪ್ರಸಿದ್ಧ ಪಾರ್ಸಿ ಶ್ರೀಮಂತರಾದ ಸರ ಮ್ಯಾಂಚರ್ಜಿ ಭಾವನಗರಿ ಇವರು ಮಂಗಳವಾರ ಮುಂಜಾನೆ ಲಂಡನದಲ್ಲಿ ತೀರಿಕೊಂಡರೆಂದು ಸುದ್ದಿಯು ಬಂದಿದೆ. ರಾಜಕಾರಣದಲ್ಲಿ ಇವರು ಹಿಂದೀ ರಾಷ್ಟ್ರೀಯ ಪಕ್ಷದ ವಿರೋಧಿಗಳಾಗಿದ್ದು ಇಂಗ್ಲಂಡದ ಪಾರ್ಲಮೆಂಟಿಗೆ ಎರಡು ಸಲ ಕಾನ್ಸರ್ವೇಟಿವ್ಹ ಪಕ್ಷದವರಿಂದ ಆರಿಸಲ್ಪಟ್ಟಿದ್ದರು. ಇವರು ಲಂಡನ್ನವನ್ನೆ ತಮ್ಮ ವಾಸಸ್ಥಳವನ್ನಾಗಿಟ್ಟುಕೊಂಡಿದ್ದರು.

ಪ್ರತಿವರ್ಷ ಕೊಡಲಿರುವ ನೊಬೆಲ ಶಾಂತತೆಯ ಪಾರಿತೋಷಕವನ್ನು ಈ ವರ್ಷ ಯಾರಿಗೂ ಕೊಡುವದಿಲ್ಲವಂತೆ! ಎಲ್ಲ ಕಡೆಗು ಯುದ್ಧದ ಸಿದ್ಧತೆ ನಡೆದಿದೆಯೆಂದೋ?

ಹುಬ್ಬಳ್ಳಿಪೇಟೆಯ ಧಾರಣಿ

(ಕೇವಡೆ ಮತ್ತು ಕೆಂಪಡಿ)

ಹುಬ್ಬಳ್ಳಿ ತಾ|| ೧೬ [ಮಧ್ಯಾಹ್ನ ೧೧ ಗಂಟೆ

ಜವಾರಿ ಹತ್ತಿ	೧೦೦ ೧೦೨	ಜೋಳ	೩-೧೪
ಅಕ್ಲಜ ,	೧೦೦ ೧೦೨	ಗೋದಿ	೬||-
ವಿಲಾಯತಿ ,,	೯೪-೯೫	ಕಡ್ಲಿ	೬||.
ಮ್ಯಾಕ್ಸ ,	೧೦೮-೧೧೦	ಅಕ್ಕಿ	[illegible]
ಕಾನಪುರೀ	೬೮-೭೦	ಅಕ್ಕಿ	ಶಾ. ೫೫-[illegible]
ಹುಬ್ಬಳ್ಳೀ ಮೂಲ ಅ.	೬೪-೬೫	ಕುಸುಬಿ ೧೨	
ಸಾಹುಕಾರ ಅರಳೀ	೬೪-೬೫	ಹುರುಳಿ ೧೪	
ಹೆಸರು ಜವಾರಿ	೯ ೧೨		
ಶೇಂಗಾಬೀಜ	೫|-೫||	ಹತ್ತಿಕಾಳು ೬೦	

ಬೆಳ್ಳಿ ಬಂಗಾರ

ಬಂಗಾರ	೩೨೫-	ಬೆಳ್ಳಿ	|-

ಕಾಂಗ್ರೆಸ ಸಭೆಯು ಕೂಡುವದಿಲ್ಲ

ಕಾಂಗ್ರೆಸ ಸಭೆಯು ಕೂಡುವದಿಲ್ಲ

ಅಲಹಾಬಾದ ತಾ॥ ೧೫—ಪಂಡಿತ ಜವಾಹಿರಲಾಲರು ಡಿಸೆಂಬರ ತಿಂಗಳಲ್ಲಿ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಸಭೆಯನ್ನು ಕರೆಯುವರೆಂಬ ಸುದ್ದಿಯು ನಿಜವಲ್ಲ; ಪಂಡಿತರನ್ನು ವಿಚಾರಿಸಲಾಗಿ ತಾವು ಸಭೆಯನ್ನು ಕರೆದಿಲ್ಲವೆಂದು ಹೇಳಿದರು.

ಮಿಾರತ ಕೈದಿಗಳ ಬಿಡುಗಡೆ

ಮಿಾರತದ ಖಟ್ಲೆಯಲ್ಲಿ ಶಿಕ್ಷೆ ಹೊಂದಿದ್ದ ಆರೋಪಿಗಳಾದ ಬ್ರ್ಯಾಡ್ಲೆ, ಮಿರಜಕರ, ಜೋಗಳೇಕರ, ಸೋಹನಸಿಂಗ, ಜೋಶಿ ಮತ್ತು ಅಬ್ದುಲ್ ಮಜಿದ್ ಇವರು ತಮ್ಮ ಶಿಕ್ಷೆಯ ಅವಧಿಯನ್ನು ಮುಗಿಸಿಕೊಂಡು ಇವತ್ತಿನ ದಿವಸ ಬಿಡುಗಡೆ ಹೊಂದಿದರು. [ಅ ಪ್ರೆ ತಂತಿ]

ಅಲಹಾಬಾದ ತಾ॥ ೧೬—ಮಿಾರತದ ಖಟ್ಲೆಯಲ್ಲಿಯ ಆರೋಪಿಗಳು ಪ್ರಿವ್ಹಿ ಕೌನ್ಸಿಲಕ್ಕೆ ಅಪೀಲು ಮಾಡುವದಿಲ್ಲವೆಂದು ತಿಳಿಯುತ್ತದೆ. ಕೈದಿಗಳ ಪರವಾಗಿ ವಕೀಲರಾಗಿದ್ದ ಶ್ರೀ ಆರ್ ಎಸ್ ಪಂಡಿತ ಇವರು 'ರಕ್ಷಣ ಕಮಿಟಿ'ಯ ಕಡೆಗೆ ಲೆಕ್ಕ ಪತ್ರ ಸಹಿತವಾಗಿ ಖರ್ಚಿನ ಯಾದಿಯನ್ನು ಕಳಿಸಿದ್ದಾರೆ. ಅಪೀಲಿನಲ್ಲಿಯೇ ೫೦೦೦೦ ರೂ ಖರ್ಚಾಗಿವೆಯಂತೆ.

[ಅ ಪ್ರೆ ತಂತಿ]

ಕಾನಪೂರದಲ್ಲಿ ದರೋಡೆಯು.

ಕಾನಪೂರ ತಾ॥ ೧೫—ನಿನ್ನೆ ರಾತ್ರಿ ಇಲ್ಲಿ ಒಂದು ದರೋಡೆಯಾಯಿತು. ೧೫-೧೬ ಜನರು ಓರ್ವ ಶ್ರೀಮಂತ ಗೃಹಸ್ಥನ ಮೇಲೆ ಎರಡು ಸಲ ಗುಂಡು ಹಾಕಿ ಅವನನ್ನು ಗಾಯಗೊಳಿಸಿ ಹತ್ತಿರ ಇದ್ದ ಹಣವನ್ನೂ ಅರಿವೆ ಅಂಚಡಿಗಳನ್ನೂ ಮತ್ತು ಮುತ್ತು ರತ್ನಾದಿಗಳನ್ನೂ ತೆಗೆದುಕೊಂಡು ಹೋಗಿದ್ದಾರೆ. (ಅ ಪ್ರೆ ತಂತಿ)

ಹಿಂದುಸ್ಥಾನ-ಜಪಾನ ಸಂಭಾಷಣೆಗಳು.

ಹೊಸದಿಲ್ಲಿ ತಾ॥ ೧೫— ಹಿಂದುಸ್ಥಾನ ಮತ್ತು ಜಪಾನದ ನಡುವೆ ನಡೆದ ಇವತ್ತಿನ ಸಂಭಾಷಣೆಗಳು ಕೊನೆಯವೆಂದು ಹೇಳಬಹುದು. ಹಿಂದುಸ್ಥಾನದ ಸ್ಥಿತಿಯನ್ನು ಸ್ಪಷ್ಟವಾಗಿ ಯಾವ ಸಂಶಯಕ್ಕೂ ಆಸ್ಪದ ಸಿಗದಂತೆ ಜಪಾನವರಿಗೆ ತಿಳಿಸಲಾಯಿತು. ಹಿಂದುಸ್ಥಾನವು ಜಪಾನಕ್ಕೆ ಕೊಟ್ಟ ಕೆಲವು ಸವಲತ್ತುಗಳ ಬಗ್ಗೆ ಕಾಯದೆ ಮಂಡಲದಲ್ಲಿ ಕಡುತರ ಟೀಕೆಯಾಗುವ ಸಂಭವವಿದೆ. ಆದರೆ ಎರಡೂ ದೇಶಗಳ ಹಿತವನ್ನು ಲಕ್ಷ್ಯದಲ್ಲಿಡಲಾಗಿದೆ. ಸರಕುಗಳ ವರ್ಗೀಕರಣದ ವಿಷಯವಾಗಿ ಮತ್ತೆ ಅಲ್ಪಸ್ವಲ್ಪ ಮತಭೇದವಿದ್ದಿದೆ. ವರ್ಗೀಕರಣ ಮಾಡದೆ ಎಲ್ಲ ಅರಿವೆಯ ಸರಕಿನ ಮೇಲೆ ಒಂದೇ ಸುಂಕದ ದರವನ್ನು ಹೇರಬೇಕೆಂದು ಜಪಾನದವರ ಆಗ್ರಹ. ಹಾಗೆ ಮಾಡಿದರೆ ಕೆಲವು ಹಿಂದೀ ಗಿರಣಿಗಳಿಗೆ ಬಾಧೆ ಬರಬಹುದೆಂದು ಹಿಂದುಸ್ಥಾನದ ಅಂಜಿಕೆ. ಈ ಗಿರಣಿಗಳು ಬಿಸನೂಲಿನ ಅರಿವೆಯನ್ನು ತಯಾರಿಸುವವಿದ್ದು ಅವಕ್ಕೆ ಸರಕಾರವು ಎಲ್ಲ ರೀತಿಯಿಂದ ರಕ್ಷಣೆಯ ಅಭಿವಚನವನ್ನಿತ್ತಿದೆ. [ಅ ಪ್ರೆ ತಂತಿ]

ಹಿಂದೀ ವೈಮಾನಿಕನ ವಿಮಾನೋಡ್ಡಾಣ.

ಲಾಹೊರ ತಾ॥ ೧೫— ಹಿಂದೀ ವೈಮಾನಿಕನಾದ ಮನಮೋಹನಸಿಂಗ ಇವನು ಇವತ್ತಿನ ದಿವಸ ಲಂಡನದಿಂದ ಕೇಪಟೌನಕ್ಕೆ ವಿಮಾನ ಮಾರ್ಗವಾಗಿ ಹೊರಟನು. ವೇಗದಲ್ಲಿ ಜಗತ್ತಿನೊಳಗೇ ಮೊದಲನೇ ನಂಬರನ್ನು ಸಂಪಾದಿಸಬೇಕೆಂದು ಇವನ ಆಕಾಂಕ್ಷೆಯಿದೆ.

(ಅ ಪ್ರೆ ತಂತಿ]

ಕನ್ನಡದಲ್ಲಿ ಶೀಘ್ರಲಿಪಿ.

ಕನ್ನಡದಲ್ಲಿ ಶೀರ ಹೊಸ ಪದ್ಧತಿಗನುಸರಿಸಿ ಶಿವಮೊಗ್ಗೆಯ ಕೇ ಅನಂತ ಸುಬ್ಬರಾಯರು ಒಂದು ಶೀಘ್ರ ಲಿಪಿಯನ್ನು ನಿರ್ಮಿಸಿದ್ದಾರೆ. ಇದರ ಹೆಸರು 'ಶ್ರೀ ಶಾರದಾ ಶೀಘ್ರಲಿಪಿ'. ಈ ಲಿಪಿಯನ್ನು ಇಷ್ಟವಿದ್ದವರಿಗೆ ಕಲಿಸಿ ಹಾಗೂ ಈ ಲಿಪಿಕಲಿತ ಜನರನ್ನು ಬೇಕಾದವರಿಗೆ ಪೂರೈಸುವ ಯೋಜನೆಯನ್ನು ಶ್ರೀ ಅನಂತ ಸುಬ್ಬರಾಯರು ಹೊತ್ತಿದ್ದಾರೆ.

ವಿಜಾಪುರದಲ್ಲಿ ಹೊಸದೊಂದು ಪಕ್ಷ.

ವಿಜಾಪುರದ ವೀರಶೈವ ತರುಣರಾದ ಶ್ರೀ ಪಾಟೀಲರು ಒಂದು ಪ್ರಸ್ತಾವಿಕ ಸಭೆ ಕರೆದು 'ಪೀಪಲ್ಸ ಪಾರ್ಟಿ ಎಂದರೆ ಜನತೆಯ ಪಕ್ಷ' ಎಂಬ ಹೊಸದೊಂದು ಪಕ್ಷವನ್ನು ಸ್ಥಾಪಿಸಿದರು. ಕರ್ನಾಟಕದ ಸುಧಾರಣೆಯೇ ಇದರ ಗುರಿಯಂತೆ. ಪ್ರಾತಿನಿಧಿಕ ಸಂಸ್ಥೆಗಳನ್ನೆಲ್ಲ ಹಸ್ತಗತ ಮಾಡಿಕೊಳ್ಳುವದೇ ಸದ್ಯದ ಕಾರ್ಯಕ್ರಮವಾಗಿದೆಯೆಂದು ತಿಳಿಯುತ್ತದೆ.

ಸಾವುಕಾರನು ಸಾಲಕ್ಕಾಗಿ ಹೆಂಡತಿಯನ್ನು ಮನೆಗೆ ಒಯ್ದನು

ಸೊಲಾಪುರ ತಾ॥ ೧೪—ಇಂದು ಮುಂಜಾನೆ ಶರಣಪ್ಪ ಚಂದ್ರಪ್ಪ ಜವಳಿ ಎಂಬುವನ ಸ್ತ್ರೀಯು ಗಿರಣಿಗೆ ಹೋಗುವಾಗ್ಗೆ ಅಯ್ಯಪ್ಪ ತಿಪ್ಪಣ್ಣಾ ಎಂಬ ಓರ್ವ ವ್ಯಾಪಾರಿಯು ಅವಳನ್ನು ಅಡ್ಡಗಟ್ಟಿ ಅವಳ ಗಂಡನು ತೆಗೆದುಕೊಂಡಿದ್ದ ಸಾಲದ ರೂಪಾಯಿಗಳನ್ನು ಸಕಾಲದಲ್ಲಿ ಕೊಡದ್ದರಿಂದ ಶರಣವ್ವನನ್ನು ತನ್ನ ಮನೆಯಲ್ಲಿ ಒಯ್ದು ಇಟ್ಟುಕೊಂಡನು. ಮುಂದೆ ಈ ಸಂಗತಿಯು ಗಂಡನಿಗೆ ತಿಳಿಯಲು ಅವನು ಪೋಲೀಸರಿಗೆ ವರ್ದಿ ಕೊಟ್ಟನು. ಕೂಡಲೆ ಗೋಬಲೆ ಫೌಜದಾರರು ಅಯ್ಯಪ್ಪನನ್ನು ಬಂಧಿಸಿ ಇ ಪಿ ಕೋಡ ಕಲಮು ೩೬೫ ರ ಪ್ರಕಾರ ಅವನ ಮೇಲೆ ಕಟ್ಲೆ ಹಾಕಿದರು.

ರೂಪಾಯಿ ಪವನಗಳ ಬೆಲೆಯಲ್ಲಿ ನ್ಯಾಸನ ಗಳೂಡದು

ರೂಪಾಯಿ – ಪವನಗಳ ಬೆಲೆಯಲ್ಲಿ ಈ ಮುಂದೆಯೂ ಬದಲು ಮಾಡುವ ಕಾರಣವಿಲ್ಲೆಂದು ರಿಝರ್ವ ಬ್ಯಾಂಕ ಬಿಲ್ಲಿನ ಜಾಯಿಂಟ ಕಮಿಟಿಯವರು ನಿರ್ಣಯಿಸಿದ್ದಾರೆ.

ರಾಷ್ಟ್ರಸಂಘವು ಮತಿಹೀನವಾಗಿದೆ

ರೋಮ ತಾ॥ ೧೪— "ರಾಷ್ಟ್ರಸಂಘವು ಮೊದಲು ಉದಾತ್ತವಾದ ಧ್ಯೇಯಗಳಿಂದ ಪ್ರಾರಂಭವಾದದ್ದೇನೋ ನಿಜ. ಆದರೆ ಈಗ ಅನೇಕ ರಾಷ್ಟ್ರಗಳು ಈ ಸಂಘದಿಂದ ಸಿಡಿದು ನಿಂತಿರುವ ಮೂಲಕ ಈ ಸಂಘವು ಮತಿಹೀನವಾದಂತಾಗಿದೆ" ಎಂದು ಮುಸಲೊನಿಯವರು ಭಾಷಣ ಮಾಡಿದರು.

ಬೇಡನ್ ಪಾವೆಲ್ಲರ ಧನ್ಯವಾದ.

ಮುಂಬೈ ನಗರದಲ್ಲಿ ಮುನಸಿಪಾಲಿಟಿ ಸ್ಕೌಟ ಸಂಘದವರು ಉತ್ತಮವಾದ ಕೆಲಸ ಮಾಡುತ್ತಿರುವ ಬಗ್ಗೆ ಲಾರ್ಡ ಬೇಡನ್ ಪಾವೆಲ್ಲರು ಸಂಘದವರಿಗೆ ಧನ್ಯವಾದವನ್ನು ಅರ್ಪಿಸಿದ್ದಾರೆ.

ವಿಠ್ಠಲಭಾಯಿಯವರ ಪ್ರತಿಮೆ.

ದಿವಂಗತ ವಿಠ್ಠಲಭಾಯಿಯವರ ಪ್ರತಿಮೆಯನ್ನು ಅಹಮದಾಬಾದದ ನಗರದಲ್ಲಿ ನಿಲ್ಲಿಸಬೇಕೆಂದು ಅಹಮ್ಮದಾಬಾದದಲ್ಲಿ ಅನೇಕರು ಸೂಚಿಸಿದ್ದಾರೆ.

ಸ್ಟೋವ್ಹಿನಿಂದ ಅಪಮೃತ್ಯು!

ಹುಬ್ಬಳ್ಳಿ ತಾ॥ ೧೫

ಈ ಹೊತ್ತು ಮುಂಜಾನೆ ೧೧ ಗಂಟೆಯ ಸುಮಾರಿಗೆ ಇಲ್ಲಿಯ ಉಡುಪಿ ಗುರುರಾಯರ ಚಹಾದ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಗಿರಿ ಎಂಬ ೧೫ ವರ್ಷದ ಹುಡುಗನು ಮನೆಯಲ್ಲಿ ಒಲೆ ಹೊತ್ತಿಸುವಾಗ್ಗೆ ಒಮ್ಮಿಂದೊಮ್ಮೆ ಎಣ್ಣೆ ಸಿಡಿದು ಮೈಗೆ ಬೆಂಕಿ ಹತ್ತಿ ಸುಟ್ಟುಕೊಂಡನು. ಕೂಡಲೇ ಅವನನ್ನು ಇಲ್ಲಿಯ ಕೇ. ಜಿಪರೇಟ ವ್ಹ ದವಾಖಾನೆಗೆ ಉಪಚಾರಕ್ಕಾಗಿ ಒಯ್ದರು. ಆದರೆ ತುಸು ವೇಳೆಯಲ್ಲಿಯೇ ಪ್ರಾಣೋತ್ಕ್ರಮಣವಾಯಿತು.

ಲೇಡಿ ಸಾಯಿಕ್ಸ ಮೋರಿಸಾನಿಯವರು ಇಲ್ಲಿಯ ಕೆಂಗಸರ ದವಾಖಾನೆಗೆ ಭೆಟ್ಟಿ ಕೊಟ್ಟಾಗ್ಯೆ ಆ ದವಾಖಾನೆಯ ಕೆಲಸವನ್ನು ನೋಡಿ ಅವರು ಸಂತೋಷವನ್ನು ವ್ಯಕ್ತ ಪಡಿಸಿದ್ದರು. ಈಗ ಅವರು ಆ ದವಾಖಾನೆಗೆ ಒಂದು ನೂರು ರೂಪಾಯಿ ಕೊಟ್ಟಿರುವದಾಗಿ ತಿಳಿಯುತ್ತದೆ.

ಊರಲ್ಲಿ ಮತ್ತೆ ಇಲಿಗಳು ಬಿಳಹತ್ತಿವೆ. ಮುನಸೀಪಾಲ್ಟಿಯವರು ಬಳೆಗಳನ್ನು ಕೊಡುತ್ತಿರುವರು. ಆದರೆ ಕೇವಲ ಅದರಿಂದ ಮಾತ್ರ ವಿಶೇಷ ಪ್ರಯೋಜನವೇನೂ ಆಗುವಂತೆ ತೋರುವದಿಲ್ಲ. ಆದ್ದರಿಂದ ಈಗಲೇ ಹೆಚ್ಚು ಬಳಿ ತಾದ ಪ್ರತಿಬಂಧಕ ಉಪಾಯಗಳನ್ನು ಕೈಕೊಳ್ಳುವದು ಉತ್ತಮ.

ಈ ಹೊತ್ತು ಬೆಳಗಿನ ಜಾವಕ್ಕೆ ನೀಲವ್ವ ಎಂಬುವಳು ಹಕ್ಕಿಯ ಹೊಂಡದ ಹತ್ತಿರ ಇರುವ ಬಾವಿಯ ಹತ್ತಿರ ಹೋದಾಗ ಮಲರೋಗ ದಿಂದ ಬಾವಿಯಲ್ಲಿ ಬಿದ್ದು ಸತ್ತಳು. ಪ್ರೇತದ ಪರೀಕ್ಷೆ ಮಾಡುವದಕ್ಕಾಗಿ ಮುನಸಿಪಲ್ ದವಾಖಾನೆಗೆ ಒಯ್ದಿರುವರು.

ವಿಠ್ಠಲಭಾಯಿಯವರ ಸ್ಮಾರಕಕ್ಕಾಗಿ ೧೫ ಸಾವಿರ ರೂಪಾಯಿ

ವಿಠ್ಠಲಭಾಯಿ ಪಟೇಲರು ಪಾಟೀದಾರ ಜಾತಿಯವರಷ್ಟೇ? ಈ ಜಾತಿಯವರು ಅವರ ಸ್ಮಾರಕಕ್ಕಾಗಿ ೧೫ ಸಾವಿರ ರೂಪಾಯಿಗಳನ್ನು ಕೂಡಿಸಲು ನಿರ್ಣಯಿಸಿದ್ದಾರೆ.

ಸ್ಮಶಾನ ಭೂಮಿಯಲ್ಲಿ ವಿಚಿತ್ರ ಸಂಗತಿಯು

ಕಲಕತ್ತಾ ತಾ॥ ೧೪— ಇವತ್ತಿನ ಮುಂಜಾನೆ ಇಲ್ಲಿ ಒಂದು ವಿಚಿತ್ರ ಸಂಗತಿಯು ಸಂಭವಿಸಿತು. ಓರ್ವ ಬಂಗಾಲೀ ತರುಣಿಯ ಪ್ರೇತಶರೀರವನ್ನು ದಹನಕ್ಕಾಗಿ 'ಕಾಶಿಮಿತ್ರ' ಸ್ಮಶಾನ ಘಾಟಕ್ಕೆ ತಂದಾಗ ಅಲ್ಲಿದ್ದ ಅಧಿಕಾರಿಗೆ ಪ್ರೇತವೆಂದು ತಂದ ಶರೀರದಲ್ಲಿ ಜೀವ ಇದ್ದಂತೆ ಸಂಶಯ ಬಂದಿತು. ಕೂಡಲೇ ಡಾಕ್ಟರರನ್ನು ಕರೆಯಿಸಿ ಪರೀಕ್ಷಿಸಿದನು. ಜೀವವಿದ್ದದ್ದು ನಿಜವಾಯಿತು.

ಅವಳು ಕೆಲವು ದಿವಸಗಳಿಂದ ಅಸ್ವಸ್ಥಳಾಗಿದ್ದು ನಿನ್ನಿನ ರಾತ್ರಿ ಅವಳ ಸ್ಥಿತಿಯು ವಿಕೋಪಕ್ಕೆ ಹೋಯಿತು. ಮನೆಯಲ್ಲಿಯ ವೃದ್ಧನೊಬ್ಬನು ಜೀವವು ಹೋಗಿದೆಯೆಂದನು. ಕೂಡಲೇ ಸ್ಮಶಾನ ಭೂಮಿಗೆ ಒಯ್ಯಲಾಗಿ ಮೇಲೆ ಹೇಳಿದ ಸಂಗತಿಯು ಸಂಭವಿಸಿತು. ಡಾಕ್ಟರನು ಚುಚ್ಚಿ ಔಷಧವನ್ನು ಹಾಕಿದ ಮೇಲೆ ಅವಳ ಮೈಮೇಲೆ ಸ್ಮೃತಿ ಬಂದಿತು. ಈ ವಿಚಿತ್ರವನ್ನು ನೋಡಲಿಕ್ಕೆ ಬೆರಗಾದ ಜನರ ಒಂದು ದೊಡ್ಡ ಗುಂಪೇ ಕೂಡಿದ್ದಿತು.

"ಶ್ಯಾಮಸುಂದರ" ದ ಮೇಲೆ ಟೀಕೆಯೆ?

ಸಂಪಾದಕ ಕನ್ನಡಿಗ ಇವರಿಗೆ

ರಾಜಹಂಸದ ೧೫ ನೇ ನವ್ಹೆಂಬರ ಸಂಚಿಕೆಯಲ್ಲಿ "ಶ್ಯಾಮಸುಂದರ ಸಮಾಚಾರದ" ವೆಂಬ ಬರಹದಕೆಳಗೆ "ಓರ್ವಪ್ರೇಕ್ಷಕ" ನೆಂಬ ಅನಾಮಧೇಯರಿಂದ ಬರೆದಬರಹವನ್ನು ನೋಡಿ ನನಗೆಬಹಳ ಆಶ್ಚರ್ಯವಾಯಿತು. ವಿಜಯ ಸಿನೇಮಾದ ಚಾಲಕರು ಈ ಚಿತ್ರಪಟವನ್ನು ನೋಡಕಾಬಜಾರದಿಂದ ತಂದಿರುವರೆಂದು ಓರ್ವ ಪ್ರೇಕ್ಷಕನು ಬರೆದಿರುವನು. ಆದರೆ ಚಿತ್ರಪಟಗಳು ನೋಡಕಾ ಬಜಾರಗಳಲ್ಲಿ ದೊರೆಯುವವೆಂದು ನಾನು ಕೇಳಿದ್ದು ಇದೇ ಮೊದಲು.

ಚಿತ್ರಪಟವು ನಡುನಡುವೆ ಹದಿನೆಂಟು ಸಾರೆ ಹರಿಯುವದೆಂದು ಬರೆದಿರುವರು. ನಿಜವಲ್ಲ. ಆದರೆ ಅಲ್ಲಲ್ಲಿ ಚಿತ್ರಪಟದ ಭಾಗವು ಮಾಗಿಯುತ್ತದೆ. ಈ ಚಿತ್ರಪಟವ 'ಸಾವುಂಡ ರೆಕರ್ಡಿಂಗ' ವು "ಚಿಬ್ಬೆಯ ಸಪ್ಪಳದಂತೆ ಕೇಳುತ್ತಿದ್ದರೆ" ಮುಂಬಯಿಯಂಥ ಶಹರದಲ್ಲಿ ಸತತ ೨೫ ವಾರಗಳ ವರೆಗೆ ಒಂದೇ ಥಿಯೇಟರದಲ್ಲಿ ನಡೆಯುವದು ಶಕ್ಯವೇ ಇದ್ದಿಲ್ಲ. ಇಡೀ ಹಿಂದುಸ್ಥಾನದಲ್ಲಿ ಪ್ರಸಿದ್ಧತೆಯನ್ನು ಹೊಂದಿದ ಈ ಚಿತ್ರಪಟದ ಮೇಲೆ ಟೀಕೆಯನ್ನು ಮಾಡಿದ್ದು ಮತ್ತು ಬರೆದದ್ದು ಓರ್ವ ಪ್ರೇಕ್ಷಕನಿಂದಲೇ. "ಚಾಲಕರು ಪ್ರಸಿದ್ಧಿಯ ಕಾಲಕ್ಕೆ ಹಂಚಿದ ಚಿತ್ರದ ಚಿತ್ರದ ದೃಶ್ಯವು ಈ ಚಿತ್ರಪಟದ ಯಾವ ಪ್ರತಿಯಲ್ಲಿಯೂ ಇಲ್ಲ" ವೆಂದು ಈ ಚಿತ್ರಪಟದ ಸಂಗಡ ಬಂದಿದ್ದ ಪ್ರತಿನಿಧಿಗಳು ಹೇಳುತ್ತಾರೆ.

ಸಿನೇಮಾದ ಚಾಲಕರಿಗೆ ಕೆಟ್ಟ ಚಿತ್ರಪಟಗಳನ್ನು ತೋರಿಸಿ ಪ್ರೇಕ್ಷಕರ ಕಡೆಯಿಂದ ದುಡ್ಡು ಸೆಳೆಯಬೇಕೆಂಬುವದು ಅವರ ಕನಸು ಮನಸಿನಲ್ಲಿಯೂ ಇಲ್ಲ.

ಆರ್ ಎನ್ ಪದಕಿ.

ಹುಬ್ಬಳ್ಳಿಯಲ್ಲಿ ಕೂಡಲಿರುವ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾರು

ಇಲ್ಲಿಯ ವರೆಗಾದ ಸಾಹಿತ್ಯ ಪರಿಷತ್ತಿನ ಯಜಮಾನತ್ವವು ದಕ್ಷಿಣ ಕರ್ನಾಟಕದವರಿಗೆ ಬಹಳವಾಗಿ ಸಿಕ್ಕಿದೆ. ಈ ಸಲವಾದರೂ ಉತ್ತರ ಕರ್ನಾಟಕಸ್ಥರಿಗೆ ಈ ಸ್ಥಲವು ದೊರೆಯಬೇಕೆಂದು ಹಂಬಲವು.

ಆದರಲ್ಲಿ ಸರ್ವಾಂಗ ಪರಿಪೂರ್ಣತೆ ವಾಙ್ಮಯ ವೀರನಿಗೆ ಈ ಸ್ಥಲವು ಅವಶ್ಯವಾಗಿ ಸಿಕ್ಕೇ ತೀರಬೇಕು. ಆದ್ದರಿಂದ ಇಂಥ ವ್ಯಕ್ತಿಗಳನ್ನೇ ಸೂಚಕರು ಸೂಚಿಸಬೇಕು. ಇಷ್ಟೆಲ್ಲಕ್ಕೂ ಸರಿಕಂಡ ವ್ಯಕ್ತಿಯೆಂದರೆ ನನ್ನ ದೃಷ್ಟಿಯಿಂದ ಗದಗಿನ ಶ್ರೀ ನಾರಾಯಣರಾವ ಕೃಷ್ಣರಾವ ಹುಯಿಲಗೋಳ ಬಿ ಎ ಎಲ್. ಎಲ್ ಬಿ ಯವರು. ಇವರು ಕರ್ನಾಟಕ ರಂಗ ಭೂಮಿಯಲ್ಲಿ ಸಾಮಾಜಿಕ [ಸ್ತ್ರೀಧರ್ಮ ರಹಸ್ಯ ಶಿಕ್ಷಣ ಸಂಭ್ರಮ] ನಾಟಕಗಳನ್ನು ಬರೆದು ಕ್ರಾಂತಿಯನ್ನು ಎಬ್ಬಿಸಿದವರು. ಅಚ್ಚಗನ್ನಡ ಯಾವತ್ತೂ ಕರ್ನಾಟಕದಿಂದ ಮೆಚ್ಚು ಪಡೆದವರು. ನಾಟ್ಯಲೇಖನ ನಿಪುಣರೆಂದು ಹೊಗಳಿಸಿಕೊಂಡವರು. ಕೆರೂರ ವಾಸುದೇವರ ಕಾಲದಲ್ಲಿಯೂ ಪ್ರಕಟಿಸಲ್ಪಡುತ್ತಲಿರುವ ಸಚಿತ್ರ ಭಾರತ, ಸುಬೋಧ ಯುಗಳಿಂದಾರಂಭಿಸಿ ವಾಗ್ಭೂಷಣ, ಪ್ರಭಾತ, ಜಯಕರ್ನಾಟಕ, ಸಾಹಿತ್ಯ ಪರಿಷತ್ ಪತ್ರಿಕೆಗಳಲ್ಲಿ ಚಿಕ್ಕ ದೊಡ್ಡ ಕವಿತೆ ಲೇಖನಗಳನ್ನು ಬರೆದವರು.

ಪರಿಷತ್ ಪತ್ರಿಕೆಯಲ್ಲಿ ಪ್ರಕಟವಾದ ಗಜೇಂದ್ರ ಮೋಕ್ಷವು ಪ್ರಭಾತದಲ್ಲಿ ಪ್ರಕಟವಾದ "ಉದ್ಧೋತ್ಸವವು" ಸಾಹಿತ್ಯ ಪ್ರಪಂಚದಲ್ಲಿ ಚಿರಂಜೀವಿಯಾಗಿವೆ. ಇವರ ಕೃತಿಗಳು ಕವಿಗಳಿವರೆಂದು ಸಾರುತ್ತಿವೆ.

"ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು" ಎಂದು ಅಭಿಮಾನ ಪೂರಿತ ಹೃದಯದಿಂದ ಹಾಡಿ ಪರಿಕೆಯನ್ನು ಕೊಟ್ಟ ವೀರ ನಾರಾಯಣನ ಕಿಂಕರಗೆ ಈ ಸಲದ ಅಧ್ಯಕ್ಷ ಪದವನ್ನು ಕೊಟ್ಟರೆ ಯೋಗ್ಯವೆಂದು ನನ್ನ ಸೂಚನೆ. ಉತ್ತರ ಕರ್ನಾಟಕದ ಓರ್ವ ಕನ್ನಡಿಗ

ಕರ್ಚ್ಯೂ

ಶಾಸ್ತ್ರಶುದ್ಧ
ಮತ್ತು ಕ್ರಿಮಿನಾಶಕ
ದಂತಮಂಜನ.



ಈ ಕಂಪನಿಯು ಬಳ್ಳಾರಿಯಿಂದ ಗದಗಿಗೆ ಬಂದಿರುತ್ತದೆ ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು

ಕರ್ನಾಟಕ

ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮ ಬಾಣ ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು — **ಧಾರವಾಡ ಫಾರ್ಮಸಿ ಹಾಗೂ ಬಾಳಿಗಾ ಫಾರ್ಮಸಿ**

ಡಾ. ಕುಲಕರ್ಣಿಯವರ

೧೮-೧೧ ಲ್ಯಾಬೋರೇಟರಿ ನಂಬರ ೧೨

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೆ ೯ ಆಜಟ ಗುಣ ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ:-**ರಾಘವ ಫಾರ್ಮಸಿ ಗೋಕಾಕ**
ಜಿ ಬೆಳಗಾವ

ಕೇವಲ ನಾಲ್ಕೇ ದಿವಸ! ಡಬಲ್ ಪ್ರೊಗ್ರಾಮ **ಕೇವಲ ನಾಲ್ಕೇ ದಿವಸ!!**

ವಿಜಯ ಸಿನೇಮಾ ಧಾರವಾಡ.

ತಾರೀಖು ೧೭ ಶುಕ್ರವಾರದಿಂದ ಫಕ್ತ ೪ ದಿವಸ
ಸರಸ್ವತಿ ಫಿ ಕಂ ಸುಪ್ರಸಿದ್ಧ ಮಾತಾಡುವ ಹಾಡುವ ಚಿತ್ರಪಟ

ಶ್ಯಾಮಸುಂದರ

ಮತ್ತು ಗ್ರಾಮಫೋನ ರಿಕಾರ್ಡುಗಳಲ್ಲಿ ಪ್ರಸಿದ್ಧಿಯನ್ನು ಪಡೆದ **ಬಾಯಿ ಸುಂದರಾಬಾಯಿ** ಇವರ ಗಾಯನವನ್ನು ಸ್ಕ್ರೀನಿನ ಮೇಲೆ ಕೇಳಿರಿ

ವೇಳೆ:— ೭, ೧೦-೩೦ಕ್ಕೆ ರವಿವಾರ, ಮಂಗಳವಾರ ಹಗಲು ೪ ಕ್ಕೆ

Moderate fees! ***Excellant Results!!***

THE NEW COACHING CLASSES

For High School & College Students

Fort Dharwar N R Sunkad B A D R Kengeur B A

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. **ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ** ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩ **ಗದಗ ಶ್ರೀ ದತ್ತಾತ್ರೇಯ ಬುಕ ಡೀಪೊ**
ಕಪಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ## ಅಸ್ಪೃಶ್ಯತಾ ನಿವಾರಣೆ. { **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಡ್ವಾನ್ಸಿಲ್ಲದೆ ವ್ಹಿ ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೩ **ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ**

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೇ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ **ಕಲ್ಲು**] ಗಳು ಬೇಕಾಗಿವೆ, ಮಾರುವವರು ಕನ್ನಡಿಗ ಕಾರ್ಯಾಲಯದಲ್ಲಿ ತಿಳಿಸಬೇಕು

೦ **ಕನ್ನಡಿಗ ಕಾರ್ಯಾಲಯ**

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡುರವರ

ಮೋಹಸಂಜೀವನೀ ಯಣ್ಣೆ

ಪತಿವ್ರತೆಯಾದ ತನ್ನ ಹೆಂಡತಿಯಲ್ಲಿಯೆ ಅತಿ ಸಂಭೋಗ ಮಾಡುವದರಿಂದ ಅನರ್ಥಕರವಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟಸ್ತ್ರೀಯರಲ್ಲಿ ತಮ್ಮ ಪ್ರಾಯವೆಂಬ ಅಮೋಘ ವಸ್ತುವನ್ನು ಧಾರೆಯೆರೆದು ಹಾಳು ಮಾಡಿಕೊಂಡು—ಮೇಹವ್ರಣ, ಬಿಳುಪು, ಭಗಂದರ, ತೊಡೆವಾಳ, ಮುಸುಕು, ಟಾಕಿ, ಶರಮ, ಪವಿತ್ರ ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ನಿರಂತರವೂ ಬಾಧೆಪಡುತ್ತಿರುವ ನಮ್ಮ ದೇಶೀಯರಾದ ಯೌವನಸ್ಥರಿಗೆ ಈ ಔಷಧವು ಅಮೃತ ಕಲಶವಿದ್ದಂತೆ ನವಜೀವನವನ್ನೇ ಕಲ್ಪಿಸತಕ್ಕದ್ದಾಗಿರುವದು ತಕ್ಕ ಔಷಧ ಬೀಳದಿದ್ದರೆ ದೇಹಕ್ಕಾವರಿಸಿರುವ ಮೇಹರೋಗವು ಕುಲ ತಲಾಂತರಗಳ ವರೆಗೂ ಹಬ್ಬುತ್ತಾ ತನ್ನ ಕಾರ್ಯವನ್ನು ಆ ವಂಶದಲ್ಲಿ ನೆಲೆಗೊಳಿಸುವದೆಂಬುದೇ ವೈದ್ಯಶಾಸ್ತ್ರಜ್ಞರ ತಾತ್ಪರ್ಯವಾಗಿದೆ ಈ ಮೋಹಸಂಜೀವನೀ ಯಣ್ಣೆಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸಿರುವ— ಬಿಳುಪು ಕೆಂಪು, ಹಸರು ಮುಂತಾದ ೧೮ ವಿಧ ಪ್ರಮೇಹರೋಗಗಳು, ಉರಿಮೂತ್ರ ಮುಂತಾದ ಕಣ್ಣು, ಮೇಹಹಳುಕು, ಮೇಹ ಬಟ್ಟೆಗಳು, ನಂಭೀವ್ರಣ, ಮೇಹವಾಯು, ತೊಡೆಬಾಳ, ಭಗಂದರ, ಟಾಕಿ, ಪವಿತ್ರ ಮುಂತಾದ ಜಾಡ್ಯಗಳು ಬುಡದೊಂದಿಗೆ ನಾಶವಾಗುತ್ತವಲ್ಲದೆ, ಈ ಯಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಪ್ರಾಪ್ತವಾಗುವ ಆಶ್ರವ, ಋತುವಾಗುವಿಕೆ, ಋತುಶೂಲೆ ಪ್ರದರ ಮುಂತಾದ ರೋಗಗಳು ನಿರ್ನಾಮವಾಗುವವು ಕ್ರಯ ಶೀಸೆ ೧ಕ್ಕೆ ೨—೦—೦ ಮ

ಯೋಗ್ಯತಾಪತ್ರಗಳು— (೧) ನಿಮ್ಮ ಮೋಹಸಂಜೀವನೀ ಯಣ್ಣೆಯನ್ನು ತರಿಸಿ ಉಪಯೋಗಿಸಿ ನೋಡಿದಲ್ಲಿ ತುಂಬಾ ಪ್ರಯೋಜನವು ಕಂಡುಬಂದದ್ದರಿಂದ ಈ ಯಣ್ಣೆಯನ್ನು ನಮ್ಮ ವೈದ್ಯಶಾಲೆಯಲ್ಲಿ ಹೆಚ್ಚು ಖರ್ಚಾದೀತೆಂದು ಯೋಚಿಸುವೆನು ಮ|| ರಾ|| ಕೆ ಎಸ್ ಗೋವಿಂದಶಾಸ್ತ್ರಿ, ಆಯುರ್ವೇದ ಭೂಷಣ, ಆರೋಗ್ಯಾಶ್ರಮ, ಕೂಡಿಯಾಲ್ ಬೈಲ ಪೋಸ್ಟ್, ಮಂಗಳೂರು (೨) ನಿಮ್ಮ ಮೋಹಸಂಜೀವನೀ ಯಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಿಗಳ ಕೃತಜ್ಞತೆಗೆ ಪಾತ್ರನಾಗಿರುವೆನು ಮ|| ರಾ|| ಉಗ್ಗಪ್ಪ ಕೋಡಿ ಕುಂಭಟ್ಟ ವೈದ್ಯ, ಕೆಲಿಂಜಗ್ರಾಮ, ವಿಟ್ಲ್ ಪೋಸ್ಟ್, ದಕ್ಷಿಣ ಕನ್ನಡ

ಪಂಡಿತ ಬಿ. ಆರ್ ಗೋವಿಂದರಾಜುಲು ನಾಯುಡು,
ಆಂಗ್ಲೋ ಭಾರತೀ ವೈದ್ಯಶಾಲಾ
೪೯೧, ಹಲಸೂರಪೇಟೆ, ಬೆಂಗಳೂರು ಸಿಟಿ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಪೆಡಿಗೆಯ ಬಾಗಿಲು ತಯಾರಾಗುತ್ತ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ನಂ. ಬಿ. ೨೭೮೮

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಸುರನ್ಸ

ಜೀವವಿಮೆ ಇಳಿ ಬಿ
ದಿ ಯುನಾಯಿಟೆಡ್
ಕರ್ನಾಟಕ ಇನಸ್ಸುರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನಸ್ಸುರನ್ಸ

ಪರದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ,
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು: — ಆಲೂರ ವೆಂಕಟರಾಯರು

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಶನಿವಾರ ಮಾರ್ಗಶಿರ ಶುದ್ಧ ೧ ಶಕೆ ೧೮೫೫ ತಾ॥ ೧೮-೧೧-೩೩ [ಸಂಚಿಕೆ ೧೭೩

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ.
ತಾ॥ ೨೫-೮ ३३

ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ.

ಉದ್ಯೋಗವ ಬೇಕೆ?

ಸೋವೀ ದರದಲ್ಲಿ, ಎಣ್ಣಿ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.

(೧) ಬಿಳಿ, ಹಳದಿ, ಕೆಂಪು ಚಿಮಣಿಯೆಣ್ಣಿ ಕ್ರೂಡ್ ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುನಿಚ್ ಫಾಮಸ್ ಬೀರ್ (೩) ಉತ್ತಮವ ಹಾಗೂ ಬಹಳ ಸೋಯಿಸ್ಕರ್ ಹೊಸ ಮೋಟಾರ ಸಾಯಕಲ್ (೪) ಸಕಾರ (೫) ಮೋಟಾರ ವಸ್ತುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುವದೆ ಸಬ್ಬ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು; ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ಮಿಸ ಸೂ. ಬೇಕಾದರೆ ೧೫ ದಿವಸಗಳವರೆಗೆ
ಧಾರವಾಡ ಮಾಳಮಡ್ಡಿಯಲ್ಲಿರುವ
ಕುಂಡೇಕರ ವಕೀಲರ ಬಂಗ್ಲೆಯಲ್ಲಿ
ಭೆಟ್ಟಿಯಾಗಬಹುದು

ಕುಂಡೇಕರ ಯಳಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಸನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**

ನ್ಯೂ ಓರಿಯಂಟಲ್ ಕಂ.

“ ನೀಲಗಿರಿ ಎಣ್ಣಿ ”

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದು ತಲೆಶೂಲಿ, ವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು, ಕಿವಿ ಸೋರುವದು, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಬೇಕು.

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು.

ಏಜಂಟ:— ಜಿ. ಶ. ಕೊಣಿಪಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಕಂಠರ ಕರ್ನಾಟಕ ಪುಸ್ತಕ ಭಾಂಡಾರಕ್ಕೇ ಬನ್ನಿರಿ.

ಹುಬ್ಬಳ್ಳಿಯ ಮುನಸೀಪಾಲಟಿಯ ಕಾರಭಾರ.

ವಾಟರ ವರ್ಕ್ಸದ ಅವ್ಯವಸ್ಥೆ.

[ಲೇಖಾಂಕ ೩]

ನೀರಿನ ಕೊಗಳೆ ಇಂದಿನದಲ್ಲ

ಹುಬ್ಬಳ್ಳಿಯಲ್ಲಿಯ ನೀರಿನ ಕೊಗಳೆಯು ಬಹುದಿವಸದಿಂದಿದೆ ಕೆರೆಯ ಪಾತ್ರಿಯು ೧೭-೧೮ ಫೂಟ ಹೂಗದಿರುವದರಿಂದ ಅದರಲ್ಲಿಯ ಸಂಚಯ ಸಾಮರ್ಥ್ಯವು ಕಡಿಮೆಯಾಗಿ ಆ ಮೂಲಕ ಸಾಕಷ್ಟು ನೀರನ್ನು ಬಿಡಲಿಕ್ಕೆ ಬರುವದಿಲ್ಲೆಂದು ಕೆಲವರು ಹೇಳುತ್ತಾರೆ. ಅಶಾಸ್ತ್ರ ರೀತಿಯಿಂದ ಪೈಪುಗಳನ್ನು ಹಾಕಿದ್ದರಿಂದ ನೀರಿನ ಪ್ರವಾಹವು ಸರಿಯಾಗಿ ಹಂಚಿ ಹೋಗುವದಿಲ್ಲೆಂದು ಕೆಲವರು ಹೇಳುತ್ತಾರೆ ಆದರೆ ಇದಕ್ಕೆಲ್ಲ ಯಾರು ಹೊಣೆಗಾರರು ?

ಇಕಾನಮಾಯಿ ಝರವನ್ನು ಹಸನ ಮಾಡಿಸಿದ ಕಥೆ

ವಾಟರ ವರ್ಕ್ಸದ ಇಂಜನಿಯರರು ಉರವಲ ಕಡಮೆಮಾಡುವ ಯಂತ್ರವನ್ನು [Economiser] ಹಸನಾಗಿ ಮಾಡಬೇಕೆಂದು ಸೂಚಿಸಿದರು ಆಗ್ಗೆ ಆ ಕೆಲಸ ಒಲ್ಲವರಿಗೆ ಅದನ್ನ ಎಷ್ಟಕ್ಕೆ ಮಾಡುವರೆಂದು ಕೇಳುವದರಲ್ಲಿ ಬಂತು ಮಿ॥ ಕೊಪ್ಪಳಕರರು ಒಬ್ಬರೇ ರೂ ೧೫೦ ಕ್ಕೆ ತಾವು ಆ ಕಲಸವನ್ನ ಮಾಡುತ್ತೇವೆಂದು ತಿಳಿಸಿದರು ಉಳಿದವರು ಉತ್ತರ ಬರೆಯಲಿಲ್ಲ. ಸಮಾಧಾನವಾಗದ್ದರಿಂದ ಚೀಫ ಆಫೀಸರರು ಮತ್ತೆ ಬರೆದು ಕೇಳಿದರು. ಆ ಬಳಿಕ ಮಿ. ಕೊಪ್ಪಳಕರರು ರೂ ೧೭೫ ಹಾಗು ಮಿ. ಇಂಜನಿಯರರು ರೂ ೨೫೦ ಕೊಡಬೇಕೆಂದು ತಿಳಿಸಿದರು. ಮೂರನೇದವರು ಉತ್ತರವನ್ನೇ ಕೊಡಲಿಲ್ಲ ಚೀಫ ಆಫೀಸರರು ಮಿ. ಇಂಜಿನಿಯರರಿಗೆ ಕೆಲಸವೇನಿದೆಂಬದನ್ನು ನೋಡಿಕೊಂಡು ತಿಳಿಸಿರೆಂದರು. ಆ ಮೇಲೆ ಮಿ ಇಂಜನಿಯರರು ರೂ ೧೫೦ ಕ್ಕೆ ಆ ಕೆಲಸವನ್ನು ಮಾಡಲು ಒಪ್ಪಿದರು ಈ ಎಲ್ಲ ವಿಧಿಯಾಗಲಿಕ್ಕೆ ಸುಮಾರು ಎರಡು ತಿಂಗಳುಗಳು ಬೇಕಾದವು ಈ ಅವಧಿಯಲ್ಲಿ ಕಟ್ಟಿಗೆಯ ಖರ್ಚ ಹೆಚ್ಚಾದದ್ದು ಆಗೇ ಆಯಿತು ಅದರ ಹೊರ್ತು ಮೊದಲು ಇಂಥ ಕೆಲಸಗಳನ್ನು ಮಾಡಿದ ಮಿ ಕೊಪ್ಪಳಕರರ ಮೊದಲನೇ ರಕಮಿಗೆ ಒಪ್ಪದ್ದರಿಂದ ಮುನಸೀಪಾಲಟಿಗೆ ರೂ ೪೦ ಹೆಚ್ಚಿಗೆ ಕೊಡಬೇಕಾಯಿತು

ರೂ. ೮೫೪೪ ಗಳ ಹಾನಿಯನ್ನು ತಪ್ಪಿಸುವ ವಿಚಾರವು ಇನ್ನೂ ನಡದೇ ಇದೆ

ಸರಕಾರೀ ಲೆಕ್ಕ ಪರೀಕ್ಷಕರು ಉಣಕಲ್ ವಾಟರ ವರ್ಕ್ಸದ ಸಂಬಂಧ ರೂ. ೮೫೪೪ ಗಳ ಹಾನಿ ಹಚ್ಚಿದೆಂದು ಹೋದ ವರ್ಷ ತಿಳಿಸಿದ್ದರಂತೆ. ಇದ್ದ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ—ಇತ್ತ ಕಡೆಗೆ ಲಕ್ಷ ಗೊಡಬೇಕೆಂದು ಪುನಃ ಸೂಚಿಸಿದ್ದಾರೆ ಪ್ರತಿವರ್ಷ ವೆಚ್ಚವಾಗುವ ಈ ರಕಮನ್ನು ಕಡಿಮೆ ಮಾಡಲಿಕ್ಕೆ ಯತ್ನಿಸುವದು ವಿಹಿತವಲ್ಲವೇ? ಎಷ್ಟು ನೀರು ಕಂಪಾಯಿತು ? ಇಂಜಿನ್ನ ಎಷ್ಟು ತಾಸು ನಡೆಯಿತು ? ಎಷ್ಟು ನೀರನ್ನು ಪಂಪು ಮಾಡುವ ಬಲವು ಇಂಜಿನ್ನಿಗಿದೆ? ಮುಂತಾದ ವಿಷಯಗಳನ್ನು ಸೂಕ್ಷ್ಮವಾಗಿ ಚಿಕಿತ್ಸಿಸಿ ನೋಡುವದು ಅವಶ್ಯಕತ್ಯವದೆ

ಪಟಿಕವನ್ನು ವೆಚ್ಚ ಮಾಡಿದ ಲೆಕ್ಕ-ಪೋಂದುಗಳು ಸರಿಯಾಗಿಲ್ಲ

ಕೆರೆಯ ನೀರನ್ನು ಪಟಿಕದಿಂದ ತಿಳಿ ಮಾಡುತ್ತಾರೆ ಮುನಸೀಪಾಲಿಟಿಯವರು ಪ್ರತಿವರ್ಷ ಸುಮಾರು ರೂ. ೪೦೦೦ ಪಟಿಕಕ್ಕಾಗಿ ವೆಚ್ಚ ಮಾಡುತ್ತಾರೆ ಆದರೆ ಈ ಬಗ್ಗೆ ಮುನಸೀಪಾಲಟಿಯ ಲೆಕ್ಕ-ಪೋಂದುಗಳನ್ನು ಸರಿಯಾಗಿಟ್ಟಿಲ್ಲವಂತೆ ಪಟಿಕದ ದಿನದ ವೆಚ್ಚವು ೨೬ ಪೌಂಡಿನಿಂದ ೩೦೦ ಪೌಂಡುಗಳ ವರೆಗೆ ಏರುತ್ತ ನೀರಿನ ಪ್ರಮಾಣದ ಮೇಲಿಂದ ಪಟಿಕದ ವೆಚ್ಚವನ್ನು ಗೊತ್ತುಪಡಿಸಬೇಕಿಲ್ಲವೇ? ಎಷ್ಟು ತಿಳಿಯಾಯಿತೆಂಬವನ್ನು ನೋಡಬೇಕಿಲ್ಲವೇ? ಆದರೆ ಅದನ್ನು ನೋಡಲಿಕ್ಕೆ ಆ ತರದ ಸಾಧನಗಳವೆಯೋ?

ವಾಟರ ವರ್ಕ್ಸದ ರಿಪೇರಿಗೆ ಹೊರಗಿನ ಕೆಲಸಗಾರರೇಕೆ ಬೇಕು?

ವಾಟರ ವರ್ಕ್ಸದಲ್ಲಿ ತಜ್ಞ ಇಂಜನಿಯರರೂ ಹಾಗು ಅವರ ಕೈಕೆಳಗೆ ನುರಿತ ಕೆಲಸಗಾರರೂ ಇದ್ದು ರಿಪೇರಿ ಕೆಲಸವನ್ನು ಎರಡನೇಯವರಿಗೆ ಕೊಡುವ ಕಾರಣವೇನು ?

ಖಾಸಗೀ ನಳಗಳ ಸರಿಯಾದ ಯಾದಿ ಇಲ್ಲವಂತೆ!

ಖಾಸಗೀ ನಳಗಳ ಸರಿಯಾದ ಯಾದಿ ಇಲ್ಲವೆಂದು ಲೆಕ್ಕಪರೀಕ್ಷಕರ ಅಂಬೋಣವಿದೆ. ಹುಬ್ಬಳ್ಳಿಯಲ್ಲಿ ನಳಗಳಾಗಿ ೩೦-೪೦ ವರ್ಷಗಳಾಗಿರಬಹುದು ಈ ಕಾಲಾವಧಿಯಲ್ಲಿ ಖಾಸಗೀ ನಳಗಳ ಯಾದಿಯನ್ನು ದಕ್ಷತೆಯಿಂದ ಯಾಕೆ ತಯಾರಿಸಲಿಲ್ಲ! ಇದು ಉತ್ಪನ್ನದ ಬಾಬು ಇದ್ದು ಇದರ ಕಡೆಗೆ ಅಲಕ್ಷವೇಕೆ? ಮುನಸೀಪಾಲಟಿಯಲ್ಲಿ ನೌಕರರ ಸಂಖ್ಯೆಯು ಕಡಮೆಯುಂಟೋ? ಬೇಕಾಗಿದ್ದಕ್ಕಿಂತಲೂ ಹೆಚ್ಚು ನೌಕರರಿದ್ದಾರೆಂದು ಅನೇಕರು ಹೇಳುತ್ತಾರೆ.

“ ರೇಟಪೇಯರ ”

ಶ್ರೀ. ದಳವಿಯವರು ಠಾಣೆಯ ಅ. ಜಜ್ಜರಾದರು.

ಬೆಳಗಾವಿಯ ಪಬ್ಲಿಕ್ ಪ್ರಾಸಿಕ್ಯೂಟರರಾದ ಶ್ರೀ ದಳವಿ ಭುಜಂಗರಾಯರು ಠಾಣೆಯ ಅಸಿಸ್ಟೆಂಟ ಜಜ್ಜರಾದರು. ಅವರು ೫-೬ ದಿವಸಗಳಲ್ಲಿ ಅಲ್ಲಿಗೆ ಹೋಗುವರು ಠಾಣೆಯಲ್ಲಿದ್ದ ಮಿ. ಡಿ ಎಸ್. ಓಕರು ಬೆಳಗಾವಿಗೆ ಅಸಿಸ್ಟಂಟ ಜಜ್ಜರಾಗಿ ಬರುವವರಿದ್ದು ೨ ೩ ದಿವಸಗಳಲ್ಲಿಯೇ ಇಲ್ಲಿಗೆ ಬರುವರಂತೆ

ಕನ್ನಡಿಗ

ಶನಿವಾರ ತಾರೀಖು

ಕನ್ನಡಿಗರ ಸತ್ವಪರೀಕ್ಷೆ.

ಮುಂಬಯಿ ಇಲಾಖೆಯ ಗವರ್ನರ ದೊರೆಗಳು ಉತ್ತರ ಕರ್ನಾಟಕದಲ್ಲಿ ಸಂಚಾರಕ್ಕೆ ಹೊರಟ ಕಾಲವು ಕನ್ನಡ ಜನಾಂಗಕ್ಕೆಲ್ಲ ಒಂದು ಬಗೆಯಿಂದ ಶುಭ ಸೂಚಕವಾಗಿರುವದೆಂದು ಹೇಳುವದಕ್ಕೆ ಅಡ್ಡಿಯಿಲ್ಲ ಬೇರೆ ಕನಿಯವರ ಬಿನ್ನವತ್ತಳೆಯಲ್ಲಿ ಉಲ್ಲೇಖಿಸಲ್ಪಟ್ಟ ಕರ್ನಾಟಕದ ಏಕೀಕರಣ ಹಾಗೂ ಅದನ್ನೊಂದು ಸ್ವತಂತ್ರ ಪ್ರಾಂತವನ್ನಾಗಿ ಮಾಡೋಣ ಇವುಗಳ ಸಂಬಂಧವಲ್ಲಿ ದೊರೆಗಳು ಒಂದು ಬಗೆಯ ಮೂಕವೃತ್ತಿಯನ್ನೇ ವಹಿಸಿ ಕನ್ನಡಿಗರ ಕುತೂಹಲಪೂರ್ಣ ಬೇಡಿಕೆಯನ್ನು ಕಡೆಗಣ್ಣಿನಿಂದ ನೋಡಿದಂತೆ ನಟಿಸಿದರೂ ಧಾರವಾಡದಲ್ಲಿ ಮಾಡಲ್ಪಟ್ಟ ಈ ಬಿನ್ನಹವನ್ನು ಹಾಗೆಯೇ ಬಗೆಹರಿಸದೆ ಬಿಡುವದು ದೊರೆಗಳವರಿಗೆ ಶಕ್ಯವಾಗಲಿಲ್ಲ ಇಷ್ಟೇ ಅಲ್ಲದೆ ಜನರ ಬೇಡಿಕೆಯಿಲ್ಲವೆಂಬ ಹಾರಿಕೆಯ ಉತ್ತರದ ಪದ್ಧತಿಯನ್ನು ಬದಿಗಿರಿಸಿ ಸರಕಾರದ ಅಡಚಣಿಗಳನ್ನೇ ಮುಂದೆ ಮಾಡಿ ಈ ವಿಷಯವಾಗಿ ವಿಚಾರಮಾಡಲು ಸರಕಾರಕ್ಕೆ ಅನುಕೂಲ ಕಾಲವಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು ಹೀಗೆ ಮುಂಬಯಿ ಸರಕಾರದ ಹೊಣೆಗಾರರಾದ ಅಧಿಕಾರಿಗಳ ದೃಷ್ಟಿಕೋನದಲ್ಲಿ ಕನ್ನಡ ಜನಾಂಗಕ್ಕೆ ಅನುಕೂಲವಾದ ಬದಲಾವಣೆಯಾದದ್ದು ನಿದರ್ಶನಕ್ಕೆ ಬಂದಂತಾಗಿದೆ

ಇದಾಗುವದರೊಳಗಾಗಿಯೇ ಅತ್ತ ಮದ್ರಾಸದ ಕಾನೂನು ಮಂಡಲದಲ್ಲಿ ಕರ್ನಾಟಕದ ಏಕೀಕರಣದ ಪ್ರಶ್ನೆಯು ಅಕಸ್ಮಿಕವಾಗಿ ಚರ್ಚೆಗೆ ಬಂದು ಮದ್ರಾಸ ಪ್ರಾಂತದೊಳಗೆ ಒಟ್ಟಾಗಿ [illegible] ಬೇರೆ ಬೇರೆ ಭಾಷೆಗಳ [illegible] ಮೂಹದ ಬೇಡಿಕೆಗಳು [illegible] ಕನ್ನಡಿಗರ ಬಯಕೆಯು [illegible] ಮಾನವನ್ನು ಈ ಮೊದಲೇ ತಿಳಿಸಿದ್ದೇವೆ ಮದ್ರಾಸ ಕೌನ್ಸಿಲಿನಲ್ಲಾದ ಈ ಚರ್ಚೆಯ ವಿಷಯವನ್ನೇ ಎತ್ತಿ ಹಿಡಿದು ಪ್ರೆಸಿಡೆನ್ಸಿ ಪತ್ರವು ಕೂಡ ಕರ್ನಾಟಕದ ಏಕೀಕರಣದ ಈ ಬೇಡಿಕೆಯ ಬಗ್ಗೆ ಮುಂಬಯಿ ಸರಕಾರವು ಪುನಃ ವಿಚಾರ ಮಾಡಬೇಕೆಂದು ಸೂಚಿಸಿದ ಸಂಗತಿಯೂ ನಮ್ಮ [illegible] ನೇ ತಾರೀಖಿನ ಸಂಚಿಕೆಯಲ್ಲಿ ಉದಾಹರಿಸಲ್ಪಟ್ಟ ಆ ಪತ್ರದೊಳಗಿನ ಲೇಖದ ಅನುವಾದದಿಂದ ವಾಚಕರಿಗೆ ಗೊತ್ತಾಗಿರುವದು. ಹೀಗೆ ಪ್ರಕೃತ ಕಾಲವು ಕರ್ನಾಟಕದ ಏಕೀಕರಣ ವಿಷಯಕವಾದ ಕನ್ನಡಿಗರ ಆಕಾಂಕ್ಷೆಗಳಿಗೆ ಎಷ್ಟೋ ಮಟ್ಟಿಗೆ ಅನುಕೂಲವಾಗಿರುವದೆಂಬ ಭರವಸೆಯನ್ನು ಕನ್ನಡಿಗರು ಉತ್ಸಾಹಭಾವದಿಂದ ತಳೆಯಬಹುದಾಗಿದೆ

ಈಗ ಹದಿನಾರು ವರ್ಷಗಳ ಹಿಂದೆ ಮಾಂಟೆಗೂ ಸಾಹೇಬರ ಸುಧಾರಣೆಯು ವಿಚಾರವು ಗರ್ಭಾವಸ್ಥೆಯಲ್ಲಿದ್ದಾಗ್ಗೆ ಹೊರಬೀಳ ಬೈಲಿಗೆ ಬಿದ್ದ ಕರ್ನಾಟಕ ಪ್ರಾಂತದ ಏಕೀಕರಣದ ಪ್ರಶ್ನೆಗೆ ಇಷ್ಟೊಂದು ಅನುಕೂಲ ಕಾಲವು ಎಂದಿಗೂ ಬಂದಿರಲಿಲ್ಲವೆಂಬುದನು ಕನ್ನಡ ಜನಾಂಗವು ಅಗತ್ಯವಾಗಿ ಲಕ್ಷಿಸಬೇಕಾಗಿದೆ 'ಗಾಳಿ ಬಂದಾಗ ತೂರಿಕೊಳ್ಳಬೇಕೆ'ಂಬ ಕನ್ನಡ ಗಾದೆಯ ಮಾತಿನ ಒಳದಿರುಳನ್ನು ಅರಿತಿರುವ ಸುಜ್ಞ ಕನ್ನಡಿಗರು ಈ ಸಂಧಿಯನ್ನು ಸಾಧಿಸಿಕೊಂಡು ತಮ್ಮ ಬಹುದಿನದ ಬಯಕೆಯನ್ನು ಪೂರಯಿಸಿಕೊಳ್ಳಲು ಹೆಣಗಾಡುವದಕ್ಕೆ ಇದೀಗ ಸುಸಮಯವಾಗಿದೆ [illegible]ರಿಂದೀಚೆಗೆ ಅಖಂಡ ಕರ್ನಾಟಕದಲ್ಲಿ ಸ್ಥಾಪಿತವಾದ ಕರ್ನಾಟಕ ಸಂಘ [illegible] ರಲ್ಲಿ ಪ್ರತಿಷ್ಠಿತನಾಗಿ ಇಂದಿಗೂ ತನ್ನ ಪಟ್ಟಿನ ಕೆಲಸ ಮಾಡುತ್ತ ಬಂದಿರುವ ಕರ್ನಾಟಕ ಏಕೀಕರಣ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯೂ ಈಗ ತುಸು ಕಷ್ಟ ಪಡುತ್ತಿರುವ ಕಾರ್ಯವನ್ನು ಕೈಕೊಂಡು ಜನತೆಯ ಹಂಬಲವನ್ನು ಚೆನ್ನಾಗಿ ಜಾಗೃತಗೊಳಿಸಿ ಸರಕಾರದ ಕಿವಿಗಳವರೆಗೆ ಕರ್ನಾಟಕ ಸಂಘಟ್ಟನೆಯನ್ನು ಅಖಂಡವಾಗಿ [illegible] ಪ್ರಯತ್ನ ಮಾಡಲು ಇದೊಂದು ಸುವರ್ಣ ಸಂಧಿಯಾಗಿದೆಂಬುದನ್ನು ನಾವು [illegible] ಕನ್ನಡಿಗರ [illegible] ಮುಂಬಯಿ ಸರಕಾರದ ಮಂತ್ರಿ [illegible] ಒಂದು ವರ್ಷದ ಮೊದಲು [illegible] ಬೆಳಗಾವಿಯಲ್ಲಿ [illegible] ನೆಯ ಕರ್ನಾಟಕ ಏಕೀಕರಣ ಪರಿಷತ್ತಿಗೆ ಅಧ್ಯಕ್ಷರಾಗಿ ಏಕೀಕರಣದ ಕಾರ್ಯವನ್ನು ಪುರಸ್ಕರಿಸಿದ್ದಾರೆ [illegible] ಮುಂಬಯಿ ಕೌನ್ಸಿಲಿನಲ್ಲಿ ಸಾಮಾನ್ಯ ಸಭಾಸದರಿದ್ದಾಗ್ಗೆ ದಿವಾಣ ಬಹದ್ದೂರರು ಕರ್ನಾಟಕದ ಏಕೀಕರಣದ ಪ್ರಶ್ನೆಗೆ ತಮ್ಮ ಅಖಂಡವಾದ ಪಕ್ಷಪಾತ [illegible] ವನ್ನು ಕೊಟ್ಟಿರುವುದಲ್ಲದೆ ವಿಭಿನ್ನವಾಗಿರುವ ಕನ್ನಡ ನಾಡು ಒಂದುಗೂಡಿಸಲ್ಪಟ್ಟು ಅದಕ್ಕೆ ಸ್ವತಂತ್ರವಾದ ಪ್ರಾಂತೀಯತೆಯು ದೊರೆಯುವ ಕನ್ನಡಿಗರಿಗೆಂದಿಗೂ ಸಮಾಧಾನವಾಗಲಾರದೆಂಬ ಸಂಗತಿಯನ್ನು ಮುಂಬಯಿ ಸರಕಾರಕ್ಕೆ ನಿಶ್ಚಿತವಾಗಿ ಹೇಳಿಬಿಟ್ಟಿದ್ದಾರೆ ಆದುದರಿಂದ ದಿವಾಣ ಬಹದ್ದೂರ ಕಂಬಳಿಯವರು ಮಂತ್ರಿಪದವನ್ನು ಹೊಂದಿದವರಾಗಿರುವ ಈ ಹೊತ್ತಿನಲ್ಲಿಯೇ ಮುಂಬಯಿ ಕರ್ನಾಟಕದ ಯಾವತ್ತೂ ಸಾರ್ವಜನಿಕ ಸಂಸ್ಥೆಗಳು ಕರ್ನಾಟಕದ ಏಕೀಕರಣದ ವಿಚಾರವನ್ನು ಮತ್ತೊಮ್ಮೆ ಮುಂಬಯಿ ಸರಕಾರದ ದೃಷ್ಟಿಗೆ ತಂದುಕೊಟ್ಟು ಅವರಿಂದ ಹಿಂದುಸ್ಥಾನ ಸರಕಾರಕ್ಕೆ ಈ ವಿಷಯವಾಗಿ ಅನುಕೂಲ ರಾಯಸವು ಹೋಗುವಂತೆ ಮಾಡದೆ ಬಿಡಲಾಗದೆಂದು ನಮ್ಮ ಸ್ಪಷ್ಟ ಮತವನ್ನು ನಾವು ಇಂದು ಹೇಳದಿರಲಾರೆವು

ಮದ್ರಾಸ ಸರಕಾರದವರಂತೂ ತಮ್ಮ ಕೌನ್ಸಿಲಿನ ನಿರ್ಣಯವನ್ನು ಅತ್ಯಂತ ಆತುರತೆಯಿಂದಲೂ ದಕ್ಷತೆಯಿಂದಲೂ ವಿಚಾರಿಸುವ ಆಶ್ವಾಸನವನ್ನು ಕೊಟ್ಟಿರುವದು ತಾ|| [illegible] ರ ಕನ್ನಡಿಗದಲ್ಲಿ ವಾಚಕರಿಗೆ ಗೊತ್ತಾಗಿದೆ ಆದುದರಿಂದ ಆಂಧ್ರ ಹಾಗು ಕರ್ನಾಟಕ ಪ್ರಾಂತಗಳನ್ನು ಬರುವ ಸುಧಾರಣೆಗಳ ಆರಂಭದ ಜೊತೆಯಲ್ಲಿಯೇ ವಿಂಗಡಿಸುವ ಸಲುವಾಗಿ ಹಿಂದುಸ್ಥಾನ ಸರಕಾರದ ಸ್ಟೇಟ ಸೆಕ್ರೆಟರಿಯವರಿಗೂ ಬಿನ್ನವಿಸಬೇಕೆಂಬ ತಮ್ಮ ಕೌನ್ಸಿಲದ ನಿರ್ಣಯವನ್ನು ಮದ್ರಾಸ ಸರಕಾರದವರು ತಮ್ಮ ಅನುಕೂಲ ಅಭಿಪ್ರಾಯದೊಂದಿಗೆ ಹಿಂದುಸ್ಥಾನ ಸರಕಾರಕ್ಕೆ ಕಳಿಸುವರೆಂದು ಭಾವಿಸಲು ಅಭ್ಯಂತರವಿಲ್ಲ ಇದೇ ಹೊತ್ತಿನಲ್ಲಿ ಮುಂಬಯಿ ಕಾನೂನು ಮಂಡಲದೊಳಗಿನ ಕರ್ನಾಟಕ ಭಾಗದ ಪ್ರತಿನಿಧಿಗಳು ಇದೇ ಅರ್ಥದ ಒಂದು ಠರಾವನ್ನು ಪಾಸು ಮಾಡಿಕೊಂಡು ಅದನ್ನು ಮುಂಬಯಿ ಸರಕಾರದಿಂದ ಹಿಂದುಸ್ಥಾನ ಸರಕಾರಕ್ಕೆ ಅನುಕೂಲ ಅಭಿಪ್ರಾಯದೊಡನೆ ಕಳಿಸಿಕೊಡುವಂತೆ ಅಗತ್ಯವಾಗಿ ವ್ಯವಸ್ಥೆ ಮಾಡಬೇಕು ಕೂಡಗಿನ ಕೌನ್ಸಿಲಿನಲ್ಲಿಯೂ ಕರ್ನಾಟಕ ಏಕೀಕರಣವೂ ಕರ್ನಾಟಕ ಪ್ರಾಂತದಲ್ಲಿ ಕೊಡಗಿನ ಸಮಾವೇಶವೂ ಈ ಮೊದಲೇ ಪಾಸಾಗಿರುವದರಿಂದ ಅಲ್ಲಿಂದಲೂ ಚೀಫ ಕಮಿಶನರರ ಮುಖಾಂತರ ಈ ವಿಷಯವು ಹಿಂದುಸ್ಥಾನ ಸರಕಾರದ ವಿಚಾರಣೆಗೆ ಸಲ್ಲಿಸಲ್ಪಡುವದು ಅಗತ್ಯವಾಗಿದೆ ಹೀಗೆ ಬ್ರಿಟಿಶ ಕರ್ನಾಟಕದ ಬೇರೆ ಬೇರೆ ವಿಭಾಗಗಳಿಂದ ಕರ್ನಾಟಕದ ಜನತೆಯ ಬೇಡಿಕೆಯು ಆ ಆ ಭಾಗದ ಜವಾಬದಾರ ಸರಕಾರಗಳ ಮುಖಾಂತರ ಹಿಂದುಸ್ಥಾನ ಸರಕಾರದ ಮುಂದೆ ಮಂಡಿಸಲ್ಪಟ್ಟರೆ ಹೊಸ ಸುಧಾರಣೆಗಳೊಂದಿಗೆಯೇ ಬ್ರಿಟಿಶ ಕರ್ನಾಟಕವು ಒಂದು ಸ್ವತಂತ್ರ ಪ್ರಾಂತವಾಗುವದು ಅಸಂಭವನೀಯ ಮಾತಲ್ಲ ಪ್ರಾಂತಿಕ ಘಟಕಗಳ ಸೀಮೆಗಳಲ್ಲಿ ಬದಲಾವಣೆಗಳನ್ನು ಮಾಡುವದು ಹೊಸ ಹೊಸ ಪ್ರಾಂತಗಳನ್ನು ನಿರ್ಮಾಣ ಮಾಡುವದು ಸದ್ಯದ ಹಿಂದುಸ್ಥಾನ ಸರಕಾರದ ಕಾನೂನಿನ್ವಯ [Govt of India Act] ಸ್ಥಾಯಿ ಸರಕಾರದ ಅಧಿಕಾರಕ್ಕೊಳಪಟ್ಟ ವಿಷಯವೇ ಆಗಿದೆ ಇಂಥ ಕೆಲಸಗಳಿಗೆ ಪಾರ್ಲಮೆಂಟಿನ ಅಥವಾ ಬ್ರಿಟಿಶ ಸರಕಾರದ ಒಪ್ಪಿಗೆಯ ಆವಶ್ಯಕತೆಯಿರುವದಿಲ್ಲ ಆದುದರಿಂದಲೇ ತಮ್ಮ ಎಲ್ಲ ವಿಧದ ಕಷ್ಟ ನಿಷ್ಠುರತೆಗಳನ್ನು ಒಮ್ಮೆಲೇ ಕೊನೆ ಮುಟ್ಟಿಸುವ ಈ ಏಕೀಕರಣದ ವಿಷಯವನ್ನು ಇದೇ ಕಾಲಕ್ಕೆ ವಿಶ್ವ ಪ್ರಯತ್ನದಿಂದ ಮುಂದರಿಸಿ ಸಾಧಿಸಿಕೊಳ್ಳುವದು ಕನ್ನಡ ಜನಾಂಗದ ಪ್ರಕೃತ ಕರ್ತವ್ಯವಾಗಿದೆ ಇದುವೇ ಕನ್ನಡಿಗರ ಸತ್ವಪರೀಕ್ಷೆಯ ಕಾಲವಾಗಿದೆ

ಕರ್ನಾಟಕ ಏಕೀಕರಣದ ಮುಂದಿನ ಕೆಲಸ

(ಶ್ರೀ [illegible] ಹಣಮಂತರಾಯರು)

ಕರ್ನಾಟಕ ಏಕೀಕರಣವು ಸದ್ಯಕ್ಕೆ ಸಾಧ್ಯವಿಲ್ಲೆಂದು ಮುಂಬಯಿ ಗವರ್ನರ ಸಾಹೇಬರು ನೊನ್ನೆ ಹೇಳಿದ್ದರಿಂದ [illegible] ಕರ್ನಾಟಕದಲ್ಲಿ ಒಂದು ಬಗೆಯ ಕಳವಳವುಂಟಾಗಿದೆ [illegible] ರಕಾರದ ಪಕ್ಷವನ್ನು ಯಾವಾಗಲೂ ಎತ್ತಿ ಹಿಡಿಯು ತನ್ನ ಬೇಳೆಯನ್ನು ಬೇಯಿಸಿಕೊಂಡು [illegible] ಲ್ಲಿಯೇ ಬೇರು ಬಿಟ್ಟ ಮುಂಬೈ ಟಾಯಿಮ್ಸ ಪತ್ರವು ಭಾಷಾವಾರ ಪ್ರಾಂತ ರಚನೆಯನ್ನೇ ವಿರೋಧಿಸಿದ್ದು ನೋಡಿಯಂತೂ ತರುಣ ಕನ್ನಡಿಗರು ರೊಚ್ಚಿಗೆದ್ದಿದ್ದಾರೆ

ಟೀಕಾಕಾರರಿಗೆ ಉತ್ತರ

ಭಾಷಾವಾರ ಪ್ರಾಂತರಚನೆಯ ತತ್ವವನ್ನು ಸರಕಾರದವರು ಒಪ್ಪಿಕೊಂಡು ಹಳೆಯ ಮಾತಾಯಿತು ಆ ಬಗ್ಗೆ ಇದೀ ಹಿಂದುಸ್ಥಾನದಲ್ಲಿ [illegible] ನಲ್ಲಿಯೂ ಕೂಡ ಮತಭೇದವಿಲ್ಲೆಂದು ಹೇಳಬಹುದು ಟಾಯಿಮ್ಸಕಾರರ ಮುತ್ತಜ್ಜರಾದ ಮಾಂಟೆಗ್ಯೂ ಸಾಹೇಬರು [illegible] ಇಸ್ವಿಯಲ್ಲಿ ಹೊಸ ಸುಧಾರಣೆಗಳ ತಮ್ಮ ವರದಿಯಲ್ಲಿ ಈ ತತ್ವಕ್ಕೆ ಒಪ್ಪಿಕೊಂಡು ಭಾಷಾವಾರ ಪ್ರಾಂತರಚನೆಯನ್ನು ಸಮರ್ಥಿಸಿದ್ದಾರೆ ಆ ವರದಿಯ [illegible] ನೆಯ ಪುಟದಲ್ಲಿ ಹೀಗೆ ಬರೆದಿರುತ್ತದೆ

"We are impressed with the artificial and often inconvenient character of existing administrative units We cannot doubt that the business of the Government would be simplified if administrative units were both smaller & homogeneous. It is a strong argument in favour of linguistic units of Government"

ಇದಲ್ಲದೆ [illegible] ನೆಯ ಇಸ್ವಿಯ ಸುಧಾರಣಾ ಕಾಯಿದೆಯ [illegible] ನೇ ಕಲಮು ಹೊಸಪ್ರಾಂತ ರಚನೆಯ ಬಗ್ಗೆ ಇರುತ್ತದೆ ಆಗಿನ ಜಾಯಿಂಟ ಪಾರ್ಲಮೆಂಟರೀ ಕಮಿಟಿಯವರು ಮೇಲಿನ ಕಲಮಿಗೆ ಒಂದು ಟಿಪ್ಪಣಿಯನ್ನು ತಮ್ಮ ವರದಿಯಲ್ಲಿ ಜೋಡಿಸಿದ್ದಾರೆ ಅವರು ಅನ್ನುವದೇನೆಂದರೆ—

"They are of opinion th[at] any clear request made by a ma[jority] of the members of a legis[lative] council representing [a] distinctive racial or linguist[ic] territorial unit for its constitutio[n] under this clause a sub-provinc[e] or a separate province, shoul[d] be taken as a prima-facie case o[n] the strength of which a commis[sion] of inquiry may be appoint[ed]"

ಇದಲ್ಲದೆ ಓರಿಸಾ ಮತ್ತು ಸಿಂಧ ಪ್ರಾಂ[ತ]ಗಳನ್ನು ಬೇರೆ ಮಾಡಬೇಕೆಂದು ನಿಶ್ಚಯಿಸಿ [ಸ]ರಕಾರದವರು ಕಮಿಟಿಗಳನ್ನು ನಿಯಮಿಸಿ[ದ]ರು ಆ ಕಮಿಟಿಗಳ ವರದಿಗಳು ಸಹ [illegible] ವಾಗಿವೆ. ಟಾಯಿಮ್ಸಕಾರರ ಮಿದುಳು [illegible] ಧೂಳು ತಿಂದಂತೆ ತೋರುತ್ತದೆ ಅವರು [illegible] ಧೂಳನ್ನು ಝಾಡಿಸಿ ನಾವು ಮೇಲೆ ಹೇಳಿದ ವ[ರ]ದಿಗಳನ್ನು ಅವರು ಚೆನ್ನಾಗಿ ಓದಬೇಕು [illegible] ಷಾವಾರ ಪ್ರಾಂತ ರಚನೆಯನ್ನು ವಿರೋಧಿಸು[ವ]ದರಲ್ಲಿ ಟಾಯಿಮ್ಸಕಾರರ ಸ್ವಾರ್ಥ ಬುದ್ಧಿ [illegible] ಕಂಡು ಬರುತ್ತದೆ ಭಾಷಾವಾರ ಪ್ರಾಂತರಚನೆಯಾದರೆ ಪ್ರಾಂತಿ[ಕ] ಸರಕಾರದ ಕಾರ್ಯಕಲಾಪವೆಲ್ಲ [illegible] ಪ್ರಾಂತಿಕ ಭಾಷೆಗಳಲ್ಲಿಯೇ ನಡೆಯುತ್ತದೆ [ಇ]ದರಿಂದ ಇಂಗ್ಲೀಷ ಭಾಷೆಯ ಪ್ರಾಬಲ್ಯವು [illegible] ಹೋಗುತ್ತದೆ ಆ ಮೇಲೆ ಟಾಯಿಮ್ಸ ಪತ್ರಿಕೆ[ಯ]ನ್ನು ಓದುವರಾರು? ಮುಂಬಯಿಯ [illegible] ಬೋರಿ ಬಂದರದ ಹತ್ತರ ಮುಗಿಲು ಮು[ಟ್ಟು]ವಂಥ ಕಟ್ಟಡವನ್ನು ಕಟ್ಟಿಕೊಂಡು ಕುಳಿ[ತ] ಈ ಟಾಯಿಮ್ಸಕಾರರ ಗತಿಯೇನು? [illegible] ಪ್ರಿಯವಾಗಬೇಕಾಗುವದು ಅವರು [illegible] ಯದಲ್ಲಿ ತೋರಿಸುವ ಧೂರ್ತತೆಯ [illegible] ನಾವು ಹೊಗಳಬಹುದು. ಆದರೆ ಅವರ [illegible] ಬದ್ಧ ಪ್ರಲಾಪವನ್ನು ನಾವು ಹಳಿಯದಿರ[ಲಾ]ರೆವು

ಇನ್ನು ಗವರ್ನರ ಸಾಹೇಬರು ಎತ್ತಿದ [ಆ]ಕ್ಷೇಪಕ್ಕೆ ಉತ್ತರ ಕೊಡುವದು ಅತ್ಯಂತ ಅವ[ಶ್ಯ]ವಿರುತ್ತದೆ ಈಗಿನ ಆರ್ಥಿಕ ಬಿಕ್ಕಟ್ಟಿನ ಕಾ[ಲ]ದಲ್ಲಿ ಹೊಸ ಪ್ರಾಂತವನ್ನು ಮಾಡುವದರಿಂದ [illegible] ವೆಚ್ಚವು ಹೊರಲಿಕ್ಕೆ ಸರಕಾರವು ಸಮರ್ಥ[ವಿ]ಲ್ಲೆಂದೂ ಹೊಸ ಕರ್ನಾಟಕ ಪ್ರಾಂತವು ಆರ್ಥಿ[ಕ] ದೃಷ್ಟಿಯಿಂದ ಸ್ವಾವಲಂಬಿಯಾಗದೆಂದೂ [illegible] ವರ ಮುಖ್ಯ ಆಕ್ಷೇಪ. ಹಿಂದುಸ್ಥಾನ ಸರ[ಕಾರ]ವು ತನ್ನ ಬೊಕ್ಕಸದೊಳಗಿಂದ ಹಣವನ್ನು ಕೊ[ಟ್ಟು] ಸಿಂಧ ಮತ್ತು ಓರಿಸಾ ಪ್ರಾಂತಗಳನ್ನು ಬೇರೆ ಮಾಡಲಿಕ್ಕೆ ಸಿದ್ಧವಾಗಿದೆ. ಕರ್ನಾಟ[ಕ]ವು ಯಾರ ಬೊಕ್ಕಸದೊಳಗಿಂದಲೂ ಹಣವನ್ನು ಬೇಡುವದಿಲ್ಲ ಹೊಸ ಪ್ರಾಂತರಚನೆಯ ವೆಚ್ಚವನ್ನು ಅದೇ ಪ್ರಾಂತದ ಮೇಲೆ ಹೇರಿ[ದ]ರೂ ಅದು ಸಿದ್ಧವಿದೆ ಈ ವಿಷಯದಲ್ಲಿ ಗವರ್ನ[ರ] ಸಾಹೇಬರಾಗಲಿ ಸರಕಾರದವರಾಗಲಿ [illegible] ಮಾಡುವ ಕಾರಣವಿಲ್ಲ. ಕರ್ನಾಟಕ ಪ್ರಾಂ[ತ]ವು ಸ್ವಾವಲಂಬಿಯಾಗುವದೆಂಬುದರ ಬಗ್ಗೆ ಆ[ರ್ಥಿ]ಕ ಪ್ರಮಾಣಗಳನ್ನು ಏಕೀಕರಣ ಸಭೆಯವರೂ [illegible] ಪ್ರಾಂತಿಕ ಕಾಂಗ್ರೆಸ್ಸ ಕಮಿಟಿಯವರೂ [illegible] ದ ಮುಂದಿಟ್ಟಿದ್ದಾರೆ. ಅವೆಲ್ಲ ಪ್ರಮಾಣ[ಗಳ]ನ್ನು ಪರಿಶೀಲಿಸಿ ನೆಹರು ಕಮಿಟಿಯವರು [ಕರ್]ನಾಟಕವನ್ನು ಸ್ವತಂತ್ರ ಪ್ರಾಂತವನ್ನಾಗಿ ಮಾಡಲಿಕ್ಕೆ ಸಮ್ಮತಿಯನ್ನಿತ್ತರು ಅದೆಲ್ಲ [illegible] ಮಾಣವನ್ನು ಗವರ್ನರ ಸಾಹೇಬರು [illegible]

ಕವಾಗಿ ನೋಡಿದ್ದರೆ ಕರ್ನಾಟಕದ ಏಕೀಕರಣದ ಬೇಡಿಕೆಯು ಮನದಟ್ಟಾಗುತ್ತಿತ್ತು. ಗವರ್ನರ ಸಾಹೇಬರು ತಮ್ಮ ಗಂಟು ಕಟ್ಟುವ ಗಡಿಬಿಡಿಯಲ್ಲಿ ಇವೆಲ್ಲ ಸಂಗತಿಗಳನ್ನು ವಿಚಾರ ಮಾಡಲಿಕ್ಕೆ ಸಮಯ ಸಿಕ್ಕಿರಲಿಕ್ಕಿಲ್ಲ

ಸಿದ್ಧವಾದ ಮಾತು

ಆಸಾಮ ಪ್ರಾಂತವು ಅನೇಕ ವರುಷಗಳಿಂದ ಸ್ವತಂತ್ರವಿರುತ್ತದೆ ಅದರ ಜನಸಂಖ್ಯೆ ಕ್ಷೇತ್ರ ಮತ್ತು ಆದಾಯ ಇವುಗಳನ್ನು ಹೊಸ ಕರ್ನಾಟಕ ಪ್ರಾಂತದ ಜನಸಂಖ್ಯೆ ಆದಾಯ ಮೊದಲಾದವುಗಳಿಗೆ ಹೋಲಿಸಿ ನೋಡಿದರೆ ಕರ್ನಾಟಕವು ಯಾವ ತೊಂದರೆಯಿಲ್ಲದೆ ಸ್ವತಂತ್ರ ಪ್ರಾಂತವಾಗಬಹುದೆಂದು ಸಿದ್ಧವಾಗುತ್ತದೆ ಆಸಾಮ ಪ್ರಾಂತದ ಆದಾಯವು [ಸರಕಾರಿ ರಿಪೋರ್ಟುಗಳ ಪ್ರಕಾರ) ೨೬೩೭೦೦೦ ರೂ ಇರುತ್ತದೆ ಬೆಳಗಾಂವಿ, ವಿಜಾಪೂರ, ಧಾರವಾಡ, ಕಾರವಾರ, ಬಳ್ಳಾರಿ, ಮಂಗಳೂರ ನೀಲಗಿರಿ, ಮತ್ತು ಕೊಡಗು ಜಿಲ್ಹೆಗಳಿಂದ ಕೂಡಿದ ಹೊಸ ಕರ್ನಾಟಕ ಪ್ರಾಂತದ ಆದಾಯವು ೩೫೪೭೧೫೩೪ ರೂ. ಆಗುತ್ತದೆ ಈ ಎಂಟು ಜಿಲ್ಹೆಗಳಲ್ಲಿ ಪ್ರತಿಯೊಂದು ಜಿಲ್ಹೆಯಿಂದ ಈಗ ಎಷ್ಟು ಆದಾಯವಿರುತ್ತದೆಂಬದನ್ನು ಸರಕಾರಿ ರಿಪೋರ್ಟುಗಳಿಂದಲೂ ಮದ್ರಾಸ ಮುಂಬಯಿ ಕೌನ್ಸಿಲುಗಳಲ್ಲಿ ಸರಕಾರದವರು ಕೊಟ್ಟ ಉತ್ತರಗಳ ಮೇಲಿಂದಲೂ ಆದಾಯದ ಈ ಅಂಕಿಯನ್ನು ಗೊತ್ತು ಮಾಡಿದೆ. ಅದೇ ಪ್ರಕಾರ ಈ ಎಂಟು ಜಿಲ್ಹೆಗಳ ಸಲುವಾಗಿ ಸರಕಾರದವರು ೨೦೮೫೨೦೩೬೭ ರೂ ವೆಚ್ಚ ಮಾಡುತ್ತಾರೆ ಆದಾಯದೊಳಗಿಂದ ವೆಚ್ಚವನ್ನು ತೆಗೆದರೆ ೧೪೬೨೧೧೬ ರೂ ಶಿಲುಕು ಉಳಿಯುತ್ತದೆ ಇಂನು ಗವರ್ನರ ಸಾಹೇಬರ ಸಂಬಳ, ಅವರ ಕಚೇರಿಯ ವೆಚ್ಚ, ಶಾಸನ ಸಭೆಯ ವೆಚ್ಚ ಮೊದಲಾದವುಗಳ ಸಲುವಾಗಿ ಎಷ್ಟೋ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ ಮುಂಬೈಯಂಥ ದೊಡ್ಡ ಇಲಾಖೆಯು ಪ್ರತಿ ವರ್ಷ ೩೬೨೫೦೦೦ ರೂ. ಗಳನ್ನು ವೆಚ್ಚ ಮಾಡುತ್ತದೆ ಹೊಸ ಪ್ರಾಂತಕ್ಕೂ ಇಷ್ಟೇ ವೆಚ್ಚವು ತಗಲುತ್ತದೆಂದು ಇಟ್ಟುಕೊಂಡರೂ ೮೩೭೧೧೬ ರೂ ಶಿಲುಕು ಉಳಿಯುತ್ತದೆ ಆದ್ದರಿಂದ ಕರ್ನಾಟಕವು ಸ್ವಾವಲಂಬಿಯಾದ ಪ್ರಾಂತವಾಗಿ ಪಡೆಂಬದರಲ್ಲಿ ಸಂದೇಹವಿಲ್ಲ. ಕರ್ನಾಟಕದಲ್ಲಿಯು ಪ್ರಚಂಡವಾದ ಲೋಕಮತವು ಏಕೀಕರಣದ ಬೇಡಿಕೆಯನ್ನು ಸಮರ್ಥಿಸುತ್ತಿದೆ ಅನೇಕ ಸಾರ್ವಜನಿಕ ಸಂಸ್ಥೆಗಳೂ ಮುಂಬಯಿ ಮದ್ರಾಸಗಳ ಶಾಸನ ಸಭೆಗಳೂ ಮುಂದಾಳುಗಳೂ ಏಕೀಕರಣವನ್ನು ಎತ್ತಿ ಹಿಡಿದಿದ್ದಾರೆ ಇಂಥ ಬಲವತ್ತರವಾದ ಬೇಡಿಕೆಯನ್ನು ಹಿಂದೂಡುವದು ಸಮಂಜಸವಾಗಲಾರದು

ಮಾಡತಕ್ಕ ಮುಂದಿನಕಾರ್ಯ

ವೃತ್ತಪತ್ರಿಕೆಗಳಲ್ಲಿ ಲೇಖಗಳನ್ನು ಬರೆದಾಗಲಿ ಸಾರ್ವಜನಿಕ ಸಭೆಗಳಲ್ಲಿ ಠರಾವುಗಳನ್ನು ಪಾಸ ಮಾಡಿಯಾಗಲಿ ಸುಮ್ಮನೆ ಕುಳಿತರೆ ನಮ್ಮ ಕೆಲಸವು ತೀರಲಾರದು ೧೯೧೯ ನೇ ಕಾಯದೆಯ ೫೨ನೇ ಕಲಮಿನ ಪ್ರಕಾರ ಏಕೀಕರಣ ಪ್ರಶ್ನೆಯನ್ನು ವಿಚಾರ ಮಾಡುವ ಸಲುವಾಗಿ ಒಂದು ಕಮಿಟಿಯನ್ನು ನೇಮಿಸುವ ಬಗ್ಗೆ ಅಸೆಂಬ್ಲಿಯಲ್ಲಿ ಠರಾವನ್ನು ತರಬೇಕು ಮುಂಬಯಿ ಮತ್ತು ಮದ್ರಾಸ ಶಾಸನ ಸಭೆಗಳಲ್ಲಿ ಅದೇ ತರದ ಕಮಿಟಿಗಳನ್ನು ನೇಮಿಸಲಿಕ್ಕೆ ಒತ್ತಾಯಪಡಿಸಬೇಕು. ಏಕೀಕರಣ ಪರಿಷತ್ತನ್ನು ಕೂಡಿಸಿ ನಮ್ಮ ಪ್ರಾಂತವು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗುವದೆಂಬದನ್ನು ಸಶಾಸ್ತ್ರವಾಗಿ ಅಭ್ಯಾಸ ಮಾಡಿ ಇನ್ನೊಮ್ಮೆ ಸಿದ್ಧ ಮಾಡಿ ತೋರಿಸಲಿಕ್ಕೆ ತಜ್ಞರದೊಂದು ಕಮಿಟಿಯನ್ನು ನೇಮಿಸಬೇಕು ಈ ಕಮಿಟಿಯಲ್ಲಿ ಸರಕಾರದ ಆರ್ಥಿಕ ವ್ಯವಹಾರವನ್ನು ಬಲ್ಲವರೂ ಅರ್ಥಶಾಸ್ತ್ರಜ್ಞರೂ ಇರಬೇಕು ಸಿಂಧ ಮತ್ತು ಓರಿಸಾ ಕಮಿಟಿಗಳ ವರದಿಗಳನ್ನು ಎದುರಿಗಿಟ್ಟುಕೊಂಡು ಕರ್ನಾಟಕದ ಬಗ್ಗೆ ಎಲ್ಲ ಮಾಹಿತಿಯನ್ನು ಕೂಡಿಸಿ ಪ್ರಸಿದ್ಧ ಮಾಡಬೇಕು ಮೊನ್ನೆ ಮದ್ರಾಸ ಕೌನ್ಸಿಲದಲ್ಲಿ ಆಂಧ್ರ ಮತ್ತು ಕರ್ನಾಟಕ ಪ್ರಾಂತಗಳು ಸ್ವತಂತ್ರವಾಗಬೇಕೆಂಬ ಬಗ್ಗೆ ಠರಾವು ಪಾಸಾಗಿರುತ್ತದೆ ಕೌನ್ಸಿಲ ಸಭಾಸದರು ಮೇಲಿಂದ ಮೇಲೆ ಪ್ರಶ್ನೆಗಳನ್ನು ಕೇಳುವದು ಠರಾವುಗಳನ್ನು ತರುವದು ಇವೇ ಮೊದಲಾದ ಚಟುವಟಿಕೆಗಳನ್ನು ತೋರಿಸುವದು ಅವಶ್ಯವಿರುತ್ತವೆ ಏಕೀಕರಣ ಪ್ರಶ್ನೆಯನ್ನು ಹೇಗೆ ಮುಂದರಿಸಬೇಕೆಂಬದರ ವಿಷಯದಲ್ಲಿ ಕಾರ್ಯಕ್ರಮವನ್ನು ಸಿದ್ಧಗೊಳಿಸಬೇಕು ನಮ್ಮ ಎಲ್ಲ ಶಕ್ತಿಯನ್ನು ಈ ದಿಶೆಯಲ್ಲಿ ಕೇಂದ್ರೀಕರಿಸದೆ ಗತ್ಯಂತರವಿಲ್ಲ

ಸರೋಜಿನಿಯವರು ಬಳ್ಳಾರಿಗೆ ಬರುವರು

ಶ್ರೀ ಸೌ ನಾಯಡುರವರ ಸಮ್ಮತಿ.

(ಸ್ಪೇಶಲ್ ತಂತಿ)

ಬಳ್ಳಾರಿ ತಾ|| ೧೬— ಬಳ್ಳಾರಿಯಲ್ಲಿ ಡಿಸೆಂಬರ ೨ ನೇ ವಾರದಲ್ಲಿ ಕೂಡುವ ಅಖಿಲ ಭಾರತ ಸ್ವದೇಶಿ ಪ್ರದರ್ಶನವನ್ನು ತೆರೆಯಲಿಕ್ಕೆ ಶ್ರೀಮತೀ ಸರೋಜಿನೀನಾಯುಡುರವರು ತಮ್ಮ ಕೊನೆಯ ಸಮ್ಮತಿ ಕೊಟ್ಟಿದ್ದಾರೆ ಪ್ರದರ್ಶನದಲ್ಲಿ ಮೈಸೂರ ಕೈಗಾರಿಕೆ ಖಾತೆಯವರು ಭಾಗವಹಿಸುತ್ತಾರೆ. ಹಿಂದುಸ್ಥಾನದ ದೂರ ದೂರದ ಭಾಗಗಳಿಂದ ಮನೋರಂಜಕ ಸಾಮಾನಗಳು ಬರಹತ್ತಿವೆ

ಡಾ. ಹರ್ಡೀಕರರ ಆರೋಗ್ಯ

ಮುಂಬೈ ತಾ|| ೧೬— ಹದಿನೈದು ದಿನಗಳಾಚೆ ಡಾ ಹರ್ಡೀಕರರಿಗೆ ಶಸ್ತ್ರ ಚಿಕಿತ್ಸೆ ಮಾಡಲಾಯಿತು ಇಂದು ಡಾ ದೇಶಮುಖರು ಮತ್ತೆ ಅವರ ಗಾಯವನ್ನು ಪರೀಕ್ಷಿಸಿದರು ಗಾಯವು ಮಾಯುತ್ತ ನಡೆದಿದೆ ಪೂರಾ ಮಾಯಲಿಕ್ಕೆ ಇನ್ನೂ ೧೫ ದಿನಗಳು ಬೇಕು ಅಲ್ಲಿಯವರೆಗೆ ಡಾ ರವರು ಆಸ್ಪತ್ರಿಯಲ್ಲಿಯೇ ಇರುವರು ಶಸ್ತ್ರಕ್ರಿಯೆಯ ನೋವೂ ಮೆಲ್ಲಗೆ ಗುಣವಾಗುತ್ತಿದೆ ತಮ್ಮ ಕೆಲಸ ಕೈಕೊಳ್ಳಲು ಅವರು ಒಲು ಆತರರಿರುವರು ಪೂರಾ ಗುಣವಾಗುವವರೆಗೆ ಯಾವ ಬಗೆಯ ತೊಂದರೆ ಮಾಡಿಕೊಳ್ಳಬೇಡಿರೆಂದು ಪಂಡಿತ ಜವಾಹಿರಲಾಲರು ಮತ್ತು ಮಹಾತ್ಮರು ಅವರಿಗೆ ಈಗವೆ ಬರೆದಿರುವರು

(ಅ ಪ್ರೆ ತಂತಿ]

ಹೊಸ ನಮೂನೆಯ ರಾಟಿ.

ಖಾದೀ ಹುಟ್ಟುವಳಿಯಲ್ಲಿ
ಕ್ರಾಂತಿಯನ್ನುಂಟುಮಾಡುವದೇ ?

ಬೆಂಗಳೂರಿನ ಶ್ರೀ ರಾಜಗೋಪಾಲ ಮುದ್ಲಿಯಾರರು ಹೊಸ ನಮೂನೆಯ ರಾಟಿಯನ್ನು ಸಿದ್ಧಪಡಿಸಿರುವರು ಇದರಿಂದ ಖಾದಿ ಹುಟ್ಟುವಳಿಯಲ್ಲಿ ಕ್ರಾಂತಿಯೇ ಆಗುವದೆಂದು ಮುದ್ಲಿಯಾರರ ಮತವಿದೆ ಯಾಕಂದರೆ ಓರ್ವ ಮನುಷ್ಯನು ಇದನ್ನು ಹೇಗೆ ಉಪಯೋಗಿಸಬೇಕೆಂದನ್ನು ೧ ತಾಸದಲ್ಲಿ ಕಲಿಸಲು ಆಕೆಯು ಈಗ ದಿನವೊಂದಕ್ಕೆ ೭ ಸಾವಿರ ಯಾರ್ಡ ನೂಲನ್ನು ನೂಲುತ್ತಿರುವಳು ಬೇರೆ ಬೇರೆ ನಂಬರಿನ ನೂಲನ್ನು ಈ ರಾಟಿಯಲ್ಲಿ ನೂಲಬಹುದಂತೆ. ಬಡನವಾಳ ಖಾದೀ ಕೇಂದ್ರದಲ್ಲಿ ಇದನ್ನು ಇಟ್ಟುಕೊಂಡು ಪರೀಕ್ಷಿಸಿ ತಮಗೆ ಅಭಿಪ್ರಾಯ ಕೊಡಬೇಕೆಂದು ಮುದ್ಲಿಯಾರರು ಮೈಸೂರ ಸರಕಾರದ ಉದ್ಯೋಗ ಖಾತೆಯವರನ್ನು ಕೇಳಿಕೊಂಡಿದ್ದಾರೆ

ಅಲವಾರದ ಮಹಾರಾಜರು ತಿರುಗಿ ಬರುವರು.

ಅಲವಾರ ತಾ|| ೧೬— ಅಲವಾರದ ಮಹಾರಾಜರು ಡಿಸೆಂಬರ ಮೊದಲನೇ ವಾರದಲ್ಲಿ ಅಲವಾರಕ್ಕೆ ಮರಳಿ ಬರುವರೆಂಬ ಸುದ್ದಿಯು ಇಲ್ಲಿಗೆ ಲಂಡನದಿಂದ ಬಂದ ಕೆಲವು ಖಾಸಗೀ ಪತ್ರಗಳಿಂದ ನಿಜವೆಂದು ತಿಳಿಯುತ್ತದೆ

ಪಾಲಿಸ್ಥಾಯಿನದಲ್ಲಿ ಜ್ಯೂ ಜನರ ವಸಾಹತಿಯ ಸಂಬಂಧವಾಗಿ ಬ್ರಿಟಿಶ ಸರಕಾರದ ಧೋರಣೆಯನ್ನು ಖಂಡಿಸುವದಕ್ಕಾಗಿ ಇಲ್ಲಿ ದಗಾಂವದಲ್ಲಿ ಮುಸಲ್ಮಾನರ ಸಭೆ ನೆರೆತ್ತು ಪಾಲಿಸ್ಥಾನವು ಮುಸಲ್ಮಾನರ ನಾಡೆ ವಾಗಿದ್ದು ಜ್ಯೂ ಜನರ ಬರುವಿಕೆಯನ್ನು ನಿಷೇಧಿಸಲಾಯಿತು ಅರಬ ಜನರಿಗೆ ಸಹಾನುಭೂತಿಯನ್ನು ತೋರಿಸುವ ಮತ್ತು ಅಧಿಕಾರಿಗಳನ್ನು ಗುಂಡು ಹಾಕಿದುದಕ್ಕೆ ಅವರ ಕೃತಿಯನ್ನು ನಿಷೇಧಿಸುವ ಗೊತ್ತುವಳಿಯು ಪಾಸಾಯಿತು ನಾದಿರಶಹರ ಬಗ್ಗೆ ಪ್ರಾರ್ಥನೆಯೂ ಆಯಿತು

[ಅ ಪ್ರೆ ತಂತಿ]

ಪೋಲೀಸ-ಸಂಥಾಲರ ಹೊಡೆದಾಟ.

ದಿನಾಜಪೂರ ತಾ|| ೧೬— ಇಲ್ಲಿಂದ ೨೯ ಮೈಲುಗಳ ಮೇಲಿರುವ ಬಿಲ್ಲಾಳಾ ಎಂಬ ಹಳ್ಳಿಯಲ್ಲಿ ಪೋಲಿಸರು ಮತ್ತು ೧೫೦೦೦ ಸಂಥಾಲ ಜನರ ನಡುವೆ ಹೊಡೆದಾಟವಾಯಿತೆಂದು ಸುದ್ದಿ ಬಂದಿರುತ್ತದೆ ಪೋಲೀಸ ಅಧಿಕಾರಿಯು ಗುಂಡು ಹಾರಿಸಿದನಂತೆ ದಿನಾಜಪೂರದಿಂದ ಅಲ್ಲಿಗೆ ಸಶಸ್ತ್ರ ಪೋಲೀಸರನ್ನು ಕಳಿಸಲಾಗಿದೆ ಸವಿಸ್ತಾರ ಸಂಗತಿಗಳು ಇನ್ನೂ ತಿಳಿದಿಲ್ಲ.

(ಅ ಪ್ರೆ ತಂತಿ

ಕಲಕತ್ತಾ ಕಾರ್ಪೋರೇಶನ್ನದ ಹೊಸ ಕಾಯದೆ.

ಕಲಕತ್ತಾ ತಾ|| ೧೬— ಕಲಕತ್ತಾ ಕಾರ್ಪೋರೇಶನ್ನದ ಬಗ್ಗೆ ಹೊಸ ಕಾಯದೆಯು ಇವತ್ತಿನಿಂದ ಅಮಲಿನಲ್ಲಿ ಬರುವದು ಈ ಕಾಯದೆಯ ಪ್ರಕಾರ ಸರಕಾರದ ವಿರುದ್ಧ ಯಾವದೇ ತರಹದ ಚಳವಳಿಯಲ್ಲಿ ಭಾಗ ತೆಗೆದುಕೊಂಡು ಶಿಕ್ಷೆ ಹೊಂದಿದವರನ್ನು ಕಾರ್ಪೋರೇಶನ್ನದ ನೌಕರಿಯಲ್ಲಿ ಇಟ್ಟುಕೊಳ್ಳಲಿಕ್ಕೆ ಪ್ರತಿಬಂಧವಿರುತ್ತದೆ. ಮತ್ತು ಅಂಥ ಜನರನ್ನು ನೌಕರಿಗಾಗಿ ಇಟ್ಟುಕೊಳ್ಳುವ ಸಂಸ್ಥೆಗಳಿಗೆ ಕಾರ್ಪೋರೇಶನ್ನದಿಂದ ಗ್ರ್ಯಾಂಟು ಸಹ ಕೊಡಲಿಕ್ಕೆ ಬರುವದಿಲ್ಲ ಬೇಕಾಯದೇಶೀರ ವೆಚ್ಚಕ್ಕೆ ಸುದರೂ ನಿರ್ಬಂಧವನ್ನು ಹಾಕಲಾಗಿದೆ

ಶ್ರೀ ಸತೀಶಚಂದ್ರ ದಾಸಗುಪ್ತ ಇವರು ಕಳೆದ ಹತ್ತು ದಿವಸಗಳಿಂದ ಹರಿಜನರ ಕುಡಿಯುವ ಚಟವನ್ನು ಬಿಡಿಸಲು ಉಪವಾಸವನ್ನು ಕೈಕೊಂಡಿದ್ದರಷ್ಟೇ ಈಗ ಮಹಾತ್ಮಾ ಗಾಂಧಿಯವರ ಉಪದೇಶಕ್ಕನುಸಾರವಾಗಿ ಉಪವಾಸವನ್ನು ಸ್ವಲ್ಪ ಲಿಂಗಿನ ಹಾಲನ್ನು ಕುಡಿದು ಮುರಿದರು. ಓಕರಿಕೆಯ ರೋಗವು ಸ್ವಲ್ಪ ಇದ್ದು ಅಶಕ್ತರಾಗಿದ್ದರೂ ಅವರ ಪ್ರಕೃತಿಯು ಸಮಾಧಾನಕರವಾಗಿದೆ

ಚಿಲ್ಹಂಗಾ [ಮುರ್ಶಿದಾಬಾದ ಜಿಲ್ಹೆಯಲ್ಲಿ] ದಂಗೆಯ ಖಟ್ಲೆಯ ವಿಚಾರಣೆಯು 'ಜ್ಯೂರಿ' ಯ ಮುಂದೆ ನಡೆಯುವದಿಲ್ಲವೆಂದು ಕಲಕತ್ತಾ ಗ್ಯಾಝೆಟಿನಿಂದ ತಿಳಿಯುತ್ತದೆ

[ಅ ಪ್ರೆ ತಂತಿ]

ಚಿತಗಾಂಗದಲ್ಲಿ ಪೋಲೀಸರಾಳಿಕೆ!

ಚಿತಗಾಂಗ ತಾ|| ೧೬ ಈ ಹೊತ್ತು ಊರ ತುಂಬೆಲ್ಲ ಮುಖ್ಯ ಮುಖ್ಯ ಬೀದಿಗಳಲ್ಲಿ ಪೋಲೀಸರನ್ನೂ ಸೈನಿಕರನ್ನೂ ಅಲ್ಲಲ್ಲಿ ಕಾವಲಿಗೆಂದು ನಿಲ್ಲಿಸಿದರು ಹಾಯ್ದಾಡುವವರನ್ನು ಮತ್ತು ಹಿಂದೂ ತರುಣರನ್ನು ಗುರುತಿನ ಚೀಟಿಗಳ Identity-Cards) ಸಹಾಯದಿಂದ ಗುರುತಿಸಿ, ಅವರ ಮೈಮೇಲಿನ ಬಟ್ಟೆಗಳ ಸಹಿತ ಹುಡುಕಿನೋಡಿದರು

[ಅ ಪ್ರೆ ತಂತಿ]

ವಕೀಲರ ಮನೆಗಳಿಗೆ ದಾಳಿ.

ಮೆದಿನಿಪೂರ ತಾ|| ೧೬— ನಿನ್ನಿನ ದಿವಸ ಇಲ್ಲಿ ೨೪ ಜನ ವಕೀಲರ ಮನೆಗಳನ್ನು ಪೋಲೀಸರು ಶೋಧಿಸಿದರು ಶೋಧನೆಯಲ್ಲಿ ಸೈನಿಕರು ಪೋಲೀಸರಿಗೆ ಸಹಾಯರಾಗಿದ್ದರು ದೋಷಾರ್ಹವಾಗಿರುವದಾವುದೂ ಶಿಕ್ಕಲಿಲ್ಲವಾದರೂ ಕೆಲವು ಕಾಗದ ಪತ್ರಗಳನ್ನು ವಶಕ್ಕೆ ತೆಗೆದುಕೊಂಡರು

[ಅ ಪ್ರೆ ತಂತಿ]

ಕೈ. ವಿಠ್ಠಲಭಾಯಿಯವರ ಶಿಲಾಮೂರ್ತಿ.

ಅಹಮ್ಮದಬಾದ ತಾ|| ೧೬— ಜಳಗಾಂವ ಎಂಬಲ್ಲಿಯ ಮುನಸಿಪಲ್ ಕೌನ್ಸಿಲರೊಬ್ಬರ್ ತಾವು ಮುನಸಿಪಾಲಟಿಯಲ್ಲಿ ಕೈ ವಿಠ್ಠಲಭಾಯಿ ಪಟೇಲರ ಶಿಲಾಮೂರ್ತಿಯನ್ನು ಸ್ಥಾಪಿಸುವ ಸೂಚನೆಯನ್ನು ಮಂಡಿಸಲಿರುವ ಬಗ್ಗೆ ಮುನಸಿಪಾಲಟಿಗೆ ತಿಳಿಸಿರುವರು. (ಅ ಪ್ರೆ ತಂತಿ)

ರಿಝರ್ವ ಬ್ಯಾಂಕ ಬಿಲ್ಲಿನ ಮುನ್ನಡೆ

ಹೊಸದಿಲ್ಲಿ ತಾ|| ೧೬ ಮಧ್ಯವರ್ತಿ ಸಭೆಯ ಸಂಯುಕ್ತ ಕಮಿಟಿಯವರು ರಿಝರ್ವ ಬ್ಯಾಂಕ ಮತ್ತು ಇಂಪಿರಿಯಲ್ ಬ್ಯಾಂಕಿನ ಬಿಲ್ಲುಗಳ ವರದಿಯ ಮಸೂದೆಯನ್ನು ತಯಾರಿಸಿ ಬದಲಾವಣೆಗಳೊಂದಿಗೆ ಒಪ್ಪಿದರು ಕೆಲ ಸಭಾಸದರು ಇಂದು ಎರಡು ವರದಿಗಳ ಮೇಲೆ ಅಂಕಿತಗಳನ್ನು ಹಾಕಿದರು ಬೇರೆಯವರು ಶನಿವಾರ ದಿನ ತಮ್ಮ ತಮ್ಮ ಮತಭೇದಗಳನ್ನು ಬರೆದು ಅಂಕಿತಗಳನ್ನು ಹಾಕುವರು ರಿಝರ್ವ ಬ್ಯಾಂಕ ಬಿಲ್ಲಿನ ವರದಿಯಲ್ಲಿ ಕೆಳಗೆ ಕಾಣಿಸಿದ ವಿಷಯವನ್ನು ವಿಶೇಷ ಒತ್ತಿ ಹೇಳಲಾಗಿದೆಂದು ತಿಳಿಯುತ್ತದೆ ಅದೇನಂದರೆ- ಸರಕಾರದವರು ಎಲ್ಲಕ್ಕೂ ಮೊದಲು ಆದಷ್ಟು ಬೇಗ ಬ್ಯಾಂಕವನ್ನು ಸ್ಥಾಪಿಸಬೇಕು. ಹಾಲುಗಾರ ಮಂಡಲದ ಪಾಲಿನ ಹಣದ ಸಂಬಂಧವಾಗಿ ಹಾಕಿದ ಕಲಮಿನಲ್ಲಿ ಕಮಿಟಿಯವರು " ಹಿಂದೂ ಜನರಿಗೆ ತಮ್ಮ ಒಕ್ಕಲತನಾಡುಗಳಲ್ಲಿ ಸಮಪಕ್ಷ್ಯಗಳನ್ನು ಕೊಡುವವರು ಈ ಸೌಲಭ್ಯವನ್ನು ಕೊಡದಂತೆ ಪ್ರಯತ್ನಿಸತಕ್ಕದ್ದು " ಎಂದು ಅಭಿಪ್ರಾಯ ಪಟ್ಟಿದ್ದಾರೆ (ಅ ಪ್ರೆ ತಂತಿ]

ಝಾಹೀರಶಹರಿಗೆ ವ್ಹಾಯಿಸರಾಯರ ಸಂದೇಶ.

ಹೊಸದಿಲ್ಲಿ ತಾ|| ೧೬— ಅಫಗಾಣಿಸ್ತಾನದ ಹೊಸ ಅಮೀರರಿಗೆ ವೈಸರಾಯರು ಕೆಳಗಿನಂತೆ ಸಂದೇಶ ಕಳಿಸಿದ್ದಾರೆ 'ನಿಮ್ಮ ತಂದೆಯವರಾದ ನಾದಿರಶಹರ ಕೊಲೆಯ ಸುದ್ದಿಯನ್ನು ಕೇಳಿ ನನಗೆ ಅತ್ಯಂತ ದುಃಖವಾಯಿತು ಈ ಹೀನ ಕೃತಿಯ ಬಗ್ಗೆ ನನ್ನ ವಿಷಾದವನ್ನು ವ್ಯಕ್ತಮಾಡುವೆನಲ್ಲದೆ ನಿಮಗೂ ನಾದಿರಶಹರ ಕುಟುಂಬಕ್ಕೂ ನನ್ನ ಹೃತ್ಪೂರ್ವಕ ಸಹಾನುಭೂತಿಯನ್ನು ವ್ಯಕ್ತ ಪಡಿಸುವೆ ನಿಮ್ಮ ಏಳಿಗೆ ಮತ್ತು ಹಿತವಾಗಲೆಂದು ನನ್ನ ಹಾರೈಕೆ'

[ಅ ಪ್ರೆ ತಂತಿ]

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ ದಂತಮಂಜನ.



ಕಾವೇರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮ ಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು. ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು:— ಧಾರವಾಡ ಫಾರ್ಮಸಿ ಹಾಗೂ ಬಾಳಿಗಾ ಫಾರ್ಮಸಿ
ಡಾ. ಕುಲಕರ್ಣಿಯವರ
೧೧-೧೧ ಲ್ಯಾಬೋರೇಟರಿ ಬೆಂಗಳೂರು

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೇ ಅಜಬ ಗುಣ. ಅರ್ಧ ಕಿಮ್ಮತ್ತು ಕಳಿಸಿದಲ್ಲಿ ವ್ಹಿ. ಪಿ. ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.
ಮ್ಯಾನೇಜರ:-ರಾಘವ ಫಾರ್ಮಸಿ ಗೋಕಾಕ ಜಿ. ಬೆಳಗಾವ

ಕೇವಲ ನಾಲ್ಕೇ ದಿವಸ! ಡಬಲ್ ಪ್ರೋಗ್ರಾಮು ಕೇವಲ ನಾಲ್ಕೇ ದಿವಸ!!

ವಿಜಯ ಸಿನೇಮಾ ಧಾರವಾಡ.

ತಾರೀಖು ೧೭ ಶುಕ್ರವಾರದಿಂದ ಫಕ್ತ ೪ ದಿವಸ
ಸರಸ್ವತಿ ಫಿಲ್ಮ ಕಂ. ಸುಪ್ರಸಿದ್ಧ ಮಾತಾಡುವ ಹಾಡುವ ಚಿತ್ರಪಟ.

ಶ್ಯಾಮಸುಂದರ

ಮತ್ತು ಗ್ರಾಮೊಫೋನ ರಿಕಾರ್ಡುಗಳಲ್ಲಿ ಪ್ರಸಿದ್ಧಿಯನ್ನು ಪಡೆದ ಬಾಯಿ ಸುಂದರಾಬಾಯಿ ಇವರ ಗಾಯನವನ್ನು ಸ್ಕ್ರೀನಿನ ಮೇಲೆ ಕೇಳಿರಿ
ವೇಳೆ:— ೭, ೧೦-೩೦ಕ್ಕೆ ರವಿವಾರ, ಮಂಗಳವಾರ ಹಗಲು ೪ ಕ್ಕೆ

Moderate fees! *Excellant Results!!*

THE NEW COACHING CLASSES

For High School & College Students

Fort Dharwar N R Sunkad B A D R Kengur B A.

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ದೂರಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು
ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ
೧೪-೧೦-೩೩ ಗದಗ ಶ್ರೀ ವಿದ್ಯಾಕ್ಷೇತ್ರೀಯ ಬುಕ್ ಡಿಪೋ
ಕಟಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ## ಅಸ್ಪೃಶ್ಯತಾ ನಿವಾರಣೆ. { ಪ್ರಚಾರಕರಿಗೆ ಸುಸಮಯ

(ಕೊಟ್ಟೂರು ವೀರ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ಮೊದಲಾದ ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸೂಚನೆಗಳೂ ಇವೆ. ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ. ಅಡ್ವಾನ್ಸಿಲ್ಲದೆ ವ್ಹಿ. ಪಿ. ಕಳುಹಿಸುವುದಿಲ್ಲ. ಕ್ರಯ ೦-೨-೦ ಎರಡಾಣೆ ಮಾತ್ರ. ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್
೩-೧೧-೩೩ ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಪಡಿಕೆಯ ಬಾಗಿಲು ತಯಾರಾಗುತ್ತವೆ

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ
ಸಂಪಾದಕರು:— ಮೊಹರೆ ಹ. ಹನುಮಂತರಾಯರು.

ಸಪ್ಟೆಂಬರ ೩ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡಹತ್ತಿದೆ. ವಿಚಾರ ಪರಿಪ್ಲುತವಾದ ಲೇಖಗಳೂ, ಒಂದೇ ತುಂಡಿನ ಸುದ್ದಿಗಳೂ, ಬಿಸಿ ಬಿಸಿ ಸುದ್ದಿಗಳೂ ಬೇಕಾಗಿದ್ದರೆ ಇದನ್ನೇ ಓದಿರಿ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೧೨—೦
ವ್ಯವಸ್ಥಾಪಕರು— 'ಕರ್ನಾಟಕ ವೈಭವ' ವಿಜಾಪುರ.

“ ಬದರೀ ನಾರಾಯಣನ ದರ್ಶನ ”

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶೆಗಳಿರುವವು. ಬೆಲೆ —೦-೬-೬ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ
ಹನುಮಂತಾಚಾರ್ಯ ಓಣಿ ಮಂಗಳವಾರ ಪೇಟೆ ಧಾರವಾಡ

ಡಾ. ಭೈಲೂರ

ಇವರ ಔಷಧಗಳು

ಬಾಲಗೃಹ ಚೂರ್ಣ ಡ. ಕಿ ೧—೬—೦ } { ಕ್ಷಯರೋಗ ಗುಳಿಗೆಗಳು ಡ. ಕಿ ೦—೮—೦

ಶಾಸ್ತ್ರಸಾರಯುರೆಪ್— ನೆಗಡಿ, ಕೆಮ್ಮು, ಜ್ವರ, ಪಿತ್ತ, ... (illegible remainder of paragraph) ... ಡಬ್ಬಿ ೦-೮-೦ ದೊಡ್ಡ ಡಬ್ಬಿ ೧-೧೨-೦

ಬೇರೆ ಔಷಧಗಳ ಬಗ್ಗೆ ಕ್ಯಾಟಲಾಗವನ್ನು ತರಿಸಿಕೊಳ್ಳಬಹುದು.

ಪತ್ತೆ:— ಡಾ॥ ಹರಿ ಮಹಾದೇವ ಭೈಲೂರ ದ ಬೆಳಗಾವ
ಬಾಗಲಕೋಟೆ ಏಜಂಟ— ಬಿ. ಬಿ ಕೆರೂರ ಅ್ಯಂಡ ಸನ್ಸ, ಮೆಡಿಕಲ್ ಸ್ಟೋರ್ಸ

ಈ ಪತ್ರಿಕೆಯನ್ನು ಲಿಂಗಪ್ಪ ಬಳವಂತ ಮುತಾಲಿಕ ದೇಸಾಯಿ ಇವರು, ಲಕ್ಷ್ಮೀಶ ಮುದ್ರಣಾಲಯದಲ್ಲಿ ಮುದ್ರಿಸಿ ಲಕ್ಷ್ಮೀಶ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು

ರಿ. ನಂ. ಬಿ. ೨೭೮೮

ನಿತ್ಯ ಪತ್ರ ಬೆಲೆ ೩ ಪೈ

ಇನಸ್ಯುಅರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ
ಕರ್ನಾಟಕ ಇನಸ್ಯುಅರನ್ಸ
ಕಂಪನಿಯೇ
ಉತ್ತಮವಾದುದು

ಕನ್ನಡಿಗ

ಇನಸ್ಯುಅರನ್ಸ
ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ
ದಿ ಯುನಾಯಿಟೆಡ
ಕರ್ನಾಟಕ ಇ. ಕಂ ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ

ಸಂಪಾದಕರು:- ಆಲೂರ ವೆಂಕಟರಾಯರು

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ವರ್ಷ ೧೦] ಧಾರವಾಡ— ರವಿವಾರ ಮಾರ್ಗಶಿರ ಶುದ್ಧ ೩ ಶಕೆ ೧೮೫೫ ತಾ॥ ೧೯-೧೧-೩೩ [ಸಂಚಿಕೆ ೧೭೬

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ
ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ
ಧಾರವಾಡ
ತಾ॥ ೨೫-೮ ೩೩
ಕೃಷ್ಣರಾವ ಅಂಕಲಿಗಿ
ಮ್ಯಾನೇಜಿಂಗ ಡಾಯರೆಕ್ಟರ

ಭವಾನಿ ಅಯರ್ನ ವರ್ಕ್ಸ, ಧಾರವಾಡ
ಕಬ್ಬಿಣದ ಕಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಮಡಿಕೆಯ ಬಾಗಿಲು ತಯಾರಾಗುತ್ತವೆ

ಉದ್ಯೋಗವು ಬೇಕೆ?
ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್
ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!
ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ
(೧) ಬಿಳೀ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುನಿಚ್ ದಾಮುಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋವಿ ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರೆ (೫) ಮೋಟಾರ ಮತ್ತು ಬಸ್ಸುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ
ನಮ್ಮ ಹದ್ದು —
(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು
ವಿಶೇಷ ಸೂ ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು
ಹುಂಡೇಕರ ಯಳಲಾಸಪೂರ
ಆ್ಯಂಡ ಕೋ ದೇವಕರಣ ಮ್ಯಾನ್ಶನ್
ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!
ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ

ನ್ಯೂ ಓರಿಯಂಟಲ್ ಕಂ.
" ನೀಲಗಿರಿ ಎಣ್ಣೆ "
ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇರುತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಹೊಟ್ಟೆನೋವು, ಕೆಮ್ಮು, ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು
ಏಜಂಟ:— ಹಿ. ಕೆ ಕೊಣಜಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಹಲಸಿಗಿಯ ಪತ್ರ.

[ಸ್ವಂತ ಸುದ್ದಿಗಾರರಿಂದ]

ತಾ। ೧೫-೧೧-೩೩ ಹವೆಯು ಚನ್ನಾಗಿದೆ ಪ್ಲೇಗ ಮೊದಲಾದವುಗಳೇನೂ ಇಲ್ಲ ಬೆಳೆ ಕೊಯ್ಯುವದು ನಡೆದಿದೆ ನಡುವೆ ಮಳೆ ಹತ್ತಿದ್ದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರುವದೊ ಇಲ್ಲವೋ ಎಂದೆನಿಸಹತ್ತಿದ್ದರಿಂದ ರೈತರಲ್ಲಿ ವಿಷಾದವು ತಲೆದೋರುತ್ತಿದೆ

ಗ್ರಾಮಪಂಚಾಯತಿಯ ಆಯ್ಕೆ

೧೪-೧೧-೩೩ನೇ ದಿನ ಈ ಊರ ಗ್ರಾಮಪಂಚಾಯತಿಯ ಆಯ್ಕೆಯು ಆಗುವದಿದ್ದದರಿಂದ ಊರಲ್ಲಿಯ ಜನತೆಯಲ್ಲಿ ವಿಶೇಷ ಗಡಿಬಿಡಿಯುಂಟಾಗಿತ್ತು. ಹಾಗು ಬೇರೆ ಬೇರೆ ಜನರು ಬೇರೆ ಬೇರೆ ವಿಚಾರದಿಂದ ಗುಂಪುಗಟ್ಟಿಗೊಂಡು ತಮ್ಮ ತಮ್ಮಲ್ಲಿ ವಿಚಾರವಿನಿಮಯ ಮಾಡುತ್ತಿದ್ದದರಿಂದ ಊರಲ್ಲಿ ಈ ಚುನಾವಣೆಯ ಕಾಲಕ್ಕೆ ತಂಟೆಯೊಂದು ಜಾತ್ರೆಯುಂಟಾಗೊಂದಲವೇಳಬಹುದೆಂದು ಅನಿಸಿತ್ತು. ಆದರೆ ಊರಲ್ಲಿಯ ಪ್ರಮುಖರ ಪ್ರಯತ್ನದಿಂದ ಹಾಗು ಮರಾಠಾ ಕಮಾಜದ ಮ ಖಂಡರು ಕಲಂಬಾಳ ತಾ ಖಾನಾಪುರ) ಆಶ್ರಮದ ಚಾಲಕರಾದ ಶ್ರೀಮಾನ್ ಗೋವಿಂದ ಬುವಾಜಿಯವರ ಪರಿಶ್ರಮದಿಂದ ಕದನವೇ ನಡೆಯದೇ ಆಯ್ಕೆಯು ಹೊಸ ಮಾದರಿಯಿಂದ ನಡೆಯಿತು. ಆಯ್ಕೆಯು ಮಾಮಲೇದಾರರ ಎದುರಿನಲ್ಲಿ ಮಧ್ಯಾಹ್ನ ೨ ಗಂಟೆಗೆ ನಡೆಯುವದಿತ್ತು. ಆದರೆ ಅದಕ್ಕೆ ಮೊದಲೇ ಮುಂಜಾನೆ ೮ ಗಂಟೆಗೇನೇ ಅಲ್ಲಿಯ ಮುಖಂಡರಾದ ಶ್ರೀ ಸಂಣಪ್ಪನಾಯಿಕರ ಮನೆಯಲ್ಲಿ ಊರ ಜನರೆಲ್ಲ ಸಭೆ ನೆರೆಯಿಸಿ ತಮ್ಮ ಪರವಾಗಿ ಶ್ರೀ ಸಂಣಪ್ಪ ನಾಯಿಕರು ಹಾಗು ಶ್ರೀ ಚನ್ನಪ್ಪಣ್ಣಾ ಪಂಚಯವರು ಇವರೇ ಸರ್ವಾಧಿಕಾರಿಗಳಾಗಿದ್ದು ಈ ಪಂಚಾಯತಿಗೆ ಬೇಕಾದ ೬ ಜನರನ್ನು ಅವರೇ ಆರಿಸಿಕೊಳ್ಳಬೇಕು ಅವರು ಹೇಳಿದ್ದೆಲ್ಲ ತಮಗೆ ಸಮ್ಮತವೆಂದು ಹೇಳಿದರು ಆ ಮೇಲೆ ಇವರಿಬ್ಬರೂ ಕೂಡಿ ಸ್ವಲ್ಪ ಹೊತ್ತು ವಿಚಾರ ವಿನಿಮಯ ಮಾಡಿ ೧ ಶ್ರೀ ಚನ್ನಪ್ಪ ಪಂಚ ೨ ಸಂಣಪ್ಪ ನಾಯಿಕ ೩ ಅಪ್ಪಣ್ಣಾ ಕಲ್ಲಪ್ಪಗೋಳ ೪ ಪ್ರಲ್ಹಾದರಾವ ಕುಲಕರ್ಣಿ ೫ ಶಿದ್ರಾಮಪ್ಪ ಹಂಚಿ ೬ ನರೂದ್ದೀನ ಸಾಹೇಬ ತಾಂಬಡೆ ಹೀಗೆ ೬ ಜನರ ಹೆಸರನ್ನು ಹೇಳಿದ್ದು ಸರ್ವರಿಗೂ ಸಮ್ಮತವಾಯಿತು ಊರ ಜನರೆಲ್ಲ ಆನಂದಭರಿತರಾದರು ಆ ಮೇಲೆ ಗೋವಿಂದ ಬುವಾ ಅವರು ಊರ ಜನರನ್ನು ಬಹು ರೀತಿಯಲ್ಲಿ ಪ್ರಶಂಸೆ ಮಾಡಿದರು ಮುಂದೆ ೨ ಗಂಟೆಗೆ ಮಾಮಲೇದಾರರು ಬಂದ ಕೂಡಲೇ ಇವೇ ಆರು ಹೆಸರನ್ನು ಮುಂದಿಟ್ಟರು ಚುನಾವಣೆಯಲ್ಲಿ ಹುಟ್ಟಿ ಬೆಳೆದು ಬಲು ದಿನ ಬಾಳುವ ದ್ವೇಷ ಈರ್ಷ್ಯ, ಅಸೂಯೆಗಳೇನೂ ಇಲ್ಲ ಹುಟ್ಟಲಿಲ್ಲವಿಷ್ಟೇ, ಆದರೆ ಈಗ ಹಲಸಗಿಯಲ್ಲಿ ಪ್ರಚಂಡ ಐಕ್ಯತೆಯು ನೆಲೆಗೊಂಡಿದೆ ಈ ಮಾದರಿಯನ್ನು ಬೇರೆಯವರೂ ಅನುಸರಿಸಬೇಕಲ್ಲವೆ?

ದಿವಂಗತ ರಾವಬಹಾದ್ದೂರ ಗುಡಿ ಭೀಮಾಚಾರ್ಯರು.

ಧಾರವಾಡದ ಸುಪ್ರಸಿದ್ಧ ಪುರಾಣಪ್ರಿಯ ಗುಡಿ ಮನೆತನದವರಾದ ರಾವಬಹಾದ್ದೂರ ಭೀಮಾಚಾರ್ಯರು ಮೊನ್ನೆ ತಾರೀಖು ೧೫-೧೧ ೧೯೩೩ ನೇ ದಿವಸ ವಿಜಾಪುರದಲ್ಲಿ ಅರ್ಧಾಂಗವಾಯು ವಿಕಾರದಿಂದ ಸ್ವರ್ಗಸ್ಥರಾದರೆಂಬ ವರ್ತಮಾನವನ್ನು ತಿಳಿಸಲು ನಮಗೆ ಅತ್ಯಂತ ವಿಷಾದವಾಗುತ್ತದೆ ರಾವಬಹಾದ್ದೂರರವರು ಧಾರವಾಡದಲ್ಲಿಯೇ ಹುಟ್ಟಿ ಬೆಳೆದು ಇಲ್ಲಿಯೇ ಕನ್ನಡ ಹಾಗು ಇಂಗ್ಲೀಷ ಶಾಲೆಗಳಲ್ಲಿ ಅಭ್ಯಾಸಮಾಡಿದವರು ೧೮೯೦ ರ ಸುಮಾರಕ್ಕೆ ಇಲ್ಲಿಯ ಹಾಯಸ್ಕೂಲಿನಲ್ಲಿ ಚಿತ್ರಕಲೆಯ ವರ್ಗವು ಪ್ರಾರಂಭವಾದ ಕೂಡಲೆ ಅದನ್ನು ಮೊಟ್ಟ ಮೊದಲು ಸೇರಿ ಅದರಲ್ಲಿಯೇ ಪ್ರಗತಿಯನ್ನು ಹೊಂದಿ ಮುಂದೆ ಮುಂಬಯಿಯಲ್ಲಿ ಅದೇ ಕಲೆಯನ್ನು ಆಗಿನ ಶಿಕ್ಷಣ ಪದ್ಧತಿಯ ಮೇರೆಗೆ ಕೊನೆ ಮುಟ್ಟಿಸಿ ಪ್ರಾವೀಣ್ಯವನ್ನು ಸಂಪಾದಿಸಿದವರು. ಇಲ್ಲಿಯ ಟ್ರೇನಿಂಗ ಕಾಲೇಜದಲ್ಲಿ ಡ್ರಾಯಿಂಗ ಮಾಸ್ತರರಾಗಿದ್ದವರು, ಆದರೆ ಇವರ ಅಂತರಂಗದ ಸಾಹಸಿಗೆ ಪ್ರವೃತ್ತಿಗೆ ಶಾಲೆಯಲ್ಲಿಯ ಶಿಕ್ಷಕ ವೃತ್ತಿಯು ಸರಿ ಹೋಗದೆ ಪೋಲೀಸ ಖಾತೆಯಲ್ಲಿ ಮೊಟ್ಟಮೊದಲು ಜಮಾದಾರರಾಗಿ ಪ್ರವೇಶ ಮಾಡಿದರು. ಅಲ್ಲಿ ಇವರ ಧೈರ್ಯವೂ ಸಾಹಸವೂ ಚನ್ನಾಗಿ ಬೈಲಿಗೆ ಬಂದು ಇವರು ಅಧಿಕಾರಿಗಳ ಅನುಗ್ರಹಕ್ಕೆ ಪಾತ್ರರಾಗಿ ಬೇಗನೇ ಏಂದರು ಕೆಲವು ದಿವಸ ಕ್ರಿಮಿನಲ್ ಇನ್‌ವ್ಹೆಸ್ಟಿಗೇಶನ್ ಖಾತೆಯಲ್ಲಿ ಕೆಲಸ ಮಾಡಿದನಂತರ ಜಿಲ್ಹೆಯ ಡೆಪ್ಯೂಟೀ ಸುಪರಿಂಟೆಂಡೆಂಟರಾಗಿ ಬೆಳಗಾಂವಿ ವಿಜಾಪುರಗಳಲ್ಲಿ ಎಷ್ಟೋ ದಿವಸ ಕೆಲಸಮಾಡಿದರು. ಸೊಲ್ಲಾಪುರದಲ್ಲಿ ಪೋಲೀಸ ಸುಪರಿಂಟೆಂಡೆಂಟರಾಗಿಯೂ ಕೆಲವು ದಿವಸ ಕೆಲಸ ಮಾಡುವ ಭಾಗ್ಯವು ಇವರಿಗೆ ದೊರೆಯಿತು ಹಿಂದೀ ಜನರಲ್ಲಿ ಅದರಲ್ಲಿಯೂ ಕನ್ನಡಿಗರಲ್ಲಿ ಇಂಥ ಘನವಾದ ಸರಕಾರದ ಅಧಿಕಾರವನ್ನು ಹೊಂದುವವರೇ ವಿರಳ ಪ್ರಾಮಾಣಿಕತನದಿಂದ ಸರಕಾರದ ಸೇವೆಯನ್ನು ಅವ್ಯಾಹತವಾಗಿ ಮಾಡಿದ ಮೂಲಕ ಇವರಿಗೆ ರಾವಬಹಾದ್ದೂರ ಪದವಿಯು ದೊರೆಯಿತು ಕೆಲಸದಿಂದ ನಿವೃತ್ತರಾದನಂತರ ಇವರು ವಿಜಾಪುರವನ್ನೇ ತಮ್ಮ ವಾಸಸ್ಥಾನವಾಗಿ ಮಾಡಿಕೊಂಡಿದ್ದರು ಅಲ್ಲಿಯೇ ತಮ್ಮ ಕಲಾಭಿನಿವೇಶಕ್ಕೂ ಕಲೋಪಾಸನೆಗೂ ಅನುಕೂಲವಾದ ಸುಂದರವಾದ ಮನೆಯನ್ನು ಕಟ್ಟಿಕೊಂಡು ತಮ್ಮ ವಿರಾಮಕಾಲವನ್ನು ಸುಖಸಮಾಧಾನದಿಂದ ಕಳೆಯುತ್ತಿದ್ದರು ಇವರ ಹಿರಿಯ ಮಕ್ಕಳು ಪೋಲೀಸ ಖಾತೆಯಲ್ಲಿ ಸಬ್ ಇನ್ಸ್‌ಪೆಕ್ಟರರಾಗಿದ್ದಾರೆ ಇನ್ನೊಬ್ಬರು ವಿಜಾಪುರದಲ್ಲಿಯೇ ಆಸ್ತಿಪಾಸ್ತಿಗಳನ್ನು ನೋಡಿಕೊಂಡು ಮನೆತನಸ್ಥರಾಗಿದ್ದಾರೆ ಭಗವಂತನು ರಾವಬಹದ್ದೂರರವರ ಸ್ವರ್ಗಸ್ಥ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ

ಕನ್ನಡಿಗ

ರವಿವಾರ ತಾರೀಖು ೧೯ ೧೧-೧೯೩೩

ಒಂದಾಗದ ಕರ್ನಾಟಕಕ್ಕೆ ಸ್ವರಾಜ್ಯವು ಶೂನ್ಯಪ್ರಾಯ!

ಕರ್ನಾಟಕ ಏಕೀಕರಣದ ವಿಷಯದಲ್ಲಿ ಕನ್ನಡ ಜನಾಂಗದ ಸತ್ವಪರೀಕ್ಷೆಯ ಕಾಲವೇ ಈಗ ಬಂದಿರುವದೆಂಬ ಮಾತನ್ನು ನಿನ್ನಿನ ಅಗ್ರಲೇಖದಲ್ಲಿ ನಾವು ವಿವರಿಸಿರುತ್ತೇವೆ ಹಾಗೆಯೇ ಸಾಂಸ್ಕೃತಿಕ ವಿಚಾರದಿಂದ ಕನ್ನಡ ನಾಡಿನಲ್ಲೆಲ್ಲ ಒಂದೇ ಜನಾಂಗದ ಜೀವಾಳವು ಹರಿದಾಡುವಂತೆ ಈಗ ಬಹು ದಿವಸಗಳಿಂದ ಪ್ರಯತ್ನ ಪಡುತ್ತಿರುವ ಸಂಘಗಳೂ ಸಂಸ್ಥೆಗಳೂ ಮತ್ತು ಕರ್ನಾಟಕ ಏಕೀಕರಣ ಸಂಘದ ಕಾರ್ಯನಿರ್ವಾಹಕ ಮಂಡಲಿಯವರೂ ಸದ್ಯಕ್ಕೆ ಮಾಡಬೇಕಾದ ಕಾರ್ಯದ ದಿಗ್ದರ್ಶನವನ್ನು ನಿನ್ನೆಯೇ ಮಾಡಿರುತ್ತೇವೆ ಕರ್ನಾಟಕದ ಏಕೀಕರಣದ ವಿಷಯವಾಗಿ ಮನದಲ್ಲಿ ಕುತೂಹಲವಿದ್ದಂತೆ ಬಾಯಿಯಿಂದ ಒಣ ಚರಿಕೆಯ ಮಾತುಗಳನ್ನಾಡುತ್ತ ಕರ್ನಾಟಕದ ಜನತೆಯ ಹಿತಚಿಂತಕರೂ ಹಿತಕರ್ತರೂ ಹಿತಸಂವರ್ಧಕರೂ ಎಂದು ನಾಶ ಮುಖಂಡತನದ ಗುತ್ತಿಗೆಯನ್ನು ಹೊತ್ತು ಅಲೆದಾಡುತ್ತಿರುವ ನಮ್ಮ ವಿಶಿಷ್ಟ ಬಾಂಧವರಿಗಾಗಿ ಇಂದು ನಾಲ್ಕು ಮಾತುಗಳನ್ನು ಹೇಳಬಯಸುತ್ತೇವೆ

ಕನ್ನಡ ನಾಡು ಒಂದಾಗಲೇಬೇಕೆಂಬ ಬಯಸತಕ್ಕವರೊಳಗ ತಮ್ಮದೊಂದು ವಿಶಿಷ್ಟ ಗುರಿಯನ್ನಷ್ಟೇ ಮುಂದಿಟ್ಟುಕೊಂಡ ಮಹನೀಯರೆಷ್ಟೋ ಜನ ಇರುವದು ಕಂಡುಬರುತ್ತದೆ. ಕೆಲವರಿಗೆ ಆರ್ಥಿಕ ದುರ್ದಸೆ, ಕೆಲವರಿಗೆ ವ್ಯಾಪಾರದ ಹಿಂದಡಿ, ಕೆಲವರಿಗೆ ಅಧಿಕಾರಗಳ ಅಭಿಲಾಷೆ, ಕೆಲವರಿಗೆ ಮತ್ತೊಂದರ ಬ.. ಕೆ. ಇನ್ನೂ ಕೆಲವರಿಗೆ ಇನ್ನೂ ಅನೇಕಾನೇಕ ವಿಷಯಗಳು. ಹೀಗೆ ಬಿನ್ನ ಪ್ರಕೃತಿಮಾನವನರಿಗೆ ಈ ಏಕೀಕರಣದ ವಿಷಯವು ಭಿನ್ನ ಭಿನ್ನ ತೆರನಾಗಿ ಗೋಚರಿಸುವದು ಸ್ವಾಭಾವಿಕವಾಗಿಯೇ ಇದೆ ಕಣ್ಣಿಗೆ ವಿಭಿನ್ನವಾಗಿ ತೋರುವ ಪ್ರಕೃತಿಯು, ಮೂಲತಃ ಏಕರೂಪವಾಗಿರುವಂತೆಯೇ ಬೇರೆ ಬೇರೆಯಾಗಿ ವಿಕಾಸಹೊಂದಿ ತೋರಹೊಮ್ಮುವ ಏಕೀಕರಣಕಾರಣಸಮುಚ್ಚಯವು ಕರ್ನಾಟಕ ಸಂಸ್ಕೃತಿಯ ಸಂಗೋಪನ ಸಂವರ್ಧನವೆಂಬ ಒಂದೇ ಭಾವನೆಯಲ್ಲಿ ಕೊನೆಗೆ ಲೀನವಾಗುತ್ತದೆಂಬ ಮಾತನ್ನು ನಾವು ಮರೆಯುವಂತಿಲ್ಲ. ಕಾಂಗ್ರೆಸ್ಸಿನವರು ಮೊದಲು ಮೊದಲು ಹಿಂದುಸ್ಥಾನದ ಕಷ್ಟನಿವಾರಣೆಗಾಗಿ ಅಧಿಕಾರಿಗಳ ಮುಂದೆ ಒಡ್ಡುತ್ತಿದ್ದ ಬೇರೆ ಬೇರೆ ಬೇಡಿಕೆಗಳೆಲ್ಲ ಕೊನೆಗೆ ಸ್ವರಾಜ್ಯ ಸಾಧನೆಯಲ್ಲಿ ಪರಿಣಮಿಸಿದಂತೆಯೇ ಕರ್ನಾಟಕದ ಏಕೀಕರಣ ವಿಚಾರವನ್ನು ಸದ್ಯಕ್ಕೆ ಬೇರೆ ಬೇರೆ ನೋಟಗಳಿಂದ ನೋಡತಕ್ಕವರ ದೃಷ್ಟಿಗಳೆಲ್ಲ ಕೊನೆಗೆ ಏಕಮೇವಾದ್ವಿತಿಯವಾದ ಕರ್ನಾಟಕ ಸಂಸ್ಕೃತಿಯಲ್ಲಿಯೇ ಕೇಂದ್ರೀಭೂತವಾಗುವದೆಂಬದಕ್ಕೆ ಸಂದೇಹವೇ ಇಲ್ಲ

ಕಾಂಗ್ರೆಸ್ಸಿನ ವಿಶಿಷ್ಟವಾದ ಧೋರಣೆಯ ಮೇರೆಗೆ ಹಿಂದುಸ್ಥಾನಕ್ಕೆ ಸ್ವರಾಜ್ಯವು ಎಂದು ದೊರೆಯಬಹುದೆಂಬುದನ್ನು ದೇಶದ ಸದ್ಯಸ್ಥಿತಿಯಲ್ಲಿ ಈಗ ಅನುಮಾನ ಮಾಡಿ ಹೇಳುವದು ಅಸಾಧ್ಯವಾಗಿದೆ ಹಾಗೆ ಸ್ವರಾಜ್ಯವು ದೊರೆತುದೇ ಆದರೆ ಅಖಂಡ ಕರ್ನಾಟಕವು ಆ ಸ್ವರಾಜ್ಯ ಭೋಗಿಯಾದ ಭರತಖಂಡದಲ್ಲಿ ಒಂದು ಪ್ರಬಲವೂ ಪ್ರಚಂಡವೂ ಆದ ಪ್ರಾಂತೀಯ ಘಟಕವಾಗುವದೆಂಬದಕ್ಕೆ ಎಷ್ಟೂ ಸಂದೇಹವಿಲ್ಲ ಈ ವಿಷಯದಲ್ಲಿ ಕಾಂಗ್ರೆಸ್ಸಿನ ಅನುಯಾಯಿಗಳಲ್ಲಿಯೂ ಅನುಯಾಯಿಗಳಲ್ಲದವರಲ್ಲಿಯೂ ಅಸ್ಖಾದ್ಯಶವಾದ ದೃಢವಿಶ್ವಾಸಗಳು ನೆಲೆಗೊಂಡಿರುವವೆಂಬುದು ಸಿದ್ಧಾಂತವಾಗಿದೆ ಇನ್ನು ಕಾಂಗ್ರೆಸ್ಸಿನ ಧೋರಣದ ಸ್ವರಾಜ್ಯವು ದೊರೆಯುವವರೆಗೆ ಅಂದರೆ ಈಗಿನ ಬ್ರಿಟಿಶ್ ಮಂತ್ರಿಮಂಡಲದವರೂ ಅವರ ಕೈ ಗೊಂಬೆಯಂತಿದ್ದರೂ ಸೂತ್ರಚಾಲಕರಂತಿರುವ ಹಿಂದುಸ್ಥಾನ ಸರಕಾರದವರೂ ಹಿಂದುಸ್ಥಾನಕ್ಕೆ ಇಷ್ಟರಲ್ಲಿಯೇ ಕೊಡುವೆವೆಂದು ಸಾರುತ್ತಿರುವ ಸ್ವರಾಜ್ಯದ ಹಕ್ಕು ಬಾಧ್ಯತೆಗಳ ಯೋಜನೆಯಲ್ಲಿ ಕರ್ನಾಟಕದ ಗತಿಯು ಎಲ್ಲಿಗೆ ಮುಟ್ಟುವದೆಂಬುದನ್ನು ನಾವೆಲ್ಲರೂ ಶಾಂತಮನಸ್ಸಿನಿಂದ ತೂಗಿ ನೋಡಬೇಕಾಗಿದೆ

ಈಗಿನ ಬಿಳೆ ಕಾಗದದ ವಿಧಾನವನ್ನು ನೋಡಿದರೆ ಮುಂಬಯಿ, ಮದ್ರಾಸ ಇಲಾಖೆಗಳೂ ಕೊಡಗು ಪ್ರಾಂತವೂ ಇದ್ದಂತೆಯೇ ಉಳಿಯುವವೆಂದು ಭಾವಿಸದೆ ಗತ್ಯಂತರವಿಲ್ಲ ಮುಸಲ್ಮಾನರ ವರ್ಚಸ್ವದ ಬೆಂಬಲದಾಸೆಯಿಂದ ಸಿಂಧಪ್ರಾಂತವನ್ನೂ ಶ್ರೀಮಂತ ಜಮೀನುದಾರ ವರ್ಗದ ಆಶಯ ಕಳಕೊಳ್ಳಲಾರದೆ ಉತ್ಕಲ ಪ್ರಾಂತವನ್ನೂ ಕಣಜಗಟಲೆ ಹಣ ವೆಚ್ಚ ಮಾಡಿ ವಿಂಗಡಿಸಲು ಮನಸು ಮಾಡಿದ ಬ್ರಿಟಿಶ ಸರಕಾರವು ನಿರಾಶ್ರಿತವಾದ ನಿಃಸಹಾಯವಾದ ನಿರ್ಜೀವಪ್ರಾಯವಾದ ಕರ್ನಾಟಕದ ನೀರುದನಿಯ ಬೇಡಿಕೆಯ ಕಡೆಗೆ ಕಡೆಗಣ್ಣಿನಿಂದಲೂ ನೋಡದೆಂಬುದು ನಿರ್ವಿವಾದವಾಗಿದೆ ಆದುದರಿಂದ ಇಂದು ಕರ್ನಾಟಕವು ಮುಂಬಯಿ ಮದ್ರಾಸ ಪ್ರಾಂತಗಳಲ್ಲಿ ಮೂಲೆಗುಂಪಾಗಿರುವಂತೆ ಮುಂದಾದರೂ ಉಳಿಯುವದೆಂಬುದು ಕಟ್ಟಿಟ್ಟ ಮಾತು ಮುಂಬಯಿ ಮದ್ರಾಸ ಕೌನ್ಸಿಲುಗಳಲ್ಲಿಯೂ ಮಧ್ಯವರ್ತಿ ಅಸೆಂಬ್ಲೀ ಕೌನ್ಸಿಲುಗಳಲ್ಲಿಯೂ ಕರ್ನಾಟಕದ ಪ್ರತಿನಿಧಿಗಳು ಅತ್ಯಲ್ಪ ಸಂಖ್ಯಾಕರೇ ಉಳಿದು ಇವರು ತಮ್ಮ ನಾಡಿನ ಉನ್ನತಿಗಾಗಿ ಮಾಡುವ ಆಕ್ರೋಶಗಳೆಲ್ಲ ಸಮುದ್ರದ ಗಂಭೀರ ಘೋಷಣೆಯಲ್ಲಿ ಟಿಂವ್ವಕ್ಕಿಯ ನಾದದಂತೆ ಎಲ್ಲಿಯಾದರೂ ಅಡಗಿ ಹೋದರೆ ಆಶ್ಚರ್ಯವೇನು?

ಆದುದರಿಂದ ಮುಂದೆ ಬರಲಿರುವ ಸ್ವರಾಜ್ಯದ ಹಕ್ಕು ಬಾಧ್ಯತೆಗಳಿಂದ ಕನ್ನಡ ನಾಡಿಗೇನಾದರೂ ಸೌಲಭ್ಯಗಳು ದೊರೆಯಬೇಕೆಂಬ ಬಲವಾದ ಆಶೆಯನ್ನು ಅವುಚಿಕೊಂಡು ಹೊಸ ಕೌನ್ಸಿಲುಗಳ ಪ್ರವೇಶದ ಹಾದಿಯನ್ನು ಈಗಿನಿಂದಲೇ ಹಿಡಿಯಬೇಕೆಂಬ ಆತುರತೆಯಿಂದ ಅಲ್ಲಲ್ಲಿ ಸಿದ್ಧತೆ ನಡಿಸಿರುವ ನಮ್ಮ ನಾಡ ಮುಖಂಡರು ಕನ್ನಡ ನಾಡಿನ ಈ ಆಪತ್ತನ್ನು ಚನ್ನಾಗಿ ಪರಿಶೀಲಿಸಿ ನೋಡಬೇಕು ಬ್ರಿಟಿಶ್ ಕರ್ನಾಟಕದ ಏಕೀಕರಣವಾಗಿ ಅದೊಂದು ಸ್ವತಂತ್ರ ಪ್ರಾಂತವಾಗದೆ ಬ್ರಿಟಿಶ್ ಸರಕಾರದವರು ಈಗ ಕೊಡಲಿರುವ ಮಹಾಧಿಕಾರದ ರಾಜ್ಯಾಡಳಿತೆಯ ಪರಿವಿಡಿಯಲ್ಲಿ ಕರ್ನಾಟಕಕ್ಕೆ ಎಷ್ಟು ಲಭ್ಯಾಂಶ ದೊರೆಯಲಾರದೆಂಬ ಬಗ್ಗೆ ಪದರಿಗೆ ಗಂಟು ಹಾಕಿಕೊಂಡು ಅಸ್ಥಾನದಲ್ಲಿ ವೆಚ್ಚ ಮಾಡಲಿಚ್ಛಿಸುತ್ತಿರುವ ತಮ್ಮ ಬುದ್ಧಿ ಶಕ್ತಿ ಧನಸರ್ವಸ್ವವನ್ನೆಲ್ಲ ಏಕೀಕರಣ ಕಾರ್ಯಕ್ಕೆ ವಿನಿಯೋಗಿಸಬೇಕೆಂದು ಕಟ್ಟಬೇಕು ಕರ್ನಾಟಕದ ಜನತೆಯ ವಿಧವಿಧದ ತಾತ್ಪರ್ಯಗಳಿಗೆ, ಕನ್ನಡ ನಾಡಿನ ಜನಜೀವನದ ಎಲ್ಲ ವಿಧದ ಹ್ರಾಸಕ್ಕೆ, ಆದರ ವಿಭಜನೆಯೇ ಕಾರಣವೆಂಬ ಮಾತನ್ನು ಕನ್ನಡ ಜನಾಂಗದಲ್ಲೆಲ್ಲ ಆಡಿಗೆ ಮನದಟ್ಟಾಗುವಂತೆ ಬೇರೂರಿಸಿ ಏಕೀಕರಣವಾಗದೆ ಗತ್ಯಂತರವಿಲ್ಲೆಂಬ ಪ್ರಬಲ ಲೋಕಮತವನ್ನು ಎಚ್ಚರಗೊಳಿಸಬೇಕು ಈಗ ಮೂವತ್ತು ವರ್ಷಗಳ ಹಿಂದೆ ಒಂಗಾಲವನ್ನು ಇಬ್ಭಾಗ ಮಾಡಿದಾಗ ನಮ್ಮ ಬಂಗಾಲಿ ಬಾಂಧವರು ತಮ್ಮ ಏಕೀಕರಣಕ್ಕಾಗಿ ಎಬ್ಬಿಸಿದ ಪ್ರಚಂಡ ಕೋಲಾಹಲದ ಇತಿಹಾಸವನ್ನು ನಮ್ಮ ನಾಡ ಮುಖಂಡರು ಪರ್ಯಾಲೋಚಿಸಬೇಕು ತಮ್ಮ ಇಷ್ಟ ಸಾಧನೆಗಾಗಿ ಅವರು ಪಟ್ಟ ಕಷ್ಟ ತಾಪಗಳನ್ನು ನಿಟ್ಟಿಸಬೇಕು ಏಳೆ ವರ್ಷಗಳ ಪರಿಶ್ರಮದಿಂದ ಬಂಗಾಲಿಗಳು ತಮ್ಮ ಮಟ್ಟಿಲನ್ನು ಮುಟ್ಟಿದ ದೃಷ್ಟಾಂತವನ್ನು ಕಣ್ಣು ಮುಂದೆ ಕಟ್ಟಿಕೊಳ್ಳಬೇಕು ಈ ತರದ ಪ್ರಯತ್ನವನ್ನು ಅಖಂಡವಾಗಿ ಕೈಮಾಡಿದಾಗ ಮಾತ್ರ ಕರ್ನಾಟಕವು ಒಂದಾಗಬಹುದು ಮತ್ತು ಆಗ ಮಾತ್ರ ಅದಕ್ಕೆ ಅಲ್ಪ ಸ್ವಲ್ಪ ಸ್ವರಾಜ್ಯದ ಆಡಳಿತೆಯ ಲಾಭವೂ ದೊರೆಯಬಹುದು! ಇಲ್ಲವಾದರೆ ಶೂನ್ಯದ ಪರ್ಯವಸಾನವು ಶೂನ್ಯವೇ ಅಲ್ಲವೆ?

ಶಿವಮೊಗ್ಗೆಯ ಬಾಲಕಾಶ್ರಮ.

ಶಿವಮೊಗ್ಗೆಯ ನೆರೆಹೊರೆಯಲ್ಲಿಯ ಅನೇಕ ಕುಟುಂಬಗಳು ನಿರಾಶ್ರಿತವಾಗಿ ಆ ಕುಟುಂಬಗಳೊಳಗಿನ ಬಾಲಬಾಲಿಕೆಯರ ರಕ್ಷಣ ಶಿಕ್ಷಣಗಳು ಯೋಗ್ಯರೀತಿಯಿಂದ ಸಾಗಬೇಕೆಂದು ಶಿವಮೊಗ್ಗೆಯ ಕೆಲ ಪ್ರಮುಖ ನಾಗರಿಕರು ಕಳೆದ ಮಾರ್ಚ ತಿಂಗಳಲ್ಲಿ ಒಂದು ಬಾಲಕಾಶ್ರಮವನ್ನು ಏರ್ಪಡಿಸಿದರು ಆಶ್ರಮದ ವ್ಯವಸ್ಥೆಗಾಗಿ ಒಂದು ಮಂಡಲವು ಸ್ಥಾಪಿಸಲ್ಪಟ್ಟಿತು ರನ್ನಗಿರಿ ಸೋಮಶೆಟ್ಟರೂ [ಅಧ್ಯಕ್ಷರು] ಶ್ರೀ ತೊಳೂರ ಸುಬ್ಬರಾಯರೂ ಬಿ ಎ ಎಲ್ ಎಲ್ ಬಿ [ಉಪಾಧ್ಯಕ್ಷರು] ಶ್ರೀ ಡಿ ಆರ್ ಮಾನಪ್ಪ [ಕೋಶಾಧ್ಯಕ್ಷ] ಎಸ್ ವ್ಹಿ ಕೃಷ್ಣಮೂರ್ತಿ ಎಲ್ ಎಲ್ ಬಿ [ಕಾರ್ಯದರ್ಶಿ] ಆರ್ ಕೆ ಒಯತೀರ್ಥಾಚಾರ ಎಲ್ ಎಲ್ ಬಿ ಶ್ರೀ ಭೂಪಾಲ ಚಂದ್ರಶೇಖರಶೆಟ್ಟಿ, ಶ್ರೀ ಶ್ರೀನಿವಾಸ ಅಯಂಗಾರ ಎಲ್ ಎಲ್ ಬಿ ಆಡವೋಕೇಟ ಶ್ರೀ ಎಸ್ ಕೆ ಮಲ್ಲಪ್ಪ, ಶ್ರೀ ದಿನಕರ ಸಾಹಪ್ಪ ಶ್ರೀ ಜೋಗಿ ವಾಸಪ್ಪ ಈ ಮಹನೀಯರು ಸಭಾಸದರಿದ್ದಾರೆ] ಈ ಮಂಡಲವು ಆಶ್ರಮದ ಮೇಲ್ವಿಚಾರಣೆಯ ಕಾರ್ಯವನ್ನು ದಕ್ಷತೆಯಿಂದ ಮಾಡುತ್ತಲಿದೆ ಆಶ್ರಮದಲ್ಲಿನ ಪ್ರತ್ಯಕ್ಷ ಸಂಗೋಪನ ಕಾರ್ಯವನ್ನು ಈಗ ಶ್ರೀ ವಾಸುದೇವರಾವ ಪ್ರಮುಖ, ಶ್ರೀ ಭೈರಪ್ಪ ಮಡಿವಾಳ, ಶ್ರೀ ಮಹಾಬಳೇಶ್ವರ ಭಟ್ಟ, ಶ್ರೀಮತಿಗಳಾದ ಗೌರಮ್ಮನವರು ಸರಸ್ವತಮ್ಮನವರು ಕಲ್ಲಾಳ ಕಾವೇರಮ್ಮನವರು ಈ ಆರು ಸುರಿತ ಕಾರ್ಯಕರ್ತರು ಸಾಗಿಸುತ್ತಲಿದ್ದಾರೆ ಆಶ್ರಮವು ಶಿವಮೊಗ್ಗೆಯ ಊರಹೊರಗಿನ ವಿಸ್ತೀರ್ಣವಾದ ಒಂದು ಮನೆಯಲ್ಲಿದೆ ಹುಡುಗರು ಆಡಲಿಕ್ಕೆ ಮನೆಯ ಸುತ್ತಲು ಸಾಕಷ್ಟು ಬಯಲಿದೆ.

ಆಶ್ರಮದಲ್ಲಿ ಸದ್ಯಕ್ಕೆ ೩೧ ಬಾಲಕರೂ ೧೦ ಬಾಲಿಕೆಯರೂ ಇದ್ದಾರೆ ಇವರ ವಯಸ್ಸು ೪ ರಿಂದ ೧೪ ವರೆಗಿದೆ ಎಲ್ಲರೂ ಶಿವಮೊಗ್ಗೆಯಲ್ಲಿಯ ಕನ್ನಡ ಶಾಲೆಗೆ ಹೋಗುತ್ತಾರೆ [ಅವರ ದಿನದ ಕಾರ್ಯಕ್ರಮವು ಮುಂದಿನಂತಿದೆ ಬೆಳಗಿನದ ೫ ಗಂಟೆಗೆ ಏಳುವದು ೫ ರಿಂದ ೫-೪೫ ಶೌಚ ಮುಖಮಾರ್ಜನೆ ೫ ೪೫ ರಿಂದ ೬ ರ ವರೆಗೆ ಪ್ರಾರ್ಥನೆ, ೬ ರಿಂದ ೬-೪೫ ಸ್ನಾನ ವ್ಯಾಯಾಮ, ೬-೪೫ ರಿಂದ ೭-೧೫ ಗಂಜಿ ೭-೧೫ ರಿಂದ ೧೦-೪೫ ಶಾಲೆ ೧೦ ೪೫ ರಿಂದ ೧೨ ಸ್ನಾನ ಅಭ್ಯಾಸ, ೧೨- ೧೨-೪೫ ಊಟ, ೧-೪೫ ರಿಂದ ೨-೪೫ ಅಭ್ಯಾಸ, ೨-೪೫ ರಿಂದ ೫-೧೫ ಶಾಲೆ ೫ ೧೫ ರಿಂದ ೭ ಆಟ ಡ್ರಿಲ್, ಲೇಜಮು ಮುಂತಾದವುಗಳು ೭ ರಿಂದ ೭-೧೫ ಪ್ರಾರ್ಥನೆ ೭-೧೫ ರಿಂದ ೮ ಊಟ ೮ ರಿಂದ ೯ ಅಭ್ಯಾಸ, ೯ ಕ್ಕೆ ನಿದ್ರೆ, ಈ ಕಾರ್ಯಕ್ರಮವು ನಿಯಮಿತವಾಗಿ ನೆರವೇರಿಸಲ್ಪಡುತ್ತದೆ ಮುಂಜಾನೆ ಸಜ್ಜೆಯ ಗಂಜಿ, ಮಧ್ಯಾಹ್ನ ಮತ್ತು ರಾತ್ರಿ ಅನ್ನ ಬೇಳೆ ಪಲ್ಲೆ ಚಟ್ನಿ ಮಜ್ಜಿಗೆ ಇವುಗಳಿಂದೊಡಗೂಡಿದ ಊಟ ಇದೇ ಬಾಲಕರ ಆಹಾರ ಪ್ರತಿ ಊಟದ ಖರ್ಚು ಸಾಮಾನ್ಯವಾಗಿ ೧೨ ರಿಂದ ೧೧ ಪೈಯದೆ ಅಡಿಗೆ ಸ್ವಚ್ಛತೆಯನ್ನು ಡಾವದು ಪಾತ್ರೆಗಳನ್ನು ಬೆಳಗುವದು, ಕಸವಳಗುವುದು, ಸಾರಿಸುವುದು ಇವೆಲ್ಲ ಕೆಲಸಗಳನ್ನು ಕಾರ್ಯಕರ್ತೆಯರೇ ಮಾಡುತ್ತಾರೆ ಆಶ್ರಮದಲ್ಲಿ ಆಳುಹೋಳುಗಳಿಲ್ಲ

ಆಶ್ರಮದಲ್ಲಿರುವ ಬಾಲ ಬಾಲಕಿಯರು ವಾನಸ್ಸ ..ಗಳಲ್ಲಿ ಮಲೇರಿಯಾ ಮುಂತಾದ ರೋಗಗಳ ಉಪದ್ರವವಿದ್ದುದದರಿಂದ ಅವರ ಆರೋಗ್ಯಕ್ಕಾಗಿ ತಕ್ಕ ಏರ್ಪಾಡು ಮಾಡಲ್ಪಟ್ಟಿದೆ ಶಿವಮೊಗ್ಗೆಯಲ್ಲಿಯ ಡಾ॥ ದತ್ತಾತ್ರಯ ಡಾ॥ ಮಾಧವರಾವ, ಡಾ॥ ಪಾರ್ಥನಾರಾಯಣ ಪಂಡಿತ ಮುಂತಾದ ನುರಿತ ವೈದ್ಯರು ಆಶ್ರಮಕ್ಕೆ ಬಂದು ರೋಗವಿದ್ದವರ ಚಿಕಿತ್ಸೆ ಮಾಡುತ್ತಾರೆ

ಪ್ರತಿಬಾಲಕನಿಗೂ ೨ ಬಿಳೇ ಶರ್ಟು ೧ ಕರೇ ಲಂಡ ಚಣ್ಣ, ೧ ಧೋತರ, ೧ ಟೊಪ್ಪಿಗೆ ಮತ್ತು ಬಾಲಿಕೆಯರಿಗೆ ೧ ಲುಂಗಿ, ೧ ಜಾಕೀಟು, ೧ ಚಡ್ಡಿ, ೧ಟಾವೇಲ, ೧ ಕಂಬಳಿ ೧ ಚಾದರ, ಇಷ್ಟು ಉಡಿಗ ಬಟ್ಟೆಗಳು ಕೊಡಲ್ಪಟ್ಟಿವೆ ಎಲ್ಲರಿಗೂ ಪಾಟಪುಸ್ತಕಗಳು ಕೊಡಲ್ಪಟ್ಟಿವೆ ಶಾಲೆಗಳಲ್ಲಿಯ ಶಿಕ್ಷಣಕ್ರಮವಲ್ಲದೆ ಸೂರ್ಯನಮಸ್ಕಾರ, ಆಸನಗಳು, ಹಿಂದೀ ಆಟಗಳು, ಫುಟಬಾಲ, ಲೇಜೀಮು, ಲೋಡು, ತ್ರಿಲ ಮುಂತಾದ ಶಾರೀರ ಶಿಕ್ಷಣವೂ, ಕನ್ನಡ ಹಿಂದೀ ಭಾಷೆಗಳ ಜ್ಞಾನವೂ, ನೂಲುವ ಶಿಕ್ಷಣವೂ ಕೊಡಲ್ಪಡುತ್ತಲಿದೆ

ಮಾರ್ಚತಿಂಗಳಿಂದ ಆಗಸ್ಟ ಅಖೈರದ ವರೆಗಿನ ಆಶ್ರಮದ ಗಳಿಕೆ ಬಳಿಕೆಗಳು ಈ ರೀತಿ ನಂತಿವೆ ಗಳಿಕೆ: ಮೈಸೂರು ಸಂಸ್ಥಾನದಿಂದ ಚಂದಾ ೭೦೩-೮-೧, ಇತರ ಕಡೆ ಯಿಂದ ೯೦೧-೩-೪ ಭಿಕ್ಷೆ ನಗದು ೧೮-೧೪-೧೧; ಭಿಕ್ಷೆ ಧಾನ್ಯ ೪೮-೧೨-೧೧, ಸಾಲ ೩೨೨—೧-೧೧ ಒಟ್ಟಿಗೆ ಗಳಿಕೆ ೧೯೭೩-೭-೧—ಬಳಿಕೆ ಆಶ್ರಮಕ್ಕಾಗಿ ಕಾಯಂ ಸಾಮಾನು ೨೩೬-೧೧-೩,-ಟ್ಟೆ ೩೨೮-೧೫-೬, ಶಿಕ್ಷಣ ೭೧-೧೪-೦, ಸ್ವಚ್ಛತೆ ೨೧ ೧೩-೦, ಪೋಸ್ಟೇಜ ೧೫-೪-೯ ಬಾಡಿಗೆ ೯೭-೧೦-೬, ದೀಪ ಮುಂತಾದ್ದು ೩೪-೫-೬ ಊಟದ ಸಾಮಾನು ೭೩೧-೨-೬, ಔಷಧ ೩೦-೪-೬, ಪ್ರವಾಸ ೧೩೧-೧೦-೬, ಅಮಾನತ ೪೪-೨-೮, ಕಿರಾಕುಳ, ೫೩-೩-೬, ರಿಪೇರಿ ೫೯೦-೯ ೦, ಉಳಿಕೆ ೪೦-೧೫-೧೧, ಅಂತೂ ಬಳಿಕೆ—೧೯೭೩-೭-೧, ಆಶ್ರಮದ ಖರ್ಚಿಗೆ ತಿಂಗಳಿಗೆ ೩೫೦ ರೂಪಾಯಿಯಷ್ಟು ಹಣವು ಬೇಕಾಗುತ್ತದೆ ಅಂದಾಜು ೫೦-೭೦, ರೂಪಾಯಿ ಮಾತ್ರ ಶಿವಮೊಗ್ಗೆಯಲ್ಲಿ ಕೂಡಬಹುದು ಉಳಿದ ೨೦೦ ರೂಪಾಯಿಗಳು ಹೊರಗಿನಿಂದ ದೊರೆಯದಿದ್ದರೆ ಆಶ್ರಮದ ಕಾರ್ಯವು ವ್ಯವಸ್ಥಿತವಾಗಿ ಸಾಗುವಂತಿಲ್ಲ

ಆಶ್ರಮವು ಕೈಕೊಂಡ ಕಾರ್ಯದ ಮಹತ್ವವನ್ನು ಮನಗಂಡು ಎಲ್ಲ ಉದಾರ ಹೃದಯರು ಸಹಾಯ ಮಾಡುವರೆಂದು ಆಶ್ರಮದ ಕಾರ್ಯಕರ್ತರು ಆಶಿಸುತ್ತಾರೆ.

ಇಹವೃತ್ತ.

ಇಲ್ಲಿಯ ವಿಜಯ ಸಿನೇಮಾದಲ್ಲಿ ೩ ಪಡದೆಯ ಮೇಲೆ ಬಾಯಿ ಸುಂದರಾಬಾಯಿ ಇವರ ಗಾಯನವಾಯಿತು ಆದರೆ ಈ ಹೊಸ ಏರ್ಪಾಡು ಜನ ಮೆಚ್ಚಿಕೊಳ್ಳುವಂತೆ ಆಗಿಲ್ಲ

ಕಿನ್ನಾಳದ ಪ್ರಸಿದ್ಧ ವೈದ್ಯರಾದ ವೇ ಭೀಮಾಚಾರ್ಯ ಕಲ್ಲಮುನಿ ಎಂಬವರು ಇಲ್ಲಿಯ ಶ್ರೀ ಹೆಬ್ಬಳ್ಳೀಕರ ದಾದಾಸಾಹೇಬ ರಲ್ಲಿ ಬಂದಿದ್ದಾರೆ. ಹುಚ್ಚು ಹಿಡಿದವರನ್ನು ಮೂಗಿನಲ್ಲಿ ಒಂದೆರಡು ವನಸ್ಪತಿ ರಸವನ್ನು ಹಿಂಡಿ ಗುಣಪಡಿಸುತ್ತಾರೆ ದೃಷ್ಟಾಂತಗಳು ಆಗಿವೆಯಂತೆ ಅವರು ಇಲ್ಲಿ ಒಂದೆರಡು ದಿವಸ ಇರುವರಂತೆ ಅವಶ್ಯರು ಕೋಟೆಯಲ್ಲಿ ಹೆಬ್ಬಳ್ಳೀಕರರಲ್ಲಿ ಹೋಗಿ ಉಪಚಾರ ಪಡೆಯಬಹುದು

ಜಗಜಟ್ಟಿಯಾದ ಹಿಂದುಸ್ಥಾನದ ಗಾಮಾ ಅವರು ಈ ತಿಂಗಳ ಕೊನೆಯಲ್ಲಿ ಕುಸ್ತಿಗೆಂದು ಅಮೇರಿಕಕ್ಕೆ ಹೋಗುವವರಿದ್ದಾರೆ

ಅಫಗಾನದ ಹೊಸ ಅಮೀರರ ಪ್ರಕಟನೆ.

ಪೇಶಾವರ ತಾ|| ೧೫— ಇಂದಿನ ಕಾಬೂಲ ಟಪಾಲಿನಿಂದ ಬಂದ ಅಫಗಾನ ಸರಕಾರದ ಪತ್ರಿಕೆಯಾದ ಇಸ್‌ಲ್ಹಾ' ದಲ್ಲಿ ಹೊಸ ಅಮೀರ ಜಹೀರ ಶಹಾ ಪ್ರಕಟನೆಯು ಪ್ರಸಿದ್ಧವಾಗಿದೆ ತಮ್ಮ ತಂದೆಯವರ ಮರಣಕ್ಕಾದ ದುಃಖ ಅಫಗಾನ ರಾಷ್ಟ್ರದ ವಿಷಯವಾಗಿ ಕೃತಜ್ಞತೆ ಪ್ರಜೆಗಳ ರಾಜನಿಷ್ಠೆಯು ಬಗ್ಗೆ ಹಾಗು ತಮ್ಮನ್ನು ಅಮೀರರಾಗಿ ಒಪ್ಪಿಕೊಂಡ ಬಗ್ಗೆ ರಾಷ್ಟ್ರದ ಆಭಾರ ಮನ್ನಣೆಗಳು ಇದರಲ್ಲಿ ಸೇರಿವೆ ತಾವು ಸೇವಕರಲ್ಲದೆ ಬೇರೆ ಏನೂ ಅಲ್ಲವೆಂದು ಬಗೆದುಕೊಂಡಿದ್ದು ತಮ್ಮ ತಂದೆಯವರ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ನಡೆಯುವವರಾಗಿಯೂ ಇದರಲ್ಲಿ ಆಶ್ವಾಸನವಿದೆ ಅಫಗಾನಿಸ್ಥಾನದ ಪಾರ್ಲಮೆಂಟ ಮಂತ್ರಿಮಂಡಲ ಹಾಗು ಎಲ್ಲ ಅಧಿಕಾರಿಗಳು ತಮ್ಮೊಡನೆ ಸಹಕರಿಸಿ ಯೋಗ್ಯದಾರಿಯನ್ನು ತೋರುವರೆಂದು ಬಯಸಲಾಗಿದೆ ದೇಶದ ಸಂರಕ್ಷಣೆಯಲ್ಲಿ ಸೈನ್ಯವು ತಮಗ ನೆರವಾಗುವದೆಂಬ ಆಶೆಯು ವ್ಯಕ್ತಮಾಡಲಾಗಿದೆ ತಮ್ಮ ರಾಷ್ಟ್ರದ ಬೆಂಬಲದಿಂದ ಅಫಗಾಣಿಸ್ಥಾನವನ್ನು ಬೇರೆ ರಾಷ್ಟ್ರಗಳ ಜೊತೆಯಲ್ಲಿ ಉಚ್ಚಸ್ಥಾನಕ್ಕೆ ಏರಿಸುವ ಅಭಿಲಾಷೆಯು ವ್ಯಕ್ತಪಡಿಸಲಾಗಿದೆ ಕೊನೆಗೆ ದೇವರು ತಮಗೂ ತಮ್ಮ ರಾಷ್ಟ್ರಕ್ಕೂ ತಮ್ಮ ದೇಶದ ಹಾಗೂ ಪ್ರಜೆಗಳ ಅತ್ಯಂತ ಹಿತವನ್ನು ಶಕ್ಯವಾದ ಎಲ್ಲ ವಿಧದಿಂದ ಸಾಧಿಸಲು ಸಾಮರ್ಥ್ಯವನ್ನು ಕೊಡಲೆಂದು ಪ್ರಾರ್ಥನೆ ಮಾಡಿದ್ದಾರೆ

(ಅ ಪ್ರೆ ತಂತಿ)

ಚಿತಗಾಂಗದಲ್ಲಿ ಮತ್ತೆ ಪೋಲೀಸರು

ಚಿತಗಾಂಗ ತಾ|| ೧೭— ಬೀದಿಗಳಲ್ಲಿ ಅಲ್ಲಲ್ಲಿ ಪೋಲೀಸರನ್ನೂ 'ಸೈನಿಕರನ್ನೂ ನಿಲ್ಲಿಸುವದು ಮತ್ತು ಹಾಯ್ದಾಡುವವರನ್ನು ಸೋಧಿಸುವದು ಮತ್ತೆ ಇವತ್ತೂ ನಡೆದಿದೆ. ಸಮೀಪದಲ್ಲಿಯೇ ಮತ್ತೊಂದು ಅತ್ಯಾಚಾರವು ಆಗುವ ಸಂಭವನಿದೆಯೆಂದು ವಿಶ್ವಸನೀಯವಾಗಿ ತಿಳಿದು ಬಂದದರಿಂದ ಹೀಗೆ ವಿಶೇಷ ಮುಂಜಾಗ್ರತೆಯನ್ನು ಇಡಲಾಗಿದೆಯೆಂದು ಕಲೆಕ್ಟರರು ತಿಳಿಸುತ್ತಾರೆ ರಾತ್ರಿ ಹತ್ತು ಗಂಟೆಯಿಂದ ಮುಂಜಾನೆ ೬ ಗಂಟೆಯ ವರೆಗೆ ಹಾಯ್ದಾಡುವವರು ಪೋಲೀಸರು ಒದರಿದ ಕೂಡಲೇ ನಿಲ್ಲಲೇಬೇಕು.

(ಅ ಪ್ರೆ ತಂತಿ)

ಮಿ. ಬರ್ಜ ಇವರ ಕೊಲೆಯ ಪ್ರತಿಧ್ವನಿ.

ಮಿದ್ನಾಪೂರ ತಾ|| ೧೭ ಮಿದ್ನಾಪುರದ ಕಲೆಕ್ಟರರಾದ ಬರ್ಜ ಇವರ ಕೊಲೆಮಾಡಬೇಕೆಂದು ಹೊಂಚು ಹಾಕಿದ್ದರೆಂಬ ಆರೋಪವನ್ನಿಟ್ಟು ೧೫ ಜನ ಬಂಗಾಲೀ ಜನರ ಮೇಲೆ ಖಟ್ಲೆ ಹಾಕಲಾಗಿದೆ ಖಟ್ಲೆಯು ಸ್ಪೇಶಲ್ ಕೋರ್ಟಿನ ಮುಂದೆ ನಡೆಯುವದು

(ಅ ಪ್ರೆ ತಂತಿ)

ದಂಡವನ್ನು ಬಿಟ್ಟುಕೊಟ್ಟರು.

ಪೇಶಾವರ ತಾ|| ೧೭ — ಪೇಶಾವರ ಜಿಲ್ಲೆಯಲ್ಲಿ ಚಮಕನ್ನಿ. ಟಪ್ಪಾ. ಬಾಲಸಾ ಇವೇ ಕೆಲವು ಹಳ್ಳಿಗಳ 'ಕೆಂಪಂಗಿ'ಯವರು ಮೇಲೆ ಸಾರ್ವಜನಿಕ ವಸ್ತುಗಳನ್ನು ನಾಶ ಮಾಡಿದ್ದಕ್ಕಾಗಿಯೂ ಮತ್ತು ವೈಲುಗಲ್ಲುಗಳಿಗೆ ಕೆಂಪು ಬಣ್ಣವನ್ನು ಕೊಟ್ಟದ್ದಕ್ಕಾಗಿಯೂ ೧೬೫೦ ರೂ ದಂಡವಾಗಿತ್ತಷ್ಟೇ ಈಗ ಕೆಂಪಂಗಿಯವರು ತಾವು ಇನ್ನು ಮುಂದೆ ಯಾವದೇ ರಾಜಕೀಯ ಚಳವಳಿಯಲ್ಲಿ ಭಾಗ ತೆಗೆದುಕೊಳ್ಳುವದಿಲ್ಲವೆಂದು ಪವಿತ್ರ ಗ್ರಂಥವಾದ ಕೂರಾನದ ಆಣೆಯನ್ನು ಮುಟ್ಟಿ ಆಣೆ ಮಾಡಿದ್ದರಿಂದ ಸರಕಾರದವರು ಅವರಿಗಾದ ದಂಡವನ್ನು ಬಿಟ್ಟುಕೊಟ್ಟಿದ್ದಾರೆ

[ಅ ಪ್ರೆ ತಂತಿ]

ಹಿಂದೀ ಗಿರಣಿಕಾರರ ಚಿಂತೆ.

ಹೊಸದಿಲ್ಲಿ ತಾ|| ೧೬— ಜಪಾನಿ ಶಿಷ್ಟಮಂಡಳದವರು ಟೋಕಿಯೊಕ್ಕೆ ಒಂದು ತಂತಿಯನ್ನು ಕಳಿಸಿ ಸರಕುಗಳ ವರ್ಗೀಕರಣದ ವಿಷಯವಾಗಿ ಹಿಂದುಸ್ಥಾನ ಸರಕಾರದ ಕೊನೆಯ ಆಲೋಚನೆಗಳನ್ನು ತಿಳಿಸಿದ್ದಾರೆ ಇನ್ನೂವರೆಗೂ ಉತ್ತರವು ಬಂದಿಲ್ಲ. ಸರಕಾರವು ಜಪಾನಕ್ಕೆ ಕೊಡಲೊಪ್ಪಿದ ಸೌಲಭ್ಯಗಳು ಬಿನ್ನ ಸರಕಾರೀ ಸಲಹೆಗಾರರ ಸೂಚನೆಗಳನ್ನು ಮೀರುವವೆಂದು ಹಿಂದೀ ಗಿರಣಿಕಾರರು ಚಿಂತಾತುರರಾದಂತೆ ತೋರುತ್ತದೆ. (ಅ ಪ್ರೆ ತಂತಿ]

ದೇವಾಸ ಮಹಾರಾಜರ ಉತ್ತರ

ಪಾಂಡಿಚೆರಿ ತಾ|| ೧೭— ದೇವಾಸ [ಹಿರಿಯ] ಮಹಾರಾಜರು ವ್ಹಾಯಿಸರಾಯರಿಗೆ ೧೪ ತಾರೀಖಿನ ದಿವಸ ಕೆಳಗಿನಂತೆ ತಂತಿಯನ್ನು ಕಳಿಸಿದ್ದಾರೆಂದು ತಿಳಿಯುತ್ತದೆ

'೧೦ ನೇ ತಾರೀಖಿನ ತಮ್ಮ ತಂತಿಯ ಬಗ್ಗೆ ನಾನು ತಮಗೆ ಕೃತಜ್ಞನಾಗಿದ್ದೇನೆ| ಸದ್ಯದ ಪರಿಸ್ಥಿತಿಯನ್ನೂ ಮುಂದೆ ಉಂಟಾಗಬಹುದಾದ ಪರಿಣಾಮಗಳನ್ನೂ ನೋಡಲಾಗಿ ನನಗೆ ತಮ್ಮ ಸೂಚನೆಗಳನ್ನು ಮಾನ್ಯ ಮಾಡಲು ಶಕ್ಯವಿಲ್ಲವೆಂದ ತಿಳಿಸಲು ವಿಷಾದಿಸುತ್ತೇನೆ

[ಅ ಪ್ರೆ ತಂತಿ]

ಮಹಾತ್ಮರು ಅಮೇರಿಕೆಗೆ ಹೋಗುವದಿಲ್ಲ.

ತಾ|| ೧೭—ಮಹಾತ್ಮರು ಮುಂದಿನ ಬೇಸಿಗೆಯಲ್ಲಿ ನ್ಯೂಯಾರ್ಕಕ್ಕೆ ಹೋಗುವರೆಂದು ಅಮೇರಿಕದಿಂದ ಬಂದ ಒಳ ಸುದ್ದಿಯನ್ನು ಕುರಿತು ಅ. ಪ್ರೆ ದ ಸುದ್ದಿಗಾರನು ಮಹಾತ್ಮರನ್ನು ಕಂಡು ಕೇಳಲು ಅವರು 'ನನಗೆ ಈ ಬಗ್ಗೆ ಯಾರಿಂದಲೂ ಕರೆ ಬಂದಿಲ್ಲ''ವೆಂದು ಅಲ್ಲಗಳೆದು ಅಮೇರಿಕಕ್ಕೆ ಬರುವದು ನನ್ನಿಂದ ಸಾಧ್ಯವಿಲ್ಲೆಂದೂ ಅಮೇರಿಕೆಯ ಸುದ್ದಿಗಾರನಿಗೆ ಇತ್ತೀಚೆ ತಿಳಿಸಿರುವೆನು, ಮುಂದಿನ ಜುಲೈ ಕೊನೆಯ ವರೆಗೆ ಸಂಪೂರ್ಣವಾಗಿ ಹರಿಜನ ಕಾರ್ಯಕ್ಕಾಗಿಯೇ ನನ್ನ ಶಕ್ತಿ ಸರ್ವಸ್ವವನ್ನೆಲ್ಲ ವಿಭಾಗಿಡುವೆನೆಂದು ವ್ರತ ಮಾಡಿದ್ದರಿಂದ ನಾನು ಅತ್ತಿತ್ತ ಹೋಗಲಾರೆ (ಅ ಪ್ರೆ ತಂತಿ)

ಮತ್ತೆ ಎರಡು ಗಿರಣಿಗಳಿಗೆ ಪೆಟ್ಟು.

ಮುಂಬೈ ತಾ|| ೧೭— ವ್ಯಾಪಾರ ಮಂದಿಯ ಮೂಲಕ ಮುಂಬೈಯಲ್ಲಿಯ ಮತ್ತೆ ಎರಡು ಗಿರಣಿಗಳು ಮುಂದಿನ ತಿಂಗಳ ೧೫ನೇ ತಾರೀಖಿಗೆ ಮುಚ್ಚಲಾಗುವವೆಂದು ಸುದ್ದಿ. ಎರಡು ಗಿರಣಿಗಳು ಮುಚ್ಚಿದರೆ, ನಾಲ್ಕು ಸಾವಿರ ಕೂಲಿಕಾರರಿಗೆ ಅನ್ನವಿಲ್ಲದಾಗುವದು (ಅ ಪ್ರೆ ತಂತಿ)

ವೈಷ್ಣವ ಮಠದ ವ್ಯವಸ್ಥೆ

ಮುಂಬೈ ತಾ|| ೧೭—ದೇಹಬಿಟ್ಟ ವೈಷ್ಣವ ಸ್ವಾಮಿ ಗೋವರ್ಧನ ಲಾಲಜಿಯವರ ಒಬ್ಬರೇ ಮಕ್ಕಳಾದ ದಾಮೋದರ ಲಾಲಜಿಯವರು ತಮ್ಮ ಆಸ್ತಿಯೆಲ್ಲ ತಮಗೆ ದೊರೆಯತಕ್ಕದೆಂದು ಮುಂಬೈ ಹಾಯಕೋರ್ಟಿಗೆ ಮಾಡಿದ ಅರ್ಜಿಯ ವಿಚಾರಣೆಯು ಹಾಯಕೋರ್ಟಿನಲ್ಲಿ ನ್ಯಾ. ರಂಗಣೇಕರರ ಮುಂದೆ ಇಂದು ನಡೆಯಿತು ಆಗ ನ್ಯಾಯಮೂರ್ತಿಗಳು "ಅರ್ಜಿದಾರನು ತನ್ನ ಹಕ್ಕನ್ನು ಸಿದ್ಧಪಡಿಸಲಿಕ್ಕೆ ಬೇರೊಂದು ದಾವೆಯನ್ನು ೧೦—೧—೩೪ ರೊಳಗಾಗಿ ಹೂಡಬೇಕೆಂದರು. ದಾವೆಯಾಗುವವರೆಗೆ ಉದೇಪುರ ದರ್ಬಾರದವರು ಆಸ್ತಿ ವ್ಯವಸ್ಥೆಗಾಗಿ ನಿಯಮಿಸಿದ ಮುಂಬೈ ಮ್ಯಾನೇಜರರು ಲೆಖ್ಖಪತ್ರವನ್ನು ಸರಿಯಾಗಿಡಬೇಕೆಂದು ಹೇಳಿದರು ಹಿಪ್ಲಿಯ ವರೆಗೆ ಈ ಅರ್ಜಿಯ ವಿಚಾರಣೆಯು ಮುಂದೂಡಲಾಯಿತು ದಾಮೋದರ ಲಾಲಜಿಯವರ ತಪ್ಪು ನಡೆಯಿಂದ ತಮ್ಮ ತಂದೆಯವರ ಹಕ್ಕುದಾರರಾಗಲು ಅಯೋಗ್ಯರಾಗಿರುವ ಸಂಗತಿಯು ಕಳೆದ ಸಪ್ಟಂಬರದಲ್ಲಿ ಸ್ಥಳಿಕ ವೈಷ್ಣವರು ಹಾಯಕೋರ್ಟಿಗೆ ಅರ್ಜಿ ಮಾಡಿದ್ದನ್ನು ಯಾರೂ ಮರೆತಿರಲಿಕ್ಕಿಲ್ಲ. ಆ ಅರ್ಜಿಯ ಪ್ರಕಾರ ಹಾಯಕೋರ್ಟಿನವರು ಹುಕುಂ ಮಾಡಿ ದಾಮೋದರ ಲಾಲಜಿಯವರು ಒಂದು ತಿಂಗಳಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸಲು ಕೋರ್ಟಿಗೆ ಆಶ್ವಾಸನ ಕೊಟ್ಟದ್ದರಿಂದ ಆ ಹುಕುಮು ರದ್ದು ಮಾಡಲ್ಪಟ್ಟಿತ್ತು (ಅ ಪ್ರೆ ತಂತಿ)

ಸಶಸ್ತ್ರ ದರೋಡೆಯು.

ಲಖನೌ ತಾ|| ೧೭— ನಗೆಲಾ ಮತ್ತು ರಘುನಾಥಪುರದಲ್ಲಿ ಎರಡು ಭಯಂಕರ ದರೊಡೆಗಳಾಗಿ ೩೦ ಜನರು ಘಾಯ ಹೊಂದಿದ್ದಾರೆಂದು ಹಾಪೂರದಿಂದ ಬಂದಸುದ್ದಿಯಿಂದ ತಿಳಿಯುತ್ತದೆ ದರೋಡೆಖೋರರು ಸಶಸ್ತ್ರರಾಗಿದ್ದು ಸೈನಿಕರಂತೆ ಅರಿವೆಗಳನ್ನು ಹಾಕಿಕೊಂಡಿದ್ದರು ಮೊದಲು ನಗೆಲಾ ಎಂಬಲ್ಲಿ ಒಂದು ಮನೆಯನ್ನು ಹೊಕ್ಕು ಒಳಗಿದ್ದವರನ್ನು ಮನಬಂದಂತೆ ಹೊಡೆದು ಬೆಲೆಯುಳ್ಳ ಸಾಮಾನುಗಳನ್ನು ತೆಗೆದುಕೊಂಡು ಹೋದರು ಒಳಗಿನವರ ಚೀರಾಟವನ್ನು ಕೇಳಿ ಪಕ್ಕದ ಜನರೆಲ್ಲರೂ ಅಲ್ಲಿಗೆ ಬಂದೊಡನೆ ಅವರಿಗೂ ದರೋಡೆಖೋರರಿಗೂ ಜಗಳವಾಯಿತು. ಆದರೆ ದರೋಡೆಯವರು ಶಸ್ತ್ರಸನ್ನದ್ಧರಾಗಿದ್ದದರಿಂದ ಜನರ ಆಟವು ಅವರಿದುರಿಗೆ ಸಾಗದಂತಾಯಿತು ಇದೇ ತಂಡವೇ ಆ ಮೇಲೆ ರಘುನಾಥಪೂರ ಎಂಬಲ್ಲಿ ಮತ್ತೊಂದು ಮನೆಗೆ ದರೋಡೆ ಹಾಕಿತೆಂದು ಊಹಿಸಲಾಗಿದೆ (ಅ ಪ್ರೆ ತಂತಿ)

ಹಾಪೂರ ತಾ|| ೧೬— ಲಖನೌ ಜಿಲ್ಲೆಯಲ್ಲಿ ಚಕೌರಾ ಎಂಬ ಹಳ್ಳಿಯಲ್ಲಿ ಹೆಚ್ಚಿನ ಪೋಲೀಸರನ್ನು ಇಡುವದಾಗಿಯೂ ಮತ್ತು ಅವರ ವೆಚ್ಚವನ್ನು ಮೂರು ನಾಲ್ಕು ಹಳ್ಳಿಯವರು ತೆತ್ತಬೇಕೆಂತಲೂ ತಿಳಿಯುತ್ತದೆ ಸಪ್ಟಂಬರ ೨೧ನೇ ತಾರೀಖಿನ ದಿವಸ ಅಲ್ಲಿ ಆದ ದಂಗೆಯಲ್ಲಿ ದಂಗೆಗಾರರು ಪೋಲೀಸರ ಮೈಮೇಲೆ ಎರಗಿ ಬಿದ್ದು ಅವರನ್ನು ಓಡಿಸಿದ್ದೇ ಇದಕ್ಕೆ ಕಾರಣ

(ಅ ಪ್ರೆ ತಂತಿ)

ಮಹಾತ್ಮರ ಸಂಚಾರ

ಅಮರಾವತಿ ತಾ|| ೧೭—ಇಲ್ಲಿಗೆ ಮಹಾತ್ಮರು ಬಂದ ದಿನ ಜನರಲ್ಲಿ ಎಂದೂ ಕಾಣದ ಉತ್ಸಾಹವು ಉಕ್ಕುತ್ತಿದ್ದಿತು ಅವರನ್ನು ಎದುರುಗೊಳ್ಳಲಿಕ್ಕೆಂದು ಅಮರಾವತಿ ಪಟ್ಟಣದ ಎರಡೂ ಮಗ್ಗುಲಿಗೂ ಸ್ತ್ರೀ ಪುರುಷರು ನಿಂತಿದ್ದರು. ಚಿಕ್ಕ ಮಕ್ಕಳನ್ನು ಮುಂದೆ ನಿಲ್ಲಿಸಿ ಮಹಾತ್ಮರ ದರ್ಶನ ಮಾಡಿಸಲಾಯಿತು, ಇಲ್ಲಿಯ ಹರಿಜನರ ಕೇರಿಗಳಿಗೆಲ್ಲ ಮಹಾತ್ಮರು ಹೋಗಿ ಬಂದ ನಂತರ ಅವರು ಸಭೆಯಲ್ಲಿ ಒಂದಾಗ ದೇಶ ಸೇವಿಕೆಯರು ಮಂಡಿನ ರೀತಿಯಿಂದ ಮಹಾತ್ಮರಿಗೆ ಶುಭಾಗಮನವನ್ನಿತ್ತರು ಅನೇಕ ಮಹಿಳೆಯರು ಮಹಾತ್ಮರಿಗೆ ತಮ್ಮ ಕೈಯಲ್ಲಿಯ ಉಂಗುರ-ಬಳೆಗಳನ್ನು ತೆಗೆದುಕೊಟ್ಟರು ತಮ್ಮ ಭಾಷಣದಲ್ಲಿ ಅವರು "ಅಸ್ಪೃಶ್ಯತೆಯನ್ನಾದರೂ ನಿರ್ನಾಮ ಮಾಡುವೆನು ಅಥವಾ ನಾನಾದರೂ ಈ ಕಾರ್ಯದಲ್ಲಿ ಸಾಯುವೆನು'' ಎಂದು ಸಾರಿ ಸಾರಿ ಹೇಳಿದರು ಶಹರಾಯ ಮುನಸಿಪಾಲಿಟಿಯಿಂದ ಬಿನ್ನವತ್ತಳೆಯನ್ನರ್ಪಿಸುವ ಕೆಲಸ ನಡೆಯಿತು ಇದೊಂದೇ ಊರಲ್ಲಿ ಹರಿಜನ ಕಾರ್ಯಕ್ಕಾಗಿ ೫೦೦ ರೂಪಾಯಿ ದೊರೆತವು

ಜಿನೀವಾಕ್ಕೆ ಬ್ರಿಟಿಷ ಪ್ರತಿನಿಧಿಗಳು

ಲಂಡನ್ ತಾ|| ೧೭— ಶಸ್ತ್ರಸನ್ಯಾಸ ಪರಿಷತ್ತಿನ ಅಧ್ಯಕ್ಷರಾದ ಸರ್ ಆರ್ಥರ ಹೆಂಡರ್ಸನ್ನರೊಡನೆ ಪರಿಷತ್ತಿನ ಮಾತುಕಥೆಗಳನ್ನು ಮತ್ತೆ ನಡಿಸಲಿಕ್ಕೆಂದು ಸರ್ ಜಾರ್ಜ ಸಾಯಮನ್ನರು ಹೋಗುವವರಿದ್ದಾರೆ ರೋಮದಲ್ಲಿ ಮುಖ್ಯ ನಾಲ್ಕು ಜನಾಂಗಗಳ ಪ್ರಾಸ್ತಾವಿಕ ಸಭೆ ನೆರೆಯಿಸಲಿಕ್ಕೆ ಬ್ರಿಟಿಶರು ಒಪ್ಪಿದ್ದು ಇಟಲಿಯವರಿಗೂ ಅದು ಸಮ್ಮತವಾಗಿದೆ ಜಿನೀವಾಕ್ಕೆ ಹೋಗಲು ಜರ್ಮನರು ಒಪ್ಪುವದಿಲ್ಲ ಆದರೆ ಫ್ರೆಂಚರಿಗೆ ಮಾತ್ರ ಜಿನೀವಾ ಸ್ಥಳವೇ ಇಷ್ಟ

ಸಂಯುಕ್ತ ಸಮಿತಿಯ ಕೆಲಸ ಮುಗಿಯಿತು.

ಲಂಡನ್ ತಾ|| ೧೭— ಇಲ್ಲಿ ನಡೆದ ಸಂಯುಕ್ತ ಸಮಿತಿಯ ಕೊನೆಯ ಸಭೆಯ ಕೆಲಸ ಮುಗಿಯಿತು ಹೊಸ್ಸರಿಗೆ ಕೃತಜ್ಞತೆ ಅಭಿನಂದನೆಗಳನ್ನರ್ಪಿಸುವದು ಆಯಿತು ಬ್ರಹ್ಮದೇಶದ ಬೇರ್ಪಾಟಿನ ಪ್ರಶ್ನದ ವಿಚಾರವೊಂದು ಮಾತ್ರ ಉಳಿದಿದೆ ಅದೊಂದಾದರೆ ಎಲ್ಲವೂ ಮುಗಿದಂತಾಗುವದು

ಹುಬ್ಬಳ್ಳಿ

ಹುಬ್ಬಳ್ಳಿಯ ಕನ್ನಡ ಗಂಡು ಹುಡುಗರ ೫ನೇ ನಂಬರ ಶಾಲೆಯ ಮಾಸ್ತರರಾದ ಶ್ರೀ ಶಿಡಂಬಿಕರ ಇವರು ತಮ್ಮ ೬ನೇ ವರ್ಗದ ವಿದ್ಯಾರ್ಥಿಗಳನ್ನು ರೇಲ್ವೆ ಕನ್‌ಸೆಶನ್ ಪಡೆದು ಧಾರವಾಡಕ್ಕೆ ಕರಕೊಂಡು ಬಂದು ಇಲ್ಲಿಯ ಮುಖ್ಯ ಮುಖ್ಯ ಸ್ಥಳಗಳನ್ನು ತೋರಿಸಿಕೊಂಡು ಹೋದರು ತೀರ ಸಣ್ಣ ವಯಸ್ಸಿನ ಮಕ್ಕಳಿಗೆ ಹೀಗೆ ಪ್ರವಾಸಕ್ಕೆ ಹಾಗು ಸೃಷ್ಟಿನಿರೀಕ್ಷಣೆಗೆ ಅನುಕೂಲ ಒದಗಿಸಿ ಕೊಡುವದು ಸ್ತುತ್ಯವಾಗಿದೆ

ಬಾಗಲಕೋಟೆ ಪತ್ರ

ಮಂಗಳವಾರ ರಾತ್ರಿ ದೊಡ್ಡ ಮಳೆಯಾಗಿ ಹೊರಗೆ ಚಪ್ಪರದೊಳಗಿನವರಿಗೆ ಪೇಚಾಟವಾಯಿತು ಅನಂತರ ಈಗ ೩ ದಿನ ಮೋಡ ಮುಸುಕಿ ಮೂಢಣದ ಚಳಿಗಾಳಿಯು ಬಿಟ್ಟು ಪ್ಲೇಗಿನ ಉಪದ್ರವಕ್ಕೆ ಪುಟಕೊಟ್ಟಂತಾಗಿದೆ.

ಸೀತಿಮಾನಿಯಲ್ಲಿ ಸಾಂಗವಾಗ ಬೇಕಿದ್ದ "ನಕ್ಷತ್ರ ಇಷ್ಟಿಯು'' ನಿಂತಿರುವದೆಂದೂ ಅದರ ಯಜಮಾನ್ಯವನ್ನು ವಹಿಸತಕ್ಕವರಾದ ಬಳ್ಳಾರಿಯ ವೇ|| ಮಳಗಿ ಪಾಂಡುರಂಗಾಚಾರ್ಯರು ಅದನ್ನು ಅಲ್ಲಿ ತಮ್ಮ ಬಳ್ಳಾರಿ ಪ್ರಾಂತದಲ್ಲಿಯೇ ಜರಗಿಸಬೇಕೆಂದು ಅತ್ತ ಕಡೆಗೆ ಹೊರಟು ಹೋದರೆಂದೂ ಸುದ್ದಿಯಾಗಿದೆ

ಅಸ್ಪೃಶ್ಯತಾ ವಿಷಯವನ್ನು ವಿಚಾರಿಸುವ ಕುರಿತು ಸಾತಾರದಲ್ಲಿ ನೆರೆಯಲಿರುವ ಸನಾತನಿಯರ ಪರಿಷತ್ತಿಗೆ ಇಲ್ಲಿಯ ಕೆಲ ವಿದ್ವದ್ವರ್ಯರೂ ಹೋಗಬೇಕೆಂದು ಗೊತ್ತು ಮಾಡಿಕೊಂಡಿದ್ದಾರೆ ಗೀತಾ ಪ್ರವಚನಕಾರರಾದ ಇಲ್ಲಿಯ ವೇ|| ಮಳಗಿ ವೆಂಕಣ್ಣಾಚಾರ್ಯರು ಸತ್ಕಾರ್ಯಗಳಿಗೆ ವಿನಿಯೋಗಿಸಲು ಅನುಕೂಲವಾಗಿರುವಂಥ ಒಂದು ನಿಧಿಯನ್ನು ಏರ್ಪಡಿಸುವ ಉದ್ದೇಶದಿಂದ ಖಾಸಗಿ ಸ್ವರೂಪದ ಲಾಟರಿಯನ್ನು ಹೊರಡಿಸಬೇಕೆಂದು ಯತ್ನ ನಡಿಸಿರುವರು ಅವರ ಈ ಕಾರ್ಯದಲ್ಲಿ ತಾವೂ ನೆರವಾಗುವೆವೆನ್ನುವ ಊರೊಳಗಿನ ಸದ್ಗೃಹಸ್ಥರ ಸಹಿ ಕೂಡಿಸುತ್ತಿರುವರು.

ಮುಂಬೈಯಂತೆ ಮದ್ರಾಸ ಮತ್ತು ಪುಣೆಗಳಲ್ಲಿ ಒಂದೊಂದು ಕರಪ್ಸಿಲೀಗ ಆದರೆ ಚಲವಳಿ ಸಂಘಗಳು ಸ್ಥಾಪಿಸಲ್ಪಟ್ಟಿವೆ

ಪಂಜಾಬ ಸರಕಾರದವರು ಹಳ್ಳಿಯ ಜನರ ಏಳಿಗೆಗಾಗಿ ಧ್ವನಿವಾಹಕ ಯಂತ್ರಗಳ ಏರ್ಪಾಡು ಮಾಡುವವರಿದ್ದಾರೆ

ಭಾಯಿ ಪರಮಾನಂದರು ಹಿಂದೂ ಮಹಾಸಭೆಯ ವಿಷಯವಾಗಿ ಅಹಮ್ಮದಾಬಾದಿನಲ್ಲಿ ವ್ಯಾಖ್ಯಾನ ಕೊಡುತ್ತಿದ್ದಾರೆ

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತು ಕ್ರಿಮಿನಾಶಕ ದಂತಮಂಜನ.

ಈ ಕಂಪನಿಯು ಬಳ್ಳಾರಿಯಿಂದ ಗದಗಿಗೆ ಬಂದಿರುತ್ತದೆ. ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು.



ಕರ್ನಾಟಕ ಕೆಮಿಕಲ್ ವರ್ಕ್ಸ — ಗದಗ.

ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು. ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು:— ಧಾರವಾಡ ಫಾರ್ಮಸಿ ಹಾಗೂ ಪಾಟೀಲ ಫಾರ್ಮಸಿ.

ಡಾ. ಕುಲಕರ್ಣಿಯವರ ೧೧-೧೧ ಲ್ಯಾಬೋರೇಟರಿ ನಂಬರ ೧೨

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೬ ದಿವಸದಲ್ಲಿಯೇ ಆಚಟ ಗುಣ ಅರ್ಧ ಕಿಮ್ಮತ್ತು ನಾರು ಕೀಳಿಸಿಕೊಳ್ಳಿ. ವ್ಹಿ. ಪಿ. ಯಿಂದ ಕಳಿಸುತ್ತೇವೆ. ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ— ರಾಘವ ಭಾವ ಕಸಿಗೋಳಕ ಜಿ. ಬೆಳಗಾವ

ಕೇವಲ ನಾಲ್ಕೇ ದಿವಸ! ಡಬಲ್ ಪ್ರೋಗ್ರಾಮ ಕೇವಲ ನಾಲ್ಕೇ ದಿವಸ!

ವಿಜಯ ಸಿನೆ ಮಾ ಧಾರವಾಡ.

ತಾರೀಖು ೧೭ ಶುಕ್ರವಾರದಿಂದ ಫಕ್ತ ೪ ದಿವಸ

ಸರಸ್ವತಿ ಫಿಲ್ಮ ಕಂ ಸುಪ್ರಸಿದ್ಧ ಮಾತಾಡುವ ಹಾಡುವ ಚಿತ್ರಪಟ.

ಶ್ಯಾಮಸುಂದರ

ಮತ್ತು ಗ್ರಾಮಫೋನ ರಿಕಾರ್ಡುಗಳಲ್ಲಿ ಪ್ರಸಿದ್ಧಿಯನ್ನು ಪಡೆದ ಬಾಯಿ ಸುಂದರಾಬಾಯಿ ಇವರ ಗಾಯನವನ್ನು ಸ್ಕ್ರೀನಿನ ಮೇಲೆ ಕೇಳಿರಿ

ವೇಳೆ:— ೭, ೧೦-೩೦ಕ್ಕೆ ರವಿವಾರ, ಮಂಗಳವಾರ ಹಗಲು ೪ ಕ್ಕೆ

Moderate fees! ***Excellant Results!!***

THE NEW COACHING CLASSES

For High School & College Students

Fort Dharwar N R Sunkad B A. D R. Kengeur B A.

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು. ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೫-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೋ
ಪತ್ತಾರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } **ಅಸ್ಪೃಶ್ಯತಾ ನಿವಾರಣೆ.** { ಪ್ರಚಾರಕರಿಗೆ ಸುಸಮಯ

(ಕೊಟ್ನೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ಮೊದಲಾದ ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಚನೆಗಳೂ ಇವೆ. ದೊಡ್ಡ ವರಿಂದ ಪ್ರಶಂಸಾ ಪತ್ರಗಳು ಬಂದಿವೆ. ಅಂಚೆಸ್ಟಿಲ್ಲದೆ ವ್ಹಿ. ಪಿ. ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಘಗಳಿಗೂ ಹೆಚ್ಚಿನ ಕಮೀಶನ್

೬-೧೧-೩೩ ಟಿ ಬಿ ಕೇಶವರಾವ್ ಪ್ರಾಪ್ರೈಟರ ಜೀವಿ ಬಳ್ಳಾರಿ.

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬರೆಯಿರಿ

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ

ಸಂಪಾದಕರು:— ಮೊಹರೆ ಹಣಮಂತರಾಯರು.

ಸಪ್ಟೆಂಬರ ೩ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡಹತ್ತಿದೆ. ವಿಚಾರ ಪರಿಪೂರ್ಣವಾದ ಲೇಖಗಳೂ, ಖಂಡ ತುಂಡಿನ ನುಡಿಗಳೂ, ಬಿಸಿ ಬಿಸಿ ಸುದ್ದಿಗಳೂ ಬೇಕಾಗಿದ್ದರೆ ಇದನ್ನೇ ಓದಿರಿ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೧೨—೦

ವ್ಯವಸ್ಥಾಪಕ— 'ಕರ್ನಾಟಕ ವೈಭವ' ವಿಜಾಪುರ.

" ಬದರೀ ನಾರಾಯಣನ ದರ್ಶನ "

ಗೌರೀ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ, ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ. ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶಗಳಿರುವವು. ಬೆಲೆ—೦-೬-೬ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ

ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟೆ ಧಾರವಾಡ

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೆ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ ಕಲ್ಲು] ಗಳು ಬೇಕಾಗಿವೆ. ಮಾರುವವರು ಕನ್ನಡಿಗ ಕಾರ್ಯಾಲಯದಲ್ಲಿ ತಿಳಿಸಬೇಕು

C/o ಕನ್ನಡಿಗ ಕಾರ್ಯಾಲಯ



ಮಹನೀಯರ ಇತ್ತ ಲಕ್ಷ್ಯಕೊಡಿರಿ.

ಕಿರ್ಲೋಸ್ಕರ ಕಬ್ಬಿಣ ಫರ್ನಿಚರ

ಆಲ್ಪದರದಲ್ಲಿ

ಸ್ಪ್ರಿಂಗ ಕಾಟು, ಖುರ್ಚಿ, ಸ್ಟೂಲ, ತೊಟ್ಟಿಲ ಇತ್ಯಾದಿ

ಅತ್ಯುತ್ತಮ ಮಾಲ

ಅತಿ ಸಣ್ಣ ಜಾಗೆಯಲ್ಲಿ ಸಹ ಇವುಗಳ ಉಪಯೋಗವು ಹಳೇ ಆಗುವದು ಹೆಚ್ಚಿನ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಿರ್ಲೋಸ್ಕರ ಬಂಧುಗಳು ಲಿ. } ಕಿರ್ಲೋಸ್ಕರ ವಾಡಿ. ಜಿ (ಸಾತಾರಾ)

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ನಂ. ಬಿ. ೨೭೮೮

ನಿತ್ಯಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:— ಆಲೂರ ವೆಂಕಟರಾಯರು

ಸೋಮವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಮಂಗಳವಾರ ಮಾರ್ಗಶಿರ ಶುದ್ಧ ೪ ಶಕೆ ೧೮೫೫ ತಾ॥ ೨೮-೧೧-೩೩ [ಸಂಚಿಕೆ ೧೭೭

ಇನಸ್ಯುರನ್ಸ

ಜೀವವಿಮೆ ಇಳಿಸಲು ದಿ ಯುನಾಯಿಟೆಡ್ ಕರ್ನಾಟಕ ಇನಸ್ಯುರನ್ಸ ಕಂಪನಿಯೇ ಉತ್ತಮವಾದುದು.

ಇನಸ್ಯುರನ್ಸ

ಸ್ವದೇಶದ ಹಣವನ್ನು ಸ್ವದೇಶದಲ್ಲಿಯೇ ಉಳಿಸಬೇಕಾದರೆ, ದಿ ಯುನಾಯಿಟೆಡ್ ಕರ್ನಾಟಕ ಇ. ಕಂ. ಲಿ. ಧಾರವಾಡ ಇದರಲ್ಲಿಯೇ ವಿಮೆ ಇಳಿಸಿರಿ.

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ॥ ೨೫-೮-೩೩ } ಕೃಷ್ಣರಾವ ಅಂಕಲಿಗಿ ಮ್ಯಾನೇಜಿಂಗ ಡಾಯರೆಕ್ಟರ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ವಡಿಕೆಯ ಬಾಗಿಲು ತಯಾರಾಗುತ್ತವೆ

ಉದ್ಯೋಗವ ಬೇಕೆ?

ಸೋವೀ ದರದಲ್ಲಿ, ಎಣ್ಣಿ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ

(೧) ಬಿಳೀ, ಹಳದಿ, ಕೆಂಪು ಚಿಮಣಿಯೆಣ್ಣಿ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮ್ಯುನಿಜ್ ಫೇಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋವಿ ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಬಕಾರ (೫) ಮೋಟಾರ ವಸ್ತು ಬಸ್ಸುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡಿಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝ್ಯಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುತ್ತದೆ. ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ವಿಶೇಷ ಸೂ. ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು

ಹುಂಡೇಕರ ಯಕಲಾಸಪೂರ ಆ್ಯಂಡ ಕೋ ದೇವಕರಣ ಮ್ಯಾನ್ಶನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**

ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣಿ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದ್ದುದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ ಕೆ ಟೋಣಪಿ ಆ್ಯಂಡ ಕಂಪನಿ, ಕೊಪ್ಪೀಕರ ರೋಡ, ಹುಬ್ಬಳ್ಳಿ

ವಿಜಯನಗರ ಸಾಮ್ರಾಜ್ಯ ಸ್ಮಾರಕ ಪ್ರಾಸ್ತಾವಿಕ ಸಭೆಯು.

ಹುಬ್ಬಳ್ಳಿಯ ವಿಜಯನಗರ ಸ್ಮಾರಕ ಸ್ಥಾನಿಕ ಸಂಘದಿಂದ

ಮಹನೀಯರೇ,

೧೯೩೬ಕ್ಕೆ ತುಂಬುವ ೬೦೦ ವರ್ಷಗಳಿಗೆ ಈ ಸಾಮ್ರಾಜ್ಯದ ಸ್ಮಾರಕವನ್ನು ಆದು ನಮ್ಮ ಕರ್ನಾಟಕ ಮತ್ತು ಭಾರತ ಸಂಸ್ಕೃತಿಗೆ ಏರಿಸಿದ ಕಳೆಯ ವೈಭವಕ್ಕನುಸರಿಸಿ ನೆರವೇರಿಸತಕ್ಕದ್ದು. ಪರಿಪೂರ್ಣ ಕಾರ್ಯವು ಮಹತ್ತರವಾದುದು. ಅದನ್ನು ಸಾಂಗವಾಗಿ ಪೂರೈಸಲು ಅನೇಕ ವಿಷಯಗಳನ್ನು ಚರ್ಚಿಸಿ ಗೊತ್ತು ಪಡಿಸಬೇಕಾಗುತ್ತದೆ. ಆದರಿಂದ ಈ ನಮ್ಮ ಕರ್ನಾಟಕದ ಪ್ರಮುಖರನ್ನೆಲ್ಲ ಒಂದು ಪ್ರಾಸ್ತಾವಿಕ ಸಭೆ ಸೇರಿಸಿ ಕಾರ್ಯಕಲಾಪಗಳನ್ನು ಹೊಳವು ಹಾಕಿ ಮುಂದೆ ಡಿಸೆಂಬರ ತಿಂಗಳಲ್ಲಿ ೧೯ನೇ ಸಾಹಿತ್ಯ ಸಮ್ಮೇಲನದ ಅಧಿವೇಶನದ ಕಾಲಕ್ಕೆ ನೆರೆಯಿಸಲಿರುವ ಸ್ಥಾಯಿ ಮಂಡಲ (Central Board) ದ ಮುಂದೆ ಇಟ್ಟುಕೊನೆಯ ಕಾರ್ಯಕಲಾಪ ನಿರ್ಣಯವನ್ನು ಮಾಡುವದು ಯುಕ್ತವಾಗಿದೆ. ಆದರಿಂದ ಇದೇ ತಿಂಗಳ ೨೫, ೨೬ ತಾರೀಖು ಶನಿವಾರ ಆದಿತ್ಯವಾರಗಳಲ್ಲಿ ಹುಬ್ಬಳ್ಳಿಯಲ್ಲಿ ಪ್ರಾಸ್ತಾವಿಕ ಸಭೆಯನ್ನು ಕರೆದಿರುತ್ತೇವೆ. ಕಾರ್ಯಗೌರವವನ್ನರಿತು ತಾವು ಈ ಸಭೆಗೆ ಅತ್ಯವಶ್ಯವಾಗಿ ಬರಬೇಕೆಂದು ನಮ್ಮ ಕೋರಿಕೆ. ತಮಗೆ ಕಾರ್ಯಾಂತರಗಳಿಂದ ಬರುವದಕ್ಕೆ ತೊಡರುಗಳಿದ್ದಲ್ಲಿ ತಮ್ಮ ಆಲೋಚನೆಗಳನ್ನು ತಿಳಿಸಬೇಕು. ತಾವು ಬರುವ ಸಮಯವನ್ನು ಮತ್ತು ಬಂಡಿಯನ್ನು ತಿಳಿಸಬೇಕು. ಸಭೆಯ ಕೆಲಸಗಳು ಶನಿವಾರ ೨೫-೧೧-೩೩ಕ್ಕೆ ಸಂಜೆಯ ೫ ಗಂಟೆಗೆ ಆರಂಭವಾಗುವವು.

ವಿಜಯನಗರದ ಸ್ಮಾರಕ ಸಂಘ ಹುಬ್ಬಳ್ಳಿ } ಸಿದ್ಧರಾಮಪ್ಪ ಪಾವಟೆ, ಅಧ್ಯಕ್ಷರು

ಟೀಪು ಪತ್ರವ್ಯವಹಾರವನ್ನು ಕೆಳಗಿನ ಹೆಸರಿಗೆ ಮಾಡಿರಿ ಪ್ರೊ‌ಖಾಶಿ ಗಣಪತರಾವರು ಕಾರ್ಯದರ್ಶಿ ವಿಜಯನಗರ ಸ್ಮಾರಕ ಸಂಘ. ಹಳೇಹುಬ್ಬಳ್ಳಿ, ಹುಬ್ಬಳ್ಳಿ.

ಮುಂಬೈ-ಮದ್ರಾಸ ವಿಶ್ವವಿದ್ಯಾಲಯಗಳಲ್ಲಿ ನ್ಯಾಯ.

ಶ್ರೀ ಬುಳವಳ್ಳಿ ಎಂಬುವ ಮುಂಬೈ ಮ್ಯಾಟ್ರಿಕ್ಯುಲೇಟನಿಗ ಮಂಗಳೂರ ಕಾಲೇಜದಲ್ಲಿ ಸೇರಿಸದ್ದರಿಂದ ಆವನು ಮುಂಬೈ ವಿಶ್ವವಿದ್ಯಾಲಯದವರೊಡನೆ ಆ ಬಗ್ಗೆ ಪತ್ರ ವ್ಯವಹಾರ ನಡಿಸಿದನು, ಅವರು ಮದ್ರಾಸ ವಿಶ್ವವಿದ್ಯಾಲಯದವರೊಡನೆ ಪತ್ರವ್ಯವಹಾರ ನಡಿಸಿದರೂ ಅವರು ಮಂಗಳೂರ ಕಾಲೇಜಿನ ಅಧಿಕಾರಿಗಳ ಮಾತನ್ನೇ ಎತ್ತಿ ಹಿಡಿದದ್ದರಿಂದ ಮುಂಬೈ ವಿಶ್ವವಿದ್ಯಾಲಯದವರು ಮದ್ರಾಸ ಮ್ಯಾಟ್ರಿಕ್ಯುಲೇಟರಿಗೆ ತಮ್ಮ ಕಾಲೇಜಗಳಲ್ಲಿ ಸೇರಿಸಿಕೊಳ್ಳಲಾಗಲೆಂದು ನಿರ್ಣಯಿಸಿದ್ದರಿಂದ ಮುಂಬೈಗೆ ಕಾಲೇಜ ಶಿಕ್ಷಣಕ್ಕಾಗಿ ಹೋಗಿದ್ದ ಮದ್ರಾಸ ವಿದ್ಯಾರ್ಥಿಗಳು ತಿರುಗಿ ನಡೆದರಂತ

ಅಂಜಿದರೇಕೆ?

ರಾಜಹಂಸದಲ್ಲಿ ೧೫ ಮತ್ತು ೧೬ನೆಯ ತಾರೀಖುಗಳಲ್ಲಿ ಶ್ಯಾಮಸುಂದರ ಚಿತ್ರಪಟದ ವೇಳೆ ಓರ್ವ ಪ್ರೇಕ್ಷಕನು ಸುಳ್ಳೇ ಟೀಕೆ ಮಾಡಿದ್ದರಿಂದ ವಿಜಯ ಸಿನೇಮಾದ ಮಾಲಕರೂ ಸರಸ್ವತಿ ಫಿಲ್ಮ ಕಂಪನಿಯ ಪ್ರತಿನಿಧಿಗಳು ಆ ಪ್ರೇಕ್ಷಕನಿಗೆ ಯಾವ ಭಾಗವು ಕೆಟ್ಟ ಆದೆ ಎಂಬದನ್ನು ತಿಳಿಸಲಿಕ್ಕೆ ಆಮಂತ್ರಣ ಕೊಟ್ಟಿದ್ದರು. ಆದರೆ ಆ ಪ್ರೇಕ್ಷಕನು ಬರಲಿಲ್ಲ. ಹಿಂದಿನಿಂದ ಟೀಕೆ ಮಾಡುವದು ಹೇಡಿತನವಲ್ಲವೇ? ಸತ್ಯವಿದ್ದರೆ ಹೋಗಿ ಯಾವ ತಪ್ಪು ಇದೆಯೋ ಅದನ್ನು ತೋರಿಸಬೇಕಾಗಿತ್ತು ಎಂದು ಸಿನೇಮಾದವರು ಕೇಳುತ್ತಾರೆ

ಕನ್ನಡವು ಬಳಿಕೆಯ ಭಾಷೆಯಾಗಬೇಕು.

ಶಿವಮೊಗ್ಗೆಯ ಕರ್ನಾಟಕ ಸಂಘದ ವಾರ್ಷಿಕ ಉತ್ಸವವು ಶ್ರೀ ಬಿ ಎಂ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಅಯ್ಯನವರು "ಈಗ ಬಳಿಕೆಯಲ್ಲಿ ಇಂಗ್ಲೀಷ ಮತ್ತು ಹಿಂದೀಗೆ ಕೊಡುತ್ತಿರುವ ಪ್ರಾಶಸ್ತ್ಯವನ್ನು ಕನ್ನಡಕ್ಕೆ ಕೊಡಲಿಕ್ಕೆ ಬೇಕು ಮತ್ತು ಆ ದೃಷ್ಟಿಯಿಂದ ಬೆಳಸಿದರೆ ಅದು ಹೆಚ್ಚು ಜನಪ್ರಿಯವಾಗುವದಾಗ" ಹೇಳಿದರು.

ಕಾಂಗ್ರೆಸ ಧೋರಣೆಯು ಈಗ ಬದಲಾಗದು.

ಅಲ್ಹಾಬಾದ ರಾ। ೧೫— **ಪಂಡಿತ ಜವಾಹಿರಲಾಲರು** ತಮ್ಮದೊಂದು ಪ್ರಕಟನೆಯಲ್ಲಿ ಅನ್ನುವದು:— ರಾಷ್ಟ್ರೀಯ ಸಭೆಯ ಕಾರ್ಯಕ್ರಮವು ಪರಿಣಾಮಕಾರಿ ಇದೆ; ಆದರೆ, ಶಾಸನಭಂಗ ನಡಿಸುವಷ್ಟು ಜನರಲ್ಲಿ ಸಿದ್ಧತೆಯಿಲ್ಲ ಸರಕಾರದವರು ಪ್ರಕಟಿಸಿದಕ್ಕಿಂತ ಹೆಚ್ಚು ಜನರು ಕಳೆದ ಎರಡು ತಿಂಗಳಲ್ಲಿಯೇ ಸೆರೆಮನೆ ಕಂಡಿರುವರು. ಬಿಹಾರ ಪ್ರಾಂತದಿಂದಲೇ ೮೦೦ ಜನರು ಸೆರೆವಾಸಕ್ಕೆ ತೆರಳಿರುವರು; ಆದಾಗ್ಯೂ, ಸಾರ್ವತ್ರಿಕ ಶಾಸನ ಭಂಗದ ಚಳವಳಿ ನಡೆಯುವದು ಸಾಧ್ಯವಿಲ್ಲೆಂಬುದನ್ನು ನಾವು ಒಲ್ಲೆವು ಕಾಂಗ್ರೆಸದ ಧೋರಣೆಯು ಅಸಹಕಾರದ್ದು ಇದ್ದು, ಆದರಲ್ಲಿ ಬದಲಾವಣೆಯಾಗುವಂತಿಲ್ಲ. ಕಾಂಗ್ರೆಸ ಕಾರ್ಯಕ್ರಮವನ್ನು ಟೀಕಿಸಿದವರು ಬೇರೆ ದಾರಿಯನ್ನು ಹೇಳಿಲ್ಲ. ಕಾಂಗ್ರೆಸ ಕಾರ್ಯಕ್ರಮದಲ್ಲಿ ಬದಲಾವಣೆ ಬೇಕೆನ್ನುವವರು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿ ಸಭೆಯನ್ನು ನೆರೆಯಿಸಬೇಕು: ಆದರೆ, ಇನ್ನೂ ನನ್ನ ಸೂಚನೆಯನ್ನು ಯಾರೂ ಸ್ವೀಕರಿಸಿದಂತೆ ಕಾಣಲಿಲ್ಲ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯನ್ನು ಡಿಸೆಂಬರ ಒಂದನೇ ಎರಡನೇ ವಾರದಲ್ಲಿ ನಾನು ಕೂಡಿಸುವೆನೆಂದು ಹಬ್ಬಿದ ಸುದ್ದಿಯು ಸುಳ್ಳು ಆದೆ.

ಶ್ರೀ ಮುದವೀಡು ಕೃಷ್ಣರಾಯರ ಮುನ್ನುಡಿಯುಳ್ಳ ಮಲ್ಲಾರಿಯವರ ಸರಸವಾದ ಕನ್ನಡ

ಉರುಟಣೆ.

ಬೆಲೆ ೧ ಆಣೆ

ಕನ್ನಡಿಗ.

ಮಂಗಳವಾರ ತಾರೀಖು ೨೧-೧೧-೧೯೩೩

ಮೊದಲು ಹೆಗ್ಗಣವನ್ನು ಹೊರದೂಡಿರಿ!

ನಮ್ಮ ಇಲಾಖೆಯ ಗವರ್ನರ ದೊರೆಗಳು ಬೇಗನೆ ತಮ್ಮ ಅಧಿಕಾರ ಸೂತ್ರಗಳನ್ನು ಕೆಳಗಿಟ್ಟು ಸ್ವದೇಶಕ್ಕೆ ತೆರಳತಕ್ಕವರಿರುವರಷ್ಟೇ! ತಮ್ಮ ಆಡಳಿತೆಯ ಕೊನೆಕೊನೆಯ ಭಾಗದಲ್ಲಿ ತಮ್ಮ ಮೇಲ್ವಿಚಾರಣಗೊಳಪಟ್ಟ ಪ್ರದೇಶದ ರೈತರ ಹಿತಸಂರಕ್ಷಣೆ ಹಾಗು ಸಂವರ್ಧನೆಯ ವಿಷಯವಾಗಿ ಯಾವದಾದರೊಂದು ನಿಶ್ಚಿತ ಸ್ವರೂಪದ ಯೋಜನೆಯನ್ನು ತಮ್ಮ ಸಂಸ್ಮರಣೀಯ ಸ್ಮಾರಕವಾಗಿ ನಿಲ್ಲಿಸಿ ಹೋಗಬೇಕೆಂಬ ಆತುರತೆಯು ದೊರೆಗಳವರಿಗೆ ಹೊಳೆಯಿತು ಕೂಡಲೆ ಅದರದೊಂದು ಅಸ್ಥಿಪಂಜರವನ್ನು ಸಿದ್ಧಪಡಿಸಿ ಇಲಾಖೆಯೊಳಗಿನ ಪ್ರಮುಖ ಸಹಕಾರಿಗಳೆಂದೆನಿಸುವವರ ಕಡೆಗೆ ಕಳಿಸಲಾಯಿತು ಈ ಸ್ಥೂಲ ಯೋಜನೆಯ ಬಗ್ಗೆ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದು ಕಳಿಸಬೇಕೆಂದು ಸೂಚಿಸಲಾಯಿತು ಹೀಗೆ ಬಂದ ಸೂಚನೆಗಳನ್ನೆಲ್ಲ ಸಮಾಲೋಚಿಸಿ ಸರ್ವ ಸಮ್ಮತವಾಗಬಹುದಾದ ಕೊನೆಯ ಯೋಜನೆಯನ್ನು ಸಿದ್ಧಪಡಿಸಿ ಅದನ್ನೇ ಕಾರ್ಯರಂಗಕ್ಕಿಳಿಸುವ ಸಂಕಲ್ಪವನ್ನು ದೊರೆಗಳವರು ನೂತನ ಪ್ರಕಟಗೊಳಿಸಿದ್ದಾರೆ. [ಗವರ್ನರ ಸಾಹೇಬರ ಈ ಸ್ಥೂಲ ಯೋಜನೆಯೊಳಗಿನ ಕೆಲವು ಮಹತ್ವದ ಸಂಗತಿಗಳನ್ನು ಹೋದ ತಿಂಗಳ ೭ ಹಾಗು ೮ನೇ ತಾರೀಖುಗಳ ಸಂಚಿಕೆಗಳಲ್ಲಿ ನಾವು ಪ್ರಕಟಿಸಿರುವದನ್ನು ವಾಚಕರು ನೋಡಿಕೊಳ್ಳಬಹುದು]

ದೊರೆಗಳವರ ಈ ಸ್ಥೂಲ ಯೋಜನೆಯ ವಿಷಯವಾಗಿ ಶ್ರೀಮಂತ ಸಂಸ್ಥಾನಿಕರಿಂದಾರಂಭ ಮಾಡಿಕೊಂಡು ಅನೇಕಾನೇಕ ಜನ ದೇಶಹಿತಚಿಂತಕರು ತಮ ತಮಗೆ ಯೋಗ್ಯ ಕಂಡ ರೀತಿಯಾಗಿ ಸಲಹೆಗಳನ್ನು ಸಮರ್ಪಿಸಿರುವರೆಂದೂ ಅವುಗಳ ಬಗ್ಗೆ ದೊರೆಗಳವರು ಸಾಮೂಹಿಕವಾಗಿ ಸರ್ವರಿಗೂ ವಂದನೆಗಳನ್ನು ಸಮರ್ಪಿಸಿ ಅವುಗಳೊಳಗಿನ ಯುಕ್ತವಾದ ಸೂಚನೆಗಳು ಅಗತ್ಯವಾಗಿ ಅವಗಾಹನೆಗೆ ತೆಗೆದುಕೊಳ್ಳಲಾಗುವವೆಂಬ ಆಶ್ವಾಸನವು ಈಗ ಪ್ರಸಿದ್ಧವಾಗಿದೆ ಹಾಗೆಯೇ ಯಾವ ಮಹನೀಯರು ಯಾವ ಯಾವ ಬಗೆಯ ಸೂಚನೆಗಳನ್ನು ಮಾಡಿರುವರೆಂಬ ವಿಷಯವಾಗಿ ಅಸೋಸಿಯೇಟೆಡ್ ಪ್ರೆಸ್ ಸುದ್ದಿಗಾರ ಸಮಿತಿಯವರು ಒಂದು ಸಂಕ್ಷಿಪ್ತವಾದ ವಿವರಣೆಯನ್ನೇ ಎಲ್ಲ ಪತ್ರಿಕೆಗಳಿಗೆ ಕಳಿಸಿಕೊಟ್ಟಿರುತ್ತಾರೆ ಈ ವಿವರಣೆಯನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಗ್ರಾಮಸಂಘಟನೆಯ ಅವಶ್ಯಕತೆಯ ವಿಷಯವಾಗಿಯೂ ಅವುಗಳ ಸದ್ಯದ ಹೀನ ದೀನ ಪರಿಸ್ಥಿತಿಯ ವಿಷಯವಾಗಿಯೂ ಬಹುತೇಕ ಎಲ್ಲ ಸೂಚಕರು ನಿರ್ದಾಕ್ಷಿಣ್ಯ ವೃತ್ತಿಯಿಂದ ತಮಗೆ ತೋರಿದ ವಿಧಾಯಕ ಕ್ರಮವನ್ನೇ ಮುಂದರಿಸಿರುವರೆಂಬದು ಕಂಡುಬರುತ್ತದೆ. ಗ್ರಾಮಜೀವನ, ವಿದ್ಯಾಭಿವೃದ್ಧಿ, ಸಹಕಾರ, ಸ್ಥಾನಿಕ ವ್ಯವಸ್ಥೆ, ಆರೋಗ್ಯ, ಗ್ರಾಮಸ್ವಚ್ಛತೆ, ಒಕ್ಕಲತನದ ವ್ಯವಸಾಯಕ್ಕೆ ಪೋಷಕವಾದ ಬೇರೆ ಉದ್ಯೋಗ ಇವೆಲ್ಲ ಸಂಗತಿಗಳ ಸಮಾವೇಶವು ಈ ಗ್ರಾಮಸಂಘಟನೆಯ ಯೋಜನೆಯಲ್ಲಿ ಸೇರಬೇಕಾಗಿ ಬಯಸುವವರೇ ಬಹುಜನರಾಗಿದ್ದಾರೆ. ಮೇಲಾಗಿ ಇವೆಲ್ಲ ಕಾರ್ಯಗಳನ್ನು ಸರಕಾರದವರು ಮುಲಕೀ ಖಾತೆಯ ಅಮಲದಾರರ ಮುಖಾಂತರವಾಗಿಯೇ ಸಾಗಿಸಿ ಹಳ್ಳಿಗಾಡ ಜನರಲ್ಲಿ ಸ್ವಂತ ತಿದ್ದುಪಡೆಯ ವಿಚಾರಗಳನ್ನು ಪ್ರಸಾರಗೊಳಿಸಿ ಸಾಧಿಸಬೇಕೆಂಬುದೇ ಬಹು ಜನರ ಸೂಚನೆಯ ಮಥಿತಾರ್ಥವಾಗಿರುವದು ಕಂಡುಬರುತ್ತದೆ

ಈ ಯೋಜನೆಯಲ್ಲಿ ಅಭಿವ್ಯಕ್ತವಾದ ಗವರ್ನರ ದೊರೆಗಳ ಮನೋದಯವೂ ಆ ಮನೋದಯಕ್ಕೆ ಬೆಂಬಲವಾಗಿ ಹೊರಗೆ ಬಂದಿರುವ ಪ್ರಮುಖ ನಾಗರಿಕರ ಸೂಚನೆಗಳೂ ಈ ಇಲಾಖೆಯ ಹಳ್ಳಿಗಳಲ್ಲಿ ವಾಸ ಮಾಡಿಕೊಂಡಿರುವ ಲಕ್ಷಾವಧಿ ಬಡ ರೈತರ ಹಿತ ಬುದ್ಧಿಯಿಂದಲೇ ನಿಸ್ಸಂದೇಹವಾಗಿ ಪ್ರೇರಿತವಾಗಿರುವವೆಂಬ ಮಾತನ್ನು ನಾವು ಒಪ್ಪಿಕೊಳ್ಳುತ್ತೇವೆ ಹಾಗು ಈ ಯೋಜನೆಯು ಅವಶ್ಯಕವಾದ ತಿದ್ದುಪಾಟುಗಳನ್ನು ಹೊಂದಿ ಪ್ರಚಾರದಲ್ಲಿ ಬಂದರೆ ಗವರ್ನರ ದೊರೆಗಳ ಸದುದ್ದೇಶಗಳು ವಸ್ತುತಃ ಸಫಲವಾಗುವಂತೆ ಇದರ ಕಾರ್ಯಕಲಾಪಗಳು ನಡೆದರೆ— ಒಡಗ್ರಾಮ ನಿವಾಸಿಗಳಾದವರ ದುಃಖ ಪರಂಪರೆಯಲ್ಲಿ ಅಲ್ಪಸ್ವಲ್ಪ ಸುಖ ಸಮಾಧಾನವು ತಲೆದೋರಬಹುದೆಂಬುದನ್ನೂ ನಾವು ನಿರ್ದಾಕ್ಷಿಣ್ಯವಾಗಿ ಒಪ್ಪಿಕೊಳ್ಳುತ್ತೇವೆ ಆದರೆ ಅತ್ಯಂತ ಸದುದ್ದೇಶದಿಂದ ಹೂಡಲಾಗುವ ಇವೆಲ್ಲ ಉಪಾಯಗಳು ರೈತರ ಮೂಲ ದುಃಸ್ಥಿತಿಯ ಪರಿಹಾರಕ್ಕೆ ಎಷ್ಟು ಮಾತ್ರವೂ ಸಹಾಯವಾಗಲಾರವೆಂಬುದನ್ನು ಅತ್ಯಂತ ನಮ್ರ ಭಾವನೆಯಿಂದ ನಾವು ಗವರ್ನರ ದೊರೆಗಳ ಮುಂದೆ ಮಂಡಿಸುವ ಸಾಹಸ ಮಾಡಬೇಕೆನ್ನುತ್ತೇವೆ ಮನೆಯ ತಳದಲ್ಲಿಯೇ ದೊಗರು ಮಾಡಿ ಒಳಗೆ ಅವಿತುಕೊಂಡಿರುವ ಹೆಗ್ಗಣವನ್ನು ಹೊರದೂಡಿ ಹೊಡೆದು ಹಾಕದೆ ಮೇಲಿಂದ ಮೇಲೆ ಹೆಗ್ಗಣ ಕೊರೆದ ಬಾಯಿಗೆ ಕಲ್ಲು ಮಣ್ಣಿನ ಮೆತ್ತಿಗೆ ಸಾರಣೆಯನ್ನು ಮಾಡುವ ಉಪಾಯವನ್ನೇ ಈ ಯೋಜನೆಯು ಹೋಲಬಹುದೆಂಬ ಹೆದರಿಕೆಯು ನಮ್ಮ ಅಂತಃಕರಣಕ್ಕೆ ಹೊಳೆದ ಮೂಲಕ ಈ ಬಗೆಯ ವಿಧಾನವನ್ನು ಮಾಡಬೇಕಾದ ಅವಶ್ಯಕತೆ ಗತ್ಯಂತರವಿಲ್ಲದಾಗಿದೆ

ಮುಂಬಯಿ ಇಲಾಖೆಯ ರೈತರು ಹಿಂದುಸ್ಥಾನದೊಳಗಿನವರೇ ಆಗಿದ್ದಾರೆ ಅದುದರಿಂದ ಇಡೀ ದೇಶಕ್ಕೆ ಅಂಟಿಕೊಂಡಿರುವ ಆರ್ಥಿಕ ದುರ್ದಸೆಯ ಪಿಡುಗು ಇಲ್ಲಿಯ ರೈತರನ್ನೂ ಸೋಂಕಿ ಅವರನ್ನು ಅತ್ಯಂತ ಹೈರಾಣಮಾಡಿ ಬಿಟ್ಟಿದೆ ಹೊಲದಲ್ಲಿ ತಿಂಗಳುಗಟ್ಟಲೆ ದುಡಿದು ದುಃಖಪಟ್ಟು ತಂದ ಕಾಳುಕಡಿ ಮೇವು ಮಿತಿಗಳನ್ನೆಲ್ಲ ಪೇಟೆಗೆ ಹಚ್ಚಿ ಮಾರಿದರೂ ಸರಕಾರದ ತೆರಿಗೆ ಭೂಮಿಯವರ ಲಾವಣಿ ಸಾಲುಗಾರರ ಬಡ್ಡಿ ಇವುಗಳಿಗೆ ಗತಿಯಿಲ್ಲದಂತಾಗಿ ದಷ್ಟು ಪೇಟೆಯ ಧಾರಣೆವಾಸಿಗಳಲ್ಲಿ ಬದಲಾವಣೆಯಾಗಿರುವದರಿಂದ ಉಂಟಾಗಿರುವ ದುರ್ದಸೆಯನ್ನು ದೂರಮಾಡುವ ಉಪಾಯವನ್ನು ಮೊದಲು ಕೈಕೊಳ್ಳದೆ ಬೇರೆ ಗತಿಯೇನಿದೆ? ಈ ಪರಿಸ್ಥಿತಿಗೆ ಹಿಂದುಸ್ಥಾನ ಸರಕಾರದ ಆರ್ಥಿಕ ಧೋರಣೆಯೇ ಸಂಪೂರ್ಣವಾಗಿ ಹೊಣೆಯಾಗಿರುವದೆಂಬ ಮಾತನ್ನು ಅನೇಕಜನ ಶಾಸ್ತ್ರನಿಷ್ಣಾತರು ಅನೇಕ ಬಾರಿ ಸಿದ್ಧಾಂತವಾಗಿ ಹೇಳಿದ್ದಾರೆ ಇಂದು ಬೇರೆ ಕಡೆಗೆ ಪ್ರಸಿದ್ಧವಾದ ಈಸ್ಟ ಇಂಡಿಯಾ ಕಾಟನ್ ಅಸೋಸಿಯೇಶನದವರು ಹಿಂದುಸ್ಥಾನ ಸರಕಾರಕ್ಕೆ ಕಳಿಸಿದ ತಂತಿಯಲ್ಲಿಯೂ ಇದೇ ಸಂಗತಿಯು ಸಕಾರಣವಾಗಿ ಸಪ್ರಮಾಣವಾಗಿ ವಿವರಿಸಲಾಗಿದೆ ರೂಪಾಯಿಯ ಬೆಲೆಯನ್ನು ಕೃತ್ರಿಮತನದಿಂದ ಏರಿಸಿದ ಈ ದುಷ್ಪರಿಣಾಮವು ಈ ಐದು ವರ್ಷಗಳಲ್ಲಿ ಪೂರ್ತಿ ಅನುಭವಕ್ಕೆ ಬಂದು ಹೋಗಿದೆ ಪ್ರಜೆಗಳ ಪರವಾಗಿ ಹೇಳಿ ಕೇಳಿದ್ದೆಲ್ಲ ಗೋರ್ಕಿಗಂಟಾಗಿ ಹೋಗಿದೆ ಆದುದರಿಂದ ನಮ್ಮ ಗವರ್ನರ ದೊರೆಗಳು ತಮ್ಮ ಈ ಅತ್ಯಂತ ಕಳಕಳಿಯ ಯೋಜನೆಯನ್ನು ರೂಢ ಮಾಡುವ ಯತ್ನದೊಂದಿಗೆ ಹಿಂದುಸ್ಥಾನ ಸರಕಾರದಲ್ಲಿ ತಮ್ಮ ವರ್ಚಸ್ವವನ್ನು ವೆಚ್ಚಮಾಡಿ ರೂಪಾಯಿಯ ಧಾರಣೆಯು ಇಳಿಯುವಂತೆ ಪ್ರಯತ್ನಮಾಡಿದರೆ ಬಹುಮಟ್ಟಿಗೆ ಬಡರೈತರ ಹಿತಮಾಡಿದಂತಾಗುವದೆಂದು ನಾವು ವಿನಿಮಯಪೂರ್ವಕ ಪ್ರಾರ್ಥಿಸುತ್ತೇವೆ

ಗಾಂಧಿಯವರಿಗೆ ನರಿಮನ್ನರ ಬಿನ್ನಪ ಪತ್ರ.

ಮಹಾತ್ಮರಿಗೆ ಬರೆದ ಬಿನ್ನಪ ಪತ್ರದಲ್ಲಿ ಶ್ರೀ ನರೀಮನ್ನರು ಅನ್ನುವದೇನೆ: ಬಿಳಿಯ ಪತ್ರಿಕೆಯ ವಿಷಯದ ಅಸ್ಪೃಶ್ಯತೆಯನ್ನು ತೋರಿಸುವದೊಂದೇ ಈಗ ನಾವು ಮಾಡತಕ್ಕ ಮುಖ್ಯ ಕಾರ್ಯ ಸಾಯವನ್ನ ಕಮೀಶನ್ನ ವೇಳೆಯಲ್ಲಿ ಕಾಂಗ್ರೆಸದವರು ನಡಿಸಿದ ಬಹಿಷ್ಕಾರ ಚಳವಳಿಯ ಅರ್ಧದಷ್ಟಾದರೂ ಗದ್ದಲವನ್ನು ನಾವೀಗ ಬಿಳಿಯ ಪತ್ರಿಕೆಯ ಬಗ್ಗೆ ಎಬ್ಬಿಸಲಿಕ್ಕೆ ಶಕ್ಯವಾದರೆ, ಕಾಂಗ್ರೆಸಿನ ಮರ್ಯಾದೆ ಮತ್ತು ಧ್ಯೇಯವನ್ನು ಕಾಯ್ದುಕೊಂಡು ಬಿಳಿಯ ಪತ್ರಿಕೆಯು ತಳವನ್ನೇ ಅಪ್ಪರಿಸದಂತಾಗುವದು ರಾಷ್ಟ್ರದ ಮೇಲೆ ಒದಗಿ ಬರುವ ಈ ಸಂಕಟದಿಂದ ಬಿಡುಗಡೆ ಹೊಂದುವ ಅಥವಾ ಆ ಸಂಕಟವು ಕೆಲಮಟ್ಟಿಗಾದರೂ ಮೆತ್ತಗಾಗುವ ಆಸೆಯು ತಟಸ್ಥರಿರುವರಿಗೆ ಅರಿಯುವದಿಲ್ಲ ಈ ಮೇರೆಗೆ ಬಿಳಿಯ ಪತ್ರಿಕೆಯು ಹೊಟ್ಟು ಹಾರಿಸುತ ರಾಜಕಾರ್ಯದಲ್ಲಿ ಮುಸಲ್ಮಾನ-ಹಿಂದೂ ಶೀಖ-ಅಸ್ಪೃಶ್ಯ ಅವರೆಲ್ಲರೂ ಒಮ್ಮತದಿಂದ ಒಂದುಗೂಡುವರು ಈ ಚಳವಳಿಯ ತೀವ್ರಗೊಳ್ಳಲಿಕ್ಕೆ ಮಹಾತ್ಮರೇ ಯೋಗ್ಯ ವರರು, ಆದ್ದರಿಂದ ಹರಿಜನ ಕಾರ್ಯಕರ್ತರು ಈ ಕೆಲಸಕ್ಕಾಗಿ ಮಹಾತ್ಮರನ್ನು ಬಿಡುಗಡೆ ಮಾಡಿ ಎಲ್ಲ ಪಕ್ಷದವರು ಐಕ್ಯ ಪರಿಷತ್ತನ್ನು ನೆರೆಯಿಸಿ ಈ ಕೆಲಸವನ್ನವರು ಕೈಕೊಳ್ಳುವಂತೆ ಮಾಡಬೇಕು ರಾಜಕೀಯ ದೃಷ್ಟಿಯಿಂದ ಒಂದಾಗಿ ಕೆಲಸನಡೆಸಿದರೆ ಸಾಮ್ರಾಜ್ಯದ ರಾಜಕಾರ್ಯಗಳಲ್ಲಿ ಹಿಂದುಸ್ಥಾನಕ್ಕೆ ಸಿಗದ ವಸ್ತು ಯಾವುದು? ಅರ್ಧಾತ್ ಇದಕ್ಕೆ ಬೇಕಾದುದು ನಿಷೇಧ ಚಳವಳಿಯು! ರಾಷ್ಟ್ರದ ಮುಖಂಡರು ಇದಕ್ಕೊಪ್ಪಿದರೆ ಮುಂಬೈ ಪಟ್ಟಣವು ಈ ಕಾರ್ಯವನ್ನು ಯಶಸ್ಕರವಾಗಿ ಕೈಕೊಳ್ಳಬಹುದು. ಹಿಂದೀ ರಾಜಕಾರ್ಯವೆಂಬ ಹಡಗವನ್ನು ಸುರಕ್ಷಿತವಾದ ಬಂದರಕ್ಕೆ ಮುಟ್ಟಿಸುವ ಒಂದೇ ಒಂದಾದ ಸಂಧಿಯನ್ನು ರಾಜಕಾರ್ಯಜ್ಞರು ಕಳೆದ ಕೊಳ್ಳಲರಿಯರೆಂದು ನನ್ನ ಆಸೆ

ಕಾಂಗ್ರೆಸ್ಸನ್ನು ಕಸುವು ಗೊಳಿಸಿರಿ.

ಕಾಂಗ್ರೆಸಬಗ್ಗೆ ಲಾಹೋರ ಟ್ರಿಬ್ಯೂನ ಪತ್ರಿಕೆಯ ಸುದ್ದಿಗಾರನಿಗೆ ಹೇಳುವಾಗ ಡಾ॰ ಸತ್ಯಪಾಲರು ಅನ್ನುವದು:— ಈಗ ಪ್ರಾಂತದಲ್ಲಿ ಕಾಂಗ್ರೆಸ ಬಗ್ಗೆ ನಿರಾಶೆಯ ಮೋಡ ಕವಿದಿದೆ ಸರಕಾರದವರ ಬಲುಮೆಯ ಆಳಿಕೆಯನ್ನು ನಷ್ಟಗೊಳಿಸುವದೇ ಮೇಲಾದ ಉಪಾಯ ಇಂಥ ಕಟ್ಟಳೆಗಳ ಬಗ್ಗೆ ಜನಮತವನ್ನು ಜಾಗೃತಪಡಿಸಿ ದೊಡ್ಡ ಹುಲುಬು ಎಬ್ಬಿಸುವದೇ ಈಗಿನ ಮುಖ್ಯ ಕೆಲಸ ರಾಷ್ಟ್ರವು ಮಹಾತ್ಮರ ಹೇಳಿಕೆಯಂತೆ ನಡೆದಿದ್ದರೆ ನಮ್ಮ ಜನಾಂಗವು ಹೆಚ್ಚು ಬಲಕಟ್ಟಾಗಬಹುದಾಗಿತ್ತು ಆದರೆ, ಮುಖದ ಮುಂದೆ ಗುದ್ದಿದಂಥ ಮಾತುಗಳನ್ನಾಡಿ ಆತ್ಮಲಿನ ಶಕ್ತಿಯನ್ನು ಕೂಡ ಉತ್ಸಾರಿಸದ ಅನೇಕರು ಮಹಾತ್ಮರ ಅನುಯಾಯಿಗಳಲ್ಲಿರುವ ಮೂಲಕ ಹೀಗಾಗಿದೆ ಮೊದಲು ಕಾಂಗ್ರೆಸಕ್ಕೆ ಯೋಗ್ಯವಾದ ಸ್ಥಾನವನ್ನು ದೊರಕಿಸಿಕೊಟ್ಟು ಆ ಮೇಲೆ ಅದರ ಹೊಟ್ಟೆಯೊಳಗೆ ಹಲವು ಪಂಗಡಗಳು ಹುಟ್ಟಿದರೆ ಏನೂ ಅಡ್ಡಿ ಇಲ್ಲ

ಚಿತ್ರದುರ್ಗದ ಸಮಾಚಾರ

ತಾ॥ ೧೯-೧೧-೩೩—ಚಿತ್ರದುರ್ಗದ ೩ನೇ ವರ್ಗದ ನ್ಯಾಯಾಧೀಶರಾದ ಮ॥ ರಾ॥ ವೇಣುಗೋಪಾಲ ಮುದಲಿಯಾರವರ ಧರ್ಮ ಪತ್ನಿಯವರು ತಾ॥ ೧೭-೧೧-೧೯೩೩ ನೇ ಶುಕ್ರವಾರ ಮಧ್ಯಾಹ್ನ ಎಣ್ಣೆಯ ಒಲೆಯ ಮೇಲೆ ಕಾಫಿ ಮಾಡುತ್ತಿರುವಾಗ ಬೆಂಕಿ ತಗಲಿ ಅವರ ಎಡಮೈ ಮೇಲ್ಭಾಗವು ಸುಟ್ಟು ಗಾಯವಾಗಿರುವುದಾಗಿ ತಿಳಿಯುತ್ತದೆ ಅವರನ್ನು ಆಸ್ಪತ್ರೆಗೆ ಸಾಗಿಸಿರುತ್ತಾರಂತೆ ಅವರಿಗೆ ಗುಣವಾಗಿ ಅವರು ಮೊದಲಿನ ಆರೋಗ್ಯ ಸ್ಥಿತಿಗೆ ಬರಲೆಂದು ಎಲ್ಲರೂ ಹಾರೈಸುತ್ತಾರೆ

ಹಿರಿಯೂರು ತಾಲೂಕು ಮರಸಕಲ್ ಗ್ರಾಮದ ಪಟೇಲರಾದ ಮ॥ ರಾ॥ ರಾಮದಾಸರವರ ಎರಡು ಕಣ್ಣುಗಳನ್ನು ಯಾರೋ ದುರಾತ್ಮರು ಸೂಜಿಗಳನ್ನು ಚುಚ್ಚಿ ಅಭದ್ರ ಪಡಿಸಿದ್ದರ ಮೇಲೆ ರಕ್ಷಣ ಖಾತೆಯ ಅಧಿಕಾರಿಗಳು ಕೆಲವು ಜನಗಳ ಮೇಲೆ ಆಪಾದನೆಯನ್ನಿಟ್ಟು ಮ॥ ರಾ॥ ರಾಮದಾಸರವರ ಪರವಾಗಿ ಚಿತ್ರದುರ್ಗದ ಜಿಲ್ಲಾಧಿಕಾರಿಗಳ ನ್ಯಾಯಸ್ಥಾನದಲ್ಲಿ ವಿಚಾರಣೆಯನ್ನು ಹೂಡಿದ್ದರು ಕೆಲವು ಕಾಲ ವಿಚಾರಣೆ ನಡೆದು ಆಪಾದಕರ ಪರವಾಗಿ ಸಾಕಷ್ಟು ಆಧಾರಗಳಿಲ್ಲವೆಂಬ ಕಾರಣದಿಂದ ನ್ಯಾಯಾಧೀಶರು ಅಪರಾಧಿಗಳನ್ನೆಲ್ಲ ಬಿಟ್ಟು ಕೊಟ್ಟರು

ಚಿತ್ರದುರ್ಗದಲ್ಲಿ ಪ್ಲೇಗಿನ ಹಾವಳಿಯು ಇನ್ನೂ ಕಡಿಮೆಯಾಗಿಲ್ಲ ಹೊಸ ತಗಲುವಿಕೆಗಳೂ ಹೊಸ ಮರಣಗಳೂ ಇದ್ದೇ ಇವೆ ಮಲೇರಿಯಾ ಜ್ವರವಂತೂ ಪ್ರತಿ ಮನೆಯಲ್ಲಿ ಪ್ರವೇಶಿಸಿದೆ ಚಿತ್ರದುರ್ಗದ ಕೋಟೆಯ ಅಂಚೇ ಕಚೇರಿಯು ಮುಚ್ಚಲ್ಪಟ್ಟು ಇಲ್ಲಿನ ಮುಖ್ಯ ಅಂಚೇ ಕಚೇರಿಗೆ ಸೇರಿಸಲ್ಪಟ್ಟಿದೆ ಇಲ್ಲಿಯ ಫಾರೆಸ್ಟ ಲ್ಯಾಂಡ್ ಎಂಬ ಬೆಳವಣಿಗೆಯಲ್ಲಿ ಅನೇಕ ವಕೀಲರೂ, ವ್ಯಾಪಾರಸ್ಥರೂ ಸರಕಾರಿ ನೌಕರರೂ ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡುತ್ತಾ ಇದ್ದಾರೆ ಅವರಿಗೆ ಹತ್ತಿರದಲ್ಲಿ ಒಂದು ಅಂಚೇ ಕಚೇರಿಯು ಇರುವುದು ನ್ಯಾಯವಾಗಿರುತ್ತದೆ ಈ ವಿಚಾರದಲ್ಲಿ ಕೆಲವು ನ್ಯಾಯವಾದಿಗಳು ಬೆಂಗಳೂರು ವಿಭಾಗದ ಅಂಚೇ ಕಚೇರಿಗಳ ಮುಖ್ಯಾಧಿಕಾರಿಗಳ ಕಡೆಗೆ ಬರೆದುಕೊಂಡಿದ್ದಾರೆ ಜನಗಳ ಈ ಬೇಡಿಕೆಯನ್ನು ಬೇಗನೆ ಪೂರೈಸಿ ಕೊಡುವುದು ಸೂಕ್ತವಾಗಿರುತ್ತದೆ ಏನು ಮಾಡುವರೋ ನೋಡಬೇಕು.

ಬಳ್ಳಾರಿಯ ಪತ್ರ.

[ನಮ್ಮ ಸ್ವಂತ ಸುದ್ದಿಗಾರರಿಂದ]

ತಾ॥ ೨೦-೧೧ ೩೩ ಮಹಾತ್ಮಾ ಗಾಂಧಿಯವರ ಜನ್ಮದಿನ [೨-೧೦-೩೩] ಸ್ಥಾಪಿತವಾದ ಈ ವ್ಯಾಯಾಮ ಶಾಲೆಯು ಶ್ರೀ ಶೇಷಾಚಾರ್ಯ ಬುರ್ಲಿ ಇವರ ನೇತೃತ್ವದಲ್ಲಿ ಅಭಿವೃದ್ಧಿಯನ್ನು ಹೊಂದುತ್ತಲೇ ಇದೆ. ವ್ಯಾಯಾಮ ಶಾಲೆಯಲ್ಲಿ ೫೦ ಜನರು ಅಭ್ಯಾಸ ಮಾಡುತ್ತಲಿರುವರು, ಇದರಲ್ಲಿ ೧೪ ಜನ ಹರಿಜನ ಬಾಲಕರಿರುವರು

ವ್ಯಾಯಾಮ ಶಾಲೆಯ ಹಿತೈಷಿಗಳೆಲ್ಲ ೧೮-೧೧-೩೩ ನೇ ದಿವಸ ಸಭೆ ಸೇರಿ ಈ ಕೆಳಗೆ ಕಂಡ ಮಹನೀಯರು ೧೯೩೩-೩೪ ವರ್ಷಕ್ಕೆ ಅಧಿಕಾರಿ ವರ್ಗದಲ್ಲಿ ಇರಬೇಕೆಂದು ನಿರ್ಣಯವಾಯಿತು ಗವ್ವರ್ನಿಂಗ ಬಾಡಿಯಲ್ಲಿ ಊರಿನ ಪ್ರಮುಖರಾದ ವಕೀಲರೂ ವರ್ತಕರೂ ೧೦ ಜನರು ಇದ್ದಾರೆ ಕಾರ್ಯದರ್ಶಿಗಳಲ್ಲಿಬ್ಬರು ಅಭ್ಯಸಿಸುವ ಯುವಕರೂ ಇದ್ದಾರೆ

ಅಧ್ಯಕ್ಷ ಟಿ ಎಚ್ ಎಸ್ ಸದಾಶಿವಯ್ಯಾ ಎಮ್ ಎ ಜಿ

ಕಾರ್ಯದರ್ಶಿ – ಟಿ ನರಸಿಂಹಾಚಾರ ಬಿ ಎಲ್

ಎಸ್ ಪಾರ್ಥಸಾರಥಿ

ಆರ್ ವೆಂಕಟರಾವ

ಕಾರ್ಯಕಾರಿಣೀ ಸಮಿತಿಯಲ್ಲಿ ಊರಿನ ೧೦ ಪ್ರಮುಖರಿರುತ್ತಾರೆ

೧೮ ಪೆ. ದರದ ಘೋರ ಪರಿಣಾಮ.

೧೮ ಪೆನ್ಸ ದರದ ಘೋರ ಪರಿಣಾಮ.

ಮುಂಬಯಿ ತಾ ೨೦— ಈಸ್ಟ ಇಂಡಿಯಾ ಕಾಟನ್ ಅಸೋಸಿಯೇಶನದ ವಿಶಿಷ್ಟ ಸಾಧಾರಣ ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಯು ಸ್ವೀಕೃತವಾಗಿ ವ್ಹಾಯಿಸರಾಯರ ಕಡೆಗೆ ತಂತಿಯಿಂದ ಕಳಿಸಲಾಗಿದೆ— ಒಂದು ರೂಪಾಯಿಗೆ ೧೮ ಪೇನ್ಸಿನ ಪ್ರಮಾಣವು ಈ ಕೆಳಗಿನ ವಿಷಯಗಳಿಗೆ ಬಹುಮಟ್ಟಿಗೆ ಕಾರಣವಾಗಿರುವದೆಂದು ಈಸ್ಟ ಇಂಡಿಯಾ ಕಾಟನ್ ಅಸೋಸಿಯೇಶನದ ಈ ಸಾಧಾರಣ ಸಭೆಗೆ ಪೂರಾ ಮನವರಿಕೆಯಾಗಿದೆ.

(ಅ) ಹತ್ತಿಯಿಂದೊಡಗೂಡಿದ ಎಲ್ಲ ಕಾಳುಕಡಿಗಳ ಬೆಲೆಯು ಘಾತಕ ಪರಿಸ್ಥಿತಿಯ ವರೆಗೆ ಇಳಿದು ಕನಸುಮನಸಿನಲ್ಲಿಲ್ಲದಷ್ಟು ಹಾಗೇ ನಡೆದ ಮೂಲಕ ರೈತ ಜನರಲ್ಲಿ ಅಸಂತೋಷವು ಹೆಚ್ಚು ಹೆಚ್ಚಾಗುವದಕ್ಕೆ ಕಾರಣವಾಗಿ ಕೊನೆಗೆ ದೇಶದ ಆರ್ಥಿಕ ಪರಿಸ್ಥಿತಿಯೆಲ್ಲ ಹಾಳಾಗಿ ಹೋಗುವಂಥ ಅವಸ್ಥೆ ಬಂದಿದೆ

(ಬ) ವ್ಯಾಪಾರ ಮತ್ತು ಉದ್ಯೋಗಗಳ ಗಿನ ಕಷ್ಟಕರ ಅವಸ್ಥೆಗೆ ಕಾರಣವಾಗಿದೆ

(ಕ) ಸಾವಕಾರ ಮತ್ತು ಸಾಲಗಾರರೊಳಗಿನ ಪತ್ತು ಪೇಢಿಗಳನ್ನೆಲ್ಲ ಮುಳುಗಿಸಿ ಕರಗು ಹುಟ್ಟುವಳಿಯ ಸಂಬಂಧಗಳನ್ನು ಕೆಡಿಸಿಬಿಟ್ಟಿದೆ

(ಡ) ದೊಡ್ಡ ದೊಡ್ಡ ನಗರಗಳಿಂದಾರಂಭ ಮಾಡಿಕೊಂಡು ಹಳ್ಳಿಗಾಡುಗಳ ವರೆಗೆ ಎಲ್ಲ ಕಡೆಗೆ ಹೋರಿಗೇಡಿತನದ ಭೂತವು ಮಿತಿಮೀರಿ ಇಲ್ಲದೆ ಹಬ್ಬಿದೆ

(ಈ) ಕನಿಷ್ಟ ಜೀವನಕ್ಕೆ ಬೇಕಾಗುವದಕ್ಕಿಂತಲೂ ಹೀನ ಪರಿಸ್ಥಿತಿಯಲ್ಲಿ ಬರ ಒನರು ಬಾಳಬೇಕಾಗಿರುವದರಿಂದ ಅವರ ಬಾಳುವೆಯು ಬಲವನ್ನೇ ಕೊರೆಯುತ್ತಿದೆ

ಜಗತ್ತಿನೊಳಗಿನ ಅನೇಕ ದೇಶಗಳಲ್ಲಿ ನಾಣ್ಯದ ಬೆಲೆಯು ಇಳಿದು ಹೋದ ಮೂಲಕ ವಿಶೇಷತಃ ಅಮೇರಿಕೆಯ ಡಾಲರದ ಬೆಲೆಯು ಇತ್ತೀಚಿಗೆ ಬಹಳವಾಗಿ ಕುಗ್ಗಿದ್ದರಿಂದ ಮತ್ತು ಆ ದೇಶದ ಆಡಳಿತೆಗಾರರು ತಮ್ಮ ಡಾಲರಿನ ಬೆಲೆ ಕಡಿಮೆಯಾದದರೊಂದಿಗೆಯೇ ತಮ್ಮಲ್ಲಿಯ ದವಸ ಧಾನ್ಯಗಳ ದರಗಳನ್ನು ಏರಿಸಹತ್ತಿದ್ದರಿಂದ ನಮ್ಮಲ್ಲಿಯ ದವಸ ಧಾನ್ಯಗಳ ಬೆಲೆಯ ಮೇಲೆ ವಿಪರೀತ ಪರಿಣಾಮವಾಗಿದೆ ಹೀಗೇ ಮುಂದೆ ನಡೆಗಿದರೆ ಕೊನೆಗೆ ಕಲ್ಪನೆ ಮೀರಿ ನಿಲುಕದಷ್ಟು ಆರ್ಥಿಕ ದುರವಸ್ಥೆಯು ಉಂಟಾಗುವದೆಂದು ಈ ಸಭೆಯು ಪೂರಾ ಮನಗಂಡಿದೆ ಆದದರಿಂದ ರೂಪಾಯಿಯ ಬೆಲೆಯನ್ನು ಕೂಡಲೆ ಇಳಿಸಿ ತನ್ಮೂಲಕ ನಮ್ಮ ದೇಶದ ಜಿನಸುಗಳ ಬೆಲೆ ಏರಿ ರೈತರಿಗೆ ಯೋಗ್ಯವಾದ ಸಾಕಷ್ಟು ಪ್ರತಿಫಲ ದೊರೆಯುವಂತಹ ವ್ಯವಸ್ಥೆಯನ್ನು ಕಾಲ ಕಳೆಯದೆ ಮಾಡಲೇ ಬೇಕೆಂದು ಹಿಂದುಸ್ಥಾನ ಸರಕಾರಕ್ಕೆ ಸನ್ಮಾನಪೂರ್ವಕವಾಗಿಯಾದರೂ ಬಲವಂತವಾಗಿ ವಿಜ್ಞಾಪಿಸುವದು ತನ್ನ ಧರ್ಮವಾಗಿರುವದೆಂದು ಈ ಸಭೆಯು ನಂಬುತ್ತದೆ ಇಷ್ಟು ಮಾತ್ರವಲ್ಲದೆ ಈ ಉದ್ದೇಶವು ಕೊನೆಗಾಣಬೇಕೆಂದು ದೇಶದ ಚಿನ್ನವು ಹೊರಗೆ ಹೋಗದಂತೆ ಸರಕಾರದವರು ಪ್ರತಿಬಂಧವನ್ನು ಹಾಕಬೇಕೆಂದು ಈ ಸಭೆಯು ಒತ್ತಾಯಪಡಿಸುತ್ತದೆ

[ಅ ಪ್ರೆ ತಂತಿ]

ಅಸೆಂಬ್ಲಿಯ ವಿಶೇಷ ಅಧಿವೇಶನ.

ಹೊಸದಿಲ್ಲಿ ತಾ॥ ೨೦— ಅಸೆಂಬ್ಲಿಯ ವಿಶೇಷ ಅಧಿವೇಶನವು ಇಂದು ರಿಜರ್ವ ಬ್ಯಾಂಕ ಬಿಲ್ಲಿನ ವಿಷಯದ ಚರ್ಚೆಗಾಗಿಯೇ ಎಂದು ನೆರದಿತ್ತು ಸರ್ ಷಣ್ಮುಖಂ ಚೆಟ್ಟಿಯವರು ಅಧ್ಯಕ್ಷರು ಸಾಕಷ್ಟು ಪ್ರತಿನಿಧಿಗಳು ಬಂದಿದ್ದರು ಪ್ರಾರಂಭಕ್ಕೆ ಬಿ ದ ರಾಮಸ್ವಾಮಿ ಮೊದಲಿಯಾರರು ವಿರೋಧಪಕ್ಷದ ಮುಖಂಡರು, ನಿಯೋಗಿಯವರು ಪ್ರಜಾಪಕ್ಷದ ಪ್ರಮುಖರು ಹಡಸನ್ನರು ಯುರೋಪಿಯರ ಮುಂದಾಳುಗಳು ಎಂದು ಗೊತ್ತಾದ ಮೇಲೆ ಶ್ರೀ ವಿಠ್ಠಲಭಾಯಿಯವರ ಮರಣದ ಬಗ್ಗೆ ದುಃಖ ಅವರ ಕೆಲಸದ ಬಗ್ಗೆ ಆದರ ವ್ಯಕ್ತಪಡಿಸುವದಕ್ಕ ವಿಶಿಷ್ಟ ಕೆಲಸಗಳೆಲ್ಲ ನಿಲ್ಲಿಸುವ ಗೊತ್ತುವಳಿಯನ್ನು ಸರ್ ಬಿ ಎಲ್ ಮಿತ್ರರು ಮಂಡಿಸಿದಾಗ ಅಂದದ್ದು— ಅಸೆಂಬ್ಲಿಯಿಂದ ಸಭೆಗೆ ಅಧ್ಯಕ್ಷರಾಗಿ ಹಿಂದೂ ಒಬರು ಶಕ್ಯರು ಎಂಬುವದನ್ನು ಪಟೇಲರು ಸಿದ್ಧಪಡಿಸಿದರು ಅಸೆಂಬ್ಲಿಯ ಪರವಾಗಿ ವಿಶೇಷತಃ ಸರಕಾರದ ಪರವಾಗಿ ನಾನು ಅವರ ಬುದ್ಧಿಶಕ್ತಿಯ ವಿಷಯದಲ್ಲಿ ಆತ್ಮಾದರ ಮತ್ತು ಮರಣದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ ಇನ್ನು ಅವರ ಹಿಂದಿನ ರಾಜಕಾರ್ಯ ಕಲಾಪಗಳನ್ನು ನೆನಿಸಿಕೊಂಡರೆ ಮುಂಬೈ ಕೌನ್ಸಿಲಿನಲ್ಲಿ ಸಭಾಸದರು ಮತ್ತು ಮುಂಬಯಿ ಕಾರ್ಪೊರೇಶನ್ನಿನ ಅಧ್ಯಕ್ಷರು ಇರುವಾಗ ಹಿಡಿದ ಧೋರಣೆಯನ್ನೇ ಅವರು ಹೊಸ ಸುಧಾರಣೆಗಳನ್ನು ಮುರಿದೊತ್ತುವ ಸ್ವರಾಜ್ಯ ಪಕ್ಷದಲ್ಲಿ ಸೇರಿಸಿಕೊಂಡಾಗಲೂ ನಡಿಸಬೇಕೆಂದೇ ಮುಂದೆಯಾಗಿ ನಿಂತರು ಹೀಗೆ ನಡೆಯುವದರಲ್ಲಿ ಹಿಂದೂ ಜನರು ಬರಿಯ ಟೀಕೆಗಾಗಿ ಎಂದಂತೆ ಟೀಕಿಸಿ ಯಾವುದೊ ದಾ ಕೆಲಸ ಹಾಳುಗಾಳಿ ಸಾವವರಲ್ಲದೆ ಹೊತ್ತು ಬಂದರೆ ತಮ್ಮ ಪಾಲಿಗೆ ಒರುವಂತಹ ಜವಾಬ್ದಾರಿಯ ಮತ್ತು ಕಡೆಗಾರಿಕೆಯ ಕಾರ್ಯವನ್ನು ನಿರ್ವಹಿಸಲು ಶಕ್ತರೆಂಬುದನ್ನು ಅವರು ಸರಕಾರದವರಿಗೆ ತಮ್ಮ ಉದಾಹರಣೆಯಿಂದ ತೋರಿಸಿಕೊಟ್ಟರು ಅಸೆಂಬ್ಲಿಯ ಅಧ್ಯಕ್ಷರಾಗಿಯೂ ಅವರು ಶಾಸನ ಸಂಬಂಧವಿಲ್ಲದೆ ಶಾಸನ ಕೈವಾರಿಗಳೆಂದೂ, ಅಸೆಂಬ್ಲಿಯ ಹಕ್ಕು ಮರ್ಯಾದೆಗಳ ರಕ್ಷಕರೆಂದೂ ತಮ್ಮ ಕೀರ್ತಿಯನ್ನು ಬೆಳಗಿಸಿದರು ಸರಕಾರದವರಾದರೂ ಅವರ ವಿಷಯದಲ್ಲಿ ಅನ್ಯ ಭಾವನೆಯನ್ನು ತಳೆಯಲಾರರು ನಾನು ನನ್ನ ಪತ್ನಿಯೊಡನೆ ಜಿನೀವಾದಲ್ಲಿ ಅವರನ್ನು ಕಾಣಲಿಕ್ಕೆ ಹೋದಾಗ ಎಲ್ಲರಿಗೂ ತಮ್ಮ ಶುಭಾಶೀರ್ವಾದವನ್ನು ಹೇಳಲಿಕ್ಕೆ ಲಾರ್ಡ ಮತ್ತು ಲೇಡಿ ವಿಲಿಂಗ್ಡನ್ನರಿಗೆ ತಮ್ಮ ನೆನಪು ಕೊಡಲಿಕ್ಕೆ ಸಂದೇಶ ಕೊಟ್ಟರು [ಅ ಪ್ರೆ ತಂತಿ]

ರಿಝರ್ವ ಬ್ಯಾಂಕ ಬಿಲ್ಲು.

ಹೊಸದಿಲ್ಲಿ ತಾ॥ ೧೮- ರಿಝರ್ವ ಪತ್ತು ಇಂಪೀರಿಯಲ್ ಬ್ಯಾಂಕಿನ ವಿಷಯವಾಗಿ ಜಾಯಿಂಟ್ ಕಮಿಟಿಯ ರಿಪೋರ್ಟಿಗೆ ಸಭಾಸದರು ತಮ್ಮ ಆಕ್ಷೇಪಗಳನ್ನು ಹಾಕಿದರು. ಕೆಲವು ಸಭಾಸದರು ರಿಪೋರ್ಟಿನ ವಿಷಯವಾಗಿ ತಮ್ಮ ಅಸಮ್ಮತಿಯನ್ನು ಪ್ರದರ್ಶಿಸಿದ್ದಾರೆ ರಿಝರ್ವ ಬ್ಯಾಂಕು ಸರಕಾರೀ ಬ್ಯಾಂಕು ಆ ಬೇಕೆಂತಲೂ ರೂಪಾಯಿಯ ವಿನಿಮಯ ದರದ ವಿಷಯವಾಗಿಯೂ ಜನರು ತಮ್ಮ ಬೇರೆ ರಿಪೋರ್ಟ ಬರೆದಿದ್ದಾರೆ ಕೌನ್ಸಿಲ್ ಆಫ್ ಸ್ಟೇಟಿನ ಅಧಿವೇಶನವು ಡಿಸೆಂಬರ ೧ ನೇ ತಾರೀಖಿಗೆ ಪ್ರಾರಂಭವಾಗುವದು (ಅ ಪ್ರೆ ತಂತಿ)

ಬಂಗಾಲದಲ್ಲಿ ಅತ್ಯಾಚಾರ

ಕಲಕತ್ತಾ ತಾ॥ ೧೮— ಅಕ್ಕ ಲ (ಪಾಬನಾ) ದ ಪೋಸ್ಟ ಮಾಸ್ತರರಾದ ಶ್ರೀ ಹಿರೇಂದ್ರ ಮೋಹನ ಸೇನ ಇವರನ್ನು ಮತ್ತು ಅವರ ಆಚಾರಿಯನ್ನು ೧೬ ನೇ ತಾರೀಖಿನ ದಿವಸ ಮಧ್ಯಾಹ್ನದ ಪ್ರಾಂತ್ಯದಲ್ಲಿ ಆವರ ಮನೆಯಲ್ಲಿ ಯಾರೋ ಕೊಲೆ ಮಾಡಿದ್ದಾರೆ ಪೋಸ್ಟ ಪೆಟ್ಟಿಗೆಯ ಹಣವು ಅವರ ಕಿಸೆಯೊಳಗೇ ಇತ್ತು ಸವಿಸ್ತಾರ ಸುದ್ದಿಯು ಇನ್ನೂ ಬಂದಿಲ್ಲ. (ಅ ಪ್ರೆ ತಂತಿ

ಮುಂಬಯಿ ಸರಕಾರದ ಹೊಸ ಮಂತ್ರಿಗಳು.

ಮುಂಬಯಿ ತಾ ೨೦ ಗತಿಸಿ ಹೋದ ಶ್ರೀ ರುಸ್ತುಮ ವಕೀಲ ಇವರ ಸ್ಥಳದಲ್ಲಿ ಸಾತಾರಾ ಜಿಲ್ಲೆಯ ಖಾನಬಹಾದ್ದೂರ ಡಿ ಬಿ ಕೂಸರೆ ಎಂಬುವರನ್ನು ಸ್ಥಾನಿಕ ಸ್ವರಾಜ್ಯ ಮಂತ್ರಿಗಳನ್ನಾಗಿ ನೇಮಿಸಿದ ಬಗ್ಗೆ ಹರಡಿದ ಸುದ್ದಿಯನ್ನು ಮುಂಬಯಿ ಸರಕಾರದವರು ಪ್ರಸಿದ್ಧಪಡಿಸಿದ ಪ್ರಕಟನೆಯು ಸ್ಥಿರಗೊಳಿಸುತ್ತದೆ

(ಅ ಪ್ರೆ ತಂತಿ)

ಗುಜರಾಥದಲ್ಲಿ ಬಡಿದಾಟ.

ಅಹಮ್ಮದಾಬಾದ ತಾ॥ ೨೦— ಇಲ್ಲಿಯೇ ಸಮೀಪದಲ್ಲಿರುವ ರಾಖಿಯಾಲ ಎಂಬ ಹಳ್ಳಿಯಲ್ಲಿ ರಾತ್ರಿ ಒಂದು ಎರಡು ಪಂಗಡಗಳ ನಡುವೆ ಕೈಗೆ ಕೈ ಲಗ್ಗೆ ಹತ್ತಿತು ಒಬ್ಬನಿಗೆ ಒಂದೊಕಿನ ೮ ಗುಂಡುಗಳು ಬಡಿದು ಮುದುಕಿಯೊರ್ವಳ ಹೊಟ್ಟೆಯಲ್ಲಿ ಚಲ್ಲೆಯಿಂದ ಇರಿದರಂತೆ ಪೋಲೀಸ ಅಧಿಕಾರಿಗಳು ಆ ಸ್ಥಳಕ್ಕೆ ಮುಟ್ಟುವದರೊಳಗೇ ದೊಂಬಿಗಾರರು ಓಡಿಹೋದರು ವಿಚಾರಣೆ ನಡೆದಿದೆ

[ಅ ಪ್ರೆ ತಂತಿ]

ಬ್ರಹ್ಮದೇಶದ ಭವಿತವ್ಯ.

ಮುಂಬಯಿ ತಾ॥ ೧೮— ಇವತ್ತು ಅಪರಾಹ್ನಕ್ಕೆ "ರಾವಲಪಿಂಡಿ" ಹಡಗದಿಂದ ಲಂಡನಕ್ಕೆ ಪ್ರಯಾಣ ಬೆಳಸಿದ ಬ್ರಹ್ಮದೇಶದ ಕೌನ್ಸಿಲಿನೊಳಗಿನ "ಪೀಪಲ್ಸ ಪಾರ್ಟಿ" ಎಂಬ ಪಕ್ಷದ ಮುಖಂಡರೂ ಬ್ರಹ್ಮದೇಶವು ಹಿಂದುಸ್ಥಾನದಿಂದ ಬೇರೆಯಾಗಬೇಕೆಂಬ ಪಕ್ಷದ ಜಾಯಿಂಟ ಪಾರ್ಲಮೆಂಟರಿ ಕಮೀಟಿಯ ಪ್ರತಿನಿಧಿಗಳೂ ಆದ ಮಿ ಉ ಬಾ. ಪೆ ಇವರು ಕೆಳಗಿನ ತೆ ಮತಪ್ರದರ್ಶನ ಮಾಡಿದರು—

ವಿಭಜನೆಯ ವಿರೋಧಕರೆಂಬ ಶಬ್ದ ಸಮುಚ್ಚಯವು ಅಯಥಾರ್ಥವಾಗಿದೆ ವಿಭಜನೆಯ ವಿರೋಧಕರೆಂದೆನಿಸಿಕೊಳ್ಳುವವರು ಕೆಲವು ಕರಾರುಗಳಿಗೊಳಪಟ್ಟು ವಿಭಜನೆ ಬೇಕೆಂದು ಬಯಸುವವರೇ ಆ ಕರಾರುಗಳಿಲ್ಲದೆ ಯಾವ ನಿರ್ಬಂಧವೂ ಇಲ್ಲದ ಹಿಂದೂ ಸಂಯುಕ್ತ ರಾಜ್ಯಘಟನೆಯಲ್ಲಿ ಸೇರಬೇಕೆಂದು ಬಯಸುವವರಲ್ಲ ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ವಿಂಗಡಿಸಬೇಕೆಂದು ಬಡಿದಾಡುವದಕ್ಕೇ ನಾನು ಲಂಡನಕ್ಕೆ ಹೋಗುತ್ತೇನೆ ಇಡೀ ಬ್ರಹ್ಮದೇಶವು ಅಂತರಂಗದಲ್ಲಿ ಬೇರೆಯಾಗಬೇಕೆಂದೇ ಬಯಸುತ್ತದೆ. ಅಲ್ಲಿದ್ದ ಕೆಲವು ಒಂದು ಹಿಂದಿ ವಾಸಿಗಳ ಹೊರತಾಗಿ ಯಾರಿಗೂ ಹಿಂದುಸ್ಥಾನದೊಂದಿಗೆ ಕೂಡಿಕೊಂಡಿರುವದು ಬೇಕಾಗಿಲ್ಲ. ಬ್ರಹ್ಮದೇಶವು ಬೇರೆಯಾಗಬಾರದೆಂಬುವರು ಸಂಯುಕ್ತ ರಾಜ್ಯಘಟನೆಯಲ್ಲಿ ಸೇರಬಯಸುವವರಲ್ಲ ಅವರ ಕೆಲವು ಕರಾರುಗಳಿಗೊಳಪಟ್ಟು ಬೇರೆಯಾಗಬೇಕೆನ್ನುವವರೇ ಇದ್ದಾರೆ ಹೋದಸಾರಿಯ ಚುನಾವಣೆಯಲ್ಲಿ ವಿಭಾಗವಿರೋಧಕರಿಗೆ ಬಹು ಮತದ ಬೆಂಬಲದೊರೆತದ್ದು ಮುಖ್ಯ ಮಂತ್ರಿಗಳಿಂದ ನಿರ್ದಿಷ್ಟವಾದ ರೂಪರೇಷೆಯ ಘಟನೆಯ ಮೇರೆಗೆ ಆಗುವ ವಿಭಜನೆಯನ್ನು ವಿರೋಧಿಸುವದಕ್ಕೂ ಹಿಂದುಸ್ಥಾನದ ಸಂಗಡ ಚಿರಕಾಲ ಯಾವ ಕರಾರುಗಳೂ ಇಲ್ಲದೆ ಕೂಡಿಕೊಂಡಿರುವವನ್ನು ವಿರೋಧಿಸುವದಕ್ಕಾಗಿ ಬ್ರಹ್ಮದೇಶದವರ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳುವ ಘಟನೆಗಾಗಿ ಪ್ರಯತ್ನ ಮಾಡುವದಕ್ಕಾಗಿ ಇತ್ತು ಆದುದರಿಂದ ವಿಭಜನೆಯಾಗಬೇಕೆಂಬ ಎರಡೂ ಪಕ್ಷಗಳ ಮೂಲ ಉದ್ದೇಶದಲ್ಲಿ ವ್ಯತ್ಯಾಸವಿರಲಿಲ್ಲ ಕಾರ್ಯನಿರ್ವಾಹದಲ್ಲಿ ಮಾತ್ರ ತುಸು ವ್ಯತ್ಯಾಸವಿದ್ದಿತು ಬ್ರಹ್ಮದೇಶದವರು ಹಿಂದೀ ಘಟನೆಯಲ್ಲಿಯೇ ಸೇರಿಕೊಂಡಿರುವದಾದರೆ ಅದರ ಬೇರೆ ಘಟಕಗಳಿಗೆ ದೊರೆಯುವದಕ್ಕಿಂತ ಹೆಚ್ಚಿನ ಸೌಲಭ್ಯಗಳು ಬ್ರಹ್ಮಿಜನರಿಗೆ ಏನೂ ದೊರೆಯಲಾರವೆಂದು ಹೇಳಿದರು. ಆದದರಿಂದ ಹಿಂದುಸ್ಥಾನದ ಸಂಯುಕ್ತ ರಾಜ್ಯದಲ್ಲಿ ಸೇರಿಕೊಂಡು ತಮಗೆ ಹೆಚ್ಚಿಗೆ ಉಪಯುಕ್ತವಾಗುವ ಬೇರೆ ಘಟನೆಯು ದೊರೆಯಬಹುದೆಂದು ವಿಭಜನೆಯ ವಿರೋಧಕರು ಆಶಿಸುವದಕ್ಕೆ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಬ್ರಹ್ಮದೇಶವು ಆಕಸ್ಮಿಕವಾಗಿ ಹಿಂದುಸ್ಥಾನದ ಭಾಗವಾಯಿತು ಬ್ರಹ್ಮದೇಶದವರು ಹಿಂದಿಗಳಿಂದ ಎಲ್ಲ ವಿಧದಲ್ಲಿಯೂ ಬೇರೆಯಾಗಿದ್ದಾರೆ ಒಂದು ಶತಮಾನದವರೆಗೆ ನಾವು ಹಿಂದುಸ್ಥಾನದ ಪ್ರಾಂತವಾಗಿ ಉಳಿದ ಅನುಭವವು ಇನ್ನು ಮುಂದೆ ಹಾಗೆ ಉಳಿಯುವದಕ್ಕೆ ನಮಗೆ ಬುದ್ಧಿಗಲಿಸುವದಿಲ್ಲ. ನಾವು ನಮ್ಮ ಸ್ವಂತ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕೆನ್ನುತ್ತೇವೆ. ಹಿಂದೀ ಸಂಯುಕ್ತ ಘಟನೆಯಲ್ಲಿ ನಮ್ಮ ವೈಯಕ್ತಿಕ ರಾಷ್ಟ್ರೀಯತ್ವವು ವಿಲೀನವಾಗಿ ಹೋಗುವದು ನಮಗೆ ಬೇಡ ಮುಖ್ಯಮಂತ್ರಿಗಳು ಬ್ರಹ್ಮದೇಶಕ್ಕಾಗಿ ನಿಯೋಜಿಸಿದ ಯೋಜನೆಯು ನಮ್ಮ ಪಕ್ಷಕ್ಕೆ ಸಮಾಧಾನಕರವಿಲ್ಲ. ಆದದರಿಂದ ಮೇಲಿಂದ ಮೇಲೆ ಪಾರ್ಲಮೆಂಟಿನ ವಿಚಾರಣೆಗೆ ಒಳಗಾಗದಂಥ ಪೂರ್ಣ ಸ್ವರಾಜ್ಯದ ಸ್ವಾಯತ್ತತೆಯನ್ನು ಪ್ರಯತ್ನಿಸಿ ಸಂಪಾದಿಸುವವಕ್ಕೆ ಅಗತ್ಯವಾದ ಹೆಚ್ಚಿನ ಅಧಿಕಾರವು ತಮ್ಮ ಜನಕ್ಕೆ ದೊರೆಯುವಂತೆ ತಾವೂ ತಮ್ಮ ಬೇರೆ ಸಹಕಾರಿಗಳೂ ಹೆಣಗಾಡುವೆವೆಂದು ಹೇಳಿದರು

ಅದೇ ಹಡಗದಿಂದ ಉ ಕ್ಯೋಥಾ ಎಂಬ ಇನ್ನೊಬ್ಬ ಬ್ರಹ್ಮದೇಶದ ಪ್ರತಿನಿಧಿಗಳೂ ಲಂಡನಕ್ಕೆ ಹೋದರು ಇವರೂ ಬ್ರಹ್ಮದೇಶವು ಬೇರೆಯಾಗಬೇಕೆಂಬವರೇ ಇದ್ದಾರೆ

[ಅ ಪ್ರೆ ತಂತಿ]

ಭಾರತ ಮಂತ್ರಿಗಳ ಅದ್ಭುತ ಕೆಲಸ !

ಭಾರತ ಮಂತ್ರಿಗಳು ಹಿಂದೀ ಸಂಯುಕ್ತ ಸಮಿತಿಯ ಮುಂದೆ ಸಾಕ್ಷಿಯನ್ನು ಕೊಡುವಾಗ್ಗೆ ೪೫೨ ವಿಶಿಷ್ಟ ಪ್ರಶ್ನೆಗಳಿಗೂ ಮತ್ತು ಒಟ್ಟಿನ ಮೇಲೆ ೧೫೦೦೦ ಪ್ರಶ್ನೆಗಳಿಗೂ ಉತ್ತರ ಕೊಟ್ಟರು ಸಾಕ್ಷಿ ಕೊಡುವ ಕೆಲಸವು ೧೯ ದಿವಸಗಳ ವರೆಗೆ ಒಂದೇ ಸವನೆ ನಡೆದು ಇಷ್ಟು ಶ್ರಮದ ಕೆಲಸ ಮಾಡಿದುದು ಬ್ರಿಟಿಶ ಮಂತ್ರಿಮಂಡಳದವರಲ್ಲಿ ಇವರೇ ಮೊದಲಂತೆ!

ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು. ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು:— ಧಾರವಾಡ ಫಾರ್ಮಸಿ ಹಾಗೂ ಬಾಳಿಗಾ ಫಾರ್ಮಸಿ.
ಡಾ ಕುಲಕರ್ಣಿಯವರ
೧೧-೧೧ ಲ್ಯಾಬೋರೇಟರಿ ನಂಬ-೯೭

ನಾರಿನ ವೈರಿ

ಚಂದ್ರಪ್ರಭಾ - ಈ ಔಷಧದಿಂದ ೩ ದಿವಸದಲ್ಲಿಯೆ ೧ ಆಡಬ ಗುಣ ಅರ್ಧ ಕಿಮ್ಮತ್ತು ಗಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ. ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.
ಮ್ಯಾನೇಜರ:-ರಾಘವ ಫಾರ್ಮಸಿ ಗೋಕಾಕ ಜಿ. ಬೆಳಗಾವ

ವಿಜಯ ಸಿನೇಮಾ ಧಾರವಾಡ.

ತಾರೀಖು ೨೧ ಮಂಗಳವಾರದಿಂದ ಫಕ್ತ ೪ ದಿವಸ
ರಣಜಿತ ಮೂವ್ಹಿಟೋನದ ಮಾತಾಡುವ ಹಾಡುವ ಚಿತ್ರಪಟ.
ಮಿಸ್ ಗೋಹರ, ಭಗವಾನದಾಸ, ಬಿಲಿಮೋರಿಯಾ ಇವರು ಕೆಲಸ ಮಾಡಿದ ಚಿತ್ರಪಟ

ರಾಧಾರಾಣಿ

ವೇಳೆ:— ೬, ೯೦-೩೦ಕ್ಕೆ ರವಿವಾರ, ಮಂಗಳವಾರ ಹಗಲು ೪ ಕ್ಕೆ

Moderate fees! Excellent Results!!

THE NEW COACHING CLASSES

For High School & College Students

Fort Dharwar N R Sunkad B A D R. Kengsur B. A.

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಕಿ' ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.
ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ
೧೪-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡಿಪೊ
ಕಹಾಪುರ ಪೇಟ ಗದಗ

ಪ್ರ್ಯಾಪಾರಿಗಳಿಗೆ ಕಮೀಶನ್ } **ಅಸ್ಪೃಶ್ಯತಾ ನಿವಾರಣೆ.** { ಪ್ರಚಾರಕರಿಗೆ ಸುಸಮಯ

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ಮೊದಲಾದ ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಚನೆಗಳೂ ಇವೆ. ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಡ್ವಾನ್ಸಿಲ್ಲದೆ ವ್ಹಿ ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್
೩-೧೧-೩೩ ಟಿ. ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ
ಸಂಪಾದಕರು:— ಮೊಹರೆ ಹಣಮಂತರಾಯರು.
ಸಪ್ಟೆಂಬರ ೧ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡಹತ್ತಿದೆ ವಿಚಾರ ಪರಿಪ್ಲುತವಾದ ಲೇಖಗಳೂ, ಒಂದೆ ತುಂಡಿನ ನುಡಿಗಳೂ, ಬಿಸಿ ಬಿಸಿ ಸುದ್ದಿಗಳೂ ಬೇಕಾಗಿದ್ದರೆ ಇದನ್ನೇ ಓದಿರಿ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೧೩—೦
ವ್ಯವಸ್ಥಾಪಕ- 'ಕರ್ನಾಟಕ ವೈಭವ' ವಿಜಾಪುರ.

" ಬದರೀ ನಾರಾಯಣನ ದರ್ಶನ "

ಸೌ ೧ ಶಂಕರ ಕಂಪನಿ ಸಂಗಡ ಹೋಗುವವರಿಗೆ ಈ ಪುಸ್ತಕವು ಉಪಯೋಗವಾಗುವದು. ಉತ್ತರದಲ್ಲಿಯ ಮುಖ್ಯ ಕ್ಷೇತ್ರಗಳ ವಿಸ್ತಾರವೂ, ಉತ್ಪತ್ತಿಯೂ, ವೇದ, ವೇದಾಂತ, ಪುರಾಣೇತಿಹಾಸ ಸಂಸ್ಕೃತ ಮತ್ತು ಕನ್ನಡ ಸುಭಾಷಿತೋಕ್ತಿಗಳಿಂದ ಸ್ಥಿರಪಡಿಸಲ್ಪಟ್ಟಿದೆ ಐತಿಹಾಸಿಕ ಪಟ್ಟಣಗಳ ವಿಸ್ತಾರವೂ ತಿಳಿಸಲ್ಪಟ್ಟಿದೆ. ಇದರಲ್ಲಿ ಎರಡು ನಕಾಶೆಗಳಿರುವವು. ಬೆಲೆ —೦ ೬-೬ ಮಾತ್ರ; ಅಂಚೆವೆಚ್ಚ ಬೇರೆ. ನರಸಿಂಹ ರಾಘವೇಂದ್ರ ಗಲಗಲಿ ಬಿ ಎ
ಹಣಮಂತಾಚಾರ್ಯ ಓಂಕಾರ ಮಂಗಳವಾರ ಪೇಟ ಧಾರವಾಡ

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೇ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ ಕಲ್ಲು] ಗಳು ಬೇಕಾಗಿವೆ, ಮಾರುವವರು ಕನ್ನಡಿಗ ಕಾರ್ಯಾಲಯದಲ್ಲಿ ತಿಳಿಸಬೇಕು
c/o ಕನ್ನಡಿಗ ಕಾರ್ಯಾಲಯ



ಮಹನೀಯರೆ ಇತ್ತ ಲಕ್ಷ್ಯಕೊಡಿರಿ.

ಕಿರ್ಲೋಸ್ಕರ ಕಬ್ಬಿಣ ಫರ್ನಿಚರ

ಅದರಲ್ಲಿ

ಸ್ಪ್ರಿಂಗ ಕಾಟು, ಖುರ್ಚಿ, ಸ್ಟೂಲ, ತೊಟ್ಟಿಲ ಇತ್ಯಾದಿ

ಅತ್ಯುತ್ತಮ ಮಾಲು

ಅತಿ ಸಣ್ಣ ಜಾಗೆಯಲ್ಲಿ ಸಹ ಇವುಗಳ ಉಪಯೋಗವು ಬಹಳ ಆಗುವದು ಹೆಚ್ಚಿನ ಮಾಹಿತಿಬಗ್ಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕಿರ್ಲೋಸ್ಕರ ಬಂಧುಗಳು ಲಿ. } ಕಿರ್ಲೋಸ್ಕರ ವಾಡಿ. ಜಿ. (ಸಾತಾರಾ)

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರಿ. ನಂ. ಬಿ. ೨೭೮

ಕನ್ನಡಿಗ

ನಿತ್ಯಪತ್ರ ಬೆಲೆ ೩ ಪೈ

ಇನಸ್ಶುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ
ಕರ್ನಾಟಕ ಇನಸ್ಶುರನ್ಸ
ಕಂಪನಿಯು
ಉತ್ತಮವಾಗುದು

ಇನಸ್ಶುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿಯ ನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು: — ಆಲೂರ ವೆಂಕಟರಾಯರು

ಸೋಮವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ — ಬುಧವಾರ ಮಾರ್ಗಶಿರ ಶುದ್ಧ ೫ ಶಕೆ ೧೮೫೩ ತಾ॥ ೨೨-೧೧-೩೧ [ಸಂಚಿಕೆ ೧೭೮

ದಿ. ಅಂಕಲಿಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬಿನ್ನೂರ, ಹಾವೇರಿ

ಕುಟುಂಬ ಸಂರಕ್ಷಕ ನಿಧಿ.

ವಿಸ್ತಾರವಾದ ಈ ಯೋಜನೆಯು ಅರ್ಜಿಗಾಗಿ [illegible]
ಗಳಿಗಾಗಿ [illegible]

[illegible] ಕೃಷ್ಣರಾವ ಅಂಕಲಿಗಿ
[illegible] ಮ್ಯಾನೇಜಿಂಗ ಡಾಯರೆಕ್ಟರ

ಭವಾನಿ ಅಯರ್ನ ವರ್ಕ್ಸ್, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ಪೆಡಿಕೆಯ ಬಾಗಿಲು ತಯಾರಾಗುತ್ತವೆ

ಉದ್ಯೋಗವ ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿವೆ.

(೧) ಬರ್ಮಾ, ಹಸಿರು [illegible] ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮಿಚೆಲ್ ಥಾಮಸ್ ಬಿರ್ (೩) ಉತ್ತಮ ಹಾಗೂ ಬಹಳ ಸೋಯಿ ಜವ ಕನ್ ಹೊಸ ಮೋಟಾರ ಸಾಯಕಲ್ (೪) ಸೈಕಲ (೫) ಮೋಟಾರ ಮತ್ತು ಬಸ್ಸುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರು ಸಬ ಏಜಂಟರು ಬೇಕಾಗಿದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ವಿಶೇಷ ಸೂ. ಬೇಕಾದರೆ ೧೫ ದಿವಸಗಳವರೆಗ	**ಹುಂಡೇಕರ ಯಳಲಾಸಪೂರ**
ಧಾರವಾಡ ಮಾಳಮಡ್ಡಿಯಲ್ಲಿರುವ	**ಆ್ಯಂಡ ಕೋ** ದೇವಕರಣ ಮ್ಯಾನ್ಸನ್
ಹುಂಡೇಕರ ವಕೀಲರ ಬಂಗ್ಲೆಯಲ್ಲಿ	ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨
ಭೆಟ್ಟಿಯಾಗಬಹುದು	

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ **ದರದಲ್ಲಿ ಸೋವಿ**



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇನ್ನತ್ತದೆ ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು ಕಿವಿ ಸೋರು ವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು

ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ. ಮೊಣಸಿ ಆ್ಯಂಡ ಕಂಪನಿ,
ಕೊಪ್ಪೀಕರ ರೋಡ, ಹುಬ್ಬಳ್ಳಿ

ಒಪ್ಪಿಗೆ ವಿಮರ್ಶೆ.

ಸ್ಥಾನಿಕ ಸ್ವರಾಜ್ಯ.

[ಕನ್ನಡ ತ್ರೈಮಾಸಿಕ, ಸಂಪಾದಕರು:— ಶ್ರೀ ಪಾಟೀಲ ದೇವನಗೌಡರು ಬಿ. ಏ ಎಲ್‌ಎಲ್ ಬಿ]

ಧಾರವಾಡದಲ್ಲಿ ಪ್ರಸಿದ್ಧವಾಗುವ ಈ ತ್ರೈಮಾಸಿಕದ ಮೊದಲನೆಯ ಸಂಚಿಕೆಯು ತಲುಪಿದೆ. ಮುಂಬಯಿ ಇಲಾಖೆಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಅದೇ ಸಂಸ್ಥೆಯ ಪರವಾಗಿ ಇಲಾಖೆಯೊಳಗಿನ ಕನ್ನಡ ಜನರ ಉಪಯೋಗಕ್ಕಾಗಿ ಇದನ್ನು ಪ್ರಕಟಿಸುವ ಕಾರ್ಯವು ಕೈಕೊಳ್ಳಲಾಗಿದೆ ಜನವರಿ, ಎಪ್ರಿಲ, ಜುಲಾಯಿ ಮತ್ತು ಆಕ್ಟೋಬರ ತಿಂಗಳ ಕೊನೆಗೆ ಈ ಪ್ರಕಾರ ವರ್ಷವೊಂದರಲ್ಲಿ ನಾಲ್ಕು ಸಂಚಿಕೆಗಳನ್ನು ಪ್ರಕಟಿಸುವ ಸಂಕಲ್ಪ ಮಾಡಲಾಗಿದೆ ಶ್ರೀ ಪಾಟೀಲ ದೇವನಗೌಡರು ಸಾರ್ವಜನಿಕ ಕೆಲಸಗಳ ವಿಷಯವಾಗಿ ಆಸ್ಥೆಯುಳ್ಳ ತರುಣರಾಗಿರುವ ಮೂಲಕ ಇವರ ಸಂಪಾದಕತ್ವದಲ್ಲಿ ಹೊರಟ ಈ ತ್ರೈಮಾಸಿಕವು ತನ್ನ ಉದ್ದೇಶಗಳನ್ನು ಉತ್ಸಾಹದಿಂದ ನೆರವೇರಿಸುವದೆಂದು ಒಯಸಲು ಅಡ್ಡಿಯಿಲ್ಲ

ಸಂಪಾದಕರು ಈ ಸಂಚಿಕೆಯಲ್ಲಿ ತಮ್ಮ ಉದ್ದೇಶಗಳನ್ನು ಹೀಗೆ ವಿವರಿಸಿದ್ದಾರೆ:—

" ಈ ನಮ್ಮ ಕರ್ನಾಟಕ ಪ್ರಾಂತಗಳಲ್ಲಿಯ ಮುನಿಸಿಪಾಲಿಟಿಗಳು ಹಾಗೂ ಲೋಕಲ್ ಬೋರ್ಡುಗಳು ಮೊದಲಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಬಲಪಡಿಸುವದು, ಗ್ರಾಮಪಂಚಾಯತಿಗಳನ್ನು ಹೆಚ್ಚಿಸುವದು, ಸ್ಥಾನಿಕ ಸ್ವರಾಜ್ಯದ ಅಂಗಗಳಾದ ಸದಸ್ಯರು ಕಾಮದಾರರು ಮತ್ತು ಮತದಾರರು ಇವರಲ್ಲಿಯ ಅಜ್ಞಾನ ಔದಾಸೀನ್ಯತೆ–ಸ್ವಾರ್ಥಪರಾಯಣತೆ - ಕರ್ತವ್ಯ ಪರಾಙ್ಮುಖತೆ ಮೊದಲಾದ ದುರ್ಗುಣಗಳನ್ನು ಹೊಡೆದೋಡಿಸಿ ಅವರ ದೃಷ್ಟಿಕೋನವನ್ನು ಬದಲಾಯಿಸಿ ಅವರಲ್ಲಿ ಸಾಮಾಜಿಕತೆ ಸಾರ್ವತ್ರಿಕ ದೃಷ್ಟಿಯನ್ನುಂಟು ಮಾಡಿ ಅವರಲ್ಲಿ ಸ್ವಕರ್ತವ್ಯಜ್ಞಾನ ಸಾರ್ವಜನಿಕ ಸ್ಫೂರ್ತಿ ಸಮಾಜಸೇವೆ ಕಾರ್ಯದಕ್ಷತೆ, ನಿಷ್ಪಕ್ಷಪಾತ ಬುದ್ಧಿ ನೈತಿಕ ಧೈರ್ಯ ಮೊದಲಾದ ಸದ್ಗುಣಗಳನ್ನುಂಟುಮಾಡಲು ಪೋಷಕವಾದ ಸ್ಥಾನಿಕ ಸ್ವರಾಜ್ಯ ವಿಷಯಕ ಲೇಖನಗಳನ್ನು ಪ್ರಸಿದ್ಧಿಸುವದು "

ಈ ಉಚ್ಚ ಧ್ಯೇಯವು ಒಮ್ಮೆಗೇ ಸಾಧ್ಯವಾಗದೆಂಬದನ್ನು ಯಾರಾದರೂ ಒಪ್ಪಿಕೊಳ್ಳುವರು ಆದರೂ ಇವುಗಳೊಳಗಿನ ಒಂದೊಂದೇ ಮೆಟ್ಟಿಲವನ್ನು ಆಕ್ರಮಣ ಮಾಡುತ್ತ ಹೋದರೆ ಕೊನೆಗೆ ಸರ್ವಸಿದ್ಧಿಯಾಗುವದಕ್ಕೆ ಸಾಧಕವೆಂದರೆಯೂ ಬರಲಾರದು ಧಾರವಾಡ ಹುಬ್ಬಳ್ಳಿಗಳಂಥ ಮಹತ್ವದ ಸ್ಥಳಗಳ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಅತ್ಯಗತ್ಯವಾಗಿರುವ ಮಾರ್ಪಾಡುಗಳ ಕಡೆಗೆ ಸಂಪಾದಕರು ಮೊದಲ ಗಮನ ಕೊಡುವದು ಯೋಗ್ಯವಾಗುವದೆಂದು ಸೂಚಿಸುವೆವು

ಈ ಮೊದಲನೆಯ ಸಂಚಿಕೆಯಲ್ಲಿ ಗ್ರಾಮ [illegible] ಮಹತ್ವದ [illegible] ದವು [illegible]ಡಲಾಗಿದೆ ಸಂ[illegible] ಬೋಧಪ್ರದವಾಗಿವೆ. ಡಾ. [illegible]ಬೆರ್ಯುಂಟ, ವಿಠ್ಠಲಭಾಯಿ ಪಟೇಲ ಹಾಗು ಸರ ರುಸ್ತುಮ ವಕೀಲ ಇವರ ಮರಣದ ಬಗ್ಗೆ ದುಃಖೋದ್ಗಾರಗಳೂ ಪ್ರಕಟವಾಗಿವೆ. ಭಾಷೆಯು ಸುಲಭವಾಗಿಯೂ ಸುಂದರವಾಗಿಯೂ ಇವೆ ಶುದ್ಧತೆಯ ಕಡೆಗೆ ತುಸು ಹೆಚ್ಚು ಗಮನ ಕೊಡಬೇಕೆಂದು ಸೂಚಿಸುವೆವು ಮುದ್ರಣವೂ ಅಂದವಾಗಿದೆ ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸೇರಿ ೧ ರೂ ೮ ಆ. ಬಿಡಿ ಸಂಚಿಕೆ ೮ ಆಣೆ

೩ ಪೈ ಅದಾಯಕ್ಕಾಗಿ ೨೦೦ ರು ಯ ವೆಚ್ಚ

ಲಾಡ - ಜಾನಾ ಮುನಿಸಿಪಾಲಟಿಯು ೬ ಪೈ ಪ್ರಾಪ್ತಿಯ ಡಿಕ್ರಿಯಿಂದ ಕೋರ್ಟಿನಲ್ಲಿ ಮಾಡಿದ ದಾವೆಯು ಕೊನೆಗೆ ಕಿತ್ತು ಒಗೆಯಲ್ಪಟ್ಟಿತು. ಈ ದಾವೆಯು ಒಬ್ಬ ಮಹಂತನ ಮೇಲೆ ೬ ಪೈ ಬಾಕಿಯನ್ನು ತೆಗೆಯುವದಕ್ಕಾಗಿ ಮಾಡಲ್ಪಟ್ಟಿತು. ಈ ವ್ಯಾಜ್ಯದಲ್ಲಿ ಮುನಸಿಪಾಲಟಿಗೆ ೨೦೦ ರೂಪಾಯಿ ವೆಚ್ಚವೂ ಮಹಂತನಿಗೆ ಇನ್ನೂ ಹೆಚ್ಚಾದ ವೆಚ್ಚವು ಬಂದಿತೆಂದು ತಿಳಿಯುತ್ತದೆ ವಿಚಾರಣೆಯ ಕಾಲದಲ್ಲಿ ಮಹಂತನು ತನ್ನ ಮೇಲಿನ ವ್ಯಕ್ತಿದ್ವೇಷವೇ ಈ ದಾವೆಯ ಕಾರಣವೆಂದು ಹೇಳಿದನು ಇಬ್ಬರ ನ್ಯಾಯ ಮೂರನೆಯ ವಿನಿಗಾದಾಯ.

ಅಮಲದಾರರ ತಿರಗುವ ವೆಚ್ಚ.

ಪ್ರಿಕ್‌ಲ್ಯಾಂಡ ಎಂಬ ಗೃಹಸ್ಥರು ಈಸ್ಟ ಇಂಡಿಯಾ ಅಸೋಸಿಯೇಶನದ ಮುಂದೆ "ರೇಡಿಯೋ ಸುದ್ದಿ [Broad-casting] ಯೂ ಸರಕಾರಕ್ಕೆ ಅದರಿಂದಾಗುವ ಉಪಯೋಗಗಳು" ಎಂಬ ವಿಷಯದಲ್ಲಿ ಮಾತನಾಡುವಾಗ ಅಂದದ್ದೇನೆಂದರೆ " ಪೇಟಿಯ ಧಾರಣೆಗಳೂ, ಬೆಳ್ಳೆಗಳುವದೂ, ರೋಗ ಜಾತ್ಯಗಳು ಹಬ್ಬುವದು ಮತ್ತು ಸರಕಾರೀ ಅಮಲದಾರರು ಪ್ರಯಾಣಕ್ಕೆ ಹೊರಡುವದು ಮತ್ತು ಇಂಥ ಇನ್ನೂ ಕೆಲವು ಅವಶ್ಯಗಳ ವಿಷಯಕ್ಕೆ ಮುಂಚಿತವಾಗಿಯೇ ಜನರಿಗೆ ಎಚ್ಚರಿಕೆಯನ್ನು ಕೊಡಬಹುದಾಗಿ ನನಗೆ ಕಾಣುತ್ತದೆ. (ಮುಂಬೈ ಕ್ರಾನಿಕಲ್)

ಕ್ಷೌರದವನು ಲಕ್ಷಾಧೀಶನಾದನು

ಎಲ್ಲರಿಗೂ ಹಣವಿಲ್ಲದೆ ಕ್ಷೌರ.

ಫ್ರಾನ್ಸ ದೇಶದಲ್ಲಿದ್ದ ತರಾಸ್ಕೊ ಊರಲ್ಲಿಯ ಪಾಲ್ ಬಾನಕೋರ್‌ನೆಂಬ ಕ್ಷೌರದವನಿಗೆ ಅಲ್ಲಿಯ ನ್ಯಾಶನಲ್ ಲಾಟರಿಯಲ್ಲಿ ೧ ಲಕ್ಷ ರೂಪಾಯಿಯ ಇನಾಮು ಸಿಕ್ಕಿತು ಅವನು ತನ್ನ ಮೊದಲಿನ ಎಲ್ಲ ಗ್ರಾಹಕರಿಗೆ ಕೂಲಿ ಇಲ್ಲದೆ ಕ್ಷೌರವನ್ನು ಮಾಡಹತ್ತಿರುವನು. ಇದಕ್ಕೆ ಕಾರಣವೇನೆಂದು ಕೇಳಿದಕ್ಕೆ ನಾವು ಕೃತಜ್ಞನಿದ್ದು ಕೆಲವು ತತ್ವಗಳಿಗನುಸಾರವಾಗಿ ನಡೆಯುತ್ತೇನೆಂದು ಹೇಳಿದನು.

ಕನ್ನಡಿಗ.

ಬುಧವಾರ ತಾರೀಖು ೨೨-೧೧-೧೯೩೩

ರೈತರ ಗೋಳು.

ಮುಂಬಯಿ ಇಲಾಖಾಧೀಶರು ಮತ್ತು ಅವರನ್ನು ಹಿಂಬಾಲಿಸಿ ಜನರ ಹಿತವನ್ನು ಮಾಡಬೇಕೆಂಬ ಅಪೇಕ್ಷೆಯುಳ್ಳವರು ಹಳ್ಳಿಗಳ ಹೀನಸ್ಥಿತಿಯನ್ನು ತಿದ್ದುವದಕ್ಕಾಗಿ ಅವುಗಳಲ್ಲಿ ಬಾಳುವೆ ಮಾಡಿಕೊಂಡಿರುವ ಬಹು ಜನರ ಕಲ್ಯಾಣ ಕಟ್ಟುವದಕ್ಕಾಗಿ ನಡಿಸಿರುವ ಯತ್ನದ ಅಲ್ಪಸ್ವಲ್ಪ ಚರ್ಚೆಯನ್ನು ನಿನ್ನಿನ ಅಗ್ರಲೇಖದಲ್ಲಿ ಮಾಡಿದ್ದೇವೆ. ಇದೇ ಸಂಗತಿಯು ಈಗ ಮುಖ್ಯವಾಗಿ ಪ್ರತಿಯೊಬ್ಬ ದೇಶ ಹಿತಚಿಂತಕನ ಕಣ್ಣುಮುಂದೆ ಕುಣಿಯುತ್ತಿರುವದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಹಿಂದುಸ್ಥಾನವು ಮುಖ್ಯವಾಗಿ ಒಕ್ಕಲತನದ ದೇಶವೆಂದು ಬಹು ಪುರಾತನ ಕಾಲದಿಂದಲೂ ಪ್ರಸಿದ್ಧವಾಗಿದೆ. ನಮ್ಮನ್ನಾಳುವ ಇಂಗ್ಲೀಷ ಅಧಿಕಾರಿಗಳೂ ಅವರಂತೆ ಪುಂಗೀ ಊದುವ ಬೇರೆಯವರೂ ಇದನ್ನೇ ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ. ಈ ಇಪ್ಪತ್ತನೇ ಶತಮಾನದ ಪರಿಭಾಷೆಯಂತೆ ಇದು ಔದ್ಯೋಗಿಕ ದೇಶವಲ್ಲದಿದ್ದರೂ ಇಲ್ಲಿಯ ಜನತೆಯ ಪ್ರಾಪಂಚಿಕ ಅನುಕೂಲತೆಗೆ ಬೇಕಾಗುವ ಎಲ್ಲ ಬಗೆಯ ಉದ್ಯೋಗ ಕಲಾಕೌಶಲ್ಯಗಳಲ್ಲಿಯೂ ಇದು ಹಿಂದೆ ಎಂದೂ ಹೆರವರ ಮೋರೆಯನ್ನು ನೋಡುತ್ತ ಕೂಡಬೇಕಾದ ಕಾಲವಿದ್ದಿಲ್ಲ. ಒಕ್ಕಲತನದಿಂದ ಭೂಮಿಯಲ್ಲಿ ಹುಟ್ಟಿದ ಹಸಿ ಸರಕುಗಳನ್ನು ತಮ ತಮಗೆ ಬೇಕಾಗುವ ರೀತಿಯಲ್ಲಿ ಅಣಿ ಮಾಡಿಕೊಂಡು ಇಲ್ಲಿಯ ಜನತೆಯು ಉಂಡುಟ್ಟು ಸುಖದಿಂದ ಜೀವಿಸಿದ ಮಾತ್ರವಲ್ಲದೆ ತನ್ನ ಉದ್ಯೋಗ ಶೀಲತೆಯಿಂದಲೂ ಕಲಾಕೌಶಲ್ಯದ ನಿಪುಣತೆಯಿಂದಲೂ ಹೊರಗಿನ ದೇಶಗಳೊಂದಿಗೆ ವ್ಯಾಪಾರ ವಿನಿಮಯವನ್ನು ಬೆಳಿಸಿ ವಿಪುಲವಾದ ಸಂಪತ್ತನ್ನು ಗಳಿಸಿ ತನ್ನ ನಾಡಿಗೆ ಸುವರ್ಣಭೂಮಿ "ಚಿನ್ನದ ನಾಡು" ಎಂಬ ಗೌರವದ ಹೆಸರನ್ನು ಕೂಡ ಒಂದಾನೊಂದು ಕಾಲಕ್ಕೆ ಸಂಪಾದಿಸಿತ್ತು.

ಪಶ್ಚಿಮ ದೇಶದ ವ್ಯವಹಾರಜ್ಞರ ಸಂಪರ್ಕವು ನಮ್ಮ ನಾಡಿಗಾದಂದಿನಿಂದ ಈ ಪರಿಸ್ಥಿತಿಯು ಬದಲಾಯಿತು. ನಮ್ಮಲ್ಲಿಯ ಒಂದೊಂದೇ ಉದ್ಯೋಗ ವ್ಯವಸಾಯಗಳು ಮುರಿದು ಮೂಲ್ಯಾಬಟ್ಟೆಯಾಗಿ ನಮ್ಮ ಜನಜೀವನದ ಪ್ರತಿಯೊಂದು ಸಂದರ್ಭದಲ್ಲಿಯೂ ನಮ್ಮನ್ನು ಹೆರವರನ್ನು ನಂಬಿಕೊಂಡು ಕೂಡುವ ದುರ್ದೆಸೆಗೆ ಈಡು ಮಾಡಿತು. ನಮ್ಮ ಪ್ರಪಂಚದೊಳಗಿನ ಪ್ರತಿನಿತ್ಯದ ವ್ಯವಹರಣೆಯ ಸರಕುಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರೆ ಪ್ರತಿಯೊಂದರ ಮೇಲೆ "ಇಂಗ್ಲಂಡದಲ್ಲಿ ಮಾಡಿದ್ದು" "ಜರ್ಮನಿಯಲ್ಲಿ ಮಾಡಿದ್ದು" "ಜಪಾನದಲ್ಲಿ ಮಾಡಿದ್ದು" ಎಂಬ ಅಕ್ಷರದ ಮುದ್ರೆಗಳು ಢಾಳವಾಗಿ ಮೂಡಿದ್ದೇ ಕಂಡು ಬರುತ್ತದೆ. ಇಷ್ಟು ದಿವಸ ನಿತ್ಯ ಪದಾರ್ಥಗಳ ಸಂಬಂಧದಲ್ಲಿ ಪರಾವಲಂಬಿಗಳಾಗಿದ್ದ ನಾವು ಈಗ ಕಾಳುಕಡಿಗಳ ಸಂದರ್ಭದಲ್ಲಿಯೂ ಹೆರವರ ಗುಲಾಮರಾಗುವ ಹೊತ್ತು ಬಂದಿದೆ. ಜಪಾನದಿಂದ ಅಕ್ಕಿಯೂ, ಕ್ಯಾಲಿಫೋರ್ನಿಯಾದಿಂದ ಗೋದಿಯೂ, ಅಮೇರಿಕಾದಿಂದ ಹತ್ತಿಯೂ ಬಂದು ನಮ್ಮ ಪೇಟೆಗಳನ್ನೆಲ್ಲ ಆಕ್ರಮಿಸುವ ಲಕ್ಷಣಗಳು ತೋರುತ್ತಿವೆ. ದೂರದ ವರೆಗೆ ದೃಷ್ಟಿಯನ್ನಿಟ್ಟು ಇದರ ದುಷ್ಪರಿಣಾಮವನ್ನು ನಿರೀಕ್ಷಿಸುವದಾದರೆ ನಮ್ಮ ಪ್ರಪಂಚಕ್ಕೆ ಬೇಕಾಗುವ ಯಾವತ್ತೂ ಸುಖ ಸಾಮಗ್ರಿಗಳನ್ನು ನಾವೇ ನಮ್ಮ ದೇಶದಲ್ಲಿ ಪೂರಯಿಸಿಕೊಳ್ಳುತ್ತಿದ್ದ ನಮ್ಮ ವ್ಯವಸಾಯಗಳೆಲ್ಲ ಪರಕೀಯರ ಸರಕುಗಳ ದಾಳಿಯಿಂದ ಹೇಗೆ ಸತ್ತು ಹೋದವೋ ಹಾಗೆಯೇ ಈ ಪರದೇಶದ ಕಾಳುಕಡಿಯ ಅಭಿಯೋಗವು ನಮ್ಮ ಪೇಟೆಗಳ ಮೇಲಾಗುತ್ತಿದ್ದರಿಂದ ನಮ್ಮ ಒಕ್ಕಲತನವೂ ಮಣ್ಣುಗೂಡುವ ಹೊತ್ತು ಬಂದು ನಮ್ಮ ರೈತವರ್ಗವೆಲ್ಲ ದೊಡ್ಡ ದೊಡ್ಡ ಕಾರಖಾನೆಗಳಲ್ಲಿ ಕೂಲಿಗೆ ದುಡಿಯುವ "ಗುಲಾಮ" ರಾಗುವ ಹೊತ್ತು ಬೇಗನೇ ಬರಬಹುದೆಂಬ ಭೀತಿ ತೋರಿದರೆ ಆಶ್ಚರ್ಯವೇನ?

ಈಗ ನಾಲ್ಕೈದು ವರ್ಷಗಳಲ್ಲಿ ಭೂಮಿಯ ಹುಟ್ಟುವಳಿಯ ಬೆಲೆಯು ವಿಪರೀತ ಕಡಿಮೆಯಾಗಿ ಬಡರೈತರಿಗೆ ದುಡ್ಡೆಂಬುದು ಕನಸಿನಲ್ಲಿಯೂ ಕಾಣದ ಪದಾರ್ಥವಾಗಿದೆ. ಆದರೂ ಸರಕಾರದ ತೆರಿಗೆಯನ್ನು ತೆತ್ತೇ ತೀರಬೇಕಷ್ಟೆ! ಸಾವುಕಾರರ ಸಾಲ ಸಾಲದ ಬಡ್ಡಿ ಇವುಗಳಿಗೆ ಅಲ್ಪಸ್ವಲ್ಪ ಅವಕಾಶವಾದರೂ ದೊರೆಯಬಹುದು. ಆದರೆ ಸರಕಾರದ ಸಾರವು ಮಧ್ಯಸ್ಥವನ್ನು ಮೀರಕೂಡದು! ಹಾಗೆಯೇ ಸ್ವಂತ ಪ್ರಪಂಚದ ವ್ಯವಹಾರವಂತೂ ಸಾಗಲೇ ಬೇಕಷ್ಟೆ? ಈ ದೃಷ್ಟಿಯಿಂದ ನಮ್ಮಲ್ಲಿಯ ಸಾಮಾನ್ಯ ಜನವರ್ಗವೇ ಈಗ ಅತ್ಯಂತ ಹೀನಸ್ಥಿತಿಗೆ ಬಂದು ಮುಟ್ಟಿದೆ. ಬಡ ರೈತನಾದ ಒಕ್ಕಲಿಗನ ಅವಸ್ಥೆಯನ್ನಂತೂ ಹೇಳಲಾಗದು! ಈಗ ಐದು ವರ್ಷಗಳಿಂದ ಒಂದೇ ಸಮನೇ ಬೆನ್ನು ಹತ್ತಿದ ಅಗ್ಗಳಿಕೆಯ ಸುಗ್ಗಿಯಲ್ಲಿ ಆತನು ನುಗ್ಗು ನುಸಿಯಾಗಿ ಹೋಗಿದ್ದಾನೆ. ಇಂದಿಲ್ಲ ನಾಳೆ ಧಾರಣಿ ಬಂದೀತೆಂಬ ಆಶೆಯಿಂದ ಇಷ್ಟು ದಿನಗಳನ್ನು ನೂಕಿ ಈಗ ಮುಗಿಲ ಕಡೆ ಮೋರೆ ಮಾಡಿ ದೇವರ ನೆರವನ್ನು ನಿರೀಕ್ಷಿಸುವ ಹೊತ್ತು ಆತನಿಗೆ ಒದಗಿದೆ. ಭೂಮಿಯನ್ನು ಉತ್ತಿಬಿತ್ತಲು ರೈತರಲ್ಲಿ ಗತಿಯಿಲ್ಲದ ಮೂಲಕ ಎಷ್ಟೋ ಭೂಮಿಗಳೇ ಈಗ ಸಾಗುವಳಿಯಿಲ್ಲದೆ ಬಿದ್ದಿರುವದಾಗಿಯೂ ಕೇಳಬರುತ್ತದೆ. ಕರ್ನಾಟಕದ ನಂದನವನವಾಗಿದ್ದ ಕಾನಡಾ ಜಿಲ್ಲೆಯ ಅನುಕಂಪನೀಯ ಸ್ಥಿತಿಯನ್ನು ಮನಗಂಡದ್ದರಿಂದಲೇ ಮೊನ್ನೆ ಮೊನ್ನೆ ಗವರ್ನರ ಜೊರೆಗಳು ಅಲ್ಲಿಗೆ ಹೋದಾಗ್ಗೆ ಅಲ್ಲಿಯ ರೈತರಿಂದ ಕೊಡಲಾಗದೆ ಉಳಿದ ೧೧ ಸಾವಿರ ರೂಪಾಯಿಗಳ ತೆರಿಗೆಯನ್ನು ಬಿಟ್ಟುಕೊಟ್ಟದ್ದೂ ಉಂಟು. ಕಾನಡಾ ಜಿಲ್ಲೆಯ ಪರಿಸ್ಥಿತಿಯೇ ಎಲ್ಲ ಕಡೆಗೂ ಅಲ್ಲವೆ?

ಮುಂಬಯಿ ಇಲಾಖೆಯಲ್ಲಿ ಅಥವಾ ಕರ್ನಾಟಕ ಭಾಗದಲ್ಲಿ ಮಾತ್ರ ಈ ಪರಿಸ್ಥಿತಿ ಇರುವದೆಂತಲ್ಲ! ಹಿಮಾಲಯದಿಂದ ಕನ್ಯಾಕುಮಾರಿಯ ವರೆಗಿನ ಇಡೀ ದೇಶದಲ್ಲೆಲ್ಲ ಇದೇ ಅವಸ್ಥೆಯು ಹರಡಿಕೊಂಡಿದೆ. ಹೀಗೆ ನಮ್ಮ ದೇಶದ ರೈತರೆಲ್ಲ ಗೋಳಿಗೀಡಾದ ಕಾರಣಮೀಮಾಂಸೆಯನ್ನು ಮಾಡತಕ್ಕವರೆಲ್ಲರೂ ಜಗತ್ತಿನಲ್ಲೆಲ್ಲ ಕಡೆಗೆ ಉಂಟಾದ ವ್ಯಾಪಾರದ ಇಳಿತವನ್ನೇ ತೋರುತ್ತಾರಲ್ಲದೆ ನಮ್ಮ ದೇಶದ ಪರಿಸ್ಥಿತಿಗನುಸಾರವಾಗಿ ಉಪಾಯಚಿಂತನೆಯನ್ನು ವಿಚಾರವಂತರಾರೂ ಮಾಡಿದ ಹಾಗೆ ಕಾಣುವದಿಲ್ಲ. ಜಗತ್ತಿನೊಳಗೆಲ್ಲ ಧಾರಣಿವಾಸಿಯು ಇಳಿದು ಹೋಗಿರುವದು ನಿಜವಾದರೂ ಅದರ ದುಷ್ಪರಿಣಾಮವನ್ನು ನಾವು, ನಮ್ಮ ದೇಶದ ರೈತರು ಇಷ್ಟೊಂದು ಪರಿಯ ಅನ್ನಾನ್ನಗತಿಕ ಸ್ಥಿತಿಗೆ ಬರುವಷ್ಟರ ಮಟ್ಟಿಗೆ ಯಾಕೆ ಭೋಗಿಸಬೇಕಾಗಿರುವದೆಂಬ ಸಂಗತಿಯನ್ನು ವಿಚಾರ ಮಾಡಿ ತಿಳಿದು ನೋಡಬೇಕಾಗಿದೆ. ಈಗ ಐದು ವರ್ಷಗಳ ಕೆಳಗೆ ಹಿಂದುಸ್ಥಾನ ಸರಕಾರದವರು ರೂಪಾಯಿಗೆ ೧೮ ಪೆನ್ನಿನ ಧಾರಣೆಯನ್ನು ತಮ್ಮ ಅಧಿಕಾರದಿಂದ ನಿಶ್ಚಯ ಮಾಡಿದರು. ಈ ಐದು ವರ್ಷಗಳಲ್ಲಾದ ಅನೇಕ ಸ್ಥಿತ್ಯಂತರಗಳನ್ನು ಲಕ್ಷಿಸದೆ ಅತೀವ ಹಟಮಾರಿತನದಿಂದ ಅದನ್ನೇ ಗಟ್ಟಿಮುಟ್ಟಾಗಿ ಹಿಡಿದಿದ್ದಾರೆ. ಇಂಗ್ಲಂಡದ ಪೌಂಡಿನ ಬೆಲೆಯು ಕಡಿಮೆಯಾಯಿತು. ಜಪಾನದ ಯೆನ್ನಿನ ಧಾರಣಿ ಇಳಿಯಿತು. ಈಗಂತೂ ಅಮೇರಿಕೆಯ ಡಾಲರಿನ ಬೆಲೆಯೂ ಕುಗ್ಗಿಹೋಗಿದೆ. ಆ ಆ ದೇಶದ ಹಿತವನ್ನೇ ಅನುಲಕ್ಷಿಸಿ ಕಾರಭಾರ ಸಾಗಿಸುವ ಅಲ್ಲಲ್ಲಿಯ ಸ್ವತಂತ್ರ ಸರಕಾರಗಳು ತಮ್ಮಲ್ಲಿಯ ಅಧಿಕ ದುರ್ದೆಸೆಯನ್ನು ಹೋಗಲಾಡಿಸುವದಕ್ಕೆ ಕೈಕೊಂಡ ಕೃತ್ರಿಮ ಉಪಾಯಗಳೇ ಇವೆಂದು ಹೇಳಲು ಅಡ್ಡಿಯಿಲ್ಲ. ಆದರೆ ಬ್ರಿಟನ್ನದ ಹಿತಕ್ಕಾಗಿ ಬ್ರಿಟಿಶ್ ಸಾಮ್ರಾಜ್ಯದ ಹೆಚ್ಚಳಕ್ಕಾಗಿ ಹಿಂದುಸ್ಥಾನವನ್ನಾಳುವ ಬ್ರಿಟಿಶ್ ಅಧಿಕಾರಿಗಳು ಇಲ್ಲಿಯ ರೈತರ ಗೋಳನ್ನು ಕಿವಿಯ ಮೇಲೆ ಹಾಕಿಕೊಂಡರಷ್ಟೆ?

ಮುಂಬೈಯಲ್ಲಿ ಸುಪ್ರಸಿದ್ಧ ಕುಸ್ತಿ

ಇದೇ ೧೯ ನೇ ತಾರೀಖಿನ ದಿವಸ ಭೋಯಿವಾಡಾ ಜೈಲಿನಲ್ಲಿ ೪೦ ಸಾವಿರ ಪ್ರೇಕ್ಷಕರ ಮುಂದೆ ಕೊಲ್ಲಾಪುರದ ಸುಪ್ರಸಿದ್ಧ ಒಟ್ಟೆ ವೆಂಕಪ್ಪಾ ಬುರುಡ ಮತ್ತು ಜಗತ್ಪ್ರಸಿದ್ಧ ಪೈಲವಾನ ಗಾಮಾ ಇವನ ಶಿಷ್ಯನಾದ ನಿಜಾಮ ಪೈಲವಾನ ಇವರ ಕುಸ್ತಿಯಾಯಿತು. ಇದರಲ್ಲಿ ಕುಸ್ತಿಯಲ್ಲಿ ವೆಂಕಪ್ಪನು ತನ್ನ ಹೆಚ್ಚಿನ ದೇಹಭಾರದಿಂದ ತನ್ನನ್ನು ಮೇಲಿಂದ ಮೇಲೆ ಕಣದ ಹೊರಗೆ ದೂಡುವನೆಂಬ ನೆವದಿಂದ ನಿಜಾಮ ಪೈಲವಾನನು ೭ ಮಿನೀಟಿನವರೆ ಕುಸ್ತಿಯಾಡಿ ಕಣಬಿಟ್ಟು ಹೋದನು. ಈ ಕಾರಣವು ಉಚಿತವಲ್ಲವೆಂದು ತಿಳಿದು ಪಂಚರು ವೆಂಕಪ್ಪನೇ ಯಶಸ್ವಿಯೆಂದು ಪ್ರಕಟಿಸಿ ಅವನಿಗೆ ೩ ಸಾವಿರ ರೂಪಾಯಿ ಬಹುಮಾನವನ್ನು ಕೊಟ್ಟರು. ಕುಸ್ತಿಯು ಜಯಶಾಲಿಯಾದ ವೆಂಕಪ್ಪನು ೭ ನಿಮಿಷಗಳಲ್ಲಿಯೇ ಒಳ್ಳೇ ಕುಶಲತೆಯನ್ನು ತೋರಿಸಿದನು. ಹೀಗೆ ಕುಸ್ತಿಯಾದ ಕೂಡಲೇ ನಿಜಾಮನ ಬೆನ್ನು ಕಟ್ಟುವ ತಂಡವು ಗದ್ದಲವೆಬ್ಬಿಸಿ ಒದರಾಡುತ್ತ ಚೀರಾಡುತ್ತ ವೆಂಕಪ್ಪನನ್ನು ಹೀಯಾಳಿಸುತ ಆವನನ್ನು ಬೆನ್ನಟ್ಟಿ ಕಣದ ಕಡೆಗೆ ನುಗ್ಗಿದರು. ಅಷ್ಟರಲ್ಲಿ ಪೋಲೀಸರ ಸಹಾಯದಿಂದ ವೆಂಕಪ್ಪನನ್ನೇ ಸುರಕ್ಷಿತ ಸ್ಥಳಕ್ಕೆ ಒಯ್ದು ನಿಜಾಮನ ಪಂಗಡದವರು ಹೋದ ಮೇಲೆ ಮೆರವಣಿಗೆಯನ್ನು ಹೊರಡಿಸಿ ವೆಂಕಪ್ಪನನ್ನು ಸ್ಟೇಶನಕ್ಕೆ ಕರೆದೊಯ್ದರು.

ಹುಬ್ಬಳ್ಳಿಯ ಪತ್ರ.

(ಸ್ವಂತ ಸುದ್ದಿಗಾರನಿಂದ)

ಶ್ರೀಮಂತ ತೀರಪ್ಪ ಹುಬ್ಬಳ್ಳಿ ಇವರ ಸ್ತುತ್ಯ ಕಾಣಿಕೆ— ಹುಬ್ಬಳ್ಳಿ ತಾ॥ ೧-೧೧-೩೩ ನಿನ್ನೆ ಇಲ್ಲಿಯ ಮರಾಠಾ ಓಣಿಯಲ್ಲಿರುವ ಆರ್ಯ ಸಮಾಜ ಮಂದಿರದಲ್ಲಿ ಒಂದು ಅನಾಥ ಬಾಲಕಾಶ್ರಮವನ್ನು ಸ್ಥಾಪಿಸುವ ಕುರಿತು ಇಲ್ಲಿಯ ಪ್ರಮುಖ ನಾಗರಿಕರ ಸಭೆ ಸೇರಿತ್ತು. ಈ ಸಭೆಗೆ ಶ್ರೀ ಜೋಂಗಾಳೆ ವಕೀಲ, ಶ್ರೀ ಸಿದ್ಧರಾಮಪ್ಪ ಅಣ್ಣಾ ಪಾಟೀಲ ವಕೀಲ ಶ್ರೀಮಂತ ತೀರಪ್ಪ ಹುಬ್ಬಳ್ಳಿ ಎಸ್ ಪಿ ಗಾಂವಕರ ಶೇಟ ಅರಮುಸಿ ಮೇತಸಿ ಮುಂತಾದ ಸದ್ಗೃಹಸ್ಥರು ಬಂದಿದ್ದರು. ಆಶ್ರಮದ ಸ್ಥಾಪನೆಯು ಗೊತ್ತಾಗಿ ಶ್ರೀಮಂತ ತೀರಪ್ಪನವರು ೨೦೦೦ ರೂಪಾಯಿಗಳನ್ನು ಚಿರನಿಧಿಗೆ ಕೊಟ್ಟದ್ದಲ್ಲದೆ ಪ್ರತಿವರ್ಷ ೨೦೦೦ ರೂಪಾಯಿಯಂತೆ ಕಾಣಿಕೆ ಕೊಡಲು ಒಪ್ಪಿರುವರು. ಇದು ಶ್ರೀಮಂತ ತೀರಪ್ಪನವರಿಗೆ ಭೂಷಣಾಸ್ಪದವೇ ಸರಿ. ಸಭೆಯವರು ಈ ಸಂಸ್ಥೆಗೆ ಶ್ರೀ ತೀರಪ್ಪನವರನ್ನೇ ಅಧ್ಯಕ್ಷರನ್ನಾಗಿ ಆರಿಸಿರುವರು.

ಇಲ್ಲಿ ಕೊಲ್ಲಾಪುರದ ನರ್ತಕಿ ಮಿಸ್ ಮೆಹಬೂಬಜಾನ್ ಇವಳ ಗಾಯನ ಕಚೇರಿಯು ಇಲ್ಲಿಯ ಗಣೇಶ ಥಿಯಟರದಲ್ಲಿ ಬೇಗನೇ ಆಗುವದಿದೆ.

ಹಿಂದೂ ಮಹಾಸಭೆಯು ಜಾತಿಯ ಸಭೆಯಲ್ಲ.

ಕಳೆದ ವಾರದಲ್ಲಿ ಪಂಡಿತ ಜವಾಹಿರ
ಲಾಲರು ಹಿಂದೂ ಮಹಾಸಭೆಯನ್ನು ಕುರಿತು
ಟೀಕಿಸಿದ ಸಂಗತಿಯನ್ನು ನಮ್ಮ ವಾಚಕರು ಮ
ರೆತಿರಲಿಕ್ಕಿಲ್ಲ. ಆಗ್ಗೆ ಅಲ್ಲಿಯೇ ಇದ್ದ ಪಂ
ಮಾಲವಿಯರು ಕೂಡ ಪಂ ಜವಾಹಿರಲಾ
ಮಾಡಿದ ಉಡಾಫರ ಟೀಕೆಯ ಬಗ್ಗೆ ತಮ್ಮ
ಸಮ್ಮತಿಯನ್ನು ತೋರಿಸಿದರಷ್ಟೆ? ಈಗ
ದೂ ಮಹಾಸಭೆಯ ಸನ್ಮಾನ್ಯ ಕಾರ್ಯದರ್ಶಿ
ಗಳಾದ ಶ್ರೀ ಜಗತ್‌ನಾರಾಯಣರು ಪಂ ಜವಾ
ರಲಾಲರಿಗೆ ಹೀಗೆ ಉತ್ತರಕೊಟ್ಟಿದ್ದಾರೆ
ಯಿ ಪರಮಾನಂದರು ಇತ್ತೀಚೆ ಕಾಂಗ್ರೆ
ಮೇಲೆ ಮಾಡಿದ ಟೀಕೆಯ ಸೇಡು ತೀರಿಸಿ
ಳ್ಳಲಿಕ್ಕೆಂದು ಪಂಡಿತರು ಮಹಾಸಭೆಯ ಮೆ
ಹರಕೊಂಡು ಬಿದ್ದಿದ್ದಾರೆ. ಅದಕ್ಕೆ ನನ್ನದೇ
ಅಂಬೋಣವಿಲ್ಲ. ಮಹಾಸಭೆಯನ್ನು ಒ
ವದಲ್ಲಿ ಅವರ ಹುಟ್ಟು ವೈರಿಗಳಿಗೂ ಮಿ
ನಿಂತಿದ್ದಾರೆ ಮತ್ತು ಅವರ ದೆಸೆಯಿ
ಅವರನ್ನು ಮಹಾ ಶೌಕತಅಲ್ಲಿಯವರು ಬೆ
ಚಪ್ಪರಿಸಿದ್ದಕ್ಕಾಗಿ ಪಂಡಿತರಿಗೆ ಸು
ಹವೆನಿಸಬಹುದು. ತಾವು ಹಿಂದೂ ಮ
ಸಭೆಗೆ ಬಹುದಿನದ ವಿರೋಧಿಗಳೆಂಬುವ
ಅವರೇ ಒಪ್ಪಿದ್ದಾರೆ. ಪಂಡಿತ ಮದನಮೋ
ನ ಮಾಲವಿಯರೂ ದಿವಂಗತ ಲಜಪತರಾ
ರೂ ಹಿಂದೂ ಮಹಾಸಭೆಯ ಚಾಲಕರಾ
ಗಲೂ ಮಹಾಸಭೆಯ ಮಹತ್ವವು ಅವರಿಗೆ
ತಿಳಿದಿರಲಿಲ್ಲ. ಈಗಂತೂ ಅದರ ವಿಷಯಕ್ಕೆ
ಅವರಿಗೆ ಆದರ ತೋರದಿದ್ದರೆ ಆಶ್ಚರ್ಯ
ಚಿಕ್ಕಂದಿನಿಂದ ಇಂಗ್ಲಂಡದಲ್ಲಿಯೇ ಬೆಳೆದು
ಮದ ದೇಶಾಭಿಮಾನ ಹಾಗೂ ಸಾಮಾಜಿ
ಸ್ಥಿತಿಯ ಉದ್ದೇಶಗಳನ್ನೇ ಗಾಳಿಯಗೂಡ
ತೂರಿಸಿ ಹಿಂದೂ ಸಂಸ್ಕೃತಿಯ ಹಾಗೂ ಅದರ
ಯಥಾರ್ಥಭಾವವನ್ನು ಗ್ರಹಿಸಲಾರದ
ಭಕ್ತರಲ್ಲಿ ಈ ಬಗೆಯ ಭಾವನೆಗಳುಂಟಾದ
ಸೋಜಿಗದ ಮಾತಲ್ಲ. ಲಾಹೋರ ಕಾಂ
ಸ್‌ದ ಅಧ್ಯಕ್ಷಸ್ಥಾನದಿಂದ ಅವರು ಮಾ
ಭಾಷಣದಲ್ಲಿ ತಾವು ಆಕಸ್ಮಿಕವಾಗಿ ಹಿಂದೂಗ
ಗಿ ಹುಟ್ಟಿರುವೆವೆಂದು ಸಾರಿದ್ದು ಇನ್ನೂ ನ
ಕಿವಿಗಳಲ್ಲಿ ತಾಪದಾಯಕವಾಗಿ ದುಮದುಮಿ
ತ್ತಿರುವದು. ಹಿಂದೂ ಧರ್ಮದ ವಿಷಯ
ಇಷ್ಟು ಬಗೆಯ ಪ್ರೇಮವು ಅವರಲ್ಲಿರುವ
ಸ್ಪಷ್ಟವಾಗಿರುವಾಗ ಮಹಾಸಭೆಯ ವಿಷಯ
ಗಿ ಅವರಲ್ಲಿ ಅನಾದರವಿರುವದು ಸ್ವಾಭಾ
ವ ಗಿದೆ.

ಜವಾಹಿರಲಾಲರ ಸಮಾನತಾವಾದದ
ತತ್ವವು ಮಹಾಸಭೆಗೆ ಮಾನ್ಯವಿಲ್ಲದೇ ಹೋ
ಅವರು ಇಷ್ಟೊಂದು ಮಿತಿಮೀರಿ ರೇಗಿದ್ದ
ಮಹಾ ಸಭೆಯೊಂದೇ ಪಂಡಿತಜಿಯವರ ಈ
ಚಾರ ಸರಣಿಯನ್ನು ಒಪ್ಪುವದಿಲ್ಲವೆಂತಲ್ಲ
ದೇಶದೊಳಗಿನ ಬೇರೆ ಬೇರೆ ವಿಚಾರಗಳ
ಜನ ಪ್ರಮುಖರೂ ಅವರ ಈ ವಿಷಯಕ ವಿ
ರಗಳೂ ಪರಿಶ್ರಮವೂ ದೇಶ ಹಿತ ದೃಷ್ಟಿಯಿ
ಘಾತಕವಾಗಿರುವವೆಂದು ತಿಳಿಯುವವರಿದ್ದಾ
ಜವಾಹಿರಲಾಲರು ಹಿಂದೂ ಮಹಾ ಸಭೆ
ಮೇಲೆ ಏನು, ಹರಿಬಿದ್ದರೂ ಮಹಾ ಸಭೆಯ
ಬಂಡವಲುಗಾರರ ಮತ್ತು ಜಮೀನುದಾ
ಬೆನ್ನು ಕಟ್ಟುವದೆಂದು ಹೇಳಲು ಬರಲಾರ
ಹಾಗೂ ಪಂಡಿತ ಜವಾಹಿರಲಾಲರು ಸಮಾ
ತಾವಾದವನ್ನು ಸಾರಿದ ಮಾತ್ರಕ್ಕೆ ಸಾಮಾ
ಜನತೆಯ ಹಿತ ಸಂವರ್ಧನದ ಗುತ್ತಿಗೆಗಾರ
ಆಗಲಿಲ್ಲ.

ಶಿವಮೊಗ್ಗೆಯ ಜಿಲ್ಲೆಯಲ್ಲಿರುವ ಹರೇ
ಕಲಿ ಎಂಬೂರಿನ ವೀರಶೈವ ಜಂಗಮ ಗೃಹಸ್
೧೬ ವರ್ಷದ ಹೆಣ್ಣುಮಗಳನ್ನು ಮುಸಲ್ಮಾನ
ಅಪಹರಿಸಿಕೊಂಡು ಹೋಗಿದ್ದಾರಂತೆ

ಹಿಂದುಸ್ತಾನ ಸರಕಾರದ ಹೊಸ ಯೋಜನೆ.

ಹಿಂದುಸ್ತಾನ ಸರಕಾರದವರ ಹೊಸ ಯೋಜನೆ.

ಹೊಸದಿಲ್ಲಿ ತಾ|| ೨೦—ಹಿಂದುಸ್ತಾನದ ಆರ್ಥಿಕ ಪ್ರಶ್ನವನ್ನು ವಿಶಾಲ ದೃಷ್ಟಿಯಿಂದ ಪರ್ಯಾಲೋಚಿಸಲು ಮತ್ತು ಹಿಂದುಸ್ತಾನ ಸರಕಾರದವರಿಗೆ ಮುಂದಿನ ಆರ್ಥಿಕ-ಸಂಘಟನೆಯ ದಾರಿ ತೋರಿಸಲು ಹಿಂದುಸ್ತಾನ ಸರಕಾರದವರು ಕೇಂಬ್ರಿಜ್ಜ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರೊಫೆಸರರಾದ ಎಚ್. ರಾಬರ್ಟಸನ್ನ ಮತ್ತು ಅಂಕಿ ಲೆಖ್ಖದ ಪ್ರಖ್ಯಾತ ತಜ್ಞರಾದ ಪ್ರೊ. ಬ್ಯೊಲೆಯವರನ್ನೂ ಬರುವ ಚಳಿಗಾಲದಲ್ಲಿ ಹಿಂದುಸ್ಥಾನಕ್ಕೆ ಕರೆಕಳಿಸುವವರಿದ್ದಾರೆ ಈ ಕಾರ್ಯವು ಸಾಧ್ಯವಾದ ಮಟ್ಟಿಗೆ ಹಿಂದೂ ಜನರಿಂದಲೇ ನಡಿಸಲ್ಪಡಬೇಕೆಂಬ ಉದ್ದೇಶದಿಂದ ಅವರ ಸಹಾಯಕ್ಕೆ ಮೂರು ಮಂದಿ ಹಿಂದೀ ಅರ್ಥಶಾಸ್ತ್ರಿಗಳನ್ನು ಕೊಡುವವರಿದ್ದಾರೆ

[ಅ ಪ್ರೆ ತಂತಿ]

ಅಸೆಂಬ್ಲಿಯಲ್ಲಿ ಪಟೇಲರ ಸ್ಮಾರಕ.

ಹೊಸದಿಲ್ಲಿ ತಾ|| ೨೦—ಅಸೆಂಬ್ಲಿಯ ಸಭಾಗೃಹದಲ್ಲಿ ಕೈ. ಪಟೇಲರ ಸ್ಮಾರಕ ಒಂದನ್ನು ಸ್ಥಾಪಿಸುವ ಕಾರ್ಯದಲ್ಲಿ ಅಧ್ಯಕ್ಷರು ಮುಂದಾಗಬೇಕೆಂದು ರಾಷ್ಟ್ರ ಪಕ್ಷದ ಮುಖಂಡರಾದ ಶ್ರೀ ರಂಗಯ್ಯರರು ಬಿನ್ನವಿಸಿಕೊಂಡರು ಶ್ರೀ ಅಮರನಾಥ ದತ್ತ, ಸರ ಅಬ್ದುಲ್ಲಾ ಸುಹ್ರಾವರ್ದಿ, ಶ್ರೀ ಜಾಧವ, ಬಿ ದಾಸ ಮುಂತಾದವರು ಪಟೇಲರನ್ನು ನೆನಿಸಿ ಧನ್ಯವಾದಗಳನ್ನರ್ಪಿಸುವಾಗ ಅಸೆಂಬ್ಲಿಯ ಹಕ್ಕು ಬಾಧ್ಯತೆಗಳನ್ನು ಕಾದ ಬಂಟರೆಂದು ಗೌರವಿಸಿದರು ಅಧ್ಯಕ್ಷರಾದ ಶ್ರೀ ಷಣ್ಮುಖಂ ಚೆಟ್ಟಿಯವರು ಅಂದದ್ದು— ಪಟೇಲರ ಬಗ್ಗೆ ತೀರ್ಪು ಕೊಡುವದು ಮುಂದಿನ ಇತಿಹಾಸಗಾರರ ಕೆಲಸವಾದರೂ ಅವರ ಕಾಲದವರಾದ ನಾವಂತೂ ಇಂದು ಅವರನ್ನು ಭಾರತ ಪುತ್ರರಲ್ಲಿ ಶಿರೋಮಣಿಗಳೆಂದು ಭಾವಿಸುವೆವು. ಅಧ್ಯಕ್ಷರು ಅಂದಿನ ಕೆಲಸ ಮುಂದೆ ಹಾಕಿ ಪಟೇಲರ ಮರಣದಿಂದ ತಮಗಾದ ದುಃಖವನ್ನು ಅವರ ತಮ್ಮಂದಿರಿಗೆ ಕಳಿಸುವ ಬಗ್ಗೆ ಅಭಿವಚನ ಕೊಟ್ಟರು.

(ಅ ಪ್ರೆ ತಂತಿ)

ಕರೀಮಭಾಯಿ ಗಿರಣಿಗಳ ದಿವಾಳಿ

ಮುಂಬಯಿ ತಾ|| ೨೨

"ಕರೀಮಭಾಯಿ ಎಂಡ ಸನ್ಸ ಎಂಬ ಅಂಗಡಿಯವರು ತಮ್ಮ ಸ್ವೇಚ್ಛೆಯಿಂದ ದಿವಾಳಿ ತೆಗೆಯಕೂಡದೆಂದು ಇಂಡೂರ ಮಾಳ್ವಾ ಮಿಲ್ಸ ಲಿಮಿಟೆಡ್ ಕಂಪನಿಯವರು ಹಾಯಕೋರ್ಟಿಗೆ ಮಾಡಿಕೊಂಡ ಅರ್ಜಿಯ ವಿಚಾರಣೆ ನಡೆದಾಗ್ಗೆ ಅವರು ಬೇಡಿಕೊಂಡದ್ದೇನಂದರೆ—" ಈ ಅಂಗಡಿಯವರು ತೆಗೆದ ದಿವಾಳಿಯ ವ್ಯವಸ್ಥೆಯು ಹಾಯಕೋರ್ಟಿನ ಸೂಚನೆಯಂತೆಯೇ ಆಗತಕ್ಕದ್ದು."

ಇದಕ್ಕೆ ಜಸ್ಟಿಸ್ ವಾಡಿಯಾ ಸಾಹೇಬರು ಎರಡೂ ಪಕ್ಷದವರ ಹೇಳಿಕೆಯನ್ನು ಕೇಳುವದಾದ ಮೇಲೆ ಆಜ್ಞಾಪಿಸಿದ್ದೇನಂದರೆ—ಡಿಸೆಂಬರ ೭ನೇ ದಿವಸ ಕರೀಮಭಾಯಿ ಇಬ್ರಾಹೀಮ ಕಂಪನಿಯು ಪಾಲುಗಾರರ ಒಂದು ಸಭೆ ಕೂಡಿಸಿ ಅವರ ಅಭಿಪ್ರಾಯವನ್ನು ಮತ್ತು ಆ ಸಭೆಯಲ್ಲಾದ ಕಾರ್ಯಕ್ರಮದ ವರದಿಯನ್ನು ಅಧ್ಯಕ್ಷರು ಬೇಗನೇ ತಮಗೆ ತಿಳಿಸಬೇಕು ಆ ಮೇಲೆ ನ್ಯಾಯ ಕೊಡುವದರ ನೆಲೆಯಿಂದ ಈ ವಿಷಯವು ೮ನೇ ದಿವಸ ಪುನಃ ಕೋರ್ಟಿನ ಮುಂದೆ ಬರುವದು.

(ಅ ಪ್ರೆ. ತಂತಿ)

ಚಿತಗಾಂಗದಲ್ಲಿ ವಿದ್ಯಾರ್ಥಿಗಳಿಗೆ ಉಪದೇಶ.

ಚಿತಗಾಂಗ ತಾ। ೨೦—ಚಿತಗಾಂಗಿನಲ್ಲಿ ಕೆಲವು ಹಿಂದು ಶ್ರಮ ಖೂ ಆ ಜಿಲ್ಲೆಯ ಶಾಲಾಧ್ಯಾಪಕರೂ ಮತ್ತು ಪ್ರಾಂತ ಅಧಿಕಾರಿಗಳೂ ಕೂಡಿ ವಿದ್ಯಾರ್ಥಿಗಳನ್ನು ಕ್ರಾಂತಿಕಾರಕ ಚಳವಳಿಯಲ್ಲಿ ಸೇರದಂತೆ ಮಾಡುವ ಮಾರ್ಗವನ್ನು ಹುಡುಕುವದಕ್ಕೂ ಶಾಲಾಧ್ಯಾಪಕರೂ ಪಾಲಕರೂ ಈ ಕೆಲಸವನ್ನು ಕೈಕೊಳ್ಳುವ ವಿಚಾರ ಮಾಡುವದಕ್ಕೂ ಒಂದು ಸಭೆಗೂಡಿಸಿದ್ದರು

ಊರಲ್ಲಿ ಕೂಟ ಕೂಟಿಗೆ ಸೈನಿಕರು ಜನರನ್ನೂ ದಾರಿಕಾರರನ್ನೂ ಕಳ್ಳರಂತೆ ಶೋಧಿಸಿ ನೋಡುವದೂ ನಡೆದಿರುತ್ತದ

[ಅ. ಪ್ರೆ ತಂತಿ]

ಅಫಗಾನರ ರಾಜನಿಷ್ಠೆ

ಹೊಸದಿಲ್ಲಿ ತಾ। ೨೦—ಅಫಗಾಣಿಸ್ತಾನದ ಕಾಸಸಲ್ಲ ಜನರಲ್ಲರಿಗೆ ಕಾಬೂಲದಿಂದ ಕೆಳಗಿ ಕಾಣಿಸಿದಂತೆ ತಂತಿ ಬಂದಿದೆ-ಇಡೀ ಅಫಗಾಣಿಸ್ಥಾನದ ಪ್ರತಿನಿಧಿಗಳು ಶಾಮದಾರರು, ಧಾರ್ಮಿಕ ಮತ್ತು ಆಧ್ಯಾತ್ಮಿಕ ಗುರುಗಳು ಎಲ್ಲ ಪ್ರಾಂತಗಳ ರಾಜರು, ಕಾಬೂಲದಲ್ಲಿ ಸೇರಿ, ನಾದೀರಶಹಾ ಬಾದಶಹರ ಘೋರ ಕೊಲೆಯ ಬಗ್ಗೆ ತಮ್ಮ ವಿಷಾದವನ್ನು ಈಗಿನ ಬಾದಶಹ ಜಹೀರ ಶಹರ ಬಗ್ಗೆ ರಾಜನಿಷ್ಠೆಯನ್ನು ತೋರ್ಪಡಿಸಿ, ಹಿಂದಿನ ಬಾದಶಹರಾದ ಅಮಾನುಲ್ಲಾ ಅವರನ್ನು ಬಹಿಷ್ಕರಿಸುವ ಬಗ್ಗೆ ಒಮ್ಮತದ ನಿರ್ಣಯ ಮಾಡಿ ತಮ್ಮ ತಮ್ಮ ಊರುಗಳಿಗೆ ನಡೆದರು

(ಅ ಪ್ರೆ ತಂತಿ)

ಕತ್ತೆಯ ಮೇಲೆ ಗುಂಡು ಪಿಸ್ತೂಲುಗಳ ಒಜ್ಜೆ

ಪೇಶಾವರ ತಾ|| ೨೦— ಸರಹದ್ದಿನ ಪೋಲೀಸ ನೋರ್ವನು ಅಲ್ಲಲ್ಲಿ ಹುಡುಕುತ್ತಿರುವಾಗ ಶಸ್ತ್ರಾಸ್ತ್ರಗಳ ಒಂದು ದೊಡ್ಡ ಸಮೂಹವು ಅವನ ಕಣ್ಣಿಗೆ ಬಿತ್ತು ಅಟಕ್ಕದ ಹತ್ತರ ಒಬ್ಬ ಪಠಾಣನು ೬ ಕತ್ತೆಗಳ ಮೇಲೆ ಏನನ್ನೋ ಹೇರಿಕೊಂಡು ಪೂಲನ್ನು ದಾಟುತ್ತಿದ್ದನು ಪೋಲಿಸನು ಕೇಳಲಾಗಿ ಸಕ್ಕರೆಯ ಚೀಲಗಳಿವೆಯೆಂದು ಹೇಳಿದನು

ಪರೀಕ್ಷಿಸಿ ನೋಡಲಾಗಿ ೩ ಬಾಂಬುಗಳೂ ೩ ಮದ್ದಿನ ಚೀಲಗಳೂ, ೧೭ ಬಂದೂಕಗಳೂ ೭ ಪಿಸ್ತೂಲಗಳೂ ೧೦೦೦ ಮದ್ದಿನ ಗುಂಡುಗಳೂ ಶಿಕ್ಕವು ಅವನು ಅವುಗಳನ್ನು ಪಂಜಾಬಕ್ಕೆ ಒಯ್ಯತಕ್ಕವನಿದ್ದನಂತೆ ಪಠಾಣನನ್ನು ಸೆರೆಹಿಡಿದಿದ್ದಾರೆ ಕೆಲವು ರಶಿಯಾದಲ್ಲಿ ಮಾಡಿದ ಶಸ್ತ್ರಗಳು ಇರುವವು (ಅ ಪ್ರೆ ತಂತಿ)

ಸಿಕ್ಕಿದೆ

ಧಾರವಾಡ ಹೆಡ್ ಪೋಸ್ಟ ಆಫೀಸಿನ ಹತ್ತರ ಮುಂಗೈಗೆ ಕಟ್ಟುವ ಒಂದು ಬಂಗಾರದ ಗಡಿಯಾರವು ಸರಪಳಿ ಸಹಿತ ದಾರಿಯಲ್ಲಿ ಬಿದ್ದಿರುವದು ಇಂಗಲ್ ಸಾಹೇಬರಿಗೆ ಸಿಕ್ಕಿರುವದು. ಅದರ ಒಡೆಯರು ಯೋಗ್ಯವಾದ ತಮ್ಮ ಒಡೆತನದ ಗುರುತನ್ನು ಕೊಟ್ಟು ತೆಗೆದುಕೊಂಡು ಹೋಗಬಹುದು. ಈ ವಿಷಯಕ್ಕೆ -ಡ್ ಪೋಸ್ಟ ಆಫೀಸಿನ ಹತ್ತರಿರುವ ಯುರೋಪಿಯನ್ ಜಿಮಖಾನಾ ಕ್ಲಬ್‌ದಲ್ಲಿ ವಿಚಾರಿಸಬಹುದು.

ಸತ್ಯಾಗ್ರಹದ ನಿಲುಗಡೆಯ ಬಗ್ಗೆ ಪಂ. ಜವಾಹಿರಲಾಲರ ಮತ.

ಸತ್ಯಾಗ್ರಹದ ಚಳವಳಿಯನ್ನು ನಿಲ್ಲಿಸಲು ತಾವೇಕೆ ಒಪ್ಪುವದಿಲ್ಲವೆಂಬ ಬಗ್ಗೆ ಟೀಕಾಕಾರರಿಗೆ ಉತ್ತರ ಕೊಡುವಾಗ ಪಂಡಿತ ಜವಾಹಿರಲಾಲರು ತಾವು ಹೊರಡಿಸಿದ ಪತ್ರಿಕೆಯಲ್ಲಿ ಅನ್ನುವದು-ಸತ್ಯಾಗ್ರಹ ಚಳವಳಿಯನ್ನು ಕಾಂಗ್ರೆಸ್ಸದವರು ನಿಲ್ಲಿಸಬೇಕೆಂಬುದಕ್ಕೆ ನಾನು ವಿರುದ್ಧನಿರುವೆ ಮೇಲಿನ ಮಾತಿನ ಒಡಬಡಿಕೆಯು ಅಲ್ಲಲ್ಲಿ ಕೇಳಬರುತ್ತಿದ್ದರೂ ಕಾಂಗ್ರೆಸ್ಸು ಅದರಂತೆ ನಡೆದರೆ ನಮ್ಮ ಚಳವಳಿಯನ್ನು ಹಾಳುಮಾಡಿ ದಿವಾಳಿಗೊಳಿಸಿ ಬ್ರಿಟಿಶ ಸಾಮ್ರಾಜ್ಯವಾದಿಗಳೊಡನೆ ಒಪ್ಪಂದ ನಡಿಸಲು ಜನನ್ನು ಕೋರಿಕೊಳ್ಳಸುವಂತಿದೆ, ಈಗಿನ ಸಂದುಕಟ್ಟಿನಲ್ಲಿ ನಾವು ಹೀಗೆ ನಡೆದರೆ, ನಮ್ಮ ಕಾರ್ಯ ಘಾತವಾಗುವದು ನಿಶ್ಚಯ ಮತ್ತು ಹೀಗೇ ಜಗದ ಪ್ರವಾಹದೊಳಗೆ ಹರಿಯುತ್ತ ನಡೆದು ಮುಂದೆ ನಾವು ಗಾಲಿತಾನಿಂತ ಹೊಂಡದೊಳಗೂ ಸೇರಬಹುದು. ಸರಕಾರದವರಂತೂ ನಮ್ಮ ರಾಷ್ಟ್ರ ಕಟ್ಟಡಕ್ಕೆ ಆಸ್ಪದ ಕೊಡದೆ, ನಮ್ಮನ್ನು ಗಚ್ಚಿಚ್ಚು ಒಲಗೆಡಿಸಲು ಕಾದಿರುವರು, ಹೀಗೆ ಒಬ್ಬೊಬ್ಬರನ್ನೇ ಒಲಗೆಡಿಸುವ ಅವರ ಪ್ರಯತ್ನದೊಳಗೆ ಸತ್ಯಾಗ್ರಹದ ನಿಲುಗಡೆಯಂಥ ನೀತಿಗುಂದಿಸುವ ಕಾರ್ಯ ಒಂದು ಕೂಡಿದರೆ ಹಿಂದೀ ಜನತೆಯ ನೀತಿಯು ಬೆಲೆಗೆಟ್ಟು ಯಾವ ಕಾರ್ಯಕ್ಕೂ ನಾವು ಯೋಗ್ಯರಲ್ಲವೆಂಬ ಹೇಡಿತನವನ್ನು ಬಹು ದಿನಗಳ ವರೆಗೆ ನಮ್ಮ ತಲೆಗೆ ಕಟ್ಟಿಕೊಳ್ಳಬೇಕಾಗುವದು. ವ್ಯಕ್ತಿಗಳಿಗಿಂತ ನಡೆಯುವ ಸಂಗತಿಗಳಿಂದಲೇ ಜನ ಸಾಮಾನ್ಯಕ್ಕೆ ಹೆಚ್ಚಿನ ಶಿಕ್ಷಣ ದೊರೆಯುವದು ಮತ್ತು ಯಾವುದೊಂದು ಸಾಮಾಜಿಕ. ರಾಜಕೀಯ ಸಂಗರದೊಳಗಿಂದಲೇ ವೀರಾಧಿವೀರರಾದ ಗುರುಗಳು ಹುಟ್ಟುವರು ಆದರೆ ಜನ ಸಾಮಾನ್ಯಕ್ಕೆ ನಿಜವಾದ ದಾರಿ ಮಾತ್ರ ಹತ್ತಲಿಕ್ಕೆ ಬೇಕು. ನಾನೂ, ನನ್ನಂತಯೇ ಅನೇಕರು ಸರಕಾರದವರೊಡನೆ ಬೆರೆತು ಕೂಡಿ ನಡೆಯುವದಕ್ಕಿಂತ ಸತ್ಯಾಗ್ರಹ ಸಂಗರದೊಳಗೆ ಕಾದುತ್ತಲೇ ಕೊನೆಗೆ ಮಣ್ಣುಗೂಡಿ ಹೋದರೂ ಅಡ್ಡಿ ಇಲ್ಲ

ಇದಕ್ಕೆ ಒಪ್ಪದರೆ ಆದರ್ಶಾನುಗುಣವಾಗಿ ಬಡಿದಾಡುವದೊಂದು ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳಬೇಕಾಗುವದು ಈಗ, ಅಖಿಲ ಭಾರತ ಕಾಂಗ್ರೆಸ ಕಮಿಟಿ ನೆರೆಯಲಿಕ್ಕೆ ಸಿದ್ಧನಿದ್ದೇನೆ ಏನಿಲ್ಲೆಂದರೂ, ನೂರರಲ್ಲಿ ೮ ಜನರಾದರೂ ಅವರ ಬಗ್ಗೆ ಬಿನ್ನಹ ಪತ್ರ ಕಳಿಸಲಿಕ್ಕೆಬೇಕು ಇಷ್ಟು ಜನರಿಂದ ಬೇಡಿಕೆ ಬಾರದಿದ್ದರೆ ನನ್ನದೇನು ತಪ್ಪು? ಈಗಿನ ಕಾರ್ಯಕ್ರಮದಿಂದ ನಾನಂತೂ ಸಂತುಷ್ಟನಾಗಿರುವೆ ಅದಕ್ಕೊಪ್ಪುವವರಿಗೆ ತಮ್ಮ ಕೆಲಸ ಆದಂತೆ ನಡೆಸಲಿಕ್ಕೆ ಬರುವಂತಿದೆ ಮೇಲಿನ ಕಾರ್ಯಕ್ರಮಕ್ಕೆ ಒಪ್ಪದವರು ಆ ಭಾ. ಕಾಂಗ್ರೆಸ ಕಮಿಟಿ ಕೂಡಿಸಲು ಕೇಳುತ್ತಿರುವರು ಅಂಥವರೇ ಸುಮ್ಮನಿದ್ದರೆ ಯಾರೇನು ಮಾಡುವದು? ಅಂತೂ ಕಾಂಗ್ರೆಸದ ಬಹು ಜನರಿಗೆ ಸದ್ಯದ ಕಾರ್ಯಕ್ರಮದಲ್ಲಿ ಬದಲಾವಣೆ ಬೇಕಿಲ್ಲ

ಶ್ರೀ ಗೀತಾಜಯಂತ್ಯುತ್ಸವ ನಿಮಿತ್ತ ಬೆಂಗಳೂರಿನ ದೇಶಿಯ. ವಿದ್ಯಾ ಶಾಲೆಯಲ್ಲಿ ಈ ಸಲ ಏಳು ದಿವಸಗಳ ವರೆಗೆ ಬ್ರಹ್ಮಶ್ರೀ ಪೊಳವಾನಹಳ್ಳಿ ಶೇಷಾಚಾರ್ಯರ ಗೀತಾ ಪ್ರವಚನ ೨೧ನೇ ತಾರೀಖಿನಿಂದ ೨೭ ವರೆಗೆ ನಡೆಯು

ಯಂತ್ರಗಳ ಮೇಲೆ ದಾಳಿ.

ಬ್ರಿಟಿಶ್ ಶಿಲ್ಪಿಗರ ರಾಜಸಂಸ್ಥೆಯ ಹೊಸ ಸೆಸನ್ನು ಆರಂಭಿಸುವಾಗ್ಗೆ ಸರ್ ಜಾಯಿಲ್ಸ್ ಗಿಲ್‌ಬರ್ಟ ಸ್ಕಾಟ್ ಎಂಬವರು "ಜನರು ತಮ್ಮ ಸ್ವಂತ ಉದ್ಧಾರಕ್ಕಾಗಿ ಯಂತ್ರಗಳ ಮೇಲೆ ದಾಳಿಯನ್ನಿಡುವ ದಿನವೊಂದು ಉದಯಿಸುವದು" ಎಂದು ಭವಿಷ್ಯ ಹೇಳಿದರು. ಈ ಯಂತ್ರಗಳ ಪೂಜೆಪುರಸ್ಕಾರಗಳು ನಮ್ಮನ್ನು ಎಲ್ಲಿಗೊಯಿದು ಮುಟ್ಟಿಸುವವೋ ತಿಳಿಯದು ಒಳಗಿನ ತಳಮಳದ ಕಳಕಳವು ಈಗಾಗಲೇ ಕೇಳಹತ್ತಿದೆ ಯಂತ್ರಗಳ ಉಪಯೋಗವನ್ನು ಒಹಳವಾಗಿ ಮಾಡುವ ದೇಶಗಳಲ್ಲಿಯೇ ಹೋರೆಗೇಡಿತನದ ದುಷ್ಪರಿಣಾಮವು ಸಾಕಷ್ಟು ಗೋಚರವಾಗಿಲ್ಲವಲ್ಲ" ಎಂದು ಅವರು ಅಂದರು

ಯಾಂತ್ರಿಕ ಯುಗದ ಈ ವಿಚಾರ ಶೂನ್ಯ ಬೆಳವಣಿಗೆಗೆ ತಕ್ಕದ್ದಾದ ಅಡ್ಡಂಕೆಯನ್ನು ಹಾಕದಿದ್ದರೆ ಮುಂದೆ ಯಂತ್ರಗಳ ಪುಂಡಾಟಿಕೆಯನ್ನು ಸದೆಬಡೆಯುವದಕ್ಕೇ ಕ್ರಾಂತಿಗಳುಂಟಾಗುವವೆಂದು ನನ್ನ ದೂರದೃಷ್ಟಿಗೆ ತೋರುತ್ತದೆ ಈಗ ಒಳಗೊಳಗೆ ಹುಟ್ಟಿ ಬೆಳೆಯುತ್ತಿರುವ ತಳಮಳವು ವಿಪರೀತವಾಗಿ ಬೆಳೆದು ಕಂಡಕಂಡಲ್ಲಿ ವಿಧ್ವಂಸವನ್ನೇ ಹೂಡುವ ವಿಕರಾಳ ರೋಷವಾಗಿ ಪರಿಣಮಿಸುವದು ನನಗೆ ಕಾಣುತ್ತದೆ ಜನರ ಗುಂಪುಗಳು ಕಾರಖಾನೆಗಳ ಮೇಲೆ ಸಾಗಿ ಹೋಗಿ ಯಂತ್ರಗಳನ್ನು ಮುರಿಯುವದೂ ವಿದ್ಯುತ್ತಿನಿಂದ ಅಥವಾ ಬೆಂಕಿಯಿಂದ ಅನೇಕರನ್ನು ಸುಟ್ಟು ಬೂದಿ ಮಾಡುವದೂ ನನ್ನ ಕಣ್ಣು ಮುಂದೆ ಕಟ್ಟುತ್ತದೆ ಇದರ ಪರ್ಯವಸಾನವೆಂದು ಜನರು ಅತಿ ಸುಲಭವಾದ ಮತ್ತು ದಯಾವಂತವಾದ ಹಾದಿಯನ್ನು ಹಿಡಿಯುವದೂ ನನಗೆ ಭಾಸವಾಗುತ್ತದೆ ಈ ನನ್ನ ವಿಚಾರಗಳನ್ನು ಯಾವನಾದರೊಬ್ಬ "ಸಿನೇಮಾ" ಚಿತ್ರಪಟಗಾರನಿಗೆ ನಾನು ಕಾಣಿಕೆಯಾಗಿ ಕೊಡುವೆನು.

ಬಾಬು ರಾಜೇಂದ್ರ ಪ್ರಸಾದರ ಪ್ರಕೃತಿ.

ಪಾಟ್ನಾ ತಾ। ೧೮

ಬಿಹಾರದ ಪ್ರಸಿದ್ಧ ರಾಷ್ಟ್ರೀಯ ಮುಖಂಡರಾದ ಬಾಬು ರಾಜೇಂದ್ರ ಪ್ರಸಾದರವರ ಪ್ರಕೃತಿಯು ತೀರ ಕೆಟ್ಟಿರುವದಾಗಿ ವರ್ತಮಾನವಿದೆ ದಮ್ಮಿನ ಉಪದ್ರ ಹೆಚ್ಚಾಗಿರುವದರಿಂದ ಇಡೀ ರಾತ್ರಿ ಅವರು ನಿದ್ರೆ ಮಾಡದೆ ಹಾಸಿಗೆಯಲ್ಲಿ ಕೂತೇ ಕಳೆದರಂತೆ ಅವರಿಗೆ ನಿದ್ರೆ ಬಗುವದಕ್ಕಾಗಿ ಇಂಜೆಕ್ಷನ್ ಮಾಡಲ್ಪಟ್ಟಿತು.

ಮೈಸೂರು ರೇಶ್ಮೆ ವ್ಯಾಪಾರಗಳ ಸಮ್ಮೇಲನವು ಚನ್ನಪಟ್ಟಣದ ರೇಶ್ಮೆ ಫಾರ್ಮಿನಲ್ಲಿ ನಡೆಯುವದೆಂದು ಪ್ರಸಿದ್ಧವಾಗಿದೆ ಸಮ್ಮೇಲನ ಸಮಾರಂಭ ನಡಿಸುವವರು ಶ್ರೀಮುದ್ಯಾವರ್ ಜರು

ಕೊನೆಯಚ್ಚು

ಕರ್ಚ್ಯೂ

ಶಾಸ್ತ್ರಶುದ್ಧ ಮತ್ತುಕ್ರಿಮಿನಾಶಕ ದಂತಮಂಜನ.

ಈ ಕಂಪನಿಯು ಬಳ್ಳಾರಿಯಿಂದ ಗದಗಿಗೆ ಬಂದಿರುತ್ತದೆ. ಯಾರಾದರೂ ಪತ್ರವ್ಯವಹಾರ ಮಾಡತಕ್ಕವರು ಗದಗಿಗೆ ಮಾಡಬೇಕು.



ಕರ್ನಾಟಕ ಕೆಮಿಕಲ್ ವರ್ಕ್ಸ — ಗದಗ.

ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ. ರು ೧॥. ಎಲ್ಲ ಕಡೆಗೂ ದೊರೆಯುತ್ತದೆ.

ಧಾರವಾಡದ ಏಜಂಟರು:— ಧಾರವಾಡ ಫಾರ್ಮಸಿ ಹಾಗೂ ದಾಳಿಗಾ ಫಾರ್ಮಸಿ.

ಡಾ ಕುಲಕರ್ಣಿಯವರ

೧೧-೧೧ ಲ್ಯಾಬೋರೇಟರಿ ನಂಬರ ೧೨

ನಾರಿನ ವೈರಿ

ಚಂದ್ರಪ್ರಭಾ — ಈ ಔಷಧದಿಂದ ೩ ದಿವಸದಲ್ಲಿಯೇ ಗುಣ ... ಕಿಮ್ಮತ್ತು ... ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ—ರಾಘವ ಫಾರ್ಮಸಿ ಗೋಕಾಕ
ಜಿ. ಬೆಳಗಾವ

ವಿಜಯ ಸಿನೇಮಾ ಧಾರವಾಡ.

ತಾರೀಖು ೨೧ ಮಂಗಳವಾರದಿಂದ ಫಕ್ತ ೪ ದಿವಸ

ರಜತಪಟ ಮೂವ್ವತ್ತು ಟೋಕಿಸದ ಮಾತಾಡುವ ಹಾಡುವ ಚಿತ್ರಪಟ.

ಮಿಸ್ ಗೋಹರ, ಭಗವಾನದಾಸ, ಬಿಲಿಮೋರಿಯಾ ಇವರು ಕೆಲಸ ಮಾಡಿದ ಚಿತ್ರಪಟ

ರಾಧಾರಾಣಿ

ದರ ನಿತ್ಯದಂತೆ ವೇಳೆ— ೭, ೧೦-೩೦ಕ್ಕೆ ರವಿವಾರ, ಮಂಗಳವಾರ ಹಗಲು ೪ ಕ್ಕೆ

Moderate fees! ***Excellent Results!!***

THE NEW COACHING CLASSES

For High School & College Students

Fort Dharwar N. R. Sunkad B. A. D. R. Kenesur B. A.

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು. ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ. ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು.

ಕೆ ಅಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡೇಪೊ
ಶಹಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ## ಅಸ್ಪೃಶ್ಯತಾ ನಿವಾರಣೆ. { ಪ್ರಚಾರಕರಿಗೆ ಸುಸಮಯ

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಕ್ತ ಸಲಹೆಗಳೂ ಇವೆ. ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಆಡ್ವಾನ್ಸಿಲ್ಲದೆ ವ್ಹಿ. ಪಿ. ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೩ ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇನೇ ಬನ್ನಿರಿ.

ಕರ್ನಾಟಕ ವೈಭವ.

ಉಜ್ವಲವಾದ ರಾಷ್ಟ್ರೀಯ ವಾರಪತ್ರಿಕೆ

ಸಂಪಾದಕರು:— ಮೊಹರೆ ಹ ಣಮಂತರಾಯರು.

ಸಪ್ಟೆಂಬರ ೩ನೇ ತಾರೀಖಿನಿಂದ ಪುನಃ ಹೊಸ ಹುರುಪಿನಿಂದ ಹೊರಡಹತ್ತಿದೆ. ವಿಚಾರ ಪರಿಪ್ಲುತವಾದ ಲೇಖಗಳೂ, ಒಂದೆ ತುಂಡಿನ ನುಡಿಗಳೂ, ಬಿಸಿ ಬಿಸಿ ಸುದ್ದಿಗಳೂ ಬೇಕಾಗಿದ್ದರೆ ಇದನ್ನೇ ಓದಿರಿ. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೧೩—೦.

ವ್ಯವಸ್ಥಾಪಕರು— 'ಕರ್ನಾಟಕ ವೈಭವ' ವಿಜಾಪುರ.

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೆ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ ಕಲ್ಲು] ಗಳು ಬೇಕಾಗಿವೆ ಮಾರುವವರು ಕನ್ನಡಿಗ ಕಾರ್ಯಾಲಯದಲ್ಲಿ ತಿಳಿಸಬೇಕು
C/o ಕನ್ನಡಿಗ ಕಾರ್ಯಾಲಯ

ಕುಲಭೂಷಣ ಡಾ ಜಿ. ಬಿ. ಯುವ ... ಕುಲಭೂಷಣ

ಸುಗಂಧ ನಶ್ಯದ ಕುಡಿ



ಕೀರ್ತಿ ಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಕೆಂಡು ... ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ... ರೋಗನಿವಾರಣೆ ... ನಶ್ಯದ ... ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆಶೂಲೆ, ತಲೆ ... ರೋಗಗಳು ... ಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ... ದೋಷದಿಂದ ... ವ್ಯಾಧಿಗಳು ಪರಿಹಾರವಾಗುವದಲ್ಲದೆ, ... ವ್ಯಾಧಿಗಳನ್ನು ... ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತ್ತದೆ. ... ಬಿಟ್ಟು ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿ ... ಒಂದು ಚಿಮಟಿಗೆಯನ್ನು ಮಿಶ್ರಮಾಡಿದರೆ ಎಲ್ಲವೂ ... ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ರತ್ಯೇಕವಾಗಿ ಕೇಳಿಕೆ ... ಒಂದಕ್ಕೆ ಕ್ರಯ ೪ ಆಣೆ, ವ್ಹಿ. ಪಿ ೪ ಆಣೆ ಡಜನ್ ... ೨—೮—೦ ವ್ಹಿ. ಪಿ ಚಾರ್ಜ ೮ ಆಣೆ

... — ಗುರುಬಸವ ಅಂಡ್ ಕಂಪನಿ, ಲಿಮಿಟೆಡ್

ಪೋ. ಬಾ. ... ... ಮಧುರಾಕರ.

ದಯವಿಟ್ಟು ತಮ್ಮ ಹೆಸರನ್ನು ಅಡ್ರೆಸ್ಸನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೮೮

ನಿತ್ಯಪತ್ರ ಬೆಲೆ ೩ ಪೈ

ಕನ್ನಡಿಗ

ಸಂಪಾದಕರು:- ಆಲೂರ ವೆಂಕಟರಾಯರು

ಸೋಮವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಗುರುವಾರ ಮಾರ್ಗಶಿರ ಶುದ್ಧ ೬ ಶಕೆ ೧೮೫೩ ತಾ॥ ೨೩ ೧ -೩೧ [ಸಂಚಿಕೆ ೧೭೯

ಇನಸ್ಯುಅರನ್ಸ

ಜೀವವಿಮೆ ಇಳಿಸಲು ದಿ ಯುನಾಯಿಟೆಡ್ ಕರ್ನಾಟಕ ಇನಸ್ಯುಅರನ್ಸ ಕಂಪನಿಯೇ ಉತ್ತಮವಾದುದು

ಇನಸ್ಯುಅರನ್ಸ

ಪ್ರದೇಶದ ಹಣವನ್ನು ಪ್ರದೇಶದಲ್ಲಿಯೇ ಉಳಿಸಬೇಕಾದರೆ. ದಿ ಯುನಾಯಿಟೆಡ್ ಕರ್ನಾಟಕ ಇ. ಕಂ. ಲಿ. ಧಾರವಾಡ ...ಲ್ಲಿಯೇ ವಿಮೆ ಇಳಿಸಿರಿ

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ

ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ

ಕ್ಯುಮ್ಯು ಸಂರಕ್ಷಕ ನಿಧಿ.

ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಬೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ

ಧಾರವಾಡ ತಾ॥ ೨೫ ೮ ೩೧

ಕೃಷ್ಣರಾವ ಅಂಕಲಗಿ ಮ್ಯಾನೇಜಿಂಗ ಡಾಯರೆಕ್ಟರ

ಭವಾನಿ ಅಯರ್ನ ವರ್ಕ್ಸ, ಧಾರವಾಡ

ಕಬ್ಬಿಣದ ಪಲಂಗು, ಸ್ಟ್ಯಾಂಡು, ಕೊಟ್ಟೆಲು ಮತ್ತು ಪಡಿಕೆಯ ಬಾಗಿಲು ತಯಾರಾಗುತ್ತವೆ

ಉದ್ಯೋಗವ ಬೇಕೆ?

ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್

ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!

ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿವೆ

(೧) ಬಿಳಿ, ಹಳದಿ, ಕೆಂಪು ಬಣ್ಣದ ಚಿಮಣಿಯೆಣ್ಣೆ ಕ್ರೂಡ್ ಆಯಿಲ್ ಮತ್ತು ಗ್ಯಾಸ್ ಆಯಿಲ್ (೨) ಮುಸಿಕ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋವಿಯ ಜರ್ಮನ್ ಹೊಸ ಮೋಟಾರ ಸಾಯಕಲ್ (೪) ಸಕ್ಕರೆ (೫) ಮೋಟಾರ ವಸ್ತುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ

ನಮ್ಮ ಹದ್ದು:—

(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝ್ಯಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ಸಣ್ಣದೆ ಇರುವ ಪ್ರದೇಶಕ್ಕೆ ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು.

ವಿಶೇಷ ಸೂ. ಬೇಕಾದರೆ ೧೫ ದಿವಸಗಳ ವರೆಗೆ

ಧಾರವಾಡ ಮಾಳಮಡ್ಡಿಯಲ್ಲಿರುವ	ಹುಂಡೇಕರ ಯಕಲಾಸಪೂರ
ಹುಂಡೇಕರ ವಕೀಲರ ಬಂಗ್ಲೆಯಲ್ಲಿ	ಅ್ಯಾಂಡ ಕೋ ದೇವಕರಣ ಮ್ಯಾನ್ಸನ್
ಭೆಟ್ಟಿಯಾಗಬಹುದು	ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!

ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ.

" ನೀಲಗಿರಿ ಎಣ್ಣೆ "

ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದು ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಜೋಡಿಗೆಮ್ಮು, ಕೆಮ್ಮು ಕಿವಿನೋವು ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಬೇಕು. ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವದು

ಏಜಂಟ:— ಜಿ. ಕೆ ಟೊಣಪಿ ಅ್ಯಾಂಡ ಕಂಪನಿ, ಕೊಪ್ಪೀಕರ ರೋಡ, ಹುಬ್ಬಳ್ಳಿ.

ಕರ್ನಾಟಕ ಏಕೀಕರಣ.

ಈಗ ಪತ್ರಿಕೆಯ ಮುಂದಿರುವ ಕರ್ನಾಟಕ ಏಕೀಕರಣ ವಿಚಾರವಾಗಿ ಬೆಂಗಳೂರಿನ ವಿಶ್ವಕರ್ನಾಟಕದ ಸಂಪಾದಕರು ನೇ ... ಸಂಚಿಕೆಯಲ್ಲಿ ಹೀಗೆ ... —

ಈ ದಿನವರೆಗೆ ಕರ್ನಾಟಕ ... ಪಕ್ಕೆ ... ನಿರ್ಮಾಣಕ್ಕೆ ಬೇಕಾದ ಕ್ರಿಯಾಶಕ್ತಿಯುಂಟು ಗುವದಿಲ್ಲವೋ ಅಂದಿನವರೆಗೆ ಏನೂ ಆಗುವದಿಲ್ಲ ಈ ಬಗೆಯ ಕ್ರಿಯಾಶಕ್ತಿ ಹುಟ್ಟಿಸಲು ಕರ್ನಾಟಕದಲ್ಲಿ ಸಾಕಾದಷ್ಟು ಪ್ರಯತ್ನಗಳಾಗಿಲ್ಲವೆಂದು ಹೇಳಲು ವಿಷಾದವಾಗುತ್ತದೆ. ಸಾಂಸ್ಕೃತಿಕ ಚಲನವಲನಗಳ ದೃಷ್ಟಿಯಿಂದ ಇತ್ತೀಚೆಗೆ ಕೊಂಚ ಕೆಲಸವಾಗಿದೆಯೆಂದು ಎಲ್ಲರೂ ಒಪ್ಪಬೇಕಾದದ್ದೆ ಆದರೆ ಕಾರ್ಯಸಾಧಕರ ಲಕ್ಷಣಗಳೇ ಕರ್ನಾಟಕದಲ್ಲಿ ಕಾಣಬರುತ್ತಿಲ್ಲ ಕರ್ನಾಟಕದಲ್ಲಿ ಏಕೀಕರಣ ಸಭೆಯೊಂದಿತ್ತು ಅದು ಒಂದಾನೊಂದು ಕಾಲದ ಮಾತಾಗಿ ಹೋಯಿತು 'ಬ್ರಿಟಿಶ್ ಕರ್ನಾಟಕ ಅಸೋಸಿಯೇಶನ್' ಒಂದು ಹುಟ್ಟಿತು ಅದೂ ಬಾಲಗ್ರಹ ಪೀಡಿತ್ವಕ್ಕೆ ಗುರಿಯಾಗಿ ಹೋಯಿತು ಕರ್ನಾಟಕದ 'ನಾಯಕರು' ಈ ವಿಚಾರದಲ್ಲಿ ಸಾಕಾದಷ್ಟು ಐಕ್ಯಮತ್ಯವನ್ನು, ಶ್ರದ್ಧಾಳುತನವನ್ನು ತೋರಿಸಿದರೆ ಈ ಪತ್ರಿಕೆ ವರ್ಷಗಳಲ್ಲಿ ವರು ಎಷ್ಟೋ ಸಾಧಿಸ-ಹುದಾಗಿತ್ತು.

ಈಗಲಾದರೂ ಏನಾಯಿತು? 'ಕರ್ನಾಟಕ ಪ್ರಾಂತ್ಯ' ಅಥವಾ 'ಕರ್ನಾಟಕ ಏಕೀಕರಣ' ವಿಚಾರವು ಯಾವ ಪಕ್ಷಕ್ಕೂ ಸೇರಿದ್ದಲ್ಲ ಯಾವ ಜಾತಿ ಸಂಘಕ್ಕೂ ಸೇರಿದ್ದಲ್ಲ; ಅದು ಕರ್ನಾಟಕ ಜನಾಂಗದ ಇರವಿಕೆಗೇ ಸಂಬಂಧಪಟ್ಟದ್ದೆಂಬ ಭಾವನೆಯಿಂದ ಕರ್ನಾಟಕದ ನಾಯಕರೆಲ್ಲ ಪ್ರಯತ್ನಮಾಡಲಿ ಕರ್ನಾಟಕದ ಪಣಿಕ್ ಸಂಘಗಳೊಂದು ಕಡೆ ಚಳವಳಿ ಹೂಡಿ ಶ್ರದ್ಧಾಳು ... ಆಗ ಒಂದು ಕ್ರಿಯಾಶಕ್ತಿಯುತ್ಪನ್ನವಾಗುತ್ತದೆ ಆರದವು ಸಫಲವಾಗಲು ಅನುಕೂಲವುಂಟಾಗುತ್ತದೆ.

ಹೊಸ ಕೌನ್ಸಿಲುಗಳನ್ನು ಕೈಯಲ್ಲಿ ತೆಗೆದುಕೊಳ್ಳಿರಿ.

ಸಂಯುಕ್ತ ಪ್ರಾಂತದ ಗವರ್ನರರಾದ ಛತ್ತರಾಯಿ ನವಾಬರು ಅಲ್ಲಿಯ ಜಮೀನುದಾರರಿಗೆ ಉಪದೇಶ ಮಾಡುವಾಗ "ನಿಮ್ಮೊಳಗೆ ಸಂಘಟನೆಯನ್ನ ಮಾಡಿಕೊಳ್ಳುವ ಉದ್ಯೋಗವನ್ನು ಕೂಡಲೆ ಕೈಕೊಂಡು ಹೊಸ ಕೌನ್ಸಿಲುಗಳಲ್ಲಿ ನಿಮ್ಮ ಬಹುಮತವಾಗುವಂತೆ ಈಗಿನಿಂದಲೇ ಯತ್ನಮಾಡಿರಿ" ಎಂದು ಹೇಳಿದರು.

ಈಗ ಪ್ರಚಾರದಲ್ಲಿದ್ದ ದ್ವಿದಲ ರಾಜ್ಯಪದ್ಧತಿಯನ್ನು ಯಶಸ್ವಿಯಾಗಿ ಮಾಡುವದಕ್ಕೆ ಜಮೀನದಾರರು ಮಾಡಿದ ಸಹಾಯವನ್ನು ಅವರು ಕೊಂಡಾಡಿದರಲ್ಲದೆ ಪೋಲೀಸ ಖಾತೆಯ ಕೆಲಸಗಳು ಕೆಡದಂತೆ ಅದನ್ನು ನೀಗಿಸಿಕೊಂಡು ಹೋದ ಶ್ರೇಯಸ್ಸು ಜಮೀನುದಾರ ಪಾಲಿಗಿರುವದೆಂದೂ ಹೇಳಿದರು.

ಗವರ್ನರರಿಗಾದ ಸತ್ಕಾರ ಸಮಾರಂಭದ ಕಾಲಕ್ಕೆ

ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರಿಗಾದ ಅಪಮಾನ.

ನ್ಯಾಯಾಧೀಶರು ಅಸಹ್ಯಬಟ್ಟುಕೊಂಡು ತಿರುಗಿ ಹೋದರು

ಅಲಹಾಬಾದ ಹಾಯಕೋರ್ಟಿನ ಚೀಫ ಜಸ್ಟೀಸರಾದ ಸರ್ ಎಸ್ ಎಮ್. ಸುಲೇಮಾನ ಎಂಬವರು ತಮ್ಮ ಮೋಟಾರಿನಲ್ಲಿ ಕುಳಿತು ಆಗ್ರಾದ ಜಮೀನುದಾರರ ಸಂಘದವರು ಗವರ್ನರ ದೊರೆಗಳಿಗೆ ಮಾಡಿದ ಸತ್ಕಾರ ಸಮಾರಂಭಕ್ಕೆಂದು ಹೋದಾಗ್ಗೆ ಸಂಘದ ಪ್ರಾಕಾರದ ಬಾಗಿಲದಲ್ಲಿದ್ದ ಪೋಲೀಸ ಅಮಲದಾರನು ಇವರ ಮೋಟಾರನ್ನು ತರುಬಿ ಅಲ್ಲಿಂದ ಒಂದು ಫರ್ಲಾಂಗ ದೂರದವರೆಗೆ ಅದನ್ನು ಒಯ್ದು ನಿಲ್ಲಿಸಲಿಕ್ಕೆ ಮೋಟಾರ ಡ್ರಾಯಿವರನಿಗೆ ಹೇಳಿದನು ಚೀಫ ಜಸ್ಟೀಸರು ಈ ಸಂಗತಿಯಿಂದ ಮನನೊಂದು ಮನೆಯ ಹಾದಿಯನ್ನು ಹಿಡಿದರು

ಹಿಂದುಸ್ಥಾನದಲ್ಲಿ ಜಪಾನದ ಅಕ್ಕಿ.

ಜಪಾನ ಸರಕಾರದವರು ತಮ್ಮ ದೇಶಕ್ಕೆ ಹಿಂದುಸ್ಥಾನದ ಅಕ್ಕಿಯು ಬರಬಾರದೆಂದು ಪ್ರತಿಬಂಧ ಮಾಡಿರುವಾಗ ಜಪಾನದಿಂದ ೬ ಸಾವಿರ ಟನ್ನು ಅಕ್ಕಿಯು ಹಿಂದುಸ್ಥಾನಕ್ಕೆ ಬಂದು ಬಿದ್ದಿರುವದು ನಿಜವೇ ಹೇಗೆಂಬದಾಗಿ ಅಸೆಂಬ್ಲಿಯ ಮೆಂಬರರಾದ ಲಾಲಾ ರಾಮೇಶ್ವರ ಪ್ರಸಾದರವರು ಬರುವ ಸಭೆಯಲ್ಲಿ ಪ್ರಶ್ನೆ ಕೇಳುವ ನೋಟೀಸು ಕೊಟ್ಟಿದ್ದಾರೆ

ಹರಿಜನ ವಿದ್ಯಾರ್ಥಿಗಳಿಗೆ ಅನುಕೂಲ ಸಹಾಯ.

ಪಂಡಿತ ಮದನಮೋಹನ ಮಾಲವೀಯರು ಬನಾರಸ ಹಿಂದೂ ವಿಶ್ವವಿದ್ಯಾಲಯದ ದೇವರಾಜನ್‌ದಲ್ಲಿ ರಿಸ್ಪ ... ನಡೆದ ದಂಡೆಯ ವೇಳೆ ಕೂಡಿದ ಪ್ರಚಂಡ ಸಭೆಯಲ್ಲಿ ಮಾತಾಡುವಾಗ್ಗೆ ಬನಾರಸದ ಹಿಂದೂ ವಿಶ್ವವಿದ್ಯಾಲಯದಲ್ಲಿ ೨೫ ಜನ ಹರಿಜನ ವಿದ್ಯಾರ್ಥಿಗಳನ್ನು ಹೆಚ್ಚಿಗೆ ಸೇರಿಸಿಕೊಳ್ಳಲಾಗುವದೆಂದೂ ಅವರಿಗೆ ಎಲ್ಲ ಬಗೆಯ ಅನುಕೂಲತೆಗಳು ಒದಗಿಸಿಕೊಡಲಾಗುವವೆಂದೂ ಹೇಳಿದರು

ಪಂಡಿತರ ದರ್ಶನಕ್ಕಾಗಿ ಸುತ್ತು ಮುತ್ತಿನ ಪ್ರದೇಶದಿಂದ ಸಾವಿರಾರು ಜನ ಹರಿಜನರು ಅಲ್ಲಿ ನೆರೆದಿದ್ದರು. ಮಾಲವೀಯಜಿಯವರಿಗೆ ಒಪ್ಪಿಸಿದ ಬಿನ್ನವತ್ತಳೆಯಲ್ಲಿ ತಾವೆಲ್ಲರೂ ಹಿಂದೂ ಧರ್ಮವನ್ನೇ ಭಕ್ತಿಪೂರ್ವಕವಾಗಿ ಅನುಸರಿಸುವೆವೆಂಬ ಆಶ್ವಾಸನವು ಅವರಿಂದ ಕೊಡಲಾಗಿದೆ.

ಪಂಡಿತಜಿಯವರು ತಮ್ಮ ಉತ್ತರದಲ್ಲಿ ನಿಮ್ಮನ್ನು ಪೀಡಿಸುವವರ ವಿಷಯವಾಗಿಯೂ ನೀವು ದ್ವೇಷ ಬುದ್ಧಿಯನ್ನು ಹಿಡಿಯಬೇಡಿರಿ. ನಿಮ್ಮ ವಿಪತ್ತುಗಳೆಲ್ಲ ಬೇಗನೆ ದೂರಾಗುವವು ಎಂದು ಉಪದೇಶ ಮಾಡಿದರು.

ಕನ್ನಡಿಗ.

ಗುರುವಾರ ತಾರೀಖು ೨೩-೧೧-೧೯೩೩

ನಾಣ್ಯಗಳ ಹುಟ್ಟೂ ಗುಟ್ಟು

ರೂಪಾಯಿಗೆ ೧೮ ಪೆನ್ಸಿನ ದರವನ್ನು ಹಿಂದುಸ್ಥಾನ ಸರಕಾರದವರು ಈಗ ಕೆಲವು ವರ್ಷಗಳಿಂದ ನಿಷ್ಕರ್ಷ ಮಾಡಿದ ಮೂಲಕ ನಮ್ಮಲ್ಲಿಯ ಹುಟ್ಟುವಳಿಗಳ ಬೆಲೆ ಕಡಿಮೆಯಾಗಿ ದಾ[illegible]

[illegible] ಶಾಸ್ತ್ರ ಮೊದಲಾದ ಧಾತುಗಳಿಂದ ರಾಜ್ಯಶಾಸಕರ ಮುದ್ರೆಗಳನ್ನೊತ್ತಿ ಮಾಡಲ್ಪಡುವವು ಯಾವ ಧಾತುವಿನ ನಾಣ್ಯವಿರುವದೋ ಆ ಧಾತುವಿನ ಪೇಟಿಯೊಳಗಿನ ಬೆಲೆಯ ಮಾನದಿಂದ ಆ ನಾಣ್ಯದ ಬೆಲೆಯಲ್ಲಿ ಅಲ್ಪಸ್ವಲ್ಪ ಹೆಚ್ಚಳವಾಗುವದು ಅಪರಿಹಾರ್ಯವಾಗಿರುತ್ತದೆ ಯಾಕಂದರೆ ಆ ಧಾತುವಿನ ತುಂಡಿನ ಮೇಲೆ ರಾಜ್ಯದಾಡಳಿತೆಯ ಮುದ್ರೆಯನ್ನೊತ್ತಿ ಅದನ್ನು ಪ್ರಚಾರದಲ್ಲಿ ತರುವ ಉದ್ಯೋಗವನ್ನು ಹೊಣೆಗಾರರಾದ ರಾಜ್ಯಕರ್ತರು ಮಾಡಬೇಕಾಗುತ್ತದೆ. ಈ ಕೆಲಸಕ್ಕೆ ಬೇಕಾಗುವ ಜನರಿಗೆ ಕೊಡುವ ಕೂಲಿ ಮತ್ತು ಹಲಕೆಲವು ಇತರ ಸಂಗತಿಗಳ ಬಗ್ಗೆ ರಾಜ್ಯಯಂತ್ರವು ಮಾಡಬೇಕಾದ ವೆಚ್ಚದ ಭಾರವು ನಾಣ್ಯಗಳ ಮೇಲೆ ಸ್ವಾಭಾವಿಕವಾಗಿಯೇ ಏರುತ್ತದೆ. ಹೀಗಾಗಿ ನಾಣ್ಯದೊಳಗಿನ ಮೂಲ ದ್ರವ್ಯದ ಬೆಲೆಯು ಪೇಟಿಯ ಧಾರಣಿಗಿಂತ ಅಲ್ಪ ಸ್ವಲ್ಪ ಕಡಿಮೆಯಿದ್ದರೂ ರಾಜ್ಯಯಂತ್ರದ ಅಧಿಕಾರ ವರ್ಚಸ್ಸುಗಳ ಬೆಂಬಲದ ಮೂಲಕ ದೇಶದೊಳಗಿನ ನಾಣ್ಯದ ವ್ಯವಹಾರಕ್ಕೆ ಯಾವ ಬಗೆಯ ಆತಂಕವೂ ತಟ್ಟುವದಿಲ್ಲ. ನಮ್ಮ ದೇಶದ ರಾಜರೇ ನಮ್ಮನ್ನಾಳುತ್ತಿದ್ದಾಗ ಪ್ರಚಾರದಲ್ಲಿದ್ದ ಮೊಹರು, ವರಹ, ರೂಪಾಯಿ, ದುಡ್ಡು ಇವುಗಳ ಪರಿಸ್ಥಿತಿಯೆಲ್ಲ ಹೀಗೇ ಇರುತ್ತಿತ್ತು.

ಪರಕೀಯರಾದ ಈಸ್ಟ ಇಂಡಿಯಾ ಕಂಪನಿಯವರು ಇಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದ ನಂತರ ಅವರಿಂದ ಪ್ರಚಾರದಲ್ಲಿ ಬಂದ ರೂಪಾಯಿ, ಅರ್ಧ ರೂಪಾಯಿ, ಕಾಲು ರೂಪಾಯಿ, ಅರ್ಧ ಆಣೆ- ಕಾಲಾಣೆಯು ನಾಣ್ಯಗಳೂ ಇದೇ ಪರಿವಿಡಿಯಲ್ಲಿ ಮೊದ್ಲು ಮೊದಲು ರೂಢವಾದವು. ಮುಂದೆ ಮುಂದೆ ಇಂಗ್ಲಂಡದ ವ್ಯಾಪಾರವು ಇಲ್ಲಿ ಚನ್ನಾಗಿ ಬೇರೂರಿ ಇಲ್ಲಿಯ ಹಸಿ ಸರಕುಗಳು ಅಲ್ಲಿಗೆ ಹೋಗಿ, ಹೋಗಹತ್ತಿದ ತರುವಾಯ ಇಲ್ಲಿಯ ರೂಪಾಯಿಯೊಳಗಿನ ಬೆಳ್ಳಿಯ ಪ್ರಮಾಣವನ್ನು ಕಡಿಮೆ ಮಾಡಿ ತೂಕ ಸರಿ ಉಳಿಯುವಂತೆ ತಾಮ್ರವನ್ನು ಅದರಲ್ಲಿ ಬೆರಿಸಿ ಕೃತ್ರಿಮತನದಿಂದ ಅದರ ಬೆಲೆಯನ್ನು ಏರಿಸಿ ಇಲ್ಲಿಯ ಸರಕಾರವು ತನ್ನ ಲಾಭವನ್ನೂ ತನ್ನ ದೇಶದ ಲಾಭವನ್ನೂ ಹೆಚ್ಚಾಗಿ ಮಾಡಿಕೊಳ್ಳುವ ಉಪಕ್ರಮವನ್ನು ಕೈಕೊಂಡಿತು ಇಂದಿಗೂ ನಮ್ಮಲ್ಲಿಯ ರೂಢ ನಾಣ್ಯಗಳಲ್ಲಿ ಬೆಳ್ಳಿ ತಾಮ್ರದ ಮೂಲ ಬೆಲೆಯು ಬಹಳ ಮಟ್ಟಿಗೆ ಕಡಿಮೆಯಾಗಿದ್ದರೂ ರೂಪಾಯಿಗೆ ೧೬ ಆಣೆಗಳೆಂಬ ಪ್ರಮಾಣವು ಸರಕಾರದ ಕಟ್ಟಳೆಯಿಂದ ನಿಷ್ಕರ್ಷವಾದಂತೆ ಪ್ರಚಾರದಲ್ಲಿರುವದು. ವಸ್ತುತಃ ನೋಡಿದರೆ ಒಂದು ಬೆಳ್ಳಿಯ ರೂಪಾಯಿಯಲ್ಲಿ ಏಳು ಅಥವಾ ಎಂಟು ಆಣೆಗಳ ಬೆಲೆಯ ಬೆಳ್ಳಿಯು ಮಾತ್ರ ಇರುತ್ತದೆಂಬ ಮಾತನ್ನು ಎಲ್ಲರೂ ನೆನೆಗಂಡಿರಬಹುದು. ಇತ್ತಿತ್ತ ಪ್ರಚಾರದಲ್ಲಿ ಬಂದಿರುವ ನಿಕಲ್ ನಾಣ್ಯಗಳಾದ ನಾಲ್ಕಾಣೆ, ಎರಡಾಣೆ, ಒಂದಾಣೆಯ ತುಂಡುಗಳಂತೂ ವಸ್ತುತಃ ಏನೂ ಬೆಲೆಯಿಲ್ಲದ ಕೃತ್ರಿಮ ಬೆಲೆಯ ನಾಣ್ಯಗಳೇ ಆಗಿವೆ. ಸರಕಾರೀ ಕರನ್ಸೀ ನೋಟುಗಳ ಸಂದರ್ಭದಲ್ಲಿ ಈ ಮಾತು ಸ್ಪಷ್ಟವಾಗಿಯೇ ಕಣ್ಣಿಗೆ ಕಟ್ಟುವದು ನಾಲ್ಕಾರು ಬೆರಳು ಅಗಲ ಉದ್ದವಾದ ಕಾಗದದ ತುಂಡಿನ ಮೇಲೆ ಸರಕಾರದ ಮುದ್ರೆಯೂ ಅದರ ಬೆಲೆಯ ಅಂಕಿಯೂ ಬಿದ್ದ ಕೂಡಲೆ ಅದಕ್ಕೆ ಪೇಟೆಯಲ್ಲಿ ಐದು ಹತ್ತು ಐವತ್ತು ನೂರು ಸಾವಿರಗಟ್ಟಲೆ ರೂಪಾಯಿಗಳ ಬೆಲೆ ಏರುತ್ತದೆ ಇದೇ ಕಾರಣದಿಂದ ರಾಜಕೀಯ ಅರ್ಥ ಶಾಸ್ತ್ರ ವಿಚಾರದಲ್ಲಿ ಪ್ರಚಲಿತ ನಾಣ್ಯಗಳ ನಿಯಮನವು ರಾಜ್ಯಯಂತ್ರದ ಅಧಿಕಾರಕ್ಕೊಳಪಟ್ಟದ್ದೇ ಇರುವದೆಂಬ ಸಿದ್ಧಾಂತವನ್ನು ಮಾಡಿದ್ದಾರೆ.

ಪೃಥ್ವಿಯ ಮೇಲಿನ ಅನೇಕ ದೇಶಗಳಲ್ಲಿ ಅನೇಕ ರಾಜ್ಯಯಂತ್ರಗಳು ಬಹು ಕಾಲದಿಂದಲೂ ಇದ್ದೇ ಇರುತ್ತವೆ ಈ ದೇಶಗಳೆಲ್ಲವೂ ಪೂರ್ವಕಾಲದಲ್ಲಿಯೂ ಪರಸ್ಪರರೊಳಗೆ ವ್ಯಾಪಾರ ವಿನಿಮಯದ ಬಳಕೆಯನ್ನು ಮಾಡುತ್ತಲೇ ಇದ್ದವು ಒಂದು ದೇಶದ ನಾಣ್ಯಗಳನ್ನು ಮತ್ತೊಂದು ದೇಶದ ನಾಣ್ಯಗಳಿಗೆ ಬದಲಿಸಿ ಕೊಡುವ ವ್ಯವಹಾರವನ್ನೇ ಸಾಗಿಸುತ್ತಿದ್ದ ಚಿನಿವಾರರು ಎಲ್ಲ ದೇಶದ ಪ್ರಮುಖ ಪಟ್ಟಣಗಳಲ್ಲಿಯೂ ಇರುತ್ತಿದ್ದ ಮೂಲಕ ಯಾವದೇ ದೇಶದ ಅಂತರ್ವ್ಯವಹಾರದಲ್ಲಾಗಲಿ, ಬಹಿರ್ವ್ಯವಹಾರದಲ್ಲಾಗಲೀ ಯ[illegible] ಬಗೆಯ ಆತಂಕವೂ ಉಂಟಾಗದಂತೆ ಎ[illegible]ದ ವ್ಯವಹಾರಗಳು ಸುಸೂತ್ರವಾಗಿ ಸಾಗುತ್ತಿದ್ದವು ಇದಕ್ಕೆ ಇಲ್ಲಿಯೇ ನಮ್ಮ ನೆರೆಯ ಒಂದೆರಡು ದೃಷ್ಟಾಂತಗಳನ್ನು ನಾವು ಕೊಡಬಹುದು ನಿಜಾಮ ಸರಕಾರದಲ್ಲಿ ಅವರ ನಾಣ್ಯಗಳೇ ಬೇರೆಯಾಗಿವೆ. [illegible] ಬೇರೆಯಾಗಿವೆ ಆದರೂ ಬ್ರಿಟಿಶ ಹಿಂದುಸ್ಥಾನದ ಬೇರೆ ಭಾಗದ ಜನರು ನಿಜಾಮ ರಾಜ್ಯದವರೊಂದಿಗೆ ವ್ಯವಹಾರ ನಡಿಸುವದಕ್ಕೆ ಯಾವ ತೊಂದರೆ ತಾಪಗಳೂ ಆಗುವದಿಲ್ಲ ಇಲ್ಲಿಯ ರಾಜಮುದ್ರಾಂಕಿತ ನಾಣ್ಯಗಳಿಗೂ ಅಲ್ಲಿಯ ನಾಣ್ಯಗಳಿಗೂ ಇರುವ ಅಲ್ಪ ಸ್ವಲ್ಪ ಬೆಲೆಯ ವ್ಯತ್ಯಾಸವು ತುಸು ಹೆಚ್ಚು ಕಡಿಮೆ ಹಣ ಕೊಡುವದರಿಂದ ಬಗೆಹರಿದು ವ್ಯವಹಾರವು ಯಾವ ಆತಂಕವಿಲ್ಲದೆಯೇ ಸಾಗಿ ಹೋಗುತ್ತದೆ ಹಾಗೆಯೇ ಪೋರ್ತುಗಾಲದ ವಶದಲ್ಲಿರುವ ಗೋವೇ ಪ್ರಾಂತದ ವ್ಯವಹಾರವೂ ಇದೇ ದಾರಿಯಿಂದ ಸುಯಂತ್ರಿತವಾಗಿ ಸಾಗುತ್ತ ಬಂದಿದೆ ಹೀಗೆ ಪೂರ್ವಕಾಲದಲ್ಲಿ ರಾಜ್ಯಯಂತ್ರ ನಿರ್ವಾಹಕರು ದೇಶದ ವ್ಯಾಪಾರ ಉದ್ಯೋಗಗಳಲ್ಲಿ ಪ್ರತ್ಯಕ್ಷ ಕೈಹಾಕದೆ ಅಥವಾ ಅವುಗಳ ನಿಯಮನ ಮಾಡದೆ ವ್ಯಾಪಾರೋದ್ಯೋಗಗಳಿಗೆ ಸೌಲಭ್ಯವನ್ನು ಕಲ್ಪಿಸಿ ಕೊಡುವ ಮಟ್ಟಿಗೆ ನಾಣ್ಯಗಳ ನಿರ್ಮಿತಿಯನ್ನೂ ನಿಯಮನವನ್ನೂ ಅಂಕಿತದಲ್ಲಿಟ್ಟುಕೊಂಡಿರುವ ವರೆಗೆ ಯಾವ ದೇಶದವರಿಗೂ ಯಾವ ಬಗೆಯ ತಾಪತ್ರಯಗಳ ತೊಂದರೆಯೂ ಉಂಟಾಗುತ್ತಿರಲಿಲ್ಲ

ಪಶ್ಚಿಮ ದೇಶಗಳಲ್ಲಿ ಯಾಂತ್ರಿಕ ಯುಗಕ್ಕೆ ಆರಂಭವಾದಾಗಿನಿಂದ ವ್ಯವಹಾರದ ಈ ಪರಿಸ್ಥಿತಿಯು ಬದಲಾಯಿತು ದೇಶದಲ್ಲಿ ಹುಟ್ಟುವ ಗು[illegible]ಗಡುತರ ಸರಕುಗಳ ಮಾರಾಟಕ್ಕೆ ದಿಗ್ದೇಶಗಳಲ್ಲಿ ಗಿರಾಕಿಗಳನ್ನು ಹುಡುಕದೆ ಗತ್ಯಂತರವಿಲ್ಲದಾಯಿತು ಆಗ ದೇಶದೊಳಗಿನ ವ್ಯವಹಾರಸ್ಥರಿಗೆ ಸರಕಾರದ ಬೆಂಬಲವನ್ನು ಆಶ್ರಯಿಸಿ ರಾಜಕೀಯ ಸತ್ತಾ, ವರ್ಚಸ್ಸು ಪ್ರಸಂಗ ವಿಶೇಷಗಳಲ್ಲಿ ದಂಡು ಮಾರ್ಬಲಗಳ ಸಹಾಯ ಮೊದಲಾದವುಗಳ ಮುಖಾಂತರವಾಗಿಯೂ ತಮ್ಮ ವ್ಯಾಪಾರ ವ್ಯವಹಾರಗಳನ್ನು ಭೂಮಂಡಲದ ಮೇಲೆಲ್ಲ ಹಂಚುವ ಹವ್ಯಾಸವನ್ನು ಕೈಕೊಳ್ಳಬೇಕಾಯಿತು. ಇದುವೇ ಮುಂದೆ ಸಾಮ್ರಾಜ್ಯಗಳ ವಿಸ್ತಾರಕ್ಕೆ ಮೂಲ ಪೀಠಿಕೆಯಾಗಿ ಕೂತಿತು ಇದರಿಂದ ಗೆದ್ದ ದೇಶಗಳಲ್ಲಿ ತಮ್ಮ ಮೂಲ ದೇಶಗಳ ವ್ಯಾಪಾರವು ಹೆಚ್ಚು ಹೆಚ್ಚು ಉತ್ಕರ್ಷ[illegible] ಹೊಂದುವದಕ್ಕೆ ಅವಶ್ಯಕವಾದ ಉಪಾಯಗಳನ್ನು ಕೈಕೊಳ್ಳುವದರಲ್ಲಿಯೇ ನಾಣ್ಯಗಳ ಬೆಲೆಯನ್ನು ಕೃತ್ರಿಮ ರೀತಿಯಿಂದ ಇಳಿಸುವ ಹಾಗೂ ಏರಿಸುವ ಉಪಾಯವೂ ಒಂದು ಅವಶ್ಯಕ ಸಂಗತಿಯಾಗಿ ಗಣಿಸಲ್ಪಡಹತ್ತಿತು ಇದೇ ವಿಚಾರ ಪರಂಪರೆಯ ಅನುಸಂಧಾನದಿಂದ ಇಂಗ್ಲಂಡದ ಪೌಂಡು ಶಿಲಿಂಗು ಪೆನ್ಸುಗಳಿಗೂ ನಮ್ಮಲ್ಲಿಯ ರೂಪಾಯಿ ಆಣೆ ಪೈಗಳಿಗೂ ಇರುವ ಮೂಲ ಬೆಲೆಯ ವ್ಯತ್ಯಾಸಗಳಲ್ಲಿ ಸರಕಾರೀ ನಿರ್ಬಂಧಗಳಿಂದ ಬದಲಾವಣೆಗಳನ್ನು ಮಾಡಿ ವಿಲಾಯತಿಯ ವ್ಯಾಪಾರವನ್ನು ಎತ್ತಿ ಹಿಡಿಯುವದಕ್ಕೂ ಅಲ್ಲಿಯ ಉದ್ಯೋಗವ್ಯವಸಾಯಗಳನ್ನು ಉತ್ಕರ್ಷಕ್ಕೆ ಮುಟ್ಟಿಸುವದಕ್ಕೂ ಎಂದು ಹಿಂದುಸ್ಥಾನ ಸರಕಾರದವರು ವಿಲಾಯತಿಯ ಸರಕಾರದವರ ಪ್ರೇರಣೆಯಿಂದ ಅಥವಾ ಅನುಮತಿಯಿಂದ ನಮ್ಮ ರೂಪಾಯಿಯ ಧಾರಣಿಯನ್ನು ೧೮ ಪೆನ್ಸಿಗೆ ಏರಿಸಿ ನಮ್ಮ ದೇಶದ ಬಡ ರೈತರ ಕುತ್ತಿಗೆಗೆ ಉರುಲು ತಂದಿದ್ದಾರೆ ಇದು ಹೇಗೆಂಬದನ್ನು ಮುಂದೆ ವಿವರಿಸುವೆವು.

ಶ್ರೀಮಂತ ಡೀಕಪ್ಪ ಅಣ್ಣಾ ಹುಬ್ಬಳ್ಳಿ.

ಇವರು ಹುಬ್ಬಳ್ಳಿಯಲ್ಲಿ ಇದೀಗ ಹೊಸದಾಗಿ ಸ್ಥಾಪನೆಯಾಗಿರುವ ಹಿಂದೂ ಅನಾಥಾಶ್ರಮಕ್ಕೆ ೨೦೦೦ ರೂಪಾಯಿ ಕಾಣಿಕೆಕೊಟ್ಟು ಮುಂದೆ ಪ್ರತಿವರ್ಷ೨೦೦ ರೂಪಾಯಂತೆ ಖರ್ಚುಕೊಡಲು ಒಪ್ಪಿರುವರು

ಹಿಂದುಸ್ಥಾನದಲ್ಲಿ ಸಿನೇಮಾ ವ್ಯವಸಾಯದ ಶಿಕ್ಷಣ.

ನಾರ್ದರ್ನ ಇಂಡಿಯಾ ಇನ್‌ಸ್ಟಿಟ್ಯೂಟ ಆಫ್ ಫೋಟೋಗ್ರಾಫಿ ಎಂಡ ಮೋಶನ್ ಪಿಕ್ಚರ್ ಇಂಡಸ್ಟ್ರೀ ಎಂಬ ಹೆಸರಿನಿಂದ ರಾವಳಪಿಂಡಿಯಲ್ಲಿ ಸಿನೆಮಾ ಫಿಲ್ಮಗಳನ್ನು ಮಾಡುವದನ್ನು ಹಿಂದೀ ಸುಶಿಕ್ಷಿತ ತರುಣರಿಗೆ ಕಲಿಸುವದಕ್ಕೆ ಒಂದು ಶಾಲೆಯು ಸ್ಥಾಪಿತವಾಗಿದೆ ನಾರ್ದರ್ನ ಇಂಡಿಯಾ ಥಿಯೇಟರ್ಸ ಲಿಮಿಟೆಡ್ ಎಂಬ ಕಂಪನಿಯವರು ಇದರ ಉತ್ಪಾದಕರು ಹಿಂದೀ ತರುಣರನ್ನು ಕ್ಯಾಮೆರಾದ ಉಪಯೋಗಕ್ಕೂ ರಸಾಯನ ಕೃತಿಗಳಲ್ಲಿಯೂ ನುರಿತವರನ್ನಾಗಿ ಮಾಡುವದು ಶಾಲೆಯ ಉದ್ದೇಶವಾಗಿದೆ ಪಶ್ಚಿಮ ದೇಶಗಳಲ್ಲಿ ಈ ವಿಷಯದ ಜ್ಞಾನವನ್ನು ಹೊಂದಿದ ಪ್ರವೀಣರು ಶಿಕ್ಷಕರಲ್ಲಿದ್ದಾರೆ.

ಪುಣೆಯಲ್ಲಿ ಇಂಥದೊಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಪ್ರಭಾತ ಸಿನೆಟೋನ ಕಂಪನಿಯವರು ಆಲೋಚನೆ ನಡಿಸಿದ್ದಾರೆ.

ಹುಬ್ಬಳ್ಳಿಯ ಪತ್ರ.

ಹುಬ್ಬಳ್ಳಿ ತಾ। ೨೨— ನಿನ್ನೆ ಸಾಯಂಕಾಲಕ್ಕೆ ಮಳೆಯು ಪ್ರಾರಂಭವಾಗಿ ನಿಂತು ನಿಂತು ಮಧ್ಯರಾತ್ರಿಯ ವರೆಗೆ ಹೊಡೆಯಿತು. ಒಟ್ಟು ೪೬ ಸೆಂಟು ಮಳೆಯಾಗಿದೆ

ಇಲ್ಲಿಯ ಗಣೇಶಪೇಟ ಥಿಯೇಟರದಲ್ಲಿ ನಿನ್ನೆ ರಾತ್ರಿ ಸೊಲ್ಲಾಪುರದ ಮಿಸ್ ಮೆಹಬೂಬಜಾನ್ ಇವಳ ಗಾಯನವಾಯಿತು ಸಂಜೆಯಿಂದ ಮಳೆಯು ಹತ್ತಿದಾಗ್ಯೂ ಪ್ರೇಕ್ಷಕರು[illegible] ಒಳಿತಾಗಿ ಕೂಡಿತ್ತು. ಗಾಯಕಿಯ ಧ್ವನಿಯು ಘೋರವೂ ಸುಸ್ವರವೂ ಆಗಿದ್ದು "ಕೃಷ್ಣಾ ನೀ ಬೇಗನೆ ಬಾ" ಎಂಬ ಕನ್ನಡ ಪದವನ್ನು ಯಮನ ರಾಗದಲ್ಲಿ ಬಹು ಸರಸಾಗಿ ಹಾಡಿದಳು.

ಹುಬ್ಬಳ್ಳಿಪೇಟೆಯ ಧಾರಣಿ

(ಲೇವಡಿ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೨೨ [ಮಧ್ಯಾನ್ಹ ೧೧ ಗಂಟೆ]

ಜವಾರಿ ಹತ್ತಿ	೯೦-೯೫	ಜೋಳ	೬.೫
ಅಪ್ಲೆಂಡ ,,	೯೦-೯೫	ಗೋದಿ	೬॥-೭
ವಿಲಾಯತಿ ,,	೯೦	ಉದ್ದು	೯.೮॥
ಕುಮ್ಟಾ ,,	೧೦೦	ಕಡ್ಲಿ	೫॥-೬
ಜೀನ ಅರಳೆ	೬೮-೭೦	ಕಡ್ಲಿ ಕಾ. ೫॥	[illegible]
ದಬ್ಬಲ್‌ರೂಲ ಅ	೬೪-೬೫	ಕುಸುಬಿ	೧-॥।-೧೧
ಸಾಣಿನ ಅರಳೆ	೬೦	ಹುರಳಿ	೧೧-೧೧॥
ಹೆಸರು ಜವಾರಿ	೯೧೨		
ಶೇಂಗಾಕಾಯಿ	೫	ಹತ್ತಿಕಾಳು ೬೦	

ಬೆಳ್ಳಿ ಬಂಗಾರ

ಬಂಗಾರ	೩೧೪॥।	ಬೆಳ್ಳಿ	॥-

ಅಮೀರರ ಕಕ್ಕನು ದಿವಾಣನಾದನು.

ಅಮೀರರ ಕಕ್ಕನು ದಿವಾಣನಾದನು.

ಮುಂಬಯಿ ತಾ। ೨೨— ಅಫಗಾಣಿಸ್ಥಾನದ ಹೊಸ ಅಮೀರರು ತಮ್ಮ ಚಿಗಪ್ಪನಾದ ಸರದಾರ ಮಹಮ್ಮದ ಹಾಶಿಮುಖಾನರವರನ್ನು ದಿವಾಣರನ್ನಾಗಿ ನೇಮಿಸಿಕೊಂಡಿರುವರೆಂದೂ ಮತ್ತು ಅವರಿಗೆ ಹೊಸ ಮಂತ್ರಿಮಂಡಳವನ್ನು ಸ್ಥಾಪಿಸಿಕೊಳ್ಳಲು ಅಪ್ಪಣೆ ಕೊಟ್ಟಿರುವರೆಂದೂ ಮುಂಬಯಿಯಲ್ಲಿದ್ದ ಅಫಗಾಣಿಸ್ಥಾನದ ರಾಯಭಾರಿಗಳು ಅಸೋಸಿಯೇಟೆಡ್ ಪ್ರೆಸ್ಸಿನವರಿಗೆ ತಿಳಿಸಿರುವರು (ಈಗಿನ ಅಮೀರರ ತಂದೆಯ ಕಾಲಕ್ಕಾದರೂ ಹಾಶಿಮುಖಾನರೇ ದಿವಾಣರಾಗಿದ್ದರು) [ಅ ಪ್ರೆ ತಂತಿ]

ಬೆಳ್ಳಿಯ ಕರಾರಿಗೆ ಒಪ್ಪಿಗೆ.

ಮುಂಬಯಿ ತಾ॥ ೨೨— ಹಿಂದುಸ್ಥಾನ ಸರಕಾರದವರು ಬೆಳ್ಳಿಯ ವ್ಯವಹಾರದ ಸಂಬಂಧದಲ್ಲಿ ಮಾಡಿದ ಕರಾರನ್ನು ಅಸೆಂಬ್ಲಿಯ ಮುಂದೆ ಒಪ್ಪಿಗೆಗಾಗಿ ಮಂಡಿಸಿದರು. ಈ ವಿಷಯವಾಗಿ ತುಸು ಚರ್ಚೆಯಾಗಿ ಕೊನೆಗೆ ಒಪ್ಪಿಗೆಯು ಗೊತ್ತುವಳಿಯು ಅಂಗೀಕೃತವಾಗಿ ಅಸೆಂಬ್ಲಿಯ ಅಧಿವೇಶನವು ಗುರುವಾರದವರೆಗೆ ಮುಂದೆ ಹಾಕಲ್ಪಟ್ಟಿತು [ಅ ಪ್ರೆ]

ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಳವು.

ಮುಂಬೈ ತಾ। ೨೨— ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಲದ ಸಭೆಯು ಡಿಸೆಂಬರ ೩ ನೇ ತಾರೀಖಗೆ ಸೇರಿ ರಾಷ್ಟ್ರ ಸಂಘಕ್ಕೆ ಪ್ರತಿನಿಧಿ ಮಂಡಲವನ್ನು ಕಳಿಸುವ ಸಂದರ್ಭದ ವಿಶೇಷ ಸಂಗತಿಗಳು ಹಾಗೂ ಹಿಂದೂ ಮಹಾಸಭೆಯ ಕೆಲಸಗಳಿಗಾಗಿ ಒಂದು ಸ್ಥಿರವಂದಿರವನ್ನು ಕಟ್ಟುವ ವಿಷಯವೂ ವಿಚಾರ ಮಾಡಲ್ಪಡುವದು [ಅ ಪ್ರೆ]

ಶ್ರೀ. ಸೀ. ಕೆ. ನಾಯುಡೂ ಹಿರೇಮಣಿಯಾದರು.

ನ್ಯೂದಿಲ್ಲಿ ತಾ॥ ೨೧— ಬರುವ ದಿಶೆಂಬರ ತಿಂಗಳಲ್ಲಿ ಇಂಗ್ಲಂಡಿನ ಎಮ್. ಸಿ ಸಿ ಕ್ರಿಕೆಟ್ ಗುಂಪಿನ ಸಂಗಡ ಆಡುವ ಕ್ರಿಕೆಟ್ ಆಟದಲ್ಲಿ ಅಖಿಲ ಭಾರತ ಕ್ರಿಕೆಟ್ ಸಂಘದವರು ಇಂದೂರಿನ ಮೇಜರ್ ಸೀ. ಕೆ ನಾಯುಡು ಇವರನ್ನು ಅಖಿಲ ಹಿಂದುಸ್ಥಾನದ ಕ್ರಿಕೆಟ್ ಗುಂಪಿನ ಹಿರೇಮಣಿಯನ್ನಾಗಿ ಆರಿಸಿರುವರು ಮತ್ತು ಲಾಲಸಿಂಗರವರು ಹಿಂದುಸ್ಥಾನದ ತಂಡದಿಂದ ಆಡುವದಕ್ಕೆ ಯೋಗ್ಯರಲ್ಲರೆಂದೂ ನಿಶ್ಚಯಿಸಿರುವರು. (ಅ ಪ್ರೆ ತಂತಿ)

ಬಿಳೇ ಕಾಗದದಲ್ಲಿ ಮಹಮ್ಮದ ಯಾಕೂಬರವರ ವಿಶ್ವಾಸ

ಮುಂಬಯಿ ತಾ॥ ೨೨

ಆಸಿರ್ಬಂಧ ಪ್ರಜಾಸತ್ತಾತ್ಮಕ ರಾಜ್ಯದಾಡಳಿತೆಯು ಉತ್ತಮವಾದದ್ದಲ್ಲ ಯಾಕಂದರೆ ಮಹಾ ಯುದ್ಧವಾದ ಮೇಲೆ ಪರಿಣತಿ ಹೊಂದಿದ ಪ್ರಜಾಸತ್ತಾತ್ಮಕ ರಾಷ್ಟ್ರಗಳೆಲ್ಲ ಒಬ್ಬೊಬ್ಬ ವ್ಯಕ್ತಿಯಿಂದ ಆಳಲ್ಪಡಹತ್ತಿವೆ. ಮತ್ತು ಇಂಥಲ್ಲಿ ಸೈನ್ಯದ ಅಧಿಕಾರವು ಹೆಚ್ಚಾಗಿ ಜನತೆಯ ವ್ಯಕ್ತಿ ಸ್ವಾತಂತ್ರ್ಯವೆಲ್ಲವೂ ಇಲ್ಲದಂತಾಗಿ ಹೋಗಿದೆ. ಕಾರಣ ಈ ಸಮಯಕ್ಕೆ ಹಿಂದುಸ್ಥಾನದಲ್ಲಿ ಇಂಥ ರಾಜ್ಯದಾಡಳಿತೆಯನ್ನು ನೆಲೆಗೊಳಿಸಿದರೆ ಅದು ದೇಶಕ್ಕೆ ಎಷ್ಟೋ ಆಪತ್ತುಗಳನ್ನು ತಂದು ಕಳೆದ ಶತಮಾನದಲ್ಲಿ ಕಟ್ಟಲ್ಪಟ್ಟ ಸಾಂಸ್ಕೃತಿಕ ಬೆಳವಣಿಗೆಯ ಮಂದಿರವನ್ನೇ ಹಾಳು ಮಾಡಿ ಬಿಡುವದು'' ಹೀಗೆಂದು ಯುರೋಪ ಖಂಡದಲ್ಲಿಯೂ ಮಧ್ಯಪೂರ್ವದಿಯ ರಾಜ್ಯಗಳಲ್ಲಿಯೂ ಪ್ರವಾಸ ಮಾಡಿ ಬಂದ ಮಹಮ್ಮದ ಯಾಕೂಬರು ಅಂದರು ಮತ್ತು ಜಗತ್ತಿನ ರಾಷ್ಟ್ರಗಳೆಲ್ಲವೂ ಲೋಕ ಸತ್ತೆಯೆಂಬ ಬಾಹ್ಯರೂಪವನ್ನು ತೆಗೆದೊಗೆದು ತಿರುಗಿ ರಾಜಸತ್ತೆಯ ಕಡೆಗೇ ಬರಹತ್ತಿವೆ ಈಗಿನ ಹಿಂದುಸ್ಥಾನದಲ್ಲಿ ಸಹ ಅನಿರ್ಬಂಧ ... ರಾಜ್ಯಯಂತ್ರವನ್ನ ... ಯುರೋಪ ಖಂಡದ ರಾಷ್ಟ್ರಗಳು ತೊಟ್ಟಿರುತ್ತಿ ... ದ ಹರಕ ತೊಡಿಗೆಗಳನ್ನು ನಾವು ಹಿಂದುಸ್ಥಾನಕ್ಕೆ ಹಾಕಿಟ್ಟಲ್ಲದೆ ಸಾತ್ತೇನು? ನಿಜವಾಗಿ ನಮ್ಮಲ್ಲಿದ್ದ ಬಂಧನಗಳು ಎಷ್ಟು ಬಿಗಿಯಾಗಿದ್ದರೂ ಜನ ಸತ್ತೆಯೆಂಬ ಗೋವ ಮುಖ ವ್ಯಾಘ್ರದಿಂದ ಆಳಲ್ಪಡುತ್ತಿರುವ ಯುರೋಪದ ಸ್ವತಂತ್ರ ರಾಜ್ಯಗಳ ಪ್ರಜೆಗಳಿಗಿಂತ ನಾವು ಎಷ್ಟೋ ಮಟ್ಟಿಗೆ ಸುಖಿಯಾಗಿರುತ್ತೇವೆ ಆದಕ್ಕಾಗಿಯೇ ಬರುವ ಬಿಳಿ ಕಾಗದದಲ್ಲಿದ್ದ ರಾಜ್ಯ ರಚನೆಗೆ ಕೆಲಮಟ್ಟಿಗೆ ನನ್ನ ಸಮ್ಮತಿ ಇದೆ ಇಷ್ಟಾಗಿ ಈ ಬಿಳೀ ಕಾಗದವು ಪರಮ ಆಕಾಂಕ್ಷೆಯ ಧ್ಯೇಯವಲ್ಲವಷ್ಟೇ! ಆದರೆ ಸಧ್ಯದ ದುಸ್ತರ ಪರಿಸ್ಥಿತಿಯನ್ನು ದಾಟುವುದಕ್ಕೆ ಇದೊಂದೇ ಮಾರ್ಗವಾಗಿದೆ ಮತ್ತು ಈ ರಚನೆಯನ್ನು ನಾವು ವಿರೋಧಿಸಿದರೆ ಆಂಗ್ಲ ... ದಲ್ಲಿದ್ದ ನಮ್ಮ ವಿರೋಧಿಗಳ ಕೈಯಲ್ಲ ನಾವೇ ಗಿಯೇ ನಮ್ಮ ಕುತ್ತಿಗೆಯನ್ನು ಕೊಟ್ಟಂತಾಗುವದು ಈ ರಾಜ್ಯ ಘಟನೆಯಲ್ಲಿ ವ್ಯಂಗಗಳೇನೋ ಇರುವದು ನಿಜವಿದ್ದರೂ ಇದರ ಪುನರ್ವಿಚಾರಣೆಯ ಕಾಲಕ್ಕೆ ಅದರಲ್ಲಿ ನಾವು ನಮಗೆ ಬೇಕಾದ ಸುಧಾರಣೆಗಳನ್ನು ಮಾಡಿಕೊಳ್ಳಬಹುದು [ಅ ಪ್ರೆ ತಂತಿ]

ಅಖಿಲ ಕರ್ನಾಟಕ ವಾಚನಾಲಯ ಪರಿಷತ್ತು.

ಇದೇ ಡಿಶಂಬರ ತಿಂಗಳಲ್ಲಿ ಜರಗಲಿರುವ ಸಾಹಿತ್ಯ ಸಮ್ಮೇಲನದೊಂದಿಗೆ ಅಖಿಲ ಕರ್ನಾಟಕದ ಎರಡನೆಯ ವಾಚನಾಲಯ ಪರಿಷತ್ತನ್ನು ಕೂಡಿಸುವ ವಿಷಯವಾಗಿ ವಿಚಾರ ಮಾಡಿ ಮುಂದಿನ ಸಿದ್ಧತೆಯನ್ನು ಕೈಕೊಳ್ಳುವದಕ್ಕೆ ಒಂದು ಪ್ರಾಸ್ತಾವಿಕ ಸಭೆಯು ಬರುವ ೨೬ನೇ ತಾರೀಖು ರವಿವಾರ ದಿವಸ ಸಂಜೆಯ ೫ ಘಂಟೆಗೆ ಹುಬ್ಬಳ್ಳಿಯ ಶ್ರೀ ಗಂಗಾಧರ ಸಂಸ್ಕೃತ ಕಾಲೇಜದ ಪಾಠಶಾಲೆಯಲ್ಲಿ ಕೂಡುವದು ಗೊತ್ತುಪಡಿಸಲಾಗಿದೆ ಸಂಘದ ಸದಸ್ಯರೂ ಸಹಾನುಭೂತಿಯುಳ್ಳ ಬೇರೆ ಸದ್ಗೃಹಸ್ಥರೂ ಅಗತ್ಯವಾಗಿ ಸಭೆಗೆ ಬರಬೇಕೆಂದು ಬಿನ್ನಹ

ಬೆಳವಡಿ ಗೋಪಾಳರಾಯರು
ಕಾರ್ಯದರ್ಶಿ

ಅಖಿಲ ಕರ್ನಾಟಕ ವಾಚನಾಲಯ ಸಂಘ
ಧಾರವಾಡ

ಗಲಗಲಿ

ಪ್ಲೇಗಿನ ಉಪದ್ರವವು ಪ್ರಾರಂಭವಾಗಿ ಗಲಗಲಿಯು ಈಗ ಊರ ಹೊರಗೆ ಇರಹತ್ತಿದೆ ಅಲ್ಲಿಯ ' ನರಸಿಂಹ ' ದೇವರ ಗುಡಿ ಕಟ್ಟಿಸುವ ಸಂಬಂಧದ ನ್ಯಾಯ ನಡೆದಿದ್ದು, ಕಟ್ಟಿಸುವ ವ್ಯವಸ್ಥಾಪಕರಾದ ಶ್ರೀ ವಾಜಾಚಾರ್ಯರು ಕೋರ್ಟಿನ ಹುಕುಮು ಅಮಾನ್ಯಮಾಡಿದಂತಾಗಿದೆ. ಆ ಕಾರಣ ಅವರು ಬಾಗಲಕೋಟಿ ಕೋರ್ಟಿಗೆ ಕ್ಷಮೆ ಬೇಡಬೇಕು ಅಂತಾ ಹುಕುಮು ಆಗಿದೆ ಇದು ಮೇಲೆ ಅಪೀಲು ಮಾಡುವವರಿದ್ದಾರಂತೆ

ಕರ್ನಾಟಕ ಹಿಂದೀ ಪ್ರಚಾರ ಪರಿಷತ್ತು.

ಬೆಂಗಳೂರ ತಾ॥ ೧೯-೧೧-೩೩

ಕರ್ನಾಟಕ ಹಿಂದೀ ಪ್ರಚಾರಪರಿಷತ್ತಿನ ವಿಶೇಷ ಅಧಿವೇಶನವು ಇದೇ ೧೬-೧೧-೩೩ ನೇ ಗ ... ರ ... ಗ ... ರ ಪಿಟಿ ಹಿಂದೀ ಸಮಾಜ ... ಭವನದಲ್ಲಿ ಶ್ರೀ ಪಂಡಿತ ಎಸ್ ರಂಗಾಚಾರ್ಯ ಎಮ್ ಎ ' ವಿ ... ' ರವರ ಅಧ್ಯಕ್ಷತೆಯಲಿ ಜರುಗಿತು ದೇವತಾ ಪ್ರಾರ್ಥನೆಯಾದ ಮೇಲೆ ಆಗ್ರಾಸನ ಧಿಪತಿಗಳು ಈ ವಿಶೇಷ ಅಧಿವೇಶನದ ಪ್ರಸಂಗಕ್ಕೆ ಲಕ್ಷ್ಯಾಂತೆ ಭಾಷಣ ಮಾಡಿದರು ನಮ್ಮ ಪೂಜ್ಯ ಪಿತಾಮಹರಿಗೆ ಸ್ವರ್ಗವಾಸವುಂಟಾಗಿ ನಾನು ಅವರ ಸ್ಥಳದಲ್ಲಿ ನಿಲ್ಲಬೇಕಾಗಿ ಬಂದುದಕ್ಕಾಗಿ ಬಹಳ ದುಃಖವಾಗುತ್ತದೆ ಆದ ಪ್ರನಃ ಅವರನ್ನು ನಮ್ಮ ನಡುವೆ ನೋಡುವ ಸಂಭವವಿಲ್ಲ.

ಮಹಾತ್ಮಾ ಗಾಂಧಿಯವರೂ ಇತರ ಮುಂದಾಳುಗಳೂ ... ಹಿಂದಿಯ ಪ್ರಚಾರದ ಆವಶ್ಯಕತೆಯ ಮೇಲೆ ಬ್ರಿಟಿಶ್ ಪ್ರಾಂತಗಳಲ್ಲಿ ಉಪನ್ಯಾಸಮಾಡುತ್ತಿದ್ದರು ಬ್ರಿಟಿಷ್ ಪ್ರಾಂತ್ಯಕೆ ಅವರು ಮುಂದಾಳಾದರೆ ನಮ್ಮ ನಾಡಿಗೆ, ಕರ್ನಾಟಕಕ್ಕೆ ಮುಂದಾಳುಗಳು ನಮ್ಮ ವೃದ್ಧ ಪಿತಾಮಹರು. ಇವರು ಕರ್ನಾಟಕದಲ್ಲಿ ಹಿಂದೀ ಪ್ರಚಾರ ಮಾಡುವುದಕ್ಕಾಗಿ ತಮ್ಮ ನೇತೃತ್ವದಲ್ಲಿ ' ಹಿಂದೀ ಭಾಷಾ ಸೇವಾ ಸಮಾಜ ' ವೆಂಬ ಹೆಸರಿನಿಂದ ಒಂದು ಸಂಸ್ಥೆಯನ್ನು ೧೯೩೧ ರಲ್ಲಿ ಸ್ಥಾಪಿಸಿದರು. ಈ ಸಂಸ್ಥೆಯನ್ನು ಬೆಳಸಿ ಕರ್ನಾಟಕದಲ್ಲೆಲ್ಲಾ ಇದರ ಶಾಖೆಗಳನ್ನೇರ್ಪಡಿಸಿ ಅಖಿಲ ಕರ್ನಾಟಕದ ಏಕೀಕರಣವನ್ನೂ ಹಿಂದೀ ಪ್ರಚಾರದ ಮಾರ್ಗದಿಂದಲಾದರೂ ಮಾಡಿ, ಕರ್ನಾಟಕವು ಎಂದಿದ್ದರೂ ಒಂದು ಎಂಬುವದನ್ನು ತೋರಿಸಿ ಈ ಸಮಾಜವನ್ನು ಕರ್ನಾಟಕಕ್ಕೆ ಒಂದು ಆದರ್ಶ ಸಂಸ್ಥೆಯನ್ನಾಗಿ ಮಾಡಬೇಕೆಂದು ಬಹಳ ಆಶೆಯಿಟ್ಟುಕೊಂಡಿದ್ದರು ಆದರೆ ದೈವಗತಿಯು ಬೇರೆಯಿತ್ತು. ಅವರ ಆಶೆಯಲ್ಲಿ ಅರ್ಧವನ್ನು ಮಾತ್ರ ಕಳೆದ ವರ್ಷವೇ ನೋಡಿದರು ಅವರಿಂದ ಸ್ಪಷ್ಟವಾಗಿ ಬೆಳೆದ. ಬಂದ ಸಮಾಜಕ್ಕೆ ಕರ್ನಾಟಕದಲ್ಲಿ ೩೦-೪೦ ಶಾಖೆಗಳು ಹುಟ್ಟಿ ಹರಡುತಿರುವದನ್ನು ನೋಡಿ, ಆ ಸಂಸ್ಥೆಯನ್ನು ಕರ್ನಾಟಕ ಹಿಂದೀ ಪ್ರಚಾರ ಪರಿಷತ್ತೆಂದು ಕರೆದು ಕರ್ನಾಟಕದಲ್ಲಿನ ಹಿಂದೀ ಪ್ರಚಾರಕ ಸಂಸ್ಥೆಗಳಿಗೆಲ್ಲಾ ಇದು ಪ್ರಧಾನ ಕೇಂದ್ರವೆಂಬುವುದನ್ನು ಸ್ಥಿರಪಡಿಸಿದರು ಇತರ ಕೆಲವು ಹಿಂದೀ ಸಂಸ್ಥೆಗಳನ್ನೂ ಇದಕ್ಕೆ ಅಂಗಗಳನ್ನಾಗಿ ಮಾ. ಕರ್ನಾಟಕವು ಹಿಂದೀ ಪ್ರಚಾರದ ವಿಚಾರದಲ್ಲಿ ಸ್ವತಂತ್ರವಾಗಿ ರಬಲ್ಲದೆಂದು ತೋರ್ಪಡಿಸಿ. ಪ್ರದರೊಳಗ ಭಗವಂತನು ಅವರನ್ನ ತನ್ನಲ್ಲಿಗೆ ಕರೆದ ಕೊಂಡು, ಬಿಟ್ಟನು ಇವರಿಂದ ನಮ್ಮ ನಾಡಿಗೆ ಎಂತಹ ನಷ್ಟವಾಗಿದೆಯೆಂಬುದನ್ನು ಹೇಳತೀರದು? ಎಂದು ಹೇಳಿ ಪಿತಾಮಹರ ಹೆಸರಿನಲ್ಲಿ ಒಂದು ಹಿಂದೀ ಪುಸ್ತಕಾಲಯವನ್ನೂ ವಾಚನಾಲಯವನ್ನೂ ತೆರೆಯುವದು ಪಿತಾಮಹ ವೆಂಕಟಕೃಷ್ಣಯ್ಯನವರ ಭಾವ ಚಿತ್ರವನ್ನು ಆಂನೆಯ ಹಿಂದೀ ಸಮಾರೋಹದ ಸಮಯದಲ್ಲಿ ಅನಾವರಣ ಮಾಡುವದು ಮತ್ತು ವೆಂಕಟಕೃಷ್ಣಯ್ಯನವರ ಹೆಸರಿನಲ್ಲಿ ನಮ್ಮ ಹಿಂದೀ ಪ್ರವೇಶ ಪರೀಕ್ಷೆಯಲ್ಲಿ ಸರ್ವ ಪ್ರಥಮ ಉತ್ತೀರ್ಣರಾದವರಿಗೆ ಪ್ರತಿವರ್ಷವೂ ಒಂದು ಪದಕವನ್ನು ಕೊಡಲು ಅನುಕೂಲಿಸುವಂತೆ ಒಂದು ಸ್ಮಾರಕ ನಿಧಿಯನ್ನು ಏರ್ಪಡಿಸುವದು ಅಗತ್ಯವಾಗಿದೆಯೆಂದು ಹೇಳಿದರು ಮೂರು ಸಲಹೆಗಳೂ ಸದಸ್ಯರಿಂದ ಅನುಮೋದಿಸಲ್ಪಟ್ಟು ಸರ್ವಾನು ಮತದಿಂದ ಅಂಗೀಕೃತವಾದವು

ದುರಾಗ್ರಹಿಗಳು ಯಾರು ?

ಸನಾತನಿಗಳೋ ಕೆಲವು ಉಪದ್ವ್ಯಾಪಿಗಳೋ ?

೧೨ ನೇ ತಾರೀಖಿನ ' ಕನ್ನಡಿಗ ' ದಲ್ಲಿ ' ದೇವಾಲಯ ಪ್ರವೇಶದ ಕಾಯದೆ ' ಈ ತಲೆ ಬರಹದ ಕೆಳಗೆ ಒಂದು ಲೇಖವು ಪ್ರಸಿದ್ಧವಾಗಿದೆ ಅದರಲಿ ಲೇಖಕರು ಶ್ರೀ ರಂಗಾ ಅಯ್ಯಂಗರ ಬಿಲ್ಲಿನ ಬಗ್ಗೆ ಲೋಕಮತವನ್ನು ಪಡಿಸುವದಕ್ಕೆ ಯುಕ್ತಿ ಸಬೇಕೆಂದು ಸುಧಾರಕರಿಗೆ ಸೂಚಿಸಿರುವರು ಈ ಬಗ್ಗೆ ನಮಗೆ ಏನೂ ಅನ್ನಬೇಕಾಗಿಲ್ಲ ಆದರೆ ಅವರು ಮೆಲ್ಲಗೆ ಸನಾತನಿಗಳಿಗೆ ದುರಾಗ್ರಹಿಗಳು ' ಎಂಬದೊಂದು ಮೆತನ್ನ ವಿಶೇಷಣವನ್ನು ಹಚ್ಚಿರುವರು. ಈ ವಿಷಯದಲ್ಲಿಯೇ ನಮ್ಮ ಆಕ್ಷೇಪವಿರುವದು.

ಸದ್ಯಕ್ಕೆ ಸನಾತನ ಧರ್ಮವು ಅನಾದವಾಗಿರುವದು ಬೇಕಾದವರು ಬೇಕಾದ ಹಾಗೆ ಸನಾತನ ಧರ್ಮಕ್ಕೂ ಅದರ ಅನುಯಾಯಿಗಳಿಗೂ ಕಾಲಾಕಾಲದಲ್ಲಿ ನಿಂದಿಸಬಹುದು ಮತ್ತು ಜಾತಿ ಜಾತಿಗಳ ನಡುವೆ ವೈಮನಸ್ಸನ್ನೂ ದ್ವೇಷವನ್ನೂ ಹುಟ್ಟಿಸುವಂಥ ಲೇಖಗಳನ್ನೂ ಭಾಷಣಗಳನ್ನೂ ಸಾರಬಹುದು ಆ ಬಗ್ಗೆ ಸದ್ಯಕ್ಕೆ ಸರಕಾರದ ಹಸ್ತದಲ್ಲಿರುವ ಶಸ್ತ್ರವು ಸರಕಾರದ ಬೆತ್ತಳಿಕೆಯಲ್ಲಿ ಸುಖವಾಗಿ ಮಲಗಿರುವದು; ಅಂದಬಳಿಕ ಸನಾತನಿಗಳಿಗೆ ದುರಾಗ್ರಹಿಗಳು ಎಂದಂದದ್ದರಲ್ಲಿ ವಿಶೇಷವೇನು? ಇದಕ್ಕೂ ಹೆಚ್ಚಿನ ಎಷ್ಟೋ ಅವಾಚ್ಯ ಶಬ್ದಗಳನ್ನು ಸುಧಾರಕ ಬ್ರುವರು ನುಡಿಯುತ್ತಿರುವಲ್ಲಿ ಇದಕ್ಕೇನೂ ಅಷ್ಟು ಮಹತ್ವಕೊಡುವ ಕಾರಣವಿಲ್ಲ ಆದರೂ ದುರಾಗ್ರಹಿಗಳು ಎಂಬ ವಿಶೇಷಣವು ಸನಾತನಿಗಳಿಗೆ ಸಲ್ಲುವದೋ ಅವರ ವಿರೋಧಿಗಳಿಗೆ ಸಲ್ಲುವದೋ ನೋಡುವಾ

ದುರಾಗ್ರಹವೆಂದರೆ ದುಷ್ಟವಿಷಯದಲ್ಲಿ ಹಟ ' ಬ ' ನಿಗೂ ಅವನ ಜನರಿಗೂ ಉಪಯೋಗಿಸುವ ಹಕ್ಕಿರುವ ಸ್ಥಳದಲ್ಲಿ ' ಕ ' ನಿಗೂ ಅವನ ಜನರಿಗೂ ಹೋಗಲಿಕ್ಕೆ ಹಕ್ಕಿಲ್ಲ ಹೀಗಿದ್ದರೂ ಅವರಿಬ್ಬರ ನಡುವೆ ಯಾವ ತರದ ವೈಮನಸ್ಯವೂ ಇರದೆ ಬಹುಕಾಲದಿಂದ ಶಾಂತತೆಯಿಂದ ಇದ್ದುಕೊಳ್ಳುತ್ತ ಬಂದಿದ್ದಾರೆ ' ಅ ' ನೂ ಅವನ ಕೆಲವು ಜನರೂ ಬಂದು ' ಕ ' ನಿಗೂ ಅವನ ಜನರಿಗೂ ' ಬ ' ಮುಂತಾದವರ ಹಕ್ಕಿನ ಸ್ಥಳದಲ್ಲಿ ' ನೀವೂ ಹೋಗಿರಿ, ನಿಮಗೂ ಹಕ್ಕುಂಟು ಆ ಬಗ್ಗೆ ಹಟಹಿಡಿಯಿರಿ ' ಎಂದು ಹೇಳಿ ಉಸ್ಸಿಗೆ ಹಾಕಿದರೆ, ಅವರನ್ನು ಕಟ್ಟಿಗೆ ಹಾಕಿ ಎಬ್ಬಿಸಿ ಕೊಡ್ತಿಸಿ ಸಮಾಜದಲ್ಲಿ ಶಾಂತತೆಯನ್ನು ಭಂಗು ಮಾಡಲು ಆಗ್ರಹ ತೊಟ್ಟರೆ ಅದೇನು ಸದಾಗ್ರಹವೋ ದುರಾಗ್ರಹವೋ?

ಸ್ವತಃ ಅವ್ಯಾಪಾರೇಷು ವ್ಯಾಪಾರಮಾಡಿ ಜನರಲ್ಲಿ ಅಶಾಂತತೆಯುಂಟಾಗುವಂತೆ ಮಾಡುವದು ಮತ್ತು ಈ ದುಷ್ಟ ಕೆಲಸದಲ್ಲಿಯೇ ಆಗ್ರಹ ಹಿಡಿಯುವದು ಮತ್ತೆ ವಿಪರೀತವಾಗಿ ಅನ್ಯರಿಗೆ ದುರಾಗ್ರಹಿಗಳು ಎಂದೆನ್ನುವದು ಇದು ಒಳ್ಳೇ ನ್ಯಾಯ! ಇದಕ್ಕೇ ಅನ್ನುವದು ಕಳ್ಳನ ತಿರುಬೊಬ್ಬೆಯೆಂದು ! ತಾ॥ ೨೦-೧೧-೩೩

ರಾವ ಚಂದ್ರ ಗಣೇಶ ಜೋಯ್ಸ ಧಾರವಾಡ

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಶತಾವರೀ ಕಾರ್ಡಿಯಲ್



ಸ್ತ್ರೀಯರ ಎಲ್ಲ ಬೇನೆಗೂ ರಾಮಬಾಣ ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ ರು ೧॥ ಎಲ್ಲ ಕಡೆಗೂ ದೊರೆಯುತ್ತದೆ.

ಏಜಂಟರು — ಧಾರವಾಡ ... ಫಾರ್ಮಸಿ ... ಲ್ಯಾಬೋರೇಟರಿ ...

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ೩ ದಿವಸದಲ್ಲಿಯೆ ಗುಣ ... ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್ ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ

ಮ್ಯಾನೇಜರ-ರಾಘವ ಧಾವ ... ಗೋಕಾಕ
ಜಿ ಬೆಳಗಾವ

ವಿಜಯ ಸಿನೇಮಾ ಧಾರವಾಡ.

ತಾರೀಖು ೨೧ ಮಂಗಳವಾರದಿಂದ ಫಕ್ತ ೪ ದಿವಸ
ರಜಪೂತ ಮೂರ್ತಿ ಟೋನದ ಮಾತಾಡುವ ಹಾಡುವ ಚಿತ್ರಪಟ.
ಮಿಸ್ ಗೋಹರ ಭಗವಾನದಾಸ, ಬಿಲಿಮೋರಿಯಾ ಇವರು ಕೆಲಸ ಮಾಡಿದ ಚಿತ್ರಪಟ

ರಾಧಾರಾಣಿ

ದರ ನಿತ್ಯದಂತೆ ವೇಳೆ— ೬, ೧೦-೩೦ಕ್ಕೆ ರವಿವಾರ, ಮಂಗಳವಾರ ಹಗಲು ೪ ಕ್ಕೆ

Moderate fees ***Excellent Results!!***

THE NEW COACHING CLASSES

For High School & College Students

Fort Dharwar V R Sankad B A D R Kengsur B. A.

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡುವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕೆ ಆಗಡಿಕರ ಬ್ರದರ್ಸ
ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ...

೧೪- ೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡೇಪೊ
ಕಹಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ಅಸ್ಪೃಶ್ಯತಾ ನಿವಾರಣೆ. **ಪ್ರಚಾರಕರಿಗೆ ಸುಸಮಯ**

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ ಹರಿಜನೋದ್ಧಾರದ ... ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಉದ್ರಿ ಇಲ್ಲವೆ ವ್ಹಿ ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಒಯ್ಯುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೬-೧೧-೩೩ ಟಿ ಜಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೇ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ ಕಲ್ಲು] ಗಳು ಬೇಕಾಗಿವೆ. ಮಾರುವವರು ಕರ್ನಾಟಕ ಕಾರ್ಯಾಲಯದಲ್ಲಿ ತಿಳಿಸಬೇಕು

೨/೦ ಕರ್ನಾಟಕ ಕಾರ್ಯಾಲಯ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡುಯವರ

ಮೋಹಸಂಜೀವನೀ ಯಣ್ಣೆ



ಪತಿವ್ರತೆಯಾದ ತನ್ನ ಹೆಂಡತಿಯಲ್ಲಿಯೆ ಅತಿ ಸಂಭೋಗ ಮಾಡುವದರಿಂದ ಅನರ್ಥಕ್ಕೆ ಕಾರಣವಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟ ಸ್ತ್ರೀಯರಲ್ಲಿ ತಮ್ಮ ಪ್ರಾಯವೆಂಬ ಅಮೋಘ ವಸ್ತುವನ್ನು ಧಾರೆಯೆರೆದು ಹಾಳು ಮಾಡಿಕೊಂಡು—ಮೇಹವ್ರಣ, ಬಿಳುಪು, ಭಗಂದರ, ತೊಡೆವಾಳ, ಮುಸುಕು, ಟಾಕಿ, ಕರಮು, ಪವಿತ್ರ ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ನಿರಂತರವೂ ಬಾಧೆಪಡುತ್ತಿರುವ ನಮ್ಮ ದೇಶೀಯರಾದ ಜನರಿಗೆ ಈ ಔಷಧವು ಅಮೃತ ಕಲಶವಿದ್ದಂತೆ ನವಜೀವನವನ್ನೇ ಕಲ್ಪಿಸತಕ್ಕದ್ದಾಗಿರುವದು ತಕ್ಕ ಔಷಧ ಬೀಳದಿದ್ದರೆ ದೇಹಕ್ಕಾವರಿಸಿರುವ ಮೇಹರೋಗವು ತಲೆತಲಾಂತರಗಳ ವರೆಗೂ ಹಬ್ಬುತ್ತಾ ತನ್ನ ಕಾರ್ಯವನ್ನು ಆ ವಂಶದಲ್ಲಿ ನೆಲೆಗೊಳಿಸುವದೆಂಬುದೇ ವೈದ್ಯಶಾಸ್ತ್ರದ ತಾತ್ಪರ್ಯವಾಗಿದೆ ಈ ಮೋಹಸಂಜೀವನಿ ಯಣ್ಣೆ"ಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸಿರುವ— ಬಿಳುಪು, ಕೆಂಪು, ಹಸರು ಮುಂತಾದ ೧೮ ವಿಧ ಪ್ರಮೇಹರೋಗಗಳು, ಉರಿಮೂತ್ರ, ಮುಸುಕು ಹುಣ್ಣು, ಮೇಹಬಿಳುಪು, ಮೇಹಗಟ್ಟೆಗಳು, ನಾಭೀವ್ರಣ, ಮೇಹವಾಯು, ತೊಡೆಬಾಳ, ಭಗಂದರ, ಟಂಕಿ ಪವಿತ್ರ ಮುಂತಾದ ಜಾಡ್ಯಗಳು ಬುಡದೊಂದಿಗೆ ನಾಶವಾಗುವದಲ್ಲದೆ, ಈ ಯಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಪ್ರಾಪ್ತವಾಗುವ ಅಕ್ರಮ ಋತುವಾಗುವಿಕೆ, ಮುಟ್ಟುಶೂಲೆ, ಪ್ರದರ ಮುಂತಾದ ರೋಗಗಳು ನಿರ್ಮೂಲವಾಗುವವು ಕ್ರಯ ಸೀಸೆ ೧ಕ್ಕೆ ೨—೦—೦

ಯೋಗ್ಯತಾಪತ್ರಗಳು— (೧) ನಿಮ್ಮ ಮೋಹಸಂಜೀವನೀ ಯಣ್ಣೆಯನ್ನು ತರಿಸಿ ಉಪಯೋಗಿಸಿ ನೋಡಿದಲ್ಲಿ ತುಂಬಾ ಪ್ರಯೋಜನವು ಕಂಡುಬಂದದ್ದರಿಂದ ಈ ಯಣ್ಣೆಯನ್ನು ತಕ್ಕ ವೈದ್ಯಶಾಲೆಯಲ್ಲಿ ಹೆಚ್ಚು ಖರ್ಚಾದೀತೆಂದು ಯೋಚಿಸುವೆನು ಮ॥ ರಾ॥ ಕೆ ಎಸ್ ಗೋವಿಂದಸ್ವಾಮಿ ಆಯುರ್ವೇದ ಭೂಷಣ ಆರೋಗ್ಯಾಶ್ರಮ, ಕೋಡಿಯಾಲ್‌ಬೈಲ ಪೋಸ್ಟ್, ಮಂಗಳೂರು (೨) ನಿಮ್ಮ ಮೋಹಸಂಜೀವನೀ ಯಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಿಗಳ ಕೃತಜ್ಞತೆಗೆ ಪಾತ್ರನಾಗಿರುವೆನು ಮ॥ ರಾ॥ ಉಗ್ಗಪ್ಪಕೋಡಿ ಉಕ್ಕರಭಟ್ಟ ವೈದ್ಯ, ಕೆಲಿಂಜಗ್ರಾಮ, ವಿಟಲ್‌ಪೋಸ್ಟ್, ದಕ್ಷಿಣ ಕನ್ನಡ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು,
ಆಂಗ್ಲೋ ಭಾರತೀ ವೈದ್ಯಶಾಲಾ
೧೯೧ **ಬಳೆಪೇಟೆ, ಬೆಂಗಳೂರು ಸಿಟಿ**

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇ ಬನ್ನಿರಿ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕರ್ನಾಟಕ ಮುದ್ರಣಾಲಯದಲ್ಲಿ ಮುದ್ರಿಸಿ ಕರ್ನಾಟಕ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

ರ. ನಂ. ಬಿ. ೨೭೮

ನಿತ್ಯಪತ್ರ ಬೆಲೆ ೩ ಪೈ

ಇನ್ಸ್ಯುರನ್ಸ
ಜೀವವಿಮೆ ಇಳಿಸಲು
ದಿ ಯುನಾಯಿಟೆಡ್
ಕರ್ನಾಟಕ ಇನ್ಸ್ಯುರನ್ಸ
ಕಂಪನಿಯೇ
ಉತ್ತಮವಾದುದು.

ಕನ್ನಡಿಗ

ಇನ್ಸ್ಯುರನ್ಸ
ಸ್ವದೇಶದ ಹಣವನ್ನು ಸ್ವದೇಶ
ದಲ್ಲಿಯೇ ಉಳಿಸಬೇಕಾದರೆ.
ದಿ ಯುನಾಯಿಟೆಡ್
ಕರ್ನಾಟಕ ಇ. ಕಂ. ಲಿ.
ಧಾರವಾಡ
ಇದರಲ್ಲಿಯೇ ವಿಮೆ ಇಳಿಸಿರಿ.

ಸಂಪಾದಕರು: — ಆಲೂರ ವೆಂಕಟರಾಯರು

ಸೋಮವಾರದ ಹೊರ್ತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು.

ವರ್ಷ ೧೦] ಧಾರವಾಡ— ಶುಕ್ರವಾರ ಮಾರ್ಗಶಿರ ಶುದ್ಧ ೭ ಶಕೆ ೧೮೫೫ ತಾ। ೨೪-೧೧-೩೩ [ಸಂಖ್ಯೆ ೧೪೦

ದಿ. ಅಂಕಲಗಿ ಬ್ಯಾಂಕ ಲಿ. ಧಾರವಾಡ
ಶಾಖೆಗಳು:- ಹಿರೇಕೆರೂರ, ರಾಣೇಬೆನ್ನೂರ, ಹಾವೇರಿ
ಕುಟುಂಬ ಸಂರಕ್ಷಕ ನಿಧಿ.
ವಿಮೆಗಿಂತಲೂ ಈ ಯೋಜನೆಯು ಆಕರ್ಷಕವಾಗಿದೆ ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ
ಧಾರವಾಡ
ತಾ॥ ೨೫-೮-೩೩
ಕೃಷ್ಣರಾವ ಅಂಕಲಗಿ
ಮ್ಯಾನೇಜಿಂಗ ಡಾಯರೆಕ್ಟರ

ಭವಾನಿ ಅಯರ್ನ ವರ್ಕ್ಸ, ಧಾರವಾಡ
ದ್ವಿಚಣದ ಪಲಂಗು, ಸ್ಟ್ಯಾಂಡು, ತೊಟ್ಟಿಲು ಮತ್ತು ವೇದಿಕೆಯ ಬಾಗಿಲು ತಯಾರಾಗುತ್ತವೆ

ಉದ್ಯೋಗವ ಬೇಕೆ?
ಸೋವೀ ದರದಲ್ಲಿ, ಎಣ್ಣೆ, ಮೋಟಾರ ಸಾಯಕಲ್
ಚಹ ಮೊದಲಾದವು ಬೇಕೆ? ಹಾಗಾದರೆ, ನಮ್ಮಲ್ಲಿ ಬನ್ನಿ!
ಕೆಳಗಿನ ಮಾಲುಗಳ ಸೋಲ ಏಜನ್ಸಿ ನಮ್ಮ ಕಡೆಗಿದೆ.
(೧) ಬಿಳಿ, ಹಳದಿ, ಕೆಂಪು ಚಿಮಣಿಯೆಣ್ಣೆ ಕ್ರೂಡ್‌ಆಯಿಲ್ ಮತ್ತು ಗ್ಯಾಸ್ ಯಿಲ್ (೨) ಮುನಿಚ್ ಥಾಮಸ್ ಬೀರ್ (೩) ಉತ್ತಮ ಹಾಗೂ ಬಹಳ ಸೋವಿ ಮರ್ಸ್ ಹೊಸ ಮೋಟಾರ ಸಾಯಕಲ್ (೪) ಸಬಕಾರ (೫) ಮೋಟಾರ ವಸ್ತುಗಳ ಟ್ಯೂಬ ಹಾಗೂ ಟಾಯರ್ (೬) ಚಹಾ ಮತ್ತು ಇನ್ನೂ ಅನೇಕ ಹೊಸ ಸಾಮಾನುಗಳ ಸೋಲ ಏಜನ್ಸಿಗಳು ನಮ್ಮ ಕಡೆಗೆ ಇರುತ್ತವೆ.
ನಮ್ಮ ಹದ್ದು:—
(೧) ಪುಣೆಯಿಂದ ದಕ್ಷಿಣ ಇಡೀ ಮುಂಬಯಿ ಇಲಾಖೆ (೨) ಮದ್ರಾಸ ಇಲಾಖೆ (೩) ಮೈಸೂರ ಸಂಸ್ಥಾನ ಸಂಪೂರ್ಣ (೪) ಮುಂಬಯಿಯಿಂದ ತ್ರಾವಣಕೋರ ಬಂದರದ ವರೆಗೆ ಸಂಪೂರ್ಣ ಸಮುದ್ರ ತೀರ (೫) ನೈಝಾಮ ಇಡೀ ಇಲಾಖೆ (೬) ಇಡೀ ಗೋವಾಪ್ರಾಂತ ವಗೈರೆ ಇರುವದೆ. ಸಬ್ ಏಜಂಟರು ಬೇಕಾಗಿದ್ದಾರೆ ಬೇಕಾದವರು ಕೆಳಗಿನ ವಿಳಾಸಗಳಿಗೆ ಪತ್ರವ್ಯವಹಾರ ಮಾಡಬೇಕು, ಅಥವಾ ಸಮಕ್ಷಮ ಭೆಟ್ಟಿಯಾಗಬೇಕು
ಶೇಷ ಸೂ. ಬೇಕಾದರೆ ೧೫ ದಿವಸಗಳವರೆಗೆ ಧಾರವಾಡ ಮಾಳಮಡ್ಡಿಯಲ್ಲಿರುವ ಹುಂಡೇಕರ ವಕೀಲರ ಬಂಗ್ಲೆಯಲ್ಲಿ ಭೆಟ್ಟಿಯಾಗಬಹುದು
ಹುಂಡೇಕರ ಯಳಲಾಸಪೂರ ಆ್ಯಂಡ ಕೋ ದೇವಕರಣ ಮ್ಯಾನ್ಸನ್ ಪ್ರಿನ್ಸೆಸ್ ಸ್ಟ್ರೀಟ ಮುಂಬಯಿ ನಂಬರ ೨

ನಕಲೀ ಮಾಲಿಗೆ ಮೋಸಹೋಗಬೇಡಿರಿ!
ಗುಣದಲ್ಲಿ ಅತ್ಯುತ್ತಮ ದರದಲ್ಲಿ ಸೋವಿ



ನ್ಯೂ ಓರಿಯಂಟಲ್ ಕಂ.
"ನೀಲಗಿರಿ ಎಣ್ಣೆ"
ಈ ಎಣ್ಣೆಯು ಎಲ್ಲ ತರದ ಬೇನೆಗಳಿಗೂ ಉಪಯೋಗವಾಗುವಂಥಾದ್ದು ಇದು ಸಂಧಿವಾತ, ಎದೆನೋವು, ತಲೆನೋವು, ಛಳಿಜ್ವರ, ಮೋಡಿಗೆಮ್ಮು, ಕೆಮ್ಮು ಕಿವಿ ಸೋರುವಿಕೆ, ಮತ್ತು ಇತರ ಎಲ್ಲ ಬಾವು ಮತ್ತು ಶೂಲೆಗಳಿಗೂ ಅತ್ಯುತ್ತಮ. ಒಮ್ಮೆ ಉಪಯೋಗಿಸಿ ಅನುಭವ ತೆಗೆದುಕೊಳ್ಳಿರಿ. ವಿಶೇಷ ಮಾಹಿತಿಗೆ ಪತ್ರ ವ್ಯವಹಾರ ಮಾಡಬೇಕು.
ವ್ಯಾಪಾರಸ್ಥರಿಗೆ ವಿಶೇಷ ಸವಲತ್ತು ಕೊಡಲ್ಪಡುವವು.
ಏಜಂಟ:— ಜಿ. ಕೆ. ಕೊಜಾಪಿ ಆ್ಯಂಡ ಕಂಪನಿ, ಕೊಪ್ಪೀಕರ ರೋಡ, ಹುಬ್ಬಳ್ಳಿ

ಮುರಗೋಡದಲ್ಲಿ ರೈತರ ಸಭೆಯು

ಬೆಳಗಾಂವಿ ಜಿಲ್ಲಾ ಸಂಪಗಾಂವಿ ತಾಲೂಕ ಮುರಗೋಡದಲ್ಲಿ ಕಳೆದ ೨೦ ನೇ ತಾರೀಖಿನ ದಿವಸ ಸುತ್ತು ಮುತ್ತಿನ ಎಲ್ಲ ಗ್ರಾಮಗಳ ರೈತರ ಸಭೆಗೂಡಿತ್ತು. ನಾಲ್ಕು ಸಾವಿರದವರೆಗೆ ರೈತರು ಕೂಡಿದ್ದರು. ಮುಂಬೈ ಕೌನ್ಸಿಲದಲ್ಲಿ ಬೆಳಗಾಂವಿಯ ಪ್ರತಿನಿಧಿಗಳಾಗಿರುವ ಶ್ರೀ. ಚಿಕ್ಕೋಡಿ ಪಂಡಿತಪ್ಪನವರು ಅಧ್ಯಕ್ಷರಾಗತಕ್ಕವರಿದ್ದರು. ಆದರೆ ಅವರ ಚಿಗಪ್ಪನವರಾದ ಶ್ರೀ ಚಿಕ್ಕೋಡಿ ತಮ್ಮಪ್ಪನವರು ಬನಹಟ್ಟಿಯಲ್ಲಿ ಅತ್ಯವಸ್ಥರಾದ ವರ್ತಮಾನ ಬಂದ ಮೂಲಕ ಪಂಡಿತಪ್ಪನವರಿಗೆ ಬರುವದಾಗದೆ ಸವದತ್ತಿಯ ವಕೀಲರಾದ ಶ್ರೀ ಕೌಜಲಗಿಯವರು ಅಧ್ಯಕ್ಷರಾಗಿ ಕೆಲಸ ನಡಿಸಿದರು.

ಕೆಲಕಾಲ ಕೊಲ್ಲಾಪುರದ ದಿವಾಣರಾಗಿದ್ದ ದಿ ಬ ಲಠ್ಠೆಯವರೂ ಸಭೆಗೆ ಬಂದು ತಮಗೆ ಬಂದಂತೆ ಕನ್ನಡದಲ್ಲಿಯೇ ಮಾತಾಡಿ ರೈತರಿಗೆ ಅವರ ಸ್ಥಿತಿಯನ್ನು ಚನ್ನಾಗಿ ತಿಳಿಸಿ ಹೇಳಿದರು. ರೈತರೆಲ್ಲರೂ ತಮ್ಮ ಕಷ್ಟನಿವಾರಣೆಗೆ ಕೂಡಿ ಕೆಲಸ ಮಾಡುವದಿಲ್ಲ. ಆದದರಿಂದ ನಿಮ್ಮನ್ನಾರೂ ಕೇಳುವವರಿಲ್ಲ. ನಿಮ್ಮ ಸುಖದುಃಖಗಳ ಅರಿವೇ ನಿಮಗೆ ಇರುವದಿಲ್ಲ. ಕೌನ್ಸಿಲುಗಳಲ್ಲಿ ನಿಮ್ಮ ಪ್ರತಿನಿಧಿಗಳಾದವರು ಇಲೆಕ್ಶನ್ ಆದ ಕೂಡಲೆ ನಿಮ್ಮ ಹಿಂಬಲು ಹರಕೊಂಡು ಬಿಡುತ್ತಾರೆ. ನೀವು ನಿಮ್ಮ ಕಷ್ಟಪರಿಹಾರಕ್ಕಾಗಿ ಕಷ್ಟುವಿನಿಂದ ಒಂದೇ ಸವನೇ ಕಾಯದೆ ಕಾನೂನುಗಳಿಗನುಸರಿಸಿ ಸರಕಾರದ ಮುಂದೆ ಅವುಗಳನ್ನು ತೆರೆದಿಟ್ಟು ಮಂಡಿಸಿರಿ. ಅಂದರೆ ನಿಮ್ಮ ಕಡೆಗೆ ಸಂಕಾ ವು ಶೀಘ್ರದಾದರೆ ಸತ್ಯಾಗ್ರಹಕ್ಕೆ ಅಣಿಯಾಗುವ ಸಿದ್ಧತೆ ಮಾಡಿರಿ. ಅಂದರೆ ನಿಮ್ಮ ಕಡೆಗೆ ಸರಕಾರವು ದುರ್ಲಕ್ಷ ಮಾಡಲಾರದು. ನಿಮ್ಮ ಹೊಲದಲ್ಲಿ ಬೆಳೆಸುವ ಹತ್ತಿಯಿಂದ ನೀವೇ ಕೆಲಸವಿಲ್ಲದಾಗ ನೂಲು ನೇಯಿದ್ದು ಅರಿವೆ ಮಾಡಿಕೊಂಡರೆ ಕೈಯಲ್ಲಿ ಕಾಸಿಲ್ಲದೆ ಕೊರಗುವಾಗ ಗಿರಣಿಯ ಬಟ್ಟೆಗಳಿಗೆ ದುಡ್ಡು ಹಾಳುಮಾಡುವ ಪ್ರಸಂಗವೇ ನಿಮಗೆ ಬರಲಾರದು. ರೊಕ್ಕವಿಲ್ಲನೆಂದು ಚಿಕ್ಕೆ ಅಳುವ ಹೊತ್ತು ಬಾರದಂತೆ ಯತ್ನ ಮಾಡಿರಿ. ದೇಶಕ್ಕೆ ತೋರದವರಂತೆ ಕಳ್ಳೊಪಿಕ್ಕೆಯಾಗಿ ಕೂಡಬೇಡಿರಿ ಎಂದು ಮೊದಲಾಗಿ ದಿ ಬ. ಲಠ್ಠೆಯವರು ಹೇಳಿದರು.

ಶ್ರೀ ಜಯದೇವ ಕುಲಕರ್ಣಿಯವರೂ ಮಾತನಾಡಿದರು. ಎಲ್ಲರೂ ರೈತರನ್ನೇ ಹುರಿದು ತಿನ್ನುವರು. ಸರಕಾರ, ಸಾವಕಾರ, ಜಮೀನುದಾರ, ವ್ಯಾಪಾರಗಾರ ಎಲ್ಲರೂ ರೈತರ ರಕ್ತವನ್ನೇ ಹೀರುವ ಹವ್ಯಾಸದಲ್ಲಿರುವರು. ನೀವು ಕಷ್ಟಪಟ್ಟು ಬೆಳೆದ ಕಾಳುಕಡಿಯಿಂದ ಬಾಳುವವರೆಲ್ಲರೂ ನಿಮ್ಮನ್ನೇ ನುಂಗಿ ನೀರು ಕುಡಿಯಹತ್ತಿದ್ದಾರೆ. ಇವರೆಲ್ಲರಿಗೂ ನೀವು ಎದುರಾಗಬೇಕಾಗಿದೆ. ಆದದರಿಂದ ನೀವು ಎಚ್ಚತ್ತು ನಿಮ್ಮ ನಿಮ್ಮೊಳಗೆ ಒಗ್ಗಟ್ಟು ಮಾಡಿಕೊಂಡು ಪ್ರಾಮಾಣಿಕತನದಿಂದ ಧೈರ್ಯದಿಂದ ನಡೆದು ನಿಮ್ಮ ಹಿತವನ್ನು ಮಾಡಿಕೊಳ್ಳಿರಿ ಎಂದು ಹೇಳಿದರು.

ಶ್ರೀ ಜೋಶಿ ನಾರಾಯಣರಾಯರು (ಸ್ವತಃ ವಕೀಲರು; ಕಾಂಗ್ರೆಸ್‌ದ ಅನುಯಾಯಿಗಳು) ಹೇಳಿದರು ನಿಮ್ಮೊಳಗಿನ ಒಡಕಿನಿಂದ, ಮಿತಿಯಿಲ್ಲದ ವೆಚ್ಚದಿಂದ, ವ್ಯಸನಗಳಿಂದ, ಕೋರ್ಟ ಕಚೇರಿಗಳ ಎಡತಾಕಪಟ್ಟಿಯಿಂದ ನಿಮ್ಮವಲ್ಲದ ಹಾರಿಹೋಗಿದೆ. ಒಂದಾಗಿರಿ ಒಬ್ಬರಿಗೊಬ್ಬರು ನೆರವಾಗಿರಿ ಕೋರ್ಟ ಕಚೇರಿಗಳ ಕಟ್ಟೆಯನ್ನೇರಬೇಡಿರಿ ನೀವು ಕೊಟ್ಟ ರೊಕ್ಕದಿಂದ ಅವು ಮೋಟರಗಳನ್ನಿಟ್ಟು ತಿರುಗಾಡುತ್ತೇವೆ ನಿಮ್ಮ ಪ್ರತಿನಿಧಿಗಳಾದವರು ಗವರ್ನರ ಸಾಹೇಬರ ಕೂಡ ಖುರ್ಚಿಗಳ ಮೇಲೆ ಕೂಡುತ್ತಾರೆ. ಆದರೆ ನೀವೇ ಅವರ ಮನೆಗೆ ಹೋದರೆ ಹೊಸ್ತಿಲದ ಹೊರಗೆ ನಿಲ್ಲಬೇಕಾಗುತ್ತದೆ. ಇದನ್ನು ವಿಚಾರಿಸಿ ನೋಡಿರಿ. ವಕೀಲರ ಉದ್ಯೋಗವೇ ನಡೆಯದಂತೆ ಮಾಡಿರಿ. ವ್ಯಸನಗಳಿಗೆ ಗುರಿಯಾಗಿ ಹಾಳಾಗಬೇಡಿರಿ.

ಹೀಗೆ ಮಾತುಗಳಾದ ಬಳಿಕ ಈ ಸಾರಿ ಮಳೆಯು ಹೆಚ್ಚಾಗಿ ಬೆಳೆಗಳು ನಾಶವಾದ ಮೂಲಕ ಹಾಗು ಧಾರಣೆಯು ಇಳಿದ ಮೂಲಕ ಸರಕಾರದವರು ಎರಡೂ ಹಪ್ತೆಗಳನ್ನು ಮುಂದೆ ಹಾಕಬೇಕೆಂಬ ಗೊತ್ತುವಳಿಯು ಒಮ್ಮತದಿಂದ ಮಾಡಲಾಯಿತು. ಅತ್ತ ಕಡೆಯ ಜನರಿಗೆ ಸಂಬಂಧಿಸಿದ ಬೇರೆ ಕೆಲವು ಗೊತ್ತುಗಳೂ ಸಭೆಯಲ್ಲಾದವು. ಮುರಗೋಡ ಭಾಗದ ರೈತರ ಈ ಕೆಲಸವನ್ನು ಮಿಕ್ಕವರೂ ಅನುಸರಿಸಬೇಕು.

ಅಖಿಲ ಭಾರತ ಖಾದೀ ಮತ್ತು ಸ್ವದೇಶೀ ಪ್ರದರ್ಶನ ಬಳ್ಳಾರಿ.

ಶ್ರೀಮತೀ ಸೌ. ಸರೋಜಿನೀ ದೇವಿಯವರು ಡಿಸೆಂಬರ ತಿಂಗಳಲ್ಲಿ ಪ್ರಾರಂಭೋತ್ಸವವನ್ನು ನೆರವೇರಿಸಲಿರುವ ಈ ಪ್ರದರ್ಶನಕ್ಕೆ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಹಿಂದುಸ್ಥಾನದ ವಿವಿಧ ಭಾಗಗಳಿಂದಲೂ ಚಿತ್ರ ವಿಚಿತ್ರವಾದ ವಸ್ತುಗಳು ಬರಲಿಕ್ಕೆ ಹತ್ತಿವೆ. ಮದ್ರಾಸ ಸರಕಾರದ ವ್ಯವಸಾಯ ಇಲಾಖೆಯವರು ತಮ್ಮ ಪ್ರದರ್ಶನವನ್ನು ಸಹ ನಮ್ಮ ಸಮಾರಂಭ ನಡೆಯುವ ವಾರದಲ್ಲಿಯೇ ಏರ್ಪಡಿಸುವರಿದ್ದಾರೆ.

ಹಿಂದು ದೇಶದ ಪ್ರಮುಖ ರೇಲ್ವೆ ಕಂಪನಿಯವರು ಈ ಪ್ರದರ್ಶನಕ್ಕೆ ಬರುವ ಸಾಮಾನುಗಳ ಹೋಗಿ ಬರುವ ವೆಚ್ಚವನ್ನು ಕಡಿಮೆ ಮಾಡಿರುವರು. ೧೦೦ ಮೈಲುಗಳೊಳಗಾಗಿ ಇರುವ ಸ್ಥಳಗಳಿಂದ ಬರಬಹುದಾದ ಜನರಿಗೆ ಟಿಕೆಟ್ ದರಗಳನ್ನು ತಗ್ಗಿಸಬೇಕೆಂದೂ ಪ್ರದರ್ಶನಾಧಿಕಾರಿಗಳು ಅವರನ್ನು ಬೇಡಿರುವರು.

ಬೊಂಬಾಯಿಯ ಸುಪ್ರಸಿದ್ಧ ದೇಶಾಭಿಮಾನಿಗಳಾದ ಶ್ರೀಮತೀ ಸೋಫಿಯಾ ಸೋಮಜೀಯವರೂ, ಈ ಪ್ರದರ್ಶನಕ್ಕೆ ಬರುವರು.

ಬಳ್ಳಾರಿಯ ಹವೆಯು ಡಿಸೆಂಬರ ತಿಂಗಳಲ್ಲಿ ಹಿತಕರವಾಗಿಯೂ ಮತ್ತು ಮನೋಹರವಾಗಿಯೂ ಇರುತ್ತದೆ.

ಟಿ ಬಿ ಕೇಶವರಾವ
ಪ್ರಕಟಣಾಧಿಕಾರಿ

‘ಕನ್ನಡಿಗ’ ಹಾಗೂ ‘ಸಂಯುಕ್ತ ಕರ್ನಾಟಕ’ಗಳ ಏಕೀಕರಣ

ಕನ್ನಡಿಗ.

ಶುಕ್ರವಾರ ತಾರೀಖು. ೨೪.೧೧-೧೯೩೩.

೧೮ ಪೆನ್ಸಿನ ಕತ್ತರಿ.

ಇಂಗ್ಲಂಡದ ನಾಣ್ಯಗಳಾದ ಪೌಂಡು ಶಿಲಿಂಗು ಪೆನ್ಸುಗಳಿಗೂ ನಮ್ಮಲ್ಲಿಯ ನಾಣ್ಯಗಳಾದ ರೂಪಾಯಿ ಆಣೆ ಪೈಗಳಿಗೂ ಯಾವ ಬಗೆಯ ಸಂಬಂಧವಿರುವದೆಂಬದನ್ನು ನಿನ್ನೆ ವಿವರಿಸಿದ್ದಾಯಿತಷ್ಟೆ? ಇಂಗ್ಲಂಡದೊಂದಿಗೆ ಹಿಂದುಸ್ತಾನದ ವ್ಯವಹಾರವಿರುವಂತೆಯೇ ಪಶ್ಚಿಮದಲ್ಲಿ ಫ್ರಾನ್ಸ, ಜರ್ಮನೀ, ಹಾಲಂಡ, ಸ್ವಿಟ್ಝರಲಂಡ, ಇಟಲೀ ಮೊದಲಾದ ಯುರೋಪದ ದೇಶಗಳೊಂದಿಗೆ ಹಾಗೆಯೇ ಅಮೇರಿಕಾ ಜಪಾನ ಮೊದಲಾದ ಬೇರೆ ರಾಷ್ಟ್ರಗಳೊಂದಿಗೆ ಹಿಂದುಸ್ತಾನವು ವ್ಯಾಪಾರ ವ್ಯವಹಾರವನ್ನು ಮಾಡಿಯೇ ಮಾಡುತ್ತದೆ. ಆ ಎಲ್ಲ ದೇಶಗಳಲ್ಲಿ ಫ್ರ್ಯಾಂಕ್, ಮಾರ್ಕ, ಡಾಲರ, ಯೆನ್ ಮೊದಲಾದ ಬೇರೆ ಬೇರೆ ಹೆಸರಿನ ನಾಣ್ಯಗಳೂ ಅವುಗಳ ವಿಭಾಗಗಳೂ ವ್ಯವಹಾರದಲ್ಲಿ ಉಪಯೋಗಿಸಲ್ಪಡುತ್ತವೆ. ನಮ್ಮಲ್ಲಿಯ ಹಾಗು ಬೇರೆ ದೇಶದ ನಾಣ್ಯಗಳ ಬೆಲೆಯಲ್ಲಿ ಪೇಟೆಯಲ್ಲಾಗುವ ಏರಿಳಿತಗಳ ಪ್ರಮಾಣದಿಂದ ಆಯಾ ದೇಶದ ಸಂಬಂಧದಿಂದಾಗುವ ವ್ಯವಹಾರದಲ್ಲಿ ಅಲ್ಪಸ್ವಲ್ಪ ಲಾಭವಾಗಲೀ ಹಾನಿಯಾಗಲೀ ಪ್ರಸಂಗಕ್ಕನುಸಾರವಾಗಿ ಆಗುವದು ತಪ್ಪುವದೇ ಇಲ್ಲ. ಇಂಗ್ಲಂಡದ ಪೌಂಡಿಗೂ ಹಿಂದುಸ್ತಾನದ ರೂಪಾಯಿಕ್ಕೂ ಹಿಂದಕ್ಕೊಂದು ಕಾಲಕ್ಕೆ ಇದೇ ಬಗೆಯ ಅಕೃತ್ರಿಮ ಸಂಬಂಧವೂ ಇತ್ತು. ಒಂದು ಪೌಂಡೆಂದರೆ ಹತ್ತೇ ರೂಪಾಯಿ, ಶಿಲಿಂಗೆಂದರೆ ಎಂಟೇ ಆಣೆ ಎಂಬ ವ್ಯವಹಾರದ ಗರಿಮೆಯ ಮಾತುಗಳು ಈಗಲೂ ಎಷ್ಟೋ ಜನರಿಗೆ ನೆನಪಿನಲ್ಲಿರಬಹುದು. ಇಂದಿಗೂ ಕೆಲವು ಸಂದರ್ಭಗಳಲ್ಲಿ ಅಂದರೆ ಇಂಗ್ಲಂಡದ ಚಿನ್ನದ ನಾಣ್ಯವಾದ ಪೌಂಡು ಇಲ್ಲಿಯ ಪೇಟೆಗಳಲ್ಲಿ ಮಾರಾಟಕ್ಕೆ ಬಂದರೆ ಅದರ ಬೆಲೆಯು ಒಳಗಿನ ಚಿನ್ನದ ತೂಕ ಗುಣ ಇವುಗಳ ಅನುಸಂಧಾನದಿಂದ ೧೬-೧೮-೨೦ ರೂಪಾಯಿಗಳ ವರೆಗೆ ನಿಶ್ಚಯಿಸಲ್ಪಡುತ್ತದೆ. ರೂಪಾಯಿಯನ್ನು ಕರಗಿಸಿದರೆ ಅಥವಾ ಬೆಳ್ಳಿಯ ಧಾರಣೆಯಿಂದ ಅದನ್ನು ಮಾರಲಿಕ್ಕೆ ಹೋದರೆ ಹೇಗೆ ೬-೮ ಆಣೆಗಳ ಕಿಮ್ಮತ್ತೇ ಅದಕ್ಕೆ ಬರುವದೋ ಹಾಗೆಯೇ ವಿಲಾಯತಿಯ ಪೌಂಡಿನ ಧಾರಣೆಯು ಇಷ್ಟು ಮಟ್ಟಿಗೆ ಏರಿ ಬರುತ್ತದೆ. ಸವರಿನುಗಳೆಂಬ ಹೆಸರಿನಿಂದ ಇಲ್ಲಿ ಕೆಲವು ದಿವಸ ಪ್ರಚಾರದಲ್ಲಿದ್ದ ಚಿನ್ನದ ನಾಣ್ಯಗಳೇ ಈ ಪೌಂಡುಗಳೆಂದು ಹೇಳಿದ ಬಳಿಕ ನಮ್ಮ ಈ ಹೇಳಿಕೆಯ ಸತ್ಯತೆಯು ವಾಚಕರಿಗೆ ತಿಳಿಯಬಹುದು. ಅನುಭವಿಕರಿಗಂತೂ ಮನದಟ್ಟಾಗುವದು.

ಹೀಗೆ ಪೌಂಡು ಅಥವಾ ಸಾವರಿನದ ಮೂಲ ಬೆಲೆಯಲ್ಲಿ ಯಾವ ವ್ಯತ್ಯಾಸವೂ ಆಗುವದಿಲ್ಲ. ಆದುದರಿಂದಲೇ ವ್ಯಾಪಾರ ವ್ಯವಹಾರಗಳಲ್ಲಿ ಅತ್ಯಂತ ನಿಕಟ ಸಂಬಂಧವುಳ್ಳ ಇಂಗ್ಲಂಡ, ಹಿಂದುಸ್ತಾನಗಳಲ್ಲಿ ಒಂದೇ ಬಗೆಯ ನಾಣ್ಯಗಳು ಪ್ರಚಲಿತವಾಗುವಂತೆ ಇಲ್ಲಿ ಹಿಂದುಸ್ತಾನದಲ್ಲಿಯೂ ಸ್ವರ್ಣಬದ್ಧ ನಾಣ್ಯದ ಪರಿಸ್ಥಿತಿಯನ್ನೇ ಆರಂಭಿಸಿರೆಂದು ಇಲ್ಲಿಯ ಅರ್ಥ ಶಾಸ್ತ್ರ ವಿಶಾರದರೂ [illegible]

‘ಕನ್ನಡಿಗ’ ಹಾಗೂ ‘ಸಂಯುಕ್ತ ಕರ್ನಾಟಕ’ಗಳ ಏಕೀಕರಣ.

ಅಖಂಡ ಕರ್ನಾಟಕಕ್ಕೆಲ್ಲ ಒಂದಾದರೂ ಉತ್ತಮವಾದ ದೈನಿಕ ಪತ್ರಿಕೆಯು ಅವಶ್ಯವಾಗಿ ಬೇಕಾಗಿದ್ದರಿಂದ ರಾಷ್ಟ್ರೀಯ ಧೋರಣವನ್ನು ಸಮರ್ಥಿಸುವಂಥ ಈ ‘ಕನ್ನಡಿಗ’ ಹಾಗೂ ‘ಸಂಯುಕ್ತ ಕರ್ನಾಟಕ’ ಪತ್ರಿಕೆಗಳನ್ನು ಬೇರೆ ಬೇರೆಯಾಗಿ ಹೊರಡಿಸುವದರಿಂದ ಒಂದು ಉತ್ತಮ ದೈನಿಕದ ಕೊರತೆಯು ಅಷ್ಟೊಂದು ದೂರಾಗುವದಿಲ್ಲ. ಆದ್ದರಿಂದ ಈ ಎರಡೂ ಪತ್ರಿಕೆಗಳ ಶಕ್ತಿಗಳನ್ನೂ ಜನತೆಯ ಬೆಂಬಲವನ್ನೂ ಒಂದೇ ಪತ್ರಿಕೆಗೆ ಕೂಡಿಸಿಕೊಟ್ಟು, ಒಂದೇ ದೈನಿಕವನ್ನು ಮಾದರಿಯಾಗಿ ಪ್ರಕಟಿಸಿ ಕರ್ನಾಟಕದ ಸೇವೆಯನ್ನು ಉತ್ತಮ ರೀತಿಯಿಂದ ಮಾಡಬೇಕೆಂಬ ಉದ್ದೇಶದಿಂದ ಈ ಎರಡೂ ಪತ್ರಿಕೆಗಳ ಚಾಲಕರು ಇವನ್ನು ಏಕೀಕರಿಸುವದನ್ನು ನಿಶ್ಚಯಿಸಿದ್ದಾರೆ.

ಹೀಗೆ ಏಕೀಕೃತವಾದ ಪತ್ರಿಕೆಯು ಇದೇ ನವಂಬರ ೨೬ ನೇ ತಾರೀಖಿನಿಂದ ಮೊದಲ್ಗೊಂಡು ದಿನಾಲು ಬೆಳಗಾಂವಿಯಿಂದ ಹೊರಡುವದು. ಕರ್ನಾಟಕವು ಸಂಯುಕ್ತವಾಗುವದೇ ಕನ್ನಡಿಗರ ಈಗಿನ ಗುರಿಯಾಗಿದ್ದರಿಂದ ‘ಸಂಯುಕ್ತ ಕರ್ನಾಟಕ’ವೆಂಬ ಹೆಸರನ್ನೇ ಮುಂದಿರಿಸಲಾಗುವದು. ‘ಕನ್ನಡಿಗ’ನ ಚಂದಾದಾರರಿಗೆ ಸಹ ೨೬ನೇ ತಾರೀಖಿನಿಂದ ‘ಸಂಯುಕ್ತ ಕರ್ನಾಟಕ’ವೇ ಮುಟ್ಟಿಸಲ್ಪಡುವದು.

ಈ ಎರಡೂ ಪತ್ರಿಕೆಗಳನ್ನು ತಾ॥ ೨೬ಕ್ಕೆ ಕೂಡಿಸಿದರೂ ಇವುಗಳ ವ್ಯವಹಾರಕ್ಕೆ ಸಂಬಂಧಪಟ್ಟ ಅನೇಕ ಸಂಗತಿಗಳನ್ನು ಈ ಮುಂದೆ ಪರಿಹರಿಸಬೇಕಾಗಿದೆ. ಈ ಕಾರ್ಯವನ್ನು ನೆರವೇರಿಸಲು ಒಂದು ತಿಂಗಳಾದರೂ ಬೇಕಾಗಹುದು. ಆದ್ದರಿಂದ ಜನೇವರಿ ತಿಂಗಳ ಸುಮಾರದ ವರೆಗೆ ನಮಗಿಷ್ಟವಿದ್ದ ಅನೇಕಾನೇಕ ಸುಧಾರಣೆಗಳನ್ನು ಮಾಡುವದು ಸಾಧ್ಯವಾಗಲಾರದು. ಜನೇವರಿ ತಿಂಗಳಿನಿಂದ ಎಂಟು ಪುಟಗಳ ಸೌಕರ್ಯ, ಮುಂಬೈ, ಮದ್ರಾಸ, ಬೆಂಗಳೂರ, ದಿಲ್ಲಿಗಳಿಂದ ಸ್ಪೆಶಲ್ ತಂತಿ, ಕರ್ನಾಟಕದ ಪ್ರತಿಯೊಂದು ತಾಲೂಕಿನ ಸುದ್ದಿ, ರಾಷ್ಟ್ರೀಯ ಪ್ರಗತಿಯ ಬಗ್ಗೆಯೂ ಕರ್ನಾಟಕದ ಬಗ್ಗೆಯೂ ವಿಶಿಷ್ಟ ಲೇಖಗಳು ಇವೇ ಮೊದಲಾದ ಸುಧಾರಣೆಗಳು ಇನ್ನೂ ಹೆಚ್ಚಾಗಿ ಮಾಡಲ್ಪಡುವವು.

ಆದ್ದರಿಂದ ಅಖಂಡ ಕರ್ನಾಟಕದ ಮುಖಪತ್ರವಾಗಲು ಬಯಸುವ ಈ ಪತ್ರಿಕೆಗೆ ಕರ್ನಾಟಕದ ಮಹಾಜನರೆಲ್ಲ ಆಶ್ರಯ ಕೊಡುವರಾಗಿ ನಂಬುತ್ತೇವೆ.

ವೆಂಕಟೇಶ ಭೀಮರಾವ ಆಲೂರ — ನಾರಾಯಣ ಗುರುರಾವ ಜೋಶಿ

ಶ್ರೀನಿವಾಸ ರಾಘವೇಂದ್ರರಾವ ಮಂಗಳವೇಢೆ — ಕೇಶೋ ಗಿರಿಯಾಚಾರ್ಯ ಕಟ್ಟಿ

ರ ಉದ್ಯೋಗಗಳಲ್ಲಿ ನಿರತ ದೇಶ ಹಿತಚಿಂತಕರೂ ಹಿಂದುಸ್ತಾನ ಹಾಗು ಇಂಗ್ಲಂಡದ ಸರಕಾರಗಳ ಮುಂದೆ ಒಂದೇ ಸವನೆ ಬಿನ್ನಹಗಳನ್ನು ಒಡ್ಡಿ ಬೇಡಿಕೊಂಡರು. ಆದರೆ ಬಹುತೇಕ ಎಲ್ಲ ಸಂದರ್ಭಗಳಲ್ಲಿ ಶಕ್ಯವಿಲ್ಲೆಂಬ ಉತ್ತರವನ್ನೇ ಕೊಟ್ಟು ಉಭಯ ಸರಕಾರದವರು ತಮ್ಮ ಕೈಕಸಬನ್ನು ಅವ್ಯಾಹತವಾಗಿ ಮುಂದೆ ನಡೆಸುತ್ತಲೇ ಬಂದಿದ್ದಾರೆ. ಇಲ್ಲಿನ್ನಲಿಕ್ಕೆ ಮಧ್ಯಂತರದಲ್ಲಿ ಎಂದೋ ಹತ್ತಾರು ವರುಷಗಳ ಹಿಂದೆ ಇಂಗ್ಲಂಡದ ಸಾವರಿನುಗಳನ್ನೇ ಇಲ್ಲಿ ಪ್ರಚಾರದಲ್ಲಿ ತಂದರು. ನಡುವೆ ಕ್ಷಣಮಾತ್ರ ಕಣ್ಣುಮುಸಕು ಮಾಡಿದಂತೆ— “ಮೊಹರು” ಎಂಬ ೧೫ ರೂಪಾಯಿ ಬೆಲೆಯ ಚಿನ್ನದ ನಾಣ್ಯವನ್ನು ಇಲ್ಲಿಯೇ ಹುಟ್ಟಿಸಿದರು. ಆದರೆ ಇವೆಲ್ಲ ಸರಕಾರದ ಕಾಯಕಗಳು ಹಟಮಾಡಿ ಅಳುವ ಮಕ್ಕಳ ಕಣ್ಣೊರೆಸುವ ಮೋಸಗಾರಿಕೆಯಂತೆಯೇ ಇದ್ದವಲ್ಲದೆ ಹಿಂದುಸ್ತಾನದಲ್ಲಿ ಹಿಂದುಸ್ತಾನದ ಹಿತದ ಸಲುವಾಗಿ ಚಿನ್ನದ ನಾಣ್ಯಗಳನ್ನೇ ಪ್ರಚಾರದಲ್ಲಿ ತರಬೇಕೆಂಬ ಉದಾತ್ತವಾದ ಸದುದ್ದೇಶದಿಂದ ಅಲ್ಲವೇ ಅಲ್ಲ. ಆದುದರಿಂದ ಸರಕಾರದವರ ಈ ಬಗೆಯ ಉಪಕ್ರಮಗಳೆಲ್ಲ ಶರತ್ಕಾಲದ ಬಿಳಿಯ ಮೋಡಗಳಂತೆ ಕ್ಷಣಕಾಲ ಮಾತ್ರ ಹಿಂದುಸ್ತಾನದ ವಿಶಾಲವಾದ ಆಕಾಶದಲ್ಲಿ ಎಲ್ಲಿಯೋ ಒಂದು ಮೂಲೆಯಲ್ಲಿ ಯಾವದೋ ಒಂದು ಆಕಾರದಿಂದ ಕಣ್ಣಿಗೆ ಬಿದ್ದು ನಷ್ಟವಾಯವಾಗಿ ಹೋದವು. ಹೀಗೆ ಪೌಂಡಿಗೂ ರೂಪಾಯಿಗೂ ಉಂಟು ಮಾಡಿದ ಕೃತ್ರಿಮ ಸಂಬಂಧವನ್ನೇ ಸ್ಥಿರಗೊಳಿಸುವ ಮತ್ತು ಅದನ್ನು ಹೆಚ್ಚು ಹೆಚ್ಚಾಗಿ ಮಾಡುವ ಸಂಪೂರ್ಣ ಸ್ವಾರ್ಥ [illegible] ಧೋರಣವನ್ನೇ ಇಲ್ಲಿಯ ಬ್ರಿಟಿಶ ಅಧಿಕಾರಿಗಳು ಕೈಕೊಂಡು ನಮ್ಮ ಹಾಡಿನ [illegible]

ಬಡತನದ ಬಾಳುವೆಯ ಒರೆ ಹೊಟ್ಟೆಯ ಮೇಲೆ ಬರೆ ಕೊಡುವ ನಿರ್ದಯವೃತ್ತಿಯ ಪ್ರದರ್ಶನವನ್ನೇ ಮಂಡಿಸಿದ್ದಾರೆ.

ಪೌಂಡಿನ ಬೆಲೆಯು ಮೊದಲೆಂತೋ ಒಂದು ಕಾಲಕ್ಕೆ ಹತ್ತೇ ರೂಪಾಯಿಯಂತೆ ಲೆಕ್ಕ ಹಿಡಿಯಲ್ಪಡುತ್ತಿದ್ದುದನ್ನು ಮೇಲೆ ಹೇಳಲಾಗಿದೆ. ಆಗ ನಮ್ಮಲ್ಲಿಯ ೮ ಕಾಸುಗಳಿಗೆ ಒಂದು ಪೆನ್ನಿನಂತೆ ಲೆಕ್ಕವಾಗುತ್ತಿತ್ತು. ಅಂದರೆ ರೂಪಾಯಿಗೆ ೨೪ ಪೆನ್ನಿನ ಧಾರಣೆಯಂತೆ ಹಿಂದುಸ್ತಾನ ಮತ್ತು ಇಂಗ್ಲಂಡ ದೇಶಗಳ ನಡುವೆ ವ್ಯಾಪಾರ ವಿನಿಮಯದ ಲೆಕ್ಕಾಚಾರವಾಗುತ್ತಿತ್ತು. ಮುಂದೆ ಮುಂದೆ ಈ ದರದಲ್ಲಿ ವ್ಯತ್ಯಾಸವಾಗಿ ಪೌಂಡಿಗೆ ೧೫ ರೂಪಾಯಿಗಳ ವ್ಯವಹರಣೆಯು ಕೆಲಕಾಲ ನಡೆಯುತ್ತಿತ್ತು. ಅಂದರೆ ಇದು ರೂಪಾಯಿಗೆ ೧೬ ಪೆನ್ನಿನ ಧಾರಣೆಯಾದಂತಾಯಿತು. ಈಗ ೫ ವರ್ಷಗಳ ಹಿಂದೆ ಸರಕಾರದವರು ಕಾಯಿದೆಯಿಂದ ಈ ದರವನ್ನು ಹೆಚ್ಚಿಸಿ ೧೮ ಪೆನ್ನುಗಳಿಗೆ ಒಂದು ರೂಪಾಯಿ ಪ್ರಮಾಣವನ್ನು ಗೊತ್ತುಪಡಿಸಿದರು. ಈ ಪ್ರಸ್ತಾಪವು ಅಸೆಂಬ್ಲಿಯಲ್ಲಿ ಚರ್ಚೆಗೆ ಹೊರಟಾಗ ದೇಶದ ಆರ್ಥಿಕ ಸ್ಥಿತಿಯ ವಿಷಯವಾಗಿ ಅತ್ಯಂತ ಪರಿಶ್ರಮದಿಂದ ಅಧ್ಯಯನ ಮಾಡಿದ ವಿಚಾರಶೀಲ ಪ್ರವೀಣರನೇಕರು ಅಸೆಂಬ್ಲಿಯ ಒಳಗೂ ಹೊರಗೂ ಸರಕಾರದ ಈ ಕೃತಿಯು ದೇಶದ ಹಿತ ಸಂಬಂಧಕ್ಕೆ ಅತ್ಯಂತ ಘಾತಕವಾಗಿರುವದೆಂದು ಸಪ್ರಮಾಣವಾಗಿ ಸಿದ್ಧಪಡಿಸುವ ಯತ್ನ ಮಾಡಿದರು. ಆದರೆ ಲೋಕಮತಕ್ಕೆ ಎಳ್ಳಷ್ಟು ಬೊಗ್ಗದ ಉಕ್ಕಿನ ಮನೋವೃತ್ತಿಯ ಸರಕಾರದ ಘಟಕಗಳು ತಮ್ಮಂತೆ ಕೈಯೆತ್ತುವ ತಮ್ಮ ಅನುಯಾಯಿಗಳ ಬಹುಮತದ ಬೆಂಬಲದಿಂದ ತಮ್ಮ ಮಾತನ್ನೇ [illegible]

ಇನ್ನು ಈ ೧೮ ಪೇನ್ಸಿನ ಕತ್ತರಿ ನಮ್ಮ ದೇಶಕ್ಕೆ ಹೇಗೆ ಹಾನಿಕಾರಕವಾಗಿರುವದೆಂಬದನ್ನೂ ಇಂಗ್ಲಂಡಕ್ಕೆ ಹೇಗೆ ಲಾಭಕರವಾಗುವದೆಂಬದನ್ನೂ ಒಂದೆರಡೇ ಮಾತುಗಳಲ್ಲಿ ಹೇಳಿ ಈ ವಿಷಯವನ್ನೇ ಮುಗಿಸುತ್ತೇವೆ. ನಮ್ಮ ದೇಶದಿಂದ ಇಂಗ್ಲಂಡಕ್ಕೆ ಹೋಗುವ ಹಸೀಸರಕೇ ಬಹಳ. ಅಂದರೆ ನಮ್ಮ ಭೂಮಿಯಲ್ಲಿ ಬೆಳೆಯುವ ಹತ್ತಿ, ಕಾಳು, ಕಡಿ, ಮೊದಲಾದ “ಕಚ್ಚಾ ಮಾಲು” ಇದು. ಇಲ್ಲಿಯ ಪೇಟೆಯ ಧಾರಣೆಯ ಮಾನವು ರೂಪಾಯಿಯ ದರದಿಂದ ಇಂಗ್ಲಂಡದ ವ್ಯಾಪಾರಸ್ಥರು ನಮ್ಮಲ್ಲಿಯ ಪೌಂಡಿನ ಲೆಕ್ಕದಿಂದ ನಮಗೆ ಹಣ ಸಲ್ಲಿಸಬೇಕಾಗುತ್ತದೆ. ರೂಪಾಯಿಗೆ ೧೮ ಪೇನ್ಸಿನ ಧಾರಣೆಯಿಂದ ೧ ಪೌಂಡಿನ ಬೆಲೆಯು ೧೩ ರೂ ೫ ಆಣೆ ೪ ಪೈ ಆಗುತ್ತದೆ. ಇಂಗ್ಲಂಡವು ಹಿಂದುಸ್ತಾನಕ್ಕೆ ಕೊಡಬೇಕಾಗುವ ಪ್ರತಿಯೊಂದು ಪೌಂಡಿಗೆ ೧ ರು ೧೦ ಆಣೆ ೮ ಪೈಯ ಉಳಿತಾಯವಾಗುತ್ತದೆ. ಇನ್ನು ಇಂಗ್ಲಂಡದಿಂದ ನಮ್ಮಲ್ಲಿಗೆ ಬರುವವೆಲ್ಲವೂ ಸಿದ್ಧಸರಕುಗಳೇ, ಯಂತ್ರಗಳು, ಬಟ್ಟೆಬರೆಗಳು ಮೊದಲಾದವು. ಇವುಗಳ ಬೆಲೆಯು ಅಲ್ಲಿಯ ನಾಣ್ಯಗಳಲ್ಲಿ ನಿಶ್ಚಯಿಸಲ್ಪಟ್ಟು ಇಲ್ಲಿಗೆ ಬಂದು ರೂಪಾಯಿಗಳ ಧಾರಣೆಯಿಂದ ಮಾರಲಾಗುತ್ತವೆ. ಅಲ್ಲಿಯ ಒಂದು ಪೌಂಡು ಬೆಲೆಯ ಬಟ್ಟೆಗೆ ಇಲ್ಲಿಯವರು ಮೊದಲು ಕೊಡಬೇಕಾಗುತ್ತಿದ್ದ ೧೫ ರೂಪಾಯಿಗಳ ಬದಲು ಈ ಮೇಲೆ ಹೇಳಿದಂತೆ ೧೩ ರು ೫ ಆಣೆ ೪ ಪೈ ಮಾತ್ರ ಕೊಡಬೇಕಾಗುತ್ತದೆ. ಅಂದರೆ ಇಂಗ್ಲಂಡದ ಕಾರಖಾನೆಯವರಿಗೆ ಅಗತ್ಯವಾಗಿ ಮುಟ್ಟುವ ಒಂದು ಪೌಂಡು ಮುಟ್ಟಿಯೂ ನಮ್ಮಲ್ಲಿ ಮಾರಾಟ ಮಾಡುವವರಿಗೆ ೧ ರು ೧೦ ಆಣೆ ೮ ಪೈ ಅಗ್ಗವಾಗಿ ಆ ಬಟ್ಟೆಯು ದೊರೆಯುತ್ತದೆ. ಇದರಿಂದ ಹಿಂದುಸ್ತಾನದಲ್ಲಿ ಇಂಗ್ಲಂಡದ ಸರಕುಗಳು ಅಗ್ಗವಾಗಿ ಮಾರಲಿಕ್ಕೆ ಅನುಕೂಲವಾಗಿ ವ್ಯಾಪಾರವು ಬೆಳೆದು ಬಹಳ ಲಾಭವಾಗುವದು. ಅದರೊಂದಿಗೆಯೇ ನಮ್ಮಲ್ಲಿ ಅಲ್ಪಸ್ವಲ್ಪ ಪ್ರಮಾಣದಿಂದ ನಡೆದಿರುವ ಬಟ್ಟೆ ಗಿರಣಿಗಳ ಉದ್ಯೋಗಕ್ಕೆ ಗಿರಾಕಿಗಳಿಲ್ಲದೆ ಅವು ದಿವಾಳಿತನ್ನದ ಹಾದಿಯನ್ನೇ ಹಿಡಿಯುತ್ತವೆ. ಹೀಗೆ ಈ ೧೮ ಪೆನ್ಸಿನ ದರದಿಂದ ಇಂಗ್ಲಂಡಕ್ಕೆ ಎರಡು ಬಗೆಯ ಲಾಭವೂ ನಮಗೆ ಹಾನಿಯೂ ಉಂಟಾಗುತ್ತದೆ ಎಂಬದು ಸುಲಭವಾಗಿ ಧ್ಯಾನಕ್ಕೆ ಬರುವದು.

ಯಾವದೇ ರಾಜ್ಯಾಡಳಿತೆಯ ಆರ್ಥಿಕ ಧೋರಣವೆಂಬುದು ಬಲು ಬಿಗಿಯಾದ ಮತ್ತು ತೊಡಕಿನದಾದ ವಿಷಯವು. ಇದರಲ್ಲಿ ಅನೇಕಾನೇಕ ಸಂಗತಿಗಳು ಒಳಗೊಂಡಿರುತ್ತವೆ. ಅವುಗಳನ್ನೆಲ್ಲ ಸುಲಭವಾಗಿ ಸರಲವಾಗಿ ಚರ್ಚಿಸಿ ಕನ್ನಡಿಗರ ಹಿಂದುಳಿದ ಜನಾಂಗಕ್ಕೆ ಮನದಟ್ಟಾಗುವಂತೆ ವಿವೇಚಿಸಲು ಸ್ಥಲವೂ ಕಾಲವೂ ವಿಪುಲವಾಗಿ ಬೇಕಾಗುವವು. ಮುಂದೆ ಇತರ ವಿಷಯಗಳು ಅನುಕೂಲವಾದಂಗೆ ಚರ್ಚೆ ಮಾಡುವ ಇಚ್ಛೆಯೂ ನಮಗಿದೆ. ಆದರೆ ಸದ್ಯಕ್ಕೆ ಈ ವಿಷಯದ ತಿಳುವಳಿಕೆ ಅಥವಾ ಅಲ್ಪ ಪರಿಚಯ ವಾಚಕರಿಗಾಗಲೆಂಬ ಅಪೇಕ್ಷೆಯಿಂದ ಈ ಮೂರು ಲೇಖಗಳನ್ನು ಬರೆದಿದ್ದೇವೆ. ೧೮ ಪೆನ್ಸಿನ ಕತ್ತರಿಯ ಯೋಗದಿಂದ ಹಿಂದುಸ್ತಾನ ಸರಕಾರದ ಆರ್ಥಿಕ ಧೋರಣವು ನಮ್ಮ ದೇಶ ಹಿತಕ್ಕೆ ವಿಪರೀತವಾಗಿರುವದೆಂಬದು ನಮ್ಮ ವಾಚಕವರ್ಗಕ್ಕೆ ಮನದಟ್ಟಾಗದಿರಲಾರದೆಂದು ನಮ್ಮ ಅಭಿಲಾಷೆ.

ದೇಹಾಂತ ಶಿಕ್ಷೆಯಾಗಿದ್ದರೂ ಅಪೀಲು ಮಾಡರು.

ಪ್ರಿವ್ಹಿ ಕೌನ್ಸಿಲಿಗೆ ಅಪೀಲು ಮಾಡುವದಿಲ್ಲ

ಚಿತಗಾಂಗ ತಾ॥ ೨೨-ಶಸ್ತ್ರಾಗಾರದ ಮೇಲೆ ದಾಳೀ ಮಾಡಿದ ಸಂಬಂಧದ ಎರಡನೇ ಪ್ರಕರಣದಲ್ಲಿ ದೇಹಾಂತ ಶಿಕ್ಷೆಗೆ ಗುರಿಯಾದ ಸೂರ್ಯಸೇನ ಮತ್ತು ತಾರಕೇಶ್ವರ ದಸ್ತಿದಾರ ಇವರ ಪರವಾಗಿ ಪ್ರಿವ್ಹೀ ಕೌನ್ಸಿಲಿಗೆ ಅಪೀಲು ಮಾಡಲಾಗುವದಿಲ್ಲವೆಂದು ತಿಳಿಯುತ್ತದೆ. ಆ ಪಕ್ಷಾಧಿಗಳ ಅಪ್ತರು ನಿನ್ನೆ ಚಿತಗಾಂಗ ಜೇಲಿನಲ್ಲಿ ಅವರನ್ನು ಕಂಡರು. (ಅ ಪ್ರೆ ತಂತಿ)

ಮೆಮನಸಿಂಗ ಡಿ. ಮ್ಯಾ. ರಿಗೆ ವಿಶೇಷಾಧಿಕಾರ.

ಕಲಕತ್ತಾ ತಾ॥ ೨೨ ತಲೆ ಹಚ್ಚಿಸಿದ ಅರಾಜಕರ ಸಂಚಾರವನ್ನೂ ಅವರೊಡನೆ ಸಂಬಂಧವನ್ನೂ ಪ್ರತಿಬಂಧಿಸುವದಕ್ಕೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ಕೊಡುವ "ಅರಾಜಕರ ಅತ್ಯಾಚಾರ ನಿರೋಧಕ" ಕಾನೂನನ್ನು ಮೆಮನಸಿಂಗ ಜಿಲ್ಹೆಗೆ ಹಚ್ಚಿದ್ದು ಕಲಕತ್ತಾ ಗ್ಯಾಝೇಟಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. (ಅ ಪ್ರೆ ತಂತಿ)

ಚಿತಗಾಂಗದಲ್ಲಿ ಮೋಜಿನ ಮದ್ದು ಹಾರಿಸಲಾಯಿತು

ಚಿತಗಾಂಗ ಪಟ್ಟಣದಲ್ಲಿ ಬಾಣ ಬಿರುಸು ಮೊದಲಾದ ಮದ್ದು ಹಾರಿಸುವದನ್ನು ಇನ್ನೂ ಎರಡು ತಿಂಗಳ ವರೆಗೆ ಪ್ರತಿಬಂಧಿಸುವ ಅಪ್ಪಣೆಯು, ಕಲಕತ್ತಾ ಗ್ಯಾಝೆಟಿನಲ್ಲಿ ಪ್ರಸಿದ್ಧವಾಗಿದೆ. [ಅ ಪ್ರೆ ತಂತಿ]

ಬಂಗಾಲ ಸರಕಾರದ ಆಡಳಿತೆಯ ವರದಿ

೧೯೩೧-೩೨ರ ಬಂಗಾಲ ಸರಕಾರದ ಆಡಳಿತೆಯ ವರದಿಯು ಇದೇ ಪ್ರಸಿದ್ಧವಾಗಿದೆ. ಅದರಲ್ಲಿ ಗಾಂಧಿಯವರು ಚಕ್ರಗೋಷ್ಟಿ ಪರಿಷತ್ತಿನಿಂದ ತಿರುಗಿ ಬಂದ ಕೂಡಲೆ ಸವಿನಯ ಕಾನೂನು ಭಂಗದ ಚಳವಳಿಯನ್ನು ಮತ್ತೆ ಪ್ರಾರಂಭಿಸಿದ್ದು ಉಲ್ಲೇಖಿಸಲಾಗಿದೆ. ಕಟ್ಟಳೆಗಳ ಮಾನ್ಯತೆ ಹಾಗು ಸುವ್ಯವಸ್ಥೆಯನ್ನು ಕಾಯುವದಕ್ಕೆ ಸರಕಾರದವರು ಕೂಡಲೆ ಕಡುಕರವಾದ ಶಾಸನಕ್ಕೆ ಕೈಹಾಕಬೇಕಾಯಿತು. ಆರಂಭದಲ್ಲಿ ಚಳವಳಿಗೆ ಜನ ಸಹಾಯವಿದ್ದಿದ್ದಿಲ್ಲ. ೧೯೩೦-೩೧ರಲ್ಲಿ ಅದಕ್ಕೆ ಬಂದ ಭಯಂಕರ ಸ್ವರೂಪವನ್ನು ಈ ಸಾರಿ ಹೊಂದಲಿಲ್ಲ. ೧೯೩೨ರ ಜನವರಿಯಿಂದ ಅರಾಜಕರ ಚಳವಳಿಯು ಮಾತ್ರ ಕಡುವಿನಿಂದ ಬೆಳೆಯಿತು. ಆ ಕ್ಟೋಬರ ತಿಂಗಳಲ್ಲಿಯೇ ನೂರಕ್ಕಿಂತ ಹೆಚ್ಚು ಜನರು ಬಂಧಿಸಲಾದರು. [ಅ ಪ್ರೆ ತಂತಿ]

ಆಯುಧಗಳೂ ಮದ್ದೂ ಸಿಕ್ಕವು.

ಕಲಕತ್ತಾ ತಾ॥ ೨೨—೨೩ ಗುಂಡು ತುಂಬಿದ ಒಂದು ಚರೇವಾದ ಒಂದು ಹೀಗೆ ಕೈ ರಿವಾಲ್ವರಗಳೂ ೨೦ ಸುತ್ತಿನ ಮದ್ದಿನ ಸಾಮುಗ್ರಿಯೂ ಹತ್ತರ ಇದ್ದವೆಂಬ ಆರೋಪಣೆಯಿಂದ ಒಬ್ಬ ತರುಣನನ್ನು ನಿನ್ನೆ ರಾತ್ರಿ ಪೋಲೀಸರು ಹಿಡಿದಿದ್ದಾರೆ. ಮುಂದೆ ಅವನ ಕೋಣೆಯಲ್ಲಿ ಹುಡುಕಿದಾಗ ಎರಡು ಬೇರೆ ರಿವಾಲವರಗಳೂ ೭೫ ಸುತ್ತಿನ ಮದ್ದಿನ ಸಾಮುಗ್ರಿಯೂ ಕಾರ್ಟ್ರಿಜ್ ಕೇಸೂ ನಾಯನಾಯಡದ ಒಂದು ಬಾಟಲಿಯೂ ಒಂದು ಕಟ ಶಿಯೂ ದೊರೆತವು. ತರುಣನು ಚಿತಗಾಂಗದಲ್ಲಿರುವವನಂತೆ.

(ಅ ಪ್ರೆ ತಂತಿ)

'ಕನ್ನಡಿಗ'ನ ಬಿನ್ನಹ.

ನಾಳೆಯಿಂದ "ಕನ್ನಡಿಗ" ನು "ಸಂಯುಕ್ತ ಕರ್ನಾಟಕ" ದಲ್ಲಿ ಸಂಯುಕ್ತನಾಗಿ ಕನ್ನಡ ನಾಡಿನ ಸೇವೆಗೆ ಮುಂದ ವರಿಯುವನು. ಈ ಸಂಗತಿಯು ಹುಲುಬು ತಾಸು ಹೋಬಿದ್ದೊಡನೆಯೇ 'ಕನ್ನಡಿಗ'ನ ಉಪಹಾಸ ಮಾಡಿ ಕೆಲವರು ನಕ್ಕು ಬಿಟ್ಟರು. ಕನ್ನಡಿಗನಿಗೆ ದೇಶ ಮರ್ಯಾದೆಯ ಆತಂಕವೇ ಇಲ್ಲವೆಂಬುದನ್ನು ಇವರೇನು ಬಲ್ಲರು ಪಾಪ! ಇಡೀ ಕನ್ನಡನಾಡಿನಲ್ಲಿ ಎಲ್ಲಿಯಾದರೂ ಕನ್ನಡನಾಡು, ಕನ್ನಡನಾಡಿ ಕನ್ನಡ ಜನಾಂಗಗಳ ಸೇವೆಯನ್ನು ಮಾಡುವದೇ ಕನ್ನಡಿಗನ ಗುರಿ. ಅವನಿಗೆ ಸ್ಥಲನಿರ್ಬಂಧವೇ ಇಲ್ಲ. ಬಾಗಲಕೋಟೆಯಿಂದ ಇಲ್ಲಿಗೆ ಬರುವ ಮೊದಲೇ ಉತ್ತರ ಕರ್ನಾಟಕಕ್ಕೆಲ್ಲ ಒಂದೇ ಮೇಲ್ತರದ ಕನ್ನಡ ರಾಷ್ಟ್ರೀಯ ಪಕ್ಷದ ದಿನಪತ್ರಿಕೆಯನ್ನು ಮಾಡುವದು, ಎಲ್ಲ ದೃಷ್ಟಿಯಿಂದಲೂ ಹಿತಕರವಾದ ಮಾತೆಂಬ ಒಗ್ಗು ಕನ್ನಡನಾಡಿನ ಹಿತಚಿಂತಕರಲ್ಲಿ ಒಟ್ಟಾಗಿ ನಡೆದ ಚರ್ಚೆಯ ಪರ್ಯವಸಾನವೇ ಇದೇನು ಹೇಳಿದರೆ ಯಾರಿಗೂ ಅಸಮಾಧಾನವಾಗಲಾರದು.

ಕನ್ನಡಿಗರಲ್ಲಿ ಒಂದಾಗಿ ಕಲೆತು ಕೆಲಸ ಮಾಡುವ ಪ್ರವೃತ್ತಿ ಕಡಿಮೆ ಎಂಬ ಪ್ರವಾದವುಂಟು. ಇದು ಪೂರಾ ಸಳ್ಳೆಂದು ನಾವು ಹೇಳಲಾರೆವು. ಆದರೆ ಆ ಪ್ರವೃತ್ತಿಯನ್ನು ಬೆಳಸಿ ತೋರಿಸಬೇಕೆಂಬ ಒಲವಾದ ಆಸೆಯಿಂದ ಕನ್ನಡಿಗನು ಸಂಯುಕ್ತ ಕರ್ನಾಟಕವನ್ನು ಕೂಡಿಕೊಂಡಿದ್ದಾನೆ. ವಿಜಾಪುರದ ಕರ್ನಾಟಕ ವೈಭವದ ಸಂಪಾದಕರಾದ ಶ್ರೀ ಮೋಹರೆ ಹನಮಂತರಾಯರೂ ಇದೇ ಸಹಕಾರ-ಬುದ್ಧಿಯಿಂದ ಸಂಯುಕ್ತ ಕರ್ನಾಟಕಕ್ಕೆ ನೆರವಾಗಲು ಒಂದಿದ್ದಾರೆ. ಕನ್ನಡಿಗನಿಗೆ ಇಲ್ಲಿ ನೆರೆಯಾಗುವ ಆತ್ಮೀಯ ಮಿತ್ರ ನಾನಾಗಲೀ ನನ್ನ ಮಿತ್ರರಾದ ಇಲ್ಲಿಯ ಇನ್ನೂ ಅನೇಕ ನಾಡಬಾಂಧವರಾಗಲೀ ಕನ್ನಡಿಗನೊಂದಿಗೆಯೇ ಸಂಯುಕ್ತ ಕರ್ನಾಟಕದ ಸಂಯುಕ್ತ ಸೇವೆಗೆ ಸಿದ್ಧರೇ ಆಗಿರುವೆವೆಂಬುದು ತಿಳಿದ ಬಳಿಕ ಕನ್ನಡಿಗನ ಉಪಹಾಸಕರಿಗೂ ಸಮಾಧಾನವಾಗದಿರದು.

ನಮ್ಮೆಲ್ಲರ ಈ ಸಂಯುಕ್ತ ಸೇವೆಯನ್ನು ಸಂಯುಕ್ತ ಕರ್ನಾಟಕದ ಜನಾಂಗವು ಅರ್ಥನ ಕಳಕಳಿಯಿಂದ ಕೈಕೊಳ್ಳಲೆಂದೇ ನನ್ನ ಬೇಡಿಕೆ.

ಆಲೂರ ವೆಂಕಟರಾಯರು
ಸಂಪಾದಕ ಕನ್ನಡಿಗ

ಕಾರ್ಯಾಲಯವು ಇಲ್ಲೇ ಉಳಿಯುವದು.

ಕನ್ನಡಿಗನು ಬೆಳಗಾವಿಯ ಸಂಯುಕ್ತ ಕರ್ನಾಟಕದೊಂದಿಗೆ ಸಮಾವಿಷ್ಟನಾದರೂ ಈಗಿನ "ಕನ್ನಡಿಗ ಕಾರ್ಯಾಲಯವು" ಇಲ್ಲಿಯೇ ಇದ್ದಲ್ಲಿಯೇ ಉಳಿಯುವದು. ಇನ್ನು ಮುಂದೆ ಕನ್ನಡಿಗನ ಬದಲು ಸಂಯುಕ್ತ ಕರ್ನಾಟಕದೊಂದಿಗೆ ಮಾಡತಕ್ಕ ವ್ಯವಹರಣೆಗಳನ್ನೆಲ್ಲ ಧಾರವಾಡದವರು ಇಲ್ಲಿಯೇ ಮಾಡಬೇಕು.

ಧಾರವಾಡ ಜವಳೀಪೇಟೆ ೨೪-೧೧-೩೩
ಕಾರ್ಯದರ್ಶಿ
ಸಂಯುಕ್ತ ಕರ್ನಾಟಕ ಶಾಖಾಕಚೇರಿ

ಮುಂಬಯಿಗೆ ಬಂಗಾಲದ ಕವಿವರ್ಯ-ಡಾ. ರವೀಂದ್ರರ ಆಗಮನ.

ಮುಂಬಯಿ ತಾ॥ ೨೩—ತಾವೇ ಬರೆದ ಕೆಲವು ನಾಟಕಗಳನ್ನು ತಮ್ಮ ಶಿಷ್ಯ ಸಮೂಹದಿಂದಲೆ ಮುಂಬಯಿಯಲ್ಲಿ ಅಭಿನಯಿಸಿ ತಮ್ಮ ಶಾಂತಿ ನಿಕೇತನದ ವಿಶ್ವಭಾರತಿ ವಿದ್ಯಾಲಯಕ್ಕೆ ಧನಸಂಚಯ ಮಾಡಲು ಇಲ್ಲಿ ಒಂದು ವಾರದ ಮಟ್ಟಿಗೆ ನಿಲ್ಲುವ ಉದ್ದೇಶದಿಂದ ಕವೀಂದ್ರ ರವೀಂದ್ರರು ತಮ್ಮ ಪರಿವಾರದೊಂದಿಗೆ ಇಂದು ಬೆಳಿಗ್ಗೆ ಮುಂಬಯಿಗೆ ಬಂದು ಮುಟ್ಟಿದರು. ಮುಂಬೈ ಕಾರ್ಪೋರೇಶನದ ಅಧ್ಯಕ್ಷರ ಮುಖಾಂತರವೇ ಕವೀಂದ್ರರಿಗೆ ಮುಂಬಯಿ ನಗರದ ಸ್ವಾಗತ ಮಂಡಳದ ಸಭಾಸದರೂ ಇನ್ನು ಅಸಂಖ್ಯ ಪ್ರಮುಖ ನಾಗರಿಕರೂ ಬೋರೀಬಂದರ ಸ್ಟೇಶನಕ್ಕೆ ಬಂದರು. ಹೊರಗೆ ಕಾದಿದ್ದ ಮೋಟಾರ ಕಾರಿನವರೆಗೆ ನೆರೆದ ಜನರ ಸಂದಣಿಯಲ್ಲಿ ಹಾದು ಹೋಗುವಾಗ ರವೀಂದ್ರರಿಗೆ ಸಾಕುಬೇಕಾಯಿತು. ಹಾಯಕೋರ್ಟಿನ ಜಸ್ಟೀಸ ಮಿರ್ಝಾಲೀ ಅಕಬರ ಖಾನರಿಂದ ಟಿ ವ್ಹನ ಹಾಲಿನಲ್ಲಿ ಟಾಗೋರ ಶಿಲ್ಪಕಲಾ ಪ್ರದರ್ಶನದೊಡನೆ ಟಾಗೋರ ಸಪ್ತಾಹದ ಕಾರ್ಯಗಳಿಗೆ ಆರಂಭವಾಗುವದು.

ಮುಂಬಯಿಯಲ್ಲಿ ಇನ್ನೊಂದು ಹೊಸ ದೈನಿಕಪತ್ರ.

ಮುಂಬಯಿ ತಾ॥ ೨೨ ಹಿಂದಕ್ಕೆ ಮುಂಬಯಿ ಕ್ರಾನಿಕಲ್ಲ ಪತ್ರಿಕೆಯ ಸಂಪಾದರಾಗಿದ್ದ ಮಿ ಬಿ ಜಿ ಹಾರ್ನಿಮನ್ನ ಇವರು ಮುಂಬಯಿಯಲ್ಲಿ ಬಾಂಬೇ ಸೆಂಟೇನಿಯಲ್ ಎಂಬ ಹೊಸ ರೀತಿ ಒಂದು ಇಂಗ್ಲೀಷ ದಿನ ಪತ್ರಿಕೆಯನ್ನು ಪ್ರತಿನಿತ್ಯ ಹೊರಡಿಸುವರಿದ್ದಾರೆ. ತಾವೇ ಮುದ್ರಕರೂ ಪ್ರಕಾಶಕರೂ ಎಂಬುದಾಗಿ ಇಂದು ಪ್ರಮುಖ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಮುಂದೆ ಅವರು ಪ್ರತಿಜ್ಞಾ ಲೇಖವನ್ನೂ ಒಪ್ಪಿಸಿದರು.

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಲಿಂಗರಾಜೇ ಅರಸರು ಅಧ್ಯಕ್ಷರು.

ಬೆಂಗಳೂರು ತಾ॥ ೨೨

ಡಿಶೆಂಬರ ೨೯ಕ್ಕೆ ಹುಬ್ಬಳ್ಳಿಯಲ್ಲಿ ನಡೆಯುವ ೧೯ನೇ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ರಾಜ ಕವಿಭೂಷಣ ಎಚ್ ಲಿಂಗರಾಜೇ ಅರಸರವರು ಅಧ್ಯಕ್ಷತೆಯನ್ನು ವಹಿಸಲು ಒಪ್ಪಿರುವರು.

ಕವಿ ಸಮ್ಮೇಳನಕ್ಕೆ ಶ್ರೀಮಾನ್ ಕೆ ವಿ ಪುಟ್ಟಪ್ಪನವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ವಿಜಯನಗರ ಸ್ಮಾರಕೋತ್ಸವ ಮಂಡಲ ಹುಬ್ಬಳ್ಳಿ

ತಾ॥ ೨೫ ಹಾಗು ೨೬ ನೇ ದಿವಸ ನೆರೆಯತಕ್ಕ ವಿಸ್ಮೃ ಪ್ರಾಸ್ತಾವಿಕ ಸಭೆಯು ಹುಬ್ಬಳ್ಳಿಯಲ್ಲಿ ಮರಾಠಾ ಓಣಿಯ ನಾರಾಯಣ ವ್ಯಾಯಾಮ ಶಾಲೆಯ ಕಟ್ಟಡದಲ್ಲಿ ಕೂಡುವದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬಾಗಲಕೋಟೆಯ ಪತ್ರ

ತಾ॥ ೨೧-೧೧-೩೩

ಶುಕ್ರವಾರ ರಾತ್ರಿ ಆರಂಭವಾಗಿ ಶನಿವಾರ ಸಮಗ್ರ ದಿವಸ ಒಂದೇ ಸವನೆ ಮಳೆ ಹತ್ತಿ ಕೆಟ್ಟ ಮೋಡಗಾಳಿ ಬೀಸಿತು. ಊರಲ್ಲಿ ಪ್ಲೇಗಿನಿಂದ ದಿನಾಲು ೧ ೨ ಜನರು ಮಲಗಿಕೊಳ್ಳುವರು ನಡೆದಿದೆ.

... ವೀರಯ್ಯ ಇವರ ಗಾಯನ ಕಚೇರಿಯು ... ನಾರ ಹಾಡಿದಂತ ಲಾಯಲ್ಲಿ ... ಅವರ ಎಕ್ಕಿ ಗಾಯನವು ಇಲ್ಲವರಿಗೆ ಎಷ್ಟು ರುಚಿಸಿತೊ ಎಂದು ಕೆಲವರು ... ಕೊಳ್ಳುತ್ತಿರುವರು.

ಪುಣೆಯ ಎಗ್ರಿಕಲ್ಚರಲ್ ಕಾಲೇಜದ ೪೦ ಜನ ವಿದ್ಯಾರ್ಥಿಗಳದೊಂದು ತಂಡವು ಭೂಗರ್ಭ ಶಾಸ್ತ್ರದ ಕೆಲವು ಸಂಗತಿಗಳನ್ನು ಪ್ರತ್ಯಕ್ಷ ಕಂಡುಕೊಳ್ಳುವ ಉದ್ದೇಶದಿಂದ ಸಂಚಾರಕ್ಕೆ ಹೊರಟು ನಿನ್ನೆ ಸೋಮವಾರ ಮಧ್ಯಾಹ್ನ ಇಲ್ಲಿಗೆ ಬಂದರು. ನಿನ್ನಿನ ದಿನವೇ ಅವರು ಇಲ್ಲಿಯ ವಿದ್ಯಾರ್ಥಿಗಳೊಡನೆ ಹಾಕಿ ಆಟವನ್ನು ಆಡಿ ಪರಾಜಯವಿಟ್ಟು ಒಂದು ಬಂಡಿಯನ್ನು [ಗೋಲ] ಹೊತ್ತುಕೊಂಡರು. ಆ ಹೊತ್ತು ಸಾಯಂಕಾಲ ೫ ಘಂಟೆಗೆ ಬಸವೇಶ್ವರ ಶಾಲೆಯ ವಿದ್ಯಾರ್ಥಿಗಳ ಕೂಡೆ ಕಾಲ ಚಂಡಾಟವನ್ನು ಆಡತಕ್ಕವರಿರುವರು.

ಕನ್ನಡ ಒಗಟುಗಳು (ಭಾಗ ೧)

ಬೆಳಗಾಂವಿಯ 'ಮೂವರು ಕನ್ನಡಿಗರು' ಬರೆದ ಒಗಟುಗಳವು ಬೆಲೆ ೧ ಆಣೆ ಪುಸ್ತಕಗಳು ದೊರೆಯುವ ಸ್ಥಳ ನಾಡನವರಿಗಳ ಕಚೇರಿ ಬೆಳಗಾಂವ.

ಉತ್ತರ ಕರ್ನಾಟಕದಲ್ಲಿ ಒಗಟುಗಳು ಕೇವಲ ಮರಾಟಿಯಲ್ಲಿಯೇ ರೂಢವಾಗಿರುವವು. ಇದನ್ನು ತಿಳಿದು ಹಾಕದೇ ಆದರೆ ಕನ್ನಡದಲ್ಲಿ ಚಿತ್ತಾಕರ್ಷಕವಾದ ಒಗಟುಗಳು ಅವಶ್ಯವಾಗಿ ಬೇಕಾಗಿದ್ದವು. ಈ ಕೊರತೆಯನ್ನು ಬೆಳಗಾಂವಿಯ ನಾಡನವರಿಗಳು ದೂರ ಮಾಡಿದ್ದು ಸ್ತುತ್ಯವಾಗಿದೆ. ಇದರಲ್ಲಿ ರಾಷ್ಟ್ರೀಯ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಐತಿಹಾಸಿಕ ಹೀಗೆ ಎಲ್ಲ ಬಗೆಯ ಒಗಟುಗಳು ಬೇರೆ ಬೇರೆಯಾಗಿ ರಚಿಸಲ್ಪಟ್ಟಿದ್ದು ವಿಶೇಷವಾಗಿದೆ.

ಮರಾಟಿಯಲ್ಲಿ ಒಗಟುಗಳಿಗೆ ಕೇವಲ ಕೊನೆಯ ಪ್ರಾಸವಿರುತ್ತದೆ. ಇದೇ ಪದ್ಧತಿಯಿಂದ ಇವೂ ರಚಿಸಲ್ಪಟ್ಟಿವೆ. ಆದರೆ ಕನ್ನಡದಲ್ಲಿ ತ್ರಿಪದಿ ಅಥವಾ ಬೇರೆ ಯಾವುದಾದರೂ ಮಟ್ಟುಗಳಲ್ಲಿ ಹಾಕಿ ಗದ್ಯವು ಬಾಯಿಂದ ಅಕ್ಷರಶಿಕ್ಷ ಸಾಗುವ ಗುಣಕಂತೆ ಮಾಡಿದರೆ ಒಳಿತಾಗುವದು.

ಹುಬ್ಬಳ್ಳಿಪೇಟೆಯ ಧಾರಣೆ
(ಕೇವಡೆ ಮತ್ತು ಕಂಪನಿ)

ಹುಬ್ಬಳ್ಳಿ ತಾ॥ ೨೩ [ಮಧ್ಯಾಹ್ನ ೧೧ ಗಂಟೆ]

ಜವಾರಿ ಹತ್ತಿ	೯೦-೯೫	ಜೋಳ	೧೦॥
ಅಪ್ಲಂಡ	೯೦-೯೫	ಗೋದಿ	೩॥-೭
ಬಿರಾರ ಹತ್ತಿ	೯೨	ಅಕ್ಕಿ	೬॥
ಹೊಸ ಕಾಪಸ	೧೦೦	ಕಡ್ಲಿ	೬॥-೬
ಶೇಂಗಾಬೀಜ	೬೮-೭೦	ಕಡ್ಲಿ	೫॥-೬॥
ದಬ್ಬೇಶೇಂಗಾ	೬೮-೬೫	ತೊಗರಿ	೧೦-೧೦॥
ಸಾವಿರ ಅರಳಿ	೬೦	ಹುರಳಿ	೧೧-೧೧॥
ಹೆಸರು ಜವಾರಿ	೯		
ತಿಂಗಳಾಚೆಟು	೫॥	ಅಕ್ಕಿ ಹಾಸು	೬೦

ಬೆಳ್ಳಿ ಬಂಗಾರ

ಬಂಗಾರ	೩೧॥	ಬೆಳ್ಳಿ	॥

ಕರ್ನಾಟಕ ಕೆಮಿಕಲ್ ವರ್ಕ್ಸ್, ಗದಗ.

ಶತಾವರೀ ಕಾರ್ಡಿಯಲ್

ಸ್ತ್ರೀಯರ ಎಲ್ಲ ಬೇನೆಗೂ ರಾಮಬಾಣ. ಇದನ್ನು ಸೇವಿಸುವದರಿಂದ ಸ್ತ್ರೀಯರ ಶರೀರವು ನಿರೋಗಿ ಹಾಗೂ ಸುದೃಢವಾಗುತ್ತದೆ ಬಾಟ್ಲಿ ಕಿ ರು ೧॥ ಎಲ್ಲ ಕಡೆಗೂ ದೊರೆಯುತ್ತದೆ.

— ಧಾರವಾಡ ಫಾರ್ಮಸಿ ಕಾಗದ ಬಾಳಿಗಾ ಫಾರ್ಮಸಿ ಡಾ ಕುಲಕರ್ಣಿಯವರ ... ನಂಬ ...

ನಾರಿನ ವೈರಿ

ಚಂದ್ರಪ್ರಭಾ— ಈ ಔಷಧದಿಂದ ದಿವಸದಲ್ಲಿಯೇ ಅಜಬ ಗುಣ ... ಕಿಮ್ಮತ್ತು ಕಳಿಸಿದಲ್ಲಿ ವ್ಹಿ ಪಿ ಯಿಂದ ಕಳಿಸುತ್ತೇವೆ ಏಜಂಟರಿಗೆ ಭರಪೂರ ಕಮೀಶನ್. ಕಿಮ್ಮತ್ತು ರೂ ೦-೮-೦ ಅಂಚೆ ವೆಚ್ಚ ಬೇರೆ.

ಮ್ಯಾನೇಜರ—ರಾಘವ ಫಾರ್ಮಸಿ ಗೋಕಾಕ ಜಿ. ಬೆಳಗಾವ

ವಿಜಯ ಸಿನೇಮಾ ಧಾರವಾಡ.

ತಾರೀಖು ೨೧ ಮಂಗಳವಾರದಿಂದ ಫಕ್ತ ೪ ದಿವಸ

ರಜಿಜೆತ ಮೂವ್ಹಿಟೋನದ ಮಾತಾಡುವ ಹಾಡುವ ಚಿತ್ರಪಟ.

ಮಿಸ್ ಗೋಹರ, ಭಗವಾನದಾಸ, ಬಿಲಿಮೋರಿಯಾ ಇವರು ಕೆಲಸ ಮಾಡಿದ ಚಿತ್ರಪಟ

ರಾಧಾರಾಣಿ

ದರ ನಿತ್ಯದಂತೆ **ವೇಳೆ:— ೭, ೧೦-೩೦ಕ್ಕೆ** ರವಿವಾರ, ಮಂಗಳವಾರ ಹಗಲು ೪ಕ್ಕೆ

Moderate fees! ***Excellent Results!!***

THE NEW COACHING CLASSES

For High School & College Students

Fort Dharwar N R Sunkad B A D R Kengsur B A

ಅಗಡಿಕರ ಇವರ ಸುಗಂಧಿ ಬ್ರಾಹ್ಮೀ ತೈಲ.

ಮಿದುಳಿಗೆ ಶಕ್ತಿ ಕೊಡ ವದು ಹಾಗೂ ಮಿದುಳಿನ ಎಲ್ಲ ವಿಕಾರಗಳನ್ನು ನಾಶಪಡಿಸುವದು. ಬೆಲೆ ಬಾಟ್ಲಿ ಒಂದಕ್ಕೆ ೮ ಆಣೆ ನಮ್ಮಲ್ಲಿ ಆಯುರ್ವೇದದ ಔಷಧಗಳೆಲ್ಲ ದೊರೆಯುವವು

ಕೆ ಅಗಡಿಕರ ಬ್ರದರ್ಸ

ಮಂಗಳವಾರ ಪೇಟೆ ಧಾರವಾಡ

ಗರುಡರವರ ಅಚ್ಚಾದ ಸಚಿತ್ರ ಸಂಗೀತನಾಟಕಗಳ ಪುಸ್ತಕಗಳು

ದೊರೆಯುವ ಸ್ಥಳ

೧೪-೧೦-೩೩ ಗದಗ ಶ್ರೀ ದತ್ತಾತ್ರೇಯ ಬುಕ್ ಡೀಪೊ

ಕಹಾಪುರ ಪೇಟೆ ಗದಗ

ವ್ಯಾಪಾರಿಗಳಿಗೆ ಕಮೀಶನ್ } ## ಅಸ್ಪೃಶ್ಯತಾ ನಿವಾರಣೆ. { ಪ್ರಚಾರಕರಿಗೆ ಸುಸಮಯ

(ಕೊಟ್ಟೂರು ದೀನ ಸೇವಾ ಸಂಘದ ಪ್ರಥಮ ಪುಷ್ಪ)

ಇದರಲ್ಲಿ ಶಾಸ್ತ್ರೀಯಾಧಾರಗಳಿಂದ ಹಿಂದೂ ಧರ್ಮದಲ್ಲಿ ಅಸ್ಪೃಶ್ಯತೆಯು ನಿಷೇಧಿಸಲ್ಪಟ್ಟಿದೆ. ಶ್ರೀಶಂಕರ, ರಾಮಾನುಜ, ಮಧ್ವ, ಬಸವೇಶ್ವರ ವಗೈರೆ, ಧರ್ಮಗುರುಗಳ ಉಪದೇಶವೂ, ಹಿಂದೂ ಸಮಾಜ ಕ್ಷೀಣತೆಯ ವರ್ಣನೆಯೂ, ಹರಿಜನೋದ್ಧಾರದ ಬಗ್ಗೆ ಸೂಚಕ ಸಲಹೆಗಳೂ ಇವೆ ದೊಡ್ಡವರಿಂದ ಪ್ರಶಂಸಾ ಪತ್ರಗಳು ಬಂದಿವೆ ಅಡ್ವಾನ್ಸಿಲ್ಲದೆ ವ್ಹಿ ಪಿ ಕಳುಹಿಸುವುದಿಲ್ಲ ಕ್ರಯ ೦-೨-೦ ಎರಡಾಣೆ ಮಾತ್ರ ಉಚಿತವಾಗಿ ಹಂಚಲು ಬಯಸುವ ಪ್ರಚಾರಕರಿಗೂ, ಹರಿಜನ ಸೇವಾ ಸಂಸ್ಥೆಗಳಿಗೂ ಹೆಚ್ಚಿನ ಕಮೀಶನ್

೩-೧೧-೩೩ ಟಿ ಬಿ ಕೇಶವರಾವ್ ಬ್ರಾಹ್ಮಣ ಬೀದಿ ಬಳ್ಳಾರಿ.

ಬೇಕಾಗಿದೆ.

ಇಲೆಕ್ಟ್ರಿಕ್ ಮೋಟಾರ ೫ ಇಲ್ಲವೇ ೬ ಹಾರ್ಸ ಪಾವರಿನದು ಹಾಗು ಚಕ್ಕಿ [ಬೀಸುವ ಕಲ್ಲು] ಗಳು ಬೇಕಾಗಿವೆ, ಮಾರುವವರು ಕನ್ನಡಿಗ ಕಾರ್ಯಾಲಯದಲ್ಲಿ ತಿಳಿಸಬೇಕು

C/o ಕನ್ನಡಿಗ ಕಾರ್ಯಾಲಯ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡುಯವರ

ಮೇಹಸಂಜೀವನೀ ಯಣ್ಣೆ

ಪತಿವ್ರತೆಯಾದ ತನ್ನ ಹೆಂಡತಿಯಲ್ಲಿಯೆ ಅತಿ ಸಂಭೋಗ ಮಾಡುವದರಿಂದ ಅನರ್ಥಕ್ಕೆ ಕಾರಣವಾದ ಅನೇಕ ರೋಗಗಳು ಬರುತ್ತಿರುವಲ್ಲಿ—ದುಷ್ಟ ಸ್ತ್ರೀಯರಲ್ಲಿ ತಮ್ಮ ಪ್ರಾಯವೆಂಬ ಅಮೋಘ ವಸ್ತುವನ್ನು ಧಾರೆಯೆರೆದು ಹಾಳು ಮಾಡಿಕೊಂಡು—ಮೇಹವ್ರಣ, ಬಿಳುಪು, ಭಗಂದರ, ತೊಡೆವಾಳ, ಮುಸುಕು, ಟಾಕಿ, ಪರಮ, ಪವಿತ್ರ ಮುಂತಾದ ರೋಗಗಳನ್ನು ಸಂಪಾದಿಸಿಕೊಂಡು ನಿರಂತರವೂ ಬಾಧೆಪಡುತ್ತಿರುವ ನಮ್ಮ ದೇಶೀಯರಾದ ಯೌವನಸ್ಥರಿಗೆ ಈ ಔಷಧವು ಅಮೃತ ಕಲಶವಿದ್ದಂತೆ ನವಜೀವನವನ್ನೇ ಕಲ್ಪಿಸತಕ್ಕದ್ದಾಗಿರುವದು. ತಕ್ಕ ಔಷಧ ಬೀಳದಿದ್ದರೆ ದೇಹಕ್ಕಾವರಿಸಿರುವ ಮೇಹರೋಗವು ತಲೆತಲಾಂತರಗಳ ವರೆಗೂ ಹಬ್ಬುತ್ತಾ ತನ್ನ ಕಾರ್ಯವನ್ನು ಆ ವಂಶದಲ್ಲಿ ನೆಲೆಗೊಳಿಸುವದೆಂಬುದೇ ವೈದ್ಯಶಾಸ್ತ್ರಜ್ಞರ ತಾತ್ಪರ್ಯವಾಗಿದೆ ಈ "ಮೇಹಸಂಜೀವನೀ ಯಣ್ಣೆ"ಯ ಸೇವನೆಯಿಂದ ಸ್ತ್ರೀಪುರುಷರಿಗೆ ಸಂಭವಿಸುವ— ಬಿಳುಪು, ಕೆಂಪು, ಹಸರು ಮುಂತಾದ ೧೮ ವಿಧ ಪ್ರಮೇಹರೋಗಗಳು, ಉರಿಮೂತ್ರ, ಮುಸುಕುಹಣ್ಣು, ಮೇಹಚಳುಕು, ಮೇಹಚಟ್ಟೆಗಳು, ನಾಭೀವ್ರಣ, ಮೇಹವಾಯು ತೊಡೆಬಾಳ, ಭಗಂದರ, ಟಾಕಿ, ಪವಿತ್ರ ಮುಂತಾದ ಬಾಧ್ಯಗಳು ಬುಡದೊಂದಿಗೆ ನಾಶವಾಗುತ್ತವಲ್ಲದೆ, ಈ ಯಣ್ಣೆಯ ಸೇವನೆಯಿಂದ ಸ್ತ್ರೀಯರಿಗೆ ಪ್ರಾಪ್ತವಾಗುವ ಅಕ್ರಮ ಋತುವಾಗುವಿಕೆ ಋತುಶೂಲೆ, ಪ್ರದರ ಮುಂತಾದ ರೋಗಗಳು ನಿರ್ನಾಮವಾಗುವವು ಕ್ರಯ ಶೀಸೆ ೧ಕ್ಕೆ

೨—೦—೦

ಯೋಗ್ಯತಾಪತ್ರಗಳು— (೧) ನಿಮ್ಮ ಮೇಹಸಂಜೀವನೀ ಯಣ್ಣೆಯನ್ನು ತರಿಸಿ ಉಪಯೋಗಿಸಿ ನೋಡಿದಲ್ಲಿ ತುಂಬಾ ಪ್ರಯೋಜನವು ಕಂಡುಬಂದದ್ದರಿಂದ ಈ ಯಣ್ಣೆಯನ್ನು ನನ್ನ ವೈದ್ಯಶಾಲೆಯಲ್ಲಿ ಹೆಚ್ಚು ಖರ್ಚಾದೀತೆಂದು ಯೋಚಿಸುವೆನು. ಮ॥ ರಾ॥ ಕೆ ಎಸ್ ಗೋವಿಂದಶಾಸ್ತ್ರಿ, ಆಯುರ್ವೇದ ಭೂಷಣ, ಆರೋಗ್ಯಾಶ್ರಮ, ಕೂಡಿಯಾಲ್‌ಬೈಲ ಪೋಸ್ಟ್, ಮಂಗಳೂರು (೨) ನಿಮ್ಮ ಮೇಹಸಂಜೀವನೀ ಯಣ್ಣೆಯನ್ನು ಕೆಲವು ವರ್ಷಗಳಿಂದ ನಾನು ಪ್ರಯೋಗಿಸಿ ಅನೇಕ ರೋಗಿಗಳ ಕೃತಜ್ಞತೆಗೆ ಪಾತ್ರನಾಗಿರುವೆನು ಮ॥ ರಾ॥ ಉಗ್ಗಪ್ಪ ಕೋಡಿ ಕುಕ್ಕಂಭಟ್ಟ ವೈದ್ಯ, ಕೆಲಿಂಜಗ್ರಾಮ, ವಿಟಲ್‌ಪೋಸ್ಟ್, ದಕ್ಷಿಣ ಕನ್ನಡ

ಪಂಡಿತ ಬಿ. ಆರ್. ಗೋವಿಂದರಾಜುಲು ನಾಯುಡು,

ಆಂಗ್ಲೋ ಭಾರತೀ ವೈದ್ಯಶಾಲಾ

೪೯೧, ಹಲಸೂರಪೇಟೆ, ಬೆಂಗಳೂರು ಸಿಟಿ

ಕನ್ನಡ ಪುಸ್ತಕಗಳನ್ನು ಕೊಳ್ಳಬೇಕಿದ್ದರೆ,

ಧಾರವಾಡದ ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರಕ್ಕೇ ಬನ್ನಿ.

ಈ ಪತ್ರಿಕೆಯನ್ನು ರಂಗನಾಥ ಬಳವಂತ ಮುತಾಲೀಕ ದೇಸಾಯಿ ಇವರು ಕನ್ನಡಿಗ ಮುದ್ರಣಾಲಯದಲ್ಲಿ ಮುದ್ರಿಸಿ ಕನ್ನಡಿಗ ಕಾರ್ಯಾಲಯ ಧಾರವಾಡದಲ್ಲಿ ಪ್ರಸಿದ್ಧಿಸಿದರು.

REEL NO

3

KARNATAKA STATE ARCHIVES

SRINIVASA RAO MANGALAVEDE COLLECTION

Old Newspapers

KANNADA NAVAJIVANA
Published from Bagalakote

KANNADIGA
Published from Bagalakote

KANNADIGA

Published from Dharawada

EXPOSURES

305

END